✻ ತರಂಗಿಣಿ ✻

✻:✻

ಉಡುತಡಿಯಲ್ಲಿ ಉಗಮ ; ಬಿದಿಗೆಯ ಚಂದ್ರನಂತೆ ಪ್ರಗತಿ : ವಿಘ್ನ ಪರಂಪರೆಯನ್ನು ಎದುರಿಸುತ್ತ ಗಮನ, ನಡೆ ಶುಚಿ, ನುಡಿ ಶುಚಿಯಾಗಿ ಪರತತ್ತ್ವವನ್ನು ಮೈಗೂಡಿಸಿಕೊಂಡ ಕಲ್ಯಾಣದ ಶರಣರ ಬಳಗದೊಡನೆ ಸಂಗಮ, ಜಗದೆಲ್ಲೆಡೆಯಲ್ಲಿ ಓತಪ್ರೋತವಾಗಿ ತುಂಬಿದ ಪರಮಾತ್ಮನೊಡನೆ ಕದಳಿಯಲ್ಲಿ ಸಮಾಗಮ. ಇಂತಹ ದೈವೀ ತರಂಗಿಣಿ ಅಕ್ಕಮಹಾದೇವಿ.

"ತೋರಲು ಹೆಣ್ಣು ರೂಪಾದರೇನು ಭಾವಿಸಲು ಗಂಡು ರೂಪು ನೋಡಾ," ಎಂಬ ವಿಲಕ್ಷಣ ಕೆಚ್ಚು; "ಆತ್ಮಸಂಗಾತಕ್ಕೆ ಚನ್ನಮಲ್ಲಿಕಾರ್ಜುನ ಎನಗುಂಟು" ಎಂಬ ಆತ್ಮವಿಶ್ವಾಸ; ಇಂಥ ಅಕ್ಕಮಹಾದೇವಿ ಉಡುತಡಿಯ ಉಷೆ ಮಾತ್ರವಲ್ಲ, ಕೇವಲ ಕನ್ನಡನಾಡಿನ ತಣ್ಸೊಡರು ಅಲ್ಲ, ಜಂಬೂದ್ವೀಪದ ನಂದಾದೀಪವಷ್ಟೇ ಅಲ್ಲ, ವಿಶ್ವದ ವಿನೂತನ ಪರಂಜ್ಯೋತಿ.

ಬೇಸಿಗೆಯ ಹಗಲ ದಗೆಯಲ್ಲಿ ಬೆಂದು ಬಸವಳಿದವರಿಗೆ ತಂಗಾಳಿ ತಂಪು ಸ್ಪರ್ಶವಿತ್ತು ಮುದಗೊಳಿಸುವಂತೆ ನೂರಾರು ವರ್ಷಗಳಿಂದ ಶೂದ್ರತ್ವ, ಪುರುಷದಾಸ್ಯ, ಮಾಯೆತನ, ಕೀಳರಿಮೆ ಇವುಗಳ ಬೇಗೆಯಲ್ಲಿ ದಹಿಸಲ್ಪಟ್ಟ ಸ್ತ್ರೀಕುಲಕ್ಕೆ ಆತ್ಮವಿಶ್ವಾಸದ ಅಮೃತವೆರೆದ ವಿರಾಗಿಣಿ ಅಕ್ಕಮಹಾದೇವಿ. ಏಕೆ ಸಂಶಯವೇ? ಕುತೂಹಲವೆ? ಅಭಿಮಾನವೆ? ಹಾಗಾದರೆ ಬೇಗ ಓದಿರಿ – ಈ ತರಂಗಿಣಿಯನ್ನು.

ಬೆಲೆ : ಮೂವತ್ತು ರೂಪಾಯಿಗಳು

ವಿಶ್ವ ಕಲ್ಯಾಣ ಮಿಷನ್
ನಂ. 24, ಎರಡನೆಯ ಬ್ಲಾಕು
ರಾಜಾಜಿನಗರ, ಕಾರ್ಡ್‌ರೋಡ್
ಬೆಂಗಳೂರು - ೧೦

ಸುಯಿಧಾನ ಸುಗ್ರಂಥಮಾಲೆಯ ಪ್ರಕಟಣೆಗಳು

	ಗ್ರಂಥದ ಹೆಸರು	ಲೇಖಕರು	ರೂ.	ಪೈ.
೧	ದೇವರು*	ಸ್ವಾಮಿ ಲಿಂಗಾನಂದ	೨	೦೦
೨	ಲಿಂಗ ತತ್ತ್ವದರ್ಪಣ*	,,	೩	೦೦
೩	ದೇವಪೂಜಾ ವಿಧಾನ	,,	೨	೫೦
೪	ಶರಣರ ನೂರು ನಾಟಕಗಳು*	ಡಾ|| ತಿಪ್ಪೇರುದ್ರಸ್ವಾಮಿ	೧	೫೦
೫	ಅಕ್ಕನ ಪ್ರವಚನ*	ಸ್ವಾಮಿ ಲಿಂಗಾನಂದ	೧೦	೦೦
೬	ಮಾತೃವಾಣಿ*	ಮಾತೆ ಮಹಾದೇವಿ	೩	೦೦
೭	ಜಂಗಮ ದರ್ಶನ*	ಸ್ವಾಮಿ ಲಿಂಗಾನಂದ	೧	೦೦
೮	ವಿರಹ ತರಂಗ*	ಮಾತೆ ಮಹಾದೇವಿ	೩	೦೦
೯	ಲಿಂಗ ತತ್ತ್ವದರ್ಪಣ (ಹಿಂದಿ)*	ಸ್ವಾಮಿ ಲಿಂಗಾನಂದ	೩	೦೦
೧೦	ಶಿವಯೋಗಿಣಿ*	ಮಾತೆ ಮಹಾದೇವಿ	೨	೦೦
೧೧	ಬಸವ ತತ್ತ್ವ ದರ್ಶನ*	,,	೧೮	೦೦
೧೨	ಚಿನ್ಮೂಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	೧೦	೦೦
೧೩	ವಚನ ಸುಧಾ*	ಮಾತೆ ಮಹಾದೇವಿ	೦	೫೦
೧೪	ಲಿಂಗ ತತ್ತ್ವದರ್ಪಣ (ಮರಾಠಿ)	ಸ್ವಾಮಿ ಲಿಂಗಾನಂದ	೩	೦೦
೧೫	ಗಂಗಾ ತರಂಗ*	ಮಾತೆ ಮಹಾದೇವಿ	೨	೦೦
೧೬	ಸಾಮೂಹಿಕ ಪ್ರಾರ್ಥನೆ	ಸಂ. ,,	೦	೫೦
೧೭	ಅಣ್ಣನ ಲಾವಣಿ*	ವಿ. ಸಿದ್ಧರಾಮಣ್ಣ	೦	೩೫
೧೮	ಹಿಂದು ಯಾರು ?	ಮಾತೆ ಮಹಾದೇವಿ	೦	೫೦
೧೯	ಬಸವ ವಚನ ಸುಧಾ*	ಸಂ. ,,	೨	೦೦
೨೦	ಅಕ್ಕನ ಅಮರವಾಣಿ*	,,	೨	೦೦
೨೧	ಮಾತೃ ಹರಕೆ	,,	೬	೦೦
೨೨	ವಚನಾಮೃತ	ಸ್ವಾಮಿ ಲಿಂಗಾನಂದ	೨	೦೦
೨೩	ವೀರಶೈವ ಧರ್ಮಸ್ಥಾಪಕರಾರು ?*	ಬಿ. ಸಿ. ಜವಳಿ	೪	೦೦
೨೪	ಕಲ್ಯಾಣ ಕ್ರಾಂತಿ*	ಮಾತೆ ಮಹಾದೇವಿ	೩	೫೦
೨೫	ದೇವರ ಮಕ್ಕಳು*	,,	೨	೫೦
೨೬	ಪತಿತೋದ್ಧಾರಕ*	,,	೧	೫೦
೨೭	ಲಿಂಗಾಯತ ಧರ್ಮ ಕೈಪಿಡಿ	,,	೩	೦೦
೨೮	ಲಿಂಗಾಯತ ಧರ್ಮಸ್ಥಾಪಕರಾರು ?	ಬಿ. ಸಿ. ಜವಳಿ	೪	೦೦
೨೯	ಬಸವಣ್ಣನವರ ವಚನ ಪದಪ್ರಯೋಗ ಕೋಶ	ಎಸ್. ಆರ್. ಗುಂಜಾಳ	೫೦	೦೦

೩೦	ದೇವನೆಡೆಗೆ*	ಮಾತೆ ಮಹಾದೇವಿ	೧ ೦೦
೩೧	ಹೆಪ್ಪಿಟ್ಟ ಹಾಲು (ಕಾದಂಬರಿ)	,,	೧೬ ೦೦
೩೨	ಅನುಭವ ಮಂಟಪ*	,,	೧ ೦೦
೩೩	*Revolution in Kalyana*	Mathe Mahadevi	೫ ೦೦
೩೪	*A Guide to Lingayatism*	,,	೬ ೦೦
೩೫	*Emblem of God*	Swami Linganand	೬ ೦೦
೩೬	ಅಧ್ಯಾತ್ಮ ಮತ್ತು ಮಹಿಳೆ*	ಮಾತೆ ಮಹಾದೇವಿ	೧ ೦೦
೩೭	ತರಂಗಿಣಿ (ಅಕ್ಕಮಹಾದೇವಿ ಕಾದಂಬರಿ)	,,	೩೩ ೦೦
೩೮	ವಿಶ್ವವಿಭೂತಿ ಬಸವಣ್ಣ	,,	೪ ೦೦
೩೯	*Lingayatism*	Mathe Mahadevi	೩ ೦೦
೪೦	ವಿಶ್ವಕಲ್ಯಾಣ ಗೀತೆ*	ಸಂ : ಮಾತೆ ಮಹಾದೇವಿ	೩ ೦೦
೪೧	*Mataji—A Profile*	,,	೦ ೫೦
೪೨	ಧರ್ಮಕ್ರಾಂತಿಯ ದಿವ್ಯಜ್ಯೋತಿ	ಗೊ.ರು.ಚ.	೦ ೫೦
೪೩	ಧರ್ಮಕ್ರಾಂತಿಯ ಧೀರಯೋಗಿ	ಸಂ : ಮಾತೆ ಮಹಾದೇವಿ	೨ ೦೦
೪೪	ಬಸವ ಚರಣಕೆ—ನುಡಿ ನೈವೇದ್ಯ	,,	೫ ೦೦
೪೫	ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕ	ಸುಜನಾ	೨ ೦೦
೪೬	ವಿಶ್ವಗುರು ಬಸವಣ್ಣ (ಮಕ್ಕಳಿಗಾಗಿ)*	ಮಾತೆ ಮಹಾದೇವಿ	೨ ೦೦
೪೭	ಅವತಾರ*	,,	೨ ೦೦
೪೮	ದೇವರ ಸ್ವರೂಪ*	,,	೩ ೦೦
೪೯	ಕ್ರಾಂತಿಯೋಗಿ*	,,	೩ ೦೦
೫೦	ಬಸವ ಬೀಡಿನಿಂದ ಆಂಗ್ಲ ನಾಡಿಗೆ (ವಿದೇಶ ಪ್ರವಾಸದ ಅನುಭವಗಳು)*	ಮಾತೆ ಮಹಾದೇವಿ	೫ ೦೦
೫೧	*Confluence* (An Anthology of Lectures delivered in England)*	Mathe Mahadevi	೫ ೦೦
೫೨	ಬಸವ ಗೀತೆ*	ಮಾತೆ ಮಹಾದೇವಿ	೩೦ ೦೦
೫೩	ಬಸವ ಧರ್ಮ ದರ್ಶನ*	,,	೫೦ ೦೦
೧	ಜಗದ್ಗುರು ಬಸವಣ್ಣನವರ ತ್ರಿವರ್ಣರಂಜಿತ ಭಾವಚಿತ್ರ		೧ ೫೦
೨	ಅಕ್ಕಮಹಾದೇವಿಯ ತ್ರಿವರ್ಣರಂಜಿತ ಭಾವಚಿತ್ರ		೧ ೫೦
೩	ಶ್ರೀ ಮಾತಾಜಿಯವರ ತ್ರಿವರ್ಣರಂಜಿತ ಭಾವಚಿತ್ರ*		೧ ೫೦
೪	ಶ್ರೀ ಗುರೂಜಿಯವರ ತ್ರಿವರ್ಣರಂಜಿತ ಭಾವಚಿತ್ರ		೧ ೫೦
೫	ಲಿಂಗಾಯತ ಯಾರು? (ಚಾರ್ಟ್)		೦ ೨೫
೬	ವಿಶ್ವವಿಭೂತಿ ಬಸವಣ್ಣನವರ ಅಪೂರ್ವ ವ್ಯಕ್ತಿತ್ವ (ಚಾರ್ಟ್)		೦ ೫೦

---

* ಅಚ್ಚಿನಲ್ಲಿವೆ

ಸುಯಿಧಾನ ಸುಗ್ರಂಥ ಮಾಲೆಯ ಮೂವತ್ತೇಳನೆಯ ಪುಷ್ಪ

ತರಂಗಿಣಿ

(ಅಕ್ಕಮಹಾದೇವಿಯನ್ನು ಕುರಿತಾದ ಕಾದಂಬರಿ)

ಜಗದ್ಗುರು ಮಾತೆ ಮಹಾದೇವಿ

ಸುಯಿಧಾನ ಸುಗ್ರಂಥ ಮಾಲೆ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ – ರೇಲ್ವೆ ಕ್ರಾಸ್
ಧಾರವಾಡ – 3

TARAṄGINI—A Novel on Akkamahādēvi
Writer: Her Holiness Jagadguru Māte Mahādēvi
Publishers : Suyidhāna Sugrantha Māle, Jaganmāta Akkamahādēvi Asrama, Dharwar-3

Third Edition 1979

© ಎಲ್ಲ ಹಕ್ಕುಗಳೂ ಪ್ರಕಾಶಕರಿಗೆ ಸೇರಿವೆ

ಗ್ರಂಥಗಳು ದೊರೆಯುವ ತಾಣಗಳು:

೧. ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ಧಾರವಾಡ-೩

೨. ವಿಶ್ವಕಲ್ಯಾಣ ಮಿಷನ್
ನಂ. ೨೪, ಕಾರ್ಡ್‌ರೋಡ್, ಎರಡನೆಯ ಬ್ಲಾಕ್,
ರಾಜಾಜಿ ನಗರ, ಬೆಂಗಳೂರು-೧೦

ಬೆಲೆ: ಮೂವತ್ತುಮೂರು ರೂಪಾಯಿಗಳು

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಸಮರ್ಪಣೆ

ಅಕ್ಕಮಹಾದೇವಿಯ ಔನ್ನತ್ಯವನ್ನು ಮನದಟ್ಟು ಮಾಡಿಕೊಟ್ಟು
ಆ ಮಾತೆಯ ಆದರ್ಶವನ್ನು ಹೃದಯಕ್ಷೇತ್ರದಿ ನೆಟ್ಟು
ಇರುಳು – ಹಗಲೆನ್ನದೆ ಅವಿಶ್ರಾಂತ ಚೇತನವಾಗಿ
ಈಂಟಿಸುತ ಎಲ್ಲರಿಗೆ ಜ್ಞಾನಾಮೃತವ ತ್ಯಾಗಿಯಾಗಿ
ಎನ್ನ ಆಧ್ಯಾತ್ಮ ಬಾಳಿನ ಬೆಂಗಾವಲಾಗಿ ದಿಕ್ಸೂಚಿಯಾಗಿ
ಅನುಗ್ರಹಿಸಿ, ಉದ್ಧರಿಸಿದ ಮಮ ಸದ್ಗುರು
ಶ್ರೀ ಲಿಂಗಾನಂದ ಸ್ವಾಮಿಗಳವರ ಶ್ರೀ ಚರಣಕ್ಕೆ
ಹೃತ್ಪೂರ್ವಕ ಸಮರ್ಪಣೆ

ಮಾತೆ ಮಹಾದೇವಿ

ಮೊದಲ ಮಾತು

ಸೆಲೆಯ ಬಾಯಿಗೆ ಅಟೆದುಕೊಂಡ ಕಲ್ಲು ಅರುಗಾಗುತ್ತಲೇ ನಿರರ್ಗಳವಾಗಿ ಸೆಲೆಯು ಪುಟಿಯುವುದು ಲೋಕದ ನೇಮ. ನಿಜ, ಹಾಗೆಯೇ 'ಸನ್ಯಾಸಿಗಳು ಕಾದಂಬರಿ ಬರೆಯುವುದು ಅಸಾಧು' ಎಂಬ ನಂಬುಗೆ ಪ್ರಚಲಿತವಿದ್ದಾಗ, ಸಾಮಾಜಿಕ ಕಥಾ ವಸ್ತುವುಳ್ಳ, ಆಧ್ಯಾತ್ಮಿಕ ಮೆರುಗು ಪಡೆದ ನನ್ನ ಮೊದಲ ಕಾದಂಬರಿ 'ಹೆಪ್ಪಿಟ್ಟ ಹಾಲು' ಬೆಳಕನ್ನು ಕಂಡಿತು. ನಾವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಮೆಚ್ಚುಗೆ ಪಡೆಯಿತು, ಜನಸಾಮಾನ್ಯರ ಅಭಿಮಾನದ ಹೊಳೆಯಲ್ಲಿ ಮಿಂದಿತು, ರಾಜ್ಯ ಸಾಹಿತ್ಯ ಅಕ್ಯಾಡೆಮಿಯ ಪ್ರಶಸ್ತಿಯನ್ನೂ ಹೊಂದಿತು.

ಈ ಅವಧಿಯಲ್ಲಿ 'ಹೆಪ್ಪಿಟ್ಟ ಹಾಲು' ಜನರ ಹೃದಯದಮೇಲೆ ಮಾಡುತ್ತಿದ್ದ ಪರಿಣಾಮವನ್ನು ಮನಗಂಡೆ. ಮಾನಸಿಕ ಭಾವನೆಗಳನ್ನೇ ಆಗಲೀ, ವೈಚಾರಿಕತತ್ವಗಳನ್ನೇ ಆಗಲಿ ವ್ಯಕ್ತಪಡಿಸಲು ಕಾದಂಬರಿಯು ಸೂಕ್ತ ಮಾಧ್ಯಮ ಮತ್ತು ವ್ಯಕ್ತಿ-ವ್ಯಕ್ತಿತ್ವಗಳನ್ನು ಪದರಪದರವಾಗಿ ಚಿತ್ರಿಸಲು ಸಮರ್ಪಕ ಸಾಧನ ಎಂಬ ಭಾವನೆ ದೃಢವಾಯಿತು. ಇದರಿಂದಾಗಿ ಮನದ ಮೂಲೆಯಲ್ಲಿದ್ದ ಅಳುಕೂ ಸರಿದಿತ್ತು. ಆಗ ಉತ್ಸಾಹಶಾಲಿಯಾಗಿ ಹೊರಹೊಮ್ಮಿ ಅಕ್ಕಮಹಾದೇವಿಯನ್ನು ಕುರಿತಾದ ಈ ಕಾದಂಬರಿ 'ತರಂಗಿಣಿ'ಯು ಪ್ರವಹಿಸಿತು.

ಈ ಕಾದಂಬರಿಯು ಹನ್ನೆರಡನೇ ಶತಮಾನದಲ್ಲಿ ಆಗಿಹೋದ ಐತಿಹಾಸಿಕ ವ್ಯಕ್ತಿಯೋರ್ವಳ ಸಾಹಿತ್ಯಿಕ ಚಿತ್ರಣ ಮಾತ್ರವಲ್ಲ; ಬದುಕನ್ನು ಪಲ್ಲಟಿಸಿಕೊಂಡು ಅಸಾಮಾನ್ಯ ಯೌಗಿಕ ಗುರಿಯನ್ನು ಮುಟ್ಟಿದ ಶಿವಯೋಗಿಣಿ "ಅಕ್ಕಮಹಾದೇವಿ"ಯನ್ನು ಕುರಿತದ್ದು. ಮರ್ತ್ಯಮಟ್ಟದಲ್ಲಿ ಉಗಮಿಸಿ ಅಮರ್ತ್ಯಮಟ್ಟದಲ್ಲಿ ಸಮಾಗಮಗೊಳ್ಳುವ ಆ ತಾಯಿಯ ವ್ಯಕ್ತಿತ್ವವು ಬಹುಮುಖವಾದುದು. ಆಕೆ ಅನುಭಾವಿ (Mystic), ತತ್ವಜ್ಞಾನಿ (Philosopher), ಯೋಗಿಣಿ, ಸಾಹಿತಿ, ಕ್ರಾಂತಿಕಾರಿಣಿ, ಸ್ವತಂತ್ರ ವಿಮರ್ಶಾ ಪ್ರಜ್ಞೆಯುಳ್ಳವಳು. ಇಂತಹ ಮಹಾವ್ಯಕ್ತಿತ್ವವು ರೂಪುಗೊಂಡ ಪರಿ, ವಿವಿಧ ಹಂತಗಳಲ್ಲಿ ಆಕೆಯ ಮನಸ್ಸು ಹಾಯ್ದುಬಂದ ಸ್ತರ, ಎದುರಿಸಿದ ಪರಿಸರ— ಇವುಗಳನ್ನು ಚಿತ್ರಿಸಲು ಬಹುದೊಡ್ಡ ಭಿತ್ತಿಯೇ ಬೇಕಾಯಿತು ; ಅದರಿಂದಾಗಿ ಕಾದಂಬರಿಯು ಬೃಹತ್ ಗಾತ್ರ ಪಡೆಯಿತು.

ಇಲ್ಲಿಗಾಗಲೇ ಅಕ್ಕಮಹಾದೇವಿಯನ್ನು ಕುರಿತು ಅನೇಕರು ತಾತ್ತ್ವಿಕ

ಕೃತಿಗಳನ್ನು, ಕಾದಂಬರಿಗಳನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ತೆಗೆದುಕೊಂಡ ವೈಶಿಷ್ಟ್ಯಪೂರ್ಣ ಎಚ್ಚರಿಕೆಯೆಂದರೆ, ಸಾಧ್ಯವಾದಷ್ಟೂ ಸ್ವತಃ ಅಕ್ಕಮಹಾದೇವಿಯ ವಚನಗಳ ಅಸ್ತಿವಾರದಮೇಲೆಯೇ ಕಥಾಭವನದ ನಿರ್ಮಾಣ. ವಚನದ ಆಧಾರವಿಲ್ಲದೆ ಯಾವುದೇ ಘಟನೆಯನ್ನು ರೂಪಿಸಲು ಯತ್ನಿಸಿಲ್ಲ. ಸಂಭಾಷಣೆಗಳನ್ನೂ ಸಹ ಸಾಧ್ಯವಾದಷ್ಟೂ ವಚನಗಳ ಆಧಾರದಮೇಲೆಯೇ ಹೆಣೆದಿರುವುದರಿಂದ, ಪದ್ಯ ಅಥವಾ ಗದ್ಯ ಯಾವುದೇ ರೂಪದಲ್ಲಿ ಬಳಸಿಕೊಂಡ ವಚನಗಳ ಸಂಖ್ಯೆಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿರುವೆ. ನೇರ ರೂಪದಲ್ಲಿ ಎಲ್ಲವನ್ನೂ ಬಳಸಿಕೊಂಡರೆ ಕಾದಂಬರಿಯ ಛಾಯೆ ಹೋಗಿ ತಾತ್ತ್ವಿಕ ಕೃತಿಯ ಲಕ್ಷಣ ಬರಬಹುದೆಂಬ ಆತಂಕದಿಂದ ಹೆಚ್ಚಾಗಿ ಗದ್ಯ ರೂಪದಲ್ಲಿ ಬಳಸಿಕೊಂಡಿರುವೆ. ಅವಶ್ಯಕವಿದ್ದಲ್ಲಿ ಸ್ವ-ರೂಪದಲ್ಲಿ ಹೆಣೆದಿರುವೆ.

ವೈರಾಗ್ಯದ ಸೋಪಾನವಿಡಿದು ಆಧ್ಯಾತ್ಮಿಕ ಶ್ರೀಗಿರಿಯನ್ನೇರಿದ, ಮೀಸಲಳಿಯದ ಕುಸುಮವಾಗಿ ಚೆನ್ನಮಲ್ಲಿಕಾರ್ಜುನನಿಗೆ ಎಡೆಯಾದ ವೀರವಿರಾಗಿಣಿ ಅಕ್ಕಮಹಾದೇವಿಯ ಬದುಕಿನ ಅನೇಕ ಘಟನೆಗಳು ವಿವಾದಾಸ್ಪದವಾಗಿ ಉಳಿದಿದ್ದು, ಅವುಗಳ ಬಗ್ಗೆ ತಪ್ಪು ತಿಳುವಳಿಕೆ ಬಹಳಷ್ಟು ಜನರಲ್ಲಿ ಮೂಡಿದೆ. ಅಂತಹ ವಾದಗ್ರಸ್ತ ವಿಷಯಗಳನ್ನು ಸೂಕ್ತ ಹಿನ್ನೆಲೆ—ವಿವರಣೆಗಳೊಡನೆ ಆಕೆಯ ವ್ಯಕ್ತಿತ್ವಕ್ಕೆ ಚ್ಯುತಿ ಬರದಂತೆ ಬಿಡಿಸುವ ಪ್ರಯತ್ನ ಮಾಡಿರುವೆ. ಓದಿದವರು ಅಕ್ಕನ ವ್ಯಕ್ತಿತ್ವವನ್ನು ಸರಿಯಾಗಿ ಅರಿತುಕೊಂಡರೆ ನನ್ನ ಶ್ರಮ ಸಾರ್ಥಕವಾಗದಿರದು.

ನನ್ನ ಈ ಕಾದಂಬರಿಗೆ ಸ್ಫೂರ್ತಿಯನ್ನು ಒದಗಿಸಿದ್ದು ಪರಮಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಅಕ್ಕಮಹಾದೇವಿಯನ್ನು ಕುರಿತಾದ ಪ್ರವಚನ. ಆದ್ದರಿಂದ ಗುರುಗಳ ಆ ಕೊಡುಗೆಯನ್ನು ಸ್ಮರಿಸದಿರಲಾರೆ. ಬಹುಮುಖ ವ್ಯಕ್ತಿತ್ವವುಳ್ಳ ಅಕ್ಕಮಹಾದೇವಿಯನ್ನು ವಿವಿಧ ದೃಷ್ಟಿಕೋನಗಳಿಂದ ದರ್ಶಿಸಿ, ಕಾದಂಬರಿಯೊಂದನ್ನು ಬರೆಯಬೇಕೆಂಬ ಅಭೀಪ್ಸೆ ತಣಿವೊಡೆಯಲು ಕೃತಿಯ ರಚನೆಯನ್ನು ಆರಂಭಿಸಲಾಯಿತು. ಆದರೆ ಅದು ಕಲ್ಯಾಣದ ಪಯಣದ ತನಕ ಬಂದು ತಟ್ಟನೆ ನಿಂತಿತು. ಕಾರಣವೆಂದರೆ, ಕದಳಿಯ ಬನವನ್ನು ನೋಡಿಯೇ ಇರದ ಕಾರಣ ಅನ್ಯರು ಬರೆದ ವಿವರಗಳನ್ನು ಸಂಗ್ರಹಿಸಿ ಓದಿದ್ದಾಯಿತು. ಅದರಿಂದ ತೃಪ್ತಿಯೊದಗಲಿಲ್ಲ, ಕಲ್ಪನೆಯ ಕುದುರೆಗೆ ಹಾರಲು ಸ್ಫೂರ್ತಿ ಬರಲಿಲ್ಲ. ಆಗ ಕದಳಿಯ ಬನವನ್ನು ಸಂದರ್ಶಿಸಿ ಬರೋಣವೇ? ಎಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದೇ ತಡ ಗುರೂಜಿಯವರು ಉತ್ಸಾಹಕ್ಕೆ ಭಂಗ ತರದೆ ಒಪ್ಪಿಗೆ ನೀಡಿದರು. ಒಂದು

ಯಲ್ಲಿ ತ್ವರಿತ ಸಿದ್ಧತೆ ಮಾಡಿಕೊಂಡು, ನಲವತ್ತು ಭಕ್ತರ ಗುಂಪಿನೊಡನೆ ಹೊರಟೆವು. ೧೯೬೭ರಲ್ಲಿ ಗುರುಗಳು ಸಂದರ್ಶಿಸಿ ಬಂದಿದ್ದ ಕಾರಣ ಯಾವುದೇ ತೊಂದರೆಯಿಲ್ಲದೆ ದುರ್ಗಮ ಕಾನನದಲ್ಲಿ ಸಾಗಿದೆವು. ಮಳೆಗಾಲವು ಆದೇ ಆಗ ಮುಗಿದಿತ್ತಾದ ಕಾರಣ 'ಕಾನನವು ದಡಸಾಗಿದ್ದು, ಹುಲ್ಲು ಬಹು ದಟ್ಟವಾಗಿರುವುದು; ಹಾವುಗಳ ಹರಿದಾಟ ಬಹಳ' ಎಂದು ಮೊದಲು ಅನೇಕರು ಹಿಂಜರಿದಿದ್ದರು.

ಅಕ್ಕಮಹಾದೇವಿಯು ಐಕ್ಯವಾದ ಕದಳಿಯನ್ನು ಪ್ರತ್ಯಕ್ಷವಾಗಿ ನೋಡಿ ಬರದೆ, ಕಾದಂಬರಿಯನ್ನು ಪ್ರಕಟಿಸಬಾರದೆಂದು ನಾನು ಸಂಕಲ್ಪಿಸಿದ್ದ ಕಾರಣ, ಅಕ್ಕನ ಮೇಲೆ ಭಾರಹಾಕಿ ಹೊರಟುಬಿಟ್ಟೆವು. ಉಳಿದವರೂ ಮನಸ್ಸನ್ನು ದೃಢಪಡಿಸಿಕೊಂಡು ಹೊರಟರು. ಅಲ್ಲಿಗೆ ಹೋದಾಗ ಯಾವುದೇ ವಿಘ್ನವಾಗ ಲಿಲ್ಲ, ವಿಪತ್ತು ಇದಿರಾಗಲಿಲ್ಲ. ದಟ್ಟ ಹುಲ್ಲುಗಾವಲಲ್ಲಿ ಹಾವುಗಳನ್ನು ಕಂಡಿದ್ದು, ಮುಂಜಾನೆ ಆದೇ ಆಗ ನೀರನ್ನೀಂಟಿ ಹೋದ ಹುಲಿಯ ಹೆಜ್ಜೆಯ ಗುರುತು, ೩೧-೧೦-೭೩ರಂದು ರಾತ್ರಿ ಕದಳಿಗವಿಯ ಮೇಲ್ಭಾಗದಲ್ಲಿ ಉರಿ ಯನ್ನು ಹಾಕಿಕೊಂಡು ಪ್ರಾರ್ಥನಾಮಗ್ನರಾಗಿ ಕುಳಿತಾಗ ನೀರು ಕುಡಿಯಲು ಬಂದು ಅತ್ಯಂತ ಸನಿಹದಲ್ಲಿ ನಿಂತು ಗರ್ಜಿಸಿ, ಮರೆಯಾದ ಕಾಡುಮೃಗದ ಧ್ವನಿ ಬಿಟ್ಟರೆ ಇನ್ನಾವ ದುರ್ಧರ ಪ್ರಸಂಗವೂ ಎದುರಾಗಲಿಲ್ಲ. ಬೇಸಿಗೆ ಗಿಂತಲೂ ಈಗ ಬಂದುದು ಒಳ್ಳೆತೆನಿಸಿತು. ಏಕೆಂದರೆ ಬೇಸಿಗೆಯಲ್ಲಿ ಸುಟ್ಟ ಗುಡ್ಡಗಳು, ಒಣಗಿದ ಗಿಡಗಳು ಕಂಡುಬಂದರೆ ಈಗ ಯಥೇಚ್ಛ ನೀರು, ಕುಲು ಕುಲು ನಗುವ ನಿಸರ್ಗಗಳು ನಮ್ಮ ಪ್ರವಾಸವನ್ನು ಚೇತೋಹಾರಿಯಾಗಿ ಮಾಡಿದವು. ಚಿರಸ್ಮರಣೀಯವಾದ, ಸ್ಫೂರ್ತಿದಾಯಕವಾದ ಕದಳಿಯ ಸಂದರ್ಶನ ಮಾಡಿಸಿಕೊಟ್ಟದ್ದಕ್ಕಾಗಿ ಸದ್ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸ ದಿರಲಿಲ್ಲ. ಈ ಸಂದರ್ಶನದ ಪರಿಣಾಮವಾಗಿ ಅಕ್ಕನ ಕದಳಿ ಪ್ರವಾಸವನ್ನು ಯಥಾವತ್ತಾಗಿ ಬರೆಯಲು ಸಾಧ್ಯವಾಯಿತು.

ಆದ್ದರಿಂದ ಈ ಕಾದಂಬರಿ ರೂಹುಗೊಳ್ಳಲಿಕ್ಕೆ ಹೆಚ್ಚಿನ ಸಹಾಯಕರಾದ ಪೂಜ್ಯ ಗುರುಗಳಿಗೆ ವಂದನೆ ಸಲ್ಲಿಸುವೆ. ಅನೇಕ ಗ್ರಂಥಗಳ ಸಹಾಯ ಪಡೆದಿರುವ ನಾನು ಆ ಗ್ರಂಥಗಳ ಕರ್ತೃಗಳು ಅಥವಾ ಸಂಪಾದಕರಿಗೆ ಕೃತಜ್ಞತೆ ಸಲ್ಲಿಸುವೆ. ಕನ್ನಡ ನಾಡಿನ ಅಮರಜ್ಯೋತಿಯಾದ ಅಕ್ಕಮಹಾ ದೇವಿಯ ಬದುಕನ್ನು ಓದಿ, ಅಪೂರ್ವ ಚಿತ್ರವೊಂದನ್ನು ಹೃದಯಭಿತ್ತಿಯಲ್ಲಿ ರೂಪಿಸಿಕೊಳ್ಳಲಿರುವ ಓದುಗರಿಗೆ ಶುಭ ಹಾರೈಕೆಗಳನ್ನು ಸಮರ್ಪಿಸುವೆ.

ಮೂರನೆಯ ಮುದ್ರಣಕ್ಕೆ ಮುನ್ನುಡಿ

'ತರಂಗಿಣಿ' ಕಾದಂಬರಿಯು ಇದೀಗ ಮೂರನೆಯ ಮುದ್ರಣವನ್ನು ಕಾಣು ತ್ತಿದೆ. ಮಂಗಳೂರಿನ ಪ್ರವಚನಕ್ಕೇನೆ ಪುಸ್ತಕಗಳು ಸಾಲದಾದವು. ಬಹಳ ದೀರ್ಘಕಾಲದಿಂದ ಅದರ ಬೇಡಿಕೆ ಇದ್ದರೂ ನಮಗೆ ಮುದ್ರಿಸಿ ಬಿಡುಗಡೆ ಮಾಡಲು ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲ. ತರಂಗಿಣಿಯು ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾದ ಕೃತಿ ಮತ್ತು ಜನಮನದ ಮೇಲೆ ಆಳವಾದ ಪರಿಣಾಮ ಬೀರಿದೆ ಎನ್ನುವುದು ನಮಗೆ ಹೆಮ್ಮೆಯ ಸಂಗತಿ. ಯಾವುದೋ ಒಂದು ವಿಶೇಷ ಕಾರ್ಯಕ್ಕೆಂದು ನಾವು ಬೆಂಗಳೂರು ಜಿಲ್ಲೆಯ ದೇವನ ಹಳ್ಳಿಗೆ ಹೋಗಿದ್ದೆವು. ಒಂದರ್ಧಗಂಟೆ ಕಾಲ ಪ್ರವಾಸಿಮಂದಿರದಲ್ಲಿ ಕುಳಿತು ನಾವು ಕಾಣಬೇಕಾಗಿದ್ದವರಿಗಾಗಿ ಹೇಳಿಕಳಿಸಿದೆವು. ಅಷ್ಟರಲ್ಲಿ ಅನೇಕ ಹೆಣ್ಣು ಮಕ್ಕಳು ಮತ್ತು ಪುರುಷರು ತಂಡೋಪತಂಡವಾಗಿ ಬರತೊಡಗಿದರು.

"ನೀವು ಯಾವ ಊರಿನವರು ? ನಮ್ಮ ಪರಿಚಯ ಹೇಗೆ ?"-ಎಂದು ಕೇಳಿದೆ.

"ಅಮ್ಮಾ, ತರಂಗಿಣಿ ಪುಸ್ತಕವನ್ನು ಸಾಯಂಕಾಲ ನಾವೆಲ್ಲರೂ ಒಟ್ಟಿಗೆ ಸೇರಿ ಪಾರಾಯಣ ಮಾಡುತ್ತೇವೆ. ಯಾರೋ ಹೇಳಿದರು ಅದನ್ನು ಬರೆ ದವರು ಬಂದಿದ್ದಾರೆಂದು. ದರ್ಶನ ಪಡೆಯಲು ಬಂದಿದ್ದೇವೆ. ಪುಸ್ತಕ ತುಂಬಾ ಚೆನ್ನಾಗಿದೆ."

ನಿಜವಾಗಿಯೂ ಹೆಮ್ಮೆ ಮೂಡಿತು. ಇಂಥ ಶ್ರೀಸಾಮಾನ್ಯ ಹೆಂಗೆಳೆಯ ರಲ್ಲೂ ಅದು ತನ್ನ ಪ್ರಭಾವ ಬೀರುತ್ತಿದೆ ಎಂಬುದೇ ಆ ಹೆಮ್ಮೆಗೆ ಕಾರಣ.

ಎರಡನೆ ಮುದ್ರಣ ನಮ್ಮ ಅನುಪಸ್ಥಿತಿಯಲ್ಲಿ ಆಗಿ ವಿಪರೀತ ಮುದ್ರಣ ದೋಷವಾಗಿತ್ತು. ತುತ್ತಿಗೊಮ್ಮೆಮ್ಮೆ ಕಲ್ಲು ಸಿಕ್ಕಂತೆ, ಓದುವಾಗ ಬೇಸರವಾ ಗುತ್ತಿತ್ತು. ಮೂರನೆಯ ಮುದ್ರಣವೂ ನನ್ನ ಅನುಪಸ್ಥಿತಿಯಲ್ಲೇ ಆಗಿದ್ದರೂ ಮೈಸೂರ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್‌ನ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರು ಅನುಭವಸ್ಥ ಮುದ್ರಣಕಾರರಾದ್ದರಿಂದ ಚೊಕ್ಕವಾಗಿ ಮುದ್ರಿಸಿದ್ದಾರೆ. ಎರಡನೆಯ ಮುದ್ರಣದ ಅಕ್ಷರ ದೋಷಗಳನ್ನೂ ತಿದ್ದಿ ದ್ದಾರೆ. ಹೀಗೆ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಅವರಿಗೆ ಪರಮಾತ್ಮನು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ. ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ ಓದುಗರು ಹೃತ್ಪೂರ್ವಕವಾಗಿ ಸ್ವೀಕರಿಸುವ ರೆಂದು ನಿರೀಕ್ಷಿಸುವೆ.

ಕ್ಯಾಂಪ್ : ಬೆಂಗಳೂರು
ಅಕ್ಟೋಬರ್ ೧೦, ೧೯೭೭

ಜಗದ್ಗುರು ಮಾತೆ ಮಹಾದೇವಿ

ಆಶ್ರಯದಾತರ ಪರಿಚಯ

ಆಕಸ್ಮಿಕವಾಗಿ ಕೆಲವರು ಪರಿಚಿತರಾಗುತ್ತಾರೆ; ಆದರೆ ಆತ್ಮೀಯರಾಗಿ ಉಳಿಯುತ್ತಾರೆ; ಮತ್ತೆ ಕೆಲವರು ದೀರ್ಘಕಾಲದ ಪರಿಚಿತರಾದರೂ ಪರಿಣಾಮ ಕಾರಿ ಆತ್ಮೀಯ ಸಂಬಂಧಕ್ಕೆ ಈಡಾಗರು.

ಅಂದು ಭಾನುವಾರ ದಿ|| ೪-೩-೧೯೭೯ ಮಂಗಳೂರಿನ ನೆಹರೂ ಮೈದಾನ ದಲ್ಲಿ ನನ್ನಿಂದ ಪ್ರವಚನ ನಡೆಯುತ್ತಿತ್ತು. ವಿಶೇಷ ಪ್ರಸಂಗ ಅಂದು; 'ಚಿನ್ಮೂಲಾದ್ರಿ ಚಿತ್ಕಳೆ' ಎಂಬ ನನ್ನ ಪರಿಚಯ ಗ್ರಂಥದ ಬಿಡುಗಡೆ. ಮತ್ತು ಮೈಸೂರಿನ ದಾನಿಗಳಾದ ಶ್ರೀ ತುಕಾರಾಂರಾವ್ ಮತ್ತು ಶ್ರೀಮತಿ ಸರಸ್ವತಿ ಬಾಯಿಯವರಿಗೆ ಅಪಾರ ಜನಸ್ತೋಮದ ಎದುರು ಸತ್ಕಾರ. ಅಂದು ನನ್ನ ಪ್ರವಚನ ವೈಯಕ್ತಿಕವಿತ್ತು—ಪುಸ್ತಕ ಬಿಡುಗಡೆಯ ಸಂದರ್ಭಕ್ಕನುಸರಿಸಿ. "೧೯೭೫ನೆಯ ಅಕ್ಟೋಬರ್ ತಿಂಗಳಲ್ಲಿ ಆದ ಭೀಕರ ಕಾರಿನ ಅಪಘಾತದಿಂದ ಉಳಿಯಲು ಕೇವಲ ದೇವಾನುಗ್ರಹದಿಂದ ಸಾಧ್ಯವಾಯಿತು. ಅಧ್ಯಾತ್ಮ ಜೀವನವನ್ನು ಪ್ರವೇಶಿಸಿ, ವಿಶಿಷ್ಟ ಅವಧಿಯಲ್ಲಿ ನಾನು ಸಂಪಾದಿಸಿರಬಹುದಾದ ದೈವೀಕರುಣೆಯೇ ಪುನರ್ಜನ್ಮವನ್ನು ನೀಡಿರಬಹುದು" ಎಂದು ಮೃತ್ಯುವಿನ ಪಂಜರದಿಂದ ತಪ್ಪಿಸಿಕೊಂಡು ಚಿರಂಜೀವಿಯಾದ ಮಾರ್ಕಂಡೇಯನ ಕಥೆಗೆ ಹೋಲಿಸಿ ಹೇಳುತ್ತಿದ್ದೆ. ಆ ಪ್ರಸಂಗ ಎಲ್ಲರಿಗಿಂತಲೂ ಹೆಚ್ಚಿನ ಪರಿಣಾಮ ವನ್ನು ದಂಪತಿಗಳೀರ್ವರ ಮೇಲೆ ಉಂಟುಮಾಡಿತ್ತು.

ವೇದಿಕೆಯ ಮೇಲೆ ಕುಳಿತು, ಅನೇಕರಿಗೆ ಸಹಿ ಮಾಡಿಕೊಡುತ್ತ, ವಚನ ಗಳನ್ನು ರಚಿಸಿಕೊಡುವುದರಲ್ಲಿ ತನ್ಮಯಳಾದ ನನ್ನ ಕಣ್ಣುಗಳು ಈರ್ವರ ಮೇಲೆ ಬಿದ್ದಾಗ ಆಕರ್ಷಿತಳಾದೆ. ಸಾತ್ವಿಕತೆಯೇ ರೂಪು ತಳೆದಂತಿದ್ದ ಶುಭ್ರ ಬಿಳಿಯ ಬಟ್ಟೆ ತೊಟ್ಟ ಪತಿ-ಪತ್ನಿಯರು. ತೇಜಸ್ವಿಯಾದ ಕಣ್ಣುಗಳು; ಅವುಗಳಲ್ಲಿ ವಿಶೇಷ ಭಾವಾಭಿವ್ಯಕ್ತಿ; ಬಟ್ಟೆಯ ಬಿಳುಪಿನೊಡನೆ ಸ್ಪರ್ಧಿಸಿದ್ದ ಬಿಳಿಯ ತಲೆಗೂದಲು, ಅದೇ ಮುಖಕಾಂತಿ. ಯಾಕೋ ಅವರ ದೃಷ್ಟಿ ನಮ್ಮ ಮೇಲಿದ್ದಂತೆ, ನಮ್ಮ ಕುತೂಹಲ ಅವರ ಮೇಲೆ. ಸಹಿಯ ಕಾರ್ಯ ಮುಗಿಯುವುದು ತಡವಾದರೂ ಅವರಲ್ಲಿ ಸಹನೆಯ ನಿರೀಕ್ಷಣೆ. ಜನರ ನಿರ್ಗಮನಾನಂತರ ಸನಿಹಕ್ಕೆ ಅವರ ಆಗಮನ, ಪಾದಸ್ಪರ್ಶನ ಅನಿರೀಕ್ಷಿತ ಬಿನ್ನಹ—"ಇಂದು ನಮ್ಮ ಮನೆಗೆ ಬರಬೇಕು...." ಉಭಯತರ ಆಹ್ವಾನ ಪರಿಚಯದಷ್ಟೇ ಆಕಸ್ಮಿಕ ಆಹ್ವಾನ.

"ಎಷ್ಟು ದಿನ ಪ್ರವಚನ ಕೇಳಿದ್ದೀರಿ?" ಪ್ರಶ್ನಿಸಿದೆ.

"ಇದೇ ಮೊದಲ ದಿನ."

"ಇಂದೇ ಆಹ್ವಾನಿಸುವ ಉದ್ದೇಶವೇನು?"

"ದೃಢ ಸಂಕಲ್ಪ ಮನದಲ್ಲಿ ಮೂಡಿದೆ. ಇದು ನನ್ನ ಪತ್ನಿಯ ಅಪೇಕ್ಷೆ. ತಾವು ಬರಲೇಬೇಕು." ಆಹ್ವಾನವನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಹೊರಟೆವು. ದಾರಿಯಲ್ಲಿ ವಾಹನವು ಓಡುವಾಗ ಹಿಂದಿನ ಕಥೆ ಹೇಳಿದರು.

"ನನ್ನ ಮಗಳೊಬ್ಬಳು ಸನ್ಯಾಸಿನಿಯಾಗುತ್ತೇನೆ; ಆಶ್ರಮವಾಸಿಯಾಗುತ್ತೇನೆ ಎಂದು ಹಲವು ಹತ್ತು ಬಾರಿ ಇಷ್ಟಪಟ್ಟಿದ್ದಳು. ಮಮತೆಯ ಸುಳಿಯಲ್ಲಿ ಸಿಕ್ಕಿ ನಾವು ಒಪ್ಪಿಗೆ ನೀಡಿರಲಿಲ್ಲ. ನಂತರ ಬಲವಂತದ ಮದುವೆಯ ನೆಳವಿಗೆ ಸಿಕ್ಕಳು. ಮದುವೆಯಾಗಿ ಕೇವಲ ಎಂಟು ತಿಂಗಳು ಸಹ ಕಳೆದಿರಲಿಲ್ಲ. ದುರ್ಮರಣಕ್ಕೀಡಾದಳು. "ಹೇಳುತ್ತಾ ಹೇಳುತ್ತಾ ಉಭಯತರ ಕಂಠಗಳೂ ಗದ್ಗದಿತವಾದವು.

"ಇಂದು ನಿಮ್ಮನ್ನು ವೇದಿಕೆಯ ಮೇಲೆ ಕಂಡಾಗ ಅನ್ನಿಸಿತು. ನಮ್ಮ ಮಗಳಿಗೆ ಸನ್ಯಾಸಿನಿಯಾಗಲು ಪ್ರೋತ್ಸಾಹಿಸಿದ್ದರೆ ನಿಮ್ಮಂತೆಯೇ ತೇಜಸ್ವಿನಿಯಾಗಿ ಬೆಳಗುತ್ತ ಲೋಕೋದ್ಧಾರ ಮಾಡುತ್ತಿದ್ದಳು ಎಂದು ಭಾವೋದ್ರೇಕವಾಯಿತು. ಆಕೆಯ ಸ್ಮರಣಾರ್ಥ ಏನಾದರೂ ಕಾಣಿಕೆ ಸಲ್ಲಿಸಬಯಸುತ್ತೇವೆ."

"ಈ ದಿನ ಏನಾದರೂ ಸಲ್ಲಿಸಲೇಬೇಕೆಂದು ಐದುನೂರುಗಳನ್ನು ನೀಡುತ್ತೇವೆ. ಆದರೆ ಆಕೆಯ ಸ್ಮರಣಾರ್ಥ ಒಂದು ಕಾರ್ಯ ಮಾಡುತ್ತೇವೆ. ನಮ್ಮ ಮಗನನ್ನು ಕೇಳಿ ನಿರ್ಧಾರ ತಿಳಿಸುತ್ತೇವೆ."

ತೀರಾ ಆಕಸ್ಮಿಕವಾಗಿ ಒದಗಿದ ಭೇಟಿ ಮತ್ತು ಕಾಣಿಕೆಯ ಚಿಂತನೆ ಮಾಡುತ್ತಾ ಮನೆಯೊಳಕ್ಕೆ ಪ್ರವೇಶಿಸುವಾಗ ಪಾದಪೂಜೆ ಮತ್ತು ಆರತಿ ಮಾಡಿದರು. ನಡುಮನೆಯಲ್ಲಿ ಒಂದು ಫೋಟೋ ನೋಡಿದೆ, ಸ್ತಂಭೀಭೂತಳಾಗಿ ಕೇಳಿದೆ 'ಯಾರದಿದು?' ಆದೇ ಆಗ ಅರಳಿದ, ಇನ್ನೂ ಮಧ್ಯದಲ್ಲಿ ಮೊಗ್ಗಿನ ಲಕ್ಷಣಗಳಿದ್ದು, ಸುತ್ತಲಿನ ಪಕಳೆ ಮಾತ್ರ ತೆರೆದ, ಸುಪ್ರಭಾತದ ಸೂರ್ಯನ ಹೊಂಗಿರಣಗಳಲ್ಲಿ ಬೆಳಗುವ ಗುಲಾಬಿಯನ್ನು ಕಂಡಂತಾಯಿತು.

"ಇವಳೇ ನಮ್ಮ ಮಗಳು ಉಷಾ." ವ್ಯಾಮೋಹದ ತಂತುವನ್ನೇ ಕತ್ತರಿಸಿಕೊಂಡ ನನ್ನ ಹೃದಯವೂ ಮಿಡುಕಿತು. ಆದೇ ಆಗ ಅರಳುತ್ತ ಯಾರ ಮುಡಿಯನ್ನೋ ಏರುವ ಅಥವಾ ಪೂಜೆಗೆ ಅರ್ಪಿತವಾಗುವ ಬಯಕೆ ತಾಳಿ ನಿಂತ ಸುಂದರ ಸುಮವೊಂದನ್ನು ವಿಧಿಯು ಕ್ರೂರ ಹಸ್ತ ಕಿತ್ತು ತನ್ನ ಕಾಲಲ್ಲಿ ತುಳಿದರೆ ಯಾರಿಗೆ ಬೇಸರವಾಗದು?

'ಈಗ ಹೇಳುವ ಸಮಾಧಾನ ಸಹ ಕೃತಕವೆನಿಸೀತು' ಎಂದುಕೊಂಡು, ಔಪಚಾರಿಕ ಮಾತುಗಳನ್ನು ಕರ್ತವ್ಯದೃಷ್ಟಿಯಿಂದ ಆಡಿದೆ. ನಾವು-ನಮ್ಮ ಶಿಷ್ಯೆಯರು ಬಿಡಾರದತ್ತ ವಾಹನದಲ್ಲಿ ಹೊರಟಾಗ ಎಲ್ಲರ ಹೃದಯಗಳು ಅಂತರ್ಮುಖ; ಮೌನವು ವಾತಾವರಣವನ್ನು ತುಂಬಿತ್ತು.

'ಇಷ್ಟೊಂದು ಪರಿಣಾಮವನ್ನು ಬೀರುವ ಓರ್ವ ವ್ಯಕ್ತಿಯನ್ನು ಕಂಡೆವೆ?' ಎಂದು ಅನ್ನಿಸಬಹುದು ನಿಮಗೆ.

ಮರುದಿನ ಶ್ರೀಮತಿ ನಿರ್ಮಲಾದೇವಿ, ಶ್ರೀ ರಾಜ್‌ರವರು ನಮ್ಮ ಬಿಡಾರಕ್ಕೆ ಬಂದರು. "ಇಂದು ಬೆಳಿಗ್ಗೆ ಬೆಂಗಳೂರಿಗೆ ಮಗನಿಗೆ ಫೋನ್ ಮಾಡಿ, ಅಕ್ಕನ ಹೆಸರಿನಲ್ಲಿ ೫೦೦೧-೦೦ ರೂ. ಕೊಟ್ಟು 'ತರಂಗಿಣಿ' ಮುದ್ರಿಸಲು ಸಹಾಯಗೈವ ಬಗ್ಗೆ ಕೇಳಿದೆ. ಆಗ ಮಗ ಹೇಳಿದ ಅಕ್ಕನಿಗಾಗಿ ನೀವು ಇಡೀ ಆಸ್ತಿಯನ್ನೇ ಧಾರೆ ಎರೆದರೂ ನಾನು ಸಂತೋಷಪೂರ್ವಕವಾಗಿ ಒಪ್ಪುತ್ತೇನೆ ಎಂದು. ಆದ್ದರಿಂದ ತಾವು ಉಷಾರಾಣಿಯ ಸ್ಮರಣಾರ್ಥ ಐದುಸಾವಿರದ ಒಂದು ರೂಪಾಯಿ ಸ್ವೀಕರಿಸಿ."

ತ್ಯಾಗದಲ್ಲಿಯೂ ಸ್ಪರ್ಧೆ ತುಂಬಾ ಆನಂದವೆನಿಸಿತು. ಶ್ರೀಮತಿ ನಿರ್ಮಲಾ ದೇವಿ ಮತ್ತು ರಾಜ್‌ರವರ ನಿಸ್ವಾರ್ಥ ತ್ಯಾಗಪೂರ್ಣ ಭಕ್ತಿಯನ್ನು ಕಂಡು ಅಭಿಮಾನ ಅಚ್ಚರಿ ಒಟ್ಟಾಗಿ ಮೂಡಿದವು. ಮೊದಲು ಅವರ ಪರಿಚಯ ಮಾಡಿಕೊಟ್ಟು ನಂತರ ಶ್ರೀಮತಿ ಉಷಾರಾಣಿಯ ಪರಿಚಯ ಮಾಡಿಕೊಡುವೆ. ಈ ಗ್ರಂಥ ಮುದ್ರಣದ ಆಶ್ರಯದಾತರಾದ ಎಂ. ಸಿ. ರಾಜ್‌ರವರು ಜೈನ ಧರ್ಮೀಯರು. ಹುಟ್ಟಿದ್ದು ೧೯೨೦ರಲ್ಲಿ, ಸೆಪ್ಟೆಂಬರ್ ೨೭ರಂದು. ಹುಟ್ಟಿದೂರು ದಕ್ಷಿಣ ಕನ್ನಡ ಜಿಲ್ಲೆ, ಕಾರ್ಕಳ ತಾಲ್ಲೋಕು ಮಾರ್ನಾಡ್. ಪೂರ್ಣ ಹೆಸರು ಎಂ. ಚಂದ್ರರಾಜ್, ಅವರ ಬಾಲ್ಯ-ಯೌವ್ವನಗಳೆಲ್ಲವೂ ದುಃಖ, ಹೋರಾಟಗಳ ರಣರಂಗ. ಹುಟ್ಟಿದ ಐದೇ ದಿನಗಳಿಗೆ ತಾಯಿ ಸಿದ್ಧಮ್ಮನ ಸಾವು. ಮಗು ಇಪ್ಪತ್ತೈದನೆ ದಿನಕ್ಕೆ ಬೆಳೆದಾಗ ತಂದೆ ಶ್ರೀ ಎಂ. ಪಿ. ಕೆಲ್ಲ ಅವರ ನಿಧನ. ಅಕ್ಕ ಚಂದ್ರಾವತಿ ಹೊರತು ಹಸುಗೂಸು ಚಂದ್ರರಾಜ್‌ಗೆ ಯಾರೂ ದಿಕ್ಕಿಲ್ಲ. ಇಬ್ಬರೂ ಸಣ್ಣವರೇ. "ಅನಾಥರಿಗೆ ದೇವರೇ ಬಂಧು" ಎಂಬ ಉಕ್ತಿಯಂತೆ ತಂದೆಯ ಸ್ನೇಹಿತರಾದ ಶ್ರೀ ಧರ್ಮ ಹೆಗ್ಗಡೆಯವರು ಅನಾಥ ಮಕ್ಕಳಿಗೆ ಆಶ್ರಯ ನೀಡಿದರು. ಅಷ್ಟರಲ್ಲಿ ತಾಯಿಯ ತಂಗಿ ಚಿಕ್ಕಮ್ಮನು ಆಶ್ರಯ ಕೊಟ್ಟದ್ದು ನಿಜವಾದರೂ ಆಕೆ ತನ್ನ ಮತ್ತು ಅನಾಥರಾದ ಅಕ್ಕನ ಮಕ್ಕಳಲ್ಲಿ ತೋರುತ್ತಿದ್ದ ಪಕ್ಷಪಾತ ಅಪಾರ. ಯಾವುದೇ ಮಮತೆಯಿಲ್ಲದ ಚಿಕ್ಕಮ್ಮನ ವರ್ತನೆಯಿಂದ ಮನಸ್ಸು ನೊಂದಿತ್ತು. ಸ್ವಾಭಿಮಾನಿಯಾದ ಬಾಲಕ ವಯಸ್ಸಿನ

ಸೀಮೆಯನ್ನೂ ಲಕ್ಷಿಸದೆ ಮನೆ ತೊರೆದು, ಅವರಿವರ ಕೆಲಸ ಮಾಡಿಕೊಟ್ಟು ಓದಲು ಆರಂಭಿಸಿದ. ದೊಡ್ಡವರ ಮನೆಯಲ್ಲಿ ಕೆಲಸ ಮಾಡುತ್ತ ಹಾಗೂ ಹೀಗೂ ಓದಿ, ಎರಡನ್ನೂ ಹೊಂದಿಸಿಕೊಳ್ಳಲಾರದೆ ಐದನೆಯ ತರಗತಿಗೆ ಬರುವುದರಲ್ಲಿ ವಿದ್ಯೆಗೆ ತಿಲಾಂಜಲಿ (ಆದರೆ ಶ್ರೀ ರಾಜ್‌ರವರನ್ನು ನೋಡಿದರೆ ಎರಡು ಮೂರು ಡಿಗ್ರಿಯಾಗಿರಬೇಕು ಎಂಬ ನಂಬುಗೆ ಸ್ವಾಭಾವಿಕವಾಗಿ ಬರುವುದು) ಆ ನಂತರ ಬೀಡಿಕಟ್ಟುವ ಉದ್ಯೋಗವನ್ನು ಆಶ್ರಯಿಸಿ ಬಾಳ್ವೆ ಸಾಗಿಸಬೇಕಾಯಿತು. ಸೈಕಲ್‌ಷಾಪ್‌ಗಳಲ್ಲಿ ಕೆಲಸ ಮಾಡುತ್ತ, ಬೀಡಿ ಕಟ್ಟುತ್ತ, ಅದೇ ಸಂಪಾದನೆಯಲ್ಲೇ ನಿಯಮಿತವಾಗಿ ಉಳಿಸುತ್ತ ಹಣವನ್ನು ಕೂಡಿಹಾಕತೊಡಗಿದರು.

ಚಂದ್ರಹಾಸನ ಕಥೆಯ ಪ್ರತಿರೂಪದಂತಿದೆ, ಎಂ. ಸಿ. ರಾಜ್‌ರವರ ಜೀವನ ಕಥೆ. ಅನಾಥ ಬಾಲಕ ಚಂದ್ರಹಾಸ ಶಿವಲೀಲೆಯಿಂದ ರಾಜಕುಮಾರಿ ವಿಷಯೆಯನ್ನು ಮದುವೆಯಾದಂತೆ, ಶ್ರೀ ರಾಜ್‌ರವರ ಮನೆ ತುಂಬಿದ ಮಡದಿ ನಿರ್ಮಲಾದೇವಿ ಸುಪ್ರಸಿದ್ಧ ಜೈನ ವ್ಯಾಪಾರಿಗಳು, ಉದ್ಯಮಿಗಳೂ ಆದ ಶ್ರೀ ಪಾಂಡ್ಯರಾಜ ಬಲ್ಲಾಳರ ಮಗಳು. ಮೂಡಬಿದ್ರೆಯ ನಿವಾಸಿಗಳು,ರಾಜವಂಶಕ್ಕೆ ಸೇರಿದ್ದ ಇತಿಹಾಸವಿರುವ ಶ್ರೀ ಪಾಂಡ್ಯರಾಜ ಬಲ್ಲಾಳ ಮತ್ತು ಶ್ರೀಮತಿ ಶಾರದಾಬಾಯಿಯವರ ಪ್ರೇಮದ ಪುತ್ರಿ ಶ್ರೀಮತಿ ನಿರ್ಮಲ. ಇಂದು ಬಲ್ಲಾಳ ಟ್ರಾನ್ಸ್‌ಪೋರ್ಟ್ ಎಂದು ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಖ್ಯಾತಿವೆತ್ತಿರುವ ಬಸ್ ಸಮುದಾಯದ ಒಡೆಯರು ಶ್ರೀ ಪಾಂಡ್ಯರಾಜರು. ೧೯೩೬ರಲ್ಲಿ ಶ್ರೀಯುತರು ಇಹಲೋಕ ತೊರೆದರು. ಶ್ರೀಮತಿ ಶಾರದಾಬಾಯಿ ೧೯೪೪ರಲ್ಲಿಯೇ ಪರಂಧಾಮವನ್ನೈದಿದ್ದರು. ಅತ್ಯಂತ ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದ ನಿರ್ಮಲಾ, ಕಡುಬಡತನದ ಹೋರಾಟದಲ್ಲೇ ಮುಂದೆ ಬಂದ ಶ್ರೀ ರಾಜ್, ಇಬ್ಬರ ವಿವಾಹ ದೈವೀಸಂಕಲ್ಪವಲ್ಲದೆ ಬೇರಲ್ಲ. ೧೯೪೪ರಲ್ಲಿ ಮದುವೆಯಾಯಿತು.

ಮೂವತ್ತರ ಹರೆಯದಲ್ಲಿ ಎಂ. ಸಿ. ರಾಜ್‌ರವರು ಓರ್ವ ಲಾರಿ ಮಾಲಿಕರಲ್ಲಿ ಕೆಲಸಕ್ಕೆ ಸೇರಿದರು. ಈ ವ್ಯಕ್ತಿಯ ದಕ್ಷತೆ, ಪ್ರಾಮಾಣಿಕತೆ, ಶ್ರದ್ಧೆಗಳು ಎಷ್ಟೋ ದಿವಸಗಳಿಂದ ನಷ್ಟದಲ್ಲಿ ನಡೆಯುತ್ತಿದ್ದ ಲಾರಿಯ ವ್ಯವಹಾರವನ್ನು ಉತ್ತಮಪಡಿಸಿದವು. ನಷ್ಟ ಭರ್ತಿಯಾಗಿ ಲಾಭದ ಗಳಿಕೆ ಆರಂಭವಾದಾಗ ಲಾರಿಯ ಮಾಲಿಕರು ವಿಸ್ಮಿತರಾದರು. ಎಂ. ಸಿ. ರಾಜ್‌ರವರನ್ನು ಮಗನಿಗಿಂತ ಮಿಗಿಲಾಗಿ ಪ್ರೀತಿಸಿದರು.

ವ್ಯವಹಾರಪ್ರಜ್ಞೆ ಬೆಳೆದಿತ್ತು; ತಾವೇ ಸ್ವತಂತ್ರರಾಗಿ ಲಾರಿಯನ್ನು

ಇಡುವ ಬಯಕೆ ಅದಮ್ಯವಾಯಿತು. ಅಂಥ ಪ್ರಸಂಗದಲ್ಲಿ ಕಾಂಟ್ರ್ಯಾಕ್ಟ್ ಆಧಾರದ ಮೇಲೆ ಲಾರಿಯನ್ನು ಮಾಲಿಕರು ವಹಿಸಿಕೊಟ್ಟರು. ಈಗ ನಿರ್ಮಲಾ ದೇವಿಯೊಡನೆ ಯಶೋಲಕ್ಷ್ಮಿಯೂ ಮಾಲೆ ಹಾಕಿದಳು. ಇಲ್ಲಿಯವರೆಗಿನ ಕರಾಳ ಬಡತನದ ಕಾರ್ಮೋಡಗಳು ಸರಿದು, ಸುಖದ ಬೆಳದಿಂಗಳು ಮೆಲ್ಲ ಮೆಲ್ಲನೆ ಹಸರಿಸತೊಡಗಿತು. ಸ್ವತಂತ್ರವಾದ ಲಾರಿಯ ಉದ್ಯಮ ಪ್ರಾರಂಭ ವಾಯಿತು. ಮುಂದೆ ೧೯೬೬ರಲ್ಲಿ ಉಷಾ ಎಂಜನಿಯರಿಂಗ್ ವರ್ಕ್ಸ್ ಆರಂಭಿಸಿದರು. ನಿಷ್ಕಾಮವಂತ, ಪ್ರಾಮಾಣಿಕ ಪ್ರಯತ್ನದ ಫಲವೋ ಅಥವಾ ಮೈಗೂಡಿಸಿಕೊಂಡಿದ್ದ ಸದ್ಗುಣಗಳಿಗಾಗಿ ದೇವನಿತ್ತ ವರವೋ ಅಂತೂ ಮುನ್ನಿನ ಕಷ್ಟಗಳು ಪಲಾಯನಿಸತೊಡಗಿದವು.

ಜೀವನದ ಅಭಿವೃದ್ಧಿ ಸಾಧಿಸುತ್ತಿದ್ದಂತೆಯೇ ಶ್ರೀ ರಾಜ್‌ರವರು ಮೈ-ಗೂಡಿಸಿಕೊಂಡು ಬೆಳೆದಿದ್ದ ಬಡತನವನ್ನು ಮರೆಯಲಿಲ್ಲ. ಬಡವರನ್ನು ಅಲಕ್ಷಿಸ ಲಿಲ್ಲ. ಅತ್ಯಂತ ಸರಳ ಜೀವನವನ್ನೇ ನಡೆಸುತ್ತ, ಸಾಧ್ಯವಾದಷ್ಟು ದೀನ ದಲಿತರಿಗೆ, ಬಡವರಿಗೆ, ನಿಸ್ಸಹಾಯಕರಿಗೆ ನೆರವು ನೀಡತೊಡಗಿದರು.

ಅವರಲ್ಲಿ ಕೃತಜ್ಞತಾಭಾವ ಅತ್ಯಧಿಕ. ತನಗೆ ಕಿಂಚಿತ್ತು ಸಹಾಯ ಸಲ್ಲಿಸಿದವರನ್ನು ಇಂದು ಸ್ಮರಿಸುತ್ತಾರೆ. ಬಾಲ್ಯದಲ್ಲಿ ಸಹಾಯ ಸಲ್ಲಿಸಿದ ಧರ್ಮ ಹೆಗ್ಗಡೆಯವರನ್ನಾಗಲೀ, ಪಕ್ಷಪಾತ ಮಾಡಿದ ಚಿಕ್ಕಮ್ಮನನ್ನಾಗಲೀ ಮರೆತಿಲ್ಲ. ಇವರ ಸ್ಥಾನಮಾನ ಸುಧಾರಿಸಿದಾಗ ಮನೆಗೆ ಆಗಮಿಸಿದ ಚಿಕ್ಕಮ್ಮ ನನ್ನು ಸತ್ಕರಿಸಿ ಹೇಳಿದರಂತೆ : "ನೀವೇನೂ ಹಳೆಯದನ್ನು ನೆನಪಿಸಿಕೊಂಡು ದುಃಖಿಸಬೇಡಿ. ಅಂದು ನೀವು ಪಕ್ಷಪಾತ ಮಾಡಿ, ತಿಳಿಗಂಜಿ ನೀಡಿ, ಅಲಕ್ಷ ದಿಂದ ಕಾಣದೆ ನಿಮ್ಮ ಮಕ್ಕಳಂತೇ ಕಂಡಿದ್ದರೆ ನಾನು ಮನೆಯಿಂದ ಹೊರಬರುತ್ತಿರಲಿಲ್ಲ. ನನ್ನಲ್ಲಿ ಸಾಹಸಪ್ರವೃತ್ತಿ ಬೆಳೆಯುತ್ತಿರಲಿಲ್ಲ. ಇಷ್ಟು ಪ್ರವರ್ಧಮಾನಕ್ಕೂ ಬರುತ್ತಿರಲಿಲ್ಲ. ನನ್ನ ಪ್ರಗತಿಗೆ ಪರೋಕ್ಷವಾಗಿ ನೀವೇ ಕಾರಣರು.

ಬೀಡಿ ಕಟ್ಟುವ ಉದ್ಯೋಗದಲ್ಲಿ ತೊಡಗಿದ್ದ ಬಾಲಕನಾಗಿದ್ದಾಗ ಒಮ್ಮೆ ಬಾಡಿಗೆ ಸೈಕಲ್ ಮೇಲೆ ನಗರಕ್ಕೆ ಹೊರಟಿದ್ದರಂತೆ. ದಾರಿಯಲ್ಲಿ ಕಾಫಿ ಕುಡಿಯಲಿಕ್ಕೆಂದು ಒಂದು ಆಣೆ ಜೇಬಿನಲ್ಲಿ ಇಟ್ಟಿದ್ದರಂತೆ. ಒಡನಿದ್ದ ಸ್ನೇಹಿತ ನೋರ್ಮನ ಜೊತೆಗೆ ಕಾಫಿಗೆ ಹೊರಟಾಗ ಚಡ್ಡಿಯ ಜೇಬಿನಲ್ಲಿದ್ದ ತೂತಿನ ಮುಖಾಂತರ ಆ ಆಣೆಯೂ ಬಿದ್ದುಹೋಗಿತ್ತು. "ನೀನೇ ಹೋಗಿ ಕುಡಿ, ನನ್ನ ಆಣೆ ಕಳೆದುಹೋಗಿದೆ" ಎಂದು ನಿರಾಶೆಗೊಂಡು ಅಂದಾಗ ಆ ವ್ಯಕ್ತಿ ಒತ್ತಾಯಿಸಿ ತನ್ನ ಮುಕ್ಕಾಲು ಆಣೆ ವ್ಯಯಿಸಿ ಇವರಿಗೆ ಕಾಫಿ ಕುಡಿಸಿದನಂತೆ.

ಆ ಪ್ರಸಂಗವನ್ನು ಇನ್ನೂ ಮರೆಯದ ರಾಜ್‌ರವರು ಇಂದಿಗೂ ಅವರಿಗೆ ಯಾವುದಾದರೊಂದು ನೆರವು ನೀಡಲು ಇಚ್ಛಿಸುವರಂತೆ.

ಶ್ರೀಮತಿ ನಿರ್ಮಲಾರವರು ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿ ಬೆಳೆದಿದ್ದರೂ, ಬಡತನದ ಸೋಂಕನ್ನೇ ಅರಿಯದೆ ಇದ್ದರೂ, ಬಡವರನ್ನು ಕಂಡು ಅವರಿಗೆ ಅಪಾರ ಅನುಕಂಪ. ಅವರ ಉದಾರ ಹಸ್ತ ಸದಾಕಾಲ ಹಿತವನ್ನು ಗೈಯ್ಯುವುದರಲ್ಲೇ ಆಸಕ್ತ. ಈ ದಂಪತಿಗಳಿಗೆ ಇಬ್ಬರೇ ಮಕ್ಕಳು. ಹಿರಿಯವಳು ಶ್ರೀಮತಿ ಉಷಾರಾಣಿ ಮತ್ತು ತಮ್ಮ ಶ್ರೀ ವಿನೋದ್. ಉಷಾರಾಣಿ ಹುಟ್ಟಿದ್ದು ೯-೪-೧೯೪೬ರಲ್ಲಿ. ಅತ್ಯಂತ ಬುದ್ಧಿವಂತ ಮಗು, ಗುಣವಂತೆ ಮತ್ತು ಅಕಲಂಕ ಚೆಲುವೆ. ತನ್ನ ನಡೆ-ನುಡಿ, ಮಾತು, ವರ್ತನೆ ಎಲ್ಲದರಿಂದಲೂ ಎಲ್ಲರಿಗೂ ತಂಪನ್ನೆರೆಯುವ ಮಗಳು. ಪಿ.ಯು.ಸಿ ತನಕ ಓದಿದ ಬಳಿಕ ವೈದ್ಯಕೀಯ ಪದವಿಗೆ ಅಭ್ಯಸಿಸುವ ಬಯಕೆ. ಆ ದಿಶೆಯಲ್ಲಿ ಯತ್ನಿಸುವಾಗಲೇ ಓರ್ವ ಅಧ್ಯಾಪಕರು ಅವರ ಮನೆಗೆ ಬಂದರು. ಪ್ರಾಣಿಶಾಸ್ತ್ರ ವಿದ್ಯಾರ್ಥಿನಿಯಾದ ಆಕೆ ಬಿಡಿಸಿದ್ದ ಮೀನು ಮುಂತಾದ ಚಿತ್ರಗಳಲ್ಲಿದ್ದ ಅದ್ಭುತ ಕಲಾವಂತಿಕೆ ಕಂಡು ಬೆರಗಾಗಿ 'ಇಂಥಾ ಪ್ರತಿಭಾವಂತ ಭಾವನಾಜೀವಿ ವೈದ್ಯಕೀಯ ರಂಗಕ್ಕೆ ಬರುವುದೇನೂ ವೈಶಿಷ್ಟ್ಯಪೂರ್ಣ ಕೊಡುಗೆಗೆ ಸಹಾಯಕವಾಗದು. ಆದ್ದರಿಂದ ಈಕೆಯ ಕಲೆಯು ಬೆಳವಣಿಗೆಯಾಗಲು ಸಹಾಯಗೈಯ್ಯಿರಿ." ಕುಮಾರಿ ಉಷಾರಾಣಿಯ ಒಲವೂ ಇದ್ದುದರಿಂದ ಮುಂಬಯಿಗೆ ಕಲಾಭ್ಯಾಸಕ್ಕಾಗಿ ರಾಜ್‌ರವರು ಕಳಿಸಿದರು. ಅಲ್ಲಿಯ ಸುಪ್ರಸಿದ್ಧ ಜೆ. ಜೆ. ಆರ್ಟ್ಸ್ ಶಾಲೆಗೆ ಅರ್ಜಿ ಸಲ್ಲಿಸಿದಾಗ ಅವರು ಖಂಡತುಂಡವಾಗಿ ಪ್ರವೇಶ ನಿರಾಕರಿಸಿದರು. ಆಗ ಕಲಾನಿಕೇತನ ಎಂಬ ಶಾಲೆಗೆ ಉಷಾ ಅರ್ಜಿ ಹಾಕಿ, ಪ್ರವೇಶ ಪಡೆದರು. ಆ ವರ್ಷ ಒಂದು ಕಲಾಸ್ಪರ್ಧೆಯನ್ನು ಜೆ. ಜೆ. ಆರ್ಟ್ಸ್‌ನವರು ಏರ್ಪಡಿಸಿದ್ದಾಗ ಉಷಾರಾಣಿ ಮೊದಲ ಬಹುಮಾನ ಪಡೆದಾಗ ಶಾಲೆಯವರು ಆಕೆಯನ್ನು ಆಮಂತ್ರಿಸಿದರು. ಮೊದಲು ನಿರಾಕರಿಸಿದ್ದಕ್ಕಾಗಿ ವಿಷಾದವನ್ನೂ ವ್ಯಕ್ತಪಡಿಸಿದರು. ಐದು ವರ್ಷಗಳ ಕಾಲ ಆ ಶಾಲೆಯಲ್ಲಿ ಆಳವಾದ ಅಧ್ಯಯನವನ್ನು ಉಷಾ ಕೈಗೊಂಡರು. ಆಕೆ ಬಿಡಿಸಿದ ಚಿತ್ರಗಳಿಗೆ ಅಂತರರಾಷ್ಟ್ರೀಯ ಬೇಡಿಕೆ ಸಹಾ ದೊರಕಿ ಸುಮಾರು ೧೨,೦೦೦ (ಹನ್ನೆರಡು ಸಾವಿರ) ರೂಪಾಯಿ ಗೌರವಧನ ಬರತೊಡಗಿತು. ಆಗ ತನ್ನ ತಂದೆಗೆ ಬರೆದಳಂತೆ, 'ದೇವರು ಕೊಟ್ಟ ಪ್ರತಿಭೆಯಿಂದ ನಾನು ಗಳಿಸಿದ ಹಣವನ್ನು ನನ್ನ ವೈಯುಕ್ತಿಕ ಉಪಯೋಗಕ್ಕೆ ಬಳಸುವುದಿಲ್ಲ. ನನ್ನ ಖರ್ಚಿಗೆ ನೀವೇ ಕಳಿಸಿರಿ—ಬಂದ ಹಣವನ್ನೆಲ್ಲ

ಸ್ಮರಣಾರ್ಥ

ಶರಣೆ ಉಷಾರಾಣಿ

"ಆನಂದತುಂದಿಲರಾದ ತಾಯಿ-ತಂದೆ ಒಮ್ಮನದಿಂದ ಒಪ್ಪಿಗೆ ಕೊಟ್ಟರು. ಹೀಗಾಗಿ ಉಷಾರ ಗಳಿಕೆ ಅನಾಥಾಶ್ರಮ, ಸಾರ್ವಜನಿಕ ಸೇವಾಶ್ರಮಗಳಿಗೆ ಸಲ್ಲತೊಡಗಿತು. ಅಪೂರ್ವ ಸುಂದರಿಯಾಗಿದ್ದರೂ, ತನ್ನ ಸೌಂದರ್ಯ ಪ್ರಸಾಧನಗಳಿಗೆ ಎಳ್ಳಷ್ಟೂ ಖರ್ಚು ಮಾಡದೆ ಅತ್ಯಂತ ಸರಳ ಜೀವನ ನಡೆಸುತ್ತ ತನ್ನ ಗಳಿಕೆಯನ್ನು ಸರ್ವೋಪಕಾರಕ್ಕೆ ವ್ಯಯಿಸತೊಡಗಿದರು. ಉಷಾರಾಣಿಯ ಕಲಾಪ್ರತಿಭೆ ಅತ್ಯಂತ ಅದ್ಭುತವಾಗಿತ್ತು. ಉತ್ತಮ ನಾಟಕಕಾರಳು, ನೃತ್ಯಕಾರಳು. ನಾಟಕ, ಫ್ಯಾನ್ಸಿ ಡ್ರೆಸ್ ಮುಂತಾದವಕ್ಕೆ ಅಲಂಕರಿಸುವ ಪ್ರತಿಭೆ ಅಸಾಮಾನ್ಯವಾಗಿತ್ತು. ಜೊತೆಗೆ ಅಷ್ಟೇ ಧೈರ್ಯ ಶಾಲಿನಿ. ಎಂಥ ಹಾವುಗಳನ್ನಾದರೂ ನಗುನಗುತ್ತ ಹಿಡಿದು ಆಟವಾಡಿಸು ತ್ತಿದ್ದರೆ ನೋಡುವ ಜನರು ದಂಗಾಗುತ್ತಿದ್ದರು. ಅಪೂರ್ವ ಚೆಲ್ವಿಕೆಯೊಂದೆಡೆ, ಮದುವೆಯಾಗದೆ ಅಧ್ಯಾತ್ಮ ಜೀವನ ನಡೆಸುವ ಬಯಕೆಯೊಂದೆಡೆ. "ಅಪ್ಪಾ, ನಾನು ಮದುವೆ ಆಗೋದಿಲ್ಲ. ಯಾವುದಾದರೂ ಆಶ್ರಮಕ್ಕೆ ಸೇರಿಸಿಬಿಡಿರಿ. ಕೈಲಾದಷ್ಟು ಸೇವೆ ಮಾಡಿ ಜನ್ಮ ಸಾರ್ಥಕ ಮಾಡಿಕೊಳ್ಳುತ್ತೇನೆ. ಮದುವೆ ಯಾದರೆ ನನ್ನ ಕಲಾಪ್ರತಿಭೆ ಕುಂಠಿತವಾಗಬಹುದು. ನನ್ನಿಂದ ಏನೊಂದೂ ಉಪಕಾರವಾಗದಿರಬಹುದು." ಹೀಗೆ ಹಲವಾರು ಬಾರಿ ವ್ಯಕ್ತಪಡಿಸಿದ್ದುಂಟು.

ಆದರೆ ವಿಧಿಲೀಲೆ ವಿಚಿತ್ರ. ತಾಯಿ ತಂದೆ ಯಾವೊಂದೂ ನಿರ್ಧಾರ ತೆಗೆದು ಕೊಳ್ಳುವ ಮುನ್ನವೇ; ತಾನು ಯಾವ ದಿಶೆಯಲ್ಲಿ ಮುಂದುವರಿಯಬೇಕು ಎಂದು ವಿವೇಕಯುಕ್ತವಾಗಿ ವಿಚಾರ ಮಾಡುವ ಮುನ್ನವೇ ಮದುವೆಯ ಬಂಧನದಲ್ಲಿ ಸಿಕ್ಕಿದಳು. ಆಗಸ್ಟ್ ಒಂದನೆಯ ತಾರೀಖು 1971ರಂದು, ತಿರುಪತಿಯಲ್ಲಿ ಮದುವೆ ನೆರವೇರಿತು.

ಆ ಮದುವೆಯ ಬಂಧನದಲ್ಲಿ ಸಿಕ್ಕಿದ್ದು ದೇವನಿಚ್ಛೆಗೆ ವಿರುದ್ಧವಾಗಿರ ಬೇಕು. ತನ್ನ ದಿವ್ಯಪಥಕ್ಕಾಗಿ ಮೀಸಲಾಗಿದ್ದ ಮುಗ್ಧ ಸುಮವೊಂದು ತನಗರ್ಪಿತವಾಗದಿದ್ದಕ್ಕಾಗಿ ದೇವನು ಕ್ರೋಧತಪ್ತನಾಗಿರಬಹುದು. ಅಥವಾ ತಾನೇ ಸಂಕಲ್ಪಿಸದಿದ್ದ ವಾತಾವರಣಕ್ಕೆ ಸಿಕ್ಕಿಬಿದ್ದ ಜೀವವನ್ನು ಬಿಡುಗಡೆ ಮಾಡುವ ಉದ್ದೇಶವಿದ್ದಿರಬಹುದು. ಮದುವೆಯಾಗಿ ಕೇವಲ ಎಂಟು ತಿಂಗಳಿಗೆ ಬೆಂಕಿಯ ಅಪಘಾತಕ್ಕೆ ಸಿಕ್ಕ ಉಷಾರಾಣಿ ದುರ್ಮರಣಕ್ಕೆ ಈಡಾದಳು. ಬೌರಿಂಗ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಉಷಾಳನ್ನು ಕಾಣಲು ತಂದೆ ಬಂದಾಗ ಮಗಳ ರೂಪನ್ನು ಕಂಡು ತತ್ತರಿಸಿದರು. ಮುಂಜಾವಿನ ಸೂರ್ಯನ ಹೊಂಗಿರಣಗಳಲ್ಲಿ ಮಂಜಿನ ಹನಿಗಳನ್ನು ಹೊತ್ತು ಕುಲುಕುಲು ನಗುತ್ತಿದ್ದ ಚೆಲುವಿನ ಗುಲಾಬಿ ಬೆಂಕಿಯ ಕ್ರೂರ ನಾಲಿಗೆಗೆ ಸಿಕ್ಕು ಜರ್ಜರಿತವಾಗಿತ್ತು.

ಕಣ್ಣು ಸುಟ್ಟಿದ್ದವು. ಚರ್ಮವೆಲ್ಲ ಬೆಂದು ಕರಿಕಾಗಿತ್ತು. ಇಂಥ ಭೀಕರ ಸುದ್ದಿ ಕೇಳಿ ಅರಗಿಸಿಕೊಳ್ಳುವ ತಾಕತ್ತಾಗಲೀ, ಭಯಂಕರ ದೃಶ್ಯವನ್ನು ಕಂಡು ಸಹಿಸಿಕೊಳ್ಳುವ ಧೈರ್ಯವಾಗಲೀ ಇಲ್ಲದಿದ್ದ ಪತ್ನಿ ನಿರ್ಮಲಾರವರಿಗೆ ಸುದ್ದಿಯನ್ನೂ ತಿಳಿಸದೆ, ಅಂತ್ಯದರ್ಶನಕ್ಕೂ ಅವಕಾಶಕೊಡದ ಕ್ರೂರಭಾವ (??) ನನ್ನು ರಾಜ್‌ರವರು ತಾಳಿದರು. ಮುದ್ದು ಮಗಳಂತೂ ಕೈಬಿಡತೊಡಗಿದ್ದಳು. ಅದನ್ನು ತೋರಿಸಿ ಮಮತೆಯ ಮಡದಿಯನ್ನೂ ಕಳೆದುಕೊಳ್ಳಬೇಕೇ?

ಅತ್ಯಂತ ಕರುಣಾಪೂರಿತ ಧ್ವನಿಯಲ್ಲಿ ಶಕ್ತಿಯನ್ನೆಲ್ಲ ಮೈಗೂಡಿಸಿಕೊಂಡು ತಂದೆಗೆ ಉಷಾರಾಣಿ ಹೇಳಿದರು : "ದಯಮಾಡಿ ನನ್ನನ್ನು ಉಳಿಸಲು ಯತ್ನಿಸಬೇಡಿ. ಚೆಲ್ವಿನ ಪುತ್ಥಳಿಯನ್ನು ಕಂಡ ಈ ಕಣ್ಣುಗಳು ಜೀವಿತ ಪರ್ಯಂತರ ಕುರೂಪದ ಮುದ್ದೆಯನ್ನು ಕಾಣುತ್ತ ನೋಯುವುದು ಬೇಡ. ಆದಷ್ಟು ಬೇಗ ನಾನು ಸತ್ತರೆ ಒಳ್ಳಿತು." ಬಹುಶಃ ಈ ಕಠೋರ ಮಾತಿನಿಂದ ವೈದ್ಯರೂ ಸಹ ಅಚ್ಚರಿಪಟ್ಟಿರಬಹುದು. ಪ್ರಾಣ ಬಿಡುವ ಮುನ್ನ ಉಷಾ ಹೇಳಿದಳಂತೆ, "ನನ್ನಂಥ ಮಕ್ಕಳು ಅನೇಕರು ಸಿಕ್ಕಬಹುದು. ಆದರೆ ನಿಮ್ಮಂಥ ಆದರ್ಶ ತಾಯಿ-ತಂದೆ ಸಿಕ್ಕುವುದು ಅಸಾಧ್ಯ." ಗಟ್ಟಿ ಮನಸ್ಸಿನಿಂದ ಮಗಳಿಗೆ ಅಂತ್ಯಕ್ರಿಯೆ ಮಾಡಿ ಮುಗಿಸಿ ರಾಜ್‌ರವರು ಮಂಗಳೂರಿಗೆ ಬಂದು, ಸ್ವಲ್ಪ ಕಾಲದ ನಂತರ ಹೆಂಡತಿಗೆ ಸುದ್ದಿ ತಿಳಿಸಿದರಂತೆ. ಕನಸಿನಲ್ಲಿ ನಡೆದಂತೆ ಮಗಳ ಸಾವು ಆಗಿದ್ದರೂ ಇಂದಿಗೂ ಎಲ್ಲರ ಹೃದಯದಲ್ಲಿ ಮಗಳ ನೆನಪು ಹಸಿರು. ಮನೆಯ ತುಂಬ ಆಕೆ ತೆಗೆದಿರುವ ಸುಂದರ ತೈಲಚಿತ್ರಗಳು, ರೇಖಾಚಿತ್ರ ಮತ್ತು ಜಲವರ್ಣ ಚಿತ್ರಗಳು. ಇದು ನಿಜಕ್ಕೂ ಯಾರ ದುರ್ದೈವ? ಅಂಥ ವಿಶೇಷ ವ್ಯಕ್ತಿತ್ವದ ಮಗಳನ್ನು ಕಳೆದುಕೊಂಡ ತಾಯಿ-ತಂದೆಗಳದೋ? ಅಕ್ಕರೆಯ ಅಕ್ಕನನ್ನು ಕಳೆದುಕೊಂಡ ತಮ್ಮ ವಿನೋದರದೋ? ಅಥವಾ ಉತ್ಕೃಷ್ಟ ಕಲಾಪ್ರತಿಭೆಯಿಂದ ಮತ್ತು ಅಪಾರ ಮಾನವೀಯತೆಯಿಂದ ಲೋಕದಲ್ಲಿ ವಿನೂತನ ಸೇವೆ ಮಾಡಬಹುದಾಗಿದ್ದ ಶ್ರೇಷ್ಠ ಮಟ್ಟದ ಕಲಾವಿದೆಯನ್ನು ಕಳೆದುಕೊಂಡ ಸಮಾಜದ್ದೋ? ಉಷಾರಾಣಿಯ ದುರಂತದ ಕಥೆ ಕೇಳಿದಾಗ ನಮಗೇ ಕರುಳು ಮಿಡಿಯದಿರದು. ಸಮಾಜಕ್ಕೆ ಲಭ್ಯವಾಗಬಹುದಾಗಿದ್ದ ಒಂದು ಪ್ರತಿಭಾವಂತ ಚೇತನ ದೊರೆಯದಾಯಿತು ಎಂಬುದೇ ನಮ್ಮ ವ್ಯಥೆ.

ಶ್ರೀ ರಾಜ್‌ರವರ ಮಗ ವಿನೋದರವರು ಅತ್ಯಂತ ಸೌಜನ್ಯಶೀಲ ಸ್ವಭಾವದ ತರುಣ. ಹುಟ್ಟಿದ್ದು 20-11-1953. ಅಕ್ಕ-ತಮ್ಮರೆಂದರೆ ಎರಡು ದೇಹ, ಒಂದು ಪ್ರಾಣ. ತಮ್ಮನ ಬಗ್ಗೆ ತುಂಬಿತುಳುಕು

ಅಕ್ಕನ ಬಗ್ಗೆ ತುಂಬು ಅಭಿಮಾನ ಅಕ್ಕರೆ ಮತ್ತು ಗೌರವ ತಮ್ಮನಲ್ಲಿ. ಇಬ್ಬರೂ ಮಕ್ಕಳಿಗೆ ಒಂದೊಂದು ಮನೆಯನ್ನು ಕೊಳ್ಳುವ ಆಲೋಚನೆಯಿಂದ ಶ್ರೀ ರಾಜ್‌ರವರು ಖರೀದಿಸಿ ಎರಡರಲ್ಲಿ ನಿಮಗೆ ಬೇಕಾದ್ದು ಆರಿಸಿಕೊಳ್ಳಿ ಎಂದರೆ, ಉಷಾ ಹೇಳಿದಳಂತೆ "ನನಗಿರುವವನ ಒಬ್ಬ ತಮ್ಮ. ನಮ್ಮ ಮನೆತನಕ್ಕೆ ಬೆಳಕು. ಅವನು ಮೊದಲು ಆರಿಸಿಕೊಳ್ಳಲಿ. ಬಿಟ್ಟಿದನ್ನು ನಾನು ಪಡೆಯುವೆ." ಆಗ ವಿನೋದರ ಉತ್ತರ "ನಾನು ಮಗ; ಅಪ್ಪನ ಆಸ್ತಿಗೆಲ್ಲ ಒಡೆಯನಾಗುತ್ತೇನೆ. ನಾನೂ ದುಡಿಯುತ್ತೇನೆ. ಬೇಕೆನಿಸಿದರೆ ಮತ್ತೆ ಮನೆಯನ್ನೂ ಕಟ್ಟಿಸಬಲ್ಲೆ. ಆದ್ದರಿಂದ ಆಕೆಯ ಮನಸ್ಸಿಗೆ ಒಪ್ಪುವಂಥದ್ದು ಆರಿಸಿಕೊಳ್ಳಲಿ. ಬಿಟ್ಟದ್ದು ನನಗೆ." ಮಕ್ಕಳ ಪರಸ್ಪರ ತ್ಯಾಗಬುದ್ಧಿ ಕಂಡು ತಾಯಿ ತಂದೆಯರಿಗೆ ಒಳಗೇ ಸಂತೋಷ. ನನಗಿರಲಿ, ನನಗಿದು, ನನಗದು ಎಂದು ಕಿತ್ತಾಡುವ ಮಕ್ಕಳಾಗದೆ ನಿನಗೇ ಇರಲಿ ಎಂದು ತ್ಯಾಗಮಾಡುವ ಗುಣನಿಧಿಗಳಾದ ಮಕ್ಕಳು ಹುಟ್ಟಿದ್ದಕ್ಕೆ ಅಪಾರ ಸಮಾಧಾನ.

ತನ್ನಕ್ಕನ ನೆನಪು ವಿನೋದರ ಮನಸ್ಸಿನಲ್ಲಿ ಚಿರಹಸಿರು. ಸಾಮಾನ್ಯವಾಗಿ ಬೇರಾವ ವಸ್ತುಗಳನ್ನು ಉಪಯೋಗಿಸದ, ಎಷ್ಟೇ ಸಾಮಾನ್ಯ ವಸ್ತುಗಳಿರಲಿ ತನ್ನವನ್ನು ತಾನೇ ಬಳಸುವ ಪರಿಪಾಠವಿದ್ದ ಉಷಾ ಬಳಸುತ್ತಿದ್ದ ವಸ್ತುಗಳನ್ನು ಒಂದು ಅಲ್ಮೈರಾದಲ್ಲಿ ಅಂದವಾಗಿ ಜೋಡಿಸಿ, ದಿನವೂ ನೋಡಿ ಸಮಾಧಾನ ಹೊಂದುತ್ತ, ಬಂದವರಿಗೆ ಅವನ್ನು ತೋರಿಸಿ ಆನಂದಿಸುವುದು ವಿನೋದರ ಪರಿಪಾಠ. ವಿನೋದರು ಬಿ.ಎ. ಪದವೀಧರರಾಗಿ ಈಗ ನ್ಯಾಯಶಾಸ್ತ್ರವನ್ನು ಓದುತ್ತಿದ್ದಾರೆ. ಬೇರಾವ ತಿರುಗುವ ಹವ್ಯಾಸವೂ ಇಲ್ಲದ ಅವರು ಸಮಯವನ್ನು ಹರಣಮಾಡಲಿಚ್ಛಿಸದೆ ಹಗಲು ಹೊತ್ತಿನಲ್ಲಿ ಬ್ಯಾಂಕಿನಲ್ಲಿ ಕಾಯಕ ಮಾಡಿ ಸಂಜೆ 'ಲಾ' ಕಾಲೇಜಿನಲ್ಲಿ ಅಭ್ಯಸಿಸುತ್ತಿದ್ದಾರೆ. ಸ್ವಾರ್ಜಿತ ಹಣದಲ್ಲೇ ವಿದ್ಯಾಭ್ಯಾಸ ಮಾಡುವ ಅಭೀಪ್ಸೆ.

ಶ್ರೀ ಎಂ. ಸಿ. ರಾಜ್ ಮತ್ತು ಶ್ರೀಮತಿ ನಿರ್ಮಲಾರವರು ಅತ್ಯಂತ ಸಹೃದಯರು, ತ್ಯಾಗಜೀವಿಗಳು. ಅನ್ಯಾಯ ಮಾಡಿದವರಿಗೂ ಸಹ ಸಹಾಯ ಬಯಸುವ ಸಹನಾಗುಣವೊಂದೆಡೆ, ನಿರ್ಗತಿಕರಿಗೆ ಸಹಾಯಗೈವ ಮಾನವೀಯತೆ ಇನ್ನೊಂದೆಡೆ. ತಮ್ಮ ಮಗಳು ಉಷಾರಾಣಿಯ ನೆನಪಿನಲ್ಲಿ ಕಲಾಸ್ಪರ್ಧೆಯನ್ನೇರ್ಪಡಿಸಲು ಮತ್ತು ಒಂದು, ಎರಡು, ಮೂರನೆಯ ಬಹುಮಾನ ಕೊಡಲು ಮೂಡಬಿದ್ರೆಯ ಜೈನ ಶಾಲೆಗೆ ಮತ್ತು ಅದೇ ರೀತಿಯಲ್ಲಿ ಬೋರ್ಡ್ ಹೈಸ್ಕೂಲಿಗೆ ಧನಸಹಾಯ ಮಾಡಿದ್ದಾರೆ. ಕೆಲವು ಗುಪ್ತದಾನ ಕೂಡ ಮಾಡುತ್ತಾ ಇದ್ದಾರೆ. ಶ್ರೀಮತಿ ಉಷಾರಾಣಿಯ ಸ್ಮರಣಾರ್ಥ

'ತರಂಗಿಣಿ' ಗ್ರಂಥದ ಮುದ್ರಣಕ್ಕೂ ನೆರವು ನೀಡಿದ್ದಾರೆ. ಅನಿರೀಕ್ಷಿತವಾದ ಆರ್ಥಿಕ ನೆರವು ಬೇಕಾದಲ್ಲಿ ಆಶ್ರಮಕ್ಕೆ ಆಗಾಗ ಸಹಾಯ ಮಾಡಿದ್ದಾರೆ, ಮಾಡುತ್ತಾರೆ. ಇಂಥ ಸದ್ಗುಣಶೀಲ ದಂಪತಿಗಳಾದ ಶ್ರೀ ಎಂ. ಸಿ. ರಾಜ್ ಮತ್ತು ಶ್ರೀಮತಿ ನಿರ್ಮಲಾರವರಿಗೆ ಪರಮಾತ್ಮನು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ಕೊಡಲಿ. ವಿನೋದರು ಉತ್ತರೋತ್ತರ ಅಭಿವೃದ್ಧಿಯನ್ನು ಸಾಧಿಸಿ, ಹೆತ್ತವರಿಗೆ ಆನಂದ ತರುವ ಮಗನಾಗಲಿ. ಪೂರ್ಣವಾಗಿ ಅರಳಿ ದೇವನ ಪಾದಕ್ಕೆ ಅರ್ಪಿತವಾಗಬೇಕಾಗಿದ್ದ "ಉಷಾರಾಣಿ" ವಿಧಿಯ ಕರಾಳ ತುಳಿತಕ್ಕೆ ಸಿಕ್ಕು ಇಹದಿಂದ ಕಣ್ಮರೆಯಾಗಿದ್ದರೂ, ಸದ್ಗುಣ ಸೌರಭದಿಂದ ಇರುವಷ್ಟು ಕಾಲ ಎಲ್ಲರನ್ನೂ ಮುದಗೊಳಿಸಿದ ಆ ಚೇತನಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ವಿಶ್ವಗುರು ಬಸವೇಶ್ವರರಲ್ಲಿ ಪ್ರಾರ್ಥಿಸುವೆವು.

ಜಗದ್ಗುರು ಮಾತೆ ಮಹಾದೇವಿ

ಬೆಂಗಳೂರು

ಆಗಸ್ಟ್ ೩೧, ೧೯೭೯

ತರಂಗಿಣಿಯಲ್ಲಿ ಮಿಂದಾಗ

ಪೂರ್ವಾರ್ಧ

ಭಾಗ ೧ – ಉಗಮ

೧	ಬಯ್ಸಿಟ್ಟ ಬಯಕೆ	೩
೨	ಸಾತ್ವಿಕ ಸಂಸಾರ	೧೨
೩	ಧರ್ಮ ಸಂಸ್ಕಾರ	೧೬
೪	ಸಂಕಲ್ಪ ಸಿದ್ಧಿ	೨೯
೫	ನನಸಾದ ಕನಸು	೩೯
೬	ಕಾರಣಿಕ ಕನ್ಯೆ	೪೪

ಭಾಗ ೨ – ಪ್ರಗತಿ

೭	ಬಿದಿಗೆಯ ಚಂದ್ರ	೫೩
೮	ವಿದ್ಯೆಗೆ ನಾಂದಿ	೫೮
೯	ಸುಪ್ತಶಕ್ತಿಯ ಆವಿಷ್ಕಾರ	೬೬
೧೦	ವಿರಕ್ತಿಯ ಕಿಡಿ	೭೫
೧೧	ಮೋಡ ಸರಿಯಿತು	೮೫
೧೨	ಕನ್ನೆತನ ಕಾಲಿಕ್ಕಿತು	೯೩
೧೩	ಪುನರ್ಜನ್ಮ	೯೬

ಭಾಗ ೩ – ಗಮನ

೧೪	ಅಂತರ್ಮುಖಿ	೧೧೧
೧೫	ದೇವ ವಿರಹಿಣಿ	೧೨೨
೧೬	ಶಿವನೊಲಿಮೆ	೧೪೨
೧೭	ನಿರಾಕರಣೆ	೧೫೮
೧೮	ಏಕದೇವೋಪಾಸನೆ	೧೭೨
೧೯	ಮದುವೆಯ ಮಾತು	೧೮೪
೨೦	ಸಮಾಧಾನಿ	೧೯೬

೨೧ ವ್ಯಥಚಿತ್ತೆ ೨೧೧
೨೨ ನೆಮ್ಮದಿಯ ನೆಲೆ ೨೨೪
೨೩ ಕೌಶಿಕನ ಕಾಕದೃಷ್ಟಿ ೨೩೦
೨೪ ವಿರಹದುರಿಯಲ್ಲಿ ೨೫೦
೨೫ ಕಳವಳದ ಕೂಪದಲ್ಲಿ ೨೫೭
೨೬ ಕ್ರೋಧತಪ್ತ ಕಾಮಿ ೨೮೦
೨೭ ಕಾಡಾರಣ್ಯದಲ್ಲಿ ಕಾಲುದಾರಿ ೨೮೯
೨೮ ಪಂಜರಕ್ಕೆ ಪಯಣ ೩೧೪
೨೯ ಕರ್ತವ್ಯದ ಪಾಠ ೩೪೦
೩೦ ಮದನನರಮನೆಯಲ್ಲಿ ಆಧ್ಯಾತ್ಮ ಬೋಧೆ ೩೫೩
೩೧ ಪ್ರಕೃತಿಯ ಪ್ರಶಾಂತ ಮಡಿಲಲ್ಲಿ ೩೭೧
೩೨ ಅಭವನ ಧ್ಯಾನಕ್ಕೆ ಭವಿಯಿಂದ ಭಂಗ ೩೯೩
೩೩ ಗುರುಗಳ ಮುಖಭಂಗ ೪೦೩
೩೪ ಜ್ಞಾನಮಂಥನ ೪೧೭
೩೫ ದಿಗಂಬರ ದಿವ್ಯಯೋಗಿಣಿ ೪೪೭
೩೬ ಮೋಹ ಪಂಜರದಿಂದ ಮುಕ್ತಿ ೪೫೯

ಉತ್ತರಾರ್ಧ

ಭಾಗ ೪ – ಸಂಗಮ

೩೭ ಮಸಣದಲ್ಲಿ ಒಂದು ಇರುಳು ೪೮೧
೩೮ ಹಸಿವಿನ ಅಬ್ಬರ ೪೯೧
೩೯ ಭಯಂಕರ ಬೈರಾಗಿ ೪೯೯
೪೦ ಮುಗಿಲೆರೆದ ಮಜ್ಜನ ೫೦೭
೪೧ ನಿಂದಕರಿಗೆ ನಿಜಬೋಧೆ ೫೨೭
೪೨ ಮಹಾಗ್ರಾಮದಲ್ಲಿ ಮಹಾದೇವಿ ೫೩೫
೪೩ ದಾಸೋಹ ಧಾಮದಲ್ಲಿ ೫೪೧
೪೪ ಕಲ್ಯಾಣ ಪ್ರವೇಶ ೫೪೭
೪೫ ಕಿನ್ನರಯ್ಯನ ಪರೀಕ್ಷೆ ೫೫೪
೪೬ ಅನುಭವ ಮಂಟಪದ 'ಅಕ್ಕ' ೫೬೭

೪೭ ಶಿವಯೋಗ ಸಾಧನೆಯಲ್ಲಿ ೬೦೮
೪೮ ಯೋಗಾಂಗ ತ್ರಿವಿಧಿಯ ರಚನೆ ೬೧೭
೪೯ ದಾರ್ಶನಿಕ ದೇವಗಂಗೆ ೬೩೧
೫೦ ದ್ವೇಷದ ಜ್ವಾಲೆ–ಪ್ರೇಮದ ಜಲ ೬೪೩

ಭಾಗ ೫ – ಸಮಾಗಮ

೫೧ ಕದಳಿಯ ಕಾಮನೆ ೬೫೩
೫೨ ಪಯಣದ ಪ್ರಸ್ತಾಪ ೬೬೧
೫೩ ಕರುಣೆಯ ಕಂದ ೬೭೦
೫೪ ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ? ೬೭೭
೫೫ ದಯೆಯೇ ಧರ್ಮದ ಮೂಲ ೬೯೫
೫೬ ಶ್ರೀಗಿರಿಯ ಆರೋಹಣ ೭೦೨
೫೭ ಕದಳಿಯತ್ತ ಪಯಣ ೭೧೨
೫೮ ಅನುಷ್ಠಾನದ ಆನಂದದಲ್ಲಿ ೭೨೯
೫೯ ಪ್ರವೃತ್ತಿ ಪಲ್ಲಟ ೭೩೨
೬೦ ಸಾಗರದಲ್ಲಿ ಸಮರಸ ೭೫೧

ಗ್ರಂಥಋಣ

1 ಮಹಾದೇವಿಯಕ್ಕನ ವಚನಗಳು
—ಸಂ : ಡಾ॥ ಆರ್. ಸಿ. ಹಿರೇಮಠ, ಕ. ವಿ. ವಿ., ಧಾರವಾಡ 1968

2 ಅಕ್ಕನ ಪ್ರವಚನ
—ಸ್ವಾಮಿ ಲಿಂಗಾನಂದ, ಜ.ಅ.ಆಶ್ರಮ, ಧಾರವಾಡ 1970

3 ಬಸವಣ್ಣನವರ ಷಟ್‌ಸ್ಥಲದ ವಚನಗಳು
—ಸಂ : ಡಾ॥ ಆರ್. ಸಿ. ಹಿರೇಮಠ, ಕ.ವಿ.ವಿ., ಧಾರವಾಡ 1968

4 ಚನ್ನಬಸವಣ್ಣನವರ ವಚನಗಳು
—ಸಂ : ಡಾ॥ ಆರ್. ಸಿ. ಹಿರೇಮಠ, ಕ.ವಿ.ವಿ., ಧಾರವಾಡ 1971

5 ವಚನ ಸಾಹಿತ್ಯ ಸಂಗ್ರಹ
—ಸಂ : ಸಂ. ಶಿ. ಭೂಸನೂರ ಮಠ, ಎಂ.ಎ. 1965

6 ಅಲ್ಲಮನ ವಚನ ಚಂದ್ರಿಕೆ
—ಸಂ : ಡಾ॥ ಎಲ್. ಬಸವರಾಜು, ನಳಿನೀ ಶಂಕರ ಪ್ರಕಾಶನ,
ಮೈಸೂರು 1960

7 ಶಿವಶರಣರ ಕಥಾರತ್ನಕೋಶ
—ಲೇ : ತ. ಸು. ಶಾಮರಾಯ, ತ. ವೆಂ. ಸ್ಮಾರಕ ಗ್ರಂಥಮಾಲೆ,
ಮೈಸೂರು 1967

8 ಹರಿಹರ ಕವಿಯ ಬಸವರಾಜ ದೇವರ ರಗಳೆ 1955
—ಸಂ : ತ. ಸು. ವೆಂಕಣ್ಣಯ್ಯ, ಮೈಸೂರು

9 ಬಳ್ಳಿಗಾವೆ ಕ್ಷೇತ್ರದರ್ಶನ 1965
—ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವ ಸಮಿತಿ, ಶಿವಮೊಗ್ಗ

10 ಪ್ರಬುದ್ಧ ಕರ್ನಾಟಕ
—ಸಂ : 23, ಸಂಚಿಕೆ 3, ಪುಟ 22–23

ಭಾಗ ೧

ಉಗಮ

೧. ಬಚ್ಚಿಟ್ಟ ಬಯಕೆ

‘ಶಿವನೊಲಿಮೆಯನ್ನು ಒರೆಗೆ ಹಚ್ಚಬಾರದು. ಬೇಡ....ಲಿಂಗಾ, ಭಕ್ತಿಯ ಕೈಂಕರ್ಯಕ್ಕೆ ಕೂಲಿಯನ್ನು ಬೇಡುವುದು ಸಲ್ಲದು. ನಿಷ್ಕಾಮ ಭಕ್ತಿಯು ನಮ್ಮದಾಗಬೇಕು. ಹೃತ್ಪೂರ್ವಕ ಭಕ್ತಿಯು ನೀಡುವ ಸಂತೃಪ್ತಿಯನ್ನು ಮತ್ತಾವುದೂ ನೀಡದು. ಫಲಾಪೇಕ್ಷೆಯಿಂದ ಮಾಡಿದರೆ, ಅದರ ಫಲ ದೊರೆಯದಾಗ ನಮ್ಮ ಭಕ್ತಿ ನಿರಾಶೆ, ಕೋಪ, ತಾಪಗಳಲ್ಲಿ ಪರ್ಯಾವಸಾನ ಹೊಂದುವುದು....’

ಓಂಕಾರಶೆಟ್ಟಿ ತಾನು ಅಧ್ಯಯನಿಸುತ್ತಿದ್ದ ಹೊತ್ತಿಗೆಯಿಂದ ದೃಷ್ಟಿಯನ್ನು ಸರಿಸಿ, ಲಿಂಗಮ್ಮನ ಮುಖವನ್ನು ನಿಟ್ಟಿಸುತ್ತ ನುಡಿದ.

‘ಇಷ್ಟು ಅನನ್ಯ ಭಕ್ತಿಯಿಂದ, ಅನೇಕ ವರ್ಷಗಳಿಂದ ಎಡಬಿಡದೆ ಪೂಜಿಸಿ, ಪ್ರತಿಫಲವಾಗಿ ಕಂದನನ್ನು ನೀಡೆಂದು ಪರಿತಪಿಸುತ್ತಿದ್ದರೂ, ಮನದ ಅಳಲನ್ನು ಅರಿತು ಆ ನಿಮ್ಮ ದೇವರು ನಮ್ಮ ಬೇಡಿಕೆಗೆ ಕಿವಿನೀಡಿ ನಮ್ಮೀ ವಂಶದ ಲತೆಯನ್ನು ಮುಂದುವರಿಸುವ ಕುಡಿಯೊಂದನ್ನು ನೀಡಬಾರದೆ? ನಮ್ಮಂತಹ ನಿಷ್ಠಾವಂತ ಭಕ್ತರ ಬೇಡಿಕೆಯನ್ನರಿಯಲಾರದ ಆ ದೇವರನ್ನು ಪೂಜಿಸಬೇಕೇಕೆ....?’

ಕೈಯಲ್ಲಿದ್ದ ತಳಿಗೆಯನ್ನು ಪುಷ್ಪ-ಫಲಗಳ ಸಮೇತ ಕೆಳಗೆ ಹಾಕಿ, ಮಂದಲಿಗೆಯ ಮೇಲೆ ಕುಕ್ಕರಿಸಿದಳಾಕೆ.

ಪತ್ನಿಯ ಧ್ವನಿಯಲ್ಲಿ ಆಕ್ರೋಶವಿತ್ತು, ಆಳಲಿನ ಝಳವಿತ್ತು. ಭೂಮಿಯ ಗರ್ಭದಲ್ಲಿ ಬಹುಕಾಲ ಹುದುಗಿಕೊಂಡಿದ್ದು, ಅಲ್ಲಿಯೇ ಕುದಿಯುತ್ತಿದ್ದು, ಕಾಲಾನಂತರದಲ್ಲಿ ಸ್ಫುರಿಸುವ ಲಾವಾರಸದಂತೆ ಭಾವನೆಗಳು ಹೊರಹೊಮ್ಮುತ್ತಿದ್ದವು. ಜ್ವಾಲಾಮುಖಿ ಕಿಡಿಯುಗುಳುವಂತೆ ಕಣ್ಣುಗಳು ಉದ್ರಿಕ್ತತೆಯ ಕಿಡಿಗಳನ್ನು ಸಿಡಿಸುತ್ತಿದ್ದವು. ಆವೇಶದ ಈ ನುಡಿಗಡಣ, ಉದ್ರಿಕ್ತ ವರ್ತನೆಗಳನ್ನು ಕಂಡು ಓಂಕಾರನ ಮನೋಸರಸಿಯಲ್ಲಿ ಅಚ್ಚರಿಯ ಅಲೆಗಳು ಏಳದಿರಲಿಲ್ಲ. ಸಾತ್ವಿಕತೆಯೇ ಸಾವಯವಗೊಂಡಂತಿದ್ದ ಲಿಂಗಮ್ಮನ ವರ್ತನೆಯಲ್ಲಿ ಇಂತಹ ಆವೇಶವನ್ನು ಅವನೆಂದೂ ಕಂಡಿರಲಿಲ್ಲ. ಸಂಭ್ರಾಂತನಾಗಿ ಪತ್ನಿಯನ್ನು ದಿಟ್ಟಿಸಿದ. ಉದ್ರಿಕ್ತತೆಯೊಡನೆ ನೋವು ಸಹ ವ್ಯಕ್ತರೂಪ ಪಡೆಯಲು ಹಾತೊರೆಯುತ್ತಿತ್ತು. ಕಣ್ಣುಗಳು ನೀರಿನ ಮಡುಗಳಾಗಿದ್ದವು, ಕುತ್ತಿಗೆಯ ನರಗಳು ಬಿಗಿಯುತ್ತಿದ್ದವು, ಬಲವಂತವಾಗಿ ದುಃಖವನ್ನು ತಡೆಹಿಡಿಯುತ್ತಿದ್ದಳು.

ಈ ಆವೇಶಕ್ಕೆ ಹಿನ್ನೆಲೆ ಏನಿರಬೇಕೆಂದು ಓಂಕಾರನು ಆಲೋಚಿಸುತ್ತಲಿದ್ದ. ಪ್ರಸಾದ ಪೂರೈಸಿ ಮಧ್ಯಾಹ್ನ ಬೆವಹಾರ ಕಾಯಕಕ್ಕೆ ಹೋದ ಅವನು ಸಂಜೆಯ ತನಕ ಅಂಗಡಿಯ ಮೇಲಿದ್ದು, ದಿನನಿತ್ಯದ ಕಾರ್ಯಕ್ರಮಗಳಾದ ಪೂಜೆ—ಅಧ್ಯಯನಗಳನ್ನು ನಿರ್ವಹಿಸಲು ಮನೆಗೆ ಬಂದಾಗ, ಮನೆಯಲ್ಲಿ ಲಿಂಗಮ್ಮನ ಸುಳಿದಾಟ ಕಂಡುಬರಲಿಲ್ಲ. ಕುತೂಹಲಿತನಾಗಿ ಸೇವಕಿ ಗಿರಿಜಾಂಬೆಯನ್ನು ವಿಚಾರಿಸಿದಾಗ ಲಿಂಗಮ್ಮ ಅದೇ ಕೇರಿಯ ನಿವಾಸಿಗಳಾದ ಫಾಲನೇತ್ರಯ್ಯನವರ ಮನೆಗೆ ಹೋದುದು ತಿಳಿಯಿತು. ತನ್ನ ಪಾಡಿಗೆ ತಾನು ಮಿಂದು, ಪೂಜೆ ಮುಗಿಸಿ, ಪ್ರಸಾದ ಸ್ವೀಕರಿಸಿ ಅಧ್ಯಯನದಲ್ಲಿ ಮಗ್ನನಾಗಿ ಇರುವಾಗ ಲಿಂಗಮ್ಮ ಆವೇಶದಿಂದಲೇ ಧಾವಿಸಿದ್ದಳು.

ಓಂಕಾರಶೆಟ್ಟಿ ಗ್ರಂಥವನ್ನು ಮಗ್ಗುಲಿನ ಪೀಠದ ಮೇಲಿರಿಸಿ, ಎದ್ದು ಬಂದು, ಲಿಂಗಮ್ಮನ ಎರಡೂ ಕೈಗಳನ್ನು ಹಿಡಿದು ಮೇಲಕ್ಕೆತ್ತಿ, ತನ್ನೊಡನೆ ಕರೆದೊಯ್ದು, ಮಂಚದ ಮೇಲೆ ಕುಳಿತು,

'ಕುಳಿತುಕೋ....ಶಾಂತಳಾಗು ಲಿಂಗಾ....' ಎಂದು ಮೃದು ಧ್ವನಿಯಲ್ಲಿ, ಕರುಣೆಯ ಪೂರವನ್ನೇ ಹರಿಸುತ್ತ ನುಡಿದ.

ಮಂಚದ ಮೇಲೆ ಕುಳಿತು, ಗಂಡನ ಎದೆಗೊರಗಿ ಲಿಂಗಮ್ಮ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಪತ್ನಿಯ ತಲೆಯನ್ನು ಮೃದುವಾಗಿ ಸವರುತ್ತ, ಕಣ್ಣೀರನ್ನು ಕೈಗಳಿಂದ ಒರೆಸಿ, ಮನದ ದುಗುಡ ಸ್ವಲ್ಪ ತಿಳಿಯಾಗಲು ಅವಕಾಶ ನೀಡಿದ, ಓಂಕಾರಶೆಟ್ಟಿ.

'ಲಿಂಗಾ....ನೀನು ನನ್ನನ್ನು ಪ್ರೀತಿಸುತ್ತೀಯಾ....?' ಕೇಳಿದ.

'ಏಕೆ....ಸಂಶಯವೆ?....' ಆಕಸ್ಮಿಕ ಪ್ರಶ್ನೆಯಿಂದ ಅಚ್ಚರಿಗೊಂಡು ಲಿಂಗಮ್ಮ ಮರು ಪ್ರಶ್ನಿಸಿದಳು.

'ಏತಕ್ಕಾಗಿ ನನ್ನನ್ನು ಪ್ರೀತಿಸುವೆ? ನನ್ನ ಶ್ರೀಮಂತಿಕೆ, ನಾನು ಕೊಡುವ ಬಟ್ಟೆ-ಬರೆ, ಒಡವೆ-ವಸ್ತುಗಳಿಗಾಗಿಯೇ?'

'ಛೀ....ಬಿಡ್ತು ಅನ್ನಿ. ನಾನು ಪ್ರೀತಿಸುವುದು ನಿಮಗಾಗಿ, ನಿಮ್ಮ ಪವಿತ್ರ ಪ್ರೇಮಕ್ಕಾಗಿ; ನೀವು ಕೊಡುವ ವಸ್ತುಗಳಿಗಾಗಿ ಅಲ್ಲ. ಅಂತರಂಗದಲ್ಲಿ ಅನನ್ಯವಾಗಿ ಪ್ರೀತಿಸಿ, ಬಹಿರಂಗದಲ್ಲಿ ನಿಮ್ಮ ಸೇವೆ ಮಾಡುವುದರಲ್ಲೇ ನನಗೆ ಅಶೀಮ ಆನಂದ, ಅಪಾರ ಸಂತೃಪ್ತಿ.'

'ಹಾಗೆಯೇ....ಲಿಂಗಾ, ದೇವರನ್ನು ನಾವು ಪೂಜಿಸಬೇಕಾದುದು ಅವನನ್ನು ಗಳಿಸಿಕೊಳ್ಳುವುದಕ್ಕೆ, ಅವನ ಕಾರುಣ್ಯದಲ್ಲಿ ಮಿಂದು ಪುನೀತರಾಗಲಿಕ್ಕೆ! ದೇವನು ಕೊಡುವ ವಸ್ತುಗಳನ್ನು ಗುರಿಯಾಗಿರಿಸಿಕೊಂಡು ಆರಾಧಿಸಬಾರದು.'

ಲಿಂಗಮ್ಮ ನಿರುತ್ತರಳಾದಳು. ಸಾವರಿಸಿಕೊಂಡು ನಂತರ ನುಡಿದಳು :

'ಅದೇನು, ಇವೆಲ್ಲ ಆಧ್ಯಾತ್ಮವಾಯಿತು. ಆದರೆ ಈ ಶುಷ್ಕ ತತ್ವಜ್ಞಾನ, ಅತೀತ ಆದರ್ಶ, ವ್ಯವಹಾರ ಜೀವನದಲ್ಲಿ ನಡೆದೀತೆ....?'

'ನಡೆಯಬೇಕು ದೇವಿ....ಆಧ್ಯಾತ್ಮವು ಬದುಕಿನಿಂದ ಭಿನ್ನವಾಗಿರಬಾರದು, ವಸ್ತ್ರದೊಳಗಣ ಅಡ್ಡ-ಉದ್ದ ಎಳೆಗಳಂತೆ ಹಾಸುಹೊಕ್ಕಾಗಬೇಕು. ಆಧ್ಯಾತ್ಮ ತತ್ತ್ವಜ್ಞಾನಗಳಿರುವುದು ಕೇವಲ ಹೇಳಿ, ಕೇಳಲಿಕ್ಕಲ್ಲ—ನಡೆದು ತೋರಿಸಲೋಸುಗ. ನಡೆ-ನುಡಿಗಳ ಮಧ್ಯೆ ಅವಿನಾಭಾವ ಸಂಬಂಧವಾಗದಿದ್ದರೆ ಅಂತಹ ಜ್ಞಾನಕ್ಕೆ ಯಾವ ಅರ್ಥವೂ ಇಲ್ಲ....'

'ಒಳ್ಳೆಯದು....ಜ್ಞಾನದ ಖನಿಗಳಾದ ಧರ್ಮಶಾಸ್ತ್ರಗಳು, ಹಿರಿಯರು ಒಕ್ಕೊರಲಿನಿಂದ ಹೇಳುತ್ತಾರಲ್ಲಾ, 'ಮಕ್ಕಳಾಗದಿದ್ದರೆ ಮುಕ್ತಿಯಾಗದು; ಬಂಜೆಯರಿಗೆ ಸ್ವರ್ಗದ ಬಾಗಿಲು ತೆರೆಯದು' ಎಂದು. ನಾನೇನು ಆಧ್ಯಾತ್ಮ ಸಾಧನೆ ಮಾಡಿದರೇನು ಮಕ್ಕಳೇ ಇಲ್ಲದಾಗ!'

ಓಂಕಾರಶೆಟ್ಟಿಗೆ ನಗೆಯ ಹೊನಲು ಉಕ್ಕಿ ಬಂದಿತು. ಇಲ್ಲಿಯವರೆಗೆ ಹೊಂದಿದ್ದ ಉಪದೇಶಕನ ಗಾಂಭೀರ್ಯದ ತೆರೆ ಸರಿಸಿ ನಗತೊಡಗಿದ. ಸ್ವಚ್ಛಂದವಾದ ನಗೆಯಿಂದಾಗಿ ಅವನ ಗುಲಾಬಿ ವರ್ಣದ ಮುಖ ಮತ್ತಷ್ಟು ಕೆಂಪೇರಿತು. ಲಿಂಗಮ್ಮನು ನಾಚಿ ಮೌನವಾಂತಳು, 'ಬಹುಶಃ ತನ್ನ ಅಜ್ಞಾನದ ನುಡಿಯು ಪ್ರತಿಫಲವಾಗಿರಬೇಕು ಈ ಅಪಹಾಸ್ಯದ ನಗು' ಎಂಬುದನ್ನರಿತು.

ತನ್ನನ್ನು ತಾನೆ ನಿಯಂತ್ರಿಸಿಕೊಂಡು ಓಂಕಾರಶೆಟ್ಟಿ ಹೇಳಿದ:

'ಹುಚ್ಚಿ, ಎಂತಹ ಸಿದ್ಧಾಂತ ನಿನ್ನದು! ನಿನ್ನ ತತ್ತ್ವಜ್ಞಾನದ ಪ್ರಕಾರ ಪರಮ ವೈರಾಗ್ಯಮೂರ್ತಿಗಳೂ, ತಪೋಧನರೂ ಆದ ಮಹಂತರಿಗೆ ಮುಕ್ತಿಯಿಲ್ಲ. ಆಚೆ ಮನೆಯ ಅಂಬುಜಮ್ಮನಿಗೆ ಆರು ಮಕ್ಕಳು. ಮುಂದಿನ ಮನೆಯ ಉಮಕ್ಕನಿಗೆ ಹತ್ತು ಮಕ್ಕಳು, ಇವರಿಗೆಲ್ಲ ಮುಕ್ತಿಪದವಿ ಕಟ್ಟಿಟ್ಟ ಬುತ್ತಿಯೋ! ಇವರೆಲ್ಲ ಯಾವಾಗ ಬಂದಾರೋ ಎಂದು ಸ್ವರ್ಗದ ಬಾಗಿಲು ತೆರೆದುಕೊಂಡು ಕಾಯುತ್ತಲಿರಬಹುದು ಅಲ್ಲವೆ?'

'....' ಲಿಂಗಮ್ಮನ ಮುಖ ತನ್ನ ಅಜ್ಞಾನದ ಅರಿವಿನಿಂದ ಕೆಂಪಾಗಲು ಗಂಡನ ಎದೆಯಲ್ಲಿ ಮುಖವನ್ನು ಹುದುಗಿಸಿದಳು. ಕ್ಷಣಕಾಲ ತಡೆದು ಕೇಳಿದಳು :

'ಹಾಗಾದರೆ ಶಾಸ್ತ್ರಗಳು ಹೇಳುವುದು ಸುಳ್ಳೇ....?'

'ಮಕ್ಕಳಾಗದಿದ್ದರೆ ಮುಕ್ತಿಯಿಲ್ಲ' ಎಂಬ ಈ ವಾಕ್ಯದ ಹಿಂದೆ 'ನಿಮಗೆ'

ಎಸ್ಸುವುದನ್ನು ಜೋಡಿಸದೆ, 'ನೀವು' ಎಂದು ಹೊಂದಿಸಿ ಬಳಸಬೇಕು ದೇವಿ. ನಾವು ಮಕ್ಕಳಂತೆ ಆಗದಿದ್ದರೆ, ಅಂತಹ ನಿಷ್ಕಲ್ಮಶ, ನಿರ್ವಿಕಾರ ಮನಃಸ್ಥಿತಿಯನ್ನು ಪಡೆಯದಿದ್ದರೆ ಮುಕ್ತಿಯಾಗದು, ದೈವೀ ರಾಜ್ಯಕ್ಕೆ ಪ್ರವೇಶ ದೊರೆಯದು. ಪ್ರಾಕೃತಿಕ ಮಕ್ಕಳನ್ನು ಪಡೆಯುವುದೇ ಮಹತ್ಸಾಧನೆಯಲ್ಲ. ಕೋಟಿ ಕೋಟಿ ಜನರು ಅದನ್ನು ಸುಲಭವಾಗಿ ಸಾಧಿಸುತ್ತಾರೆ; ಪಶುಪಕ್ಷಿ ಕ್ರಿಮಿ ಕೀಟಗಳು ಸಹ ಪ್ರಜೋತ್ಪತ್ತಿ ಮಾಡುವಲ್ಲಿ ಮಾನವನಿಗಿಂತ ಮುಂದುವರಿದಿವೆ. ತ್ರೈಮಲಗಳನ್ನು ಸುಜ್ಞಾನದ ಅಗ್ನಿಯಲ್ಲಿ ದಹಿಸಿಕೊಂಡು, ಪರಮಾತ್ಮನ ದರ್ಶನ ಮಾಡಿಸಬಲ್ಲ ಸದ್ಗುರುವಿನ ಮಕ್ಕಳಾಗಬೇಕು. ಇಂತಹ ಸಂಸ್ಕಾರ ಪಡೆದಾಗ ನಮಗೆ ದೈವಾನುಭಾವದ ಮಗುವಾಗುವುದು. ಅಂತಹ ಮಗುವನ್ನು ಪಡೆದವರು ಮುಕ್ತರು....' ಓಂಕಾರಶೆಟ್ಟಿ ಹೇಳಿದ.

'ಆದರೆ, ಅಂತಹ ಮಗುವನ್ನು ಪಡೆದಾಗ ಅದು ಜಗತ್ತಿನ ಚರ್ಮಚಕ್ಷುಗಳಿಗೆ ಕಾಣದು. ಲೋಕದ ನಿಂದೆಯ ಸಂಕಟವಂತೂ ತಪ್ಪದು.' ಲಿಂಗಮ್ಮನಿಗೆ ಮತ್ತೆ ಸಂಜೆಯ ಘಟನೆ ನೆನಪಿಗೆ ಬಂದು ಚಿತ್ತ ಸರೋವರವನ್ನು ಕಲಕಿತು. ತಡೆದಿಟ್ಟ ದುಃಖ ಮುಖದ ಮೇಲೆ ಪುನಃ ಕಾಣಿಸಿಕೊಂಡಿತು.

'ನಿಮ್ಮ ಉಪದೇಶವೆಲ್ಲ ಕೇಳಲಿಕ್ಕೆ ಅಷ್ಟೇ ಚಂದ. ಅನುಭವಿಸಲಿಕ್ಕೆ.... ಅಬ್ಬಾ! ಅಸಹನೀಯ. ಇಂದು ಸಂಜೆ....' ದುಃಖದ ಒತ್ತಡ ಹೆಚ್ಚಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಓಂಕಾರಶೆಟ್ಟಿ ಮೂಕನಾಗಿ ಪತ್ನಿಯ ತಲೆಯನ್ನು ನೇವರಿಸುತ್ತಿದ್ದ. ಲಿಂಗಮ್ಮ ಬಂದಾಗಲೇ ಆಕೆಯ ಅನಿರೀಕ್ಷಿತ ಆವೇಶ ಕಂಡು ಏನಾದರೂ ವಿಷಮ ಘಟನೆಯು ನಡೆದಿರಬಹುದೆಂದು ಊಹಿಸಿದ್ದ. 'ಏನಾಯ್ತು....ಹೇಳು....ಸಮಾಧಾನ ತಂದುಕೊ....'

'ಗಂಡಸರ ಮಧ್ಯೆ ಒಡನಾಡುವ ನಿಮಗೇನು ಗೊತ್ತು ಅದರ ಸಂಕಟ. ಫಾಲನೇತ್ರಯ್ಯನವರ ಹಿರಿಯ ಮಗಳಿಗೆ ಕೂಸು ಜನ್ಮಿಸಿದೆಯಲ್ಲವೇ? ಇಂದು ಸಂಜೆ ನಾಮಕರಣೋತ್ಸವ ಮತ್ತು ತೊಟ್ಟಿಲ ಕಾರ್ಯ ಇದ್ದಿತು. ಆಮಂತ್ರಣ ನೀಡಿದ ಕಾರಣ ಮುಯ್ಯನ್ನು ತೆಗೆದುಕೊಂಡು ಅವರ ಮನೆಗೆ ಹೋಗಿದ್ದೆ. ತೊಟ್ಟಿಲಿಗೆ ಹಾಕಿದ ಕೂಸನ್ನು ಪಂಚ ಮುತ್ತೈದೆಯರು ಆರತಿಯೆತ್ತಿ, ತೂಗಬೇಕಿತ್ತು. ಅಂಬುಜಾಕ್ಷಿ ಕರೆದಾಗ ತೊಟ್ಟಿಲ ಬಳಿ ಹೋದೆ. ಫಾಲನೇತ್ರಯ್ಯನ ತಾಯಿ, 'ಏ ಯಮ್ಮಗಳಾ....ಲಿಂಗಮ್ಮನ ಕಡೆ ಮಗುವಿನ ತೊಟ್ಟಿಲಾ ಮುಟ್ಟಿಸಬೇಡ್ರಿ. ಆಕೆ ಬಂಜೆ. ಬಂಜೇರ ಕೈಯಿ ಮೊದಲು ಯಾಕೆ ಹಾಕಬೇಕು....ಕೂಸಿಗೆ ಏನಾರ ಆದೀತು ...' ಎಂದುಬಿಟ್ಟಳು.

'ಅಜ್ಜಿ....ಅವರು ಶರಣರಡಾಕ್ರಿ. ಅವರ ಪುಣ್ಯ ಹಸ್ತ ಬಿದ್ದರೆ ಕೂಸು

ಬಿದಿಗಿ ಚಂದ್ರನಂತೆ ಬೆಳೀತಾದ್ರಿ....' ಅಂಬುಜಾಕ್ಷಿ ಹೇಳಿದಳು.

'ಅಯ್ಯೋ....ಏನು ಹಸ್ತಾನವ್ವ! ಆ ಪುಣ್ಯ ಇದ್ದರೆ ಆಕೆ ಬಂಜೆ ಆಗಿ ಯಾಕುಳಿತಾ ಇದ್ಲು' ಎಂದು ತಿರಸ್ಕಾರದಿಂದ ನುಡಿದಳು. ನೂರು ಚಾವಟಿಯ ಏಟು ಒಂದೇ ಬಾರಿಗೆ ಬಿದ್ದಂತೆ ಆಯಿತು. ಕೈಕಾಲು ನಡುಗಿ, ಹೃದಯವೆಲ್ಲ ಭೋರ್ಗರೆಯಿತು. ನಾನು ಒಯ್ದ ವಸ್ತುಗಳನ್ನೆಲ್ಲ ಮರಳಿ ತಂದಿರುವೆ ನೋಡಿರಿ....' ಅವನ್ನು ದೃಷ್ಟಿಸಿ ಲಿಂಗಮ್ಮನ ದುಃಖ ಇಮ್ಮಡಿಯಾಯಿತು. ಮತ್ತೆ ಹೇಳಿದಳು :

'ಇಂಥಾ ಕಹಿ ಪ್ರಸಂಗ ಒಂದೇ....ಎರಡೇ....ಮಕ್ಕಳನ್ನು ಮುದ್ದಿಸುವ ಆಸೆಯಿಂದ ಒಮ್ಮೆ ಓಣಿಯ ಹುಡುಗರನ್ನು ಕರೆದು ಸಿಹಿ ತಿನಿಸು ಕೊಡ ಹೋದರೆ, ಆ ಮನೆ ಬಂಗಾರಮ್ಮನ ಮಗ ಹೇಳಿದ :

'ಲೇ....ಮಹೇಶ....ಆ ಬಂಜೆ ಕೊಟ್ಟ ತಿಂಡೀನ ಇಸಕೋ ಬೇಡ್ವೊ ಎಂದು ನಮ್ಮವ್ವ ಹೇಳಿದಾಳೆ ಚಿಕ್ಕವ್ವ. ಬಂಜೇರ ಕೈಯಿಂದ ತಿಂದರೆ ಏನೇನೋ ಆಗುತ್ತಂತೆ ನಿಜವಾ' ಎಂದ. ಇಂತಿಂಥಾ ಮೊನಚಾದ ಮಾತನ್ನು ಕೇಳಿ ಹೇಗಿರಲಿ ಹೇಳಿ....?" ಪ್ರಶ್ನೆಯನ್ನು ನೇರವಾಗಿ, ಗಂಭೀರವಾಗಿ ಎದುರಿಗೆ ಇಟ್ಟಾಗ ಓಂಕಾರಶೆಟ್ಟಿಗೆ ಉತ್ತರಿಸುವುದೇ ಕಷ್ಟವಾಯಿತು. ಪತ್ನಿಯ ಮುಖ ವನ್ನು ತನ್ನೆಡೆಗೆ ಹೊರಳಿಸಿಕೊಂಡು ದಿಟ್ಟಿಸಿ ನೋಡಿ, ಕಣ್ಣೀರು ತೊಡೆದು, ಮುಂಗುರುಳನ್ನು ತಿದ್ದಿದ.

'ಲಿಂಗಾ....ನನ್ನ ಬಂಗಾರ....ಲೌಕಿಕ ಹೆಂಗಸರ ಸಹವಾಸಕ್ಕೆ ಯಾಕೆ ಹೋಗ್ತೀಯಾ? ಮದುವೆಯಾಗಿ, ಮಕ್ಕಳನ್ನು ಹಡೆಯೋದೆ ಅವರ ಬದುಕಿನ ಆತ್ಯಂತಿಕ ಗುರಿಗಳು, ಮಾತಿನ ಸಾಮಗ್ರಿಗಳು. ಈ ಸೀಮಿತ ವಲಯದ ಆಚೆ ಅವರ ಮನಸ್ಸು ಹರಿಯದು.'

'ಇದು ಸಮಸ್ಯೆಗೆ ಪರಿಹಾರವೇ? ಸಮಾಜ ಜೀವಿಗಳಾದಮೇಲೆ ಉಳಿದವ ರೊಡನೆ ಬೆರೆಯುವ ಪ್ರಸಂಗ ಬರುವುದಿಲ್ಲವೆ? ಬರೀ ಹೆಂಗಸರೇ ಅನ್ನುವರೇನು ....ಅಂದು ಆ ಶಿವಮೂರ್ತೆಪ್ಪ ತನ್ನ ಹಿಂಡು ಮಕ್ಕಳನ್ನು ಕಟ್ಟಿಕೊಂಡು ಮನೆಗೆ ಬಂದಿದ್ದನಷ್ಟೆ. ಅವ್ರೋ ಮಂಗಗಳ ವಂಶಸ್ಥರೆಂಬಂತೆ ಕುಣಿದಾಡುತ್ತ ಮನೆ ಯಲ್ಲೆಲ್ಲ ಗದ್ದಲ ಮಾಡುತ್ತಿದ್ದವು. ವಿವಿಧ ಸಾಮಗ್ರಿಗಳನ್ನು ಎಳೆದು, ಕೆಡವಿ ದಾಗ ನೀವು ಹೇಳಿದಿರಿ, 'ಶಿವಮೂರ್ತೆಪ್ಪ....ಮಕ್ಕಳನ್ನು ಸ್ವಲ್ಪ ನಿಯಂತ್ರಣ ದಲ್ಲಿಡಬೇಕು....' ಎಂದು.

'ಶೆಟ್ಟರೇ....ಮಕ್ಕಳ ಸುಖವನ್ನೇ ಅರಿಯದ ನಿಮಗೇನ್ರಿ ಗೊತ್ತು ಅವರನ್ನು ಬೆಳಸೋ ಬಗೆ! ವಿಗ್ರಹವಿಲ್ಲದ ಗುಡಿ, ನೀರಿಲ್ಲದ ಕೆರೆ, ಹಣ್ಣಿ

ಬಿಡದ ಮರ, ಮಕ್ಕಳಿಲ್ಲದ ಮನೆ, ವ್ಯರ್ಥ....ಹೆತ್ತವರಿಗೆ ಮಕ್ಕಳ ಗದ್ದಲವೇ ಮಂಗಳವಾದ್ಯ, ಮನೆಗೆ ಶೋಭೆ' ಶಿವಮೂರ್ತೆಪ್ಪನ ಮಾತಿನಲ್ಲಿ ತನ್ನ ಸಾಧನೆಯ ಬಗ್ಗೆ ಹೆಮ್ಮೆ, ಓಂಕಾರನ ಕೊರತೆಯ ಬಗ್ಗೆ ಅನುಕಂಪ ತುಂಬಿದ್ದವು. ಆಗ ಓಂಕಾರ ತುಸು ಆಲೋಚನಾಪರನಾಗಿ ಕುಳಿತ. ತನ್ನ ಕೊರತೆಯ ಅರಿವಿಗಾಗಿ ದುಃಖವೆನಿಸದಿದ್ದರೂ, ಹೆರರ ಬದುಕಿನ ನೋವನ್ನು ಕೆದಕಿ ಆನಂದಿಸುವ ಶಿವಮೂರ್ತಿಯ ಅಜ್ಞಾನಕ್ಕೆ ನೋವೆನಿಸಿತು.

'ನಮಗೇನು ಇದರಿಂದ ಬಹಳಷ್ಟು ಕೊರತೆ ಎನ್ನಿಸುತ್ತಿಲ್ಲ ಶಿವಮೂರ್ತೆಪ್ಪ. ಶಿವನು ಕೊಡದ್ದರ ಬಗ್ಗೆ ಚಿಂತಿಸದೆ, ಅವನು ಕೊಟ್ಟುದಕ್ಕೆ ಕೃತಜ್ಞತೆ ಸೂಚಿಸಿ ತೃಪ್ತರಾಗಿದ್ದೇವೆ....'

'ಪಾಪ....! ಇಲ್ಲದಾಗ ಮತ್ತೇನು ಮಾಡಾಕ ಸಾಧ್ಯ....' ವಿಷಮ ಚರ್ಚೆಯಿಂದ ದೂರಾಗಬೇಕೆಂದು ಚಟಪಟಿಸುವಾಗಲೇ ಅಂಗಡಿಗೆ ಯಾರೋ ಬಂದಿದ್ದಾರೆಂದು ಕರೆಬಂದಿತ್ತು. ಶಿವಮೂರ್ತಿಯನ್ನು ಮನೆಯಲ್ಲೇ ಬಿಟ್ಟು ಹೋದರೆ ಲಿಂಗಮ್ಮನ ದುಃಖಾಗ್ನಿಗೆ ತಿರಸ್ಕಾರದ ಮಾತಿನ ತುಪ್ಪವನ್ನು ಸುರಿಯಬಹುದೆಂದು ಅವನನ್ನು ಒಡನೆಯೇ ಕರೆದೊಯ್ದಿದ್ದ.

ಆ ಪ್ರಸಂಗ ಬಾಳ ಸಮುದ್ರದ ಒಂದು ಅಲೆಯಂತೆ ಬಂದು ಹೋಗಿತ್ತು. ಆದರ ನೆನಪು ಓಂಕಾರಶೆಟ್ಟಿಯ ವೈಚಾರಿಕತೆಯ ಕಲ್ಲಿನ ಮೇಲೆ ಆಳವಾದ ಮುದ್ರೆ ಒತ್ತಿರದಿದ್ದರೂ, ಲಿಂಗಮ್ಮನ ಭಾವುಕ ಹೃದಯದ ಮಳಲಿನ ದಂಡೆಯನ್ನು ಕೊರೆದುಕೊಂಡು ಹೋಗಿತ್ತು.

'ಅಜ್ಞಾನಿಗಳ ಮಾತನ್ನು ಗಮನದಲ್ಲಿರಿಸಬಾರದು ಲಿಂಗಾ....' ಶಾಂತನಾಗಿ ಉತ್ತರಿಸಿದ.

'ಹಾಗಾದರೆ ನಾವು ನೆಮ್ಮದಿಯಾಗಿರಲು ಊರುಬಿಟ್ಟು ಕಾಡಿನ ಮೊರೆ ಹೋಗಬೇಕೆ?'

'ನಿನಗಾಗಿ ನಿನಗೆ ಮಗು ಬೇಡ, ಸಮಾಜಕ್ಕಾಗಿ ನಿನಗೆ ಮಗು ಬೇಕೆ? ಒಳ್ಳೆಯ ಬಯಕೆ....!' ನಕ್ಕ ಓಂಕಾರ.

'ನನಗಾಗಿಯೂ ಬೇಕು. ಪುರುಷ ಹೃದಯಕ್ಕೆ ಮಾತೃಹೃದಯದ ಒತ್ತಡ ತಿಳಿಯುವುದೆಂತು! ಆ ಮಗು ಪುಟ್ಟ ದುಂಡಾದ ಕೈಗಳಿಂದ ನನ್ನನ್ನು ಅಪ್ಪುವುದು: ಪ್ರೇಮಾಮೃತ ಧಾರೆಯನ್ನು ಹೀರುವುದು ಎಷ್ಟು ಆನಂದದಾಯಕ!' ಲಿಂಗಮ್ಮನು ಕಣ್ಣುಗಳನ್ನು ಮುಚ್ಚಿ ಕಲ್ಪನೆಯ ಸರಸಿಯಲ್ಲಿ ತೇಲಿದಳು. ಆ ಸ್ಥಿತಿಯ ಕಲ್ಪನೆಯೇ ಸಂತಸದ ತೆರೆಯನ್ನು ಮುಖದ ಮೇಲೆ ಹಾಯಿಸಿತು. ಓಂಕಾರಶೆಟ್ಟಿ ಸಂಭ್ರಾಂತಿಯಿಂದ, ಮೂಕನಾಗಿ ನಿಟ್ಟುಸಿದ.

'ಎಳೆಮಗು ತೊಟ್ಟಿಲಲ್ಲಿ ಮಲಗಿಸಿ ನಾನು ಜೋಗುಳ ಹಾಡುವಾಗ ಅದು ಕಪ್ಪು ಕಣ್ಣುಗಳಿಂದ ದಿಟ್ಟಿಸಿ, ಕಿಲಕಿಲನೆ ನಕ್ಕರೆ, ತೆಗೆದು ಬಿಗಿಯಾಗಿ ಅಪ್ಪಿದಾಗ ಎಂತಹ ಬಿಸುಪು, ಆನಂದ....!'

'ಅವನ್ನು ನಾನು ಮಾಡಲಾರೆನೇ?' ಓಂಕಾರಶೆಟ್ಟಿ ನಸುನಕ್ಕಾಗ ಲಿಂಗಮ್ಮನ ಮುಖ ಕೆಂಪಾಯಿತು.

'ಥೂ....ಹೋಗ್ರಿ....ಏನು ಹಾಸ್ಯ! ಕೋಗಿಲೆಯ ಕಂಠದ ಇನಿದನಿ ಕೇಳಿದಾಗ ಆಗುವ ಶ್ರವಣಾನಂದ ಬೇರೆ; ನವಿಲಿನ ನಾಟ್ಯದ ಸೊಬಗನ್ನು ನೋಡಿದಾಗ ಆಗುವ ದೃಶ್ಯಾನಂದವೇ ಬೇರೆ. ಅದರದು ಅದಕ್ಕೆ, ಇದರದು ಇದಕ್ಕೆ!'

ಆಕೆಯ ಭಾವೋದ್ವೇಗದ ನಡುವೆ ಓಂಕಾರನ ನಾಲಿಗೆ ನಿಃಶಕ್ತವಾಯಿತು.

'ನಿಸರ್ಗದತ್ತವಾದ ಈ ವಾತ್ಸಲ್ಯದ ಹೊನಲನ್ನು ಆವ ನಾಲುವೆಯ ಮೂಲಕ ಹಂಸಿ ಪ್ರೇಮದ ಫಲವನ್ನು ಬೆಳೆಯಲಿ. ಪ್ರಾಣಿಸಹಜವಾದ ಮಾತೃತ್ವವನ್ನು ಹೇಗೆ ಅದುಮಲಿ?' ಉತ್ಕಟ ದನಿಯಲ್ಲಿ ಕೇಳಿದಳು.

'ಲಿಂಗಾ....ಅರಗಿಳಿ....ಬಯಕೆಯನ್ನು ಒತ್ತಾಯದಿಂದ ಅದುಮಿಡಬೇಡ; ಒತ್ತಿಟ್ಟುದು ವಿಕಾರ ರೂಪವನ್ನು ತಳೆದು ವ್ಯಕ್ತಿತ್ವದ ಹಾನಿಗೆ ಹಾದಿ ಮಾಡುವುದು. ಇದನ್ನು ಉದಾತ್ತೀಕರಿಸಿಕೋ. ಬಂದುದೆಲ್ಲ ಒಳ್ಳಿತಿಗೇ; ಶಿವನಿತ್ತ ಪ್ರಸಾದ ಎಂದು ಸಾಂತ್ವನ ಪಡೆದುಕೋ. ನೋಡು, ನಿನಗೆ ಮಕ್ಕಳಿದ್ದರೆ ನಿನ್ನ ಒಡಲ ಕುಡಿಗಳನ್ನಷ್ಟೇ ಆದರಿಸುತ್ತಿದ್ದೆ. ಈಗ ನಿನ್ನದು ಎನ್ನುವುದು ಇಲ್ಲದ ಕಾರಣ ಎಲ್ಲರೂ ನಿನ್ನವರೇ! ಇತರರ ಮಕ್ಕಳನ್ನು ನಿನ್ನ ಮಕ್ಕಳೆಂದೇ ತಿಳಿ, ಅಕ್ಕರೆ ತೋರು, ಸಾಂಕೋಚ್ಯದ ಕಟ್ಟು ಹರಿದು ವಿಶಾಲತೆಯ ಭಾವನೆ ಹೊಂದು.'

'ಅದು ಆದರ್ಶ ಮಾತ್ರ. ಸಾರ್ವಜನಿಕ ಉದ್ಯಾನವನ್ನು ರಕ್ಷಿಸುವುದು ಬೇರೆ, ಮನೆಯ ಆವರಣದಲ್ಲಿ ಕೈದೋಟವನ್ನು ಪೋಷಿಸುವುದು ಬೇರೆ. ಉದ್ಯಾನದ ರಕ್ಷಣೆಯಲ್ಲಿ ಕೇವಲ ಕರ್ತವ್ಯಪ್ರಜ್ಞೆ; ಕೈದೋಟದ ಪೋಷಣೆಯಲ್ಲಿ ಹೃದಯದಾಳದಿಂದ ಬರುವ ಆಸಕ್ತಿ, ಅಭಿಮಾನಗಳುಂಟು. ಸಾರ್ವಜನಿಕ ಉದ್ಯಾನದಲ್ಲಿ ನಿಯಮಿತ ವೇಳೆಯಲ್ಲಿ ಕುಳಿತುಕೊಳ್ಳಬೇಕು. ತನ್ನಂಗಳದ ಕೈದೋಟದಲ್ಲಿ ಸಂಪೂರ್ಣ ಸ್ವಾತಂತ್ರ್ಯ. ಅಲ್ಲಿ ಬೇರೆಯ ತೋಟಗಳು ಬೆಳೆಸಿದ ಗಿಡಗಳನ್ನು ನೋಡಿ ಆನಂದಿಸಬೇಕು, ಕೀಳುವ ಹಕ್ಕಿಲ್ಲ. ಇಲ್ಲಿ ಸ್ವತಂತ್ರ ಅಭಿರುಚಿಗೆ ಅನುಗುಣವಾಗಿ ಗಿಡಗಳನ್ನು ನೆಡಬಹುದು, ಬೇಕೆನಿಸಿದಾಗ ಹೂವು ಕಿತ್ತು ಮುಡಿಯಬಹುದು....'

ಓಂಕಾರ ಆಳವಾದ ಆಲೋಚನೆಯಲ್ಲಿದ್ದ.

'ಹಾಗೆಯೇ ನನ್ನ ಮಗುವನ್ನು ನೋಡಿಕೊಳ್ಳುವುದರಲ್ಲಿ ಸಿಗಬಹುದಾದ ಆನಂದ ಮತ್ತೊಬ್ಬರ ಮಕ್ಕಳಲ್ಲಿ ಸಿಕ್ಕೀತೆ? ನಾನು ಬಯಸಿದಾಗ ಅವು ಕೈಗೆ ಸಿಗುವವೇ? ನನಗೆ ಬೇಕೆನಿಸುವ ಆದರ್ಶಗಳನ್ನು ಅವರಲ್ಲಿ ನೆಟ್ಟು ಪೋಷಿಸ ಬಲ್ಲೆನೆ? ನಾನೆಷ್ಟು ಆದಂಸಿದರೂ ಚಿಕ್ಕಮ್ಮ. ಅತ್ತೆ, ಅಕ್ಕ ಎಂದು ಅವರಿಂದ ಅನ್ನಿಸಿಕೊಳ್ಳಬಲ್ಲೆನೇ ಹೊರತು, ಅಮ್ಮಾ....ಅವ್ವಾ....ಎಂದು ಅಕ್ಕರೆ ತುಂಬಿ ಅನ್ನಿಸಿಕೊಳ್ಳಲಾರೆ. ನಿಮ್ಮ ಸಖಿಯಾಗಿ ಪ್ರಿಯೆ, ದೇವಿ, ಚಿನ್ನಾ ಎನ್ನಿಸಿ ಕೊಂಡು ಒಂದು ಬಗೆಯ ಆನಂದ ಪಡೆದೆ; ಆದರೆ ಅಮ್ಮಾ, ಅವ್ವಾ ಎಂದು ಕರೆಯುವುದನ್ನು ಕೇಳುವ ಆ ಭಾಗ್ಯ ಪಡೆಯಲಿಲ್ಲ....' ಲಿಂಗಮ್ಮನ ದನಿಯಲ್ಲಿನ ಆವೇಶವನ್ನು ಗುರುತಿಸಿದ ಓಂಕಾರ. ಅದರ ಆಳವನ್ನು ಅರಿಯಲು ತಾನು ಅಸಮರ್ಥನಾದಂತೆ ಎನಿಸಿತು. ಈ ಬಯಕೆ ಆಗಾಗ ಕವಣೆಯ ಕಲ್ಲಿನಂತೆ ತೂರಿಬಂದು ಅವನನ್ನು ಬಡಿದು ಘಾಸಿಗೊಳಿಸಿದ್ದುದು ನಿಜ. ಆದರೆ ಅದುವೇ ಹೆಬ್ಬಂಡೆಯಂತೆ ಉರುಳಿ ಅದರ ಕೆಳಗೆ ಲಿಂಗಮ್ಮನನ್ನು ಸಿಕ್ಕಿಸಿಕೊಂಡಿದೆ ಎಂಬುದರ ಅರಿವು ಅವನಿಗಾದುದು ಇಂದು. ಅವನಿಗೆ ಆ ಬಂಡೆಗಲ್ಲನ್ನು ಸರಿಸಿ ಆಕೆಯನ್ನು ಎಬ್ಬಿಸುವ ಬಗೆ ತಿಳಿಯಲಿಲ್ಲ. ಅವನು ಹೇಳಿದುದೆಲ್ಲ—'ಕಲ್ಲಿನ ಕೆಳಗೇ ಇದ್ದು ಶಿವಪ್ರಸಾದವೆಂದು ನಿಶ್ಚಿಂತಳಾಗಿರು' ಎಂಬ ತತ್ತ್ವಜ್ಞಾನದಂತೆ ಇತ್ತು. ಅದಕ್ಕೆ ಲಿಂಗಮ್ಮನ ಬುದ್ಧಿ ಒಪ್ಪಿಕೊಂಡು ಮಣಿದರೂ, ಹೃದಯ ಪ್ರತಿಭಟಿಸುತ್ತಿತ್ತು: ಅಸಹನೀಯ ವೇದನೆಯಿಂದ ಚಟಪಟಿಸುತ್ತಿತ್ತು.

ಇದರ ಅರಿವು ಓಂಕಾರನಿಗೆ ಇದ್ದರೂ ತಾತ್ಕಾಲಿಕವಾಗಿ ಈ ಚಿಂತನೆಯ ವಾಹಿನಿಯನ್ನು ಬೇರೆಡೆಗೆ ಹರಿಸಬೇಕಾಗಿತ್ತು. ಕೈಗೆ ಸಿಗಲಾರದ ವಸ್ತುವಿ ಗಾಗಿ ಅತ್ತತ್ತು ಮಗುವಿಗೆ ಉಸಿರು ಕಟ್ಟಿದಾಗ ಅದರ ಚಿತ್ತವನ್ನು ಬೇರೆಡೆ ಹರಿಸಬೇಕಾಗುವುದಷ್ಟೆ. ಓಂಕಾರನು ಮತ್ತಷ್ಟು ಮೃದುವಾಗಿ ಮಮತೆಯಿಂದ ಆಕೆಯ ತಲೆಯನ್ನು ತಟ್ಟಿ ನುಡಿದ:

'ಲಿಂಗಾ, ನನಗೆ ಒಮ್ಮೊಮ್ಮೆ ಇದೇ ಒಳ್ಳಿತೆನಿಸುತ್ತದೆ. ನೋಡು, ನಾವೇ ಮಕ್ಕಳನ್ನು ಹೆತ್ತಿದ್ದರೆ ನೋವು-ನಲಿವು ಎರಡೂ ಸಿಕ್ಕುತ್ತಿದ್ದವು. ಅಂದರೆ ಅವು ಗಳ ಅಳು-ನಗು ಎರಡನ್ನೂ ಕೇಳಬೇಕಾಗುತ್ತಿತ್ತು. ಆದರೆ ಈಗ ನೋಡು, ಕಾಮಾಕ್ಷಮ್ಮನು ತನ್ನ ಮಗಳಿಗೆ ಸಿಂಗಾರಮಾಡಿ ಆಡಲು ಬಿಟ್ಟಾಗ ನಾವು ಎತ್ತಿಕೊಂಡು ಮುದ್ದಿಸಬಹುದು ತ್ತೇನೆ. ಅದೆಲ್ಲಾದರೂ ಅಳಲಾರಂಭಿಸಿದರೆ ತಾಯಿಯ ಕೈಗೆ ಒಪ್ಪಿಸಿಬಿಡುತ್ತೇನೆ. ನಮಗೆ ನಲಿವೊಂದೇ, ಹೆತ್ತವರಿಗೆ ನೋವು ನಲಿವು ಎರಡೂ!' ತಾನು ನೀಡುವ ಉತ್ತರದ ಜಾಣ್ಮೆಗೆ ಮನಸ್ಸಿ ನಲ್ಲಿಯೇ ಬೆನ್ನು ತಟ್ಟಿಸಿಕೊಂಡ ಓಂಕಾರ, ಲಿಂಗಮ್ಮನ ಪ್ರತಿಕ್ರಿಯೆಯನ್ನು

ಗಮನಿಸಿದ. ಆಕೆಯ ತುಟಿಯ ಮೇಲೆ ಕಿರುನಗೆ ಲಾಸ್ಯವಾಡಿತು.

'ನುಚ್ಚು ಮಲ್ಲಿಗೆಯ ಕಂಟಿಯನ್ನು ಹತ್ತಲಲ್ಲಿ ನೆಟ್ಟರೆ ಹೂವಿನೊಡನೆ ಮುಳ್ಳು ಚುಚ್ಚುವುದು; ಬರೀ ಅಂಗಡಿಯಲ್ಲಿರುವ ಪುಷ್ಪಗುಚ್ಛವನ್ನೇ ನೋಡಿ ಆನಂದಿಸೋಣ ಎಂಬಂತಾಯಿತು ನಿಮ್ಮ ಮಾತು. ಮಕ್ಕಳಿಂದ ಆಗುವ ನೋವಿನಲ್ಲೇ ನಲಿವಿದೆ. ಅವರ ಪಾಲನೆ ಪೋಷಣೆಯಲ್ಲೇ ಸುಖವಿದೆ. ಆದರೆ ನನಗಾದರೋ ತಾಯ್ತನದ ಬಯಕೆಯ ಹೊರೆಯನ್ನು ಇಳಿಸಿಕೊಳ್ಳುವ ಮಾರ್ಗವು ಕಾಣುತ್ತಿಲ್ಲ....' ಓಂಕಾರನಿಗೆ ಮುಂದಿನ ಹಾದಿ ತಿಳಿಯಲಿಲ್ಲ. ಅವನ ವಿಚಾರದ ಮಟ್ಟಕ್ಕೆ ಆಕೆ ಮುಟ್ಟಲಾರದಾಗಿದ್ದಳು. ಮಳೆಯು ಎಷ್ಟಾದರೇನಂತೆ ಭೂಮಿಯ ಶಕ್ತಿಗನುಸಾರವಾಗಿ ನೀರು ಹಿಂಗುವುದು. ಅದೇ ರೀತಿ ಗುರುಲಿಂಗದೇವರ ಆಧ್ಯಾತ್ಮವಿಚಾರಧಾರೆ ಓಂಕಾರನನ್ನು ಪರಿಪಕ್ವಗೊಳಿಸಿದಷ್ಟು ಲಿಂಗಮ್ಮನನ್ನು ಪರಿಪಕ್ವಗೊಳಿಸಿರಲಿಲ್ಲ.

'ಮುಂದೇನು ಮಾಡಬೇಕೆಂದು ಸಂಕಲ್ಪಿಸಿರುವೆ ದೇವಿ?'

'ಎಂದೆಂದೂ ಗುರುದೇವರ ಮುಂದೆ ನನ್ನ ಕೊರಗನ್ನು ನಿವೇದಿಸಿಕೊಂಡಿಲ್ಲ. ನಾಳೆ ಖಂಡಿತವಾಗಿಯೂ ಹೇಳುವೆ. 'ದೇವರೇಕೆ ನನ್ನ ನಿಷ್ಠೆಗೆ ಒಲಿದಿಲ್ಲ?' ಎಂದು ಕೇಳಿಬಿಡುವೆ. ನನ್ನನ್ನು ಅಲ್ಪಾಕಾಂಕ್ಷಿ ಎಂದರೂ ಚಿಂತೆಯಿಲ್ಲ....'

'ನಿಸ್ಸಿಪ್ಪ ಚಿನ್ನಾ; ನಿನ್ನ ವೇದನೆ ನನಗೆ ಅರ್ಥವಾಗುವುದು. ನಾನು ಬುದ್ಧಿಯಿಂದ ತಾತ್ತ್ವಿಕ ಸಮಾಧಾನ ಹೇಳಿದರೇನಂತೆ, ನಿನ್ನ ಹೃದಯದ ತುಡಿತ ನಿಂತಿರುವದೆ. ಬದುಕು ಕೇವಲ ಬುದ್ಧಿ ಕಿರಣದಿಂದ ಬೆಳೆಯದು; ಅದು ಭಾವದ ರಸಗಂಗೆಯನ್ನುಂಡು ಬೆಳೆವ ರಸಪೂರ್ಣ ವೃಕ್ಷದಂತೆ! ನಿನ್ನ ಅನನ್ಯ ಬೇಡಿಕೆ ನಿನ್ನನ್ನು ರಕ್ಷಿಸೀತು. ಆದರೆ ನಾನಂತೂ ದೇವನಲ್ಲಿ ಭಕ್ತಿಯ ಕೈಕೂಲಿ ಕೇಳಲಾರೆ....' ಓಂಕಾರ ನುಡಿದ.

'ಒಳ್ಳಿತು....ನಾನೇ ಕೇಳುವೆ....'

ಹೀಗೆ ಸಂವಾದ ನಡೆದಿತ್ತು ಪತಿ-ಪತ್ನಿಯರಲ್ಲಿ, ಉಡುತಡಿ ಪಟ್ಟಣದ ಸಭ್ಯ ಹರದ, ಓಂಕಾರಶೆಟ್ಟಿಯ ಮನೆಯಲ್ಲಿ.

೨. ಸಾತ್ವಿಕ ಸಂಸಾರ

ಉಡುತಡಿಯು ಮಲೆನಾಡ ಮಾತೆಯ ಮಡಿಲ ಮಗುವಾಗಿ ಕಂಗೊಳಿಸುವ ಪಟ್ಟಣ. ಪ್ರಕೃತಿಮಾತೆಯ ಮನೋಹರ ರೂಪವನ್ನು ಗುತ್ತಿಗೆ ಹಿಡಿದಂತಿತ್ತು ಆ ನಾಡು. ವನರಾಜಿಯ ದಟ್ಟಸಂಪತ್ತು ಪ್ರಕೃತಿಮಾತೆಯುಟ್ಟ ಹಸಿರು ಪಟ್ಟಾವಳಿ ಸೀರೆಯ ನೆರಿಗೆಯಂತಿತ್ತು. ಎತ್ತ ನೋಡಿದೊಡತ್ತ ಕಣ್ಸೆಳೆಯುವ ಹಚ್ಚಹಸುರಿನ ಹುಲ್ಲುಹಾಸಿಗೆ, ಭವ್ಯ ವೃಕ್ಷಸಮೂಹ; ತೀಡಿಬಂದು ನಲಿಸುವ ತಂಗಾಳಿ. ಇಂತಹ ಪಟ್ಟಣದ ವ್ಯವಹಾರ ಕ್ಷೇತ್ರದಲ್ಲಿ ಸುಪ್ರಸಿದ್ಧ, ಶ್ರೇಷ್ಠ ಹೆರದ ಓಂಕಾರಶೆಟ್ಟಿ. ಸಾತ್ವಿಕ ಗುಣವೇ ಸಾಕಾರ ತಳೆದ ಪತ್ನಿ ಲಿಂಗಮ್ಮ. ಇಬ್ಬರ ಸ್ವಭಾವ, ಅಭಿರುಚಿ, ಆಕಾಂಕ್ಷೆ ಒಂದುಗೂಡಿದ್ದವು. ಜನ್ಮತಃ ಅವರು ಪರಂಪರಾಗತವಾಗಿ ಶೆಟ್ಟರ ಮನೆತನದವರು. ಊರಿಗೆ ಶ್ರೇಷ್ಠ ವ್ಯಾಪಾರಿಯಾದ್ದರಿಂದ ಇತ್ತೀಚಿಗೆ ಕಲ್ಯಾಣಶೆಟ್ಟರೆಂಬ ಅಡ್ಡ ಹೆಸರೂ ರೂಢಿಗೊಳ್ಳುತ್ತಿತ್ತು. ಹಲಕೆಲವರು ನೇಯ್ಗೆಯ ಉದ್ಯೋಗವನ್ನು ಕೈಗೊಂಡವರು, ಮತ್ತೆ ಕೆಲವರು ಇತರ ವ್ಯಾಪಾರ ಕೈಗೊಂಡವರು. ಓಂಕಾರಶೆಟ್ಟಿಯ ತಂದೆಗೆ ಇಬ್ಬರು ಸುಪುತ್ರರು. ಹಿರಿಯಣ್ಣ ಶಿವದೇವಶೆಟ್ಟಿ, ಕಿರಿಯವನು ಓಂಕಾರ. ಮೊದಲಿನಿಂದಲೂ ಓಂಕಾರನದು ಅಂತರ್ಮುಖ ಸ್ವಭಾವ; ಭಾವುಕ ಹೃದಯಿಯಾದ ಅವನು ಅಧ್ಯಯನ, ಧ್ಯಾನ-ಮೌನಗಳಲ್ಲಿ ಬಾಲ್ಯದಿಂದಲೂ ಕಾಲಕಳೆದ. ತಂದೆಗೆ ಮುಪ್ಪಡರಿ ಅಂತ್ಯಕಾಲ ಸಮೀಪಿಸುವಾಗಲೇ ಹತ್ತಿರದ ಊರಿನ ಲಿಂಗಮ್ಮನನ್ನು ವಿವಾಹ ಮಾಡಿದರು. ಮಾಡಿದ ಕೆಲವು ತಿಂಗಳಲ್ಲಿ ತಂದೆಯು ದೈವಾಧೀನನಾದ.

ಅಣ್ಣ ಶಿವದೇವಶೆಟ್ಟಿ ವ್ಯವಹಾರ ಚತುರ. ವ್ಯಾಪಾರದ ಬೆಳವಣಿಗೆ, ಸಿರಿತನದ ವೃದ್ಧಿ; ಈ ಮಿತವಲಯವನ್ನು ದಾಟಿ ಬುದ್ಧಿಯನ್ನು ಓಡಿಸಲು ಯತ್ನಿಸುತ್ತಿರಲಿಲ್ಲ. ಅವನಿಗೆ ಓಂಕಾರನ ಅಂತರ್ಮುಖ ವ್ಯಕ್ತಿತ್ವ ಸರಿಬರಲಿಲ್ಲ. ಆಗಾಗ ತಮ್ಮನು ಮಠ, ಮಂದಿರಗಳಿಗೆ ಹೋಗುವುದು, ಗುಡ್ಡದ ತುದಿಯಲ್ಲಿ ಧ್ಯಾನಾಸಕ್ತನಾಗುವುದು, ಇರುಳಿನಲ್ಲಿ ದೀಪ ಉರಿಸುತ್ತ ಅಧ್ಯಯನ ಮಾಡುವುದು, ಲೌಕಿಕರಿಗೆ ಅಸಾಧುವೆಂದು ಅಣ್ಣನ ಭಾವನೆ. ಲಗ್ನವಾದನಂತರವಾದರೂ ಸರಿಹೊಂದಬಹುದೆಂದು ಭಾವಿಸಿದ್ದ ಅವನ ನಿರೀಕ್ಷಣೆ ತಲೆಕೆಳಗಾಯಿತು ಮದುವೆಯಾದ ಕೆಲವೇ ದಿವಸಗಳಲ್ಲಿ. ಕೈಹಿಡಿದ ಲಿಂಗಮ್ಮ ಓಂಕಾರನ ಆಧ್ಯಾತ್ಮವೃತ್ತಿಗೆ ವಿಘ್ನವಾಗುವ ಬದಲು ಪ್ರೋತ್ಸಾಹಕಶಕ್ತಿ

ಯಾದಳು. ಮಠ, ಮಂದಿರ, ಗುಡಿಗಳಿಗೆ ಹೋಗುವಾಗ ಪತಿಯ ಸಂಗಾತಿಯಾದಳು. ಶಿವದೇವಶೆಟ್ಟಿಯ ಸತಿ ಗೌರಾಂಬೆ ಆಗಾಗ ಇದನ್ನು ಕಂಡು ಉರಿದೇಳುವಳು. ಪ್ರತಿನಿತ್ಯ ಪರದೇಶಿ ಮಲ್ಲಯ್ಯನ ಗುಡಿಗೆ ದಂಪತಿಗಳು ಹೋದರೆ ಅಸಹನೆಯಿಂದ ಸಿಡಿಯುವಳು.

'ದಿನಾ ಹೋದರೆ ಮನೆಗೆಲಸ ಮಾಡುವವರಾರು ?' ಕೊಂಕು ಮಾತನಾಡುವಳು. ಲಿಂಗಮ್ಮ ಅತಿವೇಗದಿಂದ ಕೆಲಸ ಪೂರೈಸಿ ಮಾತಿನ ಶರಕ್ಕೆ ಸಿಗದಂತೆ ವೇಳೆಗೆ ಸರಿಯಾಗಿ ಸಿದ್ಧಳಾಗುವಳು. ಓಂಕಾರನಿಗೆ ಪತ್ನಿಯ ಸದ್ಗುಣದ ಬಗ್ಗೆ ತುಂಬು ಅಭಿಮಾನ. ಮಕ್ಕಳ ನೆಪ ಹಾಕಿ ಗೌರಾಂಬೆಯು ಕೆಲಸವನ್ನೆಲ್ಲ ಲಿಂಗಮ್ಮನಿಗೆ ಬಿಟ್ಟಾಗ ಆನಂದದಿಂದಲೇ ಪೂರೈಸುತ್ತಿದ್ದಳಾಕೆ. 'ಲಿಂಗಾ.... ಕೆಲಸ ಬಹುವಾಗಿ ದಣಿವಾಗುವುದೇ ?' ಓಂಕಾರಶೆಟ್ಟಿ ಗುಡಿಗೆ ಹೋಗುವಾಗ ಪ್ರಶ್ನಿಸುವ.

'ದಣಿವೆಂತಹುದು ? ಶರೀರ ಇರುವುದೇ ದುಡಿಯುವುದಕ್ಕೆ ; ಎಷ್ಟು ದಣಿವಾದರೇನಂತೆ ಮಲ್ಲಿಕಾರ್ಜುನನ ಮೂರ್ತಿಯನ್ನು ಕಣ್ತುಂಬ ನೋಡುತ್ತಲೇ ದಣಿವು ಉರಿಯನ್ನಪ್ಪಿದ ಕರ್ಪೂರದಂತಾಗುವುದು....'

ಓಂಕಾರ ಓದಲು ಕುಳಿತರೆ ಆಗಾಗ ದೀಪಕ್ಕೆ ಎಣ್ಣೆ ಎರೆದು, ಬತ್ತಿ ಚಾಚುತ್ತ ತಾನೂ ಕುಳಿತು ಕೇಳುವಳು. ಲಗ್ನವಾದ ಮೇಲೆ ಧ್ಯಾನಗೀನ ಗಾಳಿಗೆ ಹಾರುವುದೆಂದು ನಿರೀಕ್ಷಿಸಿದ್ದ ಶಿವದೇವಶೆಟ್ಟಿಗೆ ಅದು ದಿಟವಾಗಲಿಲ್ಲ. ಅತ್ತಿಗೆಯ ಹೆದರಿಕೆಗೆ ಸಂಜೆಯ ಧ್ಯಾನವನ್ನು ಬೇಗ ಮುಗಿಸಿ ಊಟಕ್ಕೆ ಅಣಿಯಾಗುತ್ತಿದ್ದ ಓಂಕಾರನಿಗೆ ಆ ಭಯ ಲಗ್ನದ ಬಳಿಕ ತಪ್ಪಿತು. ಧ್ಯಾನಾಸಕ್ತನಾದ ಪತಿಯ ಬಳಿ ಕುಳಿತ ಲಿಂಗಮ್ಮ ಗೌರಾಂಬೆಗೆ,

'ಅಕ್ಕಾ....ತಾವು ಊಟ ಮುಗಿಸಿ ವಿಶ್ರಾಂತಿ ಹೊಂದಿರಿ. ಅವರು ಎದ್ದ ಬಳಿಕ ನಾನೆಲ್ಲ ನೀಡುವೆ....' ಎನ್ನುವಳು.

'ನೀನೊಬ್ಬಳು ಹುಚ್ಚಿ, ಗಂಡಸರ ಎಲ್ಲ ವರ್ತನೆಗೆ ಸುಮ್ಮನಿದ್ದರೆ ಆಯಿತು, ನಮ್ಮ ಗತಿ ಗಂಗಮ್ಮನ ಪಾಲೇ !' ಗೌರಾಂಬೆ ಹೇಳುತ್ತಿದ್ದಳು.

'ಸತಿಯರಾದ ನಮ್ಮ ಕರ್ತವ್ಯ ಮತ್ತೇನು ಇರಬೇಕು ಅಕ್ಕಾ ? ಇಂತಹ ಪುಣ್ಯಪುರುಷರ ಸೇವೆಗಿಂತ ಹಿರಿದಾದ ಭಾಗ್ಯ ಯಾವುದು ?' ಲಿಂಗಮ್ಮ ಮಾರ್ನುಡಿಯುತ್ತಿದ್ದಳು.

'ಭಾರೀ ಪುಣ್ಯಪುರುಷ. ಸನ್ಯಾಸಿಯಾಗಿದ್ದರೆ ಚೆನ್ನಾಗಿತ್ತು. ಏತಕಾದರೂ ಮದುವೆಯಾದನೋ ? ಹೀಗೆ ರಾತ್ರಿಯೆಲ್ಲ ಕಾಯಿಸಲಿಕ್ಕೆ....'

'ದಯಮಾಡಿ....ಗಟ್ಟಿಸಿ ಮಾತನಾಡಬೇಡಿ. ಧ್ಯಾನಕ್ಕೆ ಭಂಗಬಾರದಂತೆ

ಕಾಯುಪ್ರನರಲ್ಲೇ ನನಗೆ ಆನಂದ....'

'ಅದು ನಿನ್ನ ಪ್ರಾರಬ್ಧ....' ಗೌರಾಂಬೆ ತೀಕ್ಷ್ಣವಾಗಿ ನುಡಿದಳು.

'ಅಲ್ಲ ಪುಣ್ಯ....' ಲಿಂಗಮ್ಮ ಹೇಳಿದಳು.

'ಸರಿ....ಈ ಜೋಗಯ್ಯನಿಗೆ ಸರಿಯಾದ ಜೋಗತಿ ಗಂಟುಬಿದ್ದಳು...." ಸಿಟಿದು ನುಡಿದು ಗೌರಾಂಬೆ ತನ್ನ ಶಯನಾಗಾರಕ್ಕೆ ಹೋದಳು. ಈ ಬಿರುಸು ಮಾತಿನಿಂದಾಗಿ ಆಗಲೇ ಎಚ್ಚರಗೊಂಡಿದ್ದ ಓಂಕಾರನಿಗೆ ಪತ್ನಿ ಲಿಂಗಮ್ಮನ ಮಾತು ಕೇಳಿ ಅಪೂರ್ವ ಆನಂದವೆನಿಸಿತ್ತು. ಚಿನ್ನದ ಹೂವಿಗೆ ಸುವಾಸನೆ ಬಂದಂತೆ ಅವಳ ರೂಪಕ್ಕೆ ತಕ್ಕ ಸದ್ಗುಣ ಬೆರೆದಾಗ ಧನ್ಯತೆಯ ಭಾವ ಪಡಿ ಮೂಡಿತು. ಅಭಿಮಾನದಿಂದ ಪತ್ನಿಯನ್ನು ನಿಟ್ಟಿಸುತ್ತಿದ್ದ.

ಓಂಕಾರನಿಗೆ ವ್ಯವಹಾರಚತುರತೆಯಿಲ್ಲ. ಅದರಿಂದಾಗಿ ವ್ಯಾಪಾರ ಸರಿಯಾಗದೆ ನಷ್ಟವಾದರೆ ಮುಂದೆ ಪಾಲು ಕೊಡುವಾಗ ತನಗೆ ಹಾನಿಯಾಗಬಹುದು. ಅಥವಾ ತನ್ನ ಬುದ್ಧಿವಂತಿಕೆಯಿಂದ ಗಳಿಸಿದುದರಲ್ಲಿ ಪಾಲು ನೀಡಬೇಕಾದೀತೆಂಬ ಭಯದಿಂದ ಏನೇನೋ ನೆಪಹೂಡಿ ಅಣ್ಣನು ತಮ್ಮನನ್ನು ಬೇರೆ ಕಳಿಸಲು ನಿರ್ಧರಿಸಿದ.

ಒಂದು ದಿನ ಲಾಭಕ್ಕಾಗಿ ಮೋಸಮಾಡಲು ಸಿದ್ಧನಾದ ಶಿವದೇವಶೆಟ್ಟಿಯನ್ನು ಓಂಕಾರನು ವಿರೋಧಿಸಿದಾಗ ಶಿವದೇವ ಕೆರಳಿದ. 'ಪ್ರಾಮಾಣಿಕವಾಗಿ ಗಳಿಸಿ ಅಂಬಲಿಯನುಂಡರೂ ಸಾಕು, ಅಪ್ರಮಾಣಿಕತೆಯಿಂದ ಗಳಿಸಿ ಹೋಳಿಗೆಯನ್ನು ಉಣ್ಣುವುದಕ್ಕಿಂತ....' ಎಂದು ಓಂಕಾರನು ನುಡಿದಾಗ ಶಿವದೇವಶೆಟ್ಟಿ ಕೆರಳಿ, 'ದುಡಿದು ತೋರಿಸು ಹೋಗು' ಎಂದು ಪಾಲನ್ನು ಕೊಟ್ಟು ಕಳಿಸಿದ. ಓಂಕಾರ ಅಧೀರನಾಗಲಿಲ್ಲ. ಭಾರವನ್ನು ಚೆನ್ನಮಲ್ಲಿಕಾರ್ಜುನನ ಮೇಲೆ ಹಾಕಿ ವ್ಯಾಪಾರಕ್ಕೆ ಆರಂಭಿಸಿದ.

ಶಿವದೇವ ತಿಳಿದಂತೆ ವ್ಯವಹಾರಿಕ ಪ್ರಜ್ಞೆಯ ಕೊರತೆಯಿಂದ ಅವನು ಬರಿದಾಗಲಿಲ್ಲ. ಪುರುಷಪ್ರಯತ್ನದೊಡನೆ ದೈವೀಕಾರುಣ್ಯವೂ ಸೇರಿ ದಿನದಿನಕ್ಕೂ ಸಂಪತ್ತು ಹೆಚ್ಚಿತು. ಅವ್ಯವಹಾರಿಕ ತರುಣ ಹಾಳಾಗುವನೆಂದು ಬಗೆದಿದ್ದ ಜನರು ಓಂಕಾರನ ಪ್ರಗತಿಯನ್ನು ಕಂಡು ಮೂಗಿಗೆ ಬೆರಳನ್ನು ಆನಿಸಿದರು. ತನ್ನ ನಿರ್ಲಿಪ್ತತೆ, ದೈವೀ ಶರಣಾಗತಿಗಳನ್ನು ಅವ್ಯವಹಾರಿಕತನ, ಅಶಕ್ತತನ ಎಂದು ಭಾವಿಸಿದ್ದವರಿಗೆ ಓಂಕಾರ ಒಂದು ಆಹ್ವಾನವಾದ. ಹಲವಾರು ವರ್ಷಗಳಲ್ಲಿ ಅವನ ಕೀರ್ತಿ-ಪ್ರತಿಷ್ಠೆಗಳು ಹೆಚ್ಚಿದವು. ವಣಿಕ ಸಮೂಹದಲ್ಲಿ ಪ್ರಾಮಾಣಿಕತೆ, ಔದಾರ್ಯಗಳಿಗೆ ಹೆಸರಾಗಿ ಬಡವರ ಆಧಾರ ಶಕ್ತಿಯಾಗಿ ಉಡುತಡಿಯಲ್ಲಿ ನಿಂತ.

ಅಷ್ಟರಲ್ಲಿ ಆ ಊರಿಗೆ ವಿಶೇಷ ವ್ಯಕ್ತಿಯ ಆಗಮನವಾಯಿತು. ಮಲ್ಲಿಕಾರ್ಜುನ ಶಿವಾಚಾರ್ಯರೆಂಬ ಶೈವಾಚಾರ್ಯರು ಅನೇಕ ವರುಷಗಳಿಂದ ಆ ಊರಿನಲ್ಲಿದ್ದರು. ಅಂತಹ ಘನ ಪಂಡಿತರಲ್ಲದಿದ್ದರೂ ಸ್ವಭಾವತಃ ಸತ್ಯದ ಹಂಬಲಿಗರು, ತಪೋನಿಷ್ಠರು. ಅನನ್ಯ ಶಿವಭಕ್ತಿಯಿಂದ ಅಲ್ಲಿ ಮಲ್ಲಯ್ಯನ ಗುಡಿಯನ್ನು ಕಟ್ಟಿಸಿದ್ದರು. ಆಗಾಗ ಶ್ರೀಗಿರಿಗೆ ಹೋಗಿ ಬರುವ ಪರಿಪಾಠ ಉಳ್ಳ ಅವರು ಮುಪ್ಪಾವರಿಸಿದಂತೆ ಹೋಗಲಶಕ್ತರಾಗಿ ಉಡುತಡಿಯಲ್ಲೇ ಮಲ್ಲಿಕಾರ್ಜುನ ಲಿಂಗವನ್ನು ಪ್ರತಿಷ್ಠಾಪಿಸಿದ್ದರು. ಅದನ್ನೇ ಪೂಜಿಸುತ್ತ ದಿನಗಳನ್ನು ಕಳೆಯುವಾಗ ಒಂದು ದಿನ ತರುಣ ಸಾಧಕನೊಬ್ಬನ ಆಗಮನ ಅಲ್ಲಿಗಾಯಿತು. ಸಂಚಾರಿಯಾಗಿ ಸದಾ ತಿರುಗುತ್ತಿದ್ದ ಆ ವ್ಯಕ್ತಿಯ ದೈವೀ ಹಂಬಲವನ್ನು, ವಿಚಾರತೀಕ್ಷ್ಣತೆಯನ್ನು ಗುರುತಿಸಿದ ಶಿವಾಚಾರ್ಯರು ಅಲ್ಲೇ ಉಳಿಸಿಕೊಳ್ಳಲೆತ್ನಿಸಿದರು. ವೈರಾಗ್ಯದ ಪ್ರತಿಮೂರ್ತಿಯಾಗಿದ್ದ ಆ ವ್ಯಕ್ತಿ ಒತ್ತೆಡೆ ನಿಂತು ಬಂಧನದ ನಿರ್ಮಾಣ ಮಾಡಿಕೊಳ್ಳಲೊಪ್ಪಲಿಲ್ಲ. ಜಗದ ಸೇವಾರ್ಥಕ್ಕೆ ಇದು ಅವಶ್ಯಕ ಎಂದು ಒತ್ತಾಯಿಸಿದಾಗ ಅಲ್ಲಿಯೇ ಉಳಿದ. ಪೂರ್ವದ ಹೆಸರನ್ನು ಯಾರೂ ಅರಿಯರು. ಮಲ್ಲಿಕಾರ್ಜುನ ಶಿವಾಚಾರ್ಯರಿತ್ತ ಗುರುಲಿಂಗ ಶಿವಾಚಾರ್ಯ ಎಂಬ ಹೆಸರು ಪ್ರಚಲಿತವಾಯಿತು. ಅವರು ತನ್ನ ಗುರುವಿನ ಪರಂಪರೆಯನ್ನು ಮುಂದುವರಿಸಿದರು. ಧರ್ಮಶಾಸ್ತ್ರಗಳ ಪ್ರವಚನ ಪಾರಾಯಣ ಆರಂಭವಾಯಿತು.

ಇಲ್ಲಿಯ ತನಕ ಕೇವಲ ಗುಡಿಯ ಕಾರ್ಯ ನಡೆಯುತ್ತಿದ್ದಲ್ಲಿ ಆಧ್ಯಾತ್ಮಿಕ ಚಟುವಟಿಕೆ ಆರಂಭವಾದವು. ಉಡುತಡಿಯ ಸಾಧಕ-ಜೀವಿಗಳು ಆ ಶೈವ ಗುರುಗಳ ಸುತ್ತಲೂ ನೆರೆಯತೊಡಗಿದರು. ಶಿವಾಚಾರ್ಯರ ವ್ಯಕ್ತಿತ್ವ, ಔನ್ನತ್ಯಗಳಿಗೆ ಮಾರುಹೋದ ಓಂಕಾರ ಪತ್ನಿಸಮೇತನಾಗಿ ಶಿಷ್ಯನಾದ. ಶೈವಶಾಸ್ತ್ರಕ್ಕನುಗುಣವಾಗಿ ಮಂತ್ರೋಪದೇಶವನ್ನು ಹೊಂದಿದರು.

ಗುರುಗಳ ಪರಂಪರೆಯನ್ನು ನಿಷ್ಠೆಯಿಂದ ಮುಂದುವರಿಸಿದ ಗುರುಲಿಂಗ ಶಿವಾಚಾರ್ಯರು ಐದು ವರುಷಕ್ಕೊಮ್ಮೆ ತಪ್ಪದೆ ಶ್ರೀಗಿರಿಗೆ ಹೋಗಿ ಅನುಷ್ಠಾನ ಮಾಡುವುದರಲ್ಲಿ ಸ್ವತಃ ಆನಂದಿಸುತ್ತಿದ್ದರು. ಕಾಲ ಒದಗಿದಾಗ ಈ ಬಾರಿಯೂ ಮಲ್ಲಿಕಾರ್ಜುನನ ದರ್ಶನಕ್ಕೆ ಹೋದರು. ಆದರೆ ಎರಡು ತಿಂಗಳಿಗೆ ಹಿಂತಿರುಗುತ್ತಿದ್ದ ಅವರು ಈ ಬಾರಿ ನಾಲ್ಕು ತಿಂಗಳಾದರೂ ಬರಲಿಲ್ಲ. ಅವರ ಶಿಷ್ಯನಾದ ಮಾಣಿಕ್ಯ ಶಿವಾಚಾರ್ಯ ಮಠದ ಕಾರ್ಯಕಲಾಪಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರೂ ಸದ್ಭಕ್ತರಿಗೆ ಮಾತ್ರ ಮಠವು ಬರಿದಾದಂತೆನಿಸುತ್ತಿತ್ತು.

ಗುರುಗಳು ದೀರ್ಘಕಾಲ ಬರದಿದ್ದಾಗ ಎಲ್ಲರೂ ಅದೇ ಚಿಂತೆಯಲ್ಲಿದ್ದರು.

೩. ಧರ್ಮಸಂಸ್ಕಾರ

ಸೂರ್ಯೋದಯವಾಗಿ ಕೆಲವು ಚಣಗಳು ಸರಿದಿರಬೇಕು. ಏಕನಾದದ ಮಧುರ ನಾದ ಮನೆಯ ಮುಂದೆ ನಿನದಿಸತೊಡಗಿತ್ತು. ಲಿಂಗಮ್ಮನು ಸ್ನಾನವನ್ನು ಮುಗಿಸಿ ಮನೆಯ ಮುಂದೆ ರಂಗವಲ್ಲಿ ಬಿಡಲು ಸಾರಿಸುತ್ತಿದ್ದಳು. ಏಕನಾದದ ಸದ್ದು ಕೇಳಿ ಕ್ಷಣಕಾಲ ನಿಂತಳು. ತೇಜಸ್ವಿಯಾದ ಪುರುಷನೊಬ್ಬನ ಬಲಗೈಯಲ್ಲೊಂದು ಜೋಳಿಗೆ ತೂಗು ಬಿದ್ದಿತ್ತು. ಹೆಗಲಮೇಲೆ ಬಟ್ಟೆಯ ಗಂಟು ಇದ್ದಿತು. ಅವನ ಹಣೆಯ ಮೇಲಿನ ತ್ರಿಪುಂಡ್ರವನ್ನು ಕಂಡಳು. ಕೊರಳಿನಲ್ಲಿ ಅದನ್ನು ಸುತ್ತುವರಿದು ಎದೆಯ ಮೇಲೆ ಬಟ್ಟೆಯಲ್ಲಿ ಕಟ್ಟಲ್ಪಟ್ಟ ವಸ್ತುವೊಂದು ಇಳಿಯಬಿದ್ದಿತ್ತು. ಆ ಆಗಂತುಕನು ಬಲಗೈಯಲ್ಲಿ ಏಕನಾದವನ್ನು ಮೀಂಟುತ್ತ ಹಾಡತೊಡಗಿದ :

ನಂಬರು ನಚ್ಚರು ಬರಿದೇ ಕರೆವರು
ನಂಬಲರಿಯರೀ ಲೋಕದ ಮನುಜರು
ನಂಬಿ ಕರೆದಡೆ ಓ ಎನ್ನನೇ ಶಿವನು ?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ನಮ್ಮ
ಕೂಡಲ ಸಂಗಮದೇವಾ !*

ರಂಗವಲ್ಲಿಯ ಬಟ್ಟಲನ್ನು ಕೈಯಲ್ಲಿ ಹಿಡಿದು ಮಂತ್ರಮುಗ್ಧಳಾಗಿ ನಿಂತಳು ಲಿಂಗಮ್ಮ. ಆ ದನಿಯ ಇಂಪಿಗೆ ಮಾರುಹೋದ ಓಂಕಾರಶೆಟ್ಟಿಯೂ ತಲೆಬಾಗಿಲಿಗೆ ಬಂದು ನಿಂತಿದ್ದ. ಬಾಗಿಲಿಗೆ ಒರಗಿ ಕಣ್ಣುಮುಚ್ಚಿ ಆಲಿಸುತ್ತಿದ್ದ. ತಿಳಿಕನ್ನಡದಲ್ಲಿ ಘನತತ್ತ್ವವನ್ನು, ಭಕ್ತಿಯೋಗದ ರಹಸ್ಯವನ್ನು ಹೇಳುವ ಮಾತನ್ನು ಕೇಳಿದುದು ಇದೇ ಮೊದಲು. ಹಾಡು ಮುಗಿಯುತ್ತಿದ್ದಂತೆಯೇ ಎಚ್ಚರಗೊಂಡ ಓಂಕಾರ, 'ಇನ್ನೊಂದನ್ನು ಹಾಡಬಲ್ಲಿರಾ ಸ್ವಾಮಿ ?' ಎಂದು ಕೇಳಿದ.

'ಸಂತೋಷವಾಗಿ....! ತಮ್ಮ ಸೇವೆಯೇ ನಮ್ಮ ಪುಣ್ಯ....'

'ಛೇ....ಛೇ....ಕಾವೀ ವಸನಧಾರಿಗಳಾದ ತಾವು ಸೇವೆ ಎಂಬ ಶಬ್ದ ಬಳಸುವುದೇ ?' ಓಂಕಾರ ಹೇಳಿದ.

---

* ಬ. ಷ. ವ. ೧೧೬

'ಆಳಾಗಬಲ್ಲವನಷ್ಟೆ ಅರಸನಾಗಲು ಯೋಗ್ಯ. ಸಮಾಜಸೇವಕನೇ ನಿಜ ಸ್ವಾಮಿಯಾಗಬಲ್ಲ. ಇದು ನಮ್ಮ ತತ್ತ್ವದ ತಿರುಳು....'

'ಇದೆಂತಹ ಕ್ರಾಂತಿಕಾರಕ ವಿಚಾರ! ಸೇವೆ ಮಾಡಿಸಿಕೊಳ್ಳುವವ ಸ್ವಾಮಿ ಎಂದು ನಾವು ತಿಳಿದಿದ್ದೆವು. ಆದರೆ ವ್ಯಾಖ್ಯೆ ಬದಲಾಯಿತಲ್ಲ, ಸೇವೆ ಮಾಡುವವನು ಸ್ವಾಮಿಯಂತೆ' ಮನದಲ್ಲಿ ಆಲೋಚಿಸಿ, ಓಂಕಾರ ಕೇಳಿದ:

'ಸ್ವಾಮಿ, ತಾವು ಯಾರು?'

'ನಾವು ಜಂಗಮರು....'

'ಅಂದರೆ....'

'ಪಟ್ಟಣಕ್ಕೆ ಪಂಚರಾತ್ರಿಯಂತೆ ಹಳ್ಳಿಗೆ ಏಕರಾತ್ರಿಯಂತೆ ಧರ್ಮೋಪದೇಶ ಮಾಡುತ್ತ ಸಂಚರಿಸುವವರು....'

'ತಮ್ಮ ಕೊರಳಲ್ಲಿ ಇರುವುದೇನು?....'

'ಅದು ದೇವರು....'

'ಆಂ....ದೇವರೇ....! ನಾವೆಂದೂ ಹೀಗೆ ಕಟ್ಟುವುದನ್ನು ಕಂಡಿರಲಿಲ್ಲ. ಇದೆಲ್ಲ ಹೊಸದು. ತಮ್ಮ ಧರ್ಮದ ಆದಿ ಗುರುವು ಯಾರು....?'

'ಮನುಕುಲದ ಸ್ವಾತಂತ್ರ್ಯವನ್ನು ಸಾರಲು ಬಂದಿರುವ ಬಸವಣ್ಣನವರು. ಆಗಲೇ ಹೇಳಿದ ವಚನ ಅವರೇ ರಚಿಸಿದುದು....'

'ಅದೆಷ್ಟು ಅರ್ಥಗರ್ಭಿತವಾಗಿದೆ! ಇನ್ನೊಂದು ಹಾಡಬಲ್ಲಿರಾ?'

"ಮನವೇ ಸರ್ಪ, ತನುವೇ ಹೇಳಿಗೆ;
ಹಾವಿನೊಡತನ ಹುದುವಾಳಿಗೆ!
ಇನ್ನಾವಾಗ ಕೊಂದಹುದೆಂದರಿಯೆ;
ಇನ್ನಾವಾಗ ತಿಂದಹುದೆಂದರಿಯೆ!
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ,
ಅದೆ ಗಾರುಡ, ಕೂಡಲ ಸಂಗಮದೇವಾ!"*

ಏಕನಾದವನ್ನು ಮೀಂಟುತ್ತ ಜಂಗಮನು ಭಾವ ತುಂಬಿ ಹಾಡಿದ.

'ಇದೂ ಆ ಅಣ್ಣನವರದೇ?' ಓಂಕಾರ ಕೇಳಿದ. ಜಂಗಮ ಹೌದೆಂದ.

'ನೀವು ಎಷ್ಟು ಧರ್ಮಗ್ರಂಥಗಳನ್ನು ಓದಿದರೂ ನನಗೆ ಅರ್ಥವಾಗುತ್ತಿರಲಿಲ್ಲ. ಮತ್ತೂ ನೀವೇ ಅರ್ಥೈಸಿ ಹೇಳಬೇಕಾಗುತ್ತಿತ್ತು. ಆದರೆ ಈಗ ಅಚ್ಚಕನ್ನಡದಲ್ಲಿರುವ ಕಾರಣ ಇವೆರಡೂ ನನಗೆ ಅರ್ಥವಾದವು' ಲಿಂಗಮ್ಮ ಹೇಳಿದಳು.

---

* ಬ. ಷ. ವ., ೧೬೦

‘ಹೌದು ತಾಯಿ, ಜನಕ್ಕೆ ಧರ್ಮತತ್ತ್ವಗಳು ಅರ್ಥವಾಗಲೆಂದೇ ಈ ಚಳುವಳಿ ಆರಂಭವಾಗಿದೆ....ಇದರ ನೇತಾರರು ಬಸವಣ್ಣನವರು....’

‘ತಮ್ಮ ಜಾತಿ ಯಾವುದು ?’ ಲಿಂಗಮ್ಮ ಕೇಳಿದಳು, ಸಾಧ್ಯವಾದರೆ ತಮ್ಮ ಮನೆಯಲ್ಲಿ ಉಪಚರಿಸಿ ಕಳಿಸಬೇಕೆಂದು.

‘ನಮಗೆ ಜಾತಿ ಇಲ್ಲವಮ್ಮ. ನೀರು ಗಟ್ಟಿಗೊಂಡು ಮುತ್ತಾದಂತೆ, ಪೂರ್ವಜಾತಿ ಅಳಿದಾಗಲೇ ನಾವು ಜಂಗಮರಾದುದು !’

ಇವೆಲ್ಲವೂ ಹೊಸ ಶಬ್ದ, ಹೊಸ ತತ್ತ್ವಗಳಾಗಿ ಕೇಳಿಬರುತ್ತಿದ್ದವು. ಇಲ್ಲಿಯ ತನಕ ಜಂಗಮನೂ ನಿಂತಿದ್ದ, ದಂಪತಿಗಳೂ ನಿಂತಿದ್ದರು.

‘ಕಟ್ಟೆಯ ಮೇಲಾದರೂ ಕುಳಿತುಕೊಳ್ಳಿ, ಸ್ವಾಮಿ....’ ಓಂಕಾರ ಬಿನ್ನವಿಸಿದ.

‘ನೋಡಿ ಶರಣರೇ, ಮಧ್ಯಾಹ್ನದ ಒಳಗೆ ಏಳೆಂಟು ಮನೆಗಳಿಗಾದರೂ ಹೋಗಿ ಬೋಧೆ ಮಾಡಬೇಕು. ನೀವು ತಿಳಿದುಕೊಳ್ಳಬೇಕಾದುದು ಬಹಳಷ್ಟು ಇದೆ. ಆದ್ದರಿಂದ ತಾವು ಒಪ್ಪಿದಲ್ಲಿ ಸಂಜೆಯ ವೇಳೆಗೆ ನಿಮ್ಮ ಮನೆಯ ಕಟ್ಟೆಯ ಮೇಲೋ ಅಥವಾ ಅಂಗಡಿಯ ಮುಂದೆಯೋ ಬೋಧೆ ಮಾಡುವೆ. ಓಣಿಯ ಜನರನ್ನು ಸೇರಿಸಬೇಕು. ಇಲ್ಲವೇ ತಾವೇ ನಮ್ಮಲ್ಲಿ ಬರುವುದಾದರೆ..’

‘ತಮ್ಮ ವಾಸ್ತವ್ಯ ಎಲ್ಲಿ ಆಗಿದೆ....?’ ಓಂಕಾರ ಕೇಳಿದ.

‘ಇಲ್ಲಿಯ ಮಲ್ಲಿಕಾರ್ಜುನ ಮಠದಲ್ಲಿ. ಸ್ಥಾನಪತಿ ಶ್ರೀ ಗುರುಲಿಂಗಸ್ವಾಮಿಗಳ ಸನ್ನಿಧಿಯಲ್ಲಿ ಜರುಗಿಸುತ್ತೇವೆ....’

‘ಆಂ....ಗುರುಗಳು ಊರಿನಿಂದ ಬಂದರೇ....?’

‘ನಿನ್ನೆ ತಾನೆ ನಾವೆಲ್ಲ ಕೂಡಿಯೇ ಬಂದೆವು. ನಮ್ಮ ನಿತ್ಯಕಾಯಕ ಪೂರೈಸಲು ಬೇಗನೆ ಸ್ನಾನ ಪೂಜೆ ಮುಗಿಸಿ ಬಂದಿದ್ದೇವೆ....’

‘ನಾವು ಸಂಜೆಗೆ ಅಲ್ಲೇ ಬರುತ್ತೇವೆ....’ ಸಂಭ್ರಮದಿಂದ ನುಡಿದ ಓಂಕಾರ. ತುಂಬಾ ಆಪ್ಯಾಯಮಾನವಾಗಿತ್ತು ಗುರುಗಳ ಆಗಮನದ ಸುದ್ದಿ.

‘ನಾನಿನ್ನು ಹೊರಡುವೆ. ಆದರೆ ಅದಕ್ಕೆ ಮುನ್ನ ಒಂದು ಬಿನ್ನಹ. ನನ್ನ ಜೋಳಿಗೆಯ ಗಂಟಿನಲ್ಲಿ ವಚನಗಳ ಕಟ್ಟುಗಳಿವೆ; ಅವುಗಳನ್ನು ಕೊಡುವೆ. ತಾವು ಓದಿ, ಹೊಸ ಧರ್ಮದ ತಿರುಳನ್ನು ಅರಿಯಿರಿ. ಅರ್ಥವಾಗದೆ ಉಳಿದಿದ್ದರೆ ಸಂಜೆಗೆ ನಡೆಯುವ ಅನುಭವಗೋಷ್ಠಿಯಲ್ಲಿ ಕೇಳುವ ಸ್ವಾತಂತ್ರ್ಯವಿ ಉಂಟು.’

‘ಅನುಭವಗೋಷ್ಠಿ ಎಂದರೇನು ? ಪ್ರವಚನವೇ ?’

‘ಇದೊಂದು ವಿಶಿಷ್ಟ, ಬಗೆಯ

ಹೋಗುತ್ತಾನೆ, ಶಿಷ್ಯ ಕೇಳುತ್ತಾನೆ. ಅನುಭವಗೋಷ್ಠಿಯಲ್ಲಿ ಪ್ರವಚನಕಾರ ಅಥವಾ ಉಪದೇಶಕ ಮೊದಲು ವಿಶಿಷ್ಟ ತತ್ತ್ವದ ಬಗೆಗೆ ವಿವರಣೆ ನೀಡುವನು. ಸಭಿಕರಿಗೆ ಸಂಶಯಗಳು ಬಂದರೆ ಅವರು ಪ್ರಶ್ನಿಸುತ್ತಾರೆ; ಅಥವಾ ಶ್ರೋತೃವಿಗೆ ಹೆಚ್ಚಿನ ವಿಷಯ ತಿಳಿದಿದ್ದರೆ ಅವನೂ ತಿಳಿದ ವಿಷಯ ಮಂಡಿಸಬಹುದು ....ಎಲ್ಲರಿಗೂ ಮಾತನಾಡುವ ಸ್ವಾತಂತ್ರ್ಯ; ವಿಚಾರ ಮಾಡುವ ಸ್ವಾತಂತ್ರ್ಯ, ಆಚರಣೆಗೆ ತರುವ ಸ್ವಾತಂತ್ರ್ಯ ಉಂಟು....'

'ಇದೊಂದು ಹೊಸ ಬಗೆಯೇ ಆಯಿತು....'

'ಅಹುದು....ವಿಚಾರಶಕ್ತಿಯನ್ನು ಪ್ರತಿಯೋರ್ವನು ಬೆಳೆಸಿಕೊಂಡು ತನ್ನ ಅರಿವಿನ ಬೆಳಗಿನಲ್ಲಿ ಮುನ್ನಡೆಯುವಂತೆ ಮಾಡಲು ನಾವು ಶಿಕ್ಷಣ ಕೊಡುತ್ತೇವೆ. ಐಹಿಕ ಬಾಳಿನ ಬಗೆಯನ್ನು ಕಲಿಸುವವನು ಓದಿಸುವ ಅಯ್ಯನಾದರೆ, ಪಾರಮಾರ್ಥಿಕ ಬಾಳಿನ ಬಗೆಯನ್ನು ಕಲಿಸುವ ನಮಗೆ ಬೋಧಿಸುವ ಜಂಗಮರು ಎನ್ನುವುದು. ವೇಳೆ ಬಹಳವಾಯಿತು. ಈ ವಚನವ ಕಟ್ಟಿ ಹಿಡಿಯಿರಿ. ನಾನಿನ್ನು ಹೊರಡುವೆ. ನನ್ನ ಕಾಯಕಕ್ಕೆ ಪ್ರತಿಫಲ?' ಜಂಗಮನು ಕೇಳಿದ. ಓಂಕಾರಶೆಟ್ಟಿ ಸಂಭ್ರಮದಿಂದ ಬಂಗಾರದ ಒಂದು ನಾಣ್ಯವನ್ನು ಕೊಡ ಹೋದ.

'ಮನ್ನಿಸಿ....ಶರಣರೇ, ನನ್ನ ಕಾಯಕಕ್ಕೆ ಇದು ಹೆಚ್ಚು. ವಿರಕ್ತನಿಗೇಕೆ ಬಂಗಾರದ ನಾಣ್ಯ! ಧಾನ್ಯವನ್ನು ನೀಡಿದರೆ ಸಾಕು....'

ಲಿಂಗಮ್ಮ ಭಯಭಕ್ತಿಯಿಂದ ಒಳಹೋಗಿ ಮೊರದ ತುಂಬ ಅಕ್ಕಿಯನ್ನು ತಂದು ಹಿಡಿದಾಗ ಜಂಗಮನು ನುಡಿದ:

'ತಾಯಿ....ನಿಮ್ಮ ಔದಾರ್ಯಕ್ಕೆ ತುಂಬ ಋಣಿ. ಆದರೆ ನನ್ನ ಕಾಯಕಕ್ಕೆ ಇದು ಹೆಚ್ಚು; ಎರಡು ಹಿಡಿ ಸಾಕು. ಇನ್ನೂ ನಾಲ್ಕಾರು ಮನೆಗೆ ಹೋಗಬೇಕಾಗುತ್ತದೆ. ಎಲ್ಲರದ್ದೂ ಸೇರಿದರೆ ನಮಗೆ ಇಂದಿಗೆ ಹೆಚ್ಚಾಗಿ ಉಳಿಯುವಂತಾಗಬಾರದು.' ಅವನ ವರ್ತನೆ ಅಚ್ಚರಿಯಮೇಲೆ ಅಚ್ಚರಿಯನ್ನು ಉಂಟುಮಾಡುತ್ತಿತ್ತು. ಎಷ್ಟು ಬೇಡಿಕೊಂಡರೂ ಒಪ್ಪದೆ ಅವನು ನಿಯಮಬದ್ಧವಾಗಿ ಎರಡು ಹಿಡಿ ಅಕ್ಕಿ ಸ್ವೀಕರಿಸಿದ.

'ತಮ್ಮ ಹೆಸರೇನು ಸ್ವಾಮಿ?' ಓಂಕಾರ ಕೇಳಿದ.

'ಬೋಧೆ ಕಾಯಕದ ಚನ್ನಯ್ಯ....' ಅವನು ಮಾರುತ್ತರಿಸಿ ಮುಂದೆ ಸಾಗಿದ.

ಓಂಕಾರ ಮೌನವಾಗಿ ಆಲೋಚಿಸುತ್ತ ನಿಂತ. ಲಿಂಗಮ್ಮನು ರಂಗವಲ್ಲಿ ಬಿಡಲಾರಂಭಿಸಿ ಆಗಾಗ ಜಂಗಮನನ್ನು ನೋಡುತ್ತಿದ್ದಳು. ಅವನು ಮುಂದೆ

ನಾಗಿ ಎದುರಿನ ಮನೆಯ ಮುಂದೆ ನಿಂತು ಏಕನಾದವನ್ನು ಮೀಂಟುತ್ತ ಹಾಡಲಾರಂಭಿಸಿದ. ಮನೆಯ ಒಳಗಿನಿಂದ ಬಂದ ಪಾರ್ವತಮ್ಮ ಭಿಕ್ಷುಕನೆಂದು ಭಾವಿಸಿ ಮೊರದಲ್ಲಿ ಅಕ್ಕಿ ತಂದಳು. ಪಡೆದುಕೊಳ್ಳುವ ಮುನ್ನ ಜಂಗಮ ಕೇಳಿದ,

'ಅವ್ವಾ....ಈಗ ಹಾಡಿದ ವಚನದ ಅರ್ಥ ಹೇಳಲೇ....?'

'ಅವೆಲ್ಲಾ ಯಾರಿಗೆ ಬೇಕಪ್ಪಾ....'

'ಈಗ ತಮಗೆ ವೇಳೆ ಇರಲಿಕ್ಕಿಲ್ಲ. ವಚನದ ಕಟ್ಟು ಕೊಡುವೆ. ಓದಿ ಇಟ್ಟುಕೊಳ್ಳಿ. ಸಂಜೆ ಮತಕ್ಕಾದರೂ ಬರ್ರಿ, ಇಲ್ಲವೇ ನಾಳೆ ಬಂದಾಗ ನಾನೇ ಹೇಳ್ತೀನಿ.'

'ಹೆಂಗಸರು ದೇವರು, ಧರ್ಮದ ಬಗ್ಗೆ ಹೇಳೋ ಪುಸ್ತಕಗಳನ್ನ ಮುಟ್ಟ ಬಾರದಂತಲ್ಲಾ....'

'ಅವ್ವಾ....ಹೆಣ್ಣು ಕುಲವೂ ಸೃಷ್ಟಿಯ ಒಂದು ಅಂಗವಲ್ಲವೆ? ದೇವರು ಹಂಗ ಭೇದ ಮಾಡೋದು ಉಂಟಾ?'

'ನಮಗೇನೂ ನಿನ್ನ ತತ್ತ್ವ ಬೇಡಪ್ಪಾ....ಈ ಭಿಕ್ಷೆ ಒಯ್ಯಿ....' ಪಾರ್ವತಮ್ಮ ಹೇಳಿದಳು.

'ಬೇಡ ತಾಯಿ; ನನ್ನ ಜ್ಞಾನದಾನವನ್ನು ನೀನು ಒಲ್ಲೆಯಾದರೆ ನೀನು ನೀಡುವ ಅನ್ನದಾನವೂ ನನಗೆ ಬೇಡ. ನೀವು ನೆತ್ತಿಯ ಅನ್ನವನ್ನು ಉಂಡರೆ ಮಾತ್ರ ನಾನು ಉದರದ ಅನ್ನವನ್ನುಣ್ಣುವೆ. ನಾವು ಬೇಡುವುದು ಭಿಕ್ಷೆಯನ್ನಲ್ಲ, ಕಾಯಕದ ಪ್ರತಿಫಲವನ್ನು. ತನ್ನ ಪಾಲಿನ ಕಾಯಕ ಮಾಡದೆ ಬೇಡಿ ತಿನ್ನು ವುದು ಬಸವ ಧರ್ಮಕ್ಕೆ ಸಲ್ಲದು.' ಆ ಜಂಗಮ ಮುಂದಿನ ಮನೆಗೆ ಹೋದಾಗ ಓಂಕಾರಶೆಟ್ಟಿ, ಲಿಂಗಮ್ಮನವರಿಗೆ ಎಚ್ಚರವಾಯಿತು. ಜಂಗಮನಲ್ಲಿದ್ದ ಕರ್ತವ್ಯ ಪ್ರಜ್ಞೆ, ಸಮಾಜೋದ್ಧಾರದ ಕಳಕಳಿ, ನಿರ್ಭೀತ ವಿಚಾರಧಾರೆಗಳು ಓಂಕಾರ ನನ್ನು ಬೆರಗುಗೊಳಿಸಿದವು.

'ಒಬ್ಬ ಸಾಮಾನ್ಯ ಅನುಯಾಯಿಯೇ ಹೀಗಿದ್ದರೆ ಆ ಮೂಲಗುರು ಬಸವಣ್ಣನವರು ಎಂತಹ ಉತ್ತುಂಗ ವ್ಯಕ್ತಿ ಇರಬೇಕು!' ಎಂದುಕೊಳ್ಳುತ್ತ ಒಳಹೊಕ್ಕ ಓಂಕಾರ.

ಬಹು ದಿನಗಳ ಕಾಲ ಸಂಚಾರದಲ್ಲಿ ಮಗ್ನರಾಗಿ ಶಿಷ್ಯಕೋಟಿಯಿಂದ ದೂರವಿದ್ದ ಶ್ರೀಗುರುಗಳ ಆಗಮನದ ಸುದ್ದಿ ಆವನ ಹೃದಯವನ್ನು ಗರಿ ಬಿಚ್ಚಿದ ನವಿಲಿನಂತೆ ಮಾಡಿದ್ದಿತು. ತಕ್ಷಣವೇ ದರ್ಶನಕ್ಕೆ ಧಾವಿಸಬೇಕೆಂಬ ಆತುರತೆಯಿಂದ ಹೊರಡುವಲ್ಲಿ ಅಂಗಡಿಯಿಂದ ಕರೆ ಬಂದಿತು.

ನಿರ್ಧಾರದ ದಿಕ್ಕನ್ನು ಬದಲಿಸಿ ಅಂಗಡಿಗೆ ನಡೆದಾಗ ಸ್ವಲ್ಪ ಆಶ್ಚರ್ಯವು ಕಾದಿತ್ತು. ಮಲ್ಲಿಕಾರ್ಜುನ ಮಠದ ಅನೇಕ ಭಕ್ತರು ನೆರೆದಿದ್ದರು. ಆ ಬೀದಿಯ ಪ್ರಮುಖರೂ ಇದ್ದರು. ಇವರುಗಳೆಲ್ಲ ವಿಶೇಷ ಪ್ರಸಂಗಗಳಲ್ಲಿ ಮಾತ್ರ ವಣಿಕಶ್ರೇಷ್ಠ ಓಂಕಾರನ ಅಂಗಡಿಯಲ್ಲಿ ನೆರೆಯುತ್ತಿದ್ದುದುಂಟು. ತನ್ನ ಕುತೂಹಲವನ್ನು ಹತ್ತಿಕ್ಕಿಕೊಂಡು ಓಂಕಾರ ಕರವೆತ್ತಿ ಮುಗಿದು ಮುಗುಳ್ನಕ್ಕು ಪ್ರಶ್ನಿಸಿದ :

'ಇದೇನು....ಅಪರೂಪದ ಸಮಾವೇಶ ?'

'ಒಂದು ವಿಚಿತ್ರ ಸುದ್ದಿ ಹಬ್ಬುತ್ತಿದೆ. ಯಾರೋ ಕಲ್ಯಾಣದ ಕಡೆಯ ಜಂಗಮಯ್ಯಗಳಂತೆ—ಬೋಧೆ ಕಾಯಕದವರು, ಬಹುರೂಪದವರು ಎಂದು ನಮ್ಮ ಊರಿಗೆ ಬಂದಿದ್ದಾರಂತೆ. ಅವರೆಲ್ಲ ಊರು ತುಂಬ ಸಂಚರಿಸುತ್ತಿದ್ದಾರಂತೆ. ಹೊಲೆಗೇರಿ, ವೇಶ್ಯಾಕೇರಿಗಳಲ್ಲೆಲ್ಲ ಓಡಾಡಿ ಬಂದು ಉತ್ತಮರ ಓಣಿಯಲ್ಲೂ ಬೋಧೆ ಮಾಡುತ್ತ ಓಡಾಡುತ್ತಿದ್ದಾರಂತೆ. ಥೂ, ಕುಲ ಕೆಡುವ ಕಾಲ. ಪಾಪ ತುಂಬಿ ಬಂದ ಕಾಲ....' ಗುಡಿಯ ಅರ್ಚಕ ವಿರೂಪಾಕ್ಷಭಟ್ಟ ಮೆಲ್ಲನೆ ಸುದ್ದಿ ತೆಗೆದ.

'ಅದತ್ತ ಹಾಳಾಗಿ ಹೋಗಲಿ ; ನಮ್ಮ ತಪೋಧನರಾದ ಗುರುಲಿಂಗ ಶಿವಾಚಾರ್ಯರು ಕೂಡ ಆ ಅಯ್ಯಗಳ ಪ್ರಭಾವಕ್ಕೆ ಒಳಗಾಗಿ ವಸತಿಗಾಗಿ ಮಠವನ್ನೇ ಕೊಟ್ಟುಬಿಟ್ಟಿದ್ದಾರಂತೆ.'

'ಅಲ್ರೀ....ಜಂಗಮರನ್ನು ಕರೆತಂದವರೇ ಅವರಂತೆ. ಇದ್ಯಾಕಿಂತ ಬುದ್ಧಿ ಬಂತು !' ಮೈಲಾರಶೆಟ್ಟಿ ಹೇಳುತ್ತಿದ್ದ.

'ಇಲ್ನೋಡ್ರಿ, ತಿಳಿಯದೆ ಏನನ್ನು ಆಡೋದು ಸಲ್ಲದು. ನಿನ್ನೆ ತಾನೆ ಗುರುಗಳು ಪ್ರವಾಸದಿಂದ ಬಂದಿರುವರಂತೆ. ಗೊತ್ತಾದುದು ಇದೇ ಮುಂಜಾನೆ. ಹೋಗಿ ದರ್ಶನಪಡೆದು ವಿಷಯ ತಿಳಿದು ಬರೋಣ. ಅವರ ವಿಚಾರಶಕ್ತಿ, ವಿಮರ್ಶಾಪ್ರಜ್ಞೆ, ದಿಟ್ಟತನ ಎಷ್ಟೆಂಬುದು ನಮಗೆ ತಿಳಿದೇ ಇದೆ. ದುಡುಕಿ ಮಾಡುವವರಂತೂ ಅಲ್ಲವೇ ಅಲ್ಲ....' ಓಂಕಾರ ಪ್ರಶಾಂತಚಿತ್ತನಾಗಿ ಹೇಳಿದಾಗ ಎಲ್ಲರೂ ಮೌನವಾಂತರು.

ಅಂದು ಸಂಜೆ ತ್ವರಿತಗತಿಯಲ್ಲಿ ಅಂಗಡಿಯ ವ್ಯವಹಾರವನ್ನು ಅಣ್ಣನ ಮಗ ಸದಾಶಿವಶೆಟ್ಟಿಗೆ ಹಸ್ತಾಂತರಿಸಿ ಓಂಕಾರಶೆಟ್ಟಿ ಲಿಂಗಮ್ಮನೊಡಗೂಡಿ ಫಲಪುಷ್ಪಗಳೊಡನೆ ಗುರುಲಿಂಗ ಶಿವಾಚಾರ್ಯರ ಮಠಕ್ಕೆ ಧಾವಿಸಿದ. ತಮ್ಮ ಆಸನದ ಮೇಲೆ ಸ್ಥಾಪಿತರಾಗಿದ್ದ ಗುರುವರ್ಯರನ್ನು ಕಂಡವನೇ ಅಪೂರ್ವ ಆನಂದದಿಂದ ನಮಸ್ಕರಿಸಿದ. ಬಹುದಿವಸಕ್ಕೆ ಗುರುಗಳ ದರ್ಶನಲಾಭವಾಗಿ,

ಮಾತು ಮೂಕವಾಯಿತು.

'ಓಂಕಾರ, ಲಿಂಗಮ್ಮತಾಯಿ ಎಲ್ಲರೂ ಕುಶಲವೇ?' ಶ್ರೀ ಗುರುಗಳು ವಾತ್ಸಲ್ಯಪೂರ್ಣ ದೃಷ್ಟಿ ಬೀರಿ ಕೇಳಿದರು.

'ತಮ್ಮ ದಯದಿಂದ ಕುಶಲ. ತಮ್ಮ ದೀರ್ಘ ಪ್ರವಾಸದಿಂದಾಗಿ ನಾವೆಲ್ಲ ತಾಯನಗಲಿದ ಕರುವಿನಂತಾಗಿದ್ದೆವು....' ಓಂಕಾರ ನುಡಿದನು.

ಮಠದಲ್ಲಿ ಹೊಸಮುಖಗಳು ಕಾಣತೊಡಗಿದ್ದವು. ಎಲ್ಲರ ಹಣೆಯಮೇಲೆ ತ್ರಿಪುಂಡ್ರ, ಕೊರಳಲ್ಲಿ ರುದ್ರಾಕ್ಷಿ, ಕಾವೀ ವಸ್ತ್ರದಲ್ಲಿ ತೂಗುಬಿದ್ದ 'ದೇವರು.' ಆಂವಿನ ಕಳೆ ಮುಖದ ಮೇಲೆ ಸೂಸುತ್ತಿತ್ತು.

'ಗುರುದೇವಾ....ಇವರೆಲ್ಲಾ ಯಾರು?' ಓಂಕಾರ ಕೇಳಿದ.

'ಇವರು ಕಲ್ಯಾಣದ ಜಂಗಮರು; ಬಸವಸೈನ್ಯ....'

'ಹಾಂ....ಸೈನಿಕರೇ....?' ಲಿಂಗಮ್ಮ ಪ್ರಶ್ನಿಸಿದಳು.

'ತಾಯಿ....ಆಧ್ಯಾತ್ಮಿಕ ಸೈನಿಕರು. ನಾಡಗಡಿಗಳನ್ನು, ರಾಜ್ಯವನ್ನು, ದುಷ್ಟರನ್ನು ರಕ್ಷಿಸುವ ಅವರು ಲೌಕಿಕ ಸೈನಿಕರಾದರೆ ಜಾತೀಯತೆ, ಮೂಢಾಚಾರ, ಗೊಡ್ಡು ಸಂಪ್ರದಾಯಗಳ ವಿರುದ್ಧ ಹೋರಾಡಿ ಸತ್ಸಂಪ್ರದಾಯವನ್ನು ಪೋಷಿಸುವ ಇವರು ಆಧ್ಯಾತ್ಮಿಕ ಸೈನಿಕರು. ಅಂತರಂಗದ ನಾಡನ್ನು ಕಾಮ ಕ್ರೋಧಾದಿಗಳಿಂದ ರಕ್ಷಿಸುವ ಬೋಧಕರು, ತ್ಯಾಗಿಗಳು.'

'ತಮಗೆ ಪ್ರವಾಸದಿಂದ ದಣಿವಾಗಿರಬೇಕು. ಬಹುಶಃ ವಿಶ್ರಾಂತಿಯ ಅವಶ್ಯಕತೆ ಇರಬೇಕು. ತಮ್ಮ ಬಾಯಲ್ಲಿಯೇ ಪ್ರವಾಸದ ಕಥನವನ್ನು ಕೇಳುವ ಅಭೀಪ್ಸೆ....' ಓಂಕಾರ ಬಿನ್ನವಿಸಿದ.

'ನಾನೂ ಅದಕ್ಕೆ ನಿಮ್ಮ ಬರವನ್ನು ಹಾರೈಸುತ್ತಿದ್ದೆ. ಮಠದ ಉಳಿದ ಸದ್ಭಕ್ತರಿಗೂ ಹೇಳಿಕಳುಹಿಸಿರುವೆ. ಅಲ್ಲಿಯ ತನಕ ಉಳಿದ ಕಾರ್ಯಕ್ರಮ ಆರಂಭವಾಗಲಿ....'

ವಚನಗಳನ್ನು ನುಡಿಯುತ್ತ ವಚನ ಕಾಯಕದ ವಾಸುದೇವ ಉಳಿದವರಿಂದ ಪುನರುಚ್ಚಾರಣೆ ಮಾಡಿಸಿದ. ಬಹುರೂಪದ ಭರಮಯ್ಯ ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಕೆಲವು ಲೀಲೆಗಳನ್ನು ಅಭಿನಯಿಸಿ ತೋರಿಸಿದ. ಬೋಧೆ ಕಾಯಕದ ಚನ್ನಯ್ಯ ಆಧ್ಯಾತ್ಮಿಕ ತತ್ವಗಳ ವಿವೇಚನೆ ಮಾಡಿದ. ಶ್ರೋತೃಗಳ ಮೊದಲ ಸಾಲಿನಲ್ಲಿ ಕುಳಿತ ಓಂಕಾರ-ಲಿಂಗಮ್ಮನವರುಗಳನ್ನು ಗುರುತಿಸಿ ಚನ್ನಯ್ಯ ನುಡಿದ:

'ಗುರುಗಳೇ....ಇಂದು ಮುಂಜಾನೆ ಈ ಶರಣರು ಬಹು ಆಸಕ್ತಿಯಿಂದ ತತ್ತ್ವಗಳನ್ನು ಕೇಳಿದರು....'

'ಹೌದು ಚನ್ನಯ್ಯನವರೇ....! ಈ ದಂಪತಿಗಳು ನಮ್ಮ ಮಠದ ನಿಷ್ಠಾವಂತ ಭಕ್ತರು, ಆಧ್ಯಾತ್ಮ ಜೀವಿಗಳು....'

'ತಮಗೇನಾದರೂ ಸಂದೇಹ ಉಳಿದಲ್ಲಿ ಈ ಅನುಭವಗೋಷ್ಠಿಯ ಮುಂದೆ ಇಡಬಹುದು' ಚನ್ನಯ್ಯ ಹೇಳಿದ.

ಓಂಕಾರ ತನ್ನ ಕೆಲವು ಸಂದೇಹಗಳನ್ನು ಮುಂದಿರಿಸಿ ಉತ್ತರ ಪಡೆದ. ಆ ಬಳಿಕ ಗುರುಲಿಂಗರ ಆಶೀರ್ವಚನ ಪ್ರಾರಂಭವಾಯಿತು.

'ಈ ಬಾರಿ ನನ್ನ ಪ್ರವಾಸ ಬಾಳಿನ ದಿಕ್ಕನ್ನೇ ಬದಲಿಸಿತು. ಪ್ರತಿ ಐದು ವರುಷಕ್ಕೊಮ್ಮೆ ಹೋಗುವಂತೆ ಶ್ರೀಶೈಲಕ್ಕೆ ಹೊರಟಿದ್ದೆನಷ್ಟೆ. ದಾರಿಯಲ್ಲಿ ಹೋಗುವಾಗ ಒಂದು ಕಟು ಅನುಭವವಾಯಿತು. ಕನ್ನಡ ನಾಡಿನಿಂದ ಪರಿಷೆಯ ತಂಡವೊಂದು ಹೊರಟಿದ್ದು ಪರಸ್ಪರ ಆತ್ಮಕೂರಿನಲ್ಲಿ ಸಂಧಿಸಿದೆವು. ಮುಂದೆ ಎಲ್ಲರೂ ಒಟ್ಟಿಗೆಯೆ ಸಾಗಿದೆವು. ಪ್ರಕೃತಿಯ ರೌದ್ರಮುಖದಂತಹ ಆಳವಾದ, ಗಭೀರ ಕೊಳ್ಳಗಳನ್ನು ದಾಟುತ್ತ ಶ್ರೀಗಿರಿಯ ಮುಖವಾಗಿ ಸಾಗುತ್ತ ಒಂದು ರಾತ್ರಿ ಬೀಡುಬಿಟ್ಟಿದ್ದೆವು. ಗೃಹಸ್ಥ ಪ್ರವಾಸಿಕರ ಸದ್ದುಗದ್ದಲಗಳಿಂದ ದೂರವಾಗಿ ಧ್ಯಾನ ಮಾಡಲು ನಾನು ಅವರಿಂದ ಸ್ವಲ್ಪ ದೂರದಲ್ಲಿ ತಂಗಿದ್ದೆ. ನಡುರಾತ್ರಿಯ ಗಂಭೀರ ಕತ್ತಲೆಯನ್ನು ಭೇದಿಸಿಕೊಂಡು ಕರುಳು ಕಿವುಚುವ ಆಕ್ರಂದನ ಧ್ವನಿ ಕೇಳಿಬಂದಿತು. ಧಾವತಿಗೊಂಡು ಸಾಗಿದಾಗ ಕರುಣಾಜನಕ ದೃಶ್ಯವೊಂದು ಜರುಗುತ್ತಿತ್ತು. ಸುಲಿಗೆಗಾರರ ತಂಡವೊಂದು ಪರಿಷೆಯ ಜನರನ್ನು ಕೊಳ್ಳೆಹೊಡೆಯುತ್ತಲಿತ್ತು. ಆಸ್ತಿಪಾಸ್ತಿ-ಆಭರಣಗಳನ್ನಲ್ಲದೆ ಆಹಾರ ಸಾಮಗ್ರಿಗಳನ್ನೂ ಒಯ್ಯುತ್ತಿದ್ದರು. ವೀರಾವೇಶದಿಂದ ಜನರನ್ನು ಹುರಿದುಂಬಿಸಿ ಕೈಲಿದ್ದ ಬಲವಾದ ದೊಣ್ಣೆಗಳಿಂದಲೇ ಕೊಳ್ಳೆಗಾರರನ್ನು ಎದುರಿಸಿ ಸ್ವಲ್ಪ ಸಂಪತ್ತನ್ನು ಪಡೆದೆವು. ನನ್ನ ಬಲವಾದ ಪೆಟ್ಟುಗಳಿಗೆ ಹೆದರಿ ಕಳ್ಳರು ಓಟದ ಸೂತ್ರ ಪಠಿಸಿದರು. ಆದರೆ ಪರಿಷೆಯ ತಂಡ ಜರ್ಜರಿತವಾಗಿತ್ತು. ಸಾವು-ನೋವುಗಳಿಂದ ಜನ ನರಳುತ್ತಿದ್ದರು. ಅಷ್ಟರಲ್ಲಿ ತಂಡದಲ್ಲಿಬ್ಬರು ಜೀನೆ ಬಿದ್ದರು. ಗಿಡಮೂಲಿಕೆಗಳ ಬಲದಿಂದ ಎಷ್ಟೇ ಉಪಚರಿಸಿದರೂ ಪರಿಣಾಮವಾಗದೆ ಅವರು ಶಿವಾಧೀನರಾದರು. ಉಳಿದವರು ಚಿಂತಾಕ್ರಾಂತರಾಗಿ ಮುಂದೆ ಸಾಗಿದರು. ಈ ಎಲ್ಲ ದೃಶ್ಯಗಳು ನನ್ನ ಕರುಳು ಕಿವಿಚುವಂತೆ ಮಾಡಿದ್ದವು. ಹೇಗೋ ಶ್ರೀಗಿರಿಯನ್ನು ಮುಟ್ಟಿದೆವು.

ಆದರೆ ನನ್ನಂತರಂಗವು ಗಂಭೀರ ಮಂಥನಕ್ಕೆ ತೊಡಗಿತ್ತು. ಒಂದು ಪ್ರಶ್ನೆ ಮೇಲೆದ್ದು ನಿಲ್ಲುತ್ತಿತ್ತು :

'ಇಷ್ಟು, ಕಷ್ಟ-ನಷ್ಟಗಳನ್ನು ಸಹಿಸಿಕೊಂಡೇ ದೇವನನ್ನು ಒಲಿಸಬೇಕೆ?

ಹೊರಗಡೆ ಹುಡುಕುವುದರಲ್ಲಿಯೇ ನನ್ನ ಬಾಳು ಸವೆಯಬೇಕೇ? ಈ ಆಲೋಚನೆ ಅಂತರಂಗವನ್ನು ಕೊರೆಯುತ್ತಿರುವಾಗ ಒಂದು ಬಗೆಯ ಮಂಕು ಕವಿದು ಒಂದು ದಿನ ಸುಮ್ಮನೆ ಗಿಡಕ್ಕೊರಗಿ ಕುಳಿತಿದ್ದೆ. ಆಗ ಇಂಪಾದ, ಅರ್ಥಪೂರಿತ ಗಾಯನ ಕೇಳಿತು. ಮೈಯೆಲ್ಲ ಕಿವಿಯಾಗಿ ಆಲಿಸಿದೆ;

ಆರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯ?
ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯ?
ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯ?
ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯ?
ಸಹಜಭಾವ ನಿಜೈಕ್ಯ ಸ್ಥಿರರೂಪ ಕೂಡಲ ಸಂಗಮದೇವನೊಬ್ಬನೇ ದೇವಾ!*

ಈ ನುಡಿಗಡಣ ನನ್ನ ಕುತೂಹಲವನ್ನು ಕೆರಳಿಸಿದಾಗ ಹಾಡುವವನ ಬಳಿ ಸಾರಿ ವಿಚಾರಿಸಿದೆ. ಅವನು ಕಲ್ಯಾಣದ ಜಂಗಮನಂತೆ. ಜಾತ್ರೆಗಳು ನೆರೆದಾಗ, ಜನರ ಗುಂಪುಗಳಿದ್ದಲ್ಲಿ ಹೋಗಿ ಬೋಧೆ ಮಾಡುವ ಕಾಯಕ ಅವನದಂತೆ.

ಆಗ ಅವನು ಶರಣಧರ್ಮದ ಪರಿಚಯ ಮಾಡಿಕೊಟ್ಟ. ಅದರ ವಿಶಾಲತೆ, ವೈಚಾರಿಕತೆ, ಪ್ರಗತಿಪರ ದೃಷ್ಟಿಕೋನ,ಮಾನವೀಯತೆ, ಜಾತ್ಯತೀತತೆಗಳನ್ನು ಕಂಡು ಮೂಕವಿಸ್ಮಿತನಾದೆ. ಈ ನವಧರ್ಮವಾಹಿನಿಯ ಸ್ಥಾಪಕ ಚಾಲುಕ್ಯ ನಾಡಿನ ಮಹಾ ಪ್ರಧಾನಿ ಬಸವಣ್ಣ ಎಂಬುದನ್ನು ಅರಿತೆ. ಅವನ ಉತ್ತುಂಗ ವ್ಯಕ್ತಿತ್ವ, ಜಗದೋದ್ಧಾರದ ಕಳಕಳಿ, ಪತಿತರ ಬಗ್ಗೆ ಅನುಕಂಪ; ಇವೆಲ್ಲ ಕೇಳಿ ಮನದಲ್ಲಿ ಆ ರೂಪನ್ನು ಕಲ್ಪಿಸಿಕೊಂಡೆ. ಕಲ್ಯಾಣದ ಜಂಗಮರು ಆ ಬಸವಣ್ಣನವರಲ್ಲಿಟ್ಟ ಅನನ್ಯ ವಿಶ್ವಾಸ, ಗೌರವ ಕಂಡು ಚಕಿತನಾದೆ. ಜನಸಾಮಾನ್ಯರನ್ನು ಸ್ವತಂತ್ರ ವಿಚಾರಕ್ಕೆ ಪ್ರೇರೇಪಿಸುವ ಆ ಮಹಾಗುರುವಿನ ಮೂರ್ತಿ ಹೃದಯದ ಭಿತ್ತಿಯಮೇಲೆ ಅಚ್ಚೊತ್ತತೊಡಗಿ, ದರ್ಶಿಸಬೇಕೆಂಬ ಹಂಬಲವಾಯಿತು.

ಆ ಪರಿಷೆಗೆ ಹತ್ತಾರು ಜಂಗಮರು ಬಂದಿದ್ದರು. ಅವರ ಜಾತಿಗಳ ಬಗ್ಗೆ ಕೇಳಿದಾಗ ಪೂರ್ವಜಾತಿಗಳನ್ನು ಹೇಳಲೊಪ್ಪಲಿಲ್ಲ. ನನ್ನದು ವಿಮರ್ಶಾತ್ಮಕ, ತಾತ್ತ್ವಿಕ ಪ್ರಶ್ನೆ ಎಂದಾಗ ಹೇಳಿದರು. ಹಲವು ಹನ್ನೊಂದು ಜಾತಿಯಿಂದ ಬಂದು ಸಮಾವೇಶವಾಗಿದ್ದರು. ಪೂರ್ಣಪ್ರಭಾವಿತನಾದ ನಾನು ಶ್ರೀಶೈಲದಿಂದ ಕಲ್ಯಾಣದ ಕಡೆಗೆ ಸಾಗಿದೆ....'

* ಬ. ಷ. ವ., ೫೫೬

'ಹಾಗಾದರೆ ಗುರುಗಳು ಕಲ್ಯಾಣದ ಸಂದರ್ಶನ ಪೂರೈಸಿದ್ದಾರೆ. ಅದಕ್ಕೇ ತಡವಾಯಿತು ಮರಳಲಿಕ್ಕೆ....' ಓಂಕಾರ ನುಡಿದ.

'ಹೌದು....ಕಲ್ಯಾಣಕ್ಕೆ ಹೋದಾಗ ಪವಾಡಗಳ ಸರಮಾಲೆಯನ್ನು ಕಂಡೆ. ಆ ಜಂಗಮರು ಹೇಳುವುದು ಉತ್ಪ್ರೇಕ್ಷೆ ಏನೋ ಎಂದುಕೊಂಡಿದ್ದ ನಾನು ಪ್ರತ್ಯಕ್ಷವಾಗಿ ಕಂಡಾಗ ಆ ಜಂಗಮರು ಬಸವಣ್ಣನವರ ವ್ಯಕ್ತಿತ್ವ ಮತ್ತು ಕಾರ್ಯವಿಸ್ತಾರದ ಅರ್ಧದಷ್ಟನ್ನೂ ಹೇಳಲಿಲ್ಲ ಎಂದುಕೊಂಡೆ. ಬಸವಣ್ಣನವರು 'ಅನುಭವಮಂಟಪ' ಎಂಬ ಧಾರ್ಮಿಕ ಸಂಸ್ಥೆಯೊಂದನ್ನು ಇತ್ತೀಚೆಗೆ ರೂಪಿಸಿದ್ದಾರೆ. ಎಲ್ಲ ಜಾತಿಮತಗಳ, ಎಲ್ಲ ಅಂತಸ್ತಿನ ಜನರಿಗೆ ಬರಲವಕಾಶ ನೀಡಿ ಅವರ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಅನುವುಮಾಡಿ ಕೊಡುತ್ತಿದ್ದಾರೆ.

ನಾನು ಅನೇಕ ಮಠ, ಮಂದಿರಗಳನ್ನು ನೋಡಿದ್ದೆ. ಅವು ಕುಳಿತು ತಿನ್ನುವವರಿಗೆ ಆಶ್ರಯಸ್ಥಾನಗಳಾಗಿರುವುದನ್ನು, ಪರೋಪಜೀವಿಗಳ ಪೋಷಕ ಕೇಂದ್ರಗಳಾಗಿರುವುದನ್ನು ನೋಡಿದ್ದೆ; ಆದರೆ ಅನುಭವಮಂಟಪದಲ್ಲಿ ಪ್ರತಿಯೊಬ್ಬನೂ ದುಡಿಯಬೇಕು; ಪ್ರತಿಯೋರ್ವನೂ ಅಧ್ಯಯನ, ಅನುಭವ ಮಂಥನ ಮಾಡಬೇಕು, ತಪ್ಪದೆ ಪೂಜೆ ಮಾಡಬೇಕು. ವರ್ಗ, ವರ್ಣವಾದಗಳನ್ನು ತೊಡೆದುಹಾಕುವ ವಿಶ್ವಶಕ್ತಿಯ ಕುರುಹಾದ ಇಷ್ಟಲಿಂಗವು ಎಲ್ಲರ ಕೈಗೆ ಸಿಗುವುದು. ಇಂತಹ ಕ್ರಾಂತಿ ಜಂಬೂದ್ವೀಪದ ಇತಿಹಾಸದಲ್ಲೇ ಅಭೂತಪೂರ್ವ.

ಬಸವಣ್ಣ ಹಲವಾರು ಪವಾಡಗಳನ್ನು ಮಾಡಿದ್ದಾನೆ ಎಂದು ಭಯಭಕ್ತಿಯಿಂದ ಜನರು ಆಡುವರು. ಅದೇನೇ ಇರಲಿ, ಬರಡಾದ ಭಕ್ತಿಹೀನ ಬಂಜರು ಹೃದಯಗಳಲ್ಲಿ ದೈವೀ ವಿಶ್ವಾಸದ ಚಿಲುಮೆಯನ್ನು ಚಿಮ್ಮಿಸುತ್ತಿದ್ದಾರೆ. ಕೊರಡುಗಳಂತೆ ಅರ್ಥಹೀನ ಬಾಳುವೆ ಮಾಡುತ್ತಿದ್ದ ಶೋಷಿತ, ಕೀಳು ಕುಲದವರ ಬದುಕನ್ನು ತನ್ನ ವಿಚಾರಧಾರೆಯಿಂದ ಕೊನರಿಸುತ್ತಿದ್ದಾರೆ. ಅಬ್ಬಾ! ಪುಣ್ಯಪುರುಷ! ದೈವೀ ರಾಜ್ಯವನ್ನು ಕಟ್ಟಿ ತೋರಿಸಿದ್ದಾರೆ.

ಹದಿನೈದು ದಿವಸಗಳಲ್ಲಿ ಆ ಮಹಾವ್ಯಕ್ತಿತ್ವದ ಆಕರ್ಷಣೆಗೆ ಈಡಾದ ನಾನು ಅವರಿಂದ ಇಷ್ಟಲಿಂಗ ದೀಕ್ಷೆಯನ್ನೂ ಸ್ವೀಕರಿಸಿ ಪುನರ್ಜಾತನಾಗಿಬಿಟ್ಟೆ. ಗುರುಲಿಂಗ ಶಿವಾಚಾರ್ಯತ್ವ ಹೋಗಿ ಗುರುಲಿಂಗದೇವರಾಗಿಬಿಟ್ಟೆ. ಬಸವಣ್ಣನವರನ್ನು ಧರ್ಮಗುರುವೆಂದು ಸ್ವೀಕರಿಸಿ ಲಿಂಗಾಯತ ಧರ್ಮದ ಅನುಯಾಯಿಯಾಗಿಬಿಟ್ಟೆ. ಎಷ್ಟೋ ಜನ್ಮಗಳ ಪುಣ್ಯ....!' ಶ್ರೀ ಗುರುಲಿಂಗದೇವರು ಕಣ್ಮುಚ್ಚಿಕೊಂಡು, ತಮ್ಮ ದೀಕ್ಷೆಯ ಅನುಭವವನ್ನು ನೆನಪಿಸಿಕೊಂಡು

ತನ್ಮಯತೆಯ ಆಳಕ್ಕೆ ಇಳಿದರು. ಸ್ವಲ್ಪ ಕಾಲಾನಂತರ ಕಣ್ತೆರೆದರು.

'ಓಂಕಾರ....ಒಂದು ಅಪೂರ್ವ ಅನುಭವವಾಯಿತು....'

'ಏನದು ಗುರುಗಳೇ ?'

'ಒಂದು ದಿವಸ ನನ್ನನ್ನು ಕೂರಿಸಿಕೊಂಡು ಮಾತುಕತೆಯಾಡುತ್ತ, ಮುಂದೆ ಕೈಗೊಳ್ಳಬೇಕಾದ ಕರ್ತವ್ಯದ ಪರಿಚಯ ಮಾಡುತ್ತ ಬಸವಣ್ಣನವರು ಇದ್ದಕ್ಕಿದ್ದಂತೆಯೇ ಧ್ಯಾನೋನ್ಮುಖರಾದರು. 'ನಿಮ್ಮ ನಾಡು ಪ್ರಕೃತಿ ಸಂಪತ್ತಿಗನಿತೇ ಅಲ್ಲ ಆಧ್ಯಾತ್ಮಿಕ ಸಂಪತ್ತಿಗೂ ತಾಯಿಯಾಗುವುದು. ಅಪ್ರತಿಮ ಶರಣರನ್ನು ಜಗತ್ತಿಗೆ ಧಾರೆ ಎರೆಯಲಿರುವುದು. ವೈರಾಗ್ಯವೇ ಸಾಕಾರ ತಳೆದ ವ್ಯಕ್ತಿಯೊಂದು ಅಲ್ಲಿಂದ ರೂಪುಗೊಳ್ಳಲಿದೆ ; ಸ್ತ್ರೀಯು ಸಾಧಿಸಬಲ್ಲ ಅತ್ಯಂತಿಕ ಸಿದ್ಧಿಯನ್ನು ಮೈಗೂಡಿಸಿಕೊಳ್ಳಲಿದೆ....' ಎಂದು ನುಡಿದರು. ನಾನು ಮೌನವಾಗಿ ನಿಟ್ಟಿಸುತ್ತಲಿದ್ದೆ.

'ಆ ಧೀಮಂತ ಶಕ್ತಿಯ ಶಿಲ್ಪಿ ನೀವಾಗುವಿರಿ. ಈ ಇಷ್ಟಲಿಂಗವನ್ನು ಹಿಡಿಯಿರಿ ; ತಾಯಿಗೆ ಎಂಟು ತಿಂಗಳು ತುಂಬಿದಾಗ ಧಾರಣೆ ಮಾಡಿರಿ. ಆ ಮಗು ಜನ್ಮಿಸಿದಾಗ ವಿಭೂತಿ ಪಟ್ಟವನ್ನು ಕಟ್ಟಿರಿ....' ಎಂದು ಆಜ್ಞಾಪಿಸಿದರು.

ನಾನು ಮೌನವಾಗಿ ಸ್ವೀಕರಿಸಿ, ತಂದು ಅವರಿತ್ತ ವಿಭೂತಿ, ಇಷ್ಟಲಿಂಗಗಳನ್ನು ಪೂಜೆಯ ವಸ್ತುಗಳ ಗಂಟಿನಲ್ಲಿ ಸುರಕ್ಷಿತವಾಗಿಟ್ಟಿರುವೆ....'

'ಓಹ್....ಅಂತಹ ಪುಣ್ಯವಂತೆ ಯಾರೋ !' ಎಲ್ಲರೂ ಉದ್ಗರಿಸಿದರು.

'ಅವರ ಅನುಗ್ರಹ ಹೊತ್ತು ಬರುವಾಗ ವಿವಿಧ ಕಾಯಕದ ಜಂಗಮ ಮೂರ್ತಿಗಳನ್ನು ಕರೆತಂದಿರುವೆ. ಬಸವಣ್ಣನವರು ಕೈಗೊಂಡ ಮಹಾಮಣಿಹದ ಪೂರ್ತಿಕೆಗೆ ನನ್ನ ಕಿಂಚಿತ್ ಸೇವೆಯನ್ನು ಸಲ್ಲಿಸುವ ಸಂಕಲ್ಪ ಮಾಡಿರುವೆ....'

ಬೆಳಗಿನ ವೇಳೆ ಆಡಿಕೊಂಡ ಅನೇಕ ಸಾಲಿಗೆಗಳು ಸುಮ್ಮನಾಗಿದ್ದವು, ಈ ಧೀಮಂತ ವಾಣಿಯ ಮುಂದೆ.

'ನಮ್ಮ ಈ ಧರ್ಮಕೇಂದ್ರದಿಂದ ಹಲವಾರು ಕಾರ್ಯಗಳನ್ನು ಹಮ್ಮಿಕೊಳ್ಳೋಣ ಎಂದುಕೊಂಡಿರುವೆ. ಲೌಕಿಕ ಓದು, ಆಧ್ಯಾತ್ಮಿಕ ಬೋಧೆ ಪ್ರಮುಖವಾದವು. ಆದ್ದರಿಂದ ಸಾಲಿಯ ಮಠ ತನ್ನ ಕಾರ್ಯವನ್ನು ಪ್ರಾರಂಭಿಸುವುದು. ವೈದ್ಯಕೀಯ ವಿಭಾಗವನ್ನು ತೆರೆಯೋಣ ಎಂದುಕೊಂಡಿರುವೆ. ಅನುಭವಮಂಟಪ ತನ್ನ ವೈದ್ಯಕೀಯ ಕಾರ್ಯದ ಮೂಲಕ ಜನದ ಸೇವೆಯನ್ನು ಮನಮುಟ್ಟಿ ಮಾಡುವುದು. ಬಸವಣ್ಣನವರ ಅಕ್ಕಂದಿರಾದ ನಾಗಮ್ಮನವರು ಕ್ರಿಯಾಶಕ್ತಿಯ ಸಾಕಾರವಾಗಿ ಇವುಗಳ ಮೇಲ್ವಿಚಾರಣೆ ಮಾಡುತ್ತಿರುವರು. ವಚನಗಳನ್ನು

ಮನೆಮನೆಗೆ ಹಂಚಿ, ಬೋಧೆಮಾಡುವ ಕಾಯಕವೂ ಅವಶ್ಯಕ ಎನ್ನಿಸುತ್ತಿದೆ. ಬಸವಣ್ಣನವರು ಎಡದ ಕೈಯಲ್ಲಿ ಲಿಂಗಪೂಜೆ, ಬಲದ ಕೈಯಲ್ಲಿ ಜಂಗಮ ಸೇವೆಗಳನ್ನು ಹಿಡಿದುಕೊಂಡಿರುವರು. ಜನತಾ ಜಂಗಮದ ಸೇವೆ ಮಾಡದ ಪೂಜೆಗೆ ಅರ್ಥವೇ ಇಲ್ಲ ಎನ್ನುವರು. ಆ ಆದರ್ಶಗಳನ್ನು ಸ್ವಲ್ಪಸ್ವಲ್ಪವಾಗಿ ಆಚರಣೆಗೆ ತರುವ ಬಯಕೆ ನನ್ನದು....'

ಗುರುಲಿಂಗದೇವರ ಮಾತಿಗೆ ಯಾರೂ ಪ್ರತಿಯಾಡಲಿಲ್ಲ. ಓಂಕಾರನು ನುಡಿದ:

'ತಮ್ಮ ಸಂಕಲ್ಪ ನಮಗೆಲ್ಲ ಆನಂದದಾಯಕ. ಈ ಮಹಾಮಣಿಹದಲ್ಲಿವೂ ಮನಮುಟ್ಟಿ ಸಹಕರಿಸುತ್ತೇವೆ ಗುರುದೇವಾ....'

ಮಂಗಲದ ಬಳಿಕ ಗೋಷ್ಠಿಯ ವಿಸರ್ಜನೆಯಾಯಿತು. ವಂದಿಸಿ ಮರಳಿದ ಓಂಕಾರ ಆಲೋಚನೆಯಲ್ಲಿ ಮೈಮರೆತಿದ್ದ. ನೆಪಮಾತ್ರಕ್ಕೆ ಪೂಜೆ, ಊಟಗಳನ್ನು ಮುಗಿಸಿ ಜಂಗಮನು ಕೊಟ್ಟ ವಚನಗಳ ಕಟ್ಟನ್ನು ಬಿಚ್ಚಿದ. ಸರಿರಾತ್ರಿಯಾದರೂ ಪರಿವೆ ಇಲ್ಲದೆ ಓದುತ್ತ ಹೋದಂತೆ ಅವನಿಗೆ ಸಂತೃಪ್ತಿಯ ಅಲೆ ಹಾಯತೊಡಗಿತ್ತು. ಅವನ ಅಂತರಂಗ, ವಿಮರ್ಶಾಶಕ್ತಿಗಳು ಬಹುದಿನಗಳಿಂದ ಹಂಬಲಿಸುತ್ತಿದ್ದ ವಿಚಾರಧಾರೆ ಸಿಕ್ಕಂತಾಗಿ ಆನಂದಿತನಾದ. ಮರುದಿವಸ ಶ್ರೀಗುರುಲಿಂಗದೇವರು ಬ್ರಾಹ್ಮೀ ಮುಹೂರ್ತದಲ್ಲಿ ಪೂಜೆ ಮುಗಿಸಿ, ಆ ಸಂತೃಪ್ತಿಯ ಭಾವದಲ್ಲಿಯೇ ಬಂದು ಮಠದ ಮುಂದಿನ ಕೈದೋಟದಲ್ಲಿ ಗುದ್ದಲಿ ಹಿಡಿದು ಗಿಡಗಳಿಗೆ ಪಾತಿ ಮಾಡುವಾಗ ಓಂಕಾರ ಸತಿಸಮೇತನಾಗಿ ಆಗಮಿಸಿದ. ಗುರುಗಳ ಕೈಯೊಳಗಣ ಗುದ್ದಲಿ ನೋಡಿ ವಿಸ್ಮಿತನಾಗಿ ಕೇಳಿದ:

'ಇದೇನು ಗುರುದೇವಾ....ತಾವು ಮಾಡುವುದು....?'

'ಗುದ್ದಲಿಯಿಂದ ಅಗೆತ' ಸರಳವಾಗಿ ಉತ್ತರಿಸಿದರು.

'ಛೀ, ಸ್ಥಾನಪತಿಗಳಾದ ತಾವು ಮಾಡುವುದು ಸಲ್ಲದು' ಗುದ್ದಲಿಯನ್ನು ಯಿಂದ ತೆಗೆದುಕೊಳ್ಳಲು ಯತ್ನಿಸಿದ.

'ಈ ಹಮ್ಮನ್ನು ಕಲ್ಯಾಣದಲ್ಲಿ ಬಿಟ್ಟು ಬಂದಿರುವೆ ಓಂಕಾರ. ಕಾಯಕದಲ್ಲಿ ಮೇಲು ಕೀಳಿಲ್ಲ. ಕಾಯಕದಲ್ಲಿ, ಕಾಯಕ ಜೀವಿಗಳಲ್ಲಿ ಮೇಲು ಕೀಳಿನ ಕಲ್ಪನೆ ತಪ್ಪು. ಮಾಡುವ ಮಾಟದಿಂದ ದೈವೀಕೂಟವನ್ನು ಪಡೆಯಲು ಬರುವುದು. ಅಣ್ಣನವರು ಹೇಳುತ್ತಾರೆ:

> ನಾನು ಆರಂಭವ ಮಾಡುವೆ ಗುರುಪೂಜೆಗೆಂದು,
> ನಾನು ಬೆವಹಾರವ ಮಾಡುವೆ ಲಿಂಗಾರ್ಚನೆಗೆಂದು,
> ನಾನು ಪರಸೇವೆಯ ಮಾಡುವೆ ಜಂಗಮದಾಸೋಹಕ್ಕೆಂದು.*

---

* ಬ. ಷ. ವ., ೨೦೮

ಹೀಗೆಂದು ನುಡಿದು ಕಾಯಕಮಗ್ನರಾದರು.

'ಎಂತಹ ಉದಾತ್ತ ವಿಚಾರ; ಎಂತಹ ಸಮಷ್ಟಿಪ್ರಜ್ಞೆ....!' ಓಂಕಾರ ಉದ್ಗರಿಸಿ ಪತ್ನಿಯೊಡನೆ ನಮಸ್ಕರಿಸಿದ. ತಾನೂ ಲಿಂಗದೀಕ್ಷೆಯನ್ನು ಪಡೆದು ಭವಿತನವನ್ನು ತೊಡೆದುಕೊಳ್ಳುವ ಅಭೀಪ್ಸೆಯನ್ನು ವ್ಯಕ್ತಪಡಿಸಿದ. ಪೂಜೆ-ಧ್ಯಾನಗಳಿಗಾಗಿ ದೇವರನ್ನು ಅನುಗ್ರಹಿಸಬೇಕು ಎಂದು ಬೇಡಿಕೊಂಡಾಗ ಗುರುಲಿಂಗದೇವರು ಆನಂದತುಂದಿಲರಾದರು. ಆದರೂ ನುಡಿದರು :

'ನಾವೇನೋ ವಿರಕ್ತರು....ತೊಂದರೆ ಇರದು. ನೀನು ಗೃಹಸ್ಥ ; ಮುಂದೆ ಮಕ್ಕಳು-ಮರಿಗಳಾದಾಗ ವಿವಾಹದ ತೊಂದರೆಗಳು ಬರಬಾರದು ; ಆಲೋಚಿಸು ಓಂಕಾರ....'

'ದೇವರಿದ್ದಾನೆ ಗುರುದೇವಾ....ಆ ಚಿಂತೆ ಈಗೇಕೆ ? ನನಗೀಗ ಧರ್ಮ ಸಂಸ್ಕಾರ ಬೇಕು. ಪೂಜೆಗಾಗಿ ಸದವಕಾಶ ಬೇಕು....' ನಿಶ್ಚಿತವಾಗಿ ನುಡಿದ. ಗುರುಲಿಂಗದೇವರು ಸಂತೋಷದಿಂದ ದಂಪತಿಗಳಿಗೆ ಲಿಂಗದೀಕ್ಷೆ ನೀಡಿದರು. ಓಂಕಾರಶೆಟ್ಟಿ-ಲಿಂಗಮ್ಮ ಉಭಯತರು ಧರ್ಮದೀಕ್ಷೆ ಸ್ವೀಕರಿಸಿ, ಸಾತ್ವಿಕ ಬದುಕನ್ನು ಅಳವಡಿಸಿಕೊಂಡಿದ್ದರು.

೪. ಸಂಕಲ್ಪ ಸಿದ್ಧಿ

ಸದ್ಗುಣಪೂರ್ಣ ಸದ್ಭಕ್ತಿ, ದೈವೀಶ್ರದ್ಧೆಗಳೇ ಮೈವೆತ್ತ ಸತಿಪತಿಗಳು ಸಂಸಾರದಲ್ಲಿ ಇದ್ದು ಇಲ್ಲದಂತೆ ನಿರ್ಲಿಪ್ತ ಬಾಳನ್ನು ಬಾಳುತ್ತಿದ್ದರು. ಉಂಬುದಕ್ಕೆ ಉಡುವುದಕ್ಕೆ ಕೊರತೆಯಿಲ್ಲ; ಕೊಂಬುದಕ್ಕೆ ಕೊಡುವುದಕ್ಕೆ ಕಡಿಮೆಯಿಲ್ಲ. ಬಹಿರಂಗಿಕ, ಅಂತರಂಗಿಕ ಉಭಯ ಸಂಪತ್ತಿನ ಒಡೆಯರಾಗಿ ಮನೆ-ಮನಗಳೆರಡರಲ್ಲಿ ಉಳ್ಳವರಾಗಿದ್ದರು.

ಇಂತಹ ಆನಂದದ ಬದುಕಿನಲ್ಲಿ ಇದ್ದ ಕೊರತೆಯೊಂದೇ; ಅದುವೇ ಮಡಿಲು ತುಂಬಿ, ತೊಡೆ ತುಂಬಿ, ಮನೆ ತುಂಬಿ, ಮನ ತುಂಬಿ ನಲಿವಿನ ಹೊನಲನ್ನು ಹೊಮ್ಮಿಸುವ ಮಗುವು ಇಲ್ಲದಿರುವುದು. ಮನೆಯು ಮಗುವಿನ ನಲ್ಮಾತುಗಳ ಸಂಭ್ರಮದಿಂದ, ಕಿರುಗೆಜ್ಜೆಯ ದನಿಯಿಂದ ಝುಂಝುಣಿಸಿರಲಿಲ್ಲ. ಹದಿನಾರನೆಯ ವಯಸ್ಸಿಗೆ ಮದುವೆಯಾಗಿ ಮನೆಗೆ ಆಗಮಿಸಿದ ಲಿಂಗಮ್ಮನಿಗೆ ಈಗಾಗಲೇ ಮೂವತ್ತೊಂದು ವರ್ಷಗಳು ಸಂದಿದ್ದವು. ಲಗ್ನವಾಗಿ ಹದಿನೈದು ವರುಷಗಳು ಸರಿದಿದ್ದವು. ಆಕೆಗಿಂತ ಆರೇಳು ವರುಷ ವಯಸ್ಕನಾದ ಓಂಕಾರ ಶೆಟ್ಟಿಗೆ ಸುಮಾರು ಮೂವತ್ತೇಳು ವರ್ಷ ನಡೆಯುತ್ತಿದ್ದವು. ಮಕ್ಕಳಿಲ್ಲದ ಈ ಕೊರತೆ ಲಿಂಗಮ್ಮನ ಹೃದಯವನ್ನು ಗುಂಗಿಯು ಹುಳದಂತೆ ಕೊರೆಯುತ್ತಿತ್ತು.

ಓಂಕಾರ ಹೆಚ್ಚಿನ ತಿಳುವಳಿಕೆಯುಳ್ಳವನು; ವಿಸ್ತಾರವಾದ ಪ್ರಪಂಚದ ಸಮಸ್ಯೆಗಳ ಆಲೋಚನೆ ಮಾಡುವ ಶಕ್ತಿ ಇದ್ದ ಅವನ ಬುದ್ಧಿ ವಿಧಾಯಕ ವಿಚಾರಗಳ ಚಿಂತನೆಯಲ್ಲಿ ತನ್ನ ವೈಯಕ್ತಿಕ ಬದುಕಿನ ಕೊರತೆಯನ್ನು ಮರೆಯುತ್ತಿತ್ತು. ಆದರೆ ಲಿಂಗಮ್ಮನಿಗೆ ಅಂತಹ ಸದವಕಾಶವಿರಲಿಲ್ಲ. ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಚಿಂತನೆಗಳಲ್ಲಿ ಹರಿದಾಡುವಷ್ಟು ಆಕೆಯ ವಿಚಾರಶಕ್ತಿ ಬೆಳವಣಿಗೆಯಾಗಿರಲಿಲ್ಲ. ಜೊತೆಗೆ ಸುತ್ತಮುತ್ತ ಸಂಚರಿಸುವ ಹೆಂಗೆಳೆಯರ ಚುಚ್ಚುಮಾತಿನ ಶರಗಳ ಏಟಿಗೆ ಸಿಕ್ಕು ಜರ್ಜರಿತಳಾಗುತ್ತಿದ್ದಳು. ಫಾಲನೇತ್ರಯ್ಯನ ಮನೆಯಲ್ಲಿ ಆಕೆಗಾದ ತಿರಸ್ಕಾರದ ಅಪಮಾನ ಸ್ವಾಭಿಮಾನವನ್ನು ಕೆರಳಿಸಿದ್ದಿತು. ಏನಾದರಾಗಲಿ ಗುರುಗಳನ್ನು ಕೇಳಬೇಕೆಂದು ನಿರ್ಧರಿಸಿಯೇ ಬಿಟ್ಟಳು.

ಪ್ರತಿನಿತ್ಯ ಸಂಜೆಯ ವೇಳೆ ಮಠಕ್ಕೆ ಹೋಗುವ ಪರಿಪಾಠ ಹಲವಾರು ವರ್ಷಗಳಿಂದ ನಡೆದಿದ್ದು, ಅನುಭವಗೋಷ್ಠಿ ಆರಂಭವಾದಾಗಿನಿಂದ ಆ ಮಠಕ್ಕೆ

ಇನ್ನಷ್ಟು ಕಳೆ ಏರತೊಡಗಿತ್ತು. ಸ್ಥಾನಪತಿಗಳಾದ ಶ್ರೀ ಗುರುಲಿಂಗದೇವರು ಪ್ರವಚನಾಮೃತವನ್ನು ಉಣಬಡಿಸುತ್ತಿದ್ದರು. ಈ ನೆತ್ತಿಯ ಊಟದಿಂದ ಭಾವವು ಅರಳಿ ಸದ್ಭಕ್ತಿಯ ಸುವಾಸನೆಯನ್ನು ಸೂಸಿದರೆ, ಬುದ್ಧಿಯು ಅರಳಿ ವಿಚಾರದ ದೀಪ್ತಿಯನ್ನು ಬೆಳಗುತ್ತಿತ್ತು. ಶ್ರೀ ಗುರುಲಿಂಗದೇವರ ಸ್ವಯಂ ವ್ಯಕ್ತಿತ್ವ ಪ್ರಭೆಯೊಡನೆ ಬಸವಣ್ಣನ ಕ್ರಾಂತಿಕಾರಕ ತತ್ತ್ವಗಳೂ ಬೆರೆದು ಆ ವಾಣಿ ದಿವ್ಯವಾಣಿಯಾಗಿದ್ದಿತು. ಆದರಿಂದಾಗಿ ಅಸಂಖ್ಯಾತ ಹೃದಯಗಳ ಕೊರಡು ಕೊನರಿ, ಬರಡು ಬಾಳು ಹಯನಾಗಿ ಸಂಸ್ಕೃತಿಯ ಸೌರಭದ ನೆಲೆವನೆಯಾಗಿರುತ್ತಿತ್ತು—ಆ ಆಧ್ಯಾತ್ಮಿಕ ಕೇಂದ್ರ. ಶ್ರೀ ಗುರುಲಿಂಗದೇವರು ನಿಸ್ವಾರ್ಥದ ಸಾಕಾರಮೂರ್ತಿಯಾಗಿ, ಕರ್ತವ್ಯದ ಕಲಿಯಾಗಿ, ಕೀರ್ತಿ ಕಾಮಿನಿಗೆ ಬಲಿಯಾಗದೆ ಉತ್ತುಂಗ ವ್ಯಕ್ತಿತ್ವ ಪಡೆದಿದ್ದರು. ಸದ್ಗುಣದ ಔನ್ನತ್ಯದೊಡನೆ ಸ್ಥೂಲಾಕೃತಿಯೂ ಭವ್ಯವಾಗಿತ್ತು. ಎಂಟು ಗೇಣು ಎತ್ತರದ ನಿಲುವು; ವಿರಕ್ತಿ-ಪೂಜಾನಿಷ್ಠೆಗಳಿಂದ ಉದ್ದೀಪಿತವಾಗಿ ಫಳಫಳನೆ ಹೊಳೆ ಯುವ ಕಣ್ಣುಗಳು. ಯೋಗಾಭ್ಯಾಸ-ನಿಯಮಿತ ಜೀವನದಿಂದ ಪೋಷಿತವಾದ ದಷ್ಟಪುಷ್ಟ ಆಕೃತಿ, ಅವರ ಹೊಂಬಣ್ಣಕ್ಕೆ ಹೆಚ್ಚಿನ ಹಿನ್ನೆಲೆ ನೀಡುವ ಕಾವಿಯ ಕಪನಿ. ಲೌಕಿಕ ಆಸೆ-ಆಕಾಂಕ್ಷೆಗಳನ್ನು ಮೆಟ್ಟಿ ನಿಂತ ಗಾಂಭೀರ್ಯ, ವಿಶ್ವ ಕುಟುಂಬತ್ವದ ಸೂತ್ರವಾದ ನಿಷ್ಕಲ್ಮಶ ಆತ್ಮೀಯತೆಯ ಹಾಸ್ಯ, ಎರಡೊಂದಾಗಿ ಮೇಳೈಸಿದ್ದವು. ಭಕ್ತಜನರ ತಾಯಿ, ತಂದೆ, ಬಂಧು, ಗುರು ಸರ್ವಸ್ವವೂ ಆಗಿದ್ದರು. ಅಂತೆಯೇ ಎಲ್ಲರೂ ತಮ್ಮ ದುಃಖ ದುಮ್ಮಾನಗಳನ್ನು ಮನಬಿಚ್ಚಿ ಬಿನ್ನವಿಸಿಕೊಳ್ಳುತ್ತಿದ್ದರು ಅವರ ಬಳಿಯಲ್ಲಿ.

ಓಂಕಾರಶೆಟ್ಟಿ ಲಿಂಗಮ್ಮರಿಬ್ಬರೂ ಶುಭ್ರವಸನಾಲಂಕೃತರಾಗಿ, ಫಲಪುಷ್ಪ ಗಳೊಡನೆ ಮಠವನ್ನು ಪ್ರವೇಶಿಸಿದರು. ಪ್ರವಚನದ ವೇದಿಕೆಯನ್ನೇರಿದ್ದ ಗುರುಗಳು ದಂಪತಿಗಳನ್ನು ಕಂಡು ತಿಳಿನಗೆ ಬೀರಿದರು. ಗಂಭೀರ ಮೌನ ನೆಲೆಸಿ, ಪ್ರಾರ್ಥನೆಗೆ ಮುನ್ಸೂಚನೆ ನೀಡುವಂತೆ ಪಂಚಲೋಹದ ಗಂಟೆ ನುಡಿ ಯಿತು. ಎತ್ತರದ ಕಂಠದಲ್ಲಿ ಓಂಕಾರದ ಅಲೆಗಳು ವಾತಾವರಣವನ್ನು ತುಂಬಿದವು.

ಹಮ್ಮುಬಿಮ್ಮಿಲ್ಲದ ಅನವರತ ಶಿವ ನೀನು
ಎನ್ನ ಕರಸ್ಥಲದ ಕಳೆ ನೀನು !
ಎನ್ನ ಮನೋಮಧ್ಯದ ಸ್ವಯಂ ಜ್ಯೋತಿ ನೀನು !
ಅಮರೇಶ್ವರ ಲಿಂಗದ ಅನುಪಿನ ಕಳೆ ನೀನು ಸಂಗನ ಬಸವಣ್ಣ !

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿಸ್ಸೀಮ ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ !

ಪ್ರಾರ್ಥನೆಯು ನಿನಾದ ಪಂಚೇಂದ್ರಿಯಗಳ ಸಂಚಲವನ್ನು ಕೆಡಿಸಿ, ಮನದ ಹಂದಾಡುವಿಕೆಯನ್ನು ನಿಲ್ಲಿಸಿ ಅಂತರಂಗದ ಕದವನ್ನು ತೆರೆದು, ಆತ್ಮನನ್ನು ಎಚ್ಚರಿಸುತ್ತಿತ್ತು.

ಪ್ರಾರ್ಥನೆಯ ಬಳಿಕ ಪ್ರಸಾದವಾಣಿಯ ತತ್ತ್ವದಡಿಗೆಯನುಣಬಡಿಸಿದರು ಶ್ರೀ ಗುರುಲಿಂಗರು. ಮಂಗಲದ ಬಳಿಕ ಗುರುಗಳ ದರ್ಶನ ಪಡೆದು ಎಲ್ಲರೂ ಚದುರಿದರೂ ಓಂಕಾರಶೆಟ್ಟಿ ಲಿಂಗಮ್ಮ ಕುಳಿತಿದ್ದುದನ್ನು ಕಂಡು, ಮಾತನಾಡುವುದೇನೋ ಇರಬೇಕೆಂದು ಊಹಿಸಿ ಬಳಿಗೆ ಕರೆದರು.

'ಏನನ್ನಾದರೂ ಕೇಳುವುದಿದೆಯೋ ಓಂಕಾರ ?'

'ತಮ್ಮಲ್ಲಿ ಏನನ್ನೋ ಬಿನ್ನವಿಸಬೇಕೆಂದು ಲಿಂಗಾ ದಿಟ್ಟ ಸಂಕಲ್ಪ ಮಾಡಿದ್ದಳು ; ಹೇಳು ಲಿಂಗಾ.'

ಆಕೆಗೆ ಗುರುಗಳ ಮುಂದೆ ಮನಬಿಚ್ಚಿ ಮಾತನಾಡುವ ಧೈರ್ಯ ಬರಲಿಲ್ಲ. 'ನೀವೇ ಹೇಳಬಹುದಲ್ಲಾ....' ಓಂಕಾರನಿಗೆ ಹೇಳಿದಳು.

'ವಾತ್ಸಲ್ಯದ ಬಯಕೆ ತೃಪ್ತಿಯಾಗಿಲ್ಲವೆಂಬುದು ತಮಗೆ ತಿಳಿಯದುದೇನಲ್ಲ ಗುರುದೇವಾ. ನಾನಾದರೋ ಬಹಿರಂಗಿಕ ಪ್ರಪಂಚದ ವ್ಯವಹಾರದಲ್ಲಿ ವ್ಯಮರಿತು ಮನದಳಲನ್ನು ಮರೆಯುವೆ. ಆದರೆ ಈಕೆಗೆ ಅದಾಗದೇ ಬರೀ ಕೊರಗುತ್ತಿರುವಳು. ಶಿವಸಂಕಲ್ಪಕ್ಕೆ ವಿರುದ್ಧ ಹೋಗುವ ಸಾಹಸ ಬೇಡ ಎಂದು ಹಿತನುಡಿಯನ್ನು ಹೇಳಿದರೆ, 'ಮಾತೃಹೃದಯದ ಕೋಮಲ ಭಾವನೆಗಳನ್ನು, ತುಮುಲ ಹೋರಾಟವನ್ನು ಗ್ರಹಿಸುವುದು ಪುರುಷಹೃದಯಕ್ಕೆ ಹೇಗೆ ಸಾಧ್ಯ ?' ಎಂದು ಟೀಕಾಸ್ತ್ರಗಳನ್ನು ಎಸೆಯುತ್ತಾಳೆ....' ನಕ್ಕು ನುಡಿದ ಓಂಕಾರ.

'ನಾನೆಲ್ಲಿ ಅನ್ನುತ್ತೇನೆ....' ಹುಸಿಮುನಿಸು ತೋರಿದಳು ಲಿಂಗಮ್ಮ.

'ಅಷ್ಟೇ ಅಲ್ಲ....ತನಗಾಗಿ ಬೇಡವಾದರೂ ಇತರರ ಮುಂದೆ ತಾಯ್ತನವನ್ನು ಪ್ರದರ್ಶಿಸಿಕೊಳ್ಳಲು, ಬಂಜೆತನದ ಅಪವಾದವನ್ನು ನೀಗಿಕೊಳ್ಳಲಾದರೂ ಮಗು ಬೇಕಂತೆ....' ಮನವಾರೆ ನಕ್ಕ.

'ಗುರುಗಳ ಮುಂದೆ ಏನೆಲ್ಲ ಹೇಳಿಬಿಡಬೇಡಿ...' ನಾಚಿಕೆಯಿಂದ ಲಿಂಗಮ್ಮನ ಮುಖ ಕೆಂಪಾಯಿತು.

'ಅದಕ್ಕೆ ಈಗ ದೇವರ ವಿರುದ್ಧ ಹೋರಾಟಕ್ಕೆ ನಿಲ್ಲುವವಳಿದ್ದಾಳೆ....'

ಗುರುಲಿಂಗರು ಸಸುನಕ್ಕು ಕೇಳಿದರು :

'ಹೌದೇ ತಾಯಿ; ಪರಮಾತ್ಮನ ಕರುಣೆಗಾಗಿ ಅವನನ್ನು ಪೂಜಿಸದೆ, ಅವನು ಕೊಡುವ ವರಗಳಿಗಾಗಿ ಅವನನ್ನು ಪೂಜಿಸುವೆಯೇನು? ಅಂತೂ ನಿನ್ನ ಭಕ್ತಿ ಶರಣಾಗತಿಯಾಗದೆ ಕೂಲಿಯಾಗಬೇಕೆನ್ನುವೆಯಾ?'

'ಬಹಳ ಎತ್ತರಕ್ಕೆ ಏರುವಷ್ಟು ನನ್ನ ಬಾಳು ಮುಂಬರಿದಿಲ್ಲ ಗುರುವೇ! ಆದರೆ ನನಗೆ ಸಮಸ್ಯೆಯೊಂದಿದೆ; ಕೆಲವರು ಅಲ್ಪಸ್ವಲ್ಪ ಯಾಂತ್ರಿಕ ಭಕ್ತಿ ಮಾಡುವರು. ಅವರಿಗೆ ಸಂಪತ್ತು, ಮಕ್ಕಳು ಮರಿ ಎಲ್ಲವುಂಟು. ನಮಗೇಕೆ ಕೊಡಲೊಲ್ಲ. ನಮ್ಮ ಭಕ್ತಿಯಲ್ಲಿ ಕೊರತೆಯೋ, ಅವನ ಕರುಣೆಯಲ್ಲಿ ಕೊರತೆಯೋ?....' ಗುರುಲಿಂಗರು ಒಂದು ಕ್ಷಣ ಮೌನತಾಳಿದರು; ಬಳಿಕ ನುಡಿದರು :

'ಲಿಂಗಮ್ಮಾ....ಹೊಲಕ್ಕೆ ದುಡಿಯಲು ಹೋದಾಗ ಎರಡು ಬಗೆಯ ಜನರು ಇರುವರು. ಕೆಲವರು ಕೂಲಿಯ ಆಳುಗಳು; ಇನ್ನು ಕೆಲವರು ಅವರ ಕೆಲಸದ ಮೇಲ್ವಿಚಾರಣೆಗೆ ಹೋಗುವ ಮನೆಯ ಮಕ್ಕಳು. ಕೂಲಿಯವರಿಗೆ ದಿನಗೂಲಿಕೊಟ್ಟು ಕೈಬಿಡುವರು. ಮನೆಮಕ್ಕಳಿಗೆ ಅಂಥ ಕೂಲಿಯನ್ನೇನೂ ಕೊಡುವುದಿಲ್ಲ. ಒಡೆಯನಿಗೆ ಯಾರ ಮೇಲೆ ಪ್ರೇಮ ವಿಶ್ವಾಸ ಹೆಚ್ಚು?'

'ಮನೆಮಕ್ಕಳಮೇಲೆ ತಾನೇ?....'

'ಈಗೇನೂ ಕೊಡಲಿಲ್ಲವಲ್ಲ....'

'ಆದರೇನಂತೆ ಮುಂದೆ ಆಸ್ತಿಗೆ ಅವರೇ ಒಡೆಯರಷ್ಟೆ....' ಲಿಂಗಮ್ಮ ಮಾರುತ್ತರಿಸಿದಳು.

'ಹಾಗೇ ಮಗಳೇ, ಅಲ್ಪ ಬಯಕೆಗಳುಳ್ಳವರಿಗೆ ಅದನ್ನು ಪೂರೈಸಿ ದೇವನು ಸುಮ್ಮನಿರುವನು. ಆದರೆ ನಿಷ್ಕಾಮಿಗಳಿಗೆ ಈಗ ಸ್ವಲ್ಪ ಕೊರತೆ ಮಾಡಿದರೂ, ಮುಂದೆ ಮುಕ್ತಿಯ ಸಂಪತ್ತನ್ನು ಧಾರೆ ಎರೆಯುವನು....'

'ಗುರುದೇವಾ....ನನ್ನ ಕಣ್ಣುತೆರೆಯಿತು. ನನ್ನ ಅಲ್ಪ ಬಯಕೆಗೆ ಲಜ್ಜೆ ಎನಿಸಿದೆ. ತಪ್ಪಾಯ್ತು ಕ್ಷಮಿಸಿ....'

'ನೋಡಿದೆಯಾ .... ಕಿವಿಯನ್ನು ಅಕ್ಕಸಾಲಿಗರೇ ಚುಚ್ಚಬೇಕು. ಈ ಮಾತು ನಿನ್ನೆಯೇ ನಾನು ಹೇಳಲಿಲ್ಲವೇ? ಆಗ ಒಪ್ಪದೇ ಆವೇಶದಿಂದ ಮಾತನಾಡಿದೆ....' ನಕ್ಕ ಓಂಕಾರ.

ಗುರುಗಳು ಮೌನತಾಳಿ ತಡೆದು ಹೇಳಿದರು: 'ದೇವರಲ್ಲಿ ಅವಿಶ್ವಾಸ ಎಂದೂ ಬರಬಾರದು ಮಗಳೇ! ಅದಕ್ಕಾಗಿ ಹೀಗೆ ಹೇಳಿದೆನಷ್ಟೆ. ಓಂಕಾರ....

ಶಾರೀರಿಕ ದೋಷವೇನಾದರೂ ಉಂಟೋ....'

'ಇಲ್ಲ ಗುರುವೇ....ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಂಡಾಗಿದೆ....'

'ಪ್ರಾಕೃತಿಕ ದೋಷ ಇಲ್ಲವೆಂದಾಗ ಕರ್ಮಬಂಧನ ಅಡ್ಡಿಯಾಗಿರಬೇಕು. ತಾಯಿ, ನನ್ನ ತಾತ್ತ್ವಿಕ ಉತ್ತರದಿಂದ ನೀನು ಸುಮ್ಮನಾದಿ ನಿಜ. ಆದರೆ ನಿನ್ನ ಬಯಕೆ ಅಳಿಯಲಿಲ್ಲ; ಕೇವಲ ಅದನ್ನು ಅದುಮಿಟ್ಟೆ. ಇದು ಶಾಶ್ವತ ಪರಿಹಾರವಲ್ಲ. ಇರಲಿ, ನಿಮ್ಮ ಸಲುವಾಗಿ ನಾನು ಶಿವನಲ್ಲಿ ಸಂಕಲ್ಪ ಮಾಡುವೆ. ಅದು ಸಫಲವಾಗುವುದೆಂಬ ವಿಶ್ವಾಸ ನನಗಿದೆ.'

ಲಿಂಗಮ್ಮನ ಮುಖದ ಮೇಲೆ ವಿನೂತನ ಸಂಭ್ರಮದ ತೆರೆಯು ಹಾಯಿತು. 'ನಾವು ಧನ್ಯರಾದೆವು ಗುರುದೇವಾ....' ಎಂದು ನಮಸ್ಕರಿಸಿದಳು ಪಾದ ಮುಟ್ಟಿ.

'ಆದರೊಂದು ನಿಯಮ ತಾಯಿ! ಶಿವನ ಮುಡಿಲಿನಿಂದ ಹಸಾದವಾಗಿ ಬಂದ ದೇವಕುಸುಮ ಪೂರ್ಣಾರ್ಪಿತವಾಗಿ ಅವನ ಮುಡಿಯನ್ನು ಪರಿಮಳಿಸ ಬೇಕೆಂಬ ಇಚ್ಛೆ ನನ್ನದು. ಗುರುವಿನ ತಪಸ್ಸಿನ ಫಲವಾದ ಅನರ್ಘ್ಯನಿಧಿಯದು ವಂಶ ಒಂದನ್ನು ಉದ್ಧರಿಸಿದರೆ ಸಾಲದು, ಮನುಕುಲಕ್ಕೆ ಮಾರ್ಗ ತೋರುವ ಮಹಾಬೆಳಗಾಗಬೇಕು.'

'ತಮ್ಮ ಇಚ್ಛೆಗೆ ಇದಿರಾಡಲುಂಟೇ ಗುರುದೇವಾ....?' ಲಿಂಗಮ್ಮ ನುಡಿದಳು.

'ನೆನಪಿರಲಿ ಲಿಂಗಮ್ಮ, ಆ ದೇವಪಕ್ಷಿ ಬಂಧನವನ್ನು ಹರಿದೊಗೆದು ಆಧ್ಯಾತ್ಮ ಆಗಸಕ್ಕೆ ಹಾರುವಾಗ ವ್ಯಾಮೋಹದ ಪಂಜರದಲ್ಲಿ ಕೂಡಿಹಾಕಲು ಯತ್ನಿಸಬಾರದು....'

'ಆದರೆ....ಅಂತಹ ಅಮೂಲ್ಯ ನಿಧಿಯನ್ನು ಧರಿಸುವ ಭಾಗ್ಯ ನನಗೆ ಬಂದೀತೇ?' ವಿಸ್ಮಿತಳಾಗಿ ಕೇಳಿದಳು.

ಗುರುಗಳು ಧ್ಯಾನಮಗ್ನರಾಗಿ ನಂತರ ಹೇಳಿದರು : 'ಬರಬಾರದೇಕೆ? ಬರುವ ಕಾಲ ಬಳಿ ಸಾರುತ್ತಿದೆ. ಹೆಂಗೆಳೆಯರ ಹೊಂಗನಸಿನ ಸ್ವಾತಂತ್ರ್ಯದ ಮಹಾ ಮನೆಯ ಹೆಬ್ಬಾಗಿಲನ್ನು ತೆರೆವ ಅಪೂರ್ವ ಸಾಧಕಿಯಾಗಬೇಕು ಅಕೆ! ಪುತ್ರೀ ರತ್ನವಾದರೆ ಆಯಿತಷ್ಟೇ....'

'ಪುತ್ರ-ಪುತ್ರಿ ಎಂಬ ಭೇದವಿಲ್ಲ ನಮಗೆ. ಬಂಜೆಯ ಬರಡು ಬಾಳು ಹಸುರಾದರಷ್ಟೇ ಸಾಕು, ಧನ್ಯಳಾಗುವೆ. ಸಾವಿತ್ರಿದೇವಿಯಂತೆ ಹುಟ್ಟಿದ-ಕೊಟ್ಟ ಮನೆಗಳೆರಡನ್ನು ಬೆಳಗಿದರೆ ಸಾಕು....'

'ಅಂ....ಅಹುದು....ಹುಟ್ಟಿದ ಮರ್ತ್ಯಲೋಕ, ಕೊಟ್ಟ ಶಿವನ ಹೃದಯ

ಎರಡನ್ನೂ ತೊಳಗಿಬೆಳಗುವ ಜ್ಯೋತಿಯಾದಳು.' ಅಪೂರ್ವವಾದ ತನ್ಮಯತೆ ಗುರುಗಳ ಮುಖದ ಮೇಲಿತ್ತು.

'ಒಳ್ಳೆಯದು ಓಂಕಾರ, ನೀವು ನಡೆಯಿರಿ. ನಾಳೆ ಮುಂಜಾನೆ ಸೂರ್ಯೋದಯಕ್ಕೆ ಮುಂಚೆ ಅರ್ಧ ಗಳಿಗೆ ಇರುವಾಗ ನೀವಿಲ್ಲಿ ಸಿದ್ಧರಾಗಿರಬೇಕು. ಮಿಂದು ಮಡಿಯುಟ್ಟು ಆಗಮಿಸಿರಿ. ದಂಪತಿಗಳಿಬ್ಬರೂ ಸತ್‌ಸಂಕಲ್ಪದಿಂದ ಇಂದು ದೇವನ ಧ್ಯಾನವನ್ನು ಮಾಡಿರಿ....'

ಇಬ್ಬರೂ ಮತ್ತೊಮ್ಮೆ ಗುರುಗಳಿಗೆ ನಮಸ್ಕರಿಸಿ ಮನೆಗೆ ಅಭಿಮುಖರಾದರು.

ಗುರುಲಿಂಗದೇವರು ಪೂಜಾರಿ ಶಿವಪುತ್ರಪ್ಪನನ್ನು ಕರೆದು ಹೇಳಿದರು:

'ಪೂಜೆಗೆ ಎಲ್ಲ ಅಣಿಯಾಗಿದೆಯಷ್ಟೇ. ಸರಿರಾತ್ರಿಯಲ್ಲಿ ನಾನು ಸ್ನಾನ ಮಾಡಿ ಪೂಜೆಗೆ ಕೂಡುತ್ತೇನೆ. ಯಾರೂ ಬಂದು ಮಾತನಾಡಿಸಬೇಡಿರಿ. ಮುಂಜಾವಿನ ಅರುಣೋದಯದ ಸಮಯದಲ್ಲಿ ಓಂಕಾರ ಪತ್ನಿಸಮೇತನಾಗಿ ಬರುವನು. ಕೈಕಾಲು ಮುಖ ತೊಳೆಸಿ ಪೂಜೆಯ ಕೋಣೆಯೊಳಗೆ ಕಳಿಸಿಬಿಡು. ಇನ್ನೊಮ್ಮೆ ಪೂಜೆಯ ಪರಿಕರಗಳ ವ್ಯವಸ್ಥೆಯನ್ನು ಗಮನಿಸು.'

ಶಿವಪುತ್ರಪ್ಪ ವಿಸ್ಮಿತನಾದರೂ ಭಯಭಕ್ತಿಯಿಂದ ಒಪ್ಪಿಗೆ ಸೂಚಿಸಿ ಹೋದ.

ಶ್ರೀ ಗುರುಲಿಂಗದೇವರು ಮಿಂದು ಮಡಿಯನ್ನು ಧರಿಸಿ ಆತ್ಮವಿಶ್ವಾಸದ ಹೆಜ್ಜೆಗಳನ್ನು ಇರಿಸುತ್ತ, ಶಿವಪ್ರಸಾದವನ್ನು ಪಡೆದೇತೀರುವೆನೆಂಬಂತೆ ಪೂಜೆಯ ಮಂದಿರವನ್ನು ಹೊಕ್ಕರು....

* * *

ಮಲೆನಾಡಿನ ಮಳೆಗಾಲದ ಪರಿಯನ್ನು ಅರಿಯದವರೇ ಇಲ್ಲ. ಮೋಡಗಳಿಗೆ ತೂತು ಬಿದ್ದಂತೆ ಜಿಟಿಜಿಟಿ ಮಳೆ ಹಿಡಿದು ವಾರದ ಮೇಲಾಗಿತ್ತು. ಯುದ್ಧಕ್ಕೆ ಸನ್ನದ್ಧವಾಗಿ ನಡೆಯುವ ಸೈನಿಕ ಸಮೂಹದಂತೆ ಒಂದರ ಹಿಂದೊಂದು ಮೋಡಗಳು ಧಾವಿಸುತ್ತ ಸೂರ್ಯನನ್ನು ಮಲೆನಾಡಿನ ಮಕ್ಕಳಿಂದ ದೂರಾಗಿಸಿದ್ದವು. ಮಳೆಯ ರಂಪಾಟದಿಂದ ಬೇಸತ್ತ ಜನ ಬಿಸಿ ಕಿರಣದಿಂದ ತುಸು ಚೇತನ ನೀಡುವ ಬೆಳ್ಳದಿರನ ಬರವಿಗೆ ತಪಸ್ಸು ಮಾಡುತ್ತಿದ್ದರು. ಮಳೆಯು ನಾಳಷ್ಟು ಆಗಿ ಸ್ವಲ್ಪ ಹೊರಪಾಗದೆ ಎಡೆ ಗೊಡೆಯಲು ಬರುವಂತಿರಲಿಲ್ಲ. ಆದರೆ ಒಂದು ವಾರದ ಬಳಿಕ ಇಂದೇನೋ ಮಳೆಬಿಟ್ಟಂತಾಗಿತ್ತು. ಸೂರ್ಯೋದಯಕ್ಕೆ ವೇಳೆ ಬಹಳವಿದ್ದರೂ ಆಕಾಶದ ಶುಭ್ರತೆಯಿಂದ, ಬಹುದಿನಕ್ಕೆ ಕಂಡ ಚುಕ್ಕೆಗಳ ಸಂಕೇತದಿಂದ ಮಂಗಳ ಹೊಂಬೆಳಕು ಅಂದು ದೊರೆಯಬಹುದೆಂಬ

ಸುಳುಹಾಯಿತು. ಓಂಕಾರ-ಲಿಂಗಮ್ಮರು ಮಿಂದು ಮಡಿಯುಟ್ಟು, ಪೂಜೆ ಮುಗಿಸಿ ಮನೆಬಿಡುವಾಗ ಬೆಳ್ಳಿಯ ಚುಕ್ಕೆ ತೀಕ್ಷ್ಣ ಪ್ರಭೆಯಿಂದ ಬೆಳಗುತ್ತಿತ್ತು. ಭಾವುಕನಾದ ಓಂಕಾರ ಮೌನವಾಗಿ ಆನಂದಿಸುತ್ತಿದ್ದ.

'ಬೆಳ್ಳಿಚುಕ್ಕೆ ಅದೆಷ್ಟು ಚಂದವಾಗಿದೆಯಲ್ಲವೇ ? ಸುಂದರ ಸುಪ್ರಭಾತದ, ಶುಭ್ರ ಅರುಣೋದಯದ ಮುನ್ಸೂಚನೆಯಂತೆ ತೋರುತ್ತದೆ. ಪ್ರಾಯಶಃ ಇಂದು ಹಲವು ದಿನಗಳ ಮಂಕನ್ನು ಕಳೆಯುವಷ್ಟು ತೇಜೋಮಾನವಾಗಿ ಸೂರ್ಯ ಬರಬಹುದೇನೋ !' ಉಲ್ಲಸಿತಳಾಗಿ ಸಾಗುತ್ತಿದ್ದ ಲಿಂಗಮ್ಮ ನುಡಿದಳು.

'ಲಿಂಗಾ....ದೇವೀ....ಇಂದು ನಿನ್ನ ಮುಖ ಅಪೂರ್ವಕಳೆಯಿಂದ ಬೆಳಗುತ್ತಿದೆ. ನೀನು ಮಡಿಯುಟ್ಟು ಪೂಜಿಸಿ ಹೊರಬಂದಾಗ ಈ ಬೆಳ್ಳಿಚುಕ್ಕೆಯ ಶೋಭೆಯನ್ನು ನಿನ್ನಲ್ಲಿ ಕಂಡೆ. ನಮ್ಮ ಬದುಕಿನಲ್ಲೂ ಸುಂದರ ಅರುಣೋಯವಾದರೆ, ಹಲವು ವರ್ಷಗಳ ಮಂಕೆಲ್ಲ ಕಳೆದೀತಲ್ಲವೇ ?'

'ಇಂದು ರಾತ್ರಿ ಮನೋಹರ ಕನಸೊಂದನ್ನು ಕಂಡೆ ನಾನು. ರಾತ್ರಿ ಮಳೆಯಾಗಿ, ಬೆಳಿಗ್ಗೆ ಸೂರ್ಯೋದಯವಾದಾಗ ಪ್ರಕೃತಿ ಕಳಾವತಿಯಾಗಿ ಕಾಣುವಂತೆ, ಆ ಕನಸಿನ ದಿವ್ಯತೆ ನನ್ನ ಮುಖದ ಮೇಲೆ ಆನಂದದ ಪಡಿಯಚ್ಚನ್ನು ಮೂಡಿಸಿದೆ....'

'ನನಗೆ ಹೇಳಬಹುದಲ್ಲ....'

'ಈಗ ಬೇಡ....ಗುರುಗಳ ಸನ್ನಿಧಿಯಲ್ಲಿ ಬಿತ್ತರಿಸುವೆ....'

ದಂಪತಿಗಳು ಮಠವನ್ನು ಮುಟ್ಟಿದಾಗ, ಕೈಕಾಲು ತೊಳೆದು ಒಳಗೆ ಹೋಗಲು ಶಿವಪುತ್ರಪ್ಪ ಸೂಚನೆ ನೀಡಿ ಪೂಜೆಯ ಕೋಣೆಯ ಕದ ತೆರೆದ. ಇಬ್ಬರೂ ಫಲಪುಷ್ಪ ಸಮೇತವಾದ ಹರಿವಾಣಗಳನ್ನು ಕೈಲಿ ಹಿಡಿದು ಒಳಗೆ ಪಾದವಿಕ್ಕಿ ರೋಮಾಂಚಿತರಾದರು. ಧೂಪದ ವಾಸನೆಯು, ದುಂಡುಮಲ್ಲಿಗೆ ಹೂವಿನ ಕಂಪಿನೊಡನೆ ಘ್ರಾಣೇಂದ್ರಿಯವನ್ನು ಚೇತನಿಸಿತು.

ಶ್ರೀಗುರುಲಿಂಗದೇವರು ಶಾಂಭವೀಮುದ್ರೆಯಲ್ಲಿ ಕುಳಿತು, ಅನಿಮಿಷ ನೇತ್ರರಾಗಿ ಇಷ್ಟಲಿಂಗದ ಮೇಲೆ ದೃಷ್ಟಿಯನ್ನು ನಿಲ್ಲಿಸಿದ್ದಾರೆ. ಪೂಜೆಯ ಮಂದಿರವನ್ನು ಅಮರ್ತ್ಯಭಾವವು ತುಂಬಿಕೊಂಡಿದೆ. ಮಾನವಲೋಕದ ಮರೆವಿನ ಸೃಷ್ಟಿಯನ್ನು ಮೀರಿ ಅರಿವಿನ ಸೃಷ್ಟಿಗೆ ಪಾದವಿಟ್ಟಂತೆ ಆಯಿತು. ದಂಪತಿಗಳು ನಿಶ್ಶಬ್ದವಾಗಿ ಕುಳಿತು ಗುರು ಲಿಂಗದೇವರನ್ನು ನಿಶ್ಚಲವಾಗಿ ದಿಟ್ಟಿಸಿದರು. ಬಹಿರಂಗದ ಅರಿವೆ ಅವರಿಗಿರಲಿಲ್ಲ. ಮುಖದಿಂದ ಹೊಮ್ಮುವ ಓಜಸ್ಸು ಸುತ್ತಲೂ ಸೂರೆಯಾಡುತ್ತಿದೆ. ಹೊಂಬಣ್ಣದ ಮುಖಕಮಲದಲ್ಲಿ

ಕಪ್ಪು ಕಂಗಳು ಸ್ಥಿರವಾಗಿ ಕಪ್ಪು ದುಂಬಿಗಳಂತೆ ಕುಳಿತಿವೆ. ಆ ನಿಶ್ಚಲ ದೃಷ್ಟಿಯಲ್ಲಿ ಅನುತ್ಯರ್ಯದ ಮಹಾಶಕ್ತಿಯನ್ನು ಕೆಳಗಿಳಿಸುವ ಸಾಹಸವಿದ್ದಂತೆ ತೋರುತ್ತಿದೆ. ಯಾವ ಚಲನೆಯಿಲ್ಲದೆ ಶಿಲಾವಿಗ್ರಹದಂತೆ ಕುಳಿತ ಗುರುಗಳು ಅಪೂರ್ವ ತಪೋಕಾಂತಿಯಲ್ಲಿ ಬೆಳಗುತ್ತಿದ್ದಾರೆ.

ಯಾವುದೋ ಗಳಿಗೆ ಸಮೀಪಿಸಿದಂತಾಗಿ ಅವರಿಗೆ ಆನಂದವೆನಿಸುತ್ತಿದೆ. ವಾಮಕರದಲ್ಲಿ ಪೀಠಸ್ಥವಾದ ಇಷ್ಟಲಿಂಗದಲ್ಲಿ ಬೆಳಕೊಂದು ಉದಯಿಸುತ್ತಿದೆ. ಅದು ಹಿರಿದಾಗುತ್ತ ಬಂದು, ವಿಶ್ವವನ್ನೆಲ್ಲ ವ್ಯಾಪಿಸಿದಂತಾಗಿ, ಮತ್ತೆ ಕಿರಿದಾಗುತ್ತ ಬಂದು ಅಂಗೈಯಲ್ಲಿದ್ದ ದೇವನ ಮುಂದಿದ್ದ ಕಲ್ಲುಸಕ್ಕರೆಯಲ್ಲಿ ಲೀನವಾಗುತ್ತಿದೆ. ಹಾಗೆ ಅಡಗಿದಾಗ ಸಂಕಲ್ಪ ಸಿದ್ಧಿಸಿದ ಆನಂದ ಗುರುಗಳ ಮುಖದ ಮೇಲೆ ಮೂಡಿತು. ತೃಪ್ತಿಯ ಕಳೆ ಮಿನುಗಿ, ಮತ್ತೆ ಅಡಕವಾಯಿತು.

ಬಹಿರಂಗಪ್ರಜ್ಞೆ ಮೂಡಿ ಸುತ್ತಲೂ ಕಣ್ಣು ಹಾಯಿಸಿದರು. ಭಯ ಭಕ್ತಿಯಿಂದ ಕುಳಿತ ದಂಪತಿಗಳನ್ನು ಕೈಸನ್ನೆಯಿಂದ ಸಮೀಪಕ್ಕೆ ಕರೆದರು. ಇಬ್ಬರ ನೊಸಲಿಗೆ ವಿಭೂತಿಯನ್ನು ಹಚ್ಚಿ, ಪಾದೋದಕ ನೀಡಿದ ಬಳಿಕ ಅಂಗೈಯೊಳಗೆ ಅಪೂರ್ವನಿಧಿಯಾಗಿದ್ದ, ಸಂಕಲ್ಪಸಿದ್ಧಿಯ ಸಾಕಾರವಾಗಿದ್ದ ಕಲ್ಲುಸಕ್ಕರೆಯನ್ನು ಕರುಣಪ್ರಸಾದವಾಗಿ ನೀಡಿದರು. ಇಬ್ಬರ ತಲೆಯಮೇಲೆ ಹಸ್ತವನ್ನಿಟ್ಟು ಕಣ್ಮುಚ್ಚಿ ಹರಸಿದರು. ದೃಢಸಂಕಲ್ಪಯುಕ್ತ ತಪೋಸಾಧನೆಯ ಶಕ್ತಿಯನ್ನು ಹಸ್ತದ ಮೂಲಕ ಹರಿಸಿದರು. ದಂಪತಿಗಳಿಬ್ಬರೂ ಆನಂದದ ಅನುಭೂತಿಯನ್ನು ಪಡೆದರು. ಆ ಬಳಿಕ ಗುರುಗಳು ನುಡಿದರು:

'ಗುರುಕಾರುಣ್ಯ, ಲಿಂಗಪ್ರಸಾದದ ಸಾಕಾರವೇ ನಿಮ್ಮ ಚಿತ್ಕೂಸು. ತಾಯಿ....ಸದ್ಗುಣಸಂಪನ್ನತೆಯ ಗರ್ಭದಲ್ಲಿ ಆ ದಿವ್ಯಕಳೆ ಬೆಳೆಯಬೇಕು. ಓಂಕಾರ....ನನ್ನ ಸಂಕಲ್ಪ ಫಲಿಸಿತು. ನಿಮ್ಮ ಬಯಕೆ ಈಡೇರುವುದು. ನಿನ್ನ ಮಗುವು ಜನ್ಮತಳೆವ ನೆಪದಲ್ಲಿ ನನಗೆ ಪ್ರಭುಕಾರುಣ್ಯ ದೊರಕಿತು....' ತನ್ಮಯರಾಗಿದ್ದರು ಗುರುಗಳು.

ಧ್ಯಾನಮಗ್ನಳಾದ ಲಿಂಗಮ್ಮನಿಗೆ ಮಹಾಜ್ಯೋತಿಯೊಂದು ಕಿರಿದಾಗುತ್ತ ಬಂದು ಹೃತ್ಕಮಲವನ್ನು ಪ್ರವೇಶಿಸಿದಂತೆನಿಸಿತು. ಶಬ್ದಮುಗ್ಧಳಾಗಿ ಕುಳಿತಳು. ಸ್ವಲ್ಪ ಸಮಯದ ಬಳಿಕ ಓಂಕಾರ ಮಾತನಾಡಿಸಿ ಆಕೆಯನ್ನು ಬಹಿರ್ಪ್ರಪಂಚಕ್ಕೆ ಕರೆತಂದ.

'ಗುರುದೇವಾ....ತಾವು ರಾತ್ರಿ ಪ್ರಸಾದವನ್ನೇ ಸ್ವೀಕರಿಸಿಲ್ಲವಂತೆ! ನಾವು ತಂದಿರುವ ರಸಬಾಳೆಯ ಹಣ್ಣನ್ನು ತಿಂದು, ಕರೆದು ತಂದಿರುವ ಹಸುವಿನ

ಹಾಲನ್ನು ಸ್ವೀಕರಿಸಬೇಕು....' ಹಣ್ಣು ಹಾಲನ್ನು ಸಂತೃಪ್ತಿಯ ಮುಖದಿಂದ ಸ್ವೀಕರಿಸುತ್ತ ಗುರುಗಳು ನುಡಿದರು :

'ಲೌಕಿಕವೇ ಆಗಲಿ, ಪಾರಮಾರ್ಥಿಕವೇ ಆಗಲಿ ಯಾವುದಾದರೂ ಬಯಕೆಯು ಸಿದ್ಧಿಸಬೇಕಾದರೆ ಬಲವಾದ ಸಂಕಲ್ಪ ಬೇಕಾಗುವುದು ಓಂಕಾರ. ಬರೀ ಸಂಕಲ್ಪವೊಂದಿದ್ದರೆ ಸಾಲದು, ಅದು ಪೂರ್ಣರೂಪ ಪಡೆಯಬೇಕಾದರೆ ಸದಾಚಾರದ ಸಹಕಾರ ಅವಶ್ಯಕ.

'ಮಮತೆಯ ಮಕ್ಕಳೇ, ಗಂಗೆಯು ತಾನು ಹುಟ್ಟುವ ತಾಣವನ್ನು ಕ್ಷೇತ್ರೀಕರಿಸುವಳಷ್ಟೇ ಅಲ್ಲ, ತಾನು ಹರಿವ ಭೂಮಿಯನ್ನು ಪಾವನಗೊಳಿಸುವಳು; ಹಾಗೆಯೇ ನಿಮ್ಮ ಮಗಳು ಕುಲೋದ್ಧಾರಕಳಷ್ಟೇ ಅಲ್ಲ, ಮನುಕುಲೋದ್ಧಾರಕಳಾಗುವಳು....'

'ಗುರುದೇವಾ....ನಿನ್ನೆ ನನಗೊಂದು ಕನಸಾಯಿತು....'

'ಏನದು ತಾಯಿ....'

'ರಜತಗಿರಿಯು ಸುಪ್ರಭಾತದ ಹೊಂಗಿರಣಗಳಪ್ಪುಗೆಯಲ್ಲಿ ಕಂಗೊಳಿಸುತ್ತಿತ್ತು. ನಾನು ಇವರೊಡನೆ ಅದರಲ್ಲಿ ಸಾಗಿದ್ದೆ. ತೇಜೋಮಯನಾದ ಯೋಗಿ ಶಿವನು ಧ್ಯಾನಮುದ್ರೆಯಲ್ಲಿದ್ದ. ತಾವು ಅಲ್ಲಿ ಕುಳಿತು ತಪಸ್ಸು ಮಾಡುತ್ತಲಿದ್ದಿರಿ. ನಿಮ್ಮ ಉತ್ಕಟ ಕರೆಗೆ ಮಣಿದು ಮಹಾದೇವನು ಕಮಲದ ದಳಗಳರಳಿದಂತೆ ಕಣ್ತೆರೆದು ಕರುಣೆಯಿಂದ ನೋಡಿದ. ಆ ಮಹಾಯೋಗಿಯ ಜಡೆಯಲ್ಲಿದ್ದ ಗಂಗೆ ಜುಳುಜುಳನೆ ಹರಿಯಲಾರಂಭಿಸಿತು. ನೀವು ಅದನ್ನು ಕಂಡು ಆನಂದಿತರಾದಿರಿ. ಆ ಗಂಗೆಯೊಡನೆ ಮಹಾದೇವನ ಮುಡಿಯಲ್ಲಿದ್ದ ಏಳುಸುತ್ತಿನ ಮಲ್ಲಿಗೆಯು ಹರಿಯುತ್ತ ನಮ್ಮೆಡೆಗೆ ಬಂದಿತು. ನಾನು ಸಂಭ್ರಮದಿಂದ ತೆಗೆದುಕೊಂಡು ಉಡಿಯಲ್ಲಿ ಹಾಕಿಕೊಂಡೆ....'

'ಧನ್ಯೆ ತಾಯಿ....ಲಿಂಗಮ್ಮ, ನಿನ್ನ ಕನಸು ಕೇವಲ ಭ್ರಮೆಯಲ್ಲ ಅಥವಾ ಅತೃಪ್ತ ಆಸೆಯ ವ್ಯಕ್ತರೂಪವಾದ ಸಾಮಾನ್ಯ ಕನಸಲ್ಲ. ನೀನು ಶಿವನ ಪ್ರಸಾದವನ್ನು ಪಡೆದೆ....'

'ಆದರೆ....ಗುರುದೇವಾ....ಈ ಕನಸು ಇಷ್ಟಕ್ಕೇ ಮುಗಿಯಲಿಲ್ಲ. ನಾನು ನನ್ನ ಮಡಿಲಲ್ಲಿ ಆ ಸುಮವನ್ನು ಭದ್ರವಾಗಿರಿಸಿಕೊಂಡು ಆನಂದಿಸುವಾಗಲೇ ಮಹಾದೇವನು ಅದನ್ನು ಬೇಡಿದ. 'ಅದು ನನಗಿರಲಿ' ಎಂದು ಅಂಗಲಾಚಿದೆ. 'ನಾನು ಕೊಟ್ಟಿದನ್ನು ನನಗೇ ಕೊಡಲಾರೆಯಾ ?' ಎಂದ ಆ ಮಹಾದೇವ. ಇವರೂ ಸಹ 'ಶಿವನ ಮೀಸಲ ಹೂವನ್ನು ಅವನಿಗೆ ಕೊಡು' ಎಂದರು. ಗುರುದೇವಾ, ನೀವು ಸಹ ಹಾಗೇ ಅಂದಿರಿ; ನನ್ನ ಮಡಿಲಿನಿಂದ ಬಲವಂತ

ವಾಗಿ ಪಡೆದು ಅವನ ಪಾದಕ್ಕೆ ಇವರು ಅರ್ಪಿಸಿಬಿಟ್ಟರು....' ಸ್ವಲ್ಪಸ್ವಲ್ಪವಾಗಿ ನೆನಸಿಸಿಕೊಂಡು ನುಡಿದಳು.

'ನಿಜ....ತಾಯಿ; ಆಕೆ ಕಾರಣಿಕಕನ್ಯೆ. ಶಿವನ ಮೀಸಲ ಕುಸುಮ....' ಗಂಭೀರವಾಗಿ ನುಡಿದರು ಗುರುಗಳು. ಅವರ ಅಪ್ಪಣೆಯನ್ನು ಪಡೆದು ಸತಿಪತಿಗಳು ಮನೆಯತ್ತ ಅಡಿ ಇಟ್ಟರು.

೫. ನನಸಾದ ಕನಸು

ಭವಿಷ್ಯ ಬಾಳಿನಾಗಸದಲ್ಲಿ ಮುತ್ತಲಿದ್ದ ನಿರಾಶೆಯ ಕಾರ್ಮೋಡಗಳು ಸರಿದು, ಹೊಂಬೆಳಗು ಮೂಡುವುದೆಂಬ ಭರವಸೆ ಲಿಂಗಮ್ಮನಿಗೆ ಅಪಾರ ಉತ್ಸಾಹ ವನ್ನು ತುಂಬಿತು. ಸತಿ-ಪತಿಗಳೊಂದಾದ ಜೀವನ ಹಾಲು ಸಕ್ಕರೆಯ ರಸಾರಿ ಯಂತಿದ್ದಾಗ, ಬಂಜೆತನ ಅಳಿಯುವ ಆಶ್ವಾಸನೆ ಕೇಸರಿಯ ಕಂಪಿನಂತೆ ಬೆರೆ ದಿತ್ತು. ಮನದ ಇಚ್ಛೆಯನರಿತು ನಡೆವ ರಸಿಕ ಪತಿ, ಅಷ್ಟೇ ಸದ್ಗುಣವಂತ, ಸಂಯಮಪೂರ್ಣನಾದ ಮಿತಜೀವಿ. ವಿರಸದ ಅಲೆಗಳು ಹಾಯದಂತಹ ಸರಸ ಸಂಸಾರ. ಇಷ್ಟಿದ್ದರೂ ಎಂತಹುದೇ ಪ್ರಸಂಗದಲ್ಲಿ ಬೆಳಗಿನ ಜಾವದ ಪೂಜೆ ತಪ್ಪದಷ್ಟು ನಿಷ್ಠೆ ಲಿಂಗಮ್ಮನಲ್ಲಿ. ಆಕೆಯ ದೈವೀ ವರ್ತನೆಯನ್ನು ಕಂಡ ಓಂಕಾರ ಅಭಿಮಾನದಿಂದ ಹೇಳುತ್ತಿದ್ದ: 'ನಮ್ಮ ಶರಣರು ಹೇಳುವ ನುಡಿ ನಿನಗೆ ಅನ್ವಯಿಸುವುದು ನೋಡು; ಸತಿಯೆಂದರೆ ಕೇವಲ ಭೋಗದ ಗೊಂಬೆಯಲ್ಲ, ಪತಿಯನ್ನು ಮೌಢ್ಯತೆಯಿಂದ ಹಿಂಬಾಲಿಸುವ ನೆರಳಲ್ಲ; ಪತಿಯ ವಿಚಾರಶಕ್ತಿ–ಸಂಕಲ್ಪಶಕ್ತಿ–ಕ್ರಿಯಾಶಕ್ತಿಯಾಗಿ, ಗುರುವಾಗಿಯೂ ಬಾಳಬಲ್ಲಳು. ಸುಖ–ದುಃಖಗಳ ಭೋಗದಲ್ಲಿ ಸಂಗಾತಿಯಾಗಿ, ಮಾರ್ಗ-ದರ್ಶನದಲ್ಲಿ ಗುರುವಾಗಿ, ರಕ್ಷಣೆಯಲ್ಲಿ ತಾಯಿಯಾಗಿ, ತೃಪ್ತಿ ನೀಡುವುದರಲ್ಲಿ ಸತಿಯಾಗಿ, ಜೀವನಕ್ಕೆ ಶೋಭೆ ನೀಡುವ ಚಿತ್ಕಳೆಯಾಗಿ, ಕಷ್ಟ-ನಷ್ಟಗಳಲ್ಲಿ ಬಂಧುವಾಗಿ ಪತ್ನಿ ಇರುವಳೆಂಬ ನುಡಿಗೆ ನೀನು ಜ್ವಲಂತ ಸಾಕ್ಷಿ. ನಾನೆಷ್ಟು ಪುಣ್ಯವಂತ!' ಆದರದಿಂದ ದೃಷ್ಟಿಸಿ, ಆಕೆಯ ತಲೆಯನ್ನು ನೇವರಿಸುತ್ತಿದ್ದ ಓಂಕಾರ.

'ಸಾಕು....ಸಾಕು, ನಿಮ್ಮ ಹೊಗಳಿಕೆಯ ಈ ಹುಚ್ಚುಹೊಳೆಗೆ ಅಡ್ಡಗಟ್ಟೆ ಹಾಕಿರಿ. ಪತ್ನಿಯ ಸಹಜ ಕರ್ತವ್ಯಕ್ಕೆ ಹೀಗೆ ಹೊಗಳುವುದು ಉಚಿತವಲ್ಲ....' ಎಂದು ಮಾತಿನ ಜಾಡನ್ನು ತಿರುಗಿಸುತ್ತಿದ್ದಳು.

ಆಕೆಗೆ ದೈವೀ ಅನುಭವಗಳ ಸಮುದಾಯ ಮುತ್ತಲಾರಂಭಿಸಿದ್ದಿತು. ಮನಸ್ಸು ಅಂತರ್ಮುಖವಾಗತೊಡಗಿತ್ತು. ಹೆಚ್ಚಾಗಿ ಯಾರೊಡನೆಯೂ ಬೆರೆಯದೆ ಪೂಜೆ-ಅಧ್ಯಯನಗಳಲ್ಲಿ ಮಗ್ನಳಾಗಲಾರಂಭಿಸಿದಳು. ಒಂದು ದಿವಸ ಮಧ್ಯರಾತ್ರಿ ದಾಟಿರಬೇಕು. ಸರಸದ ಮಾತುಗಳನ್ನು ಆಡುತ್ತ ಹಾಗೆಯೇ ನಿದ್ರಿಸಿದ್ದ ಓಂಕಾರ. ಲಿಂಗಮ್ಮ ಹಾಸುಗೆಯ ಮೇಲೆ ಅಡ್ಡಾಗಿಯೇ ಕಣ್ಣು ಮುಚ್ಚಿಕೊಂಡು ಧ್ಯಾನಿಸುತ್ತಲಿದ್ದಳು. ಒಮ್ಮೆ ಕಣ್ಣು ತೆರೆದಾಗ ದೀಪದ

ಕಂಬದ ಮೇಲೆ ಉರಿಯುತ್ತಿದ್ದ ದೀಪದೊಡಲಿನಿಂದ ಕಿಡಿ ಹಾರಿದಂತಾಯಿತು. ಅದು ದೊಡ್ಡದಾಗಿ, ಸುಂದರವಾದ ಹೆಣ್ಣುಮಗುವಾಗಿ ಕಾಲುಗೆಜ್ಜೆಗಳನ್ನು ಕುಣಿಸುತ್ತಾ ಬಂದಿತು. ಲಿಂಗವ್ವನ ಮಗ್ಗುಲಿಗೆ ಬಂದು ನಸುನಕ್ಕಂತಾಯಿತು. ಹಿಡಿಯಬೇಕೆನ್ನುವಷ್ಟರಲ್ಲಿ ಗರ್ಭದಲ್ಲಿ ಅಡಗಿದಂತಾಯಿತು.

ಮೈ ಪುಳಕಿತಳಾದ ಲಿಂಗವ್ವ ಮಗುವಿಗಾಗಿ ತಡಕಾಡುವಷ್ಟರಲ್ಲಿ ಓಂಕಾರನಿಗೆ ಎಚ್ಚರಿಕೆಯಾಯಿತು. 'ಲಿಂಗಾ....ದೇವಿ ...ಏನನ್ನು ಹುಡುಕುತ್ತಿರುವೆ' ಮೈಮುಟ್ಟಿ ಎಚ್ಚರಿಸಿದ.

'ಮಗು....ಮಗು....ಮಗುವಿಗಾಗಿ....'

'ಎಲ್ಲಿದೆ? ಮಗುವೆಲ್ಲಿ....ನಿನಗೆ ಭ್ರಮೆಯಾಗಿಲ್ಲವಷ್ಟೇ?' ಮೈ ಹಿಡಿದು ಅಲುಗಿಸಿದಾಗ ಕಣ್ಣುಗಳನ್ನು ಹೊಸಕಿಕೊಂಡಳು.

'ಎಲ್ಲಿ ಹೋಯಿತು ನನ್ನ ಮಗು?' ಅದೇ ತನ್ಮಯತೆಯಿಂದ ಕೇಳಿದಳು. ಕಣ್ಣಿಗೆ ಕಟ್ಟಿದಂತಿತ್ತು ಆ ಚಿತ್ರ.

'ಇಲ್ಲಿದೆ ನೋಡು....' ಹಗುರಾಗಿ ಮುತ್ತಿಟ್ಟು ನಕ್ಕ ತನ್ನ ಎದೆಯ ಮೇಲೆ ಕೈ ಇರಿಸಿಕೊಂಡು.

'ಹುಡುಗಾಟ ಬೇಡಿ....ಎಲ್ಲಿ ಹೋಯಿತು ಹೇಳಿ?'

'ಹೊಟ್ಟೆಯಲ್ಲಿರಬೇಕೇನೋ ನೋಡಿಕೋ. ಗರ್ಭ ನಿಂತುದೇ ತಿಳಿದಿಲ್ಲ, ಮಗುವನ್ನು ಕಂಡೆನೆನ್ನುವೆ. ಹುಚ್ಚು ಹಿಡಿದಿಲ್ಲ ತಾನೇ....?'

'ಪ್ರತ್ಯಕ್ಷ ಕಂಡ ಅನುಭವವಾಯಿತಲ್ಲಾ....' ಲಿಂಗವ್ವ ವಿಸ್ಮಿತಳಾದಳು.

'ನಾನು ಕಣ್ಣೆದುರಿಗೇ ಇದ್ದರೂ ನಾನು ಬೇಡವಂತೆ, ಇನ್ನೂ ಕಣ್ಣಿಗೆ ಸಹ ಬೀಳದ ಆ ಮಗುವನ್ನು ಅಪ್ಪುವ ಆಸೆ. ಹೀಗಾದರೆ ನನ್ನ ಗತಿ ಏನಪ್ಪಾ ದೇವರೆ! ಎನಿಸುತ್ತಿದೆ; ಭಯವಾಗುತ್ತಿದೆ....' ಓಂಕಾರನು ಮುನಿಸಿನಿಂದ ನುಡಿದ.

'ಎನ್ನಾಳ್ದನೇ....ಆ ಭಯವೇಕೆ? ಮಾತೃವೃಕ್ಷದ ಪ್ರೇಮರಸ ನೂರೊಂದು ಕವಲಲ್ಲಿ, ಸನೆಪುಲ್ಲಿ, ಪುಷ್ಪದಲ್ಲಿ, ಫಲದಲ್ಲಿ ಸಮಾನವಾಗಿ ಹರಿಯದೆ? ಫಲವು ಪೈದಾಳಿದಾಗ ಕಾಂಡವನ್ನು ಮರೆಯಲುಂಟೆ?'

'ಅಬ್ಬಾ! ಗೆದ್ದೆ; ಅಷ್ಟು ಆಶ್ವಾಸನೆ ಸಿಕ್ಕರೆ ನನ್ನದೇ ಪುಣ್ಯ!' ಓಂಕಾರ ನುಡಿದ. ಲಿಂಗವ್ವನ ಹಲವು ದಿನಗಳ ಬಯಕೆ ಮೂರ್ತರೂಪು ತಾಳುವಂತೆ, ಓಂಕಾರನ ಅಂತರಂಗದ ಆಸೆ ಕೃತರೂಪಕ್ಕೆ ಬರುವಂತೆ, ಎರಡು ಹೃದಯಗಳನ್ನು ಮತ್ತಷ್ಟು ಬೆಸೆಯುವಂತಹ ಚೇತನವು ಲಿಂಗವ್ವನ ಗರ್ಭದಲ್ಲಿ ನೆಲೆನಿಂತು, ಮೊಳೆಯತೊಡಗಿತು.

ಸೂರ್ಯನಾಗಮನವನ್ನು ಸೂಚಿಸುವಂತೆ ಕೆಂಭಾಯೆ ಮುನ್ನವೇ ಆಗಮಿಸಿ ದಿಗಂತವನ್ನು ಕಳೆ ಏರಿಸುವಂತೆ ಲಿಂಗಮ್ಮನ ಮೊಗದಮೇಲೆ ತಿಳಿಕೆಂಪು ಸಲ್ಲನಿಸಲಾರಂಭಿಸಿತು. ಸ್ವಭಾವತಃ ಚೆಲುವೆಯಾದ ಆಕೆಯ ಹೊಂಬಣ್ಣ ಇನ್ನಷ್ಟು ಸತ್ವಪೂರ್ಣವಾಯಿತು. ನವಿಲಿನ ಉತ್ಸಾಹ ಅಂಗಾಂಗಗಳಲ್ಲಿ ಪುಟಿಯತೊಡಗಿತು. ಕೆನ್ನೆಗಳು ತುಂಬಿಕೊಂಡು ಮೃದುವಾಗತೊಡಗಿದವು. ಗರ್ಭನಿಂತುದಕ್ಕೆ ಸೂಚನೆಯೆಂಬಂತೆ ಶರೀರವು ಬದಲಾವಣೆಗಳನ್ನು ಆಹ್ವಾನಿಸ ತೊಡಗಿತು.

ಶಾರೀರಿಕ ಸೌಷ್ಟವದೊಡನೆ ಮಾನಸಿಕ ಬದಲಾವಣೆಗಳು ಎದ್ದು ಕಾಣ ತೊಡಗಿದವು. ಒಮ್ಮೊಮ್ಮೆ ಓಂಕಾರ ಆ ಚೆಲುವನ್ನು ಕಂಡು ಸ್ತಂಭೀಭೂತನಾಗುತ್ತಿದ್ದ. ಲಾವಣ್ಯದ ಪ್ರತಿರೂಪದಂತೆ ತೋರುವ ತನ್ನ ಸತಿಯ ಮೊಗಾರವಿಂದದಲ್ಲಿ ಕಾಂತಿಕಿರಣಗಳು ಚಲ್ಲುವರಿಯುತ್ತಿದ್ದಂತೆಯೇ ಕಂಗಳ ಬಟ್ಟಲುಗಳು ಶಾಂತಿ, ಗಾಂಭೀರ್ಯಗಳ ಧಾಮವಾಗತೊಡಗಿದ್ದವು. ಮುಂದೆ ಆಗಮಿಸಲಿರುವ ಕಾರಣಿಕಶಿಶುವನ್ನು ಪುಷ್ಟವಾಗಿ ಸಾಕಲೆಂಬಂತೆ ಕ್ಷೀರ ಕುಂಡಗಳು ಪುಷ್ಟಿಗೊಂಡು ಅರಳತೊಡಗಿದವು. ಬ್ರಹ್ಮಾಂಡದ ಒಡೆಯ ಮಹಾದೇವನ ಮೀಸಲು ಸತಿಯನ್ನು ಹೊರಲಿರುವದೆಂಬಂತೆ ಆ ಗರ್ಭ ಹಿರಿದಾಗಿ ವಿಶ್ವದಾಕಾರವನ್ನು ತಾಳತೊಡಗಿತು. ಬೇಡವೆಂದರೂ ಕೇಳದೆ ನಸುಕಿನಲ್ಲಿಯೇ ಎದ್ದು ಪೂಜೆ ಮುಗಿಸಿ ಓಂಕಾರನನ್ನು ಎಬ್ಬಿಸಲು ಬಂದಾಗ ನೆಟ್ಟ ದೃಷ್ಟಿಯಿಂದ ಅವಳ ಚೆಲುವನ್ನು ಹೀರುತ್ತಿದ್ದ. ಮುಂಗುರುಳುಗಳು ಮದವೇರಿ, ಅಂಗಾಂಗಗಳು ಕಳೆ ಏರಿ, ತುಟಿಯ ತುಂಬಿದ ಕೆಂಪಿನೊಡನೆ ಮುಗುಳ್ನಗೆಯನ್ನು ಸೂರೆಯಾಡುತ್ತ ಬರುವ ಹೆಂಡತಿಯನ್ನು ಕಂಡು, ಮುಂಬರುವ ಮಗುವಿನ ರೂಪವನ್ನು ಕಲ್ಪಿಸಿಕೊಳ್ಳುವನು.

ಐದು ಆರು ತಿಂಗಳು ಸರಿದುಹೋಗಿದ್ದವು. ಲಿಂಗಮ್ಮ ಏಕಾಂತಪ್ರಿಯಳಾಗತೊಡಗಿದಳು. ಪತಿಯ ಸೇವೆಯನ್ನು ನಿಯಮಬದ್ಧವಾಗಿ ಮಾಡಿ ಅವನು ಕರ್ತವ್ಯಕ್ಕೆ ಹೋಗುತ್ತಲೇ ಪಾರಾಯಣ, ಪೂಜೆಗಳಲ್ಲಿ ಮೈಮರೆಯುವಳು. ಊಟದ ಕಡೆ ಗಮನವಿಲ್ಲ; ಬಹುದಿನಕ್ಕೆ ಗರ್ಭಧರಿಸಿದ ಅವಳನ್ನು ಅಭಿನಂದಿಸಲು ಬರುವವರ ಕಡೆ ಆಸಕ್ತಿಯಿಲ್ಲ. ಇದನ್ನು ಕಂಡ ಫಾಲಾಕ್ಷಯ್ಯನ ಮನೆಯ ಹೇಮಾವತಿ ಕೊಂಕುಮಾತನಾಡಲಾರಂಭಿಸಿದಳು :

‘ಎಂದೂ ಇಲ್ಲದ ಅಂದಗೇಡಿಗೆ ಬಹಳ ದಿನಕ್ಕೆ ಹೊಟ್ಟೆ ನಿಂತುದಕ್ಕೆ ಜಗತ್ತೇ ಕಾಣ್ತಾಯಿಲ್ಲ....ನಮ್ಮಂಗೆ ಎಂಟು ಮಕ್ಕಳಾಗಿದ್ದರೆ ಯಾರನ್ನಾದರೂ

'ಬಾಳ ದಿನಕ್ಕೆ ನಿಂತಿದೆ. ಏನಾದರೂ ಆದೀತು, ಕೆಟ್ಟ ಕಣ್ಣು ಬಿದ್ದೀತು ಎಂದು ಹೆದರಿ ಒಳಗೇ ಸೇರ್‍ಕೊಬಹುದೇನೋ !' ಸಿಂಗಾರಮ್ಮ ವಿವರಣೆ ನೀಡಿದಳು.

'ಇರಲಿಕ್ಕಿಲ್ಲ, ಬಹಳ ದಿನಕ್ಕೆ ಗರ್ಭ ನಿಂತರೆ ಆಗಿ ಬರದೆ ಸನ್ನಿ ಅಂತಾರಲ್ಲ ಹಂಗೆ ಮಂಕುಬಡಿಯೋ ಸಂಭವ ಇರುತ್ತೆ ಕಣಕ್ಕಾ....' ಬಂಗಾರಮ್ಮ ನುಡಿದಳು. ಹೆಂಗಸರಾಡುವ ಈ ಮಾತನ್ನು ಕೆಲವು ಗಂಡಸರು ಬಂದು ಅಂಗಡಿಯಲ್ಲಿ ಆಡತೊಡಗಿದಾಗ ಓಂಕಾರನಿಗೆ ಏನೂ ತೋಚದಾಯಿತು. ಬೆಳಿಗ್ಗೆ ಸ್ನಾನ ಪೂಜೆ ಮುಗಿಸಿ, ಉಪಾಹಾರ ಮಾಡಿ ವ್ಯವಹಾರಕ್ಕೆ ಹೋದವನು ಮರಳಿ ಮಧ್ಯಾಹ್ನ ಬಂದು ಊಟ ಮುಗಿಸಿ ಹೋಗಿಬಿಡುತ್ತಿದ್ದ. ಸಂಜೆ ಬಂದ ಬಳಿಕ ಸ್ನಾನ, ಪೂಜೆ, ಅಧ್ಯಯನ ಮುಗಿಸಿ ಪ್ರಸಾದ ಸ್ವೀಕಾರವನ್ನು ಮಾಡುತ್ತಿದ್ದ. ಒಂದು ದಿನ ಮಧ್ಯಾಹ್ನ ಹಾಗೆ ಬಂದಾಗ ಲಿಂಗಮ್ಮ ಪೂಜಾಸಕ್ತಳಾಗಿ ಧ್ಯಾನದಲ್ಲಿ ಮೈಮರೆತಿದ್ದಳು. ಕ್ಷಣಕಾಲ ನಿಂತು ವೀಕ್ಷಿಸಿದ. ಮನೆಯ ಸೇವಕಿ ಗಿರಿಜಾಂಬೆಯನ್ನು ಕೇಳಿದಾಗ ಲಿಂಗಮ್ಮನು ಇನ್ನೂ ಉಪಾಹಾರ ಸಹ ಮಾಡದೆ ಓಂಕಾರ ಹೋದಾಗಿನಿಂದಲೂ ಹಾಗೆಯೇ ಕುಳಿತಿರುವುದಾಗಿ ನುಡಿದಳು.

ವಿಹ್ವಲನಾದ ಓಂಕಾರ ಸಮೀಪಿಸಿ ಎಚ್ಚರಿಸಿದ: 'ಲಿಂಗಾ....ಇದೇನು ನಿನ್ನಾಟ. ಹೊಟ್ಟೆಯಲ್ಲಿ ಯಾವ ಆಹಾರವನ್ನೂ ಹಾಕಿಲ್ಲನಂತೆ. ಹೀಗಾದರೆ ಮಗುವಿನ ಬೆಳವಣಿಗೆ ಹೇಗಾದೀತು? ನಿನ್ನ ಆರೋಗ್ಯ ಉಳಿಯುವುದೇ? ಶಕ್ತಿಹೀನತ್ವ ಬಂದರೆ ಗತಿ ಏನು ?....'

'ಓಹ್....ಅದಕ್ಕೇಕಿಷ್ಟು ಉದ್ವಿಗ್ನರಾಗಿದ್ದೀರಿ. ಆಹಾರ ಕಡಿಮೆಯಾದರೇನಂತೆ ಈಗೇನು ಶಕ್ತಿಹೀನಳಾಗಿರುವೆನೆ? ಶಕ್ತಿ, ಉತ್ಸಾಹಗಳು ನೂರ್ಮಡಿಯಾಗಿವೆ....' ತಾನೇ ಸಂತೈಸಿದಳು—ಇಷ್ಟಲಿಂಗವನ್ನು ಧರಿಸಿಕೊಳ್ಳುತ್ತ.

'ನೋಡು ಗರ್ಭಿಣಿಯರಿಗೆ ಏನೇನೋ ಬಯಕೆಗಳು ಉದಿಸುತ್ತವಂತೆ. ನಿನಗೇನು ಆಸೆಯಾಗುತ್ತೆ ಹೇಳು. ಪೂರೈಸೋಣ.'

'ನನಗೆ ಲೌಕಿಕ ಬಯಕೆಗಳಿಲ್ಲ. ಬರೀ ಪೂಜೆ, ಧ್ಯಾನಗಳಲ್ಲಿ ಮೈಮರೆಯಬೇಕು; ವಚನಗಳ ಆಳವಾದ ಅಧ್ಯಯನ ಮಾಡಬೇಕು. ಎನ್ನಿಸುತ್ತೆ.'

ಓಂಕಾರ ಅಚ್ಚರಿಗೊಂಡ. ನಿಜ, ಮೊದಲಿಗಿಂತ ಶಕ್ತಿ, ಕಳೆ, ಚೆಲುವು ಇಮ್ಮಡಿಸಿದ್ದರೂ ಅವನಿಗೇನೋ ಭಯ. ಗುರುಲಿಂಗದೇವರನ್ನು ಕೇಳಿದಾಗ ಅವರು ನುಡಿದರು: 'ಓಂಕಾರ....ಬೆಳೆಯುತ್ತಿರುವ ಚಿತ್ಪಿಂಡದ ಪ್ರಭಾವ ಅದು. ಕೂಸು ಮುಂದೆ ತಾನು ಹೊಂದಲಿರುವ ವ್ಯಕ್ತಿತ್ವದ ಸುಳುಹನ್ನು

ತಾಯಿಯ ಜೀವನ-ವರ್ತನೆಗಳ ಮೂಲಕ ಮುನ್ಸೂಚಿಸುವುದು. ಮತ್ತು ಜನಿಸಲಿರುವ ಮಕ್ಕಳ ಸ್ವಭಾವ ನಿರ್ಧಾರವಾಗುವುದು ತಾಯಿಯ ಗರ್ಭದಲ್ಲಿರುವಾಗಲೇ! ಗರ್ಭವತಿಯಾಗಿರುವ ತಾಯಿ ಸದಾಚಾರಸಂಪನ್ನಳಾಗಿ, ಪೂಜಾನಿಷ್ಠಳಾಗಿ, ಸದ್ಗುಣವತಿಯಾಗಿ ಇದ್ದರೆ ಜನ್ಮಿಸುವ ಶಿಶುವೂ ಅದೇ ಸ್ವಭಾವವನ್ನು ಹೊಂದುವದು. ವಿಲಾಸಿಯಾಗಿ ಸುಖಭೋಗಗಳಲ್ಲೇ ಕಾಲ ಕಳೆದರೆ ಅಂತಹುದೇ ಮಕ್ಕಳಾಗುವರು. ಕೈಗೆ ಸಿಕ್ಕಂತೆ ತಿನ್ನುವವಳಾದರೆ ಬಕಾಸುರರೇ ಹುಟ್ಟುವರು....

'ಲಿಂಗಮ್ಮನ ವರ್ತನೆಗಳು ಆಧ್ಯಾತ್ಮಿಕ ಲಕ್ಷಣಗಳಿಂದ ಕೂಡಿವೆ. ಲೌಕಿಕ ಜನರ ಮಾತುಗಳನ್ನು ತಲೆಗೆ ಹಚ್ಚಿಕೊಳ್ಳದಿರು. ಆಕೆ ಪುಣ್ಯಜೀವಿ; ಅಪರೂಪವಾದ ಮಗುವಿಗೇ ಜನ್ಮ ಕೊಡುತ್ತಾಳೆ....' ಓಂಕಾರ ಸಮಾಧಾನದ ಮುಖಮುದ್ರೆ ತಳೆದ.

'ಅಂಪಹಾಗೆ ಓಂಕಾರ, ಶರಣಧರ್ಮಕ್ಕನುಸಾರವಾಗಿ ಗರ್ಭಸ್ಥ ಶಿಶುವಿಗೆ ಎಂಟು ತಿಂಗಳಾದಾಗ ಸಂಸ್ಕಾರದ ಅವಶ್ಯಕತೆಯುಂಟು. ಇದೊಂದು ಸತ್ ಸಂಪ್ರದಾಯ. ಪಿಂಡವು ತಾಯಿಯ ಗರ್ಭದಲ್ಲಿ ಸ್ಥಾಪಿತವಾದ ಕ್ಷಣದಿಂದಲೂ ಅದು ಸುತ್ತಲಿನ ವಾತಾವರಣ, ತಾಯಿಯ ಮನಃಸ್ಥಿತಿಗಳ ಪ್ರಭಾವಕ್ಕೆ ಒಳಗಾಗುತ್ತದೆ. ಯಾವಾಗ ಅದಕ್ಕೆ ಜೀವಕಳೆಯ ಆವಿರ್ಭಾವವಾಗುವುದೋ ಆಗಿನಿಂದ ವಾತಾವರಣದ ಸ್ಪಂದನಕ್ಕೆ ಹೆಚ್ಚು ಈಡಾಗುವುದು. ಆದ್ದರಿಂದ ತಾಯಿಯ ಮೂಲಕ ಆಹಾರವನ್ನು ಅದು ಸ್ವೀಕರಿಸುವಂತೆ, ಧರ್ಮವನ್ನೂ ಸ್ವೀಕರಿಸಬೇಕು. ಲಿಂಗಮ್ಮನಿಗೆ ಎಂಟು ತಿಂಗಳು ತುಂಬಿದಾಗ ಲಿಂಗಧಾರಣೆ ಮಾಡಿಸಿಬಿಡು....'

'ಆಗಲಿ, ಗುರುದೇವಾ....'

ಲಿಂಗಮ್ಮನಿಗೆ ಎಂಟು ತಿಂಗಳು ತುಂಬಿದಾಗ ಗರ್ಭಸ್ತ ಶಿಶುವಿಗಾಗಿ ಲಿಂಗಧಾರಣೆ ಮಾಡಿ, ಮಂತ್ರೋಪದೇಶವನ್ನು ಗೈದು, ಆ ಲಿಂಗವನ್ನು ಲಿಂಗಮ್ಮನ ಕೊರಳಿನಲ್ಲಿರುವ ಶಿವದಾರಕ್ಕೆ ಧರಿಸಿದರು—ಶ್ರೀ ಗುರುಲಿಂಗ ದೇವರು.

೬. ಕಾರಣಿಕ ಕನ್ಯೆ

ಅಂದು ದವನದ ಹುಣ್ಣಿಮೆ. ಹನ್ನೆರಡು ತಿಂಗಳಲ್ಲಿ ಶುಭ್ರವಾದ ಬೆಳ್ದಿಂಗಳನ್ನು ಜಗತ್ತಿಗೆ ನೀಡುವ ಅಪರೂಪದ ಹುಣ್ಣಿಮೆ. ಚಳಿಗಾಲ ಕಳೆದು ವಸಂತಋತು ಆಗಮಿಸಿ, ಪ್ರಕೃತಿಯು ಕಳೆ ಏರುವ ಕಾಲವದು. ನಡುರಾತ್ರಿ ಸರಿದು ಕೆಲವು ಘಳಿಗೆಗಳಲ್ಲಿ ಲಿಂಗಮ್ಮನಿಗೆ ಪ್ರಸವವೇದನೆಯ ಆರಂಭ. ಓಂಕಾರನಿಗೆ ದ್ವಂದ್ವ ಭಾವನೆಗಳ ತೂಗಾಟ; ಒತ್ತಿಡೆ ಬಹುಕಾಲದಿಂದ ನಿರೀಕ್ಷಿಸುತ್ತಿದ್ದ, ಕತ್ತಲೆ ತುಂಬಿದ ಮನೆ-ಮನಗಳನ್ನು ತೇಜೋಮಯ ಮಾಡಲು ಬರುವ ಬೆಳಗನ್ನು ಸ್ವಾಗತಿಸುವ ಸಂಭ್ರಮ; ಮತ್ತೊಂದೆಡೆ ಹೆಂಡತಿಯ ಬೇನೆಯ ಬಗ್ಗೆ ಕಳವಳ. ಈ ಭಾವನೆಗಳಿಗೆ ತಾಳ ಹಾಕುತ್ತ ಒಳಹೊರಗೆ ಶತಪಥ ತಿರುಗುವಾಗಲೇ ಮಗುವಿನ ರೋದನ ಧ್ವನಿ. ಓಂಕಾರನಿಗೆ ಬಹಿರಂಗಪ್ರಜ್ಞೆ ಮೂಡಿ ನೋಡಿದಾಗ ಉಷಃಕಾಲ ಸಮೀಪಿಸುತ್ತಿತ್ತು. ಲೋಕದ ಚೇಷ್ಟೆಗಳು ಹಕ್ಕಿಗಳ ಇಂಚರದೊಡನೆ ಆರಂಭವಾಗುತ್ತಿದ್ದವು. ಸೂಲಗಿತ್ತಿ ಮಂಗಳಮ್ಮ ಹೊರಬಂದು ಓಂಕಾರನನ್ನು ಕಂಡು ನಸುನಕ್ಕಳು; 'ಹುಟ್ಟಿದ ಮನೆಯನ್ನು ತಣ್ಣಗಿಡುವ ಹೆಣ್ಣುಕೂಸಿನ ಜನ್ಮವಾಗಿದೆ....' ಓಂಕಾರ ಸಂಭ್ರಮದಿಂದ ದೂರನಿಂತು ದೃಷ್ಟಿಸಿದ. ಕೆಂಪುಮಿಶ್ರಿತ ಬಿಳಿಯ ವರ್ಣದ ಕರ್ಪೂರದ ಗೊಂಬೆಯಂತಿದ್ದ ಕಂದನು ಮೊರದ ತುಂಬ ತುಂಬಿ ಮಲಗಿತ್ತು.

'ಹತ್ತು ಹಡೆಯೋದಕ್ಕಿಂತ ಒಂದು ಮುತ್ತು ಹಡೆಯೋದು ಲೇಸು....' ಮಂಗಳಮ್ಮ ಉದ್ಗರಿಸಿದಳು. ಹಿಗ್ಗಿನಿಂದ ಓಂಕಾರ ಕಣ್ತುಂಬಿ ನೋಡಿದ.

'ನಾನು ಎಷ್ಟೋ ಹೆರಿಗೆ ಮಾಡಿಸಿದ್ದೀನಿ; ಆದರೆ ಇಂಥಾ ಚೆಲ್ವೆಯನ್ನು ಕಂಡಿರಲಿಲ್ಲ....' ದೃಷ್ಟಿಯನ್ನು ನಿವಾಳಿಸುತ್ತ ಮಂಗಳಮ್ಮ ಹೆಮ್ಮೆಯಿಂದ ನುಡಿದಳು.

ಓಂಕಾರನು ಗುರುಗಳಿಗೆ ವಿಷಯವನ್ನು ತಿಳಿಸಲು ಮಠದ ಕಡೆ ಸಂಭ್ರಮದಿಂದ ಸಾಗಿದ. ಗುರುಗಳು ಮಠದ ಮೇಲ್ಮಹಡಿಯಲ್ಲಿ ಧ್ಯಾನಾಸಕ್ತರಾಗಿದ್ದರು. ಬೆಳ್ದಿಂಗಳ ಸೊಬಗನ್ನು ಸವಿಯುತ್ತ, ನಸುಕಿನ ಪೂಜೆ ಮುಗಿಸಿ, ಧ್ಯಾನಮಾಡುತ್ತಲಿದ್ದವರು ಓಂಕಾರನ ಕಾಲಸಪ್ಪುಳಕ್ಕೆ ಬಹಿರ್ಮುಖರಾದರು. ಅವನ ಮೊಗದ ಸಂಭ್ರಮವನ್ನು ಕಂಡು ನುಡಿದರು,

'ಬಾ....ಓಂಕಾರ....ಚಿಚ್ಛಕ್ತಿಯ ಆಗಮನವಾಯಿತು. ಆಕೆಯ ಆಗಮನಕ್ಕೆ ಸ್ವಾಗತ ನೀಡಲು

'ತನುಗಾಗಲೇ ತಿಳಿದಿವೆಯಲ್ಲ ಗುರುದೇವಾ....!' ಆಶ್ಚರ್ಯದ ಸರಸಿಯಲ್ಲಿ ತೇಲಾಡುತ್ತ ನುಡಿದ ಓಂಕಾರ.

'ಧ್ಯಾನೋನ್ಮುಖನಾದಾಗ ಆ ಬೆಳಕು ಭುವಿಗೆ ಇಳಿಯುವುದನ್ನು ಕಂಡೆ....'

'ಆಕೆಗೇನೂ ಕಷ್ಟವಾಗಲಿಲ್ಲ, ಸುಲಭವಾಗಿ ಹೆರಿಗೆಯಾಯಿತು....'

'ಕಷ್ಟ ಕೊಡುತ್ತ, ಕಷ್ಟ ಕೊಡಲಿಕ್ಕೆ ಬರುವವಳಲ್ಲ ನಿನ್ನ ಮಗಳು ಓಂಕಾರ; ಸ್ತ್ರೀಕುಲದ ಕಷ್ಟವನ್ನು ಕಳೆಯಲಿಕ್ಕೆ ಬಂದವಳು.' /

'ಮುಂದಿನ ಧಾರ್ಮಿಕವಿಧಿ....'

'ಅಹುದು, ಅದಕ್ಕೇ ಹೊರಟಿದ್ದೆ. ಅಷ್ಟರಲ್ಲಿ ನೀನೇ ಬಂದೆ. ನೀನು ಮೊದಲಿಗೆ ಹೋಗು. ನೀರನ್ನು ಎರೆದಿರಲಿ. ಹಾಲೂಡಿಸುವ ಮುನ್ನ ಬಸವಣ್ಣ ನವರಿತ್ತ ವಿಭೂತಿಯನ್ನು ಧರಿಸಿ, ಮಂತ್ರೋಪದೇಶ ಮಾಡುವೆ....'

ಶಿಷ್ಯ ಶಿವಪ್ರಕಾಶನನ್ನೊಡಗೂಡಿಕೊಂಡು ಶ್ರೀ ಗುರುಲಿಂಗದೇವರು ಓಂಕಾರನ ಮನೆಗೆ ಆಗಮಿಸಿದರು. ಪೂಜೆಯ ಕೋಣೆಯೊಳಕ್ಕೆ ಶಿಶುವನ್ನು ನೀರನ್ನೆರೆದು ಕರೆತಂದಾಗ ಸಂತೃಪ್ತಿಯಿಂದ ನೋಡಿದರು. ಉದ್ದವಾದ ದೇಹ, ಕಪ್ಪು ಕೂದಲ ಸಂಚಯ, ಕಪ್ಪುದುಂಬಿಗಳಂತೆ ಸುಳಿಯುವ ಕಣ್ಣಾಲಿಗಳು ರಮ್ಯವಾದ ರೂಪದ ಸಂಕೇತವಾಗಿದ್ದವು. ಭಾವುಕತೆಯನ್ನು ಪ್ರದರ್ಶಿಸುವ ಸಾತ್ವಿಕ ಕಣ್ಣು, ಕಲಾವಂತಿಕೆಯ ದ್ಯೋತಕವಾದ ನೀಳವಾದ ಬೆರಳುಗಳು, ದಿಟ್ಟತನದ ಸೂಚಕವಾದ ವಿಶಾಲ ಹಣೆಯಿಂದ ಮಗು ಸುಂದರವಾಗಿತ್ತು. ಮಿಂದು ಮಡಿಯುಟ್ಟು ಮೆಲ್ಲನೆ ಬಂದ ಲಿಂಗಮ್ಮ ಸುಖಾಸನದಲ್ಲಿ ಕುಳಿತಳು. ನೀರನ್ನು ಎರೆದ ಮಗುವನ್ನು ಬಿಳಿಯ ಬಟ್ಟೆಯಮೇಲೆ ಮಲಗಿಸಿಕೊಂಡು ಮಂಗಳಮ್ಮ ತಂದು ತಾಯಿಯ ತೊಡೆಯಮೇಲೆ ಮಲಗಿಸಿದಳು. ಬಿಸಿ ನೀರಿನ ಸಂಪರ್ಕದಿಂದ ಮೈಬಣ್ಣ ಕೆಂಪಾಗಿ, ನವ ಉದಿತ ಸೂರ್ಯನಂತೆ ಮಗುವು ಕಾಣುತ್ತಿತ್ತು.

ಗುರುಲಿಂಗದೇವರು ಹಣೆಯಮೇಲೆ ವಿಭೂತಿಯನ್ನು ಧರಿಸಿ, ಮಗುವಿನ ಮೈಗೆಲ್ಲ ಸವರಿದರು. ತಮ್ಮ ತೊಡೆಯಮೇಲಿರಿಸಿಕೊಂಡು ಷಡಕ್ಷರಿ ಮಂತ್ರದ ಉಪದೇಶ ಮಾಡಿ, ಮಗುವಿಗೋಸುಗವಾಗಿ ಲಿಂಗಮ್ಮನಿಗೆ ಎಂಟನೆಯ ತಿಂಗಳಲ್ಲಿ ಕೊಟ್ಟಿದ್ದ ನಾಗೋಸವನ್ನು* ಕೊರಳಿಗೆ ಧರಿಸಿದರು.

'ಶಾರೀರಿಕವಾಗಿ ನೀನು ಓಂಕಾರ–ಲಿಂಗಮ್ಮರ ಮಗಳಾದರೂ, ಅಪ್ಪ ಬಸವಣ್ಣನ ಮೋಹದ ಮಗಳು ನೀನು ಕಂದಾ....' ಎಂದು ಹೃದಯ ತುಂಬಿ ನುಡಿದು ಕೆನ್ನೆಯನ್ನು ಸವರಿದರು.

---

* ಸಣ್ಣ ಮಕ್ಕಳಿಗೆ ಕಟ್ಟುವ ಇಷ್ಟಲಿಂಗ

'ಓಂಕಾರ, ಬೇಸಿಗೆಯ ಹಗಲ ದಗೆಯಲ್ಲಿ ಬೆಂದು ಬಸವಳಿದವರಿಗೆ ಇರುಳಿನಲ್ಲಿ ಹುಣ್ಣಿಮೆಯ ಚಂದ್ರ ಇನಿಕಿರಣದಿಂದ ತಂಪೆರೆಯುವಂತೆ, ನೂರಾರು ವರ್ಷಗಳಿಂದ ಪುರುಷದಾಸ್ಯ, ಕೀಳರಿಮೆಯ ಬೇಗೆಯಲ್ಲಿ ದಹಿಸಲ್ಪಟ್ಟಿರುವ ಸ್ತ್ರೀಕುಲಕ್ಕೆ ಆತ್ಮವಿಶ್ವಾಸದ ತಣ್ಪೆರೆಯಲು ಬಂದಿರುವಳಪ್ಪಾ ನಿನ್ನ ಮಗಳು....'

'ಎಲ್ಲವೂ ದೇವನ ದಯೆ ಗುರುಗಳೇ; ಅವನ ಕೈಗೊಂಬೆಗಳು ನಾವು' ಓಂಕಾರ ವಿನೀತನಾಗಿ ನುಡಿದ.

* * *

ಮಗುವಿನ ಆಗಮನದಿಂದ ಹರ್ಷದ ವಾತಾವರಣ ತುಂಬಿ ಹರಿಯುತ್ತಿತ್ತು. ಶುಭ್ರವಾದ ವಿಶಾಲ ತಿಳಿಗೊಳದಲ್ಲಿ ಒಂದೇ ಒಂದು ತಾವರೆ ಅರಳಿನಿಂತು, ಆ ಕೊಳದ ಬಂಜೆತನವನ್ನು ತೊಡೆದುಹಾಕಿದಂತೆ, ಕಪ್ಪೆಯ ಚಿಪ್ಪಿನಲ್ಲಿ ಮುತ್ತರಳಿ ಆ ಜನ್ಮಸ್ಥಾನವನ್ನು ಕೀರ್ತಿಗೊಳಿಸಿದಂತೆ—ಶಿಶುವು ಉದಿಸಿತ್ತು. ಮೋಡದ ಸಮೂಹವನ್ನು ಸರಿಸಿ ತೂರಿಬಂದ ಹುಣ್ಣಿಮೆಯ ಚಂದ್ರನಂತೆ ಸುಪ್ತ ಬಯಕೆಗಳನ್ನು ಭೇದಿಸಿಕೊಂಡು ಆಕೆ ಜನ್ಮಿಸಿದ್ದಳು. ನೀರಿಲ್ಲದ ಕೆರೆಯಂತೆ ಬಂಜರಾಗಿದ್ದ ಲಿಂಗಮ್ಮನ ಬಾಳು ಅಮೃತವರ್ಷ ಧಾರೈಸಿದಂತಾಗಿ ಕಳಾಪೂರ್ಣವಾಯಿತು. ಪ್ರಕೃತಿಸಹಜ ಬಯಕೆಗಳು ತೃಪ್ತಿಯಾಗದೆ ಬರಲಾಗುತ್ತಿದ್ದ ಬಾಳ ಗಿಡದ ಮೇಲೆ ಮಳೆಯಧಾರೆಯಂತೆ ಮಗುವಿನಾಗಮನವಾದಾಗ ಲಿಂಗಮ್ಮನ ಬದುಕಿನ ಸಸಿ ಸುಳಿದೆಗೆದು ಬೆಳೆಯತೊಡಗಿತು. ತೃಪ್ತಿಯ ಆವರಣ ಸಂಸಾರವನ್ನು ಬಳಸಿಕೊಂಡಿತು.

ಜನನವಾಗಿ ಹನ್ನೊಂದನೆಯ ದಿವಸ. ನಾಮಕರಣದ ಕ್ರಿಯೆ ನಡೆಯಬೇಕೆಂದು ಸಂಕಲ್ಪಿಸಿ ಓಂಕಾರ ಗುರುಗಳ ಕಡೆಗೆ ನಡೆದ. ಅವರ ಅಪ್ಪಣೆ, ಅನುಗ್ರಹವಿಲ್ಲದೆ ಓಂಕಾರನ ಕಾರ್ಯಗಳು ಯಾವೂ ಮುಂದೆ ಸಾಗುತ್ತಿರಲಿಲ್ಲ. ಸೂರ್ಯೋದಯವಾದ ಎರಡು ಘಳಿಗೆಗೆ ಮಠಕ್ಕೆ ನಡೆದಾಗ ಮಠದಲ್ಲಿ ಗುರುಗಳೊಡನೆ ತೇಜಸ್ವೀ ವ್ಯಕ್ತಿಯೊಬ್ಬರು ಕುಳಿತಿದ್ದುದು ಕಾಣಬಂದಿತು. ಎತ್ತರವಾದ ನಿಲುವು, ಭಸ್ಮದಿಂದ ಶೋಭಿತವಾದ ವಿಶಾಲ ಹಣೆ, ತಪೋಕಾಂತಿಯಿಂದ ಮಿರುಗುವ ಕಣ್ಣುಗಳನ್ನು ಕಂಡಾಗ ಓಂಕಾರ ಭಕ್ತಿಯಿಂದ ನಮಸ್ಕರಿಸಿದ.

'ಇವರೇ ಓಂಕಾರಶೆಟ್ಟಿ....' ಗುರುಲಿಂಗರು ಓಂಕಾರನನ್ನು ಪರಿಚಯ ಮಾಡಿದರು.

'ಓ! ಕಾರಣಿಕಕನ್ಯೆಗೆ ಜನ್ಮವಿತ್ತವನೆಂದು ಹೇಳುತ್ತಿದ್ದಿರಷ್ಟೆ! ಅವರೇ ಇವರೋ....' ಓಂಕಾರ ಆಶ್ಚರ್ಯಗೊಂಡ, ತನ್ನ ಪರಿಚಯ ಆಗಂತುಕರಿಗೆ

ಆಗಿರುವುದನ್ನು ಕಂಡು.

'ಸಮಗ್ರ ಕ್ರಾಂತಿಗೆ ಕಾಲವು ಮಾಗಿದೆ ಗುರುಲಿಂಗದೇವರೇ! ಪ್ರೊರ್ಶಾನಸತ್ತಾಯಾದ ಮಹಾಗುರು ಬಸವಣ್ಣನ ತತ್ವಗಳನ್ನು ಕ್ರಿಯಾ ರೂಪಕ್ಕೆ ತರಲು ಅಲ್ಲಲ್ಲೇ ಅಂಶಾವತಾರಗಳು ಆಗುತ್ತಲಿವೆ. ಅಂತಹ ಒಂದು ಚೇತನವಿದು ಸ್ವಾಮಿಗಳೇ....'

'ನಿಜ, ಮರುಳುಸಿದ್ಧರೇ....ಇಲ್ಲಿಯ ಸಮೀಪದ ಬಳ್ಳಿಗಾವಿಯ ಅಲ್ಲಮರೂ ರಕ್ತಸಂಬಂಧದ ಸಂಕುಚಿತ ಸಂಕೋಲೆ ಹರಿದುಕೊಂಡು, ಅನಿಮಿಷಯ್ಯ ನವರ ಹಸ್ತದಲ್ಲಿ ಅನುಗ್ರಹಿತರಾಗಿ ಸಾಧನೆ-ಸಂಚಾರಗಳಲ್ಲಿ ತೊಡಗಿದ್ದಾರೆ....' ಗುರುಲಿಂಗದೇವರು ಹೇಳಿದರು.

'ಈ ಮಲೆನಾಡು ಶಿವಾನುಭವದ ಪರಿಮಳವನ್ನು ಬೀರುವ ಶಿವನ ಮೊಗ್ಗೆ ಯಂತಿದೆ. ಅದೆಷ್ಟು ಚೇತನಗಳು ಇಲ್ಲಿಂದ ಉದಿಸುತ್ತಿರುವವು. ಅದರಲ್ಲಿಯೂ ಉಡುತಡಿಯು ಪುಣ್ಯ ಘನವಾದುದು. ಓಂಕಾರನ ಸುಪುತ್ರಿ ಉಡುತಡಿಯ ಉಷೆ ಮಾತ್ರವಲ್ಲ, ಕೇವಲ ಕನ್ನಡನಾಡಿನ ತಣ್ಣೋದರು ಅಲ್ಲ, ಜಂಬೂ ದ್ವೀಪದ ನಂದಾದೀಪವಷ್ಟೇ ಅಲ್ಲ, ವಿಶ್ವದ ವಿನೂತನ ಪರಂಜ್ಯೋತಿ.'

ಆ ಮಾತು, ಹೀಗಾಗಲೀ ಎಂದು ಹಾರೈಸುವ ಹರಕೆಯೋ; ಹೀಗಾಗು ವುದು ಎಂದು ನುಡಿಯುವ ಪ್ರವಾದಿಯ ಭವಿಷ್ಯವಾಣಿಯೋ ತಿಳಿಯದೆ ಓಂಕಾರ ಮೂಕನಾಗಿ ನಿಂತ.

'ಗುರುಗಳೇ....ಇಂದು ಮಗುವಿನ ನಾಮಕರಣ ಮಾಡಬೇಕಲ್ಲ....'

'ಆಗಲಿ ಓಂಕಾರ, ಮರುಳುಸಿದ್ಧರ ಅನುಗ್ರಹ ಹಸ್ತ ಆ ತಾಯಿಯ ಮೇಲೆ ಬೀಳಲಿ. ಇಬ್ಬರೂ ಬರುತ್ತೇವೆ.'

ತಪಸ್ವಿಗಳಿಬ್ಬರು ಓಂಕಾರನ ಮನೆಗೆ ತೆರಳಿ ಆನಂದದಿಂದ ಮಗುವನ್ನು ದೃಷ್ಟಿಸಿದರು. ರತ್ನಪಡಿ ವ್ಯಾಪಾರಿ ಬೆಲೆಯುಳ್ಳ ಮಾಣಿಕ್ಯವನ್ನು ಕಂಡು ಅಚ್ಚರಿ, ಆನಂದಪಡುವಂತೆ ಮರುಳುಸಿದ್ಧರು ಮಗುವಿನ ಯೋಗನೇತ್ರಗಳನ್ನು, ನಿಶ್ಚಲದೃಷ್ಟಿಯನ್ನು ಕಂಡು ಹರ್ಷಿಸಿ ನುಡಿದರು:

'ಗುರುಲಿಂಗರೇ, ಉತ್ತಮ ಶಿಷ್ಯರಿಂದ ಗುರುವಿಗೆ ಕೀರ್ತಿ. ಈ ಮಹಾ ಚೇತನಕ್ಕೆ ಗುರುವಾಗುವ ಭಾಗ್ಯ ನಿಮ್ಮದಾಗಿದೆ...."

'ಅದು ಬಹಳ ದೊಡ್ಡ ಮಾತು ಪೂಜ್ಯರೇ; ದಯಮಾಡಿ ನಮ್ಮ ಮಗಳನ್ನು ಹೊಗಳದಿರಿ....' ಓಂಕಾರ ಹೇಳಿದ ವಿನಯದಿಂದ ಭಾರವಾಗಿ.

'ಒಂದು ಮಾವಿನ ಫಲಕ್ಕೆ ಮಾವಿನಗಿಡ ನಿಮಿತ್ತಮಾತ್ರವಾಗಿ ತಾಯಿ ಯಾದರೂ, ಭೂಮಿಯೇ ನಿಜವಾದ ತಾಯಿಯಾಗುವಂತೆ, ನಿಮ್ಮ ಮಗಳಿಗೆ

ನೀವು ನಿಮಿತ್ತಮಾತ್ರ ಜನ್ಮದಾತರು. ಈಕೆ ಚಿಚ್ಛಕ್ತಿಯ ಪರಪ್ರಸಾದ, ಓಂಕಾರಶೆಟ್ಟಿ....' ಮರುಳುಸಿದ್ಧರು ನುಡಿದರು ಅಭಿಮಾನದಿಂದ.

'ಜಗದ ಗಂಡರನ್ನೆಲ್ಲ ಹೆಂಡಿರಾಗಿ ಆಳುವ ಮಹಾದೇವನ ಮೀಸಲ ಸತಿ ಈಕೆ. ಜಗದೊಡೆಯನ ನಿಜಸತಿಯಾಗಲಿರುವ ಈ ಜಗನ್ಮಾತೆಗೆ 'ಮಹಾದೇವಿ' ಎಂದರಾಗುವುದಷ್ಟೆ ?' ಮರುಳುಸಿದ್ಧರು ಕೇಳಿದರು.

'ತಮ್ಮ ಪ್ರಸಾದವಾಣಿಗೆ ಇದಿರಾಡುವವರುಂಟೇ ಪೂಜ್ಯರೇ ?' ಓಂಕಾರ ಮರುಪ್ರಶ್ನೆಯ ಮೂಲಕ ಒಪ್ಪಿಗೆ ಸೂಚಿಸಿದ.

ಷಡಕ್ಷರಿ ಮಂತ್ರದೊಡನೆ ಮೂರು ಬಾರಿ 'ಮಹಾದೇವಿ' ಎಂಬ ಹೆಸರನ್ನು ಬಲಗಿವಿಯಲ್ಲಿ ಮರುಳುಸಿದ್ಧರು ಉಗ್ಘಡಿಸಿದರು. ಗುರುಲಿಂಗದೇವರು ಸಹ ತಮ್ಮ ಅನುಗ್ರಹದ ಹಸ್ತವನ್ನು ಭಸ್ಮ ಸಮೇತವಾಗಿ ಮೈಯೆಲ್ಲ ಆಡಿಸಿ, 'ಮಹಾದೇವಿ' ಎಂಬ ಹೆಸರನ್ನು ಉಗ್ಘಡಿಸಿದರು. ಪ್ರಕೃತಿಜನ್ಯಸ್ವಭಾವದಂತೆ ದೃಷ್ಟಿ ನಿಂತಿರಲಿಲ್ಲವಾದರೂ ಮಂತ್ರನಾದವನ್ನು ಕೇಳಿದ ಮಹಾದೇವಿ ನೀಳ ವಾದ, ವಿಶಾಲವಾದ ಯೋಗನೇತ್ರಗಳನ್ನರಳಿಸಿದಳು.

ಓಂಕಾರನಿಗೆ ತನ್ನ ಮಗಳ ಬಗ್ಗೆ ಆಡುವ ಮಾತುಗಳನ್ನು ಕೇಳಿ ಏನೋ ಅಪೂರ್ವ ಆನಂದ. ಜೀವನದಲ್ಲಿ ಸಾಧಿಸಬೇಕೆಂದು ತಾನು ಹಂಬಲಿಸುತ್ತಿದ್ದುದನ್ನು ಆಕೆ ಸಾಧಿಸಬಲ್ಲಳೇನೋ ಎಂದು ಹೆಮ್ಮೆ ಎನಿಸುತ್ತಿತ್ತು. ಲಿಂಗಮ್ಮನಿಗೆ, ಬೆಳೆದು ನಿಂತು ಸಾಧಿಸುವ ಮಗಳ ವ್ಯಕ್ತಿತ್ವಕ್ಕಿಂತಲೂ, ಈಗ ಬಂಜೆತನದ ಕೊರತೆ ತುಂಬಲಿಕ್ಕೆ ಬಂದ ಮಗಳ ನಿಲುವೆಯೇ ಸಾಕಾಗಿತ್ತು.

ತಪೋಧನರಿಬ್ಬರೂ ಪ್ರಸಾದವನ್ನು ಸ್ವೀಕರಿಸಿದರು. ಮಹಾದೇವಿಯ ನಾಮಕರಣಕ್ಕೆ ತಾವಾಗಿಯೇ ಶಿವಪ್ರಸಾದವೆಂಬಂತೆ ಎಲ್ಲಿಂದಲೋ ಒದಗಿ ಬಂದ ಮಹಾನುಭಾವ ಮರುಳುಸಿದ್ಧರ ಅನುಗ್ರಹದಿಂದ ಓಂಕಾರನಿಗೆ ತುಂಬಾ ಸಂತಸವಾಗಿತ್ತು. ಈ ಎಲ್ಲ ಕಾರ್ಯಗಳನ್ನು ತಾನು ಉದ್ದೇಶಪೂರ್ವಕವಾಗಿ ಮಾಡುತ್ತಿರುವುದಕ್ಕಿಂತ ಯಾವುದೋ ಶಕ್ತಿ ಹೊಣೆಯನ್ನು ತಾನೇ ಹೊತ್ತು ಕಾರ್ಯದ ಬಂಡಿಯನ್ನು ಮುಂದೆ ಸಾಗಿಸುವಂತೆ ಭಾಸವಾಗುತ್ತಿತ್ತು.

ಪ್ರಸಾದವನ್ನು ಸ್ವೀಕರಿಸಿದ ಗುರುಗಳ ಪಾದಕ್ಕೆ ಫಲಪುಷ್ಪ ಕಾಣಿಕೆಗಳೊಡನೆ ನಮಸ್ಕರಿಸಿದ ಓಂಕಾರ. ಗೊಂಬೆಯಂತಿದ್ದ ಮಹಾದೇವಿಯನ್ನು ಮರುಳುಸಿದ್ಧರ ಪಾದದ ಮೇಲಿರಿಸಿ ಲಿಂಗಮ್ಮ ನುಡಿದಳು :

'ಒಮದಿನಕ್ಕೆ ಬಾಳಲತೆಯಲ್ಲಿ ಅರಳಿನಿಂತ ಈ ಕುಸುಮದ ರಕ್ಷಣೆ ತಮ್ಮದು ಪೂಜ್ಯರೆ! ತಮ್ಮ ಅನುಗ್ರಹವೇ ಈಕೆಗೆ ಮಹಾರಕ್ಷೆಯಾಗಲಿ....'

'ತಾಯಿ, ಲೌಕಿಕರ ಅನುಗ್ರಹದ ಅವಶ್ಯಕತೆ ಈಕೆಗಿಲ್ಲವಮ್ಮ. ಜಗದೊಡೆ

ಯನೆ ಈ ಕಾರಣಿಕ ಕನ್ಯೆಯ ರಕ್ಷಕ....'

'ತೊಟ್ಟಿಲಿಗೆ ಹಾಕಬಹುದಲ್ಲ ಓಂಕಾರ....' ಗುರುಲಿಂಗರು ಸೂಚಿಸಿದರು. ಅವರ ಸಾಪೋವಕನನ್ನು ಅಲಂಕರಿಸಿದ ತೊಟ್ಟಿಲಿಗೆ ಸಿಂಪಡಿಸಿದರು. ಗುರುಲಿಂಗರು ಮೂರು ಬೆರಳಿನಿಂದ ತೊಟ್ಟಿಲಿಗೆ ಅಲ್ಲಲ್ಲಿ ಭಸ್ಮವನ್ನು ಧರಿಸಿದರು. ಮಗುವನ್ನೆತ್ತಿ ಸೋಗಿಲಲ್ಲಿ ಮಲಗಿಸಿ ಹಿಂದಕ್ಕೆ ಸರಿದರು. ಪಂಚ ಮುತ್ತೈದೆಯರು ತೊಟ್ಟಿಲ ಸುತ್ತಲೂ ನಿಂತರು.

ಬಣ್ಣ ಬಣ್ಣದ ಕಟ್ಟುಗಳಿಂದ ಶೋಭಿಸುವ ತೊಟ್ಟಿಲು ಕಲಾತ್ಮಕವಾಗಿದ್ದಿತು. ಅದರ ಕಟ್ಟುಗಳಿಗೆ ಪುಟ್ಟ ಗೊಂಬೆಗಳನ್ನು ತೂಗುಬಿಟ್ಟಿದ್ದರು. ಗಿಳಿ, ಗುಬ್ಬಿ, ನವಿಲುಗಳೊಡನೆ ಮುತ್ತಿನ ಗೊಂಡೆಗಳು ನೇತಾಡುತ್ತಿದ್ದವು. ಮದುವೆಯಲ್ಲಿ ಲಿಂಗಮ್ಮನ ಗಂಡನ ಮನೆಯವರು ಧಾರೆಗೆ ತಂದಿದ್ದ ಬೆಲೆಬಾಳುವ ಕಾಶಿಯ ಪೀತಾಂಬರವು ತೊಟ್ಟಿಲನ್ನು ಸುತ್ತುವರಿದು ದೀವಿಗೆಗಳ ಬೆಳಗಿನಲ್ಲಿ ಫಳಫಳನೆ ಮಿಂಚುತ್ತಿತ್ತು. ಮಗುವು ಮಲಗುವ ಭಾಗದಲ್ಲಿ ಕಾವಿಯ ಬಟ್ಟೆಯನ್ನು ಪೀತಾಂಬರದ ಮೇಲೆ ಹಾಸಿದ್ದರು. ಮಗುವು ಯಾರದ್ದಾದರೂ ಹಳೆಯ ಬಟ್ಟೆಯ ಮೇಲೆ ಮಲಗಿದರೆ ಅವರ ಗುಣಗಳು ಬರುವವೆಂಬ ನಂಬಿಕೆ ಪ್ರಚಲಿತವಿದ್ದಂತೆ, ಓಂಕಾರ ಬಿನ್ನವಿಸಿಕೊಂಡು ಗುರುಗಳ ಹಳೆಯ ವಸ್ತ್ರವನ್ನು ತಂದಿದ್ದನು. ಅವನ ಬೇಡಿಕೆಯನ್ನು ಕೇಳಿದಾಗ ಗುರುಗಳು ಮನವಾರೆ ನಗದೆ ಇರಲಿಲ್ಲ.

'ಹಳೆಯ ಬಟ್ಟೆಗೂ, ವ್ಯಕ್ತಿಗಳ ಗುಣಕ್ಕೂ ಏನು ಸಂಬಂಧ ಓಂಕಾರ?'

'ಅದೇನೇ ಇರಲಿ ಗುರುಗಳೇ, ನನ್ನ ಮಗಳು ತಮ್ಮಂತೆ ಜ್ಞಾನನಿಧಿಯಾಗಬೇಕೆಂದು ನನ್ನಾಸೆ; ಅದಕ್ಕೆ ಅನುಗ್ರಹಿಸಿ ಕೊಡಿರಿ....'

'ಸನ್ಯಾಸಿಗಳ ಬಟ್ಟೆಯ ಮೇಲೆ ಮಲಗಿ ತಾನೂ ಸನ್ಯಾಸಿಯಾಗುವೆನೆಂದು ಹಠ ಹಿಡಿದರೆ....' ಮತ್ತೆ ನಕ್ಕರು.

'ನನ್ನ ಪುಣ್ಯ! ನನ್ನ ಬಾಳಿನ ಹಂಬಲವನ್ನು ಆಕೆ ತನ್ನ ಬಾಳಿನಲ್ಲಿ ಪೂರೈಸಿಕೊಂಡಳೆಂದು ಆನಂದಪಡುವೆ....' ಹಿಂದುಮುಂದು ನೋಡದೆ ಓಂಕಾರ ಹೇಳಿದ.

'ಓಂಕಾರ, ನೀನು ನಿಜವಾಗಿ ಪರಿಪಕ್ವವಾಗಿರುವೆ....' ಗುರುಲಿಂಗರು ಹಳೆಯ ವಸ್ತ್ರ ನೀಡಿದ್ದರು....

'ಆರತಿ ಬೆಳಗಿ, ಜೋಗುಳ ಹಾಡಿರವ್ವಾ....' ಗುರುಗಳು ಹೇಳಿದರು.

ಮಂಗಳಮ್ಮನ ಧ್ವನಿ ಇಂಪಾಗಿತ್ತು. ಆಕೆ ಹಾಡಿದ ಬಳಿಕ ಲಿಂಗಮ್ಮನಿಗೆ ಉಡಿ ತುಂಬಿ, ಮುಯ್ಯನು ಅರ್ಪಿಸಿದರು—ನೆರೆದಿದ್ದ ಹೆಂಗಳೆಯರು. ಆಕೆಯ

ಮುಖದಮೇಲೆ ತುಂಬಿದ್ದ ಸಂತೃಪ್ತಿಯನ್ನು ಕಂಡು ಓಂಕಾರನಿಗೆ ಅತುಳ ಆನಂದವೆನಿಸಿತು. ಇಂತಹ ಒಂದು ಘಳಿಗೆಗಾಗಿ ಎಷ್ಟು ಹಂಬಲಿಸಿದ್ದನಲ್ಲ ಎಂದುಕೊಂಡ. ಲಿಂಗಮ್ಮನ ಮೊಗದ ಕಳೆ, ಸಂತೃಪ್ತಿಯನ್ನು ಕಂಡು ಆಗಾಗ ಆಣಿಕೊಂಡಿದ್ದ ಕೆಲವರಿಗೆ ಮುಖ ಕಪ್ಪಿಟ್ಟಿದ್ದು ಮಾತ್ರವಲ್ಲ, ಓರಗಿತ್ತಿ ಗೌರಾಂಬೆ ಅಸೂಯೆಯಿಂದ ಅಂತರಂಗವಲ್ಲೇ ಕುದಿಯುತ್ತಿದ್ದಳು.

‘ಎಂಥೋವಸ್ನಾರ ಹತ್ತು ಹಡೆಯೋದಕ್ಕಿಂತ ಇಂಥ ಒಂದು ಮುತ್ತು ಹಡೆಯೋದು ಲೇಸು. ಮಹಾದೇವಿ ಚೆನ್ನಾರ ಚೆಲ್ವೆ! ಮಹಾರಾಣಿಯಾಗುವಷ್ಟು ಅಂದಗಾತಿ....’ ನಟಿಕೆ ಮುರಿಯುತ್ತ ಮಂಗಳಮ್ಮ ದೃಷ್ಟಿ ತೆಗೆದು, ಎಣ್ಣೆ ಸವರಿದ ಎಲೆ ಸುಟ್ಟು, ಅದರ ಕಪ್ಪನ್ನು ಮಗುವಿನ ತುಂಬುಕೆನ್ನೆಯ ಮೇಲಿರಿಸಿದಳು. ಬಹುದಿನಗಳಿಂದ ಅನ್ನಕಾಣದ ನಿರ್ಗತಿಕನಿಗೆ ಇದ್ದಕ್ಕಿದ್ದಂತೆಯೇ ಅಮೃತಾನ್ನ, ಶ್ರೀಮಂತಭೋಜನ ಮುಂದೆ ಬಂದಾಗ ಅದನ್ನೇ ಸಂಭ್ರಮದಿಂದ ನೋಡುತ್ತ ಮೈಮರೆಯುವಂತೆ, ಲಿಂಗಮ್ಮ ತೃಪ್ತಿಯಿಂದ ತನ್ನ ಬಾಳಿನಾಗಸವನ್ನು ಶಶಿಯಂತೆ ಬೆಳಗಬಂದ, ತೊಟ್ಟಿಲು ತುಂಬಿ ಮಲಗಿದ್ದ ಮಗಳನ್ನು ನಿಟ್ಟಿಸಿ ನೋಡಿದಳು.

ಭಾಗ ೨

ಪ್ರಗತಿ

೭. ಬಿದಿಗೆಯ ಚಂದ್ರ

'ಲಿಂಗಾ, ಇವಳು ನನ್ನ ಮಗಳೋ, ನಿನ್ನ ಮಗಳೊ....'' ಹೆಂಡತಿಯ ತೊಡೆಯಮೇಲಿದ್ದ ಮಹಾದೇವಿಯನ್ನು ಎತ್ತಿಕೊಂಡು ಮುದ್ದಿಸಿದ ಓಂಕಾರ. ಈಗಾಗಲೇ ತಾಯ್ತಂದೆಯರ ಗುರುತನ್ನು ಹಿಡಿಯಬಲ್ಲವಳಾಗಿದ್ದ ಮಹಾದೇವಿ ಕೆನ್ನೆಗಳನ್ನರಳಿಸಿ ಬೊಚ್ಚುಬಾಯಿ ತೆರೆದು ನಕ್ಕಳು. ಲಿಂಗಮ್ಮ ಮಗಳ ಎರಡೂ ಕೆನ್ನೆಗಳನ್ನು ಚಪ್ಪರಿಸಿದಳು.

'ನಿನ್ನ ರೂಪ, ನನ್ನ ಬುದ್ಧಿ ಇವಳಲ್ಲಿ ಬರ್‍ತಾವೆ ನೋಡೆ. ನಿನ್ನ ಅಂದವೆಲ್ಲ ಇನ್ನಷ್ಟು ಗುಡಿಗಟ್ಟಿ ಇವಳಲ್ಲಿ ಅರಳುತ್ತೆ ನೋಡು....'

'ಹೆತ್ತವರಿಗೆ ಹೆಗ್ಗಣವೂ ಮುದ್ದಂತೆ, ಕೂಡಿದವರಿಗೆ ಕೋಡಗ ಮುದ್ದಂತೆ....'

'ಹಾಗಾದರೆ ನೀನು ಕೋಡಗ ಅಂದಂತಾಯಿತು....ಆದರೆ ನನ್ನ ಮಗಳಂತೂ ಹೆಗ್ಗಣವಲ್ಲ, ತ್ರಿಪುರಸುಂದರಿ....'

'ಭಾರೀ ಸುಂದರಿ, ಯಾರಾದರೂ ಮಹಾರಾಜರೇ ಬರ್‍ತಾರೇನೊ ಕೈ ಹಿಡಿಯಲಿಕ್ಕೆ, ನಿಮ್ಮ ಸುಂದರೀನ....' ಕೊಂಕಿಸಿ ಮಾತನಾಡಿದಳು ಲಿಂಗಮ್ಮ.

ಮನೆಯೊಳಕ್ಕೆ ಪ್ರವೇಶಿಸಿದ ಶಿವಮೂರ್ತೆಪ್ಪ ನುಡಿದ :

'ದೊಡ್ಡವಳಾಗಲಿ ನಿಲ್ರಿ....ಮಹಾರಾಜರುಗಳೇ ಅಳಿಯರಾಗಲು ನಿಮ್ಮ ಬಾಗಿಲಿನಲ್ಲಿ ಸಾಲುಕಟ್ಟಿ ನಿಲ್ತಾರೆ.'

'ಸಾಕು ನಿಮ್ಮ ಹುಚ್ಚು ಹಾರೈಕೆ; ನನ್ನ ಮಗಳು ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿದ್ದರೆ ಲೇಸು' ಮಹಾದೇವಿಯನ್ನು ಮೇಲಕ್ಕೆತ್ತಿ ಆಡಿಸುತ್ತಿದ್ದ ಓಂಕಾರ ಹೇಳಿದ.

'ಅಂಗಡಿ ಮೇಲೆ ಯಾರಿದ್ದಾರೆ? ಮಗಳೊಡನೆ ಸಲ್ಲಾಪದಲ್ಲಿ ನೀವು ವ್ಯವಹಾರ ಮರೆತಿರುವಂತೆ ಕಾಣುತ್ತೆ!' ಲಿಂಗಮ್ಮ ನೆನಪಿಸಿದಳು.

'ದೇವರಿದ್ದಾನೆ ಬಿಡೆ, ಅವನನ್ನೇ ಕಾಯಲಿಕ್ಕೆ ಇರಿಸಿ ಬಂದಿದ್ದೇನೆ....'

'ಅವನನ್ನೇ ಅಳಿಯನನ್ನಾಗಿಮಾಡಿಕೊಂಡುಬಿಡಿ, ವ್ಯವಹಾರ ನೋಡ್ತಾನೆ ....' ಲಿಂಗಮ್ಮ ಹಾಸ್ಯಮಾಡಿ ನಕ್ಕಳು.

'ದೇವರನ್ನೇ ಮನೆಅಳಿಯನ್ನ ಮಾಡಿಕೊಂಡಿದೀನಿ. ಅವನೇ ಈಗ ಕಾಯ್ತಾನೆ....' ಏನು ಅರ್ಥವಾಯಿತೋ ಏನೋ ಮಹಾದೇವಿ ಕಿಲಕಿಲನೆ

ದಂಪತಿಗಳಿಬ್ಬರಿಗೆ ವೇಳೆ ಹೋದುದೇ ತಿಳಿಯುತ್ತಿರಲಿಲ್ಲ. ಸದಾಕಾಲ ಮಗಳ ಆಟದಲ್ಲಿ ಮೈಮರೆಯುತ್ತಿದ್ದರು. ಮಹಾದೇವಿ ತೊಟ್ಟಿಲ ಹೊಸದು ಮೆಲ್ಲನೆ ಅತ್ತಿತ್ತ ಸರಿದಾಡುವಳು. ಬಿದಿಗೆಯ ಚಂದ್ರನಂತೆ ದಿನದಿನಕ್ಕೂ ಬೆಳೆಯು ವಂತೆ ಕಾಣುತ್ತಿದ್ದಳು. ಅಂಬೆಗಾಲನ್ನಿಕ್ಕುತ್ತ ಮನೆ ತುಂಬ ಓಡಾಡುವಳು. ತಾಯಿತಂದೆಯರೊಡನೆ ಕಣ್ಣುಮುಚ್ಚಾಲೆಯಾಡುವಂತೆ ಕೈಗೆ ಸಿಗದಂತೆ ಸರ ಸರನೆ ಅಂಬೆಗಾಲಿಕ್ಕುವಳು. ಬೇಕಂತಲೇ ಮುಟ್ಟಲಾರೆವೆಂದು ಸೋತುನಿಂತಾಗ ಕೈ ಚಪ್ಪಾಳೆ ತಟ್ಟಿ ಕಿಲಕಿಲನೆ ನಗುವಳು. ಆಗಾಗ ಅಪ್ಪನ ಬೆನ್ನಿನ ಮೇಲೆ ಕುದುರೆ ಸವಾರಿ ಮಾಡುವಳು. ಶತಪದಿ ಜರಿಯಂತೆ ಮನೆ ತುಂಬ ಓಡಾಡುತ್ತ ನಲಿಯುವಳು. ಆಕೆಯ ಕಾಲಿನ ಗೆಜ್ಜೆ ಮನೋಹರವಾಗಿ ಝುಣಝುಣಿಸಿ ಮನೆಯನ್ನು ನಾದದಿಂದ ತುಂಬುತ್ತಿತ್ತು.

ಬಾಯಿಂದ ಹೊಮ್ಮುವ ಅಸ್ಪಷ್ಟ ಧ್ವನಿ, ತೊಟ್ಟಿಲಲ್ಲಿ ಮಲಗಿದಾಗ ಮಾಡುವ ಗುಂಗಾನ ಹೆಣ್ದುಂಬಿಯ ಗಾನದಂತೆ ತಾಯಿತಂದೆಯರಿಗೆ ಅನ್ನಿಸು ತ್ತಿತ್ತು. ಕ್ಷಣಕಾಲ ತೊಟ್ಟಿಲಿನ ಕಳೆಯಾಗಿ, ಮತ್ತೆ ಕೆಲಕಾಲ ತೋಳುಗಳ ತರಳೆಯಾಗಿ, ಎಲ್ಲರ ಮಧ್ಯೆ ಓಡಿಯಾಡುವ ಕೂಸನ್ನು ಕಂಡಾಗ ಆನಂದವೋ ಆನಂದ. ಯಾರು ಕರೆದರೂ ನಿರ್ಭಯವಾಗಿ ಹೋಗಿ ಅವರ ತೊಡೆಯಮೇಲೆ ಆಸೀನಳಾಗಿಬಿಡುತ್ತಿದ್ದಳು. ಆಟವಾಡುತ್ತ ನಕ್ಕರೆ ಜೆಲುವು ಅರಳಿದಂತೆನಿಸು ತ್ತಿತ್ತು. ಮಲಗಿ ಕಣ್ತೆರೆದರೆ ತಾವರೆಯ ಪಕಳೆ ಬಿಚ್ಚಿದಂತೆ ಭಾಸವಾಗು ತ್ತಿತ್ತು. ಒಂದು ವೈಶಿಷ್ಟ್ಯವೆಂದರೆ ಹಠವಾಗಲಿ, ತುಂಟತನವಾಗಲಿ ಅವಳ ಸಮೀಪ ಹಾಯುತ್ತಿರಲಿಲ್ಲ. ಹಾಲನ್ನೂಡಿಸಲು ವೇಳೆ ಬಹಳವಾದರೂ ಗಾಯನದಲ್ಲಿ ಮೈಮರೆವ ಗಾಯಕನಂತೆ ತನ್ನಾಟದಲ್ಲೇ ಮಗ್ನಳಾಗಿರು ತ್ತಿದ್ದಳು. ಲಿಂಗಮ್ಮ ತಾನೇ ಅರಿತು ಹಾಲೂಡಿಸಬೇಕೇ ಹೊರತು, ಅದಕ್ಕಾಗಿ ಮಹಾದೇವಿ ಎಂದೂ ಚಂಡಿ ಹಿಡಿದಿರಲಿಲ್ಲ.

ಒಮ್ಮೊಮ್ಮೆ ಲಿಂಗಮ್ಮನಿಗೆ ಸೋಜಿಗವೆನಿಸುತ್ತಿತ್ತು. ತನ್ನೊಡನೆ ಮಗಳಿಗೂ ಸ್ನಾನ ಮಾಡಿಸಿ ತೊಡೆಯಮೇಲೆ ಹಾಕಿಕೊಂಡು ತಾನು ಪೂಜೆಮಾಡತೊಡಗಿ ದರೆ ಕಣ್ಣನ್ನು ಬಟ್ಟಲುಗಳಂತೆ ಅರಳಿಸಿಕೊಂಡು ತಾಯಿಯ ಮುಖವನ್ನೊಮ್ಮೆ ತಾಯಿ ಎಡಗೈಯಲ್ಲಿ ಹಿಡಿದ ದೇವರನ್ನೊಮ್ಮೆ ದಿಟ್ಟಿಸುವಳು. ತನ್ನ ಪೂಜೆ ಯನ್ನು ತಾನು ಮಾಡಿಕೊಳ್ಳಲಸಮರ್ಥವಾದ ಮಗುವಿನ ದೇವರನ್ನು ಲಿಂಗಮ್ಮನು ತಾನೇ ಪೂಜಿಸಿ ಆದರ ತೀರ್ಥ-ಪ್ರಸಾದವನ್ನು ಬಾಯಿಯಲ್ಲಿ ಹಾಕುತ್ತಿದ್ದಳು. ಭೂಮಿಗೆ ಬಂದಾಗಿನಿಂದ ಇಲ್ಲಿಯವರೆಗೆ ಒಂದು ದಿನವೂ ಮೀರಿಯಿಸದೆ, ತೀರ್ಥ-ಪ್ರಸಾದವೆರೆಯದೆ ಹಾಲನ್ನು ಸಹ ಕೊಡದಷ್ಟು ನಿಷ್ಠೆ

ತಾಯಿಯನು. ಕುಳಿತುಕೊಳ್ಳುವ ಶಕ್ತಿ ಬಂದಮೇಲೆ ಮಗ್ಗುಲಲ್ಲಿ ಕೂಡಿಸಿ ಕೊಂಡು ಪೂಜೆಗೆ ಕುಳಿತರೆ ಎಷ್ಟು ದೀರ್ಘ ಕಾಲದವರೆಗೆ ತಾಯಿ ಕುಳಿತರೂ ಬೇಸರವಿಲ್ಲದೆ ಮಗಳೂ ಕುಳಿತುಕೊಳ್ಳುತ್ತಿದ್ದಳು. ತನ್ನ ಕೊರಳಿನಲ್ಲಿನ ದೇವರನ್ನು ತಾನೂ ಎಡಗೈಲಿ ಹಿಡಿದು ತೊದಲು ಭಾಷೆಯಲ್ಲಿ ಏನನ್ನೋ ಗುಣುಗುಣಿಸುತ್ತ ಪೂಜಿಸುತ್ತಿದ್ದವನ್ನು ಕಂಡು ಲಿಂಗಮ್ಮ ತನ್ನ ಪೂಜೆಯನ್ನು ಮರೆತು ಮಗಳನ್ನು ನೋಡತೊಡಗುತ್ತಿದ್ದಳು. ಮಹಾದೇವಿಯ ಮುಗ್ಧತೆ, ಏಕಾಗ್ರತೆಗೆ ದಂಪತಿ ಗಳು ಬೆರಗಾಗುತ್ತಿದ್ದರು. ಉಳಿದೆಲ್ಲರದು ಬೆಳಿಗ್ಗೆ ಒಮ್ಮೆ, ಸಂಜೆಗೊಮ್ಮೆ ಪೂಜೆ ಯಾದರೆ ಮಹಾದೇವಿಯದು ಎರಡೆರಡು ಬಾರಿ—ತಾಯಿ ತಂದೆ ಇಬ್ಬರ ಜೊತೆಗೂ ಒಮ್ಮೊಮ್ಮೆ. ಓಂಕಾರ ಹಾಸ್ಯ ಮಾಡುತ್ತ,

'ಕಲ್ಲುಸಕ್ಕರೆ, ದ್ರಾಕ್ಷಿಗಾಗಿ ಏನಮ್ಮ ಪೂಜೆ....' ಎನ್ನುತ್ತಿದ್ದ. ಲಿಂಗ ತೀರ್ಥದೊಡನೆ ಲಿಂಗಪ್ರಸಾದವನ್ನು ತೆಗೆದುಕೊಳ್ಳುವ ಪರಿಪಾಠವಷ್ಟೆ.

'ಇಲ್ಲಪ್ಪ, ಪೂಜೆ ಮಾಡಿದರೆ ಹಾಲು ಕುಡಿದಷ್ಟು ಸಂತೋಷವಾಗುತ್ತೆ' ಎಂದು ತೊದಲು ನುಡಿಯಲ್ಲಿ ಹೇಳುತ್ತಿದ್ದಳು ಮಗಳು. ಓಂಕಾರ ಪೂಜೆ ಯಾದ ಬಳಿಕ ವಚನಗಳನ್ನು ಮಗಳಿಗೆ ಕಲಿಸುತ್ತಿದ್ದ. ನಾಲಿಗೆ ಇನ್ನೂ ಕೂತಿರದ ಮಹಾದೇವಿ ತನ್ನದೇ ಭಾಷೆಯಲ್ಲಿ ಉಚ್ಚರಿಸುತ್ತಿದ್ದಳು.

'ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯ; ಕೂಡಲ ಸಂಗಮದೇವಾ, ಹಾಲಲ್ಲದ್ದು ನೀರ ಲ್ಲದ್ದು....'

'ಚಂಜೆ ನೀನು ಚಾಯಿ ನೀನು ಬಂಜು ನೀನು ಬಲಗ ನೀನು. ನೀನಲದೆ ಪತ್ತಾಲೂ ಇಲವಯಾ ಕೂದಲ ಚಂಗಮದೇವಾ ಹಾಲಲದ್ದು, ನೀಲಲದ್ದು, ಚಕ್ಕೆಯಲದ್ದು, ತುಪ್ಪದಲ್ಲದ್ದು, ಪಾಯಸದಲ್ಲದ್ದು....'

ಓಂಕಾರ ಬೆರಗಾಗಿ, 'ಇದೇನಮ್ಮಾ....ಹೊಸಾದು' ಎಂದ.

'ಅಪ್ಪಾ; ಹಾಲು ನೀಲು ಅಚ್ಚೇ ಕುದಿತೀವಾ; ಚಕ್ಕೆ, ತುಪ್ಪ, ಪಾಯ್ಸ ಎಲ್ಲ ತಿಂಬಲ್ಲವಾ....'

ಮಗಳ ಮಾತಿಗೆ ನಕ್ಕ ಓಂಕಾರ.

ಒಮ್ಮೊಮ್ಮೆಯಂತೂ ಆಕೆಯ ಲೀಲೆಗಳು ಬಾಲಲೀಲೆಯಂತೆ ತೋರದೆ, ಶಿವಲೀಲೆ ಎನಿಸುತ್ತಿತ್ತು. ಓಂಕಾರನ ಆಪ್ತಗೆಳೆಯನೊಬ್ಬ ಹೊರನಾಡಿಗೆ ಹೋಗಿ ಬರುವಾಗ ಸ್ನೇಹಿತನ ಅಗರೂಪದ ಮಗಳಿಗೆಂದು ಒಂದು ಜೊತೆ ಮುತ್ತು ಸೇರಿಸಿದ ಹೊನ್ನಿನ ತೂಗೋಲೆಗಳನ್ನು ತಂದಿದ್ದ. 'ಎಷ್ಟು ಚೆಂದ ವಾಗಿದ್ದಾಳೆ ನಿನ್ನ ಮಗಳು. ಈ ಓಲೆಗಳನ್ನು ಹಾಕು' ಎಂದು ಕೊಟ್ಟಾಗ

ಓಂಕಾರ ತೊಡಿಸಹೋದರೆ ರಂಪಾಟ ಮಾಡಿ, ರೊಚ್ಚಿಗೆದ್ದು ಅತ್ತಳು. 'ಬೇಡ, ಬೇಡಾ' ಎಂದು ಕೈಕಾಲು ಬಡಿದು ಅತ್ತಾಗ ಮುಖವೆಲ್ಲ ಕೆಂಪಾಗಿ, ಉಸಿರು ಕಟ್ಟಿತು. ಅವಳು ಸಮಾಧಾನದಲ್ಲಿದ್ದಾಗ ತೊಡಿಸಿದರಾಯಿತೆಂದು ಓಂಕಾರ ಸುಮ್ಮನಾದ. ಆದರೆ ಒಮ್ಮೆ ಗುರುಗಳ ದರ್ಶನಕ್ಕೆ ಹೋದಾಗ ಒಂದು ವಿಶೇಷ ಪ್ರಸಂಗ ನಡೆಯಿತು.

ಪ್ರೇಮದಿಂದ ಗುರುಗಳು ಕರೆದಾಗ ಪುಟ್ಟಪುಟ್ಟ ಹೆಜ್ಜೆ ಇರಿಸುತ್ತ ಮಹಾದೇವಿ ಅವರ ಬಳಿಗೆ ಹೋದಳು. ಅವರು ಮೈದಡವಿ, ಮುತ್ತಿಟ್ಟು ತೊಡೆಯ ಮೇಲೆ ಕುಳ್ಳಿರಿಸಿಕೊಂಡರು. ಅವರ ಕಿವಿಯಲ್ಲಿ ತೂಗುತ್ತಿದ್ದ ರುದ್ರಾಕ್ಷಿಗಳ ಮೇಲೆ ಅವಳ ಕಣ್ಣು ಬಿದ್ದಿತು. ಅವರ ತೊಡೆಮೇಲೆ ಎದ್ದು ನಿಂತು ಕಿವಿಗೆ ಕೈಹಾಕಿದಳು.

'ಲೇ....ಮಾದೇವಿ, ಏನಿದು ನಿನ್ನ ಅವಾಂತರ, ಗುರುಗಳಮೇಲೆ ಕಾಲಿರಿಸುವೆಯಾ ? ಇಳಿ ಕೆಳಗೆ....' ಗದರಿಸಿ ಎತ್ತಿಕೊಳ್ಳಹೋದ ಓಂಕಾರ.

'ಇರಲಿ ಬಿಡಪ್ಪಾ, ಜಗದೀಶ್ವರಿಯ ಪಾದ ನಮ್ಮನ್ನೂ ಉದ್ಧರಿಸುವುದು....' ಎಂದರು ಗುರುಗಳು. ಮಹಾದೇವಿಯ ಚಿತ್ತವೆಲ್ಲ ರುದ್ರಾಕ್ಷಿಯ ಮೇಲೆ. ಅವುಗಳನ್ನು ಬಿಗಿಯಾಗಿ ಹಿಡಿದು ತನಗೂ ಬೇಕೆನ್ನತೊಡಗಿದಳು.

'ನಮ್ಮಮ್ಮಾ....ಬಲು ಜಾಣೆ, ಕೈಬಿಡಮ್ಮಾ....ಸಿಹಿ ಕಜ್ಜಾಯ ಕೊಡು ಸ್ತ್ರೀನಿ....' ಗುರುಗಳು ಹೇಳಿದರು.

'ಹೊಂ....ಇವು ನಂಗೆ....' ತಂದೆಗೆ ಕೈಮಾಡಿ ತೋರಿಸಿದಳು.

'ಮನೆಯಲ್ಲಿ ಹೊನ್ನೋಲೆಗಳಿವೆ, ಕೊಡುವೆ' ಎಂದು ತಂದೆ ಹೇಳಿದರೆ ಕೇಳಲಿಲ್ಲ. ಅವಳ ಹಟ ನೋಡಿದಾಗ ಗುರುಗಳಿಗೆ ಅಚ್ಚರಿಯಾಯಿತು. ಶಿಷ್ಯ ಶಿವಪ್ರಕಾಶನನ್ನು ಕರೆದು ಬೆತ್ತದ ಕರಂಡದಲ್ಲಿರುವ ಎರಡು ಸಣ್ಣ ರುದ್ರಾಕ್ಷಿಗಳನ್ನು ತರಹೇಳಿದರು.

'ಅವುಗಳನ್ನು ಗೃಹಸ್ಥರು ಧರಿಸಬಹುದೇ ?....' ಲಿಂಗಮ್ಮ ಕೇಳಿದಳು.

'ತಪ್ಪೇನು ತಾಯಿ ; ಅಷ್ಟಾವರಣ ಧರಿಸುವುದರಲ್ಲಿ ಗೃಹಸ್ಥರು, ವಿರಕ್ತರು ಎಂಬ ಭೇದವಿಲ್ಲ. ಪ್ರತಿಯೋರ್ವ ಲಿಂಗಾಯತನೂ ಅಷ್ಟಾವರಣಧಾರಿಯಾಗಬೇಕು. ಕೇವಲ ಕಾಷಾಯ ವಸ್ತ್ರವಷ್ಟೆ ವಿರಕ್ತನ ವೈಶಿಷ್ಟ್ಯ. ರುದ್ರಾಕ್ಷಿಯನ್ನು ಕಿವಿಗೆ, ಕೊರಳಿಗೆ ಯಾರು ಬೇಕಾದರೂ ಹಾಕಿಕೊಳ್ಳಬಹುದು....'

ದಾರವನ್ನು ಪೋಣಿಸಿ ಕಿವಿಗೆ ಹಾಕಿದರು ಗುರುಲಿಂಗರು. ಮಹಾದೇವಿಗೆ ಆನಂದವೋ ಆನಂದ.

'ಮೊನ್ನೆ ಹೊನ್ನಿನ ತೂಗೋಲೆ ಹಾಕಲು ಹೋದರೆ ಅದೆಷ್ಟು ರಂಪಾಟ

ಮಾಡಿವಳು. ಇಂದು ರುದ್ರಾಕ್ಷಿಗಳನ್ನು ಹಟಮಾಡಿ ಹಾಕಿಸಿಕೊಂಡಳು. ವಿಚಿತ್ರ ಹುಡುಗಿ!' ಓಂಕಾರ ಉದ್ಗರಿಸಿದ.

'ರುದ್ರಾಕ್ಷಿಯು ರುದ್ರಕನ್ಯೆಗೆ ಹೊನ್ನೋಲೆ ಸೇರಿಕೆಯಾದಾವೇ? ಶಿವಕನ್ಯೆ ಈಕೆಗೆ ಇವೇ ಪ್ರೈವೊಡಿಗೆ....' ಎಂದು ಗುರುಗಳು ಮುದ್ದಿಸಿದರು. ತನ್ನ ಕಿವಿಯಮೇಲೆ ಕೈಯಾಡಿಸಿ ಆನಂದಿಸಿದಳು ಮಹಾದೇವಿ. ಆ ರುದ್ರಾಕ್ಷಿಗಳನ್ನು ಚಿನ್ನದ ತಂತಿಗೆ ಪೋಣಿಸಿ ಕಿವಿಗೆ ಹಾಕಿಸಿದ ಓಂಕಾರ.

ಕಾಂತಿಯುಕ್ತ ಮುಖದ ಮೇಲೆ ಮೂರೆಳೆ ಭಸ್ಮವಿಟ್ಟಾಗ ಮಗು ಮಹಾದೇವಿಯ ಸಾತ್ವಿಕ ತೇಜ ಹೆಚ್ಚುತ್ತಿತ್ತು. ಒಮ್ಮೆ ತಾಯಿ ಮಗಳಿಗೆ ಎಣ್ಣೆ ನೀರನ್ನೆರೆದು ಬಚ್ಚಲಿನಿಂದ ಹೊರಗೆ ಕಳಿಸಿದಳು. ಗಿರಿಜಾಂಬೆ ಮೈಯೊರೆಸಿ ತಲೆಕೂದಲನ್ನು ಹಿಂಡಿ, ಬಟ್ಟೆ ತೊಡಿಸಿದಾಗ ಪೂಜೆಯ ಕೋಣೆಯೊಳಕ್ಕೆ ಹೋಗಿ ತನ್ನ ಪುಟ್ಟ ಬೆರಳಿನಿಂದ ವಿಭೂತಿ ಧರಿಸಿಕೊಂಡು, ಚದುರಿಬಿದ್ದ ನೀಳ ಕೂದಲನ್ನು ಬೆನ್ನಿನ ಮೇಲೆ ಹರಡಿಕೊಂಡು, ತಾವರೆಯ ದಳದಂತಹ ಕಣ್ಣು ಮುಚ್ಚಿಕೊಂಡು ದೀಪದ ಬೆಳಗಿನಲ್ಲಿ ಸಿದ್ಧಾಸನದಲ್ಲಿ ಕುಳಿತಿದ್ದಳು ಮಹಾದೇವಿ. ಓಂಕಾರ ಕಾರಣಾಂತರದಿಂದ ಪೂಜೆಯ ಕೋಣೆಯೊಳಗೆ ಕಾಲಿರಿಸಿ ಸ್ತಬ್ಧನಾಗಿ ನಿಂತ. ತನ್ಮಯತೆ, ಏಕಾಗ್ರತೆ ಪುಟ್ಟ ಹುಡುಗಿಯನ್ನು ಆಲಿಂಗಿಸಿಕೊಂಡಿದ್ದವು. ಅವನ ಕಣ್ಣುಗಳು ಮುಚ್ಚಿದವು. ಮನಃಪಟಲದ ಮೇಲೆ ವಿಶೇಷ ದೃಶ್ಯ ಮೂಡಿತು. ಶಿವನನ್ನು ವರಿಸಬೇಕೆಂದು ಯೋಗಾಸನದಲ್ಲಿ, ತಲೆಗೂದಲನ್ನು ಬಿಚ್ಚಿಕೊಂಡು ಧ್ಯಾನಕ್ಕೆ ಕುಳಿತ ಪರ್ವತರಾಜಕುವರಿಯ ನೆನಪಾಯಿತು. ಅಂದವಾದ ಮೈಬಣ್ಣ, ಮಾಟವಾದ ಹಣೆಯ ಮೇಲಿನ ಬೆಳ್ಳಿಯ ಗೆರೆಗಳಂತಹ ತ್ರಿಪುಂಡ್ರ, ಕಿವಿಯೊಳಗಣ ರುದ್ರಾಕ್ಷಿ, ಮಹಾದೇವಿಯನ್ನು ಅನುರ್ಘ್ಯಳ ಮಟ್ಟಕ್ಕೆ ಏರಿಸುತ್ತಿದ್ದವು. ಭಾವುಕ ಭಕ್ತಿವಂತನಾದ ಓಂಕಾರ ಕಾಲದ ಪರಿವೆ ಇಲ್ಲದೆ ನಿಂತಿದ್ದ. ಮಹಾದೇವಿ ಎದ್ದು ಬಂದು ತನ್ನ ಪುಟ್ಟ ಕೈಗಳಿಂದ ತಂದೆಯುಟ್ಟ ಪಂಚೆಯನ್ನು ಎಳೆದಾಗಲೇ ಅವನಿಗೆ ಎಚ್ಚರ.

೮. ವಿದ್ಯೆಗೆ ನಾಂದಿ

ಕಾಲನು ನಾಲ್ಕು ವರ್ಷದ ಮುದ್ರೆಯೊತ್ತುವಾಗಲೇ ಮಹಾದೇವಿಗೆ ಪಕ್ಕದ ಮನೆಯ ಪ್ರಸಾದನಂತೆ ಓದಲು ಕಲಿಯಬೇಕೆಂಬ ಹಂಬಲ. ಅದಕ್ಕಾಗಿ ತಂದೆಗೆ ಮುಂಬಾಲು ಬಿದ್ದಳು. ಮಠದ ಸಾಲೆಗೆ ಹೋಗಿ ಓದಿ ಬಂದು, ಸಂಜೆಯ ವೇಳೆ ಕಲಿತುದನ್ನು ಮನನ ಮಾಡುವ ಪ್ರಸಾದನನ್ನು ಅವನೆದುರು ಕುಳಿತು ಏಕಾಗ್ರತೆ, ಅಚ್ಚರಿಗಳಿಂದ ದೃಷ್ಟಿಸುವಳು. ಮನೆಗೆ ಹಿಂತಿರುಗಿದವಳು ತಂದೆಯ ತೊಡೆಯನ್ನೇರಿದಳು.

'ಅಪ್ಪಾ....ಆ ಮನೆ ಪ್ರಸಾದಣ್ಣ ಏನೇನೋ ಓದ್ತಾನೆ. ಅದನ್ನ ನಂಗೂ ಕಲಿಸಪ್ಪ....' ಎಂದು ಪೀಡಿಸಿದಳು.

'ನೀನಿನ್ನೂ ಸಣ್ಣವಳಮ್ಮ, ಮಠಕ್ಕೆ ಹೋಗಿ ಬರಲು ಸಾಧ್ಯವೇ?' ಮುದ್ದಿಸಿ ಓಂಕಾರ ಕೇಳಿದ.

'ನಾನೇನು ಸಣ್ಣೋಳಲ್ಲಪ್ಪ; ಓಡಾಡ್ತೀನಿ, ಆಟವಾಡ್ತೀನಿ, ಊಟ ಮಾಡ್ತೀನಿ. ಓದಕ್ಕೆ ಬರಲ್ವೆ?' ಮುಖ ಉಬ್ಬಿಸಿ ಕೇಳಿದಳು.

'ನಾಳೆ ಗುರುಗಳನ್ನು ಕೇಳೋಣ....'

'ಹೆಣ್ಣು ಮಕ್ಕಳಿಗೆಲ್ಲ ಓದ್ಯಾಕೆ ಬಿಡಿರಿ. ನಾವೆಲ್ಲ ಓದೇ ಇದೀವೇನು. ಗಂಡು ಹುಡುಗನಾದರೂ ಆಗಿದ್ದರೆ ವ್ಯವಹಾರಕ್ಕೆ, ಜಗತ್ತು ತಿಳ್ಕೊಳ್ಳಕ್ಕೆ ಓದು ಬೇಕಾಗ್ತಿತ್ತು' ಲಿಂಗಮ್ಮ ಮಧ್ಯೆ ಪ್ರವೇಶಿಸಿದಳು.

'ಅಪ್ಪೇ ಮತ್ತೆ ನಿಂಗೆ ಏನೂ ಬರೋಲ್ಲ. ಅಪ್ಪ ಓದೋದನ್ನ ಮುಂದು ಕೂತು ದಡ್ಡಿಯಂತೆ ಕೇಳ್ತೀಯಾ....' ಮಹಾದೇವಿ ಮುದ್ದುಮಾತಿನಲ್ಲಿ ತಾಯಿಯನ್ನು ಅಣಕಿಸಿದಳು.

'ಇಷ್ಟು ಭಕ್ತಿಯ ಹಾಡನ್ನು, ಹಸೆ ಹಾಡನ್ನು, ನಾನೇ ಹೇಳಿಕೊಟ್ಟು ಬಿಡ್ತೀನಿ. ಮಠಕ್ಕೆ ಯಾರೂ ಹೆಣ್ಣುಮಕ್ಕಳು ಸಾಲೆ ಕಲೀಲಿಕ್ಕೆ ಹೋಗಲ್ಲ' ಲಿಂಗಮ್ಮ ಆಕ್ಷೇಪಿಸಿದಳು.

ಜುಳುಜುಳನೆ ಪುಟಿಯುವ ಬುಗ್ಗೆಯ ಬಾಯಿಗೆ ಕಲ್ಲು ಸಿಕ್ಕಾಗ ಅದು ತುಸು ಸತ್ವಹೀನವಾಗುವಂತೆ ತಾಯಿಯ ಮಾತುಗಳು ಪುಟ್ಟ ಹೃದಯದ ಉತ್ಸಾಹದ ಓಘಕ್ಕೆ ಭಂಗ ತಂದವು. ಅದೇ ಮುಗ್ಧತೆಯಿಂದ ಮತ್ತೆ ಕೇಳಿದಳು:

'ಅಪ್ಪಾ, ನಿನ್ನಂಗೆ ಬಾಳಷ್ಟು ಓದಕ್ಕ ಬರಬೇಕು; ನಂಗೂ ಕಲಿಸಪ್ಪ

ಹೂಂ....ನಂಗೂ ಬೇಕು....' ಧ್ವನಿ ಹಿರಿದು ಮಾಡಿ ಅಳತೊಡಗಿದಳು.

'ನೀನು ಹೆಣ್ಣುಮಗಳವ್ವ, ಬಹಳಷ್ಟು ಓದು ಬೇಡ ನನ್ನ ತಾಯಿ....' ಲಿಂಗಮ್ಮ ರಮಿಸುತ್ತ ಕರೆದು ಮುದ್ದಿಕ್ಕಿ ನೆತ್ತಿಯನ್ನು ಸವರಿದಳು. ಮಹಾದೇವಿಯ ದುಃಖ ನಿಲ್ಲದೆ ಮತ್ತಷ್ಟು ಧ್ವನಿ ಏರಿತು.

'ನಂಗೆ ಬೇಕು....ಹೂಂ....' ಉಸಿರು ಕಟ್ಟತೊಡಗಿ ಮುಖವೆಲ್ಲ ಕೆಂಪಾದಾಗ ಲಿಂಗಮ್ಮ ಭಯಭೀತಳಾದಳು.

'ಆಗಲಮ್ಮ....ನಾಳೇನೆ ಗುರುಗಳ ಹತ್ತಿರ ಹೋಗೋಣಂತೆ. ಬೆಳಿಗ್ಗೆ ಮಿಂದು, ಪೂಜೆಯಾದಮೇಲೆ ನಾವಿಬ್ಬರೂ ಹೋಗೋಣಂತೆ....ಈಗ ಸುಮ್ಮನಾಗು ಅರಗಿಳಿ....' ಓಂಕಾರ ತನ್ನೆಡೆಗೆ ಕರೆದುಕೊಂಡ. ಆವೇಶದಿಂದ ಉಕ್ಕುವ ಹಾಲಿಗೆ ಹನಿ ನೀರು ಬಿದ್ದಂತೆ, ತಂದೆಯ ಮಾತು ಮಗಳ ದುಃಖವನ್ನು ಶಮನಿಸಿತು.

ಅಂದಿನ ಸಂಜೆಯೆಲ್ಲ ತುಂಬ ಸಂಭ್ರಮ. ತನ್ನ ಓರಗೆಯವರ ಮುಂದೆಲ್ಲ ನಾಳಿನ ಕಾರ್ಯಕ್ರಮದ ವಿವರಣೆ. ಪುಟ್ಟ ಪಕ್ಷಿಗೆ ಹೊಸದಾಗಿ ರೆಕ್ಕೆಗಳು ಮೂಡಿದಂತಹ ಚಟುವಟಿಕೆ ಮಹಾದೇವಿಯಲ್ಲಿ.

'ಪ್ರಸಾದಣ್ಣ....ನಾನೂ ನಿನ್ನಂಗೆ ಓದಕ್ಕೆ ಕಲೀತೀನಿ....' ರಾತ್ರಿಯ ಹರಳೆಣ್ಣೆ ದೀವಿಗೆಯ ಬೆಳಗಿನಲ್ಲಿ ಓದುತ್ತ ಕುಳಿತು, ಆ ಮುದ್ರೆಯ ಪ್ರಭಾವವನ್ನು ಎಳೆಯ ಹೃದಯದಮೇಲೆ ಅಚ್ಚೊತ್ತಿದ್ದ ಪ್ರಸಾದನ ಮುಂದೆ ಹೇಳಿದಳು.

'ಸುಳ್ಳು ಮಾದು, ಹೆಣ್ಣು ಹುಡುಗಿಯರನ್ನ ಸಾಲೆಗೆ ಕಳಿಸೋಲ್ಲ....' ವಿದ್ಯೆ ಗಂಡಸರ ಸೊತ್ತು ಎಂಬ ರೀತಿಯಲ್ಲಿ ಪ್ರಸಾದ ಹೇಳಿದ.

'ಇಲ್ಲಣ್ಣ, ನಾಳೆ ಅಪ್ಪ ಕರ್ಕೊಂಡು ಹೋಗ್ತಾರೆ....'

'ಸುಳ್ಳು ಹೇಳಿರ್ಬೇಕು, ನಿನ್ನ ಕಣ್ಣಿಗೆ ಮಣ್ಣೆರಚಕ್ಕೆ....' ಹಾಸ್ಯದ ನಗೆ ನಕ್ಕ.

'ನಮ್ಮಪ್ಪ ಸುಳ್ಳು ಹೇಳಲ್ಲ. ಸುಳ್ಳು ಹೇಳೋದು ಪಾಪ ಎಂತ ಹೇಳ್ತಾರೆ....'

'ಹಂಗಾರೆ ಇದೇನೋ ಹೊಸ ಸಂಪ್ರದಾಯ; ಹೆಂಗಸರೂ ಹೊರಗ್ಬರಬೇಕು ಎನ್ನೋದು ನಿನ್ನಿಂದಲೇನೇ ಆರಂಭವಾಗುತ್ತೇನೋ....' ಪ್ರಸಾದ ಹೇಳಿದ.

ಪಾದರಸವು ಹರಿದಾಡುವಂತೆ ಹೋಗಿ ಸ್ನೇಹಿತೆಯರ ಮನೆಮನೆಗೆ ಸುದ್ದಿ ಮುಟ್ಟಿಸಿದಳು. ರಾತ್ರಿಯಿಡೀ ನಿದ್ರೆಯಲ್ಲೂ ಅದೇ ಸಂಭ್ರಮ. ಆಕೆಯ

ಸನಗರ ಕಂಪು ತಂದೆತಾಯಿಗಳಿಗೆ ಸೋಜಿಗವೆನಿಸಿತ್ತು. ಬೆಳಗಾಗುವುದರೊಳಗೆ ಮರೆತುಬಿಡಬಹುದು ಎಂದುಕೊಂಡಿದ್ದ ಅವರ ನಿರೀಕ್ಷೆ ಸುಳ್ಳಾಯಿತು.

ಲಿಂಗಮ್ಮನನ್ನು 'ಅಮ್ಮಾ....' ಎಂದು ಎಚ್ಚರಿಸಿದಾಗ ಆಕೆಗೆ ಆಶ್ಚರ್ಯವಾಯಿತು. ಇನ್ನೂ ಬೆಳ್ಳಿ ಚುಕ್ಕೆ ಮೂಡುವ ಹೊತ್ತು.

'ಯಾಕವ್ವಾ, ಇಷ್ಟು ಬೇಗ ಎದ್ದೆ. ಮಲಕ್ಕೋ, ಕೆಂಪು ಮೂಡಿಲ್ಲ. ಹೊರಗೆ ಹೋಗ್ಬೇಕೇನು....?' ಲಿಂಗಮ್ಮ ಮಗ್ಗುಲಲ್ಲಿ ಮಲಗಿದ್ದ ಮಗಳನ್ನು ತಟ್ಟಿದಳು.

'ಅವ್ವಾ, ಮುಂಜಾನೆ ಮಠಕ್ಕೆ ಹೋಗ್ಬೇಕಲ್ಲ. ಮೀಯುತೀನಿ....'

'ಅದೆಷ್ಟು ಹುಚ್ಚವ್ವ ನಿಂಗೆ. ರಾತ್ರಿ ನಿದ್ದೇನಾದರೂ ಮಾಡಿದ್ಯೋ ಇಲ್ವೋ....' ಮಗಳ ಕಾಟ ಸಹಿಸಲಾರದೆ ಎದ್ದು ಕುಳಿತಳು ಲಿಂಗಮ್ಮ. ಓಂಕಾರನನ್ನು ಎಬ್ಬಿಸಹೊರಟಳು ಮಹಾದೇವಿ. ಲಿಂಗಮ್ಮ ತಡೆದು,

'ಬೇಡ....ನಾವಿಬ್ಬರೂ ಪೂಜೆ ಮುಗಿಸೋಣ....ಆಮೇಲೆ ಅಪ್ಪನನ್ನು ಎಬ್ಬಿಸುವೆಯಂತೆ ಬಾ....'

ನಿತ್ಯದ ಪರಿಪಾಠದಂತೆ ತಾಯಿಯ ಪಾದಕ್ಕೆ ನಮಸ್ಕರಿಸಿದಳು. ಲಿಂಗಮ್ಮನಿಗೆ ಹಿಂದೊಮ್ಮೆ ನಡೆದ ಘಟನೆ ನೆನಪಿನ ಸರಸಿಯಲ್ಲಿ ಕಮಲವಾಗಿ ಅರಳಿತು....

ಅಂಗಡಿಯ ಬೆವಹಾರವನ್ನು ಮುಗಿಸಿ ಓಂಕಾರ ಮನೆಗೆ ಬಂದು ಸ್ನಾನ-ಪೂಜೆ ಮುಗಿಸಿ ಅಧ್ಯಯನವನ್ನು ನಡೆಸುವ ಸಮಯದಲ್ಲಿ, ಪಡಸಾಲೆಯಲ್ಲಿ ಕುಳಿತು ಮಗಳನ್ನು ಕುಳ್ಳಿರಿಸಿಕೊಂಡು ಪುರಾಣದ, ಮಹಾತ್ಮರ ಕಥೆಗಳನ್ನು ಆಯ್ದು ಹೇಳುವ ಪರಿಪಾಠ ಲಿಂಗಮ್ಮನದು. ಮಠ, ಗುಡಿಗಳಲ್ಲಿ ಕೇಳಿ ಸಂಗ್ರಹಿಸಿದ, ಪತಿಯಿಂದಲೂ ತಿಳಿದುಕೊಂಡ ಹಲವು ತತ್ತ್ವಗಳನ್ನು ನೆನಪಿನ ನೆಲೆಗೆ ತಂದುಕೊಂಡು ಮಗಳಿಗೆ ಹೇಳುವಳು. ಜೊತೆಯವರೊಡನೆ ಸಂಜೆಯ ಆಟಗಳನ್ನು ಆಡಿ ಬಂದ ಮಹಾದೇವಿ ಅವರೆಲ್ಲರಿಗೆ ಕೈಕಾಲು ಮುಖ ತೊಳೆಸಿ, ವಿಭೂತಿ ಧರಿಸಿಕೊಳ್ಳಲು ಹೇಳಿ, ತಾನೂ ಹಾಗೆ ಮಾಡಿ ಎಲ್ಲರೊಡನೆ ಕುಳಿತುಕೊಳ್ಳುವಳು. ಏಕಾಗ್ರತೆಯಿಂದ ತಾಯಿ ಹೇಳಿದುದನ್ನೆಲ್ಲ ಮನವಿಟ್ಟು ಕೇಳುವಳು.

ತಾಯಿತಂದೆಯರ ಘನತೆಯನ್ನು ವಿವರಿಸುತ್ತ ಗಣಪತಿ, ಷಣ್ಮುಖರ ಪಂದ್ಯದ ಬಗ್ಗೆ ಲಿಂಗಮ್ಮ ಹೇಳಿದ್ದಳು. ನಾರದ ತಂದ ಹಣ್ಣಿಗಾಗಿ ಇಬ್ಬರೂ ಪಂದ್ಯಕಟ್ಟಿ, ಷಣ್ಮುಖ ಮೂರು ಸಲ ಬ್ರಹ್ಮಾಂಡ ಸುತ್ತಿ ಬರುವುದರೊಳಗೆ ಗಣಪತಿ ತಾಯಿತಂದೆಯರಿಬ್ಬರನ್ನು ಮೂರು ಸಲ ಪ್ರದಕ್ಷಿಸಿ, ನಮಸ್ಕರಿಸಿ ತಾನೇ ಗೆದ್ದುದಾಗಿ ಪ್ರಕಟಿಸಿದ್ದನ್ನು ಹೇಳಿದಳು.

ಗಣಪತಿಯ ಬುದ್ಧಿಯನ್ನು ಕಂಡು ಮಹಾದೇವಿಗೆ ಹಿಗ್ಗೋ ಹಿಗ್ಗು. ಅವನು ಗೆದ್ದಾಗ ಚಪ್ಪಾಳೆ ತಟ್ಟಿ ನಕ್ಕಳು.

'ತಾಯಿತಂದೆ ಅಷ್ಟು ದೊಡ್ಡೋರೇನವ್ವಾ....' ತಾಯಿಯನ್ನು ಕೇಳಿದಳು.

'ಹೌದವ್ವಾ....ಯಾರು ಬೆಳಗ್ಗೆ ಎದ್ದು ನಮಸ್ಕಾರಮಾಡಿ ಹೆತ್ತೊಡಲಿನ ಆಶೀರ್ವಾದ ಪಡೆಯುವರೋ ಅವರು ಎಲ್ಲ ಸಂಪತ್ತನ್ನು ಪಡೆಯುವರು....' ಈ ಮಾತು ಅಚ್ಚಳಿಯದೆ ಉಳಿದುದಷ್ಟೇ ಅಲ್ಲ, ಅಂದಿನಿಂದ ಮಹಾದೇವಿ ಬೆಳಗ್ಗೆ ಎದ್ದ ತಕ್ಷಣ, ಸಂಜೆಗೆ ದೀಪಹಚ್ಚಿಸಿದ ವೇಳೆಗೆ ತಾಯಿತಂದೆಗಳಿಗೆ ನಮಸ್ಕರಿಸಲು ಮರೆಯಲೇ ಇಲ್ಲ.

ಶಾಲೆಗೆ ಹೋಗುವ ಆತುರ, ಉತ್ಸಾಹಗಳಿಂದ ಮಹಾದೇವಿ ಸ್ನಾನ ಪೂಜೆ ಮುಗಿಸಿದಳು. ತಂದೆಯನ್ನು ಎಬ್ಬಿಸಿದಾಗ, ಸೂರ್ಯೋದಯವೇ ಆಗಿಲ್ಲದ್ದನ್ನು ನೋಡಿ ಓಂಕಾರ ಬೆರಗಾದ.

'ಆಗಲೇ ಎದ್ದೇಬಿಟ್ಟಿಯಾ ?'

'ಅಪ್ಪಾ....ಮಠಕ್ಕೆ ಹೋಗಬೇಕಲ್ಲ....ಹೊತ್ತಾಗಲಿಲ್ವೆ' ಅವಳ ಆತುರವನ್ನು ಕಂಡು ಆಶ್ಚರ್ಯಚಕಿತನಾಗಿ, ನಮಸ್ಕರಿಸಿದ ಮಗಳನ್ನು ತೊಡೆಯ ಮೇಲೆ ಕೂಡಿಸಿಕೊಂಡ.

'ಹಟಮಾರಿ, ಹಿಡಿದ ಹಟ ಬಿಡಬೇಕಲ್ಲ ... ನಿನ್ನೆಯಿಂದ ಅದೇ ಪಟ್ಟು....' ಮಗಳನ್ನು ಹಿಂಬಾಲಿಸಿದ್ದ ಲಿಂಗಮ್ಮ ನುಡಿದಳು.

'ಸಂದಾಗಲೇ ಎಲ್ಲ ಆಯ್ತು. ನೀನು ನಡಿಯಪ್ಪ....' ಅವಳ ಉತ್ಸಾಹವನ್ನು ಹತ್ತಿಕ್ಕಲಾರದೆ ಮೇಲೆದ್ದು ನಡೆದ. ಪೂಜೆಯಾದ ಬಳಿಕ ತಂದೆ ಮಗಳಿಬ್ಬರೂ ರಸಬಾಳೆಯ ಹಣ್ಣು ತಿಂದು, ಹಾಲು ಕುಡಿದರು. ತಂದೆಯೊಡನೆ ಹೊರಟ ಮಗಳು ಕಳಿಸಲು ಬಂದ ತಾಯಿಗೆ ನಮಸ್ಕರಿಸಿ,

'ಅವ್ವಾ....ಇಷ್ಟು ವಿದ್ಯೆ-ಬುದ್ಧಿ ಬರಲಂಥ ಆಶೀರ್ವಾದ ಮಾಡವ್ವ....' ಕೈಗಳನ್ನು ವಿಸ್ತರಿಸಿ ತೋರಿಸಿದಳು.

'ಮಠದ ಗುರುಗಳು ಇಲ್ವಾ, ಅವರಂಗೆ ನಾನೂ ಆಗ್ಬೇಕು....' ಗುರುಲಿಂಗದೇವರು ಎತ್ತರದ ವೇದಿಕೆಯ ಮೇಲೆ ಕುಳಿತು ಪ್ರವಚನ ಮಾಡುವ ದೃಶ್ಯ ಅವಳ ಮನದ ಮೇಲೆ ಆದರ್ಶಸಾಧನೆಯ ರೂಪುರೇಷೆ ಮೂಡಿಸಿದ್ದಿತು.

'ಇಂಥಾದ್ದೇಕೆ ಹರಸಲವ್ವಾ ; ಜಾಣೆಯಾಗಿ, ಒಳ್ಳೆ ಗಂಡನ್ನ ಪಡಿ ಎಂದು ಹರಸುವೆ' ಮನಸ್ಸಿನಲ್ಲಿ ಅಂದುಕೊಂಡು, ಅಂದವಾಗಿ ಹೊರಟು ನಿಂತ ಮಗಳನ್ನು ಕಣ್ತುಂಬ ನೋಡಿ ಲಿಂಗಮ್ಮ ನಕ್ಕಳು.

ಬೆಳಗಿನ ಶಾಲೆ ಆರಂಭವಾಗುವ ಮುನ್ನವೇ ಜಳಕ ಮಾಡಿ, ವಿಭೂತಿ ಧರಿಸಿಕೊಂಡು ಪುಟ್ಟಪುಟ್ಟ ಹೆಜ್ಜೆ ಇರಿಸುತ್ತ ತಂದೆಯೊಡನೆ ಬಂದು ನಮಸ್ಕರಿಸಿದ ಮುಗ್ಧೆಯನ್ನು ಕಂಡು ಅಚ್ಚರಿಗೊಂಡರು ಗುರುಲಿಂಗರು. ಮಹಾದೇವಿ ಎದ್ದು ನಿಂತು ಕೈಮುಗಿದು,

'ಶರಣು ಗುರುಗಳೇ....' ಎಂದಳು. ವಾತ್ಸಲ್ಯಪೂರಿತ ಧ್ವನಿಯಿಂದ, ತಲೆ ನೇವರಿಸಿ ಕೇಳಿದರು :

'ಕ್ಷೇಮವೇನಮ್ಮಾ....?'

'ತಮ್ಮನುಗ್ರಹದಿಂದ ಎಲ್ಲ ಚೆನ್ನಾಗಿದೆ....' ಉತ್ತರಿಸಿದಳು. ಧ್ವನಿ, ಮಾತುಕತೆಯಲ್ಲಿ ತಂದೆಯ ಅನುಕರಣೆಯನ್ನು ಗುರುತಿಸಿದರು. ಗುರುಗಳ ಸ್ವಾಭಾವಿಕ ಪ್ರಶ್ನೆಗೆ ಓಂಕಾರ ಯಾವಾಗಲೂ ಹೀಗೆ ಉತ್ತರಿಸುತ್ತಿದ್ದುದು.

'ನೀನು ಅಪ್ಪನ ಮಗಳೋ, ಅವ್ವನ ಮಗಳೋ....' ದಿನದಿನಕ್ಕೂ ಬಾಳೆಯ ಸಸಿಯಂತೆ ವೃದ್ಧಿಯಾಗುತ್ತಿದ್ದ ಆಕೆಯನ್ನು ಪರೀಕ್ಷಿಸುತ್ತ ಕೇಳಿದರು. ತಾಯಿಯ ಶಾರೀರಿಕ ಸೌಂದರ್ಯ, ಸಾತ್ವಿಕತೆ, ತಂದೆಯ ಚಿಂತನಶೀಲತೆ, ದಿಟ್ಟತನಗಳ ಸಂಗಮ ಮಗಳಲ್ಲಿ ಆದುದನ್ನು ಗಮನಿಸಿದರು. ಮಹಾದೇವಿ ಕ್ಷಣಕಾಲ ಮೌನವಾಂತಳು. ಬಳಿಕ ಉತ್ತರಿಸಿದಳು :

'ದೇವರ ಮಗಳು....' ಗುರುಲಿಂಗರು ಸ್ತಂಭೀಭೂತರಾದರು. ಶರೀರಕ್ಕೆ ಜನ್ಮ ನೀಡಿದ ತಾಯ್ತಂದೆಯರನ್ನೇ ಕಾರಣರು ಎನ್ನುವ ಲೌಕಿಕ ಪ್ರಶ್ನೆಯಲ್ಲಿನ ಆಧ್ಯಾತ್ಮಿಕ ದೋಷವನ್ನು ಎತ್ತಿ ತೋರಿಸುವಂತಿತ್ತು ಆ ಮುಗ್ಧೆಯ ಉತ್ತರ.

ತಂದೆ, ಮಗಳಿಬ್ಬರು ಕುಳಿತುಕೊಳ್ಳುವಾಗಲೇ ಮಹಾದೇವಿ ಹೇಳಿದಳು :

'ತಂದೆ ನೀನು, ತಾಯಿ ನೀನು, ಬಂಧು ನೀನು ಬಳಗ ನೀನು ಎಂದು ಅಪ್ಪ ಬಸವಣ್ಣನವರು ಹೇಳುತ್ತಾರಲ್ಲ ಗುರುಗಳೇ! ದೇವರೇ ಎಲ್ಲರಿಗೂ ತಾಯಿ-ತಂದೆ' ಬಾಯಿಪಾಠ ಮಾಡಿದ ವಚನವನ್ನು ಸ್ಮರಿಸಿಕೊಳ್ಳುತ್ತ ಹೇಳಿದಳು.

'ಅದಕ್ಕೇ ಅಪ್ಪ ಬಸವಣ್ಣನವರು ಹೇಳುವರು : 'ವನದ ಕೋಗಿಲೆ ಮನೆಗೆ ಬಂದರೆ ವನದ ನೆನಪನ್ನು ಹೇಗೆ ದೂರ ಸರಿಸದೋ, ಬೆಟ್ಟದ ಆನೆ ಪಟ್ಟದ ಆನೆಯಾದರೂ ತನ್ನ ಅರಣ್ಯದ ಸೊಬಗನ್ನು ಮರೆಯದೋ, ಹಾಗೆ ಶರಣರು ಮರ್ತ್ಯದಲ್ಲಿದ್ದರೂ ಅಮರ್ತ್ಯಶಕ್ತಿಯಾದ ದೇವಕಾರುಣ್ಯದ ಸೂತ್ರವನ್ನು ಮರೆಯರು !' ಗುರುಲಿಂಗದೇವರು ಉದ್ಗರಿಸಿದರು.

'ಬಹಳ ಕುಶಾಗ್ರಮತಿ ಈಕೆ ಗುರುಗಳೇ ! ಒಂದು ಬಾರಿ ಹೇಳಿದರೆ ಸಾಕು, ಮರೆಯದೆ ತನ್ನ ಚಿತ್ತದ ಉಗ್ರಾಣದಲ್ಲಿ ಸೇರಿಸಿಕೊಂಡುಬಿಡುವಳು.... ತಾನೂ ಪಕ್ಕದ ಮನೆಯ ಪ್ರಸಾದನಂತೆ ಓದಲು ಕಲಿಯುತ್ತೇನೆಂದು ಹಠ ಹಿಡಿದಿದ್ದಾಳೆ. ಸುಮ್ಮನಾಗಿಸಲು ಸಾಧ್ಯವಾಗದೆ ನಿಮ್ಮ ಬಳಿ ಕರೆತಂದಿರುವೆ....'

'ಕಲಿಯಲಿ ಬಿಡು....' ಗುರುಗಳ ಮಾತಿನಿಂದ ಮಹಾದೇವಿಯ ಮುಖದ ಮೇಲೆ ನಗೆಯ ಮುಗುಳು ಬಿರಿಯಿತು.

'ಆದರೆ ...ಇವರ ತಾಯಿ, ಹೆಂಗೂಸಿಗೇಕೆ ಓದು ಎಂದು ಬೇಡವೆನ್ನುತ್ತಿರುವಳು. ವೈನದವರು ಆಡಿಕೊಂಡಾರೆಂಬ ಭಯ. ಆದರೆ ನನಗೇನೋ ಓದಿಸುವ ಬಯಕೆ....'

'ಅಪ್ಪಾ, ಅವ್ವ ನಿನ್ನಷ್ಟು ಜಾಣೆಯಲ್ಲ. ಆಕೆಗೆ ನಿನ್ನಷ್ಟು ತಿಳಿಯಲ್ಲ....' ಮಹಾದೇವಿ ಉತ್ತರಿಸಿದಾಗ ಗುರುಲಿಂಗರು ನಕ್ಕರು. ಅರಳು ಹುರಿದಂತೆ ಮಾದೇವಿ ಮಾತನಾಡಿದರೆ ಅವರಿಗೆ ಆನಂದದ ಕೊಡ ತುಂಬುತ್ತಿತ್ತು.

'ಈ ಮೌಢ್ಯ ಸಂಪ್ರದಾಯವನ್ನು ಕಿತ್ತೊಗೆಯುವ ಸಾಹಸ ಮಾಡಬೇಕು ಓಂಕಾರ. ಧಾರ್ಮಿಕ, ಆಧ್ಯಾತ್ಮಿಕ ಸಮಾನತೆಯನ್ನು ಘೋಷಿಸಿದ ಬಸವಣ್ಣನವರು ನಮಗಾಗಲೇ ಸೂತ್ರವನ್ನು ನೀಡಿದ್ದಾರೆ. ಈ ಸೂತ್ರದ ಬೀಜಗಳನ್ನು ಸಮಾಜದಲ್ಲಿ ನೆಟ್ಟು ಫಲ ಪಡೆಯುವ ಪ್ರಯೋಗ ನಾವು ಮಾಡಬೇಕು. ಶಿಕ್ಷಣರಂಗದಲ್ಲಿ ಸಮಾನತೆ ತರದ ಹೊರತು ಅಂಧಃಶ್ರದ್ಧೆಯ ಬಂಧನದಿಂದ ಬಿಡುಗಡೆ ಸಾಧ್ಯವಿಲ್ಲ. ಸಾಂಪ್ರದಾಯಿಕ ಕರ್ಮವಾದದ ಬಾವಿಯಲ್ಲಿ ಬಿದ್ದವರನ್ನು ಶಿಕ್ಷಣದ ಹಗ್ಗ ಹಿಡಿದು ಮಾತ್ರ ಎತ್ತಲು ಸಾಧ್ಯ.

ವಿದ್ಯೆ ಎಂದರೆ ಉತ್ತಮಾಂಗವನ್ನು ಉರಸ್ಥಲದಲ್ಲಿ ಬಯ್ಚಿಡುವ ಬಯಕೆಯ ಸಾಧನ ಎಂದು ವ್ಯಾಖ್ಯಾನಿಸುವರು ಶರಣರು. ಉತ್ತಮಾಂಗ ಎಂದರೆ ಶಿರ, ಅರಿವು ಅಥವಾ ಬುದ್ಧಿ. ಉರಸ್ಥಲ ಎಂದರೆ ಹೃದಯ ಅಥವಾ ಭಾವ. ಬುದ್ಧಿ ಮತ್ತು ಭಾವಗಳನ್ನು ಅರಳಿಸುವ ಸಾಧನೆಯೇ ವಿದ್ಯೆ. ಭಾವದ ಹೊನ್ನೆಲೆಯಲ್ಲಿ ಬುದ್ಧಿಯನ್ನು ಅರಳಿಸಬೇಕಾದುದು ವಿದ್ಯೆಯ ಗುರಿ. ಇಂಥ ವಿದ್ಯೆ ಹೆಣ್ಣುಮಕ್ಕಳಿಗೆ ಬೇಡವೇ ? ಅವರಿಗೂ ಬುದ್ಧಿ, ಹೃದಯಗಳಿಲ್ಲವೆ ? ನಮ್ಮ ಸಮಾಜವು ದೈವೀಸೃಷ್ಟಿಯ ಅರ್ಧ ಅಂಗವಾದ ಸ್ತ್ರೀಕುಲವನ್ನು ಶೋಷಿಸುತ್ತ, ಅವರ ಯಾವ ಪ್ರತಿಭೆಗಳೂ ಅರಳದಂತೆ ಇರಿಸಿದೆ. ಅರೆ ಬಿರಿದ ಮೊಗ್ಗನ್ನು ನೀರಿನಲ್ಲಿ ತೇಲಿಬಿಟ್ಟರೆ ಅರಳುವುದು; ಅದು ಬಿಟ್ಟು ಬೆಂಕಿಯ ಸಾಮೀಪ್ಯದಲ್ಲಿಟ್ಟರೆ ! ಎಷ್ಟೋ ಪ್ರತಿಭಾವಂತ ಶಕ್ತಿಗಳನ್ನು ಅವಕಾಶ ನೀಡಿ ಅರಳಿಸದೆ ಸಂಸಾರದ ಬಂಧನಕ್ಕೆ ಬಾಲ್ಯದಲ್ಲಿಯೇ ಸಿಕ್ಕಿಸಿಬಿಡುವ ಅಜ್ಞಾನದ

ಆಚರಣೆ ಸಮಾಜವನ್ನು ತುಂಬಿದೆ.

'ಪ್ರತಿ ಮಾನವನ ನಿಲುವಿನಲ್ಲಿ, ಹೆಣ್ಣಿರಲಿ ಗಂಡಿರಲಿ ಕ್ರಿಯಾತ್ಮಕ, ಬೌದ್ಧಿಕಾತ್ಮಕ, ಭಾವಾತ್ಮಕ ಮೂರು ಮುಖಗಳಿರುವುದು ಸಹಜ. ಆ ಮೂರು ಮುಖಗಳ ವಿಕಾಸಕ್ಕೆ ಕಾರಣವಾಗಬೇಕಾದುದೇ ಶಿಕ್ಷಣದ ಗುರಿ. ಇಂತಹ ಶಿಕ್ಷಣ ಹೆಣ್ಣುಮಕ್ಕಳಿಗೆ ಬೇಡವೇ ?' ಶ್ರೀ ಗುರುಲಿಂಗರು ಹೇಳಿದರು.

'ಇದೆಲ್ಲವೂ ಸರಿಯೆ. ಮುಳ್ಳುಕಲ್ಲುಗಳಿಂದ ಕೂಡಿದ ದಟ್ಟಾರಣ್ಯದಲ್ಲಿ ಮೊದಲ ಅಡಿಯಿಟ್ಟು ನಡೆಯುವವರಿಗೆ ಶ್ರಮ ಬಹಳವಾದಂತೆ, ಹೊಸದನ್ನು ಹಿಡಿಯುವವರಿಗೆ ಸಮಾಜದಿಂದ ಟೀಕೆಗಳು ಬಹಳಷ್ಟೆ ! ಓಂಕಾರ ಹೇಳಿದ.

'ಅದು ನಿಜ ಓಂಕಾರ; ಆನೆಯಂತಹ ಪ್ರಾಣಿ ಕಾಡಿನಲ್ಲಿ ಮುಂದೆ ಸಾಗಿದಾಗ ಆಡಿನಂತಹವು ನಿರ್ಮಾಣವಾದ ದಾರಿಯಲ್ಲಿ ಅಡಿ ಇಡಬಲ್ಲವು. ವಿವೇಕಿಗಳಾದ ಕೆಲವರಾದರೂ ಸಾಹಸದ ಹೆಜ್ಜೆ ಇಡದಿದ್ದರೆ ಉಳಿದವರಿಗೆ ಮುಂದುವರಿಯಲು ಆಸ್ಪದವೆಲ್ಲಿ? ಮೊದಲುಮೊದಲು ಹೊಸತನ್ನು ಕಂಡಾಗ ಸಮಾಜ ಟೀಕಿಸುವುದು ಸಹಜ. ಮೊದಲ ತಂಬಿಗೆ ತಣ್ಣೀರನ್ನು ಮೈಮೇಲೆ ಹಾಕಿಕೊಂಡಾಗ ಮೈಯ ಬಿಸಿಗೆ ವಿರುದ್ಧ ತಣ್ಣೀರು ಕೆಲಸ ಮಾಡಿ 'ಹಾ' ಎನ್ನಿಸುವುದು. ಅದೇ ಹತ್ತಾರು ತಂಬಿಗೆ ಬೀಳತೊಡಗಿದಾಗ ಮೈಯ ಕಾವು ನೀರಿನ ಕಾವಿಗೆ ಹೊಂದಿಕೊಂಡು ಹಿತವೆನಿಸುವುದಷ್ಟೆ. ಯಾರಾದರೂ ಮುಂದುವರಿದು ಹೊಸತನ್ನು ತುಳಿದಾಗ ಆಡಿಕೊಳ್ಳುವ ಸಮಾಜವೇ ನಂತರ ಸ್ಫೂರ್ತಿಗೊಂಡು ಹಿಂಬಾಲಿಸುವುದು ಅಸಂಭವವೇನಲ್ಲ....'

'ತಮ್ಮ ಸಮ್ಯಕ್‌ಪ್ರಜ್ಞೆಯ ಆಳದ ಅರಿವು ನನಗಿದೆ ಗುರುದೇವಾ. ನಿಮ್ಮ ಮಾತಿಗೆ ತಲೆಬಾಗಲು ನಾನು ಸಿದ್ಧನಿರುವೆ....'

'ಸರಿ, ಹಾಗಾದರೆ ಮಹಾದೇವಿಯನ್ನು ಪ್ರತಿನಿತ್ಯ ಕಳಿಸಿಕೊಡು. ನಿನಗೆ ಕರೆತರಲು ತೊಂದರೆಯಾದೀತು. ಅಕ್ಕಪಕ್ಕದ ಮಕ್ಕಳಾರಾದರೂ ಮಠದ ಶಾಲೆಗೆ ಬರುತ್ತಿದ್ದರೆ ಜೊತೆ ಮಾಡಿ ಕಳುಹಿಸು. ತಪ್ಪದೇ ಬರುತ್ತೀಯೋ ನಮ್ಮಾ....?' ಮಹಾದೇವಿಯನ್ನು ಪ್ರಶ್ನಿಸಿದರು. ಉತ್ಸುಕತೆಯ ಧ್ವನಿಯಲ್ಲಿ ನುಡಿದಳು :

'ಓಹೋ....ತಪ್ಪದೆ ಬರುವೆ. ನೀವು ಹೇಳಿಕೊಟ್ಟಿದ್ದನ್ನೆಲ್ಲ ಕಲಿಯುವೆ....'

'ತಪ್ಪಿದರೆ ಗುರುಗಳು ಹೊಡೆಯುತ್ತಾರೆ, ಬಯ್ಯುತ್ತಾರೆ....' ಗುರುಲಿಂಗರು ಹೇಳಿದರು.

'ಆಗಲಿ ಗುರುಗಳೇ, ಕಲ್ಲು ಮೂರ್ತಿಯಾಗಲು ಪೆಟ್ಟು ತಿನ್ನಬೇಕಂತೆ, ಅಪ್ಪ ಹೇಳುವಳು....' ಗುರುಲಿಂಗರು ಅವಳ ಗ್ರಹಣಶಕ್ತಿಯನ್ನು ಕಂಡು

ಬೆರಗಾದರು. ತಾಯಿ ತಂದೆಗಳ ಪ್ರತಿಯೊಂದು ಬೋಧೆ, ಆಚರಣೆಗಳು ಆಕೆಯ ಮೇಲೆ ಅಚ್ಚೊತ್ತಿದ್ದವು.

'ಮಕ್ಕಳ ಮನಸ್ಸು ಹದಮಾಡಿದ ಮಣ್ಣಿನ ಮುದ್ದೆ. ಕುಂಬಾರ ತಿಗರಿಯ ಮೇಲಿಟ್ಟು ತಿರುಗಿಸಿದಾಗ ವಿವಿಧಾಕಾರದ ಮಡಿಕೆಗಳು ರೂಪು ಗೊಳ್ಳುವಂತೆ ತಾಯ್ತಂದೆಯರ, ಪರಿಸರದ ಪ್ರತಿ ಆಚಾರವಿಚಾರಗಳು ಅವರ ಮನಸ್ಸಿನ ಮೇಲೆ ಪರಿಣಾಮದ ಮುದ್ರೆಯೊತ್ತುವವು. ಕುಂಬಾರನ ಹಸ್ತವು ಆಕಾರ ನೀಡಿದಾಗ, ತಿಗರಿಯು ಅದನ್ನು ನಯಗೊಳಿಸಿ, ಆವುಗೆ ಸುಟ್ಟು ಸ್ಥಿರೀ ಕರಣ ಮಾಡುವಂತೆ ಮಕ್ಕಳ ವ್ಯಕ್ತಿತ್ವಕ್ಕೆ ಆಕಾರ ಕೊಡುವವರು ತಾಯಿ ತಂದೆಯರು, ನಯಗೊಳಿಸುವವರು ಶಿಕ್ಷಕರು, ಜೇಯಿಸಿ ಪರಿಪಕ್ವ ಮಾಡು ವುದು ಧರ್ಮ. ನಿಮ್ಮ ಒಳ್ಳೆಯ ಸಂಸ್ಕಾರ ಹೇಗೆ ಮಹಾದೇವಿಯನ್ನು ಸಂಸ್ಕರಣ ಮಾಡುತ್ತಿದೆ ನೋಡು....'

'ತಮ್ಮ ಹಸ್ತದಿಂದಲೇ ಅಕ್ಷರಾಭ್ಯಾಸ ಪ್ರಾರಂಭವಾಗಲಿ ಗುರುಗಳೆ?'

ಕಟ್ಟಿಗೆ ಮಣೆಯ ಮೇಲೆ ಅಕ್ಷತೆಯನ್ನು ಹರಡಿ, 'ಓಂ ಶ್ರೀಗುರು ಬಸವ ಲಿಂಗಾಯನಮಃ' ಎಂದು ಬರೆದ ಗುರುಲಿಂಗರು ಮಹಾದೇವಿಯ ಬೆರಳನ್ನು ಹಿಡಿದು ತಿದ್ದಿಸಿದರು.

ಹೀಗೆ ಆರಂಭವಾದ ಶಿಕ್ಷಣ ನಿರೀಕ್ಷೆಗೆ ಮೀರಿದ ಪ್ರಗತಿಯನ್ನು ಸಾಧಿಸ ತೊಡಗಿತು. ವಯಸ್ಸಿನ ಸೀಮೆಯನ್ನು ದಾಟಿದ್ದ ನೆನಪಿನ ಶಕ್ತಿ, ಗ್ರಹಣ ಶಕ್ತಿಗಳು ಮಹಾದೇವಿಯಲ್ಲಿ ಸಂಗಮಿಸಿದ್ದವು. ಕ್ರಮಯುಕ್ತ ಅಭ್ಯಾಸ ಮುಗಿಸಿಕೊಂಡು ವಚನಗಳನ್ನು ಕಲಿಯಲು ಗುರುಗಳ ಸನ್ನಿಧಿಗೆ ಬರುತ್ತಿದ್ದಳು. ಒಂದೆರಡು ಹೊಸ ವಚನಗಳನ್ನು ಓದಿಕೊಂಡು ಮನೆಯತ್ತ ಧಾವಿಸುತ್ತಿದ್ದಳು. ಅವಳು ಕಲಿಯುವ ವೇಗವನ್ನು ಗಮನಿಸಿ ಗುರುಲಿಂಗರು ಚಕಿತ ರಾಗುತ್ತಿದ್ದರು.

'ಓಂಕಾರ, ನಿನ್ನ ಮಗಳು ಸಾಮಾನ್ಯಳಲ್ಲವಪ್ಪ. ಮನೆಯ ಮಾಳಿಗೆಯ ಮೇಲೆ ನಿಂತಾಗ ಎತ್ತರದಲ್ಲಿ ಹಾರುವ ಗಾಳಿಯಪಟ ತೋರುವುದು; ಪಟ ವಷ್ಟೇ ಕಾಣುವುದು, ಅದರ ಹಿಂದೆ ಸೂತ್ರ ಹಿಡಿದು ಆಡಿಸುವ ಹಸ್ತ ಕಾಣದು. ಹಾಗೆಯೇ ಈ ಮಹಾದೇವಿಯ ಬದುಕು ಒಂದು ಗಾಳಿಯಪಟ. ಇದರ ಸೂತ್ರವು ಆ ಅದೃಶ್ಯ, ಅಲೌಕಿಕ ಹಸ್ತದ ಹಿಡಿತದಲ್ಲಿ....' ಉದ್ಗರಿಸು ತ್ತಿದ್ದರು ಗುರುಲಿಂಗದೇವರು.

೯. ಸುಪ್ತ ಶಕ್ತಿಯ ಆವಿಷ್ಕಾರ

ಭೂಮಿಯಲ್ಲಿ ಬಿದ್ದ ಬೀಜ ಮೊಳೆತು, ಪಲ್ಲವಿಸಿ, ಫಲವನ್ನೀಯಬೇಕಾದರೆ ಅದರ ನೈಯಕ್ತಿಕ ಸತ್ವ ಒಂದೇ ಸಾಲದು, ಅದಕ್ಕೆ ಕ್ರಮಯುಕ್ತವಾಗಿ ನೀರು, ಗೊಬ್ಬರ, ರವಿಕಿರಣಗಳ ಸಂಪರ್ಕ ಬೇಕು. ಮಾನವನ ವ್ಯಕ್ತಿತ್ವವೂ ಅತಿಮಾನವತೆಯ ಹಂತವನ್ನು ಮುಟ್ಟಬೇಕಾದರೆ ಸದ್ಭಕ್ತಿಯ ಸುಜಲ, ಸದಾಚಾರದ ಗೊಬ್ಬರ, ಸುಜ್ಞಾನದ ರವಿಕಿರಣಗಳ ಅವಶ್ಯಕತೆಯುಂಟು. ಮಹಾದೇವಿಯ ಬದುಕಿನ ಬಳ್ಳಿ ಕುಡಿವಡೆಯತೊಡಗಿದಾಗ ಲಿಂಗಮ್ಮನ ಆಚರಣೆಗಳು, ಓಂಕಾರನ ಸತ್ವಪೂರ್ಣ ಜೀವನ, ಗುರುಲಿಂಗದೇವರ ವಿರಕ್ತಿಯ ತೇಜ ಮೂರೊಂದಾಗಿ ಪರಿಣಾಮವನ್ನು ಬೀರಿದವು; ಆಕೆಯ ಬದುಕಿನ ರೂಪುರೇಷೆಯನ್ನೆಳೆಯುವ ದಿವ್ಯ ಹಸ್ತಗಳಾದವು.

ಸಂಜೆಯ ಶಾಲೆಯು ಮುಕ್ತಾಯವಾದ ಬಳಿಕ, ಮನೆಯಲ್ಲಿ ತಾಯಿಯ ಶಿಕ್ಷಣ ಆರಂಭವಾಗುತ್ತಲಿತ್ತು. ಅಟ್ಟಿಬಂದ ಸಾವನ್ನು ಮೆಟ್ಟಿಸಿಂದ ಮಾರ್ಕಂಡೇಯನ ಕಥೆ, ದಿಟ್ಟ ಸಂಕಲ್ಪದಿಂದ ಅರಣ್ಯವನ್ನು ಸೇರಿ ದೇವ ಕಾರುಣ್ಯ ಪಡೆದು ಅಮರನಾದ ಧ್ರುವನ ಕಥೆ, ವಯಸ್ಸಿನಲ್ಲಿ ಕಿರಿಯಳಾದರೂ ಶಿವನಿಗೆ ಕಂಪಾದ ಹಾಲನ್ನುಣ್ಣಿಸಿದ ಕೋಳೂರು ಕೊಡಗೂಸಿನ ಕಥೆ ಮಹಾದೇವಿಯ ಚಿತ್ತದ ಮೇಲೆ ಅಚ್ಚೊತ್ತಿದ್ದುವು.

ಆಗ ಏಳನೆಯ ವರುಷ ಸುತ್ತುತ್ತಲಿತ್ತು. ಪುಟ್ಟ ವಯಸ್ಸಿನಲ್ಲಿ ಶಬ್ದ ಮಾತ್ರವಾಗಿ ಒಳಹೋಗುತ್ತಿದ್ದ ಕಥೆಗಳು ಬುದ್ಧಿ ಬಲಿತ ಕಾರಣ ಅರ್ಥದ ಬೇರನ್ನು ಒಳಗೆ ಇಳಿಸುತ್ತಿದ್ದವು. ಮಹಾದೇವಿ ಧ್ರುವನ ಕಥೆಯನ್ನು ಕೇಳುತ್ತಾ ಮುಗ್ಧಳಾಗಿ ಕುಳಿತಿದ್ದಳು. ಕಥೆ ಮುಗಿದು ವೇಳೆ ಬಹಳವಾಗಿತ್ತು. ಆಕೆಯ ಓರಗೆಯವರೆಲ್ಲ ಮನೆಯ ಮೆಟ್ಟಿಲನ್ನು ತುಳಿದಿದ್ದರೂ ಇನ್ನೂ ಈಕೆಗೆ ಎಚ್ಚರವಾಗಿರಲಿಲ್ಲ. ಮೊದಲಿಗೆ ಅವನ ಮಲತಾಯಿಯ ತಿರಸ್ಕಾರಮಯವಾದ ವರ್ತನೆ ಮಹಾದೇವಿಗೆ ಅಳುವನ್ನು ತರಿಸಿತು. ಗಂಡನ ತೊಡೆಯಿಂದ ಸವತಿಯ ಮಗ ಧ್ರುವನನ್ನು ಮಲತಾಯಿ ಕೆಳಕ್ಕೆ ತಳ್ಳಿದಾಗ ಮಹಾದೇವಿಯ ದುಃಖದ ಕಟ್ಟೆಯೊಡೆಯಿತು. ತಾನೂ ತನ್ನ ತಂದೆಯ ತೊಡೆಯ ಮೇಲೆ ಕುಳಿತಾಗ ಯಾರೋ ತಳ್ಳಿದಂತಾಗಿ, ಆ ವೇದನೆಯ ಅನುಭವವಾಯಿತು.

'ಅಮ್ಮ, ಅವಳು ಯಾಕಮ್ಮ ಹಂಗೆ ಮಾಡಿದ್ದು....' ಗಟ್ಟಿಯಾಗಿ ಅತ್ತಳು, ತಾನೇ ಧ್ರುವನೆಂಬಂತೆ.

'ಮಲತಾಯಿಯರೆಂದರೆ ಹಾಗೇ ಕಣಮ್ಮ. ಬಂಜೆಯರಿಗೆ ಹೆರಿಗೆ ಬೇನೆ ತಿಳಿಯದು, ಬಲತಾಯಿಯರಿಗೆ ಸವತಿಯರ ಮಕ್ಕಳನ್ನು ಪ್ರೇಮಿಸಲು ಬರುವುದಿಲ್ಲ....' ಲಿಂಗಮ್ಮ ಹೇಳಿದಳು.

'ಬಂಜೆ ಬೇನೆಯರಿಯಳು, ಮಲತಾಯಿಗೆ ಮುದ್ದು ಮಾಡಲು ಬರುವುದಿಲ್ಲ, ಅಲ್ಲವೇನಮ್ಮಾ....?' ಮರು ಉಚ್ಚರಿಸಿದಳು. ತಾಯಿಯ ಈ ಮಾತಿನ ಅನುಭವಾರ್ಥ ಒಳಗಿಳಿಯುವ ವಯಸ್ಸು ಮಹಾದೇವಿಯದಲ್ಲ; ಆದರೆ ಶಬ್ದಗಳು ಮಾತ್ರ ಒಳಗಿಳಿದು ಸುಪ್ತಚೇತನದಲ್ಲಿ ಅಡಗಿಕೊಂಡವು.

'ಥೂ....ಎಂಥಾ ಕೆಟ್ಟೋಳು....' ಕಣ್ಣೊರಸಿಕೊಂಡು ಮೂಗೇರಿಸಿದಳು ಮಹಾದೇವಿ.

'ಇದು ಕಥೆ ಕಣಮ್ಮ ಹಾಗೆಲ್ಲ ಅಳಬಾರದು' ಲಿಂಗಮ್ಮ ಬುದ್ಧಿ ಹೇಳಿದಳು. ಕಥೆ ಮುಂದರಿಯಿತು. ಚಿಕ್ಕಮ್ಮ ತೋರಿಸಿದ ತಿರಸ್ಕಾರವನ್ನೇ ಒಂದು ಆಹ್ವಾನವಾಗಿ ಸ್ವೀಕರಿಸಿ ಧ್ರುವಸಾಧನೆಗೆ ಹೊರಟಾಗ ಮಹಾದೇವಿಗೆ ಕೆಚ್ಚು ಮೂಡಿತು. ಸಾಮಾನ್ಯ ಪದವಿ, ಸ್ಥಾನಕ್ಕಾಗಿ ಬಯಸದೆ ಅವನು ಅಸಾಮಾನ್ಯ ಪದವಿ ಪಡೆದಾಗ ಎಲ್ಲಿಲ್ಲದ ಅಭಿಮಾನ.

ಕಥೆ ಮುಗಿದಾಗ ಮುಖದ ಮೇಲೆ ಸಂಭ್ರಮದ ಅಲೆ ತೇಲಿದರೂ ಏಕೋ ಅಂತರ್ಮುಖಳಾಗಿದ್ದಂತೆ ಎನಿಸಿತು.

'ಮಹಾದೇವಿ....' ತಾಯಿ ಭುಜ ಹಿಡಿದು ಅಲುಗಿಸಿದಳು.

'ಪುಟ್ಟಾ....ಹೊತ್ತಾಯ್ತು ಊಟಕ್ಕೆ ಬರಲ್ವೇನಮ್ಮ....' ಲಿಂಗಮ್ಮ ಮಾತನಾಡಿಸಿದಳು.

'ಅವ್ವಾ, ನಾನೂ ದೇವರನ್ನ ಕಾಣಬಹುದೇನವ್ವಾ....' ಅದೇ ತನ್ಮಯತೆಯಲ್ಲೇ ಕೇಳಿದಳು.

'ಹೂಂ. ಕಾಣಬಹುದಮ್ಮಾ....' ತಾಯಿ ನುಡಿದಾಗ ಮೌನವಾಗಿ ಒಳಸಾಗಿ ಊಟ ಮಾಡಿದಳು.

ಕಥೆಯ ಪರಿಣಾಮ ಅಷ್ಟಕ್ಕೇ ನಿಂತಿರಲಿಲ್ಲ. ರಾತ್ರಿಯ ಒಂದು ಹೊತ್ತಿಗೆ ಅಳುವಿನ ಶಬ್ದ ಕೇಳಿದಾಗ ಲಿಂಗಮ್ಮನಿಗೆ ಎಚ್ಚರವಾಯಿತು. ಮಗಳು ಕೆಟ್ಟ ಕನಸನ್ನೇನಾದರೂ ಕಂಡಳೇನೋ ಎಂದು ಕಣ್ಮುಚ್ಚಿಕೊಂಡೇ ತಟ್ಟಲು ಯತ್ನಿಸಿದಳು. ಆದರೆ ಹಾಸುಗೆ ಬರಿದಾಗಿತ್ತು. ಒಮ್ಮೆಲೇ ಗಾಬರಿಯಿಂದ ಕಣ್ತೆರೆದಾಗ ಏನೂ ಕಾಣಿಸಲಿಲ್ಲ. ಓಂಕಾರನನ್ನು ಎಬ್ಬಿಸಿದಾಗ ಅವನೂ ವಿಸ್ಮಿತನಾದ. ಸಣ್ಣಗೆ ಉರಿಯುತ್ತಿದ್ದ ದೀವಿಗೆಯ ಕುಡಿ ಚಾಚಿ ದೊಡ್ಡದು ಮಾಡಿದಳು ಲಿಂಗಮ್ಮ; ಆ ಬೆಳಕಿನಲ್ಲಿ ಬಾಗಿಲ ಅಗಳಿಯನ್ನು ಹಿಡಿಯಲು ಯತ್ನಿಸಿ,

ಸೋತು ಅಳುತ್ತಿದ್ದ ಮಹಾದೇವಿ ಕಂಡಳು. ದಂಪತಿಗಳು ಮಗಳ ಬಳಿ ಧಾವಿಸಿದರು; ಮಹಾದೇವಿಯ ತಲೆ ನೇವರಿಸಿದರು.

'ಹೊರಗೆ ಹೋಗಬೇಕಾಗಿತ್ತೇ. ನನ್ನ ಎಬ್ಬಿಸಲಿಲ್ಲವೇಕೆ?' ಮಗಳ ಕಣ್ಣೊರಸಿದಳು.

'ಮತ್ತೆ....ನಾನು ದೇವರನ್ನ ಕಾಣೋಕೆ ಕಾಡಿಗೆ ಹೋಗಬೇಕಂತ ಬಂದೆ. ಈ ಅಗಳಿ ತೆಗೆಯಕ್ಕೆ ಬರಲಿಲ್ಲ....' ನಿಸ್ಸಹಾಯಕ ಧ್ವನಿಯಲ್ಲಿ ಮಹಾದೇವಿ ಬಿಕ್ಕಿದಳು. ಓಂಕಾರ ಸ್ತಂಭೀಭೂತನಾದ. ಲಿಂಗಮ್ಮನಿಗೆ ತಾನು ಹೇಳಿದ ಕಥೆಯ ಪರಿಣಾಮದ ಫಲವಿದು ಎಂದರಿವಾಯಿತು.

ಮರದ ಬಾಗಿಲು ಬಹಳ ಗಟ್ಟಿಮುಟ್ಟಾಗಿದ್ದು, ಒಳಮಗ್ಗುಲಿಗೆ ದಪ್ಪನಾದ ಅಗಳಿ ಇದ್ದಿತು. ಅದು ಪೂರ್ಣವಾಗಿ ಕೈಗೆ ನಿಲುಕದೆ ಇದ್ದುದರಿಂದ ಮಹಾದೇವಿ ಅಳತೊಡಗಿದ್ದಳು.

'ಪುಟ್ಟ ಮಕ್ಕಳು ಕಾಡಿಗೆ ಹೋಗಬಾರದು....' ಮಗಳನ್ನು ಎತ್ತಿಕೊಂಡು ಹೇಳಿದಳು ಲಿಂಗಮ್ಮ.

'ಧ್ರುವ ಹೋಗಿದ್ದನಲ್ಲ....'

'ಅವನು ನಿನ್ನಷ್ಟು ಪುಟ್ಟವನಲ್ಲ; ಇನ್ನೂ ದೊಡ್ಡೋನಾಗಿದ್ದ, ನಿನ್ನಷ್ಟು ಎಳೆಯವರು ಹೋದರೆ ಹುಲಿ ಕರಡಿ ತಿಂದುಹಾಕಿಬಿಡ್ತಾವೆ....' ತಾಯಿ ಕರೆತಂದು ಮಲಗಿಸಿ ತಟ್ಟಿದಳು. ಮಹಾದೇವಿ ಮಲಗಿದ ಬಳಿಕವೂ ತನ್ನ ಸೋಲಿಗಾಗಿ ಬಿಕ್ಕುತ್ತಲಿದ್ದಳು.

ಹಸಿಯ ಅರಲು ಗೋಡೆಯಮೇಲೆ ಹರಳು ಒಗೆದಾಗ ಅದು ಅಲ್ಲಿ ಭದ್ರವಾಗಿ ತಳವೂರುವಂತೆ ಆಧ್ಯಾತ್ಮಿಕ ಸಂಸ್ಕಾರಗಳು ಮಹಾದೇವಿಯ ಹೃದಯದ ಮೇಲೆ ಅಚ್ಚೊತ್ತುತ್ತಿದ್ದವು. ಕೊಡಗೂಸಿನ ಕಥೆಯನ್ನು ಲಿಂಗಮ್ಮ ಹೇಳಿದ್ದಳು. ಅಂದು ಸಹ ಅಂತಹುದೇ ಪರಿಣಾಮ ಆಕೆಯ ಮೇಲೆ. ಕಥೆಯ ಸಮಾರೋಪದ ನಂತರ ಎಳೆಯರ ಸಭೆ ಚದುರಿದರೂ ಮಹಾದೇವಿ ಚಿತ್ತಾರದ ಗೊಂಬೆಯಂತೆ ನೆಲಕ್ಕಂಟಿದ್ದಳು.

ಅಂದು ರಾತ್ರಿ ಮಲಗಿದಾಗ ಕನವರಿಸುತ್ತಿದ್ದಳು. ಕನವರಿಕೆಯನ್ನು, ಓದುತ್ತ ಕುಳಿತಿದ್ದ ಓಂಕಾರ ಕೇಳಿದ. 'ಕುಡಿ....ಮಲ್ಲಿನಾಥ. ನಾನು ಕೊಡುವ ಹಾಲು ನಿನಗೆ ಬೇಡವೇ? ರುಚಿಯಿಲ್ಲವೇ? ನಾನು ಒಳ್ಳೆಯವಳಲ್ಲವೇ? ಮಲ್ಲಿಕಾರ್ಜುನಾ ಕುಡಿ....' ದೇವನ ನೆನಹನ್ನು ಮನದಲ್ಲಿ, ಸರ್ವಾಂಗದಲ್ಲಿ ತುಂಬಿಕೊಂಡು ಕನಸಿನಲ್ಲಿ ಸಹ ಕನವರಿಸುವ ಮಗಳನ್ನು ಕಂಡು ಓಂಕಾರ ಬೆಕ್ಕಸಬೆರಗಾದ.

ಭಕ್ತಿಯ ನನೆಯು ಮಹಾದೇವಿಯ ಬದುಕಿನ ಬಳ್ಳಿಯಲ್ಲಿ ನಿಧಾನವಾಗಿ ಅರಳುತ್ತಿತ್ತು. ಆ ನನೆಯಲ್ಲಿ ಸುಜ್ಞಾನದ ಚೆಲುವೂ ಮೈಗೂಡಿದಾಗ ಅದು ಇನ್ನಷ್ಟು ಕಳೆಗೊಂಡಿತು. ತಾಯಿ ಲಿಂಗಮ್ಮನ ಬೋಧೆ ಭಕ್ತಿಯ ಕಾಳನ್ನು ಹೃದಯದ ಕಣದಲ್ಲಿ ಶೇಖರಿಸುತ್ತಿದ್ದರೆ, ಶ್ರೀಗುರುಲಿಂಗದೇವರ ಮತ್ತು ಓಂಕಾರನ ವಿಮರ್ಶಾಪ್ರಜ್ಞೆ, ವಿಚಾರಪ್ರೌಢಿಮೆಗಳು ಆ ಭಕ್ತಿಯನ್ನು ವಿಚಾರದ ಗಾಳಿಯಲ್ಲಿ ತೂರಿ ಪರೀಕ್ಷಿಸಲು ಪ್ರೋತ್ಸಾಹಿಸುತ್ತಿದ್ದವು. ಬುದ್ಧಿಯ ಒರೆಗಲ್ಲಿಗೆ ಸರಿಬರದುದನ್ನು ಒಪ್ಪಲು ಆಕೆ ಎಂದೂ ಸಿದ್ಧಳಿರಲಿಲ್ಲ. ವಿಮರ್ಶಾ ಪ್ರಜ್ಞೆಗೆ ವಿರುದ್ಧವಾದುದನ್ನು ಕಂಡಾಗ ಮಹಾದೇವಿ ವಾದಕ್ಕೆ ನಿಲ್ಲುತ್ತಿದ್ದಳು.

ಮಹಾದೇವಿಗೆ ಸುಮಾರು ಹತ್ತು ವರ್ಷಗಳಾಗಿರಬೇಕು. ಒಂದು ದಿವಸ ಓಂಕಾರ ಬೆಳಗಿನ ಬೆವಹಾರವನ್ನು ಪೂರೈಸಿಕೊಂಡು ವಿರಾಮಕ್ಕಾಗಿ ಮನೆಗೆ ಬಂದಿದ್ದ. ಊಟಕ್ಕೆ ಮುನ್ನ ಪಡಸಾಲೆಯಲ್ಲಿ ತಂದೆ, ಮಗಳು ಮತ್ತು ತಾಯಿಯ ನಡುವೆ ಮಾತುಕತೆ ಸಾಗಿತ್ತು. ಆಗ ಸಮಗಾರ ಮಾದಯ್ಯ ಹೊಲಿದ ಚಪ್ಪಲಿಗಳನ್ನು ಕೊಡಲು ಬಂದ.

'ಹೊಸ್ತಿಲ ಹೊರಗೆ ನಿಂತು ಒಳಗಿರಿಸಿ ಹೋಗು....', ಲಿಂಗಮ್ಮ ಕೂಗಿ ಹೇಳಿದಳು.

'ಅವ್ವಾ; ಹೊಟ್ಟೆ ಹಸ್ತೈತೆ. ಏನಾದರೂ ತುತ್ತು ನೀಡವ್ವ....' ಕರುಣಾಜನಕ ಧ್ವನಿಯಲ್ಲಿ ಕೇಳಿದ.

'ನಿನಗೆ ಗೊತ್ತಿಲ್ಲೇನು ಮಾದಯ್ಯ? ನಮ್ಮ ಮನೆಯಿಂದ ಕೀಳುಜನಕ್ಕೆ ಅನ್ನ, ನೀರು ಕೊಡಲ್ಲ ಎಂದು....' ಲಿಂಗಮ್ಮ ಏರಿದ ಧ್ವನಿಯಲ್ಲಿ ಹೇಳಿದಳು.

'ಅವ್ವಾ, ಯಾಕೆ ಕೊಡಬಾರದವ್ವಾ....' ಮಹಾದೇವಿ ಚಕಿತಳಾಗಿ ಕೇಳಿದಳು.

'ಕೀಳುಜನ ಕಣವ್ವಾ. ಕೊಟ್ಟರೆ ದೇವರಿಗೆ ಸಿಟ್ಟು ಬಂದು ಮೈಲಿಗೆ ಆಗಿ ಹಾವು, ಚೇಳು ಬರ್ತಾವೆ.'

'ಹಸಿದೋರಿಗೆ ಅನ್ನ ನೀಡಿದರೆ ದೇವರಿಗೆ ಸಿಟ್ಟು ಬರುತ್ತಾ? ಇದೇನವ್ವಾ ಈ ತತ್ತ್ವ, ಹೀಗೆ ಯಾರು ಹೇಳ್ತಾರೆ?' ಮಹಾದೇವಿ ವ್ಯಾಕುಲತೆಯಿಂದ ಕೇಳಿದಳು.

'ಇದು ಮನೆ ಹಿರಿಯರು ನಡೆಸಿಕೊಂಡು ಬಂದ ಸಂಪ್ರದಾಯ ಕಣಮ್ಮ....'

'ಉಪಕಾರ ಮಾಡಿದರೆ ಸಿಟ್ಟಾಗೋದಿದ್ದರೆ ಅಂಥ ಸುಡುಗಾಡು ದೇವರ ಪೂಜೆ ಏತಕ್ಕೆ ಮಾಡಬೇಕವ್ವಾ....?' ಮಹಾದೇವಿಯ ವ್ಯಾಕುಲತೆ ಸಿಟ್ಟಾಗಿ ಪರಿವರ್ತಿತವಾಗಿತ್ತು.

'ತಪ್ಪಾಯ್ತು ಅನ್ನವ್ಮ, ಹಾಗೆಲ್ಲ ದೇವರನ್ನು ಬೈಯಬಾರದು....'

'ತಪ್ಪಿಲ್ಲ....ಒಪ್ಪಿಲ್ಲ. ನಮ್ಮಂತೆ ಕೈಕಾಲು, ದೇಹ, ಹೃದಯ, ಜನನ-ಮರಣ ಎಲ್ಲ ಇರುವ ಮಾನವಜೀವಿಯನ್ನು ಕೀಳು ಅನ್ನೋದು ಯಾವ ಧರ್ಮವಪ್ಪಾ....? ಸುಡಬೇಕು ಅದನ್ನು....'

ತನ್ನ ಮಗಳ ವಿಚಾರಪ್ರೌಢಿಮೆ ಕಂಡು ಓಂಕಾರನಿಗೆ ಆನಂದವೆನಿಸಿತು. ಆದರೆ ಲಿಂಗಮ್ಮನಿಗೆ ಹಿರಿಯರ ಸಂಪ್ರದಾಯವನ್ನು ಕೆದಕಿ ನುಡಿಯುವ ಮಗಳದು ಉದ್ಧಟತನ ಎನ್ನಿಸಿತು.

'ಇದೆಲ್ಲ....ನಿಜವೇನಪ್ಪಾ? ಹಾಗಾದರೆ ಬಸವಣ್ಣನವರು ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಅಂತ ಏಕೆ ಹೇಳಿದರಪ್ಪಾ?'

'ಮಹಾದೇವಿ, ಈ ಜಾತಿ ಗೀತಿ ಸ್ವಾರ್ಥಮಾನವನ ಪ್ರಯತ್ನದ ಫಲಗಳಮ್ಮ; ಅವಕ್ಕೆ ಯಾವ ಅರ್ಥವಿಲ್ಲ. ಇಷ್ಟು ದಿನ ಪ್ರವಚನ ಕೇಳಿದ್ದಾಳೆ, ಗುರುಲಿಂಗದೇವರ ತತ್ತ್ವವಿಚಾರ ಕೇಳಿದ್ದಾಳೆ. ಆದರೂ ನಿಮ್ಮಪ್ಪನಿಗೆ ಸಂಪ್ರದಾಯದ ಜಿಗುಟು ಬಿಡಲೊಲ್ಲದು....' ಓಂಕಾರ ಹೇಳಿದ.

'ಸರಿ, ಸರಿ, ಮಗಳ ಕುಣಿತಕ್ಕೆ ತಾಳ ಹಾಕ್ರಿ....' ಲಿಂಗಮ್ಮ ರೋಷಗೊಂಡು ನುಡಿದಳು.

'ಬಸವಣ್ಣೋರು ಹೇಳಿದಂತೆಲ್ಲ ನಾವು ನಡೆಯಲಿಕ್ಕೆ ಸಾಧ್ಯವೆ?' ಲಿಂಗಮ್ಮನ ಮರುಪ್ರಶ್ನೆ.

'ಎಲ್ಲರೂ ನಡೆಯಲೆಂದು ತಾನೇ ಅವರು ಹೇಳೋದು....' ಮಹಾದೇವಿ ಹೇಳಿ, ತಂದೆಯ ಕಡೆಗೆ ತಿರುಗಿ ಪ್ರಶ್ನಿಸಿದಳು.

'ನೂರಾರು ವರ್ಷಗಳಿಂದ ಹಿರಿಯರು ತಪ್ಪು ಮಾಡಿದ್ದಾರೆ ಅಂದ್ರೆ, ಅದೇ ತಪ್ಪನ್ನೇ ಮುಂದುವರಿಸಬೇಕೇನಪ್ಪಾ? ಗಂಡ ಹುಟ್ಟು ಕುರುಡ ಅಂತ, ಕಣ್ಣಿದ್ದ ಹೆಂಡತಿಯೂ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕುರುಡಿಯಾಗೋದು ಹುಚ್ಚುತನ. ಕಣ್ಣಿರುವ ತಾನು ಗಂಡನ ಸೇವೆ ಮಾಡುವುದು ಬಿಟ್ಟು, ತಾನೂ ಬಟ್ಟೆ ಕಟ್ಟಿಕೊಂಡು ಇಬ್ಬರೂ ಹೆರರಿಗೆ ಹೊರೆಯಾಗಬೇಕೆ? ವಿಚಿತ್ರ ಧರ್ಮಶಾಸ್ತ್ರಗಳು! ಅಜ್ಞಾನದಿಂದ ಹಿಂದಿನವರು ತಪ್ಪು ಮಾಡಿದ್ದರೆ ನಮ್ಮಪ್ಪ ಬಸವಣ್ಣನವರು ಕೊಟ್ಟ ಧರ್ಮಶಾಸ್ತ್ರಾಧಾರದ ಕಣ್ಣಿದ್ದೂ ಸಂಪ್ರದಾಯದ ಬಟ್ಟೆಯಿಂದ ಕಣ್ಣು ಕಟ್ಟಿಕೊಳ್ಳಬಯಸುತ್ತಾಳೆ....'

'ಹೋಟುದ್ದದ ಹುಡುಗಿ ದೊಡ್ಡವರ ಸಂಪ್ರದಾಯ ಅಲ್ಲಗಳೆಯಬೇಡ.... ಬಸವಣ್ಣ — ಅವತಾರಿಕ. ಸಮಾನತೆಯ ಹೋರಾಟಕ್ಕಾಗಿ ತಂದೆ

ತಾಯಿಗಳನ್ನು, ಹುಟ್ಟಿನ ನೆಲೆಯನ್ನೇ ಹರಿದು ಬಂದವನು. ಅಂಥ ಸುಧಾರಣೆ ಮಾಡಲಿಕ್ಕೆ ನಮಗೆಲ್ಲ ಸಾಧ್ಯವೆ?....'

'ಯಾಕೆ ಆಗಲ್ಲ; ಇಂದು ಆ ಮಾದಯ್ಯಗೆ ಊಟ ಕೊಡದಿದ್ದರೆ ನಾನು ಉಂಡರೆ ಕೇಳು? ನಾನೂ ಬಸವಣ್ಣನಂಗೆ ಹೋಗಿಬಿಡ್ತೀನಿ....' ಮಹಾದೇವಿ ಛಲದಿಂದ ನುಡಿದಳು. ಲಿಂಗಮ್ಮ ದಿಗ್ಭ್ರಾಂತಳಾದಳು, ಮಗಳ ಛಲದ ವಾಣಿಯನ್ನು ಕೇಳಿ.

'ಅಪ್ಪಾ, ಮಡಿ ಉಟ್ಟುಕೊಂಡು ಲಿಂಗಭಕ್ತಿ ಮಾಡೋದು ಬಹಳ ಸುಲಭ. ಆದರೆ ಇಂತಹ ಜಂಗಮಭಕ್ತಿ ಬಹಳ ಕಷ್ಟಕರ....' ಮಹಾದೇವಿ ಹೇಳಿದಳು. ಪಟ್ಟು ಬಿಡದ ಮಗಳನ್ನು ಕಂಡು ಓಂಕಾರನಿಗೆ ಒಳಗೇ ಆನಂದ ಉಕ್ಕುತ್ತಿತ್ತು. ಈ ವೈಶಾಲ್ಯತೆಯನ್ನು ತರಬೇಕೆಂಬ ಹಂಬಲ ಅವನಿಗೆ ಹಲವು ದಿನಸಗಳಿಂದ ಇದ್ದರೂ ಲಿಂಗಮ್ಮನ ವಚನಾಸ್ತ್ರಕ್ಕೆ ಭೀತನಾಗಿ ಸುಮ್ಮನಿದ್ದ.

'ನೀವಾದ್ರೂ ಬುದ್ಧಿ ಹೇಳ್ರಿ ಈ ನಿಮ್ಮ ಮುದ್ದು ಮಗಳಿಗೆ....' ಲಿಂಗಮ್ಮ ಗಂಡನಿಗೆ ಹೇಳಿದಳು.

'ತಪ್ಪು ಮಾಡ್ತಿದ್ರೆ ಬುದ್ಧಿ ಹೇಳಬಹುದಾಗಿತ್ತು. ಆಕೆ ತಪ್ಪೇನೂ ಹೇಳ್ತಿಲ್ಲನಲ್ಲ. ಈ ತಾಯಿಯಿಂದಲಾದರೂ ಸುಧಾರಣೆ ನಮ್ಮ ಮನೆಯಲ್ಲಿ ಕಾಲಿಟ್ಟೀತೇನೋ! ಈಕೆಯಿಂದಲಾದರೂ ಸಂಪ್ರದಾಯದ ಬಂಧನ ಹರಿಯಲಿ....' ಓಂಕಾರ ಅಭಿಮಾನದಿಂದ ನುಡಿದ.

'ಬುದ್ಧಿ ಇಲ್ಲದ ಹುಡುಗಿಗೆ ಪ್ರೋತ್ಸಾಹ ಬೇರೆ ಕೊಡ್ತೀರಿ....'

ಮಹಾದೇವಿ ಪಟ್ಟುಬಿಡದೆ ಕುಳಿತಾಗ ಲಿಂಗಮ್ಮ ಸೋತು ನೂರಾರು ವರ್ಷಗಳ ಸಂಪ್ರದಾಯವನ್ನು ಮುರಿದು ಮಾದಯ್ಯನಿಗೆ ಊಟಕ್ಕಿಕ್ಕಿ ಕಳಿಸಿದಳು. ಮಗಳ ದಿಟ್ಟತನಕ್ಕಾಗಿ ತಂದೆಗೆ ಅಭಿಮಾನವೆನಿಸಿದರೂ, ಲಿಂಗಮ್ಮನ ಎದೆ ಡವಗುಟ್ಟತೊಡಗಿತು. ತನ್ನ ಮಗಳು ಎಲ್ಲಿ ಗಂಡುಬೀರಿಯಾಗುವಳೋ ಎಂದು ಒಳಗೇ ನಡುಗಿದಳು.

ಸ್ವಾಭಿಮಾನ, ದಿಟ್ಟತನದ ಪ್ರತೀಕವಾಗಿದ್ದಳು ಮಹಾದೇವಿ. ಒರಟುತನ, ಉದ್ಧಟತನಗಳು ಸಮೀಪ ಹಾಯ್ದಿರಲಿಲ್ಲ. ಆದರೆ ವಿನಯದ ಹೆಸರಿನಲ್ಲಿ ಮೂಢತನದ ತಲೆಬಾಗುವಿಕೆಯನ್ನು ಒಪ್ಪಲು ಸಿದ್ಧಳಿರಲಿಲ್ಲ. ಆಕೆಯಲ್ಲಿ ಗಂಡುತನವಿದ್ದರೂ ಗಂಡುಬೀರಿತನವಿರಲಿಲ್ಲ. ಒಂದು ದಿವಸ ಸಂಜೆ ಶಿವಮೂರ್ತಪ್ಪ ಸಹಜವಾಗಿ ಓಂಕಾರನ ಮನೆಗೆ ಆಗಮಿಸಿದ್ದ. ಹನ್ನೆರಡು ವರುಷಗಳ ಕನ್ಯೆಯಾಗಿದ್ದರೂ ಮಹಾದೇವಿ ನಾಚಿ ಒಳಸೇರುತ್ತಿರಲಿಲ್ಲ. ತಂದೆಯ ಮಗ್ಗುಲಲ್ಲಿ ಕುಳಿತಿದ್ದಳು. ಮಾತನಾಡುವ ಮಧ್ಯದಲ್ಲಿ ಶಿವ

ಮೂರ್ತಿಯ ಹಿರಿಯ ಮಗ ಯಾವುದೋ ಕಾರ್ಯಾರ್ಥ ಹೋಗಿದ್ದವನು ತಂದೆಯನ್ನು ಹುಡುಕಿಕೊಂಡು ಬಂದ. ಶಿವಮೂರ್ತಪ್ಪ ಕೇಳಿದ:

'ಹೋಗಿದ್ದ ಕೆಲಸ ಗಂಡೋ ಹೆಣ್ಣೋ?'

ಮಗ ಹೇಳಿದ: 'ಗಂಡು.' ಸುಮ್ಮನೆ ಆಲಿಸುತ್ತಿದ್ದ ಮಹಾದೇವಿ ಕೇಳಿದಳು:

'ದೊಡ್ಡಪ್ಪ, ಹಾಗಂದರೇನು?'

'ಹೋದ ಕೆಲಸ ಆಯ್ತೋ, ಹೋಯ್ತೋ ಎನ್ನಲು ಬಳಸುವ ಭಾಷೆ....'

'ಸರಿ, ಅಣ್ಣ ಹೇಳಿದ್ನಲ್ಲ ಗಂಡು ಅಂತ. ಹಂಗೆ ಅಂದರೆ....'

'ಗಂಡು ಅಂದರೆ ಗೆಲವು, ಹೆಣ್ಣು ಅಂದರೆ ಸೋಲು....' ಸಹಜ ಧ್ವನಿಯಲ್ಲಿ ಶಿವಮೂರ್ತಪ್ಪ ಹೇಳಿದ. ಆನೆಯ ಗಂಡಸ್ಥಲವನ್ನು ತಿವಿದಾಗ, ಅದರ ಆವೇಶ ಕೆರಳುವಂತೆ ಮಹಾದೇವಿಯ ಸ್ವಾಭಿಮಾನ ಕೆರಳಿತು.

'ಹೆಣ್ಣು ಅಂದರೆ ಸೋಲಿನ ಸಂಕೇತವೇ ದೊಡ್ಡಪ್ಪ....? ಇದು ಸ್ತ್ರೀಕುಲಕ್ಕೆ ಅಪಮಾನಕಾರಕವಲ್ಲವೆ? ಸೋಲೋ ಗೆಲವೋ ಅಂತ ಕೇಳಲು ಕಾಯೋ, ಹಣ್ಣೋ ಎನ್ನಬಹುದು. ಅದು ವಿಶಿಷ್ಟಸ್ಥಿತಿಯನ್ನು ಹೇಳಿದಂತಾಗುವುದು. ಕೆಲವು ಸಲ ಸೋಲು, ಗೆಲುವಿನ ಮೊದಲ ಮೆಟ್ಟಿಲಾಗಬಹುದು. ಆದರೆ ಹೆಣ್ಣೋ ಗಂಡೋ ಎಂಬಲ್ಲಿ ಹೆಣ್ಣಿನ ಬಗ್ಗೆ ಎಂತಹ ತಿರಸ್ಕಾರ ವ್ಯಕ್ತವಾಗಿದೆ. ಅಬ್ಬಾ!....' ಏನೋ ಅಪಮಾನವಾದಂತೆ, ಸ್ತ್ರೀಕುಲಪ್ರತಿನಿಧಿಯಾದ ತಾನೇ ಆ ಅಪಮಾನವನ್ನು ಹೊರಬೇಕಾದಂತೆ ಪ್ರತಿಕ್ರಿಯೆ ವ್ಯಕ್ತಪಡಿಸಿದಳು.

'ಅವೆಲ್ಲ ರೂಢಿಯಲ್ಲಿ ಬಂದಿವೆ ಕಣವ್ವ,' ಶಿವಮೂರ್ತಪ್ಪ ಹೇಳಿದ.

'ಓ....ಎಲ್ಲದಕ್ಕೂ ರೂಢಿ....ಸಂಪ್ರದಾಯ! ಇವೇ ಶಬ್ದಗಳು. ಇವರ ಕಟ್ಟನ್ನು ಮುರಿಯುವ ಪ್ರಯತ್ನವೇ ಇಲ್ಲ. ಪ್ರತಿ ಆಚರಣೆಯ ಮಾತಿನಲ್ಲೂ ಹೆಣ್ಣಿನ ಬಗ್ಗೆ ತಿರಸ್ಕಾರ ವ್ಯಕ್ತವಾಗಿದೆ....'

'ಹೆಂಗಸಿನ ಬುದ್ಧಿ ಮೊಳಕಾಲ ಕೆಳಗೆ, ಅಂತ ಹೇಳ್ತಾರವ್ವ' ಶಿವಮೂರ್ತಪ್ಪ ಹೇಳಿದ.

'ಆದೂ ಸರೀನೆ, ಹೆಂಗಸಿನ ಮೊಳಕಾಲ ಬುದ್ಧಿ ಪುರುಷರ ತಲೆಮಟ್ಟದ ಬುದ್ಧಿಗೆ ಸಮ....' ನಕ್ಕಳು ಮಹಾದೇವಿ.

'ಮಹಾದೇವಿ, ಇತ್ತೀಚಿಗೆ ನಿನ್ನ ಉದ್ಧಟತನ ಬಹಳವಾಯಿತು. ಪ್ರಳಯಾಂತಕಬುದ್ಧಿಗೆ ಬೆಂಕಿ ಬಿತ್ತು; ಹಿರಿಯರಾದ ಅವರ ಜೊತೆಗೆ ಎದುರು ವಾದಿಸ್ತೀಯಾ?....' ಲಿಂಗಮ್ಮ ಗದರಿದಳು.

'ಅವ್ವಾ....ಉದ್ಧಟತನ ಹೇಗಾದೀತು? ಸ್ತ್ರೀಯರ ಬೆನ್ನಮೇಲೆ ಸಂಪ್ರ

ನ್ಯಾಯದ ಭಾರವಾದ ಹೇರು ಹೊರಿಸಿ ತಲೆ ಎತ್ತದಂತೆ ಮಾಡಿದ್ದೀರಲ್ಲಾ ಎಂದು ಪ್ರಶ್ನಿಸುವುದು ವಿಮರ್ಶಾಶಕ್ತಿಯೇ ವಿನಾ ಉದ್ಧಟತನವಲ್ಲ. ಹೆಂಗಸರಿಗೂ ದೇವರು ಬುದ್ಧಿ ಕೊಟ್ಟಿದ್ದಾನವ್ವಾ....' ಮಹಾದೇವಿ ಉತ್ತರಿಸಿದಳು.

'ಲಿಂಗಮ್ಮಕ್ಕ, ಹೆಣ್ಣಾಗಿ ಬೆಳೆಯಬೇಕಾದ ಮಗಳನ್ನು ಅತಿ ಮುದ್ದು ಮಾಡಿ ಗಂಡಿನಂತೆ ಬೆಳೆಸಿದ್ದೀರಲ್ಲಾ, ಅದು ನಿಮ್ಮ ತಪ್ಪು. ಮಿಂಚಿ ಹೋದುದಕ್ಕೆ ಚಿಂತಿಸಿದರೆ ಏನೂ ಆಗದು. ಎಳೆಯ ಗಿಡಕ್ಕೆ ಕೋಲು ನೆಟ್ಟು ದಾರ ಬಿಗಿದರೆ ನೇರವಾಗಿ ಬೆಳೆಯುವುದು; ಮೊದಲೇ ಸೊಟ್ಟವಾಗಿ ಬೆಳೆಯಲು ಬಿಟ್ಟು, ಬಲಿತುದನ್ನು ಬಗ್ಗಿಸಲಾರದೆ ಅತ್ತರೆ ಏನು ಪ್ರಯೋಜನ....?' ಶಿವಮೂರ್ತಪ್ಪ ಕೊಂಕು ಮಾತನಾಡಿದ. ಹದವರಿತು ಬಡಿವ ಕಮ್ಮಾರನಂತೆ ಮಾರ್ಮಿಕವಾಗಿ ನುಡಿದ :

'ಇನ್ನಾದರೂ ಬುದ್ಧಿ ಕಲಿತು, ಮಠಕ್ಕೆ ಶಾಲೆ ಕಲಿಯಲಿಕ್ಕೆ ಹೋಗೋದು ಬಿಡಿಸಿ, ವರನನ್ನು ನೋಡಿ ಲಗ್ನ ಮಾಡಿರಿ. ಹೀಗೇ ಆದರೆ ಮಗಳು ಕೈಗೆ ಸಿಗದಂತೆ ಆದಾಳು....ಹಾಲು ಉಕ್ಕಲಿಕ್ಕೆ ಮೊದಲೇ ಎಚ್ಚರವಾಗಿರಬೇಕು. ಉಕ್ಕಿದಮೇಲೆ ಬಳಿದುಕೊಳ್ಳಲಿಕ್ಕೆ ಬರದು. ನಾನೂ ಎಂಟು ಮಕ್ಕಳ ತಂದೆ; ಅನುಭವದಿಂದ ಹೇಳ್ತೀನಿ. ನಾನು ಹೊರಡ್ತೀನಿ ಅಕ್ಕ....' ಶಿವಮೂರ್ತಪ್ಪ ಹೇಳಿ ಮನೆಯ ಕಡೆ ಹೊರಟ.

ಮಳೆ ಬಿಟ್ಟಮೇಲೂ ಮರದ ಹನಿ ತೊಟ್ಟಿಕ್ಕುವಂತೆ ಲಿಂಗಮ್ಮನ ಗೊಣಗೊಣ ನಡೆದೇ ಇತ್ತು.

'ಇನ್ನಾದರೂ ಬುದ್ಧಿ ಕಲಿತೀರೋ ಇಲ್ಲವೋ. ಬಂದವರ ಮುಂದೆ ಅಲ್ಲದ ಸಲ್ಲದ ಮಾತನಾಡಿ ಮನೆತನದ ಗೌರವ ಕಳೀತಾಳೆ ನಿಮ್ಮ ಜಾಣ ಮಗಳು....'

'ಲಿಂಗಾ....ಆಕೆಯ ಮಾತಿನಲ್ಲಿ ಎಂತಹ ವಿಮರ್ಶಾಪ್ರಜ್ಞೆ ಇದೆ! ಆಳವಾಗಿ ಬೇರು ಬಿಟ್ಟಿರುವ ಮೂಢಸಂಪ್ರದಾಯ ವೃಕ್ಷವನ್ನೇ ಅಲುಗಿಸುವ ಸಾಹಸ ಅಡಗಿದೆ....'

'ಸರಿಹೋಯ್ತು. ನಿಮ್ಮ ಈ ಮಾತುಗಳು ಅವಳ ಒರಟುತನಕ್ಕೆ ಪ್ರೋತ್ಸಾಹ ಕೊಡುತ್ತವೆ. ಈ ಊರಿನಲ್ಲಿ ಯಾರೂ ಹೆಣ್ಣುಮಕ್ಕಳು ಸಾಲೆಗೆ ಹೋಗ್ತಿರಲಿಲ್ಲ. ಇವಳನ್ನು ಕಳಿಸುವುದರ ಜೊತೆಗೆ ಅವರಿವರನ್ನು ಒತ್ತಾಯಿಸಿ ಅವರ ಹೆಂಗೂಸುಗಳನ್ನೂ ಕಳಿಸುವಂತೆ ಮಾಡಿದಿರಿ. ಅವರೆಲ್ಲರು ಮಕ್ಕಳಿಗೆ ಹತ್ತು ವರ್ಷ ಆಗುವುದರೊಳಗೆ ಬಿಡಿಸಿ ಮನೆಯಲ್ಲಿ ನಿಲ್ಲಿಸಿಕೊಂಡರು. ಈಕೆಗೆ ಹನ್ನೆರಡು ವರ್ಷಗಳಾಗಿದ್ದರೂ ಇನ್ನೂ ಮಠಕ್ಕೆ ಹೋಗಿ ಗಂಡು ಹುಡುಗರ

ಮಧ್ಯೆ ಕುಳಿತು ಸಾಲಿ ಕಲಿಯೋದು ಬಿಡಿಸಲಿಲ್ಲ. ಹೀಗಾದರೆ ಮನೆತನದ ಮಾನ ಉಳಿದೀತೆ?....' ಲಿಂಗಮ್ಮ ಸಿಟ್ಟಿನಿಂದ ನುಡಿದಳು.

'ಅವ್ವಾ, ವಿದ್ಯೆ ಕಲಿಯೋದು ಪಾಪದ ಕೆಲಸ ಅಲ್ಲ ಕಣವ್ವ. ಮನುಷ್ಯನ ಕೀರ್ತಿಗೆ ಮುಖ್ಯ ಸಾಧನ ವಿದ್ಯೆ....'

'ನೀ ಸುಮ್ನಿರು. ಎಲ್ಲದರಲ್ಲೂ ಮಾತನಾಡಬೇಡ....ನೀವು ಹೇಳ್ರಿ.'

'ಲಿಂಗಾ....ಇತ್ತೀಚಿಗೆ ನೀನು ಬಹಳ ಲೌಕಿಕಳಾಗುತ್ತಿರುವೆ. ಮಹಾದೇವಿಯ ದಿಟ್ಟತನವನ್ನು ಒರಟುತನ ಎಂದು ಭಾವಿಸಿರುವೆ. ಎಲ್ಲಿಗ್ಹೋಗಿ ವಿದ್ಯೆ ಕಲಿತರೇನಂತೆ; ನನ್ನ ಮಗಳು ರತ್ನ! ತಿಪ್ಪೆಯಲ್ಲಿದ್ದರೂ ಮಂಕಾಗೋದಿಲ್ಲ....' ಆತ್ಮವಿಶ್ವಾಸದಿಂದ ಓಂಕಾರ ಹೇಳಿದ.

'ಅವಳ ನೃತ್ಯಕ್ಕೆ ನಿಮ್ಮದು ತಾಳ! ನನಗೇನೂ ಆಕೆಯ ಹಿತರಕ್ಷಣೆ ಸಂಬಂಧವಿಲ್ಲವೇನೋ ಅನ್ನುವಂತೆ ಮಾತನಾಡ್ತೀರಿ....' ಲಿಂಗಮ್ಮ ಮುನಿಸಿನಿಂದ ಒಳಗೆ ಹೋದಳು.

೧೦. ವಿರಕ್ತಿಯ ಕಿಡಿ

ತಾಯಿ ತಂದೆಯಿಂದ ಬಳುವಳಿಯಾಗಿ ಬಂದ ಸದ್ಭಕ್ತಿ, ಸುಜ್ಞಾನದೊಡನೆ ಮಹಾದೇವಿಯ ವ್ಯಕ್ತಿತ್ವದ ಹೂವಿನಲ್ಲಿ ವಿರಕ್ತಿಯ ಸೌರಭವೂ ಸೂಸ ತೊಡಗಿತು. ಇದಕ್ಕೆ ಸ್ಫೂರ್ತಿ ಸಿಕ್ಕಿದ್ದು ಗುರುಲಿಂಗದೇವರ ಜೀವನದಿಂದ. ಅವರ ತೀಕ್ಷ್ಣವೈರಾಗ್ಯ, ತಪಃಸಾಧನೆ ಅಪೂರ್ವ ಪ್ರಭಾವವನ್ನು ಬೀರಿದ್ದವು. ಬಾಲ್ಯದಿಂದಲೂ ಆಕೆಯ ವರ್ತನೆಯಲ್ಲಿ ವಿರಕ್ತಿಯ, ಲೌಕಿಕ ಅನಾಸಕ್ತಿಯ ಕಿಡಿಗಳು ಆಗಾಗ ಸಿಡಿದು ತೋರುತ್ತಿದ್ದವು.

ಪುಟ್ಟ ಹೆಣ್ಣು ಹುಡುಗಿಯರು ಗೊಂಬೆಯೊಂದನ್ನು ಮಡಿಲಲ್ಲಿ ಹಾಕಿಕೊಂಡು ತಮ್ಮ ಮಗುವೆಂದು ಭಾವಿಸಿಕೊಂಡು, ಅದಕ್ಕೆ ಮೀಯಿಸಿ, ಬಟ್ಟೆ ಸುತ್ತಿ, ತೊಟ್ಟಿಲಿಗೆ ಹಾಕಿ ಆಟವಾಡುತ್ತಿದ್ದರೆ ಮಹಾದೇವಿಗೆ ಅದರತ್ತ ಆಸಕ್ತಿಯಿಲ್ಲ. 'ನಿನಗೆ ಮಗುವಿಲ್ಲವೇನು?' ಎಂದು ಓರಗೆಯ ಹುಡುಗಿಯರು ಕೇಳಿದರೆ, ಯಜಮಾನಿಯಂತೆ ಮಹಾದೇವಿ ಹೇಳುತ್ತಿದ್ದಳು:

'ನಂಗೆ ಬೇಡಮ್ಮ....'

'ಏಕೆ, ಅಪ್ಪನ ಕೇಳೇ, ಕೊಡುಸ್ತಾಳೆ....' ಎಂದರೆ,

'ಅವ್ರು ಪೂಜೆ ಮಾಡಕ್ಕೆ ಬಿಡಲ್ಲ, ಅಳ್ತವೆ; ಕೊಳಕು ಮಾಡ್ತವೆ, ಹಟ ಮಾಡ್ತವೆ....' ಎನ್ನುತ್ತಿದ್ದಳು. ಲಿಂಗಮ್ಮನ ಪರಿಚಯದ ಸ್ನೇಹಿತೆ ಗಂಗಮ್ಮ ಒಂದು ದಿನ ಹೇಳಿದ್ದಳು:

'ಲಿಂಗಮ್ಮಾ, ನನ್ನ ಪ್ರಾರಬ್ಧ ನೋಡು. ಮನೆ ತುಂಬ ಮಕ್ಕಳು. ಮಠಕ್ಕೆ ಹೋಗ್ತೀನಿ ಪ್ರವಚನ ಕೇಳ್ತೀನಿ. ನನಗೂ ನಿನ್ನಂತೆ ಪೂಜೆ ಮಾಡ ಬೇಕು ಅಂತ ಆಸೆ....ಆದರೆ ಈ ಪಿಶಾಚಿಗಳು ಕುಯ್ಯೋ, ಮುರ್ರೋ ಅಂತಾವೆ ....ಪೂಜೆ ಮಾಡೋಕ್ಕೂ ನೆಮ್ಮದಿಯಿಲ್ಲ. ಬರೀ ಇವುಗಳ ಹೊಲಸು ಬಳಿ ಯೋದೆ ಆಗುತ್ತದೆ....'

ಗಂಗಮ್ಮನ ಮಾತು ಪುಟ್ಟ ಮಹಾದೇವಿಯ ಹೃದಯದಲ್ಲಿ ಹೊಕ್ಕು, ಮಕ್ಕಳು ಪೂಜೆಗೆ ಆತಂಕ ಎಂಬ ಭಾವವನ್ನು ಬೇರೂರಿಸಿದ್ದವು. ಮಗುವಿನಾಟ ಎಂದೂ ಸೇರುತ್ತಿರಲಿಲ್ಲ.

'ಮನೆಯಾಟ, ಗಂಡ ಹೆಂಡ್ತಿ ಆಟ ಆಡೋಣ ಬಾರೆ....ಮಹಾದೇವಿ....' ಎಂದು ಓರಗೆಯವರು ಕರೆಯುತ್ತಿದ್ದರು.

ಮನೆಯ ಹಿತ್ತಿಲಲ್ಲಿ ಗಿಡಕ್ಕೆ ಸೀರೆ ಕಟ್ಟಿ, ಮೂರು ಕಲ್ಲಿಟ್ಟು ಅದರ ಮೇಲೆ

ಮಡಿಕೆ ಚೂರು ಇಟ್ಟು ಅಡಿಗೆ ಮಾಡಿ, ಬಡಿಸುವ, ಉಣ್ಣುವ ನಟನೆಯಾಗಲಿ, ಗಂಡ ಹೆಂಡತಿ, ಅತ್ತೆ ಮಾವ ಈ ಆಟವಾಗಲಿ ಆಕೆಗೆ ಸೇರುತ್ತಿರಲಿಲ್ಲ.

'ನೀನು ಹೆಂಡ್ತಿಯಾಗು, ಶಿವಣ್ಣ ಗಂಡ ಆಗಲಿ, ನಾನು ನಿನಗೆ ಅತ್ತೆ ಆಗ್ತೀನಿ' ಎಂದು ಗೆಳತಿ ರುದ್ರಾಣಿ ಕರೆದರೆ,

'ಬೇಡಮ್ಮ... ಸಂಸಾರದ ಆಟ ನಂಗೆ ಬೇಡ, ಗಂಡ ಹೊಡೀತಾನೆ, ಹೇಳಿದಂಗೆ ಕೇಳ್ಬೇಕು ಅಂತಾನೆ. ಅವನು ಸತ್ತ್ಹೋದರೆ ನಾನು ಕುಂಕುಮ ಅಳಿಸಿ ಮುತ್ತೈದೆತನ ಕಳ್ಕಂಡು ಅಳಬೇಕಾಗುತ್ತೆ; ನಂಗೆ ಸಾಯೋ ಅಂಥ ಗಂಡ ಬೇಡ....' ಸಂಬಂಧಿಯೊಬ್ಬಳಿಗೆ ಗಂಡ ಸತ್ತಾಗ ಮಾಡಿದ್ದನ್ನು ನೋಡಿದ್ದಳು.

'ಥೋಗೇ....ಯಾವ ಆಟನೂ ಬೇಡ ಅಂತೀಯ. ನಂಗೆ ಬೇಸರ ವಾಗುತ್ತೆ.'

'ಅಂ, ಪಾರ್ವತಿ ಆಟ ಆಡಾನ ಕಣೆ....' ಉತ್ಸುಕತೆಯಿಂದ ಮಹಾದೇವಿ ಹೇಳುವಳು.

'ಏನು ಹಂಗಂದರೆ....'

'ಶಾಲೆಗೆ ಹೋಗಿದ್ನಲ್ಲ ಗುರುಗಳು ಹೇಳ್ತಿದ್ದರು. ಶಿವನನ್ನ ಒಲಿಸಿಕೋಬೇಕು ಅಂತ ಪಾರ್ವತಿ ಹಿಮಾಲಯದಲ್ಲಿ ತಪಸ್ಸಿಗೆ ಕೂತಳಂತೆ. ಮಳೆ, ಗಾಳಿ, ಬಿಸಿಲು ಯಾತಕ್ಕೂ ಹೆದರಲಿಲ್ಲವಂತೆ. ಆಮೇಲೆ ಶಿವ ಮದುವೆ ಮಾಡಿಕೊಂಡನಂತೆ....ನಾನು ಪಾರ್ವತಿ ಆಗ್ತೀನಿ. ನೀವೆಲ್ಲ ನನ್ನ ಸಖಿಯರು, ಪೂಜೆಯ ಸಲಕರಣೆ ಕೊಡಬೇಕು....'

ಓಂಕಾರನ ಮನೆಯ ಕೈದೋಟದಲ್ಲಿ, ಹೂ ಗಿಡಗಳ ನಡುವೆ ಕಟ್ಟೆಯೊಂದರ ಮೇಲೆ ಧ್ಯಾನಮಗ್ನಳಾದ ಪಾರ್ವತಿ; ಗೆಳತಿಯರು ಹೂವನ್ನು ಕಿತ್ತು ಮಾಲೆಕಟ್ಟಿ, ಮುಂಗೈಗೆ, ರಟ್ಟೆಗೆ ಬಿಗಿದಿದ್ದಾರೆ. ಪೂಜೆಗೆ ಇರಿಸಿದ್ದ ಜಪಮಾಲೆಯನ್ನು ತಾಯಿಗೆ ಕಾಣದಂತೆ ಕದ್ದು ತಂದು ಕೊರಳಿಗೆ ಹಾಕಿಕೊಂಡು, ಎದೆಯ ಮೇಲಿದ್ದ ಲಿಂಗವನ್ನು ಕೈಯೊಳಗೆ ಇರಿಸಿಕೊಂಡು ಪೂಜೆ ಆರಂಭಿಸುತ್ತಿದ್ದಾಳೆ. ಅವಳ ಗೆಳತಿಯರೆಲ್ಲ ನೀರು, ಹೂವು, ಎಲೆ ತಂದು ಒದಗಿಸುತ್ತಿದ್ದಾರೆ. 'ಓಂ ನಮಃ ಶಿವಾಯ' ಎಂದು ಕಣ್ಣು ಮುಚ್ಚಿಕೊಂಡು ಜಪಿಸುತ್ತಿದ್ದಾಳೆ.

ಓಂಕಾರ ಮಹಡಿಯ ಮೇಲಿನ ಕೋಣೆಯಲ್ಲಿ ಕುಳಿತು ಮಗಳಿಗೆ ಕಾಣದಂತೆ ಅವಳಾಟವನ್ನು ನೋಡತೊಡಗಿದ್ದ. ಅವಳ ನಡೆನುಡಿ, ಆಟಪಾಟ ಉಳಿದವರಿಗಿಂತ ಪೂರ್ಣ ಭಿನ್ನವೆನಿಸುತ್ತಿತ್ತು. ಈ ಭಿನ್ನತೆಗಾಗಿ ಅವನಿಗೆ

ಅಭಿಮಾನ ಎನಿಸಿದರೆ, ಲಿಂಗಮ್ಮನಿಗೆ ಭಯವೆನಿಸುತ್ತಿತ್ತು. ತನ್ನ ಮಗಳು ಸಹಜ ಲೌಕಿಕಪಥದಿಂದ ಎಲ್ಲಿ ದೂರಸಾಗುವಳೋ ಎಂದು ಒಳಗೇ ಭೀತಿ ಪಡುತ್ತಿದ್ದಳು. 'ಅಧ್ಯಾತ್ಮದ ಔನ್ನತ್ಯಕ್ಕೆ ನನ್ನ ಮಗಳು ಏರುವಂತಾಗಲಿ....' ಎಂದು ಓಂಕಾರ ಹರಸಿದರೆ, 'ಒಳ್ಳೆಯ ಗಂಡು ಸಿಕ್ಕಿ, ಉತ್ತಮ ಸೊಸೆಯಾಗಲಿ' ಎಂದು ಲಿಂಗಮ್ಮ ಹಂಬಲಿಸುತ್ತಿದ್ದಳು.

ಕಣ್ಣು ಮುಚ್ಚಿಕೊಂಡು ಮಂತ್ರ ಜಪ ಮಾಡುತ್ತ, ತನ್ಮಯಳಾದ ಮಹಾದೇವಿ ಬೇಗನೆ ಏಳದಿದ್ದಾಗ ಗೆಳತಿಯರು ಗಾಬರಿಗೊಂಡು ಅಲುಗಿಸಿದರು. ಕಣ್ತೆರೆದು ಸುತ್ತಲೂ ನೋಡಿದಳು :

'ಹೋಗೇ ಮಹಾದೇವಿ....ಆಟ ಅಂತ ಆಡಬೇಕು ಅಂದ್ರೆ ನೀನು ನಿಜವಾಗೂ ಮಾಡ್ತೀಯ....' ರುದ್ರಾಣಿ ಆಕ್ಷೇಪಿಸಿದಳು.

'ಕಣ್ಮುಚ್ಚಿಕೊಂಡು ಕುಳಿತಾಗ ಬೆಳ್ಳನೆ ಪರ್ವತ, ಅಲ್ಲಿ ಪಾರ್ವತಿ, ಶಿವ ಎಲ್ಲರನ್ನೂ ನೋಡಿದೆ....' ಮಹಾದೇವಿ ಹೇಳಿದಳು. ಗುರುಗಳು ಅಂದು ಹೇಳಿದ ಕಾಳಿದಾಸನ ಕುಮಾರಸಂಭವದ ಕಥೆ ಮಹಾದೇವಿಯ ಮನದ ಮೇಲೆ ಪರಿಣಾಮ ಬೀರಿತ್ತು.

ಪ್ರವಚನದ ಆಟವೂ ಆಕೆಗೆ ಬಲು ಇಷ್ಟ. ಓರಗೆಯವರನ್ನು ಕೂಡಿಸಿಕೊಂಡು ಶಾಲೆಯಲ್ಲಿ ಕಲಿತ ವಚನಗಳನ್ನು ಪುನರುಚ್ಚರಿಸುವಳು. ಹೀಗಾಗಿ ಅಧ್ಯಾತ್ಮಿಕ ಸೌರಭ ಆಟಪಾಠಗಳ ಕಣಕಣದಲ್ಲೂ ಝುಂಝುಣಿಸುತ್ತಿತ್ತು. ಉಳಿದ ಹುಡುಗಿಯರಂತೆ ತಿಂಡಿ ತೀರ್ಥಗಳಿಗಾಗಿ ಹಟಮಾಡಿದವಳಲ್ಲ. ಬಟ್ಟೆ ಬರೆ, ತೊಡಿಗೆಗಳಿಗಾಗಿ ಮುನಿಸಿದವಳಲ್ಲ. ಜಾತ್ರೆಗೆ ಕರೆದೊಯ್ಯಿರೆಂದೋ, ನೋಟಗಳನ್ನು ನೋಡಲು ಕರೆದೊಯ್ಯಿರೆಂದೋ ಎಂದೂ ರಚ್ಚೆ ಹಿಡಿದವಳಲ್ಲ.

'ಅಪ್ಪಾ, ಬಳ್ಳಿಗಾವೆಯ ಕೋಡಿಮಠದಲ್ಲಿ ಹೊಸಹೊಸ ವಚನಗಳ ಕಟ್ಟು ಉಂಟಂತೆ. ತಂದುಕೊಡಪ್ಪಾ' ಎಂದು ಮಾತ್ರ ಆಗಾಗ ಬೇಡುತ್ತಿದ್ದಳು.

ಅದಕ್ಕೆ ಕಾರಣವೂ ಇಲ್ಲದಿಲ್ಲ. ಒಂದು ದಿನ ಶಾಲೆಯ ಪಾಠ ಮುಗಿದಾಗ, ಗುರುಗಳ ಬಳಿ ಸಾಹಿತ್ಯದ ಪಾಠಕ್ಕೆ ಕುಳಿತಾಗ, ಮಾತಿನ ಮಧ್ಯೆ ಅವರು ಆಕೆಗೂ ವಚನಗಳನ್ನು ಬರೆಯಲು ಸಲಹೆ ಸೂಚಿಸಿದರು. ಅಂದಿನಿಂದ ತಾನೂ ವಚನಗಳನ್ನು ಬರೆಯಬೇಕಲ್ಲ ಎಂಬ ಆಸೆ ಒಳಗೇ ಕುದಿಯುತ್ತಿತ್ತು.

'ಮಹಾದೇವಿ, ವಚನಗಳನ್ನು ತಪ್ಪದೆ ಓದಿ ಕಂಠಪಾಠ ಮಾಡಬೇಕಮ್ಮ....' ತಾನೂ ಸಣ್ಣವಳಾಗಿದ್ದಾಗಿನಿಂದ ಯಾಂತ್ರಿಕವಾಗಿ ಅನೇಕ ವಚನಗಳನ್ನು ಓದಿದ್ದಳು.

'ವಚನಗಳು ಎಂದರೇನು ಗುರುಗಳೇ....?'

'ವಚನ ಎಂದರೆ ಮಾತು; ಆದರೆ ಮಾತನ್ನೇ ಒಂದು ಶಾಸ್ತ್ರವನ್ನಾಗಿ ಮಾಡಿದ ಮಹಾಮಹಿಮ ಬಸವಣ್ಣ. ಬಿಡಿಬಿಡಿಯಾದ ಮಾತುಗಳಾಗಿ ಪ್ರಾರಂಭವಾದ ವಚನಗಳು ಇಂದು ಒಂದು ಧರ್ಮಶಾಸ್ತ್ರವನ್ನೇ ರೂಪಿಸಿವೆ. ಹಲವಾರು ನದಿಗಳು ಸೇರಿದಾಗ ಜೀವನದಿ ಆಗುವಂತೆ, ವಚನಶಾಸ್ತ್ರವಾಹಿನಿ ಮುಂಬರುವ ಪೀಳಿಗೆಗೆ ಹರಿದುಹೋಗಬೇಕಾದರೆ ಅದು ಸತ್ವಯುತವಾಗಿ ಆಗಬೇಕು. ಈ ಮಹಾಪ್ರವಾಹಕ್ಕೆ ನಿನ್ನ ವಿಚಾರದ ವಾಹಿನಿಯೂ ಬೆರೆಯ ಬೇಕು.'

'ವಚನಶಾಸ್ತ್ರದ ವೈಶಿಷ್ಟ್ಯ ಏನು ಗುರುದೇವಾ....?'

'ಧರ್ಮಶಾಸ್ತ್ರಗಳು ಕಠಿಣವಾದ ಸಂಸ್ಕೃತದಲ್ಲಿ ಬಂಧಿತವಾಗಿ, ಸಂಸ್ಕೃತ ದೇವಭಾಷೆ, ಅನೇಕರು ಅದನ್ನು ಅರಿಯಲು ಅಸಮರ್ಥರು, ಅನರ್ಹರು ಎಂದು ಸಂಪ್ರದಾಯವು ಬೃಹತ್ ಜನಾಂಗವನ್ನು ಧರ್ಮದಿಂದ ವಂಚಿತರನ್ನಾಗಿ ಮಾಡಿದೆ ತಾಯಿ; ಇಂಥ ಪ್ರಸಂಗದಲ್ಲಿ ಬಸವಣ್ಣನು, ದೇವಭಾಷೆಯು ಶ್ರೀಸಾಮಾನ್ಯನ ಮಟ್ಟಕ್ಕೆ ಇಳಿಯಲು ಅಸಮರ್ಥವಾದಾಗ, ಮನಸ್ಸು ಮಾಡದಾಗ, ಮಾತೃಭಾಷೆಯಾದ ಕನ್ನಡವನ್ನೇ ದೇವಭಾಷೆಯ ಮಟ್ಟಕ್ಕೇರಿ ಸುತ್ತಿದ್ದಾನೆ. ತನ್ಮೂಲಕ ಜನಸಾಮಾನ್ಯರಿಗೆ ಧರ್ಮಶಾಸ್ತ್ರದ ಪರಿಚಯ ಮಾಡುವುದು ಅಷ್ಟೇ ಅಲ್ಲ, 'ಸಂಸ್ಕೃತ ಮಾತ್ರ ದೇವಭಾಷೆ, ಉಳಿದ ದ್ರವಿಡ ಭಾಷೆಗಳು, ಮಾತೃಭಾಷೆಗಳು ಮಾನವನ ಅಥವಾ ಪೈಶಾಚಿಕ ಭಾಷೆ' ಎಂಬ ಭಾಷಾ ಅಸ್ಪೃಶ್ಯತೆಯನ್ನು ತೊಡೆದುಹಾಕುತ್ತಿದ್ದಾನೆ.

'ಜನಸಾಮಾನ್ಯನ ಜಾಗೃತಿ, ಉದ್ಧಾರ, ಮಾರ್ಗದರ್ಶನ ಈ ನುಡಿಯ ಗುರಿ. ಸಾಮಾನ್ಯರಿಗೆ ತಿಳಿಯದ ದೊಡ್ಡದೊಡ್ಡ ಪಾಂಡಿತ್ಯಪೂರ್ಣ ಶಬ್ದಗಳ ಜಡಗಿಲ್ಲ; ರಾಜರನ್ನು, ಮನ್ನೆಯರನ್ನು ಅತಿಯಾಗಿ ಹೊಗಳುವ ಸ್ವಾರ್ಥ ವಿಲ್ಲ; ಪ್ರತಿಯೊಬ್ಬನನ್ನೂ ತನ್ನ ಅರಿವಿನ ಬೆಳಗಿನಲ್ಲಿ ಮುನ್ನಡೆಸಬೇಕೆಂಬ ಪ್ರಾಮಾಣಿಕ ಪ್ರಯತ್ನವಿದೆ....'

'ಇವುಗಳ ಪ್ರಾಸ, ಛಂದಸ್ಸು....ಏನುಂಟು....?' ಹಳಗನ್ನಡದ ಕಾವ್ಯಗಳ ಅಭ್ಯಾಸಗಳಲ್ಲಿ ಪರಿಣಿತಳಾಗುತ್ತಿದ್ದ ಮಹಾದೇವಿ ಪ್ರಶ್ನಿಸಿದಳು.

'ಇವು ಪದ್ಯದ ನಿಯಮಬದ್ಧ ಪ್ರಾಸಗಳ ಕಟ್ಟಿನಲ್ಲೂ ಸಿಕ್ಕಿಬಿದ್ದಿಲ್ಲ; ಗದ್ಯ ದಷ್ಟು ಸಡಿಲವಾಗಿಯೂ ಹರಿದು ಹೋಗುವುದಿಲ್ಲ, ಆದರೆ ಪದ್ಯದ ಲಯ, ನಾದವೂ ಇದೆ, ಗದ್ಯದ ಸರಳತೆ ಇದೆ. ಇವು ಒಂದು ಬಗೆಯ ಗದ್ಯಗೀತೆಗಳು ಕಣಮ್ಮ. ಬಸವಣ್ಣನ ವಚನಗಳು ಉತ್ಕೃಷ್ಟ ಉದಾಹರಣೆಗಳು. ಈ ಸಾಹಿತ್ಯ ನಿರ್ಮಾಪಕನಾದ ಅವನು ಹೇಳುವನು 'ಇಲ್ಲಿ "ಒಲಿದಂತೆ ಹಾಡುವ" ಹೃದಯದ

ಭಾವನೆಗಳ ಹೊನಲು ಇದೆಯೇ ಹೊರತು, ತಾಳಮಾನ ಸರಸ ಇತ್ಯಾದಿಗಳ ಗೊಂದಲವಿಲ್ಲ' ಎಂದು. ಆದರೆ ದಾರ್ಶನಿಕನ ಹೃದಯ ಕವಿಹೃದಯ ಕಣಪ್ಪ. ಕವಿಹೃದಯ ಸೃಷ್ಟಿಯಲ್ಲಿ ಬರೀ ಸೌಂದರ್ಯ ರಸಾಸ್ವಾದನೆ ಮಾಡಿದರೆ, ದಾರ್ಶನಿಕ ಹೃದಯ ಒಂದು ಹೆಜ್ಜೆ ಮುಂದೆ ಹೋಗಿ ಸೌಂದರ್ಯ ರಸಾಸ್ವಾದನೆಗೆ ದೈವೀಭಾವದ ಸಿಂಚನೆ ಮಾಡಿ ಸ್ವೀಕರಿಸುವುದು. ಆದ್ದರಿಂದ ಅಪ್ರತ್ಯಕ್ಷವಾಗಿ ನುಡಿಗಳಲ್ಲಿ ಲಯ, ಪ್ರಾಸಗಳು ವೈಗೂಡಿಬಡುವವು. ವಚನಗಳು ಕೇವಲ ಸಾಹಿತ್ಯಕೃತಿಗಳಲ್ಲ, ತಾತ್ತ್ವಿಕಕೃತಿಗಳೂ ಅಹುದು....'

'ಮೊನ್ನೆ ದಿನ ನಾವೆಲ್ಲ ಆಟವಾಡುತ್ತ ಪದ್ಮನಾಭಶಾಸ್ತ್ರಿಗಳ ಮನೆಗೆ ಹೋಗಿದ್ದೆವು. ಅವರ ಮಗಳು ಲಕ್ಷ್ಮಿ, ನಾನು ಕೆಳದಿಯರು. ಅವರಿಗೆ ಯಾಕೋ ನಮ್ಮನ್ನೆಲ್ಲ ಕಂಡರೆ ಅಷ್ಟೊಂದು ಸರಿ ಅನ್ನಿಸುವುದಿಲ್ಲ. ನಮ್ಮನ್ನು ಮುಟ್ಟಿಸಿಕೊಳ್ಳದೆ ಸರಿಸರಿದು ಹೋಗುತ್ತಾರೆ. ಆಗ ಅವರು ನನ್ನನ್ನು ನೋಡಿ ಹಾಸ್ಯದ ಧ್ವನಿಯಲ್ಲಿ ಹೇಳಿದರು :

'ಈ ಜನಕ್ಕೆ ಒಂದು ಜಾತಿಯಿಲ್ಲ, ಹಲವು ಜಾತಿಗಳ ಕಲಸುಮೇಲೋಗರ, ಇದು ಸಂಕರ ಜಾತಿ. ಇದಕ್ಕೊಂದು ಧರ್ಮಶಾಸ್ತ್ರವಿಲ್ಲ....'

ನನಗೆ ಬಹಳ ಸಿಟ್ಟು ಬಂತು.

'ಅದೇ ನಮ್ಮ ದೊಡ್ಡಸ್ತಿಕೆ ಕಣ್ರಿ. ಜಾತಿಗಳ ಅಡ್ಡಗೋಡೆಗಳನ್ನು ಒಡೆದು ಒಂದು ಅಖಂಡ ಶರಣ ಸಮಾಜವನ್ನು ಕಟ್ಟೋದು ನಮ್ಮ ಗುರಿ. ನಮ್ಮ ಧರ್ಮಕ್ಕೆ ಒಬ್ಬ ಅಪ್ಪ ಇದ್ದಾನೆ. ಅವನೇ ಬಸವಣ್ಣ. ನಿಮ್ಮಂಗೆ ನೂರು ಜನರ ಹೆಸರು ನಾವು ಹೇಳಲ್ಲ. ನಮಗೂ ಧರ್ಮಶಾಸ್ತ್ರವಿದೆ; ಅದೇ ವಚನಶಾಸ್ತ್ರ. ಅಜ್ಞಾನದಲ್ಲಿ ಜನರನ್ನು ಸಿಕ್ಕಿಸಿ ಶೋಷಿಸುವ ಧರ್ಮಶಾಸ್ತ್ರವಲ್ಲ, ಸಂಪ್ರದಾಯದ ಕತ್ತಲೆಯಲ್ಲಿ ಕಣ್ಣು ಕಾಣದವರಿಗೆ ಬೆಳಗನ್ನು ಹಿಡಿದು ಮುಂದೆ ನಡೆಯುವಂತೆ ಮಾಡಿ, ಜನರನ್ನು ಬದುಕಿಸುವ ಶಾಸ್ತ್ರ....' ನಾನು ಸ್ವಲ್ಪ ಆವೇಶದಿಂದ ಹೇಳಿಬಿಟ್ಟೆ ಗುರುಗಳೇ.

'ನಿನಗೇನು ಗೊತ್ತೇ ಹುಚ್ಚಿ ; ಸಂಸ್ಕೃತದಲ್ಲಿದ್ದರೆ ಅದು ಶಾಸ್ತ್ರ, ಕನ್ನಡದಲ್ಲಿ ಕರೆದರೆ ಆ ದೇವರು ಓಗೊಡೋದಿಲ್ಲ' ಶಾಸ್ತ್ರಿಗಳು ತಿರಸ್ಕಾರದಿಂದ ಹೇಳಿದರು. ನನಗೆ ಉತ್ತರ ಕೊಡಲು ಹೊಳೀಲಿಲ್ಲ. ಆಗ ಅವರ ಮನೆಗೆ ಮಲ್ಲಿಗೆ ಹೂ ಕೊಡಕ್ಕೆ ನಿತ್ಯ ವರ್ತನೆಯ ಹೂಗಾರ ಬಂದ. ಬಾಳೆ ಎಲೇಲಿ ಸುತ್ತಿಕೊಂಡು ತಂದು ಕೊಟ್ಟಾಗ ಶಾಸ್ತ್ರಿಗಳು :

'ಯಾಕಯ್ಯಾ, ಅಡಿಕೆ ಪಟ್ಟೆ ಇರಲಿಲ್ವೆ ?' ಎಂದರು.

'ಇಲ್ಲ ಸೋಮಿ. ಸಮಯಕ್ಕೆ ಒದಗಲಿಲ್ಲ....'

'ಇರಲಿ ಬಿಡು. ಹೂತಾನೆ ಮುಖ್ಯ! ಚೆನ್ನಾಗಿದ್ದಾವ? ಶ್ರೀಚಕ್ರ ಪೂಜೆಗೆ ಬೇಕು....' ಎಂದರು. ನಾನು ತಟ್ಟನೆ ಹೇಳಿದೆ:

"ಶಾಸ್ತ್ರಿಗಳೇ....ನಿಮಗೆ ಹೂ ತಾನೇ ಮುಖ್ಯ. ಅದನ್ನು ಬಾಳೆ ಎಲೇಲಿ ಕಟ್ಟಿರ್ಲಿ, ಅಡಿಕೆ ಪಟ್ಟೀಲಿ ಕಟ್ಟಿರ್ಲಿ, ಮುತ್ತುಗದ ಎಲೇಲೇ ಕಟ್ಟಿರ್ಲಿ...."

'ಹೂಂ ಕಣಪ್ಪ....'

'ಹಂಗೆ ಶಾಸ್ತ್ರಿಗಳೇ....ದೇವರಿಗೆ ಬೇಕಾಗಿರೋದು ಭಾವದ ಮಲ್ಲಿಗೆ. ಅದನ್ನು ಭಾಷೆಯ ಎಲೇಲಿ ಕಟ್ಟಿ ತಲುಪಿಸುತ್ತೇವೆ. ಅವನು ಹೃದಯದ ಭಾಷೆ ಬಲ್ಲವನು. ಸಂಸ್ಕೃತದ ಬಾಳೆ ಎಲೆ ಆದ್ರೂ ಅಷ್ಟೇ, ಕಸ್ತೂರಿ ಕನ್ನಡದ ಅಡಿಕೆ ಪಟ್ಟೆ ಆದ್ರೂ ಅಷ್ಟೆ....'

'ಶಾಸ್ತ್ರಿಗಳು ಮಾತನಾಡಲಿಲ್ಲ ಗುರುಗಳೇ...."ಭಾರೀ ಘಾಟಿ ಹುಡುಗಿ. ಅರಳು ಹುರಿದಂತೆ ಮಾತನಾಡ್ತಾಳೆ" ಎಂದುಬಿಟ್ಟರು....ನಾನು ಹೇಳಿದ್ದು ತಪ್ಪಾಯ್ತೇ? ಗುರುಗಳೇ....'

ವಯಸ್ಸಿಗೆ ಮೀರಿದ ವಿಚಾರದ ಓಘವನ್ನು ಕಂಡ ಗುರುಲಿಂಗದೇವರು ಬೆರಗಾದರು.

'ಇಲ್ಲ....ನನ್ನ ಕಂದಾ....ಬಹಳ ಸಮರ್ಪಕ ಉತ್ತರ ಕೊಟ್ಟಿದ್ದೀಯ....' ಆನಂದದಿಂದ ಅವರ ಕಣ್ಣು ತುಂಬಿಕೊಂಡಿದ್ದವು.

'ಈಗ ಸಾಹಿತ್ಯದ ಪಾಠ ಮುಂದುವರಿಸ್ತೀನಿ. ವಚನಗಳು ಒಂದೊಂದು ವಿಶಿಷ್ಟತತ್ತ್ವವನ್ನು ಬಿಂಬಿಸುವ ಘಟಕಗಳು. ಒಂದೇ ವಚನದಲ್ಲಿ ಹಲವಾರು ವಿಷಯಗಳ ಗೊಂದಲ ಇರುವುದಿಲ್ಲ. ಮೊದಲ ವಾಕ್ಯದಿಂದ ಕಡೆಯವರೆಗೆ ಒಂದೇ ವಿಚಾರವಾಹಿನಿ ವಿಸ್ತರಣವಾಗುತ್ತ ಹೋಗುತ್ತದೆ. ಆ ವಚನವನ್ನು ಓದಿ ಪೂರೈಸಿದಾಗ, ಅದು ತಾನು ಹೇಳಬೇಕಾದ ವಿಷಯವನ್ನು ಸಮರ್ಪಕವಾಗಿ ಮನಸ್ಸಿಗೆ ಮುಟ್ಟಿಸುತ್ತದೆ. ಕೆಲವು ವಚನಗಳು ಉಪಮೆ, ಉದಾಹರಣೆಗಳಿಂದ ಆರಂಭವಾಗುತ್ತವೆ. ಸ್ವಾನುಭಾವದ ಉಪಮೆಗಳೇ ವಚನ ರಚನೆಯ ಜೀವಾಳ.

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ.
ಎನಗೆ ನಮ್ಮ ಕೂಡಲ ಸಂಗಮ ದೇವರ ನೆನೆವುದೇ ಚಿಂತೆ.

ಇದನ್ನು ಉದಾಹರಣೆಗೆ ತೆಗೆದುಕೋ....ಕತ್ತಲೆಯಲ್ಲಿ ಕುಳಿತು ಚಂದ್ರೋದಯಕ್ಕಾಗಿ ಪರಿತಪಿಸುವ, ಹಂಬಲಿಸುವ ಚಕೋರದ ಚಿತ್ರ ಕಣ್ಣ ಮುಂದೆ

ಬಂದು ನಿಲ್ಲುವುದು. ನಮ್ಮ ಹೃದಯದಲ್ಲೂ ಆ ಹಂಬಲದ ಸಂವೇದನೆ ಮಿಡಿಯತೊಡಗುವುದು. ಈ ಸಂವೇದನೆಯನ್ನು ಇನ್ನಷ್ಟು ಪಕ್ವಗೊಳಿಸುವುದು ಮುಂದಿನ ವಾಕ್ಯ. ತನ್ನ ಪಕಳೆಗಳನ್ನು ಮುಚ್ಚಿಕೊಂಡು, ಆದರೆ ಅವನ್ನು ಬಿಚ್ಚಿ ತೋರಿಸಲು ಹಂಬಲ ತುಂಬಿ, ಹೊರಗಿನಿಂದ ಸೂರ್ಯನ ಕಿರಣಗಳ ಸಹಾಯಕ್ಕಾಗಿ ಹಾತೊರೆದು ನಿಂತಿರುವ ಅಂಬುಜದ ಕಲ್ಪನೆ ಮನದಲ್ಲಿ ಅಚ್ಚೊತ್ತುವುದು. ಆ ಬಳಿಕ ಬಂಡನ್ನು ಉಣ್ಣಲು ಪರಿವೆ ಇಲ್ಲದೆ ಗುಂಯ್ಗುಡುತ್ತ ಅಲೆಯುವ, ಬಳಲಿಕೆಯನ್ನು ಗಮನಿಸದೆ ಪುಷ್ಪದಿಂದ ಪುಷ್ಪಕ್ಕೆ ಪರಿಮಳದ ಜಾಡನ್ನು ಹಿಡಿದು ತಿರುಗುವ, ಉತ್ಕಟ ಬಯಕೆಯ ದುಂಬಿಯ ಕಲ್ಪನೆ ಬರುವುದು. ಇಷ್ಟು ಹೊತ್ತಿಗೆ ಒಂದು ವಿಶಿಷ್ಟ ಮಾನಸಿಕ ಸ್ಥಿತಿಯ ಅರಿವು ಓದುಗನಿಗೆ ಮೂಡಿ, ಒಂದು ತತ್ವವನ್ನು ಸ್ವೀಕರಿಸಲು ಮನಸ್ಸು ಹದಗೊಂಡು ನಿಂತಿದ್ದಾಗ, ಕಡೆಯ ವಾಕ್ಯ ತಟ್ಟನೆ ಮನಸ್ಸಿಗೆ ಇಳಿಯುವುದು. ಮೇಲಿನ ಎಲ್ಲ ಚೇತನಗಳು ಹಂಬಲ ತುಂಬಿ ಪರಿತಪಿಸುವಂತೆ, ಭಕ್ತನ ಹೃದಯವೂ ದೈವೀಕಾರುಣ್ಯಕ್ಕಾಗಿ, ಅವನ ನೆನಹಿಗಾಗಿ ಪರಿತಪಿಸುತ್ತದೆ. ಮನಸ್ಸು ಚಕೋರದಂತೆ ದೇವನ ಬೆಳಗಿಗೆ ಹಂಬಲಿಸಿ, ಹೃದಯಕಮಲ ಶಿವಸೂರ್ಯನ ಕಾರುಣ್ಯ ಕಿರಣಕ್ಕೆ ಹಾತೊರೆದು, ಚಿತ್ತದ ತುಂಬಿಯು ದೇವಹೃದಯದ ಪುಷ್ಪದ ಒಲವಿನ ಮಕರಂದವನ್ನು ಆಸ್ವಾದಿಸಲು ಸಿದ್ಧವಾಗಿದೆ. ಇಂತಹ ಸ್ಥಿತಿಯಲ್ಲಿ ಭಕ್ತನು ಇರುವನು ಎಂಬುದನ್ನು ಎಷ್ಟು ಸಮರ್ಪಕವಾಗಿ ಈ ವಚನ ಚಿತ್ರಿಸುತ್ತದೆ—ಇದು ಸಾಹಿತ್ಯದ ಚಿತ್ರ. ಮನದ ಭಿತ್ತಿ, ಭಾವದ ಕುಂಚ, ಪದಗಳ ಬಣ್ಣ, ಉಪಮೆಗಳ ವಿನ್ಯಾಸ....' ಗುರುಲಿಂಗದೇವರು ತನ್ಮಯವಾಗಿ ಕುಳಿತರು. ಮಹಾದೇವಿ ಅವರನ್ನು ಮೂಕಳಾಗಿ ನಿಟ್ಟಿಸಿದಳು. ಎಷ್ಟು ಹೊತ್ತಾದರೂ ಬಹಿಃಪ್ರಜ್ಞೆ ಮೂಡದಾಗ, ತಾಡಓಲೆಯನ್ನು ನೋಡುತ್ತ ಕುಳಿತಳು. ತುಸು ಹೊತ್ತಿನ ಬಳಿಕ,

'ಗುರುಗಳೇ....' ಎಂದಳು.

'ಅಂ....' ಎಂದು ಗುರುಲಿಂಗರು ಕಣ್ತೆರೆದರು.

'ಇದು ಒಂದು ಬಗೆಯ ನಿರೂಪಣೆ. ಮತ್ತೆ ಬೇರೆ ಬಗೆಯ ನಿರೂಪಣೆ ಉಂಟೇ....?'

'ಹೂಂ....ಇದೆ....ಪ್ರತಿ ವಚನದಲ್ಲಿ ಒಂದು ಸಿದ್ಧಾಂತ, ನಿರ್ಣಯ ಇರುವುದು. ಅದು ಸಾಮಾನ್ಯವಾಗಿ ಕಡೆಯ ವಾಕ್ಯದಲ್ಲಿ. ಆದರೆ ಕೆಲವು ಸಲ ಮೊದಲ ವಾಕ್ಯದಲ್ಲಿ ಸಿದ್ಧಾಂತ ಹೇಳಿಬಿಟ್ಟು, ನಂತರ ತಮ್ಮ ಹೇಳಿಕೆಯನ್ನು ಪುಷ್ಟೀಕರಿಸುತ್ತ ಹೋಗುವರು. ಉದಾಹರಣೆಗೆ ಇದನ್ನು ತೆಗೆದುಕೊಳ್ಳೋಣ :

ಎಂತಹನಾದರೇನು, ಲಿಂಗ ಮುಟ್ಟಿದವನೆ ಕುಲಜಾತಿ
ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ
ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ
ಕೂಡಲ ಸಂಗಮದೇವನೊಲ್ಲ ಸರ್ವಸಂದೇಹಿಗಳ.

ಇಲ್ಲಿ ತಾವು ತಿಳಿಸಬೇಕಾದ ನಿರ್ಣಯವನ್ನು ಮೊದಲ ವಾಕ್ಯದಲ್ಲಿ ಹೇಳಿ ಬಿಡುತ್ತಾರೆ. ತಮ್ಮ ವಿಚಾರಧಾರೆಯನ್ನು ಪುಷ್ಟೀಕರಿಸಲು ಉಪಮೆಯನ್ನು ಬಳಸುತ್ತಾರೆ. ಯಾವ ರೀತಿ ಪರುಷ ಮುಟ್ಟಿದಾಗ ಕಬ್ಬಿಣ ತನ್ನ ಜನ್ಮದ ಗುಣವನ್ನು ಕಳೆದುಕೊಂಡು ಹೊನ್ನಾಗುವುದೋ, ಹಾಗೆಯೇ ಯಾವ ಜಾತಿಯವನಾದರೇನು ಲಿಂಗವು ಮುಟ್ಟಿದಾಗ ಅಂದರೆ ದೀಕ್ಷೆ ಹೊಂದಿದಾಗ, ತನ್ನ ಜನ್ಮದ ಕಾಳಿಕೆ ಕಳೆದುಕೊಂಡು ಶರಣನಾಗುವನು. ಹೇಗೆ ಪರುಷ ಸ್ಪರ್ಶಿತವಾಗಿ ಪರಿವರ್ತನೆ ಹೊಂದಿದ ಚಿನ್ನದ ಪರಿಶುದ್ಧತೆಯಲ್ಲಿ ನಾವು ಸಂದೇಹ ಪಡುವುದಿಲ್ಲವೋ, ಹಾಗೆಯೇ ದೀಕ್ಷೆ ಹೊಂದಿ ಶರಣನಾದವನ ಕುಲತ್ವದಲ್ಲೂ ಸಂಶಯ ಪಡಬಾರದು....'

'ಎಷ್ಟು ತಿಳಿಭಾಷೆಯಲ್ಲಿ, ಎಂತಹ ತತ್ತ್ವವನ್ನು ಹೇಳಿದ್ದಾರೆ ಅಲ್ವೆ ಗುರುಗಳೇ....!' ಉದ್ಗರಿಸಿದಳು ಮಹಾದೇವಿ.

'ಬಸವಣ್ಣನು ಘನ ಮನೋವಿಜ್ಞಾನಿ ಮಗಳೆ. ಮನುಷ್ಯನ ಮನದ ವಿವಿಧ ಪದರಗಳನ್ನು ಬಿಚ್ಚಿ ಬಿಚ್ಚಿ ನೋಡಿ, ಲೋಪ ದೋಷ ವಿಕಾರಗಳನ್ನು ಕಂಡು, ಮರುಕಗೊಂಡು, ಸಂತೈಸಿ, ಪರಿವರ್ತನೆಗೆ ಯತ್ನಿಸುವ ಮಾತೃ ಹೃದಯ ಅವನದು. ಆ ಹೃದಯದ ಕಳಕಳಿಯೇ ಇಂತಹ ಸತ್ವಪೂರ್ಣ ಮಾತುಗಳ ಮೂಲ....' ಹೃದಯ ತುಂಬಿ ಗುರುಲಿಂಗರು ಮಾತನಾಡಿದರು. ಬಸವಣ್ಣನ ನೆನಪು ಅವರನ್ನು ಮೈಮರೆಸುತ್ತಿತ್ತು, ಕಣ್ಣಿನಲ್ಲಿ ಹರುಷ ಜಲವನ್ನು ಸಂಗ್ರಹಿಸುತ್ತಿತ್ತು.

'ಇನ್ನೊಂದು ಪ್ರಕಾರದ ವಚನಗಳು ಉಂಟು. ಮೊದಲ ವಾಕ್ಯದಲ್ಲಿ ಒಂದು ಸಮಸ್ಯೆಯನ್ನು ಮೂಡಿಸಿ ಪ್ರಶ್ನೆ ಹಾಕಿ, ವಿವಿಧ ಉದಾಹರಣೆಗಳೊಡನೆ ಒಂದು ಚಿತ್ರಣ ನೀಡಿ, ಕಡೆಯಲ್ಲಿ ನಿರ್ಣಯವನ್ನು ಹೇಳುವದು.

ಆರಾರ ಸಂಗವೇನೇನ ಮಾಡದಯ್ಯ?
ಕೀಡೆ ಕುಂಡಲಿಗನಾಗದೆ ಅಯ್ಯಾ?
ಚಂದನದ ಸನ್ನಿಧಿಯಲ್ಲಿ ಪರಿಮಳತಾಗಿ
ಬೇವು, ಬೊಬ್ಬುಲಿ, ತರೆಯ ಗಂಧಂಗಳಾಗವೆ?

ನಮ್ಮ ಕೂಡಲ ಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೇ ?*

ಕೇವಲ ಪ್ರಶ್ನಾರ್ಥಕ ವಾಕ್ಯದ ಮೂಲಕವೇ ತತ್ವವನ್ನು ಪ್ರತಿಪಾದಿಸುತ್ತಾ ಹೋಗುವರು. ಸಂಗದ ಮಹಿಮೆ ಏನೇನನ್ನು ಮಾಡದು ? ಎಂದು ಪ್ರಶ್ನಿಸುವರು. ಕೀಡೆಯು ಕುಂಡಲಿಗನ ಸಂಗ ಮಾಡಿ, ತನ್ನ ಪೂರ್ವದ ರೂಪನ್ನು ಕಳೆದುಕೊಂಡು, ತಾನು ಒಡನಾಡಿದ ಪ್ರಾಣಿಯ ರೂಪನ್ನು ಹೊಂದುವದು. ಬೇವು, ಬೊಬ್ಬುಲಿಗಳು ಶ್ರೀಗಂಧದ ವೃಕ್ಷದ ಮಗ್ಗುಲಲ್ಲಿದ್ದರೆ, ಅದರೊಡನೆ ತಿಕ್ಕಾಡಿ ಗಂಧದ ವಾಸನೆ ಬೀರತೊಡಗುವವು. ಹಾಗೆಯೇ ಮರೆವಿನ ಸೃಷ್ಟಿಯ ಮಾನವನು, ಸುಜ್ಞಾನಿಯಾದ ಶರಣನ ಸಂಗದ ಮಹಿಮೆಯಿಂದಾಗಿ ತನ್ನ ಕರ್ಮದ ಬಂಧನ ಹರಿದುಕೊಂಡು, ನಿರ್ಮಲ ಚಾರಿತ್ರ್ಯನಾಗಿ, ಸುಖಿಯಾಗುವನು. ಮೊದಲ ವಾಕ್ಯದಲ್ಲಿ ಮುಂದಿಟ್ಟ ಸಮಸ್ಯೆಯನ್ನು ಬಿಡಿಸಲು ಎರಡು ಉದಾಹರಣೆ ನೀಡಿ, ಕಡೆಯ ವಾಕ್ಯದಲ್ಲಿ ತಮ್ಮ ನಿರ್ಣಯ ಹೇಳುವರು....'

'ಪ್ರತಿ ವಚನದಲ್ಲಿ ಬಸವಣ್ಣನವರು 'ಕೂಡಲ ಸಂಗಮ ದೇವಾ' ಎಂದು ಮಡಿವಾಳ ಮಾಚಿದೇವರು 'ಕಲಿದೇವರ ದೇವಾ' ಎಂದು, ಎಲ್ಲ ಶರಣರು ಹೀಗೆ ಹೇಳುವುದೇಕೆ ಗುರುಗಳೇ ?'

'ತಾಯಿ, ವಚನಗಳು ಕುಳಿತು ಬರೆದ ಕಾವ್ಯಗಳಲ್ಲ. ಸಮಯ ಸಂದರ್ಭದಲ್ಲಿ, ಜಗತ್ತನ್ನು ನೋಡಿ ಅನಿರೀಕ್ಷಿತವಾಗಿ ಅಂತಃಸ್ಫುರಣಗೊಂಡು, ಮೂಡಿಬರುವ ವಿಚಾರದ ತುಣುಕುಗಳು, ಪ್ರತಿಕ್ರಿಯೆಯ ಪ್ರತಿರೂಪಗಳು. ಶರಣರು ಪರಸ್ಪರ ಚರ್ಚೆ ಮಾಡುವಾಗ ಪೂರ್ವಭಾವಿ ಸಿದ್ಧತೆ ಇಲ್ಲದೆ ಇವು ಸಹಜವಾಗಿ ಬರುತ್ತವೆ. ಇಂಥ ಹೇಳಿಕೆಗಳು ಯಾರಯಾರವು ಎಂದು ಗುರುತಿಸಲಿಕ್ಕೆ ಸುಲಭವಾಗಲೆಂದು ವಿವಿಧ ಮುದ್ರಿಕೆಗಳನ್ನು ಬಳಸುತ್ತಾರೆ.

ಇಷ್ಟೇ ಅಲ್ಲ, ಶರಣರು ಯಾವುದೇ ಸಿದ್ಧಾಂತವನ್ನು ಹೇಳುವಾಗ ಹೆಮ್ಮೆನಿಂದ, ಅಹಂಸಾಕ್ಷಿಯಾಗಿ ನುಡಿಯಲಿಚ್ಛಿಸರು, ದೈವೀಸಾಕ್ಷಿಯಾಗಿ, ವಿನಯ ಶರಣಾಗತಿಯಿಂದ ಹೇಳಬಯಸುತ್ತಾರೆ. ಅದಕ್ಕಾಗಿ ಮುದ್ರಿಕೆಗಳನ್ನು ಬಳಸುತ್ತಾರೆ....'

'ಸರಿ....ಗುರುಗಳೇ....ಇಂದು ವಚನ ಸಾಹಿತ್ಯದ ಮಾರ್ಮಿಕತೆ ಅರ್ಥವಾಯಿತು....'

'ನೀನೂ ಸಹ ಪ್ರಯತ್ನಿಸಬೇಕು ಮಗು ; ಇದಕ್ಕೇನು ಪಾಂಡಿತ್ಯ,

* ಬ. ಷ. ವ. ೧೪೧

ಭಾಷೆಯ ಬೆಡಗು ಬೇಕಿಲ್ಲ. ಜಗತ್ತನ್ನು ವಿಶ್ಲೇಷಿಸುವ ವಿಮರ್ಶಾಪ್ರಜ್ಞೆ, ಮಾನವನ ಮನಸ್ಸನ್ನು ಪದರ ಪದರವಾಗಿ ಅರಿಯಬಲ್ಲ ತಾದಾತ್ಮ್ಯಭಾವನೆ ಕಣ್ಣಮುಂದೆ ಹಾಯ್ದು ಹೋಗುವ ಹಲವಾರು ಚಟುವಟಿಕೆಗಳನ್ನು ಗ್ರಹಿಸಿ ಕೊಳ್ಳುವ ಶಕ್ತಿ, ಸೂಕ್ತ ಸರಳ ಪದಗಳ ಬಳಕೆ ಇದ್ದರೆ ಸಾಕು....'

'ತಮ್ಮಾಶೀರ್ವಾದ ಇರಲಿ ಗುರುದೇವಾ; ಬೇವು ಶ್ರೀಗಂಧದೊಡನೆ ತಿಕ್ಕಾಡಿ ಸ್ವಲ್ಪಕಾಲವಾದರೂ ಗಂಧದ ವಾಸನೆ ಕೊಡುವಂತೆ, ತಮ್ಮಂತಹವರ ವಚನ ಸಾಹಿತ್ಯದ ಸಿರಿಗಂಧ ಬನದಲ್ಲಿ ಸುಳಿದಾಡಿ ನಾನೂ ವಚನಗಳ ಪರಿಮಳ ಕೊಡ ಬಲ್ಲೆನೇನೋ! ಅದಕ್ಕಾಗಿ ಪ್ರಯತ್ನಿಸುವೆ...."

ಗುರುಗಳಿಗೆ ನಮಸ್ಕರಿಸಿ, ಅಂದಿನ ಪಾಠ ಮುಗಿಸಿಕೊಂಡು ಮೇಲಕ್ಕೆದ್ದಳು ಮಹಾದೇವಿ. ಮಠದ ಶಾಲೆಯಲ್ಲಿ ಪಠ್ಯಕ್ರಮ ಪೂರೈಸಿಕೊಂಡು, ಅನಂತರ ಗುರುಗಳ ಸನ್ನಿಧಿಯಲ್ಲಿ ಕುಳಿತು ವಿಶೇಷ ವ್ಯಾಸಂಗ ಮಾಡುತ್ತಿದ್ದಳು ಮಹಾ ದೇವಿ. 'ಆಕೆಯ ಉಳಿದ ಸಹಪಾಠಿಗಳು ಕೇವಲ ಉಪಜೀವನಕ್ಕಾಗಿ ವಿದ್ಯೆ ಯನ್ನು ಕಲಿಯುತ್ತಿರುವರು, ಆದರೆ ಈಕೆ ಜೀವನದ ರಹಸ್ಯವನ್ನರಿಯಲು ವಿದ್ಯಾರ್ಥಿನಿಯಾಗಿರುವಳು' ಎಂದರಿತ ಗುರುಲಿಂಗರು ವಿಶೇಷ ಆಸಕ್ತಿಯಿಂದ ಆಕೆಗೆ ಶಿಕ್ಷಣ ನೀಡುತ್ತಿದ್ದರು.

'ತಾನೂ ಬರೆಯಬೇಕು' ಎಂಬ ಹುಮ್ಮಸ್ಸಿನಿಂದ, ಅಂದಿನ ವಿಚಾರ ಗಳನ್ನೇ ಮೆಲುಕಾಡಿಸುತ್ತ, ಮನೆಯ ದಿಕ್ಕಿಗೆ ಹೆಜ್ಜೆ ಹಾಕಿದಳು. ಅಂದಿನಿಂದ ವಚನಗಳ ಅಧ್ಯಯನ ಇನ್ನೂ ತೀವ್ರವಾಯಿತು.

೧೧. ಮೋಡ ಸರಿಯಿತು

ಗುರುಲಿಂಗದೇವರು ವಿಶೇಷ ಆಸಕ್ತಿಯೊಡನೆ ಮಹಾದೇವಿಯ ಜ್ಞಾನ ವಿಕಾಸವನ್ನು ಮಾಡುತ್ತಿದ್ದರು. ಎಲ್ಲರಂತೆ ಕೇವಲ ಉಂಡು, ಉಟ್ಟು, ಭೋಗದ ಗೊಂಬೆಯಾಗಲಿಕ್ಕಷ್ಟೆ ಬಂದವಳಲ್ಲ; ವಿಶೇಷ ದೈವೀಶಕ್ತಿಯ ಅಂಶವನ್ನು ಹೊತ್ತವಳು ಎನ್ನಿಸುತ್ತಿತ್ತು. ಮೂರ್ತಿಯಾಗಬಲ್ಲುದು ಎಂಬಂತಹ ಶಿಲೆಯೊಂದನ್ನು ಆರಿಸಿಕೊಂಡು, ತಾನು ಸಿದ್ಧಗೊಳಿಸಬೇಕಾದ ಮೂರ್ತಿಯ ರೂಹುರೇಷೆಯನ್ನು ಮನದಲ್ಲಿ ಚಿತ್ರಿಸಿಕೊಂಡು, ಎಚ್ಚರಿಕೆಯಿಂದ ಉಳಿಯ ಏಟನ್ನು ಕೊಡುವ ಚತುರಶಿಲ್ಪಿಯಂತೆ ಗುರುಲಿಂಗದೇವರು ಮಹಾದೇವಿಯ ಭಾವನೆ, ವಿಚಾರಗಳನ್ನು ರೂಪಿಸುತ್ತಿದ್ದರು. ಅವರಿಗೆ ಆತ್ಮವಿಶ್ವಾಸವಿತ್ತು, ಆ ಮೂಲಧಾತು ಉಳಿಯ ಏಟಿನಿಂದ ಪುಡಿಯಾಗುವ ಹಿಟ್ಟುಗಲ್ಲೂ ಅಲ್ಲ; ಕಟೆಯಲಿಕ್ಕೆ ಬಾರದಷ್ಟು ಬಿರುಸಿರುವ ಕಠಿಣಶಿಲೆಯೂ ಅಲ್ಲ; ದಿವ್ಯಮೂರ್ತಿಯಾಗಲಿಕ್ಕೆಂದೇ ಪ್ರಕೃತಿಯಲ್ಲಿ ಸಿದ್ಧವಾದ ಕರಿಯಶಿಲೆ ಎಂದು.

ತೋರಲು ಹೆಣ್ಣುರೂಪಾದರೂ ಅಂಧಃಶ್ರದ್ಧೆ, ಮೂಢಸಂಪ್ರದಾಯಗಳನ್ನು ತಲೆ ಎತ್ತಿ ಪ್ರಶ್ನಿಸುವ ಗಂಡೆದೆ ಅದೆಂದು ಅರಿದ ಅವರು ಬಾಲ್ಯದಿಂದಲೇ ವೇದ, ಉಪನಿಷತ್ತು, ಪುರಾಣಗಳನ್ನು, ಸಂಸ್ಕೃತ ಭಾಷೆಯನ್ನು, ಮಹಾದೇವಿಗೆ ಪರಿಚಯ ಮಾಡಿಕೊಟ್ಟಿದ್ದರು. ಅಬ್ರಾಹ್ಮಣರಿಗೆ, ಶೂದ್ರರಿಗೆ, ಶೂದ್ರತ್ವದ ವರ್ಗದಲ್ಲಿ ಸೇರಿಸಲ್ಪಟ್ಟಿರುವ ಹೆಣ್ಣುಮಕ್ಕಳಿಗೆ ವೈದಿಕ ಬದ್ಧ ಸಮಾಜದಲ್ಲಿ ಸಂಸ್ಕೃತ ಭಾಷೆಯ ಕಲಿಕೆಗೆ ಅವಕಾಶವಿದ್ದಿರಲಿಲ್ಲ. ಆದರೆ ಶೈವ ಸಂಪ್ರದಾಯದ ಮಠಗಳು ಇದಕ್ಕೆ ಹೊರತಾಗಿದ್ದವು. ಗುರುಲಿಂಗದೇವರು ಮೊತ್ತಮೊದಲಿಗೆ ಉಡುತಡಿಯಲ್ಲಿ ಸಂಸ್ಕೃತವನ್ನು ಎಲ್ಲರಿಗೆ ಕಲಿಸತೊಡಗಿದಾಗ ಪ್ರತಿಭಟನೆಯ ಸೊಲ್ಲು ಕೇಳಿ ಬಂದಿತು. ಆಗ ಅವರು ನಿಷ್ಠುರರಾಗಿ ಹೇಳಿದರು :

'ಶೈವಸಂಪ್ರದಾಯ ಈ ಪರಂಪರೆಗೆ ಹೊರತಾದುದು. ಸಂಗಮ ಕ್ಷೇತ್ರದ ಗುರುಕುಲ, ಬಳ್ಳಿಗಾವೆಯ ಕೋಡಿಮಠ ಈ ಎಲ್ಲ ಶೈವಮಠಗಳು ಎಲ್ಲರಿಗೆ ಪ್ರವೇಶ ನೀಡಿ, ಸಂಸ್ಕೃತದ ಅಭ್ಯಾಸ ಮಾಡಿಸುತ್ತಿವೆ. ವೈದಿಕ ಸಮಾಜದ ಕಟ್ಟುನಿಟ್ಟು ಶೈವಪರಂಪರೆಗೆ ಸಂಬಂಧವಿಲ್ಲ.'

ಮಹಾದೇವಿಗೆ ಸಂಸ್ಕೃತಾಭ್ಯಾಸ ಮಾಡಿಸತೊಡಗಿದಾಗ ಮೊದಲು ಕಿಡಿಯಾಗಿ ಹಾರಿದ್ದ ಪ್ರತಿಭಟನೆ ಈಗ ಜ್ವಾಲೆಯಾಗಿ ಉರಿಯಿತು.

'ಹೆಂಗಸಿಗೆ ಧರ್ಮಶಾಸ್ತ್ರವನ್ನು ಕಲಿಸುವುದೆಂದರೇನು? ಅವರ ಬಾಯೊಳಗೆ

ಸಂಸ್ಕೃತ ಭಾಷೆ ಸಿಕ್ಕು ಅಪವಿತ್ರವಾಗದಿರದು....' ಎಂದು ಸಂಪ್ರದಾಯಿಕರು ಅನ್ನದಿರಲಿಲ್ಲ.

ಗುರುಲಿಂಗರ ದೃಢತೆ ಈಗ ಮತ್ತಷ್ಟು ಗಟ್ಟಿಗೊಂಡಿತ್ತು. ಏಕೆಂದರೆ ಶೈವ ಪರಂಪರೆಯ ಸಮರ್ಥನೆಯೊಡನೆ ಬಸವಣ್ಣನ ಲಿಂಗಾಯತ ಧರ್ಮಶಾಸ್ತ್ರದ ಬೆಂಬಲ ಸಿಕ್ಕಿತ್ತು.

'ಶರೀರ ರಚನೆ, ಕರ್ತವ್ಯಗಳ ಹೊರತು ದೈವೀಸೃಷ್ಟಿಯಲ್ಲಿ ಹೆಣ್ಣು ಗಂಡಿಗೆ ಇನ್ನಾವ ಭೇದವಿಲ್ಲ. ಎಲ್ಲರ ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ, ಗಂಡು ಅಲ್ಲ' ಎಂಬ ವಾದ ಅವರದಾಯಿತು.

ಕಟ್ಟುನಿಟ್ಟಿನ ಸಂಪ್ರದಾಯಸ್ಥರು ಬಂದು ಹೆಣ್ಣುಮಕ್ಕಳಿಗೆ ಸಹ ಸಂಸ್ಕೃತ ಕಲಿಸುವ, ಧರ್ಮಶಾಸ್ತ್ರ ಬೋಧಿಸುವ ಅನಾಚಾರ ಸಲ್ಲದೆಂದು ತಿಳಿಸಿದಾಗ ಗುರುಲಿಂಗದೇವರು ಮಾರುತ್ತರಿಸಿದರು :

ಹಲವಾರು ಆಗಮಗಳನ್ನು ಶಿವನು ಪಾರ್ವತಿಗೆ ಬೋಧಿಸಿದನೆಂಬುದನ್ನು ಒಪ್ಪುವಿರಷ್ಟೆ.

'ಜೀವಿತಂ ಶಿವಭಕ್ತಾನಾಂ ವರಂ ಪಂಚ ದಿನಾನಿ ಚ
ಅಜಕಲ್ಪ ಸಹಸ್ರೇಭ್ಯೋ ಭಕ್ತಿ ಹೀನಸ್ಯ ಶಾಂಕರಿ'*
'ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ಚ ಜಂಗಮಂ
ಅಹಂ ತುಷ್ಟೋ ಸ್ಮ್ಯಹಂ ಮಾದೇವಿ ಉಭಯೋರ್ಲಿಂಗ ಜಂಗಮಾತ್'॥*

'ಈ ಶ್ಲೋಕಗಳು ಪಾರ್ವತಿಯನ್ನು ಉದ್ದೇಶಿಸಿ ಹೇಳಲ್ಪಟ್ಟವಲ್ಲವೆ? ಆಕೆ ಹೆಣ್ಣಲ್ಲವೆ?' ಪ್ರತಿಭಟನೆಗಾಗಿ ಬಂದಿದ್ದ ಪಂಡಿತರು ನಿರುತ್ತರರಾದರು.

'ಅಲ್ಲದೆ ಹೆಣ್ಣನ್ನು ನೀವು ಶೂದ್ರ ವರ್ಗದಲ್ಲಿ ಸೇರಿಸಿದರೆ ಲಿಂಗಾಯತ ಧರ್ಮವು ಅವರನ್ನು ಸಾಕ್ಷಾತ್ ದೈವಾಂಶ ಸಂಭೂತರೆಂದು, ಪುರುಷರಿಗೆ ಸಮಾನ ಹಕ್ಕುಳ್ಳವರೆಂದು ಹೇಳುತ್ತದೆ. ನಮ್ಮ, ನಿಮ್ಮ ತತ್ತ್ವಗಳಿಗೆ ಮೂಲ ಭೂತ ಭಿನ್ನತೆಯಿದೆ. ಚತುರ್ವರ್ಣಗಳ ಕಟ್ಟುನಿಟ್ಟನ್ನೇ ಅಲ್ಲಗಳೆಯುವ ಅತಿವರ್ಣಾಶ್ರಮಿಗಳು ನಾವು. ನಿಮ್ಮ ನಿಯಮವನ್ನು, ಸಂಪ್ರದಾಯವನ್ನು ಉಲ್ಲಂಘಿಸುವ ಪ್ರಶ್ನೆಯೇ ಇಲ್ಲ.

ಸಂಸ್ಕೃತ ಭಾಷೆಯಲ್ಲಿ ವೈದಿಕಶಾಸ್ತ್ರಗಳು ಇವೆ ಎಂದಮಾತ್ರಕ್ಕೆ, ಸಂಸ್ಕೃತವು ವೈದಿಕಧರ್ಮದ ಸ್ವತ್ತಲ್ಲ. ಆರ್ಯ ಜನಾಂಗ ಆ ಭಾಷೆಯ ನಿರ್ಮಾಪಕರಾದರೇನಂತೆ, ಅದು ಬಳಸಿಕೊಳ್ಳಬಯಸುವ ಎಲ್ಲರ ಸ್ವತ್ತು....

---

* ಬ. ಷ. ವ. ೧೫೪

* ಬ. ಷ. ವ. ೧೯೭

'ಶಿವಧರ್ಮ ಕುಲೇಜಾತಃ ಪುನರ್ಜನ್ಮ ವಿವರ್ಜಿತಃ
ಉಮಾ ಮಾತಾ ಪಿತಾ ರುದ್ರ ಐಶ್ವರಂ ಕುಲಮೇವ ಚ'

ದೀಕ್ಷೆ ಹೊಂದಿದವರಲ್ಲಿ ಹೆಣ್ಣು, ಗಂಡು, ಬ್ರಾಹ್ಮಣ, ಶೂದ್ರ ಭೇದವೇ ಇಲ್ಲ. ಎಲ್ಲರೂ ಧರ್ಮಶಾಸ್ತ್ರ ಪಠಣಕ್ಕೆ, ಸಾಕ್ಷಾತ್ಕಾರ ಸಾಧನೆಗಳಿಗೆ ಅರ್ಹರು....'

ಗುರುಲಿಂಗದೇವರ ದೃಢವಿಚಾರ ಸರಣಿ, ತತ್ತ್ವನಿಷ್ಠೆಯಿಂದಾಗಿ ಎಲ್ಲ ಜಾತಿಯವರು, ಹೆಣ್ಣುಮಕ್ಕಳು ಸಹ ಸಂಸ್ಕೃತದ ಅಭ್ಯಾಸ ಮಾಡತೊಡಗಿದ್ದರು. ಒಂದು ಬಾರಿ ಹೇಳಿಕೊಟ್ಟರೆ ಸಾಕು ಶೀಘ್ರವೇ ಗ್ರಹಿಸಿ ಮರು ಉಚ್ಚಾರಣೆ ಮಾಡುವ ಮಹಾದೇವಿಯ ಗ್ರಹಣಶಕ್ತಿ, ನೆನಪಿನ ಶಕ್ತಿ ಕಂಡು ಬೆರಗಾಗುತ್ತಿದ್ದರು.

'ಈಕೆಗೆ ಹೇಳಿಕೊಡುವುದೆಂದರೆ, ಬರಿದಾದ ಕೋಣೆಗೆ ಸಾಮಾನುಗಳನ್ನು ತುಂಬಿದಂತಲ್ಲ; ಸಾಮಾನು ಜೋಡಿಸಿಟ್ಟ ಕೋಣೆಯ ದ್ವಾರಕ್ಕೆ ಇಳಿಯಬಿಟ್ಟ ತೆರೆಯನ್ನು ಸರಿಸಿಬಿಟ್ಟಂತೆ. ಅನಂತಜನ್ಮಗಳ ಪುಣ್ಯ ಸಂಸ್ಕಾರ ತುಂಬಿ ನಿಂತಿದೆ. ಸ್ವಲ್ಪ ಹೊಳಪು ಕೊಡುವುದಷ್ಟೇ ನನ್ನ ಕೆಲಸ' ಎಂದುಕೊಳ್ಳುತ್ತಿದ್ದರು. ಅವಳ ಪ್ರಗತಿಯ ವೇಗ ಕಂಡು ಆನಂದಪಡುತ್ತಿದ್ದರು.

ಆದರೆ ಅವರ ಈ ಪ್ರಯತ್ನಕ್ಕೆ, ಆನಂದಕ್ಕೆ ಆತಂಕ ಬರುವಂತೆ ಕಂಡಿತು. ಒಂದು ದಿನ ಲಿಂಗಮ್ಮ, ಗಂಡ-ಮಗಳ ಸಮೇತ ಮಠಕ್ಕೆ ಬಂದು ಮಾತನಾಡಲಾರಂಭಿಸಿದಳು.

'ಗುರುಗಳೆ, ನಮ್ಮ ತಂದೆ-ತಾಯಿ, ಹಿತೈಷಿಗಳು ಸರ್ವಸ್ವವೂ ನೀವೇ....' ನಮಸ್ಕರಿಸಿದ ಬಳಿಕ ನುಡಿದಳು.

'ಹೌದು ಮಗಳೇ, ನಿಮ್ಮಲ್ಲಿಯೂ ಆ ಶರಣಾಗತ ಭಾವವುಂಟು, ನನ್ನಲ್ಲೂ ಆ ವಾತ್ಸಲ್ಯ ಉಂಟು....'

'ಮಹಾದೇವಿ ನಿಮ್ಮ ಮಗಳೆಂದೇ ಆದರಿಸಿ, ವಿದ್ಯೆ ಬುದ್ಧಿ ನೀಡಿದ್ದೀರಿ....'

'ಸಂಶಯವೇ ಇಲ್ಲ....'

'ಇನ್ನು ಮುಂದಿನ ಕಾರ್ಯವೂ ತಮ್ಮಿಂದಲೇ ಆದರೆ....'

'ಯಾವ ಕಾರ್ಯ....?'

'ಇಲ್ಲಿಗಾಗಲೇ ಹನ್ನೆರಡು ವರ್ಷ ತುಂಬಿದವು. ಹೆಣ್ತನದ ಲಕ್ಷಣಗಳು ವಿಕಸಿತವಾಗುತ್ತಿವೆ. ಪುಷ್ಪವತಿಯಾಗುವ ಕಾಲವೂ ಹಲವಾರು ತಿಂಗಳಲ್ಲೇ ಬಳಿಸಾರಬಹುದು....'

ಗುರುಲಿಂಗರು ಅಪ್ಪ-ಅವ್ವರ ಮಧ್ಯೆ ಕುಳಿತ ಮಹಾದೇವಿಯನ್ನು ದೃಷ್ಟಿಸಿದರು.

'ಅಹುದು....ಬಾಲ್ಯಾವಸ್ಥೆಯಲ್ಲಿ ಒಂದು ಕಾಲು—ಕನ್ಯಾವಸ್ಥೆಯಲ್ಲಿ ಮತ್ತೊಂದು' ಮನದಲ್ಲಿ ಅಂದುಕೊಂಡರು. ಇಲ್ಲಿಯ ತನಕ ಇದು ಅವರ ಗಮನಕ್ಕೆ ಬಂದಿರಲಿಲ್ಲ. ಪುಟ್ಟ ಮಗುವಿನ ಮೊಗದ ಮುಗ್ಧಕಳೆ, ನಿಷ್ಕಲ್ಮಶ ವರ್ತನೆ, ಎಲ್ಲರೊಡನೆ ಸಂಕೋಚ-ದುರ್ಭಾವನೆಯ ಸೋಂಕೂ ಇಲ್ಲದೆ ಬೆರೆಯುವ ದಿಟ್ಟತನ, ಅವಳು ಹೆಣ್ಣಾಗುತ್ತಿದ್ದಾಳೆ ಎಂಬುದರ ಕಲ್ಪನೆಯನ್ನೂ ಸುಳಿಸಿರಲಿಲ್ಲ. ಕಲಾವಿದ ಕನ್ಯೆಯೊಬ್ಬಳ ದಂತವಿಗ್ರಹವನ್ನು ಕಟೆಯುವಾಗ, ಇನ್ನೂ ಅರ್ಧಂಬರ್ಧ ಅದು ರೂಪುಗೊಂಡಿರುವಾಗ ನೋಡಿದರೆ ಕಾಣುವಂತೆ, ಮಹಾದೇವಿಯ ಅಂಗಾಂಗಗಳ ವಿನ್ಯಾಸವಷ್ಟೇ ರಚಿತವಾಗಿತ್ತು. ದಂತದ ಪುತ್ಥಳಿಯಂತೆ ಕುಳಿತ ಆಕೆಯನ್ನು ಕಂಡು ಅಂದುಕೊಂಡರು :

'ಮಗುವಿನಲ್ಲಿನ್ನೂ ಕನ್ನೆತನದ ಅರಿವು ಜಾಗ್ರತವಾಗಿಲ್ಲ ; ನೋಡುವ ಜಗತ್ತಿಗಷ್ಟೇ ಆಗುತ್ತಿರಬೇಕು !'

ಗುರುಗಳು ಸುಮ್ಮನೆ ಕುಳಿತುದನ್ನು ಕಂಡು ಲಿಂಗಮ್ಮನೇ ಮಾತು ಮುಂದುವರಿಸಿದಳು :

'ವಯಸ್ಸಿಗೆ ಮೀರಿ ಬೆಳೆದುಬಿಟ್ಟಿದ್ದಾಳೆ. ಇನ್ನು, ಸುಲಕ್ಷಣ ಸಂಪನ್ನನಾದ ವರನನ್ನು ನೋಡಿ ಮದುವೆ ಮುಗಿಸಿಬಿಟ್ಟರೆ ಕರ್ತವ್ಯದ ಹೊರೆ ಇಳಿಯುವುದು. ಮೈನೆರೆದ ಮಗಳ ಮುಖವನ್ನು ನೋಡುವುದು ಕೂಡ ಪಾಪ ಎಂದು ಶಾಸ್ತ್ರಗಳು ಹೇಳುತ್ತವಂತೆ. ಮೈನೆರೆಯಲಿಕ್ಕೆ ಮುಂಚೆ ಮಗಳ ಮದುವೆ ಮಾಡದ ತಾಯಿತಂದೆಯರು ಅಘೋರ ನರಕಕ್ಕೆ ಬೀಳುವರೆಂದು ಮೊನ್ನೆ ಸಂಜೆ ಅರಿಶಿನ ಕುಂಕುಮಕ್ಕೆ ಅಂಬುಜಾಕ್ಷಮ್ಮನ ಮನೆಗೆ ಹೋದಾಗ ಪದ್ಮನಾಭಶಾಸ್ತ್ರಿಗಳ ಹೆಂಡತಿ ಸಾವಿತ್ರಮ್ಮ ಹೇಳುತ್ತಿದ್ದರು ...ಅವರೆಲ್ಲ ತಮ್ಮ ಮಕ್ಕಳು ಏಳೆಂಟು ವರ್ಷದವರಿರುವಾಗಲೇ ಮದುವೆ ಮಾಡಿಬಿಟ್ಟರಂತೆ.

ನಾನು ಇವರ ಕೈಹಿಡಿದಾಗ ದೊಡ್ಡಾಕೆ ಆಗಿರಲಿಲ್ಲ. ಮದುವೆಯಾಗಿ ಒಂದು ವರ್ಷಕ್ಕೆ ದೊಡ್ಡವಳಾದೆ. ಆಮೇಲೆ ಗಂಡನ ಮನೆಗೆ ಕಳಿಸಿಕೊಟ್ಟರು....'

ಲಿಂಗಮ್ಮನ ಮಾತು ಮುಗಿದು, ಗುರುಗಳ ಅಭಿಪ್ರಾಯಕ್ಕೆ ಕಾದು ನಿಂತಂತೆ ತೋರಿತು. ಗುರುಲಿಂಗದೇವರು ಗಂಭೀರವದನರಾಗಿದ್ದರು. ಸ್ವಲ್ಪ ತಡೆದು,

'ನಿನ್ನ ವಿಚಾರ ಏನಿದೆ ಓಂಕಾರ ?' ಎಂದು ಪ್ರಶ್ನಿಸಿದರು.

'ಅಪ್ರಬುದ್ಧರಾದ ಮಕ್ಕಳಿಗೆ ಲಗ್ನ ಮಾಡುವುದು ಅಷ್ಟೊಂದು ಸಮಂಜಸ

ನಲ್ಲ.' ನಿಧಾನವಾಗಿ ಹೇಳಿ, ಪುತ್ತೆ ನುಡಿದ :

'ಇನ್ನಷ್ಟು ಬುದ್ಧಿ ಬಲಿಯಲಿ, ನಂತರ ನೋಡೋಣ....ಎಂದೆನ್ನಿಸುತ್ತದೆ ಗುರುಗಳೇ.'

'ನಿಜ ಓಂಕಾರ, ಮದುವೆಯ ಅರ್ಥವನ್ನಾಗಲೀ, ವೈವಾಹಿಕ ಜೀವನದ ಕರ್ತವ್ಯವನ್ನಾಗಲಿ ಅರಿಯದ ಬಾಲೆಗೆ ವಿವಾಹ ಮಾಡುವುದು ಅನುಚಿತ....'

'ಆದರೆ ಗುರುಗಳೇ, ಸಂಪ್ರದಾಯದ ಪ್ರಕಾರ ಎಲ್ಲರೂ ಋತುಮತಿ ಯಾಗುವ ಮುನ್ನವೇ ಮಾಡುವರು. ನಾಗಣ್ಣಶೆಟ್ಟಿಯವರ ಮಗಳಿಗೆ ತೊಟ್ಟಿಲ ಕೂಸಾಗಿದ್ದಾಗಲೇ ತಾಳಿ ಕಟ್ಟಿಸಿದ್ದು ಕಾಣುತ್ತೇವೆ...' ಲಿಂಗಮ್ಮ ಹೇಳಿದಳು.

'ನಿಜ ಲಿಂಗಮ್ಮ, ಅನೇಕ ಅವೈಚಾರಿಕ, ಕುರುಡು ಸಂಪ್ರದಾಯಗಳು ಸಂಕೋಲೆಯ ರೂಪದಲ್ಲಿ ಈ ಸಮಾಜವನ್ನು ಬಿಗಿದಿವೆ. ತಮ್ಮ ದಿಟ್ಟ ವೈಚಾರಿಕತೆಯ ಖಡ್ಗದಿಂದ ಬಸವಣ್ಣನವರು ಈ ಸಂಕೋಲೆಗಳನ್ನು ತುಂಡ ರಿಸುತ್ತ ನಡೆದಿರುವರು. ಹಲವಾರು ಸಂಪ್ರದಾಯಗಳನ್ನು ಪ್ರತಿಭಟಿಸಿ ನಿಂತಿರುವ ನಾವು, ಈ ಬಾಲ್ಯವಿವಾಹ ಪದ್ಧತಿಯನ್ನೂ ಪ್ರತಿಭಟಿಸೋಣವಂತೆ. ನೋಡು ತಾಯಿ, ತನ್ನ ಆಕಾಂಕ್ಷೆಗಳನ್ನು, ಭವಿಷ್ಯ ಬಾಳಿನ ರೂಪುರೇಷೆಯನ್ನು ಅರಿಯದ ಮುಗ್ಧರಿಗೆ ಈ ಸಂಸಾರದ ಸಂಕೋಲೆಯನ್ನು ಹೇರಿ ಬೆನ್ನು ಬಾಗು ವಂತೆ ಮಾಡುವುದು ತರವಲ್ಲ....'

'ಸಂಸಾರವು ಒಂದು ಹೊರೆಯೇನಲ್ಲ ಗುರುಗಳೆ, ಹೂವಿನ ಮಾಲೆ. ಖಂಡಿತಾ ಹೊರೆಯಲ್ಲ....'

'ನಿಜ ತಾಯಿ, ನೀವಿಬ್ಬರೂ ಹಾಲುಸಕ್ಕರೆಯಂತೆ ಕೂಡಿದ್ದೀರಿ, ಸಂಸಾರವು ಆನಂದದ ರಸರಂಗವಾಗಿದೆ. ಒಂದು ವೇಳೆ ವಿರುದ್ಧ ವಿಚಾರ, ಆಕಾಂಕ್ಷೆಗಳ ದಂಪತಿಗಳಾಗಿದ್ದರೆ ಬದುಕು ಹೂವಿನ ಹಾರವಲ್ಲ, ಹಾವಿನ ಹಾರವಾಗು ತಿತ್ತು ; ರಸರಂಗವಾಗುವುದರ ಬದಲು ರಣರಂಗವಾಗುತ್ತಿತ್ತು....'

'ಈಗ ಬೇಡವೆನ್ನುತ್ತೀರಾ ಗುರುಗಳೆ ?'

'ಬೇಡ, ಮಹಾದೇವಿ ದೊಡ್ಡಾಕೆಯಾಗಲಿ, ತನ್ನ ಆಸೆ ಆಕಾಂಕ್ಷೆಗಳ ಅರಿವು ಆಕೆಗೆ ಬರಲಿ. ತನ್ನ ಗಂಡನಾಗುವವನ ಮನಸ್ಸು, ವ್ಯಕ್ತಿತ್ವವನ್ನು ಅರಿಯುವಷ್ಟು ಬುದ್ಧಿ ಬಲಿಯಲಿ, ಆಗ ನೋಡೋಣ.'

> 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
> ಸತಿಪತಿಗಳೊಂದಾಗದ ಭಕ್ತಿ ಅಮೃತದೊಳು ವಿಷವ ಬೆರೆಸಿದಂತೆ
>
> ಕಾಣಾ ರಾಮನಾಥ.

ಎನ್ನುತ್ತಾರೆ ದಾಸಿಮಯ್ಯ ಶರಣರು. ಆಕೆಯ ವಿಚಾರಗಳಿಗೆ ಹೊಂದಿಕೆಯಾಗುವ ಗಂಡ ಸಿಕ್ಕಾಗ ನೋಡುವಿರಂತೆ....' ಲಿಂಗಮ್ಮ ಗುರುಗಳ ಮಾತಿಗೆ ಸುಮ್ಮನಾದಳು.

'ಆದರೆ ಗುರುಗಳೇ....'

'ಮತ್ತೇನು ಹೇಳವ್ವ....'

'ಜನರು ಬಹಳಷ್ಟು ಆಡಿಕೊಳ್ಳತೊಡಗಿದ್ದಾರೆ. "ಕತ್ತೆಯಂತೆ ಬೆಳೆದ ಮಗಳನ್ನು ಮದುವೆ ಮಾಡದೆ ಇರಿಸಿಕೊಂಡಿದ್ದಾರೆ. ಮದುವೆ ಮಾಡದಿದ್ದರೆ ಹಾಳಾಗಲಿ ಮನೆಯಲ್ಲಾದರೂ ಗೌರವಯುಕ್ತವಾಗಿ ಇರಿಸಿಕೊಳ್ಳಬಾರದೆ? ಓದು, ವಿದ್ಯೆ ಅಂತ ಗಂಡು ಹುಡುಗರ ಜೊತೆ ಮಠಕ್ಕೆ ಕಳಿಸುತ್ತಾರೆ" ಅಂತ....'

ಗುರುಲಿಂಗರು ಗಂಭೀರವದನರಾದರು. ಲಿಂಗಮ್ಮ ಮತ್ತೆ ಹೇಳಿದಳು: 'ಇನ್ನೇತಕ್ಕೆ ಓದು, ಎಷ್ಟು ಓದಿದರೇನಂತೆ ಹೆಂಗಸಿಗೆ ಮುಸುರೆ ತೊಳೆಯೋದು ತಪ್ಪದು. ಈಗ ಕಲಿತಷ್ಟು ಸಾಕಾದೀತಲ್ಲ....' ಮಹಾದೇವಿ ಮೌನವಾಗಿ ಆಲಿಸುತ್ತಿದ್ದವಳು ನುಡಿದಳು: 'ಗುರುಗಳೇ, ಹೆಣ್ಣಿಗೆ ಬೇರಾವ ಬದುಕಿಗೂ ಅವಕಾಶವಿಲ್ಲವೆ? ಗಂಡ, ಮದುವೆ, ಅಡಿಗೆ, ಉಡಿಗೆ, ತೊಡಿಗೆ....ಈ ಕೆಸರಿನಲ್ಲಿಯೇ ಬಿದ್ದು ಸಾಯಬೇಕೆ?' ದಿಟ್ಟತನ, ಆವೇಶಗಳು ಒಂದೊಂದೂ ಪದಗಳಲ್ಲಿ ವ್ಯಕ್ತವಾದುವು.

'ಅಹುದು....ಮಾದೇವಿ, ಲತೆ, ವಿತ್ತ, ವನಿತೆ ಬೇರೊಂದರ ಆಶ್ರಯವಿಲ್ಲದೆ ಬದುಕಲಾರವವ್ವಾ. ಬಳ್ಳಿಗೆ ವೃಕ್ಷದಾಶ್ರಯವಿಲ್ಲದಿದ್ದರೆ ತುಳಿಸಿಕೊಳ್ಳಲ್ಪಡುವುದು, ಹಣವು ಅವ್ಯವಸ್ಥಿತವಾಗುವುದು, ಹೆಣ್ಣು ಅನಾಥಳಾಗುವಳು. ಅಷ್ಟಲ್ಲದೆ, ಆಕೆಯನ್ನು ಅಬಲೆ ಎನ್ನುವರೇ?' ಲಿಂಗಮ್ಮನೇ ಉತ್ತರಿಸಿದಳು.

'ಓಹ್....ಅಬಲೆ....ಅಬಲೆ. ಇವೊಂದು ದೊಡ್ಡ ಬಿರುದು! ದೈಹಿಕ ಶಕ್ತಿಯಲ್ಲಿ ಹೆಣ್ಣು ಅಬಲೆ ಇರಬಹುದವ್ವಾ, ಆದರೆ ಮಾನಸಿಕಶಕ್ತಿಯಲ್ಲಿ ಆಕೆ ಅಬಲೆಯೇನಲ್ಲ, ಹೆಣ್ಣಿನಲ್ಲಿರುವಷ್ಟು ಸಂಕಲ್ಪ, ದೃಢತೆ, ಛಲ, ಸಹನೆ ಗಂಡಿಗಿಲ್ಲ....' ತಾಯಿಗೆ ಹೇಳಿ, ಗುರುಗಳತ್ತ ತಿರುಗಿದಳು. 'ಅದರೆ, ಗುರುಗಳೇ ನಾನು ಅಬಲೆ, ಕೀಳು, ಆಳಿಸಿಕೊಳ್ಳಲಷ್ಟೇ ಅರ್ಹಳು ಎಂಬ ನಂಬಿಗೆ ಹೆಂಗಸಿನಲ್ಲೇ ಇರುವುದನ್ನು ಕಂಡು ನನಗೆ ತುಂಬ ಖೇದವೆನಿಸುತ್ತದೆ....'

'ನಿಜ ಮಗು....ಬಾಗಿ ನಡೆದೂ ನಡೆದೂ ಬೆನ್ನು ಡೊಂಕಾಗಿ ಬಿಡುವಂತೆ, ನೂರಾರು ವರ್ಷಗಳಿಂದ ಹೇರಲ್ಪಟ್ಟ ಈ ವಿಚಾರಧಾರೆ ಆಕೆಯ ವಿಚಾರಶಕ್ತಿಯನ್ನು ಕುಂಠಿತಗೊಳಿಸಿ ಕೀಳರಿಮೆಯ ಆಗರವನ್ನಾಗಿ ಮಾಡಿದೆ....'

'ಒಮ್ಮೊಮ್ಮೆ, ಇಂಥಾ ಬಂಧನಗಳನ್ನೆಲ್ಲ ತುಂಡರಿಸಿ, "ಸ್ತ್ರೀಯಲ್ಲಿಯೂ ಸುಪ್ತಶಕ್ತಿಯಿದೆ, ಅದರ ಬಲದಿಂದ ಉನ್ನತ ಸಾಧನೆಯನ್ನು ಮಾಡಬಲ್ಲಳು, ಆತ್ಯಂತಿಕ ಸಿದ್ಧಿಯನ್ನು ಪಡೆಯಬಲ್ಲಳು" ಎಂಬುದನ್ನು ಘಂಟಾಘೋಷವಾಗಿ ಸಾರಲೇ? ಎಂದು ಕೆಚ್ಚು ಮೂಡುತ್ತದೆ' ಮಹಾದೇವಿಯ ಕಣ್ಣಿನಲ್ಲಿನ ಕೆಚ್ಚನ್ನು, ಆ ವಾಣಿಯಲ್ಲಿನ ದೃಢತೆಯನ್ನು ಕಂಡು ಓಂಕಾರ ಬೆರಗಾದ. ಗುರುಲಿಂಗರು ಒಳಗೇ ಆನಂದಿಸಿದರು. ಬೂದಿ ಮುಚ್ಚಿದ ಕೆಂಡದಂತೆ ಅವಳ ಶಕ್ತಿ ಸುಪ್ತವಾಗಿರುವುದನ್ನು ಬಲ್ಲರು. ಜಗತ್ತಿಗೆ ಕಾಣುವಂತೆ ಉರಿಯಬೇಕಾದರೆ ಇನ್ನೂ ಅವಕಾಶ ಬೇಕಾಗಿತ್ತು. ಆದರೆ ಅಷ್ಟರಲ್ಲಿ ಹೆತ್ತತಾಯಿ ಸಂಸಾರದ ಬಂಧನ ಎಂಬ ನೀರನ್ನು ಸುರಿದು ಅದನ್ನು ಎಲ್ಲಿ ಆರಿಸಿಬಿಡುವಳೋ ಎಂಬ ಭಯವಿತ್ತು. ತಮ್ಮ ಅಭಿಪ್ರಾಯವನ್ನು ಬೇಗನೆ ತೋರಿಸಿಕೊಳ್ಳದೆ, ಗುರುಲಿಂಗರು ಸೂಕ್ಷ್ಮವಾಗಿ ಲಿಂಗಮ್ಮನ ಸಾಂಪ್ರದಾಯಿಕ ವಿಚಾರಗಳು ಆಚರಣೆ ಬರದಂತೆ ಮೊದಲೇ ಚಿವುಟುತ್ತಿದ್ದರು.

'ಅವ್ವಾ, ಜ್ಞಾನಾರ್ಜನೆಗೆ ವಯಸ್ಸಿನ ಅಡ್ಡಿಯುಂಟೇ? ಸಾಯುವ ತನಕವೂ ಜಿಜ್ಞಾಸುವು ವಿದ್ಯಾರ್ಥಿಯೇ!....'

'ಆದರೆ ಜನರಾಡುವುದನ್ನು ಅರಿಯೆ ಏನವ್ವಾ....'

'ಸಾವಿರ ನಾಲಿಗೆ ಸಾವಿರ ನುಡಿಯಲಿ. ನಮ್ಮ ಆತ್ಮಸಾಕ್ಷಿಯಾಗಿ ಬದುಕಿದರೆ ಆಯಿತವ್ವಾ! ಗಾಳಿ ಬಂದಾಗ ಕಾಳು ತೂರಿಕೊಳ್ಳಬೇಕು. ಗಾಳಿ ಬಂದಾಗ ಸುಮ್ಮನಿದ್ದು ಹೋದ ಬಳಿಕ ಬಯಸಿದರೆ ಆಗದು. ಮನುಷ್ಯ ಜನ್ಮ ಸಿಕ್ಕಿ, ವಿಚಾರಮಾಡುವ ಶಕ್ತಿಯಿದ್ದಾಗಲೇ ಬಾಳನ್ನು ಹಸನಿಸಿಕೊಂಡು ಮುಕ್ತಿಯನ್ನು ಕಾಣಬೇಕವ್ವಾ! ಆಡಿಕೊಳ್ಳುವವರಾರೂ ನಮ್ಮ ಬಾಳಬಸ್ಸನವನ್ನು ಹೊತ್ತುಕೊಳ್ಳಲಾರರು....'

'ಮಾತಿಗೊಂದು ಮಾತು; ಇತ್ತೀಚೆಗಂತೂ ಬಹು ಉದ್ಧಟತನ ನೈಗೂಡಿದೆ ಗುರುಗಳೇ!....' ಲಿಂಗಮ್ಮ ಆಕ್ಷೇಪಿಸಿದಳು.

'ಅದು ಉದ್ಧಟತನವಲ್ಲ, ಸ್ವಾಭಿಮಾನದ ಸೊಲ್ಲು' ಎಂದು ಮನದಲ್ಲಿ ಅಂದುಕೊಂಡರು ಗುರುಲಿಂಗರು. ಮಗಳ ವ್ಯಕ್ತಿತ್ವವನ್ನು ಅರಿಯಲಾರದ ತಾಯಿಯ ಬಗ್ಗೆ ವಿಷಾದವೆನಿಸಿತು.

'ಸುಮ್ಮನೇ ದಟ್ಟಿಕುಪ್ಪಸ ಉಡಿಸೋ ಬದಲು ಪಂಚೆ, ಅಂಗಿ ಉಡಿಸಿ ಗಂಡನ್ನು ಮಾಡೋದು ಮೇಲು' ಲಿಂಗಮ್ಮ ನಕ್ಕು ನುಡಿದಳು.

'ಅವ್ವಾ, ಗಂಡಸಿನ ವಸ್ತ್ರ ಉಟ್ಟು, ಗಂಡಸಾಗಲಿಕ್ಕೆ ನಾನು ಬಯಸಲ್ಲ. ತೋರಲು ಹೆಣ್ಣು ರೂಪಿನಲ್ಲಿದ್ದೇ ಗಂಡುತನವನ್ನು ಮೆರೆಯಲು ಬಯಸುವೆ.

ಯಾವುದು ಹೆಣ್ಣಿಗೆ ಅಸಾಧ್ಯ ಎಂದು ಸಾವಿರ ನಾಲಿಗೆ ಸಾರಿ, "ವಿದ್ಯೆಗೆ ಅನರ್ಹಳು, ಸ್ವಾತಂತ್ರ್ಯಕ್ಕೆ ಅನರ್ಹಳು, ಧರ್ಮಕ್ಕೆ ಅನಧಿಕಾರಿ" ಎಂದು ಅಂದಿರುವರೋ ಅದೆಲ್ಲ ಸುಳ್ಳು ಮಾಡಿ ಗಂಡಸು ಪಡೆಯುವ ಎಲ್ಲ ಹಕ್ಕುಗಳಿಗೆ, ಸಾಧಿಸುವ ಎಲ್ಲ ಸಿದ್ಧಿಗಳಿಗೆ ಅರ್ಹಳು ಎಂದು ಸಾರಬೇಕೆನ್ನಿಸುತ್ತದೆ....'

ಮಹಾದೇವಿಯ ಎಳೆಯ ಹೃದಯದಿಂದ ಸಿಡಿದು ನುಡಿದ ಕಿಡಿಗಳ ತೀಕ್ಷ್ಣತೆಯನ್ನು ಗಮನಿಸಿದ ಗುರುಲಿಂಗರು, ಅವಳು ಸಾಮಾನ್ಯಚೇತನವಲ್ಲ ಎಂದುಕೊಂಡರು.

'ಮಕ್ಕಳಿಲ್ಲ ಅಂತ ತಪಸ್ಸುಮಾಡಿದರೆ ಪಾರ್ವತೀದೇವಿ ತಾನು ಬರೋದ್ರ ಬದಲು ಭದ್ರಕಾಳಿಯನ್ನು ಕಳಿಸಿದಂತೆ ಕಾಣುತ್ತೆ....ಅಬ್ಬಾ...!' ಲಿಂಗಮ್ಮ ಉದ್ಗರಿಸಿದಳು.

'ಹೂಂ ಕಣವ್ವಾ....ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಮಾಡಿ ಅಹಿಂಸಾ ತತ್ತ್ವ ಸ್ಥಾಪಿಸಲು ದಾಕ್ಷಾಯಿಣಿಗೆ ಆಗಲಿಲ್ಲ; ವೀರಭದ್ರ ಕಾಳಿಯರಿಂಗೇ ಆಗಿದ್ದು !' ಅಷ್ಟೇ ವಿರುಧ್ವನಿಯಲ್ಲಿ ಹೇಳಿದಳು. ಎಲ್ಲರೂ ಗಟ್ಟಿಯಾಗಿ ನಕ್ಕರು.

'ಆಗಲಿ ಗುರುಗಳೇ; ನಾವೇ ಸೋಲ್ತೀವಿ. ವಿದ್ಯೆ ಕಲಿಯಲಿ; ಆದರೆ ಸಂಗಡ ಯಾರನ್ನಾದರೂ ಮನೆಯಿಂದ ಬರುವಾಗ, ಮಠದಿಂದ ಹಿಂದಿರುಗುವಾಗ ಜೋಡಿ ಮಾಡ್ತೀವಿ....' ಲಿಂಗಮ್ಮ ನಿರ್ಧಾರಕ್ಕೆ ಬಂದಳು.

ಚಂದ್ರನನ್ನು ಮುಚ್ಚಲು ವೇಗವಾಗಿ ಬಂದ ಮೋಡ, ಅನಿರೀಕ್ಷಿತವಾಗಿ ಬೀಸಿದ ಗಾಳಿಯಿಂದ ಸರಿದು ಹೋದಂತೆ, ಮಹಾದೇವಿಯ ಶೈಕ್ಷಣಿಕ ಪ್ರಗತಿಗೆ ಅಡ್ಡಬರುತ್ತಿದ್ದ ವಿಘ್ನ ಗುರುಲಿಂಗರ ಸಮಯೋಚಿತ ಪ್ರಯತ್ನದಿಂದ ಸರಿದು ಹೋಯಿತು. ಸಮಾಧಾನದ ಉಸಿರನ್ನು ಅವರು ಬಿಟ್ಟರು.

೧೨. ಕನ್ನೆತನ ಕಾಲಿಕ್ಕಿತು

ಅಂದು ಇರುಳಿನ ಮೊದಲ ಜಾವ ಮುಗಿಯುತ್ತ ಬಂದಾಗ ಲಿಂಗಮ್ಮನ ಸಡಗರಕ್ಕೆ ರೆಕ್ಕೆ ಬಂದಂತಾಯಿತು. ಇತ್ತೀಚೆಗೆ ಆಕೆಯ ಲೌಕಿಕಾಸಕ್ತಿ ಬಹಳಷ್ಟು ಅಭಿವೃದ್ಧಿಯಾದಂತೆ ಎನಿಸುತ್ತಿತ್ತು. ಆನಂದೋತ್ಸಾಹಗಳೊಡನೆ ಮನೆ ತುಂಬ ಓಡಿಯಾಡತೊಡಗಿದಳು. ಸಂಜೆಯ ಪೂಜೆ ಪ್ರಸಾದ ಮುಗಿಸಿ ಮಹಡಿಯ ಮೇಲೆ ಅಧ್ಯಯನದಲ್ಲಿ ಕುಳಿತ ಓಂಕಾರನಿಗೆ ಬರಲು ಕರೆ ಕಳಿಸಿದಳು. ವಿಸ್ಮಿತನಾದ ಓಂಕಾರ ಕೆಳಮನೆಯೊಳಗೆ ಕಾಲಿಕ್ಕುವುದೇ ತಡ ಲಿಂಗಮ್ಮ ಉತ್ಸಾಹದಿಂದ ಹೇಳಿದಳು :

'ಮಹಾದೇವಿ ಮೈನೆರೆದಳು....' ಓಂಕಾರನಿಗೆ ಏನು ಹೇಳಲೂ ತೋಚಲಿಲ್ಲ. ಮಾಗಿ ನಿಂತ ಆಕೆಯ ಅಂಗಾಂಗಗಳು ಆಗಲೋ ಈಗಲೋ ದೊಡ್ಡವಳಾಗುವಳು ಎಂದು ಮುನ್ಸೂಚನೆ ಇತ್ತಿದ್ದರೂ, ಈಗ ಸುದ್ದಿ ಕೇಳಿ ಸ್ತಂಭೀಭೂತನಾದ. ಮಗಳ ಮನಸ್ಸು ಲೌಕಿಕಬಯಕೆಗಳಲ್ಲಿ ಆಸಕ್ತವಾಗಿಲ್ಲ ಎಂದು ಅವನಿಗೆ ತಿಳಿದಿತ್ತು. ಮಾತ್ರವಲ್ಲ, ಆಕೆ ಆಗಾಗ ಮನಸ್ಸನ್ನು ತಂದೆಯ ಎದುರಿಗೆ ಮಾತ್ರ ಬಿಚ್ಚಿಡುತ್ತಿದ್ದಳು. ತಾತ್ತ್ವಿಕವಿಷಯಗಳನ್ನು ಆಳಕ್ಕಿಳಿದು ಚಿಂತನಗೈವ ಮಗಳ ಸಾಮರ್ಥ್ಯಕ್ಕೆ ತಲೆದೂಗುತ್ತಿದ್ದ. ತಾಯಿಯು ಉಡು, ತೊಡು ಎಂದು ಹೇಳುತ್ತ ಬಲವಂತವಾಗಿ ತನ್ನ ಗೆಳತಿಯರ ಮನೆಗೆ, ಹೆಂಗಸರು ಹರಟುವ ಮಧ್ಯೆ, ಆರತಿ ಅಕ್ಷತೆ ಮುಂತಾದ ಸ್ತ್ರೀಯರ ಬಳಗಕ್ಕೆ ಕರೆದೊಯ್ಯುತ್ತಿದ್ದಳು. ಕೇವಲ ಬಹಿರಂಗಿಕ ಪ್ರಪಂಚದ ಚಿಂತೆಯಲ್ಲಿ ಮಗ್ನಳಾಗುವ ಆಕೆಯೊಡನೆ ಹೆಚ್ಚಿನ ಮಾತಿಗೆ ಮಹಾದೇವಿ ನಿಲ್ಲುತ್ತಿರಲಿಲ್ಲ. ತನಗೇನಾದರೂ ಆಧ್ಯಾತ್ಮಿಕ ವಿಷಯಗಳನ್ನು ಹೇಳಬೇಕೆನ್ನಿಸಿದರೆ ಅಥವಾ ಸಂಶಯ ಬಂದರೆ ತಂದೆಯ ಬಳಿ ಅಥವಾ ಗುರುಗಳ ಬಳಿ ಕೇಳುತ್ತಿದ್ದಳು. ಹೀಗಾಗಿ ಓಂಕಾರ ಮಹಾದೇವಿಯರ ಮಧ್ಯೆ ತಂದೆ ಮಗಳ ವಾತ್ಸಲ್ಯಯುಕ್ತ ಸಂಬಂಧವಷ್ಟೇ ಅಲ್ಲ, ಗುರುಶಿಷ್ಯರ ಅಥವಾ ಇಬ್ಬರು ಮೋಕ್ಷಾರ್ಥಿಗಳ ಮಧ್ಯದ ಜ್ಞಾನ ಸಂಬಂಧ ಬೆಳೆದಿತ್ತು.

ಮಗಳ ವ್ಯಕ್ತಿತ್ವ ಓಂಕಾರನಿಗೆ ಅರ್ಥವಾಗತೊಡಗಿತ್ತು. ಆದರೆ ಲಿಂಗಮ್ಮ ಮಗಳ ಅಂತರಂಗ ಬಯಕೆಗೆ ವಿರುದ್ಧವಾಗಿ ಮದುವೆಯ ಜಾಲವನ್ನು ಕಟ್ಟತೊಡಗಿದ್ದಳು. ಮುಂದೆ ಮುಂದೆ ಎಂದು ತಳ್ಳಿಕೊಂಡು ಬಂದು ಸಂತೈಸಿದ್ದಾಗಿತ್ತು. ಇನ್ನು ದೊಡ್ಡವಳಾದಳೆಂದರೆ ಪ್ರಸಂಗವನ್ನು ನೇರವಾಗಿ ಎದುರಿಸ

ಬೇಕಾಗುವುದು ಎಂದು ಓಂಕಾರನಿಗೆ ಕಳವಳವಾಯಿತು.

'ಲೇಸಾಯಿತು ಲಿಂಗಾ ;....' ನಿರ್ಲಿಪ್ತನಾಗಿ ಹೇಳಿದನು.

ಹಿತ್ತಿಲದಲ್ಲಿ ಕುಳಿತಿದ್ದ ಮಗಳನ್ನು ನೋಡಲು ಇಬ್ಬರೂ ಬಂದರು. 'ಮೂರನೆ ದಿವಸಕ್ಕೆ ಆರತಿ ಅಕ್ಷತೆ ಮಾಡೋಣ. ಎಷ್ಟು ವೆಚ್ಚವಾದರೂ ಹಿಂಜರಿಯೋದು ಬೇಡ : ಪಾರ್ವತಮ್ಮ, ಗಿರಿಜಮ್ಮ, ಸಿಂಗಾರಮ್ಮ, ಶಿವಮೂರ್ತಪ್ಪ ಬೆರಗಾಗಬೇಕು. ನಮ್ಮ ಮಹಾದೇವಿ ಮೊದಲೇ ಚೆಲುವೆ. ಹತ್ತು ದಿವಸಗಳ ತನಕ ನಿತ್ಯವೂ ಒಂದೊಂದು ವೇಷ ಹಾಕೋಣ. ಪಾರ್ವತಿ ವೇಷ, ಲಕ್ಷ್ಮಿ, ಸರಸ್ವತಿ, ರತಿ ವೇಷ. ಅದಕ್ಕೆಲ್ಲ ಸಿದ್ಧತೆ ಮಾಡೋಣ. ಇರುವವಳು ಒಬ್ಬಳು ತಾನೆ, ಹೆಣ್ಣು ಗಂಡೂ ಎಲ್ಲ ಇವಳೆ....'ಲಿಂಗಮ್ಮ ಉತ್ಸುಕತೆಯಿಂದ ಹೇಳಿದಳು.

'ಇಷ್ಟೆಲ್ಲ ಸಡಗರ ಬೇಡವ್ವ' ಮಹಾದೇವಿ ಗಂಭೀರವಾಗಿ ಹೇಳಿದಳು.

'ನಿನಗೇನು ತಿಳಿಯುತ್ತವ್ವಾ?' ಲಿಂಗಮ್ಮ ಮಾರುತ್ತರಿಸಿದಳು.

'ಬಹಳ ದೊಡ್ಡ ಸಿದ್ಧಿ ಎಂಬಂತೆ ಸಂಭ್ರಮಿಸುತ್ತಿರುವೆ. ಪ್ರಕೃತಿ ಸಹಜವಾದ ಗುಣ ವ್ಯಕ್ತವಾಗಿದ್ದಕ್ಕೆ ಇಷ್ಟೊಂದು ಆಡಂಬರ ಸಲ್ಲದು....'

ಕಂಗಳ ಮುಂದಣ ಕತ್ತಲೆ ಇದೇನೋ?
ಮನದ ಮುಂದಣ ಮರವೆ ಇದೇನೋ?
ಒಳಗಣ ರಣರಂಗ, ಹೊರಗಣ ಶೃಂಗಾರ,
ಬಳಕೆಗೆ ಬಂದ ಬಟ್ಟೆ ಇದೇನೋ ಗೊಹೇಶ್ವರಾ?

ಎಂದು ಪ್ರಭುದೇವರು ಹೇಳರೇ? ನೀರಿನ ಮೇಲಿನ ಗುರುಳೆಯಂತೆ ಒಡೆದು ಹೋಗುವ ಈ ಕಾಯದ ಶೃಂಗಾರ, ಆಡಂಬರ, ಪ್ರದರ್ಶನ ಅಜ್ಞಾನಿಗಳ ಕೆಲಸ.'

'ನಿನಗೇನು ತಿಳಿಯುತ್ತದೆ. ಎಲ್ಲದಕ್ಕೂ ಮಾತನಾಡಲು ಕಲಿತಿರುವೆ' ಲಿಂಗಮ್ಮ ಒರಟಾಗಿ ಉತ್ತರಿಸಿದಳು.

'ಲಿಂಗಾ, ನಿನ್ನಿಚ್ಛೆ ಬಂದಂತೆ ಮಾಡಿಕೋ. ಆದರೆ ಮಹಾದೇವಿಗೆ ದೀಕ್ಷೆಯಾಗಬೇಕಾದುದು ಮೊದಲ ಕಾರ್ಯ. ಅದು ಪೂರೈಸಬೇಕು' ಓಂಕಾರ ಹೇಳಿದ.

'ಬೇಡವೆಂದವರಾರು?' ಗಂಡನು ಒಪ್ಪಿಗೆ ಇತ್ತುದಕ್ಕೆ ಆನಂದವೆನಿಸಿತ್ತು ಆಕೆಗೆ.

'ಈಗಾಗಲೇ ಇರುಳಿನ ಎರಡನೆಯ ಜಾವ ಆರಂಭವಾಗುತ್ತಿದೆ. ಈಗಲೇ ಮಠಕ್ಕೆ ಧಾವಿಸುವೆ. ಗುರುಗಳಿಗೆ ವಿಷಯ ತಿಳಿಸಿ ಬೆಳಗಿನ ಜಾವದಲ್ಲಿ ದೀಕ್ಷೆ ಕೊಡಿಸಲು ಅನುವು ಮಾಡೋಣ. ನಮ್ಮ ಧರ್ಮದ ಪ್ರಕಾರ ಶೂದ್ರತ್ವ

ಭಾವದಿಂದ ಹೊರಗೆ ಕೂಡಿಸಬಾರದು. ಅಲ್ಲದೆ ದೀಕ್ಷೆಯಾಗದೆ ಒಳಗೆ ಬಳಕೆಯನ್ನೂ ಮಾಡಕೂಡದು....'

'ಅಂತೇ ಆಗಲಿ....ಮಠಕ್ಕೆ ಹೋಗಿ ಬನ್ನಿರಿ....'

ತಾಯಿಯ ಸಂಭ್ರಮದಿಂದ ಮಹಾದೇವಿಗೆ ವಿಷಾದವಾಗಿದ್ದುದು ನಿಜ. ಆದರೆ ತನಗೆ ದೀಕ್ಷೆಯಾಗುವುದೆಂಬುದನ್ನು ಕೇಳಿದಾಗ ಹೃದಯಪಕ್ಷಿ ಆನಂದದ ಗರಿ ಬಿಚ್ಚಿ ಹಾರತೊಡಗಿತು. ದೀಕ್ಷೆಯನ್ನು ಪಡೆಯುವ ಹಲವು ಕಾಲದ ಹಂಬಲ ತುಂಬಿ ನಿಲ್ಲುವ ಸುಯೋಗ ಬಂದುದಕ್ಕೆ ಉಳಿದೆಲ್ಲವನ್ನು ಮರೆತಳು. ಅಂದು ಇರುಳಿಡೀ ಅದೇ ಕನಸನ್ನು ಕಾಣತೊಡಗಿದಳು.

ಓಂಕಾರ, ಮನೆಯಾಳು ಸಿದ್ಧಯ್ಯನ ಜೊತೆಗೂಡಿ ಮಠದ ಕಡೆ ಮುನ್ನಡೆದ. ಗುರುಲಿಂಗದೇವರು ತಮ್ಮ ಪೂಜೆ, ಪ್ರಸಾದದ ನಂತರ ಹರಳೆಣ್ಣೆಯ ಸೊಡರಿನ ಬೆಳಗಿನಲ್ಲಿ ವಚನಗಳ ಅಧ್ಯಯನ ನಡೆಸಿದ್ದರು. ಗುರುಗಳ ಅಪ್ಪಣೆ ಪಡೆದು ಒಳಗೆ ಸಾಗಿ ನಮಸ್ಕರಿಸಿದ. ಆವೇಳೆಯಲ್ಲಿ ಆಗಮಿಸಿದ ಓಂಕಾರನನ್ನು ಕಂಡು ವಿಸ್ಮಿತರಾದ ಗುರುಗಳು ಬಂದ ಕಾರಣವನ್ನು ಅರಿತರು. ಬೆಳಗಿನ ಮೊದಲ ಜಾವದ ಶುಭವೇಳೆಯಲ್ಲಿ ದೀಕ್ಷೆಮಾಡುವುದು ಒಳ್ಳೆತೆಂದು ಹೇಳಿ, ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲು ತಿಳಿಸಿ, ಶಿಷ್ಯನಾದ ಶಿವಯೋಗಿಯನ್ನು ಪೂಜೆಗೆ ಅಣಿಮಾಡಿರಿಸಲು ಓಂಕಾರನೊಡನೆ ಕಳಿಸಿದರು.

೧೩. ಪುನರ್ಜನ್ಮ

ಅದೊಂದು ಮಂಗಳ ಮುಂಜಾವು ಮಹಾದೇವಿಯ ಪಾಲಿಗೆ. ಹೊರಗಣ ಜಗದ ಕತ್ತಲೆಯನ್ನು ಕಳೆಯಲು ರವಿಯಾಗಮಿಸುವಂತೆ, ಜನ್ಮಜನ್ಮಾಂತರದ ಕಾಳಿಕೆಯನ್ನು ಕಳೆಯಲು ಗುರುಸೂರ್ಯನ ಆಗಮನವಾಗುತ್ತಿತ್ತು. ಆಗಸ ಶುಭ್ರವಾಗಿದ್ದು ಚುಕ್ಕೆಗಳು ತೇಜಃಪೂರ್ಣವಾಗಿ ಮಿನುಗುತ್ತಿದ್ದವು. ತಂಗಾಳಿ ಮನಮೋಹಕವಾಗಿ ಬೀಸುತ್ತಿದ್ದಿತು. ಆಗಸದಲ್ಲಿ ಕೆಂಛಾಯೆ ಬೆಳ್ಳಿಯ ಚುಕ್ಕೆಯ ಬೆನ್ನು ಹತ್ತಿ ಬರುವಾಗ ಗುರುಲಿಂಗದೇವರು ಶಿಷ್ಯನೋರ್ವನೊಡನೆ ಮನೆಗೆ ಆಗಮಿಸಿದರು. ಮಿಂಥು ಮಡಿಯುಟ್ಟ ದಂಪತಿಗಳು ಪಾದಕ್ಕೆ ನೀರೆರೆದು ಒಳಗೆ ಕರೆದೊಯ್ದರು. ಸ್ನಾನವನ್ನು ಮುಗಿಸಿದ ಗುರುಲಿಂಗದೇವರು ಹಾವುಗೆಯನ್ನು ಮೆಟ್ಟಿ ನಡೆಯುತ್ತ ಪೂಜೆಯ ಕೋಣೆಯನ್ನು ಹೊಕ್ಕು, ಆಸನದ ಮೇಲೆ ಕುಳಿತಾಗ ಓಂಕಾರನು ಧೂಳಪಾದೋದಕವನ್ನು ತೆಗೆದು, ಮನೆಗೆಲ್ಲ ಸಿಂಪಡಿಸಿದ.

ಐದು ಜನ ಮುತ್ತೈದೆಯರು ಅರಿಶಿನ, ಎಣ್ಣೆಯನ್ನು ಮೈಗೆಲ್ಲ ಸವರಿ, ಮಹಾದೇವಿಗೆ ಅಭ್ಯಂಗನ ಸ್ನಾನ ಮಾಡಿಸಿ ಕುಳ್ಳಿರಿಸಿದ್ದರು. ಸದ್ಗುರುಗಳ ಪಾದೋದಕವನ್ನು ಸಿಂಪಡಿಸಿದರು. ಗುರುಲಿಂಗದೇವರು ಕುಳಿತು ಸೂತ್ರವನ್ನು ಹಿಡಿದರು. ಉದ್ದನಾದ ಸೂತ್ರದ ಮತ್ತೊಂದು ತುದಿಯನ್ನು ಹಿಡಿದು ಮಹಾದೇವಿ ಮೆಲ್ಲನೆ ಮುಂದಡಿಯಿಡುತ್ತ ನಡೆದಳು. ಕೋಣೆಯ ಬಾಗಿಲಲ್ಲಿ ಕಾಲಿಕ್ಕಿದ ಆಕೆಯನ್ನು ಗುರುಗಳು ನೋಡಿದರು. ತಮ್ಮ ಕಣ್ಣೆದುರಿಗೇ ಹುಟ್ಟಿ, ಅಂಬೆಗಾಲಿಟ್ಟು, ದಟ್ಟಡಿಯಿಟ್ಟು, ಬೆಳೆದ ಮಹಾದೇವಿ ಈಗ ಪ್ರೌಢ ಹೆಣ್ಣಿನಂತೆ ತೋರುತ್ತಿದ್ದಳು.

ಉಟ್ಟಿದ್ದ ಹೊಸದಾದ ಬಿಳಿಯ ಸೀರೆ ಜ್ಞಾನವೇ ಮೂರ್ತಿಗೊಂಡ ಸರಸ್ವತಿಯ ರೂಪವನ್ನು ನೆನಪಿಗೆ ತರುತ್ತಿತ್ತು. ಅದೇ ಆಗ ಎಣ್ಣೆ ನೀರೆರೆದುಕೊಂಡು, ಒಣಗಲೆಂದು ಬಿಚ್ಚಿದ್ದ ಕೂದಲು ಬೆನ್ನ ತುಂಬೆಲ್ಲ ಚದುರಿಬಿದ್ದು ಮೊಳಕಾಲನ್ನು ಸೋಂಕುತ್ತಿದ್ದವು. ಶಿವನನ್ನು ಒಲಿಸಹೊರಟ ಪರ್ವತರಾಜ ಕುಮಾರಿಯಂತೆ ಅವರಿಗೆ ಕಂಡಳು. ಸೌಂದರ್ಯವು ಸಾಕಾರಗೊಂಡಂತಹ ಪುತ್ಥಳಿಯನ್ನು ಕಂಡು ವಾತ್ಸಲ್ಯ ತುಂಬಿದ ದನಿಯಲ್ಲಿ 'ಬಾ ಮಗಳೇ....' ಎಂದು ಕರೆದರು. 'ಪರಮಾತ್ಮ ಎಂತಹ ಅಪರೂಪ ಚೆಲುವನ್ನು ಕಡೆದು

ಇಟ್ಟಿದ್ದೀಯೆ! ಈ ಕಂದನ ರಕ್ಷಣೆ ನಿನ್ನದು ತಂದೆ....' ಅಂತರಂಗದಲ್ಲಿ ಪ್ರಾರ್ಥಿಸಿದರು.

ಮಹಾದೇವಿ ಸಾಷ್ಟಾಂಗ ನಮಸ್ಕಾರಮಾಡಿ ಪದ್ಮಾಸನದಲ್ಲಿ ಕುಳಿತಳು. ಗುರುಲಿಂಗದೇವರು ಇಷ್ಟಲಿಂಗಪೂಜೆಯನ್ನು ಮಾಡಿದರು. ಬಳಿಕ ಮಹಾದೇವಿಯನ್ನು ಎದುರಿನಲ್ಲಿದ್ದ ಸಮೀಪದ ಆಸನದಲ್ಲಿ ಕುಳ್ಳಿರಿಸಿದರು.

'ಮಗು, ನಿನಗೆ ಲಿಂಗಧಾರಣೆ ಆಗಿದೆ, ಈಗ ಆಗುವುದು ಲಿಂಗದೀಕ್ಷೆ. ಅದು ಮದುವೆಗೆ ಮುನ್ನ ನಡೆಯುವ ನಿಶ್ಚಯ ಕಾರ್ಯವಿದ್ದಂತೆ; ಇದು ಲಗ್ನ ಕಾರ್ಯದಂತೆ. ಅಲ್ಲಿ ತಾಯಿತಂದೆಯರು ಮಗುವನ್ನು ಶಿವಪಥದಲ್ಲಿ ನಡೆಸುತ್ತೇನೆಂದು ಪ್ರತಿಜ್ಞೆ ಕೈಗೊಂಡರೆ, ಇಲ್ಲಿ ನೀನೇ ಸ್ವತಃ ಪ್ರತಿಜ್ಞೆ ಕೈಗೊಳ್ಳಬೇಕು. ಲಿಂಗಪತಿಯೊಡನೆ ಶರಣಸತಿಯಾಗಿ ಆಧ್ಯಾತ್ಮಸಂಸಾರವನ್ನು ಆರಂಭಿಸಲು ಗುರುವು ಈ ದೈವೀವಿವಾಹವನ್ನು ಮಾಡುವನು. ತಾಯಿ, ಇಲ್ಲಿ ನಾನೇ ತೆತ್ತಿಗ, ನೀನು ಮದುವಳಿಗೆ, ಲಿಂಗದೇವನೇ ಮದುವಳಿಗ, ವಿಶ್ವದ ಬಂಧುಗಳೇ ನಿಬ್ಬಣಿಗರು.

ಭಕ್ತಿಯ ಮಂಟಪ, ಜ್ಞಾನದ ಚಪ್ಪರ, ವಿರಕ್ತಿಯ ಹಸೆಮಣೆ, ಸರ್ವಜ್ಞನಾದ ಗಂಡ, ಸದಾಚಾರಿಯಾದ ಹೆಂಡತಿ, ಇದು ಎಂದೆಂದೂ ಬಿಡದ ಬಾಳವೆ; ಶರಣಸತಿಯ ಮದುವೆ. ಜಗದಾದಿ ಗಂಡರನು ಹೆಂಡಿರನ್ನಾಗಿ ಆಳುವ ಧೀರ ಗಂಡನ ಶರಣ ಸತಿ ನೀನು; ಅವನ ನಿಷ್ಠಾವಂತ ಸತಿಯಾಗಿ ಜಗನ್ಮಾತೆಯಾಗು.' ಎಂದು ಉಪದೇಶಿಸುತ್ತ ಮಹಾದೇವಿಯ ಇಷ್ಟಲಿಂಗವನ್ನು ಕೈಲಿ ಹಿಡಿದು ಪೂಜಿಸಿ, ತ್ರಾಟಕಯೋಗ ಮಾಡಿ, ಅದಕ್ಕೆ ಚಿತ್ಕಳೆಯನ್ನು ತುಂಬಿದರು. ತಮ್ಮ ತಪಸ್ಸನ್ನು ಧಾರೆಯೆರೆಯುವಂತೆ ದೈವೀಶಕ್ತಿಯನ್ನು ಪ್ರತಿಷ್ಠಾಪಿಸಿ ನುಡಿದರು :

'ಮಗಳೇ, ಇದು ನಿನ್ನ ಪುನರ್ಜನ್ಮ. ಶಾರೀರಕ ಬದಲಾವಣೆಯೊಡನೆ ಮಾನಸಿಕ ಬದಲಾವಣೆಯೂ ಆಗುವ ಸಂಗಮ ಕಾಲ. ಪ್ರಾಕೃತಿಕವಾಗಿ ತಾಯಿ ತಂದೆಯರ ಗರ್ಭದಲ್ಲಿ ಜನ್ಮಿಸಿದ್ದ ನೀನು, ಇಂದು ಆತ್ಮಿಕವಾದ ಹುಟ್ಟನ್ನು ಹೊಂದುವೆ. ಭವದ ಬಂಧನವ ಕಳಚಿ ಭಕ್ತತ್ವಕ್ಕೆ ಬರುವೆ. ನಿನ್ನ ಅಂಗದಮೇಲೆ ಬರಲಿರುವ ಗೋಲಾಕಾರದ ಇಷ್ಟಲಿಂಗವು ಜಗದಗಲ, ಮುಗಿಲಗಲ ವಿಶ್ವವ್ಯಾಪಿಯಾಗಿರುವ ಪರಮಾತ್ಮನ ಕುರುಹು. ವಿಶ್ವದ ಆಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸುವ ಪುಣ್ಯ ನಿನಗೆ ದೊರೆಯಿತು. ನಿನ್ನ ಕೈಗೆ ಕೊಡುತ್ತಿರುವ ಇಷ್ಟಲಿಂಗದಲ್ಲಿ ಎರಡು ಭಾಗಗಳಿವೆ: ಒಂದು ಒಳಗಿನ ಹುಟ್ಟುಲಿಂಗ, ಪಂಚಸೂತ್ರಲಿಂಗ. ಇನ್ನೊಂದು ಆ ಹುಟ್ಟುಲಿಂಗವನ್ನು

ಸುತ್ತುವರಿದಿರುವ ಕಂತೆ. ನಿರಾಕಾರನಾದ ದೇವನ ಶರೀರವೇ ಬ್ರಹ್ಮಾಂಡ. ಇದು ದೇವನಿದ್ದಾನೆ ಎಂಬುವಕ್ಕೆ ಪರಮಸಾಕ್ಷಿ. ಹಾಗೆಯೇ ಆತ್ಮನ ಶರೀರವೇ ಪಿಂಡಾಂಡ. ಇದು ಜೀವಾತ್ಮನಿದ್ದಾನೆ ಎನ್ನುವುದಕ್ಕೆ ಸಾಕ್ಷಿ. ಮೂರ್ತಿ-ಪೂಜೆಯ ವಿರೋಧಕರಾದ ಶರಣರು ಯಾವ ಮಾನವಾಕಾರದಲ್ಲಿ ದೇವನನ್ನು ಸೃಜಿಸದೆ, ವಿಶ್ವಾತ್ಮತತ್ತ್ವವನ್ನು ಗೋಲಾಕಾರದ ಕಂತೆಯ ರೂಪದಲ್ಲಿ, ದೇಹಾತ್ಮತತ್ತ್ವವನ್ನು ಶಾಂಭವೀಮುದ್ರೆಯಾಕಾರದಲ್ಲಿ ರೂಪಿಸಿ, ಬ್ರಹ್ಮಾಂಡ ದಲ್ಲಿ ಪಿಂಡಾಂಡವಿದೆ, ದೇವನ ಗರ್ಭದಲ್ಲಿ ಜೀವನಿದ್ದಾನೆ ಎಂಬ ತತ್ತ್ವದ ಮೇಲೆ ಕಂತೆಯಲ್ಲಿ ಹುಟ್ಟುಲಿಂಗವನ್ನು ಹುದುಗಿಸುತ್ತಾರೆ.

ನೋಡುವುದು ನೋಡಲ್ಪಡುವುದಿಲ್ಲ, ನೋಡಲ್ಪಡುವುದು ನೋಡುವುದಿಲ್ಲ. ಕಣ್ಣು ನೋಡುತ್ತದೆ, ನೋಡಲ್ಪಡುವುದಿಲ್ಲ. ಆತ್ಮ ತಿಳಿಯುತ್ತದೆ, ತಿಳಿಯಲ್ಪಡುವುದಿಲ್ಲ. ನೋಡುವುದು ನೋಡಲ್ಪಡಬೇಕಾದರೆ ಕನ್ನಡಿಯ ಸಹಾಯ ಬೇಕು. ಹಾಗೆಯೇ ಆತ್ಮವು ತಿಳಿಯಲ್ಪಡಬೇಕಾದರೆ ಲಿಂಗದರ್ಪಣವು ಬೇಕು. ತಾನಾರೆಂದು ತಿಳಿಯಲಿಕ್ಕೆ ಈ ಇಷ್ಟಲಿಂಗ ದರ್ಪಣವು ಅವಶ್ಯ.

ಸತ್ ಅಥವಾ ಇರುಹಿನ ಸ್ವರೂಪವಾದ ಪರಮಾತ್ಮ, ಚಿತ್ ಅಥವಾ ಅರುಹಿನ ಸ್ವರೂಪವಾದ ಜೀವಾತ್ಮ, ಎರಡನ್ನೂ ಬೆಸೆಯುವ ಆನಂದಸ್ವರೂಪವಾದುದು ಇಷ್ಟಲಿಂಗ. ಆದ್ದರಿಂದ ಇದು ಅವಯವ ಸಹಿತವಾದ ಮೂರ್ತಿ ಪೂಜೆಯಲ್ಲ, ನಿರವಯವ ಪರಮಾತ್ಮನ ಪೂಜೆ. ತನ್ನನ್ನು ಬಿಟ್ಟು ಬೇರೊಂದು ವಸ್ತುವಿನ ಪ್ರತೀಕೋಪಾಸನೆಯಲ್ಲ, ಅಹಂಗ್ರಹೋಪಾಸನೆ. ಬ್ರಹ್ಮಾಂಡ ಗತವಾದ ಮಹಾಲಿಂಗ ಪತಿಯನ್ನು ಪಿಂಡಾಂಡಗತವಾದ ಆತ್ಮಸತಿಯನ್ನು ಬೆಸೆಯುವ ಮಾಂಗಲ್ಯದಂತೆ ಈ ಇಷ್ಟಲಿಂಗ. ಇದನ್ನು ನೆಟ್ಟನೆ ಪೂಜಿಸಿ ಭವ ಗೆಡು. ನಿನ್ನ ಕರಸ್ಥಲಕ್ಕೆ ಕೊಡುತ್ತಿರುವ ಈ ತತ್ತ್ವವನ್ನು ಮನಸ್ಥಲ, ತದನಂತರ ಭಾವಸ್ಥಲದಲ್ಲಿ ಅಳವಡಿಸು. ಅನಂತರ ಜ್ಞಾನಸ್ಥಲದಲ್ಲಿ ನೆಲೆನಿಲ್ಲಿಸಿ ಸರ್ವಾಂಗ ದಲ್ಲೂ ವ್ಯೈಗೂಡಿಸಿಕೊಂಡು ಲಿಂಗ ನಡೆ, ಲಿಂಗ ನುಡಿಗಳಿಂದ ಬಾಳು....' ತಮ್ಮ ಕೈಯಲ್ಲಿದ್ದ ಇಷ್ಟಲಿಂಗವನ್ನು ಮಹಾದೇವಿಯ ಅಂಗೈಯೊಳಗೆ ಬರೆದ ಪಂಚ ಕೋನ ಮತ್ತು ಪ್ರಣವದ ಮೇಲಿರಿಸಿ, ತಮ್ಮ ಹಸ್ತವನ್ನು ಮಸ್ತಕದ ಮೇಲಿರಿಸಿ ಭಾವಲಿಂಗ ಸಂಬಂಧ ಮಾಡಿ, ಬಲಗಿವಿಯೊಳಗೆ ಪ್ರಣವ ಪಂಚಾಕ್ಷರಿ ಮಂತ್ರವನ್ನು ಉಸುರಿ, ಮಹಾದೇವಿಯಿಂದ ಪುನರುಚ್ಚಾರಣೆ ಮಾಡಿಸಿದರು.

ಮಹಾಚೈತನ್ಯವು ತನ್ನ ಸರ್ವಾಂಗವನ್ನು ಪ್ರವೇಶಿಸಿದಂತಾಗಿ ಪುಳಕಿತಳಾದ ಮಹಾದೇವಿ ಪ್ರಣವ ಪಂಚಾಕ್ಷರಿಯನ್ನು ಮನನಿಸತೊಡಗಿದಳು. ಆಗ ಮತ್ತೆ ಗುರುಗಳು ನುಡಿದರು :

'ಈ ನರಜನ್ಮ ಮತ್ತು ಶರೀರ, ದೈವೀಕೊಡುಗೆ; ಇವು ಇರುವುದು ಕೇವಲ ವಿಲಾಸ, ಲೌಕಿಕ ಸಂತೃಪ್ತಿಗಲ್ಲ, ದೇವನ ಒಲಿಮೆ ಗಳಿಸಲಿಕ್ಕೆ! ಆದರ್ಶ ಗುರಿಯನ್ನಿರಿಸಿಕೊಂಡು, ನಿಷ್ಠಾಯುತ ಸಾಧನೆಯಿಂದ ಮುಂದುವರಿ.'

ತಾಡಓಲೆಯ ಕಟ್ಟೊಂದನ್ನು ಕೈಗೆ ಇರಿಸಿ,

'ಇದು ಬಸವ ಜಗದ್ಗುರುವಿನ ವಚನ. ಇದೇ ನಮ್ಮ ಆಚಾರ ಸಂಹಿತೆ, ಅವನೇ ನಮ್ಮ ಧರ್ಮಗುರು, ಮಂತ್ರಪುರುಷ, ಶರಣಾಗತ ರಕ್ಷಕ ಎಂಬ ನಂಬಿಕೆ ಬೆಳೆಸಿಕೋ....' ಎಂದು ಗುರುಲಿಂಗದೇವರು ಹೇಳಿದರು.

'ಮಗಳೇ, ಈ ಬರಿದಾದ ತಾಳೇಗರಿಗಳನ್ನು ಸಾಂಕೇತಿಕವಾಗಿ ಕೊಡುವೆ. ಈ ಓಲೆಕಂತವನ್ನೂ ಹಿಡಿ; ನಿನ್ನ ಅನುಭವವನ್ನು ಕವಿ ಕೋಗಿಲೆಯಾಗಿ ಕನ್ನಡ ನುಡಿಯ ಬನದಲ್ಲಿ ಹಾಡು. ಆ ಕರೆ ವಿಶ್ವವನ್ನು, ವಿಶ್ವಾತ್ಮನನ್ನು ಖಂಡಿತಾ ಕೂಗಿ ಕರೆಯುವುದು. ಚನ್ನಮಲ್ಲಿಕಾರ್ಜುನನ ಚನ್ನ ಸತಿಯಾಗು...' ತಾಡಓಲೆ, ಓಲೆಕಂತವನ್ನು ಕೈಗಿತ್ತು ಎರಡೂ ಹಸ್ತಗಳನ್ನು ಮಹಾದೇವಿಯ ತಲೆಯ ಮೇಲಿರಿಸಿದಾಗ ಆಕೆಗೆ ಅಪೂರ್ವ ಆನಂದವೆನಿಸಿತು.

ಹೃದಯಕಮಲದಲ್ಲಿ ದೃಷ್ಟಿಯಿರಿಸುವಂತೆ ಎಡಗೈಯಲ್ಲಿ ಇಷ್ಟಲಿಂಗವಿಟ್ಟು, ಮೂಗಿನ ನೇರಕ್ಕೆ ಹನ್ನೆರಡು ಅಂಗುಲ ದೂರದಲ್ಲಿ ಹಿಡಿದು, ದೃಷ್ಟಿ ನಿಲ್ಲಿಸಿದಾಗ ತನ್ಮಯತೆಯ ತೆರೆ ಆವಳನ್ನು ಬಳಸಿತು.

ಎಷ್ಟೋ ಕ್ಷಣಗಳವರೆಗೆ ಬಹಿರಂಗದ ಅರಿವಿರಲಿಲ್ಲ. ಎಚ್ಚರಗೊಂಡು ಪಾದೋದಕ ಪ್ರಸಾದವನ್ನು ಸ್ವೀಕರಿಸಿ ಇಷ್ಟಲಿಂಗವನ್ನು ಕಣ್ಣಿಗೆ ಮುಟ್ಟಿಸಿ, ಮೇಲಿದ್ದ ಗಂಧದ ಕರಡಿಗೆಯಲ್ಲಿರಿಸಿದಳು.

'ಮಹಾದೇವಿ, ನಿನ್ನ ಸಾಧನೆ ದೃಢವಾಗಿರಲಿ....'

'ತಮ್ಮ ಅನುಗ್ರಹವಿದ್ದರಾಯಿತು ಗುರುಗಳೆ....' ವಿನಯದಿಂದ ನುಡಿದಳು.

'ಶಿಷ್ಯನ ಗುರುಭಕ್ತಿ, ಗುರುವಿನ ಶಕ್ತಿ ಎರಡೂ ಇದ್ದರೇನೆ ಗುರಿ ಮುಟ್ಟಲು ಸಾಧ್ಯ. ದೀಪದಲ್ಲಿ ಎಣ್ಣೆ, ಬತ್ತಿ ಇದ್ದೂ ಬೆಳಗನ್ನಂಟಿಸದಿದ್ದರೆ ದೀಪ ಸಾಧ್ಯವಾಗದು. ಎಣ್ಣೆ, ಬತ್ತಿ ಇಲ್ಲದಾಗ ದೀಪವಂಟಿಸಿದರೂ ಅಂಟದು. ನಿನ್ನ ಕಾಯದ ಪ್ರಣತೆಯಲ್ಲಿ ಭಕ್ತಿಯ ತೈಲ, ಸದಾಚಾರದ ಬತ್ತಿ ಎರಡೂ ಇವೆ ತಾಯಿ. ನಾನು ಹೊತ್ತಿಸಿದ ಜ್ಞಾನದೀವಿಗೆ ಉಜ್ವಲವಾಗಿ ಉರಿದು, ಜಗಕ್ಕೆ ಬೆಳಕು ನೀಡುವುದೆಂಬ ವಿಶ್ವಾಸವಿದೆ.

ಕಲಾವಿದನು ಎಷ್ಟೋ ವಿಗ್ರಹಗಳನ್ನು ಕಟೆಯುವನು. ಆದರೆ ಕೆಲವು ಅವನನ್ನು ಕೀರ್ತಿವಂತನನ್ನಾಗಿ ಮಾಡುವವು. ಸಾಹಿತಿ ಎಷ್ಟೋ ಕೃತಿಗಳನ್ನು ರಚಿಸುವನು, ಆದರೆ ಕೆಲವು ಕೃತಿಗಳು ಅವನನ್ನು ಅಮರನನ್ನಾಗಿ ಮಾಡುವವು.

ಸ್ವಾತಿ ಮಳೆಯ ನೀರು ಕಾಯ್ದ ಹಂಚಿನ ಮೇಲೆ ಬಿದ್ದಾಗ ಹಿಂಗುವುದು, ಕಮಲ ಪತ್ರದ ಮೇಲೆ ಬಿದ್ದಾಗ ಸುಮ್ಮನೆ ನಿಲ್ಲುವುದು, ಆದರೆ ಕಪ್ಪೆಯ ಚಿಪ್ಪಿನಲ್ಲಿ ಬಿದ್ದಾಗ ಮುತ್ತಾಗಿ ಮೆರೆಯುವುದು. ನನ್ನ ಕಾರುಣ್ಯದ ನೀರನ್ನು, ಬೋಧೆಯನ್ನು ಹಲವಾರು ಜನಕ್ಕೆ ಅನುಗ್ರಹಿಸಿರುವೆ. ನಿನ್ನ ತಾಯಿಯಂತಹ, ಲೌಕಿಕತೆಯಲ್ಲಿ ಕಾಯ್ದ ಹೃದಯದಲ್ಲಿ ಅದು ಹಿಂಗಿ ಹೋಗಿದೆ. ನಿನ್ನ ತಂದೆಯಂತಹ ಸಾತ್ವಿಕ ಜೀವಿಯ ಹೃದಯದ ಎಲೆಯ ಮೇಲೆ ಯಥಾ ರೂಪದಲ್ಲಿ ನಿಂತಿದೆ. ಆದರೆ ನಿನ್ನ ಹೃದಯದ ಚಿಪ್ಪಿನಲ್ಲಿಳಿದು ಅದು ಅಮರ ಸಂದೇಶದ ಮುತ್ತಾಗಿ ಹೊರಬರಲವ್ವಾ; ಇದು ನನ್ನ ಸಂಕಲ್ಪ, ಇದೇ ನೀನು ಸಲ್ಲಿಸಬಲ್ಲ ಗುರುದಕ್ಷಿಣೆ....' ಗುರುಲಿಂಗದೇವರ ಕಂಠ ಗದ್ಗದಿತವಾಗಿತ್ತು.

'ಆಗಲಿ ತಂದೆ, ನಿಮ್ಮ ಸಂಕಲ್ಪವನ್ನು ಪೂರೈಸುವ ಶಕ್ತಿಯನ್ನು ಚನ್ನಮಲ್ಲಿಕಾರ್ಜುನನು ದಯಪಾಲಿಸಲಿ....' ಗುರುಗಳ ಪಾದದ ಮೇಲೆ ತಲೆ ಇರಿಸಿದಳು ಕ್ಷಣಕಾಲ. ವಾತ್ಸಲ್ಯಪೂರ್ಣ ಹಸ್ತದಿಂದ ತಲೆಯನ್ನು ನೇವರಿಸಿದರು. ಈ ಅಪೂರ್ವ ಗಳಿಗೆಯನ್ನು ಕಂಡು ಅಲ್ಲಿಯೇ ಕುಳಿತಿದ್ದ ಓಂಕಾರನ ಕಣ್ಣುಗಳೂ ಹನಿಗೂಡಿದವು. ಸದ್ಯ ಲಿಂಗಮ್ಮನು ಅಲ್ಲಿಲ್ಲದೆ ಅಡಿಗೆಯ ಮನೆಯ ಗಡಿಬಿಡಿಯಲ್ಲಿದ್ದುದರಿಂದ ಸಮಾಧಾನದ ಉಸಿರುಬಿಟ್ಟನು. ಮಹಾದೇವಿ ಮೇಲೆದ್ದಳು. ಅದೊಂದು ಅಮೃತಗಳಿಗೆ ಎನಿಸಿತ್ತು. ಪುನರ್ಜನ್ಮವನ್ನು, ಆತ್ಮಿಕ ಹುಟ್ಟನ್ನು ಪಡೆದು ಉತ್ಸುಕಚೇತನಳಾಗಿ ಮಹಡಿಯನ್ನೇರಿದಳು.

ಉಳಿದ ಪರಿವಾರದವರೆಲ್ಲ ಪಾದೋದಕ, ಪ್ರಸಾದವನ್ನು ಸ್ವೀಕರಿಸುವುದರಲ್ಲಿ ಉದ್ಯುಕ್ತರಾದರು. ಮಹಾದೇವಿಯು ಬಿಸಿಲು ಮಹಡಿಯ ಬಯಲಲ್ಲಿ ಕುಳಿತಾಗ ಜಗತ್ತೆಲ್ಲವೂ ಹೊಸ ರೂಪವನ್ನು ಪಡೆದಂತೆನಿಸಿತು. ಸುಪ್ರಭಾತದ ಸೂರ್ಯ ಹಿತವಾದ ಬೆಳಗು ಚೆಲ್ಲುತ್ತಿದ್ದ. ಅವನ ಮೃದುವಾದ, ಚೇತೋಹಾರಿ ಕಿರಣದ ಅಪ್ಪುಗೆಯಿಂದ ಹೂಗಳು ತುಟಿಬಿರಿದು ನಗುತ್ತ, ಮೆಲ್ಲನೆ ಬೀಡುವ ತಂಗಾಳಿಗೆ ತಲೆದೂಗುತ್ತಿದ್ದವು. ಬೆಳ್ಳದಿರನ ಕಿರಣ ಸ್ಪರ್ಶದಿಂದ, ಹುಲ್ಲನ್ನು ಅಪ್ಪಿಕೊಂಡ ಮಂಜಿನ ಹನಿಗಳು ಮುತ್ತಿನ ಮಣಿಗಳಂತೆ ಹೊಳೆಯುತ್ತಿದ್ದವು. ದೊಡ್ಡದೊಡ್ಡ ಗಿಡಗಳು ನಿದ್ರೆಯಿಂದೆದ್ದಂತೆ ತೋರುತ್ತಿದ್ದವು. ಗುಬ್ಬಿಗಳು, ಗೊರವಂಕ–ಕಾಗೆಗಳು ಚಿಲಿಪಿಲಿ ರವವನ್ನು ಮಾಡುತ್ತಿದ್ದವು. ಜಗತ್ತು ರಮ್ಯವಾಗಿ, ಚಟುವಟಿಕೆಯ ಆಗರವಾಗಿ ತೋರತೊಡಗಿತು. ವಿಶಿಷ್ಟ ಚೇತನವೊಂದು ಎಲ್ಲೆಡೆ ಓತಪ್ರೋತವಾಗಿ ಹರಿಯುವ ಅನುಭವವಾಯಿತು.

ಮಹಾದೇವಿ ಮೆಲ್ಲನೆ ಗುಣುಗುಣಿಸಿ ಹಾಡುತ್ತ, ಏನನ್ನೋ ಬರೆದಳು. ಮತ್ತೊಮ್ಮೆ ತಿದ್ದಿ ಸರಿಪಡಿಸಿದಳು. ಅದನ್ನು ಎತ್ತಿಕೊಂಡು ಪೂಜೆಯ ಕೋಣೆಗೆ

ಬಂದಾಗ ಮಂಗಲ ನಡೆಯುತ್ತಿತ್ತು.

'ಗುರುದೇವಾ, ನಿಮಗೆ ಅರ್ಪಿತ ಮಾಡುತ್ತಿರುವುದೆಲ್ಲವೂ ತಂದೆ-ತಾಯಿಯರ ಸಂಪತ್ತು. ನನ್ನದಾಗಿ, ನಿಮ್ಮ ಶ್ರೀಪಾದಕ್ಕೆ ಕಿರುಕಾಣಿಕೆ ನೀಡುತ್ತಿರುವೆ, ಸ್ವೀಕರಿಸಿ ತಂದೆ....' ಭಾವುಕಳಾಗಿ ತಾಡಓಲೆಯ ಗರಿಯನ್ನು ಇಟ್ಟಳು.

ಗುರುಲಿಂಗರು ಮೆಲ್ಲನೆ ಓದಿದರು ;

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ,
ಭವಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ,
ಭವಿ ಎಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೆ,
ಚನ್ನಮಲ್ಲಿಕಾರ್ಜುನನ ತಂದೆನ್ನ
ಕೈವಶಕ್ಕೆ ಕೊಟ್ಟ ಗುರುವೆ ನಮೋ, ನಮೋ !*

'ಬಹು ಸುಂದರ, ಅರ್ಥಗರ್ಭಿತ, ಭಲೇ....!' ಉದ್ಗಾರ ತೆಗೆದರು. ಅವರ ಮುಖದ ಮೇಲೆ ಆನಂದದ ಮಹಾಪೂರ ಹರಿಯಿತು. ಭೂಮಿಯ ಗರ್ಭದಲ್ಲಿ ಅನಂತಕಾಲ ಗುಪ್ತವಾಗಿದ್ದು, ನಿಮಿತ್ತ ಮಾತ್ರ ಅವಕಾಶ ಸಿಕ್ಕಾಗ ಹೊರ ಚಿಮ್ಮುವ ಬುಗ್ಗೆಯಂತೆ ಮಹಾದೇವಿಯ ಅನಂತಜನ್ಮದ ಸಂಸ್ಕಾರಗಳ ಸಂಗ್ರಹ, ನಿಮಿತ್ತ ಸಂಸ್ಕಾರವಾದ ದೀಕ್ಷೆಯ ನಂತರ ಹೊರಹೊಮ್ಮಿತು.

'ಮಗಳೇ....ಹಾಡಬಲ್ಲೆಯಾ ?'

ಸುಶ್ರಾವ್ಯಕಂಠದಲ್ಲಿ ಹಾಡತೊಡಗಿದಳು :

ಸಂಸಾರ ಸಂಗದಲ್ಲಿರ್ದೆ ನೋಡಾ ನಾನು ;
ಸಂಸಾರ ನಿಸ್ಸಾರವೆಂದು ತೋರಿದನೆನಗೆ ಶ್ರೀಗುರು
ಅಂಗವಿಕಾರದ ಸಂಗವ ನಿಲಿಸಿ,
ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು ;
ಹಿಂದಣ ಜನ್ಮವ ತೊಡೆದು ಮುಂದಣ ಪಥವ ತೋರಿದನೆನ್ನ ತಂದೆ ;
ಚನ್ನಮಲ್ಲಿಕಾರ್ಜುನನ ನಿಜವ ತೋರಿದನೆನ್ನ ಗುರು !†

ಜೋಳದ ಬೆಳೆಯನ್ನು ಬೆಳೆಯಹೋಗಿ, ಮುತ್ತಿನ ತೆನೆಯನ್ನು ಪಡೆದಷ್ಟು ಸಂಭ್ರಮವಾಯಿತು—ಗುರುಲಿಂಗದೇವರಿಗೆ.

'ನಿನ್ನ ಸಾಧನೆ ದೈವೀಶಕ್ತಿಯ ಬೆಂಗಾವಲಿನಲ್ಲಿ ಅವ್ಯಾಹತವಾಗಿ ಮುಂದು ವರಿಯಲಿ....'

'ಸ್ತ್ರೀ ಸ್ವಾತಂತ್ರ್ಯದ ಕಹಳೆಯೂದಲು ಪರಮಾತ್ಮನು ನಿನ್ನನ್ನು ಸಾಧನ

---

* ಮ.ವ. ೫೬

† ಮ.ವ. ೪೦

ವನ್ನಾಗಿ ಮಾಡಿಕೊಳ್ಳುವೆನು.' ಎಂದು ಹೃದಯ ತುಂಬಿ ಹರಸಿದರು.

ಮಂಗಲ ನಡೆಯುವಾಗ, ಅಡಿಗೆಯ ಸಿದ್ಧತೆಯಲ್ಲಿ ತೊಡಗಿದ್ದ ಲಿಂಗಮ್ಮ ಬಂದು ಭಾಗಿಯಾದಳು. ಸದ್ಗುರುಗಳಿಗೆ ಆರತಿ ಬೆಳಗಿ, ಪುಷ್ಪವೇರಿಸಿ, ನಮಸ್ಕ ರಿಸಿ ನುಡಿದಳು :

'ಒಳ್ಳೆಯ ವರ ಬೇಗನೆ ಸಿಕ್ಕಿ, ಮಹಾದೇವಿ ಉತ್ತಮ ಗೃಹಿಣಿಯಾಗು ವಂತೆ ಆಶೀರ್ವದಿಸಿ ಗುರುದೇವಾ....'

ಗುರುಗಳು ಮಹಾದೇವಿಯನ್ನು ದಿಟ್ಟಿಸಿದರು. ಆವಳು ಗಂಭೀರಳಾಗಿ ನುಡಿದಳು :

'ಅವ್ವಾ, ಆಶೀರ್ವಾದವೂ ಆಯಿತು, ಮದುವೆಯೂ ಆಯಿತು. ಇಲ್ಲಿ ನೋಡು ಚೆಲುವಗಂಡ, ಚನ್ನಸತಿ. ನಿತ್ಯ ಮುತ್ತೈದೆತನ ನನ್ನದು....'

'ಓಹೋ....ಈ ಗಂಡನೇ?' ನಕ್ಕ ಲಿಂಗಮ್ಮ ಮಹಾದೇವಿಯ ಮಾತಿನ ತೀವ್ರತೆಯನ್ನು, ಮನದ ಇಂಗಿತವನ್ನು ಅರಿಯಲಾರದೆ, ಗುರುಗಳಿಗೆ ಎಡೆ ಮಾಡುವ ಸಲುವಾಗಿ ಪ್ರಸಾದ ತರಲು ಒಳಗೆ ಹೋದಳು.

ಗುರುಗಳಿಗೆ ಪ್ರಸಾದಕ್ಕೆ ಬಿನ್ನಹ ನೀಡಿದ ದಿನ ಆತ್ಮೀಯ ಸ್ವಜನರನ್ನು ಕರೆಯುವ ಪರಿಪಾಠ ಲಿಂಗಮ್ಮನದು. ಅಂದು ಗುರುಗಳ ಆಗಮನ, ಮಗಳ ಸಮಾರಂಭ, ಎರಡೂ ಸೇರಿದ್ದರಿಂದ ಅನೇಕರಿಗೆ ಊಟಕ್ಕೆ ಹೇಳಿದ್ದರು. ಮಹಾ ದೇವಿಯ ಕೆಳದಿಯರು ಬಹು ಸಂಭ್ರಮದಿಂದ ಅವಳನ್ನು ಸುತ್ತುವರಿಯುತ್ತಿ ದ್ದರು. ಇನ್ನೂ ಹತ್ತು ದಿನಗಳವರೆಗೆ ಅವಕಾಶವಿದ್ದುದರಿಂದ ಇಂದು ಅತಿ ಆಪ್ತ ಬಂಧುಗಳು, ಪ್ರಮುಖ ವಣಿಕರು ಮಾತ್ರ ನೆರೆದಿದ್ದರು. ಪೇಟೆಯ ಪ್ರಮುಖ ಹರದರಾದ ಶಂಕರಶೆಟ್ಟಿ, ಶಿವಪ್ಪಶೆಟ್ಟಿ ಅಲ್ಲದೆ ಶಿವಮೂರ್ತಪ್ಪ, ಸಿದ್ಧೇಶಶಾಸ್ತ್ರಿ ಮುಂತಾದ ವಿವಿಧ ವೃತ್ತಿಯವರೂ ಸೇರಿದ್ದರು.

ಶರಣ ಧರ್ಮದ ಪದ್ಧತಿಯ ಪ್ರಕಾರ ಎಲ್ಲವನ್ನೂ ಎಡೆಮಾಡಿ, ತುಪ್ಪ ವನ್ನು ನೀಡಿ, ಎಡೆಮಾಡುವುದು ಮುಗಿಯಿತೆಂದು ಸೂಚಿಸಿ, ಕರ್ಪೂರ ಬೆಳಗಿ ನಮಸ್ಕರಿಸಬೇಕಷ್ಟೆ. ಲಿಂಗಮ್ಮ, ಪಾರ್ವತಮ್ಮ, ಗಿರಿಜಾಂಬೆ ವಿವಿಧ ಭಕ್ಷ್ಯ ಗಳನ್ನು ಎಡೆಮಾಡಿದರು.

'ಲಿಂಗಮ್ಮಕ್ಕ....ಮಗಳ ಕೈಲಿ ಎಡೆಮಾಡಿಸವ್ವಾ....' ಶಿವಮೂರ್ತಪ್ಪ ಹೇಳಿದ. ಎಂಟು ಮಕ್ಕಳ ಹಿಂಡು ಅವನನ್ನು ಹಣ್ಣು ಮಾಡಿದ್ದರೂ, ಹಾಸ್ಯ ಪ್ರವೃತ್ತಿ ಇನ್ನೂ ಕುಂದಿರಲಿಲ್ಲ. ಮಹಾದೇವಿ ಪೂಜೆಯ ಕೋಣೆಯಲ್ಲಿ ಗದ್ದು ಗೆಯ ಮೇಲೆ ಪ್ರಸಾದಕ್ಕೆ ಕುಳಿತಿದ್ದ ಗುರುಗಳಿಗೆ, ಅವರ ಶಿಷ್ಯರಿಗೆ ಬಡಿಸು ತ್ತಿದ್ದಳು.

'ತುಪ್ಪ ನೀಡಿ ಸಾಷ್ಟಾಂಗ ಹಾಕಲು ಈಗ ಬರ್ತ್ತಾಳೆ....' ಎಂದು ಲಿಂಗಮ್ಮ ಅನ್ನುವಷ್ಟರಲ್ಲಿ ಹೊರಗೆ ಬಂದಳು. ಮಹಾದೇವಿಯ ಕೆಳದಿಯರಾದ ಕುಮುದಾ, ರುದ್ರಾಣಿ, ಕಮಲಾಕ್ಷಿ, ಶೈಲಜೆಯರು ಒತ್ತಾಯಮಾಡಿ ಆಕೆಗೆ ಅಲಂಕಾರ ಮಾಡಿದ್ದರು.

'ಇದೆಲ್ಲ ನಾನೊಲ್ಲೆ ರುದ್ರ....ಈ ಆಡಂಬರ ಬೇಡ....' ಮಹಾದೇವಿ ನಿರಾಕರಿಸಿದಳು.

'ದಿನಾ ಮಾಡಿಕೋ ಅಂತ ಕೇಳ್ತೀನೇನೇ? ಇಷ್ಟು ಪ್ರೇಮದಿಂದ ಕೇಳಿದರೂ ನೀನು ಒಪ್ಪೋಲ್ಲ. ಆಗಲೇ ಹಮ್ಮು ಬಂದಿರ್ತೇನೋ....' ರುದ್ರಾಣಿ ಮುಖ ಉಬ್ಬಿಸಿ ಮುನಿಸು ತೋರಿದಾಗ ಮಹಾದೇವಿ ಸೋತಳು.

ಗೆಳತಿಯರು ವಿಶೇಷ ಆಸಕ್ತಿಯಿಂದ ಹೆರಳು ಹಾಕಿ, ಮಲ್ಲಿಗೆ ಹೂವನ್ನು ಹೆಣೆದು, ಮಧ್ಯೆಮಧ್ಯೆ ಬಂಗಾರದ ಜಡೆಬಿಲ್ಲೆಗಳನ್ನು ಹಾಕಿ, ಹಣೆಗೆ ಬೈತಲೆ ಬೊಟ್ಟನ್ನು ಇಳಿಯಬಿಟ್ಟು, ರೇಷಿಮೆಯ ಸೀರೆಯನ್ನುಡಿಸಿ, ರತ್ನದ ಹರಳಿನ ತೋಳಬಂದಿಯನ್ನು ತೋಳಿಗೆ ಏರಿಸಿ, ಕಿವಿಗೆ ತೂಗೋಲೆಯನ್ನು ತೊಡಿಸಿ, ಕೊರಳನ್ನು ಮುತ್ತಿನ ಹಾರದಿಂದ ಅಲಂಕರಿಸಿದಾಗ ಮಹಾದೇವಿಯ ಅಂದ ಮುಮ್ಮಡಿಸಿತು. ಕೆಳದಿಯರೆಲ್ಲ ಜೊತೆಯಾಗಿ ಅಲಂಕರಿಸಿದ ಮಹಾದೇವಿಯನ್ನು ಕರೆದುಕೊಂಡು ಬಂದು ಗುರುಗಳ ಎದುರು ನಿಲ್ಲಿಸಿದಾಗ, ಗುರುಲಿಂಗ ದೇವರು ಗಂಭೀರವದನರಾದರು.

'ರೇಷಿಮೆ ಹುಳದ ರೇಷ್ಮೆ ನೇಯುವ ಪ್ರತಿಭೆಯೇ ತನಗೆ ಶತ್ರುವಾದಂತೆ, ದೇವಾ, ಈ ಮಗುವಿನ ಸೌಂದರ್ಯ ಆಧ್ಯಾತ್ಮ ಜೀವನದಲ್ಲಿ ಶತ್ರುವಾಗದಿರಲಿ...' ಎಂದು ಮನದಲ್ಲಿ ಪ್ರಾರ್ಥಿಸಿದರು. ಅಲ್ಲೇ ನಿಂತು ಗುರುಗಳಿಗೆ ಆಕೆ ಎಡೆ ಮಾಡತೊಡಗಿದಾಗ ಶಿವಮೂರ್ತಪ್ಪನ ಮಾತು ಕೇಳಿ ಹೊರಬಂದಳು.

ತುಪ್ಪದ ಬಟ್ಟಲನ್ನು ಹಿಡಿದು ನೀಡುತ್ತ ಬಂದ ಆಕೆಯನ್ನು ಕಂಡು ಎಲ್ಲರೂ ಬೆರಗಾದರು. 'ಈ ಸೌಂದರ್ಯದ ರಚನೆ ಮಾಡುವಾಗ ಬ್ರಹ್ಮ ಎಷ್ಟು ಕುಶಲತೆ ತೋರಿಸಿರಬೇಕು!' ಎಂಬ ಭಾವ ಎಲ್ಲರಲ್ಲೂ ಹಾಯದಿರಲಿಲ್ಲ. ತನಗೆ ಎಂಟು ಮಕ್ಕಳಿದ್ದರೂ ಒಂದೂ ಮಹಾದೇವಿಯಷ್ಟು ಚೆಂದವಿಲ್ಲ ಎಂಬ ಭಾವ ಶಿವಮೂರ್ತಪ್ಪನಿಗೆ ಬಂದರೆ, ಶಂಕರಶೆಟ್ಟರ ಮಗ ರಾಜಶೇಖರ ತಂದೆಯ ಮಗ್ಗುಲಲ್ಲಿ ಊಟಕ್ಕೆ ಕುಳಿತವನು, ತಾನೇ ನಾಚಿ ಮುಖ ಕೆಂಪಗೆ ಮಾಡಿಕೊಂಡ. ತನಗಾಗಿ ಹೆಣ್ಣಿನ ಅನ್ವೇಷಣೆಯಲ್ಲಿರುವ ತಂದೆ ಮಹಾದೇವಿಯನ್ನು ಏಕೆ ಕೇಳಬಾರದು? ಎಂದು ಅವನಿಗೆ ಅನ್ನಿಸದಿರಲಿಲ್ಲ.

'ಅದೆಷ್ಟು ಬೆಳೆದುಬಿಟ್ಟಿದ್ದಾಳೆ ಓಂಕಾರ, ನಿನ್ನ ಮಗಳು. ವಯಸ್ಸಿಗೆ

ನೀರಿದ ಬೆಳವಣಿಗೆ' ಸಿದ್ಧೇಶಶಾಸ್ತ್ರಿಗಳು ಹೇಳಿದರು.

'ಸೃಷ್ಟಿಯ ಸಮುದ್ರದಲ್ಲಿ ಹುಡುಕಿ ತೆಗೆದ ಅಪರೂಪದ ಮುತ್ತಿನಷ್ಟ ಅಪೂರ್ವ ಚೆಲುವು....!' ರತ್ನಪಡಿ ವ್ಯಾಪಾರಿಯಾಗಿದ್ದ ಶಿವಪ್ಪಶೆಟ್ಟಿ ಅಭಿಮಾನ ದಿಂದ ಹೇಳಿದರು.

'ಓಂಕಾರ, ಮಹಾದೇವಿಯ ಕೂಡ ನಾನು ಜಗಳ ತೆಗೆಯುತ್ತೀನಿ.' ಮಲ್ಲೇಶಪ್ಪ ಹೇಳಿದರು.

'ಏಕೆ ಚಿಕ್ಕಪ್ಪ....?' ಮಹಾಧೇವಿ ತುಪ್ಪ ಬಡಿಸೋದು ನಿಲ್ಲಿಸಿ ಕೇಳಿದಳು.

'ರುದ್ರಾಣಿ, ನೀನು ಒಂದೇ ದಿನ ಹುಟ್ಟಿದ್ದೀರಿ. ನೋಡವ್ವಾ, ಅಂದು ಬ್ರಹ್ಮ ನಿಮಗಿಬ್ಬರಿಗೆ ಸೌಂದರ್ಯ ಹಂಚುವಾಗ ನೀನೇನೋ ಲಂಚ ನೀಡಿ, ಅವಳ ಪಾಲಿನದೂ ಕಿತ್ತುಕೊಂಡುಬಿಟ್ಟಿದ್ದೀಯ....' ಗಹಗಹಿಸಿ ನಕ್ಕರು.

'ನನ್ನ ರುದ್ರಾಣಿ ಗುಣದಿಂದ ಅಪ್ರತಿಮ ಸುಂದರಿ ಚಿಕ್ಕಪ್ಪ : ಶರೀರ ಸೌಂದರ್ಯಕ್ಕಿಂತ ಮನದ ಚೆಲುವು ಮುಖ್ಯ.' ಮಹಾದೇವಿಯು ತನ್ನ ಪ್ರೇಮದ ಗೆಳತಿ ರುದ್ರಾಣಿಯನ್ನು ವಹಿಸಿಕೊಂಡು ಮಾತನಾಡಿದಳು.

'ಓಂಕಾರ, ಮಗಳು ದೊಡ್ಡೋಳಾದಾಗಲೇ ಇಷ್ಟೊಂದು ಭವ್ಯ ಊಟ ವಾದರೆ ಮದುವೆಗೆ ಎಷ್ಟು ವೆಚ್ಚ ಮಾಡ್ತೀಯಪ್ಪಾ? ಎಷ್ಟು ಗಂಟು ತೆಗೆ ದಿಟ್ಟಿದ್ದೀಯಾ; ಎಂದು ಮದುವೆ?' ಶಿವಮೂರ್ತಪ್ಪ ಕೇಳಿದ. ಓಂಕಾರ ಲೌಕಿಕರ ಸಂಭಾಷಣೆ, ಹರಟೆಯಲ್ಲಿ ಅಷ್ಟೊಂದು ಭಾಗವಹಿಸುತ್ತಿರಲಿಲ್ಲ. ಸುಮ್ಮನೆ ಮುಗುಳ್ನಕ್ಕ.

'ಹೇಳವ್ವಾ, ಮಾದೇವಕ್ಕ....ಎಂದು ನಿನ್ನ ಲಗ್ನದ ಊಟ?'

ಶಿವಮೂರ್ತಪ್ಪನನ್ನು ಸಮೀಪಿಸಿದ್ದ ಮಹಾದೇವಿ ಅಂದಳು :

'ಜೀವನದಲ್ಲಿ ಎರಡು ಸಾರಿ ಯಾರೂ ಲಗ್ನ ಆಗಲ್ಲ ಬೊಪ್ಪ; ಇಂದಾಗಲೇ ಗುರುಗಳು ತೆತ್ತಿಗರಾಗಿ ಚನ್ನಮಲ್ಲಿಕಾರ್ಜುನನ ಧರ್ಮಪತ್ನಿಯನ್ನಾಗಿ ಮಾಡಿ ದ್ದಾರೆ. ಬೆಳಿಗ್ಗೆ ಮದುವೆ ಆಗಿಬಿಟ್ಟಿತು. ಇದೇ ನನ್ನ ಲಗ್ನದ ಊಟ. ತನು ಮನ ಎಲ್ಲಕ್ಕೂ ಅವನೊಬ್ಬನೇ ಒಡೆಯ. ನಾನವನ ಮೀಸಲು ಸತಿ. ಇನ್ನೊಂದು ಊಟದ ದೃಷ್ಟಿಯಿಟ್ಟುಕೊಂಡು ಈ ಹೊತ್ತು ಕಡಿಮೆ ಉಂಡೀರಿ. ಎರಡೂ ಸಮಾರಂಭದ್ದು ಈಗಲೇ! ತುಪ್ಪ ಚೆನ್ನಾಗಿ ನೀಡ್ತೀನಿ.' ಗಿಂಡಿ ಯಲ್ಲಿದ್ದ ತುಪ್ಪವನ್ನೆಲ್ಲ ಶಿವಮೂರ್ತಪ್ಪನ ತಟ್ಟೆಗೆ ಸುರಿದಳು, ಹಾಸ್ಯದ ನಗೆ ನಗುತ್ತ.

ಚಕಿತರಾದ ಎಲ್ಲರೂ ಇದ್ದಕ್ಕಿದ್ದಂತೆಯೇ ಮೌನ ತಾಳಿದರು. ಆಕೆಯ ದಿಟ್ಟತನವನ್ನು ಕುರಿತು ಒಬ್ಬರು ಆಲೋಚಿಸುತ್ತಿದ್ದರೆ, ಪ್ರೌಢವಾದ ವಿಚಾರ

ಘಾರೆಯನ್ನು ಕಂಡು ಮತ್ತೊಬ್ಬರು ಬೆರಗಾಗಿದ್ದರು. ಮದುವೆಯ ವಿಚಾರ ವನ್ನು ಎತ್ತಿದ ತಕ್ಷಣ ನಾಚಿ, ಮುಖವೆಲ್ಲ ಕೆಂಪಗಾವರೆ ನೋಡಬಹುದು ಹಬ್ಬ ಎಂದು ಅವಳ ಮುಖವನ್ನೇ ಕದ್ದು ನೋಡುತ್ತಿದ್ದ ರಾಜಶೇಖರನಿಗೆ ಮಹಾ ದೇವಿಯ ಮುಖ ಹೆಣ್ತನವನ್ನು ಪ್ರಕಟಿಸದಿದ್ದಾಗ ಕೊಂಚ ನಿರಾಶೆ ಯಾಯಿತು.

'ಓಹೋ....ಅಪ್ಪನ ಗಂಟು ಉಳಿಸಬೇಕು ಅಂತಾಳೇನೋ....'

ಶಿವಮೂರ್ತಪ್ಪ ಮೌನವನ್ನು ಮುರಿದ.

'ಇಲ್ಲ ಬೊಪ್ಪ, ಭವಕ್ಕೆ ಕೆಡಹುವ ಪುಣ್ಯ-ಪಾಪದ ಗಂಟನ್ನು ಅಳಿಸ ಬೇಕು ಅಂತ....'

'ಶಿವಮೂರ್ತಣ್ಣ....ಆಕೆ ಜೊತೆಗೆ ಮಾತಿಗೆ ನಿಂತರೆ ಅದು ಹನುಮಂತನ ಬಾಲ. ಉಣ್ಣಲು ಆರಂಭಿಸಿರಿ.' ಲಿಂಗಮ್ಮ ಮಾತಿನ ತೆರೆ ಎಳೆದಳು. ಮಹಾ ದೇವಿ ಕರ್ಪೂರವನ್ನು ಹಚ್ಚಿ ಬೆಳಗಿ ಸಾಷ್ಟಾಂಗಮಾಡುತ್ತ,

'ಶಿವಾರ್ಪಿತವಾಗಲಿ ...' ಎಂದಳು.

ಗುರುಲಿಂಗದೇವರು ಪ್ರಸಾದವನ್ನುಣ್ಣುತ್ತಲೇ ಮಹಾದೇವಿಯ ಮಾತನ್ನು ಮೆಲುಕಾಡಿಸಿದರು. ಪ್ರಕೃತಿಸಹಜವಾದ ಗುಣವನ್ನು ಶರೀರ ವ್ಯಕ್ತಮಾಡಿ ದ್ದರೂ, ಮನಸ್ಸಿನಲ್ಲಿ ಮಾತ್ರ ಪ್ರಕೃತಿಜನ್ಯವಿಕಾರಗಳು ಮೊಳಕೆಯೊಡೆದಿರ ಲಿಲ್ಲ. ಅದೇ ಮುಗ್ಧತೆ, ಅದೇ ಗಂಭೀರ ವ್ಯಕ್ತಿತ್ವ! ಅವಳು ಉತ್ತರಿಸಿದ ದಿಟ್ಟತನ ಕಂಡು ಚಂದ್ರದರ್ಶನ ಮಾಡಿದ ಅಂಬುಧಿಯಂತೆ, ಹೃದಯ ಸಂತಸದ ಅಲೆಗಳಿಂದ ಭೋರ್ಗರೆಯತೊಡಗಿತ್ತು. ಅವಳ ಒಂದೊಂದು ಪದವಲ್ಲಿ ಹುದುಗಿದ ಭವಿಷ್ಯ ಜೀವನದ ರೂಪುರೇಷೆಯನ್ನು ಗುರುತಿಸುತ್ತ ಗುರುಗಳು ಪ್ರಸಾದದ ತೃಪ್ತಿಯನ್ನು ಅನುಭವಿಸುತ್ತಿದ್ದರು.

* * *

ಮಹಾದೇವಿಯ ಶರೀರದ ವ್ಯತ್ಯಾಸ ಅವಳಲ್ಲಿ ಯಾವ ಬದಲಾವಣೆಯನ್ನು ಮಾಡದಿದ್ದರೂ ನೋಡುವವರ ದೃಷ್ಟಿಕೋನ, ಆಡುವ ನಾಲಿಗೆಗಳಲ್ಲಿ ಬದ ಲಾವಣೆಯನ್ನು ತಂದಿತು. ಲಿಂಗಮ್ಮ ಈಗ ಒಂದೇ ಹಟ ಹಿಡಿದು ಮಗಳು ಇನ್ನು ಶಾಲೆ ಕಲಿಯುವುದು ಬೇಡವೆಂದು ಸಾರಿಬಿಟ್ಟಳು.

'ಅವ್ವಾ, ನನ್ನ ವಿದ್ಯೆಗೆ ತಡೆಯೊಡ್ಡಬೇಡ....' ಎಂದು ಮಗಳು ಗೋಗರೆ ದಳು.

'ಹಟ ಮಾಡಬೇಡ ಮಾದೇವಿ; ಇಲ್ಲಿಯತನಕ ನಿನ್ನ ಮಾತಿಗೆ ಬೆಲೆ ಗೊಟ್ಟೆವು. ಇನ್ನು ಸಾಧ್ಯವಿಲ್ಲ. ದಿನಾಲು ಹುಡುಗರ ಮಧ್ಯೆ ಕುಳಿತು ಓದುವ

ಅವಶ್ಯಕತೆಯಿಲ್ಲ. ಬೇಕಾದರೆ ಮನೆಯಲ್ಲಿ ತಾಡಓಲೆ ತಂದು ಓದು; ತಿಳಿಯದಿದ್ದಾಗ ಅಪ್ಪನನ್ನು ಕರೆದುಕೊಂಡು ಹೋಗಿ ಗುರುಗಳಲ್ಲಿ ಕೇಳಿ ಬಾ....' ತಾಯಿಯ ಮಾತಿನಲ್ಲಿನ ಗಡಸುತನ ಕಂಡು ಮಹಾದೇವಿ ಮೌನವಾಂತಳು.

'ಅವ್ವಾ, ನನ್ನಲ್ಲಿ ವಿಶ್ವಾಸವಿಲ್ಲವೆ? ಇದು ಅಪರಂಜಿ ಅಂತ ತಿಳಿಯವ್ವ; ತಿಪ್ಪೇಲಿಟ್ಟರೂ ಕಲ್ಲಿದ್ದಲಾಗುವುದಿಲ್ಲ, ಇನ್ನು ರೇಷಿಮೆ ವಸ್ತ್ರದಲ್ಲಿಟ್ಟರೆ ಮಂಕಾದೀತೆ? ಎಂಥಲ್ಲಿಟ್ಟರೂ ನನಗೆ ಭಯವಿಲ್ಲದಾಗ ಮಠಕ್ಕೆ ಹೋದರೆ ಪಾವಿತ್ರ್ಯತೆಯ ಪ್ರತಿರೂಪವಾದ ಗುರುಗಳ ಬಳಿ ಕುಳಿತರೆ ಏನಾದೀತು....?'

'ಇದ್ದಿರಬಹುದು ಮಗಳೇ! ಆದರೆ ಲೋಕದ ನಿಂದೆ!! ತಿಪ್ಪೇಲಿಟ್ಟರೂ ಕಲ್ಲಿದ್ದಲಾಗಲ್ಲ ನಿಜ. ಆದರೆ ಅದು ಸಗಣಿ ಮೆತ್ತಿ ಮಂಕಾದರೆ ಬಂಗಾರದ ವ್ಯಾಪಾರಿಗಳು ಕೊಳ್ತಾರೇನವ್ವಾ? ನೀನು ಎಲ್ಲಿದ್ದರೂ ರತ್ನವೇ, ಆದರೆ ವೃಥಾಪವಾದ ಹೆಸರಿಗೆ ಬಡಿದರೆ ಯಾರು ಮನೆ ತುಂಬಿಸ್ಕೋತಾರವ್ವಾ....?' ಮಂಕಾದ ಮಗಳ ಮುಖ ನೋಡಿ ನೊಂದ ಲಿಂಗಮ್ಮ, ತಲೆ ಸವರಿ, ಮಗಳ ಮುಖವನ್ನು ಎದೆಗೊರಗಿಸಿಕೊಂಡಳು.

'ಇನ್ನು ಯಾರು ಮನೆ ತುಂಬಿಸ್ಕೋಬೇಕು!! ಆಗಲೇ ಶಿವನನ್ನು ಮನಸ್ಸಿಗೆ ತುಂಬಿಸಿಕೊಂಡಾಗಿದೆ' ಎಂದುಕೊಂಡ ಮಹಾದೇವಿ ತಾಯಿಯ ಅಜ್ಞಾನಕ್ಕಾಗಿ ಮನದಲ್ಲಿ ನಕ್ಕಳು. ಲಿಂಗಮ್ಮನ ಭೀತಿ ಬೇರೆಯೇ ಇತ್ತು. ಗುರುಲಿಂಗದೇವರು ಆಗಲೇ ವೃದ್ಧಾವಸ್ಥೆಗೆ ಕಾಲಿಡತೊಡಗಿದ್ದರು; ಪಾವಿತ್ರ್ಯತೆ ವೈರಾಗ್ಯ, ತಪಸ್ಸು ಎರಕಹೊಯ್ದ ಮೂರ್ತಿ ಅವರು ಎಂದು ಲಿಂಗಮ್ಮನೇಕೆ, ಉಡುತಡಿಯೆಲ್ಲ ಅರಿತಿತ್ತು. ಅವರ ಬಗ್ಗೆಯಾಗಲಿ, ಮನೆಯ ವಾತಾವರಣದ ಬಗ್ಗೆಯಾಗಲಿ ಕನಸು ಮನಸಿನಲ್ಲಿ ಕೆಟ್ಟದಾಡುವಂತಿರಲಿಲ್ಲ. ಆಕೆಯ ಭಯವೆಂದರೆ. 'ವೈರಾಗ್ಯದ ಕುಂಡವಾದ ಗುರುಗಳು ಮಹಾದೇವಿಗೆ ಅದನ್ನೇ ಬೋಧಿಸಿ, ಎಲ್ಲಿ ಅವಳನ್ನು ಸಂಸಾರವಿಮುಖಳನ್ನಾಗಿ ಮಾಡಿಬಿಡುವರೋ' ಎಂಬುದಾಗಿತ್ತು. ಮಾನಸಿಕ ಸ್ಥಿತ್ಯಂತರವಾಗುವ ಈ ಕನ್ಯಾವಸ್ಥೆಯಲ್ಲಿ ಮನಸ್ಸು ಸಂಸಾರ-ಪ್ರಪಂಚಕ್ಕೆ ಆಕರ್ಷಿತವಾಗದೆ, ವೈರಾಗ್ಯ-ಆಧ್ಯಾತ್ಮಿಕತೆಯ ಸೆಳೆತಕ್ಕೆ ಸಿಕ್ಕರೆ, ಆ ಸುಳಿಯಿಂದ ಮಹಾದೇವಿಯನ್ನು ಮೇಲಕ್ಕೆತ್ತುವುದು ಕಠಿಣವಾದೀತು ಎಂದು ತಿಳಿದ ಲಿಂಗಮ್ಮ, ಮಠದ-ವಿರಕ್ತರ ವಿಚಾರಗಳ ವಾತಾವರಣದಿಂದ ಹೊರತೆಗೆದು, ನಾನಾ ವರ್ಣದ ಪ್ರಪಂಚದ ಪರಿಚಯ ಮಾಡಿಕೊಡಲೆಳಸುತ್ತಿದ್ದಳು.

ತಾಯಿಯ ಅಜ್ಞಾನಯುಕ್ತ ಪ್ರೀತಿಯಲ್ಲಿ ಮಹಾದೇವಿಗೆ ಉಸಿರುಕಟ್ಟಿದಂತಾಗಿ, ಮೌನ ತಾಳಿ ಮೆಲ್ಲನೆ ಬಿಡಿಸಿಕೊಂಡು ಮಹಡಿಯನ್ನೇರಿದಳು.

ತಗ್ಗಿದ್ದಲ್ಲಿ ನೀರು ಸ್ವಾಭಾವಿಕವಾಗಿ ಹರಿದುಹೋಗುವಂತೆ ತನ್ನ ತಾಯಿಯ ವೃತ್ತಿ ಮತ್ತೆಮತ್ತೆ ಪ್ರಾಪಂಚಿಕ ಆಕಾಂಕ್ಷೆಗಳಲ್ಲಿ ಹರಿಯುವುದನ್ನು ಗಮನಿಸಿ ವ್ಯಥಿತಳಾದಳು. 'ಅಧೋಮುಖವಾಗಿ ಹರಿಯುವ ಈ ಆಶಾಪ್ರವಾಹವನ್ನು ಊರ್ಧ್ವಮುಖಗೈಯಲು ಯಾವ ಅಧ್ಯಯನ, ಪ್ರವಚನಗಳಿಗೂ ಸಾಧ್ಯವಾಗಿಲ್ಲವೆ? ಅವ್ವಾ, ಕೊಳವೆಯಲ್ಲಿರಿಸಿದ ಕಾಲಕ್ಕೆ ನೆಟ್ಟಗಾದಂತೆ ಕಂಡು, ಕೊಳವೆಯ ಬಂಧನ ದಾಟಿ ಹೊರಗಾಗುತ್ತಿದ್ದಂತೆಯೇ ಮತ್ತೆ ಸುತ್ತಿಕೊಳ್ಳುವ ನಾಯಿಯ ಬಾಲದಂತೆ ನಿನ್ನ ಮನದ ಓಘ. ಜ್ಞಾನ ಪ್ರವಚನಗಳನ್ನು ಶ್ರವಣ ಮಾಡುತ್ತೀಯ; ಆದರೆ ಮನನ-ನಿಧಿಧ್ಯಾಸ ಮಾಡದೆ ಮತ್ತೆ ಕೆಳಮಟ್ಟದ ಆಸೆಯ ತಿರುಗಣಿ ಮಡುವಿನಲ್ಲೇ ಸುತ್ತುತ್ತೀಯೆ! ಪ್ರಚಂಡವಾದ ಮಾಯೆಯ ಬಲೆಯಿದು; ಇದನ್ನು ಬಿಡಿಸಿಕೊಳ್ಳುವುದು ಕಷ್ಟಸಾಧ್ಯ. ತಾವಿದರೊಳಗೆ ಸಿಕ್ಕಿ ಬೀಳುತ್ತಲಿದ್ದೇವೆ ಎಂಬ ಅರಿವು ಸಹ ಇಲ್ಲದೆ, ಅವರನ್ನು ಭ್ರಮಿತಗೊಳಿಸುವುದೇ ಮಾಯೆಯ ಕೈಚಳಕ. ಎಂತೆಂಥ ಹರಿ ಅಜರನ್ನು, ಇಂದ್ರ ಚಂದ್ರರನ್ನು ಈ ಮಾಯೆ ಬಳಲಿಸಿದೆ. ನಾವು ಮಹಾಜ್ಞಾನಿಗಳೆಂಬ ಜ್ಞಾನಮದ ಇರುವ ತಾಪಸಿಗಳನ್ನು, ಅನರ್ಹರು-ಅಸಮರ್ಥರು ಎಂಬ ಕೀಳರಿಮೆ ಇರುವ ಅಜ್ಞಾನಿಗಳನ್ನು, ಹದಿನಾಲ್ಕು ಲೋಕವನ್ನು ಇದು ನುಂಗಿ ನೀರು ಕುಡಿದಿದೆ. ಅಂದಾಗ ನಿನ್ನ ಪಾಡೇನು? ಆದರೆ ಚನ್ನಮಲ್ಲಿಕಾರ್ಜುನಾ, ಎಂಥದೇ ಪ್ರಸಂಗದಲ್ಲೂ ಈ ಮಾಯೆಯ ಮೋಹದ ಸೆರಗಿನಲ್ಲಿ ನನ್ನನ್ನು ಮಲಗಿಸದೆ, ನಿನ್ನ ಕಾರುಣ್ಯದ ಕಿರಣದಿಂದ ಜಾಗೃತವಾಗಿರಿಸು....'*

ಮಹಾದೇವಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದಳು.

---

* ಮ. ವ. ೬

ಭಾಗ ೩
ಗಮನ

೧೪. ಅಂತರ್ಮುಖಿ

ಎಡೆಬಿಡದೆ ಹರಿಯುವ ನದಿಯಂತೆ, ಕಾಲಪ್ರವಾಹ ವರುಷಗಳ ಹೆಜ್ಜೆಯನ್ನಿಕ್ಕುತ್ತ ಸಾಗಿದಂತೆ ಮಹಾದೇವಿಯ ವ್ಯಕ್ತಿತ್ವ ಬಹುಮುಖವಾಗಿ ವಿಸ್ತಾರವಾಗುತ್ತಿತ್ತು. ಆಳವಾದ ಪಾಂಡಿತ್ಯ, ಕಠಿಣ ತತ್ತ್ವಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯ, ತನ್ನ ವಿಮರ್ಶೆಯ ಒರೆಗೆ ಹಚ್ಚಿ ಪ್ರತಿಯೊಂದು ಆಚಾರ ವಿಚಾರಗಳನ್ನು ಪರಾಮರ್ಶಿಸುವ ತಾರ್ಕಿಕ ಶಕ್ತಿ ಮೈಗೂಡಿದ್ದವು. ಇಂತಹ ತತ್ತ್ವಜ್ಞಾನಿಯಾದ ಆಕೆ ಆಗಾಗ ಅಂತರ್ಮುಖಿಯಾಗಿ ಆತ್ಮಚಿಂತನೆಗೆ ತೊಡಗುತ್ತಿದ್ದಳು. ಒಳಮುಖದ ವಿಸ್ತರಣೆಯಾದಂತೆ ಬಹಿರಂಗದಲ್ಲಿ ಆಸಕ್ತಿ ಕುಂದತೊಡಗಿತು. ವೇಷಭೂಷಣಗಳಲ್ಲಿ, ಅಲಂಕಾರದಲ್ಲಿ ಅಸಡ್ಡೆ ಮೂಡಲಾರಂಭಿಸಿತು. ಸಾಧ್ಯವಾದಷ್ಟೂ ಕಾಲವನ್ನು ಮಗಳು ಪೂಜೆ, ಅಧ್ಯಯನ, ಚಿಂತನದಲ್ಲಿ ಕಳೆಯಲುದ್ಯುಕ್ತಳಾದಾಗ ಲಿಂಗಮ್ಮನಿಗೆ ಅಂತರಂಗದಲ್ಲಿ ಭೀತಿಯ ಅಲೆಗಳು ಹಾಯತೊಡಗಿದವು. ಓರಗೆಯ ಗೆಳತಿಯರು ಸ್ವಭಾವತಃ ಅಂದಗಾತಿಯರಲ್ಲದಿದ್ದರೂ ವಿಶೇಷ ಅಲಂಕಾರ ಮಾಡಿಕೊಂಡು, ಬಲವಂತವಾಗಿ ಅಂದವನ್ನು ಹೆಚ್ಚಿಸಿಕೊಳ್ಳಲು ಯತ್ನಿಸಿದರೆ, ಮಹಾದೇವಿ ಇರುವ ಚೆಲುವನ್ನೂ ಮಂಕಾಗಿರಿಸಿಕೊಳ್ಳುತ್ತಿದ್ದಳು. ಸಾದಾ ಸೀರೆ, ನಿರಾಭರಣ, ಕೇಶಾಲಂಕಾರದಲ್ಲಿ ನಿರಾಸಕ್ತಿ ; ಇವು ತಾಯಿಗೆ ನೋವನ್ನು ಕೆರಳಿಸುವ ವರ್ತನೆಗಳಾಗಿದ್ದವು. ಯೌವ್ವನದ ಹೊಸ್ತಿಲಲ್ಲಿ ನಿಂತ ಮಗಳು ಮುಪ್ಪಿನ ಮುದುಕಿಯಂತಿರುವುದು ಸಹನೆಯಾಗಲಿಲ್ಲ. ವಿದ್ಯೆಯ ಮುಂದುವರಿಕೆ ಬೇಡವೆಂದುದಕ್ಕೆ ಮಗಳು ಮಂಕಾಗಿ ಮನೆಯಲ್ಲಿರಬೇಕು, ಅವಳ ಚಿತ್ತವನ್ನು ಬೇರೆ ಕಡೆ ಹರಿಸಬೇಕು ಎಂದು ಸಂಕಲ್ಪಿಸಿಕೊಂಡ ಲಿಂಗಮ್ಮ, ತಾಡಓಲೆ ಹಿಡಿದು ಓದುತ್ತಿದ್ದ ಮಗಳ ಬಳಿಗೆ ಬಂದಳು.

'ಮಾದೇವಿ, ನಿನ್ನ ಓರಗೆಯ ಹುಡುಗಿಯರು ಅದೆಷ್ಟು ಚಂದವಾಗಿ ಉಟ್ಟು ತೊಟ್ಟು, ಇರುವರು. ನಿನಗೇನಾಗಿದೆಯೋ ? ಹಿತ್ತಾಳೆ ತಂಬಿಗೆಯನ್ನು ಹುಳಿ ಉಪ್ಪಿನಿಂದ ತೊಳೆದು ಒತ್ತಾಯಪೂರ್ವಕವಾಗಿ ಚೆಲುವನ್ನು ಹೆಚ್ಚಿಸುವಂತೆ ಅವರು ಮಾಡಿದರೆ, ಬಂಗಾರದ ತಂಬಿಗೆಯನ್ನು ಮಣ್ಣಿನಿಂದ ಸವರಿಡುವಂತೆ ನೀನು ಮಾಡುತ್ತಿರುವೆ!' ನೊಂದ ತಾಯಿ ತಲೆನೇವರಿಸಿ ಕೇಳಿದಳು. ಮಗಳ ತಲೆ ಕೆದರಿದ್ದುದನ್ನು ಕಂಡು ಎಣ್ಣೆ, ಹಣಿಗೆ ತಂದು, ಸಂಸ್ಕರಿಸತೊಡಗಿದಳು.

'ಅವ್ವಾ, ಈ ಶರೀರ ಇದಕ್ಕಾಗಿಯೇ ಇರುವುದೇ ? "ಇದರ ಉಪಯೋಗ

ಕೇವಲ ಪ್ರದರ್ಶನ, ಆಕರ್ಷಣೆ, ಭೋಗ ಇವಿಷ್ಟರಲ್ಲಿಯೇ ?" ಎಂದು ಚಿಂತನೆಗೆ ತೊಡಗಿರುವನವ್ವಾ. ನೋಡವ್ವೆ, ಮೊನ್ನೆ ಅಪ್ಪನು ರೇಷಿಮೆಯ ಸೀರೆಯೊಂದನ್ನು ಉರುಟು ಬಟ್ಟೆಯಲ್ಲಿ ಸುತ್ತಿ ತಂದನು. ನಮಗೆ ಒಳಗಿನ ಸೀರೆ ಮುಖ್ಯವೋ, ಹೊರಗೆ ಸುತ್ತಿದ ವಸ್ತ್ರ ಮುಖ್ಯವೋ....?' ತಾನು ಓದುತ್ತಿದ್ದ ತಾಡಓಲೆ ಯಿಂದ ಕಣ್ಣನ್ನು ಸರಿಸಿ ಕೇಳಿದಳು.

'ರೇಷಿಮೆ ಸೀರೆಯೇ ಮುಖ್ಯವಲ್ಲವೇ ?' ಲಿಂಗಮ್ಮ ತಲೆಗೂದಲನ್ನು ಹಣಿಗೆಯಿಂದ ಬಾಚುತ್ತ ಉತ್ತರಿಸಿದಳು.

'ಹಂಗೆ ಕಣವ್ವ; ಈ ಶರೀರವು ಕೇವಲ ಹೊರಗಿನ ಆವರಣ. ಆತ್ಮ ಒಳಗಣ ರೇಷಿಮೆ ಬಟ್ಟೆ. ನಾವು ಗಮನಿಸಬೇಕಾದುದು ಆತ್ಮನನ್ನು. ಅದನ್ನು ಸದ್ಗುಣಗಳಿಂದ ಅಲಂಕರಿಸಬೇಕು. ಕೇವಲ ನಿಮಿತ್ತ ಮಾತ್ರ ಸಾಧನವಾಗಿ ಇರುವ ಈ ಶರೀರವನ್ನಲ್ಲವ್ವ....'

'ಈ ಎಲ್ಲ ವೇದಾಂತ ಯಾತಕ್ಕೆ ಮಗಳೆ ? ನಿನಗೇನಾದರೂ ಆಸೆಯುಂಟೇ ? ಏನಾದರೂ ಉಡುಗೆ-ತೊಡಿಗೆ....ಬೇಡಿದ್ದು ತಂದುಕೊಡೋ ತಂದೆ ಇದ್ದಾರೆ.'

'ಅವ್ವೆ ! ನಾನು ಬಯಸೋ ವಸ್ತುವನ್ನು ಯಾರೂ ತಂದುಕೊಡಲಾರರು, ನಾನೇ ಶ್ರಮದಿಂದ ಗಳಿಸಿಕೊಳ್ಳಬೇಕಾಗುತ್ತೆ....'

'ನೀನು ಬಹಳ ಒಗಟನಂತೆ ಮಾತಾಡ್ತಿ ಮಾದೇವಿ. ಮೊನ್ನೆ ಸೋಮ ಶೇಖರಪ್ಪನ ಮಗಳು ನಾಗವೇಣಿ ವಜ್ರದೋಲೆ ಹಾಕ್ಕೊಂಡು ತೋರಿಸೋಕ್ಕೆ ಬಂದಿದ್ದಳಲ್ಲ; ನಿನಗೂ ಅದರ ಮೇಲೆ ಆಸೆ ಆಗಿದ್ಯೇನವ್ವಾ? ಕಪ್ಪುಮುಖ ಇದ್ದರೂ ಅದೆಷ್ಟು ಆಡಂಬರ ಮಾಡಿದ್ಲು ಅಲ್ವಾ? ನೀನೇನಾದರೂ ಅವನ್ನು ಹಾಕಿಕೊಂಡರೆ ಎಷ್ಟು ಜನರ ದೃಷ್ಟಿ ತಾಗುತ್ತೋ....'

ಮಹಾದೇವಿ ನಕ್ಕು ನುಡಿದಳು :

'ಅವ್ವಾ, ಮಧುವನ್ನು ಹೀರಬಯಸುವ ದುಂಬಿಯನ್ನು ಜೇನುತುಪ್ಪದ ಬಿಂದಿಗೆಯಲ್ಲಿ ಇಕ್ಕಿದರೆ ಅದು ಆನಂದಿಸಬಲ್ಲುದೇನವ್ವಾ? ಅಂತರಂಗ ನಿಜ ವಾಗಿ ಬಯಸುವುದು ಆಧ್ಯಾತ್ಮಪುಷ್ಪದಲ್ಲಿ ಸಿಗುವ ಸ್ವಾನುಭಾವದ ಮಕರಂದ ವನ್ನೇ ವಿನಾ ಲೌಕಿಕಸುಖದ ಕೃತಕ ಜೇನುತುಪ್ಪವನ್ನಲ್ಲ....'

'ನಿನ್ನ ಮಾತಿನ ಹೊಯ್ಲು ನನಗೆ ಅರ್ಥವೇ ಆಗದು....' ನಿರಾಶಳಾದ ಲಿಂಗಮ್ಮ ನುಡಿದಳು. ಮಗಳು ಇನ್ನೂ ಸಣ್ಣವಳು ಎಂದು ಸಹನೆಯಿಂದ ಕಾಯುತ್ತ ಬಂದಿದ್ದಳು. ಆದರೆ ಪುಷ್ಪವತಿಯಾಗಿ ಕೆಲವು ತಿಂಗಳು ಸರಿದು ಹೋಗಿದ್ದರೂ ಮಹಾದೇವಿಯ ಆಸೆ-ಆಕಾಂಕ್ಷೆಗಳು ಬಹಿರ್ಮುಖಪ್ರಪಂಚಕ್ಕೆ ತಿರುಗಿರಲಿಲ್ಲ.

ಮಗಳು ನಡೆದಾಡುತ್ತಿದ್ದರೆ, ಪೂಜೆಗೆ ಕುಳಿತಿದ್ದರೆ, ತಾಯಿಯು ನೆಟ್ಟ ನೋಟದಿಂದ ದಿಟ್ಟಿಸುತ್ತಿದ್ದಳು. ತಾನು ಚೆಲ್ವೆ ಎಂದು ಅರಿತಿದ್ದ ಆಕೆಗೆ, ಆ ಚೆಲ್ವು ಇನ್ನೂ ವೃದ್ಧಿಯಾಗಿ ಮಗಳಲ್ಲಿ ಕಾಣಬರುತ್ತಿತ್ತು. ದಂತದ ಬಣ್ಣಕ್ಕೆ ತಿಳಿಗೆಂಪು ರಂಗು ಬೆರೆದಂತಹ ಮೈಬಣ್ಣ, ಎತ್ತರದ ನಿಲುವು, ನೀಳವಾದ ಕೈಕಾಲುಗಳು, ಬಳಕುವಂತಹ ತೆಳುನಡು, ಪುಷ್ಪವಾದ ಎದೆ, ನೀಳವಾದ ಕೊರಳು; ತುಂಬು ಕೆನ್ನೆಯೊಡನೆ ಶೋಭಿಸುವ ಅಂದವಾದ ಮುಖ, ಅದರಲ್ಲಿ ಕಡೆದು ಇಟ್ಟಂತಹ ನೀಳವಾದ ಮೂಗು, ಕಮಲದ ದಳದಂತಹ ಕಣ್ಣೆವೆಗಳು, ಆ ಕಣ್ಣೆವೆ ತೆರೆದಾಗ ಹೂವಿನ ನಡುವೆ ಚಲಿಸುವ ದುಂಬಿಯಂತಹ ಕಪ್ಪು ಕಣ್ಣಾಲಿಗಳು. ಕಳೆಯ ಬುಗ್ಗೆಯಾದ ಕಣ್ಣಾಲಿಗಳು ಚೈತನ್ಯದ ಕುಂಡಗಳಾಗಿದ್ದವು. ದೂಟವಾದ ಹಣೆಯಮೇಲೆ ಹಾರಾಡುವ ಮುಂಗುರುಳುಗಳು ಮೊಗದ ಅಂದವನ್ನು ಇಮ್ಮಡಿಸುತ್ತಿದ್ದವು. ಮಹಾದೇವಿಯ ಕೇಶರಾಶಿಯಂತೂ ಕಂಡವರ ಕಣ್ಣು ಸೆಳೆಯುವಷ್ಟು ಮೋಹಕವಾಗಿತ್ತು. ಬಿಚ್ಚಿದರೆ ಸಾಕು ಮೊಳಕಾಲ ಚಿಪ್ಪನ್ನು ಮುಟ್ಟುವಷ್ಟು ತೂಗಿಬಿದ್ದು, ದಟ್ಟವಾಗಿ ಹರಡಿಕೊಳ್ಳುತ್ತಿದ್ದವು. 'ಯಾರ ಕಣ್ಣನ್ನು ಸೆಳೆಯುವ ಕಾಮ ಪಾಶವೋ' ಎಂದು, ಮಗಳು ಎಣ್ಣೆ ನೀರೆರೆದುಕೊಂಡು ನಿಂತಾಗ ಲಿಂಗಮ್ಮ ಅಂದುಕೊಳ್ಳುತ್ತಿದ್ದಳು.

ದಟ್ಟವಾದ ಆ ಕೂದಲನ್ನು ತಿಕ್ಕಿಕೊಂಡು ಎರೆದುಕೊಳ್ಳಲಾರದೆ ಮಗಳು ಉದಾಸೀನ ಮಾಡುವಳೆಂದು ತಾಯಿಯೇ ಮುಂಜಾಗ್ರತೆಯಿಂದ ಎರೆದು, ಕೂದಲ ಕಳೆಯನ್ನು ರಕ್ಷಿಸುತ್ತಿದ್ದಳು. 'ಮಗಳ ಸೌಂದರ್ಯವನ್ನು ರೂಪಿಸುವಾಗ ಬಹುಶಃ ಬ್ರಹ್ಮ ಆನಂದದ ಅನುಭವದಲ್ಲಿರಬೇಕು. ಆದಕ್ಕೇ ಜಗದ ಚೆಲುವನ್ನು ಒಂದೆಡೆ ಎರಕ ಹಾಕಿದ್ದಾನೆ' ಎಂದು ಹರ್ಷಿಸುತ್ತಿದ್ದಳು. ಪ್ರತಿ ಅಂಗಾಂಗಗಳು ಕಳೆಯಿಂದ ಪುಟಿಯುತ್ತಿದ್ದವು. ಪರಿಪಕ್ವ ಶಿಲ್ಪಿಯು ತನ್ನ ಏಕಾಗ್ರತಾಯುಕ್ತ ಕಲಾ ತಪಸ್ಸನ್ನು ಧಾರೆ ಎರೆದು ಕಡೆದಂತಹ ದಂತದ ಗೊಂಬೆಗೆ ಜೀವ ಬಂದಂತೆ ಮಹಾದೇವಿ ಶೋಭಿಸುತ್ತಿದ್ದಳು. ಲಿಂಗಮ್ಮ ತನ್ನ ಕಣ್ಣ ಮುಂದೆ ಸುಳಿದಾಡುವ ಹಲವಾರು ತರುಣಿಯರನ್ನು ಮಗಳಿಗೆ ಹೋಲಿಸಿ ನೋಡಿದಳು. ಮಹಾದೇವಿಯ ಪಾದದ ಮೇಲಿನ ಕಳೆಗೆ ಅವರಾರ ಚೆಲ್ವು ಸರಿದೂಗದು ಎನಿಸಿದಾಗ ಅಭಿಮಾನದ ಹೊನಲು ಉಕ್ಕಿ ಹರಿಯಿತು.

ಹೆಣ್ಣಾದ ಹೆತ್ತ ತಾಯಿಯೇ ತನ್ನನ್ನು ದಿಟ್ಟಿಸುವುದನ್ನು ಕಂಡು ಮಹಾದೇವಿಯ ಮೈಮೇಲೆ ಮಿಂಚು ಹರಿದಂತಾಯಿತು, ಸಂಕೋಚವೆನಿಸಿತು, ಅಂತರಂಗ ಭಯದಿಂದ ತಳಮಳಿಸಿತು. ತಾಯಿಯ ನೋಟ, 'ನೀನು ಹೆಣ್ಣು, ನೀನು ಹೆಣ್ಣು, ನಿನ್ನ ಸೌಂದರ್ಯದ ಆಸ್ವಾದನೆಗೆ ಬೇರೊಂದು ಚೇತನ ಬೇಕು

....' ಎಂದು ಚುಚ್ಚಿ ಚುಚ್ಚಿ ಹೇಳುವಂತಿತ್ತು. ಆ ನೋಟ, ತನ್ನ ವಿಕಸಿತ ಹೆಣ್ತನವನ್ನು ಜಾಗ್ರತ ಮಾಡುವ ಉದ್ದೇಶದಿಂದ ಕೂಡಿದಂತಿತ್ತು. ಅಸಹನೀಯ ಎನ್ನಿಸಿದಾಗ, 'ಅವ್ವಾ....ಹಾಗೇಕೆ ನೋಡ್ತೀಯವ್ವಾ?' ಎಂದಳು ಭಾರವಾದ ಕಂಠದಿಂದ. ತಾನು ಎಷ್ಟೋ ಹೊತ್ತಿನಿಂದ ದಿಟ್ಟಿಸುವುದರ ಅರಿವು ಬಂದು, ಮಗಳಿಗೆ ದೃಷ್ಟಿ ತಾಗಿತೇನೋ ಎಂದುಕೊಂಡಳು ಲಿಂಗಮ್ಮ. ಹೆರಳು ಹಾಕುವುದು ಮುಗಿದಿತ್ತು.

'ಬಚ್ಚಲಿಗೆ ಹೋಗಿ ಮುಖ ತೊಳೆದು ಬಾ. ಮೊನ್ನೆ ನಿನ್ನಪ್ಪ ತರಲಿಲ್ವೆ ಆ ಹೊಸ ಸೀರೆ ಕಣೆ, ಅದನ್ನ ಉಟ್ಕೋ. ನಿನ್ನ ಕೆಳದಿ ಕುಮುದಾ ಬರ್ತ್ತಾಳಂತೆ; ನೀವಿಬ್ಬರೂ ಉದ್ಯಾನಕ್ಕೆ ಹೋಗಿ ತಿರುಗಾಡಿ ಬರ್ರಿ. ಕತ್ತಲೆ ಆಗೋದರ ಒಳಗೆ ಬಂದು ಬಿಡಬೇಕು.'

ಕುಮುದಳು ಮಹಾದೇವಿಗಿಂತ ಒಂದು ವರುಷ ಹಿರಿಯಳು. ಕೆಲವೇ ತಿಂಗಳ ಹಿಂದೆ ಲಗ್ನವಾಗಿ, ಮೊದಲ ಬಾರಿಗೆ ಗಂಡನ ಮನೆಯಲ್ಲಿದ್ದು, ದೀವಳಿಗೆಯ ಹಬ್ಬಕ್ಕೆ ತೌರಿಗೆ ಬಂದವಳು. ಆಕೆಯ ಗಂಡ ಗಂಗಾಧರ ಬಹಳ ಸುಲಕ್ಷಣವಂತ ರಸಿಕ. ಸಂಸಾರಿಕ ಜೀವನಪಥದಲ್ಲಿ ಕುಮುದಳು ಅತ್ಯಂತ ಸುಖಿಯಾಗಿರುವಳು ಎಂಬುದನ್ನು ಆಕೆ ಊರಿಗೆ ಬಂದೊಡನೆ ಗೆಳತಿ ಮಹಾದೇವಿಯನ್ನು ಕಾಣಲಿಕ್ಕೆ ಬಂದ ತಕ್ಷಣ ಲಿಂಗಮ್ಮ ತಿಳಿದುಬಿಟ್ಟಳು. ಮಹಾದೇವಿಯ ವಿಚಿತ್ರ ವರ್ತನೆಯನ್ನು ಕುಮುದೆಯ ಮುಂದೆ ಹೇಳಿ, ತನ್ನ ಸಂಸಾರ ಜೀವನದ ಸುಖದ ಬಗೆಯನ್ನು ಮಹಾದೇವಿಯ ಮುಂದಿರಿಸಿ, ಆಕೆಯ ಹೃದಯಪರಿವರ್ತನೆ ಮಾಡೆಂದು ಕೇಳಿಕೊಂಡಿದ್ದಳು.

'ಅವ್ವಾ, ನಾನಿನ್ನೂ ಗುರುಗಳು ಕೊಟ್ಟ ವಚನಗಳನ್ನು ಕಂಠಪಾಠ ಮಾಡಿ, ನಾಳೆ ಸಂಜೆಗೆ ಅಪ್ಪನೊಡನೆ ಹೋಗಿ ಹಾಡಬೇಕಾಗಿದೆ. ಹೊರಗೆ ಹೋಗಲು ಒಲ್ಲೆ ಕಣವ್ವಾ....'

ಏಕೋ ಲಿಂಗಮ್ಮನಿಗೆ ಗುರುಗಳ ಮೇಲೆ ಸ್ವಲ್ಪ ಸಿಟ್ಟು ಬಂದಿತು. 'ಅರಿಯದ ಹುಡುಗಿಗೆ ವೈರಾಗ್ಯಬೋಧೆ ಮಾಡುವವರು ಇವರೇ. ಬುದ್ಧಿ ಹೇಳುವ ಬದಲು, ಬುದ್ಧಿ ಕೆಡಿಸುತ್ತಾರೆ' ಎಂದುಕೊಂಡಳು. ಗುರುಗಳ ಬಗ್ಗೆ ಇಂಥಾ ಕ್ರೋಧದ ಅಲೆ ತೇಲಿ ಬಂದುದಕ್ಕೆ ಮರುಕ್ಷಣದಲ್ಲಿ ಪಶ್ಚಾತ್ತಾಪವೆನಿಸಿತು.

'ಓಂ....ದೇವರೇ ಕ್ಷಮಿಸು. ಪರಮಪವಿತ್ರ ಸದ್ಗುರುವಿನ ಮೇಲೆ ಕ್ರೋಧ ಸಲ್ಲದು' ಎಂದುಕೊಂಡು, ಸಮಾಧಾನ ತಾಳಿ ನುಡಿದಳು:

'ಮಹಾದೇವಿ, ನಿನ್ನ ಕೆಳದಿ ಬಹುದಿನಕ್ಕೆ ಬಂದರೆ ಹಾಗೆಲ್ಲ ಮಾಡ

ಬಾರಸವ್ವಾ....ಕಲಿಸೋನು ಇದ್ದುದ್ದೇ. ತಾಯಿಯ ಮಾತಿಗೆ ಅಷ್ಟು ಬೆಲೆ ಕೊಡಬಾರದೆ....?' ಮಹಾದೇವಿಯ ಬಾಯಿ ಕಟ್ಟಿದಂತಾಯಿತು.

'ಹೋಗ್ಲಿ ನಿ ಅವ್ವಾ, ಆ ರೇಷ್ಮೆ ಸೀರೆ ಉಡಲ್ಲ, ಈ ನೂಲಿನ ಸೀರೇನೆ ಸಾಕು....'

'ನನ್ನಮ್ಮ ಜಾಣೆ, ನನ್ನ ಮಾತಿಗೆ ಬೆಲೆ ಕೊಡೆ ಮಗಳೇ! ನಾನು ನಿನ್ನ ಕೆಟ್ಟದ್ದಕ್ಕೆ ಹೇಳ್ತೀನೆಯೆ?' ಹೆಜ್ಜೆಹೆಜ್ಜೆಗೆ ತಾಯಿಯ ಮನಸ್ಸನ್ನು ನೋಯಿಸಲಾರದೆ ಮೌನವಾಗಿ ಒಳಹೋಗಿ, ಮುಖ ತೊಳೆದು ವಿಭೂತಿ ಧರಿಸಿ, ತಿಳಿ ನೀಲಿಯ ರೇಶಿಮೆ ಸೀರೆಯನ್ನುಟ್ಟು, ತಲೆಯ ಮೇಲೆ ಮುಸು ಕೆಳೆದುಕೊಂಡು ಬಂದಾಗ, ಲಿಂಗಮ್ಮ ಕಟ್ಟಿ ಇರಿಸಿದ್ದ ಸುವಾಸಿತ ಮಲ್ಲೆಯ ದಂಡೆಯನ್ನು ತಂದು ಮಗಳಿಗೆ ಮುಡಿಸಹೋದಳು.

'ಬೇಡ ಬಿಡವ್ವಾ, ಸಂಜೆ ಪೂಜೆಗೆ ಇಷ್ಟಲಿಂಗಕ್ಕೆ ಏರಿಸ್ತೀನಿ....ನನ್ನ ಚನ್ನಮಲ್ಲಿಕಾರ್ಜುನನಿಗೆ ಅರ್ಪಿಸುತ್ತೀನಿ....' ಕೈ ಅಡ್ಡ ಹಿಡಿದಳು.

'ಬೇರೆ ಕೊಡ್ತೀನಿ; ಇದು ಮುಡಿಯಲ್ಲಿ ಇರಲಿ ...' ಲಿಂಗಮ್ಮ ಮುಡಿಸಿ ದಳು.

'ನನ್ನವ್ವಾ, ನಿನ್ನನ್ನು ಬಹಳ ಹೊತ್ತಿನಿಂದ ನೋಡ್ತಾ ಇದ್ದೀನಿ, ದೃಷ್ಟಿ ತಾಗಿತೋ ಏನೋ!' ಲಿಂಗಮ್ಮ ಸರಸರನೆ ಒಳಹೋಗಿ ಎಲೆಯನ್ನು ಸುಟ್ಟು ತಂದು ಕಾಡಿಗೆಯ ಚುಕ್ಕೆಯನ್ನು ಕೆನ್ನೆಗೆ, ಹಣೆಗೆ ಇರಿಸಿದಳು. ಮಗಳ ಚೆಲುವು ಮುಮ್ಮಡಿಸಿದಾಗ ಎರಡೂ ಕೈಗಳನ್ನು ಮೇಲಿನಿಂದ ಸವರಿ ಚಿಟಿಕೆ ಮುರಿದಳು.

ತಾಯಿಯ ವಾತ್ಸಲ್ಯಕ್ಕೆ ಮಹಾದೇವಿಯ ಹೃದಯ ತುಂಬಿಬಂದಿತು.

'ಅವ್ವಾ! ನಿನ್ನ ಹೃದಯ ಅಮೃತದ ಕೊಡ....' ಎಂದಳು ಕಂಠ ತುಂಬಿ. ಆದರೆ ಮರುಕ್ಷಣವೇ ಮನ ಅಂತರ್ಮುಖವಾಯಿತು.

'ನನ್ನ ತಾಯಿಯ ವಾತ್ಸಲ್ಯ ಅಪರಿಮಿತ. ಆದರೆ ಅದರ ಹಿಂದೆ ನೂರಾರು ಬಯಕೆಗಳು! ಒಬ್ಬರ ಆಹಾರ ಮತ್ತೊಬ್ಬರಿಗೆ ವಿಷವಾಗಬಹುದು. ನನ್ನ ತಾಯಿ ತೋರುವ ಪ್ರೇಮ ಲೌಕಿಕರಿಗೆ ಹಿತ; ಆದರೆ ನನಗೆ....?'

ಅಷ್ಟರಲ್ಲಿ ಕುಮುದಾ ಹೊಸ ಸೀರೆಯನ್ನುಟ್ಟು, ನಿರಿಗೆಯನ್ನು ಚಿಮ್ಮುತ್ತ ಬಂದುದನ್ನು ನೋಡಿ ಲಿಂಗಮ್ಮ ನುಡಿದಳು;

'ನೋಡು, ನಿನಗಿಂತ ಹಿರಿಯಳಾದರೂ ಆಕೆಯ ಉತ್ಸಾಹ ಎಷ್ಟು, ಸೌಂದರ್ಯಪ್ರಜ್ಞೆ ಎಷ್ಟು! ನೀನು ಮುದಿ ಅಜ್ಜಿಯಂತೆ ತಲೆ ಮೇಲೆ ಮುಸುಗು ಹೊದ್ದು....'

'ಅವ್ವಾ....ಈ ಮಾತು ನಿನ್ನ ಬಾಯಲ್ಲಿ! ಸೂರ್ಯನು ಚಳಿಯನ್ನು ಉಂಟುಮಾಡಿದ್ದರೂ ನನಗೆ ಸೋಜಿಗವಾಗುತ್ತಿರಲಿಲ್ಲ. ನೀನು ಹೀಗನ್ನುವುದೇ?....' ವಿಪರೀತ ಆಶ್ಚರ್ಯದಿಂದ ಕೇಳಿದಳು.

'ಲೋಕದ ವ್ಯವಹಾರ. ತಾಯಿ-ತಂದೆಯರ ಕರ್ತವ್ಯ ನೀನರಿಯೆ ಮಗಳೇ....'

'ನೀನು ಇತ್ತೀಚೆಗೆ ಬಹಳ ಬಹಿರ್ಮುಖಳಾಗುತ್ತಿರುವೆ ಅವ್ವಾ! ನಾನು ಸಣ್ಣವಳಿದ್ದಾಗ ನೀನು ಬೋಧಿಸುತ್ತ ಕುಳಿತಿರುತ್ತಿದ್ದ ಚಿತ್ರ ಇನ್ನೂ ನನ್ನ ಚಿತ್ತಭಿತ್ತಿಯ ಮೇಲೆ ಅಚ್ಚಳಿಯದಂತಿದೆ. ಆದರೆ ಆ ಚಿತ್ರಕ್ಕೂ, ಇಂದಿನದಕ್ಕೂ ಪೂರ್ವ-ಪಶ್ಚಿಮದಷ್ಟು ಅಂತರ....'

'ಅಂದು ನೀನು ತಾಯಿಯ ಮಡಿಲಲ್ಲಿದ್ದ ಮಗು; ಇಂದು ನೀನೇ ಮಡಿಲನ್ನು ತುಂಬಿಕೊಳ್ಳುವ ಸಾಮರ್ಥ್ಯ ಹೊಂದಿದವಳು. ಅಂದಾಗ ಬೋಧೆಯ ಬಗೆ ಬದಲಾಗಲೇಬೇಕಲ್ಲ....'

'ಇನ್ನೂ ಅದೇ ಮಗು ಎಂದು ಅರಿತು ವರ್ತಿಸವ್ವಾ....' ದೈನ್ಯತೆಯಿಂದ ಕೇಳಿದಳು ಮಹಾದೇವಿ.

'ನಾನು ಭಾವಿಸಿದರೆ ಜಗತ್ತೂ ಹಾಗೆ ತಿಳಿದೀತೆ? ಹರೆಯದವಳಾದ ನೀನು ನಾಲ್ಕು ಜನರ ಕಣ್ಣಿಗೆ ಅಂದವಾಗಿ ಕಾಣುವ ರೀತಿಯಲ್ಲಿರಬಾರದೆ?'

'ಯಾರ ಚರ್ಮಚಕ್ಷುಗಳನ್ನೂ ನಾನು ಸೆಳೆದುಕೊಳ್ಳಬೇಕಿಲ್ಲವ್ವ; ತ್ರಿನಯನನ ಅರಿವಿನ ಕಣ್ಣನ್ನಷ್ಟೇ ಸೆಳೆಯಬೇಕಾಗಿದೆ. ಅದಕ್ಕೆ ಬಹಿರಂಗದ ಅಲಂಕಾರ ಬೇಕಾಗಿಲ್ಲ; ಅಂತರಂಗದ ಸದ್ಗುಣಗಳ ಶೃಂಗಾರವಷ್ಟೇ ಬೇಕು' ನಿರ್ಲಿಪ್ತಳಾಗಿ ಮಹಾದೇವಿ ಹೇಳಿದಳು.

'ಇರಲಿ ನಡೆ, ಮಾತಿನಲ್ಲಿ ಕಾಲವನ್ನು ಸಾಗಹಾಕಬೇಡ....' ಒತ್ತಾಯಿಸಿ ಮಗಳನ್ನು ಹೊರಗೆ ಕಳಿಸಿದಳು.

ಕುಮುದ, ಮಹಾದೇವಿಯರಿಬ್ಬರೂ ಕೂಡಿ ರಾಜೋದ್ಯಾನದ ಕಡೆಗೆ ನಡೆದರು. ನಿಸರ್ಗಸ್ವರ್ಗದ ನಂದನವನದಂತಿದ್ದ ಉಡುತಡಿ ಎಲ್ಲವೂ ಉದ್ಯಾನವೇ ಆಗಿದ್ದರೂ, ರಾಜೋದ್ಯಾನ ವಿಶೇಷ ಎಚ್ಚರಿಕೆಯೊಡನೆ ಬೆಳೆಸಲ್ಪಟ್ಟಿತ್ತು. ಉಡುತಡಿಯ ಮಹಾರಾಜ ಕೌಶಿಕನು ಸ್ವಭಾವತಃ ರಸಿಕ ಶಿಖಾಮಣಿ. ತನಗಾಗಿ ಒಂದು ವಿಶೇಷ ಅರಮನೆಯನ್ನೂ, ಅದರ ಸುತ್ತಲೂ ಸುಂದರ ಉದ್ಯಾನವನ್ನು ನಿರ್ಮಿಸಿಕೊಂಡುದಲ್ಲದೆ, ಅರಮನೆತನದವರಿಗೆ ಒಂದು ಉದ್ಯಾನವನ್ನು ನಿರ್ಮಿಸಿದ್ದ. ಅಂಥಲ್ಲಿಗೆ ಹೋಗಲು ಉಡುತಡಿಯ ಗಣ್ಯ ವ್ಯಕ್ತಿಗಳಿಗೆ ಸಹ ಅವಕಾಶ ಇರುತ್ತಿತ್ತು. ಇನ್ನೊಂದು, ಊರಿನ

ಮಧ್ಯಭಾಗದಲ್ಲಿದ್ದ ಸಾರ್ವಜನಿಕ ಉದ್ಯಾನವನ. ತನ್ನ ಸಾಮಾನ್ಯ ಪ್ರಜೆಗಳ ರಸಪ್ರಜ್ಞೆಯೂ ತೃಪ್ತಿಯಾಗಲೆಂದು ಸಾರ್ವಜನಿಕ ಉದ್ಯಾನಕ್ಕೂ ಹೆಚ್ಚಿನ ಗಮನ ಹರಿಸುತ್ತಿದ್ದ.

ಓಂಕಾರಶೆಟ್ಟಿ ಪುರಪ್ರಮುಖ ಶ್ರೇಷ್ಠಿಯಾದುದರಿಂದ ಅವರ ಮನೆಯವ ರಿಗೆ ವಿಶೇಷ ಉದ್ಯಾನಕ್ಕೆ ಹೋಗಲು ಅವಕಾಶವಿತ್ತು. ಕುಮುದ, ಮಹಾದೇವಿ ಮುಂದೆ ಸಾಗುತ್ತ ನಡೆದಂತೆ, ಅವರ ಮನೆಯ ಸೇವಕ ಅಪ್ಪಯ್ಯನೂ ಅವರ ಬೆಂಗಾವಲಿಗೆ ಬಂದು, ಪ್ರವೇಶ ದ್ವಾರದಲ್ಲಿ ಕಾವಲಿದ್ದ ದ್ವಾರಪಾಲಕರಿಗೆ ಪರಿಚಯ ಹೇಳಿ, ಒಳಗೆ ಕಳಿಸಿದ. ತಾನು ಬಾಗಿಲ ಬಳಿ ಕುಳಿತಿರುವುದಾಗಿ ಹೇಳಿ, ದ್ವಾರಪಾಲಕರೊಡನೆ ಹರಟೆಯನ್ನು ಕೊಚ್ಚುತ್ತ ಕುಳಿತ.

ಗೆಳತಿಯೊಡನೆ ಮಹಾದೇವಿ ಉದ್ಯಾನದ ಒಳಹೊಕ್ಕಾಗ ಅಸ್ತಮಾನಕ್ಕೆ ಕಾಲುಜಾವದ ವೇಳೆಯಿತ್ತು. ಸೂರ್ಯ ಪ್ರಖರತೆಯನ್ನು ಕಳೆದುಕೊಂಡು ಹಿತವಾಗಿ ಮೈಯನ್ನು ಬಳಸುತ್ತಿದ್ದ. ಹೊಂಬೆಳಕು ಉದ್ಯಾನವನ್ನು ಬಾಹು ಬಂಧನದಲ್ಲಿರಿಸಿಕೊಂಡಿದ್ದಿತು. ಮಹಾದೇವಿ ಮೌನವಾಗಿ ಸೌಂದರ್ಯದಾಸ್ವಾದನೆ ಮಾಡುತ್ತ ಸಾಗುತ್ತಿದ್ದಳು. ಸತ್ತಿಗೆಯಂತೆ ಹರವಿಕೊಂಡು ಬೆಳೆದ ಮರಗಳು, ವಿವಿಧಾಕಾರಗಳಲ್ಲಿ ಕತ್ತರಿಸಲ್ಪಟ್ಟ ಗಿಡಗಳು ಕೊಳದೊಳಗೆ ನಗೆಯನ್ನರಳಿಸಿಕೊಂಡು ನಿಂತ ತಾವರೆ, ಪಾದದ ಕೆಳಗೆ ಮೃದುವಾದ ಸುಪ್ಪತ್ತಿಗೆಯಂತೆ ಇರುವ ಹಸಿರು ಹುಲ್ಲು. ಆ ಹಸಿರು ಗಿಡಗಳ ತಲ್ಪದಲ್ಲಿ ವಿಶ್ರಾಮಕ್ಕಾಗಿ ಮೈಚಾಚಿ ಮಲಗಿದ ಲಲನೆಯರಂತೆ, ಅರಳಿದ ಬಣ್ಣಬಣ್ಣದ ಹೂವುಗಳು. ಆಗಾಗ ಮೆಲ್ಲನೆ ಬೀಸಿ ಬಂದು ಕಚಕುಳಿಯಿಡುವ ತಣ್ಣೆಲರು. ಆ ಉದ್ಯಾನವನವು ಭೂಸ್ವರ್ಗದಂತೆನಿಸಿತು ಮಹಾದೇವಿಗೆ.

'ಕುಮುದಾ....ಒಂದು ಲತಾಮಂಟಪದಲ್ಲಿ ಶಿಲಾಸನದ ಮೇಲೆ ಕುಳಿತುಕೊಳ್ಳೋಣವೇ ?'

'ಆಗಲಿ....ಮಾದೇವಿ....'

ಒಂದು ಕಡೆ ಮಲ್ಲಿಗೆಯ, ಜಾಜಿಯ ಬಳ್ಳಿಗಳಿಂದ ನಿರ್ಮಿತವಾದ ಮಂಟಪ. ಮತ್ತೊಂದು ಕಡೆ ಮಾಧವೀಲತೆಯ ವಿಸ್ತರಣದ ಮಂಟಪ. ಮಲ್ಲಿಗೆಯ ವಾಸನೆಯನ್ನು ಗುರುತಿಸಿ ಆಸ್ವಾದಿಸುವ ಮುನ್ನವೇ, ಮತ್ತೊಂದು ದಿಶೆಯಿಂದ ಕೇತಕಿಯ ವಾಸನೆ. ಪಾರಿಜಾತದ ಪರಿಮಳ ನನ್ನನ್ನು ಸ್ವೀಕರಿಸು ಎಂದು ಘ್ರಾಣೇಂದ್ರಿಯದ ಸಖನನ್ನು ಬೇಡಿಕೊಳ್ಳುವಾಗಲೇ, ಸಂಪಿಗೆಯ ಪರಿಮಳ ತಾ ಮುಂದಾಗಿ ಬಂದು ಮೈ ತೆರೆದು ನಿಲ್ಲುತ್ತಿತ್ತು. ಇಂತಹ [illegible] ಕುಳಿತ ಮಹಾದೇವಿಗೆ ವೇಳೆಯ ಅರಿವು

ಸಹ ಆಗಲಿಲ್ಲ.

'ಮಹಾದೇವಿ....ನನಗೆ ಏನೋ ಬರಿದಾದಂತೆನಿಸುತ್ತಿದೆ....' ಕುಮುದೆ ಹೇಳಿದಳು. ಭಾವಸಮಾಧಿಯಿಂದ ಮಹಾದೇವಿ ಎಚ್ಚೆತ್ತಳು.

'ಏಕಮ್ಮಾ....?'

'ಹೇಳಿದರೆ ಲಜ್ಜೆಗೆಟ್ಟವಳು ಅಂತೀಯೇನೋ! ನೋಡೇ ಅವರನ್ನು ಬಿಟ್ಟು ಬಂದು ಒಂದು ಹದಿನೈದು ದಿನ ಸಹ ಆಗಿಲ್ಲ, ಆದರೆ ಏನೋ ಕಳ ಕೊಂಡಂತೆ ಅನ್ನಿಸ್ತಿದೆ....'

'ಹುಟ್ಟಿದಾಗಿನಿಂದಲೂ ಅವರೇ ಇದ್ದರೇನೋ....!' ಮೆಲುನಗೆ ನಕ್ಕಳು ಮಹಾದೇವಿ.

'ನಿನಗೇನು ಗೊತ್ತು; ಅವರು ಬಂದು ಬಳಿ ನಿಂತು ತಲೆ ನೇವರಿಸಿ, ಮುಂಗುರುಳನ್ನು ತೀಡಿ ಕುಮುದಾ ಎಂದರೆ ಸ್ವರ್ಗವ್ರ ಪಾದದಡಿಯಲ್ಲಿ ಎನಿಸು ತ್ತದೆ. ನನ್ನವರ ಪ್ರೇಮದ ಮಾತು, ಬಿಸಿಯುಸಿರು, ಬಿಗಿಯಪ್ಪುಗೆ....' ಕುಮುದಾ ತನ್ಮಯ ಹಾವಭಾವದಿಂದ ಹೇಳಿದಳು.

'ಆ ಸೇವಂತಿಗೆ ಹೂವು ಅದೆಷ್ಟು ಚೆನ್ನಾಗಿ ತಲೆದೂಗುತ್ತಿವೆ ಅಲ್ವಾ. ನನ್ನ ಚನ್ನಮಲ್ಲಿಕಾರ್ಜುನನ ಆ ಪಕಳೆಗಳ ಮೂಲಕ ನಸುನಗುವಂತೆ ಎನಿಸು ತ್ತಿದೆ....' ಸರಕ್ಕನೆ ಕುಮುದಾಳ ಮಾತನ್ನು ಮಹಾದೇವಿ ತಡೆದಳು.

'ಹೂಂ ಕಣೆ, ಅಂಥ ಹೂವು ಕಂಡರೆ ಅವರಿಗೆ ಬಹಳ ಇಷ್ಟ. ಪ್ರತಿನಿತ್ಯ ತಮ್ಮ ಅಂಗಡಿ ವ್ಯವಹಾರ ಮುಗಿಸಿ ಬರುವಾಗ ಮರೆಯದೆ ತರ್ತಾರೆ. ನಾನು ತುರುಬು ಕಟ್ಟಿಕೊಂಡು ನಿಂತಿರುವೆ; ಬಂದವರೆ ನನಗೆ ಮುಡಿಸಿ, ನನ್ನನ್ನು ದಿಟ್ಟಿಸಿ ನೋಡಿ, ಮುತ್ತಿಟ್ಟು, ತಮ್ಮ ಬಳಿಗೆ ಸೆಳೆದುಕೊಳ್ಳುತ್ತಾರೆ. ಓಹ್.... ಆ ಬಂಧನದಲ್ಲಿದ್ದರೆ ಜಗತ್ತೇ ಬೇಡವೆನ್ನಿಸುತ್ತದೆ....! ಕಣ್ಮುಚ್ಚಿಕೊಂಡು ಕುಮುದಳು ಆ ಸುಖವನ್ನು ಕಲ್ಪಿಸಿಕೊಳ್ಳುವಂತೆ ತೋರಿದಳು. ತನ್ನ ಅನುಭವದ ಎರೆಹುಳವನ್ನು ಆಮಿಷವಾಗಿ ಮಹಾದೇವಿಯ ಮುಂದಿರಿಸಿ, ಆಕೆಯ ಮನದ ಮೀನನ್ನು ಸಂಸಾರದ ಗಾಳಕ್ಕೆ ಸಿಕ್ಕಿಸುವ ಸನ್ನಾಹ ನಡೆಸಿದ್ದಳು ಅವಳು.

'ಕುಮುದಾ, ನನ್ನ ಚನ್ನಮಲ್ಲಿಕಾರ್ಜುನ ಎಂತಹ ಸುಂದರಾಂಗ! ಅರಳುವ ಹೂವಿನಲ್ಲಿ, ಮೂಡುವ ರವಿಯಲ್ಲಿ, ಬಾನ ಬೆಳ್ದಿಂಗಳಲ್ಲಿ ಅವನ ಚೆಲುವಿನ ಹೊಳೆ ಉಕ್ಕಿ ಹರಿಯುತ್ತದೆ. ಕೋಗಿಲೆಯ ಕೂಹೂರವದಲ್ಲಿ ನನ್ನನ್ನು ಕರೆಯುವ ದನಿಯಿದೆ; ಬೀಸುವ ಗಾಳಿಯಲ್ಲಿ ಅಪ್ಪುವ ಸನ್ನಾಹವಿದೆ. ಜಗದಾದಿ ಚೆಲ್ವ ಕಣೇ....!' ಕುಮುದೆಯ ತನ್ಮಯತೆಯನ್ನು ಮೀರಿಸಿತು ಮಹಾದೇವಿಯ ಭಾವುಕತೆ. ತನ್ನ ಅಸ್ತ್ರ ಹುಸಿಯಾಗುವುದೆಂದು ಅರಿತ

ಕುಮುದ ಮತ್ತೊಂದು ಅಸ್ತ್ರವನ್ನು ಬುದ್ಧಿಯ ಬತ್ತಳಿಕೆಯಿಂದ ಹೊರತೆಗೆದಳು.

'ಮಾವೇನಿ....ವನದಲ್ಲಿ ಬಳ್ಳಿಗೊಂದು ಆಶ್ರಯ ಬೇಕಾದಂತೆ, ಬದುಕಿನಲ್ಲಿ ಹೆಣ್ಣಿಗೆ ಆಶ್ರಯ ಬೇಡವೇನೇ?....'

'ಖಂಡಿತ ಬೇಕು ಕುಮುದಾ, ಆದರೆ ಹೆಣ್ಣು ಬಳ್ಳಿ—ಅದಕ್ಕೆ ಗಂಡೆಂಬ ವೃಕ್ಷವೇ ಬೇಕು ಎಂದೇಕೆ ಭಾವಿಸುವೆ. ಲತೆಗೆ ಆಶ್ರಯ ನೀಡುವ ವೃಕ್ಷದಂತೆ ಪರಮಾತ್ಮನನ್ನೇ ಏಕೆ ಭಾವಿಸಬಾರದು? ಪರಮಾತ್ಮ ಮಹಾವೃಕ್ಷದ ಆಸರೆ ಸಿಕ್ಕ ಭಕ್ತ ಲತೆಗೆ, ಇನ್ನೊಂದರ ಆಶ್ರಯ ಏಕೆ ಬೇಕು ಕುಮುದಾ? ನದಿಗೆ ಬೇಕು ಸಮುದ್ರ; ಆದರೆ ಸಮುದ್ರಕ್ಕೂ ಹಿರಿದಾದ ಸಾಗರವಿದೆ. ಸಾಗರದ ಅಪ್ಪುಗೆ ನದಿಗೆ ಸಿಕ್ಕಾಗ ಮತ್ತದು ಇನ್ನೊಂದಕ್ಕೆ ಆಶಿಸಬೇಕಿಲ್ಲ, ಜಗದ ಗಂಡರನ್ನೆಲ್ಲ ಆಳುವ ಮಹಾ ಗಂಡನ ಆಶ್ರಯ ಇರುವಾಗ, ಲೌಕಿಕ ಗಂಡರ ಚಿಂತೆ ನನಗೆ ಏಕೆ ಕೆಳದಿ....?'

'ಇವೆಲ್ಲ....ಕಾಲ್ಪನಿಕ ಆಧ್ಯಾತ್ಮ. ವ್ಯವಹಾರಪ್ರಪಂಚಕ್ಕಿಳಿದು ನೋಡು, ನನ್ನದೆನ್ನುವ ವ್ಯಕ್ತಿಯೊಂದಿಲ್ಲದೆ ನೆಮ್ಮದಿಯಾಗಿ ಬದುಕಲು ಸಾಧ್ಯವೇ....?'

'ಕುಮುದಾ, ಹದ್ದು ಎಷ್ಟೇ ಹಾರಿದರೂ ಮೋಡಗಳೆತ್ತರಕ್ಕೆ ಹಾರದು. ನಿನ್ನ ವಿಚಾರವು ಎಷ್ಟು ಕಷ್ಟಪಟ್ಟು ಹಾರಿದರೂ ಲೌಕಿಕ ಪ್ರಪಂಚದ ಸೀಮೆಯನ್ನು ದಾಟದು. ಇದಕ್ಕೂ ಅತೀತ ಪ್ರಪಂಚವೊಂದಿದೆ, ನೋಡಲೆತ್ನಿಸು. ಒಂದು ಚೇತನದ ಆಶ್ರಯ ಮಾನಸಿಕವಾಗಿ ಹೆಣ್ಣಿಗಾಗಲಿ, ಗಂಡಿಗಾಗಲಿ ಬೇಕೇ ಬೇಕು. ಆದರೆ ಮಹಾ ಚೇತನದ ಆಶ್ರಯ ಸಿಕ್ಕಾಗ ಕ್ಷುಲ್ಲಕ ಆಸೆಯೇಕೆ?

ಚಕ್ಷು ಬಿಸಗೈಯ್ಯೊಡೆ ಅಲಗಿನ ಹಂಗೇಕೆ?
ಮಾಣಿಕ್ಯದ ಬೆಳಗುಳ್ಳಡೆ ದೀಪದ ಹಂಗೇಕೆ?
ಪರುಷ ಕೈಯಲುಳ್ಳೊಡೆ ಸಿರಿಯ ಹಂಗೇಕೆ?
ಕಾಮಧೇನು ಕರೆವೊಡೆ ಕರಾವಿನ ಹಂಗೇಕೆ?
ಎನ್ನ ದೇವ ಸಿರಿಶೈಲ ಚನ್ನಮಲ್ಲಿಕಾರ್ಜುನನುಳ್ಳಡೆ
ಮರಳಿ ಸಂಸಾರದ ಹಂಗೇಕೆ?*

ಭಾವುಕಳಾಗಿ ದನಿತೆಗೆದು ಮೆಲ್ಲನೆ ಹಾಡಿದಳು. ಹಾಡಿದ ಬಳಿಕ ತನಗೇ ಆಶ್ಚರ್ಯವೆನಿಸಿತು. ಎಂತಹ ಸುಂದರ ವಚನ! ಸುಂದರ ಕಲ್ಪನೆ! ಬುಗ್ಗೆಯಂತೆ ತಾನಾಗಿ ಹೃದಯದ ಆಳದಿಂದ ಚಿಮ್ಮಿದ ಅದರ ಅರ್ಥವನ್ನು ಸವಿಯತೊಡಗಿದಳು.

'ಮಹಾದೇವಿ, ನೀನು ಅವ್ಯವಹಾರಿಕ ಪ್ರಜ್ಞೆಯಿಂದ ಮಾತನಾಡುವೆ. ಕಲ್ಪನೆಗಳು ತುಂಬ ಸುಂದರ ಎನಿಸುತ್ತವೆ; ಆದರೆ ವಾಸ್ತವಿಕತೆ ಅಷ್ಟು ಮನೋಹರವಾಗಿರುವುದಿಲ್ಲ. ಕಲ್ಪನೆ ತುಂಬು ಶರೀರದಂತೆ, ವಾಸ್ತವಿಕತೆ ಅಸ್ಥಿಪಂಜರದಂತೆ! ಕಲ್ಪನೆಯ ಕುದುರೆಯನ್ನು ವಾಸ್ತವಿಕ ಕುದುರೆ ಬೆನ್ನಟ್ಟಬಹುದೇ? ಈ ವಿರಕ್ತಿ, ಏಕಾಂಗ ಜೀವನ ಅಸಾಧ್ಯ ಕಣೇ!'

'ನಿಜ ಕುಮುದ, ನಿನ್ನ ಮಾತು ಸರಿ. ಚಕ್ರವನ್ನು ಪ್ರಯೋಗಿಸಲಾರದವನು ಅಲಗನ್ನು ಆಶ್ರಯಿಸಲೇಬೇಕು. ಕಾಮಧೇನುವನ್ನು ಕರೆವ ಶಕ್ತಿಯಿಲ್ಲದವನು ನಾಡಹಸುವಿನ ಹಾಲಿನಲ್ಲಿ ತೃಪ್ತಿಪಡಬೇಕು. ಆಳವಾದ ಸರಸಿಯಲ್ಲಿ ಈಸಾಡಲಾರದವನು ಬಚ್ಚಲಿನಲ್ಲಿ ಮೀಯಲೇಬೇಕು. ಆದರೆ....ಪಾತಾಳಗಂಗೆಯ ಸರೋವರದಲ್ಲಿ ಈಸುವ ಶಕ್ತಿಯಿರುವವನೂ, ಬಚ್ಚಲಿಗಾಗಿ ಬಯಸಬೇಕೇ? ನಿನ್ನಂತಹವಳಿಗೆ ಈ ಆಳವಾದ ಸರಸಿಗೆ ಇಳಿ ಎಂದು ನಾನು ಸಲಹೆ ಮಾಡಲಾರೆ; ಆದರೆ ಆಳವಾದ ಸರಸಿಯ ತಿಳಿನೀರಿನಲ್ಲಿ ಈಸುವ ಸಾಮರ್ಥ್ಯವಿದ್ದವಳನ್ನು ನಿನ್ನ ಪ್ರಪಂಚಕ್ಕೆ ಕರೆಯುವದು ಅಸಮಂಜಸವಲ್ಲವೇ?....'

ಕುಮುದೆಗೆ ಮಾತನಾಡುವ ಸಾಮರ್ಥ್ಯ ಉಳಿಯಲಿಲ್ಲ.

'ಏನೋ ಮಹಾದೇವಿ, ನಾನು ಸುಖವಾಗಿರುವೆ; ನನ್ನಂತೆ ನನ್ನ ಕೆಳದಿಯೂ ಇರಲಿ ಎಂದು ನನ್ನ ಅಪೇಕ್ಷೆ....'

'ಲೌಕಿಕ ಸುಖವೇ ನಿಜವಾದ ಸುಖ ಎಂಬುದು ಭ್ರಮೆ ಕಣೆ ಕುಮುದ. ನೋಡು, ಬೆಟ್ಟದ ತುದಿಯಲ್ಲಿ ನಿಂತು ಅಲ್ಲಿಯ ತಿಳಿಗಾಳಿಯನ್ನು ಆಸ್ವಾದಿಸುತ್ತ ಪ್ರಕೃತಿ ಸೌಂದರ್ಯವನ್ನು ಸವಿಯುತ್ತ, ಅಲ್ಲಿಯ ಸೊಬಗನ್ನು ಸವಿಯಲು ಬಾರೆಂದು ಇತರರನ್ನು ಕರೆಯುವುದಕ್ಕೆ ಅರ್ಥವಿದೆ. ಅದು ಬಿಟ್ಟು, ಮೇಲೇಳಲಾರದಂತಹ ಕೆಸರಿನ ಗುಂಡಿಯಲ್ಲಿ ಬಿದ್ದು, ಅದನ್ನೇ ಅಮೃತಕೂಪವೆಂದು ಭಾವಿಸಿ, ಇತರರನ್ನೂ ಅಲ್ಲಿಗೆ ಕರೆಯುವುದರಲ್ಲಿ ಯಾವ ಅರ್ಥವಿಲ್ಲ....'

ಸಂಸಾರಿಕ ಜೀವನದ ಬಗ್ಗೆ ತಿರಸ್ಕಾರ ತುಂಬಿ ತುಳುಕುತ್ತಿತ್ತು ಮಹಾದೇವಿಯ ಮಾತುಗಳಲ್ಲಿ.

'ಆದರ ಅನುಭವವಿಲ್ಲದೆ ಹೀಗಳೆಯುತ್ತಿರುವೆ ಮಹಾದೇವಿ. ನಿನಗೆ ನಿಜವಾಗಿಯೂ ಅದರ ಸುಖದ ಕಲ್ಪನೆಯಿಲ್ಲ....'

'ನಿಜ, ಕುಮುದ....ನನಗೆ ಅದರ ಕಲ್ಪನೆಯಿಲ್ಲ; ಬೇಡವೂ ಬೇಡ. ಆದರೆ ನಿನಗೆ ನನ್ನ ಅಧ್ಯಾತ್ಮ ಸುಖದ ಕಲ್ಪನೆಯಿಲ್ಲ. ನನ್ನ ಮನ ಇದಕ್ಕೆ ಹಂಬಲಿಸುತ್ತಿದೆ.

ಮುಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ.
ಎಚ್ಚಡೆ ಗರಿದೋರದಂತಿರಬೇಕು.
ಅಪ್ಪಿದಡೆ ಅಸ್ಥಿಗಳು ನುಗ್ಗು ನುಸಿಯಾಗಬೇಕು.
ಬೆಚ್ಚಡೆ ಬೆಸುಗೆಯಸರಿಯದಂತಿರಬೇಕು.
ಮುಚ್ಚುಒಪ್ಪಿತ್ತು, ಚನ್ನಮಲ್ಲಿಕಾರ್ಜುನನ ಸ್ನೇಹದಲ್ಲಿ ತಾಯೆ !*

'ನಿನ್ನ ಉತ್ತರ ಒಂದು ಒಗಟಿನಂತಿದೆ ಮಹಾದೇವಿ, ನನಗೆ ಎಳ್ಳಷ್ಟೂ ಅರ್ಥವಾಗದು....' ಕುಮುದ ಹೇಳಿದಳು.

'ನೋಡು ಕೆಳದಿ; ನನ್ನ ಪ್ರಣಯದ ಬಗೆ ನೀನರಿಯೆ. ಪ್ರೇಮಿಗಳಾದ ನಮ್ಮಿಬ್ಬರ ಮುಚ್ಚಿನ ಗಾಢತೆ ಎಷ್ಟೆಂದರೆ ಕ್ಷಣಕಾಲವೂ ಅಗಲಿರುವುದಿಲ್ಲ; ನಿನ್ನ ಗಂಡ ನಿನ್ನಿಂದ ಅಗಲಿರುವ ಸಾಧ್ಯತೆಯುಂಟು; ಈಗ ಅಗಲಿ ಇಲ್ಲವೆ? ಆದರೆ ನನ್ನವನು ನನ್ನಿಂದ ದೂರ ಸರಿಯನು. ಸಮರ್ಥ ಬಿಲ್ಲುಗಾರನೋರ್ವ ಬಾಣವೊಂದನ್ನು ಪ್ರಾಣಿಗೆ ಹೊಡೆದರೆ ಅದು ಎಷ್ಟು ಒಳಗೆ ಇಳಿಯುವುದೆಂದರೆ ಅದರ ಗರಿ ಸಹ ಕಾಣದಷ್ಟು ಒಳಗೆ ತೂರುವುದು. ಹೊರ ಜಗತ್ತಿಗೆ ಬಾಣ ಕಾಣದು; ಒಳಗೆ ಮಾತ್ರ ವಿಪರೀತ ನೋವು ಕೊಡುವುದು. ಹಾಗೆಯೇ ನನ್ನ ಚನ್ನಮಲ್ಲಿಕಾರ್ಜುನ ಎಚ್ಚಿದ ಬಾಣ ಹೃದಯದ ಆಳಕ್ಕೆ ಇಳಿದಿದೆ; ವಿರಹದ ನೋವನ್ನು ಉಂಟುಮಾಡುತ್ತಿದೆ. ಎಲ್ಲಿಯತನಕ ಆವನು ಬಿಗಿದಪ್ಪಿ ಅಹಂಭಾವದ ಅಸ್ಥಿಗಳನ್ನು ಪುಡಿಪುಡಿಮಾಡಿ ನನ್ನತನವನ್ನು, ಜೀವೋ-ಹಂಭಾವವನ್ನು ಅಳಿಸುವುದಿಲ್ಲವೋ, ನನ್ನನ್ನು ಬಂಧಿಸಿ ಬೆಸುಗೆಯ ಕಲೆಯನ್ನು ಅಂದರೆ ನಾನು—ಅವನು ಭಿನ್ನವೆಂಬ ದ್ವೈತಭಾವ ಸಹ ಉಳಿಯದಂತೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ನನಗೆ ಸಮಾಧಾನವಿಲ್ಲ. ಇಂತಹ ದೈವೀಸ್ನೇಹಕ್ಕೆ ನಾನು ಹಾತೊರೆಯುತ್ತಿರುವೆ....'

'ನೀನೊಬ್ಬಳು ಹುಚ್ಚಿ....' ಕುಮುದ ವಿಷಾದದಿಂದ ನಕ್ಕಳು. ಸೂರ್ಯಾಸ್ತವಾಗಿ ಕತ್ತಲೆ ಆವರಿಸತೊಡಗಿತ್ತು. ಕೇವಲ ಮಬ್ಬು ಬೆಳಗಷ್ಟೇ ಉಳಿದಿದ್ದುದು.

'ಓಹ್, ಮಹಾದೇವಿ....ಎಷ್ಟು ಕತ್ತಲಾಯಿತು! ನಾವಿಬ್ಬರೇ ಹೆಂಗಸರು ಇಲ್ಲಿ. ನಡೆಯೇ ಹೋಗುವಾ....'

'ನಿನ್ನ ಗಂಡ ನಿನ್ನ ಬೆಂಗಾವಲಿಗಿಲ್ಲ, ಅದಕ್ಕೇ ಈ ಭಯ! ನೋಡಿಲ್ಲಿ ನನ್ನ ಗಂಡ ಸದಾ ನನ್ನೊಡನೆ....ನನಗೆ ನಿನ್ನಷ್ಟು ಭೀತಿಯಿಲ್ಲ....' ಅಭಿಮಾನದಿಂದ ಕರಡಿಗೆಯನ್ನು ತೋರಿಸಿ ನಕ್ಕಳು. ಕೆಳದಿಯರಿಬ್ಬರೂ ಮೇಲೆದ್ದು, ಆಳು ಅಪ್ಪಯ್ಯನನ್ನು ಕರೆದುಕೊಂಡು ಮನೆಗೆ ನಡೆದರು.

* ಮ. ವ. ೨೬೭

೧೫. ದೇವ ವಿರಹಿಣಿ

ನದಿಯ ದಂಡೆಯಮೇಲೆ ಕುಳಿತು ಗಾಳಬೀಸಿದ ಬೆಸ್ತನು ಸಹನೆಯಿಂದ ಕಾಯು ವಂತೆ, ಕುಮುದೆಯ ಮಾತು ಮಹಾದೇವಿಯ ಮೇಲೆ ಖಂಡಿತ ಪರಿಣಾಮ ಬೀರುವುದೆಂದು ಲಿಂಗಮ್ಮನು ಕಾಯತೊಡಗಿದಳು. ಆದರೆ ಮಹಾದೇವಿಯ ಸ್ವಭಾವ ಬದಲಾಗತೊಡಗಿತು, ಲಿಂಗಮ್ಮ ಬಯಸಿದ ಬಟ್ಟೆಯಲ್ಲಿ ಅಲ್ಲ; ಅದರ ವಿರುದ್ಧ ದಿಕ್ಕಿನಲ್ಲಿ. ಮಹಾದೇವಿ ಎಲ್ಲದರಲ್ಲಿಯೂ ಉತ್ಸಾಹ ಕಳೆದು ಕೊಂಡಳು. ನಸುಕಿನ ಕೊನೆಯ ಜಾವದ ಮೊದಲ ಗಳಿಗೆಯಲ್ಲಿ ಎದ್ದು ತಣ್ಣೀರಿನಲ್ಲಿ ಮೀಯುವಳು. ಹಿಂದಿನ ರಾತ್ರಿಯೇ ಅಟ್ಟದ ಮೇಲಿನ ತನ್ನ ಕೋಣೆಯಲ್ಲಿ ಪೂಜೆಯ ಪರಿಕರಗಳನ್ನು ಜೋಡಿಸಿಕೊಂಡುಬಿಡುವಳು. ನಸುಕಿನಲ್ಲಿ ಪೂಜೆಗೆ ಕುಳಿತರೆ ಮೇಲೇಳುತ್ತಿದ್ದುದು ಸೂರ್ಯೋದಯವಾಗಿ ಅರ್ಧ ಜಾವ ಕಳೆದ ಬಳಿಕ. ಅನಂತರ ತಾಡಓಲೆಗಳ ಅಧ್ಯಯನ, ಇಲ್ಲವೇ ಓಲೆಕಂಠವನ್ನು ಹಿಡಿದು ತಾಡಓಲೆಯ ಮೇಲೆ ಬರವಣಿಗೆ. ಓಂಕಾರ ಎದ್ದು ಸ್ನಾನ ಪೂಜೆ ಮುಗಿಸಿ, ಉಪಾಹಾರ ಸ್ವೀಕರಿಸಿದರೂ ಇನ್ನೂ ಮಹಾದೇವಿ ತನ್ನ ಕೋಣೆಯ ಕದದ ಅಗಳಿಯನ್ನು ಬಿಚ್ಚುತ್ತಿರಲಿಲ್ಲ.

'ನೋಡಿರಿ....ಅವಳಿನ್ನೂ ಎದ್ದೇ ಇಲ್ಲ....ಈಗೀಗ ಊಟೋಪಚಾರವನ್ನೂ ಮರೆಯುತ್ತಿದ್ದಾಳೆ' ಲಿಂಗಮ್ಮ ಗೋಗರೆಯುವಳು.

'ಬೇಡ ಲಿಂಗಾ....ಬಾಗಿಲು ಬಡಿಯೋದು ಬೇಡ, ಧ್ಯಾನಾಸಕ್ತಳಾಗಿರ ಬೇಕು....' ಓಂಕಾರ ತನ್ನ ಅಂಗಡಿಯ ವ್ಯವಹಾರಕ್ಕೆ ಹೋಗುತ್ತಿದ್ದ. ಲಿಂಗಮ್ಮ ಕಾಯುತ್ತಲಿದ್ದು ನಂತರ ಬಾಗಿಲು ಬಡಿಯುವಳು. ಮಹಾದೇವಿ ಎದ್ದು ಬಂದು ಬಾಗಿಲು ತೆರೆವಳು. ವಾತ್ಸಲ್ಯದ ದೃಷ್ಟಿಯಿಂದ ಮಗಳನ್ನು ನೋಡಿ,

'ಮಹಾದೇವಿ....ಹಣ್ಣು-ಹಾಲು ತಗೋ ಬಾ ಮಗಳೇ....' ಎನ್ನುವಳು.

'ಬೇಡವ್ವ....ಈ ಶರೀರ ಬಯಕೆಗಳ ಆಗರ. ಹಸಿವು, ತೃಷೆ, ನಿದ್ರೆ ಮುಂತಾದುವನ್ನು ಮಾರ್ಗದಲ್ಲಿ ಒಡ್ಡಿ, ನನ್ನಿನಿಯನ ಬಳಿಗೆ ಹೋಗದಂತೆ ಮಾಡುವುದು. ಇವುಗಳನ್ನು ನಿಗ್ರಹಿಸಲೇಬೇಕು....'

"ಈ ವಯಸ್ಸಿಗೆ ಹೀಗೆಲ್ಲ ಬಳಲಿಸಬಾರದವ್ವಾ. ಶರೀರ ದುರ್ಬಲವಾದರೆ ಮಕ್ಕಳು ಮರಿ ಆದಾಗ ಬಹಳ ಕಷ್ಟವಾಗುತ್ತೆ...." ಈ ಮಾತನ್ನು ಕೇಳಿ, ಇಲ್ಲಿಯತನಕ ಬಾದಾಮಿಯ ಹಾಲನ್ನು ಕುಡಿದು, ಆ ಸವಿಯನ್ನು ಚಪ್ಪರಿಸು

ವಾಗಲೇ ಒತ್ತಾಯದಿಂದ ಬೇವಿನ ಎಣ್ಣೆಯನ್ನು ಬಾಯಿಗೆ ಹಾಕಿದಂತೆ ಆಗಿ, ಮಹಾದೇವಿ ಮುಖವನ್ನು ಕಹಿ ಮಾಡಿಕೊಂಡಳು.

'ಆಗಲವ್ವ, ಬರುವೆ ನಡೆ....' ತಾಯಿ ಕೆಳಗಿಳಿಯುತ್ತಿದ್ದಂತೆಯೇ ಮತ್ತೆ ಅಗಳಿ ಹಾಕಿಕೊಂಡು ಬಿಡುವಳು. ಊಟವೂ ಅಷ್ಟೇ, ಬಹಳಷ್ಟು ಕಡಿಮೆಯಾಗುತ್ತಿತ್ತು. ಇತ್ತೀಚೆಗೆ ಕಾರ, ಹುಳಿ, ಉಪ್ಪು ಎಲ್ಲ ಬಿಟ್ಟು ಕೇವಲ ಹಣ್ಣು-ಹಾಲು, ಮುಂತಾದ ಸಪ್ಪೆಯಾದ, ಸಾತ್ವಿಕ ಆಹಾರದ ಮೇಲೆ ಇರತೊಡಗಿದಳು.

ಒತ್ತಾಯ ಮಾಡಿ ತಾಯಿ ಹಾಕಿದ್ದ ಒಂದೊಂದೇ ಬಂಗಾರದ ಆಭರಣಗಳು ಮೈಯಿಂದ ಕೆಳಗಿಳಿಯತೊಡಗಿದವು. ಸಣ್ಣವಳಾಗಿದ್ದಾಗ ಹಾಕಿದ ರುದ್ರಾಕ್ಷಿಯ ತೂಗೋಲೆಗಳು ಅಂದಿನಿಂದಲೂ ಹಾಗೆಯೇ ಇದ್ದವು. ಜಪಕ್ಕೆಂದು ಇರಿಸಿದ್ದ ಜಪಮಾಲೆಯನ್ನು ತೆಗೆದುಕೊಂಡು, ತಾಯಿಯ ಕಣ್ಣಿಗೆ ಕಾಣದಂತೆ ಕೊರಳಲ್ಲಿ ಧರಿಸಿದಳು. ಇದನ್ನೆಲ್ಲ ಕಂಡ ಲಿಂಗಮ್ಮ ಚಟಪಟಿಸತೊಡಗಿದಳು, ಕಾಯ್ದ ಹಂಚಿನಮೇಲೆ ನಿಂತಂತೆ ಉದ್ವಿಗ್ನಳಾದಳು.

'ಮಹಾದೇವಿ, ಇವನ್ನೆಲ್ಲ ತೆಗೆಯಲು ಯಾರು ಹೇಳಿದರು?' ಗಡಸು ಧ್ವನಿಯಲ್ಲಿ ಕೇಳಿದಳು.

'ಯಾರೂ ಹೇಳಿಲ್ಲವ್ವ. ಇನ್ನೊಬ್ಬರ ಬೋಧೆಯ ಎರವಲು ಜ್ಞಾನ ನನಗೆ ಬೇಕಾಗಿಲ್ಲ. ನನ್ನ ಮನಸ್ಸಿಗೆ ಬಂದಿತು, ಮಾಡಿರುವೆ.'

'ಬಡ ದಾಸಿಯಂತೆ ನೀನು ನಿರಾಭರಣದಿಂದಿದ್ದರೆ ನೋಡಿದವರು ಏನೆಂದಾರು....?'

'ಅನ್ಯರಿಗಾಗಿ ನಾನು ಬದುಕಿಲ್ಲವ್ವ; ನನ್ನ ಆತ್ಮಸಂತೋಷಕ್ಕಾಗಿ ಬದುಕಿರುವೆ....'

'ನಿನ್ನ ಸಂತೋಷ ಒತ್ತಟ್ಟಿಗಿರಲಿ; ಮನೆತನದ ಮಾನ ಉಳಿಯುವುದೆ?....'

'ಒಡವೆ-ವಸ್ತು, ಸಿರಿ-ಸಂಪತ್ತಿನ ಮೇಲೆ ಮಾನಮರ್ಯಾದೆ ನಿಂತಿರುವುದೇನವ್ವಾ? ಹಾಗಾದರೆ ಮನುಷ್ಯನಿಗೆ ಕವಡೆಯ ಬೆಲೆಯಿಲ್ಲ, ಅವನ ಒಡವೆ ವಸ್ತುಗಳಿಗೆ' ಮಾತ್ರವೆ? ನೀನು ನಿಶ್ಚಯವಾಗಿಯೂ ಅಜ್ಞಾನಿ. ಪ್ರಭುದೇವರು ಹೇಳುವರು, 'ಭೂಮಿ ಹೇಮ ಕಾಮಿನಿ ನಿನ್ನವಲ್ಲ. ಇವು ಜಗತ್ತಿಗಿಟ್ಟ ಪ್ರಲೋಭನೆಗಳು. ಅಂತರಂಗ ಜ್ಞಾನರತ್ನ ಒಂದೇ ನಿನ್ನೊಡವೆ. ಅದನ್ನು ಪಡೆದವನೇ ಮಹಾ ಸಿರಿವಂತ....'

'ಇದೆಲ್ಲ ವಿತಂಡವಾದ ಬೇಡ. ಕೊರಳೊಳಗಣ ರುದ್ರಾಕ್ಷಿಯ ಸರ ಕಿತ್ತೊಗೆ. ಇಲ್ಲವಾದರೆ ನಾನು ಇಂದು ಊಟ ಸಹ ಮಾಡುವುದಿಲ್ಲ....'

'ಸಾಧ್ಯವಿಲ್ಲ ತಾಯಿ....' ನಿಸ್ಸಂಕೋಚವಾಗಿ ಹೇಳಿದಳು ಮಹಾದೇವಿ.

'ಹೆತ್ತವರಿಗೆ ಎರಡು ದುಡ್ಡಿನ ಬೆಲೆಯೂ ಇಲ್ಲವಾಯ್ತೇ?' ನೊಂದ ಧ್ವನಿಯಲ್ಲಿ ಲಿಂಗಮ್ಮ ನುಡಿದಳು. ಮಹಾದೇವಿಯ ಮುಖ ಗಂಭೀರವಾಯಿತು.

'ಅವ್ವ, ನೀನು ನಿನ್ನ ಕೊರಳೊಳಗಿನ ಮಂಗಲಸೂತ್ರ ತೆಗೆ. ನಾನು ರುದ್ರಾಕ್ಷಿ ಸರವನ್ನು ತೆಗೆಯುವೆ....'

'ಶಿವಾ ಶಿವಾ....ಎಂತಹ ಅಮಂಗಲದ ಮಾತು! ಮಾದೇವಿ ಇಂಥಾ ಕೆಟ್ಟ ಬುದ್ಧಿ ನಿನಗೇಕೆ ಬಂತು?' ಲಿಂಗಮ್ಮ ಖಿನ್ನಳಾಗಿ, ಕಣ್ಣಿನಿಂದ ನೀರು ಉದುರಿದವು.

'ಅವ್ವಾ, ನಿನ್ನ ಮಂಗಲಸೂತ್ರಕ್ಕೆ ನೀನೆಷ್ಟು ಬೆಲೆ ಕೊಡುವೆ ನೋಡು; ಏಕೆ? ಅದು ನಿನ್ನ ಪತಿಯ ಪವಿತ್ರ ಕುರುಹು. ಹಾಗೆಯೇ ಈ ರುದ್ರಾಕ್ಷಿ ಸರ ನನ್ನ ಪತಿಯ ಕುರುಹು. ನನ್ನ ಮಂಗಲಸೂತ್ರ ನಾನು ತೆಗೆಯಲಾರೆ....' ಲಿಂಗಮ್ಮ ದುಃಖಿಸತೊಡಗಿದಳು. ಮಗಳ ತಾತ್ತ್ವಿಕ ವಿಚಾರಧಾರೆಯಿಂದ ಸಂತಸವಾಗುವುದರ ಬದಲು, ಅಮಂಗಲದ ಮಾತೆಂದು ಅದನ್ನೇ ಹಿಡಿದು ಕೊಂಡು ಅಳತೊಡಗಿದಳು.

'ಅವ್ವಾ, ನಿನ್ನ ಮನಸ್ಸು ನೊಂದಿದ್ದರೆ ಕ್ಷಮಿಸು; ನಿನಗೆ ತತ್ತ್ವ ತಿಳಿಸುವ ಉದ್ದೇಶದಿಂದ ನುಡಿದೆ.' ತಾಯಿಯ ಪಾದವನ್ನು ಹಿಡಿದರೂ ಆಕೆ ಮಾತನಾಡಲಿಲ್ಲ. ತಾಯಿಯ ಅಜ್ಞಾನಕ್ಕೆ ಮನ ನೊಂದು ತನ್ನ ಕೋಣೆಯಲ್ಲಿ ಮಹಾದೇವಿ ಹುದುಗಿಕೊಂಡಳು.

ಓಂಕಾರನೇ ಬಂದು ಲಿಂಗಮ್ಮನನ್ನು ಸಮಾಧಾನ ಮಾಡಬೇಕಾಯಿತು. ಆದರೆ ಮಗಳ ನಿರಾಸಕ್ತಿ ಒಂದು ಒಗಟಾಯಿತು ಆಕೆಗೆ. ನಸುಕಿನ ವೇಳೆಯಲ್ಲಿ ಹಿಮ ಸುರಿಯುವಾಗ ಅರಣ್ಯದಲ್ಲಿ ಜಾಡು ತಿಳಿಯದಂತಾಗುವಂತೆ ಲಿಂಗಮ್ಮನು ಸಂದಿಗ್ಧತೆಗೆ ಒಳಗಾದಳು. ಕಲ್ಲೇಶಪ್ಪನ ಮಗಳು ಶೈಲಜೆಯ ಸಹಾಯವನ್ನು ಪಡೆಯ ಬಯಸಿದಳು. ಶೈಲಜ ಸರಳ ಸ್ವಭಾವದ ಸುಗುಣಿ. ಮಹಾದೇವಿಗೆ ಇದ್ದ ನಾಲ್ಕಾರು ನಿಕಟ ಗೆಳತಿಯರಲ್ಲಿ ಈಕೆ ಅತಿ ಸಮೀಪದವಳು. ಏನಾದರೂ ತಾತ್ತ್ವಿಕ ವಿಷಯಗಳ ಚರ್ಚೆಗೆ ಇಳಿದರೆ ಅದರ ಬಗ್ಗೆ ತನ್ನ ಅಭಿಪ್ರಾಯವನ್ನು ಹೇಳುವ ಸಾಮರ್ಥ್ಯ ಇರದಿದ್ದರೂ, ಮಹಾದೇವಿಯ ಮಾತಿನ ಆಳವನ್ನು ಗ್ರಹಿಸಬಲ್ಲವಳಾಗಿದ್ದಳು. ಇಬ್ಬರೂ ಆಪ್ತ ಗೆಳತಿಯರಿದ್ದರೂ ಮಹಾದೇವಿಯನ್ನು ಕಂಡರೆ ಗೌರವ ಮಿಶ್ರಿತ ಆದರ. ಆಕೆ ಉನ್ನತ ವಿಚಾರಗಳ ಆಗರ ಎಂದು ಅಭಿಮಾನ. ಶೈಲಜೆಯ ನಿಷ್ಕಲ್ಮಶ ಪ್ರೇಮ

ಮತ್ತು ಒಳ್ಳೆಯತನದಿಂದ ಮನಸೋತ ಮಹಾದೇವಿ ಆಗಾಗ ತನ್ನಂತರಂಗದ ಬಯಕೆಗಳು ಅದುಮಿಡಲಾರದಷ್ಟು ತೀವ್ರವಾದಾಗ ಶೈಲಜೆಯ ಮುಂದೆ ಮನವನ್ನು ತೆರೆದಿಡುತ್ತಿದ್ದಳು.

ಇದನ್ನರಿತ ಲಿಂಗಮ್ಮ ಶೈಲಜೆಗೆ ಕರೆಯನ್ನು ಕಳುಹಿಸಿ ತನ್ನ ಮಗಳ ಮನಸ್ಸನ್ನು ತಿಳಿಯಲು ಬಿನ್ನವಿಸಿದಳು. ಅರಳು ಹುರಿದಂತೆ ಚಟಪಟಿಸಿ ಮಾತನಾಡುವ ಮಗಳು, ಈಗ ಮೌನದ ಪಂಜರದಲ್ಲಿ ಬಂಧಿತವಾದುದನ್ನು ಕಂಡು ಹೆತ್ತ ಕರುಳಿಗೆ ಕಸಿವಿಸಿ. ಅಂದು ಸಂಜೆಯಿಂದಲೂ ಮಹಡಿಯನ್ನೇರಿ ಬಯಲಲ್ಲಿ ಕುಳಿತ ಮಹಾದೇವಿ ಕೆಳಗೆ ಇಳಿದಿರಲಿಲ್ಲ. ಶೈಲಜಳು ಮೆಲ್ಲನೆ ಶಬ್ದವಾಗದಂತೆ ಹೆಜ್ಜೆ ಇರಿಸುತ್ತಾ ಮಹಡಿಯ ಸೋಪಾನ ಏರಿದಳು. ಬೆಳದಿಂಗಳು ಹಾಲು ಚೆಲ್ಲಿದಂತೆ ಹಬ್ಬಿತ್ತು. ಸೃಷ್ಟಿಯೆಲ್ಲವೂ ಚಂದಿರನ ಕಿರಣಗಳಲ್ಲಿ ಮೀಯುತ್ತ, ಇನಿಯನಪ್ಪುಗೆಯಲ್ಲಿ ಮೈಮರೆತ ಸತಿಯಂತೆ ಮೌನತಾಳಿತ್ತು. ಆ ಸೋನದ ಬೆಳುದಿಂಗಳಿನಲ್ಲಿ ಗೋಡೆಗೆ ಒರಗಿ, ಮಹಾದೇವಿ ಕಾಲನ್ನು ಮುಂದೆ ಚಾಚಿ ಬಿಟ್ಟದಂತೆ ಕೋನಾಕಾರದಲ್ಲಿ ಮೊಳಕಾಲನ್ನಿರಿಸಿ, ಎರಡೂ ಕೈಗಳ ಬೆರಳನ್ನು ಬೆಸೆದು, ಬಾನಿನೆಡೆಗೆ ದೃಷ್ಟಿ ಇರಿಸಿದ್ದಳು.

ಸೋಪಾನವನ್ನೇರಿ ಬಂದು ನಿಂತ ಶೈಲಜ, ಸದ್ದುಮಾಡದೆ ಉಸಿರು ಬಿಗಿಹಿಡಿದು ನಿಂತಳು. ಮಹಾದೇವಿಯ ವಿರಹದ ನೋವು ಗಾನದ ಮೂಲಕ ಉಕ್ಕುತ್ತಿತ್ತು. ತನ್ನ ಮನದ ಅಳಲನ್ನು ಅಷ್ಟೇ ಸಮರ್ಪಕವಾಗಿ ಬಿಂಬಿಸುವ ಬಸವಣ್ಣನವರ ವಚನವೊಂದನ್ನು ದನಿ ತೆಗೆದು ಹಾಡಲಾರಂಭಿಸಿದ್ದಳು.

ಅರಿಸಿನವನೆ ಮಿಂದು ಹೊಂದೊಡಿಗೆಯನು ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತಾಗಿದ್ದೆನಯ್ಯಾ!
ವಿಭೂತಿಯನೆ ಪೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ ನಿಮ್ಮ ಒಲವಿಲ್ಲದಂತಾಗಿರ್ದೆನಯ್ಯಾ!
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯ ಕೂಡಲ ಸಂಗಮದೇವಾ.*

ಹಾಡುತ್ತ ಹಾಡುತ್ತ ವಿರಹದ ಭಾರವನ್ನು ಹೊರಲಾರದೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ನಂತರ ಶಾಂತವಾದಂತೆ ಕಂಡರೂ, ಬೆಳುದಿಂಗಳ ಬೆಳಗಿನಲ್ಲಿ ಮುತ್ತಿನ ಮಣಿಗಳಂತೆ ಜಲಬಿಂದುಗಳು ಕಪೋಲದ ಮೇಲೆ ಉರುಳುವುದು ಶೈಲಜೆಗೆ ಕಾಣುತ್ತಿತ್ತು. ತಳಮಳಗೊಂಡ ಶೈಲಜೆ ಅದನ್ನು ಅದುಮಿಕೊಂಡು, ಏನೂ ಅರಿಯದವಳಂತೆ ಹಿಂದಿನಿಂದ ಬಂದು ಮಹಾದೇವಿಯ ಕಣ್ಣನ್ನು

* ಬ. ವ. ದ. ೨೬೮

ಮುಚ್ಚುತ್ತ, 'ಬೆಳ್ದಿಂಗಳ ಹಾಲನ್ನು ಸೃಷ್ಟಿಯ ಮೇಲೆ ಚೆಲ್ಲಿ, ಆ ಬೆಳ್ದಿಂಗಳನ್ನೇ ಮುದ್ದೆಮಾಡಿ ಮಹಾದೇವಿಯ ಆಕಾರದಲ್ಲಿ ಕುಳ್ಳಿರಿಸಿದ್ದಾನೆ ಈ ದೇವರು....' ಎನ್ನುತ್ತ ಸಲಿಗೆಯಿಂದ ಗೆಳತಿಯು ಕೆನ್ನೆಗೆ ಮೃದುವಾಗಿ ಮುದ್ದಿಕ್ಕಿದಳು.

'ಶೈಲಜೆಯೇ....' ಭಾವಸಮಾಧಿಯಿಂದ ಮಹಾದೇವಿ ಎಚ್ಚೆತ್ತಳು.

ಕಣ್ಣು ಮುಚ್ಚಿದ ಎರಡೂ ಕೈಗಳನ್ನು ಬಿಚ್ಚಿ ತೆಗೆದಾಗ ತನ್ನ ಕೈ ಬೆರಳು ಇನ್ನೂ ತೇವಗೊಂಡಿದ್ದು ಕಂಡು, ಶೈಲಜ ಗಾಬರಿಯಾದಂತೆ ನಟಿಸಿ,

'ಮಾದೇವಿ .... ಏಕೆ ಅಳುತ್ತಿರುವೆ ....' ಎಂದು ಅವಳ ಕೊರಳನ್ನು ಳಿಂವ ಬಳಸಿ ಕೇಳಿದಳು.

'ಏನಿಲ್ಲ ಶೈಲಜಾ....'

'ನನ್ನ ಮುಂದೆಯೂ ಬಿಗುಮಾನವೇ? ಆತ್ಮೀಯರ ಮುಂದೆ ಹೇಳಿದರೆ ದುಃಖದ ಉತ್ಕಟತೆ ಕಡಿಮೆಯಾಗುವುದು. ದೊಡ್ಡವ್ವ ಬೈದಳೇನು....?'

'ಛೇ....ತಾಯಿ ಬೈದರೆ ಅಳುವರೇ ?'

'ಮತ್ತೇಕೆ....?'

'ಪಾತ್ರೆಯೊಳಗಣ ನೀರು ಕುದಿಯುತ್ತಿದ್ದರೆ, ಪಾತ್ರೆಯ ಬಾಯಿಗೆ ಮುಚ್ಚಿದ ತಟ್ಟೆಯ ಕೆಳಗೆ ನೀರಿನ ಹನಿಗಳು ಮೂಡುವುದಿಲ್ಲವೇ ?'

'ಅಹುದು....'

'ಹಾಗೆ...ನನ್ನಂತರಂಗ ಕುದಿಯುವ ಪಾತ್ರೆಯಾಗಿದೆ....'

'ನಿನಗೇನು ಕೊರತೆಯಾಗಿದೆ....?' ವಿಸ್ಮಿತಳಾದ ಶೈಲಜೆ ಕೇಳಿದಳು.

"ಒಮ್ಮೆ ಕಾಮನ ಕಾಲ ಹಿಡಿವೆ
ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ
ಸುಡಲೀ ವಿರಹವ!
ನಾನಾರಿಗೆ ಧೃತಿಗೆಡುವೆ ?
ಚೆನ್ನಮಲ್ಲಿಕಾರ್ಜುನ ದೇವನು ಎನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗಿತ್ತೆಯಾದೆನವ್ವಾ!*

ಮನಸ್ಸು ಕಳವಳದ ಸುಳಿಯಲ್ಲಿ ಸಿಕ್ಕಿ, ಜರ್ಜರಿತಳನ್ನಾಗಿ ಮಾಡುತ್ತಿದೆ. ತಂಪಾಗಿ ಬೀಸುವ ಮಂದಮಾರುತ ನನ್ನನ್ನು ಉರಿಯುವ ಬೆಂಕಿಯ ಝಳದಂತೆ ಸುಡುತ್ತಿದೆ. ಈ ಚಂದಿರನ ಕಿರಣಗಳು ನನ್ನನ್ನು ತಂಪಾಗಿರಿಸುವ ಬದಲು ಉರಿಬಿಸಿಲಾಗಿ ದಹಿಸುತ್ತಿವೆ. ಈ ತಂಪಾದ ರಾತ್ರಿಯ ವಾತಾವರಣ ನನ್ನನ್ನು ಪಂಚಾಗ್ನಿಯ ಮಧ್ಯೆ ಇರಿಸಿ, ಆವಿಗೆಯೊಳಗೆ ಸಿಕ್ಕಿಬಿದ್ದ ಮಡಿಕೆ

* ಮ. ವ. ೨೫೩

ಯಂತೆ ಒಳಗೇ ಕುದ್ದಿಸುತ್ತಿದೆ. ಜಾತ್ರೆಯಲ್ಲಿ ಒಟ್ಟು ಹಣ ಗುತ್ತಿಗೆ ಹಿಡಿದು, ಏನಾದೀತೋ ಎಂದು ಹಗಲಿರುಳು ಊಟ ನಿದ್ರೆ ಬಿಟ್ಟು ಪರಿತಪಿಸುವ ಸುಂಕದವನಂತಾಗಿದೆ.*

ಎಲ್ಲರೂ ನನ್ನನ್ನು ಹಂಗಿಸುವರೇನೋ ಎನ್ನಿಸುತ್ತಿದೆ. ನೋಡು, ಆ ಚಂದ್ರನು ಅಪಹಾಸ್ಯದ ನಗೆ ನಕ್ಕು ನನ್ನ ಅಳಲಿನ ಬೆಂಕಿಗೆ ತುಪ್ಪ ಸುರಿಯುವನು. ಈ ಮಂದಮಾರುತ ಬೆಂದವಳ ಮೇಲೆ ಕೆಂಡವನ್ನು ಸುರಿಯುತ್ತಿದೆ. ನನ್ನ ಮನದ ನೋವನ್ನು, ಅಂತರಂಗದ ವಿರಹವನ್ನು ಯಾರ ಮುಂದೆ ತೋಡಿಕೊಳ್ಳಲೇ ಶೈಲಜ? ನನ್ನ ಪರಿತಾಪವನ್ನು ಅವನಿಗೆ ಹೇಗೆ ಮುಟ್ಟಿಸಲಿ?....' ಮಹಾದೇವಿಯ ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯಿತು.

ಶೈಲಜ ಸ್ತಬ್ಧಳಾದಳು. ಅವಳಿಗೆ ಜಗತ್ತೆಲ್ಲವೂ ಗರಗರ ತಿರುಗಿದಂತೆ ಭಾಸವಾಯಿತು. ಸಾವರಿಸಿಕೊಂಡು, ತನ್ನನ್ನು ತಾನೇ ಸಂತೈಸಿಕೊಂಡಳು. ಸೂರ್ಯನು ಪಡುವಣದಲ್ಲಿ ಹುಟ್ಟಿ, ಮೂಡಣದಲ್ಲಿ ಮುಳುಗಿದ್ದರೂ ಇಷ್ಟೊಂದು ಅಚ್ಚರಿಯಾಗುತ್ತಿರಲಿಲ್ಲ. ಯಾವ ಮಹಾದೇವಿಯು ವೈರಾಗ್ಯ, ವಿರಕ್ತಿಯ ಬಗ್ಗೆ ದೊಡ್ಡ ದೊಡ್ಡ ಮಾತನಾಡುತ್ತಿದ್ದಳೋ ಅವಳೇ ಇಂದು ವಿರಹದಲ್ಲಿ! ಕಾಮನಾಟ ಯಾರನ್ನೂ ಬಿಟ್ಟಿದ್ದಲ್ಲ ಎಂದು ಮನದಲ್ಲೇ ತಲೆದೂಗಿದಳು. ತನ್ನನ್ನು ನೋಡಲಿಕ್ಕೆ ಬಂದು ಹೋಗುವ ನೆಂಟರ ಸಂಖ್ಯೆ ಹಿರಿದಾದುದರಿಂದ ಇತ್ತೀಚೆಗೆ ಮೂರು ವಾರದಿಂದ ಮಹಾದೇವಿಯ ಬಳಿ ಬರಲು ಶೈಲಜೆಗೆ ವೇಳೆ ಸಿಕ್ಕಿರಲಿಲ್ಲ. 'ಇಷ್ಟು ಅಲ್ಪಾವಧಿಯಲ್ಲಿ ಇಂತಹ ನಿಕಟ ಪ್ರೇಮವೇ? ಅಬ್ಬಾ! ಇದಾಗಲೇ ಬಹುದಿವಸಗಳದಾಗಿದ್ದಿರಬೇಕು, ಈಗ ಸ್ಫೋಟವಾಗಿದೆ' ಎಂದುಕೊಂಡಳು. 'ಪ್ರೇಮ ಬೆಳೆಯಲಿಕ್ಕೆ ದೀರ್ಘ ಕಾಲವಾದರೂ ಏಕೆ ಬೇಕು; ಮಹಾದೇವಿಯದು ಮೊದಲ ನೋಟದ ಪ್ರಣಯ ಇರಬೇಕು....' ಎಂದುಕೊಂಡಳು. ತಾನೇ ಉತ್ತರಿಸಬೇಕು ಎಂದು ಆಲೋಚಿಸುತ್ತ ಇರುವಾಗಲೇ ಮಹಾದೇವಿ ಹೇಳಿದಳು:

'ಇದು ಕಿಚ್ಚಿಲ್ಲದ ಬೇಗೆಯಾಗಿದೆ, ಏರಿಲ್ಲದ ಗಾಯವಾಗಿದೆ; ನೋಡುವವರ ಕಣ್ಣಿಗೆ ಬೆಂಕಿ ಕಾಣದು, ಆದರೆ ಒಳಗೇ ಜೀವಂತವಾಗಿ ದಹಿಸುತ್ತಿದೆ. ಶರೀರದ ಮೇಲೆ ಗಾಯವಿಲ್ಲ, ಆದರೆ ಯಾರಿಗೂ ಕಾಣದ ನೋವನ್ನು ಉಂಟುಮಾಡಿವೆ. ಎಷ್ಟೋ ದಿವಸಗಳಾದವು ಸುಖ ಎಂಬುದೇ ಇಲ್ಲ. ಅವನ ಒಲುಮೆ ನೆಟ್ಟು ಹಸಿವು ತೃಷೆ ನಿದ್ರೆಯನ್ನು ಮರೆದಿರುವೆ. ನನ್ನ ಮನದ ಅಳಲನ್ನು ಅವನಿಗೆ ಹೇಗೆ ನಿವೇದಿಸಿಕೊಳ್ಳಲಿ ಹೇಳು ಶೈಲಜಾ....?'†

---

* ಮ. ವ. ೨೫೪; † ಮ. ವ. ೨೫೧

ಮಹಾದೇವಿಯ ಕೆನ್ನೆಯ ಮೇಲೆ ಹರಿಯುವ ನೀರಿನ ಹನಿಗಳು ಬೆಳು ದಿಂಗಳ ಬೆಳಗಿನಲ್ಲಿ ಫಳಫಳಿಸುತ್ತಿದ್ದವು. ತಾಯಿತಂದೆಯರ ಮೋಹದ ಪುತ್ಥಳಿ ಯಾಗಿ ಬೆಳೆದ ಆಕೆಯ ಕಣ್ಣಿನಲ್ಲಿ ನೀರನ್ನು ಮೊದಲಬಾರಿಗೆ ಕಂಡುದು, ಶೈಲಜೆಯ ಹೃದಯವನ್ನು ಹಿಂಡಿದಂತಾಯಿತು.

'ದೊಡ್ಡಪ್ಪನಿಗೆ ಗೊತ್ತಾಗಿಲ್ಲವೆ?....'

'ಅಪ್ಪನಿಗೆ ಹೇಗೆ ಹೇಳಲಿ? ಹೇಳಿದರೆ ಅರ್ಥ ಮಾಡಿಕೊಳ್ಳಲು....' ಶೈಲಜೆ ಆಲೋಚನಾ ಮಗ್ನಳಾದಳು. ತಾಯಿಯ ಭಯದಿಂದ ಹೊರಗೆ ಹೋಗಲು ಸಾಧ್ಯವಾಗಿಲ್ಲ; ತನ್ನ ಪ್ರಿಯತಮನಿಗೆ ಯಾವ ಸಂದೇಶವನ್ನು ಮುಟ್ಟಿಸ ಲಿಕ್ಕಾಗಲಿ, ಅಥವಾ ಅವನೊಡನೆ ಮಾತನಾಡಲಿಕ್ಕಾಗಲಿ ಅವಕಾಶ ಸಿಕ್ಕಿಲ್ಲ. ಅದಕ್ಕೇ ಈ ದುಃಖ! ಗೆಳತಿಯಾಗಿ ತಾನೇನು ಸಹಾಯ ಸಲ್ಲಿಸಬಹುದು? 'ಈಕೆಯ ಚಿಂತೆಗೆ ಕಾರಣವನ್ನು ಸ್ಪಷ್ಟವಾಗಿ ಕಂಡುಹಿಡಿದಾಯಿತು. ಕಾಳಿದಾಸನ ಶಾಕುಂತಲೆ ದುಷ್ಯಂತನೊಡನೆ ಮೊದಲ ಮಿಲನವಾಗಿ, ಅವನು ರಾಜಧಾನಿಗೆ ಹಿಂತಿರುಗಿದ ಬಳಿಕ ಹೀಗೆಯೇ ಅನುತಾಪಗೊಂಡಳು. ಆ ಎಲ್ಲ ಲಕ್ಷಣಗಳು ನಿಸ್ಸಂಶಯಪೂರ್ವಕವಾಗಿ ಇಲ್ಲಿವೆ. ಬಾಣಭಟ್ಟನ ಕಾದಂಬರಿಯ ಮಹಾಶ್ವೇತೆ ಪುಂಡರೀಕ ಮುನಿಯ ದರ್ಶನದಿಂದ ಉದ್ವಿಗ್ನಳಾದಾಗ ವ್ಯಕ್ತ ಪಡಿಸಿದ ಎಲ್ಲ ಭಾವನೆಗಳೂ ಇಲ್ಲಿವೆ....' ಎಂದುಕೊಂಡಳು ಶೈಲಜಾ.

'ಇಲ್ಲಿಯತನಕ ದೊಡ್ಡ ದೊಡ್ಡ ಮಾತನಾಡಿ ಈಗ ಪ್ರಣಯದ ಮಾರ್ಗ ವನ್ನು ಹಿಡಿದಳೆಂದು ಗೆಳತಿಯಮೇಲೆ ಬೇಸರಗೊಳ್ಳುವುದು ಬೇಡ. ಒಂದೊಂದು ವಯಸ್ಸಿನಲ್ಲಿ ಒಂದೊಂದು ಸ್ಥಿತಿ. ಅವಳ ಮಾರ್ಗ ಸರಿಯೋ ತಪ್ಪೋ ಆಲೋಚಿ ಸದೆ ಈ ವಿರಹದ ಸುಳಿಯಿಂದ ಹೊರತೆಗೆಯೋಣ. ಅವಳ ಪ್ರಿಯತಮನು ಯಾರೆಂದು ಅರಿತರೆ, ಹೇಗಾದರೂ ತಾಯಿ ತಂದೆಯರ ಕಣ್ಣು ತಪ್ಪಿಸಿ ಮಹಾ ದೇವಿಯು ಕೊಡುವ ಪ್ರೇಮಪತ್ರವನ್ನು ಅವನಿಗೆ ಮುಟ್ಟಿಸಬಹುದು. ಅದರಿಂದ ಅವಳು ನನ್ನಲ್ಲಿರಿಸಿದ ವಿಶ್ವಾಸಕ್ಕೆ ಸ್ವಲ್ಪವನ್ನಾದರೂ ಮುಟ್ಟಿಸಿದಂತಾಗುತ್ತದೆ,' ಎಂದು ಶೈಲಜ ಮನದಲ್ಲಿ ನಿಶ್ಚಯಿಸಿಕೊಂಡಳು. 'ಮಹಾದೇವಿಯಂತಹ ಅಪೂರ್ವ ಸುಂದರಿಯನ್ನು, ವಿಚಾರವಂತಳನ್ನು ಆಕರ್ಷಿಸಿದ ಆ ಮಹಾನುಭಾವ ಯಾರಿರಬೇಕು' ಎಂದು ಕುತೂಹಲ ತಡೆಯದಾಯಿತು. ಕನ್ಯೆಯರ ಕೈ ಹಿಡಿಯಲು ಸಿದ್ಧರಾಗಿ ನಿಂತ ಉಡುತಡಿಯ ಸ್ವರ್ಧವರ್ಗೀಯ ತರುಣರ ಚಿತ್ರಗಳನ್ನೆಲ್ಲ ಕಣ್ಣು ಮುಂದೆ ತಂದುಕೊಂಡಳು. ಯಾರೂ ಹೊಳೆಯಲಿಲ್ಲ. 'ಶಂಕರಶೆಟ್ಟಿಯವರ ಮಗ ರಾಜಶೇಖರ ಇರಬಹುದೇ' ಎಂದು ತಲೆತುಂಬಿ

ಕೊಂಡಳು. ಸುಂದರ ತರುಣನಾದ ರಾಜಶೇಖರನ ಕಣ್ಣು ಮಹಾದೇವಿಯ ಕಡೆಗೆ ಆಕರ್ಷಿತವಾಗಿದೆಯೆಂದು ಶೈಲಜ ಗಮನಿಸಿದ್ದಳು. ಗುಂಪಿನಲ್ಲಿ ಮಹಾದೇವಿಯಿದ್ದರೆ ಎಲ್ಲಿಯಾದರೂ ಮರೆಯಲ್ಲಿ ನಿಂತು ಅವನು ಮೌನವಾಗಿ ನೋಡುತ್ತಿದ್ದುದನ್ನು ಹಲವಾರು ಬಾರಿ ಗಮನಿಸಿದ್ದಳು. ಮಲ್ಲಿಕಾರ್ಜುನನ ಗುಡಿಗೆ ತಾವಿಬ್ಬರೂ ಹೋಗುವಾಗ ಇವರಿಗೆ ಅರಿಯದಂತೆ ದೂರದಲ್ಲಿ ಹಿಂಬಾಲಿಸುತ್ತಿದ್ದುದನ್ನು ಕಂಡಿದ್ದಳು. ಮದುವೆ ಮುಂತಾದ ವಿಶೇಷ ಸಮಾರಂಭಗಳಲ್ಲಿ ಗೆಳತಿಯರೆಲ್ಲ ಕೂಡಿದ್ದರೆ, ಅಲ್ಲಿ ಮಹಾದೇವಿಯೂ ಇದ್ದರೆ, ರಾಜಶೇಖರ ಹೆಚ್ಚು ಹೊತ್ತು ಅಲ್ಲೇ ಸುಳಿಯುತ್ತಿದ್ದ. ಆಕೆ ಇಲ್ಲವಾದರೆ ಕೆಲವಾರು ನಿಮಿಷ ಮಾತ್ರ ಇದ್ದು ಹೊರಟುಹೋಗುತ್ತಿದ್ದ.

ಆದರೆ ಅವನ ಮನಸ್ಸು ಇವಳ ಕೇಂದ್ರದ ಸುತ್ತ ಸುತ್ತುತ್ತಿರುವುದು ಮಹಾದೇವಿಗೆ ತಿಳಿಯದು. ಕುಲೀನ ಮನೆತನದ ಸೌಜನ್ಯಶೀಲ ಯುವಕನಾದ ಅವನು ತಾನೇ ಮುಂದಾಗಿ ತಿಳಿಸುವ ಪ್ರಯತ್ನವನ್ನೂ ಮಾಡಿರಲಿಲ್ಲ. ಅವನ ಕಡೆಗೆ ಇವಳ ಮನಸ್ಸು ಹರಿದಿದೆಯೇನೋ ಎಂದು ಅರಿಯುವ ಪ್ರಯತ್ನವನ್ನು ಶೈಲಜೆ ಮಾಡಿದಳು, ಮಾತಿನ ಮಧ್ಯೆ.

'ಶಂಕರಶೆಟ್ಟರ ಮಗ ರಾಜಶೇಖರ ಎಷ್ಟು ಚೆನ್ನಾಗಿದ್ದಾನೆ ಅಲ್ವೇನೆ ಮಾದೇವಿ....?' ಎಂದಳು. ಮಹಾದೇವಿಯ ಮುಖವನ್ನೇ ಸೂಕ್ಷ್ಮವಾಗಿ ಮನಶ್ಶಾಸ್ತ್ರಜ್ಞನಂತೆ ಗಮನಿಸಿದಳು, ನಾಚಿಕೆಯಿಂದ ಕೆಂಪಾಗಬಹುದೇನೋ ಎಂದು.

'ಯಾರೇ....ಆವತ್ತು ನಾನು ದೀಕ್ಷೆ ತೆಗೆದುಕೊಂಡ ದಿನ ಪ್ರಸಾದಕ್ಕೆ ಬಂದಿದ್ನಲ್ಲ ರಾಜಣ್ಣನಾ? ರಾಜಣ್ಣಯ್ಯ ಬಹಳ ಒಳ್ಳೆಯವನಂತೆ, ಮತ್ತೆ ಜಾಣನಂತೆ, ಬಹಳಷ್ಟು ವಚನಗಳನ್ನು ಕಲಿತಿದ್ದಾನಂತೆ! ಆವತ್ತು ಗುರುಗಳು ಹೇಳಿದರು, ಹೆಚ್ಚು ವಚನ ಕಲಿಯೋದ್ರಲ್ಲಿ ನಾನು ಮೊದಲಂತೆ, ರಾಜಣ್ಣಯ್ಯ ಎರಡನೆಯವನಂತೆ....' ಕೆದಕಿ ನೋಡಿದರೂ ಪ್ರೇಮದ ಸುಳಿವು ಸಿಕ್ಕಿರಲಿಲ್ಲ. ತರುಣನಾಗಿದ್ದ ಅವನು ಸುಂದರನಾಗಿರುವನು ಎಂಬುದಕ್ಕಿಂತಲೂ ಹೆಚ್ಚು ವಚನಗಳನ್ನು ಕಲಿತುದೇ ಆ ಮುಗ್ಧೆಯ ಆಸಕ್ತಿಯ ಕೇಂದ್ರಬಿಂದುವಾಗಿ ಇದ್ದಿತು. ಹೀಗಿದ್ದಾಗ ಮಹಾದೇವಿಯ ಮನಸ್ಸು ಸೂರೆಗೊಂಡವನು ಯಾರಿರಬಹುದು? ಎಂಬ ಸಂಶಯ ಶೈಲಜೆಯಲ್ಲಿ ಬಲವಾಯಿತು.

'ಮಹಾದೇವಿ....ನಿನ್ನ ಮನದ ಅಳಲು ಅರ್ಥವಾಯಿತು. ನಿನ್ನ ಕಷ್ಟ ನೋಡಲಾರೆ. ಬಿಸಿಲಿನ ಝಳಕ್ಕಿಟ್ಟ ಮಲ್ಲಿಗೆಯಂತೆ ಬಾಡಿಬಿಟ್ಟಿರುವೆ. ಒಳ್ಳೆತೋ ಕೆಟ್ಟದೋ ನಾನರಿಯೆ; ನಿನ್ನ ವಿರಹದ ತಾಪವನ್ನು ಶಮನಿಸಲು ಪ್ರಯತ್ನಿ

ಕೊಂಡಳು. ಸುಂದರ ತರುಣನಾದ ರಾಜಶೇಖರನ ಕಣ್ಣು ಮಹಾದೇವಿಯ ಕಡೆಗೆ ಆಕರ್ಷಿತವಾಗಿದೆಯೆಂದು ಶೈಲಜ ಗಮನಿಸಿದ್ದಳು. ಗುಂಪಿನಲ್ಲಿ ಮಹಾದೇವಿಯಿದ್ದರೆ ಎಲ್ಲಿಯಾದರೂ ಮರೆಯಲ್ಲಿ ನಿಂತು ಅವನು ಮೌನವಾಗಿ ನೋಡುತ್ತಿದ್ದುದನ್ನು ಹಲವಾರು ಬಾರಿ ಗಮನಿಸಿದ್ದಳು. ಮಲ್ಲಿಕಾರ್ಜುನನ ಗುಡಿಗೆ ತಾವಿಬ್ಬರೂ ಹೋಗುವಾಗ ಇವರಿಗೆ ಅರಿಯದಂತೆ ದೂರದಲ್ಲಿ ಹಿಂಬಾಲಿಸುತ್ತಿದ್ದುದನ್ನು ಕಂಡಿದ್ದಳು. ಮದುವೆ ಮುಂತಾದ ವಿಶೇಷ ಸಮಾರಂಭಗಳಲ್ಲಿ ಗೆಳತಿಯರೆಲ್ಲ ಕೂಡಿದ್ದರೆ, ಅಲ್ಲಿ ಮಹಾದೇವಿಯೂ ಇದ್ದರೆ, ರಾಜಶೇಖರ ಹೆಚ್ಚು ಹೊತ್ತು ಅಲ್ಲೇ ಸುಳಿಯುತ್ತಿದ್ದ. ಆಕೆ ಇಲ್ಲವಾದರೆ ಕೆಲವಾರು ನಿಮಿಷ ಮಾತ್ರ ಇದ್ದು ಹೊರಟುಹೋಗುತ್ತಿದ್ದ.

ಆದರೆ ಅವನ ಮನಸ್ಸು ಇವಳ ಕೇಂದ್ರದ ಸುತ್ತ ಸುತ್ತುತ್ತಿರುವುದು ಮಹಾದೇವಿಗೆ ತಿಳಿಯದು. ಕುಲೀನ ಮನೆತನದ ಸೌಜನ್ಯಶೀಲ ಯುವಕನಾದ ಅವನು ತಾನೇ ಮುಂದಾಗಿ ತಿಳಿಸುವ ಪ್ರಯತ್ನವನ್ನೂ ಮಾಡಿರಲಿಲ್ಲ. ಅವನ ಕಡೆಗೆ ಇವಳ ಮನಸ್ಸು ಹರಿದಿದೆಯೇನೋ ಎಂದು ಅರಿಯುವ ಪ್ರಯತ್ನವನ್ನು ಶೈಲಜೆ ಮಾಡಿದಳು, ಮಾತಿನ ಮಧ್ಯೆ.

'ಶಂಕರಶೆಟ್ಟರ ಮಗ ರಾಜಶೇಖರ ಎಷ್ಟು ಚೆನ್ನಾಗಿದ್ದಾನೆ ಅಲ್ವೇನೆ ಮಾದೇವಿ....?' ಎಂದಳು. ಮಹಾದೇವಿಯ ಮುಖವನ್ನೇ ಸೂಕ್ಷ್ಮವಾಗಿ ಮನಶ್ಶಾಸ್ತ್ರಜ್ಞನಂತೆ ಗಮನಿಸಿದಳು, ನಾಚಿಕೆಯಿಂದ ಕೆಂಪಾಗಬಹುದೇನೋ ಎಂದು.

'ಯಾರೇ....ಆವತ್ತು ನಾನು ದೀಕ್ಷೆ ತೆಗೆದುಕೊಂಡ ದಿನ ಪ್ರಸಾದಕ್ಕೆ ಬಂದಿದ್ನಲ್ಲ ರಾಜಣ್ಣನಾ? ರಾಜಣ್ಣಯ್ಯ ಬಹಳ ಒಳ್ಳೆಯವನಂತೆ, ಮತ್ತು ಜಾಣನಂತೆ, ಬಹಳಷ್ಟು ವಚನಗಳನ್ನು ಕಲಿತಿದ್ದಾನಂತೆ! ಆವತ್ತು ಗುರುಗಳು ಹೇಳಿದರು, ಹೆಚ್ಚು ವಚನ ಕಲಿಯೋದ್ರಲ್ಲಿ ನಾನು ಮೊದಲಂತೆ, ರಾಜಣ್ಣಯ್ಯ ಎರಡನೆಯವನಂತೆ....' ಕೆದಕಿ ನೋಡಿದರೂ ಪ್ರೇಮದ ಸುಳಿವು ಸಿಕ್ಕಿರಲಿಲ್ಲ. ತರುಣನಾಗಿದ್ದ ಅವನು ಸುಂದರನಾಗಿರುವನು ಎಂಬುದಕ್ಕಿಂತಲೂ ಹೆಚ್ಚು ವಚನಗಳನ್ನು ಕಲಿತುದೇ ಆ ಮುಗ್ಧೆಯ ಆಸಕ್ತಿಯ ಕೇಂದ್ರಬಿಂದುವಾಗಿ ಇದ್ದಿತು. ಹೀಗಿದ್ದಾಗ ಮಹಾದೇವಿಯ ಮನಸ್ಸು ಸೂರೆಗೊಂಡವನು ಯಾರಿರಬಹುದು? ಎಂಬ ಸಂಶಯ ಶೈಲಜೆಯಲ್ಲಿ ಬಲವಾಯಿತು.

'ಮಹಾದೇವಿ....ನಿನ್ನ ಮನದ ಅಳಲು ಅರ್ಥವಾಯಿತು. ನಿನ್ನ ಕಷ್ಟ ನೋಡಲಾರೆ. ಬಿಸಿಲಿನ ಝಳಕ್ಕಿಟ್ಟ ಮಲ್ಲಿಗೆಯಂತೆ ಬಾಡಿಬಿಟ್ಟಿರುವೆ. ಒಳ್ಳೆತೋ ಕೆಟ್ಟದೋ ನಾನರಿಯೆ; ನಿನ್ನ ವಿರಹದ ತಾಪವನ್ನು ಶಮನಿಸಲು ಪ್ರಯತ್ನಿ

ಸುವೆ. ಯಾರವನು? ಲಕ್ಷಣಗಳನ್ನು ವಿವರಿಸು. ನಿನ್ನ ಸ್ಥಿತಿಯನ್ನು ಯಾವ ರೀತಿ ಅವನಿಗೆ ತಿಳಿಸಬೇಕು ಹೇಳು, ಕೈಲಾದಷ್ಟು ಮಾಡುವೆ. ನಿನ್ನಾಣೆ ನನ್ನನ್ನು ನಂಬು....' ತನ್ನ ಸೆರಗಿನ ಚುಂಗಿನಿಂದ ಮಹಾದೇವಿಯ ಕಣ್ಣೀರನ್ನು ತೊಡೆದಳು.

ಮಹಾದೇವಿ ಸಮಾಧಾನ ತಂದುಕೊಂಡಳು, ಮೆಲ್ಲನೆ ಹೇಳಿದಳು :

'ಶೈಲಜಾ....ಅವನ ರೂಪು ಹೀಗಿದೆ ನೋಡು....' :

'ಹೊಳೆವ ಜಡೆ, ಅದರ ಮೇಲೆ ಎಳೆಯ ಚಂದಿರ, ಫಣಿಮಣಿ ಕರ್ಣಕುಂಡಲ ನೋಡವ್ವಾ....ರುಂಡಮಾಲೆಯು ಕೊರಳವನು....'* ತನ್ನಿನಿಯನ ಚಿತ್ರವನ್ನು ತನ್ಮಯಳಾಗಿ ಕಲ್ಪಿಸಿಕೊಂಡಳು.

'ಛೀ .. ಸಾಕು ನಿಲ್ಲಿಸು. ಯಾವನೋ ದರಿದ್ರ ಬೈರಾಗಿಯ ಮೋಹಕ್ಕೆ ಬಿದ್ದೆಯಾ? ಜಿಡ್ಡುಗಟ್ಟಿದ ತಲೆಯ ಆ ಸುಡುಗಾಡ ಸಿದ್ಧನಿಗಾಗಿ ಇಷ್ಟೊಂದು ಕಾತುರವೇ? ಬಂಗಾರದ ಪುತ್ಥಳಿಯಾದ ನಿನಗೆ ಎಂತೆಂತಹ ಗಂಡುಗಳನ್ನು ತರಲು ದೊಡ್ಡಪ್ಪನಿಗೆ ಶಕ್ತಿ ಇದೆ....'

'ಶೈಲಾ....ಪೂರ್ತಿ ಕೇಳೆ, ಅವನು ಸಾಮಾನ್ಯ ಬೈರಾಗಿಯಲ್ಲವೇ.... ಗೋವಿಂದನ ಕಣ್ಣು ಇವನ ಅಂಗಾಲಲ್ಲಿ. ಇವನು ಜಗದಾದಿ ಚೆಲುವ, ಚನ್ನಮಲ್ಲಿಕಾರ್ಜುನ ಕಣೇ....' ದೈನ್ಯತೆಯಿಂದ ನುಡಿದಳು ಮಹಾದೇವಿ.

'ಅಂದರೆ ಶಿವನೇ! ಅವನನ್ನು ಪ್ರೇಮಿಸಿದ್ದೀಯಾ? ಈ ವಿರಹವೆಲ್ಲ ಅವನಿಗಾಗಿಯೇ!'

'ಹೌದೇ....ನಿನ್ನಾಣೆಗೂ ಸತ್ಯ. ಎನ್ನ ತನುವನ್ನು ಸೂರೆಗೊಂಡವನು, ಮನವನ್ನು ಮಾರುಗೊಂಡವನು, ನನ್ನ ಸುಖವನ್ನು ಒಪ್ಪುಗೊಂಡವನು, ಎನ್ನ ಇರವನ್ನು, ಅಸ್ತಿತ್ವವನ್ನು ಆಕ್ರಮಿಸಿಕೊಂಡವನು ಅವನೇ ಕಣೆ, ಆ ಚನ್ನಮಲ್ಲಿಕಾರ್ಜುನನ ಒಲಿಮೆಯವಳು ನಾನು....'†

ಶೈಲಜ ಬೆಪ್ಪಾದಳು. ಏನು ಮಾತನಾಡಬೇಕೆಂಬುದೇ ತಿಳಿಯಲಿಲ್ಲ. ತನ್ನ ನಿರೀಕ್ಷೆ. ಊಹೆ ಎಲ್ಲವೂ ಸುಳ್ಳಾದಾಗ ಇಲ್ಲಿಯ ತನಕ ಮಾತನಾಡಬೇಕು ಎಂದು ಯೋಜಿಸಿಕೊಂಡುದೆಲ್ಲ ಒಮ್ಮೆಲೇ ಗಾಳಿಗೆ ತೂರಿಹೋಯಿತು. ಒತ್ತೆಡೆ ತನ್ನ ಊಹೆ ಸುಳ್ಳಾಯಿತಲ್ಲ ಎಂಬ ನಿರಾಶೆ, ಮತ್ತೊಂದೆಡೆ ಅಂತೂ ತನ್ನ ಗೆಳತಿ ಮೊದಲಿನಿಂದಲೂ ಆಡುತ್ತಿದ್ದ ಆದರ್ಶದ ಮಾತುಗಳ ಜಾಡನ್ನು ಬಿಟ್ಟು ಸರಿಯಲಿಲ್ಲ ಎಂಬ ಆನಂದ. ಇಂತಹ ಸಂಭ್ರಾಂತ ಸಮ್ಮಿಶ್ರಭಾವದಲ್ಲಿ

* ಮ. ವ. ೨೫೫

† ಮ. ವ. ೨೬೮

ಮೌನವಾಗಿ ಕುಳಿತಳು :

'ಏಕೆ ಶೈಲಜಾ....ಸುಮ್ಮನಾದೆ....'

'ಏನೂ ಹೇಳದಂತಹ ಸಂದಿಗ್ಧ ಅವಸ್ಥೆ ನನಗೊದಗಿದೆ ಮಹಾದೇವಿ.... ನಿಜಕ್ಕೂ ದೇವನಿಗಾಗಿ ಇಷ್ಟು ಹಂಬಲಿಸುವೆಯಾ....? ಪ್ರಿಯತಮನಿಗಾಗಿ ಹಂಬಲಿಸುವವರನ್ನು ನೋಡಿರುವೆ. ಲೋಕದಲ್ಲಿ ಅಪರೂಪದ ವರ್ತನೆ ಇದು...!' ಉದ್ಗರಿಸಿದಳು.

'ಮುಗಿಲಿನಿಂದ ಮಳೆಯ ನೀರು ಧಾರೈಸುವುದು. ಅದು ಕೊಚ್ಚೆಯ ಗುಂಡಿಗೆ ಬಿದ್ದಾಗ ಕೊಚ್ಚೆ, ಕೆರೆಯಲ್ಲಿ ಬಿದ್ದಾಗ ಬಳಕೆಗೆ ಯೋಗ್ಯ ನೀರು, ಸದ್ಗುರುವಿನ ಪಾದದ ಮೇಲೆ ಹರಿದಾಗ ಪೂಜ್ಯವಾದ ತೀರ್ಥವಲ್ಲವೇ ?'

'ಅಹುದು....'

'ಅಂತೆಯೇ ಮಾನವನ ಇಂದ್ರಿಯ ಶಕ್ತಿ, ವಿರಹಗಳು ; ಅನೀತಿಯ ಮಾರ್ಗ ದಲ್ಲಿ ಹರಿದಾಗ ಅದು ಅಕ್ಷಮ್ಯ ; ನೀತಿವಂತಿಕೆಯ ಗೃಹಸ್ಥಮಾರ್ಗದಲ್ಲಿ ಹರಿ ದಾಗ ಕ್ಷಮ್ಯ ; ಆಧ್ಯಾತ್ಮದಲ್ಲಿ ದೈವೀಮುಖವಾಗಿ ಹರಿದಾಗ ಅದೇ ಪೂಜ್ಯ. ಪ್ರೇಮತತ್ತ್ವವು ವಿಶಾಲ ಅರ್ಥವ್ಯಾಪ್ತಿಯುಳ್ಳುದು. ತಾಯಿ ಮಗುವಿಗೆ ತೋರಿಸಿದಾಗ ವಾತ್ಸಲ್ಯ, ಗಂಡ ಹೆಂಡತಿಗೆ ತೋರಿಸಿದಾಗ ಪ್ರೇಮ, ಸ್ನೇಹಿತ ರಲ್ಲಿ ತೋರಿಸಿದಾಗ ಕೆಳೆತನ, ಅದನ್ನೇ ದೇವನಲ್ಲಿ ತೋರಿಸಿದಾಗ ಭಕ್ತಿ....'

'ಆದರೆ ದೇವನಿಗಾಗಿ ಹಂಬಲಿಸುವುದು ಇಷ್ಟು ಉತ್ಕಟವಾಗಿರುವುದೇ ? ಇದೇ ನನಗೆ ಆಶ್ಚರ್ಯ ಸಂಗತಿ....'

'ನಿಜವೆಯೆ ಶೈಲಜಾ, ಹಗಲು ನಾಲ್ಕು ಜಾವದಲ್ಲೂ ಅದೇ ಚಿಂತನೆ. ಇರುಳು ನಾಲ್ಕು ಜಾವದಲ್ಲಿ ಅದೇ ಕಳವಳ. ಇದರಿಂದಾಗಿ ಊಟ ನಿದ್ರೆಗಳು ಬೇಕೆನಿಸುತ್ತಲಿಲ್ಲ. ನನಗೆ ಈ ಬದುಕೇ ಒಂದು ಕಾಳರಾತ್ರಿಯಾಗಿದೆ.* ನಾನಿಷ್ಟು ಪರಿಯಲ್ಲಿ ಹಂಬಲಿಸಿದರೂ ಓಗೊಡದ ಅವನ ನಿಷ್ಕರುಣೆಯಿಂದಾಗಿ ಒಲಿವನೋ, ಒಲಿಯನೋ ಎಂಬ ಚಿಂತೆ ತುಂಬಿ, ಅವನಿಂದ ತಿರಸ್ಕೃತಳಾಗಿ ಉಳಿಯಬೇಕಾಗುವುದೇನೋ ಎಂಬ ಭಯದಿಂದ ತಲ್ಲಣಿಸುತ್ತಿರುವೆ....' ಮಹಾದೇವಿಯ ಕಣ್ಣು ಮತ್ತೆ ನೀರಿನಿಂದ ತುಂಬಿದವು. ಮಹಾದೇವಿಯ ಮಾನಸಿಕ ಸ್ಥಿತಿಯ ಕಲ್ಪನೆ ಶೈಲಜೆಗೆ ಆಗಲಿಲ್ಲ. ಕುರುಡನ ಮುಂದೆ ಕನ್ನಡಿ ಯನ್ನು ಇಟ್ಟಂತಾಗಿತ್ತು. ಸುಮ್ಮನೆ ಕುಳಿತಳು ಮಹಾದೇವಿಯನ್ನು ಅಸಹಾಯ ಕಳಾಗಿ ನಿಟ್ಟಿಸುತ್ತ. ಬಿಂದಿಗೆಯನ್ನೆತ್ತಲು ಸಹಾಯಮಾಡಬಲ್ಲ ಶಕ್ತಿಯು ಅವಳಿಗಿತ್ತೇ ಹೊರತು, ಆಡಾಯಿಯನ್ನಲ್ಲ. ಲೌಕಿಕ ಕಷ್ಟದಲ್ಲಿ ಸಹಾಯ,ಸಲಹೆ

* ಮ. ವ. ೨೭೧

ಬೇಕಿದ್ದರೆ ಕೊಡಬಲ್ಲವಳಾಗಿದ್ದಳೇ ಹೊರತು ಪಾರಮಾರ್ಥ ಸಮಸ್ಯೆಗಳಲ್ಲಲ್ಲ.

'ದಟ್ಟವಾದ ಒಂದು ಅಡವಿಗೆ ಎಳೆಗರು ಹೋಗಿದೆ. ಹಿಂಡಿನ ಮಧ್ಯದಿಂದ, ಗೋವಳಿಗನ ದೃಷ್ಟಿಯಿಂದ ತಪ್ಪಿಸಿಕೊಂಡಿದೆ. ರಾತ್ರಿಯಾಗಿದೆ; ಕಾಡಿನಿಂದ ಪಾರಾಗುವ ಬಗೆ ತಿಳಿಯುತ್ತಿಲ್ಲ. ಒಂದೆಡೆ ಹೊಟ್ಟೆಯ ಹಸಿವೆ, ಮತ್ತೊಂದೆಡೆ ದಟ್ಟವಾದ ಕಾಡಿನ ಭಯ, ಇನ್ನೊಂದೆಡೆ ತಾಯಿಯ ನೆನಪು. ಎಂತಹ ದುರ್ಧರ ಪರಿಸ್ಥಿತಿ; ಭಯಾನಕ ವಾತಾವರಣ! ವಿಹ್ವಲಗೊಂಡು ಅಂಬಾ ಅಂಬಾ ಎಂದು ಕರುಳು ಕತ್ತರಿಸುವಂತೆ ಕೂಗುತ್ತಿದೆ....' ಕಣ್ಣು ಮುಚ್ಚಿಕೊಂಡು ಆ ಕರುವಿನ ಕರುಣಾಜನಕ ಚಿತ್ರವನ್ನು ಮನದ ಭಿತ್ತಿಯ ಮೇಲೆ ಕಲ್ಪಿಸಿಕೊಂಡಾಗ ಆಕೆಗೆ ಕಣ್ಣೀರಿನ ಮಹಾಪೂರ ಉಕ್ಕಿತು. ಶೈಲಜೆಗೆ ಏನೂ ತಿಳಿಯದಂತಾಯಿತು. ತನ್ನ ಗೆಳತಿಗೆ ಹುಚ್ಚುಗಿಚ್ಚು ಹಿಡಿಯಿತೋ ಎಂದು ಭೀತಳಾದಳು. ಅಥವಾ ಏನನ್ನಾದರೂ ಕಾಣುತ್ತಿರುವಳೋ ಎಂದು ಸುತ್ತಮುತ್ತ ನೋಡಿದಳು. ಒಂದು ವರ್ಷದ ಹಿಂದೆ ಶೈಲಜೆಯ ತಾತ ತೀರಿಕೊಂಡಾಗ ಕಡೆಯ ಗಳಿಗೆಯಲ್ಲಿ ಈಕೆ ಅವರ ಹಾಸಿಗೆಯ ಬಳಿ ಇದ್ದಳು. ಅವರು ಬಹಳ ಕೃಪಣರಾಗಿ ಬದುಕನ್ನು ಸವೆಸಿದ್ದರು. ದುಡ್ಡನ್ನು ಗಳಿಸುವ ಆತುರದಲ್ಲಿ ಎಷ್ಟೋ ಬಡಬಗ್ಗರ ರಕ್ತವನ್ನು ಹೀರಲು ಹಿಂದುಮುಂದು ನೋಡಿರಲಿಲ್ಲ. ಅವರ ಮಗ, ಶೈಲಜೆಯ ತಂದೆ ಕಲ್ಲೇಶಪ್ಪ ಹಾಗಲ್ಲ. ಓಂಕಾರನ ಸ್ವಭಾವಕ್ಕೆ ಹೋಲುವವನು. ತಂದೆಯ ಕ್ರೌರ್ಯ, ದುರಾಸೆ ಮನಸ್ಸಿಗೆ ಎಂದೂ ಸರಿಬಂದಿರಲಿಲ್ಲ. ಜಿಪುಣಾಗ್ರೇಸರ ತಂದೆಯ ಮನಸ್ಸು ನೋಯಿಸಲಾರದೆ ಸುಮ್ಮನೇ ಇರುತ್ತಿದ್ದ. ಅವರ ಕಣ್ಣಿಗೆ ಬೀಳದಂತೆ ಬಡಬಗ್ಗರಿಗೆ ಸಹಾಯ ಮಾಡುತ್ತಿದ್ದ. ತಂದೆ ಸತ್ತ ತಕ್ಷಣ ಚಕ್ರಬಡ್ಡಿಯ ಮೇಲೆ ವಶಪಡಿಸಿಕೊಂಡ ಹೊಲವನ್ನೆಲ್ಲ ಹಿಂತಿರುಗಿಸುವ ಆಶ್ವಾಸನೆ ಬಡವರಿಗೆ ನೀಡಿದ್ದ. ಅಂತಹ ತಾತನು ಬಚ್ಚಲಿನಲ್ಲಿ ಜಾರಿ ಬಿದ್ದು, ಮೂಳೆ ಮುರಿದುಕೊಂಡು ವಟಗುಟ್ಟುತ್ತ ಹಾಸಿಗೆಯಲ್ಲಿ ಕೊನೆಯಕಾಲ ಕಳೆಯಬೇಕಾಯಿತು. ಆಗ ಆ ಮುದುಕನ ಗೋಳು ಹೇಳತೀರದು.

'ಅಯ್ಯೋ ...ಅಲ್ಲಿ ...ಯಮದೂತರು... ಹಗ್ಗ ಹಿಡಿದು ಕರೆಯುತ್ತಿದ್ದಾರೆ ....ನಾನು ಬರೋದಿಲ್ಲ ...ನನ್ನ ಹೊಲ, ನನ್ನ ಮನೆ....ಅವರ ಕಣ್ಣು ಕ್ರೂರವಾಗಿವೆ. ಒಂದು ಕೈಯಲ್ಲಿ ಹಗ್ಗ, ಇನ್ನೊಂದು ಕೈಯಲ್ಲಿ ಕತ್ತಿ....ನಾ ಬರೋದಿಲ್ಲ ಕಣ್ರೋ....' ಮುದುಕ ಚೀರುತ್ತಿದ್ದ.

'ಅಪ್ಪಾ, ಇಲ್ಲಿ ಯಾರೂ ಇಲ್ಲ...ಭ್ರಮೆ ಕಣಪ್ಪ...' ಕಲ್ಲೇಶಪ್ಪ ಸಂತೈಸಿದ.

'ಅಲ್ಲಿ....ನರಕ....ಎತ್ತರದಲ್ಲಿ ಯಮಧರ್ಮ ಕೂತಿದ್ದಾನೆ; ಕೆಂಗಣ್ಣಿನಿಂದ

ನೋಡುತ್ತಿದ್ದಾನೆ. ಓ ಇವನು....ಭರಮ....ಅಲ್ಲಿ ನಿಂತು ದೂರು ಹೇಳ್ತಿದ್ದಾನೆ ....ಯಾಕಲೇ ಭರಮ ನಿನಗೆ ಸಾಲ ಕೊಟ್ಟದ್ದಿಲ್ಲೇನೋ ! ನನ್ನ ಕಡ ಮುಟ್ಟಿಸ ದಿದ್ದರೆ ನಿನ್ನ ಹೊಲ ತಗಂತೀನಿ ಅಂತ ಮೊದಲೇ ಹೇಳಿದ್ದಿಲ್ಲೇನೋ…ಈಗೇಕೋ ಯಮಧರ್ಮನ ಹತ್ತಿರ ದೂರು ಹೇಳೋದು ? ನಾನೇನು ಮಾಡ್ಲಿ, ಸಾಲ ತೀರಸ್ದೆ ನೀನು ಹಾಳಾಗಿ ಊರು ಬಿಟ್ಟು ಹೋಗಿ ಹಾದಿ ಹೆಣವಾಗಿ ಸತ್ತರೆ.... ನನ್ನ ತಪ್ಪಿಲ್ಲ....'

ಮನೆಯ ಮಂದಿ, ಮಕ್ಕಳು ಬೆಪ್ಪಾಗಿ ನಿಂತಿದ್ದರು. ಒಂದು ನೂರು ವರಹ ಕ್ಕಾಗಿ ಭರಮಣ್ಣನ ಹೊಲ ತೆಗೆದುಕೊಂಡು, ಅವನನ್ನು ಮಕ್ಕಳುಮರಿ ಸಮೇತ ಊರು ಬಿಡಿಸಿದ್ದು ಅವರಿಗೆಲ್ಲ ಗೊತ್ತಿತ್ತು. ಅವನು ಬಾಳಲಾರದೆ ಹೆಂಡತಿ ಮಕ್ಕಳ ಸಹಿತ ಹೋಗಿ, ಮೂರು ಹರದಾರಿ ದೂರದ ಕಾಡಿನಲ್ಲಿ ಬಾವಿಗೆ ಹಾರಿ ಸತ್ತಿದ್ದೂ ಗೊತ್ತಿತ್ತು.

'ಕಲ್ಲೇಶ....ಬೇಗನೇ ಗುಡಿಗೆ ಒಯ್ಯೋ, ಅಲ್ಲಿ ಸಾಯ್ತೀನಿ. ಪರದೇಶೀ ಮಲ್ಲಪ್ಪನ ಗುಡಿಗೆ ಒಯ್ಯೋ....ಮಾರ್ಕಂಡೇಯನ್ನ ಕಾಪಾಡಿದ. ಸ್ವಾಮಿ ನನ್ನೂ ಕಾಪಾಡ್ತಾನೆ....' ಕಲ್ಲೇಶಪ್ಪ ಓಡಿ ಹೋಗಿ ಗುರುಲಿಂಗದೇವರನ್ನು ಕರೆತಂದಿದ್ದ. ಗುರುಲಿಂಗದೇವರು ಮನದಲ್ಲೇ ವಿಷಾದದ ನಗೆ ನಕ್ಕು, ಹೇಳಿ ದ್ದರು :

'ಶೆಟ್ಟರೇ....ಮಾಡಿದ ಪಾಪಕ್ಕೆ ಪಶ್ಚಾತ್ತಾಪ ಪಡ್ರಿ....ಬಡವರ ಹೊಲ ಬಿಟ್ಟುಬಿಡು ಅಂತ ಕಲ್ಲೇಶಪ್ಪನಿಗೆ ಹೇಳ್ರಿ....' ಗಂಭೀರವಾಗಿ ಹೇಳಿದರು.

'ಅಯ್ಯೋ....ಹಂಗೆ ಮಾಡ್ಬೇಡ ಕಣೋ ...ಕಲ್ಲೇಶಿ, ಕಷ್ಟಪಟ್ಟು ಹೊಲ ಗಳಿಸಿದ್ದೀನಿ....'

'ಇನ್ನಾದ್ರೂ ಉಪಕಾರ ಮಾಡ್ದಿದ್ರೆ ನಿಮಗೆ ನರಕ ತಪ್ಪಿದ್ದಲ್ಲ. ಲಿಂಗ ಜಂಗಮಕ್ಕೆ ಇಲ್ಲದ ವೇಳೆ, ಕಾಂಚನಕ್ಕೆ ಇತ್ತು. ಜೀವಮಾನವೆಲ್ಲ ಕಾಂಚನದ ಗಳಿಕೆಯಲ್ಲೇ ಹೋಗಿದೆ. ಈಗಾದರೂ ಶಿವಾ ಶಿವಾ....ಅನ್ನಿ....' ಗುರುಲಿಂಗ ದೇವರು ಪಾದೋದಕವನ್ನು ಬಾಯಿಯಲ್ಲಿ ಹಾಕಿದರು. ಮುದುಕ ಕಷ್ಟಪಟ್ಟು ಶಿವ ಶಿವಾ ಎನ್ನುವಾಗಲೇ ಪ್ರಾಣಪಕ್ಷಿ ಹಾರಿಹೋಯಿತು.

ಈ ಚಿತ್ರಣ ಶೈಲಜೆಯ ಚಿತ್ತ ಭಿತ್ತಿಯ ಮೇಲೆ ಅಚ್ಚೊತ್ತಿತ್ತು. ತಾತ ಮಾಡಿದ ಪಾಪದಿಂದ ಅವನ ಕಣ್ಣಿಗೆ ಏನೇನೋ ಕಂಡಿರಬೇಕು. ಆದರೆ ಮಹಾದೇವಿಗೆ ಏಕೆ ಕಾಣುತ್ತದೆ? ಪಾಪದ ಹೆಸರನ್ನೂ ಕೇಳದಷ್ಟು ಮುಗ್ಧಳು. ಮಹಾದೇವಿ ಮತ್ತೆ ಮಾತನಾಡಿದಾಗ ಶೈಲಜೆಯ ಮೌನ ಹರಿಯಿತು.

'ಶೈಲಜಾ....ನಾನು ಆ ಕೊಲಬುಗೆಟ್ಟ ಎಳೆಗರುವಿನಂತಾಗಿರುವೆ. ಪ್ರಪಂಚ

ವೆಂಬುದೇ ಈ ದಟ್ಟಾರಣ್ಯ, ಇಲ್ಲಿ ನೂರಾರು ದಾರಿಗಳು. ಅಜ್ಞಾನದ ಕತ್ತಲೆ, ಮುಕ್ತಿಯ ಹಸಿವು, ಪರಮಾತ್ಮನೆಂಬ ತಾಯಿಯ ನೆನಪು....ನನ್ನ ಕರೆ ಅವನಿಗೇಕೆ ಮುಟ್ಟುತ್ತಲಿಲ್ಲ....ಅವನಿಗೆ ಮುಟ್ಟುತ್ತಲಿಲ್ಲ....?' ದುಃಖ ಮಿತಿಮೀರಿ, ಉನ್ಮಾದದ ಅವಸ್ಥೆ ಬಳಸಿತು. ಕಣ್ಣುಮುಚ್ಚಿಕೊಂಡು ಸುಮ್ಮನೆ ಪ್ರತಿಮೆಯಂತೆ ಕುಳಿತಳು.

'ಮಾದೇವಿ....ಮಾದೇವಿ....' ಶೈಲಜೆ ಅಲುಗಿಸಿದಳು. ಯಾವುದೇ ಪ್ರತಿಕ್ರಿಯೆ ತೋರದಾದಾಗ ಗಾಬರಿಯಿಂದ ಕೆಳಗಿಳಿದು, ಲಿಂಗಮ್ಮನ ಬಳಿ ಹೋದಳು. ಮಗಳ ಸ್ಥಿತಿ ಕಂಡು ಭೀತಿಯಿಂದ ತಲ್ಲಣಿಸಿ, ಲಿಂಗಮ್ಮ ಅದೇ ಆಗ ಸ್ನಾನಮಾಡಿ ಪೂಜೆಗೆ ಹೊರಟಿದ್ದ ಓಂಕಾರನಿಗೆ ಸುದ್ದಿ ಮುಟ್ಟಿಸಿದಳು. ಓಂಕಾರ ಮಹಡಿಯನ್ನೇರಿ ಮಗಳನ್ನು ಗಮನಿಸಿದ.

'ಲಿಂಗಾ....ನೀನೇನೂ ಗಾಬರಿ ಪಡಬೇಡ....ನಾನೀಗಲೇ ಮಠಕ್ಕೆ ಹೋಗಿ ಗುರುಗಳನ್ನು ಕಂಡು ಬರುವೆ....ನೀನು ಎಚ್ಚರಗೊಳಿಸದಿರು....'

ಅವಸರದಿಂದ ಮಠಕ್ಕೆ ಧಾವಿಸಿದ. ಗುರುಲಿಂಗದೇವರು ಪೂಜೆ ಮುಗಿಸಿ, ಫಲಾಹಾರ ಮಾಡಿ ಅಧ್ಯಯನದಲ್ಲಿದ್ದರು. ಮಹಾದೇವಿಯ ಸ್ಥಿತಿಯನ್ನು ವಿವರವಾಗಿ ಕೇಳಿದರು.

'ಓಂಕಾರ....ಏನೂ ಕಳವಳಗೊಳ್ಳದಿರು. ಸಾಧಕರ ಜೀವನದಲ್ಲಿ ಬರುವ ಸಹಜ ಅವಸ್ಥೆ ಇದು. ಗಾಢವಾದ ಅಜ್ಞಾನದಲ್ಲಿ ಮುಳುಗಿರುವ ಮಾನವನಿಗೆ 'ಎಚ್ಚರ'ವಾಗಿ, ನಾನಾರು ಎಂದು ಪ್ರಶ್ನಿಸಿಕೊಳ್ಳತೊಡಗುವನು: ಆ ನಂತರ ತನ್ನ—ಪರಮಾತ್ಮನ ಸಂಬಂಧವನ್ನು ಅರಿಯತೊಡಗಿ, ಆ ಮೂಲ ತಂದೆಯ ಕಾರುಣ್ಯಕ್ಕಾಗಿ ಹಂಬಲಿಸಿ, ಹಲುಬುವನು. ತಾಯಿಯನ್ನು ಕಳೆದುಕೊಂಡು, ನೆನಪು ಮಾಡಿಕೊಂಡ ಮಗನ ಉತ್ಕಟ ಹಂಬಲಕ್ಕಿಂತ, ಪ್ರೇಮಿಯ ಸಾಮೀಪ್ಯಕ್ಕಾಗಿ ಹಾತೊರೆಯುವ ಪ್ರಣಯಿನಿಯ ವಿರಹಕ್ಕಿಂತ, ಉತ್ಕಟವಾಗಿರುವುದು ಈ ದೇವವಿರಹಿಗಳ ಹಂಬಲದ ತೀವ್ರತೆ. ಇದಕ್ಕೆ ಲಿಂಗವಿಕಳಾವಸ್ಥೆ ಎನ್ನುವರು. ಸಾಮಾನ್ಯಜನರಿಗೆ ಇದು ಎಳ್ಳಷ್ಟೂ ಅರ್ಥವಾಗದು. ಇದು ಸಾಧಕರ ಜೀವನದ ಕಾಳರಾತ್ರಿ ಎನ್ನಿಸಿಕೊಳ್ಳುವುದು. ಅವರು ಉತ್ಕಟ ವಿರಹ, ನಿರಾಶೆ, ಉದ್ವೇಗಗಳ ಸಂಗಮವಾಗಿರುವರು. ಭಾವನೆಗಳ ಉದ್ವೇಗ ಅತಿಯಾದಾಗ ಹಾಗೆ ಮೌನವಾಗಿಬಿಡುವರು. ಇದು ಹೆದರುವಂತಹುದಲ್ಲ. ದೈವೀ ಕಾರುಣ್ಯದ ಆವಿರ್ಭಾವಕ್ಕೆ ಮುನ್ನ ಇಂತಹ ಉತ್ಕಟತೆ ಇರುವುದು. ಉಷೆಯ ಆಗಮನಕ್ಕೆ ಮುನ್ನ ಕತ್ತಲೆ ತುಸು ಗಾಢವಾಗುವಂತೆ, ಇಲ್ಲಿ ಮಾನಸಿಕ ಉದ್ವೇಗದ ಒತ್ತಡ ಅತಿಯಾಗುವುದು. ಬೆಳಕು ಹರಿಯುವ ಮುನ್ಸೂಚನೆ

ಯನ್ನು ತೀವ್ರ ಕತ್ತಲೆ ಸಂಕೇತಿಸುವಂತೆ, ಶಿವನೊಲಿಮೆಯ ಸೂರ್ಯೋದಯವನ್ನು ಈ ಕಾಳರಾತ್ರಿ ಮುನ್ಸೂಚಿಸುತ್ತದೆ. ಇಂತಹ ಸ್ಥಿತಿ ಎಲ್ಲರಿಗೆ ಬರದು.

'ರೇಷಿಮೆ ಹುಳದ ಚಟುವಟಿಕೆ ನೋಡಿರುವೆಯಲ್ಲವೆ?' ಗುರುಲಿಂಗರು ಕೇಳಿದರು.

'ಅಹುದು. ಮೊದಲು ಅದು ಹೊಟ್ಟೆಬಾಕನಂತೆ ತಿನ್ನುವುದು, ಉತ್ಕೃಷ್ಟವಾಗಿ ಬೆಳೆಯುವುದು. ಅನಂತರ ಕೆಲವು ದಿನ ಏನೂ ತಿನ್ನದಂತೆ ಕುಳಿತುಬಿಡುವುದು. ಆಮೇಲೆ ನಿಧಾನವಾಗಿ ಎಳೆಯನ್ನು ಬಿಡತೊಡಗಿ ರೇಷಿಮೆಯ ಗೂಡಿನಲ್ಲಿ ಬಂಧಿತವಾಗುವುದು....'

'ನಿಜ....ಅದೇ ರೀತಿ ಮಹಾದೇವಿ ಇಲ್ಲಿಯತನಕ ಉತ್ಕಟ ಕುತೂಹಲ, ಆಸಕ್ತಿಯಿಂದ ಒಂದೇ ಸಮನೆ ಜ್ಞಾನದ ಶೇಖರಣೆ ಮಾಡಿಕೊಂಡಿದ್ದಾಳೆ. ಆ ಜ್ಞಾನವೆಲ್ಲ ಈಗ ಮೈಗೂಡಬೇಕಾಗಿದೆ. ಅದಕ್ಕೀಗ ಮೌನವಾಗಿ, ಏಕಾಂತ ಪ್ರಿಯಳಾಗಿದ್ದಾಳೆ. ಈ ಅವಸ್ಥೆ ವ್ಯಕ್ತಿತ್ವದ ವಿಕಾಸಕ್ಕೆ ಉತ್ತಮ ಭೂಮಿಕೆಯಾಗುತ್ತದೆ. ಅನಂತರ ಆ ಹುಳವು ಗೂಡು ಕಟ್ಟುವಂತೆ, ಸಾಧಕರು ಸಹ ತಮ್ಮ ವಿಚಾರಗಳ ಎಳೆ ಬಿಡತೊಡಗಿ, ತತ್ತ್ವದ ಗೂಡನ್ನು ಕಟ್ಟುವರು. ಅದೇ ಅವರು ಜಗತ್ತಿಗೆ ಕೊಡುವ ಕಾಣಿಕೆ....'

'ಅದ್ದರಿಂದ ಇದು ಶುಭಲಕ್ಷಣ....ನೀನು ಕಳವಳಿಸಬೇಡ. ಆದರಿಷ್ಟೇ, ಲಿಂಗಮ್ಮನಿಗೆ ಮಗಳನ್ನು ಅರ್ಥಮಾಡಿಕೊಳ್ಳಬಲ್ಲ ಶಕ್ತಿಯಿಲ್ಲ. ಆಕೆ ವಿಘ್ನಗೈಯದಂತೆ ಎಚ್ಚರ ವಹಿಸು. ಓಂಕಾರ, ನೀನು ಖಂಡಿತವಾಗಿಯೂ ಪುಣ್ಯಜೀವಿ. ನಿನ್ನ ಮಗಳು ತನ್ನ ಹೆಸರನ್ನಷ್ಟೇ ಉಳಿಸಿಕೊಳ್ಳುವುದಲ್ಲ, ನಿಮ್ಮ—ನಮ್ಮ ಹೆಸರನ್ನು ಅಮರ ಮಾಡುವಳು....'

ಓಂಕಾರನು ಸಮಾಧಾನಚಿತ್ತನಾದ. ಗುರುಗಳ ಮಾತಿನಲ್ಲಿ ಪೂರ್ಣ ವಿಶ್ವಾಸವಿತ್ತವನಿಗೆ.

'ಏನೂ ಹೆದರಬೇಕಾಗಿಲ್ಲ ಲಿಂಗಾ....ನೀನು ನಿಶ್ಚಿಂತಳಾಗಿರು' ಎಂದು ಹೆಂಡತಿಗೆ ಸಮಾಧಾನ ಮಾಡಿದ. ಆದರೂ ಆಕೆಯ ಜೀವ ತಡೆಯಲಿಲ್ಲ. ಬೆಳದಿಂಗಳ ಬೆಳಗಿನಲ್ಲಿ ಬೆಳ್ಳಿಯ ಪುತ್ಥಳಿಯಂತೆ ಕುಳಿತ ಮಗಳಿಂದ ಸ್ವಲ್ಪ ದೂರದಲ್ಲಿ ಕುಳಿತು ಮೌನವಾಗಿ ನಿರೀಕ್ಷಿಸತೊಡಗಿದಳು. ಸಮೀಪಿಸಿ ಎಚ್ಚರಿಸಕೂಡದೆಂದು ಓಂಕಾರನ ಕಟ್ಟಪ್ಪಣೆಯಾಗಿದ್ದಿತು.

ಇರುಳಿನ ಎರಡನೆಯ ಜಾವದ ಕೊನೆಗೆ ಚಳಿಗಾಳಿಯ ಚಲನೆ ಆರಂಭವಾಯಿತು. ಲಿಂಗಮ್ಮನಿಗೆ ಹಲ್ಲು ಕಟಿಯತೊಡಗಿದವು. ರಾತ್ರಿಯ ಊಟವೂ ಇಲ್ಲದೆ,

ಕಂಪು ಕರುಳು ಕತ್ತರಿಸಿತು. ಏನಾದರಾಗಲಿ, ಬೈದರೂ ಚಿಂತೆಯಿಲ್ಲ ಎಂದು ಬೆಚ್ಚನೆಯ ಹೊದ್ದಿಕೆಯನ್ನು ತಂದು ಮಗಳಿಗೆ ಸುತ್ತುವಾಗ, ಆ ಬೆಚ್ಚನೆಯ ಸ್ಪರ್ಶಕ್ಕೆ ಮಹಾದೇವಿ ಕಣ್ತೆರೆದಳು.

'ಯಾರು....?' ಮೆಲ್ಲನೆ ಕೇಳಿದಳು.

'ನಾನು ಮಹಾದೇವಿ ನಿಮ್ಮಮ್ಮ....ಮೈಕೊರೆವ ಚಳಿಯಲ್ಲಿ ಕೂತಿರುವೆ ಯಲ್ಲ ಮಗಳೇ....' ಮಗಳ ತಲೆ ನೇವರಿಸಿದಳು.

'ಅವ್ವಾ....ಎಂತಹ ವಾತ್ಸಲ್ಯಮಯಿ ನೀನು....!' ಎಂದು ಸವರುತ್ತಿದ್ದ ತಾಯಿಯ ಕೈಯನ್ನು ಕಣ್ಣಿಗೆ ಒತ್ತಿಕೊಂಡಳು.

'ನಡೆ ಕಂದಾ....ಉಂಡುಟ್ಟು ನಲಿಯುತ್ತ ಇರಬೇಕಾದ ಕಾಲದಲ್ಲಿ ಯಾವ ಪ್ರಾರಬ್ಧ ಕಾಡುತ್ತಿದೆಯೋ....' ನಿಟ್ಟುಸಿರಿಟ್ಟಳು.

'ಅವ್ವಾ....ಬಿಸಿನೀರಿನಲ್ಲಿ ಆನಂದದ ಸ್ನಾನಮಾಡಿ ಮೈಯೊರೆಸಿಕೊಂಡು ನಿಂತವನ ಮೇಲೆ ತಟ್ಟನೆ ತಣ್ಣೀರು ಸುರಿದಂತಹ ಆಘಾತ ಮಾಡಬೇಡ. ನನ್ನ ಮನಸ್ಸೀಗ ಶಾಂತಿಯಲ್ಲಿ ಮಿಂದಿದೆ. ಈಗೇನು ಮಾತು ಬೇಡ....ನೀನು ಹೋಗು....'

'ಬಿಸಿ ಹಾಲನ್ನಾದರೂ ಕುಡಿ....'

'ಈ ಹೊತ್ತಿನ ಮೇಲೇ?....ಬೇಡ, ಬೆಳಿಗ್ಗೆ ಕೊಡುವೆಯಂತೆ....' ಮಗಳ ಒತ್ತಾಯಕ್ಕೆ ಲಿಂಗಮ್ಮ ಕೆಳಗಿಳಿದು ಹೋದಳು. ಮಹಾದೇವಿ ಹರ್ಷಚಿತ್ತಳಾಗಿ ಮಲಗಿದಳು.

* * *

ಬೆಳಗಾಗಿ ಸಾಕಷ್ಟು ವೇಳೆಯಾಗಿತ್ತು. ಇನ್ನೂ ಮಹಾದೇವಿ ಎದ್ದಿರಲಿಲ್ಲ. ಓಂಕಾರ ಹೊರಗೆ ಹೋಗಬೇಕಾಗಿದ್ದವನು ಮಗಳ ಬಗ್ಗೆ ಕೇಳಿದ. ಇನ್ನೂ ಹಾಸಿಗೆಯನ್ನು ಬಿಟ್ಟಿಲ್ಲವೆಂದು ತಿಳಿಯಿತು. ಆಶ್ಚರ್ಯ ಸಮನಿಸಿತು. ನಸುಕಿನಲ್ಲಿ ಎದ್ದು ಸ್ನಾನ ಪೂಜೆ ಮುಗಿಸುವ ಮಗಳು ಇಂದೇಕೆ ಇನ್ನೂ ಎದ್ದಿಲ್ಲವೋ ಎಂದುಕೊಂಡ. ಮಹಡಿಯನ್ನೇರಿ ಕೋಣೆಯೊಳಗೆ ಕಾಲಿಕ್ಕಿದ. ಮಹಾದೇವಿ ಗಾಢ ನಿದ್ರೆಯಲ್ಲಿದ್ದಳು. ಯಾಕೋ ಹಾಸಿಗೆಯನ್ನು ತೆಗೆದು ಕೇವಲ ಚಾಪೆಯ ಮೇಲೆ ಮಲಗಿದ್ದಳು. ಬಣ್ಣ ಬಣ್ಣದ ರತ್ನಗಂಬಳಿಯ ಹೊದ್ದಿಕೆಯ ನಡುವೆ ಆಕೆಯ ಮುಖ ಸುಂದರವಾಗಿ ಕಾಣುತ್ತಿತ್ತು.

'ನನ್ನ ಕಂದ, ಬಂಗಾರದ ಗೊಂಬೆ, ಚೆಲುವಿನ ಪುತ್ಥಳಿ....' ಮನದಲ್ಲಿ ಅಂದುಕೊಂಡ. ಆಸಳ ತಲೆಯ ಹಿಂದೆ ಇಟ್ಟ ದೀಪಸ್ತಂಭದ ಮೇಲೆ ಇದ್ದ ಹರಳೆಣ್ಣೆಯ ದೀಪದಲ್ಲಿ ಬತ್ತಿ ಸುಟ್ಟು ಬೂದಿಯಾಗಿತ್ತು. ದೀಪವನ್ನು ಆರಿಸದೆ

ಓಮತ್ತ ಮಲಗಿದಂತೆ ಕಾಣಿಸುತ್ತಿತ್ತು. ಎಣ್ಣೆ ತೀರಿದಾಗ ಬತ್ತಿ ಸುಟ್ಟು ತಣ್ಣಗಾಗಿತ್ತು. ಚಾಪೆಯ ಮೇಲೆ ತಾಡಓಲೆಯಗರಿ, ಓಲೆಕಂಠಗಳು ಬಿದ್ದಿದ್ದವು. ತಾಡಓಲೆಯನ್ನು ಕೈಯಲ್ಲಿ ತೆಗೆದುಕೊಂಡು ಕಣ್ಣೋಡಿಸಿದ. ಮುದ್ದಾದ, ಗುಂಡು ಅಕ್ಷರಗಳಲ್ಲಿ ಏನೋ ಕೊರೆಯಲ್ಪಟ್ಟಿತ್ತು.

'ಬೆರೆಸುವರೆ ಬೇಗ ತೋರಾ, ಹೊರಹಾಕದಿರಯ್ಯಾ.
ನಿಮ್ಮಲ್ಲಿಗೆ ಸಲೆ ಸಂದ ತೊತ್ತಾನು ;
ಎನ್ನ ಹೊರ ಹಾಕದಿರಯ್ಯಾ.
ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ನಂಬಿ ಬೆಂಬಳಿ ಬಂದೆನು
ಇಂಬುಗೊಳ್ಳಯ್ಯಾ ಬೇಗದಲಿ !'*

'ಸಂಸಾರವೆಂಬುದು ಹಗೆಯಯ್ಯಾ ತಂದೆ.
ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತಿದೆಯಯ್ಯಾ.
ಎನ್ನನವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯಾ.
ನಿನ್ನ ನಾ ಮರೆಹೊಕ್ಕೆ ಕಾಯಯ್ಯಾ.
ಎನ್ನ ಬಿನ್ನಪವನವಧರಿಸಾ ಚನ್ನಮಲ್ಲಿಕಾರ್ಜುನಾ.'†

ಎರಡೂ ವಚನಗಳು ಮಗಳ ಮನಸ್ಸಿಗೆ ಕೈಗನ್ನಡಿ ಹಿಡಿದಿದ್ದವು. ತಾನೂ ಬರೆಯಬೇಕೆಂಬ ಆಸೆ ಹೊಂದಿದ್ದ ಓಂಕಾರ. ಆದರೆ ಅದು ಪೂರ್ಣವಾಗಿರಲಿಲ್ಲ. ಮಗಳ ಬರವಣಿಗೆಯಲ್ಲಿ ಅದು ಮೂಡಿದುದು ಕಂಡು ಸಂತಸವೆನಿಸಿತು. ಅಭಿಮಾನ ತುಂಬಿ ನಿಟ್ಟಿಸಿದ. ಕನಸಿನಲ್ಲಿ ಏನನ್ನಾದರೂ ಕಂಡಿದ್ದಳೇನೋ, ಮುಖದ ಮೇಲೆ ನಗೆಯ ಅಲೆ ತೇಲುತ್ತಲಿತ್ತು.

'ರಾತ್ರಿ ತಡವಾಗಿ ಮಲಗಿರಬೇಕು, ಸಂತೋಷದ ನಿದ್ರೆ ಮಾಡಲಿ—' ಎಂದುಕೊಳ್ಳುತ್ತ ಕೆಳಗಿಳಿದು ಹೋದ.

ಕೊಂಚ ವೇಳೆಯ ಬಳಿಕ ಶೈಲಜ ಬಂದಳು. ತನ್ನ ಗೆಳತಿಗೆ ಏನಾಯಿತೋ ಎಂದು ತಿಳಿಯುವ ಕಾತುರ. ಅವಳು ಬಂದಾಗಲೂ ಮಹಾದೇವಿ ಎದ್ದಿರಲಿಲ್ಲ. ಮೇಲಕ್ಕೆ ಹೋಗಿ ಅವಳ ಮಗ್ಗುಲಲ್ಲಿ ಕುಳಿತು ದಿಟ್ಟಿಸತೊಡಗಿದಳು. ನೆಮ್ಮದಿಯ ನಿದ್ರೆ ಮಾಡಿ ಮುಖವು ಅರಳಿದ್ದಿತು. ಮುಗ್ಧತೆಯೇ ವಿಕಸಿಸಿದಂತೆ ಅವಳ ಕೆನ್ನೆಗಳಲ್ಲಿ ಕಳೆ ಮೂಡಿದ್ದಿತು. ಕೆದರಿದ ಮುಂಗುರುಳು ಹಣೆಯ ಮೇಲೆ ರಾರಾಡುತ್ತಿದ್ದವು, ನೀಳವಾದ ರೆಪ್ಪೆಗಳು ಕೆಳಮುಖವಾಗಿ ಮುಚ್ಚಿಕೊಂಡಿದ್ದವು.

---

* ಮ. ವ. ೩೨೪
† ಮ. ವ. ೨೩

'ದೇವರು ಚೆಲುವನ್ನೇ ಮುದ್ದೆಮಾಡಿ ಇಟ್ಟಂತಾಗಿದೆ....ಎಂತಹ ಅಂದ! ನಮ್ಮ ಉಡುತಡಿಯ ಅಕ್ಕಪಕ್ಕದಲ್ಲಿ ಯಾರೂ ಇಷ್ಟು ಅಂದವಾಗಿರಲಿಕ್ಕಿಲ್ಲ....; ಇನ್ನಾರಿಗಾದರೂ ಇಂತಹ ಸೌಂದರ್ಯವಿದ್ದರೆ ಅದೆಷ್ಟು ಮೆರೆದಾಡುತ್ತಿದ್ದರೋ! ಮಹಾದೇವಿ ತುಂಬಿದ ಕೊಡದಂತೆ. ಇವಳ ಬಾಳಿನ ಕೊಡದ ತುಂಬೆಲ್ಲ ಸದ್ಗುಣದ ತಿಳಿನೀರು.

ಇವಳನ್ನು ನೋಡುತ್ತಿದ್ದರೆ ಮತ್ತೂ ನೋಡಬೇಕೆನ್ನಿಸುತ್ತದೆ. ಹೆಣ್ಣಾದ ನನಗೇ ಹೀಗಾದೀತೆಂದಮೇಲೆ ತರುಣರಿಗೆ ಹೇಗಾದೀತೋ! ಆದರೆ ತನ್ನ ಸೌಂದರ್ಯದ ಅಭಿಮಾನ ಎಳ್ಳಷ್ಟೂ ಇಲ್ಲ....ತುಂಬಾ ವಿಚಿತ್ರ....' ಶೈಲಜೆಯ ಮನಸ್ಸು ಹೀಗೆ ಆಲೋಚಿಸುವಾಗಲೇ ಮಹಾದೇವಿ ಮೆಲ್ಲನೆ ಗುಣುಗುಣಿಸಿದಳು. ಸಂಭ್ರಮದ ಸುಳಿನಗೆ ಮುಖದ ಮೇಲೆ ಹಾಯಿತು; ಮೂಡಿದ ಅಲೆಗಳು ಅಡಗುವಂತೆ ಆ ನಗೆ ಮತ್ತೆ ಅಡಗಿತು.

'ಚನ್ನಮಲ್ಲಿಕಾರ್ಜುನ ಬಾ....ಹೋಗಬೇಡ, ಬಿಟ್ಟು....ಹೋಗಬೇಡ' ಹೊದ್ದಿಕೆಯಿಂದ ಹೊರಗೆ ಕೈಚಾಚಿದಳು.

ತಟ್ಟನೆ ಎಚ್ಚರಗೊಂಡಳು ಮಹಾದೇವಿ; ಕಣ್ದೆರೆದಾಗ ಮೌನವಾಗಿ ವೀಕ್ಷಿಸುತ್ತಿದ್ದ ಶೈಲಜೆ ಕಂಡಳು. ಬೇರಾವುದೋ ಪ್ರಪಂಚದಿಂದ ಇಳಿದವಳಿಗೆ ಈ ಪ್ರಪಂಚದ ಅರಿವಾಗದೆ ಕಣ್ಣು ಹೊಸಕಿಕೊಂಡಳು. ಶೈಲಜೆ ಮಹಾದೇವಿಯ ಬಲಗೈ ಹಿಡಿದು ಸವರಿ ನುಡಿದಳು :

'ಇದೇನು ಮಹಾದೇವಿ, ಸೂರ್ಯೋದಯವಾಗಿ ಅರ್ಧ ಜಾವ ಕಳೆದರೂ ಎದ್ದಿಲ್ಲ. ಮೈಯಲ್ಲಿ ಸೊಗಸಿಲ್ಲವೆ?' ಕುತ್ತಿಗೆಯ ಬಳಿ ಕೈ ಇಟ್ಟಳು.

'ಅಹುದೇ....ಅಷ್ಟು ವೇಳೆಯಾಗಿದೆಯೇ....?' ತಟಕ್ಕನೆ ಮೇಲೆದ್ದಳು.

'ಹೊರ ಪ್ರಪಂಚದ ಅರಿವೇ ಇಲ್ಲವೇ? ರಾತ್ರಿ ಬಹಳ ಹೊತ್ತಿನ ತನಕ ನಿನ್ನ ಗಂಡನ ನೆನಪಿನಲ್ಲಿದ್ದೆಯೇನೋ? ಅಥವಾ ಕನಸಿನಲ್ಲಿ ಮಧುಚಂದ್ರ ವಿಹಾರಕ್ಕೆ ಹೋಗಿದ್ದೆ ಏನೋ?' ತಿಳಿಹಾಸ್ಯದ ನಗೆ ನಕ್ಕಳು.

'ಸತ್ಯವಾಗಿಯೂ ಶೈಲಜಾ....ಹೊಂ ಅದೆಷ್ಟು ಚೆಂದವಿತ್ತು, ಗೊತ್ತಾ....? ಕೇಳಿ ನೀನು ನಗಬೇಡ.'

ಕೇಳವ್ವಾ, ಕೇಳವ್ವಾ ಕೆಳದಿ, ನಾನೊಂದು ಕನಸು ಕಂಡೆ
ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ.
ಚಿಕ್ಕಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಬಂದೆನ್ನನೆರೆದನೋಡವ್ವಾ.
ಆತನನಪ್ಪಿಕೊಂಡು ತಳುವೆಳಗಾದೆನು.

ಚನ್ನಮಲ್ಲಿಕಾರ್ಜುನನ ಕಂಡು
ಕಣ್ಣುಮುಚ್ಚಿ ತೆರೆದು ತಳುವೆಳಗಾದೆನು.*

ಅದೊಂದು ಸುಂದರ ಬೆಟ್ಟ; ಸುಪ್ರಭಾತದ ಹೊಂಬೆಳಗಿನಲ್ಲಿ ಮೀಯುತ್ತಿತ್ತು. ನಾನು ಮೆಲ್ಲಮೆಲ್ಲನೆ ಮೇಲೇರಿ ಹೋದೆ. ಗಿರಿಯ ತುದಿಯಲ್ಲಿ ಸುಂದರ ಯೋಗಿಯೊಬ್ಬ ಕುಳಿತಿದ್ದ. ಅವನ ಜಡೆಗಳು ಹೊಳೆಯುತ್ತಿದ್ದವು. ನನ್ನನ್ನು ನೋಡಿ ನಕ್ಕ. ಈ ನಗೆ ಬೆಳುದಿಂಗಳ ಹೂವನ್ನು ಚೆಲ್ಲಿತು ನೋಡೆ. ನಾನು ಕೈಚಾಚಿ ಕರೆದೆ. ಅವನು ಬಂದು ನನ್ನ ಕೈಹಿಡಿದು ಅಪ್ಪಿಕೊಂಡ. ನನ್ನ ದಣಿವೆಲ್ಲ ಬಿಸಿಲಿಗೊಡ್ಡಿದ ಮಂಜಿನಂತೆ ಕರಗಿತು. ಕಣ್ಣುಗಳು ಮುಚ್ಚಿದವು ಆನಂದದ ಭರದಲ್ಲಿ....'

ಮತ್ತೊಮ್ಮೆ ಕನಸಿನ ದೃಶ್ಯವನ್ನು ಅನುಭವಿಸುವಂತೆ ಕಂಡಳು.

'ಮತ್ತೆ ನಾನು ಕಣ್ತೆರೆದಾಗ ಅವನು ಇರಲಿಲ್ಲ. ಕಂಡೂ ಕಾಣದಂತಾಗಿ ನನ್ನ ಕಣ್ಣುಮುಚ್ಚಾಲೆಯಾಡಿಸುವ ಅವನ ಬಗ್ಗೆ ಮುನಿಸು ಮೂಡಿತು. ದುಃಖಿಸುತ್ತ ಮನೆಗೆ ಬಂದೆ. ಅವನಿಗಾಗಿ ಹಂಬಲಿಸುವಾಗಲೇ ಮನೆಯ ತುಂಬ ಮಂಗಳದ ಪರಿಕರಗಳು ಕಂಡವು. ಅಕ್ಕಿ, ಅಡಕೆ, ಓಲೆ, ತೆಂಗಿನಕಾಯಿ ಕಾಣುತ್ತಿದ್ದವು. ಅವನ ನಿರೀಕ್ಷೆಯಲ್ಲಿ ನಾನಿದ್ದು, ದಾರಿಯನ್ನೇ ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಿದ್ದೆ.

ಮನೆಯ ಮುಂದೆ ಆ ಗೊರವ ಬಂದು ಭಿಕ್ಷೆಯನ್ನು ಬೇಡಿದ. ನನ್ನನ್ನ ಮೊರದಲ್ಲಿ ಅಕ್ಕಿಯನ್ನು ಒಯ್ದು ಸುರಿಯ ಹೋದರೆ ಸ್ವೀಕರಿಸದೆ ನನ್ನೆಡೆಗೆ ಕಣ್ಣು ಹಾಯಿಸಿದ, ಮುನಿಸಿನಿಂದ ಹೋಗಲು ಹೊರಟ; ನನಗರಿವಾಯಿತು. ನಮ್ಮ ವಸ್ತುಗಳು ಅವನಿಗೆ ಬೇಕಿಲ್ಲ, ನಾನೇ ಬೇಕೆಂದು. ಅವ್ವನು ಬೇಡ ಬೇಡವೆಂದರೂ ನಾನು ಬೆಂಬತ್ತಿ ಓಡಿ ಹೋಗಿ 'ಚನ್ನಮಲ್ಲಿಕಾರ್ಜುನಾ.... ಬಾ ಹೋಗಬೇಡ....' ಎಂದು ಅವನ ಕೈಹಿಡಿದು ಮೈಮರೆತೆ. ಆದರೆ ಕಣ್ತೆರೆದಾಗ ಅವನು ಇರಲಿಲ್ಲ....'†

'ಅವನು ಬದಲ ನಾನಿದ್ದೆ....ಅಲ್ಲವೇ.....?' ಶೈಲಜೆ ನಕ್ಕಳು.

'ಅಬ್ಬಾ! ಎಂತಹ ಸುಂದರ ಕನಸು ಅಂತೀಯ. ಶೈಲಜಾ ...ಅವನು ನನ್ನ ಸುತ್ತಮುತ್ತಲೂ ಇದ್ದಾನೆ ಕಣೇ. ಕಣ್ತಪ್ಪಿಸುತ್ತಾನೆ....ತಪ್ಪಿಸಿಕೊಳ್ಳಲಾರದಂತೆ ಹಿಡಿದುಕೊಳ್ಳಬೇಕೆನಿಸುತ್ತದೆ....' ಮಹಾದೇವಿಯ ಮನಃಸ್ಥಿತಿ ಕಂಡು ಶೈಲಜೆ ಮೂಕಳಾದಳು. ಹಗಲಿನಲ್ಲಿ, ಇರುಳಿನಲ್ಲಿ, ನಿದ್ರೆಯಲ್ಲಿ,

* ಮ. ವ. ೨೬೭

† ಮ. ವ. ೨೬೭

ಕನಸಿನಲ್ಲಿ ಆ ಚನ್ನಮಲ್ಲಿಕಾರ್ಜುನನೇ ತುಂಬಿದ್ದ. ಅವನ ನೆನಪನ್ನು ಹಾಸಿ ಕೊಂಡು, ಹೊದ್ದುಕೊಂಡು ಪ್ರಾಣವಾಗಿ ಮಾಡಿಕೊಂಡಿದ್ದಳು.

'ಶೈಲಾ, ನನ್ನನ್ನು ಕಂಡು ಹುಚ್ಚಿ ಅಂತೀಯೇನೆ....ನಿನ್ನ ಮನಬಿಚ್ಚಿ ಹೇಳು....' ಹೊದ್ದಿಕೆ ಸರಿಸಿ ಮೇಲೆದ್ದು ಕುಳಿತಳು ಮಹಾದೇವಿ. ಶೈಲಜಾ ಗಂಭೀರಳಾದಳು.

'ಮಹಾದೇವಿ....ನಿನ್ನನ್ನು ಕಂಡರೆ ಬರೀ ಸ್ನೇಹವಷ್ಟೇ ಅಲ್ಲ, ಪೂಜ್ಯತೆಯ ಭಾವವಿದೆ. ನಿನ್ನ ಗೆಳತಿಯಾಗಿರುವುದು ನನ್ನ ಪುಣ್ಯ ಎಂದುಕೊಂಡಿರುವೆ....'

'ಓಹ್, ಇದು ಬಹು ದೊಡ್ಡ ಮಾತು, ಹೆಚ್ಚಿನ ಹೊಗಳಿಕೆ....'

'ಇಲ್ಲ ಮಾದೇವಿ. ನಿನ್ನಲ್ಲಿರುವ ವಯಸ್ಸಿಗೆ ಮೀರಿದ ಜ್ಞಾನ, ವಿಮರ್ಶಾ ಪ್ರಜ್ಞೆ, ಆದರ್ಶ ಗುರಿಯ ಹಂಬಲ ಯಾರಲ್ಲಿಯೂ ನಾನು ಕಂಡಿಲ್ಲ. ಸುತ್ತ ಮುತ್ತಲಿನ ಯಾರಲ್ಲಿಯೂ ಇಲ್ಲದ ಅಪೂರ್ವ ಸೌಂದರ್ಯ; ನಾಮುಂದೆ ತಾಮುಂದೆ ಎಂದು ಕೈಹಿಡಿಯಲು ಹಾತೊರೆಯುವ ತರುಣರು ಸಾಲುಗಟ್ಟಿ ನಿಂತಿರುವಾಗ, ಇದನ್ನು ತಿರಸ್ಕರಿಸಿ ಪಾರಮಾರ್ಥ ಪಥವನ್ನು ತುಳಿಯುವ ವಿರಕ್ತಿ, ಬಯಸಿದುದನ್ನು ರೆಪ್ಪೆ ಮಿಟುಕಿಸುವುದರಲ್ಲಿ ಪೂರೈಸಬಲ್ಲ ಸಿರಿವಂತ ತಾಯಿ-ತಂದೆಯರಿದ್ದರೂ ನಿರಾಭರಣಯುಕ್ತೆಯಾಗಿ, ಆಡಂಬರದಲ್ಲಿ ನಿರಾ ಸಕ್ತೆಯಾಗಿ ಇರುವ ಸರಳತನ, ಒಂದೊಂದೂ ಘನವಾಗಿವೆ. ಏನೂ ಇಲ್ಲದ್ದಕ್ಕೆ ಒಲ್ಲದ ಅಭಾವ ವೈರಾಗ್ಯವಲ್ಲ ನಿನ್ನದು, ಎಲ್ಲವೂ ಇದ್ದು ಸ್ವಯಂ ಇಚ್ಛೆಯಿಂದ ನಿರಾಕರಿಸುವ ಸ್ವಭಾವ ವೈರಾಗ್ಯ....'

'ಆದರೆ ನನ್ನದು ಹುಚ್ಚೆಂದು ನನ್ನ ತಾಯಿಯಿಂದ ಹಿಡಿದು, ಕೆಳದಿಯರೂ ಸೇರಿ ದೈವದವರೂ ಅನ್ನುವುದಿಲ್ಲವೆ?....'

'ಅನ್ನಲಿ ಬಿಡು ಮಹಾದೇವಿ. ನಮ್ಮದೆಲ್ಲ ಏನು ಬದುಕು! ಸಗಣಿಯಲ್ಲಿ ಹುಟ್ಟುವ ಸಾವಿರ ಹುಳಗಳಂತೆ ಆದರ್ಶಹೀನ ಬದುಕು. ಅದೇ ಉಂಡು, ತಿಂದು, ಹಡೆದು, ಮಡಿದು ಬದುಕುವ ಹೇಯ ಬಾಳು. ಜೀವಂತ ಶವಗಳಂತೆ ಬದುಕುವ ಲೌಕಿಕರ ಮಾತಿಗೆ ಬೆಂಕಿ ಹಚ್ಚು. ನಿಜವಾಗಿ ಹೇಳಬೇಕೆಂದರೆ ನಿನ್ನಂತೆಯೇ ನಾನೂ ಆಗಬೇಕೆಂದು ನನಗೆ ಅನ್ನಿಸುತ್ತದೆ....'

'ಆಗಬಾರದೇಕೆ....?'

'ಆದರೆ....ನಿನ್ನಂತಹ ದೃಢಸಂಕಲ್ಪ ನನಗಿಲ್ಲ. ನಿನ್ನದು ಗಂಡೆದೆ. ನನಗೆ ಸನ್ಯಾಸಿನಿಯಾಗಿ ಲೋಕ ಕೊಡುವ ಎರಡು....ನಿಂದೆಗಳ ಬೆಂಕಿಯ ತುತ್ತನ್ನು ನುಂಗುವ ಕೆಚ್ಚಿಲ್ಲ. ಆಸೆ ಇದ್ದರೆ ಸಾಲದು, ಅದನ್ನು ಸಾಧಿಸುವ ಸಾಮರ್ಥ್ಯವೂ ಬೇಕು. ಇಲ್ಲವಾದರೆ ಹುಲಿಯ ಮೈಯನ್ನು ನೋಡಿ, ನರಿ ಬರೆಯನ್ನು

ಹಾಕಿಕೊಂಡಂತೆ ಆಗುತ್ತದೆ. ಹಿಮಾಲಯವನ್ನು ಏರಲು ನಮಗಾಗದಿದ್ದರೆ, ಏರುವವರನ್ನು, ಏರಿದವರನ್ನು ಕಂಡು ಅಸೂಯೆ, ಅಸಹನೆ ಮಾಡುವುದು ಬೇಡ. ನಮಗಾಗದುದನ್ನು ಅವರು ಮಾಡುತ್ತಿದ್ದಾರೆ ಎಂದು ಗೌರವಿಸೋಣ. ಹಾಗೆಯೇ ನನಗಾಗದುದನ್ನು ನೀನು ಸಾಧಿಸುವೆಯೆಂದು ತಿಳಿದು ನನಗೆ ನಿನ್ನ ಬಗ್ಗೆ ತುಂಬು ಗೌರವ....'

'ಶೈಲಜಾ....ನೀನು ಸದ್ಗುಣದ ಖನಿ. ದೇವರು ನಿನ್ನನ್ನು ಸುಖವಾಗಿ ಇಡಲಿ....' ಮಹಾದೇವಿ ಪ್ರೇಮದಿಂದ ಶೈಲಜೆಯ ಕೈಯನ್ನು ಹಿಡಿದಳು.

೧೬. ಶಿವನೊಲಿಮೆ

"ಅಯ್ಯಾ, ನೀನು ದಂಡು ಮಂಡಲಕ್ಕೆ ಹೋದಹೆಯಾದೊಡೆ
ನಾನು ಸುಮ್ಮನಿಹೆನಲ್ಲದೆ,
ನೀನೆನ್ನ ಕೈಯೊಳಗಿದ್ದು, ಎನ್ನ ಮೈಯೊಳಗಿದ್ದು,
ಎನ್ನ ಮನದೊಳಗಿದ್ದು ಎನ್ನ ಕೂಡದಿದ್ದಡೆ
ನಾನೆಂತು ಸೈರಿಸುವೆನಯ್ಯಾ.
ಸ್ನೇಹವೆಂಬ ಕುಂಟಣಿ, ಚನ್ನಮಲ್ಲಿಕಾರ್ಜುನಯ್ಯಾ
ನಿನ್ನೊಲಿಸದಿದ್ದಡೆ ಆನಿನ್ನೇವೆನಯ್ಯಾ ?"*

ಮಹಾದೇವಿ ಅಂಗೈಯೊಳಗೆ ಇಷ್ಟಲಿಂಗವನ್ನು ಹಿಡಿದುಕೊಂಡು ಹಾಡ ತೊಡಗಿದ್ದಳು. ಸುಶ್ರಾವ್ಯಕಂಠದಿಂದ ಗಾನ ಅಲೆಅಲೆಯಾಗಿ ತೇಲಿ ಬರುತ್ತಿತ್ತು. ದೇವನ ನೆನಹಿನೊಡನೆ, ಅವನು ಕಾಣಿಸಿಕೊಳ್ಳದ ನೋವು ತುಂಬಿದೆ.

ಸೂರ್ಯಾಸ್ತವಾದ ತಕ್ಷಣವೇ ಮಿಂದು ಮಡಿಯುಟ್ಟು ಪೂಜೆಗೆ ಕುಳಿತಿದ್ದಾಳೆ. ಅಂದು ಅವರ ಹಿತ್ತಲಿನಲ್ಲಿ ಯಥೇಚ್ಛವಾಗಿ ಹೂವುಗಳು ಸಿಕ್ಕಿವೆ. ಸಂತೋಷದಿಂದ, ಸಡಗರದಿಂದ ಬಿಡಿಸಿಕೊಂಡು ಹೂವಿನ ಬುಟ್ಟಿಯಲ್ಲಿ ಇಟ್ಟುಕೊಂಡಿದ್ದಾಳೆ. ಏಳುಸುತ್ತಿನ ಮಲ್ಲಿಗೆಗಳು ಮೈಬಿಚ್ಚಿಕೊಂಡು ನಗುತ್ತಿದ್ದಾವೆ, ಪರಿಮಳವನ್ನು ಸೂರೆಮಾಡುತ್ತ ಮೂಗನ್ನು ಅರಳಿಸುತ್ತಿರುವವು. ಅಂಗೈಯ ಮಧ್ಯದಲ್ಲಿ ಕುಳಿತಿರುವ ಇಷ್ಟಲಿಂಗದ ಸುತ್ತಲೂ ಮಲ್ಲಿಗೆಯ ಹೂವುಗಳನ್ನು ಪೇರಿಸಿದಾಗ, ಶುಭ್ರ ಬಿಳಿಯ ಹಿನ್ನೆಲೆಯಲ್ಲಿ ಕಪ್ಪು ಕಂತೆ ಮನೋಹರವಾಗಿ ಮಿಂಚುತ್ತಿದೆ. ತಾನು ಕುಳಿತು, ಹಿಂದೆ ಭುಜದ ನೇರದ ಮೇಲಕ್ಕೆ ಇರಿಸಿಕೊಂಡ ಔಡಲೆಣ್ಣೆಯ ಸೊಡರು ಕಿರಣವನ್ನು ಚೆಲ್ಲುತ್ತಿದೆ. ಅವರ ಪ್ರತಿಫಲನ ಕಂತೆಯಲ್ಲಿ ಮೂಡಿದ್ದರಿಂದ ಇಷ್ಟಲಿಂಗ ಮತ್ತಷ್ಟು ಕಾಂತಿಯುಕ್ತವಾಗಿದೆ.

ಕಂಗಳಿಗೆ ಮಂಗಳನಾದ, ಪ್ರಾಣಕ್ಕೆ ಪರಿಣಾಮವಾದ, ಮನಕ್ಕೆ ಮನೋಹರನಾದ ರಮಣೀಯ ರಮಣನು ಇನಿತೊಂದು ಚಂದವಾಗಿ ಕಣ್ಣೆದುರಿಗೆ ಇರುವಾಗ ಒತ್ತಿಡೆ ಆನಂದ, ಮತ್ತೊಂದೆಡೆ ಅವನ ಚೈತನ್ಯದ ಸುಳಿವಿಲ್ಲದುದಕ್ಕೆ ದುಃಖ. ತನ್ನಲ್ಲಿ ತಾನೇ ಹೇಳಿಕೊಳ್ಳುತ್ತಾಳೆ :

'ನೀನೇನಾದರೂ ಕಾರ್ಯಸಾಧನೆಗೋ, ಯುದ್ಧಕ್ಕೋ ಹೋಗಿದ್ದರೆ

---

* ಮ. ವ. ೨೫೬

ಹೇಗಾದರೂ ಸಂತೈಸಿಕೊಳ್ಳುವೆ. ಆದರೆ ಕೈಯೊಳಗೇ ಮನಸ್ಸನ್ನು ಕೆರಳಿಸು ವಂತೆ ಇದ್ದು, ಮೈಯೊಳಗಿದ್ದು ನನ್ನ ಇರುವನ್ನು ಸೂರೆಮಾಡಿ, ಮನದೊಳ ಗಿದ್ದು ನಿನ್ನೆಡೆಗೆ ಅದನ್ನು ಸೆಳೆದುಕೊಂಡು ಇದ್ದರೆ, ಹೇಗೆ ಸೈರಿಸಲಿ ?

ನೀನು ಕ್ರೂರಿ : ನೀನು ಹೆಣ್ಣಿನ ಭಾವನೆಯನ್ನರಿಯೆ. ಬೇರಾವುದಾದರೂ ಊರಿಗೆ ಗಂಡನು ಕಾರ್ಯನಿಮಿತ್ತ ಹೋದರೆ ಹೇಗಾದರೂ ಸತಿ ಸೈರಿಸ ಬಲ್ಲಳು. ಆದರೆ....ಒಂದೇ ಮನೆಯಲ್ಲಿ, ಒಂದೇ ಕೋಣೆಯಲ್ಲಿದ್ದೂ ಬೇರೆ ಹಾಸುಗೆಯನ್ನು ಹಾಸಿದರೆ, ಅಥವಾ ಒಂದೇ ಹಾಸುಗೆಯಲ್ಲಿದ್ದೂ ಅವಳತ್ತ ಬೆನ್ನು ತಿರುಗಿಸಿದರೆ ಅವಳು ಹೇಗೆ ಸಹಿಸಬಲ್ಲಳು ?

ಚನ್ನಮಲ್ಲಿಕಾರ್ಜುನಾ, ನೀನು ಕರುಣಾಸಾಗರನು ಅಂತ ತತ್ತ್ವಜ್ಞಾನಿಗಳು ವರ್ಣಿಸುವರು. ಆದರೆ ನೀನು ಕಾಡುವ ಪರಿ ಅವರಿಗೇನು ಗೊತ್ತು ! ಬಟ್ಟೆ ಯನ್ನು ಹಿಂಡಿದಂತೆ ಭಕ್ತರನ್ನು ಹಿಂಡುವೆ. ಸಾಕಿನ್ನು ಹಿಂಡುವಿಕೆ. ಇಲ್ಲಿ ವಿಷಯಾಪೇಕ್ಷೆಯ ನೀರಿಲ್ಲ, ಬೇಗನೇ ಧರಿಸಿಕೋ.

ಓಹ್ ! ಸಾಮಾನ್ಯಪುರುಷರು ತಮ್ಮ ಪ್ರೇಯಸಿಯರ ಮನಸ್ಸನ್ನು ಅರ್ಥಮಾಡಿಕೊಳ್ಳಬಲ್ಲರು ; ನೀನು ಮಾಡಿಕೊಳ್ಳುತ್ತಿಲ್ಲ.

ಇದು ನನ್ನದೇ ತಪ್ಪೇನೋ, ಪ್ರೇಮ ಎಂಬ ಕುಂಟಣಿಯನ್ನು ನಾನು ನಿನ್ನತ್ತ ಕಳಿಸಿರುವೆ; ಅವಳು ನಿನ್ನನ್ನೊಲಿಸಿ ಕರೆತರಲು ಸಮರ್ಥಳಾಗಿಲ್ಲ.

ಹಲವಾರು ದಿನಗಳಿಂದ ನಾನು ಸರಿಯಾಗಿ ತಲೆಯನ್ನು ಬಾಚಿರಲಿಲ್ಲ, ಉತ್ತಮ ಬಟ್ಟೆ ತೊಡುತ್ತಿರಲಿಲ್ಲ. ನೀನೊಲ್ಲದುದಕ್ಕೆ ಏನೋ ನಿರಾಸಕ್ತಿ. ಆದರೆ ಇಂದು ಮಧ್ಯಾಹ್ನ ಅವ್ವ ಹೇಳಿದಳು : "ಚೆನ್ನಾಗಿ ವೇಷಭೂಷಣ ತೊಟ್ಟರೆ ಹೆಣ್ಣುಮಕ್ಕಳು ಅಂದವಾಗಿ ಕಾಣುವರು" ಎಂದು. ಆಗ ನನ್ನಲ್ಲಿ ನಾನೇ ವಿಚಾರಮಾಡಿದೆ; 'ನಾನು ಸರಿಯಾಗಿ ಬಟ್ಟೆ ತೊಡದೆ, ತಲೆ ಬಾಚಿ ಕೊಳ್ಳದೆ ಹುಚ್ಚಿಯಂತೆ ಇರುವುದರಿಂದ ಅವನು ಬರುತ್ತಿಲ್ಲವೇನೋ. ಚರ್ಮ ಚಕ್ಷುವಿನಿಂದ ಆಳೆಯುವ ಪುರುಷರಂತೆ ಅವನೂ ಬಹಿರಂಗದ ಚೆಂದ ಬಯ ಸುವ ರಸಿಕನೇನೋ' ಎಂದುಕೊಂಡು ಅಂದವಾಗಿರಲು ಸಂಕಲ್ಪಮಾಡಿಕೊಂಡೆ. ಅದಕ್ಕಾಗಿ ತಲೆಗೆ ಎಣ್ಣೆಯನ್ನು ತಟ್ಟಿಕೊಂಡು, ಮೈಗೆಲ್ಲ ಅರಿಶಿನದ ಎಣ್ಣೆ ಯನ್ನು ತಿಕ್ಕಿಕೊಂಡು ಬಿಸಿ ನೀರಿನಲ್ಲಿ ಮಿಂದಿರುವೆ. ನನ್ನ ತಂದೆಯು ನನಗಾಗಿ ತಂದಿರುವ ಶುದ್ಧ ದೇವಾಂಗವನ್ನು ಮೈಗೆ ಸೂಡಿಕೊಂಡಿರುವೆ. ನನ್ನವ್ವೆ ಇಂದು ತುಂಬ ಅಚ್ಚರಿಪಡುವಂತೆ ಪೆಠಾರದಲ್ಲಿದ್ದ ಹೊಂದೊಡಿಗೆಗಳನ್ನೆಲ್ಲ ತೆಗೆದು ಧರಿಸಿಕೊಂಡಿರುವೆ. ಎಂದೂ ಇಲ್ಲದ ವಿಶೇಷ ಆಸಕ್ತಿಯಿಂದ ಕನ್ನಡಿಯ ಮುಂದೆ ನಿಂತು ಮುಂಗುರುಳು ತಿದ್ದಿಕೊಂಡಿರುವೆ, ಪುರುಷ ಬಾರಾ, ಪುರುಷ

ರತ್ನವೇ ಬಾರಾ. ಇಷ್ಟೆಲ್ಲ ಸಿಂಗರಿಸಿಕೊಂಡಿದ್ದರೂ ನೀನಿಲ್ಲದೆ ಜೀವಂತ ಶವವಾಗಿರುವೆ. ನಿನ್ನ ಬರುವು ನನ್ನ ಪ್ರಾಣದ ಬರವು. ಬಾ ಚನ್ನಮಲ್ಲಿಕಾರ್ಜುನಾ ವಿರಹದ ಬೇಗೆಯಲ್ಲಿ ಬೇಯುತ್ತಿರುವೆ....*ನಾನೆಷ್ಟು ಚೆಂದವಾಗಿ ಕಾಣುತ್ತಿರುವೆನೆಂದರೆ ಕನ್ನಡಿಯನ್ನು ನೋಡಿಕೊಂಡು ನನ್ನಲ್ಲಿ ನಾನೇ ಮೋಹಿತಳಾದೆ....'

ಕರ್ಪೂರವನ್ನು ಹಚ್ಚಿ ಆರತಿಯನ್ನು ಇಷ್ಟಲಿಂಗದ ಮುಂದೆ ಹಿಡಿದಳು. ಬೆಳಗಿನಲ್ಲಿ ಅದಿನ್ನೂ ಉಜ್ವಲವಾಗಿ ಹೊಳೆಯಿತು.

'ನಾನು ಮತ್ತಾರ ಸಲುವಾಗಿಯಾದರೂ ಅಲಂಕರಿಸಿಕೊಂಡಿರುವೆ ಎಂದು ತಪ್ಪು ತಿಳಿದೀಯಾ! ಗಂಡಸರದ್ದು ಸಂಶಯ ಸ್ವಭಾವವೆಂದು ಕೆಲವು ಗೃಹಿಣಿಯರಿಂದ ಕೇಳಿ ತಿಳಿದಿರುವೆ. ನನ್ನ ಉಡಿಗೆ, ತೊಡಿಗೆ ಎಲ್ಲವೂ ನಿನಗಾಗಿ; ಮಾಟ, ನೋಟ ನಿನಗಾಗಿ, ಎನ್ನಂತರಂಗ ಬಹಿರಂಗದಲ್ಲೆಲ್ಲಾ ನೀನೇ!† ನೀನು ಎಲ್ಲಿ ಬೇಕಾದರೂ ಬಡಿದುನೋಡು; ಸುಟ್ಟ ಮಡಿಕೆಯಂತೆ ಟಂವ್ ಟಂವ್ ಅಂದೀತೇ ಹೊರತು, ಹಸಿಯ ಮಡಿಕೆಯಂತೆ ಟಕ್‌ಟಕ್ ಎಂದಲ್ಲ....

ನನ್ನ ಹೃದಯವೊಂದು ಕುದಿಯುವ ಬುಗ್ಗೆ. ಅದರಲ್ಲಿ ನೂರಾರು ಆಸೆಗಳು. ನೀನೊಬ್ಬ ವೈಣಿಕ; ನಿನ್ನ ಸುಂದರ ಕೈಗಳಲ್ಲಿ ನಾನೊಂದು ವೀಣೆ, ನಿನ್ನ ಕೈಯಲ್ಲಿ ಅದನ್ನು ಹಿಡಿದು, ಆ ವೀಣೆಯ ಮೈಮೇಲೆ ನಿನ್ನ ಕೈಯ ಮೃದು ಬೆರಳುಗಳು ಆಡುತ್ತಿದ್ದರೆ, ಎಂತಹ ಅಮೃತ ಅನುಭವ! ಮರವೊಂದನ್ನು ಬಿಗಿದಪ್ಪಿಕೊಂಡು ಬೆಳೆಯುವ ಲತೆಯಂತೆ, ನಿನ್ನನ್ನು ಆಶ್ರಯಿಸಿಕೊಂಡು ಇರುವಾಸೆ. ನಿನ್ನ ಕಾರುಣ್ಯಮಯ ಹೃದಯದ ಮಧುವನ್ನೀಂಟಿ ಮೈಮರೆತು ಮಲಗುವ ಆಸೆ. ಚಂದಿರನ ಕಿರಣದ ಸೆಳೆತಕ್ಕೆ ಭೋರ್ಗರೆವ ಅಂಬುಧಿಯೊಲು ಆನಂದದಿಂದ ಮೊರೆವ ಆಸೆ. ಪ್ರಿಯನ ಎದೆಗೊರಗಿ ಮೈಮರೆವ ಸತಿಯಂತೆ, ನಿನ್ನ ಮಡಿಲಲ್ಲಿ ಹುದುಗಿಕೊಳ್ಳುವ ಆಸೆ. ನಿನ್ನ ಬಾಹುಬಂಧನದಲ್ಲಿ ಸಿಕ್ಕು ಅಲ್ಲೇ ಪುಡಿಪುಡಿಯಾಗಿ, ನಿನ್ನಲ್ಲಿ ಅಡಗುವ ಆಸೆ....

ಆ ಬೆಳದಿಂಗಳು ಎಷ್ಟು ಚೆನ್ನಾಗಿ ಹಬ್ಬಿಕೊಂಡಿದೆ. ಶುಭ್ರವಾದ ಗಗನದಲ್ಲಿ ಹಂಸಪಕ್ಷಿಗಳಂತೆ ಬಿಳಿಯ ಮೋಡಗಳು ತೇಲುತ್ತಿವೆ. ತಂಗಾಳಿ ಕಚಕುಳಿ ಇಡುತ್ತಿದೆ. ಮಂದಮಾರುತದಲ್ಲಿ ತುಂಬಿರುವ ಪರಿಮಳವು ಉನ್ಮಾದಾವಸ್ಥೆಯನ್ನು ಉಂಟುಮಾಡುತ್ತಿದೆ. ಇಂತಹ ಬಿಳಿಯ ನೋಡಗಳ ಮೇಲೆ ಕುಳಿತು, ಒಬ್ಬರಿಗೊಬ್ಬರು ಅತುಕೊಂಡು ಮಧುಚಂದ್ರಕ್ಕೆ ಹೋಗುವುದು ಎಂತಹ ಮಧುರ ಅನುಭವವಲ್ಲವೆ! ನಿನಗೆ ಆಸೆಯಾಗದೆ? ಓಹ್! ನೀನು ರಸಿಕನೇ

---

* ಮ. ವ. ೨೫೮

† ಮ. ವ. ೬೯

ಅಲ್ಲ...ಇಂತಹ ಅರಸಿಕನು ಅದು ಹೇಗೆ ಚೆಲುವಿನ ಸೃಷ್ಟಿಯನ್ನು ರಚಿಸಿದೆಯೋ! ಸಂವೇದನೆಗಳಿಲ್ಲದ ಹೃದಯದಲ್ಲಿ ಸೌಂದರ್ಯ ರಸಪ್ರಜ್ಞೆ ಮೂಡಲು ಸಾಧ್ಯವೆ?

ಅಷ್ಟೈತ್ತರದಲ್ಲಿ ತೇಲುವುದು ನಿನಗೆ ಬೇಡವಾದರೆ, ನಮ್ಮ ಕೈದೋಟದಲ್ಲಿ ಉಯ್ಯಾಲೆ ಇಲ್ಲವೇ? ಅಲ್ಲಿ ಇಬ್ಬರೂ ತೂಗಬಹುದಲ್ಲ.

ನನ್ನ ಬದುಕು ಒಂದು ಒಗಟಾಗಿದೆ ನನಗೆ. ಒಂದು ಕಡೆ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಂದ ಬಿಡುಗಡೆ ಹೊಂದಲು ಉತ್ಕಟ ಪ್ರಯತ್ನ ಆದರೆ ಮತ್ತೊಂದು ಕಡೆ ಅವುಗಳ ಬಂಧನ. ಪುರುಷ ಕಾಮದ ಸುಳಿವಿಲ್ಲ.... ಆದರೆ ಅತಿ ಕಾಮಿಯಾಗುತ್ತಿರುವೆ, ನಿನ್ನ ಸಂಗ ಬಯಸಿ! ಅಂದು ಉದ್ಯಾನ ದಲ್ಲಿ ಕುಳಿತಾಗ ಕುಮುದೆ ಗಂಡನ ನೆನಪು ಮಾಡಿಕೊಂಡಾಗ ನಾನು ಅಪಹಾಸ್ಯ ಮಾಡಿ ನಕ್ಕೆ. ಆದರೀಗ....ಅದಕ್ಕಿಂತ ಹತ್ತು ಪಟ್ಟು ಮಿಗಿಲಾದ ದುರ್ಗತಿ ನನ್ನದು. ಅವಳು ಉಂಡು ತಿಂದು ನಗುತ್ತಲಿರುವಳು. ನನಗೆ ಊಟ, ನಿದ್ರೆಯಲ್ಲಿ ಆಸಕ್ತಿ ಇಲ್ಲ; ನಗೆಯೇ ಬತ್ತಿಹೋಗಿದೆ. ಕ್ರೋಧವನ್ನು ಕಡಿಮೆ ಮಾಡಬೇಕೆಂದು ಪ್ರಯತ್ನಿಸಿ ಯಾರೆಷ್ಟೇ ಆಡಿಕೊಂಡರೂ, ಛೇಡಿಸಿದರೂ ಸುಮ್ಮನಿರುವೆ. ಆದರೆ ನಿನ್ನನ್ನು ತೊರೆಸಲು, ನಿನ್ನಿಂದ ಅಗಲಿಸುವ ಪ್ರಯತ್ನ ಮಾಡುವ ತಾಯಿಯ ಮೇಲೆ ಸಿಟ್ಟುಮಾಡತೊಡಗಿರುವೆ. ಸಂಸಾರದಲ್ಲಿ ಮೋಹ ತರವಲ್ಲ ಎಂದು ಎಲ್ಲರಿಗೆ ಹೇಳುತ್ತಿದ್ದೆ. ಆದರೆ ನಿನ್ನ ಪೂಜೆಯಿಂದ, ನಿನ್ನ ನೋಟದಿಂದ ಕ್ಷಣಕಾಲವೂ ಅಗಲದಷ್ಟು ಮೋಹಿಯಾಗಿರುವೆ. 'ಲೋಭ ಒಳ್ಳೆ ತಲ್ಲ, ಅದು ಮನುಷ್ಯನನ್ನು ಭವಕ್ಕೆ ಸೆಳೆಯುವುದು' ಎಂದು ಬೋಧಿಸುತ್ತಿದ್ದ ನಾನು, ಮಿತಿಮೀರಿ ಲೋಭಿಯಾಗಿರುವೆ ನಿನ್ನ ಒಲವನ್ನು ಸುಖಿಸುವುದರಲ್ಲಿ. 'ಅಹಂ ಒಳ್ಳೆಯದಲ್ಲ, ಅದು ವ್ಯಕ್ತಿತ್ವಕ್ಕೆ ಕುಂದು ತರುವುದು. ಮದವನ್ನು ಗೆಲ್ಲದ ಹೊರತು ಭವ ಚಕ್ರದಿಂದ ಬಿಡುಗಡೆಯಿಲ್ಲ' ಎಂದು ಅನ್ನುತ್ತಿದ್ದ ನಾನು, ನಿನ್ನ ಪ್ರೇಯಸಿಯಾಗಿರುವುದಕ್ಕಾಗಿ ಬಹಳ ಮದಗೊಂಡಿರುವೆ. ಮತ್ಸರದಿಂದ ವ್ಯಕ್ತಿತ್ವದ ನಾಶವಾಗುವುದು ಎಂದು ಅದನ್ನು ಗೆಲ್ಲಬಯಸಿದ್ದ ನಾನು, ಈಗ ಮಾತ್ಸರ್ಯದಿಂದ ಕುದಿಯುತ್ತಿರುವೆ! ಯಾರ ಮೇಲೆ ಮಾತ್ಸರ್ಯ? ಈಗಾಗಲೇ ನಿನ್ನನ್ನು ಒಲಿಸಿಕೊಂಡು ಸೆರೆಯಾಗಿಟ್ಟುಕೊಂಡಿರುವ ಹಿಂದಿನ ಭಕ್ತರ ಮೇಲೆ; ಅಡಗಿಸಿ ಇಟ್ಟುಕೊಂಡಿರುವ ಸುಂದರ ಪ್ರಕೃತಿಯ ಮೇಲೆ; ತನ್ನ ಕಂಠದಲ್ಲಿ ನಿನ್ನನ್ನು ಬಂಧಿಸಿರುವ ಕೋಗಿಲೆಯ ಮೇಲೆ, ತನ್ನ ಅಂದದಲ್ಲಿ ಕೂಡಿಹಾಕಿರುವ ಸೋಗೆಯ ಮೇಲೆ. ಹೀಗೆ ಅರಿಷಡ್ವರ್ಗಗಳ ಪಂಜರದಲ್ಲಿ ಸಿಕ್ಕಿಬಿದ್ದಿರುವ ಪಕ್ಷಿ ನಾನಾಗಿರುವೆ. ಆದರೇನಂತೆ, ಇದೆಲ್ಲವೂ ನಿನಗಾಗಿ; 'ನೀನೊಲಿದ ನರಕವು ನನಗೆ ಸ್ವರ್ಗ; ನೀನೊಲಿಯದ ಸ್ವರ್ಗವು ನರಕ! ನಿನ್ನ ಬಂಧನ ನನಗೆ

ಸ್ವಾತಂತ್ರ್ಯ; ಲೌಕಿಕ ಸ್ವಾತಂತ್ರ್ಯ ನನಗೆ ಬಂಧನ'....*

ಮಹಾದೇವಿ ಒಮ್ಮೆ ನಲಿಯುವಳು—ತನ್ನ ಕರದ ದೇವನನ್ನು ನೋಡಿ; ಮತ್ತೊಮ್ಮೆ ಸಿಟ್ಟುಸಿಡಿಯುವಳು—ಅವನು ಮಾರ್ದನಿ ನೀಡದ ಕ್ರೌರ್ಯವನ್ನು ನೆನೆದು.

'ನಿನಗೆ ಯಾರ ಭೀತಿಯು ಸಹ ಇದ್ದಂತೆ ಕಾಣದು. ಅಂದು ದೀಕ್ಷೆಮಾಡು ವಾಗ 'ನೀವಿಬ್ಬರೂ ಅಗಲದಿರಿ' ಎಂದು ಗುರುಗಳು ಹೇಳಿದರು. ಅದಕ್ಕೇನಾ ದರೂ ಬೆಲೆಯುಂಟೇ? ಅಂದಿನಿಂದ ಇಂದಿನವರೆಗೆ ನೀನು ಬಂದಿದ್ದರೆ ಕೇಳು. ಮದುವೆಯಾದ ಬಳಿಕ ಮಧುಚಂದ್ರ ಮಾಡುವ ಸೌಜನ್ಯವೂ ನಿನಗಿಲ್ಲವೆಂದ ಮೇಲೆ ಇನ್ಯಾರಲ್ಲಿ ನನ್ನ ಸಂಕಟ ತೋಡಿಕೊಳ್ಳಲಿ....?

ಇನ್ನು ಕೆಲವಾರು ದಿನ ಸಹಿಸಿಕೊಳ್ಳುವೆ, ಕಾಯ್ದು ನೋಡುವೆ. ಆ ಬಳಿಕ ಹೆತ್ತಪ್ಪ ಬಸವಣ್ಣ, ಹೆತ್ತವ್ವ ನೀಲಮ್ಮ, ಮಾವ ಪ್ರಭುದೇವರ ಬಳಿಗೆ ದೂರನ್ನು ಕೊಂಡೊಯ್ಯುವೆ. ನಿನ್ನ ನಿಷ್ಕರುಣೆಯನ್ನು ಪದರಪದರವಾಗಿ ಅವರ ಮುಂದೆ ಬಿಚ್ಚಿಡುವೆ. 'ಗಂಡ-ಹೆಂಡಿರ ಮುನಿಸು ಒಳಗಿರಲಿ, ಹಾದಿಯ ಹಾಡಾಗುವುದು ಬೇಡ' ಎಂದು ನಾನು ಸಹಿಸಿಕೊಂಡಷ್ಟೂ ನಿನಗೆ ಮನಸ್ಸು ಕರಗದು....' ಸ್ವಲ್ಪ ಮುನಿಸು ಮೂಡಿತು.

ಮರುಕ್ಷಣವೇ ಮನಸ್ಸು ಮುದುಡಿತು.

'ಬಡವನ ಕೋಪ ದವಡೆಗೆ ಮೃತ್ಯು† ಎಂದು ಅಣ್ಣನವರು ಹೇಳುವರ ಲ್ಲವೇ? ನಿಜ. ಅರಸು ಮುನಿದರೂ ಆಳೇ ಕೆಡುವನು; ಆಳು ಮುನಿದರೂ ಆಳೇ ಕೆಡುವನು. ಇದು ವಿಚಿತ್ರ ಜಗತ್ತು! ನೀನು ಮುನಿದರೆ ನಾನೇ ಫಾಸಿ ಯಾಗಬೇಕು. ನಾನು ಮುನಿದರೂ ನಾನೇ ಫಾಸಿಯಾಗುವೆ....'

* * *

ಮಹಾದೇವಿಯ ನಿವೇದನೆ ನಡದೇ ಇತ್ತು. ಲಿಂಗಮ್ಮ ಬಾಗಿಲ ಹೊರಗೆ ನಿಂತು ಆಲಿಸತೊಡಗಿದ್ದಳು. ಪೂಜೆಗೆ ಕುಳಿತು ಅರ್ಧ ಜಾವ ಕಳೆದರೂ ಪೂಜೆ ಮುಗಿಯುವ ಸೂಚನೆಯಿಲ್ಲ; ಒಮ್ಮೆ ನಗುವಳು, ಒಮ್ಮೆ ಅಳುವಳು, ಒಮ್ಮೆ ಹಾಡುವಳು, ಒಮ್ಮೆ ಬಿಸಿಯುಸಿರು ಬಿಡುವಳು; ಚನ್ನಮಲ್ಲಿಕಾರ್ಜುನಾ ಎಂದು ಮಾತನಾಡಿಸುವಳು.

ಲಿಂಗಮ್ಮ ಭಯಭೀತಳಾದಳು. 'ಮಗಳಿಗೆ ಹುಚ್ಚು ಹಿಡಿದಿರುವುದು ಸರಿ. ಅದಕ್ಕೇ ಒಬ್ಬಳೇ ಮಾತನಾಡಿಕೊಳ್ಳುವಳು; ಅದಕ್ಕೇ ಮಂಕಾಗುವಳು. ನಾಲ್ಕೈದು ದಿವಸಗಳಿಂದ ತಲೆ ಬಾಚದವಳು ಇಂದು ತಾನಾಗಿ ಎಣ್ಣೆ ನೀರೆರೆದು

* ಮ. ವ. ೧೩೨; † ಬ. ಷ. ವ. ೬೪೫

ಕೊಂಡು, ಕೂದಲಿಗೆ ಪರಿಮಳಯುಕ್ತ ಎಣ್ಣೆ ಸವರಿಸಿಕೊಂಡಳು. ಆರೇಳು ತಿಂಗಳಿಂದ ಆಭರಣವಿಡದವಳು ಇಂದು ಪೆಟ್ಟಿಗೆಯಲ್ಲಿನ ಒಡವೆಗಳನ್ನೆಲ್ಲ ತೆಗೆದು ತೊಟ್ಟುಕೊಂಡಳು. ಬಿಳಿಯ ದಟ್ಟಿಯುಡುತ್ತಲಿದ್ದವಳು, ಬೆಲೆ ಬಾಳುವ ದೇವಾಂಗವನ್ನು ಉಟ್ಟುಕೊಂಡು ಪೂಜೆಗೆ ಹೋದಳು.' ತ್ರಿಪುರಸುಂದರಿಯಾದ ಮಗಳು ಒಳ್ಳೆಯ ಗಂಡನ ಕೈಹಿಡಿದು, ಮುತ್ತಿನಂತಹ ಮಕ್ಕಳನ್ನು ಹೆತ್ತು, ಗೃಹಲಕ್ಷ್ಮಿಯಾಗುವಳು ಎಂದು ಕನಸು ಕಟ್ಟಿದ್ದ ಲಿಂಗಮ್ಮನಿಗೆ ಮಗಳು ಹುಚ್ಚಿನ ಬಲೆಯಲ್ಲಿ ಸಿಕ್ಕಿರುವುದು ಕಂಡಾಗ ದುಃಖ ಉಮ್ಮಳಿಸಿತು. ಕನಸಿನಗೋಪುರ ಕುಸಿದು ಬಿದ್ದಿತು. ಓಂಕಾರನನ್ನು ಕರೆದು ತೋರಿಸಿದಳು. ಮಹಾದೇವಿಗೆ ಏನೂ ಆಗಿಲ್ಲ ಎಂದು ಅವನು ತೇಲಿಸಿ ನಕ್ಕಾಗ ಲಿಂಗಮ್ಮ ದುಃಖತಪ್ತಳಾಗಿ, ಗಿರಿಜಾಂಬೆಗೆ ಬಾಗಿಲ ಬಳಿ ಇದ್ದು, ಮಗಳನ್ನು ಕಾಯಲು ಹೇಳಿ, ಆಳು ಅಪ್ಪಯ್ಯನೊಡನೆ ಮಠದ ಕಡೆಗೆ ಸಾಗಿದಳು.

ಇರುಳಿನ ವೇಳೆಯಲ್ಲಿ ಬಂದ ಲಿಂಗಮ್ಮನನ್ನು, ಆಕೆಯ ಕಣ್ಣೀರು ತುಂಬಿದ ಮುಖವನ್ನು ಗುರುಲಿಂಗರು ನೋಡಿ ಆಶ್ಚರ್ಯ ಚಕಿತರಾದರು.

'ಮಹಾದೇವಿ ಹುಚ್ಚಿಯಂತೆ ಆಡುತ್ತಿದ್ದಾಳೆ. ಮುಸ್ಸಂಜೆಯ ಸುಮಾರಿಗೆ ಒಳಗೆ ಹೋಗಿ ಕದ ಮುಚ್ಚಿ ಕುಳಿತವಳು ಇನ್ನೂ ತೆರೆದಿಲ್ಲ. ಬಾಗಿಲ ಕಿಂಡಿಯಲ್ಲಿ ಇಣಿಕಿ ನೋಡಿ, ಆಲಿಸಿ ಕೇಳಿದರೆ, ಕೈಯಲ್ಲಿ ಲಿಂಗವನ್ನು ಹಿಡಿದು ಹುಚ್ಚುಚ್ಚಾಗಿ ಮಾತನಾಡುವುದು ತಿಳಿಯುತ್ತದೆ. ಒಮ್ಮೆ ನಗುವಳು, ಇನ್ನೊಮ್ಮೆ ಅಳುವಳು, ಮತ್ತೊಮ್ಮೆ ಹಾಡುವಳು; ನಿಟ್ಟುಸಿರಿಡುವಳು. ಸನ್ನಿಗಿನ್ನಿ ಅಂತಾರಲ್ಲ ಹಾಗೆ, ಹುಚ್ಚು ಹಿಡಿದಿರಬೇಕು. ಚನ್ನಮಲ್ಲಿಕಾರ್ಜುನಾ ಅಂತ ತನ್ನಲ್ಲಿ ತಾನೇ ಮಾತನಾಡಿಕೊಳ್ಳುವಳು....'

ಗುರುಲಿಂಗರು ಸ್ವತಃ ಸಾಧಕರು; ತಾವೂ ಒಂದು ಕಾಲದಲ್ಲಿ ಆ ಜೀವನದ ಹಂತಗಳಲ್ಲಿ ಹಾಯ್ದು ಬಂದಿದ್ದವರು. ಮೆಲುನಗೆ ನಕ್ಕು ನುಡಿದರು :

'ಗಂಡ-ಹೆಂಡತಿಯರ ಏಕಾಂತ ಪ್ರಣಯವನ್ನು ನೀನೇಕೆ ನೋಡಹೋದೆಯಮ್ಮಾ ?'

'ಗುರುಗಳೇ, ಹೆತ್ತ ಒಡಲಿನ ಸಂಕಟ ನೀವರಿಯಿರಿ. ಅವರೂ ಹಾಗೆಯೇ, ಎಲ್ಲವನ್ನು ನಕ್ಕು ತೇಲಿಸಿಬಿಡುವರು. ಅರಗಿಳಿಯನ್ನು ಬೆಕ್ಕಿನ ಬಾಯಿಗೆ ಕೊಡುವಂತೆ, ನನ್ನ ಮುದ್ದು ಮಗಳನ್ನು ಭ್ರಮೆಯ ಬಾಯಿಗೆ ಕೊಡಲೇ ?' ಪ್ರಲಾಪಿಸತೊಡಗಿದಳು.

'ಲಿಂಗಮ್ಮಾ....ನಿನ್ನ ಮಗಳಿಗೆ ಏನೂ ಆಗಿಲ್ಲ. ನಿಶ್ಚಿಂತಳಾಗಿ ಹೋಗು....' ಲಿಂಗಮ್ಮ ಭಾರವಾದ ಹೃದಯದಿಂದ ನಮಸ್ಕರಿಸಿ ಹೊರಟಳು. ಆದರೆ ಮನಸ್ಸಿಗೆ

ಸಮಾಧಾನವಾಗಲಿಲ್ಲ. ಗುರುಗಳಾಗಲೀ, ತನ್ನ ಪತಿಯಾಗಲೀ ಸಮಸ್ಯೆಯ ಗಂಭೀರತೆಯನ್ನು ಅರ್ಥ ಸಹ ಮಾಡಿಕೊಳ್ಳದಷ್ಟು ಹಗುರವಾಗಿ ಮಾತನಾಡು ವರಲ್ಲ ಎಂದು ನೊಂದುಕೊಂಡಳು.

ಸಿಂಗಾರಮ್ಮನ ನೆನಪು ತಟ್ಟನೆ ಬಂದಿತು. ಸಿಂಗಾರಮ್ಮನದು ಸ್ವಲ್ಪ ಒಡಕು ಬಾಯಿ. ಆದರೂ ಆಕೆ ಚಲಿಸುವ ವಿಶ್ವಕೋಶ. ತನಗರಿಯದ ವಿಷಯವೇ ಇಲ್ಲ ಎಂಬಷ್ಟು ಆತ್ಮವಿಶ್ವಾಸದಿಂದ, ಧಾರ್ಷ್ಟ್ಯದಿಂದ ಸಲಹೆ ಕೊಡುತ್ತಿದ್ದಳು. ದಟ್ಟಾರಣ್ಯದಲ್ಲಿ ದಾರಿ ತಪ್ಪಿಸಿಕೊಂಡ ತನಗೆ ಆಕೆಯಿಂದ ನೆರವು ಒದಗಬಹು ದೆಂಬ ವಿಶ್ವಾಸದಿಂದ ಲಿಂಗಮ್ಮ, ಸಿಂಗಾರಮ್ಮನ ಮನೆಗೆ ನಡೆದಳು.

ಬಾಗಿಲು ಬಡಿದ ಸದ್ದು ಕೇಳಿ, ಎದ್ದು ಬಂದ ಸಿಂಗಾರಮ್ಮ ಲಿಂಗಮ್ಮನನ್ನು ಕಂಡು ಚಕಿತಳಾದಳು.

'ಬಾ ಲಿಂಗಮ್ಮಕ್ಕ, ಇದ್ಯಾಕೆ ಈ ಹೊತ್ತಿನಲ್ಲಿ ?' ಸಿಂಗಾರಮ್ಮನ ಕುತೂಹಲ ಮೇರೆ ಹರಿಯಿತು. ಸಿಂಗಾರಮ್ಮ ಹಾಸಿದ ಚಾಪೆಯ ಮೇಲೆ ಲಿಂಗಮ್ಮ ಕುಳಿತಳು. ಸಿಂಗಾರಮ್ಮ ಎಲೆ ಅಡಿಕೆಯ ಚೀಲಬಿಚ್ಚಿ ಅಡಿಕೆ ಹಾಕಿಕೊಂಡು ಮಾತಿಗೆ ಪೂರ್ವಾರಂಭ ಮಾಡಿಕೊಂಡಳು. ಎಲೆ ಅಡಿಕೆ ಬಾಯಿಗೆ ಬೀಳದೆ ಸಿಂಗಾರಮ್ಮನ ತಲೆ ಓಡುತ್ತಿರಲಿಲ್ಲ. ಲಿಂಗಮ್ಮ ಹೇಳುವುದನ್ನೆಲ್ಲ ಕೇಳಿದಳು ಸಾವಧಾನವಾಗಿ.

'ಲಿಂಗಮ್ಮಕ್ಕ ಇಷ್ಟು ಬೆಳೆಯೋತನಕ ಯಾಕೆ ಬಿಟ್ಟೆ! ನೀನು ಜಾಣೆ ಅಂದ್ಕೊಂಡಿದ್ದೆ ನೋಡು. ಅರಳು ಹುರಿದಂತೆ ಮಾತಾಡೋ ಮಗಳು ಮಾತು ಬಿಟ್ಟು, ಪೂಜೆಗೆ ಕೂತುಕೊಳ್ಳೋದಕ್ಕೆ ಆರಂಭವಾದಾಗಲೇ ಮದ್ದು ಕೊಡಿಸ ಬೇಕಾಗಿತ್ತು. ಹುಚ್ಚು ಆರಂಭವಾಗೋದರ ಲಕ್ಷಣ ಅದು. ಈಗ ಬಲಿತಂತೆ ಆಗಿದೆ, ಕೈ ಮೀರಿದೆ....' ಸಿಂಗಾರಮ್ಮನ ಮಾತು ಕೇಳಿ ಲಿಂಗಮ್ಮ ನಡುಗಿದಳು.

'ಈಗ ಏನು ಮಾಡೋದು ಸಿಂಗಾರಕ್ಕ....?' ಬೆಪ್ಪಾಗಿ ಕೇಳಿದಳು.

'ಈಗ ಮೊದಲು ಹುಚ್ಚು ಬಿಡಕ್ಕೆ, ವೈದ್ಯ ಸಂಕಯ್ಯ ಇಲ್ವೆ, ಅವನ ಕಡೆ ಮದ್ದು ಕೊಡಿಸು....ಆಮೇಲೆ ಹುಚ್ಚಿಗೆ ಕಾರಣ ಏನು ಹುಡುಕೋಣ ...?' ಕಷ್ಟಕಾಲದಲ್ಲಿ ಸಲಹೆ ನೀಡಿದ ಸಿಂಗಾರಮ್ಮ ಲಿಂಗಮ್ಮನಿಗೆ ದೇವತೆಯಂತೆ ಕಂಡಳು.

'ಅಂದಹಾಗೆ....ಲಿಂಗಮ್ಮಕ್ಕ. ಭ್ರಮೆ ಆದಾಗ ಯಾರದೋ ಹೆಸರು ಹೇಳ್ತಾಳೆ ಅಂದೆಯಲ್ಲ....'

'ಚನ್ನಮಲ್ಲಿಕಾರ್ಜುನ....ಬಾ....ಅಂತಾಳವ್ವ....' ಲಿಂಗಮ್ಮ ಕಣ್ಣೊರೆಸಿ ಕೊಂಡಳು.

'ಸುಮ್ನಿರಕ್ಕ....ಅಳಬೇಡ. ಕಷ್ಟಗಳು ಮನುಷ್ಯನಿಗೆ ಬರದೇ ಮರಕ್ಕೆ ಬರ್ತಾವ್ಯೆ?....' ಸಿಂಗಾರಮ್ಮ ಸಾಂತ್ವನ ನೀಡಿದಳು. ವೈದ್ಯ ಸಂಕಯ್ಯನನ್ನು ಕರೆತರಲು ಕಳುಹಿಸಿದಳು.

'ಮಕ್ಕಳು ಇಲ್ದಿದ್ರೆ ಇಲ್ಲ ಅನ್ನೋದು ಒಂದೇ ಕೊರಗು; ಇದ್ದರೆ ನೂರಾರು ಕೊರಗು ಕಣಕ್ಕ...." ಲಿಂಗಮ್ಮ ಹೇಳಿದಳು.

'ನೋಡವ್ವಾ, ಮಾದೇವಿಗೆ ಚನ್ನಮಲ್ಲಿಕಾರ್ಜುನ ಎಂಬ ಹುಡುಗನ ಮೇಲೆ ಪ್ರೀತಿ ಕುಂತಿರಬೇಕು....'

'ಇಲ್ಲ ಬಿಡು ಸಿಂಗಾರಕ್ಕ, ಅವಳು ಅಂಥವಳಲ್ಲ....'

'ನಿನಗೇನು ಗೊತ್ತಾಗುತ್ತೆ ಬಿಡು; ವಿರೂಪಾಕ್ಷಪ್ಪನ ಮಗಳು ಅಂಬು ಜಾಕ್ಷಿಗೆ ಪರಮೇಶಿ ಮೇಲೆ ಹೀಂಗ ಪ್ರೇಮ ಕುಂತು, ಮನೆಯವರು ಒಪ್ಪ ದಿದ್ದಾಗ ಹುಚ್ಚು ಹಿಡಿದಿರಲಿಲ್ವೆ....'

ಲಿಂಗಮ್ಮ ಸುಮ್ಮನೆ ಕುಳಿತಳು.

'ಇಲ್ಲಾಂದ್ರೆ....ಲಗ್ನ ಆಗೋ ಮನಸ್ಸಿರಬೇಕು; ನೀವು ಮಾಡದಿದ್ದಕ್ಕೆ ಹೀಗಾಗಿರಬೇಕು. ಅಲ್ಲ ಲಿಂಗಮ್ಮಕ್ಕ, ಇಷ್ಟು ಬೆಳೆದ ಮಗಳಿಗೆ ಲಗ್ನ ಮಾಡ ದಿದ್ರೆ ಅವರಾರ ಏನು ಮಾಡಬೇಕು?'

'ಇಲ್ಲ ಸಿಂಗಾರಕ್ಕ....ಮಾಡ್ತೀವಿ ಅಂತ ಎಷ್ಟು ಸರಿ ಹೇಳಿದ್ರು ಬೇಡ ಅಂತ ಹಟ ಅವಳದ್ದು....ನಮಗೇನವ್ವ, ಮಾಡಾಕ ಕೊರತೆ....?' ಇರೋದು.

'ನಾಚಿಕೊಂಡು ಲಗ್ನ ಬೇಡ ಅನ್ನೋದು ಹೆಣ್ಣು ಹುಡುಗಿಯರ ಸ್ವಭಾವ. ಅವರನ್ನು ಕೇಳಿ ಮಾಡ್ತಾರೇನು? ನೀವು ಮಾಡಕ್ಕ ನಿಂತರೆ ಬೇಡ ಅನ್ನಲ್ಲ. ತಾವಾಗಿ ನೋಡ್ರಿ, ಮಾಡ್ರಿ ಅಂತ ಯಾವ ಲಜ್ಜೆಗೇಡಿ ಹೆಣ್ಣು ಅಂತಾಳೆ? ಅವರನ್ನು ಯಾಕೆ ಕೇಳಬೇಕು, ಸುಮ್ನೆ ಮಾಡಿಬಿಟ್ಟರಾಯಿತು....'

ಪತಿಯ ಸಲಹೆ ಕೇಳುವುದರಲ್ಲಿ ಯಾವ ಅರ್ಥವಿಲ್ಲ; ತಾನೇ ದಿಟ್ಟಹೆಜ್ಜೆ ಇಡಬೇಕು ಎಂದುಕೊಂಡಳು ಲಿಂಗಮ್ಮ.

ವೈದ್ಯ ಸಂಕಯ್ಯ ಬಂದು, ಲಿಂಗಮ್ಮ ಹೇಳಿದ್ದು ಕೇಳಿ ಒಂದು ಬಗೆಯ ಲೇಹ್ಯವನ್ನು ಕೊಟ್ಟ; ಎಣ್ಣೆಯನ್ನು ಕೊಟ್ಟು, ಅದನ್ನು ನೆತ್ತಿಗೆ ತಿಕ್ಕಲು ಹೇಳಿದ. ಆ ಲೇಹ್ಯವನ್ನು ಬೆಳಿಗ್ಗೆ ಗೊಮ್ಮೆ, ರಾತ್ರಿಗೊಮ್ಮೆ ಅಡಿಕೆ ಗಾತ್ರದಷ್ಟು ತಿನ್ನಲು ಕೊಟ್ಟು, ಹಾಲನ್ನು ಕುಡಿಯಲು ಕೊಡಲು ಹೇಳಿದ. ಲಿಂಗಮ್ಮ ಇಸಿದುಕೊಂಡು ಪಂಡಿತನಿಗೆ ಕೃತಜ್ಞತೆ ಹೇಳಿ ಹೊರಟಾಗ, ಸಿಂಗಾರಮ್ಮ—

'ನಾನೇಳಿದ್ದು ಮರೆಯಬೇಡ ಲಿಂಗಮ್ಮಕ್ಕ....' ಎಂದಳು.

ಲಿಂಗಮ್ಮ ಮನೆಯ ಕಡೆ ಬಂದಾಗ ಮಹಾದೇವಿ ಮಲಗಿದ್ದಳೇನೋ

ಎಂಬಂತೆ ಆಕೆಯ ಕೋಣೆಯೊಳಗಿನ ಸೊಡರು ಆರಿತ್ತು.

'ಏನಾದರೂ ತಿಂದಳೇ ಗಿರಿಜಾ....?' ಗಿರಿಜಾಂಬೆಯನ್ನು ಕೇಳಿದಳು.

'ಇಲ್ಲ ಅವ್ವಾ, ಪೂಜೆ ಮಾಡಿ ಹಾಗೆ ಮಲಗಿಬಿಟ್ರು, ಬಾಗಿಲನ್ನು ತೆರೆಯ ಲಿಲ್ಲ....'

ಲಿಂಗಮ್ಮ ಖಿನ್ನಮನಸ್ಕಳಾಗಿ ಮಲಗಲು ಹೋದಳು.

* * *

ಸುಖದುಃಖ, ಆಸೆ-ನಿರಾಸೆಗಳ ಸಂವೇದನೆಯ ಅಲೆಗಳಿಂದ ತುಂಬಿದ ಮನೋಸರಸಿಯಲ್ಲಿ ತೇಲುತ್ತಲೇ ಮಹಾದೇವಿ ಪೂಜೆ ಮಾಡಿದಳು.

'ಚನ್ನಮಲ್ಲಿಕಾರ್ಜುನಾ ನಾನು ನಿನ್ನೊಲಿಸುವ ಪರಿ ಎಂತಯ್ಯಾ? ಕಡಿದಾದ, ಎತ್ತರವಾದ ಬೆಟ್ಟದ ಬುಡದಲ್ಲಿ ನಿಂತು, ಬೆಟ್ಟದ ತುದಿಗೆ ಕಣ್ಣಿಟ್ಟಂತಾಗಿದೆ ನನ್ನ ಪರಿ. ಏರುವ ಆಸೆ ಉತ್ಕಟವಾಗಿದೆ; ಮಾರ್ಗವಿಧಾನ ತಿಳಿಯದು. ಅಷ್ಟವಿಧಾರ್ಚನೆಯಿಂದ ಒಲಿಸೋಣ ಎಂದರೆ ನೀನು ಕೇವಲ ಬಹಿರಂಗ ಕ್ರಿಯೆಗಳಿಗೆ ಸಿಗುವವನಲ್ಲ. ಅಂತರಂಗದ ಗುಡಿಯಲ್ಲಿ, ಹೃದಯ ಪೀಠದ ಮೇಲೆ ಪ್ರತಿಷ್ಠಾಪಿಸಿ ಧ್ಯಾನವನ್ನು ಮಾಡಿ ಒಲಿಸೋಣ ಎಂದರೆ ನೀನು ವಾಕ್ಮನಗಳಿಗೆ ಅತೀತ. ಪದಗಳಿಂದ, ಸ್ತೋತ್ರಗಳಿಂದ ನಿನ್ನ ಮನವನ್ನು ಸೆಳೆಯೋಣ ಎಂದರೆ ನೀನು ಸಂಗೀತಕ್ಕೆ ಅತೀತನು. ವಿಚಾರಗಳ ಬಲದಿಂದ ಒಲಿಸೋಣವೆಂದರೆ ಬುದ್ಧಿಯು ಒಂದು ಹಂತದಲ್ಲಿ ನಿಂತುಬಿಡುತ್ತದೆ. ಅದಕ್ಕೆ ಅತೀತನಾಗಿ ನೀನು ಸಾಗುವೆ. ನನ್ನ ಹೃದಯಕಮಲದಲ್ಲಿ ನಿನ್ನನ್ನು ಅಡಗಿಸಿ ಇಟ್ಟುಕೊಳ್ಳೋಣ ಎಂದರೆ, ಜಗವನ್ನೆಲ್ಲಾ ತುಂಬಿ ತುಳುಕುವ ಸರ್ವವ್ಯಾಪಿ ನೀನು. ಬಿಸಿಲ ಮರೀಚಿಕೆಯಂತೆ ಕಣ್ಗೆ ತೋರುತ್ತ, ಕೈಗೆ ಸಿಗದೆ ಮುಂದೆ ಸಾಗುವ ಕಣ್ಣಮುಚ್ಚಾಲೆ ಸಾಕಿನ್ನು ಬಾ.... ದೇವಾ; ನಾನು ಒಲಿಸುವೆ ಎಂಬ ಹಮ್ಮಿನ ಪ್ರಯತ್ನ ಸಾಕಿನ್ನು. ನೀನು ಒಲಿದರೆ ಚೆಂದ: ನನ್ನ ಪ್ರಯತ್ನಗಳೆಲ್ಲ ಮುಗಿದವು. ಇನ್ನಾದರೂ ನೀನು ಒಲಿಯದಿದ್ದರೆ ನಿನ್ನ ಘನತೆಗೇ ಕುಂದು....'*

ಕೈಯಲ್ಲಿದ್ದ ಇಷ್ಟಲಿಂಗವನ್ನು ಭಕ್ತಿ-ಪ್ರೇಮದಿಂದ ಕಣ್ಣಿಗೊತ್ತಿಕೊಂಡಳು.

'ನನ್ನ ಸ್ಥಿತಿಯನ್ನು ಅರ್ಥಮಾಡಿಕೋ....ಬೇಟೆಗಾರರ, ನಾಯಿಗಳ ಕಾಟದಿಂದ ಮುದ್ದು ಜಿಂಕೆ ಹೇಗೋ ಪಾರಾಗಿದೆ. ಓಡಿಓಡಿ ದಣಿದ ಅದಕ್ಕೆ ಬಾಯಾರಿಕೆಯಾಗಿದೆ. ನೀರಿಲ್ಲದಿದ್ದರೆ ಸಾಯುವುದು. ಹಾಗೆಯೇ ಕಾನನದಲ್ಲಿ ಕಾಮನೆಂಬ ಬೇಟೆಗಾರ, ಪಂಚೇಂದ್ರಿಯಗಳೆಂಬ ನಾಯಿಗಳು, ಈ ವಿಷವೃತ್ತದಿಂದ ನನ್ನ ಮನದ ಜಿಂಕೆ ಪಾರಾಗಿದೆ. ಪ್ರಭು....ಮಹಾದೇವ....ಇದು ಬಾಯಾರಿ

* ಮ. ವ. ೧೬೧

ಬಸವಳಿದಿದೆ, ಕಾರುಣ್ಯಾಮೃತದ ನೀರನ್ನು ಎರೆಯಲಾರೆಯಾ .... ?'
ಮಹಾದೇವಿಯ ದುಃಖ ಶಿಖರವನ್ನು ಮುಟ್ಟಿತು.

'ನೀನು ಅದೆಷ್ಟೇ ಪರೀಕ್ಷೆ ಮಾಡು: ನಾನು ಸೋಲುವುದಿಲ್ಲ. ಕೇಳುವಿಯೋ, ಬಿಡುವೆಯೋ ಎಂಬ ಚಿಂತೆ ನನಗೇತಕ್ಕೆ ? ನಿನ್ನನ್ನು ಕುರಿತು ಹಾಡಿದರೇ ನನಗೆ ಸಮಾಧಾನ. ನಿನಗೆ ನನ್ನನ್ನು ನೋಡುವಷ್ಟು ಸಹನೆ, ಪ್ರೇಮವಿದೆಯೋ ಇಲ್ಲವೋ ಆದರೆ ನಾನು ಮಾತ್ರ ನಿನ್ನನ್ನು ನೋಡಿ, ಹಿಗ್ಗಿದಲ್ಲದೆ ಬದುಕಲಾರೆ. ನೀನು ನನ್ನನ್ನು ಪ್ರೇಮಿಸಿದರೂ ಸರಿ, ಇಲ್ಲವಾದರೂ ಸರಿ ; ನಿನ್ನನ್ನಪ್ಪಿದಲ್ಲದೆ ನನಗೆ ಪ್ರಾಣಬರದು. ಒಲಿಯುವ, ಬಿಡುವ ಚಿಂತೆ ನಿನಗಿರಲಿ. ಪೂಜಿಸಿ, ಆನಂದ ಹೊಂದುವದಷ್ಟೇ ನನ್ನ ಕರ್ತವ್ಯ.* ದೇವಾ, ನಿನ್ನನ್ನು ಕುರಿತು ಇನ್ನು ನಾನೇನನ್ನೂ ಕೇಳೆನು, ನಿಷ್ಕಾಮ ಪೂರ್ವಕ ಸಾಧನೆಯಲ್ಲಿ ನಾನು ಆನಂದ ಪಡುವೆ. ಅರ್ಚನೆಯ ಆನಂದದ ಸರಸಿಯಲ್ಲಿ ಅರಿಸಂಚೆಯಾಗಿ ತೇಲುವೆ...."

ಮಹಾದೇವಿಯ ಉದ್ವೇಗ ತುಸು ಶಮನವಾಯಿತು. ಹಾಲು ಇಲ್ಲಿಯ ತನಕ ಕಾಯ್ದು, ಆತ್ಯಂತಿಕ ಮಟ್ಟವನ್ನು ಮುಟ್ಟಿ ಉಕ್ಕಿತು. ನಾನು ಒಲಿಸಿ ಕೊಳ್ಳುವೆ ಎಂಬ ಪ್ರಯತ್ನದಲ್ಲಿ 'ಅಹಂ'ನ ಅಂಶವಿದೆ ; ಇದೂ ಅಳಿಯಬೇಕು. ತನ್ನ ಕರ್ತವ್ಯವನ್ನು ತಾನು ಮಾಡಿ ಒಲಿಯುವುದನ್ನು ದೇವನಿಗೆ ಒಪ್ಪಿಸಿಬಿಡ ಬೇಕು ಎನ್ನಿಸಿತು. ಹಾಲಿನ ಕಾವು ಇಳಿಯುವಂತೆ ಉದ್ವಿಗ್ನತೆ ಶಾಂತವಾಗ ತೊಡಗಿತು.

ಯಾವ ಹೊಯ್ದಾಟವಿಲ್ಲದ ಸಮಚಿತ್ತದ ಸ್ಥಿತಿ ಒದಗಿ, ತ್ರಾಟಕಯೋಗ ವನ್ನು ಮಾಡಲು ತೊಡಗಿದಳು. ತನ್ನ ಕೈಯೊಳಗಿನ ಇಷ್ಟಲಿಂಗ ಸಹ ಕಾಣ ದಾಯಿತು. ಶರೀರದ ನರನಾಡಿಗಳು ಮಿಡಿಯತೊಡಗಿದಂತಾಯಿತು. ಇದ್ದಕ್ಕಿ ದ್ದಂತೆಯೇ ಇಷ್ಟಲಿಂಗದಿಂದ ಬೆಳಗೊಂದು ಉದ್ಭವಿಸಿತು. ಅದೊಂದು ಆಕಾರ ವನ್ನು ತಳೆಯತೊಡಗಿತು. ಹೊಳೆವ ಕೆಂಜೆಡೆ, ಮಣಿ ಮುಕುಟ, ಶುಭ್ರವಾದ ದಂತಪಂಕ್ತಿ, ಪ್ರೇಮಾಸಕ್ತ ನಗೆಮೊಗ, ಕಾರುಣ್ಯ ಮಿಶ್ರಿತ ತೇಜಃಪೂರ್ಣ ಕಣ್ಣುಗಳು, ದಿವ್ಯಸ್ವರೂಪ ಘನೀಭೂತವಾಗಿ ಬಂದು ತನ್ನೆದುರು ನಿಂತು ಬಿಗಿ ದಪ್ಪಿದಂತಾಯಿತು. ತನ್ನ ಮೈಯನ್ನು ಚೈತನ್ಯದ ಪ್ರವಾಹವಾಗಿ ಒಳ ಹೊಕ್ಕಿತು. ಮಾತು ಮೌನವಾಯಿತು. ಸರ್ವಾಂಗವನ್ನು ಅಲ್ಲಾಡಿಸಿದ ಅನುಭವ ; ಮಿಂಚು ಮೈಯಲ್ಲಿ ಹರಿದಾಡಿದಂತಾಯಿತು. ಬೆಳಕಿನ ಸುಳಿಯಲ್ಲಿ ಸಿಕ್ಕಿ ತಾನು ಗರಗರನೆ ಸುತ್ತಿದಂತಾಯಿತು.

ಪೂಜೆಗಾಗಿ ಹಿಡಿದಿದ್ದ ಇಷ್ಟಲಿಂಗವನ್ನು ಗಂಧದ ಕರಡಿಗೆಯಲ್ಲಿರಿಸಿ

* ಮ. ವ. ೧೦೯

ಕೊಂಡಳು. ಯಾವುದೋ ಅದೃಶ್ಯಶಕ್ತಿ ಅವಳತನವನ್ನು ಕಸಿದುಕೊಂಡು, ತನ್ನತನವನ್ನು ತುಂಬಿದಂತಾಯಿತು. ಕಣ್ಣುಗಳು ಭಾರವಾಗಿ ಮುಚ್ಚಿದವು. ಅನಾಹತನಾದ ಹೃದಯವೀಣೆಯ ಕೇಂದ್ರದಿಂದ ಮಿಡಿಯತೊಡಗಿ, ಆ ನಾದದ ಅಲೆಗಳು ಸರ್ವಾಂಗವನ್ನು ಬಳಸಿಕೊಂಡು, ತನ್ನ ದೇಹವೇ ಒಂದು ವೀಣೆಯಾಗಿ ಮಿಡಿಯತೊಡಗಿದೆ ಎನ್ನಿಸಿತು. ತನ್ನ ಮನಸ್ಸು ಬುದ್ಧಿಗಳ ವಶದಲ್ಲಿ ಯಾವುದೂ ಉಳಿಯಲಿಲ್ಲ. ಭಾವಸಮಾಧಿಯಲ್ಲಿ ಮೈಮರೆತ ಆಕೆ ಸ್ವಲ್ಪ ಕಾಲದ ಬಳಿಕ ಕುಳಿತಲ್ಲೇ ನೆಲಕ್ಕೆ ಉರುಳಿದಳು.

ಹರಳೆಣ್ಣೆಯ ಸೊಡರು ಆರಿ ಕತ್ತಲೆಯಾವರಿಸಿತು.

* * *

ಪೂರ್ವದಿಗಂತದ ಕಡೆಗೆ ಮುಖವಾಗಿದ್ದ ಕಿಟಕಿಯ ಮೂಲಕ ಸೂರ್ಯನ ಕಿರಣಗಳು ಮೈಯನ್ನು ಬಿಸಿಗೊಳಿಸಿದಾಗ ಮಹಾದೇವಿ ಕಣ್ತೆರೆದಳು. ಬಾಲ ಸೂರ್ಯನ ಹೊಂಗಿರಣದಲ್ಲಿ ಜಗತ್ತು ಮೀಯುತ್ತಿತ್ತು. ಕಿಟಕಿಗೆ ಸಮೀಪದ ಮಾಮರದ ಮೇಲೆ ಕೋಗಿಲೆ ಕೂಗುತ್ತಿತ್ತು. ರವಿಯಾಗಮನದಿಂದ ಲೋಕದ ಚೇಷ್ಟೆಗಳು ಪ್ರಾರಂಭವಾಗತೊಡಗಿದ್ದವು. ಗುಬ್ಬಿ, ಗೊರವಂಕಗಳ ಕೀಚಲ ಧ್ವನಿ ಕರ್ಣದ್ವಾರವನ್ನು ಬಡಿಯಿತು. ಕಣ್ಣನ್ನು ಸವರಿಕೊಂಡು ಮೇಲೆದ್ದಳು. ಎದೆಯ ಮೇಲಿನ ಕರಡಿಗೆಯನ್ನು ಕಣ್ಣಿಗೊತ್ತಿಕೊಂಡು, 'ಸದ್ಗುರು ಗುರುಲಿಂಗ ದೇವಾ, ಚನ್ನಮಲ್ಲಿಕಾರ್ಜುನಾ, ಜಂಗಮಮೂರ್ತಿ ಜಗದ್ಗುರು ಬಸವಣ್ಣಾ,' ಎಂದು ಗುರುಲಿಂಗ ಜಂಗಮ ಧ್ಯಾನವನ್ನು ಮಾಡಿ, ಕುಳಿತಳು. ತಾನೆಲ್ಲಿರುವೆ ಎಂಬುದನ್ನು ಅರಿಯಲು ವೇಳೆ ಹಿಡಿಯಿತು. ನಿನ್ನೆಯ ಚಿತ್ರವೆಲ್ಲ ಕಣ್ಣ ಮುಂದೆ ಬಂದಿತು. ಚಾಪೆಯ ಮೇಲೆ ಪೂಜೆಗೆ ಕುಳಿತವಳು, ಹಾಸಿಗೆಯನ್ನೂ ಮರೆತು ಉರುಳಿದ್ದಳು.

ಮೈಯಲ್ಲಿ ಚೈತನ್ಯದ ಸಂಚಾರವಾಗತೊಡಗಿತ್ತು. ಸೂರ್ಯಕಿರಣ ಸಮಷ್ಟಿಯನ್ನು ಚೇತನಿಸಿದಂತೆ ಶಿವಕಾರುಣ್ಯ ಕಿರಣ ಮಹಾದೇವಿಯ ವ್ಯಷ್ಟಿಯನ್ನು ಚೇತನಿಸಿತ್ತು. ಆಧ್ಯಾತ್ಮದ ಮಾಮರದ ಮೇಲೆ ಕುಳಿತ ಹೃದಯದ ಕೋಗಿಲೆ ಕುಹೂರವವನ್ನು ಹಾಡತೊಡಗಿತ್ತು. ಪ್ರಸನ್ನಚಿತ್ತಳಾಗಿ ಓಲೆಯ ಕಂಠವನ್ನು ಹಿಡಿದು ತಾಡಓಲೆಯ ಮೇಲೆ ಕೊರೆಯತೊಡಗಿದಳು. ಎಷ್ಟೋ ದಿನಗಳ ಬಯಕೆ ಇಂದು ಬಳಿಸಾರಿತ್ತು.

ಹೊಳೆವ ಕೆಂಜೆಡೆಗಳ ಮಣಿಮುಕುಟದ ಒಪ್ಪುವ ಸುಲಿಪಲ್ಗಳ
ನಗೆಮೊಗದ ಕಂಗಳ ಕಾಂತಿಯ
ಈರೇಳು ಭುವನವ ಬೆಳಗುವ ದಿವ್ಯ ಸ್ವರೂಪವ ಕಂಡೆ ನಾನು.

ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ.
ಗಂಡ ಗಂಡರೆಲ್ಲರ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು.
ಜಗದಾದಿ ಶಕ್ತಿಯೊಳು ಬೆರೆಸಿ ಮಾತನಾಡುವ ಪರಮಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.*

ಆ ದಿವ್ಯರೂಪವನ್ನು ಮತ್ತೆ ಚಿತ್ತಭಿತ್ತಿಯಲ್ಲಿ ತಂದುಕೊಂಡಳು. ದೈವೀ ಮಿಲನದ ಸುಖ ತುಂಬ ಆನಂದದಾಯಕವಾಗಿತ್ತು.

ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವಾ.
ಕೇಳುತ್ತ ಕೇಳುತ್ತ ಮೈಮರದೊರಗಿದೆ ನೋಡವ್ವಾ.
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವಾ.
ಚೆನ್ನಮಲ್ಲಿಕಾರ್ಜುನದೇವರ ದೇವನ ಕೂಡುವ ಕೂಟವ
ನಾನೇನೆಂದರಿಯದೆ ಮರೆದೆ ಕಾಣವ್ವಾ!†

ತನ್ನ ಅನುಭವ ತುಂಬ ಸುಂದರವಾಗಿ ಮೂಡಿ ಬಂದಂತೆ ಎನಿಸಿತು. ಅನುಭವದ ಓಟಕ್ಕೆ ಭಾಷೆ ಓಡುವುದು ಕಷ್ಟ. ಆದರೂ ಅದು ಅನುಭವಕ್ಕೆ ತೃಪ್ತಿಕರ ದೂರದಲ್ಲಿ ನಿಂತರೆ ಎಷ್ಟೋ ಸಮಾಧಾನ ತಂದುಕೊಡುವುದಷ್ಟೆ.

ಮಹಾದೇವಿ ಪುನರ್ಜನ್ಮವನ್ನು ಹೊಂದಿದವಳಂತೆ ಉಲ್ಲಸಿತಳಾಗಿ ಮೇಲೆ ಎದ್ದು ಕದವನ್ನು ತೆರೆದು ಹೊರಗೆ ಬಂದಾಗ ಲಿಂಗಮ್ಮ ಹೊಸ ಬಗೆಯ ವಿಲಕ್ಷಣ ದೃಷ್ಟಿಯನ್ನು ಬೀರಿದಳು.

'ಮಗಳೇ, ಬಾ ಇಲ್ಲಿ....' ಎಂದು ಎಣ್ಣೆಯನ್ನು ನೆತ್ತಿಗೆ ತಿಕ್ಕಿದಳು.

'ಎಂತಹ ಎಣ್ಣೆಯಪ್ಪ ಇದು....?' ಕುತೂಹಲಿತಳಾಗಿ ಕೇಳಿದಳು.

'ಕಣ್ಣಿಗೆ ತಂಪುಕೊಡುವುದಂತೆ....' ಸುಮ್ಮನೆ ತಿಕ್ಕಿಸಿಕೊಂಡಳು. ತಾನೇ ಸ್ವತಃ ತಾಯಿ ಬಂದು ಬಿಸಿ ನೀರನ್ನೆರೆದಳು. ತಾಯಿಯ ವಾತ್ಸಲ್ಯದಿಂದ ಮಹಾದೇವಿಗೆ ಆನಂದವೆನಿಸಿತು.

'ಇದೆಷ್ಟು ಸೊರಗಿರುವೆಯಲ್ಲಾ ಮಗು....ರಾತ್ರಿಯ ಊಟ ಕಡಿಮೆ ಮಾಡಿರುವೆ. ಒಂದೊಂದು ದಿನ ಉಣ್ಣುವುದೇ ಇಲ್ಲ....ಈ ವಯಸ್ಸಿನಲ್ಲಿ ಅರಳಿದ ತಾವರೆಯಂತಿರಬೇಕು; ಇದೇನವ್ವಾ....'

'ಈ ಶರೀರವನ್ನು ಬಹಳಷ್ಟು ಗಮನಿಸಬಾರದಪ್ಪ. ಇದು ಕೊಬ್ಬಿಬಿಟ್ಟರೆ, ಉನ್ಮತ್ತ ಆನೆಯಂತೆ ಎಳೆದೊಯ್ಯುವುದು....'

* ಮ. ವ. ೩೩೮
† ಮ. ವ. ೨೯೧

ಎಣ್ಣೆ ನೀರೆರೆದುಕೊಂಡು ಪೂಜೆ ಮುಗಿಸಿದಾಗ ಅವಳ ಉಲ್ಲಾಸವು ಇಮ್ಮಡಿಸಿತ್ತು. ಸ್ವಾತಿಯ ಹನಿಗಾಗಿ ಬಾಯಿಬಿಟ್ಟುಕೊಂಡು ತೇಲುವ ಕಪ್ಪೆ ಚಿಪ್ಪು, ಆ ಹನಿ ಒಳಗಿಳಿಯುತ್ತಿದ್ದಂತೆಯೇ ಕಡಲ ತಳ ಸೇರಿ ಮುತ್ತನ್ನು ರಚಿಸುವಂತೆ, ಶಿವಕಾರುಣ್ಯದ ಹನಿ ಹೃದಯವನ್ನು ಹೊಕ್ಕು, ಇನ್ನೇನೋ ಬೇಕು ಎನ್ನಿಸದಷ್ಟು ತೃಪ್ತಿ ಮೂಡಿಸಿತ್ತು.

ಪಂಡಿತನಿತ್ತ ಲೇಹ್ಯದೊಡನೆ ಹಾಲನ್ನು ಬಿಸಿ ಮಾಡಿ ತಂದಳು ಲಿಂಗಮ್ಮ.

"ಇದೆಲ್ಲಾ....ಏಕವ್ವಾ....?'

'ಇರಲಿ ತಗೋ....' ತಾಯಿಗೆ ಎರಡಾಡದೆ ಮದ್ದು, ಹಾಲು ಕುಡಿದಳು. ನಿನ್ನೆಯ ತನ್ನ ಅನುಭವವನ್ನು ಗುರುಗಳ ಮುಂದೆ ಬಿತ್ತರಿಸುವ ಆಸೆ ಉತ್ಕಟ ವಾಯಿತು.

'ಅವ್ವಾ, ಮಠಕ್ಕೆ ಹೋಗಿ ಗುರುಗಳನ್ನು ದರ್ಶಿಸಿ ಬಹಳ ದಿವಸಗಳಾದಂತೆ ಎನಿಸಿದೆ. ಹೋಗಿ ಬರುವೆನವ್ವಾ....' ಲಿಂಗಮ್ಮನಿಗೆ ಭೀತಿ ಎನಿಸಿತು. ಪಂಡಿತರ ಎಣ್ಣೆಯನ್ನು ತಲೆಗೆ ತಿಕ್ಕಿ ಎರೆದ ಬಳಿಕ ನಸುನಗುತ್ತ ಇರುವ ಮಗಳು, ಮತ್ತೆ ಅಲ್ಲಿಗೆ ಹೋಗಿ ಬಂದು ಮಂಕಾದರೆ!

'ಬೇಡವ್ವಾ. ನಾಳೆ ನಾಡಿದ್ದರಲ್ಲಿ ಹೋಗುವೆಯಂತೆ....'

'ಅವ್ವೆ, ಶಾಲೆಗೆ ಹೋಗುವುದು ಬೇಡ ಎಂದಾಗ ಅದಕ್ಕೂ ನಾನು ತಲೆ ಬಾಗಿದೆ. ಮಠಕ್ಕೆ ಆಗಾಗ ಹೋಗಬೇಡ ಎಂದಾಗ ಸುಮ್ಮನಾದೆ. ಏನವ್ವಾ, ನಿನ್ನ ಬಂಧನ! ಶಾರೀರಿಕ ಜನ್ಮವಿತ್ತ ನಿನಗಿಂತ, ಜ್ಞಾನದ ಜನ್ಮವಿತ್ತ ಅವರು ನನ್ನ ನಿಜವಾದ ತಂದೆಯವ್ವಾ. ನೀವು ಬಂಧನಕ್ಕೆ ಎಳೆವಿರಿ, ಅವರು ನನ್ನ ಬಂಧನ ಬಿಡಿಸುವರು. ಭವ ಚಕ್ರಕ್ಕೆ ನೀವು ದೂಡುವಿರಿ, ಅವರು ಅದರಿಂದ ಹೊರತೆಗೆದು ಭಕ್ತಿಯ ಮುದ್ದು ಹಚ್ಚುವರು. ಯಾವಾಗಲೊಮ್ಮೆಯಾದರೂ ಹೋಗಲು ಬಿಡದಿದ್ದರೆ ನಾನು ಸೈರಿಸೆನು. ಭಾರ ಹೇರುವಷ್ಟು ಹೇರಬೇಕು; ಹೆಚ್ಚಾದರೆ ಹೊರಲಾರದ ಕುದುರೆ ಎಲ್ಲವನ್ನು ಕೊಡವಿ ಓಡುವುದು....' ಕೆರಳಿ ನಿಂತಳು ಮಹಾದೇವಿ.

ಹುಚ್ಚು ಮತ್ತೆ ಕೆರಳಿತು ಎಂದುಕೊಂಡಳು ಲಿಂಗಮ್ಮ. ಆಕೆ ದಿಕ್ಕುತೋಚದೆ ನಿಂತಾಗ ತಾಯಿ-ಮಗಳ ಸಂಭಾಷಣೆಯನ್ನು ಆಲಿಸುತ್ತಿದ್ದ ಓಂಕಾರಶೆಟ್ಟಿ ಬಂದು ಮಮತೆ ತುಂಬಿದ ಧ್ವನಿಯಲ್ಲಿ,

'ನಡೆಯಮ್ಮ....ಹೋಗಿ ಬರೋಣ....' ಎಂದ.

ತಂದೆ-ಮಗಳಿಬ್ಬರೂ ಬೆಳಗಿನ ಸೊಬಗನ್ನು ಸವಿಯುತ್ತ ಮಠದ ಕಡೆಗೆ ನಡೆದರು. ಗುರುಲಿಂಗದೇವರು ಮಠದ ಹಿಂದಿನ ತೋಟದಲ್ಲಿ, ಬೆಳಗಿನ ಪೂಜೆ

ಯನ್ನು ಮುಗಿಸಿ, ಓದುತ್ತ ಕುಳಿತಿದ್ದರು. ಗುರುಗಳು ಅಲ್ಲಿರುವ ಸುದ್ದಿ ಕೇಳಿ ಇಬ್ಬರೂ ತೋಟಕ್ಕೆ ಬಂದರು.

ಗುರುಲಿಂಗದೇವರು ಆಗಲೇ ಅರವತ್ತರ ಹತ್ತಿರದಲ್ಲಿದ್ದರು. ಆದರೆ ಮುಖದ ತೇಜಸ್ಸು ಐವತ್ತನ್ನು ಘೋಷಿಸುತ್ತಿತ್ತು. ಮುಖದ ಮೇಲೆ ಪರಿಪಕ್ವವಾದ ಛಾಯೆ ಮೂಡಿತ್ತು. ಸೂರ್ಯನ ಕಿರಣಕ್ಕೆ ಇದಿರಾಗಿ ಮೆಲ್ಲಮೆಲ್ಲನೆ ಹೆಜ್ಜೆ ಇರಿಸುತ್ತ ಸೀರೆಯ ನಿರಿಯನ್ನು ಚಿಮ್ಮುತ್ತ ಬಂದ ಮಹಾದೇವಿ ಜ್ಞಾನ ದೇವತೆಯಂತೆ ಕಂಡಳು.

ತನ್ನ ಕಣ್ಣೆದುರಿಗೆ ಹುಟ್ಟಿ, ಬೆಳೆದು ನಿಂತ ಮಹಾದೇವಿ ಈಗ ಬಹು ಎತ್ತರಕ್ಕೆ ಬೆಳೆದಂತೆ ಎನ್ನಿಸಿತು.

ತಂದೆ ಮಗಳಿಬ್ಬರೂ ಪೊಡಮಟ್ಟು ಹಸಿರು ಹುಲ್ಲಿನ ಮೇಲೆ ಕುಳಿತರು.

'ಗುರುಗಳನ್ನು ಮರೆತೆಯಾ....ಮಹಾದೇವಿ....ಎಷ್ಟೋ ದಿವಸಗಳಿಂದ ಬರಲೇ ಇಲ್ಲ....?'

'ಮರೆಯುವುದೇ ?....ಅದು ಸಾಧ್ಯವೇ ? ತಂದೆತಾಯಿಗಳಿಗಾಗಿ ತನ್ನ ಪ್ರೀತಿಯನ್ನು ಧಾರೆಯೆರೆದ ಬಾಲೆ, ವಿವಾಹಿತಳಾದಾಗ ಗಂಡನಲ್ಲಿ ಆಸಕ್ತ ಳಾಗುವಳು, ಅವನನ್ನು ಬಿಟ್ಟು ಅವಳಿಗೆ ಮತ್ತೇನೂ ಕಾಣದು. ಒಂದು ಮಗುವಾದರೆ, ಮಗುವಿನ ಹೊರತು ಇನ್ನೇನೂ ಕಾಣದಂತಾಗುತ್ತದೆ, ಅಲ್ಲವೇ ಗುರುಗಳೇ ? ಆ ಮಗು ದೊಡ್ಡದಾದಮೇಲೆ ಮತ್ತೆ ಆಕೆಯ ಆಕರ್ಷಣೆಯ ಕೇಂದ್ರ ಬದಲಾಗುವುದು....'

'ಅಹುದವ್ವಾ....'

'ಹಾಗೆಯೇ....ಕೆಲವಾರು ದಿವಸಗಳಿಂದ ಶಿವನ ಪ್ರೇಮದಲ್ಲಿ ಬಂಧಿತ ಳಾಗಿದ್ದೆ. ಕುಳಿತಲ್ಲಿ, ನಿಂತಲ್ಲಿ ಅವನೇ ಅವನು. ತಾಯಿ ತಂದೆಗಳ ನೆನಪು ಸಹ ಆಗಿರಲಿಲ್ಲ. ಇಷ್ಟು ದಿನ ಕಣ್ಣು ಮುಚ್ಚಾಲೆಯಾಡಿಸಿ ನಿನ್ನೆ ತನ್ನ ರೂಪವನ್ನು ತೋರಿಸಿದ ಆ ಕಳ್ಳ.' ಹಾಸ್ಯ ಬೆರೆತ ತನ್ಮಯ ಧ್ವನಿಯಲ್ಲಿ ಹೇಳಿದಳು.

ತಾನು ಬರೆದ ವಚನಗಳನ್ನು ಗುರುಗಳ ಮುಂದಿರಿಸಿದಳು. ಮೌನವಾಗಿ ಅವರು ಕಣ್ಣಾಡಿಸಿದರು.

'ಮಹಾದೇವಿ, ನಿನ್ನ ಸುಕೃತ ದೊಡ್ಡದವ್ವಾ. ಅವನು ಬಹಳ ಸ್ವಾರ್ಥಿ ! ನಮ್ಮಂತಹವರು ಎಷ್ಟೋ ವರುಷ ತಲ್ಲಣಿಸಿದರೂ ಬರದವನು, ತನ್ನ ಹೆಂಡತಿಯ ಕರೆಗೆ ಎಷ್ಟು ಬೇಗ ಓಗೊಟ್ಟಿರುವನು !....'

ಈ ಹಲವಾರು ದಿವಸಗಳ ತನ್ನ ಮಾನಸಿಕ ಸ್ಥಿತಿಯನ್ನು ವರ್ಣಿಸಿದಳು.

'ಮನಸ್ಸು ಉದ್ವಿಗ್ನತೆಯಲ್ಲಿದ್ದರೆ ಕಾರುಣ್ಯವು ಇಳಿಯದು. ಕುದಿಯುವ ಹಾಲಿಗೆ ಹೆಪ್ಪು ಬಿದ್ದಂತೆ ಆಗುವುದು. ನೀನು ಪರಿಪೂರ್ಣ ಶರಣಾಗತಿಯಿಂದ ಶಾಂತಚಿತ್ತಳಾದಾಗಲೇ ಒಲಿಮೆಯಾಗಿದೆ. ಅವನ ಕರುಣೆಯನ್ನು ಹಮ್ಮಿನಿಂದ, ಹಕ್ಕಾಗಿ ಕೇಳಿದರೆ ಸಾಧ್ಯವೇ ಇಲ್ಲ. ತಾನಾಗಿ ಒಲಿದು ಕೊಟ್ಟರೆ ಕೊಡ ಬೇಕು! ಆಸೆ-ಅಹಂಕಾರದ ಮುಚ್ಚಳ ತೆರೆಯುವ ತನಕ ಕಾರುಣ್ಯ ಒಳ ಸೇರದು. ದೈವೀಕಾರುಣ್ಯವು ಅದ್ಭುತ ರೀತಿಯಲ್ಲಿ ವ್ಯಕ್ತಿತ್ವದ ವಿಕಾಸವನ್ನು ಮಾಡುತ್ತದೆ....'

'ನಿಜ ಗುರುಗಳೇ, ಯಾವುದೋ ಅಸಾಮಾನ್ಯ ಬಲ ಬಂದಂತಾಗಿದೆ. ಆತ್ಮವಿಶ್ವಾಸದ ಬೆಳಗು ಹೊತ್ತಿದೆ....'

'ಕೊಡುವುದು ಬಿಡುವುದು ಅವನ ಇಚ್ಛೆಯಾದರೂ, ಸತ್ವಯುತ ಸಾಧನೆ ಸಾಧಕನ ಪಾಲಿನದು. ಜೀವನ ಭಕ್ತಿಯ ಸತ್ವಕ್ಕೆ ಅನುಗುಣವಾಗಿ ಶಿವನ ಶಕ್ತಿಯೂ ಅವರೋಹಿಸುತ್ತದೆ. ದೇವನ ಕರುಣೆ ವಿಶ್ವದಲ್ಲೆಲ್ಲ ಇದ್ದರೂ ಅದನ್ನು ಗ್ರಹಿಸಲು ಸಾಧಕನ ಹೃದಯಕ್ಕೆ ಶಕ್ತಿ ಬೇಕಾಗುವುದು. ಮೋಡ ಸುರಿಸುವ ಮಳೆಯು ಸಮಪ್ರಮಾಣದಲ್ಲಿ ಆದರೂ ಎರೆಭೂಮಿ ಕರಗಿ ಅರಳು ವುದು; ಕೆಂಪು ಭೂಮಿ ತೋಯುವುದು, ಮರಡು ಭೂಮಿ ತುಸು ಹಸಿ ಯಾಗುವುದು, ಭೋರ್ಗಲ್ಲು ನೀರನ್ನೇ ಹಿಡಿಯದು. ಸಾಧಕನ ಹೃದಯ ಸಂಸ್ಕಾರ ಇಲ್ಲಿ ಬಹು ಮುಖ್ಯ....'

ಮತ್ತೊಮ್ಮೆ ಮಹಾದೇವಿಯ ವಚನಗಳನ್ನು ಓದಿದರು.

'ಮಹಾದೇವಿ, ಸಾಕ್ಷಾತ್ಕಾರದಲ್ಲಿ ಮೂರು ಬಗೆಯನ್ನು ವಚನ ಸಾಹಿತ್ಯ ದಲ್ಲಿ ಗಮನಿಸಬಹುದು; ಸಗುಣ ಸಾಕ್ಷಾತ್ಕಾರ, ಆತ್ಮಸಾಕ್ಷಾತ್ಕಾರ, ಪರ ಮಾತ್ಮ ಸಾಕ್ಷಾತ್ಕಾರ. ಆತ್ಮ-ಪರಮಾತ್ಮ ಸಾಕ್ಷಾತ್ಕಾರವನ್ನು ನಿರ್ಗುಣ ದಲ್ಲಿ ವಿಂಗಡಿಸಬಹುದು. ನೀರಿಗೆ ತನ್ನದೇ ಆದ ಆಕಾರವಿಲ್ಲ. ಯಾವ ಆಕಾರದ ಪಾತ್ರೆಯಲ್ಲಿ ಹಾಕಿದರೆ ಆ ಆಕಾರ ತಳೆವುದು. ಗುಂಡಾದ ಪಾತ್ರೆ ಯಲ್ಲಿ ಹಾಕಿ ಶೈತ್ಯೀಕರಿಸಿದರೆ ಗುಂಡಾದ ಮಂಜುಗಡ್ಡೆಯಾಗಿ ನಮಗೆ ತೋರು ವುದು. ಹಾಗೆಯೇ ದೇವನು ಹೆಣ್ಣಲ್ಲ, ಗಂಡಲ್ಲ, ಅತೀತ ಚೈತನ್ಯ. ಆದರೆ ಭಾಷೆಯ ಬಂಧನದಲ್ಲಿ ಸಿಕ್ಕ ನಾವು ಪುಂ, ಸ್ತ್ರೀ, ನಪುಂಸಕವನ್ನು ಬಿಟ್ಟು ಮಾತನಾಡಲಾರದೆ ರೂಢಿಯಲ್ಲಿ ಅವನು ಎನ್ನುತ್ತೇವೆ.

ದೇವರು ವ್ಯಕ್ತಿಯಲ್ಲ, ಆದರೆ ಅವನಿಗೆ ವ್ಯಕ್ತಿತ್ವವಿದೆ. ನಮ್ಮ ನಿಮ್ಮಂತೆ ಕೈ ಕಾಲು ಕಣ್ಣು ಮೂಗು ಇರುವವನಲ್ಲ; ಆದರೆ ತಂದೆಯಾಗಿ, ತಾಯಿ ಯಾಗಿ, ಪತಿಯಾಗಿ, ಸಖನಾಗಿ ಭಕ್ತರ ಕರೆಗೆ ಓಗೊಡುವ ಸಗುಣಪೂರ್ಣ

ವ್ಯಕ್ತಿತ್ವವಿದೆ. ಸಗುಣ ಸಾಕ್ಷಾತ್ಕಾರದ ಬಳಿಕ ತನ್ನ ವ್ಯಷ್ಟಿಗತವಾದ ಆತ್ಮ ಸಾಕ್ಷಾತ್ಕಾರ, ಅಂದರೆ ಪ್ರಾಣಲಿಂಗ ಸಾಕ್ಷಾತ್ಕಾರ ಮತ್ತು ಸಮಷ್ಟಿಗತವಾದ ಪರಮಾತ್ಮ ಸಾಕ್ಷಾತ್ಕಾರ, ಅಂದರೆ ಭಾವಲಿಂಗ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅದು ನಿನ್ನ ಮುಂದಿರಬೇಕಾದ ಗುರಿ ತಾಯಿ....'

ಮಹಾದೇವಿ ಮೌನವಾಗಿ ತಲೆಯಲ್ಲಾಡಿಸಿದಳು.

೧೭. ನಿರಾಕರಣೆ

ದಿವ್ಯಾನುಭವದ ನಂತರ ಮಹಾದೇವಿ ಸಹಜವಾದ ವರ್ತನೆಯಲ್ಲಿ ಇರತೊಡಗಿದಾಗ ಲಿಂಗಮ್ಮನ ಎದೆಯ ಕುದಿ ಸ್ವಲ್ಪ ಇಳಿಯಿತು. ಪಂಡಿತರ ಲೇಹ್ಯ, ಎಣ್ಣೆಗಳು ಚೆನ್ನಾಗಿ ಪರಿಣಾಮ ಬೀರಿದವೆಂದು ಹಿಗ್ಗಿ ಕೈತುಂಬ ಹಣವನ್ನು ಸಲ್ಲಿಸಿದಳು. ಇನ್ನು ಸಿಂಗಾರಮ್ಮನ ಎರಡನೆಯ ಸೂಚನೆ ಕಾರ್ಯಗತವಾಗಬೇಕಾಗಿದ್ದಿತು. ಮಗಳ ಅಂತರಂಗದಲ್ಲಿ ಲಗ್ನದ ಬಯಕೆ ಇದ್ದೂ ಹಾಗೆ ಮಾಡುತ್ತಲಿರಬಹುದು ಎಂದುಕೊಂಡಳು.

ಶಂಕರಶೆಟ್ಟರ ಮಗ ರಾಜಶೇಖರನು ಹಲವಾರು ಕನ್ಯಾಪಿತರ ಕಣ್ಣು ಸೆಳೆದಿದ್ದ ವ್ಯಕ್ತಿ. ಆದರೆ ಅವನ ಮನಸ್ಸು ಮಹಾದೇವಿಯ ಕಡೆ ಹರಿದಿತ್ತು. ಈಗಾಗಲೇ ಇಪ್ಪತ್ನಾಲ್ಕರ ಹರೆಯದಲ್ಲಿದ್ದ ಅವನ ಲಗ್ನದ ವಿಷಯ ಮನೆಯಲ್ಲಿ ನಡೆಯತೊಡಗಿತ್ತು. ಮಹಾದೇವಿಯ ಸುದ್ದಿಯನ್ನು ಹಿರಿಯರು ಎತ್ತಬಾರದೆ ಎಂದು ಚಟಪಟಿಸುತ್ತಿದ್ದ. ಶಂಕರಶೆಟ್ಟರು ರತ್ನಪಡಿ ವ್ಯಾಪಾರಿಗಳಾದುದರಿಂದ ಓಂಕಾರನಿಗಿಂತ ಸಿರಿವಂತಿಕೆಯಲ್ಲಿ ಒಂದು ತೂಕ ಹೆಚ್ಚು. ಅಲ್ಲದೆ ವರನ ತಂದೆ! ತಾವಾಗಿ ಏಕೆ ಮಹಾದೇವಿಗಾಗಿ ಕೇಳುವುದು ಎಂದು ಹಿಂಜರಿಯುತ್ತಿದ್ದರು. ತಂದೆಯ ಹಮ್ಮು ರಾಜಶೇಖರನಿಗೆ ಅರ್ಥವಾಯಿತು. ಆದರೆ ಮತ್ತೆಲ್ಲಿ ಮಹಾದೇವಿಯೂ ಕೈಬಿಟ್ಟು ಹೋಗುವಳೋ ಎಂದು ಚಟಪಟಿಸಿದ. ಅವನ ತಂಗಿ ಕಮಲಾಕ್ಷಿ ಮಹಾದೇವಿಯ ಕೆಳದಿ. ಅವರೆಲ್ಲ ಒಂದೇ ವಯಸ್ಕರು. ಕಮಲಾಕ್ಷಿಯನ್ನು ಬನವಾಸಿಗೆ ಲಗ್ನಮಾಡಿ ಕೊಟ್ಟಿದ್ದರು. ಲಗ್ನವಾದ ವರ್ಷದಮೇಲೆ ಗರ್ಭಿಣಿಯಾಗಿ ಚೊಚ್ಚಲು ಹೆರಿಗೆಗಾಗಿ ತವರಿಗೆ ಬಂದಿದ್ದಳು. ಅಣ್ಣತಂಗಿಯರು ಒಂದು ದಿನಸ ಪರದೇಶಿ ಮಲ್ಲಯ್ಯನ ಗುಡಿಗೆ ಪೂಜೆಗೆ ಹೊರಟಾಗ, ದಾರಿಯಲ್ಲಿ ಮಹಾದೇವಿಯೂ ಶೈಲಜೆಯೊಡನೆ ಅಲ್ಲಿಗೆ ಹೊರಟಿದ್ದಳು. ಎರಡು ಮಾರ್ಗಗಳ ಕೂಟದಲ್ಲಿ ಕೆಳದಿಯರು ಸಂಧಿಸಿದಾಗ, ಒಂದು ವರ್ಷದ ಬಳಿಕ ನೋಡಿ ತುಂಬಾ ಸಂತೋಷಿಸಿದರು.

'ಕುಶಲವಾಗಿರುವೆಯಾ ಕಮಲ....?' ಮಹಾದೇವಿ ಕೇಳಿದಳು. ಕಮಲಳು ತುಂಬ ಸುಖಿಯಾಗಿ ಇರುವಳೆಂದು ಮುಖದ ಕಾಂತಿಯೇ ಹೇಳುತ್ತಿತ್ತು.

'ಎಲ್ಲವೂ ಕುಶಲ, ನೀನು ಚೆನ್ನಾಗಿರುವೆಯಾ ?' ಕಮಲೆ ಕೇಳಿದಳು.

'ದೇವನ ಕರುಣೆಯಲ್ಲಿ ಎಲ್ಲವೂ ಸುರಕ್ಷಿತ....'

ಕೆಳದಿಯರು ಮಾತನಾಡುತ್ತ ಸಾಗಿದಾಗ ರಾಜಶೇಖರ ಹಿಂದೆ ಉಳಿದು

ನಿಧಾನವಾಗಿ ಬರತೊಡಗಿದ. ಮುಳುಗುವ ಸೂರ್ಯನಿಗೆ ಇದಿರಾಗಿ ನಡೆಯುವ ಮೂವರ ಮೇಲೆ ರವಿ ಕಿರಣಗಳು ಬಿದ್ದು ಅವರನ್ನು ಕಾಂತಿಯುಕ್ತವಾಗಿ ಮಾಡಿದ್ದವು. ಎಲ್ಲರ ನಡುವೆ ಮಹಾದೇವಿ ಎದ್ದು ಕಾಣುತ್ತಿದ್ದಳು. ಹಸನ್ಮುಖಿಯಾಗಿ ನಕ್ಕಾಗ ಕೆಂಪು ಬಣ್ಣದ ತುಟಿ ಅರಳಿ, ಶುಭ್ರ ಹಲ್ಲುಗಳು ಕಂಡಾಗ ದೇವಲೋಕದ ಅಪ್ಸರೆ ಎನಿಸುತ್ತಿತ್ತು. ಮೌನವಾಗಿ ದೃಷ್ಟಿಸಿದ. ಆಕೆ ನಿರಾಭರಣ ಸುಂದರಿ. ತಂಗಿ ಕಮಲಾಕ್ಷಿ, ಹೇಳಿಕೊಳ್ಳುವಷ್ಟು ಅಂದಗಾತಿಯಲ್ಲ. ಶಂಕರಶೆಟ್ಟರ ಪತ್ನಿ ಬಹಳ ಸುಂದರವಾಗಿದ್ದರು. ಶೆಟ್ಟರು ಸ್ವಲ್ಪ ಕಪ್ಪು ಬಣ್ಣದವರು. ರಾಜಶೇಖರ ತಾಯಿಯ ಹೋಲಿಕೆ ಪಡೆದು ತುಂಬ ಲಕ್ಷಣವಾಗಿದ್ದ. ಕಮಲಾಕ್ಷಿ ತಂದೆಯಿಂದ ರೂಪವನ್ನು ಎರವಲು ಪಡೆದಿದ್ದಳು. ಹುಟ್ಟಿದ, ಕೊಟ್ಟ ಎರಡೂ ಮನೆಯ ಸಿರಿಸಂತಿಕೆಯ ದ್ಯೋತಕವಾಗಿ ಮೈತುಂಬ ಆಭರಣಗಳು ಸಂಗ್ರಹವಾಗಿತ್ತು. ಏಕೈಕ ಪುತ್ರಿಯಾದ ಮಹಾದೇವಿಗೆ ಆಭರಣಗಳ ಕೊರತೆ ಏನೂ ಇರಲಿಲ್ಲ. ಅಂದು ಊಟಕ್ಕೆ ಹೋದಾಗ ಆಕೆ ಹಾಕಿಕೊಂಡಿದ್ದುದನ್ನು ಗಮನಿಸಿದ್ದನಷ್ಟೆ. ಆದರೆ ಸ್ವಭಾವತಃ ಸರಳಜೀವಿಯಾದ ಅವಳು ಇಂದು ಏನನ್ನೂ ಧರಿಸಿರಲಿಲ್ಲ. ಮುಖದ ಮೇಲಿನ ತ್ರಿಪುಂಡ್ರ, ಅದರ ಮೇಲೆ ಎದ್ದು ಕಾಣುವ ಕುಂಕುಮ, ಕಿವಿಯಲ್ಲಿ ರುದ್ರಾಕ್ಷಿಯ ತೂಗೋಲೆ. ಕೊರಳಿನಲ್ಲಿ ರುದ್ರಾಕ್ಷಿಯ ಸರ. ಕೈಯಲ್ಲಿ ಬಿಳಿಯ ಬಣ್ಣದ ಸಾಣೆ ಬಳೆಗಳು. ಮೈಯನ್ನು ಸುತ್ತಿದ್ದ ಅಚ್ಚ ಬಿಳಿಯ ಸೀರೆ. ಇದಿಷ್ಟೇ ಆಕೆಯ ಅಲಂಕಾರ.

ಮಹಾದೇವಿ ಕೈಯಲ್ಲಿ ತೆಂಗಿನಕಾಯಿ, ಹಣ್ಣುಗಳ ತಟ್ಟೆಯನ್ನು ಹಿಡಿದು ಮಾತನಾಡುತ್ತ ಸಾಗಿದ್ದಳು. ತಲೆಯ ಮೇಲಿನ ಹೊದ್ದಿಕೆ ಅರ್ಧ ತಲೆಯನ್ನು ಮುಚ್ಚಿದ್ದರೂ, ಮುಸುಕನ್ನು ತೂರಿ ಹೊರಗೆ ಹಾರುವ ಮುಂಗುರುಳು, ಮುಖಕಮಲದ ಸುತ್ತ ಹಾರುವ ದುಂಬಿಗಳಂತೆ ಸುಳಿಯುತ್ತಿದ್ದವು. ಸೆರಗನ್ನು ದಾಟಿ ಕೆಳಗೆ ತೂಗುತ್ತ ಮೊಳಕಾಲನ್ನು ಅಪ್ಪುತ್ತಿದ್ದ ಜಡೆಯು ಮೋಹಕವಾಗಿದ್ದಿತು. ಅವಳ ಅಂದಕ್ಕಿಂತ ಮಿಗಿಲಾಗಿ ನಿರಾಡಂಬರದ ಸರಳ ವ್ಯಕ್ತಿತ್ವ ಅವನನ್ನು ಸೆಳೆಯಿತು. ಹಿಮಾಲಯದ ಬೆಟ್ಟಗಳ ನಡುವೆ ನಿಂತ ಪ್ರಶಾಂತ ಮಾನಸ ಸರೋವರದಂತೆ ಆಕೆ ಕಂಡಳು.

ಗುಡಿಗೆ ಹೋಗಿ ನಮಸ್ಕರಿಸಿ ತಟ್ಟೆಯನ್ನು ಕಟ್ಟೆಯ ಮೇಲೆ ಇಟ್ಟರು. ರಾಜಶೇಖರನೂ ಒಳಗೆ ಬಂದು ಅನತಿ ದೂರದಲ್ಲಿ ನಿಂತನು. ಪೂಜೆಯ ಪರಿಕರಗಳನ್ನು ಪೂಜಾರಿ ತೆಗೆದುಕೊಳ್ಳಲು ಬಂದನು.

ಇವರೆಲ್ಲ ಅವನ ಕಣ್ಣೆದುರಿಗೆ ಆಡಿ ಬೆಳೆದ ಲಲನೆಯರು. ಅದರಿಂದಾಗಿ ಅವನಿಗೆ ಬಹಳ ಸಲಿಗೆ.

'ಓಹ್....ಕಮಲಾಕ್ಷಮ್ಮ ಒಂದಾಗಿ ಹೋಗಿ, ಎರಡಾಗಿ ಬಂದಿದ್ದಾಳೆ....' ಹಾಸ್ಯದ ನಗೆ ನಕ್ಕ.

'ಮಗ ಬೇಕಂತೀಯೋ, ಮಗಳು ಬೇಕು ಅಂತ ಸ್ವಾಮೀನ ಕೇಳಿ ಕೊಳ್ತೀಯೋ....'

'ಅವನು ಕೊಟ್ಟದ್ದು....'

'ಮಗಳಾದರೆ ಮಾದೇವಿ ಅಂಥವಳಿರಲಿ ಅಂತ ಕೇಳ್ಕಳವ್ವಾ....' ಪೂಜಾರಿ ಅಭಿಮಾನದಿಂದ ಹೇಳಿದ:

'ಏನವ್ವಾ ಮಹಾದೇವಿ....ನೀನೆಂದವ್ವಾ ಜೊತೆಗೂಡಿ ಬರೋದು....?' ನಗುತ್ತ ಕೇಳಿದ. ಮಹಾದೇವಿಯ ಮುಖ ನಾಚಿ ಕೆಂಪೇರಬಹುದೆಂದು ರಾಜಶೇಖರ ದಿಟ್ಟಿಸಿದ. ಆದರದು ಇದ್ದಂತೆಯೇ ಇತ್ತು.

'ಈಗಾಗಲೇ ಜೊತೆಗೂಡೇ ಬಂದಿದ್ದೀವಲ್ಲಾ ಪೂಜಾರ್ರೆ....' ನಸುನಗೆ ನಕ್ಕಳು. ರಾಜಶೇಖರ ಸ್ತಂಭೀಭೂತನಾದ. ಅವಳು ಉದ್ದೇಶಿಸಿ ಹೇಳಿದ್ದು ಎದೆಯ ಮೇಲಿನ ಇಷ್ಟಲಿಂಗವನ್ನು ಎಂದು ಅವನಿಗೆ ತಿಳಿಯಲಿಲ್ಲ. ತನ್ನನ್ನು ಕುರಿತೇ ಹೇಳುವಳೆಂದು ಕಲ್ಪಿಸಿ, ಅವಳ ದಿಟ್ಟತನಕ್ಕೆ ಬೆರಗಾದ.

ಕರ್ಪೂರದಾರತಿಯನ್ನು ಹಚ್ಚಿ ಬೆಳಗಿ ಗಂಟೆ ನಿನದಿಸುವಾಗ ಭಕ್ತಿಯಿಂದ ಕಣ್ಣುಮುಚ್ಚಿಕೊಂಡು ಕೈಜೋಡಿಸಿ ನಿಂತ ಮಹಾದೇವಿಯ ಭಂಗಿ ತುಂಬ ಸೆಳೆಯಿತು. ಕೊಳದಲ್ಲಿನ ನೈದಿಲೆಯ ಮೊಗ್ಗೆಯಂತೆ ಮುಚ್ಚಿದ ಬೆರಳುಗಳು ಕಂಡವು. ಕರ್ಪೂರದ ಆರತಿಯನ್ನು ತಂದು ಪೂಜಾರಿ ಎಲ್ಲರ ಮುಂದೆ ಹಿಡಿದ. ಭಾವಸಮಾಧಿಯಲ್ಲಿದ್ದು ಕಣ್ತೆರೆಯದ ಮಹಾದೇವಿಯ ಮುಂದೆ ಹಿಡಿದಾಗ ಆ ಬೆಳಗಿನಲ್ಲಿ ಆಕೆಯ ಮುಖ ಕಳಾಯುಕ್ತವಾಗಿ ಬೆಳಗಿತು.

'ತಾಯಿ, ಆರತಿ ತೆಗೆದುಕೋ....' ಪೂಜಾರಿಯ ದನಿಗೆ ಮಹಾದೇವಿ ಕಣ್ತೆರೆದಾಗ ತಾವರೆಯ ದಳ ಅರಳಿದಂತಾಯಿತು. ಮೌನವಾಗಿ ಆರತಿಯನ್ನು ಕಣ್ಣಿಗೊತ್ತಿಕೊಂಡಳು.

'ಮಾದೇವಮ್ಮ ನಿನ್ನ ಬಾಯಲ್ಲಿ ಒಂದು ಹಾಡು ಕೇಳುವಂತೆನಿಸಿದೆ. ಮುದುಕನಿಗೆ ಕೇಳಿಸುವೆಯಾ....?' ಬಂದಾಗಲೆಲ್ಲ ಹಾಡುವ ಪರಿಪಾಠ. ಎಲ್ಲರೂ ಕುಳಿತರು. ಕಣ್ಣು ಮುಚ್ಚಿ ಹಾಡಲಾರಂಭಿಸಿದಳು.

ಕಾಯ ಮೀಸಲಾಗಿ ನಿನಗರ್ಪಿತವಾಯಿತ್ತು.
ಕರಣ ಮೀಸಲಾಗಿ ನಿನಗರ್ಪಿತವಾಯಿತ್ತು.
ಆನೊಂದನರಿಯೆನಯ್ಯಾ.
ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ

ನೀನಲ್ಲದೆ ಪೆರತೊಂದ ನೆನೆವಡೆ
ಆಣೆ ನಿಮ್ಮಾಣೆ, ಚನ್ನಮಲ್ಲಿಕಾರ್ಜುನಾ.*

ಪ್ರತಿ ಒಂದೊಂದು ಪದವನ್ನು ಅನುಭವಿಸಿ ಹಾಡತೊಡಗಿದಾಗ, ಅದು ಕೇಳುಗರ ಮೇಲೆ ವಿಲಕ್ಷಣ ಪರಿಣಾಮ ಬೀರಿತು. ತನ್ನನ್ನು ಕುರಿತೇ ಹೇಳಿದ ಳೇನೋ ಎಂದು ಸಂದಿಗ್ಧತೆಗೆ ಒಳಗಾದ ರಾಜಶೇಖರ. ತನ್ನಂತೆಯೇ ಉತ್ಕಟ ಆಸೆ ಆಕೆಗೂ ಇದ್ದು, ವ್ಯಕ್ತಪಡಿಸಲಾರದೆ ಚಟಪಟಿಸುತ್ತಿರಬೇಕು. ಗಂಡುಸಾದ ತಾನೇ ಸಂಕೋಚದಿಂದ ತೊಳಲಾಡುವಾಗ ಅವಳು ಅಸಹಾಯಕಳಾಗಿರುವುದು ಏನು ದೊಡ್ಡದು! ಈ ತೊಳಲಾಟಕ್ಕೆ ಪೂರ್ಣವಿರಾಮ ಹಾಕಲು ಸಂಕಲ್ಪ ಮಾಡಿದ.

'ಇದನ್ನು ಬರೆದವರು ಯಾರವ್ವಾ....?' ಪೂಜಾರಿ ತೆಂಗಿನ ಹೋಳನ್ನು ಕೊಡುವಾಗ ಕೇಳಿದ.

'ನಾನೇ ಬರೆದುದು ಪೂಜಾರ್‍ರೆ....'

ಸಾಲೆಯನ್ನು ಕಲಿಯುವಾಗ ತಾನು ವಚನಗಳನ್ನು ಕಂಠಪಾಠ ಮಾಡಿ ಗುರುಲಿಂಗದೇವರ ಮುಂದೆ ಒಪ್ಪಿಸಿ, ಬೆನ್ನು ಚಪ್ಪರಿಸಿಕೊಂಡಿದ್ದ ರಾಜಶೇಖರ. ಅದೇ ವಚನದ ಧಾಟಿಯಲ್ಲಿ ಮಹಾದೇವಿ ಬರೆಯತೊಡಗಿದ್ದುದು ಕೇಳಿ, ಅವನ ಹೃದಯ ಕುಣಿದಾಡಿತು. ಅವಳೂ ಬರೆಯತೊಡಗಿದ್ದಾಳೆ ಎಂದು ಗೌರವ ತುಂಬಿತು. ಅವನ ಕಲ್ಪನೆಯ ಕುದುರೆ ಕಡಿವಾಣ ಹರಿದುಕೊಂಡು ಓಡತೊಡಗಿತು.

ಸುಂದರವಾದ ಸರೋವರದಲ್ಲಿ ದೋಣಿಯು ತೇಲುತ್ತಿದೆ; ಇವನು ಹುಟ್ಟು ಹಾಕುತ್ತಿದ್ದಾನೆ. ಮಹಾದೇವಿ ಹಾಡುತ್ತಿದ್ದಾಳೆ. ಅವಳು ಕಣ್ಣು ಮುಚ್ಚಿ ಹಾಡುವುದನ್ನೇ ಇವನು ನೆಟ್ಟನೋಟದಿಂದ ನೋಡುತ್ತಿದ್ದಾನೆ. ಮಂದಮಾರುತ ಆಹ್ಲಾದಕರವಾಗಿ ಬೀಸುತ್ತಿದೆ....

'ಅಣ್ಣಾ....ಹೊರಡೋಣವೇ?' ಕಮಲಾಕ್ಷಿಯ ಮಾತು ರಾಜಶೇಖರನ ಕನಸಿನ ಜೇಡನ ಬಲೆಯನ್ನು ತುಂಡರಿಸಿತು.

'ಹೂಂ....ನಡೆ....' ಮೌನಪ್ರೇಕ್ಷಕನಂತೆ ಆತ ಹಿಂಬಾಲಿಸಿದ. ಈಗ ಹುಣ್ಣಿಮೆಯ ಬೆಳದಿಂಗಳು. ಹೋಗುವಾಗ ಸೂರ್ಯನ ಬೆಳಗಿನಲ್ಲಿ ಬಂಗಾರದ ಪುತ್ಥಳಿಯಂತೆ ಕಂಡ ಆ ಶ್ವೇತಕನ್ಯೆ, ಈಗ ಹಿಮದ ಗೊಂಬೆಯಂತೆ ನಡೆಯುತ್ತಿದ್ದಾಳೆ. ದಾರಿಯಲ್ಲಿ ಅವರವರು ಚದುರುವ ಸ್ಥಳ ಬಂದಾಗ ಪರಸ್ಪರ ಬೀಳ್ಕೊಂಡರು. ನಡೆದ ಘಟನೆ, ನೋಡಿದ ದೃಶ್ಯಗಳನ್ನು ನೆನಪಿನ ತೆರೆಯ

* ಮ. ವ. ೧೫೪

ಮೇಲೆ ತಂದುಕೊಳ್ಳುತ್ತ ಸಾಗಿದ ರಾಜಶೇಖರನಿಗೆ ಎಚ್ಚರವಾದುದು ಕಮಲಾಕ್ಷಿ ಮಾತನಾಡಿಸಿದಾಗ.

'ಅಣ್ಣಾ....'

'ಹೂಂ....' ಎಚ್ಚರಗೊಂಡ.

'ನಿನ್ನನ್ನು ಬಿಟ್ಟು ಗೆಳತಿಯರ ಜೊತೆ ಸಾಗಿದುದಕ್ಕೆ ಬೇಸರವಾಯಿತೆ?'

'ಇಲ್ಲವಮ್ಮಾ....ಬಹುದಿನಕ್ಕೆ ಭೇಟಿಯಾಗಿರುವಿರಿ, ಅದು ಸಹಜ ತಾನೆ! ನಿಮ್ಮ ಸರಸದಲ್ಲಿ ನಾನೂ ಮೌನಪ್ರೇಕ್ಷಕನಾಗಿದ್ದೆ.'

'ಇಷ್ಟು ದಿನಸವಾದರೂ ಮದುವೆ ಮಾಡಿಕೊಳ್ಳುತ್ತಿಲ್ಲವೇಕೆ? ಅತ್ತಿಗೆಯನ್ನು ಕರೆತರುವ ಬಯಕೆ ಇಲ್ಲವೇ?' ಆತ್ಮೀಯತೆಯಿಂದ ಕೇಳಿದಳು.

'ಯೋಗ್ಯಳು ಸಿಗಬೇಕಲ್ಲ ಕಮಲಾ....ಇಬ್ಬರ ಆಸೆ-ಆಕಾಂಕ್ಷೆಗಳು ಒಂದಾಗಿ ಇರದಿದ್ದರೆ ಬದುಕು ಕಷ್ಟಕರವಾಗುವುದಲ್ಲವೆ?....'

'ಯೋಗ್ಯರು ಎಂದರೆ ಹೊಸದಾಗಿ ಕಟೆದು ತರಬೇಕೇನಣ್ಣಾ?....'

'ಕಮಲಾ, ನೀನು ಮನಸ್ಸುಮಾಡಿದರೆ ನನಗೆ ಉಪಕಾರ ಮಾಡಬಹುದು.'

'ಅಂತಹ ಉಪಕಾರ ನಾನೇನು ಮಾಡಬಲ್ಲೆನಣ್ಣ?'

'ಮಹಾದೇವಿ ಬಹಳ ಸುಗುಣಸಂತೆ, ಸಾತ್ವಿಕ ಹುಡುಗಿ. ಅಂತಹವಳನ್ನು ಕೈಹಿಡಿಯುವುದು ಸೌಭಾಗ್ಯವಲ್ಲವೆ?' ಮೆಲ್ಲನೆ ಪೀಠಿಕೆ ಹಾಕಿದ.

'ಆದರೆ ಆಕೆ ವಿಭೂತಿ-ರುದ್ರಾಕ್ಷಿಯ ವಿರಕ್ತೆಯಣ್ಣಾ. ಅವಳಿಗೆ ಲೌಕಿಕದಲ್ಲಿ ಆಸಕ್ತಿಯಿಲ್ಲ. ಅವಳ ಉಡಿಗೆ ತೊಡಿಗೆ ನೋಡಿದೆಯೋ ಇಲ್ಲವೋ....'

'ಅವಳ ಸರಳ ರೀತಿ ಅಂತರಂಗದ ಆದರ್ಶ ಮೌಲ್ಯಗಳಿಗೆ ಸಾಕ್ಷಿಯಾಗಿದೆ ತಂಗಿ. ಸಾತ್ವಿಕತೆ ವಿರಾಗಿಣಿಗಷ್ಟೇ ಅವಶ್ಯವಲ್ಲ, ಗೃಹಿಣಿಗೂ ಆದರ್ಶ ಲಕ್ಷಣ. ಭೋರ್ಗರೆಯುವ ಜಲಪಾತದಡಿ, ತಿರ್ರನೆ ತಿರುಗುವ ಸುಳಿಯಲ್ಲಿ ಯಾರೂ ಸ್ನಾನ ಮಾಡಲಾರರು, ನದಿಯ ಪ್ರಶಾಂತ ಭಾಗದಲ್ಲಷ್ಟೇ ಸ್ನಾನ ಮಾಡಬಲ್ಲರು....ಬೆಡಗುಗಾತಿಯರೊಡನೆ ಬದುಕು ಕರಕಷ್ಟ!'

'ಆದರೆ ಅವಳು ತುಂಬ ಅಂತರ್ಮುಖಿ, ಅಲಂಕಾರದಲ್ಲಿ ಅನಾಸಕ್ತಳು....'

'ಏನೇ ಇರಲಿ, ನನ್ನ ಅದೃಷ್ಟ ಚೆನ್ನಾಗಿದ್ದು ಅವಳು ಒಪ್ಪಿದರೆ ನನ್ನ ಬಾಳು ನಂದನವನವಾದೀತು....' ಭಾವುಕನಾಗಿ ನುಡಿದ ರಾಜಶೇಖರ.

'ನಿನ್ನ ಅದೃಷ್ಟ ಹಾಗಿರಲಿ, ಅವಳ ಅದೃಷ್ಟ ಚೆನ್ನಾಗಿರಬೇಕಷ್ಟೆ! ನಿನಗೇನಂತೆ ನಾ ಮುಂದೆ ತಾ ಮುಂದೆ ಎಂದು ತಮ್ಮ ಮಕ್ಕಳನ್ನು ಕೊಡಲು ಕನ್ಯಾಪಿತೃಗಳು ಸಾಲುಗಟ್ಟಿ ನಿಂತಿಲ್ಲವೆ?....'

'ಒಮ್ಮೆ ನನಗೆ ಅವಳೊಡನೆ ಮಾತನಾಡುವ ಅವಕಾಶ ಒದಗಿಸಿ ಕೊಡು.

ನಾನು ಉಪಕೃತನಾಗುವೆ....'

'ಅಷ್ಟು ದೊಡ್ಡ ಮಾತು ಬೇಡ. ನಿನಗಾಗಿ ಅಷ್ಟೂ ಮಾಡಲಾರನೆ? ನನ್ನ ಸೀಮಂತದ ದಿನ ಮನೆಗೆ ಕರೆತರುವೆ....'

ಆ ದಿನಕ್ಕಾಗಿ ರಾಜಶೇಖರ ಚಕೋರ ಪಕ್ಷಿಯಂತೆ ಕಾಯತೊಡಗಿದ. ಕಮಲಾಕ್ಷಿ ತಾಯಿಯೊಡನೆ ಓಂಕಾರನ ಮನೆಗೆ ಹೋಗಿ ಮಹಾದೇವಿಯನ್ನು ಕಳಿಸುವಂತೆ ಕೇಳಿಕೊಂಡಳು. ಲಿಂಗಮ್ಮ ಒಪ್ಪಿಕೊಂಡರೂ ಮಹಾದೇವಿ ಒಪ್ಪಲಿಲ್ಲ.

'ಬೇಡ ...ಕಮಲಾ ; ನನಗೆ ಯಾರೊಡನೆಯೂ ಬೆರೆಯಲು ಇಚ್ಛೆಯಿಲ್ಲ. ನಮ್ಮಪ್ಪ ಸಂಜೆ ಆರತಕ್ಷತೆಗೆ ಬಂದು, ಉಂಡು ಬರುವಳು.'

'ಅಪ್ಪನು ಸಂಜೆಗೆ ಬರಲಿ. ಆದರೆ ನೀನು ಮಧ್ಯಾಹ್ನವೇ ಬರಬೇಕು. ನೀನು ದೊಡ್ಡವಳಾದಾಗ ನಾನೆಷ್ಟು ಓಡಾಡಿದೆ. ನನಗಾಗಿ ಬರಲು ಒಪ್ಪಲಾರೆಯಾ?'

'ಮಧ್ಯಾಹ್ನದಿಂದ ಸಂಜೆಯುತನಕ ಹೇಗೆ ವೇಳೆ ಕಳೆಯುವುದು? ಅಬ್ಬಾ! ಲೌಕಿಕರೊಡನೆ ಹರಟುವುದೆಂದರೆ ಎಲ್ಲಿಲ್ಲದ ಬೇಸರ....'

'ನಮ್ಮಣ್ಣ ಮುತ್ತುರತ್ನಗಳ ಕ್ರಯಕ್ಕೆ ಸಂಚಾರಕ್ಕೆ ಹೋದಾಗ ವಚನಗಳುಳ್ಳ ತಾಡಓಲೆಗಳನ್ನು ತಂದಿದ್ದಾನೆ. ಅವು ಎಷ್ಟಿವೆ ಅಂತೀಯ, ಬಹಳಷ್ಟು!'

'ಅಹುದೇ....ನನಗೆ ತಿಳಿದೇ ಇಲ್ಲನಲ್ಲಾ? ಹಾಗಾದರೆ ಅವನ್ನು ನೋಡಲು ಬರುವೆನು ಕಮಲಾ....' ಮಹಾದೇವಿಯ ಕಿವಿ ನಿಮಿರಿ, ಹೃದಯ ಅರಳಿತು. ಮಗಳು ಲೌಕಿಕ ಮಾತುಗಳಲ್ಲಿ ಬೆರೆದಾದರೂ ಬಹಿರ್ಮುಖಳಾಗಲಿ ಎಂದು ತಾಯಿಯ ಬಯಕೆ. ಮಗಳಿಗೆ ಒತ್ತಾಯಮಾಡಿ ರೇಶಿಮೆಯ ಸೀರೆಯನ್ನುಡಿಸಿದಳು. ಜಾತಿಮುತ್ತಿನ ಸರವನ್ನು ಕೊರಳಿಗೆ ಹಾಕಿ ಕಳಿಸಿದಳು. ಮಹಾದೇವಿಗಿಂತಲೂ ಹತ್ತುಪಟ್ಟು ಹೆಚ್ಚು ಒಡವೆ ಹಾಕಿದ್ದರೂ ತಾನು ಆಕೆಯಷ್ಟು ಸುಂದರವಾಗಿ ಕಾಣುವುದಿಲ್ಲವಲ್ಲ ಎಂದು ಈರ್ಷೆ ಮೂಡಿದರೂ ಕಮಲಾಕ್ಷಿ, ಮಹಾದೇವಿಯಂತಹ ನಿಷ್ಕಲ್ಮಶ, ಮುಗ್ಧೆಯನ್ನು ಕುರಿತು ಅಸೂಯೆಪಡುವುದು ತರವಲ್ಲ ಎಂದು ಸಂತೈಸಿಕೊಂಡಳು.

ಕಮಲಾಕ್ಷಿಗೆ ಎಣ್ಣೆ ನೀರೆರೆದು, ಹಸಿರು ಬಳೆ, ಹಸಿರು ಸೀರೆ ಉಡಿಸಿ, ಊಟಕಿಕ್ಕಿದರು. ಆಕೆಯ ಪತಿಯೂ ಬಂದಿದ್ದನು. ಇಬ್ಬರನ್ನೂ ಹಸೆಯ ಮೇಲೆ ಕೂಡಿಸಿ ಆರತಿ ಮಾಡಿದಾಗ ಮಹಾದೇವಿಗೆ ನಗುಬಂದಿತು.

'ಮದುವೆ, ಮಕ್ಕಳು ಇವೇ ಲೌಕಿಕರ ಆತ್ಯಂತಿಕ ಸಿದ್ಧಿಗಳು. ಇವರ ದೃಷ್ಟಿಯಲ್ಲಿ ಗರ್ಭಿಣಿಯಾದುದೊಂದು ಅಸಾಮಾನ್ಯ ಸಾಧನೆ. ಅಬ್ಬಾ!

ಜಗತ್ತೊಂದು ಸಂತೆ....ಅರ್ಥವಿಲ್ಲದ ಗದ್ದಲ....!’ ಮೌನವಾಗಿ ವೀಕ್ಷಿಸಿ ದಳು.

ಮಧ್ಯಾಹ್ನದ ಊಟ ಮುಗಿಯುತ್ತಲೇ ಮಹಾದೇವಿಯ ತಾಳ್ಮೆ ಮೀರಿತು.

‘ನಾನಿನ್ನು ಹೊರಡಲೇ ಕಮಲಾ? ನಿನ್ನ ಪತಿಯೊಡನೆ ನಿನಗೆ ಮಾತು ಕತೆಯುಂಟೇನೋ....’

‘ಇದೇನೇ, ನೀನು ಬಂದ ಕಾರ್ಯವೇ ನೆರವೇರಿಲ್ಲ....’

ವಿಸ್ತಾರವಾದ ಭವ್ಯ ಮನೆಯದು. ಮಹಡಿಯ ಮೇಲೆ ರಾಜಶೇಖರನ ಕೋಣೆ. ಕಮಲಾಕ್ಷಿ ಮೆಲ್ಲನೆ ಮಹಾದೇವಿಯನ್ನು ಕರೆದೊಯ್ದಳು. ಮನೆ ಯನ್ನು ತೋರಿಸುತ್ತ ಬಂದಳು.

‘ನಮ್ಮಣ್ಣ ಬಹಳ ಓದುತ್ತಾನೆ ಮಾದೇವಿ. ಅಂಗಡಿಯಲ್ಲಿ ಕುಳಿತಾಗಲೂ ಅಷ್ಟೆ; ವೇಳೆ ಸಿಕ್ಕಿದಾಗಲೆಲ್ಲ ಅಧ್ಯಯನ ಮಾಡುತ್ತಾನೆ....’

‘ಅಡ್ಡಿಯಿಲ್ಲ....ಒಳ್ಳೆಯ ಅಭ್ಯಾಸ. ಅಧ್ಯಯನವೇ ವ್ಯಕ್ತಿತ್ವ ವಿಕಾಸದ ಮೂಲಸಾಧನೆ....’

‘ಇತ್ತೀಚೆಗಂತೂ ಲಿಂಗಪೂಜೆಯಲ್ಲಿ ಬಹಳಷ್ಟು ಆಸಕ್ತಿ. ನಸುಕಿನಲ್ಲಿಯೇ ಎದ್ದು ತಣ್ಣೀರಿನಲ್ಲಿ ಮಿಂದು, ಪೂಜೆಗೆ ತೊಡಗುತ್ತಾನೆ....’

‘ಅಹುದೇ?’

‘ಇಲ್ಲೆಲ್ಲ ನೋಡು ಎಷ್ಟು ತಾಡಓಲೆಗಳು; ಪೆಟ್ಟಿಗೆಗಳಲ್ಲಿವೆ. ಪೂಜೆಗೆ ವಿಘ್ನವಾಗಬಾರದೆಂದು ನಾವೆಲ್ಲ ಕೂಡುವಲ್ಲಿ ಪೂಜೆಗೆ ಕೂಡುವುದಿಲ್ಲ, ತಾನೇ ಬೇರೆ ವ್ಯವಸ್ಥೆ ಮಾಡಿಕೊಂಡಿರುವನು....’ ತನ್ನಂತೆಯೇ ಅವನೂ ಕೋಣೆಯ ಒಂದು ಭಾಗದಲ್ಲಿ ಪೂಜೆಯ ಪರಿಕರಗಳನ್ನು ಇರಿಸಿಕೊಂಡಿದ್ದ. ಗಂಧದ ಕಡ್ಡಿಯ ಸುವಾಸನೆ, ತಾಡಓಲೆಗಳ ಭಂಡಾರ ಆಪ್ಯಾಯಮಾನ ಎನ್ನಿಸಿದವು.

‘ಮನೆಗೆ ಗ್ರಂಥಗಳ ಭಂಡಾರವೇ ಶೃಂಗಾರ; ಮನಕ್ಕೆ ಲಿಂಗಪೂಜೆಯೇ ಶೃಂಗಾರ ನೋಡು ಕಮಲ....’ ಮಹಾದೇವಿ ಹೇಳಿದಳು.

ಕೆಲವು ಕಟ್ಟುಗಳನ್ನು ತೆಗೆದು ಚಾಪೆಯ ಮೇಲೆ ಕುಳಿತು ಕಣ್ಣಾಡಿಸಿದಳು ಮಹಾದೇವಿ. ರಾಜಶೇಖರ ಒಳಗೆ ಬಂದ. ಶುಭ್ರಬಿಳಿಯ ಪಂಚೆಯ ಕಚ್ಚೆ ಯನ್ನು ಹಾಕಿದ, ಬಿಳಿಯ ಬಗಲುಕಸೆಯ ಅಂಗಿಯನ್ನು ಉಟ್ಟ ಸುಲಕ್ಷಣ ಯುವಕ ರಾಜಶೇಖರ. ಹಣೆಯ ಮೇಲಿನ ವಿಭೂತಿಯ ಅಡ್ಡಗೆರೆಗಳು ತಿಳಿ ಗೆಂಪು ವರ್ಣದ ಮುಖದ ಅಂದವನ್ನು ಹೆಚ್ಚಿಸಿದ್ದವು. ಗುಂಗುರು ಗುಂಗುರಾದ ತಲೆಕೂದಲು, ಚಿಗುರು ಮೀಸೆಯ ತಾರುಣ್ಯಕ್ಕೆ ಪುಟವಿಕ್ಕಿದ್ದವು.

‘ನಮ್ಮಣ್ಣ ರಾಜಶೇಖರ....’ ಕಮಲಾಕ್ಷಿ

'ಶರಣು ರಾಜಣ್ಣ' ಸಹೋದರಿಕೆಯ ಪ್ರಯೋಗ ಕೇಳಿ ಕಸಿವಿಸಿಗೊಂಡ ರಾಜಶೇಖರ.

'ಶರಣಾರ್ಥಿ....' ಕೈ ಜೋಡಿಸಿದ.

'ನಿಮ್ಮ ಒಪ್ಪಿಗೆ ಇಲ್ಲದೆ ಕೋಣೆಗೆ ನುಗ್ಗಿ, ಆಸ್ತಿಯನ್ನು ಕೊಳ್ಳೆ ಹೊಡೆಯುತ್ತಿದ್ದೇನೆ. ಮನ್ನಿಸುವಿರಷ್ಟೆ....' ನಸುನಗುತ್ತ ಕೇಳಿದಳು. ಆ ನಗೆ ಬಹು ಮೋಹಕವೆನಿಸಿತು.

'ನನ್ನ ಆಸ್ತಿಯನ್ನೆಲ್ಲ ನಿಮ್ಮದೆಂದು ಸ್ವೀಕರಿಸಿದರೆ ನಾನು ಧನ್ಯ....' ರಾಜಶೇಖರ ನುಡಿದ.

'ವಚನಗಳ ಅಧ್ಯಯನ ಮಾಡುತ್ತೀರಂತೆ....ತುಂಬ ಸಂತೋಷ....'

'ಸಾಹಿತ್ಯಸೃಷ್ಟಿಗೆ ಆಗಲಿ, ಆಧ್ಯಾತ್ಮಸಾಧನೆಗೆ ಆಗಲಿ, ತಕ್ಕ ಬೌದ್ಧಿಕ ಸಂಗಾತಿಗಳು ದೊರೆತರೆ ಒಳ್ಳೆಯದಲ್ಲವೆ....?' ರಾಜಶೇಖರ ಕೇಳಿದ.

'ಬೌದ್ಧಿಕ ಸಂಗಾತಿಗಳು ಸಿಗುವುದೇ ಅತಿ ದುರ್ಲಭ ಈ ಜಗತ್ತಿನಲ್ಲಿ. ಸಂಸಾರ, ಮದುವೆ, ಮಕ್ಕಳು, ಆಸ್ತಿ ಇವೇ ಹೆಚ್ಚು ಜನರ ಆಸಕ್ತಿಯ ಕೇಂದ್ರ ಬಿಂದುಗಳು. ಈ ಮಿತವಲಯವನ್ನು ದಾಟಿ ಜನರ ವಿಚಾರವೇ ಓಡುವುದಿಲ್ಲ' —ಮಹಾದೇವಿ ಹೇಳಿದಳು.

'ಪೂಜೆ, ಅಧ್ಯಯನ ಇಂತಹುದರಲ್ಲಿ ಪಾಲ್ಗೊಳ್ಳಬಲ್ಲ ಯೋಗ್ಯ ವಧುವಿಗಾಗಿ ಅಣ್ಣನು ಒಂದೇ ಸಮನೆ ಹುಡುಕುತ್ತಿದ್ದಾನೆ....' ಕಮಲಾಕ್ಷಿ ಹೇಳಿ ಮೆಲ್ಲನೆ ಅಲ್ಲಿಂದ ಜಾರಿಕೊಂಡಳು.

'ಇನ್ನೂ ಸಿಕ್ಕಿಲ್ಲವೇ?' ತಾಡಓಲೆಯಿಂದ ಕಣ್ಣು ತೆಗೆಯದೆ ಮಹಾದೇವಿ ಕೇಳಿದಳು.

'ಸಿಕ್ಕಿದ್ದಾಳೆ....ಆದರೆ ಒಪ್ಪಬೇಕಾದುದಷ್ಟೆ ಉಳಿದಿದೆ....' ರಾಜಶೇಖರ ಮಾರ್ಮಿಕವಾಗಿ ನುಡಿದ.

'ನೀವೋ, ಅವಳೋ....?'

'ನಾನೇನೋ ಒಪ್ಪಿಯಾಗಿದೆ, ಆಕೆಯಷ್ಟೇ ಒಪ್ಪುವುದು ಉಳಿದಿದೆ. ಮದುವೆಯ ವಿಚಾರದಲ್ಲಿ ಇಬ್ಬರ ಒಪ್ಪಿಗೆಯೂ ಅತ್ಯಾವಶ್ಯವಲ್ಲವೆ? ಇಬ್ಬರ ಆಸೆ-ಆಕಾಂಕ್ಷೆ, ಆದರ್ಶಗಳು ಒಂದುಗೂಡಿದರೆ ಒಳ್ಳೆಯದು. ಇಲ್ಲವಾದರೆ ಅಣ್ಣನವರು ಹೇಳುವಂತೆ ಗಂಡ ಶಿವಲಿಂಗ ದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ. ಇಜ್ಜೋಡಾಗಿ ಸಂಸಾರ ಸಮರಸದ ಠಾವಾಗುವ ಬದಲು ಸಮರಾಂಗಣವಾಗಿಬಿಡಬಹುದಲ್ಲವೇ?'

'ಒಳ್ಳೆಯ ಪರಿಪ್ಲುತ ವಿಚಾರ....ಆಕೆಯೂ ಒಪ್ಪಿ ನಿಮ್ಮ ಬಾಳು ಹಸ

ನಾಗಲೆಂದು ಹಾರೈಸುವೆ....' ಮಹಾದೇವಿ ಪ್ರಸನ್ನಮುಖಿಯಾಗಿ ಹೇಳಿದಳು.

'ನೀವು ಸಹಾಯ ಮಾಡಿದರೆ ಅದೂ ಸಾಧ್ಯ....'

'ಅವರಾರೋ ನಾನರಿಯೆ. ನಾನ್ಹೇಗೆ ಒಪ್ಪಿಸಬಲ್ಲೆ....?'

'ಅವರು ಉಡುತಡಿಯ ಓಂಕಾರಶೆಟ್ಟರ ಏಕೈಕ ಪುತ್ರಿ ಮಹಾದೇವಿ....' ಮಹಾದೇವಿಯ ಮುಖವನ್ನು ನಿಟ್ಟಿಸುತ್ತ ಹೇಳಿದನು.

'ಅಂ....ನಾನೇ....' ಮೂಕಚೇತನಳಾದಳು.

'ನೀವು ಮನಸ್ಸು ಮಾಡಿದರೆ ನನ್ನ ಬಾಳು ನಂದನವನವಾಗುವುದು, ಮಹಾದೇವಿ....ಲೌಕಿಕವೃತ್ತಿಯವನು ನಾನಲ್ಲ; ವಿಷಯಮೋಹಿ ನಾನಲ್ಲ. ಆದರ್ಶ ಗುರಿಯವನು; ಪೂಜಾ ನಿಷ್ಠನು....'

'ರಾಜಣ್ಣಾ....ನಾನೇ....? ನನ್ನನ್ನು ಉದ್ದೇಶಿಸಿ ಹೇಳುತ್ತಿರುವೆಯಾ?'

'ಅಣ್ಣಾ....ಅನ್ನದಿರು ಮಹಾದೇವಿ.'

'ನನಗಾಗಲೇ ಮದುವೆಯಾಗಿದೆ ರಾಜಣ್ಣ....'

'ಅಹುದೇ....?' ಸ್ವಲ್ಪ ದೂರದಲ್ಲಿದ್ದ ರತ್ನಗಂಬಳಿಯ ಮೇಲೆ ಕುಸಿದು ಕುಳಿತ.

'ಚನ್ನಮಲ್ಲಿಕಾರ್ಜುನ ದೇವನಿಗೆ ನನ್ನ ಸರ್ವಸ್ವವನ್ನೂ ಅರ್ಪಿಸಿರುವೆ ಅಣ್ಣಾ. ಎನ್ನ ಮನವ ಮಾರುಗೊಂಡ, ತನುವನ್ನು-ಇರವನ್ನು ಇಂಬುಗೊಂಡ ಆ ದೇವ ಪ್ರಿಯನ ಮೀಸಲ ಸೊತ್ತಾನು. ಅವನನ್ನು ಬಿಟ್ಟು ಉಳಿದವರೆಲ್ಲ ನನ್ನ ಅಣ್ಣಂದಿರು, ಹೆತ್ತವರು....'

'ನನ್ನನ್ನು ಹತಾಶನನ್ನಾಗಿ ಮಾಡದಿರು ಮಹಾದೇವಿ; ಬಹುದಿವಸಗಳ ಕನಸನ್ನು ಒಂದೇ ಕ್ಷಣದಲ್ಲಿ ನುಚ್ಚುನೂರು ಮಾಡಬೇಡ....'

'ಹೃದಯ ಕಮಲದಲ್ಲಿ ತುಂಬಿ ಕುಳಿತಿರುವ ಅವನನ್ನುಳಿದು ಇಲ್ಲಿ ಬೇರಾರಿಗೂ ಎಡೆಯಿಲ್ಲವಣ್ಣಾ....'

'ನಿನ್ನ ಹತ್ತಿರದವನು ನಾನಾಗಬೇಕೆಂಬುದು ಬಹುದಿನದ ಹಂಬಲ....'

'ಅಣ್ಣನಿಗಿಂತ ಹತ್ತಿರದವರು ಮತ್ತಾರಾದಾರು! ಬದುಕಿನಲ್ಲಿ ಹತ್ತಾರು ಸಂಬಂಧ ಸಾಧ್ಯವಿದೆ; ಅಣ್ಣ-ತಂಗಿ, ತಾಯಿ-ಮಗ, ತಂದೆ-ಮಗಳು....'

'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬುದು ಶರಣರ ನುಡಿ. ಆಧ್ಯಾತ್ಮಯುಕ್ತ ಸಂಸಾರ-ಯೋಗ ಏಕೆ ಕೈಗೊಳ್ಳಬಾರದು? ಅದರಲ್ಲೇನು ತಪ್ಪು....'

'ತಪ್ಪು ಒಪ್ಪಿನ ಪ್ರಶ್ನೆ ಇಲ್ಲಿಲ್ಲ. ಏಕೆ ಎಂಬುದಕ್ಕೆ ಉತ್ತರವೂ ಇಲ್ಲ. ಆ ಪರಮಾತ್ಮನಿಗೆ ನನ್ನ ಮನ ಮಾರು

ಯಾಗಿ ಉಳಿಯುವ ಸಂಕಲ್ಪ ಮಾಡಿರುವೆ....'

'ಅಬಲೆಯಾದ ಹೆಣ್ಣಿಗೆ ವಿರಕ್ತಿಯ ಹಾದಿ ಕ್ಲಿಷ್ಟಕರ....' ರಾಜಶೇಖರ ನುಡಿದ.

'ಸಂಕಲ್ಪಕ್ಕಿಂತ ದೊಡ್ಡದು ಬದುಕಿನಲ್ಲಿ ಯಾವುದೂ ಇಲ್ಲ. ದೃಢಸಂಕಲ್ಪವೇ ಗಂಡುತನ; ಚಂಚಲತೆಯೇ ಹೆಣ್ಣುತನ....'

'ಕಡೆಯವರೆಗೂ ವಿರಕ್ತಿಯ ಮಾರ್ಗದಲ್ಲೇ ಇರುವ ಸಂಕಲ್ಪವೇ....?'

'ಅಹುದು, ಬೆಟ್ಟಗಳು ಪುಡಿಯಾಗಲಿ, ನದಿಯ ನೀರು ಕುದಿಯಲಿ, ಸೂರ್ಯ ಇದ್ದಿಲಾಗಲಿ, ನನ್ನ ಸಂಕಲ್ಪ ಬದಲಾಗದು....' ಮಹಾದೇವಿಯ ಕಣ್ಣಿನಲ್ಲಿ ವಿಲಕ್ಷಣ ತೇಜಸ್ಸು ಮಿನುಗಿತು.

'ಸತಿ-ಪತಿಯೊಂದುಗೂಡಿ ಆಧ್ಯಾತ್ಮ ಮಾರ್ಗದಲ್ಲಿ ನಡೆಯಲು ಬರದೆ? ನಿನ್ನ ಯಾವ ಪೂಜೆ ಪುರಸ್ಕಾರ, ದಾನ-ಧರ್ಮಗಳಿಗೆ ನಾನು ಅಡ್ಡ ಬರುವುದಿಲ್ಲ. ನಿನಗೆ ಮಾರಕವಾಗೆನು, ಪೂರಕವಾಗುವೆ; ಬಾಧಕವಾಗೆನು, ಸಾಧಕವಾಗುವೆ....' ಸ್ಪಷ್ಟದನಿಯಲ್ಲಿ ಹೇಳಿದ.

'ಧಾರ್ಮಿಕತೆಗೂ—ಆಧ್ಯಾತ್ಮಿಕತೆಗೂ ಸ್ವಲ್ಪ ವ್ಯತ್ಯಾಸವಿದೆ ರಾಜಣ್ಣ. ಹಾಲಿನಲ್ಲಿ ಹಾಲಿನ ಕೆನೆಯುಂಟು. ಹಾಲಿನ ಕೆನೆ ಹಾಲು ನಿಜ, ಆದರೆ ಹಾಲು ಹಾಲಿನ ಕೆನೆಯಲ್ಲ. ಹಾಲಿಗಿಂತಲೂ ಹೆಚ್ಚಿನ ಬೆಣ್ಣೆಯ ಅಂಶ ಕೆನೆಯಲ್ಲಿರುವುದು. ಹಾಗೆಯೇ ಧಾರ್ಮಿಕತೆಯಲ್ಲಿ ದೇವರಲ್ಲಿ ನಂಬುಗೆಯುಂಟು. ಆದರೆ ಆಧ್ಯಾತ್ಮಿಕತೆಯಲ್ಲಿ ದೇವರಲ್ಲಿ ನೆರೆನಂಬುಗೆಯುಂಟು, ಅಚಲ ವಿಶ್ವಾಸವುಂಟು. ಕೆನೆಯಲ್ಲಿ ಬೆಣ್ಣೆ ಘನೀಭೂತವಾಗಿರುವಂತೆ ಆಧ್ಯಾತ್ಮಿಕತೆಯಲ್ಲಿ ಶರಣಾಗತಿ ಘನೀಭೂತವಾಗಿರುವುದು.

ಅನ್ನವ ನೀಡುವವರಿಂಗೆ ಧಾನ್ಯವೆಸೆವ ಲೋಕ,
ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ,
ಹೆಣ್ಣು, ಹೊನ್ನು, ಮಣ್ಣು ಮೂರನೂ
ಕಣ್ಣಿನಲ್ಲಿ ನೋಡಿ ಕಿವಿಯಲ್ಲಿ ಕೇಳಿ,
ಕೈಯಲ್ಲಿ ಮುಟ್ಟಿಮಾಡುವ ಭಕ್ತಿ,
ಸಣ್ಣವರ ಸಮಾರಾಧನೆಯಾಯಿತು.
ತನ್ನನಿತ್ತು ತುಷ್ಟಿಪಡೆವರನೆನಗೆ ತೋರಾ,
ಶ್ರೀಗಿರಿ ಚನ್ನಮಲ್ಲಿಕಾರ್ಜುನಾ.*

ತನ್ನದಾದ ವಸ್ತುಗಳನ್ನು ದೇವನಿಗೆ ಅರ್ಪಿಸುವುದು ಧಾರ್ಮಿಕತೆಯಾದರೆ, ತನ್ನನ್ನೇ ಇತ್ತುಕೊಳ್ಳುವುದು ಆಧ್ಯಾತ್ಮಿಕತೆ. ಅನ್ನವನ್ನಿತ್ತು, ಅರ್ಥವನ್ನಿತ್ತು, ಮರಳಿ ಸಂಪತ್ತು ಬಯಸುವ ಸಕಾಮವು ಧಾರ್ಮಿಕತೆಯಲ್ಲಿ ಸಮಾವೇಶ ವಾದರೆ, ತನ್ನನ್ನೇ ಇತ್ತು ದೇವನಿಂದ ಲೌಕಿಕವಾದುದು ಏನನ್ನೂ ಬಯಸದೆ ಅವನನ್ನು, ಅವನ ಕರುಣೆಯನ್ನು ಬಯಸುವುದು ನಿಜವಾದ ಆಧ್ಯಾತ್ಮ, ಅಂತಹ ಬದುಕು ನನ್ನದಾಗಬೇಕೆಂಬ ಆಸೆಯುಂಟು ರಾಜಣ್ಣ.

ಹೆಣ್ಣು ಮಣ್ಣು ಹೊನ್ನುಗಳನ್ನು ತಾನೂ ಆನಂದಿಸಿ, ಆ ಆನಂದದ ಮಧ್ಯ ದಲ್ಲೂ ದೇವನಿಗೆ ಅರ್ಪಿತ ಮಾಡುವುದು ಮರೆಯದಿದ್ದರೆ ಅದು ಧಾರ್ಮಿಕತೆ. ವ್ಯವಹಾರ ಮಾಡಿ, ಬಂದ ಲಾಭದಲ್ಲಿ ದೇವನಿಗೆ ಒಂದು ಪಾಲು ನೀಡಿದಂತೆ; ಆದರೆ ನನ್ನ ಮಾರ್ಗ—ಇವಾವನ್ನೂ ಕಣ್ಣಿನಲ್ಲಿ ನೋಡದೆ, ಕೈಯಲ್ಲಿ ಮುಟ್ಟದೆ ಸಂಪೂರ್ಣವಾಗಿ ಎಡೆಮಾಡುವುದು ಆಗಿದೆ. ಅಂದರೆ ಇದು ಮೂಲ ಧನವನ್ನೇ ಅರ್ಪಿತ ಮಾಡಿದಂತೆ. ಆದ್ದರಿಂದ ನನ್ನ ಶರೀರವಾಗಲಿ, ಮನ ವಾಗಲಿ ನನ್ನ ಸ್ವತ್ತಲ್ಲ, ಆಗಲೇ ಅರ್ಪಿತವಾಗಿರುವ ಚನ್ನಮಲ್ಲಿಕಾರ್ಜುನನ ಸ್ವತ್ತು....

ಅವರವರ ಗುರಿಗೆ ತಕ್ಕಂತೆ ಮಾರ್ಗವನ್ನು ಹಿಡಿಯಬೇಕಷ್ಟೆ. ಅನ್ನವನ್ನಿಕ್ಕಿ, ಅರ್ಥವನ್ನು ನೀಡಿದರೆ ಪುಣ್ಯ ಸಂಚಯವಾಗಿ ಧನಕನಕ ಸಂಪತ್ತಿನ ಸ್ವರ್ಗ ಲೋಕ ದೊರೆಯಬಹುದು; ಮರುಜನ್ಮದಲ್ಲಿ ಯಥೇಚ್ಛವಾಗಿ ಸಂಪದವೂ ಸಿಗಬಹುದು. ಆದರೆ ಇದು ಮುಕ್ತಿಯಲ್ಲ; ತನ್ನ ವಸ್ತುಗಳನ್ನು ದಾನಮಾಡು ವುದರಿಂದ ಸ್ವರ್ಗ ಸಿಕ್ಕರೆ, ತನ್ನನ್ನೇ ದೇವನಿಗೆ ಇತ್ತುಕೊಂಡರೆ ಮುಕ್ತಿ ಸಿಗುವುದು....'

'ಸ್ವರ್ಗ ಮತ್ತು ಮುಕ್ತಿಯಲ್ಲಿ ವ್ಯತ್ಯಾಸವಿದೆಯೆ?' ರಾಜಶೇಖರ ಪ್ರಶ್ನಿ ಸಿದ.

'ನಿಶ್ಚಯವಾಗಿಯೂ; ಸ್ವರ್ಗವು ಭೋಗಭೂಮಿ. ಪುಣ್ಯಸಂಚಯವಾದ ವನು ಪುಣ್ಯದ ಗಂಟಿನೊಡನೆ ಆ ವಿಲಾಸಗೃಹಕ್ಕೆ ಹೋಗಿ ಆನಂದಿಸುವನು. ಎಂದು ಪುಣ್ಯದ ಸಂಚಯ ತೀರುವುದೋ ಆಗ ಆ ವಿಲಾಸಗೃಹದಿಂದ ಹಿಂತಿರುಗಿ, ಮತ್ತೆ ಈ ಕರ್ಮಭೂಮಿಯಲ್ಲೇ, ಕರ್ತಾರನ ಕಮ್ಮಟವಾದ ಈ ಮರ್ತ್ಯದಲ್ಲೇ ತನ್ನ ಸಂಸ್ಕಾರದ ಗಂಟನ್ನು ಕಟ್ಟಿಕೊಳ್ಳಬೇಕು. ಆದರೆ ಪುಣ್ಯ ಪಾಪಗಳಿಗೆ ಅತೀತವಾಗಿ ಕಾರ್ಯಮಾಡಿ, ದೇವನಿಗೆ ಶರಣಾಗತನಾದರೆ ಅವನ ಸಂಸ್ಕಾರದ ಬೀಜಗಳು ಸುಜ್ಞಾನದ ಅಗ್ನಿಯಲ್ಲಿ ಹುರಿಯಲ್ಪಟ್ಟು, ಮುಕ್ತಿಯಾಗುವುದು. ಮತ್ತೆ ಭವದ ಕೋಟಲೆಯಿಲ್ಲ...

ನಾನು ಶಿವಪಥವನ್ನು ಹಿಡಿಯುತ್ತಿರುವೆ....'

'ಅಥವಾ ನಾನು ನಿನ್ನಷ್ಟು ಅಂದವಾಗಿಲ್ಲವೆಂದು ನಿನಗೆ ಒಪ್ಪಲು ಆತಂಕ ವೆನಿಸಿದೆಯೋ....' ರಾಜಶೇಖರ ಕೇಳಿದ.

'ಶಿವಾ ಶಿವಾ! ಕ್ಷಮಿಸು ರಾಜಣ್ಣ. ಬಹಿರಂಗಸೌಂದರ್ಯವನ್ನು ಗಮನಿಸುವ ಚರ್ಮಚಕ್ಷುಗಳು ಅಳಿದುಹೋಗಿ ಹಲವಾರು ತಿಂಗಳಾದವು. ಅಂತರಂಗದ ಕಣ್ಣಷ್ಟೇ ಉಳಿದಿವೆ. ಅದರ ಮೂಲಕ ನೋಡಿದಾಗ ನೀವು ಸದ್ಗುಣವಂತರು! ಅಲ್ಲದೆ, ನನ್ನಲ್ಲಿ ನಾನು ಚೆಲುವೆ ಎಂಬ ಭಾವ, ಚೆಲ್ವಿಕೆಯ ಅಹಂಕಾರ ಎಳ್ಳಷ್ಟು ಇಲ್ಲ. ಬಿದ್ದುಹೋಗುವ ಕ್ಷಣಿಕ ಕಾಯ ಇದಲ್ಲವೇ ರಾಜಣ್ಣ? ಕಾಮದಿಂದ ಹುಟ್ಟಿದ ಒಡಲು, ಕ್ರೋಧ-ಲೋಭಗಳ ತವರ್ಮನೆ, ಮೋಹ-ಮದಗಳ ನೆಲೆವೀಡು, ಮತ್ಸರದ ಭಾವಿ. ಈ ಶರೀರಾಭಿಮಾನ ಬತ್ತಿದಲ್ಲದೆ ಶಿವಪಥದಲ್ಲಿ ಕಾಲಿಕ್ಕಲು ಸಹ ಇಂಬಿಲ್ಲ....'

'ಮಹಾದೇವಿ, ವಯಸ್ಸಿಗೆ ಮೀರಿದ ನಿನ್ನ ಅರಿವಿನ ನಿಲುವನ್ನು ನೋಡಿ ನನ್ನ ಹೃದಯ ತುಂಬುತ್ತದೆ. ನಿನ್ನನ್ನು ಕೈಹಿಡಿಯುವ ಭಾಗ್ಯ ನನಗಿಲ್ಲವೆಂದು ಖೇದವೆನಿಸುತ್ತದೆ. ನಿನ್ನ ಮಾತನ್ನು ಕೇಳುತ್ತಿದ್ದರೆ ಈ ವ್ಯವಹಾರ, ಈ ಮದುವೆ, ಸುಡುಗಾಡು-ಸಂತೆ ಎಲ್ಲವನ್ನು ಬೀಸಾಟ ಹೋಗಬೇಕೆನ್ನಿಸುತ್ತದೆ....'

'ಆದರೆ ಇನ್ನೊಬ್ಬರನ್ನು ನೋಡಿ ಮಾಡಹೋಗಬೇಡಿ. ಶ್ರೀಗಂಧದ ಮರದೊಡನೆ ಬೇವು ತಿಕ್ಕಿದಾಗ ಅದಕ್ಕೂ ಶ್ರೀಗಂಧದ ವಾಸನೆ ಸೋಂಕಿ, ಮೂಸಿ ನೋಡಿದಾಗ ಅದೂ ಶ್ರೀಗಂಧವೇನೋ ಎನ್ನಿಸುತ್ತದೆ. ಬೆಂಕಿಯ ಬಾಯಿಗೆ ಆವೆರಡೂ ಬಿದ್ದಾಗ, ಶ್ರೀಗಂಧದ ವಾಸನೆಯೇ ಬೇರೆ, ಬೇವಿನ ವಾಸನೆಯೇ ಬೇರೆ. ಅಂದರೆ ಇದರರ್ಥ ಹೆಮ್ಮೆಯಿಂದ ನಾನು ನನ್ನನ್ನು ಶ್ರೀಗಂಧಕ್ಕೆ ಹೋಲಿಸಿಕೊಂಡೆ ಎಂದುಕೊಳ್ಳಬೇಡಿ. ಒಂದು ಸಾಮಾನ್ಯ ತತ್ತ್ವವನ್ನು ಹೇಳುತ್ತಿರುವೆ. ಒಬ್ಬ ವಿರಕ್ತನನ್ನು ನೋಡಿ ಸ್ಫೂರ್ತಿಗೊಂಡು ಇನ್ನೊಬ್ಬನೂ ಆದರೆ, ಮೊದಲು ಅದು ಚೆಂದ ಕಂಡರೂ, ದೇವರು ಕಷ್ಟ-ಅಪಮಾನಗಳ ಬೆಂಕಿಯಲ್ಲಿ ಹಾಕಿ ಸುಡತೊಡಗಿದಾಗ ಊರ್ವರ ವ್ಯಕ್ತಿತ್ವ ಬಯಲಿಗೆ ಬರುವುದು. ವಿರಕ್ತಿಯ ನನೆ ನಿಮ್ಮಲ್ಲಿ ಒಳಗಿನಿಂದ ಅರಳಿಬರಲಿ. ಮೊಗ್ಗಿನ ಪಕಳೆಗಳನ್ನು ಬೆರಳುಗಳಿಂದ ಬಲವಂತವಾಗಿ ಬಿಚ್ಚಿದರಾಗದು, ಅದು ತಾನಾಗಿ ಸ್ಫೋಟಗೊಂಡು ಅರಳಬೇಕು.'

'ಹಾಗಾದರೆ ನಿನ್ನ ಸಮೀಪದವನಾಗುವ ಭಾಗ್ಯ ನನಗಿಲ್ಲವಾಯಿತು ಮಾದೇವಿ....' ವಿಷಾದದ, ಮೆಲು ದನಿಯಲ್ಲಿ ಹೇಳಿದ.

‘ಹಾಗೇಕೆ ನಿರಾಶೆಯ ನುಡಿಯಾಡುವಿ ? ಎಂದೆಂದೂ ನನ್ನ ಅಣ್ಣನಾಗುವ ಅವಕಾಶವಿಲ್ಲವೇ ? ಒಂಟಿಯಾಗಿ ಹುಟ್ಟಿದ ನನ್ನ ನೋವನ್ನಾದರೂ ಮರೆಯುವೆ....ನಾನಿನ್ನು ಹೊರಡಲೇ....?’ ಮಹಾದೇವಿ ಕೇಳಿದಳು ; ರಾಜಶೇಖರ ಗದ್ಗದಿತನಾಗಿದ್ದ.

‘ಮಹಾದೇವಿ, ನೀನೆಷ್ಟೇ ದೊಡ್ಡವಳಾದರೂ, ನಿನ್ನ ಸರ್ವಾಂಗದಲ್ಲೂ ಚನ್ನಮಲ್ಲಿಕಾರ್ಜುನನೇ ತುಂಬಿಕೊಂಡಿದ್ದರೂ, ಈ ನಿನ್ನಣ್ಣನಿಗೆ ಒಂದಿಷ್ಟು ಎಡೆ ಇರಲಿ....’ ಅವನ ಕಂಠ ಮುಂದೆ ಮಾತನಾಡಗೊಡಲಿಲ್ಲ. ಅವನ ಈ ವರ್ತನೆ ಮಹಾದೇವಿಯ ಹೃದಯವನ್ನು ಸ್ಪರ್ಶಿಸಿತು. ಮೂಕಳಾಗಿ ಕೆಳಗಿಳಿದುಹೋಗಿ,

‘ನಾನಿನ್ನು ಮನೆಗೆ ಹೊರಡುವೆ ಕಮಲಾ....’ ಎಂದು ಕೇಳಿದಳು.

‘ಸಂಜೆ ವೈಭವಯುತವಾಗಿ ಆರತಿಗೆ ಕೂಡಿಸುವರು. ಇದ್ದು ನೋಡಿ ಹೋಗು ಮಾದೇವಿ.’

‘ಬೆಳಗಿನಿಂದ ನಿನ್ನೊಡನೆ ಇದ್ದು ಆನಂದಿಸಿರುವೆ. ಹೋಗಿ ಅಪ್ಪನನ್ನು ಕಳಿಸುವೆ....’ ಗೆಳತಿಯ ಕೈಯನ್ನು ಪ್ರೇಮದಿಂದ ಅದುಮಿ, ಹೊರಟಳು.

ಕಮಲಾಕ್ಷಿ ಕುತೂಹಲವನ್ನು ಹತ್ತಿಕ್ಕಲಾರದೆ ಮಹಡಿಯನ್ನು ಏರಿದಳು. ರಾಜಶೇಖರ ಮೌನವಾಗಿ ಕುಳಿತಿದ್ದ. ಅವನ ಹೃದಯ ಭಾರವಾಗಿತ್ತು, ಕಣ್ಣು ಸಜಲವಾಗಿದ್ದವು. ಮಹಾದೇವಿ ತನ್ನನ್ನು ಒಪ್ಪದ ನಿರಾಶೆಯಿಂದಲೋ ಅಥವಾ ಆದರ್ಶವತಿಯಾದ ಸಹೋದರಿಯೊಬ್ಬಳನ್ನು ಪಡೆದ ಆತ್ಮಾನಂದದಿಂದಲೋ, ಮಾತನಾಡದವನಾಗಿದ್ದ.

‘ಅಣ್ಣಾ, ಪ್ರಯತ್ನ ಫಲಿಸಿತೆ ?’ ಕಮಲಾಕ್ಷಿ ಕೇಳಿದಳು. ಅವನಿಗೆ ಉತ್ತರಿಸಲು ತೋಚಲಿಲ್ಲ. ಒಂದು ಬಗೆಯಿಂದ ಸೋಲು, ಮತ್ತೊಂದು ದೃಷ್ಟಿಯಿಂದ ಗೆಲುವು. ಎರಡನ್ನೂ ಕ್ರೋಢೀಕರಿಸಿ ಹೇಳುವ ಬಗೆ ಹೇಗೆ ?

‘ಕೈ ಹಿಡಿಯಲು ಒಪ್ಪಲಿಲ್ಲವೇ ?’ ಕಮಲಾಕ್ಷಿ ಅಣ್ಣನ ಮೌನದಿಂದ ಊಹಿಸಿದರೂ, ಸಮಾಧಾನವಾಗದೇ ಮತ್ತೆ ಪ್ರಶ್ನಿಸಿದಳು.

ರಾಜಶೇಖರ ತಲೆಯಲ್ಲಾಡಿಸಿದ.

‘ನನಗೆ ಗೊತ್ತಣ್ಣ. ಬಹಳ ಅಹಂಕಾರಿ ಅವಳು. ರಾಜಕುಮಾರಿಯರಂತಹ ಕುಲೀನ ಕನ್ಯೆಯರು ನಿನ್ನಂತಹ ಚೆಲುವ, ಸಿರಿವಂತನ ಕೈಹಿಡಿಯಲು ಕಾತುರರಾಗಿದ್ದಾರೆ. ಆದರೆ ಇವಳಿಗೆ ಮೈತುಂಬ ಸೊಕ್ಕು....’ ಏನೋ ಅಪಮಾನವಾದಂತೆ ಕಮಲಾಕ್ಷಿಗೆ ಎನಿಸಿ, ಅಸಹನೆಯ ಮಾತನ್ನಾಡಿದಳು.

‘ಕಮಲಾ,

'ಮಾವು ಸಿಗದಿದ್ದರೆ ಹುಳಿ ಅನ್ನುವುದು ಸದ್ಗುಣವಂತಿಕೆಯಲ್ಲ. ಮಹಾದೇವಿ ಸದ್ಗುಣವತಿ, ತುಂಬಿದ ಕೊಡ. ಅವಳ ಪಾದವನ್ನು ಮುಟ್ಟಲೂ ನಾವು ಅರ್ಹರಲ್ಲ....' ಕಂಠ ತುಂಬಿ ಬಂದು ಮಾತು ನಿಲ್ಲಿಸಿದ.

'ಇದೇನು ಮಾತಣ್ಣ ? ನಿನಗೆ ಹುಚ್ಚು ಹಿಡಿದಿಲ್ಲವಷ್ಟೇ....'

'ಹುಚ್ಚಲ್ಲ ಕಮಲಾ; ಮನುಕುಲ ಮಹಾವೃಕ್ಷವು ಸಾಸಿರ ವರುಷಕ್ಕೊಮ್ಮೆ ತಳೆಯುವ ದಿವ್ಯ ಪುಷ್ಪವದು. ಸರೋವರದ ಮಧ್ಯದ ತಾವರೆಯನ್ನು ನಾವು ತಂದು ಮುಡಿಯಲು ಅಸಮರ್ಥರಾದರೆ ಅದನ್ನು ದೂಷಿಸಬಾರದಮ್ಮ. ಶಿವನಿಗೆ ಮೀಸಲಾದ ತಾವರೆ ಅದು ! ಅವನ ಮುಡಿಯನ್ನು ಏರಲಿ ; ದೂರ ನಿಂತು ಆನಂದಿಸಿ, ಕೈ ಮುಗಿಯೋಣ.

ರಕ್ತಸಂಬಂಧದ ತಂಗಿ ನೀನಾದರೆ, ಭಕ್ತಿಸಂಬಂಧದ ತಂಗಿ ಆಕೆ. ಪರಮಾತ್ಮನು ಯಾವ ಎಡರು ತೊಡರುಗಳನ್ನೊಡ್ಡದೆ ತನ್ನ ಒಡಲಿನಲ್ಲಿ ಅವಳನ್ನು ಒಂದುಮಾಡಿಕೊಳ್ಳಲಿ ಎಂದು ಹೃದಯ ತುಂಬಿ ಪ್ರಾರ್ಥಿಸುವೆನಮ್ಮಾ....'

ರಾಜಶೇಖರ ಮೌನವಾಗಿ ಕುಳಿತಾಗ, ಕಮಲಾಕ್ಷಿ ಅಚ್ಚರಿಯಿಂದ ಮೂಕಳಾಗಿ, ಕೆಳಗಿಳಿದು ಹೋದಳು.

೧೮. ಏಕದೇವೋಪಾಸನೆ

ಕಲ್ಯಾಣದ ಅನುಭವಮಂಟಪದಲ್ಲಿ ನಡೆಯುವ ಅನುಭವಗೋಷ್ಠಿಗಳ ಸಿದ್ಧಾಂತ—ತತ್ತ್ವಗಳು ತ್ವರಿತವೇಗದಲ್ಲಿ ಅನುಯಾಯಿಗಳಿಗೆ ಮುಟ್ಟುತ್ತಲಿದ್ದವು. ಈ ಧರ್ಮಪ್ರಸಾರ, ಜನಜಾಗೃತಿಯ ಮಣಿಹದಲ್ಲಿ ದುಡಿಯಲು ಹಲವಾರು ನಿಸ್ವಾರ್ಥಿಗಳು, ತ್ಯಾಗಿಗಳು, ವಿಚಾರಶೀಲ ಯುವಕರು ಉತ್ಸಾಹಿತರಾಗಿ ಮುಂದೆ ಬರುತ್ತಲಿದ್ದರು. ಇಂತಹವರು ಶತಮಾನಗಳಿಂದ ಸಮಾಜವನ್ನು ಬಿಗಿದಿದ್ದ ಜಾತಿಯತೆ, ಮೂಢನಂಬಿಕೆ, ಕಂದಾಚಾರಗಳ ಸಂಕೋಲೆಗಳಿಂದ ಜನರನ್ನು ಬಿಡುಗಡೆ ಮಾಡಲು ತಮ್ಮ ಬದುಕನ್ನೇ ಮುಡುಪಿಡಲು ಸಿದ್ಧರಾದರು. ವಿಚಾರಶೀಲ ಆಚಾರಗಳನ್ನು, ಆದರ್ಶ ಸಮಾಜದ ರೂಪುರೇಷೆಯನ್ನು ಒದಗಿಸುವ ಅನುಭವಮಂಟಪವು ಕೇಂದ್ರಬಿಂದುವಾದರೆ, ಅಲ್ಲಿಂದ ಪ್ರೈದಾಳಿದ ತತ್ತ್ವಗಳನ್ನು ಜನತೆಗೆ ಮುಟ್ಟಿಸಲು ಧರ್ಮಪ್ರಸಾರಕರು ಸಾಧನವಾದರು. ನಿಂತಲ್ಲಿ ನಿಲ್ಲದೆ ಸಂಚರಿಸುತ್ತ ಜನರಿಗೆ ತತ್ತ್ವಬೋಧೆ ಮಾಡಿ, ಆಕರ್ಷಿಸಿ, ಸಂಶಯಗಳನ್ನು ಪರಿಹರಿಸಿ, ಅವರಿಗೆ ಧರ್ಮಸಂಸ್ಕಾರ ನೀಡಿ ಚರಜಂಗಮರು ಹರಿವ ನದಿಯಂತೆ ಮುಂದೆ ಸಾಗುತ್ತಿದ್ದರು. ಹಾಗೆ ಸಾಗುವ ಮುನ್ನ, ಧರ್ಮಾಂತರ ಮಾಡಿದ ಹೊಸ ಅನುಯಾಯಿಗಳಿಗೆ ಶಿಕ್ಷಣಕೊಟ್ಟು, ಸಾಧನೆಗೆ ಮಾರ್ಗದರ್ಶನ ನೀಡಲು ಕೆಲವರನ್ನು ಸ್ಥಿರಜಂಗಮರನ್ನಾಗಿ ಮಾಡಿ ಅಲ್ಲಿಯೇ ಬಿಡುತ್ತಿದ್ದರು. ಇಂತಹ ಸ್ಥಿರಜಂಗಮರು ಜನತೆಗೆ ಶಿಕ್ಷಣ ನೀಡಲೋಸುಗ ಮಠಗಳನ್ನು ನಿರ್ಮಾಣ ಮಾಡುತ್ತಿದ್ದು, ಜನರೊಡನೆ ಸಂಪರ್ಕ ಬೆಳೆಸಿಕೊಂಡು ಸೂಕ್ತ ತಿಳುವಳಿಕೆ ಕೊಡುತ್ತಲಿದ್ದರು.

ಶರಣ ಧರ್ಮದ ಆ ಕೇಂದ್ರಗಳು ಓದಿಸುವ ಮತ್ತು ಬೋಧಿಸುವ ಎರಡೂ ಕಾರ್ಯಗಳನ್ನು ಮಾಡುತ್ತಲಿದ್ದವು. ಕಲ್ಯಾಣದ ಅನುಭವಮಂಟಪವು ಮೆದುಳಿನಂತೆ ಕೇಂದ್ರ ಕಾರ್ಯಾಲಯವಾಗಿ, ಸುತ್ತಲಿನ ಮಠಗಳು ನರಕೇಂದ್ರಗಳಂತೆ ಕಾರ್ಯ ಮಾಡತೊಡಗಿದವು. ಧರ್ಮಬೋಧಕರಾದ ಸಂಚಾರಿ ಜಂಗಮರು ಕೇಂದ್ರದಲ್ಲಿ ರೂಪುಗೊಂಡ ವಿಚಾರಧಾರೆಯನ್ನು ವಿವಿಧ ಉಪಕೇಂದ್ರಗಳಿಗೆ ಮುಟ್ಟಿಸುತ್ತಲಿದ್ದರು. ಸ್ಥಾನಿಕ ಮಠಗಳ ಮೂಲಕವಾಗಿ ವಚನ ಸಾಹಿತ್ಯವು ಅನುಯಾಯಿಗಳ ಕೈಸೇರುತ್ತಲಿದ್ದಿತು. ಹೀಗಾಗಿ ಪ್ರತಿ ಊರುಗಳಲ್ಲಿ ವಿವಿಧ ಬಗೆಯ ಜಂಗಮರು ಕಾಣಸಿಗುತ್ತಿದ್ದರು. ಸುಪ್ರಭಾತ ಸಮಯದಲ್ಲಿ ನಿದ್ರೆಯಿಂದ

ತಪ್ಪು ಹಾದಿ ಹಿಡಿದು ಅನೀತಿಯ ಕೂಪದಲ್ಲಿ ಸಿಕ್ಕವರನ್ನು ನೀತಿಬೋಧೆಯಿಂದ ಮೇಲೆತ್ತುವ ಛಲವಾದಿಯರು, ಗಣಾಚಾರಿಗಳು, ತೆಕ್ಕೆ-ಮುಳ್ಳಾವಿಗೆ ಕಾಯಕದವರು, ಕಲ್ಯಾಣದಿಂದ ಸುದ್ದಿಯನ್ನು ತಂದು ಸಾರುವ 'ಸಾರುವ ಅಯ್ಯನವರು', ಧರ್ಮಾನುಯಾಯಿಗಳ ವಂಶಾವಳಿಯನ್ನು ಲಿಖಿತರೂಪದಲ್ಲಿರಿಸಿ, ಅವರಲ್ಲಿಗೆ ಆಗಾಗ ಬಂದು ತತ್ತ್ವಹೇಳುವ 'ಹೇಳುವ ಕಾಯಕದವರು', ಚಿಂತಾಕ್ರಾಂತರಾದವರ ಬಳಿ ತಾವಾಗಿ ಹೋಗಿ ಕಥೆ-ತತ್ತ್ವ ಹೇಳಿ ಮನದ ದುಗುಡ ಇಳಿಸುವ 'ನಗೆಯ ಕಾಯಕ'ದವರು, ಪ್ರೌಢ, ದೈವೀಮಯ ಮನರಂಜನೆ ಒದಗಿಸುವ 'ಬಹುರೂಪ'ದವರು ; ಮುಂತಾದ ವಿವಿಧ ಕಾಯಕ ಜೀವಿಗಳು ಸಂಚರಿಸುತ್ತ ಸಮಾಜದ ಅವಿಭಾಜ್ಯ ಅಂಗವಾಗಿ ದುಡಿಯುತ ಇದ್ದರು.

ಇಂತಹ ಜಂಗಮರು ಉಡುತಡಿಗೆ ಧಾವಿಸಿದಾಗ ಮಹಾದೇವಿಗೆ ಎಲ್ಲಿಲ್ಲದ ಆನಂದ. ತನ್ನ ಮನೆಗೆ ಆಹ್ವಾನಿಸಿ ಅವರೊಡನೆ ದೀರ್ಘ ಕಾಲದವರೆಗೆ ಸಂಭಾಷಿಸುತ್ತ, ಕಲ್ಯಾಣದ ಚಟುವಟಿಕೆಗಳ ಬಗ್ಗೆ ಕುತೂಹಲಿತಳಾಗಿ ಕೇಳುತ್ತ ಕುಳಿತುಬಿಡುತ್ತಿದ್ದಳು. ದಿನದಿನಕ್ಕೂ ಮಹಾದೇವಿಯ ಜ್ಞಾನ ಭಂಡಾರಕ್ಕೆ ಶರಣತತ್ತ್ವದ ಮುತ್ತುರತ್ನಗಳ ಸಂಚಯವಾಗತೊಡಗಿತು.

ಒಮ್ಮೆ ವಚನದ ಕಟ್ಟನ್ನು ಅಧ್ಯಯನಿಸುವಾಗ ಕೆಲವು ವಚನಗಳು ಆಕೆಯ ಗಮನವನ್ನು ಸೆಳೆದವು.

ಅಂಗದ ಮೇಲೆ ಲಿಂಗದೇವನಿರ್ದಂತೆ
ಇತರ ಸ್ಥಾವರ ಲಿಂಗಕ್ಕೆ ಹೋಗಿ ಹೋಗಿ
ದೇವರ ಕಂಡೆನೆಂದು ಅರಿವುತಿಪ್ಪ ಸಲೆ ಮನುಜರುಗಳಿಗೆ
ಉಪದೇಶವ ಮಾಡುವ ಗುರುವಿಂಗೆ ಪುಣ್ಯದ ಬಟ್ಟೆಯ ಕೊಡ
ಉರಿಲಿಂಗ ತಂದೆ...!*

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲಮೇಲೆ ಕೆಡೆದರೆ ದೇವರೆತ್ತ ಹೋದರೋ?
ಲಿಂಗ ಪ್ರತಿಷ್ಠೆಯ ಮಾಡಿದನಂಗೆ
ನಾಯಕನರಕ ಗುಹೇಶ್ವರಾ*

ಇವೆರಡರ ಭಾವಾರ್ಥ ಸ್ಥಾವರ ಲಿಂಗದ ಪೂಜೆಯನ್ನು ಲಿಂಗವಂತನು ಮಾಡಬಾರದು, ಗುಡಿಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸಬಾರದು ಎಂಬು

* ಉರಿಲಿಂಗದೇವ. ವ.ಸಾ.ಸಂ. ೩೬೨
† ಪ್ರಭುದೇವ. ವ.ಸಾ.ಸಂ.

ದಾಗಿತ್ತು. ಈ ವಿಚಾರವನ್ನು ಓದಿದಾಗ ಮಹಾದೇವಿಗೆ ಆಶ್ಚರ್ಯದ ಹೊಳೆ ಹರಿಯಿತಲ್ಲದೆ, ಯಾರೋ ತನ್ನ ಬಹುದಿನದ ನಂಬಿಗೆಗಳನ್ನು ಹಿಡಿದು ಅಲ್ಲಾಡಿಸಿದಂತೆ ಆಯಿತು. ಮನದ ತಳಮಳ ಸಹಿಸಲಾರದಷ್ಟು ಆದಾಗ ಆ ವಚನಗಳನ್ನು ಕೈಯಲ್ಲಿ ಹಿಡಿದು ಗುರುಲಿಂಗದೇವರ ಕಡೆ ನಡೆದಳು.

ಮಟಮಟ ಮಧ್ಯಾಹ್ನದ ಬಿಸಿಲಿನಲ್ಲಿ ಬಂದ ಮಹಾದೇವಿಯನ್ನು ಕಂಡು ಗುರುಲಿಂಗದೇವರಿಗೆ, ಮತ್ತು ಅವರ ಸುತ್ತಲೂ ಕುಳಿತಿದ್ದ ಕಲ್ಯಾಣದ ಜಂಗಮರಿಗೆ ಆಶ್ಚರ್ಯ ಎನಿಸಿತು. ಆಕೆಯ ಕೈಯಲ್ಲಿದ್ದ ತಾಡಓಲೆಯ ಕಟ್ಟನ್ನು, ಮೊಗದಮೇಲೆ ಮೂಡಿದ್ದ ಆಳವಾದ ಆಲೋಚನೆಯ ಅಲೆಗಳನ್ನು ಕಂಡು ಆಕೆಗೆ ಏನಾದರೂ ತಾತ್ತ್ವಿಕ ಸಂಶಯ ಬಂದಿರಬೇಕೆಂದು ಊಹಿಸಿದರು. ವಿಚಾರದ ಒರೆಗಲ್ಲಿಗೆ ತಿಕ್ಕದೆ ಆಕೆ ಯಾವುದನ್ನಾದರೂ ಪರಂಪರಾಗತವಾದುದೆಂದು ನಂಬುವವಳಾಗಿರಲಿಲ್ಲ. ಚಿಕಿತ್ಸಕಬುದ್ಧಿಯ ಮಹಾದೇವಿ ಯಾವುದನ್ನಾದರೂ ವಿಮರ್ಶಿಸಿ, ಮನಸ್ಸಿಗೆ ಸರಿ ಎನಿಸಿದಾಗ ಮಾಡುತ್ತಿದ್ದಳಷ್ಟೇ ಅಲ್ಲ, ತನ್ನ ನಂಬಿಕೆಗಳಿಗೆ ಧಕ್ಕೆ ತರುವಂತಹ ಹೊಸ ವಿಚಾರಗಳನ್ನು ಕಂಡರೂ ಅಷ್ಟೇ ಬೌದ್ಧಿಕ ಪ್ರಾಮಾಣಿಕತೆಯಿಂದ ನಂಬುತ್ತಿದ್ದಳು. ಬೌದ್ಧಿಕ ಪ್ರಾಮಾಣಿಕತೆಯು ಪ್ರಗತಿಯ ಲಕ್ಷಣ ಎಂದರಿತ ಗುರುಲಿಂಗದೇವರು, ಆಕೆಗೆ ಬಂದ ಸಂಶಯಗಳನ್ನು ಸಂತೋಷದಿಂದ ಪರಿಹರಿಸುತ್ತಿದ್ದರು.

ಮಹಾದೇವಿ ಗುರುಲಿಂಗದೇವರ ಪಾದಕ್ಕೆ ನಮಸ್ಕರಿಸಿ ಕಲ್ಯಾಣದ ಜಂಗಮರಿಗೆ 'ಶರಣು ಶರಣಾರ್ಥಿ' ಎಂದಳು.

'ಇದೇಕಮ್ಮಾ....ಮಧ್ಯಾಹ್ನದ ಉರಿಬಿಸಿಲಲ್ಲಿ?' ಗುರುಲಿಂಗರು ಕುತೂಹಲದಿಂದ ಕೇಳಿದರು.

'ಗುರುಗಳೇ, ಮೊನ್ನೆ ನಿಮ್ಮಿಂದ ತೆಗೆದುಕೊಂಡು ಹೋದ ವಚನಗಳ ಕಟ್ಟನ್ನು ಪರಿಶೀಲಿಸುವಾಗ ಉರಿಲಿಂಗ ತಂದೆ ಎಂಬ ಮುದ್ರಿಕೆಯ, ಗುಹೇಶ್ವರ ಎಂಬ ಮುದ್ರಿಕೆಯ ವಚನಗಳಲ್ಲಿ ಶರಣ ಧರ್ಮೀಯರು ಸ್ಥಾವರ ಲಿಂಗಾರ್ಚನೆ ಮಾಡಬಾರದು, ದೇವಾಲಯ ಕಟ್ಟಿಸಿ ಲಿಂಗ ಸ್ಥಾಪನೆ ಮಾಡಬಾರದು ಎಂದು ಓದಿದೆ....'

'ಅಹುದಹುದು ; ಅಂತಹ ಅಸಂಖ್ಯಾತ ವಚನಗಳು ಇವೆ....'

'ಹಾಗಾದರೆ ಸ್ಥಾವರ ಲಿಂಗಪೂಜೆ ಮಾಡಬಾರದೇ ?....'

'ಅಹುದಮ್ಮ....ಮನೆಯಲ್ಲಿರುವ ಕಾಮಧೇನುವಿನಂತೆ ಇಷ್ಟಲಿಂಗವಿರುವಾಗ ಅದನ್ನು ಬಿಟ್ಟು ನಾಡಹಸುವಿನ ಹಾಲಿಗಾಗಿ ಅತ್ತಿತ್ತ ಹರಿದಾಡಬೇಕೆ?'

'ಮತ್ತೆ ನಾವೆಲ್ಲ ಹೋಗುತ್ತೇವಲ್ಲಾ....ಅಮ್ಮ-ಅಪ್ಪ ಹೋಗುವರು. ಮತ್ತೆ ನೀವು....'

'ಬಸವ ತತ್ತ್ವವು ತಿಳಿಯುವ ಮುನ್ನ ನಾನೂ ಹೋಗುತ್ತಿದ್ದೆ. ಆದರೆ ಈಗ ಬಹು ವರ್ಷಗಳಿಂದ ಬಿಟ್ಟಿರುವೆ. ನಮ್ಮ ಮತವೂ ಅನೂತನವಾಗಿ ಶೈವ ಸಂಪ್ರದಾಯದ ಮತವಷ್ಟೆ. ಸ್ಥಾವರ ಲಿಂಗಪೂಜೆಯೇ ಶೈವಪರಂಪರೆಯ ಜೀವಾಳ. ಅವಕ್ಕಾಗಿ ನಾನು ನಡೆಸುತ್ತಿದ್ದೆ. ಎಂದು ನಾನು ಬಸವಣ್ಣನು ಕೊಟ್ಟ ಲಿಂಗಾಯತ ಧರ್ಮಕ್ಕೆ ಮತಾಂತರನಾದೆನೋ ಅಂದೇ ಅವನ್ನೆಲ್ಲಾ ತ್ಯಜಿಸಿಬಿಟ್ಟಿರುವೆ. ನೂರಾರು ವರುಷಗಳಿಂದ ಇದ್ದ ಕಾಳಾಮುಖ, ಲಾಕುಲೀಶ ಪಾಶುಪತ ಇತ್ಯಾದಿ ಮತಗಳವರೆಲ್ಲ ಈಗ ಆ ಪರಂಪರೆ ತ್ಯಜಿಸಿ ಬಸವಸಂಪ್ರದಾಯಕ್ಕೆ ಬರುತ್ತಿದ್ದಾರೆ.'

'ಆದರೆ....ಗುರುಗಳೇ, ನಾನು ಇಲ್ಲಿಯವರೆಗೆ ಗುಡಿ ಗುಂಡಾರಗಳಿಗೆ ಹೋಗುತ್ತಿದ್ದೆನಲ್ಲಾ, ನಮ್ಮ ಧರ್ಮದ ಪ್ರಕಾರ ಅದು ತಪ್ಪು ಅಂತ ಒಂದು ಬಾರಿಯೂ ಹೇಳಲಿಲ್ಲವಲ್ಲ....!' ಆಶ್ಚರ್ಯದಿಂದ ಕೇಳಿದಳು.

'ನಿಜ ಮಗಳೇ. ಹೇಳಲಿಕ್ಕೆ ಸಹ ನಿಮಗೆ ವಿಶಿಷ್ಟ ಬೌದ್ಧಿಕ ಪ್ರಜ್ಞೆ ಬೇಕಾಗುತ್ತದೆ. ಈ ನಾಡಿನಲ್ಲಿ ಇಲ್ಲಿಯವರೆಗೆ ಕೇವಲ ಭಯದ ತಳಹದಿಯ ಮೇಲೆ ಧರ್ಮವನ್ನು ಉಳಿಸಿಕೊಂಡು ಬಂದಿದ್ದಾರೆ. ಇದನ್ನು ಪಲ್ಲಟಿಸಿ, ಆತ್ಮ ವಿಶ್ವಾಸದ ತಳಹದಿಯ ಮೇಲೆ ಧರ್ಮವನ್ನು ರೂಪಿಸುವುದು ಬಹಳ ಕಷ್ಟಕರ. ಪೌರಾಣಿಕ ದೇವತೆಗಳ ಪೂಜೆ, ಮೂರ್ತಿಪೂಜೆ, ನವಗ್ರಹ ಪೂಜೆ ಇತ್ಯಾದಿಗಳನ್ನು ಬಿಟ್ಟುಬಿಟ್ಟು ಕೇವಲ ಸರ್ವಶಕ್ತನಾದ ಜಗದೊಡೆಯನ ಪೂಜೆಯನ್ನಷ್ಟೇ ಮಾಡಿರಿ ಎಂದರೆ, ಹಿಂದಿನದನ್ನು ಬಿಟ್ಟರೆ ಏನು ಕೆಡುಕಾದೀತೋ ಎಂದು ಭಯಭೀತರಾಗುವರು. ಜೀವನದಲ್ಲಿ ಸಹಜವಾಗಿ ದುರ್ಘಟನೆಗಳು ಏನಾದರೂ ಸಂಭವಿಸಿದರೆ ಕಾಕತಾಳೀಯ ನ್ಯಾಯದಂತೆ ಗಂಟು ಹಾಕಿ ತಾವು ಅಂತಹ ದೇವತೆಗಳ ಪೂಜೆ ಬಿಟ್ಟುದಕ್ಕೆ ಹೀಗಾಯಿತು, ಎಂದು ಹೇಳಿದವರ ಮೇಲೆ ಸಿಟ್ಟಿಗೆ ಬರುವರು. ಅದಕ್ಕಾಗಿಯೇ ನಿನ್ನ ತಾಯಿತಂದೆಯರಿಗೆ ನಾನು ಹೇಳಿರಲಿಲ್ಲ. ಪ್ರತ್ಯಕ್ಷವಾಗಿ ಹೇಳದಿದ್ದರೂ ಸೂಚ್ಯವಾಗಿ ಹೇಳಿದ್ದೆ. ಆದರೂ ಹಳತನ್ನು ಅಷ್ಟು ಬೇಗನೆ ಅವರು ಬಿಡುವವರಲ್ಲ....'

'ಹಾಗಾದರೆ ಎಲ್ಲ ಪೂಜೆಗಳ ಪ್ರಾರಂಭದಲ್ಲಿ ವಿಘ್ನೇಶ್ವರನನ್ನು ಪೂಜಿಸಬೇಕು; ಇಲ್ಲವಾದರೆ ಕೆಡಕಾಗುವುದು. ನವಗ್ರಹಗಳನ್ನು ಪೂಜಿಸದಿದ್ದರೆ ಅವುಗಳ ಕ್ರೂರದೃಷ್ಟಿ ಬಿದ್ದು ಹಾನಿಯಾಗುವುದು ಎನ್ನುವರಲ್ಲ?'

'ತಾಯಿ, ನೀನು ನೇರವಾಗಿ ವಿಷಯಕ್ಕೆ ಪ್ರವೇಶಿಸಿದ್ದೀಯ. ಬಸವಣ್ಣನ

ಕ್ರಾಂತಿಕಾರಕ, ಪ್ರಗತಿಪರ ವಿಚಾರಗಳನ್ನು ಆಚರಿಸುವುದಕ್ಕೆ ಬಹಳ ಎದೆಗಾರಿಕೆ, ಬೌದ್ಧಿಕ ಪ್ರಾಮಾಣಿಕತೆ ಬೇಕು. ಆ ತತ್ತ್ವಗಳನ್ನು ಕೇಳಿದರೆ ಖಂಡಿತವಾಗಿ ವೈಚಾರಿಕ ಪ್ರಜ್ಞೆ ಗಟ್ಟಿಗೊಳ್ಳುವುದು.

ನೋಡಪ್ಪ : ನಮ್ಮನ್ನು ಸೃಷ್ಟಿಮಾಡಿದ ದೇವರು, ನಾವು ಸೃಷ್ಟಿಮಾಡಿದ ದೇವತೆಗಳು, ಎಂದು ಎರಡು ಬಗೆಯುಂಟು. ನಿರಾಕಾರ, ನಿರ್ಗುಣನಾದ, ಜನನ ಮರಣಕ್ಕೆ ಅತೀತನಾದ ಪರಮಾತ್ಮನೊಬ್ಬನು; ಅವನೇ ಈ ಜಗದ ಯಂತ್ರವಾಹಕ! ಆದರೆ ಬಹಳ ಜನರು ಇವನನ್ನು ಬಿಟ್ಟು ತಮ್ಮ ಕಲ್ಪನೆಗೆ ತಕ್ಕಂತೆ ದೇವತೆಗಳನ್ನು ಸೃಷ್ಟಿ ಮಾಡಿರುವರು. ಲೌಕಿಕರ, ಗೃಹಸ್ಥರ ಜೀವನ ಎಷ್ಟೋ ವಾಸಿ, ಅದಕ್ಕಿಂತಲೂ ಕೀಳುಮಟ್ಟದ ಜೀವನವನ್ನು ಇಂತಹ ಕೆಲವು ದೇವತೆಗಳು ಪ್ರತಿನಿಧಿಸುವವು. ಅವುಗಳ ಜೀವಮಾನವೆಲ್ಲ ಹೆಣ್ಣು-ಮಣ್ಣು-ಹೊನ್ನುಗಳ ಗಳಿಕೆ, ಬಳಕೆ, ಉಳಿಕೆಯಲ್ಲೇ ಕಳೆಯುವುದು. ಇಂಥವನ್ನು ಏಕೆ ಪೂಜಿಸಬೇಕೋ ನಾ ಕಾಣೆ.

ನಮ್ಮ ದೇಶದಲ್ಲಿ ಕಾಲಿಡಲಿಕ್ಕೆ ಇಂಬಿಲ್ಲದಷ್ಟು ದೇವರುಗಳು. ಹಾಳು ಮೊರಡಿಗಳಲ್ಲಿ, ಊರದಾರಿಗಳಲ್ಲಿ, ಕೆರೆಭಾವಿಗಳಲ್ಲಿ ಎಲ್ಲಿ ನೋಡಿದರೂ ಅವೇ. ಬಹುಶಃ ಈ ಜಂಬೂದ್ವೀಪದ ಪ್ರತಿಯೊಬ್ಬ ಮಾನವನಿಗೆ ಒಂದೊಂದಾಗಿ ಹಂಚಿದರೂ ಮುಗಿಯದಷ್ಟು ದೇವರುಗಳು. ಅರಗಿನ ದೇವರು, ಹಿತ್ತಾಳೆಯ ದೇವರು, ಬಂಗಾರದ ದೇವರು, ಒಂದೊಂದಲ್ಲ. ಇಂತಹ ಕಾಲ್ಪನಿಕ ದೇವರುಗಳು ನಮಗೇನು ಕೆಡುಕು ಮಾಡಲು ಸಾಧ್ಯ? ಅಸ್ತಿತ್ವದಲ್ಲೇ ಇರಲಾರದ್ದು ಕೆಡಕು ಮಾಡುವದು ಎಂಬುದಕ್ಕೆ ಅರ್ಥವೇ ಇಲ್ಲ.

ನವಗ್ರಹಗಳು ನಮ್ಮ ಪೃಥ್ವಿಯಂತೆ ಜಡವಾಗಿ ತಿರುಗುವ ಗೋಲಗಳು. ಅವನ್ನೇಕೆ ಮೂರ್ತೀಕರಿಸಿ ಪೂಜಿಸಬೇಕು? ಹೋಗಲಿ, ವಾದಕ್ಕಾಗಿ ಅವುಗಳಿಗೆ ಅಸ್ತಿತ್ವವಿದೆ ಎಂದೇ ನಂಬೋಣ. ಆದರೆ ಜಗದೊಡೆಯ ಪರಮಾತ್ಮನನ್ನು ಆಶ್ರಯಿಸಿ, ಆರಾಧಿಸುವ, ಸದ್ಭಕ್ತರಿಗೆ ಅವು ಏನನ್ನೂ ಮಾಡಲಾರವು. ಈಗ ಉಡುತಡಿಯ ರಾಜ ಕೌಶಿಕನಿರುವನು. ನಮಗೆ ಅವನ ನೇರ ಪರಿಚಯ ಇದ್ದಾಗ, ನಾವು ಏನಾದರೂ ಕಾರ್ಯವನ್ನು ಸಾಧಿಸಿಕೊಳ್ಳುವಾಗ ಅವನ ದ್ವಾರಪಾಲಕನನ್ನು ಆಶ್ರಯಿಸದೆ ನೇರವಾಗಿ ಕೆಲಸ ಮಾಡಿಸಿಕೊಳ್ಳುತ್ತೇವಷ್ಟೆ. ಹಾಗೆ ವಿಶ್ವರಕ್ಷಕನಾದ ದೇವನನ್ನು ಆಶ್ರಯಿಸಿದ ನಾವು ಕ್ಷುದ್ರದೇವತೆಗಳನ್ನು ಆರಾಧಿಸುವುದು ತಪ್ಪಲ್ಲವೆ? ದೇವನು ಇರುವಂತೆ ತಿಳಿದುಕೊಳ್ಳಲೆತ್ನಿಸಬೇಕೇ ಹೊರತು ನಮಗೆ ಬೇಕಾದಂತೆ ಅವನನ್ನು ಕಲ್ಪಿಸಿಕೊಂಡು, ಪರಮಾತ್ಮನ ನಿರಂಜನತ್ವಕ್ಕೆ ಕಳಂಕ ತರಬಾರದು....'

'ಎಲ್ಲರ ಬುದ್ಧಿಮಟ್ಟವೂ ಒಂದೇ ಬಗೆಯದಿರುವುದಿಲ್ಲ: ಅವರವರ ತಿಳುವಳಿಕೆಗೆ ಅನುಗುಣವಾಗಿ ಬೇರೆಬೇರೆ ಕಲ್ಪನೆಗಳಿದ್ದರೆ ತಪ್ಪೇನು....?' ಮಹಾದೇವಿ ಪ್ರಶ್ನಿಸಿದಳು.

'ಧರ್ಮದ ಕರ್ತವ್ಯವೇನು? ವೈಚಾರಿಕ, ಹಾರ್ದಿಕ, ಕ್ರಿಯಾತ್ಮಕ ಸಂಸ್ಕಾರವನ್ನು ಜನತೆಗೆ ನೀಡುವುದು. ಅಜ್ಞಾನಿಯು ತಪ್ಪು ಮಾಡುವಾಗ ಅವನ ತಪ್ಪನ್ನು ತಿದ್ದಿ ಹೇಳಿ ನಮ್ಮ ಮಟ್ಟಕ್ಕೆ ಎತ್ತರಿಸಿಕೊಳ್ಳಬೇಕೇ ವಿನಾ, ನಾವು ಅವನ ಮಟ್ಟಕ್ಕೆ ಇಳಿಯಬಾರದು. ಆಳವಾದ ಗುಂಡಿಯಲ್ಲಿ ವ್ಯಕ್ತಿಯೊಬ್ಬ ಬಿದ್ದಿರುವಾಗ ಏನಾದರೂ ಪ್ರಯತ್ನ ಮಾಡಿ ಅವನನ್ನು ಮೇಲಕ್ಕೆತ್ತಬೇಕು. ಪಾಪ ಎಂದು ಮರುಕದೋರಿ ನಾವೂ ಆ ಗುಂಡಿಯಲ್ಲಿ ಬೀಳಬಾರದು. ಎರಡನೆಯದಾಗಿ ಈ ಬಹುದೇವೋಪಾಸನೆ, ಕ್ಷುದ್ರದೇವತಾರಾಧನೆಯಿಂದ ಸರಿಯಾದ ದೇವರ ಕಲ್ಪನೆ ಸಿಗದೆ, ಮೂಢನಂಬಿಕೆಗಳಿಗೆ ಪ್ರೋತ್ಸಾಹ ದೊರೆಯುವುದು. ಮೂರನೆಯದಾಗಿ, ಒಂದು ದೇವರ ಕಲ್ಪನೆ, ಒಂದು ಸಮಾಜಶಾಸ್ತ್ರ, ಒಂದು ಧರ್ಮಗ್ರಂಥದ ಸೂತ್ರ ಇಲ್ಲದಿದ್ದರೆ ಸಮಾಜವು ಅನೈಕ್ಯತೆಯ ಆಗರವಾಗಿ ಸಿಡಿಯುವುದು; ಒಗ್ಗಟ್ಟು ಇಲ್ಲದಂತಾಗುವುದು. ಧರ್ಮದ ತಳಹದಿಯಮೇಲೆ ನಾಡು, ಸಮಾಜಗಳನ್ನು ಸುಸಂಘಟಿತವಾಗಿ ಕಟ್ಟಬೇಕಾದರೆ ಏಕದೇವೋಪಾಸನೆ ಅನಿವಾರ್ಯ....?'

'ಭಕ್ತಿಯ ಉಳಿವಿಗೆ ದೇವಸ್ಥಾನಗಳು ಅತ್ಯಾವಶ್ಯಕ ಎಂದು ನನ್ನ ಭಾವನೆ ಗುರುಗಳೇ....'

'ದೇವಸ್ಥಾನಗಳಿಗಿಂತ ದಿವ್ಯಸ್ಥಾನಗಳು ಬೇಕವ್ವ....' ಗುರುಗಳು ಮಾರ್ಮಿಕವಾಗಿ ಹೇಳಿದರು.

'ಅಂದರೆ....' ಅರ್ಥವಾಗದೆ ಮಹಾದೇವಿ ಹುಬ್ಬೇರಿಸಿದಳು.

'ಪರದೇಶಿ ಮಲ್ಲಪ್ಪನಗುಡಿ ದೇವಸ್ಥಾನ; ಆದರೆ ಅನುಭವಮಂಟಪ, ಮತ್ತು ನಮ್ಮ ಮಠದ ದಿವ್ಯಸ್ಥಾನಗಳು....! ದೇವರಿಗೆ ಒಂದು ಸ್ಥಾನವಿಲ್ಲ. ಜಗದ ತುಂಬೆಲ್ಲ ಹಾಲಿನಲ್ಲಿ ತುಪ್ಪವಿರುವಂತೆ ತೆರಹಿಲ್ಲದೆ ತುಂಬಿರುವ ಪರಮಾತ್ಮನಿಗೆ ಒಂದು ಮನೆಯನ್ನು ಕಟ್ಟಿಕೊಡುತ್ತೇವೆ ಎಂಬುದು ಹಾಸ್ಯಾಸ್ಪದವಲ್ಲವೆ? ನಾಲ್ಕು ಗೋಡೆಗಳ ಮಧ್ಯೆ ಅವನನ್ನು ಕಟ್ಟಿಹಾಕಲಾಗುವುದೆ? ನಾಲ್ಕು ಗೋಡೆ ಕಟ್ಟಿ, ಕೆಲವರನ್ನು ಕುಲಜರೆಂದು ಒಳಗೆ ಬಿಟ್ಟು ಕೆಲವರನ್ನು ಕೀಳೆಂದು ಹೊರಗಿರಿಸಿ ಭೇದ ಮಾಡುವುದು ಏಕೆ? ಅನುಭವಮಂಟಪ ದೈವೀ ಜ್ಞಾನವನ್ನು ಕೊಡುವ ತಾಣ, ಅಲ್ಲಿ ಯಾವ ಜಾತಿ ಮತ ಪಂಥಗಳ ಭೇದ ಇಲ್ಲದೆ ಎಲ್ಲರೂ ಬಂದು ಜ್ಞಾನದ ಊಟವನ್ನು ಉಣ್ಣುತ್ತಾರೆ. ನಮ್ಮ ಮಠ

ವಲ್ಲಿ ಎಲ್ಲರೂ ಬಂದು ಬೋಧೆ ಕೇಳಲಿಕ್ಕೆ, ವಿದ್ಯೆ ಕಲಿಯಲಿಕ್ಕೆ ಅವಕಾಶ ಉಂಟು. ಎಲ್ಲ ಜಾತಿಯವರಿಗೆ ದೀಕ್ಷಾವಕಾಶವೂ ಇದೆಯಷ್ಟೆ.

ಅದ್ದರಿಂದ ಬಸವಧರ್ಮದ ಪ್ರಕಾರ ಆಧ್ಯಾತ್ಮಿಕ ಶಿಕ್ಷಣ ನೀಡುವ ಅನುಭವ ಮಂಟಪದಂತಹ ಸಂಸ್ಥೆಗಳ ನಿರ್ಮಾಣಕ್ಕೆ ಅವಕಾಶವುಂಟೇ ವಿನಾ ಗುಡಿಗಳ ನಿರ್ಮಾಣಕ್ಕಲ್ಲ....

ಲಿಂಗವಂತರಿಗೆ ಪೂಜೆಗೆ ತಾತ್ತ್ವಿಕ ಕುರುಹಿದೆ. ಆ ಸೌಲಭ್ಯವಿಲ್ಲದವರಿಗೆ ಅಲ್ಪವಟ್ಟಿಗೆ ದೇವಸ್ಥಾನಗಳು ಭಕ್ತಿಯ ಉದ್ದೀಪನೆಗೆ ಕೇಂದ್ರಗಳಾದರೂ, ದೇವಸ್ಥಾನಗಳು ಈಗಿನಂತೆ ವ್ಯವಹಾರ ಕೇಂದ್ರಗಳು, ಗದ್ದಲ-ಶೋಷಣೆಯ ಸ್ಥಾನಗಳಾದರೆ ಉಪಯೋಗವಿಲ್ಲ; ಅವು ಜ್ಞಾನಬೋಧೆ, ಶಾಂತಿಯನ್ನು ನೀಡುವ ಪಾರಮಾರ್ಥಿಕ ತಾಣಗಳಾಗಬೇಕು. ಧ್ಯಾನಕ್ಕೆ ಯೋಗ್ಯ ಮಂದಿರ ಗಳಾಗಬೇಕು....'

'ಗುರುಗಳೇ, ಈಗ ನನ್ನ ಮನಸ್ಸನ್ನು ಕಾಡುವ ಪ್ರಶ್ನೆ ಇವು—ನಾವೀಗ ಚನ್ನಮಲ್ಲಿಕಾರ್ಜುನ ಎಂದು ಬಳಸಿಕೊಳ್ಳುವ ಮುದ್ರಿಕೆ ತಪ್ಪೇ? ಹಾಗಾದರೆ ಬಸವಣ್ಣನವರು ಕೂಡಲಸಂಗಮದೇವಾ ಎಂದು, ಪ್ರಭುದೇವರು ಗುಹೇಶ್ವರ ಎಂದು ಏಕೆ ಸ್ಥಾವರಲಿಂಗ ಅನ್ವರ್ಥಕ ಹೆಸರು ಬಳಸಿಕೊಂಡರು....?'

'ತಾಯಿ, ದೇವರನ್ನು ನೀನು ಯಾವ ಹೆಸರಿನಿಂದಾದರೂ ಕರೆ, ತಪ್ಪಿಲ್ಲ. ಆದರೆ ಮಾನವರನ್ನು, ಮೂರ್ತಿಗಳನ್ನು ದೇವರು ಎನ್ನಬೇಡ. ಹೆಸರಿಲ್ಲದ ಪರಮಾತ್ಮನನ್ನು ಶಿವ ಎನ್ನು, ರಾಮ ಎನ್ನು, ಕೃಷ್ಣ ಎನ್ನು, ಗುರುಲಿಂಗ ದೇವಾ ಎನ್ನು, ಓಂಕಾರ ಎನ್ನು. ಆದರೆ ಶಿವನನ್ನೇ, ರಾಮನನ್ನೇ, ಕೃಷ್ಣ ನನ್ನೇ 'ದೇವರು' ಎನ್ನಬೇಡ; ಗುರುಲಿಂಗದೇವರು, ಓಂಕಾರರನ್ನೇ ದೇವರು ಎನ್ನಬೇಡ....'

'ಇಂತಹ ಪೂಜ್ಯರನ್ನು ದೇವರೆಂದರೆ ತಪ್ಪೆ....?'

'ಮಹಾತ್ಮ ಬೇರೆ, ಪರಮಾತ್ಮ ಬೇರೆ. ಹುಟ್ಟಿ ಸತ್ತವರೆಲ್ಲರೂ ಮಾನವರು. ಜೀವನದಲ್ಲಿ ಘನ ಗುರಿ ಸಾಧಿಸಿ ಪವಿತ್ರ ಬಾಳನ್ನು ಬಾಳಿದವರು ಮಹಾತ್ಮರು. ಆದರೆ ಹುಟ್ಟದೆ ಸಾಯದೆ ಸೃಷ್ಟಿ ಸ್ಥಿತಿ ಲಯವನ್ನು ಮಾಡುವ ಸಾಮರ್ಥ್ಯ ಉಳ್ಳ ಮಹಾಶಕ್ತಿಯೊಂದೇ—ಪರಮಾತ್ಮ. ಪೂಜ್ಯರನ್ನು ಅವತಾರಿಕರು ಎನ್ನು, ಗುರು ಎನ್ನು, ಮಹಾತ್ಮರು ಎನ್ನು, ಘನಕ್ಕೆ ಬೆಳೆದ ದೇವರು ಎನ್ನ ಬೇಡ....'

'ಚಂದ್ರಶೇಖರನಾದ, ಜಟಾಧಾರಿ ಶಿವನು ದೇವರಲ್ಲವೆ?'

'ಇಲ್ಲವ್ವಾ: ಒಂದಾನೊಂದು ಕಾಲದಲ್ಲಿ ಐತಿಹಾಸಿಕವಾಗಿ ಇದ್ದು, ಗೌರಿ

-ಗಂಗೆಯರ ವಲ್ಲಭನಾಗಿ, ಮಹಾಯೋಗಿಯಾಗಿ, ದಕ್ಷಯಾಗ ಭಗ್ನದಂತಹ ಲೀಲೆಗಳನ್ನು ಮಾಡಿದ ಅವನನ್ನು ದೇವರು ಎನ್ನಲು ಬಾರದು....'

'ಹಾಗಾದರೆ ಇಷ್ಟಲಿಂಗಪೂಜೆ ತಮೋಗುಣ ಪ್ರಧಾನ ರುದ್ರನ ಪೂಜೆಯಲ್ಲವೆ....?'

'ಸರ್ವಥಾ ಅಲ್ಲ, ಸತ್ವರಜತಮೋಗುಣಗಳಿಗೆ ಅತೀತನಾದ ಸತ್-ಚಿತ್-ಆನಂದ ಸ್ವರೂಪವಾದ ಪರವಸ್ತುವಿನ ಪೂಜೆ....'

'ಹಾಗಾದರೆ ಶಿವನಿಗೆ ಈ ನವಧರ್ಮದಲ್ಲಿ ಸ್ಥಾನವಿಲ್ಲವೆ?'

'ಖಂಡಿತವಾಗಿ ಇದೆ. ನಾವು ಪೌರಾಣಿಕ ಶಿವನನ್ನು ಮನ್ನಿಸುವುದಿಲ್ಲ, ಪೂಜಿಸುವುದಿಲ್ಲ. ಐತಿಹಾಸಿಕ ಶಿವನನ್ನು ಮನ್ನಿಸುತ್ತೇವೆ, ಪೂಜಿಸುವುದಿಲ್ಲ. ನಿರಾಕಾರ ನಿರ್ಗುಣನಾದ ತಾತ್ತ್ವಿಕ ಶಿವನನ್ನು ಮನ್ನಿಸುತ್ತೇವೆ, ಪೂಜಿಸುತ್ತೇವೆ. ಆದ್ದರಿಂದ ಐತಿಹಾಸಿಕ ಶಿವನನ್ನು ಮನ್ನಿಸುವುದು, ದೇವರು ಎಂಬರ್ಥದಲ್ಲಿ ಅಲ್ಲ, ಗುರು ಎಂಬ ಅರ್ಥದಲ್ಲಿ! ಈ ನಾಡಿನಲ್ಲಿ ಶೈವಪರಂಪರೆ, ವೈಷ್ಣವಪರಂಪರೆ ಎಂದು ಎರಡು ಭಕ್ತಿಪರಂಪರೆಗಳು, ವೇದಾಂತ-ಸಿದ್ಧಾಂತ ಎಂಬ ಎರಡು ವಿಚಾರವಾಹಿನಿಗಳು ಇರುವವಷ್ಟೆ! ಈ ಶೈವ ಪರಂಪರೆ ಬಹು ಪುರಾತನ, ವೇದಗಳ ರಚನೆಗೆ ಪೂರ್ವದಲ್ಲಿ, ಆರ್ಯರ ಆಗಮನಕ್ಕೆ ಮುನ್ನವೇ ಇದ್ದ ಪರಂಪರೆ ಇದು. ಇದಕ್ಕೆ ಮೂಲ ಗುರು ಶಿವನು. ಶಿವನು ಕೇವಲ ಪೌರಾಣಿಕ, ಕಾಲ್ಪನಿಕ ವ್ಯಕ್ತಿಯಲ್ಲ. ಶೈವಧರ್ಮವನ್ನು ನೀಡಿರುವ, ಆದರ್ಶ ಯೋಗಿಯಾಗಿ ಬಾಳಿದ ಮಹಾನುಭಾವ, ಐತಿಹಾಸಿಕ ವ್ಯಕ್ತಿ. ಇವನು ಶೈವಧರ್ಮದ ಮೂಲಗುರು. ಅವನು ಬೋಧಿಸಿದುದು ವೈಚಾರಿಕಧರ್ಮವೇ! ಅಲ್ಲಿ ಸಹ ಜಾತಿಭೇದ, ಯಜ್ಞ-ಯಾಗ, ಕರ್ಮಕಾಂಡ ಇರಲಿಲ್ಲ. ಪಾರ್ವತಿಗೆ ಧರ್ಮಶಾಸ್ತ್ರ ಹೇಳಿ, ಸ್ತ್ರೀಯೂ ಧರ್ಮಾಧಿಕಾರಕ್ಕೆ ಯೋಗ್ಯಳು ಎಂದು ಬೋಧಿಸಿದ. ಅವರು ಸಹ ಮೂರ್ತಿಪೂಜಕರಲ್ಲ. ಶಿವನ ಐಕ್ಯಾನಂತರ ಅವನ ಪ್ರತಿರೂಪವಾಗಿ, ಸಾಂಕೇತಿಕವಾಗಿ ಸ್ಥಾವರ ಲಿಂಗಾರಾಧನೆ ಆರಂಭವಾಯಿತು. ಅವನ ತತ್ತ್ವವನ್ನು ಕಟ್ಟುನಿಟ್ಟಾಗಿ ಆಚರಿಸಿದ ಅವನ ಅನುಯಾಯಿಗಳು, ಶಿಷ್ಯರು ಎಂದರೆ ವೃಷಭ, ವೀರಭದ್ರ ಮುಂತಾದವರು. ವೃಷಭನು ವೀರತನದಿಂದ ಶಿವನ ಧರ್ಮವನ್ನು ಉಳಿಸಲು, ಬೆಳೆಸಲು ಪ್ರಯತ್ನಮಾಡಿದನು. ನಂತರ ಬಂದ ವೈದಿಕ ಸಂಪ್ರದಾಯಗಳ ಪ್ರಭಾವಕ್ಕೆ ಒಳಗಾಗದೆ, ಆ ತತ್ತ್ವಗಳನ್ನು ಎಳ್ಳಷ್ಟೂ ಇಂಬಿಟ್ಟುಕೊಳ್ಳದ ಒಂದು ಜನಾಂಗ ವೃಷಭನ ನೇತೃತ್ವದಲ್ಲಿ ಆರಂಭವಾಯಿತು. ಅದೇ ವೀರಶೈವ. ಆ ಪರಂಪರೆ ತಮಿಳುನಾಡಿನಲ್ಲಿ, ಹಿಮಾಲಯದ ಸಪಾದ

ಲಕ್ಷನಲ್ಲಿ, ಕನ್ನಡನಾಡಿನಲ್ಲಿ ಅಲ್ಲಲ್ಲಿ ಉಳಿದಿತ್ತು. ಆದರೆ ಅದು ಭದ್ರವಾಗಿ ಬೇರು ಬಿಟ್ಟುದು ತಮಿಳು ದೇಶದಲ್ಲಿ. ತಿರುವಳ್ಳುವರ್, ಮಾಣಿಕ್ಯವಾಚಕರ್, ನಕ್ಕಿರಾರ್, ಮಾದಾರ ಚೆನ್ನಯ್ಯ ಮುಂತಾದವರೆಲ್ಲ ಕಟ್ಟುನಿಟ್ಟಿನ ಶಿವಭಕ್ತರಾಗಿದ್ದರು; ಈ ಬಗೆಯ ವೀರಶೈವರು ಗುಡಿಯಲ್ಲಿನ ಶಿವನ ಪ್ರತೀಕವಾದ ಸ್ಥಾವರ ಲಿಂಗಗಳನ್ನು ಸಣ್ಣ ಆಕಾರದಲ್ಲಿ ರೂಪಿಸಿ, ಜಟೆಯಲ್ಲಿ ಇಟ್ಟುಕೊಳ್ಳುತ್ತಿದ್ದರು; ಕೈಚೀಲದಲ್ಲಿ ಹಾಕಿಕೊಂಡು ಹೋಗುತ್ತಿದ್ದರು. ಈ ವೀರಶೈವರಲ್ಲಿ ಶಿಥಿಲತೆಯಾಗಿ ಅವರು ವೈದಿಕ ಆಚರಣೆಗಳಿಂದ ಪ್ರಭಾವಿತರಾಗಿ, ನಂತರ ವರ್ಣಭೇದವೂ ಅವರಲ್ಲಿ ನುಸುಳಿತು. ಬ್ರಾಹ್ಮಣಶೈವರು ಶಿಲೆಯ ಲಿಂಗವನ್ನು, ಕ್ಷತ್ರಿಯಶೈವರು ರತ್ನಲಿಂಗಗಳನ್ನು, ವೈಶ್ಯಶೈವರು ಸುವರ್ಣ ಲಿಂಗಗಳನ್ನು, ಶೂದ್ರಶೈವರು ಮಣ್ಣಿನ ಲಿಂಗಗಳನ್ನು ಪೂಜಿಸಲು ಮೊದಲು ಮಾಡಿದರು.

ಬ್ರಾಹ್ಮಣರು ಕ್ಷತ್ರಿಯ, ವೈಶ್ಯರಿಗೆ ಜನಿವಾರ ನೀಡಿದರೂ ಸಹ ಅವರನ್ನು ತಮ್ಮ ಸಮಾನವಾಗಿ ತಿಳಿದುಕೊಳ್ಳದೆ, ಅವರಿಂದ ಕೇವಲ ಧನಕನಕ ದವಸ ಧಾನ್ಯವನ್ನಷ್ಟೇ ಪಡೆದುಕೊಂಡು ಬರುವಂತೆ, ಆ ವೀರಶೈವರು ಸಹ ಹಾಗೆಯೇ ಕುಲಹೀನ ಶಿಷ್ಯರಿಗೆ ಅನುಗ್ರಹ ಮಾಡಿ, ಅವರನ್ನು ಸಮರಸ ಮಾಡಿಕೊಳ್ಳದೆ ಅವರ ಮನೆಯಿಂದ ಸಾಮಗ್ರಿಗಳನ್ನಷ್ಟೇ ಪಡೆಯಲು ಆರಂಭಿಸಿದರು. ಇದನ್ನು ಬಸವಣ್ಣನವರು ಟೀಕಿಸಿರುವುದನ್ನು ಕಾಣಬಹುದು.*

ಇದರಿಂದಾಗಿ ಬಸವಣ್ಣನವರು ಹೊಸ ವಿಚಾರವಾಹಿನಿಯನ್ನು ಆರಂಭಿಸಿ, ಪ್ರಚಲಿತವಿದ್ದ ಹಲವಾರು ಮೂಢಾಚರಣೆಗಳನ್ನು ತೊಡೆದುಹಾಕಲು ಬಯಸಿದರು. ಯಾವ ವರ್ಣ ಜಾತಿಗಳವರಿರಲಿ, ಹೆಣ್ಣಿರಲಿ-ಗಂಡಿರಲಿ ಒಂದೇ ಬಗೆಯ ಇಷ್ಟಲಿಂಗವನ್ನು ಧರಿಸಿಕೊಳ್ಳುವುದನ್ನು ಕಡ್ಡಾಯವಾಗಿ ಆಚರಣೆಗೆ ತಂದರು.

ದಾಸೀಪುತ್ರರಿರಲಿ, ವೇಶ್ಯಾಪುತ್ರರಿರಲಿ ದೀಕ್ಷಾನಂತರ ಸಮರಸ ಮಾಡಿಕೊಳ್ಳುವುದಷ್ಟೇ ಅಲ್ಲ, ಅವರನ್ನು ಗುರುಗಳೆಂದು ಗೌರವಿಸಿ, ಅವರಿಂದ ಪಾದೋದಕ-ಪ್ರಸಾದವನ್ನು ಸ್ವೀಕರಿಸುವುದನ್ನೂ ಮಾಡಿದರು. ಶೈವ ವಿಚಾರವಾಹಿನಿಯ ಬಳ್ಳಿಯಲ್ಲಿ ವೀರಶೈವತತ್ತ್ವದ ಹೂವು ಅರಳಿದರೆ, ಬಸವಣ್ಣನ ಲಿಂಗಾಯತ ಧರ್ಮವು ಪರಿಪೂರ್ಣ ಫಲವಾಯಿತು. ಅಷ್ಟೇ ಅಲ್ಲ, ಶೈವ ಪರಂಪರೆಯಿಂದ ಕತ್ತರಿಸಲ್ಪಟ್ಟು ಸ್ವತಂತ್ರವಾಗಿ ಬದುಕಬಲ್ಲ ಪೂರ್ಣ ಧರ್ಮವಾಯಿತು. ಜೈನಧರ್ಮವು ವೃಷಭನನ್ನು ಆದಿ ತೀರ್ಥಂಕರನೆಂದು, ಮಹಾ

* ಬ. ಷ. [illegible]

ವೀರನನ್ನು ಕಡೆಯ ತೀರ್ಥಂಕರನೆಂದು ಮನ್ನಿಸುವಂತೆ, ನಾವು ಮಹಾಯೋಗಿ ಶಿವನನ್ನು ಮೊದಲ ಗುರುವೆಂದು, ಬಸವಣ್ಣನನ್ನು ನಮ್ಮ ಧರ್ಮಗುರುವೆಂದು ಭಾವಿಸಲು ಯಾವ ತೊಂದರೆಯಿಲ್ಲ. 'ಹರನು ಮೂಲಿಗನಾಗಿ ಪುರಾತರೊಳಗಾಗಿ....'* ಎಂದು ಹೇಳುವಲ್ಲಿ ಬಸವಣ್ಣನವರು ಶಿವನ ಗುರುತ್ವವನ್ನು ಹೇಳುವರು.

ಬಸವಣ್ಣನವರ ಮುದ್ರಿಕೆ ಕೂಡಲಸಂಗಮದೇವಾ. ಇದು ಸ್ಥಾವರಲಿಂಗದ ಅನ್ವರ್ಥಕವಲ್ಲ, ಇಷ್ಟಲಿಂಗಾನ್ವರ್ಥಕ, ಪರಶಿವಸೂಚಕ. ಬಸವಣ್ಣನವರು ಬಾಲಕರಿದ್ದಾಗಲೇ ಮನೆಬಿಟ್ಟು ಕೂಡಲಸಂಗಮ ಕ್ಷೇತ್ರದ ಗುರುಕುಲದಲ್ಲಿ ವಿದ್ಯೆ ಕಲಿತರು. ಕೆಲವು ಕಾಲದವರೆಗೆ ಆ ಗುಡಿಯಲ್ಲಿ ಪೂಜಾರಿಗಳಾಗಿಯೂ ಇದ್ದರು. ಸಹಜವಾಗಿ ಸಂಗಮನಾಥನೊಡನೆ ಪಿತೃ-ಪುತ್ರ ಬಾಂಧವ್ಯ ಬೆಳೆಯಿತು. ವಚನಗಳನ್ನು ಬರೆಯಲಾರಂಭಿಸಿ, ಆ ಹೆಸರನ್ನು ಬಳಸಿಕೊಂಡರು. ಸಂಗಮವನ್ನು ಬಿಡುವಾಗ ಅವರಿಗಾದ ದಿವ್ಯಾನುಭವ ಅವರ ಬಾಳನ್ನು, ವಿಚಾರಧಾರೆಯನ್ನು ಪಲ್ಲಟಿಸಿ ಬಹುದೇವೋಪಾಸನೆಯಿಂದ ಏಕದೇವೋಪಾಸನೆಗೆ, ಸ್ಥಾವರಲಿಂಗಪೂಜೆಯಿಂದ ಇಷ್ಟಲಿಂಗಪೂಜೆಗೆ ಪರಿವರ್ತಿಸಿತು. ಅವರು ಕೂಡಲಸಂಗಮದೇವಾ ಮುದ್ರಿಕೆಯನ್ನು ಬದಲಿಸದೆ ಅದರ ಅರ್ಥವ್ಯಾಪ್ತಿಯನ್ನು ಬದಲಿಸಿಕೊಂಡರು. ಪ್ರಭುದೇವರು, ಗೊಗ್ಗಯ್ಯನ ತೋಟದಲ್ಲಿದ್ದ ಗುಹೆಯಲ್ಲಿ ತಪಸ್ಸಿಗೆ ಕುಳಿತಿದ್ದ ಅನಿಮಿಷಯೋಗಿಗಳಿಂದ ಇಷ್ಟಲಿಂಗ ಪಡೆದು ಗುಹೆಯಲ್ಲಿ ದೊರೆತ ಈಶ್ವರ ಎಂದು ಹೆಸರಿಸುತ್ತಾರೆ. ಈ ಎಲ್ಲ ಮುದ್ರಿಕೆಗಳು ಸಂಕೇತಿಸುವುದು ಪರಾತ್ಪರ ಪರಶಿವನನ್ನು. ನೀನೂ ಸಹ ಚನ್ನಮಲ್ಲಿಕಾರ್ಜುನ ಪದವನ್ನು ಪರಮಾತ್ಮನಿಗೆ ಅನ್ವಯಿಸಿ ನುಡಿಯಬೇಕೇ ವಿನಾ, ಕೇವಲ ಶ್ರೀಗಿರಿಯ ಮಲ್ಲಿಕಾರ್ಜುನ ಲಿಂಗಕ್ಕಲ್ಲ....'

'ನಾನು ಉತ್ಕಟ ವ್ಯಾಕುಲತೆಯಿಂದ ಹಂಬಲಿಸಿದಾಗ, ನನ್ನ ಇಷ್ಟಲಿಂಗದಲ್ಲಿಯೇ ಜಟಾಮುಕುಟಧಾರಿಯಾದ, ಸುಲಿಪಲ್ಲ, ಕಂಗಳ ಕಾಂತಿಯಿಂದ ತೊಳಗಿ ಬೆಳಗುವ ಶಿವನನ್ನು ಕಂಡು, ನನ್ನನ್ನು ಬಿಗಿದಪ್ಪಿದನಲ್ಲ ಗುರುಗಳೇ; ಈ ಅನುಭವವು ಸುಳ್ಳೆ....ಆಕಾರವು ಮಿಥ್ಯವೇ....?'

'ಮಾದೇವಿ, ದೇವನು ನಿರಾಕಾರ, ಅವನಿಗಾವ ಆಕಾರವಿಲ್ಲ. ನೀವು ಯಾವುದಾದರೂ ವಿಶಿಷ್ಟ ಆಕಾರದಲ್ಲಿ ಕಾಣಬಯಸಿದರೆ ಸರ್ವಶಕ್ತನಾದ ಅವನು ಆ ಆಕಾರದಲ್ಲಿ ದರ್ಶನ ನೀಡಿ ಉದ್ಧರಿಸುವನು. ಮುಗಿಲ ಗರ್ಭದ ಮಿಂಚು ನಿರಾಕಾರ; ಆದರೆ ಕೆಲವು ಸಲ ಕೋಲ್ಮಿಂಚಾಗಿ, ಹಾವು ಮಿಂಚಾಗಿ

* ಬ. ಷ. ವ. ೩೪೭

ನಮಗೆ ಕಾಣುವನು. ನಾವು ಕಂಡ ಅಂಕು ಡೊಂಕಿನ ಆಕಾರ, ಅಥವಾ ಗೆರೆಯುಳ್ಳ ರೂಪವೇ ಬಿಂಬದ ರೂಪ ಎನ್ನಲಾದೀತೇ? ಯೋಗಮುದ್ರಾಂಕಿತ, ಶಾಂತನೇತ್ರ, ಪರಮ ವಿರಕ್ತ, ದೇವರನ್ನು ಶಿವನ ಆಕಾರದಲ್ಲಿ ಕಾಣಬಯಸಿದರೆ ಹಾಗೇ ದರ್ಶನ ನೀಡುವನು; ಬಸವಣ್ಣನ ರೂಪದಲ್ಲಿ ಕಾಣಬಯಸಿದರೆ ಹಾಗೇ ಕಾಣುವನು. ಆದರೆ ಈ ಆಕಾರಗಳೇ ದೇವನ ನಿಜಸ್ವರೂಪವೆಂದು ಭಾವಿಸಲಾಗದು. ಮತ್ತು ಇದು ಸಗುಣ ಸಾಕ್ಷಾತ್ಕಾರ, ಮೊದಲು ಮೆಟ್ಟಿಲು. ಇದಕ್ಕೂ ಮುಂದೆ ಆತ್ಮ-ಪರಮಾತ್ಮ ಸಾಕ್ಷಾತ್ಕಾರ ಉಂಟಷ್ಟೆ. ಆ ಪರಮಾತ್ಮ ಸಾಕ್ಷಾತ್ಕಾರದಲ್ಲಿ ದೇವರ ನಿರಾಕಾರ ಸ್ವರೂಪವು ಮನನವಾಗುವುದು...ಇಷ್ಟಲಿಂಗವು ಈ ಎಲ್ಲ ಸಾಕ್ಷಾತ್ಕಾರಗಳಿಗೂ ಸಾಧನವು....' ಗುರುಗಳು ಸೋದಾಹರಣವಾಗಿ ಹೇಳಿದರು.

'ಹಾಗಾದರೆ ಸ್ಥಾವರಪೂಜೆ, ಇಷ್ಟಲಿಂಗಪೂಜೆಗೆ ವ್ಯತ್ಯಾಸವುಂಟೇ ಗುರುಗಳೇ....?'

'ನಿಶ್ಚಯವಾಗಿಯೂ ಮಗಳೇ, ಎರಡೂ ಶಿವನ ಪ್ರತೀಕ ಎಂದು ಹೇಳಿದ ತಕ್ಷಣ, ಅರ್ಥವು ಒಂದೇಯಾಗಿಲ್ಲ. ಸ್ಥಾವರಲಿಂಗವು ಐತಿಹಾಸಿಕ ಗುರುವಾದ ಶಿವನ ಪ್ರತೀಕವಾದರೆ, ಇಷ್ಟಲಿಂಗ ಪಿಂಡಾಂಡ-ಬ್ರಹ್ಮಾಂಡಗಳನ್ನು ತುಂಬಿದ ಪರಮಾತ್ಮನ ಪ್ರತೀಕ. ಅದು ಶೈವರ ಉಪಾಸ್ಯವಸ್ತುವಾದರೆ, ಇದು ಲಿಂಗವಂತರ ಉಪಾಸ್ಯವಸ್ತು. ಇಷ್ಟಲಿಂಗವನ್ನು ಹುಟ್ಟಿದ ಕೂಸಿಗೆ ಧಾರಣೆ ಮಾಡಲಾಗುವುದು. ಇದು ಅಹಂಗ್ರಹೋಪಾಸನೆ; ಸ್ಥಾವರಪೂಜೆ ಪ್ರತೀಕೋಪಾಸನೆ. ಗುಡಿಯ ಲಿಂಗವು ಕೇವಲ ಭಕ್ತಿಯನ್ನು ಉದ್ದೀಪಿಸುವ ಸಾಧನ; ಇಷ್ಟಲಿಂಗವು ಭಕ್ತಿಯೋಗಕ್ಕೆ ಮಾತ್ರವಲ್ಲದೆ ತ್ರಾಟಕಯೋಗಕ್ಕೆ ಉತ್ತಮ ಸಾಧನೆ. ಇಷ್ಟಲಿಂಗ ವೈಯಕ್ತಿಕ ಉಪಾಸನಾ ವಸ್ತು; ಸದ್ಗುರುವಿನಿಂದ ನೇರವಾಗಿ ಶಿಷ್ಯನಿಗೆ ಬರುವುದು. ಸ್ಥಾವರಲಿಂಗ ಸಾರ್ವತ್ರಿಕ ಉಪಾಸನಾ ವಸ್ತು. ಅದನ್ನು ಸಾಮೂಹಿಕವಾಗಿ ಪ್ರತಿಷ್ಠಾಪಿಸಿರುತ್ತಾರೆ. ದೀಕ್ಷಾಸಂಸ್ಕಾರದ ಮೂಲಕ ಪಡೆದು ಇಷ್ಟಲಿಂಗವನ್ನು ಭಕ್ತನು ನೇರವಾಗಿ ಕೈಯಾರೆ ಪೂಜಿಸುತ್ತಾನೆ. ಸಂಸ್ಕಾರ ಪಡೆಯದ ಭಕ್ತನು ಕೇವಲ ತೀರ್ಥಪ್ರಸಾದವನ್ನು ಪಡೆಯುತ್ತಾನೆ. ಇಷ್ಟಲಿಂಗದಲ್ಲಿ ಆಹ್ವಾನ ವಿಸರ್ಜನೆ ಇಲ್ಲ; ಸ್ಥಾವರಲಿಂಗದಲ್ಲಿ ಆಹ್ವಾನ ವಿಸರ್ಜನೆಯುಂಟು. ಚೈತನ್ಯಮಯವಾದ ಅಂಗದಮೇಲೆ ಪ್ರತಿಷ್ಠಾಪನೆಗೊಂಡ ಇಷ್ಟಲಿಂಗ ನಾವು ಹೋದಲ್ಲೆಲ್ಲ ಬರುತ್ತದೆ. ಜಡಗುಡಿಯಲ್ಲಿ ಪ್ರತಿಷ್ಠಾಪನೆಗೊಂಡ ಸ್ಥಾವರಲಿಂಗ ಇದ್ದಲ್ಲಿಯೇ ಇರುವುದು; ಭಕ್ತನೇ ಅಲ್ಲಿ ಹೋಗಿ ಪೂಜಿಸಬೇಕು. ಇಷ್ಟಲಿಂಗವು ದೇಹ

ವನ್ನೇ ದೇವಾಲಯವಾಗಿ ಮಾಡಿಕೊಳ್ಳಬೇಕೆಂದು ಹೇಳುತ್ತದೆ. ಪೂಜಾ ಸ್ವಾತಂತ್ರ್ಯವನ್ನು, ಸಮಾನತೆಯನ್ನು ಸಾರುತ್ತದೆ....' ಗುರುಲಿಂಗದೇವರು ಹೇಳಿದಾಗ ಮಹಾದೇವಿಯಲ್ಲಿ ವೈಚಾರಿಕ ಕ್ರಾಂತಿ ಆರಂಭವಾಗಿತ್ತು. ಯಾಂತ್ರಿಕ ಭಕ್ತಿಗಿಂತ ಹೃದಯಪೂರ್ವಕ ಆಧ್ಯಾತ್ಮ ಶರಣಧರ್ಮದ ಜೀವಾಳ ಎಂದು ಮನದಟ್ಟಾಗತೊಡಗಿದ್ದಿತು. ತನ್ನ ಪೂರ್ವಿಕರಿಂದ, ತಾಯಿ-ತಂದೆಗಳಿಂದ, ಬಾಲ್ಯದಿಂದಲೂ ಬೆಳೆದುಬಂದ ನಂಬಿಕೆಗಳಲ್ಲಿನ ಅಪೂರ್ಣ ಸತ್ಯವನ್ನು ಗುರುತಿಸಿದಾಗ ಮನಸ್ಸು ಹೊಯ್ದಾಡತೊಡಗಿತು. ಇವನ್ನೆಲ್ಲವನ್ನು ಅಲ್ಲಗಳೆಯುವುದು ಹೇಗೆ ಎಂದು ಮನದ ಮೂಲೆಯೊಂದರಿಂದ ಧ್ವನಿ ಆಡಿದರೆ, 'ಅಹುದು ಅಂತರಂಗದಲ್ಲಿ ದೇವನನ್ನು ಅರಸುವುದೇ ಆಧ್ಯಾತ್ಮ' ಎಂದು ಬುದ್ಧಿ ಸಮರ್ಥಿಸತೊಡಗಿತು. ತತ್ತ್ವವನ್ನು ಮನನ ಮಾಡುತ್ತ ಗೃಹಾಭಿಮುಖಳಾದಳು.

೧೯. ಮದುವೆಯ ಮಾತು

ಮಹಾದೇವಿಯ ಗೆಳತಿಯರು, ಅವರ ಓರಗೆಯವರು, ಅವಳಿಗಿಂತ ಕಿರಿಯರು ಸಹ ಮದುವೆಯಾಗಿ ಹೋಗಿದ್ದರು. ಇನ್ನೂ ಮದುವೆಯಾಗದೆ ಉಳಿದ ಮಹಾದೇವಿಯ ಸ್ಥಿತಿ ತಾಯಿ-ತಂದೆಯರಿಗೆ ಒಗಟಾದರೆ, ಊರಿನವರಿಗೆ ಸಮಸ್ಯೆಯಾಗಿತ್ತು, ಅಪಹಾಸ್ಯದ ಮಾತೂ ಆಗಿತ್ತು. ಇದನ್ನು ಕಂಡ ಲಿಂಗಮ್ಮನ ಹೃದಯ ಹಗಲಿರುಳು ತಳಮಳಿಸತೊಡಗಿತು. ಬನವಾಸಿಯ ಸಿರಿವಂತ ಮನೆತನದ ವರನ ತಾಯಿ-ತಂದೆಯರು ದೂತನೊಬ್ಬನನ್ನು ಅಟ್ಟಿದ್ದರು, ಓಂಕಾರಶೆಟ್ಟಿಯ ಮನೆಗೆ.

ಕುದುರೆಯ ಮೇಲೆ ನಿರೂಪವನ್ನು ಹೊತ್ತು ತಂದವರನ್ನು ಓಂಕಾರ, ಅಂಗಡಿಯಿಂದ ಕರೆತಂದು ಊಟೋಪಚಾರವನ್ನು ಮುಗಿಸಿ,

'ಬಂದು ಕನ್ಯೆಯನ್ನು ನೋಡುವ ಬಗ್ಗೆ ನಾನು ಓಲೆಯನ್ನು ಕಳುಹಿಸುವೆ. ತಾವೇನೂ ಮತ್ತೆ ಮತ್ತೆ ಬಂದು ತೊಂದರೆ ತೆಗೆದುಕೊಳ್ಳುವ ಕಾರಣವಿಲ್ಲ....' ಎಂದು ಸೌಜನ್ಯದಿಂದ ಉತ್ತರಕೊಟ್ಟ. ಲಿಂಗಮ್ಮನು ಅರಿಯುವ ಮುನ್ನವೇ ದೂತನನ್ನು ಮರಳಿಸುವ ವಿಚಾರ ಓಂಕಾರನದು. ಆದರೆ ಅವನು 'ತಾಯಿಯವರಿಗೆ ಹೇಳಿ ಹೋಗುವೆ....' ಎಂದಾಗ ಓಂಕಾರ ಲಿಂಗಮ್ಮನನ್ನು ಕರೆಯಲೇಬೇಕಾಯಿತು.

'ನಾನು ಹೊರಡುವೆನಮ್ಮ; ತಮ್ಮ ಸತ್ಕಾರಕ್ಕೆ ಚಿರಋಣಿ. ಮಗಳನ್ನು ಕೊಡುವ ಬಗ್ಗೆ ಬೇಗನೇ ಉತ್ತರವನ್ನು ಕಳಿಸಿರಿ....' ಲಿಂಗಮ್ಮ ಯಾವುದೂ ಗೊತ್ತಿಲ್ಲದೆ ಸಂದಿಗ್ಧತೆಗೆ ಒಳಗಾದರೂ, ಓಂಕಾರನು ಆಗಂತುಕನನ್ನು ಕರೆದು ಉಪಚರಿಸಿದ್ದು, ಅವನು ವಂದಿಸಿದುದನ್ನು ತಿಳಿದು ವಿಷಯವೇನಿರಬೇಕೆಂದು ಊಹಿಸಿ ಪ್ರಶ್ನಿಸಿದಳು:

'ಅವರ ಸ್ಥಿತಿಗತಿ ಚೆನ್ನಾಗಿರುವವಷ್ಟೆ....?'

'ಬನವಾಸಿಯ ವಣಿಕಶ್ರೇಷ್ಠರಲ್ಲಿ ಇವರೂ ಒಬ್ಬರು. ಹುಡುಗನು ಇವರ ಏಕೈಕಪುತ್ರ, ಉಳಿದವರೆಲ್ಲ ಹೆಣ್ಣುಮಕ್ಕಳು; ಇಬ್ಬರು ವಿವಾಹವಾಗಿ ಗಂಡನ ಮನೆ ಸೇರಿರುವರು, ಮತ್ತೆ ಇಬ್ಬರು ಒಂದೆರಡು ವರ್ಷಗಳಲ್ಲಿ ಮದುವೆಗೆ ಸಿದ್ಧವಾಗುತ್ತಾರೆ. ರೂಪ, ಸಂಪತ್ತು ಯಾವುದರಲ್ಲೂ ಕೊರತೆಯಿಲ್ಲದ ನಮ್ಮ ಸ್ವಾಮಿಯವರಿಗೆ ಹೆಣ್ಣು ಕೊಡಲು ನೂರಾರು ಜನ ಸಿದ್ಧವಿದ್ದಾರೆ. ಆದರೆ ತಮ್ಮದು ಕುಲೀನ ಮನೆತನ, ಒಬ್ಬಳೇ ಮಗಳು, ಎಂದು ತಿಳಿದು ನಾನು ನಿರೂಪ ತಂದಿರುವೆ....'

'ಏನು ಉತ್ತರ ನೀಡಿರುವಿರಿ...' ಲಿಂಗಮ್ಮ ಓಂಕಾರನನ್ನು ಪ್ರಶ್ನಿಸಿದಳು.

'ಪರಸ್ಪರ ಆಲೋಚಿಸಿ ಒಂದು ವಾರದೊಳಗೆ ತಿಳಿಸೋಣವಂತೆ....ಹಾಗೇ ಹೇಳಿರುವೆ.'

'ಸರಿ ಹಾಗಾದರೆ....' ಆಗಂತುಕ ಬೀಳ್ಕೊಂಡು ಹೋದ. ಓಂಕಾರ ಶೆಟ್ಟಿ ಕಳಿಸಿಬಂದು ಪಡಸಾಲೆಯಲ್ಲಿ ದಿಂಬಿಗೆ ಒರಗಿ ಕುಳಿತ. ಲಿಂಗಮ್ಮ ಸಮೀಪಿಸಿ ಚಾಪೆಯಮೇಲೆ ಕುಳಿತಳು.

'ಮಾದೇವಿ ಎಲ್ಲಿ....?' ಓಂಕಾರನು ಕೇಳಿದ.

'ತನ್ನ ಕೋಣೆಯಲ್ಲಿ ಪೂಜೆ ಮುಗಿದ ಬಳಿಕ, ಏನೋ ಬರೆಯುತ್ತಲಿರುವಳು....ದಿವಸದಿವಸಕ್ಕೆ ವಯಸ್ಸು ಹೋಗುವುದೋ ಬರುವುದೋ? ನಿಮ್ಮ ನಿಶ್ಚಿಂತೆ ನೋಡಿ ನನಗೆ ಬಲು ಸೋಜಿಗ....'

'ನಾನು ಏನು ಮಾಡಬೇಕು ಅಂತೀಯಾ....?'

'ಕಣ್ಣು ಕುಕ್ಕುವಂತಹ ಚೆಲುವು; ತುಂಬು ಯೌವ್ವನ, ಮಾಗಿ ನಿಂತ ಶರೀರ. ಗಿಡದ ಮೇಲೆ ಹಣ್ಣು ಕಂಡರೆ ಗಿಳಿಗಳು ಬಂದು ಕುಕ್ಕದಿದ್ದಾವೆಯೇ? ನಿಮಗೆ ಅದರ ಪರಿವೆ ಇಲ್ಲ; ಬೇಗನೇ ಕಿತ್ತು ಮನೆಯೊಳಗೆ ಕಾಪಿಗಿರಿಸಬೇಕಾದುದು ಜಾಣತನವಲ್ಲವೆ?' ಲಿಂಗಮ್ಮ ಸೂಚ್ಯವಾಗಿ ಮಾತನಾಡಿದಳು.

'ಅವಳು ಮದುವೆಗೆ ಒಪ್ಪದಿರುವಾಗ ಏನು ಮಾಡಬೇಕು ಹೇಳು....'

'ಏನು ಹಾಗಂದರೆ....ಹೆಣ್ಣಾದವಳು ಬೇರಾವ ಮಾರ್ಗ ಹಿಡಿಯಬಲ್ಲಳು. ನಿಮ್ಮದು ವಿಚಿತ್ರ ವರ್ತನೆ. ಯಾವ ಹೆಣ್ಣೂ ಲಜ್ಜೆಗೇಡಿಯಾಗಿ ನನಗೆ ಮದುವೆ ಮಾಡಿ ಎಂದು ಕೇಳಲಾರಳು. ತಿಳಿದು ಮಾಡಬೇಕಾದುದು ಹೆತ್ತವರ ಕರ್ತವ್ಯ....' ಕಟುವಾಗಿ ಹೇಳಿದಳು ಲಿಂಗಮ್ಮ.

'ಅವಳನ್ನು ಕೇಳದೆಯೇ ಮಾಡುವುದೇ....?'

'ಏಕೆ ಕೇಳಬೇಕು? ತರಕಾರಿಯನ್ನು ಕೇಳಿ ಸಂಭಾರ ಅರೆಯಬೇಕೆ? ಮಕ್ಕಳ ಹಿತಾಸಕ್ತಿ ಹೆತ್ತವರಿಗೆ ತಿಳಿಯದೇ? ಭಾರ ಹೊತ್ತವರು ತಮ್ಮ ನಿಲ್ದಾಣ ಬಂದಾಗ ಇಳಿಸುತ್ತಾರೆ. ಅದಕ್ಕೆ ಮೂಟೆಯ ಒಪ್ಪಿಗೆ ಏಕೆ ಬೇಕು? ಬನವಾಸಿಗೆ ಹೋಗಿ ಆ ವರನನ್ನು ನೋಡಿಬನ್ನಿರಿ. ಸರಿ ಕಂಡರೆ ಮಾಡಿಬಿಡುವಾ....ಕೇಳುತ್ತ ಹೋದರೆ ಹಾಗೆಯೇ....' ಲಿಂಗಮ್ಮನ ಧ್ವನಿಯಲ್ಲಿ ಬೇಸರ, ಆಕ್ರೋಶ ತುಂಬಿದ್ದವು.

'ಎಲ್ಲರದ್ದೂ ಒಂದು ಜಾಡಾದರೆ ಇವಳದ್ದೇ ಒಂದು! ಕಮಲಾಕ್ಷಿ ಮದುವೆಯಾಗಿ ಹೆರಿಗೆಗೆ ಬಂದಿದ್ದಾಳೆ; ಕುಮುದಳಿಗೆ ಮದುವೆಯಾಯಿತು. ಆ ಶಾರದೆಗೆ ಹತ್ತು ವರ್ಷಕ್ಕೇ ಲಗ್ನ ಮಾಡಿದರು; ದೊಡ್ಡವಳಾದ ಒಂದು

ತಿಂಗಳಿಗೆ ಗಂಡನ ಮನೆಗೆ ಕಳಿಸಿದರು. ಪಾಪ! ಅದರ ಪ್ರಾರಬ್ಧ ಚೆಂದವಿಲ್ಲ ವೇನೋ, ಒಂದೇ ತಿಂಗಳಲ್ಲಿ ಸಿಡುಬಿನ ಬೇನೆಗೆ ಬಲಿಯಾಗಿ ಗಂಡ ತೀರಿ ಕೊಂಡ. ಇವಳ ಅಚ್ಚುಮೆಚ್ಚಿನ ಗೆಳತಿ ಶೈಲಜೆಯದೂ ಮದುವೆ ಗೊತ್ತಾಗಿದೆ. ಇಷ್ಟಾದರೂ ನಿಮ್ಮ ಕಣ್ತೆರೆಯಬಾರದೆ?'

'ಮದುವೆ ವಿಷಯದಲ್ಲಿ ಒತ್ತಾಯ ತರವಲ್ಲ ಲಿಂಗಾ; ಒಂದು ವೇಳೆ ಬನವಾಸಿಯವರಿಗೆ ಬರಲು ತಿಳಿಸಿದೆವು ಎಂದುಕೋ, ಆಗ ಇವಳು ತೋರಿಸಿ ಕೊಳ್ಳಲು ಒಪ್ಪದಿದ್ದರೆ? ಒತ್ತಾಯದಿಂದ ಮದುವೆಗೆ ಯತ್ನಿಸಿದರೆ ಏನಾದರೂ ಆಘಾತ ಮಾಡಿಕೊಂಡರೆ!' ಲಿಂಗಮ್ಮನ ಮನಸ್ಸು ಕಸಿವಿಸಿಗೊಂಡಿತು. ಮಗಳ ಬದುಕು ಅನ್ಯಾಯವಾದರೆ ಆಕೆ ಸಹಿಸಳು.

'ಮೊದಲು ಆಕೆಗೆ ತಿಳಿಸು. ಮದುವೆಗೆ ನೀನು ಒಪ್ಪಿಸು; ನಂತರ ನಿರೂಪವನ್ನು ಕಳಿಸುವಾ....'

ಲಿಂಗಮ್ಮನಿಗೆ ಸರಿ ಎನ್ನಿಸಿತು. ಸೋಪಾನದ ಬಳಿ ಹೋಗಿ ನಿಂತು, 'ಮಾದೇವೀ....' ಎಂದು ಕೂಗು ಹಾಕಿದಳು.

ತುಂಬು ಯೌವ್ವನಸ್ತೆಳಾಗಿ, ತಲೆಯ ತುಂಬ ಸೆರಗು ಹೊದ್ದು ಗಂಭೀರ ವಾದ ಹೆಜ್ಜೆ ಇಕ್ಕುತ್ತ ಬಂದ ಮಗಳನ್ನು ನಿಟ್ಟಿಸಿದ ಓಂಕಾರಶೆಟ್ಟಿ.

'ಏಕವ್ವಾ, ಕರೆದೆ....' ಮಹಾದೇವಿ ನಿಂತು ಕೇಳಿದಳು.

'ಬಾಮ್ಮ....ಪ್ರಸಾದವಾಯಿತೇ? ಕುಳಿತುಕೋ ಬಾ....' ಮಮತೆಯಿಂದ ಓಂಕಾರ ಕರೆದ.

'ಪ್ರಸಾದವಿನ್ನೂ ಆಗಿಲ್ಲ. ಪೂಜೆ ಮಾಡುವಾಗ ಹಲವಾರು ಭಾವನೆಗಳು ಉಕ್ಕಿ ಹರಿದವು. ಅವನ್ನು ವಚನಗಳ ರೂಪದಲ್ಲಿ ಹಿಡಿದು ಇಡಲು ಪ್ರಯತ್ನಿಸು ತ್ತಿದ್ದೆ ಅಪ್ಪಾ....'

'ಬಾಮ್ಮ ಕುಳಿತುಕೋ....ನನಗೂ ಇಂದು ಅವಸರವಿಲ್ಲ....' ತಂದೆಯಷ್ಟೇ ಅಗದೆ, ಬಾಲ್ಯದಿಂದಲೂ ವೈಚಾರಿಕ ಮಾರ್ಗದರ್ಶಿಯಾದ ಓಂಕಾರನನ್ನು ಕಂಡರೆ ಮಹಾದೇವಿಗೆ ತುಂಬ ಅಭಿಮಾನ.

'ಬನವಾಸಿಯಿಂದ ಇದೇ ಈಗ ಒಂದು ನಿರೂಪ ಬಂದಿದೆ ಮಾದೇವಿ.... ಮಹಾಲಿಂಗಶೆಟ್ಟರು ದೊಡ್ಡ ವ್ಯಾಪಾರಗಳಂತೆ. ಒಬ್ಬನೇ ಮಗನಂತೆ, ನೋಡ ಲಿಕ್ಕೆ ಬರಲು ಕೇಳುತ್ತಾರೆ....' ಲಿಂಗಮ್ಮ ಪ್ರಸ್ತಾಪಿಸಿದಳು.

'ಯಾರನ್ನು ನೋಡಲು?' ತಾಯಿಗೆ ಮರುಪ್ರಶ್ನೆ ಹಾಕಿದಳು.

'ಮತ್ತಾರನ್ನು, ನಿನ್ನನ್ನು! ನಿನಗೆ ವಯಸ್ಸು ಎಷ್ಟೆಂಬುದರ ಕಲ್ಪನೆ ಯಾದರೂ ಇದೆಯೋ? ದವನದ ಹುಣ್ಣಿಮೆಯಾಗಿ ...

ದ್ದಿಗೆ; ಅಂದರೆ ಹದಿನೈದು, ಮೇಲೆರಡು ಸಂವತ್ಸರ ಕಳೆದವು....' ಲಿಂಗಮ್ಮ ಹೇಳಿದಳು.

'ನನ್ನನ್ನು ನೋಡಲಿಕ್ಕೆ! ನನ್ನಲ್ಲಿ ಏನಿದೆ ಅಂತ ಪ್ರದರ್ಶಿಸಲಿ?....'

'ಏನು ಹಾಗಂದರೆ....ಸುಂದರ ರೂಪವಿಲ್ಲವೆ? ತುಂಬಿದ ಯೌವ್ವನ ವಿಲ್ಲವೆ? ಮನೆತನದ ಕುಲೀನತೆಯಿಲ್ಲವೆ? ಮುಪ್ಪಿನ ಮುದುಕಿಯಾಗಿರುವೆ ಏನು?....' ಲಿಂಗಮ್ಮ ನೊಂದು ಕೇಳಿದಳು.

'ತಾಯಿ, ನನ್ನ ಜೀವನವಾಗಲೇ ಎಡೆಮಾಡಲ್ಪಟ್ಟಿದೆ. ನನ್ನದಾವುದೂ ನನ್ನ ಕೈಲಿಲ್ಲ....

ಕಾಮಿಸಿ ಕಲ್ಪಿಸಿ ಕುಂದಿದೆನವ್ವಾ.
ಮೋಹಿಸಿ ಮುದ್ದಿಸಿ ಮರುಳಾದೆನವ್ವಾ.
ತೆರೆಯದೆ ತೊರೆಯದೆ ನಲಿದು ನಂಬಿದೆ ನಾನು.
ಎನ್ನ ದೇವ ಚನ್ನಮಲ್ಲಿಕಾರ್ಜುನನೊಲ್ಲದೊಡೆ ಆನೇವೆನವ್ವಾ!*

'ಅವನ ವಿರಹದಲ್ಲಿ ಕಳವಳಿಸುತ್ತಿರುವೆ. ಕಾಮದಲ್ಲಿ ಕುಂದಿ, ಮೋಹದಲ್ಲಿ ಮರುಳಾಗಿರುವೆ....'

'ನನಗೆ ಸಂಶಯ ಬಂದಿತ್ತು ಮಾದೇವಿ! ನಾನು ಎಷ್ಟು ಪರಿಯಲ್ಲಿ ಹೇಳಿದರೂ ನಿಮ್ಮಪ್ಪ ಕೇಳಲಿಲ್ಲ....ಸಿಂಗಾರಮ್ಮ ಎಂದೋ ಹೇಳಿದಳು. ಹೆಣ್ಣಿನ ಮನವನ್ನು ಹೆಣ್ಣೇ ಅರಿಯುವಳು....' ಲಿಂಗಮ್ಮನಿಗೆ ಸಂಭ್ರಮವೆನಿಸಿತು.

'ನನ್ನ ಕಣ್ಣಿನೊಳಗೆಲ್ಲ ಅವನ ಚೆಲುವೇ ತುಂಬಿ ನಿಂತಿದೆ. ಅವನ ದಿವ್ಯವಾದ ಕಾಂತಿ ನನ್ನ ಕಣ್ಣು ಕುಕ್ಕುತ್ತಿದೆ....ಅವನಿಗೆ ನಾನಾಗಲೇ ಮನ ಸೋತಿರುವೆನವ್ವಾ. ಅವನು ನನ್ನ ಮದುಮಣಿಗ, ನಾನವಳ ಮದುಮಣಿಗಿ.'

'ನೀನು ಹೇಳುವುದು ನೋಡಿದರೆ ಅವನು ತುಂಬ ಸುಂದರಾಂಗನೇ ಎನ್ನಿಸುತ್ತಿದೆ. ನಿನ್ನ ಚೆಲುವಿಗೆ ಸಾಟಿಯಾಗುವುದು. ಎಷ್ಟು ದಿವಸಗಳಿಂದ ಈ ಬಯಕೆಯನ್ನು ಮನದೊಳಗೆ ಹುದುಗಿಸಿಕೊಂಡು ಕೊರಗುತ್ತಿರುವೆ. ಹುಚ್ಚಮ್ಮಾ.... ನನ್ನು ಮುಂದೆ ಹೇಳಲೂ ಸಂಕೋಚವಾಯಿತೇ?....' ಲಿಂಗಮ್ಮ ಉಕ್ಕೇರಿದ ಹರ್ಷದಿಂದ ಮಗಳ ಬಳಿ ಸರಿದು ತಲೆಸವರಿದಳು. ಆದರೆ ಮರುಕ್ಷಣದಲ್ಲೇ ಆಲೋಚನೆಯ ದಿಕ್ಕು ಬದಲಾಗಿ, ಮುಖ ತುಸು ಗಂಭೀರವಾಯಿತು.

'ಮಗಳೇ, ನೀನು ಹೇಳುವ ಚನ್ನಮಲ್ಲಿಕಾರ್ಜುನ ಎಂಬ ಹೆಸರಿನಮೇಲೆ ಅವನೂ ನಮ್ಮ ಧರ್ಮಸ್ಥನೇ ಎನ್ನಿಸುವುದು.

* ಮ. ವ. ೨೭೬.

ನನ್ನ ಮಗುಡ ಅರ್ಥದಷ್ಟು ಇಳಿಯಿತು. ಮುದ್ದು ಕಂದಾ, ಯಾರನ್ನು ಪ್ರೀತಿಸಿರುವೆ ಹೇಳು? ಅವನ ಹೆಸರು, ತಾಯಿ ತಂದೆಯರ ಸ್ಥಿತಿ-ಗತಿ, ಮನೆ ತನದ ಪರಿಚಯ, ಎಲ್ಲವನ್ನೂ ವಿವರವಾಗಿ ತಿಳಿಸು. ನೀನು ಒಲಿದ ವರನನ್ನೇ ಕರೆತಂದು ಧಾರೆ ಎರೆಯುತ್ತೇನೆ....ನಿನ್ನ ಸುಖಕ್ಕಿಂತ ಮಿಗಿಲಾದುದು ನಮ ಗೇನಿದೆಯವ್ವಾ....?' ಲಿಂಗಮ್ಮ ಸಮಾಧಾನಚಿತ್ತಳಾಗಿ ಹೇಳಿದಳು.

'ಅವ್ವ....ನನ್ನ ಮಾತಿನ ಅರ್ಥವನ್ನು ತಪ್ಪಾಗಿ ತಿಳಿದೆ. ನನ್ನ ಪತಿಯ ವರ್ಣನೆಯನ್ನು ಇನ್ನಷ್ಟು ಮಾಡುವೆ ಕೇಳು....ಆಗಲಾದರೂ ಕಂಡುಹಿಡಿ.

> ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗಾನೊಲಿದೆ ಅವ್ವಾ!
> ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
> ಚೆಲುವಂಗಾನೊಲಿದೆ ಎಲೆ ಅವ್ವಾ!
> ನೀನು ಕೇಳಾ ತಾಯೆ! ಭವವಿಲ್ಲದ ಭಯವಿಲ್ಲದ
> ನಿರ್ಭಯ ಚೆಲುವಂಗೊಲಿದೆ ನಾನು.
> ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
> ಇದು ಕಾರಣ, ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
> ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು!*

ತನ್ನ ಪತಿಯ ವರ್ಣನೆಯಲ್ಲಿ ಮೈಮರೆತು ನಕ್ಕಳು ಮಹಾದೇವಿ.

'ಈ ಒಗಟು ಮಾತನ್ನು ಬಿಡು. ಮುಚ್ಚುಭಾಷೆ ನನಗರ್ಥವಾಗದು, ಬಿಚ್ಚುಭಾಷೆಯಲ್ಲಿ ಹೇಳು....' ಲಿಂಗಮ್ಮ ಹೇಳಿದಳು.

ಓಂಕಾರ ಮೌನವಾಗಿ, ಸಾಕ್ಷೀಭೂತವಾಗಿ ಕುಳಿತು ತಾಯಿ-ಮಗಳ ಸಂವಾದವನ್ನು ನಿರೀಕ್ಷಿಸುತ್ತಿದ್ದ. ಮಗಳ ಸಾಹಿತ್ಯಶಕ್ತಿ, ಭಾಷೆಯಮೇಲೆ ಆಕೆಗಿದ್ದ ಬಿಗುವು, ಸಮರ್ಥ ಮತ್ತು ಪರಿಣಾಮಕಾರೀ ಬಗೆಯಲ್ಲಿ ತತ್ತ್ವವನ್ನು ಸೂತ್ರೀಕರಿಸಿ ಹೇಳುವ ಜಾಣ್ಮೆ, ಅವನನ್ನು ಮಂತ್ರಮುಗ್ಧನನ್ನಾಗಿ ಮಾಡಿದ್ದವು. ಈ ತಾನು ಏನೇ ಪ್ರತಿಕ್ರಿಯೆ ವ್ಯಕ್ತಪಡಿಸಿದರೂ ಅದು ಈರ್ವರನ್ನೂ ಕೆರಳಿಸುವುದು ಎಂದುಕೊಂಡ. ಮಗಳ ಪರವಾಗಿ ಮಾತಾಡಿ, ಮನದ ಭಾವನೆ ವ್ಯಕ್ತಪಡಿಸಿದರೆ 'ಅವ್ಯವಹಾರಿಕರು, ಕರ್ತವ್ಯಪ್ರಜ್ಞಾಹೀನರು....' ಎಂದು ಲಿಂಗಮ್ಮ ಆಕ್ರೋಶಗೊಳ್ಳುವುದು ಬಹು ಸಹಜವಿದ್ದಿತು. ಹೆಂಡತಿಯನ್ನು ಹರ್ಷಚಿತ್ತಳನ್ನಾಗಿ ಮಾಡಲು ಅವಳ ಪರವಾಗಿ ಮಾತನಾಡಿದರೆ 'ತನ್ನ ತಂದೆ ಎಂತಹ ಅಜ್ಞಾನಿ, ಲೌಕಿಕ' ಎಂದು ಮಗಳು ಅಳೆಯುವುದರಲ್ಲಿ ಸಂಶಯ ಉಳಿದಿರಲಿಲ್ಲ.

---

* ಮ. ವ. ೨೫೦.

'ಇದೊಂದು ನದಿ. ಎರಡು ದ್ರೋಣಿ ತೇಲುತ್ತಿವೆ. ಎರಡರಲ್ಲಿ ಒಂದೊಂದು ಕಾಲಿಟ್ಟಿರುವೆ. ಅವರೆ ಕೊಚ್ಚಿಕೊಂಡು ಹೋಗದಷ್ಟು ಎಚ್ಚರವಾಗಿರುವೆ. ಏನಾಗುವುದೋ ನೋಡುವಾ....ಯಾವ ಕಡೆಯ ದೋಣಿಯ ವೇಗ ಹೆಚ್ಚಾಗುವುದೋ ಅದರಲ್ಲಿ ತೇಲಿದರಾಯಿತು. ಹೆಂಡತಿಯ ಲೌಕಿಕತೆಯೇ ಗೆದ್ದರೆ ಅದಕ್ಕೆ ಹೊಂಗುಟ್ಟಿದರಾಯಿತು; ಮಗಳ ವಿರಕ್ತಿ ಗೆದ್ದರೆ ಅದಕ್ಕೆ ತಲೆಬಾಗಿದರೆ ಆಯಿತು....' ಮನಸ್ಸಿನಲ್ಲಿಯೇ ಆಲೋಚಿಸತೊಡಗಿದ್ದ.

'ನನ್ನ ಗಂಡನಿಗೆ ಹುಟ್ಟಿಲ್ಲ, ಸಾವಿಲ್ಲ....' ಮಹಾದೇವಿ ಹೇಳಿದಳು.

'ಸರಿ, ಆಗದ ಹೋಗದ ಮಾತು....ಮನುಷ್ಯರೆಂದಮೇಲೆ ಹುಟ್ಟು-ಸಾವು ಸಹಜ....' ಲಿಂಗಮ್ಮ ಹೇಳಿದಳು.

'ಅದಕ್ಕೇ ನನ್ನ ಗಂಡ ಮಾನವನಲ್ಲ. ಜನನ-ಮರಣಗಳಿಗೆ ಅತೀತನಾದವನು; ರೂಪವು ಇಲ್ಲದವನು....'

'ರೂಪವಿಲ್ಲದವನು ಅಂತೀಯ, ಚೆಲುವನು ಅಂತೀಯ. ನಿನ್ನದು ಯಾವ ಹುಚ್ಚುಭಾಷೆ....' ಬೆರಗಾಗಿ ಕೇಳಿದಳು ಲಿಂಗಮ್ಮ.

'ಅದೇ ನನ್ನ ಗಂಡನ ವೈಶಿಷ್ಟ್ಯ ಕಣವ್ವಾ. ರೂಪುಳ್ಳದ್ದು ಖಂಡಿತವಾಗಿರುವುದು, ರೂಪವುಳ್ಳ ಚೆಲುವಿಗೆ ವಿಕಾರವಿದೆ, ನಾಶವಿದೆ. ಆದರೆ ನನ್ನ ಗಂಡ ನಿರೂಪಿ, ಅಖಂಡಿತ, ನಿಸ್ಸೀಮ ಚೆಲುವ. ಮೂಡುತ್ತಿರುವ ಸೂರ್ಯನ ಕೆಂಬಣ್ಣದಲ್ಲಿ ಅವನ ಚೆಲುವು, ಹಾಡುತ್ತಿರುವ ಹಕ್ಕಿಯ ಕಂಠದಲ್ಲಿ ಅವನ ಚೆಲುವು, ಬೀಸುವ ಗಾಳಿಯ ಸಡಗರದಲ್ಲಿ ಅವನ ಚೆಲುವು, ಅರಳುವ ಹೂವಿನ ಸೊಗಸಿನಲ್ಲಿ ಅವನ ಚೆಲುವು, ತೇಲುವ ಮೋಡದ ಸಂಚಯದಲ್ಲಿ ಅವನ ಚೆಲುವು.

ಅವನು ಸ್ಥಾನಕಾಲಕ್ಕತೀತನಾದವನು, ಅಂತ್ಯರಹಿತನು. ಹಾಲಿನಲ್ಲಿ ಓತಪ್ರೋತವಾಗಿ ಇರುವ ತುಪ್ಪದಂತೆ, ಎಳ್ಳು ಗೊನೆಯಲ್ಲಿ, ಮುಳ್ಳು ಮೊನೆಯಲ್ಲಿ ಪೊಳ್ಳುಬಿಡದಂತೆ ಒಳಗೆ ಹೊರಗೆ ತುಂಬಿ ತುಳುಕುವ ಸರ್ವವ್ಯಾಪಿ ಚೈತನ್ಯನು. ಭವಚಕ್ರಕ್ಕೆ ಸಿಕ್ಕದವನು, ನಿರ್ಭಯನು. ಜಾತಿಮತ ಕುಲದ ಜಂಜಾಟಕ್ಕೆ ಸಿಕ್ಕದವನು. ಹೆಣ್ಣು ಗಂಡೆಂಬ ಲಿಂಗಭೇದವಿಲ್ಲದ, ಸತ್ಯ-ಸುಂದರ-ಮಂಗಳಮಯನು. ನನ್ನನ್ನು ಇಂತಹವನೊಡನೆ ಒಂದುಗೂಡಿಸುವ ಸಾಮರ್ಥ್ಯವಿದೆಯೋ ನಿನಗೆ....?'

'ನೀನು ಹೇಳುವುದು ದೇವರನ್ನು ಕುರಿತೆಂದು ಅನ್ನಿಸುವುದು. ಅವನನ್ನು ಹಿಡಿದು ತರಲು ಸಾಧ್ಯವೇ?....' ಹತಾಶಳಾಗಿ ಲಿಂಗಮ್ಮ ನುಡಿದಳು.

'ನೋಡವ್ವ, ಅಂತಹವನನ್ನು ಒಲಿಸಿಕೊಂಡು ಅತ್ತೆಯಾಗುವ ಸಾಮರ್ಥ್ಯ

ಇದ್ದರೆ ಹೇಳು. ಅವನೇ ನನ್ನ ಚೆಲುವಗಂಡ. ಇಲ್ಲವಾದರೆ ಈ ಸಾವಕೆಡುವ ಗಂಡರ ಮುಂದೆ ನನ್ನನ್ನು ನಿಲ್ಲಿಸಬೇಡ, ಪ್ರದರ್ಶಿಸಬೇಡ. ಅವರನ್ನೊಯ್ದು ಒಲೆಯೊಳಗಿಕ್ಕು ; ನಾನೊಲ್ಲೆ....'

'ಸರಿ....ನಿನ್ನ ಹುಚ್ಚಾಟಕ್ಕೆ ಮಿತಿ ಇಲ್ಲ. ಅಂತಹವನನ್ನು ಲಗ್ನವಾಗುವುದುಂಟೇ....? ಅಸಂಭವ....'

'ಶರಣಸತಿ-ಲಿಂಗಪತಿಯ ಸಂಬಂಧ ಅಳವಡಬೇಕೆಂದು ಶರಣರ ವಚನಗಳು ಹೇಳವೇ....?'

'ಅಂತರಂಗದಲ್ಲಿ ಆ ಸಂಬಂಧವನ್ನು ಬೆಳಸಿಕೋ ಎಂದು ಷಟ್ಸ್ಥಲವು ಹೇಳುವುದೇ ಹೊರತು ಬಹಿರಂಗದಲ್ಲಿ ಲಗ್ನವಾಗಬೇಡ ಎಂದು ಹೇಳುವುದಿಲ್ಲ' —' ಲಿಂಗಮ್ಮ ಸಿಡಿದು ನುಡಿದಳು.

'ಆದರೆ ತಾಯಿ,

ಉಳ್ಳುದೊಂದು ತನು, ಉಳ್ಳುದೊಂದು ಮನ.
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ ?
ಅಕಟಕಟಾ, ಕೆಟ್ಟೆ ಕೆಟ್ಟೆ ! ಸಂಸಾರಕ್ಕಲ್ಲ, ಪರಮಾರ್ಥಕ್ಕಲ್ಲಾ !
ಎರಡಕ್ಕೆ ಬಿಟ್ಟ ಕರುವಿನಂತೆ !
ಬಿಲ್ವ ಬೆಳವಲ ಕಾಯನೊಂದಾಗಿ ಹಿಡಿಯಬಹುದೆ
ಚನ್ನಮಲ್ಲಿಕಾರ್ಜುನಾ*

ಅವ್ವಾ, ಇರುವದೊಂದು ಶರೀರ, ಇರುವದೊಂದು ಮನ. ಅದು ಹೇಗೆ ಅವನ್ನು ಎರಡು ವ್ಯವಹಾರಗಳಲ್ಲಿ ತೊಡಗಿಸಬಹುದು. ನೋಡವ್ವ, ಶರೀರವನ್ನು ಲೌಕಿಕ ಗಂಡನಿಗೆ ಸಲ್ಲಿಸಿ ಮನವನ್ನು ದೇವನಿಗೆ ಸಲ್ಲಿಸಿದರೆ ಅದು ವೇಶ್ಯೆಯ ಸ್ನೇಹದಂತಾಗುವುದು. ಈ ಒಲವಿಲ್ಲದ ಸೇವೆ, ಸ್ನೇಹವಿಲ್ಲದ ಮಾಟ ಗಂಡನಿಗೆ ತೃಪ್ತಿಯನ್ನು ಕೊಡವು. ಈ ಪುರುಷನಿಗೆ ಮನವನ್ನು ಕೊಟ್ಟು ದೇವನಿಗೆ ತನುವನ್ನು ಮೀಸಲಿಟ್ಟರೆ, ಸಾರವಿಲ್ಲದ ಬೀಜದ ಸಿಪ್ಪೆಯನ್ನು ತೆಗೆದುಕೊಂಡು ದೇವನೇನು ಮಾಡುವನು? ದಯಾಮಯಿ ದೇವನು ಸಹಿಸಿಕೊಂಡಾನು ; ಆದರೆ ಕಾಮದ ಹುಳುವಾದ ಪುರುಷನು ತನುವು ದೊರೆಯದ ಮನದ ಪರಿಶುದ್ಧ ಪ್ರೇಮವನ್ನು ಬಯಸುವನೇ ?....'

'ಇದು ಅವ್ಯವಹಾರಿಕ ಪ್ರಶ್ನೆ. ತನು ಮನಗಳನ್ನು ವಿಭಜಿಸಬೇಡ, ದಿನದ ವೇಳೆಯನ್ನು ವಿಭಜಿಸು. ಗಂಡನ ಸೇವೆಗೆ, ಗೃಹಕೃತ್ಯಕ್ಕೆ ಹೆಚ್ಚಿನ

* ಮ. ವ. ೧೩

ಭಾಗ, ಪೂಜೆ-ಪುರಸ್ಕಾರಗಳಿಗೆ ಸ್ವಲ್ಪ ಭಾಗ....'

'ಎರಡಕ್ಕೆ ಬಿಟ್ಟ ಕರುವಿನಂತೆ! ರುಚಿಕಟ್ಟಾದ ಹತ್ತಿಕಾಳಿನ ಹಾಲನ್ನು ಒಂದೆಡೆ ಇಟ್ಟು, ಇನ್ನೊಂದೆಡೆ ಗೋವಳಿಗ ಹಾಲನ್ನು ಹಿಂಡುತ್ತಾನೆ. ಈ ಕರು ರುಚಿಕಟ್ಟಾದ ಹತ್ತಿಯ ಕಾಳಿನ ಹಾಲನ್ನು ಸವಿಯುವಾಗಲೇ, ಮತ್ತೆ ತಾಯ ಮೊಲೆವಾಲ ನೆನಪಾಗಿ ಅತ್ತ ಓಡುವುದು. ಅಲ್ಲಿ ತಾಯಿಯ ಹಾಲನ್ನು ಕುಡಿಯುವಾಗಲೇ ಈ ಕಡೆ ಹತ್ತಿಕಾಳಿನ ಬಳಿ ಓಡುವುದು. ಒಂದು ಕಡೆಯೂ ಹೊಟ್ಟೆ ತುಂಬದಂತಾಗುವುದು—ಈ ಎರಡಕ್ಕೆ ಬಿಟ್ಟ ಕರುವಿನ ಗತಿ! ತಾಯಿಯ ಬಳಿ ನಿಂತು, ಅವನು ಹಿಂಡಿಕೊಳ್ಳುವುದರಲ್ಲೇ ಸಾಕಷ್ಟು ಹಾಲು ಕುಡಿಯಬೇಕು. ಇಲ್ಲವೇ ಈ ಹತ್ತಿಯ ಕಾಳನ್ನಾದರೂ ಚೆನ್ನಾಗಿ ತಿನ್ನಬೇಕು. ಇಲ್ಲವಾದರೆ ಅದನ್ನು ಉಳಿದ ರಾಸುಗಳು ತಿಂದು ಮುಗಿಸುತ್ತವೆ. ಹಾಗೆಯೇ ತಾಯೀ, ಸಂಸಾರದ ತಿಂಡಿಯ ಆಸೆ ಒಂದು ಕಡೆ, ದೈವೀಕಾರುಣ್ಯದ ತಾಯಹಾಲು ಮತ್ತೊಂದು ಕಡೆ. ಎರಡಕ್ಕೂ ಎಳಸಿದರೆ ಯಾವುದೊಂದೂ ಸಿಗದು....'

'ನಿನ್ನ ಮಾತಿನ ಒಳುವೇ ನನಗೆ ಅರ್ಥವಾಗದು ಮಾದೇವಿ. ಸಂಸಾರದಲ್ಲಿದ್ದೂ ಘನವಾದ ವ್ಯಕ್ತಿತ್ವ ಪಡೆದವರು ಎಷ್ಟು ಮಹಾನುಭಾವರಿಲ್ಲ! ಕಾರಿಕಾಲಮ್ಮ, ಪಾಂಡ್ಯ ಮಹಾದೇವಿ ಹಿಂದೆ ಆಗಿಹೋಗಲಿಲ್ಲವೇ; ಸಿರಿಯಾಳ ಚಂಗಳೆಯರಿಲ್ಲವೇ? ಹಿಂದಿನ ಉದಾಹರಣೆಗಳೇಕೆ, ಸೋಜ್ವಲ ಉದಾಹರಣೆಯಾಗಿ ನಮ್ಮ ಧರ್ಮಗುರು ಅಪ್ಪ ಬಸವಣ್ಣನವರು, ತಾಯಿ ನೀಲಾಂಬಿಕೆಯರಿಲ್ಲವೆ?....'

'ಅಪ್ಪಾ, ಪ್ರಾಣಿಗಳಲ್ಲಿ ಜಲಚರ, ಭೂಚರ ಜಲಭೂಚರ' ಎಂದು ವಿವಿಧ ಬಗೆಗಳುಂಟು. ಜಲಚರ ಪ್ರಾಣಿಯಾದ ಮೀನು ವಾತಾವರಣದ ಗಾಳಿಯನ್ನು ಕುಡಿದು ಬದುಕಲಾರದು; ಅದರ ಸ್ವಭಾವ ಜಲಪ್ರಕೃತಿಗೆ ಹೊಂದಿದೆ, ಅದರ ಅಂಗ ರಚನೆ ಹಾಗಿದೆ. ಭೂಚರ ಪ್ರಾಣಿಯಾದ ಹಸುವು ಜಲದಲ್ಲಿ ಬದುಕಲಾರದು. ಅದು ಭೂಪ್ರಕೃತಿಗೆ ಹೊಂದಿದೆ, ಅದರ ಅಂಗರಚನೆ ಹಾಗಿದೆ. ಕಪ್ಪೆಯು ಭೂ-ಜಲಚರ ಪ್ರಾಣಿ, ಅದು ಭೂಮಿಯ ಮೇಲೂ ಬದುಕಬಲ್ಲದು, ಜಲದಲ್ಲೂ ಬದುಕಬಲ್ಲದು. ಅದನ್ನು ಅನುಕರಿಸಿ ಹಸು ನೀರಿಗಿಳಿದರೂ ತಪ್ಪು; ಮೀನು ದಡಕ್ಕೆ ಹಾರಿದರೂ ತಪ್ಪು.

ಹಾಗೆಯೇ ಕೆಲವರು ಸದಾಕಾಲದಲ್ಲಿ ಅರ್ಥರಹಿತ ಭೋಗಪ್ರಪಂಚದ ಸಿಂನಲ್ಲಿ ಮುಳುಗಿ ತೇಲುವವರು; ಅವರನ್ನು ಪಾರಮಾರ್ಥ ಪ್ರಪಂಚಕ್ಕೆ ಒಮ್ಮೆ ಕ್ಷಣಕಾಲವೂ ತಡೆಯ...

ಮಠಕ್ಕೆ ಪ್ರವಚನ ಕೇಳಲು ಕರೆದೊಯ್ದಿದ್ದೆ. ಒಂದು ತಿಂಗಳು ಸಹ ಗಂಡನೊಡನೆ ಸಂಸಾರ ಮಾಡದೆ ವಿಧವೆಯಾದ ಅವಳ ಬಾಳಿಗೊಂದು ತಿರುವನ್ನು ಕೊಡಬೇಕೆಂದು, ಪಾರಮಾರ್ಥ ಮೌಲ್ಯಗಳು ಅವಳ ಹೃದಯದ ಗಾಯಕ್ಕೆ ಲೇಪನವನ್ನು ನೀಡುಸವೆಂದು ಕರೆದೊಯ್ದೆ; ಆದರೇನು, ಹತ್ತಾರು ಕ್ಷಣ ಕುಳಿತುಕೊಳ್ಳಲಾರದೆ ಚಟಪಟಿಸಿ ಬಂದುಬಿಟ್ಟಳು. ನಾನೀಗ ಪಾರಮಾರ್ಥ ಪ್ರಪಂಚದ ಕೂಸು. ಸಂಸಾರದ ಕೆಸರಿನ ಮಡುವಿನಲ್ಲಿ ಈಜಲು ಅಸಮರ್ಥಳು. ನನ್ನನ್ನು ಸ್ವಬಯಕೆಗೆ ವಿರುದ್ಧವಾದ ಭೋಗದ ನೀರಿನೊಳಕ್ಕೆ ದೂಡಿದರೆ ಹೇಗೆ?

ದೊಡ್ಡವರ ಉದಾಹರಣೆ ಕೊಡಬೇಡವ್ವಾ! ಬಸವಣ್ಣ-ನೀಲಮ್ಮನಂತಹವರು ಲೌಕಿಕ-ಪಾರಮಾರ್ಥ ಎರಡನ್ನೂ ಕೂಡಿನಡೆಸುವ ಕಡುಜಾಣರು. ಅವರು ಭೂಜಲಚರ ಪ್ರಾಣಿಯಾದ ಕಪ್ಪೆಯಂತೆ. ಸಂಸಾರದಲ್ಲಿದ್ದೂ ಸಂಸಾರಿಗಳಾಗಿರದವರು. ನಮ್ಮಲ್ಲಿ ಯೋಗ್ಯತೆ ಇಲ್ಲದೆ ಅಂಥವರನ್ನು ಅನುಕರಿಸ ಹೋದರೆ ನವಿಲನ್ನು ನೋಡಿ ಕೆಂಭೂತ ಪುಕ್ಕ ತೆರೆದಂತೆ, ರೇಷಿಮೆಯ ಗೂಡನ್ನು ನೋಡಿ ಕಂಬಳಿಹುಳ ಕೋಶ ಹೆಣೆದಂತೆ, ಚಂದ್ರನನ್ನು ನೋಡಿ ಮಿಣುಕುಹುಳ ಹಾರಿದಂತೆ ಆಗಿ, ಅಪಹಾಸ್ಯಕ್ಕೆ ಈಡಾದೇವು!....ಆನೆಯು ಆ ದಾರಿಯಲ್ಲಿ ಹೋಯಿತ್ತು ಎಂದರೆ, ಆಡೂ ಆ ದಾರಿಯಲ್ಲಿ ಹೋಗಬಲ್ಲುದೆ....?'

'ಆದರೆ ಮಹಾದೇವಿ ಹೆಣ್ಣಿಗೆ ಬೇರಾವ ಹಾದಿ ಇದೆಯವ್ವಾ?'

'ಏಕವ್ವ, ಹೆಣ್ಣು ಭೋಗದ ಗೊಂಬೆ, ಹಡೆಯುವ ಯಂತ್ರ, ಪುರುಷನ ದಾಸಿ ಇಷ್ಟಾಗುವುದು ಬಿಟ್ಟು ಬೇರಾವ ಹಾದಿ ಇಲ್ಲವೇ?' ಕೆರಳಿ ಕೇಳಿದಳು.

'ಅಷ್ಟಲ್ಲದೆ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂದು ಶಾಸ್ತ್ರಗಳು ಹೇಳುತ್ತವೆಯೆ?' ಲಿಂಗಮ್ಮ ಪ್ರಶ್ನಿಸಿದಳು.

'ಅದನ್ನು ಹೇಳಿದವರು ಪುರುಷರು ತಾನೇ! ಶೋಷಕರು ಹೇಳುತ್ತ ಬಂದುದನ್ನು ಶೋಷಿತರು ಕೇಳುತ್ತ ಬಂದುದಕ್ಕೇ ಸಮಾಜವು ಈ ದುರವಸ್ಥೆಯಲ್ಲಿ ಇರುವುದು....'

'ಹೆಣ್ಣು ಮಾಯೆ ...ಎಂದು ಧರ್ಮಶಾಸ್ತ್ರಗಳು ಅಲ್ಲಗಳೆಯುತ್ತವೆ. ಹೀಗಿದ್ದಾಗ ಮಾಯೆಯಾದ ಹೆಣ್ಣು ಮುಕ್ತಿಮಾರ್ಗಕ್ಕೆ ಏಕಾಕಿನಿಯಾಗಿ ಹೋಗಬಲ್ಲಳೇ....?'

'ಅವ್ವಾ! ಶರಣ ಧರ್ಮದ ಅನುಯಾಯಿ ನೀನಾಗಿದ್ದೂ ಅದರ ಕೆಚ್ಚು ನಿನಗರ್ಥವಾಗಿಲ್ಲ; ಅದರ ತಿರುಳನ್ನು ಸವಿದಿಲ್ಲ. ಹೆಣ್ಣು ಮಾಯೆ ಎಂಬ

ತತ್ತ್ವದ ವಿರುದ್ಧ ಹೋರಾಟ ಮಾಡಿ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ, ದೈವಾಂಶಳು ಎಂದು ಸಾರಿರುವುದು ಕಾಣೆಯಾ? ಹೆಣ್ಣು ಹೊನ್ನು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಎಂದು ಮೂಢಸಂಪ್ರದಾಯವನ್ನು ಶರಣರು ಎದುರಿಸಿ ನಿಂತಿರುವುದು ಅರಿಯೆಯಾ?

ಹೆಣ್ಣಿಗೆ ಧರ್ಮದಲ್ಲಿ, ಗುರುತ್ವದಲ್ಲಿ, ಮುಕ್ತಿಪದವಿಯಲ್ಲಿ ಸಮಾನತೆ ಕೊಡುವುದೇ ನಮ್ಮ ಧರ್ಮದ ಜೀವಾಳವಲ್ಲವೆ?

ಪುರುಷತ್ವದ ಪ್ರಕೃತಿಸಿದ್ಧ ಗುಣಗಳು ಅಳಿಯದ ವ್ಯಕ್ತಿಗೆ ಸ್ತ್ರೀಯು ಮಾಯೆಯಾದರೆ, ಸ್ತ್ರೀತ್ವದ ಲಜ್ಜೆ, ಕಾಯಗುಣ ಅಳಿಯದವಳಿಗೆ ಪುರುಷ ಮಾಯೆ! ಆದರೆ ಶರಣರು ಸ್ತ್ರೀತ್ವ, ಪುರುಷತ್ವವನ್ನು, ಹುಟ್ಟು ಗುಣಗಳ ಕಾಳಿಕೆಯನ್ನು ಮೆಟ್ಟಿನಿಂತವರು. ಇಂತಹವರಿಗೆ ಯಾವ ಮಾಯೆ-ಅಜ್ಞಾನಗಳಿಲ್ಲ, ಅಹಂಕಾರವಿಲ್ಲ....'*

'ಮದುವೆ ಎಂದರೇನು? ತನ್ನ ಸುಖ-ದುಃಖ, ಭೋಗ-ತ್ಯಾಗ ಎಲ್ಲದರಲ್ಲಿ ಭಾಗಿಯಾಗುವ ಸಂಗಾತಿಯನ್ನು ಹೊಂದುವಿಕೆ. ಅಂದಾಗ ಸದ್ಗುಣವಂತ ಪತಿ ಸಿಕ್ಕರೆ ನಿನ್ನ ಮಾರ್ಗ ಇನ್ನೂ ಸರಳವಾಗುವುದಲ್ಲ....'

'ಇಲ್ಲ ತಾಯಿ, ಮದುವೆ ಮಾನವನ ಸ್ವಾತಂತ್ರ್ಯಹರಣ ಮಾಡುವುದು. ಲಿಂಗಕಾಮಿಯಾಗಬೇಕಾದವಳನ್ನು ಪತಿಮೋಹಿ, ಸುತಮೋಹಿ, ಧನಮೋಹಿಯನ್ನಾಗಿ ಮಾಡುವುದು. ಬಾಲ್ಯಾವಸ್ಥೆಯಲ್ಲಿ ತಾಯಿ-ತಂದೆಯರ ಮೋಹ, ಯೌವ್ವನದಲ್ಲಿ ಪತಿಯ ಮೋಹ, ಮುಪ್ಪಿನಲ್ಲಿ ಮಕ್ಕಳ ಮೋಹ. ಈ ಸುತ್ತನ್ನು ಸಂಸಾರ ವಿಸ್ತರಿಸುತ್ತಲೇ ಹೋಗುವುದು....'

'ಮದುವೆ ಒಂದು ಆಧಾರಶಕ್ತಿ; ಅಬಲೆಯಾದ ಹೆಣ್ಣಿಗೆ ಮಹಾವೃಕ್ಷ....'

'ನಿಜ, ನಿನ್ನ ಮಾತು ಸರ್ವಥಾ ಒಪ್ಪತಕ್ಕದ್ದೇ. ಬಳ್ಳಿಗೆ ಒಂದು ವೃಕ್ಷ ಬೇಕು; ಆದರೆ ವೃಕ್ಷಕ್ಕೆ ಯಾವ ಆಶ್ರಯ ಬೇಡ. ಆತ್ಮವಿಶ್ವಾಸವಿಲ್ಲದೆ, ಒಂಟಿಯಾಗಿ ಬದುಕಲಾರೆನೆಂಬ ಹೆಣ್ಣಾಗಲಿ, ಗಂಡಾಗಲಿ ಅವರಿಗೆ ಖಂಡಿತಾ ಆಶ್ರಯ ಬೇಕು. ಆತ್ಮವಿಶ್ವಾಸದ ಕಾರಂಜಿಯಾಗಿರುವ ನನಗೆ, ಪರಮಾತ್ಮನ ಆಶ್ರಯವನ್ನೇ ಪಡೆದವಳಿಗೆ ಪುರುಷಾಶ್ರಯ ಬೇಕಾಗಿಲ್ಲ....

ಮದುವೆ ಮಾಡಿಕೊಳ್ಳುವುದು ಕೆಲವು ಉದ್ದೇಶಗಳಿಗಾಗಿ; ದೈಹಿಕ ಬೇಡಿಕೆಯಾದ ಕಾಮತೃಪ್ತಿಗೆ; ವಾತ್ಸಲ್ಯ ತೃಪ್ತಿ ಮಾಡುವ ಸಂತಾನಾಪೇಕ್ಷೆಗೆ, ಅಥವಾ ಸಾಮಾಜಿಕ ರಕ್ಷಣೆಗೆ. ತೋರಲು ಹೆಣ್ಣಾಗಿದ್ದರೂ, ಕಾಮನೇ

---

* [illegible]

ಹುಟ್ಟಿಲ್ಲದ ನಿರ್ವಿಕಾರಿ ನಾನು ; ಅಂದಾಗ ಕಾಮನ ಕಾಟವೇ ಇಲ್ಲ. ಜಗತ್ತಿನ ಮಕ್ಕಳನ್ನೆಲ್ಲಾ ದೇವಸಂತಾನವೆಂದು, ನನ್ನ ಮಕ್ಕಳೆಂದು ತಿಳಿಯುವ ವಿಶ್ವ ಕುಟುಂಬಿ ನಾನು ; ರಕ್ಷಣೆಗೆ ಮಹಾದೇವನನ್ನೇ ಬೆನ್ನಿಗೆ ಹೊಂದಿದವಳು.... ನನಗೇತಕ್ಕೆ ಮದುವೆಯ ಬಂಧನ...?' ಓಂಕಾರನ ಹೃದಯದಲ್ಲಿ ತುಲನಾತ್ಮಕ ಅಧ್ಯಯನ ನಡೆದಿತ್ತು. ಉಡುತಡಿಯ ಹೊರಾಂಗಣದ ಗುಡ್ಡ ಮತ್ತು ಹಿಮಾಲಯದ ಗೌರೀಶಂಕರ ಬೆಟ್ಟಗಳ ಮಧ್ಯದ ಸಂವಾದವೆನಿಸತೊಡಗಿತ್ತು. ಇಂತಹ ತಾಯಿಯ ಹೊಟ್ಟೆಯಲ್ಲಿ ಇಂತಹ ಮಗಳೇ ! ಮೂಕವಿಸ್ಮಿತನಾಗಿದ್ದ. ಒಂದು ಅಜ್ಞಾನದ ಕೂಸು, ಇನ್ನೊಂದು ಬೆಳಗಿನ ಪುತ್ಥಳಿ—ಆಳವಾದ ಕಂದಕದೊಡನೆ ಸ್ಪರ್ಧಿಸಿ ನಿಂತ ಪರ್ವತದಂತೆ !

'ಮಗಳೇ, ಪವಿತ್ರವಾದ ಮಾನವಪ್ರೇಮ, ದೈವೀಪ್ರೇಮದ ಮೊದಲ ಮೆಟ್ಟಿಲು. ಅದನ್ನು ತುಳಿದು ಮುಂದಲ ಮೆಟ್ಟಲಿಗೆ ಹೋಗಬಹುದವ್ವಾ !'

'ನೇರವಾಗಿ ಎರಡನೆಯ ಮೆಟ್ಟಲನ್ನು ಹತ್ತಬಲ್ಲವರು ಮೊದಲ ಮೆಟ್ಟಲಿಗೇಕೆ ಬಯಸಬೇಕವ್ವ ! ಶಕ್ತಿಯಿಲ್ಲದವರು ಹತ್ತಲಿಕ್ಕೆ ಇರುವುದು ಅದು....'

'ಸಂಸಾರಸಾಗರವನ್ನು ಈಸಲಿಕ್ಕೆ ಪತಿಯು ಸೋರೆಕಾಯಿಯಂತೆ.'

'ದುರ್ದೈವಕ್ಕೆ, ಸಿಕ್ಕಿದುದು ತೂತು ಸೋರೆಕಾಯಿಯಾದರೆ ಇನ್ನೂ ಬಹು ಕಷ್ಟ ಕಣವ್ವ. ಅದು ಪೂರಕವಾಗುವ ತೇಲು ಕಾಯಾಗುವುದರ ಬದಲಿಗೆ ಮುಳುಗುಕಾಯಾಗುವುದು ! ಯಾವ ಕಾಯಿಯ ಸಹಾಯವಿಲ್ಲದೆ ಈಜಬಲ್ಲವರಿಗೆ ಸೋರೆಕಾಯಿ ಅನವಶ್ಯಕ....'

'ನೋಡವ್ವಾ, ನಮ್ಮ ಮನೆತನದ ಬಳ್ಳಿಗೆ ನೀನೊಂದೇ ಕುಡಿ, ನಿನ್ನಿಂದಲೇ ಈ ವಂಶದ ಲತೆ ಚಿಗುರೊಡೆಯಬೇಕು. ಮದುವೆಯಾಗದೆ ಉಳಿದರೆ ಅದು ಇಲ್ಲಿಗೇ ಕೊನೆಯಾಗದೆ?' ಲಿಂಗಮ್ಮ ದುಃಖದಿಂದ ಕೇಳಿದಳು.

'ಅವ್ವಾ, ಈ ವಿಶ್ವಚಕ್ರ ಎಡಬಿಡದೆ ಸುತ್ತುತ್ತಿದೆ. ಒಂದಾನೊಂದು ಕಾಲದಲ್ಲಿ ಸೃಷ್ಟಿಚಕ್ರವೇ ಅಂತ್ಯಗೊಳ್ಳುವಾಗ, ಮನೆತನಗಳ ಪಾಡೇನು ? ಎಷ್ಟೆಷ್ಟು ಕುಲ, ವಂಶಗಳು ಹುಟ್ಟುವವೋ ಅಳಿಯುವವೋ ! ಮಕ್ಕಳು, ಮೊಮ್ಮಕ್ಕಳಿಂದ ಮನೆತನದ ಹೆಸರು ನಿಲ್ಲದಷ್ಟು, ಆದರ್ಶ ಸಿದ್ಧಪುರುಷರಿಂದ ಮನೆತನದ ಕೀರ್ತಿ ಮುಗಿಲಿಗೇರುವುದು. ಈ ನಾಡಿನ ಸುತ್ತಲೂ ಎಷ್ಟೆಷ್ಟು ಮನೆತನಗಳಿಲ್ಲ ! ಆದರೆ ಬಳ್ಳಿಗಾವೆಯ ಸುಜ್ಞಾನಿ-ನಿರಹಂಕಾರರ ಕೀರ್ತಿ ಜನಜನಿತವಾಗುತ್ತಿಲ್ಲವೆ ; ಯಾರಿಂದ ? ವಿರಕ್ತನಾದ ಅಲ್ಲಮ ಪ್ರಭುದೇವರಿಂದ ತಾನೇ ? ಮನೆತನದ ಸುದ್ದಿ ಅಲ್ಲಿರಲಿ, ನಮ್ಮ ಬದುಕು ಅಳಿಯುವ ಮೊದಲು ಆತ್ಮೋ[illegible] ಕೊಳ್ಳಬೇಕಲ್ಲವೇನವ್ವ ?'

'ಬಸವಾಸಿಯ ಶೆಟ್ಟರು ಬಂದು ಹೋಗಲಿ; ಹೆಣ್ಣಿದ್ದ ಮನೆಗೆ ಗಂಡು ಬರುವುದು ಸಹಜ, ಹಣ್ಣಿದ್ದ ಮರಕ್ಕೆ ಗಿಳಿಗಳು ಬರುವುದು ಸಹಜ! ನಂತರ ಒಪ್ಪುವುದು ಬಿಡುವುದು ಆಗಲಿ....' ಲಿಂಗಮ್ಮ ಮೆಲ್ಲನೆ ಹೇಳಿದಳು.

'ಚನ್ನಮಲ್ಲಿಕಾರ್ಜುನನಲ್ಲದ ಪುರುಷರು ನನಗಾಗದ ಮೋರೆ ನೋಡವ್ವಾ. ಅವನ ಹೊರತು ಯಾರ ಮುಂದೂ ನಿಲ್ಲಲಾರೆ, ತೋರಿಸಿಕೊಳ್ಳಲಾರೆ!' ಮಹಾದೇವಿ ಆ ತಾಣವನ್ನು ಬಿಟ್ಟೆದ್ದು ಮನೆಯ ಹಿಂದಣ ಹೂದೋಟಕ್ಕೆ ಹೋದಳು.

'ನೀವೇನ್ರಿ....ಮಗಳಿಗೆ ಎಳ್ಳಷ್ಟು ಬುದ್ಧಿ ಹೇಳಲ್ಲ. ನೀವು ಕೊಟ್ಟ ಸಲಿಗೆ, ಶಿಕ್ಷಣಗಳೇ ಅವಳನ್ನು ಈ ಪರಿ ಮಾಡಿದವು....' ಲಿಂಗಮ್ಮನ ಆಕ್ರೋಶ ಗಂಡನ ಮೇಲೆ ತಿರುಗಿತು.

'ಸಂಪೂರ್ಣ ಸ್ವಾತಂತ್ರ್ಯ ನಿನಗೇ ಲಿಂಗಾ....ನಿನಗಿಷ್ಟಬಂದ ಪರಿಯಲ್ಲಿ ಅವಳನ್ನು ಪರಿವರ್ತಿಸು....' ಓಂಕಾರಶೆಟ್ಟಿ ಮೇಲೆದ್ದು ಶಲ್ಯವನ್ನು ಕೊಡವಿ ಹೆಗಲಮೇಲೆ ಹಾಕಿಕೊಂಡು ಮನೆ ಬಿಟ್ಟ. ಲಿಂಗಮ್ಮ ದಿಕ್ಕು ತೋಚದೆ ತಲೆಯ ಮೇಲೆ ಕೈಹೊತ್ತಳು.

೧೦. ಸಮಾಧಾನಿ

ಎರಡು ದಿನ ಮನೆಯಲ್ಲಿ ಗಂಭೀರ ವಾತಾವರಣ ಮುಸುಕಿತ್ತು. ಒಬ್ಬರಿಗೆ ಒಬ್ಬರು ಯಾರೂ ಮಾತನಾಡಲಿಲ್ಲ. ಲಿಂಗಮ್ಮನ ಹೃದಯ ಕೊತಕೊತನೆ ಕುದಿಯುತ್ತಿತ್ತು. ಎಲ್ಲರೂ ತಮ್ಮ ಪಾಡಿಗೆ ತಮ್ಮ ವ್ಯವಹಾರದಲ್ಲಿದ್ದರು. ಮಹಾದೇವಿ ತಾಯಿಯನ್ನು ಸಾಂತ್ವನಿಸುವ ಪ್ರಯತ್ನ ಮಾಡಲಿಲ್ಲ. ತನ್ನ ತಾಯಿಯ ಮನೋರೋಗಕ್ಕೆ ಮದ್ದು ಕೊಡಲು ತಾನು ಅಸಮರ್ಥಳು, ಕಾಲವೇ ಅದನ್ನು ಮಾಯಿಸಬೇಕು ಎಂದು ಪೂಜೆಯಲ್ಲಿ ತನ್ಮಯಳಾಗಿ ಆಕೆ ಇದ್ದುಬಿಟ್ಟಳು.

ಬನವಾಸಿಯ ಶೆಟ್ಟರ ಕೀರ್ತಿವಾರ್ತೆಯನ್ನು ಕೇಳಿ ಬಲ್ಲ ಲಿಂಗಮ್ಮ ಈ ಸದವಕಾಶವನ್ನು ತಪ್ಪಿಸಿಕೊಳ್ಳಬಾರದೆಂದು ನಿಶ್ಚಯಿಸಿ, ಮಗಳ ಮನಸ್ಸನ್ನು ಪರಿವರ್ತಿಸಲು ಗುರುಗಳ ಸಹಾಯವನ್ನು ಬೇಡಲು ಮಠದ ಕಡೆಗೆ ನಡೆದಳು. ದಾರಿಯಲ್ಲಿ ಹೋಗುವಾಗ ವಿಶೇಷ ಘಟನೆ ನಡೆಯಿತು. ಓಂಕಾರನ ಮನೆಯಿಂದ ಸ್ವಲ್ಪ ದೂರ ರಾಜಬೀದಿಯಲ್ಲಿ ನಡೆದು ಬಲಕ್ಕೆ ಹೊರಳಿದರೆ ಅಲ್ಲಿಂದ ಹತ್ತು ನಿಮಿಷದ ಹಾದಿಯಲ್ಲಿ ಸಿಹಿ ನೀರಿನ ಭಾವಿ ಇದ್ದಿತು. ಅಲ್ಲಿಂದ ಮುಂದೆ ಹದಿನೈದು ನಿಮಿಷಗಳ ಹಾದಿಯಲ್ಲಿ ಮಠವಿದ್ದಿತ್ತು. ಸಿಹಿ-ನೀರಿನ ಭಾವಿ ಆ ಊರಿನ ವಾರ್ತಾಪ್ರಸಾರ ಕೇಂದ್ರ. ಊರಿಗೆ ಮೂರು ರುಚಿಕಟ್ಟಾದ ಸಿಹಿ-ನೀರಿನ ಭಾವಿಗಳಿದ್ದರೂ ಈ ಭಾವಿ ವಿಶೇಷವಾಗಿ ಹೆಂಗೆಳೆಯರ ಆಕರ್ಷಣೆಯ ಕೇಂದ್ರ ಬಿಂದು. ಹೆಂಗಸರಿಗೆ ವಿಶೇಷ ಸ್ವಾತಂತ್ರ್ಯವಿಲ್ಲದ ಆ ದಿನಗಳಲ್ಲಿ ನೀರು ತುಂಬಲು ಭಾವಿಗೆ ಬರುವುದು, ಬಟ್ಟೆ ತೊಳೆಯಲು ಕೆರೆಗೆ ಹೋಗುವುದು, ಇಲ್ಲವೇ ಬಹಿರ್ದೆಶೆಗೆ ಬಯಲಿಗೆ ಹೋಗುವುದು, ಹೆಚ್ಚೆಂದರೆ ಗುಡಿಗೆ ಹೋಗುವುದು, ಇವಿಷ್ಟೇ ಹೊರಬರುವ ಸಾಧನಗಳು. ಶ್ರೀಮಂತ ಹೆಂಗಸರಿಗೆ ಅಷ್ಟೂ ಅವಕಾಶವಿರಲಿಲ್ಲ. ಕೆಲವು ಸಂಪ್ರದಾಯಸ್ಥರಲ್ಲಿ ಮದುವೆಯಾಗಿ ಮನೆ ತುಂಬುವಾಗ ಹೊಸ್ತಿಲ ಒಳಗೆ ಕಾಲಿಟ್ಟ ಸ್ತ್ರೀಯು ಹೊರಬರುತ್ತಿದ್ದುದು ಹೆಣವಾದಾಗಲೇ! ಓಂಕಾರನ ಮನೆಯವರು ಆ ಕಟ್ಟನ್ನು ಎಂದೋ ಮುರಿದಿದ್ದರೂ ಗುಡಿ, ಮಠ ಬಿಟ್ಟರೆ ಎಲ್ಲಿಯೂ ಕಾಲಿಟ್ಟವರಲ್ಲ. ಮಧ್ಯಮ ವರ್ಗದ ಮನೆತನದ ಹೆಂಗಸರಿಗೆ ಆ ಭಾವಿಯು ದಂಡೆ ಸುಖದುಃಖಗಳನ್ನು ತೋಡಿಕೊಳ್ಳುವ ನೆಲೆವೀಡಾಗಿದ್ದಿತು. ಆ ಭಾವಿ ಊರ ಹೊರಗಿದ್ದುದರಿಂದ ತಡವಾಗಿ ಮನೆ ಸೇರಿದರೂ 'ಹಗ್ಗ ಸಿಗಲಿಲ್ಲ, ರಾಟವಾಳ ಸಿಗಲಿಲ್ಲ' ಎಂದು

ಹೆಂಗೆಳೆಯರು ನೆಪ ಹೇಳಿದಾಗ ಮನೆಯ ಹಿರಿಯರಿಂದ ಕ್ಷಮಿಸಲ್ಪಡುತ್ತಿದ್ದರು.

ಎಂದಿನಂತೆ ಅಂದು ಸೂರ್ಯಾಸ್ತಕ್ಕೆ ಅರ್ಧ ಜಾವವಿರುವಾಗ ಹೆಂಗೆಳೆಯರ ಗುಂಪು ಕೂಡಿದ್ದಿತು. ಹರಟೆ, ನಗು, ಅಳು, ಹಾಡು ಎಲ್ಲ ನಡೆದಿದ್ದಾಗಲೇ ಲಿಂಗಮ್ಮ, ಗಿರಿಜಾಂಬೆಯನ್ನು ಕರೆದುಕೊಂಡು ಮಠದ ಕಡೆ ಸಾಗಿದ್ದಳು. ಗುಂಪಿನಲ್ಲಿ ಪರಿಚಯಸ್ಥರು ಸಾಕಷ್ಟು ಜನರು ಇದ್ದುದರಿಂದ ಅನಿವಾರ್ಯ ವಾಗಿ ಅವರತ್ತ ನೋಡಿ ಮುಗುಳ್ನಕ್ಕಳು.

'ಬಾ ಲಿಂಗಮ್ಮಕ್ಕ ಬಹಳ ಅಪರೂಪವಾಗಿಬಿಟ್ಟೆ. ಮೊದಲು ಅಣ್ಣ-ತಮ್ಮ ಕೂಡಿದ್ದಾಗ ನೀರಿಗೆ ಬರ್‍ತಿದ್ದೆ; ಈಗೇನವ್ವಾ ಕೈತುಂಬ ಆಳು ಕಾಳು....' ಸಂಗಮ್ಮ ಹೇಳಿದಳು.

'ಹೋಗೋರು ಬರೋರು ಬಹಳ ಕಣವ್ವ. ಮನೆ ಬಿಟ್ಟು ಬರಲಿಕ್ಕೆ ಬಿಡುವಾಗಲ್ಲ' ಲಿಂಗಮ್ಮ ಹೇಳಿದಳು.

'ಎಲ್ಲ ಚೆನ್ನಾಗಿದ್ದೀರಷ್ಟೇ....ನಿಮಗೇನವ್ವ? ಆಳು ಕಾಳು ಸುಖ-ಸಂಪತ್ತು, ದೇವರು ಯಾವುದಕ್ಕೂ ಕೊರತೆ ಮಾಡಿಲ್ಲ....'

'ಎಲ್ಲ ಐತೆ; ಆದರೆ ಏನು ಮಾಡೋದು. ಇರುವ ಒಬ್ಬಳೇ ಮಗಳು ಹೊರೆಯಾಗಿಬಿಟ್ಟಿದ್ದಾಳೆ....' ಲಿಂಗಮ್ಮ ಗುಂಪಿನಲ್ಲಿ ಧ್ವನಿಬಂದ ಕಡೆಗೆ ತಿರುಗಿದಳು. ಸಿಂಗಾರಮ್ಮ ತುಂಬಿದ ಕೊಡವನ್ನು ಜಗ್ಗುತ್ತಿದ್ದಳು.

ಅನ್ನವನ್ನು ಚೆಲ್ಲುತ್ತಿದ್ದಂತೆಯೇ ಕಾಗೆಗಳು ಸರಕ್ಕನೇ ಮುತ್ತುವ ಹಾಗೆ ಮಹಾದೇವಿಯ ವಿಷಯ ಕಣ್ಣೆದುರಿಗೆ ಹಾಯುತ್ತಲೇ ಎಲ್ಲರೂ ಉತ್ಸುಕರಾಗಿ ಅದರ ಮೇಲೆ ಎರಗಿದರು. ಸಿಂಗಾರಮ್ಮನದು ಮೊದಲೇ ಒಡಕುಬಾಯಿ. ಲಿಂಗಮ್ಮ ಭೀತಳಾದಳು.

'ಏನಿಲ್ಲವ್ವ ಮಹಾದೇವಿಯೂ ಚೆನ್ನಾಗಿದ್ದಾಳೆ....' ಲಿಂಗಮ್ಮನು ಸಹಜತೆ ಯಿಂದ ಹೇಳಿದಳು.

'ತಾಯಿಯ ಹೊಟ್ಟೆ ಅಂತ ಅದಕ್ಕೇ ಕಣವ್ವ ಅನ್ನೋದು. ಹುಚ್ಚು ಹಿಡಿದು ಇಷ್ಟು ಕಷ್ಟ ಕೊಟ್ಟರೂ ಮತ್ತೆ ನುಂಕೊಳ್ಳೋದೆ ಅದರ ದೊಡ್ಡ ಗುಣ....' ಮರುಕದ ಧ್ವನಿಯಲ್ಲಿ ಸಿಂಗಾರಮ್ಮ ಹೇಳಿದಳು. ಬಾಯಿಗಿಂತಲೂ ದೊಡ್ಡದಾದ ಕಪ್ಪೆಯನ್ನು ಅರ್ಧ ನುಂಗಿ, ಪೂರ್ತಿ ನುಂಗಲಾರದೆ ಒದ್ದಾಡುವ ಹಾವಿನಂತಾದಳು ಲಿಂಗಮ್ಮ. ಕೆಲಸವನ್ನು ತಪ್ಪಿಸಿಕೊಳ್ಳಬಯಸುವ ಸೋಮಾರಿ ಸೊಸೆ ತೊಟ್ಟಿಲನ್ನು ತೂಗುತ್ತ ಮತ್ತೆಮತ್ತೆ ಚಿವುಟಿ ಮಗುವನ್ನು ಎಬ್ಬಿಸಿ ಅಳಿಸುತ್ತ, ತೊಟ್ಟಿಲು ತೂಗುವಂತೆ ಸಿಂಗಾರಮ್ಮನ ಮಾತು, ಅನುಕಂಪ—ಅಪಹಾಸ್ಯದ ಸಮ್ಮಿಶ್ರಣವಾಗಿತ್ತು.

'ಹುಚ್ಚು ಹಿಡಿದಿತ್ತೇನು....?' ಸಂಗಮ್ಮ ಕೇಳಿದಳು.

'ಹೂನವ್ವಾ, ಮಂಕಾಗಿ ಬಿಟ್ಟು ಮೂರುಮೂರು ದಿವಸಗಟ್ಲೆ ಕದ ಇಕ್ಕೊಂಡು ಕೋಣೇಲಿ ಇರ್ತಿದ್ಲು. ಪಾಪ! ಲಿಂಗಮ್ಮ ದೇವರಂಥ ಮನುಷ್ಯಳು, ಭೂತಾಯಿ ಹಂಗೆ ಕಷ್ಟಸಹಿಸಿಕೊಂಡ್ಲು....' ಸಿಂಗಾರಮ್ಮ ಮರುಕದ ಹೊಳೆ ಹರಿಸಿದಳು, ಬಾಯಲ್ಲಿನ ತಾಂಬೂಲದ ರಸವನ್ನು ಪಿಚಕ್ಕನೆ ಉಗುಳುತ್ತ.

'ದೆವ್ವ ಹಿಡಿದಿರಬೇಕು ಅಂತ ಸುದ್ದಿ ಇತ್ತು ಕಣವ್ವ....' ಸಾಕಮ್ಮನ ಹೇಳಿಕೆ.

'ಇದ್ದರೂ ಇರಬೋದು ಲಿಂಗವ್ವಕ್ಕ....ಶಾಂತಿ ಮಾಡಿಸಿರಿ; ನೀವು ಭಾರೀ ಧೈರ್ಯವಂತರವ್ವ. ಹರೆಯದ ಹೆಣ್ಣನ್ನು ಪುರಾಣ, ಪ್ರವಚನ ಅಂತ ಕಳುಸ್ತೀರಿ....'

'ಒಂಟಿಯಾಗಿ ನಾವೆಲ್ಲೂ ಕಳಿಸಲ್ಲವ್ವ....' ಲಿಂಗಮ್ಮ ಹೇಳಿದಳು.

'ಜೊತೆಗಿದ್ದರಾರ ಏನು? ಈ ದಾರೀಲಿ ಕತ್ತಲು. ಝುಂ ಅಂತ ಮರ ಗಳು ಕೂಗ್ತಾವೆ. ಎಂಟೆದೆ ಗಂಡಸೂ ಪಂಚೇಲಿ ನಡುಗ್ತಾನೆ. ಮೊದಲೇ ನಿನ್ನ ಮಗಳು ಚೆನ್ನಾರ ಚೆಲ್ವೆ. ರಾತ್ರಿ ಬರುವಾಗ ದೆವ್ವ ಗಿವ್ವ ಹಿಡಿದಿರ ಬೇಕು....' ಗಂಗಮ್ಮನು ವಿವರಣೆ ನೀಡಿದಳು.

'ಹೌದೇ ಯವ್ವಾ....ಹಾದೀಲಿ ಬ್ರಹ್ಮರಾಕ್ಷಸ ಒಂದೈತೆ ಅಂತ ಬಹಳಷ್ಟು ಜನ ಅಂತಾರೆ, ಅದೇ ಬಡಿದಿರಬೇಕು. ಶೀನಪ್ಪಶಾಸ್ತ್ರಿಗಳ ಹತ್ತಿರ ಹೋದರೆ ಅದಕ್ಕೆ ಚೆನ್ನಾಗಿ ಶಾಸ್ತಿ ಮಾಡ್ತಾರೆ....' ಹಗ್ಗದ ಕುಣಿಕೆಗೆ ನೀರು ಹಾಕಿ ಮಡಿ ಮಾಡುತ್ತಲಿದ್ದ ವೆಂಕಮ್ಮನು ಸಲಹೆ ನೀಡಿದಳು.

'ಯಾರಾದರೂ ಮನೆ ಏಳ್ಗೆ, ಹುಡುಗಿ ಅಂದ ಸಹಿಸ್ಲಾರ್ದೆ ಮಾಟಗೀಟ ಮಾಡ್ಸಿದಾರೋ....ಈ ಜಗತ್ತಿನಲ್ಲಿ ಅದೂ ಸುಳ್ಳೇನಲ್ಲ. ಮಂತ್ರಗಾರ ಕಾಳಪ್ಪ ಮಾಟ ಕೀಳೋದ್ರಲ್ಲಿ ಭಾರಿ ಮುಂದು....' ಕುರುಬರ ಭರಮವ್ವ ತನ್ನ ಸಲಹೆ ನೀಡಿದಳು.

'ಬಂಗಾರದಂಥ ಹುಡ್ಗಿ....ಚನ್ನಮಲ್ಲಿಕಾರ್ಜುನಾ ಅಂತ ಕನವರಿಸು ತ್ತಂತೆ....' ಆರುವ ಜ್ವಾಲೆಗೆ ತುಪ್ಪ ಸುರಿದಂತೆ ಮಾಡಿ, ಅದನ್ನು ತೀಕ್ಷ್ಣ ಗೊಳಿಸಿದಳು ಸಿಂಗಾರಮ್ಮ.

'ಹರೆಯಕ್ಕೆ ಬಂದ ಹುಡುಗಿಯರಿಗೆ ಬೇಗ ಲಗ್ನಮಾಡದೆ ಇದ್ದರೆ ತಲೀ ಕೆಡೋದು ಸ್ವಾಭಾವಿಕ ನೋಡವ್ವಾ! ತುಂಗಪ್ಪನ ಮಗಳು ಬಂಗಾರಿ ನೋಡಕ್ಕೆ ಚೆಂದವಿರಲಿಲ್ಲ, ಬಡತನ ಬೇರೆ. ಲಗ್ನ ಆಗದೆ ತಲಿ ಕೆಡಲಿಲ್ಲೇ ನವ್ವಾ....ಅಂದಹಾಗೇ ಲಿಂಗಮ್ಮಕ್ಕ ನಿಮ್ಮ ನಂಟರಿಷ್ಟರು, ಮಾದೇವಿ

ಪಂಚಯಮೋರು ಚನ್ನಮಲ್ಲಿಕಾರ್ಜುನ ಅಂತ ಇದ್ದಾರೇನು? ಇದ್ದರೆ ಆಕೆ ಬಯಸಿದೋರ್ಗೆ ಮದುವಿ ಮಾಡ್ಬೋದಲ್ಲ'....ಸಂಗಮ್ಮ ತನ್ನ ಸಲಹೆ ನೀಡಿದಳು.

'ಹೂಂ ಕಣವ್ವಾ, ಬೇಗನೇ ಕಾರ್ಯ ಮುಗುಸ್ರಿ. ವೇಳೆ ಒಂದೇ ಸಮ ಇರಲ್ಲ. ಒಂಪೋಗಿ ಒಂದಾಗಬಾರ್ದು....' ಗಂಗವ್ವ ಹೇಳಿದಳು.

ಕಾಲು ಜಾರಿ ಹಳ್ಳಕ್ಕೆ ಬಿದ್ದವರ ಮೇಲೆ ಕಲ್ಲು ಉರುಳಿ ಬಿದ್ದಂತೆ, ಮಾತು ಗಳು ಅಪ್ಪಳಿಸತೊಡಗಿದಾಗ ಲಿಂಗಮ್ಮನ ಕಣ್ಣು ತುಂಬಿಬಂದವು.

'ಇನ್ನೊಬ್ಬರನ್ನು ಛೇಡಿಸಿ ಮಾತನಾಡಿದರೆ ಇವರಿಗೇನು ಲಾಭವೋ....' ಎಂದುಕೊಂಡಳು.

ತಾನು ಮಾತನಾಡದಿದ್ದರೆ ಅಪಾರ್ಥವಾದೀತು ಎಂದುಕೊಂಡು, ನುಡಿ ದಳು :

'ಚನ್ನಮಲ್ಲಿಕಾರ್ಜುನ ಎಂಬುದು ಶ್ರೀಗಿರಿ ಮಲ್ಲಯ್ಯನ ಹೆಸರವ್ವ ಸಂಗಮ್ಮ. ಅವನನ್ನೇ ತನ್ನ ಆರಾಧ್ಯದೇವತೆ. ಗಂಡ ಅಂತ ಮಹಾದೇವಿ ತಿಳಿದಿದ್ದಾಳೆ....' ಲಿಂಗಮ್ಮ ತನ್ನ ನೋವನ್ನೆಲ್ಲ ನುಂಗಿಕೊಂಡು ಹೇಳಿದಳು.

'ಪಾಪ....ಹೀಂಗಾಗಬಾರದಿತ್ತು. ದೇವರ್ನ ಲಗ್ನವಾಗ್ತಾಳಂತಾ? ಎಂಥಾ ಚೆಲುವಾದ ಹುಡುಗಿ ತಲೇಲಿ ಇಂಥ ಹುಚ್ಚು ಹ್ಯಾಂಗ ಹೊಕ್ಕಿತವ್ವಾ! ಅರಗಿಳಿ ಅಂತ ಮಗಳು, ಚಂದಾನ ಗಂಡನ್ನ ಮಾಡ್ಕೊಂಡು, ಮುತ್ತು ರತ್ನದಂಥ ಮಕ್ಕಳ್ನ ಹಡೆಯೋದು ಬಿಟ್ಟು....' ಲಿಂಗಾಯತರ ಸಂಗಮ್ಮ ಹೇಳಿದಳು.

'ಮತ್ತೇನವ್ವಾ, ಮಾಡ್ಬಾರದ್ದು ಮಾಡಿದ್ರೆ ಆಗ್ಬಾರದ್ದು ಆಗುತ್ತೆ ಅನ್ನೋದು ಸುಳ್ಳೇನು. ಹೆಂಗಸರು ದೇವರ್ನ ಮುಟ್ಬಾರದು, ಧರ್ಮಗ್ರಂಥ ಮುಟ್ಬಾರದು, ಸಂಸ್ಕೃತ ಓದಬಾರ್ದು....ಎಲ್ಲನೂ ಧಿಕ್ಕರ್ಸಿದ್ರೆ ದೇವರು ಯಾಕೆ ಸುಮ್ನಿರ್ತಿದ್ದಾನು....!' ಹಾರುವರ ವೆಂಕಮ್ಮ ಹೇಳಿದಳು.

'ಏಟು ಓದಿದ್ರಾರ ಏನು....ಹೆಣ್ಣೆಂಗ್ಸು ಮುಸುರೆ ಗಡಿಗೆ ತೊಳೆಯೋದು ತಪ್ಪಿದ್ದಲ್ಲ. ಸಾಲೆಗೆ ಕಳಿಸ್ದೆ ಇದ್ದಿದ್ರೆ, ಶಾಸ್ತ್ರ ಓದಿಸ್ದೆ ಇದ್ರೆ ಹೀಂಗೆಲ್ಲ ಮದ್ವೆ ಆಗಲ್ಲ, ದೇವರ್ನ ಮದುವೆ ಆಗ್ತೀನಿ ಎಂತ ಅಂತಾನೇ ಇರ್ತಿಲ್ಲ. ತುಸು ಹೆಚ್ಚು ಉಂಡ್ರೇನೆ ಹೊಟ್ಟೆನೋವು ಬಂದು, ಹೊಟ್ಟೆ ಕೆಡ್ತಾದೆ. ಬಹಳ ಓದಿದ್ರೆ ತಲೀ ಕೆಡ್ದಂಗೆ ಇರ್ತಾದಾ?....ಅದ್ಕೇ ಬುದ್ಧಿಭ್ರಮೆ ಆಗಿರ್ಬೇಕವ್ವಾ' — ಭರಮಮ್ಮ ತನ್ನ ಅನುಭವದ ನುಡಿಮುತ್ತುಗಳನ್ನು ಅವರ ಮಾತಿನ ಜಾಲದೊಳಕ್ಕೆ ತೂರಿಸಿದಳು.

ಮನೆಯೊಳಗೆ ನಡೆದ ವಾದವಿವಾದ ಲಿಂಗಮ್ಮನ ಹೃದಯವನ್ನು ಬೇಯಿ ಸಿತ್ತು. ಇವರೆಲ್ಲರ ಚುಚ್ಚುಮಾತುಗಳು ಬೆಂದ ಹೃದಯವನ್ನು ಕಾದ ಕಬ್ಬಿಣ

ದಿಂದ ಬಡಿದಂತೆ, ಘಾಸಿಗೊಳಿಸಿದವು. ತನ್ನ ಮನೆಯ ವಿಷಯ ಊರ ಹೆಂಗೆಳೆಯರ ನಾಲಿಗೆಗೆ ಆಹಾರವಾಗಿ, ಕರ್ಣಾಕರ್ಣಿಯಾಗಿ ಹಬ್ಬಿ, ಬಸವಾಸಿಯ ಶೆಟ್ಟರ ಕಿವಿಗೆ ಮುಟ್ಟಿದರೆ ಏನು ಗತಿ, ಎಂದು ಒಳಗೇ ನಡುಗಿದಳು.

ಇಲ್ಲಿಯವರೆಗೆ ಮೌನವಾಗಿ ಬಟ್ಟೆ ತೊಳೆಯುತ್ತಿದ್ದ ಮಂಗಲಮ್ಮ ಹಿಂಡುತ್ತಿದ್ದ ಬಟ್ಟೆಯನ್ನು ಕಲ್ಲಿನ ದೋಣಿಯಲ್ಲೇ ಬಿಟ್ಟು ಗುಂಪಿನ ಕಡೆಗೆ ಬಂದಳು. ಲಿಂಗಮ್ಮನು ಅಷ್ಟಪದಿಯ ಕೈಯಲ್ಲಿ ಸಿಕ್ಕಿಕೊಂಡ ಕ್ರಿಮಿಯಂತೆ, ಆ ಎಲ್ಲ ಹರಕುಬಾಯಿಯ ಹೆಂಗಸರ ಮಧ್ಯೆ ಸಿಕ್ಕಿ ಮಾನಸಿಕವಾಗಿ ಒದ್ದಾಡುವುದನ್ನು ಆಕೆ ಗಮನಿಸಿದ್ದಳು.

'ಏನ್ರವ್ವ, ಬೇರೆಯವರ ಸುದ್ದಿ ಮಾತಾಡೋದು, ಕೆದಕಿಕೆದಕಿ ಅನ್ನೋದು ಬಿಟ್ಟರೆ ನಿಮಗೆ ಬೇರೇನು ಕೆಲ್ಸ ಇಲ್ಲವೆ? ಮಾದೇವಕ್ಕಗೆ ಹುಚ್ಚು ಹಿಡಿದಿಲ್ಲ, ತಲೆಯೂ ಕೆಟ್ಟಿಲ್ಲ. ಮಾಟಾನೂ ಅಲ್ಲ, ದೆವ್ವಾನೂ ಬಡಿದಿಲ್ಲ; ರಾತ್ರಿ ವೇಳೇಲಿ ಒಂದು ನಾಯಿ ನಿದ್ದೆಗಣ್ಣಲ್ಲಿ ಏನಾದ್ರೂ ಕಂಡು ಬೊಗಳಿದರೆ, ಓಣಿ ನಾಯ್ಗಳೆಲ್ಲ ಬೊಗಳಲು ಆರಂಭಮಾಡ್ತಾವೆ. ಯಾಕೆ ಬೊಗಳ್ತೀವಿ ಅನ್ನೋದು ಅವಕ್ಕೇ ಗೊತ್ತಿರಲ್ಲ. ಒಂದನ್ನು ಕಂಡು ಇನ್ನೊಂದು ಬೊಗುಳೋದು ನಾಯಿ ಗುಣ. ಮಾದೇವಿ ದೊಡ್ಡತನ ನಿಮಗೇನು ಗೊತ್ತವ್ವ? ತಿನ್ನದು, ಉಡೋದು, ದುಡಿಯೋದು, ಹಡೆಯೋದು, ಊರಾಗಳ ಸುದ್ದಿ ಮಾತಾಡೋದು ಬಿಟ್ಟರೆ ನಿಮಗೆ ಇನ್ನೇನಾರಾ ಗೊತ್ತಾದೀತಾ? ಒಂದು ಮೊಲದ ಸುತ್ತ ಒಂಭತ್ತು ನಾಯಿ ಕಾದು ನಿಂತಂತೆ, ಲಿಂಗಮ್ಮಕ್ಕನ್ನ ಸಿಕ್ಕಿಸಿಕೊಂಡಿದ್ದೀರಾ....?' ಮಂಗಲಮ್ಮನ ಧ್ವನಿ ಗಡುಸಾಗಿತ್ತು.

'ಹೋಗಲಿ ಬಿಡು....ಮಂಗಲಮ್ಮಕ್ಕ....ನಿಂಗ್ಯಾಕಿಷ್ಟು ಸಿಟ್ಟು....ಏನೋ ಲಿಂಗಮ್ಮಕ್ಕನ ಸಂಕಟ ನೋಡಲಾರದೆ ಬುದ್ಧಿ ಹೇಳಿದ್ವಿ....' ಸಿಂಗಾರಮ್ಮ ಜಗಿಯುತ್ತಿದ್ದ ತಾಂಬೂಲಕ್ಕೆ, ಇನ್ನೊಂದು ತುಂಡು ಎಲೆಗೆ ಸುಣ್ಣ ಸವರಿ ಸೇರಿಸಿಕೊಂಡಳು.

'ಹೆಂಗಲ್ಲ ಸಿಂಗಾರಮ್ಮ....ಎಲುವಿಲ್ಲದ ನಾಲಿಗೆ ಹಲವಾರು ನುಡೀತದೆ. ಮಾದೇವಿ ಯಾವಾಗಲೂ ಪೂಜೇಲಿ ಕಾಲ ಕಳೀತಾಳೆ. ದೇವರು-ಧರ್ಮ-ಅಂತ ವಚನ ಕಟ್ಟಿ ಹಾಡಿದರೆ ಕೇಳೋರು ಮಂತ್ರ ಹಾಕಿದಂತೆ ಮುಗ್ಧರಾಗ್ತಾರೆ. ಅಬ್ಬಾ! ಆ ಪದಗಳಲ್ಲಿ ಏನು ಅರ್ಥ, ಸೊಗಸು! ಯಾವಾಗ್ಲಾರೆ ಮಠಕ್ಕೆ ಶಾಸ್ತ್ರ, ಪ್ರವಚನ ಕೇಳಕ್ಕೆ ಬರ್ತಾಳೆ. ಗುರುಗಳು ಹಾಡುಸ್ತಾರೆ. ಅಂಥ ಮಹಾನುಭಾವರೇ ಕೇಳ್ತಾ ಕೇಳ್ತಾ ಮೆಚ್ಚಿ ತಲೆದೂಗ್ತಾರೆ. ಕೇಳ್ತಿದ್ದರೆ, 'ನಾವು ಭೂಮಿಗೆ ಭಾರ ಆಗಿ ಬದುಕೀವಲ್ಲ' ಅಂತ ನಮಗೆ ನಾಚಿಕೆ ಬರ್ತಾದೆ.

ಅಂಥ ಮಾತಾಯಿ ಬಗ್ಗೆ ಗುಲ್ಲೆಬ್ಬಿಸ್ತೀರಿ. ಲಿಂಗವ್ವ ಮಗಳ್ನ ಹಡೆದಾಗ ನಾನೇ ಹೆರಿಗೆ ಮಾಡಿಸ್ದೆ. ಅಂದಿನಿಂದ ಇಂದಿನತನಕ ನೋಡ್ತಿದ್ದೀನಿ, ಅದು ಮಾನಮುತ್ತು, ಅಪರಂಜಿ. ಕೈ ತೊಳ್ಕಂಡು ಮುಟ್ಟಬೇಕು.

ಗುರುಲಿಂಗದೇವರು ಹೇಳ್ತಾರೆ ಆಕೆ ಪಾರೋತಿ ಅವ್ತಾರಂತೆ. ಇಂಥೋಳ ಬಗ್ಗೆ ಮಾತ್ನಾಡಿ ಯಾಕೆ ಪಾಪದ ಕೂಪದಾಗೆ ಬೀಳ್ತಿರವ್ವಾ! ಹಂಗೆ ಮಾತಾಡಿದ್ರೆ ನಿಮ್ಗೇನು ಒಳ್ಳೆದಾಗಾಕಿಲ್ಲ. ಸಂಸಾರದ ಕೆಸರು ಗುಂಡೀಲಿ ಬಿದ್ದು ಗಗನ ಮಲ್ಲಿಗೇನ ಬಯ್ತಾವೆ....ತಿಳಿಗೇಡಿಗಳು....! ನೀನು ನಡಿ ಲಿಂಗಮ್ಮಪ್ಪ....' ಮಂಗಲಮ್ಮ ಲಿಂಗಮ್ಮನನ್ನು ಸಂಕಟದಿಂದ ಪಾರು ಮಾಡಿ ಬಟ್ಟೆ ತೊಳೆಯಲು ನಡೆದಳು.

ಕೆಲವು ಕಾಲ ವಾತಾವರಣ ಸ್ತಬ್ಧವಾಯಿತು. ಮಂಗಲಮ್ಮ ಆಧ್ಯಾತ್ಮ ಜೀವಿ. ಆಗಾಗ ಮಠಕ್ಕೆ ಶಾಸ್ತ್ರ ಕೇಳಲು ಹೋಗುತ್ತಿದ್ದಳು. ತನಗೆ ಅರ್ಥ ವಾಗದೇ ಇರುವುದನ್ನು ಮಹಾದೇವಿಯ ಬಳಿ ಕೇಳಿ ಸಂಶಯ ನಿವಾರಿಸಿ ಕೊಂಡು ಆಕೆಯ ಜ್ಞಾನಕ್ಕೆ ಬೆರಗಾಗುತ್ತಿದ್ದಳು. ತನ್ನ ಕರ್ತವ್ಯದ ವಿನಾ ಬೇರೆಯವರ ಸಂಸಾರಕ್ಕೆ ತಲೆ ಹಾಕದೆ, ಸಿಕ್ಕ ವೇಳೆಯನ್ನು ಅಧ್ಯಯನದಲ್ಲಿ ಕಳೆಯುತ್ತಿದ್ದಳು. ಎತ್ತರವಾದ ನಿಲುವು, ತುಂಬಿದ ಮೈಕಟ್ಟು, ಐವತ್ತು ವರ್ಷಗಳ ಪಕ್ವತೆ, ಹಣೆಯ ಮೇಲಿನ ವಿಭೂತಿ, ಆಕೆಯಲ್ಲಿ ಪರಿಣಾಮಕಾರಿ ವ್ಯಕ್ತಿತ್ವವನ್ನು ಬೆಳೆಸಿದ್ದವು. ಮಂಗಲಮ್ಮ ಬಟ್ಟೆ ತೊಳೆದು, ಎಲ್ಲವನ್ನೂ ಬಿದಿರಿನ ಪುಟ್ಟಿಯಲ್ಲಿ ಹಾಕಿ, ನೆತ್ತಿಮೇಲೆ ಇಟ್ಟುಕೊಂಡು, ಸೊಂಟದಮೇಲೆ ತುಂಬಿದ ಕೊಡ ಹೊತ್ತು ಭಾವಿಯ ಆವರಣ ಬಿಟ್ಟು ದಾರಿಗೆ ಇಳಿದಳು. ತಕ್ಷಣವೇ, ಅನ್ನವನ್ನು ಎಸೆದು ಮನೆಯವರು ದೂರ ಸರಿಯುತ್ತಿದ್ದಂತೆ ವೇಗ ದಿಂದ ಬಂದೆರಗುವ ಕಾಗೆಗಳಂತೆ, ಹೆಂಗೆಳೆಯರು ಪುನಃ ಮಹಾದೇವಿಯ ಬಗ್ಗೆ ಚರ್ಚಿಸತೊಡಗಿದರು.

ಆಮೇಲೆ ಒಬ್ಬೊಬ್ಬರೇ ತೊಳೆದ ಬಟ್ಟೆ, ನೀರು ತುಂಬಿದ ಬಿಂದಿಗೆ ಹೊತ್ತು ನಿಧಾನವಾಗಿ ದಾರಿಗೆ ಕಾಲು ಹಚ್ಚಿದರು. ಮನೆಗೆ ಹೋಗಿ ಹಲವಾರು ಜನರ ಕುತೂಹಲ ಕೆರಳಿಸಲು, ಅಕ್ಕಪಕ್ಕದವರ ಜೊತೆ ಚರ್ಚಿಸಲು, ಹೊಸ ವಿಷಯ ಸಿಕ್ಕಿದ್ದಕ್ಕೆ ಆನಂದತುಂದಿಲರಾಗಿದ್ದರು.

* * *

ಸಂಜೆಯ ಮಧುರ ವಾತಾವರಣದಲ್ಲಿ ತಂಗಾಳಿಯನ್ನು ಸವಿಯುತ್ತ ಗುರು ಲಿಂಗದೇವರು ತೋಟದಲ್ಲಿ ಶಿಲಾಸನದ ಮೇಲೆ ಕುಳಿತಿದ್ದರು. ಲಿಂಗಮ್ಮನು ಆವೇಶ-ಹತಾಶೆಯ ಸಂಗಮವಾಗಿ ಬಂದು ನಮಸ್ಕರಿಸಿ,

'ಹಡೆದ ಹೆಣ್ಣು ಹುಣ್ಣಾಗುತ್ತದೆ ಅಂತ ಭಾವಿಸಿರಲಿಲ್ಲ ಗುರುಗಳೇ....' ಎಂದಳು. ಆಕೆಯ ಮನದ ಉದ್ವಿಗ್ನತೆ, ಭಾವನೆಯ ತೀವ್ರತೆಯನ್ನು ಅರ್ಥ ಮಾಡಿಕೊಂಡ ಅವರು,

'ಏಕವ್ವಾ, ಏನಾಯಿತು....?' ಎಂದರು.

'ನಿಮ್ಮ ಮುದ್ದು ಶಿಷ್ಯಳನ್ನು ಕರೆಸಿ ನೀವೇ ಬುದ್ಧಿ ಹೇಳಿ. ತಪಸ್ಸು ಮಾಡಿ ಮಾಡಿ ಹಟಮಾರಿ ಹೆಣ್ಣನ್ನು ಹಡೆದಂತಾಯಿತು....ಈವತ್ತು ನಿರ್ಣಯ ವಾಗಲೇಬೇಕು....'

'ಮಠದಲ್ಲಿ ಕುಳಿತುಕೋ ಮಗಳೇ, ಶಿವಪುತ್ರ ಇದ್ದರೆ ಮಹಾದೇವಿಗೆ ಮತ್ತು ಓಂಕಾರನಿಗೆ ಕರೆಯನ್ನು ಕಳುಹಿಸು. ಬಂದ ತಕ್ಷಣ ಅಲ್ಲಿ ಕುಳ್ಳಿರಿಸಿ, ಇತ್ತ ಹೇಳಿ ಕಳುಹಿಸು....' ಲಿಂಗಮ್ಮ ಹೊಂಗುಟ್ಟಿ ಹೋದಳು.

ಮಹಾದೇವಿಗೆ ಗುರುಗಳಿಂದ ಕರೆ ಬಂದಾಗಲೇ ಕಾರಣ ತಿಳಿಯಿತು— ತಾಯಿಯು ಮಠಕ್ಕೆ ಹೋಗಿ ಹೇಳಿ ಕಳಿಸಿರಬೇಕೇನೋ ಎಂದುಕೊಂಡಳು. ತನ್ನ ಸಂಕಲ್ಪ ದೃಢವಿದ್ದಾಗ ಹೆದರುವ ಪ್ರಮೇಯವೇ ಇಲ್ಲ ಎಂದು ನಿಶ್ಚಿಂತತೆ ಯನ್ನು ಮೈಗೂಡಿಸಿಕೊಂಡಳು. ಅದೇ ಆಗ ಬಂದು ಮಾತನಾಡುತ್ತ ಕುಳಿತಿದ್ದ ಶೈಲಜೆಯನ್ನು ಸಂಗಡ ಕರೆದುಕೊಂಡು ಮಠದ ದಾರಿಗೆ ಇಳಿದಳು. ಶೈಲಜೆಗೆ ಮದುವೆ ನಿಶ್ಚಿತವಾಗಿದ್ದು, ಮುಂದಿನ ಮದುವೆಯ ಕಾಲದಲ್ಲಿ ಲಗ್ನ ನಡೆಯುವುದಿತ್ತು. ಅದನ್ನು ಗೆಳತಿಗೆ ತಿಳಿಸಲು ಆಕೆ ಬಂದಿದ್ದಳು.

ಮಹಾದೇವಿ ಮುಂದಿನ ಸಮಸ್ಯೆಯನ್ನು ಆಲೋಚಿಸುತ್ತ, ತಾನು ಹೇಳಬೇಕಾದ ಉತ್ತರಗಳನ್ನು ಸಿದ್ಧಪಡಿಸಿಕೊಂಡಳು. ಕಜ್ಜಿಯ ತುರಿಯಂತೆ ಆಗಾಗ ಉದ್ಭವಿಸಿ ಕಿರುಕುಳ ಕೊಡುವ, ಈ ಹೊಯ್ದಾಟದ ಸಮಸ್ಯೆಗೆ ಅಂತಿಮ ಪರಿಹಾರ ಕಂಡುಹಿಡಿಯಬೇಕು, ಅಶಾಂತಿಯ ಈ ನಾಟಕಕ್ಕೆ ಕೊನೆಯ ತೆರೆ ಎಳೆದುಬಿಡಬೇಕು ಎಂದುಕೊಂಡು, ಮೌನವಾಗಿ ನಡೆಯತೊಡಗಿದಳು.

ದಾರಿಯ ಬದಿಯಲ್ಲಿ ಒಂದು ಹೋರಿಯು ಯಥೇಚ್ಛವಾಗಿ ಬೆಳೆದ ಹಸಿರು ಹುಲ್ಲನ್ನು ಮೇಯುತ್ತಿತ್ತು. ಅದರ ಒಡೆಯನು ಮೇಯಲು ಅದನ್ನು ಬಿಟ್ಟು, ಹೊಲದ ಕೆಲಸದಲ್ಲಿ ಮಗ್ನನಾಗಿದ್ದ. ಒಂದು ನಾಯಿ ಬಂದು ಹೋರಿಯ ಸುತ್ತಲೂ ಓಡಾಡುತ್ತ ಕನಕನ ಬೊಗುಳುತ್ತಿತ್ತು. ಮಹಾದೇವಿ ಕುತೂಹಲ ದಿಂದ ನೋಡುತ್ತ ನಿಂತಳು. ಆ ಹೋರಿಯು ಸಹನೆ ತಪ್ಪಿತೆಂದು ಕಾಣುತ್ತದೆ, ಬೊಗುಳಿ ಸುತ್ತುವ ನಾಯನ್ನು ತಲೆ ಎತ್ತಿ ನೋಡಿ, ಅದರ ಸನಿಹಕ್ಕೆ ನಡೆ ಯಿತು. ಆಗ ನಾಯಿಯು ಹೋರಿಗೆ ಬೆನ್ನು ತಿರುಗಿಸಿ ಓಡತೊಡಗಿತು. ಹೋರಿಯು ವೇಗವಾಗಿ ಹಿಂಬಾಲಿಸಿತು. ಕುಂಯ್ಯುಕುಂಯ್ಯು ಎಂದು

ಒರಲುತ್ತ ನಾಯಿ ಓಟಕಿತ್ತಿತು.

ಮಹಾದೇವಿ ಗಂಭೀರವಾಗಿ ಇದನ್ನು ಗಮನಿಸಿ, ನಂತರ ಹೋರಿ ನಾಯಿಗಳ ಓಟವನ್ನು ಕಂಡು ನಗತೊಡಗಿದಳು.

'ಶೈಲಜಾ....ಅತ್ತ ನೋಡು....' ನಗೆ ಇನ್ನೂ ಮುಗಿದಿರಲಿಲ್ಲ.

'ಅದಕ್ಕೇಕೆ ಇಷ್ಟು ನಗುವೇ !....'

'ಈ ಪ್ರಸಂಗ ನನಗೆ ಬಹು ಉತ್ತಮ ಪಾಠ ಕಲಿಸಿತು. ಪ್ರಕೃತಿಯು ಬಾಳಪಥದರ್ಶಿ....'

'ಇದರಲ್ಲೇನು ಪಾಠವಿದೆಯೇ ?' ಶೈಲಜ ಬೆರಗಾದಳು.

'ನೋಡೆ, ಈ ಹೋರಿ ತನ್ನ ಪಾಡಿಗೆ ತಾನು ಮೇಯುತ್ತಿತ್ತು. ನಾಯಿಗೇಕೆ ಹೊಟ್ಟೆಯುರಿ ಇರಬೇಕು. ವ್ಯರ್ಥವಾಗಿ ಬೊಗುಳುತ್ತದೆ! ಬೊಗುಳಿ ಏನೂ ಮಾಡಲಾರದು, ಸುಮ್ಮನೇ ಕಿರುಕುಳ ಕೊಡುವುದಷ್ಟೆ! ಹಾಗೆಯೇ ಈ ಜಗತ್ತಿನಲ್ಲಿ ಆಧ್ಯಾತ್ಮಜೀವಿಗಳು ತಮ್ಮ ಪಾಡಿಗೆ ತಾವು ಪಾರಮಾರ್ಥದ ಕ್ಷೇತ್ರದಲ್ಲಿ ಭಕ್ತಿಯ ಹುಲ್ಲನ್ನು ಮೇಯುತ್ತಲಿದ್ದರೆ, ನಾಯಿಯಂತಹ ಕೆಲವು ಕ್ಷುಲ್ಲಕ ಲೌಕಿಕರಿಗೆ ಸಹನೆಯೇ ಆಗದು! ಬರಿದೇ ನಿಂದೆಗೆ ತೊಡಗುತ್ತಾರೆ. ನಾಯಿಯಂತೂ ಹುಲ್ಲು ತಿನ್ನದು; ಹೋರಿ ತಿಂದರೆ ಇದಕ್ಕೇಕೆ ಸಂಕಟ? ಅದರ ಆಹಾರ ಬೇರೆ, ಇದರ ಆಹಾರ ಬೇರೆ. ಹಾಗೆಯೇ ಆಧ್ಯಾತ್ಮಜೀವಿಗಳ ತಂಟೆ ಈ ಲೌಕಿಕರಿಗೇಕೆ ಬೇಕು ಹೇಳು....'

'ಬಾಯಿ ಚಪಲ ಬಿಟ್ಟು ಬೇರೇನೂ ಅಲ್ಲ....' ಶೈಲಜ ಹೇಳಿದಳು.

'ಇಲ್ಲಿ ಇನ್ನೂ ಒಂದು ಉಪದೇಶವಿದೆ. ಹೋರಿಯನ್ನು ಜೀವಿಗೆ, ನಾಯಿಯ ಕಿರುಕುಳವನ್ನು ಎದುರಾಗುವ ಸಮಸ್ಯೆಗಳಿಗೆ ಹೋಲಿಸಿದರೆ, ಇನ್ನೂ ಒಳ್ಳೆಯ ಮಾರ್ಗದರ್ಶನ ಸಿಗುವುದು. ಎಲ್ಲಿಯ ತನಕ ಹೋರಿ ಸುಮ್ಮನಿತ್ತೋ ಅಲ್ಲಿಯ ತನಕ ನಾಯಿಯ ಬೊಗಳುವಿಕೆ ಸಾಗಿತ್ತು. ಯಾವಾಗ ಹೋರಿಯು ನಾಯಿಗೆ ಎದುರಾಯಿತೋ, ಅದು ಬಾಲ ಮುದುರಿ ಓಡುತ್ತಿದೆ....' ಮಹಾದೇವಿ ಓಡಿ ಹೋಗುವ ಎರಡನ್ನೂ ನೋಡಿ ನಕ್ಕಳು.

'ಹಾಗೆಯೇ....ನಾವು ಹೆದರಿ ನಿಂತರೆ ಸಮಸ್ಯೆಗಳು ಮುತ್ತಿಕಾಡುತ್ತವೆ, ಎದೆಗೊಟ್ಟರೆ ಬೆದರಿ ಓಡುತ್ತವೆ. ಎಂತಹ ಉಪದೇಶವಾಯಿತು ನನಗೆ! ಬೆನ್ನು ತೋರಿದರೆ ಬೆನ್ನು ಹತ್ತುತ್ತವೆ, ಎದೆಗೊಟ್ಟರೆ ಹೆದರಿ ಹಿಮ್ಮೆಟ್ಟುತ್ತವೆ ....ಇದು ವಿಶ್ವದ ಲೀಲೆ. ಶೈಲಜಾ....ಬರುವ ಎಡರು ತೊಡರುಗಳು ಬರಲಿ.... ಕೆಳದೀ ನೀನೇ ಸಾಕ್ಷಿ....ಕೇಳಿದೋ :

ಅಳುತನದ ಮಾತನೇರಿಸಿ ನುಡಿವಡೆ
ಆಗಳೇ ಕಟ್ಟಿದೆನು ಗಂಡುಗಚ್ಚೆಯ;
ತಿಗುರನೇರಿಸಿ ತಿಲಕವನಿಟ್ಟು,
ಕೈದುವ ಕೊಂಡು ಕಳನೇರಿದ ಬಳಿಕ,
ಕಟ್ಟಿದ ನಿರಿ ಸಡಲಿದಡೆ ಇನ್ನು ನಿಮ್ಮಾಣೆ
ಕಾಣಾ ಚನ್ನಮಲ್ಲಿಕಾರ್ಜುನಾ!*

ಹೆಣ್ಣು ಹೆಣ್ಣು ಎಂದು ಹೀಗಳೆಯುವ ಜಗತ್ತಿಗೆ ಸಾಧಿಸಿ ತೋರಿಸುವೆ ಕೆಳದಿ; ಆಕಾರ ಹೆಣ್ಣಿನದಾದರೇನು ಹೃದಯ ಗಂಡಿನದು ಇರಬಹುದು; ಆಕಾರ ಗಂಡಿನದಿದ್ದೂ ಹೃದಯವು ದುರ್ಬಲತೆಯ ತವರಾಗಿ ಇರಬಹುದು. ಜಗತ್ತಿನ ಮುಂಡಿಗೆಯನ್ನು ಇಂದು ನಾನು ಸ್ವೀಕರಿಸುವೆ; ದಿಟ್ಟತನದ ಕಚ್ಚೆಯನ್ನುಟ್ಟು, ಸ್ವಾಭಿಮಾನದ ಗುರಾಣಿ ಹಿಡಿದು, ಶಿವಪ್ರೇಮದ ತಿಲಕವ ನಿಟ್ಟು, ಆತ್ಮವಿಶ್ವಾಸದ ಖಡ್ಗವ ಹಿಡಿದು, ವಿರಕ್ತಿಯ ಸಮರಾಂಗಣಕ್ಕೆ ನಡೆಯುವೆ. ಇಟ್ಟ ಹೆಜ್ಜೆ ಹಿಂತೆಗೆದು, ಮನೋಸ್ಥೈರ್ಯದ ಗಂಡುಗಚ್ಚೆಯ ಸಡಲಿಸಿದರೆ ಅಂದೇ ನನ್ನ ಪ್ರಾಣದ ಹೋಕು....ಇದು ಚನ್ನಮಲ್ಲಿಕಾರ್ಜುನನ ಆಣೆ....'

ಮುಂಚಾಚಿದ ಕೈಯ್ಯಿ, ಬಿಗಿದ ಮುಷ್ಟಿ, ಪ್ರತಿಜ್ಞೆಯ ಕೆಚ್ಚು ಮೂರೂ ಕೂಡಿ ವಿಲಕ್ಷಣ ಕಳೆಯಿಂದ ಮಹಾದೇವಿಯನ್ನು ಬೆಳಗಿಸಿದವು. ಶೈಲಜೆ ಬೆರಗಾದಳು.

'ಮಾದೇವಿ....ನೀನು ಗಂಡಾಗಿ ಹುಟ್ಟಿದ್ದರೆ ಚೆನ್ನಾಗಿರ್ತಿತ್ತು....!' ಶೈಲಜೆ ಉದ್ಗರಿಸಿದಳು.

'ಅದು ಪ್ರಯೋಜನವಿಲ್ಲ. ಮುಕ್ತಿ ಪದಕ್ಕೆ ಪುರುಷನಷ್ಟೇ ಹೋಗಬಲ್ಲ; ಹೆಣ್ಣು ಮಾಯೆ, ಹೆಣ್ಣಿಗೆ ಅಸಾಧ್ಯ ಎಂಬುದನ್ನು ಲೋಕ ಆಡುವಾಗ, ಅದನ್ನು ಸುಳ್ಳಾಗಿಸಬೇಕಾದರೆ, ಸ್ತ್ರೀಗೆ ಬಂದ ಅರ್ಥರಹಿತ ಕಳಂಕವನ್ನು ಕಿತ್ತೊಗೆಯಬೇಕಾದರೆ, ಗಂಡಾಗಿ ಹುಟ್ಟಿದರೆ ಸಾಧ್ಯವಾಗುವುದೇ....? ಇದೇ ಸರಿ....'

ಗೆಳತಿಯರು ಸಾಗುವಾಗಲೇ ಎದುರಿನಿಂದ ಬರುತ್ತಿದ್ದ ಹೆಂಗೆಳೆಯರ ಸಮೂಹ, ಪಿಸಿಪಿಸಿ ಮಾತನಾಡುತ್ತ, ತನ್ನನ್ನೇ ನೋಡುತ್ತ ಕ್ಷಣಕಾಲ ನಿಂತುದನ್ನು ಗಮನಿಸಿದಳು. ತನ್ನತ್ತಲೇ ಅವರ ಆಕರ್ಷಣೆಯು ಕೇಂದ್ರೀಕೃತ

---

* ಮ. ವ. ೧೪೬

ವಾಗಿವೆ ಎಂದು ಮನವರಿಕೆಯಾಯಿತು. ಆದರೆ ಮಠಕ್ಕೆ ಹೋಗಲಿದ್ದುದು ಆದೊಂದೇ ಮಾರ್ಗ; ಪಕ್ಕದಲ್ಲೆಲ್ಲ ಹೊಲ-ಗದ್ದೆಗಳು. ಮುಂದೆ ಹೋಗದೆ ಗತ್ಯಂತರವಿರಲಿಲ್ಲ.

ತನ್ನ ಅಳಿಮನಕ್ಕೆ ತಾನೇ ನಾಚಿದಳು. ಹೋರಿಯು ಕಲಿಸಿದ ಪಾಠವನ್ನು ಮರೆತುಬಿಟ್ಟುದಕ್ಕಾಗಿ ಪಶ್ಚಾತ್ತಾಪಪಟ್ಟು, ಮತ್ತೆ ಅದನ್ನು ನೆನಪಿಸಿಕೊಂಡು ಮುಂದಡಿ ಇಡತೊಡಗಿದಳು.

ತನ್ನ ತಾಯಿಯ ವಯಸ್ಕರಾದ ಸಿಂಗಾರಮ್ಮ, ಗಂಗಮ್ಮ, ವೆಂಕಮ್ಮನವರ ಸಂಗಮವಾಗಿತ್ತಲ್ಲಿ. ಸುದ್ದಿ ಸಂಗ್ರಹದ ಕಾರ್ಯಾಲಯಗಳೇ ಒಂದುಗೂಡಿವೆ ಎಂದುಕೊಂಡು ಅವರಿಂದ ಪಾರಾಗಿಹೋಗಲು ಆಲೋಚಿಸಿದಳು. ಆದರೆ ಆ ಹೆಂಗೆಳೆಯರು ಬಿಡಲಿಲ್ಲ. ಮಂಗಲಮ್ಮ ಆಗಲೇ ಹೋಗಿದ್ದುದು ಅವರಿಗೆ ಅಪೂರ್ವ ಧೈರ್ಯವನ್ನು ನೀಡಿತ್ತು.

'ಮಾದೇವಿ....ಮಾದೇವಮ್ಮ....' ಸಂಗಮ್ಮ ಕೂಗಿದಳು.

'ಏನು ಚಿಕ್ಕಮ್ಮ ಎಲ್ಲ ಕ್ಷೇಮವೇ ?....' ಮುಗುಳ್ನಕ್ಕು ಕೇಳಿದಳು.

'ಏನವ್ವಾ ಕಂಡರೂ ಕಾಣದಂತೆ ಹೋಗ್ತೀಯಲ್ಲಾ. ಸಾಕಿದೋರು ಸಲಹಿದೋರು ಎಲ್ಲರ್ನು ಮರ್ತ್ಹೇಬಿಟ್ಯಾ....?' ಧ್ವನಿಯಲ್ಲಿ ವ್ಯಂಗ್ಯವಿತ್ತು.

'ಇಲ್ಲ ಚಿಕ್ಕಮ್ಮ....ನೀವೆಲ್ಲ ದೊಡ್ಡವರು. ಗಹನವಾಗಿ ಮಾತಾಡ್ತಾ ಇದ್ದಿರಿ. ದೊಡ್ಡವರ ಮಾತಿನ ಮಧ್ಯದಲ್ಲಿ ಚಿಕ್ಕವರು ತಲೆ ಹಾಕಬಾರದೆಂದು ನಡೆಯುತ್ತಿದ್ದೆ....'

'ನಮ್ಮದೇನು ಮಾತು ಬಿಡವ್ವಾ; ನಿನ್ನದೇ ಸುದ್ದಿ ಮಾತಾಡ್ತಾ ಮರ ಮರ ಮರುಗುತ್ತಿದ್ವಿ....' ಸಂಗಮ್ಮ ಹೇಳಿದಳು.

'ಅದ್ಯಾಕೆ ಮರುಗುತ್ತಿದ್ರಿ....' ಚಕಿತಳಾಗಿ ಕೇಳಿದಳು.

'ಮತ್ತೇನವ್ವಾ....ಉಂಡು ಉಟ್ಟು, ಗಂಡನ್ನ ಮಾಡಿಕೊಂಡು, ಚಕ್ಕಂದ ವಾಡುವ ಕಾಲದಲ್ಲಿ ಹುಚ್ಚು ಹಿಡಿದರೆ ಯಾರಿಗೆ ತಾನೆ ಅಯ್ಯೋ ಅನ್ನಸಲ್ಲ....' ಸಿಂಗಾರಮ್ಮ ಪೀಠಿಕೆ ಹಾಕಿದಳು.

'ಯಾರು ಹೇಳಿದ್ರು ಹುಚ್ಚು ಹಿಡೀತು ಅಂತ!' ಆಶ್ಚರ್ಯದ ಮೇರೆ ಮೀರಿತು ಮಹಾದೇವಿಗೆ.

'ಹೋಗಲಿ ಬಿಡವ್ವಾ, ಈಗಾದರೂ ಹ್ಮೈನಾಗಿದ್ದೀಯಲ್ಲ! ಬಂಗಾರದ ಗೊಂಬೆಯಂಥ ಚೆಲ್ವೆ....ಲಗ್ನ ಆಗದೆ ಉಳಿದಿದೀಯಲ್ಲ; ನೋಡಿದರೆ ಕರುಳು ಕತ್ತರಿಸುತ್ತದೆ. ನಿನ್ನ ಓರಗೆಯ ಮಹಾಲಕ್ಷ್ಮಿ, ನನ್ನ ಮಗಳು ಲಗ್ನ ಆಗಿ ಎರಡು ಹಡೆದಳು. ಒಂದು ಎರಡು ವರ್ಷದ್ದು; ಈಗ ಒಂದು ಮೂರು

ತಿಂಗಳದ್ದು....' ವೆಂಕಮ್ಮ ಹೇಳಿದಳು. ಮಹಾದೇವಿಗೆ ತಡೆಯಲಾಗದಷ್ಟು ನಗು ಬಂದಿತು.

'ಹಡೆಯಲಿ ಬಿಡೀ ವೆಂಕಮ್ಮ; ಎರಡಲ್ಲ ಹನ್ನೆರಡು ಹಡೀಲಿ; ಅದನ್ನು ಬಿಟ್ಟು ಇನ್ನು ಯಾವ ಕೆಲಸ ಇದೆ ಅವರಿಗೆ....' ಏನೋ ಒಂದು ಮಹಾ ಸಾಧನೆಯನ್ನು ತಾವುಗಳೆಲ್ಲ ಮಾಡಿ, ಆ ಪರಮಪುರುಷಾರ್ಥದಿಂದ ಮಹಾದೇವಿ ವಂಚಿತಳಾದಳಲ್ಲ ಎಂಬ ಅನುಕಂಪದಿಂದ ಮಾತನಾಡಿದ ವೆಂಕಮ್ಮ ಪೆಚ್ಚಾದಳು.

'ನೋಡಕ್ಕೆ ಚಂದವಿದ್ದು, ಮನೇಲಿ ದುಡ್ಡಿದ್ದಮಾತ್ರಕ್ಕೇ ಲಗ್ನ ಆದೀತಾ! ಅದಕ್ಕೂ ಪುಣ್ಯ ಬೇಕು.... ಏನಾದರೂ ಐಬು ಇರ್ತಾವೆ. ಹೊರಗಿನೋರಿಗೆ ಏನು ತಿಳಿಯುತ್ತೆ....' ಸಂಶಯಾಸ್ಪದ ರೀತಿಯಲ್ಲಿ ಗಂಗಮ್ಮ ಕೊಂಕು ಮಾತನಾಡಿದಳು.

'ಅದೂ ನಿಜವೇ! ಆದ್ರೆ ಮಹಾದೇವಿ ಅಂಥವಳೇನಲ್ಲ. ಆದ್ರೂ ಯಾವಾಗಂದ್ರೆ ಆವಾಗಲೇ ಊರಿನಲ್ಲಿ ತಿರುಗೋದು. ಮಠಕ್ಕೆ ಹೋಗೋದು ಚೆಂದಲ್ಲ. ವೇಳೆ ಒಂದೇ ಸಮ ಇರಲ್ಲ....' ಬಾಯಲ್ಲಿದ್ದ ತಾಂಬೂಲವನ್ನು ಉಗುಳುತ್ತ ಸಿಂಗಾರಮ್ಮ ಅಂದಳು.

'ಹರೇದ ಹುಡುಗೀನ್ನ ಹೀಂಗೆ ಬಿಡೋ ಲಿಂಗಮ್ಮನೂ ಗಟ್ಟಿಗಿತ್ತೀನೆ ಬಿಡವ್ವಾ! ಹೆಣ್ಣುಮಕ್ಕಳು ಸಾಲೆಯ ಮೆಟ್ಟುಗಟ್ಟಿ ತುಳೀತಿರಲಿಲ್ಲ. ಮೊದಲಿಗೆ ಈಕೇನ ಕಳ್ಸಿದರು. ಸಣ್ಣಮಕ್ಕಳಿದ್ದಾಗ ಹೋದರೆ ಸರಿ, ದೊಡ್ಡಾಕೆ ಆದ್ರೂ ಹೋಗ್ತಿದ್ಲು. ಬೆಳೆದುನಿಂತ ಹೆಣ್ಣುಮಕ್ಕಳು ಏನವ್ವ ಕಲಿಯೋದು!....'

'ನಾವು ಅನುಭವಿಗಳು.... ನಿನ್ನ ಹಿತೈಷಿಗಳು; ಹೇಳ್ತೀವಿ ಕೇಳು. ಕೊಟ್ಟ ಗಂಡನಿಗೆ ನಿಷ್ಠೆಯಿಂದ ನಡೆದು, ಹತ್ತು ಮಕ್ಕಳ ತಾಯಾಗಿ, ಮುತ್ತಿನಂಗೆ ಇರವ್ವ. ಅದು ಬಿಟ್ಟು ಮನೆಮಾನ, ಊರಿನ ಮಾನ ಕಳೀಬೇಡ....' ಸಂಗಮ್ಮ ಉಪದೇಶ ಮಾಡಿದಳು.

ಮಹಾದೇವಿಯ ಮನಸ್ಸು ಚಟಪಟಿಸತೊಡಗಿತ್ತು. ಅವರ ಅಜ್ಞಾನ, ವಿಚಾರದ ಮಟ್ಟ, ರೀತಿ ನೀತಿಗಳನ್ನು ಕಂಡು ಮರುಕಗೊಂಡು ಹೇಳಿದಳು :

'ಮದುವೆ, ಮಕ್ಕಳು ಇವನ್ನು ಬಿಟ್ಟರೆ ಬೇರೇನೂ ಚಿಂತೆಯೇ ಇಲ್ವೆ ಸಂಗಮ್ಮನೋರೆ....? ಪ್ರತಿಯೊಬ್ಬರಿಗೂ ಅವರವರ ಬಾಳಿನ ಹೊಣೆಗಾರಿಕೆ ಇದ್ದೇ ಇರುತ್ತದೆ. ಅದರ ಬಗ್ಗೆ ನೀವೇಕೆ ಚಿಂತಿಸಬೇಕು? ದೇವರು ಈ ಶರೀರವನ್ನು, ಮನಸ್ಸನ್ನು, ಬುದ್ಧಿಯನ್ನು ವರವಾಗಿ ಕೊಟ್ಟಿದ್ದಾನೆ. ಶರೀರ

ಇರುವುದು ಕೇವಲ ಸುಖಭೋಗಕ್ಕಾಗಿ ಅಲ್ಲ, ಪರಮಾತ್ಮನನ್ನು ಕಾಣಲಿಕ್ಕೆ ; ಮನಸ್ಸು ಇರುವುದು ಅನ್ಯರ ಚಿಂತೆಯನ್ನು ಮಾಡಲಿಕ್ಕಲ್ಲ, ಶಿವನ ಚಿಂತನೆ ಮಾಡಲಿಕ್ಕೆ! ನಾಲಿಗೆ ಇರುವುದು ಇನ್ನೊಬ್ಬರನ್ನು ಆಡಿಕೊಳ್ಳಲಿಕ್ಕಲ್ಲ, ಶಿವನನ್ನು ಹಾಡಿಕೊಳ್ಳಲಿಕ್ಕೆ! ಬುದ್ಧಿ ಇರುವುದು ಇನ್ನೊಬ್ಬರ ಬಗ್ಗೆ ಅನಿಷ್ಟ ವಿಚಾರ ಮಾಡಲಿಕ್ಕಲ್ಲ, ಜಗತ್ತಿಗೆ ಉಪಕಾರ ಮಾಡಲಿಕ್ಕೆ! ತಾಯಂದಿರಾ, ನೀವು ಮಾಡುವ ಪಾಪದ ಅರಿವು ಸಹ ನಿಮಗಿಲ್ಲವಲ್ಲ ಅಂತ ನನಗೆ ಅಯ್ಯೋ ಅನ್ನಿಸುತ್ತೆ. ಅಜ್ಞಾನಿ ಮಗುವು ಆಡುತ್ತ ಹೋಗಿ ಬೆಂಕಿಯಲ್ಲಿ ಕೈ ಇಡುವಂತೆ, ನೀವು ಇನ್ನೊಬ್ಬರ ನಿಂದನೆಯ ಜ್ವಾಲೆಯಲ್ಲಿ ಬೇಯುತ್ತ ಏಕೆ ಕಾಲ ಕಳೀತೀರಿ? ನೀವು ಅಂದ್ರೆ ನನಗೇನೂ ಆಗಲ್ಲ. ಆನೆ ಮೇಲೆ ಹೋಗುವವರನ್ನು ನಾಯಿ ಕಚ್ಚಲ್ಲ. ಆನೆ ತನ್ನ ಪಾಡಿಗೆ ತಾನು ಹೋಗಿಬಿಡುತ್ತೆ; ಆದ್ರೆ ನಾಯಿ ಬಾಳು ಇದರಲ್ಲೇ ಹಾಳಾಗುತ್ತೆ.

ಮನುಷ್ಯನ ಜೀವನ ಜಾಲಿ ಗಿಡದಂತೆ ಆಗಬಾರದು; ಮಾವಿನಗಿಡದಂತೆ ಆಗ್ಬೇಕು. ಬೊಬ್ಬಲಿಗಿಡ ನೆರಳು ಕೊಡಲ್ಲ, ಮುಳ್ಳು ಚುಚ್ಚಿ ಕಳಿಸುತ್ತೆ. ಮಾವಿನಗಿಡ ನೆರಳು ಕೊಡ್ತದೆ, ಹಣ್ಣನ್ನೂ ಕೊಡ್ತದೆ.

ನೀವು ನನಗೆ ಉಪದೇಶ ಮಾಡ್ತೀರಿ, ಅದು ಉಪಕಾರದ ಮಾತು ಎಂದು ತಿಳಿದುಕೊಂಡಿದ್ದೀರಿ. ರಕ್ತ ನೆಕ್ಕಿ, ಮೂಳೆಯನ್ನು ಕಡಿದು ಬದುಕುವ ನಾಯಿಗೆ, ಹಾಲನ್ನು ಕುಡಿದು ಕಮಲದ ದಂಟನ್ನು ತಿಂದು ಬದುಕುವ ಹಂಸೆಗೆ ಉಪದೇಶ ಮಾಡಲು ಯಾವ ಅಧಿಕಾರವಿದೆ ಹೇಳಿ? ಕಾಡಿನಲ್ಲಿ ಮೂರು ಜಿಂಕೆ ಇದ್ದವು. ಬೇಟೆಗಾರ ಬಲೆ ಬೀಸಿದಾಗ ಒಂದು ಅದರಲ್ಲಿ ಸಿಕ್ಕದೆ ಪಾರಾಗಿ ಸ್ವಚ್ಛಂದವಾಗಿ ವನದಲ್ಲಿ ಇರತೊಡಗಿತು. ಇನ್ನೊಂದು ತಾನು ಬಲೆಯಲ್ಲಿದ್ದುದರ ಅರಿವಾಗಿ ತಪ್ಪಿಸಿಕೊಳ್ಳುವ ಮಾರ್ಗ ತಿಳಿಯದೆ ಚಟಪಟಿಸತೊಡಗಿತು. ಮತ್ತೊಂದು ತಾನು ಬಲೆಯಲ್ಲಿ ಬಿದ್ದುದರ ಅರಿವು ಸಹ ಇಲ್ಲದೆ ಬೇಟೆಗಾರ ನೀಡಿದ ಹಸಿರು ಹುಲ್ಲನ್ನು, ತಿಳಿನೀರನ್ನು ಕುಡಿಯುತ್ತ ಮೈಮರೆಯಿತು. ಕೆಲವಾರು ಕ್ಷಣಗಳಲ್ಲಿ ಸಾಯುವೆನೆಂಬ ಅರಿವು ಸಹ ಅದಕ್ಕಿಲ್ಲ. ಹಾಗೆಯೇ.... ನೋಡಿರೇ ಅವ್ವಗಳಿರಾ, ಬಲೆಯಲ್ಲಿ ಸಿಕ್ಕದೆ ಪಾರಾಗಲು ನಾನು ಯತ್ನಿಸುತ್ತಿರುವೆ. ಮಂಗಲಮ್ಮನಂತಹ ಜಿಜ್ಞಾಸುಗಳು ಬಲೆಯಿಂದ ತಪ್ಪಿಸಿಕೊಳ್ಳಲು ಹೋರಾಡುತ್ತಿರುವರು. ಆದರೆ ನೀವು ಕಾಮನೆಂಬ ಬೇಟೆಗಾರ ಬೀಸಿದ ಸಂಸಾರದ ಬಲೆಯಲ್ಲಿ ಸಿಕ್ಕಿಬಿದ್ದು, ಅದರ ಅರಿವಿಲ್ಲದೆ ಇಂದ್ರಿಯ ಸುಖದ ಹುಲ್ಲು ತಿನ್ನುತ್ತ ವ್ಯಾಮೋಹದ ನೀರು ಕುಡಿಯುತ್ತ, ತನ್ಮಯರಾಗಿರುವಿರಿ.

ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ.
ಕೂಡಿರ್ದ ಸತಿಸುತರು ತನುತನುಗೆ ಹರಿದು ಹೋಗುತ್ತೈದಾರೆ.
ಬೇಡಬೇಡವೆಲೆ ಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ
ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ
ಹೂಣೆಹೊಕ್ಕು ಬದುಕು ಕಂಡಾ, ಮನವೆ.*

ಅವರವರ ಕಾಲ ಮುಗಿದಾಗ ಅವರವರು ಪಯಣ ಮುಗಿಸುತ್ತಾರೆ. ಆದರೆ ಅಪ್ಪಗಳಿರಾ, ನಿಮ್ಮ ಅಂತರಂಗವನ್ನು ಬೆದಕಿಕೊಳ್ಳಿ, ಸದ್ವಿಚಾರಗಳ ಸಾಕಾರ ಮೂರ್ತಿಗಳಾದ ಸಜ್ಜನರ ಸಂಗದಲ್ಲಿರಿ. ಈ ಅಜ್ಞಾನದ ಬದುಕು ಸಾಕು....' ಮಹಾದೇವಿ ಮೃದುವಾಗಿ ಹೇಳಿದಳು.

ಅವರಿಗೆಲ್ಲ ಆಶ್ಚರ್ಯ ಸಮನಿಸಿತು. ಯಾವ ಅಂಜಿಕೆ, ಅಳುಕು, ತೊದಲಿಕೆ ಇಲ್ಲದೆ ದೊಡ್ಡ ತತ್ವಜ್ಞಾನ ಹೇಳಿದ ಮಹಾದೇವಿಯನ್ನು ಸೋಜಿಗಭರಿತರಾಗಿ, ಮೌನವಾಗಿ ದಿಟ್ಟಿಸಿದರು. ಶೈಲಜೆಗೆ ತಡೆಯಲಾರದಷ್ಟು ಕೋಪ ಬಂದಿತ್ತು.

'ಮಾದೇವಿ, ನಿನ್ನ ಉಪದೇಶ ಸಾಕು. ಜಾಣರಿಗೆ ಮಾತಿನ ಪೆಟ್ಟು, ದಡ್ಡರಿಗೆ ದೊಣ್ಣೆ ಪೆಟ್ಟು. ಸಾಹಿತ್ಯಿಕ ಭಾಷೆಯಲ್ಲಿ ಮಾತನಾಡಿದರೆ ಇವರಿಗೆ ಅರ್ಥವಾದೀತೇ? ಸಿಂಗಾರಮ್ಮನೋರೇ, ಇನ್ನೊಬ್ಬರ ಸುದ್ದಿ ಮಾತಾಡ್ದೆ ಇದ್ರೆ ಬಹುಶಃ ನಿಮ್ಗೆ ಊಟ ಮಾಡಿದ್ದು ಅರಗುವಂತೆ ಕಾಣದು, ಕಣ್ಗೆ ನಿದ್ರೆ ಬರುವಂತೆಯೂ ಕಾಣದು, ಅಲ್ವೇನ್ರೀ....?' ಆವೇಶದಿಂದ ಹೇಳಿದಳು.

'ಸಂಗಮ್ಮನೋರೆ, ಮದುವೆ ಮಾಡಿಕೊಂಡು ನೀವು ಸುಖಪಡೋದು ಊರಿಗೆಲ್ಲ ಗೊತ್ತದಲ್ಲ. ನಿಮ್ಮ ಯಜಮಾನರು ಇರುಳಾಗೋದೆ ತಡ ಕುಡಿದು ಬಂದು ಮೈ ಮುರಿಯುವಂತೆ ಹೊಡೆದಾಗ ಬಳೆ ಒಡಕ್ಕಂಡು, ಕಿವಿ ಹರ್ಕಂಡು ಎಷ್ಟು ಸಲ ತೌರಿಗೆ ಹೋಗಿಲ್ಲ. ಹೀಗಿದ್ದೂ ಉಪದೇಶ ಮಾಡ್ತೀರಿ; ಇನ್ನೊಬ್ಬರ ಮನೆ ಸುದ್ದಿ ಮಾತಾಡ್ತೀರಿ. ನಿಮಗೆ ಬೇರೆ ಉದ್ಯೋಗವಿಲ್ವೆ....'

'ಶೈಲಾ....ಸಾವಧಾನ; ಇಷ್ಟೇಕೆ ಕೋಪ....?' ಶೈಲಜೆಯ ಆವೇಶಕ್ಕೆ ತಡೆಹಾಕಲು ಮಹಾದೇವಿ ಪ್ರಯತ್ನಿಸಿದಳು.

'ಮತ್ತೇನು ಮಾದೇವಿ, ಯಾರನ್ನು ಅನ್ಬೇಕು ಎಂಬ ಪ್ರಜ್ಞೆಯೂ ಬೇಡವೆ? ನಿನ್ನ ವೇಷ, ಸಾತ್ವಿಕತೆ, ಶಾಂತಿ, ಹಣೆಯ ಮೇಲಿನ ಭಸ್ಮ ನೋಡಿ ದರೆ ಪಾದ ಮುಟ್ಟಿ ನಮಸ್ಕಾರ ಮಾಡ್ಬೇಕು ಅನ್ನಿಸುತ್ತೆ. ನಿನ್ನಂಥವಳಲ್ಲಿ ಸಂಶಯಪಡ್ತಾರೆ, ಅಲ್ಲದ ಮಾತಾಡ್ತಾರೆ. ಇವರೇನು ನಾರಿಯರೋ, ಹೆಮ್ಮಾರಿಯರೋ....?'

* ಮ. ವ. ೬೯

'ಬೇಡ....ಶೈಲಾ. ಅವರು ಅಜ್ಞಾನದ ಕೈಲಿ ನಾಲಿಗೆ ಒಪ್ಪಿಸಿದರೂ ಅಂತ ನೀನು ಸಿಟ್ಟಿನ ಕೈಗೆ ನಾಲಿಗೆ ಕೊಡಬೇಡ ಕೆಳದಿ! ಬಸವಣ್ಣನವರು ಹೇಳಲ್ವೆ,

ಕೋಡಗನೇಡಿಸಬೇಡೆಂದಡೆ ಮಾಣದಯ್ಯಾ
ತೋಡುವ ಹೆಗ್ಗಣ ಮಾಳಿಗೆ ಎಂದಡೆ ಮಾಣದಯ್ಯ.
ಗಾಡಿಗದೂಷಕನವರವರನಾಡುವುದೇ ನೇಮ
ಕೂಡಲಸಂಗಮದೇವಾ, ಇದವರ ಕಾಯಕವಯ್ಯ*

ಕೋಡಗನಿಗೆ ಯಾರ ತೋಟವಾದರೇನು, ಯಾವ ಗಿಡವಾದರೇನು ? ಎಲ್ಲ ಹಣ್ಣನ್ನು ಕಿತ್ತು ಬಿಸುಟುವುದು. ಅದರ ದೃಷ್ಟಿಯಲ್ಲಿ ಮೆಣಸಿನಗಿಡ ಕೀಳುವುದೂ ಒಂದೇ, ತೆಂಗಿನಸಸಿ ಕೀಳುವುದೂ ಒಂದೇ. ತೆಂಗಿನಗಿಡದ ಬೆಲೆಯಾಗಲಿ, ಬೆಳೆಸುವ ಕಷ್ಟವಾಗಲಿ ಅದಕ್ಕೇನು ಗೊತ್ತು ? ಹೆಗ್ಗಣಕ್ಕೆ ತೋಡುವುದಷ್ಟೇ ಗೊತ್ತು, ಮಾಳಿಗೆಯಾದರೂ ಅಷ್ಟೇ, ನೆಲವಾದರೂ ಅಷ್ಟೆ. ಹಾಗೆಯೇ ಎಲ್ಲರಿಗೂ ಪಾರಮಾರ್ಥ ಪಥದ ಘನತೆ, ಶರಣರ ಬದುಕು ತಿಳಿಯುವುದೇ ತಾಯಿ ?

ಅವರ ಅಜ್ಞಾನಕ್ಕೆ ಮರುಕಪಡಬೇಕೇ ಹೊರತು, ಕೋಪವನ್ನು ತಾಳಬಾರದು. ತಿಳಿದು ತಿಳಿದು ಅವರು ತಪ್ಪು ಮಾಡರು, ಅಜ್ಞಾನದಿಂದ ಮಾಡುವರು. ಇನ್ನೊಬ್ಬರ ಮುಖಕ್ಕೆ ಮಸಿ ಹಚ್ಚುವ ಪ್ರಯತ್ನ ಮಾಡುವರು, ಆದರೆ ಅವರ ಮುಖ ಮಸಿಯಾಗುವ ಮುನ್ನ ತಮ್ಮ ಕೈ ಮಸಿಯಾಗುವುದನ್ನು ಅರಿಯರು.' ಶೈಲಜೆಗೆ ಹೇಳಿ, ಮತ್ತೆ ಹೆಣ್ಣುಮಕ್ಕಳಿಗೆ ನುಡಿದಳು :

'ಕನ್ನಡಿಯ ಮುಂದೆ ನಿಂತು ಅಣಕಿಸುವವರು ಹೇಗೆ ಅಸಹ್ಯ ಮುಖವನ್ನು ನೋಡಿಕೊಳ್ಳಬೇಕಾಗುವುದೋ ಹಾಗೆ ನೀವು ನಿಂದಿಸಿ ಪಾಪದ ಬೆಳೆಯನ್ನು ಬೆಳೆದುಕೊಳ್ಳುವಿರಿ. ಬೇವಿನ ಬೀಜ ಬಿತ್ತಿ ಬೇವಿನ ಫಲ ಬಂದಾಗ ಪಶ್ಚಾತ್ತಾಪಪಡದಿರಿ ; ಬಾಳೆಯ ಕಂದು ನೆಟ್ಟು, ಸಿಹಿ ಫಲ ಪಡೆಯಲು ಕೃಷಿ ಮಾಡಿರಿ. ಭಕ್ಷ್ಯಭೋಜ್ಯಗಳ ನಡುವೆ ಮಾಂಸದ ತುಣುಕಿದ್ದರೆ ಹದ್ದು ಎಲ್ಲವನ್ನು ಸರಿಸಿ, ಮಾಂಸವನ್ನು ಹೆಕ್ಕುವುದು. ಕಸಕಡ್ಡಿಯ ಮಧ್ಯೆ ಕಾಳು ಇದ್ದರೆ ಕೋಳಿ ಕಸವನ್ನು ಸರಿಸಿ ಕಾಳನ್ನು ಆರಿಸಿಕೊಳ್ಳುವುದು. ಅದೇ ರೀತಿ, ತಾಯಂದಿರಾ ಉಳಿದವರಲ್ಲಿರುವ ಒಳ್ಳಿತನ್ನು ಕಡೆಗಣಿಸಿ, ಕೆಟ್ಟುದನ್ನೇ ಹುಡುಕಿ, ಆಡಿ, ಪಾಪಗಳಿಸುವ ಗೃಧ್ರದೃಷ್ಟಿ ಬೇಡ ; ಸ್ವಲ್ಪವಾದರೂ ಒಳ್ಳಿತಿದ್ದರೆ ಅದನ್ನು ಕಂಡು, ಆನಂದಿಸಿ, ಪ್ರೋತ್ಸಾಹಿಸುವ ಕುಕ್ಕುಟದೃಷ್ಟಿ ಇರಲಿ.

---

* ಬ. ಷ. ವ. ೯೭೮

ನಾವು ಸಣ್ಣವರು ; ಅರಿಯದೆ ಕಟುವಾಗಿ ಏನಾದರೂ ಅಂದಿದ್ದರೆ ಮಕ್ಕಳ ಮಾತೆಂದು ಮನ್ನಿಸಿಬಿಡಿರಿ. ಇಲ್ಲಿಯತನಕದ ಬದುಕಿಗೆ ತೆರೆ ಎಳೆದು, ಹೊಸದಾದ ಆದರ್ಶಯುಕ್ತ ಬದುಕು ಗಳಿಸಿಕೊಳ್ಳಿರಿ....ಎಲ್ಲರಿಗೂ ಶರಣುಗಳು.' ಮಹಾದೇವಿ ಶೈಲಜೆಯ ಕೈಯನ್ನು ಹಿಡಿದು ಬರಬರನೆ ಮುಂದಕ್ಕೆ ಹೆಜ್ಜೆ ಇಟ್ಟಳು.

'ಶೈಲಜಾ, ಅರಿಯದ ಅಜ್ಞಾನಿಗಳೊಡನೆ ಮಾತಿಗೆ ನಿಲ್ಲುವದೆಂದರೆ ಕಲ್ಲನ್ನು ಘರ್ಷಿಸಿ ಕಿಡಿಯನ್ನು ತೆಗೆದುಕೊಳ್ಳುವಂತೆ. ಬಲ್ಲವರೊಡನೆ ಸಂಭಾಷಣೆ ಎಂದರೆ ಮೊಸರನ್ನು ಮಥನಿಸಿ ಬೆಣ್ಣೆ ತೆಗೆದಂತೆ. ಜ್ಞಾನಿಗಳೊಡನೆ ಮಾತಿಗೆ ನಿಂತರೆ ಅಲ್ಲಿ ಅರಿವಿನ ಸ್ಫುರಣವಾಗಿ, ಆ ಕಿರಣದ ಉರಿ ಇರುವ ಸಂಸ್ಕಾರಗಳನ್ನು ಕರ್ಪೂರದಂತೆ ಭಸ್ಮೀಕರಿಸಿ, ಮುಕ್ತಿಯನ್ನು ನೀಡುವುದು.* ಗುರುಗಳ ಸಾನ್ನಿಧ್ಯ ಸೇರೋಣ ನಡೆ....' ನುಡಿದಳು ಮಹಾದೇವಿ.

ಹೆಂಗೆಳೆಯರೆಲ್ಲ ಚಿತ್ತಾರದ ಗೊಂಬೆಗಳಂತೆ ಮೌನವಾಗಿ ನಿಂತಿದ್ದರು. ಅವರಿಗೆ ಮಾತನಾಡಲು ಕಂಠಕ್ಕೆ ತ್ರಾಣವಿರಲಿಲ್ಲ, ಮುಂದೆ ಹೆಜ್ಜೆ ಇಕ್ಕಲು ಕಾಲಿಗೆ ತ್ರಾಣವಿರಲಿಲ್ಲ.

---

* ಮ. ವ. ೮೭

೨೧. ದೃಢಚಿತ್ತೆ

ಶ್ರೀ ಗುರುಲಿಂಗದೇವರು ಬಿಲ್ವಪತ್ರೆಯ ಗಿಡದ ಬೊಡ್ಡೆಯ ಸುತ್ತಲೂ ಕಟ್ಟಿದ್ದ ಕಲ್ಲುಕಟ್ಟೆಯಮೇಲೆ ಪದ್ಮಾಸನದಲ್ಲಿ ಕುಳಿತರು. ತನ್ಮೊಡನೆ ಗಾಳಿ ಸೇವನೆಗೆ ಬಂದಿದ್ದ ಶಿವಯ್ಯನಿಗೆ 'ಯಾರೂ ಬರದಂತೆ ನೋಡಿಕೋ' ಎಂದು ಹೇಳಿ ಚಿಂತನಾಮಗ್ನರಾದರು. ಓಂಕಾರನ ಮನೆಯ ಪರಿಸ್ಥಿತಿ ಅವರಿಗೆ ತಿಳಿದಿತ್ತು. ಹೆಣ್ಣುಮಕ್ಕಳು ಲಗ್ನವಾಗದೆ ಉಳಿದು, ಯೋಗ ಸಾಧನೆ ಮಾಡುವ ಪರಿಪಾಠ ರೂಢಿಯಲ್ಲಿ ಇರದೇಇದ್ದುದರಿಂದ, ವಿರಾಗಿಣಿಯಾಗಿ ಉಳಿಯುವ ಮಹಾದೇವಿಯ ನಿರ್ಧಾರ ಅವರ ಮನೆಯಲ್ಲಿ, ಸಮಾಜದಲ್ಲಿ ವಿವಿಧ ಬಗೆಯ ಕೋಲಾಹಲವನ್ನೆಬ್ಬಿಸಿತ್ತು.

ಬಸವಧರ್ಮದ ಪ್ರಕಾರ ಇದೇನೂ ತತ್ತ್ವವಿರೋಧಿ ಕಾರ್ಯವಾಗಿರಲಿಲ್ಲ. ನಾಡಿನ ಧಾರ್ಮಿಕಪರಂಪರೆಯಲ್ಲಿ ಮೊತ್ತಮೊದಲಿಗೆ ಸ್ತ್ರೀಸ್ವಾತಂತ್ರ್ಯದ ಕಹಳೆಯು ಬಸವ ಧರ್ಮದಲ್ಲಿ ಮೊಳಗಿತ್ತು. ಈ ಶತಮಾನಕ್ಕೆ ಮುನ್ನ, ಪರಂಪರೆಯಲ್ಲಿ ಗಾರ್ಗೇಯಿ, ಮೈತ್ರೇಯಿಯಂತಹ ಹಲವಾರು ಪ್ರತಿಭಾವಂತರು ಜ್ಞಾನಮಾರ್ಗದಲ್ಲಿ ಮುಂದೆ ಬಂದಿದ್ದರು. ಅದು ವೈಯಕ್ತಿಕ ಪ್ರಗತಿಯೇ ವಿನಾ ಸ್ತ್ರೀಗೆ ಸಾಮೂಹಿಕ ಅವಕಾಶ ಸಿಕ್ಕಿರಲಿಲ್ಲ. ಆದರೆ ಈಗ ಬಸವಣ್ಣನಿಂದ, ಹುಟ್ಟಿದ ಕೂಸು ಹೆಣ್ಣು ಗಂಡೆಂದು ಗಮನಿಸದೆ ಏಕಪ್ರಕಾರದ ದೀಕ್ಷೆ ನೀಡುವ ಕ್ರಾಂತಿ ಧರ್ಮದಲ್ಲಿ ಆರಂಭವಾಗಿತ್ತು. ಪ್ರಗತಿಪರ ವಿಚಾರವಂತನಾದ ಬುದ್ಧ ಸಹ ಹೆಣ್ಣು ಭಿಕ್ಕುಣಿಯಾದರೆ ಸಾವಿರ ವರುಷ ಬರುವ ಸಂಘಗಳು, ಐದುನೂರು ವರುಷಕ್ಕೆ ಅಂತ್ಯ ಕಾಣುತ್ತವೆ ಎಂದು ಮೊದಮೊದಲಿಗೆ ದೀಕ್ಷೆ ನೀಡಲು ಹಿಂಜರಿದ. ಆದರೆ ಶರಣ ಧರ್ಮವು ಅಸಮಾನತೆಯ ಬೇರನ್ನು ಅಲ್ಲಾಡಿಸಿ, ವಿಚಾರ ವಿಪ್ಲವಕ್ಕೆ ಕಾರಣವಾಗಿತ್ತು. ಇಂತಹ ಕ್ರಾಂತಿಕಾರಿ ಧರ್ಮದ ಅನುಯಾಯಿಗಳಾದ ಓಂಕಾರ-ಲಿಂಗಮ್ಮರು ತಮ್ಮ ಮಗಳ ಆದರ್ಶವನ್ನು ಆತ್ಮಾನಂದದಿಂದ ಒಪ್ಪಿಕೊಂಡು ಪ್ರೋತ್ಸಾಹಿಸಬೇಕಾದುದೇ ತಾತ್ತ್ವಿಕವಾಗಿ ಶ್ಲಾಘನೀಯ. ಓಂಕಾರ ವಿವೇಕಿ; ಅವನು ಒಂದು ವೇಳೆ ಒಪ್ಪಿದರೂ ಲೋಕಜ್ಞಾನವಿಲ್ಲದ, ಮತ್ತು ಅಷ್ಟೊಂದು ಬೌದ್ಧಿಕ ಸಂಸ್ಕಾರವಾಗದ, ಶರಣಧರ್ಮದ ಸತ್ವ ತಿಳಿಯದ ಲಿಂಗಮ್ಮ ಒಪ್ಪುವುದು ಕಷ್ಟದ ಮಾತಾಗಿತ್ತು.

ಗುರುಲಿಂಗರು ತಮ್ಮಲ್ಲೇ ಆಲೋಚನೆ ಮಾಡತೊಡಗಿದರು. ಮಹಾ

ದೇವಿಯ ಬುದ್ಧಿಶಕ್ತಿ, ವಿಮರ್ಶಾಪ್ರಜ್ಞೆ, ವೀರವಿರಕ್ತಿ ಅಸಾಮಾನ್ಯವಾಗಿದ್ದವು. ಸಂಸಾರದಲ್ಲಿ ಆಸಕ್ತಿ ಇಲ್ಲದ ಅವಳನ್ನು ಒತ್ತಾಯದಿಂದ ಸಂಸಾರಕ್ಕೆ ಎಳೆದು, ವಿಕಾಸವಾಗುವ ಆ ಚೇತನಕ್ಕೆ ಸಂಕೋಲೆ ಹಾಕಿ ಪ್ರತಿಭೆಯನ್ನು ಕಮರಿಸುವುದು ಮಾನವಕುಲಕ್ಕೆ ಮಾಡುವ ಅಪಚಾರದ ಕಾರ್ಯ ಎನಿಸುತ್ತಿತ್ತು. ಆದರೆ ತಾವೇನು ಮಾಡಬಹುದು? ಸಂಸಾರ-ವಿರಕ್ತಿಗಳ ಈ ನಾಟಕದಲ್ಲಿ ತಮ್ಮ ಪಾತ್ರ-ಸಂಭಾಷಣೆ ಏನಿರಬೇಕು?

'ನನ್ನ ಮಾತಿನಲ್ಲಿ ದಂಪತಿಗಳಿಗೆ ಭಯ-ಭಕ್ತಿ, ವಿಶ್ವಾಸವಿದೆ. ಆದರೆ ವಿರಕ್ತಿಯ ವಿಚಾರವನ್ನು ನಾನೇ ಮಹಾದೇವಿಯಮೇಲೆ ಹೇರುತ್ತಿರುವೆ ಎಂದು ಲಿಂಗಮ್ಮ ತಪ್ಪು ತಿಳಿಯಲಾರಳೆ? ವಿಚಿತ್ರ ಜನ....ಎಷ್ಟು ಓದಿ, ಏನು ಕೇಳಿದರೂ ವೈಚಾರಿಕಪರಿವರ್ತನೆಗೆ ಒಳಗಾಗರು. ವಿಷಯಪ್ರಪಂಚದ ಬಣ್ಣದ ಬೆಡಗಿನಿಂದ ಪಾರಾಗಿ ದೈವೀಪ್ರಪಂಚಕ್ಕೆ ಸಾವಿರಕ್ಕೊಬ್ಬರು ಬರುವುದಿಲ್ಲ. ಬಂದವರಲ್ಲಿ ಪರಿಪೂರ್ಣತ್ವ ಹೊಂದುವವರು ಸಾವಿರಕ್ಕೊಬ್ಬರು. ಇಂತಹ ಅಪರೂಪ ಪ್ರಪಂಚಕ್ಕೆ ಬರುವ ಮಕ್ಕಳನ್ನು ಎಷ್ಟು ಪರಿಯಿಂದ ತಡೆಯುವರು; ಹಲವಾರು ಕಾರಣಗಳಿಗಾಗಿ, ಕೊರತೆಗಳಿಗಾಗಿ ಮದುವೆಯಾಗದೆ ಮನೆಯಲ್ಲಿರುವ ಹೆಂಗೆಳೆಯರು; ಲಗ್ನವಾಗಿಯೂ, ಮಹಾದೇವಿಯ ಗೆಳತಿ ಶಾರದೆಯಂತೆ ಬಾಲ್ಯವಿಧವೆಯರಾಗಿ, ಸಹಜ ಸುಖದಿಂದ ವಂಚಿತರಾಗುವವರು; ದುಷ್ಟನಾದ, ವಿಲಾಸಿಯಾದ, ಕುಡುಕನಾದಂತಹ ಗಂಡನಿಂದ ಹಿಂಸೆಗೊಳಗಾಗುವ ಮಹಾಲಕ್ಷ್ಮಿಯರಂತಹವರು, ಹೀಗೆ ಎಷ್ಟೋ ಜನ ದುಃಖತಪ್ತರಾಗಿರುವರು. ಇಂತಹ ಮುಗ್ಧ ಹೂವುಗಳು ದುರ್ವಿಧಿಯ ಬೆಂಕಿಯ ಜಳಕ್ಕೆ ಸಿಕ್ಕಿ ಬಾಡಿಹೋಗುತ್ತಿರುವಾಗ, ಅಂಥವರಿಗೆ ಪರಿಹಾರ ಹುಡುಕದೆ, ಶಿವನ ಮುಡಿಗೇರಿ ಸಾರ್ಥಕಗೊಳ್ಳಬೇಕೆಂಬ ಮಹಾದೇವಿಯನ್ನು ಬಿಡಲೊಲ್ಲರು. ಈಕೆಯದು, ಆ ಗೆಳತಿಯರಂತೆ ಸುಖ ದೊರೆಯದುದಕ್ಕಾಗಿ ಅನಿವಾರ್ಯವಾಗಿ ಏಕಾಂಗ ಜೀವನ ನಡೆಸುವ ಅಭಾವ ವೈರಾಗ್ಯವಲ್ಲ; ಸ್ವಇಚ್ಛೆಯಿಂದ, ಆದರ್ಶಸಾಧನೆಗಾಗಿ ಶಿವಕಾಮಿನಿಯಾಗುವ ಸ್ವಭಾವ ವೈರಾಗ್ಯ! ಪರಮಾತ್ಮಾ....ನಿನ್ನ ಸತಿಯನ್ನು ಮೀಸಲಳಿಯದಂತೆ ನಿನ್ನ ಬಳಿಗೆ ಕರೆದುಕೋ ತಂದೆ! ಬಸವೇಶಾ, ನಿನ್ನ ಪ್ರೇಮದ ಪುತ್ರಿಯನ್ನು ಕಲ್ಮಶದ ಸೋಂಕಿಲ್ಲದ ಅಪರಂಜಿಯ ಗಟ್ಟಿಯಾಗಿ ರೂಪಿಸಿರುವೆ. ನಿನ್ನ ಪರುಷಹಸ್ತಕ್ಕೆ ಸಿಕ್ಕಿ ಇದು ಆಭರಣವಾಗುವುದಷ್ಟೇ ಉಳಿದಿದೆ; ನಿನ್ನ ಕುಶಲಹಸ್ತದ ಕಲೆಯಲ್ಲಿ ಶಿವನ ತೊಡಿಗೆಯಾಗುವಂತೆ ಅನುಗ್ರಹಿಸು; ಜಗತ್ತಿಗೆ ಆದರ್ಶ ವಿರಾಗಿಣಿಯನ್ನು ನೀಡಬೇಕೆಂಬ ಈ ಗುರುವಿನ ಸಂಕಲ್ಪವನ್ನು ಹುಸಿಗೊಳಿಸ

ಬೇಡ....' ಹಂಬಲ ತುಂಬಿ ಅಂತರಂಗದಲ್ಲಿ ಪ್ರಾರ್ಥಿಸಿದರು.

'ಒಂದು ದೃಷ್ಟಿಯಿಂದ ನಾನು ನಿರ್ಲಿಪ್ತನಾಗಿ ಉಳಿಯುವುದೇ ಒಳ್ಳಿತು. ಕಷ್ಟ ವಿಘ್ನಗಳ ಕುಲುಮೆಯಲ್ಲಿ ಆಕೆ ತಾನಾಗಿಯೇ ರಸಘಟ್ಟಿಯಾಗಿ ಹೊರಗೆ ಬರಬೇಕು. ಬಿದಿರುಗಳೆಲ್ಲ ಕೊಳಲಾಗವು, ಸೋರೆಯ ಕಾಯಿಗಳೆಲ್ಲ ವೀಣೆಯಾಗವು, ಮಿಡಿಗಳೆಲ್ಲ ಹಣ್ಣಾಗವು, ಆವಿಗೆಯನ್ನು ಹೊಕ್ಕ ಹಸಿ ಮಡಿಕೆಗಳೆಲ್ಲವೂ ಸುಟ್ಟು ಹೊರಬರವು. ಕೊರೆಯಿಸಿಕೊಳ್ಳಲಿಕ್ಕೆ ಗಟ್ಟಿಯಾದುದಷ್ಟೇ ಕೊಳಲಾಗಿ ಹಾಡುವುದು. ಗಾಳಿ, ಮಳೆಯ ಹೊಡೆತದಲ್ಲಿ ಪಾರಾದ ಮಿಡಿಯಷ್ಟೇ ಹಣ್ಣಾಗುವುದು. ನಿಂದೆಗಳು, ಕಷ್ಟಗಳು ಈ ಎಲ್ಲ ಏಟಿಗೂ ಬಗ್ಗದ ಬದುಕಷ್ಟೇ ವೈರಾಗ್ಯಮಾರ್ಗದಲ್ಲಿ ಸಲ್ಲುವುದು.

ವೈರಾಗ್ಯವು ಹೊರಗಿನಿಂದ ತುಂಬಿದರೆ ಬರುವಂತಹುದಲ್ಲ, ಒಳಗಿನಿಂದ ಪುಟಿಯಬೇಕಾದುದು. ಕಸುಕಾಯಿಯನ್ನು ಒತ್ತಿ ಹಿಸುಕಿ ಹಣ್ಣುಮಾಡಿದರೆ ರುಚಿಕರವಾಗದು. ಅದು ತಾನಾಗಿ ಮಾಗಬೇಕಷ್ಟೆ. ಆದರಿಷ್ಟೇ, ತೋಟಗಾರನು ಅದು ಮಿಡಿಯಿದ್ದಾಗ ಸಾಧ್ಯವಾದಷ್ಟೂ ಎಚ್ಚರಿಕೆಯಿಂದ ರಕ್ಷಿಸಬೇಕು. ಹೊರಗಿನ ಒತ್ತಡವನ್ನು ಎದುರಿಸುವ ಶಕ್ತಿ ಈ ವಯಸ್ಸಿಗೆ ಮಹಾದೇವಿಗೆ ಬಂದಾಗಿದೆ. ಇನ್ನು ಮುಂಬಾಳ ಪಥವನ್ನು ಆಕೆಯೇ ನಿರ್ಧರಿಸಿಕೊಳ್ಳಲಿ....' ನಿಶ್ಚಯಿಸಿಕೊಂಡ ಗುರುಲಿಂಗದೇವರು ಮೇಲೆದ್ದು, ದೊಡ್ಡ ಹೆಜ್ಜೆಗಳನ್ನು ಹಾಕುತ್ತ ಮಠದ ಪ್ರಾಂಗಣಕ್ಕೆ ಬಂದರು.

ತಮ್ಮ ವೇದಿಕೆಯ ಮೇಲೆ ಕುಳಿತುಕೊಳ್ಳುವಷ್ಟರಲ್ಲಿ ಓಂಕಾರನು, ಶಿವಪುತ್ರಪ್ಪನೊಡನೆ ಬಂದು ನಮಸ್ಕರಿಸಿದ. ಮಹಾದೇವಿಯೂ ಶೈಲಜೆಯೊಡನೆ ಮಠದ ದ್ವಾರವನ್ನು ಪ್ರವೇಶಿಸುವುದು ಕಂಡಿತು. ಗೆಳತಿಯರೀರ್ವರು ಗುರುಗಳಿಗೆ ನಮಸ್ಕರಿಸಿ ಕುಳಿತರು. ಸುತ್ತಲೂ ಗಂಭೀರ ಮೌನ ಆವರಿಸಿತು. ಮಾತು ಆರಂಭವಾಗಲೆಂಬ ಬಯಕೆ ಎಲ್ಲರಿಗೆ ಇದ್ದರೂ, ಪ್ರಾರಂಭಿಸುವ ಧೈರ್ಯ ಯಾರಿಗೂ ಬರದಾಗಿತ್ತು.

'ಎಲ್ಲರೂ ಬಂದಾಯಿತಲ್ಲವೇ ಲಿಂಗಮ್ಮ....' ಗುರುಗಳು ಪೀಠಿಕೆ ಹಾಕಿದರು.

'ಗುರುದೇವಾ, ನನಗೆ ಅರಿಯದುದು ಯಾವುದೂ ಇಲ್ಲ. ಲೋಕದಲ್ಲಿ ಬದುಕಬೇಕಾದವರು ಲೋಕದ ಕಟ್ಟುಪಾಡುಗಳಿಗೆ ಒಳಪಡಬೇಕಷ್ಟೆ....'

'ಆದರೆ ಗುರುಗಳೇ....ಎಲ್ಲವೂ ಪ್ರಾಣಿಗಳೆಂದು ಮೀನು, ಹಸು, ಗುಬ್ಬಿ ಎಲ್ಲವನ್ನು ನೀರಿನಲ್ಲಿಡಲು ಬರದು. ವೃತ್ತಿ, ಸ್ವಭಾವಕ್ಕನುಸರಿಸಿ ಬೇರೆಬೇರೆ ಕಟ್ಟುಪಾಡು ಅವಶ್ಯಕ....' ಮಹಾದೇವಿ ಮಧ್ಯದಲ್ಲಿ ಬಾಯಿಹಾಕಿದಳು.

'ಬನವಾಸಿಯ ಶೆಟ್ಟರೊಬ್ಬರಿಗೆ ಏಕೈಕ ಪುತ್ರನಂತೆ. ಲಕ್ಷ್ಮಿ-ಸರಸ್ವತಿಯು ರೊಂದಾಗಿ ನೆಲಸಿದ್ದಾರೆ ಅವರ ಮನೆಯಲ್ಲಿ. ಇಂಥ ವರನಿಗೆ ಕೊಟ್ಟು ಮದುವೆ ಮಾಡೋಣ ಎಂದು ನಮ್ಮಾಸೆ....'

'ಒಳ್ಳೆಯ ವಿಚಾರ....' ಗುರುಗಳು ಗಂಭೀರವಾಗಿ ನುಡಿದರು.

'ಮದುವೆಯ ವಯಸ್ಸಾಗಿ ಸಾಕಷ್ಟು ವರ್ಷಗಳಾದವು. ನಮ್ಮ ಕರ್ತವ್ಯ ವನ್ನು ನಾವು ಪೂರೈಸಲೇಬೇಕು. ಇನ್ನೂ ತಡೆಯಿರಿ ಎಂದರೆ ಯಾರಿಗೆ ಸಾಧ್ಯ ?'

'ಸರಿ, ಇಷ್ಟು ದಿನ ತಡೆದುದೇ ಬಹಳ ಸಾಹಸ....' ಗುರುಗಳು ನುಡಿದಾಗ ಮಹಾದೇವಿ ಚಕಿತಳಾಗಿ ಅವರ ಮುಖವನ್ನು ದಿಟ್ಟಿಸಿದಳು ; ಮನೋಭಾವನೆ ಯನ್ನರಿಯಲು ಅಸಮರ್ಥಳಾದಳು, ಅಷ್ಟು ನಿರ್ಲಿಪ್ತವಾಗಿತ್ತು ಆ ಮುಖ.

'ಅಹುದು ಮಹಾದೇವಿ, ಬೆಳೆದ ಮಗಳ ಭವಿಷ್ಯ ಬದುಕಿನ ಚಿಂತನೆ ತಾಯಿತಂದೆಯರು ಮಾಡಲೇಬೇಕಷ್ಟೆ! ಅವರಿಗೆ ನಿನ್ನ ಒಪ್ಪಿಗೆ ನೀಡಮ್ಮ....'

'ಸತ್ತ ಹಾವನ್ನು ಬಡಿಯುವ ಇವರ ವ್ಯರ್ಥ ಪ್ರಯತ್ನ ಕಂಡು ಯಾವ ಪ್ರತಿಕ್ರಿಯೆ ವ್ಯಕ್ತಪಡಿಸಬೇಕೋ ತಿಳಿಯದಂತಾಗಿದೆ ಗುರುಗಳೇ....'

'ಏಕೆ....?'

'ಮದುವೆಗೆ ನಾನೊಪ್ಪೆನು ಎಂದು ಆಗಲೇ ತಿಳಿಸಿಯಾಗಿದೆ....'

'ಅಂದರೆ....?'

'ಯಾರಾದರೂ ಎರಡು ಬಾರಿ ಲಗ್ನವನ್ನು ಮಾಡಿಕೊಳ್ಳುವುದುಂಟೇ ಗುರುಗಳೇ ? ಗಂಡನಿದ್ದೂ ಪರಪುರುಷನನ್ನು ಕೂಡುವವಳನ್ನು ನೀತಿಗೆಟ್ಟವಳು ಎನ್ನರೇ....?'

'ಅಹುದು....'

'ಚನ್ನಮಲ್ಲಿಕಾರ್ಜುನನೆಂಬ ಆತ್ಮಸಂಗಾತಿಯನ್ನು ಇರಿಸಿಕೊಂಡು, ಮತ್ತೊಬ್ಬ ಮಾಂಸಶರೀರಿಯಾದ ಪುರುಷನನ್ನು ಬಯಸಲೇ ? ಅಸಂಭವ. ಎರದ ಮುಳ್ಳಿನಂತೆ ಪರಗಂಡರು! ಅವರನ್ನು ಸೋಂಕಲಾರೆ, ಸಮೀಪ ಸುಳಿಯಲಾರೆ, ನಂಬಿ ನಚ್ಚಿ ಮಾತಾಡಲಾರೆ. ಚನ್ನಮಲ್ಲಿಕಾರ್ಜುನನಲ್ಲದ ಗಂಡರಲ್ಲಿ ಭವದ ಮುಳ್ಳುಂಟು. ಅದು ಅಪ್ಪಿದವರನ್ನು ಚುಚ್ಚುವುದು* ನಾನು ದೇವನ ಮೀಸಲ ಸತಿ ಗುರುಗಳೇ....' ಸ್ಪಷ್ಟ ಧ್ವನಿಯಲ್ಲಿ ಹೇಳಿದಳು.

'ಶಾಸ್ತ್ರದ, ಆಧ್ಯಾತ್ಮದ ದೃಷ್ಟಿಯಲ್ಲಿ ಲಿಂಗವೇ ಪತಿ-ಶರಣಸತಿ ಎಂಬುದು ಸಹಜ. ಆದರೆ ಲೌಕಿಕದಲ್ಲಿ ಹಾಗೆ ಅಂದವರುಂಟೇ ? ಯಾವುದಕ್ಕೆ ಯಾವ

---

* ಮ. ವ. ೨೧೫

ಸ್ಥಾನವೋ ಅಷ್ಟೇ ಕೊಡಬೇಕು. ಸಾರಿನ ರುಚಿ ನೋಡಲಿಕ್ಕೆ ನಾಲಿಗೆ ಬೇಕು. ಬಹಳ ರುಚಿ ಅಂತ ಕಣ್ಣಿನಲ್ಲಿ ಹಾಕಿಕೊಳ್ಳಲಾಗುವುದಿಲ್ಲ....' ಲಿಂಗಮ್ಮನು ಹೇಳಿದಳು.

'ಇಹ-ಪರ, ಲೌಕಿಕ-ಪಾರಮಾರ್ಥಗಳಲ್ಲಿ ಬಹಳ ಅಂತರ ಇರದೆ, ಎರಡೊಂದಾಗುವುದೇ ನಿಜವಾದ ಆಧ್ಯಾತ್ಮಿಕತೆ. ಇಹದ ಇರುವಿಕೆಯ ರಕ್ಷಣೆಗೆ ಒಬ್ಬನು, ಪರದ ಮುಕ್ತಿಗಾಗಿ ಮತ್ತೊಬ್ಬನು ; ಎಂತಹ ವಿಪರ್ಯಾಸ! ಪಾರಮಾರ್ಥಿಕ ಪತಿ ರಕ್ಷಣೆಯನ್ನು ಕೊಡಲಾರನೆ ! ಅರಿದ ಅರಿವು ಆಚರಣೆಗೆ ಬರದಿದ್ದರೆ ಪ್ರಯೋಜನವೇನು ? ದೇವರು ಸರ್ವರಕ್ಷಕ, ಸರ್ವಶಕ್ತ ಎಂದು ನಂಬಿಯೂ ಪೂರ್ಣ ವಿಶ್ವಾಸವಿಲ್ಲದೆ ಲೌಕಿಕಪತಿಯಿಂದ ರಕ್ಷಣೆ ಬಯಸುವುದು ಹಾಸ್ಯಾಸ್ಪದ.'

ನಡೆಯದ ನುಡಿಗಡಣ, ಮಾಡದ ಕಲಿತನ, ಚಿತ್ರದ ಸತಿಯ ಶೃಂಗಾರ ಏತಕ್ಕೂ ಪ್ರಯೋಜನವಿಲ್ಲ. ನಡೆಯಿಲ್ಲದ ನುಡಿಯೆಂದರೆ ಎಲೆಯಿಲ್ಲದ ಮರದಂತೆ, ಜಲವಿಲ್ಲದ ನದಿಯಂತೆ...."* ಮಹಾದೇವಿ ಉತ್ತರಿಸಿದಳು.

'ಇದು ಆವೇಶದ ಮಾತು....! ಉದ್ವೇಗ, ಆವೇಶಗಳ ಬಲದಮೇಲೆ ನಿಂತ ಜೀವನ ಉಸುಕಿನ ಬುನಾದಿಯಮೇಲೆ ಕಟ್ಟಲ್ಪಡುವ ಭವನ ತಾಯಿ ; ಇನ್ನೊಮ್ಮೆ ಪರಾಮರ್ಶಿಸಿ ನೋಡು ; ದುಡುಕಿ ಪಶ್ಚಾತ್ತಾಪ ಪಡಬೇಡ. ಉಕ್ಕಿದ ಹಾಲು ಹಾಗೆಯೇ ನಿಲ್ಲದು ; ಹುಲ್ಲಿನ ಬೆಂಕಿ ಹಾಗೇ ಉರಿಯದು....' ಗುರುಗಳು ತೂಗಿತೂಗಿ ಮಾತನಾಡಿದರು.

'ಗುರುಗಳೇ, ಆವೇಶದ ನಿರ್ಧಾರವಿದಲ್ಲ, ಆತ್ಮವಿಶ್ವಾಸದ ನಿರ್ಧಾರವಿದು! ದುಡುಕಿನ ಪರಿಣಾಮವಲ್ಲ, ಅಂತರಂಗದ ಮಥನದ ಪರಿಣಾಮ. ಹುಲ್ಲಿನ ಬೆಂಕಿಯಂತಲ್ಲ, ಕಬ್ಬಿಣದ ಕಾವಿನಂತೆ.'

'ಮಾನವನಿಗೆ ಆಸೆಯೊಂದಿದ್ದರೆ ಸಾಲದು, ಸಾಧಿಸುವ ಶಕ್ತಿಯೂ ಬೇಕು. ಮಾಮರದಲ್ಲಿ ತಳಿತ ಮಿಡಿಗಳೆಲ್ಲ ಫಲಗಳಾಗವು, ಸಾಧಕರೆಲ್ಲ ಸಿದ್ಧಪುರುಷರಾಗರು. ಹೆಜ್ಜೆ ಇಕ್ಕುವ ಮುನ್ನ ಹತ್ತು ಬಾರಿ ಚಿಂತಿಸಬೇಕು...." ಗುರುಲಿಂಗ ದೇವರು ನುಡಿದರು.

'ನಿಜ ಗುರುದೇವಾ ; ಮುತ್ತು ನೀರಲ್ಲಾಗುವುದು, ವಾರಿಕಲ್ಲು ನೀರಲ್ಲಾಗುವುದು, ಉಪ್ಪು ನೀರಲ್ಲಾಗುವುದು, ವಾರಿಕಲ್ಲು ಬೇಗನೆ ಕರಗುವುದು. ಉಪ್ಪು ಸಹ ಕರಗುವುದು ; ಆದರೆ ಗಟ್ಟಿಗೊಂಡ ಮುತ್ತು ಕರಗದು. ಅರಿಯದೆ ಹೊರಟ ಸಾಧಕರು ಹಿಮ್ಮೆಟ್ಟಬಹುದು ; ಅರಿತು ಹೆಜ್ಜೆ ಹಾಕಿ

* ಮ. ವ. ೧೨೯

ದವರು ಹಿಮ್ಮೆಟ್ಟರು. ನನ್ನ ದೃಢತೆ ಮುತ್ತಿನಂತೆಯೇ ಹೊರತು, ಉಪ್ಪು-ಆಲಿಕಲ್ಲುಗಳಂತಲ್ಲ.*

ತುಂಬಿದ ಕೊಡ ತುಳುಕದು, ನಂಬಿದ ಹೃದಯ ಸಂದೇಹಿಸದು, ಶಿವನಡಿಗೆ ಒಲಿದ ಚಿತ್ತ ಓಸರಿಸದು. ಅವನ ಇರುವಿನೊಡನೆ ಬೆರೆಸಿದುದು ಬೇರಾಗದು.... ಇದು ನನ್ನ ನಿರ್ಧಾರ....'†

'ಹೆಣ್ಣುಮಗಳು ಪತಿಯ ಆಶ್ರಯವಿಲ್ಲದೆ ಬದುಕುವುದು ಕಷ್ಟ. ನಾವಿರುವ ತನಕ ಹೇಗೋ ಆದೀತು; ನಾವು ಸುಡುಗಾಡ ಯಾತ್ರೆ ಕೈಗೊಂಡರೆ ಈಕೆಯನ್ನು ರಕ್ಷಿಸುವವರು ಯಾರು....?' ಲಿಂಗಮ್ಮ ಸೆರಗಿನ ತುದಿಯಿಂದ ಕಣ್ಣೊರೆಸಿಕೊಂಡಳು.

'ಜಗತ್ತಿನ ರಕ್ಷಣೆಯ ಭಾರವನ್ನು ಹೊತ್ತ ದೇವನು ನನ್ನ ರಕ್ಷಣೆ ಮಾಡಲಾರನೆ ಅವ್ವಾ....? ಬಳ್ಳಿಗೆ ಕಾಯಿ ಎಂದೂ ಭಾರವಾಗದು....'

'ಲೋಕದ ವ್ಯವಹಾರ ಈ ಹಸುಳೆಗೆ ಏನು ಗೊತ್ತು ಗುರುಗಳೇ....? ಉಂಡು ಬದುಕುವುದೇ ಬದುಕಲ್ಲ. ನನ್ನದೆನ್ನುವ ಜೀವವಿಲ್ಲದೆ, ಏಕಾಂಗಿನಿಯಾಗಿ ಈ ಕ್ರೂರಪ್ರಪಂಚದಲ್ಲಿ ಬದುಕುವುದು ಕಷ್ಟಕರ. ಹೆಣ್ತನದ ಬಯಕೆ, ತಾಯ್ತನದ ಬಯಕೆ ತೃಪ್ತಿಗೊಳ್ಳಬೇಡವೇ....?'

'ಅವ್ವಾ, ನನ್ನ ಮಾತನ್ನು ಅಸಹ್ಯವಾದವು, ಕೆಳಮಟ್ಟದವು ಎಂದು ತಿಳಿಯಬೇಡ; ನಿಷ್ಠುರವಾಗಿ ಹೇಳುವೆ. ನಾನು ನಿಜವಾಗಿಯೂ ಹೆಣ್ಣಲ್ಲ. ತೋರಲು ಹೆಣ್ಣು, ಮಾನಸಿಕ ಸ್ಥಿತಿಯಲ್ಲಿ ಗಂಡು. ಆದರೆ ಸೂಳೆಯಂತೂ ನಿಶ್ಚಿತವಾಗಿ ಅಲ್ಲ....; ಈಗಾಗಲೇ ನನಗೆ ಇರುವ ಗಂಡನ ಮೇಲೆ ಇನ್ನೊಬ್ಬ ಗಂಡನನ್ನು ಮಾಡಿಕೊಳ್ಳಲು....! ಆ ಬದುಕನ್ನು ನನಗೆ ಹೇಳಬೇಡ....' ನಿಷ್ಠುರವಾದ ಧ್ವನಿಯಲ್ಲಿ ನುಡಿದಳು ಮಹಾದೇವಿ.

'ಕಲಿಸಿದ್ದೇ ತಪ್ಪಾಯಿತು. ಗಂಡು ಹುಡುಗರಂತೆ ಸಾಲೆಗೆ ಕಳಿಸಬಾರದಿತ್ತು. ಅದಕ್ಕೇ ಈ ವಿತಂಡವಾದ; ಹೆಣ್ಣಿಗೆ ಸಲ್ಲದ ಉದ್ಧಟತನ....' ಲಿಂಗಮ್ಮ ಕೆರಳಿದಳು.

'ಹೆಣ್ಣು....ಹೆಣ್ಣು! ಹೆಣ್ಣುಮಗಳಿಗೆ ಮಾತನಾಡಲು ಸಹ ಅವಕಾಶ ಇಲ್ಲವೆ? ಹೆಣ್ಣುಮಕ್ಕಳು ಹುಟ್ಟಿದ ತಕ್ಷಣವೇ ನಾಲಿಗೆ ಕಿತ್ತುಬಿಟ್ಟರೆ ಒಳ್ಳೆಯದು. ಮುಂದೆ ಮಾತನಾಡುವ ಪ್ರಮೇಯವೇ ಬರದು.

ತನ್ನ ವಿಚಾರವನ್ನು ಕಾರ್ಯಗತ ಮಾಡಲು, ಸ್ವಂತ ಬಾಳನ್ನು ರೂಪಿಸಿ

---

* ಮ. ವ. ೩೩೪

† ಮ. ವ. ೨೪೩

ಕೊಳ್ಳಲು ಸಹ ಆಕೆಗೆ ಅವಕಾಶವಿಲ್ಲವೆ? ಈ ಮೌಢ್ಯತೆ ಸಮಾಜಕ್ಕೆ ತಗುಲಿದ ಕುಷ್ಠರೋಗ....'

'ಮದುವೆ—ಸಂಸಾರ ಎಂದರೆ ಅರ್ಥವಿಲ್ಲದ ಭಯ, ತಿರಸ್ಕಾರ ಕಲ್ಪಿಸಿಕೊಂಡಿರುವೆ ಮಹಾದೇವಿ, ಇದು ಅಜ್ಞಾನವೇ....' ಲಿಂಗಮ್ಮ ಹೇಳಿದಳು.

'ಇದೊಂದು ಸಮುದ್ರ ಕಣವ್ವ. ಪಾಪ-ಪುಣ್ಯಗಳೆಂಬ ಅಲೆಗಳಿಂದ ಭೋರ್ಗರೆದು ಮೊರೆವ ಸಮುದ್ರ. ಇದರ ಗುಣ ಕಾಲನ್ನು ಜರುಗಿಸಿ ಒಳಗೆಳೆದುಕೊಂಡು ಕಬಳಿಸುವುದು. ಬಸವಣ್ಣನಂತಹ ಬಲವಾನರಷ್ಟೇ ಈಸಬಲ್ಲರು ಇದರಲ್ಲಿ....'

'ಆದರೆ ಈ ಜಗತ್ತಿನಲ್ಲಿ ಬದುಕುವುದು ಎಷ್ಟು ಕಷ್ಟ ಗೊತ್ತೆ? ಮದುವೆಯಾಗಿ ಆಧ್ಯಾತ್ಮ ಜೀವನ ನಡೆಸುವುದು ಸುರಕ್ಷಿತ ರಾಜಮಾರ್ಗ; ವಿರಕ್ತಿಯ ಏಕಾಂಗ ಜೀವನ ಕಡಿದಾದ, ದುರ್ಗಮವಾದ ಬೆಟ್ಟದ ಹಾದಿ....'

'ಗುರಿ ಮುಟ್ಟಲು ಅದೊಂದೇ ಹಾದಿ ಇದ್ದರೆ ಬೆಟ್ಟದ ಕಡಿದಾದ, ದುರ್ಗಮ ಹಾದಿಯೇ ಲೇಸು. ಹಳ್ಳಕ್ಕೆ ಒಯ್ಯುವ ರಾಜಮಾರ್ಗ ಉಪಯುಕ್ತವಾಗದು....'

'ಅನನುಭವಿಯಾದ ನೀನು ಲೋಕದ ಕಾಠಿಣ್ಯವನ್ನು ಅರಿಯೆ ಮಗಳೆ! ಏಕಾಕಿಗಳಾಗಿ, ವಿರಕ್ತರಾಗಿ ಬದುಕುವವರಮೇಲೆ ಲೋಕವು ತೀಕ್ಷ್ಣವಾದ ಕಣ್ಣಿಡುವುದು. ನಾನು ಅಡಿಗೆ ಮಾಡುವಾಗ ಕರಿಯ ಚಂದ್ರಕಾಳಿ ಸೀರೆಯನ್ನುಡುವೆನೇ ಹೊರತು ಅಚ್ಚ ಬಿಳಿಯ ದೇವಾಂಗವನ್ನಲ್ಲ. ಚಂದ್ರಕಾಳಿ ಸೀರೆಯ ಮೇಲೆ ಕೊಳೆ ಕುಳಿತರೆ ಅದು ಕೊಳೆಯನ್ನು ಅಡಗಿಸಿಕೊಳ್ಳಬಲ್ಲದು. ಆದರೆ ಬಿಳಿಯ ಸೀರೆಯು ತನ್ನ ಮೇಲೆ ಒಂದು ಸಣ್ಣ ಚುಕ್ಕೆ ಮೂಡಿದರೂ ಅಡಗಿಸಿಕೊಳ್ಳಲಾರದು. ಹಾಗೆಯೇ ವೈರಾಗ್ಯಮಾರ್ಗ ಬಹು ಸೂಕ್ಷ್ಮ.'

'ಅಚ್ಚ ಬಿಳಿಯ ಸೀರೆಯನ್ನು ನಿರ್ಮಲವಾಗಿ ರಕ್ಷಿಸಿಕೊಳ್ಳುವ ಆತ್ಮವಿಶ್ವಾಸ, ಜಾಣ್ಮೆ ಇದ್ದವರು ಅದನ್ನುಡುವುದೇ ಮೇಲು. ಚಂದ್ರಕಾಳಿ ಸೀರೆಗಿಂತಲೂ ಬಿಳಿಯ ದೇವಾಂಗ ಸೌಂದರ್ಯವನ್ನು ಹೆಚ್ಚಿಸುವದು....'

'ತಾನು ಪವಿತ್ರವಾಗಿರಬಹುದು. ವೈರಾಗ್ಯದ ಖನಿ ಇರಬಹುದು. ಆದರೆ ದೋಷೈಕ ದೃಷ್ಟಿಕೋನದ ಜಗತ್ತು ನಿಂದಿಸುವುದರಲ್ಲಿ ಪ್ರಾವೀಣ್ಯತೆ ಸಾಧಿಸಿರುವುದವ್ವಾ....'

ಲಿಂಗಮ್ಮ, ಮಗಳಿಗೆ ಹೇಳುತ್ತಲೇ ಗುರುಗಳ ಕಡೆಗೆ ತಿರುಗಿದಳು ಅವರನ್ನು ಕುರಿತು ಹೇಳಿದಳು:

'ಗುರುಗಳೇ, ಹೆತ್ತವರು ಸಹಿಸಬೇಕಾದ ನೋವಿನ ಅರಿವು ಈಕೆಗೇನಿದೆ!

ಕಲಂಕವಿಲ್ಲದ, ಅಪರಂಜಿಯಂತಹ ಬದುಕನ್ನು ಮಹಾದೇವಿ ಬದುಕುತ್ತಿದ್ದರೂ ಎಂತೆಂತಹ ಮಾತನ್ನು ಜನರು ಆಡುತ್ತಿದ್ದಾರೆ. ಮದುವೆಯಾಗದೆ ಉಳಿದುದಕ್ಕೆ ವಿಚಿತ್ರ ಕಾರಣಗಳನ್ನು ಹುಟ್ಟಿಸುತ್ತಿದ್ದಾರೆ; ಸಲ್ಲದ ಗುಲ್ಲೆಬ್ಬಿಸಿದ್ದಾರೆ. ದೆವ್ವ ಬಡಿದಿವೆ ಎಂದು, ಹುಚ್ಚು ಹಿಡಿದಿದೆಯೆಂದು, ಯಾರಿಗಾದರೂ ಮನಸೋತಿರ ಬೇಕೆಂದು ಅಲ್ಲದ ಸಲ್ಲದ ಮಾತನ್ನು ಆಡತೊಡಗಿದ್ದಾರೆ. ಇಂಥ ಮಾತು ಗಳನ್ನು ಹಡೆದ ಯಾವ ಹೊಟ್ಟೆ ತಾನೆ ಸೈರಿಸೀತು....ಥೂ, ಅವರ ಮನೆ ಹಾಳಾಗಲಿ; ಆ ಸಿಂಗಾರವ್ವ ಅಪಪ್ರಚಾರದ ಮೂಲಹೇತು; ಆ ಸಂಗಮ್ಮನ ನಾಲಿಗೆಗೆ ಬೆಂಕಿ ಬೀಳಲಿ....' ಲಿಂಗಮ್ಮ ಸೆರಗಿನಿಂದ ದಳದಳನೆ ಸುರಿಯುತ್ತಿದ್ದ ಕಣ್ಣೀರನ್ನು ಒರೆಸಿಕೊಂಡಳು.

'ಗುರುಗಳೇ, ಬೆಟ್ಟದ ಮೇಲೆ ಮನೆಯ ಮಾಡಿದ ಬಳಿಕ ಮೃಗಗಳಿಗೆ ಅಂಜಿದರಾದೀತೆ? ಸಮುದ್ರದ ದಡದಲ್ಲಿ ಮನೆಯನ್ನು ಕಟ್ಟಿ ನೊರೆತೆರೆಗಳು ಭಯಾನಕ ಎಂಬುದು ಸರಿಯೆ? ಸಂತೆಯ ಮಧ್ಯದಲ್ಲಿ ಮನೆಯನ್ನು ಮಾಡಿ ಶಬ್ದಕ್ಕೆ ಹೆದರಿದರೆ ಸಮಂಜಸವೆ? ಬೆಟ್ಟಕ್ಕೂ—ಕಾಡುಮೃಗಗಳಿಗೂ ಬಿಡ ಲಾರದ ಸಂಬಂಧ; ಸಮುದ್ರಕ್ಕೂ—ನೊರೆತೆರೆಗೂ ಅವಿನಾಭಾವ ಸಂಬಂಧ. ಸಂತೆಗೆ—ಗದ್ದಲಕ್ಕೆ ಅವಶ್ಯಕ ನಂಟು. ಹಾಗೆಯೇ ಲೌಕಿಕರ ಗುಣವೆಂದರೆ ನಿಂದೆ ಮಾಡುವುದು. ಜಾಣರಾದವರು ಅಂತಹ ವಿಷಮಸ್ಥಾನಗಳಲ್ಲಿ ಮನೆ ಯನ್ನು ಕಟ್ಟಬಾರದು. ಇಲ್ಲವೇ ಕಟ್ಟಿದ ಬಳಿಕ ಅಂಥಲ್ಲಿ ವಾಸಿಸುವ ಸಂಯಮ-ಸಹನೆಯನ್ನು ಬೆಳೆಸಿಕೊಳ್ಳಬೇಕು.* ಆದ್ದರಿಂದಲೇ ಜ್ಞಾನಿಗಳಾ ದವರು ಇಂತಹ ಲೋಕದಲ್ಲಿ ಪುಣ್ಯ-ಪಾಪಗಳ ಮನೆಯನ್ನು ಕಟ್ಟಿ ವಾಸ ಮಾಡುವ ಅವಕಾಶವನ್ನೇ ಹೊಡೆದು ಹಾಕಬೇಕು. ಇಲ್ಲವೇ ಕಟ್ಟಿಕೊಂಡ ಮೇಲೆ ವಾತಾವರಣದ ಒತ್ತಡವನ್ನು ಸಹಿಸಿಕೊಳ್ಳಬೇಕು. ಏರಿಳಿತಗಳು ಅನಿವಾರ್ಯವಾಗಿ ಇರುವ ಸಮುದ್ರದಂತೆ, ಬದುಕಿನಲ್ಲಿ ಸ್ತುತಿ-ನಿಂದೆಗಳು ಬರುತ್ತವೆ. ಇವುಗಳನ್ನು ಸಮಚಿತ್ತದಿಂದ ಎದುರಿಸಬೇಕು. ಕೋಪದಿಂದ ಕೆಡುನುಡಿಯನ್ನು ಆಡಬಾರದು ಕಣವ್ವಾ!

ಉಪಕಾರವನ್ನು ಮಾಡಿದವರಿಗೆ ಉಪಕಾರ ಮಾಡುವುದು ದೊಡ್ಡದಲ್ಲ. ಅಪಕಾರ ಮಾಡಿದವರಿಗೆ ಸಹ ಉಪಕಾರ ಮಾಡಬೇಕು. ನಿಂದಕರು ನಿಮ್ಮ ಪರಮ ಬಂಧುಗಳೆಂದು ತಿಳಿಯಬೇಕು, ಏಕೆಂದರೆ ನಾವು ಎಡವದಂತೆ ಜಾಗೃತರಾಗಿರಲು ಅವರು ಅವಕಾಶ ಒದಗಿಸುವರು....!'

'ನಿಜ ಮಗಳೇ....ಆದರೆ ನಿಂದೆ ಬಂದಾಗ ಕೋಪವ ತಾಳದೆ ಸಮಾಧಾನಿ

* ಮ. ವ. ೧೩೪

ಗಳಾಗಿರುವುದಕ್ಕಿಂತ, ನಿಂದೆ ಬರದಂತೆ ಬಾಳುವುದು ಒಳ್ಳಿತಲ್ಲವೇ? ರೋಗ ಬಂದಮೇಲೆ ಸಹಿಸಿಕೊಳ್ಳುವುದಕ್ಕಿಂತ, ಬರದಂತೆ ನೋಡಿಕೊಳ್ಳುವುದು ಜಾಣತನ. ಲೋಕವಿರೋಧಿ ನಡೆಯನ್ನು ಬಿಟ್ಟು ಲೋಕಸಹಜ ನಡೆಯಿಂದಿರುವುದು ಒಳ್ಳೆಯದು....'

'ಲೋಕದ ಮೆಚ್ಚುಗೆಗಾಗಿ ನಮ್ಮ ಬಾಳು ಇರಬಾರದು ತಾಯಿ; ಶಿವನ ಮೆಚ್ಚುಗೆಗಾಗಿ ಇರಬೇಕು. ಮತ್ತೆಮತ್ತೆ ಭವಚಕ್ರದಲ್ಲಿ ಸುತ್ತು ಹೊಡೆಯುವಾಗ ಸ್ತುತಿಸಿದ ಲೋಕ ಬಿಡುಗಡೆ ಮಾಡಲು ಬರದು. ಸತ್ಯಪ್ರಿಯರು, ತತ್ತ್ವನಿಷ್ಠರು ಕಾಲಾನಂತರ ಲೋಕಪ್ರಿಯರಾದರೂ ತಾತ್ಕಾಲಿಕವಾಗಿ ಲೋಕವಿರೋಧಿಗಳಾಗಿರುವುದು ಬಹು ಸಹಜ; ಸತ್ತ ಮೀನಾಗಿ ನೀರಿನ ಪ್ರವಾಹದ ಗುಂಟ ಕೊಚ್ಚಿಕೊಂಡು ಹೋಗುವುದಕ್ಕಿಂತ ಜೀವಂತ ಮೀನಾಗಿ ಗುರಿ ಮುಟ್ಟಬೇಕು....'

ಮಹಾದೇವಿ ದೃಢವಾಗಿ ನುಡಿದಳು. ಲಿಂಗಮ್ಮನ ಸಹನೆ ಸೀಮೆ ತಪ್ಪಿತು.

'ಗುರುಗಳೇ, ಹೆತ್ತು ಹೊತ್ತು ಬೆಳೆಸಿ ಪೋಷಿಸಿದ್ದಕ್ಕಾಗಿಯೂ ಬೆಲೆ ಕೊಡಬಾರದೆ? ತಂದೆ ತಾಯಿಗಳು, ಗುರುಗಳು ದೇವರ ಸಮಾನ ಎಂದು ಧರ್ಮಶಾಸ್ತ್ರಗಳು ಸಾರಿಸಾರಿ ಹೇಳುತ್ತವೆ....ಜೀವಂತ ದೇವರುಗಳ ಮಾತು ಕೇಳದೆ ಕಾಣದ ದೇವರಿಗೆ ಕೈಚಾಚುವುದು ಯಾವ ಆಧ್ಯಾತ್ಮ....?'

'ಅವ್ವಾ; ತಾಯಿ ತಂದೆ ಗುರುಗಳು ದೇವರ ಸಮಾನ, ದೇವರೇ ಅಲ್ಲ. ತಾಯಿ ತಂದೆ ಗುರು ಗಂಡ ದೇವರಂತೆ ಎನ್ನುವುದು ನೀತಿ, ದೇವರೇ ನಮ್ಮ ತಾಯಿ ತಂದೆ ಗಂಡ ಗುರು ಎನ್ನುವುದು ಆಧ್ಯಾತ್ಮ. ನೀತಿಯಿಂದ ಐಹಿಕಸುಖ, ಆಧ್ಯಾತ್ಮದಿಂದ ಪಾರಮಾರ್ಥಿಕ ಶಾಂತಿ. ಗೃಹಸ್ಥನಿಗೆ ನೀತಿವಂತಿಕೆಯೇ ಆದರ್ಶ, ಆದರೆ ವಿರಕ್ತನಿಗೆ ಪಾರಮಾರ್ಥಿಕತೆಯೇ ಅನುಕರಣೀಯ....'

'ಹಾಗಾದರೆ ನಿನ್ನ ದೃಷ್ಟಿಯಲ್ಲಿ ಹೆತ್ತ ತಾಯಿಯ ಮಾತಿಗೆ ಬೆಲೆಯೇ ಇಲ್ಲವೇ....?' ಲಿಂಗಮ್ಮ ರೋದಿಸತೊಡಗಿದಳು.

'ಅವ್ವಾ! ಅಜ್ಞಾನಿಯಂತೆ ಅಳಬೇಡ. ನಿನ್ನ ನಿಷ್ಠುರದ ನುಡಿಯಲ್ಲಿನ ಆತ್ಯಂತಿಕ ಸತ್ಯವನ್ನು ಅರಿಯಲೆತ್ನಿಸು.

ನನ್ನ ಮನಸ್ಸು ಮರ್ಮಗಟ್ಟಲೆ ತಾರ್ಕಿಕವಾಗಿ ಚಿಂತನೆ ಮಾಡಿದೆ. ಈಗ ಅದೊಂದು ಒಮ್ಮತಕ್ಕೆ ಬಂದು ನಿಂತಿದೆ. ನೀನು ಈ ಜನ್ಮದ ತಾಯಿ....ನನ್ನ ಪತಿ ಚನ್ನಮಲ್ಲಿಕಾರ್ಜುನನು ಜನ್ಮಾಂತರದ ಪತಿ; ನೀನು ಮಾಂಸದ ಮುದ್ದೆಯಾದ ಶರೀರಕ್ಕೆ ಕಾರಣಕರ್ತೃ. ಆದರೆ ನನ್ನಿನಿಯ ಶರೀರದ ಜಂತ್ರವನ್ನು ನಡೆಸುವ ಚೈತನ್ಯಮಯಿ ಆತ್ಮದ ಕಾರಣಕರ್ತೃ. ನೀನು ವ್ಯಾಮೋಹದಿಂದ

ಬಂಧನಕ್ಕೆ ಎಳೆದರೆ, ಅವನು ತನ್ನ ಪ್ರೇಮದಿಂದ ಬಂಧನವನ್ನು ಬಿಡಿಸುವನು. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನಿಗೊಲಿದು ಸಲೆ ಮಾರುಹೋದೆನು. ನಿನ್ನ ತಾಯಿತನವನೊಲ್ಲೆ, ಹೋಗಾ....'*

ಮಹಾದೇವಿಯ ನಿಷ್ಠುರದ ಮಾತಿನಿಂದ ಲಿಂಗಮ್ಮನ ದುಃಖ ಉಮ್ಮಳಿಸಿತು. ವಾತಾವರಣ ಗಂಭೀರವಾಗಿ, ಮೌನವು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ಯಾರಿಗೂ ಯಾವ ಮಾತನ್ನಾಡಲೂ ಧೈರ್ಯವಿರಲಿಲ್ಲ.

ಮಹಾದೇವಿಯೇ ಕಂಚಿನ ಕಂಠದಲ್ಲಿ ಹೇಳಿದಳು :

'ಗುರುಗಳೇ....ತಮ್ಮ ಎದುರಿಗೆ ನನ್ನ ಅಂತಿಮ ನಿರ್ಧಾರವನ್ನು ತಿಳಿಸುತ್ತಿರುವೆ. ಚನ್ನಮಲ್ಲಿಕಾರ್ಜುನನೇ ನನ್ನ ಪತಿ, ನಾನು ಅವನ ಸತಿ, ನನ್ನದು ವಿರಕ್ತಿಯ ಮಾರ್ಗ. ಈ ನಿರ್ಧಾರದಲ್ಲಿ ಒಂದು ಹೆಜ್ಜೆಯಷ್ಟೂ ಹಿಂದೆ ಸರಿಯೆನು. ಮತ್ತೆಮತ್ತೆ ಮದುವೆಯ ಪ್ರಸ್ತಾಪ ಬೇಡ. ಈಗ ನನ್ನವ್ವ, ಅಪ್ಪರು ಒಂದನ್ನು ನಿರ್ಣಯಿಸಲಿ. ಒಂದು ಕಡೆ ಮಗಳು, ಮಗಳ ಗುರಿ; ಮತ್ತೊಂದು ಕಡೆ ಲೋಕದ ನಿಂದನೆ. ಮಗಳ ಸುಖವೇ ಮುಖ್ಯವಾದರೆ ಲೋಕದ ನಿಂದನೆಯನ್ನು ಎದುರಿಸಲಿ ; ಲೋಕದ ನಿಂದನೆಯನ್ನು ಸಹಿಸಲಾರದೆ ಹೋದರೆ ನನಗೆ ಅನುಮತಿ ನೀಡಲಿ—ನಾನು ಮನೆಯಿಂದ ನಿರ್ಗಮಿಸಿ ನನ್ನ ಸಾಧನೆಯನ್ನು ಮುಂದುವರಿಸುವೆ....'

'ಮಹಾದೇವೀ....' ಲಿಂಗಮ್ಮ ಬಿಚ್ಚಿ ನುಡಿದಳು.

'ಅಹುದಮ್ಮ....ಇದರಲ್ಲಿ ಯಾವ ಸಂಶಯವಿಲ್ಲ....' ಮೇಲಕ್ಕೆದ್ದು ಗುರುಗಳ ಪಾದಕ್ಕೆ ನಮಸ್ಕರಿಸಿ ಮಠದ ಹೊರಕ್ಕೆ ನಡೆದಳು.

ಶೈಲಜೆಯು ಅವಸರದಿಂದ ಮಹಾದೇವಿಯನ್ನು ಹಿಂಬಾಲಿಸಿದಳು. ಕತ್ತಲೆಯು ಗಾಢವಾಗಿದ್ದುದರಿಂದ ಗುರುಗಳು ಶಿವಯ್ಯನಿಗೆ ಸಂಗಡ ಹೋಗಿ ಇಬ್ಬರನ್ನೂ ಮನೆಗೆ ಮುಟ್ಟಿಸಿಬರಲು ಹೇಳಿದರು. ಮೌನವಾಗಿ ಕುಳಿತ ಓಂಕಾರ-ಲಿಂಗಮ್ಮರಿಗೆ ಹೇಳಿದರು :

'ಮಹಾದೇವಿಯು ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ತೋರದು. ಅವಳ ಸಾಧನೆಗೆ ಅನುವು ಮಾಡಿಕೊಡಿರಿ ಓಂಕಾರ....'

'ಅಪ್ಪಣೆ ಗುರುಗಳೇ....' ನಮಸ್ಕರಿಸಿದ. ಹೆಚ್ಚು ಮಾತನಾಡದೆ ದಂಪತಿಗಳು ನಿರ್ಗಮಿಸಿದರು.

ಮಹಾದೇವಿಯ ಮನಸ್ಸು ತುಮುಲ ಹೋರಾಟದಲ್ಲಿ ತೊಡಗಿತ್ತು.

---

* ವ. ಪ. ೧೯

ಯಾವ ಮಾತೂ ಇಲ್ಲದೆ ಮೌನವಾಗಿ ಸಾಗಿದಳು; ಹೆಜ್ಜೆಗಳು ದಾರಿಯನ್ನು ಸ್ಪರ್ಶಿಸುತ್ತಿದ್ದುವು.

'ಈ ಲೋಕದ ನಡೆಯೇ ಬಹು ವಿಚಿತ್ರ. ಹೆಣ್ಣು ಹೊನ್ನು ಮಣ್ಣಿಗಾಗಿ ಕೋಟಿಕೋಟಿ ಜನ ಸಾಯುವರು. ಆದರೆ ದೇವರಿಗಾಗಿ ಯಾರೂ ಸಾಯರು. ಅನಿತ್ಯವಾದ, ಕ್ಷಣಿಕ ಸುಖಕ್ಕಾಗಿ ಹಂಬಲಿಸಿ ಪತಂಗದಂತೆ ನಾಶವಾಗುವ ಜನರನ್ನು ಯಾರೂ ನಿಂದೆ ಮಾಡರು. ಆದರ್ಶದ ಮಾರ್ಗವನ್ನು ಹಿಡಿಯ ಬಯಸುವವರನ್ನು ಅಪರಾಧಿಗಳೇನೋ ಎಂಬಂತೆ ಕಾಣುವರು. ನಾನು ಹಿಡಿದುದು ತಪ್ಪು ಆದರ್ಶವೇ? ತುಳಿದಿರುವುದು ತಪ್ಪು ಹಾದಿಯನ್ನೇ?....'

'ಅಹುದು ...ನಿನ್ನಿಂದ ಎಷ್ಟು ಜನರಿಗೆ ವ್ಯಥೆ! ಹೆತ್ತವರಿಗೆ ನೆಮ್ಮದಿಯಿಲ್ಲ; ಸಮಾಜವು ಒಪ್ಪುವುದಿಲ್ಲ...' ಮನಸ್ಸು ಎಲ್ಲೋ ನಿಂತು ಕೂಗುತ್ತಿತ್ತು.

'ಇಲ್ಲ....ನೀನು ಹಿಡಿದುದೇ ನಿಜಮಾರ್ಗ. ಸಜ್ಜನರು ಮೆಚ್ಚುವ ಪವಿತ್ರ ಪಥ....' ವಿವೇಕವು ಪುಷ್ಟಿ ನೀಡಿತು.

ಆಗ ತನ್ನಲ್ಲಿ ತಾನೆ ಹಾಡಿಕೊಂಡಳು :

ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿದು ನಿಶ್ಚಿಂತವಾಗಿರು.
ಫಲವಾದ ಮರನ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಂದು ಕಾಣೆ.
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ
ಚನ್ನಮಲ್ಲಿಕಾರ್ಜುನಾ...*

ತನ್ನ ಅಂತರಾತ್ಮನ ಆಶ್ವಾಸನೆಯಿಂದ ಹೊರಹೊಮ್ಮಿದ ವಚನದ ಅರ್ಥವನ್ನು ಮೌನವಾಗೇ ಮೆಲುಕಾಡಿಸಿದಳು.

'ಏನು ಮಾಡೇನಿ....ಒಬ್ಬಳೇ ಗುಣಗುಣಿಸುತ್ತಿರುವೆ....' ಎಂದು ಶೈಲಜೆ ಕೇಳಿದಾಗ ಎಚ್ಚರಗೊಂಡಳು.

'ಶೈಲಜಾ, ನನ್ನ ಕಣ್ಣೆದುರಿಗೊಂದು ಉತ್ತುಂಗ ಬೆಟ್ಟ ಕಾಣುತ್ತಿದೆ. ಅದನ್ನು ಹತ್ತುವ ಗುರಿ ನನ್ನದಾಗಿದೆ. ದಾರಿಯನ್ನು ಹಿಡಿದು ನಡೆಯುವಾಗ ದಾರಿ ಕವಲೊಡೆದಿದೆ. ಯಾವ ಮಾರ್ಗವನ್ನು ಹಿಡಿಯಬೇಕು ಎಂಬ ಸಂದಿಗ್ಧತೆಗೆ ಒಳಗಾಗಿ ನಿಂತಾಗ ಎರಡು ಕಡೆಯಿಂದ ಧ್ವನಿ ಬರುತ್ತದೆ.

* ಮ. ವ. ೧೯೧

ಒಂದು ಎದುರಿನ ಬೆಟ್ಟದ ತುದಿಯಲ್ಲಿ ಕುಳಿತ ತೇಜಸ್ವಿಯಿಂದ, ಇನ್ನೊಂದು ಬಲದಾರಿಯ ತುದಿಯ ಪಂಕದ ಮಡುವಿನಿಂದ. ಆದರೆ ಬೆಟ್ಟದಮೇಲೆ ಒಬ್ಬನಿದ್ದಾನೆ, ಪಂಕದ ಮಡುವಿನಲ್ಲಿ ಹಲವಾರು ಜನರಿದ್ದಾರೆ. ನಾನೀಗ ಯಾವ ದಾರಿ ಹಿಡಿಯಬೇಕು? ಎದುರಿನ ದಾರಿಯಲ್ಲಿ ಕಾಲಿಟ್ಟ ತಕ್ಷಣಕ್ಕೆ ಪಂಕದ ಮಡುವಿನಲ್ಲಿ ಒದ್ದಾಡುತ್ತಿರುವವರು, 'ಅದು ತಪ್ಪು ದಾರಿ' ಎಂದು ಕೂಗುವರು. ಆದರೆ ಮೇಲೆ ನಿಂತ ಮಹಿಮನು 'ಸರಿ ದಾರಿ....' ಎಂದು ಆಶ್ವಾಸನೆ ನೀಡುವನು. ಯಾರ ಮಾತು ಕೇಳಬೇಕೇ?'

'ಉತ್ತರ ಸ್ಪಷ್ಟವಿದೆಯಲ್ಲ ಮಾದೇವಿ. ಬೆಟ್ಟದ ಆರೋಹಣವೇ ಗುರಿ ಯಾದಾಗ ಬೆಟ್ಟವನ್ನು ಮುಟ್ಟಿದವನದೇ ಅಧಿಕೃತ ಮಾತು. ತಪ್ಪುದಾರಿಗೆ ಈಡಾದ ಹತ್ತು ಜನರ ಮಾತಿಗಿಂತಲೂ ಗುರಿ ಮುಟ್ಟಿದವನದು ಒಂದೇ ಧ್ವನಿ ಯಿದ್ದರೂ ಸ್ವಾಗತಾರ್ಹ.

'ನಿಜ ಕೆಳದಿ, ಅದನ್ನೇ ನಾನು ಅಂದುಕೊಂಡು ನನ್ನ ಮನಕ್ಕೆ ಹೆದರ ದಿರಲು ಆಶ್ವಾಸನೆ ನೀಡಿದೆ. ನಿಜವಾದ ಗುರಿಯನ್ನು, ಆದರ್ಶ ಮೌಲ್ಯವನ್ನು, ಪರಮಾತ್ಮನ ಸ್ವರೂಪವನ್ನು, ನಿಶ್ಚಯಿಸಿಕೊಂಡ ಬಳಿಕ, ಸಾವಿರ ಜನರು ತಪ್ಪು ಎಂದರೂ ಮನಸ್ಸು ಹೊಯ್ದಾಡಬಾರದು. ಫಲ ತುಂಬಿದ ಮರಗಳಿಗೆ ಕಲ್ಲು ಬೀಸುವರು; ಬೂರುಗದ ಮರಕ್ಕೆ ಕಲ್ಲು ಬೀಸರು. ಭಕ್ತಿವಂತರಾಗಿ, ಆದರ್ಶಜೀವಿಗಳಾಗಿ ಇರುವವರನ್ನು ನಿಂದಿಸುವವರು ಬಹಳ. ಆದರೆ ಮಹಾ ದಾನಿಯಾದ ದೇವರು ಕೊಟ್ಟುದನ್ನು ಸ್ವೀಕರಿಸಿ, ಆ ದಾತನನ್ನು ಮರೆತು, ಭೋಗಪ್ರಪಂಚದಲ್ಲಿ ಕೆಸರಿನ ಕ್ರಿಮಿಗಳಂತೆ, ಒದ್ದಾಡುವವರನ್ನು ಯಾರೂ ನಿಂದಿಸರು.

ಲೋಕದ ನಾಲಿಗೆ ಸತ್ಯದ ಒರೆಗಲ್ಲಲ್ಲ. ಲೌಕಿಕ ಆದರ್ಶ ಅನುಕರಣೀಯ ವಲ್ಲ. ಉನ್ನತ ಸಾಧನೆ ಮಾಡಿದ ಶರಣರ ನುಡಿ, ಜೀವನಗಳೇ ನಮ್ಮ ದಾರಿದೀಪಗಳಾಗಬೇಕು. ಮುನ್ನಿನ ಮಹಂತರು ಬಿಟ್ಟುಹೋದ ಸಂದೇಶಗಳೇ ಕಾಲದ ಬಯಲಲ್ಲಿ ಮೂಡಿದ ಅಡಿಯ ಗುರುತುಗಳು. ಅವಷ್ಟೇ ನಿನ್ನ ಮುಂದಿರಲಿ ಎಂದು ಧೈರ್ಯದ ಊರುಗೋಲನ್ನು ಮುಗ್ಗರಿಸುವ ಮನಕ್ಕೆ ನೀಡಿದೆ ಶೈಲಜ....' ಮಹಾದೇವಿ ಹೇಳಿದಳು.

'ನೀವು ಹೇಳೋ ಮಾತು ನಿಜ ಅಕ್ಕಾವ್ರೆ. ಎಷ್ಟು ಜನ ಜೂಜುಕೋರ ರಾಗಿ, ಕುಡುಕರಾಗಿ, ವಿಷಯಲಂಪಟರಾಗಿ ಹಾಳಾಗಿಹೋಗ್ತಾರೆ. ತಾಯಿ-ತಂದೆ ಸುಮ್ಕೆ ಇರ್ತಾರೆ. ಈ ಶಿವಮಾರ್ಗಕ್ಕೆ ಬರಬೇಕು ಅಂದರೆ ಎಲ್ಲಿಲ್ಲದ ಮುಳ್ಳು ಕಲ್ಲುಗಳನ್ನು ಹಾದೀಲಿ ಹರವ್ತಾರೆ....' ಮೌನವಾಗಿ ಹಿಂಬಾಲಿಸಿ

ಬರುತ್ತಿದ್ದ ಶಿವಯ್ಯ ಹೇಳಿದ.

ಶಿವಯ್ಯನು ಇತ್ತೀಚೆಗೆ, ಗುರುಗಳ ಸಾನ್ನಿಧ್ಯದಲ್ಲಿದ್ದುಕೊಂಡು, ಸೇವೆ ಮಾಡಿ, ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಬಂದ ತರುಣ ಸಾಧಕ. ಬಹಳ ಓದಿದವನು, ಸುಸಂಸ್ಕೃತನು ಆಗಿರದಿದ್ದರೂ ಅಪಾರ ವಿರಕ್ತಿ ಅವನಲ್ಲಿತ್ತು.

'ನಾನು ಹಳ್ಳಿ ಬಿಟ್ಟು ಹೇಳದೆ ಕೇಳದೆ ಮಠಕ್ಕೆ ಬಂದು ಸೇರ್ಕಂಡೆ. ನಮ್ಮ ಹಿರೇರು ಹೆಂಗೋ ಹುಡುಕಿ ಕರ್ಯಕ್ಕೆ ಬಂದ್ರು. ತಾವು ಸಂಸಾರದ ಜೇಳು ಕಡುಸ್ಕೊಂಡು ಒದ್ದಾಡೋದು ಸಾಲದೆ, ಎಲ್ಲರ್ಗೂ ಕಡಿಸ್ಬೇಕು ಅಂತಾರೆ. ಗುರುಗಳ ಹತ್ತಿರ ಬಂದು ಹೇಳಿದ್ರು, 'ನಮ್ಮಗನ್ನ ಕಳಿಸ್ಕೊಡ್ರಿ.... ಹೆಣ್ಣು ನೋಡಿದ್ದೀವಿ. ಲಗ್ನ ಮಾಡ್ತೀವಿ ಅಂತ....ಲಗ್ನ ಅಂದರೆ ಮುಳ್ಳು ಕಣವ್ವಾ; ಬಾಸಿಂಗಕ್ಕೆ ಮುಳ್ಳು ಚುಚ್ಚಿರ್ತಾರೆ ಅದನ್ನು ತಿಳಿಸಲು. ಆದ್ರೂ ಇವಕ್ಕೆ ಬುದ್ಧಿ ಇಲ್ಲ....'

'ಸರಿ, ಆಮೇಲೆ....' ಮಹಾದೇವಿ ಕುತೂಹಲದಿಂದ ಕೇಳಿದಳು.

'ಗುರುಗಳು 'ಹೋಗಪ್ಪಾ, ಮದ್ವೆ ಮಾಡ್ಕೋ; ಅದೇನು ತಪ್ಪಲ್ಲ ಅಂದ್ರು.' ನಾನು ಹೇಳ್ಬಿಟ್ಟೆ : 'ಅದು ತಪ್ಪಲ್ದಿದ್ರೆ ನೀವೇಕೆ ಮಾಡ್ಕಳ್ಲಿಲ್ಲ; ನೀವು ಮಾಡ್ಕಳ್ಳಿ ಆಮೇಲೆ ನಾನು ಮಾಡ್ಕಳ್ತೀನಿ....' ಅಂದ್ಬಿಟ್ಟೆ.'

ಮಹಾದೇವಿಗೆ ತಡೆಯಲಾರದಷ್ಟು ನಗು ಉಕ್ಕಿತು.

'ಗುರುಗಳಿಗೆ ಹೀಗೆ ಅನ್ನೋದೆ....?' ಕೇಳಿದಳು.

'ಮತ್ತೆ ಅವರ್ಯಾಕೆ ಹಂಗಂದ್ರು....'

'ನಿಮ್ಮ ವೈರಾಗ್ಯ ಪರೀಕ್ಷೆ ಮಾಡಲು ಅಂತಾರೆ....'

'ಅಯ್ಯೋ, ನಂಗೆ ತಿಳೀಲಿಲ್ಲ. ನಿಮ್ಮಂಗೆ ಉತ್ತರ ಕೊಡಕ್ಕು ಬರಲ್ಲ. ಈವತ್ತು ನೀವು ಪದ್ಯ ಹೇಳ್ತಾ ಹೇಳ್ತಾ ಉತ್ತರ ಕೊಡ್ತಿದ್ದರೆ ನಂಗೆ ಸಂತೋಷ ಆಗಿ, ಕಣ್ಣಾಗೆ ನೀರು ಬರ್ತಿದ್ವು....' ಶಿವಯ್ಯ ಹೇಳಿದ.

'ಅದ್ಸರಿ....ಗುರುಗಳು ಸುಮ್ಮನೆ ಇದ್ದರೇ ?....'

'ನನ್ನ ಮಾತಿಗೆ ಬಿದ್ದು ಬಿದ್ದು ನಕ್ಕರು. ಏನಾರ ಮಾಡು ಅಂದ್ಬಿಟ್ರು. ಆಮೇಲೆ ನಾನು ಬರಾಕಿಲ್ಲ ಅಂತ ಪಟ್ಟು ಹಿಡಿದು, ಮನೆಯವರ್ನ ಸಾಗಾಕಿ ಇಲ್ಲೇ ಉಳುದ್ಬಿಟ್ಟೆ....'

ಶೈಲಜೆಯ ಮನೆ ಸಮೀಪಿಸಿತು. ಅವಳನ್ನು ಒಳಗೆ ಕಳಿಸಿ, ಮಹಾದೇವಿ ಮನೆಯ ಕಡೆಗೆ ಹೆಜ್ಜೆಯನ್ನಿಟ್ಟಳು. ಮನೆಯ ತಲೆಬಾಗಿಲನ್ನು ಮುಟ್ಟುತ್ತಲೇ ಶಿವಯ್ಯನನ್ನು ಮರಳಿ ಮಠಕೆ ಕಳಿಸಿದಳು.

೨೨. ನೆಮ್ಮದಿಯ ನೆಲೆ

ತುಮುಲಾತ್ಮಕವಾದ ನಾಟಕ ಕೊನೆಗೊಂಡಂತೆನಿಸಿತು ಮಹಾದೇವಿಗೆ. ಎಷ್ಟೋ ದಿವಸಗಳಿಂದ ಹೊಗೆಯಾಡಿ ಹೊಗೆಯಾಡಿ ಭುಗಿಲ್ಲನೆ ಉರಿಯನ್ನು ಏಳಿಸುತ್ತಿದ್ದ ಮದುವೆಯ ಸಮಸ್ಯೆಯ ಬೆಂಕಿ ಪೂರ್ಣವಾಗಿ ಆರಿಹೋದಂತೆ ಎನಿಸಿತು. ಕಲಕಿದ ಕೆಲವು ಕ್ಷಣಗಳ ನಂತರ ಶಾಂತವಾಗುವ ಸರೋವರದಂತೆ ಮನೆಯ ವಾತಾವರಣ ಮುನ್ನಿನ ಶಾಂತತೆಗೆ ಮರಳುತ್ತಿತ್ತು. ಓಂಕಾರನು ಹರ್ಷಚಿತ್ತನಾಗಿದ್ದ. ಲಿಂಗಮ್ಮನಿಗೆ ಪೂರ್ಣ ಸಮಾಧಾನವು ಸಮನಿಸ ದಿದ್ದರೂ ತೋರಿಸಿಕೊಳ್ಳದೆ ಅಸಮಾಧಾನವನ್ನು ನುಂಗಿಕೊಳ್ಳುತ್ತಿದ್ದಳು. ಆವೇಶದಿಂದ ತಾನು ಮಾತನಾಡಿದರೆ ಮಗಳು ಎಲ್ಲಿ ಕೈಬಿಟ್ಟು ದೂರ ಸಾಗು ವಳೋ ಎಂಬ ಭಯ ಅಂತರಂಗದಲ್ಲಿ ಕಾಡುತ್ತಿತ್ತು.

ಪ್ರತಿನಿತ್ಯ ಸಂಜೆಯ ವೇಳೆಯಲ್ಲಿ ಮಹಾದೇವಿ ವಚನಗಳ ಪಾರಾಯಣ ಪ್ರಾರಂಭಿಸಿದಳು. ಓಂಕಾರನು ವ್ಯವಹಾರವನ್ನು ಪೂರೈಸಿಕೊಂಡು ಬಂದು ಕುಳಿತುಕೊಳ್ಳುತ್ತಿದ್ದ. ಭಿನ್ನಭಿನ್ನ ವಿಷಯಗಳನ್ನು ತೆಗೆದುಕೊಂಡು ಇಬ್ಬರೂ ಸಂಭಾಷಿಸುತ್ತಿದ್ದರು. ಆ ಸಂಭಾಷಣೆಯಲ್ಲಿ ಮುಖ್ಯ ಶ್ರೋತೃವಾಗಿ ಲಿಂಗಮ್ಮನೂ ಭಾಗವಹಿಸುತ್ತಿದ್ದಳು. ಕಾಲಾನಂತರದಲ್ಲಿ ಸುತ್ತಮುತ್ತಲಿನ ಕೆಲವಾರು ಆಸಕ್ತ ಜಿಜ್ಞಾಸುಗಳು ಬರಲಾರಂಭಿಸಿದರು. ಮಗಳ ಬೌದ್ಧಿಕ ಪಟುತ್ವಕ್ಕೆ, ನಿರೂಪಣಾ ಶಕ್ತಿಗೆ ಓಂಕಾರ ತಲೆದೂಗುತ್ತಿದ್ದ. ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ಇಷ್ಟಲಿಂಗಪೂಜೆ-ತ್ರಾಟಕ ಯೋಗವನ್ನು ಮಾಡಿ, ಮಹಾದೇವಿ ಪೂಜೆಯ ಕೋಣೆಯ ಹೊರಗೆ ಕಾಲಿಕ್ಕಿದಾಗ ಓಂಕಾರ ಮಗ ಳನ್ನು ಗೌರವಪೂರ್ಣದೃಷ್ಟಿಯಿಂದ ನೋಡುತ್ತಿದ್ದ. ಶಿವನ ಕಾರುಣ್ಯವನ್ನು ಅಡಗಿಸಿಕೊಂಡ ಆ ಕಣ್ಣುಗಳು ಮಾಣಿಕ್ಯದ ದೀಪ್ತಿಯಂತೆ ಬೆಳಗುತ್ತಿದ್ದವು.

"ಲಿಂಗಾ....ಮಾದೇವಿಯ ಕಣ್ಣನ್ನು ನೋಡು; ದೈವೀಶಕ್ತಿಯ ಕುಂಡ ಗಳಂತಿವೆ. ಇವಳು ನನ್ನ ಮಗಳೇ ಎಂದು ಆಶ್ಚರ್ಯವಾಗುತ್ತದೆ. ಇಂತಹ ಮಗಳನ್ನು ಪಡೆದ ನಾವು ಪುಣ್ಯವಂತರು. ಸಾಮಾನ್ಯ ಪದಾತಿಯಾಗಿದ್ದವನ ಮಗನು ಸೇನಾಧಿಪತಿಯಾದರೆ ತಂದೆಯು ಆನಂದತುಂದಿಲನಾಗುವಂತೆ, ನನ್ನ ಮಗಳು ಆಧ್ಯಾತ್ಮಮಾರ್ಗದಲ್ಲಿ ನನಗಿಂತಲೂ ಬಹಳಷ್ಟು ಮುಂದೆ ಸಾಗಿರುವುದನ್ನು ಕಂಡು ಅಸೀಮ ಸಂತೋಷ ನನಗೆ....' ಎಂದು ಉದ್ಗರಿಸು ತ್ತಿದ್ದ ಓಂಕಾರ.

ಮಹಾದೇವಿ ಈಗ ನಿರ್ಲಿಪ್ತಳಾಗಿದ್ದಳು, ಅಂತರ್ಮುಖಳಾಗಿದ್ದಳು. ಮಠಕ್ಕೆ ಹೋಗುವೆನೆಂದು ತಾಯಿ-ತಂದೆಯರನ್ನು ಸಹ ಕೇಳುತ್ತಿರಲಿಲ್ಲ. ಬೇಕೆನಿಸಿದಾಗ ತಾನು ಬರೆದ ವಚನಗಳ ಕಟ್ಟನ್ನು ಕೈಲಿ ಹಿಡಿದು, ಸಾಗಿ ಬಿಡುತ್ತಿದ್ದಳು. ಪ್ರತಿನಿತ್ಯ ಮುಂಜಾನೆಯ ಪೂಜೆ ಮುಗಿದ ತಕ್ಷಣ ಹಣ್ಣು ಹಾಲನ್ನು ಸ್ವೀಕರಿಸಿ, ಕೈತೋಟದಲ್ಲಿ ಓಡಾಡುತ್ತ, ಗಿಡಗಳಿಗೆ ಪಾತಿ ಮಾಡು ವಳು ; ನೀರು ಎರೆಯುವಳು. ಅರ್ಧ ಜಾವದವರೆಗೆ ಹೊಂಬಿಸಿಲ ಚೇತೋಹಾರಿ ಕಿರಣಗಳಲ್ಲಿ ಮೀಯುತ್ತ ಗಿಡಗಳನ್ನು ನೋಡಿ, ಮಾತಾಡಿಸಿ, ಮೃದುವಾಗಿ ಸವರುತ್ತಿದ್ದಳು. ತಾಯಿಯ ಹಸ್ತದ ಸೇವರಿಕೆಯ ಅನುಭವದಲ್ಲಿ ಗಾಳಿ ಬೀಸಿ ದಾಗ ತನ್ಮಯವಾಗಿ ಆ ಗಿಡಗಳು ತಲೆದೂಗುತ್ತಿದ್ದವು.

ಬಳಿಕ ಮಠಕ್ಕೆ ಹೋಗುವಷ್ಟರಲ್ಲಿ ಗುರುಗಳು ಮುಂಜಾವಿನ ಪೂಜೆ ಮುಗಿಸಿರುತ್ತಿದ್ದರು. ಮಹಾದೇವಿ ಬಂದ ತಕ್ಷಣ ಕಲ್ಯಾಣದಿಂದ ಆಗಾಗ ಬರುತ್ತಿದ್ದ ವಚನಗಳ ಕಟ್ಟನ್ನು ಓದುತ್ತಿದ್ದರು. ಶಿವಯ್ಯನೂ ಆಸಕ್ತಿಯಿಂದ ಭಾಗವಹಿಸುತ್ತಿದ್ದ. ಗುರುಗಳು ಕ್ಲಿಷ್ಟವಾದ ವಿಷಯವನ್ನು ವಿವರಿಸುತ್ತಿದ್ದರು.

'ಮಹಾದೇವಿ....ಕಲ್ಯಾಣದ ಕಾರ್ಯಕ್ಷೇತ್ರ ಬಹು ವಿಸ್ತಾರವಾಗತೊಡ ಗಿದೆ. ಜನಸಾಮಾನ್ಯರಿಗೆ ಧರ್ಮತತ್ತ್ವಗಳನ್ನು ಮುಟ್ಟಿಸುವ ಕಾಯಕ ತ್ವರಿತ ಗತಿಯಿಂದ ಸಾಗುತ್ತಿದೆ. ಪ್ರಭುದೇವರು ಶೂನ್ಯಪೀಠವನ್ನು ಅಲಂಕರಿಸಿದ ಮೇಲೆ ಬಸವಣ್ಣನಿಗೆ ಇನ್ನೊಂದು ಭುಜ ಬಂದಂತಾಗಿದೆ..'

'ಶೂನ್ಯಪೀಠ ಎಂದರೇನು ಗುರುಗಳೆ....?'

'ಅದೊಂದು ಸಾಂಕೇತಿಕ ಧಾರ್ಮಿಕಸ್ಥಾನ. ಪೀಠವೆಂದರೆ ಬಂಗಾರದ, ಕಟ್ಟಿಗೆಯ ಸಿಂಹಾಸನವೆಂದಲ್ಲ. 'ಶೂನ್ಯ'. ಇದು ಪರಮಾತ್ಮನ ಸ್ಥಿತಿಯನ್ನು ಸೂಚಿಸುವ ಮತ್ತೊಂದು ಹೆಸರು. ಬೌದ್ಧರದು ಏನೂ ಇಲ್ಲದ ಶೂನ್ಯವಾದರೆ ಶರಣರದು ಎಲ್ಲವನ್ನೂ ಒಳಗೊಂಡ, ಆದರೆ ಎಲ್ಲಕ್ಕೂ ಅತೀತವಾದ ಬಯಲು. ಇದು ನಿರ್ವಾತದ ಸಂಕೇತವಲ್ಲ, ಪರಿಪೂರ್ಣತೆಯ ಸಂಕೇತ. ಇಂತಹುದನ್ನು ಸಾಕ್ಷಾತ್ಕರಿಸಿಕೊಂಡವನೇ ಜಂಗಮನು. ಅಲ್ಲಿ ಅವನು ತ್ರಿಪುಟಿಯನ್ನು ಅಳಿದುಕೊಂಡು, ಪೂಜ್ಯ-ಪೂಜಕ-ಪೂಜೆ ಎಂಬ ಭಿನ್ನತೆಯನ್ನು ಕಳೆದು, ತಾನೇತಾನಾಗುವ ಸ್ಥಿತಿಗೆ ಬರುವನು. ಕಾಯದಲ್ಲಿ ಕಳವಳವಿಲ್ಲ. ಮನದಲ್ಲಿ ಭ್ರಾಂತಿಯಿಲ್ಲ, ಚಿತ್ತದಲ್ಲಿ ಹೊಯ್ದಾಟವಿಲ್ಲ, ಬುದ್ಧಿಯಲ್ಲಿ ವಿಸಂಚವಿಲ್ಲ, ಭಾವದಲ್ಲಿ ಅತೃಪ್ತಿಯಿಲ್ಲ. ಇಂತಹ ಸ್ಥಿತಿ ಶೂನ್ಯಸ್ಥಿತಿ. ಇಂಥ ಜಂಗಮಸ್ಥಿತಿ ಯನ್ನು ಪಡೆಯಲಿಕ್ಕೆ ಹುಟ್ಟಿದ ಜಾತಿ, ಕೈಗೊಂಡ ಕಾಯಕ, ಸಾಮಾಜಿಕ ಸ್ಥಾನಮಾನ, ಯಾವೂ ಅಡ್ಡ ಬರವು. ಈ ಸ್ಥಿತಿಯನ್ನು ಪಡೆದವನೇ ಶೂನ್ಯ

ಪೀಠಾಧಿಕಾರಿ. ಇದನ್ನು ಸಾಂಕೇತಿಸಿ ಜಗತ್ತಿಗೆ ತೋರಿಸುವ ಸಲುವಾಗಿ ಶೂನ್ಯಸಿಂಹಾಸನದ ನಿರ್ಮಾಣವಾಗಿದೆ. ಅದನ್ನು ವೈರಾಗ್ಯಚಕ್ರವರ್ತಿ ಅಲ್ಲಮಪ್ರಭುದೇವರು ಏರಿರುವರು....

ಅವರ ನೇತೃತ್ವದಲ್ಲಿ ಪ್ರತಿದಿನವೂ ಅನುಭವಗೋಷ್ಠಿಗಳು ನಡೆಯುತ್ತವೆ. ಒಂದೊಂದು ವಿಷಯಗಳನ್ನು ತೆಗೆದುಕೊಂಡು ವಿಚಾರಮಂಥನ ಮಾಡುವಾಗ ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯವನ್ನು ಸಭೆಯ ಮುಂದಿರಿಸುವರು. ಕೊನೆಗೆ ನಿರ್ಣಯ ಕೈಗೊಳ್ಳುವರು. ಗೋಷ್ಠಿಯಲ್ಲಿ ಹೊರಹೊಮ್ಮುವ ವಚನಗಳನ್ನು ಓಲೆಯ ಶಾಂತರಸರ ನೇತೃತ್ವದಲ್ಲಿ ಸಂಗ್ರಹಿಸಿ, ಪ್ರತಿಮಾಡಿಸಿ ನಾಡಿನ ವಿವಿಧ ಭಾಗಗಳಿಗೆ ಕಳುಹಿಸುವರು....'

'ಮಾನವನಿಗೆ ತನು ಮನ ಆತ್ಮಗಳು ಮುಖ್ಯ ಮೂರು ಘಟಕಗಳಾದ ಕಾರಣ, ಅವುಗಳಿಗೆ ತಕ್ಕ ಸಂಸ್ಕಾರ ನೀಡಲು ಕಾಯಕ-ಕಲೆ-ಉಪಾಸನೆಗಳು ಕಡ್ಡಾಯ ಆಚರಣೆಗಳು. ಪ್ರತಿಯೊಬ್ಬನೂ ದುಡಿಯಬೇಕು ; ಶರೀರವನ್ನು ದಣಿಸಲೇಬೇಕು. ಹೃದಯ ವಿಕಾಸವಾಗಿ, ಅಂತಃಕರಣಗಳು ಅರಳಲಿಕ್ಕೆ ಸಾಹಿತ್ಯ, ಅಧ್ಯಯನ, ಸಂಭಾಷಣೆ ಮುಂತಾದ ಲಲಿತಕಲೆಗಳನ್ನು ಅಳವಡಿಸಿಕೊಳ್ಳಬೇಕು. ಬಾಳಿನ ದುಃಖ ದುಮ್ಮಾನಗಳನ್ನು ಮರೆಯಲು, ಭವಸಾಗರವನ್ನು ದಾಟಲು ಎಲ್ಲರೂ ಪೂಜೆ ಮಾಡಬೇಕು.

ಅನುಭವಮಂಟಪವನ್ನು ನೋಡಿದರೆ ಸುಂದರವಾದ ತಿಳಿಗೊಳದಂತೆನಿಸುತ್ತದೆ. ಶುಭ್ರವಾದ ನೀರು ಕುಡಿದು, ಕಮಲದ ದಂಟನ್ನು ತಿಂದು, ವಿಹರಿಸುವ ಹಂಸಪಕ್ಷಿಗಳ ಹಿಂಡು ಸರೋವರದಲ್ಲಿರುವದಷ್ಟೆ. ಹಾಗೆಯೇ ಅನುಭವ ಮಂಟಪದ ನೂರಾರು ಸಾಧಕ ಅರಸಂಚೆಗಳು ಸುಜ್ಞಾನದ ಕಮಲನಾಳವನ್ನು ಸವಿದು, ಸದ್ಭಕ್ತಿಯ ಸುಜಲವನ್ನು ಈಂಟಿ, ಸದಾಚಾರದ ರೆಕ್ಕೆಗಳನ್ನು ಹರಡಿಕೊಂಡು ಆನಂದದಲ್ಲಿರುವುದನ್ನು ನೋಡಬೇಕು ತಾಯಿ. ಅದು ಕೇವಲ ಜ್ಞಾನ-ಪಾಂಡಿತ್ಯಗಳಿಂದ ಕೂಡಿ ಕೊಬ್ಬಿರುವ ತರ್ಕಜ್ಞಾನಿಗಳ ವಾದದ ಸಮರಾಂಗಣವಲ್ಲ; ಸಜೀವ ಸಾಧಕರ ಪ್ರಯೋಗ ಕ್ಷೇತ್ರ, ಸದ್ವಿನಯದ ಸಾಕಾರವಾದಂತಹವರ ಸೇವಾಮಂದಿರ, ಕಾಯಕಜೀವಿಗಳ ಕೂಟ, ಅನುಭಾವಿಗಳ ಸಂಗಮ. ಅಲ್ಲಿ ತಲೆತಲೆಗಳ ತಿಕ್ಕಾಟಕ್ಕಿಂತಲೂ ಮಿಗಿಲಾಗಿ ಹೃದಯದ ಭಾವನೆಗಳ ಮಿಸಿಮಯವಿದೆ; ಬುದ್ಧಿಯು ವಿಕಾಸವಾದಂತೆ, ಭಾವದ ಬೆಳವಣಿಗೆಯೂ ಇದೆ. ಈ ಬಸವಧರ್ಮದ ವೈಶಿಷ್ಟ್ಯ ಬಹಳ ಅಪೂರ್ವ. ಅನೇಕ ಧರ್ಮಗಳು ಉಗಮಿಸುವಾಗ ಗುರುವೊಬ್ಬನ ವಾಣಿಯ ಪ್ರತಿಫಲವಾಗಿ ರೂಪುಗೊಳ್ಳುವುವು. ಆದರೆ ಬಸವಧರ್ಮವು ಶ್ರೀಸಾಮಾನ್ಯನ

ಧರ್ಮ. ಇವರ ಉಗಮವಾಗುವಾಗ ಎಲ್ಲರ ಅನುಭವಕ್ಕೆ ಬೆಲೆಯುಂಟು.'

'ಆದರೆ ಸ್ವತಃ ಪ್ರಭುದೇವರೇ ಬಸವಣ್ಣನನ್ನು 'ಗುಹೇಶ್ವರಲಿಂಗಕ್ಕೆ ನಿಃಕಾಸವಾದೆಯಲ್ಲಾ ಸಂಗನ ಬಸವಣ್ಣ' ಎನ್ನುವರಲ್ಲ ಗುರುಗಳೇ....?' ಮಹಾದೇವಿ ಕೇಳಿದಳು.

'ಅಹುದಮ್ಮ....ಅವರು ಕೇಂದ್ರಶಕ್ತಿ, ವಚನ ಸಾಹಿತ್ಯದ ಕಣದಲ್ಲಿ ಮೇಟಿಯ ಗೂಟ. ಯುದ್ಧದ ಕಾರ್ಯಾಚರಣೆಗೆ ಹೋದಾಗ ಸಮರಾಂಗಣ ದಲ್ಲಿ ಪದಾತಿಗಳು, ರಥಿಕರು, ಅಶ್ವಾರೂಢರು, ಎಲ್ಲರು ಇದ್ದರೂ ಯುದ್ಧದ ಯೋಜನೆಯನ್ನು ರಚಿಸುವ, ಮುಂಸಾಗಲು ಅಪ್ಪಣೆ ನೀಡುವ ಮಹಾ ದಂಡ ನಾಯಕನಿಗೆ ಯುದ್ಧದ ಗೆಲುವು ಅನ್ವಯಿಸುವಂತೆ, ಈ ಧರ್ಮದ ಮಹಾಶಿಲ್ಪಿ, ಮಂತ್ರಪುರುಷ, ಆದಿಗುರು ಬಸವಣ್ಣ.

ಅನುಭವಮಂಟಪ ಎಂಬ ಮಡಿಕೆಯಲ್ಲಿ, ಸದ್ಭಕ್ತಿಯ ಕೆನೆಮೊಸರು ಹಾಕಿ, ಜನಜಾಗೃತಿಯ ಉದ್ದೇಶದ ಕಡೆಗೋಲನ್ನೂರಿ, ನೀತಿವಂತಿಕೆಯ ಹಗ್ಗವನ್ನು ಕಟ್ಟಿ, ಅನೇಕ ಶರಣ-ಶರಣೆಯರು ಅನುಭವದ ಮಥನ ಮಾಡಿ ದಾಗ ಈ ಲಿಂಗಾಯತ ಧರ್ಮದ ನವನೀತ ಹುಟ್ಟಿಬಂದಿದೆ....'

'ಅದಕ್ಕೆ ಅನುಭವಮಂಟಪ ಎಂದು ಏಕೆ ಕರೆಯುತ್ತಾರೆ ಗುರುಗಳೆ?'

'ಜ್ಞಾನವನ್ನು ಪಡೆದುಕೊಳ್ಳಲು ಅನೇಕ ಪ್ರಮಾಣಗಳಿವೆಯಷ್ಟೇ; ಪ್ರತ್ಯಕ್ಷ, ಅನುಮಾನ, ಆಗಮ, ಮುಂತಾದುವುಗಳು. ವಾಙ್ಮನಕ್ಕತೀತ ನಾದ ಪರಮಾತ್ಮನನ್ನು ಈ ಯಾವ ಪ್ರಮಾಣದಿಂದ ತಿಳಿಯಲೂ ಸಾಧ್ಯವಿಲ್ಲ; ಕೇವಲ ಅನುಭವಪ್ರಮಾಣದಿಂದ ಮಾತ್ರ ಎಂದು ಸಾರುವ ಕಾರಣ, ಇದು ಅನುಭವಮಂಟಪ. ಇಲ್ಲಿ ಅನುಭವ ಎಂದರೆ ಕೇವಲ ಇಂದ್ರಿಯಾನುಭವ ವಲ್ಲ; ಹೃದಯಾನುಭವ....ಇಂದ್ರಿಯಾತೀತ ಅನುಭವ.

ಬ್ರಹ್ಮಾಂಡದ ಒಳಹೊರಗೆಲ್ಲ ತುಂಬಿ ತುಳುಕುವ ವಿಶ್ವಚೇತನ ಅಂತ ರಂಗದಲ್ಲಿ ಗುಪ್ತವಾಗಿ ಇದೆ. ಹೊರಮುಖವಾದ ದೃಷ್ಟಿಯನ್ನು ಒಳಮುಖ ಮಾಡಿ ಅರಸುವಂತೆ ಮಾಡುವುದೇ ಈ ಅನುಭಾವ ವಿದ್ಯೆಯ ಗುರಿ. ಬಸವಣ್ಣ ನವರ ಉನ್ನತ ತತ್ತ್ವಗಳು, ಪರಿಶುದ್ಧ ಜೀವನ, ಜನಜಾಗೃತಿಯ ಕಳಕಳಿ. ಲೋಹಚುಂಬಕ ವ್ಯಕ್ತಿತ್ವಗಳು ಸಿಹಿಯು ಇರುವೆಗಳನ್ನು ಆಕರ್ಷಿಸುವಂತೆ ಆಕರ್ಷಿಸುತ್ತಿವೆ. ಇಷ್ಟು ಅಲ್ಪ ಕಾಲಾವಧಿಯಲ್ಲಿ ಹಿಮಾಲಯದ ಸಪಾದಲಕ್ಷ ದೇಶದಿಂದ ಮಹಾದೇವ ಭೂಪಾಲನಂತಹವರು ಅರಸೊತ್ತಿಗೆಯನ್ನು ತೊರೆದು ಬಂದಿದ್ದಾರೆ.

ಕೈಲಾಸಲೋಕವೆಂಬುದು ಇರುವುದು ನಿಜವೋ, ಸುಳ್ಳೋ, ಆದರೆ ಆ

ಮಹಾನುಭಾವನ ಪರುಷಮಯ ಪಾದಸ್ಪರ್ಶದಿಂದ ಕಲ್ಯಾಣ ನಗರವು ಕೈಲಾಸವಾಗಿದೆ ತಾಯಿ. ಈ ಮರ್ತ್ಯದಲ್ಲಿ ಅಸತ್ಯವಿದೆ, ಅಜ್ಞಾನವಿದೆ, ತಿಮಿರವಿದೆ ಎಂದು ತಿರಸ್ಕರಿಸಿ ಸತ್ಯವನ್ನು, ಜ್ಞಾನವನ್ನು, ಬೆಳಗನ್ನು ಅರಸಿಕೊಂಡು ಬಸವಣ್ಣನವರು ಹೋಗಿಲ್ಲ. ದೈವೀಶಕ್ತಿಯನ್ನು ಇಳಿಸಿ ಮರ್ತ್ಯವನ್ನು ದೈವೀಕರಿಸಲು ಪ್ರಯತ್ನಿಸುತ್ತಿದ್ದಾರೆ.

ಮುಂಬರುವ ಮನುಕುಲ 'ಈ ಭುವಿಯಮೇಲೆ ಬಸವಣ್ಣನಂತಹ ಸರ್ವಾಂಗಪರಿಪೂರ್ಣ ಅತಿಮಾನವ ಇದ್ದಿರಲು ಸಾಧ್ಯವೇ?' ಎಂದು ಅಚ್ಚರಿ ಪಡುವಂತಹ ನಿಲುವು ಆ ಅಣ್ಣನವರದು. ಮಾನವ ಜನಾಂಗವು ಸಕಲ ಬಗೆಯ ಸ್ವಾತಂತ್ರ್ಯ ಪಡೆದು, ಸುಪ್ತಶಕ್ತಿಗಳನ್ನು ಆವಿಷ್ಕಾರ ಮಾಡಿಕೊಂಡು, ಈ ಭೂಮಿಯನ್ನೇ ದೈವೀನೆಲೆಯನ್ನಾಗಿ ಪರಿವರ್ತಿಸಿ ಸುಖ-ಆನಂದಗಳ ಸಂಗಮದಲ್ಲಿ ಪ್ರಶಾಂತವಾಗಿ ಬದುಕಲು ಸಾಧ್ಯವಾಗುವ ಮಹಾ ಪ್ರಯೋಗವೊಂದನ್ನು ಧರ್ಮವಿಜ್ಞಾನಿ ಬಸವಣ್ಣನು ಕೈಗೊಂಡಿದ್ದಾನೆ ತಾಯಿ. ಇಂತಹ ಮಹಾನ್ ಕಾಣಿಕೆ ನೀಡುವ ಆ ಅಣ್ಣನಿಗೆ ಜಗತ್ತು ಎಷ್ಟು ಕೃತಜ್ಞತೆ ಅರ್ಪಿಸಿದರೂ ಸಾಲದು. ಬಸವಣ್ಣನವರು, ಅವರ ಸುತ್ತಲೂ ಸಮಾವೇಶವಾಗಿರುವ ಆ ಶರಣರ ಸತ್ಸಂಗದಲ್ಲಿ ಇದ್ದರೆ ಮುಕ್ತಿಪದವಿಯನ್ನು ಸಹ ತಿರಸ್ಕರಿಸಬೇಕೆನಿಸುತ್ತದೆ....' ಗುರುಲಿಂಗದೇವರು ತನ್ಮಯರಾಗಿ ಹೇಳಿದ ಪರಿ, ಮಹಾದೇವಿಯ ಮೇಲೆ ಅಪಾರ ಪರಿಣಾಮ ಬೀರಿತು.

'ಗುರುಗಳೇ.... ನಾನು ಯಾವತ್ತು ಕಲ್ಯಾಣವನ್ನು ಕಂಡೇನು? ನನ್ನ ಧರ್ಮಗುರು ಆ ಪವಿತ್ರಾತ್ಮ ಬಸವಣ್ಣನವರ ಪಾದಗಳಿಗೆ ಆನಂದಭಾಷ್ಪಗಳಿಂದ ಯಾವ ಗಳಿಗೆಯಲ್ಲಿ ಅಭಿಷೇಕ ಮಾಡಿಯೇನು ಎಂದು ಹೃದಯ ಹಂಬಲಿಸುತ್ತಿದೆ....'

'ನಿಜ ಮಹಾದೇವಿ, ಅಲ್ಲಿಗೆ ಹೋಗದೆ ನಿನಗೆ ಪರಿಪೂರ್ಣತ್ವ ಸಾಧ್ಯವಾಗದು. ಸಾಧಕರ ಓರೆಕೋರೆ, ಲೋಪದೋಷಗಳನ್ನು ತಿದ್ದುವ ದೈವೀ ಕಾರ್ಯಾಗಾರವದು. ಚೆನ್ನಬಸವಣ್ಣನವರು ಹೇಳುತ್ತಾರೆ: 'ಮಂಡೆ ಮಾಸಿದಾಗ ಎಣ್ಣೆ ನೀರಿನ ಅಭ್ಯಂಗನ ಮಾಡಬೇಕಂತೆ, ವಸ್ತ್ರ ಮಾಸಿದಾಗ ಮಡಿವಾಳನಿಗೆ ಕೊಡಬೇಕಂತೆ, ಮನದ ಮೈಲಿಗೆ ತೊಳೆಯಬೇಕಾದರೆ ಅನುಭವಗೋಷ್ಠಿಯಲ್ಲಿ ಭಾಗವಹಿಸಿ, ಶರಣರ ಕೈಯಲ್ಲಿ ಹೃದಯದ ಬಟ್ಟೆ ಕೊಟ್ಟು ತೊಳೆಸಿಕೊಳ್ಳಬೇಕಂತೆ!*

* ಚ. ಬ. ವ. ೯೯

ಶರಣರು ಒರೆದೊರೆದು, ಶುದ್ಧೀಕರಿಸಿ ಸಾಧಕರನ್ನು ಶಿವನಿಗೆ ತೊಡಿಗೆಯಾಗಿ ಮಾಡುವರು. ಅಂತೆಯೇ ಪ್ರಭುದೇವರಂತಹ ಮಹಾಯೋಗಿಗಳು ಕೃತಜ್ಞತೆಯಿಂದ ಹೇಳುತ್ತಾರೆ:

> ಅಪ್ಪ್ರಿಯತವ ನುಡಿದು ಅಹಂಕಾರಿಯಾದೆನಯ್ಯಾ,
> ಬ್ರಹ್ಮನ ನುಡಿದು ಭ್ರಮಿತನಾದೆನಯ್ಯಾ.
> ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯಾ.
> ಗುಹೇಶ್ವರ, ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದ
> ನಾನು ಸದ್ಭಕ್ತನಾದೆನಯ್ಯಾ.*

ಅನುಭವಮಂಟಪವು ಹಲವು ನದಿಗಳ ಸಂಗಮ ಸ್ಥಾನದಂತೆ, ಅನೇಕ ದಿವ್ಯ ಚೇತನಗಳ ಒಕ್ಕೂಟ. ಉದಿಸಿದ ವಾಹಿನಿಯು ಹಲವಾರು ಹಳ್ಳಗಳನ್ನು ಇಂಬಿಟ್ಟುಕೊಳ್ಳದೆ ಇದ್ದರೆ, ಬೃಹತ್ತಾದ ನದಿಯೊಡನೆ ಮಿಲನ ಹೊಂದದಿದ್ದರೆ ಅದು ಜೀವನದಿಯಾಗದೆ ಬತ್ತಿ ಹೋಗುವಂತೆ; ನಿನ್ನ ಬಾಳವಾಹಿನಿಯು ಶರಣಸಂಗದ ಸಂಗಮವನ್ನು ಸೇರದಿದ್ದರೆ, ಪರಿಪೂರ್ಣತ್ವವನ್ನು ಸಂಪಾದಿಸದು, ಗುರಿ ಮುಟ್ಟಲಾರದು.

ಮಗಳೇ, ನನ್ನಂತರಂಗದ ಹಂಬಲವೆಂದರೆ ನಿನ್ನ ಜೀವನ ತರಂಗಿಣಿಯೂ ಕಿರು ಸರಸಿಯಂತೆ ನಿಂತಲ್ಲಿ ನಿಲ್ಲದೆ, ಅಪಾರ ಶಕ್ತಿ-ಉತ್ಸಾಹಗಳಿಂದ ವಿಶಾಲ ಕ್ಷೇತ್ರದಲ್ಲಿ ಹರಿದು, ಶರಣ ಸಂಗದ ಸಂಗಮದಲ್ಲಿ ಬೆರೆದು, ಬರಡು ಹೃದಯಗಳಿಗೆ ಭಕ್ತಿಧಾರೆಯನ್ನೆರೆದು ಆತ್ಮವಿಶ್ವಾಸದ ಹಸಿರು ಮೂಡಿಸಿ, ಪರಶಿವ ಸಮುದ್ರದಲ್ಲಿ ಸಮರಸವಾಗಬೇಕೆಂಬುದು! ಶಿವಸಂಕಲ್ಪವೇನಿದೆಯೋ ಬಲ್ಲವರಾರು?'

ಗುರುಲಿಂಗದೇವರು ಗಂಭೀರವಾದ ತನ್ಮಯಭಾವದಲ್ಲಿ ನುಡಿದಾಗ ಅವರ ಒಂದೊಂದು ಮಾತುಗಳೂ ಮಹಾದೇವಿಯ ಚಿತ್ತದ ಪದರ ಪದರಗಳನ್ನು ದಾಟಿ ಸುಪ್ತ ಮನದಲ್ಲಿ ನೆಲೆಗೊಂಡವು. ಹಸಿದ ಮಗುವು ಹಾಲಿಗಾಗಿ ಒಂದೇ ಸಮನೆ ಅಳುವಂತೆ, ಆಕೆಯ ಹೃದಯದ ಕೂಸು ಶರಣರಿಂದ ದೊರೆಯಬಹುದಾದ ಆಧ್ಯಾತ್ಮದ ಹಾಲಿಗಾಗಿ ಅವ್ಯಕ್ತವಾಗಿ ರೋದಿಸಲಾರಂಭಿಸಿತು. ಸದ್ಗುರುಗಳು ಇತ್ತೀಚೆಗೆ ಸಂಗ್ರಹಿಸಿದ ವಚನಗಳ ಕಟ್ಟನ್ನು ಮೌನವಾಗಿ ಪಡೆದು, ಮನೆಯತ್ತ ಹೆಜ್ಜೆ ಹಾಕಿದಳು. ನರನಾಡಿಗಳೆಲ್ಲ, ವೀಣೆಯ ತಂತಿಗಳಂತೆ 'ಕಲ್ಯಾಣ', 'ಬಸವಣ್ಣ', 'ಶರಣರು' ಎಂಬ ಶಬ್ದಗಳನ್ನು ಉಲಿಯತೊಡಗಿದ್ದವು.

---

* ಅ. ವ. ೫೦. ೮೫

೨೩. ಕೌಶಿಕನ ಕಾಕದೃಷ್ಟಿ

ಮಹಾದೇವಿಯ ಬದುಕು ನೆಮ್ಮದಿಯ ನೆಲೆಯಾಗಿತ್ತು. ತಾಯಿ-ತಂದೆಗಳು ಆಕೆಯನ್ನು ಅನುಸರಿಸಿಕೊಂಡು ಹೋಗುವುದಷ್ಟೇ ಅಲ್ಲ, ಆಕೆಯ ಸಾತ್ವಿಕ ಜೀವನದ ಬಗ್ಗೆ, ರಚಿಸುತ್ತಿದ್ದ ವಚನಗಳ ತಾತ್ವಿಕ ಆಳವನ್ನು ಕಂಡು ಅಭಿಮಾನಭರಿತರಾಗಿದ್ದರು. ಒಂದೇ ಗತಿಯಲ್ಲಿ ನಾದಬದ್ಧವಾಗಿ ಬೀಸುವ ಗಾಳಿಯಂತೆ, ಸಮವೇಗದಿಂದ ತೂಗುವ ಉಯ್ಯಾಲೆಯಂತೆ ಏರಿಳಿತಗಳಿಲ್ಲದ ದಿನಚರಿಯೊಡನೆ ಮಹಾದೇವಿಯ ಬದುಕು ಸಾಗುತ್ತಿತ್ತು.

ಆದರೆ ಚನ್ನಮಲ್ಲಿಕಾರ್ಜುನನಿಗೆ 'ತನ್ನ ಪತ್ನಿಯ ಸೀಮಿತ ಆನಂದ ಸಾಕಾಯಿತೇನೋ, ಕೆರೆಯಲ್ಲಿ ವಿಹರಿಸುತ್ತ ಮೈಮರೆತ ಹಂಸಪಕ್ಷಿಯನ್ನು ವಿಶಾಲ ಸರೋವರಕ್ಕೆ ಒಯ್ಯುವ ಆಸೆಯಾಯಿತೇನೋ, ಬಾಳಿನುಯ್ಯಾಲೆಯ ವೇಗವನ್ನು ಪಲ್ಲಟಿಸುವ ಪ್ರಯತ್ನಮಾಡತೊಡಗಿದ. ಸುಳಿಗಾಳಿ ಬಿರುಗಾಳಿಯಾಗಿ,' ಉಯ್ಯಾಲೆಯ ವೇಗ ವರ್ಧಿಸಿತು. ಉಯ್ಯಾಲೆ ತೂಗುವ ರಭಸವನ್ನು ಕಂಡು ತಾನೆಲ್ಲಿ ಬೀಳುವೆನೋ ಎಂದು ಮಹಾದೇವಿ ಭಯಗೊಂಡು ಜೋಕಾಲಿಯ ಹಗ್ಗವನ್ನು ಬಿಗಿದು ಹಿಡಿದಳು. ಆದರೆ ಆ ವೇಗದ ಉದ್ದೇಶ ತಾಯಿ ತಂದೆಯರ ವ್ಯಾಮೋಹಭರಿತ ಪ್ರೇಮದ ಉಯ್ಯಾಲೆಯಿಂದ ಕೆಳಗಿಳಿಸುವುದೇ ಆಗಿತ್ತು ಎಂಬುದನ್ನು ಮೊದಲು ಅರಿಯಲು ಆಕೆಗೆ ಆಗಲಿಲ್ಲ.

ಅದು ಆದುದು ಹೀಗೆ....

ಊರಿನ ವಣಿಕಶ್ರೇಷ್ಠರು ಅಂದು ಸಂಜೆ ಉತ್ಸಾಹದಿಂದ ಆಗಮಿಸಿ, ಓಂಕಾರನ ಮನೆಯಲ್ಲಿ ಸಮಾವೇಶವಾದರು.

'ಓಂಕಾರಶೆಟ್ಟರೆ, ನಮ್ಮ ಕೌಶಿಕ ರಾಜರು ವೈಹಾಳಿಯಿಂದ ಬರುವರಂತೆ. ಧೈರ್ಯಶಾಲಿಗಳು, ಪ್ರಜಾಭಿಮಾನಿಗಳು ಆದ ಅವರನ್ನು ಸ್ವಾಗತಿಸಿ ಗೌರವಿಸೋಣ. ಬೇರೆಬೇರೆ ವೃತ್ತಿಯವರು ಆಯಾ ಕೇರಿಗಳಲ್ಲಿ ಕಮಾನುಗಳನ್ನು ಕಟ್ಟಿ, ತೋರಣಗಳನ್ನು ರಚಿಸಿ ಅವರಿಗೆ ಪುಷ್ಪಮಾಲೆ, ಫಲ ತಾಂಬೂಲಗಳನ್ನು ಸಲ್ಲಿಸುವರು. ನಾವು ಸಹ ವಣಿಕರೆಲ್ಲರ ಪರವಾಗಿ ನಿಮ್ಮ ಮನೆಯ ಮುಂದೆ ಪಟ್ಟದಾನೆಯನ್ನು ತಡೆದು, ನಮ್ಮ ಕಾಣಿಕೆಗಳನ್ನು ಸಲ್ಲಿಸೋಣ. ಈ ಪೇಟೆಯ ಬೀದಿ ದೊಡ್ಡದಿದೆ. ನಿಮ್ಮ ನೇತೃತ್ವದಲ್ಲಿ ಇದು ಸಾಗಬೇಕೆಂದು ನಮ್ಮ ಇಚ್ಛೆ....'

ಓಂಕಾರನು ಸಹಜವಾಗಿ ಒಪ್ಪಿಗೆ ಸಲ್ಲಿಸಿದ. ಅವನ ಮನೆ ಇದ್ದುದು

ಪ್ರಮುಖ ಪೇಟೆಯ ಸೂರ್ಯಬೀದಿಯಲ್ಲಿ. ಇಡೀ ಕೇರಿಯಲ್ಲಿನ ಮನೆಗಳಿಗಿಂತ ಎತ್ತರವಾಗಿ, ಲಕ್ಷಣವಾಗಿ ತಲೆ ಎತ್ತಿನಿಂತ ಎರಡಂತಸ್ತಿನ ಮನೆಯದು. ಮನೆಯ ಭವ್ಯತೆ, ಸಾರಣೆ ಕಾರಣೆಗಳು, ಹೆಬ್ಬಾಗಿಲ ಮೇಲೆ ಮೂಡಿಸಿದ್ದ ಸುಂದರ ಚಿತ್ರಗಳು, ಕಲಾಪೂರ್ಣ ಕಂಭಗಳು ಕಣ್ಸೆಳೆಯುವಂತಿದ್ದವು. ಅಂತಹ ಮನೆಯ ಮುಂದೆ ಮೆರವಣಿಗೆಯನ್ನು ತಡೆದು, ಮಹಾರಾಜನನ್ನು ಸತ್ಕರಿಸುವ ಆಲೋಚನೆ ವಣಿಕರಿಗೆ ಬಂದುದು ಸಹಜವಷ್ಟೆ.

ಕೌಶಿಕ ಮಹಾರಾಜ ಧರ್ಮದಿಂದ ಜೈನನಾದರೂ, ದುರಭಿಮಾನಿಯಾಗಿ ಇರಲಿಲ್ಲ. ಅವನಿಗೆ ಧಾರ್ಮಿಕಪ್ರಜ್ಞೆಗಿಂತ ರಾಷ್ಟ್ರರಕ್ಷಣೆಯ ಪ್ರಜ್ಞೆಯೇ ಮಿಗಿಲಾದುದರಿಂದ, ರಾಜಕೀಯ ಅಧಿಕಾರದಲ್ಲಿ ಇನ್ನೂ ಉನ್ನತ ಹಂತಕ್ಕೇರುವ ಮಹತ್ವಾಕಾಂಕ್ಷೆ ಇದ್ದುದರಿಂದ ಎಲ್ಲ ಧರ್ಮೀಯರನ್ನು ಸಮಚಿತ್ತದಿಂದ ಕಾಣುವ ಸ್ವಭಾವಿಯಾಗಿದ್ದ. ಅವನು ವೈಯಕ್ತಿಕ ನೈತಿಕ ಜೀವನದಲ್ಲಿ ಕುಕೀರ್ತಿಯನ್ನು ಪಡೆದವನಾಗಿದ್ದರೂ, ಸಾರ್ವತ್ರಿಕ ಬದುಕಿನಲ್ಲಿ ಕೀರ್ತಿ ಶಾಲಿಯಾಗಿದ್ದ. ಮೂವತ್ತರ ವಯಸ್ಸನ್ನು ದಾಟಿದ್ದ ರಾಜನು ವಿಲಾಸಿ ಯೆಂದು, ಅಂತಃಪುರದ ಬೆಳವಣಿಗೆಯಲ್ಲಿ ಅತ್ಯಾಸಕ್ತನೆಂದು, ಪಟ್ಟದ ರಾಣಿ ಧರ್ಮಪತ್ನಿಯಾಗಿದ್ದೂ ಅನೇಕ ಉಪಪತ್ನಿಯರ ಸಹವಾಸದಲ್ಲಿ ಆಸಕ್ತ ನೆಂದೂ, ಕರ್ಣಾಕರ್ಣಿಯಾಗಿ ವಾರ್ತೆಗಳು ನುಸುಳಿ ಬಂದು ಪುರಪ್ರಮುಖರ ಕರ್ಣಪಟಲಗಳನ್ನು ಬಡಿದಿದ್ದವು. ಆದರೆ ಅವರು ರಾಜನ ನಾಡು-ನುಡಿಯ ಅಭಿಮಾನಕ್ಕಾಗಿ, ಈ ದುರ್ಗುಣವನ್ನು ಗಮನಿಸುತ್ತಿರಲಿಲ್ಲ. ಅವನ ಅಧಿಕಾರ ಆರೋಹಣದ ನಂತರ ರಾಜಧಾನಿಯ ಪ್ರಾಕೃತಿಕ ಸೌಂದರ್ಯ, ವ್ಯಾಪಾರಿಕ ಚಟುವಟಿಕೆಗಳು, ಆದಾಯಗಳು ಹೆಚ್ಚಿದ್ದವು. 'ಅವನ ವಿಲಾಸಜೀವನವು ವೈಯಕ್ತಿಕ ಬದುಕಿನ ಸೀಮೆಗೊಳಪಟ್ಟುದು, ಸಾರ್ವಜನಿಕ ಹಿತಾಸಕ್ತಿಗಳನ್ನು ಅವನು ಮರೆಯದಿದ್ದರಾಯಿತು' ಎಂದು ಪ್ರಜೆಗಳು ಸಮಾಧಾನ ತಾಳಿ ಕೊಂಡಿದ್ದರು.

ಇಂತಹ ಕೌಶಿಕನು ವೈಹಾಳಿಗೆ ಹೋಗುವವನಿದ್ದ. ವಿದೇಶದಿಂದ ಅಶ್ವ ವ್ಯಾಪಾರಿಗಳು ನೂತನ ಅಶ್ವಗಳನ್ನು ಮಾರಾಟಕ್ಕೆ ತಂದಿದ್ದು, ಅವ್ವುಗಳನ್ನು ಅರಮನೆಯ ಭಂಡಾರವು ಕೊಂಡುಕೊಂಡಿದ್ದಿತು. ಆ ಕುದುರೆಗಳಲ್ಲಿ ಒಂದಂತೂ ರಾಜಾಶ್ವದ ಲಕ್ಷಣಗಳನ್ನು ಹೊಂದಿದ್ದು, ಬಹಳ ಭವ್ಯವಾಗಿತ್ತು. ಕುದುರೆ ಗಳನ್ನು ಇನ್ನೂ ಪಳಗಿಸಿರಲಿಲ್ಲ. ಹೊಸ ಕುದುರೆಗಳನ್ನು ಹತ್ತಿ ಮಣಿಸುವುದು ಅಂದಿನ ಕಾಲದಲ್ಲಿ ದೊಡ್ಡ ಸಾಹಸ ಪ್ರದರ್ಶನವಾಗಿದ್ದಿತು. ಅಂತೆಯೇ ಉತ್ಸಾಹಿ ತರುಣನಾದ ಕೌಶಿಕನು ದೊಡ್ಡ ಕುದುರೆಯನ್ನು ಏರುವ ಅಭೀಪ್ಸೆ

ಹೊಂದಿದ್ದ. ಅವಕ್ಕಾಗಿ ಸಕಲ ಸಿದ್ಧತೆಗಳು ನಡೆಯುತ್ತಿದ್ದವು. ಒಂದು ವಾರ ದಿಂದಲೇ ಅರಮನೆಯ ಸೇವಕರು ಊರ ಹೊರಗಿನ ಬಯಲನ್ನು ಸ್ವಚ್ಛಮಾಡ ತೊಡಗಿದ್ದರು. ಕುದುರೆ ಓಡಿದಾಗ ಧೂಳು ಬಹಳವಾಗಿ ಏಳದಂತೆ ನೆಲವನ್ನು ಕುಟ್ಟಿ, ನೀರು ಚಿಮುಕಿಸಿದ್ದರು. ಬಿದಿರಿನ ಬೇಲಿಯನ್ನು ವಿಸ್ತಾರವಾಗಿ ಹಾಕಿ, ಬೇಲಿಯ ಹೊರಗೆ ಮೆಟ್ಟಿಲುಗಳ ಅಟ್ಟಣಿಗೆ ಕಟ್ಟಿದ್ದರು.

ಅಂದು ಊರಿನಲ್ಲೆಲ್ಲ ಸಂಭ್ರಮ, ಉತ್ಸುಕತೆ, ಕುತೂಹಲಗಳು ಸೂರೆ ಯಾಡುತ್ತಿದ್ದವು. ಆಯಾ ಕೇರಿಯವರು ವಿಶಿಷ್ಟ ತಾಣಗಳಲ್ಲಿ ಸ್ವಾಗತಕ್ಕೆ ತೋರಣಗಳನ್ನು ಕಟ್ಟತೊಡಗಿದ್ದರು. ಓಂಕಾರನ ಮನೆಯ ಮುಂದೆ ಸ್ವಾಗತಿಸುವ ಬಳಗ ವಣಿಕರ ಸಮೂಹವಾದುದರಿಂದ ಉಳಿದೆಲ್ಲ ಕಡೆಗಳಿಗಿಂತ ಇಲ್ಲಿಯ ವೈಭವವು ಕಣ್ಣು ಕುಕ್ಕುತ್ತಿತ್ತು. ಆನೆಯು ಸುಲಭವಾಗಿ ತೂರುವಷ್ಟು ಎತ್ತರದಲ್ಲಿ ತೋರಣದ ನಿರ್ಮಾಣವಾಗಿತ್ತು. ತೆಂಗಿನ ಚಪ್ಪರ, ಕಂಭಕ್ಕೆ ಬಿಗಿದ ಬಾಳೆಯ ದಿಂಡು, ಮೇಲ್ಭಾವಣಿಗೆ ಬೆಲೆಬಾಳುವ ಸೀರೆಗಳನ್ನು ಕಮಲದ ಆಕಾರದಲ್ಲಿ ಕಟ್ಟಲಾಗಿದ್ದಿತು. ಅಲ್ಲಲ್ಲೇ ಮುತ್ತಿನ ಗೊಂಡೆಗಳನ್ನು, ಹವಳದ ಸರಗಳನ್ನು ತೂಗುಬಿಟ್ಟಿದ್ದರು. ಮಲ್ಲಿಗೆಯ ಮೊಗ್ಗಿನ ಜೋಡಣೆ, ಸಂಪಿಗೆಯ ಗುಚ್ಛಗಳ ಆವರಣಗಳು ಮನಮೋಹಕವಾಗಿದ್ದವು. ತೋರಣಗಳ ರಚನೆಯಲ್ಲಿ ಬೇರೆಬೇರೆ ಓಣಿಯವರಿಗೆ ಸ್ಪರ್ಧೆ ನಡೆದಂತೆ ಇತ್ತು.

ಮಹಾದೇವಿಯ ಗೆಳತಿಯರು ಉತ್ಸಾಹದಿಂದ ನಲಿಯತೊಡಗಿದ್ದರು. ಮನೆಯಿಂದ ಹೊರಗೆ ಹೋಗಲು ಅವಕಾಶ ಸಿಕ್ಕಿದ ಸಂಭ್ರಮ ಒಂದು ಕಡೆ ಯಾಗಿದ್ದರೆ, ತಮ್ಮ ಬೆಲೆಬಾಳುವ ಉಡುಗೆ ತೊಡಿಗೆಗಳನ್ನು ಗೆಳತಿಯರ ಮಧ್ಯೆ ಪ್ರದರ್ಶಿಸುವ ಅವಕಾಶ ಸಿಕ್ಕಿದ್ದು ಒಂದು ಕಡೆ; ತಮ್ಮ ನಾಡನ್ನು ಆಳುವ ಅಲಂಕೃತ ರಾಜನನ್ನು ನೋಡುವ ಕುತೂಹಲ ಮತ್ತೊಂದು ಕಡೆ.

ವಸಂತಮಾಸದ ಸುಂದರ ದಿನವದು. ಪ್ರಕೃತಿಯು ಹಸಿರುಡೆಯನ್ನುಟ್ಟು ಕಂಗೊಳಿಸುವ ಮುಂಜಾವಿನ ವೇಳೆಯಲ್ಲಿ ಊರ ಮುಂದಿನ ವಿಶಾಲ ಬಯಲಿ ನಲ್ಲಿ ವೈಹಾಳಿ ನಡೆಯುವುದಿತ್ತು. ಕೌಶಿಕ ಮಹಾರಾಜನು ಅರುಣೋದಯ ವಾದ ಅರ್ಧ ಜಾವದ ನಂತರ ವೈಹಾಳಿಗೆ ಹೋಗಿ, ಅದನ್ನು ಪೂರೈಸಿ ಅಲ್ಲಿ ನಿರ್ಮಾಣವಾದ ವಿಶ್ರಾಂತಿಧಾಮದಲ್ಲಿ ಮಧ್ಯಾಹ್ನ ವಿಶ್ರಮಿಸಿಕೊಂಡು ಇಳಿ ಹೊತ್ತಿನಲ್ಲಿ ಊರ ದ್ವಾರದಿಂದ ಅರಮನೆ ತನಕ ಮೆರವಣಿಗೆಯಲ್ಲಿ ಹೋಗುವು ದೆಂದು ನಿಶ್ಚಿತವಾಗಿದ್ದಿತು. ಮಹಾದೇವಿಯ ಓರಗೆಯ, ಕುಮುದ, ಶಾರದ, ಶೈಲಜೆಯರೂ ವೈಹಾಳಿಯನ್ನು ನೋಡುವ ಉತ್ಸುಕತೆಯಲ್ಲಿದ್ದರು. ಅದಕ್ಕಾಗಿ

ಕಮಲಾಕ್ಷಿ ಸಹ ತನ್ನ ಎಂಟು ತಿಂಗಳ ಮಗುವನ್ನು ಎತ್ತಿಕೊಂಡು ತೌರಿಗೆ ಬಂದಿದ್ದಳು.

ಹಿಂದಿನ ದಿನವೇ ಅವರೆಲ್ಲ ಮಹಾದೇವಿಯ ಮನೆಯಲ್ಲಿ ಸಮಾವೇಶವಾಗಿದ್ದರು. ವಿಚಾರ, ನಡೆ-ನುಡಿ ಎಲ್ಲದರಲ್ಲೂ ಅವರ ಮಟ್ಟವನ್ನು ದಾಟಿ ಮಹಾದೇವಿ ಮುಂದೆ ಹೋಗಿದ್ದರೂ, ಅವಳನ್ನು ತಮ್ಮ ಸಂಭಾಷಣೆಯಲ್ಲಿ ಭಾಗಿಯಾಗುವಂತೆ ಮಾಡಲು ಪ್ರಯತ್ನಿಸುತ್ತಿದ್ದರು.

‘ನಾಳೆ....ನಾವೆಲ್ಲರೂ ಪೈಹಾಳಿ ನೋಡಲು ಹೋಗೋಣವೆ....?’ ಕುಮುದೆ ಉತ್ಸುಕತೆಯಿಂದ ಕೇಳಿದಳು. ಹೆರಿಗೆಗಾಗಿ ತೌರಿಂಗೆ ಬಂದಿದ್ದಳಾಕೆ.

‘ಹೋಗೋಣ; ನಾನು ತಿಳಿ ನೀಲಿ ಬಣ್ಣದ ಸೀರೆಯನ್ನುಡುವೆ; ನೀನು ಯಾವುದು ಉಡುವೆಯೋ ಕಮಲಾ....?’ ಶಾರದೆ ಕೇಳಿದಳು.

‘ನನ್ನ ಮಗನನ್ನು ಬಿಟ್ಟು ಬರಲಿಕ್ಕೆ ಆಗಲ್ಲಪ್ಪ: ಪೈಹಾಳಿ ಎಷ್ಟು ಹೊತ್ತು ಆದೀತೇನೋ. ಅದಕ್ಕೆ ನಾನು ಕರಿಯ ರೇಷಿಮೆ ಸೀರೆ ಉಡುವೆ; ಕೊಳೆಯಾದರೆ ಅಷ್ಟು ಕಾಣದು....’

‘ಮದುವೆಯಲ್ಲಿ ಕೊಟ್ಟ ರತ್ನಹಾರ, ಕಿವಿಯಲ್ಲಿ ತೂಗೋಲೆ ಹಾಕಿಕೊಳ್ಳುವೆ. ಎಲ್ಲರೂ ಒಂದೇ ರೀತಿಯಲ್ಲಿ ಹಾಕೋಣವೆ....?’ ಕುಮುದೆ ಕೇಳಿದಳು.

‘ನನ್ನ ಬಳಿ ಬರೀ ಓಲೆ, ಬಂಗಾರದ ಸರವಷ್ಟೇ ಇದೆ. ರತ್ನಹಾರ, ತೂಗೋಲೆ ಇಲ್ಲವಪ್ಪಾ....’ ಬಾಲ ವಿಧವೆ ಶಾರದೆ ಖಿನ್ನಳಾಗಿ ಹೇಳಿದಳು.

ಮೌನವಾಗಿ ಸಂಭಾಷಣೆಯನ್ನು ಆಲಿಸುತ್ತ, ವಿಮರ್ಶಿಸಿ ನಗುತ್ತಿದ್ದ ಮಹಾದೇವಿ ಹೇಳಿದಳು:

‘ನನ್ನವು ಇವೆ....ಅಪ್ಪೆಯ ಬಳಿ ಇರಬೇಕು. ಇಸಿದುಕೊಡುವೆ, ಹಾಕಿಕೊಂಡು ಹೋಗಿಬನ್ನಿರಿ....’

‘ನೀನು ಬರಲ್ವೇನೆ....?’ ಎಲ್ಲರೂ ಒಕ್ಕೊರಲಿನಿಂದ ಕೇಳಿದರು.

‘ಇಲ್ಲವಪ್ಪಾ....ಈಗ ಮಲ್ಲಿಗೆ ಹೂವು ಹೇರಳವಾಗಿ ಸಿಗುವವು. ನನಗೆ ಬೆಳಗಿನ ವೇಳೆಯಲ್ಲಿ ಪೂಜೆ ಮಾಡಲು ಅಮಿತಾನಂದ; ಅಲ್ಲದೆ ಪೂಜೆಯ ನಂತರ ಚನ್ನಬಸವಣ್ಣನವರ ಮಂತ್ರಗೋಪ್ಯವನ್ನು ಓದಬೇಕಾಗಿದೆ....’

‘ಇವೆಲ್ಲ ದಿನಾಲು ಇದ್ದುದ್ದೇ....ಪೈಹಾಳಿ ನಿನಗೆ ಎಂದು ಸಿಗಬೇಕೆ....?’ ಕುಮುದ ನಿರಾಶಳಾಗಿ ನುಡಿದಳು.

‘ಅದನ್ನು ನೋಡಿದರೆ ಬರುವ ಭಾಗ್ಯ ಅಷ್ಟರಲ್ಲೇ ಇದೆ! ಆ ವೇಳೆಯನ್ನೂ ಪೂಜೆಗೆ ಮೀಸಲಿಟ್ಟರೆ ಮನುಷ್ಯನ ಸಾಹಸವನ್ನು ನೋಡುವ ಬದಲು, ಶಿವನ

ಪ್ರೇಮುವನ್ನು ಉಂಡಂತಾಗುವುದು....'

'ಮಹಾದೇವಿ ಈ ವಯಸ್ಸಿಗೆಲ್ಲ ತಲೆನಡುಗುವ ಅಡಗೂಲಜ್ಜಿಯಂತೆ ಮಾತನಾಡುವಳು....' ಶಾರದೆ ಟೀಕಿಸಿದಳು.

'ನೀವೆಲ್ಲರೂ ಮೈದಾನಕ್ಕೆ ಹೋಗಿ ಬಂದು, ನಡೆದುದನ್ನು ಹೇಳಿರಿ. ನಾನೂ ಮಹಾದೇವಿ ಇಲ್ಲೇ ಇದ್ದು ಮಧ್ಯಾಹ್ನದ ಮೆರವಣಿಗೆ ನೋಡುತ್ತೇವೆ. ಶೈಲಜೆಯು ಮುಕ್ತಾಯದ ಮಂಗಳ ಹಾಡಿದಳು. ಮಹಾದೇವಿಯನ್ನು ಬಿಟ್ಟುಹೋಗಲಾರದ ಹೃದಯ ಆಕೆಯದು.

ಎರವಲು ಪಡೆದ ಸೀರೆ ಒಡವೆಗಳನ್ನು ಧರಿಸಿ ಗೆಳತಿಯರು ಸಕಲಾಲಂಕಾರ ಭೂಷಿತರಾಗಿ ಬೆಳಿಗ್ಗೆಯೇ ಮನೆ ಬಿಟ್ಟರು. ವೈಹಾಳಿಯ ರಾಜಪರಿವಾರವು ಬೆಳಿಗ್ಗೆ ಹೊರಟಾಗ, ರಾಜನು ಮುಚ್ಚಿದ ಮೇನೆಯಲ್ಲಿ ಕುಳಿತು ಸಾಗಿದನು.

ಸುಪ್ರಭಾತದ ಸುಂದರ ವಾತಾವರಣದಲ್ಲಿ ವೈಹಾಳಿ ಮೊದಲಾಯಿತು. ಎತ್ತರವಾದ ಬಿಳಿಯ ಕುದುರೆ ದಷ್ಟಪುಷ್ಟವಾಗಿ ಸುಂದರವಾಗಿದ್ದಿತು. ಹಾಲಿನಂತಹ ಮೈಬಣ್ಣ, ತುಂಬಿಕೊಂಡ ಮಾಂಸಖಂಡಗಳು, ತಲೆ ಎತ್ತಿ ನಿಂತಾಗ ಕಾಣುವ ಧೀರಭಂಗಿ, ನವಿರುನವಿರಾಗಿ ಎದ್ದು ನಿಂತ ಬಿಳಿಯ ಕೂದಲು, ಹೊಳೆಯುವ ಕಂದು ಕೂದಲು ಮಿಶ್ರಿತ ಬಾಲ, ಸುಂದರ ಕಣ್ಣುಗಳು; ಜನರ ಮನಸ್ಸನ್ನು ಬಹುವಾಗಿ ಆಕರ್ಷಿಸಿದ್ದವು. ಜನರು ಮುಂಜಾವಿನಿಂದಲೇ ನೆರೆದು ಬಿದಿರಿನ ಕಟಾಂಜನದ ಸುತ್ತಲೂ ನಿಂತುಕೊಳ್ಳತೊಡಗಿದ್ದರು. ಕೊರಳಿಗೆ ಬಿಗಿದ ಹಗ್ಗವನ್ನು ಹಿಡಿದು ಕುದುರೆಯನ್ನು ತಂದು ಕಟಾಂಜನದ ದ್ವಾರದಲ್ಲಿ ಸಡಲಿಸಿದಾಗ ಸ್ವತಂತ್ರವಾದ ಅದು ಆವರಣದಲ್ಲಿ ಸ್ವಚ್ಛಂದವಾಗಿ ನುಗ್ಗಿತು. ಕೆಲವೇ ಕ್ಷಣಗಳಲ್ಲಿ ರಾಜನೂ ಮೇನೆಯಿಂದ ಕೆಳಗಿಳಿದು ಉತ್ಸಾಹದಿಂದ ಬಿದಿರಿನ ಆವರಣವನ್ನು ಹೊಕ್ಕ. ತಲೆ ಎತ್ತಿ ಜನಸಮೂಹವನ್ನು ದೃಷ್ಟಿಸಿದ ಕುದುರೆ ಕೆಲೆಯಿತು. ರಾಜನು ಉತ್ತರೀಯವನ್ನು ಕಳಚಿ ಸೇವಕರ ಕೈಗಿತ್ತು, ಕಣದೊಳಗೆ ನಡೆದಾಗ ಕುದುರೆಯು ಠೀವಿಯಿಂದ ರಾಜನನ್ನು ನೋಡಿ ಹೂಂಕರಿಸಿತು.

ಕುದುರೆಯನ್ನು ನೋಡಿ ರಾಜನು ಉತ್ಸಾಹಿತನಾದ. ಒಂಬತ್ತು ಗೇಣಿನ, ಶುಭ ಲಕ್ಷಣಗಳುಳ್ಳ ಆ ರಾಜಾಶ್ವ ರಾಜನನ್ನು ದೃಷ್ಟಿಸಿ ತನ್ನ ಬಾಲವನ್ನೊಮ್ಮೆ ಎತ್ತಿತು. ಅದರ ಜವೆಗಳೆಲ್ಲ ನಿಮಿರಿ ನಿಂತವು. ಕೈಗೆ ಸಿಗದಂತೆ ಓಡತೊಡಗಿತು. ಖುರಪುಟಧ್ವನಿ ಶೀಘ್ರವಾಗಿ ಕೇಳಿಬರತೊಡಗಿತು. ಅದು ಬಿದಿರ ಆವರಣವನ್ನು ಸುತ್ತುತ್ತ ಚಲಿಸುವಾಗ ಅಡ್ಡದಾರಿಯಲ್ಲಿ ಹೋಗಿ ಹಿಡಿಯಲೆತ್ನಿಸಿದ. ಕೌಶಿಕನಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರೂ, ಹಲವಾರು ಕ್ಷಣಗಳಲ್ಲಿ

ಅಶ್ವರಹಸ್ಯವನ್ನು ಬಲ್ಲ ಕೌಶಿಕ ಓಡುವ ಕುದುರೆಯನ್ನು ಹಿಡಿದು, ಬೆನ್ನಿನ ಮೇಲೆ ಹಾರಿ ಕುಳಿತು, ಕೊರಳ ಹಿಂಭಾಗದ ಕೂದಲನ್ನು ಹಿಡಿದ. ಮನುಷ್ಯನನ್ನು ಹತ್ತಿಸಿಕೊಂಡು ರೂಢಿ ಇರದ ಕುದುರೆ ಅವನನ್ನು ಕೆಳಗೆ ಕೆಡಹಲು ಪ್ರಯತ್ನಿಸಿ, ನಾಗಾಲೋಟದಿಂದ ಓಡಿತು. ಏನಾದರೂ ರಾಜನು ತನ್ನ ಬಿಗಿಯನ್ನು ಸಡಲಿಸದಾದಾಗ ಕುದುರೆ ಓಡಿ ಓಡಿ ದಣಿಯಿತು. ಓಡುವ ಕುದುರೆಯ ಮೇಲೆ ಕುಳಿತ ರಾಜನು ಸಮೀಪಿಸಿದಾಗ ಸೇವಕರು ಎಚ್ಚರಿಕೆಯಿಂದ ಕೊರಳಪಟ್ಟಿ, ಕಡಿವಾಣಗಳನ್ನು ಎಸೆದರು. ಚಾಕಚಕ್ಯತೆಯಿಂದ ಹಿಡಿದ ಕೌಶಿಕನು ಕುದುರೆಗೆ ಕೊರಳಪಟ್ಟಿಯನ್ನು ಹಾಕುವ ಪ್ರಯತ್ನಮಾಡಿ, ಯಶಸ್ವಿಯಾದನು. ಕುದುರೆಯ ಹೊರಳೆಗಳು ಬಿಸಿಯುಸಿರನ್ನು ಬಿಡುತ್ತಿದ್ದವು; ಬಾಯಿಯಲ್ಲಿ ನೊರೆ ಬರುತ್ತಿತ್ತು. ರಾಜನ ಮುಖವೂ ಕೆಂಪಾಗಿತ್ತು; ನೀಳವಾಗಿ ಮೇಲೆ ಸಾಗಿ ಹಿಂದೆ ಬಿದ್ದಿದ್ದ ಕೂದಲುಗಳು ಚದುರಿದ್ದವು. ರಕ್ತಚಲನೆಯ ತೀವ್ರತೆಯಿಂದ, ಬಿಸಿಲಿನ ಸಂಪರ್ಕದಿಂದ ಮುಖವು ಕಾಂತಿಯುಕ್ತವಾಗಿದ್ದಿತು. ಕುದುರೆ ಕಡೆಗೂ ಸೋಲನ್ನು ಒಪ್ಪಿಕೊಂಡಿತು. ಕುದುರೆಯ ಶರೀರವಲ್ಲಿ ಬೆವರು ಹರಿದು, ನೆಗೆದಾಟ ಕಡಿಮೆಯಾಗಿ ಮೆಲ್ಲನೆ ಹೆಜ್ಜೆ ಹಾಕತೊಡಗಿದಾಗ, ರಾಜನು ಕಡಿವಾಣವನ್ನು ಏರಿಸಿ, ಪ್ರೇಮದಿಂದ ಅದರ ಮೈಯನ್ನು ಸವರಿದ. ದಣಿದ ಕುದುರೆ ಆ ಪ್ರೇಮದ ಸೇವಂಕೆಗೆ ಮನಸೋತು ನಿಂತಾಗ ರಾಜನು ಕುದುರೆಯ ಬೆನ್ನಿನಿಂದ ಕೆಳಕ್ಕೆ ಹಾರಿ, ಕೊರಳನ್ನು ನೀವಿ ಸೀವಿಯ ಹೆಜ್ಜೆಯನ್ನಿಕ್ಕುತ್ತ ದ್ವಾರದ ಬಳಿಗೆ ಬರತೊಡಗಿದಾಗ ಜನರು ಜಯಘೋಷ ಮಾಡಿದರು.

ಕುದುರೆಯೊಡನೆ ಬಂದು ನಿಂತ ರಾಜನಿಗೆ ಪಟ್ಟದರಾಣಿ ಯಶೋಮತಿ ಮಾಲೆಯನ್ನು ಹಾಕಿ ಆರತಿಯನ್ನು ಬೆಳಗಿ, ತಿಲಕವನ್ನಿಟ್ಟು ಅಭಿಮಾನದಿಂದ ನೋಡಿದಳು. ಕುದುರೆಗೂ ಆರತಿ ಬೆಳಗಿದರು. ಮಣಿಸಿದ ಕುದುರೆಯ ಕಡಿವಾಣವನ್ನು ಸೇವಕರ ಕೈಗೆ ಕೊಟ್ಟು, ರಾಜನು ತನಗಾಗಿ ವಿಶ್ರಾಮಕ್ಕೆಂದು ನಿರ್ಮಿಸಿದ ಗುಡಾರದ ಒಳಗೆ ನಡೆದ.

ಸೂರ್ಯನು ಪಶ್ಚಿಮದ ಕಡೆಗೆ ಪ್ರಯಾಣ ಬೆಳೆಸಿ ಶಾಂತಮುಖನಾಗ ತೊಡಗಿದ್ದಂತೆಯೇ ಮೆರವಣಿಗೆಯ ಸಿದ್ಧತೆ ಆರಂಭವಾಯಿತು. ಜನರು ಚದುರಿಹೋಗಿ ಪಟ್ಟಣದ ಸ್ವಾಗತ ಸ್ಥಾನಗಳಲ್ಲಿ ಮೆರವಣಿಗೆಯನ್ನು ನೋಡಲು ನಿಂತರು. ಮಹಾದೇವಿಯ ಗೆಳತಿಯರು ತುಂಬಿದ ಉತ್ಸಾಹದಿಂದ ಮನೆಗೆ ನಡೆದು ವೈಹಾಳಿಯ ವಿವರವನ್ನು ವರ್ಣಿಸಿದರು. ರಾಜನ ಸಾಹಸವನ್ನು, ಕುದುರೆಯ ವಿಚಕ್ಷಣತೆಯನ್ನು, ಅದನ್ನು ಚಾಕಚಕ್ಯತೆಯಿಂದ ಪಳಗಿಸಿದ

ಮಿಯನ್ನು ವರ್ಣಿಸಿದಷ್ಟೂ ತೃಪ್ತಿ ಇಲ್ಲವಾಗಿದ್ದಿತವರಿಗೆ. ಮಹಾದೇವಿ-ಶೈಲಜೆಯರು ಯಾವುದೋ ಭಾಗ್ಯವನ್ನು ಕಳೆದುಕೊಂಡಂತೆ, ತಾವು ಅದನ್ನು ಪಡೆದುಕೊಂಡು ಧನ್ಯರಾದಂತೆ ಮಾತನಾಡುತ್ತಿದ್ದರು.

'ಆ ಪುಣ್ಯವಂತೂ ಸಿಗಲಿಲ್ಲ. ಸಂಜೆಗಾದರೂ ಮೆರವಣಿಗೆಯನ್ನು ನೋಡೆ....' ಕುಮುದ ಹೇಳಿದಳು.

'ಅವನ್ನೇನು ನೋಡುವುದು ಬಿಡು ಕುಮುದಾ. ಅರಸನೂ ನಮ್ಮಂತೆಯೇ ಮನುಷ್ಯ....!' ನಿರಾಸಕ್ತಳಾಗಿ ಉತ್ತರಿಸಿದಳು ಮಹಾದೇವಿ.

ಮತ್ತೊಮ್ಮೆ ತರುಣಿಯರೆಲ್ಲ ಅಲಂಕರಿಸಿಕೊಂಡರು. ಮಹಾದೇವಿ ತಾನುಟ್ಟ ಬಿಳಿಯ ರೇಷಿಮೆಯ ಸೀರೆಯ ಹೊರತು ಏನನ್ನೂ ಧರಿಸಲು ಇಚ್ಛಿಸಲಿಲ್ಲ. ಅವಳನ್ನು ಒಪ್ಪಿಸಲು ಸೋತು ತಮ್ಮತಮ್ಮ ಅಲಂಕಾರದಲ್ಲಿ ಅವರು ಮಗ್ನರಾದರು.

ಲಿಂಗಮ್ಮ ಮಗಳ ಬಳಿ ಬಂದು ಹೇಳಿದಳು :

'ಮಹಾದೇವಿ, ಇಂದು ವರ್ತಕಶ್ರೇಷ್ಠರೆಲ್ಲ ಮನೆಯ ಮುಂದೆ ನೆರೆಯುವರು. ಮೆರವಣಿಗೆ ಬರುವತನಕ ಪಡಸಾಲೆಯಲ್ಲಿ ಮಾತುಕತೆಯಲ್ಲಿ ಮಗ್ನರಾಗಿರುವರು. ನೀರು ನಿಡಿ, ಹಣ್ಣು ಹಂಪಲನ್ನು ಕೊಡಬೇಕಾಗುವುದು ; ನೀನೂ ಅಲಂಕಾರ ಮಾಡಿಕೊಳ್ಳವ್ವ....'

'ಇರಲಿ ಬಿಡವ್ವ. ನನ್ನ ಅಲಂಕಾರದಿಂದ ಅವರಿಗೇನಾಗಬೇಕಾಗಿದೆ. ನನ್ನ ಚನ್ನಮಲ್ಲಿಕಾರ್ಜುನನನ್ನೊಲಿಸುವ ಸದ್ಗುಣಗಳ ಆಭರಣಗಳನ್ನು ಧರಿಸತೊಡಗಿರುವೆ....'

'ಅದು ಅಂತರಂಗದ ಆಭರಣವಾಯಿತು ; ಜಗತ್ತಿಗೆ ಕಾಣದು. ನೀನು ಬಚ್ಚೋಲಿ ಗೌರಮ್ಮನಂತೆ ಇದ್ದರೆ ಇವರ ದರಿದ್ರತನ ಎಷ್ಟು ಎಂದು ಜನರು ಆಡಿಕೊಳ್ಳರೇ ? ಅನ್ನಿಸಿಕೊಳ್ಳಲು ನಿನಗೆ ನಾಚಿಕೆಯಾಗದೆ ?'

'ನನ್ನ ಪಾಲಿನದೂ ನಿನ್ನ ಮೈಮೇಲೆ ಇರಲವ್ವಾ. ನಿನಗೆ ನಾಚಿಕೆಯಾಗುವುದಿದ್ದರೆ ನಾನು ನನ್ನ ಕೋಣೆಯನ್ನು ಬಿಟ್ಟು ಹೊರಗೇ ಬರುವುದಿಲ್ಲ. ಬಂದರೂ ನನ್ನ ಮಗಳು ಎಂದು ಹೇಳಿಕೊಳ್ಳಲೇಬೇಡ....' ನಕ್ಕು ನುಡಿದು ಮುಖವನ್ನು ತಿರುವಿದಳು.

ಲಿಂಗಮ್ಮ ಮೌನ ತಾಳಿದಳು. ಮಹಾದೇವಿಯ ಒಡನಾಡಿಗಳ ಸಂಭ್ರಮ ನೋಡಿದಾಗ ಅವಳ ಹೃದಯವು ಕಲುಕುತ್ತಿತ್ತು. 'ನನ್ನ ಮಗಳೂ ಹೀಗಿಲ್ಲವಲ್ಲಾ' ಎಂದು ಮನಸ್ಸಿನಲ್ಲಿ ಮರುಗುತ್ತಿದ್ದಳು. ಅಕ್ಕರೆಯಿಂದ ಕುಮುದೆಯನ್ನು ಕರೆದು ಬೆಲೆಬಾಳುವ ಸೀರೆಯನ್ನುಡಿಸಿ, ಒಡವೆಗಳನ್ನು ಹಾಕಿದಳು.

ಸಿರಿವಂತರ ಹೆಂಗೆಳೆಯರು ನಡುಮನೆಯಲ್ಲಿ ಕುಳಿತಾಗ ಕುಮುದೆಯನ್ನು ಹೊಗಳುವ ನೆಪದಲ್ಲಿ, 'ದೃಷ್ಟಿಯಾಗುವಂತೆ ಕುಮುದ ಕಾಣುತ್ತಾಳೆ....ನಮ್ಮ ಮಹಾದೇವಿಯ ಸೀರೆ, ಒಡವೆ ಎಷ್ಟು ಚೆನ್ನಾಗಿ ಒಪ್ಪಿವೆಯಲ್ಲೇ?' ಎಂದು ಆಗಾಗ ಅನ್ನುವುದರಲ್ಲಿ ಲಿಂಗಮ್ಮನು ಸಮಾಧಾನಪಟ್ಟುಕೊಂಡಳು.

ಬೆಳಗಿನ ವೈಹಾಳಿಯನ್ನು ನೋಡಿಬಂದ ಕೆಲವರು ನೋಡಹೋಗದ ಇತರರಿಗೆ ಉತ್ಸಾಹದ ಮಾತುಗಳ ಮೂಲಕ ಸಾಹಸವನ್ನು ಬಣ್ಣಿಸುವಾಗಲೇ 'ಉತ್ಸವ ಬಂತು....' ಎಂದು ಪಡಸಾಲೆಯಲ್ಲಿನ ವಣಿಕರು ಮೇಲೆದ್ದು ಉತ್ತರೀಯಗಳನ್ನು ಕೊಡವಿಕೊಳ್ಳುತ್ತ, ಪೇಟಗಳನ್ನು ಸರಿಪಡಿಸಿಕೊಂಡರು. ತರುಣಿಯರು ಉತ್ಸಾಹದಿಂದ ನವಿಲಿನಂತೆ ಕುಣಿಯುತ್ತ ಮಹಡಿಯನ್ನು ಏರಿದರು.

ಹರದರ ಬಳಗವು ಮಾಡಿಕೊಂಡ ಸಿದ್ಧತೆಯನ್ನು ಮತ್ತೊಮ್ಮೆ ಗಮನಿಸಿ, ತೃಪ್ತಿ ಎನಿಸಿದಾಗ ಸಾಲುಗಟ್ಟಿ ಬೀದಿಯಲ್ಲಿ ನೆರೆಯಿತು. ವಯಸ್ಕ ಹೆಂಗೆಳೆಯರು ಮನೆಯ ಮುಂಭಾಗದಲ್ಲಿ ನಿಂತರು. ತರುಣಿಯರು ಮಹಡಿಯನ್ನು ಏರಿ, ತೊಡೆ ಎತ್ತರದ ಮರದ ಕಟಾಂಜನದ ಒಳ ವಲಯದಲ್ಲಿ ನಿಂತರು. ಶೈಲಜೆ ಒತ್ತಾಯಪೂರ್ವಕವಾಗಿ ಮಹಾದೇವಿಯನ್ನು ಹೊರಗೆ ಕರೆದು ತಂದಳು. ತನ್ನ ಮನೆಯ ಮಹಡಿಯ ಮೇಲೆ ನಿಂತು ಸಹಜ ಕುತೂಹಲದಿಂದ ಉತ್ಸವವನ್ನು ವೀಕ್ಷಿಸಿದರೆ ತಪ್ಪೇನೂ ಇಲ್ಲ, ಎಂದು ಮಹಾದೇವಿ ಶೈಲಜೆಯ ಪ್ರೇಮಕ್ಕೆ ಕಟ್ಟುಬಿದ್ದು ಹೊರಗೆ ಬಂದಳು.

ಅಷ್ಟರಲ್ಲಿ ಕಾಲಾಳುಗಳ ಸಮೂಹವು ಕ್ರಮಬದ್ಧವಾಗಿ ಹೆಜ್ಜೆಯನ್ನು ಹಾಕುತ್ತ ಬಂದು ಸಿದ್ಧತೆಯನ್ನು ಎಚ್ಚರಿಕೆಯಿಂದ ಗಮನಿಸಿತು. ಅದರ ಹಿಂದೆ ವಾದ್ಯಘೋಷ ನಡೆಯುತ್ತಿತ್ತು. ಯುದ್ಧ ವಾದ್ಯಗಳಾದ ಕಹಳೆ, ಭೇರಿ, ನಿಸ್ಸಾಳ, ತಮಟೆಗಳು ಕುತೂಹಲವನ್ನು ಕೆರಳಿಸುವಂತೆ ಮೊರೆಯತೊಡಗಿದ್ದವು. ಅವರ ಹಿಂದೆ ಅಶ್ವಸೈನ್ಯ; ಸುಂದರವಾದ ಅಶ್ವಗಳು ಕ್ರಮಬದ್ಧವಾಗಿ ಠೀವಿಯಿಂದ ಹೆಜ್ಜೆ ಹಾಕುತ್ತಲಿದ್ದವು. ಅವುಗಳ ಹಿಂದೆ ವಿವಿಧ ವೇಷಗಳನ್ನು, ಕವಾಯಿತುಗಳನ್ನು ಪ್ರದರ್ಶಿಸುವ ಶೂರರ ಗುಂಪುಗಳು. ಇವರ ಹಿಂದೆ ಕವಿ, ಗಮಕಿಗಳ ಸಮೂಹ, ವೇದಘೋಷ ಮಾಡುವ ವಿಪ್ರರ ಕಿಂಥಿಣಿ; ಅವರ ಹಿಂದೆ ಬೆಳಗಿನ ವೇಳೆ ಪಳಗಿಸಿದ ಶ್ವೇತಾಶ್ವ.

'ನೋಡ್ರೆ....ಅದೇ ಕುದುರೆ....' ಶಾರದೆ ಉತ್ಸಾಹದಿಂದ ತೋರಿಸಿದಳು. ಒಂಭತ್ತು ಗೇಣಿನ ಎತ್ತರದ ಕುದುರೆ ಠೀವಿಯ ಹೆಜ್ಜೆಗಳನ್ನು ಹಾಕುತ್ತಿತ್ತು. ಅದಕ್ಕೆ ವಿಶೇಷ ಅಲಂಕಾರ ಮಾಡಿದ್ದರು. ಮುತ್ತು ರತ್ನಗಳಿಂದ

ವಾದ ಮೊಗವಾಡ, ಅಷ್ಟೇ ಸುಂದರ ಕತ್ತಿನ ಪಟ್ಟಿ, ಎಲಪದ ಅರಳೆಯನ್ನು ತುಂಬಿ, ಬೆಲೆಬಾಳುವ ಕೆಂಪು ಚೀಲ ತೊಡಿಸಿ, ಕುದುರೆಯ ಬೆನ್ನಿಗೆ ಹಾಕಿದ ತಡಿ, ಬೀಸುಗಾಳಿಗೆ ಅಲುಗುವ ಕುತ್ತಿಗೆಯ ಜವೆ, ನಿಜಕ್ಕೂ ಸುಂದರ ಅಶ್ವ ಅದಾಗಿದ್ದಿತು. ಕುದುರೆಯ ಹಿಂದೆ ಸ್ತುತಿಪಾಠಕರು, ವಂಧಿಮಾಗಧರು. ಅವರು ನಾದಬದ್ಧವಾಗಿ ಬಿರುದುಗಳನ್ನು ಕೂಗುತ್ತಿದ್ದರು.

'ಜಯ ಜಯ ಕೌಶಿಕ ಮಹಾರಾಜ, ಸಾಹಸಾಭರಣ,
ಅಪ್ರತಿಮಶೂರ, ಚೌಷಷ್ಟಿ ವಿದ್ಯಾ ಪ್ರವೀಣ.
ಜಯಜಯ ರಸಿಕ ಚಕ್ರೇಶ್ವರ, ಜನಾನುರಾಗಿ ಜಯಜಯ'

ಜಯಘೋಷದ ಹಿಂದೆ ಮಂಜುಳಮಯವಾಗಿ ಮಧುರ ವಾದ್ಯಗಳು ಮೊಳಗುತ್ತಿದ್ದವು. ಅವನ್ನು ಹಿಂಬಾಲಿಸಿ ಹೆಂಗೆಳೆಯರು ಆರತಿಗಳನ್ನು, ಮಂಗಲ ಪರಿಕರಗಳನ್ನು ಹಿಡಿದು ಸಾಗುತ್ತಿದ್ದರು. ಅರಮನೆಯ ವಿಳಾಸಿನಿಯರು ಬಣ್ಣಬಣ್ಣದ ಸೀರೆಗಳನ್ನುಟ್ಟು, ಬಗೆಬಗೆಯ ಆಭರಣಗಳಿಂದ ಶೃಂಗರಿಸಿಕೊಂಡು ಕಳಸಗಳನ್ನು ಹಿಡಿದು ಸಾಗಿದ್ದರು.

'ಅವರನ್ನು ನೋಡೆ ಕುಮುದಾ....ಎಷ್ಟೆಷ್ಟು ಚಂದವಾಗಿದ್ದಾರೆ....!' ಶಾರದ ಉದ್ಗರಿಸಿದಳು.

'ಚೆಂದವಾಗಿರುವವರನ್ನು ಮಾತ್ರವೇ ಅಂತಃಪುರಕ್ಕೆ ಸೇರಿಸಿಕೊಳ್ಳುತ್ತಾರೆ ಕಣೇ....'

ಕುಮುದಾ ಹೇಳಿದಳು :

'ನೋಡೇ....ಅವಳ ಸೀರೆ, ಆ ಎದೆಕಟ್ಟು ಎಷ್ಟು ಚಂದವಿದೆಯಲ್ಲವೆ? ತೆಳುವಾದ ಮುಸುಗನ್ನು ಹೊದ್ದಿದ್ದಾಳೆ....ಆ ಮುಸುಕಿನ ಮೇಲೆ ರತ್ನಹಾರ ಹೇಗೆ ಹೊಳೆಯುತ್ತಿದೆ! ಅತ್ತಲಿರುವ ಆಕೆಯನ್ನು ನೋಡು, ತುರುಬನ್ನು ಎಷ್ಟೆತ್ತರ ಕಟ್ಟಿದ್ದಾಳೆ. ಮುತ್ತಿನ ಸರಗಳು ತುರುಬನ್ನು ಸುತ್ತಿವೆ. ಅಬ್ಬಾ! ಎಂತೆಂತಹ ಆಭರಣಗಳು; ಕಣ್ಣನ್ನು ಕೋರೈಸುತ್ತವೆ....'

'ಅರಮನೆಯಲ್ಲಿ ವಸ್ತ್ರ, ಆಭರಣಗಳಿಗೆ ಏನು ಕೊರತೆ....' ಕಮಲಾಕ್ಷಿ ಹೇಳಿದಳು.

'ಅರಮನೆಯ ಪರಿಚಾರಿಕೆಯರು ಸಹ ಎಷ್ಟು ಪುಣ್ಯವಂತರಲ್ಲವೆ? ಬೆಲೆಬಾಳುವ ಸೌಂದರ್ಯಸಾಧನಗಳನ್ನು ಬಳಸುತ್ತಾರೆ....' ಕುಮುದ ಖಿನ್ನಳಾಗಿ ನುಡಿದಳು.

'ಏನು ಬಳಸಿದರೇನಂತೆ, ಕಾಗೆಬಂಗಾರದಂತೆ ಬರೀ ಹೊರಗಿನ ಮೆರುಗು.

ನನ್ನ ಮಾದೇವಿಯಷ್ಟು ಅಂದಗಾತಿಯರು ಒಬ್ಬರೂ ಇಲ್ಲ....' ಶಾರದೆ ದೊಡ್ಡ ದನಿಯಲ್ಲಿ ನುಡಿದಳು.

'ಶಾರದ....ನಿನ್ನ ವಿಮರ್ಶೆ ನಂತರವಾಗಲಿ, ಸುತ್ತಲೂ ಜನವಿರುವುದರ ಪ್ರಜ್ಞೆ ಇರಲಿ. ನೀವೇನೂ ಬೆರಳು ಚೀಪುವ ಮಕ್ಕಳಲ್ಲ....' ತೀಕ್ಷ್ಣವಾಗಿ ಮಹಾದೇವಿ ನುಡಿದಾಗ ಶಾರದೆ ಮೌನ ತಾಳಿದಳು.

ಹೆಂಗೆಳೆಯರ ಹಿಂದೆ ರಾಜಗಾಂಭೀರ್ಯದಿಂದ ಪಟ್ಟದ ಆನೆ ಹೆಜ್ಜೆ ಇರಿಸುತ್ತಿತ್ತು. ಅವರ ಸ್ಥಾನಮಾನಕ್ಕೆ ತಕ್ಕಂತೆ ಅದು ಅಲಂಕೃತವಾಗಿತ್ತು. ಆನೆಯ ಬೆನ್ನಮೇಲೆ ಹಾಸಲಾಗಿದ್ದ ರೇಷಿಮೆಯ ವಸ್ತ್ರಕ್ಕೆ ಹವಳ-ಮುತ್ತುಗಳನ್ನು ಹೆಣೆದಿದ್ದರು. ಅದರ ಬೆನ್ನಮೇಲಿನ ಅಂಬಾರಿ, ಸರೋವರದ ಅಲೆಗಳ ಮಧ್ಯದಲ್ಲಿ ಸಡಿಲಬಿಟ್ಟ ದೋಣಿಯಂತೆ ಹಿಂದಕ್ಕೆ ಮುಂದಕ್ಕೆ ಓಲಾಡುತ್ತಲಿತ್ತು. ಹೊಂಗದಿರನ ಅಪ್ಪುಗೆಯಲ್ಲಿ ಚಿನ್ನದ ಅಂಬಾರಿ ಮಿರಿಮಿರಿ ಮಿಂಚುತ್ತಲಿತ್ತು. ಅಂಬಾರಿಯ ಮುಂದೆ ಮಾವುತ, ಅಂಬಾರಿಯಲ್ಲಿ ರಾಜ, ಅವರ ಹಿಂದೆ ವಿದೂಷಕ ವಸಂತಕ ಕುಳಿತಿದ್ದರು.

'ಅಬ್ಬಾ....ಅಂಬಾರಿ ಎಷ್ಟು ಚೆನ್ನಾಗಿದೆ....ಬಂಗಾರದ್ದು ಇರಬೇಕು; ಸೂರ್ಯನ ಬೆಳಗಿನಲ್ಲಿ ಫಳಫಳ ಅನ್ನುತ್ತಿದೆ....' ಹಿಂದಿನ ಪ್ರಸಂಗ ಬಿಸಿಲಿಗೆ ಸಿಕ್ಕಿದ ಮಂಜಿನಂತೆ ಕರಗಿ ಹೋಗಿತ್ತು. ಅದನ್ನು ಮರೆತು ಶಾರದೆ ಮತ್ತೆ ಉದ್ಗರಿಸಿದಳು. ವಯಸ್ಸಿಗೆ ಮೀರಿದ ಹುಡುಗುತನ ಆಕೆಯಲ್ಲಿತ್ತು.

'ಅಂಬಾರಿಯ ಚಂದಕ್ಕಿಂತಲೂ ರಾಜನ ಚೆಲುವು ಒಂದು ಗುಲಗಂಜಿ ತೂಕ ಹೆಚ್ಚೇ ಕಣೆ. ಅವನ ಕಿರೀಟ ನೋಡು, ಮುತ್ತು ರತ್ನಗಳಿಂದ ಹೇಗೆ ಹೊಳೀತಿದೆ....ಎದೆಯಮೇಲೆ ತೂಗಿಬಿದ್ದಿರುವ ವಜ್ರದ ಹಾರ ನೋಡು....' ಕುಮುದೆ ವರ್ಣಿಸಿದಳು.

ಕೌಶಿಕ ಮೂವತ್ತರ ಹರೆಯದ ಶಕ್ತಿ ಉಕ್ಕುತ್ತಿರುವ ತರುಣ. ವಿಶಾಲವಾದ ಎದೆ. ಅದನ್ನಪ್ಪಿದ ತಿಳಿ ನೀಲ ನಿಲುವಂಗಿ, ದಷ್ಟಪುಷ್ಟವಾದ ತೋಳುಗಳು, ಮುಖದ ಬಂಗಾರ ವರ್ಣ, ಚಿಗುರು ಮೀಸೆ, ನೀಳವಾಗಿ ಮೇಲಕ್ಕೆ ಹೋಗಿ ಕತ್ತಿನ ವರೆಗೆ ತೂಗಿಬಿದ್ದ ಕೂದಲು; ಹಣೆಯನ್ನು ದಾಟಿ ಮೇಲೆ ಕುಳಿತ ಕಿರೀಟ, ಹಣೆಯ ಮೇಲಿನ ತಿಲಕ, ಕಿವಿಯಲ್ಲಿ ತೂಗುವ ಕರ್ಣಕುಂಡಲ, ಕೈ ಎರಡನ್ನೂ ಜೋಡಿಸಿ ಮುಗಿದಾಗ ಹತ್ತು ಬೆರಳುಗಳಲ್ಲಿ ಹೊಳೆಯುವ ಉಂಗುರಗಳು, ಒಂದೊಂದೂ ಲಲನೆಯರನ್ನು ಕೆರಳಿಸುತ್ತಿದ್ದವು.

ಮುಗುಳ್ನಗೆಯ ಮಲ್ಲಿಗೆಯನ್ನೆರಚುತ್ತ, ಸುತ್ತಲೂ ದೃಷ್ಟಿ ಬೀರಿ, ಮಾಳಿಗೆಯ ಮೇಲೆ ನಿಂತವರ ವಂದನೆಗಳನ್ನು ಸ್ವೀಕರಿಸುತ್ತ ಕೈಮುಗಿವ

ಕೌಶಿಕನ ಭಂಗಿ ಅನೇಕರಿಗೆ ಆಪ್ಯಾಯಮಾನ ಎನಿಸುತ್ತಿತ್ತು.

ಓಂಕಾರನ ಮನೆಯ ಮುಂದಿನ ಚಪ್ಪರಕ್ಕೆ ಬಂದ ತಕ್ಷಣವೇ ಮಾವುತನು ಆನೆಯನ್ನು ಅಂಕುಶದಿಂದ ಸ್ಪರ್ಶಿಸಿ, ನಿಲ್ಲಲು ಸೂಚನೆ ನೀಡಿದ. ಓಂಕಾರಶೆಟ್ಟಿ ಕಚ್ಚೆಯ ಪಂಚೆಯನ್ನುಟ್ಟು, ಬಿಳಿಯ ಕಸೆಯಂಗಿಯನ್ನು ಬಿಗಿದು, ಹೆಗಲಿನ ಮೇಲೆ ರೇಶಿಮೆಯ ಶಲ್ಯವನ್ನು ಹಾಕಿಕೊಂಡು ತಲೆಗೆ ಪೇಟವನ್ನು ಸುತ್ತಿಕೊಂಡು, ಬೆಳ್ಳಿಯ ಹರಿವಾಣದಲ್ಲಿ ಜೋಡಿಸಿಟ್ಟ ಪುಷ್ಪಹಾರ, ಫಲಗಳೊಂದಿಗೆ ಬಂದನು. ತನ್ನೊಡನಿರ್ದ ಪರಿಚಾರಕನ ಕಡೆಯಿಂದ ಹೂಮಾಲೆಯನ್ನು ತೆಗೆದು ಆನೆಯ ಮುಂದೆ ಹಿಡಿಯುತ್ತಲೇ ಅದು ಸ್ವೀಕರಿಸಿ, ಭಕ್ತಿ ಪ್ರದರ್ಶನ ಮಾಡುತ್ತ ಕೌಶಿಕನ ಕೈಗೆ ಮುಟ್ಟುವಂತೆ ಸೊಂಡಿಲನ್ನು ಎತ್ತಿತು. ಮುಗುಳ್ನಗುತ್ತ ಕೌಶಿಕನು ಮಾಲೆಯನ್ನು ತೆಗೆದುಕೊಂಡು, ಗಮಗಮಿಸುವ ಮಲ್ಲಿಗೆಯ ಮಾಲೆಯ ಪರಿಮಳವನ್ನು ಆಸ್ವಾದಿಸುತ್ತ ಅದನ್ನು ತನ್ನ ಮುಂದಿರಿಸಿಕೊಂಡ.

ಅಂಬಾರಿಗೆ ಸಮೀಪ ಎನಿಸುವಂತೆ ಬಿದಿರಿನ ಅಟ್ಟಣಿಗೆಯನ್ನು ಮಾಡಲಾಗಿದ್ದಿತು. ಅದನ್ನು ಏರಿ ಓಂಕಾರನು ಹಣ್ಣುಗಳು ತುಂಬಿದ ಹರಿವಾಣವನ್ನು ರಾಜನ ಮುಂದೆ ಹಿಡಿದು ತನ್ನ ಪರಿಚಯ ಮಾಡಿಕೊಂಡ. ಓಂಕಾರನ ಹಣೆಯ ಮೇಲಿನ ವಿಭೂತಿಯನ್ನು, ಕೊರಳೊಳಗಿನ ರುದ್ರಾಕ್ಷಿ ಸಮೇತ ಚಿನ್ನದ ಹಾರವನ್ನು, ಅವನ ಪರಿಪಕ್ವಗೊಂಡ ಸಾತ್ವಿಕ ಮುಖವನ್ನು ಕಂಡು ಕೌಶಿಕನಿಗೆ ಆಶ್ಚರ್ಯ-ಆನಂದಗಳು ಕೂಡಿ ಸಮನಿಸಿದವು. ಓಂಕಾರನು ಅಟ್ಟಣಿಗೆಯಿಂದ ಇಳಿದಾಗ, ರತ್ನಪಡಿ ವ್ಯಾಪಾರಿಯಾದ ಶಂಕರಶೆಟ್ಟರು ರತ್ನ ಹಾರವೊಂದನ್ನು ಕೌಶಿಕನಿಗೆ ಅರ್ಪಿಸಿದರು. ನಂತರ ಎಲ್ಲರೂ ಕೆಳಗೇ ನಿಂತು ಆನೆಯ ಮೂಲಕವೇ ಮಾಲಾರ್ಪಣೆ ಮಾಡತೊಡಗಿದರು.

ಪುರಪ್ರಮುಖರು ಕೊಡುತ್ತಿದ್ದ ಹೂಮಾಲೆ, ಕಾಣಿಕೆಗಳನ್ನು ಸ್ವೀಕರಿಸುತ್ತಲೇ ಹಂದರವನ್ನು, ಅದರ ಕುಶಲ ಕಲೆಯನ್ನು ಕಂಡು ಕೌಶಿಕ ತಲೆದೂಗಿದ. ಮಲ್ಲಿಗೆ, ಸಂಪಿಗೆ ಹೂವುಗಳ ಸುವಾಸನೆ ಮೂಗಿನ ಒಳ ಮಂದಿರವನ್ನು ಮೋಹಕವಾಗಿ ತಟ್ಟುತ್ತಿತ್ತು. ಅನಿತರಲ್ಲಿ ಆನೆಯು ಮತ್ತೊಂದು ಹೂಮಾಲೆಯನ್ನು ಕೆಳಗಿನಿಂದ ಪಡೆದು ಕೌಶಿಕನ ಮುಂದೆ ಹಿಡಿದಾಗ ಅವನು ಹಗುರವಾಗಿ ಮುಟ್ಟಿದ. ಅವನಿಂದ ಆಶೀರ್ವದಿಸಲ್ಪಟ್ಟ ಆ ಹೂಮಾಲೆಯನ್ನು ಆನೆಯು ಸೊಂಡಿಲನ್ನು ಎರಡುಸಲ ತೂಗಾಡಿಸಿ, ಬೀಸಿ ಒಗೆಯಿತು. ಹಾಗೆ ಬೀಸಲ್ಪಟ್ಟ ಮಾಲೆಯನ್ನು ನಾ ಮುಂದೆ ತಾ ಮುಂದೆ ಎಂದು ಹಿಡಿದು ಪ್ರಸಾದವನ್ನು ತೆಗೆದುಕೊ

ನುಲ್ಲಿಗೆಯ ಮಾಲೆಯು ಓಂಕಾರನ ಮಹಡಿಯ ಮೇಲಿದ್ದ ತರುಣಿಯರ ಮಧ್ಯೆ ಬಿದ್ದಾಗ, ಹೋ ಎಂದು ಅವರೆಲ್ಲ ಹರ್ಷಧ್ವನಿಗೈದರು. ಆ ಧ್ವನಿಯಿಂದ ಆಕರ್ಷಿತನಾದ ಕೌಶಿಕನು ಮುಗುಳ್ನಗೆಯನ್ನು ಸೂಸುತ್ತ ತರುಣಿಯರನ್ನು ನೋಡಿದನು. ಅವರುಗಳು ಆ ಮಾಲೆಯನ್ನು ಹರಿದುಕೊಳ್ಳುವುದರಲ್ಲಿ ಆಸಕ್ತರಾಗಿದ್ದರು. ಆದರೆ ನೀರುಕೋಳಿಗಳ ಮಧ್ಯದಲ್ಲಿ ವಿಹರಿಸುವ ಹಂಸ ಪಕ್ಷಿಯಂತೆ, ಶುಭ್ರವಾದ ನೀಲಾಗಸದಲ್ಲಿ ನಕ್ಷತ್ರಗಳ ಮಧ್ಯೆ ಹೊಳೆಯುವ ಚಂದ್ರನಂತೆ ಅಪೂರ್ವ ಸೌಂದರ್ಯವತಿಯಾದ ತರುಣಿಯೊಬ್ಬಳು ಕಂಡಳು. ಕೌಶಿಕನು ಪುಂಗಿಯ ನಾದಕ್ಕೆ ಮನಸೋತ ಹಾವಿನಂತೆ ಎವೆ ಮಿಟುಕಿಸದೆ ಆ ಯುವತಿ, ಮಹಾದೇವಿಯನ್ನು ನೋಡಿದ.

ಮಂಗಳಮಯ ಮುಂಜಾವಿನಲ್ಲಿ ಅದೇ ಆಗ ಅರಳಿ, ರವಿಕಿರಣದ ಸ್ಪರ್ಶದಿಂದ ಮುಗುಳ್ನಗುವ ಬೆಳ್ದಾವರೆಯ ಹೂವಿನಂತೆ ಆಕೆಯ ಮುಖ ಕಂಡಿತು. ಕಾಳಿದಾಸನ ಶಕುಂತಲೆಯ ಚಿತ್ರವನ್ನು ಕಣ್ಣೆದುರಿಗೆ ತಂದುಕೊಂಡು ಆ ಮಹಾಕವಿಯ ಶ್ಲೋಕಗಳನ್ನು ನೆನಪಿಸಿಕೊಂಡು, ಅವುಗಳನ್ನು ಅನ್ವಯಿಸ ತೊಡಗಿದ. 'ಕಮಲದೊಳಗೊಂದು ಕಮಲ', ಭೋಜರಾಜನು ಕಾಳಿದಾಸನನ್ನು ಕಂಡುಹಿಡಿಯಲು ಹಾಕಿದ ಸೂತ್ರ! ಪ್ರೇಯಸಿಯ ಮನೆಯಲ್ಲಿ ಮೈಮರೆತ ಅವನನ್ನು ಆ ಪ್ರೇಯಸಿ ಕೇಳಿದಾಗ, ಕಾಳಿದಾಸ ಅವಳ ಮುಖವನ್ನು ಮೇಲಕ್ಕೆತ್ತಿ ನುಡಿದನಂತೆ, 'ತವಮುಖಾಂಭೋರುಹೆ ಕಮಲ ನಯನೆ' ನಿನ್ನ ಮುಖವೊಂದು ಕಮಲ, ಆ ವದನಾಂಬುಜದಲ್ಲಿ ಅರಳಿರುವ ಕಣ್ಣು ಕಮಲವೆ!' ಎಂತಹ ಸುಂದರ ಉಪಮೆ! ಈ ತರುಣಿಯ ಮುಖಕಮಲದಲ್ಲಿ ಅರಳಿರುವ ಎರಡು ಕಳಾಪೂರ್ಣ ಕಣ್ಣುಗಳು ಪುಟ್ಟ ಕಮಲಗಳಲ್ಲದೆ ಮತ್ತಿನ್ನೇನು. ಆ ಕಣ್ಣಿನಲ್ಲಿ ನಿಂತು ಫಳಫಳನೆ ಮಿರುಗುವ ಕಪ್ಪು ಕಣ್ಣಾಲಿಗಳು ಬಿಳಿಯ ತಾವರೆಯ ಮಧ್ಯದಲ್ಲಿ ಕುಳಿತ ದುಂಬಿಗಳಂತೆ. ಎಂತಹ ಚೆಲುವು!'

ಕೌಶಿಕನು ಮೈಮರೆತು ನೋಡಿದ, ಆ ಅಪೂರ್ವ ಸೌಂದರ್ಯದ ಪುತ್ಥಳಿಯನ್ನು. ಅವಳ ಶರೀರವು ಮದನನ ಉದ್ಯಾನದಂತಿತ್ತು. ನೀಳವಾದ ಎತ್ತರದ ನಿಲುವು, ಕಳಾಯುಕ್ತ ಬಿಳಿಯ ಬಣ್ಣಕ್ಕೆ ಕೆಂಪು ಬಣ್ಣ ಸೇರಿದಂತಹ ವರ್ಣಸಮ್ಮಿಶ್ರಣ; ದಟ್ಟವಾದ ಹುಬ್ಬುಗಳು ಕಾಮನ ಬಿಲ್ಲಿನಂತೆ ಬಾಗಿ ನಿಂತಿದ್ದವು. ನೀಳವಾದ ಸುಂದರ ನಾಸಿಕ, ಕೆಂಬಣ್ಣದ ತುಟಿಗಳು, ಆರೋಗ್ಯಯುಕ್ತ ಅಂಗಾಂಗಗಳು; ಆಕೆಯ ಮುಡಿಯಿಂದ ಅಡಿಯವರೆಗೆ ರಾಜನ ಕಣ್ಣುಗಳು ಆಡತೊಡಗಿದವು. ಮಹಾದೇವಿ ತನ್ನ ಮಗ್ಗುಲಲ್ಲಿದ್ದ ಶೈಲಜೆಯ ಹೆಗಲಿಗೆ ಕೈ ಹಾಕಿ ಸಲೀಸಾಗಿ ನಿಂತಿದ್ದಳು.

'ಸೌಂದರ್ಯವೇ ಸಾಕಾರವನ್ನು ತಳೆದಿರುವಂತೆ ತೋರುತ್ತದೆ. ಮನಮೋಹಕರೂಪವು ಸೃಷ್ಟಿಬ್ರಹ್ಮನ ಅಪರೂಪ ಚಿತ್ರಣದಂತಿದೆ.' ಕ್ರಮ ಬದ್ಧವಾಗಿ ಕಟೆಯಲ್ಪಟ್ಟಂತಿದ್ದ ಅಂಗಾಂಗಗಳ ವಿನ್ಯಾಸವನ್ನು ಆಕೆಯುಟ್ಟ ಸೀರೆಯ ಮೂಲಕ ದರ್ಶಿಸಲು ಕೌಶಿಕ ಪ್ರಯತ್ನಿಸುತ್ತಿದ್ದ.

ಆದರೆ ಅವನಿಗೆ ಮತ್ತೊಂದು ಸಂಶಯ ಬರದೆ ಇರಲಿಲ್ಲ. ಇಂತಹ ಚೆಲುವೆ ಆಭರಣಗಳನ್ನೇಕೆ ಧರಿಸಿಲ್ಲ? ಕುತೂಹಲಿತನಾಗಿ ಮತ್ತೆ ಅಳೆದ: 'ಪಾಪ, ಬಡವರ ಮಗಳೇನೋ!' ಮರುಕ್ಷಣವೇ ಆಕೆಯ ಹಣೆಯ ಮೇಲಿನ—ಶಿವನ ಮಂದಹಾಸದಂತಿದ್ದ ಮೂರೆಳೆ ವಿಭೂತಿ, ಬಿಳಿಯ ರೇಷ್ಮೆಯ ಸೀರೆಯ ಹೊರಗೆ ಎದೆಯ ಮೇಲೆ ತೂಗಾಡುತ್ತಿದ್ದ ರುದ್ರಾಕ್ಷಿಮಾಲೆಗಳು ಬೇರೇನನ್ನೋ ಸಂಕೇತಿಸುವಂತೆ ಕಂಡವು.

'ಬಡತನವೋ....ವಿರಕ್ತಿಯೋ....?' ಸಂದಿಗ್ಧನಾಗಿ ಆಲೋಚಿಸತೊಡಗಿದ. ಪಶ್ಚಿಮಕ್ಕೆ ಎದುರಾಗಿ ನಿಂತ ಆಕೆಯ ಮುಖದ ಮೇಲೆ ಸೂರ್ಯನ ಶಾಂತಕಿರಣಗಳು ಬಿದ್ದು ಅವಳ ಚೆಲುವು ಇಮ್ಮಡಿಸಿತ್ತು.

'ಯಾವುದೇ ಕಾರಣಕ್ಕೆ ಆಭರಣರಹಿತಳಾಗಿರಲಿ, ಈ ಸರಳತನ ಈಕೆಗೆ ಕೊರತೆಯಾಗುವ ಬದಲು ಅದೇ ಅಲಂಕಾರವಾಗಿದೆ. ಹೆಣ್ಣಿನ ಅಂದವನ್ನು ಆಭರಣಗಳು ಹೆಚ್ಚಿಸುವವು ಎಂಬ ಪ್ರಚಲಿತ ನಂಬುಗೆಯನ್ನು ಹುಸಿಮಾಡಿ, ಹೆಣ್ಣಿನ ಚೆಲುವೇ ಆಭರಣಗಳ ಕಾಂತಿಯನ್ನು ವರ್ಧಿಸುವದು ಎಂಬ ತತ್ತ್ವವನ್ನು ಪ್ರತಿಪಾದಿಸಲು ಬಂದಂತಿದೆ ಈಕೆ....' ಅಂತರಂಗದಲ್ಲಿ ಕೌಶಿಕ ಆಲೋಚಿಸುತ್ತಿದ್ದ.

'ಮಾದೇವಿ....ಅರಸರು ನಿನ್ನನ್ನೇ ನೋಡುತ್ತಿದ್ದಾರೆಯೇ....?' ಶೈಲಜೆ ಗಲಿಬಿಲಿಯಿಂದ ಪಿಸುಗುಟ್ಟಿದಳು.

'ಹಾಂ....' ಮಹಾದೇವಿಯ ಕಣ್ಣುಗಳು ಇಲ್ಲಿಯ ತನಕ ಅವಳಿಗರಿಂಯ ದಂತೆ ಅವನ ಮೇಲಿದ್ದವು. ಹೊರಗಣ್ಣು ಆ ಕಡೆ ದೃಷ್ಟಿ ನಿಲ್ಲಿಸಿದ್ದು ನಿಜ; ಆದರೆ ಅಂತರಂಗವು ಆ ಕಣ್ಣಿನೊಡನೆ ಸಂಬಂಧ ಕಳಚಿಕೊಂಡು ತಾತ್ತ್ವಿಕ ಚಿಂತನೆಯಲ್ಲಿ ತೊಡಗಿತ್ತು. ನೀರಮೇಲಿನ ಗುರುಳೆಯಂತೆ ಸಿಡಿದುಹೋಗುವ ಶರೀರಕ್ಕೆ ಮಾಡಿದ ಅಲಂಕಾರಕ್ಕೆ, ಎರಡು ದಿನವಿದ್ದು ಮೂರನೆಯ ದಿನಕ್ಕೆ ಮಣ್ಣಾಗುವ ಅಧಿಕಾರಕ್ಕೆ ಜನರು ಕೊಡುವ ಬೆಲೆಯನ್ನು, ಸ್ವತಃ ಕೌಶಿಕ ಕೊಟ್ಟ ಆಸಕ್ತಿಯನ್ನು ವಿಮರ್ಶಿಸುತ್ತಿದ್ದಳು.

'ಗುಬ್ಬಿ ಇನ್ನೊಬ್ಬರ ಮನೆಯನ್ನು ತನ್ನ ಮನೆಯೇನೋ ಎಂದು ತಿಳಿದು ಗೂಡು ಕಟ್ಟುವುದು. ಹಾಗೆಯೇ ಈ ಸಿರಿವಂತರು, ರಾಜರು, ಚಕ್ರವರ್ತಿಗಳು

ಶಿವನ ಪ್ರಪಂಚದಲ್ಲಿದ್ದು, ಈ ಸಾಮ್ರಾಜ್ಯ, ಅಧಿಕಾರಗಳು ದೇವನ ದಾನ ಎಂಬುದನ್ನು ಮರೆತು ತಾವೇ ಒಡೆಯರೆಂಬಂತೆ ಭೋಗಾಸಕ್ತರಾಗುವ ರಲ್ಲ....' ಆಕೆಯ ವಿಚಾರಮಂಥನ ಸಾಗಿಯೇ ಇತ್ತು.

ಅಂತಹ ಒಬ್ಬ ರಾಜನು ಮುಟ್ಟಿ ಎಸೆದ ಹೂಮಾಲೆಗಾಗಿ ತನ್ನ ಗೆಳತಿ ಯರು ಸಂಭ್ರಮಿಸುವುದನ್ನು ಕಂಡು ವಿಷಾದ ಎನಿಸಿತ್ತು. ಆದರೆ ತನ್ನ ಔದಾಸೀನ್ಯದ, ವಿಮರ್ಶೆಯ, ಮುಗ್ಧವಾದ ನೇರದೃಷ್ಟಿ ಕೌಶಿಕನಿಗೆ ಆಕರ್ಷ ಣೆಯ ಕೇಂದ್ರಬಿಂದುವಾಗಿದೆ ಎಂಬುದರ ಅರಿವಿರಲಿಲ್ಲ ಅವಳಿಗೆ. ಶೈಲಜೆಯ ಮಾತು ಕಿವಿಯನ್ನು ಪ್ರವೇಶಿಸಿದಾಗ ತನ್ನ ಮನಸ್ಸನ್ನು ಇಂದ್ರಿಯಗಳೊಂದಿಗೆ ಬೆಸೆದಳು. ಕೌಶಿಕನು ತನ್ನ ದೃಷ್ಟಿಯನ್ನು ಅಂಗಾಂಗಗಳ ಮೇಲೆ ಹರಿಯ ಬಿಟ್ಟುದರ ಅರಿವಾಗಿ ಸಹಸ್ರ ಮುಳ್ಳುಗಳಿಂದ ಅವಳನ್ನು ಚುಚ್ಚಿದಂತಾಯಿತು. ಸರ್ವಾಂಗವೂ ಉದ್ವೇಗದಿಂದ ಬಿಸಿಯಾಗಿ, ಮನಸ್ಸು ತಿರಸ್ಕಾರದ ಕಿಡಿಗಳನ್ನು ಉಗುಳತೊಡಗಿತು. ಕೈಯನ್ನು ತಲೆಯಮೇಲೆ ಆಡಿಸಿಕೊಂಡಾಗ, ಸೆರಗು ಭದ್ರವಾಗಿ ತಲೆಯ ಮೇಲೆ ನಿಂತುಕೊಂಡಿದ್ದುದನ್ನು ಗಮನಿಸಿ ಆಕೆಗೆ ಸಮಾಧಾನವಾಯಿತು.

ಅಲಂಗಿಸುವ ಸಂಜೆಯ ಸುಳಿಗಾಳಿಯಿಂದಾಗಿ, ತಾಯಿಯ ಮಾತು ಕೇಳದ ಉದ್ಧಟ ಮಗುವಿನಂತೆ ಮುಸುಕಿನ ಹೊರಗೆ ಹಾರುತ್ತಲಿದ್ದ ಮುಂಗುರುಳುಗಳನ್ನು ಹಿಂದಕ್ಕೆ ಸರಿಸಿಕೊಂಡಳು. ಮತ್ತೆ ನೋಡಿದಾಗಲೂ ಕೌಶಿಕನ ನೇರನೋಟ ಅಷ್ಟೇ ಸ್ಥಿರವಾಗಿದ್ದಿತು. ಮಹಾದೇವಿಯ ದೃಷ್ಟಿ ಅವನನ್ನು ಸಂಧಿಸಿದಾಗ ಅವನಿಗೆ ಮೈಯಲ್ಲೆಲ್ಲ ಮಿಂಚು ಸಂಚಲವಾದ ಅನುಭವ.

ಆದರೆ ಮಹಾದೇವಿ, 'ಮೆರವಣಿಗೆ ಮುಂದೆ ಸಾಗೀತು, ತಾನು ಬಿಗಿ ಹಿಡಿದು ನಿಂತ ಉಸಿರನ್ನು ಸಡಿಲಬಿಡಬಹುದು' ಎಂದು ಕಾಯುತ್ತ ನಿಂತವಳಿಗೆ, ರಾಜನ ನೋಟ ಸ್ಥಿರವಾಗಿ ಬೇರೂರಿದಾಗ ಭಯವೆನ್ನಿಸಿತು. ಮತ್ತೆ ತಲೆ ಎತ್ತಿ ನೋಡಿದಳು. ಮಾಂಸದ ತುಣುಕನ್ನು ದೃಷ್ಟಿಸುತ್ತ ಸುತ್ತಮುತ್ತಲೂ ಸುಳಿ ಯುವ ಹದ್ದಿನಂತೆ, ಕೌಶಿಕನ ಕಣ್ಣುಗಳು ಇನ್ನೂ ತನ್ನಮೇಲೇ ಹರಿದಾಡು ವುದನ್ನು ಕಂಡಾಗ ವಿಪರೀತ ಮಾನಸಿಕ ಹಿಂಸೆಯಾಯಿತು.

ಸರಕ್ಕನೆ ಹಿಂದೆ ತಿರುಗಿ ತನ್ನ ಮನೆಯೊಳಕ್ಕೆ ನಡೆದಳು. ಅಮೃತಶಿಲಾ ಪ್ರತಿಮೆಯಂತೆ ಮಾಟವಾದ ಅವಳ ಶರೀರವಿನ್ಯಾಸವನ್ನು, ತೆಳು ನಡುವನ್ನು, ಗಂಭೀರ ನಡಿಗೆಯನ್ನು, ಸೀರೆಯ ಸೆರಗನ್ನು ದಾಟಿ ಮೊಳಕಾಲವರೆಗೆ ತೂಗಿ ಬಿದ್ದು ಒಳಗೆ ಹೋಗುವಾಗ ಕೌಶಿಕನ ಕಣ್ಣಿನೊಡನೆ ಮನಸ್ಸನ್ನೂ ಸೆಳೆದ

ಕಪ್ಪು ಜಡೆಯನ್ನು ನೆನಪಿನ ತೆರೆಯಮೇಲೆ ತಂದುಕೊಂಡು ಅವನು ಮತ್ತೆ ಮತ್ತೆ ನೋಡಿದ. ಆ ಗುಂಪಿನ ಮಧ್ಯೆಯಿದ್ದ ಹಂಸಪಕ್ಷಿ ಕಣ್ಮರೆಯಾದಾಗ, ಮತ್ತೆ ಬಾಗಿಲ ಕಡೆಯೇ ನೋಡತೊಡಗಿದ—ಪುನಃ ಆಕೆ ಹೊರಬರಬಹುದು ಎಂಬ ದೂರದಾಸೆಯಿಂದ.

ರಾಜೋತ್ಸವವು ಭಿತ್ತಿಯ ಮೇಲೆ ಮೂಡಿಸಿದ ಚಿತ್ತಾರದಂತೆ ಸ್ತಬ್ಧವಾಗಿ ನಿಂತಿದ್ದಿತು. ಕೆಳಗಿನಿಂದ ಪುಷ್ಪಮಾಲೆಯನ್ನು ತೆಗೆದುಕೊಂಡ ಆನೆಯು ತನ್ನ ಸೊಂಡಿಲಿನಲ್ಲಿ ಹಾಗೆಯೇ ಎತ್ತಿ ಹಿಡಿದಿತ್ತು. ಪುರಪ್ರಮುಖ ವಣಿಕರು ರಾಜನನ್ನು ಆಶ್ಚರ್ಯದಿಂದ ನೋಡತೊಡಗಿದರು. ಅವನ ದೃಷ್ಟಿ ಕೆಳಗಿಳಿಯದೆ ಓಂಕಾರನ ಮಹಡಿಯ ಮೇಲೆ ಸ್ಥಿರವಾಗಿ ನಿಂತುದನ್ನು ಕೆಲವರು ಗಮನಿಸಿದರು. ಮೊದಲು ಸಹಜವಾದ ಮುಗುಳ್ನಗೆಯಿಂದ ಹರಿದ ದೃಷ್ಟಿ, ಈಗ ಆಶಾಭರಿತವಾಗಿ, ಆಕರ್ಷಿತವಾಗಿ, ಕೇಂದ್ರೀಕರಿಸಲ್ಪಟ್ಟುದನ್ನು ನೋಡಿ ಎಲ್ಲರೂ ಕಳವಳಕ್ಕೀಡಾದರು. ವಿದೂಷಕ ವಸಂತಕನು ರಾಜನ ಮನಃಸ್ಥಿತಿಯನ್ನು ಊಹಿಸಿದ. ರಾಜಗಾಂಭೀರ್ಯವನ್ನು ಬದಿಗಿಟ್ಟು ಅರಸನು ತೋರಿದ ವರ್ತನೆಯನ್ನು ಕಂಡು, ಪುರಪ್ರಮುಖರು ಅವನ ಯೋಗ್ಯತೆಯನ್ನು ಅಳೆಯುವರೇನೋ ಎಂದು ವಿಹ್ವಲನಾದ.

'ಪ್ರಭು, ಪ್ರಜೆಗಳು ದರ್ಶನಾಸಕ್ತರಾಗಿದ್ದಾರೆ....' ಮೆಲ್ಲನೆ ರಾಜನ ಕಿವಿಯಲ್ಲಿ ಪಿಸುಗುಟ್ಟಿದ.

'ಹಾಂ....' ನಿರ್ಭಯನಾಗಿ ನಿಂತವನ ಮೇಲೆ ಅನಿರೀಕ್ಷಿತವಾಗಿ ತಣ್ಣೀರನ್ನು ಎರಚಿದಂತೆ ರಾಜನು ಬೆಚ್ಚಿಬಿದ್ದು, ಕರ್ತವ್ಯಮುಖನಾದ. ಮಾಲಾರ್ಪಣೆ ಮುಗಿದಾದ ಬಳಿಕ ಉತ್ಸವ ಮುಂದೆ ಹೋಗಲು ಅಪ್ಪಣೆಗಾಗಿ ಮಂತ್ರಿಯಾದ ಮುರಾರಿಯು ಕೇಳಿದಾಗ, ಕೌಶಿಕ ಮೌನವಾಗಿ ತಲೆಯಲ್ಲಾಡಿಸಿ, ಬಲವಂತದ ನಗೆಯನ್ನು ತಂದುಕೊಂಡು ಎಲ್ಲರಿಗೆ ಕೈಮುಗಿದ. ಮಾಳಿಗೆಯ ಮೇಲೆ ನಿಂತಿದ್ದ ಸ್ತ್ರೀಸಮೂಹಕ್ಕೆ ಕೈಮುಗಿಯುವ ನೆಪದಿಂದ ಅತ್ತ ದೃಷ್ಟಿಯನ್ನು ಹರಿಸಿದ; ಬೇಟೆಗಾರನ ಬಾಣದ ಅರೆಪೆಟ್ಟಿನಿಂದ ಕಂಗೆಟ್ಟು ಓಡಿದ ಹರಿಣಿ ಮತ್ತೆ ಕಾಣಲಿಲ್ಲ. ನಿರಾಶೆಯ ನೆರಳು ಮುಖದ ಮೇಲೆ ಹಾಯಿತು; ಬಲವಂತವಾಗಿ ಕಣ್ಣುಗಳನ್ನು ಕಿತ್ತು ಮುಂದೆ ಹರಿಸಿದ. ಆನೆಯು ತುಸು ದೂರ ಮುಂದೆ ಸಾಗಿದಾಗ ಮತ್ತೊಮ್ಮೆ ಹಿಂದಕ್ಕೆ ತಿರುಗಿ ನೋಡಿದ, ಅವನು ನಿರೀಕ್ಷಿಸುತ್ತಿದ್ದ ಮೂರ್ತಿ ಅಲ್ಲಿ ನಿಂತಿರಲಿಲ್ಲ.

'ವಸಂತಕ, ತಲೆಯನೋವು ಆರಂಭವಾಗಿದೆ....ನೇರವಾಗಿ ಅರಮನೆಗೆ ಹೋಗೋಣವೇ?' ಮೆಲ್ಲನೆ ವಿದೂಷಕನನ್ನು ಕೇಳಿದ.

'ಪ್ರಭು, ಪ್ರಜೆಗಳ ಆನಂದಕ್ಕಾಗಿ ವೈಯಕ್ತಿಕ ಕಷ್ಟವನ್ನು ಕಡೆಗಣಿಸ ಬೇಕಾಗುವುದು. ನಿಮಗಾಗಿ ಅವರು ಸಕಲ ಸಿದ್ಧತೆ ಮಾಡಿರುವರು. ಅವರ ಆಸೆಯ ಬೆಂಕಿಗೆ ತಣ್ಣೀರೆರಚಬಾರದಲ್ಲವೆ....?' ವಿದೂಷಕ ಕೇಳಿದನು.

'ಹಾಗಾದರೆ ಬೇಗಬೇಗನೆ ಹೋಗಲು ಅಪ್ಪಣೆ ಮಾಡು....'

ಆನೆ ತ್ವರಿತಗತಿಯಲ್ಲಿ ಸಾಗಿತು. ಕೌಶಿಕನು ಯಾಂತ್ರಿಕವಾಗಿ ಫಲಪುಷ್ಪ ಗಳನ್ನು ಸ್ವೀಕರಿಸತೊಡಗಿದ. ಕೆಲವು ಸಾರಿ ಚಿಂತಿಸುತ್ತ ಮೈಮರೆತು, ಎದುರಿಗೆ ಸೊಂಡಿಲೆತ್ತಿ ನಿಂತ ಆನೆಯಿಂದ ಪುಷ್ಪಮಾಲೆಯನ್ನು ಇಸಿದುಕೊಳ್ಳು ವುದನ್ನೇ ಮರೆಯುತ್ತಿದ್ದ. ಕಣ್ಣೆದುರಿಗೆ ಕಾಣುವ ಅಸಂಖ್ಯಾತ ಹೆಂಗಸರಲ್ಲಿ ತಾನು ಕಂಡ ತರುಣಿಯ ರೂಪವನ್ನು ಅರಸಲು ಪ್ರಯತ್ನಿಸಿ, ನಿರಾಶನಾಗು ತ್ತಿದ್ದ. ಚಂದ್ರೋದಯವನ್ನು ಕಂಡ ಸಮುದ್ರದಂತೆ ಅಬ್ಬರಿಸಿ ಮೊರೆಯುವ ಮನದ ಸಂಕಲ್ಪ-ವಿಕಲ್ಪದ ತೆರೆಗಳನ್ನು ನಿಯಂತ್ರಿಸಲಾರದೆ ಹತಾಶನಾದ.

'ವಸಂತಕ....ಉತ್ಸವ ಸಾಕು, ಸರಳವಾಗಿ, ನೇರವಾಗಿ ಅರಮನೆಯನ್ನು ಮುಟ್ಟೋಣ. ಬೆಳಗಿನ ಅಶ್ವಾರೋಹಣದಿಂದ ದಣಿವು ಎನಿಸುತ್ತಿದೆ, ನನಗೆ ವಿಶ್ರಾಂತಿ ಬೇಕಾಗಿದೆ....'

'ಆಯಿತು ಪ್ರಭು. ಇನ್ನು ಕೆಲವೇ ಕ್ಷಣಗಳ ಪಥ....' ಹೇಗೋ ಸಂತೈಸುತ್ತ ಮಹಾರಾಜನ ಮಾನವನ್ನುಳಿಸುವ ಸಂಕಲ್ಪದಿಂದ, ಕ್ರಮಿಸ ಬೇಕಾದ ಪಥವನ್ನು ಪೂರೈಸಿದ ವಸಂತಕ.

ತ್ವರೆಯಿಂದ ಅಂಬಾರಿಯನ್ನು ಇಳಿದು ಹೆಬ್ಬಾಗಿಲಿಗೆ ಬಂದು ನಿಂತ ರಾಜ ನಿಗೆ ಆರತಿ ಬೆಳಗಲು ಬಂದ ಮಹಾರಾಣಿ ಯಶೋಮತಿ ಮುಗುಳ್ನಕ್ಕಳು. ಕೌಶಿಕನು ಆಕೆಯಲ್ಲಿ ತಾನು ಕಂಡ ತರುಣಿಯ ರೂಪವನ್ನು ಕಾಣಬಯಸಿ, ಆಳೆದು ನೋಡಿದ.

'ಇದು ನಕ್ಷತ್ರ, ಅದು ಚಂದ್ರಮ; ಇದು ಸೌಂದರ್ಯ ಸರಸಿ, ಅದು ಸೌಂದರ್ಯವಾರಿಧಿ; ಇದು ಕಾಕಡ ಹೂವು, ಅದು ಮಲ್ಲಿಗೆ; ಈಕೆ ಎಲ್ಲಿ, ಆಕೆ ಎಲ್ಲಿ....!' ಯಶೋಮತಿಯ ಮುಗುಳ್ನಗೆಯನ್ನು ಯಾಂತ್ರಿಕವಾಗಿ ಸ್ವೀಕರಿಸಿ ಕೌಶಿಕನು ತನ್ನ ಏಕಾಂತದ ಭವನಕ್ಕೆ ಹೊರಟುಹೋದ.

* * *

ಮೆರವಣಿಗೆ ಮುಂದೆ ಸರಿದಾಗ ಪುರಪ್ರಮುಖ ಶ್ರೇಷ್ಠಿಗಳು ಸಮಾಧಾನದ ಉಸಿರೆಳೆದರು. ಆ ಹಿರಿಯರೆಲ್ಲರ ಮನಸ್ಸು ವಿವಿಧ ಭಾವನೆಗಳ ಕ್ಷೇತ್ರವಾಗಿತ್ತು. ಓಂಕಾರನ ಹೃದಯವಾದರೋ ಪ್ರಕ್ಷುಬ್ಧ ಸಾಗರದಂತೆ ಹೊಯ್ದಾಡತೊಡ ಗಿತ್ತು.

'ಅರಸರು ಓಂಕಾರಶೆಟ್ಟರ ಮಗಳನ್ನು ಎವೆಯಿಕ್ಕದೆ ನೋಡಿದರು....' ಎಂಬ ಪಿಸುಮಾತುಗಳು ಗಾಳಿಯಲ್ಲಿ ತೇಲಿ ಬರುತ್ತಿದ್ದವು. ಕೆಳಗೆ ನಿಂತು ಅರಸನನ್ನು ಸತ್ಕರಿಸುವ ಭರದಲ್ಲಿ ಬಿಸಿಲುಮಾಳಿಗೆಯಮೇಲೆ ಜರುಗಿದ ಯಾವ ಕೃತ್ಯವೂ ದಂಪತಿಗಳಿಗೆ ಕಾಣಬಂದಿರಲಿಲ್ಲ.

'ಓಹೋ....ಅರಸರನ್ನು ಅಳಿಯಂದಿರನ್ನಾಗಿ ಮಾಡಿಕೊಳ್ಳುವ ದೂರಾಲೋಚನೆಯಿಂದಲೇ ಉತ್ಸವವನ್ನು ಮನೆಯ ಮುಂದೆ ನಿಲ್ಲಿಸಿಕೊಂಡಿರಬೇಕು' ಎಂಬ ಕುಹಕದ ನುಡಿಯೂ ಬರದೇ ಇರಲಿಲ್ಲ.

ಓಂಕಾರನ ಮನಸ್ಸು ಹಿಂಡಿ ಹಿಪ್ಪೆಯಾದಂತಾಗಿತ್ತು. ತನ್ನ ಹೊಯ್ದಾಟಗಳನ್ನು ಮನದಲ್ಲಿ ಸಂಯಮಪೂರ್ವಕವಾಗಿ ಅಡಗಿಸಿಕೊಂಡು, ಫಲಸಮೇತವಾಗಿ ಸಮವರ್ತಕರನ್ನು ಬೀಳ್ಕೊಟ್ಟನು. ಮಹಾದೇವಿಯ ಗೆಳತಿಯರು ಮೆರವಣಿಗೆ ಮುಂದೆ ಸಾಗಿದ ಬಳಿಕ ಒಳಗೆ ಬಂದರು. ಮಹಾದೇವಿ ಮನದ ನೋವನ್ನು, ಹೊಯ್ದಾಟವನ್ನು ನುಂಗಿಕೊಂಡು ಚಾಪೆಯ ಮೇಲೆ ಆಸೀನಳಾಗಿ ವಚನಗಳನ್ನು ಓದಲಾರಂಭಿಸಿದ್ದಳು. ಕಣ್ಣುಗಳು ಯಾಂತ್ರಿಕವಾಗಿ ಸುಳಿದಾಡುತ್ತಿದ್ದರೂ ಒಂದು ಅಕ್ಷರವೂ ಒಳಸೇರದೆ, ಎಲ್ಲೆಡೆಗಳಿಂದ ಆ ಕಾಮತಪ್ತ ಕಣ್ಣುಗಳು ಈಟಿಯಿಂದ ಚುಚ್ಚುವಂತೆ ನೋಟವನ್ನು ಎಸೆಯುತ್ತಿದ್ದವು. ವಾದ್ಯಗಳ ಘೋಷ ಕಿವಿಯಿಂದ ದೂರ ಸರಿದಾಗ ಸ್ವಲ್ಪ ಸಮಾಧಾನವೆನ್ನಿಸಿತು. ಅಷ್ಟರಲ್ಲಿ ಗೆಳತಿಯರು ಒಳಗೆ ನುಗ್ಗಿದರು.

'ಮಾದೇವಿಯು....ಉತ್ಸವವನ್ನು ಪೂರ್ಣವಾಗಿ ನೋಡಲೇ ಇಲ್ಲ....' ವಿಷಾದದ ಧ್ವನಿಯಲ್ಲಿ ಕುಮುದೆ ನುಡಿದಳು.

'ಉತ್ಸವದ ಜೀವಾಳವಾದ ರಾಜರ ನೋಟವೇ ಈಕೆಯ ಮೇಲೆ ಬಿದ್ದಾಗ ಇನ್ನೇನನ್ನು ನೋಡುವುದು ಉಳಿದೀತವ್ವಾ! ನಮ್ಮಂಥವರೊಡನೆ ಮಾತನಾಡೋದೇ ಕಷ್ಟವಾಗಬಹುದು....' ಶಾರದೆ ಹೇಳಿದಳು.

ಮಹಾದೇವಿ ತಲೆಯೆತ್ತಿ, ನೇರವಾದ ತೀಕ್ಷ್ಣದೃಷ್ಟಿಯಿಂದ ಶಾರದೆಯನ್ನು ದಿಟ್ಟಿಸಿದಳು. ಬಾಲ್ಯವಿಧವೆಯಾದ ಆಕೆ ಇನ್ನೂ ಚಪಲತೆಯ ಸೆಳವಿನಲ್ಲೇ ಇದ್ದಳು. ತಾನಾಗಿ ಒದಗಿಬಂದ ಪತಿವಿಯೋಗದ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿಯಾದರೂ ಆಕೆಗೆ ವೈರಾಗ್ಯ, ಕಡೆಗೆ ಗಾಂಭೀರ್ಯವಾದರೂ ಬರಬೇಕಾಗಿದ್ದಿತು. ಮಹಾದೇವಿ ಕಟುವಾಗಿ ಹೇಳಿದಳು :

'ಎಂತಹ ಮಾತು ಶಾರದಾ! ಕೌಶಿಕ ಎಂದರೆ ಗೂಬೆ ಎಂದು ಒಂದು ಅರ್ಥವಿದೆ. ಆ ಗೂಬೆಯ ಕಣ್ಣು ಬಿದ್ದುದಕ್ಕೆ ಆನಂದಪಡಬೇಕೆ?.... ಇಂತಹ ಕ್ಷುಲ್ಲಕ ಮಾತನ್ನು ಆಡಬೇಡ....' ಶಾರದೆಯ ಮಾತಿನಿಂದ ಬೆಂದ

ಹೃದಯದಮೇಲೆ ಕಾಯ್ದ ಕಬ್ಬಿಣದ ಸಳಿಯಿಂದ ಹೊಡೆದಷ್ಟು ನೋವೆನಿಸಿತ್ತು ಮಹಾದೇವಿಗೆ.

'ಛೇ....ಅರಸರೆಂದರೆ ಪ್ರತ್ಯಕ್ಷ ದೇವರವ್ವ! 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಶಾಸ್ತ್ರವಾಣಿ ಇಲ್ಲವೆ? ಹಾಗೆಲ್ಲ ಕೆಟ್ಟ ಮಾತನಾಡಬಾರದು ಮಹಾದೇವಿ....' ಕುಮುದ ಹೇಳಿದಳು.

'ನಿಮ್ಮಂತಹ ಮೂಢಮತಿಗಳಿಗೆ ಇಂತಹವರೇ ದೇವರು! ಆ ಅಯೋಗ್ಯನಿಗೆ ತನ್ನ ಸ್ಥಾನಕ್ಕೆ ತಕ್ಕ ಗಾಂಭೀರ್ಯ ಬೇಡವೇ ಕುಮುದಾ? ಮಲ್ಲಿಗೆ ಕಸ್ತೂರಿಗಳ ಗುಣ ಅವುಗಳ ವಾಸನೆಯಿಂದ ತಿಳಿದುಬರುವಂತೆ, ಮನುಷ್ಯನ ಯೋಗ್ಯತೆ ಅವನ ವರ್ತನೆಯಿಂದ ತಿಳಿದುಬರುವುದು. ಊರ ಹೆಂಗೆಳೆಯರನ್ನು ಕಾಕದೃಷ್ಟಿಯಿಂದ ನೋಡುವುದು ಯಾವ ಗುಣವಂತಿಕೆ? ಹೆಣ್ಣು, ಹೊನ್ನು, ಮಣ್ಣು ಮೂರರ ರಕ್ಷಣೆಯೇ ರಾಜನ ಕರ್ತವ್ಯ. ತನ್ನ ಪ್ರಜಾಸಮುದಾಯದ ಆಸ್ತಿ, ಧನಕನಕವನ್ನು ರಕ್ಷಿಸುವುದಷ್ಟೇ ಅಲ್ಲ, ಅವನು ಪರನಾರಿ ಸಹೋದರನಾಗಬೇಕು....'

ಈ ಮಾತುಗಳಿಂದ ಶಾರದೆ, ಕುಮುದೆಯರು ಪೆಚ್ಚಾದರು.

'ನಾವಿನ್ನು ಹೊರಡುತ್ತೇವೆ ಮಹಾದೇವಿ....' ಎಂದು ಮೇಲೆದ್ದರು. ಕಮಲಾಕ್ಷಿಯೂ ಅವರನ್ನು ಹಿಂಬಾಲಿಸಿದಳು.

ಶೈಲಜೆ ಮಾತ್ರ ಮೌನದ ಮುದ್ದೆಯಾಗಿ ಕುಳಿತಿದ್ದಳು. ಬೆಂಕಿಯ ಸಮೀಪದಲ್ಲಿದ್ದರೆ ಬೆಂಕಿ ಸುಡದಿದ್ದರೂ ಅದರ ಝಳ ಬಡಿಯುವಂತೆ, ಮಹಾದೇವಿಯನ್ನು ಕೌಶಿಕನ ವಿಕೃತದೃಷ್ಟಿಯ ಬೆಂಕಿ ಸುಡತೊಡಗಿದ್ದರೂ ಆಕೆಯ ಸಮೀಪದಲ್ಲಿ ಅತುಕೊಂಡು ನಿಂತ ಶೈಲಜೆಗೆ ಆ ದೃಷ್ಟಿಯ ಝಳ ಬಡಿದಿತ್ತು. ಶೈಲಜೆ ಶಾರೀರಿಕವಾಗಿ ಮಾತ್ರವೇ ಮಹಾದೇವಿಯ ಬಳಿ ನಿಂತಿರಲಿಲ್ಲ; ಅವಳ ವಿಚಾರದ ಜಾಡಿನಲ್ಲಿಯೂ ಸನಿಹವೇ ಇದ್ದುದರಿಂದ ಗೆಳತಿಯ ಮಾನಸಿಕ ಭಾವನೆಗಳನ್ನು ಸ್ವಲ್ಪಮಟ್ಟಿಗಾದರೂ ಅರಿಯಬಲ್ಲವಳಾಗಿದ್ದಳು.

ಕೌಶಿಕನ ಕೀಳುದೃಷ್ಟಿ ತನ್ನ ಸುತ್ತ ಕೇಂದ್ರೀಕೃತವಾದುದೇ ಅಲ್ಲದೆ ಅವಳ ಮೈತುಂಬ ಹರಿದಾಡಿದ ನೆನಪು ಮಹಾದೇವಿಯ ಹೃದಯವನ್ನು ಹಿಂಡುತ್ತಿತ್ತು.

'ಶೈಲಜಾ....ನನ್ನ ಚನ್ನಮಲ್ಲಿಕಾರ್ಜುನ ಕಣ್ತೆರೆಯುಲೊಲ್ಲ. ಅವನ ಮುನಿಸಿನ ಕಾರಣವನ್ನೇ ನಾನರಿಯೆ. ಕಾಡಿ ನೋಡುವುದಕ್ಕೊ ಒಂದು ಮಿತಿ ಬೇಡವೆ? ನೂರು ಪೆಟ್ಟು ಬಿದ್ದರೆ ಒಂದು ಕಲ್ಲು ಮೂರ್ತಿಯಾಗುವುದು ನಿಜ; ಆದರೆ ಮಿತಿ ಇಲ್ಲದೆ ಹೊಡೆತ ಬಿದ್ದರೆ ಅದು ಪುಡಿಯಾಗದೇ....?' ಆಕೆಯ

ಕಣ್ಣಾಲಿಗಳು ನೀರಿನಿಂದ ತುಂಬಿದ್ದವು.

'ಮಾದೇವಿ, ನೀನು ನನ್ನ ಗೆಳತಿಯೆಂದು ಮುಖಸ್ತುತಿಗೆ ಹೇಳುತ್ತಿಲ್ಲ; ನೀನು ಪುಡಿಯಾಗುವ ಹಿಟ್ಟಿಗಲ್ಲಲ್ಲ, ಕಠಿಣ ಶಿಲೆ....'

'ಏನೋ ಅವ್ಯಕ್ತ ವೇದನೆಯಿಂದ ನನ್ನೆದೆ ನಡಗುತ್ತಿದೆ. ಓಹ್....ಅವನ ಆ ದೃಷ್ಟಿ....ನನ್ನನ್ನು ನೂರಾರು ಈಟಿಗಳಿಂದ ಚುಚ್ಚುತ್ತಿದೆ....ಶೈಲಾ ಚುಚ್ಚುತ್ತಿದೆ....' ಮಹಾದೇವಿಯ ಕಣ್ಣಿನ ಚಿಪ್ಪಿನಿಂದ ಜಾರಿದ ನೀರಿನ ಮುತ್ತುಗಳು ಕೆನ್ನೆಯಮೇಲೆ ಉರುಳತೊಡಗಿದ್ದವು. ಶೈಲಜೆಗೂ ಕಣ್ಣು ತುಂಬಿ ಬಂದವು.

'ಶೈಲಾ....ನನ್ನಲ್ಲಿ ಏನಿದೆ ಅಂತ ಅವನು ಹಾಗೆ ನೋಡಬೇಕೆ? ನಿಮ್ಮಂತೆ ಚಂದವಾದ ಒಂದು ಸೀರೆ ಉಟ್ಟಿರಲಿಲ್ಲ, ಬೆಲೆಬಾಳುವ ಆಭರಣ ತೊಟ್ಟಿರಲಿಲ್ಲ. ಕಣ್ಣು ಕುಕ್ಕುವ ಅಲಂಕಾರವಿಲ್ಲ, ಪುರುಷರನ್ನು ಸೆಳೆಯುವ ಆಕರ್ಷಣೆಯ ವರ್ತನೆ ಮುನ್ನವೇ ಇಲ್ಲ. ನನಗಿಂತ ನೂರರಷ್ಟು ಹೆಚ್ಚಿನ ಶೃಂಗಾರವನ್ನು ಕುಮುದೆ, ಶಾರದೆಯರು ಮಾಡಿರಲಿಲ್ಲವೆ....?' ನೋವು ಬೆರೆತ ಮುಗ್ಧಭಾವದಿಂದ ಕೇಳಿದಳು.

'ನೈಸರ್ಗಿಕ ಪುಷ್ಪಕ್ಕೆ ಭ್ರಮರ ಎಳೆಸುವುದಲ್ಲದೆ ಬಣ್ಣ ಕೊಟ್ಟು, ಪರಿಮಳ ಚಿಮುಕಿಸಿಟ್ಟ ಕೃತಕ ಪುಷ್ಪಕ್ಕಲ್ಲ ಕೆಳದಿ....ನಿನ್ನ ಅಪೂರ್ವ ಸೌಂದರ್ಯವೇ ಅಪ್ರತಿಮ ಅಲಂಕಾರ....' ಶೈಲಜೆ ಪಿಸುಗುಟ್ಟಿದಳು.

ಮಹಾದೇವಿ ತನ್ನ ಕೂದಲನ್ನು ಹಿಂಡಿಕೊಳ್ಳುತ್ತ ನುಡಿದಳು:

'ನನ್ನ ಗುರಿಗೆ ಬಾಧಕವಾದ ಈ ಚೆಲುವನ್ನು ದೇವನು ನನಗೇಕೆ ಕೊಡಬೇಕಾಗಿತ್ತು? ರೇಷ್ಮೆಹುಳುವಿನ ಪ್ರತಿಭೆಯ ಪ್ರತಿಫಲವಾದ ಗೂಡು ಅದರ ಸಾವಿಗೆ ಹೇತುವಾಗುವಂತೆ, ನನ್ನ ಈ ದರಿದ್ರ ಸೌಂದರ್ಯ....' ಶೈಲಜೆ ಮಹಾದೇವಿಯ ಮಾತನ್ನು ಆಕೆಯ ತುಟಿಯಮೇಲೆ ತನ್ನ ಬೆರಳಿರಿಸಿ ತಡೆದಳು. ಧಾರಾಕಾರವಾಗಿ ಹರಿಯುತ್ತಿದ್ದ ಅಶ್ರುಬಿಂದುಗಳನ್ನು ತನ್ನ ಬೆರಳತುದಿಯಿಂದ ಒರೆಸಿ, ಅವಳ ಕೂದಲನ್ನು ಹಿಂದಕ್ಕೆ ಸರಿಸುತ್ತ ಹೇಳಿದಳು:

'ಮಾದೇವಿ....ಇಷ್ಟೇಕೆ ಭೀತಳಾಗಿರುವೆ? ಹೊಳೆಯು ಗಾವುದ ದೂರವಿರುವಾಗಲೇ ಪಂಚೆ ಎತ್ತಿ, ಕೈಲಿ ಕೆರಹುಗಳನ್ನು ಹಿಡಿದುಕೊಳ್ಳುವವನಂತೆ ಮಾಡುತ್ತಿರುವೆ. ಸಂತೈಸಿಕೊ ಕೆಳದಿ. ದೃಢವಾಗಿ ನೀನು ನಂಬಿದ ನಿನ್ನ ಶಿವನು ಎಂದಿಗೂ ಕೈ ಬಿಡನು....'

ಬದುಕಿನಲ್ಲಿ ಕಷ್ಟ ಬಂದಾಗ ಬೇರೊಬ್ಬರು ಪೂರ್ಣವಾಗಿ ಕಷ್ಟಗಳನ್ನು ಹೊತ್ತುಕೊಳ್ಳದಿದ್ದರಷ್ಟೆ; ಸಂತೈಸಿ ಮಾತನಾಡಿದರೂ ಹೊರೆಗೆ ಹೆಗಲು ಕೊಟ್ಟಂತಾಗಿ ಹಗುರವೆನ್ನಿಸುವುದು. ಶೈಲಜೆ ತನ್ನ ಮನೆಗೆ ಹೊರಟಾಗ ಸುಹಾವೇನಿ ಸಂಜೆಯ ಪೂಜೆಗೆಂದು ಮೀಯಲು ಸ್ನಾನದ ಮನೆಗೆ ನಡೆದಳು. ನೆರೆದ ಅತಿಥಿಗಳೆಲ್ಲಾ ಒಬ್ಬೊಬ್ಬರಾಗಿ ಚದುರಿದರು. ಮೋಡ ಮುಸುಕಿದ ಮಳೆಗಾಲದ ದಿವಸಗಳಲ್ಲಿ ಒಂದು ಬಗೆಯ ಮಂಕು ಜಗತ್ತನ್ನು ಮುಸುಕಿದಂತೆ ಮನೆಯನ್ನು ಗಂಭೀರ ಮೌನ ಆವರಿಸಿತ್ತು. ಯಾರೊಡನೆ ಯಾರಿಗೆ ಮಾತನಾಡಲೂ ಧೈರ್ಯವಿರಲಿಲ್ಲ. ಆದರೆ ಮನಸ್ಸುಗಳು ವಿಲಿವಿಲಿ ಒದ್ದಾಡುತ್ತಿದ್ದವು. ಜೇಡನ ಬಲೆಯಲ್ಲಿ ಕಾಲುಗಳು ಸಿಕ್ಕಿಹಾಕಿಕೊಂಡ ಕ್ರಿಮಿಗಳಂತೆ ಕಲ್ಪನೆಯ ಬಲೆಯಲ್ಲಿ ಸಿಕ್ಕು ನಿಸ್ಸಹಾಯಕರಾಗಿದ್ದರು. ಮೌನವಾಗಿಯೇ ಊಟ ಮುಗಿಯಿತು. ದೀಪಗಳೂ ನಂದಿದವು. ಓಂಕಾರ-ಲಿಂಗಮ್ಮರು ತಮ್ಮಲ್ಲಿಯೇ ಆಲೋಚಿಸುತ್ತಿದ್ದರು.

‘ಅವಳಾಗಲೇ ಮಲಗಿದಳೇನೋ’ ಎಂದುಕೊಂಡ ಓಂಕಾರ.

‘ಅವರಾಗಲೇ ನಿದ್ರಾವಶರಾಗಿರಬೇಕು’ ಎಂದುಕೊಂಡಳು ಲಿಂಗಮ್ಮ. ಆದರೆ ದೀರ್ಘವಾದ ನಿಟ್ಟುಸಿರು ಓಂಕಾರನಿಂದ ಹೊಮ್ಮಿದಾಗ, ಲಿಂಗಮ್ಮ ಮಗ್ಗುಲಿಗೆ ಹೊರಳಿ ಕೈಬಳೆಗಳು ಜಣ-ಜಣಿಸಿದಾಗ ಪರಸ್ಪರ ಎಚ್ಚರವಾಗಿರುವುದನ್ನು ಅರಿತರು.

೨೪. ವಿರಹದುರಿಯಲ್ಲಿ

ಕೌಶಿಕನು ತನ್ನ ಏಕಾಂತ ಭವನಕ್ಕೆ ಹೋಗಿ, ಮೆತ್ತನೆಯ ಸುಪ್ಪತ್ತಿಗೆಯ ಮೇಲೆ ಮೈಚೆಲ್ಲಿ, ದಿಂಬಿಗೆ ಶರೀರವನ್ನು ಆನಿಸಿದ. ಪರಿಚಾರಕರು ಬಂಗಾರದ ಹರಿವಾಣಗಳನ್ನು ತಂದು ಎದುರು ಹಿಡಿದಾಗ ಕಿರೀಟವನ್ನು ತೆಗೆದು ಇರಿಸಿದ. ಉಳಿದ ಆಭರಣಗಳನ್ನು ಪರಿಚಾರಕರು ಬಿಚ್ಚಿದರು. ಪರಿಚಾರಕರಿಗೆ, ಯಾರೂ ಬರದಂತೆ ನೋಡಿಕೊಳ್ಳಲು ಅಜ್ಞಾಪಿಸಿ ಹಾಸಿಗೆಯ ಮೇಲೆ ಕೈಕಾಲುಗಳನ್ನು ಚಾಚಿದ. ಎದೆ ಮೇಲಾಗಿ ಮಲಗಿ ಕಣ್ಣು ಮುಚ್ಚಿಕೊಂಡು ತಾನು ಕಂಡ ರೂಪವನ್ನು ಮತ್ತೆ ಚಿತ್ರಿಸಿಕೊಂಡ; ಆದರೂ ಸಮಾಧಾನವಿಲ್ಲ.

ಕೌಶಿಕನ ಏಕಾಂತ ತಾಣಕ್ಕೆ ಅಪ್ಪಣೆ ಇಲ್ಲದೆ ಬರುವ ಅವಕಾಶ ಪಟ್ಟದ ರಾಣಿ ಯಶೋಮತಿಗಷ್ಟೇ ಇದ್ದಿತು. ಅವಳು ಮೆಲ್ಲನೆ ಹೆಜ್ಜೆ ಇರಿಸುತ್ತ ಬಂದು ಮಂಚದ ಮೇಲೆ ಕುಳಿತು ಕೇಳಿದಳು :

'ಪ್ರಭುಗಳಿಗೆ ಬಳಲಿಕೆ ಬಹಳವಾಗಿದೆಯೇ? ಅಶ್ವಾರೋಹಣ ಹಣ್ಣು ಮಾಡಿರಬೇಕು....' ಎಂದು ತನ್ನ ಕೈಯನ್ನು ಹಣೆಯ ಮೇಲೆ, ಕೊರಳಿನ ಸುತ್ತಲೂ ಪ್ರೇಮದಿಂದ ಆಡಿಸಿದಳು.

'ಕುದುರೆಯ ಜಿಗಿದಾಟವಲ್ಲ, ಕಾಮನ ಕಾಟವು ಹಣ್ಣು ಮಾಡಿದೆ....' ಎಂದು ಮನದಲ್ಲಿ ಅಂದುಕೊಂಡ, ಮಾತನಾಡಲಿಲ್ಲ. ಶಾರೀರಿಕ ಶ್ರಮಕ್ಕಿಂತ ಮಾನಸಿಕ ಚಿಂತೆ ಮನುಷ್ಯನನ್ನು ಬೇಗನೇ ಬಳಲಿಸುವುದು ಎಂಬುದು ಅವನು ಅರಿಯದ ವಿಷಯವೇನಲ್ಲ.

'ಊಟವನ್ನು ಮಾಡಿ ವಿಶ್ರಾಂತಿ ಹೊಂದಬಹುದು. ದಣಿದಾಗ ಉಪವಾಸ ಒಳ್ಳಿತಲ್ಲ....'

'ಬೇಡ ರಾಣಿ....ನನಗೇನೂ ಬೇಡ....'

'ಕಡೆಗೆ ಕೇಸರಿಮಿಶ್ರಿತ ಬಿಸಿ ಹಾಲನ್ನಾದರೂ ಕುಡಿಯಿರಿ....' ಗೋಗರೆದ ಳಾಕೆ.

'ನಾನೇನೂ ಒಲ್ಲೆ....'

'ಏಕೆ ನನ್ನಮೇಲೆ ಮುನಿಸೇ?'

'ಯಾರ ಮೇಲೂ ಮುನಿಸಿಲ್ಲ, ನನ್ನ ಪಾಡಿಗೆ ನನ್ನನ್ನು ಬಿಟ್ಟರೆ ಉಪಕಾರ ವಾದೀತು....' ಕೌಶಿಕನ ಮಾತಿನ ತೀಕ್ಷ್ಣತೆ ಕಂಡು ಯಶೋಮತಿ ತಲ್ಲಣಿಸಿ, ಮೌನವಾಗಿ ಎದ್ದು ಹೋದಳು ತನ್ನ ನಿವಾಸಕ್ಕೆ.

ಕೌಶಿಕ ಸಾಮಾನ್ಯವಾಗಿ ಪಟ್ಟದರಾಣಿಯ ಭವನದಲ್ಲೇ ತನ್ನ ವೇಳೆಯನ್ನು ಕಳೆಯುತ್ತಿದ್ದುದು. ವಿಶೇಷ ಪ್ರಸಂಗದಲ್ಲಿ, ಏಕಾಂತ ಬೇಕೆನಿಸಿದಾಗ, ತನ್ನ ಏಕಾಂತ ಭವನಕ್ಕೆ ಹೋಗಿಬಿಡುತ್ತಿದ್ದ. ತನಗೆ ಇಚ್ಛೆಯಾದರೆ ಆಜ್ಞೆಯನ್ನು ಕಳಿಸಿ ಆತ್ಮೀಯರನ್ನಷ್ಟೇ ಅಲ್ಲಿಗೆ ಕರೆಸುತ್ತಿದ್ದ.

ಯಶೋಮತಿ ಹೊರಗೆ ಸಾಗಿದಾಗ ಕೈಚಪ್ಪಾಳೆ ಬಡಿದ. ಬಾಗಿಲ ಹೊರಗಿದ್ದ ಕಾವಲುಗಾರ 'ಅಪ್ಪಣೆ ಮಹಾಪ್ರಭು....' ಎಂದು ತಲೆ ಬಗ್ಗಿಸಿ ನಿಂತ.

'ವಿದೂಷಕ-ವಸಂತಕರನ್ನು ಕೇಳೀವನಕ್ಕೆ ತೀವ್ರವಾಗಿ ಬರಲು ಹೇಳಿಕಳಿಸಬೇಕು....' ಪರಿಚಾರಕ ಹೋದತಕ್ಷಣ ಕೌಶಿಕ ಬಿಳಿಯ ಉಡುಪನ್ನು ಧರಿಸಿ, ಬಿಳಿಯ ಉತ್ತರೀಯವನ್ನು ಹೊದೆದು ಕೇಳೀವನದತ್ತ ನಡೆದ.

ವನದ ಮಧ್ಯದಲ್ಲಿ ಮಾನವನಿರ್ಮಿತ ತಿಳಿಗೊಳವಿತ್ತು. ಅದರ ದಂಡೆಗೆ ಮಲ್ಲಿಕಾಮಂಟಪವಿತ್ತು. ವಸಂತಮಾಸದ ಹುಣ್ಣಿಮೆಯ ದಿನವದು. ಚಂದಿರನು ತುಂಬುಮೊಗದಿಂದ ಬಿಳಿಯ ಮೋಡಗಳೊಡನೆ ಕಣ್ಣುಮುಚ್ಚಾಲೆಯಾಡುತ್ತಿದ್ದ. ಕೌಶಿಕನು ಮೆಲ್ಲನೆ ನಡೆದು ಬಂದು ಮಲ್ಲಿಕಾಮಂಟಪದಲ್ಲಿ ಕುಳಿತ. ಮಲ್ಲಿಗೆಯ ಕಾಲ ಆರಂಭವಾಗಿ ಕೆಲವು ದಿನಸಗಳಾಗಿದ್ದವು. ಉನ್ಮಾದವಾದ ಪರಿಮಳವು ವಾತಾವರಣವನ್ನು ವ್ಯಾಪಿಸಿತ್ತು. ತಿಳಿಗೊಳದಲ್ಲಿ ಚಂದಿರನ ಬಿಂಬ ಮೂಡಿದ್ದಿತು. ಅದನ್ನೇ ದೃಷ್ಟಿಸುತ್ತ ಮಲ್ಲಿಗೆಯ ಹೂವೊಂದನ್ನು ಚಿವುಟಿ ಮೂಗಿನ ಬಳಿ ಹಿಡಿದ.

'ಆಕೆಯ ಮುಖವೂ ಹುಣ್ಣಿಮೆಯ ಚಂದಿರನಂತೆ ತುಂಬಿಕೊಂಡಿತ್ತಲ್ಲವೆ? ಓಹ್....ಇಂತಹ ಬೆಳ್ದಿಂಗಳಲ್ಲಿ ಆ ಶ್ವೇತಕನ್ಯೆ, ಈ ಮಂಟಪದಲ್ಲಿ ನನ್ನ ಮೈಗೊರಗಿ ಕುಳಿತುಕೊಳ್ಳುವುದು ಎಷ್ಟು ಆಹ್ಲಾದಕರವಲ್ಲವೆ? ಈ ಬೆಳ್ದಿಂಗಳಲ್ಲಿ ಆ ಮುಖವನ್ನು ಸಮೀಪದಲ್ಲಿ ಹಿಡಿದು, ಹೊಳೆಯುವ ಕಣ್ಣುಗಳನ್ನು ದಿಟ್ಟಿಸುವುದು ಎಂತಹ ಆಪ್ಯಾಯಮಾನ....

ಆಕೆ ಎಂತಹ ಚೆಲುವೆ! ಮಳೆಯಲ್ಲಿ ಮಿಂದ ಭೂದೇವಿಯಂತೆ, ರವಿಕಿರಣ ಚುಂಬನದಿಂದ ಮೈದೆರೆದು ನಿಂತ ತಾವರೆಯಂತೆ, ಅಪೂರ್ವ ಲಾವಣ್ಯವಂತೆ! ನನ್ನ ಅಂತಃಪುರದಲ್ಲಿ ಇಂತಹ ಒಂದು ಅನರ್ಘ್ಯರತ್ನವೂ ಇಲ್ಲ. ಯಶೋಮತಿ ತಕ್ಕಮಟ್ಟಿಗೆ ಚೆಲ್ವೆಯಾದರೂ ಆ ಕನ್ಯೆಯ ಕಾಂತಿಯ ಅರ್ಧದಷ್ಟನ್ನೂ ಹೊಂದಿಲ್ಲ. ರಸವಂತಿ, ವೈಜಯಂತಿ, ವಿಲಾಸಿನಿ, ಸುಹಾಸಿನಿ ಇವರೆಲ್ಲ ತಕ್ಕಮಟ್ಟಿಗಿದ್ದರೂ ಇವರದ್ದು ಒಂದೊಂದು ಅಂಗಾಂಗಕ್ಕೆ ಸೀಮಿತವಿದೆ. ಅವಳು ಹಾಗಲ್ಲ; ಯಾವನೋ ಚತುರ ಕಲಾವಿದ ಅಮೃತಶಿಲೆಯ

ಮೂರ್ತಿಯನ್ನು ಕಟೆದು ಇಟ್ಟಿರಬೇಕು. ಅದಕ್ಕೆ ಜೀವ ಬಂದು ಉಡುತಡಿಗೆ ಇಳಿದಿರಬೇಕು ಎಂದೆನಿಸುತ್ತದೆ.

ಇಂತಹ ಬೆಳ್ದಿಂಗಳ ರಾತ್ರಿಯಲ್ಲಿ ಅವಳೊಡನೆ ಏಕಾಂತದಲ್ಲಿ ಮನದಣಿಯೆ ಮಾತನಾಡಬೇಕು; ಆ ರಾತ್ರಿ ಸರಿದು ಬೆಳಗಾಗಬಾರದು, ಹಾಗೆಯೇ.... ಹಾಗೆಯೇ ಇರಬೇಕು....' ಕಲ್ಪನೆಯ ಕನಸಿನಲ್ಲಿ ವಿಹರಿಸುತ್ತಿದ್ದ ಕೌಶಿಕ.

'ಪ್ರಭು,....ರಸಿಕಚಕ್ರೇಶ್ವರರು ಇದೇನಿದು ಇಂತಹ ಬಿಸಿಲಿನಲ್ಲಿ, ಉರಿಗಾಳಿಯ ದಗೆಯ ನಡುವೆ ಕುಳಿತುಬಿಟ್ಟಿರುವಿರಿ....' ವಸಂತಕ ಬಂದು ಕೇಳಿದಾಗ ಕೌಶಿಕ ಬೆಚ್ಚಿದ. ತನ್ನ ಮನಸ್ಸನ್ನು ಇಷ್ಟೊಂದು ಸೂಕ್ಷ್ಮವಾಗಿ ತಿಳಿದ ವಸಂತಕನ ಬಗ್ಗೆ ಹೆಮ್ಮೆ ಎನಿಸಿತು.

'ಗೆಳೆಯಾ, ಯಾಕೋ ಈ ಬದುಕೇ ಬೇಡವೆನ್ನಿಸುತ್ತಿದೆ....' ಕೌಶಿಕ ನುಡಿದ.

'ನಿಜ ಪ್ರಭು, ಬಯಸಿದ ವಸ್ತು ಕೈಗೆ ಎಟುಕದಾಗ ನಿರಾಶೆ ಕಾಡುವುದು ಸಹಜವೇ....!'

'ಏನನ್ನು ಕುರಿತು ಮಾತನಾಡುತ್ತಿರುವೆ....' ಕೌಶಿಕ ಕೇಳಿದನು.

'ಮತ್ತಾವುದನ್ನು, ಅರಸರ ಬಯಕೆಯನ್ನು ಕುರಿತು. ಹಸಿದವನ ಕಣ್ಣಿಗೆ ಹಣ್ಣು ಕಂಡರೆ ಅವನು ಚಟಪಟಿಸದಿರುವನೇ....?' ಗಹಗಹಿಸಿ ನಕ್ಕ.

'ಓಹ್....ನೀನಾಗಲೇ ತಿಳಿದೇಬಿಟ್ಟೆಯಾ?....' ಆಶ್ಚರ್ಯದಿಂದ ಕೌಶಿಕ ಕೇಳಿದ.

'ಆಕಾಶದ ಸೂರ್ಯನಷ್ಟು ಸ್ಪಷ್ಟವಾಗಿರುವುದನ್ನು ತಿಳಿಯಲು ಸಾಹಸ ಪಡಬೇಕೆ? ಊರಿನಲ್ಲೆಲ್ಲ ಆ ಬಗ್ಗೆ ಸುಳಿಗಾಳಿ ಎದ್ದಿದೆ....'

'ಅಷ್ಟು ಬೇಗನೇ....'

'ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ ಜಗತ್ತಿಗದು ಕಾಣದೇ ಪ್ರಭು? ಉಷ್ಟ್ರಪಕ್ಷಿಯ ಮೈ ದೊಡ್ಡದು, ಮುಖ ಸಣ್ಣದು; ಶತ್ರುವಿನಿಂದ ರಕ್ಷಣೆ ಹೊಂದಲು ಅದು ಓಡಿಹೋಗಿ ಮರಳಿನಲ್ಲಿ ಮುಖ ಮುಚ್ಚಿಕೊಳ್ಳುವುದಂತೆ. ಶತ್ರುವಿಗೆ ತಾನು ಕಾಣಹಾದೆ ಎಂಬ ಸಮಾಧಾನ ಅದಕ್ಕೆ; ಆದರೆ ಅದರ ಮೈಯೆಲ್ಲ ಹೊರಗೇ ಇರುವುದು....'

'ವಸಂತಕ....ಆ ಚೆಲುವೆ, ಆ ಮುಗ್ಧೆ ಯಾರು? ಯಾರ ಸುಪುತ್ರಿ....'

'ಯಾರು, ಯಾರು, ಯಾವ ಕನ್ಯೆ....' ವಸಂತಕ ಅರಿಯದಂತೆ ನಟಿಸಿದ.

'ಕಾಡಬೇಡ ವಸಂತಕ; ಇಂದು ಮಧ್ಯಾಹ್ನ ಮೈಹಾಳಿಯಿಂದ ಬರುವಾಗ ನೋಡಿದ ಆ ದಂತದ ಪುತ್ಥಳಿ....'

'ಓಹೋ ; ಸುತ್ತಲೂ ನೆರೆದಿರುವ ಜನಸಮುದಾಯದ ಪರಿವೆ ಸಹ ಇಲ್ಲದೆ, ಸ್ಥಾನದ ಔಚಿತ್ಯವನ್ನೂ ಮರೆತು, ಪುಂಗಿಯ ನಾದಕ್ಕೆ ಮನಸೋತ ಹಾವಿನಂತೆ, ಮಂತ್ರಮುಗ್ಧವಾಗಿ ದಿಟ್ಟಿಸಿದಿರಲ್ಲ ಆ ಲಲನೆಯೇ....?' ಕೆಣಕುವ ಧ್ವನಿಯಲ್ಲಿ ವಸಂತಕ ನುಡಿದ.

ಇಂತಹ ರಸಿಕತನದ ವಿಷಯಗಳಲ್ಲಿ ಮಾತನಾಡುವ ಸ್ವಾತಂತ್ರ್ಯವಿದ್ದುದು ವಸಂತಕ ಒಬ್ಬನಿಗೇ. ಕೌಶಿಕನು ರಾಜಕಾರಣದ ವಿಷಯಗಳನ್ನು ಮಂತ್ರಿ ಮುರಾರಿಯ ಮುಂದೆ ಬಿಚ್ಚಿಡುತ್ತಿದ್ದರೆ, ಇಂತಹ ವೈಯಕ್ತಿಕ ಮನೋಭಾವನೆಗಳನ್ನು ವಸಂತಕನ ಮುಂದೆ ತೆರೆದಿಡುತ್ತಿದ್ದ.

'ನಿನಗೇನು ಗೊತ್ತು ಗೆಳೆಯಾ ಆ ಅನುಭವ! ನವಿಲು ತನ್ನ ಪ್ರೇಯಸಿಗಾಗಿ ನರ್ತಿಸುವಾಗ ಜಗತ್ತನ್ನೇ ಮರೆತಿರುವುದು. ಅವು ಅಮೃತಗಳಿಗೆಗಳು!' — ತನ್ಮಯನಾಗಿ ಕೌಶಿಕ ನುಡಿದ.

'ನಿಮ್ಮ ಬದುಕಿನಲ್ಲಿ ಎಷ್ಟು ಬಾರಿಯೋ ಇಂತಹವು! ಒಂದೇ ಹೆಣ್ಣನ್ನು ಕಟ್ಟಿಕೊಂಡು ಒದ್ದಾಡುವುದೇ ನಮಗೆ ಸಾಕಾಗಿದೆ. ಮತ್ತೆಮತ್ತೆ ಅವು ಬೇಡವಪ್ಪಾ....' ಉಸಿರ್ಗರೆದು ವಸಂತಕ ನುಡಿದ, ವಿಕಟನಗೆ ನಕ್ಕು.

'ಸುತ್ತಾಟ ಸಾಕು ; ವ್ಯರ್ಥ ವಿಲಂಬ ಮಾಡದೆ ಮಾತಿಗೆ ಬರೋಣ. ಆ ಲಲನೆ ಯಾರವಳು....!

'ಆಕೆ ಓಂಕಾರಶೆಟ್ಟರ ಮಗಳು....'

'ಅಟ್ಟಣಿಗೆ ಏರಿ ಫಲ ಪುಷ್ಪಾರ್ಪಣೆ ಮಾಡಿದ ಆ ಸಭ್ಯವರ್ತಕರು....?'

'ಅಹುದು ; ನಿಮ್ಮ ಅವತಾರ ಕಂಡು ಮುಂದಿನದನ್ನು ಊಹಿಸಿ ನಾನಾಗಲೇ ಸುದ್ದಿ ಸಂಗ್ರಹ ಮಾಡಿರುವೆ. ಆ ಹರದಶ್ರೇಷ್ಠರ ಏಕೈಕ ಪುತ್ರಿ, ಆಕೆಯ ಹೆಸರು ಮಹಾದೇವಿ....'

'ಮಹಾದೇವಿ....ಎಂತಹ ಸುಂದರ ಹೆಸರು ; ದೇವೀ ಎಂದೇ ಚುಟುಕಾಗಿ ಕರೆದುಬಿಡಬಹುದು. ಆ ಎತ್ತರದ ನಿಲುವು, ಬಳುಕುವ ನಡು, ತುಂಬು ನಿತಂಬ, ಆಕರ್ಷಣೀಯ ಬಣ್ಣ, ಕಾಂತಿಯುಕ್ತ ಕಣ್ಣುಗಳು, ಕಟೆದು ಇಟ್ಟಂತಹ ಮೂಗು, ಕೆನ್ನೆಯ ಮೇಲೆ ಕೆಂದಾವರೆಯಂತೆ ಅರಳಿದ ಆ ನಸುಗೆಂಪು, ಮಾಟವಾಗಿ ಕಾಣುವ ವಕ್ಷಸ್ಥಲ, ಕಣ್ಣನ್ನು ಕೋರೈಸುವ ಕೂದಲ ರಾಶಿ....ಓಹ್....ಅಪೂರ್ವ ಸೌಂದರ್ಯ! ಚೆಲುವಿನ ಖಣಿ, ಮೋಹದ ಗಣಿ,....' ಕೌಶಿಕ ಭಾವುಕನಾಗಿ ನುಡಿದ.

'ಸಾಕು....ಸಾಕು....ಕೈಗೆಟುಕದ ವಸ್ತುವಿನ ಬಗೆಗೆ, ಇನ್ನೊಬ್ಬರ ತೋಟದ ಹಣ್ಣಿನ ಬಗ್ಗೆ ಚಿಂತಿಸುವುದು ಸಭ್ಯತೆಯಲ್ಲ....' ವಸಂತಕ ನುಡಿ

ಹಾಗ ಕೌಶಿಕ ಬೆಚ್ಚಿದ.

'ಏಕೆ....ಅವಳಿಗಾಗಲೇ ಮದುವೆಯಾಗಿದೆಯೇ....?'

'ಅಹುದು. ತಾನು ದೇವರನ್ನು ಲಗ್ನವಾಗಿರುವೆನೆಂದು, ವಿರಕ್ತಳೆಂದೂ ಹೇಳಿ ಸಾವ ಕೆಡುವ ಗಂಡರ ಸಂಪರ್ಕವೇ ಬೇಡವೆಂದು ಹೇಳುತ್ತಿದ್ದಾಳಂತೆ....'

ಕೌಶಿಕ ಗಹಗಹಿಸಿ ನಕ್ಕ. ಗೆಳೆಯನ ಹೆಗಲಮೇಲೆ ಕೈ ಹಾಕಿ ನುಡಿದ:

'ವಸಂತಕಾ, ಈ ವಿಚಾರದಲ್ಲಿ ಇಷ್ಟು ಅಜ್ಞಾನಿ, ಅನನುಭವಿ ನೀನು ಎಂದು ತಿಳಿದಿರಲಿಲ್ಲವಯ್ಯಾ. ಬಹುಶಃ ಆಕೆಯ ಚೆಲುವು, ಸ್ಥಾನಮಾನಕ್ಕೆ ತಕ್ಕ ಪುರುಷ ಸಿಗದಿದ್ದುದಕ್ಕೆ ಹಾಗೆ ವೈರಾಗ್ಯ ಧರಿಸಿರಬೇಕು. ಆದರೆ ನನ್ನಂತಹ ಆದರ್ಶಪುರುಷನನ್ನು, ಮಹಾರಾಣಿಯ ಪದವಿಯನ್ನೂ ಬೇಡವೆನ್ನುವಷ್ಟು ಮೂರ್ಖಳೆ ಅವಳು? ಸಾಧ್ಯವಿಲ್ಲ. ಬಗೆಬಗೆಯ ದಿವ್ಯಾಭರಣಗಳನ್ನು, ಜರಿಯ ಪೀತಾಂಬರಗಳನ್ನು ಕಂಡ ತಕ್ಷಣವೇ ಅವಳು ಕರಗಿಬಿಡುವಳು ಗೆಳೆಯಾ....'

'ಅಂತಹ ಸಾಮಾನ್ಯ ಭೋಗಜೀವಿಯಂತೆ ಕಾಣದು; ಅರಿವು-ಆದರ್ಶಗಳ ಪ್ರೌಢಿಮೆಯನ್ನು ಗಮನಿಸಲಿಲ್ಲವೇ ರಾಜ? ನಿರಾಭರಣಯುಕ್ತಳಾಗಿದ್ದರೂ ಅದು ಬಡತನದ, ಅಭಾವದ ಆಚರಣೆಯಲ್ಲ ಎಂಬುದನ್ನು ಅರಿಯಲಿಲ್ಲವೆ? ಹಳ್ಳಿಯ ಅನಾಗರಿಕಳನ್ನು ತಂದು ಜರದ ಪೀತಾಂಬರ ಉಡಿಸಿದರೂ ಅವಳ ನಡಿಗೆ, ಮಾತಿನಲ್ಲಿ ಅವಳಾರೆಂದು ತಿಳಿಯುವುದು. ಆದರೆ ಈಕೆ ಕೇವಲ ಬಿಳಿಯ ಸೀರೆಯನ್ನುಟ್ಟಿದ್ದರೂ ಸುಸಂಸ್ಕೃತಳೆಂಬುದನ್ನು ಪ್ರತಿಯೊಂದು ರೀತಿ ನೀತಿಯಲ್ಲಿ ಪ್ರದರ್ಶಿಸುತ್ತಿದ್ದಳು....'

'ಎಂತಹ ಆದರ್ಶದ ಹೆಣ್ಣಾದರೇನು ಬಿಡು ವಸಂತಕ; ಅಧಿಕಾರ, ಆಭರಣಕ್ಕೆ ಸೋಲದ ಹೆಣ್ಣುಗಳಿಲ್ಲ....'

'ಇನ್ನೂ ಒಂದು ಸಮಸ್ಯೆಯಿದೆ ಪ್ರಭು....ಅವರು ಬಸವಣ್ಣನವರ ನೂತನ ಧರ್ಮದ ನಿಷ್ಠಾವಂತ ಅನುಯಾಯಿಗಳು; ಪರಧರ್ಮೀಯರನ್ನು ಒಪ್ಪಲಾರರು....'

'ವಸಂತಕಾ, ಸ್ನೇಹ, ರಾಜಕೀಯ, ಬೇಟೆ, ಕೂಟಕ್ಕೆ ಜಾತಿ-ಧರ್ಮಗಳು ಅಡ್ಡಬರವು. ಹಾಲು, ಮೊಸರು, ಬೆಣ್ಣೆಗಳನ್ನು ಎಲ್ಲ ಜಾತಿಯವರಿಂದಲೂ ಕೊಳ್ಳುವುದಿಲ್ಲವೆ? ಹಾಗೆಯೇ ಮೇಲಿನವುಗಳಲ್ಲಿ ತಾರತಮ್ಯವಿರದು. ರಾಜನ ಕೈ ಹಿಡಿಯುವುದನ್ನು ಆಕೆ ನಿರಾಕರಿಸಲಾರಳೆಂದೇ ನನ್ನ ದೃಢ ನಂಬುಗೆ....' ಕೌಶಿಕ ವಸಂತಕನ ಕೈ ಹಿಡಿದು ಮೃದುವಾದ, ದೀನಧ್ವನಿಯಲ್ಲಿ ನುಡಿದ:

'ಗೆಳೆಯಾ, ಆವಶ್ಯಕತೆ ಒದಗಿದಾಗ ಅನುವಾಗುವವನೇ ನಿಜಸ್ನೇಹಿತ ನಲ್ಲವೆ? ನಾನು ಎಷ್ಟೋ ಲಲನೆಯರನ್ನು ನೋಡಿರುವೆ, ಬಯಸಿರುವೆ, ಒಡನಾಡಿರುವೆ, ಅಂಗಸುಖವನ್ನು ಉಂಡಿರುವೆ; ಆದರೆ ಇದು ಜಾತಿ ಮುತ್ತು. ಇದನ್ನು ಧರಿಸದೆ ನನಗೆ ಸಮಾಧಾನ, ಸಂತೃಪ್ತಿಯಿಲ್ಲ. ಅನೇಕರನ್ನು ಕಣ್ಣಿನಿಂದ ಬಯಸಿದ್ದೆ, ಶರೀರದಿಂದ ಬಯಸಿದ್ದೆ, ಆದರೆ....ಹೃದಯದಿಂದಲೂ ಬಯಸಿರುವುದು ಇವಳನ್ನಷ್ಟೇ! ಎಂತಹ ಸುಂದರ ಕೊಳವಾದರೇನು, ಬರೀ ಹೊನ್ನಾನರಿಕೆ ಇದ್ದು, ಕಮಲವಿಲ್ಲದಿದ್ದರೆ; ಶುಭ್ರ ನೀಲಾಗಸವಿದ್ದರೇನು ಬರೀ ನಕ್ಷತ್ರಗಳಿದ್ದು, ಚಂದ್ರಮನಿಲ್ಲದಿದ್ದರೆ; ಎಂತಹ ದಟ್ಟಾರಣ್ಯವಾದರೇನು ಶ್ರೀಗಂಧದ ಗಿಡವಿಲ್ಲದಿದ್ದರೆ! ಅವಳು ನನ್ನ ಹೃದಯಸರಸಿಯ ಕಮಲವಾಗಬಲ್ಲಳು, ನನ್ನ ಆರಮನೆಯಾಗಸದ ಚಂದ್ರಮನಾಗಬಲ್ಲಳು, ನನ್ನ ಬದುಕಿನ ಆರಣ್ಯದ ಶ್ರೀಗಂಧದ ಗಿಡವಾಗಬಲ್ಲಳು. ವಸಂತಕಾ....ನಾನು ರಾಜನಾಗಿ ನಿನ್ನನ್ನು ಬೇಡುತ್ತಿಲ್ಲ, ವಿರಹಿಯಾಗಿ, ನೊಂದ ಪ್ರಣಯಿಯಾಗಿ ಬೇಡುತ್ತಿರುವೆ; ನನಗಾಗಿ....ನನ್ನ ಬದುಕಿನ ಉಳಿವಿಕೆಗಾಗಿ ಅವಳನ್ನು ತಂದು ಕೊಡಲಾರೆಯಾ?....ಇಲ್ಲವಾದರೆ ಈ ಬದುಕಿಗೆ ಅರ್ಥವೇ ಇಲ್ಲ....' ಶೂನ್ಯ ಧ್ವನಿಯಲ್ಲಿ ಹೇಳಿದ.

'ಯಶಸ್ಸು ಸಾಧಿಸಿದರೆ ನನಗೇನು ಬಹುಮಾನ....' ಹುಬ್ಬೇರಿಸಿ ಕೇಳಿದ ವಸಂತಕ.

'ನಿನಗೇ....? ನೀನು ಬಯಸಿದುದನ್ನು ಕೊಡುವೆ. ಬೇಕಾದರೆ ಈ ರಾಜ್ಯದ ಅಧಿಕಾರವನ್ನೇ ಕೊಡುವೆ. ನಾನು ಅವಳೊಡನೆ ಎಲ್ಲಿಯಾದರೂ ಕಾಡಿಗೆ ಹೋಗಿ, ಗುಡಿಸಲನ್ನು ಹಾಕಿಕೊಂಡು, ನೆಮ್ಮದಿಯಾಗಿ ಇದ್ದು ಬಿಡುವೆ. ನನಗೇನೂ ಬೇಡ....ಅವಳಷ್ಟೇ ಬೇಕು....ಅವಳು ಬೇಕು....ಅವಳು ಬೇಕೇಬೇಕು....' ನಿರ್ಧಾರದ ಧ್ವನಿಯಲ್ಲಿ ಹೇಳಿದ.

'ರಾಜಕಿರೀಟವು ನೋಡಲಷ್ಟೇ ಚಂದ; ಧರಿಸಿದರೆ ಮುಳ್ಳಿನ ಕಿರೀಟ! ಆ ಸೌಖ್ಯ ಎಂದೂ ಬೇಡವಪ್ಪ. ಈಗ ನಾನು ನೆಮ್ಮದಿಯಾಗಿರುವೆ....' ವಸಂತಕ ನುಡಿದ.

'ನಿನಗೇನು ಬೇಕು ಹಾಗಾದರೆ....'

'ಒಂದು ವಾರದ ವರೆಗೆ ವಿಶೇಷ ಸುಗ್ರಾಸ ಭೋಜನ....' ನಾಲಿಗೆ ಚಪ್ಪರಿಸಿಕೊಳ್ಳುತ್ತ ಹೇಳಿದ.

'ಥೂ, ನಿನ್ನ....ಅಂದಣವನೇರಿದ ನಾಯಿಯಂತೆ, ನಿನ್ನ ಬುದ್ಧಿ ಎಲ್ಲಿ ಹೋಗಬೇಕು? ಹೊಟ್ಟೆಯದೇ ಚಿಂತೆ ನಿನಗೆ....' ಕೌಶಿಕ ಛೇಡಿಸಿದ.

'ಅದೇ ಸಾಕಪ್ಪಾ; ನಿಮ್ಮಂತೆ ಬರೀ ಮದುವೆಯ ಚಿಂತೆಯಾದರೆ ನಾವು ಬದುಕೇವೆಯೇ? ಇಂತಹ ಚಿಂತೆಯಿಂದ ಬೇರೆಯವರಿಗೆ ಕೆಡುಕಿಲ್ಲ; ನಿಮ್ಮಂತಹ ಚಿಂತೆಯಿಂದ ಹಲವಾರು ಜನಕ್ಕೆ ಕಷ್ಟ....'

'ಅದು ಕಷ್ಟವಲ್ಲ ವಸಂತಕ, ವರ! ರಾಜನ ದೃಷ್ಟಿ ತಮ್ಮಮೇಲೆ ಬಿದ್ದರೆ ಯಾರು ಸಂತೋಷಿಸರು. ನೀನು ನಡೆ; ಬೆಳಿಗ್ಗೆ ಸಂದರ್ಶನಕ್ಕೆ ಹೋಗಲು ಯೋಜನೆ ಸಿದ್ಧಪಡಿಸು.'

'ಏನೇ ಆಗಲಿ....ಸಾತ್ವಿಕರನ್ನು ಕೆಣಕುವುದು ಸುಲಭದ ಮಾತಲ್ಲ; ಹುಲಿಯ ಮೀಸೆಯ ಹಿಡಿದು ಉಯ್ಯಾಲೆ ಆಡಿದಂತೆ....'

'ಆ ಭೀತಿ ಬೇಡ....ನಾನಿರುವಾಗ ನಿನಗೇತರ ಭಯ. ರಾಜದಂಡ ಸಾಧಿಸದ್ದು ಯಾವುದು?' ಗಹಗಹಿಸಿ ನಕ್ಕ ಕೌಶಿಕ.

'ನೀವಿನ್ನು ವಿಶ್ರಮಿಸಲು ನಡೆಯಿರಿ....ನಿಶ್ಚಿಂತೆಯಿಂದಿರಿ. ನಾನು ನಿಷ್ಠೆಯ ಪ್ರಯತ್ನ ಮಾಡುವೆ....' ವಸಂತಕ ಆಶ್ವಾಸನೆ ನೀಡಿದಾಗ ಕೌಶಿಕ ಹಗುರವಾಗಿ ನಕ್ಕು ಮೇಲೆದ್ದು ತನ್ನ ಭವನಕ್ಕೆ ನಡೆದನು.

೨೫. ಕಳವಳದ ಕೂಪದಲ್ಲಿ

ಮಹಾದೇವಿ ದಿನನಿತ್ಯದಂತೆ ಬಹು ಬೇಗನೆ ಎದ್ದು, ಮಿಂದು ಮಾಳಿಗೆಯ ಮೇಲಿನ ತನ್ನ ಕೋಣೆಯಲ್ಲಿ ಪ್ರಾತಃಕಾಲದ ಪೂಜೆಗೆ ಕುಳಿತಿದ್ದಳು. ಹೃದಯವು ತುಮುಲ ಭಾವನೆಗಳ ಸಮರಾಂಗಣವಾಗಿದ್ದಿತು. ಕಾತರ, ಭೀತಿ, ನಿರಾಶೆಗಳು ನಾ ಮುಂದೆ ತಾ ಮುಂದೆಂದು ಬಂದು ನಿಲ್ಲುತ್ತಿದ್ದವು. ತೆರೆದ ಕಿಟಕಿಯಿಂದ ತೂರಿ ಬರುವ ತಂಗಾಳಿಯಾಗಲಿ, ತೂರಿ ಬಂದು ಕೋಣೆಯನ್ನು ಬೆಳಕಾಗುವಂತೆ ಮಾಡಿದ ಚಂದ್ರನ ಕಿರಣಗಳಾಗಲಿ ಸಂತೈಸಲಾರದೆ ನಿಸ್ಸಹಾಯಕವಾಗಿದ್ದವು. ಕಲ್ಪನೆಯ ಸುಳಿಯಲ್ಲಿ ಸಿಕ್ಕು ಅಸಹಾಯಕಳಾಗಿ ಸುತ್ತುತ್ತಿದ್ದಳು. ತನ್ನ ಅಂಗೈಯಲ್ಲಿ ಕುಳಿತು ದೀವಿಗೆಯ ಬೆಳಗಿನಲ್ಲಿ ಮಿಂಚುತ್ತಿದ್ದ ಇಷ್ಟಲಿಂಗವನ್ನು ದೃಷ್ಟಿಸುತ್ತಿದ್ದಂತೆಯೇ ದುಃಖ ತುಂಬಿ ಬಂದಿತು. ತನ್ನ ಅಳಲನ್ನು ಹೊರಹಾಕಲು ಹಾಡತೊಡಗಿದಳು :

ನಚ್ಚುಗೆ ಮನ ನಿಮ್ಮಲ್ಲಿ, ಮಚ್ಚುಗೆ ಮನ ನಿಮ್ಮಲ್ಲಿ.
ಸಲುಗುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ.
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ.
ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ.
ಎನ್ನ ಪಂಚೇಂದ್ರಿಯಂಗಳು ಕಾಯ್ದ ಕಬ್ಬಿನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚೆನ್ನಮಲ್ಲಿಕಾರ್ಜುನಯ್ಯ.*

'ಯಾರ ಕಣ್ಣಿಗೂ ಬೀಳಬಾರದೆಂದು ನನ್ನ ಪಾಡಿಗೆ ನಾನಿರಬಯಸಿದೆ. ಆ ಗೆಳತಿಯರು ಒತ್ತಾಯಿಸಿ ಹೊರಗೆ ಕರೆತಂದರು. ಬಂದರೂ ಸಹ ಯಾರ ಕಣ್ಣನ್ನೂ ಆಕರ್ಷಿಸದಂತೆ ಇರಬೇಕೆಂದು ನಿರಾಭರಣಯುಕ್ತೆಯಾಗಿದ್ದೆ. ಹೀಗಿದ್ದೂ ಅವನ ಕಣ್ಣು ನನ್ನಮೇಲೆ ಹರಿಯುವಂತೆ ಮಾಡಿದ ನೀನು ನಿಷ್ಕರುಣಿಯಲ್ಲವೆ ?....'

'ನಿನ್ನನ್ನು ಬಿಟ್ಟು ಯಾರನ್ನೂ ಕಣ್ಣೆತ್ತಿ ನೋಡದ ನನ್ನಮೇಲೆ ಅವನ ಕಾಮುಕಕಣ್ಣು ಬೀಳುವಂತೆ ಮಾಡಿದೆ. ಏಕೆ ದೇವಾ....ಇಂತಹ ಪರೀಕ್ಷೆ ಏಕೆ ಒಡ್ಡುತ್ತಿರುವೆ? ನನ್ನ ಪವಿತ್ರಪ್ರೇಮದಲ್ಲಿ ಇನ್ನೂ ಅವಿಶ್ವಾಸವೇ? ತನುವನ್ನು ಬಗೆದು ನೋಡು, ಅಣುಅಣುವೂ ಸಹ ನಿನಗಾಗಿ ಹಂಬಲಿಸುತ್ತಿದೆ....'

---

* ಮ. ವ. ೩೨೬

'ರಾಜನು ಏನು ಕೇಳುವನೋ ಏನೋ....ಮದುವೆಗೆ ಕೇಳಿದರೆ ? ಲೋಕದ ಪುರುಷರ ಸ್ಪರ್ಶವೇ ಬೇಡವೆಂದಾಗ, ಇನ್ನು ಅವನನ್ನು—ಪರಧರ್ಮೀಯ ಭವಿಯನ್ನು ಮದುವೆಯಾಗುವುದುಂಟೆ ?' ಇದು ಅಸಾಧ್ಯದ ಮಾತು. ಪ್ರಾಣ ಹೋದರೂ ಚಿಂತೆಯಿಲ್ಲ, ಅವನ ಬೇಡಿಕೆಗೆ ಈಡಾಗುವುದಿಲ್ಲ....ನನ್ನಂತಹ ಹತಭಾಗ್ಯಳು, ದೇವಕಾರುಣ್ಯವಿಹೀನಳು ಬದುಕಿ ಮಾಡುವುದು ಅನಿತರಲ್ಲೇ ಇದೆ....

'ಲೋಕದಲ್ಲಿ ಹೆಣ್ಣು ಒಂಟಿಯಾಗಿ ಬಾಳುವುದು ಕಷ್ಟ; ಅವಳ ಸೌಂದರ್ಯ, ಶೀಲರಕ್ಷಣೆಗೆ ಪುರುಷನು ಬೇಕು ಎಂಬ ಹೊಯ್ದಾಟಕ್ಕೆ ಸಿಕ್ಕಿ, ಸೋತು ಹತಾಶಳಾಗಿ ನಾನೂ ಮದುವೆಯ ಬಂಧನಕ್ಕೆ ಬಿದ್ದು ನಿನ್ನನ್ನು ಮರೆತು ಬಿಡಲಿ ಎಂದು ನಿನ್ನ ಆಶಯವೇ ಚನ್ನಮಲ್ಲಿಕಾರ್ಜುನಾ ?'

'ನೀನು ಬಹಳ ಜಾಣ ! ಅಧಿಕಾರದ ಆಸೆಯೋ, ಹಣದ ಆಮಿಷವೋ, ಆಭರಣದ ಮೋಹವೋ, ಇಂತಹ ಪ್ರಲೋಭನೆಗಳನ್ನು ಒಡ್ಡಿ, ನಿನ್ನನ್ನು ಮರೆಸಿಕೊಳ್ಳಬೇಕೆಂದು ಮಾಡುವೆ. ತಾಯಿಯು ಕೆರೆಗೆ ನೀರು ತರಲು ಹೋಗಿದ್ದರೆ, ಆಕೆಯ ಮಗುವು ತಾಯಿಯ ನೆನಹಿನಿಂದ ರಚ್ಚೆ ಹಿಡಿದಿದ್ದರೆ, ಮಗುವಿನ ಚಿತ್ತವನ್ನು ವಿಕೇಂದ್ರೀಕರಿಸಲು ದಾದಿಯು ಹಣ್ಣನ್ನೋ, ಕಜ್ಜಾಯವನ್ನೋ ಕೊಡುವುದುಂಟು. ಹಾಗೆಯೇ ಮಾಯೆಯು ಪ್ರಲೋಭನೆಗಳೆಂಬ ತಿನಿಸನ್ನು ನೀಡಿ ನಿನ್ನನ್ನು ಮರೆಸುವ ಪ್ರಯತ್ನ ಮಾಡುವುದು. ಆದರೆ ಇದಕ್ಕೆ ಸೋಲುವವರು ಯಾರು ?'

'ಅಬ್ಬಾ ! ನಿನ್ನ ಜಾಣತನ ಎಷ್ಟರಮಟ್ಟಿನದೆಂದರೆ ಎಂತೆಂತಹ ಜ್ಞಾನಿಗಳನ್ನೂ ಹಾದಿಗೆಡಿಸುವುದು. ದಾಸಯ್ಯ ನಿನ್ನಿಂದ ವಸ್ತ್ರವನ್ನು ಬೇಡಿದ, ಸಿರಿಯಾಳ ಕೈಲಾಸವನ್ನು ಬೇಡಿದ. ಆದರೆ ಅವರೆಲ್ಲ ಒಂದಬೇಡಲು ಮರೆದರು, ನಿನ್ನ ಬೇಡಲು ಮರೆದರು. ಇನ್ನೂ ಕೆಲವರಿಗೆ ಮುಕ್ತಿಯ ಆಸೆ ತೋರಿಸಿ ನಿನ್ನನ್ನು ಮರೆಸಿಕೊಂಬೆ. ಇಂತಹ ಯಾವ ಕಣ್ಣುಮುಚ್ಚಾಲೆಗೆ ಮರುಳಾಗುವ ಮುಂಕು ಹೆಣ್ಣು, ಮೂಢ ಭಕ್ತಳು ಎಂದು ತಿಳಿಯಬೇಡ.*

ಕಷ್ಟಕ್ಕೆ ಅಂಜಿ, ನೀನು ನೀಡುವ ಒಡವೆವಸ್ತುಗಳಿಗೆ ಮರುಳಾಗಿ, ಕಡೆಗೆ ಮುಕ್ತಿಗೆ ಸಹ ಹಾತೊರೆಯೆ; ನನಗೆ ಬೇಕಾಗಿರುವುದು ನೀನು ಮಾತ್ರ.... ನೀನೇ ನನ್ನ ಉಸಿರು, ಬದುಕು.'

---

* ಮ. ಪ. ೭೨

ಚಂದನವ ಕಡಿದು ಕೊರೆದು ತೇದೊಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ
ಬೆಂದು ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೆ ಹಾನಿಯೇ ಎನ್ನ ತಂದೆ!
ಚನ್ನಮಲ್ಲಿಕಾರ್ಜುನ ದೇವಯ್ಯಾ,
ಕೊಂದಡೆ ಶರಣೆಂಬುದ ಮಾಣೆ!'*

ಈ ಶರಣಾಗತಿಯು ಸ್ವಬೋಧೆಯಿಂದ ಆತ್ಮವಿಶ್ವಾಸವು ಮೂಡಿ, ವಿಲಕ್ಷಣ ವಾದ ಕಳೆಯಿಂದ ಕಣ್ಣುಗಳು ಮಿನುಗಿದವು.

'ನೀನು ಕೊಡುವ ಕಷ್ಟವನ್ನು ಕೊಡು; ನಾನು ಶರಣಾಗತಿಯನ್ನು ಬಿಡೆನು, ನೋಡೋಣ....ಈ ದೇವ-ಭಕ್ತರ ಸಮರದಲ್ಲಿ ನಿನ್ನದು ಸೋಲೋ ....ನನ್ನದು ಸೋಲೋ! ಜಗದ ಇತಿಹಾಸದಲ್ಲಿ, ಎಲ್ಲ ಭಕ್ತರ ಬದುಕಿನ ಹೋರಾಟದಲ್ಲಿ ನೀನೇ ಸೋತಿರುವೆ ಎಂಬುದನ್ನು ನಾ ಬಲ್ಲೆ....' ಈ ನಿರ್ಧಾರ ದಿಂದ ಮಹಾದೇವಿಗೆ ಅಸೀಮ ಬಲ ಮೈಗೂಡಿತು. ಅನಿತರಲ್ಲಿ ರಾಜಬೀದಿ ಯಲ್ಲಿ ಕುದುರೆಗಳ ಖುರಪುಟ ಧ್ವನಿ, ಹೇಷಾರವ ಕೇಳಿಬಂದು, ಕೆಳಗೆ ಯಾರೋ ಬಂದು, ಮಾತುಕತೆಗೆ ಆರಂಭವಾದುದು ತಿಳಿಯಿತು. ಪೂಜೆ ಯನ್ನು ಮುಗಿಸಿ, ಮೆಟ್ಟಿಲನ್ನು ಇಳಿಯತೊಡಗಿದಳು. ಆ ಮಾತುಕತೆ ತನ್ನ ಸುತ್ತಲೂ ನಡೆಯುತ್ತಿದೆ ಎಂದರಿತು, ಆಗಂತುಕರ ಕಣ್ಣಿಗೆ ಮರೆಯಾಗಿ ನಿಂತು ಆಲಿಸತೊಡಗಿದಳು.

* * *

ಲಿಂಗಮ್ಮನು ಎದ್ದಾಗ ಮಹಾದೇವಿ ಪೂಜೆಗೆ ಹೋಗಿದ್ದಳು. ಆಕೆ ಅವಸರದಲ್ಲಿ ಪೂಜೆ ಮುಗಿಸಿ ಯಾಂತ್ರಿಕವಾಗಿ ಅಡಿಗೆಯ ಮೇಲ್ವಿಚಾರಣೆಯಲ್ಲಿ ತೊಡಗಿದ್ದಳು. ಓಂಕಾರನು ಸ್ನಾನ ಮಾಡಿ ಪೂಜೆಯಲ್ಲಿ ಮಗ್ನನಾಗಿದ್ದ. ಆದರೆ ಅವನ ಮನಸ್ಸು ಮಾತ್ರ ಸ್ತಿಮಿತವನ್ನು ಕಳೆದುಕೊಂಡು ಹೊಯಾಡುತ್ತ ಲಿತ್ತು. ಕೌಶಿಕನ ಕಾಮದೃಷ್ಟಿ ಕೇವಲ ಹುಲ್ಲಿನಂತಷ್ಟೇ ಇರದೆ, ಆ ದೃಷ್ಟಿಯ ಬೇರು ಅಂತರಂಗದಲ್ಲಿ ಆಳವಾಗಿ ಬಿಟ್ಟಂತೆ ಅನಿಸುತ್ತಿತ್ತು. ವಿಪತ್ತಿನ

---

* ಮ. ವ. ೧೨೭

ಮುನ್ಸೂಚನೆಯಂತೆ ಹೃದಯ ಡಬಡಬನೆ ಬಡಿದುಕೊಳ್ಳುತ್ತಿತ್ತು. ಎಷ್ಟು ಸಂತೈಸಿಕೊಂಡರೂ ರಚ್ಚೆಹಿಡಿದ ಕೂಸಿನಂತೆ ಮನಸ್ಸು ಪ್ರಲಾಪಿಸುತ್ತಿತ್ತು. ಯಾಂತ್ರಿಕವಾದ ಪೂಜೆ ಮುಗಿಸಿದಾಗ ಲಿಂಗಮ್ಮ ಹಣ್ಣು ಹಾಲನ್ನು ತಳಿಗೆಯಲ್ಲಿರಿಸಿಕೊಂಡು ಬಂದು, ಮುಂದಿರಿಸಿದಳು. ಆಲೋಚಿಸುತ್ತಲೇ ಅನ್ಯಮನಸ್ಕನಾಗಿ ತಿಂದನು. ಗಂಡನ ಮುಖವನ್ನು ನೋಡಿದ ಲಿಂಗಮ್ಮ ಮರುಕದಿಂದ ಪರಿತಪಿಸಿದಳು. ಕಳವಳ-ಕಾತುರಗಳಿಂದ ಅವನ ಕಣ್ಣಿನ ಕಾಂತಿ ಸತ್ವಹೀನವಾಗಿತ್ತು. ಆಗಲೇ ಮುದುಕರಾದರಲ್ಲ ಎಂಬ ಭಾವವು ಸುಳಿದಾಡಿತು. ಒಂದೇ ರಾತ್ರಿಯ ಚಿಂತೆ ಇಷ್ಟು ಹಣ್ಣು ಮಾಡೀತೆಂದು ಆಕೆ ನಿರೀಕ್ಷಿಸಿರಲಿಲ್ಲ. ಅರವತ್ತರ ವಯಸ್ಸನ್ನು ಸಮೀಪಿಸುತ್ತಿದ್ದ ಓಂಕಾರಶೆಟ್ಟಿಯ ತಲೆಗೂದಲು ಅಲ್ಲಲ್ಲೇ ಬೆಳ್ಳಿಯ ತಂತಿಗಳಂತಾಗಿದ್ದರೂ ಉತ್ಸಾಹದ ಬುಗ್ಗೆಯಾದ, ಸಂತೃಪ್ತಿಯ ಪಾರಮಾರ್ಥಿಕ ಜೀವನದಿಂದಾಗಿ ವಯಸ್ಸು ಎದ್ದು ಕಾಣುತ್ತಿರಲಿಲ್ಲ.

ಹೆಚ್ಚು ಗಳಿಸಬೇಕು ಎಂಬ ದುರಾಸೆಯೂ ಇರಲಿಲ್ಲ. ನಿಯಮಿತ ವೇಳೆಯಲ್ಲಷ್ಟೇ ದುಡಿತ; ತಾನಾಗಿ ಹೆಚ್ಚು ಬಂದರೆ ಬಡಬಗ್ಗರಿಗೆ ವ್ಯಯಮಾಡುತ್ತಿದ್ದ. ವರುಷದಲ್ಲಿ ಕೆಲವು ಸಾರಿ ಧರ್ಮಪ್ರಸಾರಕ್ಕಾಗಿ ಸಲ್ಲಲೆಂದು ಅನುಭವ ಮಂಟಪದ ಅಕ್ಷಯನಿಧಿಗೆ ಕಳಿಸುತ್ತಿದ್ದ. ಯಾವ ವೈಪರೀತ್ಯಗಳಿಲ್ಲದೆ ಸಾಗಿ ಬಂದ ಅವನ ಜೀವನದಲ್ಲಿ ವಿಪತ್ತು ಇದಿರಾಗುವ ಸೂಚನೆ ಇಂದೇ ಕಂಡುದು.

ಲಿಂಗಮ್ಮನೂ ಬೆಳಗಿನಿಂದ ಅಷ್ಟೇ ದುಗುಡಗೊಂಡಿದ್ದಳು. ಒಲೆಯ ಮುಂದೆ ಕುಳಿತಾಗ ಕೊಳ್ಳಿಯು ಉರಿಯುತ್ತಾ ಹೊರಬಂದು ಕಾಲಿನ ಬಳಿಗೆ ಸಮೀಪಿಸಿದ್ದರೂ ಆಕೆಗೆ ಪರಿವೆ ಇರಲಿಲ್ಲ. ಗಿರಿಜಾಂಬೆ ಸಾರಿಗೆ ಉಪ್ಪು ಹಾಕಿದ್ದೇನೆ. ಎಂದು ಒತ್ತಿ ಹೇಳಿ ಒಗ್ಗರಣೆಗೆ ಕರಿಬೇವು ತರಲು ಹಿತ್ತಲಿಗೆ ಹೋಗಿದ್ದಾಗ, ಮತ್ತೆ ಹಿಡಿಯಷ್ಟು ಉಪ್ಪನ್ನು ಸಾರಿನ ಮಡಿಕೆಗೆ ಇಳಿಬಿಟ್ಟಳು. ಚಿತ್ತ ಒತ್ತೆಡೆ, ಕೆಲಸ ಇನ್ನೊಂದೆಡೆ. ಓಂಕಾರನಿಗೆ ಹಣ್ಣನ್ನು ಹೋಳುಮಾಡಿಕೊಡಲೆಂದು ಈಳಿಗೆಯನ್ನು ತಂದಿಟ್ಟುಕೊಂಡಳು. ಹೆಚ್ಚುತ್ತಾ ಕೈಗೆ ಈಳಿಗೆ ತಗುಲಿದಾಗ 'ಹಾಂ' ಎಂದು ಚೀರಿದಳು. ರಕ್ತ ಒಸರತೊಡಗಿದಾಗ ಗಿರಿಜಾಂಬೆ ಅರಿಷಿಣ ಮೆತ್ತಿ ಸೀರೆಯ ತುಂಡನ್ನು ತಂದು ಬಿಗಿದಳು. ಹಾಲನ್ನು ಬಿಸಿಗಿಟ್ಟು ಚಿಂತೆಗೆ ತೊಡಗಿದವಳಿಗೆ, ಹಾಲು ಉಕ್ಕಿ ಒಲೆ ಆರಿದಾಗಲೇ ಎಚ್ಚರ. ತನ್ನ ಅನ್ಯಮನಸ್ಕತೆಗೆ ನಾಚಿಕೆ ಎನಿಸಿತು. ಹೊಸದಾಗಿ ಕೈಕಾಲು ಬಂದ ಮಗು, ಹಿಡಿಯಲಾರದೆ ತಾಯಿ ಸೋಲುವಷ್ಟು ಹರಿದಾಡುವಂತೆ, ಮನಸ್ಸು ಹರಿದಾಡತೊಡಗಿತ್ತು.

ಹಾಲನ್ನು ಗುಟುಕು ಗುಟುಕಾಗಿ ಕುಡಿಯುತ್ತಾ ಓಂಕಾರ ಹೇಳಿದ :

'ಕುಳಿತುಕೋ....ಲಿಂಗಾ....'

ಗಂಡನ ಸಮೀಪಕ್ಕೆ ಚಾಪೆಯನ್ನು ಎಳೆದುಕೊಂಡು ಕುಳಿತಳು.

'ನಿನ್ನೆ ರಾಜನು ಹಾಗೆ ನೋಡಬಾರದಾಗಿತ್ತಲ್ಲವೆ?....' ಮೆಲ್ಲನೆ ಕೇಳಿದಳು.

"ಹೂಂ....ದುರ್ಘಟನೆ ಜರುಗಿತು. ಮಾದೇವಿಯು ಹೊರಗೆ ಬರಲಿಕ್ಕೆ ಒಲ್ಲೆ ಅಂತಿದ್ದಳು; ಗೆಳತಿಯರೇ ಒತ್ತಾಯ ಮಾಡಿ ಮಾಳಿಗೆಗೆ ಕರೆತಂದರು....'

"ಹೀಗಾಗುವುದೆಂದು ಯಾರಿಗೆ ತಿಳಿದಿತ್ತು ? ಅನಿರೀಕ್ಷಿತ ಘಟನೆ....' ಖಿನ್ನನಾಗಿ ನುಡಿದ.

'ಕಣ್ಣು ಕುಕ್ಕುವಷ್ಟು ಚೆಲುವು ಮಾದೇವಿಯದು. ಆಕೆ ಶಾಲೆಗೆ ಹೋದಾಗಲೂ ಅಷ್ಟೇ ಅಲ್ಲವೇ ತರುಣರು ಅದೆಷ್ಟು ಹಿಂದೆ ಸುಳಿದಾಡುತ್ತಿದ್ದರು. ನಮ್ಮ ಅದೃಷ್ಟವೋ, ಅವಳ ವಿರಕ್ತಿಯೋ, ದೈವೀಕಾರುಣ್ಯವೋ, ಯಾವುದೋ ಶಕ್ತಿ ಅವಳನ್ನು ಇಷ್ಟು ಪವಿತ್ರವಾಗಿ ರಕ್ಷಿಸಿದೆ. ಅದಕ್ಕೆಂದೇ ನಾನು ನಿಮಗೆ ಹೇಳುತ್ತಿದ್ದುದು : 'ಮಾಗಿದ ಹಣ್ಣು ಗಿಡದಲ್ಲಿರಬಾರದು, ಹರೆಯದ ಮಗಳು ಮನೆಯಲ್ಲಿರಬಾರದು' ಎಂದು. ಗಂಡಸರ ಸ್ವಭಾವವೇ ಹೀಗೆ, ಯಾವುದನ್ನೂ ಹಗುರವಾಗಿ ತೆಗೆದುಕೊಳ್ಳುವಿರಿ....'

'ಆಗಿಹೋದುದರ ಚಿಂತೆ ಎಂದೂ ಮಾಡಬಾರದು ಲಿಂಗಾ. ಸತ್ತ ಹಾವನ್ನು ಹೊಡೆಯುವ ಪ್ರಯತ್ನದಂತೆ ನಿನ್ನ ಮಾತುಗಳು. ಮಗಳ ಮನಸ್ಸಿಗೆ ವಿರುದ್ಧವಾಗಿ ಹೋಗುವುದು ನಮ್ಮಂತಹ ತಿಳಿದವರು ಮಾಡುವ ಕಾರ್ಯವೇ ?....ರಾಜನು ನೋಡಿದ್ದು ತಾತ್ಕಾಲಿಕ, ಅವನು ಅದನ್ನು ಮರೆತಿರಬೇಕು ಎನ್ನಿಸುವುದೇ ನಿನಗೆ....?'

'ಇಲ್ಲ....ಹಾವಿನ ಹುತ್ತ ಹೊರಗೆ ಸ್ವಲ್ಪವೇ ಕಂಡು, ಭೂಗರ್ಭದಲ್ಲಿ ವಿಸ್ತಾರವಾಗಿ, ಕವಲಾಗಿ ಹೋಗಿರುವಂತೆ ಅವನ ನೋಟದ ಅರ್ಥ ಬಹು ವ್ಯಾಪಕವಿದೆ ಎನ್ನಿಸುವುದು....'

"ಬಹು ಸರಿಯಾಗಿ ಹೇಳಿದೆ ಲಿಂಗಾ....; ಅವನ ಪ್ರಯತ್ನ ಇಲ್ಲಿಗೇ ನಿಲ್ಲಲಿಕ್ಕಿಲ್ಲ. ಅವನು ಬಹಳ ವಿಲಾಸಿ, ಸ್ತ್ರೀಲೋಲುಪ. ಪಟ್ಟದರಸಿ ಯಶೋಮತಿ ಕುಲೀನಮನೆತನದ ರಾಜಕುಮಾರಿ, ಗುಣವತಿ. ಹೀಗಿದ್ದೂ ಸಹ ಕಂಡಕಂಡ ಹೆಣ್ಣುಗಳನ್ನು ಕೂಡಿಹಾಕಿಕೊಳ್ಳುವ ಪರಿಪಾಠ ಅವನಿಗೆ. ಅವನ ದಕ್ಷ ಆಡಳಿತ, ನಾಡು-ನುಡಿಗಳ ಅಭಿಮಾನಕ್ಕಾಗಿ ಈ ಲೋಪವನ್ನು ಕಡೆಗಣಿಸಿ ಎಲ್ಲರೂ ಸುಮ್ಮನಿದ್ದಾರೆ....'

'ಮಹಾದೇವಿಯು ಬೆದರಿದ ಹರಿಣಿಯಂತಾಗಿದ್ದಾಳೆ. ಶುಭ್ರಾಗಸದಲ್ಲಿ ಕಪ್ಪು ಮೋಡ ಸುಳಿದಂತೆ ಆಗಾಗ ಭೀತಿಯ ನೆರಳು ಆಕೆಯ ಮುಗ್ಧ ಮುಖದ ಮೇಲೆ ಹಾಯುವದು. ನಿನ್ನೆಯಿಂದ ಯಾರೊಡನೆಯೂ ಮಾತನಾಡಿಲ್ಲ....' ಲಿಂಗಮ್ಮ ತಗ್ಗಿಸಿದ ದನಿಯಲ್ಲಿ ಹೇಳಿದಳು.

'ಲಿಂಗಾ....ನಾವು ಏನಾದರೊಂದು ಉಪಾಯವನ್ನು ಯೋಚಿಸಬೇಕು. ನನಗನ್ನಿಸುತ್ತದೆ, ಯಾರಾದರೂ ನಮ್ಮ ಹಿತೈಷಿಗಳ, ಬಂಧುಗಳ ಬಳಿ ಕೆಲವು ತಿಂಗಳು ಆಕೆಯನ್ನು ಬಿಡೋಣ. ರಾಜನಿಂದ ಏನಾದರೂ ಕೇಳಿಕೆ ಬಂದರೆ ಅವಳಿಗೆ ಮದುವೆ ನಿಶ್ಚಯವಾಗಿದೆ ಎನ್ನೋಣ. ವಿವಾಹ ನಿಶ್ಚಿತವಾದವಳನ್ನು ಅವನು ವರಿಸಲು ಬಯಸುವದಿಲ್ಲ....'

'ಇದೊಂದೇ ಸದ್ಯದಲ್ಲಿರುವ ಸೂಕ್ತಮಾರ್ಗ. ನನ್ನ ಹಿರಿಯಕ್ಕನನ್ನು ಪಂಪಾಕ್ಷೇತ್ರದ ಹರದರೊಬ್ಬರಿಗೆ ಮದುವೆ ಮಾಡಿಕೊಟ್ಟಿದೆಯಷ್ಟೆ. ಅವರ ಮನೆಯಲ್ಲಿ ಕೆಲವು ದಿನ ಬಿಡಬಹುದು....'

'ನಾನು ಇಂದು ಅಂಗಡಿಗೆ ಹೋಗುವುದಿಲ್ಲ. ಹಲವಾರು ಜನ ಬಂದು ಸಹಾನುಭೂತಿ ತೋರುವ ನೆಪದಲ್ಲಿ ಮನದ ನೋವಿನ ಜ್ವಾಲೆಗೆ ತುಪ್ಪವನ್ನು ಎರೆಯುವರು. ಸಾಧ್ಯವಾದರೆ ಇಂದು ಹೇಗಾದರೂ ಮೇನೆಗೆ ಅಥವಾ ಕಮಾನುಬಂಡಿಗೆ ವ್ಯವಸ್ಥೆ ಮಾಡುವೆ. ನೀನೂ ಆಕೆಯೊಡನೆ ಹೋಗಿಬಿಡುವೆಯಂತೆ....'

'ಆಗಲಿ....' ಲಿಂಗಮ್ಮನು ಇಷ್ಟು ಅನ್ನುವುದರಲ್ಲಿ, ಗಿರಿಜಾಂಬೆ ಬಂದು ಪೂಜೆಯ ಕೋಣೆಯ ಬಾಗಿಲಲ್ಲಿ ನಿಂತು,

'ಅಪ್ಪಾ, ಯಾರೋ ದೊಡ್ಡ ಮನುಷ್ಯರು ಬಂದವ್ರೆ. ನಡುಮನೆಯಲ್ಲಿ ಕೂಡಿಸಿದ್ದೇನೆ....' ಎಂದಳು. ಓಂಕಾರನ ಎದೆ ಕ್ಷಣಕಾಲ ತಣ್ಣಗಾಯಿತು. ಸಾವರಿಸಿಕೊಂಡು ಮೇಲಕ್ಕೆದ್ದು ರೇಷಿಮೆಯ ಶಲ್ಯವನ್ನು ಮೈತುಂಬ ಹೊದ್ದುಕೊಂಡು ಹೊರಬಂದ.

ಬಾಗಿಲಿನಲ್ಲಿ ಇಬ್ಬರು ಬಿಚ್ಚುಗತ್ತಿಯ ಭಟರು ನಿಂತಿದ್ದರು. ಐವರು ಹೆಣ್ಣುಮಕ್ಕಳು ಐದು ಹರಿವಾಣಗಳನ್ನು ಕೈಯಲ್ಲಿ ಹಿಡಿದು ನಿಂತಿದ್ದರು. ಅವರಿಗಾಗಿ ರತ್ನಗಂಬಳಿಯನ್ನು ಹಾಸಿದ್ದರೂ ಅವರು ಕುಳಿತಿರಲಿಲ್ಲ. ನೆಲದಿಂದ ಒಂದು ಗೇಣು ಎತ್ತರವಿದ್ದ ಕಟ್ಟೆಯಮೇಲೆ ರತ್ನಗಂಬಳಿಯನ್ನು ಹಾಸಿ, ಅದರ ಮೇಲೆ ಮೆತ್ತನೆಯ ಬೂರುಗದರಳೆಯ ಹಾಸಿಗೆಯನ್ನು ಹರವಿದ್ದರು. ಹಾಸಿಗೆಯ ಮೇಲೆ ಕುಳಿತು, ದಿಂಬಿಗೆ ಒರಗಿದ್ದ ಆಗಂತುಕನು ಮನೆಯ ಸಂಸ್ಕೃತಿಯನ್ನು ಅಳೆಯುತ್ತಿದ್ದ. ಬಾಗಿಲಲ್ಲಿ ತೂಗಬಿಟ್ಟ ತೆರೆಯಮೇಲೆ

ಹೆಣೆಯಲ್ಪಟ್ಟಿದ್ದ ಹಿಮಾಚಲದಲ್ಲಿ ಕುಳಿತ ಪಾರ್ವತಿಯ ತಪಸ್ಸಿನ ಚಿತ್ರ ಮನಾಪಹಾರಕವಾಗಿತ್ತು. ಕುಶಲ ಕಲಾವಿದರ ಕೈಯ ಸ್ಪರ್ಶವನ್ನು ಅದು ಕಂಡಂತಿತ್ತು. ಸ್ಫಟಿಕದ ಮಣಿಗಳ ತೋರಣ, ಕಲಾತ್ಮಕ ಚಿತ್ರಣದ ಕಂಭಗಳು ನಡುಮನೆಯ ಅಂದವನ್ನು ಹೆಚ್ಚಿಸಿದ್ದವು. ಒಳಗಿನಿಂದ ನವಿರಾಗಿ ತೇಲಿ ಬರುತ್ತಿದ್ದ ಧೂಪದ ಸುವಾಸನೆ ರಮ್ಯವೆನಿಸುತ್ತಿತ್ತು. ಮಹಡಿಯ ಕಡೆಯಿಂದ ಗಂಟೆ ಬಾರಿಸಿದ ಧ್ವನಿಯೂ ಕೇಳಿಬಂದಿತು. ಕೋಕಿಲಕಂಠದಲ್ಲಿ ಗಾಯನವೂ ಅಲೆಯಲೆಯಾಗಿ ತೇಲಿಬಂದಾಗ ಆಗಂತುಕ ಪುಳಕಗೊಂಡ. ಸೂರ್ಯೋದಯದ ಬಳಿಕ ಒಂದು ಜಾವ ಜಾರಿಹೋಗಿ, ಎರಡನೆಯದಕ್ಕೆ ಸ್ಥಳ ನೀಡಿತ್ತು.

ಓಂಕಾರಶೆಟ್ಟಿ ಒಳಗಿನಿಂದ ಬರುತ್ತಿದ್ದಂತೆಯೇ ಆಗಂತುಕ ಎದ್ದು ನಿಂತ. ಓಂಕಾರನ ಸಾತ್ವಿಕ ಮುಖ, ಸರಳ ಉಡುಗೆ, ಗಂಭೀರ ನಡಿಗೆಗಳನ್ನು ಕಂಡು ಆಗಂತುಕನಿಗೆ ಗೌರವ ಉಕ್ಕಿಬಂದಿತು.

'ಓಹ್....ತಾವು....ವಸಂತಕ ಮಹಾಶಯರು. ಬಹಳ ಸಂತೋಷ; ಅಪರೂಪಕ್ಕೆ ದಯಮಾಡಿಸಿರುವಿರಿ....' ಮನದ ದುಗುಡವನ್ನು ಮರೆಮಾಡಿಕೊಂಡು ಮುಗುಳ್ನಗುತ್ತ ಕೈಮುಗಿದ ಓಂಕಾರ.

'ಇನ್ನು ಅಪರೂಪವೆತ್ತಣದು ಶೆಟ್ಟರೆ, ನಿಜರೂಪವಾಗಿಯೇ ಆಗಾಗ ಕರೆಸಿಕೊಳ್ಳುವ ಭಾಗ್ಯ ಪಡೆದಿರಿ....'

'ಕುಳಿತುಕೊಳ್ಳಿ....' ಕೈ ತೋರಿಸಿದ.

'ಪುರಪ್ರಮುಖ ಹರದರೆಲ್ಲ ಸಮಾವೇಶವಾಗಿ ನಿನ್ನೆ ನೀಡಿದ ಸತ್ಕಾರಕ್ಕೆ ಮಹಾಪ್ರಭುಗಳು ಹರ್ಷಚಿತ್ತರಾದರು. ಅನೇಕ ಕಡೆ ನೀಡಿದ ಸ್ವಾಗತದಲ್ಲಿ ಇಲ್ಲಿಯದು ಅದ್ಭುತವಾಗಿತ್ತು....'

'ಇದೆಲ್ಲ ಏನು ದೊಡ್ಡದು....ಪ್ರಭುಗಳ ಹೃದಯ ದೊಡ್ಡದು, ಅಲ್ಪ ಸತ್ಕಾರವನ್ನೇ ಮಹವನ್ನಾಗಿ ತೆಗೆದುಕೊಂಡಿದ್ದಾರೆ....'

'ಏನೇ ಇರಲಿ....ತಮ್ಮ ಪೂರ್ವಸುಕೃತ ಬಹು ದೊಡ್ಡದು ಶೆಟ್ಟರೆ. ಅಪರೂಪವಾದ ಕನ್ಯಾರತ್ನವನ್ನು ಪಡೆದಿರುವುದಷ್ಟೇ ಅಲ್ಲ, ಆ ರತ್ನವನ್ನು ಪ್ರಭುಗಳಿಗೆ ಸಲ್ಲಿಸುವ ಸದವಕಾಶ ದೊರೆತುದು ತಮ್ಮ ಅಪೂರ್ವ ಭಾಗ್ಯ....' ವಸಂತಕ ಹೇಳಿದ ಮಾರ್ಮಿಕವಾಗಿ.

'ಆಂ....ಏನಂದಿರಿ....' ಓಂಕಾರ ಬೆಚ್ಚಿಬಿದ್ದ.

'ಅಹುದು....ಪ್ರಭುಗಳು ನಿನ್ನೆಯ ಉತ್ಸವದಲ್ಲಿ ನಿಮ್ಮ ಪುತ್ರಿಯನ್ನು ನೋಡಿ ಮಾರುಹೋಗಿದ್ದಾರೆ, ಆದಕ್ಕಾಗಿ ಮಂಗಲವಸ್ತುಗಳು, ವಸ್ತ್ರಾಭರಣಗಳೊಡನೆ ನಾನು ಮದುವೆಗೆ ಬಿನ್ನಹ ಮಾಡಲು ಬಂದಿರುವೆ....'

'ವಸಂತಕರೆ ಸಾಕು ನಿಲ್ಲಿಸಿರಿ....' ಓಂಕಾರ ಅಸಹನೆಯಿಂದ ನುಡಿದ.

'ಏಕೆ ಶೆಟ್ಟರೆ....'

'ಹೆಣ್ಣುಮಗಳಿದ್ದಲ್ಲಿ ಕೇಳುವುದು ಸಹಜ. ಕೇಳುವ ನಿಮ್ಮ ಕರ್ತವ್ಯವು ಮುಗಿಯಿತಷ್ಟೆ. ಇನ್ನು ಕೊಡುವ ಬಿಡುವ ನಿರ್ಧಾರ ನಮಗೆ ಸೇರಿದುದು. ಆ ವಿಷಯವನ್ನುಳಿದು ಬೇರೇನಾದರೂ ಇದ್ದರೆ ಮಾತನಾಡಿರಿ....'

'ಅದಕ್ಕೆಂದೇ ನಾನು ಬಂದಿರುವುದು. ಮಗಳನ್ನು ಕೊಡಲು ಒಪ್ಪುವುದಿಲ್ಲವೆ?'

'ಇಲ್ಲ ವಸಂತಕರೆ, ಅವಳು ವಿರಾಗಿಣಿಯಾಗಿ ಉಳಿಯಬಯಸಿದ್ದಾಳೆ. ಆಕೆಗೆ ಯಾವ ಲೌಕಿಕ ಪುರುಷರನ್ನೂ ಲಗ್ನವಾಗುವ ಬಯಕೆಯಿಲ್ಲ. ಅವಳ ಇಚ್ಛೆಗೆ ವಿರುದ್ಧವಾಗಿ ನಾವೂ ಹೋಗುವುದಿಲ್ಲ....'

'ಶೆಟ್ಟರೇ, ಇದೆಲ್ಲಿಯಾದರೂ ಪ್ರಪಂಚದಲ್ಲಿ ಸಾಧ್ಯವೆ? ಗಂಡನ ಕೈಹಿಡಿದು ಅವನ ಸೇವೆ ಮಾಡಿ, ತನ್ಮೂಲಕ ಸ್ತ್ರೀಯು ಪುಣ್ಯಜೀವಿಯಾಗಬೇಕು. ಪುಣ್ಯಸಂಸ್ಕಾರಗಳ ಬಲದಿಂದ ಪುರುಷಜನ್ಮವನ್ನು ಹೊಂದಿ ಮುಕ್ತಳಾಗಬೇಕಾಗುವುದು....'

'ಇದು ನಿಮ್ಮ ಸಿದ್ಧಾಂತವಿರಬಹುದು ವಸಂತಕರೆ; ನಮ್ಮ ಧರ್ಮವು ಉಭಯತರಿಗೂ ಮುಕ್ತಿಮಾರ್ಗಕ್ಕೆ ಅವಕಾಶ ನೀಡಿ, ಸ್ತ್ರೀ-ಪುರುಷ ಭೇದ ಶಾರೀರಿಕವಾದುದು ಆತ್ಮಿಕವಾದುದಲ್ಲ; ಯಾರ ಆತ್ಮವು ಬೇಕಾದರೂ ಪರಮಾತ್ಮನಲ್ಲಿ ಬೆರೆಯಬಲ್ಲದು ಎಂದು ಹೇಳುವುದು....'

'ಆದರ್ಶಗಳ ಮೋಡಗಳಮೇಲೇ ತೇಲಬಾರದು. ಅವು ಕರಗಿಹೋದರೆ ನಿಲ್ಲಲಿಕ್ಕಿಷ್ಟು ತಾವಿಲ್ಲದಂತಾಗುವುದು. ವಿವಾಹಿತಳಾಗಿ ತನ್ನ ಆಧ್ಯಾತ್ಮ ಸಾಧನೆ ಮಾಡುವುದು ಒಳ್ಳಿತು. ಅದರಲ್ಲಿಯೂ ಮಹಾರಾಜರ ಕೈಹಿಡಿಯುವ ಭಾಗ್ಯ ಎಷ್ಟು ಜನರಿಗೆ ದೊರಕೀತು?'

'ವಿಧರ್ಮೀಯನಾದ ರಾಜನಿಗೆ ಮಗಳನ್ನು ಕೊಡಲು ನಾವು ಎಳ್ಳಷ್ಟು ಸಮ್ಮತಿಸುವುದಿಲ್ಲ. ಸ್ವಧರ್ಮೀಯ ವರನನ್ನೇ ಒಪ್ಪದ ಮಹಾದೇವಿ ಪರಧರ್ಮೀಯನನ್ನು ಕಣ್ಣೆತ್ತಿಯೂ ನೋಡಳು....'

'ಶೆಟ್ಟರೆ, ನೀವು ಬಹಳ ಅಪ್ರಾಯೋಗಿಕವಾಗಿ ಮಾತನಾಡುವಿರಿ. ಪ್ರೇಮಪೂರಕ್ಕೆ ಜಾತಿಧರ್ಮಗಳ ಅಡ್ಡಗೋಡೆಗಳು ನಿಲ್ಲಲಾರವು. ಧರ್ಮಾಚರಣೆ ವೈಯಕ್ತಿಕ, ಅದು ನಿಮ್ಮಲ್ಲಿರಲಿ. ಮಹಾರಾಜರ ಮಾವನಾಗುವುದು ಎಂತಹ ಪರಮ ಸೌಭಾಗ್ಯ! ಇದರಿಂದ ವ್ಯಾಪಾರರಂಗದಲ್ಲಿ ನಿಮ್ಮ ಅಧಿಕಾರ, ಕೀರ್ತಿ, ಘನತೆಗಳು ಹೆಚ್ಚುತ್ತವೆ. ಇವು ಬಯಸಿದರೂ ಸಿಗುವುದು ಕಷ್ಟ.

ಗಾಳಿ ಬಂದಾಗ ತೂರಿಕೊಳ್ಳಬೇಕು, ಅವಕಾಶ ಸಿಕ್ಕಾಗ ಮುಂದೆ ನುಗ್ಗಬೇಕು....'

'ನಿಮ್ಮ ಹಿತವಚನಗಳಿಗೆ ನಾನು ಚಿರಋಣಿ. ಆದರೆ ಈ ಎಲ್ಲ ಪ್ರಲೋಭನೆಗಳಿಗೆ ಮರುಳಾಗುವವನು ನಾನಲ್ಲ. ನಾವು ಗಳಿಸಿದ ಧನ, ಕನಕ, ಅಧಿಕಾರ, ಕೀರ್ತಿ ಯಾವೂ ನಮ್ಮೊಡನೆ ಬರುವುದಿಲ್ಲ; ಕೇವಲ ಪಾಪ-ಪುಣ್ಯಗಳ ಗಂಟೊಂದೇ ನಮ್ಮ ಬೆನ್ನು ಹತ್ತುವುದು. ನೀವು ತೋರಿಸುವ ಆಮಿಷಗಳತ್ತ ಮನಸ್ಸು ಒಲಿಯದು ವಸಂತಕರೆ, ಇನ್ನು ಧಾರ್ಮಿಕ ಜೀವನವೊಂದೇ ನನ್ನ ಕಣ್ಣು ಮುಂದಿರುವುದು....'

'ಕೆಲವು ಸಲ ತಮಗೆ ಬೇಡವಾದರೂ ಅದರಿಂದ ಒಳ್ಳಿತಾಗುತ್ತಿದ್ದರೆ ಇನ್ನೊಬ್ಬರಿಗೆ ಒದಗಿಸುವ ಪ್ರಯತ್ನ ಮಾಡಬೇಕು. ನೀವು ಮುಪ್ಪಿನ ಮಂದಿರದ ಹೊಸ್ತಿಲ ಮೇಲೆ ನಿಂತಿರುವಿರಿ; ನಿಮಗೆ ಆಸೆಗಳು ಉಳಿದಿರಲಿಕ್ಕಿಲ್ಲ. ಆದರೆ ಇದೇ ಈಗ ತಾರುಣ್ಯದ ಅಂಚಿನಲ್ಲಿರುವ ನಿಮ್ಮ ಮಗಳ ಸುಖವನ್ನೂ ಕಡೆಗಾಣಿಸುವುದೇ? ಆಕೆಯ ಸುಖಕ್ಕಾದರೂ ನೀವು ಮನಸ್ಸು ಮಾಡಲೇಬೇಕು....'

'ಓಹ್, ನಾನು ಅಗ್ನಿಕುಂಡ, ಅವಳು ಜ್ವಾಲಾಮುಖಿ. ನಾನು ಭಕ್ತಿಯ ಸರೋವರ, ಅವಳು ಆಧ್ಯಾತ್ಮಿಕ ಜಲಧಿ. ನನಗಿಂತಲೂ ನೂರರಷ್ಟು ಹೆಚ್ಚಿನ ಭಕ್ತಿ-ವಿರಕ್ತಿ ಅವಳಲ್ಲಿವೆ....' ಅಭಿಮಾನದಿಂದ ಓಂಕಾರ ನುಡಿದ.

'ಹಿರಿಯರಿಗೆ ತರುಣರ ಸಂವೇದನೆ ಅರ್ಥವಾಗವು ಶೆಟ್ಟರೆ! ಉಡುತಡಿಯಲ್ಲಿನ ಅನೇಕ ತರುಣಿಯರು ಮಹಾರಾಜರ ದೃಷ್ಟಿ ಬೀಳಬಾರದೇ ಎಂದು, ಸೂರ್ಯನಿಗಾಗಿ ಹಲುಬುವ ತಾವರೆಯಂತೆ ಹಂಬಲಿಸುತ್ತಾರೆ. ಆದರೆ ನಿಮ್ಮ ಮಗಳ ಸುಕೃತ ದೊಡ್ಡದು. ರಾಜರ ಕೃಪಾದೃಷ್ಟಿ ತಾನಾಗಿಯೇ ಬಿದ್ದಿತು. ನಿಮ್ಮ ಮಗಳನ್ನು ಕೇಳಿನೋಡಿರಿ; ಖಂಡಿತವಾಗಿಯೂ ಆಕೆ ನಿರಾಕರಿಸಲಾರಳು....'

ಸಹನೆಯ ಕಟ್ಟೆಯೊಡೆಯಿತು ಮಹಾದೇವಿಗೆ. ಸೋಪಾನದಮೇಲೆ ನಿಂತು ಇಲ್ಲಿಯ ತನಕ ಆಲಿಸುತ್ತ ನಿಂತವಳಿಗೆ, ಆವೇಶ ಬಂದಂತಾಗಿ, ಇಳಿಯತೊಡಗಿದಳು. ಅನಿರೀಕ್ಷಿತವಾಗಿ ಮಹಾದೇವಿ ಬಂದಾಗ ಓಂಕಾರ, ಲಿಂಗಮ್ಮರೊಡನೆ ವಸಂತಕನೂ ತಬ್ಬಿಬ್ಬಾದ. ತಂದೆಗೆ ಸಮೀಪದ ಕಂಭಕ್ಕೆ ಒರಗಿ ನಿಂತುಕೊಳ್ಳುತ್ತ ಹೇಳಿದಳು:

'ನಿಮ್ಮ ರಾಜರದು ಕೃಪಾದೃಷ್ಟಿಯಲ್ಲ, ಕಾಮದೃಷ್ಟಿ, ಗೃಧ್ರದೃಷ್ಟಿ. ಕಂಡಕಂಡ ಹೆಣ್ಣುಮಕ್ಕಳನ್ನು ಹಾಗೆ ನೋಡಬಾರದೆಂಬ ವಿವೇಕಪ್ರಜ್ಞೆ, ಸಹ

ಬೇಕವೆ? ಪರನಾರಿ ಸಹೋದರನಾಗಬೇಕಾದವನು ಪರನಾರಿ ಭಕ್ಷಕನಾಗ ಬೇಕೇ? ಈಗಿರುವ ಹೆಂಡಂದಿರು ಸಾಲರೇ ನಿಮ್ಮ ಅಪೂರ್ವ ವರನಿಗೆ? ಆ ವಿಲಾಸಿಗೆ ಬೇಕಾದ ವಧುಗಳು ಇಲ್ಲಿ ಯಾರೂ ಇಲ್ಲ....'

ವಸಂತಕ ಅನಿರೀಕ್ಷಿತ ವಾಗ್ಬಾಣಗಳಿಂದ ತಬ್ಬಿಬ್ಬಾಗಿ ಕೆಲವು ಕ್ಷಣಗಳ ಕಾಲ ಮೌನ ತಾಳಿದ. ಸಮುದ್ರದಲ್ಲಿ ಹಗುರವಾಗಿ ಈಸಾಡುವಾಗ ಅನಿರೀಕ್ಷಿತ ವಾಗಿ ದೊಡ್ಡ ಅಲೆಯೊಂದು ಬಂದು ಎರಗಿದರೆ, ಕಣ್ಣು ಬಾಯಿಗಳಲ್ಲಿ ನೀರು ಹೋಗಿ, ಈಸುಗಾರ ಕ್ಷಣಕಾಲ ತತ್ತರಿಸುವಂತೆ ಆಯಿತು ವಸಂತಕನ ಸ್ಥಿತಿ. ಸಾವರಿಸಿಕೊಂಡು ಹೇಳಿದ :

'ತಾಯಿ, ಹುಚ್ಚು ಆದರ್ಶಗಳ ಉಯ್ಯಾಲೆಯಲ್ಲಿ ಕುಳಿತವಳು ನೀನಮ್ಮ. ಉಯ್ಯಾಲೆಯಮೇಲೇ ಬದುಕನ್ನು ಕಳೆಯುವುದು ಆಗದು; ಭೂಮಿಗೆ ಇಳಿಯಲೇಬೇಕಾಗುವುದು. ರಾಜರು ತಮಗೆ ಬೇಕೆನಿಸಿದಷ್ಟು ಹೆಂಡಿರನ್ನು ಮಾಡಿಕೊಳ್ಳಬಹುದೆಂದು ಧರ್ಮಶಾಸ್ತ್ರ ಹೇಳುತ್ತದೆ. ಈಗಿರುವ ಪತ್ನಿಯರಲ್ಲಿ ಅನೇಕರನ್ನು ಅವರು ತನುವಿನಿಂದ ಕಣ್ಣಿನಿಂದ ಪ್ರೀತಿಸಿದರೂ, ಹೃದಯದಿಂದ ಪ್ರೀತಿಸಿ ಸಮಸ್ತ ಪ್ರೇಮವನ್ನು ಎರೆದಿರುವದು ನಿನಗೆಯೇ! ನಿನ್ನನ್ನು ಕುರಿತು ಪವಿತ್ರಪ್ರೇಮವಿದೆ....'

'ನಿಮ್ಮಂತಹ ಮಿತ್ರರಲ್ಲದೆ, ಅಂತಹ ಕುವರ್ತನೆಯನ್ನು ಮತ್ತಾರು ಮೆಚ್ಚ ಬಲ್ಲರು! ಅವನ ಆ ದುರ್ವರ್ತನೆಯನ್ನು ವಹಿಸಿಕೊಂಡು ಮಾತನಾಡಲು ನಿಮಗೆ ನಾಚಿಕೆ ಎನಿಸದೆ? ಈ ವಿಲಾಸಿಗಳೆಂದರೆ ದುಂಬಿಗಳಂತೆ, ಇವಕ್ಕೆ ಎಷ್ಟು ಹೂವುಗಳಾದರೂ ಸಾಲದು....' ತಿರಸ್ಕಾರದಿಂದ ನುಡಿದಳು.

'ನೀನು ತಪ್ಪಾಗಿ ತಿಳಿದಿರುವಿಯಮ್ಮ. ರಾಜರ ಹೃದಯವು ಪ್ರೇಮದ ಬುಗ್ಗೆ, ನಿನ್ನಲ್ಲಿಯೇ ಸಂಪೂರ್ಣ ಪ್ರೀತಿ ಕೇಂದ್ರೀಕೃತವಾಗಿದೆ. ಈ ಐದು ಹರಿವಾಣಗಳಲ್ಲಿ ಎಂತೆಂತಹ ಅನರ್ಘ್ಯ ಕಾಣಿಕೆಗಳನ್ನು ಕಳುಹಿಸಿದ್ದಾರೆ. ಒಂದರಲ್ಲಿ ಜರಿಯ ಪೀತಾಂಬರಗಳು, ಮತ್ತೊಂದರಲ್ಲಿ ಮುತ್ತಿನ ಆಭರಣಗಳು, ಮೂರನೆಯದರಲ್ಲಿ ಅಡಿಯಿಂದ ಮುಡಿಯವರೆಗೆ ಸಿಂಗರಿಸಿಕೊಳ್ಳಬಹುದಾದ ರತ್ನಾಭರಣಗಳು, ನಾಲ್ಕನೆಯದರಲ್ಲಿ ನಿನ್ನ ತಾಯಿ-ತಂದೆಗಳಿಗೆ ಬೇಕಾಗುವ ವಸ್ತ್ರಗಳು, ಐದನೆಯದು ಇನ್ನೂ ಅಪೂರ್ವ! ಇದರಲ್ಲಿರುವ ನವರತ್ನಖಚಿತ ಉಂಗುರ ರಾಜರ ಪ್ರೀತಿಪಾತ್ರ ವಸ್ತು. ಅದನ್ನು ಕೈಯಾರೆ ನೀಡಿ, "ನನ್ನ ಹೃದಯವನ್ನೇ ಇದರಲ್ಲಿ ಅಡಗಿಸಿ ಕಳಿಸಿರುವೆ ಎಂದು ಹೇಳು ವಸಂತಕ" ಎಂದಿದ್ದಾರೆ....' ವಸಂತಕನು ಉಪ್ಪು-ಕಾರದ ಲೇಪನ ಮಾಡಿ ಹೇಳ ತೊಡಗಿದ್ದ.

ಮಹಾದೇವಿ ಮೌನವಾಗಿ ಆಲಿಸುತ್ತಿದ್ದಳು. ತನ್ನ ಈ ಅಸ್ತ್ರವು ಹುಸಿಯಾಗದು ಎಂದುಕೊಂಡು ಮತ್ತೆ ಹೇಳಿದ:

'ಇಷ್ಟೇ ಅಲ್ಲ, ಪಟ್ಟದರಸಿಯ ಪದವಿಯನ್ನೂ ಕೊಡಲು ತುದಿಗಾಲ ಮೇಲೆ ನಿಂತಿದ್ದಾರೆ....' ಮಹಾದೇವಿಯನ್ನು ನಿಟ್ಟಿಸಿದ. ಅದೇ ನಿರ್ಲಿಪ್ತ ಮುಖಭಾವದಿಂದ ಹೇಳಿದಳು:

'ವಸಂತಕರೇ, ರಾಜಾಶ್ರಯ, ರಾಜಭೋಜನ, ಇವು ನಿಮ್ಮಂತಹವರಿಗೆ ಆತ್ಯಂತಿಕ ಸಿದ್ಧಿಗಳು. ಆದರೆ ಅಧ್ಯಾತ್ಮಜೀವಿಗಳು ಅಪೇಕ್ಷಿಸುವದೇ ಬೇರೆ, ಅಣ್ಣನವರು ಹೇಳುವುದಿಲ್ಲವೆ?

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ*

ಅಂತಹ ವಿಲಾಸಿಗಳ ಮಧ್ಯದಲ್ಲಿ ಪಟ್ಟಮಹಿಷಿಯಾಗುವುದಕ್ಕಿಂತ, ಸದ್ಭಕ್ತರ ಮನೆಯ ಮುಸುರೆ ತೊಳೆಯುವುದು ಪುಣ್ಯಕರ....'

'ಅರಮನೆಯಲ್ಲಿ ನಿನ್ನ ಪೂಜೆಗೆ ಸಹ ಯಾವ ಅಡ್ಡಿ ಆತಂಕ ಬರದು....'

'ಮದುವೆ ಎರಡು ದೇಹಗಳ ಒತ್ತಾಯದ ಕೂಟವಲ್ಲ, ಹೃದಯವೆರಡರ ಸಮ್ಮಿಲನ ಎಂಬುದು ತಿಳಿದಿರುವುದೇ ತಮಗೆ....?'

'ತಿಳಿಯದೇ ಏನು....ಅಂತಲೇ ನಮ್ಮ ರಾಜರಿಗಾಗಿ ನಿಮ್ಮ ಹೃದಯವನ್ನು ಒಲಿಸಿಕೊಳ್ಳಲು ಬಂದಿರುವುದು....'

'ಅವರೊಬ್ಬರು ಒಪ್ಪಿದರೆ ಆಗದು, ನಾನೂ ಒಪ್ಪಬೇಕಷ್ಟೇ....'

'ನಿಮ್ಮ ಒಪ್ಪಿಗೆಗಾಗಿಯೇ ಇಷ್ಟೆಲ್ಲ ಶ್ರಮಿಸುವುದು....'

'ಸರಿ ಹಾಗಾದರೆ, ನನಗೆ ನಿಮ್ಮ ರಾಜರು ಒಪ್ಪಿಗೆಯಿಲ್ಲ; ನಾನು ಮದುವೆಯಾಗಲು ಇಚ್ಛಿಸುವುದಿಲ್ಲ. ಈ ನಿರ್ಧಾರದಲ್ಲಿ ನಾನು ಸ್ವತಂತ್ರಳು. ತಂದೆಯವರನ್ನು ಸಮಸ್ಯೆಯೊಳಗೆ ಎಳೆದುಕೊಳ್ಳಬೇಡಿರಿ....'

'ಇಂಥ ಅನುರೂಪರಾದ ರಾಜರಂತಹ ವರನನ್ನು ಒಪ್ಪದಿರಲು ಕಾರಣ?'

'ಕಾರಣವು ಸ್ಪಷ್ಟವಿದೆಯಲ್ಲ. ನಾನು ವಿರಾಗಿಣಿಯಾಗಿ ಉಳಿಯ ಬಯಸುವೆನು. ಜಗದಾದಿ ರಕ್ಷಕನಾದ ಚನ್ನಮಲ್ಲಿಕಾರ್ಜುನನ ಮೀಸಲ ವಧುವು ನಾನು. ಈ ಜನ್ಮದಲ್ಲಿ ಈ ಮೀಸಲು ಕೆಡಿಸದೆ, ಆ ದೇವನಲ್ಲಿ ಒಂದಾಗಬಯಸಿರುವೆ. ಆದ್ದರಿಂದ ತಾವು ಒತ್ತಾಯ ಮಾಡದಿರಿ.

ಹೃದಯವು ಒಲಿಯುವುದು ಅಧಿಕಾರಕ್ಕಲ್ಲ, ಆಮಿಷಕ್ಕಲ್ಲ, ಆದರ್ಶ

* ಬ. ಷ. ವ. ೪೫೫

ಸ್ವಕ್ತಿತ್ವಕ್ಕೆ ಎಂಬುದು ನೆನಪಿರಲಿ....' ಮಹಾದೇವಿಯ ಮಾತುಗಳು ವಸಂತಕನನ್ನು ದಿಗ್ಭ್ರಮೆಗೊಳಿಸಿದವು. ಆಕೆಯ ದಿಟ್ಟತನ, ವಿಮರ್ಶಾ ಪ್ರಜ್ಞೆ, ನಿಷ್ಠುರತೆಗೆ ಆಶ್ಚರ್ಯಪಟ್ಟು 'ಇಂತಹ ಹೆಣ್ಣು ರಾಜ್ಯವನ್ನಾದರೂ ಸಮರ್ಥವಾಗಿ ಆಳಬಲ್ಲಳು....' ಎಂದು ಮೆಚ್ಚಿಕೊಂಡ. ಆದರೆ ಆ ಮೆಚ್ಚುಗೆಯನ್ನು ಹೊರಗೆ ತೋರಿಸುವಂತಿರಲಿಲ್ಲ.

'ವಸಂತಕರೇ, ತಾವು ಹೇಳುವುದು ಮುಗಿಯಿತೆಂದು ತೋರುತ್ತದೆ.... ನಾವು ನಮ್ಮ ನಿರ್ಧಾರವನ್ನು ತಿಳಿಸಿಯೂ ಆಯಿತು. ಇನ್ನು ಮಾತನ್ನು ಮುಗಿಸಬಹುದಲ್ಲ....' ಓಂಕಾರ ಹೇಳಿದ.

'ಇದು ದುಡುಕಿನ ನಿರ್ಧಾರವೆಂದು ನನಗೆ ಅನ್ನಿಸುತ್ತಿದೆ ಶೆಟ್ಟರೆ. ಮಹಾದೇವಿಗೆ ಲೋಕಾನುಭವವಿಲ್ಲ, ಆಗುಹೋಗುಗಳ ಅರಿವಿಲ್ಲ, ಪರಿಣಾಮವೇನಾದೀತು ಎಂಬುದರ ಕಲ್ಪನೆಯಿಲ್ಲ. ಆದರೆ ಅನುಭವಿಗಳಾದ ನೀವು ಕೂಡ ಆಕೆಯ ತಾಳವನ್ನನುಸರಿಸಿ ಹೆಜ್ಜೆ ಹಾಕುವುದು ವಿವೇಕಯುಕ್ತವಲ್ಲ....'

'ಅದರ ಚಿಂತೆ ನಮಗೆ ಬೇಡ....' ಓಂಕಾರ ಬೆದರದೆ ಹೇಳಿದ.

'ರಾಜ್ಯದ ಒಡೆಯನ ಕೋಪದೃಷ್ಟಿಯನ್ನು ಮೈಮೇಲೆ ಹಾಕಿಕೊಂಡು ಬದುಕುವುದು ಬಹು ಕಷ್ಟ. ರಾಜದಂಡದ ಭೀತಿ ನಿಮಗಿರಲಿ....' ತೀಕ್ಷ್ಣ ದೃಷ್ಟಿಯನ್ನು ಬೀರುತ್ತ ವಸಂತಕನೆಂದ.

'ಚಂದ್ರನಿಗಿಂತಲೂ ಪ್ರಕಾಶಮಾನನಾದ ಸೂರ್ಯನ ಆಗಮನವಾದಾಗ ಚಂದ್ರನ ಪ್ರಕಾಶ ಮಂಕಾಗದೇ? ನಮ್ಮ ದೇವನ ದಂಡದ ರವಿಪ್ರಕಾಶದ ಮುಂದೆ ರಾಜದಂಡದ ಚಂದ್ರಪ್ರಕಾಶ ಎಷ್ಟರದು! ದೈವೀಸಾಕ್ಷಿಯಾಗಿ ಬದುಕುವ ನಮಗೆ ಆದಾವ ಭೀತಿಯೂ ಇಲ್ಲ....' ಓಂಕಾರನ ನುಡಿಗಳು ಧೈರ್ಯದಿಂದ ಹೊರಬಂದವು.

'ಮಹಾದೇವಿ, ನೀನು ಕಷ್ಟಕೋಟಲೆಗೆ ಒಳಗಾಗುವುದಷ್ಟೇ ಅಲ್ಲ, ಹೆತ್ತವರನ್ನೂ ಸಿಕ್ಕಿಸುತ್ತಲಿರುವೆ....'

'ವಸಂತಕರೇ, ನಿಮ್ಮ ವಿಚಾರ ಅಸಂಬದ್ಧಸರಣಿಯಲ್ಲಿ ಹರಿಯುವಂತೆ ತೋರುವುದು. ಮೊದಲು ಹೇಳಿದಿರಿ—ನನ್ನನ್ನು ಒಲಿಸಲು ಬಂದಿರುವುದಾಗಿ, ಈಗಲೋ ರಾಜದಂಡದ ಭೀತಿ ತೋರುತ್ತಿರುವಿರಿ. ಆಗ ವಿನಂತಿಯನ್ನು ವ್ಯಕ್ತಪಡಿಸಿ ಈಗ ಆಜ್ಞೆಯನ್ನು ಮಾಡುವಿರಿ. ಎಂತಹ ವಿಪರ್ಯಾಸ! ಪ್ರೇಮವನ್ನು ಗಳಿಸುವುದು ಕಲ್ಲುಕುಟ್ಟಿ ಕಿಡಿಯು ತೆಗೆದುಕೊಂಬಂತಲ್ಲ, ಮೊಸರನ್ನು ಮಥಿಸಿ ಬೆಣ್ಣೆಯನ್ನು ಪಡೆಯುವಂತೆ....

ಪ್ರತಿಯೊಬ್ಬ ಹೆಣ್ಣಿಗೆ ತಾನು ಒಲಿದ ವರನನ್ನು ಮದುವೆಯಾಗುವ

ಸ್ವಾತಂತ್ರ್ಯ ಕೊಡುವುದು ಮಾನವೀಯತೆ. ಅಮಾನವೀಯವಾದ ರಾಜ-ದಂಡದ ಭೀತಿ ತೋರಿಸದಿರಿ....'

'ಸಾಮೋಪಾಯ ಹುಸಿಯಾದಾಗ ದಂಡೋಪಾಯ ಅನಿವಾರ್ಯ. ಮಗುವು ಊಟ ಮಾಡದೆ ಚಂಡಿ ಹಿಡಿದಾಗ ರಮಿಸಿ ಹೇಳಿ ಸೋತ ತಾಯಿ, ನಂತರ ದಂಡಿಸಲೇಬೇಕಾಗುವುದು....' ವಸಂತಕ ಮಾರ್ಮಿಕವಾಗಿ ಹೇಳಿದ.

'ನಿಜ....ತಾಯಿಯಲ್ಲಿ ಮಗುವಿನ ಬಗ್ಗೆ ನಿಸ್ವಾರ್ಥಪ್ರೇಮ, ದೂರಾಲೋಚನೆ, ಹಿತದೃಷ್ಟಿ ಇವೆ....ಆದರೆ....ಇಲ್ಲಿ....? ಸ್ವಾರ್ಥ, ವಿಲಾಸ, ಕಾಮೋದ್ರೇಕವಷ್ಟೇ! ಆ ವಾತ್ಸಲ್ಯದ ವರ್ತನೆಯನ್ನು ಈ ದುರಾಚಾರವನ್ನು ಸಮರ್ಥಿಸಲು ಬಳಸಿಕೊಳ್ಳಬೇಡಿ....'

'ಸಮಾಜದಲ್ಲಿ ಕೆಲವು ಮೂಲಭೂತ ಶಾಸನಗಳಿವೆ. ಒಂದನೆಯದಾಗಿ ಯಾವುದೇ ಅನರ್ಘ್ಯ ವಸ್ತುವಿರಲಿ ಅದು ರಾಜಭಂಡಾರಕ್ಕೆ ಮೊದಲ ಮೀಸಲು, ಎರಡನೆಯದಾಗಿ ಸ್ವತಃ ರಾಜನೇ ಬಯಸಿದಮೇಲೆ ನಿರಾಕರಿಸುವ ಹಕ್ಕು ಯಾರಿಗೂ ಇಲ್ಲ....'

'ಛೀ....ಇಂತಹ ಅಮಾನವೀಯ ಶಾಸನಗಳನ್ನು ಮೂಲೆಗೆಸೆಯಿರಿ. ಒಂದು ವೇಳೆ ಅದು ಅನ್ವಯಿಸಿದರೂ ಜಡವಾದ, ಸಂವೇದನೆಗಳಿಲ್ಲದ ಮುತ್ತು, ರತ್ನ, ಧನಕ್ಕಷ್ಟೇ ವಿನಾ ಭಾವನೆಗಳು, ಸಂವೇದನೆಗಳು ಇರುವ ಮಾನವ ಪ್ರೇಮಕ್ಕಲ್ಲ. ಅದರಲ್ಲಿಯೂ ವೈವಾಹಿಕಸಂಬಂಧ ಭಾವನಾರಹಿತವಾಗಿ, ಯಾಂತ್ರಿಕವಾಗಿ ತಿರುಗುವ ಬಂಡಿಯ ಚಕ್ರವಲ್ಲ, ಪ್ರೇಮರಸದಿಂದ ಬೆಸೆಯಲ್ಪಡಬೇಕಾದ ಹೃದಯಮಿಲನ....'

'ಓಹ್....ಮಹಾದೇವಿ, ದುಡುಕಿನ ನಿರ್ಧಾರದಿಂದ ನಿನ್ನ ಬಾಳಿನ ಸಸಿಯ ಸುಳಿಯನ್ನು ಕತ್ತರಿಸಿಕೊಳ್ಳುತ್ತಿರುವೆ....' ವಸಂತಕ ನುಡಿದ.

'ಸತ್ತ್ವಹೀನರಾಗಿ, ಪ್ರವಾಹಪತಿತರಾಗಿ ನೂರು ವರುಷ ಬಾಳುವುದಕ್ಕಿಂತ, ಒಂದೇ ದಿನದ ಮಟ್ಟಿಗೆ ಆದರ್ಶಜೀವನವನ್ನು ಬದುಕಿದರೆ ಸಾಕು....' ಓಂಕಾರ ಹೇಳಿದನು.

'ಶೆಟ್ಟರೇ....ನೂರು ಸಾರಿ ಆಲೋಚಿಸಿರಿ. ಹಾಲನ್ನು ಚೆಲ್ಲಿ, ಆಮೇಲೆ ಅದನ್ನು ಬಳಿದು ಪಾತ್ರೆಗೆ ಹಾಕುತ್ತೇನೆ ಎಂಬುದು ಮೂರ್ಖ ವಿಚಾರ. ಮನೆ ಬಾಗಿಲಿಗೆ ಬಂದ ಭಾಗ್ಯವನ್ನು ಧಿಃಕ್ಕರಿಸಿದರೆ ಒಳ್ಳಿತಾಗದು. ಮನವನ್ನು ಒಲಿಸಿ, ನಿಮ್ಮ ಪ್ರೇಮದೊಡನೆ ಮಂಗಳವಾರ್ತೆಯನ್ನು ಒಯ್ಯಬೇಕೆಂದು ಪ್ರತಿನಿಧಿಯಾಗಿ ಬಂದಿರುವೆ. ಇದಕ್ಕೆ ನೀವು ಮಣಿಯದಿದ್ದರೆ....'

'ಮಣಿಯದಿದ್ದರೆ....ಏನಾದೀತು? ಮರಣದಿಂದ ಮುಂದೆ ಕಷ್ಟವಿಲ್ಲ

ನಷ್ಟೆ!' ಓಂಕಾರನ ಮಾತಿನಲ್ಲಿ ಕೆಚ್ಚಿನ ಕಿಡಿ ಹಾರುತ್ತಿದ್ದವು.

'ಪ್ರೇಮಕ್ಕೆ ಮಣಿಯದ ನೀವು ದಂಡಕ್ಕೆ ಮಣಿಯಲೇಬೇಕಾಗುವುದು....' ಬಿರುಸುಧ್ವನಿಯಲ್ಲಿ ವಸಂತಕ ಹೇಳಿದ.

'ಪರಿಚಾರಕರೇ, ಆ ಹರಿವಾಣಗಳನ್ನು ಮಹಾದೇವಿಗೆ ಒಪ್ಪಿಸಿರಿ....'

'ಕೂಡದು....ನಿಮ್ಮ ಕಾಮುಕರಾಜನ ಎಂಜಲಿಗೆ ಕೈಯೊಡ್ಡುವವರು ನಾವಲ್ಲ....' ಮಹಾದೇವಿ ಗಡುಸಾಗಿ ಹೇಳಿದಳು. ವಿಲಾಸಿನಿಯರು ತಲ್ಲಣಿಸಿ, ಹಿಂದಕ್ಕೆ ಹೆಜ್ಜೆ ಇಟ್ಟರು.

'ರಾಜಾಜ್ಞೆಯ ಉಲ್ಲಂಘನೆ, ರಾಜಕಾರುಣ್ಯದ ತಿರಸ್ಕಾರ....ಸಿಂಹಾಸನಕ್ಕೆ ಅಪಮಾನ!' ವಸಂತಕ ಕೆರಳಿ ನುಡಿದ. ಮತ್ತೆ ಶಾಂತಿಯನ್ನು ಒಟ್ಟು ಗೂಡಿಸಿಕೊಂಡು ಮಾತನಾಡಿದ:

'ಇರಲಿ, ನೀವು ದುಡುಕುವಿರೆಂದು ವಿವೇಕಿಯಾದ ನಾನೂ ದುಡುಕ ಬಾರದು. ಇನ್ನೂ ಕಾಲಾವಕಾಶ ನೀಡುವೆ. ನಾಳೆ ಬೆಳಗ್ಗೆ ಇದೇ ವೇಳೆಗೆ ಬರುವೆನು. ಆವೇಶ, ಅಜ್ಞಾನಗಳನ್ನು ಶಮನಿಸಿಕೊಂಡು ಆಲೋಚನೆ ಮಾಡಿರಿ. ಬದುಕಿನಲ್ಲಿ ಸುವರ್ಣಾವಕಾಶ ಅನೇಕ ಸಲ ಬರದು. ಬಂದಾಗ ಕೈಬಿಡುವ ದಡ್ಡತನ ಸಲ್ಲದು.

'ಶೆಟ್ಟರೆ, ಮಗಳ ಮಾತಿನ ದಿಕ್ಕಿನಲ್ಲಿ ಮುನ್ನಡೆಯಬೇಡಿರಿ. ತಂದೆಯಾಗಿ, ರಾಜ್ಯದ ನಿಷ್ಠಾವಂತ ಪ್ರಜೆಯಾಗಿ ಆಲೋಚಿಸಿರಿ....', ವಸಂತಕನು ತಾನೇ ನೇರವಾಗಿ ಹರಿವಾಣಗಳನ್ನು ರತ್ನಗಂಬಳಿಯ ಮೇಲಿಟ್ಟನು.

ಕೆಳಗಿಟ್ಟ ಬಳಿಕ ವಸಂತಕನು,

'ನಡೆಯಿರಿ....ಪರಿಚಾರಕರೇ....' ಎಂದು ಹೊರಟು, ಹೊರಗೆ ಬಂದಾಗ ಪಟುಭಟರತ್ತ ನೋಡಿ ಸನ್ನೆ ಮಾಡಿ, ಏನನ್ನೋ ಹೇಳಿ ಕುದುರೆಯನ್ನೇರಿದ.

* * *

ಮನೆಯಲ್ಲಿ ಸ್ಮಶಾನಮೌನ ಆವರಿಸಿತು. ದಟ್ಟವಾದ ಕತ್ತಲೆಯಲ್ಲಿ ಕಾಲುಗಳು ಎಡಹುವಂತೆ, ಬುದ್ಧಿ ವಿಚಾರಮಾಡಲರಿಯದೆ ಎಡಹುತ್ತಿತ್ತು. ಸಾಮಾನ್ಯ ಅರಳೆಯನ್ನು ನೂಲು ಮಾಡಲು ರಾಟೆಗೆ ಹಾಕಿದರೆ ಮತ್ತೆಮತ್ತೆ ಕಿತ್ತುಹೋಗುವಂತೆ, ಹಲವು ವಿಚಾರಗಳು ಅಸಂಬದ್ಧವಾಗಿ ನುಸುಳಿ, ಕ್ರಮ ಯುಕ್ತವಾಗಿ ಚಿಂತಿಸಲು ಅವಕಾಶ ನೀಡುತ್ತಿರಲಿಲ್ಲ. ಓಂಕಾರ ದಿಂಬಿಗೊರಗಿ ಮೂಕನಾಗಿ ಕುಳಿತಿದ್ದ. ಲಿಂಗಮ್ಮ ನಡುಮನೆಯಿಂದ ಒಳಮನೆಗೆ ಹೋಗುವ ಕದದ ಪಟಲಕ್ಕೊರಗಿ ತಲೆಗೆ ಕೈಯನ್ನು ಆನಿಸಿದ್ದಳು. ಕರಿಯ ಕಟ್ಟಿಗೆಯ ಕಂಭಕ್ಕೆ ಒರಗಿದ ಮಹಾದೇವಿ ಅಟ್ಟದ ಕಡೆಗೆ ಮುಖ ಮಾಡಿ ಅದನ್ನೇ

ದಿಟ್ಟಿಸುತ್ತಿದ್ದಳು. ಶಿವಮೂರ್ತಪ್ಪನು, ಅವನ ಹಿಂದೆ ಮಹಾದೇವಿಯ ಗೆಳತಿಯರಾದ ಶಾರದ, ಕುಮುದ, ಶೈಲಜ, ಅಂಬುಜ ಗುಂಪಾಗಿ ಬಂದರು.

'ಬನ್ನಿ, ಬನ್ನಿ....' ಓಂಕಾರ ಯಾಂತ್ರಿಕವಾಗಿ ನುಡಿದ. ವಸಂತಕನ ಕುದುರೆ, ಅದರ ಹಿಂದೆ ತುರಂಗಾರೋಹಿಗಳು, ಮೇನೆಯಲ್ಲಿ ಹೆಂಗಸರು ಬಂದಾಗಲೇ ಕೇರಿಯಲ್ಲಿ ಗುಸುಗುಸು ಸುದ್ದಿ ಆರಂಭವಾಗಿ, ನೀರಿನ ಮೇಲೆ ಬಿದ್ದ ಎಣ್ಣೆ ಹರಡಿಕೊಳ್ಳುವಂತೆ, ಆಗಲೇ ಸುತ್ತಮುತ್ತ ಹಸರಿಸತೊಡಗಿತ್ತು. ಮಹಾದೇವಿ ಗೆಳತಿಯರೊಡನೆ ಮೇಲಿನ ತನ್ನ ಕೋಣೆಯ ಕಡೆಗೆ ನಡೆದಳು. ಹಾಸಿದ್ದ ಚಾಪೆಯ ಮೇಲೆ ಗೆಳತಿಯರು ಕುಳಿತರು.

'ಮಹಾದೇವಿ, ಬೆಳಗಿನ ವೇಳೆಯಲ್ಲಿ ಅನೇಕ ಕುದುರೆಗಳು, ಮೇನೆಗಳು ಬಂದಿದ್ದುವಂತೆ....ಏನು ವಾರ್ತೆ....?' ಶೈಲಜೆ ದುಗುಡದಿಂದ ಕೇಳಿದಳು.

'ಮತ್ತೇನವ್ವಾ; ಆ ರಾಜನಿಂದ ನಿರೂಪ ಬಂದಿದ್ದಿತು. ನಾನು ಅವನಿಗೆ ರಾಣಿಯಾಗಬೇಕಂತೇ....?'

'ಹೌದೇ ...' ಎಲ್ಲರೂ ಉದ್ಗರಿಸಿದರು.

'ಮಹಾದೇವಿ....ನೀನು ಇಷ್ಟು ದಿನ ಪೂಜೆ ಮಾಡಿದುದಕ್ಕೆ ಸಾರ್ಥಕ ವಾಯ್ತು ಕಣೇ? ರಾಜನ ಹೆಂಡತಿಯಾಗುವ ಪುಣ್ಯ ಎಷ್ಟು ಬೇಗ ಒದಗಿತು.... ಆ ಅರಮನೆ, ಅಲ್ಲಿಯ ವೈಭವ....ಅಬ್ಬಾ!' ಶಾರದೆಯು ಉತ್ಸಾಹದಿಂದ ನುಡಿದಳು.

'ಓಹ್, ಶಾರದಾ....ನಿನ್ನ ಬುದ್ಧಿ ಏನೂ ಬಲಿತಿಲ್ಲ! ನಾನು ಬಯಸಿರು ವುದು ಅರಮನೆಯನ್ನಲ್ಲವೇ, ಗುರುಮನೆಯನ್ನು. ಅರಮನೆ ಪಂಜರ, ಶರಣರ ಮನೆ ಅರಣ್ಯ. ಈ ಗಿಳಿಗೆ ಬೇಕಾಗಿರುವುದು ಅರಮನೆಯ ಪಂಜರ, ವೈಭವದ ಹಣ್ಣು, ರಸಿಕತೆಯ ಹಾಲಲ್ಲ ಗೆಳತಿ; ಶರಣರ ಸಂಗದ ವಿಶಾಲ ಕಾನನ, ಸುಜ್ಞಾನದ ಹಣ್ಣು, ಭಾಕ್ತಿಕತೆಯ ಹಾಲು....! ನೀವಿನ್ನೂ ನನ್ನ ಮನಸ್ಸಿನ ಜಾಡನ್ನೇ ಅರಿತಿಲ್ಲ....' ನೊಂದದನಿಯಲ್ಲಿ ಮಹಾದೇವಿ ಹೇಳಿದಳು.

'ಮಾದೇವಿ....ಹುಚ್ಚುತನದ ಮಾತುಗಳನ್ನು ಬಿಡು; ನಿನ್ನ ಈ ಮಾತು ಗಳು ಕಿವಿಗೆ ಇಂಪೆನಿಸುತ್ತವೆ, ಆಚರಣೆಗೆ ಕಠಿಣ. ಹೆಣ್ಣು ಒಂಟಿಯಾಗಿ ಬಾಳಲಾರಳು, ಸಂಗಾತಿಯಿಲ್ಲದ ಬದುಕು ಬಹು ನೀರಸ. ಹೆಣ್ಣಿಗಿರುವ ಈ ಯೌವ್ವನ, ಸೌಂದರ್ಯಗಳು ಸದುಪಯೋಗವಾಗಬೇಡವೆ? ಇವು ಸದುಪ ಯೋಗವಾಗದಿದ್ದರೆ, ಮಸಿಬಟ್ಟೆಯಲ್ಲಿ ಕಟ್ಟಿಟ್ಟ ಮಾಣಿಕ್ಯದಂತೆ ಮೌಲ್ಯ ಹೀನವಾಗಿ, ಯಾರೂ ಸವಿಯದ ಹಣ್ಣು ಕೊಳೆತು ವ್ಯರ್ಥವಾಗುವಂತೆ, ಹೆಣ್ಣಿನ ಬಾಳೂ ನಿರರ್ಥಕವಾಗುವುದು....' ಶಾರದೆಯು ಹೇಳಿದಳು.

'ಶಾರದಾ, ನಿನ್ನದೊಂದು ವಿಚಿತ್ರ ವ್ಯಕ್ತಿತ್ವ; ಬದುಕಿನಲ್ಲಿ ಹೆಣ್ಣು-ಗಂಡು, ಸಂಸಾರ-ಮಕ್ಕಳು, ಈ ಸೀಮಿತ ವಲಯ ಬಿಟ್ಟರೆ ನಿನಗೆ ಬೇರೆ ಆದರ್ಶಗಳ ಪ್ರಪಂಚವೇ ತಿಳಿಯದು. ಎಂತಹ ಸಾಮಾನ್ಯ ತಿಳುವಳಿಕೆ ಇದು. ಯಾವ ನಾವರೊಬ್ಬ ಪುರುಷ ಸುಖಿಸಿದರೆ ಮಾತ್ರವೇ ತಾರುಣ್ಯ-ಚೆಲುವುಗಳು ಸಾರ್ಥಕವಾಗುವವೆಂದು ನಿನ್ನ ನಂಬಿಗೆಯೇ! ನಾನಿದನ್ನೊಪ್ಪೆನು. ಘನವಾದ ಆದರ್ಶ ಸಾಧನೆಗೆ, ಜ್ಞಾನಸಂಪಾದನೆಗೆ, ದೇವನೊಲಿಮೆಯನ್ನು ಗಳಿಸಲಿಕ್ಕೆ ಉಪಯೋಗವಾದರೆ ಮಾತ್ರ ಇವು ಸಾರ್ಥಕಗೊಳ್ಳುವವೆಂದು ನನ್ನ ನಂಬಿಗೆ. ಈ ಶರೀರವೊಂದೇ ಪರಮ ಸತ್ಯ, ಇದರ ಸುಖವೇ ಸ್ತುತ್ಯ ಎಂದು ತಿಳಿದಿರುವೆ. ಈ ಶರೀರವನ್ನು ಮೀರಿದ ಬುದ್ಧಿ, ಮನ, ಆತ್ಮಗಳಿಲ್ಲವೇ? ಅವುಗಳನ್ನು ಏಕೆ ಕಡೆಗಣಿಸುವೆ. ಬುದ್ಧಿಯ ವಿಕಾಸವನ್ನು ಮಾಡಿಕೊಂಡು ಆ ಲತೆಯಲ್ಲಿ ಸುವಿಚಾರಗಳ ಪುಷ್ಪಗಳನ್ನು ತಳೆಯುವುದು ಎಷ್ಟು ಪರಮಾನಂದಕರ! ಭೌತಿಕಾನಂದ ಬಹು ಕ್ಷಣಿಕ, ಬೌದ್ಧಿಕಾನಂದ, ಆತ್ಮಾನಂದಗಳು ಅಮೂಲ್ಯ, ಸ್ಥಿರ....'

'ನೀನು ಏನೇ ಹೇಳವ್ವಾ, ಮದುವೆ ಬೇಡ ಎನ್ನುವುದು, ಕಾಣದ ಚೆನ್ನ ಮಲ್ಲಿಕಾರ್ಜುನನಿಗೆ ಹಂಬಲಿಸುವುದು, ನಮಗೆಲ್ಲ ಇವು ಅಸಹಜ ಎನಿಸು ತ್ತವೆ....ನಿನ್ನ ಮನೋಭಾವನೆಗಳು ನಮಗೆ ಅರ್ಥವಾಗವು....' ಕುಮುದ ಹೇಳಿದಳು.

'ನಿಜ....ನಿಮಗೆ ಅರ್ಥವಾಗಲು ಸಾಧ್ಯವಿಲ್ಲ. ಬಂಜೆ ಹೆಂಗಸಿಗೆ ಹೆಂಗೆಯ ಬೇನೆ ಹೇಗಿದೆ ಎಂದು ಎಷ್ಟೇ ವರ್ಣಿಸಿದರೂ, ಅದನ್ನು ಅನುಭವಕ್ಕೆ ತಂದು ಕೊಳ್ಳಲಾರದೆ ಹಗುರವಾಗಿ ತಿಳಿಯುವಳು. ಮಲತಾಯಿಗೆ ತನ್ನ ಮಲಮಕ್ಕ ಳನ್ನು ಪ್ರೀತಿಸಲು ಖಂಡಿತ ಬರದು. ತನ್ನ ವಿವೇಕವು ಪ್ರೀತಿಸು ಎಂದು ಹೇಳಿ ದರೂ, ಉಕ್ಕಿಬರುವ ಪ್ರೀತಿಯನ್ನು ಅದುಮಿಟ್ಟು ದ್ವೇಷಿಸುವಳು. ವಿಶಿಷ್ಟ ಕಷ್ಟನಷ್ಟಗಳಲ್ಲಿ ನೊಂದವರ ನೋವನ್ನು, ನೋಯದವರು ಅರಿಯಲಾರರು. ಆ ನನ್ನ ಪ್ರಿಯ, ಸಾವಿಲ್ಲದ ಚೆಲುವ ಚನ್ನಮಲ್ಲಿಕಾರ್ಜುನನು ಇರಿದುಬಿಟ್ಟಿರುವ ಪ್ರೇಮದ ಅಲಗು, ಒಳಗೆ ಮುರಿದುಬಿಟ್ಟಿದೆ. ಹೊರನೋಟಕ್ಕೆ ಅದು ಕಾಣದು; ಆದರೆ ಒಳಗೆ ಒಡಲಲ್ಲಿ ಕೊರೆಯುತ್ತಿದೆ. ಇಂತಹ ಅಳಲನ್ನು ನೀವಾರೂ ಅರ್ಥ ಮಾಡಿಕೊಳ್ಳಲಾರಿರಿ....* ನಿಮಗೆ ಮನವರಿಕೆ ಮಾಡುವುದು, ಕುರುಡನಿಗೆ ಸೂರ್ಯನ ಬೆಳಗನ್ನು ವಿವರಿಸಿ ಅರಿಯುವಂತೆ ಮಾಡುವುದು ಒಂದೇ, ವ್ಯರ್ಥ

ಸಾಹಸ....' ನಿರಾಶೆಯಿಂದ ನುಡಿದ ಮಹಾದೇವಿಯ ಕಂಠ ತುಂಬಿಬಂದಿತು.

'ಮುಂದೆ ಏನಾಯಿತು ಮಹಾದೇವಿ, ವಸಂತಕನಿಗೆ ಏನು ಉತ್ತರ ನೀಡಿದಿರಿ?' ಶೈಲಜೆ ದುಗುಡದಿಂದ ಕೇಳಿದಳು.

'ರಾಜನು ಬಹು ಎಚ್ಚರಿಕೆಯಿಂದ ಆರಿಸಿ ನನಗಾಗಿ ಕಳಿಸಿರುವನಂತೆ; ಅದನ್ನು ವರ್ಣಿಸಿ ವಸಂತಕನು ಜರಿಯ ಪೀತಾಂಬರ, ಮುತ್ತಿನ ಒಡವೆ, ರತ್ನ ಹಾರಗಳು ಎಲ್ಲವನ್ನೂ ತೋರಿಸಿದ. ನವರತ್ನಖಚಿತ ಉಂಗುರವನ್ನು ರಾಜನು ಪ್ರೀತಿಯ ದ್ಯೋತಕವಾಗಿ ಕಳಿಸಿದ್ದನಂತೆ, ಅದನ್ನೂ ನನಗೆ ಕೊಡಲುಬಂದ....'

'ನೀನು ತೆಗೆದುಕೊಂಡೆಯಾ? ಅವು ಎಲ್ಲಿದ್ದಾವೆಯೋ....' ಶಾರದೆಯ ಬಾಯಲ್ಲಿ ನೀರೂರಿ, ಕಣ್ಣು ಕಾಂತಿಯುಕ್ತವಾದವು. ಮೂಳೆಯನ್ನು ಕಂಡು ನೀರು ಸುರಿಸುವ ನಾಯಿಯ ನೆನಪಾಯಿತು ಮಹಾದೇವಿಗೆ. ಶಾರದೆಯ ಕ್ಷುಲ್ಲಕ ವ್ಯಕ್ತಿತ್ವಕ್ಕೆ ಮರುಕವೆನ್ನಿಸಿತು. ಮುಂದಿನ ಆಗುಹೋಗುಗಳ ಅರಿವು ಸಹ ಇಲ್ಲದೆ, ಶೂಲವನ್ನೇರಲಿರುವ ಕಳ್ಳನು ಹಾಲುತುಪ್ಪವನ್ನು ಸಂತೃಪ್ತಿಯಾಗಿ ಕುಡಿಯಲು ಕುಳಿತಂತಹ ಮೂರ್ಖತನ ಎನಿಸಿತು. ತನ್ನ ಮನದಲ್ಲಿ ಅಂದುಕೊಂಡಳು :

'ಇವಳಿಗೆ ತತ್ತ್ವ ಹೇಳುವದು ನನ್ನ ಮೂರ್ಖತನ. ಗಿಡ್ಡ ಹೋರಿಯನ್ನು ಕಮಾನು ಗಾಡಿಗೆ ಹೂಡುವ ಬಂಡಿಗನದು ಎಂತಹ ಹುಚ್ಚುತನವೋ ಈಕೆಗೆ ಪಾರಮಾರ್ಥದ ಗಾಡಿಯನ್ನು ಎಳೆಯಲು ಶಿಕ್ಷಣಕೊಡುವುದು ಅಷ್ಟೇ ಹುಚ್ಚುತನ. ಗ್ರಹಣಶಕ್ತಿಯು ಸ್ವಭಾವತಃ ಇದ್ದರೆ ಶಿಕ್ಷಣವು ಸಾರ್ಥಕವಾಗುವುದು. ಆಧ್ಯಾತ್ಮದ ಅಭೀಪ್ಸೆ ಇಲ್ಲದವರಿಗೆ ಬೋಧಿಸಿ ನಮ್ಮ ಮಟ್ಟಕ್ಕೆ ಏರಿಸಿಕೊಳ್ಳಬೇಕೆಂಬುದು ಗಾಳಿಯನ್ನು ಗುದ್ದಿ ಮೈ ನೋಯಿಸಿಕೊಳ್ಳುವ ಮೂರ್ಖ ಸಾಹಸ....' ನಂತರ ಸ್ಪಷ್ಟ ಧ್ವನಿಯಲ್ಲಿ ನುಡಿದಳು :

'ನಾನು ಕಣ್ಣಿನಿಂದ ನೋಡಿಲ್ಲ, ಬೆರಳಿನಿಂದ ಮುಟ್ಟಿಲ್ಲ....ಬೇಕಾದರೆ ಕೆಳಗೆ ಬಿದ್ದಿರಬಹುದು, ಹೋಗಿ ನೋಡಿಕೊಳ್ಳಿ....' ಶಾರದ, ಕುಮುದ, ಅಂಬುಜೆಯರು ದಡದಡನೆ ಕೆಳಗೆ ಓಡಿದರು.

'ನಾನು ನಿರಾಕರಿಸಿದೆ ಶೈಲಜಾ....ಅಪ್ಪನೂ ತಿರಸ್ಕರಿಸಿದರು. ಆದರೆ ಅವನೇ ಅಲ್ಲಿ ಬಿಟ್ಟುಹೋಗಿರುವನು. ನಾವಿನ್ನೂ ಆಲೋಚಿಸಲು ಅವಕಾಶ ಬೇರೆ ನೀಡಿರುವನು. ಮತ್ತೆ ನಾಳೆ ಬೆಳಿಗ್ಗೆ ಬರುವನಂತೆ....ಓಹ್, ಗೆಳತಿ ಈ ಅನಿಷ್ಟ ಸೌಂದರ್ಯವನ್ನು ದೇವರು ನನಗೇಕೆ ಕೊಟ್ಟನೋ....' ಸಿಟ್ಟುಸಿಡಿಸಿಟ್ಟಳು ಮಹಾದೇವಿ.

'ನಿಜ ಮಾದು, ನಿನ್ನದು ಕಣ್ಣು ಕುಕ್ಕುವ ಸೌಂದರ್ಯ ಕಣೆ. ಪಟ್ಟಾಧಿ

ಕಾರದ ವಾರ್ಷಿಕೋತ್ಸವ ನಡೆದಾಗ ನಾನೂ ನಮ್ಮ ತಂದೆಯ ಜೊತೆಗೆ ಅರಮನೆಗೆ ಹೋಗಿದ್ದೆ. ಆಗ ಕೌಶಿಕ ಮಹಾರಾಜರು, ಪಟ್ಟದ ರಾಣಿ ಯಶೋಮತಿಯವರು ಪೀಠಾಲಂಕೃತರಾಗಿದ್ದರು. ಯಶೋಮತಿ ಚೆಲ್ವೆ ಏನೋ ನಿಜ.... ಆದರೆ ನಿನ್ನಷ್ಟಲ್ಲ. ಮುಖವು ಲಕ್ಷಣವಿದ್ದರೂ ನಿನ್ನಂತೆ ಸರ್ವಾಂಗಗಳೂ ಕ್ರಮಬದ್ಧವಾಗಿಲ್ಲ. ನಿನ್ನನ್ನು ರೂಪಿಸುವಾಗ ಆ ಬ್ರಹ್ಮನು ಆನಂದದ ಲಹರಿಯಲ್ಲಿದ್ದು ಬೇರೆಬೇರೆ ಅನೇಕರಿಗೆ ಹಾಕಬೇಕಾದ ಚೆಲುವಿನ ಅಂಗಾಂಗಗಳನ್ನು, ಮರೆತು ಒಂದೇ ಕಡೆ ಜೋಡಿಸಿರಬೇಕು. ನನಗೆ ಅನ್ನಿಸುತ್ತೆ, ನಾನೇನಾರ ಗಂಡಸಾಗಿದ್ದರೆ....ಹೇಳದೆ ಕೇಳದೆ ನಿನ್ನನ್ನು ಓಡಿಸಿಕೊಂಡು ಹೋಗಿಬಿಡುತ್ತಿದ್ದೆ....' ಮಹಾದೇವಿಯ ಗಲ್ಲವನ್ನು ಎತ್ತಿ ಶೈಲಜಾ ಕೆನ್ನೆಗೆ ಹಗುರವಾಗಿ ಮುದ್ದನ್ನಿಕ್ಕಿದಳು.

ಗೆಳತಿಯ ವರ್ತನೆಯಿಂದ ಮಹಾದೇವಿಯ ಮುಖವೆಲ್ಲ ಆರಕ್ತವಾಗಿ, ಕೆನ್ನೆಯಲ್ಲಿ ಕೆಂಪು ತಾವರೆಗಳು ಅರಳಿದವು.

'ಶೈಲಾ....ನಿನ್ನ ನಾಟಕ ಸಾಕು. ಇದು ಶೃಂಗಾರ ರಸಪ್ರಧಾನ ಸನ್ನಿವೇಶವಲ್ಲ, ರೌದ್ರರಸ-ಶೋಕರಸ ಸಮ್ಮಿಶ್ರವಾದ ಪ್ರವೇಶ. ನೀನು ಮಾಡಿದ ಸೌಂದರ್ಯದ ವರ್ಣನೆಯಿಂದ ನನಗೆ ಆನಂದವಾಗುವ ಬದಲು ತಳಮಳವಾಗುತ್ತಿದೆ. ಆಧ್ಯಾತ್ಮಸಾಧನೆಗೆ ಮುಳ್ಳಾಗಿರುವ ಈ ಸೌಂದರ್ಯವನ್ನು ಅಗ್ನಿಗಾದರೂ ಆಹುತಿ ಮಾಡಲೇ ಎನ್ನಿಸುತ್ತದೆ....' ಆವೇಶದಿಂದ ಹೇಳಿದಳು.

'ಅಂದರೆ....' ಶೈಲಜಾ ಭೀತಳಾಗಿ ಕೇಳಿದಳು.

'ಬೆಂಕಿಯಿಂದ ಅರ್ಧಂಬರ್ಧ ಸುಟ್ಟರೆ ಇದು ವಿಕಾರವಾಗುವುದು; ಆ ಪುರುಷನಾಯಿ ನೋಡಲು ಸಹ ಹೇಸುವುದು....ಅಂತರಂಗದ ಚೆಲುವನ್ನು ಈ ಬೆಂಕಿ ಸುಡದು; ಆಗ ನನ್ನ ಚನ್ನಮಲ್ಲಿಕಾರ್ಜುನನನ್ನು ನಿರಾತಂಕವಾಗಿ ಬೆರೆಯಬಹುದು....' ಭಾವನೆಯ ತೀವ್ರತೆ ಹಿರಿದಾಗಿ ಶೈಲಜೆಯ ಭುಜಕ್ಕೊರಗಿದಳು. ಕಣ್ಣೀರಿನ ಹನಿಗಳು ಹರಿಯತೊಡಗಿದವು.

'ನಾನೇನಾದರೂ ತಪ್ಪು ಅಂದಿದ್ದರೆ ಕ್ಷಮಿಸು ಗೆಳತಿ; ಹಾಸ್ಯಕ್ಕಾಗಿ ಮಾತನಾಡಿದೆ. ತಪ್ಪು ತಿಳಿಯಬೇಡ....' ಶೈಲಜೆ ನೊಂದು ಕೇಳಿದಳು.

'ಶೈಲಾ....ನೀನೊಬ್ಬಳೇ ನೋಡು ನನ್ನ ಭಾವನೆಗಳನ್ನು ಸ್ವಲ್ಪವಾದರೂ ಅರಿಯಬಲ್ಲವಳು. ನೀನು ಇಲ್ಲದಿದ್ದರೆ ನಾನು ಏಕಾಂಗಿಯಾಗಿಬಿಡುತ್ತಿದ್ದೆ....'

ಅಷ್ಟರಲ್ಲಿ ಕೆಳಗೆ ಹೋಗಿದ್ದ ಶಾರದೆ, ಕುಮುದ, ಅಂಬುಜ ಇವರು ಮೇಲೇರಿ ಬಂದರು. ಮಹಾದೇವಿಗೆ ಅವರ ಬರವು ಬೇಡವೆನಿಸಿತ್ತು; ಮುಖವನ್ನು ಕಿವುಚಿಕೊಂಡಳು.

'ಅಬ್ಬಾ! ಮಹಾದೇವಿ ತೀಕ್ಷ್ಣಮತಿ, ಜಾಣೆ ಎಂದುಕೊಂಡಿದ್ದುದು ಸುಳ್ಳು ನೋಡು ಕುಸುಮ. ನಾವು ಎಲ್ಲರೂ ಒಂದಾಗಿ ಸಾಲೆಗೆ ಹೋಗುವಾಗ ಗುರುಗಳು ಪ್ರಶ್ನೆ ಕೇಳಿದರೆ ಚಟಪಟನೆ ಉತ್ತರಿಸುತ್ತಿದ್ದಳು. ಆಗ ನಾವು ಇವಳನ್ನು ಜಾಣೆ ಎಂದುಕೊಂಡಿದ್ದೆವು. ಎಂತೆಂತಹ ಒಡವೆಗಳು ಅಂತೀಯ; ಆ ಮಾಗಾಯಿ ಓಲೆ, ನವರತ್ನಖಚಿತ ಮಾಗಾಯಿ ಸರ, ಹಾವಿನ ಹೆಡೆಯ ತೋಳಬಂದಿ, ಮುತ್ತಿನ ಕಂಕಣ, ಬಂಗಾರದ ಕಾಲಂದುಗೆ, ಅಬ್ಬಾ! ಒಂದೇ ಎರಡೇ! ಮದುವೆಗೆ ಮುನ್ನವೇ ಇಂತಹವು ಸಿಕ್ಕರೆ, ರಾಣಿಯಾದಮೇಲೆ ಎಂತೆಂತಹವು ಸಿಗುವವೋ! ಅರಮನೆಯ ವಾಸ, ಬೇಡಿಕೆಗಳನ್ನು ಪೂರೈಸುವ ಆ ಸುಂದರಾಂಗನಾದ ಅರಸ, ಅರಸಿಯ ಪಟ್ಟ, ಕೈಕಾಲಿಗೆ ದಾಸಿಯರು, ಇವೆಲ್ಲ ಬಿಟ್ಟು ಸನ್ಯಾಸಿಯಾಗುವೆ ಎನ್ನುವುದೊಂದು ಹುಚ್ಚು. ಇದೇನೋ ಭಯಾನಕ ವಿಪತ್ತು ಎಂದು ಹೆದರಿರುವದು ಮತ್ತೊಂದು ಹುಚ್ಚು....' ಶಾರದೆ ಬಡಬಡನೆ ನುಡಿದಳು.

ಮಹಾದೇವಿ ಸಂತೈಸಿಕೊಂಡು ಹೇಳಿದಳು :

"ಗಿರಿಯಲ್ಲಲ್ಲದೇ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?
ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವುದೇ ಹಂಸೆ?
ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ?
ಎನ್ನ ದೇವ, ಚೆನ್ನಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವದೆ ಎನ್ನ ಮನ?
ಹೇಳಿರೆ, ಕೆಳದಿಯರಿರಾ?*

ಶಾರದಾ, ಕೆಂಭೂತ ಕುಣಿಯಲು ಸಾಮಾನ್ಯ ಮೊರಡಿಯಾದರೆ ಸಾಕವ್ವ; ಆದರೆ ನವಿಲು ಕುಣಿಯಲು ಸುಂದರವಾದ ಬೆಟ್ಟದ ತಪ್ಪಲೇ ಬೇಕು. ಕೊಕ್ಕರೆ ಈಜಲಿಕ್ಕೆ ಕಿರು ಕೆರೆ ಸಿಕ್ಕರೂ ಸಾಕು, ಅದೇ ಸ್ವರ್ಗವದಕ್ಕೆ! ಆದರೆ ಹಂಸ ಪಕ್ಷಿಗೆ ನಮ್ಮೂರಿನ ಕೆರೆ ಸಾಲದು, ವಿಶಾಲವಾದ ಸರೋವರವೇ ಬೇಕು. ಕಾಗೆ ಕಾಂಗುಡಲಿಕ್ಕೆ ಋತುಬೇಕಿಲ್ಲ; ಕೋಗಿಲೆ ಸರಗೈಯಲಿಕ್ಕೆ ವಸಂತಋತು ಬಂದು, ಮಾಮರಗಳು ತಳಿರಬೇಕು.

ನೊರಜು ಯಾವ ಹೂವಿನ ಮೇಲಾದರೂ ಕುಳಿತು ಆನಂದಿಸುವುದು; ಆದರೆ ದುಂಬಿಗೆ ಮಕರಂದದ ಕೊಡವಾಗಲಿ, ಪರಿಮಳದ ಆಕರ್ಷಣೆಯಾಗಲಿ ಇಲ್ಲದಿದ್ದರೆ ಅದು ಸಮೀಪ ಸಾರದು. ಹಾಗೆಯೇ ಲೌಕಿಕಪುರುಷ ಯಾವನೇ ಇರಲಿ, ಅರಸಾಗಲೀ, ಚಕ್ರವರ್ತಿಯಾಗಲಿ ನನ್ನ ಹೃದಯದ ನವಿಲು ನರ್ತಿ

* ಮ. ವ. ೨೮೫

ಸಲು ಆಲಿಸದ ಹುಲ್ಲು ಮೊರಡಿ; ಭಾವದ ಅರಸಂಚೆ ಈಜಲಾಶಿಸದ ಕಿರುಕೆರೆ; ಮನದ ಕೋಗಿಲೆ ಸಂತಸದಿಂದ ಸರಗೈಯಲಾರದ ವಸಂತೇತರ ಋತು; ವಿವೇಕದ ಭ್ರಮರ ಎಳಸಲಾರದ ಕಾಕಡ ಹೂವು. ಆ ಜಗದಾದಿ ಚೆಲುವ ಚನ್ನನ ಪಟ್ಟದರಸಿ ನಾನು; ಈ ಪುರುಷನ ಕಂಡು, ಪ್ರಲೋಭನೆಗಳಿಗೆ ಮರುಳಾಗಿ, ಆ ನನ್ನ ಎದೆಯರಸನನ್ನು ಮರೆಯಲೇ? ಓಹ್....ಸಾಧ್ಯವಿಲ್ಲ....’ ಮಹಾದೇವಿ ಉದ್ವಿಗ್ನಳಾಗಿ ಹೇಳಿ, ಮತ್ತೆ ಮುಂದುವರಿಸಿದಳು:

‘ಖಂಡಿತಾ—ನಿಮಗೆ ಆ ಸುಖದ ಅರಿವಿಲ್ಲ. ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳಲು ಯಾರೂ ಬಯಸರು. ಚಂದನವಿದ್ದಂತೆ ಸಗಣಿಯನ್ನು ಸವರಿಕೊಳ್ಳಲು ಯಾರೂ ಇಚ್ಛಿಸರು. ಮಾಣಿಕ್ಯದ ದೀಪ ಕೈಲಿರುವಾಗ ಮಿಣುಕು ಹುಳಕ್ಕಾಗಿ ಯಾರೂ ಬಯಸರು.

ಆ ನನ್ನವನ ಚೆಲುವಿನ ಸಾವಿರದಲ್ಲೊಂದು ಅಂಶ ಪಡೆದು ಕಾಮನಾದ. ಆವನ ಸರ್ವಶಕ್ತತ್ವದ ಕೋಟಿಯಲ್ಲೊಂದು ಅಂಶ ಪಡೆದು ಚಕ್ರವರ್ತಿಯಾಗುವನು. ಆವನ ದಶಕೋಟಿ ಸಿರಿಯಲ್ಲಿ ಒಂದಂಶ ಪಡೆದು ಕುಬೇರನಾದ. ಇಂತಹ ಆ ಜಗದಾದಿ ಸಾರ್ವಭೌಮನ ಪ್ರಿಯತಮೆ ನಾನು; ಈ ಕ್ಷುಲ್ಲಕ ಅರಸನನ್ನು ಪ್ರೇಮಿಸಲೇ....? ಛೀ! ನೀವಿನ್ನು ಹೋಗಿರಿ ಶಾರದ....ನನ್ನನ್ನು ಕೆರಳಿಸಬೇಡಿರಿ....’

ಶಾರದೆ, ಕುಮುದೆಯರು ಪೆಚ್ಚಾಗಿ ಕೆಳಗಿಳಿದು ಹೋದರು. ಶೈಲಜೆ, ಮಹಾದೇವಿ ಪರಸ್ಪರ ಅಂತರಂಗವನ್ನು ತೆಗೆದಿಟ್ಟುಕೊಳ್ಳುವಾಗಲೇ ಕೆಳಗಿನಿಂದ ಕೂಗಿದ ಕರೆ ಕೇಳಿಸಿತು. ಮಹಾದೇವಿ ಕೆಳಗಿಳಿದು ತಂದೆಯ ಕಡೆಗೆ ನಡೆದಳು.

* * *

ಅತ್ತ ಕೆಳಗೆ ಓಂಕಾರ-ಶಿವಮೂರ್ತಪ್ಪನ ಮಧ್ಯೆ ಸಂವಾದ ನಡೆಯುತ್ತಿತ್ತು. ಶಿವಮೂರ್ತಪ್ಪ ತಾನಾಗಿ ಸುದ್ದಿ ಎತ್ತಿದ:

‘ಶೆಟ್ಟರೆ, ರಾಜರ ಆಪ್ತಗೆಳೆಯರು ಬಂದಿದ್ದರೆಂದು ಸುದ್ದಿ ಕೇಳಿದೆ. ನನ್ನ ಮಗ ಪೇಟೆಯ ಬೀದಿಗೆ ಬಂದಿದ್ದನಂತೆ; ಕುದುರೆಯನ್ನು ನೋಡಿ, ಬಂದು ಹೇಳಿದ....’

ಓಂಕಾರ ಶೆಟ್ಟಿ ರಾಜನ ಬೇಡಿಕೆಯನ್ನು ತಿಳಿಸಿದ.

‘ಅಬ್ಬಾ! ನೀವು ಪುಣ್ಯವಂತರು ಶೆಟ್ಟರೆ. ನಿಮ್ಮ ಮಗಳ ಸುಕೃತ ಬಹು ದೊಡ್ಡದು. ಎಲ್ಲರಿಗೆ ಬಾ ಅಂದರೆ ಆದೀತೇ?....’ ಊರಗಲ ಬಾಯಿ ತೆಗೆದು ಉದ್ಗರಿಸಿದ ಶಿವಮೂರ್ತಪ್ಪ.

‘ಸಾಕು ಬಿಡಿ, ನೀವೇನೋ ಹೀಗೆ ಹೇಳುತ್ತೀರಿ. ಮುಂದಿನ ಬಟ್ಟೆಯನ್ನು

ತೋರಿಸುತ್ತೀರಿ ಎಂದು ನಂಬಿದ್ದೆ....'

'ಯಾಕೆ ಏನಾಯ್ತು....?'

'ಮತ್ತೇನಾಗಬೇಕು. ಆ ವಿಲಾಸಿರಾಜನ ಪಂಜರಕ್ಕೆ ವಿರಕ್ತಿಯ ಅರಗಿಳಿಯನ್ನು ಕಳಿಸಬೇಕೆ? ಇದು ಸುಕೃತವೇ, ಅಲ್ಲ ನಮ್ಮ ದುರ್ದೈವ....!'

'ಮದುವೆ ಮಾಡಲಾರದ ಆತಂಕ ಏನಿದೆ?....' ಶಿವಮೂರ್ತಪ್ಪ ಅಚ್ಚರಿಯಿಂದ ಕೇಳಿದ. 'ಮದುವೆಯನ್ನೇ ಒಲ್ಲೆ ಎನ್ನುವ ಮಹಾದೇವಿ, ಈ ವಿಲಾಸಿಯನ್ನು, ವಿಧರ್ಮೀಯನನ್ನು ಮದುವೆಯಾಗುವುದುಂಟೇ? ಬಸವಧರ್ಮದ ನಿಷ್ಠಾವಂತ ಅನುಯಾಯಿಗಳಾದ ನಾವು ಭವಿಗೆ ಮಗಳನ್ನು ಕೊಡೋಣವೇ? ಅವನು ಜಾತಿಯಿಂದ ಭವಿ ಎಂದು ಅನ್ನದಿದ್ದರೂ ನೀತಿಯಿಂದ ಭವಿಯೇ ಸರಿ! ಮದುವೆ ಮಾಡಲೇಬೇಕು ಅನ್ನುವುದಾದರೆ ಆದರ್ಶಜೀವಿಯಾದ ಬಡವನೊಬ್ಬನಿಗೆ ಕೊಡುವುದು ಸಾಸಿರದಷ್ಟು ಲೇಸು. ನನ್ನ ಮಗಳು ವಿಲಾಸಿನಿಯಾಗಿ, ಅರಮನೆಯ ಕೆಸರಿನಲ್ಲಿ ಬೀಳುವ ದಾಸಿಯಾಗುವುದು ಇಷ್ಟವಿಲ್ಲ....' ಓಂಕಾರ ಖಂಡತುಂಡವಾಗಿ ಹೇಳಿದ.

'ಪಟ್ಟದ ರಾಣಿಯನ್ನು ಮಾಡುವುದಾಗಿ ವಾಗ್ದಾನ ಮಾಡಿರುವರಂತೆ....'

'ಶರಣರ ಪಾದಧೂಳಿಯಾಗಿ ಬದುಕುವುದಕ್ಕಿಂತ ಪಟ್ಟದರಸಿಯ ಪದವಿ ದೊಡ್ಡದಲ್ಲ ಶಿವಮೂರ್ತಪ್ಪ. ಈ ರಾಜರುಗಳು ಹಲವು ಪುಷ್ಪಗಳಿಗೆ ಹಾತೊರೆಯುವ ದುಂಬಿಗಳಂತೆ; ಇಂಥವರ ಬುದ್ಧಿ ಸ್ಥಿರವಲ್ಲ. ಆಮೇಲೆ ಮಗಳ ಬಾಳು ಉಂಡು, ಬೀಸಿ ಒಗೆದ ಬಾಳೆಯ ಎಲೆಯಂತೆ ಆಗಬಾರದಷ್ಟೆ....'

'ಕಡೆಗೆ ಸಾಯುವ ತನಕ ಅರಮನೆಯ ಸುಖವಾಸ, ಭಕ್ಷ್ಯಭೋಜನ, ಆಳುಕಾಳುಗಳ ಸೇವೆಯಾದರೂ ದೊರಕೀತಲ್ಲವೇ?....' ಶಿವಮೂರ್ತಪ್ಪ ಹೇಳಿದಾಗ ಓಂಕಾರ ಕ್ರೋಧತಪ್ತನಾದ. 'ಇಂತಹ ಕೀಳುಬಯಕೆಗಳ ತೃಪ್ತಿಯೇ ಸರ್ವಸ್ವ ಎನ್ನುವವರೊಡನೆ ಮಾತನಾಡುವುದಾಗಲಿ, ಅವರ ಸಲಹೆ ಕೇಳುವುದಾಗಲೀ ನನ್ನದೇ ಮೂರ್ಖತನ....' ಎಂದು ತಿರಸ್ಕಾರ ತುಂಬಿ ಬಂದು, ಮೌನ ತಾಳಿದ.

'ಹಾವನ್ನು ಅರೆಪೆಟ್ಟುಮಾಡಿ ಇದಿರುಹಾಕಿಕೊಳ್ಳುವುದೂ, ರಾಜನ ಕೋಪದೃಷ್ಟಿಯನ್ನು ಮೈಮೇಲೆ ಹಾಕಿಕೊಳ್ಳುವುದೂ, ಎರಡೂ ಒಂದೇ! ಸಮಸ್ಯೆ ಬರುವ ಮುನ್ನವೇ ಬರದಂತೆ ನೋಡಿಕೊಳ್ಳಬೇಕು. ಎರಗಿದಮೇಲೆ ಮರುಕಪಡಬಾರದು....' ಹಿತೈಷಿಯಂತೆ ಸಲಹೆ ನೀಡಿದ ಶಿವಮೂರ್ತಪ್ಪ.

'ಪ್ರಾಣಕ್ಕಿಂತ ಮಿಗಿಲಾದ ದಂಡನೆ ಯಾವುದೂ ಇಲ್ಲವಷ್ಟೆ! ಈ ದಂಡನೆ ಆತ್ಮನನ್ನು ನೈತಿಕವಾಗಿ ಪತನ ಮಾಡದು....' ನಿರ್ಧಾರದ ಧ್ವನಿಯಲ್ಲಿ ಹೇಳಿದ.

ಶಿವಮೂರ್ತಪ್ಪ ಮೇಲಕ್ಕೇಳುತ್ತ :

'ಶೆಟ್ಟರೆ....ಇನ್ನೂ ನೂರು ಬಾರಿ ಆಲೋಚಿಸಿರಿ. ವಿಪತ್ತಿನೊಡನೆ ತೊಡೆ ತಟ್ಟಿ ಕಾಳಗಕ್ಕೆ ಇಳಿಯದಿರಿ....' ಎಂದು ಹೊರಗೆ ನಡೆದ.

ಅಷ್ಟರಲ್ಲಿ ಶಾರದೆ, ಕುಮುದೆಯರು ಕೆಳಗಿಳಿದು ಹೊರಗೆ ಹೋದುದನ್ನು ಗಮನಿಸಿದ ಓಂಕಾರ, ಮಾಳಿಗೆಯ ಮೇಲಿದ್ದ ಮಗಳನ್ನು ಕರೆದ.

ಶೈಲಜೆಯೊಡನೆ ಕೆಳಗಿಳಿದು ಬಂದಳು ಮಹಾದೇವಿ.

'ಬಾಮ್ಮ, ಮಹಾದೇವಿ ಕುಳಿತುಕೋ....' ವಾತ್ಸಲ್ಯ-ದುಗುಡ ತುಂಬಿದ ಧ್ವನಿಯಲ್ಲಿ ಹೇಳಿದ. ಅವನ ಧ್ವನಿ ಸೂಕ್ಷ್ಮವಾಗಿ ಕಂಪಿಸುತ್ತಿತ್ತು.

'ಅಪ್ಪಾ, ಹೆತ್ತವರಿಗೆ ಅಲಗಾದೆ. ಹೆಣ್ಣಾಗಿ ಹುಟ್ಟಿ ಹಣ್ಣಿನಂತೆ ತಂಪು ಕೊಡುವ ಬದಲು, ಹುಣ್ಣಿನಂತೆ ನೋವು ಕೊಡುತ್ತಿರುವೆ ಎಂದು ನನ್ನ ಹೆತ್ತು ಪಶ್ಚಾತ್ತಾಪಪಡುತ್ತಿರುವಿರಾ?' ದುಃಖದಿಂದ ಭಾರವಾಗಿ ಕೇಳಿದಳು.

'ಶಿವನಾಣೆ ಅಂತಹ ಮಾತನಾಡಬೇಡ ಮಗಳೇ; ತತ್ತ್ವನಿಷ್ಠರಾಗಿ ಬದುಕುವ ಬಗೆಯಲ್ಲಿ ಅಪಾರವಾದ ಆತ್ಮಾನಂದವಿದೆ. ಇಂತಹ ಸುಪುತ್ರಿಯನ್ನು ಪಡೆದುದಕ್ಕೆ ಅಭಿಮಾನಪಡುತ್ತೇನೆ ತಾಯಿ.' ಓಂಕಾರ ಹೇಳಿದಾಗ ಮಹಾದೇವಿಯ ಕಣ್ಣುಗಳು ಹರುಷಜಲದಿಂದ ತೇವಗೊಂಡವು.

ಅಷ್ಟರಲ್ಲಿ ಅನಿರೀಕ್ಷಿತವಾಗಿ ಹೆಜ್ಜೆಯಿರಿಸಿದ ಶಂಕರಶೆಟ್ಟರ ಮಗ ರಾಜಶೇಖರ. ಮಹಾದೇವಿಯ ಹೃದಯ ತಲ್ಲಣಿಸಿತು. ಅವನು ವಿವಾಹವಾಗಲು ಬಯಸಿ ಬೇಡಿದುದು, ತಾನು ನಿರಾಕರಿಸಿದುದು ಕಣ್ಣುಮುಂದೆ ಕಟ್ಟಿದಂತಾಯಿತು. ತನಗೆ ಈ ವಿಪತ್ತು ಎರಗಿದುದಕ್ಕೆ ಅವನು ಆನಂದಿಸಿದನೇನೋ; ಚುಚ್ಚುಮಾತನಾಡಲು ಬಂದನೇನೋ ಎಂದುಕೊಂಡಳು. 'ಮಳೆಯಲ್ಲಿ ತೊಯ್ದವರಿಗೆ ಚಳಿಯೇನು, ಗಾಳಿಯೇನು, ಅಷ್ಟು ಗಟ್ಟಿಯಾಗಲೇಬೇಕು' ಎಂದು ಮನಸ್ಸನ್ನು ಕಲ್ಲು ಮಾಡಿಕೊಂಡಳು.

'ಬಾ....ರಾಜಣ್ಣ....ಮನೆಯಲ್ಲೆಲ್ಲ ಕುಶಲವೇ?' ತನ್ನ ಭಾವನೆಗಳನ್ನು ನಿಗ್ರಹಿಸಿಕೊಂಡು ಓಂಕಾರ ಕೇಳಿದ. ಸಾಂತ್ವನ ನೀಡಲು ಬಂದು, ಮಾಯುತ್ತಲಿರುವ ಗಾಯವನ್ನು ಕೆದಕುವಂತಹ ಸಹಾನುಭೂತಿಪರರ ಸಹವಾಸ ಸಾಕೆನಿಸಿತ್ತು.

'ಇಂದು ಊರಲ್ಲೆಲ್ಲ ಏನೇನೋ ಸುದ್ದಿ ಹಬ್ಬಿದೆ; ಮನಸ್ಸು ತಡೆಯಲಿಲ್ಲ ಬಂದುಬಿಟ್ಟೆ. ಆ ರಾಜನು ವಿವೇಕಹೀನನಂತೆ ತೋರುತ್ತದೆ....ಅವನಿಗೆ ಬುದ್ಧಿ ಕಲಿಸಬೇಕು ಚಿಕ್ಕಪ್ಪ....'

'ಏನು ಮಾಡಬೇಕೆಂದು ತಿಳಿಯದಾಗಿದೆ ರಾಜಣ್ಣ....' ಓಂಕಾರ ಹೇಳಿದ.

'ನಿನ್ನೆ ಮೆರವಣಿಗೆಯಲ್ಲಿ ಕುಳಿತು ತಂಗಿಯ ಮೇಲೆ ಕೆಟ್ಟ ದೃಷ್ಟಿ ಬೀರಿದಾಗಲೇ ನನ್ನ ರಕ್ತವೆಲ್ಲ ಕುದಿದು, ಕ್ರೋಧ ಸ್ಫೋಟಗೊಂಡಿತ್ತು. ಬಹಳ ಕಷ್ಟಪಟ್ಟು ನಿಗ್ರಹಿಸಿಕೊಂಡೆ....'

ರಾಜಶೇಖರನ ಮಾತುಗಳಿಂದ ಮಹಾದೇವಿ ಆಶ್ಚರ್ಯಚಕಿತಳಾದಳು. ಅವನ ಬಾಯಿಯಲ್ಲಿ ಬಂದ 'ತಂಗಿ' ಪದದ ಉಚ್ಚಾರ ಅವಳನ್ನು ಪುಳಕಗೊಳಿಸಿತ್ತು.

'ಈ ಎಲ್ಲ ಒಡವೆ-ವಸ್ತುಗಳ ಕಾಣಿಕೆಯನ್ನು ಕಳಿಸಿರುವನು ನೋಡು....' ಹರಿವಾಣಗಳತ್ತ ಓಂಕಾರ ಕೈ ತೋರಿಸಿದ.

'ಓಹ್, ತುಣುಕು ಕಜ್ಜಾಯಕ್ಕಾಗಿ ಬೆನ್ನು ಹತ್ತುವ ನಾಯಿಯಂತೆ, ಇವನ ಎಂಜಲಿಗೆ ಕೈಯೊಡ್ಡುವವರು, ಮರುಳಾಗುವವರು ನಾವು ಎಂದುಕೊಂಡನೇನೋ ; ತಂಗಿಯನ್ನು ಮುಟ್ಟುವ ಯೋಗ್ಯತೆ ಸಹ ಇಲ್ಲವವನಿಗೆ....' ಕ್ರೋಧತಪ್ತನಾಗಿ ರಾಜಶೇಖರ ನುಡಿದ.

'ನಿಜ....ಆದರೆ ಅವನು ರಾಜ....ಅವನ ಕೈಯಲ್ಲಿ ರಾಜದಂಡ. ಕೋತಿಯ ಕೈಯಲ್ಲಿ ತೀಕ್ಷ್ಣವಾದ ಅಲಗು ಸಿಕ್ಕಿದರೆ, ಮನಸ್ಸಿಗೆ ಬಂದಂತೆ ಅದು ಬೀಸಬಹುದು....'

'ಅವನ ರಾಜದಂಡಕ್ಕಿಂತ ನಮ್ಮ ನೈತಿಕ ಬಲವು ಹೆಚ್ಚು ಶಕ್ತಿಯುತ ಚಿಕ್ಕಪ್ಪ. ಏನೇ ಆಗಲಿ, ನೀವು ಸೋಲಬೇಡಿರಿ. ತಂಗಿಯನ್ನು ಧಾರೆಯೆರೆಯಲು ಯಾವುದೇ ಒತ್ತಾಯಕ್ಕೆ ಮಣಿದು ಒಪ್ಪದಿರಿ. ನಾವೆಲ್ಲ ಈ ತತ್ತ್ವದ ಹೋರಾಟದಲ್ಲಿ ನಿಮಗೆ ಹೆಗಲು ಕೊಡಲು ಸಿದ್ಧ....

ಇದು ವಿಲಾಸ-ವಿರಕ್ತಿಗಳ, ಭೋಗ-ತ್ಯಾಗಗಳ, ರಾಜಶಕ್ತಿ-ದೈವೀಶಕ್ತಿಗಳ ನಡುವಿನ ಹೋರಾಟ ; ಇದರಲ್ಲಿ ಗೆಲ್ಲಲೇಬೇಕು....' ರಾಜಶೇಖರ ಆವೇಶದಿಂದ ಹೇಳಿದ.

'ಓಹ್ ಅಣ್ಣಾ ಎಂತಹ ಗುಣವಂತ....ನೀನು!' ಎಂದುಕೊಂಡ ಮಹಾದೇವಿ ಅಭಿಮಾನದ ದೃಷ್ಟಿಯನ್ನು ಅವನೆಡೆಗೆ ಹರಿಸಿದಳು.

೨೬. ಕ್ರೋಧತಪ್ತಕಾಮಿ

‘ನನ್ನ ರಾಜ್ಯದ ಯಕಃಶ್ಚಿತ ಶೆಟ್ಟಿಗೆ ಇಷ್ಟೊಂದು ಅಹಂಕಾರವೇ? ಅನರ್ಘ್ಯವಾದ ರತ್ನವು ಯಾವುದೇ ಇದ್ದರೂ ಅದು ರಾಜನಿಗೆ ಸಲ್ಲಬೇಕೆಂಬ ಶಾಸ್ತ್ರ ನಿಯಮವಿಲ್ಲವೇ? ಸ್ವತಃ ರಾಜನೇ ಕಳಿಸಿದ ಬೇಡಿಕೆಯನ್ನು, ಉಪಾಯನಗಳನ್ನು ನಿರಾಕರಿಸುವಷ್ಟು ಹಮ್ಮೇ ಆ ತರುಣಿಗೆ ...?’ ಕೌಶಿಕ ಕ್ರೋಧತಪ್ತನಾಗಿ ತನ್ನ ಕೊಠಡಿಯಲ್ಲಿ ಶತಪಥ ಕಾಲನ್ನು ಹಾಕುತ್ತ ಓಡಿಯಾಡ ತೊಡಗಿದ.

‘ನೂರಾರು ತರುಣಿಯರು ಕೈಯಲ್ಲಿ ಮಾಲೆ ಹಿಡಿದು ಆತುರರಾಗಿ ನಿಂತಿದ್ದಾರೆ. ಹೀಗಿದ್ದಾಗ ರಾಜನಾದ ನಾನೇ ಮುಂದಾಗಿ ನಿರೂಪ ಕಳಿಸಿದರೆ ಒಲ್ಲೆ ಎನ್ನುವ ಸೊಕ್ಕೋ.... ?’

‘ಬಹಳ ಸ್ವಾಭಿಮಾನಿ ಇದ್ದಂತೆ ತೋರುವುದು....’ ವಸಂತಕ ಹೇಳಿದ.

‘ಇಂತಹ ಒಣ ಸ್ವಾಭಿಮಾನವನ್ನೆಲ್ಲ ನಾನು ಬಲ್ಲೆ—’ ಬುಸುಗುಡುತ್ತ ನುಡಿದ.

‘ಆದರೆ ಪ್ರಭು ; ಪ್ರಭಾವೀ ವ್ಯಕ್ತಿತ್ವ ಆಕೆಯದು. ಅಪೂರ್ವ ರೂಪ ಒಂದೇ ಅಲ್ಲ, ಅಷ್ಟೇ ಮಟ್ಟದ ಗುಣವೂ ಇದೆ. ಆಕೆಯ ಛಲವು ತತ್ತ್ವನಿಷ್ಠೆಯ ಪ್ರತೀಕ. ಕಂಠವೋ ವೀಣೆಯಷ್ಟು ಮಧುರ. ನಾನು ಹೋದಾಗ ಪೂಜೆಯಲ್ಲಿ ಕುಳಿತು ಹಾಡುತ್ತಿದ್ದಳೇನೋ, ಆ ಗಾಯನದಿಂಚರ ನನ್ನನ್ನು ಮೈಮರೆಸಿತು. ಪೂಜೆಯನ್ನು ಮುಗಿಸಿ ಕೆಳಗಿಳಿದು ಬಂದಾಗ ನಾನು ಎಷ್ಟು ಮಂತ್ರಮುಗ್ಧನಾಗಿದ್ದೆನೆಂದರೆ ಆಕೆಯ ಪಾದಮುಟ್ಟಿ ನಮಸ್ಕಾರ ಮಾಡಬೇಕೆನ್ನಿಸಿತು.... ಆದರೆ ಹೊರಗಡೆ ತೋರಿಸಿಕೊಳ್ಳದೆ ಗಂಭೀರನಾಗಿದ್ದೆ....’ ವಸಂತಕ ಹೇಳಿದ.

‘ಅಂತೂ ಎಲ್ಲರಿಗೂ ಮೋಡಿ ಹಾಕುವ ಕಲೆ ಅವಳದಾಗಿದ್ದಂತೆ ತೋರುವುದು....’ ಕೌಶಿಕನು ಮುಗುಳ್ನಕ್ಕ. ಆಕೆಯ ಹೊಗಳಿಕೆ ತುಂಬ ಪ್ರಿಯವೆನಿಸಿತ್ತು.

‘ಪ್ರಭು....ಇಂತಹವರ ತಂಟೆಗೆ ಹೋಗದೆ ಸುಮ್ಮನಿರುವುದು ಕಡುಲೇಸು. ಆಕೆಯಲ್ಲಿ ಕೇವಲ ಉದ್ಧಟತನವಿದ್ದರೆ ಅದನ್ನು ನಾವು ದಂಡದಿಂದ ದಮನಿಸಬಹುದು. ಒಂದು ರೀತಿಯ ದಿಟ್ಟತನ, ಸ್ವತಂತ್ರ ವಿಚಾರ, ಸಾತ್ವಿಕ ಧೈರ್ಯಗಳು ಮೇಳೈಸಿವೆ. ನನಗನ್ನಿಸುತ್ತೆ—ನಮ್ಮ ಮುಖ್ಯಮಂತ್ರಿ ಮುರಾರಿಯ ಬದಲಿಗೆ ಆಕೆಗೆ ಆ ಪದವಿ ನೀಡಿದರೆ ಇವನಿಗಿಂತ ನೂರುಪಾಲು ಸಮರ್ಥಕ

ವಾಗಿ ನಿರ್ವಹಿಸುವಳು....' ವಸಂತಕ ಸ್ವಚ್ಛಂದದ ನಗೆ ನಕ್ಕ.

ಮುರಾರಿಯನ್ನು ಅವನು ಅಷ್ಟಾಗಿ ಮೆಚ್ಚುತ್ತಿರಲಿಲ್ಲ. ಕಾರಣವೆಂದರೆ ಮುರಾರಿಯ ನರಿಬುದ್ಧಿ, ನಟನೆಗಳು ವಸಂತಕನನ್ನು ಕೆರಳಿಸುತ್ತಿದ್ದವು. ವಸಂತಕ ವಿಕಟಕವಿಯಾಗಿ, ರಸಿಕಮಿತ್ರನಾಗಿ ಕಾರ್ಯನಿರ್ವಹಿಸುತ್ತಿದ್ದರೂ ಅವನ ಹೃದಯವು ಬಹು ನಿರ್ಮಲವಾಗಿತ್ತು. ಇನ್ನೊಬ್ಬರ ಮನಸ್ಸನ್ನು ಅರಿಯುವ ಜಾಣ್ಮೆ, ಗುಣವನ್ನು ಕಂಡಲ್ಲಿ ತಲೆಬಾಗುವ ವಿನಯ, ವಸಂತಕನಲ್ಲಿ ಒಂದಾಗಿದ್ದವು. ಕೌಶಿಕನೂ ಈ ಗುಣಕ್ಕಾಗಿಯೇ ವಸಂತಕನನ್ನು ಆಪ್ತನಂತೆ ಇರಿಸಿಕೊಂಡಿದ್ದ. ವಸಂತಕನು ಎಂದೂ ರಾಜದ್ರೋಹ, ಮಿತ್ರದ್ರೋಹ ಮಾಡುವವನಲ್ಲ ಎಂಬ ವಿಶ್ವಾಸ ಕೌಶಿಕನಿಗಿತ್ತು.

ಆದರೆ ಮುರಾರಿ ಬುದ್ಧಿವಂತ, ಕಠಿಣಪ್ರಸಂಗಗಳಲ್ಲಿ ಮಿದುಳನ್ನು ತ್ವರಿತಗತಿಯಲ್ಲಿ ಓಡಿಸುವವನು; ರಾಜಕಾರಣದಲ್ಲಿ ವಿಚಕ್ಷಣತೆಯಿಂದ ವರ್ತಿಸುವವನು. ಕೌಶಿಕನ ಆಂತರಿಕ ಬದುಕಿಗೆ ಅವನು ಬೇಡವಾದರೂ, ರಾಜ್ಯದ ಕ್ಷೇಮಾಭಿವೃದ್ಧಿಗೆ ಅವನು ಬೇಕಾಗಿದ್ದ. ಹೀಗಾಗಿ ಮುರಾರಿಯ ನಾಟಕೀಯ ವರ್ತನೆ ಕೌಶಿಕನಿಗೆ ಸರಿಬರುತ್ತಿರಲಿಲ್ಲವಾದರೂ ನಾಡಿನ ಹಿತಾಸಕ್ತಿಗಾಗಿ ಸಹಿಸಿಕೊಂಡು, ವರ್ತಿಸುತ್ತಿದ್ದ.

'ಹಾಂ, ಆಕೆ ಅಷ್ಟು ಬುದ್ಧಿವಂತಳೇ....?' ಕೌಶಿಕ ಅಭಿಮಾನದಿಂದ ಕೇಳಿದ.

'ಮಾತೂ ಅಷ್ಟೇ ಮಧುರ. ಆಕೆ ಶಾಂತವಾಗಿ ಮಾತನಾಡುತ್ತಿದ್ದರೆ ಪ್ರಶಾಂತವಾಗಿ ನಿಂತ ಶುಭ್ರ ಸರೋವರದಂತೆ; ಎಲ್ಲರೂ ತಮ್ಮತಮ್ಮ ಅಂತರಾವಲೋಕನ ಮಾಡಲು ತತ್ತ್ವದ ಕನ್ನಡಿ ಹಿಡಿಯುವಳು. ಕೆರಳಿ ಮಾತನಾಡಿದರೆ ತುಂಬಿ ಹರಿಯುವ ಪ್ರವಾಹದಂತೆ ರುದ್ರ ಭೀಕರ, ಆದರೂ ರಮಣೀಯ. ಆವೇಶದಿಂದ ಸಂವಾದಕ್ಕೆ ನಿಂತರೆ ಎತ್ತರದಿಂದ ಧುಮ್ಮಿಕ್ಕುವ ಜಲಪಾತದಂತೆ....ಇನ್ನೂ ಸುಂದರ!....ಅವಳ ಬಾಯಲ್ಲಿ ಬೈಗುಳಗಳೂ ಮುತ್ತುಗಳಂತೆ ಉದುರುವುವು....' ವಸಂತಕ ಹೇಳತೊಡಗಿದ್ದ.

'ಸಾಕು ನಿಲ್ಲಿಸು, ನನ್ನ ಮನಸ್ಸಿನ ಉದ್ವೇಗದ ಜ್ವಾಲೆಗೆ ತುಪ್ಪ ಸುರಿಯಬೇಡ. ನೀನಂತೂ ಮಂಕನಾಗಿ ಬರುವಷ್ಟು ಸಮ್ಮೋಹನಾಸ್ತ್ರ ಬೀರಿದ್ದಾಳೆ. ಬಲು ಚತುರೆ....!' ಅಭಿಮಾನ-ಆನಂದ ಮಿಶ್ರಿತ ನಗೆ ನಕ್ಕ ಕೌಶಿಕ.

'ನನ್ನದೇನೋ ಪಾಡಿ! ಎರಡನೆಯ ನೋಟಕ್ಕೆ, ಮಾತಿಗೆ ಮಂತ್ರಮುಗ್ಧನಾದೆ. ನೀವು ಮೊದಲನೆಯ ನೋಟಕ್ಕೇ ಹುಚ್ಚರಾಗಿದ್ದೀರಿ. 'ಕಾಮಾತುರಾಣಾಂ ನಭಯಂ ನಲಜ್ಜಾ' ಎಂಬಂತೆ, ವಿವೇಕಹೀನರಾಗಿ ನೀವು ಆಡು

ತ್ತಿರುವಾಗ ಆಕೆಯ ಶಕ್ತಿ ಎಷ್ಟಿರಬೇಕು....!' ವ್ಯಂಗ್ಯನಗೆ ನಕ್ಕ ವಸಂತಕ.

'ವಸಂತಕಾ, ಹೂವಿನ ಗುಚ್ಛದ ಮಧ್ಯೆ ಕಲ್ಲನ್ನಿಟ್ಟು ಹೊಡೆಯುತ್ತಿರುವೆ....! ನನಗೇ ವ್ಯಂಗ್ಯದ ಶರಗಳನ್ನು ಎಸೆಯುತ್ತಿರುವೆಯಾ....'

'ತಪ್ಪಾಯಿತು, ಕ್ಷಮಿಸಿ ಪ್ರಭು. ನನ್ನ ವಿನಂತಿಯು ಏನೆಂದರೆ, "ಮಲಗಿ ನಿದ್ರಿಸುವ ಸರ್ಪವನ್ನು ಚುಚ್ಚಿ, ಎಬ್ಬಿಸಿ ಇದಿರುಹಾಕಿಕೊಳ್ಳುವಂತೆ ಆ ಸಾತ್ವಿಕ ಜನರನ್ನು ಕೆರಳಿಸುವುದು. ಆದ್ದರಿಂದ ಈ ವಿಪರೀತದ ಪ್ರಯತ್ನ ಬೇಡ...." ಎಂಬುದಾಗಿದೆ.'

'ಛೀ, ಹೇಡಿ! ಕೊಟ್ಟ ಕಾರ್ಯವನ್ನು ಪೂರೈಸದೆ ವೇದಾಂತ ಹೇಳಲು ಬಂದೆಯಾ....' ಕೌಶಿಕ ಕೆಣಕಿ ಮಾತನಾಡಿದ.

'ದೇವರನ್ನು ನಂಬಿದ ಆ ಶರಣರೊಡನೆ ಸರಸವಾಡುವುದು ಎಂದರೆ—ಕೆನ್ನೆಗೆ ನವೆಯಾಯಿತೆಂದು ಹಾವಿನ ಹೆಡೆಯಿಂದ ಕೆನ್ನೆಯನ್ನು ತುರಿಸಿಕೊಂಡಂತೆ, ಕೂದಲು ಸಿಕ್ಕಾಗಿವೆಯೆಂದು ಉರಿವ ಕೊಳ್ಳಿಯ ತೆಗೆದುಕೊಂಡು ಸಿಕ್ಕು ಬಿಡಿಸಿಕೊಳ್ಳಲು ಯತ್ನಿಸುವಂತೆ, ಹುಲಿಯ ಮೀಸೆಯನ್ನು ಹಿಡಿದು ಉಯ್ಯಾಲೆ ಆಡುವಂತೆ....'

'ಸಾಕು ನಿಲ್ಲಿಸು ಮಿತ್ರಾ ನಿನ್ನ ಗೊಡ್ಡು ಉಪದೇಶವನ್ನು. ಆ ವಿರಕ್ತಳ ಉಪದೇಶ ಕೇಳಿಬಂದು ನಿರ್ವೀರ್ಯನಾಗಿ ಮಾತನಾಡಬೇಡ....' ಕೌಶಿಕ ಅಸಹನೆಯಿಂದ ಸಿಡಿದೆದ್ದು, ನಂತರ ಹೇಳಿದ:

'ನಿನಗೆ ಶಕ್ತಿಯಿದ್ದರೆ ಒಲಿಸು, ಇಲ್ಲವಾದರೆ ರಾಜಾಜ್ಞೆಯ ಬಲದಿಂದ ಹಿಡಿದು ತಾ, ಅಷ್ಟೂ ಅಸಾಧ್ಯವಾದರೆ ಮಂತ್ರಿವರ್ಯ ಮುರಾರಿಗೆ ಹೇಳು; ಅವನು ಚತುರೋಪಾಯಗಳನ್ನು ಪ್ರಯೋಗಿಸುವನು. ನಾನೆಂದೂ ಇಟ್ಟ ಹೆಜ್ಜೆ ಹಿಂತೆಗೆಯೆ. ಅವಳಿಲ್ಲದೆ ನಾನು ಈ ಇಳೆಯಮೇಲೆ ಬದುಕಲಾರೆ. ನನ್ನ ಮನೆ-ಮನಗಳನ್ನು ಅವಳು ಇನಿಯಳಾಗಿ ತುಂಬಲೇಬೇಕು....' ಕೌಶಿಕ ಆವೇಶದಿಂದ ನುಡಿದು ಒಳಕೋಣೆಗೆ ಹೋದಾಗ ವಸಂತಕ ಮೌನವಾಂತು ಕುಳಿತ.

ಈ ವಿಷಯದಲ್ಲಿ ಹಿಂಜರಿದು ರಾಜನ ಅವಕೃಪೆಗೆ ಪಾತ್ರನಾಗುವುದು ಇಷ್ಟವಿರಲಿಲ್ಲ. ಅಥವಾ ಮುರಾರಿಗೆ ವಹಿಸಿಕೊಟ್ಟು, ಶ್ರೇಯಸ್ಸನ್ನು ಅವನಿಗೆ ಬಿಟ್ಟುಕೊಡಲೂ ಸಿದ್ಧನಿರಲಿಲ್ಲ. ಅಲ್ಲದೆ ಎರಡೇ ದಿನಗಳಲ್ಲಿ ಕಳೆಗುಂದಿದ ರಾಜನ ಮುಖವನ್ನು ಕಂಡು ಅವನ ಹೃದಯ ಹಿಂಡಿಹೋಗಿತ್ತು. 'ಈ ಪ್ರಸಂಗದಲ್ಲಲ್ಲದೇ ರಾಜನ ಉಪ್ಪಿನ ಋಣವನ್ನು ಇನ್ನಾವಾಗ ತೀರಿಸುವುದು' ಎಂದುಕೊಂಡ. ನ್ಯಾಯವೋ — ಅನ್ಯಾಯವೋ, ಸರಿಯೋ — ತಪ್ಪೋ,

ಪುಣ್ಯವೋ-ಪಾಪವೋ ಅದನ್ನಾಲೋಚಿಸದೆ ಕರ್ಣನಂತೆ ಒಡೆಯನ ಮಾತನ್ನು ನಡೆಸುವುದೇ ತನ್ನ ಧರ್ಮವೆಂದುಕೊಂಡು, ವಸಂತಕ ತನ್ನ ಮನೆಗೆ ನಡೆದನು.

* * *

ಮಹಾದೇವಿಯ ಮನಸ್ಸು ದುಗುಡಗೊಂಡಿತ್ತು. ಬಾಯಿಯೊಳಗೆ ಬಿರುಸಾದ ಕಡುಬು ತುರುಕಲ್ಪಟ್ಟು ನುಂಗಲಾರದೆ ಒದ್ದಾಡುವ ಎಳೆಯ ಕೂಸಿನಂತೆ ಸಂಕಟಪಡತೊಡಗಿದ್ದಳು. ಆಳವಾದ ಕೊಳ್ಳದಲ್ಲಿ ಸಿಕ್ಕುಬಿದ್ದು ಪರಿತಪಿಸುತ್ತ ನಿಂತವನು, ಬೆಟ್ಟದ ತುದಿಯಿಂದ ಬಂಡೆಯೊಂದು ಉರುಳುತ್ತ ಮೇಲೆ ಬೀಳಲು ಬರುವುದನ್ನು ಕಂಡಾಗ ವಿಹ್ವಲನಾಗುವಂತೆ, ಬಂದೆರಗಿದ ವಿಪತ್ತು ಭಯಂಕರವಾಗಿ ಕಂಡು ಮಹಾದೇವಿ ತಳಮಳಿಸತೊಡಗಿದಳು. ಅದರೊಡನೆ ಲಿಂಗಮ್ಮನು ಒಂದು ಸೂಚನೆಯನ್ನು ಪರಿಹಾರವೆಂಬಂತೆ ನೀಡಿದಳು.

ರಾಜಶೇಖರ ಬಂದು ಸಾಂತ್ವನ ನೀಡಿದುದರಿಂದ ಓಂಕಾರಶೆಟ್ಟಿಗೆ ಎಷ್ಟೋ ಧೈರ್ಯ ಬಂದಿದ್ದಿತು. ಎಲ್ಲರೂ ಬಂದು 'ಅವನು, ಅವನ ಮಗಳು ಮಾಡುತ್ತಿರುವುದು ಅಪರಾಧ, ರಾಜದ್ರೋಹ, ಎಂಬಂತೆ ಮಾತನಾಡತೊಡಗಿದಾಗ ಓಂಕಾರಶೆಟ್ಟಿ ಭ್ರಾಂತನಾಗಿಬಿಟ್ಟಿದ್ದ. ಆದರೆ ರಾಜಶೇಖರ ಓಂಕಾರಶೆಟ್ಟಿಯ ನಿಲುವೆಯನ್ನು ಸಮರ್ಥಿಸಿದಾಗ, ಬಾಯಾರಿಕೆಯಿಂದ ಸಾಯುವವನ ಬಾಯಿಗೆ ನೀರನ್ನು ಹನಿಸಿದಂತಾಗಿತ್ತು. ಗಾಢವಾದ ಕತ್ತಲೆಯಲ್ಲಿ ದಾರಿತಪ್ಪಿ ದಟ್ಟಾರಣ್ಯದಲ್ಲಿ ಸಿಕ್ಕಿ ಪರಿತಪಿಸುತ್ತ ಕೈಕಾಲು ಮನ ದಣಿದವನಿಗೆ, ಮಿಣುಕು ಪ್ರಕಾಶವೊಂದು ದೂರದಲ್ಲಿ ಕಂಡಂತಾಗಿತ್ತು. 'ಅವಿವೇಕಿಗಳು ನೂರು ಜನ ಮೆಚ್ಚಿಕೊಳ್ಳುವುದಕ್ಕಿಂತ ವಿವೇಕಿಯೊಬ್ಬ ಸೈ ಎಂದರೆ ಸಾಕು' ಎಂದು ಸಮಾಧಾನ ತಾಳಿಕೊಂಡ.

ರಾಜಶೇಖರ ಹೊಸ್ತಿಲನ್ನು ದಾಟುತ್ತಿದ್ದಂತೆಯೇ ಓಂಕಾರಶೆಟ್ಟಿಯ ತಡೆದಿಟ್ಟ ಅಭಿಮಾನ ಉಕ್ಕಿ ಹರಿಯಿತು.

'ಮಹಾದೇವಿ....ರಾಜಣ್ಣ ಬಹಳ ವಿವೇಕಿ; ತುಂಬಿದ ಕೊಡದಂತೆ ಸದ್ಗುಣವಂತ! ವಯಸ್ಸಿಗೆ ಮೀರಿದ ವಿಚಾರಶೀಲತೆ, ದಿಟ್ಟತನ ಅಲ್ಲವೇ ?....' ಎಂದು ನುಡಿದ.

'ಹೌದಪ್ಪ....ಉಡುತಡಿಯಲ್ಲಿಯೇ ಇಂತಹ ವಿವೇಕಿಗಳು ಮತ್ತಾರೂ ಇದ್ದಂತೆ ತೋರದು. ಆ ರಾಜನಿಗಿಂತಲೂ ನೂರುಪಟ್ಟು ಘನವಂತ....' ಮಹಾದೇವಿ ಪ್ರತಿಕ್ರಿಯೆ ತೋರಿಸಿದಳು.

'ನನಗೆ ಈ ಕತ್ತಲೆಯಲ್ಲಿ ಮಿಣುಕು ದೀಪದಂತೆ ಒಂದು ಪರಿಹಾರವು ಕಾಣುತ್ತಿದೆ ಹೇಳಲೇ....?' ಲಿಂಗಮ್ಮ ಮಾತು ತೆಗೆದಳು.

'ಅವಶ್ಯವಾಗಿ ಹೇಳು; ಯಾರಿಂದಲಾದರೂ ಪರಿಹಾರ ಸಿಕ್ಕರೆ ಸಾಕು....'

'ಲಗ್ನವಾಗಿ ಮಾಂಗಲ್ಯಧಾರಣೆಯಾದಮೇಲೆ ರಾಜನಿರಲಿ, ದೇವನೂ ಸಹ ಕಣ್ಣು ಹಾಕನು. ರಾಜಶೇಖರ ಒಪ್ಪಿದರೆ ಹೆಚ್ಚು ಸುದ್ದಿಯನ್ನು ಮಾಡದೆ ಶೀಘ್ರವಾಗಿ ಇಂದೇ ಮದುವೆ ಮುಗಿಸಿಬಿಟ್ಟು, ನಾಳೆ ವಸಂತಕ ಬಂದಾಗ ಗೃಹಿಣಿಯಾದ ಮಗಳನ್ನು ತೋರಿಸಿದರೆ....! ಅವರ ಮನೆಯವರೂ ಒಪ್ಪ ಬಹುದು; ಹೇಗಿದ್ದರೂ ಈಕೆಗೂ ಅವನ ಬಗ್ಗೆ ಪ್ರೇಮವಿದೆ....' ಲಿಂಗಮ್ಮ ಮಾತು ಮುಗಿಸಿದಾಗ ವಾತಾವರಣ ಮತ್ತೆ ಗಂಭೀರವಾಯಿತು.

'ಚೆನ್ನಾಗಿದೆ ನಿನ್ನ ಸಲಹೆ.... ಹುಲಿಯ ಬಾಯಿಗಂಜಿ ಹುತ್ತವನ್ನು ಹೊಗುವಂತೆ, ಹುತ್ತಕ್ಕಂಜಿ ಕೊಳ್ಳಕ್ಕಿಳಿಯುವಂತೆ, ರಾಜನ ಮೋಹದ ಜಾಲವನ್ನು ತಪ್ಪಿಸಿಕೊಳ್ಳಹೋಗಿ, ಮದುವೆಯೆಂಬ ಸಿಂಹದ ಗವಿಯಲ್ಲಿ ಪ್ರವೇಶಿಸುವಂತಿದೆ. ಅದು ಕಬ್ಬಿಣದ ಕೋಳವಾದರೆ, ಈ ಬಂಧನವು ಬಂಗಾರದ ಸರಪಳಿ....' ಮಹಾದೇವಿ ಮರು ನುಡಿದಳು.

'ಅವನ ಬಗ್ಗೆ ಎಂತಹ ಮೆಚ್ಚುಗೆಯ ಮಾತುಗಳನ್ನಾಡಿದೆ....' ಲಿಂಗಮ್ಮ ಅಚ್ಚರಿಯಿಂದ ಕೇಳಿದಳು.

'ಅವು ಅಭಿಮಾನದ ಸಂಕೇತವೇ ವಿನಾ ಪ್ರೇಮದ ಸಂಕೇತವಲ್ಲ. ಅಲ್ಲಿ ಅಣ್ಣನ ಗುಣವಂತಿಕೆಯನ್ನು ಕಂಡು ತಲೆದೂಗುವ ಭ್ರಾತೃಪ್ರೇಮವಿದೆಯೇ ಹೊರತು, ಅವನಿಗೆ ಒಲಿದ ಪ್ರಣಯಿನಿಯ ಭಾವವಿಲ್ಲ....'

'ನೋಡವ್ವಾ....ಯಾರಿಗೂ ಧಕ್ಕೆಯಾಗದೆ, ಎಲ್ಲರೂ ನೆಮ್ಮದಿಯಾಗಿರ ಬಹುದಾದ ಮಾರ್ಗ ಇದೊಂದೇ....' ಲಿಂಗಮ್ಮ ಹೇಳಿದಳು. ಮಹಾದೇವಿಯು ತಂದೆಯನ್ನು ಸಮೀಪಿಸಿ ಆವೇಶದಿಂದ ನುಡಿದಳು:

'ಅಪ್ಪಾ, ನನ್ನ ತನುಮನ ಕರಣಗಳೆಲ್ಲ ದೇವನಿಗಾಗಿ ಮೀಸಲಾಗಿವೆ. ಲೌಕಿಕ ಪುರುಷನು, ಜನನ-ಮರಣ-ವಿಕಾರಗಳಿಗೆ ಈಡಾದವನು ಎಷ್ಟೇ ಸುಂದರನಿರಲಿ, ಎಷ್ಟೇ ಸದ್ಗುಣಿಯಿರಲಿ ಅವನನ್ನು ನಾನೊಲ್ಲೆ; ನನಗೆ ಸಂಪೂರ್ಣನಾದ ಪರಮಾತ್ಮನಷ್ಟೆ ಪತಿಯಾಗಿ ಬೇಕು....'

'ಈ ಮಾರ್ಗ ಎಷ್ಟು ಕಷ್ಟದಾಯಕ ಎಂಬುದನ್ನು ಇನ್ನೂ ಅರಿತಿಲ್ಲವೇ ಮಹಾದೇವಿ. ಬದುಕಿನಿಂದ ಪಾಠ ಕಲಿಯುವುದು ಜಾಣರ ಲಕ್ಷಣ. ಇದೀಗ ದಂಡೆಯನ್ನು ದಾಟಿ ಕಾಲಿಡುತ್ತಿದ್ದಂತೆಯೇ ಈ ವಿರಕ್ತ ಜೀವನದ ನದಿ ಇಷ್ಟು ಆಳವಾದರೆ, ನಟ್ಟನಡುವೆ ಎಷ್ಟು ಆಳವಿರಬಹುದು....!'

'ಅಪ್ಪಾ, ಈಜುವ ಕಲೆಯಿದ್ದು, ದಾಟುವ ಶಕ್ತಿಯಿದ್ದವರಿಗೆ ಆಳವು ಮಹತ್ವದ್ದಲ್ಲ. ಆದರೆ ಅಪ್ಪಾ, ಈ ಸಮಾಜವು ವಿಲಾಸಿಗಳಿಗೆ, ದುರಾಚಾರಿ

ಗಳಿಗೆ, ದುರ್ಮತಿಗಳಿಗೆ ಎಲ್ಲರಿಗೆ ಅವಕಾಶ ನೀಡಿದೆಯಂತೆ, ನನ್ನಂತಹ ವಿರಾಗಿಣಿಗೆ ಬಾಳಲವಕಾಶ ನೀಡಲೊಲ್ಲದು. ಸದಾಚಾರಿಗಳು ಬಾಳಲು ಅಯೋಗ್ಯವಾದ ಇಂತಹ ಪ್ರಪಂಚದಲ್ಲಿ ಬದುಕಬೇಕೇಕೆ? ಇಲ್ಲಿ ಬೆಳೆಗೆ ಮಹತ್ವವಿಲ್ಲ, ಕಳೆಗೇ ಮಹತ್ವ. ನನ್ನ ಮದುವೆಯ ಆಲೋಚನೆಮಾಡುವ ಬದಲು ಈ ನನ್ನ ಶರೀರವನ್ನು ಕಡಿದು ತುಂಡುತುಂಡು ಮಾಡಿ ನಾಯಿ, ಕಾಗೆಗಳಿಗಾದರೂ ಎಸೆದುಬಿಡಬಾರದೆ? ಅದರಿಂದ ಕಳಂಕಿತಳಾಗುವುದೂ ತಪ್ಪುವುದು, ಲೌಕಿಕರ ಕಾಟವೂ ತಪ್ಪುವುದು....' ದುಃಖವು ತಡೆಯಲಸಾಧ್ಯವಾಗಿ, ಮಹಾದೇವಿಯನ್ನು ಹತಾಶಳನ್ನಾಗಿ ಮಾಡಿತು. ತನ್ನ ಮುಖವನ್ನು ಮೇಲಕ್ಕೆತ್ತದೆ ಸರಕ್ಕನೆ ಹಿಂದಕ್ಕೆ ತಿರುಗಿ ಮಹಡಿಯನ್ನೇರಿದಳು.

'ಲಿಂಗಾ....ಈ ವಿಷಯವನ್ನು ಕೆದಕಬೇಡ; ಉರಿ ಬರಲಿ, ಸಿರಿ ಬರಲಿ, ಸುಖವೇ ಬರಲಿ, ಸಾವೇ ಬರಲಿ ನಮ್ಮ ಹೋರಾಟದಲ್ಲಿ ಹಿಂದೆ ಸರಿಯುವುದು ಬೇಡ. ನಮ್ಮ ಮಗಳನ್ನು ವಿರಾಗಿಣಿಯಾಗಿ ಉಳಿಸಿಕೊಂಡು, ಜಗದೊಡೆಯನ ಮೀಸಲು ಸತಿಯನ್ನಾಗಿ ಮಾಡಲು ಯಾವ ತ್ಯಾಗಕ್ಕೆ ಬೇಕಾದರೂ ಸಿದ್ಧರಾಗೋಣ....' ಓಂಕಾರ ದೃಢಧ್ವನಿಯಲ್ಲಿ ನುಡಿದನು.

* * *

ಮಹಾದೇವಿ ಭ್ರಮಿತಳಂತೆ ದಿಙ್ಮೂಢಳಾಗಿದ್ದಳು. 'ನಾಳೆಯ ಬೆಳಗ್ಗೆ ಎಂಬುದು ಬರದೆ ಇಂದು ಹಾಗೆಯೇ ಶಾಶ್ವತವಾಗಿ ಉಳಿಯಬಾರದೆ!' ಎಂದುಕೊಳ್ಳುವಳು. ತಾಯಿಯಿಂದ ತಪ್ಪಿಸಿಕೊಂಡ ಮಗುವು ಸಂತೆಯ ಮಧ್ಯದಲ್ಲಿ ನಿಂತು ಅಳುವಂತಾಗಿತ್ತು ಅವಳ ಪರಿ.

'ಇಂತಹ ಕಷ್ಟಕೋಟಲೆಯಲ್ಲಿ ಬೇಯುವುದಕ್ಕಿಂತ ಸಾಯುವುದು ಮೇಲು' ಎಂದು ಒಳಮನವೊಂದು ಹೇಳುತ್ತಿತ್ತು.

'ಆತ್ಮಹತ್ಯೆ ಮಾಡಿಕೊಂಡು ಈ ಅನಿಷ್ಟ ಕಾಯವನ್ನು ವಿಸರ್ಜಿಸಿ, ಇನ್ನೊಂದು ಜನ್ಮವನ್ನು ಪಡೆದರೆ ಆಗಲಾದರೂ ನಿರಾತಂಕವಾಗಿ ದೇವನನ್ನು ಕೂಡಬಹುದು....' ದೌರ್ಬಲ್ಯವು ಒಳಮನಕ್ಕೆ ಪುಷ್ಟಿಕೊಡುತ್ತಿತ್ತು.

'ಆದರೆ....ಸತ್ತು ಏನನ್ನು ಸಾಧಿಸಬಲ್ಲೆ? ಪ್ರಭುದೇವರು ಹೇಳುವುದಿಲ್ಲವೇ, 'ಕೊಟ್ಟ ಕುದುರೆಯ ಏರಲರಿಯದೆ ಬೇರೊಂದು ಕುದುರೆಯ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ' ಎಂದು. ಎಂತಹ ಕುದುರೆಯನ್ನು ಕೊಟ್ಟರೇನಂತೆ, ಅದನ್ನು ಪಳಗಿಸಿಕೊಂಡು ಬಳಸಿಕೊಳ್ಳುವವನೇ ಧೀರ. ಹಾಗೆಯೇ ದೇವನು ಕೊಟ್ಟಿರುವ ಈ ಜನ್ಮವನ್ನು ಗುರಿಸಾಧನೆಗೆ ಬಳಸಿಕೊಳ್ಳುವ ಯೋಗ್ಯತೆ ಇಲ್ಲದೆ, ಇನ್ನೊಂದು ಜನ್ಮವನ್ನು ಬಯಸುವ ಹೇಡಿ

ಗಳಿಗೆ ಪರಮಾರ್ಥ ಪಥ ಸಾಧ್ಯವಿಲ್ಲ....' ವಿವೇಕವು ಚುಚ್ಚಿ ಹೇಳಿದಂತಾಯಿತು.

'ಇಲ್ಲ....ಆತ್ಮಹತ್ಯೆ ಮಾಡಿಕೊಳ್ಳುವ ಹೇಡಿ ನಾನಲ್ಲ....' ಮಹಾದೇವಿಯ ನಿರ್ಧಾರ ವಿವೇಕದ ಕೆಳೆತನವನ್ನೇ ಬಯಸಿತು.

'ಇಲ್ಲಿಂದ ತಪ್ಪಿಸಿಕೊಂಡು ಹೊರಟುಹೋಗಲೇ ? ಯಾರಿಗೂ ಕಾಣದಂತೆ ಹೊರಟುಹೋದರೆ ತಾಯಿ-ತಂದೆಯರ ಕೊರಳಿಗೆ ಸಮೀಪಿಸಿರುವ ಉರುಳು, ನನ್ನನ್ನು ಹೆದರಿಸುವ ಕಂಟಕವು ದೂರ ಸರಿಯುವುದಷ್ಟೆ....' ಎಂದು ಮನಸ್ಸು ಆಲೋಚಿಸತೊಡಗಿದಾಗ ಬುದ್ಧಿ ಅದನ್ನು ಅನುಮೋದಿಸಿತು.

ಮಹಾದೇವಿ ಸ್ತಬ್ಧವಾಗಿ ಆಲಿಸಿದಳು. ಮನೆಯಲ್ಲಿನ ದೀಪಗಳು ಆರಿದ್ದವು. ಬೆಳುದಿಂಗಳ ಬೆಳಗು ಕಿಟಕಿಯಲ್ಲಿ ತೂರಿ ಒಳಗೆ ಹರಡಿತ್ತು. ಬಾಗಿಲನ್ನು ಸರಿಸಿದಾಗ ಗಿರಿಜಾಂಬೆ ಬಾಗಿಲ ಬಳಿ ನಿದ್ರಿಸುತ್ತಿದ್ದಳು.

'ಓಹ್....ನಾನು ಏನಾದರೂ ಮಾಡಿಕೊಂಡೇನು ಎಂದು ಅಪ್ಪನಿಗೆ ಭಯವೇನೋ ! ಕಾಯಲಿಕ್ಕೆ ಗಿರಿಜಕ್ಕನನ್ನು ಕೂಡಿಸಿದ್ದಾಳೆ....ಆದರೆ ಈಕೆ ನಿದ್ರೆಯೆಂಬ ಮಾಯೆಯ ತೋಳ್ತೆಕ್ಕೆಯಲ್ಲಿ ಮೈಮರೆತು ಒರಗಿದ್ದಾಳೆ....' ಮಹಾದೇವಿಗೆ ನಗೆ ಬಂದಿತು.

ಒಂದೇ ಒಂದು ಸೀರೆಯನ್ನು, ವಿಭೂತಿಯ ಒಂದು ಉಂಡೆಯನ್ನು ಸುತ್ತಿಕೊಂಡು ಕಂಕುಳಲ್ಲಿಕ್ಕಿಕೊಂಡು ಗಿರಿಜಾಂಬೆಗೆ ಎಚ್ಚರವಾಗದಂತೆ ನಡೆದಳು. ಮಾಳಿಗೆಯ ಮುಂಬಾಗಿಲಲ್ಲಿ ನಿಂತು ಬೀದಿಯನ್ನು ದೃಷ್ಟಿಸಿದಾಗ ರಾಜನ ಪಟುಭಟರು ಆಗೊಮ್ಮೆ ಈಗೊಮ್ಮೆ ಸುಳಿಯುತ್ತಿದ್ದುದನ್ನು ಕಂಡಳು.

'ಹಾಂ....ಅವನೂ ಕಾವಲಿರಿಸಿರುವನೇ ? ಸರಿ, ಹಿತ್ತಿಲ ಬಾಗಿಲನ್ನು ತೆರೆದರೆ ಕೈದೋಟ ; ಅದು ಕೊನೆಗೊಳ್ಳುವುದು ಹಿಂದಿನ ಓಣಿಯಲ್ಲಿ. ಅಲ್ಲಿಳಿದು ಪಾರಾಗಿಬಿಡಬಹುದು. ನಾನು ಬರಲೆಂದೇ ಇರಬೇಕು, ಚನ್ನಮಲ್ಲಿಕಾರ್ಜುನನು ಚಂದ್ರನೆಂಬ ದೀಪವನ್ನು ಹಿಡಿದು, ಜ್ಯೋತ್ಸ್ನೆಯನ್ನು ಚೆಲ್ಲಿ ಸ್ವಾಗತಿಸುತ್ತಿರುವನು....' ಸದ್ದಾಗದಂತೆ ಮೆಟ್ಟಲಿಳಿದು ಬಂದಳು.

ಹೆತ್ತವರನ್ನು, ತೌರುಮನೆಯನ್ನು, ಹುಟ್ಟಿದ ಊರನ್ನು ಬಿಡಲು ದುಃಖ ತುಂಬಿ ಬಂದಿತು. ಮಾಗೇರಿಸಿದರೆ ಶಬ್ದವಾದೀತೆಂದು ಉಸಿರನ್ನು ಬಿಗಿಹಿಡಿದಳು. ಉದುರಿ ಬೀಳುವ ಹನಿಗಳಿಗೆ ಸ್ವಾತಂತ್ರ್ಯತೆ ನೀಡಿದಳು. ತನ್ನಲ್ಲಿನ್ನೂ ವ್ಯಾಮೋಹದ ತಂತು ಕಡಿದಿಲ್ಲ, ಹುಟ್ಟಿದ ನೆಲೆಯ ತೃಷ್ಣೆ ಬಿಟ್ಟಿಲ್ಲವೆನಿಸಿ ನಾಚಿಕೆಯಾಯಿತು.

ಮನಸ್ಸನ್ನು ಬಿಗಿಹಿಡಿದು, ಹಿಂದಿನ ಬಾಗಿಲ ಅಗಳಿಯನ್ನು ಸದ್ದಾಗದಂತೆ

ತೆರೆಯಲು ಪ್ರಯತ್ನಿಸಿದಳು. ಆಶ್ಚರ್ಯವೆಂಬಂತೆ ಅದು ಸ್ವಲ್ಪ ಎಳೆಯುತ್ತಲೇ ತಾನಾಗಿ ತೆರೆಯಿತು.

'ಓಹೋ....ಬಾಗಿಲಿನ ಅಗಳಿ ಹಾಕಲು ಮರೆತುಬಿಟ್ಟಿದ್ದಾರೆ....' ಎಂದುಕೊಂಡು ಹೊರಗೆ ಕಾಲಿರಿಸಿ, ಬಾಗಿಲನ್ನು ಮತ್ತೆ ಎಳೆದುಕೊಂಡಳು. ಸದ್ಯ ಪಾರಾದೆ ಎಂದು ತ್ವರಿತಗತಿಯಲ್ಲಿ ಹೆಜ್ಜೆ ಇರಿಸಿದಳು. ನಾಲ್ಕು ಗೋಡೆಗಳ ಪ್ರಪಂಚದ ಹೊರಗೆ ಕಾಲಿಡದ ತಾನು ಒಂಟಿಯಾಗಿ ಜಗತ್ತನ್ನು ಎದುರಿಸ ಹೊರಟಿರುವ ಸಾಹಸಕ್ಕೆ ಅಚ್ಚರಿ ಎನಿಸಿತು.

ಕೈತೋಟದ ಹಿಂದಿನ ಬಾಗಿಲಿಗೆ ಕೇವಲ ನಾಲ್ಕು ಹೆಜ್ಜೆಯಷ್ಟು ಇರಬೇಕು. ಅಷ್ಟರಲ್ಲಿ ಯಾರೋ ಕೈಯನ್ನು ಹಿಡಿದಂತಾಗಿ ಎದೆ ಝಲ್ಲೆಂದಿತು. ತಲೆ ಗರಗರನೆ ಸುತ್ತತೊಡಗಿತು. ನಿಂತುಕೊಂಡ ಬೆಳ್ಳನೆಯ ಪುರುಷಾಕೃತಿ! ಆ ಭಾಗದಲ್ಲಿ ಗಿಡಗಳ ನೆರಳು ದಟ್ಟವಾಗಿದ್ದು ಮುಖವು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಜಲಜಲನೆ ಮೈ ಬೆವರಿತು.

'ಯಾರದು....?' ಒಣಗಿದ ತುಟಿಯನ್ನು ಸವರಿಕೊಂಡು ಪ್ರಶ್ನಿಸಿದಳು.

'ಮಾದೇವಿ....ಹೀಗೇಕಮ್ಮ ಮಾಡಿದೆ....?' ಓಂಕಾರನ ಧ್ವನಿ.

'ಅಪ್ಪಾ....ನೀನು!' ಆಶ್ಚರ್ಯ, ಸಮಾಧಾನ, ನಾಚಿಕೆ ಏಕಕಾಲಕ್ಕೆ ಸಮನಿಸಿದವು.

'ಹೌದು ಮಗಳೇ....ರಾತ್ರಿ ನಿದ್ದೆ ಬರಲಿಲ್ಲ....ಒಬ್ಬನೇ ಬಂದು ಬಿಲ್ವ ವೃಕ್ಷದ ಕಟ್ಟೆಗೊರಗಿ ಕುಳಿತಿದ್ದೆ. ಕಣ್ಣುಮುಚ್ಚಿಕೊಂಡು ಕುಳಿತಿದ್ದ ನಾನು ಎಲೆಗಳ ಸರಿದಾಟದ ಶಬ್ದವಾಯಿತೆಂದು ಕಣ್ತೆರೆದು ನೋಡಿದಾಗ ಸ್ವಲ್ಪ ದೂರದಲ್ಲಿ ಬಿಳಿಯ ಆಕೃತಿ ಹೋಗುವುದನ್ನು ಕಂಡೆ. ಮೊದಲು ದಿಗಿಲಾದರೂ, ನಂತರ ಸಂಶಯ ಬಂದು ಹಿಂಬಾಲಿಸಿದೆನವ್ವಾ....ಏಕಮ್ಮಾ ಕಂದಾ....ಇಂತಹ ಪ್ರಯತ್ನ....?' ನೋವು ತುಂಬಿದ ದನಿಯಲ್ಲಿ ಓಂಕಾರ ಕೇಳಿದ.

'ಅಪ್ಪಾ....ನನ್ನ ಕೈಬಿಡಪ್ಪ; ವಿಶಾಲವಾದ ಜಗತ್ತಿನಲ್ಲಿ ಪ್ರವೇಶಿಸಿ ಗುರಿ ಮುಟ್ಟಲೆತ್ನಿಸುವೆ. ನಿಮ್ಮ ಬಾಳಿನಲ್ಲಿ ನಾನು ಎಡರಾಗಿ ಬಂದಿರುವೆ; ಹೂ ಮಾಲೆಯಾಗಿ ಕೀರ್ತಿತರುವ ಬದಲು ಹಾವಿನ ಹಾರವಾಗಿ ವಿಘ್ನಗಳನ್ನು ತಂದಿರುವೆ. ನನ್ನಿಂದಾಗಿ ನಿನಗೂ—ಅವ್ವನಿಗೂ ಈ ಇಳಿವಯಸ್ಸಿನಲ್ಲಿ ಎಷ್ಟು ಕಷ್ಟ. ನಾನೆಲ್ಲಾದರೂ ಹೋದರೆ ಆ ಗೂಬೆದೃಷ್ಟಿಯನ್ನು ಹಿಂತೆಗೆದುಕೊಳ್ಳುವರು.'

'ಬೇಡ ಕಂದಾ; ನೀನಿಲ್ಲದ ಬಾಳು ಬಂಜರ ಬೀಳು; ಬರುವ ಎಡರುಗಳು ಬರಲಿ, ಒಟ್ಟಾಗಿ ಬದುಕುವಾ, ಒಟ್ಟಾಗಿ ಸಾಯುವ....' ಓಂಕಾರ ಮಗಳ ನೆತ್ತಿಯನ್ನು ವಾತ್ಸಲ್ಯದಿಂದ ಸವರಿ ತನ್ನ ಎದೆಗೆ ಒರಗಿಸಿಕೊಂಡ.

ಮಹಾದೇವಿಯ ತಡೆದಿಟ್ಟ ದುಃಖ, ಅಷ್ಟೇ ಸತ್ವಯುತವಾಗಿ ಸಿಡಿಯಿತು. ಬಿಕ್ಕಿಬಿಕ್ಕಿ ಅಳತೊಡಗಿದಳು, ತಂದೆಯ ಎದೆಗೊರಗಿ. ಓಂಕಾರನ ನಿರ್ಲಿಪ್ತ ಗಂಡೆದೆಯೂ ಕರಗಿ ಬಿಸಿ ಕಣ್ಣೀರ ಮೂಲಕ ಹರಿಯತೊಡಗಿತ್ತು. ಗಂಡಸಾದ ತಾನು ದುಃಖವನ್ನು ತೋರಿಸಿಕೊಳ್ಳಬಾರದು ಎಂದು ಎಷ್ಟೇ ಪ್ರಯತ್ನಿಸಿದರೂ, ಹದುಳಿಗ ಹೃದಯ ಹನಿಗಳನ್ನು ಹರಿಸಿತು. ಅವನ ಕಣ್ಣಿನಿಂದ ಜಾರಿದ ಬಿಸಿ ಹನಿಗಳು ಮಹಾದೇವಿಯ ದಟ್ಟ ಕೂದಲ ಪದರನ್ನು ದಾಟಿ, ಚರ್ಮವನ್ನು ಸ್ಪರ್ಶಿಸಿದಾಗ ಅವಳಿಗೆ ಎಚ್ಚರವಾಯಿತು.

'ಅಪ್ಪಾ....ನೀನೂ ಅಳುತ್ತಿರುವೆಯಾ....?' ಮೆಲ್ಲನೆ ಅಂದಳು.

'ಅಹುದಮ್ಮಾ....ನಾನು ಮನುಷ್ಯನಲ್ಲವೇ ? ನನಗೂ ಹೃದಯವಿಲ್ಲವೆ?' ಮತ್ತೆ ನೀರವ ಮೌನ. ಕಡೆಯ ಜಾವದ ಕೋಳಿ ಕೂಗಿದಾಗ ಮಹಾದೇವಿಗೆ ಬಹಿಪ್ರ್ರಜ್ಞೆ ಮೂಡಿ, ದೀರ್ಘ ನಿಟ್ಟುಸಿರಿಟ್ಟು ಮೌನವಾಗಿ ಒಳಗೆ ನಡೆದಳು.

೨೭. ಕಾಡಾರಣ್ಯದಲ್ಲಿ ಕಾಲುದಾರಿ

ಮಹಾದೇವಿ ಪೂಜೆಗೆ ಕುಳಿತರೂ ಸಮಾಧಾನವಿಲ್ಲ. ಗಳಿಗೆಗಳಿಗೆಗೂ ಭೀತಿ ವೃದ್ಧಿಯಾಗುತ್ತಿದೆ. ಹಾವಿನ ಬಾಯೊಳಗೆ ಸಿಕ್ಕಿಬಿದ್ದ ಕಪ್ಪೆಯಂತೆ ಒದ್ದಾಡ ತೊಡಗಿದ್ದಳು. ವಸಂತಕ ಮರಳಿ ಬರುವ ಕ್ಷಣವು ಸಮೀಪಿಸುತ್ತಿದ್ದಂತೆಯೇ ತನ್ನ ದುಃಖವನ್ನು ಚನ್ನಮಲ್ಲಿಕಾರ್ಜುನನಲ್ಲಿ ತೋಡಿಕೊಳ್ಳತೊಡಗಿದಳು.

> ಹಿಂದಣ ಹಳ್ಳ, ಮುಂದಣ ತೊರೆ
> ಸಲ್ಲುವ ಪರಿಯೆಂತು ಹೇಳಾ!
> ಹಿಂದಣ ಕೆರೆ ಮುಂದಣ ಬಲೆ
> ಹಮಳವಿನ್ನೆಲ್ಲಿಯದು ಹೇಳಾ!
> ನೀನಿಕ್ಕಿದ ಮಾಯೆ ಕೊಲುತಿಪ್ಪುದು
> ಕಾಯಯ್ಯ, ಕಾಯಯ್ಯ, ಚನ್ನಮಲ್ಲಿಕಾರ್ಜುನಾ!*

ಎಂತಹ ಮರ್ಮಭೇದಕ ಸ್ಥಿತಿಯಲ್ಲಿ ನನ್ನನ್ನು ನಿಲ್ಲಿಸಿರುವೆ ದೇವಾ. ಹಿಂದಕ್ಕೆ ಹೆಜ್ಜೆ ಇಟ್ಟರೆ ಹಳ್ಳ, ಮುಂದೆ ಹೆಜ್ಜೆ ಇಟ್ಟರೆ ಇನ್ನೂ ವಿಸ್ತಾರವಾದ ತೊರೆ; ಯಾವ ದಡವನ್ನೂ ಮುಟ್ಟಲಾರೆ. ಒಂದು ಕಡೆ ಕೆರೆ, ಇನ್ನೊತ್ತಡೆ ಬಲೆ, ಹೇಗೆ ಪಾರಾಗಲಿ? ಮಾಯಾಪಂಜರದಲ್ಲಿ ಕೆಡುಹುವ ನಿನ್ನ ಪ್ರಯತ್ನ ಇನ್ನು ಸಾಕು. ತಂದೆ....ಮೇಲಿನಿಂದ ಸಹಾಯವನ್ನು ಕಳಿಸಿ ಎತ್ತಿಕೋ....'

ಆಸೆ-ನಿರಾಸೆಗಳ ಉಯ್ಯಾಲೆಯಲ್ಲಿ ತೂಗುವಾಗಲೇ ಗುರುಲಿಂಗದೇವರ ನೆನಪಾಯಿತು.

'ನಿನ್ನ ಮುಂದೆ ಯಾವ ದುಃಖ ತೋಡಿಕೊಂಡರೂ ಅಷ್ಟೆ; ಕಾರುಣ್ಯ ರಹಿತ ವರ್ತನೆ ನಿನ್ನದು. ಜೀವಂತ ದೇವರಾದ ಗುರುಗಳ ಮುಂದೆ ತೋಡಿ ಕೊಂಡರೆ ಮುಂದಣ ಪಥವನ್ನಾದರೂ ತೋರಬಹುದು.' ಪೂಜೆಯನ್ನು ಮುಗಿಸಿ ಮೇಲೆದ್ದು ತಂದೆಯ ಬಳಿಗೆ ಹೋದಳು.

'ಅಪ್ಪಾ, ಮಠಕ್ಕೆ ಗುರುಗಳ ಬಳಿಗೆ ಹೋಗಿಬರುತ್ತೇನೆ. ಅವರೇನಾದರೂ ಬೆಳಕು ತೋರಿಸಬಹುದು....'

'ಆಗಲಿ ಮಗಳೆ, ಮುಂದಿನ ಬೀದಿಯಲ್ಲಿ ಕಾವಲುಗಾರರು ಇದ್ದಂತೆ ತೋರುವುದು. ಹಿಂದಿನ ಬಾಗಿಲಲ್ಲಿ ಹೋಗು; ಒಬ್ಬಳೇ ಹೋಗದಿರು. ಇನ್ನೇನಾದರೂ ಮಾರ್ಗದರ್ಶನ ಸಿಗಬಹುದಾಗಿದ್ದರೆ ಅವರಿಂದ ಮಾತ್ರವಷ್ಟೇ.

* ಮ. ವ. ೧೨

'ಆಗಲಿ ಅಪ್ಪ, ಶೈಲಜೆಯನ್ನು ಸಂಗಡ ಕರೆದೊಯ್ಯುವೆ....'

ಶೈಲಜೆಯೊಡನೆ ಮಹಾದೇವಿ ಮಠದ ಕಡೆಗೆ ನಡೆದಳು. ರಾಜಮಾರ್ಗ ವನ್ನು ತಪ್ಪಿಸಿ ಸುತ್ತುಹಾದಿಯನ್ನು ತುಳಿಯುತ್ತ ಮಠಕ್ಕೆ ಬಂದಾಗ ಗುರು ಗಳು ತಮ್ಮ ಕೋಣೆಯಲ್ಲಿ ಅಧ್ಯಯನದಲ್ಲಿ ಆಸಕ್ತರಾಗಿದ್ದರು. ಆದರೂ ಅವರ ಮನಸ್ಸು ಗಾಳಿಗಿಟ್ಟ ಸೊಡರಿನಂತೆ ಹೊಯ್ದಾಡುತ್ತಿತ್ತು. ಅವರೂ ಮಹಾ ದೇವಿಯ ನಿರೀಕ್ಷೆಯಲ್ಲಿಯೇ ಇದ್ದಂತೆ ತೋರುತ್ತಿದ್ದರು. ನಮಸ್ಕರಿಸಿ ಸ್ವಲ್ಪ ದೂರದ ಮಂದಲಿಗೆಯ ಮೇಲೆ ಗೆಳತಿಯರು ಕುಳಿತರು.

'ಗುರುಗಳೇ, ನಿಮ್ಮಳಿಯನ ಕಾಟ ಸಹಿಸಲಸದಳ. ಅವನಿಗೆ ಹೃದಯ ಸಹ ಇದ್ದಂತೆ ತೋರದು....' ಗಂಭೀರವಾಗಿ ಮಹಾದೇವಿ ಹೇಳಿದಳು. ಕರ್ಣಾಕರ್ಣಿಯಾಗಿ ಸುದ್ದಿ ಬಂದು ಗುರುಗಳಿಗೆ ಮುಟ್ಟಿದ್ದಿತು. ಆದರೆ ಯಾಕೋ ಅವರಿಗೆ ಸ್ವಲ್ಪ ಅಧೀರತೆ ಸಮನಿಸಿತು, ಮಹಾದೇವಿಯ ಮಾತು ಕೇಳಿ. ರಾಜಾಶ್ರಯದ ಆಮಿಷಕ್ಕೊಳಗಾಗಿ ತನ್ನ ಮನವನ್ನಾಗಲೇ ಬದಲಿಸಿ ಬಿಟ್ಟಿಳೋ ಎಂದು ಕಳವಳಕ್ಕೀಡಾದರು.

'ಯಾರನ್ನು ನನ್ನಳಿಯ....?' ಉತ್ಕಟ ಧ್ವನಿಯಲ್ಲಿ ಪ್ರಶ್ನಿಸಿದರು.

'ಮತ್ತಿನ್ನಾರು, ನಂಬಿದವರನ್ನು ಇಂಬುಗೊಳ್ಳದೆ ಗೋಳಾಡಿಸುವ ಚನ್ನ ಮಲ್ಲಿಕಾರ್ಜುನ!' ಎದೆಯ ಭಾರ ಅವರಿಗೆ ಇಳಿಯಿತು.

'ಓಹೋ....ನಿನ್ನ ಗಂಡನ ಮೇಲೆ ದೂರು ಹೇಳಲು ಬಂದಿರುವೆಯಾ?' ಸಮಾಧಾನದಿಂದ ನಕ್ಕರು.

'ಅಲ್ಲದೇ ಏನು! ಮಾಡಿಕೊಂಡ ಹೆಂಡತಿಯನ್ನು ಅನ್ಯರಿಗೊಪ್ಪಿಸುವ ಪಾಪಕಾರ್ಯವನ್ನು ಯಾವ ಲಜ್ಜೆಗೇಡಿ ಪುರುಷನೂ ಮಾಡಲಿಕ್ಕಿಲ್ಲ. ಆದರೆ ಇವನು ಮಾಡುತ್ತಲಿರುವನು! ಸರ್ವಸ್ವವನ್ನು ಸಮರ್ಪಿಸಿರುವ ನನ್ನನ್ನು ಕೌಶಿಕನ ಕೈಗೆ ಒಪ್ಪಿಸುವ ಪ್ರಯತ್ನ ಸರಿಯೇ ಗುರುಗಳೇ....?' ಕಾತುರದಿಂದ ಕೇಳಿದಳು.

'ಎಲ್ಲವನ್ನೂ ವಿವರವಾಗಿ ಹೇಳು ಮಗಳೇ....'

ಮಹಾದೇವಿ ನಡೆದ ವಿಷಮ ಘಟನೆಯನ್ನು ಸವಿಸ್ತಾರವಾಗಿ ಹೇಳಿದಳು.

'ನಿನ್ನೆ ನಿರ್ದಿಷ್ಟವಾದ ಉತ್ತರವನ್ನು ಕೊಟ್ಟಾಗಿದೆ. ಆದರೆ ರಾಜನ ಗೆಳೆಯ ವಸಂತಕ ಕಾಲಾವಧಿ ನೀಡಿ ಹೋಗಿದ್ದಾನೆ. ಇಂದು ಹಗಲಿನ ಎರಡ ನೆಯ ಜಾವದ ವೇಳೆಗೆ ಆಗಮಿಸುವುದಾಗಿ ಹೇಳಿದ್ದಾನೆ. ಕಾಲ ಸಮೀಪಿಸು ತ್ತಿದೆ. ನಿನ್ನೆ ಅವನು ಬಂದು ಹೋದಾಗಿನಿಂದ ಮನೆಯ ತಲೆಬಾಗಿಲಿಗೆ ಶಸ್ತ್ರಸಜ್ಜಿತ ಭಟಭಟರ ಕಾವಲು ಬೇರೆ....'

ಗುರುಲಿಂಗದೇವರು ಗಂಭೀರವದನರಾದರು. ಕೆಲವು ಕ್ಷಣಕಾಲ ಅವರು ಅಂತರ್ಮುಖರಾದರು. ಕಲ್ಲು ಬಿದ್ದ ಸರೋವರದಲ್ಲಿ ತೆರೆಗಳು ಏಳುವಂತೆ ಅವರ ಮುಖದಮೇಲೆ ಚಿಂತೆಯ ಅಲೆಗಳು ಎದ್ದು, ಹಣೆಯು ನಿರಿಗೆಗಟ್ಟಿತು.

'ಒಪ್ಪದಿದ್ದರೆ ಏನು ಮಾಡುವನಂತೆ....?' ಅವರು ಪ್ರಶ್ನಿಸಿದರು.

'ರಾಜದಂಡದ ಭಯವನ್ನು ತೋರಿಸುತ್ತಿದ್ದಾನೆ. ನನ್ನಿಂದಾಗಿ ನನ್ನನ್ನು ಹೆತ್ತವರೂ ಈ ಮುಪ್ಪಾವಸ್ಥೆಯಲ್ಲಿ ನೋಯಬೇಕಲ್ಲ ಎಂದು ನನ್ನ ಕಳವಳ ಗುರುಗಳೇ....' ಉದ್ವೇಗದಿಂದ ನುಡಿದಳು.

'ಇದು ನಿನ್ನ ಪರೀಕ್ಷೆಯ ಕಾಲ ತಂಗೀ. ಇಲ್ಲಿಯತನಕ ಗಳಿಸಿಕೊಂಡ ಜ್ಞಾನದಲ್ಲಿ ಎಷ್ಟನ್ನು ಅಳವಡಿಸಿಕೊಂಡಿದ್ದೀಯ ಎಂಬುದನ್ನು ಒರೆಗಿಕ್ಕಿ, ಅರಿದು ನೋಡುವ ಕಾಲ. ದೇವನು ಅಕ್ಕಿಯು ಬೆಂದಿದೆಯೋ ಇಲ್ಲವೋ ಎಂದು ತಿಳಿಯಲು ಅಗುಳನ್ನು ಹಿಸುಕಿ ನೋಡುತ್ತಿದ್ದಾನೆ—'

'ಇದೆಂತಹ ಪರೀಕ್ಷೆ ಗುರುಗಳೇ! ಬೆಕ್ಕಿಗೆ ಚಿನ್ನಾಟ, ಇಲಿಗೆ ಪ್ರಾಣ ಸಂಕಟ!! ವಾರವಿಡೀ ದುಡಿದ ಕೂಲಿಯುವನು ಕೂಲಿಯ ಕಾಳನ್ನು ಕೇಳಲು ಹೋದಾಗ, ದುಡಿಸಿಕೊಂಡ ಸಿರಿವಂತನು ತನ್ನ ಹಗೆಹದ ವರ್ಣನೆ ಮಾಡಿ ಅದನ್ನು ತೆಗೆದಾಗ ಕಾಳು ಕೊಡುವೆ ಎಂದರೆ ಈ ಬಡವನ ಗತಿ ಹೇಗೆ? ಸಿರಿವಂತ ಹಗೆಹ ತೆಗೆಯುವುದರಲ್ಲಿ ಬಡವನ ಪ್ರಾಣವೇ ಹೋಗಿಬಿಡಬಹುದು. ಮತ್ತೆ ಮತ್ತೆ ಕಾಳನ್ನು ತೂರುತ್ತಲೇ ಹೋದರೆ ಗಟ್ಟಿಕಾಳು ಸಹ ಹಾಂಹೋಗ ಬಹುದು. ಪರೀಕ್ಷೆಗೂ ಒಂದು ಮಿತಿ ಬೇಡವೇ....?' ಅಸಹನೆಯಿಂದ ಕೇಳಿದಳು.

'ಸಾವಧಾನ ಶಾಂತಿ! ಶಿವನ ಕರುಣೆ ಯಾವ ರೂಪದಲ್ಲಿ ಬರುವುದೋ ಹೇಳಲಿಕ್ಕಾಗದು ತಾಯಿ; ಅಷ್ಟು ಬೇಗನೆ ಗ್ರಹಿಸಿಕೊಳ್ಳಲೂ ಅಸಮರ್ಥ ರಾಗುತ್ತೇವೆ....'

'ಅಂದರೆ....'

'ಮೊದಲನೆಯದಾಗಿ ದೇವರಲ್ಲಿ ನಿನಗೆ ಏಕಪ್ರಕಾರದ ಪರಿಪೂರ್ಣ ಶರಣಾಗತಿ ಇರಲಿ. ನಂಬಿ ಪಾದ ಹಿಡಿದವರನ್ನು ಎಂದಿಗೂ ಅವನು ಕೈ ಬಿಡನು ಎಂಬ ವಿಶ್ವಾಸ ಮೈಗೂಡಲಿ....'

'ನೋಡವ್ವಾ, ಶೈಲಜೆಗೆ ಮದುವೆ; ಅವಳಿಗೆ ಒಡವೆಯನ್ನು ಆರಿಸಲು ನೀನು ಶಂಕರಶೆಟ್ಟರ ಅಂಗಡಿಗೆ ಹೋಗುವೆ. ಆಗ ಅಂಗಡಿಯಲ್ಲಿನ ಎಲ್ಲ ಒಡವೆ ಗಳನ್ನು ತಿಕ್ಕಿ ನೋಡುವೆಯಾ?....'

'ಇಲ್ಲ....ನನಗೆ ಬೇಕು ಎನಿಸಿದುದನ್ನು, ನನ್ನ ಮನಸೆಳೆದುದನ್ನು ಕೈಗೆತ್ತಿ

ಕೊಂಡು ಒರೆಗೆ ಹೆಚ್ಚುವೆ....'

'ಸರಿ, ನೀನು ಒರೆಗೆ ತಿಕ್ಕಿ ನೋಡುತ್ತಿರುವೆ ಎಂಬುದರ ಅರ್ಥವೇನು....?'

'ಆ ಒಡವೆಯಮೇಲೆ ನನ್ನ ಕಣ್ಣು ಬಿದ್ದಿದೆ, ಅದರ ಮೇಲೆ ನನ್ನ ಮನ ಹರಿದಿದೆ ಎಂದು.'

'ಹಾಂ, ಹಾಗೆಯೇ ತಾಯಿ ; ಕಷ್ಟ-ವಿಘ್ನಗಳ ಒರೆಗೆ ಶಿವನು ನಿನ್ನನ್ನು ಹಚ್ಚುತ್ತಿದ್ದಾನೆ ಎಂದರೆ ಅವನ ಕಣ್ಣು ನಿನ್ನಮೇಲೆ ಬಿದ್ದಿದೆಯವ್ವಾ ; ಅವನ ಮನ ನಿನ್ನಮೇಲೆ ಹರಿದಿದೆ....'

ಗುರುಗಳ ಮಾತಿನಿಂದ ಮಹಾದೇವಿ ಪುಳಕಗೊಂಡಳು.

'ಹಾಗೆಂದು ನಂಬಮ್ಮ, ಸಮುದ್ರದಲ್ಲಿ ದೊಡ್ಡ ದೊಡ್ಡ ಅಲೆಗಳು ಏಳುತ್ತವೆ. ಆ ಅಲೆಗಳ ಉದ್ದೇಶ ದಂಡೆಯ ಮೇಲಿರುವ ಊರು-ಕೇರಿಗಳನ್ನು ಕೊಚ್ಚಿ ಹಾಕುವುದಲ್ಲ, ಸಮುದ್ರದ ನೀರನ್ನು ಸ್ವಚ್ಛವಾಗಿರಿಸುವುದು....'

'ಹೂಂ....'

'ಹಾಗೆಯೇ ಬಾಳಿನಲ್ಲಿ ಸುಖ-ದುಃಖದ ಅಲೆಗಳು ಬದುಕನ್ನು ಶುದ್ಧೀಕರಿಸಲು ಬರುವವು, ನಾಶಮಾಡಲಿಕ್ಕಲ್ಲ....'

ಗುರುಲಿಂಗದೇವರು ಮಾತು ನಿಲ್ಲಿಸಿ ಅವಳ ಮುಖವನ್ನು ದಿಟ್ಟಿಸಿದರು. ಅವರ ಬೋಧೆಯ ಪ್ರತಿಯೊಂದು ಅಂಶವನ್ನು ಮಹಾದೇವಿ ಒಳಗಿಳಿಸಿಕೊಳ್ಳುವ ಸನ್ನಾಹದಲ್ಲಿದ್ದಳು.

'ನೋಡವ್ವಾ, ಸಮುದ್ರದ ಮರಳದಂಡೆಯು ಕುಸಿದು ಸಾಗುವುದು ; ಹೆಬ್ಬಂಡೆ ಸ್ಥಿರವಾಗಿ ನಿಲ್ಲುವುದು. ಹಾಗೆಯೇ ದುರ್ಬಲ ಮನದವರು ದೇವರನ್ನು ನಿಂದಿಸಿ, ಕೈಬಿಟ್ಟನೆಂದು ಹಳಿದು ಆ ದುಃಖದ ಅಲೆಯಲ್ಲಿ ಕೊಚ್ಚಿ ಹೋಗುವರು ; ಸಬಲ ಮನದ ಶರಣಾಗತರು ಸ್ಥಿರವಾಗಿ ನಿಂತು, ಉಳಿದು ಕೊಳ್ಳುವರು....

ಕಷ್ಟಸುಖಗಳು ಮನುಷ್ಯನಿಗೆ ಬರದೇ ಗಿಡಮರಕ್ಕೆ ಬರುವವೆ? ಬಂದವುಗಳನ್ನು ಸಮರ್ಪಕವಾಗಿ ಎದುರಿಸುವುದೇ ನಿಜವಾದ ಅಧ್ಯಾತ್ಮ. ಅಧ್ಯಾತ್ಮವು ಬದುಕುವ ಒಂದು ಕಲೆ, ಬದುಕಿನಿಂದ ತಪ್ಪಿಸಿಕೊಳ್ಳುವ ಕಳ್ಳದಾರಿಯಲ್ಲ. ಆಕಾಶದಲ್ಲಿ ನಕ್ಷತ್ರಗಳಿರುವವು, ಅಮಾವಾಸ್ಯೆಯಂದು ಬಹಳ ಸ್ಪಷ್ಟವಾಗಿ ಕಾಣುವವು. ಹುಣ್ಣಿಮೆಯಂದು ಚಂದ್ರೋದಯವಾದಾಗ ಅಷ್ಟು ತೀಕ್ಷ್ಣವಾಗಿ ಎದ್ದು ಕಾಣುವವೇ ?....'

'ಇಲ್ಲ ...ಚಂದ್ರಪ್ರಕಾಶದಲ್ಲಿ ಮಂಕಾಗುವುವು....'

'ಆಗಸದಲ್ಲಿ ಅವು ಇರುವುದಿಲ್ಲವೆ?....'

'ಇದ್ದೇ ಇರುವವು, ಮಂಕಾಗಿ ಕಾಣುವವು ಅಷ್ಟೆ.'

'ಸೂರ್ಯನ ಉದಯವಾದಾಗ....'

'ಪೂರ್ತಿಯಾಗಿ ಕಾಣದಂತಾಗುವವು....'

'ಅಹುದು ಮಗಳೇ, ಅಜ್ಞಾನದ ಅಂಧಕಾರವಿದ್ದಾಗ ಬಾಳಿನಾಗಸದಲ್ಲಿ ಸುಖ-ದುಃಖದ ನಕ್ಷತ್ರಗಳು ಗಾಢವಾಗಿ ತೋರುವವು. ಸುಜ್ಞಾನದ ಚಂದ್ರೋದಯವಾದಾಗ ಅವು ಮಂಕಾದರೆ, ಸ್ಥಿತಪ್ರಜ್ಞತೆಯ ಸೂರ್ಯೋದಯ ವಾದಾಗ ಅಲ್ಲಿದ್ದರೂ ಕಾಣದಾಗುವವು."

'ಅಹುದು ಗುರುದೇವಾ....ನಿಜಕ್ಕೂ ಸತ್ಯ....!' ಮಹಾದೇವಿಯ ಮುಖದ ಚಂದ್ರನಿಗೆ ದಟ್ಟವಾಗಿ ಮುಸುಕಿದ್ದ ಚಿಂತೆಯ ಕಾರ್ಮೋಡಗಳು ಗುರುಬೋಧೆಯ ಗಾಳಿ ಬೀಸಿ ಒಂದೊಂದಾಗಿ ಸರಿಯತೊಡಗಿದ್ದವು. ಮತ್ತೆ ಅರಿವಿನಿಂದ ಮುಖವು ಕಾಂತಿಯುಕ್ತವಾಗತೊಡಗಿತ್ತು.

'ಪರಮಾತ್ಮನೆಂಬ ಮಹಾಶಿಲ್ಪಿಯ ಕೈಗೆ ನಿನ್ನ ಬಾಳಶಿಲೆಯನ್ನು ಒಪ್ಪಿ ಸಿರುವೆ ತಾಯಿ; ಚಿಂತಿಸಬೇಡ. ಅವನು ಅದನ್ನು ಮೂರ್ತೀಕರಿಸುವನು. ತಾನೊಂದು ಮೂರ್ತಿಯಾಗಬೇಕೆಂಬ ಹಂಬಲ ಆ ಶಿಲೆಗೆ ಎಷ್ಟು ಇದೆಯೋ, ಸುಂದರವಾದ ಶಿಲ್ಪವೊಂದನ್ನು ರೂಪಿಸಿ ತನ್ನ ಹೆಸರನ್ನು ಮೆರೆಸಿಕೊಳ್ಳುವ ಶಿಲ್ಪಿಯ ಹಂಬಲವೂ ಅಷ್ಟೇ ಉತ್ಕಟವಾಗಿರುವುದು. ದೈವೀ ಸಂದೇಶವನ್ನು ಸಾರಲು ವಾಹನವಾಗಿ ಬಂದ ನಿನ್ನನ್ನು ಪರಮಾತ್ಮನು ಖಂಡಿತಾ ಬಲಿ ಗೊಡನು. ಕಬ್ಬಿಣದ ಬಿಡಿಬಿಡಿ ಭಾಗಗಳನ್ನು ತೆಗೆದುಕೊಂಡು ನೀರಿಗೆ ಹಾಕು....ಏನಾಗುವುದು ?'

'ಅವು ಮುಳುಗುವವು....'

'ಅವುಗಳನ್ನೆಲ್ಲ ಒಟ್ಟಾಗಿ ಕೂಡಿಸಿ, ಹಡಗನ್ನಾಗಿ ಮಾಡಿ ನೀರಿಗೆ ಬಿಡು....ಆಗ?'

'ಅದು ತೇಲುವುದು....'

'ಅದೇ ರೀತಿ ಬದುಕಿನ ಘಟನೆಗಳನ್ನು ಬಿಡಿಯಾಗಿ ನೋಡಿದರೆ ದುಃಖ ಕಾರಕವಾಗಿ ಕಾಣುತ್ತವೆ; ಮುಳುಗಿಸಲು ಬಂದಂತೆ ಎನಿಸುತ್ತದೆ. ಆದರೆ ಸಮಗ್ರ ಸಾಧನೆಯ ದೃಷ್ಟಿಯಿಂದ ನೋಡಿದಾಗ ಅವು ಮುಳುಗಿಸಲು ಬಂದ ವಲ್ಲ, ತೇಲಿಸಲು ಬಂದವು ಎನಿಸುತ್ತದೆ....' ಮಹಾದೇವಿಯ ಮುಖದಲ್ಲಿ ಸಂತೃಪ್ತಿಯ ಕಳೆ ಮಿನುಗಿತು.

'ಬಂದ ಸಮಸ್ಯೆಗಳನ್ನು ಎದುರಿಸುವುದೂ ಒಂದು ಜಾಣತನ. ನೋಡು, ಕಲಸಿದ ಮಣ್ಣನ್ನು ಮಾಳಿಗೆಯ ಮೇಲೆ ಮೇಲುಮುದ್ದೆ ಹಾಕಲು ಒಯ್ಯು

ವಾಗ ಹತ್ತಾರು ಜನರು ಸಾಲಾಗಿ ನಿಲ್ಲುವರು. ಒಂದು ತೂಕದ ಮೇಲೆ ಮಣ್ಣು ತುಂಬಿದ ಬುಟ್ಟಿಯನ್ನು ಎಸೆಯುವರು. ಅದೇ ಎಚ್ಚರಿಕೆ, ತೂಕದ ಮೇಲೆ ಪಕ್ಕದಲ್ಲಿದ್ದವನು ಹಿಡಿಯುವನು. ಅವನು ಎಚ್ಚರದಪ್ಪಿ ನಿಂತರೆ, ಆ ಬುಟ್ಟಿ ಬಂದು ಬಡಿಯುವುದು, ಕೆಡಹುವುದು. ಹಾಗೆಯೇ ಕಷ್ಟಗಳು ಬಂದಾಗ, ಹೇಡಿಯಾಗಿ ಏನೂ ಪ್ರಯತ್ನಮಾಡದೆ ದೇವರ ಮೇಲೆ ಸಂಪೂರ್ಣ ಭಾರ ಹಾಕಿ ನಿಂತರೆ ಆ ಕಷ್ಟದ ಬುಟ್ಟಿ ಬಡಿದು, ಕೆಡಹದೆ ಇರದು. ಎಚ್ಚರಿಕೆಯಿಂದ, ಪುರುಷಪ್ರಯತ್ನದಿಂದ ಹಿಡಿದರೆ ಅದು ಪೆಟ್ಟುಮಾಡದೆ ಹಗುರವಾಗಿ ಕೈಸೇರುವುದು....'

'ಹಾಗಾದರೆ ಈ ಕಷ್ಟವು ನನ್ನ ಉದ್ಧಾರಕ್ಕಾಗಿಯೇ ಬಂದಿದೆ ಎನ್ನುವಿರಾ?' ಮಹಾದೇವಿ ಪ್ರಶ್ನಿಸಿದಳು.

'ನೀನೇ ಆಲೋಚಿಸು....ಕೌಶಿಕನೆಂಬ ಕಪ್ಪುಬಟ್ಟೆಯಮೇಲೆ ನಿನ್ನ ಬಾಳಿನ ರತ್ನಹಾರವನ್ನು ದೇವನು ಪ್ರದರ್ಶಿಸುತ್ತಿರುವನು....' ತೂಗಿ ತೂಗಿ ಗುರುಲಿಂಗದೇವರು ಹೇಳಿದರು.

'ಹಾಂ....' ಬೆಚ್ಚಿಬಿದ್ದಳು ಮಹಾದೇವಿ.

'ಅಧಿಕಾರ, ಅರಮನೆ, ರಾಜಾಶ್ರಯ ಈ ಎಲ್ಲ ಪ್ರಲೋಭನೆಗಳನ್ನು ಗೆದ್ದ ಸ್ವಭಾವ ವೈರಾಗ್ಯದ, ವೀರ ವಿರಕ್ತೆ ಎಂದು ಜಗತ್ತು ನಿನ್ನನ್ನು ಪ್ರಶಂಸಿಸದೆ? ವಿಲಾಸಿಯ ಕಪ್ಪುಬಟ್ಟೆಯ ಹಿನ್ನೆಲೆಯಲ್ಲಿ ವಿರಕ್ತೆಯ ಹೋರಾಟದ ರತ್ನಹಾರ ಇಮ್ಮಡಿಸಿದ ಕಾಂತಿಯಿಂದ ಶೋಭಿಸುವುದು....'

'ಇದು ಸತ್ಯವೇ ಗುರುದೇವಾ....?'

'ನಿಶ್ಚಯವಾಗಿಯೂ ಸತ್ಯ. ಇಷ್ಟೇ ಅಲ್ಲ ತಾಯಿ, ದೇವರು ನಿನ್ನ ಉದ್ಧಾರಕ್ಕೆ ಸಂಕಲ್ಪ ಮಾಡಿರುವನು....' ಗಂಭೀರವಾಗಿ ಹೇಳಿದರು ಗುರುಗಳು.

'ಅದು ಹೇಗೆ....?'

'ಮುದ್ದು ಪಕ್ಷಿಯೊಂದು ಆಟವಾಡಲು ಹೋಗಿ ಬೇಟೆಗಾರನ ಬಲೆಯಲ್ಲಿ ಸಿಕ್ಕು ಒದ್ದಾಡುತ್ತದೆ. ಆಗ ಸಾಕಿದವರು ಅದರ ಪ್ರಾಣ ಉಳಿಸಲು ಬಲೆಯನ್ನು ಕತ್ತರಿಸಬೇಕಾಗುವುದು....'

'ಅಹುದು....'

'ಹಾಗೆಯೇ ನೀನು ತಾಯಿ-ತಂದೆ, ಹುಟ್ಟಿದ ಊರು ಎಂಬ ವ್ಯಾಮೋಹದ ಸೀಮಿತ ಬಲೆಯಲ್ಲಿ ಸಿಕ್ಕಿಬಿದ್ದಿರುವೆ. ಇಲ್ಲಿಂದ ಬಿಡುಗಡೆಯಾಗದ ಹೊರತು ಸುಖವಿಲ್ಲ; ಶರಣರ ಸಂಗವನ್ನು ಸೇರದ ಹೊರತು ಪರಿಪೂರ್ಣತೆ ಇಲ್ಲ....

ಅದಕ್ಕಾಗಿ ಆ ಮಾಯಾವಿ ಶಿವನು ಕೌಶಿಕನೆಂಬ ಕತ್ತರಿಯನ್ನು ತಂದು, ವ್ಯಾಮೋಹದ ಬಲೆಯನ್ನು ಒತ್ತಾಯದಿಂದ ಕತ್ತರಿಸುತ್ತಿರುವನು....'

'ಗುರುದೇವಾ....ಇದು ನಿಜವೇ....?' ಪುಳಕಗೊಂಡು ಸಂಭ್ರಮದಿಂದ ಪ್ರಶ್ನಿಸಿದಳು.

'ಪರಮ ಸತ್ಯ....'

ಒಂದೊಂದು ಪದವನ್ನೂ ಮೆಲುಕಾಡಿಸುತ್ತ ಮಹಾದೇವಿ ಮೈಮರೆತಿದ್ದಳು. ಆದರೆ ಅಷ್ಟರಲ್ಲಿ ಗಡಗಡನೆ ನಡುಗುತ್ತ, ಅಳುತ್ತ ಬಂದ ಗಿರಿಜಾಂಬೆಯ ಆಗಮನ ಎಲ್ಲರನ್ನೂ ಸಮಸ್ಯೆಗೆ ಈಡುಮಾಡಿತು. ಎಲ್ಲರ ಚಿತ್ತಗಳು ಅತ್ತ ತಿರುಗಿದವು. ಗಿರಿಜಾಂಬೆ ಗುರುಗಳ ಪಾದಕ್ಕೆ ನಮಸ್ಕರಿಸಿ ನಿಂತು ಬಿಕ್ಕಿಬಿಕ್ಕಿ ಅಳತೊಡಗಿದಳು.

'ಏನಾಯಿತು ಹೇಳು ಗಿರಿಜವ್ವಾ, ಸಮಾಧಾನ ಮಾಡಿಕೋ....'-ಗುರುಗಳು ಹೇಳಿದರು. ಆಕೆಯ ಗಂಟಲುಬ್ಬಿ ತುಟಿ ನಡುಗುತ್ತಿದ್ದವು.

ಅವಳಿಂದ ತಿಳಿದುದಿಷ್ಟು....ಮಹಾದೇವಿ ಅತ್ತ ಬಂದ ಸ್ವಲ್ಪ ವೇಳೆಯಲ್ಲಿ ತಿಳಿಸಿದ ವೇಳೆಗಿಂತ ಬಲು ಮುಂಚೆಯೇ ರಾಜನ ಗೆಳೆಯ ವಸಂತಕ ಬಂದನು. ಓಂಕಾರಶೆಟ್ಟಿ ಯಥಾಪ್ರಕಾರ ಒಳಗೆ ಕರೆದು ಕುಳ್ಳಿರಿಸಿದನು.

'ನಿಮ್ಮ ನಿರ್ಧಾರ ತಿಳಿಸಿರಿ ಶೆಟ್ಟರೆ....' ವಸಂತಕ ಸ್ಪಷ್ಟವಾದ ಬಿಗುವಿನ ಧ್ವನಿಯಲ್ಲಿ ಕೇಳಿದನು.

'ನಿನ್ನೆ ತಿಳಿಸಿಯಾಯಿತಲ್ಲ ವಸಂತಕರೇ....' ಅಷ್ಟೇ ಗಂಭೀರವಾಗಿ ಓಂಕಾರನೂ ಉತ್ತರಿಸಿದನು.

'ಏನೂ ಬದಲಾವಣೆಯಿಲ್ಲವೇ....?' ದರ್ಪದಿಂದ ಕೇಳಿದ.

'ಒಂದು ಅಂಗುಲದಷ್ಟೂ ಅತ್ತಿತ್ತ ಸರಿದಿಲ್ಲ....' ಓಂಕಾರ ಅಷ್ಟೇ ನಿರ್ಧಾರದ ದನಿಯಲ್ಲಿ ಹೇಳಿದ.

'ಲಿಂಗಮ್ಮ ತಾಯಿ... ನಿಮ್ಮ ನಿರ್ಧಾರವೇನು ? ಮಗಳನ್ನು ಧಾರೆ ಎರೆಯಲಾರಿರಾ ...'

'ಪತಿಯ ಅರ್ಧಾಂಗಿನಿ ಸತಿ. ಗರತಿಯಾದವಳು ಗಂಡನ ನಿರ್ಧಾರಕ್ಕೆ ಇದಿರಾಡಲುಂಟೇ ? ಅವರು ಕಾಲಿನಲ್ಲಿ ಮುಟ್ಟಿದುದು ನನ್ನ ನೆತ್ತಿಯಮೇಲೆ....'

'ನಿಮ್ಮ ಮಗಳೆಲ್ಲಿ ?'

'ಬೆಳಿಗ್ಗೆ ಹೋದವಳು ಇನ್ನೂ ಬಂದಿಲ್ಲ ...' ಓಂಕಾರ ಉತ್ತರಿಸಿದ.

'ಎಲ್ಲಿಗೆ ಹೋಗಿರುವಳು ?'

'ಸದ್ಗುರುಗಳ ದರ್ಶನಕ್ಕೆ ಹೋಗಿರುವಳು....'

'ಸರಿ, ನಂತರ ಆಕೆಯನ್ನು ವಿಚಾರಿಸೋಣ' ಎಂದು ಅಧಿಕಾರವಾಣಿ ಯಿಂದ ಹೇಳಿ,

ವಸಂತಕ ಚಪ್ಪಾಳೆ ತಟ್ಟಿದ. ಕತ್ತಿಯನ್ನು ಒರೆಯಿಂದ ಎಳೆದುಕೊಂಡ ಸೈನಿಕರು ಎದುರು ನಿಂತರು.

'ರಾಜಾಜ್ಞೆಯ ಉಲ್ಲಂಘನೆಗಾಗಿ ಇವರನ್ನು ಬಂಧಿಸಿ ಕರೆದೊಯ್ಯಿರಿ....'

'ಕೋಳಗಳನ್ನು ತೊಡಿಸಿ ಬಂಧಿಸುವ ಅವಶ್ಯಕತೆ ಇಲ್ಲ. ನಾವೇ ಮನಃ ಪೂರ್ವಕವಾಗಿ ಬರುತ್ತೇವೆ ನಡೆಯಿರಿ....' ಓಂಕಾರಶೆಟ್ಟಿ ಹೇಳಿದ.

'ಮಗಳು ಬಂದ ಬಳಿಕ ಕಣ್ಣಾರೆ ನೋಡಿಯಾದರೂ ಬರುತ್ತೇವೆ....' ಲಿಂಗಮ್ಮ ಗೋಗರೆದಳು.

'ಕಾರಾಗೃಹದಲ್ಲಿ ನೋಡುವಿರಂತೆ....' ವಸಂತಕ ದರ್ಪದ ನಗೆ ನಕ್ಕ.

'ಲಿಂಗಾ, ಬಸವಧರ್ಮಕ್ಕೆ ಅನುಗುಣವಾದ ವರ್ತನೆ ಇರಲಿ. ಬಸವ ತತ್ತ್ವದ ಹುಲಿಯ ಹಾಲು ಕುಡಿದ ನಾವು ಹೇಡಿ ಹುಲ್ಲೆಗಳಲ್ಲ....' ಗದರಿಕೆಯ ಧ್ವನಿಯಲ್ಲಿ ಹೇಳಿದ.

ಬಂದಿದ್ದ ಮುಚ್ಚಿದ ಅಂದಣವು ದಂಪತಿಗಳಿಬ್ಬರನ್ನು ಪಟುಭಟರ ರಕ್ಷಣೆ ಯಲ್ಲಿ ಒಯ್ಯಿತು. ಈಗ ವಸಂತಕನು ಮಹಾದೇವಿಗಾಗಿ ನಿರೀಕ್ಷಿಸುತ್ತ ಮನೆ ಯಲ್ಲಿ ಕುಳಿತಿರುವನು.

ಗಿರಿಜಾಂಬೆ ಹೇಳಿದ ಈ ಸುದ್ದಿಯನ್ನು ಕೇಳಿ ಮಹಾದೇವಿ ತಲ್ಲಣಿಸಿ, ಮುಂಗಾಣದೆ ಕುಳಿತಳು. ಗುರುಲಿಂಗದೇವರು ಹೇಳಿದರು,

'ಗಿರಿಜವ್ವ, ನೀನು ಮುಂದೆ ಹೋಗು. ಮಹಾದೇವಿಯೂ ಕೆಲವೇ ಕ್ಷಣಗಳಲ್ಲಿ ಬಂದುಬಿಡುವಳು. ನೀನು ಅಧೀರಳಾಗಬೇಡ....ಎಲ್ಲಿರುವಳೆಂದು ಮಹಾದೇವಿಯ ಬಗ್ಗೆ ಕೇಳಿದರೆ ನೀನು ಹೇಳಲೇಬೇಡ....'

ಗುರುಲಿಂಗದೇವರು ಕೆಲವು ನಿಮಿಷ ಮೌನವಾಗಿ ಆಲೋಚನಾ ಮಗ್ನ ರಾದರು.

'ಗುರುಗಳೇ....ಇಂತಹ ಪ್ರಸಂಗವನ್ನು ಹೇಗೆ ನಾನು ಎದುರಿಸಲಿ ? ದಿಕ್ಕು ತೋಚದ ಸ್ಥಿತಿಗೆ ಬಂದಿರುವೆ. ಇಲ್ಲಿಂದ ಹೇಗಾದರೂ ತಲೆಮರೆಸಿಕೊಳ್ಳೋಣವೇ ಎಂದರೆ, ಇದು ಸೂಕ್ತ ಪರಿಹಾರವಲ್ಲ ಎನ್ನಿಸುವುದು. ರಾಜಭಟರ ಕಾವಲು ಸೂಕ್ಷ್ಮವಿದೆ. ಅದಕ್ಕಿಂತ ಮಿಗಿಲಾಗಿ ನನ್ನ ಹೆತ್ತವರು ಕಾರಾಗೃಹದಲ್ಲಿ ಮರಣಪರ್ಯಂತರ ನನ್ನ ಸಲುವಾಗಿ ಕೊಳೆಯಬೇಕಾಗುವುದು. ನನಗೊಂದು ಪರಿಹಾರವನ್ನು ಹೇಳಿರಿ....' ದೈನ್ಯತೆಯೇ ಮೂರ್ತಿವೆತ್ತು ಕೇಳಿದಳು.

'ಶೈಲಜಾ ಹೊರಗೆ ಯಾರಾದರೂ ಬರುವರೇನೋ ನೋಡುತ್ತಲಿರು....'

ಶೈಲಜೆ ಎದ್ದು ಹೋದಳು.

'ಮಹಾದೇವಿ, ಕಲ್ಯಾಣಸಾಧನೆಗೆ ಉಪಾಯವನ್ನು ಮಾಡಬೇಕಾಗು ವುದು. ನೀನು ಅರಮನೆಗೆ ಹೋಗುವ ಮನಸ್ಸು ಮಾಡು....' ಮೆಲ್ಲನೆ ಅಂದರು.

'ಅಂ ನಾನೇ....ಸಾಧ್ಯವಿಲ್ಲ....ಅದೊಂದನ್ನು ಹೇಳದಿರಿ....' ಸಿಢಾರ ದಿಂದ ಹೇಳಿದಳು.

'ದುಡುಕಬೇಡ ಮಗಳೇ....ನೀನೊಬ್ಬಳು ಆದರ್ಶ ವಿರಾಗಿಣಿಯಾಗಿ ಉಳಿಯಬೇಕೆಂಬ ಉತ್ಕಟ ಆಸೆ ನನಗಿಲ್ಲವೇ....? ನನ್ನಲ್ಲಿ ವಿಶ್ವಾಸವಿಟ್ಟು ಈ ಮಾತನ್ನು ಕೇಳು....

'ನೋಡು, ನೀನು ಒಪ್ಪು-ಬಿಡು ನಿನ್ನನ್ನು ಖಂಡಿತಾ ಅರಮನೆಗೆ ಒಯ್ಯುವರು, ಸಂಪೂರ್ಣ ಬಂಧನದಲ್ಲಿಡುವರು. ಆಗ ನಿನಗೆ ಯಾವ ಸಾಧ ನೆಯೂ ಸಾಧ್ಯವಾಗದು. ಒಲಿದಂತೆ ನಟನೆ ಮಾಡಿ ತಾಯಿ-ತಂದೆಯರನ್ನು ಬಿಡುಗಡೆ ಮಾಡಿಸಿ, ನೀನು ಅರಮನೆಯಲ್ಲಿರು. 'ನಾನೊಂದು ವ್ರತವನ್ನು ಕೈಗೊಂಡಿರುವೆ. ಈ ಕಾಲಾವಧಿಯಲ್ಲಿ ಯಾರನ್ನೂ ಮುಟ್ಟಿಸಿಕೊಳ್ಳೆನು. ಐದು ವಾರಗಳ ಈ ವ್ರತ ಮುಗಿದ ಬಳಿಕ ಮದುವೆಯ ಬಗ್ಗೆ ಪ್ರಯತ್ನ. ಲಗ್ನ ವಾಗಬೇಕಾದರೆ ರಾಜನು ನಮ್ಮ ಧರ್ಮದ ಲಿಂಗದೀಕ್ಷೆ ಪಡೆಯಬೇಕು. ಮತ್ತು ಈ ವ್ರತದ ಅವಧಿಯಲ್ಲಿ ನನ್ನ ಆಚರಣೆಗೆ ಅಡ್ಡಿ ಬರಬಾರದು. ಒಂದು ವೇಳೆ ಈ ಕಾಲಾವಧಿಯಲ್ಲಿ ಮೂರು ತಪ್ಪುಗಳನ್ನು ಮಾಡಿದರೆ ಅಂದು ನನ್ನ-ಅರ ಮನೆಯ ಸಂಬಂಧ ತುಂಡಾಗುವುದು' ಈ ನಿಯಮಗಳನ್ನು ಹಾಕು. ಕಬ್ಬಿಣ ವನ್ನು ಕಾಯ್ದಾಗಲೇ ಬಡಿಯಬೇಕು; ಕಾಮತಪ್ತನಾದ ಅವನು ಇವಕ್ಕೆಲ್ಲ ಮನ್ನಣೆ ನೀಡುವನು. ಬಿಸಿಲ ಮರೀಚಿಕೆಯಂತೆ ಕೈಗೆ ಸಿಗದೆ ನೀನು ಅಲ್ಲಿರು. ದುರ್ಬಲ ಮನದವನಾದ ಅವನು ಈ ಕಾಲಾವಧಿಯಲ್ಲಿ ಮೂರು ತಪ್ಪು ಮಾಡದೆ ಇರನು. ಅವನ್ನು ನೆಪವಾಗಿ ಮಾಡಿ ಒಂದು ದಿನ ಪಾರಾಗಬೇಕು. ಬೇರೆ ಉಪಾಯವೇ ಇಲ್ಲ....'

'ಇದು ಬಹಳ ಕಷ್ಟಸಾಧ್ಯ....'

'ನಿಮ್ಮ ತಂದೆ-ತಾಯಿಗಳ ಬಿಡುಗಡೆ, ನಿನ್ನ ಉದ್ದೇಶ ಸಾಧನೆ, ಅವನ ಧರ್ಮಪರಿವರ್ತನ—ಎಲ್ಲವೂ ಆಗುತ್ತವೆ....'

'ಕತ್ತಿಯ ಮೊನೆಯಮೇಲೆ ನಡೆದಷ್ಟು ಕಷ್ಟತಮ....'

'ಎಂಥದೇ ಪ್ರಸಂಗದಲ್ಲಿ ಅಧೀರಳಾಗಬೇಡ. ನೋಡು, ಆಡನ್ನಾದರೆ ಬಲಿಗೊಡುವರು, ಹುಲಿಯನ್ನು ಬಲಿಗೊಡರು. ದಿಟ್ಟತನಕ್ಕಿಂತ ಆತುರಳ ನೆಯ

ಆಯುಧ ಬೇರಾವುದೂ ಇಲ್ಲ. ಅವನ ಪಾಲಿಗೆ ಬಿಸಿ ತುಪ್ಪದಂತೆ ನೀನಾಗ ಬೇಕು....

'ವಿಘ್ನಗಳಿಗೆ ನೀನು ಹೆದರಬೇಡ ಮಗಳೆ; ಉತ್ತುಂಗ ವ್ಯಕ್ತಿತ್ವ ಗಳಿಕೆ ಯೊಂದೇ ನಿನ್ನ ಗುರಿಯಾಗಿರಲಿ. ಹುಲ್ಲೆಯಾದರೆ ನಾಯಿಗಳು ಕಚ್ಚುತ್ತವೆ, ಕರಿಯಾದರೆ ತಮ್ಮ ಪಾಡಿಗೆ ತಾವು ಬೊಗಳುತ್ತ ಮಗ್ಗುಲಲ್ಲಿ ಬರುತ್ತಿದ್ದರೂ ಅದನ್ನು ಕಚ್ಚುವ ಸಾಹಸ ಮಾಡಲಾರವು. ಹಾಗೆಯೇ ವಿಘ್ನಗಳು ಸಹ; ಸಾಧಕನು ಸಾಮಾನ್ಯ ವ್ಯಕ್ತಿತ್ವದವನಿದ್ದರೆ ಖಂಡಿತವಾಗಿ ಅವನನ್ನು ಮುತ್ತಿ ಸತ್ವಹೀನನನ್ನಾಗಿ ಮಾಡುತ್ತವೆ. ಅವನ ಬದುಕು ಉನ್ನತವಾದರೆ ಆಗಾಗ ಬಂದು ಹೆದರಿಸುವಂತೆ ಮಾಡಿದರೂ, ಘಾಸಿ ಮಾಡಲಾರವು. ಕಡೆಗೂ ಸಾಧಕನು ಧೀರನಾಗಿ ಮುಂದುವರಿಯುತ್ತಲೇ ಇದ್ದರೆ ಇವು ದಣಿದು, ತಾವೇ ಸೋತು ಹಿಂದಕ್ಕೆ ಹೋಗುವವು.'

'ಆದರೆ ಗುರುಗಳೇ....ಅರಮನೆಯ ವಿಲಾಸದ ವಾತಾವರಣ, ರಾಜನ ಕಾಮುಕವೃತ್ತಿ ನನ್ನನ್ನು ಏನು ಮಾಡುವವೋ....!' ಮೆಲ್ಲನೆ ಕಂಪಿಸಿದಳು; ಮಹಾದೇವಿಯ ಕಣ್ಣಂಚಿನಲ್ಲಿ ನೀರು ತುಂಬಿತ್ತು.

'ಮಗಳೇ....ಈ ಅಧೈರ್ಯ ಎಂದೆಂದೂ ನಿನ್ನ ಹೃದಯದಲ್ಲಿ ಸುಳಿಯ ದಿರಲಿ. ಬಣವೆ ಎಷ್ಟು ದೊಡ್ಡದಾದರೇನಂತೆ, ಉರಿಯ ಒಂದು ಕಿಡಿ ಅದನ್ನು ದಹಿಸುವುದು! ತಾಮಸಶಕ್ತಿ ಎಷ್ಟಿದ್ದರೇನು, ಸಾತ್ವಿಕಶಕ್ತಿಯನ್ನು ಸೋಲಿಸ ಬಹುದೆ? ಕತ್ತಲೆ ಎಷ್ಟು ಗಾಢವಿದ್ದರೇನು, ಕಿರು ಹಣತೆಯೊಂದೇ ಸಾಕು ಅದನ್ನು ಓಡಿಸಲಿಕ್ಕೆ. ಮನಸ್ಸಿನಲ್ಲಿ ಮಾತ್ರ ಅಧೀರತೆಗೆ, ದುರ್ಬಲತೆಗೆ ಎಡೆ ಗೊಡಬೇಡ. ಅಂತರಂಗದ ಅಂಜಿಕೆಯನ್ನು ಬಹಿರಂಗದಲ್ಲಿ ತೋರಿಸಬೇಡ.

ನಿನ್ನ ಪವಿತ್ರತೆಯ ಪರಂಜ್ಯೋತಿಯ ಮುಂದೆ ಆ ಕಾಮದ ದೀಪದ ಹುಳುವಿನಾಟ ಏನು ನಡೆದೀತು!

ಮಳೆಯಾಗುವಾಗ ಸ್ವಲ್ಪವೇ ಮಳೆಯಾದರೆ ಒಣಗಿ ನಿಂತ ಕಸ-ಕಡ್ಡಿಯೆಲ್ಲ ಕೊಳೆತು ವಿಪರೀತ ವಾಸನೆ ಬರುವುದು. ಆದರೆ ಮಳೆ ಧಾರಾಕಾರವಾಗಿ ಸುರಿದರೆ ಆ ಕಸಕಡ್ಡಿ ಕೊಚ್ಚಿಹೋಗಿ ವಾತಾವರಣ ಇನ್ನಷ್ಟು ಸ್ವಚ್ಛವಾಗದೆ? ನಿನ್ನ ಸಂಕಲ್ಪ, ತಪಸ್ಸುಗಳನ್ನು ವೃದ್ಧಿಗೊಳಿಸು. ನನಗೆ ಪೂರ್ಣವಿಶ್ವಾಸವಿದೆ —ನೀನು ಎಂದೂ ಕಲಂಕಿತಳಾಗುವುದಿಲ್ಲ, ಪರಿವರ್ತನೆಗೊಳ್ಳುವುದಿಲ್ಲ, ಮಾತ್ರ ವಲ್ಲ ನೀನು ಕಾಲಿಡುವ ಪರಿಸರವನ್ನೇ ಬದಲಿಸುವೆ....'

'ನನಗೂ ಆ ಆತ್ಮವಿಶ್ವಾಸ ಇದೆ ಗುರುಗಳೆ. ಜೊತೆಗೆ ನಿಮ್ಮ ಕಾರುಣ್ಯದ ರಕ್ಷೆಯೂ ಇದೆ. ಆದರೆ....ನನಗೆ ಇನ್ನೊಂದು....ಭಯ.'

'ಇದು ವಿಚಿತ್ರ ಜಗತ್ತು; ಒಳಗಿನ ವ್ಯಕ್ತಿತ್ವವನ್ನು ಅರಿಯಲೆತ್ನಿಸುವುದಕ್ಕಿಂತ ಹೊರಗಣ ಪರಿಸರದಿಂದ ವ್ಯಕ್ತಿಯ ನಿಲುವನ್ನು ಅಳೆಯುವುದೇ ಹೆಚ್ಚು; ಇರುವಿಕೆಗಿಂತ ತೋರುವಿಕೆಯನ್ನು ಗಮನಿಸುತ್ತದೆ. ವಿಲಾಸದ ತಾಣವಾದ ಅರಮನೆಯಲ್ಲಿ, ಆ ಕಾಮುಕರಾಜನ ದೃಷ್ಟಿವಲಯದಲ್ಲಿದ್ದೂ ನನ್ನ ಪವಿತ್ರತೆಯನ್ನು, ಬ್ರಹ್ಮಚರ್ಯವನ್ನು ಕಾಯ್ದುಕೊಂಡರೂ ಈ ಜಗತ್ತು ನಂಬೀತೆ....?' ಮಹಾದೇವಿ ದುಃಖತಪ್ತವಾದ ಮುಖವನ್ನು ತಗ್ಗಿಸಿ, ಕಣ್ಣೊರೆಸಿಕೊಂಡಳು.

'ಲೋಕದ ಈ ಭಾವನಿಂದೆಗೆ ಹೆದರಬೇಕಿಲ್ಲ ತಾಯಿ. ಬಸವಣ್ಣನವರು ಹೇಳುವುದಿಲ್ಲವೇ, ಈಚಲ ಮರದ ಕೆಳಗೆ ಒಂದು ಹಾಲಿನ ಗಡಿಗೆ ಇದ್ದರೆ, ಅದನ್ನು ಹಾಲು ಅನ್ನದೆ ಸುರೆಯೆಂದೇ ತಿಳಿಯುವರು. ವಾಸ್ತವಿಕವಾಗಿ ಅದು ಹಾಲೇ ಇದ್ದರೂ ಲೋಕದ ದೃಷ್ಟಿಯಲ್ಲಿ ಅದು ಸುರೆ. ಇಂತಹ ಭಾವನಿಂದೆಯಿಂದ ಸಾಧನೆಗೆ ಏನೂ ತೊಂದರೆಯಾಗದು. ಪಾಕಗೃಹದಲ್ಲಿ ಒಂದು ಉರಿವ ದೀವಿಗೆಯನ್ನು ಇಟ್ಟರೆ, ಸುತ್ತಲೂ ಹರವಿಕೊಂಡ ಹೊಗೆಯ ತೆರೆಯಲ್ಲಿ ದೂರದಿಂದ ದೀವಿಗೆ ಮಂಕಾದಂತೆ ತೋರಿದರೂ ಅದು ನಿಶ್ಚಯವಾಗಿಯೂ ಮಂಕಾಗಿರದು. ಆ ಹೊಗೆಯ ಪೊರೆ ಚದುರಿಹೋದ ನಂತರ ದೀವಿಗೆಯು ತೀಕ್ಷ್ಣತೆ ಮತ್ತೆ ಗೋಚರವಾಗುವುದು. ಅದಂಷ್ಟೇ....ದೀವಿಗೆಯಲ್ಲೇ ಕುಡಿ ಕಟ್ಟಿದರೆ ಮಾತ್ರ....' ತೀಕ್ಷ್ಣವಾಗಿ ನೋಡಿದರು ಮಹಾದೇವಿಯ ಹೃದಯವನ್ನು ಮಥಿಸುವಂತೆ.

'ಆ ಭಯ ಬೇಡ ಗುರುದೇವಾ....ಹಿಮಾಲಯದ ಮಂಜು ಬೆಟ್ಟವೇ ಹತ್ತಿಕೊಂಡು ಉರಿಯಲಿ, ಚಂದ್ರನು ಬಿಸಿಯಾಗಿ ಉರಿಯುವ ಅಗ್ನಿಕುಂಡವಾಗಲಿ, ಆದರೆ ಎಂಥದೇ ಪ್ರಸಂಗದಲ್ಲಿ ಚನ್ನಮಲ್ಲಿಕಾರ್ಜುನನ ಚನ್ನಸತಿಯನ್ನು, ನಿಮ್ಮ ಈ ಕರುಣೆಯ ಕಂದನನ್ನು, ಯಾವ ಶಕ್ತಿಯೂ ಪತನಿಸಲು ಸಾಧ್ಯವಿಲ್ಲ....ಈ ವಿರಕ್ತಿ-ವಿಲಾಸ, ತ್ಯಾಗ-ಭೋಗಗಳ ಹೋರಾಟದಲ್ಲಿ ನನ್ನ ಪ್ರಾಣವನ್ನೇ ಪಣವಾಗಿ ಇರಿಸುವೆ. ಆಶೀರ್ವದಿಸಿರಿ....' ವಿಲಕ್ಷಣ ಕೆಚ್ಚಿನಿಂದ ಆತ್ಮವಿಶ್ವಾಸವನ್ನು ಒಟ್ಟುಗೂಡಿಸಿಕೊಂಡು ಎದ್ದು, ಗುರುಗಳ ಪಾದಕ್ಕೆ ನಮಸ್ಕರಿಸಿದಳು.

ಗುರುಲಿಂಗದೇವರು ವಿಭೂತಿಯ ಗಟ್ಟಿಯೊಂದನ್ನು ಮಂತ್ರಿಸಿ ಕೈಲಿಟ್ಟು, ಎರಡೂ ಹಸ್ತಗಳನ್ನು ಮಹಾದೇವಿಯ ನೆತ್ತಿಯ ಮೇಲಿರಿಸಿ, ಕಣ್ಣು ಮುಚ್ಚಿ ಹರಸಿದರು. ಗುರು ಕರುಣೆಯ ವಜ್ರಕವಚವನ್ನು ಹೊದ್ದ ವಿಶ್ವಾಸದಿಂದ ಮಹಾದೇವಿ ಉತ್ಸಾಹವೇ ಮೂರ್ತಿಗೊಂಡು ಹೊರಟಳು. ಆದರೂ ಮನದ

ಸೂಲೆಯಲ್ಲೊಂದು ಮುಳ್ಳು ಅಳುಕುತ್ತಿತ್ತು—

'ಗಾಢವಾದ ಅರಣ್ಯದಲ್ಲಿ ಇದೊಂದೇ ಕಾಲುದಾರಿ ಈಗ ಕಾಣುತ್ತಿರುವುದು. ಕಾಲುದಾರಿಗಳು ಕಾಡಿನ ಹೊರಗೆ ಕೊಂಡೊಯ್ಯುವ ಸಂಭವವಿದ್ದರೂ, ಸಾಮಾನ್ಯವಾಗಿ ದಾರಿತಪ್ಪಿಸುವ ಸಂಭವವೇ ಹೆಚ್ಚು. ಅಂದಾಗ....ಇದು ಎಲ್ಲಿಗೊಯ್ಯುವುದೋ....?' ಹೃದಯ ನಡುಗಿತು.

ಹೊಯ್ದಾಡುವ ಧೈರ್ಯವನ್ನು ಮರಳಿ ಗಟ್ಟಿಗೊಳಿಸಿ ಅಂದುಕೊಂಡಳು :

'ಚನ್ನಮಲ್ಲಿಕಾರ್ಜುನಾ....ನಿನ್ನ ಕಾರುಣ್ಯದ ಪಂಜೊಂದಿದ್ದರೆ ನಾನೀ ವಿಪತ್ತಿನ ಅರಣ್ಯದಿಂದ ನಿಶ್ಚಿತವಾಗಿ ಪಾರಾಗುವೆ....'

* * *

ಶೈಲಜೆಯ ಒಡನೆ ಮಹಾದೇವಿ ಮೌನವಾಗಿ ಹೆಜ್ಜೆ ಇರಿಸತೊಡಗಿದಳು. ಇಂತಹ ಘೋರ ವಿಪತ್ತು ಎದುರಾಗುತ್ತಿರುವಾಗಲೂ ಮಹಾದೇವಿ ತನ್ನೊಡನೆ ಏನೂ ಮಾತನಾಡದುದನ್ನು ಕಂಡು ಶೈಲಜೆ ಅಚ್ಚರಿಗೊಂಡಳು. ಕೊಡವು ತುಂಬಿದಾಗ ತುಳುಕುವಿಕೆ ನಿಲ್ಲುವಂತೆ ಬಹುಶಃ ದುಃಖದ ಕೊಡ ತುಂಬಿ ಮಾತು ನಿಂತಿರಬೇಕು ಎಂದುಕೊಂಡಳು. ತನ್ನ ಪ್ರಾಣಪ್ರಿಯ ಗೆಳತಿಗೆ ಈ ಪರಿಸ್ಥಿತಿ ಒದಗಿದುದಕ್ಕೆ ಆಕೆಗೂ ಅಳತೆಗೆ ಮೀರಿದ ದುಃಖವಾಗಿತ್ತು. ಮೂಕಳಾಗಿ ದಿಟ್ಟಿಸಿದಳು. ಎಷ್ಟೇ ಚಿಕಿತ್ಸಕಬುದ್ಧಿಯಿಂದ ನಿಟ್ಟಿಸಿದರೂ ಮಹಾದೇವಿಯ ಮನದ ಭಾವನೆಗಳನ್ನು ಅರಿಯಲಾಗದೆ ಸೋತಳು. ಉದ್ವೇಗ, ನಿರಾಶೆ, ಭೀತಿ ಯಾವುವೂ ಇಲ್ಲದ ನಿರ್ಲಿಪ್ತ ಭಾವ ಅಲ್ಲಿ ತಳವೂರಿತ್ತು.

ಮಹಾದೇವಿ ಮುಂಬಾಗಿಲಿಗೆ ಬರುತ್ತಿದ್ದಂತೆಯೇ ಕಾಯುತ್ತಿದ್ದ ಭಟರು ಸರಿದು ನಿಂತು ಒಳಗೆ ಬಿಟ್ಟರು. ನಡುಮನೆಯಲ್ಲಿ ಕುಳಿತ ವಸಂತಕ, ಮಹಾದೇವಿ ಒಳಗೆ ಬರುತ್ತಲೇ ಆಕೆಯೊಡನೆ ದರ್ಪದಿಂದ ವರ್ತಿಸಬೇಕೆಂದು ದೃಢ ಸಂಕಲ್ಪಮಾಡಿದ್ದವನು, ಅವನಿಗರಿಯದಂತೆ ಎದ್ದುನಿಂತ.

'ಶರಣುಗಳು....ತಾವು ದೀರ್ಘಕಾಲದಿಂದ ನಿರೀಕ್ಷಣೆಯಲ್ಲಿದ್ದಿರೇನೋ ? ತಡವಾದುದಕ್ಕೆ ಕ್ಷಮಿಸಿರಿ; ನಾನೇನು ಇನ್ನೂ ನಿಮ್ಮ ರಾಣಿಯಾಗಿಲ್ಲ. ಈಗಲೇ ಏಕೆ ಎದ್ದು ನಿಲ್ಲುವ ಕಟ್ಟುನಿಟ್ಟು ? ಆಸೀನರಾಗಿರಿ....' ಹಗುರವಾಗಿ ಮುಗುಳ್ನಕ್ಕಳು ಮಹಾದೇವಿ.

'ದಟ್ಟವಾದ ಕಾರ್ಮೇಘಗಳಿಂದ ತುಂಬಿದ ಆಕಾಶವು ಸಿಡಿಲು, ಮಿಂಚುಗಳ ರಣರಂಗವಾಗಬಹುದು' ಎಂದು ನಿರೀಕ್ಷಿಸಿದ್ದವನಿಗೆ, ಮೋಡಗಳೆಲ್ಲ ನಿರಾಳವಾಗಿ ಸರಿದುಹೋಗಿ ಇದ್ದಕ್ಕಿದ್ದಂತೆಯೇ ಸೂರ್ಯನ ಹೊಂಬೆಳಗು ಚೆಲ್ಲಿದರೆ ಆಶ್ಚರ್ಯವಾಗುವಂತೆ, ಪ್ರಬಲನಾದ ಶತ್ರುವನ್ನೆದುರಿಸಲು ದೀರ್ಘ ಕಾಲದ ಶಸ್ತ್ರಾಸ್ತ್ರಗಳ ಸಿದ್ಧತೆ ಮಾಡಿಕೊಂಡಿದ್ದು, ಮೈಮೇಲೆ ಎರಬಂದ ಅವ

ನೊಡನೆ ಕಣಕ್ಕೆ ಇಳಿಯುವ ಉತ್ಸಾಹದಲ್ಲಿರುವಾಗಲೇ ಆ ಶತ್ರುವು ಹಿಂದೆ ಸರಿದು, ಯುದ್ಧವು ನಡೆಯದ ಸುದ್ದಿ ಹಬ್ಬಿದಾಗ ಶೂರನು ಸ್ತಂಭೀಭೂತ ನಾಗುವಂತೆ; ಮಹಾದೇವಿಯ ಆವೇಶದ ವರ್ತನೆಯನ್ನು ನಿರೀಕ್ಷಿಸಿ, ಆಕೆ ಯೊಡನೆ ವಾಗ್ಯುದ್ಧಕ್ಕೆ ಎಲ್ಲ ಬಗೆಯ ಮಾತಿನ ಅಸ್ತ್ರಗಳನ್ನು ಜೋಡಿಸಿ ಕೊಂಡು ಕಾಯುತ್ತಲಿದ್ದ ವಸಂತಕನು ಮಹಾದೇವಿಯ ಶಾಂತವರ್ತನೆ, ಮುಗುಳ್ನಗೆಗಳಿಂದ ದಿಗ್ಭ್ರಾಂತನಾಗಿ ಕುಳಿತ. ಮಹಾದೇವಿಯ ನಿನ್ನೆಯ ಮತ್ತು ಇಂದಿನ ವರ್ತನೆಗಳಲ್ಲಿ ಕತ್ತಲೆ ಬೆಳಕುಗಳ ಅಂತರವಿತ್ತು.

ತನ್ನ ಅಸ್ತ್ರ ಸಮರ್ಪಕವಾಗಿ ಕೆಲಸಮಾಡಿದುದನ್ನು ಅರಿತು ಮಹಾದೇವಿ ಇನ್ನೂ ಹಸನ್ಮುಖಿಯಾಗಿ ಹೇಳಿದಳು,

'ನಿನ್ನೆ ನಾನು ಬಹಳಷ್ಟು ದುಡುಕಿದೆನೇನೋ ಎನ್ನಿಸುತ್ತಿದೆ. ಹಿರಿಯ ರಾದ ತಮಗೆ ಅನುಚಿತವಾದ ಮಾತನಾಡಿ, ಮಹಾರಾಜರ ಕಾಣಿಕೆಗಳನ್ನು ನಿರಾಕರಿಸಿದೆನು. ಅದಕ್ಕಾಗಿ ಪಶ್ಚಾತ್ತಾಪವಾಗುತ್ತಿದೆ. ನಿಮಗೆ ನನ್ನ ಮಾತಿನಿಂದ ನೋವಾಗಿದ್ದರೆ ಮಗಳ ಮಾತೆಂದು ಕ್ಷಮಿಸಿಬಿಡಿರಿ....' ವಸಂತಕ ಕರಗಿ ನೀರಾಗಿದ್ದ. ಉರುಳುವ ಬಂಡೆಗಲ್ಲನ್ನೆದುರಿಸಲು ಸಿದ್ಧತೆಯಲ್ಲಿದ್ದನನಿಗೆ ಅದು ಹೂವಿನ ಮಾಲೆಯಾಗಿ ಕೊರಳಿಗೆ ಬಿದ್ದಂತಾಯಿತು. ಸಂತೋಷಚಿತ್ತ ನಾಗಿ ಕೇಳಿದ,

'ಪಶ್ಚಾತ್ತಾಪವೇ ಪ್ರಗತಿಯ ಮೆಟ್ಟಲು; ತಮ್ಮ ನಿರ್ಧಾರವನ್ನು ಈಗ ಲಾದರೂ ಸ್ಪಷ್ಟವಾಗಿ ತಿಳಿಸುವಿರಾ....?'

'ತಿಳಿಸಿದಂತೆಯೇ ಆಗಿದೆ. ಆದರೆ ಆದಕ್ಕೆ ಮುನ್ನ ಒಂದೇ ಆತಂಕ....'

'ಸಂಕೋಚವಿಲ್ಲದೆ ಹೇಳಿರಿ....'

'ನನ್ನ ತಾಯಿತಂದೆಯರ, ಮನೆತನದ ಶ್ರೇಯಸ್ಸಿಗಾಗಿ ನಾನು ಐದು ವಾರಗಳ ಒಂದು ವ್ರತ ಹಿಡಿದಿರುವೆ. ಒಂದು ವಾರ ಮುಗಿಯುತ್ತ ಬಂದಿದೆ. ಒಮ್ಮೆ ಸಂಕಲ್ಪ ಕೈಗೊಂಡಮೇಲೆ ಅದಕ್ಕೆ ಭಂಗ ಬರಬಾರದು....ಹಾಗೇನಾ ದರೂ ಭಂಗವಾಗಿ, ಅಪೂರ್ಣವಾದರೆ ಅದನ್ನು ಭಂಗಪಡಿಸಿದವರಿಗೆ ಘೋರ ವಾದ ಕೆಡುಕಾಗುವುದು. ಇಂದೇ ನಾನು ಅರಮನೆಗೆ ಬರಬಹುದು, ಆದರೆ ವ್ರತಕ್ಕೆ ಧಕ್ಕೆಯಾಗಿ ರಾಜರಿಗೆ ಕೆಡುಕಾಗಬಾರದಷ್ಟೆ. ಈಗ ಹೆತ್ತವರ ಹಿತಾ ಸಕ್ತಿಗಾಗಿ ಕೈಗೊಂಡ ಈ ವ್ರತವನ್ನು ಇನ್ನು ಮುಂದೆ ರಾಜರ ಶ್ರೇಯಸ್ಸಿಗೆ ಸಂಕಲ್ಪಿಸಿ ಮುಂದುವರಿಸುವ ಬಯಕೆ ಇದೆ....'

'ಒಳ್ಳೆಯದೇ ಆಯಿತಲ್ಲ; ಅರಮನೆಯಲ್ಲಿ ಮಾಡಿದರೆ ಒಳ್ಳೆಯದಾಗುವುದು?....' ವಸಂತಕ ಕೇಳಿದ.

'ಬರುತ್ತವೆ....ಆದರೆ ಐದುವಾರಗಳ ಕಾಲ ಯಾರನ್ನೂ ಮುಟ್ಟಿಸಿಕೊಳ್ಳ ಬಾರದು. ಕೇವಲ ಹಣ್ಣು-ಹಾಲಿನ ಫಲಾಹಾರ. ಇರುಳಿನ ಎರಡನೆಯ ಜಾವದಿಂದ ಬೆಳಗಿನ ಮೊದಲ ಜಾವದವರೆಗೆ ಮಾನವರ ಮುಖದರ್ಶನವಾಗ ಬಾರದು, ಪೂರ್ತಿಯಾಗಿ ಮಡಿಯಲ್ಲಿ ಇರಬೇಕಾಗುವುದು. ಬಹು ಕಟ್ಟು ನಿಟ್ಟಿನ ವ್ರತವಿದು....'

'ರಾಜರು ತಮ್ಮ ದರ್ಶನಕ್ಕಾಗಿ ಚಕೋರನಂತೆ ನಿರೀಕ್ಷಿಸುತ್ತಿದ್ದಾರೆ, ಇಷ್ಟು ದಿನಸಕಾಲ ತಡೆಯುವುದು ಕಷ್ಟಸಾಧ್ಯ....'

'ಕೇಳಿನೋಡಿರಿ ; ಒಪ್ಪಿದರೆ ರಾಜ್ಯಲಕ್ಷ್ಮಿ ಸ್ಥಿರವಾಗಿ ಉಳಿಯುವಳು. ಮತ್ತು ಈ ಕಾಲಾವಧಿಯಲ್ಲಿ ನಾನು ಹಗಲು ವೇಳೆಯಲ್ಲಿ ಗುರುಲಿಂಗ-ಜಂಗಮ ಪೂಜೆಯನ್ನು ಮಾಡಬೇಕಾಗುವುದು.'

'ಮತ್ತೆ....ನಿಮ್ಮ ನಿಯಮಗಳು ಏನೇನಿವೆಯೋ ಈಗಲೇ ತಿಳಿಸಿಬಿಡಿರಿ....'

'ನಮ್ಮ ಧರ್ಮದಲ್ಲಿ ಪ್ರತಿಯೊಬ್ಬರಿಗೆ ಕಡ್ಡಾಯವಾಗಿ ದೀಕ್ಷೆಯಾಗಬೇಕು. ನನಗೆ ದೀಕ್ಷೆಯಾಗಿದೆ ; ಆದ್ದರಿಂದ ಅರಸರೊಡನೆ ಮದುವೆಯಾಗುವದಾದರೆ ಅವರಿಗೆ ನಮ್ಮ ಧರ್ಮದ ಲಿಂಗದೀಕ್ಷೆ ಆಗಲೇ ಬೇಕು. ಬತ್ತ-ಅಕ್ಕಿಗಳನ್ನು ಬೆರೆಸಿ ಹೇಗೆ ಅನ್ನಮಾಡಲು ಬರದೋ, ಹಸಿ ಬೆಣ್ಣೆ-ಕಾದತುಪ್ಪಗಳನ್ನು ಕೂಡಿಸಿಡಲು ಹೇಗೆ ಬರದೋ ಹಾಗೆ ಸಂಸ್ಕಾರಸಹಿತರು, ಸಂಸ್ಕಾರರಹಿತ ರೊಡನೆ ಬೆರೆಯಲಾಗದು. ಒಂದು ವೇಳೆ ಈ ಐದು ವಾರಗಳ ಅವಧಿಯಲ್ಲಿ ಮೂರು ತಪ್ಪುಗಳನ್ನೇನಾದರೂ ರಾಜರು ಮಾಡಿದ್ದಾದರೆ, ಆಗ ಅವರು ನನ್ನ ಮೇಲೆ ತಪ್ಪು ಹೊರಿಸಲಾಗದು. ಅಂಥ ಪ್ರಸಂಗದಲ್ಲಿ ಒಂದು ಕ್ಷಣವೂ ನಾನು ಅರಮನೆಯಲ್ಲಿ ಇರೆನು. ಈ ಎಲ್ಲ ನಿಯಮಗಳನ್ನು ರಾಜರಿಗೆ ಅರುಹಿರಿ; ಅವರು ಒಪ್ಪಿದರೆ ಸಂತೋಷ....'

ವಸಂತಕ ಒಂದೊಂದನ್ನೂ ಎಚ್ಚರಿಕೆಯಿಂದ ಪರಿಶೀಲಿಸುತ್ತಿದ್ದ.

'ಅತಿ ಮುಖ್ಯವಾದ ಇನ್ನೊಂದು ನೇಮವೆಂದರೆ ನನ್ನ ತಾಯಿ ತಂದೆಯ ರನ್ನು ಕಾರಾಗೃಹದಿಂದ ಕರೆತರಬೇಕು. ಅವರು ಮನೆಯನ್ನು ಸೇರಿದ ಬಳಿಕ ವಷ್ಟೇ ನಾನು ಇಲ್ಲಿಂದ ಹೊರಡುವೆ....'

'ನಿಮ್ಮ ತಾಯಿತಂದೆಯರನ್ನು ಬಂಧಿಸಿದುದು ಅಪರಾಧವಾಯಿತು. ಕ್ಷಮೆ ತೋರಿರಿ.' ವಸಂತಕ ದೈನ್ಯತೆಯಿಂದ ಕೇಳಿದ.

'ಚಿಂತಿಸದಿರಿ. ಬಹುಶಃ ಅವರು ನಿನ್ನೆಯ ನಿರ್ಧಾರವನ್ನೇ ನಿಮಗೆ ಪುನಃ ತಿಳಿಸಿರಬೇಕು. ನೊಂದುಕೊಂಡಾರೆಂದು ನನ್ನ ಮನಸ್ಸಿನ ಪರಿವರ್ತನೆಯನ್ನು ಅವರಿಗೆ ಹೇಳಿರಲಿಲ್ಲ. ನಾನು ಬರುವಷ್ಟರಲ್ಲಿ ಅವಸರದಿಂದ ಕೊಂಡೊಯ್ದು

ದ್ದೀರಿ....ಇಲ್ಲವಾದರೆ ನಾನೇ ಇದೆಲ್ಲವನ್ನು ಅವರಿಗೆ ಮನವರಿಕೆ ಮಾಡು ತ್ತಿದ್ದೆ....'

ಮಹಾದೇವಿಯ ವರ್ತನೆ ವಸಂತಕನನ್ನು ಅಚ್ಚರಿಯ ಕಡಲಲ್ಲಿ ತೇಲಿಸಿತು. ಅಂತರಂಗವನ್ನು ಅರಿಯುವ ದೃಷ್ಟಿಯಿಂದ ನೇರವಾಗಿ ದಿಟ್ಟಿಸಿದ; ಅಲ್ಲಿ ನಿರ್ಲಿಪ್ತತೆಯೊಂದೇ ಗೂಡುಕಟ್ಟಿತ್ತು.

ಮಹಾದೇವಿಯ ಅಂತರಂಗ ಮಿಡುಕುತ್ತಿತ್ತು. 'ಒಂದು ದೃಷ್ಟಿಯಿಂದ ನಾನು ವ್ರತವನ್ನು ಕೈಗೊಂಡುದು ಸಾಂಕೇತಿಕವಾದರೂ, ಸುಳ್ಳನ್ನು ಹೇಳುವ ಅಪರಾಧವನ್ನು ನಾನು ಮಾಡುತ್ತಿರುವೆನಲ್ಲ' ಎನ್ನಿಸಿ ತಳಮಳವಾಯಿತು. ಆದರೆ ತನ್ನನ್ನು ತಾನೆ ಸಂತೈಸಿಕೊಂಡಳು.

'ನಾನಾದರೂ ಏನು ಮಾಡಲಿ. ಪೂರ್ಣವಾಗಿ ನದಿಯ ಸೆಳವಿನ ವಿರುದ್ಧ ಹೋದರೆ ಅದು ಬಲು ಬೇಗನೆ ಶಕ್ತಿಹೀನ ಮಾಡುವುದು. ಅದನ್ನು ಅನುಸರಿಸು ವಂತೆಯೇ ಹೋಗಿ, ವಿಚಕ್ಷಣತೆಯಿಂದ ಆ ಸೆಳವಿನ ವಲಯದಿಂದ ಪಾರಾಗ ಬೇಕಾಗುವುದು....'

'ಇಷ್ಟೇ ಅಲ್ಲ ಇಂತಹ ನನ್ನ ಸಣ್ಣ ಅಪರಾಧವನ್ನು ದೇವರು ಕ್ಷಮಿಸುವನು. ಹಾವಿನ ಡೊಂಕು ನಡಿಗೆ ಜಗತ್ತಿನ ದೃಷ್ಟಿಗೆ ವಿಪರೀತವಾಗಿದ್ದರೂ, ಹುತ್ತದ ಡೊಂಕಿಗೆ ಅತಿ ಅಚ್ಚುಕಟ್ಟಾಗಿ ಹೊಂದುವುದು. ನದಿಯ ಡೊಂಕು ನದಿ-ಸಮುದ್ರಗಳ ಕೂಟಕ್ಕೆ ಸಹಾಯಕವೆನಿಸುವದು. ಹಾಗೆಯೇ ಆಧ್ಯಾತ್ಮ ಜೀವಿಗಳ ಇಂತಹ 'ಡೊಂಕು'ಗಳು ಲಿಂಗದೇವನಿಗೆ ಪ್ರಿಯವಾದವು. *ಕ್ಷಮಾರ್ಹವಾದವು. ನನ್ನ ಈ ಹೋರಾಟವೆಲ್ಲ ಆ ಪ್ರಿಯ ಚನ್ನನಿಗಾಗಿ ತಾನೆ? ಅವನು ನಿಶ್ಚಯವಾಗಿಯೂ ಕ್ಷಮಿಸುವನು.'

ಎಷ್ಟೋ ಸಮಾಧಾನ ಎನ್ನಿಸಿತು.

'ಒಳ್ಳಿತು....ನಾನು ಅರಮನೆಗೆ ಹೋಗಿ ಅರಸರಿಗೆ ನಿಮ್ಮ ನಿಯಮಗಳನ್ನು ಅರುಹಿ, ಅವರ ಅಭಿಪ್ರಾಯವನ್ನು ತಿಳಿದು ಬರುವೆ. ತಾವು ಸಿದ್ಧರಾಗಿರಿ, ಬರುವಾಗ ನಿಮ್ಮ ತಾಯಿ ತಂದೆಯರನ್ನು ಕರೆತರುವೆ....' ವಸಂತಕ ಹೇಳಿದ.

'ಸಿದ್ಧವಾಗುವುದೇನೂ ಇಲ್ಲ; ಈಗ ನಾನಿರುವಷ್ಟೆ ನನ್ನ ಆಸ್ತಿ....' ಮುಗುನಗೆ ನಕ್ಕಳು.

'ಏನೇ ಆಗಲಿ, ತಾವು ಬಹುದೊಡ್ಡ ಮನಸ್ಸುಮಾಡಿ ರಾಜರನ್ನು ಕಾಪಾಡಿದಿರಿ, ಅವರ ಪ್ರಾಣ ಉಳಿಸಿದಿರಿ. ಅದಕ್ಕಾಗಿ ನಾನು ಚಿರಋಣಿ' ವಸಂತಕ ಕೃತಜ್ಞತೆ ತುಂಬಿ ಹೇಳಿದ.

---

* ಬ. ಷ. ವ. ೧೪೪

'ಇನ್ನೂ ಅನೇಕ ರೀತಿಯಿಂದ ಅವರನ್ನು ಉಳಿಸಬೇಕಾಗಿದೆ, ಅದಕ್ಕಾಗಿ ಒಪ್ಪಿರುವೆ....' ಸ್ಥಿತಪ್ರಜ್ಞಳಾಗಿ ನುಡಿದಳು. ವಸಂತಕನಿಗೆ ಆನಂದದಭರದಲ್ಲಿ ಈ ಮಾತು ಅಷ್ಟಾಗಿ ಒಳಗಿಳಿಯಲಿಲ್ಲ.

ವಸಂತಕ ನಿರ್ಗಮಿಸುತ್ತಲೇ ನಡುಮನೆಯ ಬಾಗಿಲಲ್ಲಿ ನಿಂತು ಎಲ್ಲವನ್ನೂ ಆಲಿಸುತ್ತಿದ್ದ ಶೈಲಜೆ ಅಳುತ್ತ ಹೊರಬಂದಳು.

'ಮಹಾದೇವಿ, ಇದೇನು ಮಾಡಿಬಿಟ್ಟೆ....!' ಅವಳನ್ನಪ್ಪಿ ಬಿಕ್ಕಿಬಿಕ್ಕಿ ಅಳ ತೊಡಗಿದಳು.

'ಶೈಲಜಾ, ನಿನ್ನ ಗೆಳತಿ ಆಡಿ ತೋರಿಸುವುದಿಲ್ಲ, ಮಾಡಿ ತೋರಿಸುವಳು ! ನಂಬು ಗೆಳತಿ....ಧೂಳಿ ಕಣಗಳು ಸೂರ್ಯಕಿರಣಗಳನ್ನು ಕಲಂಕಿತ ಮಾಡ ಲಾರವು ; ಆಕಾಶವನ್ನು ಮುಸಲಧಾರೆ ತೋಯಿಸಲಾರದು ; ಮಜ್ಜಿಗೆಯಲ್ಲಿ ಬೆಣ್ಣೆ ತೇಲುವುದೇ ವಿನಾ ಮುಳುಗದು....'

'ಅಂದರೆ....' ಆಶ್ಚರ್ಯದಿಂದ ನೋಡಿದಳು ಶೈಲಜ.

'ಈಗ ಏನೂ ಕೇಳಬೇಡ....ನೋಡಿ ತಿಳಿಯುವೆಯಂತೆ ! ಮತ್ತೆ ನಿನ್ನನ್ನು ಕಾಣಲಿಕ್ಕೆ ಈ ಜೀವನದಲ್ಲಿ ಆದೀತೋ ಇಲ್ಲವೋ ; 'ನಿನ್ನ ಬದುಕು ಬಂಗಾರ ವಾಗಲಿ. ಸಂಸಾರ ನಂದನವನವಾಗಲಿ ಎಂದು ಹಾರೈಸುವೆ....' ಮಹಾ ದೇವಿಯ ಧ್ವನಿ ಗದ್ಗದಿತವಾಯಿತು.

ಶೈಲಜೆ ನೀರವವಾಗಿ ರೋದಿಸುತ್ತಿದ್ದಳು.

'ಅಳುವುದರಲ್ಲಿ ಅರ್ಥವಿಲ್ಲ ಶೈಲಜೆ. ಈ ಬದುಕು ಒಂದು ಉಯ್ಯಾಲೆ. ಜಗದ ಬಯಲಲ್ಲಿ ತೂಗುತ್ತಿದೆ. ದ್ವಂದ್ವಗಳು ಇದರ ತುದಿಗಳು. ಆ ತುದಿ ಯಿಂದ ಈ ತುದಿಗೆ ತೂಗುವುದೇ ಇದರ ಸ್ವಭಾವ; ಬೆಳಗು-ಕತ್ತಲೆ, ಸುಖ-ದುಃಖ ಹೀಗೇ ತೂಗುವುದು. ವಿಧಿಯ ಕೈಗಳು ತೂಗುತ್ತಲಿರುವವು. ಅವನ ಕೈಗಳಿಂದ, ಶಿವನ ಕೈಗೆ ಉಯ್ಯಾಲೆಯನ್ನು ಹಸ್ತಾಂತರಿಸಬೇಕು....'

'ಸಾಕು ಮಹಾದೇವಿ....ನಾನು ಉಪದೇಶ ಕೇಳುವ ಸ್ಥಿತಿಯಲ್ಲಿಲ್ಲ....'

ತನ್ನನ್ನು ಅಪ್ಪಿಕೊಂಡು ರೋದಿಸುವ ಶೈಲಜೆಯ ತಲೆಯನ್ನು ಪ್ರೇಮದಿಂದ ನೇವರಿಸಿದಳು ಮಹಾದೇವಿ.

ಕೆಲವೇ ಕ್ಷಣಗಳಲ್ಲಿ ರಥವೊಂದು ಬಂದು ನಿಂತಿತಲ್ಲದೆ, ಕುದುರೆಗಳ ಖುರ ಪುಟ ಧ್ವನಿಯೂ ಕೇಳಿಬಂದಿತು. ಮಹಾದೇವಿ ಆ ಸದ್ದನ್ನು ಕೇಳಿ ಮಹಡಿ ಯಿಂದ ಇಳಿದುಬಂದಳು.

'ಚನ್ನಮಲ್ಲಿಕಾರ್ಜುನಾ ಹುಲ್ಲೆಯೊಂದನ್ನು ಹುಲಿಯ ಗವಿಗೆ ತಳ್ಳು ತ್ತಿರುವೆ....ಮುಂದಿನ ಬದುಕನ್ನು ನಾನರಿಯೆ. ಕೊಲ್ಲು ಕಾಯಿ ನಿನಗೆ ಸೇರಿ

ದುದು. ಗೌರಿಶಂಕರವನ್ನು ಮೆಟ್ಟಬಯಸಿದ ಸಾಹಸಿಯನ್ನು ಕೊಳ್ಳವೊಂದಕ್ಕೆ ದೂಡುವಂತಿದೆ ನಿನ್ನ ಪ್ರಯತ್ನ. ಆದರಿಷ್ಟೆ ನನ್ನ ಅಂಗಾಂಗಗಳು ತುಂಡು ತುಂಡಾಗಿ ಕಡಿಯಲ್ಪಡಲಿ, ಚಿತ್ರಹಿಂಸೆ ಕೊಡಲ್ಪಡಲಿ ಈ ನನ್ನ ಮೀಸಲು ಶರೀರವನ್ನು ಯಾವನಿಗೂ ಅರ್ಪಿಸುವುದಿಲ್ಲ.

ಕೋತಿಯ ಮರಿ ತಾಯನ್ನಪ್ಪುವ ಕ್ರಿಯೆಯಲ್ಲಿ ಶರಣಾಗತಿ ಇದ್ದರೂ, ಹೊಣೆಯು ಹೆಚ್ಚಾಗಿ ಮರಿಯ ಮೇಲಿರುವುದು. ಬೆಕ್ಕಿನಮರಿಗಳು ಕಣ್ಣು ಮುಚ್ಚಿ ಬಿದ್ದಿರುವವು ; ತಾಯಿಯೇ ಪೂರ್ಣವಾಗಿ ಹೊಣೆಹೊತ್ತು ಮಕ್ಕಳನ್ನು ರಕ್ಷಿಸುವುದು. ಹಾಗೆ ನಾನು ನನ್ನೆಲ್ಲ ಹೊಯ್ದಾಟಗಳನ್ನು ಬದಿಗೊತ್ತಿ ನಿನಗೆ ಶರಣಾಗಿರುವೆ. ಈ ಅಗ್ನಿಪರೀಕ್ಷೆಯಲ್ಲಿ ಅರಗಾಗಿ ಕರಗಿಸದೆ, ಚಿನ್ನವಾಗಿ ಪುಟಗೊಳಿಸಿ ನಿನ್ನೊಡಲಿಗೆ ಧರಿಸಿಕೋ....'

ಮಹಾದೇವಿ ಮೆಟ್ಟಲಿಳಿದು ಬರುವುದಕ್ಕೂ, ಓಂಕಾರ-ಲಿಂಗಮ್ಮರು ಹೊಸ್ತಿಲನ್ನು ದಾಟುವುದಕ್ಕೂ ವೇಳೆ ಕೂಡಿತು. ಲಿಂಗಮ್ಮ ಓಡಿ ಬಂದು ಮಗಳನ್ನು ಬಿಗಿದಪ್ಪಿದಳು. ಕೆಲವೇ ಕ್ಷಣಕಾಲ ಅಗಲಿದ್ದರೂ, ಯುಗಯುಗಗಳಿಂದ ಅಗಲಿದ್ದಂತೆ ಎನಿಸಿತ್ತಾಕೆಗೆ. ವಸಂತಕ ಹಿಂದಿನಿಂದ ಕಾಲಿರಿಸಿದ.

'ತಾಯೀ, ಅರಸರು ನಿಮ್ಮೆಲ್ಲ ನಿಯಮಗಳಿಗೆ ಒಪ್ಪಿದ್ದಾರೆ....ತಾವಿನ್ನು ಹೊರಡಬಹುದಲ್ಲ....' ಮಹಾದೇವಿ ತಾಯಿಯ ಕೈಗಳನ್ನು ಸರಿಸಿದಳು.

'ಆಗಲಿ....' ಎನ್ನುತ್ತ ಭಕ್ತಿಯಿಂದ ತಾಯಿಯ ಪಾದಗಳಿಗೆ ನಮಸ್ಕರಿಸಿ, ಮೇಲೆದ್ದು ಕೇಳಿದಳು :

'ಅವ್ವಾ, ನಾನು ಹೋಗಿ ಬರಲೇ ?....'

'ಎಲ್ಲಿಗವ್ವಾ....'

'ಅರಮನೆಗೆ....'

'ಹಾಂ....ಇದೇನು ನಿರ್ಧಾರ....?' ಲಿಂಗಮ್ಮ ಗಾಬರಿಗೊಂಡು ಕೇಳಿದಳು; ಓಂಕಾರ ಬೆಚ್ಚಿಬಿದ್ದು ನೋಡಿದ.

'ಅಹುದವ್ವಾ....ಈ ದುರ್ಭಾಗ್ಯೆಯನ್ನು ಹಡೆದ ಒಡಲನ್ನು ತಣ್ಣಗಿರಿಸಲು ಇದೊಂದೇ ಮಾರ್ಗ ಉಳಿದಿರುವುದು....' ನಿರ್ಲಿಪ್ತಳಾಗಿ, ಒತ್ತಿಬರುವ ದುಃಖ ತಡೆದು ಹೇಳಿದಳು.

'ಬೇಡ ತಾಯಿ....' ಲಿಂಗಮ್ಮನ ಕಣ್ಣು ಹನಿಯತೊಡಗಿದವು.

'ಅವ್ವಾ, ಇಲ್ಲವಾದರೆ ಮೂರೂ ಜನರು ಕಾರಾಗೃಹದಲ್ಲಿ ಮರಣವನ್ನಪ್ಪಬೇಕಾದೀತು. ನನ್ನನ್ನು ಹಡೆದು, ಸಾಕಿದ್ದಕ್ಕೆ ನಾನು ಆ ಕಾಣಿಕೆಯನ್ನು ನಿಮಗೆ ಸಲ್ಲಿಸಲೇ....?' ತುಟಿಯನ್ನು ಕಚ್ಚಿಕೊಂಡಳು ಮಹಾದೇವಿ.

ಲಿಂಗಮ್ಮ ಕಂಭದ ಮೇಲಿನ ಮಾಡಿನಲ್ಲಿದ್ದ ತೀಕ್ಷ್ಣವಾದ ಅಲಗೊಂದನ್ನು ತೆಗೆದಳು. ಆವೇಶದಿಂದ ವಸಂತಕನ ಬಳಿ ಧಾವಿಸಿ,

'ಅಣ್ಣಾ, ನೈತಿಕವಾಗಿ, ತಾತ್ತ್ವಿಕವಾಗಿ ನಮ್ಮನ್ನು ಭ್ರಷ್ಟರನ್ನಾಗಿ ಮಾಡುವುದಕ್ಕಿಂತ ಈ ಕತ್ತಿಯಿಂದ ಮೂವರನ್ನು ತುಂಡುತುಂಡು ಮಾಡಿ, ಆ ಕಡಿದ ತಲೆಗಳನ್ನು ನೀನು ನಿನ್ನೆ ತಂದಿರುವ ಹರಿವಾಣಗಳಲ್ಲಿ ಇರಿಸಿಕೊಂಡು ಹೋಗಿ ರಾಜನಿಗೆ ಎಡೆಮಾಡು' ಎಂದು ಹೇಳಿ ಅಲಗನ್ನು ಕೈಗಿಡಹೋದಳು. ವಸಂತಕ ಬೆಚ್ಚಿ ಹಿಂದೆ ಸರಿದ. ಅವನಿಗಾಗಲೇ ಹೃದಯ ಕಲಕಿ ಕಣ್ಣೀರು ತುಂಬಿದ್ದವು. ಈ ದೃಶ್ಯ ಅವನಲ್ಲಿ ಕರುಣೆಯ ತೆರೆಗಳನ್ನುಕ್ಕಿಸತೊಡಗಿತ್ತು. ಕಣ್ಣಿನಿಂದ ಜಾರಿದ ನೀರಿನ ಹನಿಗಳನ್ನು ತೋರಿಸಿಕೊಳ್ಳಬಾರದೆಂದು ಹಿಂದಕ್ಕೆ ಸರಿದು, ಹೊರಗೆ ನಡೆದ.

'ಅಪ್ಪಾ ನೀನೇನೂ ಹೆದರಬೇಡ; ನದಿಯ ಸುಳಿಯಲ್ಲಿ ಸಿಕ್ಕ ಬಲಶಾಲಿ ಸುಳಿಯಗುಂಟ ಒಳಗಿಳಿದು, ಅದು ಒಮ್ಮೆ ಮೇಲಕ್ಕೆ ಪುಟಿದಾಗ ಹೊರಬಂದು ತಪ್ಪಿಸಿಕೊಳ್ಳಬೇಕು. ಗಾಬರಿಗೊಂಡರೆ ಮುಳುಗುವುದು ನಿಶ್ಚಯ. ಸುಳಿಯು ಮುಳುಗಿಸುವುದು ಬಹು ಸಹಜ ಸತ್ಯವಾದರೂ, ಧೈರ್ಯಶಾಲಿ ಈಜುಗಾರ ತಪ್ಪಿಸಿಕೊಳ್ಳಲು ಸಾಧ್ಯವಿದೆ....'

'ಮಗಳೇ, ಅರಗಿಳಿಯಂತೆ ಬೆಳೆಸಿ ಆ ಬಾವುಗನ ಕೈಗೆ ಕೊಡಬೇಕಾಯಿತಲ್ಲ....' ಲಿಂಗಮ್ಮನ ದುಃಖ ತೀವ್ರಗೊಂಡಿತ್ತು.

'ಇಲ್ಲವ್ವಾ, ಈ ಅರಗಿಳಿಯ ರಕ್ಷಣೆಗೆ ಶಿವನ ಕಾರುಣ್ಯ, ಗುರುವಿನ ಕೃಪೆ, ನಿಮ್ಮ ಹರಕೆ, ನನ್ನ ಅಂತರಂಗಿಕ ವೈರಾಗ್ಯ ಎಂಬ ನಾಲ್ಕು ಸುತ್ತಿನ ಪಂಜರವಿದೆ. ಆ ಬೆಕ್ಕು ಅಷ್ಟು ಸುಲಭವಾಗಿ ತಿನ್ನಲಾರದು....'

'ಮಹಾದೇವಿ, ನಮಗಾಗಿ ನೀನು ಸಿಂಹದೊಡನೆ ಸರಸವಾಡಲು ಹೋಗುವುದು ಬೇಡ ತಾಯಿ....' ಓಂಕಾರ ಹೇಳಿದ.

'ನಿಮಗಾಗಿ ಅಲ್ಲ ಅಪ್ಪ, ನನಗಾಗಿ ನಾನು ಹೋಗುತ್ತಿರುವೆ....'

'ಅಂದರೆ....'

'ಈಜು ಕಲಿಯುವಾಗ ಕಲಿಸುವವನು ಕಲಿಯುವವನಿಗೆ "ನೀರಿಗೆ ಇಳಿ" ಎಂದರೆ ಅವನು ಇಳಿಯಲಂಜುವನು. ಆಗ ಕಲಿಸುವವನು ದಂಡೆಯ ಮೇಲಿಂದ ದೂಡಿಬಿಡುವನು. ಹಾಗೆಯೇ ಹೊರಪ್ರಪಂಚಕ್ಕೆ ಕಾಲಿಡಲಂಜುವ ನನ್ನಂಥ ಮುಗ್ಧೆಯನ್ನು, ಭವಸಾಗರವನ್ನು ದಾಟುವ ಬಲ್ಲಿದೆಯನ್ನಾಗಿ ಮಾಡಲು ಚನ್ನಮಲ್ಲಿಕಾರ್ಜುನನು ದೂಡುತ್ತಿರುವನಪ್ಪ... ನೀನು ಹೆದರಬೇಡ. ಅವನು ನನ್ನೊಡನೆ ಇದ್ದು ಈಜಲು ಕಲಿಸುವನು....'

'ಮಗಳೇ....ಅಂತಹ ವಿಲಾಸ, ವಿಪತ್ತು, ವಿಘ್ನಗಳ ಮಧ್ಯೆ ನಿನ್ನ ವೈರಾಗ್ಯವನ್ನು ಕಾಪಾಡಿಕೊಳ್ಳಬಲ್ಲೆಯಾ ?....' ಓಂಕಾರ ಪ್ರಶ್ನಿಸಿದ.

'ದೊಡ್ಡದೊಂದು ಗಿಡವಿದೆ, ಅದರ ಕೊಂಬೆ, ರೆಂಬೆಗಳನ್ನು ಹತ್ತಾರು ಕೊಡಲಿಗಳು ಕಡಿಯಲಿ, ಮತ್ತೆ ಚಿಗುರುವುದು. ಹೊರಗಿನ ವಿಘ್ನಗಳಾವುವೂ ಅದನ್ನು ನಾಶಗೈಯಲಾರವು. ಒಂದು ವೇಳೆ ಗೆದ್ದಲಿಯು ಬೇರನ್ನು ತಿಂದರೆ ಮಾತ್ರ ಹೊರಗಿನ ಯಾವ ಏಟುಗಳು ಬೀಳದಿದ್ದರೂ ಅಭದ್ರವಾದ ಗಿಡ ಸುಳಿ ಗಾಳಿಯೊಂದರ ಸ್ಪರ್ಶಕ್ಕೆ ಉರುಳಿ ಬೀಳುವುದು. ಈ ವಿಘ್ನಗಳು ನನ್ನ ಆದರ್ಶವೃಕ್ಷದ ಪ್ರಾಣ ಸೆಳೆಯಲಾರವು. ಆದರಿಷ್ಟೆ.....ನನ್ನ ಅಂತರಂಗದ ಆದರ್ಶದ ಬೇರನ್ನು ದೌರ್ಬಲ್ಯವೆಂಬ ಗೆದ್ದಲಿ ತಿನ್ನಬಾರದು. ಆ ಗೆದ್ದಲಿ ತಿನ್ನಲು ನಾನು ಅವಕಾಶ ನೀಡೆನೆಂಬ ವಿಶ್ವಾಸ ನನಗಿದೆ. ತಿನ್ನಲು ಆಸ್ಪದವೂ ಇಲ್ಲ. ಗಿಡ ಜೀವಂತವಾಗಿ ರಸವಾಡುತ್ತಿದ್ದರೆ ಗೆದ್ದಲಿ ಹತ್ತುವ ಸಂಭವ ಇರದು. ನನ್ನ ವಿರಕ್ತಿಯ ವೃಕ್ಷದಲ್ಲಿ ಶಿವಪ್ರೇಮದ ರಸ ಸದಾ ಆಡಿ ಅದು ಜೀವಂತವಾಗಿರುವುದು. ಈ ಬಗ್ಗೆ ನಿಮಗೆ ಪೂರ್ಣವಿಶ್ವಾಸವಿರಲಿ....'

'ತಲೆ ಗಟ್ಟಿಯಿದೆಯೆಂದು ಕಲ್ಲು ಹಾಯುವ ಸಾಹಸದ ನಿರ್ಧಾರವನ್ನು ಏಕೆ ಕೈಗೊಂಡೆ ಮಗಳೇ ?' ಲಿಂಗಮ್ಮ ಕಾತುರದಿಂದ ಕೇಳಿದಳು.

'ಇದು ಗುರುಗಳ ಸಲಹೆಯೂ ಕೂಡ....'

'ಅಹುದೇ....?' ಪತಿ-ಪತ್ನಿಯರಿಬ್ಬರೂ ಚಕಿತರಾದರು.

'ನಮ್ಮನ್ನು ವಿಚಿತ್ರ ಧರ್ಮಸಂಕಟಕ್ಕೆ ಸಿಕ್ಕಿಸುತ್ತಿರುವೆ ಮಗಳೇ....'

'ಇಲ್ಲ ಅಪ್ಪ, ನಿಮ್ಮ ದಿಟ್ಟ ನಿಲುಮೆ, ತತ್ತ್ವನಿಷ್ಠೆಗಾಗಿ ಕಾರಾಗೃಹ ಕಂಡು ಆದರ್ಶ ತಾಯಿತಂದೆಯರ ಸಾಲಿನಲ್ಲಿ ಹೆಸರನ್ನು ಉಳಿಸಿಕೊಂಡಿರಿ. ನಿಮ್ಮನ್ನು ಮುಪ್ಪಾವಸ್ಥೆಯಲ್ಲಿ ಕಾರಾಗೃಹದಿಂದ ತಪ್ಪಿಸುವ ಪ್ರಯತ್ನದಲ್ಲಿ ನಾನು ಯಶಸ್ವಿಯಾದೆ. ಮುಂದಿನ ಕಷ್ಟಪರಂಪರೆಯ ಕಡಲೊಳಗೆ ಈಜುವ ಕಾರ್ಯದ ಜಯಾಪಜಯಗಳ ಕೀರ್ತಿ-ಅಪಕೀರ್ತಿಗಳು ನನ್ನ ಪಾಲಿನವು....'

'ಒಂಟಿ ಹೆಣ್ಣು ವಿಲಾಸಿಯ ಅರಮನೆಯಲ್ಲಿದ್ದು ತನ್ನ ಪವಿತ್ರತೆ ಕಾಯ್ದು ಕೊಂಡರೂ ಲೋಕವೇನಂದೀತವ್ವಾ ! ನಿನ್ನದು ಲೋಕವಿರೋಧಿ ನಡೆ.'

'ಅವ್ವಾ, ಜಗತ್ತನ್ನು ಸಾಕ್ಷಿಯಾಗಿರಿಸಿಕೊಂಡು ನಾನು ಬಾಳುತ್ತಿಲ್ಲ, ಶಿವನನ್ನು ಸಾಕ್ಷಿಯಾಗಿರಿಸಿಕೊಂಡು ಬಾಳುತ್ತಿರುವೆ. ಜಗತ್ತಿಗಾಗಿ ಪವಿತ್ರ ವಾಗಿರಬಯಸುತ್ತಿಲ್ಲ, ಶಿವನ ಸತಿಯೆಂದು ಪವಿತ್ರವಾಗಿರಬಯಸುವೆ. ಕುರುಡು ಜಗತ್ತನ್ನು ಆದರ್ಶವಾಗಿರಿಸಿಕೊಳ್ಳಬೇಡ ತಾಯಿ ! ಬೀಸುವ ಕಲ್ಲಿನ ತಿರುಗುವ ಚಕ್ರದ ಕೆಳಗಿನ ಕಾಳುಗಳು ಪುಡಿಯಾಗುವವು, ಸ್ಥಿರವಾಗಿ ನಿಂತ ತಳಗೂಟದ

ಸುತ್ತಲೂ ಇರುವ ಕಾಳು ಹಿಟ್ಟಾಗವು. ವಿಕಾರದ ಮುದ್ದೆಯಾದ ಜಗದ ಒರೆಗಲ್ಲು ಬೇಡ, ನಿರ್ವಿಕಾರಿ ಶಿವನ ಪ್ರೇಮದ ಒರೆಗಲ್ಲೊಂದೇ ಸಾಕು. ಈ ಜಗತ್ತೂ....!' ವಿಷಾದದ ವಿಲಕ್ಷಣನಗೆ ನಕ್ಕು, ಸುತ್ತೆ ಹೇಳಿದಳು :

'ಆನೆಯು ನಡೆಯುವಾಗ ಮಗ್ಗುಲಲ್ಲೇ ಕಣ್ಮುಚ್ಚಿ ಕುಳಿತು, ಅದು ಹಾಯ್ದು ಹೋದಮೇಲೆ ಆನೆಯ ಹೆಜ್ಜೆಗಳನ್ನು ಗುರುತಿಸಿ, ಅವನ್ನು ಪೂಜಿಸುವ ಜಗತ್ತು....!

'ಅವ್ವಾ....ನಿಷ್ಠೆಯಿಂದ ಗುರಿಮುಟ್ಟಿದರೆ ಈಗ ಆಡಿಕೊಂಡ, ಹಳಿದ, ಅರ್ಥಮಾಡಿಕೊಳ್ಳದ ಜಗತ್ತೇ ಆಗ ಗೌರವಿಸೀತವ್ವಾ....! ಗೌರವ ಪಡೆಯಲಿಕ್ಕಾಗಿ ನಾನು ಸಾಧನೆ ಮಾಡುತ್ತಿಲ್ಲ; ಶಿವನ ಕೂಟವನ್ನೇ ಗುರಿಯಾಗಿರಿಸಿಕೊಂಡು ಬದುಕುವೆ. ಇರಲಿ, ಸ್ವಲ್ಪ ಒಳಗೆ ಬನ್ನಿ....' ಮಹಾದೇವಿ ಪೂಜೆಯ ಕೋಣೆಗೆ ಕರೆದೊಯ್ದಳು. ಕಾಯಿಸಿಟ್ಟ ಹಾಲನ್ನು ಒಂದು ಬಟ್ಟಲಿನಲ್ಲಿ ತಂದು, ಹಾಲಿನ ಬಟ್ಟಲನ್ನು ವಿಭೂತಿಯನ್ನು ತಾಯಿಯ ಕೈಗಿಡುತ್ತ, 'ಇದನ್ನು ಹಚ್ಚಿ, ಹಾಲನ್ನು ಆಶೀರ್ವದಿಸಿ ನನಗೆ ಕುಡಿಯಲು ನೀವಿಬ್ಬರೂ ಕೊಡಿರಿ. ಈಗ ನನ್ನದು ಸಾವು-ಬದುಕಿನ ಸಮಸ್ಯೆ. ಸತ್ತರೆ ಒಂದು ಲೇಸು; ಅಲ್ಲಿಂದ ಪಾರಾಗಿ ಪುನರ್ಜನ್ಮ ಪಡೆದು ಗುರಿ ಮುಟ್ಟಿದರೆ ಎರಡು ಲೇಸು....'

ಲಿಂಗಮ್ಮನ ದುಃಖ ತೀವ್ರಗೊಂಡಿತು; ಓಂಕಾರ ಶಿಲಾಪ್ರತಿಮೆಯಂತೆ ನಿಂತಿದ್ದ. ಮಗಳಿಗೆ ವಿಭೂತಿ ಹಚ್ಚಿ ಹಾಲಿನ ಬಟ್ಟಲನ್ನು ಸ್ಪರ್ಶಿಸಿ ಲಿಂಗಮ್ಮ ಕೊಟ್ಟ ಬಳಿಕ, ಮಹಾದೇವಿಯು ನಮಸ್ಕರಿಸಿ ಪಡೆದುಕೊಂಡು ತಂದೆಯ ಕೈಗಿತ್ತಳು. ಓಂಕಾರನ ಕಣ್ಣು ನೀರಿನಿಂದ ತುಂಬಿ ಮಂಜಾಗಿದ್ದವು; ತುಟಿ-ಕೈಗಳು ನಡುಗತೊಡಗಿದ್ದವು. ತೊದಲುತ್ತ ಕಷ್ಟಪಟ್ಟು ನುಡಿದ :

'ಕಷ್ಟದ ಕುಲುಮೆಯಲ್ಲಿ ಪುಟಗೊಂಡು ಶಿವನ ತೊಡಿಗೆಯಾಗವ್ವಾ....' ಇಷ್ಟು ಹೇಳುವಲ್ಲಿ ಹನಿಗಳು ತೀವ್ರವಾಗಿ ಧುಮ್ಮಿಕ್ಕಲು, ಮುಖವನ್ನು ತಿರುಗಿಸಿದ. ಮಹಾದೇವಿ ಹೃದಯದ ಬಟ್ಟಲಲ್ಲಿ ತುಂಬಿದ ಭಾವನೆಗಳನ್ನು ಕಣ್ಣೀರಿನ ಹನಿಗಳ ಮೂಲಕ ತಂದೆಯ ಪಾದಕ್ಕೆ ಎರೆದು, ಎದ್ದು ಕುಳಿತು, ಇಷ್ಟಲಿಂಗಕ್ಕೆ ಹಾಲನ್ನು ಮುಟ್ಟಿಸಿ, ಕಣ್ಣು ಮುಚ್ಚಿ ಕುಡಿದು ಹೊರಗೆ ಬಂದಳು. ಚಪ್ಪಾಳೆ ತಟ್ಟಿದಾಗ ಹೊರಗೆ ಕಾಯುತ್ತಿದ್ದ ವಸಂತಕ ಬಂದನು.

'ಈ ಹರಿವಾಣಗಳನ್ನು ಒಯ್ಯಿರಿ....' ಹಿಂದಿನ ದಿನದಿಂದ ಅಲ್ಲೇ ಬಿದ್ದಿದ್ದ ರಾಜಕಾಣಿಕೆಗಳತ್ತ ಮಹಾದೇವಿ ಬೊಟ್ಟುಮಾಡಿದಳು.

'ತಾವು ಧರಿಸಿ ಬರಬೇಕು....' ವಸಂತಕ ವಿನಂತಿಸಿಕೊಂಡ.

'ನನ್ನ ವ್ರತ ಮುಗಿಯುವವರೆಗೆ ಧರಿಸುವುದಿಲ್ಲ....'

'ಇಲ್ಲೇ ಇರಲಿ....'

'ಛೇ....ಆ ಅನಿಷ್ಟಗಳು ಈ ಶರಣರ ಮನೆಯಲ್ಲೇಕೆ? ಇಲ್ಲಿ ಅವು ಅಸ್ಥಿ ಪಂಜರವಂತೆ ಈ ದುರಂತ ನಾಟಕದ ಅವಶೇಷಗಳಾಗಿ ಉಳಿಯುವುದು ಬೇಡ.'

ವಸಂತಕನ ಹೃದಯಕ್ಕೆ ಈ ಮಾತುಗಳು ಚುಚ್ಚಿದರೂ, ಅರಮನೆಗೆ ಆಕೆ ಬರಲೊಪ್ಪಿದ್ದಕ್ಕಾಗಿ ಅವುಗಳ ತೀಕ್ಷ್ಣತೆಯನ್ನು ಮರೆತ. ಹೆಂಗೆಳೆಯರು ಹರಿವಾಣಗಳನ್ನು ಎತ್ತಿಕೊಂಡರು.

'ಇನ್ನು ಹೊರಡೋಣವಷ್ಟೇ....' ಮಹಾದೇವಿ ವಸಂತಕನನ್ನು ಕೇಳಿದಳು. ಓಂಕಾರ ಕಂಭಕ್ಕೊರಗಿ ನಿಂತಿದ್ದ; ಅವನ ದೃಷ್ಟಿ ಅಟ್ಟದಲ್ಲಿ ಆಡುತ್ತಿದ್ದಿತು. ಗಂಟಲ ನರಗಳು ಉಬ್ಬಿದ್ದವು.

'ನಾನು ಹೋಗಿಬರಲೇ....?' ಮಹಾದೇವಿ ಕೇಳಿದಳು. ಯಾರಿಂದಲೂ ಉತ್ತರ ಸಿಗದಾಗ 'ಅಪ್ಪಾ....ನಾನು ಹೋಗಲೇ?' ಎಂದು ತಂದೆಯನ್ನು ಸಮೀಪಿಸಿ, ಕೇಳಿದಳು.

'ಹಾಂ....ಹೂಂ....' ತೊದಲು ನುಡಿದ ಓಂಕಾರನಿಗೆ ದುಃಖದ ಕಟ್ಟೆ ಒಡೆದು ನಿಲ್ಲಲಾರದೆ ಹಿತ್ತಲಿಗೆ ಹೋದ.

'ಅವ್ವಾ....ಕಳಿಸಿಕೊಡವ್ವಾ....'

'ಮಗಳೇ, ನೀನು ಪ್ರಾಣಬಿಟ್ಟಿದ್ದರೂ ನಗುನಗುತ್ತ ಮೂರು ಹಿಡಿ ಮಣ್ಣು ಹಾಕುತ್ತಿದ್ದೆ. ಈಗ ಹೇಗೆ ಕಳಿಸಲವ್ವಾ ಆ ಜೀವಂತ ನರಕಕ್ಕೆ....!' ಲಿಂಗಮ್ಮ ಆವೇಶದಿಂದ ಮಗಳನ್ನು ಬರಸೆಳೆದು ಬಿಗಿದಪ್ಪಿದಳು. ತಾಯಿಯ ಕಣ್ಣೀರಿನ ಜಲಪಾತ ಮಹಾದೇವಿಯ ಸೆರಗನ್ನು ತೋಯಿಸತೊಡಗಿತು.

ತನ್ನ ಸಂಕಲ್ಪದ ಸತ್ವ ಕುಸಿಯಬಾರದೆಂದು ಮಹಾದೇವಿ ಬೇಗನೇ ತಾಯಿಯ ತೋಳತೆಕ್ಕೆಯಿಂದ ಬಿಡಿಸಿಕೊಳ್ಳಲೆತ್ನಿಸಿದಳು. ಆಕೆಯ ತೋಳನ್ನು ಬಿಡಿಸಿಕೊಂಡು ಕ್ಷಣಕಾಲ ದಿಟ್ಟಿಸಿದಳು.

ಗಿರಿಜಾಂಬೆ ಕಂಭಕ್ಕೊರಗಿ ನಾಟಕದ ಪ್ರೇಕ್ಷಕಳಂತೆ ಎಲ್ಲವನ್ನೂ ಮೂಕಳಾಗಿ ನಿಟ್ಟಿಸುತ್ತಿದ್ದಳು. ಬಾಲ್ಯವಿಧವೆಯಾಗಿ, ಅನಾಥಳಾಗಿ ಲಿಂಗಮ್ಮನ ಆಶ್ರಯಪಡೆದ ಆಕೆ ಲಿಂಗಮ್ಮನ ಕೃಪೆಯಲ್ಲಿ, ವಾತ್ಸಲ್ಯದ ರಕ್ಷಣೆಯಲ್ಲಿ ಸ್ಥಿರ ವಾಗಿ ನೆಲೆಸಿದ್ದಳು.

ಮಹಾದೇವಿ ಆಕೆಯ ಸಮೀಪಕ್ಕೆ ಹೋಗಿ ಎರಡೂ ಕೈಗಳನ್ನು ಹಿಡಿದು ಕೇಳಿದಳು :

'ಗಿರಿಜಕ್ಕ, ಬದುಕಿನಲ್ಲಿ ಯಾರಿಂದ ಏನನ್ನು ನಿರೀಕ್ಷಿಸಿರುತ್ತೇವೆಯೋ ಎಷ್ಟೋಸಲ ಅವರಿಂದ ಅದನ್ನು ಪಡೆಯಲಾಗುವುದಿಲ್ಲ; ಎಂದೂ ನಿರೀಕ್ಷಿಸದ

ಕಡೆಯಿಂದ ಸಹಾಯ ಪಡೆಯುತ್ತೇವೆ. ಹೆತ್ತು, ಹೊತ್ತು ಸಾಕಿದ ಮಗಳಾದ ನನ್ನಿಂದ ಹೆತ್ತವರಿಗೆ ಏನೂ ಸಿಗಲಿಲ್ಲ. ಹಡೆದ ಮಕ್ಕಳಿಗಿಂತ ಪಡೆದ ಮಕ್ಕಳೇ ಲೇಸು. ನೀನೇ ಅವರ ಮಗಳಾಗಿ ಸೇವೆ ಮಾಡಬೇಕು.

'ಅವ್ವನಿಗೆ, ಅಪ್ಪನಿಗೆ ವಯಸ್ಸಾಗುತ್ತ ಬಂತು, ಅವರಿಗೆ ಏನೂ ಕೊರತೆಯಾಗದಂತೆ ನೋಡಿಕೋ....ನಿನ್ನನ್ನೇ ಮಗಳೆಂದು ಭಾವಿಸಿ ಅವರು ನನ್ನನ್ನು ಮರೆಯುವಂತೆ ಮಾಡು....ಇದು ನನ್ನ ಬೇಡಿಕೆ. ಎನ್ನ ದೇವ ಚನ್ನಮಲ್ಲಿಕಾರ್ಜುನ ಒಲಿದಾಗ ಅವನ ಬಳಿ ನಿಮ್ಮೆಲ್ಲರ ತ್ಯಾಗದ ಬಗ್ಗೆ ವರ್ಣಿಸುವೆ, ಅಂ....' ನೋವು ತುಂಬಿದ ಹಾಸ್ಯವು ಗಿರಿಜಾಂಬೆಯನ್ನು ಕಲಕಿತು. ಮಹಾದೇವಿಯನ್ನು ಅಪ್ಪಿಕೊಂಡಳು ಗಿರಿಜಾಂಬೆ. ಅವಳಿಂದ ಬಿಡಿಸಿಕೊಂಡ ಮಹಾದೇವಿ ಹಿತ್ತಲ ಬಾಗಿಲ ಕಡೆ ನೋಡಿದಳು, ತಂದೆಯ ಮುಖ ಕಾಣಲಿಲ್ಲ. ಜೀವ ತಡೆಯದೆ ಅವನ ಮುಖವನ್ನೊಮ್ಮೆ ನೋಡಲೆಂದು ಹಿಂಬಾಗಿಲ ಬಳಿ ಹೋಗಿ ಹೊಸ್ತಿಲ ಮೇಲೆ ನಿಂತಳು. ಮಹಾದೇವಿ ಹುಟ್ಟಿದ ದಿವಸ ಅವಳ ಸ್ಮರಣಾರ್ಥ ಹಾಕಿದ್ದ ಸಂಪಿಗೆಯ ಗಿಡವನ್ನು ತಬ್ಬಿ ಹಿಡಿದು ಓಂಕಾರ ಬಾಗಿಲಿಗೆ ಬೆನ್ನುಮಾಡಿದ್ದ.

ಕಣ್ಣುಗಳು ಸಜಲವಾಗಿ ಮಹಾದೇವಿ ಮೌನವಾಗಿ ಹಿಂತಿರುಗಿ, ಮನೆಯ ಹೊಸ್ತಿಲನ್ನು ದಾಟುತ್ತ ನುಡಿದಳು :

'ಬದುಕೊಂದು ಸಮರಾಂಗಣ; ಒಬ್ಬನ ಸೋಲು ಮತ್ತೊಬ್ಬನಿಗೆ ಗೆಲುವು ; ಒಬ್ಬನ ನೋವು ಮತ್ತೊಬ್ಬನಿಗೆ ನಲಿವು ; ಒಬ್ಬನ ಅಸ್ಥಿಪಂಜರದ ಮೇಲೆ ಮತ್ತೊಬ್ಬನ ನೃತ್ಯ ; ಒಬ್ಬನ ಕಣ್ಣೀರ ಸರಸಿಯಲ್ಲಿ ಇನ್ನೊಬ್ಬನ ದೋಣಿಯ ವಿಹಾರ ; ಒಬ್ಬನ ಶವದ ಬೆಂಕಿ, ಇನ್ನೊಬ್ಬನಿಗೆ ಬೆಳುದಿಂಗಳು....'

ಕಾಯುದ್ದಿ ನಿಂತಿದ್ದ ಮೇನೆಯನ್ನೇರಿ, ಮನೆಯ ಬಾಗಿಲನ್ನು ಮತ್ತೊಮ್ಮೆ ದಿಟ್ಟಿಸಿ ನೋಡಿ ಬಿಸಿಯುಸಿರನ್ನು ಬಿಟ್ಟು ತೆರೆಯನ್ನು ಎಳೆದುಕೊಂಡಳು. ಬೋಯಿಗಳು ಹೊತ್ತ ಮೇನೆ ಮುಂದೆ ಸಾಗಿತು.

* * *

ಮಗಳು ಕುಳಿತ ಮೇನೆಯು ಮುಂದೆ ಸಾಗಿದಾಗ ಲಿಂಗಮ್ಮ ಹೊರಗೆ ಬಂದು ದಾರಿಯನ್ನು ದಿಟ್ಟಿಸಿದಳು. ದೊಡ್ಡದಾಗಿ ಕಾಣುತ್ತಿದ್ದುದು ಸಣ್ಣದಾಗುತ್ತ ಹೋಯಿತು. ಕಣ್ಣಗಲಿಸಿ ನೋಡಿದಳು, ಹಣೆಯ ಮೇಲೆ ಕೈ ಇಟ್ಟು ನೋಡಿದಳು. ಬರುಬರುತ್ತ ಅದು ಎಳ್ಳಷ್ಟೂ ಕಾಣದಾಯಿತು. ಭಾರವಾದ ಕಾಲುಗಳನ್ನೆಳೆದುಕೊಂಡು ಒಳಬಂದು ನಡುಮನೆಯಲ್ಲಿ ಕುಸಿದು ಕುಳಿತು, ಕಂಬಕ್ಕೊರಗಿದಳು. ಆಕೆಗೆ ಎಲ್ಲವೂ ಶೂನ್ಯವಾಗಿ ತೋರತೊಡಗಿತು.

ಲಿಂಗಮ್ಮನಿಗೆ ಎಚ್ಚರವಾದುದು ಪಾರ್ವತಮ್ಮ, ಸಂಗವ್ವ, ಸಿಂಗಾರಮ್ಮ, ಕಮಲಮ್ಮ ಗುಂಪುಗೂಡಿ ಬಂದಾಗಲೇ! ಮನೆಯು ಶೋಕದ ತೆರೆಯನ್ನು ಹೊದ್ದು ಗಂಭೀರವಾಗಿದ್ದಿತು. ಓಂಕಾರ ಇನ್ನೂ ಚೇತರಿಸಿಕೊಳ್ಳದೆ ಕೈದೋಟದ ಮಾವಿನ ಗಿಡದ ಬೊಡ್ಡೆಗೊರಗಿ ನೆರಳಿನಲ್ಲಿ ಕುಳಿತಿದ್ದ. ಅದೇ ವೇಳೆಗೆ ಬಂದ ಶೈಲಜೆಗೂ ಅತ್ತತ್ತು ಕಣ್ಣು ಊದಿದ್ದವು. ಆಗಲುವ ಸನ್ನಿವೇಶವನ್ನು ನೋಡಲಾಗದೆ ಆಕೆ ಮನೆಗೆ ಹೋಗಿ, ಮೇನೆ ಹೋದ ಬಳಿಕ ಬಂದಿದ್ದಳು. ಬಂದವರನ್ನು ಗಿರಿಜಾಂಬೆ ಸ್ವಾಗತಿಸಿ ಕುಳಿತುಕೊಳ್ಳಲು ಚಾಪೆ ಹಾಕಿದಳು.

'ಪಾಪ! ಲಿಂಗಮ್ಮಕ್ಕ ಬಹಳ ಅತ್ತಂತೆ ಕಾಣುತ್ತೆ....' ಸಂಗಮ್ಮ ಕರುಣೆ ಸೂಸಿದಳು.

'ಅಳದೇ ಏನು ಮಾಡ್ಯಾಳವ್ವ. ಮಗಳೂ ಅಂತ ಹೆತ್ತುದಷ್ಟೇ ಸುಖ. ಎಲ್ಲರಂತೆ ಬೆಳೀಲಿಲ್ಲ, ಎಲ್ಲರಂತೆ ಬಾಳಲಿಲ್ಲ. ಹಡೆದೊಡಲಿಗೆ ಉರೀನೇ ಹಾಕಿದ್ಲು....' ಸಿಂಗಾರಮ್ಮ ಮಾತನಾಡಿದಳು.

'ಹಾಗೆಲ್ಲ ಅನ್ನಬೇಡ್ರವ್ವ; ಮಾದೇವಿ ಬಂಗಾರದಂತಹ ಮಗಳು....ಆಕೆಯನ್ನು ಹೆತ್ತುದೇ ನಮ್ಮ ಭಾಗ್ಯ....' ಲಿಂಗಮ್ಮ ಕಣ್ಣೊರೆಸಿಕೊಳ್ಳುತ್ತ ಹೇಳಿದಳು.

'ಏನೇ ಆಗಲವ್ವ, ಹಡೆದ ಹೊಟ್ಟೆ ಹಂಗನ್ನದಿದ್ರೆ ಆದೀತೇ? ಎಲ್ಲಾನೂ ಒಳಗಾಕ್ಕೋ ಬೇಕಾಗುತ್ತೆ. ಹೆತ್ತೋರಿಗೆ ಹೆಣ್ಣ ಮುದ್ದೇ ಸರಿ....' ಸಂಗಮ್ಮ ಒಗ್ಗರಣೆ ಹಾಕಿದಳು.

'ರಾಜಸಂಘ ಮಾನುಭಾವ ಕೈ ಹಿಡಿತಿನೀ ಅಂತ ಬಂದ್ರೆ, ಮದ್ವೆ ಮಾಡ್ಕೊಳ್ಳಾಕೆ ಯಾಕೆ ಒಪ್ಕೋಬಾರ್ದು? ಅರಮನೇಲಿ ಇರೋದೆ ಪುಣ್ಯ, ರಾಣಿಯಾಗೋದು ಬೋ ಪುಣ್ಯ. ಎಲ್ಲರ್ಗೂ ಬಾ ಅಂದ್ರೆ ಬಂದಾತಾ....?' ಪಾರ್ವತಮ್ಮ ಹೇಳಿದಳು.

'ಆಕೆ ಮೊದಲಿಂದ್ಲು ಹಟಮಾರಿ ಕಣವ್ವ; ಲಿಂಗಮ್ಮ ಭಾಳ ಶಾಂತ ಮೂರ್ತಿ, ಸಹಿಸ್ಕೊಂಡು ಹೋದ್ಲು....' ಸಿಂಗಾರಮ್ಮ ಹೇಳಿದಳು.

ಲಿಂಗಮ್ಮನಿಗೆ ತಾನು ಹೊತ್ತ ನೋನೇ ಹಂಡೆಯು ಭಾರವಾಗಿ ಸಹಿಸಲಾರದೆ ಒದ್ದಾಡುವಾಗ ಇವರ ಮಾತಿನಿಂದ ಮೇಲೊಂದು ಕೊಪ್ಪರಿಗೆಯನ್ನು ಹೇರಿದಂತಾಯಿತು. ಮಗಳ ತೆಗಳಿಕೆ, ತನ್ನ ಹೊಗಳಿಕೆ ಎರಡೂ ಬೇಡವಾಗಿದ್ದವು.

'ಏನಾರ ಆಗ್ಲಿ ಲಿಂಗಮ್ಮಕ್ಕ ಮದ್ವೆ ಮಾಡದೆ ಒಂಟಿ ಹುಡುಗೀನ ಹಾಗೆ

ಕಳಿಸ್ಕೊಡಬೋದಾ....ಲೋಕ ಏನಂದೀತು?' ಸಂಗವ್ವ ನುಡಿದಳು.

'ಪ್ರಸಂಗ ಹಂಗ ಬಂತವ್ವ, ನಾವು ಕಳಿಸೋಕೆ ಸಿದ್ಧವಿರಲಿಲ್ಲ, ತಾನೇ ಹೋದಳು....' ಲಿಂಗಮ್ಮ ಹೇಳಿದಳು.

'ಹಾಂ....ಬೇಡ ಬೇಡ ಅಂತ ತೋರಿಕೆಗೆ ಅಂತಿದ್ಲೇನೋ! ಯಾರಿಗೆ ತಾನೆ ಅರಸರ ಮದ್ವೆ ಆಗೋ ಆಸೆ ಇರಲ್ಲ; ಆಕೆ ಶರಣಮ್ಮ ಆದರೇನು, ಮನುಷ್ಯಳೇ ಅಲ್ವೆ....?' ನಗುತ್ತ, ತಾಂಬೂಲವನ್ನು ಮೆಲ್ಲುತ್ತಿದ್ದ ಬಾಯೊಳಗೆ ಸಿಂಗಾರಮ್ಮ ಹೊಗೆಸೊಪ್ಪನ್ನು ಎಸೆದುಕೊಂಡಳು.

'ಏನಾರ ಆಗ್ಲಿ ಬಿಡವ್ವ, ಹಂಗ ಅರಮನೆಗೆ ಹೋದ್ರೇನಂತೆ. ನೀನಂತೂ ಅರಸರ ಅತ್ತೆ ಆಗ್ಬಿಟ್ಟೆ. ನಿನ್ನಿಂದ ನಾವೂ ಅಲ್ಲಿಗೆ ಬರಬೋದು; ಅಲ್ಲಿಯ ಸಡಗರಸಾರ ನೋಡಬೋದು' ಸಂಗವ್ವ ಹೇಳಿದಳು.

'ಅಂತೂ ಮಾದೇವಿ ಗಂಡ ಬೇಡಬೇಡ ಅಂದು ದೊಡ್ಡ ಗಂಡನ ಕಣ್ಣು ಸೆಳಕೊಂಡ್ಳು. ಮದ್ವೆ ಮಾಡೋತನಕಾನು ದಾರಿ ಕಾಯ್ಲಿಲ್ಲ, ತಾನೇ ಹೋಗಿಬಿಟ್ಳು....' ಕಿಸಕಿಸನೆ ನಕ್ಕಳು ಸಿಂಗಾರಮ್ಮ.

ಸಿಕ್ಕಂತೆ ನುಗ್ಗಿ ತೋಟವನ್ನು ಹಾಳುಮಾಡುವ ಕುರುಡು ಆನೆಯ ತುಳಿತದಂತೆ ಯಾವ ಪರಿಸ್ಥಿತಿಯನ್ನೂ ಅರ್ಥಮಾಡಿಕೊಳ್ಳದೆ ಅವರ ಮಾತಿನ ಹೊಯ್ಲು ಸಾಗಿತು. ತಮ್ಮ ಮಾತಿನ ಕಾಲ್ತುಳಿತಕ್ಕೆ ಸಿಕ್ಕ ಲಿಂಗಮ್ಮನ ಭಾವನೆಯ ಬಳ್ಳಿಗಳು ಎಷ್ಟು ಹಾಳಾಗುವವೋ ಎಂಬ ಅರಿವು ಸಹ ಅವರಿಗಿರಲಿಲ್ಲ. ಶೈಲಜೆಯ ತಾಳ್ಮೆ ಎಲ್ಲೆ ಮೀರಿತು.

'ಏನ್ರವ್ವ ನಿಮಗೆ ಬೇರೆಯವರ ಮನೆಯ ಸುದ್ದಿ ಮಾತಾಡೋದು, ನೊಂದವರ ಹೃದಯಕ್ಕೆ ಚುಚ್ಚುಮಾತಿನ ಪೆಟ್ಟು ಕೊಡೋದು ಬಿಟ್ಟರೆ ಇನ್ನು ಏನಾದರೂ ಗೊತ್ತಿದೆಯಾ? ಇದರಿಂದ ನಿಮ್ಮ ಹೊಟ್ಟೆ ತುಂಬುತ್ತೇನು....? ವಿಷಯ ಏನೂ ಅಂತ ಗೊತ್ತಿಲ್ಲ, ಪ್ರಸಂಗ ಹೇಗೆ ಒದಗಿತು ಅಂತ ಗೊತ್ತಿಲ್ಲ; ಸುಮ್ಮನೆ ಬಾಯಿಗೆ ಬಂದಂಗೆ ಮಾತನಾಡ್ತೀರಿ. ಮಹಾದೇವಿಯ ವ್ಯಕ್ತಿತ್ವ ನಿಮಗೇನು ಗೊತ್ತು? ಮರುಕ ತೋರುವ ನೋಗಿನಲ್ಲಿ ಗಾಯಕ್ಕೆ ಮೆಣಸಿನ ಪುಡಿ ಮೆತ್ತಿದಂತೆ ಮಾತಾಡ್ತೀರಿ....' ಕ್ರೋಧದಿಂದ ಹೇಳಿದಳು.

'ನಿನಗ್ಯಾಕವ್ವ, ಈಟುದ್ದ ಪೋರಿಗೆ ಇಷ್ಟು ಸಿಟ್ಟು, ಲಿಂಗಮ್ಮಕ್ಕ ಸುಮ್ಮನೆ ಇದ್ದಾಳೆ....' ಸಿಂಗಾರಮ್ಮ ಕೇಳಿದಳು.

'ಕೀಲು ಇಲ್ಲದೆ ಗಾಡಿ ಹೊಡೆಯುವ ನಿಮ್ಮಂಥವರ ಬಾಯಿಗೆ ಮಾನಸ್ತರು ಅಂಜಬೇಕಾಗುತ್ತೆ. ತಾವು ಹಡೆದು, ಸಾಕಿ, ಬೆಳಸಿದ ಮಗಳನ್ನು ತಮಗೆ ಬೇಕಾದಂತೆ ಮಾಡ್ತಾರೆ. ನಿಮಗ್ಯಾಕೆ ಅದ್ರ ಗೊಡವೆ? ಮನೇಲಿ ಇನ್ನೂ

ಯಾರು ಉಂಡಿಲ್ಲ ಸಹ. ನೀವು ಅನುಕಂಪ ತೋರ್ಸಿದ್ದು ಆಯ್ತಲ್ಲ, ಎದ್ದು ಹೋಗ್ರಿ....' ಶೈಲಜೆ ಅಸಹನೆಯಿಂದ ಕುದಿದಳು.

ನಾಲ್ವರು ಮುಖ ಕಹಿ ಮಾಡಿಕೊಂಡು ಎದ್ದು ಹೊರಟರು. ಲಿಂಗಮ್ಮನಿಗೆ ಶೈಲಜೆಯ ಆವೇಶ, ಬೈಗಳು ಸಂಕಟವಾಗಿದ್ದರೂ, ಆ ಜನವನ್ನು ಮಣಿಸಲು ಬೇರೆ ಮಾರ್ಗವೇ ಇಲ್ಲ ಎಂದು ಶೈಲಜೆಗೆ ಸ್ವಾತಂತ್ರ್ಯ ನೀಡಿಬಿಟ್ಟಳು. ಅವರು ಮನೆಯ ಅಂಗಳ ದಾಟಿ ಬೀದಿಗಿಳಿದಾಗ ನುಡಿದಳು :

'ತೋಳ ಕುಣಿಗೆ ಬಿದ್ದಾಗ ಆಳಿಗೊಂದು ಕಲ್ಲು ಎಂಬಂತೆ ಇನ್ನೂ ಏನೇನು ಮಾತನ್ನು ಕೇಳಬೇಕೋ ! ಎಂತೆಂಥಾ ಅಪವಾದ ಹೊರಬೇಕೋ....ದೇವರೇ ಬಲ್ಲ !' ಲಿಂಗಮ್ಮ ನಿಟ್ಟುಸಿರುಬಿಟ್ಟಳು.

'ಅವ್ವಾ, ಮಹಾದೇವಿ ಘನವಾದ ಗುರಿ ಸಾಧಿಸಿ ತನ್ನ ದಿವ್ಯ ಸಂದೇಶದ ನುಡಿಮುತ್ತುಗಳನ್ನು ಜಗಕ್ಕೆ ಕೊಟ್ಟಾಗ, ಈ ಸಿಂಗಾರಮ್ಮ, ಸಂಗಮ್ಮನ ಮಾತುಗಳು ಉಳಿಯುದೆ, ಮಹಾದೇವಿಯ ತತ್ತ್ವದ ಮಾತುಗಳಷ್ಟೇ ಉಳಿಯುವವು ; ಅಂಥ ಮಗಳನ್ನು ಹೆತ್ತ ನಿಮ್ಮ ಹೆಸರು ಉಳಿಯುವುದು. ಸಂತೈಸಿಕೋ.'

ಶೈಲಜೆಯ ಮಾತುಗಳು ಲಿಂಗಮ್ಮನ ಹೃದಯಕ್ಕೆ ಎಷ್ಟೋ ಸಾಂತ್ವನ ನೀಡಿದವು.

೨೮. ಪಂಜರ ಪಯಣ

ಮೇನೆಯನ್ನು ಬೋಯಿಗಳು ಹೊತ್ತುಕೊಂಡು ಸಾಗುತ್ತಿದ್ದರು. ಮಹಾದೇವಿಗೆ ಈಗ ಹೊರ ಜಗತ್ತು ಕಾಣುತ್ತಿರಲಿಲ್ಲ. ನೋಡುವ ಬಯಕೆ ಇಲ್ಲದ ಕಾರಣ ಸಣ್ಣ ಕಿಟಕಿಗಳನ್ನು ತೆರೆಯಿಂದ ಮುಚ್ಚಿದಳು. ಮೆತ್ತನೆಯ ಸುಪ್ಪತ್ತಿಗೆಯನ್ನು ತಳಕ್ಕೆ ಹಾಸಿದ್ದರು, ಹಿಂದೆ ಒರಗುದಿಂಬನ್ನು ಇಟ್ಟಿದ್ದರು. ಎಷ್ಟೋ ದಿವಸಗಳಿಂದ ಹಾಸಿಗೆಯ ಮೇಲೆ ಮಲಗದೆ, ಚಾಪೆಯ ಮೇಲೆ ಮಲಗುತ್ತಿದ್ದ ಮಹಾದೇವಿಗೆ ಇದು ಬಹು ಮೆತ್ತಗೆ ಎನಿಸಿತು.

ಮೇನೆಯ ಹಿಂದೆ ಮುಂದೆ ಅಂತಃಪುರದ ರಮಣಿಯರು ಸಾಗಿದ್ದರು. ಅವರ ಕಾವಲಿಗೆ ಪಟುಭಟರು; ಅವರ ಮಧ್ಯೆ ವಸಂತಕನು ಕುದುರೆಯನ್ನು ಏರಿ ಸಾಗುತ್ತಲಿದ್ದ.

ಮುಂದಿನ ಬಾಳು ಊಹೆಗೆ ನಿಲುಕದುದಾಗಿತ್ತು. ಇದು ತನ್ನ ಅತಿರೇಕದ ಸಾಹಸವೇನೊ ಅನ್ನಿಸುತ್ತಿತ್ತು. ಮನಸ್ಸು ವಿವಿಧ ಭಾವನೆಗಳ ರಣರಂಗವಾಗಿತ್ತು. ದೊಂಬರಾಟದಲ್ಲಿ ಬಿದಿರಿನ ಮೇಲೆ ಎತ್ತರದಲ್ಲಿ ನಿಂತು ಆಡುವ ವ್ಯಕ್ತಿ ಎಚ್ಚರವಾಗಿರುವಂತೆ ತಾನಿನ್ನು ಮೈಯೆಲ್ಲ ಕಣ್ಣಾಗಿರಬೇಕಾಗುವುದು ಎಂದುಕೊಂಡಳು.

'ಕೌಶಿಕನ ಸ್ವಭಾವ ಹೇಗೋ ಏನೋ? ಕಾಮದ ಜೊತೆಗೆ ಕ್ರೌರ್ಯವೂ ಸೇರಿದ್ದರೆ ಅತಿ ಕಷ್ಟ. ಸಮ್ಮೋಹನಕ್ಕೆ ಒಳಗಾದ ಮನುಷ್ಯನು ತನಗರಿಯದೆ ವಿಶಿಷ್ಟ ವರ್ತನೆ ಮಾಡುವಂತೆ, ಇನ್ನೊಬ್ಬರ ಮಾತು ಕೇಳುವಂತೆ, ಈ ಕಾಮಿಯಾದ ರಾಜನು ರೂಪಕ್ಕೆ ಮರುಳಾಗಿ ನನ್ನ ನಿಯಮಗಳಲ್ಲಿರುವ ಕಠಿಣ ಸತ್ಯ, ದೂರಾಲೋಚನೆಯ ಜಾಡು ತಿಳಿಯದೆ ಅವನ್ನು ಹಗುರವಾಗಿ ತಿಳಿದು, ಒಪ್ಪಿಬಿಟ್ಟಿರುವನು. ಅವನು ಕೊಟ್ಟ ಹಗ್ಗದಲ್ಲಿ ಅವನ ಕೈಕಟ್ಟುವ ಸಾಹಸವನ್ನು ಮಾಡಬೇಕಾಗುವುದು....' ಮಹಾದೇವಿಯ ಆಲೋಚನೆ ನಿರಂತರವಾಗಿ ಸಾಗಿತ್ತು.

ಇತ್ತ ಕೌಶಿಕನು ಅಪೂರ್ವ ಉತ್ಸಾಹ ಕಾತುರತೆಯಿಂದ ತನ್ನ ಅರಮನೆಯಲ್ಲಿ ಶತಪಥ ತಿರುಗುತ್ತಿದ್ದ. ವಸಂತಕನು ಮಹಾದೇವಿಯ ತಾಯಿ ತಂದೆಗಳನ್ನು ಬಂಧಿಸಿ ತಂದುದನ್ನು, ಕಾರಾಗೃಹದಲ್ಲಿರಿಸಿದುದನ್ನು ತಿಳಿಸಲು ಬಂದಿದ್ದ. ಆಗ ಕೌಶಿಕನಿಗೆ ನಿಜಕ್ಕೂ ನಿರಾಶೆಯಾಗಿತ್ತು. ಅಧ್ಯಾತ್ಮಜೀವಿಗಳೆಂದರೆ

ಮಹಾದೇವಿಯು [illegible] ಸೋಜಿಗವೆನಿಸಿತ್ತು. ಕಡೆಗೂ [illegible]
ಹೋಗುವರೇನೋ ಎಂದು ದುಗುಡಗೊಂಡಿದ್ದ.

ಸ್ವಲ್ಪ ಹೊತ್ತಿನಲ್ಲೇ ವಸಂತಕ ಬಂದಾಗ ಕೌಶಿಕನು ಕಾತರಭರಿತ ಕುತೂಹಲದಿಂದ ಕೇಳಿದ:

'ಮಿತ್ರಾ, ಹೋದ ಕೆಲಸ ಹಣ್ಣೋ, ಕಾಯೋ....?'

'ರಾಜಾ, ಈಗ ಮೂರು ದಿವಸಗಳಿಂದ ಆಸ್ಥಾನಕ್ಕೆ ಹೋಗಿಲ್ಲ, ರಾಜ್ಯದ ಕಾರ್ಯಕಲಾಪ ನೋಡಿಲ್ಲ; ಹೀಗಾದರೆ ಹೇಗೆ....?'

'ಮಹಾದೇವಿ ಬರುವ ತನಕ ನಾನು ಏನನ್ನೂ ಮಾಡುವುದಿಲ್ಲ....' ನಿರ್ಧಾರದಿಂದ ಹೇಳಿದ.

'ಸರಿ, ಸರಿ, ಒಂದು ಹೆಣ್ಣಿಗಾಗಿ ಹಂಬಲಿಸಿ ರಾಜ್ಯದ ಹೊಣೆ ಮರೆಯುವ ನಿಮ್ಮನ್ನು ಆ ತಾಯಿ ಕಾಮದ ಗೊಂಬೆ ಎಂದರೇನು ತಪ್ಪು....!' ವ್ಯಂಗ್ಯವಾಗಿ ನುಡಿದ.

'ಹಾಗಂದಳೇ—ಅನ್ನಲಿ ಬಿಡು! ಸುಂದರಿಯರ ಬಾಯಿಯ ಬೈಗುಳವೂ ಚಂದವೆ! ಹೋದ ಕೆಲಸ ಹಣ್ಣೋ ಕಾಯೋ....ಬೇಗ ಹೇಳು....'

'ಕಸುಗಾಯಿ; ಹಣ್ಣು ಮಾಡಬೇಕಾದುದು ನಿಮ್ಮ ಪಾಲಿಗೆ ಬಂದಿದೆ. ಅದಕ್ಕಾಗಿ ನೀವು ಸ್ವಲ್ಪ ತ್ಯಾಗ ಮಾಡಬೇಕಾಗಿದೆ....' ಮಾರ್ಮಿಕವಾಗಿ ಹೇಳಿದ ವಸಂತಕ.

'ಓಹೋ....ಸಂತೋಷದಿಂದ. ಆಕೆಗಾಗಿ ಇಡೀ ರಾಜ್ಯದ ಅಧಿಕಾರವನ್ನೇ ಬಿಟ್ಟುಕೊಡಲೂ ಸಿದ್ಧನು.'

'ಸಾವಧಾನ....ಶಾಂತಿ!....ಇಂತಹ ತ್ಯಾಗವಲ್ಲ....'

'ಮತ್ತೇನು, ಬೇಗ ಹೇಳು ಮಿತ್ರ. ಅರ್ಥವಿಲ್ಲದ ವಿಲಂಬ ಮಾಡುತ್ತಲಿರುವೆ....'

'ಒಂದು ಕ್ಷಣಕಾಲ ತಡೆಯದವನು ಐದು ವಾರಗಳ ಕಾಲ ಹೇಗೆ ತಡೆಯುವೆಯೋ....?'

'ಅಂದರೆ....ಅಷ್ಟು ದಿವಸಗಳ ತನಕ ಆಕೆ ಬರಳೇ? ಈ ಮುಚ್ಚುಭಾಷೆ ಬಿಟ್ಟು ಬಿಚ್ಚುಭಾಷೆಯಲ್ಲಿ ಹೇಳು....' ದೀನನಾಗಿ ಬೇಡಿಕೊಂಡ.

'ಒಂದನೆಯ ನಿಯಮ, ಆಕೆ ಐದು ವಾರಗಳ ವ್ರತ ಹಿಡಿದಿದ್ದಾಳೆ. ಅದನ್ನು ಮುಗಿಸಬೇಕು....'

'ಸರಿ....ಆ ಕಾಲದಲ್ಲಿ ಒಪ್ಪತ್ತು ಊಟ, ಇರುಳಿನ ಎರಡನೆಯ ಜಾವ ದಿಂದ ಬೆಳಗಿನ ಮೊದಲ ಜಾವದವರೆಗೆ ಯಾರ ಮುಖದರ್ಶನವಿಲ್ಲ....'

'ಹಾಂ....ಅಂದರೆ....' ನಿರಾಶೆಯಿಂದ ಕೌಶಿಕನ ಮುಖ ಕಪ್ಪಿಟ್ಟಿತು.

'ವಿಶಿಷ್ಟ ಸಂಕಲ್ಪದಿಂದ ವ್ರತ ಮಾಡುತ್ತಿರುವಳು ; ಆ ನೇಮಗಳಿಗೆ ಭಂಗ ಬಂದರೆ ಭಂಗ ಮಾಡಿದವರ ಸರ್ವನಾಶ ಎಂದು ಶಾಸ್ತ್ರಗಳು ಹೇಳುತ್ತವಂತೆ....'

'ಸರಿ....ಮುಂದೆ....'

'ಈ ಕಾಲಾವಧಿಯಲ್ಲಿ ಹಗಲು ಗುರು-ಲಿಂಗ-ಜಂಗಮ ಪೂಜೆ ಮಾಡಿದರೆ ಅಡ್ಡಿ ಬರಬಾರದು....ಹಾಗೇನಾದರೂ ಅಡ್ಡಿಯಾಗಿ ಮೂರು ತಪ್ಪುಗಳನ್ನು ಮಾಡಿದರೆ ಅಂದಿಗೆ ಆಕೆಯ—ಅರಮನೆಯ ಸಂಬಂಧ ತೀರಿತು. ಆ ನಂತರ ಯಾರಿಗೂ ಆಕೆಯನ್ನು ತಡೆಯುವ ಹಕ್ಕಿಲ್ಲ....ಈ ಅವಧಿಯನ್ನು ನಿರ್ವಿಘ್ನ ವಾಗಿ ಕಳೆದರೆ, ಆಮೇಲೆ ನೀವು ಆ ಧರ್ಮದ ದೀಕ್ಷೆ ಪಡೆದರೆ ಲಗ್ನವಾಗ ಬಹುದು. ಈ ಎಲ್ಲ ನೇಮಗಳಿಗೆ ಒಪ್ಪಿ, ಬಂಧಿತ ತಾಯಿತಂದೆಯರನ್ನು ಬಿಡುಗಡೆ ಮಾಡಿದರೆ ಮಾತ್ರ ಅರಮನೆಗೆ ಬರಲು ಆಕೆ ಸಿದ್ಧ....'

'ನೇಮಗಳ ಸರಪಳಿ ಮುಗಿಯಿತೋ ಇಲ್ಲವೋ....?'

'ಮುಗಿಯಿತು ; ಆದರೆ ನೀವೂ ಒಂದು ಕಾವಿಯ ಕಫಿನಿ ಹಾಕಿಕೊಂಡು ಆಕೆಯ ಜೊತೆಗೆ ಭಜನೆ ಮಾಡುತ್ತ ಇದ್ದರೆ ಒಳ್ಳೆಯದೆನ್ನಿಸುತ್ತದೆ—ಈ ಒಪ್ಪಂದಗಳನ್ನು ನೋಡಿದರೆ....' ನಸುನಕ್ಕ ವಸಂತಕ.

ಕೌಶಿಕ ಆಳವಾದ ಆಲೋಚನೆಯಲ್ಲಿ ಮುಳುಗಿದ.

'ವಸಂತಕಾ....ಐದು ವಾರಗಳ ಕಾಲ ಆಕೆಯನ್ನು ಬಿಟ್ಟಿರುವುದು ಕಷ್ಟ ಕರ....ಮತ್ತು ಆಕೆ ನನ್ನ ಸಮೀಪ ವಲಯದಲ್ಲಿದ್ದರೆ ನಿರ್ಧಾರದ ದಿಕ್ಕನ್ನು ಬದಲಿಸುವ ಸಂಭವ ಇಲ್ಲದಿಲ್ಲ. ಆದ್ದರಿಂದ ಅರಮನೆಯಲ್ಲೇ ಇರಲು ಒಪ್ಪು ವುದು ಒಳ್ಳಿತೆನಿಸುತ್ತದೆ. ಕಡೆಗೆ ನನ್ನ ಸಮೀಪದಲ್ಲಾದರೂ ಇದ್ದಂತಾಗು ವುದು ; ಕಣ್ತುಂಬ ನೋಡಿಯಾದರೂ ನೋಡಬಹುದು....'

'ಆದರೆ ಸಾಮೀಪ್ಯ ಸಿಗದು ಎಂಬುದರ ನೆನಪೂ ರಾಜನಿಗೆ ಇರುವು ದೊಳ್ಳಿತು. ಹತ್ತಿರವಿದ್ದೂ ಕೈಗೆ ಸಿಗದಿದ್ದರೆ ಇನ್ನೂ ಕಷ್ಟ. ನೆಲುವಿನ ಮೇಲಿನ ಗಡಿಗೆಯಲ್ಲಿ ಕರಿದ ತಿಂಡಿಯಿರಿಸಿ, ಕೆಳಗೆ ನಿಂತು ಕೆರಳುವ ವಾಸನೆ ಕುಡಿದು, ಕಣ್ಣುಕಣ್ಣು ಬಿಟ್ಟು, ನಾಲಿಗೆಯಲ್ಲಿ ನೀರು ಸುರಿಸುವ ಎಳೆಯ ಪೋರನ ಪರಿಸ್ಥಿತಿಯಂತಾದೀತು....' ವಸಂತಕ ನಕ್ಕ.

'ಕೈಗೆ ಸಿಗದಿದ್ದರಷ್ಟೇ ಕಣ್ಣಿಗಾದರೂ ಬೀಳುವಳು. ಅದರಿಂದಲಾದರೂ

‘ಸರಿ, ನೀವು ಅವರ ಧರ್ಮದ ದೀಕ್ಷೆ ಹೊಂದದ ಹೊರತು ಲಗ್ನವಾಗುವುದಿಲ್ಲ, ಆಗೇನು ಮಾಡುವಿರಿ....?’

ಕೌಶಿಕನು ಗಹಗಹಿಸಿ ನಗತೊಡಗಿದ. ವಸಂತಕ ಅಚ್ಚರಿಯಿಂದ ನಿಟ್ಟಿಸಿದ. ನಗೆಯನ್ನು ತಡೆದುಕೊಂಡು ಹೇಳಿದ :

‘ಮಿತ್ರಾ....ನೀನು ಜಾಣನೆಂದುಕೊಂಡಿದ್ದೆ. ನಿನ್ನಂತಹ ಮೂರ್ಖ ಯಾರೂ ಇರಲಿಕ್ಕಿಲ್ಲ....ಈ ಐದು ವಾರಗಳ ಕಾಲಾವಧಿಯನ್ನು ಅರಮನೆಯಲ್ಲಿ ಕಳೆದರೆ ಆಕೆಯ ಈ ಎಲ್ಲ ಆದರ್ಶಗಳು ಸ್ಥಿರವಾಗಿ ಉಳಿದಾವು ಎಂದುಕೊಂಡೆಯಾ ? ಇಲ್ಲಿಯ ವೈಭವ, ಪಕ್ವಾನ್ನದೂಟ, ವಿಲಾಸಿನಿಯರ ಸಖ್ಯ, ಪ್ರಣಯ ದೃಶ್ಯಗಳು ಸಾಯುವ ಶಯ್ಯೆಯ ಮೇಲಿದ್ದವನಿಗೂ ವಿಕಾರವನ್ನು ಕೆರಳಿಸುವುವು. ಪುರುಷಸಾಮೀಪ್ಯಕ್ಕೆ ಬಂದ ಸ್ತ್ರೀಯ ಸ್ಥೈರ್ಯ ಬೆಂಕಿಯ ಮುಂದಿನ ಬೆಣ್ಣೆಯಂತಾಗುವುದು. ಹೀಗಿದ್ದಾಗ ಆ ಹುಡುಗಿ, ಬಣ್ಣದ ಪ್ರಪಂಚವನ್ನೇ ಅರಿಯದ ಮುಗ್ಧಲಲನೆ, ನಿನ್ನಾಣೆಗೂ ತನ್ನ ವೈರಾಗ್ಯಕ್ಕೆ ತಿಲಾಂಜಲಿ ಕೊಡದಿದ್ದರೆ ಕೇಳು. ಆಮೇಲೆ ನಾನು ಧರ್ಮದ ದೀಕ್ಷೆ ತೆಗೆದುಕೊಳ್ಳುವುದು ಹಾಗಿರಲಿ, ಅವಳು ಪ್ರಣಯದೀಕ್ಷೆ ತೆಗೆದುಕೊಂಡು ನನಗೆ ಪ್ರೇಮಭಿಕ್ಷೆ ನೀಡುವಳು....ಆಹ್ಹ....’ ತಾನೇ ಮುಂದುವರಿಸಿದ.

‘ಸಣ್ಣ ಹುಡುಗಿಯಿದ್ದಾಗಿನಿಂದ ಬಹುಶಃ ಮಠದ ವಾತಾವರಣದಲ್ಲಿ, ಪೂಜೆ, ಭಕ್ತಿ ಎಂದು ತಾಯಿ ತಂದೆಯರು ಬೆಳೆಸಿಬಿಟ್ಟಿರುವರು. ಪಾಪ ! ಈ ಸುಂದರಾಂಗಿಗೆ ಯಾವ ಸುಖದ ಪರಿಚಯವೇ ಇಲ್ಲದೆ ಬೈರಾಗಿಯಂತೆ ಮಾತನಾಡುತ್ತ, ಕಲ್ಪನೆಯ ಬೆನ್ನು ಹತ್ತಿ ದಣಿಯುತ್ತಿರುವಳು. ಆ ತಾಯಿ ತಂದೆಯರಂತೂ ಶತಮೂರ್ಖರು. ಇಂತಹವರು ಅರಮನೆ ವಾಸ, ರಾಣಿಯ ಅಧಿಕಾರ ಇವನ್ನು ತಿರಸ್ಕರಿಸುತ್ತಿದ್ದಾರಲ್ಲ. ಅಂತೂ ದಂಡಕ್ಕೆ ಮಣಿದು ಮೆತ್ತಗಾದರು, ಈಗಲಾದರೂ ಒಲಿಯುವ ಕಾಲ ಬಂದಿತು....’

‘ನಿಜ, ಆದರಿಂದ ಮನಸ್ಸನ್ನು ಒಲಿಸಿಕೊಂಡಂತೆ ಆಯಿತೇ....?’ ವಸಂತಕ ಪ್ರಶ್ನಿಸಿದ.

‘ಅದು ಮುಂದಿನ ಮೆಟ್ಟಲು, ಇಲ್ಲಿಗೆ ಬಂದ ಬಳಿಕ ಅದಕ್ಕೆ ಪ್ರಯತ್ನ ! ವಸಂತಕಾ, ರಸಿಕಮಿತ್ರನಾಗಿ ನೀನು ಹೇಗೆ ಅರಿಯೆಯೋ ಏನೋ. ಮನಸ್ಸಿನ ಭಾವನೆಗಳಿಗೆ ವಾತಾವರಣ ಬಹು ಮುಖ್ಯ. ಇಲ್ಲಿ ಎಷ್ಟು ತೀವ್ರವಾಗಿ ಬದಲಾವಣೆಗೊಳ್ಳುವಳು ಎಂಬುದನ್ನು ನೋಡುವಿಯಂತೆ. ಮೊದಲ ಹನಿ ಭೂಮಿಗೆ ಬಿದ್ದಾಗ ಅದು ಅರಳಿ, ಸುವಾಸನೆ ಸೂಸುತ್ತ ಮಳೆಯನ್ನು

ಪುರುಷನ ಸಾಮೀಪ್ಯದಲ್ಲಿ ಕರಗಿ ನೀರಾಗಿ, ಮನಸೋಲುವರು; ಹಿಂದಿನ ದುರ್ಘಟನೆ ಮರೆಯುವರು....' ಆತ್ಮವಿಶ್ವಾಸದಿಂದ ಕೌಶಿಕ ಹೇಳಿದ.

'ನಿಮ್ಮ ಭರವಸೆ ಬಹಳ ದೃಢವಾಗಿದೆ, ಸಂತೋಷ! ನಾವು ಇಷ್ಟು ಕಷ್ಟ ಪಟ್ಟು ಅರಮನೆಗೆ ಕರೆತಂದುದಕ್ಕೂ, ನೀವು ಪರಿವರ್ತನೆಯಲ್ಲಿ ಯಶಸ್ವಿಯಾದರೆ ನಮ್ಮ ಶ್ರಮ ಸಾರ್ಥಕ, ನೀವೂ ಸುಖಿಯಾಗುವಿರಿ. ಹಾಗಾದರೆ ಆಕೆಯ ಎಲ್ಲ ಒಪ್ಪಂದಗಳಿಗೆ ಸಮ್ಮತಿ ಉಂಟಷ್ಟೆ....! ತಾಯಿ ತಂದೆಯರನ್ನು ಕರೆದೊಯ್ದು ಬಿಟ್ಟು, ಆಕೆಯನ್ನು ಕರೆತರುವೆ....'

'ಎಲ್ಲಕ್ಕೂ ಒಪ್ಪಿಗೆ....ತೀವ್ರವಾಗಿ ಕರೆತಾ ಮಿತ್ರ' ವಸಂತಕ ಕುದುರೆಯನ್ನೇರಿ ಬಂದು, ಮಹಾದೇವಿಗೆ ಎಲ್ಲವನ್ನು ಅರುಹಿದ್ದ.

* * *

ಇತ್ತ ಕೌಶಿಕ ತನ್ನ ಏಕಾಂತಭವನದ ಸನಿಹದಲ್ಲಿಯೇ ಇದ್ದ ಪ್ರಶಾಂತ ಭವನವೆಂಬ ನೂತನ ಅರಮನೆಯನ್ನು ತೆರವು ಮಾಡಿಸಿದ. ಅರಸನ ವೈಯಕ್ತಿಕ ಉದ್ಯಾನವಿದ್ದುದು ಈ ಗೃಹವನ್ನು ಬಳಸಿಕೊಂಡು. ಅವನ ಏಕಾಂತ ಭವನದಲ್ಲಿ ನಿಂತು ನೋಡಿದರೂ ಆ ಉದ್ಯಾನ ಅತಿ ಸುಂದರ ನೋಟವನ್ನು ಕಣ್ಣಿಗೆ ಉಣ್ಣಿಸುತ್ತಿತ್ತು.

ಪರಿಚಾರಕರ ಸಮೂಹ ಅಲ್ಲಿಗೆ ಬಂದು ಕೆಲವೇ ಕ್ಷಣಗಳಲ್ಲಿ ಭವನವನ್ನು ಶೃಂಗರಿಸಿತು. ಶೃಂಗಾರಿಕೆಯರ ಒಡತಿಯಾದ ಮದನರತಿಯನ್ನು ಕೌಶಿಕ ಕರೆದ.

'ನೋಡು ಮದನೇ....ಇಂದು ಈ ಅರಮನೆಯನ್ನು ಶೋಭೆಗೊಳಿಸಲು ಚೆಲ್ವಿನ ರಾಣಿ ಬರುವವಳಿದ್ದಾಳೆ. ಅವಳೇ ಮುಂದೆ ಪಟ್ಟದರಸಿಯೂ ಆಗಬಹುದು. ಸ್ವಲ್ಪವೂ ಕೊರತೆಯಾಗದಂತೆ ಅವಳನ್ನು ನೋಡಿಕೊಳ್ಳಬೇಕು. ಈ ಪ್ರಪಂಚಕ್ಕೆ ಹೊಸಬಳು; ಅರಮನೆಯ ವಿಲಾಸ ವೈಭವದ ಕೊಳದಲ್ಲಿ ಅರಸಂಚೆಯಂತೆ ವಿಹರಿಸಬೇಕಾದ ಆ ಮುಗ್ಧ ಚೆಲುವೆ ಆಧ್ಯಾತ್ಮಪ್ರಪಂಚದ ಕಿರುಕೆರೆಯಲ್ಲಿ ಸೇರಿದ್ದಳು. ಅಲ್ಲಿಂದ ಬಿಡುಗಡೆ ಮಾಡಿ ಇಲ್ಲಿಗೆ ಕರೆತರಲಾಗುತ್ತಿದೆ. ಈ ವಿಲಾಸಪ್ರಪಂಚದ ಮರ್ಮವು ಇನ್ನೂ ತಿಳಿದಿಲ್ಲ. ನೀನು ಸಮರ್ಪಕವಾಗಿ ಶಿಕ್ಷಣ ಕೊಡಬೇಕು....' ಮಾರ್ಮಿಕವಾಗಿ ಕಡೆಗಣ್ಣಿನಿಂದ ನೋಡಿ ಹೇಳಿದ.

'ನೀವೇನೂ ಚಿಂತಿಸದಿರಿ ಪ್ರಭುಗಳೇ! ಅವರುಗಳನ್ನು ಪಳಗಿಸುವ ಕಲೆ ನನಗೆ ಗೊತ್ತು! ಈ ವಾತಾವರಣ, ನಿಮ್ಮ ಪ್ರೇಮದ ದೃಷ್ಟಿ, ಪುರುಷ ಸಾಮೀಪ್ಯ....ಇವುಗಳಿಂದ ಬಿರುಗಾಳಿಗೆ ಸಿಕ್ಕ ತರಗೆಲೆಗಳಂತೆ ಹುಚ್ಚು ಆದರ್ಶ

'ಅರಮನೆಯಲ್ಲಿ ಕಾಲಿಟ್ಟಲ್ಲೆಲ್ಲ ಮನವನ್ನು ಉದ್ರೇಕಿಸುವ, ರಸಿಕತೆಯನ್ನು ಕೆರಳಿಸುವ ಭಾವಚಿತ್ರಗಳು, ಕಲಾಕೃತಿಗಳು ತೂಗಾಡಬೇಕು. ಇಲ್ಲಿ ಸುಂದರವಾದ ಗಿಳಿಗಳ ಜೋಡಿಯನ್ನು ಇಡು. ಅತ್ತ ಪಾರಿವಾಳಗಳ ಗೂಡನ್ನಿಡು. ಇಲ್ಲಿ ನಿಂತರೆ ಕಾಣುವಂತೆ ಉದ್ಯಾನದ ಆ ಭಾಗದಲ್ಲಿ ನವಿಲುಗಳ ಒಂದು ಜೋಡಿಯನ್ನು ಬಿಡು. ಮೊಲಗಳ ಒಂದೆರಡು ಜೋಡಿಯನ್ನು ಗೂಡಿನಲ್ಲಿಟ್ಟರೆ ಒಳ್ಳೆಯದು....' ಸೂಕ್ತವಾದ ಸಲಹೆಗಳನ್ನು ನೀಡಿದ.

'ಸಾಧ್ಯವಾದಷ್ಟೂ ಶೃಂಗಾರ ಗೀತೆಗಳನ್ನು ಹಾಡಿಸುತ್ತಲಿರು. ಸಮಯ ಸಿಕ್ಕಾಗಲೆಲ್ಲ ಕಾಮೋದ್ರೇಕ ಮಾಡುವ ಮಾತುಗಳನ್ನು ನುಡಿಯುತ್ತಿರು. ಮದನೇ....ಇದರಲ್ಲಿ ನೀನು ಜಯಶಾಲಿಯಾದರೆ ಬೆಲೆ ಬಾಳುವ ರತ್ನಹಾರವನ್ನು ಬಹುಮಾನವಾಗಿ ನೀಡುವೆ....'

'ಓ....ಆ ಬಹುಮಾನ ಒತ್ತಟ್ಟಿಗೆ ಇರಲಿ, ನೀವು ರಸಿಕತೆಯ ಸರಸಿಯಲ್ಲಿ, ಸುಖದ ದೋಣಿಯನ್ನೇರಿ ವಿಹರಿಸಿದರೆ ಸಾಕು, ನೋಡಿ ಸಂತೋಷಪಡುವೆ' ಒಯ್ಯಾರದಿಂದ ಹೇಳಿದಳು.

'ಮದನೇ ನೀನು ಬಹು ರಸಿಕಳು; ಕವಯಿತ್ರಿ ಸಹ....' ಕಿಟಕಿಯಲ್ಲಿ ಬಾಗಿ ತೂಗುತ್ತಿದ್ದ ಹೂವೊಂದನ್ನು ಕಿತ್ತು ಕೌಶಿಕ ಅವಳತ್ತ ಬೀಸಿದನು.

'ನಿನಗಿಂತ ಹತ್ತುಪಟ್ಟು ಚೆಲ್ವೆ ಆಕೆ, ಆದರೆ ಅರಸಿಕತೆಯ ಮೊಟ್ಟೆ....' ಖಿನ್ನನಾಗಿ ಹೇಳಿದ.

'ಭ್ರಮರ ತನ್ನ ಗೂಡಿನಲ್ಲಿಟ್ಟು ಕೀಡೆಯನ್ನು ಭ್ರಮರವನ್ನಾಗಿ ಮಾಡಿಕೊಳ್ಳುವಂತೆ, ಅವಳ ಚೆಲುವಿಗೆ ತಕ್ಕ ರಸಿಕತೆಯನ್ನು ನಾನು ತುಂಬಿಕೊಟ್ಟರಾಯಿತಲ್ಲೋ....'

'ಭಲೇ....ಭಲೇ! ಅಷ್ಟಾದರೆ ನಾನು ಧನ್ಯ. ನೋಡು ಮದನೆ, ಚಿನ್ನವು ಅಪರಂಜಿಯಾಗಿದ್ದರೆ ಅದನ್ನು ಬಳಸಿಕೊಂಡು ಆಭರಣಮಾಡಿ ತೊಡಲು ಬರದು. ಅದಕ್ಕಷ್ಟು ತಾಮ್ರ ಸೇರಿದರೆ ಮಾತ್ರ ಆಭರಣವಾಗುವುದು. ಹಾಗೆಯೇ ರಸಿಕತೆ, ಸೌಂದರ್ಯಪ್ರಜ್ಞೆ ಇಲ್ಲದ ಚೆಲುವು ಅಪರಂಜಿಯಂತೆ, ಪುರುಷಹೃದಯಕ್ಕೆ ತೃಪ್ತಿ ನೀಡದು. ರಸಿಕತೆಯು ಚೆಲುವಿನ ಆಸ್ವಾದನೆಗೆ ಪೂರಕ ಸಾಧನ....'

ಇರಲಿ....ಅವಳು ಬರುವ ವೇಳೆಯಾಯಿತು. ನಾನೂ ಸಿದ್ಧನಾಗುವೆ' ಕೌಶಿಕ ನುಡಿದ.

'ಜರಿಮಿಶ್ರಿತ ರೇಷಿಮೆಯ ನಿಲುವಂಗಿ, ರತ್ನಹಾರ, ವಜ್ರದುಂಗುರ ತರಲು

'ಬೇಡ ಬೇಡ....ಅವಳು ಬಹಳ ಸರಳತೆಯ ಆರಾಧಕಳು. ನನ್ನ ಆಡಂಬರ ನೋಡಿ ಬೇಸರಿಸಬಾರದು. ಜರಿಯಿಲ್ಲದ ಅಚ್ಚ ಬಿಳಿಯ ನಿಲುವಂಗಿ, ನಸುಗೆಂಪು ವರ್ಣದ ಉತ್ತರೀಯ, ಮುತ್ತಿನಹಾರ, ಸರಳವಾಗಿರುವ ಹೊನ್ನಿನ ಉಂಗುರ ಸಾಕು....'

'ಇದೂ ಸರಿಹೋಯ್ತು ; ಅವರನ್ನು ಸರಳತೆಯಿಂದ ಆಡಂಬರಕ್ಕೆ ಬದಲಿಸ ಬೇಕೆಂದು ಸಂಕಲ್ಪ ತೊಟ್ಟು, ಇನ್ನೂ ಬರುವ ಮುನ್ನವೇ ನೀವೇ ಆಡಂಬರ ದಿಂದ ಸರಳತೆಗೆ ಇಳಿಯುತ್ತಿರುವಿರಿ....ಅವರ ವಿಚಾರಕ್ಕೆ ನೀವೇ ಬಲಿಯಾದರೆ ಬಹು ಕಷ್ಟ!' ನಕ್ಕಳು ಮದನೆ.

'ನೀನು ಹೋಗಿ ಆರತಿ ಬೆಳಗಿ ಇದಿರ್ಗೊಳ್ಳಬೇಕು. ದಾಸಿಯರು ಹೂವು ಚೆಲ್ಲುತ್ತ ಕರೆತರಬೇಕು. ಹೋಗಿ ಅಲ್ಲಿ ನಿರೀಕ್ಷಿಸಿರಿ. ಅರಮನೆಯ ಹೆಬ್ಬಾಗಿಲಿ ನಿಂದ ಇಲ್ಲಿಗೆ ಕರೆತರಲು ಬಹಳ ವೇಳೆ ಹಾಳುಮಾಡಬೇಡಿರಿ. ನನಗೆ ತಡೆಯ ಲಾರದ ವಿರಹ ವೇದನೆ. ನಾನೇ ಆ ಹೆಬ್ಬಾಗಿಲಿಗೆ ಬಂದು ಇದಿರ್ಗೊಳ್ಳ ಬೇಕೆಂಬ ಬಯಕೆ ತುಡಿಯುತ್ತಿದೆ. ಆದರೆ ರಾಜಗಾಂಭೀರ್ಯವನ್ನು ಕಾಪಾಡಿ ಕೊಳ್ಳಬೇಕೆಂಬ ಸಂಕೋಲೆ ನನ್ನನ್ನು ತಡೆಯುತ್ತಿದೆ.' ಕೌಶಿಕನು ಅಸಹನೆ ಯಿಂದ ಹೇಳಿದನು. ಮದನರತಿಯು ಒಪ್ಪಿಗೆ ನೀಡಿ ತನ್ನ ಪರಿಚಾರಿಕೆಯ ರೊಡನೆ ಸಾಗಿದಳು.

* * *

ಮೇನೆಯು ವಿಸ್ತಾರವಾದ, ಎತ್ತರವಾದ ಪೌಳಿಯ ಬಾಗಿಲನ್ನು ದಾಟಿ ಅರಮನೆಯ ಹೆಬ್ಬಾಗಿಲಿಗೆ ಬಂದಿತು. ಅಲ್ಲಿ ನಿಲ್ಲುತ್ತಲೇ ವಸಂತಕನು ತೆರೆಯನ್ನು ಸರಿಸಿ ನುಡಿದ:

'ತಾವು ಇಳಿದು ದಯಮಾಡಿಸಬಹುದು....'

ಮಹಾದೇವಿ ಮೆಲ್ಲನೆ ಇಳಿದಳು. ಪರಿಚಾರಿಕೆಯರು ಕೈಯನ್ನು ತೋರಿಸಿ ಮುಂದೆ ಕರೆದೊಯ್ದರು. ಸುಂದರಿಯರಾದ ಹೆಂಗೆಳೆಯರು ಸಾಲಾಗಿ ನಿಂತಿ ದ್ದರು. ಅವರ ಮಧ್ಯೆ ವಿಶೇಷವಾಗಿ ಅಲಂಕೃತಳಾಗಿದ್ದ ಮದನರತಿಯು ಪ್ರಸನ್ನಮುಖಿಯಾಗಿ ಆರತಿ ಬೆಳಗಿದಳು.

ವಸಂತಕನು ಮುಂದೆ ನಡೆದ. ತರುಣಿಯರು, ಸುಂದರಿಯರು ಆದ ಅನೇಕ ಪರಿಚಾರಿಕೆಯರು ಹಾಸಿದ್ದ ರತ್ನಗಂಬಳಿಯಮೇಲೆ ಮಲ್ಲಿಗೆ, ಸಂಪಿಗೆ ಹೂವು ಗಳನ್ನು ಎರಚಿ, ಹೂವಿನ ಹಾಸಿಗೆಯನ್ನು ರಚಿಸುತ್ತಿದ್ದರು. ಮಹಾದೇವಿ ಅವುಗಳ ಮೇಲೆ ಕಾಲಿಡಲು ಹಿಂಜರಿಯುತ್ತಿದ್ದಳು.

ಜರ್ಜರಿತವಾಗಬೇಕೋ ಏನೋ....!' ಎಂದುಕೊಂಡಳು.

'ಇವೆಲ್ಲವನ್ನು ಕೆಳಗೆ ಹಾಕುವ ಬದಲು ಪೂಜೆಗೆ ಇರಿಸಿದ್ದರೆ, ಅವುಗಳ ಬಾಳೂ ಸಾರ್ಥಕವಾಗುತ್ತಿತ್ತು....'

ಪ್ರಶಾಂತ ಭವನದ ತಲೆಬಾಗಿಲನ್ನು ದಾಟಿ ಒಳಗೆ ಕಾಲಿಟ್ಟಳು. ವಿಶಾಲವಾದ ಪ್ರಾಂಗಣ. ಮಧ್ಯೆ ನೃತ್ಯ, ಸಂಗೀತಾದಿಗಳಿಗೆ ಭವ್ಯ ರಂಗಮಂಟಪ ; ಅದನ್ನು ದಾಟಿ ವಿಶಾಲವಾದ ಕೋಣೆ. ಪರಿಚಾರಿಕೆಯರು ಕೋಣೆಯ ಬಾಗಿಲತನಕ ಕರೆದೊಯ್ದು ಅಲ್ಲಿಯೇ ನಿಂತರು. ಮುಂದೆ ವಸಂತಕನೊಬ್ಬನೇ ಒಳಗೆ ಸಾಗಿದ. ಅವನ ಸೂಚನೆಯಂತೆ ಮಹಾದೇವಿಯೂ ಮುನ್ನಡೆದಳು. ಆ ಕೋಣೆಯಿಂದ ಹೊರಬರುವ ಪರಿಮಳಯುಕ್ತ ಗಾಳಿಯು, ಅದರ ಹೆಚ್ಚಿನ ಅಲಂಕಾರ ಆಕೆಗೆ ವಿಶೇಷತೆಯನ್ನು ಸೂಚಿಸಿದವು. ನಿರೀಕ್ಷಿಸಿದಂತೆ ಕೌಶಿಕನು ಎತ್ತರವಾದ ಪೀಠದ ಮೇಲೆ ಕುಳಿತಿದ್ದ. ಮಹಾದೇವಿ ಒಳಗೆ ಕಾಲಿಡುತ್ತಿದ್ದಂತೆಯೇ ತನ್ನ ತಲೆಯಮೇಲೆ ಕೈಯಾಡಿಸಿ ಮುಸುಕು ಮುಚ್ಚಿದೆ ಎಂದು ದೃಢಪಡಿಸಿಕೊಂಡಳು.

ಕೌಶಿಕನು ಅವನಿಗರಿಯದೆ ಎದ್ದು ನಿಂತ.

'ತಾವು....ಮಹಾಪ್ರಭುಗಳು....ನಮ್ಮಂತಹ ಸಾಮಾನ್ಯ ಪ್ರಜೆಗಳು ಬಂದಾಗ ಎದ್ದು ನಿಲ್ಲಬಾರದು, ತಾವು ಆಸೀನರಾಗಿರಿ. ತಮಗೆ ಪ್ರಣಾಮಗಳನ್ನು ಸಲ್ಲಿಸುವೆ....' ಎರಡೂ ಕೈಗಳನ್ನು ಜೋಡಿಸಿದಳು. ಪೀಠದ ಮೇಲೆ ಕುಳಿತು 'ತಾವು ಕುಳಿತುಕೊಳ್ಳಿರಿ' ಎಂದು ಕೌಶಿಕನು ಕೈತೋರಿಸಿದಾಗ ಅನತಿ ದೂರದಲ್ಲಿದ್ದ ಪೀಠವೊಂದರ ಮೇಲೆ ಕುಳಿತುಕೊಂಡಳು. ಸುತ್ತಲೂ ಮೌನ ಮುಸುಕಿತು. ಕೌಶಿಕ ಮಹಾದೇವಿಯನ್ನು ದಿಟ್ಟಿಸಿದ. ಅಂದು ತಾನು ದೂರದಿಂದ ಕಂಡು ಆ ಪುತ್ಥಳಿಯ ಆಕಾರವನ್ನಷ್ಟೇ ನೋಡಿದ್ದವನು, ಈಗ ಆಕೆಯ ಅಂಗಾಂಗಗಳ ವಿನ್ಯಾಸವನ್ನು ಗಮನಿಸತೊಡಗಿದ.

ವಸಂತಕನು ಸೂಕ್ಷ್ಮವನ್ನರಿತವನಂತೆ,

'ಮಹಾಪ್ರಭು....ಪೂರೈಸಬೇಕಾದ ಕಾರ್ಯಗಳು ಬಹಳಿವೆ. ಹೋಗಲು ಅಪ್ಪಣೆ ನೀಡಿರಿ....' ಕೌಶಿಕ ಮೌನವಾಗಿಯೇ ಸಮ್ಮತಿ ಸೂಚಿಸುವಂತೆ ತಲೆ ಅಲ್ಲಾಡಿಸಿದ. ಮಹಾದೇವಿಯ ಎದೆ ಕಂಪಿಸಿತು. ಆದರೂ ತೋರಿಸಿಕೊಳ್ಳದೆ ನಿರ್ಲಿಪ್ತವಾಗಿ ಕುಳಿತಿದ್ದಳು.

ಅಚ್ಚ ಬಿಳಿಯ ಸೀರೆಯಲ್ಲಿ ಅಂಗಾಂಗಗಳನ್ನು ಮರೆಮಾಡಿಕೊಂಡಿದ್ದ ಮಹಾದೇವಿ ಹಿಮದ ಪುತ್ಥಳಿಯಂತೆ ತೋರುತ್ತಿದ್ದಳು. ತಲೆಯ ತುಂಬ

ನಿಗೆ ತಿಳಿಸಲಾಯಿತು. ಹಣೆಯ ಮೇಲಿನ ವಿಭೂತಿ ಪಟ್ಟೆಯು [illegible] ಮೂಡಿ ಆ ಮುಖದ ಚೆಲುವನ್ನು ದುಪ್ಪಟ್ಟು ಹೆಚ್ಚಿಸಿದ್ದರೂ ಅದು ಅರಸಿಕತೆ ಎನ್ನಿಸಿತು ಕೌಶಿಕನಿಗೆ. ಮೈಮೇಲೆ ಒಂದು ಗುಂಜಿಯಷ್ಟೂ ಬಂಗಾರದ ಆಭರಣವಿರಲಿಲ್ಲ.

ಪ್ರಶಾಂತ ಭವನದ ವಿಶಾಲವಾದ ಕಿಟಕಿಗಳಿಂದ ತೂರಿ ಬರುತ್ತಿದ್ದ ತಂಗಾಳಿ ಸೆರಗನ್ನು ಹಾರಿಸುತ್ತಿದ್ದಾಗ ಅದನ್ನು ಎಚ್ಚರಿಕೆಯಿಂದ ಬಿಗಿಯಾಗಿ ಹಿಡಿದಿದ್ದಳು. ಮುಸುಕು ಗಾಳಿಯ ಅಲೆಗೆ ಜಾರಿ ಬಿದ್ದಾಗ ಮುಂಗುರುಳು ನವಿರಾಗಿ ಹಾರಿದವು. ಅವನ್ನು ಹಿಡಿತದಲ್ಲಿಡಲು ಪ್ರಯತ್ನ ಮಾಡಿದಳು. ರುದ್ರಾಕ್ಷಿಯ ಮಾಲೆಯು ಎದೆಯ ಮೇಲೆ ಸೆರಗಿನ ಹೊರಗೆ ತೂಗಿಬಿದ್ದು ವಿಲಕ್ಷಣ ಶೋಭೆಯನ್ನು ನೀಡುತ್ತಿತ್ತಲ್ಲದೆ ಶಿವನ ಸತಿಯೆಂಬುದಕ್ಕೆ ಸಾಕ್ಷಿಯಾಗಿತ್ತು. ಮಹಾದೇವಿ ತನ್ನ ಕಣ್ಣುಗಳನ್ನು ಸುತ್ತಲೂ ಹಾಯಿಸುತ್ತ ಸಹಜವಾಗಿ ದಿಟ್ಟಿಸಿದಳು. ಕೌಶಿಕನ ಮೈ ಪುಳಕಗೊಂಡಿತು. ಆ ಕಪ್ಪು ಕಣ್ಣುಗಳು ವಿಲಕ್ಷಣ ಕಾಂತಿಯಿಂದ ಫಳಫಳನೇ ಹೊಳೆಯುತ್ತಲಿದ್ದವು. ಅವುಗಳಲ್ಲಿ ಅಂಜಿಕೆ, ಅಳುಕುಗಳ ಅಂಶವಿಲ್ಲದೆ ಒಂದು ಬಗೆಯ ಆತ್ಮವಿಶ್ವಾಸ, ಕೆಚ್ಚು ತುಂಬಿರುವಂತೆ ಎನಿಸುತ್ತಿತ್ತು. ಅನಿರೀಕ್ಷಿತ ದೃಷ್ಟಿ ಮಿಲನದಿಂದ ವಿಮಂಚಿತನಾದ ಅವನು ಸಾವರಿಸಿಕೊಂಡು ಕೇಳಿದ :

'ಏಕೆ ಮಹಾದೇವಿ....ನಾನು ಕಳಿಸಿದ ಒಡವೆಗಳೊಂದನ್ನೂ ಧರಿಸಿಲ್ಲ?'

'ಬಿದ್ದು ಹೋಗುವ ಕ್ಷುದ್ರ ತನುವಿದಕ್ಕೆ ಅಲಂಕಾರದ ಆಡಂಬರ ಬೇರೆ ಬೇಕೆ....? ನನ್ನ ಗುರಿಗೆ ಅವು ಬಾಧಕ....' ನಿರ್ಲಿಪ್ತಳಾಗಿ ಹೇಳಿದಳು.

'ಅದೂ ಸರಿಯೆ. ಆ ಆಭರಣಗಳು ಸಹ ಸಾಧಕವಾಗುವ ಬದಲು ಬಾಧಕವಾಗುವವು. ಅವು ದೇವನಿರ್ಮಿತ ಅಂಗಾಂಗಗಳನ್ನು ಸುತ್ತುವರಿದು ಚೆಲುವನ್ನು ಮರೆಮಾಡಿಬಿಡುವವು....ನಿನಗೆ ಈ ನಿರಾಭರಣತ್ವವೇ ಬಹು ದೊಡ್ಡ ಅಲಂಕಾರ....'

'ಆ ಸೌಂದರ್ಯಪ್ರಜ್ಞೆಯಿಂದ ನಿರಾಭರಣಯುಕ್ತಳಾಗಿಲ್ಲ, ನನ್ನ ದೇವನಿಗಾಗಿ ನಾನು ಹೀಗಿರುವೆ....'

'ಧನ್ಯನಾದೆ ; ನನಗಾಗಿಯೇ ಹೀಗಿರುವುದಾದರೆ ಎಷ್ಟು ಭಾಗ್ಯವಂತ....!' ತನ್ಮಯನಾಗಿ ಹೇಳಿದ.

'ಓಹ್....ನಾನು ಆಡಿದ ಮಾತುಗಳನ್ನು ಎಷ್ಟು ತಪ್ಪಾಗಿ ಅರ್ಥೈಸುತ್ತಿರುವಿರಿ. ನಿಮಗಾಗಿ ಅಲ್ಲ....ನನ್ನ ಗಂಡನಿಗಾಗಿ ಹೀಗಿರುವೆ....'

'ಹೌದು; ನಾನು ವಿವಾಹಿತಳು. ದೇವನಿಗಾಗಿ ಮೀಸಲಾದ ಕನ್ಯೆ' ಗಂಭೀರವಾಗಿ ನುಡಿದಳು.

'ಓ....ಆ ದೇವರನ್ನು ಗಂಡ ಎಂದು ತಿಳಿಯುವುದು ತಾನೆ....?'

'ಹೌದು, ಸಾವು ಕೇಡಿಲ್ಲದ ನಿಸ್ಸೀಮ ಚೆಲುವನನ್ನು, ಜಗದ ಗಂಡರನೆಲ್ಲ ಹೆಂಡಿರನ್ನಾಗಿ ತಿಳಿಯುವ ಚನ್ನಮಲ್ಲಿಕಾರ್ಜುನನನ್ನು ನಾನು ಪತಿ ಎಂದು ತಿಳಿದಿರುವೆ....'

'ಮಹಾದೇವಿ ಇದೇಕೆ ನಿನ್ನ ತಲೆಯಲ್ಲಿ ಈ ಹುಚ್ಚು ಹೊಕ್ಕಿತೋ! ಇಂತಹ ಅಪರೂಪದ ಸೌಂದರ್ಯವನ್ನು, ತುಂಬು ಯೌವ್ವನವನ್ನು ಏಕೆ ಬಂಜರಾಗಿ ಮಾಡಿಕೊಳ್ಳಬಯಸುವೆ....? ಶಕ್ತಿ ಇದ್ದಾಗ, ಅವಕಾಶವಿದ್ದಾಗ ಬದುಕಿನಲ್ಲಿ ಪಡೆಯಬಹುದಾದ ಸುಖ ಬಿಟ್ಟು ಇದು ಎಂತಹ ಹುಚ್ಚುತನ....!!'

'ನಿಜ ರಾಜರೇ, ಪ್ರಾಪಂಚಿಕರ ಕಣ್ಣಿಗೆ ಶರಣರ ಜೀವನ ಹುಚ್ಚಾದರೆ, ಶರಣರ ಕಣ್ಣಿಗೆ ಆದರ್ಶರಹಿತ ಜೀವನ ಹುಚ್ಚು. ನೀರಿನ ತೊಟ್ಟಿಯಲ್ಲಿ ಒಂದು ಕೋಲನ್ನು ಇಟ್ಟರೆ, ಮೇಲೆ ನಿಂತು ನೋಡಿದಾಗ ನೀರಿನ ಮಟ್ಟದಿಂದ ಕೆಳಗಿರುವ ಕೋಲು ಬಾಗಿದಂತೆ ಕಾಣುವುದು. ಹಾಗೆಯೇ ವಿಷಯ ಪ್ರಪಂಚದ ಕೂಸಾಗಿ ಅಧ್ಯಾತ್ಮಿಕ ಸತ್ಯಗಳನ್ನು ನೋಡಿದಾಗ ಅವು ವಕ್ರವಾಗಿ ಕಂಡರೆ, ಅಧ್ಯಾತ್ಮಪ್ರಪಂಚದ ಮಗುವಾಗಿ ನಶ್ವರಮೌಲ್ಯಗಳನ್ನು ನೋಡಿದರೆ ಅವು ವಿಕೃತ ಪುರುಷಾರ್ಥಗಳಾಗಿ ತೋರುವವು.'

'ಪಾಪ, ನಿನ್ನ ತಲೆಯಲ್ಲಿ ಇವು ಬಹಳಷ್ಟು ಆಳವಾಗಿ ಬೇರುಬಿಟ್ಟಿವೆ. ಇವನ್ನು ಅಲುಗಿಸುವುದು ಕಷ್ಟ....' ವಿಷಾದದಿಂದ ನುಡಿದ ಕೌಶಿಕ.

'ಅಧ್ಯಾತ್ಮಿಕ ಮೌಲ್ಯಗಳು ಆಳವಾಗಿ ಬೇರು ಬಿಟ್ಟಷ್ಟೂ ಸದ್ಗುಣಗಳ ವೃಕ್ಷ ಹದವಾಗಿ ಬೆಳೆಯುವುದು. ಅದರಿಂದಾಗಿ ಎಷ್ಟೋ ನೊಂದಜೀವಿಗಳು ಆ ತತ್ತ್ವಗಳ ಆಶ್ರಯ ಪಡೆಯುವರು....'

'ಬರೀ ಮಾತುಕತೆಯಲ್ಲಿ ಹೊತ್ತುಗಳೆದುದಾಯಿತು. ನೀನು ಬಹು ಇಂಪಾಗಿ ಹಾಡುವಿಯಂತೆ; ದಣಿದಿರದಿದ್ದರೆ ಒಂದು ಹಾಡನ್ನು ಕೇಳಿಸುವ ಕೃಪೆ ಮಾಡುವೆಯಾ....?'

'ಓಹೋ, ನಿಶ್ಚಯವಾಗಿ. ಆದರೆ ನನ್ನದು ಕಲಿತ ಸಂಗೀತವಲ್ಲ, ಭಾವ ತುಂಬಿ ಸ್ವಚ್ಛಂದವಾಗಿ ಹರಿವ ಭಕ್ತಿಗೀತೆ...."

'ಇರಲಿ....ಅದೇ ಚಂದ. ಕಟ್ಟಿ, ಹರಿಸುವ ಕಾಲುವೆಯ ನೀರಿಗಿಂತ ಸ್ವಚ್ಛಂದವಾಗಿ ಹಳ್ಳ, ಕೊಳ್ಳಗಳಲ್ಲಿ, ಬೆಟ್ಟವನ್ನು ಬಳಸಿ ಹರಿವ ನದಿಯ

ಕೇವಲ ಶಾಸ್ತ್ರಜ್ಞಾನದಿಂದ ಹಾಡುವುದು ಕಾಲುವೆಯ ನೀರಿನಂತೆ.'

'ಅಂತೂ ನಿಮ್ಮ ಕಾವ್ಯಪ್ರಜ್ಞೆ, ಕಲ್ಪನಾ ಸಂಪತ್ತು ಚೆನ್ನಾಗಿವೆ. ಆದರೆ ಅವು ಕಾದ ಹಂಚಿನ ಮೇಲೆ ಬಿದ್ದ ನೀರಿನಂತೆ, ವಿಲಾಸ ಪ್ರಪಂಚದಲ್ಲಿ ಹರಿದು ವ್ಯರ್ಥವಾಗುತ್ತಲಿವೆ....'

ಮಹಾದೇವಿಯ ಮೆಚ್ಚುಗೆಯಿಂದ ಕೌಶಿಕ ಉಬ್ಬಿಹೋದ. ತನ್ನನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದಳು ಎಂದುಕೊಂಡ. ಕಡೆಯ ವಾಕ್ಯ ಸ್ವಲ್ಪ ನಿರಾಶೆಯನ್ನು ತಂದಿತು.

'ಅಂದರೆ....'

'ಇರಲಿ....ಈಗ ಹಾಡುವೆ :

ಎನ್ನ ಮನವ ಮಾರುಗೊಂಡನವ್ವಾ
ಎನ್ನ ತನುವ ಸೂರೆಗೊಂಡನವ್ವಾ
ಎನ್ನ ಸುಖವನೊಪ್ಪುಗೊಂಡನವ್ವಾ
ಎನ್ನ ಇರವನಿಂಬುಗೊಂಡನವ್ವಾ
ಚನ್ನಮಲ್ಲಿಕಾರ್ಜುನನ ಒಲುಮೆಯವಳಾನು'*

ಮಹಾದೇವಿ ಕಣ್ಣುಮುಚ್ಚಿಕೊಂಡು ಭಾವತುಂಬಿ, ಬಹಿರ್ಪ್ರಪಂಚದ ಅರಿವನ್ನು ಮರೆತು ಹಾಡತೊಡಗಿದಾಗ ಕೌಶಿಕ ಸಮ್ಮೋಹನಕ್ಕೆ ಒಳಗಾದ. ಮೊದಲ ನಾಲ್ಕು ಸಾಲುಗಳನ್ನು ಕೇಳುವಾಗ, ತನ್ನನ್ನು ಕುರಿತೇ ಹೇಳುತ್ತಿರಬೇಕು ಎಂದು ಭಾವಿಸಿದ. 'ಸ್ತ್ರೀ ಸಹಜವಾದ ಲಜ್ಜೆಯಿಂದ ಲಗ್ನ ಬೇಡ ಎಂದು ಅಂದಿರಬೇಕೇ ವಿನಾ ಮನಃಪೂರ್ವಕವಾಗಿ ಅಲ್ಲ' ಎಂದುಕೊಂಡಾಗ ಆನಂದದ ಹೊಳೆ ಉಕ್ಕಿ ಹರಿಯಿತು.

ಆದರೆ ಚನ್ನಮಲ್ಲಿಕಾರ್ಜುನನ ಹೆಸರನ್ನು ಕೇಳುತ್ತಿದ್ದಂತೆಯೇ ರುಚಿಯಾದ ಒಗ್ಗರಣೆಯ ಮೊಸರನ್ನದಲ್ಲಿ ಹರಳು ಸಿಕ್ಕಂತೆ ವಿಷಾದವೆನಿಸಿತು. ಈ ಚನ್ನಮಲ್ಲಿಕಾರ್ಜುನನ ಹೆಸರಿನ ಬದಲಿಗೆ ತನ್ನ ಹೆಸರು ಇದ್ದಿದ್ದರೆ ಎಂದು ಕಲ್ಪಿಸಿಕೊಂಡು, ಅಂಥ ಕಾಲವೂ ಬರಬಹುದು ಎಂದು ಸಂತೈಸಿಕೊಂಡ.

'ಮಹಾದೇವಿ....ನೀನು ಚೆಲುವಿನಲ್ಲಿ ಉಮೆಯಾದರೆ, ಗಾಯನದಲ್ಲಿ ಸರಸ್ವತಿ; ನಿನ್ನನ್ನು ನಾನು ಅದೆಷ್ಟು ಪ್ರೇಮಿಸುವೆನೆಂಬುದನ್ನು ಹೇಳಲು ಶಬ್ದಗಳು ಸಾಲುತ್ತಿಲ್ಲ. ಇದು ನನ್ನನ್ನೇ ನಾನು ಅರ್ಪಿಸಿಕೊಂಡ ಪರಿಶುದ್ಧ ಪ್ರೇಮ....!'

ಮ. ವ ೨೬೮

'ನಿಜ....ಮನುಷ್ಯನು ತನ್ನ ತಪ್ಪುಗಳನ್ನು ಸಮರ್ಥಿಸಿಕೊಳ್ಳಲು ಅವಕ್ಕೆ ಆದರ್ಶದ ರೂಪ ಕೊಡುವುದು ವಾಸ್ತವಿಕವೆ! ಅರ್ಥವಿಲ್ಲದ ಆವೇಶದಿಂದ ಬಳಸುವ ಶಬ್ದಗಳು ಇವೆಲ್ಲ....'

'ಇದು ತಪ್ಪು ಕಲ್ಪನೆ.'

'ಆದರ್ಶ ಪ್ರೇಮವು ರೂಪಕ್ಕೆ ಮರುಳಾಗದು, ಗುಣಕ್ಕೆ ಶರಣಾಗುವುದು. ತೋರಿಕೆಗೆ ಮಾರುಹೋಗದು, ಅಂತರಂಗಕ್ಕೆ ಮಾರುಹೋಗುವದು. ಅದು ಆವೇಶದಿಂದ ಕೂಡಿರದು, ಸತ್ವದಿಂದ ಕೂಡಿರುವುದು. ನೋಡಿದ ತಕ್ಷಣ ಮರುಳಾಗಿರುವ ನಿಮ್ಮ ವರ್ತನೆ ನಿಮ್ಮ ಪ್ರೇಮದ ಆಳವನ್ನು ಕನ್ನಡಿಸುವುದು....'

'ಇಲ್ಲ ಮಹಾದೇವಿ, ಅಶ್ವವಿದ್ಯೆಯಲ್ಲಿ ಬಲ್ಲಿದನಾದಂತೆ ನಾನು ಸ್ತ್ರೀಯರ ಯೋಗ್ಯತೆಯನ್ನು ಅಳೆಯುವುದರಲ್ಲೂ ಅಷ್ಟೇ ಬಲ್ಲಿದನು! ನೋಡುತ್ತಿದ್ದಂತೆಯೇ ನಿನ್ನ ವ್ಯಕ್ತಿತ್ವವನ್ನು ನಾನು ಅರಿತೆ.'

'ಪವಿತ್ರ ಪ್ರೇಮವು ದೌರ್ಜನ್ಯದ ತಳಹದಿಯಮೇಲೆ ಕಾರ್ಯಮಾಡದು, ತ್ಯಾಗದ ತವರಾಗಿರುವದು. ಅದು ಶರೀರವನ್ನು ಎಳೆದು ತರಲು ಬಯಸದು, ಹೃದಯವನ್ನು ಸೆಳೆಯಲು ಆಶಿಸುವುದು....' ತೀಕ್ಷ್ಣವಾದ ನೋಟವನ್ನು ಹರಿಸುತ್ತ ಹೇಳಿದಳು.

ಕೌಶಿಕ ತಲೆ ತಗ್ಗಿಸಿದ, ತನ್ನ ವರ್ತನೆಗೆ ನಾಚಿ ನೀರಾದ. ಸಾವರಿಸಿಕೊಂಡು ನುಡಿದ:

'ಅದೆಲ್ಲವನ್ನೂ ನಿನಗಾಗಿ ಮಾಡಿದೆ ಮಹಾದೇವಿ. ನಿನ್ನಂತಹ ದೇವತೆಯ ಸಾನ್ನಿಧ್ಯ, ಸ್ಪರ್ಶಕ್ಕಾಗಿ ನನ್ನ ಈ ಮಾಟವೆಲ್ಲ; ಅದನ್ನು ಪ್ರೇಮದ ದೃಷ್ಟಿಯಿಂದ ಅರ್ಥಮಾಡಿಕೋ....'

'ಈ ತಪ್ಪನ್ನು ಮುಂದಿನ ವರ್ತನೆಯಲ್ಲಿ ತಿದ್ದಿಕೊಂಡರೆ ಒಳ್ಳೆಯದು.'

'ಖಂಡಿತವಾಗಿ....'

'ನಿಜವಾಗಿಯೂ ಹೇಳಬೇಕೆಂದರೆ ನಾನು ಒಂದು ದೃಢವಾದ ನಂಬುಗೆಯಿಂದ ಇಲ್ಲಿಗೆ ಬಂದಿರುವೆ ಮಹಾರಾಜ. ಜಗತ್ತೆಲ್ಲವೂ ನಿನ್ನನ್ನು ವಿಲಾಸಿ ಎಂದು, ದೌರ್ಜನ್ಯಪುರುಷನೆಂದು ಹೇಳಿತು. ಆದರೆ ನಾನು ನಂಬಲಿಲ್ಲ. ನಿನ್ನಲ್ಲಿ ಕಾಮಾಸಕ್ತಿ, ದೌರ್ಬಲ್ಯ ಇರಬಹುದೇ ವಿನಾ ಅದರಿಂದ ಪ್ರಚೋದಿತನಾಗಿ ಅನ್ಯರ ಮೇಲೆ ದೌರ್ಜನ್ಯ ಮಾಡುವಷ್ಟು ಕೆಟ್ಟವನಲ್ಲ ಎಂದು ನನ್ನ ಅಂತರಾತ್ಮ ಹೇಳಿತು. ಅದಕ್ಕಾಗಿ ಇಲ್ಲಿಗೆ ಬರುವ ನಿರ್ಧಾರ ಮಾಡಿದೆ. ಹುಟ್ಟು ಗುಣಗಳು ಇರುವವ ಮಾನವನು; ಆ ಹುಟ್ಟು ಗುಣಗಳಿಂದ ಪ್ರಚೋದಿತನಾಗಿ

[illegible] ನೀನು ನಂಬಿರುವ ಮಹಾರಾಜ, "ನೀನು ಮಾನವಮಟ್ಟದಲ್ಲಿ ಇರುವೆ, ದಾನವಮಟ್ಟಕ್ಕೆ ಇಳಿಯೆ, ಮಾತ್ರವಲ್ಲ; ಪ್ರಸಂಗಬಂದರೆ ಶರಣಮಟ್ಟಕ್ಕೂ ಏರುವೆ" ಎಂದು....' ಮಹಾದೇವಿ ರಾಜನನ್ನು ಚಿಕಿತ್ಸಕಬುದ್ಧಿಯಿಂದ ದಿಟ್ಟಿಸಿ ಹೇಳಿದಳು. ಅವಳ ವಾಣಿಯು ಸತ್ವಕ್ಕೆ ಬೆರಗಾದ ಕೌಶಿಕ ಮೌನ ತಾಳಿದ; ನಂತರ ನುಡಿದ:

'ನಿಜ ಮಹಾದೇವಿ; ನೀನು ನನ್ನನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಂಡಿರುವೆ. ನಿನ್ನ ನಂಬಿಗೆಯನ್ನು ಉಳಿಸಿಕೊಡಲು ನಾನೂ ಪ್ರಯತ್ನಿಸುವೆ. ನೀನು ಒಲಿದಾಗ ನಾನು ಮದುವೆಯಾಗುವೆ; ಬಲಾತ್ಕರಿಸುವ ಪ್ರಯತ್ನ ಮಾಡೆ.'

ತಾನು ಅವಳ ಮಾತಿನ ಮೋಡಿಗೆ ಸೋತೆನೇನೋ, ಅವಳ ಸ್ತುತಿಗೆ ಮರುಳಾದೆನೇನೋ ಎಂಬ ಭಾವನೆ ಸಹ ಬರದಿರಲಿಲ್ಲ. ಇದನ್ನರಿತು ಮಹಾದೇವಿ, 'ಬಲಾತ್ಕರಿಸಿದರೆ ನಾನು ಜೀವಂತವಾಗಿರುವುದಿಲ್ಲ. ನನ್ನ ಶವವನ್ನು ಕಾಣಬೇಕಾದೀತು, ಇದು ಸದಾ ನಿಮ್ಮ ನೆನಪಿನಲ್ಲಿರಲಿ' ಎಂದು ನುಡಿದು, ತನ್ನ ವಾಸಸ್ಥಾನದ ಬಗ್ಗೆ ಕೇಳಿದಳು.

'ಇದೇ ಭವನದಲ್ಲಿಯೇ ಎಲ್ಲ ಅನುಕೂಲತೆಗಳು ನಿನಗೆ ಬೇಕೆನಿಸಿದಾಗ ದೊರೆಯುತ್ತವೆ. ಮದನರತಿಯು ಇಲ್ಲಿಯ ಮೇಲ್ವಿಚಾರಿಕೆ; ಅವಳು ಬಹು ಚತುರೆ, ಅವಶ್ಯಕತೆಗಳನ್ನು ತಡಮಾಡದೆ ಪೂರೈಸುವಳು' ಚಪ್ಪಾಳೆ ತಟ್ಟಿ ಮದನರತಿಯನ್ನು ಕರೆದು ಭವನವನ್ನು ತೋರಿಸಲು ಕೌಶಿಕ ಆಜ್ಞಾಪಿಸಿದ.

'ಕೇಸರಿ ಮಿಶ್ರಿತ ಹಾಲನ್ನಾದರೂ ಕುಡಿಯಬಹುದು; ತರಿಸಲೆ....?' ಕೌಶಿಕನು ಆದರಪೂರ್ವಕವಾಗಿ ಕೇಳಿದನು.

'ಕ್ಷಮಿಸಿರಿ....ಪೂಜೆಯ ನಂತರ ಆ ಸ್ಥಳದಲ್ಲಿ ಮಾತ್ರ ಪ್ರಸಾದ ಸ್ವೀಕರಿಸುವ ವ್ರತವನ್ನು ಕೈಗೊಂಡಿರುವೆ.'

ಮಹಾದೇವಿ ಆವೇಶದ ಭರದಲ್ಲಿ ಬೆಳಗಿನಿಂದ ಹೊಟ್ಟೆಗೆ ಯಾವ ಆಹಾರವನ್ನೂ ಹಾಕಿರಲಿಲ್ಲ. ಎರಡು ದಿವಸಗಳಿಂದ ಕಣ್ತುಂಬ ನಿದ್ರೆಯೂ ಇರಲಿಲ್ಲ. ವಿಶ್ರಾಂತಿಯನ್ನು ಬಯಸಿ, ಕೌಶಿಕ ಹೋಗಬಾರದೇ ಎಂದು ಪರಿತಪಿಸುತ್ತಿದ್ದಳು. ಆದರೆ ಅವನು ಮಾತ್ರ ಎದ್ದು ಹೋಗುವ ಸೂಚನೆ ತೋರಿಸಲಿಲ್ಲ.

'ಮದನರತಿ....ವಿಶ್ರಾಂತಿ ಬೇಕೆನಿಸುತ್ತಿದೆ. ಸೂಕ್ತ ಏಕಾಂತ ಸ್ಥಳ ತೋರಿಸುವೆಯಾ?' ಎಂದು ಮದನೆಯನ್ನು ಕೇಳಿದಾಗ, ಆಕೆ ಕರೆದೊಯ್ದು ವಿಶ್ರಾಂತಿಯ ಕೋಣೆಯಲ್ಲಿ ಬಿಟ್ಟಳು.

ದೊಡ್ಡದಾದ ಪಲ್ಲಂಗದಮೇಲೆ ಮೆತ್ತನೆಯ ಹಾಸಿಗೆಯನ್ನು ಹಾಸಿ, ಕುಸುರು ಕೆಲಸದ ಮಗ್ಗುಲು ಹಾಸಿಗೆಯನ್ನು ಹರವಿ, ಸುಂದರ ಕಲಾಚಿತ್ರದ ಹೆಣಿಕೆಯ ತಲೆದಿಂಬನ್ನಿರಿಸಿದ್ದರು. ಹಿತವಾದ ಗಾಳಿ ಕಿಟಕಿಯಲ್ಲಿ ತೂರಿ ಬರುತ್ತಿತ್ತು. ನವಿರಾದ ಬಟ್ಟೆಯ ತೆರೆಗಳನ್ನು ಕಿಟಕಿ, ಬಾಗಿಲುಗಳಿಗೆ ಇಳಿಯ ಬಿಟ್ಟಿದ್ದರು. ಸುಂದರ ರತ್ನಗಂಬಳಿ ನೆಲವನ್ನಪ್ಪಿ ಮಲಗಿತ್ತು.

'ಮದನರತಿ, ಒಂದೂ ಚಾಪೆ ಇಲ್ಲವಲ್ಲ....'

'ಅವಶ್ಯಕತೆ ಇಲ್ಲವಲ್ಲ ರಾಣಿಯರೇ....'

'ರಾಜಮಹಾರಾಜರನ್ನು ಒಲಿಸಲು ಸುಪ್ಪತ್ತಿಗೆ ಬೇಕಾದರೆ, ಜಗದಾದಿ ರಾಜನನ್ನು ಒಲಿಸಲು ಸರಳವಾದ ಚಾಪೆ ಬೇಕಲ್ಲವೆ....?' ಮನದಲ್ಲೇ ಅಂದು ಕೊಂಡು ತನಗೆ ತಾನೇ ನಕ್ಕಳು.

'ಓಹ್....ರಾಣಿಯೆಂಬ ಪದವನ್ನು ಬಳಸಬೇಡ. ಅಕ್ಕ, ತಾಯಿ, ಅವ್ವ ಎಂದೆನ್ನು. ಕಡೆಗೆ ಮಗಳೇ ಅಂದರೂ ಸಂತೋಷವೇ! ಆದರೆ ರಾಣಿ ಅನ್ನ ಕೂಡದು ತಿಳಿಯಿತೆ....?'

ಮದನರತಿ ಅಚ್ಚರಿಗೊಂಡಳು.

'ಚಾಪೆ ಬೇಕು....ತಂದುಕೊಡು....' ಮತ್ತೆ ಕೇಳಿದಾಗ ಮದನರತಿ ತರಲು ಹೊರಟಳು.

ಕೋಣೆಯ ಒಳಗೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿದಳು. ಆ ಕೋಣೆಗೆ ಇರುವುದು ಒಂದೇ ಬಾಗಿಲೆಂದು ನಿಶ್ಚಿತಪಡಿಸಿಕೊಂಡಳು. ಆ ಕಿಟಕಿಗಳ ಸರಳುಗಳನ್ನು ಅಲ್ಲಾಡಿಸಿ ನೋಡಿದಳು. ಯಾರಾದರೂ ತೆಗೆದು ಒಳಗೆ ಪ್ರವೇಶಿಸಲು ಅವಕಾಶವುಂಟೆ ಎಂದು ಪರೀಕ್ಷಿಸಿದಳು. ತನ್ನ ಸ್ವಯಂಭೀತಿ, ಮುಂಜಾಗ್ರತೆಗಳಿಗಾಗಿ ನಗು ಬಂದಿತು.

'ಅಪಾರವಾದ ಸಿರಿವಂತಿಕೆ ಇರುವ ಶ್ರೀಮಂತನು ಕಳ್ಳರ ಬಗ್ಗೆ ಎಚ್ಚರಿಕೆ ಯಿಂದಿರುವಂತೆ ಶೀಲದ ಸಂಪತ್ತನ್ನು ನೀತಿಗಳ್ಳರಿಂದ ರಕ್ಷಿಸಿಕೊಳ್ಳಲು ಅಷ್ಟೇ ಎಚ್ಚರಿಕೆ ವಹಿಸಬೇಕು....' ಮದನರತಿ ತಂದ ಚಾಪೆಯನ್ನು ಪಡೆದು, ಬಾಗಿಲನ್ನು ಮುಚ್ಚಿಕೊಂಡಳು.

ಕಿಟಕಿಯಲ್ಲಿ ತೂರಿಬರುವ ಗಾಳಿಗೆ ಮೈಯೊಡ್ಡಿ ಉದ್ಯಾನದ ಕಡೆಗೆ ಕಣ್ಣು ಹಾಯಿಸಿದಳು. ರಮ್ಯವಾದ ನೋಟ ಕಾಣಿಸಿತು.

'ಭೋಗಿಗಳು ತಮ್ಮ ಸುಖಕ್ಕಾಗಿ ಇಂತಹ ಉದ್ಯಾನವನ್ನು ಸೃಷ್ಟಿಸಿ ಕೊಂಡರೆ ಯೋಗಿಗಳೂ ಪ್ರಶಾಂತತೆಗಾಗಿ ಇಂತಹ ತಾಣಗಳನ್ನೇ ಅರಸುವರು.

ಸಿದರೆ, ಯೋಗಿಗಳ ಸಾತ್ವಿಕತೆಯನ್ನೂ ವರ್ಧಿಸುವಳು. ಜನರಲ್ಲಿರುವ ಭೋಗ ಲಾಲಸೆ, ವಿಲಾಸದ ದೃಷ್ಟಿ ಹೋಗಿ, ತ್ಯಾಗ-ವಿರಕ್ತಿಯ ದೃಷ್ಟಿ ಬಂದರೆ, ಅರಮನೆ ಹೋಗಿ ಗುರುಮನೆಯಾಗಲು ಇದು ಅತಿ ಸೂಕ್ತ ಸ್ಥಳ....

'ಇಂದು ನಾನೊಂದು ವಾಗ್ಬಾಣವನ್ನು ಯಶಸ್ವಿಯಾಗಿ ಪ್ರಯೋಗಿಸಿರುವೆ. ರಾಜನನ್ನು ತೆಗಳಿ, ವಿರೋಧಿಸದೆ ಸೌಮ್ಯವಾದ ಹೊಗಳಿಕೆಯಿಂದಲೇ ಹದ್ದು ಮೀರಿ ಹೋಗದಂತೆ ನಿಯಂತ್ರಿಸಬಹುದು ಎಂಬ ಪ್ರಯೋಗದಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿರುವೆ....

'ಈ ನನ್ನ ಬಾಳು ಡೊಂಬರಾಟದಂತಾಗಿದೆ. ವ್ಯಕ್ತಿಯೊಬ್ಬನನ್ನು ಮರದ ಹಲಗೆಗೆ ಒರಗಿ ನಿಲ್ಲಿಸಿ ಅವನ ಸುತ್ತ ಕಬ್ಬಿಣದ ಈಟಿಗಳನ್ನು, ತೀಕ್ಷ್ಣ ಅಲಗುಗಳನ್ನು ಎಸೆಯುತ್ತ ಹೋಗುವರು. ಹಾಗೆಯೇ ವಿಧಿಯು ನನ್ನನ್ನು ಇಂಥ ತಾಣದಲ್ಲಿ ನಿಲ್ಲಿಸಿ ವಿವಿಧ ಕಷ್ಟಗಳ ಅಲಗುಗಳನ್ನು ಎಸೆಯುತ್ತಿದೆ. ಪಾರಾಗುವುದು ಕಷ್ಟಸಾಧ್ಯ....' ನಿಟ್ಟುಸಿರುಬಿಟ್ಟಳು.

'ಚನ್ನಮಲ್ಲಿಕಾರ್ಜುನನು ವಿಚಿತ್ರ ಸಖನು! ಸಂಸಾರವೆಂಬ ಪಂಜರದಲ್ಲಿ ಕೂಡಿಹಾಕುವ ಸನ್ನಾಹದಲ್ಲಿರುವುದಷ್ಟೇ ಅಲ್ಲ, ಅಧಿಕಾರ, ಒಡವೆ ವಸ್ತು, ಸುಪ್ಪತ್ತಿಗೆ ಮುಂತಾದವನ್ನು ಕರಿದ ತಿಂಡಿಗಳಂತೆ ಬೋನಿನ ಬಳಿ ಇರಿಸಿ ಮನದ ಇಲಿಯನ್ನು ಆಕರ್ಷಿಸುತ್ತಿರುವನು.' ಪಂಜರದಲ್ಲಿ ಸಿಕ್ಕಿಬಿದ್ದ ಸಿಂಹದಂತೆ ಕಳವಳಗೊಂಡು ಹೆಜ್ಜೆ ಹಾಕುತ್ತ ಕಿಟಕಿಯ ಬಳಿ ನಿಂತಾಗ ಸನಿಹದಲ್ಲಿ ಬೆಳೆದ ಸಂಪಿಗೆಯ ವೃಕ್ಷವೊಂದು ತನ್ನ ಕೊಂಬೆಯನ್ನು ಇತ್ತ ಚಾಚಿತ್ತು. ಆ ಕೊಂಬೆಯ ತಳದಲ್ಲಿ ಒಂದು ಕಂಬಳಿಹುಳು ಬಾಯಿರಸವನ್ನು ಸ್ಫುರಿಸುತ್ತ ಕೋಶವೊಂದನ್ನು ರಚಿಸುತ್ತಿತ್ತು. ಎಂದೂ ಕಂಡಿರದ ಮಹಾದೇವಿ ಅದನ್ನು ಆಶ್ಚರ್ಯದಿಂದ ದಿಟ್ಟಿಸಿ ನೋಡಿ, 'ಭವಿಷ್ಯದ ಅರಿವು ಸಹ ಇಲ್ಲದೆ ಈ ಹುಳುವು ಗೂಡಿನೊಳಗೆ ಸಿಕ್ಕಿಬೀಳುತ್ತಿದೆಯಲ್ಲವೆ? ಮೂರ್ಖಹುಳು' ಎಂದು ವಿಷಾದಿಸಿದಳು. ಒಳಮನ ತಕ್ಷಣ ನುಡಿಯಿತು, 'ನೀನೂ ಅಷ್ಟೇ ಮೂರ್ಖಳಲ್ಲವೆ? ಮುಂದಿನ ಆಗುಹೋಗುಗಳನ್ನರಿಯದೆ ಈ ಬಂಧನದಲ್ಲಿ ಸಿಕ್ಕಿಬಿದ್ದಿರುವವಳು' ಈ ದನಿ ಕೇಳಿ ಹತಚೇತನಳಾದಳು. ಸುಧಾರಿಸಿಕೊಂಡು ಹೇಳಿದಳು: 'ಇರಲಿ, ದೇವಾ ನಿನ್ನೊಲಿಮೆ ಇದ್ದರೆ ವಿಷವನ್ನೇ ಅಮೃತವೆಂದು ಕುಡಿದು ಬದುಕುವೆ; ಕಷ್ಟವನ್ನೇ ಹೂಮಾಲೆಯಾಗಿ ಸ್ವೀಕರಿಸಿ ಜಯಶೀಲಳಾಗುವೆ' ಪ್ರಕೃತಿ ಸ್ವಭಾವದಂತೆ ಹೊಟ್ಟೆಯು ಹಸಿವೆಯಿಂದ ಬಳಲಿ, ಆಕ್ರಂದನದ ದನಿಯನ್ನು ಉಂಟುಮಾಡುತ್ತಿತ್ತು. ಆದರೆ ಮೇಲೆದ್ದು ಪೂಜೆಯನ್ನು ಪೂರೈಸಿ

'ಪಂಜರದಲ್ಲಿ ಸಿಕ್ಕಬಿದ್ದ ಗಿಳಿಗೆ ಹೊರಗೆ ಬರಲು ಎರಡೇ ಮಾರ್ಗ. ಒಂದು ಪಂಜರ ತೆರೆದಾಗ ಬರುವುದು, ಇಲ್ಲವೇ ಅಲ್ಲೇ ಸತ್ತುಬಿಟ್ಟರೆ ಬಂಧಿಸಿದವರು ತಾವೇ ತೆಗೆದು ಹಾಕುತ್ತಾರೆ. ಹಾಗೆ ನಾನಾದರೂ ಉಂಡು ತಿಂದು ಈ ಬಂಗಾರದ ಪಂಜರದಲ್ಲಿದ್ದು ಬದುಕುವುದಕ್ಕಿಂತ ಸಾವನ್ನಾದರೂ ಸ್ವಾಗತಿಸಿದರೆ, ಈ ಶವದಿಂದ ಆ ಕಾಮಾಸಕ್ತನಿಗೆ ಉಪಯೋಗವಿಲ್ಲವಾಗಿ ತಾನೇ ಅದನ್ನು ಹೊಳುವನು....' ನೊಂದ ಮನಸ್ಸು ಹೇಳುತ್ತಿತ್ತು.

'ನಿಜ ; ಹೀಗೆ ಶವವಾಗುವುದರಿಂದ ಪಂಚಭೂತಗಳಿಗಷ್ಟೇ ಲಾಭ! ಆದರೆ ಜಗತ್ತಿಗೆ ನಾನೇನು ಸಂದೇಶವನ್ನು ನೀಡಿದಂತಾಯಿತು ? ಕಷ್ಟಗಳ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದ ಹೇಡಿ ಅನ್ನಿಸಿಕೊಂಬೆನೇ ಹೊರತು, ಪ್ರವಾಹದ ವಿರುದ್ಧ ಈಜಿ ಗೆದ್ದ ವೀರವಿರಾಗಿಣಿ ಎನ್ನಿಸಿಕೊಳ್ಳಲಾರೆ. ನಾನು ಸಾಯಬಾರದು, ಬದುಕಿಗೆ ಬೆನ್ನು ತೋರಬಾರದು, ಎದೆಗೊಟ್ಟು ನಿಲ್ಲಬೇಕು. ಈ ಶರೀರವಿಲ್ಲದೆ ಯಾವ ಸಿದ್ಧಿಯನ್ನೂ ಪಡೆಯಲು ಬರದು ; ಆದ್ದರಿಂದ ಕೂಡಲಸಂಗನನ್ನು ಒಲಿಸಲಿಕ್ಕೆ ಸಾಧನವಾದ ಈ ಪ್ರಸಾದಕಾಯವನ್ನು ಕೆಡಿಸುವುದಿಲ್ಲ....'

ನಿರ್ಧಾರದಿಂದ ಮೇಲೆದ್ದಳು. ಬಾಗಿಲನ್ನು ತೆರೆದು ಚಪ್ಪಾಳೆ ತಟ್ಟಿದಾಗ ಪರಿಚಾರಿಕೆ ಬಂದಳು.

'ನಿನ್ನ ಹೆಸರೇನಮ್ಮ....?' ಆಕೆಯಿನ್ನೂ ಇಪ್ಪತ್ತೈದು ವರ್ಷದ ತರುಣಿ, ಸುಲಕ್ಷಣವತಿ. ಚೆನ್ನಾಗಿ ಅಲಂಕೃತಳಾಗಿ ಸುಂದರ ಕಲಾಕೃತಿಯೊಂದಕ್ಕೆ ಜೀವಬಂದಂತೆ ತೋರುತ್ತಿದ್ದಳು.

'ವಿಲಾಸಿನಿ....'

'ನಿನ್ನ ತಾಯಿ ತಂದೆ ಕೊಟ್ಟ ಹೆಸರೇ ?....'

'ಅಲ್ಲವಮ್ಮ ; ಹುಟ್ಟಿದ ಹೆಸರು ಸುಶೀಲ. ರಾಜರು ಅದು ಅಷ್ಟೊಂದು ರಮ್ಯವಿಲ್ಲವೆಂದು ವಿಲಾಸಿನಿ ಎಂದು ಇಟ್ಟಿದ್ದಾರೆ....'

'ರಸಿಕತೆಯ ದೃಷ್ಟಿಯಿಂದ ಇದು ಕ್ಷಮ್ಯ. ಆದರೆ ಎಂತಹ ಅರ್ಥಗರ್ಭಿತವಾದ ಹೆಸರನ್ನು ಬದಲಿಸಿರುವರು. ಶೀಲವಂತಿಕೆಯನ್ನು ನಾಶಪಡಿಸಿ ವಿಲಾಸವನ್ನು ತುಂಬುವುದೇ ನಿಮ್ಮರಸರ ಗುರಿಯಾಗಿರಬೇಕು....' ವ್ಯಂಗ್ಯವಾದ ದನಿಯಲ್ಲಿ ನಕ್ಕಳು.

'ನಾನು ನಿನ್ನನ್ನು ಶಿವಕಾಮಿನಿ ಎಂದು ಕರೆಯುವೆ....ಒಪ್ಪಿಗೆಯೇ ?'

'ಒಪ್ಪಿಗೆಯಷ್ಟೇ ಅಲ್ಲ....ನಾನು ಧನ್ಯಳಾದೆ....'

'ಇದ್ದಾರೆ ತಾಯಿ; ಆದರೆ ನನ್ನದು ದುಃಖದ ಕಥೆ....' ತನ್ನ ಬದುಕು ನೆನಪಾಗಿ ವ್ಯಥೆಗೊಂಡಳು.

'ನಾನೊಬ್ಬ ಜಡವರ ಮಗಳು. ನಾನೇ ಹಿರಿಯವಳು, ಬೆನ್ನಿಗೆ ನಾಲ್ವರು ತಂಗಿಯರು. ಕಿತ್ತು ತಿನ್ನುವ ಬಡತನ. ನಾನೊಬ್ಬನಿಗೆ ಒಲಿದಿದ್ದೆ. ಇಬ್ಬರೂ ಮದುವೆ ಮಾಡಿಕೊಳ್ಳಬೇಕು ಎಂದಿರುವಾಗಲೇ ಈ ಮದನರತಿಯ ಕಣ್ಣು ನನ್ನ ಮೇಲೆ ಬಿದ್ದು ಅಪ್ಪನಿಗೆ ಸಾವಿರ ನಾಣ್ಯಗಳ ಆಸೆ ಹಚ್ಚಿ, ನನ್ನ ಪ್ರಿಯ ನಿಂದಲೂ ದೂರಮಾಡಿ, ಅಪ್ಪನು ಇಲ್ಲಿಗೆ ಕಳಿಸುವಂತೆ ಮಾಡಿದಳು. ಅಂದಿ ನಿಂದ ನಾನೀ ಬಂಧನದಲ್ಲಿ....; ಮನಃಪೂರ್ವಕವಾಗಿ ನಾನು ಬರಲಿಲ್ಲ.' ಕಣ್ಣುಗಳು ನೀರಿನಿಂದ ತುಂಬಿದವು.

'ಛೀ .... ಹೆಣ್ಣು .... ಹೊನ್ನು .... ಮಣ್ಣು — ಇವು ಮೂರಕ್ಕೆ ಇಷ್ಟು ಹೋರಾಟ. ಇವುಗಳ ಗಳಿಕೆ ಬಳಕೆ ಉಳಿಕೆಗಳು ಮಾನವನ ಆತ್ಯಂತಿಕ ಸಿದ್ಧಿಗಳು! ಇವುಗಳನ್ನು ವಶಪಡಿಸಿಕೊಳ್ಳಲಿಕ್ಕಾಗಿ ಏತಕ್ಕೂ ಹೇಸನೆ?' ಅಂತರ್ಮುಖಳಾದಳು. ಬಳಿಕ ನುಡಿದಳು:

'ನೋಡು ಶಿವಕಾಮಿನಿ, ನಿನ್ನನ್ನು ದಾಸಿ ಎಂದು ತಿಳಿಯುವ ಮನೋವೃತ್ತಿ ನನ್ನದಲ್ಲ. ನನ್ನ ಸೋದರಿಯೆಂದು, ಗೆಳತಿಯೆಂದು ತಿಳಿಯುವೆ. ನೀನು ನನ್ನ ಪ್ರೀತಿಪಾತ್ರಳಾಗಿ, ನಂಬಿಗಸ್ತಳಾಗಿ ಇರಬೇಕು....'

'ತಾಯಿ, ನೀವು ಅರಸಿಯರು! ನನ್ನ ಮಟ್ಟವೆಲ್ಲಿ, ನಿಮ್ಮ ಮಟ್ಟವೆಲ್ಲಿ.'

'ನಾನು ಅರಸಿಯಲ್ಲ ಶಿವಕಾಮಿನಿ, ಆಗುವುದೂ ಇಲ್ಲ....'

'ಮತ್ತೆ ರಾಜರು ಯಾರಿಗೂ ತೋರಿಸದ ಗೌರವವನ್ನು ತಮಗೆ ತೋರಿಸು ವರಲ್ಲಾ....?' ಅಚ್ಚರಿಯಿಂದ ಕೇಳಿದಳು ಶಿವಕಾಮಿನಿ.

ತನ್ನ ಕಥೆಯನ್ನು ಸಾದ್ಯಂತವಾಗಿ ವಿವರಿಸಿ ಮಹಾದೇವಿ ನುಡಿದಳು:

'ನಾನಿಲ್ಲಿ ಇರಲು ಬಂದವಳಲ್ಲ, ಸೋದರಿ. ಪಕ್ಷಿಗಳು ವಲಸೆ ಹೋಗುವಾಗ ದಾರಿಯಲ್ಲಿ ಒಂದೆರಡು ದಿವಸಗಳ ಮಟ್ಟಿಗೆ ತಂಗಿ, ಮುಂದೆ ಸಾಗುವಂತೆ ನನ್ನ ಪರಿ. ನನ್ನ ಬದುಕಿನ ಗುರಿ ಶಿವನೊಡನೆ ಸಮಾಗಮ. ಅನಿವಾರ್ಯವಾದ ಪರಿಸ್ಥಿತಿ ಬಂದುದಕ್ಕಾಗಿ ಇಲ್ಲಿ ಇರುತ್ತಿರುವೆ....'

'ಇದು ಸತ್ಯವೇ?'

'ಅಹುದು....ಆದರೆ ಇದನ್ನು ಯಾರ ಮುಂದೆಯೂ ಬಹಿರಂಗಪಡಿಸಬೇಡ. ನನ್ನ ಪ್ರಾಣಸಖಿ ಶೈಲಜೆ ಎಂಬುವವಳಿದ್ದಳು. ನನ್ನ ಸುಖ-ದುಃಖ, ನೋವು-ನಲಿವುಗಳಲಿ ಭಾಗಿಯಾಗುತ್ತಿದ್ದಳು. ನಿನ್ನನ್ನು ನೋಡಿದ ಕೂಡಲೇ ಅವಳ

ಮಾಡಿವೆ. ಅಷ್ಟೇ ವಿಶ್ವಾಸದಿಂದ ನೀನಿರಬೇಕು....'

'ನಾನು ನಿಜಕ್ಕೂ ಪುಣ್ಯವಂತಳು ತಾಯಿ....' ಕೃತಜ್ಞತೆಯಿಂದ ನುಡಿದಳು.

'ಸ್ನಾನಕ್ಕೆ ನೀರನ್ನು ಸೇವಕಿಯರು ಸಿದ್ಧಪಡಿಸಿದ್ದಾರೆ....' ಶಿವಕಾಮಿನಿ ಹೇಳಿದಳು.

ಮಹಾದೇವಿ ಬಚ್ಚಲನ್ನು ಹೊಕ್ಕಾಗ ಮದನರತಿ ಎಲ್ಲವನ್ನು ಅಣಿಮಾಡಿಸುತ್ತಿದ್ದಳು. ಬಿಸಿನೀರಿನಲ್ಲಿ ಪರಿಮಳಯುಕ್ತ ದ್ರವ್ಯಗಳನ್ನು ಬೆರೆಸಿದ್ದರು.

'ಚಂಪಕಾ ತೈಲ, ಮಲ್ಲಿಕಾ ತೈಲಗಳು ಸಿದ್ಧವಿವೆ. ತಾವು ಬಯಸಿದ ಸುಗಂಧ ತೈಲವನ್ನು ಮೈಗೆ ಲೇಪನ ಮಾಡಿ, ಅರಿಷಿಣ ಸವಂ ಚೆನ್ನಾಗಿ ಎರೆಯುವೆ....' ಮದನರತಿ ಹೇಳಿದಳು. ಮಹಾದೇವಿಯಿಂದ ಒಪ್ಪಿಗೆ ಸಿಗದಿದ್ದು ನೋಡಿ ಮತ್ತೆ ಹೇಳಿದಳು :

'ಇದು ಇಲ್ಲಿಯ ಪರಿಪಾಠ ತಾಯಿ; ಅರಸಿಯರೆಲ್ಲರೂ ಹೀಗೆ ಎರೆದುಕೊಳ್ಳುವರು. ತಾವೂ ಸಹ ಅವಕಾಶ ಕೊಡಬೇಕು. ಅದರಿಂದ ಮೈಕಾಂತಿ ಇಮ್ಮಡಿಸುವದು. ತಮ್ಮ ಚರ್ಮವು ಮೊದಲೇ ಸುಂದರ, ಇನ್ನು ಈ ಲೇಪನವನ್ನು ತಿಕ್ಕಿ ಎರೆದರೆ ಮೃದುವಾಗಿ, ಕಾಂತಿ ಮುಮ್ಮಡಿಸುವುದು....'

ಮಹಾದೇವಿ ನಸುನಕ್ಕು ಹೇಳಿದಳು :

'ಬಿದ್ದುಹೋಗುವ ಮಣ್ಣಿನ ಕ್ಷುದ್ರದೇಹವಿದರ ಸೌಂದರ್ಯರಕ್ಷಣೆ ನನಗೆ ಬೇಡವಮ್ಮ. ಇದರಿಂದಲೇ ಎಲ್ಲ ಕಷ್ಟಕೋಟಲೆಗಳು ಬಂದಿರುವುದು. ಆಧ್ಯಾತ್ಮ ಜೀವಿಗಳು ಸೌಂದರ್ಯವರ್ಧನೆಗೆ ಪ್ರಯತ್ನ ಮಾಡುವುದೆಂದರೆ ಹಾವಿನ ಮರಿಗೆ ಹಾಲಿಟ್ಟು ಸಲಹಿದಂತೆ! ಅದು ದೊಡ್ಡದಾಗಿ ರೂಪಮದವಾಗಿ ಕಚ್ಚಿಬಿಡುವುದು ಅಸಂಭವನೀಯವಲ್ಲ!'

ಈ ಮಾತಿನಿಂದ ಮದನರತಿ ಅಚ್ಚರಿಗೊಂಡಳು.

'ನಾನೆಲ್ಲ ಮೀಯುವೆ. ನೀವು ಆಚೆ ನಡೆಯಿರಿ ಮತ್ತು ಯಾರನ್ನೂ ನಾನು ಮುಟ್ಟಿಸಿಕೊಳ್ಳುವುದಿಲ್ಲ. ನಿಮಗೆ ಗೊತ್ತಿಲ್ಲವೆ? ನಾನು ಐದು ವಾರಗಳ ವ್ರತದಲ್ಲಿರುವೆ....'

ಅಲ್ಲಿದ್ದ ಪರಿಮಳೋದಕವನ್ನು ಮುಟ್ಟದೆ, ಹಂಡೆಯಲ್ಲಿದ್ದ ತಣ್ಣೀರನ್ನು ತಲೆಯಮೇಲೆ ಸುರಿದುಕೊಂಡಾಗ ಅನುಪಮವಾದ ಹಿತವೆನ್ನಿಸಿತು. ಉಡಲಿಕ್ಕೆಂದು ಬೆಲೆಬಾಳುವ ಸುಂದರ ಸೀರೆಗಳನ್ನು, ಸರಿ ಹೊಂದುವ ಬಣ್ಣದ ರವಿಕೆಗಳೊಡನೆ ಹೊಂದಿಸಿ ಮದನರತಿ ರೇಷಿಮೆಯ ಹಗ್ಗಕ್ಕೆ ನೇತುಹಾಕಿದ್ದಳು.

'ಚನ್ನಮಲ್ಲಿಕಾರ್ಜುನ, ಈ ರಾಜನನ್ನು ತಣಿಸಲು ಬೆಲೆಬಾಳುವ ವಸ್ತ್ರಗಳು ಬೇಕು. ರಾಜಾಧಿರಾಜನಾದ ನಿನ್ನನ್ನು ಒಲಿಸಲು ನೂಲಿನ ಸೀರೆ ಸಾಕಲ್ಲವೇ?.....ನೀನು ಒಲಿಯುವುದು ಸರಳತೆಗೆ. ಆದ್ದರಿಂದ ನನಗೆ ಇದೇ ಇರಲಿ....' ತಾನು ತಂದಿದ್ದ ಒಂದೇ ಒಂದು ಬಿಳಿಯ ಸೀರೆಯನ್ನು, ಬಿಳಿಯ ಕುಪ್ಪಸವೊಡನೆ ಹಾಕಿಕೊಂಡು, ನೀರನ್ನು ಹಿಂಡಿಕೊಂಡು ಕೂದಲನ್ನು ಒರೆಸಿಕೊಂಡಳು.

ಬಚ್ಚಲ ಕೋಣೆಯಿಂದ ಹೊರಗೆ ಬಂದು, ಪೂಜೆಗೆಂದು ಅಣಿಮಾಡಿಕೊಂಡಿದ್ದ ಕೋಣೆಯ ಕಡೆಗೆ ಹೊರಟಾಗ ಮದನರತಿ ನುಡಿದಳು :

'ಶೃಂಗಾರ ಗೃಹ ಈ ಮಗ್ಗುಲಿಗಿದೆ. ಕನ್ನಡಿ, ಆಭರಣಗಳು, ತಿಲಕ, ಕಾಡಿಗೆಗಳೆಲ್ಲವೂ ಅಲ್ಲಿಯೇ! ಕನ್ನಡಿಯ ಬಳಿ ಎಲ್ಲ ಪ್ರಸಾಧನಗಳನ್ನೂ ಇರಿಸಿರುವೆ. ದಯಮಾಡಿಸಿದರೆ ನಾನೇ ಅಲಂಕರಿಸುವೆ....' ಉತ್ಸುಕಳಾಗಿ ನುಡಿದಳು.

'ಸ್ನಾನ ಮಾಡಿ ನೇರವಾಗಿ ಪೂಜೆಯ ಕೋಣೆಗೆ ಹೋಗುವುದು ನಮ್ಮ ತತ್ತ್ವ ಕಣಮ್ಮ, ಅಲಂಕರಿಸಿಕೊಳ್ಳುವದಲ್ಲ. ನನ್ನದು ಸದಾ ಅಲಂಕಾರ ಮದನರತಿ. ಈ ವಿಭೂತಿಯೇ ಅನುಲೇಪನ, ರುದ್ರಾಕ್ಷಿಯೇ ಮೈದೊಡಿಗೆ, ಶಿವನ ನೋಟವೇ ಕಾಡಿಗೆ, ವೈರಾಗ್ಯವೇ ಹಣೆಯ ತಿಲಕ ...' ಮಹಾದೇವಿ ಮುಂದೆ ನಡೆದಾಗ ಮದನರತಿ ಮೌನ ತಾಳಿ ನಿಂತಳು. ಬಿಚ್ಚಿದ ಕೂದಲು ಮೊಳಕಾಲನ್ನು ಮುಟ್ಟುತ್ತಿದ್ದು, ನಡೆದಾಗ ತೂಗುತ್ತಿದ್ದವು.

'ಅಬ್ಬಾ! ಏನು ಕೇಶರಾಶಿ....' ಮದನರತಿ ಉದ್ಗರಿಸಿದಳು.

'ಕಾಮನ ಪಾಶದಂತಿವೆಯಲ್ಲವೆ?' ಪುರುಷಧ್ವನಿ ಬಂದಾಗ ಮದನರತಿ ಬೆಚ್ಚಿದಳು. ಮಹಾದೇವಿಯ ಯೋಗಕ್ಷೇಮವನ್ನು ವಿಚಾರಿಸಲು ಮರಳಿ ಬಂದಿದ್ದ ಕೌಶಿಕ ಒಂದೇ ಸಮನೆ ಆಕೆಯನ್ನು ಹಿಂದೆ ನಿಂತು ದಿಟ್ಟಿಸುತ್ತಿದ್ದ.

'ಮಹಾಪ್ರಭುಗಳು! ಅರಸಿಯರ ಕೂದಲು ಎಷ್ಟು ಚೆನ್ನಾಗಿವೆ! ಪರಿಮಳ ಯುಕ್ತ ಎಣ್ಣೆ, ಪರಿಮಳೋದಕ ಎರೆದುಕೊಳ್ಳುವುದು ಬಿಟ್ಟು ತಣ್ಣೀರಿನಲ್ಲಿ ಮಿಂದಿದ್ದಾರೆ....' ಮದನರತಿ ನುಡಿದಳು.

'ನೀನೇಕೆ ಅವಕಾಶ ನೀಡಿದೆ?' ಕ್ರುದ್ಧನಾಗಿ ಕೇಳಿದ ಕೌಶಿಕ.

'ನನ್ನನ್ನು ಮುಟ್ಟಿಸಿಕೊಳ್ಳದೆ ತಾವೇ ಬಾಗಿಲು ಮುಚ್ಚಿ ಎರೆದುಕೊಂಡರು. ನಮ್ಮ ಇಡೀ ಅರಮನೆಯಲ್ಲೇ ಯಾರಿಗೂ ಇಷ್ಟು ಕೂದಲು ಇಲ್ಲ. ನನ್ನ ಕೈಗೆ ಅವು ಸಿಕ್ಕರೆ ಎಂತಹ ಸುಂದರ ಕೇಶಾಲಂಕಾರ ಮಾಡಬಹುದು! ನೋಡುವವರು

'ನಿಜ ಮದನಾ....ಎಂತಹ ಸುಂದರ ಕೇಶರಾಶಿ! ಸರೋವರದ ಅಲೆಗಳಂತೆ ಮೆಟ್ಟಿಲು ಮೆಟ್ಟಿಲಾಗಿ ಹರಡಿವೆ. ಅವುಗಳನ್ನು ಮುತ್ತಿಕ್ಕಬೇಕು, ಸ್ಪರ್ಶಿಸ ಬೇಕು, ನೇವರಿಸಬೇಕು ಎನ್ನಿಸುತ್ತದೆ....' ಕೌಶಿಕ ಭಾವುಕನಾಗಿ ಹೇಳಿದ.

'ಊರಿಗೆ ಬಂದೋಳು ನೀರಿಗೆ ಬರಳೇ? ಎಂಬ ಗಾದೆಯುಂತೆ, ಅರಮನೆಗೆ ಬಂದುದು ಕೈಗೆ ಸಿಕ್ಕದಿರುತ್ತದೆಯೇ? ಅವಕಾಶವು ಬಂದೇ ಬರುವುದು....' ಮುಸಿನಕ್ಕಳು ಮದನರತಿ.

'ಹೂಂ; ಈ ಹುಚ್ಚು ಹುಡುಗಿ ದೇವರು, ವೈರಾಗ್ಯ ಏನೇನೋ ಭ್ರಮೆ ಯನ್ನು ತುಂಬಿಕೊಂಡಿರುವಳು.' ವಿಷಾದದ ನಗೆ ನಕ್ಕ ಕೌಶಿಕ. ಮಹಾ ದೇವಿಯು ಕೋಣೆಯ ಬಾಗಿಲನ್ನು ಮುಚ್ಚಿಕೊಂಡ ಸದ್ದನ್ನು ಕೇಳಿ ತನ್ನ ಭವನಕ್ಕೆ ನಡೆದ.

* * *

ಮಹಾದೇವಿಯ ಪೂಜೆ ಮುಗಿದಾಗ ಸಂಜೆಗತ್ತಲು ಗಾಢವಾಗಿ ಜಗತ್ತನ್ನು ಮುಸುಕಿತ್ತು. ಪೂಜೆಗಿರಿಸಿಕೊಂಡ ದೀವಿಗೆ ಬಿಟ್ಟರೆ ಬೇರೆ ಬೆಳಕಿರಲಿಲ್ಲ. ತ್ರಾಟಕವನ್ನು ಮುಗಿಸಿ ಬಹಿಪ್ರ್ರಪಂಚಕ್ಕೆ ಬಂದಾಗ ವೇಳೆ ಬಹಳವಾದುದರ ಅರಿವಾಯಿತು. ಬಾಗಿಲನ್ನು ತೆರೆದಾಗ ಶಿವಕಾಮಿನಿ ಕಾಯುತ್ತ ನಿಂತಿದ್ದಳು.

'ಅವ್ವಾ....ನೀವು ಪೂಜೆಗೆ ಕುಳಿತು ಬಹುವೇಳೆಯಾಯಿತು. ನಾನು ಕಾಯುತ್ತಲೇ ಕುಳಿತಿದ್ದೆ. ಬಿಸಿಬಿಸಿಯಾದ ರುಚಿಕರವಾದ ಪಾಕವು ಸಿದ್ಧ ವಾಗಿದೆ. ಪಾಕಕಾರರಿಗೆ ಹೇಳಲೇ?'

'ಬೇಡ ಶಿವಕಾಮಿ, ಹಣ್ಣು ಹಾಲನ್ನು ತಂದುಕೊಡು, ಮತ್ತೇನೂ ಬೇಡ.'

'ಬೆಳಗಿನಿಂದ ನೀವೇನೂ ಉಂಡಿಲ್ಲ!'

"ಇರಲಿ, ಹಸಿವಿಲ್ಲ....ಹಣ್ಣು ಹಾಲು ಸಾಕು....'

ಮಹಾದೇವಿ ಬೇಗನೇ ಪ್ರಸಾದವನ್ನು ಸ್ವೀಕರಿಸಿ, ತನ್ನ ಶಯ್ಯಾಗೃಹ ವನ್ನು ಸೇರಿ ಬಾಗಿಲಿಕ್ಕಿಕೊಂಡಳು. ಮದನರತಿಗೆ ಒಡತಿಯ ವರ್ತನೆ ಸೋಜಿಗ ಪೂರ್ಣವೆನಿಸುತ್ತಿತ್ತು. ಉಡಿಗೆ-ತೊಡಿಗೆ, ಉಣಿಸು-ತಿನಿಸು ಎಲ್ಲದರಲ್ಲೂ ತೋರುವ ಸರಳತೆ ಅವಳನ್ನು ಬೆರುಗುಗೊಳಿಸಿತ್ತು. ಎಲ್ಲ ಅರಸಿಯರಂತೆ ಅಲಂಕರಿಸಿಕೊಂಡು ಕಾತುರದಿಂದ ಅರಸನಿಗಾಗಿ ನಿರೀಕ್ಷಿಸದೇ ಬಾಗಲಿಕ್ಕಿ ಕೊಂಡು ಒಳಗಿರುವುದನ್ನು ಕಂಡು ದಿಙ್ಮೂಢಳಾದಳು. 'ಅರಸನಿಗೆ ತಾನು ಕೊಟ್ಟ ಮಾತನ್ನು ಪೂರೈಸಲಾರದೆ ಸೋಲುವೆನೇನೋ' ಎಂದು ಕಳವಳಕ್ಕೆ ಈಡಾದಳು.

* * *

ಕೌಶಿಕ ಬಂದಾಗ ಮಹಾದೇವಿ ಆಗಲೇ ಬಾಗಿಲನ್ನು ಮುಚ್ಚಿಕೊಂಡಿದ್ದಳು. ಬಂದವನೇ ಆತುರಾತುರವಾಗಿ 'ಅವಳು ಎಲ್ಲಿ?' ಎಂದು ಮದನರತಿಯನ್ನು ಕೇಳಿದ. ಬಾಗಿಲು ಮುಚ್ಚಿದ ಕೋಣೆಯತ್ತ ಕಣ್ಣುದೃಷ್ಟಿಹರಿಸಿ ಮೌನತಾಳಿ ಆಕೆ ನಿಂತಳು. ಹದವಾಗಿ ಸಿಂಗರಿಸಿಕೊಂಡು ಬಂದಿದ್ದ ಅವನು ಆವೇಶದಿಂದ ಶತಪಥ ತಿರುಗಾಡತೊಡಗಿದ. ಮದನರತಿ ನೋಡಿ ವೈಜಯಂತಿಗೆ ಹೇಳಿದಳು :

'ಅರಸರು ಎಷ್ಟು ಸುಂದರಾಂಗರು! ಚಿಕ್ಕ ಅರಸಿಯರಿಗೆ ಅದೇನಾಗಿದೆಯೋ ಅವರನ್ನು ಪ್ರೇಮದಿಂದ ನೋಡುವುದಿಲ್ಲ; ಇಂಥ ರಾಜಪುರುಷರ ಕೈಹಿಡಿಯಲು ಎಷ್ಟು ಪುಣ್ಯಬೇಕೋ ಅಲ್ಲವೇ ವೈಜು ; ಅವರಿಗಾಗಿ ಅರಸರು ಬಂದಿರಬೇಕು. ಆದರೆ ಅವರು ಆತುರಾತುರವಾಗಿ ಫಲಾಹಾರ ಮಾಡಿ ಕದವಿಕ್ಕಿಕೊಂಡರು. ವಿಚಿತ್ರವಲ್ಲವೆ....?'

ಕಿಟಕಿಯ ಬಳಿ ನಿಂತು ಹೊರಗಿನ ಪ್ರಕೃತಿಯನ್ನು ಕೌಶಿಕ ದಿಟ್ಟಿಸಿದ. ಚಂದ್ರನಿನ್ನೂ ಮೂಡಿರಲಿಲ್ಲ. ಆಹ್ಲಾದಕರವಾಗಿ ಬೀಸುವ ತಂಗಾಳಿ, ಅದರೊಡನೆ ತೂರಿಬರುವ ಸುವಾಸನೆ, ಶರೀರಕ್ಕೆ ತಂಪನ್ನು ಎರೆದರೂ ಮನದ ವಿರಹ ಜ್ವಾಲೆಗೆ ಕೊಳ್ಳಿಯನ್ನು ಚಾಚಿದವು.

'ಮದನೇ....ಶೃಂಗಾರಗೀತೆಗಳನ್ನು ಹಾಡಲು ಚಂದ್ರಿಕೆಗೆ ಅರುಹು ... ವಿರಹೋದ್ದೀಪಕ ರಾಗ ಹಾಡಲಿ....ನನಗೆ ಮದನನ ತಳಮಳ ತಡೆಯಲು ಅಸಾಧ್ಯವಾಗಿದೆ....ಆ ಸುರೆಯನ್ನು ಕೊಡು....ನೋವನ್ನು, ಕೊರತೆಯ ಅರಿವನ್ನು ಮರೆಸುವ ಸಂಜೀವಿನಿ ಅದೊಂದೇ....' ಪಲ್ಲಂಗದ ಮೇಲಿನ ಒರಗು ದಿಂಬಿಗೆ ಒರಗಿ ಕಾಲುಚಾಚಿದನು. ಮದನೆ ಸುರೆಯನ್ನು ತಂದುಕೊಟ್ಟಾಗ ಸಂಗೀತವೂ ಆರಂಭವಾಗಿತ್ತು. ಬಾಗಿಲನ್ನು ಮುಚ್ಚಿ ಕುಳಿತ ಮಹಾದೇವಿಗೆ ಹೊರಗಿನಿಂದ ಬರುವ ಶಬ್ದವನ್ನು ಸಹಿಸಲಾಗಲಿಲ್ಲ. ಪ್ರಿಯ-ಪ್ರೇಯಸಿಯರ ಕಾತುರದ ಭಾವನೆಗಳನ್ನು ಗಾನರೂಪದಲ್ಲಿ ಹಾಡಿದಾಗ ಚನ್ನಮಲ್ಲಿಕಾರ್ಜುನನ ವಿರಹ ಮರಳಿ ಮರುಕಳಿಸಿತು. ಅವನನ್ನು ಪ್ರಿಯನ ಸ್ಥಾನದಲ್ಲಿ ನಿಲ್ಲಿಸಿ, ತಾನು ಪ್ರೇಯಸಿಯಾಗಿ ಅರ್ಥವನ್ನು ಆಸ್ವಾದಿಸತೊಡಗಿದಾಗ ವಿಲಕ್ಷಣ ಆನಂದ ಎನಿಸಿತು.

ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲ ಶಬ್ದಗಳೂ ನಿಂತುಹೋದವು. ಬಹುಶಃ ಎಲ್ಲರೂ ನಿದ್ರಾವಶರಾಗಿರಬೇಕೆಂದು ತಾನೂ ನಿಶ್ಚಿಂತೆಯಿಂದ ಮಲಗಿದಳು.

ಒಂದೊಂದು ಇರುಳನ್ನು ಕಳೆಯುವುದು ರೋಮಾಂಚಕಾರಿ ಸಾಹಸವೆನಿ

ಸುತ್ತಿತ್ತು. ಗಿಡುಗನನ್ನು ಕಂಡ ಪಾರಿವಾಳ ನಡುಗುವಂತೆ, ಇರುಳು ಧರೆಗೆ ಇಳಿಯತೊಡಗುತ್ತಿದ್ದಂತೆಯೇ ವಿಹ್ವಲಳಾಗಿ ಕಂಪಿಸುತ್ತ ಕದವನ್ನು ಮುಚ್ಚಿಕೊಂಡು ಒಳಗೆ ಧ್ಯಾನಮಗ್ನಳಾಗುವಳು. ನಡುರಾತ್ರಿಯವರೆಗೂ ರಾಜನು ಬಂದು ಉದ್ವಿಗ್ನತೆಯ ಮಾತುಗಳನ್ನಾಡಿ, ವಿರಹಗೀತೆಗಳನ್ನು ಕೇಳಿ, ಸುರಾಪಾನವನ್ನು ಮಾಡಿ, ಮೈಮರೆತು ಮಲಗುತ್ತಿದ್ದ. ಕೋಣೆಯ ಒಳಗಿದ್ದುಕೊಂಡೇ ಎಲ್ಲವನ್ನೂ ಗಮನಿಸಿ ನಿಟ್ಟುಸಿರಿಡುತ್ತಿದ್ದಳು. ಹಲ್ಲುಗಳ ಮಧ್ಯೆ ಮೈಯೆಲ್ಲ ಜಾಗ್ರತೆಯಾಗಿ ಇರುವ ನಾಲಿಗೆಯಂತೆ, ಜೀವ ಬಿಗಿಹಿಡಿದುಕೊಂಡು ಮಹಾದೇವಿ ವಿಮೋಚನೆಗಾಗಿ ಕಾಯುತ್ತ ಕಾಲವನ್ನು ತಳ್ಳತೊಡಗಿದಳು.

* * *

ಅಂದು ಇರುಳಿನ ಎರಡನೆಯ ಜಾವ ನಡೆಯುತ್ತಿತ್ತು. ತಾಡಓಲೆಯನ್ನು ಹಿಡಿದು ವಚನಗಳ ಅಧ್ಯಯನ ಮಾಡುತ್ತಿದ್ದ ಮಹಾದೇವಿಯ ಕಣ್ಣು ಗ್ರಂಥದ ಮೇಲೆ ಓಡುತ್ತಿದ್ದರೂ ಮನಸ್ಸು ತುಮುಲಭಾವನೆಗಳ ಯುದ್ಧಭೂಮಿಯಾಗಿತ್ತು. ಬೆಳುದಿಂಗಳು ಕಿಟಕಿಯ ಮೂಲಕ ತೂರಿ ತನ್ನ ಕೋಣೆಯಲ್ಲಿ ಇಣುಕುತ್ತಿತ್ತು. ಹುಣ್ಣಿಮೆಯಾಗಿ ಎರಡು ದಿನಗಳು ಸರಿದು ಮೂರನೆಯ ದಿನಸ ನಡೆಯುತ್ತಿದ್ದರಿಂದ ಚಂದ್ರನು ತಡವಾಗಿ ಉದಯಿಸಿದ್ದ. ಮೋಡಗಳ ತೆರೆಯಿಲ್ಲದ ಕಾರಣ ಶುಭ್ರವಾದ ಬೆಳಕು ಚೆಲ್ಲಿದ್ದು ಹೊರಗೆ ಹೋಗಬೇಕೆಂಬಾಸೆ ಉತ್ಕಟವಾಯಿತು. ತನ್ನ ಕೋಣೆಯ ಬಾಗಿಲನ್ನು ತೆರೆದಳು. ಬಾಗಿಲ ಸಮೀಪದಲ್ಲಿಯೇ ಶಿವಕಾಮಿನಿ ಮಲಗಿದ್ದಳು ; ಅವಳ ಬಟ್ಟೆಗಳು ಅಸ್ತವ್ಯಸ್ತವಾಗಿ ಚದುರಿದ್ದವು. ಅಲ್ಲಿಂದ ಸ್ವಲ್ಪ ಮುಂದೆ ನಡೆದಾಗ ವಿಲಾಸಿನಿಯರೆಲ್ಲ ಅಸ್ತವ್ಯಸ್ತವಾಗಿ ಮಲಗಿದ್ದುದು ಕಂಡಿತು. ಮಗ್ಗುಲಲ್ಲಿ ಬೆಳ್ಳಿಯ ಬಟ್ಟಲುಗಳು ಅಲ್ಲಲ್ಲೇ ಚದುರಿ ಉರುಳಿದ್ದವು. ಕೆಲವರ ಬಳಿ ವಾದ್ಯಗಳಿದ್ದವು. ಅವೂ ಸಹ ತಮ್ಮ ಪಾಡಿಗೆ ತಾವು ಬಿದ್ದಿದ್ದವು. ಮೊದಲು ಏನೂ ಅರ್ಥವಾಗಲಿಲ್ಲ. ಇಂತಹ ದೃಶ್ಯವನ್ನು ಎಂದೂ ಕಂಡಿರಲಿಲ್ಲವಾಕೆ.

ಆ ಬಳಿಕ ತಿಳಿಯಿತು—ಅವರೆಲ್ಲ ಸುರಾಪಾನ ಮಾಡಿ, ಉನ್ಮತ್ತರಾಗಿ ಬಿದ್ದಿದ್ದಾರೆಂದು! ಉರಿಯುತ್ತಿದ್ದ ದೀವಿಗೆಗಳ ಬೆಳಗಿನಲ್ಲಿ ಆ ಬದುಕನ್ನು ನೋಡಿ ಜಿಗುಪ್ಸೆ ಎನಿಸಿತು. ಕ್ಷಣಕಾಲ ನಿಂತು ಸುತ್ತಲೂ ಕಣ್ಣು ಹಾಯಿಸಿದಾಗ ಬೆಚ್ಚಿಬಿದ್ದಳು. ಕೌಶಿಕ ಕೊಂಚ ದೂರದಲ್ಲಿ ಪಲ್ಲಂಗದಮೇಲೆ ಮಲಗಿದ್ದ. ತನ್ನನ್ನು ನೋಡಿಬಿಟ್ಟರೆ ಎಂದು ಕಳವಳವಾಯಿತು. ಸರಸರನೆ ಪ್ರಾಂಗಣವನ್ನು ದಾಟಿ ಹೊರಗೆ ನಡೆದಳು. ಕೆಲವೇ

ಹೊಳೆವಂತೆ ಹೂವು ಅರಳಿ ಕಾಣುತ್ತಿದ್ದವು. ಮಲ್ಲಿಗೆಯ ಸುವಾಸನೆ ಆಸ್ವಾದಿಸುತ್ತ ನಿರಾಳವಾಗಿ ಕುಳಿತಳು. "ಯಾವ ಭಯವಿಲ್ಲದಿದ್ದರೆ ಇಂತಹ ಸ್ಥಳ ಯೋಗ ಸಾಧನೆಗೆ ಎಷ್ಟು ಚೆನ್ನ! ಕೇತಕಿಯ ಪೊದೆಯ ಸಮೀಪದಲ್ಲಿ ಹಾವುಗಳಿರುವಂತೆ ಪರಮಾತ್ಮನು ಸುಖದ ಹಿಂದೆ ಕಷ್ಟವನ್ನು ಇಟ್ಟೇಬಿಡುವನು...." ಚಂದ್ರನನ್ನು ದಿಟ್ಟಿಸತೊಡಗಿದಳು. ರಾತ್ರಿಯನ್ನೆಲ್ಲ ಹೀಗೆಯೇ ಕಳೆಯಬೇಕು ಎನ್ನಿಸಿತು.

> ಪಂಚೇಂದ್ರಿಯದ ಉರವಣೆಯಹುದು
> ಮದದ ಭರದ ಜವ್ವನದೊಡಲು ವೃಥಾಹೋಯಿತಲ್ಲಾ !
> ತುಂಬಿ ಪರಮಳವನೇ ಕೊಂಡು ಲಂಬಿಸುವ ತೆರನಂತೆ
> ಇನ್ನೆಂದಿಗೆ ಒಳಕೊಂಬೆಯೋ, ಅಯ್ಯಾ ಚನ್ನಮಲ್ಲಿಕಾರ್ಜುನಾ*

'ನನ್ನ ಇಂದ್ರಿಯಗಳು ದೈವೀಧ್ಯಾನಕ್ಕಾಗಿ ಹಾತೊರೆದರೆ, ಒಡಲು ದೇವನೊಡನೆ ಒಂದಾಗುವ ಸಮಾಧಿಸ್ಥಿತಿಗೆ ಹಂಬಲಿಸುತ್ತಿದೆ. ದೇವಾ....ಎಂದಿಗೆ ನನ್ನನ್ನು ಇಲ್ಲಿಂದ ಬಿಡುಗಡೆ ಮಾಡಿ "ತುಂಬಿ ಪರಿಮಳವನುಂಡು ಹಾರುವಂತೆ" ನಿನ್ನಲ್ಲಿ ಅಡಗಿಸಿಕೊಳ್ಳುವೆ' ಎಂದು ಮೊರೆಯಿಡತೊಡಗಿದಳು.

'ಮಹಾದೇವಿ....ಮಹಾದೇವಿ' ಎಂಬ ಕೂಗಿಗೆ ಎಚ್ಚರವಾಯಿತು. ಕಣ್ತೆರೆದಳು. ಬೆಳುದಿಂಗಳಲ್ಲಿ ಪುರುಷಾಕಾರ. ಕೌಶಿಕನ ದನಿಯೆಂದು ಗುರುತಿಸಿ ಕಳವಳಗೊಂಡು ಸೂಕ್ಷ್ಮವಾಗಿ ನಡುಗಿ, ಧೈರ್ಯ ತಂದುಕೊಳ್ಳುತ್ತ,

'ತಾವು....ಮಹಾಪ್ರಭುಗಳಲ್ಲವೇ....?' ಎಂದು ಕೇಳಿದಳು.

'ಮಾದೇವಿ....ನನ್ನ ಪ್ರೇಮದ ಪುತ್ಥಳಿ....! ಈ ಬೆಳುದಿಂಗಳಲ್ಲಿ ಸಗ್ಗದಿಂದ ಇಳಿದ ಅಪ್ಸರೆಯಂತೆ ಶೋಭಿಸುತ್ತಿರುವೆ. ನೀನು ನುಡಿಯುವಾಗ ತುಟಿ ತೆರೆದರೆ ಬೆಳ್ದಿಂಗಳ ಬೆಳಕಿನಲ್ಲಿ ಶುಭ್ರ ಹಲ್ಲುಗಳು ಮಾಣಿಕ್ಯದ ಹರಳಿನಂತೆ ಹೊಳೆಯುತ್ತವೆ. ನಿನ್ನ ಅಂಗಾಂಗಗಳು ಅದೆಷ್ಟು ಮಾಟವಾಗಿವೆ! ದೇವೀ....ನಿನ್ನ ಸೌಂದರ್ಯವನ್ನು ಕಾನನದ ಬೆಳುದಿಂಗಳಿನಂತೆ, ಕಾಡಕುಸುಮದಂತೆ ಏಕೆ ವ್ಯರ್ಥ ಮಾಡಿಕೊಳ್ಳುವೆ....? ನಿನ್ನನ್ನು ನೋಡುತ್ತಿದ್ದರೆ ನನ್ನ ಮನಸ್ಸು ಕೆರಳುವುದು. ಈ ವಿರಹಜ್ವಾಲೆಯಲ್ಲಿ ಜೀವಂತವಾಗಿ ಬೇಯಲಾರದೆ ಸುರಾಂಗನೆಯ ಮೊರೆಹೊಕ್ಕು ಮಲಗಿದ್ದೆ. ಕರುಣೆ ತೋರು ದೇವಿ....' ಎಂದು ದೀನನಾಗಿ ಕೈಚಾಚಿ ನುಡಿದ ಕೌಶಿಕ.

‘ಸಾಕು ನಿಮ್ಮ ಪ್ರೇಮಾಲಾಪ. ನನ್ನ ಚಿಂತನೆಗಾಗಿ ವ್ಯಯಿಸುವ ಕಾಲವನ್ನು ದೇವರ ಧ್ಯಾನ ಮಾಡಲು ವ್ಯಯಿಸಿರಿ! ದುಃಖವನ್ನು ಮರೆಯಲು ಸುರಾಪಾನ ಸಾಧನವಲ್ಲ, ಶಿವಧ್ಯಾನ ಪಾನವೇ ಸಂಜೀವಿನಿ! ಹೆಣ್ಣಿಗಾಗಿ ಮೀಸಲಿಡುವ ಬಾಳನ್ನು ದೇವರಿಗಾಗಿ ಮೀಸಲಿಡಿ!....’ ಮಹಾದೇವಿ ಹೇಳಿದಳು.

‘ದೇವರು, ಮುಕ್ತಿ....! ಈ ಸುಡುಗಾಡು ಕಲ್ಪನೆಗಳನ್ನು ಯಾರು ನಿನ್ನ ತಲೆಯಲ್ಲಿ ತುಂಬಿದರೋ....! ಕಣ್ಣುಮುಚ್ಚಿ ಸುತ್ತುವ ಗಾಣದ ಎತ್ತಿನಂತೆ ಯಾರೋ ಮೂರ್ಖರು ಹೇಳಿದ ಮಾತನ್ನು ನಂಬಿ ಒಣದಾದ ಅಧ್ಯಾತ್ಮ ಪ್ರಪಂಚದಲ್ಲಿ ಸಾಗುತ್ತಿರುವೆ. ಇವೆಲ್ಲ ಸುಳ್ಳು ಮಹಾದೇವಿ....ಭ್ರಮೆ! ಪ್ರಿಯೇ....ಕಲ್ಪನೆಯ ಕನಸಿನಲ್ಲಿ ಭಾಗಿಯಾಗದೆ, ನಿಜವಾದ ಸುಖ ಪಡೆ; ಬಾ....’ ತಟ್ಟರಿಸುತ್ತ ಮುಂದೆ ಹೆಜ್ಜೆಯಿಟ್ಟ ಕೌಶಿಕ. ಸುರೆಯ ಮಬ್ಬು ಇನ್ನೂ ಇಳಿದಿರಲಿಲ್ಲ.

‘ಅಹುದಹುದು....ನೀವು ಪಡುವುದೇ ನಿಜವಾದ ಸುಖವೇನೊ? ಗೂಗೆಯು ಸೂರ್ಯನನ್ನು ಬೈಯ್ಯುವುದು, ಕಾಗೆ ಚಂದ್ರನನ್ನು ಬೈಯ್ಯುವುದು, ಕುರುಡ ಕನ್ನಡಿಯನ್ನು ಬೈಯ್ಯುವುದು, ಪ್ರಪಾತದಲ್ಲಿ ಬಿದ್ದವನು ಗೌರಿಶಂಕರವನ್ನು ಬೈಯ್ಯುವುದು ಸಹಜವೆ? ತಮಗೆ ಅಸಹ್ಯವಾದುದನ್ನು ಎಲ್ಲರೂ ನಿಂದಿಸುವುದು ಲೋಕದ ಗುಣ. ಅಭಕ್ಷ್ಯ ಭಕ್ಷಣ, ಅಪೇಯ ಪೇಯ, ಸ್ತ್ರೀಲೋಲುಪತೆಯ ನರಕಕುಂಡದಲ್ಲಿ ಬಿದ್ದ ನೀವು ದೇವನನ್ನು, ಮುಕ್ತಿಯನ್ನು ಸುಳ್ಳೆಂದು ಅಲ್ಲಗಳೆದರೆ, ಅದಕ್ಕೆ ಯಾವ ಅರ್ಥವೂ ಇಲ್ಲ. ನಿಮಗೆ ಪರಿಚಯವೇ ಇಲ್ಲದ ಪಾರಮಾರ್ಥಪ್ರಪಂಚದ ಬಗ್ಗೆ ಮಾತನಾಡುವ ಅಧಿಕಾರವೂ ಇಲ್ಲ. *ಮಹಾರಾಜ....ನನ್ನನ್ನು ಸಮೀಪಿಸದಿರಿ, ಎಚ್ಚರಿಕೆ! ನನ್ನ ವ್ರತದ ಪ್ರಕಾರ ಇರುಳಿನ ಎರಡನೆಯ ಜಾವದ ಮೇಲೆ ಯಾರನ್ನೂ ನಾನು ನೋಡೆ ಎಂಬುವ ಅರಿವಿಲ್ಲವೆ? ಹಿಂಬಾಲಿಸಿ ಬರುವ ಅಗತ್ಯವೇನಿತ್ತು? ಮಾಡಿಕೊಂಡ ಒಪ್ಪಂದವನ್ನು ಉಲ್ಲಂಘಿಸುವ ಪ್ರಯತ್ನ ಮಾಡದಿರಿ....’

ಆವೇಶದಿಂದ ಎದ್ದುನಿಂತಳು ಮಹಾದೇವಿ; ಕೌಶಿಕ ಆ ಆವೇಶವನ್ನು ಕಂಡು ದಿಗ್ಭ್ರಾಂತನಾಗಿ ತಟ್ಟನೆ ನಿಂತುಬಿಟ್ಟ.

‘ಇರಲಿ....ಇಂದು ಮಾಡಿದ ತಪ್ಪನ್ನು ಲೆಕ್ಕಕ್ಕೆ ಇಡೆನು. ಮುಂದೆ ಎಚ್ಚರಿಕೆ....!’ ರಭಸದಿಂದ ಹೆಜ್ಜೆ ಇಡುತ್ತ ಮಹಾದೇವಿ ಮುನ್ನಡೆದಾಗ, ಕೌಶಿಕನ ಕಾಲು ನಡುಗಿದವು.

‘ಮಹಾದೇವಿ....ಕ್ರೂರಿಯಾಗಬೇಡ; ನೀನಿಲ್ಲದೆ, ನಿನ್ನ ಸ್ಪರ್ಶವಿಲ್ಲದೆ

* ಸ. ವ. [illegible]

ಬದುಕಲಾರೆ. ನನ್ನನ್ನು ಸಾಂತ್ವನಿಸು ದೇವೀ, ಬೆಂದ ಹೃದಯಕ್ಕೆ ತಂಪನ್ನೆರೆ....' ತೊದಲುತ್ತ ನುಡಿದು, ಹಿಂದಕ್ಕೆ ಹೋಗಿ ಶಿಲಾಸನದಮೇಲೆ ಒರಗಿಕೊಂಡ.

* * *

ಕೌಶಿಕನಿಗೆ ಎಚ್ಚರವಾದಾಗ ಸೂರ್ಯನು ಅದೇ ಆಗ ಮೂಡತೊಡಗಿದ್ದ. ಹಕ್ಕಿಗಳ ಚಿಲಿಪಿಲಿ ಕಲರವ ಸುಪ್ರಭಾತ ಹಾಡಿ ಎಚ್ಚರಿಸಿತು. ಬೆಳಗಿನ ತಂಗಾಳಿ ಕಚಕುಳಿ ಇಡುತ್ತಿತ್ತು. ಕಣ್ತೆರೆದಾಗ ತಾನೆಲ್ಲಿರುವೆನೆಂದು ಅರಿಯದೆ ದಿಗ್ಭ್ರಮೆಯಾಯಿತು. ಆ ಬಳಿಕ ಒಂದೊಂದೇ ಘಟನೆಗಳು ನೆನಪಿನ ರಂಗದ ಮೇಲೆ ಬರತೊಡಗಿದವು. 'ಸುರಾಪಾನದ ಮತ್ತಿನಲ್ಲಿ ತಾನು ಏನೇನು ಮಾತನಾಡಿದೆನೋ, ವರ್ತಿಸಿದೆನೋ' ಎಂದು ನಾಚಿಕೆಯಾಯಿತು. ಮಾತುಕತೆಗಳು ಅಸ್ಪಷ್ಟವಾಗಿ ನೆನಪಿನಲ್ಲಿದ್ದರೂ, ಪೂರ್ಣವಾಗಿ ಅರಿವಿಗೆ ಬರುತ್ತಿರಲಿಲ್ಲ.

'ಛೇ....ಅವಳ ಮುಂದೆ ಮದಿರಾಪಾನ ಮಾಡಿ ಕಾಣಿಸಿಕೊಳ್ಳಬಾರದಿತ್ತು. ಮೊದಲೇ ನನ್ನ ಸ್ತ್ರೀಲೋಲುಪತೆಗೆ ಜಿಗುಪ್ಸೆ ಪಡುವ ಆ ಆದರ್ಶವಾದಿನಿ, ನನ್ನ ಈ ದುರ್ಗುಣವನ್ನೂ ಕಂಡು ಹೇಸಿಗೆ ಪಡುವಳೇನೊ....!' ಕೌಶಿಕ ಎರಡೂ ಕೈಗಳನ್ನು ತಲೆಯ ಮೇಲಿರಿಸಿ ಕುಳಿತ.

'ಅವಳ ಸಾಮೀಪ್ಯ, ಸ್ಪರ್ಶಕ್ಕಾಗಿ ಹೃದಯ ಹಾತೊರೆಯುತ್ತಿದೆ; ಏನು ಮಾಡಲಿ....?'

'ಛೇ....ಹೇಡಿ! ರಾಜನಾದ ನೀನು ಆ ಅಬಲೆಯನ್ನು ವಶಪಡಿಸಿಕೊಳ್ಳಲು ಹಿಂಜರಿಯುವುದೇ? ಅವಳ ಬೆನ್ನಿಗೆ ಯಾರೂ ಇಲ್ಲ. ನಿನ್ನ ಮುಂದೆ ದೈಹಿಕ ಶಕ್ತಿಯಲ್ಲಿ ಆಕೆ ಆನೆಯ ಕಾಲಿಗೆ ಸಿಕ್ಕ ಕವಡೆಯಂತೆ. ನೀನು ಧೈರ್ಯದಿಂದ ಮುಂದೆ ಸಾಗಿದರೆ ಪ್ರತಿಭಟಿಸಲು ಆಕೆಯಲ್ಲಿ ಶಕ್ತಿಯಿದೆಯೆ?' ಅತೃಪ್ತ ಒಳಗಣ ಮನ ಹೇಳುತ್ತಿತ್ತು.

'ಇಲ್ಲ, ಸಾಧ್ಯವಿಲ್ಲ; ಆಕೆಯ ಬೆನ್ನಿಗೆ ಯಾವುದೋ ಶಕ್ತಿಯಿದೆ! ಅದು ನನ್ನನ್ನು ತಡೆಯುತ್ತದೆ. ಆ ತೇಜಸ್ಸು, ಅವಳ ಧೈರ್ಯ ನನ್ನನ್ನು ನಡುಗಿಸುತ್ತವೆ. ಎಂತಹ ಅತಿರಥ ಮಹಾರಥರನ್ನು ಸಮರಾಂಗಣದಲ್ಲಿ ತಗಣೆಯಂತೆ ಹೊಸಕಿ ಹಾಕುವೆ, ಚೆಂಡಿನಂತೆ ತಲೆಗಳನ್ನೀಡಾಡುವೆ....ಆದರೆ ಇವಳ ಮುಂದೆ ....ನಾನು ದುರ್ಬಲ. ಮುಂದುವರಿಯಲು ಕಾಲುಗಳು ಏಳವು, ಅಪ್ಪಲು ಕೈಗಳು ಏಳವು. ಅವಳ ಸುತ್ತಲೂ ಏನೋ ವಿಶಿಷ್ಟ ವಲಯ ವ್ಯಾಪಿಸಿರುವುದು. ... ತಣ್ಣಗಾಗುವುದು....ಪುಂಗಿಯ

ತ್ತು.

'ಇದೆಲ್ಲವೂ ದೌರ್ಬಲ್ಯ, ನಿನ್ನ ನಂಬುಗೆ....ನೀನು ಮುಂದುವರಿದು ಹೆಜ್ಜೆ ಇಡು, ತೃಪ್ತಿ ಪಡು. ಪಂಜರದ ಸಿಂಹವನ್ನು ಪಳಗಿಸುವುದು ಏನು ಕಷ್ಟ....!' ಪಾಶವಿಕಮನ ಹೇಳುತ್ತಿತ್ತು.

'ಇಲ್ಲ....ಹಾಗೆ ಮಾಡಲಾರೆ. ದೌರ್ಜನ್ಯದಿಂದ ಮುಂದುವರಿದು ಶರೀರವನ್ನು ವಶಪಡಿಸಿಕೊಂಡರೆ, ಮನಸ್ಸನ್ನು ಒಲಿಸಿಕೊಂಡಂತಾಗಲಿಲ್ಲ. ಹೃದಯದ ಒಲುಮೆಯನ್ನು ಪಡೆದುಕೊಳ್ಳದ ದಾಂಪತ್ಯವು ಚಿತ್ರದ ರೂಪು, ಪಟದ ಕಬ್ಬು; ನಿಜವಾದ ಆನಂದವನ್ನು ನೀಡಲಾರದು. ಏನೇ ಆಗಲಿ ಅವಳ ಹೃದಯವು ಇಂದಲ್ಲ ನಾಳೆ ಒಲಿದೇ ಒಲಿಯುವುದು.' ಆತ್ಮವಿಶ್ವಾಸದಿಂದ ಎದ್ದು ತನ್ನ ಏಕಾಂತ ಭವನಕ್ಕೆ ನಡೆದ.

೨೯. ಕರ್ತವ್ಯದ ಪಾಠ

ಕೌಶಿಕನಿಂದ ದೂರವಾಗಿ ಬಂದ ಮಹಾದೇವಿ ಕ್ಷಣಕಾಲ ನಿಂತು ಹಿಂದೆ ತಿರುಗಿ ನೋಡಿದಳು. ಸ್ತಂಭೀಭೂತನಾಗಿ ನಿಂತಿದ್ದ ಅವನು ತನ್ನಲ್ಲಿ ತಾನೇ ಏನನ್ನೋ ಗೊಣಗಿಕೊಳ್ಳುತ್ತ ಹಿಂದಕ್ಕೆ ಸರಿದು ಶಿಲಾಸನದ ಕಡೆಗೆ ನಡೆಯುತ್ತಿದ್ದ. ವಿಷಾದದಿಂದ ನುಡಿದಳು :

'ಪರಿವರ್ತನೆ ಮಾಡಬೇಕೆಂದು ಎಷ್ಟು ಯತ್ನಿಸಿದರೂ ಸಾಧ್ಯವಾಗದು. ಹಡಿಕೆಗೆ ಮೆಚ್ಚಿದ ಸೊಣಗಂಗೆ ಅಮೃತದ ರುಚಿ ಸರಿಬರದು. ಅಂಗದಿಚ್ಛೆಗೆ ಮದ್ಯ ಮಾಂಸ ತಿನ್ನುವ, ಕಂಗಳಿಚ್ಛೆಗೆ ಪರವಧುವ ನೆರೆಯುವ, ಮಾಯೆಯ ತಾಳಕ್ಕೆ ಕುಣಿಯುವ ಇಂತಹವರಿಗೆ ಆಧ್ಯಾತ್ಮವಿದ್ಯೆಯನ್ನು ಕಲಿಸುವುದು ಕಷ್ಟಕರ....'

ಇರುಳಿನ ಕಡೆಯ ಜಾವ ಆರಂಭವಾಗುವುದರ ಮುನ್ಸೂಚನೆ ಕಂಡು ಮಿಂದು ಪೂಜಿಸಬೇಕೆಂದು ನಿರ್ಧರಿಸಿದಳು. ಮಾನಸಿಕ ತಳಮಳವನ್ನು, ವ್ಯಥೆಯನ್ನು ಮರೆಯುವ ಏಕೈಕ ಸಾಧನ ಅದಾಗಿತ್ತು. ಪೂಜೆ ಮುಗಿಸಿದಾಗ ಬೆಳಗಾಗಿ ಸೂರ್ಯನು ಆಳೆತ್ತರ ಆಗಸದಲ್ಲಿದ್ದ. ಅವನ ಹೊಂಗಿರಣಗಳ ಸ್ಪರ್ಶದಿಂದ ರೋಮಾಂಚನಗೊಂಡು ಹೂವು-ಎಲೆಗಳು ಕಾಂತಿಯುಕ್ತವಾಗಿ ಮಿಂಚುತ್ತಿದ್ದವು. ಮಹಾದೇವಿಗೆ ಬಹು ಆನಂದವೆನಿಸಿ ಕದವನ್ನು ತೆರೆದು, ಹೊರಗೆ ಬಂದು ಕಿಟಕಿಯ ಬಳಿ ನಿಂತಳು. ಚೈತ್ರವನಿತೆಯ ದೂತೆಯಾಗಿ ಬರುವ ಮಾಧವೀಲತೆ, ಹೊಸ ಎಲೆಗಳಿಂದ ಶೋಭಿಸುತ್ತ ಪರಿಮಳವನ್ನು ಗಾಳಿಯೊಡನೆ ಬೆರೆಸಿ ಕಳಿಸುತ್ತಿದ್ದರೆ; ಎಲೆಗಳ ಮರೆಯಲ್ಲಿ ಅರಳಿ, ಮಧುರವಾದ ಕಂಪನ್ನು ಇರುವಂತಿಗೆಯೂ ಗಾಳಿಯಲ್ಲಿ ಬೆರೆಸುತ್ತಿತ್ತು. ಈ ದಾನದಲ್ಲಿ ಜಾಜಿಯೂ ಹಿಂದೆ ಬೀಳಲು ಸಿದ್ಧವಿರಲಿಲ್ಲ. ರಾತ್ರಿ ಸರಿದು ಬೆಳಗು ಇಳಿಯುವ ಹೊತ್ತಿಗೆ ಮೈತೆರೆಯುವ ನವವಿಕಸಿತ ಜಾಜಿ ತನ್ನ ಕಂಪನ್ನೂ ಸೇರಿಸುತ್ತಿತ್ತು. ತನ್ಮಯಳಾಗಿ ಆಸ್ವಾದಿಸುತ್ತ ಸೃಷ್ಟಿಯ ಸೊಬಗನ್ನು ಕಣ್ಣಿನಿಂದ ಈಂಟುತ್ತಿದ್ದಳು ಮಹಾದೇವಿ. ದಾಸಿಯರು ಒಬ್ಬೊಬ್ಬರೇ ಮೈಮುರಿಯುತ್ತ ಏಳತೊಡಗಿದ್ದರು.

'ತಾವಾಗಲೇ ಉಪ್ಪವಡಿಸಿದಿರಾ?' ಮಹಾದೇವಿಯನ್ನು ಕಂಡು ಮದನರತಿ, ಶಿವಕಾಮಿನಿಯರು ಉದ್ಗರಿಸಿದರು.

'ಎಸ್ವಾದೂ ಆಯಿತು, ಪೂಜೆಯೂ ಆಯಿತು....' ಪ್ರಸನ್ನಮುಖಿಯಾದ ಮಹಾದೇವಿ ಅಂದಳು.

'ಅಂದರೆ ನಿದ್ದೆ ಮಾಡಲಿಲ್ಲವೇ ?....' ಮದನರತಿ ಕೇಳಿದಳು.

'ಕೇವಲ ಉಣ್ಣುವುದು, ತಿನ್ನುವುದು, ನಿದ್ರಿಸುವುದು ಇವಿಷ್ಟೇ ಮನುಷ್ಯನ ಗುರಿಯೇ ಮದನಾ....?'

'ಶಿವಕಾಮಿನಿ, ಬೇಗನೇ ಮುಖ ಮಾರ್ಜನ ಮಾಡಿಕೋ....ಉದ್ಯಾನದಲ್ಲಿ ಸುತ್ತಾಡಿ ಬರೋಣ. ಪ್ರಕೃತಿಯ ಒಡಲು ಅದೆಷ್ಟು ಸುಂದರವಾಗಿದೆ....!'

ಮಹಾದೇವಿ ಮೆಲ್ಲನೆ ಅರಮನೆಯ ಸೋಪಾನಗಳನ್ನಿಳಿಯುತ್ತ ಸುತ್ತಲೂ ಕಣ್ಣು ಹಾಯಿಸಿದಳು. ನಿಸರ್ಗದ ಕಣಕಣದಲ್ಲೂ ಜೀವಂತಿಕೆ ಪುಟಿಯುವಂತೆ ಭಾಸವಾಯಿತು.

ಶಿವಕಾಮಿನಿಯೊಡನೆ ಉದ್ಯಾನದ ವಿವಿಧ ಭಾಗಗಳಲ್ಲಿ ಸಂಚರಿಸಿದಳು. ಅರಮನೆಯ ಸುತ್ತಲೂ ಒಂದು ಕಡೆ ಸುವಾಸಿತ ಹಸಿರೆಲೆಗಳಿಂದ ಘಮಘಮಿಸುವ ಮರುಗ, ದವನ, ಪನ್ನೀರೆಲೆ, ದೊಡ್ಡಪತ್ರೆ, ಭದ್ರಮುಖಿ ಗಿಡಗಳು. ಇನ್ನೊಂದು ಕಡೆ ಮಲ್ಲಿಗೆ, ಸೇವಂತಿಗೆ, ಇರುವಂತಿಗೆ, ಬಸವನಪಾದ, ನಂದಬಟ್ಟಲು, ಜಾಜಿ, ಮಲ್ಲೆ, ಚೆಂಗಣಗಿಲೆ, ಹೊನ್ನೆ ಮುಂತಾದ ಹೂ ಗಿಡಬಳ್ಳಿಗಳು. ನಂತರ ಸಂಪಿಗೆ, ಗಗನಮಲ್ಲಿಗೆ, ಸುರಹೊನ್ನೆ, ಪಾರಿಜಾತ, ಕಾಂಚಾಳದ ಮರಗಳು. ಕೌಶಿಕನ ಏಕಾಂತಭವನ ಮತ್ತು ಮಹಾದೇವಿಗೆ ಅವಕಾಶ ಮಾಡಿಕೊಟ್ಟ ಪ್ರಶಾಂತಭವನಕ್ಕೆ ಇದಿರಾಗಿ ಒಂದು ಸುಂದರವಾದ ತಿಳಿಗೊಳ. ಅರಸಂಚೆಯ ಜೋಡಿಯೊಂದನ್ನು ಅಲ್ಲಿ ಆಡಲು ಬಿಡಲಾಗಿತ್ತು. ವಿಸ್ತಾರವಾದ ಕೊಳದ ಕೆಲವು ಎಡೆಗಳಲ್ಲಿ ತಾವರೆ, ನೈದಿಲೆಗಳು ಶೋಭಿಸುತ್ತಿದ್ದವು. ಸೂರ್ಯೋದಯದಿಂದಾಗಿ ರವಿಸತಿ ಅಂಬುಜೆ ಅತ್ಯಂತ ಉಲ್ಲಸಿತಳಾಗಿ ಮೈತೆರೆಯುತ್ತಿದ್ದರೆ, ಚಂದ್ರನ ಮಡದಿಯಾದ ಓರಗಿತ್ತಿ ನೈದಿಲೆ ಅಸೂಯೆ-ಅಸಹನೆಗಳಿಂದ ಮುಖ ಮುಚ್ಚಿಕೊಳ್ಳುತ್ತಿದ್ದಳು. ಸುಪ್ರಭಾತದ ಸೂರ್ಯಕಿರಣಗಳಿಂದ ಸ್ಫೂರ್ತಿಗೊಂಡ ಹಂಸಪಕ್ಷಿಗಳು ಕೊಕ್ಕಿನಿಂದ ನೀರು ಚಿಮ್ಮುತ್ತ, ಪಟಪಟನೆ ರೆಕ್ಕೆ ಬಡಿಯುತ್ತ, ತೇಲುತ್ತ, ಒಂದರ ಕೊಕ್ಕನ್ನೊಂದು ಸ್ಪರ್ಶಿಸುತ್ತ ಚೆಲ್ಲಾಟವಾಡುತ್ತಿದ್ದವು. ದಾರಿಯನ್ನುಳಿದು ಇಕ್ಕೆಲಗಳಲ್ಲೂ ಪ್ರಯತ್ನಪೂರ್ವಕವಾಗಿ ಬೆಳೆಸಿದ ಹಸಿರು ಹುಲ್ಲು ಮೆತ್ತನೆಯ ರತ್ನಗಂಬಳಿಯನ್ನು ಹರವಿತ್ತು. ಪರಿಚಾರಕರು ಸೂರೆ ಮಾಡುವ ಕಾಳನ್ನು ಹೆಕ್ಕಿಕೊಳ್ಳಲು ಪಾರಿವಾಳದ ಹಿಂಡು ಬಂದು, ನೆಲದ ತುಂಬ ಹರಿದಾಡುತ್ತಿತ್ತು.

ಮಹಾದೇವಿಯು ಉತ್ಸಾಹ ವರ್ಧಿಸಿ ಉದ್ಯಾನದ ಒಳಭಾಗಕ್ಕೆ ನಡೆದಳು.

ಅದು ದಟ್ಟವಾದ ವೃಕ್ಷರಾಜಿಯಿಂದ ವಿಜೃಂಭಿಸುವ ವಲಯ. ಇಲ್ಲಿ ಕೋಗಿಲೆ, ಕಾಜಾಣ, ಗೊರವಂಕ, ಗಿಳಿ, ಗುಬ್ಬಿ, ಮರಕುಟಿಕಗಳ ಕಾರ್ಯಚಟುವಟಿಕೆ ನಡೆದಿತ್ತು. ಬೇಲ, ಮಾವು, ಹಲಸು, ತೆಂಗು, ಅಡಿಕೆ, ಮಾದಾಲ, ಚಕ್ಕೋತ ಮುಂತಾದ ಮರಗಳು ದಟ್ಟವಾಗಿ ಎಲೆಗಳನ್ನು ಹರಡಿದ್ದವು.

ಉದ್ಯಾನವನದ ಮಧ್ಯಭಾಗದಲ್ಲಿ ಮಾನವನಿರ್ಮಿತ ಮಾಧವೀಲತೆಯ ಮಂಟಪಗಳು ಅನೇಕವಿದ್ದವು. ಆದರೆ ಇಲ್ಲಿ ಅವು ಸ್ವೇಚ್ಛೆಯಿಂದ, ಅತ್ಯಂತ ಮನೋಹರವಾಗಿ ಬೆಳೆದಿದ್ದವು. ಹಿರಿಯ ಮರವನ್ನು ತಬ್ಬಿಕೊಂಡು ಹಬ್ಬಿ, ಆಶ್ರಯ ನೀಡಿದ ಮಾತೃವೃಕ್ಷದ ಕೊಂಬೆಗಳನ್ನೆಲ್ಲ ಆಕ್ರಮಿಸಿ, ಬಣ್ಣದ ಹೂವುಗಳಿಂದ ಅವನ್ನು ಅಲಂಕರಿಸಿ, ಅಕ್ಕಪಕ್ಕದ ವೃಕ್ಷಗಳಿಗೂ ದಾಂಗುಡಿಯಿಟ್ಟು ಹಬ್ಬಿದ ಮಾಧವೀಲತೆಗಳು ನೆಲಕ್ಕೆ ರವಿಕಿರಣಗಳು ಸೋಂಕದಷ್ಟು ದಟ್ಟವಾದ ಮೇಲ್ಛಾವಣಿಯನ್ನು ನಿರ್ಮಿಸಿದ್ದವು. ಬಿರಿದ ಹೂವುಗಳು ರೆಕ್ಕೆಯನ್ನು ಮುದುರಿಕೊಂಡ ಚಿಟ್ಟೆಗಳಂತೆ ಕಾಣುತ್ತಿದ್ದು, ಮಾದಕವಾದ ನರುಗಂಪನ್ನು ಬೀರಿ ಮೈಮರೆಸುತ್ತಿದ್ದವು.

ನೆಲದ ಮೇಲಿನ ದಟ್ಟನೆಯ ಹುಲ್ಲು, ಅದರ ಮೇಲೆ ಬಿದ್ದ ಹಿಮದ ಹನಿಗಳು ಕಾಲಿರಿಸಿದಾಗ ತಂಪನ್ನುಂಟುಮಾಡುತ್ತಿದ್ದವು. ತೋಟದ ಇನ್ನೊಂದು ಭಾಗದಲ್ಲಿ ಕಬ್ಬು, ಬಾಳೆಗಳ ಬೆಳೆಯೂ ಅಷ್ಟೇ ಸೊಂಪಾಗಿತ್ತು. ನಿಸರ್ಗದೇವತೆಯು ತನ್ನ ವಿವಿಧ ಮುಖಮುದ್ರೆಗಳನ್ನು ಪ್ರದರ್ಶನಕ್ಕೆ ಇರಿಸಿದಂತೆ ತೋರುತ್ತಿತ್ತಲ್ಲಿ. ಮಹಾದೇವಿ ಪುಳಕಿತಚೇತನಳಾಗಿ ಮೈಮರೆತಾಗಲೇ ಪಕ್ಷಿಯೊಂದರ ದನಿ ಕೇಳಿತು. ಅದಕ್ಕೆ ಮಾರ್ದನಿಗೊಡುವಂತೆ ಇನ್ನೊಂದು ಅಂತಹುದೇ ಧ್ವನಿ ಆದಾಗ, ಏನನ್ನೋ ಕುತೂಹಲದಿಂದ ಅರಸುತ್ತಿದ್ದ ಶಿವಕಾಮಿನಿ ಉತ್ಸುಕಳಾಗಿ "ಒಡತಿ....ಅಲ್ಲಿ ನೋಡಿ....ನವಿಲು" ಎಂದು ಕೈತೋರಿದಳು.

ಮಹಾದೇವಿ ಸಂತೋಷಚಿತ್ತಳಾಗಿ ನೋಡಿದಳು. ಮುಂಜಾನೆಯ ಚೇತೋಹಾರಿ ಬಿಸಿಲಿನಲ್ಲಿ ಗಂಡು ನವಿಲು ಕೇಕೆ ಹಾಕುತ್ತ ಗರಿಬಿಚ್ಚಿ ಕುಣಿಯುತ್ತಿತ್ತು. ಹೊಂಬೆಳಗಿನಲ್ಲಿ ಅದರ ಬಣ್ಣಬಣ್ಣದ ಕಣ್ಣುಗಳು ನಯನಮನೋಹರವಾಗಿ ಹೊಳೆಯುತ್ತಿದ್ದವು. ಹೆಣ್ಣು ನವಿಲು ಕೊಂಬೆಯಿಂದ ಕೊಂಬೆಗೆ ಹಾರುತ್ತ ತನ್ನ ಇನಿಯನನ್ನು ಸಮೀಪಿಸುತ್ತಿತ್ತು. ಅನಿತರಲ್ಲಿ ಕಂಡ ಒಂದು ದಿಬ್ಬವನ್ನು ಹತ್ತಿ ನೋಡಿದಾಗ, ಮುಂದೆಲ್ಲ ವಿಸ್ತಾರವಾದ ಬಯಲು, ಅಲ್ಲಿ ಹಸಿರು ಸಮುದ್ರದಂತೆ ತೋರುವ ಬತ್ತದ ಗದ್ದೆಗಳು, ನೇರಿಳೆಯ ಬಣ್ಣದ ತೆನೆ ಒಡೆದ ಕಬ್ಬಿನ ಗದ್ದೆಗಳು ಕಾಣಬರುತ್ತಿದ್ದವು.

'ಶಿವಕಾಮಿನಿ....ಸೃಷ್ಟಿಯೆಲ್ಲ ಸಜೀವವಾಗಿ ಎದ್ದು ನಿಂತಿದೆ ನೋಡು.

ಪರಮಾತ್ಮನ ಸೌಂದರ್ಯಪ್ರಜ್ಞೆ ಎಷ್ಟೆಂಬುದಕ್ಕೆ ಇದು ಸಾಕ್ಷಿ ನುಡಿಯುತ್ತಿದೆ! ಹೆಣ್ಣು ಎಷ್ಟೇ ಶೃಂಗಾರ ಮಾಡಿಕೊಳ್ಳಲಿ ನವಿಲಿನಷ್ಟು ಶೃಂಗರಿಸಿಕೊಳ್ಳಲು ಸಾಧ್ಯವಿಲ್ಲ. ದೈವೀಲೀಲೆ ಅಗಾಧ....' ಸಂಭ್ರಮದಿಂದ ಮಾಧವೀಲತೆಯ ಹಂದರದ ಕೆಳಗಿನ ಹುಲ್ಲಿನ ಹಾಸುಗೆಯಮೇಲೆ ಕುಳಿತು ನವಿರಾಗಿ ಕೈಯಾಡಿಸಿ ದಳು. ಕಣ್ಣು ಮುಚ್ಚಿ ಧ್ಯಾನ ಮಾಡಿ, ನಂತರ ಕಣ್ತೆರೆದಳು. ತನ್ನ ಕೈಯಲ್ಲಿ ಹಿಡಿದು ತಂದಿದ್ದ ಬೆತ್ತದ ಬುಟ್ಟಿಯೊಂದನ್ನು ತೆರೆದು ತಾಡಓಲೆಗರಿ, ಕಂಠ ವನ್ನು ತೆಗೆದು ಕೊರೆಯತೊಡಗಿದಳು.

ಈಳೆ ನಿಂಬು ಮಾವು ಮಾದಾಲಕ್ಕೆ
ಹುಳಿ ನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿ ನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ—
ಜಲವು ಹಲವು ದ್ರವ್ಯಂಗಳ ಕೂಡಿ, ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ!*

ಒಂದು ಹಲವು ಆಗುವುದು, ಏಕ ಅನೇಕವಾಗುವುದು ಪ್ರಕೃತಿಯಲೀಲೆ. ವೈವಿಧ್ಯಮಯವಾದ ಪ್ರಕೃತಿಯ ಸೂತ್ರಧಾರಕನಾಗಿ ಪರಮಾತ್ಮನು ಜಗದ ಒಳಗೆ ಮಾತ್ರವಲ್ಲ, ಜಗದ ಹೊರಗೂ ಇರುವನು....' ಪರಮಾತ್ಮನ ಸ್ವರೂಪ ವನ್ನು ಕುರಿತು ಚಿಂತನೆ ಮಾಡಿದಾಗ ಅನ್ನಿಸಿತು:

'ಮಕ್ಕಳು ಮನೆಯಾಟ ಆಡಿದಂತೆ, ಶಿವನು ತನ್ನ ವಿನೋದಕ್ಕೆ ಜಗದ ಆಟವನ್ನು ಆಡುವನು. ವಿನೋದಕ್ಕಾಗಿ ಈ ಚಕ್ರವನ್ನು ತಿರುಗಿಸುವನು. ಜೇಡರ ಹುಳುವಿನಂತೆ ಇದನ್ನು ನೆಯ್ದು, ಸೃಷ್ಟಿಲೀಲೆ ಸಾಕೆನಿಸಿದಾಗ ಅದನ್ನು ಹರಿದು, ತನ್ನ ಗರ್ಭದಲ್ಲಿ ಅಡಗಿಸಿಕೊಂಡು ಸ್ವಯಂಭುವಾಗಿಬಿಡುವನು....'†

ಎಷ್ಟೋ ಹೊತ್ತು ಮೈಮರೆತ ಆಕೆ ಎಚ್ಚರಗೊಂಡು ಅರಮನೆಯ ಕಡೆಗೆ ಹೊರಟಾಗ ಒಡತಿಯನ್ನು ಶಿವಕಾಮಿನಿ ಹಿಂಬಾಲಿಸಿದಳು.

---

* ಮ. ವ. [illegible] † [illegible]

'ಶಿವೆ....ರಾತ್ರಿ ನಾನೊಮ್ಮೆ ಎಚ್ಚರಗೊಂಡೆ ; ನೀನು ಮಲಗಿದ್ದೆ. ಬೆಳ್ದಿಂಗಳಲ್ಲಿ ಬಂದು ಉದ್ಯಾನದಲ್ಲಿ ಕುಳಿತುಕೊಳ್ಳಲು ಬಹಳಷ್ಟು ಬಯಕೆಯಾಗಿತ್ತು'

'ಎಬ್ಬಿಸಬಹುದಿತ್ತು....'

'ಆದರೆ....ನೀನು ಅಸ್ತವ್ಯಸ್ತವಾಗಿ ಮಲಗಿದ್ದೆ. ಪಕ್ಕದಲ್ಲೇ ಬಟ್ಟಲು ಉರುಳುತ್ತಿತ್ತು....' ನೇರದೃಷ್ಟಿಯಿಂದ ಮಹಾದೇವಿ ನೋಡಿ, ಹೀಗೆ ನುಡಿದಾಗ ಶಿವಕಾಮಿನಿ ನಾಚಿಕೊಂಡು ತಲೆತಗ್ಗಿಸಿದಳು.

'ಅಹುದು ತಾಯಿ; ನಾನು ಸುರಾಪಾನ ಮಾಡಿದ್ದೆ. ಮೊದಲು ಈ ಅಭ್ಯಾಸ ನನಗಿರಲಿಲ್ಲ. ಅಂತಃಪುರದ ಪರಿಚಾರಿಕೆಯಾಗಿ ಒಡನಾಡಿಯರಿಂದ ಕಲಿತುಬಿಟ್ಟೆ....'

'ಶಿವಕಾಮಿನಿ, ಮನುಷ್ಯನ ಜೀವನ ಬಹು ಬೆಲೆಯುಳ್ಳದ್ದಾಗಬೇಕವ್ವ. ಉಂಡುಟ್ಟು ಮೆರೆವ ಬಾಳುವೆಯೇ ಸರ್ವಸ್ವವಲ್ಲ. ಸಗಣಿಯ ಕ್ರಿಮಿಗಳಂತೆ ಕುಡಿದು ಹೊರಳಾಡುವ ಇಂಥ ಬದುಕು ಬದುಕಿ ಫಲವೇನು ?'

'.......................'

'ಮನಸ್ಸು ಸಿಕ್ಕತ್ತ ಹರಿವ ಮಂಗ; ಅದನ್ನು ನಿಗ್ರಹಿಸಬೇಕು ತಂಗೀ.... ಆಚಾರನಿಷ್ಠ ಸಂಯಮ ಜೀವನದಲ್ಲಿ ಎಷ್ಟು ಆನಂದವಿದೆ ಗೊತ್ತೆ....?'

'ತಪ್ಪಾಯಿತು ಒಡತಿ, ಇನ್ನೆಂದೂ ಕುಡಿಯುವುದಿಲ್ಲ....' ಪಶ್ಚಾತ್ತಾಪದಿಂದ ಶಿವಕಾಮಿನಿ ನುಡಿದಳು.

ಈರ್ವರೂ ಅರಮನೆಯ ಕಡೆಗೆ ಬಂದರು. ಮದನರತಿ ಉಳಿದ ವಿಲಾಸಿನಿಯರೊಡನೆ ಬೆಳಗಿನ ಉಪಾಹಾರ ಸ್ವೀಕರಿಸಿ, ತಾಂಬೂಲ ಮೆಲ್ಲುತ್ತ ; ಗಿಳಿ ಪಾರಿವಾಳಗಳೊಡನೆ ಆಟವಾಡುತ್ತಿದ್ದಳು.

ಮಹಾದೇವಿ ಮಧ್ಯಾಹ್ನದ ಪೂಜೆಗಾಗಿ ಹೂವನ್ನು ಸಂಗ್ರಹಿಸಲು ಬೆತ್ತದ ಬುಟ್ಟಿ ಹಿಡಿದು ಹೊರಟಾಗ ಶಿವಕಾಮಿನಿ ಅಡ್ಡಬಂದು, 'ನಾನು ಹೂ ಬಿಡಿಸಿ ಕೊಡುವೆ, ಕೊಡಿ ಒಡತಿ' ಎಂದಳು.

'ಬೇಡ ಶಿವೆ ; ಹೆಂಡತಿಯು ಕೈಯಾರೆ ಮಾಡಿಟ್ಟ ಪ್ರೇಮದ ಉಣಿಸು ಆಳು ಮಾಡಿಕೊಡುವ ಉಣಿಸಿಗಿಂತ ಪತಿಗೆ ಹೆಚ್ಚು ಪ್ರಿಯವೆನಿಸುವಂತೆ, ಪೂಜಿಸುವ ನಾನೇ ಸಲಕರಣೆಗಳನ್ನು ಹೊಂದಿಸಿಕೊಂಡರೆ ನನ್ನ ದೇವನಿಗೆ ಬಹು ಪ್ರಿಯ....'

ಭಕ್ತಿಗೀತೆಯೊಂದನ್ನು ಗುಣುಗುಣಿಸುತ್ತ ಹೂವುಗಳನ್ನು ಮಹಾದೇವಿ ಸಂಗ್ರಹಿಸತೊಡಗಿದಳು. ತೋರಿಕೆಗೆ ಉದ್ಯಾನವನ ಬಹು ರಮ್ಯವಾಗಿದ್ದರೂ ಹೂಗಿಡಗಳ ಸುತ್ತಲೂ ವಿಪರೀತ ಕಳೆ ಬೆಳೆದಿತ್ತು. ಗೋಡೆಯ ಸುತ್ತಲೂ

ಗೇಣೆತ್ತರದ ಕಳೆ ಬೆಳೆದಿದ್ದರೂ ಪ್ರತಿನಿತ್ಯ ಆ ಗಿಡಗಳಿಂದ ಹೂವು ಬಿಡಿಸಿಕೊಂಡು ಮುಡಿದು ಆನಂದಿಸುತ್ತಿದ್ದ ವಿಲಾಸಿನಿಯರ ಕೃಪಾದೃಷ್ಟಿ ಆ ಗಿಡಗಳ ಮೇಲೆ ಬಿದ್ದಿರಲಿಲ್ಲ. ಮಹಾದೇವಿ ಹೂ ಬುಟ್ಟಿಯನ್ನು ಒಂದೆಡೆ ಇರಿಸಿ, ಕೊಳದ ಬಳಿಯ ಕಟ್ಟೆಯ ಮಾಡಿನಲ್ಲಿದ್ದ ಕುರ್ಚಿಗೆಯನ್ನು ತೆಗೆದುಕೊಂಡು ಕಳೆ ತೆಗೆಯತೊಡಗಿದಳು. ಅರಮನೆಯಲ್ಲಿ ನಿಂತು ಗಮನಿಸಿದ ಮದನರತಿ, ಶಿವಕಾಮಿನಿಯರು ಗಾಬರಿಗೊಂಡು ಓಡಿಬಂದರು.

'ಬೇಡಿ....ಅರಸಿಯರೆ; ತಾವು ಹೀಗೆ ಮಾಡಬಾರದು. ತಮ್ಮಂತಹವರು ಇಂಥ ಕೆಲಸ ಮಾಡಬಹುದೇ?'

ಮಹಾದೇವಿ ಮುಗುಳ್ನಗುತ್ತ ತನ್ನ ಕಾಯಕ ಮುಂದರಿಸಿ ಹೇಳಿದಳು:

'ಕಾಯಕದಲ್ಲಿ ಇಂಥ, ಅಂಥ ಎಂಬ ಭೇದವಿಲ್ಲ ಮದನಾ. ಶರೀರದಿಂದ ಮಾಡುವ ಕಾಯಕ ಕೀಳು ಎಂದು ನೀವು ಭಾವಿಸಿದಂತೆ ತೋರುವುದು; ಇದು ಸಲ್ಲದು. ಈ ಗಿಡಗಳ ಹೂವನ್ನು ನೀವು ಬಳಸುವುದಿಲ್ಲವೆ....?'

'ಬಳಸದೆ ಏನು ಒಡತಿ; ನಾನು ಮುಡಿದಿರುವುದು ಇದೇ ಗಿಡದ ಹೂಗಳನ್ನು....' ತನ್ನ ತುರುಬನ್ನು ಮದನರತಿ ತೋರಿಸಿದಳು.

'ಭೋಗ ಬೇಕು, ದುಡಿತ ಬೇಡ ಎಂಬುದು ಸರಿಯೆ? ಈ ಗಿಡದ ಹೂವುಗಳನ್ನು ತೆಗೆದುಕೊಂಡು ಶೃಂಗರಿಸಿಕೊಳ್ಳುವ ನೀವು ಇದರ ಸುತ್ತಲೂ ಬೆಳೆದಿರುವ ಕಳೆಯನ್ನೇಕೆ ತೆಗೆಯಬಾರದು....?'

'ಅದಕ್ಕಾಗಿ ನೇಮಿಸಲ್ಪಟ್ಟ ತೋಟಿಗರು ಇರುವರು ಒಡತಿ. ಈ ಭಾಗದ ವ್ಯವಸ್ಥೆ ನೋಡುವ ತೋಟಿಗನಿಗೆ ಮೈಯಲ್ಲಿ ಅಸ್ವಸ್ಥವಾದ ಕಾರಣ ಅವನು ಬಂದಿಲ್ಲ, ಕಳೆ ವೃದ್ಧಿಯಾಗಿದೆ....'

'ಈ ಗಿಡಗಳಿಂದ ಆನಂದಹೊಂದುವ ನೀವೇ ಏಕೆ ಇವುಗಳ ಆರೈಕೆ ಮಾಡಬಾರದು? ವಿಚಾರಮಾಡು ಮದನಾ, ಇಂದು ನೀನಾಗಲೀ, ಶಿವಕಾಮಿನಿಯಾಗಲೀ ಹೊರಜಗತ್ತಿನಲ್ಲಿ ಬದುಕಬೇಕಾದರೆ ಅದೆಷ್ಟು ದುಡಿಯಬೇಕು. ಅಷ್ಟು ದುಡಿದರೂ ಈ ಅರಮನೆಯಲ್ಲಿ ನಿಮಗೆ ಸಿಗುವ ಈ ಸುಖ-ಭೋಗಗಳು ಅಲ್ಲಿ ಸಿಗುವವೆ? ವೈಭವ, ಅಟ್ಟಹಾಸಗಳಿಂದ ಇಲ್ಲಿ ಮೈಮರೆತ ನಿಮಗಾಗಿ ಬೇರೊಬ್ಬರು ದುಡಿದು, ತಮ್ಮ ದುಡಿಮೆಯಲ್ಲೊಂದು ಪಾಲನ್ನು ಕರದ ರೂಪದಲ್ಲಿ ಅರಮನೆಯ ಬೊಕ್ಕಸಕ್ಕೆ ತುಂಬಬೇಕು. ಅನ್ಯರ ದುಡಿಮೆಯ ಉಯ್ಯಾಲೆಯಲ್ಲಿ ನೀವು ತೂಗುತ್ತ, ನಿರ್ಲಕ್ಷ್ಯವಾಗಿ ಅದನ್ನು ವ್ಯಯಿಸುವುದು ಪಾಪವಲ್ಲವೆ? ಲೋಕಕ್ಕಾಗಿ ಯಾವ ಕರ್ತವ್ಯವನ್ನೂ ಮಾಡದೆ, ಅದರಿಂದ

ದುಡಿಯದೆ ತಿನ್ನುವುದಕ್ಕಿಂತ ಮಹಾಪಾಪ ಮತ್ತಾವುದೂ ಇಲ್ಲ. ಪ್ರತಿ ನಿತ್ಯವೂ ತಪ್ಪದೆ ಸೂರ್ಯನು ಬೆಳಗುವನು, ಗಾಳಿ ಬೀಸುವುದು, ನೀರು ಹರಿಯುವುದು, ಹೂವು ಅರಳುವುದು, ಮಾವು ಚಿಗುರುವುದು. ಜಡಸೃಷ್ಟಿಯೇ ಹೀಗೆ ಕಾರ್ಯೋನ್ಮುಖವಾದಾಗ ವಿವೇಕವುಳ್ಳ ಮನುಷ್ಯ ಆಲಸಿಯಾದರೆಂತು?

'ಕೈಗೊಬ್ಬ ದಾಸಿ, ಕಾಲಿಗೊಬ್ಬ ದಾಸಿ, ಎಷ್ಟೊ ದುಡಿಯದೆ ಸುಖದ ಗೊಂಬೆಗಳಾಗಿ ಸುಪ್ಪತ್ತಿಗೆಯಲ್ಲಿ ಹೊರಳಾಡುವುದು, ಇದೆಂತಹ ಹೊರೆಯಾದ ಪಾಪದ ಬದುಕು....!'

'ಅರಮನೆಯ ನೇಮವೇ ಇದು ಒಡತಿ....'

'ಅಹುದಮ್ಮ, ಬಡವರ ದುಡಿಯುವವರ ಬೆವರು-ಕಣ್ಣೀರುಗಳ ಸರಸಿಯಲ್ಲಿ ರಾಜರ, ಸಿರಿವಂತರ ದೋಣಿವಿಹಾರ. ದಂಡದ ಬಲದಿಂದ ರಕ್ತವನ್ನು ಹಿಂಡುವ ಕ್ರೌರ್ಯ! ಅದಕ್ಕೆಂದೇ ಭೋಗಜೀವಿಗಳು, ಅನ್ಯಾಯವಲಂಬಿಗಳು ಆದ ನಿಮ್ಮಿಂದ ನಾನು ಸೇವೆ ಸ್ವೀಕರಿಸುತ್ತಿಲ್ಲ....'

'ಒಡತಿ....!' ಶಿವಕಾಮಿನಿ ಉದ್ಗರಿಸಿದಳು.

'ನಿಜ ಸೋದರಿಯರೇ, ನಾನೀ ಅರಮನೆಯಲ್ಲಿ ಉಣ್ಣುವಷ್ಟಕ್ಕೆ ಸಮನಾಗಿ ದುಡಿಯದೇ ಇರೆನು. ಯಾರಿಗೂ ಹೊರೆಯಾಗಬಯಸುವುದಿಲ್ಲ....'

'ನೀವೆಂತಹ ಹೊರೆ ತಾಯಿ! ನಿಮ್ಮ ಪಾದಸೇವೆ, ಊಳಿಗಕ್ಕೆಂದು ತಾನೇ ನಮ್ಮನ್ನು ಇಲ್ಲಿ ಇರಿಸಿಕೊಂಡಿರುವುದು....?' ಮದನರತಿ ಖಿನ್ನಳಾಗಿ ಹೇಳಿದಳು.

'ನಿಮ್ಮಂತಹ ಅಲ್ಪಾಕಾಂಕ್ಷಿಗಳ ಕೈಯಿಂದ ಸೇವೆ ಸ್ವೀಕರಿಸುವುದಕ್ಕಿಂತ ಮಹಾಪಾಪ ಯಾವುದೂ ಇಲ್ಲ. ಅಸಂಖ್ಯಾತರು ಹೊರಜಗತ್ತಿನಲ್ಲಿ ಸಾಮಾನ್ಯ ಸುಖಗಳಿಂದಲೂ ವಂಚಿತರಾಗಿ ಬಾಳುವಾಗ ಅದರ ಪರಿವೆ ಸಹ ಇಲ್ಲದೆ ವಿಲಾಸದಲ್ಲಿ ಮೈಮರೆತ ನಿಮ್ಮನ್ನು ನೋಡಿ ಬಹು ತಾಪ ನನಗಾಗುತ್ತಿದೆ. ಈ ಗಿಡಕ್ಕೆ ನಿಮ್ಮಂತೆ ಪ್ರಜ್ಞೆಯಿಲ್ಲ; ಆದರೂ ಅದು ಹೂ ಕೊಡುವುದು. ಆದರೆ ವಿವೇಕ ಇರುವ ನಿಮಗೆ ಇದನ್ನು ರಕ್ಷಿಸುವಷ್ಟು ಸೌಜನ್ಯವೂ ಇಲ್ಲ.

'ದುಡಿಮೆಯಲ್ಲಿ ಅಪಾರ ಆನಂದವಿದೆ. ಮಾಡುವ ಮಾಟವನ್ನು ಶೀಲಯುಕ್ತವಾಗಿ ದೈವೀಭಾವನೆಯಿಂದ ಮಾಡಿದಾಗ ಅದು ಕಾಯಕ; ಅದರಲ್ಲಿ ದೈವೀಕೂಟದ ಆನಂದವಿದೆ. ನೀವು ಬಳಸುವಷ್ಟಕ್ಕಾದರೂ ದುಡಿತ ನಡೆಸಬಾರದೆ ಮದನಾ?'

ಮದನರತಿಯಮೇಲೆ ಮಹಾದೇವಿಯ ಮಾತುಗಳು ವಿಲಕ್ಷಣ ಪರಿಣಾಮ ಬೀರಿದವು. ತನ್ನ ಸಖಿಯರೊಡನೆ ಸಲಕರಣೆಗಳನ್ನು ತಂದು ಕಾರ್ಯಮಗ್ನಳಾದಳು. ಕಳೆಯನ್ನು ತೆಗೆದು ಪಾತಿ ಮಾಡಿ,

ನೀರೆರೆದು ಮಹಾದೇವಿ ವಾತ್ಸಲ್ಯದಿಂದ ಆ ಗಿಡಗಳನ್ನು ಸವರುತ್ತ ಮೈಮರೆತು ನಿಲ್ಲುವುದನ್ನು ಕಂಡು ಆಕೆಗೆ ಅಚ್ಚರಿಯಾಗದೆ ಇರಲಿಲ್ಲ, 'ಗಿಡಗಳ ಮೇಲೆ ಸಹಿತ ಕರುಣೆ, ವಾತ್ಸಲ್ಯಗಳ ದೃಷ್ಟಿ ಬೀರುವ ಈ ಒಡತಿ ಅರಸರ ಮೇಲೆ ಏಕೆ ಪ್ರೇಮದೃಷ್ಟಿ ಹರಿಸಲಾರರೋ....!' ಎಂದು ಚಕಿತಳಾಗಿ ಮದನರತಿ ನೋಡು ತ್ತಿದ್ದಳು.

ಮುಕ್ಕಾಲು ಜಾವದವರೆಗೆ ಕಾಯಕ ಮಾಡಿ, ಮಹಾದೇವಿ ತನ್ನೊಡನೆ ದುಡಿಯುತ್ತಲಿದ್ದ ಶೃಂಗಾರಿಕೆಯರಿಗೂ ವಿರಾಮ ತೆಗೆದುಕೊಳ್ಳಲು ಹೇಳಿ, ಅರಮನೆಯತ್ತ ಅವರು ನಡೆದಾಗ ಮಾರ್ಮಿಕವಾಗಿ ನುಡಿದಳು :

'ದುಡಿಮೆಯ ಬೆಲೆಯನ್ನು, ಕಷ್ಟವನ್ನು ಈಗಲಾದರೂ ಅರಿಯಿರಿ. ಒಬ್ಬ ವ್ಯಕ್ತಿ ಸುಖವಾಗಿ ಬದುಕಲು ಒಂದು ಜಾವ ದುಡಿಯಬೇಕಾದರೆ, ಸಮಾಜದ ಇನ್ನೊಬ್ಬ ದುಡಿಯದೆ ಕುಳಿತರೆ ಅವನ ಸಲುವಾಗಿ ಇವನು ಎರಡು ಜಾವ ದುಡಿಯಬೇಕಾಗುವುದು; ಇಲ್ಲದಿದ್ದರೆ ರಾಷ್ಟ್ರಾದಾಯದ ಸಮತೋಲನ ತಪ್ಪುವುದು; ಅಥವಾ ದುಡಿಮೆ ಒಂದು ಕಡೆ ಹೊರೆಯಾದರೆ, ವಿಲಾಸ ಇನ್ನೊಂದು ಕಡೆ ವರ್ಧಿಸುವುದು. ಆದರಿಂದಾಗಿ ಶ್ರಮಿಕ ದುಡಿದು ಹತಾಶ ನಾದರೆ, ವಿಲಾಸಿ ದುಡಿಯದೆ ಸಮಾಜಕ್ಕೆ ಹೊರೆಯಾಗುವನು....'

'ಅಹುದು ಒಡತಿ; ನಮ್ಮ ಕಣ್ಣು ತೆರೆಯಿತಿಂದು....' ಮದನರತಿ ಹೇಳಿದಳು.

ಬಿಸಿಲಿನಲ್ಲಿ ದುಡಿದು ಉತ್ಸುಕಚೇತನಳಾದ ಮಹಾದೇವಿ ಉದ್ಯಾನದ ಮರವೊಂದರ ಕೆಳಗೆ ವಿಶ್ರಾಂತಿಗಾಗಿ ಬೊಡ್ಡೆಗೊರಗಿ ಕುಳಿತಳು. ಬೀಸಿ ಬಂದಪ್ಪುವ ತಂಗಾಳಿ ಬೆವರಿದ ಶರೀರವನ್ನು ಸಾಂತ್ವನಿಸುತ್ತಿತ್ತು. ಆ ವಾತಾವರಣ ಬಹಳಷ್ಟು ಪ್ರಿಯವೆನಿಸಿ ಸವಿಯುತ್ತಿರುವಾಗಲೇ ಅದಕ್ಕೂ ವಿಘ್ನ ಬಂದಿತು—ಕೌಶಿಕನ ಆಗಮನದಿಂದ.

ಮಹಾದೇವಿಯನ್ನು ಕಾಣಲು ಪ್ರಶಾಂತಭವನಕ್ಕೆ ಕೌಶಿಕನು ಆಗಮಿಸಿ ದಾಗ, ಆಕೆಯು ಕಾಯಕ ಮಾಡಲು ತಮಗೆಲ್ಲ ಬೋಧಿಸಿ ತಾನೂ ಬಿಸಿಲಿನಲ್ಲಿ ದುಡಿದುದನ್ನು ಮದನರತಿ ಬಣ್ಣಿಸಿದಳು. ಅಚ್ಚರಿಗೊಂಡ ಕೌಶಿಕ ಹಾಗೆ ಮಾಡುವುದು ಉಚಿತವಲ್ಲವೆಂದು ಬುದ್ಧಿ ಹೇಳಲಿಕ್ಕೆ ಆಕೆಯನ್ನು ಅರಸುತ್ತ ಉದ್ಯಾನಕ್ಕೆ ಬಂದನು. ತಂಗಾಳಿಗೆ ಮೈಯೊಡ್ಡಿ, ಗಿಡದ ಬೊಡ್ಡೆಗೊರಗಿ ತನ್ಮಯಳಾಗಿ ಕುಳಿತ ಆಕೆಯ ಆ ನಿಲುವು ಬಹಳಷ್ಟು ಪ್ರಿಯವೆನಿಸಿತು. ಮೆಲ್ಲನೆ ಮುಂದೆ ಹೆಜ್ಜೆ ಇರಿಸುತ್ತ ಸಾಗಿ 'ಮಹಾದೇವಿ' ಎಂದ. ಅತ್ಯಂತ

ಅನಕ್ಕೆ ಭಂಗ ತರುವಂತೆ ರಾಜನು ಬಂದುದು ಬಹಳಷ್ಟು ಅಪ್ರಿಯವಾಯಿತು. ಆದರೂ ಸಭ್ಯತೆಯನ್ನು ಮೀರಲಾರದೆ ಎದ್ದು ನಿಂತಳು.

'ಇದೇನು ದೇವಿ, ಇಂತಹ ಬಿಸಿಲಿನಲ್ಲಿ ಸುಕೋಮಲ ಶರೀರವನ್ನು ದಣಿಸಿದೆಯಂತೆ! ಅರಸಿಯಾದ ನೀನು ದುಡಿಯುವುದೇ?'

'ದುಡಿಯಲಿಕ್ಕೆಂದೇ ದೇವನು ಕೊಟ್ಟ ದೇಹವಿದು! ತಮ್ಮ ಅರಮನೆಯಲ್ಲಿ ಉಣ್ಣುವ ಪ್ರಸಾದದ ಋಣವನ್ನಾದರೂ ನಾನು ತೀರಿಸಬಾರದೆ?' ಮಹಾದೇವಿ ಮುಗುಳ್ನಗುತ್ತ ಹೇಳಿದಾಗ ಕೌಶಿಕನ ಮುಖ ಬಾಡಿಹೋಯಿತು.

'ಇಂತಹ ಮಾತನ್ನಾಡದಿರು ಮಹಾದೇವಿ; ಈ ಸಮಸ್ತ ನಾಡು, ನಾಡಿನ ಅರಸ ನಿನ್ನವನಾದಾಗ ಇದೆಲ್ಲವೂ ನಿನಗೇ ಅರ್ಪಿತ.'

'ನಿಮ್ಮ ಔದಾರ್ಯಕ್ಕಾಗಿ ನಿಜಕ್ಕೂ ಚಿರಋಣಿ. ಆದರೆ ಇದೆಲ್ಲವನ್ನೂ ನೀವೆಂತು ಅರ್ಪಿಸಬಲ್ಲಿರಿ? ಎಲ್ಲವನ್ನೂ ಕೊಟ್ಟವನು ದೇವರು, ಪಡೆದವರು ಪ್ರಜೆಗಳು; ರಕ್ಷಿಸುವವರಷ್ಟೇ ನೀವು. ಇದು ತಾತ್ಕಾಲಿಕ ಒಡೆತನ....' ಹಸನ್ಮುಖಿಯಾಗಿ ನುಡಿದಳು.

'ನಿನ್ನನ್ನು ಮಾತಿನಲ್ಲಿ ಸೋಲಿಸುವ ಧೈರ್ಯ ನನಗಿಲ್ಲ ದೇವಿ.'

'ಈ ಲೋಕದಲ್ಲಿ ದುಡಿಯದೇ ಸುಖಿಸುವ ಹಕ್ಕು ಯಾರಿಗೂ ಇಲ್ಲ. ಏಕೆಂದರೆ, ದುಡಿದು ಪಡೆದುದು ಅಮೃತ, ದುಡಿಯದೇ ಪಡೆದುದು ಹಾಲಾಹಲ ಅಲ್ಲವೇ ಮಹಾಪ್ರಭು?'

'ಮಹಾದೇವಿ ನಿನ್ನಲ್ಲಿ ನನ್ನದೊಂದು ಬಿನ್ನಹ. ಏಕಾಂತದಲ್ಲಿರುವಾಗಲೂ ಮಹಾರಾಜಾ, ಮಹಾಪ್ರಭು ಎಂದೇಕೆ ಕರೆಯುವೆ? ದಯಮಾಡಿ ನೀನು ಈ ಸಂಬೋಧನೆ ಮಾಡಬೇಡ ದೇವಿ; ಆತ್ಮೀಯತೆಯಲ್ಲಿ ಈ ಗೌರವ ಸಂಬೋಧನೆ ಉಳಿಯದು. ವಧೂವರರ ಮಧ್ಯೆ ಹಿಡಿಯುವ ಅಂತಃಪಟದಂತೆ ಈ ಸಂಬೋಧನೆಗಳು ಅಪ್ರಿಯವಾದವು. 'ಪ್ರಿಯಾ' ಎನ್ನುವ ದನಿಯನ್ನು ಕೇಳಿಸಬಾರದೆ?' ದೀನನಾಗಿ ನುಡಿದ.

'ಕ್ಷಮಿಸಿ ಮಹಾಪ್ರಭು....ಈ ನಾಲಿಗೆ ಆ ನುಡಿಯನ್ನು ಕೇವಲ ಶಿವನಿಗಾಗಿ ಮೀಸಲಿಟ್ಟಿದೆ. ಈ ಜನ್ಮದಲ್ಲಿ ಅದು ಎಂದೂ ಬೇರೊಬ್ಬರಿಗೆ ನುಡಿಯಲಾರದು. ತಾವು ಆ ಆಸನದ ಮೇಲೆ ಕುಳಿತುಕೊಳ್ಳಿ; ನಾನು ಈ ಕಾರಂಜಿಯ ಕಟ್ಟೆಯ ಮೇಲೆ ಕೂಡುವೆನು....' ಮಹಾದೇವಿ ಮುಂದೆ ನಡೆದಳು.

'ಮಹಾದೇವಿ, ಚಕೋರ ಚಂದ್ರನ ಬರವಿಗಾಗಿ ಕಾಯ್ದಂತೆ, ಅಂಬುಜೆ ಭಾನುವಿಗಾಗಿ ಕಾಯ್ದಂತೆ, ಪುಷ್ಪ ದುಂಬಿಯ ಅಪ್ಪುಗೆಗಾಗಿ ಕಾಯ್ದಂತೆ, ನಿನಗಾಗಿ ಕಾಯುತ್ತಲಿದೆ

ನನ್ನಂತಹವನನ್ನು ಕಂಡು ಸಹ ನಿನ್ನ ಮನಸ್ಸು ವಿಚಲಿತವಾಗದೆ? ನೀನು ಹೆಣ್ಣಲ್ಲವೇ; ಹೆಣ್ಣಿನ ಕಾಮನೆಗಳಿಲ್ಲವೆ? ಅಥವಾ ಹೃದಯವೇ ಇಲ್ಲವೋ....?'

'ನಿಜ ಪ್ರಭು....ನಾನು ಹೆಣ್ಣು, ಆದರೆ ನನ್ನಲ್ಲಿ ಹೆಣ್ತನವಿಲ್ಲ! ಹೃದಯ ಇದೆ, ಆದರೆ ಅದರಲ್ಲಿ ಭಕ್ತಿರಸವನ್ನು ಉಳಿದು ಬೇರಾವುದಕ್ಕೂ ಎಡೆಯಿಲ್ಲ. ಆ ಚನ್ನಮಲ್ಲಿಕಾರ್ಜುನ ನನ್ನ ಸರ್ವಸ್ವವನ್ನು ಸೂರೆ ಮಾಡಿದ್ದಾನೆ. ಮತ್ತಾರಿಗೆ ಕೊಡಲಿಕ್ಕೂ ನನ್ನದೆಂಬುದು ಏನೂ ಉಳಿದಿಲ್ಲ. ಅವನ ಆಸ್ತಿಯನ್ನು ಬೇರೆಯವರಿಗೆ ಸಲ್ಲಿಸಿದರೆ ನನಗೆ ಜನ್ಮಾಂತರ ತಪ್ಪದು, ಪಾಪವು ಕಟ್ಟಿಟ್ಟದ್ದು.'

'ಓಹ್....ಪಾಪ-ಪುಣ್ಯ, ಪುನರ್ಜನ್ಮ, ಜನ್ಮಾಂತರ ಎಲ್ಲ ಸುಳ್ಳು ಮಹಾದೇವಿ; ಬಾಳಿನ ಸುಖವನ್ನು ಅನುಭವಿಸಲಾರದ ಹೇಡಿಗಳಿಗೆ ಇವೆಲ್ಲ ಸರಿ. ಯೌವ್ವನ ಇರುವಾಗ ಸಾಧ್ಯವಿದ್ದಷ್ಟೂ ಸುಖವನ್ನು ಹೀರಬೇಕು....'

'ಆಮೇಲೆ....'

'ಆಮೇಲೇನು ಆಯುಷ್ಯ ತೀರಿದಾಗ ಸಾಯಬೇಕು! ಒಂದು ಪಕ್ಷಿ ಹಾರುತ್ತಿದೆ. ಎಲ್ಲಿಂದ ಬಂದು ಗೊತ್ತಿಲ್ಲ, ಎಲ್ಲಿಗೆ ಹೋಗುವುದು ಗೊತ್ತಿಲ್ಲ. ಹಾಗೆಯೇ ಈ ಬದುಕು! ಜೀವಪಕ್ಷಿಯ ಆದಿ ಗೊತ್ತಿಲ್ಲ, ಅಂತ್ಯವೂ ಗೊತ್ತಿಲ್ಲ; ಮಧ್ಯಂತರದ ಬದುಕಷ್ಟೇ ಗೊತ್ತು. ಕಾಣುವ ಸುಖ ಬಿಟ್ಟು ಕಾಣದ ಸುಖಕ್ಕೆ ಕೈಚಾಚುವುದು ಮೂರ್ಖತನವಲ್ಲವೆ?....' ಕೌಶಿಕನು ಹೇಳಿದ.

'ಹಾಗಲ್ಲ....ಪ್ರತಿಯೊಂದು ಕಾರ್ಯಕ್ಕೊಂದು ಕಾರಣ, ಕಾರಣಕ್ಕೊಂದು ಪರಿಣಾಮ ಇರುವಂತೆ, ಈಗಿನ ಬದುಕಿಗೊಂದು ಕಾರಣ, ಈ ಬದುಕಿಗೊಂದು ಪರಿಣಾಮ ಇದ್ದಿರಲೇಬೇಕು. ಮಾನವನು ಬಿತ್ತಿದ ಬೆಳೆಯನ್ನು ಉಣ್ಣುವಂತೆ ತನ್ನ ಕರ್ಮ ಫಲವನ್ನು ಉಣ್ಣುವನು. ಮಂಜುಗಡ್ಡೆ, ನೀರು, ನೀರಿನ ಆವಿ ಒಂದೇ ವಸ್ತುವಿನ ತೋರಿಕೆಯ ರೂಪಗಳಾದರೂ ಮೂಲಧಾತು ಒಂದಿರುವದು. ಅದೇ ರೀತಿ ಮಾನವನ ಮೂಲಧಾತು ಆತ್ಮ. ಸಮುದ್ರದ ತೆರೆಗಳಂತೆ ಈ ಜನ್ಮಾಂತರಗಳಾದರೆ, ಮೂಲಸಮುದ್ರದಂತೆ ಪ್ರತ್ಯಗಾತ್ಮ. ಕೇಡನ್ನು ಮಾಡಿ ಪಾಪವನ್ನು, ಒಳ್ಳಿತನ್ನು ಮಾಡಿ ಪುಣ್ಯವನ್ನು ಪಡೆಯುತ್ತೇವೆ. ಇದರಲ್ಲಿ ಯಾವ ಸಂಶಯವಿಲ್ಲ.

ಮಹಾರಾಜ....ಪರಮಾತ್ಮನು ಶರೀರವೆಂಬ ಸಾಧನವೊಂದನ್ನು ದಯಪಾಲಿಸಿರುವನು. ಇದನ್ನು ವರವನ್ನಾಗಿ ಅಥವಾ ಶಾಪವನ್ನಾಗಿ ಮಾಡಿಕೊಳ್ಳುವ ಸಾಮರ್ಥ್ಯ ನಮ್ಮ ಕೈಲಿದೆ. ಆದ್ದರಿಂದ ಈ ಬದುಕನ್ನು ಜಗದ ಲೇಸಿಗಾಗಿ...

ಸ್ಥೂಲ-ಸೂಕ್ಷ್ಮ-ಕಾರಣ, ಮೂರೂ ಶರೀರಗಳ ಶುದ್ಧಿ ಬಹು ಮುಖ್ಯ. ಕರಿಕೆಯನ್ನು ನೋಡಿರಿ. ಅದಕ್ಕೆ ಮೂರು ಭಾಗಗಳುಂಟು, ಒಂದು—ಸ್ಪಷ್ಟವಾಗಿ ಕಾಣುವ ಹಸಿರು ಹುಲ್ಲು, ಎರಡು—ಹುಲ್ಲಿನ ಕಡ್ಡಿ, ಮೂರು—ಭೂಮಿಯ ಆಳದಲ್ಲಿರುವ ಬೇರು. ಒಕ್ಕಲಿಗರು ಹೊಲವನ್ನು ಉಳುವಾಗ ಕೇವಲ ನೇಗಿಲು ಹೊಡೆದರೆ ಪೂರ್ಣವಾಗಿ ಹೊಲ ಸ್ವಚ್ಛವಾಗದು. ಬೇಸಿಗೆಯ ಬಿಸಿಲಿಗೆ ಹುಲ್ಲು ಒಣಗುವುದು; ನೇಗಿಲಿಗೆ ಹುಲ್ಲಿನ ಕಡ್ಡಿ ಕಿತ್ತುಹೋಗುವುದು; ಆದರೆ ಬೇರು ಮಾತ್ರ ಭೂಮಿಯಲ್ಲಿ ಉಳಿಯುವುದು. ಮುಂದೆ ಮಳೆಯಾದಾಗ ಕರಿಕೆಯು ಹಸಿರೊಡೆದು ಹೊಲದ ಬೆಳೆಯನ್ನು ನಾಶಪಡಿಸುವುದು. ಇದೇ ರೀತಿ ಸ್ಥೂಲ ಶರೀರದಲ್ಲಿ ವೃತ್ತಿಗಳು, ಸೂಕ್ಷ್ಮಶರೀರದಲ್ಲಿ ಸಂಸ್ಕಾರಗಳು, ಕಾರಣಶರೀರದಲ್ಲಿ ವಾಸನೆಗಳು ಇರುವವು. ಈ ಮೂರನ್ನು ನಾಶಪಡಿಸಿದಲ್ಲದೆ ಭವಾಂತರಗಳ ಕೋಟಲೆ ತಪ್ಪದು.

ಆದ್ದರಿಂದ ಈ ಬದುಕಿನ ಬುನಾದಿಯ ಮೇಲೆ ಮುಂದಿನ ಜನುಮದ ಭವನ ನಿರ್ಮಾಣವಾಗುವುದು ಎಂಬುದನ್ನು ಮನಗಾಣಬೇಕು ಮಹಾರಾಜ! ಅದನ್ನು ನಿರ್ಮಾಣ ಮಾಡುವ ಹೊಣೆ ನಮ್ಮದು. ತೆರಣಿಯ ಹುಳುವು ತನ್ನ ಬಾಯಿರಸದಿಂದ ನೂಲನ್ನು ನೇಯ್ದು, ಅದರೊಳಗೆ ಸಿಕ್ಕಿಬಿದ್ದು ಕೊಲ್ಲಲ್ಪಡುವಂತೆ, ಈ ಮಾನವನು ಆಸೆಗಳ ನೂಲನ್ನು ಸುತ್ತುತ್ತ ಹೋಗಿ ಹೊರಬರಲಾಗದಷ್ಟು ಗಾಢವಾಗಿ ಬಂಧಿತನಾಗುವನು.* ಆಗ ವಿಧಿಯು ಸಾವಿನ ರೂಪದಲ್ಲಿ ಬಿಡಿಸಲೆತ್ನಿಸುವುದು, ಮಹಾರಾಜಾ, ಇದನ್ನರಿತು ಆದರ್ಶ ಬದುಕನ್ನು ಬದುಕಲೆತ್ನಿಸಬಾರದೆ?'

'ನನ್ನ ಧರ್ಮವೂ ಈ ತತ್ತ್ವವನ್ನು ಒಪ್ಪುವುದು ದೇವಿ....ಆದರೆ ನನಗೆ ಅದರಲ್ಲಿ ವಿಶ್ವಾಸವಿಲ್ಲ....' ನಿರ್ಲಕ್ಷ್ಯತನದಿಂದ ಕೌಶಿಕ ಹೇಳಿದ.

'ನನಗೆ ಗೊತ್ತು; ಯಾವ ಧರ್ಮದ ಅನುಸಾರಿಯೇ ಇರಲಿ, ಜಾತಿಯಿಂದ ಮಾತ್ರ ಅನುಸರಿಸದೆ ತತ್ತ್ವವನ್ನರಿತು ನಿಜವಾದ ಆಧ್ಯಾತ್ಮಜೀವಿಯಾದರೆ ಅವನ ಬದುಕು ಸದ್ಗುಣದಿಂದ ಶೋಭಿಸುವುದು. ನೀವು ಜೈನರು ಎಂದು ಹೇಳಿಕೊಳ್ಳುವಿರಿ, ನಿಮ್ಮ ತಂದೆಯೂ ಜೈನ ಎಂಬ ಕಾರಣಕ್ಕೆ! ಆದರೆ ಜಿನತ್ವ ಜಾತಿಯಿಂದ ಬರದು: ಗುಣ ಸಾಧನೆಗಳಿಂದ ಬರುವುದು. ಸಂಯಮ, ಮನೋನಿಗ್ರಹ, ನಿರ್ವಿಕಾರತ್ವದ ಸಾಕಾರವಾದವನೇ ಜಿನ ಎಂದು ಹೇಳುವ ಶ್ರೇಷ್ಠ ಧರ್ಮವೆತ್ತ, ವಿಲಾಸ, ದುರ್ಬಲತೆ, ವಿಕಾರಗಳ ತವರಾದ ನೀವೆತ್ತ!'

---

* ಮು. ವ. ೩೨

‘ಈ ಆಧ್ಯಾತ್ಮಜೀವಿಗಳು ಒಂದು ಬಗೆಯ ನಿರಾಶಾವಾದಿಗಳು, ನಿರ್ವೀರ್ಯರು. ಕಣ್ಣೆದುರಿಗೆ ರಮಣೀಯವಾಗಿರುವ ಸುಖವನ್ನು ತ್ಯಜಿಸಿ, ಕಾಣದ ಸುಖಕ್ಕಾಗಿ ಕೈಚಾಚಿ ನಿಲ್ಲುವ ಮೂರ್ಖರು’ ಅಪಹಾಸ್ಯದ ಧ್ವನಿಯಲ್ಲಿ ನುಡಿದ.

‘ಮಹಾರಾಜ....ಅವರಷ್ಟು ಸುಖಿಗಳು ನೀವಲ್ಲ. ಎಲ್ಲವನ್ನೂ ತ್ಯಜಿಸಿದರೂ, ‘ತಮಗಿಂತಲೂ ಸಿರಿವಂತರು ಯಾರೂ ಇಲ್ಲ, ತ್ಯಾಗವೇ ದೊಡ್ಡ ಶ್ರೀಮಂತಿಕೆ’ ಎಂದು ತೃಪ್ತಿಯಿಂದಿರುವ ಅವರೆಲ್ಲಿ; ಸ್ತ್ರೀಲೋಲುಪತೆ, ಸುರಾಪಾನದಿಂದ ಉನ್ಮತ್ತರಾಗಿರುವ ನಿಮ್ಮಂತಹವರೆಲ್ಲಿ! ಜಗದಲ್ಲಿ ಎರಡು ಬಗೆಯ ಸುಖಗಳುಂಟು; ತುಪ್ಪವನ್ನು ಸವರಿಟ್ಟ ಅಲಗನ್ನು ನೆಕ್ಕುತ್ತ ತನ್ನ ರಕ್ತವನ್ನೇ ತಾನು ಕುಡಿಯುತ್ತ, ಬೇರೆಲ್ಲಿಂದಲೋ ಸುಖ ಬಂದಿದೆ ಎಂದು ಭ್ರಮಿಸುವ ನಾಯಿಯ ಸುಖ. ತನ್ನ ನಾಲಿಗೆಯನ್ನು, ಶರೀರವನ್ನು ಕೆಡಿಸಿಕೊಳ್ಳದೆ ಭಕ್ಷ್ಯಭೋಜ್ಯವನ್ನುಣ್ಣುವ ಸುಖ. ಹಾಗೆಯೇ ವಿಲಾಸಿ ತನ್ನ ಶಕ್ತಿಯನ್ನು ಹಾಳುಮಾಡಿಕೊಂಡು ಸುಖಿಸಿದರೆ, ವಿರಕ್ತ ತನ್ನ ಶಕ್ತಿಯನ್ನು ಉದಾತ್ತೀಕರಿಸಿ ಆತ್ಮಶಕ್ತಿಯನ್ನಾಗಿಸಿಕೊಂಡು ಆನಂದಿಸುವನು. ಅದಕ್ಕೂ ಇದಕ್ಕೂ ಎತ್ತಣ ಸಂಬಂಧ?’

‘ಒಣಕಲು ಕಜ್ಜಾಯವನ್ನು* ಕಡಿಯುತ್ತ ಬಡತನದಲ್ಲಿ ಬದುಕಿ, ನೆಲದ ಮೇಲೇ ಮಲಗಿ ರೂಢಿಯಾದವನಿಗೆ ಹೋಳಿಗೆಯೂಟ, ಸುಪ್ಪತ್ತಿಗೆಯ ಸ್ಪರ್ಶ ಸವಿಯಾಗದಂತೆ, ನೀರಸವಾದ ನಿಷ್ಪ್ರಯೋಜಕ ಆಧ್ಯಾತ್ಮಬೋಧೆ ಕೇಳಿಕೇಳಿ ರಮಣೀಯವಾದ ನಿಜಸುಖವೇ ನಿನಗೆ ಸಹ್ಯವಾಗದಷ್ಟು ಒಣ ಆದರ್ಶಗಳು ತಲೆಯಲ್ಲಿ ತಳವೂರಿವೆ. ಇದನ್ನು ಕಂಡು ನನಗೆ ಬಹಳ ಮರುಕವೆನಿಸುತ್ತಿದೆ ಮಹಾದೇವಿ.’ ಕೌಶಿಕನು ಹೇಳಿದ.

‘ನಿಮ್ಮನ್ನು ಕಂಡು ನನಗೂ ಹಾಗೆ ಅನ್ನಿಸುತ್ತೆ ಮಹಾರಾಜ! ಬಹಳಷ್ಟು ಕಾಲ ಶಿವದಾನವನ್ನು† ಇರಿಸಿದ್ದ ಮಡಿಕೆಯಲ್ಲಿ ಹಾಲನ್ನು ಹಾಕಿದರೆ ಅದು ಒಡೆಯುವಂತೆ, ಕೇವಲ ಭೋಗಪ್ರಪಂಚದ ಕೂಸುಗಳಾಗಿ ಬೆಳೆದವರ ಹೃದಯದಲ್ಲಿ ಆಧ್ಯಾತ್ಮಬೋಧೆಯ ಕ್ಷೀರವು ಪವಿತ್ರವಾಗಿ ಉಳಿಯದ ಕಾರಣ, ತಮಗೆ ಬೋಧೆ ಮಾಡುವುದು ನನ್ನದೇ ತಪ್ಪೇನೋ ಅನ್ನಿಸುತ್ತದೆ’. ಮಹಾದೇವಿ ರಾಜನಿಗೆ ಹೇಳಿ ತನ್ನಲ್ಲಿ ಅಂದುಕೊಂಡಳು :

---

* ಕಜ್ಜಾಯ—ಇದು ರೊಟ್ಟಿಯ ಅಚ್ಚ ಕನ್ನಡ ರೂಪ. ಇಂದಿಗೂ ಉತ್ತರ

‘ಇಲಿಯನ್ನು ತಿಂದು ರುಚಿಗಂಡ ಬೆಕ್ಕಿಗೆ ಹಾಲು ಸವಿಯಾಗದಂತೆ ವಿಷಯಾಸಕ್ತನಿವನಿಗೆ ಸಂಯಮ-ವೈರಾಗ್ಯಗಳ ಸಿಹಿ ಪ್ರಿಯವೆನಿಸುವುದು ಕಷ್ಟಕರ.

ಮಹಾಪ್ರಭು, ಅರ್ಚನೆಯ ಕಾಲ ಸನಿಹಕ್ಕೆ ಸಾರಿದೆ. ನಾನಿನ್ನು ನಿರ್ಗಮಿಸುವೆ; ಅಪ್ಪಣೆ ನೀಡಿರಿ’ ಎಂದು ಮಹಾದೇವಿ ಉತ್ತರಕ್ಕೂ ಕಾಯದೆ ಅರಮನೆಯತ್ತ ನಡೆದಾಗ ಕೌಶಿಕ ತನ್ನ ನಿರಂತರ ಅಪಜಯಕ್ಕಾಗಿ ಹತಚೇತನನಾಗುತ್ತ, ಭಾರವಾದ ಕಾಲುಗಳನ್ನೆಳೆದುಕೊಂಡು ಏಕಾಂತಭವನಕ್ಕೆ ನಡೆದನು.

೩೦. ಮದನನರಮನೆಯಲ್ಲಿ ಆಧ್ಯಾತ್ಮ ಬೋಧೆ

ಮಹಾದೇವಿ ಮಧ್ಯಾಹ್ನದ ಅರ್ಚನೆ ಮುಗಿಸಿ, ಹಣ್ಣು-ಹಾಲನ್ನು ಸ್ವೀಕರಿಸಿ ಬಿಸಿಲ ದಗೆಯನ್ನು ಸಾಂತ್ವನಿಸಲು ನಡುಮನೆಗೆ ಬಂದಳು. ಅದೊಂದು ವಿಶಾಲವಾದ ಪ್ರಾಂಗಣ. ಎದುರಿಗೆ ಪೀಠಗಳು, ನಟ್ಟನಡುವೆ ಚಕ್ರಾಕಾರದ ನೃತ್ಯವೇದಿಕೆ. ಅಲ್ಲಲ್ಲಿ ಸುಂದರ ಕಲಾಕೃತಿಗಳ ಕಂಭಗಳು. ಮೇಲ್ಛಾವಣಿಯ ತಳಭಾಗವೆಲ್ಲ ಸುಂದರ ತೈಲಚಿತ್ರಗಳಿಂದ ಕೂಡಿತ್ತು. ವಿಶಾಲವಾದ ಕಿಟಕಿಗಳು ಯಥೇಚ್ಛವಾಗಿ ತಂಗಾಳಿಗೆ ದಾರಿ ಮಾಡಿಕೊಡುತ್ತಿದ್ದವು. ಮಹಾದೇವಿ ಕಾಲಿಟ್ಟಾಗ ಶೃಂಗಾರಿಕೆಯರು ಊಟವನ್ನು ಮುಗಿಸಿ ತಾಂಬೂಲವನ್ನು ಮೆಲ್ಲುತ್ತ, ಕುಣಿಯುತ್ತ, ಹಾಡುತ್ತ ಸಂತೆಯ ವಾತಾವರಣವನ್ನು ಸೃಷ್ಟಿಸಿದ್ದರು. ಅವಳು ಬರುತ್ತಿದ್ದಂತೆಯೇ ಗಾಬರಿಗೊಂಡು ಬೆಕ್ಕನ್ನು ಕಂಡ ಇಲಿಗಳಂತೆ ಅಡಗಿದರು. ಕೌಶಿಕ ಮಹಾರಾಜನನ್ನು ಕಂಡರೂ ಅಷ್ಟು ಹೆದರುತ್ತಿರಲಿಲ್ಲವವರು.

ಮಹಾದೇವಿಯು ಪ್ರಸಾದ ಸ್ವೀಕರಿಸಿ ಮಧ್ಯಾಹ್ನದ ನಿದ್ರೆಗೆ ಹೋಗಬಹುದೆಂದು ನಿರೀಕ್ಷಿಸಿದ್ದ ಅವರು ಅವಳು ಅನಿರೀಕ್ಷಿತವಾಗಿ ಬಂದು ಆಸನದ ಮೇಲೆ ಕುಳಿತಾಗ ದಿಗಿಲುಗೊಂಡರು. ಮದನರತಿ ಧೈರ್ಯವಹಿಸಿ ಕೇಳಿದಳು :

'ಸುಡುಬಿಸಿಲಿನಲ್ಲಿ ಕೆಲಸಮಾಡಿ ತಾವು ದಣಿದಿರಬೇಕು. ವಿಶ್ರಾಂತಿಯನ್ನು ಹೊಂದಬಾರದೇ ಒಡತಿ....?'

'ಹಸಿವು, ತೃಷೆ, ನಿದ್ರೆ, ವಿಷಯ, ಮೈಥುನ, ಬಯಕೆ ಇವು ಶರೀರದ-ಮನದ ವಿಕಾರಗಳು ಮದನಾ....ಅವಕಾಶ ಕೊಟ್ಟಷ್ಟೂ ಆಳಲು ಬರುತ್ತವೆ.... ಇವನ್ನು ನಿಗ್ರಹಿಸಬೇಕಾದುದೇ ಜಾಣತನ....'

'ಅವ್ವಾ, ತಾವು ಇರುಳು ಸಹ ಕಣ್ತುಂಬ ನಿದ್ರಿಸಿಲ್ಲ. ಹಗಲಿನಲ್ಲಾದರೂ ವಿಶ್ರಾಂತಿ ಹೊಂದಬಾರದೆ?' ಶಿವಕಾಮಿನಿ ಹೇಳಿದಳು.

'ಹಗಲಿನ ನಾಲ್ಕು ಜಾವ, ಇರುಳಿನ ನಾಲ್ಕು ಜಾವ ದೇವನ ನೆನಪು ಕಾಡುತ್ತಿರುತ್ತದೆ. ಸದಾ ಅವನ ಹಂಬಲವೇ ಹಂಬಲ; ಹೀಗಾಗಿ ಆ ಚನ್ನಮಲ್ಲಿಕಾರ್ಜುನನ ಒಲುಮೆ ನಟ್ಟು, ಹಸಿವು, ತೃಷೆ, ನಿದ್ರೆಯನ್ನು ಮರೆತಿರುವೆ ಶಿವಕಾಮಿನಿ....'

'ಒಡತಿ, ತಾವು ಕೇಳಲಿಚ್ಛಿಸಿದರೆ ಹಾಡಬಹುದೆ....?' ಮದನರತಿ ಮೆಲ್ಲನೆ

ಮನಸ್ಸನ್ನು ರಾಜನತ್ತ ಹರಿಸಲು ಸುಸಂದರ್ಭಕ್ಕಾಗಿ ಅವಳು ಕಾಯುತ್ತ ಇದ್ದಳು.

'ಅವಶ್ಯವಾಗಿ ಹಾಡು ಮದನೆ....' ಮಧುರ ಕಂಠದ ಮದನರತಿ, ಶೃಂಗಾರಿಕೆಯರು ಬಾರಿಸತೊಡಗಿದ ವಾದ್ಯಗಳ ಶ್ರುತಿಗೆ ದನಿಯನ್ನು ಹೊಂದಿಸಿ ಕೊಂಡು ಹಾಡತೊಡಗಿದಳು. ಕೌಶಿಕ ವಸಂತಕನೊಡನೆ ಅದೇ ಆಗ ಬಂದಿದ್ದ. ಪ್ರಣಯಗೀತೆಗಳನ್ನು ಹಾಡುವ ಮದನರತಿಯ ಯೋಜನೆಗೆ ಭಂಗ ತರದೇ ಅವರಿಬ್ಬರೂ ಹೊರಾಂಗಣದ ಕೋಣೆಯಲ್ಲಿ ಕುಳಿತರು. ಅವರಿಬ್ಬರೂ ಇಲ್ಲಿಗೆ ಬಂದಿದ್ದು ಕಾರ್ಯಾರ್ಥವಾಗಿ. ಉದ್ಯಾನದಲ್ಲಿ ಮಹಾದೇವಿಯನ್ನು ಸಂಧಿಸಿ ನಿರಾಶನಾದ ಕೌಶಿಕನು ಏಕಾಂತ ಭವನಕ್ಕೆ ಹೋಗುತ್ತಲೇ, ವಸಂತಕನಿಗೆ ಅವಸರದ ಕರೆಯನ್ನು ಕಳುಹಿಸಿದ್ದ. ಅವನು ಬರುತ್ತಲೇ ಕೌಶಿಕನು ಆವೇಶ ದಿಂದ ನುಡಿದ: 'ಪ್ರಮಾದವಾಗುತ್ತಿದೆ ವಸಂತಕ, ಪ್ರಳಯ ಭಯಂಕರ ಪ್ರಮಾದ' ಗಾಬರಿಗೊಂಡ ವಸಂತಕ ಪ್ರಶ್ನಾರ್ಥಕ ಮುಖಭಾವವನ್ನು ವ್ಯಕ್ತಪಡಿಸಿದ.

'ಇದೇನಯ್ಯಾ ಅನಾಹುತ! ಅವಳು....ಆ ಮಹಾದೇವಿ, ತಾನು ಇಲ್ಲಿಯ ವಾತಾವರಣಕ್ಕೆ ಹೊಂದುವಂಥ ಬದಲಾಗದೆ, ವಿಲಾಸಿನಿಯರನ್ನು ತನ್ನಂತೆಯೇ ಪರಿವರ್ತಿಸತೊಡಗಿರುವಳು.'

'ಆಹುದೇ....ಮಹಾಪ್ರಮಾದ!' ವ್ಯಂಗ್ಯನಗೆ ನಕ್ಕು ವಸಂತಕನೆಂದ.

'ಇದು ಹುಡುಗಾಟದ ಮಾತಲ್ಲವಯ್ಯಾ ಮಿತ್ರಾ; ಗಂಭೀರವಾಗಿ ಆಲೋಚಿಸಬೇಕಾದುದು. ಆ ವಿರಕ್ತಳು ತಾನೂ ಬಿಸಿಲಲ್ಲಿ ಕುರ್ಚಿಗೆ ಹಿಡಿದು ಕೆಲಸ ಮಾಡಿ, ಶೃಂಗಾರಿಕೆಯರಿಂದಲೂ ಕಾಯಕಮಾಡಿಸಿರುವಳು. ಅವಳ ಮಾತಿನ ಪರಿಣಾಮ ಎಷ್ಟಾಗಿದೆಯೆಂದರೆ ನಾನತ್ತ ಹೋಗುತ್ತಲೇ ಶೃಂಗಾರಿಕೆ ಯರು ಒಕ್ಕೊರಲಿನಿಂದ 'ಮಹಾಪ್ರಭು, ಅರಮನೆಯ ಸುತ್ತಲಿನ ಪುಷ್ಪೋ ದ್ಯಾನದ ಭಾಗವನ್ನು ನಾವೇ ಸಂರಕ್ಷಿಸುವೆವು. ಇನ್ನು ಮೇಲೆ ಈ ಭಾಗಕ್ಕಿರುವ ತೋಟಿಗನನ್ನು ವರ್ಗಾಯಿಸಿರಿ' ಎನ್ನಬೇಕೆ?'

'ಸಂತಸದ ಸಂಗತಿಯೇ ಆಯಿತಲ್ಲ ಪ್ರಭು. ತೋಟಿಗರ ಸಂಬಳ ಉಳಿ ಯಿತು; ಶೃಂಗಾರಿಕೆಯರು ಉಂಡಿದ್ದೂ ಅರಗುವುದು' ವಸಂತಕ ನಕ್ಕು ಹೇಳಿದ.

'ಮೂರ್ಖ, ಶತಮೂರ್ಖ, ಸಾವಿರಮೂರ್ಖ! ಆ ಕುಸುಮ ಕೋಮ ಲಾಂಗ ಸುಂದರಿಯರ ಮೈಯ್ಯಿ ದುಡಿದರೆ ದಣಿಯದೆ? ಬಿಸಿಲಿನ ಝಳದಲ್ಲಿ ಬಾಡದೆ? ಏನೂ ಬೇಡ ಅವರು ಅಲಂಕರಿಸಿಕೊಂಡು ಬಿಂಕದಿಂದ ಅರಮನೆ ಯಲ್ಲಿ ಓಡಾಡಿದರೂ ಸಾಕು, ಅದು ಶೋಭಾಯಮಾನ."

‘ಒಳ್ಳೆತು; ದುಡಿಯಬೇಡಿ ಎಂದು ಆಜ್ಞಾಪಿಸಿರಿ.’

‘ಅದತ್ತ ಹೋಗಲಯ್ಯ; ಆ ವಿರಕ್ತೆ ‘ಸುರಾಪಾನ ಮಾಡಬೇಡ’ ಎಂದು ಬೋಧೆ ಮಾಡಿ ಆ ವಿಲಾಸಿನಿಯ ಬುದ್ಧಿ ಕೆಡಿಸಿರುವಳಂತೆ. ವಿಲಾಸಿನಿ ಎಂಬ ರಮಣೀಯ ಹೆಸರು ತೊಡೆದು ಶಿವಕಾಮಿನಿ ಎಂಬ ಅರಸಿಕ ಹೆಸರನ್ನು ಇಟ್ಟಿರುವಳಂತೆ. ಹೀಗಾದರೆ ಆಯಿತು ನಮ್ಮ ಗತಿ....ಅವಳ ನೆರಳು ಉಳಿದವರ ಮೇಲೆ ಬಿದ್ದು ವಿಲಾಸದ ಅರಮನೆ ಹೋಗಿ ವಿರಕ್ತಿಯ ಗುರುಮನೆಯಾಗಿಬಿಟ್ಟೀತು ಇದು....’

‘ನಿಮ್ಮ ಬಾಯಹರಕೆಯಿಂದ ಆದರೆ ಬಂಗಾರವೇ ಆದೀತಲ್ಲ’ ವಸಂತಕ ಗಟ್ಟಿಯಾಗಿ ನಕ್ಕ.

‘ಸಾಕಪ್ಪಾ ಸಾಕು; ಆ ನೀರಸ ಬದುಕು ಜನ್ಮಜನ್ಮಾಂತರಕ್ಕೂ ಬೇಡ. ಮಿತ್ರಾ, ಹುಡುಗಾಟಿಕೆ ಮಾಡದೆ ಗಂಭೀರವಾಗಿ ನನ್ನ ಸಂಕಷ್ಟವನ್ನು ಕೇಳು. ಅವಳನ್ನು ಮನೆಯಿಂದ ಕರೆತರುವುದರಲ್ಲಿ ಯಶಸ್ವಿಯಾದರೂ ಮನ ಒಲಿಸುವುದರಲ್ಲಿ ಸೋತಿರುವೆ. ಅಬ್ಬಾ! ಅದೆಂತಹ ಹೆಣ್ಣು ಆಕೆ; ಯಾವುದರಿಂದಲೂ ವಿಚಲಿತಳಾಗಳು. ಈ ಏರುಂಜವ್ವನದ ವಯದಲ್ಲಿ ಹೆಣ್ಣಿನ ಮನಸ್ಸು ಬೆಣ್ಣೆಯಂತಿರುವುದು; ಪುರುಷಸಾಮೀಪ್ಯದ ಝಳ ಬಡಿದರೂ ಸಾಕು, ಸಂಯಮವು ಕರಗಿ ನೀರಾಗುವುದು. ಆದರೆ ಈಕೆ ಯಾವ ವಿಕಾರಗಳಿಗೂ ಒಳಗಾಗಳು, ಶಿಲಾಪ್ರತಿಮೆಯಷ್ಟು ನಿಶ್ಚಲಳು....’ ಬೆರಗಾಗಿ ಹೇಳಿದ ಕೌಶಿಕ.

‘ಇಂತಹವರನ್ನು ಸುಮ್ಮನೆ ಬಿಟ್ಟುಕೊಡುವುದು ಲೇಸಲ್ಲವೆ ಪ್ರಭು....?’ ವಸಂತಕ ಹಾಸ್ಯದ ದನಿಯಲ್ಲಿ ಕೇಳಿದ.

‘ಅದು ಮಾತ್ರ ಅಸಾಧ್ಯ. ಹಾಗೆ ಬಿಟ್ಟುಕೊಟ್ಟರೆ ರಾಜನಾದ ನಾನು ಸೋತಂತಾಗದೆ? ಇವಳು ಒಳ್ಳೇ ಬಿಸಿತುಪ್ಪದಂತೆ! ಬಿಟ್ಟುಕೊಡಲು ಮನಸ್ಸಿಲ್ಲ, ನುಂಗಲು ಧೈರ್ಯವಿಲ್ಲ....’ ನೋವಿನಿಂದ ಕೌಶಿಕ ನುಡಿದ.

‘ನೋಡೋಣ....ಇನ್ನೂ ಪ್ರಯತ್ನಿಸುವೆ....’ ಧೈರ್ಯವನ್ನು ಒಟ್ಟುಗೂಡಿಸಿಕೊಂಡು ಹೇಳಿದ.

‘ನಿಮ್ಮ ಪರವಾಗಿ ನಾನೂ ಪ್ರಯತ್ನಿಸುವೆ....’ ವಸಂತಕ ಭರವಸೆ ನೀಡಿದ. ಈ ಉದ್ದೇಶದಿಂದಲೇ ಅವರಿಬ್ಬರೂ ಪ್ರಶಾಂತ ಭವನದತ್ತ ಧಾವಿಸಿದ್ದರು.

ಕೌಶಿಕನಿಗೆ ಕಿಟಕಿಯ ಮೂಲಕ ಮಹಾದೇವಿ ಕುಳಿತಿದ್ದುದು, ಅವಳ ಚಲನವಲನೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ತನ್ಮಯಳಾಗಿ ಗಾನವನ್ನು ಆಲಿಸುತ್ತಿದ್ದ ಆಕೆಯ ಭಾವಮುದ್ರೆಯನ್ನು ಕಂಡು ಕೌಶಿಕ ಹುಚ್ಚನಂತಾದ!

‘ವಸಂತಕಾ....ಎಷ್ಟು ಮಾಟವಾದ ಮೈಕಟ್ಟು, ಉನ್ನತ ವಕ್ಷಸ್ಥಳ.....

ಅದೋ ನೋಡು, ಕಣ್ಮುಚ್ಚಿ ಭಾವಭರಿತಳಾಗಿ ಪ್ರೇಮಗೀತೆಗಳನ್ನು ಕೇಳು ತ್ತಿರುವಳು. ಬಹುಶಃ ಮದನರತಿಯ ಯೋಜನೆ ಫಲಿಸುತ್ತಿದೆ. ಬಹಿರಂಗದ ಪ್ರಜ್ಞೆ ಇಲ್ಲದೆ ಕಣ್ಮುಚ್ಚಿರುವ ದೇವಿಯ ಸೆರಗು ತೂರಿಬರುವ ತಂಗಾಳಿಯ ಕೈಗೆ ಸಿಕ್ಕು ತಲೆಯ ಮೇಲಿಂದ ಜಾರಿದೆ. ಮುಂಗುರುಳು ಹೇಗೆ ಹಾರುತ್ತಿವೆ ಯಲ್ಲವೆ....? ತಲೆಕೂದಲನ್ನು ಸಹ ಬಾಚಿಕೊಂಡಿಲ್ಲ. ಈಕೆಗೆ ತನ್ನ ಸೌಂದರ್ಯ ಪ್ರಜ್ಞೆಯೂ ಇಲ್ಲ, ರಕ್ಷಿಸಬೇಕೆಂಬ ಕಳಕಳಿಯೇ ಇಲ್ಲ. ಸಾಮಾನ್ಯ ಶೃಂಗಾರಿಕೆ ಯರು ಸಹ ದಿನಕ್ಕೆಷ್ಟು ಬಾರಿ ಹಿಕ್ಕಿಕೊಳ್ಳುವರೋ! ಒಂದು ದೃಷ್ಟಿಯಿಂದ ಇದೂ ಒಳ್ಳೆಯದೇ ಬಿಡು....ಬಾಚಿಕೊಂಡಿಲ್ಲವಾಗಿ ಮುಂಗುರುಳುಗಳು ಮನ ಬಂದಂತೆ ಹಾರಾಡುತ್ತಿವೆ. ತನ್ನ ಸೌಂದರ್ಯವನ್ನು ಮರೆಮಾಚಲು ಆಕೆ ಬಾಚಿಕೊಂಡಿಲ್ಲವಾದರೂ ಅದು ಇನ್ನೂ ಅಂದವನ್ನು ವರ್ಧಿಸಿದೆ. ಆಹಾ! ಆ ಗುಂಗುರು ಗುಂಗುರಾದ ಮುಂಗುರುಳು ಹಣೆಯಮೇಲೆ ಎಷ್ಟೊಂದು ಚೆನ್ನಾಗಿ ಹಾರುತ್ತಿವೆ. ಆ ಜಡೆ ನೋಡು; ಎಷ್ಟು ದಪ್ಪವಾಗಿ, ನೀಳವಾಗಿ ಎದೆಯ ಮೇಲಿನಿಂದ ಇಳಿದು ನೆಲವನ್ನು ಮುಟ್ಟುತ್ತಿದೆ. ಭಾವೋನ್ಮಾದತೆಯಿಂದ ಆಕೆಯ ಎದೆ ಹೇಗೆ ಏರಿ ಇಳಿಯುತ್ತಿದೆ ಕಾಣೆಯಾ....?

ಸೆರಗಿನ ಒಳಗೆ ಬಿಳಿಯ ಬಟ್ಟೆಯಲ್ಲಿ ಕಟ್ಟಿದ ಆ ದೇವರು ಅದು ಹೇಗೆ ಕುಳಿತಿರುವನು ನೋಡು. ಅವನು ನನ್ನ ಪ್ರತಿಸ್ಪರ್ಧಿ....ನನ್ನ ಬದಲು ತಾನು ಸ್ಥಾನವನ್ನು ಆಕ್ರಮಿಸಿಕೊಂಡಿರುವನು! ಗಾಯನದ ಏಕತಾನತೆಗೆ ಸರಿಯಾಗಿ ಹೇಗೆ ತನ್ನ ಪಾದಗಳನ್ನು ಕುಣಿಸುತ್ತಿರುವಳು ನೋಡು....ಮುಚ್ಚಿದ ಕಣ್ಣೆವೆ ಗಳು ತಾವರೆಯ ದಳಗಳಂತಿವೆಯಲ್ಲವೆ? ದೇವಲೋಕದ ಅಪ್ಸರೆ ಈಕೆ....!' ಉದ್ಗರಿಸಿದ ಕೌಶಿಕ ಮಗ್ಗುಲಿಗೆ ಹೊರಳಿ ನೋಡಿದ. ವಸಂತಕ ಕಣ್ಮುಚ್ಚಿ ಕೊಂಡು ಗಾಯನವನ್ನು ಆಲಿಸುತ್ತಿದ್ದ; ಗಾಯನಕ್ಕಿಂತ ಮಿಗಿಲಾಗಿ ಅನೇಕ ಆಲೋಚನೆಗಳು ಅವನ ಮನವನ್ನು ಆಕ್ರಮಿಸಿದ್ದವು.

'ಮಿತ್ರಾ....ವಸಂತಕಾ, ಇದೇನು ಕಿವುಡನ ಮುಂದೆ ಕಿನ್ನರಿ ಬಾರಿಸಿ ದಂತಾಯ್ತು ನನ್ನ ಗತಿ....?' ತೋಳನ್ನು ಅಲುಗಿಸಿದಾಗ ವಸಂತಕ ಕಣ್ತೆರೆದ.

'ಕೇಳುತ್ತಲಿರುವೆ ಪ್ರಭು' ಮೆಲ್ಲನೆ ನುಡಿದ.

'ಮನದ ಭಾವನೆಗಳನ್ನು ಆಪ್ತರಲ್ಲಿ ವ್ಯಕ್ತಪಡಿಸಿದಾಗ ಆನಂದವು ವರ್ಧಿಸು ವುದು ಮಿತ್ರಾ....ಇಂಥವನ್ನು ಅವಳ ಮುಂದೆ, ಇಲ್ಲವೇ ನಿನ್ನ ಮುಂದೆ ಮಾತ್ರ ಹೇಳಲು ಸಾಧ್ಯ. ಅವಳ ಮುಂದೆ ಹೇಳಿದರೆ ಕೆಂಡವನ್ನುಗುಳುವ ಜ್ವಾಲಾಮುಖಿಯಾಗುವಳು. ಲೋಕದಲ್ಲಿ ಸೌಂದರ್ಯಸ್ತುತಿಗೆ ಮರುಳಾಗದ ಹೆಣ್ಣಿಲ್ಲ; ಆದರೆ ಈಕೆ ವಿಚಿತ್ರ ಹೆಣ್ಣು! ವರ್ಣಿಸಿದರೆ ಕ್ರೋಧತಪ್ತಳಾಗುವಳು.'

'ಅಹುದು, ಆಕೆ ಹೆಣ್ಣಲ್ಲ....ಮಾತೆ, ಜಗನ್ಮಾತೆ....' ತನ್ಮಯತೆಯಿಂದ ವಸಂತಕ ನುಡಿದ.

'ವಸಂತಕಾ, ನಿನಗೆ ಹುಚ್ಚು ಹಿಡಿದಿಲ್ಲವಷ್ಟೆ....! ಹೋಗಲಿ, ಈಗ ಮಾತು ಕತೆ ಬೇಡ....ಅವಳ ಸೌಂದರ್ಯ ರಸಾಸ್ವಾದನೆ ಮಾಡುವೆ....ಮನೆಯವರ ಕಣ್ಣು ಬೀಳುವ ಮುನ್ನವೇ ಪಾತ್ರೆಯಲ್ಲಿಟ್ಟ ಹಾಲನ್ನು ಜಾಣ ಬೆಕ್ಕು ಗಟಗಟನೆ ಕುಡಿಯಬೇಕು ಮಿತ್ರಾ....' ನಸುನಕ್ಕು ಕೌಶಿಕನು ನುಡಿದ.

ವಸಂತಕನು ಮಾತನಾಡಲಿಲ್ಲ.

'ನೀನು ಅವಳನ್ನು ವರ್ಣಿಸು, ನಾನು ಕೇಳಿ ಸಂತೋಷಿಸುವೆ. ತನ್ನದಾದ ವಸ್ತುವನ್ನು ಇನ್ನೊಬ್ಬರು ಹೊಗಳಿದರೆ ಆನಂದವಾಗದೆ....?'

'ಆದರೆ, ಪ್ರಭು....ಅವರನ್ನು ನೋಡಿದರೆ ತಾಯಿಯ ನೆನಪು ಬಂದು, ಗೌರವ ಭಾವನೆ ಉಕ್ಕುವುದು. ಆ ಗಾಂಭೀರ್ಯ, ವಿವೇಕ, ಉನ್ನತ ವಿಚಾರ ಧಾರೆ, ವಯಸ್ಸಿಗೆ ಮೀರಿದ ನಿರ್ವಿಕಾರ ಸ್ಥಿತಿ; ಇವಷ್ಟೇ ನನಗೆ ಗೋಚರಿಸುವವು. ನಿಮಗೆ ಕಾಣುವಂತೆ ಯಾವ ಅಂಗಾಂಗಗಳೂ ನನ್ನ ಕಣ್ಣಿಗೆ ಕಾಣಬರವು....'

'ಸರಿ, ಸರಿ, ಹುಚ್ಚನಾದೆ—ಅರಸಿಕ ನೀನು....ನಿನ್ನೊಡನೆ ಮಾತು ಏಕೆ?' ಕೌಶಿಕ ಹುಸಿಮುನಿಸನ್ನು ತೋರ್ಪಡಿಸಿ ಮಹಾದೇವಿಯನ್ನು ಅಳೆಯುವುದರಲ್ಲಿ ಮಗ್ನನಾದ.

ಮದನರತಿ, ಪರಸ್ಪರ ದರ್ಶನಕ್ಕಾಗಿ ಹಂಬಲಿಸುವ ಇಬ್ಬರು ವಿರಹಿಗಳ ಮನೋಭಾವನೆಯನ್ನು ಗೀತರೂಪದಲ್ಲಿ ಹಾಡತೊಡಗಿದ್ದಳು. ಬೆಳುದಿಂಗಳ ಮಧ್ಯರಾತ್ರಿಯಲ್ಲಿ ಪ್ರೇಮಿಯನ್ನು ಸೇರಬಯಸಿ ಉದ್ಯಾನದಲ್ಲಿ ವಿಶಿಷ್ಟ ಸ್ಥಳಕ್ಕೆ ಬರಲು ತಿಳಿಸಿದ ಅವಳು ತಾಯಿತಂದೆಯರು ಇನ್ನೂ ಎಚ್ಚರವಾಗಿರುವುದನ್ನು ಕಂಡು ಪರಿತಪಿಸುತ್ತಿದ್ದಾಳೆ. ದೀಪವಾರೀತೇ ಎಂದು ಕಾಯುತ್ತಿದ್ದಾಳೆ, ಕಿಟಕಿಯಲ್ಲಿ ಬಂದು ಇಣುಕುತ್ತಾಳೆ. ತನ್ನ ಅಲಂಕಾರ ಮಂಕಾಗಿದೆಯೇನೋ ಎಂದು ಬಾರಿಬಾರಿಗೆ ಕನ್ನಡಿಯ ಮುಂದೆ ನಿಲ್ಲುತ್ತಾಳೆ. ಇಂದ್ರಿಯಗಳೆಲ್ಲವೂ ವಿರಹ ಜ್ವಾಲೆಯಲ್ಲಿ ಕುದಿದು, ಪ್ರಿಯನಿಗಾಗಿ ಕಾತರಿಸುತ್ತಿವೆ. ಇತ್ತ ಅವನಾದರೂ ಉದ್ಯಾನದಲ್ಲಿ ವಿಹ್ವಲನಾಗಿ, ಶತಪಥ ತಿರುಗುತ್ತಾ ಕಳವಳಗೊಳ್ಳುತ್ತಿರುವನು. ಈ ಚಿತ್ರಣವನ್ನು ಮನೋಜ್ಞವಾಗಿ ಆ ಶೃಂಗಾರಗೀತೆ ಚಿತ್ರಿಸುತ್ತಿತ್ತು. ಅದು ಮುಗಿದಾಗ ರಸಿಕತೆಯ ಕಡಲ ಅಲೆಗಳು ಗಾಳಿಯನ್ನು ತುಂಬಿದ್ದವು.

ತಂಬೂರಿ ಇನ್ನೂ ಮೀಂಟುತ್ತಲೇ ಇತ್ತು. ಸ್ಫೂರ್ತಿಗೊಂಡ ಮಹಾದೇವಿ

ಅದನ್ನು ಅನುಸರಿಸಿ ಭಾವೋನ್ಮತ್ತಳಾಗಿ ಹಾಡತೊಡಗಿದಳು. ತಾನೇ ಆ ಪ್ರೇಯಸಿ ಜಗದ ಮರೆಯ ಬಿನ್ನಾಣಿ ಚನ್ನನೇ ಆ ಪ್ರಿಯ!

ಕಳವಳದ ಮನ ತಲೆಕೆಳಗಾದುದವ್ವಾ!
ಸುಳಿದು ಬೀಸುವ ಗಾಳಿ ಉರಿಯಾಯಿತವ್ವಾ!
ಬೆಳುದಿಂಗಳು ಬಿಸಿಯಾಯಿತ್ತು ಕೆಳದಿ!
ಹೊಳಲ ಸುಂಕಿಗನಂತೆ ತೊಳಲುತ್ತಿಹೆನವ್ವಾ
ತಿಳುಹಾ ಬುದ್ಧಿಯ; ಹೇಳಿ ಕರೆತಾರೆಲೆಗವ್ವಾ!

ದೇವವಿರಹದ ಭಾವವನ್ನು ಅಳವಡಿಸಿಕೊಂಡ ಮಹಾದೇವಿಯ ಹೃದಯವು ಭಾವನೆಗಳ ಒತ್ತಡಕ್ಕೆ ಕಂಪಿಸಿ, ಕಣ್ಣುಗಳು ನೀರಿನಿಂದ ತುಂಬಿ, ಹನಿಹನಿಯಾಗಿ ಉರುಳತೊಡಗಿದವು.

'ಮಿತ್ರಾ....ವಸಂತಕ....ಫಲಿಸಿತು....ಮದನರತಿ ಹಾಡಿದ ಪ್ರೇಮಗೀತೆ ಅವಳ ಹೃದಯವನ್ನು ಹದಮಾಡಿದೆ. ಅತ್ತ ನೋಡು, ನನ್ನಂತೆ ಅವಳೂ ಕಳವಳಗೊಂಡಿದ್ದಾಳೆ, ನನಗಾದಂತೆ ಆಕೆಗೂ ತಂಗಾಳಿಯು ಬೆಂಕಿಯ ಝಳವಾಗಿದೆ. ನಿನ್ನೆ ರಾತ್ರಿ ತಾನು ತೋರಿದ ವರ್ತನೆಗೆ ಪಶ್ಚಾತ್ತಾಪ ಪಟ್ಟು ಹೇಳುತ್ತಿದ್ದಾಳೆ, 'ಯಾರಾದರೂ ಬುದ್ಧಿಹೇಳಿ, ಕೌಶಿಕನನ್ನು ಕರೆತಾರಿರಿ' ಎಂದು! ಈಗ ನಾನು ಹೋಗಿಬಿಡುವೆ ವಸಂತಕಾ. 'ನನಗೇನೂ ಸಿಟ್ಟಿಲ್ಲ' ಎಂದು ಸಂತೈಸುವೆ. ಕಬ್ಬಿಣ ಕಾದಾಗಲೇ ಬಡಿಯಬೇಕು....ಇಲ್ಲವಾದರೆ ಅಘಾತವಾದೀತು....' ಆವೇಶದಿಂದ ನುಡಿಯಾಡಿ, ಎದ್ದುನಿಂತ. ವಸಂತಕ ಕೌಶಿಕನ ಕೈಹಿಡಿದು ಕುಳ್ಳಿರಿಸುತ್ತ ನುಡಿದ:

'ಸಾವಧಾನ....ಪ್ರಭು, ಸಂತೈಸಿಕೊಳ್ಳಿ. ಅವಸರದಿಂದ ನುಗ್ಗಿ ಅವರ ತನ್ಮಯ ಹಾಡುಗಾರಿಕೆಗೆ ಭಂಗ ತರಬೇಡಿ....ನಂತರ ಹೋಗುವಾ....'

ಮಹಾದೇವಿಯ ಹಾಡು ಮುಂದುವರಿದಿತ್ತು. ಹಿಂದಿನ ಸಾಲುಗಳನ್ನೇ ವಿಸ್ತರಿಸಿ ಹಾಡತೊಡಗಿದಳು. ಮದನರತಿಯ ಕಲಿಕೆಯ ಗಾಯನಕ್ಕಿಂತ ಮಹಾದೇವಿಯ ಸಹಜವಾದ ನಾದ ಮಾಧುರ್ಯವು ಎಲ್ಲರನ್ನೂ ಮೈಮರೆಸಿತ್ತು. ಕಡೆಯ ಸಾಲನ್ನು ಆರಂಭಿಸಿದಳು;

'ಚನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ....'

ಮೇಲಕ್ಕೆ ಮೇಲಕ್ಕೆ ಹಾರುತ್ತಿದ್ದ ಗಾಳಿಪಟದ ಸೂತ್ರವು ಕತ್ತರಿಸಲ್ಪಟ್ಟರೆ ಅದು ಧೊಪ್ಪನೆ ಕೆಳಗೆ ಬೀಳುವಂತೆ, ಕೌಶಿಕನ ಆವೇಶ ಈ ಸಾಲನ್ನು ಕೇಳುತ್ತಿದ್ದಂತೆಯೇ ಜರ್ರನೆ ಇಳಿಯಿತು.

'ಓಹ್....ಚನ್ನಮಲ್ಲಿಕಾರ್ಜುನಾ....ಚನ್ನಮಲ್ಲಿಕಾರ್ಜುನಾ, ಇದು ಬಿಟ್ಟರೆ

ಬೇರೆ ಸೊಲ್ಲೇ ಇಲ್ಲವೇ? ಅವನು ಕೈಗೆ ಸಿಕ್ಕಿದ್ದರೆ ತುಂಡು ತುಂಡು ಮಾಡಿ ಬಿಡುತ್ತಿದ್ದೆ....' ಮುಷ್ಟಿ ಬಿಗಿದು, ತುಟಿ ಕಚ್ಚಿ ಕೌಶಿಕ ನುಡಿದ.

'ಪ್ರಭು....ಹೀಗೇಕೆ ಉದ್ರಿಕ್ತರಾಗುವಿರಿ! ಅತ್ತ ನೋಡಿರಿ, ಆ ತಾಯಿ ಪ್ರಶಾಂತ ಸರೋವರದಂತೆ ಹೇಗೆ ಶಾಂತವಾಗಿರುವರು? ಆಕೆಯದು ಎಂತಹ ಅಪರೂಪದ ಸ್ಥಿತಿ....!'

'ನೀನೊಬ್ಬ ಮೂರ್ಖ....ಸಂಧಾನಕ್ಕೆ ಹೋಗಿ, ಶತ್ರುವಿನ ವ್ಯಕ್ತಿತ್ವಕ್ಕೆ ಮರುಳಾದವನಂತೆ ಅವಳ ರಾಗವನ್ನೇ ಹಾಡುವೆ! ಅವಳನ್ನು ಒಲಿಸಿದರೆ ಸರಿ ....ಇಲ್ಲವಾದರೆ ಅರಮನೆಯ ಕೆಲಸದಿಂದ ನೀನು ನಿವೃತ್ತನಾಗಬೇಕು. ಬೇಟೆ ಎದ್ದಾಗ ನಾಯಿ ಬಹಿರ್ದೆಶೆಗೆ ಕುಳಿತಂತೆ, ಇಂಥ ಪ್ರಸಂಗದಲ್ಲಿ ಅವಳ ಮನ ಒಲಿಸದೆ, ತತ್ತ್ವದ ಬೋಧೆ ಮಾಡಲು ಬರುವೆಯಾ? ಈಗಲ್ಲದೇ ಮತ್ತಾವಾಗ ನಿನ್ನ ರಸಿಕಪ್ರಜ್ಞೆಯ ಉಪಯೋಗ, ಉಪ್ಪುಂಡದ್ದನ್ನು ತೀರಿಸುವ ಬಗೆ? ಕೂಳಿಗಾಗಿ ನಾವುಮಾತ್ರ ವಿದೂಷಕನೇನು? ಒಂದೆರಡೇ ಅವಕಾಶ ನೀಡುವೆ; ಯಶಸ್ವಿಯಾಗದಿದ್ದರೆ ನಿನ್ನ ಪರಿಸ್ಥಿತಿ ಗಂಭೀರವಾದೀತು....' ಕೌಶಿಕ ಬಿರುಗಾಳಿಯಂತೆ ರೌದ್ರಾವೇಶದಿಂದ ಎದ್ದು ಹೋದ, ತನ್ನ ಏಕಾಂತ ಭವನಕ್ಕೆ.

ವಸಂತಕ ಮೌನವಾಗಿ ಆಲೋಚಿಸಿದ :

'ರಾಜನ ಉಪ್ಪುಂಡದ್ದಕ್ಕಾಗಿ ಈ ಸಾಧ್ವಿಯ ಬಾಳಿನ ಹಾಲಿನಲ್ಲಿ ಉಪ್ಪು ಹಾಕಲೇ? ಪಾಪದ ಬುತ್ತಿ ಕಟ್ಟಿಕೊಳ್ಳಲೇ? ಈ ತಾಯಿಯಲ್ಲಿ ವಯಸ್ಸಿಗೆ ಮೀರಿದ ವೈರಾಗ್ಯ, ಜ್ಞಾನಗಳು ಮೇಳೈಸಿವೆ!' ಮನದಲ್ಲೇ ವಂದಿಸಿದ.

'ನಿಜ, ಆದರೆ ಕೊಟ್ಟ ಮಾತನ್ನು ನಡೆಸದಿದ್ದರೆ ಅದೂ ಪಾಪವಲ್ಲವೆ? ಪಾಪ-ಪುಣ್ಯಗಳ ಗೊಡವೆ ನಿನಗೇಕೆ? ದಣಿಯು ಹೇಳಿದುದನ್ನು ತಲೆಯ ಮೇಲೆ ಹೊತ್ತು ನಡೆಯುವುದೇ ನಿಷ್ಠಾವಂತ ಸೇವಕನ ಕರ್ತವ್ಯ....' ಮನಸ್ಸು ಮಾರ್ನುಡಿಯಿತು.

'ಇಲ್ಲವಾದರೆ ಸಂಸಾರಿಕನಾದ ನೀನು, ಅರಮನೆಯ ಆಶ್ರಯ ಕಳೆದುಕೊಂಡು ನಾಯಿಯಂತೆ ಅಲೆಯುತ್ತ, ನಂಬಿದ ಹೆಂಡತಿ ಮಕ್ಕಳನ್ನು ಕೋಳಿ ಮರಿಗಳಂತೆ ಹೆಕ್ಕಿತಿನ್ನಲು ಕಳಿಸಬೇಕಾದೀತು' ಮನಸ್ಸು ಒತ್ತಿ ಒತ್ತಿ ಹೇಳಿತು.

'ಸರಿ....ಪ್ರಯತ್ನಿಸುವೆ....' ನಿರ್ಧಾರದಿಂದ ಎದ್ದು, ಗಾಯನ ಮುಗಿದ ಬಳಿಕ ಪ್ರತ್ಯಕ್ಷನಾದ ವಸಂತಕ.

ಮಹಾದೇವಿಯನ್ನು ಕಂಡು ನಮಸ್ಕರಿಸಿದಾಗ, ಮುಗುಳ್ನಕ್ಕು ಕುಳಿತುಕೊಳ್ಳಲು ಪೀಠವನ್ನು ತೋರಿಸಿದಳು. ಆಗಾಗ ಅವಳು ಏನನ್ನೋ ಬರೆಯುತ್ತಿರುವಳೆಂಬುದನ್ನು ಸಮೀಪದಲ್ಲಿದ್ದ ಓಲೆಯ ಗರಿ-ಕಂಠಗಳು ಸೂಚಿಸುತ್ತಿ

ದ್ದವು. ಮದನರತಿ ಮಹಾದೇವಿಯ ವಚನದಿಂದ ಬಹು ಪ್ರಭಾವಿತಳಾಗಿದ್ದು, ಕುತೂಹಲದಿಂದ ಕೇಳಿದಳು :

'ಇದನ್ನು ಬರೆದವರು ಯಾರು ಒಡತಿ ?'

'ಈ ಓಲೆಯ ಕಂಠ' ಬೆರಳಿನಲ್ಲಿ ಮುಟ್ಟಿತೋರಿಸಿದಳು ಮಹಾದೇವಿ.

'ಅಂದರೆ ... ಈ ಓಲೆ ಕಂಠವನ್ನು ಹಿಡಿದ ನಿಮ್ಮ ಹಸ್ತವೆ ?' ಬೆರಗಾಗಿ ಶಿವಕಾಮಿನಿ ಕೇಳಿದಳು.

'ವಸಂತಕ ಮಹಾಶಯರಿಗೆ ಆತಂಕವಾಗದಿದ್ದರೆ ಇನ್ನೊಂದೆರಡನ್ನು ಒಡತಿಯ ಬಾಯಿಂದ ಕೇಳಬಯಸುತ್ತೇವೆ....' ಮದನರತಿ ಹೇಳಿದಳು.

'ಸಂತೋಷ....ನಾನೂ ಕೇಳಬಹುದಷ್ಟೆ ?' ವಸಂತಕ ಕೇಳಿದ.

'ಬೇಡವೆನ್ನುವರಾರು, ಆಧ್ಯಾತ್ಮವಿರುವುದೇ ಆತ್ಮಾನಂದವನ್ನು ಎಲ್ಲರೂ ಹೊಂದಲಿಕ್ಕೆ. ಇದು ನೋಡು ಶಿವಕಾಮಿನಿ, ಮದನಾ, ನೀವು ಊಟ ಮುಗಿಸಿ ಹರಟುತ್ತ ಗದ್ದಲ ಮಾಡುತ್ತಿದ್ದಿರಲ್ಲವೆ ? ಆಗ ನಾನು ಒಳಗೆ ಕುಳಿತು ಇದನ್ನು ಬರೆದೆ.' ಮಹಾದೇವಿ ಓದತೊಡಗಿದಳು :

"ಕೆಡದಿರೆ ಕೆಡದಿರೆ, ಮೃಡನಡಿಯ ಹಿಡಿಯಿರೇ,
ದೃಢವಲ್ಲ ನೋಡಿರೇ ನಿಮ್ಮೊಡಲು
ದೃಢವಲ್ಲ ನೋಡಿರೆ ಸಂಸಾರ ಸುಖವು
ಚನ್ನಮಲ್ಲಿಕಾರ್ಜುನ ಬರೆದ ಅಕ್ಷರವು ತೊಡೆಯದ ಮುನ್ನ
ಬೇಗ ಬೇಗ ಶಿವಶರಣೆನ್ನಿ."*

'ಇದರರ್ಥವೇನು ತಾಯಿ....?' ಶಿವಕಾಮಿನಿ ಕೇಳಿದಳು.

'ಸುಖ-ಭೋಗ, ಸಿರಿ-ಸಂಪದ ಇವೇ ಆತ್ಯಂತಿಕ ಸಿದ್ಧಿಗಳೆಂದು, ಈ ಶರೀರವು ಎಂದೆಂದೂ ನಾಶವಾಗದ ದೃಢವಾದ ಕಬ್ಬಿನದ ಗೂಡೆಂದು ನಂಬಿ, ವಿಷಯಾಸಕ್ತರಾಗಿರುವ ಜನರಿಗೆ ಹಿತೋಪದೇಶವಿದೆ ಇಲ್ಲಿ.

ನೋಡು ಮದನರತಿ, ನಾನು ಬಂದು ನಾಲ್ಕುದಿನಗಳಾದವು ; ನಿಮ್ಮನ್ನು ಮುಂಜಾವಿನಿಂದ ಸಂಜೆಯವರೆಗೆ ವೀಕ್ಷಿಸುತ್ತಲಿರುವೆ....ಬಗೆಬಗೆಯ ತಿನಿಸು ತಿಂಬುವುದು, ಅಡಿಯಿಂದ ಮುಡಿಯವರೆಗೆ ಅಲಂಕರಿಸಿಕೊಳ್ಳುವುದು, ವಿಲಾಸದ ಮಾತುಕತೆ, ಸುರಾಪಾನ, ನಿದ್ರೆ—ಇಷ್ಟನ್ನು ಬಿಟ್ಟರೆ ಬೇರೆ ಯಾವ ಕ್ರಿಯೆಗಳೂ ನಿಮ್ಮಲ್ಲಿಲ್ಲ....ಇವನ್ನೇ ಪರಮ ಸಂತೋಷದ ಬದುಕೆಂದು ಬಗೆಯುವಿರಿ....'

'ಬೇರಿನ್ನಾವ ಸುಖವಿದೆ ಒಡತಿ....?' ಮುಗ್ಧಳಾದ ಶಿವೆಯ ಪ್ರಶ್ನೆ.

---

* ಮ. ವ. ೩೫

'ಇದೆ....ಬುದ್ಧಿಯನ್ನು, ವಿಚಾರಶಕ್ತಿಯನ್ನು ಬೆಳೆಸಿಕೊಂಡು ಪಡುವ ಬೌದ್ಧಿಕಾನಂದ, ಸಂಯಮ ಶಕ್ತಿಯನ್ನು ವರ್ಧಿಸಿಕೊಂಡು, ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವ ಆತ್ಮಾನಂದಗಳಿವೆ. ಪರಮಾತ್ಮನು ಇಳೆ, ಬೆಳೆ, ನೀರು, ಗಾಳಿ, ಸೃಷ್ಟಿ ಮುಂತಾದ ಅನೇಕ ದಾನ ವನ್ನು ಜಗಕ್ಕಿತ್ತಿರುವನು. ನೀಡಿದ ಆ ದಾತನ ಹೆಸರನ್ನು ಒಮ್ಮೆಯಾದರೂ ಸ್ಮರಿಸುವಿರಾ ? ಇಷ್ಟೆಲ್ಲ ಸುಖದ ಸೌಲಭ್ಯಗಳನ್ನು ಒದಗಿಸಿಕೊಟ್ಟ ಮಹಾರಾಜ ರನ್ನು ಕಾರುಣ್ಯನಿಧಿಯೆಂದು ಕರೆದು, ಅವರಿಗೆ ಶರಣಾಗತರಾಗಿ ದುಡಿಯುವಿರಿ; ಆದರೆ ಮಹಾರಾಜರು ಕೊಡಲಿಕ್ಕೆ ಮೂಲವಸ್ತುಗಳನ್ನು ಕೊಟ್ಟ ಜಗದಾದಿ ರಾಜನ ನೆನಪು ಸಹ ತೆಗೆಯುವುದಿಲ್ಲ....'

'ನಮ್ಮಂತಹ ಪಾಪಿಗಳು—ಅಜ್ಞಾನಿಗಳಿಗೆಲ್ಲ ಎಲ್ಲಿಯ ದೇವರು....?' ಮದನರತಿ ನುಡಿದಳು.

'ಅದು ತಪ್ಪು ಕಲ್ಪನೆ ಮದನಾ ; ಯಾರೂ ಪಾಪಿಗಳಲ್ಲ, ಎಲ್ಲರೂ ದೇವರ ಮಕ್ಕಳೇ ! ಒಬ್ಬ ಅಗಸನು ಬಟ್ಟೆ ಒಗೆಯಲು ನೀರೊಳಗೆ ನಿಂತಿದ್ದು, ಬಾಯಾ ರಿಕೆಯಾದಾಗ ಆ ನೀರನ್ನು ಕುಡಿಯಬಹುದೆಂಬುದನ್ನು ಮರೆತು, ದಾಹದಿಂದ ಬಳಲಿ ಸತ್ತನಂತೆ. ಹಾಗೆಯೇ ಎಲ್ಲರ ಅಂತರಂಗದಲ್ಲಿರುವ ಮಹಾಘನವು ನೆಲದ ಮರೆಯ ನಿಧಾನದಂತಿದೆ; ಅದನ್ನರಿಯದೆ ಕೇವಲ ಅಶನ ವ್ಯಸನಗಳಿಗೆ ಕುದಿಯುವ ಬದುಕು, ಎಂತಹ ಅರ್ಥರಹಿತ ಬದುಕು !'*

ಆಯುಷ್ಯ ಎಂಬೊಂದು ಸಾವಿರಾರು ದಿವಸಗಳ ಕಾಳಿನ ರಾಶಿ; ಮರ್ತ್ಯದ ಕಣದಲ್ಲಿ ಬಿದ್ದಿದೆ. ಕಾಲನೆಂಬುವವನು ಉದಯ, ಅಸ್ತಮಾನ ಎಂಬೆರಡು ಅಳೆಯುವ ಕೊಳಗಗಳನ್ನು ಹಿಡಿದು ಅಳೆಯುತ್ತಿರುವನು, ರಾಶಿ ಮುಗಿದಾಗ, ಅದೆಲ್ಲವನ್ನು ತನ್ನೊಡಲಿಗೆ ಹಾಕಿಕೊಂಡು ಸಾಗುವನು. **ನಮ್ಮ ಪಂಚ ಭೂತಾತ್ಮಕ ದೇಹವಿದು ಹಂಚುಹರಿಯಾಗಿ, ಪಿಂಡಾಂಡದ ಪಂಚಭೂತಗಳು ಬ್ರಹ್ಮಾಂಡದ ಪಂಚಭೂತಗಳೊಡನೆ ಬೆರೆಯುವವು. ಸಂಸ್ಕಾರಸಹಿತನಾದ ಆತ್ಮನು ಮರಳಿ ಭವಚಕ್ರದ ಸುತ್ತಿನಲ್ಲಿ ತಿರುಗತೊಡಗುವನು. ಆದ್ದರಿಂದ ಶಿವನನ್ನು ನೆನೆದು ಈ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕು.†

ಈಗ ಜಗತ್ತಿನ ಬಹು ಪಾಲು ಜನರು ಬದುಕುವುದು ಹೀಗೆ :

ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ,
ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ,
ವಿಧಿಯ ಮೀರುವ ಅಮರರಿಲ್ಲ,

---

* ಮ. ವ. ೮೦ ** ಮ. ವ. ೧೦೨ † ಮ. ವ. ೪೧

ಕ್ಷುಧೆ, ವಿಧಿ, ವ್ಯಸನಕ್ಕಂಜಿ, ನಾ ನಿಮ್ಮ ಮರೆಹೊಕ್ಕು
ಬದುಕಿದೆನು ಚನ್ನಮಲ್ಲಿಕಾರ್ಜುನಾ.*

ಹೊಟ್ಟೆಗೆ ಹಿಟ್ಟು ಬೀಳುವುದು ತಡವಾದರೆ ಎಂತಹವರೂ ನಡುಗಿಹೋಗುವರು. ಹೊಟ್ಟೆಗಾಗಿ ಮಾಡಬಾರದುದನ್ನು ಮಾಡುವರು; ಸಂಜೆ ದಾಟಿ ಇರುಳು ಕಾಲಿಡುತ್ತಿದ್ದಂತೆಯೇ ಮನದ ವಿಕಾರಕ್ಕೆ ಈಡಾಗುವರು. ಕಾಮಾತುರನಾದವನು ಭಯ, ಲಜ್ಜೆಗಳನ್ನಳಿದುಕೊಂಡು ಹೆರವರ ತೋಟ ಹಾಳಾದೀತೆಂಬ ಭಯವೂ ಇಲ್ಲದೆ ನುಗ್ಗುವ ಉನ್ಮತ್ತ ಆನೆಯಂತೆ ವರ್ತಿಸುವನು. ಎಂತಹ ವೀರಾಧಿವೀರನಿರಲಿ, ಎಷ್ಟೇ ರಾಜರನ್ನು ಮರ್ಧಿಸಿರಲಿ, ಎಷ್ಟೇ ಹೆಣ್ಣುಗಳನ್ನು ಆಳಿರಲಿ, ಸಾವನ್ನಂತೂ ಮೀರಲಾರ. ಮನುಷ್ಯ ಜೀವನವೆಷ್ಟು ನಶ್ವರ ಮತ್ತು ಕ್ಷುದ್ರ ನೋಡಿದಿರಾ? ಬೆಳಗಿನಿಂದ ಬೈಗಿನವರೆಗೆ ತನುವಿನ ವಿಕಾರ, ಬೈಗಿನಿಂದ ಬೆಳಗಿನವರೆಗೆ ಮನದ ವಿಕಾರ; ಈ ಹಸಿವು, ವ್ಯಸನ, ಸಾವುಗಳನ್ನು ಗೆಲ್ಲಲು ದೇವನ ಧ್ಯಾನವೊಂದೇ ದಿವ್ಯ ಸಾಧನ....

'ಶರೀರವನ್ನು ನೀವು ಪರಿಮಳೋದಕದಲ್ಲಿ ಮೀಯಿಸಿ, ಸುವಾಸಿತ ದ್ರವ್ಯಗಳ ಅನುಲೇಪನ ಮಾಡಿಕೊಂಡರೆ ಏನು ಪ್ರಯೋಜನ? ಒಳಗಣ ಮನವು ಸದ್ಗುಣ ಸೌರಭದಿಂದ ಪರಿಮಳಿಸದಿದ್ದರೆ!

ಕೊಳಲದನಿಗೆ ಸರ್ಪ ತಲೆದೂಗಿದಡೇನು,
ಒಳಗಣ ವಿಷದ ಬಯಕೆ ಬಿಡದನ್ನಕ್ಕ?
ಹಾಡಿದಡೇನು ಕೇಳಿದಡೇನು,
ತನ್ನಲುಳ್ಳ ಅವಗುಣ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ ನೀ ಎನಗೆ ತೋರಯ್ಯಾ
ಚನ್ನಮಲ್ಲಿಕಾರ್ಜುನಾ.†

ಅಂತರಂಗವನ್ನು ಹಸನುಗೊಳಿಸಿಕೊಂಡು ಬಾಳಬೇಕು ಸೋದರಿಯರೇ! ಪರಿಶುದ್ಧ, ಸಂಯಮಜೀವನದಲ್ಲಿ ಸಿಗುವ ಆನಂದ ಮತ್ತಾವುದರಲ್ಲಿಯೂ ಸಿಗದು....' ಮಹಾದೇವಿ ಹೇಳಿದಾಗ ಶೃಂಗಾರಿಕೆಯರ ಬುದ್ಧಿಗಳು ಚಿಂತನೆಯ ಹಾದಿಯಲ್ಲಿದ್ದವು. ತಮ್ಮೊಡತಿಯ ವ್ಯಕ್ತಿತ್ವವನ್ನು ಕಂಡು ವಿಸ್ಮಯದಿಂದ ತಲೆಬಾಗಿದರು.

'ತಾಯಿ, ತಮ್ಮ ಸನ್ನಿಧಿಯಲ್ಲಿ ಮಾತನಾಡುವುದಿತ್ತು....' ವಸಂತಕ ಕೇಳಿದಾಗ, ಶೃಂಗಾರಿಕೆಯರು ಸೂಕ್ಷ್ಮವರಿತು ಒಬ್ಬೊಬ್ಬರಾಗಿ ಎದ್ದುಹೋದರು. ಅವನು ಹೇಳಿದ:

---

* ಮ. ವ. ೧೪೫. † ಮ. ವ. ೧೪೯

'ಮಹಾರಾಜರು ವಿರಹದಲ್ಲಿ ಬಳಲುತ್ತಿದ್ದಾರೆ. ಊಟ ನಿದ್ರೆಗಳಾವುವೂ ಅವರಿಗೆ ರುಚಿಸುತ್ತಿಲ್ಲ. ಶರೀರ ಕುಂದಿದೆ, ಮುಖ ಕಂದಿದೆ....ನೋಡಿದರೆ ಮನ ತಲ್ಲಣಿಸುತ್ತದೆ....' ಖಿನ್ನನಾಗಿ ಹೇಳಿದ.

'ನಿಜ ವಸಂತಕರೆ, ಸೃಷ್ಟಿಯನ್ನು ನೋಡಿದರೆ ತಿಳಿಯುವುದು—ಭ್ರಮರವು ಕೇವಲ ಘ್ರಾಣೇಂದ್ರಿಯದ ಸುಖಕ್ಕೆ ಮರುಳಾಗಿ ಸಂಪಿಗೆಯ ವನವನ್ನು ಪ್ರವೇಶಿಸಿ ಸಾಯುವುದು, ಮೀನು ನಾಲಿಗೆಯ ರುಚಿಗೆ ಈಡಾಗಿ ಬೆಸ್ತನ ಗಾಳಕ್ಕೆ ಸಿಕ್ಕಿಬೀಳುವುದು, ಪತಂಗವು ಕಣ್ಣಿನ ಮೋಹಕ್ಕೆ ವಶವಾಗಿ ದೀಪದ ಜ್ವಾಲೆಯಲ್ಲಿ ದಹಿಸುವುದು, ಆನೆಯು ಚರ್ಮದ ಸುಖಕ್ಕೆ ಮರುಳಾಗಿ ಬಂಧನಕ್ಕೆ ಸಿಕ್ಕಿಬೀಳುವುದು, ಕಿವಿಯು ಬಯಸುವ ಇನಿಗಾನಕ್ಕೆ ಮಾರುಹೋಗಿ ಜಿಂಕೆ ಸೆರೆಯಾಗುವುದು ; ಅಂದಾಗ ಈ ಐದೂ ಇಂದ್ರಿಯಗಳು ಒಟ್ಟಾಗಿಯೇ ಕಾರ್ಯ ಮಾಡುವ ಮಹಾರಾಜರು ವಿಕಾರವಶರಾಗುವುದು ಏನಾಶ್ಚರ್ಯ....?' ತಿರಸ್ಕಾರದಿಂದ ಹೇಳಿದಳು.

'ತಾವು ಮನಸ್ಸು ಮಾಡಿದರೆ ಅವರನ್ನು ಉದ್ಧರಿಸಬಲ್ಲಿರಿ....' ವಸಂತಕ ದೀನನಾಗಿ ಹೇಳಿದ.

'ಹಾಲನ್ನು ಬಯಸುವ ಮಗುವಾದರೆ ತಾಯಿಯು ಕೊಟ್ಟು ಸಂತೈಸಬಹುದು ; ತಾಯಿಯ ರಕ್ತವನ್ನೇ ಬಯಸುವ ಮಗುವನ್ನು ಹೇಗೆ ಸಂತೈಸಲು ಸಾಧ್ಯ? ನಾನು ಕೊಡಬಲ್ಲ ವಾತ್ಸಲ್ಯ, ಶುದ್ಧಸ್ನೇಹದಿಂದ ಅವರಿಗೆ ತೃಪ್ತಿಯಾಗುವುದಿದ್ದರೆ ತುಂಬುಮನದಿಂದ ಧಾರೆ ಎರೆಯುವೆ. ಆದರೆ ಅವರು ಕಾಮತೃಪ್ತಿ, ಶರೀರ ಸುಖಗಳನ್ನು ಬಯಸಿದರೆ....ಅದೆಂದಿಗೂ ನನ್ನಿಂದ ಸಿಗದು....' ನಿಷ್ಠುರಳಾಗಿ ಹೇಳಿದಳು.

'ತಾವು ತಿಳಿದವರು, ಜ್ಞಾನಿಗಳು ; ಪಾಂಡ್ಯ ಮಹಾದೇವಿ, ಕಾರಿಕಾಲಮ್ಮೆಯಂತಹವರು ಶರೀರಸೌಖ್ಯವನ್ನು ಪಡೆದೂ ಸಹ ಕೀರ್ತಿವಂತರಾಗಲಿಲ್ಲವೆ? ನೀವು ಬಯಸಿದುದನ್ನು ಕೈಗೂಡಿಸುವ ಮಹಾರಾಜರು, ಈ ಕ್ಷಣದಲ್ಲೇ ದೊರೆಯಬಹುದಾದ ಪಟ್ಟದರಸಿಯ ಪದವಿ, ನೀವು ಬೇಕೆನಿಸಿದಂತೆ ದಾನ ಧರ್ಮ ಮಾಡಬಹುದಾದ ಅವಕಾಶಗಳು, ವೀರಾಧಿವೀರರಾದ ಅರಸರಂಥ ಪತಿದೇವರು ; ನಿಮಗೆ ಏನು ತಾನೆ ಕೊರತೆಯಾದೀತು....?'

'ಪಂಚೇಂದ್ರಿಯ ಗುಣಂಗಳೊಳಗೆ ಒಂದರೊಡನೆ ಸಖ್ಯ ಬೆಳೆಸಿದರೂ ಆಯಿತು, ಸಪ್ತ ವ್ಯಸನಗಳೊಳಗೆ ಒಂದಕ್ಕೆ ಪ್ರಿಯರಾದರೂ ಆಯಿತು, ಸರ್ವನಾಶ ನಿಶ್ಚಿತ.* ಮುನ್ನಿನ ಶರಣರನ್ನು ವಿಮರ್ಶಿಸುವ ಸಾಹಸ ನನ್ನದಲ್ಲ.

ನನ್ನ ಗುರಿ ಮಾತ್ರ ಇದು—ಮೀಸಲ ಸತಿಯಾಗಿ, ಅನಘ್ರಾಣಿತ ಕುಸುಮವಾಗಿ ಶಿವಾರ್ಪಿತವಾಗಬೇಕೆಂಬುದು! ಮದುವೆಯೆಂಬುದು ಒಂದು ಬಂಧನ ನನ್ನ ದೃಷ್ಟಿಯಲ್ಲಿ....'

'ಮತ್ತೆ....ನಿಮ್ಮ ಧರ್ಮದ ಆದ್ಯರಾದ ಬಸವಣ್ಣನವರು ಸಂಸಾರಿಕರಲ್ಲವೆ?'

'ಅಲ್ಲ....ವಸಂತಕರೇ....ಅವರು ಸಂಸಾರಿಯಲ್ಲ, ಗೃಹಸ್ಥರು; ವಿರಕ್ತರು—ಆದರೆ ಸನ್ಯಾಸಿಯಲ್ಲ! ಅವರ ಔನ್ನತ್ಯ, ನಿಲುವು ಅಸಾಮಾನ್ಯವಾದವು. ಆನೆಯು ಬಿದಿರುಮೆಳೆಯನ್ನು ಹೊಕ್ಕು ಕಳಲೆಯನ್ನು ತಿಂದು ಸಹಜವಾಗಿ ಹೊರಬರುವುದು. ಆದರೆ ಮನುಷ್ಯ ಬಿದಿರುಮೆಳೆಯಲ್ಲಿ ಹೊಕ್ಕರೆ ಹೊರಬರುವುದು ಬಹು ಕಷ್ಟ! ಒಂಟೆಯು ಮರಳುಗಾಡನ್ನು ಬಹು ಸಹಜವಾಗಿ ದಾಟುವುದು; ಅದನ್ನು ಕಂಡು ಹಸುವೂ ಮರಳುಗಾಡನ್ನು ಹೊಕ್ಕರೆ ಹಾದಿಯ ಹೆಣವಾಗಬೇಕಾದೀತು....'

'ಆದರೆ....ಮಹಾರಾಜರ ಅಧಿದೇವತೆಯಾಗುವುದು ಪುಣ್ಯದ ಪಲವಲ್ಲವೆ?'

'ಮದುವೆಯೊಂದು ಬಂಧನ ಎಂದು ನಾನು ಭಾವಿಸಿದಾಗ ಸಾಮಾನ್ಯನನ್ನು ಲಗ್ನವಾಗುವುದು ಕಬ್ಬಿಣದ ಸಂಕೋಲೆಯಾದರೆ, ರಾಜನನ್ನು ವರಿಸುವುದು ರತ್ನದ ಸಂಕೋಲೆ. ಎರಡೂ ಸಂಕಲೆಗಳೇ!* ಏನೇ ಇರಲಿ... ತಮ್ಮದು ಬಹು ದೊಡ್ಡ ಪ್ರಯತ್ನ ವಸಂತಕರೇ, ವಿಲಾಸ–ವೈರಾಗ್ಯ, ಕತ್ತಲೆ–ಬೆಳಕು, ವಿಕಾರ–ಸಂಯಮಗಳನ್ನು ಜೋಡಿಸುವ ಅಪ್ರತಿಮ ಸಾಹಸ....' ಮಹಾದೇವಿ ನಸುನಕ್ಕು ಮೇಲಕ್ಕೆದ್ದು ಪೂಜೆಗೆ ವೇಳೆಯಾಯಿತೆಂದು ಹೊರಟಳು.

ವಸಂತಕನು ದಿಕ್ಕು ತೋಚದೆ ಕ್ಷಣಕಾಲ ಕುಳಿತು, ನಂತರ ನಿರ್ಗಮಿಸಿದನು.

* * *

'ಸಿಡಿಲ ಹೊಡೆತಕ್ಕೆ ಗುಬ್ಬಿಯನ್ನು ಬಲಿಗೊಡಬೇಡಿ, ತುಂಬು ಪ್ರವಾಹ ತಡೆಯಲು ಕಡ್ಡಿಯನ್ನು ಒಡ್ಡಬೇಡಿ, ನಿಮಗೆ ನಾನು ಬೇಡವಾದರೆ ಈ ಕತ್ತಿಯಿಂದ ಒಂದೇ ಬಾರಿಗೆ ಮುಂಡದಿಂದ ರುಂಡ ಬೇರ್ಪಡುವಂತೆ ಕಡಿದುಬಿಡಿ...." ಕತ್ತಿಯನ್ನು ಕೈಲಿ ಹಿಡಿದು ಎದುರು ನಿಂತ ವಸಂತಕನ ದೀನಮುಖವನ್ನು ಕಂಡು ಕೌಶಿಕ ದಿಗ್ಭ್ರಮೆಗೊಂಡ.

---

* ಮ. ವ. ೧೫೧

'ಏಕೆ ಏನಾಯಿತು?....'

'ಮಹಾದೇವಿಯನ್ನು ನಿಮ್ಮತ್ತ ಒಲಿಸುವುದು ನನಗೆ ಸಾಧ್ಯವಾಗದು. ಆ ಹೃದಯದಲ್ಲಿ ತುಂಬಿರುವುದು ಮಾತೃವಾತ್ಸಲ್ಯದ ಮಧುರ ಹಾಲೇ ಹೊರತು, ಕಾಮದ ಹೆಂಡವಲ್ಲ. ಅಂದಾಗ ಈ ಪ್ರಯತ್ನವೇ ನನಗೆ ಬೇಡ. ನನ್ನ ರಸಿಕತೆ ಈ ಸ್ಪರ್ಧೆಯಲ್ಲಿ ಸೋತಿದೆ ಎನಿಸಿದರೆ ನಿಮ್ಮ ಮನಸ್ಸಿಗೆ ಬಂದ ಶಿಕ್ಷೆ ನೀಡಿರಿ....'

'ನಿನ್ನನ್ನು ಶಿಕ್ಷಿಸಿದರೆ ನನಗೆ ಬರುವ ಲಾಭವೇನು ಮಿತ್ರಾ....ಅಂತರಿಕ ವಿಷಯದಲ್ಲಿ ವಿಚಾರವಿನಿಮಯ ಮಾಡಲಿಕ್ಕೆ ಇರುವ ಏಕೈಕ ನೇಹಿಗನೆಂದರೆ ನೀನೊಬ್ಬನೆ! ನಿನ್ನನ್ನು ಕಳೆದುಕೊಳ್ಳುವ ಮೂರ್ಖ ಯತ್ನ ಬೇಡ. ಸಿಟ್ಟಿನಲ್ಲಿ ಅಂದುದನ್ನು ಮರೆತುಬಿಡು.' ಕೌಶಿಕ ಕತ್ತಿಯನ್ನು ಕಿತ್ತೆಸೆದು ವಸಂತಕನನ್ನು ಅಪ್ಪಿದ.

'ಮಹಾರಾಜ, ನಿನ್ನನ್ನು ಅಳೆಯಲು ನನಗೆ ಸಾಧ್ಯವಾಗುತ್ತಿಲ್ಲ. ನೀನು ಎಲ್ಲ ದೃಷ್ಟಿಯಿಂದಲೂ ಆದರ್ಶ ಪುರುಷ; ಆದರೆ ಸ್ತ್ರೀಲೋಲುಪತೆಯೊಂದು ದೀವಿಗೆಯೊಳಗಣ ಕುಡಿಯಂತೆ, ಸುಂದರ ಮುಖದ ಮೇಲಣ ಮೊಡವೆಯಂತೆ ನಿನಗೆ ಕಲಂಕಯುಕ್ತವಾಗಿದೆ....ಅದೊಂದನ್ನು ಗೆದ್ದರೆ!'

'ವಸಂತಕಾ....ನಿನಗೆಲ್ಲೋ ಅವಳ ವಿರಕ್ತಿಯ ನೆರಳು ಬಿದ್ದಂತೆ ತೋರುತ್ತದೆ. ಹಲವು ಅರಸಿಯರ ಒಡೆಯರಾಗಿರುವುದು ರಾಜರಿಗೆ ಶೋಭಾಯಮಾನ....'

'ಇದು ಅವಿವೇಕದ ನಂಬಿಕೆ; ವಿವಾಹವು ಸಂಯಮಜೀವನದ ಮತ್ತೊಂದು ಮುಖ. ಏಕಪತ್ನೀವ್ರತಸ್ಥನಾದರೆ ಬಹು ದೊಡ್ಡ ಗೌರವ ನಿನಗೆ ಕಾದಿರುವುದು. ನಿನ್ನ ಹೃದಯವು ನಿಜಕ್ಕೂ ಚಂದ; ಸ್ನೇಹ, ಪ್ರೇಮಗಳ ಸಂಗಮ. ಆದರೆ ಇವುಗಳೊಡನೆ ನೆಲೆಸಿರುವ ಮನೋದೌರ್ಬಲ್ಯವೊಂದೇ ಬಹುಕಲಂಕಯುಕ್ತ.

ಈಚಲ ಗಿಡದಿಂದ ಬರುವ ನೀರಾ ಬಹು ರುಚಿಕರ, ಆರೋಗ್ಯಕಾರಕ ಮದ್ದು. ಆದರೆ ಅದನ್ನು ಹುಳಿಯಾಗಿಸಿ ಹೆಂಡ ಮಾಡಿದಾಗ ಅದು ಹೇಯ, ಮತ್ತು ಬರಿಸುವ ಕ್ಷುದ್ರ ವಸ್ತು. ನೀರಾವನ್ನು ಉತ್ತಮರೂ ಕುಡಿಯುತ್ತಾರೆ, ಹೆಂಡವನ್ನು ದುರ್ಬಲರಷ್ಟೇ ಕುಡಿಯುತ್ತಾರೆ. ಹಾಗೆಯೇ ನಿನ್ನ ಹೃದಯವು ನಿಷ್ಕಲ್ಮಶ ವಾತ್ಸಲ್ಯದ ತವರಾದರೆ ಆ ತಾಯಿಯು ಖಂಡಿತಾ ಸ್ವೀಕರಿಸುವಳು. ಯಾವಾಗ ಅದು ವಿಕೃತಗೊಂಡು ಕಾಮದ ಹೆಂಡವಾಗುವುದೋ ಆ

“ಸಾಕುಸಾಕು ನಿನ್ನ ಪುರಾಣ ವೈರಾಗ್ಯ. ಅವಳ ಸಾಮೀಪ್ಯ ಸುಖವಿಲ್ಲದೆ ನಾನು ಬದುಕಲಾರೆ....ಹಾಂ....ಹೀಗೆ ಮಾಡಬಹುದು. ಅವಳು ಧಾರ್ಮಿಕತೆಯ ಗೊಡ್ಡು. ಅವಳ ಹಾದಿಯಲ್ಲೇ ಹೋಗಿ ಮನವೊಲಿಸುವ ಉಪಾಯವನ್ನು ಮಾಡೋಣ. ಗೋಕರ್ಣ ಕ್ಷೇತ್ರಯಾತ್ರೆಗೆ ಹೋಗೋಣ. ನನಗೆ ಬೇಡವಾದರೂ ಅವಳಿಗಾಗಿ ಪೂಜೆ ಮಾಡಿಸಿ, ತಲೆಬಾಗುವೆ. ನನ್ನ ಧಾರ್ಮಿಕಾಸಕ್ತಿಯಿಂದ ಅವಳು ಖಂಡಿತ ತೃಪ್ತಿಗೊಳ್ಳುವಳು....’

‘ಪ್ರಯತ್ನಿಸಬಹುದು....’ ವಸಂತಕ ಹೇಳಿದ.

‘ನಡೆ ಸಂಜೆಗೆ ಹೋಗೋಣ; ಇರುಳಿನ ಎರಡನೆ ಜಾವದ ಬಳಿಕ ಯಾರ ಮುಖದರ್ಶನವನ್ನು ಬೇರೆ ಮಾಡಳು....ಬೇಗ ಹೋಗುವುದು ಒಳ್ಳೆಉತು....’ ಹಿಂದಿನ ರಾತ್ರಿಯ ಕಹಿಪ್ರಸಂಗವನ್ನು, ಬಿಸಿ ಹಾಲು ಕುಡಿಯ ಹೋಗಿ ಬಾಯಿ ಸುಟ್ಟುಕೊಂಡ ಬೆಕ್ಕಿನಂತೆ ಜ್ಞಾಪಿಸಿಕೊಂಡ.

ಮಹಾದೇವಿ ಸಂಜೆಯ ಹೊಂಬೆಳಕಿನಲ್ಲಿ ವಚನವೊಂದನ್ನು ಗುಣುಗುಣಿಸುತ್ತ ಪ್ರಶಾಂತ ಭವನದ ಉದ್ಯಾನದಲ್ಲಿ ಅಡ್ಡಾಡುತ್ತಿದ್ದಳು. ಮಹಾರಾಜರು ಬರುತ್ತಿರುವರೆಂದು ಶಿವಕಾಮಿನಿ ಬಂದು ತಿಳಿಸಿದಾಗ ಮಹಾದೇವಿಗೆ ಕೌಶಿಕನು, ವಸಂತಕನೊಡನೆ ಬರುವುದು ಕಾಣಿಸಿತು.

‘ಅರ್ಚನೆ, ಅಧ್ಯಯನ ಮುಗಿದವೆ?....’ ಕೌಶಿಕ ಮುಗುಳ್ನಗುತ್ತ ಕೇಳಿದ. ರಮ್ಯವಾದ ವಾತಾವರಣದಲ್ಲಿ ತಿರುಗಾಡುತ್ತಿದ್ದ ಆಕೆಯ ಮುಖದ ಮೇಲೆ ಪ್ರಸನ್ನತೆಯ ಪುಷ್ಪ ಅರಳಿತ್ತು.

ಮಲ್ಲಿಕಾಮಂಟಪದಲ್ಲಿ ಕೌಶಿಕನು ಕುಳಿತ. ಸಮೀಪದ ಶಿಲಾಸನವನ್ನು ತೋರಿ ಮಹಾದೇವಿಗೆ ಕುಳ್ಳಿರಲು ಸೂಚಿಸಿದ. ‘ತನ್ನ ಮಗ್ಗುಲಲ್ಲೇ ಕುಳಿತುಕೊಳ್ಳಬಾರದೇ ?’ ಎಂದು ಅಂತರಂಗ ಮಿಡಿಯುತ್ತಿದ್ದರೂ ಹೇಳುವ ಧೈರ್ಯವಾಗಲಿಲ್ಲ. ಎಡಮಗ್ಗುಲಲ್ಲಿದ್ದ ಶಿಲಾಸನದ ಮೇಲೆ ವಸಂತಕ, ಬಲಗಡೆಯ ಶಿಲಾಸನದ ಮೇಲೆ ಮಹಾದೇವಿ—ಕುಳಿತರು.

‘ವ್ಯವಸ್ಥೆಯು ತೃಪ್ತಿಕರವಾಗಿದೆಯೇ ಎಂದು ವಿಚಾರಿಸಿಕೊಂಡು ಹೋಗಲು ಬಂದೆವು....’ ಕೌಶಿಕ ಹಸನ್ಮುಖಿಯಾಗಿಯೇ ಕೇಳಿದ.

‘ತಮ್ಮ ಕೃಪೆಯಿಂದ ಯಾವ ಕೊರತೆಯೂ ಇಲ್ಲ; ಬಂಗಾರದ ಪಂಜರ, ಬಯಸಿದಲ್ಲಿಯೇ ಎಲ್ಲವೂ ಕೈಗೆ ಸಿಗುವ ವ್ಯವಸ್ಥೆ....’ ಬಹು ಸೂಚ್ಯವಾಗಿ ಮಹಾದೇವಿ ಹೇಳಿದಳು. ಈ ಮಾತಿನ ತೀಕ್ಷ್ಣತೆ ಕೌಶಿಕನಿಗೆ ಬಡಿಯದಿದ್ದರೂ, ವಸಂತಕನಿಗೆ ಸೋಂಕಿತು. ಅವನು ನಕ್ಕು ಹೇಳಿದ :

‘ತಾವು ಸಂತೃಪ್ತರಾಗಿರಬೇಕೆಂದು ಪ್ರಭುಗಳ ಅಪೇಕ್ಷೆ. ಇನ್ನೇ ...

ತಮಗೆ ದೇವರು, ಅಧ್ಯಾತ್ಮ ಎಂದರೆ ಬಹು ಆಸಕ್ತಿಯಿರುವ ಕಾರಣ ಗೋಕರ್ಣ ಸಂದರ್ಶನಕ್ಕೆ ಹೋಗಿ ಬರೋಣವೆಂದು ಇಚ್ಛಿಸುತ್ತಿದ್ದಾರೆ.'

'ಪ್ರಭುಗಳ ಔದಾರ್ಯಕ್ಕೆ ಚಿರಋಣಿ. ಆದರೆ ನಮ್ಮ ಧರ್ಮದ ಪ್ರಕಾರ ಯಾವ ತೀರ್ಥಕ್ಷೇತ್ರ ಯಾತ್ರೆಯೂ ಬೇಕಾಗಿಲ್ಲ; ಹೋಗುವುದು ಸಹ ನಮ್ಮ ತತ್ತ್ವಕ್ಕೆ ವಿರುದ್ಧವಾದ ಕಾರಣ ಸೌಮ್ಯವಾಗಿ ನಿರಾಕರಿಸುತ್ತೇನೆ. ಉತ್ತಮ ಹಾಲನ್ನು ಮನೆಯಲ್ಲಿರಿಸಿಕೊಂಡು, ಅದನ್ನು ಸಂಸ್ಕರಿಸಿ ಶುದ್ಧ ತುಪ್ಪವನ್ನು ಮಾಡಿಕೊಳ್ಳಲಾರದೆ ಬೆಣ್ಣೆಗಾಗಿ ಪಾತ್ರೆ ಹಿಡಿದು ಅಲೆದು, ಕಡೆಗೆ ಅಶುದ್ಧ ಬೆಣ್ಣೆಯನ್ನು ಪಡೆಯುವದು ಅರ್ಥಹೀನ ಪ್ರಯತ್ನವಷ್ಟೇ! ಅದೇ ರೀತಿ ಪೂಜೆಗೆ ಸರಳ – ಸುಲಭ, ಸಮರ್ಪಕವಾಗಿರುವ, ಅರ್ಥಗರ್ಭಿತ ತತ್ತ್ವವುಳ್ಳ ಇಷ್ಟಲಿಂಗವನ್ನು ಬಿಟ್ಟು, ಕ್ಷೇತ್ರ ಲಿಂಗಗಳಿಗಾಗಿ ಅಲೆಯುವುದನ್ನು ಶರಣರ ಧರ್ಮವು ಮನ್ನಿಸದು.'*

'ಅಂದರೆ ನೀವು ಪ್ರತಿನಿತ್ಯ ಪೂಜಿಸುವುದು ಲಿಂಗವನ್ನೇ ಅಲ್ಲವೇ?' ಮಹಾದೇವಿಯ ನಿರಾಕರಣೆಯಿಂದ ನಿರಾಶನಾದ ಕೌಶಿಕ; ಆದರೂ ಕುತೂಹಲದಿಂದ ಪ್ರೇರಿತನಾಗಿ ಕೇಳಿದ.

'ನಾವು ಪೂಜಿಸುವುದು ಇಷ್ಟಲಿಂಗವನ್ನು, ಸ್ಥಾವರಲಿಂಗವನ್ನಲ್ಲ....'

'ಎರಡೂ ಸಂಕೇತಿಸುವುದು ಒಂದನ್ನೇ ಅಲ್ಲವೆ?....'

'ಸ್ಥಾವರಲಿಂಗವು ಸಂಕೇತಿಸುವುದು ತ್ರಿಮೂರ್ತಿಗಳಲ್ಲೊಬ್ಬನಾದ ಶಂಕರನನ್ನು, ಇಷ್ಟಲಿಂಗವು ಸಂಕೇತಿಸುವುದು ಪರಾತ್ಪರ, ವಿಶ್ವಾತ್ಮನನ್ನು. ಸ್ಥಾವರ ಲಿಂಗ ಪೂಜಕರು ಶೈವರು, ನಾವು ಲಿಂಗವಂತರು. ಶೈವರೆಲ್ಲರಿಗೆ ಸಮಾನವಾದ ದೀಕ್ಷಾ ಸಂಸ್ಕಾರವಿಲ್ಲ. ಅವರಲ್ಲಿ ವರ್ಣಾಶ್ರಮ ವಿಭಜನೆಯಿದೆ; ನಮ್ಮಲ್ಲಿ ವರ್ಣವಿಭಜನೆ ಸಲ್ಲದು. ಮೇಲು ಕೀಳೆಂಬ ಜಾತಿಭೇದ, ಹೆಣ್ಣು ಗಂಡೆಂಬ ಲಿಂಗಭೇದ, ಗೃಹಸ್ಥ—ಸನ್ಯಾಸಿಯೆಂಬ ಆಶ್ರಮಭೇದಗಳಿಲ್ಲದೆ ಎಲ್ಲರಿಗೂ ಸಮಾನವಾಗಿ ಲಿಂಗದೀಕ್ಷಾವಿಧಿ ಇದೆ. ನಮ್ಮ ಧರ್ಮದ ಪ್ರಕಾರ ಹೆಣ್ಣು ಶೂದ್ರಳಲ್ಲ; ಪುರುಷರಂತೆ ಧರ್ಮಸಂಸ್ಕಾರಕ್ಕೆ ಯೋಗ್ಯಳು.'

'ಇದೆಲ್ಲ ಬಹಳ ಹೊಸತು ಮಹಾದೇವಿ! ರಜಸ್ವಲೆಯಾಗುವ ಹೆಣ್ಣನ್ನು ಪುರುಷ ಸಮಾನಳು, ಧಾರ್ಮಿಕಸಂಸ್ಕಾರಕ್ಕೆ ಯೋಗ್ಯಳು ಎಂಬುದು ಹಾಸ್ಯಾಸ್ಪದ. ಸ್ತ್ರೀಜನ್ಮದಲ್ಲಿ ಮುಕ್ತಿ ಸಾಧ್ಯವಿಲ್ಲ. ಆಕೆ ಪುರುಷಶರೀರವನ್ನು ಹೊತ್ತೇ ಮುಕ್ತಿ ಪಡೆಯಬೇಕು?....'

'ಪ್ರಭು....ಶರೀರ ರಚನೆಯಿಂದ ಸ್ತ್ರೀ - ಪುರುಷ ಎಂಬ ಭೇದವುಂಟೇ

---

* [illegible]

ವಿನಾ ಆತ್ಮದಲ್ಲಲ್ಲ. ಆತ್ಮವು ಹೆಣ್ಣಲ್ಲ, ಗಂಡಲ್ಲ. ಅಂದಾಗ 'ಹೆಣ್ಣು ಮುಕ್ತಿಗೆ ಅನರ್ಹಳು' ಎಂಬುದಕ್ಕೆ ಅರ್ಥವೇ ಇಲ್ಲ. ದೊಡ್ಡವರ ದರುಶನಕ್ಕೆ ಹೋಗುವಾಗ ರಥವೇರಿ, ಫಲಪುಷ್ಪಗಳೊಡನೆ ಹೋಗುವೆವು. ಶರೀರವು ರಥದಂತೆ, ಇಂದ್ರಿಯಗಳು ರಥದ ಕುದುರೆಗಳು, ಬುದ್ಧಿಯೇ ಸಾರಥಿ, ಸದ್ಗುಣಗಳು ಫಲ-ಪುಷ್ಪಗಳು. ಮಹಾನುಭಾವರ ಬಳಿಗೆ 'ನಾವು' ಹೋಗುವೆವೇ ಹೊರತು, ರಥ, ಕುದುರೆ, ಸಾರಥಿ—ಇವುಗಳಲ್ಲ. ಹಾಗೆಯೇ ಶರೀರ, ಇಂದ್ರಿಯಗಳು, ಬುದ್ಧಿ ಎಲ್ಲವೂ ಒಂದೊಂದು ಹಂತದಲ್ಲಿ ನಿಲ್ಲುವವು; ಆತ್ಮವಷ್ಟೆ ಪರಮಾತ್ಮನೊಡನೆ ಸಂಗಮಿಸುವುದು. ಹೆಣ್ಣಿನ ಶರೀರ, ಗಂಡಿನ ಶರೀರದ ಭೇದಗಳು ಈ ಮುಕ್ತಿಗೆ ಬಾಧಕವಾಗವು....'

'ಬಹಿಷ್ಠೆಯಾಗುವುದು ಪಾಪದ ಫಲವಲ್ಲವೆ....?'

'ಬಹಿಷ್ಠೆಯಾಗುವುದು ಪಾಪವಾದರೆ, ಅದು ತಡೆದು ಹುಟ್ಟುವ ಮಗುವೂ ಪಾಪದ ಫಲವಾಗಬೇಕಾದೀತು. ಆಗ ಪುರುಷನೂ ಪಾಪಿಯೇ! ಸ್ತ್ರೀ-ಪುರುಷರಿಬ್ಬರೂ ಪಾಪದ ಫಲವೆಂದರೆ, ಮನುಷ್ಯಜನ್ಮವೇ ಪಾಪಮಯ ಎಂದಂತಾದೀತು. ಇಂತಹ ಮೂರ್ಖತನಕ್ಕಿಂತ ದೊಡ್ಡದು ಬೇರಿಲ್ಲ. ಮಾನವ ಜನ್ಮ ಶಿವನಿತ್ತ ಪ್ರಸಾದ. ಅದನ್ನು ಸುಸಂಸ್ಕರಿಸುವುದು—ಕುಸಂಸ್ಕರಿಸುವುದು ಎರಡೂ ನಮ್ಮ ಕೈಲಿದೆ. ಅಂದಾಗ ಇಂತಹ ಪವಿತ್ರ ಜನ್ಮ ನೀಡುವ ಜನನಿಯನ್ನು ಪಾಪಯೋನಿಜಳೆನ್ನಬಹುದೇ? ಹೆಣ್ಣು ಮನುಕುಲದ ಕಣ್ಣು!'

'ದೇವೀ....ನಾವು ಮಾತನ್ನಾರಂಭಿಸಿದ್ದು ಗೋಕರ್ಣ ಪ್ರವಾಸದೊಡನೆ. ಆದರೀಗ ಕಾಲಹರಣ ಮಾಡುತ್ತಿರುವುದು ಗೊಡ್ಡು ತತ್ತ್ವಜ್ಞಾನದಲ್ಲಿ. ಹಲವಾರು ಧರ್ಮಶಾಸ್ತ್ರಗಳು, ಆಚರಣೆಗಳು ಘಂಟಾಘೋಷವಾಗಿ ಹೇಳುತ್ತವೆ—'ಗಂಗಾನದಿಯ ಸ್ನಾನ, ಸಮುದ್ರ ಸ್ನಾನಗಳು ಪಾಪನಾಶಕ ಸಾಧನಗಳು. ಎಷ್ಟೋ ಜನ್ಮಗಳ ಪುಣ್ಯವಿಶೇಷದಿಂದ ಅವು ಲಭ್ಯವಾಗುವವು' ಎಂದು.'

'ಅಜ್ಞಾನ-ಅವಿವೇಕಯುಕ್ತ ನಂಬಿಕೆ ಇದು. ಇಲ್ಲಿ ಮಾಡಿದ ಪಾಪಗಳನ್ನು ತೊಳೆದುಕೊಳ್ಳಲು ನೀವು ಕಾಶಿಗೆ ಹೋದರೆ, ಅಲ್ಲಿದ್ದು ಪಾಪ ಮಾಡಿದವರು ತಮ್ಮ ಪಾಪವನ್ನು ಕಳೆದುಕೊಳ್ಳಲು ಎಲ್ಲಿಗೆ ಹೋಗಬೇಕು?....' ಮನವಾರೆ ನಕ್ಕಳು ಮಹಾದೇವಿ. ಆ ಹೂ ನಗೆ ಕೌಶಿಕನಿಗೆ ತುಂಬ ಮೋಹಕ ಎನಿಸಿತು. ಮಾತನ್ನು ಮರೆತು ಆಕೆಯನ್ನು ದಿಟ್ಟಿಸಿದ.

'ಪಾಪವನ್ನು ತೊಳೆದುಕೊಳ್ಳುವುದು ಅಷ್ಟು ಸುಲಭವಾದ ಸಾಧನೆಯಲ್ಲ. ನೀರಿನ ಸ್ನಾನವು ಕೇವಲ ಮೈಕೊಳೆಯನ್ನು ತೊಳೆದೀತು, ಅಂತರಂಗದ

ಮಲಿನತೆಯನ್ನಲ್ಲ. ಅಂತರಂಗಸಂಬಂಧಿಯಾದ ಪಾಪವು ಹೋಗಬೇಕಾದರೆ ಮಾಡಿದ ತಪ್ಪಿಗೆ ಪರಿತಾಪಪಟ್ಟು, ಪಶ್ಚಾತ್ತಾಪದ ಕಣ್ಣೀರಿನಲ್ಲಿ ಮಿಂದು, ಸತ್ಕೃತಿಗಳನ್ನು ಮಾಡಬೇಕು. ಜಡದಿಂದ ಚೈತನ್ಯವು ಶುದ್ಧವಾಗದು; ಚೈತನ್ಯದಿಂದ ಜಡವು ಪವಿತ್ರವಾಗುವುದು. ಅಂತೆಯೇ ಸೃಷ್ಟಿಯ ಗಂಗಾ. ನದಿಯ ನೀರಿಗಿಂತಲೂ ಹೃದಯದ ಭಕ್ತಿಗಂಗೆಯೇ ಶಿವನಿಗೆ ಪ್ರಿಯ.'

'ಒಂದೇ ಊರಿನಲ್ಲಿ, ಒಂದೇ ವೃತ್ತಿಯಲ್ಲಿದ್ದು ಮನಸ್ಸಿಗೆ ಬೇಸರವಾಗಿ ಯಾವಾಗಲಾದರೊಮ್ಮೆ ತೀರ್ಥಕ್ಷೇತ್ರಕ್ಕೆ ಹೋಗಿ ಬಂದರೆ ತಪ್ಪೇನು ದೇವಿ ?'

'ಇಲ್ಲಿ ನಮ್ಮ ದೃಷ್ಟಿಕೋನ ಬಹು ಮುಖ್ಯ. 'ತೀರ್ಥಯಾತ್ರೆಗೆ ಹೋಗಿ ಉದ್ಧಾರ ಮಾಡಿಕೊಳ್ಳುತ್ತೇವೆ, ಪಾಪವನ್ನು ನಿರ್ಮೂಲನಿಸುತ್ತೇವೆ', ಎಂದರೆ ಶರಣಧರ್ಮವು, ಈ ನಂಬಿಗೆಯನ್ನು ಅಲ್ಲಗಳೆಯುವುದು. ರಸಪ್ರಜ್ಞೆಯ ದೃಷ್ಟಿಯಿಂದ ಪ್ರಕೃತಿಸೌಂದರ್ಯವನ್ನು ಈಂಟಲು, ನಿಸರ್ಗದ ಮಡಿಲಲ್ಲಿ ಧ್ಯಾನಿಸಿ ಮನಸ್ಸಿನ ನೆಮ್ಮದಿಯನ್ನು ಪಡೆಯಲು, ಒತ್ತಡದ ಬದುಕಿನ ಉದ್ವೇಗವನ್ನು ಸಡಲಿಸಲು, ಏಕಮುಖಜೀವನದ ಬೇಸರವನ್ನು ತೊಡೆಯಲು, ರಮ್ಯತಾಣಗಳಿಗೆ ಹೋದರೆ ತಪ್ಪಾಗದು. ಆದರೆ ತನ್ನಂತರಂಗವನ್ನು ಬಿಟ್ಟು ಮತ್ತೆಲ್ಲೋ ದೇವರನ್ನು ಅರಸುವುದನ್ನು ಮಾತ್ರ ನಾವು ಒಪ್ಪುವುದಿಲ್ಲ."

'ಬಹಳ ಪ್ರಗತಿಪರ ವಿಚಾರ ವಸಂತಕಾ; ನನ್ನಂತಹ ಶುದ್ಧ ನಾಸ್ತಿಕನ ನಂಬುಗೆಗಳನ್ನು ಸಹ ಈ ವಿಚಾರಧಾರೆಯು ಅಲುಗಾಡಿಸುತ್ತಿದೆ, ಆಕರ್ಷಿಸುತ್ತಿದೆ' ಮುಖಸ್ತುತಿ ಮಾಡಿ ಮನವೊಲಿಸಿಕೊಳ್ಳುವ ಪ್ರಯತ್ನ ಮಾಡಿದ ಕೌಶಿಕ.

ಗೋಕರ್ಣಯಾತ್ರೆಯ ನಿರಾಕರಣೆಯಿಂದಾಗಿ ಕೌಶಿಕ ನಿರಾಶನಾಗಿದ್ದ. ಕತ್ತಲೆಯಲ್ಲೊಂದು ಮಿಣುಕು ಪ್ರಕಾಶವನ್ನು ಕಂಡಂತೆ ಹೊಸ ಉಪಾಯ ಒಂದು ಹೊಳೆಯಿತು. ಸಂದರ್ಭ ಬಹು ಸೂಕ್ತವಿದೆಯೆಂದು ಭಾವಿಸಿ ಕೇಳಿದ:

'ಹಾಗಿದ್ದರೆ, ಮಹಾದೇವಿ ಇಲ್ಲಿಗೆ ಹತ್ತು ಹರದಾರಿ ದೂರದಲ್ಲಿ, ಬನವಾಸಿಯಿಂದ ಸ್ವಲ್ಪ ಆಚೆಗೆ ದಟ್ಟಾರಣ್ಯವಿದೆ. ವರದಾ ನದಿಯ ದಂಡೆ ಬಹಳಷ್ಟು ರಮಣೀಯ. ಆಗಾಗ ನಾವುಗಳು ಅಲ್ಲಿಗೆ ಹೋಗುವ ಪರಿಪಾಠವುಂಟು. ನೀನು ಒಪ್ಪಿದರೆ ಹೋಗೋಣವಂತೆ....' ಮಹಾದೇವಿ ಆಲೋಚಿಸತೊಡಗಿದಳು.

'ಆ ಅರಣ್ಯ ತುಂಬ ಸುಂದರ. ಬೆಳ್ದಿಂಗಳ ಬೆಳಗಿನಲ್ಲಿ ಆನೆಗಳು ನೀರಾಟವಾಡುವ ಪರಿ ನೋಡಬೇಕು. ಪ್ರಕೃತಿಮಾತೆಯ ಶೃಂಗಾರ ಕೋಣೆಯಂತಿದೆ ಆ ತಾಣ.'

'ವೃಕ್ಷಗಳ ಕಾಡು ನರಪ್ರಾಣಿಗಳು ವಾಸಿಸುವ ನಗರದ ಕಾಡುಗಳಿಗಿಂತ ಸಾಸಿರಪಟ್ಟು ಲೇಸು....' ಮಾರ್ಮಿಕವಾಗಿ ಮಹಾದೇವಿ ಹೇಳಿದಳು.

'ನೀನು ಅಂತಹ ಪ್ರಕೃತಿಯ ಸೌಂದರ್ಯ ನೋಡಿದ್ದೇ ಆದರೆ ಅದೆಷ್ಟು ಕವನಗಳನ್ನು ಕಟ್ಟುವೆಯೊ!' ಆಸೆಯನ್ನು ಪ್ರಚೋದಿಸುವ ಬಗೆಯಲ್ಲಿ ಹೇಳಿದ.

'ಪ್ರಭು....ತಾವು ಬಣ್ಣಿಸಿದಮೇಲೆ ನೋಡುವ ಅವಶ್ಯಕತೆ ಇಲ್ಲವೆನ್ನಿಸುತ್ತದೆ" ಮುಗುಳ್ನಕ್ಕು ಅಂದಳು.

'ಶಬ್ದ ಪರಿಣಾಮಕ್ಕಿಂತ ದೃಶ್ಯ ಪರಿಣಾಮ ಹೆಚ್ಚಿನದಲ್ಲವೆ? ಅಲ್ಲದೆ ಮಾರ್ಗದಲ್ಲಿ ಬನವಾಸಿಯನ್ನು, ಬಯಸಿದರೆ ಬಳ್ಳಿಗಾವೆಯನ್ನೂ ನೋಡಬಹುದು."

ಮಹಾದೇವಿಯ ಕಿವಿನಿಮಿರಿ, ಹೃದಯವರಳಿತು. ವೈರಾಗ್ಯಮೂರ್ತಿ ಪ್ರಭುದೇವನಿಗೆ ಜನ್ಮವಿತ್ತ ಬಳ್ಳಿಗಾವೆಯನ್ನು, ತನ್ನ ಮೋಹಪಾಶ ಬೀಸಿ ಪರಮಾರ್ಥಪಥದಲ್ಲಿ ಕಂಟಕವೊಡ್ಡಲು ಪ್ರಯತ್ನಿಸಿ, ಸೋತುಹೋದ ರಾಜಕುಮಾರಿ ಮಾಯಾದೇವಿಯ ರಾಜಧಾನಿ ಬನವಾಸಿಯನ್ನು ನೋಡುವ ಹಂಬಲ ತುಂಬಿ ನಿಂತಿತು. 'ಸೂಕ್ತ ಅವಕಾಶ ಸಿಕ್ಕರೆ ದಟ್ಟಾರಣ್ಯದಲ್ಲಿ ತಪ್ಪಿಸಿಕೊಂಡು ಪಾರಾಗುವುದೂ ಸಾಧ್ಯವಾಗಬಹುದು' ಎಂಬ ದೂರದ ಆಸೆಯೂ ಚಿಗುರೊಡೆದು, ಸ್ಫೂರ್ತಿ ತುಂಬಿತು.

'ಅಗತ್ಯವಾಗಿ ಬರುವೆ' ಎಂದಾಕೆ ಉತ್ಸಾಹದಿಂದ ಹೇಳಿದಾಗ ಕೌಶಿಕ ಸುಪ್ರೀತನಾದ. ತನ್ನನ್ನು ಸಂತೋಷಪಡಿಸಲು ಹಿಂದೆ ಮುಂದೆ ನೋಡದೆ ಪ್ರವಾಸಕ್ಕೆ ಹೊರಟ ಆಕೆಯ ಮನ ತನ್ನತ್ತ ಹರಿದಿದೆ; ಅದನ್ನು ಪಯಣದ ಸುಸಂದರ್ಭದಲ್ಲಿ ಇನ್ನಷ್ಟು ಸಮೀಪಕ್ಕೆ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿ, ರೆಕ್ಕೆ ಬಂದ ಹಕ್ಕಿಯಂತೆ ಉತ್ಸಾಹಿತನಾಗಿ ಪ್ರವಾಸದ ಸಿದ್ಧತೆಗೆ ಆಜ್ಞಾಪಿಸಲು ವಸಂತಕನನ್ನೂ ಕರೆದುಕೊಂಡು ನಡೆದ.

೩೧. ಪ್ರಕೃತಿಯ ಪ್ರಶಾಂತ ಮಡಿಲಲ್ಲಿ

ಮರುದಿವಸ ಮಧ್ಯಾಹ್ನವೇ ಹೊರಡುವುದೆಂದು ನಿರ್ಧಾರವಾಯಿತು. ಮಹಾದೇವಿ ಮದನರತಿಗೆ ಹೇಳಿದಳು :

‘ಊರವಲಯ ದಾಟಿ ಆಚೆ ಹೋಗುವತನಕ ನಾನು ಮುಚ್ಚಿದ ಮೇನೆಯಲ್ಲಿ ಬರುವೆ. ಆ ಬಳಿಕ ತೆರೆದ ರಥದಲ್ಲಿ ಹೋಗೋಣ. ಅಂದರೆ ಪ್ರಕೃತಿಯ ಚೆಲುವನ್ನು ಸವಿಯಲನುವಾಗುವುದು....’ ಅದಕ್ಕೆ ತಕ್ಕ ಸಿದ್ಧತೆಯಾಯಿತು.

ರಾಜನೊಡನೆ ವಸಂತಕ, ಮಹಾದೇವಿಯೊಡನೆ ಶಿವಕಾಮಿನಿ-ಮದನರತಿಯರು, ಅವಶ್ಯಕವಿದ್ದಷ್ಟು ಪರಿಚಾರಕ ಬಳಗವೂ ಹೊರಟಿತು. ಯಶೋಮತಿ ಬರಲಪೇಕ್ಷಿಸಿದರೂ ಕೌಶಿಕ ಆಕೆಯ ಬರುವಿಕೆಯನ್ನು ಬಯಸದೆ, ತಪ್ಪಿಸಿದ.

ಈ ಪ್ರವಾಸದ ಸುದ್ದಿ ಹೇಗೋ ಲಿಂಗಮ್ಮನ ಕಿವಿಯನ್ನು ತಲುಪಿತ್ತು. ಓಂಕಾರ ಮನಸ್ಸನ್ನು ಕಲ್ಲುಮಾಡಿಕೊಂಡು ಮಗಳಿರುತ್ತಿದ್ದ ಕೋಣೆಯನ್ನು ಸೇರಿದ್ದ. ಲಿಂಗಮ್ಮನಿಗೆ ವಾತ್ಸಲ್ಯವನ್ನು ಹತ್ತಿಕ್ಕಲಾಗಲಿಲ್ಲ. ಮತ್ತೊಮ್ಮೆ ನೋಡಬೇಕೆನಿಸಿ, ಅರಮನೆಗೆ ಹೇಳಿಕಳಿಸಿದ್ದರೂ ಮಹಾದೇವಿ ಕಾಣಲು ಒಪ್ಪಿರಲಿಲ್ಲ. ಹೀಗಾಗಿ ಬಯಕೆಯನ್ನು ಅದುಮಿಕೊಂಡಿದ್ದಳು. ಇಂದು ಮೇನೆಯು ಮನೆಯ ಮುಂದೆಯೇ ಹಾಯ್ದು ಹೋಗಬೇಕಾಗಿತ್ತು. ಅದನ್ನು ತಿಳಿದು ತುಪ್ಪಹಾಕಿ ಮಾಡಿದ್ದ ಹೆಸರುಂಡೆ, ಕಾಯಿಕಜ್ಜಾಯವನ್ನು ಅಡಕೆಯ ಪಟ್ಟಿಯಲ್ಲಿ ಕಟ್ಟಿದಳು. ರಾಜ ಪರಿವಾರ ಸಾಗುತ್ತಲಿರುವಾಗ ತಲೆ ಬಾಗಿಲಿಗೆ ಬಂದು ನಿಂತಳು.

ಲಿಂಗಮ್ಮನಿಗೆ ಅಂದಿನ ವೈಹಾಳಿ ಸಮಾರಂಭದ ಸಂಭ್ರಮ ನೆನಪಾಗಿ ಹೊಟ್ಟೆಯು ಸಂಕಟದಿಂದ ತೊಳೆಸಿ, ಕಣ್ಣು ಕತ್ತಲಿಟ್ಟಿತು. ‘ಅದೊಂದು ಘಟನೆ ನಡೆಯದಿದ್ದರೆ ಮಗಳ ಬದುಕು ದುರಂತ ನಾಟಕವಾಗುತ್ತಿರಲಿಲ್ಲ....’ ಕಣ್ಣು ಹನಿಗೂಡಿದವು. ಮಹಾದೇವಿಯು ಮನೆಬಿಟ್ಟು ಇನ್ನೂ ಒಂದು ವಾರ ಸಹ ಆಗಿರದಿದ್ದರೂ ಎಷ್ಟೋ ವರುಷಗಳಾದಂತೆನಿಸಿತ್ತು ಹೆತ್ತವರಿಗೆ. ಬದುಕಿನಲ್ಲಿಯ ಉತ್ಸಾಹ ಕಳೆದಂತಾಗಿ ಮುಪ್ಪಿನ ಕಳೆ ಅವರ ಮುಖವನ್ನಾಶ್ರಯಿಸುತ್ತಿತ್ತು.

ರಾಜಪರಿವಾರದ ಮಧ್ಯೆ ಮುಚ್ಚಿದ ಅಲಂಕೃತ ಮೇನೆಯು ಸಾಗಿತು. ಅರಮನೆಯ ಹೆಬ್ಬಾಗಿಲು ದಾಟಿದಾಗ ಮಹಾದೇವಿ ಮೇನೆಯ ತೆಳುವಾದ ತೆರೆಯಿಂದ ಹೊರಜಗತ್ತನ್ನು ನೋಡತೊಡಗಿದಳು. ಹೊರಗಿನವರಿಗೆ ಮೇನೆಯು

ಒಳಗು ಕಾಣುತ್ತಿರಲಿಲ್ಲ, ಆದರೆ ಆಕೆಗೆ ಒಳಗಿನಿಂದ ಹೊರಜಗತ್ತೆಲ್ಲವೂ ಕಾಣತೊಡಗಿತ್ತು. ರಾಜಬೀದಿಗೆ ಬಂದುದು ಅರಿವಾಗುತ್ತಲೇ ಎದೆ ಕಂಪಿಸ ತೊಡಗಿತು. ತನ್ನನ್ನು ಹೆತ್ತ ಮನೆಯನ್ನು ಕಣ್ತುಂಬ ನೋಡಬೇಕೆಂಬ ಅದಮ್ಯ ಆಕಾಂಕ್ಷೆ ಉಕ್ಕಿ ಬಂದಿತು. ತಾನು ಹುಟ್ಟಿದ, ಬೆಳೆದ, ಆಡಿದ ಮನೆಯು ಈಗ ಹೇಗಿರಬೇಕು ಎಂದು ಕಲ್ಪಿಸಿಕೊಳ್ಳಲಾರಂಭಿಸಿದಳು. ತಾನಿದ್ದಾಗ ದಿನ ಬೆಳಗಾಗುತ್ತಲೇ ಕಸಹೊಡೆದು, ಸಗಣಿಯ ನೀರನ್ನು ಚಿಮುಕಿಸಿ, ಬಣ್ಣಬಣ್ಣದ ರಂಗೋಲೆಗಳನ್ನು ಬಿಡುತ್ತಿದ್ದಳು. ಓರಗೆಯ ಗೆಳತಿಯರಲ್ಲಿ ದಿನವೂ ಸ್ಪರ್ಧೆ ಇರುತ್ತಿತ್ತು—ಯಾರು ಚೆನ್ನಾಗಿ ಬಿಡುತ್ತಾರೆಂದು. ಶಾಲೆಗೆ ಹೋಗುವಾಗ ಒಬ್ಬರೊಬ್ಬರ ಮನೆಗೆ ಹೋಗಿ ನೋಡುತ್ತಿದ್ದರು. ಮಹಾದೇವಿಯ ಕಲಾವಂತಿಕೆಯ ರಂಗವಲ್ಲಿ ಉಳಿದವರನ್ನು ಮೀರಿಸುತ್ತಿತ್ತು. ಹೀಗಾಗಿ ವಿಶೇಷ ಸಮಾರಂಭಗಳಲ್ಲಿ ಹಸೆಮಣೆಯ ಹತ್ತಿರ, 'ದೇವರ ಕಟ್ಟೆ'ಯ ಸುತ್ತಲೂ ರಂಗವಲ್ಲಿ ಬಿಡಲು, ಹಂದರವನ್ನು ಅಲಂಕರಿಸಲು ಈ ಬಾಲೆಗೆ ವಿಶೇಷ ಆಮಂತ್ರಣ ಕಾದಿರುತ್ತಿತ್ತು. ಅಂದಿನ ಅನೇಕ ಘಟನೆಗಳು ಒಂದೊಂದಾಗಿ ನೆನಪಿನಲ್ಲಿ ಸುಳಿದು ಹೃದಯವನ್ನು ಹಿಂಡಿದಂತಾಯಿತು.

ಮನೆಯು ಸಮೀಪಿಸಿದಾಗ ಸ್ವಲ್ಪ ಇಣುಕಿ ನೋಡಿದಳು. ಅಂದಿನ ಅಚ್ಚುಕಟ್ಟುತನವಾಗಲಿ, ರಂಗವಲ್ಲಿಯ ಕಲಾವಂತಿಕೆಯಾಗಲಿ ಕಾಣಬರದೆ ಸಂಪ್ರದಾಯವೆಂಬಂತೆ ನೀರನ್ನು ಚಿಮುಕಿಸಿ, ಗಂಡಭೇರುಂಡದ ರಂಗೋಲೆ ಬಿಟ್ಟಿದ್ದರು.

'ಓಹ್....ತಲೆಬಾಗಿಲೇ ಹೀಗಿರುವಾಗ....ಇನ್ನು ತಾಯಿ ತಂದೆಯರು ಹೇಗೋ ! ಒಂದು ವೇಳೆ ಆಕಸ್ಮಿಕವಾಗಿ ಅವರು ಕಂಡರೆ ಅವರ ದುಃಖತಪ್ತ ಮುಖ ನೋಡಲಾದೀತೇ ? ಆದರಿಂದ ನನ್ನ ದುಃಖವೂ ಮುಮ್ಮಡಿಸಬಹುದು. ಅಲ್ಲದೆ, ದಿನದಿನಕ್ಕೆ ಎಲ್ಲ ವ್ಯಾಮೋಹದ ತಂತುಗಳನ್ನೂ ಕತ್ತರಿಸಿಕೊಂಡು ಬಂಧನ ರಹಿತಳೂ, ನಿರ್ಲಿಪ್ತಳೂ ಆಗಬೇಕು ಎಂದಿರುವ ನನ್ನ ಮನ ಮತ್ತೇಕೆ ಹೆತ್ತವರ ಚಿಂತನೆಯಲ್ಲಿ ತೊಡಗಬೇಕು....? ಬೇಡ ಬೇಡ ; ಅತ್ತ ನೋಡುವುದೇ ಬೇಡ....' ಹೊರತೆರೆಯನ್ನು ಸ್ವಲ್ಪವಾಗಿ ಸರಿಸಿಹಿಡಿದಿದ್ದ ಕೈಗಳನ್ನು ಸರಕ್ಕನೆ ಎಳೆದುಕೊಂಡು, ದೃಢ ಮನದಿಂದ ಒಳಗಿನ ದಪ್ಪ ತೆರೆಯನ್ನು ಸರಿಸಿಬಿಟ್ಟಳು. ಆಕೆಯ ಮನವು ಹಗುರಾಯಿತು.

ತಲೆಬಾಗಿಲಲ್ಲಿ ನಿಂತು ಅತಿ ಸೂಕ್ಷ್ಮವಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದ ಲಿಂಗಮ್ಮ ಒಂದೆರಡು ಬೆರಳುಗಳು ಮೇನೆಯ ಗೂಡಿನ ತೆರೆಯನ್ನು

ಪೂರ್ತಿ ಮುಚ್ಚಿದಾಗ ನಿರಾಶೆ ಕವಿದು ಬಂದು, ದೀರ್ಘವಾದ ನಿಟ್ಟುಸಿರಿಟ್ಟು ಮಡಿಲಲ್ಲಿದ್ದ ತಿನಿಸಿನ ಗಂಟನ್ನು ನೋಡಿದಳು. ಅನಿತರಲ್ಲಿ ನಿಧಾನವಾಗಿ ಸಾಗುತ್ತಿದ್ದ ಮೇನೆಯ ಸಂಗಡ ಕಾಲುನಡಿಗೆಯಲ್ಲಿ ಸಾಗಿದ್ದ ಶಿವಕಾಮಿನಿ ಕುತೂಹಲದಿಂದ ಓಂಕಾರನ ಮನೆಯಕಡೆ ದೃಷ್ಟಿ ಹಾಯಿಸಿದಳು. ಮಹಾದೇವಿಯನ್ನು ಕೇಳಲು ಹೋದಾಗ ತಾನೂ ಹೋಗಿದ್ದ ಆಕೆ ಲಿಂಗಮ್ಮನ ಗುರುತು ಹಿಡಿದಳು.

'ಇಂತಹ ಸುಪುತ್ರಿಯನ್ನು ಹೆತ್ತ ಹೊಟ್ಟೆ ಇದಲ್ಲವೇ ?' ಎಂದು ನಮಸ್ಕರಿಸಿ ಮುಗುಳ್ನಕ್ಕಾಗ, ಲಿಂಗಮ್ಮ ಆಕೆಯನ್ನು ಕೈಬೀಸಿ ಕರೆದಳು.

'ನೀನು ಯಾರು, ನನ್ನ ಮಗಳು ಬಂದಿರುವಳೇ ?....'

'ನನ್ನ ಹೆಸರು ವಿಲಾಸಿನಿ ಅಂತ ಇತ್ತಮ್ಮ, ತಾಯಿಯವರು ಬದಲಿಸಿ ಶಿವಕಾಮಿನಿ ಅಂತ ಮಾಡಿರುವರು. ಅವರೂ ಪ್ರವಾಸದಲ್ಲಿ ಭಾಗಿಯಾಗಿದ್ದಾರೆ. ನಾನವರ ಆಪ್ತಸಖಿ.'

'ಮೇನೆಯು ನಿಲ್ಲಲಾರದೇ....?' ಆಸೆಯನ್ನು ಕಣ್ಣಲ್ಲಿ ಹೊತ್ತು ಕೇಳಿದಳು.

'ಅದಕ್ಕೆ ರಾಜರ ಒಪ್ಪಿಗೆ ಬೇಕು ; ಹೋ....ಆಗಲೇ ಮೇನೆ ಮುಂದೆ ಸಾಗಿತು....'

'ಹೆತ್ತೊಡಲಿಗೆ ಮಗಳ ಮುಖ ನೋಡುವ ಭಾಗ್ಯವಿಲ್ಲ; ಹೋಗಲಿ, ನನ್ನದೊಂದಾಸೆಯಿದೆ ಪೂರೈಸುವೆಯಾ ?' ಶಿವಕಾಮಿನಿಯ ಕೈಹಿಡಿದು ದೀನಳಾಗಿ ಲಿಂಗಮ್ಮ ಕೇಳಿದಳು. ಶಿವಕಾಮಿನಿ ಒಪ್ಪಿಗೆ ಸೂಚಿಸುವಂತೆ ತಲೆಯನ್ನಲುಗಿಸಿದಳು.

'ನೋಡು....ಈ ಅಡಿಕೆಯ ಪಟ್ಟೆಯಲ್ಲಿ ತುಪ್ಪ ಹಾಕಿ ಮಾಡಿದ ಹೆಸರುಂಡೆ, ಸಿಹಿಯಾದ ಕಾಯಿಕಜ್ಜಾಯವಿದೆ. ಹಡೆದವ್ವ ಇತ್ತಳೆಂದು ಹೇಳಿ, ಕೊಟ್ಟು ತಿನ್ನಿಸುವೆಯಾ....' ದುಃಖ ತುಂಬಿ ಬಂದ ಕಂಠದಿಂದ ನುಡಿದಳು. ಆ ಮಾತೃಹೃದಯದ ಮಮತೆ ಶಿವಕಾಮಿನಿಗೆ ತಟ್ಟಿತು.

'ಆಗಲಿ ತಾಯಿ....' ಕಣ್ಣೀರು ತುಂಬಿ ಬಂದ ಶಿವಕಾಮಿನಿ ನುಡಿದಳು.

'ಮರೆಯಬೇಡ ಮತ್ತೆ....ಒಂದೆರಡು ಹೆಚ್ಚು ನೀಡು....' ಭಾರವಾದ ಹೃದಯದಿಂದ ಮೌನವಾಗಿ ತಲೆಯಲ್ಲಾಡಿಸಿ, ಶಿವಕಾಮಿನಿ ಪರಿವಾರವನ್ನು ಕೂಡಿಕೊಂಡಳು.

ರಾಜಮಾರ್ಗವನ್ನು ಗುಡಿಸಿ ಸ್ವಚ್ಛೀಕರಿಸಲು ಆಳುಗಳು ಬಂದಾಗ ಲಿಂಗಮ್ಮ ಅವರನ್ನು ಕೇಳಿದ್ದಳು. ಅಂದಿನ ದಿನದಂತೆ ಏನಾದರೂ ವಿಶೇಷ ಸಮಾರಂಭ ಉಂಟೇನೋ ಎಂದು. ಆಗ, ರಾಜಪರಿವಾರವು ಮತ್ತು ಅದರಲ್ಲಿ ತನ್ನ ಮಗಳು ಪ್ರವಾಸ ಹೋಗುವ ಸುದ್ದಿ ತಿಳಿದು, ಆ ಕ್ಷಣದಿಂದಲೇ ತಿನಿಸು

ಮಾಡಲಾರಂಭಿಸಿದ್ದಳು. 'ಮಗಳ ಮುಖ ನೋಡಲಾಗದಿದ್ದರೂ, ಕೈಯ್ಯಾರೆ ಮಾಡಿದ ತಿನಿಸನ್ನಾದರೂ ಮುಟ್ಟಿಸಲು ಸಾಧ್ಯವಾಯಿತಲ್ಲ' ಎಂದು ನೆಮ್ಮದಿಯ ಉಸಿರುಬಿಟ್ಟು ಒಳಗೆ ಹೋದಳು.

* * *

ಪ್ರವಾಸವು ಬಹು ಹಿತಕರವಾಗಿತ್ತು. ತೆರೆದ ರಥದಲ್ಲಿ ಕುಳಿತು ಸೃಷ್ಟಿಯ ಸೊಬಗನ್ನು ಸವಿಯುತ್ತ ಹರ್ಷಭರಿತಳಾಗಿದ್ದಳು ಮಹಾದೇವಿ. ಬಹುಮುಂದೆ ಇದ್ದ ಕೌಶಿಕ ತನ್ನ ರಥವನ್ನು ಮಹಾದೇವಿಯ ರಥದ ಮುಂದೆ ನಡೆಸಲು ಸಾರಥಿಗೆ ಆಜ್ಞಾಪಿಸಿದ. ನಟ್ಟನಡುವಿನ ಕಟ್ಟಿಗೆಯ ಪಟ್ಟಿಯ ಹಿಂಭಾಗಕ್ಕೆ ಶಿವಕಾಮಿನಿ, ಮದನರತಿಯರು ಕುಳಿತಿದ್ದರು. ಸಾರಥಿಯ ಹಿಂಬದಿಗೆ ಮಹಾದೇವಿ ರಥದ ಮುಂಭಾಗದಲ್ಲಿ ಕುಳಿತಿದ್ದಳು.

'ಹಗುರವಾಗಿ ಕುದುರೆಗಳನ್ನು ಓಡಿಸು ಸಾರಥಿ, ನಿಧಾನವಾದರೂ ಚಿಂತೆಯಿಲ್ಲ; ಅರಸಿಯರಿಗೆ ಶ್ರಮವಾಗಬಾರದು....' ಮಹಾದೇವಿಯು ಕುಳಿತಿದ್ದ ರಥದ ಸಾರಥಿಗೆ ಸೂಚಿಸಿ, ಆಕೆಯ ಮುಖವನ್ನು ನೋಡಿ ಮುಗುಳ್ನಕ್ಕ. ಮುಂದಿನ ರಥದ ಹಿಂಭಾಗದಲ್ಲಿ ತನಗೆ ಎದುರಾಗಿ ಕುಳಿತು ದಿಟ್ಟಿಸಲು ತೊಡಗಿದ ಕೌಶಿಕನನ್ನು ಕಂಡು ಮಹಾದೇವಿಗೆ ಸಂಕೋಚವೆನಿಸಿತು.

'ಕೌಶಿಕನು ಅನೇಕರು ತಿಳಿದಂತೆ ದುಷ್ಟನೇನಲ್ಲ, ಆದರೆ ದುರ್ಬಲನು. ಅವನ ಪರಿತಾಪಕ್ಕೆ ಹುಚ್ಚು ನಗೆ ಬರುತ್ತದೆ, ಒಮ್ಮೊಮ್ಮೆ ಮರುಕವೆನಿಸುತ್ತದೆ. ತನ್ನ ಧರ್ಮಪತ್ನಿ ಯಶೋಮತಿಯಲ್ಲಿ ನಿಷ್ಠನಾಗಿ, ಉಳಿದ ಹೆಂಗೆಳೆಯರನ್ನು ತಾಯಿ ಎಂದು, ತಂಗಿಯೆಂದು, ಮಗಳೆಂದು ಭಾವಿಸಿದರೆ ನಾನು ಇವನನ್ನು ನಿಜವಾಗಿಯೂ ಗೌರವಿಸುವೆ. ಆದರೆ ಬಲು ಮೂರ್ಖ; ಕಾಮತೃಪ್ತಿ, ಅಂಗಸೌಖ್ಯದ ಹೊರತು ಹೆಣ್ಣಿನೊಡನೆ ಬೇರಾವ ಸಂಬಂಧವೇ ಸಾಧ್ಯವಿಲ್ಲವೇನೋ ಎಂಬಂತೆ ವರ್ತಿಸುವನು. ಶೂರತ್ವವಿದೆ, ಔದಾರ್ಯವಿದೆ, ನಾಡುನುಡಿಗಳ ಅಭಿಮಾನವಿದೆ....ಆದರೆ ಅತಿಕಾಮುಕತನ, 'ಸುಂದರವಾದ ವಸ್ತುಗಳಿಗೆಲ್ಲ ನಾನೇ ಒಡೆಯ' ಎಂಬ ಅಜ್ಞಾನದ ಹಮ್ಮು ಇವನ ವ್ಯಕ್ತಿತ್ವವನ್ನು ಕುಂದಿಸುತ್ತಿವೆ. ಈ ಒಂದೇ ದೋಷಕ್ಕಾಗಿ ಇವನ ವ್ಯಕ್ತಿತ್ವ ಕಪ್ಪಾಗಿ ಕಾಣುತ್ತದೆ....' ಸೃಷ್ಟಿಸೌಂದರ್ಯವನ್ನು ಸವಿಯುತ್ತಿದ್ದ ಮನಕ್ಕೆ ಅಡ್ಡವಾಗಿ ಬಂದ ಕೌಶಿಕನ ಬಗ್ಗೆ ಅಪಾರ ಜಿಗುಪ್ಸೆಯಾಯಿತು. ಬನವಾಸಿಯನ್ನು ಇರುಳಾಗುವುದರಲ್ಲಿ ಮುಟ್ಟಲು ಸಾಧ್ಯವಾಗದ ಕಾರಣ, ಸಂಜೆಯಾಗುವ ವೇಳೆಗೆ ದಾರಿಯ ಬದಿಯ ಹಳ್ಳಿಯೊಂದರ ಬಳಿ ಬೀಡುಬಿಟ್ಟರು. ಬಯಲಲ್ಲಿ ಇರುಳನ್ನು ಕಳೆಯುವ ಸಂತೋಷದಿಂದಾಗಿ ಮಹಾದೇವಿಯ ಮನ ಗರಿಬಿಚ್ಚಿ ಕುಣಿಯುತ್ತಿತ್ತು.

ಬೆಳಗಾಗೆದ್ದು ಅಲ್ಲಿಯೇ ಮಿಂದು ಪೂಜಿಸಿದ ಬಳಿಕ ಪ್ರಯಾಣ ಮುಂದುವರೆಯಿತು. ಹೊತ್ತಿಳಿಯುವ ಮುನ್ನವೇ ಬನವಾಸಿಯನ್ನು ಮುಟ್ಟುವ ಪ್ರಯತ್ನ. ಕುದುರೆಗಳು ಉತ್ಸಾಹ-ಉಲ್ಲಾಸಗಳಿಂದ ಓಡುತ್ತ ದಾರಿಯನ್ನು ಸವೆಸ ತೊಡಗಿದಾಗ ಮೇಘಗಳ ತೊಟ್ಟಿಲಲ್ಲಿ ತಾನು ಕುಳಿತುಹೋದಂತೆನಿಸುತ್ತಿತ್ತು. ವನಶ್ರೀಯ ಚೆಲುವನ್ನು ಕಂಗಳಿಂದ ಹೀರಿ ಹೃದಯದ ಬಟ್ಟಲಲ್ಲಿ ಹಿಡಿದಿಟ್ಟುಕೊಳ್ಳುವಂತೆ ಎವೆಯಿಕ್ಕದೆ ನೋಡುತ್ತಿದ್ದಳು. ದಾರಿಯ ಎರಡೂ ಬದಿಗಳ ಹೆಮ್ಮರಗಳು ಪೃಥ್ವಿಯನ್ನು ಮೆಟ್ಟಿ ಆತ್ಮವಿಶ್ವಾಸದಿಂದೆಂಬಂತೆ ನಿಂತಿದ್ದವು. ಬೆಟ್ಟಗಳ ಮೇಲೆ ರನ್ನಗಂಬಳಿಯನ್ನು ಹಾಸಿದಂತೆ ಕಾಣುತ್ತಲಿದ್ದಿತು. ಸುಪ್ರಭಾತದ ರಂಜನೀಯ ವಾತಾವರಣದಲ್ಲಿ ಶುಕ ಪಿಕ ಕೋಕಿಲೆಗಳು ದನಿತೆಗೆದು ಹಾಡುತ್ತಿದ್ದವು. ರವಿಕಿರಣದ ಬಿಸಿಯುಪ್ಪಿಗೆ, ಸಂಗಡವೇ ಕಾಡಿನಲ್ಲಿ ಹಾಯ್ದು ಬರುವ ತಂಪುಗಾಳಿಯ ಸ್ಪರ್ಶ ಕಚಗುಳಿ ಇಡುತ್ತಿತ್ತು. ಅನೇಕ ಬಗೆಯ ಕಾಡುಹೂವುಗಳ ವಾಸನೆಗಳು ಗಾಳಿಯಲ್ಲಿ ಮಿಶ್ರಣವಾಗಿ ಹೊಸದೊಂದು ವಾಸನೆಯನ್ನು ಸೃಷ್ಟಿಸಿದ್ದವು.

'ಸ್ವರ್ಗ-ಸ್ವರ್ಗ ಎಂದು, ಸತ್ತ ಬಳಿಕ ಪಡೆಯಬೇಕೆಂದು ಹಂಬಲಿಸುತ್ತ ಕಣ್ಮುಚ್ಚಿ ಕುಳಿತುಕೊಳ್ಳುವ ಮಿಥ್ಯಾವಾದಿಗಳ ಪ್ರಯತ್ನಕ್ಕೆ ಏನನ್ನಬೇಕೋ! ಈ ಜೀವಂತ ಸ್ವರ್ಗವನ್ನು ಬಿಟ್ಟು, ಕೆಲವು ಸಲ ನಿಷ್ಕ್ರಿಯತೆಯಿಂದ ಇದನ್ನೇ ನರಕವನ್ನಾಗಿ ಮಾಡಿ, ಇನ್ನೊಂದೆಡೆ ಹುಡುಕುವುದು ಅಜ್ಞಾನವಲ್ಲವೇ? ಆಧ್ಯಾತ್ಮಜೀವಿಯಾದ ಮಾತ್ರಕ್ಕೆ ಸೌಂದರ್ಯಪ್ರಜ್ಞೆ, ರಸಪ್ರಜ್ಞೆಗಳನ್ನು ಏಕೆ ಕಳೆದುಕೊಳ್ಳಬೇಕೋ! ಸೃಷ್ಟಿಯ ಸೌಂದರ್ಯವನ್ನು, ಜೀವಂತ ಚೆಲುವನ್ನು ಕಂಡು ಆನಂದಿಸುವುದು ರಸಪ್ರಜ್ಞೆ. ಆದರೆ ಇದೇನೂ ರಸಿಕಪ್ರಜ್ಞೆಯಲ್ಲ. ರಸಿಕತೆಯಲ್ಲಿ ವಿಲಾಸದ ಅಂಶ ಬೆರೆದಿದ್ದರೆ, ರಸಪ್ರಜ್ಞೆಯು ವಿರಕ್ತಿಯಿಂದ ಕೂಡಿರಲೂ ಸಾಕು!'

ರಥದ ಗಾಲಿಗಳು ಉರುಳುತ್ತಿದ್ದಂತೆಯೇ, ವಿಚಾರಗಳೂ ಒಂದೊಂದಾಗಿ ಚಿತ್ತಭಿತ್ತಿಯಮೇಲೆ ಸರಿಯುತ್ತಿದ್ದವು. ಗುರುಲಿಂಗದೇವರು ಒಮ್ಮೆ ಶ್ರೀಗಿರಿಗೆ ಹೋಗಿದ್ದಾಗ, ಅಲ್ಲಿಂದ ಅನತಿ ದೂರದಲ್ಲಿ ಪಶ್ಚಿಮ ದಿಕ್ಕಿನಲ್ಲಿರುವ ಕದಳಿಯ ಬನದ ಬಗ್ಗೆ ವರ್ಣಿಸಿದ್ದರು. ಭೂದೇವಿಯ ಸೀರೆಯ ನೆರಿಗೆಗಳಂತೆ, ಇನ್ನೂ ದಟ್ಟವಾದ ವನ್ಯ ಸಂಪತ್ತಿನಿಂದ ಕೂಡಿದ ತಾಣವದು. ಅಸಂಖ್ಯಾತ ತಪಸ್ವಿಗಳು ಅಲ್ಲಿ ತಪಸ್ಸನ್ನು ಮಾಡುತ್ತಿದ್ದ ಬಗ್ಗೆಯೂ ಗುರುಲಿಂಗರು ಹೇಳಿದ್ದರು. 'ಏಕಾಂತಜೀವನಕ್ಕೆ, ಕಠಿಣ ತಪೋಸಾಧನೆಗೆ ಅದಕ್ಕಿಂತಲೂ ಮಿಗಿಲಾದ

ತೀರಬೇಕೆಂಬ ಆಸೆಯುದಿಸಿ, ಅವಕಾಶ ಸಿಗದ ಗುಪ್ತವಾಗಿ ಅಡಗಿತ್ತು. ಬಾಲ್ಯದಿಂದಲೂ ಚೆನ್ನಮಲ್ಲಿಕಾರ್ಜುನ, ಶ್ರೀಗಿರಿ, ಕದಳಿಯಬನ ಎಂಬೀ ಶಬ್ದಗಳು ಅವಳ ಹೃದಯವನ್ನು ಪುಳಕಿತ ಮಾಡುತ್ತಿದ್ದವು. ಮತ್ತೊಮ್ಮೆ ಪ್ರವಾಸ ಹೋಗಿ ಬಂದ ಗುರುಲಿಂಗರು 'ಸಾಮೂಹಿಕ, ಸಾಂಘಿಕ ಬಗೆಯ ಬದುಕನ್ನು ಅರಿಯಲು, ಸಂಪೂರ್ಣ ವ್ಯಕ್ತಿತ್ವ ಪಡೆಯಲು ಕಲ್ಯಾಣವನ್ನು ಕಾಣಬೇಕು' ಎಂದಿದ್ದರು. ಹೀಗಾಗಿ ಕಲ್ಯಾಣ, ಕದಳಿ ಇವೆರಡು ಪದಗಳು ಹೃದಯಗಹ್ವರದಲ್ಲಿ ಪ್ರತಿಧ್ವನಿಸುತ್ತಿದ್ದವು. ಅಂತಹ ಶ್ರೀಗಿರಿಯನ್ನು ಈ ಕಾಡಿಗೆ ಹೋಲಿಸಿದಾಗ, ಇದು ಅದರೊಡನೆ ಸ್ಪರ್ಧೆಗೆ ನಿಲ್ಲಲಾರದು ಎನಿಸಿತು. ಮಾರ್ಗಮಧ್ಯದಲ್ಲಿ ಅಲ್ಲಮಪ್ರಭುವಿನ ಜನ್ಮಸ್ಥಾನವಾದ ಬಳ್ಳಿಗಾವೆಯನ್ನು ಸಂದರ್ಶಿಸಿದರು. ಬನವಾಸಿಯ ಪನ್ನಿರ್ಛಾಸಿರ ನಾಡಿನ ರಾಜಧಾನಿಯಾಗಿ, ವಿದ್ಯಾಕೇಂದ್ರವಾಗಿದ್ದ ಬಳ್ಳಿಗಾವೆ ಇತಿಹಾಸಪ್ರಸಿದ್ಧ ನಗರಿಯಾಗಿತ್ತು. ನಾಗರೀಕತೆ, ಸುಸಂಸ್ಕೃತಿಗಳ ಸಂಗಮವಾದ ಆ ಬೃಹತ್ ಪಟ್ಟಣ ಸುಂದರ ಶಿಲ್ಪಕಲೆಯ ದೇವಾಲಯಗಳಿಂದಲೂ, ಪಂಚ ಶೈವ ವಿದ್ಯಾಪೀಠಗಳಿಂದಲೂ ಶೋಭಿಸುತ್ತಿತ್ತು.

ಮಹಾದೇವಿಯು ಶಿಲ್ಪಕಲೆಗೆ ಸುಪ್ರಸಿದ್ಧವಾಗಿದ್ದ ಕೇದಾರೇಶ್ವರ ದೇವಾಲಯವನ್ನು, ಶಿಲೆಯಲ್ಲರಳಿದ ಕಲೆಯನ್ನು ಕಂಡು ಮೂಕವಿಸ್ಮಿತಳಾದಳು. ಶ್ರೀ ಕೇದಾರೇಶ್ವರ ದೇವಾಲಯದ ಗುರುಸ್ಥಾನವಾದ ಕೋಡಿಮಠ ಅಪೂರ್ವ ತಾಡವೋಲೆಗಳ ಸಂಗ್ರಹದಿಂದ ಮುಮುಕ್ಷುಗಳಿಗೆ ಪ್ರಿಯವಾದ ತಾಣವಾಗಿತ್ತು. ಹೀಗಾಗಿ ಓಂಕಾರಶೆಟ್ಟಿ ಆಗಾಗ ಬಳ್ಳಿಗಾವೆಗೆ ಬಂದು ಅಧ್ಯಯನಕ್ಕಾಗಿ ತಾಡವೋಲೆಗಳ ಕಟ್ಟುಗಳನ್ನು ಮಗಳಿಗೆ ಒಯ್ದುಕೊಡುತ್ತಿದ್ದ. ಬಳ್ಳಿಗಾವೆಯ ಆ ಕೋಡಿಮಠದ ಸ್ಥಾನಪತಿಗಳು ಶರಣಧರ್ಮದ ತತ್ತ್ವಗಳಿಂದ ಹೆಚ್ಚು ಹೆಚ್ಚಾಗಿ ಆಕರ್ಷಿತವಾಗಿದ್ದುದೇ ಅಲ್ಲದೆ, ವಚನಗಳ ಪ್ರಸಾರಕ್ಕಾಗಿ ಬರುವ ಶರಣಧರ್ಮಪ್ರಚಾರಕರಿಗೆ ಆ ಮಠವು ಉತ್ತಮ ತಂಗುದಾಣವಾಗಿತ್ತು.

ಒಂದು ಕಾಲದಲ್ಲಿ ಅದೇ ಊರಿನವನಾಗಿದ್ದು, ಮುಂದೆ ಬಸವಣ್ಣನ ನೂತನ ಧರ್ಮವನ್ನು ಸ್ವೀಕರಿಸಿ, ಅವನು ಸಾಂಕೇತಿಕವಾಗಿ ನಿರ್ಮಿಸಿದ ಶೂನ್ಯಪೀಠದ ಅಧಿಕಾರಿಯೂ ಆಗಿ, ವೈರಾಗ್ಯಚಕ್ರವರ್ತಿ ಎನ್ನಿಸಿಕೊಂಡಿದ್ದ ಅಲ್ಲಮಪ್ರಭು ಅದೇ ಮಠದ ವಿದ್ಯಾರ್ಥಿಯಾಗಿದ್ದುದೊಂದು ಹೆಮ್ಮೆಯ ಸಂಗತಿ ಆಗಿತ್ತು. ಅಂತೆಯೇ ಗುಣಗ್ರಾಹಿಗಳು, ಅಲ್ಲಮಪ್ರಭುವಿನ ಶಿಕ್ಷಾಗುರುಗಳೂ ಆಗಿದ್ದ ವಿದ್ಯಾಭರಣ ಪಂಡಿತರು ಅಲ್ಲಮನು ತಮ್ಮ ಗುರುಕುಲ ವಾಸಿ

ಮಾಡಿ, 'ಪ್ರಭುದೇವರ ಮಂಟಪ' ಎಂದು ಹೆಸರಿಸಿದ್ದರು.

ಮಹಾದೇವಿ ಪ್ರಭುದೇವ ಮಂಟಪವನ್ನು ಪ್ರವೇಶಿಸಿ, ಭಕ್ತಿ ತನ್ಮಯಳಾಗಿ ಧ್ಯಾನ ಮಾಡಿದಳು. ತಾಡಓಲೆಗಳ ಸಂಗ್ರಹವನ್ನು ಪರಿಶೀಲಿಸಿ, ಆ ವಿದ್ಯಾಕೇಂದ್ರದ ವ್ಯಾಪಕಕಾರ್ಯವನ್ನು ಕಂಡು ಸೋಜಿಗ ತಾಳಿದಳು.

ಬಳ್ಳಿಗಾವೆಯ ಸಂದರ್ಶನ ಮುಗಿಸಿದ ಬಳಿಕ ಪ್ರವಾಸ ಮುಂದುವರಿಯಿತು.

ಮೂರನೆಯ ಜಾವದ ವೇಳೆಗೆ ಬನವಾಸಿಯನ್ನು ಸೇರಿದರು. ಊಟದ ವ್ಯವಸ್ಥೆ ಮಾಡಲು, ವರದಾನದಿಯ ದಂಡೆಯಮೇಲೆ ಬಿಡಾರ ಹೂಡಲು ಅರಸು ಪರಿವಾರವೆಲ್ಲ ಕಾರ್ಯಮಗ್ನವಾಯಿತು. ಮುಖವನ್ನು ತೊಳೆದು ವರದೆಯ ನೀರನ್ನು ಗುಟುಕರಿಸಿದಾಗ ಮಹಾದೇವಿಗೆ ತುಂಬ ಹಿತವೆನಿಸಿತು. ಮಧುಕೇಶ್ವರ ದೇವಾಲಯ, ಸುಪ್ರಸಿದ್ಧ ಮಾಯಾದೇವಿಯ ಶಿಲಾ ರಂಗ ಮಂಟಪವನ್ನು ನೋಡಲು ಮಹಾದೇವಿಯ ಕುತೂಹಲ ಮೇರೆಮೀರಿ ಉಕ್ಕುತ್ತಿತ್ತು.

"ನಾವೆಲ್ಲರೂ ಬೆಳಗಿನಲ್ಲಿ ಉಪಾಹಾರ ಮಾಡಿದ್ದೇವೆ. ನೀನು ಏನನ್ನೂ ಸ್ವೀಕರಿಸದೆ ಬಂದಿರುವೆ. ಆದ್ದರಿಂದ ಊಟ ಮುಗಿಸಿ ಸಂದರ್ಶನಕ್ಕೆ ಹೋಗಬಹುದಲ್ಲ ದೇವಿ ?' ಕೌಶಿಕ ಕೇಳಿದ.

'ಬಹಳ ವೇಳೆಯೇನೂ ಆಗದು. ಹೋಗಿಯೇ ಬಂದುಬಿಡುತ್ತೇವೆ. ತಮ್ಮ ಊಟೋಪಚಾರ ಆತಂಕವಿಲ್ಲದೆ ಸಾಗಲಿ' ಮಹಾದೇವಿ ಹೇಳಿದಳು.

'ನನಗೇನೂ ಅವಸರವಿಲ್ಲ ; ನಿನಗಾಗಿ ಹೇಳಿದೆ ಅಷ್ಟೆ !'

ಪ್ರಕೃತಿದೇವಿಯ ವದನದಂತೆ ಬನವಾಸಿಯು ದಟ್ಟವಾದ ಅರಣ್ಯಸಂಪತ್ತಿನಿಂದ ಕೂಡಿದ, ಇತಿಹಾಸ ಪ್ರಸಿದ್ಧ ಸ್ಥಳ. ತನ್ನದೇ ಆದ ರಾಜಕೀಯ ಹಿನ್ನೆಲೆಯಿಂದ ಪ್ರಸಿದ್ಧವಾಗಿದ್ದ ಬನವಾಸಿ, ರಾಜಕುವರಿ ಮಾಯಾದೇವಿಯ ಸೋಲಿನ ಪ್ರಸಂಗದಿಂದಾಗಿ ಧಾರ್ಮಿಕ ಹಿನ್ನೆಲೆಯನ್ನೂ ಹೊಂದಿತ್ತು. ತನ್ನ ಅಪೂರ್ವ ಸೌಂದರ್ಯದಿಂದ ಜಗತ್ತನ್ನೇ ಕುಣಿಸಬಲ್ಲೆ ಎಂಬ ಹಮ್ಮಿನ ಆಕೆ, ವೀರ ವಿರಾಗಿಯಾದ ಪ್ರಭುದೇವನಿಂದ ಸೋಲಬೇಕಾಗಿ ಬಂದಾಗ ಹತಾಶಳಾದಳು. ಎಂತೆಂತಹ ರಾಜಕುವರರು ದಾಸಾನುದಾಸರಾಗಲು ಸಿದ್ಧರಾಗಿದ್ದಾಗ ಅವರನ್ನು ತಿರಸ್ಕರಿಸಿದ್ದ ಆಕೆ, ಪ್ರಭುದೇವನನ್ನು ಕಂಡು ಮೋಹಿತಳಾಗಿದ್ದಳು. ಊರು, ಕೇರಿ, ಸಿರಿ, ಸಂಪತ್ತು ಇಲ್ಲದ ಆ ತರುಣ ತನ್ನ ಕೈಗೊಂಬೆ ಆಗುವನೆಂದು ಬಗೆದಿದ್ದಳು. ಇವಳ ಸೌಂದರ್ಯವನ್ನು ನಿರ್ಲಕ್ಷಿಸಿ, ರಾಜ್ಯದಧಿಕಾರವನ್ನೂ ತೃಣವಾಗಿ ಕಂಡು ಪ್ರಭುದೇವ ಹೊರಟುಹೋದಾಗ,

ಕೊಳ್ಳಲಾರದೆ ಕೆಲವೇ ದಿನಗಳಲ್ಲಿ ಸತ್ತುಹೋಗಿದ್ದಳು.

ಮಹಾದೇವಿಯು ದೇವಾಲಯದ ವಿಸ್ತಾರ, ಶಿಲ್ಪ ಮುಂತಾದುವನ್ನು ನೋಡುತ್ತನೋಡುತ್ತ ಮೈಮರೆತಳು.

'ಮಾಯಾದೇವಿ – ಪ್ರಭುದೇವ, ಮಹಾದೇವಿ – ಕೌಶಿಕ....ಈ ದೇವನ ಬುದ್ಧಿ ಒಮ್ಮೊಮ್ಮೆ ಕಡಿವಾಣವಿಲ್ಲದೆ ಓಡುವಂತೆ ತೋರುವುದು. ಮಾಯಾ ದೇವಿಯಂತಹವಳನ್ನಾದರೂ ಕೌಶಿಕನಿಗೆ ಗಂಟು ಹಾಕಿದರೆ ಒಳಿತಾದೀತು. ಇಬ್ಬರ ಸ್ವಭಾವಗಳು, ಆದರ್ಶಗಳು ಒಂದೇ! ವೀರವೈರಾಗ್ಯಮೂರ್ತಿಯಾದ ಪ್ರಭುದೇವನನ್ನು ಕಳಿಸಬೇಕಾದರೆ ಅವನು ಎಂಥವನಿರಬೇಕು....!

'ದೇವನು ನಿಜಕ್ಕೂ ಹುಚ್ಚನಿರುವನೇನೋ; ಅಲ್ಲವಾದರೆ ಅಕ್ಕಸಾಲಿಯ ಕೈಗೆ ಕಬ್ಬಿಣವನ್ನು ಕೊಟ್ಟು, ಕಮ್ಮಾರನ ಕೈಗೆ ಬಂಗಾರದ ಗಟ್ಟಿಯನ್ನು ನೀಡಿ ವಿಚಿತ್ರ ಸಂಯೋಗ ಮಾಡಿಯಾನೆ? ಪ್ರಭುವಿನಂತಹ ಪಾರಮಾರ್ಥ ಸ್ವರ್ಣಕಾರನ ದಿವ್ಯ ಹಸ್ತಕ್ಕೆ ನನ್ನಂತಹ ವೈರಾಗ್ಯದ ಸುವರ್ಣವನ್ನು, ಕೌಶಿಕನೆಂಬ ಕಮ್ಮಾರನ ಕೈಗೆ ಮಾಯಾದೇವಿಯಂತಹ ವಿಲಾಸದ ಕಬ್ಬಿಣ ವನ್ನು ಕೊಡುತ್ತಿದ್ದನೆ? ಈಗಲೋ ತದ್ವಿರುದ್ಧ ಸಂಯೋಜನೆ....ದೇವರು ಬಲು ಹುಚ್ಚ!' ತನ್ನಲ್ಲಿ ತಾನೇ ಆಲೋಚಿಸಿದ ಮಹಾದೇವಿಗೆ ತಡೆಯಲಾರ ದಷ್ಟು ನಗೆ ಬಂದಿತು. ಮರುಕ್ಷಣವೇ ಅಂದುಕೊಂಡಳು: 'ಅಲ್ಲ, ಅಲ್ಲ ಬಲು ಚತುರ! ನಕ್ಷತ್ರಗಳ ಶೋಭೆ ಹೆಚ್ಚಲು ಕಪ್ಪುಆಗಸದ ಹಿನ್ನೆಲೆ ಚೆಂದ ವಲ್ಲವೆ? ಮಾಯಾದೇವಿಯ ವಿಲಾಸ, ವಿಕಾರಗಳ ಸೆಳವಿಗೆ ಸಿಗದಿದ್ದ ರಿಂದಲಷ್ಟೇ ಪ್ರಭುದೇವನ ಕೀರ್ತಿಯ ಧ್ವಜ ಹಾರಿದ್ದು! ಇಂತಹವರು ಇದ್ದರೆ ಒಳ್ಳೆಯದೇ; ಅಂತೂ ಪ್ರಭುವಿನ ಜೀವನವು ನನಗೆ ಉತ್ತಮ ಪಾಠ ನೀಡು ವುದು. ಎಂಥದೇ ಪ್ರಸಂಗದಲ್ಲಿ ನಾನು ಸೋಲಬಾರದು....' ವಿಚಾರಲಹರಿ ಸಾಗಿತ್ತು.

"ಅವ್ವಾ....ವೇಳೆ ಬಹಳವಾಯಿತು, ಹೊರಡೋಣ....' ಶಿವಕಾಮಿನಿ ನುಡಿದಾಗ, ಎಚ್ಚರಗೊಂಡು ಮುನ್ನಡೆದಳು.

ಕೌಶಿಕ ಊಟವನ್ನು ಮಾಡದೆ ಮಹಾದೇವಿಯ ನಿರೀಕ್ಷಣೆಯಲ್ಲಿದ್ದ. ಪ್ರಭುದೇವ – ಮಾಯಾದೇವಿಯರ ಗುಂಗಿನಲ್ಲಿದ್ದ ಮಹಾದೇವಿ ರಥದಿಂದ ಇಳಿದು ಬಂದಾಗ ನುಡಿದ:

'ವೇಳೆ ಬಹಳವಾಯಿತು ದೇವಿ; ನೀನು ಊಟಕ್ಕೆ ಬರಬಹುದು....'

'ತಾವು ಇನ್ನೂ ಸ್ವೀಕರಿಸಿಯೇ ಇಲ್ಲವೇ?....' ಆಶ್ಚರ್ಯದಿಂದ ಕೇಳಿದಳು.

‘ಅರಮನೆಯಲ್ಲಿ ನಾನೆಂದೂ ನಿಮ್ಮೊಡನೆ ಊಟಕ್ಕೆ ಕುಳಿತಿಲ್ಲವಲ್ಲ....’

‘ಅರಮನೆಯ ಸುದ್ದಿ ಹೇಗೇ ಇರಲಿ, ಇದು ಅರಮನೆಯಲ್ಲ ನಿಸರ್ಗದ ನೆಲೆವೀಡು. ಪ್ರವಾಸದಲ್ಲಿಯಾದರೂ ಎಲ್ಲರೂ ಒಟ್ಟಾಗಿ ಕುಳಿತು ಸಂತೋಷದಿಂದ ಉಣ್ಣಬಹುದು....’ ನಸುನಗುತ್ತ ಹೇಳಿದ.

‘ನನ್ನದಿನ್ನೂ ಸ್ನಾನ–ಪೂಜೆಯಾಗಬೇಕು, ತಡವಾಗಬಹುದು. ತಾವು ಕಾಯಬೇಡಿರಿ....’

‘ಆಗಲಿ....ಕಾಡಿನಲ್ಲಿ ಸುತ್ತಾಡುತ್ತಲಿರುವೆ, ಮುಗಿಸಿಬಿಟ್ಟು ಬಾ....’ ನೆಪಹೇಳಿ ತಪ್ಪಿಸಿಕೊಳ್ಳಲು ಬೇರೆ ಮಾರ್ಗ ದೊರೆಯಲಿಲ್ಲ. ಮನಬಂದಷ್ಟು ಕಾಲ ವರದಾನದಿಯಲ್ಲಿ ಮೀಯಲು ಸ್ವಾತಂತ್ರ್ಯ ಉಳಿಯದೆ ಚಟಪಟಿಸುವಂತಾಯಿತು.

‘ವಿಶಾಲವಾದ ದಟ್ಟಕಾಡು, ಜುಳುಜುಳು ಹರಿವ ನದಿ, ಮನುಷ್ಯರ ಮುಖವೇ ಕಾಣಬರದ ಏಕಾಂತತೆ, ಎಷ್ಟು ಹೊತ್ತು ಕುಳಿತರೂ ಯಾರೂ ಅಡ್ಡಿ ಮಾಡದ ಸ್ವಾತಂತ್ರ್ಯ, ಇಂತಹುದನ್ನು ಎಂದಿಗೆ ಪಡೆದೇನೋ....’ ಎನ್ನುತ್ತ ಆಲೋಚನಾಮಗ್ನಳಾಗಿ ನದಿಯ ದಂಡೆಯಮೇಲೆ ಕುಳಿತು ಪೂಜಿಸಿದಳು. ಅಂಗೈಯೊಳಗಣ ಇಷ್ಟಲಿಂಗವು ತನ್ನ ಶುಭ್ರ ಕಾಂತಿಯುಕ್ತ ದರ್ಪಣದಲ್ಲಿ ವಿಶ್ವವನ್ನೆಲ್ಲ ಪ್ರತಿಫಲಿಸಿತು. ಕಿತ್ತು ತಂದಿರಿಸಿಕೊಂಡಿದ್ದ ಬಣ್ಣಬಣ್ಣದ ಹೂವುಗಳನ್ನು ಮುಡಿಸಿದಾಗ ಹೆಚ್ಚು ಆಕರ್ಷಣೀಯವಾಗಿ ಕಂಡಿತು. ಪ್ರಸನ್ನಳಾಗಿ ಪೂಜೆ ಮುಗಿಸಿ ಬಂದಾಗ ಕೌಶಿಕ ಇನ್ನೂ ಆಕೆಯ ನಿರೀಕ್ಷಣೆಯಲ್ಲೇ ಇದ್ದ. ತನ್ನೀ ಸಹನೆಯ ನಿರೀಕ್ಷೆಯನ್ನು ಮೆಚ್ಚುಗೆಯಿಂದ ಸ್ವೀಕರಿಸುವಳು ಎಂದು ಕೌಶಿಕ ಭಾವಿಸಿದ.

ಮಹಾದೇವಿಯ ಮುಖ ಮೊದಲು ಆನಂದದಿಂದ ಅರಳಿದರೂ, ನಂತರ ತುಸು ಗಂಭೀರವಾಯಿತು, ‘ನಿಮ್ಮೆಲ್ಲರ ಪ್ರೇಮವೂ ದುರಾಲೋಚನೆ, ದುರಾಲೋಚನೆಯ ಹಿನ್ನೆಲೆಯುಳ್ಳದು ; ಎಂದಾದರೊಂದು ದಿನ ಕಡಿಯಲು ಬಯಸುವ ಕಟುಕ ಬಹು ಪ್ರೇಮದಿಂದ ಕುರಿಯನ್ನು ಪೋಷಿಸುವಂತಿದೆ. ಅದು ಒಕ್ಕಲಿಗನ ಹೋರಿಯ ಸಾಕುವಿಕೆಯಂತೆ ಪ್ರೇಮದಿಂದ ಕೂಡಿಲ್ಲ. ಅವನು ಕರುವನ್ನು ಮಾತೃವಾತ್ಸಲ್ಯದಿಂದ ಬೆಳೆಸುವ, ಕಟುಕನು ಕುರಿಯನ್ನು ಅರ್ಥವಾತ್ಸಲ್ಯದಿಂದ ಬೆಳೆಸುವ. ಹಾಗೆಯೇ ಇದು ತ್ಯಾಗಯುಕ್ತ ಪ್ರೇಮದ ಸಂಕೇತವಲ್ಲ, ಭೋಗಯುಕ್ತ ಕಾಮದ ಪ್ರತೀಕ....’

ಕೌಶಿಕನಿಗೆ ಊಟಕ್ಕೆ ನೀಡಲು ಬಂದ ಶಿವಕಾಮಿನಿ ಅವನಿಗೆ ಮತ್ತು

'ಒಡತಿಯರು....ಒಡತಿಯರು....' ತೊದಲಿ ನುಡಿದಳು ಶಿವಕಾಮಿನಿ.

ಅವಳ ಗೊಂದಲಮಯ ಪರಿಸ್ಥಿತಿಗೆ ಪರಿಹಾರವನ್ನೊದಗಿಸಲು ಮಹಾದೇವಿ ಹೇಳಿದಳು :

'ಏನಿಲ್ಲ....ನನ್ನ ಪ್ರಸಾದವನ್ನು ನಾನೇ ಎಡೆಮಾಡಿಕೊಳ್ಳುವೆ....' ತಾನು ತೊಳೆದುಕೊಂಡು ತಂದಿದ್ದ ಕಂಚಿನ ಗಂಗಾಳವನ್ನು ತನ್ನೆದುರಿಗೆ ಇರಿಸಿಕೊಂಡಳು.

'ಇಷ್ಟು ದಿನವಾದರೂ ಹೇಳಬಾರದೆ ವಿಲಾಸಿನಿ? ಅರಸಿಯರಿಗೆ ಕಂಚಿನ ಗಂಗಾಳವೇ....ಛೆ!' ಕೌಶಿಕ ಕುಪಿತನಾದ.

'ಯಾವ ಗಂಗಾಳದಲ್ಲುಂಡರೂ ಜಠರಾಗ್ನಿಯನ್ನದು ತಣಿಸುವುದಷ್ಟೇ!' ಮಹಾದೇವಿ ನಸುನಕ್ಕಳು.

ಬನವಸೆಯ ಸಂದರ್ಶನಕ್ಕೆ ಆಕೆ ಹೋದಾಗ ಕೌಶಿಕನು ಸ್ವತಃ ನಿಂತು ವಿಶೇಷ ಭಕ್ಷ್ಯಭೋಜ್ಯಗಳನ್ನು ಸಿದ್ಧಪಡಿಸಲು ಬಾಣಸಿಗರಿಗೆ ಹೇಳಿದ್ದ. ಹಾಲುಂಡೆ, ಮೇಲೋಗರ, ಪರಡಿಯ ಪಾಯಸ, ಬೀಸುಂಬೂರಿಗೆ, ಮೊಸರೋಗರ, ಕೆನೆಮೊಸರು, ಒಗ್ಗರಣೆಯ ಮಜ್ಜಿಗೆ ಇವೆಲ್ಲವುಗಳನ್ನು ಪಾಕ ಮಾಡಲು ಸಲಹೆ ನೀಡಿದ್ದ. ತಾನೇ ಮಹಾದೇವಿಗೆ ನೀಡಿಸಿ ಅವಳನ್ನು ಸಂತೋಷಪಡಿಸುವ ಆಸೆ ಅವನದಿತ್ತು.

ಅವನ ಪರಿಯಾಣಕ್ಕೆ ಎಲ್ಲವನ್ನೂ ನೀಡಿದ ಶಿವಕಾಮಿನಿ ಸುಮ್ಮನೆ ನಿಂತಾಗ, ಮಹಾದೇವಿಯೂ ತಾನೇ ನೀಡಿಕೊಳ್ಳುವುದಾದರೆ ಭಾಜನಗಳನ್ನು ಸಮೀಪದಲ್ಲಿಡು ಎಂದು ಸಂಕಟದಿಂದ ನುಡಿದ. ಅವೆಲ್ಲವನ್ನು ನಿರಾಕರಿಸಿ ಮಹಾದೇವಿ ಕೇವಲ ಬಾಳೆಯಹಣ್ಣು, ಪೇರಲಹಣ್ಣು, ಹಲಸಿನ ಒಂದೆರಡು ತೊಳೆಗಳನ್ನು ತನಗೆ ಇರಿಸಿಕೊಂಡಾಗ ಕೌಶಿಕನ ಕಳವಳಗೊಂಡ. ಖಿನ್ನನಾಗಿ ಮಗ್ಗುಲಲ್ಲಿ ಕುಳಿತಿದ್ದ ವಸಂತಕನನ್ನು ದಿಟ್ಟಿಸಿದ. ಕೌಶಿಕನ ಮನವನ್ನರಿತು ವಸಂತಕ ಕೇಳಿದ:

'ತಾಯಿ....ಇಂದು ಮಹಾರಾಜರೇ ಪ್ರತ್ಯಕ್ಷ ನಿಂತು ಇವುಗಳೆಲ್ಲವನ್ನು ಮಾಡಿಸುವ ವ್ಯವಸ್ಥೆ ಮಾಡಿದ್ದಾರೆ; ಅವರ ಪ್ರೇಮ – ಸಂತೋಷಗಳಿಗಾದರೂ ಸ್ವೀಕರಿಸಬಾರದೆ?'

'ವಸಂತಕರೇ....ತಮ್ಮ ಮಹಾರಾಜರ ವಾತ್ಸಲ್ಯಕ್ಕೆ ನಾನು ಚಿರಋಣಿ!

ಪ್ರಭು, ತಮಗೆ ನೋವಾದರೆ ಕ್ಷಮಿಸಬೇಕು.'

'ನೋವಿನ ಪ್ರಶ್ನೆಯಲ್ಲ ದೇವಿ; ಕೇವಲ ಹಣ್ಣು ಹಾಲಿನ ಮೇಲಿದ್ದರೆ ನಿನ್ನ ಶರೀರದ ಗತಿ ಏನು?....ಅದು ದುರ್ಬಲವಾಗದೇ....ಅಂದಗೆಡದೆ?....' ಕೌಶಿಕ ಕಳಕಳಿಯಿಂದ ಕೇಳಿದ. ಮಹಾದೇವಿಯು ಉತ್ತರವನ್ನೇನೂ ಕೊಡದೆ ತನ್ನಲ್ಲಿ ತಾನೇ ಅಂದುಕೊಂಡಳು:

'ಈ ಶರೀರವಿದ್ದು ಏನು ಸಾಧಿಸಬೇಕಾಗಿದೆ?

ಕಾಯ ಕರ್ರನೆ ಕಂದಿದರೇನಯ್ಯಾ?
ಕಾಯ ಮಿರ್ರನೆ ಮಿಂಚಿದರೇನಯ್ಯಾ?
ಅಂತರಂಗ ಹದವಾದ ಬಳಿಕ ಕಾಯವೇನಾದಡೆ
ನಮಗೇನಯ್ಯಾ?
ಚನ್ನಮಲ್ಲಿಕಾರ್ಜುನ ದೇವಗೊಲಿದೆ ಕಾಯವೇನಾದಡೆ
ನಮಗೇನಯ್ಯಾ?'*

'ಮಹಾರಾಜರ ಪ್ರೇಮಕ್ಕಾದರೂ ಬೆಲೆಕೊಡಬಾರದೆ ತಾಯಿ?' ವಸಂತಕ ದೀನನಾಗಿ ಕೇಳಿದ.

'ಏನು ಮಾಡಲಿ ವಸಂತಕರೆ....ನಾನು ನಿಸ್ಸಹಾಯಕಳು! ಜಗದಾದಿ ರಾಜನ ಕಾರುಣ್ಯಕ್ಕಾಗಿ ಪರಿತಪಿಸುವ ನಾನು ಲೌಕಿಕರನೇಕರ ಮನವನ್ನು ನೋಯಿಸಬೇಕಾಗಿದೆ. ಈ ಪೇರಲ ಹಣ್ಣಿನ ಗಿಡಗಳು ಎಳೆಯವಿರುವಾಗ ಮೊದಲೆರಡು ಬಾರಿ ಹಣ್ಣು ಬಿಟ್ಟಾಗ ಮಿಡಿಗಳನ್ನು ಚಿವುಟಿ ಬಿಸುಡುವರು. ಮುಂದೆ ಉತ್ತಮ ಫಲ ಬರಲೆಂದು ತಾತ್ಕಾಲಿಕವಾಗಿ ಗಿಡಕ್ಕೆ ನೋವುಂಟು ಮಾಡದೆ ಗತ್ಯಂತರವಿಲ್ಲ; ಹಾಗೆಯೇ ನಾನು ಬಯಸಿರುವ ಆ ಮಹಾದೇವನ ಒಲಿಮೆಗಾಗಿ ಬಹು ನಿಷ್ಠುರದ ಜೀವನ ತಾಳಬೇಕಾಗಿದೆ. ಅವನು ಬಲು ಮುನಿಸುಗಾರ. ಕಣ್ಣಲ್ಲಿ ಕಣ್ಣಿಟ್ಟು ಒಲಿದುಬಂದವರ ದೋಷ ಹುಡುಕುವವನು....' ಕೌಶಿಕನ ಮುಖ ಸಣ್ಣದಾಗಿ, ನೋವಿನ ನೆರಳು ಸುಳಿಯಿತು. ಎಡೆಯು ತುಂಬ ಇದ್ದ ಪರಿಕರಗಳನ್ನೊಂದನ್ನೂ ಅವನು ಮುಟ್ಟರಲಿಲ್ಲ.

'ಮಹಾಪ್ರಭುಗಳು ಮನ್ನಿಸಿರಿ; ನನ್ನ ನೇಮದ ಮುರಿತಕ್ಕೆ ಪ್ರಯತ್ನಿಸಬೇಡಿ. ಆನಂದಕಾರಕವಾಗಿ ವೇಳೆ ಕಳೆಯಲು ಬಂದಿರುವ ತಾವು ನನ್ನ ಸಲುವಾಗಿ ಕಹಿಪ್ರಸಂಗಗಳನ್ನು ಆಹ್ವಾನಿಸದಿರಿ....ನನಗೆ ಈ ವಿಷಯದಲ್ಲಿ ಸ್ವಾತಂತ್ರ್ಯ ನೀಡಿಬಿಡಿರಿ....ನಿಮಗೆ ನಾನು ಚಿರಋಣಿಯಾಗಿರುವೆ...."

---

* ಮ. ವ. ೮೫೩

ದರು. ಮಹಾದೇವಿ ಪ್ರಸಾದವನ್ನು ಸ್ವೀಕರಿಸಿ [illegible] ಓಡಾಡತೊಡಗಿದಳು. ಪರಿಚಾರಕ ಬಳಗವೂ ಉಂಡು ಸಿದ್ಧವಾಗತೊಡಗಿತು. ಮತ್ತೆ ಪ್ರಯಾಣ ಮುಂದರಿಯಿತು. ಒಂದು ಜಾವದ ಪ್ರಯಾಣ ಮಾಡಿ, ಸೂರ್ಯಾಸ್ತಕ್ಕೆ ಮೊದಲೇ ಉದ್ದೇಶಿಸಿದ್ದ ಸ್ಥಳವನ್ನು ತಲುಪಿದರು. ಸುತ್ತಲೂ ಹೆಮ್ಮರಗಳ, ಬೆಟ್ಟಗುಡ್ಡಗಳ ಭದ್ರಕೋಟೆ; ನಟ್ಟನಡುವೆ ವಿಶಾಲವಾದ ಬಯಲು. ಅಲ್ಲಿಯೇ ವರದಾ ನದಿಯು ಜುಳಜುಳನೆ ಮಂಜುಳರವದಿಂದ ಹರಿಯುತ್ತಿದ್ದುದು. ನದಿಯ ದಂಡೆಯಿಂದ ನೂರು ಮಾರು ದೂರದಲ್ಲಿ ಬಿಡಾರಗಳನ್ನು ಮೊದಲೇ ಬಂದವರು ಸಿದ್ಧಪಡಿಸಿದ್ದರು. ಪ್ರವಾಸಿಗಳು ವಾಹನಗಳನ್ನು ಇಳಿದು ತಮ್ಮತಮ್ಮ ಸ್ಥಳಗಳನ್ನು ನೋಡಲು ಹೋದರು. ಮಹಾದೇವಿ ಆ ಸೃಷ್ಟಿಯ ಭವ್ಯತೆಗೆ ಮೂಕಳಾಗಿದ್ದಳು. ರಥದಿಂದ ಇಳಿದ ವಳೇ ಏನನ್ನೂ ಲೆಕ್ಕಿಸದೆ ಶಿವಕಾಮಿನಿಯನ್ನು ಕಣ್ಸನ್ನೆಯಿಂದ ಕರೆದು ನದಿಯ ದಂಡೆಗೆ ಓಡಿದಳು. ಅವಳ ಉತ್ಸಾಹವನ್ನು ದೂರದಿಂದ ಗಮನಿಸಿದ ಕೌಶಿಕನು ನಿರಾಶೆಯ ಧ್ವನಿಯಲ್ಲಿ ವಸಂತಕನಿಗೆ ನುಡಿದ :

'ತುಂಬ ವಿಚಿತ್ರ ವ್ಯಕ್ತಿ ವಸಂತಕಾ....ಸೃಷ್ಟಿಯ ಚೆಲುವನ್ನು ಹೀರುವ ಇವಳಿಗೆ ನನ್ನ ಚೆಲುವೇಕೆ ಕಾಣದೋ !!....' ಮೆಲುನಗೆ ನಕ್ಕ, ಅದರಲ್ಲಿ ನೋವಿನ ಛಾಯೆ ಸ್ಪಷ್ಟವಾಗಿ ಕಾಣುತ್ತಿತ್ತು.

'ಹಸುವಿನ ಹಾಲನ್ನು ಕುಡಿಯುವವರು ನನ್ನ ಹಾಲನ್ನೇಕೆ ಕುಡಿಯರೋ ಎಂದು ಗಾರ್ದಭನು ಬಯಸಿತಂತೆ....' ವಸಂತಕ ವಿಡಂಬಿಸಿದಾಗ ಕೌಶಿಕ ಎಚ್ಚರಗೊಂಡ.

'ಏ....ಮಿತ್ರಾ....ಗದಾಪ್ರಹಾರ ನನ್ನ ಮೇಲೆಯೇ !....ನೀನು ಬಲು ಕೃತಘ್ನನಯ್ಯಾ....' ಸಣ್ಣ ಕಲ್ಲೊಂದನ್ನು ವಸಂತಕನ ಕಡೆ ಬೀಸಿದ. ಅದನ್ನು ತಪ್ಪಿಸಿಕೊಂಡು ನಕ್ಕ ವಸಂತಕ ಹೇಳಿದ :

'ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ಏಕೆ ನೋಡಿಕೊಳ್ಳ ಬೇಕು ?'

'ಅಲ್ಲ ಮಿತ್ರ....ನದಿಯ ದಂಡೆಗೆ ಜಿಂಕೆಯ ವೇಗದಿಂದ ಹಾರಿದುದನ್ನು ನೋಡಿದೆಯಾ? ಅವಳನ್ನು ಅರಸಿಕಳು ಎನ್ನಲು ನಾಲಿಗೆ ಓಡದು, ಬುದ್ಧಿ ಒಪ್ಪದು. ಪ್ರಕೃತಿಯನ್ನು ದೃಷ್ಟಿಸುವ, ಆ ಅನಿಷ್ಟ ಚನ್ನಮಲ್ಲಿಕಾರ್ಜುನನನ್ನು ಕರೆಯುವ ಸನ್ನಿವೇಶದಲ್ಲಿ ಅವಳ ರಸಪ್ರಜ್ಞೆ ಎಷ್ಟೆಂಬುದು ಸ್ಪಷ್ಟವಾಗಿ ಅರಿ

ಹಿಡಿದು 'ನಾನೇ ನಿನ್ನ ಚನ್ನ ಎನ್ನಲೇ ?' ಅನ್ನಿಸುವುದು....'

'ಮಹಾರಾಯರೇ....ಹಾಗೆ ಮಾತ್ರ ಮಾಡದಿರಿ. ಹೊನ್ನಿ ಹುಳುವನ್ನು ಕಂಡು ತನ್ನ ಬಾಲವನ್ನು ಹುಣ್ಣು ಮಾಡಿಕೊಂಡ ನರಿಯಂತೆ ಆದೀರಿ....' ಗಹಗಹಿಸಿ ನಕ್ಕ.

'ವಸಂತಕಾ, ಆ ಮಧುರ ಕಂಠ ನನ್ನನ್ನು ಕುರಿತು ಏಕೆ ಹಾಡಬಾರದು ? ಬಾಳೆಯ ದಿಂಡಿನಂತಹ ಆ ಕೈಯಿ ನನ್ನನ್ನು ಏಕೆ ಬಳಸುತ್ತಿಲ್ಲ ? ಕೇತಕಿಯ ಎಸಳಿನಂತಹ ಬೆರಳುಗಳು ನನ್ನ ಬಗ್ಗೆ ಏಕೆ ಬರೆಯವು ? ಇಷ್ಟು ಮಾಡಿದರೆ ನನ್ನ ಸರ್ವಸ್ವವನ್ನೂ ಅರ್ಪಿಸಲು ನಾನು ಸಿದ್ಧನಿರುವೆ. ಎಂದಿಗೆ ಈ ಸಂಕಟ ದಿಂದ ನನ್ನ ಬಿಡುಗಡೆ....'

'ಕೋಗಿಲೆಯ ಇಂಪಿನ ಬಗ್ಗೆ ಯಾರಾದರೂ ಬಣ್ಣಿಸಿಯಾರು ; ಕಾಗೆಯ ಕರ್ಕಶ ಕಂಠದ ಮೇಲೆ ಕಾವ್ಯ ಬರೆದರೆ ? ನವಿಲಿನ ನರ್ತನವನ್ನು ಚಿತ್ರಿಸಿ ಯಾರು ; ಕೆಂಭೂತದ ಹಾರುವಿಕೆಯನ್ನು?....'

'ಗೆಳೆಯಾ....ನನ್ನನ್ನು ಸಂತೈಸುವ ಬದಲು ಅಪಹಾಸ್ಯ ಮಾಡುತ್ತಿರುವೆ ಇರಲಿ, ಮಾತಿನಲ್ಲಿ ಹೊತ್ತುಗಳೆವುದು ಬೇಡ. ಸ್ವಲ್ಪವೂ ಸದ್ದು ಮಾಡದೆ ಹಿಂದೆ ಹೋಗಿ ಗಿಡಗಳ ಮರೆಯಲ್ಲಿ ನಿಂತು ಏನು ಮಾಡುವಳೆಂದು ನೋಡೋಣ ಬಾ....' ಮೆಲ್ಲನೆ ಹೆಜ್ಜೆ ಇರಿಸುತ್ತ ಇಬ್ಬರೂ ನಡೆದರು.

ಅದೇ ಆಗ ಪಶ್ಚಿಮದಲ್ಲಿ ಒಂದು ಮಾರು ಎತ್ತರದ ಆಗಸದಲ್ಲಿ ಸೂರ್ಯ ನಿದ್ದು, ಅಸ್ತಂಗತನಾಗಲಿಕ್ಕೆ ಅವಸರಿಸುತ್ತಿದ್ದ. ಪಶ್ಚಿಮಕ್ಕೆ ಎದುರಾಗಿ ಬಂಡೆ ಗಲ್ಲಿನ ಮೇಲೆ ಕುಳಿತ ಮಹಾದೇವಿ ಕಾಲನ್ನು ನೀರಿನಲ್ಲಿ ಇಳಿಯಬಿಟ್ಟು ಹಗು ರಾಗಿ ಆಡಿಸುತ್ತಿದ್ದಳು. ಕೆಂಬಣ್ಣದ ಓಕಳಿಯನ್ನು ಆಗಸದಲ್ಲೆಲ್ಲ ಚೆಲ್ಲುತ್ತ ಇಳಿಯತೊಡಗಿದ ಸೂರ್ಯನು ಸಪ್ತವರ್ಣದ ಕಮಾನಿನ ರೇಖಾಚಿತ್ರವನ್ನು ಮೂಡಿಸತೊಡಗಿದ್ದ. ವಿವಿಧ ವರ್ಣಗಳ ಛಾಯೆ ತನ್ನ ತೆಳು ತೆರೆಯನ್ನು ಸೃಷ್ಟಿಯ ಮೇಲೆ ಹೊದ್ದಿಸತೊಡಗಿತ್ತು. ಕಾಡಿನ ವಲಯವನ್ನು ದಾಟಿ ಹೋಗುವ ದನಗಳ 'ಅಂಬಾ' ಎಂಬ ದನಿ ದೂರದಲ್ಲಿಂದ ಕೇಳಿಸುತ್ತಿತ್ತು. ಗೂಡು ಸೇರುವ ಹಕ್ಕಿಗಳು ಸಂಭ್ರಮದ ಧ್ವನಿಯಿಂದ ಕಲಕಲರವ ಮಾಡು ತ್ತಿದ್ದವು. ತಾಯಿ-ತಂದೆಯರ ಬರವಿಗಾಗಿ ಕಾತುರದಿಂದ ಕಾಯುತ್ತಿದ್ದ ಪಕ್ಷಿ ಗಳ ಮರಿಗಳು ಕುತ್ತಿಗೆ ಚಾಚಿ ಸ್ವಾಗತಿಸಿ, ಆಹಾರಕ್ಕಾಗಿ ಕೊಕ್ಕು ತೆರೆಯು ತ್ತಿದ್ದವು. ನದಿಯ ಆ ಬದಿಗೆ ಎತ್ತರವಾಗಿ ಬೆಳೆದು ನಿಂತಂತಹ ದಟ್ಟವಾದ ಮರಗಳು ಸತ್ತಿಗೆಯಂತೆ ನಿಂತು ಬಿಸಿಲು ಬಿದ್ದಾಗ ಭೂಮಿಯ ಸ್ಪರ್ಶವನ್ನು ಬಿಸಿಲು ಪಡೆಯದಂತೆ ಮಾಡುತ್ತಿದ್ದವು. ವೇಗವಾಗಿ ಗಾಳಿ ಬೀಸಿದಾಗ

ಬೆಳಕಿನ ಜರಡಿಯನ್ನು ಆಡಿಸಿದಂತೆ ಆಗುತ್ತಿತ್ತು. ಹಸಿರೆಲೆಗಳ ನಡುವೆ ಶೋಭಿಸುವ ತಾಮ್ರವರ್ಣದ ಮಾಂದಳಿರು ಬಹು ಸುಂದರವಾಗಿ ತೋರುತ್ತಿದ್ದವು. ದಟ್ಟವಾದ ಮರದ ತುಂಬ ದನದ ಗೊರಸಿನಾಕೃತಿಯ, ಬಿಳಿಯದಳ, ಬೂದುಬಣ್ಣದ ಗೆರೆ, ಚುಕ್ಕೆಗಳಿಂದ ಕೂಡಿದ ಕಂಚುವಾಳದ ಹೂವುಗಳು ನಳನಳಿಸುತ್ತಿದ್ದರೆ, ಉದುರಿಬಿದ್ದ ಹೂವಿನ ದಳಗಳು ನೆಲದ ಮೇಲೆ ಬಣ್ಣ ಬಣ್ಣದ ರತ್ನಗಂಬಳಿಯನ್ನು ಹಾಸಿದ್ದವು. ಇನ್ನೊಂದು ಕಡೆ ಮುಗಿಲು ಮುಟ್ಟುವಂತೆ ಬೆಳೆದ ಸುರಹೊನ್ನೆ ಗಿಡಗಳು ಬಿಳಿಯ ಹೂವುಗಳಿಂದಲಂಕೃತವಾಗಿ, ಮುತ್ತಿನ ಆಭರಣಗಳನ್ನು ಒತ್ತಾಗಿ ಧರಿಸಿದಂತೆ ಶೋಭಿಸುತ್ತ, ದಟ್ಟವಾದ ಆಹ್ಲಾದಕರ ನೆರಳನ್ನು ಕೊಡುತ್ತಿದ್ದವು. ನದಿಯ ದಂಡೆಯ ಮೇಲೆ ಪೊದರು ಪೊದರಾಗಿ ಬೆಳೆದ ಕೇದಗಿಯ ಪೊದೆ; ಬೀಸಿದ ಗಾಳಿಯ ಓಘಕ್ಕೆ ಅನುಗುಣವಾಗಿ ತೂಗಿ ಗಾಳಿಗೆ ತನ್ನ ಪರಿಮಳದ ಬಳುವಳಿಯನ್ನಿತ್ತು ಅದು ಬೀಳ್ಕೊಡುತ್ತಿತ್ತು. ಸೂರ್ಯನು ಅಸ್ತಂಗತನಾಗುತ್ತಲೇ ಸಂಜೆಗಪ್ಪು ಕವಿಯತೊಡಗಿತು. ನಿಸರ್ಗ ಸೌಂದರ್ಯವನ್ನು ಸವಿಯುವುದರ ಒಡನೆ ಮಹಾದೇವಿಯ ಬಿಸಿಯುಸಿರು ಹೊರಹೊಮ್ಮಿತು.

'ಆಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ, ಪಾಲಿಸೆನ್ನ ಬಿನ್ನಪವ. ಏಕೆನ್ನ ಮೊರೆಯ ಕೇಳೆಯಯ್ಯಾ ತಂದೆ? ನೀನಲ್ಲದೆ ಮತ್ತಿಲ್ಲ, ಮತ್ತಿಲ್ಲ. ನೀನೆ ಎನಗೆ ಗತಿ. ನೀನೇ ಎನಗೆ ಮತಿಯಯ್ಯಾ!*

ಮಲ್ಲಿಕಾರ್ಜುನಾ ಜಗದ ಒಳಹೊರಗೆಲ್ಲ ವ್ಯಾಪಿಸಿದ್ದರೂ ಹೀಗೇಕೆ ಕಾಣದಂತೆ ಕಣ್ಣುಮುಚ್ಚಾಲೆಯಾಡುವೆ. ನಿಜ....ನನಗೆ ಸವತಿಯರು ಬಹಳ! ಈ ಪ್ರಕೃತಿಯು ತನ್ನ ಒಡಲ ಬೆಡಗಿನಲ್ಲಿ ನಿನ್ನ ಹಿಡಿದು ಇಟ್ಟುಕೊಂಡಿದ್ದಾಳೆ. ಕೋಕಿಲೆಯು ಕಂಠದಲ್ಲಿ ಅಡಗಿಸಿಕೊಂಡಿದೆ, ಸಹಸ್ರ ದೀಪಗಳ ಆರತಿಯನ್ನು ಬೆಳಗುವ ನವಿಲು ಬಂಧಿಸಿದೆ....ಅಂದಾಗ ಭಕ್ತರ ಕರೆಗೆ ಓಗೊಡಲು ನೀನೆಲ್ಲಿ ಉಳಿದಿರುವೆ....?

ಅವರೆಲ್ಲ ನನ್ನ ಪ್ರತಿಸ್ಪರ್ಧಿಗಳು....ಚಿಂತೆಯಿಲ್ಲ, ಅಲ್ಪಸ್ವಲ್ಪ ಪ್ರೇಮವನ್ನಾದರೂ ನನಗೆ ದಾನ ಮಾಡಬಾರದೆ....?' ಕಣ್ಣೀರಿನ ಹನಿಗಳು ಕಪೋಲದ ಮೇಲೆ ಹರಿದಾಗ ಶಿವಕಾಮಿನಿ,

'ಒಡತಿ....' ಎಂದಳು.

'ನನ್ನಿನಿಯನ ನೆನಪಾಯಿತು ಶಿವಕಾಮಿನಿ....'

'ಅದಕ್ಕೇಕೆ ದುಃಖ, ಬಹುಶಃ ಗುಡಾರದಲ್ಲಿರಬೇಕು ; ಹೋದರಾಯಿತು ಬನ್ನಿ....'

'ನನ್ನೊಡೆಯನ ಗುಡಾರ ಇದು ನೋಡು ಶಿವೆ; ಈ ನೆಲ – ಮುಗಿಲ ಮನೆಯ ತುಂಬ ಅಡಗಿರುವ ಸುಂದರನೇ ಎನ್ನೊಡೆಯ....' ವಿಸ್ತಾರವಾದ ಬಾನಿನತ್ತ ಕೈಮಾಡಿದಳು.

'ಅವನ ಪೂಜೆಯೂ ಅಷ್ಟೇ ಭವ್ಯ ಶಿವೆ....!'

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ, ವಾಯುವಿನ ಚಲನೆ, ತರುಗುಲ್ಮಲತಾದಿಗಳಲ್ಲಿಯ ತಳಿರುಪುಷ್ಪ, ಷಡುವರ್ಣಂಗಳೆಲ್ಲ ಹಗಲಿನ ಪ್ರಭೆ. ಚಂದ್ರಪ್ರಕಾಶ ನಕ್ಷತ್ರ ಅಗ್ನಿ ವಿದ್ಯುತ್ ಆದಿಗಳು ದೀಪ್ತಿಮಯವೆನಿಸಿಪ್ಪವೆಲ್ಲ ಇರುಳಿನ ಪೂಜೆ. ಹಗಲಿರುಳು ನಡೆಯುವ ಚನ್ನಮಲ್ಲಿಕಾರ್ಜುನನ ಈ ಪೂಜೆಯನ್ನು ಗಮನಿಸುತ್ತ ನನ್ನನ್ನು ನಾನು ಮರೆಯುವೆ ತಾಯಿ'* ತನ್ಮಯ ಭಾವದಿಂದ ಹೇಳಿ, ಮೇಲಕ್ಕೆ ಎದ್ದು ಹಿಂತಿರುಗಿದಾಗ ಅತಿ ಸನಿಹದಲ್ಲಿಯೇ ಕೌಶಿಕ, ವಸಂತಕರಿರುವುದನ್ನು ಕಂಡು ಬೆಚ್ಚಿಬಿದ್ದಳು.

'ಪ್ರಭುಗಳು....ಯಾವಾಗ ಬಂದಿರಿ ?....' ಸಾವರಿಸಿಕೊಂಡು ಕೇಳಿದಳು.

'ಇದೇ ಈಗ, ವಾಯುವಿಹಾರಕ್ಕೆ ಹೊರಟಿದ್ದ ನಾವು, ಇಲ್ಲಿ ಬಂದಾಗ ನೀನಿರುವುದನ್ನು ಕಂಡು ಸುಮ್ಮನೆ ನಿಂತೆವು....' ಕೌಶಿಕ ಉತ್ತರಿಸಿದ.

ವರದಾನದಿಯ ಆ ಬದಿಗೆ ಕಾಡಿನ ದಟ್ಟಣೆ ಬಹಳ. ಆನೆಗಳು ನೀರು ಕುಡಿಯಲು ಬರುವ ರೂಢಿ ಇದೆ ಎಂಬುದು ಅಲ್ಲಲ್ಲಿ ಮೂಡಿದ ಆನೆಯ ಹೆಜ್ಜೆಗಳಿಂದ, ಅವುಗಳು ವಿಸರ್ಜಿಸಿದ ಜಠರಾವಶೇಷಗಳಿಂದ ತಿಳಿದುಬರುತ್ತಿತ್ತು. ಎತ್ತರವಾದ ಗಿಡದ ಆಶ್ರಯಕ್ಕೆ ಮರದ ಅಟ್ಟಣಿಗೆ ಮಾಡಿದ್ದರು. ಅಲ್ಲಿ ಕುಳಿತು ಆನೆಗಳ ನೀರಾಟವನ್ನು ನೋಡುವ ಸಿದ್ಧತೆಯಾಗಿತ್ತು. ಮಹಾದೇವಿ ಉತ್ಸುಕತೆಯಿಂದ ಪೂಜೆ ಮುಗಿಸಿ, ಫಲಾಹಾರ ಮಾಡಿದಳು; ಉಳಿದವರು ತಮ್ಮ ಊಟವನ್ನು ಮುಗಿಸಿದರು. ವನ್ಯಮೃಗಗಳಿಂದ ರಕ್ಷಿಸಿಕೊಳ್ಳಲಿಕ್ಕೆ ಗುಡಾರಗಳ ಮುಂದೆ ದಟ್ಟವಾಗಿ ಉರಿಯುವಂತೆ ಬೆಂಕಿ ಹಾಕಿದರು. ದೋಣಿಯಲ್ಲಿ ಕುಳಿತು ಈ ದಂಡೆಯಿಂದ ಆ ದಂಡೆಗೆ ಸಾಗಬೇಕಾಗಿತ್ತು. ಹುಣ್ಣಿಮೆಯ ನಂತರದ ದಿನಗಳಾದ್ದರಿಂದ ಚಂದ್ರೋದಯವು ನಿಧಾನವಾಗಿ ಆಗಿ ಮಂಕಳಿದು, ಶುಭ್ರವಾದ ಬೆಳಕು ರಮ್ಯವಾಗಿ ಹರಡತೊಡಗಿತು. ದಟ್ಟಾರಣ್ಯದ ಗರ್ಭದಲ್ಲಿ

ತ್ತಿತ್ತು : ಆಗಾಗ ಗೂಬೆಗಳ ಘೂರ್ಘಸ್ವರವೂ ಕೇಳದಿರಲಿಲ್ಲ. ಮಿಣುಕು ಹುಳುಗಳು ಫಳಕ್ಕನೆ ಬೆಳಕಿನ ಕಿಡಿಗಳಂತೆ ಹಾರುತ್ತಿದ್ದವು. ಬೆಳುದಿಂಗಳು ಶುಭ್ರವಾಗುವತನಕ ಕಾಯುತ್ತಿದ್ದು ನಂತರ ಅಂಬಿಗರು ದೋಣಿಯಲ್ಲಿ ಇವರನ್ನೆಲ್ಲ ಕುಳ್ಳಿರಿಸಿದರು. ದೋಣಿಯ ಒಂದು ಹಲಗೆಯಮೇಲೆ ಕೌಶಿಕ, ವಸಂತಕ, ಅವನ ಅಂಗರಕ್ಷಕರಿಬ್ಬರು ; ಇವರ ಎದುರಿಗೆ ಮಹಾದೇವಿ, ಮದನರತಿ, ಶಿವಕಾಮಿನಿಯರು ಕುಳಿತರು. ವರದೆಯ ಮಡಿಲಿಗೆ ದೋಣಿ ಇಳಿದಾಗ ಮಹಾದೇವಿಗೆ ಉಲ್ಲಾಸವೆನಿಸಿತು. ತಾಳಬದ್ಧವಾಗಿ ಹುಟ್ಟು ಬೀಳತೊಡಗಿತು.

'ಮಹಾದೇವಿ....ನೀನೊಬ್ಬ ಕವಯಿತ್ರಿ, ಗಾಯಕಿಯೂ ಕೂಡ ; ಹಾಡಬಲ್ಲೆಯಾ ?' ಭಾವಾನಂದದಲ್ಲಿ ತನ್ಮಯಳಾಗಿದ್ದ ಆಕೆಯನ್ನು ಕೌಶಿಕನ ಮಾತುಗಳು ಎಚ್ಚರಿಸಿದವು.

'ಉಲ್ಲಾಸದಾಯಕ ಈ ಗಳಿಗೆಯಲ್ಲಿ ನನ್ನ ವಿರಕ್ತಿಯ ಹಾಡು ಅಪ್ರಿಯವೆನಿಸೀತು ಪ್ರಭು !...ತಮಗೆ ಬೇಕಾದಂತಹವನ್ನು ಮದನರತಿ ಹಾಡಬಲ್ಲಳು.'

'ನಿನ್ನ ಗಾಯನವೇ ಚಂದ ದೇವಿ' ಆಕೆಯ ಇಂಪುದನಿಯನ್ನು ಆಲಿಸುವ ಬಯಕೆಯವನಿಗೆ.

'ಭವಸಾಗರದಲ್ಲಿ ಶರೀರವೊಂದು ದೋಣಿಯಾಗಿ, ಆತ್ಮನೆಂಬ ಪಯಣಿಗನನ್ನು ಕುಳ್ಳಿರಿಸಿಕೊಂಡು ಹೊರಟಿದೆ. ಸದ್ಗುರುವೇ ಈ ದೋಣಿಯನ್ನು ನಡೆಸುವ ಅಂಬಿಗ. ಈ ಉಪಮೆಯನ್ನಿರಿಸಿ ಹಾಡುವೆ.

ನಂಬಿದೆ ಗುರುವೆ ನಂಬಿದೆ ಸ್ವಾಮಿ ನಂಬಿದೆ
ಅಂಬಿಕಾರಮಣ ರೂಪಿ ಅಂಬಿಗ...
ಹೊಳೆಯು ಭರವ ನೋಡಂಬಿಗ । ಸೆಳಹು ಬಹಳ ಕಾಣಂಬಿಗ
ಸುಳಿಯೊಳಗೆ ಬಿದ್ದೆನಂಬಿಗ ಎನ್ನ । ಸೆಳೆದುಕೊಳ್ಳೋ
ನೀನಂಬಿಗ ॥೧॥

ಅರುತೆರೆಯು ನೋಡಂಬಿಗ । ಬಲು । ಮೀರಿ ಬರುತಲಿವೆ
ಅಂಬಿಗ
ಹಾರಿಹೋದೆನು ಎನ್ನ ತಡಿಗೆ ಸಾರಿಸು ನೀ । ದೂರಮಾಡದಿರು
ಅಂಬಿಗ ॥೨॥

ತುಂಬಿದ ಹರಿಗೋಲಂಬಿಗ । ಅದ । ಕೊಂಬತ್ತು ಛಿದ್ರ
ನೋಡಂಬಿಗ
ಸಂಭ್ರಮವನು ನೋಡಂಬಿಗ । ಇದ । ರಂಬನರಿದು

ಮುಕ್ತಿಗೆಗೊಳಗಾದೆನಂಬಿಗ । ಎನ್ನ । ನೆತ್ತಿಕೊಳ್ಳೋ
ನೀನಂಬಿಗ ॥೪॥

ಸತ್ಯವೆಂಬ ಹುಟ್ಟಂಬಿಗ ಸರ್ವ । ಭಕ್ತಿ ಎಂಬ ಪಥನಂಬಿಗ
ನಿತ್ಯ ಮುಕ್ತ ನಮ್ಮ ಚನ್ನಮಲ್ಲಿಕಾರ್ಜುನನ
ಮುಕ್ತಿ ಮಂಟಪಕೊಯ್ಯೊ ಅಂಬಿಗ* ॥೫॥

'ಆಹಾ....ಬಹು ಸುಂದರ,....ಅರ್ಥಗರ್ಭಿತ....ಅಲ್ಲವೇ ವಸಂತಕಾ?' ತನ್ಮಯತೆಯಿಂದ ಆಲಿಸುತ್ತಲಿದ್ದ ವಸಂತಕನನ್ನು ಕೌಶಿಕ ಅಲುಗಿಸಿ ಕೇಳಿದ.

'ಅಹುದು....ತಾವು ಮೆಚ್ಚಿದನೇಲೆ ಮತ್ತೇನು ಪ್ರಭು?' ದೋಣಿ ನೀರಿನ ತೆರೆಗಳನ್ನು ಭೇದಿಸುತ್ತ ಸಾಗಿತು. ಆಚೆಯ ದಡ ಬಂದೊಡನೆ ಎಲ್ಲರೂ ಇಳಿದು ಅಟ್ಟಣಿಗೆಯನ್ನೇರಿ ಕುಳಿತರು. ಇರುಳಿನ ಮೂರನೆಯ ಜಾವ ಸರಿಯುತ್ತ ಬಂದಾಗ ಆನೆಯ ಹಿಂಡೊಂದು ಬಂದಿತು. ಮನುಷ್ಯರ ವಾಸನೆ ಹಿಡಿದವೇನೋ ಎಂಬಂತೆ, ಹಿಂಡು ನದಿಗೆ ಸ್ವಲ್ಪ ದೂರದಲ್ಲಿ ನಿಂತಿತು. ನಾಯಕ ಆನೆಯು ಸುತ್ತಲೂ ಪರಿಶೀಲಿಸಿತು. ಯಾರೂ ಇಲ್ಲವೆಂದು ದೃಢ ಮಾಡಿಕೊಂಡು ಅದು ಮುಂದೆ ಹೆಜ್ಜೆ ಇರಿಸಿತು. ಅದರ ಹಿಂದೆಯೇ ಆನೆಗಳ ಸಾಲು ಆರಂಭವಾಯಿತು. ಮರಗಳನ್ನು ಮೈಯಿಂದ ಉಜ್ಜುತ್ತ ; ಸೊಂಡಲಿಗೆ ಎಟುಕಿದ ಕೊಂಬೆರೆಂಬೆಗಳನ್ನು ಈಡಾಡುತ್ತ, ಕಾಡಿನ ಚಕ್ರವರ್ತಿಗಳೆಂಬಂತೆ ಆನೆಗಳು ನುಗ್ಗಿಬಂದು ನೀರಿಗಿಳಿದವು. ಬೆಳುದಿಂಗಳ ಬೆಳಗಿನಲ್ಲಿ ಆನೆಗಳ ಪಾದಾಘಾತದಿಂದ ವರದೆಯ ಸರ್ವಾಂಗವೂ ಕಂಪಿಸತೊಡಗಿತು. ಅವಳನ್ನು ದರ್ಪಣವನ್ನಾಗಿ ಬಳಸಿಕೊಂಡಿದ್ದ ಚಂದಿರನೂ ತೆರೆಗಳೊಡನೆ ಕುಣಿಯತೊಡಗಿದ್ದುದು ಚಂದ್ರಿಕೆಯಲ್ಲಿ ರಮ್ಯವಾಗಿ ಕಾಣಿಸಿತು.

ನೀರು ಕುಡಿದು ತಣಿದ ಬಳಿಕ ಆನೆಗಳ ನೀರಾಟ ಆರಂಭವಾಯಿತು. ಸೊಂಡಿಲಿನಲ್ಲಿ ನೀರನ್ನು ತುಂಬಿಕೊಂಡು ಉಷ್ಫೆಂದು ಊದಿ, ಕಾರಂಜಿಯಂತೆ ಅದನ್ನು ಚಿಮ್ಮುತ್ತಿದ್ದವು. ಒಂದರಮ್ಮೈಮೇಲೆ ಇನ್ನೊಂದು ಎರಚುತ್ತ ಆಡುತ್ತಿದ್ದುದು ರಮಣೀಯವೆನಿಸಿತು. ಬೆಳಗಾಗುವ ತನಕ ಆನೆಗಳು ಬರುವುದು, ಹೋಗುವುದು ನಡೆದೇ ಇತ್ತು. ಪೂರ್ವದಿಗಂತದಲ್ಲಿ ಸೂರ್ಯೋದಯದ ಲಕ್ಷಣಗಳು ಕಾಣಬರತೊಡಗಿದವು. ಆನೆಗಳು ಉಲ್ಲಾಸದಿಂದ ಓಡಾಡುತ್ತ ಹಲಸಿನ ಹಣ್ಣುಗಳನ್ನು ಕಿತ್ತವು; ಕೈಗೆ ಸಿಕ್ಕ ಸೊಪ್ಪುಸದೆಗಳನ್ನು ತಿನ್ನುತ್ತ ಓಡಾಡುವಾಗ ಎಲ್ಲಿಂದಲೋ ಘೀಳಿಡುವ ನೋವಿನ ದನಿ ಕೇಳಿಬಂದಿತು.

ನ್ನೈಯೆಲ್ಲ ಕಿವಿಯಾಗಿ ಆ ನೋವಿನ ದನಿಯನ್ನು ಆಲಿಸಿದವು. ಮರುಕ್ಷಣವೇ ಒಂದರ ಬೆನ್ನ ಹಿಂದೆ ಮತ್ತೊಂದಾಗಿ ಧಾವಿಸತೊಡಗಿದವು.

'ಅಗಳಾ, ಹೆರಿಗೆ ಬ್ಯಾನೆ ತಿನ್ತೈತಿ; ಅದೇ ದನಿ.' ವನ್ಯವಾಸಿ ಪಥದರ್ಶಿ ಸಂಗಡಿಗನಿಗೆ ಹೇಳಿದಾಗ, ಮಹಾದೇವಿ ಕುತೂಹಲಗೊಂಡು ಅದೇನೆಂದು ಪ್ರಶ್ನಿಸಿದಳು.

'ಯವ್ವಾ, ಆನೆಗಳಲ್ಲಿ ಕೂಡಿ ಬದ್ಕೋ ಗುಣ ಬೋ ಚಂದಕಣವ್ವಾ! ಆದ್ರ ಹೆರಿಗೆ ಬಾಳ ಕಷ್ಟಕರ. ಹೆರ್ಗೆ ಆಗ್ವಾಗ ಹೆಣ್ಣಾನೆ ಬಾಳ ಬ್ಯಾನೆ ತಿಂತಾದೆ. ಅಷ್ಟೇ ನಿಧಾನ. ಆಗ ಹಿಂಡ್ನಾಗಿರೋ ಉಳಿದ ಆನೆಗ್ಳು ಸುತ್ಲೂ ಕೋಟಿ ಕಟ್ಟಿ ನಿಂತು ರಕ್ಷಣ್ಣೆ ಮಾಡ್ತಾವೆ. ಆನೆ ಮರಿಗ್ಳಮೇಲೆ ಹುಲಿ, ಸಿಂಹಗಳ್ಗೆ ಘನಕಣ್ಣು, ಹೊಸ್ದಾಗಿ ಹುಟ್ದ ಆನೆ ಮರಿ ಅಂದ್ರೆ ಅವ್ಕೆ ಹಾಲುಂಡೆ, ಕಾಯಿ ಕಜ್ಜಾಯದಂಗೆ. ಆನೆಗಳು ಹೆಂಗ ಓಡಿದ್ವು ನೋಡ್ರಿ, ಆ ಬಯ್ಲಾಗೆ ಕ್ವಾಟೆ ಗೋಡೆ ಹಂಗೆ ನಿಲ್ತಿದಾವೆ....' ವನ್ಯವಾಸಿ ಹೇಳಿದ.

ಮಹಾದೇವಿಯ ಕುತೂಹಲ ಗರಿಗೆದರಿತು, ಕೇಳಿದಳು :

'ಅಲ್ಲಿಗೆ ಹೋಗಿ ನೋಡಿದರೆ....?'

'ಯವ್ವಾ ಈ ವ್ಯಾಳ್ಯಾಗೆ ಹೋದ್ರೆ ಉಳಿದೇವಾ? ಬುಸುಗುಡುತ್ತ ಬಂದು ಸೊಂಡಿಲಾಗೆ ಸಿಗಸಿಕೊಂಡು, ಕಾಲಲ್ಲಿ ತುಳಿದು ಅಪ್ಪಚ್ಚಿ ಮಾಡ್ತ್ಯಾವು. ನಮ್ಮ ಹೆಂಡ್ರ ಹಣೇಬರ ಚಂದಾಗಾಕಿಲ್ಲ.'

'ಹೌದು ದೇವಿ....ಅದು ದುಸ್ಸಾಹಸ; ಪಶುಶಕ್ತಿಯ ಮುಂದೆ ಮಾನವ ಶಕ್ತಿ ಎಷ್ಟರದು. ಇಳಿದು, ಆ ದಂಡೆಗೆ ಹೋಗೋಣವಷ್ಟೇ?' ಕೌಶಿಕ ಕೇಳಿದನು. ಒಪ್ಪಿ ಎಲ್ಲರೂ ಅಟ್ಟಣಿಗೆ ಇಳಿದರು.

ದೋಣಿಯಲ್ಲಿ ಕುಳಿತು ಹೊರಟಾಗ ಸೂರ್ಯನು ಅಲಂಕೃತ ವರನಂತೆ, ಮೂಡಣ ಬೆಟ್ಟಗಳನ್ನು ಮೆಟ್ಟಿ ಮೇಲೇರುತ್ತಿದ್ದ. ವಾದ್ಯ ಮೇಳವೊಂದನ್ನು ನಡೆಸುವ ಮುಖ್ಯ ಗಾಯಕನು ಸೂಚನೆ ನೀಡುತ್ತಿದ್ದಂತೆಯೇ ಎಲ್ಲ ವಾದ್ಯ ಗಳು ನುಡಿಯಲು ಆರಂಭವಾಗುವಂತೆ, ಸೂರ್ಯನ ಆಗಮನದೊಡನೆ ಸೃಷ್ಟಿ ಮೇಳ ಜೀವತಳೆದು ಹಾಡತೊಡಗಿತು. ಜಿಂಕೆಗಳ ಹಿಂಡು ನೆಗೆಯುತ್ತ ಬಂದಿತು. ಮಹಾದೇವಿ ಸಂಭ್ರಮಿತಳಾಗಿ ಅವುಗಳನ್ನು ನೋಡಿದಳು. ರವಿಯ ಚೆಂಗಿರಣಗಳ ಆಚ್ಛಾದನೆಯಲ್ಲಿ ಜಿಂಕೆಗಳ ಚರ್ಮ ಮಿರುಗಿತು. ... ಕಂಡ ಸಾರಂಗಗಳು ಠೀವಿಯಿಂದ ಎದೆ ಎತ್ತಿ ನೋಡಿ,

ನವಿಲು ಕೆಳಗೆ ಧುಮುಕಿ ಪೂರ್ವಕ್ಕೆದುರಾಗಿ ಗರಿಗೆದರಿ ನರ್ತಿಸತೊಡಗಿತು. ಎಳೆ ಬಿಸಿಲಿನಲ್ಲಿ ಮೈದೆರೆದು ನರ್ತಿಸಿದಾಗ ಸಾವಿರಾರು ಬಣ್ಣದಾರತಿಗಳನ್ನು ಚೆನ್ನಮಲ್ಲಿಕಾರ್ಜುನನಿಗೆ ಬೆಳಗುತ್ತಿದೆಯೇನೋ ಅನ್ನಿಸಿತು. ಎವೆ ಪಿಳುಕಿಸದೆ ಆ ಚೆಲುವಿನ ನರ್ತನವನ್ನು ನೋಡಿದಳು. ಗಿಡದಿಂದ ಗಾಳಿಗೆ ಉದುರಿದ ನೇರಿಳೆ, ಆಲ, ಪೇರಲ ಹಣ್ಣು, ಹುಲ್ಲೆಸಳನ್ನು ಮೊಲಗಳು ಆಯ್ದು ಕಡಿಯುತ್ತಿದ್ದವು. ಭೀತಸ್ವಭಾವದ ಇಣಚಿಗಳು ಮರಗಳನ್ನು ಏರುತ್ತ–ಇಳಿಯುತ್ತ ಮುದ್ದಾಗಿ ನೆಗೆಯುತ್ತಿದ್ದರೆ, ಗಿಳಿಗಳ ಹಿಂಡು ದಾಳಿಂಬೆಯ ಹಣ್ಣುಗಳಮೇಲೆ ಮುತ್ತಿಗೆಹಾಕಿ ಕುಕ್ಕುತ್ತಿತ್ತು. ವಸಂತಋತುವಿನಾಗಮನದಿಂದ ನಿಸರ್ಗವು ಹೊಸ ಬಟ್ಟೆಯುಟ್ಟಿತ್ತು. ತಳಿತ ಮಾಮರದೊಳಗೆ ಕುಳಿತ ಕೋಕಿಲೆಯ ಕುಹೂರವ ಮಹಾದೇವಿಯ ಮೈಯನ್ನು ಪುಳಕಿತಮಾಡಿತು. ಎಳೆಯ ಗಿಳಿಗಳು ಓದುವ ಪಾಠಶಾಲೆಯಾಗಿ, ಭ್ರಮರಗಳು ಗುಂಯ್ಗುಡುವ ಸಂಗೀತ ನಿಲಯವಾಗಿ, ಸೋಗೆಗಳು ನರ್ತಿಸುವ ನೃತ್ಯಮಂಟಪವಾಗಿ ತೋರಿಬಂದ ನಿಸರ್ಗದಲ್ಲಿ ತಾನೂ ಒಂದಾಗಿ ಹೇಳಿದಳು :

'ಶಿವಕಾಮಿನಿ, ನನಗೆ ಇಲ್ಲಿಯೇ ಇರಬೇಕೆನಿಸುತ್ತಿದೆ. ಕೃತಕ ಮಾನವ ನಿರ್ಮಿತ ಪುರವಾಸಕ್ಕಿಂತ ದೇವನಿರ್ಮಿತ ನಿಸರ್ಗದ ನಂದನವೇ ಶಾಂತಿದಾಯಕ. ಇಲ್ಲಿ ಅರಿಷಡ್ವರ್ಗಗಳ ಉಪಟಳವಿಲ್ಲ, ಸಬಲರು ದುರ್ಬಲರನ್ನು ತುಳಿವ ಶೋಷಣೆಯಿಲ್ಲ....' ಮಹಾದೇವಿ ಭಾವುಕಳಾಗಿ ನುಡಿದಳು.

ಮುಂಜಾನೆಯ ಹೊಂಗಿರಣಗಳಲ್ಲಿ ಅಪೂರ್ವ ಅಂದದಿಂದ ಶೋಭಿಸುವ ಮಹಾದೇವಿಯ ತನ್ಮಯತೆಯನ್ನು ನೋಡುತ್ತಲಿದ್ದ ಕೌಶಿಕ ಹೇಳಿದ :

'ಅಹುದು ಮಿತ್ರಾ....ನನಗೂ ಹಾಗೆಯೇ ಅನ್ನಿಸುತ್ತಿದೆ. ರಾಜ್ಯದ ರಕ್ಷಣೆಯ ಭಾರವನ್ನು ನಿನಗೇ ಕೊಟ್ಟುಬಿಡುವೆ....ದೇವಿಯರ ಅಂಗರಕ್ಷಕನಾಗಿ ಇಲ್ಲೇ ಇದ್ದುಬಿಡುವೆ....' ಇದು ತನ್ನನ್ನು ಮೆಚ್ಚಿಸಲು ಆಡುವ ಮಾತೆಂದು ಮಹಾದೇವಿಗೆ ತಿಳಿಯದಿರಲಿಲ್ಲ.

'ಮೀಸಲು ಹಾಲನ್ನು ಕಾಯಲು ಬೆಕ್ಕನ್ನು ನಿಯಮಿಸಿದಂತೆ! ನೀನು ರಕ್ಷಕನೋ, ಭಕ್ಷಕನೋ ?' ತನ್ನ ಮನದಲ್ಲಿ ಅಂದುಕೊಂಡಳು—ತುಟಿಯಿಂದ ನುಡಿದು ತೋರಿಸಲಿಲ್ಲ. ಮೌನವಾಗಿ ಮುಖ ತಿರುವಿದಳು.

ಬಂದವರು ಮಿಂದು ಬಾಣಸಿಗರು ಸಿದ್ಧಪಡಿಸಿದ ಉಪಾಹಾರ ತಿನ್ನತೊಡಗಿದರು. ಮಹಾದೇವಿ ಶಿವಕಾಮಿನಿಯೊಡನೆ ಸ್ನಾನ–ಪೂಜೆಗೆಂದು ನದಿಯ ದಂಡೆಗೆ ನಡೆದಳು. ಮೇಲೆ ರವಿಕಿರಣದ ಬಿಸಿ ಕೆಳಗೆ ತಂಪು ನೀರು, ತುಂಬ

ಪೂಜೆಗೆ ಅಣಿ ಮಾಡಿ, ಹೂವುಗಳನ್ನು ಬಿಡಿಸಲು ಹೋದಳು. ವಿವಿಧ ವರ್ಣಗಳ ಹೂಗಳು ಅರಳಿ ನಗುತ್ತಿದ್ದವು. ದುಂಬಿಗಳು ಗಿಡದಿಂದ ಗಿಡಕ್ಕೆ ಹಾರುತ್ತಿದ್ದವು. ಅರಳಿದ ಹೂವಿನ ನಡುವೆ ದುಂಬಿಯೊಂದು ಕುಳಿತಿತ್ತು.

'ನೀವು ಎಂಜಲು ಮಾಡಿಕೊಡುವಿರಿ....ಅದನ್ನು ನಾನು ಚನ್ನನಿಗೆ ಅರ್ಪಿಸಬೇಕೇನೋ....?' ಮೃದುವಾಗಿ ಹೂವಿಗೆ ಹೊಡೆದಳು. ಆ ದುಂಬಿಯು ಹಾರಿ ಬಂದು ಮುಖದ ಮೇಲೆ ಕುಳಿತಿತು.

ಕಚಕುಳಿ ಇಟ್ಟಂತಾಗಿ ಓಡಿಸಿದಳು. ಮನತಣಿಯುವಷ್ಟು ಹೂವುಗಳನ್ನು ಕಿತ್ತು ತಂದು ಪೂಜಿಸತೊಡಗಿದಳು.

'ಚನ್ನಮಲ್ಲಿಕಾರ್ಜುನಾ,....ನಿನ್ನೊಲಿಮೆಯಾಗಿಲ್ಲ ಎಂದು ನಾನು ಭಾವಿಸುವುದು ತಪ್ಪೇನೊ ಎನಿಸುತ್ತದೆ....

ತನು ಕರಗದವರಲ್ಲಿ ನೀನು ಮಜ್ಜನವನ್ನು ಸ್ವೀಕರಿಸೆ; ಮನ ಕರಗದವರಲ್ಲಿ—ಮಾನವೀಯತೆ ಇಲ್ಲದವರಲ್ಲಿ ಪುಷ್ಪವನ್ನು ಒಲ್ಲೆ; ಎಲ್ಲರಿಗೂ ಹಿತವನ್ನೇ ಬಯಸುವ ಹದುಳಿಗ ಭಾವವಿಲ್ಲದಿದ್ದರೆ ಗಂಧಾಕ್ಷತೆಯನೊಲ್ಲೆ; ಅರಿವಿನ ಕಣ್ಣು ಅರಳದವರ—ಸಮ್ಯಕ್‌ದೃಷ್ಟಿ ಅಳವಡದವರ ಆರತಿಯನ್ನು ತಿರಸ್ಕರಿಸುವೆ. ಭಾವನೆಗಳು ಶುದ್ಧವಿಲ್ಲದಿದ್ದರೆ ಧೂಪವನ್ನು ಬಯಸೆ, ಜೀವನದಲ್ಲಿ ಸಂತೃಪ್ತಿ-ಸುಯಿಧಾನ ಇಲ್ಲದಿರೆ ನೈವೇದ್ಯವನು ಒಲ್ಲೆ, ನೈಮಾತು ಮನಗಳಿಂದ ಪರಿಶುದ್ಧವಾಗಿಲ್ಲದಿದ್ದರೆ ತಾಂಬೂಲವನೊಲ್ಲೆ, ಹೃದಯಕಮಲವರಳಿ, ಸದ್ಗುಣಗಳ ಸೌರಭ ಹಸರಿಸಿ, ಸದ್ಭಕ್ತಿಯ ಮಕರಂದದ ನೆಲೆವನೆಯಾಗದಿದ್ದರೆ ಇರಲೊಲ್ಲೆ....ನನ್ನಲ್ಲಿ ಈ ಯಾವ ಗುಣಗಳೂ ಇಲ್ಲ....ಆದರೂ ಬಂದು ಉರಸ್ಥಲದಲ್ಲಿ ಸಿಂಹಾಸನಾರೂಢನಾಗಿ, ಕರಸ್ಥಲದಲ್ಲಿ ಪೂಜೆಗೊಳ್ಳುವೆ.*

ಪರಿಣಾಮವನ್ನು ನೋಡಿ ಕಾರಣ ಊಹಿಸುವುದಾದರೆ ನೀ ನೊಲಿದಿರುವುದು ಬಹು ದಿಟ. ಬಿತ್ತಿದ ಬೀಜ ಯಾವುದೆಂದು ಗೊತ್ತಿಲ್ಲ; ಪರಿಣಾಮರೂಪವಾಗಿ ಬಂದ ಫಲವನ್ನು ನೋಡಿ ಕಾರಣರೂಪವಾದ ಬೀಜವನ್ನು ನಿರ್ಧರಿಸುವಂತೆ; ಚನ್ನಮಲ್ಲಿಕಾರ್ಜುನಾ....ನೀನು ಕಾರುಣ್ಯನಿಧಿ, ಒಲಿದಿರುವುದು ನಿಶ್ಚಿತ...." ದಿವ್ಯ ಸಮಾಧಾನವೆನಿಸಿ ಕಣ್ಣುಮುಚ್ಚಿ ಪ್ರಶಾಂತಚಿತ್ತಳಾಗಿ ಶಿಲಾಪ್ರತಿಮೆಯಂತೆ ಕುಳಿತಳು. ಇಂಪು ಗಾನಕ್ಕೆ ಮನಸೋತ ಕೌಶಿಕ ಉಪಾಹಾರವಾದ ಬಳಿಕ ಬಂದುನಿಂತು ಕದ್ದು ನೋಡುತ್ತಿದ್ದ. ಆ ಸಂತೃಪ್ತಿ-ಶಾಂತಿಗಳ ಮುಖಮುದ್ರೆಯನ್ನು ವಸಂತಕನಿಗೆ ತೋರಿಸಿದ. ವಸಂತಕನಿಗೆ, ಬೋಧಿ

ತಾಯಿಯು ಮಗುವಿಗೆ ನೀಡುವ ವಾತ್ಸಲ್ಯ-ಸುಖವಾಗಲಿ ಅಲ್ಲ, ಕೇವಲ ಪ್ರೇಯಸಿಯು ಪ್ರಿಯನಿಗೆ ಕೊಡಬಹುದಾದ ಅಂಗಸುಖ. ಅದಕ್ಕಾಗಿ ತಪಿಸುತ್ತಿರುವೆ....ಏನು ಮಾಡಲಿ ಹೇಳು ವಸಂತಕಾ....?' ಉದ್ವೇಗದಿಂದ ಕೌಶಿಕನು ಕೇಳಿದನು. ವಸಂತಕ ಆಲೋಚನೆಯ ಆಳದಲ್ಲಿ ಮುಳುಗಿದ್ದ.

'ಕೇವಲ ಮಾರು ದೂರದಲ್ಲಿದ್ದು ಬಾಹುಬಂಧನಕ್ಕೆ ಸಿಗದಿದ್ದರೆ ಎಷ್ಟು ಕಷ್ಟತನು ಗೊತ್ತೇ? ರಾಮಾಯಣದ ಸುವರ್ಣಜಿಂಕೆಯಂತೆ ಕಣ್ಣಿಗೆ ಕಾಣುವಳು, ಕೈಗೆ ಸಿಗಳು....' ನಿಟ್ಟುಸಿರಿಟ್ಟು ಹೇಳಿದ ಕೌಶಿಕ.

'ಪಾಪಿಯು ಕಣ್ಣಿಗೆ ಪರುಷವು ಕಲ್ಲಾಗಿ ತೋರುವಂತೆ, ನಿರ್ಭಾಗ್ಯನಿಗೆ ಕಾಮಧೇನುವು ನಾಡ ಹಸುವಾಗಿ ಕಾಣುವಂತೆ 'ಇವನಿಗೆ ಈ ತಾಯಿಯಲ್ಲಿ ಹೆಣ್ಣಿನ ಆಕಾರ, ಅಂಗಸೌಷ್ಠವ ಬಿಟ್ಟು ಮತ್ತೇನೂ ಕಾಣದು. ಪುಣ್ಯಸಂಚಯ ವಿರದೆ ಅರಿವಿನ ಕಣ್ಣು ಅರಳಲು ಸಾಧ್ಯವೆ? ಅಂತೆಯೇ ಬಸವಣ್ಣನವರು ಹೇಳುವರು—

ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಅರಿಯಬಹುದೆ ರಸದ ಭಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದರಿದ್ರಂಗೆ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ?
ಹೊನ್ನ ಹುಳುವ ಕಂಡ ಸರಿ ತನ್ನ ಬಾಲವ ಹುಣ್ಣು
ಮಾಡಿಕೊಂಡರೆ ಹೋಲಬಹುದೆ?
ಎನ್ನೊಡೆಯ ಕೂಡಲ ಸಂಗನ ಶರಣರನ್ನು
ಪುಣ್ಯವಿಲ್ಲದೆ ಕಾಣಬಹುದೆ?'*

ವಸಂತಕ ಮನದಲ್ಲೇ ವಿಚಾರಮಂಥನ ಮಾಡುತ್ತ ಮೌನವಾಂತಿದ್ದ. ಮಹಾದೇವಿಯ ಸಂದರ್ಶನವಾದಾಗಿನಿಂದ ವಚನಶಾಸ್ತ್ರದಲ್ಲಿ ಅವನ ಕುತೂಹಲ ಹೆಚ್ಚುತ್ತಿದ್ದು, ಶರಣರ ವಿಚಾರಧಾರೆ ಅವನನ್ನು ಆಕರ್ಷಿಸತೊಡಗಿತ್ತು.

'ಏಕೆ ವಸಂತಕಾ ಮೌನತಾಳಿಬಿಟ್ಟೆ....?', ಕೌಶಿಕ ಅಲುಗಿಸಿದಾಗ ಎಚ್ಚರಗೊಂಡ ವಸಂತಕ.

'ನಿಮ್ಮ ಪ್ರಯತ್ನಕ್ಕೆ ಯಶಸ್ಸು ದೊರಕಲೆಂದು ಹಾರೈಸುವೆ...' ನಿರ್ಲಿಪ್ತನಾಗಿ ನುಡಿದನು.

ತಾಯಿಯು ಮಗುವಿಗೆ ನೀಡುವ ವಾತ್ಸಲ್ಯ-ಸುಖವಾಗಲಿ ಅಲ್ಲ, ಕೇವಲ ಪ್ರೇಯಸಿಯು ಪ್ರಿಯನಿಗೆ ಕೊಡಬಹುದಾದ ಅಂಗಸುಖ. ಅದಕ್ಕಾಗಿ ತಪಿಸುತ್ತಿರುವೆ....ಏನು ಮಾಡಲಿ ಹೇಳು ವಸಂತಕಾ....?' ಉದ್ವೇಗದಿಂದ ಕೌಶಿಕನು ಕೇಳಿದನು. ವಸಂತಕ ಆಲೋಚನೆಯ ಆಳದಲ್ಲಿ ಮುಳುಗಿದ್ದ.

'ಕೇವಲ ಮಾರು ದೂರದಲ್ಲಿದ್ದು ಬಾಹುಬಂಧನಕ್ಕೆ ಸಿಗದಿದ್ದರೆ ಎಷ್ಟು ಕಷ್ಟತಮ ಗೊತ್ತೇ? ರಾಮಾಯಣದ ಸುವರ್ಣಜಿಂಕೆಯಂತೆ ಕಣ್ಣಿಗೆ ಕಾಣುವಳು, ಕೈಗೆ ಸಿಗಳು....' ನಿಟ್ಟುಸಿರಿಟ್ಟು ಹೇಳಿದ ಕೌಶಿಕ.

'ಪಾಪಿಯ ಕಣ್ಣಿಗೆ ಪರುಷವು ಕಲ್ಲಾಗಿ ತೋರುವಂತೆ, ನಿರ್ಭಾಗ್ಯನಿಗೆ ಕಾಮಧೇನುವು ನಾಡ ಹಸುವಾಗಿ ಕಾಣುವಂತೆ ಇವನಿಗೆ ಈ ತಾಯಿಯಲ್ಲಿ ಹೆಣ್ಣಿನ ಆಕಾರ, ಅಂಗಸೌಷ್ಠವ ಬಿಟ್ಟು ಮತ್ತೇನೂ ಕಾಣದು. ಪುಣ್ಯಸಂಚಯ ವಿರದೆ ಅರಿವಿನ ಕಣ್ಣು ಅರಳಲು ಸಾಧ್ಯವೆ? ಅಂತೆಯೇ ಬಸವಣ್ಣನವರು ಹೇಳುವರು—

ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಅರಿಯಬಹುದೆ ರಸದ ಭಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದರಿದ್ರಂಗೆ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ?
ಹೊನ್ನ ಹುಳುವ ಕಂಡ ನರಿ ತನ್ನ ಬಾಲವ ಹುಣ್ಣು
ಮಾಡಿಕೊಂಡರೆ ಹೋಲಬಹುದೆ?
ಎನ್ನೊಡೆಯ ಕೂಡಲ ಸಂಗನ ಶರಣರನ್ನು
ಪುಣ್ಯವಿಲ್ಲದೆ ಕಾಣಬಹುದೆ?'*

ವಸಂತಕ ಮನದಲ್ಲೇ ವಿಚಾರಮಂಥನ ಮಾಡುತ್ತ ಮೌನವಾಂತಿದ್ದ. ಮಹಾದೇವಿಯ ಸಂದರ್ಶನವಾದಾಗಿನಿಂದ ವಚನಶಾಸ್ತ್ರದಲ್ಲಿ ಅವನ ಕುತೂಹಲ ಹೆಚ್ಚುತ್ತಿದ್ದು, ಶರಣರ ವಿಚಾರಧಾರೆ ಅವನನ್ನು ಆಕರ್ಷಿಸತೊಡಗಿತ್ತು.

'ಏಕೆ ವಸಂತಕಾ ಮೌನತಾಳಿಬಿಟ್ಟೆ....?' ಕೌಶಿಕ ಅಲುಗಿಸಿದಾಗ ಎಚ್ಚರಗೊಂಡ ವಸಂತಕ.

'ನಿಮ್ಮ ಪ್ರಯತ್ನಕ್ಕೆ ಯಶಸ್ಸು ದೊರಕಲೆಂದು ಹಾರೈಸುವೆ....' ನಿರ್ಲಿಪ್ತನಾಗಿ ನುಡಿದನು.

೩೨. ಅಭವನ ಧ್ಯಾನಕ್ಕೆ ಭವಿಯಿಂದ ಭಂಗ

ಮಹಾದೇವಿಯು ಕಣ್ಣು ತೆರೆದಾಗ ಬಿಸಿಲು ಏರಿತ್ತು. ಹಣ್ಣು-ಹಾಲನ್ನು ಸ್ವೀಕರಿಸಿ ವಿಶ್ರಾಂತಿ ಹೊಂದುವಾಗಲೇ, ಆನೆಯನ್ನು ಪಳಗಿಸುವ ಕೇಂದ್ರಕ್ಕೆ ಹೋಗಬೇಕೆಂಬ ಕರೆ ಬಂದಿತು. ಅಲ್ಲಿಂದ ಹರದಾರಿ ದೂರದಲ್ಲಿ ವಿಶಾಲವಾದ ಬಯಲಿನಲ್ಲಿ ಆನೆಗಳನ್ನು ಪಳಗಿಸುತ್ತಿದ್ದರು. ಎತ್ತರವಾದ ಒಂದು ಗಜಬಂಧನ ಕೊಟ್ಟಿಗೆಯನ್ನು ಮಾಡಿದ್ದರು. ಆನೆಯ ಕಾಲಿಗೆ ಕಬ್ಬಿಣದ ಸರಪಳಿ ಹಾಕಿ ಮೂಲೆಗಂಭಕ್ಕೆ ಬಿಗಿದಿದ್ದರು. ಮಾವಟಿಗನ ಚಾಟಿಯುಏಟು ಆನೆಯ ಮೈಮೇಲೆ ಎಳೆಎಳೆಯಾಗಿ ಮೂಡಿತ್ತು. ತನ್ನ ಬಂಧುಗಳನ್ನು, ಅರಣ್ಯವನ್ನು ಕಳೆದುಕೊಂಡ ಅದು ಬಂಧನಕ್ಕೊಳಗಾದ ಆಕ್ರೋಶದಿಂದ ಕಣ್ಣುಗಳನ್ನು ಕಂಭಕ್ಕೆ ಉಜ್ಜಿ ಉಜ್ಜಿ, ಕಣ್ಣೀರು ಸುರಿಯುತ್ತಿದ್ದವು.

'ಏ ದರಿದ್ರಾ....ಕಾಡ್ನಲ್ಲಿ ಅಲ್ದಾಡಿ ಮುಳ್ಳುಕಲ್ಲನ್ನು ತುಳಿದು, ಮೈತರೆಸಿಕೊಂಡು ಇರುತ್ತಿದ್ದೆ. ಈಗ ನಿಂತಲ್ಲೇ ಹಲಸಿನ ಹಣ್ಣು, ಮಾವಿನ ಎಲೆ, ಬಾಳೆಯ ಗೊನೆ ಸಿಕ್ಕರೂ ಗೋಳಾಡ್ತೀಯಾ ?' ಎಂದು ಗಜಶಿಕ್ಷಕ ಚಾಟಿಯನ್ನು ಬೀಸಿದಾಗ ಮಹಾದೇವಿಯ ಕರುಳು ಮರಮರ ಮರುಗಿತು. ಪಳಗಿಸುವದನ್ನು ನೋಡಿ ರಾಜಪರಿವಾರವು ಬಿಡಾರಕ್ಕೆ ಬಂದಾಗ ವನ್ಯನಿವಾಸಿಯೊಬ್ಬ ಪಂಜರದಲ್ಲಿ ಎರಡು ಗಿಳಿಗಳನ್ನು ಹಿಡಿದು ತಂದಿದ್ದ. ಕೌಶಿಕ ಹರ್ಷಿತನಾಗಿ ಬಂಗಾರದ ನಾಣ್ಯಗಳನ್ನು ಅವನಿಗೆ ಕೊಟ್ಟು ಕಳಿಸಿದ. ಅತಿ ಸನಿಹದಲ್ಲಿಯೇ ಒಂದು ಗಿಳಿವಿಂಡು ಗಿಡವೊಂದನ್ನು ಆಶ್ರಯಿಸಿತ್ತು. ಆ ಹಿಂಡಿನಿಂದ ಹಿಡಿದು ತಂದಿದ್ದ ಈ ಗಿಳಿಗಳುಳ್ಳ ಪಂಜರವನ್ನು ಗಿಡವೊಂದಕ್ಕೆ ತೂಗುಹಾಕಿದರು. ಹಣ್ಣು-ಹಾಲುಗಳನ್ನು ಇಟ್ಟರೂ ಗಿಳಿಗಳು ಕೊಕ್ಕನ್ನು ಮುಟ್ಟಿಸಲಿಲ್ಲ. ಸಂಜೆಯ ವೇಳೆಗೆ ಗಿಳಿಗಳೆಲ್ಲ ನಿವಾಸಕ್ಕೆ ಹಾರಿಬಂದು ತಮ್ಮ ಬಂಧುಗಳು ಕಣ್ಮರೆಯಾಗಿರುವುದನ್ನು ಗಮನಿಸಿ ರೋದನದ ಸ್ವರವನ್ನು ಹೊರಡಿಸಿದವು. ಅದನ್ನು ಕೇಳುತ್ತಲೇ ಪಂಜರದ ಗಿಳಿಗಳು ಆಲಿಸಿ, ಕೂಗತೊಡಗಿದ್ದಲ್ಲದೇ ಒಳಗೇ ರೆಕ್ಕೆ ಬಡಿದು ಚಟಪಟಿಸತೊಡಗಿದವು. ಆ ಸಂಕಟವನ್ನು ನೋಡಿದಾಗ ಮಹಾದೇವಿಯ ಹೃದಯ ಮರುಗಿತು. ದೀರ್ಘಕಾಲದವರೆಗೆ ದಿಟ್ಟಿಸುತ್ತ ಕುಳಿತು, ಚಟ್ಟನೆ ಎದ್ದು ಪಂಜರದ ಬಾಗಿಲು ತೆರೆದಳು. ಗಿಳಿಗಳು ರೆಕ್ಕೆ ಬಡಿದು ಹಾರುತ್ತ [illegible] ಕೊಕ್ಕುಗಳನ್ನು ಪರಸ್ಪರ ಮುಟ್ಟಿಸಿ

ಹೊರಡಬೇಕೇನೋ. ಆದ್ದರಿಂದ ಇಂದು ಸಂಜೆ-ರಾತ್ರಿಗಳನ್ನು ಪೂಜೆಯಲ್ಲಿ ಕಳೆಯುವೆ. ಯಾರೂ ಎಚ್ಚರಿಸಬೇಡಿ. ಮಹಾರಾಜರು ವಿಶ್ರಾಂತಿಯಲ್ಲಿರ ಬಹುದು ; ಕೇಳಿದರೆ ಹೇಳಿಬಿಡು....'

ತನ್ನ ಬಟ್ಟೆಯನ್ನು, ಓಲೆಗರಿ-ಕಂಠಗಳನ್ನು ಹಿಡಿದ ಮಹಾದೇವಿ ನದಿಯತ್ತ ನಡೆದಳು. ಸೂರ್ಯಾಸ್ತಕ್ಕೆ ಅರ್ಧ ಜಾವದ ವೇಳೆಯಿತ್ತು. ಶಿವಕಾಮಿನಿಯೂ ಹಿಂಬಾಲಿಸಿದಳು. ಬಂಡೆಗಲ್ಲಿನ ಮೇಲೆ ಕುಳಿತು ಎದುರಿನ ಕಾಡನ್ನು ನೋಡುತ್ತ, ಆಗಾಗ ನೀರು ಕುಡಿಯಲು ಬರುವ ಜಿಂಕೆಯ ಹಿಂಡನ್ನು ಗಮನಿಸುತ್ತ ಆಹ್ಲಾದಿಸುತ್ತಿದ್ದಳು. ಒಡತಿಯನ್ನು ಸಮೀಪಿಸಿದ ಶಿವಕಾಮಿನಿ ಕೆಳಗೆ ಕೂಡುತ್ತ ಕೇಳಿದಳು :

'ಅಮ್ಮಾ... ನೀವೇನೋ ಚಿಂತೆಯಲ್ಲಿರುವಂತೆ ತೋರುವುದು. ಯಾವಾಗಲೂ ಒಬ್ಬರೇ ಏನೇನೋ ವಿಚಾರ ಮಾಡುತ್ತಲಿರುವಿರಿ. ಮನುಷ್ಯರ ಸಹವಾಸ ಕ್ಕಿಂತ ನಿಸರ್ಗದ, ಪಕ್ಷಿಗಳ, ಪ್ರಾಣಿಗಳ ನೋಟವೇ ನಿಮಗೆ ಪ್ರಿಯವೆನಿಸುತ್ತದೆ. ತಮಗೇನು ಕೊರತೆ ಹೇಳಿ ತಾಯಿ....ಬೇಕೆಂದುದನ್ನು ಕಣ್ಣೆದುರಿಗೆ ಇಳಿಸುವ ಮಹಾರಾಜರು, ಬಯಸಿದರೆ ಕಾಲಿಗೆ ಬೀಳುವ ಪಟ್ಟದರಸಿಯ ಪದವಿ, ಅರ ಮನೆಯ ಸುಖ-ಸಂಪದ ; ಇಷ್ಟಿದ್ದೂ ಚಿಂತೆಯಲ್ಲಿರುವಿರಿ....ನನಗೆ ತುಂಬ ವ್ಯಥೆ ಎನಿಸುತ್ತದೆ....' ದೀರ್ಘವಾದ ನಿಟ್ಟುಸಿರಿನೊಡನೆ ಮಹಾದೇವಿ ಹೇಳಿದಳು :

'ಶಿವಕಾಮಿನಿ....ಕಾಡಿನಲ್ಲಿದ್ದ ಆನೆ ಕಷ್ಟಕಾರ್ಪಣ್ಯದಿಂದ, ಸ್ವಪ್ರಯತ್ನ ದಿಂದ ಆಹಾರವನ್ನು ಗಳಿಸುವುದು. ಕಟ್ಟಿಗೆಯ ಕಟಕಟೆಯಲ್ಲಿರುವ ಆನೆಗೆ ನಿಂತ ಲ್ಲಿಯೇ ಎಲ್ಲವೂ ಒದಗುವುದು. ಇಷ್ಟಿದ್ದೂ ಅದು ಏಕೆ ದುಃಖಿತವಾಗಿತ್ತು ? ಪಂಜರದಲ್ಲಿದ್ದ ಗಿಳಿಗೆ ನೀನೇ ಕೈಯಾರೆ ಹಣ್ಣು ಹಾಲನ್ನಿಟ್ಟೆ. ಆದರೂ ಏಕದು ಚಿಂತಾಕ್ರಾಂತವಾಗಿತ್ತು....? ಹೇಳು ನೋಡೋಣ....'

'ಆನೆಗೆ ಬೇಕಾದುದು ತನ್ನ ಮೂಲಸ್ಥಾನ, ತನ್ನ ಬಂಧುಗಳ ಒಡನಾಟ, ಸ್ವಾತಂತ್ರ್ಯ ; ಗಿಳಿಗೆ ಬೇಕಾದುದೂ ಅಷ್ಟೇ ತಾಯಿ....'

'ಎಷ್ಟು ಚೆನ್ನಾಗಿ ಹೇಳಿದೆ ಶಿವೆ....ಹಾಗೆಯೇ ನಾನೂ ಸಹ ಪ್ರತಿನಿತ್ಯ ಹಂಬಲಿಸುವೆ.

ಹಿಂಡನಗಲಿ ಹಿಡಿವಡೆದ ಕುಂಜರ

ಕಂದಾ, ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋರಯ್ಯ ಚನ್ನಮಲ್ಲಿಕಾರ್ಜುನಾ...'*

ತನ್ಮಯತೆಯಿಂದ ಹಾಡಿದಳು.

'ಎಷ್ಟು ಸುಂದರವಾಗಿದೆ....!' ಶಿವಕಾಮಿನಿ ಉದ್ಗರಿಸಿದಳು.

'ಶಿವೆ, ನನ್ನ ಹೃದಯವು ಹಂಬಲಿಸುವುದು ಮೂಲಸ್ಥಾನವಾದ ಶಿವನ ಹೃದಯದ ಮಂದಿರವನ್ನು, ಶರಣ ಬಂಧುಗಳ ಸತ್ಸಂಗವನ್ನು, ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು; ಇವಿಲ್ಲದ ಹೊರತು ನನ್ನ ಬದುಕಿಗೆ ಪರಿಪೂರ್ಣತೆಯಿಲ್ಲ.'

ಮುಳುಗುವ ಪ್ರಶಾಂತ ಸೂರ್ಯನ ಹೊಂಗಿರಣಗಳಲ್ಲಿ ಆಹ್ಲಾದಿಸುತ್ತ ವರದೆಯ ಮಡಿಲಲ್ಲಿ ಕುಳಿತು ತನ್ನ ತಲೆಗೂದಲನ್ನು ಚೆನ್ನಾಗಿ ತೊಳೆದು ಕೊಂಡು, ಮನತಣಿಯುವಷ್ಟು ಮೀಯತೊಡಗಿದಳು. ನಿಧಾನವಾಗಿ ಮಬ್ಬು ಆವರಿಸುತ್ತಿದ್ದು, ತಂಗಾಳಿ ಮಂದಗತಿಯಲ್ಲಿ ಸುಳಿಯುತ್ತಿತ್ತು.

'ಈ ನದಿಯಗುಂಟ ಹೀಗೇ ಹೋಗಿಬಿಡಲೇ ಶಿವಕಾಮಿನಿ....?' ನಗುತ್ತ ಕೇಳಿದಳು ಮಹಾದೇವಿ.

'ಬೇಡವ್ಮಾ....ನಿಮ್ಮನ್ನು ಬಿಟ್ಟು ನಾನಿರಲಾರೆ....' ಭಯಗೊಂಡು ಹೇಳಿದಳು.

'ಯಾವ ಜನ್ಮದ ಋಣಾನುಬಂಧವೋ ಏನೋ; ನಿನ್ನನ್ನು ನೋಡಿದರೆ ನನ್ನ ತಂಗಿ ಎನಿಸುವುದು ಶಿವೆ. ಎಂತಹ ಸುಗುಣವತಿ ನೀನು ! ಈ ಬದುಕೊಂದು ಧರ್ಮಶಾಲೆ ಇದ್ದಂತೆ. ದಾರಿಹೋಕರು ರಾತ್ರಿ ಅಲ್ಲಿ ತಂಗುವರು. ಯಾರು ಯಾರದೋ ಪರಿಚಯ, ಮಾತುಕತೆ, ತಮ್ಮ ಸುಖದುಃಖಗಳ ವಿನಿಮಯ; ಬೆಳಗಾಗುತ್ತಿದ್ದಂತೆಯೇ ಅವರವರ ದಾರಿ ಅವರಿಗೆ....' ನದಿಯ ತೆರೆಗಳ ಮೇಲೆ ಕೈಯಾಡಿಸುತ್ತ ಮಹಾದೇವಿ ನುಡಿದಳು.

'ಎಷ್ಟು ಹೊತ್ತಿನಿಂದ ನೀರಿನಲ್ಲಿರುವಿರಿ ಅವ್ಮಾ....ಶೀತವಾದರೇನು ಗತಿ ? ನಿಮಗೇನಾದರೂ ಆದರೆ ರಾಜರು ಕಳವಳಗೊಳ್ಳುವರು....' ಮುಗ್ಧಪ್ರೇಮ ದಿಂದ ಹೇಳಿದಳು.

'ಆ ಹೆಸರು ಎತ್ತದಿರು ಶಿವೆ....ಇಂತಹ ಉಲ್ಲಾಸಮಯ ಶಿವಪ್ರಪಂಚದ ಕೂಸುಗಳಾಗಿ ಆಡುವ ನಾವು ಕಹಿ ನೆನಪುಗಳನ್ನು ಕೆದಕಬಾರದು....' ಖಿನ್ನ ಳಾಗಿ ನುಡಿದಳು. ಶಿವಕಾಮಿನಿ ಈ ಮಾತಿನಿಂದ ಪೆಚ್ಚಾಗಿ ನಿಂತಳು. ಮಹಾ

ಇನ್ನೂ ಬಂದಿರಲಿಲ್ಲವಾಕೆಗೆ.

ಮಹಾದೇವಿ ನೀರಿಂದು ಹೊರಬಂದು ನದಿಯ ದಂಡೆಗೆ ಹರವಿಕೊಂಡ ಬಂಡೆಗಳಲ್ಲೊಂದರಮೇಲೆ ಪದ್ಮಾಸನ ಹಾಕಿ ಕುಳಿತಳು.

'ಯಾರನ್ನೂ ಬಿಡದಂತೆ ಸ್ವಲ್ಪ ದೂರ ನಿಂತು ಕಾಯುತ್ತಿರು ಶಿವೆ....' ಶಿವಕಾಮಿನಿ 'ಹೂಂ'ಗುಟ್ಟಿ ಅನತಿ ದೂರ ಹೋಗಿ ನೆಲದ ಮೇಲೆ ಕುಳಿತಳು.

ಒದ್ದೆಗೂದಲನ್ನು ಒಣಗಲೆಂದು ಬೆನ್ನಮೇಲೆ ಹರಡಿಕೊಂಡು, ಆನಂದ ತುಂದಿಲಳಾಗಿ ಮಹಾದೇವಿ ಪೂಜೆಗಾರಂಭಿಸಿದಳು. ತಿಳಿಯಾದ ವಿಶಾಲ ಕೊಳ ವೊಂದರಲ್ಲಿ ಅರಸಂಚೆಯೊಂದನ್ನು ಆಡಬಿಟ್ಟಾಗ ಅದು ಮನತಣಿಯುವಷ್ಟು ತೇಲುವಂತೆ ಆಕೆಯ ಮನಹಂಸೆ ಶಿವಭಕ್ತಿಯ ಸರಸಿಯಲ್ಲಿ ತೇಲುತ್ತಿತ್ತು.

'ಚನ್ನಮಲ್ಲಿಕಾರ್ಜುನಾ.... ಒಮ್ಮೊಮ್ಮೆ, ನೀನು ನನ್ನ ಕರಸ್ಥಲದಲ್ಲಿಯೇ ಇರುವೆ ಎನಿಸಿ ಅಳತೆಗೆ ಮೀರಿದ ಆತ್ಮವಿಶ್ವಾಸ ಮೈಗೂಡುವುದು; ಆದರೆ ಮತ್ತೊಮ್ಮೆ ನಿನ್ನಿಂದ ಸ್ವೀಕೃತಳಾಗದವಳೇನೋ ಎನ್ನಿಸಿ ನೈರಾಶ್ಯಭಾವದ ಬಿರುಗಾಳಿಗೆ ಸಿಕ್ಕ ಹುಲ್ಲುಕಡ್ಡಿಯಾಗುವೆನು.

ದೇವಾ....ದಾಸಿದೇವ ವಸ್ತ್ರನನ್ನಿತ್ತು, ಸಿರಿಯಾಳ ಮಗನನಿತ್ತು, ಕಾಳಿ ದಾಸ ನುಡಿಗಳನ್ನಿತ್ತು ನಿನ್ನನ್ನು ಒಲಿಸಿದರು, ನೀನು ಒಲಿದೆ. ಆದರೆ.... ಚೆನ್ನಾಗಿ ತಿಳಿದುಕೋ ತನ್ನನ್ನೇ ಒಪ್ಪಿಸಿಕೊಂಡ ಸತಿ ನಾನೆಂಬುದನ್ನು. ಕೋಲಿನ ತುದಿಯನ್ನೇರಿ ಆಟಗಾರ ಹೇಳಿದಂತೆ ಕುಣಿಯುವ ಕೋಡಗದಂತೆ, ಹಗ್ಗದ ತುದಿಯಲ್ಲಿದ್ದು ಸೂತ್ರಧಾರ ಎಳೆದಂತೆ ಕುಣಿಯುವ ಗೊಂಬೆಯಂತೆ, ನಾನು ಆಡುತ್ತಿರುವೆ—ನೀನಾಡಿಸಿದಂತೆ, ನಾನು ನುಡಿಯುತ್ತಿರುವೆ—ನೀನು ನುಡಿಸಿದಂತೆ, ನಾನು ಬದುಕುತ್ತಿರುವೆ ನೀನು ಇರಿಸಿದಂತೆ; ಜಗದ ಯಂತ್ರ ವಾಹಕನಾದ ನೀನು ಸಾಕೆನ್ನುವ ತನಕ ಆಡುವೆ.* ಇಷ್ಟು ಶರಣಾಗತಳಾ ದರೂ ನೀನು ನನ್ನನ್ನು ಸಂತೈಸಲೊಲ್ಲೆ ಏಕೆ?

ನನ್ನಲ್ಲಿ ಪರಿಪೂರ್ಣತ್ವ ಬಂದಿಲ್ಲ ಎಂದು ಹಿಂಜರಿಯುವೆಯಾ? ಅದನ್ನು ಪೂರಯಿಸುವುದು ನಿನ್ನ ಕರ್ತವ್ಯವಲ್ಲವೇ? ನಾನು ಬಂಗಾರದ ಗಟ್ಟಿಯಂತಾಗಿ ನಿನ್ನ ಕೈಗೆ ಬಿದ್ದಿರುವೆ. ಆಭರಣ ಮಾಡಬೇಕಾದ ಹೊಣೆ ನಿನಗೆ ಸೇರಿದುದು.

ಎನ್ನ ಕಾಯದ ಕತ್ತಲೆಯ ಕಳೆಯಯ್ಯ, ಎನ್ನ ಮಾಯದ ಮದವ ಮುರಿಯಯ್ಯ,
ಎನ್ನ ಜೀವದ ಜಂಜಡವ ಮಾಣಿಸಯ್ಯ!, ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿದ ಮಾಯ ಪ್ರಪಂಚವ ಬಿಡಿಸು, ನಿಮ್ಮ ಧರ್ಮ!†

ಪರಿಪೂರ್ಣವಾದ ಶರಣಾಗತಿಯಿಂದ ಹಾಡತೊಡಗಿದಳು. ಪಂಜರದಲ್ಲಿ ಬಂಧಿತವಾದ ಗಿಳಿಯು, ಕಟಾಂಜನದಲ್ಲಿ ಸಿಕ್ಕಿಬಿದ್ದ ಆನೆಯು ನೆನಪಾಯಿತು. 'ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸು ನಿನ್ನ ಧರ್ಮ' ಎನ್ನುವಾಗ ತನ್ನ ದುರ್ಧರ ಪರಿಸ್ಥಿತಿಯ ಅರಿವಾಗಿ ದುಃಖ ಉಮ್ಮಳಿಸಿತು. ಕ್ಷಣಕಾಲ ಮೌನರೋದನ ಮಾಡಿದಳು.

ಗಾಯನವು ಗಾಳಿಯೊಡನೆ ಮೇಳವಿಸಿ ತೂರಿಬಂದಾಗ ಕೌಶಿಕ ಅತ್ತ ಹೋಗಲು ಉತ್ಸುಕಗೊಂಡ. ವಸಂತಕನನ್ನು ಕರೆದುಕೊಂಡು ಹೋದಾಗ ಶಿವಕಾಮಿನಿ ತ್ವರೆಯಿಂದ ಅವರನ್ನು ಸಮೀಪಿಸಿ ಹೇಳಿದಳು :

'ದಯಮಾಡಿ ಮನ್ನಿಸಿರಿ, ಅತ್ತ ಯಾರನ್ನೂ ಬಿಡಬಾರದೆಂದು ಆಜ್ಞೆಯಾಗಿದೆ ಪ್ರಭು....'

'ಆ ಎಲ್ಲ ಆಜ್ಞೆ ನಿಮಗಷ್ಟೇ! ಅರಸರಾದ ನಮಗಲ್ಲ....' ಎಂದು ಕೆರಳಿ ನುಡಿದ.

'ಅಹುದು ಮಹಾರಾಜ, ಪೂಜೆಯಲ್ಲಿರುವ ಅವರನ್ನು ಎಚ್ಚರಿಸುವುದು ಸರಿಯಲ್ಲ' ವಸಂತಕನೂ ಬಿನ್ನೈಸಿಕೊಂಡ.

'ಎಚ್ಚರಿಸುವುದು ಬೇಡ; ಸುಮ್ಮನೆ ನೋಡುತ್ತ ನಿಂತರಾಯ್ತು....' ಕೌಶಿಕ ಹೇಳಿದ.

'ನನಗೆ ಇದೇಕೋ ವಿವೇಕಯುಕ್ತ ಅನ್ನಿಸದು....' ವಸಂತಕನೆಂದ.

'ಏಕೆ ಆ ತಪಸ್ವಿನಿ ಶಾಪಕೊಟ್ಟಾಳೆಂದು ಭಯವೇ? ನಿನಗೆ ಭಯವಿದ್ದರೆ ಎಲ್ಲಾದರೂ ಹಾಳಾಗಿಹೋಗು. ನನಗೆ ಸಾಕ್ಷಾತ್ ದೇವರೇ ಶಪಿಸಿದರೂ ಏನೂ ಆಗದು.'

ಗಹಗಹಿಸಿ ನಕ್ಕು ಕೌಶಿಕ ವಸಂತಕನನ್ನು ಹಿಂದೆ ಬಿಟ್ಟು ಮುಂದೆ ಮುಂದೆ ನಡೆದ. ಶಿವಕಾಮಿನಿಯು ಹೆಜ್ಜೆಯ ಸದ್ದಾಗದಂತೆ ಹಿಂಬಾಲಿಸಿ ಮೊದಲಿದ್ದಲ್ಲಿಯೇ ಕುಳಿತಳು.

ಮಹಾದೇವಿಯ ಪೂಜೆ ನಡೆದಿತ್ತು.

'ಸೃಷ್ಟಿಯ ಕರ್ತನಾದ ನಿನ್ನನ್ನು ಈ ಎಲ್ಲವೂ ಹರಿದು ಹಂಚಿಕೊಂಡು ಮೈಗೂಡಿಸಿಕೊಂಡಿವೆ. ಎಲ್ಲೆಲ್ಲಿ ಹುಡುಕಲಿ ಎಂದು ತಳಮಳವಾಗುವುದು. ಗಂಗೆಯ ಮಂಜುಳ ನಾದದಲ್ಲಿ ಇರುವೆ ಏನೋ ಎನ್ನುವಷ್ಟರಲ್ಲಿ, ಕೋಗಿಲೆಯ ಕುಕಿಲ ಕಂಠದಲ್ಲಿ ಇರಬಹುದು ಎಂಬ ಸಂಶಯ ಉದಿಸುವುದು. ಅಳಿಸಂಕುಲದ ಗುಂಜಾರವದಲ್ಲಿ ಅಡಗಿರುವೆಯಾ? ಮಾಮರದ ತಳಿರುಗಳಲ್ಲಿ ಒಡಲು

ಸಿಕ್ಕಿರುವೆಯಾ....? ಇವರೆಲ್ಲರನ್ನೂ ನಾನು ಬೇಡಿಕೊಳ್ಳುವೆ: 'ನೀವೇನಾದರೂ ನನ್ನವನನ್ನು ಅಡಗಿಸಿಟ್ಟುಕೊಂಡಿದ್ದರೆ ಬಿಟ್ಟುಬಿಡಿ' ಎಂದು....ಬಾ ಚೆನ್ನಮಲ್ಲಿಕಾರ್ಜುನಾ....'*

ಮಹಾದೇವಿಯ ಕಣ್ಣ ಮುಂದೆ ತಾನು ಕಂಡ ನಿಸರ್ಗವೆಲ್ಲ ಮಡುಗಟ್ಟಿ ನಿಂತಿತು.

ಹಾಡುತ್ತ ಹಾಡುತ್ತ, ಕಲ್ಪನೆಯಲ್ಲಿ ಮೈಮರೆತಳು. ನಕ್ಷತ್ರಗಳ ಮಬ್ಬು ಮಬ್ಬಾದ ಬೆಳಗಿನಲ್ಲಿ ಶುಭ್ರ ಬಿಳಿಯ ಸೀರೆಯನ್ನುಟ್ಟು ಹಾಡುತ್ತ ಮೈಮರೆತಿದ್ದ ಮಹಾದೇವಿಯನ್ನು ಕಂಡು ಕೌಶಿಕನ ಮನವು ಮುದಗೊಂಡಿತು. ಬೆನ್ನಿನ ತುಂಬ ಚದುರಿಬೀಳುತ್ತಿದ್ದ ನೀಳಕೂದಲು ದಿನದಿನಕ್ಕೆ ಹುಚ್ಚುಹಿಡಿಸುತ್ತಿದ್ದವು.

ನದಿಯ ದಂಡೆಯ ಮೇಲೆ ಪೊದರುಪೊದರಾಗಿ ಬೆಳೆದ ಕೇದಗಿಯ ಪೊದೆ; ಬೀಸಿದ ಗಾಳಿಯ ಓಘಕ್ಕೆ ಅನುಗುಣವಾಗಿ ಸರಸರ ಸದ್ದುಮಾಡಿ, ಗಾಳಿಯ ಮಡಿಲಿಗೆ ತನ್ನ ಪರಿಮಳದ ಬಳುವಳಿಯನ್ನಿತ್ತು ಬೀಳ್ಕೊಡುತ್ತಿತ್ತು. ಆ ಮೋದಕ ಪರಿಮಳದಿಂದ ಕೌಶಿಕ ಉನ್ಮತ್ತನಾದ.

ಶಿವಕಾಮಿನಿಯತ್ತ ನೋಡಿದ; ದೀರ್ಘಕಾಲ ಕಾಯ್ದು, ಅವಳು ಬೇಸರಗೊಂಡು ಅಲ್ಲಿಯೇ ತೂಕಡಿಸುತ್ತಿದ್ದಳು.

ಧೈರ್ಯಗೊಂಡು ಅವನು ಕಳ್ಳಹೆಜ್ಜೆಗಳನ್ನು ಇರಿಸುತ್ತ ಮುಂದುವರಿದು ನಿಂತನು. ಇಬ್ಬರ ನಡುವಣ ಅಂತರ ಕಿರಿದಾಗಿ ಇನ್ನೂ ಸ್ಪಷ್ಟವಾಗಿ ಕಾಣತೊಡಗಿದ್ದಳು. ಮಹಾದೇವಿ ಕಣ್ಣು ಮುಚ್ಚಿಕೊಂಡೇ ಹಾಡಲಾರಂಭಿಸಿದ್ದಳು. ತನ್ನ ಒಲಿಮೆ, ಮನದ ಅಳಲುಗಳನ್ನೆಲ್ಲ ಎರಕ ಹೊಯ್ದು ಹಾಡಿದಳು:

ವನವೆಲ್ಲ ನೀನೆ, ವನದೊಳಗಣ ದೇವ ತರುವೆಲ್ಲಾ ನೀನೆ.
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚನ್ನಮಲ್ಲಿಕಾರ್ಜುನಾ.
ಸರ್ವಭರಿತನಾಗಿ ಎನಗೇಕೆ ಮುಖದೋರೆ?†

ಅಂತರಂಗದ ವಿರಹವು ಗಾಯನದ ಮೂಲಕ ಅಲೆಅಲೆಯಾಗಿ ಹರಿಯಿತು. ಮಹಾದೇವಿ ಬಲಗೈಯನ್ನೆತ್ತಿ ಹಾಡಿದ ಭಂಗಿ, ಆ ಸತ್ವಶಾಲಿ

---

* ಮ. ವ. ೨೭೩

† ಮ. ವ. [illegible]

... ಮಾಡಿದವು. ಭಾವೋನ್ಮತ್ತನಾಗಿ ಮುಂದೆ ಹೆಜ್ಜೆಯನ್ನಿರಿಸಿ ಅವನು ಮಹಾದೇವಿಯ ಹಿಂದೆ ನಿಂತ. ತಂಗಾಳಿಗೆ ನೆಟ್ಟಲುನೆಟ್ಟಲಾಗಿ ಇಳಿದು ಚದುರಿಬಿದ್ದಿದ್ದ ಕೇಶದ ಮೇಲೆ ಕೈಯಾಡಿಸಿ, ಹಿಂದೆ ಬಂಡೆಗಲ್ಲಮೇಲೆ ಇಳಿದುಬಿದ್ದಿದ್ದ ಸೀರೆಯ ಸೆರಗನ್ನು ಹಿಡಿದ.

'ಮಹಾದೇವಿ....ಮಹಾದೇವಿ....ದೇವಿ' ಸೆರಗಿನ ತುದಿಯನ್ನು ಹಿಡಿದು ಮೈಮರೆಯುತ್ತ ನುಡಿದ.

ತಟ್ಟನೆ ಮಹಾದೇವಿ ಕಣ್ತೆರೆದಳು. ಸರಕ್ಕನೆ ತಲೆಯನ್ನು ಹಿಂದಿರುಗಿಸಿದಾಗ ಬಂಡೆಗಲ್ಲ ಕೆಳಗೆ ನಿಂತ ಪುರುಷಾಕೃತಿಯನ್ನು ಕಂಡು ತಲ್ಲಣಿಸಿದಳು.

'ಯಾರದು....?'

'ನಾನು ಮಹಾದೇವಿ....ನಿನ್ನ ಅರಸ....ನಿನ್ನ ಚನ್ನಮಲ್ಲಿಕಾರ್ಜುನ....' ತನ್ಮಯಧ್ವನಿಯಲ್ಲಿ ಹೇಳಿದ.

ಮಹಾದೇವಿ ಕನಲಿ ಕೆಂಡವಾದಳು. ಹಿಡಿದ ಸೆರಗಿನ ತುದಿ ಅವನ ಕೈಲಿತ್ತು. ಎಡಗೈಯಲ್ಲಿದ್ದ ಇಷ್ಟಲಿಂಗವನ್ನು ಅಂಗೈಯಲ್ಲಿ ಇರಿಸಿಕೊಂಡೇ ಬೆರಳುಗಳನ್ನು ಬಿಗಿಯಾಗಿ ಮುಚ್ಚಿ ಎದ್ದು ನಿಂತಳು. ತಂಪಾದ ಚಂದ್ರಕಾಂತ ಶಿಲೆಯಂತೆ ಭಕ್ತಿಯ ಶಾಂತಿಕಿರಣಗಳನ್ನು ಸ್ಫುರಿಸುತ್ತಿದ್ದ ಕಣ್ಣುಗಳು ಈಗ ಜ್ವಾಲಾಮುಖಿಗಳಾಗಿ ಕ್ರೋಧದ ಕಿಡಿಗಳನ್ನು ಹಾರಿಸತೊಡಗಿದವು. ಆವೇಶಯುಕ್ತ ಉದ್ವಿಗ್ನತೆಯಿಂದ ಉಸಿರು ತೀವ್ರವಾಯಿತು. ತಿರುಗಿ ಅವನಿಗೆದುರಾಗಿ ನಿಂತು ಹಿಂದೆ ಸರಿದು ಹೇಳಿದಳು :

"ಕಾಮದ ಪಿಶಾಚಿ....ಚನ್ನಮಲ್ಲಿಕಾರ್ಜುನನಂತೆ! ಅವನೆತ್ತ ನೀನೆತ್ತ, ವಿವೇಕಹೀನ.

ಎಮ್ಮೆಗೊಂದು ಚಿಂತೆ ಸಮಗಾರಗೊಂದು ಚಿಂತೆ;
ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ;
ನನಗೆ ನನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ,
ಒಲ್ಲೆ ಹೋಗು, ಸೆರಗ ಬಿಡು ಮರುಳೆ,
ನನಗೆ ಚನ್ನಮಲ್ಲಿಕಾರ್ಜುನ ದೇವರು
ಒಲಿವರೋ ಒಲಿಯರೋ ಎಂಬ ಚಿಂತೆ!"*

ಆವೇಶದಿಂದ ನುಡಿದು ಬಲಗೈಯನ್ನು ಸೆರಗಿಗೆ ಹಾಕಿ, ಬಲವಾಗಿ ಎಳೆದಳು.

---

* ಸ. ವ. ೧೫.

ಕೌಶಿಕ ಬಿಸಿಹಾಲು ಕುಡಿಯಹೋಗಿ ಬಾಯಿಸುಟ್ಟುಕೊಂಡ ಬಾವ್ರಗದಂತೆ ಪೆಚ್ಚಾಗಿ ನಿಂತ. ಮಹಾದೇವಿಯ ಆವೇಶ ಇನ್ನೂ ಇಳಿದಿರಲಿಲ್ಲ.

‘ಹುಲ್ಲನ್ನು ಮೆಯ್ದು ದಷ್ಟಪುಷ್ಟವಾಗುವ ಚಿಂತೆ ಎಮ್ಮೆಗಾದರೆ, ಅದು ಸಾಯುತ್ತಿದ್ದಂತೆಯೇ ಮಾಂಸ-ಚರ್ಮಗಳನ್ನು ಕಿತ್ತುಕೊಳ್ಳುವ ಹೊಂಚು ಸಮಗಾರನದು. ಈ ನರಜನ್ಮವನ್ನು ಉದ್ಧರಿಸಿಕೊಳ್ಳುವುದು ಹೇಗೆ, ಉಪಕಾರ ಮಾಡುವುದು ಹೇಗೆ ಎಂಬ ಚಿಂತೆ ಧರ್ಮಿಗಾದರೆ, ನಿರಾಯಾಸವಾಗಿ ಮುಂದಕ್ಕೆ ಹೋಗುವವರ ದಾರಿಯಲ್ಲಿ ಪೆಡಂಭೂತವಾಗುವ ಚಿಂತೆ ಕರ್ಮಿಗೆ. ಈ ಜನುಮದಲ್ಲಿ, ಈ ಶರೀರದಲ್ಲಿರುವಾಗಲೇ ದೇವನು ಒಲಿವನೋ ಒಲಿಯನೋ ಎಂಬ ಕಳವಳ ನನಗಿದ್ದರೆ, ಈ ಅನಿಷ್ಟ ಶರೀರವನ್ನು ಅನುಭವಿಸುವ ಚಿಂತೆ ನಿನ್ನದು.

ಐದು ವಾರಗಳ ಕಾಲ ಮಡಿಯಾಗಿದ್ದುಕೊಂಡು ಧ್ಯಾನ ಪೂಜೆಗಳಲ್ಲಿ ವೇಳೆಯನ್ನು ಪವಿತ್ರವಾಗಿ ಕಳೆಯಬೇಕೆಂಬ ನನ್ನ ಸಂಕಲ್ಪಕ್ಕೆ ಭಂಗ ತಂದೆ. ಇದರಿಂದಾಗಿ ನಾನು ನಿನ್ನೊಡನೆ ಮಾಡಿಕೊಂಡ ಒಪ್ಪಂದಗಳಲ್ಲಿ ಒಂದನ್ನು ಮುರಿದು, ತಪ್ಪು ಮಾಡಿರುವೆ. ಅಬಲೆ ನಾನೆಂದು ಭಾವಿಸಿ ದುಡುಕಿ ಹೆಜ್ಜೆಯೊಂದನ್ನು ಮುಂದಕ್ಕಿರಿಸಿದರೂ ವಿಪತ್ತು ತಪ್ಪದು : ಇದೋ ನೋಡಿಲ್ಲಿ.... ನಿನ್ನಂತಹ ಕೋಟ್ಯಾವಧಿ ಗಂಡಸರನ್ನು ಹೆಂಡಿರನ್ನಾಗಿ ಮಾಡಿಕೊಂಡು ಆಳುವ ಧೀರಗಂಡ ಚನ್ನಮಲ್ಲಿಕಾರ್ಜುನನು ನನ್ನ ಅಂಗರಕ್ಷಕ ಆತ್ಮಸಂಗಾತಿಯಾಗಿ ಇರುವನು.” ಗುಡುಗಿನಂತೆ ನುಡಿದು, ಸರಸರನೆ ನದಿಯ ದಂಡೆಯ ಮೇಲೆ ನಡೆದು, ಮಿಂಚಿನಂತೆ ಕಣ್ಮರೆಯಾದಳು ಮಹಾದೇವಿ. ಕೌಶಿಕನು ದಿಗ್ಭ್ರಾಂತನಾಗಿ ನಿಂತ. ಮುಂದಿನದು ಏನೊಂದೂ ತಿಳಿಯದೆ ಬಂಡೆಗಲ್ಲ ಮೇಲೆ ಕುಸಿದ. ಮಹಾದೇವಿ ಪೂಜೆಗೆಂದು ಇರಿಸಿಕೊಂಡಿದ್ದ ಹೂವುಗಳನ್ನು ಕೈಗೆತ್ತಿಕೊಂಡು ಕೆನ್ನೆಗೆ ಸವರಿಕೊಂಡ. ಅವಳು ಕುಳಿತಿದ್ದ ತಾಣವನ್ನು ಕೈಯಿಂದ ನವುರಾಗಿ ನೇವರಿಸಿದ.

‘ಆಹಾ ಪುಷ್ಪವೇ....ಅವಳ ಹಸ್ತಸ್ಪರ್ಶವನ್ನು ಪಡೆವ ಪುಣ್ಯ ನಿನಗಿರುವಷ್ಟು ನನಗಿಲ್ಲ; ಬಂಡೆಗಲ್ಲೇ....ನೀನು ಜಡದೇಹಿಯಾದರೂ ಅವಳ ಅಂಗಸ್ಪರ್ಶದ ಸುಖ ನಿನಗಿದೆ; ನನಗಿಲ್ಲ’ ನಿರಾಶೆಯ ಸುಳಿಯಲ್ಲಿ ಮುಳುಗುತ್ತ ನುಡಿದುಕೊಂಡ.

‘ಎಲೈ....ಹೇಡಿಯೇ....ಇಷ್ಟು ಅನ್ನಿಸಿಕೊಂಡೂ ಅವಳನ್ನು ಬಯಸುವುದು ನಿನ್ನ ದೌರ್ಬಲ್ಯವಲ್ಲವೇ? ಅಸಂಖ್ಯಾತ ಹೆಂಗೆಳೆಯರು ಸರ್ವಸ್ವವನ್ನು ಅರ್ಪಿಸಲು ಸಿದ್ಧರಿರುವಾಗ, ನೀನು ದೀನನಾಗಿ ಇವಳಿಗೆ ಕೈಚಾಚುವುದು

‘ಮುತ್ತನ್ನು ವಶಪಡಿಸಿಕೊಳ್ಳಲು ಹೆಚ್ಚು ಕಷ್ಟ ಪಡಬೇಕು. ಸಮುದ್ರದ ದಂಡೆಯಮೇಲೆ ಸಹಸ್ರಾರು ಕಪ್ಪೆಯ ಚಿಪ್ಪು, ಶಂಖಗಳು ಸಿಗಬಹುದು. ಆದರೆ ಮುತ್ತಿನ ಬೆಲೆ ಕಪ್ಪೆಚಿಪ್ಪಿಗುಂಟೆ ?’ ದುರ್ಬಲ ಮನಸ್ಸು ದನಿತೆಗೆಯಿತು.

‘ಆವಳಿಂದ ನಿನಗೆ ಉಪಯೋಗವೇನು ? ಅವಳ ಪಾಡಿಗೆ ಅವಳನ್ನು ಬಿಟ್ಟು ಬಿಡು ; ಎಲ್ಲಿಯಾದರೂ ಸುಖವಾಗಿರಲಿ’ ವಿವೇಕವು ಮೆಲ್ಲನೆ ಹೇಳಿತು.

‘ಇಲ್ಲ....ಇಲ್ಲ....ಈ ಚೆಲುವೆಯು ನನ್ನ ಕಣ್ಣೆದುರಿಗೆ ಓಡಿಯಾಡಿದರೂ ಸಾಕು. ನವಿಲಾಡುವ ಉದ್ಯಾನದಂತೆ, ಹಂಸೆಯ ಕೊಳದಂತೆ, ಚಂದ್ರಮನಿರುವ ಅಗಸದಂತೆ ಅರಮನೆಗೆ, ನನ್ನ ಬಾಳಿಗೆ ಕಳೆ ಬರುವುದು....’ ಕೌಶಿಕ ಮೇಲಕ್ಕೆದ್ದು ಗುಡಾರದ ಕಡೆಗೆ ಕಾಲು ಹಾಕಿದ.

ಮಹಾದೇವಿಯ ಹೃದಯವು ಕಾಯ್ದ ಬಾಂಡಲೆಯಂತಿದ್ದು, ಎಣ್ಣೆಯಲ್ಲಿ ಬಿದ್ದ ವಸ್ತುಗಳು ಕುಣಿಯುವಂತೆ, ಭಾವನೆಗಳು ಕುಣಿಯುತ್ತಿದ್ದವು. ಕೌಶಿಕನು ಅಷ್ಟು ಸನಿಹದಲ್ಲಿ ನಿಂತುದು, ತನ್ನ ಸೆರಗನ್ನು ಹಿಡಿದುದು ಸಹ್ಯವಾಗದೇ ಕಸಿವಿಸಿಯಾಯಿತು. ಇಂತಹ ಪಂಜರದಲ್ಲಿ ಇನ್ನೆಷ್ಟು ದಿನವಿರುವುದು ? ಎಂದು ಚಿಂತನೆಗೆ ಈಡಾಗಿದ್ದಳು.

ಕೌಶಿಕನಿಗೆ ಝಂಕಿಸಿ ನುಡಿದು, ತನ್ನ ಗುಡಾರದೊಳಕ್ಕೆ ಹೋದವಳು ದುಃಖತಪ್ತಳಾಗಿ ಪರಮಾತ್ಮನಲ್ಲಿ ಮೊರೆಯಿಟ್ಟಳು :

‘ಹಸಿದು ಅಳುವ ಹಸುಗೂಸಿಗೆ ಹಾಲೆರೆಯಬೇಕಲ್ಲದೆ ಹಾಲಾಹಲವನ್ನೂಡಿಸುವುದೆ ? ಕಮಲದ ದಂಟನ್ನು ತಿಂದು ಬದುಕುವ ರಾಜಹಂಸೆಗೆ ಕಾಯ್ದ ಕಬ್ಬಿಣದ ರಸವ ಕುಡಿಸುವುದೆ ? ಚನ್ನಮಲ್ಲಿಕಾರ್ಜುನಾ, ನಿನ್ನ ಕಾರುಣ್ಯದ ಹಾಲಿಗಾಗಿ ಹಂಬಲಿಸುವ ನನ್ನ ಹೃದಯಕ್ಕೆ ಕಾಮದ ವಿಷವ ಕುಡಿಸಲು ಬರುವುದು ಉಚಿತವೆ ? ಶರಣರ ಸಂಗದಲ್ಲಿದ್ದು ಜ್ಞಾನದ ದಂಟನ್ನು ಸವಿಯಲಾಶಿಸುವ ನನಗೆ ಈ ಭೋಗಿಗಳ ಸಂಗವೆಂಬ ಕಾಯ್ದ ಕಬ್ಬಿಣದ ರಸವ ಕುಡಿಸಬರುವೆಯಾ ? ನೀನು ಬಹು ಕ್ರೂರಿ.’

ಪ್ರಾಣಿಗಳಲ್ಲಿ ಎರಡು ಬಗೆಯ ಮನೋಭಾವದವು ಇರುತ್ತವೆ. ಪಾರಿವಾಳ, ಕೋಳಿ ಮುಂತಾದುವನ್ನು ಸಾಕಿದರೆ ಅವು ಎಂದೂ ಆಶ್ರಯ ನೀಡಿದವನನ್ನು ಬಿಟ್ಟು ಹೋಗದಷ್ಟು ಹೊಂದಿಕೊಳ್ಳುವವು. ಆದರೆ ಗಿಳಿ, ಮೊಲಗಳು ಎಷ್ಟೇ ದಿವಸ ಸಾಕಿದರೂ ಮೂಲ ವಾತಾವರಣವನ್ನೇ ಬಯಸುತ್ತವೆ. ಹಾಗೆಯೇ ಶಿವಕಾಮಿನಿಯಂತಹವರು ಒತ್ತಾಯದಿಂದ ವಿಲಾಸದ ವಾತಾವರಣಕ್ಕೆ

ಮಹಾದೇವಿಗೆ ಮಾತ್ರ ಅದು ಸಹ್ಯವಾಗದೆ, ಗಿಳಿಯಂತೆ ಹಾರಿಹೋಗಲು ಸದಾ ಹಾತೊರೆಯುತ್ತ, ಮಾರ್ಗವು ತೋರದೆ ಮಿಡುಕುತ್ತಿದ್ದಳು.

'ಸಜ್ಜನರ ಸಂಗ, ಶರಣರ ಮಧ್ಯೆ ಇರದಿದ್ದರೆ ನನ್ನ ಸಾಧನೆ ಖಂಡಿತಾ ಪೂರ್ಣವಾಗದು. ಕೇವಲ ವಿಘ್ನಕಾರಕ ಶಕ್ತಿಗಳನ್ನು ಎದುರಿಸುವುದರಲ್ಲೇ ನನ್ನ ಬದುಕು ಸವೆದುಬಿಡುವುದು. ಹೇಗೆ ಮಗುವಿಗೆ ಜನ್ಮ ನೀಡುವ ಗರ್ಭಿಣಿ ಆನೆಯನ್ನು ಆನೆಯ ಹಿಂಡು ಕೋಟೆ ಕಟ್ಟಿ ಹುಲಿ, ಸಿಂಹಗಳಿಂದ ರಕ್ಷಿಸುವುದೋ, ಹಾಗೆ ದಿವ್ಯಾನುಭವದ ಫಲ ಪಡೆಯಬಯಸುವ ಸಾಧಕರನ್ನು ಶರಣರ ಒಕ್ಕೂಟವು ಅರಿಷಡ್ವರ್ಗಗಳಿಂದ, ಸಾಮಾಜಿಕ ಕಷ್ಟಗಳಿಂದ ರಕ್ಷಿಸುವುದು. ಹಸುಗಳು ಹಿಂಡಾಗಿ ಹೋಗುವಾಗ ಹುಲಿ ಬಂದರೆ ಅವು ಬೆನ್ನನ್ನು ಒಳಮುಖ ಮಾಡಿ ಕೊಂಬನ್ನು ಹೊರಮುಖಮಾಡಿ ಹುಲಿಯನ್ನು ಎದುರಿಸುತ್ತವೆ. ಆದ್ದರಿಂದ ಹಿಂಡಿನಲ್ಲಿರುವ ಹಸು ಪಾರಾಗಬಲ್ಲದು; ಆದರೆ ಒಂಟಿ ಹಸುವು ಹುಲಿಯ ಕೈಗೆ ಸುಲಭವಾಗಿ ಸಿಕ್ಕಿಬೀಳುವುದು. ಚನ್ನಮಲ್ಲಿಕಾರ್ಜುನಾ, ನಾನು ಏಕಾಕಿ ಹಸುವಿನಂತಾಗಿರುವೆ; ನಿನ್ನ ಶರಣರ ಒಕ್ಕೂಟವೆಂಬ ಹಿಂಡನ್ನು ಕೂಡದೆ ಅನ್ಯಮಾರ್ಗವಿಲ್ಲ. ಅರಮನೆಯ ಗೃಹಬಂಧನಕ್ಕೆ ಹೋಗುವ ಬದಲು ಇಲ್ಲಿಂದಲೇ ಹೊರಟುಬಿಡುವೆ.' ದೃಢನಿರ್ಧಾರದಿಂದ ಗುಡಾರವನ್ನು ಬಿಟ್ಟು ಹೊರಬಂದಳು.

ದಟ್ಟವಾದ ಕಾಡಿನಲ್ಲಿ ಕಣ್ಮರೆಯಾಗಿ ಈ ರಾಜಪರಿವಾರದ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡುಬಿಡಬೇಕು ಎನ್ನಿಸಿ ಹೊರಗೆ ಬಂದಾಗ ಗುಡಾರದ ಮುಂದೆ ಕೆನ್ನಾಲಿಗೆಯನ್ನು ಚಾಚಿ ಉರಿಯುವ ಬೆಂಕಿ ಕಾಣಿಸಿತು. ಕಾವಲು ನಡೆಸುತ್ತಿದ್ದ ಶಸ್ತ್ರಸಜ್ಜಿತ ಭಟರು ಮಹಾದೇವಿಯನ್ನು ನೋಡಿ, 'ಇದೇನು ಅರಸಿಯರೇ ಈ ಅವೇಳೆಯಲ್ಲಿ....?" ಎಂದರು. ಹತ್ತಾರು ಜನ ಸರ್ಪಕಾವಲಿನಿಂದ ಆ ಆವರಣವನ್ನು ಕಾಯುವುದನ್ನು ಕಂಡು ಹತಚೇತನಳಾಗಿ ಒಳಗೆ ಬಂದಳು.

ಮುಂಜಾನೆ ಎದ್ದ ಕೌಶಿಕನು ಉಲ್ಲಸಿತನಾಗಿರದೆ, ಕಳೆಗುಂದಿದ್ದುದನ್ನು ವಸಂತಕ ಗಮನಿಸಿದ. ಪ್ರವಾಸಕ್ಕೆ ಬರುವಾಗ ಇದ್ದಾಗಿನ ಉತ್ಸಾಹ-ಕಳೆ ಹೋಗುವಾಗ ಇರಲಿಲ್ಲ. ಯಾಂತ್ರಿಕವಾಗಿ ತಮ್ಮೆಲ್ಲ ಸಿದ್ಧತೆಗಳನ್ನು ಮುಗಿಸಿ ಮಧ್ಯಾಹ್ನದ ನಂತರ ಅರಣ್ಯವನ್ನು ಬಿಡಲೆತ್ನಿಸಿದರು. ಮಹಾದೇವಿಗೆ 'ಅಲ್ಲಿಯೇ ತಾನು ಉಳಿಯುವಂತಾಗಬಾರದೆ' ಎಂಬ ಹಂಬಲ ತುಂಬಿ

ಮೌನದಿಂದ ತಾನೂ ಸಿದ್ಧಳಾದಳು.

೩೩. ಗುರುಗಳ ಮುಖಭಂಗ

ಬಂಧನದಲ್ಲಿ ಸಿಕ್ಕರೂ ತನ್ನ ವಿಂಧ್ಯವನ್ನು, ಬಂಧುಗಳನ್ನು ಆತುರದಿಂದ ನೆನೆಯುವ ಆನೆ, ಗಿಳಿಗಳ ಚಿತ್ರ ಕಣ್ಣ ಮುಂದೆ ಕಟ್ಟಿತ್ತು. ಅಂತರಂಗ ಸದಾ ಬಿಡುಗಡೆಗೆ ಬಯಸುತ್ತಿತ್ತು. ಆದರೆ ತಪ್ಪಿಸಿಕೊಂಡು ಹೊರಗೆ ಹೋಗುವುದು ಹೇಗೆ? ಹಗಲಿರುಳು ಭದ್ರ ಕಾವಲು ಅರಮನೆಯ ಸುತ್ತ ನಡೆಯುತ್ತಿತ್ತು. ಗುರುಲಿಂಗದೇವರ ಬಳಿ ಸಲಹೆ ಕೇಳಬೇಕೆಂದು ಮನದಲ್ಲಿ ಅಂದುಕೊಂಡಳು. ಆದರೆ ಅವರನ್ನು ಕಾಣುವ ಉಪಾಯ? ರಾಜನ ಒಪ್ಪಿಗೆ ಕೇಳುವುದೇ ಉಚಿತವೆಂದುಕೊಂಡು ಮದನರತಿಗೆ ಹೇಳಿದಳು :

'ಮದನಾ, ಪ್ರಭುಗಳನ್ನು ಕೇಳು, ನನ್ನ ಸದ್ಗುರುಗಳಾದ ಗುರುಲಿಂಗ ದೇವರ ದರ್ಶನ ಪಡೆಯುವ ಇಚ್ಛೆಯಾಗಿದೆ. ಅವರ ಮಠಕ್ಕೆ ಹೋಗಿಬರ ಬಹುದೇ? ಅಥವಾ ಅವರನ್ನೇ ಇಲ್ಲಿಗೆ ಕರೆಸಬೇಕೆ?'

ಮದನರತಿ ಒಪ್ಪಿಗೆ ಪಡೆಯಲು ಅರಸನ ಬಳಿಗೆ ಹೋದಳು.

'ಗುರುಲಿಂಗದೇವರನ್ನು ಅರಮನೆಗೆ ಕರೆಸಿದಾಗ ರಾಜನೇನಾದರೂ ಅನುಚಿತವಾಗಿ ವರ್ತಿಸಿ ಅವರಿಗೆ ಅಪಮಾನ ಮಾಡಿದರೆ! ಆ ವ್ಯಥೆ ಸಹಿಸ ಲಸದಳ' ಮಹಾದೇವಿಯ ಮನಸ್ಸು ಚಿಂತಿಸತೊಡಗಿತು.

'ಇಲ್ಲ....ಹಾಗೆ ವರ್ತಿಸುವ ಅಸಭ್ಯನೇನೂ ಅಲ್ಲ. ಗುರುಗಳು ಇಲ್ಲಿಗೆ ಆಗಾಗ ಬಂದು ಹೋಗುವಂತಿದ್ದರೆ ಬಿಡುಗಡೆಯ ಮುಂದಿನ ಮಾರ್ಗವಾದರೂ ನನಗೆ ತೆರೆಯುವುದು' ಹೀಗೆ ಚಿಂತಿಸುತ್ತಿರುವಾಗಲೇ ಕೌಶಿಕನು ತಾನೇ ಬಂದುಬಿಟ್ಟ.

ಪ್ರವಾಸವನ್ನು ಮುಗಿಸಿ ಬಂದು ನಾಲ್ಕು ದಿವಸಗಳಾಗಿದ್ದರೂ ಮಹಾ ದೇವಿಯ ಮುಖವನ್ನು ನೋಡುವಷ್ಟು ಎದೆಗಾರಿಕೆ ಅವನಿಗಿರಲಿಲ್ಲ. ತಾನು ದುಡುಕಿ ತಪ್ಪುಗಾರನ ಸಾಲಿಗೆ ಸೇರಿದೆನಲ್ಲ ಎಂದು ಮಿಡುಕುತ್ತಿದ್ದ. ಅವಳ ಮನಸ್ಸನ್ನು ಪ್ರಸನ್ನಗೊಳಿಸುವ ಹೊಸ ಹಂಚಿಕೆ ಹುಡುಕುತ್ತಿರುವಾಗಲೇ ಮದನರತಿ ಬಂದು ಮಹಾದೇವಿಗೆ ಗುರುಗಳ ದರ್ಶನವನ್ನು ಪಡೆಯುವ ಅಭಿಲಾಷೆಯಾಗಿದೆಯೆಂದು ಹೇಳಿದಳು. ಅಂತೂ ತನ್ನ ಒಪ್ಪಿಗೆಯನ್ನು ಕೇಳು ವಷ್ಟು ಮಹಾದೇವಿ [illegible] ಎಂದು ಮನಸ್ಸು ಉಬ್ಬಿ

ಸಂಧಾನವೇರ್ಪಟ್ಟು, ಈರ್ವರ ಮಧ್ಯದ ವಿರಸದ ಬಿರುಕು ಕಡಿಮೆಯಾದೀತೆಂಬ ಹಿಗ್ಗಾಯಿತು ಅವನಿಗೆ.

'ಅವಳ ಐದು ವಾರಗಳ ವ್ರತ ಮುಗಿಯಲು ಕೆಲವೇ ದಿವಸಗಳು ಉಳಿದಿವೆ. ನಂತರ ಒಲಿದೇ ಒಲಿವಳು, ಮದುವೆಯಾಗುವಳು. ಅಷ್ಟರಲ್ಲಿ ನಾನು ಏಕೆ ಅವಸರಿಸಿದೆನೋ?' ಎಂದು ಅಂದಿನಿಂದಲೂ ಪಶ್ಚಾತ್ತಾಪಪಡುತ್ತಿದ್ದ ಕೌಶಿಕನಿಗೆ, ಈಗೊಂದು ಸುಸಂದರ್ಭ ಒದಗಿದಂತಾಗಿ ಅದರ ಸದುಪಯೋಗ ಹೊಂದಲು ತಾನೇ ನೇರವಾಗಿ ಮಹಾದೇವಿಯ ಬಳಿಗೆ ಬಂದ.

ತನ್ನ ಬೆಳಗಿನ ಪೂಜೆ–ಪ್ರಸಾದಗಳನ್ನು ಪೂರೈಸಿ ಅಧ್ಯಯನ ಮಾಡುತ್ತಲಿದ್ದ ಮಹಾದೇವಿಯು ರಾಜನನ್ನು ನೋಡಿ, ಕಾಲುಮಣೆಯ ಮೇಲಿದ್ದ ಪರಿಕರಗಳನ್ನು ನುಗ್ಗುಲಿಗಿರಿಸಿ ಎದ್ದು ನಿಂತು, ಕೈಜೋಡಿಸಿ ಮುಗುಳ್ನಕ್ಕಳು. ಕೌಶಿಕ ಪ್ರಸನ್ನನಾಗಿ ಮರು ನಕ್ಕ; ಅವನಿಗೆ ವಿಪರೀತ ಆಶ್ಚರ್ಯವೆನಿಸಿತು. 'ತನ್ನ ಅಂದಿನ ವರ್ತನೆಯನ್ನು ಇನ್ನೂ ನೆನಪಿನಲ್ಲಿರಿಸಿಕೊಂಡು ಗಂಭೀರವಾಗಿರುತ್ತಾಳೆ. ತಾನು ಮಾತನಾಡಿಸುವುದು ಹೇಗೆ?' ಎಂದು ಸಂಕೋಚಿಸುತ್ತಿದ್ದವನಿಗೆ ಈಗ ಬಲು ಹಗುರವೆನಿಸಿತು. ಪಲ್ಲಂಗದ ಮೇಲೆ ಕೂಡುತ್ತ, 'ಮೇಲೆ ಕುಳಿತುಕೊಳ್ಳಬಹುದಲ್ಲ' ಎಂದು ಎತ್ತರವಾಗಿದ್ದ ಪೀಠದ ಕಡೆ ಕೈತೋರಿದ.

'ಬರವಣಿಗೆಗೆ ಚಾಪೆ, ಅಡ್ಡಮಣೆಗಳೇ ಸರಿ' ಮಹಾದೇವಿ ವಿನಯದಿಂದ ನಿರಾಕರಿಸಿ ಚಾಪೆಯ ಮೇಲೆ ಕುಳಿತಳು.

'ಗುರುಗಳ ದರ್ಶನಕ್ಕೆ ಹೋಗಬೇಕೆಂಬ ಅಪೇಕ್ಷೆಯಂತೆ; ಮದನರತಿ ಹೇಳಿದಳು. ಅದಕ್ಕಾಗಿ ವಿಚಾರಿಸಿಕೊಳ್ಳಲು ಬಂದೆ....ದೇವಿ....'

'ಈ ಸಾಮಾನ್ಯಳಿಗಾಗಿ ಸ್ವತಃ ಪ್ರಭುಗಳು ಇಷ್ಟೊಂದು ತೊಂದರೆ ತೆಗೆದುಕೊಳ್ಳುವ ಪ್ರಮೇಯವೇನಿತ್ತು? ಒಪ್ಪಿಗೆ, ನಿರಾಕರಣಗಳನ್ನು ದಾಸಿಯ ಮೂಲಕ ತಿಳಿಸಬಹುದಿತ್ತು.'

'ತನ್ನ ಬರವು ಆಕೆಗೆ ಅಪ್ರಿಯವಾಯಿತೇನೋ' ಎಂದು ದಿಟ್ಟಿಸಿ ನೋಡಿ ಹೇಳಿದ:

'ನಿನ್ನ ಮನಸ್ಸಂತೋಷವೊಂದೇ ನನ್ನ ಗುರಿ ಮಹಾದೇವಿ? ಇಚ್ಛೆಯಾದರೆ ಹೋಗಿ ಬಾ. ಅಥವಾ ಅವರೇ ಬಂದರೆ ಇನ್ನೂ ಲೇಸು; ಅರಸಿಯರ ಸ್ಥಾನಮಾನಕ್ಕೂ ಕೊರತೆ ಬರದು.'

ತನ್ನ ಔದಾರ್ಯದ ಪ್ರದರ್ಶನದಿಂದ ಮಹಾದೇವಿಯ ಮನಸ್ಸನ್ನು ಗೆಲ್ಲುವ ಪ್ರಯತ್ನವಿತ್ತು.

ಹೋದರೆ ಒಳ್ಳಿತು. ಆದರೆ....ನಾನಲ್ಲಿಗೆ ಹೋದರೆ ಊರ ಜನರೆಲ್ಲ ಬಂದು ಬಗೆಬಗೆಯ ಪ್ರಶ್ನೆ ಕೇಳಿ ಮನಸ್ಸಿಗೆ ಘಾಸಿ ಮಾಡುವರು; ತಾಯಿ-ತಂದೆಯರೂ ಕಾಣಲು ಬರುವ ಸಂಭವವಿಲ್ಲದೆ ಇಲ್ಲ. ತಾಯಿಯು ಮತ್ತೆ ನನ್ನನ್ನು ಬಿಗಿದಪ್ಪಿ ಅಳತೊಡಗಬಹುದು. 'ಸರ್ವವಿಧದ ಮೋಹದ ತಂತುಗಳನ್ನು ಕಡಿದುಕೊಂಡು ನಿರ್ಲಿಪ್ತಳಾಗಬೇಕು' ಎಂಬುವ ನಾನು ಮತ್ತೆ ವ್ಯಾಮೋಹದ ಜಂಜಾಟಕ್ಕೆ ಸಿಕ್ಕಿಬೀಳುವೆ. ಶಿವನ ಹೊರತು ಯಾರಿಗಾಗಿಯೂ ಕಣ್ಣೀರು ಸುರಿಸುವುದು ನನಗಿನ್ನು ತರವಲ್ಲ. ಈ ಮನಸ್ಸು ಕಲ್ಲಾಗತೊಡಗಿದೆ; ಹೀಗೆಯೇ ಆಗಲಿ.'

ತನ್ನ ತಾಯಿಯ ಕರುಳಿನ ಮಾರ್ದವತೆಯು ನೆನಪಾಗಿ, ಚಿತ್ತವು ಹಿಂದಿನ ಘಟನೆಯನ್ನು ಮೆಲುಕಾಡಿಸಿತು. ಅಂದು ಕಾಡಿನಲ್ಲಿ ವರದಾ ನದಿಯ ತೀರದಲ್ಲಿ ವಾಸ್ತವ್ಯ ಹೂಡಿದ್ದಾಗ ನದಿಯ ದಂಡೆಯ ಮೇಲೆ ಕುಳಿತ ಮಹಾದೇವಿ ಮೆಲ್ಲನೆ ಕೇಳಿದ್ದಳು :

'ಶಿವೆ....ಉಡುತಡಿಯಲ್ಲಿ ಮನೆಯ ಮುಂದೆ ಹಾಯ್ದು ಬಂದೆವಲ್ಲ....ಅವ್ವ, ಅಪ್ಪ ಯಾರಾದರೂ ಹೊರಗೆ ಕಂಡರೆ?' ಕುತೂಹಲ, ಕಾತುರಗಳು ಧ್ವನಿಯಲ್ಲಿ ಮಿಡಿಯುತ್ತಿದ್ದವು. ಶಿವಕಾಮಿನಿ ನೆನಪಿಸಿಕೊಂಡು ಗುಡಾರದೊಳಕ್ಕೆ ಓಡಿಹೋಗಿ ಅಡಿಕೆ ಪಟ್ಟೆಯ ಕಟ್ಟನ್ನು ಮಡಿಲಲ್ಲಿ ಇರಿಸಿಕೊಂಡು ಬಂದಳು.

'ಹೌದೊಡತಿ; ನಿಮ್ಮ ತಾಯಿಯು ಕಾತುರವೇ ಮೈವೆತ್ತು ನೀವು ತಲೆಬಾಗಿಲಲ್ಲಿ ನಿಲ್ಲಬಹುದು, ಅಥವಾ ಮೇನೆಯಿಂದ ಇಣುಕಿ ನೋಡಬಹುದು ಎಂದು ಆಶಿಸಿದ್ದರೇನೋ....ನೀವು ನಿಲ್ಲದಿದ್ದಾಗ ನಿರಾಶೆಗೊಂಡರು; ಅವರ ಕಣ್ಣುಗಳೆರಡು ನೀರಿನಿಂದ ತುಂಬಿದ್ದವು.'

ಮಹಾದೇವಿಯ ಹೃದಯ ಕಂಪಿಸಿತು. ಕಣ್ಣನ್ನು ಆಕ್ರಮಿಸಿಕೊಳ್ಳಬಯಸಿದ ಕಣ್ಣೀರನ್ನು ಒತ್ತಾಯಪೂರ್ವಕವಾಗಿ ಹಿಂದಕ್ಕೆ ದೂಡಿದಳು.

'ವ್ಯಾಮೋಹದ ಜ್ವಾಲೆ ಆರತೊಡಗಿದೆ. ಪುನಃಪುನಃ ಅವರನ್ನು ದರ್ಶಿಸಿ, ಆ ಜ್ವಾಲೆಯನ್ನು ವರ್ಧಿಸುವುದು ಮತ್ತೇಕೆ ಶಿವೆ?' ದೀರ್ಘವಾದ ನಿಟ್ಟುಸಿರಿಟ್ಟಳು.

'ತಾಯಿಯವರು ನನ್ನನ್ನು ಕಣ್ಸನ್ನೆಯಿಂದ ಕರೆದು ಈ ಕಟ್ಟನ್ನು ಕೊಟ್ಟರು ನೋಡಿರಿ....'

ಮಹಾದೇವಿ ಮೆಲ್ಲನೆ ಬಿಚ್ಚಿದಳು. ತುಪ್ಪದಿಂದ ಮಾಡಿದ ಹೆಸರಿನ ಉಂಡೆ [illegible] ತಡೆದಿಟ್ಟ ಕಣ್ಣೀರು

'ಖಂಡಿತವಾಗಿಯೂ ತಿನ್ನಿಸು ಎಂದು ಒತ್ತಿ ಒತ್ತಿ ಹೇಳಿದ್ದಾರವ್ವಾ.... ತಮಗಾಗಿಯೇ ಮಾಡಿ ಕಳಿಸಿದ್ದಾರೆ.'

'ತಾಯಿಯ ಮಮತೆ ಎಷ್ಟು ಆಳವಾದುದಲ್ಲವೆ? ತನ್ನ ವಾತ್ಸಲ್ಯವನ್ನೇ ಉಂಡೆಗಟ್ಟಿ ಇಲ್ಲಿಗೆ ಕಳಿಸಿರುವಳು. ನಿಜ, ನಾನು ಸಣ್ಣವಳಿದ್ದಾಗಿನಿಂದಲೂ ಅಷ್ಟೆ, ಸೊಂಟದ ಮೇಲೆ ಕೂರಿಸಿಕೊಂಡು ಬೆಳ್ಳಿಯ ಬಟ್ಟಲಿನಲ್ಲಿ ಊಟವನ್ನಿರಿಸಿಕೊಂಡು ಇರುಳಿನಲ್ಲಿ ಚಂದ್ರನನ್ನು ತೋರಿಸುತ್ತ, ಹಗಲಿನಲ್ಲಿ ಕೈದೋಟದ ಹೂವುಗಳನ್ನು ತೋರಿಸುತ್ತ ಉಣ್ಣಿಸುತ್ತಿದ್ದಳು. ಏಳೆಂಟು ವರುಷದ ಬಾಲೆಯಾದ ಮೇಲೆ ಓದುತ್ತ ಮೈಮರೆತು ಕುಳಿತರೆ ಕೈತುತ್ತು ನೀಡುತ್ತಿದ್ದಳು. ತಾಯಿಯ ಕರುಳನ್ನು ವಿಶೇಷವಾದ ಕೋಶಗಳಿಂದ ದೇವರು ಮಾಡಿಹನೇನೋ! ಇಂತಹ ಪ್ರೇಮಮಯಿ ತಾಯಿಯ ಹೊಟ್ಟೆಯಲ್ಲಿ ನನ್ನಂತಹ ಕಟುಕಿ, ಕಲ್ಲೆದೆಯ ವಿರಾಗಿಣಿ ಹುಟ್ಟಬಾರದಿತ್ತು. ಉಂಡುಟ್ಟು ನಲಿದು, ಗಂಡನನ್ನು ಮಾಡಿಕೊಂಡು, ಅವಳನ್ನು ಸಮಾಧಾನದಲ್ಲಿರಿಸುವ ಲೌಕಿಕ ಮಗಳು ಈಕೆಗೆ ಆಗಬೇಕಿತ್ತು' ದುಃಖದಿಂದ ಹೃದಯ ಭಾರವಾಯಿತು.

'ಅವ್ವಾ....ಕೈ ತೊಳೆದುಕೊಂಡು ತಿನ್ನಿರವ್ವ' ಶಿವಕಾಮಿನಿ ಹೇಳಿದಳು.

'ಹಣ್ಣುಹಾಲಿನ ಹೊರತು ಅರಮನೆಯನ್ನು ಬಿಡುವತನಕ ಬೇರೇನನ್ನೂ ಸ್ವೀಕರಿಸಬಾರದು ಎಂದು ಸಂಕಲ್ಪ ಮಾಡಿರುವೆನಲ್ಲಾ ಶಿವೆ' ಸಹಜವಾಗಿ ಏನನ್ನೋ ಯೋಚಿಸುತ್ತ ಹೇಳಿದಳು.

'ಅಂದರೆ....ಇಷ್ಟುಬೇಗ ಬಿಟ್ಟು ಹೋಗುವ ಆಲೋಚನೆ! ಎಲ್ಲಿಗವ್ವಾ ಹೋಗೋದು....?' ಸ್ತಂಭೀಭೂತಳಾಗಿ ಶಿವೆ ಕೇಳಿದಳು.

'ದೇವರು ದಾರಿ ತೋರಿಸಿದಲ್ಲಿಗೆ. ಅದಿರಲಿ ಶಿವೆ, ಐದು ವಾರಗಳ ಈ ವ್ರತ ಮುಗಿಯುವತನಕ ಬೇರೇನನ್ನೂ ತಿನ್ನುವುದಿಲ್ಲ.'

'ಎಂತಹ ವ್ರತವವ್ವಾ, ಇದು! ತಾಯಿಯು ಪ್ರೇಮದಿಂದ ಮಾಡಿಕೊಟ್ಟುದನ್ನೂ ತಿನ್ನಬಾರದೇ?' ಶಿವಕಾಮಿನಿ ನೊಂದು ಕೇಳಿದಾಗ ಮಹಾದೇವಿ ಮೌನ ತಾಳಿದಳು.

'ಅಹುದು, ತಾಯಿಯು ಮಾಡಿ ಕಳಿಸಿದ್ದನ್ನೂ ತಿನ್ನಬಾರದೆ....ಅದರಲ್ಲೇನು ತಪ್ಪು?' ಮನಸ್ಸು ಪ್ರಶ್ನಿಸಿತು.

'ತಾಯಿ ಮಾಡಿಕೊಟ್ಟುದು ಎಂಬ ನೆಪವೋ, ತಿನಿಸಿನ ರುಚಿ ನಾಲಿಗೆಯನ್ನು ಕೆರಳಿಸುತ್ತಿದೆಯೋ....?' ವಿವೇಕವು ಗಹಗಹಿಸಿ ನಕ್ಕಂತಾಯಿತು.

'ತಿನ್ನದಿದ್ದರೆ ಅವಮಾನವೀಯತೆಯಲ್ಲವೆ? ಹರಸಿ ಕಳಿಸಿದುದಕ್ಕೆ ಬೆಲೆಯೇ ಇಲ್ಲವೆ?' ಮನಸ್ಸು ಕೇಳಿತು.

'ತಿನ್ನಬಾರದು ಎಂಬ ಸಂಕಲ್ಪಕ್ಕಿಂತಲೂ ಇದು ದೊಡ್ಡದೋ? ನೀನು ದುರ್ಬಲ ಹೃದಯಿ ...ಯುದ್ಧದಲ್ಲಿ ಹೋರಾಡುವ ಸೈನಿಕನು ಅರಕ್ಷಿತ, ದುರ್ಬಲ ಸ್ಥಾನಗಳನ್ನು ಗುರಾಣಿಯಿಂದ ಮರೆಮಾಡುತ್ತ ಶತ್ರುವನ್ನು ಎದುರಿಸುವಂತೆ, ನಿನ್ನ ಮನೋದೌರ್ಬಲ್ಯ—ವ್ಯಾಮೋಹದ ಅಂಶಗಳನ್ನು ಈ ಸಾಂತ್ವನಿಸುವ ತತ್ತ್ವದಿಂದ ಮರೆಮಾಡಿಕೊಳ್ಳಬಯಸುವೆಯಾ ?' ವಿವೇಕದ ಚುಚ್ಚುಮಾತು ತೀವ್ರವಾದವು.

ಅವಾಗಲೂ ಎನ್ನ ಮನ ಉದರಕ್ಕೆ ಹರಿವುದು !
ಕಾಣಲಾರೆನಯ್ಯಾ ನಿಮ್ಮುವನು,
ಭೇದಿಸಲರಿಯೆನಯ್ಯಾ ನಿಮ್ಮ ಮಾಯೆಯನು !
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಾ,
ನಿನ್ನ ಹೊದ್ದುವಂತೆ ಮಾಡಾ, ನಿನ್ನ ಧರ್ಮ !*

ಎಂದು ನೊಂದು ಹಾಡಿಕೊಂಡಳು.

'ಚನ್ನಮಲ್ಲಿಕಾರ್ಜುನಾ....ಎಂತಹ ಚತುರ ನೀನು ! ವಿವಿಧ ಪರಿಯಲ್ಲಿ ಮಾಯೆಯ ಬಲೆಯನ್ನು ಹರಡುವೆ. ಆಮಿಷವಾಗಿ ಕಳಿತ ಹಣ್ಣು, ತಿಳಿನೀರನ್ನಿರಿಸಿ ಹಕ್ಕಿಯನ್ನು ಬಲೆಗೆ ಸೆಳೆದುಕೊಳ್ಳುವಂತೆ ನನ್ನನ್ನು ವ್ಯಾಮೋಹದ ಬಲೆಗೆ ಕೆಡಹಲು ಇಂತಹ ತಿನಿಸೆಂಬ ತುಣುಕನ್ನು ಆಮಿಷವಾಗಿ ಕಳಿಸಿದೆಯಾ?' ಮಹಾದೇವಿ ಮನಸ್ಸನ್ನು ದೃಢಪಡಿಸಿಕೊಂಡು, ಬಗ್ಗಿ ನೋಡಿದಳು. ಬಂಡೆಗಲ್ಲಮೇಲೆ ಕುಳಿತು ಕಾಲನ್ನು ಇಳಿಬಿಟ್ಟುಕೊಂಡಲ್ಲಿ ಮೀನುಗಳು ಹಿಂಡುಹಿಂಡಾಗಿ ಸುಳಿಯುತ್ತಿದ್ದವು.

'ಮುದ್ದು ಪ್ರಾಣಿಗಳೇ, ನನ್ನ ತಾಯಿಯು ನನ್ನೊಬ್ಬಳನ್ನೇ ಮಗಳೆಂದು ಏಕೆ ತಿಳಿಯಬೇಕು ? ನೀವೂ ಆಕೆಯ ಮಕ್ಕಳೇ ಅಲ್ಲವೆ? ಅಂದಾಗ ನನಗಾಗಿ ಈ ತಿನಿಸು ಸೀಮಿತವಾಗಿದೆಯೆಂದು ನಾನಾದರೂ ಏಕೆ ವ್ಯಾಮೋಹಿತಳಾಗಬೇಕು ? ನೀವೂ ಅದರಲ್ಲಿ ಪಾಲುಗಾರರು....!' ಹೆಸರುಂಡೆಗಳನ್ನು ಅಂಗೈಯಲ್ಲಿ ಇರಿಸಿಕೊಂಡು ಬೆರಳಿನಿಂದ ಪುಡಿಮಾಡಿ ನೀರಿಗೆಸೆದಳು. ಕಜ್ಜಾಯವನ್ನು ತುಂಡುತುಂಡು ಮಾಡಿ ಹಾಕಿದಳು. ಮೀನುಗಳು ವೇಗದಿಂದ ಧಾವಿಸಿ, ಬಿದ್ದ ತಿನಿಸಿಗೆ ಮುತ್ತಿಕೊಂಡವು.

'ಒಡತಿ, ಇದೇನು ನಿಮ್ಮ ಕಠೋರ ವರ್ತನೆ....!' ಶಿವಕಾಮಿನಿ ಚೀರಿ ಕೇಳಿದಳು.

'ಶಿವೆ....ಚನ್ನಮಲ್ಲಿಕಾರ್ಜುನನು ಒಡ್ಡುವ ಮಾಯದ ಬಲೆ ಬಹು ಸೂಕ್ಷ್ಮ ತಾಯಿ....ಕಂಡುಹಿಡಿವ ಮುನ್ನವೇ ಬಿಗಿದಪ್ಪುವುದು. ಅದರೊಳಗೆ ಬೀಳದೆ ತಪ್ಪಿಸಿಕೊಳ್ಳಲು ಮೈಯೆಲ್ಲ ಕಣ್ಣಾಗಿರಬೇಕಾಗುವುದು' ನಿರ್ಲಿಪ್ತಳಾಗಿ ನೀರಿಗೆ ಎಸೆದು ಎಲ್ಲವನ್ನೂ ತೆರವು ಮಾಡಿದಾಗ ಮನಸ್ಸಿಗೆ ನೆಮ್ಮದಿ ಎನಿಸಿತು.

'ನಿಜ, ಅಂದಿನಿಂದ ಒಂದೇ ಸಮನೆ ಪ್ರಯತ್ನಿಸುತ್ತಿರುವೆ—ಮನಸ್ಸನ್ನು ಕಲ್ಲು ಮಾಡಿಕೊಳ್ಳಲು. ಹೀಗಿರುವಾಗ ಮತ್ತೆ ಮಠಕ್ಕೆ ಹೋಗಿ, ಅವರನ್ನು ಕಂಡು ಹರಿದುಹೋದ ಮೋಹದ ಎಳೆಗಳನ್ನು ಪುನಃ ಕೂಡಿಸುವುದೇಕೆ ?'

'ಏನು ಆಲೋಚನೆ ಮಾಡುತ್ತಿರುವೆ ದೇವಿ ?' ಕೌಶಿಕ ಕೇಳಿದ—ದೀರ್ಘ ಕಾಲ ಮಾತನಾಡದೆ ಮಹಾದೇವಿ ಕುಳಿತುದನ್ನು ಕಂಡು.

'ಹೂಂ....ಹಾಗೆಯೇ ಆಗಲಿ ; ಸದ್ಗುರುಗಳಿಗೆ ಇಲ್ಲಿಗೇ ದಯಮಾಡಿಸಲು ನಿರೂಪವನ್ನು ಕಳಿಸುವೆ.'

ಶಿವಕಾಮಿನಿಯು ಓಲೆಯೊಂದನ್ನು ಫಲಪುಷ್ಪ ಸಮೇತವಾಗಿ ಗುರುಲಿಂಗ ದೇವರಿಗೆ ಮುಟ್ಟಿಸಿದಾಗ, ಮಹಾದೇವಿಯ ಅಂತರಂಗದ ಕರೆ ಅವರ ಹೃದಯ ಮಂದಿರದ ಕದವನ್ನು ತಟ್ಟಿತು.

'ರಾಜನು ಏನಾದರೂ ಅನುಚಿತ ಮಾತುಗಳನ್ನಾಡಿ, ಅಪಮಾನ ಮಾಡಿದರೆ....' ಗುರುಲಿಂಗರ ಮನಸ್ಸು ಕ್ಷಣಕಾಲ ಹೊಯ್ದಾಡಿತು.

'ಮಾನಾಪಮಾನದ ಚಿಂತೆ ನನಗೇಕೆ? ಇವೆರಡೂ ಆತ್ಮನನ್ನು ಮುಟ್ಟಲಾರವಷ್ಟೆ. ನನಗೆ ಸ್ತುತಿ-ನಿಂದೆ, ಗೌರವ-ತಿರಸ್ಕಾರ ಎಲ್ಲವೂ ಒಂದೆ' ಎಂದುಕೊಳ್ಳುತ್ತ, 'ಆಗಲಿ ತಾಯಿ, ನಾಳೆ ಬೆಳಿಗ್ಗೆ ಬರುವೆ....' ಎಂದು ತಮ್ಮ ನಿರ್ಧಾರವನ್ನು ತಿಳಿಸಿದರು.

ಅವರ ಮನಸ್ಸು ಅಂದೆಲ್ಲ ವಿವಿಧ ಸಂದೇಹಗಳ ಮಧ್ಯೆ ಉಯ್ಯಾಲೆಯಾಡುತ್ತಿತ್ತು. 'ಮಹಾದೇವಿಯು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಬಿಟ್ಟಿರಬಹುದೇ? ಆ ವಿಲಾಸ, ವೈಭವಗಳು ಆಕೆಯನ್ನು ಪರಿವರ್ತಿಸಿರಬಹುದೇ ?'

'ಇಲ್ಲ....ಯಾವ ಆಸೆ, ಆಮಿಷಗಳೂ ಅವಳನ್ನು ಪರಿವರ್ತಿಸಲಾರವು.... ಪರಿಪಕ್ವವಾದ ಮುತ್ತು ಅದು, ಮರಳಿ ಕರಗಿ ನೀರಾಗದು....' ತಾವೇ ಸಮಾಧಾನಿಸಿಕೊಂಡರು.

ಗುರುಗಳ ಆಗಮನದ ವಾರ್ತೆ ತಿಳಿದ ಮಹಾದೇವಿಯ ಆನಂದಕ್ಕೆ ಪಾರವಿರಲಿಲ್ಲ. ಕೌಶಿಕನು ಸೂರ್ಯೋದಯದ ಮೊದಲ ಜಾವದಲ್ಲೇ ಒಂದು ಮೌನ ಪ್ರೇಕ್ಷಕನಾಗಿ ಅವಳ ಸಂಭ್ರಮವನ್ನು ವೀಕ್ಷಿಸತೊಡಗಿದ್ದ. ಜಿಂಕೆ

ಯಂತೆ ಪಡಸಾಲೆ ಪಾದಪೂಜೆಗೆ ಅಣಿಮಾಡಿದಳು. ಬಗೆಬಗೆಯ ಹೂವುಗಳನ್ನು ಕೈಯಾರೆ ಕಿತ್ತು ತಂದು ಹೂಬುಟ್ಟಿಯಲ್ಲಿ ಜೋಡಿಸಿದಳು. ತೋಟವನ್ನು ಸುತ್ತಿ, ಮಾಗಿದ ಹಣ್ಣುಗಳನ್ನು ಕೀಳಿಸಿ ತಂದಳು. ಅವಳ ಸಡಗರವನ್ನು ಕಂಡು ಕೌಶಿಕನ ಹೃದಯದಲ್ಲಿ ಅಸೂಯೆಯು ಹೊಗೆಯಾಡದಿರಲಿಲ್ಲ.

ಎತ್ತರದ ಪೀಠವೊಂದರ ಮೇಲೆ ಮೆತ್ತನೆಯ ಸುಪ್ಪತ್ತಿಗೆ ಇರಿಸಿ, ನೆಲದ ಮೇಲೆ ಮಣೆಯನ್ನಿಟ್ಟು ಪಾದಪೂಜೆಯ ಸಾಮಗ್ರಿಗಳನ್ನು ಅಣಿಗೊಳಿಸಿ ಕಾಯುತ್ತ ನಿಂತಳು. ಗಳಿಗೆಗೊಮ್ಮೆ ಭವನದ ಬಾಗಿಲಿಗೆ ಹೋಗಿ 'ಗುರುಗಳು ಬಂದರೆ....?' ಎನ್ನುವಳು.

'ಶಿವಕಾಮಿನಿ, ಮೇನೆಯವರು ಪೂಜ್ಯರನ್ನು ಕರೆಯಲಿಕ್ಕೆ ಹೋಗಿರುವರಷ್ಟೇ....?' ಕಾತುರದಿಂದ ಕೇಳಿದಳು.

'ಅಹುದಮ್ಮ....ಆದರೆ ಸದ್ಗುರುಗಳು ಮೇನೆಯನ್ನು ಹಿಂದಕ್ಕೆ ಕಳಿಸಿ, ನಡೆದುಕೊಂಡೇ ಬರುವೆನೆಂದರಂತೆ.'

ಅವಳ ಉತ್ಸಾಹ, ಕಾತುರಗಳನ್ನು ಕಂಡು ಕೌಶಿಕ ತಳಮಳಗೊಂಡ.

'ಓಹೋ....ಅವನಿಗೇ ಇವಳು ಒಲಿದಿರುವಳೋ? ಅವನಿಂದ ಅಗಲಿದ್ದುದಕ್ಕೆ ಇಷ್ಟೊಂದು ಮಂಕಾಗಿದ್ದಳೇನೋ! ಇಂದು ತನ್ನಿನಿಯ ಬರುವನೆಂದು ಈ ಸಂಭ್ರಮವೇನೋ?....ಸರಿ ಸರಿ, ತನ್ನ ಪ್ರಣಯ ಸಾಹಸವನ್ನು ಮುಚ್ಚಿಕೊಳ್ಳಲು ವೈರಾಗ್ಯದ ಸೋಗು" ಈ ಸಂಶಯದ ಆವಿರ್ಭಾವದಿಂದ ಅವನ ಮನಸ್ಸು ಜ್ವಾಲಾಮುಖಿಯಾಗಲಾರಂಭಿಸಿತು.

'ಅವನು ಬರಲಿ; ಇಂದು ಕೈ ತೋರಿಸುವೆ....' ಕೈಕೈ ಹೊಸಕಿಕೊಂಡ.

'ಗುರುಗಳು ಬಂದರಂತೆ....' ಶಿವಕಾಮಿನಿ ತ್ವರಿತಗತಿಯಿಂದ ಬಂದು ನಿರೂಪಿಸಿದಳು.

'ಗುರುದೇವರು ದಯಮಾಡಿಸಿದರೆ?' ಗುಡಿಗಟ್ಟಿದ ಆನಂದದಿಂದ ನೀರಿನ ತಂಬಿಗೆಯನ್ನು ಕರದಲ್ಲಿ ಹಿಡಿದು ಮಹಾದೇವಿ ಅವಸರದ ಹೆಜ್ಜೆಯಿರಿಸಿ ಸಾಗಿದಳು.

ತೀಕ್ಷ್ಣವಾದ, ಚಿಕಿತ್ಸಕದೃಷ್ಟಿಯನ್ನು ಬೀರುತ್ತ ನಿಂತಿದ್ದ ಕೌಶಿಕನನ್ನು ಕಂಡಳು. ಆದರೆ ಆ ಭಾವಾವೇಶದಲ್ಲಿ ಅವನ ನೋಟದ ತೀಕ್ಷ್ಣತೆ ಅವಳನ್ನು ಸುಡಲಿಲ್ಲ.

'ತಾವೂ ಎದುರುಗೊಳ್ಳಲು ಬರುವಿರಾ ಪ್ರಭು?' ಉತ್ಸಾಹದಿಂದ ಕೇಳಿದಳು. ತನ್ನ ಅಸಹನೆಯನ್ನು ಒತ್ತಿ ತಡೆದುಕೊಂಡು, ಕೌಶಿಕ ಶಾಂತಿಯನ್ನು

'ಇಲ್ಲ....ನನಗೆ ಅವಸರದ ಕೆಲಸವಿದೆ.'

ಯಾವುದನ್ನೂ ಗಮನಿಸುವ ಸ್ಥಿತಿಯಲ್ಲಿಲ್ಲದ ಮಹಾದೇವಿ-ಮುಂದೆ ಸಾಗಿದಳು. ಕೌಶಿಕನು ಆತುರಾತುರವಾಗಿ ಮಹಡಿಯನ್ನೇರಿ, ಸ್ವಾಗತಿಸುವುದು ಕಾಣುವ ತಾಣಕ್ಕೆ ಬಂದು ನಿಂತ.

ಮಹಾದೇವಿಗೆ ಗುರುಗಳನ್ನು ಕಾಣುತ್ತಲೇ ಮೈ ಪುಳಕಗೊಂಡು, ಕಣ್ಣಾಲಿಗಳು ಹರುಷಜಲದಿಂದ ತುಂಬಿದವು. ಅವರ ಪಾದಕ್ಕೆ ಪರಿಮಳೋದಕವನ್ನೆರೆದು ಒರೆಸಿದಳು. ವಿಭೂತಿ ಧರಿಸಿ, ಹೆಬ್ಬೆರಳಿಗೆ ಹಣೆಹಚ್ಚಿ ನಮಸ್ಕರಿಸಿ, ಸಂಭ್ರಮದಿಂದ ಎದ್ದು ನಿಂತಳು. ಎರಡೂ ಕೈಗಳನ್ನು ಮುಗಿದು, ಕಣ್ಮುಚ್ಚಿ ಭಕ್ತಿ ತುಂಬಿ ಹಾಡಿದಳು :

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತಿಂದು,
ಮುಕ್ತಿ ಎನ್ನ ಮನೆಗೆ ನಡೆದು ಬಂದಿತ್ತಿಂದು,
ಜಯಜಯಾ, ಹರಹರಾ, ಶಂಕರ ಶಂಕರಾ,
ಗುರುವೆ ನಮೋ, ಪರಮ ಗುರುವೆ ನಮೋ
ಚನ್ನಮಲ್ಲಿಕಾರ್ಜುನನ ತೋರಿದ ಗುರುವೆ, ನಮೋ ನಮೋ !*

'ದಯಮಾಡಿಸಿ....ಗುರುದೇವಾ....' ತನ್ನ ಕೈಗಳನ್ನು ಮುಂದೆ ತೋರಿಸಿದಳು.

'ಕ್ಷೇಮವಾಗಿರುವೆಯಾ ಮಗು ?' ಗುರುಲಿಂಗದೇವರು ವಾತ್ಸಲ್ಯತುಂಬಿ ಕೇಳಿದರು.

'ತಮ್ಮನುಗ್ರಹದಿಂದ ಹೀಗಿರುವೆ....' ಗುರುಲಿಂಗದೇವರ ದುಗುಡಗೊಂಡ ಮನ ಸಮಾಧಾನ ತಾಳಿತು.

ಜರಿಯ ಪೀತಾಂಬರದಲ್ಲಿ ಮೈಯನ್ನು ಸುತ್ತಿ, ವಜ್ರ ವೈಢೂರ್ಯಗಳ ಹೊರೆಯಲ್ಲಿ ಮಹಾದೇವಿಯೇನಾದರೂ ಕಾಣಿಸಿಕೊಂಡಿದ್ದರೆ ಗುರುಲಿಂಗದೇವರ ಎದೆ ಒಡೆಯುತ್ತಿತ್ತೇನೋ ! ಆದರೆ ಅದೇ ಸರಳತೆ, ಮುನ್ನಿನಂತಹ ಬಿಳಿಯ ನೂಲಿನ ಸೀರೆ, ತಾವು ಆಶೀರ್ವದಿಸಿ ಇತ್ತ ರುದ್ರಾಕ್ಷಿಯ ಸರ, ಹಣೆಯ ಮೇಲೆ ಮೂಡಿದ ಶುಭ್ರ ಧವಳ ವಿಭೂತಿಯ ರೇಖೆಗಳು.

ಮೌನವಾಗಿ ಆಕೆಯನ್ನು ಅಳೆದರು. ಕಠಿಣ ವ್ರತ, ಮಿತಾಹಾರದಿಂದಾಗಿ ಶರೀರವು ಕುಂದಿದಂತೆ ಕಂಡರೂ ಉನ್ನತವಾದ ತಪೋಶಕ್ತಿ, ಆತ್ಮಬಲಗಳು ಕಣ್ಣಿನಲ್ಲಿ ಮಿರುಗುತ್ತಿದ್ದವು. ಮನೆಯಲ್ಲಿರುವಾಗ ಅಪರಿಪಕ್ವತೆ, ಜಗತ್ತನ್ನು ಎದುರಿಸುವದು ಹೇಗೆಂಬ ಅಧೈರ್ಯವಿದ್ದರೆ, ಈಗ ಒಂದು ಬಗೆಯ ಪ್ರೌಢ

* ಮ. ವ. ೪೮

ಕಳೆ, ದಿಟ್ಟತನಗಳು ಮೊಗದ ಮೇಲೆ ಪಡಿಮೂಡಿದ್ದವು. ಚಿಟ್ಟೆಯ ಕೋಶವನ್ನು ನೋಡಿದ ಪ್ರಾಣಿಶಾಸ್ತ್ರಜ್ಞ ಅದು ಪೂರ್ಣಗೊಂಡು ಹೊರಬರುವ ಲಕ್ಷಣಗಳನ್ನು ಗುರುತಿಸಿದಾಗ ಆನಂದಿಸುವಂತೆ, ಗುರುಲಿಂಗರು ಮನದಲ್ಲಿ ಹರ್ಷಗೊಂಡರು.

ಕೌಶಿಕನು ಮಹಡಿಯಲ್ಲಿ ನಿಂತು ಈ ಸ್ವಾಗತವನ್ನು ಗಮನಿಸಿದ. ಮಹಾದೇವಿಯ ಸಂಭ್ರಮ, ಪಾದಸ್ಪರ್ಶ, ನಮಸ್ಕಾರಗಳು ಅಸಹನೆಯ ತೆರೆಗಳನ್ನು ಏಳಿಸಿದರೂ, ಅವನ ಮೊದಲಿದ್ದ ಹೀನ ಸಂಶಯಗಳು ಗುರುಲಿಂಗದೇವರನ್ನು ಕಂಡು ಅಡಗಿಹೋದವು. ಗಡ್ಡ-ಜಟೆಗಳು ಬೆಳ್ಳಗಾಗತೊಡಗಿ ವೃದ್ಧಾಪ್ಯವು ಸನಿಹದಲ್ಲಿತ್ತು. ಎತ್ತರವಾದ ವಜ್ರಕಾಯ, ದೃಢ ಧ್ವನಿ, ಸಾತ್ವಿಕ ಮುಖಭಾವ, ತಪೋಕಾಂತಿ ಅವರ ಭವ್ಯ ನಿಲುವನ್ನು ಎತ್ತಿ ತೋರಿಸಿದವು. ಹಾವುಗೆಯ ಕಟ್‌ಕಟ್ ಸಪ್ಪಳದೊಡನೆ ದೊಡ್ಡದೊಡ್ಡ ಹೆಜ್ಜೆಗಳನ್ನು ಇರಿಸುತ್ತ ಗುರುಲಿಂಗರು ಒಳಕ್ಕೆ ನಡೆದಾಗ ಸಿಂಹವನ್ನು ಕಂಡ ಸೀಳ್ನಾಯಿಯಂತೆ ಕೌಶಿಕ ಮರೆಯಾಗಿ ನಿಂತ.

ನಿಯಮಿತ ಪೀಠದಲ್ಲಿ ಗುರುಲಿಂಗರು ಕುಳಿತರು. ಸಿದ್ಧಪಡಿಸಿದ ಎಲ್ಲ ಪರಿಕರಗಳನ್ನು ಬಳಸಿಕೊಂಡು ಮಹಾದೇವಿ ಗುರುಗಳ ಪಾದಗಳನ್ನು, ಇಂಪಾಗಿ ವಚನಗಾಯನ ಗೈಯುತ್ತ ಪೂಜಿಸಿದಳು. ಪಾದಪೂಜೆಯ ಬಳಿಕ ಪಾದತೀರ್ಥವನ್ನು ಸ್ವೀಕರಿಸಿದಾಗ ಅಪೂರ್ವ ಧನ್ಯತೆಯ ಭಾವ ಆಕೆಯನ್ನಾವರಿಸಿಕೊಂಡಿತು.

'ಗುರುದೇವಾ.... ಪುನರ್ಜನ್ಮ ಪಡೆದಂತಾಯಿತು ! ಎಷ್ಟೋ ದಿವಸಗಳಿಂದ ಹನಿ ನೀರಿಲ್ಲದೆ ಅರಲಾಗಿದ್ದ ಕೆರೆಗೆ ತೊರೆಯು ಹರಿದುಬಂದು ಜಲಮಯವಾಗಿ ಮಾಡಿದಂತೆ, ಬರಲಾಗಿ ಒಣಗಿ ಕಂಗೆಡುತ್ತಿದ್ದ ಸಸಿಗೆ ಧಾರಾಕಾರವಾಗಿ ಮಳೆ ಸುರಿದಂತಾಯಿತು.

ಇಹದ ಸುಖ, ಪರದ ಗತಿ ಕೂಡಿ ಸಮನಿಸಿದವು. ತಮ್ಮ ಶ್ರೀಪಾದವನ್ನು ಕಂಡು ನಾನು ಧನ್ಯಳಾದೆನು.'* ಭಕ್ತಿ ತುಂಬಿ ನಮಸ್ಕರಿಸಿದಳು.

ಪಾದಕ್ಕೆ ಆರತಿಯನ್ನು ಬೆಳಗಿದಳು. ವಿಲಾಸಿನಿಯರೆಲ್ಲ ಅಂದು ಸರಳವಾದ ಅಲಂಕಾರದೊಡನೆ ಇದ್ದುದಲ್ಲದೆ, ಎಲ್ಲರ ಹಣೆಯ ಮೇಲೆ ಅಚ್ಚೊತ್ತಿದ್ದ ವಿಭೂತಿಯ ರೇಖೆಗಳನ್ನು ಕಂಡು ಗುರುಲಿಂಗದೇವರಿಗೆ ಅಪಾರ ಹಿಗ್ಗಾಯಿತು.

ಇತ್ತ ಕೌಶಿಕ ಒಂದೇ ಸಮನೆ ಕುದಿಯುತ್ತ ಮಹಡಿಯ ಮೇಲೆ ದಾಪುಗಾಲು ಹಾಕುತ್ತ ಓಡಾಡುತ್ತಿದ್ದ. ಮನದ ಕುದುರೆಯು ಕಡಿವಾಣ ಕಳಚಿ ಓಡುತ್ತಿತ್ತು.

‘ಒಂದು ದಿನವಾದರೂ ಪಾದ ಮುಟ್ಟಿ ಹೀಗೆ ನಮಸ್ಕರಿಸಿದಳೇ? ಅದು ಹೋಗಲಿ....ಕನಿಷ್ಠ ಒಮ್ಮೆಯಾದರೂ ಹೃತ್ಪೂರ್ವಕ ಮುಗುಳ್ನಗೆ ನಕ್ಕಳೇ? ಗಂಭೀರ ಮುಖವೊಂದೇ ನನ್ನ ದುರ್ದೈವಕ್ಕೆ! ಒಲಿಸಿಕೊಳ್ಳಬೇಕೆಂದು ಎಷ್ಟು ಪ್ರಯತ್ನಿಸಿದರೂ ಆಗದೆ ವಿಫಲನಾದೆ....ನನ್ನ ಅದೃಷ್ಟವೇ ಇಷ್ಟೋ ಅಥವಾ ಅವಳ ಸೊಕ್ಕನ್ನು ಸಹಿಸಿಕೊಳ್ಳುವ ಹೇಡಿತನವೋ?’ ತನ್ನಲ್ಲಿ ತಾನೇ ಆಲೋಚಿಸ ತೊಡಗಿದ.

‘ಮಗಳೇ, ನಿನ್ನ ಸಾಧನೆ ಎಷ್ಟರಮಟ್ಟಿಗೆ ಸಾಗಿದೆಯಮ್ಮಾ....?’

‘ಅದರ ಪರೀಕ್ಷೆಗಾಗಿಯೇ ತಮಗೆ ಆಮಂತ್ರಣ ಗುರುದೇವಾ....ಇವೆಲ್ಲ ಇತ್ತೀಚೆಗೆ ರಚಿಸಿದ ವಚನಗಳು. ತಾಡಓಲೆಯ ಕಟ್ಟು ಇಲ್ಲಿದೆ ನೋಡಿ ಗುರುದೇವಾ....’ ಬೆಳ್ಳಿಯ ಹರಿವಾಣದಲ್ಲಿರಿಸಿ ಗುರುಗಳ ಮುಂದೆ ಹಿಡಿದಳು. ಕೈಗೆತ್ತಿಕೊಂಡ ಅವರು,

‘ನಿರೀಕ್ಷೆಗೆ ಮೀರಿದ ಪ್ರಗತಿಯಾಗಿದೆ ತಾಯಿ....’ ಎಂದು ಸೂಕ್ಷ್ಮವಾಗಿ ಅವುಗಳನ್ನು ಅವಲೋಕಿಸಿದರು.

‘ತಮ್ಮ ವಾಣಿಯಲ್ಲಿ ಅಮೃತವಚನಗಳನ್ನು ಕೇಳುವ ಅಪೇಕ್ಷೆ ಗುರುದೇವಾ....’ ಶಿವಕಾಮಿನಿ ಹೇಳಿದಳು.

ಗುರುಲಿಂಗದೇವರು ಗಂಭೀರವಾಣಿಯಲ್ಲಿ ವಚನಾಮೃತವನ್ನು ನೀಡತೊಡಗಿದರು.

‘ನರಜನ್ಮವು ಎಲ್ಲಕ್ಕಿಂತಲೂ ಮಿಗಿಲು, ಕಾರಣವೆಂದರೆ ದೇವರು ಅತಿ ಶ್ರೇಷ್ಠವಾದ ಬುದ್ಧಿಶಕ್ತಿ, ವಿಮರ್ಶಾಪ್ರಜ್ಞೆಗಳನ್ನು ನಮಗೆ ನೀಡಿದ್ದಾನೆ. ಅದನ್ನು ವಿನಿಯೋಗಿಸಿಕೊಳ್ಳದೆ ಕೇವಲ ಉಂಡುಟ್ಟು, ಸುಖ ಪಡೆದು ಪ್ರಾಣಿಗಳಂತೆ ಹುಟ್ಟುಗುಣ ಪ್ರಚೋದಿತವಾಗಿ ಬದುಕುವುದು ಮನುಷ್ಯನಿಗೆ ತರವಲ್ಲ. ವಿಲಾಸಜೀವನವೆಂದರೆ ಕೆಸರಿನ ಗುಂಡಿ. ಅಲ್ಲಿ ಈಜಲೂ ಸಾಧ್ಯವಿಲ್ಲ, ಹೊರಬರಲು ಕಷ್ಟಸಾಧ್ಯ. ಜೀವನದಲ್ಲಿ ಗುರಿಯೊಂದನ್ನು ಇರಿಸಿಕೊಳ್ಳಬೇಕು, ಜಗತ್ತಿಗೆ ಹಿತವಾಗುವಂತೆ ಬಾಳಬೇಕು. ಜೇನುಹುಳುವನ್ನುನೋಡಿ, ರೇಷ್ಮೆಯ ಹುಳುವನ್ನು ನೋಡಿ. ಕ್ಷುಲ್ಲಕಪ್ರಾಣಿಗಳಾಗಿ ಕಾಣುವ ಅವು ಅಲ್ಪಾವಧಿಯಲ್ಲಿ ಬದುಕನ್ನು ಅರ್ಥಪೂರಿತವಾಗಿ ಮಾಡಿಕೊಂಡು ರುಚಿಕರವಾದ ಮಧುವನ್ನು; ಸುಂದರವಾದ ರೇಷಿಮೆಯ ಗೂಡನ್ನು ಬಿಟ್ಟುಹೋಗುವವು. ಆದರೆ ಮನುಷ್ಯನು ತನ್ನ ಜೀವಮಾನವನ್ನೆಲ್ಲ ಪರಧನ, ಪರಸ್ತ್ರೀಯರಿಗೆ ಎಳಸುವುದರಲ್ಲಿ ಕಳೆಯುವನು. ಹೆಣ್ಣು, ಮಣ್ಣು, ಹೊನ್ನುಗಳ ಗಳಿಕೆಯೇ ಬಾಳಿನ ಸರ್ವಸ್ವ ಎಂದು

ನೊಣಕ್ಕೆ ಆಸೆ ಮಾಡುವಂತೆ, ಹುಟ್ಟು ಸಾವುಗಳೆಂಬ ಕಾಲಸರ್ಪನ ಬಾಯಲ್ಲಿ ಸಿಕ್ಕಿಬಿದ್ದಿರುವ ಮನುಜ ಸಂಸಾರಸುಖದ ನೊಣಕ್ಕೆ ನಾಲಿಗೆ ಚಾಚುವನು.

ಇಂಥ ಮಿಥ್ಯಸುಖದಲ್ಲಿ ಮೈಮರೆತು ಬಾಳುವ ಹೀನಬಾಳುವೆಯು ಸಲ್ಲದು. ಈ ದೇಹವನ್ನು ವಿಲಾಸದ ರಂಗವನ್ನಾಗಿ ಮಾಡಿಕೊಳ್ಳುವದಕ್ಕಿಂತ ಶಿವನೊಲಿಮೆಯ ಸಾಧನಾರಂಗವಾಗಿ, ದೇವನ ದೇವಾಲಯವನ್ನಾಗಿ ಮಾಡಿಕೊಳ್ಳಬೇಕು. ಹೃದಯಪೀಠವಲ್ಲಿ ಆತ್ಮನನ್ನು ಕುಳ್ಳಿರಿಸಿ ಸದುಗುಣಗಳಿಂದ ಅರ್ಚಿಸಬೇಕು. ಬದುಕಿ ಸಾಯುವ ಹೀನಬಾಳಿಗಿಂತ, ಸತ್ತು ಬದುಕುವ ಅಮರ ಬಾಳನ್ನು ಕಂಡುಕೊಳ್ಳಬೇಕು....' ಗುರುಲಿಂಗದೇವರ ವಚನಗಳು ಶ್ರೋತೃಗಳನ್ನು ತಣಿಸುತ್ತಿದ್ದವು. ಅವರೆಲ್ಲರೂ ಬಹಿರಂಗಪ್ರಪಂಚವನ್ನು ಮರೆತಿದ್ದರಷ್ಟೇ ಅಲ್ಲ, ತಮ್ಮ ಅಂತರಂಗವನ್ನು ಕೆದಕಿ ನೋಡಿಕೊಳ್ಳತೊಡಗಿದ್ದರು.

'ಗುರುದೇವಾ....ನಮ್ಮಂತಹವರು ಸಹ ದೀಕ್ಷೆ ಪಡೆದು ಮೋಕ್ಷ ಹೊಂದಲು ಸಾಧ್ಯವೆ ?....' ಶಿವಕಾಮಿನಿ ಕೇಳಿದಳು.

'ಸಾಧ್ಯವೇಕಿಲ್ಲವಮ್ಮ...? ಮಾನವಶರೀರವನ್ನು ಹೊತ್ತ ಪ್ರತಿ ಜೀವಿಗೂ ಸಾಧ್ಯವಿದೆ. ತಂಗಾಳಿಯು ಎಲ್ಲೆಡೆ ಸುಳಿಯುತ್ತದೆ. ಹಾಯಿಪಟವನ್ನು ಬಿಚ್ಚಿಟ್ಟಾಗ ಮಾತ್ರವೇ ನೌಕೆ ಮುಂದೆ ಸಾಗುತ್ತದೆ. ಹಾಗೆಯೇ ಶಿವನ ಕರುಣೆಯ ಮಂದಾನಿಲ ಎಲ್ಲೆಡೆ ಸುಳಿಯುತ್ತದೆ. ಯಾರು ಭಕ್ತಿಯ ಹಾಯಿಪಟವನ್ನು ಬಿಚ್ಚಿ, ಆಧ್ಯಾತ್ಮಸಾಗರದಲ್ಲಿ ಬಾಳ ಛತ್ರವನ್ನು ತೇಲಿಬಿಡುವರೋ ಅದು ಮುಕ್ತಿಯ ದಡವನ್ನು ಮುಟ್ಟುವುದು ಮಕ್ಕಳೇ. ದೇವನ ಕರುಣೆಯು ಪಂಡಿತ-ಪಾಮರ, ಪಾವನ-ಪತಿತ, ಬಲ್ಲಿದ-ಬಡವರೆಲ್ಲರಿಗೆ ಸಮಾನವಾಗಿರುವುದು. ನಮ್ಮ ಶಕ್ತಿಗನುಸಾರವಾಗಿ ನಾವು ಪಡೆದುಕೊಳ್ಳಬೇಕು....'

'ಹಾಗಾದರೆ....ನನಗೆ ದೀಕ್ಷೆಯ ಸುಯೋಗ ಒದಗಬಲ್ಲದೆ ?' ಶಿವಕಾಮಿನಿ ಕೇಳಿದಳು.

ವಿಲಾಸಿನಿಯರು ಈ ಬೋಧೆಯನ್ನು ಏಕಾಗ್ರ ಮನದಿಂದ ಕೇಳಿ, ಪರಿಣಾಮಕ್ಕೊಳಗಾಗುವುದನ್ನು ಕಂಡು ಕೌಶಿಕನಿಗೆ ಅಸಹನೆಯ ತೆರೆಗಳು ಬಲವಾಗಿ ಎದ್ದು, ಹೃದಯ ಶರಧಿಯಲ್ಲಿ ಅಬ್ಬರಿಸತೊಡಗಿದವು. ಆವೇಶದಿಂದ ಕೆಳಗಿಳಿದು ಬಂದ.

'ಮಹಾದೇವಿ....ಸಾಕು ನಿಲ್ಲಿಸು ಈ ನಿನ್ನ ದೊಂಬರಾಟವನ್ನು ! ಬೈರಾಗಿಗಳನ್ನು ಕರೆತಂದು, ಹೆಂಗಸರ ತಲೆ ಕೆಡಿಸುವ ಈ ಉದ್ಯೋಗ ಸಾಕು. ಎದ್ದು

ನ್ನೈ ಕಂಪಿಸುತ್ತಿತ್ತು. ಉಸಿರು ತೀವ್ರವಾಗಿ ಆಡುತ್ತ, ಎದೆಯುಬ್ಬಿತ್ತು.

ಕಣ್ಣು ಮುಚ್ಚಿಕೊಂಡು ಆಲಿಸುತ್ತಿದ್ದ ಮಹಾದೇವಿ ಹುಲಿಯ ಗುಡುಗನ್ನು ಕೇಳಿದ ಎರಳೆಯಂತೆ ಬೆದರಿ ಕಣ್ಣು ತೆರೆದಳು. ಉದ್ರಿಕ್ತನಾಗಿ ನಿಂತ ಕೌಶಿಕ ಕಂಡ.

'ಉಪದೇಶದ ಅವಶ್ಯಕತೆ ಇರುವುದು ಇಲ್ಲಿಯೇ! ರೋಗವಿದ್ದಲ್ಲಿ ವೈದ್ಯನಿಗೆ ಕೆಲಸ, ವಿಲಾಸಿಗಳಿದ್ದಲ್ಲಿ ಧರ್ಮದ ಕರ್ತವ್ಯ....' ಗುರುಲಿಂಗದೇವರು ಗಂಭೀರವಾಗಿ ಹೇಳಿದರು.

'ತೆರಣಿಯ ಹುಳು ತನ್ನ ಜೊಲ್ಲಿನಿಂದ ಗೂಡು ಕಟ್ಟಿ ಮಧ್ಯೆ ಸಿಕ್ಕಿಕೊಂಡು ಸತ್ತುಹೋಗುವಂತೆ, ಮಿತಿಮೀರಿದ ಆಸೆ, ಕಲ್ಪನೆಗಳ ಎಳೆಯ ಗೂಡು ಕಟ್ಟಿ ಈ ಕರ್ಮದ ಬಲೆಯಲ್ಲಿ ಬಿದ್ದು ಸಾಯುತ್ತ, ಜೀವನವನ್ನು ಏಕೆ ವ್ಯರ್ಥ ಮಾಡಿಕೊಳ್ಳುವೀ ರಾಜ....?'

'ಬಾಯಿ ಮುಚ್ಚಿರಿ....ನನಗೆ ತಿಳಿಹೇಳುವ ಅಧಿಕಾರ ನಿಮಗಿಲ್ಲ....' ಕೌಶಿಕ ಗುಡುಗಿದ.

'ಯಾಕಿಲ್ಲ....! ಬಾಹುಬಲದಿಂದ, ರಾಜದಂಡದಿಂದ ನೀನು ರಾಜ್ಯದ ಹಿರಿಯನಿರಬಹುದು. ಆದರೆ ಇಂತಹ ಸಹಸ್ರಸಹಸ್ರ, ಕೋಟಿ ರಾಜರು ಮಣ್ಣಿನಲ್ಲಿ ಮಣ್ಣಾಗಿ ಹೋಗಿದ್ದಾರೆ. ಮಣ್ಣಿನ ಗಣಪತಿಯದು ಮೂರು ದಿನದ ಮೆರೆದಾಟ; ಆನಂತರ ಜಲಸಮಾಧಿ. ಕೇವಲ ಅಧಿಕಾರ, ಧನಮೋಹದಿಂದ ಮೆರೆಯುವ ನಿನ್ನಂತಹವರು ನಾಯಿಕೊಡೆಯ ಸಂಖ್ಯೆಯಲ್ಲಿ ಹುಟ್ಟಿ, ಹೇಳಲು ಹೆಸರಿಲ್ಲದೆ ಅಳಿದಿದ್ದಾರೆ. ಪ್ರತಿಯೊಂದು ಕಾರ್ಯಕ್ಕೆ ಕಾರಣವಿದೆ, ಕಾರಣಕ್ಕೊಂದು ಕಾರ್ಯವಿದೆ. ಯಾವ ಪಾಪಕರ್ಮವನ್ನೂ ಶಿಕ್ಷಿಸದೆ ದೇವರು ಬಿಡನು. ಮದಾಂಧನಾಗಬೇಡ. ಎಚ್ಚರವಿರಲಿ....ರಾಜಾ.'

'ಗೌರವಯುಕ್ತವಾಗಿ ಹೋಗುವಿರೋ ಅಥವಾ ಕುತ್ತಿಗೆ ಹಿಡಿದು ದಬ್ಬಿಸಲೋ....?' ಕ್ರೋಧತಪ್ತನಾಗಿ ಕೌಶಿಕ ನುಡಿದ.

'ಯಾರೂ ದಬ್ಬುವ ಅವಶ್ಯಕತೆ ಇಲ್ಲ....! ಎಷ್ಟೋ ಮನೆ, ಮನಗಳನ್ನು ನಂದನವನಗಳನ್ನಾಗಿ ಮಾಡಬೇಕಾಗಿದ್ದ ಹಸುಳೆಗಳನ್ನೆಲ್ಲ ಇಲ್ಲಿ ತಂದು, ಕೂಡಿಹಾಕಿಕೊಂಡ ನರಾಧಮ....ನಿನ್ನ ಪಾಪದ ಪಾತ್ರೆ ತುಂಬುತ್ತಲಿದೆ. ತಕ್ಕ ಶಿಕ್ಷೆಗೆ ಕಾಲ ಬರುತ್ತಿದೆ....ಯೋಗ್ಯ ವೇಳೆಯಲ್ಲಿ ಎಚ್ಚರಗೊಳ್ಳದಿದ್ದರೆ ನಿನ್ನ ಪಾಪದ ಪ್ರವಾಹದಲ್ಲಿ ಬದುಕಿ ಉಳಿಯಲಾರೆ.'

'ಇರಲಿ....ತಮ್ಮ ಶಾಪ ನನ್ನನ್ನೇನೂ ಮಾಡಲಾರದು....' ಗಹಗಹಿಸಿ

ನಿನ್ನ ಲೋಪವಿಲ್ಲ, ದೇವರ ಶಾಪ! ಒಲೆ ಹತ್ತಿ ಉರಿದರೆ ಯಾರಾದರೂ ನಿಲ್ಲಬಹುದು ; ಧರೆ ಹತ್ತಿ ಉರಿದರೆ ನಿಲ್ಲಲಾರರು. ಮಾನವರ ಬಿಸಿಯುಸಿರಿಗೆ ಕಾರಣೀಭೂತನಷ್ಟೇ ಆಗದೆ ಶಿವನ ಮೀಸಲು ಸತಿಯನ್ನು ಬಂಧಿಸಿಟ್ಟು ದೇವರ ಅವಕೃಪೆಗೆ ಪಾತ್ರನಾದವನು ನೀನು....' ಗುರುಲಿಂಗದೇವರು ನಿರ್ಲಿಪ್ತರಾಗಿ ಎದ್ದು ನಿಂತರು.

'ಬೇಡ ಗುರುದೇವಾ, ಹೋಗದಿರಿ. ಅದಾವ ಪೂರ್ವಜನ್ಮದ ಪ್ರಾರಬ್ಧದಿಂದಲೋ ಈ ಕಾರಾಗೃಹದಲ್ಲಿ ಕೊಳೆಯುತ್ತಿರುವೆನು. ಹಿಂದಿನ ಪಾಪದೊಡನೆ ಇಂದು ತಮ್ಮ ಅಪಮಾನಕ್ಕೆ ಕಾರಣಕರ್ತೃವಾಗಿ, ಮಹಾಪಾಪವನ್ನು ಸೆರಗಿಗೆ ಕಟ್ಟಿಕೊಂಡ ಪಾತಕಿ ನಾನು. ನೀವು ನೀಡಿದ ಅಪೂರ್ವ ಕಾರುಣ್ಯಕ್ಕೆ ನನ್ನಿಂದ ಸಂದ ಪ್ರತಿಫಲ ಇದುವೆಯೇ? ಗುರುದೇವಾ ...' ಮಹಾದೇವಿಯಲ್ಲಿ ಆವೇಶ, ದುಃಖಗಳು ಉಕ್ಕಿಬಂದು ಬಿಕ್ಕಿಬಿಕ್ಕಿ ಅಳತೊಡಗಿದಳು.

ಗುರುಲಿಂಗದೇವರು ನಿರ್ಲಿಪ್ತರಾಗಿ ಹೆಜ್ಜೆ ಹಾಕಿದಾಗ, ಅವರ ಶಿಷ್ಯನೂ ಹಿಂಬಾಲಿಸಿದ. ಮಹಾದೇವಿ ಆವೇಶದಿಂದ ಗುರುಗಳ ಹಿಂದೆ ಸಾಗಿ, ಪಾದಗಳನ್ನು ಹಿಡಿಯುತ್ತ ಹೇಳಿದಳು :

'ನಾನೂ ತಮ್ಮೊಡನೆ ಬರುವೆ...ನಿಮಗಾದ ಮುಖಭಂಗವನ್ನು ಕಣ್ಣಾರೆ ಕಂಡೂ ಇಲ್ಲಿ ಸಹಿಸಿಕೊಂಡು ಬದುಕಿರಲಾರೆ....' ದುಃಖತಪ್ತಳಾಗಿ ನುಡಿದಳು.

'ಕಾಲ ಬಂದಿದೆ ಮಗಳೇ....ಈಗ ಬೇಡ! ಮಿಥ್ಯವಾದ ಅಪವಾದಕ್ಕೆ ಅವಕಾಶ ಮಾಡಬೇಡ ; ಮೋಕ್ಷದ ಕಾಲ ಬಹಳ ದೂರವೇನಿಲ್ಲ....' ಮಾರ್ಮಿಕವಾಗಿ ನುಡಿದ ಗುರುಲಿಂಗದೇವರು ಹೊರಟುಹೋದರು.

'ಅವಳನ್ನು ಹಿಂದಕ್ಕೆ ಕರೆತನ್ನಿರಿ....' ಕೆರಳಿದ ಧ್ವನಿಯಲ್ಲಿ ಕೌಶಿಕ ವಿಳಾಸಿನಿಯರಿಗೆ ಆಜ್ಞಾಪಿಸಿದ. ಮದನರತಿ-ವೈಜಯಂತಿಯರು ಮಹಾದೇವಿಯ ಸಮೀಪಕ್ಕೆ ಸಾರಿದರು.

'ಮುಟ್ಟೀರಿ...ಎಚ್ಚರಿಕೆ! ದೂರ ಸರಿಯಿರಿ....ಯಾರೂ ನನ್ನನ್ನು ಕರೆದೊಯ್ಯಬೇಕಾಗಿಲ್ಲ.' ಮಹಾದೇವಿಯು ಹಿಂತಿರುಗಿ ಬಂದಳು. ಕೌಶಿಕನು ಅದೇ ಉದ್ವಿಗ್ನತೆಯಲ್ಲಿ ಶತಪಥ ತಿರುಗುತ್ತಿದ್ದ.

'ನರಾಧಮ....ಪಾಪ-ಪುಣ್ಯದ ಭಯ ನಿನಗೆ ಎಳ್ಳಷ್ಟೂ ಇಲ್ಲ. ವಿಲಾಸದ ಮಬ್ಬಿನಲ್ಲಿ ಮೈಮರೆತ ನಿನಗೆ ಗುರುಹಿರಿಯರು ಎಂಬ ವಿವೇಚನೆಯಿಲ್ಲ. ಮೊದಲು ಕರೆತರಲು ಹೇಳಿ, ಬಂದಾಗ ಹಿರಿಯರನ್ನು ಅಪಮಾನ ಮಾಡುವ ವಿವೇಕಹೀನ ನೀನು. ನಮ್ಮಿಬ್ಬರ ನಡುವೆ ಒಪ್ಪಂದವಾಗಿದ್ದುದು ನೆನಪಿದೆಯೇ?

ಅಡ್ಡಿ ಬರಬಾರದೆಂದು ನಾನು ಕೇಳಿಕೊಂಡಿದ್ದು, ನೀನು ಒಪ್ಪಿರಲಿಲ್ಲವೆ? ಆದರಲ್ಲಿ ಮೊದಲವೆರಡು ಮುರಿಯಲ್ಪಟ್ಟಿವೆ....ಎಚ್ಚರವಿರಲಿ....' ದೊಡ್ಡ ದನಿಯಲ್ಲಿ ನುಡಿದ ಮಹಾದೇವಿ ತನ್ನ ಕೋಣೆಗೆ ಹೋಗಿ ಕದವನ್ನು ಮುಚ್ಚಿಕೊಂಡಳು.

ಕೌಶಿಕನ ಆವೇಶ ಒಮ್ಮೆಲೇ ತಣ್ಣಗಾಯಿತು. 'ತಪ್ಪಿನ ಸರಮಾಲಿಕೆಗೆ ಇನ್ನೊಂದು ಸೇರಿತೇ ? ನಾನೇಕೆ ಹೀಗೆ ಆವೇಶಕ್ಕೊಳಗಾಗುವೆ ? ಈ ದುಡುಕುತನವೇ ನನ್ನ ಬಾಳಿನ ಎಲ್ಲ ಅಪಜಯಕ್ಕೆ ಕಾರಣ. ಓಹ್....ಸಿಟ್ಟಿನ ಕೈಯಲ್ಲೇಕೆ ಬುದ್ಧಿಯನ್ನು ಕೊಟ್ಟೆ....? ವಿವೇಕಹೀನನಾಗಿ ಗುರುಗಳನ್ನೇಕೆ ಬೈದೆ ? ನಾನೇನು ಮಾಡುವೆನೆಂಬುವ ಅರಿವೂ ನನಗಿಲ್ಲವಾಯಿತೇ ? ಹಾಯ್ ದುರ್ವಿಧಿಯೇ !' ಕೌಶಿಕ ಏಕಾಂತಭವನಕ್ಕೆ ಸಾಗಿ, ಹತಾಶನಾಗಿ ಮಂಚದ ಮೇಲೆ ಮೈಚೆಲ್ಲಿದ.

೩೪. ಜ್ಞಾನಮಂಥನ

ಗಡುವು ಮುಗಿಯಲು ಏಳೆಂಟು ದಿವಸಗಳ ವೇಳೆ ಮಾತ್ರವೇ ಇತ್ತು. ಆ ವೇಳೆಯೊಳಗೆ ತಪ್ಪಿಸಿಕೊಂಡರೆ ತನ್ನ ಬದುಕು ದಾರಿ ಕಾಣುವುದು. ಇಲ್ಲವಾದರೆ....? ಮುಂದಿನ ಘಟನೆಯನ್ನು ಊಹಿಸಿಕೊಳ್ಳಲು ಹೆದರಿಕೆಯಾಗುತ್ತಿತ್ತು. ದೀರ್ಘವಾದ ಆಲೋಚನೆಯಲ್ಲಿ ಮಹಾದೇವಿ ಮೈಮರೆತಳು. ಗುರುಲಿಂಗದೇವರ ನಿರ್ಗಮನವಾಗಿ ನಾಲ್ಕಾರು ದಿವಸಗಳಾಗಿದ್ದವು. ಅಂದಿನಿಂದ ಕೌಶಿಕನು ಅರಮನೆಯಲ್ಲಿ ಹಲವಾರು ಬಾರಿ ಸುಳಿದಿದ್ದರೂ ಕಣ್ಣೆತ್ತಿ ನೋಡಿರಲಿಲ್ಲ; ಮಾತನ್ನೂ ಆಡಿಸಿರಲಿಲ್ಲ. ಕಂಡೂ ಕಾಣದಂತೆ ಇದ್ದುಬಿಡುತ್ತಿದ್ದಳು. ಅವನಿಗೆ ಈಕೆಯನ್ನು ಮಾತನಾಡಿಸುವ ಧೈರ್ಯವೂ ಮೈಗೂಡಿರಲಿಲ್ಲ.

ತನ್ನ ಜೀವನನೌಕೆ ಭವಸಾಗರದಲ್ಲಿ ವಿಘ್ನಗಳ ಬಿರುಗಾಳಿಯ ಮಧ್ಯದಲ್ಲಿ ಸಿಕ್ಕುಬಿದ್ದು ಹೊಯ್ದಾಡುವುದನ್ನು ಕಂಡು ದುಃಖ ಉಮ್ಮಳಿಸಿ ಬರುತ್ತಿತ್ತು. ಸೂರ್ಯಾಸ್ತಕ್ಕೆ ಸ್ವಲ್ಪವಷ್ಟೇ ವೇಳೆ ಇದ್ದಿತು. ಶಿವಕಾಮಿನಿಯನ್ನು ಕರೆದು ತನ್ನೊಡನೆ ಉದ್ಯಾನಕ್ಕೆ ಬರುವಂತೆ ಹೇಳಿದಳು. ಇಬ್ಬರೂ ಜೊತೆಗೂಡಿ ಉದ್ಯಾನದ ದಟ್ಟವಾದ ಭಾಗದ ಕಡೆಗೆ ನಡೆದರು.

'ತಾಯಿ, ಕತ್ತಲಾಗುವ ವೇಳೆಯಾಗುತ್ತಿದೆ. ಇಂಥಲ್ಲಿ ಕೂಡುವುದು ಉಚಿತವಲ್ಲ....'

'ಏನಾಗುವುದು ಶಿವೆ....?' ನಿರಾಸಕ್ತಳಾಗಿ ಕೇಳಿದಳು.

'ಏನಾದರೂ ಹುಳ ಹುಪ್ಪಡಿ, ಹಾವು ಗೀವು ಬರುವ ಸಂಭವವುಂಟು. ಕೆಲವು ಸಲ ಇಲ್ಲಿರುವ ಕೆರೆಗೆ ಹುಲಿ ಕರಡಿಗಳೂ ಬರುವುದುಂಟು....' ಹೆದರಿದಂತೆ ಕಂಡ ಶಿವಕಾಮಿನಿ ಹೇಳಿದಳು.

'ಒಳ್ಳೆತೇ ಆಗುವುದು....ನೀನು ಹೋಗು ಶಿವೆ; ನಾನು ನಂತರ ಬರುವೆ. ಹಾವಾಗಲಿ, ಹುಲಿ ಕರಡಿಗಳಾಗಲಿ ಬಂದು ನನ್ನನ್ನು ಕೊಂದರೆ ಎಷ್ಟು ಸುಖ? ಆ ವರವನ್ನಾದರೂ ಚನ್ನಮಲ್ಲಿಕಾರ್ಜುನ ಕರುಣಿಸಬಾರದೆ? ಈ ಶರೀರದಲ್ಲಿ ಆಡುವ ಪ್ರಾಣವಾದರೂ ದೂರವಾಗಿ, ಜೀವಕಳೆ ಹೋದರೆ ರಾಜನಿಗೆ ನನ್ನ ಮೇಲಿನ ಮೋಹ ತಪ್ಪೀತು....' ನೋವಿನಿಂದ ನುಡಿದಳು.

'ಆ ಮಾತು ಆಡಬೇಡಿ ತಾಯಿ....

ಕುಳಿತು ಕಾಲನ್ನು ಇಳಿಯಬಿಟ್ಟು, ಆಸನದ ಹಿಂಭಾಗಕ್ಕೆ ಮೊಳಕೈಗಳನ್ನಿರಿಸಿ ಆಲೋಚನೆಯಲ್ಲಿ ಮೈಮರೆತಳು ಮಹಾದೇವಿ....

ಜಾಲಿಯ ಗಿಡವನ್ನೇರಿದ ಕಪಿಯಂತೆ ತನ್ನಿರವು ಎಂದುಕೊಂಡು ವಚನ ವೊಂದನ್ನು ಗುಣುಗುಣಿಸಿದಳು.

'ಅವಸರಪಟ್ಟು ಹಗಲುಗನ್ನವನಿಕ್ಕಿದರೆ ಕನ್ನವೂ ಸವೆಯದು, ಕಳುವೂ ದೊರೆಯದು. ಹಾಗೆಯೇ ನಾನೂ ದುಡುಕಿ ಈ ಅರಮನೆಗೆ ಕಾಲಿಟ್ಟೆ ನೇನೋ! ಬಿಡುಗಡೆಯ ಮಾರ್ಗವೂ ನನಗೆ ಕಾಣುತ್ತಿಲ್ಲ; ಮುಮ್ಮಾರ್ಗದ ನಿರೀಕ್ಷೆಯಲ್ಲಿ ಕಾಲ ಕಳೆಯುವುದೇ ನನ್ನ ಪಾಲಿಗೆ ಉಳಿಯಿತು. ಅವಸರದಲ್ಲಿ ಹಿಂದುಮುಂದು ನೋಡದೆ ಜಾಲಿಯ ಗಿಡವನ್ನು ಏರಿ ಕುಳಿತ ಕಪಿಯಂತೆ ತೊಳಲಾಡುತ್ತಿರುವೆ. ಪಾಪ! ಆ ಬಡಪಾಯಿಗೆ ತಿನ್ನಲು ಹಣ್ಣು ಇಲ್ಲ, ನೆಮ್ಮದಿಯಾಗಿ ಕುಳಿತುಕೊಳ್ಳಲು ಠಾವೂ ಇಲ್ಲ; ಬರೀ ಮುಳ್ಳಿನ ರೆಂಬೆಗಳು. ಚನ್ನಮಲ್ಲಿಕಾರ್ಜುನಾ ಇದು ನನ್ನ ತ್ಯಾಗವೆಂದು ಅಂದುಕೊಂಬಂತೆಯೂ ಇಲ್ಲ; ಅಥವಾ ಗುರಿಮುಟ್ಟುವ ನಿಜವಾದ ಸಾಧನೆಯನ್ನೂ ನಾನು ಹಿಡಿಯ ಲಿಲ್ಲ....'* ಮಹಾದೇವಿ ನಿಟ್ಟುಸಿರಿಟ್ಟಳು.

'ಚನ್ನಮಲ್ಲಿಕಾರ್ಜುನಾ....ಇಲ್ಲಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರು. ಸಾಕಿನ್ನು ಪರೀಕ್ಷೆ! ನಿನ್ನಲ್ಲಿ ನಾನು ಧನಕನಕವನ್ನು ಕೊಡು, ಭೋಗಭಾಗ್ಯಗಳನ್ನು ಕೊಡು ಎಂದು ಯಾವ ವರವನ್ನೂ ಕೇಳೆನು.

ನಡೆ ಶುಚಿ, ನುಡಿ ಶುಚಿ, ತನು ಶುಚಿ, ಮನ ಶುಚಿ, ಭಾವ ಶುಚಿ
ಇಂತೀ ಪಂಚ ತೀರ್ಥಂಗಳನ್ನೊಳಕೊಂಡು ಮರ್ತ್ಯದಲ್ಲಿ ನಿಂದ
ನಿಮ್ಮ ಶರಣರ ತೋರಿ ಎನ್ನನುಳುಹಿಕೊಳ್ಳಾ,
ಚನ್ನಮಲ್ಲಿಕಾರ್ಜುನಾ...**

ಪರಮಾತ್ಮಾ, ಆಯುಷ್ಯ ಸವೆಯುತ್ತಲಿದೆ, ಭವಿಷ್ಯದ ಉದ್ದ ಕಿರಿದಾಗು ತ್ತಿದೆ. ನಾನೆಂದಿಗೆ ಪರಮಸುಖವನ್ನು ಕಂಡುಕೊಳ್ಳುವುದು. ಎನ್ನ ಪಂಚೇಂದ್ರಿಯಗಳೆಲ್ಲ ನಿನ್ನ ಸುಖನನ್ನಿಂಬುಗೊಳ್ಳಲು ಉರವಣಿಸುತ್ತಿವೆ. ಜವ್ವನದ ಶಕ್ತಿಯುಕ್ತ ಕಾಯವಿದು ವ್ಯರ್ಥವಾಗಿ ಹೋಗುತ್ತಿದೆ. ನಿನ್ನ ಸಾಧನೆ ಮಾಡಲು ಮಾರ್ಗದರ್ಶಕರಿಲ್ಲ. ದುಂಬಿಯು ಪರಿಮಳವನ್ನು ತನ್ನಲ್ಲಿ ಲೇಪಿಸಿ ಕೊಂಡು ಹಾರುವಂತೆ, ನೀನು ಎಂದು ನನ್ನನ್ನು ಇಂಬಿಟ್ಟುಕೊಳ್ಳುವೆ?†

---

* ಮ. ವ. [illegible]. ** ಮ. ವ. [illegible]. † ಮ. ವ. [illegible].

ಅಜ್ಞಾನದ ಕತ್ತಲೆಯನ್ನು ಕಳೆದುಕೊಂಡು ಜ್ಞಾನದ ಬೆಳಗಿನಲ್ಲಿ ಬದುಕುವ ಶರಣರ ಸಂಗಕ್ಕೆ ನನ್ನನ್ನು ಸೇರಿಸು. ಮರಹುಗೆಟ್ಟು ಅರಿವನರಿತ ಮಹಾನುಭಾವಿಗಳ ಬಳಿಗೆ ನನ್ನನ್ನು ಕರೆದೊಯ್ದು ಬದುಕಿಸು. ಉಳಿದ ಆಯುಷ್ಯವನ್ನಾದರೂ ಅವರ ಸೇವೆಯಲ್ಲಿ ಕಳೆಯಿಸು ಚನ್ನಮಲ್ಲಿಕಾರ್ಜುನಾ* ನನ್ನ ಗಡುವು ಮುಗಿಯುತ್ತಿದೆ....ನಂತರ ಕೊರಳಿಗೆ ಲಗ್ನದ ಉರುಳು ಸಮೀಪಿಸುವುದು. ರಾಜನು ಬಲಾತ್ಕಾರ ಮಾಡದೆ ಇರಲಾರ. ಯಾವುದೇ ರೀತಿಯಿಂದ ಸೋಲುವ ಮುನ್ನ ನಾನು ಪ್ರಾಣವನ್ನಾದರೂ ಕಡಿದು ಚೆಲ್ಲೇನು, ಅವನ ಬೇಡಿಕೆಗೆ ತಲೆಬಾಗುವುದಿಲ್ಲ. ಪ್ರಭು....ನೀನು ಏನಾದರೂ ಪರಿಹಾರ ಸೂಚಿಸಲಾರೆಯಾ ?....' ಹೃದಯದ ಮೊರೆತವು ನೋವು-ನಲಿವುಗಳ ಮಧ್ಯೆ ಸಾಗಿತ್ತು. ವಿಷಾದದ ವಿಲಕ್ಷಣ ನಗೆ ನಕ್ಕು ಆಲೋಚಿಸಿದಳು :

'ಯಾವ ಮಾರ್ಗವೂ ತೋರದಿದ್ದರೆ ಕಡೆಗೆ ಈ ಪರಿಹಾರವಂತೂ ಇದ್ದೇ ಇದೆಯಲ್ಲಾ' ಮಹಾದೇವಿ ತನ್ನ ಸೀರೆಯ ಬಾಳೆಕಾಯಿಯನ್ನು ಮುಟ್ಟಿ ನೋಡಿದಳು. ಮನೆಯಿಂದ ಬರುವಾಗ ತುಂಡು ಅರಿವೆಯಲ್ಲಿ ಕಟ್ಟಿ ತಂದಿದ್ದ ವಜ್ರವು ಬಾಳೇಕಾಯಿಯಲ್ಲಿ ಭದ್ರವಾಗಿತ್ತು.

'ಇದು ಅತ್ಯಂತ ವಿಷಪೂರಿತ; ಕುಟ್ಟಿ ಪುಡಿಮಾಡಿ ನೀರಿನಲ್ಲಿ ಕಲೆಸಿ ವಜ್ರಮಿಶ್ರಿತ ನೀರು ಕುಡಿದರೆ ಆಯಿತು ; ಒಂದೆರಡು ಜಾವದಲ್ಲಿ ಪ್ರಾಣಹರಣ ನಿಶ್ಚಿತ. ಎಲ್ಲ ಉಪಾಯಗಳು ಫಲಿಸದಿದ್ದರೆ, ರಾಜನೇನಾದರೂ ಬಲಾತ್ಕರಿಸುವ ಸೂಚನೆ ಕಂಡರೆ, ನನ್ನ ಪಾವಿತ್ರ್ಯವನ್ನು ಉಳಿಸುವ ದಿವ್ಯ ಸಾಧನೆ ಇದೊಂದೇ' ಮೋಹದಿಂದ ಮತ್ತೊಮ್ಮೆ ವಜ್ರದಮೇಲೆ ಕೈಯಾಡಿಸಿದಳು.

ಕೆಲವು ಚಣಗಳು ಸರಿದಿರಬೇಕು : ಮಹಾದೇವಿಯು ಇಳಿಯಬಿಟ್ಟಿದ್ದ ಪಾದಗಳು ಯಾವುದೋ ಸ್ಪರ್ಶದಿಂದ ಬಿಸಿಗೊಂಡವು. ತಟ್ಟನೆ ಕಣ್ಣು ತೆರೆದಳು. ಕತ್ತಲೆಯು ಗಾಢವಾಗಿತ್ತು. ಏನೊಂದೂ ಕಾಣಿಸಲಿಲ್ಲ. ವಿಲಕ್ಷಣ ಅನುಭವವಾದಂತೆನಿಸಿ, ಉಸಿರು ತ್ವರಿತವಾಗಿ ಆಡತೊಡಗಿತು.

'ಯಾರದು....? ಮಾತನಾಡಿ....' ದನಿ ಏರಿಸಿ ನುಡಿದಳು. ಬಿಕ್ಕುವ ಶಬ್ದವಷ್ಟೇ ಕೇಳಿತು.

'ನಾನು ತಾಯಿ....ಪರಮ ಪಾಪಿ !' ಬಿಕ್ಕುತ್ತ ನುಡಿಯಿತು ಆ ಧ್ವನಿ.

'ವಸಂತಕರೇ ?'

'ಅಹುದು....'

'ಈ ಕತ್ತಲೆಯಲ್ಲಿ....ಹೀಗೇಕೆ ಬಂದಿರಿ....ಅಳುತ್ತಿರುವುದೇಕೆ ?' ಆಶ್ಚರ್ಯ

* ಮ. ವ. ೮೨

ದಿಂದ ಕೇಳಿದಳು.

'ನಾನು ಮಾಡಿದ ಪಾಪಕ್ಕೆ ಪರಿಹಾರವುಂಟೇ ?' ತೊದಲಿ ನುಡಿದ ವಸಂತಕ—ಮಹಾದೇವಿಯ ಪಾದಗಳನ್ನು ಕಣ್ಣಿಗೊತ್ತಿಕೊಳ್ಳುತ್ತ.

'ನೀವು ಹಿರಿಯರು....ಪಾದವನ್ನು ಮುಟ್ಟಬಾರದು. ಸಮಾಧಾನ ಮಾಡಿಕೊಳ್ಳಿರಿ....'

'ಎಂತಹ ಹಿರಿತನ....! ಆಯುಷ್ಯದಲ್ಲಿ ಹಿರಿಯನು, ವಿವೇಕದಲ್ಲಿ ಹಿರಿಯನೇ....?' ವಿಷಾದದ ನಗೆ ನಕ್ಕು ಮತ್ತೆ ನುಡಿದ :

'ಹೇಳು ತಾಯಿ....ನನ್ನ ಪಾಪಕ್ಕೆ ಪರಿಹಾರ ಉಂಟೇ, ದೇವರಿಂದ ಕ್ಷಮೆ ಸಿಗಬಲ್ಲುದೆ ?'

'ಯಾವ ಪಾಪ ಹೇಳಿ ವಸಂತಕರೇ ?'

'ನನ್ನ ತಾಯಿಯನ್ನು ತಂದು ಕಾಮುಕನ ಕಾರಾಗೃಹದಲ್ಲಿರಿಸಿದ ಪಾಪ....' ವಸಂತಕ ಬಿಕ್ಕಿಬಿಕ್ಕಿ ಅತ್ತನು. ಮಹಾದೇವಿ ಮೌನತಾಳಿದಳು.

'ಹೊಟ್ಟೆಪಾಡಿಗಾಗಿ, ಉಪ್ಪುಂಡ ಋಣಕ್ಕಾಗಿ ನಿಮ್ಮಂತಹ ದೇವತೆಯನ್ನು ಪಂಜರದಲ್ಲಿ ಕೂಡಿಹಾಕಿಸಿದೆ. ಬಗೆಬಗೆಯ ಆಮಿಷ ಒಡ್ಡಿದೆ; ರಾಜದಂಡದ ಭೀತಿ ತೋರಿಸಿದೆ....ನಾನು ಮಾಡಿದ ಪಾಪಗಳು ಒಂದೇ ಎರಡೇ !'

'ನೀವು ನಿಮಿತ್ತಮಾತ್ರರು ವಸಂತಕರೇ : 'ಉಣಬೇಕೆಂದು ಬಂದ ಸುಖ ಉಂಡಲ್ಲದೆ ಅದರ ಗಂಟು ಕರಗದು, ಉಣಲೆಂದು ಬಂದ ದುಃಖ ಅನುಭವಿಸಿದಲ್ಲದೆ ಹರಿಯದು.' ಈ ವಿಧಿಯ ಕ್ರೂರ ಆಟದಲ್ಲಿ ನೀವು ನೆಪಮಾತ್ರರು. ಕತ್ತಿಯನ್ನು ಬೀಸಿ ನಿರಪರಾಧಿಯನ್ನು ಕೊಂದರೆ ಆ ಪಾಪ ಕತ್ತಿಗಲ್ಲ, ಬೀಸಿದವನಿಗೆ. ನೀವು ಆ ವಿಲಾಸಿ ರಾಜನ ಕೈಗೊಂಬೆಗಳು, ಆಯುಧಗಳು! ಆದ್ದರಿಂದ ನನ್ನ ತಾಪಕ್ಕಾಗಿ ನಿಮ್ಮನ್ನು ದೂಷಿಸಿ ಫಲವೇನು ? ದೇವರು ಕಡೆಗಣ್ಣಿಂದ ನೋಡದ ಹೊರತು, ಕೃಪಾದೃಷ್ಟಿ ಬೀರದ ವಿನಾ ನನ್ನ ತನುವಿಗೆ ಬಂದ ಈ ಕರ್ಮವು ಹರಿಯದು ನೋಡು ತಂದೆ'* ಶಾಂತಳಾಗಿ ಸಂತೈಸಿದಳು.

'ನೀವೆಂದು ಉಪವಾಸಾದಿಗಳನ್ನು ಕೈಗೊಂಡು ಬಳಲಿದಿರೋ, ಅಂದಿನಿಂದಲೂ ನನ್ನ ಮನದ ತಳಮಳ ತಪ್ಪಿಲ್ಲ....ನಿಮ್ಮ ಸೊರಗಿದ ಶರೀರವನ್ನು ಕಂಡು ಗರಗಸದಲ್ಲಿ ಹಾಯ್ದುಹೋಗುವ ಅನುಭವ ನನಗೆ.'

'ನನ್ನ ಮನದ ಸಂಕಲ್ಪವನ್ನು ದೃಢಪಡಿಸಿಕೊಳ್ಳುವ ಸಾಧನೆಯಿದು. ಇದಕ್ಕೆ ಯಾರೂ ಹೊಣೆಗಾರರಲ್ಲ. ನೀವೇನೂ ಕಳವಳಗೊಳ್ಳಬೇಡಿರಿ....!

* ಮ. ವ. ೧೬೩

ಪಂಜರದ ಬಾಗಿಲು ತೆಗೆಯದೆಂಬ ನಿರಾಶೆ ಮುಂದಿರುವಾಗ, ಈ ಶರೀರದ ಗೂಡಿನಿಂದ ಪ್ರಾಣಪಕ್ಷಿಯನ್ನು ಹಾರಿಬಿಡುವುದೊಂದೇ ಉಳಿದ ಪರಿಹಾರ ವಲ್ಲವೇ ವಸಂತಕರೇ ?....' ವಸಂತಕನ ಎದೆ ನಡುಗಿತು.

'ಬೇಡ ತಾಯಿ....ಆ ಪಾಪಕ್ಕೆ ನನ್ನನ್ನು ಹೊಣೆಮಾಡಬೇಡ....' ಕಂಪಿಸುವ ಧ್ವನಿಯಲ್ಲಿ ಉಸುರಿದ.

'ನೀವದಕ್ಕೆ ಹೊಣೆಗಾರರಲ್ಲ....! ನಿಮ್ಮ ಹೃದಯದ ಸರಳತನಕ್ಕೆ ಮಾರುಹೋಗಿ, ಎನ್ನ ಹೆತ್ತ ತಂದೆಯೆಂದು ನಂಬಿ ಮನವನ್ನು ಬಿಚ್ಚಿಡುತ್ತಿರುವೆ. ನನಗೀಗ ಇವೆರಡೇ ಹಾದಿಗಳು. ಕೇವಲ ಏಳೆಂಟು ದಿವಸಗಳ ಅವಧಿಯಲ್ಲಿ ಒಂದನ್ನಾದರೂ ಕಂಡುಕೊಳ್ಳಲೇಬೇಕು. ಪ್ರಸ್ತುತ ಕಾರಾಗೃಹದಿಂದ ಶಾರೀರಿಕವಾಗಿ ಬಿಡುಗಡೆಹೊಂದಿ ಶರಣರ ಸಂಗವನ್ನು ಸೇರಬೇಕು. ಈ ದೇಹದ ಒಂದು ಕಣವನ್ನು ಸಹ ಪುರುಷಾರ್ಪಿತ ಮಾಡಲಾರೆ, ಚೆನ್ನಮಲ್ಲಿಕಾರ್ಜುನನ ಮೀಸಲು ಕೆಡಿಸಲಾರೆ....ಇದು ಅವನಾಣೆಗೂ ಸತ್ಯ' ದೃಢ ಧ್ವನಿಯಲ್ಲಿ ನುಡಿದಳು. ವಸಂತಕ ಮೌನ ತಾಳಿ ಕುಳಿತ.

'ನಿಮ್ಮ ಬಂಧನದಲ್ಲಿ ಪ್ರಮುಖ ಪಾತ್ರ ವಹಿಸಿ ಪಾಪದ ಬುತ್ತಿಯನ್ನು ಕಟ್ಟಿಕೊಂಡ ನಾನು, ಬಿಡುಗಡೆಯಲ್ಲಿ ಸಹಾಯ ಸಲ್ಲಿಸಿ ಅದನ್ನು ಇಲ್ಲಿಯೇ ಕರಗಿಸಿಬಿಡುವೆ....ಇದು ಸತ್ಯ ; ನನ್ನನ್ನು ನಂಬು ತಾಯಿ. ನೀನು ಹೇಳಿದಂತೆ, ಒಂದು ದೃಷ್ಟಿಯಿಂದ ನೀನು ನನ್ನ ಮಗಳು. ಆದರೆ ನನ್ನ ದೃಷ್ಟಿಯಲ್ಲಿ ಅವಿವೇಕದ ಹಾದಿಯಿಂದ ಸುಜ್ಞಾನಕ್ಕೆ ಕರೆದೊಯ್ದ ಗುರುಮಾತೆ ನೀನು.... ಮುಂದಿನ ಮಾರ್ಗದ ಬಗೆಗೆ ಜೊತೆಗೇ ಆಲೋಚಿಸುವಾ....' ವಸಂತಕ ಹೇಳಿದ.

'ರಾಜನ ಕಣ್ಣು ತಪ್ಪಿಸಿ ಅಪರಾಧಿನಿಯಂತೆ ನಾನು ಅರಮನೆಯನ್ನು ಬಿಡಲಿಚ್ಛಿಸುವುದಿಲ್ಲ. ವಸಂತಕರೇ, ಅವನ ಎದುರಿಗೇ ಈ ಬಂಧನವನ್ನು ಬಿಡಿಸಿಕೊಂಡರೂ, ಅವನ ತಪ್ಪಿಗೆ ದರ್ಪಣ ನೀಡಿ ಹೋಗಬೇಕು. ಈಗಾಗಲೇ ಗುರು-ಲಿಂಗಪೂಜೆಗಳಿಗೆ ಅಡ್ಡಿಯಾಗಿ ಎರಡು ನೇಮಗಳನ್ನು ಮುರಿದಿರುವನು....ತಾವು ಹೀಗೆ ಮಾಡಿರಿ.

ನನ್ನ ವ್ರತ ಮುಗಿಯುವ ಕಡೆಯ ವಾರ ಪೂರ್ತಿ ಜಂಗಮದಾಸೋಹ ಮಾಡಬೇಕಾದುದು ನನ್ನ ಧರ್ಮವೆಂದು ಹೇಳಿ ಅದಕ್ಕೆ ಅವನನ್ನು ಒಪ್ಪಿಸಿರಿ. ಮಠದಿಂದ ಜಂಗಮರನ್ನು ಕರೆಸೋಣ. ಇದು ನನ್ನ ವಿಮೋಚನೆಗೆ ಸಹಾಯಕವಾಗಬಹುದು.'

'ಆಗಲಿ ತಾಯಿ....'

'ನಾಳೆ ಬಂದು ನಾನು ಎಲ್ಲರ ಸಂಗಡವಿದ್ದಾಗಲೇ ಕಾಣಿರಿ; ಈ ಬಗ್ಗೆ ಹೇಳುವೆ....' ವಸಂತಕ ಒಪ್ಪಿ ಮೇಲಕ್ಕೆದ್ದ.

'ತಾವಿನ್ನು ಅರಮನೆಗೆ ಧಾವಿಸಿರಿ. ಕತ್ತಲೆ ಬಹು ಗಾಢವಾಗಿದೆ. ಎಚ್ಚರಿಕೆಯಿಂದ ಹೋಗಿ ತಾಯಿ. ನಾನು ಕೆಲಕಾಲ ತಡೆದು ಬರೇವೆ.'

ಕಾಡಾರಣ್ಯದಲ್ಲಿ ಕಂಡ ಕಾಲುದಾರಿಯನ್ನು ನಂಬಿ ವಿಚಿತ್ರವಾದ ದಿಟ್ಟ ಹೆಜ್ಜೆಯಿರಿಸಿದ್ದ ಮಹಾದೇವಿ ಆ ಕಾಲುದಾರಿ ಭಯಾನಕ ಅರಣ್ಯದಲ್ಲೇ ಕೈಬಿಡುವುದೆಂದು ತಿಳಿದು ವಿಹ್ವಲಗೊಂಡಿದ್ದಳು. ಇಂತಹ ದುರ್ಧರಪ್ರಸಂಗದಲ್ಲೇ ಕಾರ್ಗತ್ತಲಲ್ಲಿ ಮಿಣುಕು ದೀಪವೊಂದು ದೂರದಲ್ಲಿ ಕಂಡಂತೆ; ದಟ್ಟವಾದ ಹುಲ್ಲಿನಿಂದ ಕಣ್ಮರೆಯಾಗಿ ಅವಳನ್ನು ಭಯಭೀತಳನ್ನಾಗಿ ಮಾಡಿದ್ದ ಕಾಲುದಾರಿ ಮತ್ತೆ ಅಸ್ಪಷ್ಟವಾಗಿ ಕಾಣತೊಡಗಿತು. ತನ್ನಂತರಂಗದಲ್ಲಿ ಹೊಳೆದ ಉಪಾಯ, ವಸಂತಕನ ಭರವಸೆ ಎದೆಯ ಭಾರವನ್ನು ಹಗುರಗೊಳಿಸಿದಾಗ ಧೈರ್ಯವು ಮೈಗೂಡಿತು. ಸಮಾಧಾನ ತಾಳಿ ಆಕೆ ಮೇಲೆದ್ದು, ತನಗಾಗಿ ಕಾಯುತ್ತಲಿದ್ದ ಶಿವಕಾಮಿನಿಯನ್ನು ಕೂಡಿಕೊಂಡು ಪ್ರಶಾಂತಭವನದತ್ತ ಹೆಜ್ಜೆ ಹಾಕಿದಳು.

* * *

ಕೌಶಿಕನು ತಳಮಳದಿಂದ ಶತಪಥ ಹೆಜ್ಜೆ ಹಾಕುತ್ತ, ಏಕಾಂಗಿಯಾಗಿ ಉದ್ಯಾನದಲ್ಲಿ ಸಂಚರಿಸುತ್ತಿದ್ದ. ಕುಳಿತರೂ, ನಿಂತರೂ ಸಮಾಧಾನವಿಲ್ಲ; ಮಲಗಿದರೆ ಕಣ್ತುಂಬ ನಿದ್ರೆಯಿಲ್ಲ. ಅವನ ಹೊಯ್ದಾಟಕ್ಕೆ ಕಾರಣ ಮಹಾದೇವಿಯ ನಿರ್ವಿಕಾರ ಸ್ಥಿತಿ. ಆಕೆ ಅರಮನೆಗೆ ಪಾದವಿರಿಸಿ ಮೂರು ವಾರಗಳ ಮೇಲಾಗಿದ್ದರೂ ಎಳ್ಳಷ್ಟೂ ಬದಲಾಗಿರಲಿಲ್ಲ. 'ಇಂದಲ್ಲ ನಾಳೆ ತನ್ನತ್ತ ಅವಳ ದೃಷ್ಟಿ ಹರಿದೀತು' ಎಂಬ ನಿರಂತರ ಭರವಸೆಯಿಂದ ಈ ಕಾಲವನ್ನು ತಳ್ಳುತ್ತ ಬಂದಿದ್ದಾಗಿತ್ತು. ಅವಳ ಶರೀರ—ಮನಸ್ಸುಗಳು ವಿರಹಜ್ವಾಲೆಯಲ್ಲಿ ಕುದಿಯುತ್ತ ಅವನನ್ನು ಹಣ್ಣು ಮಾಡಿದ್ದವು. ಇತ್ತೀಚೆಗಂತೂ ಆಸ್ಥಾನದ ಕಾರ್ಯಕಲಾಪಗಳಲ್ಲಿ ಆಸಕ್ತಿಯಿಲ್ಲ; ತನ್ನ ಪಟ್ಟದರಾಣಿ ಯಶೋಮತಿಯತ್ತ ಸಹ ಚಿತ್ತ ಹರಿಯುತ್ತಿರಲಿಲ್ಲ. ಮಹಾದೇವಿಯ ಬಗ್ಗೆ ವಿಲಕ್ಷಣವಾದ ಮೋಹ. ಅವಳು ತನ್ನನ್ನು ಅಷ್ಟೊಂದು ನಿರ್ಲಕ್ಷಿಸುತ್ತಿದ್ದರೂ ಅವನ ಅಂತರಂಗ ಆಕೆಯ ಒಲಿಮೆಗಾಗಿಯೇ ಬಯಸುವುದನ್ನು ಕಂಡು ಒಮ್ಮೊಮ್ಮೆ ಅವನಿಗೇ ಅಚ್ಚರಿ ಎನಿಸುತ್ತಿತ್ತು. ಒಂದು ದಿನ ನೇರವಾಗಿ ಕೇಳಿಯೇಬಿಟ್ಟಿದ್ದ. ಅಂದು ಮಹಾದೇವಿ ಸಂಜೆಯ ಹೂಬಿಸಿಲಿನಲ್ಲಿ ಉದ್ಯಾನದಲ್ಲಿದ್ದ ಕೊಳದ ಕಟ್ಟೆಯ ಮೇಲೆ ಕುಳಿತಿದ್ದಳು.

ಸದ್ದಾಗದಂತೆ ನಡೆದ ಕೌಶಿಕ ಹಿಂಬದಿಯಿಂದ ಬಂದು ಸನಿಹದಲ್ಲಿ ನಿಂತು 'ದೇವಿ' ಎಂದಾಗ ಬೆಚ್ಚಿ ಹಿಂದೆ ತಿರುಗಿದಳು. ಗಡಬಡಿಸಿಕೊಂಡು ಮೇಲೆದ್ದು ಅವನ ಬರವು ಅಪ್ರಿಯವಾಯಿತೇನೋ ಎಂಬಂತೆ ತೋರಿಕೆಯ ನಗುವನ್ನು ನಕ್ಕು ಪ್ರಶಾಂತಭವನದತ್ತ ಸಾಗಿದಳು. ಈ ಉದಾಸೀನತೆ ಅವನನ್ನು ಹಿಂಡಿ ಹಿಪ್ಪೆ ಮಾಡಿತು.

'ದೇವಿ....ಒಂದು ಕ್ಷಣ ನಿಲ್ಲು. ನನ್ನನ್ನು ಕಂಡರೆ ಇಷ್ಟೊಂದು ಉದಾಸೀನತೆ ಏಕೆ? ನಾನು ನಿಜಕ್ಕೂ ಅಷ್ಟೊಂದು ದುಷ್ಟನೇ, ಕ್ರೂರಿಯೇ, ಪಾಪಿಯೇ?' ನೇರವಾಗಿ ಕೇಳಿದ. ಮಹಾದೇವಿ ಮೌನವಾಗಿ ನಿಂತು ಆಲೋಚಿಸಿದಳು :

'ಅಲ್ಲದೆ ಏನು? ನನ್ನ ಪ್ರಾಣಪ್ರಿಯ ಚನ್ನಮಲ್ಲಿಕಾರ್ಜುನನ ಸದಾ ಸಂಗದಲ್ಲಿದ್ದವಳನ್ನು ಬೇರ್ಪಡಿಸಿ ತಂದ ದುಷ್ಟನಲ್ಲವೆ?"

ಮಹಾದೇವಿಯಿಂದ ಉತ್ತರ ಬಂದಿದ್ದನ್ನು ಕಂಡು ಪುನಃ ಹೇಳಿದ :

'ಐದು ವಾರಗಳ ವ್ರತದ ಅವಧಿ ಮುಗಿಯುವವರೆಗೆ ನಾನು ಕಟ್ಟುನಿಟ್ಟಿನಲ್ಲಿರುವೆ' ಎಂದು ನೀನು ಉತ್ತರಿಸಬಹುದು. ನಿನ್ನ ವ್ರತವನ್ನು ಸಮರ್ಪಕವಾಗಿ ಪೂರೈಸುವುದಾಗಿ ಮಾತು ಕೊಟ್ಟಿರುವೆ; ಕೊಟ್ಟ ಮಾತನ್ನು ಉಳಿಸಿಕೊಳ್ಳುವೆ. ಅಲ್ಲಿಯವರೆಗೆ ನಿನ್ನ ಸ್ಪರ್ಶ ಸಿಗದಿದ್ದರೆ ಹೋಗಲಿ ಒಂದು ಸಾಂತ್ವನಪೂರ್ಣ ಕುಡಿನೋಟ, ಪ್ರೇಮದ ಮಾತು, ಪ್ರಣಯಗೀತೆ— ಇಷ್ಟಾದರೂ ಬೇಡವೇ? ಇದರಿಂದಲಾದರೂ ವಿರಹತಪ್ತ ಮನ ಎಷ್ಟೋ ಶಮನಗೊಳ್ಳುವುದು.

ಕೇವಲ ಸೌಂದರ್ಯಕ್ಕಾಗಿ ಮಾರುಹೋಗಿ ಒತ್ತಾಯದಿಂದ ಕರೆತಂದುದು ನಿಜ. ಆದರೆ ಇಂದು ನಿನ್ನ ಕಾಯಸೌಂದರ್ಯಕ್ಕಿಂತ ಮಿಗಿಲಾಗಿ ಮನೋಸೌಂದರ್ಯಕ್ಕೆ ಮಾರುಹೋಗಿರುವೆ. ನಾನು ದುಷ್ಟನಾಗಿದ್ದರೆ ಬಲಾತ್ಕರಿಸದೇ ಇರುತ್ತಿದ್ದೆನೆ? ನೀನಾಗಿ ಒಲಿಯಲೆಂದು ತಾನೇ ಇಷ್ಟೆಲ್ಲ ಪ್ರಯತ್ನ. ಹೇಳು ....ನನ್ನಲ್ಲಿ ಯಾವ ಲೋಪವಿದೆ.'

'ಮಹಾರಾಜ....ನೀರಿನಲ್ಲಿ ಬದುಕಲೇ ಆರದ ಪ್ರಾಣಿಯನ್ನು ನೀರಲ್ಲಿ ಬಿಟ್ಟು, ನೀರೇನು ರಾಡಿಯಾಗಿದೆಯೆ? ತಿಳಿಯಾಗಿದೆಯಲ್ಲಾ, ಈಜಬಾರದೇ? ಎಂಬಂತಿದೆ ನಿಮ್ಮ ಪ್ರಶ್ನೆ.

ನೀರಲ್ಲಿ ಬದುಕಬಲ್ಲ ಪ್ರಾಣಿಯಾದರಷ್ಟೇ ರಾಡಿ ನೀರೋ, ತಿಳಿ ನೀರೋ ಎಂದು ಆಲೋಚಿಸಬಹುದು. ಹುಟ್ಟಿಸಾಯುವ ಮಾನವ ಎಂತಹ ಸದ್ಗುಣ ಸಂಪನ್ನನಿರಲಿ, ಸುಂದರನಿರಲಿ, ಆವನನ್ನು ನಾನೊಲ್ಲೆ. ಸಾಂಸಾರಿಕಜೀವನದ

ನೀರಲ್ಲಿ ಬದುಕಲೇ ಆರದ ಪಾರಮಾರ್ಥ ಜೀವವಿದು' ಎಂದು ಉತ್ತರಿಸಿ ಮಹಾದೇವಿ ನಿರ್ಗಮಿಸಿದ್ದಳು.

ಮಹಾದೇವಿಯ ಪರಿವರ್ತನೆ ಬಹು ಅಸಾಧ್ಯ ಎಂದು ಅರಿತಿದ್ದರೂ ಇನ್ನೂ ಅವನ ಮನಸ್ಸು ಪೂರ್ಣವಾಗಿ ನಿರಾಶೆಗೊಂಡಿರಲಿಲ್ಲ. 'ಇಂದಲ್ಲ, ನಾಳೆ' ಎಂಬ ಮೂಕಭರವಸೆಯಲ್ಲಿ ದಿನಗಳನ್ನು ನೂಂಕುತ್ತಿತ್ತು. ಹೀಗಿರುವಾಗಲೇ ಆಕೆಯ ಸದ್ಗುರುಗಳು ಬಂದುದು, ಅವರನ್ನು ಅಪಮಾನಿಸಿದ್ದುದನ್ನು ನೆನಪಿಸಿಕೊಂಡು ವಿಹ್ವಲನಾದ. ಯಾವುದೋ ದೌರ್ಬಲ್ಯಕ್ಕೆ ಈಡಾಗಿ ಹೀಗೆ ದುಡುಕುವ ತನ್ನ ವರ್ತನೆಗೆ ಒಮ್ಮೊಮ್ಮೆ ಅವನಿಗೇ ವ್ಯಥೆಯಾಗುತ್ತಿತ್ತು. ಸಾಧ್ಯವಾದಷ್ಟೂ ವಾತಾವರಣವನ್ನು ವಿಲಾಸಮಯವನ್ನಾಗಿ ಮಾಡಿ ಅವಳಂತರಂಗದ ವೈರಾಗ್ಯದಗ್ನಿಯನ್ನು ನಂದಿಸಬೇಕೆಂಬ ಉತ್ಕಟಪ್ರಯತ್ನದಲ್ಲಿ ತಾನಿದ್ದಾಗ, 'ಗುರುಗಳು ಬಂದು ಅವಳ ವಿರಕ್ತಿಯ ಜ್ವಾಲೆಯನ್ನು ಉಪದೇಶದ ಗಾಳಿ ಸೋಕಿ ತೀಕ್ಷ್ಣಗೊಳಿಸುವರಲ್ಲ; ಸಾಲದ್ದಕ್ಕೆ ಅನ್ಯ ವಿಲಾಸಿನಿಯರಿಗೂ ಅದನ್ನೇ ಬೋಧಿಸುವರಲ್ಲ' ಎಂಬುದು ಅವನನ್ನು ಅಷ್ಟು ಉದ್ರೇಕಿಸಿತ್ತು. ಆದರೆ ತಾನು ದುಡುಕಿದ್ದು ಅವಿವೇಕಯುಕ್ತವಾಯಿತು ಎನ್ನಿಸಿತು. ಅಂದಿನಿಂದ ಮಹಾದೇವಿಯ ಮುಖವನ್ನು ಸಹ ನೋಡಲು ಧೈರ್ಯವಾಗದೆ, ಮನಸ್ಸು ನೀರನ್ನು ಸ್ಪರ್ಶಿಸಿದ ಹೊಸ ಸುಣ್ಣದಂತೆ ಕೊತಕೊತ ಕುದಿಯುತ್ತಿತ್ತು.

ಮನಸ್ಸನ್ನು ಸಂತೈಸಲು ಇಂದು ಉದ್ಯಾನಕ್ಕೆ ಬಂದಿದ್ದ. ಹೊಂಬಿಸಿಲು ಕಳಾಯುಕ್ತವಾಗಿ ವನವನ್ನು ಬಳಸಿತ್ತು. ಅಂತಹ ರಮಣೀಯ ವಾತಾವರಣದಲ್ಲಿ ಮಹಾದೇವಿಯೊಡನೆ ಸರಸದ ಮಾತುಕತೆಯಾಡುತ್ತ ಉದ್ಯಾನದಲ್ಲಿ ಅಲೆಯಬೇಕೆಂದು ಒಳಮನ ಹುಚ್ಚುಹಿಡಿದು ಅಪೇಕ್ಷಿಸುತ್ತಿತ್ತು. ಆಕೆ ಒಪ್ಪಳು ಎಂಬುದು ತಿಳಿದಿದ್ದರೂ ಮನದ ಆದಮ್ಯ ಅಭೀಪ್ಸೆಯನ್ನು ಹತ್ತಿಕ್ಕಲಾರದೆ ಸೇವಕರನ್ನು ಕರೆದು, 'ದೇವಿಯರನ್ನು ಇಲ್ಲಿಗೆ ಬರಹೇಳು' ಎಂದು ಅಧಿಕಾರವಾಣಿಯಲ್ಲಿ ನಿರೂಪ ಕಳಿಸಿದ. ಮಹಾದೇವಿ ಮಿಂದು ಪೂಜೆಗೆಂದು ಕೋಣೆಯೊಳಗೆ ಕಾಲಿರಿಸುವಾಗಲೇ ರಾಜನಿಂದ ದೂತನೊಬ್ಬ ಬಂದು ರಾಜನಿರೂಪವನ್ನು ಅರುಹಿದ. ಮಹಾದೇವಿ ಮುಗುಳ್ನಕ್ಕು,

'ಶಿವಕಾಮಿನಿ, ಪ್ರಭುಗಳಿಗೆ ಮನ್ನಿಸಲು ಹೇಳು. ಇದೀಗ ಮಿಂದು ಪೂಜೆಗೆ ಹೊರಟಿರುವೆ' ಎಂದು ಕೋಣೆಯೊಳಕ್ಕೆ ಸಾಗಿ ಕದವಿಕ್ಕಿಕೊಂಡಳು. ಶಿವಕಾಮಿನಿ ಬಂದು ಉಸುರಿ, ತನ್ನ ...

'ಇವಳಿಗೆಂತಹ ಸೊಕ್ಕು ; ರಾಜನಾದ ನಾನು ನಿರೂಪ ಕಳಿಸಿದರೂ ಬೆಲೆಗೊಡುವ ಸೌಜನ್ಯವಿಲ್ಲವಲ್ಲವೆ ?....' ಅವನ ಸ್ವಾಭಿಮಾನ ತಲೆಯೆತ್ತಿ ಪ್ರಶ್ನಿಸಿತು.

'ನಿಜ....ನಿನ್ನ ಹೇಡಿತನದಿಂದಲೇ ಅವಳ ಸೊಕ್ಕು ಮಿತಿಮೀರಿರುವುದು. ಛೀ....ಒಬ್ಬ ಅಬಲೆಯಾದ ಹೆಣ್ಣನ್ನು ಮಣಿಸಲಾರದ ಷಂಡ" ದುರ್ಬಲ ಮನಸ್ಸು ಹೀಯಾಳಿಸಿತು.

'ಅಹುದು, ನಾನೇಕೆ ಇಷ್ಟು ದುರ್ಬಲನಾಗಿರುವೆ ? ಎಂತೆಂತಹ ದುರ್ಧರ ಕಷ್ಟಗಳನ್ನು ಧೈರ್ಯವಂತಿಕೆಯಿಂದ ಎದುರಿಸುವ ನಾನು, ಇವಳನ್ನೇಕೆ ವಶಪಡಿಸಿಕೊಳ್ಳಲಾಗುತ್ತಿಲ್ಲ. ಇಷ್ಟು ಸಮೀಪವಲಯದಲ್ಲಿ, ಅರಮನೆಯ ಗೃಹಬಂಧನದಲ್ಲಿರುವ ತರುಣಿಯೋರ್ವಳನ್ನು ಮಣಿಸಲಾರೆನೆ ? ಇದು ನಿಜಕ್ಕೂ ಹೇಡಿತನ. ಆಕೆಯ ಸಹಾಯಕ್ಕೆ ಒಬ್ಬರಿಲ್ಲ ; ಕೂಗಿದರೆ ಓಗೊಡುವ ನರಪ್ರಾಣಿ ಬೆಂಬಲಕ್ಕಿಲ್ಲ. ಅಂದಾಗ ಒತ್ತಾಯಿಸಿದರೇನಾದೀತು ?....' ಕೌಶಿಕನು ವಿಚಿತ್ರ ಧೈರ್ಯ-ಆವೇಶಗಳಿಂದ ಅರಮನೆಯತ್ತ ಹೆಜ್ಜೆ ಹಾಕತೊಡಗಿದ.

'ಆದರೆ ಅಂದು ಆಕೆ ಹೇಳಿದುದು ನೆನಪಿದೆಯೆ ? ಬಲಾತ್ಕರಿಸಿದರೆ ನಾನು ಜೀವಂತ ಉಳಿಯಲಾರೆ ಎಂಬ ಮಾತು ಜ್ಞಾಪಕದಲ್ಲಿಲ್ಲವೆ ? ನೀನು ಪಶುವಾಗಿ ಸಾಗಿ ಬಲಾತ್ಕರಿಸಿದರೆ ಅನಂತರ ಆಕೆ ಆತ್ಮಹತ್ಯೆ ಮಾಡಿಕೊಂಡರೆ....?' ವಿವೇಕವು ನೆನಪಿಸಿ, ಎಚ್ಚರಿಸಿತು. ಕೌಶಿಕನ ಆವೇಶ ಇಳಿದು, ಮೈಯೆಲ್ಲ ತಣ್ಣಗಾಗಿ, ಕೈಕಾಲು ನಡುಗಿದವು.

'ಮಹಾದೇವಿ....ನಿನ್ನ ದುರಂತವನ್ನು ನೋಡಲಾರೆ. ಅಮೃತಶಿಲೆಯ ಪುತ್ಥಳಿಯಾದ ನೀನು, ಸೌಂದರ್ಯವಾರಾಶಿಯಾದ ನಿನ್ನ ಕಾಯ, ಆತ್ಮಹತ್ಯೆಯಿಂದ ವಿರೂಪಗೊಂಡು, ಇನ್ನಿಲ್ಲವಾಗುವುದನ್ನು ನಾನು ಈ ಕಣ್ಣಾರೆ ಕಾಣಲಾರೆ. ನಾನು ಕಾಮಿ ನಿಜ ; ಆದರೆ ಕೊಲೆಪಾತಕಿಯಲ್ಲ. ನಾನು ದುರ್ಬಲನೇನೋ ಅಹುದು, ಆದರೆ ದೌರ್ಜನ್ಯ ಮಾಡುವಷ್ಟು ಪಶುವಲ್ಲ. ನಾನಿಂತು ಮುಂದುವರಿಯಲಾರೆ ದೇವಿ....ನಿನ್ನ ಮನವೊಲಿದಾಗ ಒಲಿಸಿಕೊಳ್ಳುವೆ.

ನಿನ್ನನ್ನು ನನ್ನ ಹೃದಯಮಂದಿರದ ಅಧಿದೇವತೆಯನ್ನಾಗಿ ಮಾಡಿಕೊಳ್ಳಲು ನಾನು ಒತ್ತಾಯದಿಂದ ಕರೆತಂದೆ ನಿಜ ; ಆದರೆ ಕರುಣಾಜನಕ ಸಾವನ್ನಪ್ಪಲು ಅಲ್ಲ....' ಶಿಲಾಸನದಮೇಲೆ ಕುಳಿತ ಕೌಶಿಕನ ಕಣ್ಣಿನಿಂದ ಒಂದೆರಡು ಹನಿ ನೀರು ತುಳುಕಿದವು.

'ಥೂ, ದುರ್ಬಲನೇ ; ಹೇಡಿತನವನ್ನು ಮುಚ್ಚಿಕೊಳ್ಳಲು ಈ ಕಾರುಣ್ಯದ

ಳಾಗಿ, ಕಾಲಕಸವಾಗಿ, ಸೊಂಟ ಮುರಿದ ಸಿಂಹದಂತೆ ಮೆತ್ತಗಾಗುವಳು....' ಅಹಂಕಾರ ಚುಚ್ಚಿ ಪ್ರಚೋದಿಸಿತು.

'ಇಲ್ಲ, ಅವಳು ಹಟಮಾರಿ....ಇಟ್ಟ ಹೆಜ್ಜೆ ಹಿಂತೆಗೆಯದಷ್ಟು ಛಲವಾದಿನಿ. ಅಂಥ ಪ್ರಸಂಗ ಬಂದರೆ ಪ್ರಾಣ ಕಳೆದುಕೊಳ್ಳುವಷ್ಟು ಸ್ವಾಭಿಮಾನಿ.' ವಿವೇಕವು ಬುದ್ಧಿ ಹೇಳಿತು.

'ಇರಲಿ....ಇನ್ನೆಷ್ಟು ದಿವಸಕಾಲ! ಅವಳ ವ್ರತವು ಮುಗಿವ ಗಡುವು ಸನಿಹಕ್ಕೆ ಸಾರುತ್ತಿದೆ. ಇಟ್ಟ ಅಡಿಯನ್ನು ಹಿಂತೆಗೆಯದಷ್ಟು ಛಲಗಾತಿಯಾದಂತೆ ಕೊಟ್ಟ ಮಾತನ್ನು ಆಕೆ ಮೀರಲಾರದ ತತ್ತ್ವನಿಷ್ಠಳೂ ಅಹುದು. ಅವಳ ವ್ರತವು ಪೂರೈಸಲಿ. ಆ ಬಳಿಕ ಅವಳು ನನ್ನವಳೇ ತಾನೇ....' ಕೌಶಿಕ ಮನಸ್ಸಿಗೆ ಸಮಾಧಾನ ತುಂಬಿದ.

'ಅಲ್ಲಿಯವರೆಗೆ ಮದನನ ಕಾಟ ತಡೆಯಲಾರೆ. ರಾಣಿ ಯಶೋಮತಿಯನ್ನಾದರೂ ಕಂಡುಬರುವೆ....ಮಹಾದೇವಿಯು ಅರಮನೆಗೆ ಕಾಲಿರಿಸಿದಾಗಿನಿಂದ ಯಶೋಮತಿಯು ನೆನಪೇ ಚಿತ್ತರಂಗದಿಂದ ಮಾಯವಾಗಿದೆ. ಉದ್ವಿಗ್ನಗೊಂಡ ಶರೀರ-ಮನಗಳು ಸ್ವಲ್ಪವಾದರೂ ಶಾಂತಗೊಳ್ಳಬಹುದು.' ನಿರ್ಧರಿಸಿಕೊಂಡ ಕೌಶಿಕ ತನ್ನ ನಿವಾಸಕ್ಕೆ ಬಂದು, ತನ್ನ ಬರವಿನ ಸುದ್ದಿಯನ್ನು ಮುಂದಾಗಿಯೇ ಕಳಿಸಿ, ಹದವಾಗಿ ಶೃಂಗರಿಸಿಕೊಂಡು ಸಾಗಿದ.

ಮೂರು ವಾರಗಳಿಂದಲೂ ಇತ್ತ ಬರದೇ ಇದ್ದ ರಾಜನು ಇಂದು ಬರುವನೆಂಬ ಸುದ್ದಿ ಕೇಳಿ ಯಶೋಮತಿಯು ಉತ್ಸಾಹ ಮೇರೆಮೀರಿಯಿತು. ಹೊಸ ಅರಸಿಯು ಬಂದ ಬಳಿಕ ತನ್ನನ್ನಿನ್ನು ಕಣ್ಣೆತ್ತಿಯೂ ನೋಡನೇನೋ ಎಂಬ ಕಲ್ಪನೆ ಅವಳನ್ನು ಹತಾಶಳನ್ನಾಗಿ ಮಾಡಿತ್ತು. ತ್ವರೆಯಿಂದ ಪರಿಮಳ ದ್ರವ್ಯವನ್ನು ಅಂಗಕ್ಕೆ ಲೇಪಿಸಿಕೊಂಡು, ಸುಂದರವಾಗಿ ಕೇಶಾಲಂಕಾರ ಮಾಡಿಕೊಂಡಳು. ಗಮಗಮಿಸುವ ಮಲ್ಲಿಗೆಯ ದಂಡೆಯನ್ನು ಮುಡಿಗೆ ಧರಿಸಿ, ತೆಳುವಾದ ಪೀತಾಂಬರವನ್ನು ಮೈಗೆ ಸುತ್ತಿಕೊಂಡಳು. ಕಣ್ಣು ರೆಪ್ಪೆಗಳಿಗೆ ಕಾಡಿಗೆಯನ್ನು ತೀಡಿ, ಮುಖಕ್ಕೆ ತಿಗುರನ್ನು ಸವರಿ, ಹಣೆಗೆ ಸುವರ್ಣ ಬಣ್ಣದ ತಿಲಕವನ್ನಿರಿಸಿ, ತಾಂಬೂಲವನ್ನು ಮೆದ್ದು ತುಟಿಗೆ ಕೆಂಬಣ್ಣವನ್ನು ನಾಲಿಗೆಯಿಂದ ಸವರಿಕೊಂಡಳು.

ಅತ್ಯಂತ ಕಾತುರಳಾಗಿ ರಾಜನ ಬರವನ್ನು ನಿರೀಕ್ಷಿಸುತ್ತ ಬಾಗಿಲಲ್ಲಿ ನಿಂತಿರುವಾಗಲೇ ಕೌಶಿಕನು ಒಳಬಂದ. ಆಕೆ ಪ್ರಸನ್ನಮುಖಿಯಾಗಿ ರಾಜನ ಕೈಹಿಡಿದು ಸ್ವಾಗತಿಸಿ ಕರೆದೊಯ್ದಳು. ಮುಗುಳ್ನಗೆಯ ಹೂವನ್ನೆರಚುತ್ತ ಕೇಳಿದಳು :

‘ಪ್ರಭುಗಳು ಈ ಬಡದಾಸಿಯನ್ನು ಮರೆತೇಬಿಟ್ಟಿರುವರು.’

‘ರಾಜಕಾರಣದ ಒತ್ತಡದಲ್ಲಿ ಬಿಡುವೇ ಆಗಲಿಲ್ಲ ದೇವಿ....’ ಕೌಶಿಕ ಉದಾಸೀನನಾಗಿಯೇ ಹೇಳಿದ. ಆ ರಾಜಕಾರಣದ ಮರ್ಮವನ್ನು ಆಕೆಯೂ ಬಲ್ಲಳು. ಕೌಶಿಕ ಪಲ್ಲಂಗದ ಮೇಲೆ ಕುಳಿತು ಪತ್ನಿಯನ್ನು ದಿಟ್ಟಿಸಿದ.

‘ಅವಳ ಚೆಲುವಿನ ಮುಂದೆ ಈಕೆಯದೇನು! ಆ ಸರಳತೆ, ಮುಗ್ಧತೆಗಳ ಸಂಗಮವಾದ ನವವಿಕಸಿತ ಕುಸುಮವದು! ಅದು ಶುಭ್ರ ನೀಲಾಗಸದಲ್ಲಿ ತೇಲುವ ಹುಣ್ಣಿಮೆಯ ಚಂದಿರ, ಇದು ಮಜ್ಜಿಗೆಯಲ್ಲಿ ತೇಲುವ ಬೆಣ್ಣೆಯುಂಡೆ. ಅದು ಶ್ರೀಗಂಧ ವೃಕ್ಷ; ಇದು ಕಾಡುಮರ. ಇವಳ ಕಾಡಿಗೆಯನ್ನು ಹಚ್ಚಿದ ಕಣ್ಣೆವೆಗಳಿಗಿಂತಲೂ ಆ ಅಕೃತ್ರಿಮ ಎವೆಗಳು ಇನ್ನೂ ಕಪ್ಪು. ತಾಂಬೂಲವನ್ನು ಮೆದ್ದು ಸವರಿಕೊಂಡ ಈ ತುಟಿಗಳಿಗಿಂತಲೂ ಅವು ಸಹಜವಾಗಿಯೇ ಎಷ್ಟು ಕೆಂಪಾಗಿಲ್ಲವೆ? ಎಷ್ಟೊಂದು ಬಗೆಯ ಪರಿಮಳದ್ರವ್ಯಗಳನ್ನು ಸವರುವ ಈ ಶರೀರಕ್ಕಿಂತಲೂ ಕೇವಲ ವಿಭೂತಿಯ ಅನುಲೇಪನದ ಆ ಕಾಯ ಬಹು ಆಕರ್ಷಣೀಯ. ಅಡಿಯಿಂದ ಮುಡಿಯವರೆಗೆ ಆಭರಣಗಳನ್ನು ಧರಿಸಿಕೊಂಡ ಈಕೆಗಿಂತಲೂ ಒಂದು ಗುಂಜಿ ತೂಕದಷ್ಟೂ ಬಂಗಾರ ಹೊರದ ಆಕೆ ಅದೆಷ್ಟು ಸುಂದರಿ.’ ಆಲೋಚನಾತರಂಗಗಳು ಗರಗರನೆ ಸುತ್ತತೊಡಗಿದವು.

‘ನಿಜ, ಆದರೆ ಆಕೆ ಆಕಾಶದ ಮಾವಿನಹಣ್ಣು; ಕೊಯ್ಯಲೂ ಸಾಧ್ಯವಿಲ್ಲ, ಮೆಲ್ಲಲೂ ಸಾಧ್ಯವಿಲ್ಲ. ಬಿಸಿಲ ಮರೀಚಿಕೆಯಂತೆ ಬಾಯಾರಿಕೆಯನ್ನು ತಣಿಸಲು. ಯಶೋಮತಿ ವಿನಯಶಾಲಿನಿ, ನಿನ್ನ ಕಾರುಣ್ಯಕಟಾಕ್ಷಕ್ಕೆ ಹಾತೊರೆಯುವ ಧರ್ಮಪತ್ನಿ; ನಿನ್ನಾಜ್ಞೆಯನ್ನು ಧಿಃಕ್ಕರಿಸುವ ಸೊಕ್ಕಿನ ಹೆಣ್ಣಲ್ಲ, ನೀನು ಪಾದದಲ್ಲಿ ಮುಟ್ಟಿದುದನ್ನು ತಲೆಯಮೇಲೆ ಹೊರುವಳು....’ ಮನಸ್ಸು ಸಂತೈಸಿ ತಿಳಿಹೇಳಿತು.

‘ಆದರೆ....ಅವಳ ಮುಂದೆ ಇವಳೇನು? ಕೋಗಿಲೆಯ ಮುಂದೆ ಕಾಗೆ ಇದ್ದಂತೆ, ಹಂಸೆಯ ಎದುರಿಗೆ ನೀರ್ಗೋಳಿ ಇದ್ದಂತೆ.’ ಕೌಶಿಕ ಪತ್ನಿಯತ್ತ ತಿರಸ್ಕಾರದ ದೃಷ್ಟಿ ಬೀರಿದ. ಆ ನೋಟವನ್ನು ಕಂಡು ಯಶೋಮತಿಯ ಹೃದಯ ನಡುಗಿ, ಮೆಲ್ಲನೆ ಧೈರ್ಯ ತಂದುಕೊಂಡು ಕೇಳಿದಳು :

‘ಏಕೆ ಪ್ರಭುಗಳಿಗೆ ಸ್ವಾಸ್ಥ್ಯವಿಲ್ಲವೇ? ಅನ್ಯಮನಸ್ಕರಾಗಿರುವಿರಿ.’

‘ಹಾಂ....ಇಲ್ಲ....ವಿಪರೀತ ತಲೆನೋವು.’

‘ಹಾಗಾದರೆ ಕೇಸರಿಮಿಶ್ರಿತ ಬಿಸಿ ಹಾಲನ್ನಾದರೂ ಕೊಡುವೆ. ದಣಿವಾರಿಸಿಕೊಳ್ಳಿರಿ....’ ಎಂದು ಪತಿಯ ಮನಸ್ಸನ್ನು ಸೆಳೆವ ಉದ್ದೇಶ ಹೊಂದಿ

ಅಂದುಕೊಂಡ :

'ಅವಳ ಗಂಭೀರ ನಡಿಗೆಯ ಮುಂದೆ ಇವಳ ಒಯ್ಯಾರ ನಿಜಕ್ಕೂ ಕಾಂತಿಹೀನ. ಹೋಳಿಗೆಯು ಹೆಂಚಿನ ಮೇಲೆ ಬೇಯುತ್ತಲಿರುವಾಗ ತಡವಾದೀತೆಂದು ಒಣಕಲು ತಂಗಳ ಕಜ್ಜಾಯವನ್ನು ತಿನ್ನಲಾದೀತೆ? ಕಾಯ್ದರೂ ಚಿಂತೆಯಿಲ್ಲ ಆಕೆಯೇ ಬೇಕು' ಕೌಶಿಕನ ಸ್ವಾಭಿಮಾನ ತಲೆಯೆತ್ತಿ ಬಯಸಿತು. ಯಶೋಮತಿ ಮರಳುವುದರಲ್ಲೇ ಎದ್ದು ಹೊರಟ. ಅರಮನೆಯ ಪ್ರಾಂಗಣವನ್ನು ದಾಟಿ ಸಾಗುವಾಗ ಯಶೋಮತಿ 'ಪ್ರಭು....' ಎಂದು ಅಂತಃಕರಣ ಮಿಡಿಯುವಂತೆ ಕೂಗಿದರೂ ಕೇಳದಷ್ಟು ಕಿವುಡನಾಗಿ ಏಕಾಂತಭವನದತ್ತ ಸಾಗಿದ.

ನಿರಾಶೆ, ದೌರ್ಬಲ್ಯ, ಅಪೇಕ್ಷೆಗಳ ತಾಕಲಾಟದಲ್ಲಿ ಸಿಕ್ಕ ರಾಜನು ಓಡುವ ಕುದುರೆಗಳ ಕಾಲ್ತುಳಿತಕ್ಕೆ ಸಿಕ್ಕವನಂತೆ ಜರ್ಜರಿತನಾಗಿ, 'ಆ ಸುರೆಯನ್ನು ತಂದಿಡಿ' ಎಂದು ಅಬ್ಬರಿಸಿದ. ಗೊಂದಲಮಯ ರಣರಂಗದಮೇಲೆ ಕತ್ತಲೆ ತನ್ನ ತೆರೆಯನ್ನು ಕವುಚಿ ಭೀಕರ ದೃಶ್ಯಗಳನ್ನು ಮರೆಮಾಡುವಂತೆ, ಸುರೆಯು ಹೊಯ್ದಾಡುವ ಮನ-ಬುದ್ಧಿಗಳೆಲ್ಲವನ್ನು ಮಂಕುಮಾಡಿ ಅವನನ್ನು ತನ್ನ ಹಿಡಿತದಲ್ಲಿ ಆಲಂಗಿಸಿಕೊಂಡಿತು.

* * *

ವಸಂತಕನು ಬೆಳಗಾದ ಸ್ವಲ್ಪ ಹೊತ್ತಿನಲ್ಲಿ ಕೌಶಿಕನನ್ನರಸಿಕೊಂಡು ಏಕಾಂತಭವನಕ್ಕೆ ಬಂದ. ಕೌಶಿಕನ ಮುಖವು ಹಡಪಿಗನ ಕತ್ತಿಯ ಸ್ನೇಹವಿಲ್ಲದೆ ಕೂದಲಿನಿಂದ ತುಂಬಿ ಕಳಾಹೀನವಾಗಿ ಕುರುಚಲು ಗಿಡದ ಕಲ್ಲುಗುಡ್ಡದಂತೆ ಕಾಣುತ್ತಿದ್ದು, ಸುರಾಪಾನದಿಂದ ಉನ್ಮತ್ತನಾಗಿ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ. ವಸಂತಕನು ಬಂದಾಗ ರಾಜನ ಆಪ್ತ ಸೇವಕಿ ನುಡಿದಳು: 'ರಾಜರು ಯಾರನ್ನೂ ನೋಡಬಯಸರು.'

'ವಸಂತಕನು ಬಂದಿರುವನೆಂದು ಅರುಹು....'

ಸೇವಕಿ ತಿಳಿಸಿದಾಗ ಕೌಶಿಕ ಮಬ್ಬಿನಲ್ಲೇ ಆಲಿಸಿ, 'ಬರಲು ಹೇಳು' ಎಂದು ತೊದಲಿ ನುಡಿದ. ವಸಂತಕನು ಒಳಗೆ ಹೋದಾಗ ಅವನಿಗೆ ಮರುಕದ ಬದಲು ಜಿಗುಪ್ಸೆ ಎನಿಸಿತು. 'ವಿಲಾಸ, ವೈಭೋಗಗಳು ಮನುಷ್ಯ ಜೀವನದ ಆತ್ಯಂತಿಕ ಸುಖಗಳು' ಎಂದು ತಿಳಿದಿದ್ದ ವಸಂತಕನಿಗೆ ಆ ಭ್ರಮೆಯ ನಿರಸನವಾಗಿ, ಸಂಯಮ-ಸರಳತೆಗಳೇ ಆದರ್ಶಗಳು ಎಂದು ಮನವರಿಕೆಯಾಗಿತ್ತು.

'ಸುರಾಪಾನ-ಸ್ತ್ರೀಲೋಲುಪತೆಯ ಕೆಸರಿನಲ್ಲಿ ಸಿಕ್ಕಿಬಿದ್ದ ನೀನೆಲ್ಲಿ, ಧ್ಯಾನ-

ಸಿಡಿಲನ್ನು ಕಟ್ಟಿಹಾಕುವೆ ಎಂಬ ಶಪಥ ತೊಟ್ಟಂತೆ, ಅರಗಿನ ಪುತ್ಥಳಿ ಉರಿಯ ಅರಿಯನ್ನು ನಂದಿಸಿಬಿಡುವೆನೆಂಬ ಪ್ರತಿಜ್ಞೆಯನ್ನು ಮಾಡಿದಂತೆ ಆಕೆಯನ್ನು ಪತನಿಸುವ ನಿನ್ನ ಪ್ರಯತ್ನ!....' ಆಲೋಚಿಸುತ್ತ ಮೌನವಾಗಿ ನಿಂತ ವಸಂತಕ.

'ಬಾ....ಮಿತ್ರ....ಏಕೆ ಹಾಗೆ ನಿಂತುಬಿಟ್ಟೆ?' ಕೌಶಿಕ ಮಾತನಾಡಿಸಿದ.

'ಪ್ರಭುಗಳಿಗೆ ನಮಸ್ಕಾರ!....ತಮ್ಮ ಚಿಂತಾಕ್ರಾಂತ ಮುಖವನ್ನು ನೋಡಿ ವ್ಯಥೆಯಾಯಿತು. ಎಷ್ಟೊಂದು ಇಳಿದುಹೋಗಿರುವಿರಲ್ಲ ಎಂದು ಸ್ತಂಭೀಭೂತನಾಗಿ ನಿಂತೆ....' ವಸಂತಕ ಖಿನ್ನತೆ ತೋರಿ ಹೇಳಿದ.

'ಮಿತ್ರಾ....ವಿರಹದಲ್ಲಿ ದಹಿಸಿಹೋಗುತ್ತಲಿರುವೆ. ನೀರಿಲ್ಲದೆ ಒಣಗುವ ಸಸಿಯು ಜಲಧಾರೆಗಾಗಿ ಬಾಯ್ಬಿಡುವಂತೆ, ಸ್ತ್ರೀಸೌಖ್ಯಕ್ಕಾಗಿ ಅಂಗಾಂಗಗಳು ತಪಿಸುತ್ತಿವೆ. ಗೆಳೆಯಾ, ಈ ತಾಪವನ್ನು ತಾಳಲಾರದೆ ಸುರಾಂಗನೆಯ ಮರೆಹೊಕ್ಕಿರುವೆ....' ಕೌಶಿಕ ಇನ್ನೂ ಕುಡಿತದ ಮಬ್ಬಿನಲ್ಲೇ ಇದ್ದ.

'ಪ್ರಭು....ಅಂತಃಪುರದಲ್ಲಿ ಹೆಣ್ಣುಗಳಿಗೇನು ಕೊರತೆ....' ಮೆಲುನಗೆ ನಕ್ಕ ವಸಂತಕ.

'ನೆಲುವಿನ ಮೇಲೆ ಗೋಧಿಯ ಹುಗ್ಗಿ ಇರುವಾಗ ಎದುರಲ್ಲಿರುವ ತಳಿಗೆಯ ಮುದ್ದೆಯನ್ನು ಯಾರು ಉಣ್ಣಬೇಕು ಗೆಳೆಯಾ....!'

'ಹುಗ್ಗಿಯು ಕೈಗೆ ಸಿಗದಿರುವಾಗ ಮುದ್ದೆಯಲ್ಲೇ ಸಮಾಧಾನ ಹೊಂದುವುದು ಯುಕ್ತವಲ್ಲವೇ ಪ್ರಭು....?' ಎಂದು ವಸಂತಕ ಹೇಳಿ, 'ಅದು ಹುಗ್ಗಿಯಲ್ಲ....ಸುಡುವ ಜ್ವಾಲೆ....' ಎಂದು ಮನದಲ್ಲಿ ಅಂದುಕೊಂಡ.

'ಗೆಳೆಯಾ....ಅವಳ ದೃಷ್ಟಿಕೂಟವಿಲ್ಲದೆ ನಾಲ್ಕಾರು ದಿವಸಗಳಾದವು. ಅವಳನ್ನು ಕಣ್ಣೆತ್ತಿ ನೋಡುವ ಧೈರ್ಯವಿಲ್ಲವಾಗಿದೆ. ಆದರೆ ಅಂತರಂಗದಲ್ಲೇ ಸುಣ್ಣದಂತೆ ಕುದಿಯುತ್ತಿರುವೆ. ಅಂದು ಅವಳ ಗುರುಗಳು ಆಗಮಿಸಿದಾಗ ಆವೇಶದಲ್ಲಿ ಅಪಮಾನಿಸಿ ಕಳಿಸಿಬಿಟ್ಟೆ; ಆದರೆ ಈಗ ಇಂಗು ತಿಂದ ಮಂಗನಾಗಿರುವೆ;....ಅವಳು ಏನು ತಿಳಿದುಕೊಂಡಿರುವಳೋ ಏನೊ....'

'ಆದರೆ....ಪ್ರಭುಗಳು ಏಕೋ ಬರಲೇ ಇಲ್ಲ ಎಂದು ಅನ್ನುತ್ತಿದ್ದರು....' ವಸಂತಕ ಜಾಣ್ಮೆಯಿಂದ ನುಡಿದ.

'ಅಹುದೇ, ಹಾಗೆ ಕೇಳಿದಳೇ?' ತಟ್ಟನೆದ್ದು ಕುಳಿತ ಹಾಸುಗೆಯಮೇಲೆ.

'ಹಾಗಾದರವಳು ಕ್ರೋಧತಪ್ತಳಾಗಿಲ್ಲವೆ?....' ಆಶ್ಚರ್ಯದಿಂದ ಕೇಳಿದ.

ಸಿಟ್ಟಿಲ್ಲ ಎಷ್ಟು ಹೊತ್ತಿನದು ಪ್ರಭು !....ಅದು ನೀರ ಮೇಲಿನ ಗುರುಳೆಯಂತೆ ; ಬರುವುದೂ ತಡವಿಲ್ಲ, ಸಿಡಿಯುವುದೂ ತಡವಿಲ್ಲ. ಅದಕ್ಕೆಂದೇ ನಾನು ತಮ್ಮನ್ನು ನೋಡಿಹೋಗಲು ಬಂದುದು....'

'ಇದು ನಿಜವೇ....ಅಥವಾ ನನ್ನ ಕಣ್ಣು ಕಿವಿಗಳು ಮೋಸ ಮಾಡು ತ್ತಿವೆಯೇ ?' ಅತಿ ಉತ್ಸಾಹವನ್ನು ಮೈಗೂಡಿಸಿಕೊಂಡು ಕೇಳಿದ.

'ಇನ್ನವರ ವ್ರತದ ಮುಕ್ತಾಯದ ಗಡುವು ಸಮೀಪಿಸಿದೆ ; ಎಳೆಂಟು ದಿವಸ ಗಳಷ್ಟೆ ! ಅದು ಮುಗಿಯಲೆಂದು ಅವರೂ ನಿಮ್ಮಷ್ಟೆ ಕಾತುರರಾಗಿದ್ದಾರೆ....'

'ವಸಂತಕಾ....ಇಂತಹ ಸುದ್ದಿ ತಂದ ನಿನಗೆ ಏನು ಕೊಡಲಿ ? ಮಿತ್ರಾ, ನನ್ನ ಪ್ರಾಣಪ್ರಿಯ ಸಖ ನೀನು....' ಕೌಶಿಕನು ವಸಂತಕನ ಕೈಹಿಡಿದು ಪಲ್ಲಂಗದಮೇಲೆ ಕುಳ್ಳಿರಿಸಿಕೊಂಡ.

'ಆ ವ್ರತದ ಕೊನೆಯ ವಾರದಲ್ಲಿ ಅವರ ಧರ್ಮದ ಪ್ರಕಾರ ಜಂಗಮ ದಾಸೋಹವನ್ನು ಮಾಡಬೇಕಂತೆ ; ಇಲ್ಲವಾದರೆ ವ್ರತ ಫಲಿಸದು....' ವಸಂತಕ ನುಡಿದ.

'ಆಗಲಿ....ಬಹು ಸಂತೋಷ....ಅವಳು ಸಂತೃಪ್ತಳಾದರೆ ಸಾಕು. ಎಷ್ಟು ಬೇಕಾದರೂ ವೆಚ್ಚ ಮಾಡಿ ಅದನ್ನು ನಡೆಸಲು ಹೇಳು....'

'ತಾವಿನ್ನು ಸ್ನಾನಮಾಡಲು ಏಳಿರಿ. ನೆಮ್ಮದಿಯಿಂದ ಇರಿ' ವಸಂತಕ ನುಡಿದು ಹೊರಹೊರಟು, ಪ್ರಶಾಂತಭವನಕ್ಕೆ ಬಂದು ಅರಸನ ಒಪ್ಪಿಗೆ ಪಡೆ ದುದನ್ನು ಮಹಾದೇವಿಗೆ ಅರುಹಿದ.

* * *

ಮಠದಲ್ಲಿ ಬಂದು ವಾಸ್ತವ್ಯ ಹೂಡಿ ಪ್ರಚಾರಕಾರ್ಯಕ್ಕೆ ಊರಿನಲ್ಲಿ ಸಂಚರಿ ಸುತ್ತಿದ್ದ ಜಂಗಮರು ಅರಮನೆಗೆ ಬಂದು ಶಿವಾನುಭವಗೋಷ್ಠಿಯನ್ನು ನಡೆಸಲುದ್ಯುಗಿಸಿದರು. ಸುಪ್ರಭಾತದ ವೇಳೆಯಲ್ಲಿ ಆಗಮಿಸಿ ಗೋಷ್ಠಿಯನ್ನು ಆರಂಭಿಸಿದರೆ ಮಧ್ಯಾಹ್ನ ಅರಮನೆಯಲ್ಲೇ ಸ್ನಾನ-ಪೂಜೆ-ಪ್ರಸಾದಗಳನ್ನು ಪೂರೈಸಿ, ಸಂಜೆಗೆ ಗೋಷ್ಠಿ ಮುಗಿಸುತ್ತಿದ್ದರು. ಮಹಾದೇವಿ ಈಗ ತುಂಬ ಸುಖಿಯಾಗಿದ್ದಳು. 'ಮಂಡೆ ಮಾಸಿದರೆ ಮಹಾಮಜ್ಜನವ ಮಾಡುವುದು, ವಸ್ತ್ರ ಮಾಸಿದಡೆ ಮಡಿವಾಳಂಗಿಕ್ಕುವುದು. ಮನದ ಮೈಲಿಗೆಯ ತೊಳೆಯಲು ಶರಣರೊಡನೆ ಅನುಭಾವವ ಮಾಡುವುದು' ಎಂಬ ಚನ್ನಬಸವಣ್ಣನವರ ವಚನದ ಅರ್ಥ ಈಗ ಮನದಟ್ಟಾಯಿತು. ಇಲ್ಲಿಯವರೆಗೆ ಮನವನ್ನಾಕ್ರಮಿಸಿ ಕೊಂಡಿದ್ದ ದುಗುಡ-ದುಮ್ಮಾನಗಳು ಓಟವನ್ನು ಕೈಗೊಂಡಿದ್ದವು. ಶರಣರು ಅರಮನೆಗೆ ಬರುವುದನ್ನು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದಳು.

ಅಯ್ಯಾ... ನಿಮ್ಮ ಶರಣರ ಬರವಿಂಗೆ ಗುಡಿ ತೋರಣವ ಕಟ್ಟುವೆ,
ಅಯ್ಯಾ ನಿಮ್ಮ ಶರಣರ ಬರವಿಂಗೆ ಮುಡುಹಿನಲ್ಲಿ ಪಟ್ಟವ ಕಟ್ಟುವೆ,
ಅಯ್ಯಾ ನಿಮ್ಮ ಶರಣರೆನ್ನ ಮನೆಗೆ ಬಂದಡೆ,
ಅವರ ಶ್ರೀಪಾದವನೆನ್ನ ಹೃದಯದಲ್ಲಿ ಬಗಿದಿಟ್ಟುಕೊಂಬೆ
ಕಾಣಾ, ಚನ್ನಮಲ್ಲಿಕಾರ್ಜುನಾ.*

ಪಾದಪೂಜೆಯ ಪರಿಕರಗಳನ್ನು ಕೈಯಲ್ಲಿ ಹಿಡಿದು ಭವನದ ಬಾಗಿಲಿನಲ್ಲಿ ಕಾಯುತ್ತಿದ್ದಳು. ಅವರನ್ನು ಕಾಣುತ್ತಲೇ, ಆನಂದದ ಅರಸಂಚೆ ಹಗುರಾಗಿ ತೇಲುತ್ತಿತ್ತು. ಸಂಭ್ರಮದಿಂದ ಅವರನ್ನು ಸ್ವಾಗತಿಸಿ ಪಾದಕ್ಕೆ ನೀರೆರೆದು, ನಮಸ್ಕರಿಸಿ ಒಳಗೆ ಕರೆದೊಯ್ಯುತ್ತಿದ್ದಳು. ವಸಂತಕನು ಕೂಡ ಆ ಆನಂದ ದಲ್ಲಿ ಭಾಗಿಯಾಗಲಾರಂಭಿಸಿದ್ದ. ಮಹಾದೇವಿಯ ಉತ್ಸಾಹವನ್ನು ಕಂಡು ಅವನಿಗೆ ಸಮಾಧಾನವೆನಿಸುತ್ತಿತ್ತು.

ಜಂಗಮ ತಂಡದ ನೇತೃತ್ವವನ್ನು ನಿಜಲಿಂಗದೇವರು ವಹಿಸಿಕೊಂಡಿದ್ದರು. ಬಸವಣ್ಣನವರು ಇಂತಹ ಅನುಭವಿ, ಪ್ರೌಢ ಶರಣರ ಮುಂದಾಳತ್ವದಲ್ಲಿ ನಾಲ್ಕಾರು ಕಿರಿಯ ಸಾಧಕರನ್ನು ಒಂದುಗೂಡಿಸಿ ಧರ್ಮಪ್ರಚಾರಕ್ಕೆ ಊರಿಂದ ಊರಿಗೆ ಕಳಿಸುತ್ತಿದ್ದರು. ಹೊಸ ಬಗೆಯ ಕ್ರಾಂತಿಯನ್ನವರು ಆರಂಭಿಸಿದ್ದ ಕಾರಣ ಸಾಮಾನ್ಯಜನರು, ವಿರೋಧಿಗಳು, ಸಂಪ್ರದಾಯನಿಷ್ಠರು, ತರ್ಕ ವಾದಿಗಳು ಕೇಳುವ ಅನೇಕ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತಿತ್ತು. ಕಿರಿಯ ಜಂಗಮರು ತತ್ವವನ್ನು ಹೇಳುತ್ತ ಹೋದಾಗ, ಉತ್ತರಿಸಲಾಗದ ಪ್ರಶ್ನೆಗಳನ್ನು ಜಿಜ್ಞಾಸುಗಳು ಕೇಳಿದರೆ ಅವರು ನಿಜಲಿಂಗದೇವರಿಂದ ಸಮಾಧಾನ ಪಡೆದು, ಮರುದಿನ ಜಿಜ್ಞಾಸುಗಳಿಗೆ ತಿಳಿಸುತ್ತಿದ್ದರು. ನಿಜಲಿಂಗರು ಸಂಸ್ಕೃತ-ಕನ್ನಡಗಳೆ ರಡೂ ಭಾಷೆಗಳಲ್ಲಿ ಬಲ್ಲಿದರು. ತಮ್ಮ ವಾಕ್‌ಶಕ್ತಿಯ ಪ್ರೌಢಿಮೆಯಿಂದ ತತ್ವ ಗಳನ್ನು ಮಾರ್ಮಿಕವಾಗಿ ಮನದಟ್ಟು ಮಾಡುತ್ತಿದ್ದರು.

ಪ್ರತಿನಿತ್ಯವೂ ಬಸವಸ್ತುತಿಯೊಡನೆ ಅನುಭವಗೋಷ್ಠಿ ಆರಂಭವಾಗುತ್ತ ಲಿತ್ತು.

'ನೋಡು ತಾಯಿ....ಬಸವಣ್ಣನು ಮಂತ್ರಪುರುಷನಾಗಿ ಜನಮನದಲ್ಲಿ ಉಳಿಯತೊಡಗಿರುವನು. ಪಟ್ಟಭದ್ರಹಿತಾಸಕ್ತರು, ಪ್ರತಿಗಾಮಿಗಳು, ಪೂಜಾರಿ ವರ್ಗದವರು, ಜನರ ಮೌಢ್ಯವನ್ನೇ ತಮ್ಮ ಬದುಕಿಗೆ ಆಹಾರವನ್ನಾಗಿ-ನೆರಳಿಗೆ ಕೊಡೆಯನ್ನಾಗಿ ಉಳಿಸಿಕೊಂಡು ಬಂದ ಕೆಲವರು ಅವನಿಗೆ ವಿರೋಧಗಳನ್ನು ಒಡ್ಡಿ ನಿಂದೆ ಮಾಡುತ್ತಿದ್ದರೂ, ಶ್ರೀಸಾಮಾನ್ಯನು ಮಾತ್ರ ತನ್ನ ಜನ್ಮದಾತ

* ಮ. ವ. ...

ನೆಂದು ಅಣ್ಣನವರನ್ನು ಸ್ಮರಿಸುವನು. ಜನಪದದಲ್ಲಿ ಅವನನ್ನು ಹೀಗೆ ಕೊಂಡಾಡುತ್ತಾರೆ.

ಎಲ್ಲ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕು ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥

ಕೆಲವು ಜ್ಞಾನಿಗಳು ಆತ್ಮಜಾಗೃತಿ ಹೊಂದಿ, ಲೋಕದ ಸುಖ-ದುಃಖ ಗಮನಿಸದೆ ಏಕಾಂತಿಕವಾಗಿ ಸುಖವನ್ನು ಅರಸಿಕೊಂಡು ಹೊರಡುತ್ತಿದ್ದರು. ಈ ಜಗತ್ತು-ಸಮಾಜಗಳ ಸಂಕಷ್ಟ, ದೀನ ದುರ್ಬಲರ ಶೋಷಣೆಗಳ ಕಡೆಗೆ ಗಮನವನ್ನು ಹರಿಸುವವರೇ ಇಲ್ಲವಾಗಿತ್ತು. ಆದರೆ ಬಸವಣ್ಣನು ಧರ್ಮದ ಸಾಧನವನ್ನು ಹಿಡಿದೇ ಮೂಢನಂಬಿಕೆ, ಜಾತೀಯತೆ, ಆಲಸ್ಯ, ಶೋಷಣೆ, ನಿರಾಶಾವಾದಗಳನ್ನು ತೊಡೆದುಹಾಕಿ ಸುಂದರ ಬಂಧುರ ಸಮಾಜ ನಿರ್ಮಾಣಕ್ಕೆ ಯತ್ನಿಸುತ್ತಿರುವನು. ಯಾವುದೋ ಲೋಕವನ್ನು ನಂಬಿ, ಸತ್ತ ನಂತರ ಸುಖ ಪಡೆಯಬೇಕೆಂದು ಜನರನ್ನೂ ನಂಬಿಸಿ ಇರುವ ಮರ್ತ್ಯವನ್ನು ನರಕವನ್ನಾಗಿ ಮಾಡುವುದನ್ನು ಸಹಿಸದೇ, ಇದನ್ನೇ ಪರಮಾತ್ಮನ ದಿವ್ಯ ನೆಲೆಯನ್ನಾಗಿ ಮಾಡುವ ಪ್ರಯತ್ನದಲ್ಲಿರುವ ಕಾರಣ, ಜನಪದ ಹೃದಯವು 'ಚೆಲ್ಲಿದನು ತಂದು ಶಿವಬೆಳಕ' ಎಂದು ಹಾಡುವುದು.

ಆದ್ದರಿಂದಲೇ ಇಂದು ಆ ತಂದೆಯ ಹೆಸರು ಮಂತ್ರವಾಗಿದೆ. ಎಂತಹ ಮಂತ್ರ ?

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ !

'ಶರಣರೇ, ಆ ಮಹಾಪುರುಷನ ದರ್ಶನ, ಪಾದಸ್ಪರ್ಶನಗಳು ಎಂದು ದೊರೆತಾವೋ ಎಂಬ ಹಂಬಲ ತುಂಬಿ ಉಕ್ಕುತ್ತಿದೆ....' ತನ್ಮಯಳಾಗಿ ಮಹಾದೇವಿ ಹೇಳಿದಳು.

'ನಿನಗಷ್ಟೇ ಹಂಬಲವೇ ತಾಯಿ ? ನಿನಗಿಂತ ಮಿಗಿಲಾಗಿ ಅವರು ಹಾತೊರೆಯುತ್ತಿರುವರು....' ನಿಜಲಿಂಗದೇವರು ಮಾರ್ಮಿಕವಾಗಿ ನುಡಿದು, ನಕ್ಕರು.

'ಅಂದರೆ ನನ್ನ ಪರಿಚಯ ಅವರಿಗೆ ಉಂಟೇ ?'

'ಏಕವ್ವಾ....ನಿನ್ನ ಅಂಗದ ಮೇಲಿನ ಇಷ್ಟಲಿಂಗವು ಅವರು ಕಳುಹಿಸಿದ

‘ನಾನು ಅರಿತಿರುವೆ ಶರಣರೇ ; ಆದರೆ ಎಷ್ಟೋ ವರ್ಷಗಳ ಹಿಂದೆ ಅವರು ಕಳಿಸಿರಬೇಕು. ಅಂದಾಗ ನನ್ನಂತಹ ಅಲ್ಪಳ ವಿಷಯ ಹೇಗೆ ಅವರು ಅರಿಯಲು ಸಾಧ್ಯ?’ ಆಶ್ಚರ್ಯದಿಂದ ಕೇಳಿದಳು.

‘ಅರಿತಿರುವುದು ಮಾತ್ರವಲ್ಲ, ಶರಣಕೂಟದ ಸಂಗಮಕ್ಕೆ ನಿನ್ನ ಬಾಳ ನದಿಯು ಎಂದು ಬರುವದೋ ಎಂದು ಕಾತರಿಸುತ್ತಲಿದ್ದಾರೆ. ‘ಅನುಭವ ಮಂಟಪವೆಂಬ ಆಧ್ಯಾತ್ಮಿಕ ಭವನಕ್ಕೆ ಕಳಸವಾಗುವ ಒಂದು ಚೆನ್ನ ಚೇತನ ದೂರದಲ್ಲಿದೆ’ ಎಂದು ಆಗಾಗ ಸ್ಮರಿಸಿಕೊಳ್ಳುತ್ತಾರೆ.’

‘ಆಹಾ....ಅದು ಅವರ ದೊಡ್ಡಸ್ತಿಕೆ! ಆದರೆ ನನ್ನಂಥ ಅಲ್ಪಳಿಗೆ ಇದು ಬಹು ದೊಡ್ಡ ಮಾತು....’

‘ನಿನ್ನ ಕೆಲವು ವಚನಗಳು ‘ಗಿರಿಯಲ್ಲಲ್ಲದೆ ಹುಲ್ಲುಮೊರಡಿಯಲ್ಲಾಡು ವುದೇ ನವಿಲು’, ‘ಬೆಟ್ಟದ ಮೇಲೊಂದು ಮನೆಯ ಮಾಡಿ’, ‘ಸಾವಿಲ್ಲದ ಕೇಡಿಲ್ಲದ ಚೆಲುವ’ ಮುಂತಾದವು ಕಲ್ಯಾಣದ ವಚನ ಭಂಡಾರದ ಮುತ್ತು ಗಳಾಗಿವೆ....ಕನ್ನಡನಾಡಿನ ಬಹು ಹೃದಯಗಳನ್ನು ತಣಿಸಿವೆ.’

‘ಅಚ್ಚರಿಯ ಸಂಗತಿ! ನನ್ನ ಮಾತುಗಳು ಅಲ್ಲಿಗೆ ಮುಟ್ಟಿದುದು ಹೇಗೆ?’

‘ನಿನ್ನ ವಚನಗಳನ್ನು ಗುರುಲಿಂಗದೇವರು ಜಂಗಮರ ಮೂಲಕ ಕಲ್ಯಾಣಕ್ಕೆ ಕಳಿಸಿರುವರು. ಅವುಗಳ ಪಠಣ ನಡೆದಾಗ ಮಂಟಪದ ಅನುಭಾವಿಗಳು ಮನ ವಾರೆ ಮೆಚ್ಚಿದರು.’

ಮಹಾದೇವಿಯ ಹೃದಯದ ಆನಂದ ಮೇರೆವರಿದು ಉಕ್ಕಿತು. ನಿಜಲಿಂಗ ದೇವರು ತನ್ನ ಒಡನಿರ್ದ ಸಾಧಕನಿಗೆ ಹೇಳಿದರು :

‘ಆತ್ಮಾನಂದಾ ಒಂದು ವಚನವನ್ನು ಹಾಡಿ ಅವ್ವನವರಿಗೆ ಕೇಳಿಸುವೆಯಾ?’ ತರುಣನಾದ ಆತ್ಮಾನಂದನಿಗೆ ಸುಶ್ರಾವ್ಯಕಂಠವಿತ್ತು. ಏಕನಾದವನ್ನು ಶ್ರುತಿಮಾಡಿಕೊಳ್ಳುತ್ತ, ರಾಗವನ್ನು ಒಂದುಗೂಡಿಸಿ ‘ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು’ ಎಂಬುದನ್ನು ಹಾಡಿದಾಗ ಮಹಾದೇವಿ ಮೈಮರೆತು ಕೇಳಿ, ‘ಇದು ನನ್ನಿಂದ ಬರೆಯಲ್ಪಟ್ಟುದೇ’ ಎಂದು ಸೋಜಿಗದ ಸರಸಿಯಲ್ಲಿ ತೇಲಿ, ಕೇಳಿದಳು :

‘ಇದಕ್ಕೆ ರಾಗವನ್ನು ಕೂಡಿಸಿದವರು ಯಾರು ಮಹಾತ್ಮರೇ?’

ಶರಣರ ಕೂಟದಲ್ಲಿದ್ದು, ಕೇಳುತ್ತಿದ್ದ ವಸಂತಕನು ಆ ವಚನದ ಭಾವ ಸಂಪತ್ತು, ಸತ್ವಕ್ಕೆ ಅಚ್ಚರಿಗಟ್ಟು ಮೂಕನಾಗಿ ಕುಳಿತಿದ್ದ. ಸುಂಟರಗಾಳಿಯಲ್ಲಿ ಸಿಕ್ಕ ಎಲೆಗಳಂತೆ ಅವನ ವಿಚಾರಗಳು ಗರಗರನೆ ತಿರುಗುತ್ತಿದ್ದವು.

ಸೀಮಿತ ವಲಯದಲ್ಲಿ ಸಿಕ್ಕಿಸುವುದಾಗಲಿ, ಅರಮನೆಯ ವಿಲಾಸಪಂಜರದಲ್ಲಿ ಕೂಡಿಡುವುದಾಗಲಿ ಮನುಕುಲಕ್ಕೆ ಎಸಗುವ ಅಪಚಾರ. ಇಂಥದೊಂದು ಮಹಾಶಕ್ತಿಯನ್ನು ಅಲ್ಪ ತೃಪ್ತಿಸಾಧನೆಗೆ ಬಳಸುವುದು ಉಗುರು ತೆಗೆಯಲು ಗುದ್ದಲಿಯನ್ನು ತೆಗೆದುಕೊಂಡಂತೆ....' ಎಂದುಕೊಂಡ.

ಅನುಭವಗೋಷ್ಠಿಯು ಆರಂಭವಾದಾಗಿನಿಂದ ಅವನ ಮುಂದೆ ಹೊಸ ಪ್ರಪಂಚವೊಂದನ್ನು ತೆರೆದು ಇರಿಸಿದಂತಾಗಿತ್ತು. ಆದರೆ ಕೌಶಿಕನ ಮುಂದೆ ತಾನು ಮರೆಮಾಚಿ ನುಡಿದುದನ್ನು ನೆನಪಿಸಿಕೊಂಡ. ಪ್ರತಿನಿತ್ಯದ ಅನುಭವ ಗೋಷ್ಠಿಯಲ್ಲಿ ವಸಂತಕನು ಭಾಗವಹಿಸುತ್ತಿದ್ದುದನ್ನು ಕಂಡ ರಾಜನು ಕೇಳಿದ :

'ವಸಂತಕಾ....ಆ ನೀರಸವಾದ, ಮುದುಕರ ಪುರಾಣಗೋಷ್ಠಿಯಲ್ಲಿ ಭಾಗ ವಹಿಸಲು ಬೇಸರವಾಗದೇ? ಅಥವಾ ನೀನೂ ಅವಳ ತಾಳಕ್ಕೆ ಕುಣಿಯ ತೊಡಗಿರುವೆಯೋ ?'

'ಪ್ರಭು, ನಾವುಗಳು ಎಚ್ಚರವಾಗಿ ಇರಬೇಕಾಗುವುದು. ಜಂಗಮ ದಾಸೋಹದ ನೆಪದಲ್ಲಿ ರಾಜದ್ರೋಹದ ಚಟುವಟಿಕೆ ನಡೆಯಬಾರದಷ್ಟೆ. ಅದಕ್ಕೆ ನಾನು ಆಸಕ್ತನಂತೆ ನಟಿಸಿ ಸಾಧ್ಯವಾದಷ್ಟೂ ಅವರ ಮಧ್ಯದಲ್ಲೇ ಕಾಲ ಕಳೆಯುವೆನು.'

'ಭಲೇ ಮಿತ್ರ....ನಿನ್ನ ರಾಜನಿಷ್ಠೆ ಅನುಪಮವಾದುದು' ವಸಂತಕನ ಬೆನ್ನು ಚಪ್ಪರಿಸಿದ ಕೌಶಿಕ ಆ ಮಾತನ್ನು ಸತ್ಯವೆಂದು ನಂಬಿದ್ದನು.

'ತಾಯಿ, ಇದಕ್ಕೆ ರಾಗವನ್ನು ಕೂಡಿಸಿದವನು ರಾಗದ ಬೊಮ್ಮಯ್ಯ ಎಂಬೋರ್ವ ಶರಣನು. ಅನುಭವಮಂಟಪದ ಕಾರ್ಯಚಟುವಟಿಕೆಯನ್ನು ಜೇನುಗೂಡಿಗೆ ಹೋಲಿಸಬಹುದು. ಒಂದು ರಾಣಿಜೇನಿನ ನೇತೃತ್ವದಲ್ಲಿ ನೂರಾರು ಜೇನುಗಳು ಕಾರ್ಯಪ್ರವೃತ್ತವಾಗಿರುವಂತೆ ಬಸವ ಪ್ರಭುವಿನ ಆಶ್ರಯ ದಲ್ಲಿ ವಿಸ್ತಾರವಾದ ಕಾರ್ಯಗಳು ಹಮ್ಮಿಕೊಳ್ಳಲ್ಪಟ್ಟಿವೆ. ಶರಣರು ವಚನಗಳನ್ನು ಕಾವ್ಯಗಳಂತೆ ಕುಳಿತು ಬರೆಯದೆ ಮಾತನಾಡುವಾಗಲೇ ರಚಿಸಿಬಿಡುತ್ತಾರೆ. ಅನುಭವಗೋಷ್ಠಿಯಲ್ಲಿ ವಚನಗಳು ಸ್ವಯಂಸ್ಫೂರ್ತಿಯಿಂದ ಹೊರಹೊಮ್ಮು ವಾಗ ಅವುಗಳನ್ನು ಲಿಖಿತರೂಪದಲ್ಲಿ ಹಿಡಿದಿಡುವ ವ್ಯವಸ್ಥೆಯನ್ನು ಅಣ್ಣ ನವರು ಮಾಡಿದ್ದಾರೆ. ಓಲೆಯ ಶಾಂತರಸರ ನೇತೃತ್ವದಲ್ಲಿ ಐದಾರು ಜನ ಓಲೆಕಾರರು ಕೆಲಸ ಮಾಡುತ್ತಾರೆ. ಚನ್ನಬಸವೇಶ್ವರರು ಅವನ್ನು ಪರಿಷ್ಕರಿಸಿ, ಧರ್ಮದ ಮೂಲಭೂತ ತತ್ವಗಳಿಗೆ ಚ್ಯುತಿ ತರದಂತೆ ಸರಿಯಾಗಿ ಇವೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿ, ವಚನಗಳನ್ನು ಕ್ರಮಬದ್ಧ ಮಾಡುತ್ತಾರೆ. ಪ್ರತಿ ವಚನದ ಮೂಲಪ್ರತಿಯನ್ನು ...

ಸಂಗ್ರಹಿಸಿ, ತಾಳೇಗಿಡಗಳು ಹೇರಳವಾಗಿ ಇರುವಲ್ಲಿ ವಚನಗಳ ಪ್ರತಿಮಾಡಿಸಿ, ಜಂಗಮರ ಮೂಲಕ ಇವುಗಳನ್ನು ಜನತೆಯ ಮನೆಬಾಗಿಲಿಗೆ, ಮನೋ ಮಂದಿರಕ್ಕೆ ಮುಟ್ಟಿಸುತ್ತಾರೆ.

ಅನುಭವಮಂಟಪದಲ್ಲಿ ರಾಗದ ಬೊಮ್ಮಯ್ಯನು ಉತ್ತಮ ಸಂಗೀತ ಗಾರ. ಮೊದಲು ವೇಶ್ಯಾವೃತ್ತಿಯಲ್ಲಿದ್ದು, ಅಣ್ಣನವರ ಬೋಧೆಯಿಂದ ಪರಿವರ್ತಿತರಾಗಿ ಶರಣೆಯರಾಗಿರುವ ಮಾಯಿದೇವಿ, ಸಂಕವ್ವೆಯರೂ ಉತ್ತಮ ಸಂಗೀತಜ್ಞರು. ಅವರು ವಚನಗಳಿಗೆ ರಾಗವನ್ನು ಹಾಕಿ, ಆತ್ಮಾ ನಂದನಂತಹ ಇಂಪು ಕಂಠವಿರುವ ಸಾಧಕರಿಗೆ ಶಿಕ್ಷಣ ಕೊಟ್ಟು, ಭಜನೆ ಮಾಡಿ ಸಲು, ವಚನಗಳ ಗಾಯನ ಕಲಿಸಲು ನಮ್ಮಂಥವರೊಡನೆ ಕಳಿಸುತ್ತಾರೆ.' ನಿಜಲಿಂಗದೇವರು ವಿವರಿಸಿದಾಗ ಬಸವಣ್ಣನ ಭೂಮಯೋಜನೆಯ ಬಗೆಯ ನ್ನರಿತು ಆನಂದವಾಯಿತು.

'ಧರ್ಮವು ಹೃದಯದ ಆಸ್ತಿ, ಕೇವಲ ಬುದ್ಧಿಯ ಆಸ್ತಿಯಲ್ಲ ಎಂಬುದನ್ನು ಬಸವಣ್ಣನವರು ಅರಿತಂತೆ ಕಾಣುತ್ತದೆ. ಅಂತೆಯೇ ಸಂಗೀತ, ಸಾಹಿತ್ಯ, ಬಹು ರೂಪ ಮುಂತಾದ ಲಲಿತಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ....' ಮಹಾ ದೇವಿ ಮೆಚ್ಚುಗೆಯಿಂದ ನುಡಿದಳು.

'ಅಣ್ಣನವರೇ ಸ್ವಭಾವತಃ ನಾದಯೋಗಿಗಳು ತಾಯಿ ; 'ನಾನು ತಾಳ ಮಾನ ಸರಿಸವನರಿಯೆ, ಓಜೆ ಬಜಾವಣೆ ಲೆಕ್ಕವನರಿಯೆ, ಅಮೃತಗಣ ದೇವ ಗಣವನರಿಯೆ, ಮನಸ್ಸಿಗೆ ಬಂದಂತೆ ಹಾಡುವೆ' ಎಂದು ವಿನಯದಿಂದ ಹಾಡಿ ಕೊಂಡಿದ್ದರೂ ಅವರ ವಚನಗಳಲ್ಲಿ ಸಂಗೀತದ ಛಾಯೆ ಅಂತರ್ಗತವಾಗಿದೆ. ತಮ್ಮನ್ನು ವೀಣೆಯನ್ನಾಗಿ ದೇವ ವೈಣಿಕನ ಕೈಗೆ ಅರ್ಪಿಸಿಕೊಂಡ ದಿವ್ಯ ಚೇತನವದು....' ನಿಜಲಿಂಗದೇವರು ಗದ್ಗದಿತರಾಗಿ ನುಡಿದರು.

'ಆತ್ಮಾನಂದಾ....ಆ ವಚನವಾಕ್ತಿಕವನ್ನೊ ಅವ್ವನವರಿಗೆ ಹಾಡಿ ಕೇಳಿ ಸುವೆಯಾ ?' ಎಂದಾಗ ಆತ್ಮಾನಂದ ಹಾಡಲುದ್ಯುಕ್ತನಾದ.

ಎನ್ನ ಕಾಯವ ದಂಡಿಗೆಯ ಮಾಡಯ್ಯಾ,
ಎನ್ನ ಶಿರವ ಸೋರೆಯ ಮಾಡಯ್ಯಾ,
ಎನ್ನ ನರವ ತಂತಿಯ ಮಾಡಯ್ಯಾ,
ನಿನ್ನ ಬೆರಳ ಕಡ್ಡಿಯ ಮಾಡಯ್ಯಾ,
ಮೂವತ್ತೆರಡು ರಾಗವ ಹಾಡಯ್ಯಾ,
ಉರದಲೊತ್ತಿ ಬಾರಿಸಯ್ಯಾ, ಕೂಡಲ ಸಂಗಮದೇವಾ*

ಆತ್ಮಸ್ಪಂದನ ಭಾವಪೂರಿತ ಗಾಯನ ವಚನವನ್ನು ಹೆಚ್ಚು ಪರಿಣಾಮ ಕಾರಿಯಾಗಿ ಮಾಡಿತು.

'ಎಷ್ಟು ಸುಂದರ ಕಲ್ಪನೆ! ಅಣ್ಣನವರ ಬದುಕೇ ಒಂದು ವೀಣೆ....ದೇವ ನೆಂಬ ವೈಣಿಕನು ನುಡಿಸಿದಂತೆ ನುಡಿವ ವೀಣೆ....' ಮಹಾದೇವಿ ಉದ್ಗರಿಸಿ ದಳು. ಗಾಯನ ಮುಗಿದರೂ ದೀರ್ಘವೇಳೆಯವರೆಗೆ ಆ ನಾದದ ಇಂಪು ಕಿವಿ ಯನ್ನು ಸೋಂಕುತ್ತಲೇ ಇತ್ತು.

'ನಿಜಲಿಂಗದೇವರೇ....ಅಣ್ಣನವರ ವಚನಗಳಲ್ಲಿ 'ಜಂಗಮ' ಎಂಬ ಶಬ್ದವು ಬಾರಿಬಾರಿಗೆ ಬರುವುದು. ಅದರ ಅರ್ಥವೇನು, ವ್ಯಾಪ್ತಿಯೇನು ? ಜಂಗಮರು ಎಂದರೆ ಬೇಡುವ ಭಿಕ್ಷುಕರೆಂದು ಕೆಲವರು, ರಾಜಕೀಯ ಸೈನ್ಯವೆಂದು ಮತ್ತೆ ಹಲವರು ಮಾತನಾಡುವರು....' ಮಹಾದೇವಿ ಕೇಳಿದಳು.

'ಅಹುದು ತಾಯಿ,....ನಾಡಗಡಿಯನ್ನು ಬಹಿರಂಗ ಶತ್ರುಗಳಿಂದ ರಕ್ಷಿಸುವ ಸೈನಿಕರಂತೆ, ಅಂತರಂಗದ ರಾಜ್ಯವನ್ನು ಕಾಮಕ್ರೋಧಾದಿಗಳಿಂದ ರಕ್ಷಿಸಿ ಕೊಳ್ಳಲು ಪಾರಮಾರ್ಥಿಕ ಶಿಕ್ಷಣ ನೀಡುವ ಸೈನಿಕರೇ ಜಂಗಮರು....' ನಿಜಲಿಂಗರು ನಸುನಕ್ಕರು. ಆ ತತ್ವದ ವಿವರಣೆಯನ್ನೇ ಅಂದಿನ ಗೋಷ್ಠಿಯ ಪ್ರಮುಖ ವಿಷಯವನ್ನಾಗಿ ಇರಿಸಿಕೊಂಡರು.

'ಜಂಗಮ ಎಂದರೆ ಚಲನೆಯುಳ್ಳದ್ದು; ಚೇತನ. ಆದರೆ ಇದನ್ನು ವ್ಯಾಪಕವಾಗಿ ಅಣ್ಣನವರು ಬಳಸುತ್ತಾರೆ. ಅನುಭಾವದ ದೃಷ್ಟಿಯಿಂದ ನೋಡಿ ದಾಗ ಜಂಗಮನೆಂದರೆ ಅವನು ಜನನ-ಮರಣ-ಗಮನಗಳನ್ನು ಮೆಟ್ಟಿನಿಂತ ಅತಿ ಮಾನವ; ಸ್ಫುರಣಾತ್ಮಕ ಜ್ಞಾನಿ. ಸಾಮಾಜಿಕ ದೃಷ್ಟಿಯಿಂದ ಧರ್ಮಬೋಧೆಯ ಕಾಯಕವನ್ನು ತಲೆಯಮೇಲೆ ಹೊತ್ತು ಮನೆಮನೆಗೆ ಹೋಗಿ ಮನಮನಕ್ಕೆ ನೀತಿ-ಧರ್ಮಗಳನ್ನು ಬೋಧಿಸುವ ಧರ್ಮಪ್ರಸಾರಕ. ಜಂಗಮನೆಂದರೆ ಚೈತನ್ಯ ವುಳ್ಳ ಜೀವಂತ ವ್ಯಕ್ತಿ. ಜಂಗಮವೆಂದರೆ ಸಮಾಜವೆಂದೂ ಸಹ ಅಣ್ಣನವರು ಹೇಳುತ್ತಾರೆ. 'ದೇವರು ನಿರಾಕಾರ, ಅವನ ಮುಖವೇ ಜಂಗಮ' ಎಂದನ್ನು ವಾಗ 'ಸಮಾಜ' ಎಂಬರ್ಥದಲ್ಲಿ ಬಳಸುತ್ತಾರೆ. 'ಎಡದ ಕೈಯಲ್ಲಿ ಲಿಂಗಪೂಜೆ, ಬಲದ ಕೈಯಲ್ಲಿ ಜಂಗಮಸೇವೆ'—ಇವು ಅವರ ಮೂಲ ಸೂತ್ರಗಳು. ಅಂದರೆ ಆಧ್ಯಾತ್ಮಜೀವಿಯಾದವನು ಒಂದು ಕೈಯಲ್ಲಿ ಆಧ್ಯಾತ್ಮ ಜೀವನ, ಇನ್ನೊಂದು ಕೈಯಲ್ಲಿ ಸಮಾಜಸೇವೆಯನ್ನು ಗೈಯುತ್ತಲಿರಬೇಕು. ಅಖಂಡ ಮನುಕುಲ ವನ್ನೂ ಜಂಗಮ ಎಂದು ಸಂಬೋಧಿಸುತ್ತಾರೆ. ಜಂಗಮನೆಂದರೆ ವಿಶಿಷ್ಟ ಜಾತಿ ಯವನೆಂದರ್ಥವಲ್ಲ—ಅನುಭಾವದ ಆತ್ಯಂತಿಕ ಸ್ಥಿತಿಯನ್ನು ಮುಟ್ಟಿದ ಸಿದ

ದುಡಿತ, ಸ್ಥಾವರ ಎಂದರೆ ದುಡ್ಡು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂದಾಗ 'ದುಡ್ಡಿಗೆ ನಾಶವಿದೆ; ದುಡಿತಕ್ಕೆ ನಾಶವಿಲ್ಲ' ಎಂಬ ಅರ್ಥವಿವರಣೆಯನ್ನು ನೀಡಬಹುದು.'

'ಜಂಗಮ ತತ್ವವು ಇಷ್ಟೊಂದು ಆಳವಾಗಿದೆಯೇ ಶರಣರೇ! ನಿಜಕ್ಕೂ ನನಗೆ ಅರ್ಥವಾಗಿರಲಿಲ್ಲ....'

ಮಹಾದೇವಿ ಈ ಪರಿಭಾಷೆಯಲ್ಲಿ ಬಸವಣ್ಣನವರ ವಚನಗಳನ್ನು ಮೆಲುಕು ಹಾಕುತ್ತ, 'ದಯೆಯಿರಿಸಿ, ಪ್ರಸಾದ ಸ್ವೀಕಾರಕ್ಕೆ ನಡೆಯಿರಿ....' ಎಂದು ವಿನಂತಿಸಿದಳು.

ಸ್ವತಃ ತಾನೇ ನಿಂತು ಅವರ ಸ್ನಾನ-ಪೂಜೆಗಳಿಗೆ ಅಣಿಮಾಡಿ, ಪ್ರಸಾದವನ್ನು ಎಡೆಮಾಡಿದಳು. ಅವಳ ಕಿಂಕರತೆಯನ್ನು ಕಂಡು ಜಂಗಮರು ಬೆರಗಾಗಿ 'ಅಲ್ಪಸ್ವಲ್ಪ ಅಧಿಕಾರ, ದುಡ್ಡುದುಗ್ಗಾಣಿ ಇದ್ದರೆ ಸಾಕು ಬೀಗಿ ಮೆರೆಯುವಂತಹ ಜನರೇ ಹೇರಳವಾಗಿರುವಾಗ, ಈ ತಾಯಿಯ ವಿನಯಕ್ಕೆ ಮಿತಿಯೇ ಇಲ್ಲವಲ್ಲ' ಎಂದುಕೊಂಡರು. ಎಡೆಯು ತುಂಬಿಹೋಗುವಷ್ಟು ಬಗೆಗಳು ತಳಿಗೆಯನ್ನು ಅಲಂಕರಿಸಿದಾಗ, ನಿಜಲಿಂಗದೇವರು :

'ಇಷ್ಟೆಲ್ಲ ಭಕ್ಷ್ಯಭೋಜ್ಯಗಳ ಅವಶ್ಯಕತೆ ಇಲ್ಲವಮ್ಮ. ಮೊದಲನೆಯದಾಗಿ ಸದಾ ಸಂಚಾರಕರಾದ ನಾವು ಆರೋಗ್ಯದ ರಕ್ಷಣೆ ಸೂಕ್ತವಾಗಿ ಮಾಡಿಕೊಂಡು ಕೂಡಲಸಂಗನ ಸೇವೆ ಮಾಡುವ ಈ ಕಾಯವನ್ನು ಸರಿಯಾಗಿ ಉಳಿಸಿಕೊಳ್ಳಬೇಕು. ಎರಡನೆಯದಾಗಿ ರುಚಿಕಟ್ಟಾದ ಭಕ್ಷ್ಯಭೋಜ್ಯಗಳನ್ನು ಸವಿದ ನಾಲಿಗೆ ದಿನವೂ ಅಂಥದನ್ನೇ ಬೇಡಬಹುದು. ಆಗ ಬಡವರ ಪ್ರಸಾದವನ್ನು ನಿರಾಕರಿಸಲೂಬಹುದು. ಆದ್ದರಿಂದ ಸರಳವಾದ ರಾಗಿಯಂಬಲಿ, ಜೋಳದ ಕಜ್ಜಾಯ, ಶಿವದಾನವಷ್ಟೇ ನಮಗೆ ಸಾಕು....' ನಿಜಲಿಂಗದೇವರು ನುಡಿದಾಗ ಮಹಾದೇವಿ ಅವರ ಆದರ್ಶ ಜೀವನಕ್ಕೆ ಮಾರುಹೋದಳು.

'ನಮ್ಮ ಒಡತಿಯರೂ ಅಷ್ಟೆ....ಹಣ್ಣು ಹಾಲಿನ ಹೊರತು ಏನನ್ನೂ ಸ್ವೀಕರಿಸರು....' ಶಿವಕಾಮಿನಿ ಅಭಿಮಾನದಿಂದ ಹೇಳಿದಳು.

'ತಾಯಿ ಅವರಿಗೆ ಉತ್ತಮ ವಸ್ತ್ರಗಳನ್ನು, ಬಂಗಾರದ ನಾಣ್ಯಗಳನ್ನು ಕಾಣಿಕೆಯನ್ನಾಗಿ ನೀಡಬಹುದಲ್ಲ....' ವಸಂತಕ ನುಡಿದು, ಹರಿವಾಣಗಳಲ್ಲಿ ಸಿದ್ಧಪಡಿಸಿಕೊಂಡು ಬಂದಿದ್ದ ಕಾಣಿಕೆಗಳನ್ನು ಮಹಾದೇವಿಯ ಕೈಗಿತ್ತ. ಅದನ್ನು ಆಕೆ ಅರ್ಪಿಸಲು ಹೋದಾಗ ನಿಜಲಿಂಗದೇವರು ಮೃದುವಾಗಿ ನಿರಾಕರಿಸಿ ನಕ್ಕರು.

ತ್ತೇವೆ; ಆದರಿಂದ ಈ ವಸ್ತ್ರಗಳನ್ನು ನೇಯ್ದುಕೊಳ್ಳುತ್ತೇವೆ. ಬಸವಣ್ಣನವರ ಧರ್ಮಪ್ರಸಾರಕರಲ್ಲಿ ಎರಡು ಬಗೆಯವರುಂಟು—ಸ್ಥಿರ ಜಂಗಮ, ಚರ ಜಂಗಮ ಎಂಬುದಾಗಿ. ಸ್ಥಿರ ಜಂಗಮರೆಂದರೆ ಮಠ, ಅನುಭವಮಂಟಪದಂತಹ ಸಂಸ್ಥೆಗಳನ್ನು ನಿರ್ಮಿಸಿ, ತನ್ಮೂಲಕ ಕಾರ್ಯಗಳನ್ನು ನಿರ್ವಹಿಸುವವರು. ಚರ ಜಂಗಮರೆಂದರೆ ನಿಂತಲ್ಲಿ ನಿಲ್ಲದೆ ಸದಾ ತತ್ವಪ್ರಸಾರವನ್ನು ಮಾಡುವವರು. ಗುರುಲಿಂಗದೇವರು ಸ್ಥಿರ ಜಂಗಮರು. ಅವರಿಗೆ ಧನ-ಕನಕಗಳು ಬೇಕು, ತಮಗಾಗಿ ಅಲ್ಲ—ಸಮಾಜದ ಉತ್ಥಾನಕ್ಕಾಗಿ. ಆದರೆ ನಮಗೆ ಅವು ಬಾಧಕ, ಅಷ್ಟೇ ಅಲ್ಲ, ಪ್ರವಾಸದಲ್ಲಿ ಭಯೋತ್ಪಾದಕ....ನಿನಗೆ ಬೇಸರವಾಗಬಾರದೆಂದು ರೇಷ್ಮೆಯ ಲಿಂಗವಸ್ತ್ರವನ್ನಷ್ಟೇ ಸ್ವೀಕರಿಸುತ್ತೇವೆ.'

ವಸಂತಕನು ಮಂತ್ರಮುಗ್ಧನಾಗಿದ್ದ. 'ಇವರದು ಎಂತಹ ತ್ಯಾಗಪೂರ್ಣ ಸರಳಜೀವನ! ಜನಜಾಗೃತಿಗೆ ತಮ್ಮ ಬಾಳನ್ನೇ ಮುಡುಪಿರಿಸಿಕೊಂಡ ನಿಸ್ವಾರ್ಥ ಚೇತನಗಳು. ಇವರ ತ್ಯಾಗವನ್ನು ಸಮಾಜವು ಅರಿತುಕೊಂಡೀತೇ!' ಮನದಲ್ಲೇ ಆಲೋಚಿಸುತ್ತಿದ್ದ.

ಸಂಜೆ ಸಾಗಿ ಇರುಳು ಜಾರತೊಡಗಿದಾಗ ಜಂಗಮರು ನಿರ್ಗಮಿಸಿದರು. ಮಹಾದೇವಿ ಬಾಗಿಲವರೆಗೆ ಬೀಳ್ಕೊಡುತ್ತ, 'ನಾಲ್ಕಾರು ದಿವಸಗಳವರೆಗೆ ತಪ್ಪದೆ ಬರಬೇಕು. ನಿಮ್ಮ ಬರವೇ ಎನಗೆ ಪ್ರಾಣ ಜೀವಾಳ.

ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ
ಜಂಗಮವೆನ್ನ ಪುಣ್ಯದ ಫಲ, ಜಂಗಮವೆನ್ನ ನಿಧಿ ನಿಧಾನ.
ಜಂಗಮವೆನ್ನ ಹರುಷದ ಮೇರೆ
ಚೆನ್ನಮಲ್ಲಿಕಾರ್ಜುನಾ, ಜಂಗಮದ ತಿಂಥಿಣಿಯಲ್ಲಿ ಓಲಾಡುವೆನು'*

ಎಂದು ಅವರಿಗೆ ಕೈಮುಗಿದು ಬೇಡಿದಳು. ದ್ವಾರವಟ್ಟದಿಂದ ಒಳಕ್ಕೆ ಮರಳುತ್ತ ಹೇಳಿದಳು:

'ವಸಂತಕರೇ, ಆಧ್ಯಾತ್ಮಜೀವಿಗಳ ಒಡನಾಟ ಅದೆಷ್ಟು ಆನಂದದಾಯಕವಲ್ಲವೆ? ಅವರನ್ನು ನೋಡುತ್ತ, ನುಡಿಸುತ್ತ, ಮಾತನಾಡುತ್ತಿದ್ದರೆ ಹೊರಪ್ರಪಂಚದ ಅರಿವೇ ಇರದು. ಈಗ ನನಗೆ ಎಷ್ಟೋ ಸಮಾಧಾನವಾಯಿತು.

ಸುಖದ ಸುಖಿಗಳ ಸಂಭಾಷಣೆಯಿಂದ, ದುಃಖಕ್ಕೆ ವಿಶ್ರಾಮವಾಯಿತು.
ಭಾವ ಭಾವ ತಾರ್ಕಣೆಯಾದಲ್ಲಿ, ನೆನಹಕ್ಕೆ ವಿಶ್ರಾಮವಾಯಿತ್ತು
ಬೆಚ್ಚು ಬೆರಸಲೊಡನೆ ಮುಚ್ಚು ಒಳಕೊಂದಿತ್ತಯ್ಯಾ,
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ...

ಮಹಾದೇವಿ ಪ್ರಶಾಂತಭವನಕ್ಕೆ ಸಾಗಿ, ಜಂಗಮರು ಕೊಟ್ಟ ಹೊಸ ವಚನಗಳ ಕಟ್ಟನ್ನು ಪರಿಶೀಲಿಸತೊಡಗಿದಳು. ವಸಂತಕ ಇನ್ನೊಂದು ವಚನದ ಕಟ್ಟನ್ನು ಪಡೆದು ತನ್ನ ನಿವಾಸಕ್ಕೆ ನಿರ್ಗಮಿಸಿದ.

* * *

ವಚನಗಳನ್ನು ಓದುತ್ತ ಕುಳಿತಿದ್ದ ಮಹಾದೇವಿಗೆ ಅನುಭವಮಂಟಪದ ಚಿತ್ರ ಎಲ್ಲೆಲ್ಲೂ ಕಾಣುತ್ತಿತ್ತು. 'ಕಲ್ಯಾಣ', 'ಬಸವಣ್ಣ' ಎಂಬ ಎರಡೂ ಶಬ್ದಗಳು ಹೃದಯಗಹ್ವರದಲ್ಲಿ ಮಾರ್ದನಿಸುತ್ತಿದ್ದವು.

> ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
> ಆಚಾರವೆಂಬ ಬತ್ತಿಗುಂಟ, ಬಸವಣ್ಣನೆಂಬ ಜ್ಯೋತಿಯು ಮುಟ್ಟಿಸಲು
> ತೊಳಗಿ ಬೆಳಗುತ್ತಿರ್ದಿತಯ್ಯ ಶಿವನ ಪ್ರಕಾಶ!
> ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಪ್ರಮಥ ಗಣಂಗಳು!

ಪ್ರಭುದೇವರು ಎಷ್ಟು ಪರಿಣಾಮಕಾರಿಯಾಗಿ ಅಣ್ಣನವರ ನಿಲುವನ್ನು ಬಣ್ಣಿಸುವರು. ಅಂತಹ ಅವಿಮುಕ್ತಕ್ಷೇತ್ರವನ್ನು ಪ್ರವೇಶಿಸಿ, ಬಸವಣ್ಣನವರ ಪಾದಸ್ಪರ್ಶವನ್ನು ಪಡೆದು, ಮಹಾನುಭಾವಿಗಳ ಸಂಗದಲ್ಲಿರುವ ಕ್ಷಣವು ಯಾವಾಗ ಬಂದೀತೋ....?'

ಚಂದ್ರನ ದರ್ಶನವಾದ ತಕ್ಷಣ ಸಮುದ್ರವು ಉಕ್ಕೇರುವಂತೆ ಅಣ್ಣನವರ ನೆನಪು ಮಹಾದೇವಿಯ ಚಿತ್ತಶರಧಿಯಲ್ಲಿ ಆನಂದದ ತೆರೆಗಳನ್ನು ಉಕ್ಕಿಸುತ್ತಿತ್ತು. ಒಮ್ಮೊಮ್ಮೆ ಅಂದುಕೊಳ್ಳುತ್ತಿದ್ದಳು: 'ಶರಣರ ದಿವ್ಯ ಸಂಗವು ದೊರೆತರೆ ನನ್ನ ಬಾಳಗುರಿಯನ್ನು ಮುಟ್ಟಲು ಸಾಧ್ಯ' ಎಂಬ ಆಶ್ವಾಸನೆ, ಆ ದೈವೀಕೂಟದಿಂದ ಶ್ರೀರಕ್ಷೆ ದೊರೆಯುವುದೆಂಬ ಉತ್ಕಟ ಭರವಸೆಯಿಲ್ಲದಿದ್ದರೆ ಬದುಕಿನ ಈ ಆಘಾತಗಳನ್ನು ಸಹಿಸಲು ನನಗಾಗುತ್ತಿತ್ತೋ ಇಲ್ಲವೋ. ಮಾತೃಹೃದಯಿಯಾದ ಬಸವಣ್ಣನ ಕಾರುಣ್ಯಕವಚವು ನನಗೆ ದೊರೆತೇ ತೀರುವುದು. ಅವನನ್ನು ಕಂಡಲ್ಲದೇ ಬಾಳಿಗರ್ಥವಿಲ್ಲ.' ಈ ಅದಮ್ಯ ಆಕಾಂಕ್ಷೆ ಕುಸಿಯುವ ಸ್ಥೈರ್ಯವನ್ನು ಮೇಲಕ್ಕೆತ್ತಿ ನಿಲ್ಲಿಸುತ್ತಿತ್ತು, ಸೋತು ಆತ್ಮಾಹುತಿಯ ಆಲೋಚನೆ ಮಾಡುವ ಮನವನ್ನು ಹಿಂದಕ್ಕೆ ಎಳೆದು, ಬದುಕಿದ್ದು ಮುಂದೆ ನುಗ್ಗುವ ಅಪೇಕ್ಷೆಯನ್ನು ಜೀವಂತವಿಡುತ್ತಿತ್ತು.

ಆ ಆಲೋಚನೆಯಲ್ಲಿ ಕುಳಿತಿರುವಾಗಲೇ ಕೌಶಿಕನು ಆಗಮಿಸಿದ. ಯಾಂತ್ರಿಕವಾಗಿ ಎದ್ದು ನಿಂತು, ಕೈ ಮುಗಿದು ಆಸನವನ್ನು ತೋರಿಸಿ ಮುಂದಲಿ

'ದೇವಿ, ಜಂಗಮರ ಉಪಚಾರವು ನಿರ್ವಿಘ್ನವಾಗಿ ನೆರವೇರಿತಷ್ಟೆ....' ಕೌಶಿಕ ಕೇಳಿದ.

'ತಮ್ಮ ಔದಾರ್ಯದಿಂದ ಸಾಂಗವಾಗಿ ನೆರವೇರಿತು, ಮಹಾಪ್ರಭು. ಅವರಾದರೂ ಉಪಚಾರ-ಆತಿಥ್ಯಗಳಿಗಾಗಿಯೋ ಬರುವವರಲ್ಲ, ತತ್ತ್ವಪ್ರಸಾರಕ್ಕಾಗಿ ಬರುವವರು. ಅಲ್ಪೋಪಚಾರವನ್ನೂ ಆನಂದದಿಂದ ಸ್ವೀಕರಿಸುವರು.'

'ಆದರೊಂದು ಮಾತು....ಅರಸಿಯರಾದ ತಾವು, ಪಟ್ಟದರಸಿಯರೂ ಆಗಲಿರುವವರು ಸ್ಥಾನಮಾನ ಬಿಟ್ಟು ಅವರನ್ನು ಇದಿರ್ಗೊಳ್ಳುವುದಾಗಲೀ, ಸ್ವತಃ ನಿಂತು ಉಪಚರಿಸುವುದಾಗಲೀ, ದ್ವಾರವಟ್ಟದವರೆಗೆ ಹೋಗಿ ಬೀಳ್ಕೊಡುವುದಾಗಲೀ—ಇವು ಗೌರವಕ್ಕೆ ಕುಂದು ತರುವಂತಹುವಲ್ಲವೆ?' ಕೌಶಿಕ ಕೇಳಿದ.

'ಎಂದೆಂದೂ ತನಗೆ ಉಪಚಾರವನ್ನಾಗಲೀ, ನಮಸ್ಕಾರವನ್ನಾಗಲಿ ಮಾಡದ ಈಕೆ ಆ ಬಡ ಜೋಗಿಗಳಿಗೆ ಅಷ್ಟೊಂದು ಉಪಚಾರವನ್ನೇಕೆ ಮಾಡುವಳು?' ಎಂಬುದೊಂದು ರಹಸ್ಯವಾಗಿತ್ತವನಿಗೆ. ಚಾತುರ್ಯದಿಂದ ಇದನ್ನು ತಿಳಿಯಬೇಕೆಂದು ಮೃಣಾಲಿನಿಯೆಂಬ ವಿಚಕ್ಷಣಮತಿಯ ವಿಳಾಸಿನಿಯನ್ನು ಪ್ರಶಾಂತ ಭವನದಲ್ಲಿ ಇರಿಸಿದ್ದ. ಮಹಾದೇವಿಯ ಪೂರ್ವಭಾವಿ ಒಡನಾಟವಾಗಲಿ, ಅವಳ ಆಧ್ಯಾತ್ಮಿಕ ನಿಲುವಿನ ಅರಿವಾಗಲಿ ಏನೊಂದೂ ಇಲ್ಲದ ಮೃಣಾಲಿನಿ ಗುಪ್ತಚಾರಿಣಿಯಾಗಿ ನಿಂತಳು. ಆಕೆ ಸ್ವಭಾವತಃ ತೀಕ್ಷ್ಣಮತಿಯಾದರೂ ಸ್ವಲ್ಪ ಕುಹಕಬುದ್ಧಿಯವಳು. ಏನಾದರೊಂದು ಸುದ್ದಿಯನ್ನು ಸೂರುತ್ತಾ ಅರಮನೆಯ ತುಂಬ ಸಂಚರಿಸುವ, ಒಡಕು ಬಾಯಿಯವಳು. ಬಹು ದಿವಸಗಳಿಂದ ಯಶೋಮತಿಯ ಆಪ್ತಪರಿಚಾರಿಕೆಯಾಗಿದ್ದು ಅನೇಕ ಸುದ್ದಿಗಳನ್ನು ಆಕೆಗೆ ತಂದು ಮುಟ್ಟಿಸುವವಳಾಗಿದ್ದಳು.

ಕೌಶಿಕನು ಮಹಾದೇವಿಯ ಆಗಮನದ ನಂತರ ತನ್ನರಮನೆಗೆ ಬರದಿರಲು, ಯಶೋಮತಿಯ ಹೃದಯ ಮತ್ಸರದಿಂದ ಕುದಿಯುತ್ತಿತ್ತು. ಶಾಶ್ವತವಾಗಿ ತನ್ನಿಂದ ರಾಜನು ದೂರಾದಾನೇನೋ ಎಂಬ ಭಯವೂ ಕಾಡದಿರಲಿಲ್ಲ. ಬನವಾಸಿಯ ಪ್ರವಾಸಕ್ಕೆ ತನ್ನನ್ನು ಬಿಟ್ಟುಹೋದಾಗಿನಿಂದ ಆ ಭಯವು ಇನ್ನೂ ತೀವ್ರವಾಗಿ, ದಿಕ್ಕುಗಾಣದಷ್ಟು ವಿಹ್ವಲಳಾಗಿದ್ದಳು. ಏನಾದರೂ ಮಾಡಿ ಕೌಶಿಕನ ಮನಸ್ಸನ್ನು ಒಡೆಯಬೇಕೆಂದು ಎಷ್ಟೋ ಬಾರಿ ಯೋಜನೆಯನ್ನು ರೂಪಿಸಿದ್ದರೂ, ಕೌಶಿಕ ಅತ್ತಕಡೆಗೇ ಹಾಯದಿರಲು ಯಶೋಮತಿ ಹತಾಶಳಾದಳು. ಅಂದೊಂದು ದಿನ ಬಂದವನೂ ತಾನು ಹಾಲನ್ನು ತರುವಷ್ಟು

ನಜ್ಜುಗೊಜ್ಜಾದ ಕೌಶಿಕನು ಮನದ ಉದ್ವಿಗ್ನತೆಯನ್ನು ತಾಳಲಾರದೆ ಯಶೋಮತಿಯ ಬಳಿಗೆ ಬಂದಾಗ ಇದೇ ಸೂಕ್ತ ವೇಳೆಯೆಂದು ಅವಳು ಮೆಲ್ಲನೆ ಮಾತಿಗೆ ತೊಡಗಿದಳು.

'ಪ್ರಭು....ತಾವು ಬೆಳ್ಳಗಿರುವದನ್ನೆಲ್ಲ ಹಾಲು ಎಂದು ನಂಬುವವರು. ನಿಮ್ಮ ಈ ಮುಗ್ಧತೆಯ ದುರುಪಯೋಗ ಬಹಳಷ್ಟು ಆಗುತ್ತಿದೆ....'

'ಅದು ಹೇಗೆ ಯಶೋಮತಿ....?'

'ಪ್ರಶಾಂತಭವನದಲ್ಲಿ ಮಿತಿಮೀರಿದ ಅನಾಚಾರಗಳು, ದುರ್ವ್ಯವಹಾರಗಳು ನಡೆಯತೊಡಗಿವೆ. ಮೆಚ್ಚಿತಂದ ಮನದನ್ನೆಯ ಬಗೆಗೆ ಹೇಳುವುದೇಕೆಂದು ಇಷ್ಟು ದಿನ ಸಹಿಸಿಕೊಂಡಿರುವೆ. ತಮಗೆ ನಮಗಿಂತ ಹೆಚ್ಚಾಗಿ ಆ ಧೂರ್ತ ಸವಣಿಯೇ ಬೇಕಲ್ಲವೆ?' ಹುಸಿ ಮುನಿಸು ತೋರಿದಳು.

'ಹಾಗೇನಿಲ್ಲ ಯಶೋಮತಿ....ರಾಜ್ಯದ ಕಾರ್ಯಭಾರದ ನಡುವೆ ಬರಲಾಗಲಿಲ್ಲ....' ಅದು ಸುಳ್ಳೆಂಬುದು ಇಬ್ಬರಿಗೂ ಗೊತ್ತು.

'ನನ್ನ ಮಾತಿನಲ್ಲಿ ತಮಗೆ ವಿಶ್ವಾಸವಿಲ್ಲದಿದ್ದಲ್ಲಿ ಮೃಣಾಲಿನಿಯನ್ನು ಗುಪ್ತಚಾರಿಣಿಯನ್ನಾಗಿ ಕಳಿಸಿರಿ; ಎಲ್ಲವೂ ತಿಳಿಯುವುದು....'

ಜಂಗಮರು ಬಂದ ದಿನ ಅಲ್ಲಿಯ ಕಾರ್ಯಗಳನ್ನು ಮೌನವಾಗಿ ಗಮನಿಸಿದ ಮೃಣಾಲಿನಿ, ಉಪ್ಪುಕಾರ ಹಚ್ಚಿ ಕೌಶಿಕನಿಗೆ ವರದಿ ಮಾಡಿದ್ದಳು. ಅದಕ್ಕಾಗಿ ಅವನು ತ್ವರೆಯಿಂದ ಜಂಗಮರ ನಿರ್ಗಮನದ ನಂತರ ಪ್ರಶಾಂತಭವನಕ್ಕೆ ಬಂದುದು.

'ಪ್ರಭು....ಮದಗಳ ತವರ್ಭೂಮಿ ಮಾನವನ ಮನಸ್ಸು! ಕುಲ, ಛಲ, ಧನ, ರೂಪ, ಯೌವ್ವನ, ವಿದ್ಯೆ, ರಾಜ್ಯ, ತಪ ಈ ಎಲ್ಲ ಮದಗಳಲ್ಲಿ ಸೆರೆಸಿಕ್ಕ ನರನಿಗೆ ಗುರುಹಿರಿಯರ ಸೇವೆ ಅಪಮಾನಕಾರಕವಾಗಿ ಕಾಣುವುದು ಸಹಜ. ಆದರೆ ಮನುಷ್ಯನಿಗೆ ಇರುವ ಬೆಲೆ ಎಷ್ಟು? ಬೇಟೆಗಾರ ಮೊಲವನ್ನು ಹೊಡೆದು ತಂದರೆ, ಎರಡು ದುಡ್ಡು ಕೊಟ್ಟಾದರೂ ಅದನ್ನು ಕೊಳ್ಳುವರು. ನೆಲವನಾಳುವ ಚಕ್ರವರ್ತಿಯ ಹೆಣವನ್ನು ಒಂದಡಕೆ ಕೊಟ್ಟು ಸಹ ಕೊಳ್ಳರು. ಮೊಲನಿಗಿಂತ ಕ್ಷುಲ್ಲಕವಾದ ಈ ಬದುಕಿಗೆ ನೀವು ಕೊಡುವ ಮೌಲ್ಯವೆಷ್ಟು! ಮಹಾತ್ಮರ ಸೇವೆಯಿಂದ ನಮ್ಮ ಹಣೆಯ ದುರ್ಲಿಖಿತ ತೊಡೆದು, ಕರ್ಮವು ನಿರ್ಮಲವಾಗುವುದು....'

'ಇಂತಹ ಭಿಕ್ಷುಕರ, ಬೈರಾಗಿಗಳ ಉಪಚಾರವನ್ನು ಮಹಾರಾಣಿಯಾದ ನೀವೇಕೆ [illegible]?'

'ನಮ್ಮಾನಂದಕ್ಕೆ ತಾನೇ ಕೈಯ್ಯಾರೆ ಸೇವೆ ಮಾಡಬೇಕೆನ್ನುವುದು. ಅವರು ಏನನ್ನೂ ಬಯಸದ ನಿರ್ಲಿಪ್ತರು. 'ಭಿಕ್ಷುಕರು' ಎಂಬ ಮಾತನ್ನು ಆಡದಿರಿ ಪ್ರಭು. ಅವರು ಪಾರಮಾರ್ಥ ಬದುಕಿನ ಶಿಕ್ಷಕರು, ಭವದ ದಾಳಿಯಿಂದ ಕಾಪಾಡುವ ರಕ್ಷಕರು. ರಾಜ ಮಹಾರಾಜರುಗಳಿಗೆ ಹೆಣ್ಣು, ಹೊನ್ನು ಮಣ್ಣಿನ ದಾಹ; ಸಿಕ್ಕಷ್ಟೂ ಇನ್ನೂ ಬೇಕೆಂಬ ಅತೃಪ್ತಿ. ಆದರೆ ಶರಣರ ಅಂತಹ ನಿಷ್ಕಾಮ, ನಿಸ್ವಾರ್ಥ ಜೀವನ ಅನುಪಮ. ಅವರು ಎಲ್ಲರಿಗಿಂತಲೂ ಸಿರಿವಂತರು—ಆತ್ಮಸಂಪತ್ತಿನಲ್ಲಿ.'

ಅಂಥವರು ಬೇಡಲಿಕ್ಕೆ ಏಕೆ ಬಂದರೋ ?....' ವ್ಯಂಗ್ಯವಾಗಿ ಕೇಳಿದ.

'ಅವರು ಬೇಡಲಿಕ್ಕೆ ಬಂದಿಲ್ಲ—ಜ್ಞಾನವನ್ನು ನೀಡಲಿಕ್ಕೆ ಬಂದಿದ್ದಾರೆ. ನಾವು ಅವರಿಗೆ ಕೊಟ್ಟುದು ಹೊಟ್ಟೆಯ ದಾಹವನ್ನು ಹಿಂಗಿಸುವ ತುತ್ತನ್ನ. ಅವರು ನೀಡಿದುದು ಆತ್ಮನ ಹಸಿವೆಯನ್ನು ತಣಿಸುವ ನೆತ್ತಿಯ ಅನ್ನ-ಜ್ಞಾನ ತತ್ತ್ವ ! ನಮ್ಮ ದುಡ್ಡನ್ನು, ನಾವು ಕೊಡುವ ಧನವನ್ನು ದೃಷ್ಟಿಯಲ್ಲಿರಿಸಿ ಕೊಂಡು ಬರುವ ಪೂಜಾರಿಗಳು ಅವರಲ್ಲ, ಭಕ್ತಿಯ ಸಂಪತ್ತನ್ನು ದರ್ಶಿಸಿ ಬರುವ ಮಹಾಮಹಿಮರು....

ಧನದ ಮೇಲೆ ಬಂದವರೆಲ್ಲ ಅನುಸರಿಗಳಲ್ಲದೆ,
ಆಗುಮಾಡಬಂದವರಲ್ಲ,
ಮನದ ಮೇಲೆ ಬಂದು, ನಿಂದು, ಜರಿದು ನುಡಿದು,
ಪಥವ ತೋರಬಲ್ಲಡಾತನೆ ಸಂಬಂಧಿ...*

ಇಂತಹ ಆಧ್ಯಾತ್ಮಸಂಬಂಧಿಗಳನ್ನು ಅರಿಯಲು ವಿಶೇಷವಾದ ಕಣ್ಣುಗಳು ಬೇಕು ಪ್ರಭು....'

'ಸಂವಾದವು ವಿವಾದವಾಗಿ ಇನ್ನು ವಿರಸದ ಜಾಡನ್ನು ಹಿಡಿದೀತು, ತನ್ನ ಮುಖಭಂಗವಾದೀತು' ಎಂದು ಸಂತೈಸಿಕೊಂಡ ಕೌಶಿಕನು, 'ಕೆಲವೇ ದಿನಗಳಷ್ಟೆ! ಹಿಡಿದ ವ್ರತವು ಮುಗಿಯಲಿ; ಆಮೇಲೆ ಈ ಚೆಲ್ವಿನ ಮುದ್ದೆಯು ತನ್ನ ಪ್ರೇಮದ ರಾಣಿಯಾಗಿ ಮೆರೆಯುವಳಲ್ಲ' ಎಂದು ಆಲೋಚಿಸಿ, ನಗುನಗುತ್ತ—

'ದೇವಿ .. ನಿನ್ನ ಸುಖ–ಸಮಾಧಾನಗಳೇ ನನ್ನ ಆತ್ಮಶಾಂತಿಯ ಸಾಧನಗಳು. ನೀನು ನೆಮ್ಮದಿಯಾಗಿದ್ದರೆ ನನಗದೇ ಸಾಕು....' ಎಂದು ನುಡಿದು ನಿರ್ಗಮಿಸಿದ.

* * *

ಕೌಶಿಕನು ಸಚಿವ ಸಂಪುಟದ ಅನಿವಾರ್ಯ ಕರೆಯ ಮೇರೆಗೆ ಆಸ್ಥಾನದ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಮಹಾದೇವಿಯನ್ನು ಕಾಣಲು ಬಹು ಉತ್ಸುಕತೆಯಿಂದ ಪ್ರಶಾಂತಭವನದೊಳಗೆ ಕಾಲಿರಿಸಿದನು. ಅನುಭವ ಗೋಷ್ಠಿ ನಡೆದಿತ್ತು. ನಿಜಲಿಂಗದೇವರು ತಾಳವನ್ನು ಹಾಕುತ್ತಲಿದ್ದರು. ಮಹಾದೇವಿ ಏಕನಾದವನ್ನು ಮೀಂಟುತ್ತ ಹಾಡತೊಡಗಿದ್ದಳು. ಅವಳ ಆ ತನ್ಮಯತೆಯನ್ನು ಕಂಡು ಬೆರಗಾದ ಕೌಶಿಕನು ಮಹಡಿಯನ್ನೇರಿ, ಅಲ್ಲಿಂದ ಮಹಾದೇವಿಯು ಕಾಣಿಸುವಂತೆ ಕುಳಿತ. ನಿಜಲಿಂಗದೇವರ ಸನ್ನಿಧಿಯಲ್ಲಿ ಕಿರಿಯ ಜಂಗಮರೂ ಅಲ್ಲದೆ ಮದನರತಿ, ಶಿವಕಾಮಿನಿ, ವಸಂತಕರೂ ಕುಳಿತಿದ್ದರು. ಮೃಣಾಲಿನಿಯೂ ವಿಳಾಸಿನಿಯರ ನಡುವೆ ಆಸೀನಳಾಗಿದ್ದಳು.

ಇಲ್ಲಿಯವರೆಗೆ ನಡೆದ ಚರ್ಚೆಯ ಬಳಿಕ ಮಂಗಲ ಮಾಡುವ ಮುನ್ನ ಒಂದೆರಡು ವಚನಗಳನ್ನು ಹಾಡಬೇಕು ಎಂದು ಮಹಾದೇವಿ ಏಕನಾದವನ್ನು ಕೈಗೆತ್ತಿಕೊಂಡಿದ್ದಳು. ವೀಣೆಯಲ್ಲಿ ಬಲ್ಲಿದಳಾದ ಮದನರತಿ ಮಹಾದೇವಿಯ ಗಾನದಿಂದ ಸ್ಫೂರ್ತಿಗೊಂಡು ವೀಣೆಯನ್ನು ಜೋಡಿಸಿಕೊಂಡಳು. ಪ್ರಿಜಯಂತಿ ಮೃದಂಗದ ನಾದವನ್ನು ಒಂದುಗೂಡಿಸಿದಳು. ಭಕ್ತಿಯ ಅಲೆಗಳು ಅರಮನೆಯ ವಾಯುಶರಧಿಯಲ್ಲಿ ಅಪ್ಪಳಿಸತೊಡಗಿದವು. ಒಂದಾದಮೇಲೊಂದು ವಚನವನ್ನು ಭಾವಾವೇಶದಿಂದ ಹಾಡತೊಡಗಿದ ಮಹಾದೇವಿಯನ್ನು ಉತ್ಥಾನಿಸಲಾರದೆ, ಎಲ್ಲರೂ ಮೌನವಾಗಿ ಸವಿಯತೊಡಗಿದರು.

ಕೆಲವು ಕ್ಷಣಗಳ ಬಳಿಕ ಏಕನಾದ ಜಾರಿತು, ಗಾಯನ ನಿಂತಿತು. ಮಹಾದೇವಿ ಮಾತ್ರ ಕಣ್ತೆರೆಯದೆ ಮೈಮರೆತಿದ್ದಳು.

ಸೂರ್ಯ ಅಸ್ತಮಿಸಿದ, ಸಂಜೆ ನಿರ್ಗಮಿಸಿತು. ಮಬ್ಬು ವ್ಯಾಪಿಸಿ, ನಂತರ ಇರುಳಿಗೆ ಎಡೆಮಾಡಿಕೊಟ್ಟಿತು. ಆದರೆ ಮಹಾದೇವಿ ಏಳಲಿಲ್ಲ. ಪರಿಚಾರಿಕೆಯರು ಸದ್ದುಮಾಡದೆ ದೀವಿಗೆಗಳನ್ನು ಹೊತ್ತಿಸಿ, ಪಡಸಾಲೆಗೆ ಬೆಳಕು ತುಂಬಿದರು. ತಲೆಯ ಮೇಲಿನ ಮುಸುಕು ಜಾರಿ ಹೆಚ್ಚಿಟ್ಟ ಬೆಳಗಿನಲ್ಲಿ ಕೂದಲು ಮಿಂಚುತ್ತಿದ್ದವು. ದುಂಡುದುಂಡಾದ ತುಂಬು ತೋಳುಗಳು ಅಂದವಾಗಿ ಕಾಣತೊಡಗಿದ್ದವು. ತನ್ನೆದುರಲ್ಲಿ ಎಂದೂ ತಲೆಯ ಮೇಲಿನ ಮುಸುಗನ್ನೇ ತೆಗೆದಿರಲಿಲ್ಲವಾಕೆ. ಕೌಶಿಕನು ಕಳ್ಳು ಕುಡಿದವನಂತೆ ಉನ್ಮತ್ತನಾಗಿ ನೋಡಿದ. ಆದರೊಡನೆ, ಬಂದ ಆಗಂತುಕರೆದುರಿಗೆ ಭಾವೋನ್ಮತ್ತಳಾಗಿ ಹಾಡತೊಡಗಿದ್ದುದು ಸರಿ ಎನಿಸದೆ ಗೌರವಕ್ಕೆ ಕುಂದೆನಿಸಿತು. ಮನಸ್ಸಿನ ಭಾವನೆಗಳನ್ನು ಒತ್ತಿಹಿಡಿದ. ಕೆಳಗಿಳಿದು ಹೋದರೆ ತಡೆದಿಟ್ಟ ...

ನಿಜಲಿಂಗದೇವರು ಕಿರಿಯ ಜಂಗಮರನ್ನು ನೋಡಿದರು. 'ಹೊರಡುವುದು ಲೇಸು' ಎಂಬ ಸೂಚನೆಯನ್ನರಿತ ಅವರು ಮೆಲ್ಲನೆ ಎದ್ದು ನಿಂತು, ವಸಂತಕನನ್ನು ಸಮೀಪಿಸಿ ಹೇಳಿದರು :

'ಇದು ಭಾವಸಮಾಧಿ....ಅವ್ವನವರು ತಮಗೆ ಎಚ್ಚರವಾದಾಗ ಏಳಲಿ; ತಾವಾರೂ ಉತ್ಥಾನಿಸಬೇಡಿರಿ. ನಾವು ಹೊರಟುಹೋಗುತ್ತೇವೆ. ನಾಳೆಗೆ ಬಂದಾಗ ಅನುಭವಗೋಷ್ಠಿಯನ್ನು ಮುಂದುವರಿಸೋಣ.' ಜಂಗಮರ ತಂಡವು ಸದ್ದು ಮಾಡದೆ ಹೊರಟುಹೋಯಿತು. ಕೌಶಿಕನು ಅವರೆಲ್ಲ ಹೋದನಂತರ ಕೆಳಗಿಳಿದು ಬಂದು ಸನಿಹದ ಪೀಠದ ಮೇಲೆ ಕುಳಿತು ಕದಲದ ಕಣ್ಣಾಲಿಗಳಿಂದ ನಿಟ್ಟಿಸತೊಡಗಿದ. ಅರಸರು ಬಂದುದನ್ನುನೋಡಿ ವಿಳಾಸಿನಿಯರು ಒಬ್ಬೊಬ್ಬರೇ ಮರೆಯಾದರೂ, ವಸಂತಕನು ಮಾತ್ರ ದೂರಾಲೋಚನೆಯಿಂದ ಅಲ್ಲಿಯೇ ಕುಳಿತ. ಅವನು ಕೌಶಿಕನ ಉನ್ಮತ್ತ ಕಣ್ಣುಗಳನ್ನು ಗಮನಿಸಿದ್ದ. ರಾಜನು ಎಲ್ಲಿಯಾದರೂ ದುಡುಕಿ, ಆಕೆಯನ್ನು ಬಹಿರ್ಮುಖಮಾಡಿಯಾನು ಎಂಬ ಭಯ ವಸಂತಕನಿಗೆ.

ಮಹಾದೇವಿಯ ಶರೀರವು ಸೊರಗಿದ್ದರೂ ತಪೋಕಾಂತಿಯ ಆಗರವಾಗಿತ್ತು. ಎವೆಯಿಕ್ಕದೆ ಅವಳ ಶರೀರವನ್ನು ಕೌಶಿಕನು ನಿಟ್ಟಿಸುವುದನ್ನು ಕಂಡ ವಸಂತಕನಿಗೆ, ಆಸೆಯ ನೀರನ್ನು ಸುರಿಸುತ್ತ ಕುಳಿತ ಹಸಿದ ನಾಯಿಯ ನೆನಪು ಬಂದಿತು. ಗುಡಿಯಲ್ಲಿ ಲಿಂಗವೊಂದರ ಮುಂದೆ ನೈವೇದ್ಯವಿಟ್ಟರೆ, ಗರ್ಭಗುಡಿಯ ಹೊರಗೆ ಕುಳಿತ ನಾಯಿಗೆ ಲಿಂಗದ ದರ್ಶನ ಪಡೆವುದಕ್ಕಿಂತ ಮಿಗಿಲಾಗಿ, ಮುಂದಿಟ್ಟ ಅನ್ನದ ಕಡೆಗೇ ಆಸೆಯಲ್ಲವೆ?

'ಕಾಮದ ನಾಯಿ!....ಸಾತ್ವಿಕ ದೇವತೆಯ ವ್ಯಕ್ತಿತ್ವ ದರ್ಶನಕ್ಕಿಂತ ಮಿಗಿಲಾಗಿ ಅವಳ ಅಂಗಾಂಗದ ಅಂದದ ಕಡೆಗೇ ಗಮನ....' ಜಿಗುಪ್ಸೆ ತಾಳಿ ಕೌಶಿಕನ ಮುಖದಿಂದ ತನ್ನ ಕಣ್ಣುಗಳನ್ನು ಕಿತ್ತು ಇನ್ನೊಂದು ಕಡೆಗೆ ಹರಿಸಿದ.

ಸ್ವಲ್ಪ ವೇಳೆಯ ಬಳಿಕ ಮಹಾದೇವಿ ಜಾಗೃತಳಾದಳು. ಅಪಾರವಾದ ಆನಂದಾನುಭೂತಿಯಲ್ಲಿದ್ದು ಕಣ್ತೆರೆದಾಗ ತಾನೆಲ್ಲಿರುವೆನೆಂಬುದರ ಅರಿವೇ ಆಗದೆ ಎಲ್ಲವನ್ನೂ ನೋಡಿದಳು.

'ಅವರೆಲ್ಲ ಹೋದರೆ?....' ಸ್ವಲ್ಪಸ್ವಲ್ಪವಾಗಿ ನೆನಪಿಸಿಕೊಳ್ಳುತ್ತ ಕಣ್ಣೆದುರಿಗೆ ಕಂಡ ವಸಂತಕನನ್ನು ಕೇಳಿದಳು.

'ಅಹುದು, ತಾಯಿ

‘ದರ್ಶನವನ್ನು ಪಡೆದುಕೊಳ್ಳಲಾಗಲಿಲ್ಲ; ನಾಳೆಗಾಗಿ ಆಮಂತ್ರಣವನ್ನೂ ನೀಡಲಿಲ್ಲ. ನಾಳೆ ಬರುವರಷ್ಟೆ?’

‘ಬರುವುದಾಗಿ ಹೇಳಿ ಹೋದರು....’

ಮಹಾದೇವಿಯು ತನ್ನ ತೊಡೆಯಮೇಲೆ ಜಾರಿಬಿದ್ದಿದ್ದ ಏಕನಾದವನ್ನು ಮಗ್ಗುಲಿಗಿರಿಸಿದಳು. ಮೇಲಕ್ಕೆದ್ದು, ನಿಧಾನವಾಗಿ ತನ್ನ ಕೋಣೆಯ ಕಡೆಗೆ ನಡೆದು, ಬಾಗಿಲನ್ನು ಮುಚ್ಚಿಕೊಂಡಳು.

ಕೌಶಿಕನಿಗೆ ಅಪಮಾನವೆನಿಸಿತು. ತಾನು ಕಣ್ಣೆದುರಿಗಿದ್ದರೂ ನೋಟವನ್ನು ಸಹ ಹರಿಸದೆ, ಆ ಭಿಕಾರಿಗಳ ಬಗ್ಗೆ ಆಸ್ಥೆಯಿಂದ ಕೇಳಿ, ಮರುದಿನ ಬರುವರೆಂದಾಗ ಸಮಾಧಾನಪಟ್ಟುಕೊಂಡ ಮಹಾದೇವಿಯ ವರ್ತನೆ ಅವನ ಆತ್ಮಾಭಿಮಾನವನ್ನು ಕೆರಳಿಸಿತು. ತನ್ನ ಏಕಾಂತಭವನಕ್ಕೆ ಎದ್ದು ಹೊರಟ. ಹಾಸಿಗೆಯ ಮೇಲೆ ಮೈಚೆಲ್ಲುತ್ತಲೇ, ಮೃಣಾಲಿನಿಯನ್ನು ಕರೆತರಲು ಪರಿಚಾರಕರನ್ನು ಅಟ್ಟಿದ.

ಬಂದ ಮೃಣಾಲಿನಿ ಕೈಮುಗಿದು ನಿಂತು, ಹೇಳಿದಳು :

‘ಮಹಾಪ್ರಭು....ಏನು ಹೇಳಲಿ! ತಮ್ಮಂತಹ ದೊರೆಗಳಿಗೆ ಮೋಸ ಮಾಡುವದನ್ನು ಕಂಡು ನನ್ನ ಹೃದಯವು ತಲ್ಲಣಿಸುತ್ತಿದೆ. ಆ ಜಂಗಮರಿಗೆ ಬಂಗಾರದ ನಾಣ್ಯಗಳನ್ನು ತುಂಬಿ ತುಂಬಿ ಕಟ್ಟಿಕೊಡುವರು. ನಿನ್ನೆ ಒಬ್ಬರಿಗೊಂದೊಂದು ಹರಿವಾಣದಲ್ಲಿ, ಕನಕದ ಕಡಗ, ರತ್ನಹಾರ, ವಜ್ರದುಂಗುರಗಳನ್ನು ಇಟ್ಟುಕೊಟ್ಟರು. ಎಲ್ಲಕ್ಕಿಂತ ಮಿಗಿಲಾಗಿ....’ ಮೃಣಾಲಿನಿ ವಿಲಕ್ಷಣವಾಗಿ ನೋಡಿ, ಮೌನ ತಾಳಿದಳು.

‘ಧೈರ್ಯವಾಗಿ ಹೇಳು....’

‘ಆ ಗುಂಪಿನಲ್ಲಿ ಚನ್ನಮಲ್ಲಿಕಾರ್ಜುನಾ ಎಂಬ ಪ್ರೇಮಿಯೂ ಇದ್ದಂತೆ ತೋರಿತು. ಅವರ ಹಂಬಲ-ಉಪಚಾರಗಳೆಲ್ಲವೂ ಅವನನ್ನೊಲಿಸಲು....’

ಕೌಶಿಕನ ಸರ್ವಾಂಗವೂ ಕೋಪ-ನಿರಾಶೆಗಳ ಸಂಗಮವಾಗಿ ನಡುಗಿತು.

‘ನೀನು ಹೋಗು ಮೃಣಾಲಿನಿ....ಈ ವಿಷಯವನ್ನು ಯಾರ ಮುಂದೂ ಬಾಯಿಬಿಡಬೇಡ....’

‘ನಾನೇಕೆ ಹೇಳಲಿ ನನ್ನೊಡೆಯಾ? ಉಪ್ಪುಂಡಮನೆಗೆ ಎರಡು ಬಗೆಯಬಾರದೆಂದು ತಮಗೆ ಮಾತ್ರ ಹೇಳಿದೆ....’ ಮೃಣಾಲಿನಿ ಮೌನ ತಾಳಿ ಸರಿದು ಹೋದಳು. ಕೌಶಿಕನು ಕೆಂಡದ ಹಾಸಿಗೆಯ ಮೇಲೆ ಮಲಗಿದಂತೆ ಹೊಯ್ದಾಡಿದ.

ಭಿಕಾರಿಯೊಬ್ಬನಿಗೆ ಒಲಿಯುವುದುಂಟೇ?.... ಛೀ.... ಸಾಧ್ಯವಿಲ್ಲ....' ವಿವೇಕವು ಸಮಾಧಾನ ನೀಡುತ್ತಿತ್ತು.

'ಪ್ರೇಮವು ಕುರುಡು ಎಂದು ಏಕೆ ಹೇಳುವರು? ಪ್ರೇಮವು ಕೂಡಿದರೆ ಇವೆಲ್ಲ ಅಡ್ಡಬರವು....' ಮನಸ್ಸು ಸಮಸ್ಯೆಯನ್ನು ತೆರೆದಿಡುತ್ತಿತ್ತು.

'ಅಷ್ಟು ಜನರಲ್ಲಿ ಯಾವನಿರಬಹುದು?'....ಒಮ್ಮೆ ಹಾಡುತ್ತಿದ್ದಳು:

'ಹೊಳೆವ ಜಡೆ, ಸುಲಿಪಲ್ಲು, ವಿಭೂತಿಧಾರಕ, ರುದ್ರಾಕ್ಷಿ ಧರಿಸಿದವನು, ಕರ್ಣಕುಂಡಲದವನು' ಎಂದು; ಆದರೆ ಈ ಆಗಂತುಕರಲ್ಲಿ ಜಟಾಧಾರಿಯಾದವರಾರೂ ಇರಲಿಲ್ಲವಲ್ಲಾ....ಯಾರಿಗೆ ಗೊತ್ತು ಜಟೆಯನ್ನು ಕತ್ತರಿಸಿ ಬೋಳು ಮಾಡಿಕೊಂಡಿರಬೇಕು....ಈ ಬೈರಾಗಿಗಳನ್ನು ನಂಬುವುದು ಬಲು ಕಷ್ಟ....' ದುರ್ಬಲ ಮನ ದನಿಕೊಡುತ್ತಿತ್ತು.

'ಇಲ್ಲದ ಸಂಶಯಪಡಬೇಡ....'ಲೋಕದ ಪುರುಷರನ್ನಾರನ್ನೂ ಮುಟ್ಟೆನು' ಎಂದು ಆಕೆ ಪ್ರತಿಜ್ಞೆ ತೊಟ್ಟಿಲ್ಲವೇ....? ಸಂಶಯದ ಸುಳಿಯಲ್ಲಿ ಬಿದ್ದು ಮುಳುಗೀಯೆ! ಆಕೆ ಅಮೃತದ ಕೊಡ; ಅವಳಲ್ಲಿ ವಿಷವನ್ನರಸುವ ಮೂರ್ಖತನ ಮಾಡಬೇಡ....' ವಿವೇಕವು ನುಡಿಯುತ್ತಿತ್ತು.

'ಏನೇ ಆಗಲಿ, ನಾಳೆ ಪರೀಕ್ಷಿಸುವೆ....' ಮನದಲ್ಲಿ ನಿರ್ಧರಿಸಿಕೊಂಡ. ಚಿತ್ತದ ತಳಮಳ ತಡೆಯಲು ಅಸಾಧ್ಯವಾಗಿ ಪರಿಚಾರಕರನ್ನು ಚಪ್ಪಾಳೆ ತಟ್ಟಿ ಕರೆದು, ಸುರೆಯನ್ನು ತರಿಸಿಕೊಂಡು ಮಿತಿಮೀರಿ ಕುಡಿದು ಹಾಸಿಗೆಯ ಮೇಲೆ ಬಿದ್ದುಕೊಂಡ.

೩೫. ದಿಗಂಬರ ದಿವ್ಯಯೋಗಿಣಿ

ಮಹಾದೇವಿಯ ಮನಸ್ಸು ಗಾಳಿಯಲ್ಲಿ ತೇಲುವ ಪರಿಮಳದಷ್ಟು ಹಗುರಾಗಿತ್ತು. ಯಾವಾಗಲೋ ಒಮ್ಮೆ ಬಂದು ಹೋಗುವ ಸಮಾಧಿಸ್ಥಿತಿಯು ಇಂದು ಮತ್ತೊಮ್ಮೆ ಬಂದು, ಅವಳನ್ನು ವಶಪಡಿಸಿಕೊಂಡಿತ್ತು. ಉತ್ಥಾನವಾದಾಗಲೂ ಯಾರೊಡನೆಯೂ ಮಾತನಾಡಬೇಕೆನಿಸಲಿಲ್ಲ. ಕೌಶಿಕನು ಕುಳಿತುದು ಕಂಡು ಬಂದರೂ ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ಆಕೆಗೆ ಗೊತ್ತು: 'ಅವನು ಏನಾದರೂ ಪ್ರಶ್ನೆ ಕೇಳುವನು; ತಾನು ಉತ್ತರಿಸಬೇಕಾಗುವುದು. ಆಗ ಬುದ್ಧಿಗೆ ಕೆಲಸ ಕೊಡಬೇಕು. ಬುದ್ಧಿಯು ಕೆಲಸ ಮಾಡತೊಡಗಿದರೆ ಈ ಭಾವದ ಅನುಭೂತಿಯು ಕೈಗೆ ಸಿಗದಂತೆ ಪಾರಾಗಿಬಿಡುವುದು. ಮಳೆ ಬಿಟ್ಟರೂ ಸಹ ಗಾಳಿಯು ತಂಪಾಗಿ ಬೀಸಿ ಮಳೆಯ ತಂಪು ಅನುಭವವನ್ನು ಕೊಡುವಂತೆ, ಸಮಾಧಿಸ್ಥಿತಿಯು ಹೋದರೂ ಅನುಭೂತಿಯಾದರೂ ಉಳಿಯಲಿ. ಈ ತನ್ಮಯತೆಯ ಗುಂಗಿನಿಂದ ವಂಚಿತಳಾಗುವುದು ಬೇಡ' ಎಂದುಕೊಂಡು ಅವಸರದಿಂದ ಎದ್ದು ಹೋದಳು.

ಅಂದು ರಾತ್ರಿಯೆಲ್ಲ ಅದೇ ಆನಂದ. ಕಲ್ಯಾಣವನ್ನು ಕಂಡಂತೆ, ಬಸವಣ್ಣನನ್ನು ದರ್ಶಿಸಿದಂತೆ ಅಪೂರ್ವ ಕನಸುಗಳು.

'ನನ್ನ ಮನದ ಅದಮ್ಯ ಬಯಕೆಯೇ ಹೀಗೆ ಕನಸಾಗಿ ಕಾಣುವುದೇನೋ! ಎಂದು ತನ್ನಲ್ಲಿ ತಾನೇ ನಕ್ಕಳು. ಆಗಸವನ್ನು ನೋಡಿ ನಕ್ಷತ್ರಗಳ ಚಾಲನೆಯ ಸೂತ್ರದ ಮೇಲೆ ಬ್ರಾಹ್ಮೀ ಮುಹೂರ್ತ ಸಮೀಪಿಸಿರುವುದನ್ನರಿತು, ಮನದಣಿಯುವಂತೆ ತಣ್ಣೀರಿನಲ್ಲಿ ಮಿಂದು ಪೂಜೆಗೆ ಕುಳಿತಳು. ಸರಸಸಲ್ಲಾಪವಾಡುತ್ತ ದೇವನನ್ನು ಕುರಿತು ಹೇಳಿದಳು:

'ಚನ್ನಾ....ಈ ಜಗತ್ತಿನಲ್ಲಿ ಸ್ವಾಭಾವಿಕವಾಗಿ ಒಂದು ತತ್ತ್ವವಿದೆ. ಅದೆಂದರೆ, ಲಗ್ನವಾದಾಗ ಗಂಡನನ್ನು ಅತ್ಯುತ್ಕಟವಾಗಿ ಪ್ರೇಮಿಸುವ ಹೆಂಗಳೆ, ಮಗುವಾಗುತ್ತಲೇ ಅರ್ಧದಷ್ಟು ಪ್ರೇಮವನ್ನು ಮಗುವಿಗೆ ಧಾರೆ ಎರೆಯುವಳು. ನನ್ನದೂ ಹಾಗೆಯೇ....ನಿನಗಾಗಿ ಹಂಬಲಿಸಿ, ಕಳವಳಿಸಿ ಸೋತು ಹೋಗಿದ್ದೆ. ಆದರೀಗ ನಿನ್ನ ಹಂಗು ನನಗೆ ಕಡಿಮೆಯಾಗಿದೆ. ಏಕೆಂದರೆ ಮಹಾನುಭಾವಿಗಳ ಸಂಗ ದೊರೆತಿದೆ....' ತನ್ನ ಕಲ್ಪನೆಯು ಆನಂದವನ್ನು ತಂದಿತು. ಆ ಭಾವವನ್ನು ವಚನದ ಮೂಲಕ ಹಾಡಿದಳು.

ಕಾಡದು ಬೇಡದು ಒಲಿಯದು ನೋಡಾ.
ಊಡಿದಡುಂಡು ನೀಡಿದಡೊಲಿದು, ಬೇಡಿದ ವರವ ಕೊಡುವ
ಜಂಗಮ ಲಿಂಗದ ಪಾದವ ಹಿಡಿದು ಬದುಕಿದೆನಯ್ಯಾ,
ಚನ್ನಮಲ್ಲಿಕಾರ್ಜುನಾ...*

ನಿನಗೆ ಏನು ಎಡೆ ಮಾಡಿದರೂ ಉಣ್ಣುವುದಿಲ್ಲ. ನನ್ನ ಪ್ರೇಮವನ್ನು ನೀನರಿಯೆ. ಆದರೆ ಮಹಾತ್ಮರು ಎಡೆಯನ್ನು ಉಣ್ಣುವರು; ಸುಪ್ರೀತರಾಗುವರು. ತಪ್ಪು ಮಾಡಿದರೆ ಬಯ್ದು ತಿದ್ದುವರು; ಆಧ್ಯಾತ್ಮಿಕ ಸಂಶಯಗಳನ್ನು ಪರಿಹರಿಸುವರು. ದಾರಿಕಾಣದಂತಾದರೆ ಮಾರ್ಗದರ್ಶನ ಮಾಡುವರು. ಅಂತಹ ಶರಣರೇ ನನಗೆ ಸಾಕು; ಇನ್ನು ನಿನ್ನ ಹಂಗಿಲ್ಲ ನನಗೆ' ಎನ್ನುತ್ತ ಕರ್ಪೂರದಾರತಿ ಬೆಳಗಿದಳು. ಒಂದು ಕ್ಷಣ ತಡೆದು ನುಡಿದಳು:

'ಮತ್ತೆಲ್ಲಾದರೂ ಕೋಪಿಸಿಕೊಂಡೀಯ ನನ್ನ ಮುದ್ದೇ?....ನಿನ್ನ ಕರುಣೆಯಿಂದಲೇ ತಾನೇ ಅವರ ಸತ್ಸಂಗ....ನಿನ್ನನ್ನು ಬಿಟ್ಟು ನನಗಿನ್ನು ಬದುಕುಂಟೇ?....'

ಸಂತೃಪ್ತಳಾಗಿ ಪೂಜೆಯನ್ನು ಮುಗಿಸಿದಳು. ನಸುಕಿನಲ್ಲಿಯೇ ಎದ್ದು ತಣ್ಣೀರೆರೆದುಕೊಂಡ ಕಾರಣ ಕೂದಲು ಆರಿರಲಿಲ್ಲ. ಶಿವಾನುಭವಗೋಷ್ಠಿಗೆ ಸಿದ್ಧಳಾಗಬೇಕೆಂದು ಕೈಯಲ್ಲಿ ಬಾಚುವ ಹಣಿಗೆಯನ್ನು ತೆಗೆದುಕೊಂಡು ಕಿಟಕಿಯ ಬಳಿ ನಿಂತಳು. ದಿನದಂತೆ ಅಂದೂ ಕಿಟಕಿಗೆ ಹೊಂದಿಕೊಂಡು ಹಬ್ಬಿದ್ದ ಸಂಪಿಗೆಯ ಕೊಂಬೆಯನ್ನು ದಿಟ್ಟಿಸಿದಳು. ಕೋಶವನ್ನು ಭೇದಿಸಿಕೊಂಡು ಪಾತರಗಿತ್ತಿ ಹೊರಬರತೊಡಗಿತ್ತು. ಒಳಗೆ ಕಂಬಳಿ ಹುಳುವಾಗಿ ಸೇರಿಕೊಂಡು ಈಗ ಬಣ್ಣ ಬಣ್ಣದ ಚಿಟ್ಟೆಯಾಗಿ ಹೊರಬರುವುದನ್ನು ಕಂಡು ತುಂಬ ಸಂತೋಷವೆನಿಸಿತು. 'ಶಿವೆ....ಶಿವೆ....' ಸಂಭ್ರಮದಿಂದ ಕೂಗಿದಳು.

'ಇದೇಕೆ ಇಷ್ಟು ಆನಂದ ಒಡತಿ?" ಶಿವಕಾಮಿನಿ ಓಡಿಬಂದು ಕೇಳಿದಳು.

'ನೋಡಿಲ್ಲಿ ಶಿವೆ....ಪಾತರಗಿತ್ತಿಯು ಬಂಧನ ಬಿಡಿಸಿಕೊಂಡು ಹೊರಬರುತ್ತಿದೆ. ಎಷ್ಟು ಸುಂದರ ರೆಕ್ಕೆಗಳು ನೋಡಿಲ್ಲಿ. ಇದು ಒಳಗೇ ಸಿಕ್ಕಿ ಎಲ್ಲಿ ಸಾಯುವುದೋ ಎಂದು ಭಯವಾಗಿತ್ತು ನನಗೆ....' ಶಿವೆಯು ಅದನ್ನು ನೋಡುತ್ತ ಹೇಳಿದಳು:

'ತಾಯಿ, ನಿಮಗೆ ಗೊತ್ತಿಲ್ಲವೇ? ರೇಷ್ಮೆಯ ಹುಳುವಾದರೆ ಮಾತ್ರ

ಪಾತರಗಿತ್ತಿ ಹಾಗಲ್ಲ....ಈ ಕೋಶಾವಸ್ಥೆ ಅದಕ್ಕೆ ಪುನರ್ಜನ್ಮ ನೀಡುವುದು. ಇದನ್ನು ಭೇದಿಸಿಕೊಂಡು ಹೊರಬಂದಮೇಲೆಯೇ ಪಾತರಗಿತ್ತಿಯ ಜೀವನದ ಆರಂಭ ಒಡತಿ. ಇನ್ನುಮೇಲೆ ಹೂವ್ಗಳ ಮಕರಂದಪಾನಕ್ಕೆ ಹಾರುವುದು....' ಏಕೋ ಈ ಮಾತುಗಳನ್ನು ಕೇಳಿ ಮಹಾದೇವಿ ಪುಳಕಿತಳಾದಳು.

'ಶರಣರ ಬರವಿಗೆ ಎಲ್ಲ ಸಿದ್ಧತೆ ಮಾಡು. ನಾನು ಕೂದಲನ್ನು ಬಿಸಿಲಲ್ಲಿ ಒಣಗಿಸಿಕೊಂಡು, ಹೆರಳು ಹಾಕಿಕೊಂಡು ಬಂದುಬಿಡುವೆ...' ಹಣಿಗೆಯೊಡನೆ, ಬಿಸಿಲಿಗೆ ಮೈಯೊಡ್ಡಲು ಉದ್ಯಾನಕ್ಕೆ ನಡೆದಳು. ಪಾತರಗಿತ್ತಿಯ ರೂಪಾಂತರ ಸೃಷ್ಟಿಯ ಸಹಜಕ್ರಿಯೆಯಾದರೂ ಅವಳಿಗೇನೋ ಹೊಸ ಸಂದೇಶವನ್ನು ಸಾರುವಂತೆನಿಸಿತು. ಬಿಸಿಲಿನಲ್ಲಿ ನಿಂತು ಹಣಿಗೆಯಿಂದ ಕೂದಲಿನ ಸಿಕ್ಕು ಬಿಡಿಸಿಕೊಂಡಳು. ಹಸಿಯು ಆರಲೆಂದು ಮಲ್ಲಿಕಾಮಂಟಪದ ಶಿಲಾಸನದಲ್ಲಿ ಕುಳಿತು ಕೂದಲನ್ನು ಹರಡಿಕೊಂಡಳು.

'ರೇಷ್ಮೆಹುಳುವು ಗೂಡನ್ನು ಕಟ್ಟಿ, ಅದರ ಫಲವಾಗಿ ಮಾನವರ ಕೈಗೆ ಸಿಕ್ಕಿ ಸಾಯುವುದು; ಪಾತರಗಿತ್ತಿ ಸಾಯದು. ಈ ಕೋಶಾವಸ್ಥೆಯು ಚಿಟ್ಟೆಗೆ ಹೊಸ ಬದುಕನ್ನು ನೀಡುವುದು. ರೇಷಿಮೆ ಹುಳುವಿನ ಕೋಶಾವಸ್ಥೆ ಅದರ ದುರಂತವನ್ನು ಸಂಕೇತಿಸಿದರೆ, ಪಾತರಗಿತ್ತಿ ಕೋಶಾವಸ್ಥೆ ಶುಭಾರಂಭ ವನ್ನು ಸಾರುವುದು....ನಿಜ....ನಿಜ....ಸೌಂದರ್ಯದ ಈ ಗೂಡನ್ನು ಹೊಂದಿದ್ದರ ಫಲವಾಗಿ, ಕೌಶಿಕನ ಕೈಗೆ ಸಿಕ್ಕಿ ಸಾಯುವ ರೇಷ್ಮೆಹುಳದಂತೆ ದುರ್ಬಲಳಲ್ಲ ನಾನು. ಈ ಅರಮನೆಯ ವಾಸ ನನ್ನ ಕೋಶಾವಸ್ಥೆ....ಅಬಲೆಯಾಗಿ ಬಂದ ನನ್ನನ್ನು ಸಬಲೆಯನ್ನಾಗಿ ಮಾಡಿದೆ....ಬದುಕನ್ನು ಎದುರಿಸುವ ದಿಟ್ಟತನ ವನ್ನು ಕಲಿಸಿದೆ....ಇದು ನನ್ನ ಕೋಶಾವಸ್ಥೆ....ಇಲ್ಲಿಂದ ನಾನು ಪರಿಪಕ್ವ ವಾಗಿ ಹಾರಲೇಬೇಕು....ಶರಣರ ಸಂಗವೆಂಬ ಬನಕ್ಕೆ ಹಾರಿ ಶಿವನ ಹೃದಯ ಪುಷ್ಪದ ಮಕರಂದವನ್ನು ಕುಡಿಯುವ ಆಧ್ಯಾತ್ಮಿಕ ಪಾತರಗಿತ್ತಿಯಾಗಬೇಕು ನಾನು....ಎಂತಹ ಸಂದೇಶವಿದು!....'

ಕಣ್ಣು ಮುಚ್ಚಿ ಕುಳಿತು ಮತ್ತೆಮತ್ತೆ ಅದನ್ನೇ ಮೆಲುಕು ಹಾಕಿದಳು.

* * *

ಕೌಶಿಕನು ಮಿಂದು, ಅಲಂಕರಿಸಿಕೊಂಡು ಪ್ರಶಾಂತಭವನದತ್ತ ನಡೆದನು. ಅನುಭವಿಸಿದ ನಿದ್ದೆಯು ಮಲಗುವಾಗ ಅವನಲ್ಲಿ ಇದ್ದ ಆವೇಶವನ್ನು ಸ್ವಲ್ಪ ಕಡಿಮೆ ಮಾಡಿದ್ದರೂ,

'ದೇವಿಯರು ಎಲ್ಲಿ?'

'ಉದ್ಯಾನವನದಲ್ಲಿ ಕೂದಲನ್ನು ಒಣಗಿಸಿಕೊಳ್ಳುತ್ತಿದ್ದಾರೆ....' ಮದನೆ ಹೇಳಿದಾಗ ಕಿಟಕಿಯಿಂದ ನೋಡಿದ.

ಮುಂಜಾನೆಯ ಹೊಂಬಿಸಿಲಿನಲ್ಲಿ ವನದೇವತೆಯಂತೆ ಕುಳಿತು, ಕೂದಲನ್ನು ಹರವಿಕೊಂಡಿದ್ದಳು. ಸಿಕ್ಕನ್ನು ಕಳೆದುಕೊಂಡು ನವಿರಾಗಿ ಹಾರುತ್ತಿದ್ದ ಅವು, ಸೂರ್ಯನ ಕಿರಣಗಳ ಆಲಿಂಗನದಲ್ಲಿ ಮಿಂಚುತ್ತಿದ್ದವು. ಉಟ್ಟಬಟ್ಟೆಯ ಹಿಂದೆ ಮನೋಹರವಾಗಿ ಅಂಗಾಂಗಗಳು ಕಾಣಬರುತ್ತಿದ್ದವು.

'ಹೋಗಿ....ಕೂದಲನ್ನು ನೇವರಿಸಲೇ....ಮುಖಕ್ಕೆ ಸವರಿಕೊಳ್ಳಲೇ.... ಹಿಂದಿನಿಂದ ಕಣ್ಣನ್ನು ಮುಚ್ಚಿಬಿಡಲೇ....' ಭಾವನೆಗಳು ಹುಚ್ಚುಕುದುರೆಗಳಂತೆ ಮನದ ಬಯಲಲ್ಲಿ ಕೆನೆದಾಡಿದವು, ಹೂಂಕರಿಸಿದವು. ಅಶ್ವಗಳನ್ನು ಪಳಗಿಸುವುದರಲ್ಲಿ ಧೀರನಾದ ಅವನು, ಭಾವನೆಯ ಕುದುರೆಗಳನ್ನು ಕಟ್ಟಿಹಾಕಲಾರದೆ ಸೋತುಹೋದ. ಅವಳತ್ತ ಹೋಗಿಬಿಡಬೇಕು ಎಂದುಕೊಂಡ. ಆದರೆ ವಿಚಕ್ಷಣಬುದ್ಧಿಯು ಪರೀಕ್ಷೆ ಮಾಡಬಯಸಿತು.

'ಮದನರತಿ, ಹೋಗಿ ಅರಸರು ಬಂದಿದ್ದಾರೆಂದು ದೇವಿಯವರಿಗೆ ಅರುಹು ....' ಕೌಶಿಕ ಹೇಳಿದ.

ಮದನರತಿ ಮಹಾದೇವಿಯ ಬಳಿಗೆ ಹೋಗಿ ಹೇಳಿದಳು :

'ಅರಸಿಯರೇ....ಪ್ರಭುಗಳು ಬಂದಿದ್ದಾರೆ....'

'ಹೂಂ....' ಮಹಾದೇವಿ ಹೂಂಗುಟ್ಟಿದಳು. ಆದರೆ ಕಲ್ಪನೆಯ ಸರಸಿಯಲ್ಲಿ ಈಜುತ್ತ ಇದ್ದವಳಿಗೆ ಹೊರಬರಲು ಮನವಾಗದೇ, ಅಲ್ಲಿಯೇ ಸುತ್ತಾಡತೊಡಗಿದಳು.

ಕೌಶಿಕನು ತೀಕ್ಷ್ಣವಾದ ವಿಮರ್ಶಕದೃಷ್ಟಿಯಿಂದ ಗಮನಿಸಿದ. ಮಹಾದೇವಿ ಕುಳಿತ ಸ್ಥಾನದಿಂದ ಎದ್ದು ಬರಲಿಲ್ಲ.

'ಆಕೆ ಏನಂದಳು?' ಅಸಹನೆಯಿಂದ ಕೇಳಿದನು.

'ಹೂಂಗುಟ್ಟಿದರು ...ಬಹುಶಃ ಈಗ ಬಂದುಬಿಡಬಹುದು. ಕೂದಲು ಒಣಗಲೆಂದು ಕಾಯುತ್ತಿರುವರು....' ಮದನರತಿ ನುಡಿದಳು.

ಆವೇಶದಿಂದ ಶತಪಥ ತಿರುಗುತ್ತ ಮಹಡಿಯನ್ನೇರಿದ. ಅನಿತರಲ್ಲಿ ನಿಜಲಿಂಗದೇವರು ಏಳೆಂಟು ಜಂಗಮರೊಡನೆ ಮಹಾದ್ವಾರವನ್ನು ದಾಟಿ, ವಿಶಾಲವಾದ ಬಯಲನ್ನು ಕ್ರಮಿಸುತ್ತ ಪ್ರಶಾಂತಭವನದ ಕಡೆಗೆ ಬರುವುದನ್ನು ನೋಡಿದ.

ಹಿಂಜರಿವೆನು. ಆದರೆ ಇವರು ಅದೆಷ್ಟು ನಿರ್ಭಯವಾಗಿ ಭವನಕ್ಕೆ ಬರುತ್ತಿರುವರು....ಇವರಿಗೆ ತಕ್ಕ ಮನ್ನಣೆ ಇಂದು ಮಾಡಲೇಬೇಕು....' ಮಹಡಿಯಲ್ಲಿ ನಿಂತು ಚಪ್ಪಾಳೆ ತಟ್ಟಿದಾಗ ಪಟುಭಟರು ತಲೆ ಎತ್ತಿ ರಾಜನನ್ನು ನೋಡಿದರು.

'ಆ ಭಿಕಾರಿಗಳನ್ನು ಒಳಗೆ ಬಿಡಕೂಡದು....ತಿಳಿಯಿತೇ ? ಹೆಚ್ಚು ಮಾತನಾಡಿದರೆ ಕುತ್ತಿಗೆ ಹಿಡಿದು ತಳ್ಳಿರಿ....' ಕೆಂಗಣ್ಣಿನಿಂದ ನೋಡಿ ನುಡಿದ.

'ಅಪ್ಪಣೆ ಪ್ರಭು....' ಪಟುಭಟರು ಒಪ್ಪಿಗೆ ಸಲ್ಲಿಸಿದರು.

ನಿಜಲಿಂಗದೇವರು ಎಂದಿನಂತೆ ಮುಂದೆ ಮುಂದೆ ಬಂದರು.

'ನಿಲ್ಲಿರಿ....' ಪಟುಭಟರು ತಡೆದರು, ಈಟಿಗಳನ್ನು ಅಡ್ಡ ಹಿಡಿಯುತ್ತ.

'ಏಕಪ್ಪಾ....ನಾವು ಮಹಾದೇವಿಯವರ ದರ್ಶನಕ್ಕೆ ಹೊರಟಿರುವುದು....' ನಿಜಲಿಂಗದೇವರು ಹೇಳಿದರು.

'ಇದು ರಾಜಾಜ್ಞೆ! ಹೆಚ್ಚು ಕೇಳದೆ....ಹಿಂತಿರುಗಿರಿ....'

ನಿಜಲಿಂಗದೇವರು ಶಿಷ್ಯರ ಮುಖವನ್ನು ಮೌನವಾಗಿ ನೋಡಿ, ಹಿಂದಕ್ಕೆ ತಿರುಗಿ ಹತ್ತು ಹೆಜ್ಜೆಗಳನ್ನು ಸಾವಧಾನವಾಗಿ ಹಾಕಿದರು.

ನೀರಿನ ತಂಬಿಗೆಯನ್ನು ಕೈಯಲ್ಲಿ ಹಿಡಿದ ಶಿವಕಾಮಿನಿ ಅದನ್ನು ಬಾಗಿಲ ಬಳಿಯಲ್ಲಿಟ್ಟಿದ್ದ ಕಾಲುಮಣೆಯ ಮೇಲೆ ಇರಿಸಲು ಬಂದವಳು, ಇದನ್ನು ಕಂಡು ವೇಗವಾಗಿ ಉದ್ಯಾನಕ್ಕೆ ಓಡಿದಳು. ಮಹಾದೇವಿಯನ್ನು ಸಮೀಪಿಸಿ,

'ಒಡತಿ....ಒಡತಿ....' ಎಂದು ಕಳವಳದಿಂದ ಕೂಗಿದಳು.

'ಏನಾಯಿತು....ಏಕಿಷ್ಟು ದುಗುಡಗೊಂಡೆ ?' ಕಣ್ತೆರೆಯುತ್ತ ಮಹಾದೇವಿ ಕೇಳಿದಳು.

'ಒಡತಿ....ಜಂಗಮಪುಂಗವರು ಭವನದ ಬಾಗಿಲಿಗೆ ಬಂದಿದ್ದರು. ತಾವು ಮೈಮರೆತುಬಿಟ್ಟಿರುವಿರಿ....ಅವರನ್ನು ಪಟುಭಟರು ಗದ್ದರಿಸಿ ಕಳಿಸಿರುವರು....' ಕಂಪಿಸುತ್ತ ನುಡಿದಳು.

'ಅಹುದೇ....ನಿಜವೇ ?' ಕೂದಲನ್ನು ಎಡಗೈಯಿಂದ ಮುರಿಮಾಡಿ ಗಂಟು ಕಟ್ಟಿಕೊಳ್ಳುತ್ತ ಅವಸರದಿಂದ ಎದ್ದು ನಿಂತಳು.

> ದೇವ ದೇವಾ, ಶಿವಲಾಂಛನವನೇರಿಸಿಕೊಂಡು
> ಮನೆಗೆ ಬಂದವರಂ ಕಡೆಗಣಿಸಿ ಎಂತು ನೋಡುತ್ತಿರ್ಪೆ ?
> ಅವರಿಗೆ ಸತ್ಕಾರಮುಂ ಮಾಡಲಿಲ್ಲದಿರ್ದೊಡೆ
> ಎನ್ನ ನೀ ಧರೆಯ ಮೇಲಿರಿಸುವ
> ಕಾರಣವೇನು ಚೆನ್ನಮಲ್ಲಿ

ಆವೇಶ-ದುಃಖಗಳು ತುಂಬಿ ಬಂದು ಬಾಗಿಲ ಕಡೆಗೆ ಓಡಿದಳು. ಕೌಶಿಕ ಮಹಡಿಯ ಮೇಲೆ ನಿಂತು ಅವಳ ಅವಸರವನ್ನು ಗಮನಿಸಿದ.

'ಅಬ್ಬಾ! ನಾನು ಬಂದು ನಿಂತರೂ, ಹೇಳಿಕಳಿಸಿದರೂ ಪರಿವೆ ಇಲ್ಲ. ಇವಳಲ್ಲಿ ಆ ಭಿಕಾರಿಗಳಿಗಾಗಿ ಇಷ್ಟೊಂದು ಆತುರವೇ....?' ಅಸಹನೆಯಿಂದ ನೀರಿಗೆ ಬಿದ್ದ ಹೊಸ ಸುಣ್ಣದಂತೆ ಕುದಿಯತೊಡಗಿದ.

ಮಹಾದೇವಿ ಶಿವಕಾಮಿನಿಯೊಡನೆ ವೇಗದಿಂದ ನಡೆದಳು. ಪೌಳಿಯ ಹೆಬ್ಬಾಗಿಲಿಗೆ ಸ್ವಲ್ಪ ದೂರದಲ್ಲಿದ್ದ ಶರಣರ ತಂಡವನ್ನು ಕಂಡಳು. ಅವರ ಬಳಿ ಸಾರಿ ನಿಜಲಿಂಗದೇವರ ಪಾದಕ್ಕೆ ನಮಸ್ಕರಿಸಿ, ಕಿರಿಯ ಜಂಗಮರಿಗೆ ಕೈಜೋಡಿಸಿದಳು.

'ಶರಣ ಪುಂಗವರೇ; ತಮಗಾದ ಅಪಮಾನವನ್ನು ಕಂಡು ನನಗೆ ಅತೀವ ವೇದನೆಯಾಗುತ್ತಿದೆ. ತಾಯಿಯು ನೊಂದರೆ ಒಡಲೊಳಗಣ ಶಿಶುವು ನೋಯುವಂತೆ, ಶಿವಭಕ್ತರ ರೋಮ ನೊಂದರೆ ದೇವನು ನೋಯುವನು; ಅವರು ಸಂತೃಪ್ತರಾಗಿದ್ದರೆ ಅವನೂ ಆನಂದಗೊಳ್ಳುವನು. ಆವನು ಭಕ್ತದೇಹಿಕ ದೇವನಾದ ಕಾರಣ ನಿಮಗೆ ಮಾಡಿದ ಅಪಮಾನ ಅವನಿಗೇ ಮಾಡಿದ ಮುಖಭಂಗ.* ಆದರೂ ತಾವು ತಮ್ಮ ಹೃದಯದಲ್ಲಿ ಇದನ್ನು ಇಂಬಿಟ್ಟುಕೊಳ್ಳದೆ ಮನ್ನಿಸಿ, ದಯಮಾಡಿಸಿರಿ....' ನಿಜಲಿಂಗದೇವರು ಆಲೋಚನೆಯಲ್ಲಿ ನಿರತರಾಗಿದ್ದರು. ಅದನ್ನು ಕಂಡು ಮಹಾದೇವಿ ಇನ್ನೂ ಕಳವಳಗೊಂಡು ಬೇಡಿದಳು:

'ಮಹಾನುಭಾವರಾದ ತಾವು ಕೋಪಗೊಳ್ಳಬೇಡಿ....ಹರ ಮುನಿದರೆ ಸೈರಿಸಬಹುದು, ಶರಣರು ಮುನಿದರೆ ಸೈರಿಸುವದು ಕಷ್ಟ. ಮಗಳ ಕರೆಯನ್ನು ಮನ್ನಿಸಿ, ಮರಳಿ ಬನ್ನಿ....ಒಣಗಿ ನಿಂತ ಸಸಿಗೆ ಮಳೆಯು ಚೇತನ ನೀಡುವಂತೆ ನಿಮ್ಮ ಜ್ಞಾನದ ಸುಧೆಯಷ್ಟೇ ನನಗೆ ಚೈತನ್ಯ ನೀಡುವ ಏಕೈಕ ಸಾಧನ. ದೈವೀಸಾಮರಸ್ಯಕ್ಕಾಗಿ ಹಾತೊರೆವ ನನಗೆ ಅದು ಸಿಗದಿದ್ದರೆ ಚಿಂತೆಯಿಲ್ಲ, ನಿಮ್ಮ ಸತ್ಸಂಗ ಸಿಕ್ಕರೂ ಎಷ್ಟೋ ಸಮಾಧಾನ. ಮಳೆಯಾಗದಿದ್ದರೂ ವಾತಾವರಣ ತಂಪಿದ್ದರೆ ಹೇಗೋ ಸಸಿಯು ಜೀವ ಹಿಡಿದುಕೊಂಡಿರುವಂತೆ ನನ್ನ ಆದರ್ಶಗಳು ಬದುಕಿರುವವು.'

'ಬೇಡ ತಾಯಿ...ರಾಜಾಜ್ಞೆಯನ್ನು ಉಲ್ಲಂಘಿಸುವುದೂ, ಸಿಡಿಲಿನ ಆಸು ಗೆಗೆ ನಿಲುವುದು ಒಂದೇ....' ಕಿರಿಯ ಜಂಗಮನೋರ್ವ ನುಡಿದ.

ಉದ್ಧಟತನವಿರಬೇಕು. ನನಗಾಗಿಯಾದರೂ ತಾವು ದಯಮಾಡಿಸಿರಿ. ಈ ಕಂದನ ಮೇಲೆ ಅಷ್ಟೂ ಕರುಣೆ ಇಲ್ಲವೇ? ನಿನ್ನೆಯ ಅನುಭವಗೋಷ್ಠಿ ಅರ್ಧವಾಗಿತ್ತು. ಆ ವಿಷಯವನ್ನು ಇಂದು ಪೂರೈಸಬೇಕೆಂದು ನಾನು ನಿನ್ನೆಯೆಲ್ಲ ಕನಸು ಕಂಡಿರುವೆ' ದುಃಖತಪ್ತಳಾಗಿ ನುಡಿದಳು.

ನಿಜಲಿಂಗದೇವರು ಹಿಂದಕ್ಕೆ ತಿರುಗಿ ಪ್ರಶಾಂತಭವನದ ಕಡೆ ನಡೆದರು. ಜಂಗಮರ ಗುಂಪನ್ನು ಬೆನ್ನಿಗಿರಿಸಿಕೊಂಡು ಮಹಾದೇವಿಯು ಮುಂದೆ ಬಂದಾಗ ಭಟರು ಮೌನ ತಾಳಿ, ಸರಿದು ನಿಂತರು. ಶರಣರ ಪಾದಕ್ಕೆ ನೀರೆರೆದು, ನಮಸ್ಕರಿಸಿ ಮಹಾದೇವಿ ಒಳಗೆ ಕರೆದೊಯ್ದಳು. ಕೌಶಿಕನು ಮಹಡಿಯ ಮೇಲೆ ನಿಂತು ಇದೆಲ್ಲವನ್ನು ಮೌನವಾಗಿ ನೋಡಿದ.

ಸರ್ವರೂ ಬಂದು ಆಸೀನರಾದರು. ಗೋಷ್ಠಿಯು ಆರಂಭವಾಯಿತು.

ಆನೆಯನೇರಿಕೊಂಡು ಹೋದಿರೆ ನೀವು,
ಕುದುರೆಯನೇರಿಕೊಂಡು ಹೋದಿರೆ ನೀವು,
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ...ಅಣ್ಣಾ !
ಸತ್ಯದ ನಿಲವನರಿಯದೆ ಹೋದಿರಲ್ಲಾ !
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ !
ಅಹಂಕಾರವೆಂಬ ಸದಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲ ಸಂಗಮದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲಾ !*

ನಿಜಲಿಂಗದೇವರು ವಿವರಿಸತೊಡಗಿದರು :

'ರಾಜ್ಯಮದ ಎಂಬ ಆನೆಯನ್ನೇರಿಕೊಂಡು, ಸಿರಿಮದ ಎಂಬ ಕುದುರೆಯನ್ನೇರಿಕೊಂಡು, ಶರೀರದ ಅಲಂಕಾರ—ಭೋಗಗಳಲ್ಲಿ ಮೈಮರೆತು ಹೋಗುವ ಕೋಟಿಕೋಟಿ ಜನರು ತಮ್ಮ ಅಂತರಂಗದಲ್ಲಿ ಇರುವ, ಬ್ರಹ್ಮಾಂಡಗತವಾಗಿರುವ ಸತ್ಯವನ್ನು ಅರಿಯದೆ ಹೋಗುವರು. ಸದ್ಗುಣಗಳನ್ನು ಬದುಕಿನ ಹೊಲದಲ್ಲಿ ಬಿತ್ತಿ ಬೆಳೆದುಕೊಳ್ಳದೆ ನಾಶವಾಗುವರು. ಅಹಂಕಾರ-ಅಜ್ಞಾನಗಳ ದ್ವಂದ್ವದಲ್ಲಿ ಸಿಕ್ಕು ಘಾಸಿಯಾಗಿ, ಪರಮಾತ್ಮನನ್ನರಿಯದೆ ನರಕದ ಹುಳುಗಳಾಗಿ ಸಾಯುವರು—' ವಿವರಣೆ ಸಾಗಿದ್ದಂತೆಯೇ ಆವೇಶದಿಂದ ಅಬ್ಬರಿಸುತ್ತ ಕೌಶಿಕನು ಸಭಾಂಗಣದಲ್ಲಿ ಬಂದು ನಿಂತ.

'ಇದೇನು ಧರ್ಮಶಾಲೆಯೋ? ತಿರುಕರು—ದಿಕ್ಕೇಡಿಗಳು ಬಂದು, ಸೇರಿ

ಕೊಂಡು ದೊಂಬಿ ಮಾಡಲಿಕ್ಕೆ....' ಕೆಂಗಣ್ಣು ಬಿಟ್ಟ.

'ಅಹುದು ರಾಜ....ಜಗತ್ತೇ ಒಂದು ಧರ್ಮಶಾಲೆ. ಇದರ ಒಡೆಯನು ದೇವರು. ಉಚಿತವಾಗಿ ಇರಲು ಕೊಟ್ಟಿರುವನು. ನಿನ್ನ ಆಯುಷ್ಯವಿದ್ದಷ್ಟು ದಿನ ನೀನು, ನಮ್ಮದಿದ್ದಷ್ಟು ದಿನ ನಾವು. ಯಾರೂ ಬೇರು ಬಿಟ್ಟುಕೊಂಡು ಇಲ್ಲೇ ಇರಲು ಬಂದವರಿಲ್ಲ....' ನಿಜಲಿಂಗದೇವರು ಶಾಂತರಾಗಿ ನುಡಿದರು.

'ಬಾಯಿ ಮುಚ್ಚಿ....ನಿಮ್ಮ ಉಪದೇಶ ಕೇಳಲು ನಾನಿಲ್ಲಿಗೆ ಬಂದಿಲ್ಲ....' ಗುಡುಗಿದ ಕೌಶಿಕ.

'ಮೊದಲ ಬಾರಿಗೆ ತಪ್ಪು ಮಾಡುವುದು ಅಪರಾಧ....ಅದನ್ನೇ ಮತ್ತೆ ಮತ್ತೆ ಮಾಡಿದರೆ ಮೂರ್ಖತನ....ಬದುಕಿನ ಗುರಿ ಏನು ? ನಿನ್ನ ಒಳಗನ್ನು ಕೆದಕಿ ನೋಡು ರಾಜಾ....'

'ಅದರ ಅವಶ್ಯಕತೆ ನನಗಿಲ್ಲ....ವೇಷಧಾರಿಗಳೇ....ಪಾಷಂಡಿಗಳೇ....ನೀವು ಕಾವಿಯ ಸೋಗಿನಲ್ಲಿ ಹೆಂಗೆಳೆಯರನ್ನು ಪತನಿಸಬಂದ ಮೋಸಗಾರರು....' ಕೋಪದಿಂದ ಕನಲಿನಿಂತಿದ್ದ ಕೌಶಿಕ.

'ಶಿವ....ಶಿವಾ....' ಕಿವಿಯನ್ನು ಮುಚ್ಚಿಕೊಂಡರು ನಿಜಲಿಂಗದೇವರು.

ಮಹಾದೇವಿಯು ಎದ್ದು ನಿಂತಳು. ಅವಳ ಶರೀರವು ಕಂಪಿಸತೊಡಗಿತ್ತು;

'ನರಾಧಮ....ಅಂಗವಿಕಾರದ ಸಂಗವ ಮರೆದು, ಲಿಂಗದೇವನನ್ನು ಒಡಗೂಡಿಕೊಂಡಿರುವ ಮಹಾನುಭಾವರಿವರು. ಕಾಮವಿಕಾರದ ಕತ್ತಲೆಯಳಿದು ಭಕ್ತಿಯೇ ಪ್ರಾಣವಾಗಿರುವ ಘನವಂತರಿವರು. ತ್ರಿಕರಣಶುದ್ಧವಾಗಿ ಶಿವನನ್ನು ನಂಬಿದ ಭಕ್ತರಿವರು.* ಇವರನ್ನು ನಿಂದಿಸುವ ಸಾಹಸವೇ ನಿನ್ನದು ? ಇಂಥವರನ್ನು ಅಳಿಯುವ ಪ್ರಯತ್ನವೇ ? ಎಲೈ ಕಾಮದ ಕ್ರಿಮಿ, ಕ್ರೋಧದ ಮುದ್ದೆಯೇ, ಶರಣರ ನಿಲುವನ್ನು ನೀನು ಅರಿಯುವೆಯಾ....?

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ ?
ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲವ,

ನೀವೇ ಬಲ್ಲಿರಲ್ಲದೆ ಈ ಕೋಣನ ಮೈಮೇಲಣ
ಸೊಳ್ಳೆಗಳೆತ್ತ ಬಲ್ಲವಯ್ಯಾ ?*

ಕೌಶಿಕನ ಕಡೆಗೆ ಕೈ ಮಾಡುತ್ತ ಆವೇಶದಿಂದ ಹೇಳಿದಳು.

'ಸಾಕು ಬಿಡು....ನಿನ್ನ ವೈರಾಗ್ಯದ ಸೋಗು ನಾನು ಕಂಡರಿಯದ್ದಲ್ಲ. ನನ್ನೆದುರಿಗೆ ಮೈತುಂಬ, ತಲೆ ತುಂಬ ಮುಸುಕು....ಈ ವಿಟರ ಮುಂದೆ ಹಾಡು ವಾಗ ಸೆರಗೇಕೆ ಬೇಕು ?....' ವ್ಯಂಗ್ಯವಾಗಿ ನುಡಿದ ಕೌಶಿಕ.

'ಅಹುದು....ನಿನ್ನ ಮಾತು ನಿಜ.

ಒಲುಮೆ ಒಚ್ಚತವಾದವರು ಕುಲ ಛಲವನರಸುವರೆ?
ಮರುಳುಗೊಂಡವರು ಲಜ್ಜೆ ನಾಚಿಕೆಯು ಬಲ್ಲರೆ?
ಚನ್ನಮಲ್ಲಿಕಾರ್ಜುನ ದೇವಗೊಲಿದವರು
ಲೋಕಾಭಿಮಾನವ ಬಲ್ಲರೆ ?†

ಎರಡು ಹೃದಯಗಳು ಒಂದಾದಾಗ ಕುಲವಾಗಲಿ, ಛಲವಾಗಲೀ ಹೇಗೆ ಇರದೋ ಹುಚ್ಚು ಹಿಡಿದವನಿಗೆ ನಾಚಿಕೆಯೆಂಬುದು ಹೇಗಿರದೋ, ಪರಮಾತ್ಮ ನಿಗೆ ಮರುಳಾಗಿ, ಒಲಿದವರಿಗೆ ಲೋಕದ ಪರಿವೆ ಇರದು....ಅವರ ಚಿತ್ತವೆಲ್ಲ ದೇವನ ಕಡೆಗೆ. ಸೆರಗು ಇದ್ದರೂ ಅಷ್ಟೇ, ಇಲ್ಲವಾದರೂ ಅಷ್ಟೇ....'

'ನಿನ್ನಿನಿಯನೆದುರಿಗೆ ಪರಿಪುಷ್ಟ ಅಂಗಾಂಗಗಳ ಪ್ರದರ್ಶನ ಮಾಡಿ ಅವ ನನ್ನು ತಣಿಸಬೇಕಲ್ಲವೇ ....?' ಕೌಶಿಕ ಚುಚ್ಚು ನುಡಿದಾಗ ಮಹಾದೇವಿಯ ಸಹನೆಯು ಮಿತಿಯನ್ನು ದಾಟಿತು.

'ಮುಚ್ಚು ಬಾಯಿ....ನೀಚ ! ನಾಲಿಗೆಯ ನರ ಬಿಗಿಯಿರಲಿ. ನಿನ್ನ ಮೆಚ್ಚುಗೆ ನನಗೇನೂ ಬೇಕಿಲ್ಲ....' ಅಷ್ಟೇ ಆವೇಶದಿಂದ ಮಹಾದೇವಿಯೂ ನಿಂತಿದ್ದಳು.

'ನಿನ್ನ ಚನ್ನಮಲ್ಲಿಕಾರ್ಜುನ ಈ ಗುಂಪಿನಲ್ಲಿ ಯಾವನು? ತೋರಿಸು, ಅವನನ್ನು ಕಡಿದು ತುಂಡು ಮಾಡುವೆ" ಕುಳಿತ ಜಂಗಮರತ್ತ ಕೈತೋರಿ, ಕತ್ತಿಯನ್ನು ಒರೆಯಿಂದ ಎಳೆದ.

'ನನ್ನ ಮಲ್ಲಿಕಾರ್ಜುನ ಎಲ್ಲರಲ್ಲಿ ತುಂಬಿ ತುಳುಕುತ್ತಿರುವ ; ಇವರೆಲ್ಲ ರಲ್ಲಿ, ನಿನ್ನಲ್ಲಿ , ನನ್ನಲ್ಲಿ....! ಅವನನ್ನು ಕಾಣುವ ಶಕ್ತಿ ನಿನ್ನ ಕಾಮದ ಕಣ್ಣು ಗಳಿಗುಂಟೇ ?'

ಈ ರುದ್ರನಾಟಕವನ್ನು ನೋಡುತ್ತ ಎಲ್ಲರೂ ಮೂಕರಾಗಿ ಚಿತ್ರದ ಗೊಂಬೆಗಳಂತೆ ಕುಳಿತರು.

'ಶಾಂತಿ....ಮಗಳೇ....ಸಮಾಧಾನವಿರಲಿ....' ನಿಜಲಿಂಗದೇವರು ನುಡಿದರು.

'ಶಾಂತಿ....ನಿಮ್ಮಂತಹ ವೇಷಧಾರಿಗಳು ಜಗತ್ತಿನಲ್ಲಿ ಇಲ್ಲದಿದ್ದರೇ ಶಾಂತಿ ಇರುವುದು....' ಕೌಶಿಕನು ಮೂದಲಿಸಿ ನುಡಿದ.

'ಆಗಲಿ....ನಾನು ವೇಷಧಾರಿ....ನೀನು ಅಲ್ಲವೇ ತಮ್ಮಾ....? ನನ್ನದು ತ್ಯಾಗಿಯ ವೇಷ....ನಿನ್ನದು ಭೋಗಿಯ ವೇಷ....ಶಿವನ ನಾಟಕದಲ್ಲಿ ಯಾರು ನಟರಲ್ಲ? ಸರ್ವರೂ ನಟರೇ, ಎಲ್ಲರೂ ಬಣ್ಣ ಬಳಿದುಕೊಂಡವರೇ....ಒಂದು ದಿನ ಈ ಎಲ್ಲ ಬಣ್ಣಗಳನ್ನು ಅಳಿಸಿ ಮಣ್ಣಿನ ಮಡಿಲೊಳಗೆ ಮಲಗಬೇಕು.... ನೀನು ಅದನ್ನೇ ಮರೆತಿರುವೆ....' ಶಾಂತರಾಗಿ ನಿಜಲಿಂಗದೇವರು ಹೇಳಿದರು.

'ನೀವು ಬಾಯಿ ಮುಚ್ಚಿದರೆ ಒಳ್ಳಿತು ...ಗೌರವಪೂರ್ಣವಾಗಿ ಎದ್ದು ನಡೆಯಿರಿ; ಇಲ್ಲವಾದರೆ ಕುತ್ತಿಗೆಗೆ ಕೈಹಾಕಿ ದಬ್ಬಿಸಬೇಕಾದೀತು....'

ನಿಜಲಿಂಗದೇವರು ಮೇಲಕ್ಕೆದ್ದರು. ಅದನ್ನು ಗಮನಿಸಿ ಉಳಿದ ಜಂಗಮರೂ ಎದ್ದು ನಿಂತರು. ಮಹಾದೇವಿಯು ದುಃಖ-ಕ್ರೋಧಗಳೇ ಮೂರ್ತಿಗೊಂಡಂತೆ ಹೆಜ್ಜೆ ಇಡುತ್ತ, ಅವರಿಗೆ ಅಡ್ಡವಾಗಿ ನಿಂತು ದೀನಳಾಗಿ ಹೇಳಿದಳು :

"ಶರಣರೇ....ಮುನಿಯದಿರಿ....ನನ್ನ ಬದುಕಿಗೊಂದು ಪರಿಹಾರವನ್ನು ತೋರಿರಿ....'

'ನಿನ್ನ ಬದುಕಿಗೆ ಪರಿಹಾರವೇ....ಅದಿರುವುದು ನನ್ನ ಬಳಿ! ಸುಮ್ಮನೇ ಇತ್ತ ಕಡೆ ಬಾ....' ಕೌಶಿಕನು ಮುಂದಾಗಿ ಅವಳ ಸೀರೆಯ ಸೆರಗನ್ನು ಬಿಗಿಯಾಗಿ ಹಿಡಿದು, 'ಭಿಕಾರಿಗಳೇ....ನಡೆಯಿರಿನ್ನು....' ಎಂದು ಅಜ್ಞಾಪಿಸಿದ.

ಮಹಾದೇವಿಯ ಮೈಯಲ್ಲಿ ಮಿಂಚಿನ ಸಂಚಾರವಾಯಿತು. ಯಾವುದೋ ಅದ್ಭುತ ಶಕ್ತಿ ತನ್ನೊಳಗೆ ಆವಿರ್ಭಾವವಾದಂತೆನಿಸಿತು. ಕಂಚಿನ ಕಂಠದಲ್ಲಿ ಹೇಳಿದಳು :

ಕೈಸಿರಿಯ ದಂಡವ ಕೊಳಬಹುದಲ್ಲದೆ,
ಮೈಸಿರಿಯ ದಂಡವ ಕೊಳಲುಂಟೆ ?
ಉಟ್ಟ ಉಡಿಗೆ ತೊಡಿಗೆಗಳ
ಸೆಳೆದುಕೊಳ್ಳಬಹುದಲ್ಲದೆ ಮುಚ್ಚಿ ಮುಸುಕಿರ್ದ,
ನಿರ್ವಾಣವ ಸೆಳೆದುಕೊಳ್ಳಬಹುದೇ ?
ಚನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು,
ಲಜ್ಜೆಗೆಟ್ಟವಳಿಗೆ ಉಡಿಗೆ ತೊಡಿಗೆಗಳ
ಹಂಗೇಕೋ ಮರುಳೆ ?*

---

* ಮ. ವ. ೨೦೦

ಮೂರ್ಖ, ಅವಿವೇಕಿ....ಅಹಂಕಾರಿ....ಬಹಿರಂಗದ, ಸೀರೆಯನ್ನು ನೀನು ಮುಟ್ಟಬಹುದು, ಎಳೆಯಬಹುದು. ನನ್ನ ಶರೀರವನ್ನು ಮುಸುಕಿರುವ ನಿರ್ವಾಣವನ್ನು ನೀನು ಸೆಳೆದುಕೊಳ್ಳಬಲ್ಲೆಯಾ? ನನ್ನ ಇನಿಯ ಚನ್ನ ಮಲ್ಲಿಕಾರ್ಜುನನು ದಿಗಂಬರ....ನಾನವನ ಮೀಸಲ ಸತಿ. ಅವನ ಕಾರುಣ್ಯ ವನ್ನೇ ಸೀರೆಯಾಗಿ ಉಟ್ಟ ನನಗೆ ಈ ಯಾವ ಸೀರೆಯ ಹಂಗೂ ಇಲ್ಲ....' ಮಿಂಚಿನ ವೇಗದಲ್ಲಿ ಉಟ್ಟ ಸೀರೆಯನ್ನು ಕಳಚಿದಳು. ಕೌಶಿಕನು ದಿಗ್ಭ್ರಾಂತ ನಾಗಿ ಸೆರಗನ್ನು ಬಿಟ್ಟು ಕಂಭದಂತೆ ನಿಂತ. ಬಿಚ್ಚಿದ ಸೀರೆಯನ್ನು ಉಂಡೆಗಟ್ಟಿ ಕೈಲಿ ಹಿಡಿದು ಶರವೇಗದಿಂದ ಮಹಾದೇವಿ ಅವನ ಮುಖಕ್ಕೆಸೆದಳು.

'ಎಲೈ ಅವಿವೇಕಿ, ಈ ನಶ್ವರವಾದ ಶರೀರವನ್ನು ನೋಡಲಿಕ್ಕೆ, ಮುಟ್ಟ ಲಿಕ್ಕೆ ನಾಯಿಯಂತೆ ಬಸವಳಿಯುತ್ತಿದ್ದೆಯಲ್ಲ; ನೋಡಿಕೋ....

ಅಮೇಧ್ಯದ ಮಡಿಕೆ ಮೂತ್ರದ ಕುಡಿಕೆ,
ಎಲುವಿನ ತಡಿಕೆ ಕೀವಿನ ಹಡಿಕೆ,
ಸುಡಲೀ ದೇಹವ ಒಡಲವಿಡಿದು ಕೆಡದಿರು.
ಚನ್ನಮಲ್ಲಿಕಾರ್ಜುನನ ಅರಿ ಮರುಳೇ.*

ಏನಿದೆ ಇದರಲ್ಲಿ....ಬಿಳಿಯ ಚರ್ಮ, ಮೂಳೆಯ ಅಸ್ಥಿಪಂಜರ, ರಕ್ತದ ಮಡು, ಮಲಮೂತ್ರದ ಗುಂಡಿ; ಪಂಚಭೂತಗಳೊಡನೆ ಹಂಚು ಹರಿಯಾ ಗುವ ಮಣ್ಣಿನ ಈ ಕಾಯಕ್ಕಾಗಿ ಎಷ್ಟು ಹಾತೊರೆದೆ....ವಿವೇಕಹೀನನಾದೆ, ಮತಿಭ್ರಷ್ಟನಾದೆ! ಎಷ್ಟು ಜನರನ್ನು ಹಿಂಸೆಗೆ ಈಡು ಮಾಡಿರುವೆ....ಸರಿ ಯಾಗಿ ನೋಡು....ನೀನು ಬಯಸಿದ ದೇಹ ನಿನ್ನೆದುರಿಗಿದೆ...."

ಕೌಶಿಕ ಸ್ತಂಭೀಭೂತನಾಗಿದ್ದ. ಕಣ್ಣು ತೆರೆದಿದ್ದರೂ ಚಿತ್ತವು ಸುಳಿಯಲ್ಲಿ ಸಿಕ್ಕ ಕಡ್ಡಿಯಂತೆ ಗರಗರನೆ ಸುತ್ತುತ್ತಲಿತ್ತು. ಸುತ್ತಲಿನವರು ಎಲ್ಲರೂ ಕಟೆದು ಪ್ರತಿಷ್ಠಾಪಿಸಿದ ಪ್ರತಿಮೆಗಳಂತೆ ನಿಂತರು.

'ಮನುಷ್ಯದೇಹವು ಕೇವಲ ಭೋಗಕ್ಕಾಗಿ ಬಂದಿರುವುದಲ್ಲ. ನಾನು ಎಂಬ ಬೀಜದಿಂದ ನಾನು ನನ್ನದು ನನ್ನಿಂದ ನನಗೆ ಎಂಬ ವ್ಯಾಪಕ ಸಂಸಾರ ಬೆಳೆಯುವುದು....ಆಗ ಅಜ್ಞಾನಕ್ಕೆ ಜನ್ಮ ನೀಡುವುದು. ಅಜ್ಞಾನದ ಶಿಶುಗಳೇ ಆಸೆ, ಕೋಪಗಳು. ಈ ಎಲ್ಲ ತಾಮಸ ಹೊಗೆ ಮುಸುಕಿ ಅಜ್ಞಾನಿ ಮಾನವನು ಬಾಳ ಬಟ್ಟೆ ಕಾಣದೆ ಮುಗ್ಗರಿಸುವನು.†

ನಾನೆಂದರೆ ಈ ದೇಹವಲ್ಲ....ದೇಹದ ಸುಖವೊಂದೇ ಆತ್ಯಂತಿಕವಲ್ಲ....

---

* ಮ. ವ. ೩೩. † ಮ. ವ. ೨೫

ನಾನೆಂದರೆ ದೇಹಯಂತ್ರವಾಹಕನಾದ ಆತ್ಮ ಎಂದು ಅರಿ. ಅದರ ಸುಖವನ್ನು ಕಾಣು....ಜಂಬೂದ್ವೀಪದ ಇತಿಹಾಸದಲ್ಲಿ ಹೆಣ್ಣಿನ ವಸ್ತ್ರಾಪಹರಣದ ಪ್ರಯತ್ನ ಎರಡು ಬಾರಿಯಾಗಿದೆ. ದಾಯಾದಿಗಳ ದೌರ್ಜನ್ಯಕ್ಕೆ ಸಿಕ್ಕಿ ಪಾಂಡವರ ಸತಿಯ ವಸ್ತ್ರಾಪಹರಣವಾಯಿತು. ಈಗ ಎರಡನೆ ಬಾರಿಗೆ ಚನ್ನಮಲ್ಲಿಕಾರ್ಜುನನ ಸತಿ ಮಹಾದೇವಿಯ ವಸ್ತ್ರಾಪಹರಣವಾಗಿದೆ. ಆದರೆ ಆಕೆ ಹೆಣ್ಣಾಗಿದ್ದಳು, ನಾನು ಹೆಣ್ಣಲ್ಲ. ನನ್ನದು ತೋರಲು ಹೆಣ್ಣುರೂಪು, ಭಾವಿಸಲು ಗಂಡುರೂಪು. ಆಕೆ ಗೃಹಿಣಿ....ನಾನು ವಿರಾಗಿಣಿ. ಆಕೆ ಸೀರೆಯನ್ನು ಬಿಗಿಯಾಗಿ ಹಿಡಿದುಕೊಳ್ಳಲೆತ್ನಿಸಿದಳು. ನಾನು ನಾನಾಗಿಯೇ ಕಿತ್ತೆಸೆದಿರುವೆ. ಏತಕ್ಕಾಗಿ ಗೊತ್ತೇ....? ನಿನ್ನ ಕಣ್ಣು ತೆರೆಸಲು, ಪುರುಷ ಜನಾಂಗದ ಕಣ್ಣನ್ನು ತೆರೆಸಲು! ಆಕೆ ಮುಡಿಯನ್ನು ಬಿಚ್ಚಿ ಕೌರವಕುಲವನ್ನು ನಾಶ ಮಾಡುವ ಪ್ರತಿಜ್ಞೆ ಕೈಗೊಂಡಳು. ಆದರೆ....ನಾನು ಆ ಪ್ರತಿಜ್ಞೆ ಕೈಗೊಳ್ಳೆನು....ನಿನ್ನನ್ನು ನಾಶ ಮಾಡಲು ಇಚ್ಛಿಸೆ, ಉತ್ಥಾನಗೊಳ್ಳಲು ಹರಸುವೆ. 'ಇನ್ನಾದರೂ ಬುದ್ಧಿಗಲಿತು, ಪರಸ್ತ್ರೀಯರನ್ನು ಹೆತ್ತ ತಾಯ್ಗಳೆಂದು ತಿಳಿದು ಉದ್ಧಾರ ಹೊಂದು' ಎಂದು ನಿನ್ನ ತಾಯಿಯಾಗಿ ಹರಸುವೆ.

ಮುಗಿಯಿತು....ನನ್ನ-ನಿನ್ನ ಸಂಬಂಧ ಮುಗಿಯಿತು. ಐದು ವಾರಗಳ ವ್ರತ ಪೂರೈಸುವ ಮುನ್ನವೇ ಗುರು-ಲಿಂಗ-ಜಂಗಮ ಪೂಜೆಗೆ ಅಡ್ಡಿ ಬಂದು ಒಪ್ಪಂದವನ್ನು ಉಲ್ಲಂಘಿಸಿದೆ. ಅರಮನೆಯ ಬಂಧನ ಹರಿಯಿತು—ನಿನ್ನ ಬಾಳು ಬಂಗಾರವಾಗಲಿ....ದೈವೀಕರುಣೆಯಿಂದ ನಂದನವನವಾಗಲಿ....' ಮಹಾದೇವಿ ತನ್ನ ನೀಳ್ಗೂದಲನ್ನು ನಗ್ನ ದೇಹಕ್ಕೆ ಹರಡಿಕೊಳ್ಳುತ್ತ, ಆವೇಶದ ಹೆಜ್ಜೆಗಳನ್ನು ಇಕ್ಕುತ್ತ ತಲೆಬಾಗಿಲನ್ನು ದಾಟಿದಳು.

'ಮಹಾದೇವಿ....ಮಹಾದೇವಿ....' ಎಚ್ಚೆತ್ತ ಕೌಶಿಕ ಚೀರಿದ. ಅವನ ಕ್ರೋಧ ತೊಲಗಿ, ಅಲ್ಲಿ ಕರುಣೆಗೆ ಎಡೆಮಾಡಿಕೊಟ್ಟಿತು.

'ಮಹಾದೇವಿ....ದೇವಿ....' ಕೌಶಿಕನ ಕೂಗಿನಿಂದ ಅರಮನೆ ಪ್ರತಿಧ್ವನಿಸಿತು. ಅವನು ಶಕ್ತಿಮೀರಿ ಕಿರುಚಿ, ಕುಸಿದುಬಿದ್ದನು.

೩೮. ಮೋಹ ಪಂಜರದಿಂದ ಮುಕ್ತಿ

ಉಟ್ಟ ಸೀರೆಯು ಸೀಳಿ, ತೊಟ್ಟ ತೊಡಿಗೆಯು ಮುರಿದು,
ಬಿಟ್ಟೆಹೆನು ನಾನು ಬಿಡುಮುಡಿಯು ಎಲೆವೃಡನೆ,
ಕೊಟ್ಟೆಹೆನು ತನ್ನ ತನು ಮನವ ॥*

ಹೀಗೆ ತನ್ನಲ್ಲಿಯೇ ನುಡಿಯೊಂದನ್ನು ಗುಣುಗುಣಿಸುತ್ತ ಮಹಾದೇವಿ ಆವೇಶಭರಿತಳಾಗಿ ದಾಪುಗಾಲನ್ನು ಹಾಕುತ್ತ ನಡೆದಳು. ಆಕೆಯನ್ನು ತಡೆಯುವ ಧೈರ್ಯವು ಅಲ್ಲಿದ್ದ ಯಾರಿಗೂ ಒದಗದೆ ಮುಂದೊಂದು ಹೆಜ್ಜೆಯನ್ನೂ ಎತ್ತಿಡಲಾರದಷ್ಟು ದಿಗ್ಭ್ರಾಂತರು ಅವರಾಗಿದ್ದರು. ಜಂಗಮರಿಂದ ಹಿಡಿದು ಅರಸು ಪರಿವಾರದವರೆಲ್ಲ ಭಿತ್ತಿಯ ಮೇಲೆ ಬಿಡಿಸಿದ ಚಿತ್ರಗಳಂತೆ, ಕಾಲುಗಳು ಹೂಳಲ್ಪಟ್ಟಷ್ಟು ಸ್ತಂಭಿತರಾಗಿದ್ದರು. ಮಹಾದೇವಿಯು ಅರಮನೆಯ ಪೌಳಿಯನ್ನು ಹೆಬ್ಬಾಗಿಲ ಮೂಲಕ ದಾಟಿದ ಬಳಿಕ ನಿಂತವರ ಶರೀರಗಳಲ್ಲಿ ಚಲನೆ ಕಂಡುಬಂದಿತು.

ಇತ್ತಕಡೆ ದಿಗಂಬರೆಯಾಗಿ ಹೆಬ್ಬಾಗಿಲನ್ನು ದಾಟಿ, ಮುನ್ನಡೆಯತೊಡಗಿದ ಮಹಾದೇವಿಯನ್ನು ಕಂಡ ಊರ ಜನರು ಬೆಪ್ಪುಬೆಪ್ಪಾಗಿ ನಿಂತರು. ರಾಜಬೀದಿಯಲ್ಲಿ ಸ್ವಲ್ಪ ನಡೆದಾಗ ದಾರಿ ಕವಲೊಡೆವ ತಾಣಬಂದಿತು. ತಾನು ನಿಂತ ಸೂರ್ಯಬೀದಿಯೇ ಪೇಟೆಯ ಬೀದಿಗೆ ಅಂದರೆ ತನ್ನ ಮನೆಗೆ ಕೊಂಡೊಯ್ಯುತ್ತಿತ್ತು. ಎಡದ ಸೋಮಬೀದಿಯು ಗುರುಗಳ ಮಠಕ್ಕೆ ಕರೆದೊಯ್ಯುವ ಪಥವಾಗಿತ್ತು. ಮನೋರಂಗದಲ್ಲಿ ಭಾವನೆಗಳು ಕಾದಾಡತೊಡಗಿ ಒಂದು ನಿಮಿಷ ಸುಮ್ಮನೆ ನಿಂತು ಮನಸ್ಸನ್ನು ಪ್ರಶ್ನಿಸಿದಳು :

'ಎಲ್ಲಿಗೆ ಹೋಗಲಿ ?....'

'ಮತ್ತೆಲ್ಲಿಗೆ? ಇದೇ ಪಥದಲ್ಲಿ ನೇರವಾಗಿ ಸಾಗಿದರೆ ಹೆತ್ತ ಮನೆ, ಆ ಮನೆಗೆ....' ಮನಸ್ಸು ಮಾರುಲಿಯಿತು.

'ಬಲಪಥವು ಬೇಡ ; ಗುರುಲಿಂಗದೇವರ ಆಶೀರ್ವಾದದೊಡನೆ ಮುಂದಿನ ಬದುಕನ್ನೆದುರಿಸಲು ಸಿದ್ಧಳಾಗು....' ಮನಸ್ಸಿನ ತಲೆಯಮೇಲೆ ಹೆಪಿಡದು ವಿವೇಕವುದಬೋಧೆ ಮಾಡಿತು. ನಿಧಾನಿಸಿದ್ದ ನಡಿಗೆಯನ್ನು ತ್ವರೆಗೊಳಿಸಿ ಎಡಮಾರ್ಗವನ್ನು ಹಿಡಿದಳು.

'ಇಗದೇನು—ಯಾರೀಕೆ? ದೆವ್ವ ಹಿಡಿದವಳಂತೆ ಹೋಗುತ್ತಿದ್ದಾಳೆ....'

ಕೆಲವರು ಮಾತನಾಡಿಕೊಂಡರು. ಕೂದಲು ಕೆದರಿಕೊಂಡು ನಡೆಯುವ ದಿಗಂಬರ ದೇಹವನ್ನು ಗುರುತಿಸದ ಹೆಂಗಸರು ಹೆದರಿ ಮನೆಯೊಳಗೆ ಸೇರಿಕೊಂಡು ಕದವಿಕ್ಕಿ, ಕಿಟಕಿಯಲ್ಲಿ ಇಣುಕಿ ನೋಡತೊಡಗಿದರು.

'ಓಂಕಾರಶೆಟ್ಟರ ಮಗಳು ಮಹಾದೇವಿಯೇ ಇದ್ದಂತೆ ತೋರುವುದು....' ಗುಂಪಿನಲ್ಲಿದ್ದ ಗೃಹಸ್ಥನೊಬ್ಬ ನುಡಿದ.

'ಓಹ್....ಪೇಟೆಯಲ್ಲಿ ಮಾತಾಗುತ್ತಿತ್ತಲ್ಲ....ವೈಹಾಳಿಯಿಂದ ಬರುವಾಗ ರಾಜನು ನೋಡಿ ಮೋಹಗೊಂಡ ; ತಾಯಿ-ತಂದೆಗಳು ರಾಜನಿಗೆ ಒಪ್ಪಿಸಿದರು ಎಂದು. ಹಾಗಾದರೆ ಇವಳೆಯೇ ?' ಅಸ್ಪಷ್ಟವಾಗಿ ಶಬ್ದಗಳು ಕಿವಿಯ ಮೇಲೆ ಬಿದ್ದವು. 'ಅಹುದೇ....ತಾಯಿ-ತಂದೆಗಳು ಒಪ್ಪಿಸಿದರೆ....ಎಂತಹ ಸುಳ್ಳು ಸುದ್ದಿ !' ಮಹಾದೇವಿಯ ಮನಸ್ಸು ಕಳವಳಗೊಂಡಿತು.

'ತಾನೇ ಮೆಚ್ಚಿ ಹೋಗಿದ್ಲು ಕಣಯ್ಯಾ....ಲಗ್ನ ಮಾಡೋ ತನಕ ಸಹ ತಡೀಲಾರದ ಅವಸ್ರ ಮಾಡಿದ್ಲಂತೆ....'

'ತಾನು ವೈರಾಗ್ಯಮೂರ್ತಿ, ಮದುವೆಯಾಗುವುದಿಲ್ಲ ಎಂದು ಬಿಂಕದಿಂದ ಅನ್ನುತ್ತಿದ್ದಳು....'

'ರಾಜನಂತಹವನು ಕೇಳಿದರೆ ಇಲ್ಲವೆಂದಾಳೆಯೇ ? ಹೆಂಗಸ್ರ ಮನಸ್ಸೆಂದರೆ ಏನಪ್ಪಾ, ಮಿಡಿನಾಗರ. ಯಾವಾಗ ಹೇಗೋ ಹೇಳೋದು ಕಷ್ಟ....'

'ಎಂತೆಂಥೋರೋ ಏನೋ ಆದ್ರಂತೆ ; ಈಕೇದೆಲ್ಲ ಏನಯ್ಯಾ ! ವಿಶ್ವಾಮಿತ್ರನೇ ಕಾಮದ ಕೈಗೊಂಬೆಯಾದ. ದೇವಾನುದೇವತೆಗಳು ಆ ಪ್ರವಾಹದಾಗೆ ಹುಲ್ಲುಕಡ್ಡಿಯಂತೆ ಕೊಚ್ಚಿ ಹೋದ್ರಂತೆ, ಇನ್ನು ಇವಳದ್ದು ಏನ್ಬಿಡಯ್ಯಾ. ಅಂಥ ವಿಲಾಸ್ದಾಗೆ ಇದ್ದೂ ನ್ಯಾರಾಗಿ ಉಳಿದಿರ್ತಾಳಾ....!'

'ಅದೇನೋ ಹೇಳ್ತಾರಲ್ಲಾ ಬೆಂಕಿ ಮುಂದಿಟ್ಟ ಬೆಣ್ಣೆ ಕರಗಲ್ಲ ಅಂದಿತಂತೆ....' ಅಪಹಾಸ್ಯದ ನಗೆನಕ್ಕ ಮತ್ತೊಂದು ಧ್ವನಿ ನುಡಿಯಿತು.

ಮಹಾದೇವಿಯ ಹೃದಯವು ನಡುಗಿತು. ಎಂತೆಂತಹ ವಾಗ್ಬಾಣಗಳು !

'ದೇವಾ....ಎಂತೆಂತಹವರೂ ಹೇಗೋ ಬದುಕುವರು. ಆದರೆ ವೈರಾಗ್ಯ ಮೂರ್ತಿಗಳಿಗೆ, ತ್ಯಾಗಿಗಳಿಗೆ ಇಂತಿಂತಹ ಮಾತೆ ?'

ಕಿವಿಗಳ ಮೇಲೆ ಬೇರಾವ ಶಬ್ದಗಳೂ ಬೀಳದಂತೆ ಮಂತ್ರವನ್ನು ಎಡಬಿಡದೆ ನುಡಿಯುತ್ತ, ಹೆಜ್ಜೆಯನ್ನು ಚುರುಕುಗೊಳಿಸಿದಳು.

ಮಠವನ್ನು ಸಮೀಪಿಸುವ ಮೊದಲು ಸಿಹಿನೀರ ಬಾವಿಯನ್ನು ಹಾಯ್ದು ಹೋಗದೆ ಬೇರೆ ಮಾರ್ಗವಿರಲಿಲ್ಲ. ಆ ರಣಗುಡುವ ಬಿಸಿಲಿನಲ್ಲಿ ಯಾರೂ

ಬಾವಿಯ ದಂಡೆಯ ಮೇಲೆ ವಿಶಾಲವಾಗಿ ಹರಡಿದ್ದ ಆಲದ ಗಿಡದ ಬುಡಕ್ಕೊರಗಿ ಗಿಡದ ನೆರಳಿನಲ್ಲಿ ಸಿಂಗಾರಮ್ಮ, ಸಂಗವ್ವ ಎಲೆಯಡಿಕೆ ಮೆಲ್ಲುತ್ತ ಕುಳಿತಿದ್ದರು. ಕೂದಲನ್ನು ಮೈತುಂಬ ಹರಡಿಕೊಂಡು ನಡೆದು ಬರುವ ಮಹಾದೇವಿಯನ್ನು ಅವರು ಮೊದಲು ಗುರುತಿಸಲಿಲ್ಲ.

'ಸಂಗವ್ವಕ್ಕಾ, ಅದೇನವ್ವಾ ಹುಚ್ಚುಗಿಚ್ಚು ಹಿಡಿದಿರಬೇಕು. ಎಂಥ ಚೆಂದನ್ನ ಹುಡುಗಿ ನೋಡು, ಬತ್ತಲೆ ಆಗಿ ನಡೆದೈತೆ....' ಸಿಂಗಾರಮ್ಮ ಎಲೆಯಡಿಕೆ ಉಗುಳುತ್ತ ಹೇಳಿದಳು. ಹುಬ್ಬಿನ ಮೇಲೆ ಕೈಯನ್ನು ಅಡ್ಡವಾಗಿ ಹಿಡಿದು,

'ನಡ್ಗೆ ನೋಡಿದ್ರೆ ನಂಗ್ಯಾಕೋ ಸಂಶಯ ಬರ್ತೈತೆ ಸಿಂಗಾರಕ್ಕ! ಆಕೆ ಲಿಂಗವ್ವನ ಮಗಳು ಮಾದೇವಿ ಹಂಗೆ ಕಾಣ್ಸಲ್ವೆ?'

'ಅಯ್ ಬಿಡು....ನಿನ್ನದೊಂದು ಮಾತೆ....ರಾಜನ ಮನೇಲಿ ಲಕ್ಷ್ಮಿ ಹಂಗೆ ನಲೀತಿರೋ ಆಕೆ ಈಗ್ಯಾಕೆ ಹೀಂಗ ಬಂದಾಳು....' ಸಿಂಗಾರಮ್ಮನಿಗೆ ದೃಷ್ಟಿಮಾಂದ್ಯವಾಗತೊಡಗಿತ್ತು.

'ಇಲ್ಲ ಕಣವ್ವಾ....ನಿನ್ನಾಣೆಗೂ ಆಕೇನೆ....ಬರೀ ಮೈಯಾಗ ಹೊರ ಟಾಳ....'

'ಏನಾತೋ....ಹತಮಾರಿ ಹೆಣ್ಣು, ನಮ್ಮೆದುರೆ ಹೆಂಗೆ ಮಾತಾಡ್ತಿತ್ತು. ಹಂಗೆ ಅಲ್ಲಿ ಮಾತಾಡಿರಬೇಕು; ರಾಜ ಯಾಕೆ ಕೇಳ್ತಾನವ್ವಾ....ಬಾರು ಕೋಲು ತಗಂಡು ಬತ್ತಲೆ ಮಾಡಿ ಬಾರ್ಸಿರ್ಬೇಕು....' ಸಿಂಗಾರಮ್ಮ ದ್ವೇಷದ ಧ್ವನಿಯಲ್ಲಿ ಹೇಳಿದಳು. ತನಗಾದ ಅಪಮಾನವನ್ನು ಇನ್ನೂ ಆಕೆ ಮರೆತಿರಲಿಲ್ಲ.

'ಇದೇನವ್ವಾ ಈ ಪಾಡು! ಗಂಡನ್ನೂ ಮಾಡ್ಕೊಳ್ಳಲಿಲ್ಲ, ರಾಜನತ್ರನೂ ಬಾಳ್ವೆ ಮಾಡ್ಲಿಲ್ಲ....' ಸಂಗವ್ವ ಸ್ವಲ್ಪ ಮರುಕ ಸೂಚಿಸಿದಳು.

'ಇನ್ನೇನು....ನಾಯಿ ಮುಟ್ಟಿದ ಮಡಿಕೆ....ಎಲ್ಲಿದ್ರೂ ಅಷ್ಟೆ. ಯಾವೋನು ಮಾಡ್ಕಂತಾನೆ....'

ಮಹಾದೇವಿಗೆ ಈ ಮಾತುಗಳನ್ನು ಕೇಳಿ ದುಃಖವು ಒತ್ತರಿಸಿತು. 'ನಾಯಿ ಮುಟ್ಟಿದ ಮಡಿಕೆ' ಎಂಬ ಮಾತು ಕೂರಲಗಿನಂತೆ ಹೃದಯವನ್ನು ಸೀಳಿತು. 'ನನ್ನ ಪವಿತ್ರತೆ-ಬ್ರಹ್ಮಚರ್ಯಗಳನ್ನು ಕಾಪಾಡಿಕೊಳ್ಳಲು ನಾನು ಪಟ್ಟ ಕಷ್ಟವೆಷ್ಟು. ಅದನ್ನು ಈ ಜಗತ್ತು ನಿಜಕ್ಕೂ ಅರ್ಥ ಮಾಡಿಕೊಂಡೀತೇ?' ಮುಂದಿನ ಮಾತುಗಳನ್ನು ಕೇಳದಿರುವುದೇ ಒಳ್ಳಿತು ಎಂದು ನೆಲಕ್ಕೆ

ಗುರುಲಿಂಗದೇವರು ಪೂಜೆ ಪ್ರಸಾದಗಳನ್ನು ಮುಗಿಸಿ ಬಿಸಿಲಿನ ದಗೆ ಒಳಗೆ ಬಹಳವೆಂದು ಮಠದ ಮುಂದಿನ ಕಟ್ಟೆಯ ಮೇಲೆ ಕುಳಿತು ವಚನ ಗಳನ್ನು ತಿರುವಿಹಾಕುತ್ತಲಿದ್ದರು. ಮಧ್ಯೆಮಧ್ಯೆ ವಚನದ ಅರ್ಥವನ್ನು ಕಣ್ಣುಮುಚ್ಚಿಕೊಂಡು ಮೆಲುಕುಹಾಕುತ್ತಿದ್ದ ಅವರಿಗೆ ಹೊರಗಿನ ಯಾವ ಚಟುವಟಿಕೆಗಳೂ ಕಾಣಬರುತ್ತಿರಲಿಲ್ಲ.

'ಗುರುದೇವಾ....ನಿಮಗೂ ವಿಶ್ವಾಸವಿಲ್ಲವೇ ?' ಎನ್ನುತ್ತ ದನಿಯೊಂದು ಆವೇಶದಿಂದ ನುಡಿದು, ಆ ಸ್ವರವನ್ನು ಉಲಿದ ಶರೀರವು ದೊಪ್ಪನೆ ಬಿದ್ದಾಗ ಗುರುಲಿಂಗರು ಕಣ್ತೆರೆದರು. ಮೊದಲಿಗೆ ಮುಖ ಕಾಣಲಿಲ್ಲ. ದಟ್ಟವಾಗಿ ಹರಡಿಬಿದ್ದ ಕೂದಲು, ಕೂದಲಿನ ಹಿಂದೆ ಕಾಣುವ ಎಳೆಯ ಸೂರ್ಯನ ಬಣ್ಣದ ಬೆನ್ನು. ಕ್ಷಣಕಾಲ ದಿಗ್ಭ್ರಾಂತರಾದರು.

'ಯಾರಿದು ?'

'ಏಕೆ ನನ್ನನ್ನು ಮರೆತುಬಿಟ್ಟಿರಾ....ಗುರುದೇವಾ ?' ತಲೆ ಎತ್ತಿ ಕೂದ ಲನ್ನು ಮುಖದಿಂದ ಪಕ್ಕಕ್ಕೆ ಸರಿಸಿಕೊಂಡಾಗ ಗುರುಲಿಂಗದೇವರು ಗುರುತು ಹಿಡಿದು, ಗಂಭೀರರಾದರು.

'ಗುರುದೇವಾ....ನನ್ನ ದಿಗಂಬರತ್ವವನ್ನು ಕಂಡು ನೀವೂ ಸಂಶಯ ತಾಳುವಿರಾ ?' ದೀನಧ್ವನಿಯಲ್ಲಿ ಮಹಾದೇವಿ ಕೇಳಿದಳು.

'ಇಲ್ಲ ಮಗಳೆ ; ಸೂರ್ಯನ ಗರ್ಭದಲ್ಲಿ ಮಂಜುಗಡ್ಡೆಯ ತುಣುಕು ಸಿಕ್ಕರೂ ಸಿಗಬಹುದು, ಮಂಜು ಬೆಟ್ಟದ ಒಡಲಲ್ಲಿ ಇದ್ದಲಿಯ ಚೂರು ಕಂಡರೂ ಕಾಣಬಹುದು. ಆದರೆ ನಿನ್ನಲ್ಲಿ ಕಲಂಕವು ಕಾಣಸಿಗದು ತಾಯಿ ; ಜಾಗ್ರತ್ ಸ್ವಪ್ನ ಸುಷುಪ್ತಾವಸ್ಥೆಯಲ್ಲೂ ಸಂಶಯ ತಾಳೆನು. ನಿನ್ನ ಮನೋ ಸ್ಥೈರ್ಯದ ಬಗ್ಗೆ ನನಗೆ ಸಂಪೂರ್ಣ ಆತ್ಮವಿಶ್ವಾಸವಿದೆಯಮ್ಮಾ.....'

'ನನಗೀಗ ಸಮಾಧಾನವಾಯಿತು....ಸಾವಿರ ನಾಲಿಗೆ ನುಡಿದರೇನಂತೆ, ನಿಮ್ಮಂತಹವರು ಒಬ್ಬರು ನಂಬಿದರೂ ಸಾಕು ಗುರುದೇವಾ. ಆ ನೂರು ನಾಲಿಗೆಗಳು ಮಾಡಿದ ಗಾಯವನ್ನು ನಿಮ್ಮ ಒಂದು ನುಡಿಯು ಮಾಯಿಸ ಬಲ್ಲದು....'

'ಅದಿರಲಿ....ಮಾದೇವಿ....ಇದೇಕನ್ಮ ಈ ರುದ್ರಲೀಲೆ....?'

'ನಿಮ್ಮ ಅಳಿಯನು ನಟಭೈರವ, ದಿಗಂಬರನಲ್ಲವೇ ? ಅವನ ಕಾಟವೇನು ಸಾಮಾನ್ಯವೇ ಗುರುಗಳೇ....?' ವಿಷಣ್ಣತೆಯ ನುಡಿಯನ್ನು ನುಡಿದು ನಕ್ಕಳು.

‘ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಸುವರ್ಣದ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಅರಿದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇದ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ*

ಹೀಗಿದೆ ನೋಡವ್ವ ಶಿವನಾಟ. ಏನೇ ಆಗಲಿ ನೀನು ಜಯಶೀಲಳಾದೆ. ಶಿವ ನೊಡ್ಡಿದ ಎಲ್ಲ ವಿಪತ್ತುಗಳನ್ನು ದಾಟಿ ಗೆದ್ದು ಬಂದು ವೈರಾಗ್ಯದ ಅತ್ಯುನ್ನತ ನಿಲುವನ್ನು ಏರಿದೆ. ಹೆಣ್ಣು ಸಂಕಲ್ಪಿಸಿದರೆ ಏನೆಲ್ಲವನ್ನೂ ಸಾಧಿಸಬಲ್ಲಳು ಎಂಬುದನ್ನು ಜಗತ್ತಿಗೆ ಮನಗಾಣಿಸಿಕೊಟ್ಟೆ. ಮಾದೇವಿ, ಹುಲಿಯ ಗವಿಯಿಂದ ಪಾರಾಗಿ ಬರಬಹುದು, ಹಾವಿನ ವಿಷಕುಂಡದಲ್ಲಿ ಈಜಿ ಬರಬಹುದು ; ಆದರೆ ಕಾಮುಕನ ಹಸ್ತದಿಂದ ಪಾರಾಗಿಬರುವುದು ಬಹುದೊಡ್ಡ ಸಾಹಸ. ಇದರಲ್ಲಿ ಗೆದ್ದ ನೀನು ಸ್ತ್ರೀಕುಲಕ್ಕೆ ತಿಲಕವಿದ್ದಂತೆ ಮಗಳೇ....’ ಅಭಿಮಾನದಿಂದ ನುಡಿದ ಗುರುಲಿಂಗದೇವರ ಮಾತುಗಳು ಮಹಾದೇವಿಗೆ ಅಪಾರ ಸಾಂತ್ವನ ನೀಡಿದವು. ಮನಸ್ಸು ಹೊಯ್ದಾಟವನ್ನು ನಿಲ್ಲಿಸಿ ಸಮಾಧಾನವು ಮುಖದಲ್ಲಿ ನೆಲೆಯೂರಿತು.

ಅನಿತರಲ್ಲಿ ಅರಮನೆಯಿಂದ ಬಂದ ನಿಜಲಿಂಗದೇವರು ಸವಿಸ್ತಾರವಾಗಿ ನಡೆದುದನ್ನು ವಿವರಿಸಿದರು. ಮಹಾದೇವಿ ವಿನೀತಳಾಗಿ ಬಿನ್ನೈಸಿಕೊಂಡಳು:

‘ಇನ್ನು ಅಪ್ಪಣೆ ನೀಡಿ ಗುರುದೇವಾ....’

‘ಎಲ್ಲಿಗಮ್ಮಾ....ಮನೆಗೇ....?’

‘ಅಹುದು ತಂದೆ, ಈ ಒಡಲನ್ನು ಕೊಟ್ಟ ಹೆತ್ತವರ ಮನೆಗಲ್ಲ. ಶಿವನ ಅರಮನೆಯಾದ ವಿಶಾಲ ಜಗತ್ತಿಗೆ.’

‘........’ ಗುರುಲಿಂಗರು ಮಾತನಾಡಲಿಲ್ಲ.

‘ನನ್ನನ್ನು ತಡೆಯದಿರಿ. ಗುರುದೇವಾ, ಅನುಭವಮಂಟಪದ ಶರಣ ಸಂಗಮಕ್ಕೆ ಹರಿಯದಿದ್ದರೆ ಈ ಬದುಕಿಗೆ ಪೂರ್ಣತೆ ಇಲ್ಲ....’

‘ಆಗಲಿ ಮಗಳೇ....’ ಗುರುಲಿಂಗದೇವರು ಎದ್ದು ನಮಸ್ಕರಿಸಿದ ಮಹಾದೇವಿಯನ್ನು ಆಶೀರ್ವದಿಸುವಷ್ಟರಲ್ಲಿ, ಮಠದ ವಿಶಾಲವಾದ ಪೌಳಿಯನ್ನು ದಾಟಿ ಶಿವಕಾಮಿನಿ, ವಸಂತಕರು ಬರುವುದು ಕಾಣಿಸಿತು. ಶಿವಕಾಮಿನಿಯು ಉತ್ಕಟ ಉದ್ವೇಗದಿಂದ ಓಡುತ್ತೋಡುತ್ತ ಬಂದು, ‘ಒಡತಿ’ ‘ಒಡತಿ’ ಎಂದು

ಕೂಗುತ್ತ ಮಹಾದೇವಿಯ ಪಾದದ ಮೇಲೆ ಬಿದ್ದು ಬಿಕ್ಕಿದಳು. ಆಕೆಯನ್ನು ಮಹಾದೇವಿ ಮೇಲಕ್ಕೆತ್ತಿದಳು.

'ಒಡತಿ....ನೀವು ನಮ್ಮನ್ನು ಬಿಟ್ಟು ಎತ್ತ ಹೋಗುವಿರಿ....?' ಬಿಕ್ಕುತ್ತಲೇ ಕೇಳಿದಳು.

'ಎಂಥ ಪ್ರಶ್ನೆಯಿದು ಶಿವಕಾಮಿನಿ! ಈ ಜಗತ್ತು ವಿಶಾಲವಾಗಿದೆ. ಅಸಂಖ್ಯಾತ ನಾಸ್ತಿಕರನ್ನು, ದುರ್ಬಲರನ್ನು, ವಿಲಾಸಿಗಳನ್ನು ಇಂಬಿಟ್ಟುಕೊಳ್ಳಬಹುದಾದ ನನ್ನ ಪತಿಯ ಮನೆ ನನ್ನನ್ನು ಇಂಬಿಟ್ಟುಕೊಳ್ಳಲಾರದೆ?'

'ಅವ್ವಾ....ನನ್ನನ್ನು ನಿಮ್ಮೊಡನೆ ಕರೆದೊಯ್ಯಿರಿ. ಅಜ್ಞಾನದ ಶಿಶುವಾಗಿ ಇಲ್ಲಿಯವರೆಗೆ ಅಲ್ಲಿ ಹೇಗೋ ಇದ್ದೆ. ಅಮೃತಪಾನದ ಬಳಿಕ ಸುರೆಯ ಸ್ನೀಂಟಲು ಮನ ಒಪ್ಪದು. ಇನ್ನು ಅಲ್ಲಿರಲು ನನಗಾಗದು. ನಿಮ್ಮೊಡನೆಯೇ ಬರುವೆನು.'

'ಬೇಡವ್ವಾ, ವೈರಾಗ್ಯದ ಬದುಕು ಬಹು ಕಷ್ಟಕರ. ಹಂಸಪಕ್ಷಿ ಸಲಿಲವಾಗಿ ನೀರಲ್ಲಿ ಈಜುವುದನ್ನು ನೋಡಿ ಪಾರಿವಾಳವೂ ನೀರಿಗಿಳಿದರೆ ನೀಗುವುದು ಕಷ್ಟಸಾಧ್ಯ. ಅಲ್ಲದೇ ನಿನಗಿನ್ನೂ ಮಾಡತಕ್ಕ ಕರ್ತವ್ಯ ಬಹಳವಿದೆ....'

'ಯಾವ ಕರ್ತವ್ಯ?'

'ರಾಜನು ಸ್ವಭಾವತಃ ದುಷ್ಟನಲ್ಲ, ದುರ್ಬಲನು. ಕ್ರೂರಿಯಲ್ಲವಾದರೂ ಅಶಕ್ತಮನದ ಕೈಕೂಸು, ಕೆಟ್ಟ ಬಯಕೆಗಳ ಸುಳಿಯಲ್ಲಿ ಸಿಕ್ಕವನು. ತನ್ನ ವಿವೇಕದ ಹಿಡಿತವನ್ನು ಮೀರಿ ಕ್ರೋಧ-ಉದ್ವಿಗ್ನತೆಗಳು ಅವನನ್ನಾಳುತ್ತವೆ. ಅವನಿಗೆ ಮಾನಸಿಕ ಆಘಾತವಾಗಿದೆ; ಇನ್ನು ತನ್ನಂತರಂಗದ ಪರೀಕ್ಷೆಗೆ ತೊಡಗುವನು, ಪರಿವರ್ತನೆಗೊಳ್ಳುವನು. ಕರಾಳಮಯವಾದ ಭೂತ ಬದುಕಿನ ಕಾರ್ಗವಿಯಿಂದ ಹೊರಬಂದು ಅವನು ಹೊಸ ಬದುಕಿನ ಬೆಳಕನ್ನು ಸವಿಯಲು ನೀನು ಸಹಾಯಕಳಾಗಬೇಕು ತಂಗಿ.'

'ನಾನೇನು ಮಾಡಬಲ್ಲೆ ತಾಯಿ....?'

'ಆ ರಾಜನಿಗೀಗ ಅಂತಃಕರಣಪೂರಿತ ವಾತ್ಸಲ್ಯದಿಂದ ಸೇವೆ ಮಾಡಿ ಸಾಂತ್ವನಿಸುವವರು ಬೇಕು. ನೀನು ಹೆತ್ತಮಗಳಂತೆ ಅವನ ಬದುಕನ್ನು ಸಂರಕ್ಷಿಸು. ಕಾಡಾನೆಯಲ್ಲಿನ ಆಕ್ರಮಣಶೀಲ ಮನೋಭಾವನೆಯನ್ನು ತೆಗೆದು ಸಾಧುಗೊಳಿಸಿದರೆ ಭಾರ ಹೊರಲು ಅದು ಸಹಾಯಕವಾಗುವಂತೆ, ರಾಜನಲ್ಲಿರುವ ವಿಷಯಾಸಕ್ತಪ್ರವೃತ್ತಿಯನ್ನು ತೆಗೆದರೆ ಅವನು ಆದರ್ಶ ಅರಸನಾಗಿ ನಾಡನ್ನಾಳುವನು.'

'ಇಲ್ಲ ಶಿವಕಾಮಿನಿ, ನಿನ್ನ ತ್ಯಾಗದಿಂದ ಮಾತ್ರವೇ ಈ ಆಘಾತದಿಂದ ರಾಜನು ಚೇತರಿಸಿಕೊಳ್ಳಬಲ್ಲ. ಕಾಲಿನಲ್ಲಿ ಮುಳ್ಳುಹೊಕ್ಕು, ಕೀವಾದಾಗ ಆ ಮುಳ್ಳನ್ನು ಕಿತ್ತು, ಕೀವನ್ನು ಹೊರತೆಗೆದು ನಂತರ ಗಾಯದ ನೋವು ತೆಗೆವ ಮದ್ದನ್ನು ಕಟ್ಟಬೇಕಾಗುವುದು. ಶಿವೆ....ನಾನೀಗ ಅವನ ಕೀಳುಬಯಕೆಗಳ ಮುಳ್ಳನ್ನು ನನ್ನ ವಿರಕ್ತಿಯಾದರ್ಶದ ಮುಳ್ಳಿನಿಂದ ಕಿತ್ತು; ವಿಲಾಸ ಪ್ರವೃತ್ತಿಯ ಕೀವನ್ನು ತೆಗೆದು ಬಂದಿರುವೆ. ಆ ಹೃದಯದ ಗಾಯ ಮಾಯ ಬೇಕಾದರೆ ನಿಷ್ಕಲ್ಮಶ, ವಾತ್ಸಲ್ಯಪೂರ್ಣವಾದ ಸೇವೆಯೆಂಬ ಮದ್ದು ಸವರಲು ನೀನು ಅವನ ಬಳಿ ಇರಬೇಕು....' ಶಿವಕಾಮಿನಿ ಮೂಕಳಾಗಿ ನಿಂತಳು. ವಸಂತಕನು ಬೆರಗಾಗಿ, ತಿರಸ್ಕಾರದ ಧ್ವನಿಯಲ್ಲಿ ಕೇಳಿದ:

'ತಾಯಿ....ಅಂತಹ ಪಾಪಿಯನ್ನು ಕ್ಷಮಿಸಿ, ಉದ್ಧರಿಸುವ ಸಲಹೆ ನೀಡುವಿರಾ? ಅವನನ್ನು ಕಡಿದು ಹದ್ದು-ನಾಯಿಗಳಿಗೆ ಆಹಾರವಾಗಿ ಎಸೆದರೂ ಪಾಪ ಬರದು. ಮಂಗಲಮಯಿ ಮಾತೆಯನ್ನು ಗೃಹಬಂಧನದಲ್ಲಿರಿಸಿ, ಕಣ್ಣೀರು ಸುರಿಸಿದ ನರಾಧಮನವನು.'

'ವಸಂತಕರೇ, ಕಣ್ಣಿನೊಳಗೆ ಬಿದ್ದ ಕಸವನ್ನು ಮತ್ಸರಿಸಬೇಕು—ಕಣ್ಣನ್ನೇ ಅಲ್ಲ. ಪಾಪಿಯೊಳಗಣ ಪಾಪವನ್ನು ದ್ವೇಷಿಸಬೇಕು ಪಾಪಿಯನ್ನೇ ಅಲ್ಲ....' ಗಂಭೀರವಾಗಿ ನುಡಿದಳು ಮಹಾದೇವಿ.

'ಶಿವಕಾಮಿನಿ, ನನ್ನ ಬೇಡಿಕೆಯನ್ನು ಮನ್ನಿಸು. ಅವನ ಪ್ರವೃತ್ತಿ ನಿಜಕ್ಕೂ ಪಲ್ಲಟವಾದರೆ ಬದುಕು ಮಂಗಲಮಯವಾಗುವುದು. ದ್ವೇಷ-ತಿರಸ್ಕಾರಗಳು ಪಾಶವಿಕ ಗುಣಗಳು, ಅನುಕಂಪ-ವಾತ್ಸಲ್ಯಗಳು ದೈವಿಕ ಗುಣಗಳು. ನಡೆ ತಂಗಿ....' ಶಿವಕಾಮಿನಿ ಅಗಲಿಕೆಯ ನೋವಿನಿಂದ ತಪ್ತಳಾಗಿ ನುಡಿದಳು:

'ತಾಯಿ, ಬೇಡಿಕೆಯೆಂದು ಬಿನ್ನವಿಸಿಕೊಳ್ಳುವುದೇಕೆ, ಆಜ್ಞೆ ಮಾಡಿರಿ. ಕಾಲಿನಲ್ಲಿ ಮುಟ್ಟಿ ಮಾಡಹೇಳಿದುದನ್ನು ತಲೆಯಲ್ಲಿ ಹೊತ್ತು ಪೂರೈಸುವೆ. ಯಾವ ಪೂರ್ವಪುಣ್ಯದ ಫಲವೋ ತಮ್ಮ ಪರುಷಸನ್ನಿಧಿಯಲ್ಲಿ ಕೆಲವಾರು ಅಮೃತಗಳಿಗೆಗಳನ್ನು ಕಳೆವ ಭಾಗ್ಯ ನನ್ನದಾಯಿತು. ಅವ್ವಾ, ನಿಮ್ಮನ್ನು ನೋಡುವುದು ಇನ್ನೆಂದಿಗೆ ಅವ್ವಾ!' ಬಿಕ್ಕಿ ಅಳುತ್ತ, ಭಾರವಾದ ಕಾಲುಗಳ ನ್ನೆಳೆದುಕೊಳ್ಳುತ್ತ ಶಿವಕಾಮಿನಿ ಹೊರಟಳು.

'ಅವ್ವಾ....ನನ್ನ ಇಚ್ಛೆಯನ್ನಷ್ಟು ಪೂರ್ಣಗೊಳಿಸಿರಿ. ಹೊಸ ಬದುಕಿನ ಬಗೆಯನ್ನಾರಂಭಿಸುವ ನನಗೆ ಆಶೀರ್ವಾದ ಮಾಡಿರಿ.' ವಸಂತಕ ಮುಂದಿ

'ಹರಸಿ, ಈ ಕಾವಿಯ ಶಾಟಿಯನ್ನು ನೀಡಿರಿ' ಎಂದಾಗ, ಆಕೆ ದಿಗ್ಭ್ರಾಂತಳಾದಳು.

'ಇದೇನು ವಸಂತಕರೇ....!' ಬೆರಗಾಗಿ ಕೇಳಿದಳು.

'ತಾಯಿ, ಉಪ್ಪರಿಗೆಯ ಮನೆಯಲ್ಲಿದ್ದ ಮಾನವನು ತಿಪ್ಪೆಯ ಮೇಲಿರಲಾರ. ಇನಿತೊಂದು ಕಾಲ ಪಾರಮಾರ್ಥ ಪ್ರಪಂಚದ ಉಪ್ಪರಿಗೆಯಲ್ಲಿದ್ದವನು ಇನ್ನು ಲೌಕಿಕತೆಯ ತಿಪ್ಪೆಯ ಮೇಲಿರಲು ಸಾಧ್ಯವೇ....?'

'ಅದಕ್ಕೆ ಏನು ಮಾಡಬೇಕೆನ್ನುವಿರಿ....?'

'ಈ ವ್ಯಾಮೋಹ ಪ್ರಪಂಚದ ಬಲೆಯನ್ನು ಬಿಡಿಸಿಕೊಂಡು ಕಲ್ಯಾಣದ ಶರಣರನ್ನು ಕೂಡಿಕೊಂಡು ಜೀವನಪರ್ಯಂತರ ಶರಣರ ಸಂಗದಲ್ಲಿರಲು ಬಯಸುವೆ....ಇದು ನನ್ನ ದೃಢನಿರ್ಧಾರ. ಅಜ್ಞಾನಿಯಾದ ಕೂಸು ಕೈಗೆ ಸಿಕ್ಕದ್ದನ್ನು ತಿನ್ನಬಹುದು, ಬುದ್ಧಿ ಬಲಿತಮೇಲೆ ತಿನ್ನಲು ಅಸಹ್ಯಪಡುವುದು.'

ತನ್ನ ಕೈಯಲ್ಲಿ ತೆಗೆದುಕೊಂಡು ಮಂತ್ರಸಂಸ್ಕಾರ ಮಾಡಿ, ಮುಂದೆ ಚಾಚಿದ ವಸಂತಕನ ಕೈಗಳಲ್ಲಿ ಹಾಕಿದಾಗ ವಸಂತಕ ಪಾದದಮೇಲೆ ಹಣೆ ಇಟ್ಟು ನಮಸ್ಕರಿಸಿ, ತನ್ನ ಆನಂದದ ಕಣ್ಣೀರಿನಿಂದ ಅಭಿಷೇಕ ಮಾಡಿದ.

ಮಹಾದೇವಿ ಅವಸರಿಸಿಕೊಂಡು ಮುಂದೆ ಹೊರಡಲು ಹೆಜ್ಜೆಯಿಡುವಷ್ಟರಲ್ಲೇ ಮಠದ ಶಿಷ್ಯನೋರ್ವ ತ್ವರೆಯಿಂದ ಬಂದು ಹೆತ್ತವರು ಬರುವ ಸುದ್ದಿಯನ್ನು ಮುಟ್ಟಿಸಿದ. ತನ್ನ ಸುದ್ದಿ ಅವರಿಗೆ ತಿಳಿದು ಅವರು ಆಗಮಿಸುವುದರೊಳಗೆ ತಾನು ಉಡುತಡಿಯಿಂದ ನಿರ್ಗಮಿಸಬೇಕೆಂಬ ಮಹಾದೇವಿಯ ಪ್ರಯತ್ನ ಸಫಲವಾಗಲಿಲ್ಲ. ಸಮಸ್ಯೆಯನ್ನು ಎದುರಿಸಿ, ಅವರಿಗೆ ಸಾಂತ್ವನ ನೀಡಿ ಹೋದರಾಯಿತೆಂದು ತನ್ನನ್ನು ತಾನೇ ಸಮಾಧಾನಿಸಿಕೊಳ್ಳುವಲ್ಲಿ, ಲಿಂಗಮ್ಮ ಮೈಮೇಲಿನ ಪರಿವೆಯನ್ನು ಕಳೆದುಕೊಂಡು ಓಡಿಬರುವದನ್ನು ಕಂಡಳು. ಆಕೆಯ ಹಿಂದೆ ತಂದೆ ಓಂಕಾರಶೆಟ್ಟಿ ಗಂಭೀರವಾಗಿ ನಡೆದು ಬರುತ್ತಿದ್ದ. ಅವರ ಬೆನ್ನಿಗೇ ಶಿವಮೂರ್ತಪ್ಪ, ಮಲ್ಲೇಶಪ್ಪ, ಗಿರಿಜಾಂಬೆ, ಶೈಲಜಾ ಬರತೊಡಗಿದ್ದರು. ಬಾವಿಯ ದಂಡೆಯ ಮೇಲೆ ಮಾತಿನಲ್ಲಿ ಮಗ್ನರಾಗಿದ್ದ ಸಿಂಗಾರಮ್ಮ-ಸಂಗಮ್ಮನೂ ಈ ಗುಂಪನ್ನು ಅನುಸರಿಸದಿರಲಿಲ್ಲ. ಮಹಾದೇವಿ ಮೌನವಾಗಿ ತಾಯಿತಂದೆಯರಿಬ್ಬರನ್ನು ನೋಡಿದಳು. ಲಿಂಗಮ್ಮ ಬಹಿರಂಗಿಕವಾಗಿ ದುಃಖವನ್ನು ವ್ಯಕ್ತಪಡಿಸುತ್ತಿದ್ದಳು. ಆದರೆ ಓಂಕಾರ ಮಾತ್ರ ಮೂಕನಾಗಿದ್ದ. ದೀರ್ಘಕಾಲದ ಶಾರೀರಿಕ ರೋಗ, ಮಾನಸಿಕ ಚಿಂತೆಯಲ್ಲಿ ಬಳಲಿದವನಂತೆ ಕಾಣುತ್ತಿದ್ದ. ಮುಖದ ಮೇಲೆ ಮುದ್ರಿತವಾದ

ಎದ್ದು ತೋರುತ್ತಿದ್ದವು. ತನ್ನ ಅಲ್ಪಕಾಲದ ಅಗಲಿಕೆ ಎಷ್ಟೊಂದು ಹಣ್ಣು ಮಾಡಿದೆಯಲ್ಲಾ ಎನಿಸಿತು. ಲಿಂಗಮ್ಮನ ಅಳುವಿಗಿಂತ, ಓಂಕಾರನ ಮೂಕ ನೋಟವು ಮಹಾದೇವಿಯ ಹೃದಯವನ್ನು ಹಿಂಡಿ ಹಿಪ್ಪೆ ಮಾಡಿತು. ಲಿಂಗಮ್ಮ ಅತ್ತು ಕರೆದು, ಸಹ ಹೆಂಗೆಳೆಯರೊಡನೆ ಮಾತನಾಡಿ ದುಃಖದ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಳು. ಆದರೆ ಓಂಕಾರನು ಅಂಗಡಿಯ ವ್ಯವಹಾರದಲ್ಲಿ ಸಹ ಆಸಕ್ತಿ ಕಳೆದುಕೊಂಡು ಕೈದೋಟದ ಸಂಪಿಗೆಯ ಗಿಡದ ಕೆಳಗೆ ಅದನ್ನೇ ದಿಟ್ಟಿಸುತ್ತ ಮೌನವಾಗಿ ಕುಳಿತುಬಿಡುತ್ತಿದ್ದ. ಪತ್ನಿಯೊಡನೆಯೂ ಮಾತನಾಡಲಿಚ್ಛಿಸುತ್ತಿರಲಿಲ್ಲ. ಯಾವಾಗಲೋ ಮನಸ್ಸು ಬಂದಾಗ ಎದ್ದು ಬಂದು, ಹೊಟ್ಟೆಗೆ ಆಹಾರವನ್ನು ತುಂಬಿಕೊಳ್ಳುತ್ತಲಿದ್ದ.

ಲಿಂಗಮ್ಮ ಓಡಿಬಂದು ದಿಗಂಬರೆಯಾಗಿ ನಿಂತ ಮಗಳನ್ನು ಆವೇಶದಿಂದ ಬರಸೆಳೆದು ಅಪ್ಪಿಕೊಂಡು,

'ಮಾದೇವಿ, ನನ್ನರಗಿಳಿ, ಈ ಕಣ್ಣಿಂದ ಕಾಣಬಾರದುದನ್ನೆಲ್ಲ ಕಂಡೆನಲ್ಲಾ ಮಗಳೇ....!' ಧ್ವನಿ ತೆಗೆದು ಅಳತೊಡಗಿದಳು. ಓಂಕಾರ ಮೌನವಾಗಿ ನೋಡುತ್ತಲಿದ್ದ.

'ಲಿಂಗಮ್ಮಾ....ಕಾಣಲಸಾಧ್ಯವಾದುದನ್ನು ಕಂಡಂತಾಗಿದೆ ಎನ್ನವ್ವಾ. ಮೋಹದ ತೆರೆಯನ್ನು ಕಿತ್ತೊಗೆದು, ಅವಳ ಉತ್ತುಂಗ ನಿಲುವನ್ನು ಅರಿಯಲು ಯತ್ನಿಸು ತಾಯಿ....' ಸೂಚ್ಯವಾಗಿ ಮಾತನಾಡಿದರು ಗುರುಲಿಂಗದೇವರು.

ತಾಯಿಯ ಕೈಗಳನ್ನು ಸಡಲಿಸಿ ಮಹಾದೇವಿ ತಂದೆಯ ಬಳಿಗೆ ಬಂದು ಅವನ ಕೈಯನ್ನು ಹಿಡಿದು ಪ್ರೇಮ ತುಂಬಿದ ಧ್ವನಿಯಲ್ಲಿ ಕೇಳಿದಳು :

'ಅಪ್ಪಾ....ಏಕಪ್ಪಾ ಇಷ್ಟೊಂದು ಸೊರಗಿರುವೆ. ಮೈಯಲ್ಲಿ ಸ್ವಾಸ್ಥ್ಯವಿಲ್ಲವೆ?' ಓಂಕಾರನು ತಡೆದಿಟ್ಟ ದುಃಖ ಒಮ್ಮೆಲೇ ಸಿಡಿಯಿತು. ಅವನ ಗಂಡೆದೆ ಕರಗಿ ನೀರಾಯಿತು. ಮಹಾದೇವಿಯ ತಲೆಯನ್ನು ತನ್ನೆದೆಗೆ ಆನಿಸಿಕೊಂಡು ಧಾರಾಕಾರವಾಗಿ ಕಣ್ಣೀರು ಹರಿಸಿದ. ಮಗಳ ನೆತ್ತಿಯನ್ನು ತಂದೆಯ ಕಣ್ಣೀರು ಸೋಂಕಿತು.

'ಅಪ್ಪಾ....ಗಂಡಸಾದ ನೀನೂ ಅಳುವುದೇ....?' ಎಂದು ಕೇಳಿದಳು.

'ಗಂಡಸಾಗಿ ಅಳುತ್ತಿಲ್ಲ, ತಂದೆಯಾಗಿ ಅಳುತ್ತಿರುವೆ ಮಗಳೇ....'

ಓಂಕಾರನ ಮಾತುಗಳು ಕಡೆಗೋಲಾಗಿ ಮಹಾದೇವಿಯ ಮನವನ್ನು ಮಥಿಸಿದವು. ಆವನು ತನ್ನ ದುಃಖವನ್ನು ನಿಗ್ರಹಿಸಲಾರದೆ, ಮರೆಮಾಚಿಕೊಳ್ಳಲೋಸುಗ ಮಗಳನ್ನು ಬಿಟ್ಟು ಮಠದ ಒಳಕ್ಕೆ ನಡೆದು, ಕೆಲವಾರು

'ನಿಮ್ಮ ತಂದೆಯವರು ನೀನು ಹೋದಮೇಲೆ ಸರಿಯಾಗಿ ಉಂಡಿಲ್ಲ.... ಕಣ್ತುಂಬ ನಿದ್ರಿಸಿಲ್ಲ. ನಿನ್ನ ಚಿಂತೆ ಅವರ ಹೃದಯದ ಆಸೆ-ಆಕಾಂಕ್ಷೆಗಳನ್ನೆಲ್ಲ ಬತ್ತಿಸಿದೆ ಮಗಳೆ. ನೀನು ಇದೆಂತಹ ಉದ್ವೇಗಕ್ಕೆ ಬಲಿಯಾಗಿರುವೆ.... ಮಾನವನಿಗಿರುವುದು ಮಾನವೊಂದೇ! ಅದನ್ನೇ ಕಳೆದುಬಿಟ್ಟೆಯಲ್ಲ....' ಲಿಂಗಮ್ಮ ಅಳುತ್ತಲೇ ನುಡಿದಳು.

'ಮಾನ-ಅಪಮಾನ ಎಂಬಿವು ಅರ್ಥವಿಲ್ಲದ ಪದಗಳಪ್ಪ. ಮಾನ ಹೋಗುವ ಬದುಕನ್ನು ನಾನು ಮಾಡಿಲ್ಲ ತಾಯಿ....ಮಂಗಲ ತರುವುದನ್ನೇ ಮಾಡಿರುವೆ....' ಮಹಾದೇವಿ ನಿಚ್ಚಳವಾಗಿ ಹೇಳಿದಳು.

'ಮತ್ತೆ ಇದೆಂತಹ ಕೃತಿಯವ್ವಾ....? ತುಂಬು ಯೌವ್ವನಸ್ಥೆ ದಿಗಂಬರೆಯಾಗಿ ತಿರುಗುವುದೆಂದರೇನು....?' ಶಿವಮೂರ್ತಪ್ಪ ಕೇಳಿದ.

'ಈ ಜಗತ್ತು ಬದುಕನ್ನಳೆಯುವ ಮಾಪನವೇ ಬೇರೆ....ಅದು ಶರಣರ ಬದುಕನ್ನು ಅಳೆಯಲು ಉಪಯೋಗವಾಗದು. ಹಾಲನ್ನು ಅಳೆಯುವ ಕೊಳಗ ಸಮುದ್ರದ ನೀರನ್ನು ಅಳೆಯಲಿಕ್ಕೆ ಉಪಯುಕ್ತವಾಗದು. ತೋರಿಕೆಯ ಬದುಕಿನಲ್ಲಿ ಸ್ವಚ್ಛವಾಗಿದ್ದು ಆಂತರಿಕ ಬದುಕಿನಲ್ಲಿ ಮಲಿನವಾಗಿದ್ದರೆ ಜಗತ್ತು ಮೆಚ್ಚುವುದು, ಮನ್ನಿಸುವುದು. ಆದರೆ ತೋರಿಕೆಯ ಬದುಕು ವಿಲಕ್ಷಣವಾಗಿದ್ದು ಆಂತರಿಕವಾಗಿ ಘನವಾಗಿದ್ದರೆ ನೂರೊಂದು ಮಾತುಗಳನ್ನಾಡುವುದು. ಏಕೆಂದರೆ ಜಗದ ದೃಷ್ಟಿಯು ಸೀಮಿತ ಶಕ್ತಿಯುತವಾದುದು. ಗೌಣೇಂದ್ರಿಯಗಳನ್ನು ಮುಚ್ಚಿದ ನೂಲಿನ ತೆರೆ ಸರಿದರೆ ಗಂಡು-ಹೆಣ್ಣುಗಳು ನಾಚಿ ನೀರಾಗುವರು. 'ಬೇರೆಯವರು ನೋಡಿದರಲ್ಲ' ಎಂದು ಸಂಕೋಚದಿಂದ ಕುಗ್ಗುವರು. ಆದರೆ ನಮ್ಮೆಲ್ಲ ವ್ಯವಹಾರಗಳನ್ನು ನೋಡುವ ಜಗದೊಡೆಯನೊಬ್ಬ ತೆರಹಿಲ್ಲದೆ ಇದ್ದು, ಕಣ್ಣಲ್ಲಿ ಕಣ್ಣಿಟ್ಟು ಸರ್ವಾಂಗಗಳನ್ನು ಪರೀಕ್ಷಿಸುವನು. ಇಂತಹ ಸರ್ವದ್ರಷ್ಟಾರನ ಕಣ್ಣು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಶರಣರದು ಜನಸಾಕ್ಷಿಯ ಬದುಕಲ್ಲ, ದೇವಸಾಕ್ಷಿಯ ಬದುಕು....'* ನಿರ್ಲಿಪ್ತಳಾಗಿ ಹೇಳಿದಳು.

'ಆದರೆ....ಕೆಳದಿ....ನಿನ್ನ ಈ ವೇಷವನ್ನು ನೋಡಿದರೆ ಕರುಳು ಕತ್ತರಿಸಿ ಬರುವುದು, ಕಣ್ಣೀರು ಕಡಲಾಗಿ ಹರಿವುದು; ಬಟ್ಟೆಯನ್ನುಡು ಮಹಾದೇವಿ' ಗೆಳತಿ ಶೈಲಜೆ ಅಳುತ್ತ ಗಿರಿಜಾಂಬೆಯ ಕೈಯಲ್ಲಿದ್ದ ಸೀರೆಯನ್ನು ಇಸಿದು ಕೊಡಹೋಗಿ ಹೇಳಿದಳು.

'ಹೌದು ಮಗಳೇ, ಬಾಳಿನಲ್ಲಿ ಆಕಸ್ಮಿಕವಾಗಿ ನಡೆದ ದುರ್ಘಟನೆಯು

ಕುರುಹಾಗಿ ಹೀಗೆ ಉಳಿಯದಿರಮ್ಮ....' ಲಿಂಗಮ್ಮ ದನಿಗೂಡಿಸಿದಳು.

'ಅವ್ವಾ....ಗಂಡಂದಿರನ್ನು ಮೆಚ್ಚಿಸಬೇಕಾದುದು ಕುಲಸತಿಯರ ಕರ್ತವ್ಯ. ಗಂಡಂದಿರ ಅಭಿರುಚಿಯನ್ನನುಸರಿಸಿ ಇವರೂ ಇರಬೇಕಾಗುವುದಷ್ಟೆ! ನನ್ನ ಪತಿಯು ಬಯಸುವುದು ಪರಿಮಳೋದಕದ ಮಜ್ಜನವನ್ನಲ್ಲ—ಗುರುಪಾದ ತೀರ್ಥದ ಮಂಗಳ ಮಜ್ಜನವನ್ನು; ಅರಿಷಿಣದ ಲೇಪನವನ್ನಲ್ಲ—ವಿಭೂತಿಯ ಅನುಲೇಪನವನ್ನು; ರೇಷಿಮೆಯ ಪೀತಾಂಬರವನ್ನಲ್ಲ—ದಿಗಂಬರವನ್ನು; ಚಂದನ, ಕಸ್ತೂರಿಗಳ ಮೈಲೇಪನವನ್ನಲ್ಲ—ಶಿವಭಕ್ತರ ಪಾದಧೂಳಿಯನ್ನು; ಬಂಗಾರ, ರತ್ನ, ವಜ್ರದಾಭರಣಗಳನ್ನಲ್ಲ-ರುದ್ರಾಕ್ಷಿಯ ಮೈದೊಡಿಗೆಗಳನ್ನು; ಹೂವಿನಿಂದ ಹೆಣೆಯಲ್ಪಟ್ಟ ಬಾಸಿಂಗವನ್ನಲ್ಲ—ಶಿವಶರಣರ ಪಾದದಾವುಗೆಗಳನ್ನು; ನಾನು ಚನ್ನಮಲ್ಲಿಕಾರ್ಜುನನ ಚನ್ನ ವಧುವವ್ವಾ. ಬೇರೆ ಶೃಂಗಾರ ನನಗೇಕೆ ಹೇಳು? ಅಲ್ಲವೇ ಗುರುಗಳೇ?'*

ಗುರುಗಳು ಅಭಿಮಾನ-ಆನಂದಗಳ ಸಮ್ಮಿಶ್ರಣಭಾವದಿಂದ ಮಾತನಾಡದಾದರು.

'ಮಹಾದೇವಿ....ನಿನ್ನ ಅಂತರಂಗಕ್ಕೆ ಈ ಪತಿಯನ್ನು ಇರಿಸಿಕೋ; ಆದರೆ ಬಹಿರಂಗವನ್ನೂ ವಿಮರ್ಶಿಸಿ ನೋಡು. ನಿನ್ನಲ್ಲಿ ನೀನೇ ಸ್ವಲ್ಪ ಆಲೋಚಿಸಿ ನೋಡು—ನೀನೂ ಎಲ್ಲರಂತೆ ಲಗ್ನವಾಗಿದ್ದರೆ ಆ ಅನಿಷ್ಟ ರಾಜನು ನಿನ್ನ ಮೇಲೆ ಕಣ್ಣು ಹಾಕುತ್ತಿದ್ದನೇ? ಮಂಗಳಸೂತ್ರ, ಕಾಲುಂಗುರಗಳಿದ್ದರೆ ಹೆಣ್ಣಿನ ಮೇಲೆ ಕಣ್ಣು ಹಾಕುವ ಧೈರ್ಯ ಯಾವನಿಗೂ ಬರದು. ಈಗಲಾದರೂ ಏನಾಯಿತು, ನಡೆದುದೆಲ್ಲ ದುಃಸ್ವಪ್ನ ಎಂದು ಮರೆತುಬಿಡು. ಕಾಲವೂ ಅದನ್ನು ಮಾಯಿಸುವುದು. ಸದ್ಗುಣಿಯಾದವನನ್ನು ನೋಡಿ ಮದುವೆ ಮಾಡುತ್ತೇವೆ. ನಿನ್ನ ಸಾಮಾಜಿಕ ಜೀವನಕ್ಕೆ ಅವನು ರಕ್ಷಣೆ ನೀಡುವನು....' ಲಿಂಗಮ್ಮ ಮಗಳನ್ನು ಸಮೀಪಿಸಿ ಮೈದಡವಿ ಹೇಳಿದಳು.

'ಛೀ....ಎಂತಹ ಅಜ್ಞಾನದ ಮಾತಿದು ತಾಯಿ. ನೆಲಕ್ಕೆ ಉಗುಳಿದ ತಾಂಬೂಲವನ್ನು ತಿನ್ನೆಂದು ಹೇಳುವ ನಿನ್ನ ಮಾತು ಎಷ್ಟು ಅಸಹ್ಯಕರ! ಯುದ್ಧದಲ್ಲಿ ಹೋಗಿ ಹಿಮ್ಮೆಟ್ಟುವುದು ಎಂತಹ ಹೇಡಿತನವೋ, ಅಷ್ಟೇ ಹೇಡಿತನ ಆಧ್ಯಾತ್ಮಪಥದಲ್ಲಿ ಇಟ್ಟಿರುವ ಹೆಜ್ಜೆಯನ್ನು ಹಿಂದಕ್ಕೆ ತೆಗೆಯುವುದು. ಹಿಂದಡಿ ಇಟ್ಟು ಬದುಕುವುದಕ್ಕಿಂತ ಮುಂದಡಿ ಇಟ್ಟು ಸಾವುದೇ ಕರಲೇಸು....'

ಕ್ಷಣಕಾಲ ತಡೆದು ನುಡಿದಳು:

'ಬಂಧನವನ್ನು ಸಡಲಿಸು ತಾಯಿ....ಕಬ್ಬಿಣದ ಸಂಕೋಲೆಯನ್ನು ಕಡಿದು

* ಮ. ವ. [illegible]

... ಸಂಕೋಲೆಯನ್ನು ತೊಡಿಸಬೇಡ....ನನ್ನನ್ನು ಹರಸಿ ಬೀಳ್ಕೊಡು....' ತಾಯಿಯು ಕೈಗಳನ್ನು ಸಡಲಿಸಿದಳು.

'ಎಲ್ಲಿಗೆ ಮಗಳೆ....?' ಅವಾಕ್ಕಾಗಿ ಕೇಳಿದಳು ಲಿಂಗಮ್ಮ.

'ನನ್ನ ಹಿಂಡನ್ನು ಕೂಡಿಕೊಳ್ಳಲು....ಶರಣರ ಸಂಗಕ್ಕೆ....'

'ಹೆತ್ತವರನ್ನು ತೊರೆದು....' ಆಶ್ಚರ್ಯ-ದುಃಖಗಳು ದನಿಯಲ್ಲಿ ಪುಟಿಯುತ್ತಿದ್ದವು.

'ಅವ್ವಾ....ಪಕ್ಷಿಗಳು ವಲಸೆ ಹೋಗುವುದುಂಟು. ಕಾರಣಾಂತರಗಳಿಂದ ಮೂಲಸ್ಥಾನವನ್ನು ತೊರೆದು ವಿಶಿಷ್ಟಸ್ಥಾನದಲ್ಲಿ ಕೆಲವಾರು ದಿನ ಕಳೆದು ಮತ್ತೆ ತಮ್ಮ ಮೂಲಕ್ಕೆ ಹಾರುವುವು. ಶಿವನ ಹೃದಯವೇ ನನ್ನ ನಿಜ ತಾಣ. ವಲಸೆ ಬಂದು ಹೆತ್ತವರ ಆಶ್ರಯದಲ್ಲಿದ್ದೆ. ಇನ್ನು ನನ್ನ ನೆಲೆಯನ್ನು ಸೇರಿಕೊಳ್ಳುವುದು ಬೇಡವೆ....?'

'ಸಾಕು ಮಗಳೇ, ನಿನ್ನ ಶುಷ್ಕ ತತ್ತ್ವಜ್ಞಾನ! ಈ ಆವೇಶವು ಬಹಳ ದಿನ ನಿಲ್ಲದು. ಹೆತ್ತವರನ್ನು, ಬಂಧು-ಬಾಂಧವರನ್ನು ತೊರೆದುಹೋಗಲು ಬುದ್ಧಿ ಇಲ್ಲವೇ....?'

'ಅವ್ವಾ, ರಾತ್ರಿಯಾಗುತ್ತಲೇ ಗಿಡವೊಂದರ ಮೇಲೆ ಅಸಂಖ್ಯಾತ ಪಕ್ಷಿಗಳು ಬರುವುವು, ಕುಳಿತುಕೊಳ್ಳುವವು. ಸೂರ್ಯೋದಯವಾಗಿ ದಾರಿ ಕಾಣುತ್ತಲೇ ತಮ್ಮ ಪಾಡಿಗೆ ತಾವು ಚದುರುವುವು. ಅದೇ ರೀತಿ ಸಂಸಾರದ ಈ ವೃಕ್ಷದಲ್ಲಿ ನೀನು, ನಾನು, ಅಪ್ಪ, ನಮ್ಮ ಬಂಧುಗಳು ಎಲ್ಲರೂ ಪಕ್ಷಿಗಳು! ಕೆಲವು ದಿನಗಳ ಬಂಧನವಿದು. ಅಜ್ಞಾನದಲ್ಲಿರುವತನಕ ಈ ವೃಕ್ಷದಲ್ಲಿದ್ದೆ; ಜ್ಞಾನ ಸೂರ್ಯೋದಯವಾದಮೇಲೆ ಅವರವರ ದಾರಿ ಅವರಿಗೆ ತಾನೇ?'

'ಮಗಳೇ, ನಿನಗೆ ಮದುವೆಗೆ ಒತ್ತಾಯ ಮಾಡೆವು. ಸಂಪೂರ್ಣ ಸ್ವಾತಂತ್ರ್ಯ ನೀಡುತ್ತೇವೆ. ನಿನಗಿಷ್ಟ ಬಂದ ಸಾಧನೆ ಮಾಡಿಕೊಂಡು ಮನೆಯಲ್ಲೇ ಇರು ಮಗಳೆ...." ಓಂಕಾರನು ದುಃಖತಪ್ತನಾಗಿ ನುಡಿದನು.

'ಅಪ್ಪಾ....ನಿಮ್ಮ ದುಃಖದ ಆಳವನ್ನು ನಾನರಿಯಬಲ್ಲೆ. ಆದರೆ ನನ್ನ ಗುರಿ ಎರಡು : ಒಂದು–ಉನ್ನತ ಸಾಧನೆ, ಎರಡನೆಯದು—ವಿಶ್ವಕುಟುಂಬತ್ವ. ಅಪಾರವಾದ ಘನಗಂಭೀರ ಸಮುದ್ರದಲ್ಲಿ ತಾರಾಪಥವನ್ನು ನೋಡುತ್ತಾ ಚೈತ್ರವನ್ನು ಏರಿದರೆ ಅದು ಸಕಲ ಪದಾರ್ಥಗಳನ್ನು ಸ್ಥಳಗಳಿಗೆ ಮುಟ್ಟಿಸುವುದು. ಹಾಗೆಯೇ ಆಧ್ಯಾತ್ಮಸಾಗರದಲ್ಲಿ, ಈ ಶರೀರದ ನೌಕೆಯಲ್ಲಿ ಸಾಧನೆಯ ಸಂಪತ್ತನ್ನು ತುಂಬಿರುವೆ. ಈ ನೌಕೆ ಮುನ್ನಡೆಯಲು ದೈವೀಕಾರುಣ್ಯದ ತಂಗಾಳಿ, ಶರಣರ ...

ದರ್ಶಕರಿಲ್ಲದೆ ಸಾಧನೆ ಹೇಗಾದೀತು....?'*

'ನಿಜ....ಓಂಕಾರ. ಅಷ್ಟೇ ಅಲ್ಲ, ನಿನ್ನ ಮಗಳು ವಿಶ್ವಕುಟುಂಬಿನಿಯಾಗ ಬೇಕಾಗಿದೆ. ಕಪ್ಪೆಯ ಚಿಪ್ಪು ತಾನು ಹೆತ್ತ ಮುತ್ತು ತನ್ನದೇ ಹಕ್ಕೆಂದು ಮುತ್ತನ್ನು ಅಡಗಿಸಿ ಇಟ್ಟುಕೊಂಡರೆ ಅದರ ಬೆಲೆ ಜಗಕ್ಕೆ ತಿಳಿದೀತೆ ? ನದಿಯು ತನ್ನ ಸ್ವತ್ತೆಂದು ಗಿರಿಯ ಗರ್ಭವು ತನ್ನಲ್ಲೇ ಅಡಗಿಸಿ ಇಟ್ಟುಕೊಂಡರೆ ತೊರೆಯು ಜಗಕ್ಕೆ ಉಪಯುಕ್ತವಾದೀತೆ ? ಗಿಡವು ತಾನು ಬಿಸಿಲಿನಲ್ಲಿ ನಿಂತು, ದಾರಿಕಾರರಿಗೆ ನೆರಳು ಕೊಡುವುದು. ನೀವು ಅಗಲಿಕೆಯನ್ನು ಸಹಿಸಿ ಮಗಳನ್ನು ವಿಶಾಲಪ್ರಪಂಚಕ್ಕೆ ಕಳಿಸಿದರೆ ಬಹು ದೊಡ್ಡ ಕಾಣಿಕೆಯನ್ನು ನೀಡಿದಂತಾಗು ವುದು....'

'ಅಹುದಮ್ಮ....ನಾನು ಹೇಳಬೇಕಾದುದನ್ನು ಗುರುಗಳೇ ಹೇಳಿದರು. ತಾಯಿ....ನನ್ನ ಸಾಧನೆಗೆ ನನ್ನನ್ನು ಬಿಟ್ಟುಬಿಡು....' ಮಹಾದೇವಿ ಕೇಳಿದಳು.

'ಎಂತಹ ಸುಡುಗಾಡು ಸಾಧನೆ ಮಾಡಹೋಗುವೆ. ಹೆತ್ತವರ ಕಣ್ಣೀರನ್ನು ಉದುರಿಸಿ ಅವರನ್ನು ದುಃಖದಾಳದಲ್ಲಿ ಮುಳುಗಿಸಿ, ಅಲ್ಲಿ ಏನು ಮಾಡ ಹೋಗುವೆ? ದೇವರಾದರೂ ನಿನಗೆ ಹೇಗೊಲಿವನು....?' ಸಂಕಟ ತುಂಬಿದ ಸಿಟ್ಟಿನಿಂದ ಲಿಂಗಮ್ಮ ನುಡಿದಳು.

'ಅವ್ವಾ, ಊರಿನಲ್ಲಿ ಕೆರೆಯನ್ನು ಕಟ್ಟಿ ನೀರು ನಿಲ್ಲಿಸುವರಲ್ಲವೇ ? ಹಾಗೆ ಕಟ್ಟಿದಾಗ ಎಷ್ಟೋಂದು ಭೂಮಿಯಲ್ಲಿ ನೀರು ನಿಂತು ಅದು ಮುಳುಗುವುದು; ಉಳಿಮೆಗೆ ಬಾರದಾಗುವುದು. ಹಾಗೆಂದು ಕೆರೆ ಕಟ್ಟುವುದನ್ನು ಬಿಡರು. ಏಕೆ ? ವರ್ಷಗಟ್ಟಲೆ ನೀರು ಸಂಗ್ರಹಿಸಿ ನೂರಾರು ಹೊಲಗಳಿಗೆ ನೀರುಣ್ಣಿಸಬಹು ದಲ್ಲವೇ ? ಹಾಗೆಯೇ ತಾಯಿ....ಹೆತ್ತವರ ಕಣ್ಣೀರು ನನ್ನಿಂದಾಗಿ ಉದುರಿದರೆ ಏನಂತೆ, ಸುತ್ತಣ ಸಹಸ್ರಾರು ಜನರ ಕಣ್ಣೀರನ್ನು ಒರೆಸಹೋಗುವೆ....' ವಿಲಕ್ಷಣವಾದ ಕೆಚ್ಚು ತುಂಬಿತ್ತು ಮಹಾದೇವಿಯ ನುಡಿಗಳಲ್ಲಿ.

'ಮಹಾದೇವಿ....ನಿನ್ನ ಉದ್ಧಟ ಮಾತಿಗೆ ಮುಕ್ತಾಯ ನೀಡು. ಹೆತ್ತ ವರಿಗೆ, ಹಿರಿಯರಿಗೆ ಸ್ವಲ್ಪವಾದರೂ ಬೆಲೆ ಕೊಡಬೇಕು. ಹೆಂಗಸು ಹೊರಜಗತ್ತಿ ನಲ್ಲಿ ಬಾಳುವುದು ಎಷ್ಟು ಕಷ್ಟಕರ ಗೊತ್ತೆ ? ಗಂಡಸಾಗಿದ್ದರೆ ಇಷ್ಟೇಕೆ ಕೇಳಿ ಕೊಳ್ಳುತ್ತಿದ್ದೆವು. ಆದಕ್ಕೆಂದೇ ಶಾಸ್ತ್ರಗಳು ಹೆಣ್ಣನ್ನು ಮಾಯೆಯೆಂದು ಒಕ್ಕೊರಲಿನಿಂದ ಕರೆಯುತ್ತವೆ' ಶಿವಮೂರ್ತಪ್ಪ ಒರಟು ಧ್ವನಿಯಲ್ಲಿ ಹೇಳಿದ.

'ನಿಮ್ಮ ಮಾತು ಬಲು ನಿಜ ದೊಡ್ಡಯ್ಯಾ, ಆದರೆ ಇದನ್ನು ನೆನಪಿನಲ್ಲಿಡು:

ವನದ ಸೂತಕ ಹಿಂಗಿದೊಡೆ ತನುವಿನ ಸೂತಕಕ್ಕೆ ತೆರಹುಂಟೆ? ಅಯ್ಯಾ, ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲವು ಎನ್ನ ದೇವ ಚನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ ಅಯ್ಯಾ!*

ವೈರಾಗ್ಯವಿಲ್ಲದಿದ್ದರೆ, ಪ್ರಾಕೃತಿಕ ಗುಣಗಳು ಅಳಿಯದಿದ್ದರೆ ಹೆಣ್ಣಾಗಲಿ, ಗಂಡಾಗಲೀ ಆಧ್ಯಾತ್ಮಪಥದಲ್ಲಿ ಪೂರೈಸುವುದು ಬಹುಕಷ್ಟ. ಹೆಣ್ಣಿನಲ್ಲಿ ಹೆಣ್ತನ, ಲಜ್ಜೆ, ದುರ್ಬಲತೆಗಳಿದ್ದರೆ ಅವಳಿಗೆ ಪುರುಷನು ಮಾಯೆ. ಹಾಗೆಯೇ ಕಾಮ-ಅಹಂಕಾರಗಳಿದ್ದರೆ ಪುರುಷನಿಗೆ ಸ್ತ್ರೀಯು ಮಾಯೆ. ಈ ಮಾಯೆತನ ಹೆಣ್ಣು-ಗಂಡು ಎಂಬ ಶರೀರಕ್ಕೆ ಸಂಬಂಧವಲ್ಲ, ಮನಸ್ಸಿಗೆ ಸಂಬಂಧ. ನೋಡಲಿಕ್ಕೆ ಹೆಣ್ಣಾದರೂ ಮಾನಸಿಕವಾಗಿ, ಪ್ರಾಕೃತಿಕವಾಗಿ ಹೆಣ್ತನವನ್ನಳಿದುಕೊಂಡ ನನಗೆ ಮಾಯೆಯಾಗಲಿ, ಮರೆವಾಗಲಿ, ಅಭಿಮಾನವಾಗಲೀ ಏನೂ ಇಲ್ಲ. ಯಾವುದೂ ನನ್ನನ್ನು ಆಮಿಷವಾಗಿ ಕಾಡಲಾರದು, ಪತನಿಸಲಾರದು....'

'ಆಗಲಿ ಮಗಳೇ....ನಿನ್ನ ವೈರಾಗ್ಯದ ಬಗೆಗೆ ನಮಗೆ ಸಂಶಯವಿಲ್ಲ. ಗುರಿಮುಟ್ಟಬಲ್ಲೆನೆಂಬ ಆತ್ಮವಿಶ್ವಾಸ ನಿನಗೂ ಇದೆ. ಆದರೆ ನಮ್ಮ ಸುತ್ತಲೂ ಒಂದು ಜಗತ್ತು ಇದೆಯಲ್ಲವ್ವಾ! ಆ ಲೋಕದ ನಡೆಗೆ ವಿಪರೀತವಾಗಿ ನಡೆದರೆ ಎಂತೆಂತಹ ಅಪವಾದಗಳನ್ನು ಎದುರಿಸಬೇಕಾಗುವುದು; ಜನರು ಎಂತೆಂತಹ ಕಟುಮಾತುಗಳನ್ನಾಡುವರು. ತಾಯಿ-ತಂದೆಯರ ರಕ್ಷಣೆಯಲ್ಲಿದ್ದು ಸಾಧನೆ ಮಾಡಿದರೆ ಆಡುವ ನಾಲಿಗೆ ಅಷ್ಟೊಂದು ಸಡಿಲವಾಗವು' ಓಂಕಾರ ತಡೆದು ನುಡಿದ. ಮಹಾದೇವಿ ಕ್ಷಣಕಾಲ ಮೌನವಾಂತಳು.

'ನಾಯಿ ಮುಟ್ಟಿದ ಮಡಿಕೆ', 'ಬೆಂಕಿಯ ಮುಂದಿಟ್ಟ ಬೆಣ್ಣೆ ಕರಗಲ್ಲ ಅಂದಂತೆ', ಈ ಶಬ್ದ ಸಮುಚ್ಚಯಗಳು ಕಿವಿಯ ಪಟಲದಮೇಲೆ ಅಪ್ಪಳಿಸ ತೊಡಗಿ ತತ್ತರಿಸಿದಳು. ಕಣ್ಣು ಮುಚ್ಚಿಕೊಂಡು ನಿಂತವಳು ಕಣ್ಣು ತೆರೆದು ನುಡಿದಳು:

'ಅಪ್ಪಾ....ಹಸಿರಿನ ಅಂಶವನ್ನು ಕಳೆದುಕೊಂಡು ಒಣಗಿ ನಿಂತಿರುವ ಬಿದಿರಿನಲ್ಲಿ ಎಳೆಯ ಕಳಿಲೆ ಮೂಡಬಹುದೇ? ನೀರಿನ ಅಂಶವನ್ನು ಆವಿಯಾಗಿಸಿಕೊಂಡು ಸುಟ್ಟ ಮಡಿಕೆ ಒಡೆದರೆ ಹಸಿಯ ಮಣ್ಣಿನೊಡನೆ ಬೆರೆಯಬಹುದೆ? ತೊಟ್ಟನ್ನು ಬಿಟ್ಟು ಬಿದ್ದ ಹಣ್ಣು ಮತ್ತೆ ತೊಟ್ಟನ್ನು ಕೂಡಿಕೊಳ್ಳಬಹುದೇ? ಹಾಗೆಯೇ ನಿರ್ಮೋಹತ್ವವನ್ನು ಹೊಂದಿದ ನನ್ನಲ್ಲಿ ಸಂಸಾರ ವಾಸನೆಯ

ಪೂರ್ವಾಶ್ರಮವನ್ನು ಬೆರೆಯಲಾರದು; ಸಂಸಾರ ವೃಕ್ಷದ ಮೋಹವೆಂಬ ತೊಟ್ಟಿನಿಂದ ಸಿಡಿದುಬಿದ್ದಿರುವ ಈ ಹೃದಯವು ಮತ್ತೆ ಲೌಕಿಕತೆಯ ವೃಕ್ಷದಲ್ಲಿ ಅಂಟಿ ಕುಳಿತುಕೊಳ್ಳಲಾರದು. ಕಷ್ಟಕರ್ಮಿಗಳಾದ ಜನರು ಏನಾದರೊಂದು ಮಾತನಾಡಿದರೆ ನಿಷ್ಠೆಯುಳ್ಳ ಶರಣರು ಮತ್ತೆ ಲೌಕಿಕ ಜೀವನಕ್ಕೆ ಬರಲಾರರು ತಂದೆ....'*

'ಹಟ ಮಾಡದಿರು ಮಗಳೇ....ಇದು ಬಹುಕಷ್ಟಕರ ಬದುಕು. ವೈರಾಗ್ಯ ಮಾರ್ಗವು ಮುಳ್ಳಿನ ಕೊಳ್ಳ. ಅದರಲ್ಲೂ ಹೆಣ್ಣಿಂಗಸು ಈ ಮಾರ್ಗದಲ್ಲಿ ನಡೆವುದು ಇನ್ನೂ ಕಷ್ಟ. ಏಕಾಂಗಿನಿಯಾಗಿ ಹೆಣ್ಣು ತನ್ನ ಶೀಲದ ಸಂಪತ್ತನ್ನು ರಕ್ಷಿಸಿಕೊಳ್ಳುತ್ತ ಕಾಡುಮೇಡಿನಲ್ಲಿ ತಿರುಗುವುದು ದುರ್ಧರ ಸಾಹಸ' ಲಿಂಗವ್ವ ಬಿಕ್ಕಿಬಿಕ್ಕಿ ಅತ್ತಳು.

'ಅಹುದವ್ವಾ, ಸಮುದ್ರದಲ್ಲಿ ಅಲೆಗಳು ಇರುವುದು ಎಷ್ಟು ಸಹಜವೋ, ಅಷ್ಟೇ ಸಹಜ ಜೀವನದಲ್ಲಿ ಕಷ್ಟ ಬರುವುದು. ಗೃಹಸ್ಥಜೀವನವೆಂದರೆ ಅಮಾವಾಸ್ಯೆ ದಿನಗಳ, ಸಮುದ್ರದ ಹಗಲಿನ ಅಲೆಗಳಂತೆ, ತೀಕ್ಷ್ಣತೆ ಕಡಿಮೆ. ಸನ್ಯಾಸ ಜೀವನವೆಂದರೆ ಹುಣ್ಣಿಮೆಯ ರಾತ್ರಿಯ ಅಲೆಗಳಂತೆ, ಆರ್ಭಟ-ರಭಸ ಬಹಳ. ಆದರೇನಂತೆ ಅವ್ವಾ, ಮೀಯಬೇಕು ಎನ್ನುವವನು ಅಲೆಗಳು ಅಡಗಲಿ ಎಂದು ಕುಳಿತರಾಗದು; ಜಗತ್ತು ಇರುವವರೆಗೆ ಅಲೆಗಳು ಅಡಗವು. ಅಲೆಗಳು ಬಂದು ಹೋಗುತ್ತಿರುತ್ತವೆ, ನಾವು ಜಾಣತನದಿಂದ ಮಿಂದು ಹೊರಬರಬೇಕಷ್ಟೆ. ಹಾಗೆಯೇ ಎಷ್ಟು ಜನ್ಮಗಳವರೆಗೆ ಕಾಯ್ದರೂ ಕಷ್ಟಗಳು ಇರುವವು. ಜಾಣತನದಿಂದ ತಪ್ಪಿಸಿಕೊಳ್ಳುತ್ತ ಅವುಗಳ ಮಧ್ಯದಲ್ಲೇ ಮೀಯುತ್ತ ಗೆದ್ದು ಬರಬೇಕವ್ವಾ!....ಅಲೆಗಂಜಿ ಸ್ನಾನ ಮಾಡದವನು ಎಷ್ಟು ಮೂರ್ಖನೋ, ಕಷ್ಟಕ್ಕಂಜಿ ಸನ್ಯಾಸಿಯಾಗದವನೂ ಅಷ್ಟೇ ಮೂರ್ಖ! ದಯಮಾಡಿ ನನಗೆ ಅಡ್ಡಿಯಾಗದಿರಿ. ಘನವಾದುದನ್ನು ಸಾಧಿಸೆಂದು ಹರಸಿರಿ....' ತಾಯಿಗೆ-ತಂದೆಗೆ ನಮಸ್ಕರಿಸಿದಳು. ಗುರುಗಳ ಬಳಿಗೆ ಸಾಗಿ ಪಾದಕ್ಕೆರಗಿ ಎದ್ದುನಿಂತು ನುಡಿದಳು :

ಮುಂಗೈಯಲ್ಲಿ ವೀರಕಂಕಣವನಿಕ್ಕಿ
ಮುಂಗಾಲಲ್ಲಿ ತೊಡರು ಬಾವುಲಿಯ ಕಟ್ಟಿದೆ.
ಗಂಡುಡುಗೆಯನುಟ್ಟೆನೆಂಬ ಮಾತಿನ ಬಿರಿದ ನುಂಗಿದೆನು,
ಚೆನ್ನಮಲ್ಲಿಕಾರ್ಜುನಾ,

ನಿಮ್ಮಾಣೆಗೆ ಊಣೆಯವ ತಂದೆನಾದಡೆ
ನಿಮ್ಮ ತೊತ್ತಿನ ಮಗಳಲ್ಲವಯ್ಯಾ.*

ಮಹಾದೇವಿಯ ವೀರಪ್ರತಿಜ್ಞೆಯಿಂದ ಗುರುಲಿಂಗದೇವರ ಕಣ್ಣುಗಳು ಆನಂದಬಾಷ್ಪದಿಂದ ತುಂಬಿದವು. ಪುಳಕಿತರಾಗಿ ಹೇಳಿದರು :

'ಮಗಳೇ....ಇನ್ನೂ ಒಮ್ಮೆ ಹೇಳವ್ವಾ, ಪ್ರತಿಜ್ಞೆ ಮಾಡಿದುದನ್ನು ಎಂದಿಗೂ ಮರೆಯದಿರು.'

'ಅಪ್ಪಾ....ನೀವೂ ಕೇಳಿರಿ. ನನ್ನ ಮುಂಗೈಯಲ್ಲಿ ರುದ್ರಾಕ್ಷಿಯ ಕಂಕಣವ ಕಟ್ಟಿದ ವೀರ ಆಧ್ಯಾತ್ಮಯೋಧಳು ನಾನು. ಮಾನಸಿಕವಾಗಿ ಗಂಡುಭಾವದ ಉಡುಗೆಯನ್ನು ಉಟ್ಟಿರುವೆ. 'ಹೆಣ್ಣೇನು ಗಂಡಿನೊಡನೆ ಸ್ಪರ್ಧಿಸಬಲ್ಲಳು?' ಎಂಬ ಲೋಕದ ಆಹ್ವಾನವನ್ನು ಎದುರಿಸಿ ನಿಲ್ಲುವೆ. ನಿಮ್ಮಾಣೆಗೂ, ಶಿವನಾಣೆಗೂ, ಈ ಪೈಜೆಯಲ್ಲಿ ಒಂದಿನಿತು ಸೋತರೂ ನಿಮ್ಮ ಮಗಳಲ್ಲ ಎಂದು ತಿಳಿದುಬಿಡಿರಿ....' ವೀರಾವೇಶದಿಂದ ಹೇಳಿ ಮಹಾದೇವಿ ಮುಂದೆ ನಡೆದಳು.

ಓಂಕಾರನ ಹೃದಯವು ಭಾರವಾಗಿ ಕಂಠ ಉಬ್ಬಿತ್ತು. ಲಿಂಗಮ್ಮ ಗಟ್ಟಿಯಾಗಿ ಅಳತೊಡಗಿದಳು. ದುಕ್ಕುತ್ತಲೇ ಹೇಳಿದಳು :

'ಮಾದೇವಿ....ಮಾದು....ಕಲ್ಯಾಣಕ್ಕೆ ಹೋಗಿ ಶರಣರ ದರ್ಶನ ಮಾಡಿಕೊಂಡಾದರೂ ಬಂದುಬಿಡು ಮಗಳೇ....'

ಮಹಾದೇವಿ ಹಿಂತಿರುಗಿ ನೋಡಿ, ನಿಂತಳು :

'ಅವ್ವಾ....ಸುಳ್ಳು ಆಶ್ವಾಸನೆ ನೀಡಿ, ನಂಬಿಸಿ ಹೋಗುವವಳಲ್ಲ ನಾನು. ದುಃಖವನ್ನು ಸಹಿಸು ತಾಯಿ....ಅಲ್ಲ ...ಇದನ್ನು ಶಿವಪ್ರಸಾದವೆಂದು ಸ್ವೀಕರಿಸವ್ವ....ನಾನೆಂದೂ ಇತ್ತ ಬರೆನು. 'ಉಪಮಾತೀತರು ರುದ್ರಗಣಂಗಳು. ಅವರೆನ್ನ ಬಂಧು ಬಳಗಂಗಳು ; ನಮ್ಮ ಶ್ರೀಶೈಲ ಚನ್ನಮಲ್ಲಿಕಾರ್ಜುನ ಒಲಿದಡೆ ಮರಳಿತ್ತ ಬಾರೆನಮ್ಮಾ ತಾಯೆ. ಎಲ್ಲರಿಗೂ ಶರಣು ಶರಣಾರ್ಥಿ....'*

ಇಷ್ಟು ನುಡಿದು ಹೆಜ್ಜೆಗಳನ್ನು ತ್ವರಿತಗೊಳಿಸಿದಳು. ಲಿಂಗಮ್ಮನ ದುಃಖ ಅಳತೆಗೆ ಮೀರಿತ್ತು. ಪುನಃ ಏನನ್ನೋ ನೆನಪಿಸಿಕೊಂಡು, 'ಮಾದೇವಿ....' ಎಂದು ಓಡಿದಳು. ಮತ್ತೆ ಮಗಳನ್ನು ಬಿಗಿದಪ್ಪಿ ಮುಖವನ್ನು ನೇವರಿಸಿದಳು.

'ಮಗೂ....ಅಂಗೈಯ ಅರಗಿಳಿಯಂತೆ ಸಾಕಿದೆನಲ್ಲ. ಎಷ್ಟು ಸುಖವಾಗಿ ಉಣ್ಣಿಸಿದೆ, ಉಡಿಸಿದೆ. ಜೋಗುಳ ಹಾಡಿ ಮಲಗಿಸಿದೆ; ಕಂದಾ, ಅಲ್ಲೆಲ್ಲ ಅಲೆಯುವಾಗ ನಿನಗೆ ಯಾರವ್ವಾ ಉಣ್ಣಿಸುವರು? ರಾತ್ರಿಯ ವೇಳೆ ಮಲಗಿಕೊಂಡಾಗ ಉರುಳಾಡಿ ದುಪ್ಪಟಿ ಏನಾದರೂ ಸರಿದು ಚಳಿಯಾಗುತ್ತಿದೆ

---

* ಮ. ವ. ೧೩೭ † ಮ. ವ. ೧೪೪

ತ್ತಿದ್ದೆನಲ್ಲಾ ಚಿನ್ನಾ....ಚಳಿಯಲ್ಲಿ ನಡುಗಿದರೆ ಇನ್ನು ನಿನಗೆ ಹೊದ್ದಿಸುವವರಾರು? ಇರುಳನ್ನು ಎಲ್ಲಿ ಮಲಗಿ ಕಳೆಯುವೆ? ತುಂಬುಪ್ರಾಯದ ಮಗಳು, ನಿನ್ನ ಜೊತೆಗೆ ಬೇರೆ ಯಾರೂ ಇಲ್ಲ....ಮಗಳೇ, ನನ್ನ ಅರಗಿಳಿ, ಕಣ್ಮಣಿ ನಿನ್ನ ಗತಿ ಏನವ್ವಾ....? ಹೋಗಲೀ, ಕಲ್ಯಾಣದವರೆಗೆ ಸಂಗಡ ಯಾರನ್ನಾದರೂ ಕಳಿಸುತ್ತೇವೆ. ಅಷ್ಟಕ್ಕಾದರೂ ಒಪ್ಪು.' ಬಿಗಿದಪ್ಪಿದ ತಾಯಿಯ ಕಣ್ಣೀರು ಧಾರೆಯಾಗಿ ಹರಿದು ಮಹಾದೇವಿಯ ಕೂದಲು ಒದ್ದೆಯಾಗಿ, ತಾಯಿಯ ದುಃಖವನ್ನು ಕಂಡು ಗಾಳಿಗೆ ಸಿಕ್ಕ ಹುಲ್ಲುಕಡ್ಡಿಯಂತೆ ತತ್ತರಿಸತೊಡಗಿದಳು.

'ಅವ್ವಾ....ನನ್ನ ಬಿಡವ್ವಾ. ಈ ಮೋಹದ ಅಪ್ಪುಗೆಯನ್ನು ಸಡಲಿಸವ್ವಾ....ನಿನ್ನ ಪ್ರಶ್ನೆಗಳಿಗೆ ಉತ್ತರ ಬೇಕೇ? ಇದೋ ಕೇಳು....

ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು
ಶಯನಕ್ಕೆ ಹಾಳುದೇಗುಲಗಳುಂಟು
ಚನ್ನಮಲ್ಲಿಕಾರ್ಜುನಯ್ಯಾ, ಆತ್ಮಸಂಗಾತಕ್ಕೆ ನೀನೆನಗುಂಟು'*

ತಾಯಿಯ ಕೈಗಳನ್ನು ಕೊಸರಿಕೊಂಡು ನಡೆಯತೊಡಗಿದಳು....

'ಹೋಗು ಗಿರಿಜವ್ವಾ....ಲಿಂಗಮ್ಮನನ್ನು ತಡೆದು, ಕರೆದು ತಾ....' ಗುರುಲಿಂಗದೇವರು ಹೇಳಿದರು.

'ಲಿಂಗಮ್ಮಾ, ನೀನು ಬಯಸಿ ಬಯಸಿ, ವ್ರತಮಾಡಿ ಇಂತಹ ಮಗಳನ್ನು ಹಡೆಯುವುದರ ಬದಲು ಒಂದು ಕಲ್ಲನ್ನು ಹೆತ್ತಿದ್ದರೆ ಎಷ್ಟೋ ಚೆನ್ನಾಗಿತ್ತು! ಹೃದಯವಿಲ್ಲದ ಶಿಲಾವಿಗ್ರಹವಿದು... ಅದಕ್ಕೆ ನಿನ್ನ ಕಣ್ಣೀರು ಸೋಂಕಲ್ಲ, ದುಃಖ ಕಾಣಲ್ಲ, ಮಾತು ಕೇಳಲ್ಲ. ಕ್ರೌರ್ಯದ ಮುದ್ದೆ....ಏನು ಸನ್ಯಾಸವೋ....ಸುಡುಗಾಡೋ!' ಶಿವಮೂರ್ತೆಪ್ಪ ನುಡಿದಾಗ ಮಹಾದೇವಿಯ ಹೃದಯವು ಗಾಳಿಗೊಡ್ಡಿದ ಸೊಡರಿನಂತೆ ಹೊಯ್ದಾಡಿತು.

'ನಾನು ಕಲ್ಲೇ....! ಹೃದಯ, ಸಂವೇದನೆಗಳು ಇಲ್ಲದ ಕಲ್ಲಿನ ವಿಗ್ರಹವೇ? ನಾನು ಕ್ರೂರಿಯೇ....ದೇವಾ....ಎಂತಹ ಅಪವಾದ!' ಕ್ಷಣಕಾಲ ನಿಂತು ಯೋಚಿಸಿದಳು. ಆದರೆ ಆಕೆಯ ಅಂತರಾತ್ಮ ನುಡಿಯಿತು:

'ಲೌಕಿಕರ ನೇಮಗಳು ಸನ್ಯಾಸಿಗೆ ಅನ್ವಯಿಸವು. ಬುದ್ಧನು ಮನೆಯನ್ನು ತೊರೆದುದು ಲೌಕಿಕರಿಗೆ ಅಮಾನವೀಯತೆ, ಕ್ರೌರ್ಯ; ಆದರೆ ಆಧ್ಯಾತ್ಮ

ವರನ್ನು ಮಾತ್ರ ಪ್ರೇಮಿಸುತ್ತ, ಹೆಂಡತಿ ಮಕ್ಕಳಿಗಾಗಿ ಅಹೋರಾತ್ರಿ ದುಡಿಯುವ ಸಂಸಾರಿಯ ಸ್ವಾರ್ಥಕ್ಕೂ, ಎಲ್ಲರಿಗಾಗಿ ಬದುಕಿ ಅತಿ ಕಷ್ಟಕರವಾದ ಮೋಹದ ಪಂಜರವನ್ನು ದಾಟಿ, ಲೋಕಕ್ಕಾಗಿ ದುಡಿಯುವ ಸನ್ಯಾಸಿಯ ತ್ಯಾಗಕ್ಕೂ ಹೋಲಿಕೆ ಎಲ್ಲಿ....! ವ್ಯಾಮೋಹದ ಬಲೆಯಿಂದ ಬಿಡಿಸಿಕೊಳ್ಳಲಾರದೆ ವಿಲಿವಿಲಿ ಒದ್ದಾಡುತ್ತ ಬಿದ್ದಿರುವ ಸಂಸಾರಿಗಳಲ್ಲಿ ಎರಡು ವಿಧ. ಒಬ್ಬರು—ತಮಗಾಗದ ನಿರ್ಮೋಹತ್ವವನ್ನು ಸನ್ಯಾಸಿ ಸಾಧಿಸಿದಾಗ ಆ ತ್ಯಾಗಕ್ಕೆ ತಲೆಬಾಗಿ ಗೌರವಿಸುವವರು, ಅವನ ನಿಸ್ವಾರ್ಥ ದುಡಿಮೆಗೆ ಪುರಸ್ಕಾರ ನೀಡುವವರು ; ಇನ್ನು ಕೆಲವರು—ಅವನ ನೋವನ್ನು ಸಹ ಅರ್ಥ ಮಾಡಿಕೊಳ್ಳದೆ, ಸಂಸಾರ-ತ್ಯಾಗದ ಬೆಲೆಯನ್ನೂ ಸಹ ಅರಿಯದೆ ಹೀನೈಸಿ ಮಾತನಾಡುವವರು. ಅವರವರ ಫಲ ಅವರಿಗೆ. ಆದರೆ ನಿಜವಾದ ಸನ್ಯಾಸಿಯು ಇವೆರಡನ್ನೂ ಗಮನಿಸದೆ ಗುರಿಯ ಕಡೆಗೆ ದೃಷ್ಟಿಯಿರಿಸಿ ದೈವೀಸಾಕ್ಷಿಯಾಗಿ ಮುಂದೆ ಸಾಗಬೇಕು.' 'ನಿಜ....ನಾನು ಮುಂದೆ ಸಾಗಲೇಬೇಕು....' ಹಿಂದಕ್ಕೆ ತಿರುಗದೆ ಮಹಾದೇವಿ ವೇಗದಿಂದ ಹೆಜ್ಜೆಗಳನ್ನು ಹಾಕಿದಳು.

ಲಿಂಗಮ್ಮನು ನೆಲಕ್ಕೆ ಕುಸಿದು ಭೋರಾಡಿ ಅಳತೊಡಗಿದಳು. ಗಿರಿಜಮ್ಮ-ಶೈಲಜೆಯರು ಸಮೀಪಿಸಿ ಆಸರೆ ಕೊಟ್ಟು ಕರೆತಂದರು. ಗುರುಲಿಂಗದೇವರೆಂದರು : 'ಸಂತೈಸಿಕೋ ಲಿಂಗಮ್ಮ....ನಿನ್ನ ಮಗಳು ಕಿರುಸರಸಿಯಾಗಿ ನಿಂತಲ್ಲೇ ಇದ್ದರಾಗದು. ಅನಂತಜೀವಿಗಳ ಬಳಿಗೆ ಧಾವಿಸಿ, ಬರಡುಹೃದಯಗಳಿಗೆ ಭಕ್ತಿಸಿಂಚನೆಯ ಮಾಡಿ, ಸ್ತ್ರೀಸ್ವಾತಂತ್ರ್ಯದ ಕ್ರಾಂತಿ ಕಹಳೆಯನ್ನೂದಿ, ಹತಚೇತನಗಳಲ್ಲಿ ಆತ್ಮವಿಶ್ವಾಸವನ್ನುದ್ದೀಪಿಸುವ, ದೈವೀತರಂಗಿಣಿಯಾಗಬೇಕೆಂಬ ಬಲುಹಿನ ಆಸೆ ನಿನ್ನದಾಗಲಿ....' ಕ್ಷಣಕಾಲ ಮೌನತಾಳಿ ನಂತರ ನುಡಿದರು :

'ಮನೆಯಲ್ಲಿ ಕುಳಿತಾಗ ಸುಗಂಧದಿಂದ ಮಿಶ್ರಿತವಾದ ಮಾರುತವು ಬೀಸಿ ಬರುವುದು. ಅದನ್ನು ಸವಿಯಬೇಕು. ಆದರೆ ಅದನ್ನು ಕೂಡಿಹಾಕುವ ವ್ಯರ್ಥ ಸಾಹಸ ಮಾಡಬಾರದು. 'ಕೆಲವು ನಿಮಿಷ ಕಾಲವಾದರೂ ನಮ್ಮ ಮನೆಯಲ್ಲಿ ಬೀಸಿ, ಮೂಗನ್ನು ಚೇತನಿಸಿತಲ್ಲಾ, ಅದು ನಮ್ಮ ಪುಣ್ಯ' ಎಂದುಕೊಳ್ಳಬೇಕು.

ಇಂತಹ ಚೇತನಕ್ಕೆ ಗುರುವಾಗುವ ಭಾಗ್ಯ ನನ್ನದಾಯಿತು ಎಂದು ನಾನು ಆನಂದಪಡುವಂತೆ, ಜನ್ಮಕೊಡುವ ಸದವಕಾಶವನ್ನು ನಿಮಗೆ ಕೊಟ್ಟುದಕ್ಕಾಗಿ

ಲಿಂಗಮ್ಮನು ಮಹಾದೇವಿಯು ಹೋಗುತ್ತಿದ್ದ ಜಾಡನ್ನೇ ನಿಟ್ಟಿಸುತ್ತ,

'ದೊಡ್ಡ ದೊಡ್ಡ ಆದರ್ಶಗಳನ್ನು ಇರಿಸಿಕೊಂಡ ಬಾಳು ಹೀಗೆ ವಿಕೃತ ವಾಯಿತಲ್ಲ ಗುರುಗಳೇ; ನಮ್ಮ ಮಗಳು ಹಾಗಾಗುವಳು, ಹೀಗಾಗುವಳು ಎಂದೆಲ್ಲ ಕನಸು ಕಂಡಿದ್ದೆವು. ಕಡೆಗೆ ಏನಾದಳು? ಪರದೇಶಿಯಾದಳು....ಆಕೆ ಅನಾಥಳಾದಳು, ಎಂಥ ದುರ್ದೈವ!' ಲಿಂಗಮ್ಮನು ಅಳುತ್ತ ಮಗ್ಗುಲಲ್ಲಿದ್ದ ಗಿರಿಜಾಂಬೆಯನ್ನು ಅಪ್ಪಿದಳು.

'ಪಾಪ, ಹೀಗಾಗಬಾರದಿತ್ತು....ಬಹಳ ಅಂದದ ಹುಡುಗಿ; ಚಕ್ರವರ್ತಿನಿ ಯಾಗುವಳು ಎಂದುಕೊಂಡಿದ್ದೆವು. ಪಾಪ, ದೈವ ಬಹು ಕೆಟ್ಟದ್ದು....' ಮೌನಪ್ರೇಕ್ಷಕಳಾಗಿ ನಿಂತಿದ್ದ ಸಿಂಗಾರಮ್ಮ ಸಹಾನುಭೂತಿ ತೋರಿದಳು.

ಗುರುಲಿಂಗದೇವರು ತಮ್ಮ ಸಿಟ್ಟನ್ನು ಸಂತೈಸುತ್ತ ಗಂಭೀರವದನರಾಗಿ ಹೇಳಿದರು: 'ಲಿಂಗಮ್ಮ, ಇದು ದುರ್ದೈವವಲ್ಲ, ಸುದೈವ. ಇಷ್ಟರಮೇಲೆ ಆಕೆಯ ಬಾಳನ್ನಳೆಯದಿರು. ಮೂಡಣ ದಿಕ್ಕಿನಲ್ಲಿರುವ ಕೃಷ್ಣಾನದಿಯು ಮಹಾ ಬಳೇಶ್ವರದ ಗಿರಿತಪ್ಪಲಲ್ಲಿ ಹುಟ್ಟಿ ಪಶ್ಚಿಮದಿಂದ ಪೂರ್ವದಿಕ್ಕಿಗೆ ಹರಿದು ಬಂಗಾಳ ಶರಧಿಯನ್ನು ಸೇರುತ್ತದೆ. ಆದರೆ ಶ್ರೀಗಿರಿಯ ಬಳಿ ಒಂದೆಡೆ ಶೃಂಗದ ಮೇಲೆ ನಿಂತು ನೋಡಿದವರಿಗೆ ಉತ್ತರ ದಿಕ್ಕಿನಿಂದ ದಕ್ಷಿಣಕ್ಕೆ, ಮತ್ತೊಂದೆಡೆ ನಿಂತು ನೋಡಿದವರಿಗೆ ಉತ್ತರಕ್ಕೆ ಹರಿದಂತೆ ಕಾಣುತ್ತದೆ. ಅಲ್ಲಿ ನಿಂತು ನೋಡಿ ಬಂದವರು ಸೀಮಿತವಾಗಿ ವೀಕ್ಷಿಸಿ ಅದು ದಕ್ಷಿಣದಿಂದ ಉತ್ತರಕ್ಕೇ ಹರಿದಿದೆ ಎಂದು ಹಟ ಹಿಡಿಯುವುದು ಸಹಜ. ಆದರೆ ಕೃಷ್ಣಾನದಿಯ ಸಮಗ್ರ ಚಲನೆಯನ್ನು ನೋಡಿದವನು ಅದು ಹೊರಟ ಸ್ಥಾನ, ಮುಟ್ಟಿದ ಗುರಿ, ಹೊಂದಿದ ಪ್ರಗತಿಯನ್ನು ನೋಡಿ ನದಿಯು ಪಶ್ಚಿಮದಿಂದ ಪೂರ್ವಕ್ಕೆ ಹರಿದಿದೆ ಎಂದು ತಿಳಿಯುವನು. ಹಾಗೆಯೇ ಮಗಳ ಬದುಕನ್ನು ತಾತ್ಕಾಲಿಕವಾಗಿ ಬಗೆದು ನೋಡಿದಾಗ ಅದು ವಿಕೃತವಾಯಿತೆಂದು ಲೌಕಿಕರಿಗೆ ಅನ್ನಿಸಬಹುದು. ಆಧ್ಯಾತ್ಮಜೀವನವು ನೇರವಾದ ಹೆದ್ದಾರಿಯಲ್ಲ, ಅಂಕುಡೊಂಕಿನ ನಡಿಗೆಯ ನದಿಯ ಹಾದಿಯಂತೆ. ಆ ನಡಿಗೆ ಇದ್ದರಷ್ಟೇ ನದಿಯು ಸಮುದ್ರವನ್ನು ಸೇರಬಲ್ಲುದು.

'ತಾಯಿ, ನಿನ್ನ ಮಗಳ ಆಧ್ಯಾತ್ಮಿಕ ಬದುಕು ತಾತ್ಕಾಲಿಕ ಆವೇಶದಿಂದ ಹರಿದು, ಬೇಸಿಗೆಯಲ್ಲಿ ಬತ್ತಿಹೋಗುವ ಮಳೆಗಾಲದ ನದಿಯಂತಲ್ಲ, ಅವ್ಯಾ

ಈಗ ಮಹಾದೇವಿ ಬಹು ದೂರ ಸಾಗಿ, ಹಸಿರು ವನರಾಜಿಯ ಮಧ್ಯೆ ಒಂದು ಚುಕ್ಕೆಯಂತೆ ಕಾಣುತ್ತಿದ್ದಳು. ಓಂಕಾರನು ದಗ್ಧಹೃದಯಿಯಾಗಿ, ಕಣ್ಣಗಲಿಸಿ ದಿಟ್ಟಿಸಿ ನೋಡುತ್ತಾ ಭಾರವಾದ ಕಂಠದಿಂದ ನುಡಿದ :

'ನಡೆ ಲಿಂಗಾ, ಗುರುದೇವರ ಮಾತಿನಲ್ಲಿ ವಿಶ್ವಾಸವಿಡು. ಆ ಪ್ರಸಾದ ವಾಣಿಯು ಎಂದಿಗೂ ಹುಸಿಯಾಗದು.' ಭಾರವಾದ ಹೆಜ್ಜೆಗಳನ್ನಿಕ್ಕುತ್ತ ಮನೆಯ ಮಾರ್ಗ ಹಿಡಿದ ಓಂಕಾರನನ್ನು ಲಿಂಗಮ್ಮ ಮೂಕಳಾಗಿ ಹಿಂಬಾಲಿಸಿದಳು.

ಭಾಗ ೪

ಸಂಗಮ

ಉತ್ತರಾರ್ಧ

ವನವೆಲ್ಲಾ ನೀನೆ, ವನದೊಳಗಣ ದೇವ ತರುವೆಲ್ಲ ನೀನೆ,

೩೭. ಮಸಣದಲ್ಲಿ ಒಂದು ಇರುಳು

ವೈರಾಗ್ಯ, ಸಂಕಲ್ಪಶಕ್ತಿಗಳೇ ಸಾವಯವ ತಳೆದು ನಡೆಯುವಂತೆ ಮಹಾದೇವಿ ಒಂದೇ ಸಮನೆ ನಡೆಯತೊಡಗಿದಳು. ಉಡುತಡಿಯ ವಲಯವನ್ನು ದಾಟುವವರೆಗೆ ಪರಿಚಿತ ಮುಖಗಳು ಕಾಣತೊಡಗಿದ್ದವು. ಆ ವಲಯವನ್ನೂ ದಾಟಿದನಂತರ ಪರಿಚಿತ ಮುಖಗಳು ಕಾಣದಂತಾದವು. ದಟ್ಟವಾದ ನಿಸರ್ಗದ ನಡುವೆ ಬಂಡಿದಾರಿಯ ಗುಂಟ ನಡೆಯತೊಡಗಿದ್ದಳು. ತಲೆಯ ತುಂಬ ಹೊಯ್ದಾಡುವ ಭಾವನೆಗಳ ಆವೇಶದಿಂದ ದಾರಿ ಸವೆದುದು ತಿಳಿಯಲಿಲ್ಲ. ಕಾಲು ಯಾಂತ್ರಿಕವಾಗಿ ನಡೆಯುತ್ತಿದ್ದರೆ, ತಲೆ ತನ್ನ ಪಾಡಿಗೆ ತಾನು ವಿಚಾರ ಮಾಡುತ್ತಲಿತ್ತು. ಅದೇ ಆವೇಶದಲ್ಲಿ ಎರಡು ಹರದಾರಿಗಳನ್ನು ತುಳಿದಿದ್ದಳು. ಮಟಮಟ ಮಧ್ಯಾಹ್ನದ ಸುಡುವ ಬಿಸಿಲು ಕೋಮಲ ದೇಹವನ್ನು ಕಾವೇರಿಸಿ, ಬೆವರನ್ನು ಹರಿಸತೊಡಗಿತ್ತು. ಬಹಳಷ್ಟು ಕಷ್ಟಪಟ್ಟು ಇನ್ನೂ ಒಂದು ಹರದಾರಿಯನ್ನು ಸವೆಸಿದಳು. ಆದರೆ ಕಾಲುಗಳು ಅಳತೊಡಗಿ, ಚಂಡಿ ಹಿಡಿದು ನೆಲಕ್ಕೆ ಕುಳಿತು ರೋದಿಸುವ ಮಗುವಿನಂತೆ ಮುಂದೆ ನಡೆಯಲಾರೆವು ಎಂದು ಹಟ ಹಿಡಿದವು.

ಅಷ್ಟರಲ್ಲಿ ಹಳ್ಳಿಯೊಂದು ಕಂಡಿತಷ್ಟೇ ಅಲ್ಲ, ಊರ ಹೊರಗಿನ ಸಿಹಿ ನೀರಿನ ಬಾವಿಯೂ ಕಣ್ಣಿಗೆ ಬಿದ್ದು, ಬಾವಿಯ ಬಳಿಗೆ ಹೋದಳು. ಹೆಂಗೆಳೆಯರು ನೀರು ಸೇದುವುದನ್ನು ಅರ್ಧಕ್ಕೆ ನಿಲ್ಲಿಸಿ ಬೆಪ್ಪಾಗಿ ಮಿಕಿಮಿಕಿ ನೋಡತೊಡಗಿದರು.

'ಅವ್ವಾ, ಸ್ವಲ್ಪ ನೀರನ್ನೆರೆಯುವಿರಾ ?' ಅವರನ್ನು ಕೇಳಿದಳು.

'ಯವ್ವಾ....ಎಂಥಾ ಸಣ್ಣಾನ್ನ ಮಗಳೇ, ಹುಚ್ಚು ಹಿಡಿದಂತೆ ಕಾಣುತ್ತೆ. ಪಾಪ! ಬಂಗಾರದ ಗೊಂಬೆ ಹಂಗ ಐತೆ. ಏನು ಹಣೆಬರಹವೋ ಬತ್ತಲೆ ನಡದೈತೆ....' ಹಿರಿಯ ಹೆಂಗೆಳೆ ಹೇಳಿದಳು.

'ಏನು ದೇವರೊ....ಅವನ್ಗೆ ಮನಸಾರ ಹೆಂಗ ಬಂತೋ. ದೃಷ್ಟಿ ಆಗೋ ಅಂತ ಚೆಲ್ವೆ, ಹುಚ್ಚು ಹಿಡ್ಸಿದಾನೆ' ಮತ್ತೊಬ್ಬಳು ಮರುಕದಿಂದ ನುಡಿದಳು.

ಮಹಾದೇವಿ ವಿಹ್ವಲಳಾದಳು. 'ಹುಚ್ಚುಹುಚ್ಚು....ಅಹುದು....ನಿಮ್ಮದು ನನಗೆ ಹುಚ್ಚು; ನನ್ನದು ನಿಮಗೆ ಹುಚ್ಚು....' ಮನದಲ್ಲೇ ಅಂದು

'ಇದ್ದದ್ದೇ ಊರು ತಾಯಿ....ನನ್ನದು ಅನ್ನುವುದು ಯಾವುದೂ ಇಲ್ಲ....' ಮಹಾದೇವಿ ಹೇಳಿದಳು.

ಬೇಗನೆ ನೀರನ್ನು ಕುಡಿದು ಮುಂದೆ ಹೋಗಲು ಅನುಸರಿಸಿದಳು. ನಿಸರ್ಗದ ನಿಯಮದಂತೆ ಹೊಟ್ಟೆ ಕರಕರ ಅನ್ನುವುದೇ ಅಲ್ಲದೆ ಕಾಲುಗಳ ಶಕ್ತಿಯನ್ನೂ ಕಿತ್ತುಕೊಂಡು ಅವುಗಳು ನಡೆಯದಂತೆ ಅಬ್ಬಾಳಿಸುತ್ತಿತ್ತು.

ಆ ಹಳ್ಳಿಯನ್ನು ದಾಟಿ ಮುಂದೇನಾದರೂ ಹಾಳು ಗುಡಿ ಸಿಕ್ಕರೆ ಅಂದು ಆಶ್ರಯಹೊಂದಿ ಇರಬಹುದು ಎಂದುಕೊಂಡು ಬರುವುದರಲ್ಲೇ ಊರಕಡೆಗೆ ಸಾಗುವ ಹಳ್ಳಿಯ ಹುಡುಗರ ಗುಂಪೊಂದು ಕಂಡಿತು. ನಗ್ನಳಾಗಿ ನಡೆಯುವ ಆಕೆಯನ್ನು ಕಾಣುತ್ತಲೇ ಹುಡುಗರ ಗುಂಪು ಕೇಕೆ ಹಾಕಿ 'ಹುಚ್ಚಿ ನೋಡ್ರೋ ...' ಎಂದು ಕೂಗಿತು. 'ಲೇ ಹುಚ್ಚಿ' ಎಂದು ಒಬ್ಬನು ಕಲ್ಲನ್ನೆತ್ತಿಕೊಂಡು ಬರುತ್ತಲೇ ಉಳಿದವರೂ ಒಬ್ಬೊಬ್ಬರಾಗಿ ದಾರಿಯಲ್ಲಿದ್ದ ಕಲ್ಲುಗಳನ್ನು ಎತ್ತಿಕೊಂಡು ಬೀಸತೊಡಗಿದರು. ಮಹಾದೇವಿಯ ಮೈಗೆ ರಪ್ಪೆಂದು ಬಡಿದು ರಕ್ತ ಸುರಿಯತೊಡಗಿತು.

'ಅಣ್ಣಾ....ನಾನು ಹುಚ್ಚಿಯಲ್ಲಪ್ಪಾ' ಎಂದು ಆ ಹೊಡೆತಗಳನ್ನು ತಾಳಲಾರದೆ ಚೀರಿ ಹೇಳಿದಳು.

'ಮುಚ್ಚೇ ಬಾಯಿ ...ಹುಚ್ಚಿ ಅಲ್ಲದಿದ್ರೆ....ಬೆತ್ತಲೆ ಹೋಗ್ತಿದ್ದೆಯಾ ?' ಇನ್ನೂ ವೇಗದಿಂದ ಕಲ್ಲು ಬೀಸಿದಾಗ ತಲೆಗೆ ಕಲ್ಲು ಬಿದ್ದು ಬಲವಾದ ಪೆಟ್ಟಾಗಿ, ಪ್ರಜ್ಞೆತಪ್ಪಿ ನೆಲಕ್ಕುರುಳಿದಳು. ಆಕೆ ಪ್ರಜ್ಞೆತಪ್ಪಿ ಬಿದ್ದುದನ್ನು ಕಂಡು ಭಯಗೊಂಡ ಹುಡುಗರು ಕಲ್ಲುಗಳನ್ನು ಬಿಸಾಡಿ ಓಡಿಹೋದರು.

ಮಹಾದೇವಿಗೆ ಎಚ್ಚರವಾದಾಗ ಸೂರ್ಯ ಪಶ್ಚಿಮ ದಿಕ್ಕಿಗೆ ಜಾರಲು ಒಂದು ಮಾರು ದೂರವಿದ್ದ. ತಲೆಯಿಂದ ಸೋರಿದ ರಕ್ತ ಅಲ್ಲೇ ಹೆಪ್ಪುಗಟ್ಟಿ ಕೂದಲ ಮೇಲೆ ನಿಂತಿತ್ತು. ಅಂಗಾಲುಗಳು ಬಾತುಕೊಂಡು ಬೊಬ್ಬೆಗಳು ಕಾಣುತ್ತಿದ್ದುದಲ್ಲದೆ ಹಿಮ್ಮಡಿ ಒಡೆದು ರಕ್ತ ಒಸರುತ್ತಿತ್ತು. ಒಂದು ಕಡೆ ಬೆವರು ಹರಿಯುತ್ತಿದ್ದರೆ, ಮತ್ತೊಂದು ಕಡೆ ಗಾಯದ ರಕ್ತ ಗಟ್ಟಿಗೊಂಡಿತ್ತು. ಮಾಂಸಖಂಡಗಳು ದನಿಕೆಗೆದು ಅಳುತ್ತಿದ್ದವು. ಮೆಲ್ಲನೆ ಎದ್ದು ಸಾವರಿಸಿಕೊಂಡು ಕುಳಿತಳು. ಮನಸ್ಸು ಗಾಳಿಗೊಡ್ಡಿದ ಸೊಡರಿನಂತೆ ಹೊಯ್ದಾಡತೊಡಗಿತು. ಯಾರೋ ಅಟ್ಟಹಾಸದಿಂದ ನಕ್ಕಂತಾಯಿತು. ಬೆಚ್ಚಿಬಿದ್ದಳು. ಯಾರೂ ಅಲ್ಲ, ಹಣತೆಯ ಕೆಳಗಿನ ನೆರಳಿನಂತೆ ದಿಟ್ಟ ಮನದ ಮೂಲೆಯಲ್ಲಿ

ರಮ್ಯವಲ್ಲ; ನೀನು ದುಡುಕಿದೆ. ಆವೇಶದ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾದೆ. ತತ್ವವನ್ನು ಇಂಪಾಗಿ ಹೇಳಿ, 'ಶಯನಕ್ಕೆ ದೇಗುಲವುಂಟು, ದೇವರೆಂಬ ಆತ್ಮಸಂಗಾತಿಯುಂಟು' ಎಂದೆ. ಆದರೆ ಈಗ....'

ಮನಸ್ಸು ಖಿನ್ನವಾಯಿತು. ಮರುಕ್ಷಣವೇ ಆತ್ಮಾಭಿಮಾನ ಜಾಗ್ರತವಾಯಿತು.

'ಇರಲಿ ಶರಣಾಗತರನ್ನು ರಕ್ಷಿಸುವ ಶಕ್ತಿ ನನ್ನೊಡೆಯನಿಗೆ ಇಲ್ಲವೆ? ಕೊಲ್ಲಲಿ ಕಾಯಲಿ ಅವನಿಗೆ ಸೇರಿದ್ದು....' ಮಹಾದೇವಿ ತನ್ನ ಮನದ ದುರ್ಬಲ ಅಂಶಕ್ಕೆ ಗದರಿಸಿ ನುಡಿದಳು.

'ಇನ್ನೂ ಆಲೋಚಿಸು; ಹೊಸ್ತಿಲ ಕಟ್ಟೆಯನ್ನು ದಾಟದ ನೀನು ಹೀಗೆ ಹೋಗಿ ಕಲ್ಯಾಣವನ್ನು ಮುಟ್ಟಬಲ್ಲೆಯಾ? ಕಾಲುಗಳ ಅವಸ್ಥೆ ನೋಡು. ಒಂದು ದಿನದ ಅನುಭವವೇ ಇಷ್ಟು ಕಟುವಾಗಿರುವಾಗ ಇನ್ನೂ ಜೀವನ ಪರ್ಯಂತರ ಏನು ಮಾಡುವೆ? ಇಷ್ಟೊಂದು ಕೋಮಲ ಶರೀರ ಊಟ, ನಿದ್ರೆ, ವಿಶ್ರಾಂತಿ, ರಕ್ಷಣೆ ಇಲ್ಲದೆ ಹೇಗೆ ಇದ್ದೀತು? ಅದೂ ಇಲ್ಲ, ಇದೂ ಇಲ್ಲ; ಹಾದಿಯ ಹೆಣವಾಗಿ ಬಿದ್ದು ಅಂತರಪಿಶಾಚಿಯಾಗಬೇಕಾದೀತು. ಮನೆಗೆ ನಡೆ' ಮನಸ್ಸು ಮತ್ತೂ ಹೇಳಿತು.

'ಇಟ್ಟ ಹೆಜ್ಜೆ ಹಿಂತೆಗೆವ ಹೇಡಿ ನಾನಲ್ಲ....' ಅಹಂ ನುಡಿಯಿತು.

'ಸಾಕುಸಾಕು, ಅರ್ಥವಿಲ್ಲದ ಆದರ್ಶ. ಯಾರೂ ನಿನ್ನನ್ನು ಹೇಡಿಯೆಂದು ಕೂಗರು. ಇನ್ನೂ ಬಹಳ ದೂರ ಬಂದಿಲ್ಲ; ಮರಳಿ ನಡೆ. ತಾಯಿತಂದೆಯರೂ ಆನಂದ ಹೊಂದುವರು....' ಮನಸ್ಸು ನೊಂದು ಹೇಳಿತು.

'ಚನ್ನಮಲ್ಲಿಕಾರ್ಜುನಾ....ಸಾಕು ನಿನ್ನ ಬಲೆಯ ಬೀಸುವಿಕೆ. ನೀನೊಡ್ಡಿದ ಮಾನಸಿಕ ವಿಘ್ನ, ಆಸೆ ಆಮಿಷಗಳನ್ನು ಗೆದ್ದು ಬಂದಿರುವೆ. ಅವಕ್ಕಿಂತ ಅತಿ ಸುಲಭವಾದ ಶಾರೀರಿಕ ಕಷ್ಟಗಳಿಗೆ ಹೆದರುವೆನೆ? ಕೇಳಿಲ್ಲಿ:

ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡೆಯಾ?
ಏನು ಮಾಡಿದಡೂ ಅನಂಜುವಳಲ್ಲ
ತರಗೆಲೆಯ ಮೆಲಿದು ಆನಿಹೆನು
ಸುರಗಿಯ ಮೇಲೊರಗಿ ಆನಿಹೆನು
ಚನ್ನಮಲ್ಲಿಕಾರ್ಜುನಯ್ಯ ಕರಕಾಡಿನೋಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು.*

ದೇವಾ, ನಿನ್ನ-ನನ್ನ ಮಧ್ಯೆ ಪಾರಮಾರ್ಥಿಕ ಯುದ್ಧ ನಡೆದಿದೆ. ಸಾಮಾನ್ಯ ಜಟ್ಟಿಯೊಡನೆ ಸಂಧ್ಯವಾಡಿ ಗೆಲ್ಲುವ ಕೀರ್ತಿಗಿಂತಲೂ, ಜಗಜಟ್ಟಿಯೊಡನಾಡಿ ಸೋತರೂ ಬರುವ ಕೀರ್ತಿ ಅಪಾರವಾದುದು. ಹೆಜ್ಜೆ ಇಟ್ಟ ಪಥದಲ್ಲಿ ನನ್ನನ್ನು ಹಿಮ್ಮೆಟ್ಟಿಸಬೇಕೆಂದು ನೀನೆಷ್ಟೇ ವಿಘ್ನಗಳನ್ನು ಹರವಬಹುದು. ನಾನು ಎಳ್ಳಷ್ಟೂ ಅಂಜೆನು. ಕಾಡುಸೊಪ್ಪನ್ನಾದರೂ ತಿಂದಿದ್ದು ಗುರಿ ಸಾಧಿಸುವೆ; ಈ ಹುಡುಗರು ಹೊಡೆದ ಮೊನಚಾದ ಕಲ್ಲುಗಳ ಏಟನ್ನು ಹೂವಿನ ವೃಷ್ಟಿಯೆಂದರಿಯುವೆ; ಚೂಪಾದ ಅಲಗುಗಳ ಹಾಸುಗೆಯನ್ನು ಹಾಸಿ ಮಲಗೆಂದರೂ ಅದು ಹಂಸತೂಲಿಕಾತಲ್ಪವೆಂದು ನಗುನಗುತ್ತ ಮಲಗುವೆ. ನಿನ್ನೊಡನೆ ಕಾಳಗವಾಡಿ ಗೆದ್ದರೆ ಒಂದು ಲೇಸು, ಸೋತರೆ ಮತ್ತೊಂದು ಲೇಸು. ಸಾವನ್ನೊಡ್ಡಿದರೂ ಅದನ್ನು ಪ್ರಸನ್ನತೆಯಿಂದ ಸ್ವೀಕರಿಸಿ, ಶುದ್ಧಳಾಗುವೆ....'

ಸ್ವಗತ ಬುದ್ಧಿವಾದದಿಂದ ಅತುಳವಾದ ಧೈರ್ಯ ಮೈಗೂಡಿತು. ಅತಿ ಕಷ್ಟದಿಂದ ಮೇಲೆದ್ದು ಹೆಜ್ಜೆ ಇಡತೊಡಗಿದಳು. ಊರನ್ನು ದಾಟಿ ಸುಮಾರು ದೂರ ನಡೆದ ಬಳಿಕ ವಿಶಾಲವಾದ ಹಾಳುಗುಡಿಯೊಂದು ಕಣ್ಣಿಗೆ ಬಿದ್ದಿತು. ಬಂಡಿದಾರಿಯ ಎಡಮಗ್ಗುಲಿಗೆ ಹೊಲ, ತೋಟಗಳು. ಬಲಬದಿಯ ಗುಡಿಯ ಎರಡೂ ಕಡೆಗೆ ವಿಶಾಲವಾದ ಸ್ಮಶಾನ. ಅಲ್ಲಲ್ಲೇ ಕೆಲವು ಮಣ್ಣು ಗುಡ್ಡೆಗಳು ಮನುಷ್ಯನನ್ನು ಹುಗಿದ ತಾಣಗಳನ್ನು ಎತ್ತಿ ತೋರುತ್ತಿದ್ದವು. ದೂರದಲ್ಲಿ ಹೆಣವನ್ನು ಸುಟ್ಟ ಮಸಣದ ಬೆಂಕಿ ಉರಿಯುತ್ತಲಿತ್ತು. ಕಾಲುಗಳು ಮುಂದೆ ಸಾಗಲಾರದಷ್ಟು ನರಳುತ್ತಿದ್ದವು. ಅಲ್ಲಿ ನಿಲ್ಲದೆ ಬೇರೆ ಮಾರ್ಗವಿರಲಿಲ್ಲ. ಗುಡಿಯನ್ನು ನೋಡಿ ಎಷ್ಟೋ ಸಮಾಧಾನ ಎನಿಸಿತು. ಸುತ್ತಲೂ ಓಡಾಡಿ ನೋಡಿದಳು. ಗುಡಿಯ ಮುಂಬದಿಯಲ್ಲಿ ಒಂದು ಕೊಳ, ಅದರ ಮಗ್ಗುಲಿಗೆ ಬಿಲ್ವಪತ್ರೆಯ ವೃಕ್ಷವಿತ್ತು. ಹೊತ್ತು ಮುಳುಗಲು ಕೆಲವೇ ಕ್ಷಣಗಳು ಉಳಿದಿದ್ದವು. ಕೊಳದಲ್ಲಿಳಿದು ಮಿಂದಳು. ಬಿಲ್ವಗಿಡದ ಎಲೆಗಳನ್ನು ಕಿತ್ತುಕೊಂಡು ಗುಡಿಯ ಒಳಗೆ ನಡೆದಳು. ಅದೊಂದು ಶಿವಲಿಂಗದ ಗುಡಿ. ಬಹುಶಃ ದಕ್ಷಿಣೆ ಕೊಡುವ ಭಕ್ತರು ಬಹಳ ಬರುತ್ತಿರಲಿಲ್ಲವೇನೋ ಆ ಗುಡಿಯ ಬಗ್ಗೆ ಪೂಜಾರಿಗಳು ಅಷ್ಟೊಂದು ಆಸಕ್ತಿ ವಹಿಸಿರಲಿಲ್ಲ. ಎಲ್ಲಿ ನೋಡಿದಲ್ಲಿ ಧೂಳು ತುಂಬಿತ್ತು. ಮಹಾದೇವಿ ಗರ್ಭಗುಡಿಯಲ್ಲಿ ಕಣ್ಣು ಹಾಯಿಸಿದಾಗ ಸಣ್ಣದೊಂದು ಮಾಡಿನಲ್ಲಿ ವಿಭೂತಿಯ ಉಂಡೆ ಸಿಕ್ಕಿತು. ಕೆಳಗಡೆ ಕುಡಿಕೆಯೊಂದು ಬಿದ್ದಿತ್ತು.

ನನ್ನನ್ನೂ ಉಳಿಸಿಕೊಂಡೆಯಾ ? ನಿನ್ನಂತಹ ಬೈರಾಗಿಗೆ ಒಲಿದವಳು ಬೈರಾಗಿಣಿಯಾಗದೇ ಮಾರ್ಗವೇ ಇಲ್ಲ. ಅದಕ್ಕೇ ಅಣ್ಣನವರು ಹೇಳುವರು : 'ದೇವನು ಒಳ್ಳೆಯವನು ಎಂದು ಭಾವಿಸಬೇಡ ; ಕರಕಟ ಕಾಡುವನು ಒಳ್ಳೆಯವನೇ ? ಅಳಿಸುವ ನಗಿಸುವವನು ಒಳ್ಳೆಯವನೇ ? ಭಕ್ತರೊಡನೆ ಚೆಲ್ಲಾಟವಾಡಿ ಸಂಕಟಕ್ಕೀಡುಮಾಡುವವನು ಒಳ್ಳೆಯವನೇ ?'

'ಮಹಾರಾಯ....ಮುನಿಸಿಕೊಳ್ಳಬೇಡ. 'ಬೆಚ್ಚದೆ ಬೆದರದೆ ತೊತ್ತುತನವ ಮಾಡಲು ತನ್ನನೀವನು ಕೂಡಲ ಸಂಗಮದೇವ' ಎಂದೂ ಹೇಳುತ್ತಾರಷ್ಟೆ.* ನಾನೂ ಹಾಗೆಯೇ ನಿನ್ನ ತೊತ್ತುತನ ಮಾಡುವೆ.' ಪೂಜೆಯನ್ನು ಮುಗಿಸಿ ಬಿಲ್ವಪತ್ರೆಯ ಎಲೆಗಳನ್ನು ತಿಂದು ನೀರು ಕುಡಿದಳು. ಹಸಿವು ಹೋಗಲಿಲ್ಲ.

'ಅಬ್ಬಾ ! ನಿನ್ನ ಪ್ರಚಂಡತನವೇ.... ಎಂತೆಂತಹ ಆಸೆ, ಆಮಿಷ, ವಿಲಾಸದ ಆಹ್ವಾನವನ್ನು ಎದುರಿಸಿ ಗೆದ್ದೆ....ನಿನ್ನ ಕಾಟ ಸಹಿಸುವುದು ಬಹು ಕಷ್ಟ !' ಎಂದುಕೊಂಡು ಹೊಟ್ಟೆಯನ್ನು ಹಳಿದಳು.

ಕತ್ತಲೆಯು ಮೆಲ್ಲಮೆಲ್ಲನೆ ತನ್ನ ತೆರೆಯನ್ನು ಕವುಚತೊಡಗಿತ್ತು. ಗಾಢವಾದ ಕತ್ತಲೆಯು ಎಲ್ಲವನ್ನೂ ಬಳಸಿದಾಗ ಏನೇನೂ ಕಾಣದಂತಾಯಿತು. ಮೈಯ್ಯ ಕಣಕಣವೂ ಶೋಕಗೀತೆಯನ್ನು ಹಾಡುತ್ತಿದ್ದಿತು. ಇದ್ದುದರಲ್ಲೇ ಕಡಿಮೆ ಧೂಳು ಇರುವ ನೆಲವನ್ನು ಆರಿಸಿಕೊಂಡು ಮಲಗಿದಳು. ನೆಲಕ್ಕೆ ಹಾಸಿದ ಕಲ್ಲುಗಳು ಮೈಯ್ಯನ್ನು ಒತ್ತತೊಡಗಿದವು. ಪೆಟ್ಟಾದ ಭಾಗಗಳಂತೂ ವಿಪರೀತ ನೋವು ಕೊಟ್ಟವು. ಅನಿವಾರ್ಯವಾಗಿ ಎದ್ದು ಕುಳಿತು, ಗೋಡೆಗೆ ಒರಗಿ ಕಣ್ಣು ಮುಚ್ಚಿಕೊಂಡಳು. ನಿದ್ರೆ ಬೇಕೆಂದು ಬಯಸುತ್ತಿದ್ದರೂ ಆ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಅಂಗಾಂಗಗಳು ಚಟಪಟಿಸುತ್ತಿದ್ದವು. ದಣಿದ ಮೈಯ್ಯಿ ಬಿಸಿಯಾಗತೊಡಗಿತು. ಮಧ್ಯರಾತ್ರಿ ಸರಿದಾಗ ಕೊರೆಯುವ ಗಾಳಿ ಬೀಸತೊಡಗಿ, ಮೈಯ್ಯಿ ತಣ್ಣಗಾಗತೊಡಗಿತು. ಒಳಗೆ ಬಿಸಿ, ಹೊರಗೆ ತಂಪು. ವಿರುದ್ಧ ತತ್ತ್ವಗಳ ಘರ್ಷಣೆಯಾಗಿ ನಡುಕ ಹುಟ್ಟಿತು.

ವಾತಾವರಣ ಭೀಕರವಾಗಿತ್ತು. ದೂರದಲ್ಲಿ ಕಗ್ಗತ್ತಲೆಯಲ್ಲಿ ಕಾಣುವ ಶವದ ಬೆಂಕಿ ಬಿಟ್ಟರೆ ಮತ್ತೆಲ್ಲೂ ಬೆಳಕಿಲ್ಲ. ಆಗಾಗ ಗಾಳಿ ಸುಂಯ್ಯೆಂದು ಬೀಸಿದಾಗ ಮರದ ಎಲೆಗಳ ಚಲನೆ ವೃದ್ಧಿಯಾಗಿ, ಸರಸರ ಸಪ್ಪಳ ಕಿವಿಯನ್ನು ತಟ್ಟುತ್ತಿತ್ತು. ಆಗಾಗ ಕಾಡನ್ನು ಭೇದಿಸಿಕೊಂಡು ಬರುವ ಘೂಂಕ್ ಎಂಬ ಗೂಬೆಯ ಕೂಗು ಹೃದಯವನ್ನು ತಣ್ಣಗಾಗಿಸುತ್ತಿತ್ತು. ಮಸಣದಲ್ಲಿಯ ಒಂದು ಗೂಬೆ ಘೂರ್ಣಿಸಿದಾಗ ಪಾಳುಗುಡಿಯ ಮಾಡಿನಲ್ಲಿದ್ದ

ಗೂಬೆಯೂ ಕೂಗಿ ಮಾರ್ದನಿಗೊಟ್ಟಿತು. ಮಹಾದೇವಿ ಆ [illegible] ನಡುಗಿದಳು. ಕೆಲಕಾಲ ಮುಲುಗುತ್ತ ಕುಳಿತ ಗೂಬೆ ಆ ಕಾರಿರುಳಿನಲ್ಲಿ ಹಾರಿ ಹೊರಗೆ ಹೋಯಿತು. ಯಾವುದೋ ಪ್ರಾಣಿಯ ಕೂಗು ಕೇಳಿ ಎದೆ ತಲ್ಲಣಿಸಿತು. ಆಲಿಸಿದಳು; ಹೂಗಿದ ಹೆಣಗಳನ್ನು ಹೊರತೆಗೆಯುವ ಆಸೆಯಿಂದ ಬಂದ ನರಿ ಕೂಗುತ್ತಿತ್ತು. ಅದಕ್ಕೆ ಮಾರ್ದನಿ ಕೊಡುವ ಇನ್ನೂ ಅನೇಕ ಅಂತಹ ಸ್ವರಗಳು ಕೇಳಿ ವಿಚಿತ್ರ ಧ್ವನಿ ಮಿಸಣವನ್ನು ಆಗಾಗ ವಿಕೃತಗೊಳಿಸುತ್ತಿತ್ತು. ಹೆಣಕ್ಕಾಗಿ ಬಂದ ನಾಯಿಗಳು ಭೌಂ ಭೌಂ ಎಂದು ಕಿರುಚುತ್ತಿದ್ದವು. ಎರಡೂ ಪ್ರಾಣಿಗಳು ಸೇರಿದಾಗ ನಾಯಿ-ನರಿಗಳ ಮಧ್ಯೆ ಹೋರಾಟ ಆರಂಭವಾಯಿತು. ಆ ಕೂಗಾಟ ರುದ್ರಭೀಕರವಾಗಿತ್ತು; 'ಶಯನಕ್ಕೆ ಹಾಳು ದೇಗುಲಗಳುಂಟು....' ಎಂಬ ತನ್ನ ಆ ನುಡಿಯನ್ನು ಪೂರೈಸುವುದು ಎಷ್ಟು ಕಷ್ಟಕರ. ಮಹಾದೇವಿ ಜೀವವನ್ನು ಅಂಗೈಯಲ್ಲಿ ಹಿಡಿದುಕೊಂಡು ಮುದ್ದೆಯಾಗಿ ಕುಳಿತಳು. ಆ ನರಿಗಳ ಹಿಂಡು ತಾನು ಕುಳಿತ ಕಡೆಗೆ ಬರುವುದು ಅಸ್ಪಷ್ಟವಾಗಿ ಕಾಣಿಸಿ ಎದೆ ಝಲ್ಲೆಂದಿತು.

'ಎಲ್ಲಿ ಅಡಗಿಕೊಳ್ಳಲಿ? ನನ್ನನ್ನೇ ಹರಿದು ತಿಂದರೆ ಏನು ಮಾಡಲಿ? ಆರೇಳು ನಾಯಿ-ನರಿಗಳಾದರೂ ಕೂಡಿರಬಹುದು. ನಮ್ಮೂರಲ್ಲಿ ಗುಡಿಸಲಲ್ಲಿ ಮಲಗಿಸಿದ ಮಗುವನ್ನು ನರಿಯು ಒಯ್ದಿರಲಿಲ್ಲವೇ? ಹಾಗೆಯೇ ಇವೂ ಮಾಡಿದರೇನು ಗತಿ....!' ರಕ್ತಚಲನೆ ನಿಂತಂತಾಗಿ, ಉಸಿರು ತಣ್ಣಗಾದಂತಾಯಿತು. ಮರುಕ್ಷಣವೇ ಅನ್ನಿಸಿತು :

'ಓ....ನನ್ನ ಅಜ್ಞಾನವೇ! ಪ್ರತಿ ನಿಮಿಷಕ್ಕೂ ನನ್ನನ್ನು ನಾನೇ ರಕ್ಷಣೆ ಮಾಡಿಕೊಳ್ಳುವೆ ಎಂಬ ಅಹಂ ಕಾಡುವುದೇ? ನನ್ನ ಭೀತಿಗೆ ಅರ್ಥವೇ ಇಲ್ಲ....

ಹಣ್ಣು ಮೆದ್ದ ಬಳಿಕ ಆ ಮರನನಾರು ಕಡಿದಡೇನು?
ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿದಡೇನು?
ಮಣ್ಣು ಬಿಟ್ಟ ಬಳಿಕ ಆ ಕೆಯ್ಯನಾರುತ್ತಡೇನು?
ಚನ್ನಮಲ್ಲಿಕಾರ್ಜುನನರಿಯದ ಬಳಿಕ
ಆ ಕಾಯವ ನಾಯಿ ತಿಂದರೇನು, ನೀರು ಕುಡಿದರೇನು?*

ಹಣ್ಣು ಬಿಟ್ಟಾನಂತರ ಬರಡಾದ, ನಿಷ್ಪ್ರಯೋಜಕ ವೃಕ್ಷವನ್ನು ಯಾರು ಕಡಿದರೂ ಅಷ್ಟೇ! ತಾನು ಪತ್ನಿಯನ್ನು ತ್ಯಜಿಸಿ ವಿರಕ್ತದೀಕ್ಷೆ ಪಡೆದವನು, ತನಗೆ ಬೇಡವಾದ ಪತ್ನಿಯನ್ನು ಮತ್ತಾರಾದರೂ ಪರಪುರುಷರು ಕೂಡಿಕೊಂಡರೆ ಚಿಂತಿಸಬೇಕೇಕೆ? 'ಹೆಣ್ಣು ಹೊನ್ನು ಮಣ್ಣುಗಳು ಬೇಡ' ಎಂದು

ನಿರಾಭಾರಿಯಾದವನು ತನ್ನ ಹೊಲವನ್ನು ಯಾರು ಉಳುವರು ಎಂಬ ಬಗ್ಗೆ ಚಿಂತಿಸಬೇಕೆ? ಸಲ್ಲದು ; ತನಗೆ ನಿಷ್ಪ್ರಯೋಜಕವಾದ, ತಿರಸ್ಕರಿಸಿದ ವಸ್ತುಗಳ ಚಿಂತನೆಗೆ ತೊಡಗಬಾರದು. ಈ ನನ್ನ ಬದುಕು, ಶರೀರಗಳು ಅವನೊಲಿಮೆಯನ್ನು ಗಳಿಸಿಕೊಳ್ಳಲಸಮರ್ಥ ಎಂಬ ಅರಿವು ಚೆನ್ನಮಲ್ಲಿಕಾರ್ಜುನನಿಗಿದ್ದರೆ ಇವು ಹಾಳಾದರೆ ಆಗಿಹೋಗಲಿ. ಅವನನ್ನು ಅರಿಯಲು ಸಹಾಯಕವಾಗದ ಈ ಶರೀರವನ್ನು ನಾಯಿ ಹರಿದರೂ ಅಷ್ಟೇ, ನರಿ ತಿಂದರೂ ಅಷ್ಟೇ, ನೀರು ತನ್ನಲ್ಲಿ ಅಡಗಿಸಿಕೊಂಡರೂ ಅಷ್ಟೇ!....' ಮಹಾದೇವಿ ಧೈರ್ಯವನ್ನು ಮೈಗೂಡಿಸಿಕೊಂಡಳು. ಎದುರಾಗುತ್ತಿರುವ ವಿಪತ್ತಿಗಾಗಿ ದುಃಖವೆನಿಸಲಿಲ್ಲ. ನಿಶ್ಚಿಂತತೆಯನ್ನು ತಂದುಕೊಳ್ಳುತ್ತ ಅಂದಳು :

'ಇವಕ್ಕೆ ಮನುಷ್ಯರ ವಾಸನೆ ಸಿಕ್ಕಿರುವುದು ನಿಜ, ಕ್ಷಣಕ್ಷಣಕ್ಕೂ ಸಮೀಪಿಸುತ್ತಿವೆ. ಶರೀರದಿಂದ ಪ್ರಾಣಹರಣವಾಗುವಾಗ ಶಿವನ ನೆನಹೊಂದೇ ಕರ್ತವ್ಯ....' ಧ್ಯಾನಮುದ್ರೆಯಲ್ಲಿ ಕುಳಿತು, ಕಣ್ಣುಮುಚ್ಚಿ ಮಂತ್ರವನ್ನು ಮನನಿಸತೊಡಗಿದಳು. ಕೆಲವಾರು ಕ್ಷಣಗಳು ಸಂದವು. ಒಳಗೆ ಬರತೊಡಗಿದ್ದ ಆ ಪ್ರಾಣಿಗಳು ಮತ್ತೆ ಕಿರ್ರಾಡುತ್ತ ಗುಡಿಯನ್ನು ಬಿಟ್ಟು ದೂರ ಸಾಗಿದವು.

ಮೈ ಕೊರೆಯುವ ಚಳಿ, ಇದ್ದಕ್ಕಿದ್ದಂತೆಯೇ ಬೀಸುವ ಶಕ್ತಿಯುತ ಗಾಳಿ; ಮೂರನೆಯ ಜಾವವು ಆರಂಭವಾದಾಗ ತಡೆಯಲಾರದ ಹಿಂಸೆಯಾಯಿತು. ಮೈಯನ್ನು ಸ್ಪರ್ಶಿಸಿದರೆ ಹಿಮದ ಗಡ್ಡೆಯನ್ನು ಮುಟ್ಟಿದಂತಾಯಿತು. ತನ್ನ ಅಸಹನೀಯ ಪರಿಸ್ಥಿತಿಗೆ ದುಃಖ ಉಕ್ಕಿ ಬಂದಿತು.

'ದೇವಾ....ಎಂತಹ ಹಿಂಸೆಯಿದು! ಹೊಟ್ಟೆಯ ಹಸಿವು ವಿಪರೀತ. ಇದರಿಂದಾಗಿ ಚಳಿಯ ತೀವ್ರತೆಯ ಅನುಭವ. ಕಣ್ಣುಗಳು ಉರಿಯುತ್ತಿವೆ. ಮಲಗಲು ಒಂದು ತುಂಡು ಅರಿವೆ ಇಲ್ಲ, ಮೈಗೆ ಸುತ್ತುವುದಕ್ಕೂ ಇಲ್ಲ. ಇಂಥಾ ವಿಷಮಪರಿಸ್ಥಿತಿಯನ್ನು ಹೇಗೆ ಎದುರಿಸಲಿ....?' ಹೃದಯ ಕಂಪಿಸಿತು. ಗಾಳಿಯ ಬಡಿತ ಇನ್ನೂ ತೀವ್ರವಾಯಿತು. ಒಮ್ಮೆ ವೇಗವಾಗಿ ಬೀಸಿದಾಗ ಮಸಣದಲ್ಲಿ ಹಾರಿದ ಕಸಕಡ್ಡಿ ಧೂಳು ಎಲ್ಲವೂ ಗುಡಿಯೊಳಗೆ ಬಿದ್ದು ಮಹಾದೇವಿಯ ಕಣ್ಣುಬಾಯಿಗಳಲ್ಲಿ ಧೂಳು ತುಂಬಿತು. ಗಾಳಿಯ ಶಬ್ದ ರೊಯ್ಯೆಂದು ಕಿವಿಗೆ ಬಡಿದು ಇನ್ನೂ ಭಯಾನಕ ವಾತಾವರಣವನ್ನು ನಿರ್ಮಿಸಿತು. ನಕ್ಷತ್ರಗಳ ಮಬ್ಬಾದ ಬೆಳಗಿನಲ್ಲಿ ಕಪ್ಪನೆಯ ವಸ್ತುವು ಗಾಳಿಗೆ ತೂರಿದಂತಾಗಿ, ಗುಡಿಯೊಳಗೆ ಹಾರಿಬಂದಂತೆನಿಸಿತು.

ಮಹಾದೇವಿ ಮನಸ್ಸನ್ನು ಕಲ್ಲುಮಾಡಿಕೊಂಡು, ಕಣ್ಣುಮುಚ್ಚಿ ಕುಳಿತಳು.

ಆಗಾಗ ಅಲುಗಿದಂತೆ ಭಾಸವಾಗುತ್ತಿತ್ತು.

'ಹಾವೇನಾದರೂ ಬಿದ್ದಿದೆಯೋ....' ಭೀತಿಯ ಅಲೆಗಳು ಬಂದು ಹಾಯುತ್ತಿದ್ದವು.

'ಹೋಗಿ ನೋಡಿಯೇ ಬಿಡುವೆ. ಹಾವಾಗಿದ್ದರೆ ನನ್ನ ಕೈಯನ್ನು ಹೆಡೆಗೆ ಕೊಡುವೆ. ಕಡಿದು ಸಾಯಿಸಲಿ....' ಧೈರ್ಯ ಮಾಡಿಕೊಂಡು ಎದ್ದು, ಅದರ ಬಳಿ ಸಾರಿ ಮುಟ್ಟಿ ನೋಡಿದಳು. ಅದೊಂದು ಬಟ್ಟೆಯಾಗಿತ್ತು. ಅದನ್ನು ಕೈಯಲ್ಲಿ ಹಿಡಿದು ಅಳೆಯುವಂತೆ ಸವರಿದಳು, ಹತ್ತು ಮೊಳದ ಮೇಲಿತ್ತು.

"ಚನ್ನಮಲ್ಲಿಕಾರ್ಜುನಾ ನನ್ನ ಕಷ್ಟವನ್ನು ನೋಡಲಾರದೆ ಇದನ್ನು ಕಳಿಸಿದೆಯಾ....?' ಆಚ್ಚರಿಗೊಂಡು ತನ್ನಲ್ಲಿ ನುಡಿದುಕೊಂಡಳು.

'ಓ....ಇದು ಮಸಣದಲ್ಲಿ ಹುಗಿಯಲು ತಂದ ಶವದ ಮೇಲಿನ ಬಟ್ಟೆಯೇನೋ....ಗಾಳಿಗೆ ಹಾರಿಬಿದ್ದಿದೆ....' ಬುದ್ಧಿ ಆಲೋಚಿಸಿತು. ಶವದ ಮೇಲಿನ ಬಟ್ಟೆ ಯಾರದೋ ಏನೋ ; ಅಸಹ್ಯವೆನಿಸಿತು. ಉಂಡೆಗಟ್ಟಿ ಕೆಳಗೆ ಹಾಕಿದಳು.

'ಶವದ ಬಟ್ಟೆಯಾದರೇನು....ಎಲ್ಲರೂ ಒಂದು ದಿನ ಶವವಾಗುವುದೇ ತಾನೆ? ಅದನ್ನು ಕಂಡು ಭಯವೋ, ಜಿಗುಪ್ಸೆಯೋ....' ವಿವೇಕ ಕೇಳಿತು.

'ಜಿಗುಪ್ಸೆಯಾದರೆ....ಅದನ್ನು ದೂರೀಕರಿಸಬೇಕು. ವೀರಾಧಿವೀರರಿರಲಿ, ರಾಜರಿರಲಿ, ವಿರಕ್ತರಿರಲಿ, ಎಲ್ಲರ ದೇಹವೂ ಮಣ್ಣಿನ ಗರ್ಭಕ್ಕೆ ತಾನೇ! ಶವದ ಬಟ್ಟೆ ಉಟ್ಟರೆ ದೆವ್ವಗಿವ್ವ ಕಾಡೀತಲ್ಲ ಎಂಬ ಭಯವಾದರೆ ಅದನ್ನು ಮೊದಲು ಗೆಲ್ಲು....ದೇವರನ್ನು ನಂಬಿದವರನ್ನು ಅವೇನು ಮಾಡುವವು....?'

'ಚನ್ನಮಲ್ಲಿಕಾರ್ಜುನನು ತಾನಾಗಿ ಕೆಡಹಿದ ಪ್ರಸಾದ....' ಮತ್ತೊಮ್ಮೆ ಅನಿಸಿತು.

'ಅದನ್ನು ತೆಗೆದುಕೋ....ಸುತ್ತಿಕೋ....ಹೊದ್ದುಕೋ ; ಇಲ್ಲವಾದರೆ ಈ ಗಾಳಿ, ಚಳಿಯ ದ್ವಂದ್ವದಲ್ಲಿ ಸಿಕ್ಕಿ ಹಾದಿಯ ಹೆಣವಾಗುವೆ, ಕಲ್ಯಾಣ ಕನಸಿನ ಮಾತಾದೀತು....' ಬುದ್ಧಿ ತಿಳುವಳಿಕೆ ನೀಡಿತು.

"ಹೀಗೆ....ಬತ್ತಲೆ ಅಡ್ಡಾಡುವುದು ಸುರಕ್ಷಿತವಲ್ಲ....' ವಿವೇಕದ ದನಿ.

'ನನಗೇನಂತೆ ವೈರಾಗ್ಯಮೂರ್ತಿಗೆ, ಈ ದಿಗಂಬರತ್ವ ನನಗೆ ಬಾಧಕವಾಗದು....' ಮಹಾದೇವಿಯ ಅಹಂ ಹೇಳಿತು.

'ನೀನು ವಿರಾಗಿಣಿ ಎಂಬುದು ನಿನಗೆ ತಿಳಿದಿದೆ. ಆದರೆ ಜಗತ್ತು ವಿರಾಗಿಣಿಯೆಂದು ತಿಳಿವ ಮೊದಲೇ ಹುಚ್ಚಿ, ಎಂದು

ತಿಲ್ಲವೇ? ನಿನ್ನ ಗುರಿ ಶರಣರ ಸಂಗದ ನದಿಯೊಡನೆ ಸಂಗಮ, ಚೆನ್ನನೊಡನೆ ಸಮಾಗಮ. ಬತ್ತಲೆ ಇರುವುದು, ಉಪವಾಸ ಮಾಡುವುದು, ಕಾಡುಮೇಡು ಅಲೆಯುವುದು ನಿನ್ನ ಗುರಿಯಲ್ಲ. ಬತ್ತಲೆಯಾಗಿ ಭಿಕ್ಷೆ ಬೇಡಲು ಊರೊಳಗೆ ಹೋಗು ; ಕಲ್ಲಿನ ಏಟು ತಿಂದು ಮೈತುಂಬ ಗಾಯ, ರಕ್ತ ಮಾಡಿಕೊಂಡು ಎಲ್ಲಾದರೂ ಕೊಳೆಯಬೇಕಾಗುವುದು. ಎಲೆಯ ಮರೆಯ ಕಾಯಿಯಂತೆ ವ್ಯವಹಾರದೃಷ್ಟಿಗೆ ಸಹಜವಾಗಿ ಸಾಗು. ಇಲ್ಲವಾದರೆ ಅನವಶ್ಯಕ ಕಷ್ಟಗಳು. ನೀನು ಸ್ವಲ್ಪವಾದರೂ ತುಂಡು ಸುತ್ತಿಕೊಂಡರೆ ನೋಡುವವರು ಬಡತನ ಎಂದುಕೊಳ್ಳುವರು ; ಬತ್ತಲೆ ಇದ್ದರೆ ಹುಚ್ಚಿ ಎನ್ನುವರು. ಮನ್ನಣೆ-ಮರುಕದ ಬದಲು ಅಪಹಾಸ್ಯ ಮಾಡತೊಡಗುವರು...."

"ಬಟ್ಟೆಯ ಆಸೆಯೂ ನನಗೆ ಬೇಡ....' ಮಹಾದೇವಿ ಮನಸ್ಸನ್ನು ಕಲ್ಲು ಮಾಡಿಕೊಂಡಳು.

'ಬೇಕು-ಬೇಡ ; ಎರಡೂ ಭವ ಬೀಜಗಳೇ! ಎರಡನ್ನೂ ಗೆದ್ದು ಸಹಜ ಸ್ಥಿತಿಯಲ್ಲಿ ನಿಲ್ಲು....ಬೇಕೆಂಬುದು ಕಾಯಗುಣ, ಬೇಡ ಎಂಬುದು ಅಹಂ ಗುಣ. ಇದ್ದರೆ ತೊಡು, ಇಲ್ಲವಾದರೆ ಬಿಡು. ಇಲ್ಲದುದಕ್ಕೆ ಹಂಬಲಿಸ ಬೇಡ, ಇರುವುದನ್ನು ತಿರಸ್ಕರಿಸಬೇಡ....' ವಿವೇಕ ಮತ್ತೆ ಮತ್ತೆ ಹೇಳಿತು.

'ಬಟ್ಟೆಯನ್ನು ಸಹ ಬಿಟ್ಟಿರುವೆ ಎಂಬ ವೈರಾಗ್ಯದ ಮದವೋ ಇದು....? ವೈರಾಗ್ಯದ ಅಹಂಕಾರವೂ ಹೊರೆಯೇ! ಕುಂಬಳಕಾಯಿ ಈಜುಗಾರನನ್ನು ತೇಲಿಸುವುದು. ಆದರೆ ಅದರಲ್ಲಿ ನೀರು ತುಂಬಿಕೊಂಡರೆ ತೇಲಿಸುವ ಬದಲು ಮುಳುಗಿಸುವುದು....ಹಾಗೆಯೇ ವಿರಕ್ತಿಯು ಭವಸಾಗರದಲ್ಲಿ ತೇಲಿಸಿ ಮುಕ್ತಿದಡಕ್ಕೆ ಸಾಧಕನನ್ನು ಒಯ್ಯುವುದು. ಆದರೆ ಅದರಲ್ಲಿ ವೈರಾಗ್ಯದ ಹಮ್ಮು ಸೇರಿಕೊಂಡರೆ ಅದೇ ಮುಳುಗಿಸುವುದು....' ವಿವೇಕ ಮತ್ತೆ ಹೇಳಿತು.

'ಆಗಲಿ....ನನಗಾಗಿ ಅಲ್ಲ ಲೋಕಕ್ಕಾಗಿ ಬಟ್ಟೆ ಸುತ್ತಿಕೊಳ್ಳುವೆ. ನನ್ನ ಚೆನ್ನಮಲ್ಲಿಕಾರ್ಜುನನು ಹೆಣದ ಬೂದಿ ಮೈಗೆ ಬಳಿದುಕೊಂಡರೆ ನಾನು ಶವದ ಬಟ್ಟೆ ಸುತ್ತಿಕೊಳ್ಳುವೆ ; ಅವನಿಗೆ ತಕ್ಕ ಸತಿಯಾಗುವೆ....'

ಮಹಾದೇವಿ ಬಟ್ಟೆಯನ್ನೆತ್ತಿ ಕೈಗೆ ತೆಗೆದುಕೊಂಡಳು. ಮನದ ದುರ್ಬಲತೆ ಮೆಲ್ಲನೆ ನುಡಿಯಿತು :

'ಮೂರ್ಖಳೇ....ಎಂತಹ ಪಾಡಿದು ನೋಡು ! ಕೌಶಿಕ ಎಂತೆಂತಹ ಪಟ್ಟಾವಳಿ, ಪೀತಾಂಬರ, ದೇವಾಂಗಗಳನ್ನು ಕೊಡಲು ಸಿದ್ಧನಿದ್ದ. ಪಾದದ ಬಳಿಗೆ ಬಂದು ಬಿದ್ದ ಸಂಪದವನ್ನು ತಿರಸ್ಕರಿಸಿ ಕಡೆಗೆ ಶವದ ಬಟ್ಟೆಯನ್ನುಡುವ ಪಾಡು ಬಂದಿತೆ...?

ಮೂರ್ತಿ ಶಿವನನ್ನೊಲಿಸುವ ಈ ಬಟ್ಟೆಯೇ ಬೆಲೆಯುಳ್ಳದ್ದು....' ಆತ್ಮಸ್ಥೈರ್ಯದಿಂದ ಬಟ್ಟೆಯನ್ನು ಮೈಗೆ ಸುತ್ತಿಕೊಂಡಳು. ಮೈನಡುಕವು ಹಿಡಿತಕ್ಕೆ ಬಂದು, ಸ್ವಲ್ಪ ಹಿತವೆನಿಸಿತು. ಕಾಲುಗಳನ್ನು ಮುದುರಿಕೊಂಡು ಅದರಲ್ಲೇ ಹುಡುಗಿ ನಿದ್ದೆ ಮಾಡಿದಳು.

೩೮. ಹಸಿವಿನ ಅಬ್ಬರ

ಬೆಳಗಾದಾಗ ಎದ್ದು ತನ್ನ ಮೈಯನ್ನು ನೋಡಿಕೊಂಡಾಗ ತನ್ನ ಮೈಗೆ ಸುತ್ತಿದ್ದುದು ಕರಿಯಂಚಿನ ಬಿಳಿಯ ಸೀರೆ. ಅರಿಶಿಣ-ಕುಂಕುಮದ ಪುಡಿ ಅದರ ಮೇಲೆ ಅಲ್ಲಲ್ಲೇ ಬಿದ್ದಿತ್ತು. 'ಯಾರೋ ಮುತ್ತೈದೆ ಸತ್ತಿದ್ದಿರಬೇಕು' ಎಂದುಕೊಂಡಳು. ಭಯಾನಕವಾದ ಆ ರಾತ್ರಿಯನ್ನು ಹೇಗೆ ಕಳೆದೆ ಎಂದು ಆಶ್ಚರ್ಯ ಎನಿಸದಿರಲಿಲ್ಲ. ಉತ್ತರಾಣಿ ಬೇರಿನ ಕಡ್ಡಿಯೊಂದನ್ನು ಕಿತ್ತು ಹಲ್ಲುಜ್ಜಿಕೊಂಡು, ಕೊಳದ ಬಳಿಗೆ ಸಾಗಿ ಮುಖ ತೊಳೆದು ಉಟ್ಟ ಸೀರೆಯನ್ನು ಒಗೆದು ಒಣಗುಹಾಕಿ, ಮಿಂದಳು. ತೊಯ್ದ ಕೂದಲನ್ನು ಮುರಿ ಮಾಡಿ ಹಿಂಡಿ, ಬೆನ್ನಮೇಲೆ ಹರವಿಕೊಂಡು ಪೂಜೆಗೆಂದು ಹೂವನ್ನು ಅರಸಿದಳು. ಕೊಳದ ದಂಡೆಯಲ್ಲಿದ್ದ ಬಿಲ್ವಪತ್ರೆಯೊಡನೆ, ರುದ್ರಜಟೆ ಪುಷ್ಪಗಳೂ ಹೇರಳವಾಗಿ ಸಿಕ್ಕಿದವು. ಮುಂಜಾನೆಯ ಆಹ್ಲಾದಕರ ರವಿಕಿರಣದಿಂದ ಕುಲು ಕುಲು ನಗುತ್ತಿದ್ದ ಆ ದಾಸವಾಳಗಳನ್ನು, ಶಿವನಿಗೆ ಅತ್ಯಂತ ಪ್ರಿಯವೆಂದು ಪುರಾಣಗಳು ಹೇಳಿ, ರುದ್ರಪುಷ್ಪಗಳೆಂದು ಕರೆಯುವ ಶುಭ್ರ ಬಿಳಿಯ ತುಂಬೆ ಹೂವುಗಳನ್ನು ಸಂಗ್ರಹಿಸಿ, ಕೆಸುವಿನ ಎಲೆಯಲ್ಲಿ ಹಾಕಿಕೊಂಡು ಬಂದು, ಹೊಂಬಿಸಿಲಿನಲ್ಲಿ ಪೂಜೆಗೆ ಕುಳಿತಳು. ರವಿ ಕಿರಣಗಳು ಮೈಯನ್ನು ಬೆಚ್ಚಗೆ ಮಾಡಿದವು. ಹೊಟ್ಟೆಯೂ ಅಷ್ಟೇ ಚುರುಗುಡುತ್ತಿತ್ತು. ಪೂಜೆ ಮುಗಿಸಿ ಹಸಿಯಿದ್ದ ಅದೇ ಸೀರೆಯನ್ನೇ ಸುತ್ತಿಕೊಂಡು, ಮುಂದಿನ ಹಾದಿ ಹಿಡಿದಳು.

'ಹಸಿವಿಗೆ ಏನು ಮಾಡಲಿ....ಯಾರಾದರೂ ಕರೆಯಬಾರದೆ....?' ಮನಸ್ಸು ಬಯಸಿತು.

'ಹೂಂ....ತಾಯಿ ಇದ್ದಾಳೆ, ಹಸಿದು ಕುಳಿತಿದ್ದರೆ ರಮಿಸಿ ಊಟವಿಡುವಳು!' ಅಪಹಾಸ್ಯದ ಧ್ವನಿ ಅಂತರಂಗದಲ್ಲಿ ಮಿಡಿಯಿತು.

'ಹಾಗಾದರೆ ಏನು ಮಾಡಲಿ?'

'ಏನು ಮಾಡುವುದು? ಭಿಕ್ಷೆ ಬೇಡುವುದು ಒಂದೇ ಮಾರ್ಗ! ಬಹಳ ಎದೆಗಾರಿಕೆ, ಬಿಂಕದಿಂದ ನೀನೇ ಹೇಳಲಿಲ್ಲವೇ, 'ಹಸಿವಾದರೆ ಭಿಕ್ಷಾನ್ನಗಳುಂಟು' ಎಂದು. ಹೇಳಿದಷ್ಟು ಸುಲಭವಲ್ಲ ತತ್ತ್ವದ ಆಚರಣೆ....'

'ನಾನಂತೂ ಭಿಕ್ಷೆ ಬೇಡುವುದಿಲ್ಲ...ಸತ್ತರೂ ಚಿಂತೆಯಿಲ್ಲ' ಮಹಾದೇವಿ ನಿರ್ಧರಿಸಿದಳು.

ನುಡಿಯಿತು.

'ಹಾಗೇನಲ್ಲ....ಶರಣಧರ್ಮದ ಪ್ರಕಾರ ಭಿಕ್ಷೆಯನ್ನು ಬೇಡುವುದು ಸಲ್ಲದು....'

'ನಿಜ....ಬೇಡುವುದು ಕಾಯಕವಾಗಬಾರದು; ಆದರೆ ತನ್ನ ವ್ಯಕ್ತಿತ್ವ ಪರಿಪೂರ್ಣತೆಗಾಗಿ ಬೇಡಲೇಬೇಕು. ಮಾನಾಪಮಾನಕ್ಕೆ, ಸ್ತುತಿ-ನಿಂದೆಗಳಿಗೆ ಈಡಾಗದ ಸಮಚಿತ್ತತೆ ಗಳಿಸಿಕೊಳ್ಳಬೇಕು. 'ಬೇಡಬಾರದು' ಎಂಬಲ್ಲಿ ಸೂಕ್ಷ್ಮಾಹಂಕಾರವಲ್ಲದೆ ಮತ್ತೇನೂ ಅಲ್ಲ....' ವಿವೇಕ ದನಿದೆಗೆದು ನುಡಿಯಿತು.

'ನೋಡಿದೆಯಾ ನಿನ್ನ ಹೀನಾವಸ್ಥೆ! ಕುಲೀನಮನೆತನದ ಹೆಣ್ಣಾಗಿ ಇಂದು ಬೇಡುವ ಅವಸ್ಥೆ ಒದಗಿತು. ಇದು ನಿನ್ನ ಮೂರ್ಖತನದ ಪ್ರತಿಫಲ. ಆದರ್ಶದ ಹುಚ್ಚುಕುದುರೆಯ ಬೆನ್ನುಹತ್ತಿ ಬಂದೆ. ಇಂತಹ ಸಮಸ್ಯೆಯ ದಟ್ಟಾರಣ್ಯದಲ್ಲಿ ಅದು ಕೆಡಹಿದೆ. ಈಗಲಾದರೂ ಬುದ್ಧಿಗಲಿತು ಉಡುತಡಿಗೆ ನಡೆ. ಕೌಶಿಕನು ಕ್ರೂರಿಯಲ್ಲ, ಮರಳಿಹೋದರೆ ಸಂತೋಷಿಸುವನು....'

'ಥೂ ...ಥೂ....ಹೀನ ಮನವೇ; ಸುಡು ನಿನ್ನ ಕೋಡಗತನವನು....!' ಮಹಾದೇವಿ ರೋಷಗೊಂಡಳು.

'ಹೋಗಲಿ....ಬೇಡವಾದರೆ ತಾಯಿತಂದೆಯರ ಬಳಿಗೆ ಹೋಗು....ಬೆಚ್ಚನೆಯ ಮನೆ, ಪ್ರೇಮದ ತಾಯಿತಂದೆಯರು, ನೆಮ್ಮದಿಯ ಜೀವನ....'

'ಎಲೈ ಹೀನ ಮನವೇ....ಸಾಕುಮಾಡು ನಿನ್ನ ಅನಿಷ್ಟ ಸಲಹೆಯನ್ನು....' ಮಹಾದೇವಿ ತನ್ನ ಮನಸ್ಸನ್ನು ಗಟ್ಟಿಮಾಡಿಕೊಂಡು ಮುಂದಿನ ಊರಲ್ಲಿ ಭಿಕ್ಷೆ ಬೇಡುವ ನಿರ್ಧಾರ ಮಾಡಿ ನಡೆದಳು.

ಮನೆಗಳ ಮುಂದೆ ನಿಂತು ಅನೇಕ ಕ್ಷಣಗಳ ಕಾಲ ಕಾಯ್ದಳು—'ಯಾರಾದರೂ ಹೊರಬರುವರೇನೋ ತಾವಾಗಿ ಕೇಳಿದರೆ ಹೇಳಿದರಾಯಿತು' ಎಂದು! ಯಾರೂ ಬರಲಿಲ್ಲ. ಒಂದೆರಡು ಮನೆಗಳ ಮುಂದೆ ನಿಂತರೂ ಯಾರೂ ಹೊರಬರದೆ ತಮ್ಮ ತಮ್ಮ ಕೆಲಸಗಳಲ್ಲಿದ್ದರು. 'ಅಬ್ಬಾ! ಅಭಿಮಾನವೇ? ಬಾಯಿಬಿಟ್ಟು ಕೇಳಲೂ ಸಂಕೋಚ. ನೀನೂ ವಿರಾಗಿಣಿಯೇ?' ವಿವೇಕವು ಚುಚ್ಚಿ ಎಚ್ಚರಿಸಿತು.

'ಅಮ್ಮಾ....ಭಿಕ್ಷೆ ನೀಡಿ ತಾಯಿ....' ಬಹಳ ಕಷ್ಟಪಟ್ಟು ಕೇಳಿದಳು. ಮನೆಯಲ್ಲಿದ್ದಾಗ ಒಂದು ದಿನವೂ ಸಹ 'ಅಮ್ಮಾ ಊಟಕ್ಕೆ ನೀಡು....'

ಒಂದೆರಡು ಬಾರಿ ದೊಡ್ಡ ದನಿಯಲ್ಲಿ ಕೂಗಿದಾಗ ಯಾರೋ ಹೆಣ್ಣು ಮಗಳು ಹೊರಗೆ ಬಂದಳು :

'ನಿನಗೇನೂ ಉದ್ಯೋಗ ಇಲ್ವೇನೆ....ಬೆಳಿಗ್ಗೆ ಎದ್ದು ಆಗಲೇ ಬಂದು ರಾಗ ತೆಗೆದಿದ್ದೀಯ. ನಿನಗಾಗಿ ನಸುಕಿನಲ್ಲೇ ಎದ್ದು ಮಾಡಬೇಕೇನೋ.... ಮುಂದಕ್ಕೆ ಹೋಗು....'

ಮಹಾದೇವಿಯ ಹೃದಯಕ್ಕೆ ಅಪಮಾನದ ಬರೆಯನ್ನೆಳೆದಂತಾಯಿತು.

'ದೇವಾ....ಎಂತೆಂತಹ ಮಾತು ಅನ್ನಿಸಿಕೊಳ್ಳಬೇಕಾಯಿತು. ನಾನು ಹೊಟ್ಟೆಗಿಲ್ಲದೆ ಬಂದಿರುವೆನೇ....' ಕ್ಷಣಕಾಲ ಹೃದಯ ಕಂಪಿಸಿ, ಕಣ್ಣು ನೀರಿನಿಂದ ತುಂಬಿತು. ಹೊಟ್ಟೆಯ ಸಂಕಟ ಹೇಳತೀರದಾಯಿತು. ಮತ್ತೆ ಮುಂದೆ ನಡೆದಳು.

'ಇದೇನೇ ನೋಡಕ್ಕೆ ಬಂಗಾರದ ಬೊಂಬೆಯಂತೆ ಇದ್ದೀಯ ; ಭಿಕ್ಷೆ ಬೇಡಾಕೆ ಬಂದಿದ್ದೀಯ' ಮತ್ತೊಬ್ಬಳ ಮಾತು.

'ದುಡ್ಕಂಡು ತಿನ್ನಬಾರದೇನೇ ? ನಿನಗೇನು ಬ್ಯಾನೆ. ಎಷ್ಟು ಗಟ್ಟಿ ಮುಟ್ಟಾಗಿದ್ದೀಯ....' ಬಗೆಬಗೆಯ ಮಾತುಗಳು ಕೇಳಿಬಂದವು.

ಒಂದು ಮನೆಯಲ್ಲಿ ಮಧ್ಯಮ ವಯಸ್ಸಿನ ಪುರುಷನೊಬ್ಬ ಹೊರಬಂದ. ಕುಚೋದ್ಯದ ದೃಷ್ಟಿಯಿಂದ ಅಡಿಯಿಂದ ಮುಡಿಯವರೆಗೆ ನೋಡಿ,

'ನಮ್ಮ ಮನೆಯಲ್ಲಿ ಕೆಲ್ಸ ಮಾಡ್ತೀಯಾ ? ಜೀತಕ್ಕೆ ಇಟ್ಕೊತೀವಿ....' ಎಂದಾಗ ಮಹಾದೇವಿಯ ಹೃದಯ ನೊಂದು ನುಲಿಯಿತು. ತುಸು ಕ್ರೋಧ-ತಪ್ತಳಾಗಿ ನುಡಿದಳು :

'ಹೆಣ್ಣುಮಕ್ಕಳನ್ನು ನೋಡುವ ದೃಷ್ಟಿ ಚೆನ್ನಾಗಿರಬೇಕು ಅಣ್ಣಾ....'

'ಓಹೋ....ಅಂಥ ಮಾನವಂತೆ ಭಿಕ್ಷೆಗೆ ಯಾಕೆ ಬಂದಿದೀಯಾ....? ಅಸಭ್ಯರೊಡನೆ ಮಾತು ತರವಲ್ಲ ಎಂದು ಮಹಾದೇವಿ ಮುಂದೆ ಸಾಗಿದಳು.

'ಎಂಥಾ ಚೆಂದುಳ್ಳಿ ಚೆಲ್ವೆ....ಆದರೆ ಸೊಕ್ಕೆಷ್ಟು' ಎಂದು ಅವನು ಮಾತನಾಡಿದಾಗ ಕಣ್ಣೀರು ತುಂಬಿ ಬಂದವು. ಹಸಿವಿನ ಜೊತೆಗೆ ಅಪಮಾನದ ಹೊರೆಯೂ ಹೇರಲ್ಪಟ್ಟಾಗ ತತ್ತರಿಸಿದಳು.

ಐದಾರು ಮನೆಗಳ ಮುಂದೆ ತಿರುಗಿದರೂ ಏನೂ ದೊರೆಯಲಿಲ್ಲ. ಮುಂದಿನ ಮನೆಗೆ ಹೋದಾಗ ಮನೆಯ ಮುಂದಿನ ಕಟ್ಟೆಯ ಮೇಲೆ ಮುದುಕಿಯೊಬ್ಬಳು ಕುಟ್ಟಾಣಿಯಲ್ಲಿ ಎಲೆ ಅಡಿಕೆ ಕುಟ್ಟುತ್ತ ಕುಳಿತಿದ್ದಳು.

'ಅಮ್ಮಾ....ಭಿಕ್ಷೆ ನೀಡಿ ತಾಯಿ....' ಎಂದು ದಣಿದು ಕೇಳಿದಾಗ ಆ ಮುದುಕಿ

...ಏನಾರ ಇದ್ದರೆ ತಿನ್ನಾಕ್ಕ ತಂದು ನೀಡವ್ವಾ....’ ಎಂದಳು. ತರುಣಿಯೊಬ್ಬಳು ಬಂದು ಬಗ್ಗಿ ನೋಡಿ,

‘ಸುಮ್ನೆ ಕುಂತ್ಕೋ ಮುದಿಕಿ. ಕಟ್ಟೆ ಮೇಲೆ ಕೂತು ಯಾಕೆ ಒದರ್ತೀಯಾ....ಇಂಥವರ್ಗೆ ಎಷ್ಟಂತ ಹಾಕಾಣ’ ಎಂದಳು.

‘ಹಂಗೆ ಅನ್ಬೇಡ ಮಗಾ....ಶಿವ ಕೊಟ್ಟಿದ್ದು ಶಿವಂಗೆ ಕೊಟ್ಟರೆ ಕಮ್ಮಿ ಆಗಲ್ಲ. ಶಕ್ತಿ ಇದ್ದಾಗ ದಾನ ಮಾಡ್ಬೇಕು....’ ಗೊಣಗುತ್ತ ಆ ತರುಣಿ ಒಳಗೆ ಹೋದಳು. ತಂಗಳು ಅನ್ನ, ಸಾರನ್ನು ತಳಿಗೆಯಲ್ಲಿ ಹಾಕಿಕೊಂಡು ಬಂದು, ಮೆಟ್ಟಲ ಮೇಲೆ ನಿಂತು ಆಕೆ ‘ತಗೋ....’ ಎಂದಳು ಬಿಂಕದಿಂದ.

‘ಯಾತ್ರಾಗ ಹಾಕಿಸ್ಕಂತಿ....’ ಅಹುದು, ಮಹಾದೇವಿ ಆಲೋಚನೆ ಮಾಡೇ ಇರ್ಲಿಲ್ಲ. ಕೈಯಲ್ಲಿ ಏನೂ ತಂದಿರಲಿಲ್ಲ.

‘ಏನೂ ಕೈಯಿಲ್ಲಿಲ್ಲ....ನೀವೇ ಏತರಲ್ಲಾದರೂ ಹಾಕಿ ಕೊಡ್ರಿ ತಾಯಿ....’ ಮಹಾದೇವಿ ವಿನಂತಿಸಿದಳು. ಕಟ್ಟೆಯ ಮೇಲೆ ತಳಿಗೆಯನ್ನಿಟ್ಟು ಆಕೆ ಒಳಗೆ ಹೋಗಿ ಮುತ್ತುಗದ ಎಲೆಯನ್ನು ತಂದು ಅದರಲ್ಲಿ ಹಾಕಿದಳು. ಮಹಾದೇವಿ ಅದನ್ನು ನೋಡಿ ಎಷ್ಟೋ ಸಮಾಧಾನಪಟ್ಟಳು.

‘ಈ ಅನ್ನವು ನನ್ನ ಹಸಿವನ್ನು ಎಷ್ಟೋ ತಣಿಸುವುದು....’

‘ಅನ್ನಕ್ಕೆ ಇಷ್ಟು ಬೆಲೆಯುಂಟೆ? ಅದರ ಅರ್ಥವೇ ನನಗೆ ಆಗಿರಲಿಲ್ಲ....’ ಮಹಾದೇವಿ ಆಲೋಚಿಸುತ್ತ ನಿಂತಿದ್ದಳು.

ಆ ತರುಣಿ ಬಂದು ಎಲೆಯಲ್ಲಿ ಹಾಕಿಟ್ಟಿದ್ದ ಅನ್ನವನ್ನು ದೂರನಿಂತು ಎತ್ತಿ ಹಾಕಿದಾಗ ಮನಸ್ಸು ಎಲ್ಲಿಯೋ ಇದ್ದ ಮಹಾದೇವಿ ಎಚ್ಚರ ತಪ್ಪಿದ್ದಳು. ಆ ಎಲೆಯು ಜಾರಿ ಬಿತ್ತು. ತರುಣಿ ಕೆರಳಿ ನುಡಿದಳು :

‘ಎಂಥಾ ಸೊಕ್ಕೇ ನಿನಗೇ... ತಿನ್ನಾಕ್ಕೆ ಇಲ್ದಿದ್ರೂ....’ ಆ ಮಾತು ನಾಟಿದವು. ಮೌನವಾಗಿ ಆಕೆಯನ್ನು ನೋಡಿದಳು.

‘ನನ್ನ ಕೈಯಿ ಎಷ್ಟು ಜನರಿಗೆ ನೀಡಿತ್ತೋ....ಆದರೆ ಅದೇ ಇಂದು ಬೇಡ ತೊಡಗಿದೆ. ನಾನು ಎಷ್ಟು ಮಾನವೀಯತೆ ಪ್ರೇಮದಿಂದ ಭಿಕ್ಷುಕರನ್ನು ಕಾಣುತ್ತಿದ್ದೆನಲ್ಲವೆ?....ಈಕೆಯ ಸಂಪತ್ತು ನನ್ನ ಸಂಪತ್ತಿನ ಮುಂದೆ ಎಷ್ಟರದಿದ್ದೀತು....’ ಮಹಾದೇವಿಯ ಅಹಂ ಜಾಗ್ರತವಾಯಿತು. ತಕ್ಷಣವೇ ವಿವೇಕವು ಅದನ್ನು ಚಿವುಟಿಹಾಕಿತು :

‘ಇಂಥ ಹೆಮ್ಮು ಇರುವ ನೀನೆಂಥ ವಿರಾಗಿಣಿ....’

ಅಷ್ಟರಲಿ ನಾಲಿಗೆ ನೀರೊಡೆಯುತ್ತಿತ್ತು...

ಬಳಿಸುಕೊಳ್ಳುವಾ' ಎಂದು ನೆಲಕ್ಕೆ ಕುಳಿತಳು. ಆದರೆ ಅಷ್ಟರಲ್ಲಿ ಎಲ್ಲಿಂದಲೋ ಬಾಣದಂತೆ ಚಿಮ್ಮಿ ಬಂದ ನಾಯಿಯು ನೆಲಕ್ಕೆ ಬಿದ್ದ ಅನ್ನಕ್ಕೆ ಬಾಯಿ ಹಾಕಿತು.

ಬೆಚ್ಚಿ ಹಿಂದಕ್ಕೆ ಸರಿದಳು. ನಾಯಿ ತಿನ್ನುವುದನ್ನು ಕಂಡು ಮತ್ತೊಮ್ಮೆ ಹಸಿವು ಅತ್ತತ್ತ ಕೇಳಿತು. ನಿಸ್ಸಹಾಯಕಳಾಗಿ ಅನ್ನದತ್ತ ನೋಡಿದಳು, ನೀರು ತುಂಬಿ ಕಣ್ಣುಗಳು ಮಂಜಾದವು.

'ನಿನ್ನ ಈ ಸೊಕ್ಕಿಗೆ ತಕ್ಕ ಶಿಕ್ಷೆಯಾಯಿತು....' ಆ ತರುಣಿ ನುಡಿದು ಬಿಂಕದಿಂದ ಒಳಗೆ ಹೋದಳು.

'ಚೆನ್ನಮಲ್ಲಿಕಾರ್ಜುನಾ ನೀನೇ ನುಡಿದೆಯಾ....ನಿಜ....ನನ್ನ ಅಹಂಮ್ಮಿಗೆ ತಕ್ಕ ಶಿಕ್ಷೆಯಾಯಿತು! ತಂದೇ....ನನ್ನನ್ನು ಪರೀಕ್ಷಿಸು.

ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯಾ
ಬೇಡಿದೊಡೆ ಇಕ್ಕದಂತೆ ಮಾಡಯ್ಯಾ
ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ
ನೆಲಕ್ಕೆ ಬಿದ್ದೊಡೆ ನಾನೆತ್ತಿಕೊಂಬ ಮುನ್ನವೇ
ಶುನಿ ಎತ್ತಿಕೊಂಬಂತೆ ಮಾಡಯ್ಯಾ...*

ಸಣ್ಣವಾಗುವ ತನಕ ಅರೆದು ನೋಡು. ರಕ್ತದ ಕಣವಿರುವ ತನಕ ಪರುಕಿಸು....' ವೇದನೆ ಉಕ್ಕಿಬಂದು ಕಣ್ಣಾಲಿಗಳು ತುಂಬಿ ನಿಂತು, ಮೌನವಾಗಿ ಮುಂದೆ ಸಾಗಿ ಗಿಡವೊಂದರ ಬುಡಕ್ಕೆ ಕುಳಿತಳು.

'ಮಹಾದೇವಿ....ಇಷ್ಟು ಕಷ್ಟ ಏಕೆ ಪಡುವೆ? ಮನೆಗೆ ಹೋಗು. ಉಪವಾಸದಲ್ಲಿ ಸಣ್ಣಾಗಿ ಸಾಯುವೆ...ಇದಿನ್ನೂ ಕಷ್ಟದ ಆರಂಭ...ಮುಂದೆ ಈ ವಿಪತ್ಸಮುದ್ರದ ಆಳ ಭಯಾನಕ....' ಮನದ ದುರ್ಬಲ ಅಂಶ ದನಿ ತೆಗೆದಿತು.

ಮತ್ತೂ ಛಲದಿಂದ ನುಡಿದಳು :

'ಚನ್ನಮಲ್ಲಿಕಾರ್ಜುನಾ ...ಆಗಲಿ....ನೀನು ಎಷ್ಟು ಕಠೋರನಾಗುವೆಯೋ ನಾನು ಅಷ್ಟೂ ಶರಣಾಗತಳಾಗುವೆ. ನಿನ್ನ ಪ್ರೇಮಕ್ಕಾಗಿ ಎಲ್ಲ ಕಷ್ಟಕ್ಕೂ ಸಿದ್ಧಳಾಗುವೆ. ನನ್ನ ಕುರುಳು ಕೊಯ್ಯಿ, ಬೆರಳು ಕಡಿ, ದೇಹವನ್ನು ಹರಿದು ಹಂಚುಮಾಡು—ನೊಂದೆನಾದರೆ ನಿಮ್ಮಾಣೆ....'† ಮತ್ತೆ ಮೈ-ಮನಗಳ ಶಕ್ತಿಯನ್ನು ಕೇಂದ್ರೀಕರಿಸಿಕೊಂಡು ಮುಂದಿನ ಮನೆಗೆ ನಡೆದಳು.

---

* [illegible]

ಆ ಮನೆಯ ಮುಂದಿನ ರಂಗವಲ್ಲಿ ಬಹು ಅಂದವಾಗಿತ್ತು. ಅದನ್ನು ನೋಡುತ್ತ ನಿಂತು 'ಅಮ್ಮಾ....ಭಿಕ್ಷೆ' ಎಂದಳು.

ಮೂವತ್ತರ ವಯಸ್ಸಿನ ಸ್ತ್ರೀಯೊಬ್ಬಳು ಹೊರಗೆ ಬಂದಳು. ಕಂಕುಳಲ್ಲಿ ಮುದ್ದಾದ ಮಗುವಿತ್ತು. ಹಣೆಯ ಮೇಲಿನ ವಿಭೂತಿ ಸಾತ್ವಿಕಕಳೆ ನೀಡಿತ್ತು. ಒಂದು ಕ್ಷಣಕಾಲ ಮಹಾದೇವಿಯನ್ನು ದಿಟ್ಟಿಸಿದಳು.

'ಒಳಗೆ ಬಾರಮ್ಮ....' ಎಂದಳು. ಅನಿತರಲ್ಲಿ ಆಕೆಯ ಗಂಡ ನುಡಿದ:

'ಜಯಾ....ಭಿಕ್ಷುಕರನ್ನೆಲ್ಲ ಒಳಗೆ ಕರೆಯುವುದೇ....ನಿನಗೇನೂ ಕೆಲಸವಿಲ್ಲವೇ ?' ಎಂದು ಗದರಿದ.

'ಆಕೆಯನ್ನು ನೋಡಿದರೆ ಸಾಮಾನ್ಯ ಭಿಕ್ಷುಕಿ ಎನಿಸದು. ಎಂತಹ ತೇಜಸ್ಸಿದೆ ಕಣ್ಣಿನಲ್ಲಿ! ಈ ದೇಹವಿರುವುದೇ ಸೇವೆಗಾಗಿ ಅಲ್ಲವೇ....?'

'ಆ ವೇದಾಂತ ಅಲ್ಲಿರಲಿ....ಸುಮ್ಮನೆ ಕೊಟ್ಟು ಕಳಿಸು....' ಆಕೆ ಮರು ಮಾತಾಡದೆ ಒಳಗೆ ಹೋಗಿ, ಮೊಸರು ಅನ್ನವನ್ನು ಕಲೆಸಿ ಎಲೆಯೊಂದರಲ್ಲಿ ತಂದು ಹೃದಯ ತುಂಬಿ ನೀಡಿದಳು. ಕೈತುಂಬ ನೀಡಿದುದು ಮಹಾದೇವಿಯ ಹಸಿವನ್ನು ಪೂರ್ಣವಾಗಿ ತಣಿಸಬಲ್ಲುದಾಗಿತ್ತು. ಅದಕ್ಕಿಂತ ಮಿಗಿಲಾಗಿ ಆಕೆಯ ಸಾತ್ವಿಕ ನೋಟ, ಹಾರ್ದಿಕ ನೀಡುವಿಕೆ, ಇಲ್ಲಿಯ ತನಕದ ನೋವನ್ನೆಲ್ಲ ಮರೆಸಿದವು.

ಕೃತಜ್ಞತೆಯಿಂದ ಸ್ವೀಕರಿಸಿ ಮರವೊಂದರ ಕೆಳಗೆ ಕುಳಿತು ಇಷ್ಟಲಿಂಗಕ್ಕೆ ನೈವೇದ್ಯ ಮಾಡಿ ಉಂಡಳು. ಎರಡು ದಿವಸದ ಹಸಿವೆ ಹಿಂಗಿ ಅಪಾರ ಆನಂದವಾಯಿತು. ನೀರನ್ನು ಕೇಳಿದಾಗ ಆಕೆ ನೀರನ್ನು ಎರೆದಳು. ಮಹಾದೇವಿಯ ಹೊಟ್ಟೆ, ಹಾಲಿಗಾಗಿ ಅತ್ತು ಹಾಲುಂಡ ಕೂಸು ತಣ್ಣಗಾಗುವಂತೆ, ಶಾಂತವಾಯಿತು. ಮೂಕ ನೋಟದಿಂದಲೇ ಆ ಸ್ತ್ರೀಯನ್ನು ಹರಸಿ ಮುಂದೆ ಸಾಗಿ ಗಿಡವೊಂದರ ಕೆಳಗೆ ಕುಳಿತಳು.

'ಚೆನ್ನಮಲ್ಲಿಕಾರ್ಜುನಾ ನಿನ್ನಾಟವೇ ಬಲು ವಿಚಿತ್ರ. ಕೈಬಿಡುವಂತೆ ಮಾಡುವೆ; ಸರ್ವನಾಶವಾಯಿತು ಎನ್ನುವಾಗ ಹಗುರವಾಗಿ ಎತ್ತಿಕೊಳ್ಳುವೆ. ಮಕ್ಕಳನ್ನು ತೂರಿ ಭೀತಿಯಿಂದ ಅಳುವಾಗ ಎತ್ತಿಕೊಳ್ಳುವ ತಂದೆಯಂತೆ ನಿನ್ನಾಟ. ಈ ಜಗತ್ತು ದ್ವಂದ್ವಗಳ ನೆಲೆ. ಕತ್ತಲೆ-ಬೆಳಕು, ಸಜ್ಜನರು-ದುರ್ಜನರು, ಕ್ರೂರಿಗಳು-ದಯಾಮಯರು ಎಲ್ಲರೂ ಇಲ್ಲಿಯೇ!' ಆಲೋಚಿಸುತ್ತ ಇರುವಾಗ ಸ್ತ್ರೀಯೊಬ್ಬಳು ಬಂದಳು.

'ಏ....ಯುವತೀ, ನಮ್ಮ ಮನೆಲ್ಲಿ ...

ಬಂದು ತಗೊಂಡು ಹೋಗು....' ಕರೆದಳು.

'ತಗೋ....ಹೋಗು....' ಮನಸ್ಸು ಹೇಳಿತು.

'ನನಗೆ ಹೊಟ್ಟೆ ತುಂಬುವಷ್ಟು ಆಯಿತು ಮತ್ತೇಕೆ....?' ತನ್ನಲ್ಲೇ ಅಂದುಕೊಂಡಳು.

'ಇಂಥ ರುಚಿಯಾದ ಅಡಿಗೆ ಮತ್ತೆ ಸಿಕ್ಕೀತೆ....?' ಮನಸ್ಸು ಆಮಿಷ ವನ್ನೊಡ್ಡಿತು.

'ರುಚಿಯೋ ಅರುಚಿಯೋ ಬದುಕುವಷ್ಟು ದೊರೆತ ಮೇಲೆ ಮತ್ತೇಕೆ ಆಸೆ....' ಮಹಾದೇವಿಯ ವಿವೇಕ ಹೇಳಿತು.

'ಎಂಥಾ ಮೂರ್ಖಳು....! ತೆಗೆದು ಇಟ್ಟರೆ ರಾತ್ರಿಗೆ ಬರದೆ? ರಾತ್ರಿಗೆ ನಿನಗೆ ಯಾರಾದರೂ ಕರೆದು ಉಣ್ಣಿಸುವರೋ....?'

'ಆದರೆ ವಿರಾಗಿಗಳಿಗೆ ಮರುಕ್ಷಣದ, ನಾಳೆಯ, ಮುಂದಿನ ಚಿಂತೆ ಏಕೆ....?' ವಿವೇಕ ಮತ್ತೆ ಹೇಳಿತು.

'ಈಗಿನದು ಆಯಿತು, ಮುಂದಿನ ಹೊಣೆ ಶಿವನದು....' ನಿರ್ಧರಿಸಿ ಕೊಂಡಳು.

'ಬಾರವ್ವ....ಭಿಕ್ಷೆ ಒಯ್ಯಿ....' ಆಕೆ ಮತ್ತೆ ಕರೆದಳು.

'ಬೇಡ ತಾಯಿ....ನನ್ನದು ಊಟವಾಗಿದೆ....ಬೇರೆ ಯಾರಿಗಾದರೂ ಕೊಡಿ....'

'ಎಂಥ ವಿಚಿತ್ರ ಹೆಂಗಸು....ಹುಚ್ಚಿ ಇರ್ಬೇಕು....ಕರೆದು ಉಣ್ಣಿಸುವೆ ಅಂದರೆ ಯಾರಾದರೂ ಬೇಡ ಅಂತಾರೆಯೇ....?' ಆ ಹೆಂಗಸು ನುಡಿದಳು.

'ಹುಚ್ಚಿ ಹುಚ್ಚಿ....ಬೇಡಿದರೂ ಹುಚ್ಚಿ; ಬೇಡ ಅಂದರೂ ಹುಚ್ಚಿ. ಈ ಶಬ್ದಕ್ಕೆ ಅರ್ಥವೇ ಇಲ್ಲವೇ?' ಎಂದುಕೊಂಡಳು.

'ಅವ್ವಾ....ಬದುಕಲಿಕ್ಕೆ, ಗುರಿಸಾಧಿಸಲಿಕ್ಕಷ್ಟೆ ತಿನ್ನುತ್ತಿರುವೆ; ತಿನ್ನಲಿ ಕ್ಕಾಗಿಯೇ ನಾನು ಬದುಕಿಲ್ಲ. ನಿಮ್ಮ ಪ್ರೇಮಕ್ಕೆ ಚಿರಋಣಿ. ಆದರೆ ನನ್ನ ಗಂಡ ವಿಚಿತ್ರ ಗುಣದವನು. ಅವನನ್ನು ಒಲಿಸುವುದು ಬಹು ಕಷ್ಟಕರ.

ಕಲ್ಲು ಹೊತ್ತು ಕಡಲೊಳಗೆ ಮುಳುಗಿದೊಡೆ
ಎಡರಿಂಗೆ ಕಡೆಯುಂಟೆ? ಅವ್ವಾ!
ಉಂಡು ಹಸಿವಾಯಿತ್ತೆಂದೊಡೆ ಭಂಗವೆಂಬೆ;
ಕಂಡ ಕಂಡ ಠಾವಿನಲ್ಲಿ ಮನ ಬೆಂದೊಡೆ
ಗಂಡ ಚೆನ್ನಮಲ್ಲಿಕಾರ್ಜುನ ಎಂತೊಲಿವನವ್ವ*

'ಮುತ್ತು ಹವಳಗಳನ್ನು ತರಬೇಕೆಂದು ಕಡಲಿಗೆ ಇಳಿವವನು ತೇಲಿಸಬಲ್ಲ ವಸ್ತುಗಳನ್ನು ಕಟ್ಟಿಕೊಳ್ಳಬೇಕೇ ವಿನಾ ಮುಳುಗಿಸುವಂತಹ ಕಲ್ಲನ್ನಲ್ಲ. ಹಾಗೆಯೇ ದಿವ್ಯಾನುಭವದ ವಾರಿಧಿಯಲ್ಲಿ ಮುಳುಗಿ ಆತ್ಮ ಮೌಕ್ತಿಕವನ್ನು ತರಬೇಕೆಂಬ ನಾನು ತತ್ಸಾಧನೆಗೆ ಸಹಾಯಕವಾಗುವ ಸಂಯಮ, ಇಂದ್ರಿಯ ನಿಗ್ರಹತ್ವಗಳನ್ನು ಇರಿಸಿಕೊಳ್ಳಬೇಕು. ಅದು ಬಿಟ್ಟು ಇಂದ್ರಿಯ ದೌರ್ಬಲ್ಯ, ಜಿಹ್ವಾ ಚಾಪಲ್ಯದ ಕಲ್ಲುಗಳನ್ನು ಕಟ್ಟಿಕೊಂಡು ಪಾರಮಾರ್ಥವಾರಿಧಿಯೊಳಗೆ ಧುಮುಕಿದರೆ ಏನಾದೀತವ್ವಾ....

ಅವಶ್ಯಕತೆ ಇದ್ದವರಿಗೆ ಕೊಡು ತಾಯಿ. ಉಂಡವಂಗೆ ಉಣ್ಣಿಸುವುದು ದಯೆಯಲ್ಲ; ಹಸಿದವನಿಗೆ ಉಣ್ಣಿಸು....' ಆ ಸ್ತ್ರೀ ಮರಳಿ ಹೋದಳು.

ನಾಲಿಗೆಯ ರುಚಿ, ಮನದ ಆಮಿಷವನ್ನು ಗೆದ್ದಾಗ ಮಹಾದೇವಿಗೆ ಅಪೂರ್ವ ಸಂತೃಪ್ತಿ ಎನಿಸಿತು. ಆ ತಾಣದಿಂದ ಮೇಲಕ್ಕೆದ್ದು ಮುಂದಿನ ಹಾದಿ ತುಳಿದಳು. 'ಅನ್ನದಲ್ಲಿ ಎಂತಹ ಶಕ್ತಿಯಲ್ಲವೆ? ಅನ್ನದಿಂದಲೇ ಪ್ರಾಣ, ಉಳಿವು. ಹಸಿದ ಮಾನವ ಏನನ್ನು ಮಾಡಲೂ ಸಿದ್ಧನಾಗುವನಲ್ಲವೆ? ಅನ್ನದ ಬೆಲೆ ಎಷ್ಟು ಜನ ಅರಿತಿರುವರು? ತುತ್ತನ್ನ ಬಿದ್ದಾಗ ಎಂತಹ ಶಕ್ತಿ ಮೈಗೂಡಿತು. ಅಂತೆಯೇ ದೇವರ ದಾಸಿಮಯ್ಯನವರು ಹೇಳುವರು:

ಹಸಿವೆಂಬ ಹೆಬ್ಬಾವು ಬಸಿರಬಂದು ಹಿಡಿದಡೆ,
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ.
ಹಸಿವಿಗನ್ನವನಿಕ್ಕಿ ವಿಷವನಿಳುಹ ಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ'*

ವಚನವನ್ನು ಮನನ ಮಾಡಿಕೊಳ್ಳುತ್ತ ಮುಂದೆ ಸಾಗಿದಳು.

---

* ವ. ಸಾ. ಸಂ. ಪುಟ ೩೭೧

೩೯. ಭಯಂಕರ ಬೈರಾಗಿ

ಶರೀರವು ಕಷ್ಟಕ್ಕೆ ಒಗ್ಗಿಕೊಳ್ಳತೊಡಗಿತು. ನಿನ್ನಿನ ಕಾಲುನೋವು ವಾಸಿಯಾಗಿರದುದರಿಂದ ಮೂರು ಹರದಾರಿ ಸವೆಸುವುದರಲ್ಲಿ ಪಡಿಪಾಟಲಾಯಿತು. ಹೊತ್ತು ನೂರು ದೂರದಲ್ಲಿದ್ದಂತೆ ಹಳ್ಳಿಯೊಂದು ಸಿಕ್ಕಿತು. ಮುಂದಿನ ದಾರಿ ತುಳಿದರೆ ಕತ್ತಲೆ ಕವುಚುವ ಮುನ್ನ ಯಾವ ತಾಣವನ್ನು ಸೇರುವುದು ಆಗದು ಎಂದುಕೊಂಡಳು. ಹಳ್ಳಿಯಲ್ಲಿ ಸಂಜೆಯ ಸಮಯ ಐದಾರು ಮನೆಗಳನ್ನು ಸುತ್ತುವುದರಲ್ಲಿ ತನಗೆ ಸಾಕೆನಿಸುವಷ್ಟು ಆಹಾರ ದೊರೆಯಿತು. ಬೇಡುವಾಗ ದ್ವಂದ್ವ ಭಾವನೆಗಳು ಬರಲಿಲ್ಲ. 'ಅಮ್ಮಾ....ಭಿಕ್ಷೆ ನೀಡಿ ತಾಯಿ' ಎಂದು ಮಂತ್ರವನ್ನು ಧ್ಯಾನಿಸುತ್ತ ನಿಂತುಬಿಡುತ್ತಿದ್ದಳು. ಅವರು ಬೈದುದು-ಹೊಗಳಿದುದು ಏನೂ ಕೇಳುತ್ತಿರಲಿಲ್ಲ. ತಂದು ನೀಡಿದರೆ ಸ್ವೀಕರಿಸುತ್ತಿದ್ದಳು; ಕೈ ಅಲ್ಲಾಡಿಸಿದರೆ ಮೌನವಾಗಿ ಮುಂದೆ ಸಾಗುತ್ತಿದ್ದಳು.

ಭಿಕ್ಷೆಯನ್ನು ಸಂಗ್ರಹಿಸಿಕೊಂಡು ಊರಿನ ಹೊರಗೆ ಬರುವಾಗ ಅಲ್ಲಿ ಗುಡಿಯೊಂದು ಕಂಡಿತು. ಗುಡಿಗಳು ನಿರ್ಗತಿಕರಿಗೆ ಉಚಿತ ವಾಸಸ್ಥಾನಗಳಲ್ಲವೆ! ಸ್ವಲ್ಪ ನೆಮ್ಮದಿಯಿಂದ ಗುಡಿಯೊಳಗೆ ಕಾಲಿರಿಸಿ ತನ್ನ ಭಿಕ್ಷೆಯನ್ನು ಒಂದು ಮೂಲೆಯಲ್ಲಿಟ್ಟು ಎಲ್ಲವನ್ನೂ ಪರಿಶೀಲಿಸಿದಳು. ಆಗಾಗಲೊಮ್ಮೆ ಜನರು ಬಂದು ಹೋಗುವ ಸ್ಥಾನ ಎನಿಸುತ್ತಿತ್ತು. ಸಂಜೆಯ ಮುಂದೆ ಪೂಜಾರಿ ಪೂಜಿಸಿ ಹೋಗಿದ್ದರಿಂದ ಎಣ್ಣೆಯ ದೀವಿಗೆ ಮಿಣುಕುತ್ತಿತ್ತು. ಅಲ್ಪ ಸ್ವಲ್ಪ ದಾರಿ ಕಾಣುವಾಗಲೇ ಗುಡಿಯ ಮಗ್ಗುಲಿನ ಹೊಂಡದಲ್ಲಿ ಮಿಂದು ಬಂದು ಪೂಜೆಗೆ ಕುಳಿತಳು. ತಾನು ಸ್ನಾನಕ್ಕೆ ಹೋಗುವಾಗ ಗುಡಿಯಲ್ಲಿ ಯಾರೂ ಇದ್ದಿರಲಿಲ್ಲ. ಆದರೆ ಮಿಂದು ಬರುವಷ್ಟರಲ್ಲಿ ಕಾವಿಯ ಬಟ್ಟೆಯ ಜೋಳಿಗೆ, ಮುರಿಮುರಿಯಾದ ಬೇರಿನ ಒಂದು ದಂಡ ಗುಡಿಯಲ್ಲಿದ್ದವು. 'ಇದು ಯಾರು ಬಂದರೋ....' ಎಂದು ಭಯವೆನಿಸಿತು. ಅಷ್ಟರಲ್ಲಿ ಕೂದಲು ಜಡೆಗಟ್ಟಿದ, ಮೈತುಂಬ ಬೂದಿ ಬಳಿದುಕೊಂಡ ಬೈರಾಗಿಯೊಬ್ಬ ಒಳಬಂದು ತನ್ನ ವಸ್ತುಗಳ ಬಳಿ ಕುಳಿತ.

ಮಹಾದೇವಿಗೆ ದಿಕ್ಕುತೋಚದಾಯಿತು. ಮಧ್ಯಮ ವಯಸ್ಸನ್ನು ದಾಟಿದವನು, ಮೇಲಾಗಿ ಕಾವಿಯ ಕಫನಿಯನ್ನು ಧರಿಸಿದ ಬೈರಾಗಿ. 'ಕಾಶಿಕ ... ಇವನಿಗೇಕೆ ಹೆದರಬೇಕು' ಎಂದು

ದ್ದಳು. ಪೂಜೆಗೆ ಕುಳಿತುಕೊಳ್ಳಬೇಕೆನ್ನುವಾಗ ಆ ಬೈರಾಗಿ [illegible] ಕಣ್ಣಾಡಿಸಿದ ಪರಿಯನ್ನು ಕಂಡು ಮೇಲೆದ್ದು ಹೋಗಿ ಒದ್ದೆಯ ಸೀರೆಯನ್ನೇ ಸುತ್ತಿಕೊಂಡು ಬಂದಳು.

'ಯಾವೂರಮ್ಮ....?' ಆ ಬೈರಾಗಿ ತೀಕ್ಷ್ಣನೋಟ ಎಸೆಯುತ್ತ ಕೇಳಿದ.

'ದಿಕ್ಕೇಡಿಗೆ ಒಲಿದವರಿಗೆ ಊರುಕೇರಿ ಇರುವುದುಂಟೇ ಅಯ್ಯಾ....' ಮಹಾದೇವಿ ಹೇಳಿದಳು. ತನ್ನ ಪಾಡಿಗೆ ತಾನು ಪೂಜೆಗೆ ಕುಳಿತು ಪೂಜಿಸಿದಳು. ಲಿಂಗತೀರ್ಥವನ್ನು ತೆಗೆದುಕೊಂಡು ಒದ್ದೆಯಾದ ಲಿಂಗವಸ್ತ್ರವನ್ನೇ ಬಿಗಿದುಕೊಂಡಾಗ ಮೈನಡುಕ ಹುಟ್ಟಿತು. ಇರುಳು ದಟ್ಟವಾಗುತ್ತಲಿತ್ತು. ಗುಡಿಯೊಳಗಣ ಕಿರು ಹಣತೆ ಮಬ್ಬಾದ ಬೆಳಕು ಚೆಲ್ಲುತ್ತಿತ್ತು.

'ಪಾಪ, ಇರುವುದೊಂದೇ ಸೀರೆ ಏನೋ....ತೊಯ್ದಿದೆ. ನಡುಗತೊಡಗಿರುವೆ. ನನ್ನ ಬಳಿ ಉದ್ದನೆಯ ಕಾವಿಯ ಶಾಟಿಯಿದೆ. ಕೊಡಲೇ....?' ಬೈರಾಗಿ ಕೇಳಿದ.

'ತೆಗೆದುಕೋ....ಎರಡು ಇದ್ದರೆ ಬದಲಿಸಿ ಉಡಲು, ಒಗೆದು ಒಣಗಿಸಲು ಅನುಕೂಲವಾಗುವುದು....' ಮಹಾದೇವಿಯ ಮನಸ್ಸು ಹೇಳಿತು.

'ಆದರೆ....ಇವನ ಭಾವನೆಗಳು, ದೃಷ್ಟಿ ಸರಿಯಾಗಿಲ್ಲವಲ್ಲ....' ವಿವೇಕ ನುಡಿಯಿತು.

'ಹೆಣದ ಬಟ್ಟೆಯನ್ನು ಉಟ್ಟವಳಿಗೆ ಬೈರಾಗಿ ಕೊಡುವುದು ಬೇಡವಾಗುವುದೇ....?' ಮನಸ್ಸು ವಿವೇಕಕ್ಕೆ ಪ್ರಶ್ನೆಹಾಕಿತು.

'ಅದು ಸತ್ತ ಶವ, ನಿರುಪದ್ರವಿ ; ಇವನು ಜೀವಂತ ಶವ, ಅಪಾಯಕಾರಿ. ಅದು ನಿರ್ಲಿಪ್ತವಾಗಿ ನೀಡಿತ್ತು. ಇವನ ನೀಡುವಿಕೆಯ ಹಿಂದೆ ಏನೋ ದುರ್ವಾಸನೆ ಇದೆ....' ವಿವೇಕ ಉತ್ತರಿಸಿತು.

'ಬೇಡ ಅಯ್ಯಾ....ಈ ಸೀರೆ ಆಗಲೇ ಒಣಗಿದೆ....' ಮಹಾದೇವಿ ವಿವೇಕದ ಬೋಧೆಗೆ ಮನಗೊಟ್ಟು, ನಿರ್ಧರಿಸಿ ನುಡಿದಳು.

ತನ್ನ ಕುಡಿಕೆಯನ್ನು ಮುಂದಿರಿಸಿಕೊಂಡು ತಂದ ಭಿಕ್ಷೆಯನ್ನು ಉಣತೊಡಗಿದಳು.

'ಪಾಪ, ಒಣಕಲ ಕಜ್ಜಾಯ. ಗಂಟಲಲ್ಲಿ ಇಳಿಯದ ಪುಡಿ ಚಟ್ನಿ ಇರಬೇಕು. ನನ್ನ ಬಳಿ ಗೋಧಿಯ ಹುಗ್ಗಿ, ಚಿತ್ರಾನ್ನವಿದೆ. ತೆಗೆದುಕೊಳ್ಳುತ್ತೀಯ....'

'ತಮ್ಮ ಔದಾರ್ಯಕ್ಕೆ ತುಂಬ ಋಣಿ ಅಣ್ಣಾ ; ನನ್ನ ಹೊಟ್ಟೆ ತುಂಬುವಷ್ಟು ನನ್ನ ಬಳಿಯೇ ಇದೆ....' ಮಹಾದೇವಿ ನಿರಾಕರಿಸಿದಳು.

ಯಲ್ಲಾ....' ಅವನು ವಿಚಿತ್ರವಾಗಿ ನುಡಿದು ಭಂಗಿಯ ಸೊಪ್ಪನ್ನು ಸೇದ ತೊಡಗಿದ.

'ಪರಪುರುಷರನ್ನು ಹಾಗೆ ಸಂಬೋಧಿಸುವುದೇ ಉಚಿತವಲ್ಲವೆ....?'

'ಎಂಥ ಚೆಂದನ್ನ ಹೆಣ್ಣು....ಹಿಂಗ್ಯಾಕೆ ದಿಕ್ಕೆಟ್ಟು ಬಂದಿದೀಯಾ. ನಿನಗೆ ಯಾರೂ ಇಲ್ಲವೇ....?'

'ಇದ್ದಾನೆ. ನನ್ನ ಕೈ ಹಿಡಿದವನು ನನ್ನ ಬೆನ್ನ ಹಿಂದೇ ಇದ್ದಾನೆ ...'

'ಅಂ....' ಆ ಬೈರಾಗಿ ಬೆಚ್ಚಿಬಿದ್ದ.

'ಮತ್ತೆ ಅವನೆಲ್ಲೂ ಕಾಣ್ತಿಲ್ಲ....' ಕುತೂಹಲದಿಂದ ಕೇಳಿದ.

'ಅವನನ್ನು ಕಾಣೋಕೆ ಬೇರೆ ಕಣ್ಣೇ ಬೇಕು....' ಮಹಾದೇವಿ ಪ್ರಸಾದ ವನ್ನು ಮುಗಿಸಿ ಕುಡಿಕೆಯಲ್ಲಿನ ನೀರನ್ನು ಗುಟುಕರಿಸಿ ಎದ್ದುಹೋಗಿ ಕೈ ತೊಳೆದು, ಕುಡಿಕೆಯನ್ನು ತೊಳೆದುಕೊಂಡು ಬಂದಳು.

'ಓಹೋ....ಅವನೇ ! ಆ ದೇವರನ್ನು ಕುರಿತು ಹೇಳ್ತೀಯಾ ?' ನಿರ್ಲಕ್ಷ್ಯ ವಾಗಿ ನುಡಿದ.

ಮಹಾದೇವಿ ಮೌನ ತಾಳಿ ಕುಳಿತಳು. ಬೈರಾಗಿ ಸಿದ್ಧಪತ್ರೆಯನ್ನು ಸೇದುತ್ತ ಸ್ವಲ್ಪ ಸನಿಹಕ್ಕೆ ಸರಿದ.

'ಊರಿನ ಕಷ್ಟಕ್ಕಂಜಿ ಕಾಡನ್ನು ಹೊಕ್ಕರೆ ಇದೆಂತಹ ವಿಪತ್ತು ದೇವಾ' ಎಂದು ತಲ್ಲಣಿಸಿದಳು.

'ನಿನ್ನ ಹೆಸರೇನು....?' ಬೈರಾಗಿಗೆ ಮತ್ತು ಏರಿ ನಾಲಿಗೆ ತೊದಲುತ್ತಿತ್ತು.

'ನನಗೆ ಹೆಸರೇ ಇಲ್ಲ....'

'ಇರಲಿ....ಚೆಲುವೆ ಅಂತಲೇ ಕರೆಯುವೆ....'

'ನೀನು ಎಂತಹ ಚೆಲುವೆ ಅಂತೀಯಾ....ಯಾಕೆ ಒಂಟಿಯಾಗಿ ತಿರು ಗ್ತೀಯಾ. ನನ್ನ ಜೊತೆಗೆ ಇದ್ಬಿಡು. ಬಾ....ಇತ್ತ ಬಾ....' ಮಹಾದೇವಿ ಕೆರಳಿದಳು.

'ಅಯ್ಯಾ....ನೀನು ಹಾಕಿರುವ ಬಟ್ಟೆಗಾದರೂ ಬೆಲೆಕೊಡಬಾರದೆ? ತ್ಯಾಗ-ವಿರಕ್ತಿಗಳ ಸಂಕೇತವೇ ಈ ಬಟ್ಟೆ. ಈ ವೇಷದ ಗೌರವ ಕಾಯ್ದುಕೊ.

ನಿಮ್ಮ ನಿಲುವಿಂಗೆ ನೀವು ನಾಚಬೇಡವೆ ?
ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಬ ನಡೆ ನುಡಿ ಏಕೆ ?
ಅಲ್ಲ ಎನಿಸಿಕೊಂಬುದರಿಂದ ಈ ಕ್ಷಣವೇ ಸಾವುದು ಲೇಸು
ಕಾಣಾ... ಚನ್ನಮಲ್ಲಿಕಾರ್ಜುನಾ...'*

---

* ...

ಹಾಡಿದಂತೆ, ಅರಗಿಳಿ ನುಡಿದಂತೆ. ಆದರೆ ಬಹಳ ದೊಡ್ಡದೊಡ್ಡ ಮಾತಾಡ್ತೀಯಲ್ಲ. ನೀನು ಹೇಳೋದು ಸರಿಯೆ. ಇನ್ನೊಬ್ಬರು ನೋಡೋಹಂಗೆ ಮಾಡಬಾರದು. ಆದರೆ ಈಗ ಯಾರು ನೋಡ್ತಾರೆ....ಇಂಥಾ ಇರುಳ್ನಲ್ಲಿ ಹೆಣ ಸಹಿತ ಹೊರಗೆ ಬರಾಕೆ ಹೆದರ್ತೈತೆ....' ತೊದಲುತ್ತ ಆ ಬೈರಾಗಿ ನುಡಿದ.

'ಅಯ್ಯಾ....ಇಂಥ ಹೀನ ಬಾಳ್ವೆ ಮಾಡಬೇಕೆನ್ನುವವನು ಕಾವಿ ಶಾಟಯನ್ನೇಕೆ ಹೊದ್ದೆ? ಗುರಿ-ಗಮ್ಯ ಉನ್ನತ ಹಂಬಲ ಇಲ್ಲದವರು ಕೇವಲ ಹೊಟ್ಟೆಪಾಡಿಗಾಗಿ ಬಟ್ಟೆ ತೊಡಬಾರದು. ಅದರಿಂದ ನಿಜವಾದ ವಿರಕ್ತರನ್ನು ಕಂಡೂ ಜನರು ಅಪಹಾಸ್ಯ ಮಾಡುವರು. ಈ ಪವಿತ್ರ ವೇಷ ತೊಡುವ ಬದಲಿಗೆ ನಿಮ್ಮಂಥವರಿಗೆ ವಿಸ್ತಾರವಾದ ಭೋಗಪ್ರಪಂಚ ಇತ್ತಲ್ಲ....'

'ನಾವೂ ಸಾಧನೆ ಮಾಡ್ತೀವಿ : ಮಸಾಣದಲ್ಲಿ ಕುಂತು ಎಷ್ಟೋ ವರುಷ ತಪಸ್ಸು ಮಾಡಿದ್ದೀನಿ. ನಾವು ಕಾಪಾಲಿಕ ಗುರುಗಳ ಶಿಷ್ಯರು. ಮೈ ತುಂಬ ಹೆಣದ ಬೂದಿ ಬಳ್ಕಂಡು, ತಲೆಬುರುಡೇಲಿ ಅನ್ನ ತಿನ್ಕಂಡು ಇರ್ತೀವಿ. ಶಿವ ಒಲಿಯೋದು ನಮ್ಗೆ ನೋಡು. ಅವನೂ ಬೂದಿ ಬಡ್ಕಂಡು ನಮ್ಮಂಗೆ ಇದ್ದಿರಲಿಲ್ವೆ. ನಮ್ಮಲ್ಲಿ ಎಷ್ಟೋ ಹೆಂಗಸ್ರು ಇದ್ದಾರೆ. ಅವರೂ ನಮ್ಮಂಗೆ ಮಸಾಣದಾಗೆ ಇರ್ತಾರೆ. ಬೆಳುದಿಂಗಳಲ್ಲಿ ನಾವು ತಿಂದು, ಕುಡಿದು ಮಸಾಣದಾಗೆ ಕುಣೀತಿದ್ದರೆ ಶಿವ ನಗನಗ್ತಾ ನೋಡ್ತಾನೆ....'

ಶೈವ ಪಂಥಗಳಲ್ಲೊಂದಾದ ಕಾಪಾಲಿಕರ ಬಗ್ಗೆ ಮಹಾದೇವಿ ಕೇಳಿದ್ದಳು. ಸಮಾಜಬಾಹಿರ ವರ್ತನೆಗಳು, ಅಶ್ಲೀಲ ಕುಣಿತಗಳು ದೇವನನ್ನೊಲಿಸುವ ಸಾಧನೆಗಳೆಂದು ತಿಳಿದ ಕ್ರೂರಮಾರ್ಗಿಗಳು ಅವರು.

'ನಾವು ಕೆಲವು ಸಲ ಉಸಿರು ಕಟ್ಟಿ ಭೂಮಿಯಲ್ಲಿ ಕೂತುಬಿಡ್ತೀವಿ. ಹತ್ತತ್ತು ಮೊಳ ಬಟ್ಟೆ ನುಂಗಿಬಿಡ್ತೀವಿ....ನಿಂಗೂ ಅದನ್ನು ನಾನು ಕಲಿಸ್ತೀನಿ....ನಂಗೆ ಒಲಿದರೆ....'

'ನಿನ್ನ ವಿದ್ಯೆ, ನಿನ್ನ ಸಾಧನೆಗೆ ಬೆಂಕಿ ಹಾಕ್ಬೇಕು. ಸದ್ಗುಣ, ಸಾತ್ವಿಕತೆ, ಸಮಾಜಸೇವೆ, ದಯೆ ಇಲ್ಲದ ಧರ್ಮಸಾಧನೆಯಿಂದ ಪ್ರಯೋಜನವೇನು?

ಆವ ವಿದ್ಯೆ ಕಲಿತಡೇನು? ಸಾವ ವಿದ್ಯೆ ಬೆನ್ನ ಬಿಡದು.
ಅಶನವ ತೊರೆದಡೇನು, ವ್ಯಸನವ ಮರೆದಡೇನು?
ಉಸಿರು ಹಿಡಿದಡೇನು ಬಸುರ ಕಟ್ಟಿದೊಡೇನು?
ಚನ್ನಮಲ್ಲಿಕಾರ್ಜುನ ದೇವಯ್ಯಾ,
ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು?*

ಭೂಮಿಯೇ ತಳವಾರನಾಗಿ ಕಾಯಲು ನಿಂತಾಗ ಕಳ್ಳರು ತುಡುಗಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ಸಮಾಜದ ಕಣ್ಣು ತಪ್ಪಿಸಿದರೇನಂತೆ ಶಿವನ ಕಣ್ಣು ತಪ್ಪಿಸಲು ಸಾಧ್ಯವೇ? ನಿಮ್ಮಂತಹ ತಾಮಸ ಜಡರಿಗೆ ಆ ಪರಂಜ್ಯೋತಿ ರೂಪನು ಒಲಿವನೇ?' ತಿರಸ್ಕಾರದಿಂದ ನುಡಿದಳು.

'ಚೆಲುವೇ....ಅದನ್ನೆಲ್ಲ ಯಾಕೆ ತಲೇಲಿ ಹಾಕ್ಕೋತಿ. ಶಿವ-ಒಲಿಮೆ-ಸೇವೆ ತಲೆ ಕೆಟ್ಟವರ ಮಾತು. ಸಾಧ್ಯವಾದಷ್ಟು ಸುಖ ಪಡ್ಬೇಕು. ಬಾ.... ಈ ಭಂಗಿಯ ದಮ್ಮು ಒಮ್ಮೆ ನೋಡು, ಆಮೇಲೆ ಈ ಬದುಕಿನ ರುಚಿ ತಿಳಿದೀತು....' ಬೈರಾಗಿ ಮುಂದೆ ಸರಿಯಲು ಮಹಾದೇವಿ ತಟ್ಟನೆ ಎದ್ದು ನಿಂತಳು.

'ಕೌಶಿಕ ವಿಲಾಸಿಯಾದರೂ ಇಂತಹ ಅನಿಷ್ಟನಲ್ಲ, ದುಷ್ಟನಲ್ಲ. ಅವನಿಗಿಂತಲೂ ಇವನು ಯಮಭಯಂಕರ....'

ಬೈರಾಗಿ ಎದ್ದು ನಿಲ್ಲುವಷ್ಟರಲ್ಲಿ ಅವನ ಹಿಂದೆ ಮಿಂಚಿನಂತೆ ಸಾಗಿದಳು. ಯಾವುದೋ ಅಲೌಕಿಕಶಕ್ತಿ ಆವಿರ್ಭವಿಸಿದಂತಿತ್ತು. ಮುರಿಮುರಿಯಾದ ಅವನ ಬೆತ್ತವನ್ನೇ ತೆಗೆದುಕೊಂಡು ಬಲವಾಗಿ ಬೀಸಿದಳು. ಪೆಟ್ಟು ಬಿದ್ದು ಸ್ತಂಭೀಭೂತನಾದ ಅವನು ಮೇಲೇಳುವಷ್ಟರಲ್ಲಿ ಮತ್ತೆರಡು ಸಲ ಚೆನ್ನಾಗಿ ಥಳಿಸಿದಳು.

ಬೈರಾಗಿ ನೆಲಕ್ಕೆ ಬಿದ್ದು 'ಅಯ್ಯೋ....' ಎಂದು ಚೀರಿದ. ಮಹಾದೇವಿಗೆ ಉಸಿರಾಡಿಸಿಕೊಳ್ಳಲು ಅವಕಾಶ ಸಿಕ್ಕಿತು. ಆ ಬೆತ್ತವನ್ನು ಅಲ್ಲೇ ಬಿಸುಟಿ ಗುಡಿಯಿಂದ ಹೊರಗೆ ಓಡಿದಳು. ಬೈರಾಗಿ ಚೇತರಿಸಿಕೊಂಡು ಆವೇಶದಿಂದ ಗುಡಿಯ ಹೊರಗೆ ಬಂದು ಸುತ್ತಮುತ್ತ ನೋಡಿದ. ಹೆಡೆ ಬಿಚ್ಚಿದ ಹಾವಿನಂತೆ ಬುಸುಗುಡುತ್ತ ಮಹಾದೇವಿಯನ್ನು ಹುಡುಕಿದ. ಆಕೆ ಓಡುತ್ತ ಹೋದಳು. ಇಪ್ಪತ್ತು ಮಾರು ಹೋಗುವದರಲ್ಲಿ, ದಟ್ಟವಾದ ಅರಣ್ಯದಲ್ಲಿ ದಾರಿ ಕಾಣದಂತಾಯಿತು. 'ಅವನು ಅರೆಪೆಟ್ಟು ತಿಂದ ಹಾವಿನಂತೆ ಬೆನ್ನು ಹತ್ತಬಹುದು, ತಾನು ಸಿಕ್ಕಿಬಿದ್ದರೆ ಅಪಾಯ ತಪ್ಪಿದ್ದಲ್ಲ' ಎಂದವಳೇ ರೌದ್ರಾವೇಶದಿಂದ ಪಕ್ಕದಲ್ಲಿನ ಗಿಡವನ್ನು ಹತ್ತಿದಳು. ಗಿಡವನ್ನು ಏರಿ ದಟ್ಟವಾದ ಕೊಂಬೆಗಳ ಮಧ್ಯೆ ಅಡಗಿ, ಉಸಿರು ಬಿಗಿಹಿಡಿದು ಕುಳಿತಳು.

ಮಹಾದೇವಿ ಕಾಣದಿರಲು ಆ ಬೈರಾಗಿ ರೋಷಗೊಂಡು ಗುಡಿಯೊಳಗೆ ಹೋಗಿ ಪಂಜನ್ನು ಹೊತ್ತಿಸಿದ. ಧಗಧಗನೆ ಉರಿಯುವ ಪಂಜನ್ನು ಹಿಡಿದು ಗುಡಿಯ ಹೊರಾಂಗಣದಲ್ಲಿ ಹುಡುಕಿದ. ಇತ್ತಲೇ ಬರತೊಡಗಿದಾಗ ಅವಳ

ಮುಖದ ಮೇಲೆ ಬಿದ್ದು ರುದ್ರಭಯಂಕರ ಮುಖಭಾವವನ್ನು ತೋರಿಸುತ್ತಿತ್ತು. ಅವನ ಕಣ್ಣುಗಳು ಕೆಂಡದುಂಡೆಗಳಂತೆ ಜ್ವಲಿಸುತ್ತಿದ್ದವು. ಅಂತಹ ಭಯಾನಕ ಮುಖವನ್ನು ಆಕೆ ಎಂದೂ ಕಂಡವಳಲ್ಲ. ಒಮ್ಮೆ ಚಿಟಾರನೆ ಚೀರಬೇಕು ಎನಿಸುವಷ್ಟು ಭಯವಾಯಿತು.

'ಆ ಪಂಜಿನ ಬೆಳಗಿನಲ್ಲಿ ನಾನು ಕಾಣುವುದು ನಿಶ್ಚಿತ. ಅವನು ಹತ್ತಿ ಬರುವನು. ನಾನು ಹೇಗೆ ತಪ್ಪಿಸಿಕೊಳ್ಳಲಿ....? ದೇವರೇ ಇದೇಕಿಂತಹ ವಿಪತ್ತು ತಂದೊಡ್ಡಿದೆ!' ಎಂದು ಪರಿತಪಿಸಿದಳು.

'ಇದೊಂದು ರಾತ್ರಿಯನ್ನು ಹೇಗಾದರೂ ಕಳೆದು ಮನೆಗೆ ಸಾಗು.... ಸಾಕು ಇಂತಹ ಪಡಿಪಾಟಲು....?' ಮನದ ದುರ್ಬಲ ಅಂಶ ಅಣಕಿಸಿ ನುಡಿಯಿತು.

'ಇಲ್ಲ....ಇಟ್ಟ ಹೆಜ್ಜೆ ಹಿಂತೆಗೆಯೆ. ಒಂದು ವೇಳೆ ಅವನು ಮೇಲೆ ಏರಿ ಬಂದರೆ ಇನ್ನೊಂದು ಕೊಂಬೆಯಿಂದ ಹಾರಿ, ಬದುಕಿದ್ದರೆ ಓಡಿ ಹೋಗುವೆ; ಇಲ್ಲವೇ ಉರಿಯುವ ಪಂಜನ್ನು ಬಿಗಿದಪ್ಪಿಕೊಂಡು ಸತ್ತುಹೋಗುವೆ. ಚನ್ನಮಲ್ಲಿಕಾರ್ಜುನಾ, ಹೇಗೆ ಪಾರುಮಾಡುವೆ....? ಅನಾಥ ರಕ್ಷಕ....' ಕಣ್ಣುಮುಚ್ಚಿಕೊಂಡು ಮೊರೆಯಿಟ್ಟಳು. ದುಃಖ ಉಕ್ಕಿ ಬರತೊಡಗಿತ್ತು. ಬೈರಾಗಿ ಬಂದು ಪಂಜು ಹಿಡಿದು ಸುತ್ತಮುತ್ತಲೂ ನೋಡಿದ. ಮರದ ಮೇಲೆ ನೋಡುವ ಸಂಶಯ ಅವನಿಗೆ ಬರಲಿಲ್ಲ.

'ಹಕ್ಕಿ ಎಲ್ಲೋ ತಪ್ಪಿಸಿಕೊಂಡಿತು. ಎಂತಹ ಚತುರೆ....!' ಎಂದುಕೊಂಡು ಗುಡಿಗೆ ಸಾಗಿದ. ಕೆಲವು ಕ್ಷಣ ಕಳೆದ ಬಳಿಕ ಅವನು ಮಲಗಿದಂತಾಗಿ ಎಲ್ಲ ಸದ್ದು ಅಡಗಿತು. ನೀರವರಾತ್ರಿಯೊಂದೇ ಎಲ್ಲೆಡೆ. ಮಹಾದೇವಿ ಸಮಾಧಾನದ ಉಸಿರೆಳೆದಳು. ಉದ್ವೇಗವೆಲ್ಲ ಶಾಂತವಾದಮೇಲೆ ಬುದ್ಧಿ ಓಡತೊಡಗಿತು.

'ಅಬ್ಬಾ! ಎಂತಹ ವಿಪತ್ತಿನಿಂದ ಪಾರಾದೆ. ಅದು ಹೇಗೆ ಇಂತಹ ಶಕ್ತಿ ಬಂದಿತೋ! ಒಂದು ಇರುವೆಯನ್ನು ಸಹ ಹೊಸಕಲು ಹಿಂಜರಿಯುತ್ತಿದ್ದವಳು ಅದೆಂತು ಅಂತಹ ಕರಾಳಮುಖದ ದೃಢಕಾಯನನ್ನು ಬೆತ್ತದಿಂದ ಹೊಡೆದೆನೋ. ವಿಲಾಸಿ ಕೌಶಿಕನಿಂದ ತಪ್ಪಿಸಿಕೊಂಡುದಕ್ಕಿಂತಲೂ ಭಯಂಕರ ಬೈರಾಗಿಯಿಂದ ತಪ್ಪಿಸಿಕೊಂಡುದು ದೊಡ್ಡ ಸಾಹಸ. ಅವನ ವೇಷವನ್ನು ನೋಡಿ ಮೋಸಹೋಗಿದ್ದರೆ ಏನು ಗತಿ....?' ಎದೆಯು ಗಡಗಡನೆ ನಡುಗಿತು. ಆ ಭಯ ಮುಂದೆ ವ್ಯಥೆಗೆ ಹಾದಿ ಮಾಡಿತು.

ಪ್ರಭು. ನಿನ್ನ ಕೈಯೊಳಗಣ ಸೂತ್ರದ ಗೊಂಬೆಯಾಗಿ ನಾನು ಕುಣಿಯುತ್ತಿರುವೆ. ಈ ನಾಟಕವನ್ನು ದುರಂತವನ್ನಾಗಿ ಮಾಡುವೆಯೋ, ಸುಖಾಂತವನ್ನಾಗಿ ಮಾಡುವೆಯೋ ನಾನರಿಯೆ.' ದೀರ್ಘ ನಿಟ್ಟುಸಿರಿಟ್ಟಳು.

'ಖಂಡಿತವಾಗಿ ಸುಖಾಂತವಾಗುವುದು. ನಿನ್ನ ಭಕ್ತಿ-ವಿರಕ್ತಿಗಳ ಆಳವನ್ನು ಅರಿಯದಷ್ಟು ಕ್ರೂರಿಯಲ್ಲ ಆ ದೇವನು' ಅಂತರಾತ್ಮದ ನುಡಿ.

'ಲೇ ಹುಚ್ಚಿ, ತಲೆ ಗಟ್ಟಿಯಿದೆ ಅಂತ ಕಲ್ಲು ಹಾಯುವ ಮೂರ್ಖತನ ಮಾಡಬೇಡ. ಯಾವ ಹುಲಿಯ ಕೈಗೆ ಸಿಕ್ಕಿದ ಹುಲ್ಲೆಯಂತೆ ಆಗುವೆಯೋ! ಈ ಎಲ್ಲ ವಿಪತ್ತುಗಳನ್ನು ಮೆಟ್ಟಿ ನಿಂತು ನೀನು ಮುಂದೆ ಬಂದರೂ ಸಮಾಜವು ನಿನ್ನ ಪವಿತ್ರತೆಯನ್ನು ನಂಬೀತೇ....?' ಮತ್ತೆ ಹೃದಯ ಕಂಪಿಸಿತು.

'ಬೇಳೆಯನ್ನು ಕೇಳಿ ಯಾರೂ ಸಂಬಾರ ಅರೆಯುರು! ಲೋಕ-ಸಮಾಜಗಳನ್ನು ಗಮನದಲ್ಲಿರಿಸಿಕೊಂಡು ಆದರ್ಶದ ಹೆಜ್ಜೆಗಳನ್ನು ತುಳಿಯುವುದಾದರೆ ಮಹಾತ್ಮರು ಯಾರೂ ಆಗಿಹೋಗುತ್ತಲೇ ಇರಲಿಲ್ಲ. ಲೋಕದ ಅಜ್ಞಾನಿಗಳ ಮಾತು ನಿಜದ ಒರೆಯಲ್ಲ, ನಿನ್ನಂತರಂಗವೇ ನಿನಗೆ ಕನ್ನಡಿ....'

'ಎಲೆ ಮನಸ್ಸೇ....ನಿನ್ನ ದುರ್ಬಲತೆಗೆ ಜಿಗುಪ್ಸೆ ಬರುವುದು. ಹಸಿವನ್ನು, ತೃಷೆಯನ್ನು, ಕಷ್ಟವನ್ನು, ಮುಂದೆ ಒಡ್ಡಿ ನನ್ನನ್ನು ಪತನಿಸಲು ಯತ್ನಿಸುವೆಯಾ? ಈ ಜಗದ ಯಾವ ಕಷ್ಟಗಳೂ ನನ್ನನ್ನು ವಿಚಲಿತಳನ್ನಾಗಿ ಮಾಡಲಾರವು, ಪತನಿಸಲಾರವು, ಶಿವಪಥದಿಂದ ದೂರಮಾಡಲಾರವು. ನೆನಪಿನಲ್ಲಿರಿಸಿಕೋ....' ವಿವೇಕ ನುಡಿಯಿತು.

ಮಹಾದೇವಿ ದಿಗಂತದೆಡೆಗೆ ನೋಡಿದಳು. ಕಡೆಯ ಜಾವ ಮೂಕವಾಗಿ ಸರಿಯುತ್ತಿತ್ತು.

"ಈಗ ಮುಮ್ಮಾರ್ಗವು ಸ್ಪಷ್ಟವಾಗತೊಡಗುವುದು; ಅವನು ಎದ್ದು ನನ್ನನ್ನು ಹಿಂಬಾಲಿಸುವ ಮುನ್ನವೇ ದೂರಸಾಗುವೆ....' ಗಿಡವನ್ನು ಇಳಿದಳು. ಹತ್ತುವಾಗ ಅದಾವ ಆವೇಶವಿತ್ತೋ ಯಾವ ಕಷ್ಟವೂ ತಿಳಿದಿರಲಿಲ್ಲ; ಇಳಿಯುವಾಗ ಕಷ್ಟವೆನಿಸಿತು. 'ತಾನೇ ಮರವನ್ನು ಹತ್ತಿದೆನೋ, ಯಾರಾದರೂ ಹತ್ತಿಸಿದರೋ' ಎಂದು ಸೋಜಿಗಗೊಂಡಳು.

ಕತ್ತಲೆಯ ತೆರೆ ಹರಿದು ಬೆಳಗು ಮೆಲ್ಲನೆ ಕಾಲಿರಿಸತೊಡಗಿತು. ಮಹಾದೇವಿ ಸುತ್ತಲೂ ಕಣ್ಣು ಹಾಯಿಸಿ ಛಲದಿಂದ ನುಡಿದಳು:

'ಇಡೀ ಸೃಷ್ಟಿಯೆಲ್ಲ ನನ್ನ ವಿರುದ್ಧ ನಿಲ್ಲಲಿ; ನನ್ನ ಈ ಆಧ್ಯಾತ್ಮ ಸಮರ

ಹಸಿವೆ ನೀನು ನಿಲ್ಲು ನಿಲ್ಲು ; ತೃಷೆಯೆ ನೀನು ನಿಲ್ಲು ನಿಲ್ಲು
ನಿದ್ರೆಯೇ ನೀನು ನಿಲ್ಲು ನಿಲ್ಲು.
ಕಾಮವೇ ನೀನು ನಿಲ್ಲು ನಿಲ್ಲು, ಕ್ರೋಧವೆ ನೀನು ನಿಲ್ಲು ನಿಲ್ಲು
ಮೋಹವೆ ನೀನು ನಿಲ್ಲು ನಿಲ್ಲು, ಲೋಭವೆ ನೀನು ನಿಲ್ಲು ನಿಲ್ಲು.
ಮದವೆ ನೀನು ನಿಲ್ಲು ನಿಲ್ಲು, ಮಚ್ಚರವೆ ನೀನು ನಿಲ್ಲು ನಿಲ್ಲು
ಸಚರಾಚರವೇ ನೀನು ನಿಲ್ಲು ನಿಲ್ಲು,
ನಾನು ಚನ್ನಮಲ್ಲಿಕಾರ್ಜುನ ದೇವರ
ಅವಸರದ ಓಲೆಯನೊಯ್ಯುತ್ತಲಿದ್ದೇನೆ; ಶರಣಾರ್ಥಿ.*

ನಾನು ಚನ್ನನ ಪ್ರೇಮದ ಪುತ್ಥಳಿ. ಅವನಿಗೆ ನನ್ನ ಬದುಕನ್ನೆ ಒಂದು ಪ್ರೇಮಪತ್ರವನ್ನಾಗಿ ಬರೆದುಕೊಂಡು ಒಯ್ಯುತ್ತಲಿರುವೆ. ಯಾರೂ ನನ್ನನ್ನು ತಡೆಯಲಾರರು....' ಎಂದು ನುಡಿದು ನಸುನಕ್ಕಳು. ಎಲ್ಲ ದಣಿವು, ಮಾನಸಿಕ ಕ್ಲೇಶಗಳು ಉರಿಗೊಡ್ಡಿದ ಅರಗಿನಂತೆ ಕರಗಿಹೋಗಿ, ಸಮಾಧಾನದ ತೆರೆ ಮುಖದಮೇಲೆ ಹಾಯಿತು. ನವಚೈತನ್ಯವನ್ನು ಮೈಗೂಡಿಸಿಕೊಂಡು, ವೇಗವಾಗಿ ಹೆಜ್ಜೆಗಳನ್ನಿರಿಸುತ್ತ ಮುಂದೆ ಸಾಗಿದಳು.

೪೦. ಮುಗಿಲೆರೆದ ಮಜ್ಜನ

ಮಹಾದೇವಿ ಮುಂದೆ ಸಾಗಿದಂತೆಲ್ಲ ಜಗತ್ತಿನ, ಬದುಕಿನ ವೈವಿಧ್ಯಮಯ ದರ್ಶನವಾಗತೊಡಗಿತು. ಹುಟ್ಟಿದ ಊರಿನಲ್ಲಿ ಆಡಂಬರ ಮಾಡುತ್ತಿದ್ದ, ಹೆರವರನ್ನು ಆಡಿಕೊಳ್ಳುತ್ತಿದ್ದ ಜನರನ್ನು ಕಂಡಾಗಲೇ ಅವರ ಕ್ಷುಲ್ಲಕ ವ್ಯಕ್ತಿತ್ವಕ್ಕೆ ಜಿಗುಪ್ಸೆಪಡುತ್ತಿದ್ದ ಮಹಾದೇವಿ ಅದಕ್ಕಿಂತಲೂ ಹೀನವಾದ ವೃತ್ತಿಗಳು ವಿಕಾಸವಾದ ಜನರನ್ನು ಕಂಡು ಬೆರಗುಗೊಂಡಳು. ಆಕೆಯ ಈ ಪಯಣದಲ್ಲಿ ವಿಪತ್ತುಗಳಿಗೆ ಆಹ್ವಾನವೀಯುತ್ತಿದ್ದುದು ಅವಳ ಸೌಂದರ್ಯ. ತನಗೆ ಬೇಡವಾದ, ಬಾಧಕವಾದ ಚೆಲುವನ್ನು ದೇವನು ಕೊಟ್ಟು, ಅದರ ಮೂಲಕವೇ ವಿಪತ್ತುಗಳನ್ನು ಹೇರುತ್ತಿದ್ದ ಅವನ ಲೀಲೆಗೆ ವಿಸ್ಮಯಪಡುತ್ತಿದ್ದಳು. ಒಂದು ದಿನ ಹತಾಶಳಾಗಿ ತನ್ನ ಸೌಂದರ್ಯವನ್ನು ಕಳೆದುಕೊಳ್ಳುವ ಸಾಹಸವನ್ನೂ ಮಾಡದೆ ಇರಲಿಲ್ಲ.

ಅಂದು ಬೆಳಗಿನ ಪೂಜೆಯನ್ನು ಮುಗಿಸಿ, ತನ್ನ ಅನುಭವಗಳನ್ನು ಓಲೆಯ ಗರಿಯ ಮೇಲೆ ಬರೆದಿಟ್ಟು ಆ ಸಾಮಗ್ರಿಗಳನ್ನು ಜೋಳಿಗೆಯಲ್ಲಿ ಹಾಕಿ, ಹೆಗಲಿಗೇರಿಸಿ ಭಿಕ್ಷಾನ್ನಕ್ಕಾಗಿ ದಾರಿಯಲ್ಲಿ ಸಿಕ್ಕಿದ ಊರೊಳಕ್ಕೆ ನಡೆದಳು. ಗ್ರಾಮದೊಳಗೆ ಹಾಯ್ದು ಹೋಗುವಾಗ ಮಾರ್ಗಮಧ್ಯದಲ್ಲಿದ್ದ ಅರಳೀಕಟ್ಟೆಯ ಮೇಲೆ ನಾಲ್ಕಾರು ತರುಣರು ಶಿಳ್ಳು ಹಾಕುತ್ತ, ಶೃಂಗಾರಗೀತೆಗಳನ್ನು ಹಾಡುತ್ತ ಗೇಲಿಯಲ್ಲಿ ತೊಡಗಿದರು.

ಮಹಾದೇವಿ ತನ್ನ ಪಾಡಿಗೆ ತಾನು ನಿರ್ಲಿಪ್ತಳಾಗಿ ಸಾಗಿ ಮನೆಯೊಂದರ ಮುಂದೆ ನಿಂತು ವಚನವೊಂದನ್ನು ಹಾಡಿದಳು. ಮನೆಯವರು ಭಿಕ್ಷೆಯನ್ನು ನೀಡಿದರು. ಈ ತುಂಟ ತರುಣರು ಸುಮ್ಮನೆ ಇರಲಿಲ್ಲ. 'ಏ....ಹೆಣ್ಣೇ ರಸ ನಿಂಬೆಹಣ್ಣೆ....ಬಾ....' ಎಂದರು.

'ಲೇ ಗೆಣೆಯಾ....ಎಂತಹ ಚೆಲುವೋ....ಬ್ರಹ್ಮನ ಕೈಚಳಕಾ ನೋಡಿದ್ಯಾ....?' ಎಂದು ಒಬ್ಬ ತರುಣ ನುಡಿದ.

'ದಂತದಲ್ಲಿ ಕೆತ್ತಿಟ್ಟ ಗೊಂಬೆಯಂತೆ ಎಷ್ಟು ಮಾಟವಾಗಿದ್ದಾಳೋ....!' ಮತ್ತೊಬ್ಬ ಹಾಡಿದ:

ಹಸನಾದ ಹೆಣ್ಣೇ ಮೊಸಳೆ ತೋಟಕೆ ಬಾರೆ
ರಸ ಮೆಚ್ಚಿ ದೆಲೆಯ ಕೊಯಿಸೇನು ಎಲೆ ಹೆಣ್ಣೆ

ಮಹಾದೇವಿಯ ಮನಸ್ಸು ಕೀಟಲೆಮಾತಿನ ಪೆಟ್ಟಿನಿಂದ ನಲುಗಿತು. ‘ಹೆಣ್ಣನ್ನು ಕಾಣುವ ದೃಷ್ಟಿಕೋನ ಇದೆಯೇ? ಪರನಾರಿ ಸಹೋದರತ್ವ ಪುರುಷನಿಗೆ ಭೂಷಣ. ಜನಾಂಗದ ಸಂಸ್ಕೃತಿ ಎಷ್ಟು ಕೆಳಮಟ್ಟಕ್ಕೆ ಜಾರುತ್ತಿದೆ’ ಎಂದು ವ್ಯಥೆಪಟ್ಟಳು.

‘ತನ್ನ ನಿರ್ಲಿಪ್ತ ಸ್ಥಿತಿ, ಗಂಭೀರ ವರ್ತನೆ, ಧಾರ್ಮಿಕ ಲಾಂಛನಗಳನ್ನು ನೋಡಿಯಾದರೆಯೂ ತಿಳಿಯಬಾರದೆ, ತಾನು ಲೌಕಿಕಳಲ್ಲವೆಂದು’ ಮನದಲ್ಲಿ ಅನ್ನಿಸಿತು ಆಕೆಗೆ. ಮರುಕ್ಷಣವೇ ಅಂದುಕೊಂಡಳು: ‘ಪಾಪ, ಅವರಾದರೂ ಏನು ಮಾಡಿಯಾರು? ಅವರ ಬುದ್ಧಿ ಮಟ್ಟವೇ ಇಷ್ಟು! ಹದ್ದಿನ ಕಣ್ಣಿಗೆ ಮಾಂಸದ ತುಂಡೂ ಅಷ್ಟೇ, ಕೆಂಪು ವಜ್ರವೂ ಅಷ್ಟೇ!’ ಸಮಾಧಾನ ತಂದುಕೊಂಡು ತನ್ನ ಸಹನೆಯನ್ನು ಕಳೆದುಕೊಳ್ಳದೆ ಶಾಂತಿಯ ಪರ್ವತದಂತೆ ಮುನ್ನಡೆದಳು.

ಆದರೆ ತರುಣರು ಕಟ್ಟೆಯಿಂದಿಳಿದು ಶಿಳ್ಳುಹಾಕುತ್ತ ಹಿಂಬಾಲಿಸಿದರು.

ದಣಿದ ದೇಹ, ಹೊಟ್ಟೆಯ ಹಸಿವು ಜರ್ಜರಿತಳನ್ನಾಗಿ ಮಾಡಿದ್ದವು. ಬೇಡುವುದನ್ನು ಬಿಟ್ಟು ಹೋದರೆ ಹೊಟ್ಟೆಯ ತಾಪ ದಾರಿ ತುಳಿಯದಂತೆ ನಿಶ್ಶಕ್ತಮಾಡುವುದು ಎಂಬುದನ್ನರಿತ ಆಕೆ ಮುಂದೇನು ಮಾಡಬೇಕೆಂದು ತಿಳಿಯದಷ್ಟು ಹತಾಶಳಾದಳು. ಎಷ್ಟೋ ದಿವಸಗಳಿಂದ ಎಣ್ಣೆ ಕಾಣದೆ ಕೂದಲು ಜಡೆಗಟ್ಟುವಷ್ಟು ಒರಟಾಗುತ್ತಿದ್ದವು. ಬಿಸಿಲಿನಲ್ಲಿ ನಡೆದು ನಡೆದು ನೆತ್ತಿ ಅಂಗಾಲುಗಳು ಬಗಬಗ ಉರಿಯುತ್ತಿದ್ದವು. ಶರೀರವು ಸೊರಗತೊಡಗಿತ್ತು. ಅಶಕ್ತತನದಿಂದ ತಲೆ ತಿರುಗುತ್ತಿತ್ತು. ಈ ಎಲ್ಲ ಸಂಕಷ್ಟಗಳ ಮಧ್ಯೆ ಇಂತಹ ತರುಣರ ಚೆಲ್ಲಾಟ ಬೇರೆ. ಮಹಾದೇವಿಗೆ ತನ್ನ ನಿಸ್ಸಹಾಯಕ ಪರಿಸ್ಥಿತಿಯಿಂದಾಗಿ ಮನಸ್ಸು ವೇದನೆಯಿಂದ ಭರಿತವಾಯಿತು; ಕಣ್ಣುಗಳು ನೀರಿನಿಂದ ತುಂಬತೊಡಗಿದವು. ಅವರ ಮನಸ್ಸು ಕರಗುವಂತೆ ಹಾಡಿದಳು:

ಮುಡಿ ಬಿಟ್ಟು ಮೊಗಬಾಡಿ ತನು ಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ?
ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ?
ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ
ಚನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ!*

ಅಣ್ಣಾ.... ಹೀಗೇಕೆ ಮಾತನಾಡುವಿರಿ, ಕಾಡುವಿರಿ. ಚನ್ನಮಲ್ಲಿಕಾರ್ಜುನನಿಗೊಲಿದು ಹೆಣ್ಣು ಗಂಡೆಂಬ ಭಾವನನ್ನೇ ಮರೆತ ಈ ನಿಸ್ಸಹಾಯಕಳನ್ನು

ಇದೇಕೆ ನೋಯಿಸುವಿರಿ....?' ಇಷ್ಟು ಹೇಳುವಲ್ಲಿ ಅಪಾರ ದುಃಖ ತುಂಬಿ ಬಂದಿತು. ಆದರೆ ತುಟಿ ಕಚ್ಚಿ ಅದನ್ನು ತಡೆದುಕೊಂಡಳು.

ಈ ವೇದನೆಯ ನುಡಿಗಳು ಆದರ್ಶ ವಿಹೀನ, ಚಪಲಚಿತ್ತದ ತರುಣರ ಹೃದಯವನ್ನು ಪ್ರವೇಶಿಸಲಿಲ್ಲ.

'ಎಂಥ ಇಂಪಾಗಿ ಹಾಡ್ತಾಳೋ ಗೆಳೆಯಾ....' ಅಪಹಾಸ್ಯದ ದನಿಯಲ್ಲಿ ನುಡಿದನೊಬ್ಬ.

'ಹೂಂ ಕಣೋ. ಇಂಥ ಹೆಣ್ಣು ಸಿಕ್ಕರೆ....!' ಮತ್ತೊಬ್ಬ ಕೇಕೆ ಹಾಕಿ ನಕ್ಕು, ಕಣ್ಣು ಹೊಡೆದ. ಇನ್ನೊಬ್ಬ ಹಾಡಿದ :

'ಆಚೆ ಕೇರಿಯುವಳೆ ಕಾಚಕ್ಕಿ ನೆರಿಯುವಳೆ
ಕಾಕ್ವಾಕಿ ನನ್ನ ಕರೆಯೋಳೆ ಮಾವನ ಮಗಳೆ
ಪ್ರೀತಿ ಬಿತ್ತಲ್ಲ ನಿನಮೇಲೆ.'

ಮತ್ತೊಬ್ಬ ಸುಮ್ಮನಿರಲಿಲ್ಲ. ತನ್ನ ಕುಹಕತನದ ಕಲೆಯ ಪ್ರದರ್ಶನಕ್ಕೆ ಮುಂದಾದ :

'ಕೋಳಿ ಕೂಗೀತು ಕುಂಬಳದ ಹೂವೀಗೆ
ಬೆಟ್ಟ ಕೂಗೀತು ಬಿದರೀಗೆ ಮಾವನ ಮಗಳೆ
ಪ್ರೀತಿ ಬಿತ್ತಲ್ಲ ನಿನಮೇಲೆ.'

ಮಹಾದೇವಿಯ ತಾಳ್ಮೆ ಕೆಡತೊಡಗಿತು. ದುಃಖವು ಶಾಂತವಾಗಿ, ಜಿಗುಪ್ಸೆ ಆ ತಾಣದಲ್ಲಿ ತುಂಬಿಕೊಳ್ಳಲಾರಂಭಿಸಿತು.

'ಶೀಲವಂತಿಕೆಯಿಲ್ಲದ ಎಂತಹ ಹೀನ ಜನರಿವರು. ಶೀಲದ ಬೆಲೆ ಸಹ ತಿಳಿಯದವರು. ಬದುಕು ಬಿದಿರಿನಂತೆ ; ಬಿದಿರಿಗೆ ಸಂಸ್ಕಾರ ಕೊಟ್ಟಾಗ ಅದು ಗಲಗವಾಗಿ, ಗಾಳಿ ತುಂಬಿದಾಗ ಕೊಳಲಾಗಿ ಹಾಡುವಂತೆ, ಹುಟ್ಟುಗುಣ ಪ್ರಚೋದಿತವಾಗಿ ಇರುವ ಬದುಕಿಗೆ ನಾಗರೀಕ ಸಂಸ್ಕಾರ ಕೊಟ್ಟಾಗ ಮಾನವತ್ವವು ಬರುವುದು ; ಇದಕ್ಕೆ ನೈತಿಕ, ಆಧ್ಯಾತ್ಮಿಕ ಸಂಸ್ಕಾರ ನೀಡಿದಾಗ ಬದುಕು ಬಂಗಾರವಾಗುವುದು ; ಸುಮಧುರ ಸಂದೇಶ ನೀಡುವುದು. ತಾರುಣ್ಯದ ಉನ್ಮತ್ತತೆಯಲ್ಲಿ ಉತ್ತಮಿಕೆಯನ್ನು ಗಾಳಿಗೆ ತೂರುವರು.

'ಆದರೆ....ಇದು ಅಪರಿಚಿತ ಸ್ಥಾನ, ತಾನು ಬುದ್ಧಿ ಹೇಳಿದರೆ ಕೇಳುವಷ್ಟು ಸೌಜನ್ಯವಿಲ್ಲದ ಅವಿವೇಕಿಗಳಿವರು ! ತೆರೆದಿಟ್ಟ ತಂಬಿಗೆಯಾಗಿದ್ದರೆ ಹಿಂಡಿದ ಹಾಲು ಒಳಹೊಕ್ಕೀತು...ಬೋರಲು ತಂಬಿಗೆಯ ಮೇಲೆ ಹಾಲು

ಅಹುದು....ಕೆಸರಿನ ಗುಂಡಿಯ ಮೇಲೆ ಕಲ್ಲು ಹಾಕಿದರೆ, ಮುಖಕ್ಕೆ ಸಿಡಿಸಿಕೊಳ್ಳಬೇಕಾದೀತು. ಇವರನ್ನು ಮಾತನಾಡಿಸುವ ಗೊಡವೆಯೇ ಬೇಡ....' ತುಟಿಯನ್ನು ಬಿಗಿಹಿಡಿದು ಮುಂದೆ ನಡೆದಳು.

ಆ ತರುಣರಲ್ಲೊಬ್ಬ ತಾನಾಗಿ ಮುಂದೆ ಬಂದು ನಾಣ್ಯವನ್ನು ಚಾಚಿದ. ಮಹಾದೇವಿ ಕಣ್ಣೆತ್ತಿ ನೋಡಿದಳು. ಆ ಕಣ್ಣುಗಳಲ್ಲಿದ್ದ ಕುಹಕತನವನ್ನು ಕಂಡು ಮನನೊಂದರೂ ಸಹನೆಯನ್ನು ಕೇಂದ್ರೀಕರಿಸಿಕೊಂಡು,

'ಕಂತೆಯ ಭಿಕ್ಷದ ಹೊರತು ಮತ್ತೇನನ್ನೂ ಸ್ವೀಕರಿಸುವುದಿಲ್ಲ ಅಣ್ಣಾ....' ಎಂದಳು. ಭಿಕ್ಷೆಗಾಗಿ ಮುಂದೆ ಸಾಗಿದಳು. ಗುಂಪು ಹಿಂಬಾಲಿಸುತ್ತಿತ್ತು. ಅಷ್ಟರಲ್ಲಿ ಮನೆಯಿಂದ ಗೃಹಿಣಿಯೋರ್ವಳು ಬಂದು ಭಿಕ್ಷೆಯನ್ನು ನೀಡಿದಳು. ತನ್ನ ಹೊಟ್ಟೆಯನ್ನು ತಣಿಸಲಾರದಷ್ಟು ಭಿಕ್ಷೆ ಕೊಡಿದ್ದರೂ ಆ ಅಸಹ್ಯ ವಾತಾವರಣ ಸಹಿಸಲಾರದೆ ಮರಳಿ ಹೋಗಲು ಉದ್ಯುಕ್ತಳಾದಳು. ಬೇಗ ಬೇಗನೆ ಹೆಜ್ಜೆ ಹಾಕುತ್ತ ಊರ ಹೊರಗಿನ ಗುಡಿಗೆ ಬಂದು, ತಾನು ಸಂಗ್ರಹಿಸಿದ ಭಿಕ್ಷೆಯನ್ನು ಲಿಂಗಾರ್ಪಿತಮಾಡಿ ಉಂಡಳು. ಗುಡಿಯ ಮುಂದಿನ ಹೊಂಡದಲ್ಲಿ ಕೈತೊಳೆದುಕೊಂಡು, ನೀರನ್ನು ಕುಡಿದು ಬಿಸಿಲಿನ ಕಾವು ಆರಿದ ಬಳಿಕ ಮುಂದೆ ನಡೆದರಾಯಿತೆಂದು ಗುಡಿಯಲ್ಲಿ ಕುಳಿತಳು.

ತಮ್ಮ ಪಾಡಿಗೆ ತಾವು ಹೋಗಿರಬೇಕೆಂದು ಭಾವಿಸಿದ್ದ ಕಿಡಿಗೇಡಿ ತರುಣರ ತಂಡದ ಇಬ್ಬರು ಯುವಕರು ಗುಡಿಯ ಮುಂದೆ ಸುಳಿದಾಡುವುದನ್ನು ಕಂಡಳು. ಬೇಸರಗೊಂಡ ಮನದಿಂದ ಜೋಳಿಗೆಯನ್ನು ಸಿದ್ಧಪಡಿಸಿದಳು. ಅಷ್ಟರಲ್ಲಿ ತರುಣನೊಬ್ಬ ಮುಂದೆ ಬಂದು ಜಗಲಿಯ ಮೇಲೆ ಕುಳಿತ.

'ಯಾವೂರು....?' ಮಹಾದೇವಿಯನ್ನು ಕೇಳಿದ.

'ವಿರಾಗಿಗಳಿಗೆ ಊರು ಇರುವುದುಂಟೇ, ಇದ್ದುದೇ ಊರು....' ನಿರ್ಲಿಪ್ತಳಾಗಿ ಹೇಳಿದಳು.

'ಪಾಪ! ನಿನ್ನ ನೋಡಿ ಅಯ್ಯೋ ಅನ್ನುಸ್ತು. ಅಪರೂಪ ಸೌಂದರ್ಯ, ಮಾಟವಾದ ಮೈಕಟ್ಟು, ತುಂಬಿನಿಂತ ಎದೆ, ಇಂಪಾದ ಕಂಠ; ಎಲ್ಲವೂ ನಿನಗಿದ್ದರೂ ಯಾವ ತಾಪತ್ರಯವೋ? ಹಸಿವಿಗೆ ಭಿಕ್ಷೆ ಬೇಡಬೇಕು, ಮೈ ಮುಚ್ಚಲು ಬಟ್ಟೆಯಿಲ್ಲ, ಬರಿಗಾಲಲ್ಲಿ ನಡೆಯಬೇಕು, ಕಂಡು ಕರುಳು ಕತ್ತರಿಸಿ ಹೋಯಿತು. ಕೈಲಾದ ಸಹಾಯ ಮಾಡಾಕೆ ಬಂದೆ....' ಅವಳ ಮೆಚ್ಚುಗೆ ಗಳಿಸಲು ನುಡಿದ.

ಹೀಗೆ ಚೆನ್ನಾರಿ ಚೆಲ್ವೆ ಆಗಿದ್ದೀಯಲ್ಲ, ಗಾಳಿ ಬಿಸಿಲು ಬಡೀದೇ ಇದ್ರೆ ಹೆಂಗಿರ್ತಿದ್ದೀಯೊ ಅಂತ ಸೋಜಿಗ ನಂಗೆ. ನೀನೊಪ್ಪಿದರೆ ಮನೆ ಮಾಡಿ ಇರಿಸ್ಕೊಂತೀನಿ....' ಮಹಾದೇವಿಯ ತಾಳ್ಮೆ ತಪ್ಪಿತು.

'ಇದೇ ತಾನೆ ನಿಮ್ಮ ಸಹಾಯ. ಯಾರ್ಗಾದ್ರೂ ಅಂಥ ಸಹಾಯ ಬೇಕಿದ್ರೆ ಮಾಡಿ ಹೋಗಿ. ನನಗೆ ಬೇಕಾಗಿಲ್ಲ. ಅಣ್ಣಾ....ಉನ್ಮತ್ತ ಕುದುರೆಗಳಂತೆ ಹೀಗೆಲ್ಲ ಪರಸ್ತ್ರೀಯರನ್ನು ಕಾಡಬೇಡಿರಿ. ಇದು ಪೌರುಷತ್ವಕ್ಕೆ ಕಳೆ ತರುವ ಲಕ್ಷಣವಲ್ಲ. ನೋಡುವ ಕಣ್ಣುಗಳಿಗೆ ನನ್ನ ರೂಪ ಚೆನ್ನಾಗಿರಲು ನೀವು ನಾಚಿಕೆ ಇಲ್ಲದೆ ಕೇಳಲು ಬಂದಿರಾ....? ನಿಮ್ಮ ಶ್ರೋತೃವಿಗೆ ನನ್ನ ದನಿ ಇಂಪಾಗಿದೆ ಎಂದು ಮರುಳಾಗಿ ಬಂದಿರಾ? ಹೆಣ್ಣಿನ ಮನೋಹರ ರೂಪವನ್ನು ಕಂಡು ಬಂದಿರಾ? ಮೂತ್ರ-ಬಿಂದುಗಳು ಒಸರುವ ನಾಳಕ್ಕಾಗಿ ಮಾನವೀಯತೆ, ಶೀಲವಂತಿಕೆಗಳನ್ನು ತೂರಿಟ್ಟು ಬಂದಿರಾ? ಬದುಕಿನ ಬೆಲೆ ಏನು, ಗುರಿಯೇನು, ಪರಮಾರ್ಥ ಪ್ರಪಂಚದ ಸುಖವೆಷ್ಟು ಎಂಬುದನ್ನರಿಯದ ಬುದ್ಧಿಗೇಡಿತನದಿಂದ ಬಂದಿರಾ? ಪರಸ್ತ್ರೀಯರ ನೋಟ, ಬೇಟ, ಕೂಟಗಳು ನರಕದ ಹೇತುಗಳು ಎಂದರಿಯದೆ ಅಜ್ಞಾನದಿಂದ ಬಂದಿರಾ....? ಛೀ, ಎಂತಹ ಹೇಸಿಕೆಯ ಬಯಕೆ....!'*

'ನಿನ್ನ ಕೊಳ್ಳಾಗೆ ತಾಳಿ ಇಲ್ಲ. ನಿನಗೆ ಲಗ್ನ ಆಗಿಲ್ಲ—ಗಂಡ ಇಲ್ಲ. ನೀನಿನ್ನೂ ಯಾರ ಸ್ತ್ರೀಯೂ ಅಲ್ಲ. ಅಂದಾಗ ಕೇಳಿದ್ರೇನು ತಪ್ಪು ಚೆಲುವೆ...?' ಹಳ್ಳಿಯ ತರುಣ ಕೇಳಿದ.

'ಯಾಕಿಲ್ಲವಯ್ಯಾ....ಇದೋ ನೋಡು, ನನ್ನ ಗಂಡ ಚನ್ನಮಲ್ಲಿಕಾರ್ಜುನನು ನನ್ನ ಎದೆಯ ಮೇಲಿರುವನು. ಅವನ ಮಂಗಲಸೂತ್ರವಾದ ರುದ್ರಾಕ್ಷಿಯ ಮಾಲೆ ಕೊರಳನ್ನು ಬಳಸಿಲ್ಲವೇ? ಇವೆಲ್ಲವೂ ನಾನು ಶಿವನ ಸತಿ ಎಂಬುದಕ್ಕೆ ಸಾಕ್ಷಿಯಾಗಿಲ್ಲವೆ? ಚನ್ನಮಲ್ಲಿಕಾರ್ಜುನನ ಮೀಸಲ ಸತಿ ನಾನು. ಅವನನ್ನುಳಿದ ಪುರುಷರೆಲ್ಲ ನನಗೆ ಒಡಹುಟ್ಟಿದವರು. ನಡೆ ನಡೆ ಮರುಳೇ....' ಗಡಸುಧ್ವನಿಯಲ್ಲಿ ನುಡಿದಳು.

'ಇದೆಂತಹ ಮಾತು ಚೆಲುವೇ....! ಹೆಣ್ಣಾದಮೇಲೆ ಪುರುಷ-ಸಂಗ ಬೇಡವೇ....?'

ನಗುನಗುತ್ತ ತರುಣ ಕೇಳಿದ. ಮಹಾದೇವಿ ಇನ್ನೂ ಕ್ರೋಧತಪ್ತಳಾದಳು.

'ಬಟ್ಟಿಹ ಮೊಲೆಯು ಭರದ ಜವ್ವನದ ಚೆಲುವು ಕಂಡು ಬಂದಿರಣ್ಣಾ.
ಅಣ್ಣಾ ನಾನು ಹೆಂಗುಸಲ್ಲ; ಅಣ್ಣಾ ನಾನು ಸೂಳೆಯಲ್ಲ!

* ಮ. ವ.

ಅಣ್ಣಾ ಮತ್ತೆ ನನ್ನ ಕಂಡು ಕಂಡು ...
ಚನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷನು
ನಮಗಾಗದ ಮೋರೆ ನೋಡಣ್ಣಾ !*

ಅಣ್ಣಾ....ನನ್ನ ತುಂಬಿದ ಎದೆ, ಏರಿದ ಯೌವ್ವನದ ಚೆಲುವನ್ನು ನೋಡಿ ಬಂದಿರಲ್ಲವೆ? ಆದರೇನಂತೆ, ನಾನು ಹೆಂಗುಸಲ್ಲ! ತೋರಲು ಹೆಣ್ಣು ರೂಪು, ನನ್ನ ಅಂತರಂಗದಲ್ಲಿ ಹೆಣ್ಣಿನ ಕಾಮನೆ-ದೌರ್ಬಲ್ಯಗಳಿಲ್ಲ. ಶರೀರ ರಚನೆಯಿಂದ ಹೆಣ್ಣು ಎಂದು ನೀವು ನಿಶ್ಚಯಿಸಿದರೂ, ನಾನು ಸೂಳೆಯಲ್ಲ ಎಂಬುದನ್ನು ಚೆನ್ನಾಗಿ ತಿಳಿಯಿರಿ. ಧನದಾಸೆಗೋ, ಮನದ ದೌರ್ಬಲ್ಯಕ್ಕೋ ಮಾಡಿಕೊಂಡವನನ್ನು ಬಿಟ್ಟು ಮತ್ತೊಬ್ಬನಿಗೆ ಸೆರಗು ಹಾಸುವ ವೇಶ್ಯೆಯಲ್ಲ ನಾನು. ಅಂದಾಗ ನನ್ನನ್ನು ಕಂಡು ಏತಕ್ಕೆ ಬಂದಿರಣ್ಣಾ? ನಾನು ಚನ್ನ ಮಲ್ಲಿಕಾರ್ಜುನನ ಚನ್ನ ಸತಿ....'

ಕಿಡಿಗೇಡಿ ತರುಣ ಬೆರಗಾಗಿ ನಿಂತಿದ್ದ. ಮಹಾದೇವಿ ಸುಡುವ ಬಿಸಿಲನ್ನೂ ಲೆಕ್ಕಿಸದೆ ಜೋಳಿಗೆಯೊಡನೆ ಮುಂದಿನ ಪಥದಲ್ಲಿ ಪಾದವಿಟ್ಟಳು.

ಅಂದು ಮನಸ್ಸಿನಲ್ಲಿ ವಿಪ್ಲವವೆದ್ದಿತು. 'ಪಾಪಕ್ಕೆ ಹುಟ್ಟಿದ ಕೂಸಿನಂತಿದೆ ಈ ನನ್ನ ಸೌಂದರ್ಯ; ಆ ಕೂಸು ಹೆತ್ತವಳಿಗೆ ಬೇಡವಾದಂತೆ, ಹೊರೆಯಾದಂತೆ ಈ ನನ್ನ ಸೌಂದರ್ಯ! ನನ್ನ ಬದುಕಿಗೆ ದೊಡ್ಡ ಅನಿಷ್ಟವಾಗಿರುವ ಇದು ಹಾಳಾಗಬಾರದೇ?'

ಮಹಾದೇವಿಯ ಚೆಲುವು ಅವಿವಾಹಿತ ತರುಣರ ಕಣ್ಣು ಸೆಳೆಯುತ್ತಿದ್ದುದಷ್ಟೇ ಅಲ್ಲ; ಭಿಕ್ಷೆ ಬೇಡಹೋದಾಗ ಮಧ್ಯಮ ವಯಸ್ಸಿನ ಗೃಹಸ್ಥರ ಕಣ್ಣನ್ನೂ ಸೆಳೆಯುತ್ತಿತ್ತು. ಕೆಲವರಂತೂ ತಲೆಬಾಗಿಲಲ್ಲಿ ನಿಂತು ಭಿಕ್ಷೆಗೆ ಬಂದ ಮಹಾದೇವಿಯ ಸೌಂದರ್ಯವನ್ನು ಹೀರುವಂತೆ, ಎವೆ ಇಕ್ಕದೆ ನೋಡುವಾಗ ಅವಳಿಗೆ ಆ ದೃಷ್ಟಿ ಅಸಹ್ಯ ಎನಿಸುತ್ತಿತ್ತು. ಮುಳ್ಳಿನ ಚಾವಟಿಯಿಂದ ಹೊಡೆದಂತೆನಿಸಿ, ಆ ಮನೆಯ ಗೃಹಿಣಿ ಭಿಕ್ಷೆ ತರುವ ಮುನ್ನವೇ ಮುಂದೆ ಸಾಗಿಬಿಡುತ್ತಿದ್ದಳು. 'ಎಂತಹ ಅನಿಷ್ಟ ಪುರುಷರು! ದೈವೀಸಾಕ್ಷಿಯಾಗಿ ಕೈಹಿಡಿದ ಧರ್ಮಪತ್ನಿಯಿದ್ದೂ ಕಂಡ ಸ್ತ್ರೀಯರ ಮೇಲೆ ಕಣ್ಣು ಹಾಕುವ ಹೀನ ಮೂಳರು....' ಎಂದುಕೊಳ್ಳುತ್ತಿದ್ದಳು.

ಇದೆಲ್ಲವನ್ನು ನೆನಪು ಮಾಡಿಕೊಂಡ ಮಹಾದೇವಿಗೆ ವ್ಯಥೆಯ ಅಲೆಗಳು ತೇಲಿಬಂದು ಅಪ್ಪಳಿಸತೊಡಗಿದವು.

ನನ್ನು ಕೂಡಲು ವಿಘ್ನವೊಡ್ಡುವುದು. ಮನುಷ್ಯರು ನೋಡಲು ಹೇಸುವಷ್ಟು ನಾನು ವಿಕೃತಗೊಳ್ಳಬೇಕು. ಅದಕ್ಕೆ ಏನು ಮಾಡಿಕೊಳ್ಳಲಿ....?' ಆಲೋಚಿ ಸುತ್ತ ಪಕ್ಕದಲ್ಲಿದ್ದ ಕೆರೆಯ ದಂಡೆಯ ಮೇಲೆ ಗಿಡದ ನೆರಳಿಗೆ ಕುಳಿತು ಚಿಂತಿಸತೊಡಗಿದಳು.

'ಈ ನೀಳವಾದ ಕೂದಲನ್ನು ಕತ್ತರಿಸಿ ಬಿಸುಡಬೇಕು. ಒಂದು ಕಲ್ಲನ್ನು ತೆಗೆದುಕೊಂಡು ಹಲ್ಲುಗಳನ್ನು ಜಜ್ಜಿಕೊಳ್ಳಬೇಕು. ಆಗ ಬೊಚ್ಚುಬಾಯಿ ಯಾದರೆ ನನ್ನನ್ನು ಮುದುಕಿ ಎಂದುಕೊಳ್ಳುವರು. 'ಸಣ್ಣಕ್ಕಿ ಹಲ್ಲಿನವಳೇ' ಎಂದು ಯಾವನೂ ಛೇಡಿಸುವುದಿಲ್ಲ. ಉರಿಯುವ ಬೆಂಕಿಯಲ್ಲಿ ಹಾಯ್ದು ಹೊರಬಂದರೆ ಈ ಬಂಗಾರ ಬಣ್ಣದ ಚರ್ಮ ಕಂದಿಹೋಗುವುದು. ಆಗ ಯಾವ ಪುರುಷ ಪಶುವೂ ನನ್ನತ್ತ ಕಣ್ಣು ಹಾಯಿಸದು....' ಮಹಾದೇವಿ ಕಣ್ಣು ಮುಚ್ಚಿಕೊಂಡು, ತುಟಿ ಕಚ್ಚಿ ಕಲ್ಲೊಂದನ್ನು ತೆಗೆದುಕೊಂಡು ಕೆನ್ನೆಗೆ ಬಡಿದುಕೊಂಡಳು. ಅಪಾರ ವೇದನೆಯಿಂದಾಗಿ ಕಣ್ಣೀರು ತುಳುಕಿದವು. 'ಹಾಂ' ಎಂದು ಚೀರಿದಳು. ಮತ್ತೆ ಗಟ್ಟಿ ಮನಸ್ಸು ಮಾಡಿ ಕಲ್ಲನ್ನು ಮುಂದೆ ತರುವಷ್ಟರಲ್ಲಿ ಯಾರೋ ಕೈಯನ್ನು ಹಿಡಿದಂತಾಗಿ ಬೆಚ್ಚಿ ಕಣ್ತೆರೆದಳು.

'ಇದೇನಮ್ಮಾ ನಿನ್ನ ಮೂರ್ಖ ಪ್ರಯತ್ನ....' ಮಧ್ಯಮ ವಯಸ್ಸಿನ ಸ್ತ್ರೀ ಯೊಬ್ಬಳು ಕೈಯನ್ನು ಹಿಡಿದು, ಆ ಕಲ್ಲನ್ನು ಬಿಸುಟಿದಳು.

ಪಕ್ಕದಲ್ಲಿದ್ದ ಗಾಯಮಾರಿ ತಪ್ಪಲನ್ನು ತಂದು ಕೈಯಲ್ಲಿ ಉಜ್ಜಿ ಕೆನ್ನೆಯ ಮೇಲೆ ರಕ್ತ ಒಸರುತ್ತಿದ್ದ ತಾಣಕ್ಕೆ ಒತ್ತಿ ಹಿಡಿದು ಮಹಾದೇವಿಯ ಮಗ್ಗು ಲಲ್ಲಿ ಕುಳಿತಳು.

'ಇದೇನು ಮಗಳೇ....ಇಂತಹ ಹುಚ್ಚು ಸಾಹಸ....ತಲೆಯು ಸರಿ ಇಲ್ಲವೇ ?' ಆಕೆಯ ಕಣ್ಣಿನಲ್ಲಿ ವಾತ್ಸಲ್ಯ, ಮರುಕಗಳು ಸಂಗಮವಾಗಿದ್ದವು ; ಆಕೆ ಸುಮಾರು ತಾಯಿ ಲಿಂಗಮ್ಮನ ವಯಸ್ಸಿನವಳು.

'ಅಹುದು ತಾಯಿ....ತಲೆ ಸರಿಯಿಲ್ಲ. ಭೋಗಾಸಕ್ತ ಪ್ರಪಂಚದಲ್ಲಿ ದೇವರಿಗೆ ಒಲಿಯುವವರು ತಲೆ ಸರಿ ಇಲ್ಲದವರು ಮಾತ್ರ....'

'ಏನವ್ವಾ....ಎಂತಹ ಚೆಂದವಿದ್ದೀಯ. ನೀನೇ ಕೈಯಾರೆ ಮುಖ ಚಚ್ಚಿ ಕೊಳ್ಳುವುದೆ....?'

'ಅಹುದಮ್ಮ, ಈ ಚೆಲುವೇ ನನ್ನ ಶತ್ರುವಾಗಿದೆ, ಬಾಳ ಹಾದಿಯಲ್ಲಿ ಮುಳ್ಳಾಗಿದೆ....ಅದಕ್ಕೇ ಇದನ್ನು ಕಳೆಯಬಯಸಿರುವೆ....?'

'ಸೌಂದರ್ಯವನ್ನು ಶತ್ರುವೆಂದು ಯಾರಾದರೂ ಅನ್ನುವರೇ ? ಇಲ್ಲದ ಅಂದವನ್ನು ತಂದುಕೊಳ್ಳಲು ತರುಣಿಯರು ಅಲಂಕರಿಸಿಕೊಳ್ಳುವರು. ಆದರೆ

ನೀನು ಇರುವುದನ್ನೂ ಕಳೆದುಕೊಳ್ಳಬೇಕನ್ನುವೆಯಾ....?'

'ನೋಡು ಅವ್ವಾ....ಊರೊಳಗೆ ಪ್ರದರ್ಶನ ಮಾಡಲಿಕ್ಕಷ್ಟೇ ಶ್ರೀಮಂತಿಕೆ ಒಳ್ಳೆಯದು....ಕಾಡಿನಲ್ಲಿ ಪಯಣಿಸುವಾಗ ಶ್ರೀಮಂತನಾಗಿ ತೋರದೆ ಬಡವನಾಗಿ ಕಂಡರೆ ಸುಕ್ಷೇಮ....'

'ಏನು ಹಂಗಂದ್ರೆ....' ಆಕೆ ಕೇಳಿದಳು.

'ಗೃಹಿಣಿಯಾದವಳಿಗೆ ಅಲಂಕಾರದಿಂದ ಅಪಾಯವಿಲ್ಲ. ಕಾಡಿನಲ್ಲಿ ಅಲೆದಾಡುವ ನನ್ನಂಥ ವಿರಾಗಿಣಿಗೆ ಅದು ಬಾಧಕ....ಸುರಕ್ಷಿತವಾಗಿ ಗುರಿ ಮುಟ್ಟಬೇಕಾದರೆ ನಾನು ಕುರೂಪಿಯಾಗುವುದೇ ಒಳ್ಳಿತು....'

'ಹುಚ್ಚವ್ವಾ....ಇಂಥ ದುಡುಕುತನ ಸಲ್ಲದು. ದೇವರು ದೊಡ್ಡವನು, ನನ್ನನ್ನು ಸಮಯಕ್ಕೆ ಸರಿಯಾಗಿ ಕಳಿಸಿದ. ಕೆರೆಗೆ ಬಟ್ಟೆ ಒಗೆಯಲು ಬಂದು, ಹಿಂಡಿ ಸಿಂಬೆ ಮಾಡಿ ಬುಟ್ಟಿಯಲ್ಲಿಡುತ್ತಿದ್ದೆ. ನಿನ್ನ ಈ ಉದ್ವೇಗ ನೋಡಿ ಓಡಿ ಬಂದೆ. ನೋಡವ್ವಾ....ದುಡುಕುತನದ ಕೈಲಿ ಬುದ್ಧಿ ಕೊಡಬಾರದು. ಅಂದವಾದ ಮೂಗು ಕೊಯ್ಕೊಂಡು ನಂತರ ಅತ್ತು ಕರೆದರೆ ಬರದು.'

'ನಂತರ ಬೇಕೆಂಬ ಬಯಕೆ ಬರದು ತಾಯಿ. ಶಿವನನ್ನೊಲಿಸಲು ಈ ಚರ್ಮದ ಸೌಂದರ್ಯ ಬೇಕಿಲ್ಲ....' ಮಹಾದೇವಿ ಹೇಳಿದಳು.

'ಶಿವನಾಟ ಬಲು ಸೋಜಿಗದು ತಂಗಿ. ಅವನ ಒಲಿಮೆ ಪಡೆಯುವುದು ಬಹಳ ಕಷ್ಟಕರ. ಪರಿಮಳಿಸುವ ನುಚ್ಚು ಮಲ್ಲಿಗೆ ಗುಚ್ಛವಿಟ್ಟು ಸುತ್ತಲೂ ಮುಳ್ಳು ಇರಿಸುವ. ವಿಘ್ನಗಳನ್ನು ಎದುರಿಸಿ, ಕಷ್ಟದ ಕಡಲಿನಲ್ಲಿ ಈಜಿ ಶಿವನೊಲಿಮೆಯ ಮುತ್ತನ್ನು ಹೊಂದಬೇಕು. ಸಿಟ್ಟಿಗೆದ್ದು ಚಿನ್ನದ ಕಲ್ಲನ್ನು ಬಿಸುಡುವೆ ಎಂಬುದು, ಕಡಲಿನ ನೀರನ್ನು ಹೊರಚೆಲ್ಲುವೆ ಎಂಬುದು ಮೂರ್ಖ ಪ್ರಯತ್ನ. ಕಲ್ಲಿನಿಂದ ಚಿನ್ನವನ್ನು, ಕಡಲ ತಳದಿಂದ ಮುತ್ತನ್ನು ತೆಗೆಯುವ ಸಾಹಸವನ್ನಷ್ಟೇ ಮಾಡಬೇಕು....'

ಆ ಸ್ತ್ರೀಯ ಕಣ್ಣಿನಲ್ಲಿ ವಿವೇಕ ಬೆಳಗುತ್ತಿತ್ತು. ಮಹಾದೇವಿ ಮೂಕಳಾಗಿ ಕುಳಿತಳು. 'ತನ್ನ ಆವೇಶದ ವರ್ತನೆ ಅರ್ಥರಹಿತವಾದುದು' ಎಂದು ನಾಚಿ ನೀರಾದಳು. 'ಸೂರ್ಯನೂ ಸಹ ಗ್ರಹಣದ ಬಂಧನಕ್ಕೆ ಸಿಕ್ಕು ಮಂಕಾಗುವಂತೆ ಎಂತೆಂತಹವರ ವಿವೇಕವೂ ಆವೇಶ-ಹತಾಶೆಗಳಿಗೆ ಸಿಕ್ಕು ಮಂಕಾಗುವುದಲ್ಲ' ಎಂದು ವಿಸ್ಮಿತಳಾದಳು. ಆ ಸ್ತ್ರೀಯನ್ನು ಕೃತಜ್ಞತೆಯಿಂದ ನೋಡಿ, ಕೆರೆಯ ನೀರನ್ನು ಬೊಗಸೆಗಳಲ್ಲಿ ಕುಡಿದು ಮುಂದೆ ನಡೆದಳು.

ಬಹುದು....ದಗೆ ವಿಪರೀತವಾಗಿದೆ....ಈಗೆರಡು ಮೂರು ದಿವಸಗಳಿಂದಲೂ ಮೋಡಗಳು ಬಂದು ತೂಗಿತೂಗಿ ಹೋಗುತ್ತಿವೆ." ಮಹಾದೇವಿ ಆಗಸವನ್ನು ತಲೆ ಎತ್ತಿ ನೋಡಿದಳು. ಮೋಡಗಳು ಉಯ್ಯಾಲೆಯಾಡುತ್ತಿದ್ದವು. ದಿಗಂತದ ಒಂದೆರಡು ಕಡೆಗಳಲ್ಲಿ ಮಳೆ ಬೀಳುವ ಸಂಕೇತವೆಂಬಂತೆ ಪಟ್ಟಿಯಾಕಾರದ ಚಿತ್ರ ಕಾಣಬರುತ್ತಿತ್ತು. ಸೂರ್ಯನು ಆಗಾಗ ಮೋಡಗಳ ಒಡನೆ ಲೀಲೆ ಯಾಡುತ್ತ ಕಣ್ಣುಮುಚ್ಚಾಲೆಯಲ್ಲಿ ತೊಡಗಿದ್ದ.

ಗಾಳಿ ಬಲವತ್ತರವಾಗಿ ಬೀಸತೊಡಗಿತು. ಮೋಡಗಳು ತ್ವರಿತಗತಿಯಲ್ಲಿ ಸಂಗ್ರಹವಾಗತೊಡಗಿದವು. ಮಹಾದೇವಿ ಉದ್ರೇಕಗೊಳ್ಳುತ್ತಿದ್ದ ಪ್ರಕೃತಿ ಯನ್ನು ನೋಡಿದಳು. ಮಳೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಮುನ್ನವೇ ನಿಲ್ಲಲು ನೆರಳನ್ನು ಹುಡುಕಿಕೊಳ್ಳಬೇಕು ಎಂದುಕೊಂಡಳು. ಆದರೆ ಆ ಅರಣ್ಯದಲ್ಲಿ ಎಲ್ಲಿಯೂ ಅಂತಹ ತಾಣ ಕಣ್ಣಿಗೆ ಬೀಳಲಿಲ್ಲ. ಮಳೆ ರಭಸದಿಂದ ಹನಿಯ ತೊಡಗಿತು. ಅದಕ್ಕೆ ಹಿನ್ನೆಲೆಯನ್ನೀಯುವಂತೆ ಮೋಡ ಮೋಡಗಳ ಘರ್ಷಣೆ ತೀವ್ರವಾಯಿತು. ಮಿಂಚಿನ ಬೆಳಕು, ಗುಡುಗಿನ ಆರ್ಭಟಗಳು ಸೇರಿ ಪ್ರಕೃತಿ ಯನ್ನು ರುದ್ರಭಯಂಕರಿಯನ್ನಾಗಿ ಮಾಡಿದಳು.

ಮಹಾದೇವಿ ಗಿಡವೊಂದರ ಕೆಳಗೆ ನಿಂತಳು. ಧಾರಾಕಾರವಾದ ಮಳೆ ಯಿಂದ ತೊಯ್ದು ತೊಪ್ಪೆಯಾಗಿ ಗುಬ್ಬಚ್ಚಿಯಂತೆ ಮುದುರಿ ಕುಳಿತಳು. 'ಧೋ ಧೋ' ಎಂದು ಪ್ರಚಂಡವಾಗಿ ಸುರಿವ ಮಳೆಯ ಆವೇಶ ಕಂಡು ನಡುಗಿಹೋದಳು. ಕಣ್ಣು ಕೋರೈಸುವ ಮಿಂಚು, ಜಗತ್ತನ್ನು ಕವಿದ ಮಂಕು, ಆಕೆಯನ್ನು ಪ್ರವಾಹಕ್ಕೆ ಸಿಕ್ಕ ಹುಲ್ಲುಕಡ್ಡಿಯನ್ನಾಗಿ ಮಾಡಿದ್ದವು.

'ಆಗಲೀ, ಪ್ರಕೃತಿ....ನೀನು ಶಿವನ ಪೂಜೆ ಮಾಡತೊಡಗಿರುವೆಯಾ.... ಮಾಡು....ಮಾಡು.'

'ನಾವು ದಿನವೂ ಅಲ್ಪಸ್ವಲ್ಪವಾಗಿ ಮಾಡಿದರೆ ನಿನ್ನದು ಬೃಹತ್ ಪೂಜೆ ....' ಎಂದು ನಸುನಕ್ಕಳು. ಮಳೆಯು ತೀವ್ರವಾಗಿ ಸುರಿದು ಕ್ಷಣಕಾಲ ವಿಶ್ರಾಂತಿ ತೆಗೆದುಕೊಂಡಿತು.

ಮಹಾದೇವಿ ಮುಂದೆ ನಡೆಯಲು ಇಪ್ಪತ್ತು ಹೆಜ್ಜೆ ಇಟ್ಟು, ನಡೆಯ ಲಾರದೆ ಸೋತಳು. ಸಾಲದ್ದಕ್ಕೆ ಅರಣ್ಯದಲ್ಲಿ ನಡೆಯುವಾಗ ಮುಳ್ಳೊಂದು ಅಂಗಾಲೊಳಗೆ ತೂರಿ, ಮುರಿದಿದ್ದಿತು. ಇನ್ನೊಂದು ಮುಳ್ಳಿನಿಂದ ತೆಗೆಯಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೆ ಹತಾಶಳಾಗಿ ಸುಮ್ಮನಾಗಿದ್ದಳು. ಆದರೆ ಅದು ಕೀವನ್ನುಂಟುಮಾಡಿ ವಿಪರೀತ ನೋವು ಕೊಡುತ್ತಿದ್ದು, ಮುಂದೆ ಕಾಲಿಡಲಾರದಷ್ಟು ನಿಸ್ಸಹಾಯಕಳನ್ನಾಗಿ ಮಾಡಿತ್ತು. ಸಾಲದ್ದಕ್ಕೆ ಸೀರೆ

ಯೆಲ್ಲ ತೊಯ್ದು ಪಟಪಟನೆ ಬಡಿದು ಕಾಲಿಗೆ ಸಿಕ್ಕುತ್ತಿತ್ತು. ಚೆನ್ನಾಗಿ ತೋಯಿಸಿಕೊಂಡ ಕೋಮಲ ಶರೀರ ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ನಡುಗತೊಡಗಿತು. ಮೈಯ ಶಾಖ ವೃದ್ಧಿಯಾಗಿ ಅಂತಹ ಚಳಿಯಲ್ಲೂ ಕೆಂಡದಂತೆ ಸುಡತೊಡಗಿತು. ಎಲ್ಲಿಯಾದರೂ ಮಲಗಬೇಕೆಂದರೆ ನೆಲದ ಮೇಲೆ ನೀರು ಹರಿಯುತ್ತಿತ್ತು. ಕೂದಲು ತೊಯ್ದು ತಲೆಯು ಭಾರವಾಗಿ ಕೊಡವನ್ನು ಹೊತ್ತಂತೆನಿಸಿತು. ಶರೀರದ ತಾಪ ವರ್ಧಿಸಿದಾಗ ಮನಸ್ಸು ಖಿನ್ನವಾಯಿತು. ಸತ್ವಪರೀಕ್ಷೆಯೋ ಎಂಬಂತೆ ಮಳೆಯು ಮತ್ತೆ ಆರಂಭವಾಯಿತು. ಹೊತ್ತು ಮುಳುಗಿದ ಸೂಚನೆಗಳೂ ಕಾಣಬರತೊಡಗಿದವು. ಕತ್ತಲೆಯಲ್ಲಿ ಮಳೆಯ ಆರ್ಭಟ ಹೆಚ್ಚಾಗಿ ತೋರಿತು. ಮಹಾದೇವಿ ನಿಸ್ಸತ್ವಗೊಂಡು ಕುಳಿತು ಬಿಟ್ಟಳು. ಅವಳು ನೋಡುತ್ತಿರುವಂತೆಯೇ ಹಾವುಮಿಂಚೊಂದು ಮಿಂಚಿ ಬಲವಾದ ಸಿಡಿಲು ಹಾರಿತು. ಅದನ್ನು ನೋಡಲಾರದೆ ಕಣ್ಣು ಮುಚ್ಚಿದಳು. ಆ ಹಾವುಮಿಂಚಿನ ಬೆಳಗಿನಲ್ಲಿ ಜಗತ್ತೆಲ್ಲ ತೀಕ್ಷ್ಣವಾಗಿ ಬೆಳಗಿತು. ತನ್ನ ಮಗ್ಗುಲಲ್ಲೇ ಸಿಡಿಲು ಹಾರಿದಂತೆನಿಸಿತು. ಕ್ಷಣಕಾಲದ ನಂತರ ಕಣ್ಣು ಬಿಚ್ಚಿನೋಡಿದಾಗ ತಾನು ದೀರ್ಘಕಾಲ ನಿಂತು ಆಶ್ರಯ ಪಡೆದುಕೊಂಡ ವೃಕ್ಷ ಸಿಡಿಲಿನ ಹೊಡೆತಕ್ಕೆ ಸಿಕ್ಕಿ ಉರಿಯತೊಡಗಿತ್ತು. ಆಕೆ ತಲ್ಲಣಿಸಿದಳು.

'ಇಲ್ಲಿಯ ತನಕ ಅಲ್ಲೇ ನಿಂತಿದ್ದೆ. ಈಗಲೂ ಅಕಸ್ಮಾತ್ ಅಲ್ಲೇ ನಿಂತಿದ್ದರೆ....' ಎಂಬ ಆಲೋಚನೆ ಸುಳಿಯಿತು.

ಬಿರುಗಾಳಿಗೆ ಸಿಕ್ಕ ದೋಣಿಯಂತೆ ಮನ ಹೊಯ್ದಾಡತೊಡಗಿತು.

'ನೀನು ನಿಜಕ್ಕೂ ಮೂರ್ಖಳು. ಯಾವುದೋ ಹುಚ್ಚು ಆದರ್ಶ, ಆವೇಶಗಳ ಕೈಕೂಸಾದೆ....' ಅವಕಾಶ ಸಿಕ್ಕುದೇ ಸಾಕೆಂದು ಮನದ ದುರ್ಬಲ ಅಂಶ ಮೆಲ್ಲನೆ ಪಿಸುಗುಟ್ಟಿತು.

'ಇಲ್ಲ ನನ್ನದು ಆವೇಶದ, ಅಲ್ಪ ಸ್ಫೂರ್ತಿಯ ನಿರ್ಧಾರವಲ್ಲ, ಆತ್ಮ ಸ್ಥೈರ್ಯದ, ಅಂತರಂಗ ಮಥನದ ಪರಿಪಕ್ವ ನಿರ್ಧಾರ....'

'ಕಾಲವಿನ್ನೂ ಮಿಂಚಿಲ್ಲ. ಇನ್ನೊಮ್ಮೆ ವಿಮರ್ಶೆ ಮಾಡಿಕೋ. ಈ ಮಾರ್ಗ ಬಹು ಕಠಿಣ. ತಾಯಿ ತಂದೆ ಎಲ್ಲರನ್ನೂ ಬಿಟ್ಟು ಕರುಳ ಬಳ್ಳಿಯನ್ನು ಕತ್ತರಿಸಿಕೊಂಡು ಬಂದಿರುವುದಷ್ಟೇ ಅಲ್ಲ, ಏಕಾಂಗಿನಿಯಾಗಿ ಅದರಲ್ಲೂ ಸುಂದರ ತರುಣಿಯಾಗಿ ಕಾಡುಮೇಡು ಅಲೆಯುವುದು, ದುಷ್ಟರ ಕಣ್ಣಿನಿಂದ ಪಾರಾಗುವುದು ಎಷ್ಟು ಕಷ್ಟಸಾಧ್ಯ. ಇದಕ್ಕೆ ಅಸಾಮಾನ್ಯ ವಿಲಕ್ಷಣ ಧೈರ್ಯ ಬೇಕು....' ಮನಸ್ಸು ಬುದ್ಧಿ ಹೇಳಿತು.

ಮತ್ತು ಅನೇಕರು ತಿಳಿದಂತೆ ಬಾಳಲಾರದವರು ಸನ್ಯಾಸಿಗಳಾಗುವರು ಎಂಬುದು ಅಪರಿಪಕ್ವ ವಿಚಾರ. ಸನ್ಯಾಸಿಯಾದವನು ಎದುರಿಸಬೇಕಾದಷ್ಟು ವಿಪತ್ತುಗಳು ಗೃಹಸ್ಥನಿಗೆ ಬರವು. ಧೈರ್ಯಶಾಲಿಯಾದಲ್ಲದೆ ಸನ್ಯಾಸ ಜೀವನ ಅಸಾಧ್ಯ. ಆ ಧೈರ್ಯ-ಕೆಚ್ಚಿನಿಂದಲೇ ನಾನು ಬಂದಿರುವೆ. ಇಟ್ಟ ಅಡಿ ಹಿಂದಕ್ಕೆ ತೆಗೆಯೆ. ಮುಂದಡಿ ಇಟ್ಟು ಗುರಿ ಮುಟ್ಟುವುದು ಇಲ್ಲವೇ ಮಡಿಯುವುದು ಒಂದೇ ನನ್ನ ಕಣ್ಣ ಮುಂದಿರುವುದು....' ಮಹಾದೇವಿಯ ವಿವೇಕ ಮನಸ್ಸಿಗೆ ಉತ್ತರ ನೀಡಿತು.

'ವಿಪತ್ತುಗಳನ್ನು ಎದುರಿಸುವುದರಲ್ಲೇ ಬಾಳು ಸವೆದರೆ ಸಾಧನೆ ಮಾಡುವುದು ಎತ್ತ ಉಳಿಯಿತು? ಈಗ ಮೈಯ್ಯು ಕೆಂಡದಂತೆ ಕಾಯ್ದಿದೆ. ಇದೇ ರೀತಿ ಕೆಲವು ನಿಮಿಷ ಮಳೆಯಲ್ಲಿ ತೋಯ್ದರೆ, ಜ್ವರ ಏರುವುದು ಖಂಡಿತ. ಆಮೇಲೆ ನಿನ್ನ ಗತಿ....'

'ಬರಲಿ ಬರಲಿ; ಬಂದುದೆಲ್ಲವೂ ಶಿವನ ಪ್ರಸಾದ' ಎಂದು ಸ್ವೀಕರಿಸುವೆ.

> ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು ತೃಷೆ ಅಡಗಿತೆಂಬೆನಯ್ಯಾ
> ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನವೆಂಬೆನಯ್ಯಾ
> ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು.
> ಚನ್ನಮಲ್ಲಿಕಾರ್ಜುನಯ್ಯಾ,
> ಶಿರಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು.*

ಎಲೆ ಮನವೇ, ನನ್ನ ಮುಂದೆ ಅಂಜಿಕೆ ಆಮಿಷವನ್ನೊಡ್ಡದಿರು. ಇತರರ ಕಷ್ಟಕಾರ್ಪಣ್ಯಗಳನ್ನು ನೋಡಿ ಕರಗುವ ನನ್ನ ಹೃದಯ ಹೂವಿನಂತಿದ್ದರೂ, ನನ್ನ ಸಾಧನೆಯ ಸಮಸ್ಯೆ ಬಂದಾಗ ಕಲ್ಲಿನಷ್ಟು ಕಠೋರ. ಅದನ್ನು ಯಾರೂ ಕರಗಿಸಲಾರರು.

ಕಿಡಿ ಕಿಡಿ ಕೆದರಿ ಉರಿಯೆದ್ದು ಕಾಡನ್ನೆಲ್ಲ ಸುಡತೊಡಗಿದರೆ, ಹಸಿವು ತೃಷೆಯಿಂದ ಬಳಲುವ ಈ ಶರೀರದ ಕಾಟವನ್ನು ದೇವರು ತಪ್ಪಿಸುತ್ತಿರುವನು ಎಂದುಕೊಳ್ಳುವೆ. ಮೋಡಗಳು ಧಾರಾಕಾರವಾಗಿ ನೀರನ್ನು ಸುರಿಸಿದರೆ ನನ್ನ ಮಜ್ಜನಕ್ಕೆ ಅಮೃತಧಾರೆಯನ್ನು ವರ್ಷಿಸುತ್ತಿರುವನು ಎಂದು ಹರ್ಷಿಸುವೆ. ಈ ಪ್ರಚಂಡ ಮಳೆಯ ಹೊಡೆತ ತಾಳಲಾರದೆ ಬೆಟ್ಟಗಳು ಕುಸಿದು, ಕಲ್ಲು ಬಂಡೆಗಳು ಉರುಳಿದರೆ ನನ್ನಿನಿಯ ಪುಷ್ಪವೃಷ್ಟಿ ಮಾಡುವನು ಎಂದು ಆನಂದಿಸುವೆ. ಇದೆಲ್ಲ ಒತ್ತಟ್ಟಿಗಿರಲಿ, ನನ್ನ ಶಿರವು ತುಂಡಾಗುವ ಪ್ರಸಂಗ ಒದಗಿದರೆ

ಆ ನನ್ನ ಒಡೆಯನು ಈ ಪ್ರಾಣಪುಷ್ಪವನ್ನು ತನ್ನ ಅಡಿಗೆ ಎಡೆಮಾಡಿಕೊಳ್ಳು ತ್ತಿರುವನು ಎಂದು ನಲಿದಾಡುವೆ.

ನನಗೆ ವಿಶ್ವಾಸವಿದೆ....ಎಲೆ ಮನವೇ! ಯಾವ ತಾಯಿಯೂ ಹೆತ್ತ ಕೂಸಿಗೆ ವಿಷ ಉಣ್ಣಿಸಳು; ರೋಗ ಬಂದಾಗ ಕಹಿಯಾದ ಮದ್ದು ಕೊಡು ವಳು ಮಾತ್ರ. ನನ್ನಿನಿಯ ನನ್ನಲ್ಲಿರುವ ದೌರ್ಬಲ್ಯದ ರೋಗವನ್ನು ತೆಗೆದು ಹಾಕಲು, ಈ ಕಷ್ಟಪರಂಪರೆಯ ಕಹಿಮದ್ದು ನೀಡುತ್ತಿರುವನು. ಇದು ಖಂಡಿತ ವಿಷವಲ್ಲ, ಅಧರಕ್ಕೆ ಕಹಿ, ಉದರಕ್ಕೆ ಸಿಹಿ....'

'ಇದೆಲ್ಲ ಸ್ವಕಲ್ಪಿತ ಭ್ರಮೆ....ನಿನಗೆ ಅವನು ಕಡೆಯತನಕ ಒಲಿಯ ದಿದ್ದರೆ?' ಮನೋದೌರ್ಬಲ್ಯ ಚಿಗುರಿ ಕೇಳಿತು.

'ಒಲಿದರೆ ಒಲಿಯಲಿ, ಬಿಟ್ಟರೆ ಬಿಡಲಿ. ನನ್ನ ಸಂಕಲ್ಪಯುಕ್ತ, ಸಂಯಮ ಜೀವನದ ಸಾಧನೆಯಲ್ಲೇ ನನಗೆ ಅಪೂರ್ವ ಆನಂದವಿದೆ. ಈ ಆಧ್ಯಾತ್ಮ ಜೀವನವೂ ಒಂದು ಜೂಜಿನಂತೆ. ದೇವನೊಡನೆ ಆಡುವ ಈ ಜೂಜಾಟದಲ್ಲಿ ಪ್ರಾಣ, ಮಾನ ಎಲ್ಲವನ್ನೂ ಪಣಕ್ಕಿಡಬೇಕಾಗುವುದು. ಏನಾಗುವುದೋ ಆಗಲಿ; ನಾನು ಖಂಡಿತ ಗೆಲ್ಲುವೆನೆಂಬ ವಿಶ್ವಾಸವಿದೆ. ಆ ಶಿವನು ಸೋತು ಗೆಲ್ಲುವನು.

ಅಣ್ಣನವರು ಹೇಳರೇ, 'ಬಲ್ಲಿದರೊಡನೆ ಬವರವಾದರೆ ಗೆಲ್ಲಲುಂಟು ಸೋಲಲುಂಟು' ಎಂದು. ಶಿವನೊಡನೆ ಬವರಕ್ಕೆ ನಿಂತಿರುವೆ; ಗೆದ್ದರೂ ಅದು ಗೆಲುವೆ, ಸೋತರೂ ಗೆಲುವೇ! ಅವನೊಡನೆ ಆಡುವುದೇ ಒಂದು ಸೊಗಸು.'

ವಿವೇಕದ ದೃಢವಾದ ಉತ್ತರ ಕಂಡು ಮನಸ್ಸು ಬಾಲ ಮುದುರಿ ಮಲ ಗಿತು. ಮಹಾದೇವಿಗೂ ಧೈರ್ಯ ಸಮನಿಸಿ ಈಗ ಮಳೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನೂ ಕೈಬಿಟ್ಟು, ಪದ್ಮಾಸನ ಹಾಕಿ ಮಳೆಯಲ್ಲೇ ಧ್ಯಾನಕ್ಕೆ ಕುಳಿತಳು.

ಸುದೀರ್ಘ, ಶಕ್ತಿಯುತ ಮಳೆಯಿಂದಾಗಿ ನಾಲ್ಕೈದು ಅಂಗುಲ ನೀರು ನೆಲದ ಮೇಲೆ ನಿಂತಿತ್ತು. ಮಹಾದೇವಿ ಈಗ ಎದೆಗುದಿಗೊಳ್ಳದೆ ಕಣ್ಣುಮುಚ್ಚಿ ದ್ದಳು. ಮನಸ್ಸಿಗೆ ಇದ್ದ ಸಾಮರ್ಥ್ಯ ಶರೀರಕ್ಕೆ ಇರಲಿಲ್ಲ. ಆ ಮಳೆ, ಗಾಳಿ, ಚಳಿಯ ಘರ್ಷಣೆಗೆ ಅದು ತರಗೆಲೆಯಂತೆ ನಡುಗಿತು.

ಜ್ವರದ ಕಾವು ಏರಿ ಪ್ರಜ್ಞೆ ತಪ್ಪಿತು. ಸುರಿಯುವ ಮಳೆಯಲ್ಲಿ ಶರೀರವು ನೆಲಕ್ಕೆ ಉರುಳಿತು. ಅದರ ಅರಿವು ಮಳೆಗೆ ಇರಲಿಲ್ಲ; ಅದು ಯಾಂತ್ರಿಕವಾಗಿ

ಇರುಳಿನ ಎರಡನೆಯ ಜಾವದ ಕೊನೆಯವರೆಗೆ ಮಳೆ ಸುರಿಯುತ್ತಲೇ ಇದ್ದಿತು. ಬೆಳಗಿನ ಜಾವದ ಹೊತ್ತಿಗೆ ಮೋಡಗಳ ತೆರೆ ಸರಿದು ಆಕಾಶ ಶುಭ್ರವಾಯಿತು. ಎಲ್ಲ ಕೆರೆಕಟ್ಟೆಗಳು ತುಂಬಿದ್ದವು. ಗದ್ದೆಯಲ್ಲಿ, ಹೊಲಗಳಲ್ಲಿ ನೀರು ನಿಂತಿತ್ತು. ಬಂಡಿಯ ದಾರಿಯ ಇಕ್ಕೆಲದಲ್ಲಿನ ಗುಂಡಿಗಳೂ ನೀರಿನಿಂದ ತುಂಬಿ ತುಳುಕುತ್ತಿದ್ದವು.

ಸೂರ್ಯೋದಯವಾದ ಕೆಲವು ಕ್ಷಣಗಳಲ್ಲಿ ದೊಡ್ಡ ಕಮಾನು ಗಾಡಿಯೊಂದು ಸಾಗಿ ಬಂದಿತು. ಜೋಡಿ ಎಲುಬಿನ ಎತ್ತುಗಳು ಭವ್ಯಾಕೃತಿಯವಾಗಿದ್ದವು. ಹೊಳೆಸಾಲಿನ ಸವಿಯೂಟವನ್ನುಂಡು ದಷ್ಟಪುಷ್ಟವಾದ ಆ ಎತ್ತುಗಳು ಉತ್ಸಾಹದ ಹೆಜ್ಜೆಗಳನ್ನು ಹಾಕುತ್ತಿದ್ದವು. ಆ ಹೆಜ್ಜೆಗೆ ತಕ್ಕ ಸದ್ದನ್ನು ಕೊರಳ ಗೆಜ್ಜೆ ಮತ್ತು ಗಂಟೆಗಳು ಮಾಡುತ್ತಲಿದ್ದವು. ಗಾಡಿಯನ್ನು ಹೊಡೆಯುತ್ತ ಜನಪದ ಗೀತೆಯೊಂದನ್ನು ಗುಣುಗುತ್ತ ಸಿದ್ದಯ್ಯ ಸಂತಸದಲ್ಲಿ ಸಾಗಿದ್ದ. ಇದ್ದಕ್ಕಿದ್ದಂತೆಯೇ ಬೆರಗಾಗಿ ಎತ್ತುಗಳನ್ನು ಜಗ್ಗಿ ನಿಲ್ಲಿಸಿ, 'ಒಡೆಯಾ....' ಎಂದು ಕೂಗಿದ.

ಗಾಡಿಯಲ್ಲಿ ತೂಕಡಿಸುತ್ತ ಕುಳಿತಿದ್ದ ಚಂದ್ರಪ್ಪಗೌಡರು ಒಮ್ಮೆಲೇ ಬೆಚ್ಚಿಬಿದ್ದರು.

'ಯಾಕಲೆ ಸಿದ್ಧ....ಈ ಪರಿ ಕೂಗಿದೆ.'

'ಒಡೆಯಾ....ಯಾರೋ ಹೆಂಗ್ಸು. ದಾರಿ ಮಗ್ಗುಲಾಗೆ ಬಿದ್ದಾವ್ಳೆ. ಯಾರಾದ್ರು ಹೊಡೆದು ಹಾಕ್ಯಾರೋ ಏನೋ!'

'ಎಲ್ಲಿ ಎಲ್ಲಿ....' ಗೌಡರು ಎಚ್ಚೆತ್ತು ಕಣ್ಣುಜ್ಜಿಕೊಂಡು ಗಾಡಿಯಿಂದ ಧುಮುಕಿದರು. ಪದ್ಮಾಸನದಲ್ಲಿ ಕುಳಿತ ಮಹಾದೇವಿಯ ಕಾಲು ಹಾಗೆಯೇ ಮರಗಟ್ಟಿದ್ದವು. ಪ್ರಜ್ಞಾಹೀನಳಾಗಿ, ತಲೆಯು ಮರದ ಬುಡಕ್ಕೆ ಒರಗಿತ್ತು. ಹರಿದುಹೋಗಿದ್ದ ನೀರಿನಗುಂಟ ನೀಳವಾದ ಕೂದಲೂ ಹರಿದು ಚೆಲ್ಲಿ ಬಿದ್ದಿದ್ದವು.

'ಹಸುಮಗ್ಳು....ಎಂಥಾ ಚೆಂದಾಗೆ ಅವ್ಳಲ್ಲ ಸಿದ್ದ. ಪಾಪ! ಏನಾಗೈತೋ....' ಗೌಡರು ನಿಂತು ಪರೀಕ್ಷಿಸಿದರು.

'ಯಾರೋ ಭಿಕ್ಷೆ ಬೇಡೋ ಹೆಂಗ್ಸಿರಬೇಕು....ಮಳೀಗೆ ಸಿಕ್ಕಿರಬೇಕು. ಅಬ್ಬಾ! ದೆವ್ವನಂಥ ಮಳೆ. ಯಾವಳಾದರೂ ರಕ್ಕಸಿ ಮುಗಿಲ ಮ್ಯಾಲ್ನಿಂತು ಕೊಡ ಸುರೀತಾಳೇನೋ ಅಂದ್ಕಂಡೆ ನಾನು....' ಸಿದ್ದ ನುಡಿದ.

ತೇಜಸ್ಸಿದೆ! ಗೌರಮ್ಮನಂಗೆ ಇದ್ದಾಳೆ. ಯೋಗಿಣಿ ಇರ್ಬೇಕು....ಇಕಾ ನೋಡು ಜೋಳಿಗೆ ಇದೆ....' ಗೌಡರು ಜೋಳಿಗೆ ತೆರೆದು ನೋಡಿದರು.

'ವಿದ್ಯೆ ಕಲಿತವಳಂಗೆ ಕಾಣುತ್ತೆ. ತಾಡಓಲೆ ಬೇರೆ ಐತೆ....'

'ಜೀವನಾರ ಐತೋ ಇಲ್ಲೋ. ಶಿವನೇ ನಮ್ಮಪ್ಪ ಜೀವ ತಗೋ ಬೇಡಪ್ಪ....' ಸಿದ್ದ ಕುಳಿತು ಪರೀಕ್ಷಿಸಿದ. ಕಾಲುಗಳು ತಣ್ಣಗಾಗಿದ್ದವು. ಕೈಗಳು ಹಿಮದಷ್ಟು ಶೀತಲ.

'ಒಡೆಯಾ....ಎಲ್ಲಾ ತಣ್ಣಗಾಗ್ಯೆತೆ....'

'ಸಿದ್ದ, ಈಪಾಟಿ ಮಳ್ಯಾಗೆ ತೋಯ್ದ್ರೆ ತಣ್ಣಗಾಗದೆ ಇರುತ್ತ್ಯೆ? ನೋಡಾನ ನಿಲ್ಲು....'

ತೆಳುವಾದ ಅಂಗವಸ್ತ್ರವನ್ನು ಮೂಗಿನ ಮೇಲೆ ಹೊದ್ದಿಸಿದರು; ನಾಡಿ ಹಿಡಿದು ನೋಡಿದರು. ನಾಡಿ ಸೂಕ್ಷ್ಮವಾಗಿ ಬಡಿಯುತ್ತಿತ್ತು. ವಸ್ತ್ರವು ಉಸಿರಾಟಕ್ಕೆ ತಕ್ಕಂತೆ ಹಿಂದೆ ಮುಂದೆ ಚಲಿಸಿತು.

'ಶಿವ್ನ ದಯದಿಂದ ಜೀವ ಐತೆ. ಏಂ ಮಾಡಾಣ....?'

'ಏನ್ಮಾಡಾದೇನು, ಗಾಡೀಲಿ ಹಾಕ್ಕೊಂಡು ಒಯ್ಯೋಣ. ಊರಾಗೆ ಮದ್ದು ಮಾಡಿಸ್ಬೋದು: ಎರಡು ಹರದಾರಿ ಅಷ್ಟೆ. ಬಸವ, ಶಿವ ಇಬ್ಬರೂ ಕುಣೀತಾ ಗಾಡಿ ಒಯ್ತಾರೆ....' ಸಿದ್ದ ಹೇಳಿದ.

'ಮಾದೇವ ದೊಡ್ಡವನು ನೋಡು; ಅನಾಥರ ರಕ್ಷಕ ಅವನೇ! ರಾತ್ರಿಯೆಲ್ಲ ಈಯಮ್ಮ ಇಲ್ಲೇ ಬಿದ್ದವ್ಳೆ. ಕಾಡುಮೃಗ ಬಂದು ಎಳಕಂಡು ಹೋಗಿದ್ರೇನು ಗತಿ....'

'ಆಪಾಟಿ ಮಳ್ಯಾಗೆ....ಅವ್ಯಾಕೆ ಸಾಯಾಕ ಬರ್ತಾವೆ. ಪೊದರು, ಗವಿ ಬಿಟ್ಟು ಹೊರಗ ಬಂದಾವಾ?'

'ನಾವೂ ರಾತ್ರೀನೆ ಊರು ಸೇರ್ಬೇಕು ಅನ್ಕಂಡ್ವಿ. ಈ ಮಳೆ ಅಬ್ಬರಕ್ಕೆ ಹೆದರಿ ಗುಡ್ಯಾಗೆ ಇಳಕಂಡುಬಿಟ್ವಿ....ಒಳ್ಳೇದೆ ಆತು....' ಗೌಡರು ಹೇಳಿದರು.

ಸಿದ್ದನು ಪದ್ಮಾಸನದಲ್ಲಿ ಮರಗಟ್ಟಿದ ಕಾಲನ್ನು ಕಷ್ಟದಿಂದ ಬಿಡಿಸಿದ. ಗಾಡಿಯಲ್ಲಿನ ಹುಲ್ಲನ್ನು ಸಮಪಡಿಸಿ ಕಂಬಳಿ ಹಾಸಿದರು. ಇಬ್ಬರೂ ಸೇರಿ ಎತ್ತಿಕೊಂಡು ಬಂದು ಗಾಡಿಯಲ್ಲಿ ಮಲಗಿಸಿದರು. ಮಗ್ಗುಲಲ್ಲಿದ್ದ ಜೋಳಿಗೆಯನ್ನೂ ಬಂಡಿಯೊಳಕ್ಕೆ ಎತ್ತಿಟ್ಟು, ಕುಳಿತರು. ಗಾಡಿ ಮುಂದೆ ಓಡಿತು.

ಗೌಡರು ಬರುತ್ತಿದ್ದಂತೆಯೇ ಮಹಾದೇವಿಯನ್ನು ಹೊರಸಿನಮೇಲೆ ಮಲಗಿಸಲು ಹೇಳಿ, ಪತಿ

ಗಿದ್ದ ತರುಣಿಯನ್ನು ಕಂಡು, ಆಕೆ ಸೋಜಿಗಗೊಂಡು ಮಗಳು ಅನ್ನಪೂರ್ಣೆಯ ಸಹಾಯದಿಂದ ನೀರಿಳಿಯುತ್ತಿದ್ದ ಕೂದಲನ್ನು ಹಿಂಡಿದರು.

'ಇದೇನು ಕೂದಲೇ ಅನ್ನು....ನಾವೆಲ್ಲೂ ನೋಡಿರಲಿಲ್ಲ, ಪಾದವನ್ನು ಮುಟ್ತಾವೆ....' ಎಂದು ಗುಣವತಮ್ಮ ಉದ್ಗಾರ ತೆಗೆಯುತ್ತ ಉದ್ದವಾದ ಬಟ್ಟೆಯನ್ನು ಕೂದಲಿಗೆ ಸುತ್ತಿ, ಬಿಗಿದರು. ಮಹಾದೇವಿಯನ್ನು ಮಗ್ಗುಲಿಗೆ ಹೊರಳಿಸಿ ತೊಯ್ದ ಸೀರೆಯನ್ನು ಬಿಚ್ಚಿ, ಒಣಗಿದ ಸೀರೆಯನ್ನು ಸುತ್ತಿದರು. ಗೌಡರು ಮದ್ದು ಕೊಡುವ ಮಾದಯ್ಯನಿಗೆ ಹೇಳಿಕಳಿಸಿದರು. ದ್ರಾವಕವನ್ನು ಸಿದ್ಧಪಡಿಸಿ ಕಿವಿಗೆ ಹಾಕಿದ ಮಾದಯ್ಯ. ಬಿಸಿ ಬೂದಿಯನ್ನು ಅಂಗಾಲಿಗೆ ತಿಕ್ಕಿಸಿದ. ಎರಡು ಕಂಬಳಿಗಳನ್ನು ಜೋಡಿಸಿ ಹೊದ್ದಿಸಿದರು. ಉಪ್ಪು ಹುರಿದು ಹಣೆಗೆ ಕಾವು ಕೊಟ್ಟರು.

ಒಂದು ಜಾವದ ಸತತ ಪ್ರಯತ್ನದ ನಂತರ ಮಹಾದೇವಿಯ ಶರೀರ ಬಿಸಿ ಏರಿತು. ಉಸಿರು ಸ್ಪಷ್ಟವಾಗಿ ಚಲಿಸಲಾರಂಭಿಸಿ, ಕಣ್ಣಿವೆಗಳೂ ಸರಿದಾಡತೊಡಗಿದವು. ಬಿಗಿದುಕೊಂಡಿದ್ದ ಹಲ್ಲುಗಳು ಸಡಿಲಾಗತೊಡಗಿದವು. ಮೆಲ್ಲನೆ ಕಣ್ತೆರೆದಳು. ಎಲ್ಲರ ಮುಖದಮೇಲೆ ಸಂತಸದ ಅಲೆಗಳು ಸುಳಿದವು. ಕಣ್ತೆರೆದಾಗ ಬುದ್ಧಿ ಬೇಗನೇ ಓಡಲಿಲ್ಲ. ನೆನಪೂ ಸ್ಪಷ್ಟವಾಗಿ ಇರಲಿಲ್ಲ. ಕನಸಿನಲ್ಲಿ ಕಂಡಂತೆ ತನ್ನ ಸುತ್ತಲೂ ಹೊಸ ಮುಖಗಳು ಇರುವುದನ್ನು ಗಮನಿಸಿದಳು. ತಲೆ ಭಾರವಾಗಿತ್ತು ; ಕಣ್ಣ ರೆಪ್ಪೆಗಳು ತೂಕವಾಗಿ, ಮತ್ತೆ ಮುಚ್ಚಿದವು.

'ಗೌಡ್ರೆ....ಮೈಯಾಗೆ ಜ್ವರ ಬಹಳ ಇತ್ತೇನೋ. ಅಂತಾದ್ರಾಗ ಮಳ್ಯಾಗ ಸಿಕ್ಕು ತೋಯ್ಸಿಕೊಂಡವಳೆ. ಪಾಪ....ಎರಡೂ ಕೂಡಿಬಿಟ್ಟವೆ. ಈಗ ತಂಪು ಹೋಗಿ ಮೈ ಕಾವೇರಿದೆ. ಇನ್ನೂ ಜ್ವರದ ತಾಪ ಬಹಳ ಅದೆ. ಅದಕ್ಕೆ ಮದ್ದು ಕೊಡ್ತೀನಿ. ಏನಾಗಲ್ಲ ಧೈರ್ಯವಾಗಿರಿ....'

ಮಹಾದೇವಿ ಸಂಜೆಯ ಸುಮಾರಿಗೆ ಕಣ್ತೆರೆದಳು. ಪ್ರಜ್ಞೆಯು ಚೆನ್ನಾಗಿ ಮರುಕಳಿಸಿತು. ಸುತ್ತಲೂ ನಿಂತ ಜನಸಮುದಾಯವನ್ನು ದಿಟ್ಟಿಸಿದಳು. ತಾನು ನೆಲವನ್ನು ಬಿಟ್ಟು ಅಂತರದಲ್ಲಿ ಮಲಗಿದ ಅನುಭವವಾಯಿತು. ಅಚ್ಚರಿಯಮೇಲಚ್ಚರಿ.

'ನೀವೆಲ್ಲ ಯಾರು? ನಾನ್ಯಾಕೆ ಇಲ್ಲಿ ಬಂದಿದೀನಿ....ಹೀಗೇಕೆ ಮಲಗಿಸಿರುವಿರಿ....?' ಹೊದ್ದ ಕಂಬಳಿಯನ್ನು ಸರಿಸುತ್ತ, ನೆನಪಿಸಿಕೊಂಡಳು. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ಪದ್ಮಾಸನ ಹಾಕಿ ಕುಳಿತುದಷ್ಟೇ

'ಎಲ್ಲಾ ನಿಧಾನಕ್ಕೆ ಹೇಳ್ತೇವಿ. ನೀನು ವಿಶ್ರಾಂತಿ ತಗೊಳವ್ವ....' ಗೌಡರು ಹೇಳಿದರು.

'ಬೆಳಗಿನಿಂದ ಗುಟುಕು ನೀರು ಸಹ ಕುಡಿದಿಲ್ಲ. ಗಂಜಿ ಮಾಡಿಟ್ಟಿದ್ದೀನಿ. ಬಿಸಿ ಹಾಲು, ಸ್ವಲ್ಪ ಗಂಜಿ ಕುಡಿಯುವ್ವಾ....' ಗುಣವತಿ ಹೇಳಿದಳು.

'ನಂದಿನ್ನೂ ಪೂಜೆಯೇ ಆಗಿಲ್ಲ....ಬೆಳಗಿನ ಪೂಜೆ ತಪ್ಪಿಹೋಯ್ತೇ....' ಮಹಾದೇವಿ ಪರಿತಾಪ ಪಟ್ಟಳು.

'ಮೈಯಾಗೆ ಚೆಂದಾಕಿಲ್ಲ....ಮನಸ್ನಾಗೇ ಶಿವಶಿವ ಅಂದ್ಕೋ....ಹಾಲು-ಗಂಜಿ ಕುಡಿ....'

'ಬೇಡ ತಾಯಿ; ಈ ಬಿದ್ದುಹೋಗೋ ಶರೀರದ ರಕ್ಷಣೆಗಿಂತ ದೇವರ ಪೂಜೆ ಮುಖ್ಯ....ನಾನು ಸ್ನಾನ ಮಾಡ್ತೀನಿ....'

'ಸ್ನಾನ ಮಾಡಿದ್ರೆ ಮತ್ತೆ ಜ್ವರ ಏರುತ್ತೆ....ಹಂಗೇ ಮಾಡ್ಕೋ ಪೂಜೇನ....' ಗುಣವತಿ ಹೇಳಿದಳು.

'ತನಗೆ ಬೇಕಾದ್ರೆ ಅವನೇ ರಕ್ಷಣೆ ಮಾಡ್ತಾನೆ. ಏನಾದ್ರೆ ಏನು ಬಿಡು ತಾಯಿ....' ಎಂದು ನುಡಿದು ಮಹಾದೇವಿ ಮೇಲೆದ್ದು ಮಿಂದು, ಪೂಜಿಸಿ ಬಿಸಿಯಾದ ಅನ್ನ-ಹಾಲನ್ನು ಉಂಡಾಗ ಕಳೆದುಹೋದ ಚೈತನ್ಯ ಮರುಕಳಿಸಿ ದಂತೆನಿಸಿತು.

ಅಪಾರ ದಣಿವು ಒಂದು ಕಡೆ; ಅರಣ್ಯದಲ್ಲಿ ಬರುವಾಗ ಕಾಲಿನಲ್ಲಿ ನೆಟ್ಟು, ಕೀವನ್ನುಂಟುಮಾಡಿದ ಮುಳ್ಳು ಇನ್ನೂ ಅಲ್ಲೇ ಇದ್ದು ಹಿಂಸೆ ಕೊಡುತ್ತಿತ್ತು. ಹಳ್ಳಿಯ ವೈದ್ಯ ಪರೀಕ್ಷಿಸಿ ಎಕ್ಕೆಯ ಹಾಲಿನ ಒಂದೆರಡು ತೊಟ್ಟುಗಳನ್ನು ಮುಳ್ಳು ಮುರಿದ ಭಾಗಕ್ಕೆ ಸವರಿದ. ಕೆಲವು ಘಳಿಗೆಗಳ ಬಳಿಕ ಕೀವನ್ನು ಕಿತ್ತುಕೊಂಡು ಮುಳ್ಳು ಹೊರಬಂದಾಗ ಮಹಾದೇವಿ ಕೃತಜ್ಞತೆಯ ದೃಷ್ಟಿ ಯನ್ನು ನಾಡವೈದ್ಯನೆಡೆಗೆ ಹರಿಸಿದಳು. ಪೂರ್ಣ ಗುಣವಾಗುವ ತನಕ ಆಕೆ ಅನಿವಾರ್ಯವಾಗಿ ಕೆಲವು ದಿನ ಅಲ್ಲಿ ಉಳಿಯಬೇಕಾಯಿತು.

ಗೌಡರು ಸವಿಸ್ತಾರವಾಗಿ ಅವಳು ಬಿದ್ದುದನ್ನು, ಪರಊರಿಗೆ ಹೋಗಿದ್ದ ತಾವು ಗಾಡಿಯಲ್ಲಿ ಹರಿಹರಪುರಕ್ಕೆ ಕರೆತಂದುದನ್ನು ವಿವರಿಸಿದರು. ದೇವ ನೊದಗಿಸಿದ ಸಹಾಯಕ್ಕಾಗಿ ಮಹಾದೇವಿ ಅಚ್ಚರಿಪಟ್ಟು 'ತಮ್ಮುಪಕಾರ ಬಹು ದೊಡ್ಡದಾಯಿತು ಗೌಡರೆ....' ಎಂದು ಹೃದಯತುಂಬಿ ನುಡಿದಳು. ಅನೇಕ ದಿನಗಳ ಕಟು ಅನುಭವದ ನಂತರ ಗೌಡರ ಮನೆಯ ಅಪೂರ್ವ

ಸಜ್ಜನರ ಪುಣ್ಯವು ತೊಡೆದುಹಾಕಿ ಸಮತೋಲನಿಸದಿದ್ದರೆ ಈ ಜಗತ್ತು ಬದುಕಲಸಾಧ್ಯವಾದ ನರಕವಾಗುತ್ತಿತ್ತು' ಎಂದುಕೊಂಡಳು.

ಮೈಯಲ್ಲಿ ಸ್ವಾಸ್ಥ್ಯವಾದ ಬಳಿಕ ತನ್ನ ಕತೆಯನ್ನು ಮಹಾದೇವಿ ಹೇಳಿದಾಗ ಆಕೆಯ ಸಮವಯಸ್ಕಳಾದ ಅನ್ನಪೂರ್ಣೆಯಿಂದ ಹಿಡಿದು ಎಲ್ಲರೂ ಅಚ್ಚರಿಪಟ್ಟರು. ಗುಣವತಿಯಂತೂ ಬೆರಗಾಗಿ ಮೂಗಿನ ಮೇಲೆ ಬೆರಳಿಟ್ಟಳು.

'ಅಯ್ಯೋ ಪಾಪ, ಇಂಥಾ ಅರಗಿಳಿಯಂಥ ಮಗಳ್ನ ಬಿಟ್ಟು ಆ ತಾಯಿಯ ಜೀವ ಅದೆಷ್ಟು ಚಟಪಟಿಸುತ್ತಿದೆಯೋ....' ಎಂದು ವ್ಯಥೆಯಿಂದ ನುಡಿದಳು.

'ನೀವೂ ನನ್ನ ತಾಯಿಯೇ ಅಲ್ವೆ? ಮನೇಲಿ ಇದ್ದಿದ್ರೆ ಆ ತಾಯಿಯ ಪ್ರೇಮವಷ್ಟೇ ಸಿಗುತ್ತಿತ್ತು. ಈಗ ನಿಮ್ಮ ವಾತ್ಸಲ್ಯವನ್ನೂ ಉಂಡೆನಲ್ಲಾ....' ಮಹಾದೇವಿ ಅಂದಾಗ ಗುಣವತಿ ಕಣ್ಣೀರು ಮಿಡಿದಳು.

'ಇದೇಕೆ ಅಳ್ತೀಯವ್ವಾ....?' ಅಚ್ಚರಿಪಟ್ಟಳು ಮಹಾದೇವಿ.

'ನಿನ್ನಂಥ ಮಗಳನ್ನು ಪಡೆದುದಕ್ಕೆ ಆನಂದ, ಇಂಥಾ ಮಗಳನ್ನು ಕಳೆದುಕೊಂಡ ನಿನ್ನ ಹೆತ್ತವ್ವನ ಬಗೆಗೆ ಮರುಕ, ಅದಕ್ಕೇ ಕಣ್ಣೀರು ಬಂತು' ಎಂದು ಒರೆಸಿಕೊಂಡಳು.

ಆ ಮನೆಯ ಪ್ರೇಮಾಮೃತವನ್ನು ತನ್ನ ಆರೋಗ್ಯ ಸುಧಾರಿಸುವ ತನಕ ಸವಿದಳು. ಬಳಲಿಕೆ ಕಳೆದು ನಡೆಯುವ ತ್ರಾಣ ಮೈಗೂಡುತ್ತಲೇ ಗೌಡರಲ್ಲಿ ಬಿನ್ನವಿಸಿದಳು :

'ತಮ್ಮ ವಾತ್ಸಲ್ಯದಿಂದ ನಾನು ಬದುಕಿ ಉಳಿದೆ. ಇನ್ನು ಮುಂದೆ ಸಾಗಲು ಅಪ್ಪಣೆ ನೀಡಬೇಕು.'

ಚಂದ್ರಪ್ಪಗೌಡರು ವ್ಯಥಿತರಾದರು. ತಮ್ಮಲ್ಲಿಯೇ ಇರಲು ಒತ್ತಾಯಿಸಿದರು; ಇಲ್ಲವೇ ಇನ್ನೂ ಕೆಲವು ದಿವಸಗಳ ಮಟ್ಟಿಗಾದರೂ ಇರಬೇಕೆಂದು ಬಲವಂತಪಡಿಸಿದರು.

ಮಹಾದೇವಿ ಮುಗುಳ್ನಕ್ಕು ನಿರಾಕರಿಸಿದಳು.

'ನನ್ನ ಸಾಧನೆ ಪೂರ್ಣವಾಗುವತನಕ ಎಲ್ಲಿಯೂ ಸ್ಥಿರವಾಗಿ ನಿಲ್ಲೆನು. ಈ ಬದುಕು ಶಾಶ್ವತವಲ್ಲ, ನೀರಿನ ಮೇಲಣ ಗುಳ್ಳೆ. ಈ ಶರೀರ ಬುದ್ಬುದ ಯಾವಾಗಬೇಕಾದರೂ ಸಿಡಿಯಬಹುದು. ಆದ್ದರಿಂದ ಆದಷ್ಟು ಬೇಗ ಗುರಿಯೆಡೆಗೆ ಹರಿಯಬೇಕು.' ಚಂದ್ರಪ್ಪಗೌಡರು ಉಳಿಸಿಕೊಳ್ಳದಾದರು.

'ಹೋಗಲಿ, ಏಕಾಂಗಿನಿಯಾಗಿ ಪಯಣಿಸುವ ಕಷ್ಟವನ್ನು ಸಾಕುಮಾಡಿ, ಯಾತ್ರಾರ್ಥಿಗಳೊಡನೆ ನಡೆಯುವು,' ಎಂದು ಹರಿಹರಪುರದಿಂದ ಹಂಪೆಯ

ಮಹಾದೇವಿ ಪಯಣಕ್ಕೆ ಸಿದ್ಧವಾದಾಗ ಗುಣವತಿಯು ಬೆಲೆ ಬಾಳುವ ರೇಷ್ಮೆ ಸೀರೆಯನ್ನು ಉಡಿಸಬಂದಳು. ಆಗ ಮಹಾದೇವಿ ನಕ್ಕು ನುಡಿದಳು:

'ಬೇಡ ತಾಯಿ; ಶಿವನು ಕೊಟ್ಟ ಇದೊಂದು ಸೀರೆಯೇ ಮೈ ಮುಚ್ಚಲು ಸಾಕು. ಮುಂದೆ ಈ ಸಂಗ್ರಹವೇ ಹೊರೆಯಾದೀತು.'

ಮಹಾದೇವಿ ಹೊರಟು ನಿಂತಾಗ ಮನೆಯವರೆಲ್ಲ ಗದ್ಗದಿತರಾಗಿದ್ದರು. ಆಕೆ ಇರುವಷ್ಟು ಕಾಲ ಗೌಡರ ಮನೆ ಶಿವಾನುಭವಮಂಟಪವಾಗಿ, ಪ್ರತಿದಿನ ಪ್ರವಚನ, ಅನುಭವ ಮಂಥನ ನಡೆಯುತ್ತಿದ್ದವು. ಎಲ್ಲರ ವಾತ್ಸಲ್ಯವನ್ನು ಮೂಕಳಾಗಿ ಸ್ವೀಕರಿಸಿ, ಶರಣುಗಳನ್ನರ್ಪಿಸಿ ಮುಂದೆ ಸಾಗಿದಳು.

ಅನೇಕ ಯಾತ್ರಾರ್ಥಿಗಳ ಸಂಗಡ ಪಂಪಾಕ್ಷೇತ್ರದ ಕಡೆಗೆ ನಡೆಯುತ್ತಿದ್ದ ಮಹಾದೇವಿಗೆ ವಿಪತ್ತುಗಳು ಕಡಿಮೆಯಾದವು. ಬೀಡು ಬಿಟ್ಟಲ್ಲಿ ಅವರಿಗೆ ಧರ್ಮಬೋಧೆ ಮಾಡುತ್ತ ಸಾಗಿದಳು. ಅವರು ತಮ್ಮ ಅಡಿಗೆಯನ್ನು ಸಿದ್ಧ ಪಡಿಸಿಕೊಳ್ಳುವಷ್ಟರಲ್ಲಿ ಊರೊಳಕ್ಕೆ ಹೋಗಿ ಭಿಕ್ಷೆಯನ್ನು ತರುತ್ತಿದ್ದಳು. ಅವರು ಕೊಟ್ಟದ್ದನ್ನು ಉಣ್ಣಲು ಒಪ್ಪುತ್ತಿರಲಿಲ್ಲ.

'ನನ್ನ ಮನಸ್ಸು ಗಟ್ಟಿಗೊಳ್ಳಬೇಕಾದರೆ, ಮಾನಾಪಮಾನಗಳನ್ನು ಸಮ ಚಿತ್ತದಿಂದ ಎದುರಿಸಬೇಕಾದರೆ, ರುಚಿ-ಅರುಚಿಗಳನ್ನು ನಿರ್ಲಕ್ಷಿಸಬೇಕಾದರೆ ಭಿಕ್ಷಾನ್ನವೇ ಒಳ್ಳಿತು. ಬಿಸಿಲು ಮಳೆ ಗಾಳಿಗೆ ಸಿಕ್ಕದೆ ಮನೆಯಲ್ಲೇ ಬೆಳೆದ ಮಕ್ಕಳು ಬಲು ಸೂಕ್ಷ್ಮವಾಗಿ, ರೋಗಗಳನ್ನು ಎದುರಿಸಲಾರದೆ ಅವುಗಳಿಗೆ ಬೇಗನೇ ವಶವಾಗುತ್ತಾರೆ. ಬಿಸಿಲು ಮಳೆ ಗಾಳಿಯನ್ನು ಯಥೇಚ್ಛವಾಗಿ ಉಂಡು ಬೆಳೆದವರು ಕಬ್ಬಿಣದ ಗುಂಡುಗಳಂತೆ ಪರಿಸರದ ವಿಕೋಪವನ್ನು ಎದುರಿಸಿ ನಿಲ್ಲುತ್ತಾರೆ. ಹಾಗೆಯೇ ಕಷ್ಟ ನಿಂದನೆಗಳನ್ನು ಉಂಡು ಬೆಳೆವ ಮನಸ್ಸು ಸಹ ಬೇಗನೇ ಗಟ್ಟಿಗೊಳ್ಳುವುದು; ನನಗೆ ಅದೇ ಇರಲಿ' ಎಂದು ನಿರ್ಧಾರದ ಧ್ವನಿಯಲ್ಲಿ ನುಡಿದಾಗ ಯಾತ್ರಾರ್ಥಿಗಳು ಒತ್ತಾಯಿಸಲಿಲ್ಲ.

ರತ್ನಗಂಬಳಿಯಮೇಲೆ ನಡೆದ ಮಲ್ಲಿಗೆಯ ಪಾದಗಳು, ನೆಲವನ್ನೂ ಬಿರು ಸಾಗಿ ಅನುಭವಿಸುತ್ತವೆ. ಮೊದಲ ಬಾರಿಗೆ ನೆಲದಮೇಲೆ ಪಾದವನ್ನೂರು ವಾಗ ಬಹಳ ಹಿಂಸೆ ಅದರ ಒಡೆಯರಿಗೆ; ಬರಿಗಾಲಿನಿಂದ ನಡೆಯುತ್ತ ರೂಢಿ ಯಾದಮೇಲೆ, ಕಾಲುಗಳು ದಡ್ಡು ಬಿದ್ದು ಯಾವ ಕಷ್ಟವಿಲ್ಲದೆ ನಡೆಯ ತೊಡಗುತ್ತವೆ. ಹಾಗೆಯೇ ಮಹಾದೇವಿಯ ಶರೀರ-ಮನಗಳು, ಭೌತಿಕ-ಮಾನಸಿಕ ಕಷ್ಟಗಳನ್ನು ಸಹಜವಾಗಿ ಎದುರಿಸುವ ಶಕ್ತಿಯನ್ನು ಹೊಂದಿದವು. ಪ್ರಯಾಣ ನಿರ್ವಿಘ್ನವಾಗಿ ಸಾಗಿ ಮಹಾದೇವಿ ಪಂಪಾಕ್ಷೇತ್ರ ಮುಟ್ಟಿದಳು.

ನೀಲವರ್ಣದ ಬೆಟ್ಟಗಳ ಸಾಲು, ಕಲ್ಲಿನ ಗುಡ್ಡಗಳು, ಗುಡ್ಡದ ನಡುವೆ ಬಳುಕುತ್ತ ಒಯ್ಯಾರದಿಂದ ಗಮಿಸುವ ತುಂಗಭದ್ರೆ, ದಟ್ಟ ಅರಣ್ಯ ಮಹಾದೇವಿಯನ್ನು ತಡೆದು ನಿಲ್ಲಿಸಿದವು. 'ಗಂಗಾಸ್ನಾನ, ತುಂಗಾಪಾನ' ಎಂಬ ನಾಣ್ಣುಡಿಯನ್ನು ಅನುಭವಿಸಿದ ಮಹಾದೇವಿ ತುಂಗಭದ್ರೆಯ ಮಡಿಲ ಮೇಲಿನ ಕಲ್ಲು ಗುಹೆಯೊಳಗೆ ಕೆಲವಾರು ದಿವಸ ಅನುಷ್ಠಾನ ಮಾಡಿದಳು.

ಅಲ್ಲಲ್ಲಿಯೇ ಪರ್ಣಕುಟಿಗಳನ್ನು ಕಟ್ಟಿಕೊಂಡು ಯಜ್ಞಕುಂಡಗಳನ್ನು ರಚಿಸಿಕೊಂಡು ಹೋಮ, ಹವನ, ಯಜ್ಞಗಳನ್ನು ಮಾಡುತ್ತ, ಬಂದ ಯಾತ್ರಾರ್ಥಿಗಳ ಕ್ಷೇಮಕ್ಕಾಗಿಯೂ ಯಜ್ಞ ಮಾಡುವ ಕರ್ಮಕಾಂಡಿಗಳು ರಾಗಬದ್ಧವಾಗಿ ನುಡಿವ ಮಂತ್ರದ ನಾದವು ವಾತಾವರಣವನ್ನು ತುಂಬುತ್ತಿತ್ತು. ಮಹಾದೇವಿ ಅಲೆದಾಡುತ್ತ ಪ್ರಕೃತಿಸೌಂದರ್ಯವನ್ನು ಸವಿಯುವುದರ ಜೊತೆಗೆ ವಿವಿಧ ಸಾಧಕರ ಸಾಧನೆಗಳನ್ನು ವೀಕ್ಷಿಸಿದಳು. ಶಾಸ್ತ್ರಗಳ ಕೇವಲ ಯಾಂತ್ರಿಕ ಉಚ್ಚಾರದಲ್ಲಿ ಮೈಮರೆತು, ಅದರೊಳಗಣ ಸತ್ವವನ್ನು ಅರಿಯದವರನ್ನು ಕಂಡು ಮರುಕಗೊಂಡಳು.

ವೇದ ಶಾಸ್ತ್ರ ಆಗಮ ಪುರಾಣಂಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಭೋ !
ಇವ ಕುಟ್ಟಲೇಕೆ, ಕುಸುಕಲೇಕೆ ?
ಅತ್ತಲಿತ್ತ ಹರಿವ ಮನದ ಶಿರವ ಹರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನಾ.*

ಅಂತರಂಗದ ಶುದ್ಧಿ, ಶಿವನೊಲಿಮೆ, ಮನದ ಏಕಾಗ್ರತೆ ಸಾಧಿಸದೆ ಕೇವಲ ಶಾಸ್ತ್ರಜ್ಞಾನದಲ್ಲಿ ಮುಳುಗಿ, ಕಲಿತ ಗಿಳಿಗಳಂತೆ ಯಾಂತ್ರಿಕವಾಗಿ ಉಚ್ಚರಿಸುವವರನ್ನು ಕಂಡು 'ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ' ಎಂದು ನುಡಿದಳು.

ಗಿರಿಯ ಗವಿಗಳಲ್ಲಿ ವಾಸಿಸುತ್ತ ಸೊಪ್ಪುಸದೆ ತಿನ್ನುತ್ತ, ಕಠಿಣ ವ್ರತಗಳನ್ನು ಕೈಕೊಂಡು, ಒಂಟಿಕಾಲಿನ ಮೇಲೆ ನಿಂತು ತಪಸ್ಸು ಮಾಡುವ ಹಠಯೋಗಿಗಳನ್ನು ಕಂಡು 'ಗಿರಿಗಹ್ವರದೊಳಾಡುವ ನವಿಲುಗಳಿರಾ ನೀವು ಕಾಣಿರೆ' ಎಂದು ನುಡಿದಳು.

ತುಂಗಾತಟದ ಗುಂಟ ಇದ್ದ ಅನೇಕ ಗುಡಿಗಳಲ್ಲಿ ಭಕ್ತರನ್ನು ಕುಳ್ಳಿರಿಸಿಕೊಂಡು, ಅವರಿಗೆ ನಿಜವಾದ 'ತತ್ತ್ವ'ದ ಅರಿವನ್ನು ಮಾಡಿಕೊಡದೆ, ಅಂತ-

* ಮ. ವ. ೨೪೮

ರಂಗಶುದ್ಧಿಯನ್ನು ಅಳವಡಿಸಿಕೊಳ್ಳಲು ತಿಳಿಹೇಳಿದ ಕೇವಲ ವೈದ್ಯನಿಮಿತ್ತವಾಗಿ ಭಕ್ತಿಪ್ರಧಾನ ಗೀತೆಗಳನ್ನು ಹಾಡುತ್ತ ಮೈಮರೆವವರನ್ನು ಕಂಡು, 'ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ' ಎಂದಳು.

ತಮ್ಮತಮ್ಮಂತರಂಗದಲ್ಲೇ ಅವಿರಳವಾಗಿ ಹುದುಗಿಕೊಂಡಿರುವ ಆತ್ಮತತ್ತ್ವವನ್ನು ಕಾಣಲು ಅನುಭಾವಪ್ರಧಾನ ಪ್ರಯತ್ನಮಾಡದೆ ಕೇವಲ ಆಧಾರ, ಸ್ವಾಧಿಷ್ಠಾನವೆಂದು ಷಟ್‌ಚಕ್ರಗಳ ಭೇದನದ ದುಸ್ಸಾಹಸದಲ್ಲಿ ತೊಡಗುವ ಕುಂಡಲಿನಿಯೋಗಿಗಳನ್ನು, ದೇವರು, ಜಗತ್ತು, ಮುಕ್ತಿ, ಆದಿ, ಅನಾದಿಗಳ ಬಗ್ಗೆ ತಾರ್ಕಿಕ ಚರ್ಚೆಗಿಳಿಯುವ ಶಬ್ದಬ್ರಹ್ಮಿಗಳಾದ ತತ್ತ್ವಜ್ಞಾನಿಗಳನ್ನು ಕಂಡು ಹೀಗೆ ಅಭಿಪ್ರಾಯಪಟ್ಟಳು :

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞೇಯುವ ನುಡಿದಡೇನು?
ಆದಿ ಅನಾದಿಯು ಸುದ್ದಿಯ ಕೇಳಿದಡೇನು ಹೇಳಿದಡೇನು ?
ತನ್ನಲ್ಲಿದ್ದುದ ತಾನರಿಯದನ್ನಕ್ಕರ
ಉನ್ಮನಿಯ ರಭಸದ ಮನ ಪವನದ ಮೇಲಿದ್ದು
ಚನ್ನಮಲ್ಲಿಕಾರ್ಜುನಯ್ಯನ ಭೇದಿಸಲರಿಯರು.*

ವೈಚಾರಿಕತೆಯನ್ನು ಬೆಳೆಸಿಕೊಳ್ಳದೆ ಮೂಢಮಯ, ತಾಮಸ ಭಕ್ತಿಯನ್ನು ಮಾಡುತ್ತ ಉನ್ಮತ್ತರಾಗಿ ಭಜಿಸುತ್ತ, ಆವೇಶದಿಂದ ಕುಣಿಯುವ ಕೆಲವು ಭಕ್ತಿ ಯೋಗಿಗಳನ್ನು ಕಂಡು 'ಎರಗಿ ಬಂದಾಡುವ ದುಂಬಿಗಳಿರಾ ನೀವು ಶಿವನನ್ನು ಕಾಣಲಾರಿರಿ' ಎಂದು ಹೇಳಿದಳು. ತೊರೆಯ ತಡಿಯಲ್ಲಿ ಕುಟೀರಗಳನ್ನು ಕಟ್ಟಿಕೊಂಡು ಕಣ್ಮುಚ್ಚಿ ಸದಾ ಧ್ಯಾನದಲ್ಲಿ ಮಗ್ನರಾಗಿ, ಯಾವ ಕಾಯಕವನ್ನೂ ಮಾಡದ ಧ್ಯಾನಯೋಗಿಗಳನ್ನು ಕಂಡು 'ಕೊಳನ ತಡಿಯೊಳಾಡುವ ಹಂಸೆಗಳಿರಾ ನೀವು ಕಾಣಿರೆ' ಎಂದು ನುಡಿದು, ಅವರಾರೂ ಚನ್ನಮಲ್ಲಿಕಾರ್ಜುನನ ನಿಲವನ್ನು ತೋರಿಸಲಾರರು ಎಂದರಿತಳು. ಏಕಮುಖ ಬೆಳವಣಿಗೆ ಮಾಡುವ ಈ ಯಾವ ಸಾಧನೆಗೂ ತನ್ನ ಗುರಿಯ ಸಿದ್ಧಿಗೆ ಸಹಾಯಕವಾಗವು ; ಸರ್ವಾಂಗಪರಿಪೂರ್ಣ ವ್ಯಕ್ತಿತ್ವವನ್ನು ಬೆಳೆಯಿಸಲಾರವು ಎಂದು ಆತೃಪ್ತಿಗೊಂಡಳು.

೪೧. ನಿಂದಕರಿಗೆ ನಿಜಬೋಧೆ

ಮಹಾದೇವಿ ಒಂದು ದಿವಸ ನದಿಯ ದಂಡೆಯ ಮೇಲೆ ಕುಳಿತು ಪೂಜಿಸುತ್ತಿರುವಾಗ ದೂರದಲ್ಲಿಂದ ಏಕನಾದದ ಧ್ವನಿಯೊಡನೆ ವಚನಗಳ ಗಾಯನ ಕೇಳಿ ಬಂದಿತು. ಬೆಂಗಾಡಿನಲ್ಲಿ ನಡೆವವನಿಗೆ ಸಿಹಿ ನೀರಿನ ಬುಗ್ಗೆಯು ಕಂಡಷ್ಟು ಆನಂದವೆನಿಸಿ ಕುತೂಹಲಿತಳಾಗಿ ಅತ್ತ ನಡೆದಳು. ನದಿಯ ದಂಡೆಯ ಮೇಲಿನ ಗುಡಿಯೊಂದರಲ್ಲಿ ಕಾವಿಧಾರಿ ಸನ್ಯಾಸಿಗಳು ಕೆಲವರು ಕುಳಿತು ವಚನಗಳನ್ನು ಹಾಡುತ್ತ, ಭಜನೆ ಮಾಡುತ್ತಿದ್ದರು. ಕೆಲವು ಬೈರಾಗಿಣಿಯರೂ ಅವರೊಡನೆ ಇದ್ದರು. ಮಹಾದೇವಿ ಆ ಗುಂಪಿನ ಸಮೀಪದಲ್ಲಿ ಕುಳಿತು ತನ್ಮಯಳಾಗಿ ವಚನಗಳನ್ನು ಆಲಿಸತೊಡಗಿದಳು. ಭಜನೆ ಮುಗಿಸಿದ ಸನ್ಯಾಸಿಗಳು ಮಹಾದೇವಿಯತ್ತ ನೋಡಿದರು. ಆಕೆಯ ಕೊರಳೊಳಗಿನ ಇಷ್ಟಲಿಂಗ, ಹಣೆಯ ವಿಭೂತಿ ನೋಡಿ ಲಿಂಗವಂತಳೆಂದು ಗುರುತಿಸಿದರು. ಮಹಾದೇವಿಯ ತಾರುಣ್ಯ, ಆ ಚೆಲುವನ್ನು ನೋಡಿ ದಿಗ್ಭ್ರಾಂತರಾದರು, ಮುಖದ ಸಾತ್ವಿಕತೆಯನ್ನು ಕಂಡು ಉತ್ತಮ ಸಾಧಕಳೆಂದು ಗುರುತಿಸಿದರು.

'ನೀನು ಯಾರು ತಾಯಿ ?'

'ಯಾರೆಂಬುದನ್ನು ಕಂಡುಕೊಳ್ಳಲೆಂದೇ ಈ ಸಾಧನೆ ನಡೆದಿದೆ ಅಯ್ಯಾ.'

'ಎತ್ತಲಿಂದ ಬಂದೆ, ಎತ್ತ ಹೊರಟಿರುವೆಯಮ್ಮಾ ?'

'ಮೂಲ ಸ್ಥಾನವಾವುದೋ ಗುರಿಯೂ ಅದೇ ! ಈ ಜೀವ ಪಕ್ಷಿಯ ಉಗಮ, ನೆಲೆಗಳನ್ನು ಕಂಡುಕೊಳ್ಳಲೆಂದೇ ಪ್ರಯತ್ನ ಮಾಡುತ್ತಿರುವೆ. ವ್ಯಾವಹಾರಿಕವಾಗಿ ನುಡಿಯಬೇಕೆಂದರೆ ಉಡುತಡಿಯಿಂದ ಬಂದೆ, ಕಲ್ಯಾಣದ ಕಡೆಗೆ ಹೊರಟಿರುವೆ ?'

'ಬಸವಣ್ಣನ ಕಲ್ಯಾಣಕ್ಕೇ ?' ಅವರು ಒಕ್ಕೊರಲಿನಿಂದ ಕೇಳಿದರು.

'ಅಹುದು ಆ ಅವಿಮುಕ್ತ ಕ್ಷೇತ್ರಕ್ಕೆ, ಆ ದಿವ್ಯಾತ್ಮನ ಪಾದದರ್ಶನಕ್ಕೆ' ಭಾವ ತುಂಬಿ ನುಡಿದಳು.

'ನಾವುಗಳೂ ಅಲ್ಲಿಯವರೇ !' ಒಬ್ಬರಿಗೊಬ್ಬರು ಮುಖ ನೋಡಿಕೊಂಡು ನುಡಿದರು. ಮಹಾದೇವಿಯ ಹೃದಯ ಆನಂದದಿಂದ ನಲಿಯಿತು. ಕಲ್ಯಾಣದ ವಿವರಗಳನ್ನು ತಿಳಿದುಕೊಳ್ಳಲು ಉತ್ಸುಕಳಾದಳು.

'ಎಂತಹ ಪುಣ್ಯವಂತರು ! ಅಣ್ಣನವರ ದರ್ಶನವಾಗಲೇ ಆಗಿಹೋಗಿದೆಯೇ ? ನನಗೆಂದು ಅದು ಕೈಗೂಡೀತೋ ?' ಕ್ಷಣಗಳನ್ನು ಯುಗಗಳನ್ನಾಗಿ

ಅಂತ. ಪಾಪ, ಗೊತ್ತಿಲ್ಲದೆ ಹೋಗುವಿರಿ....' ಸನ್ಯಾಸಿಯೊಬ್ಬ ಹೇಳಿದ. ಮಹಾದೇವಿ ದಿಗ್ಭ್ರಾಂತಳಾದಳು.

'ನಿಜ, ನಿಜ; ಆ ಬಸವಣ್ಣನ ಬಣ್ಣದ ಮಾತಿಗೆ ಮರುಳಾಗಿ ಎಷ್ಟೋ ಜನ ಹೀಗೆ ಬರುವರು. ಅಲ್ಲಿಗೆ ಬಂದನಂತರ ಅವರ ಭ್ರಮೆ ನಿರಸನವಾಗುವುದು' ಮತ್ತೊಬ್ಬನು ನುಡಿದ.

ಮಹಾದೇವಿಗೆ ಅಚ್ಚರಿಯಮೇಲಚ್ಚರಿ. ಬಸವಣ್ಣನ ಧರ್ಮದ ಲಾಂಛನ ತೊಟ್ಟು, ಅಲ್ಲಿಯವರೆಂದೇ ಹೇಳಿಕೊಳ್ಳುತ್ತ ಗುರುವನ್ನೇ ನಿಂದೆ ಮಾಡುತ್ತ ಹೋಗುವ ಇವರನ್ನು ಕಂಡು ವಿಚಲಿತಳಾದಳು. ಮನಸ್ಸು ಕ್ಷಣ ಕಾಲ ಹೊಯ್ದಾಡಿತು.

'ಇವರು ಹೇಳುವುದು ನಿಜವೇ? ಸುಳ್ಳಿದ್ದರೆ ಹೀಗೇಕೆ ಹೇಳುತ್ತಾರೆ?' ಎಂಬ ಸಂಶಯ ಸುಳಿಯಿತು. ಆದರೆ ವಿವೇಕವು ಉತ್ತರಿಸಿತು:

'ಗುರುಲಿಂಗದೇವರಂತಹ ಮಹಾನುಭಾವರು, ವೈಚಾರಿಕ ಔನ್ನತ್ಯ ಉಳ್ಳವರು ಬಸವಣ್ಣನ ವ್ಯಕ್ತಿತ್ವ, ತತ್ತ್ವ, ಕಾರ್ಯಸಾಧನೆಗಳಿಗೆ ಮಾರು ಹೋಗಿರುವಾಗ ಇಂತಹ ಕಾಕುಪೋಕು ಜನರ ಮಾತೇನು! ಗುರುದೇವರು ಅಷ್ಟು ಸುಲಭವಾಗಿ ಮರುಳಾಗುವವರಲ್ಲ.

ಅಲ್ಲಿಂದ ಬಂದ ಧರ್ಮಪ್ರಸಾರಕರೂ ಅಷ್ಟೇ; ಎಂತಹ ತ್ಯಾಗಿಗಳು, ವಿವೇಕಿಗಳು. ಅವರ ಹೃದಯದ ಕಣಕಣದಲ್ಲಿಯೂ ಬಸವಭಕ್ತಿ ತುಂಬಿ ತುಳುಕುತ್ತದೆ. ಅಂದಾಗ ಅವೆಲ್ಲವನ್ನೂ ಪ್ರತ್ಯಕ್ಷ ಕಂಡ ನಾನು ಇವರ ಮಾತನ್ನು ನಂಬಬೇಕೆ? ಸಲ್ಲದು' ಎಂದು ನಿಶ್ಚಯಿಸಿಕೊಂಡಳು. ಆಕೆಯ ಚಿಕಿತ್ಸಕ ಬುದ್ಧಿ ಜಾಗ್ರತವಾಯಿತು.

'ಅಹುದೇ, ಒಳ್ಳಿತಾಯಿತು ಬಿಡಿ. ಮಾರ್ಗಮಧ್ಯದಲ್ಲೇ ನೀವು ಹೇಳದಿದ್ದರೆ ನಾನೂ ಅಲ್ಲಿಯತನಕ ಶ್ರಮವಹಿಸಿ ಹೋಗುತ್ತಿದ್ದೆ. 'ಬಸವಣ್ಣನವರು ಮಹಾನುಭಾವರು' ಎಂದು ಪ್ರಭುದೇವರಂತಹವರು ಸಹ ಹೇಳಿರುವರಲ್ಲ. 'ಗುಹೇಶ್ವರಾ, ಸಂಗನ ಬಸವಣ್ಣನ ಸಾನ್ನಿಧ್ಯದಿಂದ ನಾನು ಸದ್ಭಕ್ತನಾದೆ ಎಂದು ಅನ್ನುತ್ತಾರೆ.'

'ಇವರೆಲ್ಲ ಹೊಗಳುಭಟ್ಟಂಗಿಗಳು. ಪ್ರಭುದೇವನು ನನಗಿಂತ ಯಾವ ವಿಧದಲ್ಲೂ ಹೆಚ್ಚಿಲ್ಲ. ನಾನು ಉಚ್ಚಕುಲದಲ್ಲಿ ಹುಟ್ಟಿದವನು. ಅವನೋ ಕೀಳಾದ ನಟುವರ ಜಾತಿಯಲ್ಲಿ ಹುಟ್ಟಿದವ. ಅಂತಹ ಕುಲಹೀನನನ್ನು ಶೂನ್ಯ

ನ್ನಾಗಿ ಮಾಡುವೆನೆಂಬ ಸಾಹಸ ಆ ಬಸವನದು. ಅವನಿಗೆ ಜಾತಿಭೇದವಿಲ್ಲ; ಕತ್ತೆಯೂ ಒಂದೇ, ಕುದುರೆಯೂ ಒಂದೇ! ಸರಿ. ಬಸವನು ಕೊಡುವ ಅನ್ನಕ್ಕಾಗಿ, ಸ್ಥಾನಕ್ಕಾಗಿ ಅವರು ಇವನನ್ನು ಹೊಗಳುವರು' ಅಸೂಯೆಯ ಧ್ವನಿಯಲ್ಲಿ ಒಬ್ಬ ಹಿರಿಯ ಸನ್ಯಾಸಿ ನುಡಿದ.

'ಗುರುವನ್ನು ನಿಂದಿಸುವ ಈ ಪಾತಕಿಗಳಿಗೆ ಲಿಂಗವೇಕೆ, ಧರ್ಮಲಾಂಛನವೇಕೆ?' ಎಂದು ಅಪಾರ ವ್ಯಥೆಯಾಯಿತು ಮಹಾದೇವಿಗೆ. ಆದರೂ ಸಮಾಧಾನ ತಂದುಕೊಂಡಳು.

'ಎಂತೆಂತಹ ಪ್ರತಿಭಾವಂತರು, ರಾಜಮಹಾರಾಜರು ಬಸವತತ್ತ್ವಕ್ಕೆ ಶರಣಾಗಿ ಕಲ್ಯಾಣಕ್ಕೆ ಬಂದು ಸರಳಜೀವನವನ್ನು ಕೈಗೊಂಡಿದ್ದಾರಂತೆ?' ಮಹಾದೇವಿ ಪ್ರಶ್ನಿಸಿದಳು.

'ಅದೆಲ್ಲ ಬಸವನ ಸೋಗು. ಅವನ ಪ್ರಚಾರಕರ ಮಾತಿನ ವೈಖರಿಗೆ ಮರುಳಾಗಿ ಅನೇಕರು ಎಲ್ಲವನ್ನು ತೊರೆದು ಬರುವರು. ಪಾಪ! ನೀನು ಹೋಗುತ್ತಿಲ್ಲವೇ, ಹಾಗೆ! ಬಂದನಂತರ ಎಲ್ಲವನ್ನು ತಿಳಿದು ಬಹಳಷ್ಟು ಮಂದಿ ಮರಳಿ ಹೋಗುವರು. ನಾವು ಬಂದಿಲ್ಲವೇ, ಹೀಗೆ.'

'ಅಲ್ಲಿಯ ಅನಾಚಾರ ನೋಡಬೇಕು. ಹಿಂದಿನಿಂದ ಬಂದ ಸಂಪ್ರದಾಯಗಳನ್ನು ಅಲ್ಲಗಳೆಯುವರು. ವಿಘ್ನೇಶ್ವರನ ಪೂಜೆ ಇಲ್ಲ, ನವಗ್ರಹ ಪೂಜೆ ಇಲ್ಲ, ಪಂಚಾಂಗ ನೋಡೋದಿಲ್ಲ' ಇನ್ನೊಬ್ಬ ಹೇಳಿದ.

'ಅದು ಹೋಗಲಿ, ಸಮಾಜಸುಧಾರಣೆ ಎಂಬ ನೆಪದಲ್ಲಿ ಸಮಾಜಬಾಹಿರ, ನೀತಿಗೆಟ್ಟ ವೇಶ್ಯೆಯರನ್ನೆಲ್ಲ ಅನುಭವಮಂಟಪದಲ್ಲಿ ಬಿಟ್ಟುಕೊಳ್ಳುವನು. ಎಲ್ಲರೂ ಜೊತೆಗೇ ಸಮಾನವಾಗಿ ನೆಲದ ಮೇಲೆ ಕುಳಿತುಕೊಳ್ಳಬೇಕು. ಅವನಂತೂ ಬುದ್ಧಿ ಇಲ್ಲದವನು, ಪ್ರಧಾನಮಂತ್ರಿಯಾದರೂ ತನ್ನ ಸ್ಥಾನಮಾನದ ಅರಿವಿಲ್ಲದೆ ಎಲ್ಲರೊಡನೆ ಸಮಾನವಾಗಿ ಕುಳಿತುಕೊಳ್ಳುವನು ಎಂದರೆ, ನಮ್ಮಂತಹವರೂ ಹಾಗೆ ಕೂಡಲು ಸಾಧ್ಯವೆ?' ಮತ್ತೊಬ್ಬ ಹೇಳಿದ.

'ಅಲ್ಲಿ ಎಲ್ಲರೂ ದುಡಿಯಲೇಬೇಕು. ಮಹಾಮನೆಯ ದಾಸೋಹದಲ್ಲಿ ಪ್ರಸಾದ ಪಡೆಯಬೇಕಾದರೆ ಎಲ್ಲರೂ ಶಾರೀರಿಕ, ಬೌದ್ಧಿಕ ಕಾಯಕ ಮಾಡಲೇಬೇಕು. ಹಂಗೆ ದುಡೀಬೇಕಾದರೆ ನಾವು ಮನೆಯಲ್ಲಿ ದುಡಿಯುತ್ತಿದ್ದೆವು. ಇಲ್ಲಿಗೇಕೆ ಬರಬೇಕಾಗಿತ್ತು?' ಮೊದಲನೆಯವ ಹೇಳಿದ.

ಮಹಾದೇವಿ ಮೌನವಾಗಿ ಆಲಿಸಿ, ನಂತರ ಕೇಳಿದಳು:

'ನಿಮಗೆ ಅಣ್ಣನವರ ತತ್ತ್ವಗಳಲ್ಲಿ ವಿಶ್ವಾಸವಿಲ್ಲದಿದ್ದರೆ ಲಿಂಗವನ್ನೇಕೆ ಕಟ್ಟಿಕೊಂಡಿದ್ದೀರಿ?

ಕುತೂಹಲತೆಯಿಂದ ಪ್ರಶ್ನಿಸಿದಳು.

'ಇಷ್ಟಲಿಂಗವಿದ್ದರೆ ಈಗೀಗ ಹೆಚ್ಚಾಗಿ ಪ್ರಚಾರವಾಗಿ, ಹಬ್ಬುತ್ತಿರುವ ಲಿಂಗಾಯತ ಧರ್ಮದ ಅನುಯಾಯಿಗಳ ಮನೆಯಲ್ಲಿ ಪ್ರಸಾದಕ್ಕೆ ಅನುಕೂಲ. ವಚನಗಳು ತಿಳಿಗನ್ನಡದಲ್ಲಿರುವುದರಿಂದ ಜನಸಾಮಾನ್ಯರನ್ನು ಬೇಗನೆ ಆಕರ್ಷಿಸುವುವು ಮತ್ತು ಅವರ ಮೇಲೆ ಪರಿಣಾಮ ಮಾಡುವುವು.'

'ಅಣ್ಣನವರು ಕೊಟ್ಟ ತತ್ತ್ವಗಳು, ವಚನಗಳು ಪ್ರಚಾರಕ್ಕಾಗಿ ನಿಮಗೆ ಬೇಕು; ಅವರ ವ್ಯಕ್ತಿತ್ವದಲ್ಲಿ ಮಾತ್ರ ವಿಶ್ವಾಸವಿಲ್ಲವೇ?' ತನ್ನ ತಳಮಳವನ್ನು ಅಡಗಿಸಿಕೊಂಡು ಮೃದುವಾಗಿ ಪ್ರಶ್ನಿಸಿದಳು.

'ತಿಪ್ಪೆಯಲ್ಲೊಂದು ಮಾಣಿಕ್ಯವಿದ್ದರೆ, ಮಾಣಿಕ್ಯ ತೆಗೆದುಕೊಳ್ಳಬೇಕು, ಆ ತಿಪ್ಪೆಯ ಗೊಡವೆ ಬೇಡ.' ಸನ್ಯಾಸಿಯ ಈ ಉತ್ತರ ಕೇಳಿ ಮಹಾದೇವಿಯ ಹೃದಯದಲ್ಲಿ ವಿಪ್ಲವವೆದ್ದಿತು.

'ಇವರೆಲ್ಲರೂ ಅನೇಕ ಕಾರಣಗಳಿಗಾಗಿ ಅಲ್ಲಿಂದ ನಿರ್ಗಮಿಸಿದವರು. ನಾವೆಲ್ಲರೂ ಸೇರಿ ಈ ಪಂಪಾಕ್ಷೇತ್ರದಲ್ಲಿ ಒಂದು ಮಠವನ್ನು ಕಟ್ಟಬೇಕೆಂದು ಮಾಡಿದ್ದೇವೆ. ಏಕೆಂದರೆ ಇಲ್ಲಿಯ ವಿರೂಪಾಕ್ಷ ಲಿಂಗವು ಸುಪ್ರಸಿದ್ಧವಾದ ಕ್ಷೇತ್ರಗಳಲ್ಲೊಂದು. ದರ್ಶನಕ್ಕೆ ಇಲ್ಲಿಗೆ ಬರುವ ಜನರು ಬಹಳ. ನಮ್ಮ ಬದುಕಿಗೂ ಕಷ್ಟವಾಗದು. ಕಲ್ಯಾಣಕ್ಕೆ ಹೋಗುವ ಬದಲು ನಮ್ಮೊಡನೆಯೇ ನೀವೂ ಇದ್ದುಬಿಡಿರಿ. ನಾವು ಮಹಾಕ್ರಾಂತಿಯನ್ನೇ ಮಾಡಬಹುದು' ಆ ಗುಂಪಿನಲ್ಲಿದ್ದ ಒಬ್ಬ ನುಡಿದ.

'ಬಹಳ ಸಂತೋಷ; ನಿಮ್ಮ ಔದಾರ್ಯಕ್ಕೆ ಚಿರಋಣಿ! ಆದರೆ ನನಗೆ ಅನ್ನಿಸುತ್ತಿದೆ, ನೀವು ಕಲ್ಯಾಣದ ಶರಣರ ಗುಂಪನ್ನು ಬಿಟ್ಟು ಬಂದುದೇ ಒಳ್ಳೆತಾಯಿತು' ಎಂದು ನಗುತ್ತ ನುಡಿದಳು. ಮಹಾದೇವಿ ಇಲ್ಲಿಯತನಕ ಗಮನಿಸಿದ ಪ್ರಕಾರ ಬಸವಣ್ಣನವರ ವಿರೋಧಿಗಳಲ್ಲಿ ಎರಡು ವಿಚಾರದವರನ್ನು ಗುರುತಿಸಿದಳು. ಸಾಮಾಜಿಕ-ತಾತ್ತ್ವಿಕವಾಗಿ ಅವರನ್ನು ಒಪ್ಪದವರು; ವೈಯಕ್ತಿಕ ಕಾರಣಗಳಿಗಾಗಿ ದ್ವೇಷಿಸುವವರು. ಅವರ ಜಾತ್ಯತೀತ ಧೋರಣೆ, ಮೂಢನಂಬಿಕೆಗಳ ವಿರುದ್ಧ ಹೋರಾಟ, ಪ್ರಗತಿಪರ ವಿಚಾರ, ಸಮಾಜ ಸುಧಾರಣೆಗಳನ್ನು ಬಯಸದವರು ಒಂದು ಬಗೆಯಾದರೆ ತಮ್ಮ ವೈಯಕ್ತಿಕ ಕೀರ್ತಿಪ್ರತಿಷ್ಠೆಗಳ ಬೆಳವಣಿಗೆಗೆ ಅವಕಾಶ ಸಿಗದವರು ಇನ್ನೊಂದು ಬಗೆಯವರು.

ಮಹಾದೇವಿಯ ಮಾತಿನಿಂದ ಅವರಿಗೆ ಆಶ್ಚರ್ಯವಾಗಿ, ಕೇಳಿದರು:

'ಒಂದು ಬುಟ್ಟಿಯ ತುಂಬ ಒಳ್ಳೆಯ ಹಣ್ಣುಗಳು ಇರುವಾಗ, ಅದರಲ್ಲಿ ಒಂದೆರಡು ಕೊಳೆತ ಹಣ್ಣುಗಳಿದ್ದರೆ ಅವು ಉಳಿದುವನ್ನೂ ಕೊಳೆಯಿಸುವುವು. ತಾವು ಹೊರಬಂದು ಬಹು ಉಪಕಾರ ಮಾಡಿದಿರಿ. ಇಲ್ಲವಾದರೆ ನಿಮ್ಮಂತಹ ಕುತಂತ್ರ ತಲೆಯುಳ್ಳವರ ಹಿತೋಪದೇಶ ಕೇಳಿ ಅಪರಿಪಕ್ವವಾದ, ಪರತಂತ್ರ ತಲೆಯ ಸಾಧಕರು ದಿಕ್ಕು ತಪ್ಪುವ ಸಂಭವವಿರುತ್ತಿತ್ತು. ಅಷ್ಟೇ ಅಲ್ಲ ಒಟ್ಟಿದ ಬಣವೆಯ ಮಂಕಾದ ಹೊರಪದರವನ್ನು ನೋಡಿ ಅನುಭವಿಗಳು ಬಣವೆಯ ಒಳಗಣ ದಂಟೆಲ್ಲ ಕೆಟ್ಟಿರಬೇಕೆಂದು ತಪ್ಪು ಊಹೆ ಮಾಡುವಂತೆ, ನಿಮ್ಮಂತಹ ಕುಹಕಿಗಳು ಅನುಭವಮಂಟಪದಲ್ಲಿಇದ್ದುದೇ ಆದರೆ ನಿಮ್ಮಂತೆಯೇ ಉಳಿದ ಶರಣರೂ ಸಹ ಎಂದು ಅಪರಿಚಿತರು ಅಳೆದುಬಿಡುತ್ತಿದ್ದರು.'

'ಅಂದರೆ ನಮ್ಮದೇ ತಪ್ಪೆಂದು ನಿಮ್ಮ ಅಭಿಪ್ರಾಯವೇ ?' ಆಶ್ಚರ್ಯದಿಂದ ಕೇಳಿದನೊಬ್ಬ.

'ನಿಮಗೆ ಅವರು ಕೊಟ್ಟ ಇಷ್ಟಲಿಂಗವು ಬೇಕು, ಅವರ ಗ್ರಂಥಗಳು ಬೇಕು, ವಚನಗಳೂ ಬೇಕು. ಅದೆಲ್ಲವನ್ನೂ ಗುರುವಿನಿಂದ ಪಡೆದು ಗುರುವನ್ನು ಗೌರವಿಸುವ ಸೌಜನ್ಯ ನಿಮಗಿಲ್ಲ.

ಲಿಂಗವನು ಪುರಾತನರನು ಅನ್ಯರ ಮನೆಯೊಳಿಂಕೆ ಹೋಗಿ ಹೊಗಳುವರು;
ತಮ್ಮೊಂದುದರದ ಕಾರಣ...
ಅನ್ಯವನೆ ಮರೆದು ನಿಮ್ಮ ನೆನೆವರ ಎನಗೊಮ್ಮೆ ತೋರಾ,
ಚನ್ನಮಲ್ಲಿಕಾರ್ಜುನಾ.*

ಹೊಟ್ಟೆಪಾಡಿಗಾಗಿ ಧರ್ಮಲಾಂಛನ ಧರಿಸುವ ಸಾಹಸ ನಿಮ್ಮದು. ಇಂತಹ ದ್ರೋಹಕ್ಕೆ ದೇವರಾಗಲಿ, ಶರಣರಾಗಲಿ ಒಲಿಯರು.'

'ನಾವು ಹೇಳುವುದು ಸುಳ್ಳೆಂದು ನೀವು ತಿಳಿಯುತ್ತಿರುವಿರಿ' ಸನ್ಯಾಸಿಯೊಬ್ಬ ಕೆರಳಿ ನುಡಿದ.

'ಅಹುದು, ಗುರುನಿಂದೆ ಮಾಡಲು ಹೇಸದವರು ಸತ್ಯವನ್ನು ನುಡಿಯುತ್ತಾರೆಂದು ನಂಬುವುದು ಹೇಗೆ? ಬಸವಣ್ಣನವರು ತಮ್ಮ ದೈವೀಶಕ್ತಿಯಿಂದ, ಅಮೃತವಾಣಿಯಿಂದ ಅಸಂಖ್ಯಾತರನ್ನು ಉದ್ಧರಿಸುತ್ತಿರುವುದು ಹಗಲು ಕಾಣುವ ಸತ್ಯ' ಮಹಾದೇವಿ ನುಡಿದಳು. ಮತ್ತೊಬ್ಬ ಆವೇಶದಿಂದ ನುಡಿದ.

'ಅವನ ಸಿಹಿ ಮಾತಿಗೆ ಮೂರ್ಖಜನ ಮಾತ್ರ ಇರುವೆಗಳಂತೆ ಮುಕುರುತ್ತಾರೆ.'

'ಒಳ್ಳೆಯದು. ನೀವೂ ಅಂತಹುದೇ ಸಿಹಿ ಮಾತನಾಡಿ ಅಷ್ಟು ಜನರನ್ನು

---

* ಮ. ವ. ೮೪

ಆಕರ್ಷಿಸಿರಿ ; ನಿಮ್ಮ ಪಾದಕ್ಕೆ ನಾನು ನಮಿಸುವೆ ! ಕಲ್ಯಾಣಕ್ಕೆ ಕಾಲಿಟ್ಟು ಅದನ್ನು ಅವಿಮುಕ್ತ ಕ್ಷೇತ್ರಮಾಡಿ ಅಸಂಖ್ಯಾತರನ್ನು ಸೇರಿಸಿದವ ಬಸವಣ್ಣ. ಅಂತಹ ಶಕ್ತಿ ಇದ್ದ ನೀವು ಪಂಪಾಕ್ಷೇತ್ರವನ್ನು ಉಪಜೀವನಕ್ಕೆ ಸೂಕ್ತ ಸ್ಥಳವೆಂದು ಏಕೆ ಹುಡುಕಿಕೊಂಡು ಬಂದಿರಿ ?'

'ನೋಡಿರಿ, ಬಸವಣ್ಣನಿಗಿಂತಲೂ ದೊಡ್ಡ ಕ್ರಾಂತಿ ಮಾಡಿ ತೋರಿಸು ತ್ತೇವೆ' ಒಬ್ಬ ತರುಣ ಸನ್ಯಾಸಿ ಹೇಳಿದ.

'ಬಹಳ ಸಂತೋಷ! ಮಾಡಿ ತೋರಿಸಿರಿ. ಆದರೆ ಅವರನ್ನು ನಿಂದೆ ಮಾಡುವುದು ಏತಕ್ಕೆ ? ಮನುಷ್ಯನ ಮಾತು ಅವನ ವ್ಯಕ್ತಿತ್ವಕ್ಕೆ ಕೈಗನ್ನಡಿ. ನಿಮ್ಮಗಳ ಮಾತಿನ ವೈಖರಿ, ಅನ್ಯರನ್ನು—ಗುರುವನ್ನು ನಿಂದಿಸುವ ಹೀನ ವೃತ್ತಿಗಳೇ ವಿಚಾರಮಟ್ಟವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಸತ್ಕಾರ್ಯ ಮಾಡಿ ತೋರಲು ದೈವೀಕರುಣೆಯ ಬೆಂಬಲ ಬೇಕು. ನಿಂದಕರಿಗೆ ಎಂದೂ ದೈವೀಕರುಣೆ ದೊರೆಯದು.' ಮಹಾದೇವಿ ಸ್ಪಷ್ಟದನಿಯಲ್ಲಿ ನುಡಿದಳು.

'ಬಸವಣ್ಣನ ಬಣ್ಣದ ಮಾತಿಗೆ ಮೋಸಹೋಗುವವರನ್ನು ಎಚ್ಚರಿಸು ವುದು ನಮ್ಮ ಕರ್ತವ್ಯ' ಮತ್ತೊಬ್ಬ ಹೇಳಿದ.

'ಸಾಮಾನ್ಯರಾದ ಜನರು ಬಹಳ ಕೀಳುಮಟ್ಟದಲ್ಲಿರುವರು. ಅಂಥವರು ಒಬ್ಬ ವ್ಯಕ್ತಿಯಿಂದ ವಿವಿಧ ಲಾಭ ಪಡೆದೂ ಸಹ ಅವನ ನಿಂದನೆಗೆ ತೊಡಗು ವುದು ಬಹು ಸಹಜ. ಹಳ್ಳದ ದಂಡೆಯಲ್ಲಿ ವರ್ತಿಯನ್ನು ಮಾಡಿ ನೀರು ಕುಡಿದ ಕೆಲವು ತುಂಟ ಮಕ್ಕಳು, ಕುಡಿದ ಬಳಿಕ ಸುಮ್ಮನೆ ಹೋಗರು : ತಮಗೆ ಕುಡಿದು ಸಾಕಾದಮೇಲೆ ಅದರಲ್ಲಿ ಮೂತ್ರವಿಸರ್ಜನೆ ಮಾಡಿಹೋಗು ವರು. ಹಾಗೆಯೇ ನಿಂದಕರು ತಮಗೆ ಆ ಸ್ಥಾನ ಸಾಕಾದ ತಕ್ಷಣ ನೀತಿ ವಂತಿಕೆಯಿಂದ ಹೋಗುವುದನ್ನು ಬಿಟ್ಟು, ಅಪಪ್ರಚಾರಕ್ಕೆ ತೊಡಗುವರು. ಇದು ಮನುಷ್ಯನಿಗೆ ಅತ್ಯಂತ ಹೀನ ಗುಣ. ಇಂತಹ ನೀವು ಬೇರೆಯವರಿಗೆ ತತ್ವ-ಧರ್ಮಗಳನ್ನು ಬೋಧಿಸಲು ಏನು ಹಕ್ಕಿದೆ ?' ಮಹಾದೇವಿ ನುಡಿದಳು.

ಮಹಾದೇವಿಯ ತೀಕ್ಷ್ಣ ನುಡಿಗಳನ್ನು ಕೇಳಿ ಅವರೆಲ್ಲ ತಣ್ಣಗಾದರು.

'ಇನ್ನೊಬ್ಬರ ಅಪಪ್ರಚಾರ ಮಾಡಿ ನೀವು ದೊಡ್ಡವರಾಗಬೇಕೆಂಬ ಕ್ಷುಲ್ಲಕ ಪ್ರಯತ್ನಕ್ಕಿಂತ, ಯಾರನ್ನೂ ನಿಂದಿಸಹೋಗದೆ, ಕೈಲಾದ ಉತ್ತಮ ಕಾರ್ಯ ಮಾಡಿರಿ. ಜಗತ್ತಿಗೆ ಅದು ಬಹು ದೊಡ್ಡ ಉಪಕಾರ. ನೀವು ನಿಂದಿಸಿದಂತೆ ಆ ವ್ಯಕ್ತಿಗಳು ಇರದಿದ್ದರೆ ನಿಮಗೆ ಬರುವ ಭೀಕರ ಪಾಪ ಅಂತಿಂತಹುದಲ್ಲ. ಇಂತಹ ವೇಷ ತೊಟ್ಟು ಅನ್ಯರ ನಿಂದೆಯಲಿ ಕಾಲ ಕಳೆವ

ಕೇವಲ ಯಾಂತ್ರಿಕವಾಗಿ ಜಪಿಸಿದರೆ ಸಾಲದು; ನುಡಿವ ನಾಲಿಗೆಗೂ ಮುಂಚೆಯೇ ಚಿಂತಿಸಿ ಕಲಂಕಿತವಾಗುವ ಮನಸ್ಸನ್ನು ಶುದ್ಧೀಕರಿಸಿರಿ. ನಿಮ್ಮ ವಚನ ಗಾಯನವನ್ನು ಕೇಳಿ ಸಂತಸದಿಂದ ಬಂದೆ. ಆದರೆ, ತಂಬಿಗೆಯನ್ನು ಹೊರಗೆ ತೊಳೆಯುವುದು ಮುಖ್ಯವಲ್ಲ, ಒಳಗೆ ತೊಳೆಯಬೇಕು. ನಿಮ್ಮ ಅಂತರಂಗಾವಲೋಕನ ಮಾಡಿಕೊಂಡು ಅಂತರಂಗ ಶುದ್ಧೀಕರಣ ಮಾಡಿಕೊಳ್ಳಿರಿ.'

ಎಲ್ಲರೂ ಗರ ಬಡಿದವರಂತೆ ಕುಳಿತಿದ್ದರು. ಮಹಾದೇವಿ ಮತ್ತೆ ನುಡಿದಳು :

'ನಿಮ್ಮಿಂದ ನಾನೊಂದು ಬಹು ದೊಡ್ಡ ಪಾಠ ಕಲಿತೆ. ಜಗತ್ತಿನಲ್ಲಿ ಎರಡು ಬಗೆಯ ಜನರಿರುತ್ತಾರೆ. ಕೆಲವರು ತಾವೆಷ್ಟೇ ಮಲಿನಾಂತಃಕರಣದವರಿದ್ದರೂ ತಮ್ಮ ತಪ್ಪನ್ನು ತಾವು ತಿದ್ದಿಕೊಳ್ಳಹೋಗದೆ, ಇನ್ನೊಬ್ಬರಲ್ಲಿನ ತಪ್ಪನ್ನು ಅರಸಿ, ತಿದ್ದಲು ಹೋಗುತ್ತಾರೆ; ಆದರೆ ಮತ್ತೆ ಕೆಲವರು ತಾವೆಷ್ಟೇ ಪರಿಶುದ್ಧರಿದ್ದರೂ ಇನ್ನೊಬ್ಬರನ್ನು ನಿಂದಿಸಹೋಗದೆ ತಮ್ಮ ಅಂತಃಕರಣವನ್ನೇ ಮತ್ತೆ ಮತ್ತೆ ಶೋಧಿಸುತ್ತಾರೆ. ನೀವು ಮೊದಲ ಬಗೆಯವರು; ಮಹಾನುಭಾವಿ ಬಸವಣ್ಣನವರು ಎರಡನೆಯ ಬಗೆಯವರು.

ನೀವು ಬಹಳ ಮಡಿವಂತರು, ಪರಿಶುದ್ಧರು ಎಂದು ನಂಬಿಕೊಂಡು ಅನ್ಯರನ್ನು ನಿಂದಿಸುವಿರಷ್ಟೆ. ಹೆರವರ ದೋಷವನ್ನು ಅರಸಿ, ನಿಂದಿಸುವ ದುಷ್ಟಗುಣವೇ ನಿಮ್ಮನ್ನು ಕಲಂಕಿತಮಾಡುವುದು. ನೀವು ನಿಮ್ಮ ತನು ಮನಗಳನ್ನು ಸಂತೈಸಿಕೊಳ್ಳಿ. ಅನ್ಯರ ಚಿಂತೆ ನಿಮಗೆ ಬೇಡ.

ಅನ್ಯರ ನಿಂದೆ ಮಾಡುವ, ಕೇಡು ಬಯಸುವ ವೈಯಕ್ತಿಕ ಪಾಪಕ್ಕಿಂತಲೂ ಘೋರವಾದ ಇನ್ನೊಂದನ್ನು ಮಾಡುತ್ತಿರುವಿರಿ. ಅದೇ ತತ್ತ್ವವಿರೋಧಿ ಆಚರಣೆ. ಬೆಳೆಯುವ ಎಳೆಯ ಕಂದನಿಗೆ ಹಾಲಾಹಲವನ್ನುಣಿಸಿದಂತೆ ಇದೀಗ ಉಗಮಗೊಂಡು, ಬಹುಮುಖವಾಗಿ ಹಬ್ಬುತ್ತಿರುವ ಪ್ರಗತಿಪರ ವಿಚಾರಧಾರೆಯ ಈ ಧರ್ಮದೊಳಕ್ಕೆ ತತ್ತ್ವವಿರೋಧಿ ಆಚರಣೆಗಳನ್ನು ತೋರಿಸುತ್ತಿರುವಿರಿ. ಇರುವಿಕೆಯಲ್ಲಿ ಅಲ್ಲದಿದ್ದರೂ ತೋರಿಕೆಯಲ್ಲಾದರೂ ನೀವು ಇಷ್ಟಲಿಂಗಧಾರಿಗಳಾಗಿರುವುದರಿಂದ ನಿಮ್ಮನ್ನು ಈ ಧರ್ಮದ ಗುರುಗಳೆಂದೇ ಸಾಮಾನ್ಯಜನರು ನಂಬುವುದು ಅತಿ ಸಹಜ. ನೀವಾದರೋ ಈ ಧರ್ಮದ ಮೂಲತತ್ತ್ವಗಳಿಗೆ ವಿರುದ್ಧವಾದ ಮೂರ್ತಿಪೂಜೆ, ಬಹುದೇವೋಪಾಸನೆ, ಸ್ಥಾವರಪೂಜೆ, ಪಂಚಾಂಗದರ್ಶನ, ಗ್ರಹಬಲ, ಜಾತಿಭೇದ ಮುಂತಾದ ಪರಂಪರಾಗತ ಮೂಢನಂಬಿಕೆಗಳನ್ನು ಜನಮೆಚ್ಚುಗೆ, ಕೀರ್ತಿವಾರ್ತೆ,

ನೋಡಿ ತಪ್ಪು ದಾರಿ ಹಿಡಿಯುವುದು ಅಸಂಭವನೀಯವಲ್ಲ. ಅತ್ಯಂತ ಸುಧಾರಣಾತ್ಮಕ, ವಿಶಾಲ ಮನೋವೃತ್ತಿಯ ಬಸವಣ್ಣನ ಕ್ರಾಂತಿಕಾರಿ ವಿಶ್ವಧರ್ಮದ ಅಂತಃಸತ್ವವನ್ನೇ ಹಾಳುಮಾಡುವ ನಿಮ್ಮ ಕಾರ್ಯ ಅಪಚಾರಾತ್ಮಕ; ನಿಮಗಾಗಲೀ-ಸಮಾಜಕ್ಕಾಗಲಿ ಶ್ರೇಯಸ್ಕರವಲ್ಲ. ತತ್ತ್ವ ಹೀನರಾಗಿ ನೂರು ವರುಷ ಬಾಳುವುದಕ್ಕಿಂತ, ತತ್ತ್ವನಿಷ್ಠರಾಗಿ ಹತ್ತು ದಿನ ಬದುಕಿದರೂ ಸಾಕು. ಇನ್ನಾದರೂ ಭವಿಷ್ಯವನ್ನು ಸುಧಾರಿಸಿಕೊಳ್ಳಿರಿ.'

ಆವೇಶದಿಂದ ನುಡಿದ ಮಹಾದೇವಿ ಮೇಲಕ್ಕೆದ್ದು ತನ್ನ ತಾಣದ ಕಡೆಗೆ ನಡೆದಳು.

'ತಂದೆ ಬಸವಣ್ಣಾ, ನಿನ್ನಂತಹ ನಿಷ್ಕಲ್ಮಶ ಹೃದಯಿಯ ಬಗ್ಗೆ ನಿಂದೆ-ವಿರೋಧ; ಅದೂ ಅನ್ಯರಿಂದಲ್ಲ, ತನ್ನವರಿಂದಲೇ! ಈ ದೇವನ ಲೀಲೆ ವಿಚಿತ್ರ. ಬೆಳಕು-ಕತ್ತಲೆಗಳನ್ನು ಜೊತೆಗೇ ಜಗತ್ತಿಗೆ ನೀಡಿರುವನು.

ತಾನು ಎಲ್ಲರನ್ನೂ ಪ್ರೀತಿಸಿದರೂ, ಎಲ್ಲರಿಂದ ಪ್ರೀತಿಸಿಕೊಳ್ಳಲ್ಪಡು ವುದು ಸಾಧ್ಯವಿಲ್ಲ ತಂದೆ! ನೀನು ಎಲ್ಲರನ್ನೂ ಆದರಿಸುವೆ, ಆದರೆ ನಿನ್ನನ್ನು ದ್ವೇಷಿಸುವ ಹಲವರು ಇರುವರು. ಈ ನಿಂದೆಯು ತಮ್ಮ ಮನದ ದೌರ್ಬಲ್ಯ ವನ್ನು ಅನ್ಯರಮೇಲೆ ಹಾಕುವ ಸಾಹಸವಲ್ಲದೆ ಮತ್ತೇನೂ ಅಲ್ಲ.

ಆದರೇನು, ನೀನು ಸಂಗಮನ ರಾಜತೇಜದಲ್ಲಿರುವ ಕರುಣೆಯ ಕಂದ. ದೇವನೊಲಿದವನಿಗೆ ಮಾನವರೇನು ಮಾಡಿಯಾರು. ನೂರಾರು ಗುಬ್ಬಿಗಳು ಸೇರಿ ಗರುಡನನ್ನು ಕುಕ್ಕಲಾರವು; ನಿನ್ನನ್ನು ಯಾರೂ ಪ್ರಭಾವರಹಿತನನ್ನಾಗಿ ಮಾಡಲಾರರು ತಂದೆ!' ಮನದಲ್ಲಿ ಸ್ಮರಿಸಿಕೊಳ್ಳುತ್ತ ಮುಂದೆ ನಡೆದಳು. ಅನ್ಯರ ನಿಂದೆಯನ್ನು ಅನ್ನಾಹಾರವನ್ನಾಗಿ ಮಾಡಿಕೊಂಡಿದ್ದ ಅನೇಕ ಲೌಕಿಕ ರನ್ನು ಕಂಡಿದ್ದಳು. ಆದರೆ ಧರ್ಮ ಲಾಂಛನ ಧರಿಸಿ ಇಂತಹ ಹೀನವೃತ್ತಿ ಕೈಗೊಂಡವರನ್ನು ಕಂಡಾಗ ಮನಸ್ಸು ಕಡು ನೊಂದಿತು.

೪೨. ಮಹಾಗ್ರಾಮದಲ್ಲಿ ಮಹಾದೇವಿ

ಪಂಪಾಕ್ಷೇತ್ರಕ್ಕೆ ವಾತಾಪಿಯ ಭಾಗದಿಂದ ಬಂದ ಅನೇಕ ಯಾತ್ರಿಕರು ಇದ್ದರು. ಮಹಾದೇವಿ ಅವರೊಡನೆ ತನ್ನ ಪಯಣವನ್ನು ಮುಂದುವರಿಸಿದಳು. ವಾತಾಪಿಯ ಕಲೆ, ಬನಶಂಕರಿಯ ಪ್ರಕೃತಿಸೌಂದರ್ಯ ಅವಳ ಮನವನ್ನು ಮುದಗೊಳಿಸಿದವು. ಅಲ್ಲಿಂದ ಮುಂದೆ, ಬಸವಣ್ಣನಿಂದ ಇತಿಹಾಸಪ್ರಸಿದ್ಧವಾದ, ಪಾಶುಪತ ಶೈವಪಂಥದ ಪ್ರಬಲ ಕೇಂದ್ರವಾಗಿದ್ದ ಕೂಡಲಸಂಗಮವನ್ನು ದರ್ಶಿಸಿದಳು. ಕೃಷ್ಣೆ, ಮಲಾಪಹಾರಿಯರ ದಂಡೆಯ ಮೇಲೆ ಕಾಲಿಡುವಾಗ ಹೃದಯ ರೋಮಾಂಚಿತವಾಗುತ್ತಿತ್ತು. 'ಈ ಎಲ್ಲ ಉಸುಕಿನ ಕಣಗಳು ಬಸವಣ್ಣನ ಪರುಷಮಯ ಪಾದಸ್ಪರ್ಶದಿಂದ ಪವಿತ್ರವಾಗಿರುವುವು' ಎಂಬ ಕಲ್ಪನೆ ಭಾವೋದ್ದೀಪನೆ ಮಾಡುತ್ತಲಿತ್ತು. ಬಸವಣ್ಣನು ಶಿಕ್ಷಣ ಪಡೆದ ಆ ಶೈವ ಗುರುಕುಲವನ್ನು, ವಯೋವೃದ್ಧರಾದ, ಪಾಶುಪತ ಪಂಥದ ಶೈವಾಚಾರ್ಯರಾದ ಈಶಾನ್ಯಗುರುಗಳ ದರ್ಶನವನ್ನು ಪಡೆದು ಆನಂದಿಸಿ, ವಿಸ್ತಾರವಾಗಿ ಹರಿವ ಕೃಷ್ಣೆಯನ್ನು ದಾಟಿ, ಬಸವಣ್ಣನ ಜನ್ಮಸ್ಥಳವಾದ ಬಾಗೇವಾಡಿಯನ್ನು ಸಂದರ್ಶಿಸಿ ಮುಂದೆ ನಡೆದಳು. ಮಾರ್ಗದಲ್ಲಿ ಎದುರಾದ ದೇವರ ಹಿಪ್ಪರಗಿಯು ಮಡಿವಾಳ ಮಾಚಿದೇವರ ಜನ್ಮಭೂಮಿಯೆಂದರಿತು ಅದನ್ನೂ ಸಂದರ್ಶಿಸಿ, ಕಲಬುರ್ಗಿಯ ದಿಕ್ಕಿನಲ್ಲಿ ಸಾಗಿದಳು.

ಬಸವಣ್ಣನ ಪ್ರಭಾವವು ಇಲ್ಲಿ ಘನೀಭೂತವಾಗಿ ಬೆಳಗುತ್ತಿತ್ತು. ಅವನ ವಿಚಾರವಾಹಿನಿ, ಧಾರ್ಮಿಕ ಪರಂಪರೆ ಬಹುದೂರದ ನಾಡಾದ ಉಡುತಡಿಯ ಭಾಗದಲ್ಲಿ ಅಲ್ಪಸ್ವಲ್ಪ ಪ್ರಮಾಣದಲ್ಲಿ ಹಬ್ಬತೊಡಗಿದ್ದಿತು. ಆದರೆ ಕಲ್ಯಾಣದ ಈ ಸಮೀಪವಲಯದಲ್ಲಿ ತ್ವರಿತಗತಿಯಲ್ಲಿ ಬೆಳೆಯತೊಡಗಿತ್ತು. ಹೊಸದಾಗಿ ಪರಿವರ್ತಿತರಾಗತೊಡಗಿದ್ದುದರಿಂದ ಅನುಸಾರಿಗಳಲ್ಲಿ ಧರ್ಮದ ಕಳೆ ಜೀವಂತವಾಗಿ ಬೆಳಗುತ್ತಿತ್ತು. ಇದನ್ನು ಕಂಡೇ ಮಡಿವಾಳ ಮಾಚಿದೇವರು,

ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದರೆ ಭಕ್ತಿ ಎಂಬ ರಸವು*

ಎಂಬುದಾಗಿ ಹೇಳಿರುವರೇನೋ ಎಂದುಕೊಂಡಳು. ಪಯಣದ ಪಥ ಕಿರಿದಾಗುತ್ತ ಬಂದಂತೆಲ್ಲ ಉತ್ಸಾಹವು ನೂರ್ಮಡಿಯಾಗತೊಡಗಿ, ಬಸವ

ಜೀವಿತಕಾಲದಲ್ಲಿಯೇ ಮಂತ್ರಪುರುಷನಾಗಿ, ಜನಸಾಮಾನ್ಯರ ಹೃದಯದಲ್ಲಿ ನೆಲೆಗೊಂಡ ಮಹಾಪುರುಷ ನೀನು; ಎಂದಿಗೆ ನಿನ್ನನ್ನು ಕಾಣುವೆನೋ' ಎಂದು ಭಕ್ತಿ ತುಂಬಿ ಕಾತರಿಸುತ್ತಿದ್ದಳು ಮಹಾದೇವಿ. ಜನರ ಮಧ್ಯೆ, ಗದ್ದಲದಲ್ಲಿ ಪ್ರಯಾಣಿಸುವುದು ಸಾಕೆನಿಸಿದ ಆಕೆ ಪ್ರಕೃತಿಯ ಸೌಂದರ್ಯವನ್ನು ಏಕಾಂಗಿನಿಯಾಗಿ ಸವಿಯುತ್ತ ನಡೆಯತೊಡಗಿದಳು. ಹೊರಜಗತ್ತಿಗೆ ಕಾಲಿರಿಸಿದಾಗ ಇದ್ದ ಭೀತಿ, ಏಕಾಕಿತನದ ಭಾವ ಈಗಿರಲಿಲ್ಲ. ಈಜು ಕಲಿಯಲು ಹೊಸದಾಗಿ ನೀರಿಗೆ ಬಿದ್ದವನು ಬೆನ್ನಿಗೆ ಈಜುಬುರುಡೆ ಇದ್ದರೂ ವ್ಯರ್ಥ ಭೀತಿಪಡುವಂತೆ ಆಗ ದಿಗಿಲುಪಡುತ್ತಿದ್ದರೆ, ನಿರಾಯಾಸವಾಗಿ ಸಹಜವಾಗಿ ಈಜುವ ಬಲ್ಲಿದನಾದ ಈಜುಗಾರನಂತೆ, ಈಗ ನಿರಾಳವಾಗಿ ವಿಪತ್ತುಗಳನ್ನೆದುರಿಸುತ್ತ ಸಾಗುತ್ತಿದ್ದಳು.

ಕಲಬುರ್ಗಿಯನ್ನು ದಾಟಿ ಮಹಾಗ್ರಾಮಕ್ಕೆ ಬಂದಿದ್ದಳು. ಇನ್ನು ಕಲ್ಯಾಣ ಕೆಲವೇ ಹರದಾರಿಗಳ ಅಂತರದಲ್ಲಿತ್ತು. ಎರಡೇ ದಿವಸಗಳ ಹಾದಿ ಎಂದು ಅವಳ ಮನಸ್ಸು ನಲಿಯತೊಡಗಿತ್ತು. ಅಂದು ಸಂಜೆಹೊತ್ತು ಎರಡು ಮಾರು ದೂರದಲ್ಲಿತ್ತು. ಮುಂದಿನ ಹಳ್ಳಿಯನ್ನು ಹೊತ್ತಿಳಿಯುವ ಮುನ್ನವೇ ಮುಟ್ಟಲು ಸಾಧ್ಯವೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು, ಹೊಲದಿಂದ ತಲೆಯ ಮೇಲೆ ಹೊರೆ ಹೊತ್ತು, ಹಸುಗಳನ್ನು ಮೇಯಿಸಿಕೊಂಡು ಮನೆಗೆ ಮರಳುತ್ತಿದ್ದ ಗೃಹಿಣಿಯೋರ್ವಳನ್ನು ಕೇಳಿದಳು. ಸೂರ್ಯಾಸ್ತಕ್ಕೆ ಮುನ್ನವೇ ಊರು ಮುಟ್ಟಲು ಸಾಧ್ಯವಿಲ್ಲದ್ದರಿಂದ ಅಲ್ಲೇ ವಸತಿ ಹೂಡುವುದು ಉಚಿತವೆಂದು ಮುಂದೆ ಸಾಗುವಾಗಲೇ ತೊರೆಯೊಂದು ಕಾಣಿಸಿತು. ಉತ್ತರದಿಂದ ಹರಿವ ಗಂಡು ತೊರೆ ಮತ್ತು ಬೆಣ್ಣೆ ತೊರೆ ಎಂಬೆರಡು ಹಳ್ಳಗಳು ಕೂಡುವ ಸಂಗಮಕ್ಷೇತ್ರವದಾಗಿತ್ತು. ಗಂಡುತೊರೆಯ ದಂಡೆಯ ಗುಂಟ ಒಂದೆರಡು ಕೂಗಳತೆ ದೂರದವರೆಗೆ ಪ್ರಕೃತಿಸೌಂದರ್ಯವನ್ನು ಸವಿಯುತ್ತಾ ಸಾಗಿದಳು. ತೊರೆಯಲ್ಲಿಳಿದು ಮಿಂದು, ಮೇಲಕ್ಕೆ ಬಂದು ಹಾಸುಬಂಡೆಯೊಂದರ ಮೇಲೆ ಪಶ್ಚಿಮಕ್ಕೆ ಮುಖಮಾಡಿ ಕುಳಿತಳು. ನಿಶ್ಶಬ್ದ ವಾತಾವರಣ, ನದಿಯ ಜುಳು ಜುಳು ನಾದ ಹರ್ಷೋದ್ದೀಪನೆ ಮಾಡಿದವು. ಪೂಜಿಸುತ್ತ, ಧ್ಯಾನಿಸುತ್ತ ಬಹಿಃಪ್ರಜ್ಞೆಯನ್ನು ಕಳೆದುಕೊಂಡಳು.

ಮುಳುಗುವ ಸೂರ್ಯನ ಹೊಂಗಿರಣಗಳ ಆಚ್ಛಾದನೆಯಲ್ಲಿ ಕಾಂತಿಯುಕ್ತವಾಗಿ ...

ನೋಡುನೋಡುತ್ತ ಕಲ್ಯಾಣಮ್ಮ ಮೂಕವಿಸ್ಮಿತಳಾದಳು. ಓರಗಿತ್ತಿ ವೀರಮ್ಮನನ್ನೂ ಮಗ್ಗುಲಲ್ಲಿ ಕುಳ್ಳಿರಿಸಿಕೊಂಡು ತಾನು ಕುಳಿತಳು. ಮಹಾದೇವಿಯ ಮೈಮೇಲೆ ಅರಿವು ಮೂಡಿದಾಗ ಎದುರಿಗೆ ಕುಳಿತ ಸ್ತ್ರೀಯರ ಆಕೃತಿಗಳನ್ನು ಕಂಡಳು. ಹೊತ್ತು ಮುಳುಗಿ, ಚಂದ್ರೋದಯವಾಗಿ ಹುಣ್ಣಿಮೆಯ ಚಂದ್ರ ಆಗಸದಲ್ಲಿ ಮೂಡಿದ್ದ.

'ಯಾರದು?'

'ನಾನು ಕಲ್ಯಾಣಮ್ಮ ಅಂತ, ತಾಯಿ. ನಿಮ್ಮನ್ನ ಮನೀಗೆ ಕರ್‍ಕಂಡೋಗಾಕೆ ಅಂತ ಕುಂತಿರುವೆ.'

'ನೀನಾರಮ್ಮ?'

'ನಾನು ಈ ಊರ ಲಿಂಗನಗೌಡ್ರ ಸೊಸೆ ಕಣವ್ವ. ಈಕೆ ನನ್ನ ಓರಗಿತ್ತಿ ಈರವ್ವ. ತೊರೆ ನೀರಿಗೆ ಅಂತ ಬಂದಿದ್ವಿ. ನಿಮ್ಮ ತೇಜಸ್ಸಿಗೆ ಮಾರುಹೋಗಿ ನೋಡಿ ಹಾಕ್ದಂಗೆ ಕುಂತೇಬಿಟ್ವಿ. ನಡೀರವ್ವಾ, ನಮ್ಮ ಮನೀಗೆ.'

'ಬೇಡ ಕಲ್ಯಾಣಮ್ಮ, ಈ ನದಿಯ ದಂಡೆಯ ಮೇಲೆ ಇಂದಿನ ಇರುಳು ಕಳೆದು, ಬೆಳುದಿಂಗಳ ಆನಂದವನ್ನುಣ್ಣುವೆ' ಮಹಾದೇವಿ ನಿರಾಕರಿಸಿದಳು.

'ಯವ್ವಾ, ಹಂಗನ್ನಬೇಡಿ. ಜಂಗಮದಾಸೋಹ ನಮ್ಮ ತಪ್ಪದ ನೇಮ, ಬಂದು ನಮ್ಮ ಉದ್ಧಾರ ಮಾಡ್ರಿ. ಶಿವಾನುಭವಗೋಷ್ಠೀಲಿ ತಮ್ಮ ನಾಕು ಮುತ್ತಿನಂಥ ಮಾತು ಹೇಳಿ.'

ಆ ಗೃಹಿಣಿಯ ಮಾತಿನಲ್ಲಿ ಸೆಳೆತವಿತ್ತು. ವರ್ಣಿಸಲಾರದ ಆದರವಿತ್ತು, ಮಹಾದೇವಿ ನಿರಾಕರಿಸಲಾರದೆ ಮೇಲೆದ್ದು ತನ್ನ ಜೋಳಿಗೆಯನ್ನು ಹೆಗಲಿಗೇರಿಸಿ ಕಲ್ಯಾಣಮ್ಮನ ಹಿಂದೆ ಸಾಗಿದಳು.

ಸೊಸೆ ತಡವಾಗಿ ಮನೆಯೊಳಕ್ಕೆ ಬಂದರೂ, ಅಪೂರ್ವ ತೇಜಸ್ಸಿನ ಯೋಗಿಣಿಯನ್ನು ಆಕೆಯೊಡನೆ ಕಂಡ ಗೌಡರು, ಸೊಸೆಯತ್ತ ಅಭಿಮಾನದ ದೃಷ್ಟಿ ಹರಿಸಿ ಮಹಾದೇವಿಯನ್ನು ಸ್ವಾಗತಿಸಿ, ಆನಂದತುಂದಿಲರಾದರು.

ಮಿರಿಮಿರಿ ಮಿರುಗುವ ಹಿತ್ತಾಳೆಯ ಕೊಡ ಹೊತ್ತು, ನೆತ್ತಿಯ ಮೇಲೆ ಮುಸುಕನ್ನು ಹೊದ್ದು, ಹಣೆಯ ಮೇಲೆ ವಿಭೂತಿಯನ್ನಿಟ್ಟ ಸಾತ್ವಿಕ ಗೃಹಿಣಿ ಕಲ್ಯಾಣಮ್ಮ. ಆಕೆಯ ಸೀರೆಯ ಸೆರಗಿನ ಒಳಗೆ ಬೆಳ್ಳಿಯ ಗುಂಡುಕರಡಿಗೆ ಮಿಂಚುತ್ತಿತ್ತು. ಕಲ್ಯಾಣಮ್ಮನ ಮುಖದ ಸಾತ್ವಿಕ-ಪ್ರೌಢಕಳೆಯನ್ನು ಕಂಡು ಮಹಾದೇವಿ ಹರ್ಷಮುಖಿಯಾದಳು.

ರಾತ್ರಿಗೆ ಗೌಡರ ಮನೆಯಲ್ಲಿ ದಿನನಿತ್ಯದಂತೆ ಶಿವಾನುಭವಗೋಷ್ಠಿ,

ಯಲ್ಲಿ ಕುಳಿತು ಕೇಳಿದರು. ಕಲ್ಯಾಣಮ್ಮ

ತ್ತಿದ್ದಳು; ಗೌಡರು ಅರ್ಥ ಮಾಡುತ್ತಿದ್ದರು.

ಬಸವಣ್ಣನ ಪ್ರಭಾವದಿಂದ ಮನೆಮನೆಗಳೂ ಶಿವಾನುಭವಮಂಟಪಗಳು ಆಗತೊಡಗಿದ್ದವು. ಅದನ್ನು ಕಂಡ ಮಹಾದೇವಿ ಸಂತಸಚಿತ್ತಳಾದಳು. ಅಂದು ತಾನೂ ಭಾಗವಹಿಸಿದಳು. ಮನೆಯಲ್ಲಿ ಹಾಸುಹೊಕ್ಕಾಗಿ ತುಂಬಿದ್ದ ಆಧ್ಯಾತ್ಮಿಕ ವಾತಾವರಣ ನೋಡಿ ಕಲ್ಯಾಣವನ್ನೇ ಕಂಡಷ್ಟು ಆನಂದಿಸಿದಳು. ಇರುಳಿನ ಕಡೆಯ ಜಾವ ಆರಂಭವಾಗುತ್ತಿದ್ದಂತೆಯೇ ಗೌಡರ ಮನೆಯಲ್ಲಿ ಇಷ್ಟಲಿಂಗಪೂಜೆ ಆರಂಭವಾಗಿ, ಗಂಟೆಯ ಗಣಗಣ ಶಬ್ದ ಕೇಳುತ್ತಿತ್ತು.

'ತಂದೇ....ಗುಡಿಗೆ ಹೋಗುತ್ತಿದ್ದ ಜನರನ್ನು ಅದರಿಂದ ಬಿಡಿಸಿ ಅವರ ಒಡಲನ್ನು ದೇವಾಲಯವನ್ನಾಗಿ, ಮನೆಯನ್ನು ಶಿವಾನುಭವಮಂಟಪವನ್ನಾಗಿ ಮಾಡಿದ ಮಹಾನುಭಾವ ನೀನು. ದೇವರಿಗಾಗಿ ಹುಡುಕುವುದನ್ನು ಬಿಡಿಸಿ, ದೇವರೇ ಭಕ್ತರನ್ನು ಹುಡುಕಿಕೊಂಡು ಬರುವಂತೆ ಮಾಡಿದ ಪವಾಡ ಪುರುಷ....' ಎಂದು ಮನದಲ್ಲಿ ಬಸವಣ್ಣನನ್ನು ಸ್ಮರಿಸಿದಳು ಮಹಾದೇವಿ.

ಇನ್ನೂ ಹೊತ್ತು ಹುಟ್ಟುವ ಮುನ್ನವೇ ಪೂಜೆ ಮುಗಿಸಿಕೊಂಡ ಕಲ್ಯಾಣಮ್ಮ ಮೊರಗಳಲ್ಲಿ ಗೋಧಿ, ಜೋಳಗಳನ್ನು ಹಾಕಿಕೊಂಡು ಬೀಸುವ ಕಲ್ಲಿನ ಬಳಿಗೆ ಬಂದಳು. ತನ್ನ ಓರಗಿತ್ತಿ ವೀರಮ್ಮನನ್ನು ಒಡನೆ ಕೂಡಿಸಿ ಕೊಂಡು ಬೀಸಲಾರಂಭಿಸಿದಳು. ಹೊಸದಾಗಿ ಮನೆಗೆ ಬಂದ ವೀರಮ್ಮ ರೂಢಿ ಗೊಂಡ ಪದ್ಧತಿಯಂತೆ ಬೀಸುವ ಕಲ್ಲಿಗೆ ನಮಸ್ಕರಿಸಿದಾಗ, ಕಲ್ಯಾಣಮ್ಮ ಆಕೆಗೆ ತತ್ತ್ವವನ್ನು ಹೇಳುತ್ತ ತಾನೂ ಹಾಡತೊಡಗಿದಳು. ಸುಶ್ರಾವ್ಯವಾದ ಕಂಠದೊಡನೆ ಬೀಸುವ ಪದ ಕೇಳಿಬರಲಾರಂಭಿಸಿತು.

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ, ಶಿವಮತಕೆ
ಬಸವ ಓಂಕಾರ ಶಿವನಾಮ ॥

ಮಲ್ಲಿಗೆ ಇದ್ದಾಗ ಮುಳ್ಳೇಕೆ ಮುಡಿಯುತಿ
ಕಲ್ಯಾಣದಲ್ಲಿ ಬಸವಯ್ಯ ಇದ್ದಾಗ
ಕಲ್ಗೇಕೆ ಕೈಯ ಮುಗಿಯುವೆ ॥

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು

ಕಲ್ಲೀ ಬೀಸೋಕಲ್ಲ ಸಕ್ಕರೆ ಒಡಗಲ್ಲೆ
ಅಪ್ಪನ ಮನೆಯ ರಜ ಕಲ್ಲೆ ಪಚ್ಚೆ ಕಲ್ಲೆ
ಬಿತ್ತರದ ಕಲ್ಲೀ ಬೀಳ್ಬೇಗ ॥

ಶರಣರ ನೆನೆದರೆ ಸರಗೀಯ ಇಟ್ಟಾಂಗ
ಹವಳ ಮಲ್ಲಿಗಿ ಮುಡಿದಂಗ । ಕಲ್ಯಾಣ
ಶರಣರ ನೆನೆಯೋ ನನ ಮನವೆ ॥

ಆದ ಮುಕ್ಕಿಗೆ ಶರಣು ಗೋದಿ ಕಲ್ಲಿಗೆ ಶರಣು
ಓನಾಮದಯ್ಯಾಗ ಶಿವಶರಣು । ಬಸವಯ್ಯ
ನಿಮ್ಮ ಪಾದಕ ಶಿವಶರಣು ॥*

ಗಾನದ ಅಲೆಗಳು ಮನೆಯ ಮೂಲೆಮೂಲೆಯನ್ನು ತುಂಬಿದವು. ಜನಪದದಲ್ಲಿ ಮೂಡಿನಿಂತ ಬಸವಣ್ಣನ ಚಿತ್ರವನ್ನು ಮಹಾದೇವಿ ಕೇಳಿ ತನ್ಮಯಳಾದಳು. 'ಬಸವ ಬಡವರ ನಿಧಿಯು' ಎಂದು ಹಾಡುವಾಗ ಕಲ್ಯಾಣಮ್ಮನ ಹೃದಯ ತುಂಬಿಬಂದಿತ್ತು. ಜನಸಾಮಾನ್ಯರು 'ಸಗ್ಗದ ಸೋಪಾನ' ಎಂದು ಬಸವಣ್ಣನನ್ನು ಕರೆಯುವಲ್ಲಿ ಅವನ ಔನ್ನತ್ಯವನ್ನು ಕಲ್ಪಿಸಿಕೊಳ್ಳಲೆತ್ನಿಸಿದಳು ಮಹಾದೇವಿ.

ಈ ಸಜ್ಜನರ ಸಂಗದಲ್ಲಿ ಆಪ್ಯಾಯಮಾನವಾಗಿ ದಿನಗಳನ್ನು ಕಳೆದಳು ಆಕೆ. ದಿನನಿತ್ಯದ ಗೋಷ್ಠಿಯಲ್ಲಿ ಮಹಾದೇವಿ ತನ್ನ ವೈಚಾರಿಕ, ಅನುಭಾವಿಕ ಸಕ್ಕರೆಯ ಸವಿಯನ್ನು ವಚನಸಾಹಿತ್ಯದ ಹಾಲಿನಲ್ಲಿ ಬೆರೆಸಿ ಧಾರೆಯೆರೆದಾಗ ಜನರು ಸಂತುಷ್ಟರಾದರು. ಒಂದು ದಿನ ಗೋಷ್ಠಿಯಲ್ಲಿ ಭಾಗವಹಿಸಿದಾಗ 'ತನಗಿನ್ನು ಮುಂದೆ ಸಾಗಲು ಅಪ್ಪಣೆ ನೀಡಬೇಕು' ಎಂದು ಕೇಳಿದಾಗ ಹಳ್ಳಿಗರು ಒಪ್ಪಲಿಲ್ಲ. ಲಿಂಗನಗೌಡರು ಸಾಷ್ಟಾಂಗ ಪ್ರಣಾಮವನ್ನು ಸಲ್ಲಿಸಿ,

'ಹಾಗೆ ಮಾಡ್ಬಾರದು, ತಾಯಿ ; ನಂಬಿದ ಮಕ್ಳನ್ನ ಅನಾಥ ಮಾಡಬೇಡ. ದೊಡ್ಡ ಮನಸ್ಸು ಮಾಡಿ ಇಲ್ಲಿಯೇ ನೆಲೆಸ್ಬೇಕು....' ಎಂದು ಬಿನ್ನವಿಸಿಕೊಂಡರು.

'ಇದೆಂತಹ ಮಾತು ಶರಣರೇ....ನನ್ನ ಗುರಿಯನ್ನು ನಾನು ಮರೆಯಬಾರದಲ್ಲವೆ? ತಾಯಿತಂದೆಗಳ ಮೋಹದ ಬಂಧನವನ್ನು ಕತ್ತರಿಸಿ ಹೊರಬಂದು, ಈ ಮೋಹದಲ್ಲಿ ಸಿಕ್ಕಿಬೀಳುವುದೂ ಸಾಧಕರಿಗೆ ಅನುಚಿತ. ಲೋಕದ ನಿಂದನೆಯಿಂದ ನಿರಾಶೆಗೊಂಡು ಹಿಮ್ಮೆಟ್ಟುವುದು ಎಂತಹ ದೌರ್ಬಲ್ಯವೋ,

---

* ಡಾ॥ ಬಿ. ಎಸ್. ಗದ್ದಗಿಮಠ : ಕನ್ನಡ ಜಾನಪದ ಗೀತೆಗಳು, ಪುಟ ೨೩೧.

[illegible]
ಸಂಕೋಚಗೊಂಡು ನುಡಿದಳು.

'ಅವ್ವಾ....ನಮ್ಮನ್ನು ಕೈಬಿಡದೆ ಉದ್ಧರಿಸಬೇಕು! ನಮ್ಮ ಮನೇಲಿ ರೋದು, ನಮ್ಮಂಥ ಗೃಹಸ್ಥರ ಸಾವಾಸ ಬ್ಯಾಡವಾದರೆ ಊರ ಹೊರಗಿನ ತೊರೆ ದಂಡೆಯ ಮೇಲೆ ಮಠ ಕಟ್ಟಿಸಿ ಕೊಡ್ತೇವೆ. ಅಲ್ಲಿ ಇದ್ದು ನಮ್ಮಂಥ ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿ ಮಾಡಬೇಕು....'

'ಬೇಡಿ ಶರಣರೇ, ನದಿಯು ನಿಂತರೆ ಮಲೆತು ಬಿಡುವುದು, ಹರಿಯುತ್ತಿದ್ದರೆ ಮಾತ್ರ ಹಸನಾಗಿ ಇರುವುದು' ಸೂಚ್ಯವಾಗಿ ನುಡಿದಳು.

'ಅದೇಕೆ ತಾಯಿ, ಆಣೆಕಟ್ಟು ಕಟ್ಟಿದಲ್ಲಿ ನಿಲ್ಲದೇ?' ಗೌಡರ ಪ್ರಶ್ನೆ.

'ನಿಮ್ಮ ಮಾತು ನಿಜ, ಗೌಡರೇ....ನದಿಯಂತೆಯೇ ಸಾಧಕನು ತನ್ನ ಸಾಧನಾವಸ್ಥೆಯಲ್ಲಿ ಬಹಳಷ್ಟು ಜಾಗೃತಿಯಿಂದ ಗುರಿಯ ಎಡೆಗೆ ಹರಿಯಬೇಕು; ಗುಂಡಿಗಳಲ್ಲಿ ಮಡುಗಟ್ಟಿ ನಿಂತರೆ ಅದು ಮಲೆಯುವಂತೆ ಜನತೆಯ ಪ್ರೇಮ, ಕೀರ್ತಿ, ಮೋಹಗಳಿಗೆ ಬಲಿಯಾದರೆ ಅವನು ಪತನಗೊಳ್ಳುವನು. ಆದರೆ ಪರಿಪಕ್ವಾವಸ್ಥೆ ಹೊಂದಿದ ಬಳಿಕ ಸಿದ್ಧಪುರುಷನಾಗಿ ಜಗದುದ್ಧಾರಕ್ಕೆ ನಿಂತರೆ ಅದು ಶ್ರೇಯಸ್ಕರ. ನಾನಿನ್ನೂ ಉದ್ಧಾರವಾಗಲಿಕ್ಕೆ ನಡೆದವಳು, ಇತರರನ್ನು ಉದ್ಧರಿಸಲಿಕ್ಕೆ ನಿಲ್ಲುವ ಶಕ್ತಿ ಬಂದಿಲ್ಲವಷ್ಟೆ....'

ಗ್ರಾಮಸ್ಥರು ದುಃಖ ತುಂಬಿದ ಹೃದಯದಿಂದ ಮಹಾದೇವಿಯನ್ನು ಬೀಳ್ಕೊಟ್ಟರು. ಸುಗಂಧಮಾರುತದಂತೆ ಅನಿರೀಕ್ಷಿತವಾಗಿ ಬಂದು, ಜ್ಞಾನ ಸೌರಭವನ್ನಿತ್ತು, ಉದ್ಧರಿಸಿಹೋದ ಆ ದೈವೀವ್ಯಕ್ತಿಯನ್ನು ಮರೆಯಲಾರದೆ ಆಕೆ ಮಹಾಗ್ರಾಮಕ್ಕೆ ಬಂದು ಪೂಜೆಗೆಂದು ಮೊದಲ ದಿವಸ ಕುಳಿತ ಗಂಡು ತೊರೆಯ ದಂಡೆಯ ಮೇಲೆ ಸಣ್ಣ ಗುಡಿಯೊಂದನ್ನು ಕಟ್ಟಿ, ಸಂವತ್ಸರಕ್ಕೊಮ್ಮೆ ಆಕೆಯ ವಚನಗಳನ್ನು ರಥದಲ್ಲಿಟ್ಟು ಮೆರೆಸಿ ಜಾತ್ರೆ ಮಾಡುವ ಸಂಕಲ್ಪವನ್ನು ಆ ಗ್ರಾಮಸ್ಥರು ಮಾಡಿಕೊಂಡರು.*

---

* ಗುಲ್ಬರ್ಗಾ ಜಿಲ್ಲೆಯ ಮಹಾಗಾಂವನಲ್ಲಿ ಇಂದಿಗೂ ವರ್ಷಕ್ಕೊಮ್ಮೆ ಅಕ್ಕ ಮಹಾದೇವಿಯ [illegible]

೪೩. ದಾಸೋಹ ಧಾಮದಲ್ಲಿ

ಮಹಾದೇವಿ ಕ್ಷಣಕ್ಷಣಕ್ಕೂ ಕಲ್ಯಾಣವನ್ನು ಸಮೀಪಿಸುತ್ತಿದ್ದಳು. ಎಷ್ಟೋ ದಿವಸಗಳ ಕನಸು ನನಸಾಗುವುದರ ಅರಿವಾದಾಗ ಮೈ ಪುಳಕಗೊಳ್ಳುತ್ತಿತ್ತು. ಎದುರಾಗುವ ಪ್ರತಿ ಊರುಗಳಲ್ಲಿ ಲಿಂಗವಂತರ ಸಂಖ್ಯೆ ದಟ್ಟವಾಗಿದ್ದುದಲ್ಲದೆ, ಊರಿನ ನಾಲ್ಕು ದಿಕ್ಕುಗಳಲ್ಲಿ ದಾಸೋಹದ ಕೇಂದ್ರಗಳಿರುತ್ತಿದ್ದುದರಿಂದ ಮಹಾದೇವಿಗೆ ಶಾರೀರಿಕ ಕಷ್ಟಗಳು ಕಡಿಮೆಯಾದವು.

ಹೊಸಬರು ಊರಿನಲ್ಲಿ ಪ್ರವೇಶಿಸುತ್ತಿದ್ದಂತೆಯೇ ದಾಸೋಹ ಶಾಲೆಯ ಪಾರುಪತ್ಯಗಾರರು ಅವರನ್ನು ಸ್ವಾಗತಿಸಿ ದಾಸೋಹ ಕೇಂದ್ರಕ್ಕೆ ಕರೆದೊಯ್ದು ಅನುಕೂಲತೆ ಕಲ್ಪಿಸುತ್ತಿದ್ದರು. ಮಹಾದೇವಿ ಅದನ್ನು ಕಂಡು ಕುತೂಹಲದಿಂದ ಕೇಳಿದಳು :

'ಇವೇನು ಧರ್ಮಶಾಲೆಗಳೇ ?'

'ಅಲ್ಲ, ಇವನ್ನು ದಾಸೋಹ ಮಠಗಳೆಂದು ಕರೆಯುತ್ತೇವೆ. ಯಾರೇ ಅಪರಿಚಿತರು, ಯಾತ್ರಿಕರು ಬಂದರೆ ಅವರಿಗೆ ಅವಕಾಶ ನೀಡಿ ಪ್ರಸಾದದ ವ್ಯವಸ್ಥೆ ಮಾಡುತ್ತೇವೆ....'

'ಉಚಿತವಾಗಿಯೇ ?'

'ಅಹುದು ; ಕಡ್ಡಾಯವಾಗಿ ಇಂತಿಷ್ಟು ಧನ ಕೊಡಬೇಕೆಂಬುದಿಲ್ಲ, ತಿಳಿದರೆ ಕೊಡಬಹುದು, ಇಲ್ಲವೇ ಬಿಡಬಹುದು....'

'ಸೋಮಾರಿಗಳಿಗೆ ಇಂಥವು ಒಳ್ಳೆಯ ಆಶ್ರಯಗಳಾಗುವವಲ್ಲವೆ ?' ನಸುನಕ್ಕಳು ಮಹಾದೇವಿ.

'ಇಲ್ಲ....ಆಗಂತುಕರಿಗೆ ಒಂದೇ ಒಂದು ದಿವಸದ ಉಚಿತ ಅವಕಾಶ. ಎರಡನೆಯ ದಿನದನಂತರ ಇಲ್ಲಿರಬೇಕಾದರೆ ಅವರು ದುಡಿದು ಪಡೆಯಬೇಕು. ದಾಸೋಹಮಠದ ಹೊಲಗಳಿವೆ; ಅಲ್ಲಿಗೆ ದುಡಿಯಲು ಕಳಿಸುತ್ತೇವೆ. ಇಲ್ಲಿ ಇರುವವರು ಸಂಜೆಯ ವೇಳೆಯ ಭಜನೆ, ಅನುಭವಗೋಷ್ಠಿಯಲ್ಲಿ ಭಾಗವಹಿಸಬೇಕು. ಊರಿನ ನಿವಾಸಿಗಳು ತಮ್ಮ ಗಳಿಕೆಯಲ್ಲಿ ಉಪಜೀವನಕ್ಕೆ ಅವಶ್ಯಕವಿದ್ದಷ್ಟು ಇರಿಸಿಕೊಂಡು, ಮಿಕ್ಕಿದುದನ್ನು ಇಂಥ ದಾಸೋಹಮಠಗಳಿಗೆ ಸಲ್ಲಿಸುತ್ತಾರೆ. ಅವರ ವೈಯಕ್ತಿಕ ಆಸ್ತಿಯ ಸಂಗ್ರಹವೂ ಆಗದು, ಹೆಚ್ಚಾದ ಗಳಿಕೆ ಸಮಾಜಕಾರ್ಯದಲ್ಲಿ ಹೀಗೆ ಬಳಕೆಯೂ ಆಗುವುದು....'

'ಈ ಭಾಗದಲ್ಲಿ ಇಂಥ ಮಠಗಳು ಎಲ್ಲ ಕಡೆ ಉಂಟೆ ?' ಮಹಾದೇವಿ ಪ್ರಶ್ನಿಸಿದಳು.

ಇವು ಸಾಮೂಹಿಕ ಭೋಜನಾಲಯಗಳಂತೆ. ಬಸವಣ್ಣನವರು ಸಾಮೂಹಿಕ ಒಡೆತನದ ಪ್ರಯೋಗವನ್ನು ಆರಂಭಿಸಿದ್ದಾರೆ. 'ಒಬ್ಬ ರಾಜನೇ ಒಡೆಯ, ಎಲ್ಲರೂ ಅವನ ದಾಸರಾಗಿರಬೇಕು' ಎಂಬುದನ್ನು ಬದಲಿಸಿ, 'ಪ್ರಜೆಗಳೇ ದೇಶದ ಆಗುಹೋಗುಗಳಲ್ಲಿ ನೇರವಾಗಿ ಭಾಗವಹಿಸಬೇಕು' ಎಂಬ ಪದ್ಧತಿಯ ಆರಂಭಮಾಡುತ್ತಿದ್ದಾರೆ. 'ಮಹಾಮನೆ' ಎಂದರೆ ಕೇವಲ ವಿಶಿಷ್ಟಗೃಹವಲ್ಲ, ಅದೊಂದು ಸಂಸ್ಥೆ. ಲಿಂಗವಂತ ಧರ್ಮದ ಅನುಸಾರಿಗಳೆಲ್ಲ ತಾವು ದುಡಿದುದೆಲ್ಲದರಲ್ಲಿ, ಅವಶ್ಯಕವಿದ್ದಷ್ಟನ್ನು ಬಳಸಿಕೊಂಡು, ಉಳಿದುದೆಲ್ಲವನ್ನೂ ಈ ಮಹಾಮನೆಗೆ ಅರ್ಪಿಸುತ್ತಾರೆ. ಇಂಥವರೆಲ್ಲರಿಗೆ ಪ್ರಸಾದದ ವ್ಯವಸ್ಥೆಯನ್ನು ಸಾಮೂಹಿಕ ಭೋಜನಾಲಯಗಳಾದ ದಾಸೋಹ ಮಠಗಳು ಮಾಡುತ್ತವೆ.

ಕಲ್ಯಾಣದ ತುಂಬೆಲ್ಲ ಇಂತಹ ಮಠಗಳಿವೆ. ಮಡಿವಾಳ ಮಾಚಯ್ಯನವರು ಬಟ್ಟೆ ತೊಳೆಯುವ ಕಾಯಕ ಮಾಡುತ್ತ, ಪ್ರಸಾದದ ವೇಳೆಯಲ್ಲಿ ಪೂಜೆ-ಪ್ರಸಾದಕ್ಕೆ ಮನೆಗೆ ಬಂದು ವೇಳೆಯನ್ನು ವ್ಯರ್ಥಗೊಳಿಸಬೇಕಾಗಿಲ್ಲ. ಅಲ್ಲಿಯೇ ಸಮೀಪದಲ್ಲಿರುವ ದಾಸೋಹ ಮಠಕ್ಕೆ ಹೋಗಿ ಮಿಂದು, ಪೂಜಿಸಿ, ಪ್ರಸಾದ ಸ್ವೀಕರಿಸಿ ಕಾಯಕಕ್ಕೆ ಮರಳುವರು. ನುಲಿಯ ಚಂದಯ್ಯನವರು ನುಲಿಗಾಗಿ ಹುಲ್ಲು ತರಲು ಹೋದಾಗ, ಸಮಗಾರ ಹರಳಯ್ಯನವರು ಚಮ್ಮಾವುಗೆ ಮಾರಲು ಹೋದಾಗ ಪ್ರಸಾದದ ವೇಳೆಯಲ್ಲಿ ದಾಸೋಹದ ಮಠಕ್ಕೆ ಹೋಗಿ ಪ್ರಸಾದವನ್ನು ಸ್ವೀಕರಿಸುವರು. ಹೀಗಾಗಿ ದುಡಿಯುವವರಿಗೆ ಊಟದ ಸಮಸ್ಯೆ ಇರದು, ವೇಳೆಯೂ ಹಾಳಾಗದು. ಬಸವಣ್ಣನವರ 'ಮಹಾಮನೆ'ಯಲ್ಲಿ ಹೀಗೆ ಉಣ್ಣುವ ಕಾಯಕಜೀವಿಗಳು ಲಕ್ಷದ ಮೇಲೆ ತೊಂಬತ್ತು ಸಾವಿರ. ಕೆಲವರಂತೂ ಸಂಪೂರ್ಣವಾಗಿ ತಮ್ಮ ಗಳಿಕೆಯನ್ನು 'ಮಹಾಮನೆ'ಗೆ ಅರ್ಪಿಸಿ ಅಲ್ಲಿಂದ ಅವರು ಅನ್ನ, ಅರಿವೆ, ಆಶ್ರಯ, ಔಷಧ, ಅರಿವು ಎಂಬ ಪಂಚ ಸಂಜೀವಿನಿಗಳನ್ನು ಪಡೆಯುವರು. ದುಡಿಯದ ಉಂಡಾಡಿಗಳನ್ನೆಲ್ಲ ಒಂದು ದಿವಸವೂ ಅಲ್ಲಿ ಇರಿಸಿಕೊಳ್ಳುವುದಿಲ್ಲ. ಯಾರೇ ಬಂದರೂ ದಾಸೋಹ ಮಠಕ್ಕೆ ಹೋಗಿ, ಅಲ್ಲಿ ದುಡಿದು ಪ್ರಸಾದ ಸ್ವೀಕರಿಸಿ ಹೋಗಬಹುದು.

ಇದೇ ಮಾದರಿಯಲ್ಲಿ ನಾವುಗಳು ಹಳ್ಳಿಹಳ್ಳಿಗೆ ಇಂತಹ ಘಟಕಗಳನ್ನು ಆರಂಭಿಸಿದ್ದೇವೆ. ವ್ಯಯಿಸಿ ಉಳಿದ ಹಣವನ್ನು ಗ್ರಾಮಾಭಿವೃದ್ಧಿ ಕಾರ್ಯ

ನವರ ವಿಚಾರಗಳನ್ನು ಅಳವಡಿಸಿರುವುದರಿಂದ, ಇಲ್ಲಿ ಯಾರಿಗೂ ಕೊರತೆಯಿಲ್ಲ, ಬಡತನವಿಲ್ಲ, ಬೇಡುವ ಪ್ರಮೇಯವಿಲ್ಲ....'

'ಅಬ್ಬಾ ! ಇದೆಂತಹ ಕ್ರಾಂತಿ....!' ಉದ್ಗರಿಸಿದ ಮಹಾದೇವಿಯ ಮನದ ಮುಂದೆ ತಾನು ಕೇಳಿದ ಜನಪದ ನುಡಿಯು ಸುಳಿಯಿತು :

ಅರ್ಪಣೆಯು ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ ಹಾಲ್ಹೊಳೆಯ
ತೆಪ್ಪ ದಾಸೋಹ ತೇಲುತಲಿ ॥

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡಕಂಡಲ್ಲಿ ದಾಸೋಹ ಕಾಯಕದ
ಕಂಡ ಜೀವನದ ಶಿವ ಮಾತು ॥

'ಒಂದು ಕಡೆ ಕಾಯಕ, ಶರೀರಸಂಸ್ಕಾರ ; ಮತ್ತೊಂದು ಕಡೆ ಅಧ್ಯಯನ, ಮನಕ್ಕೆ ಸಂಸ್ಕಾರ. ಇನ್ನೊಂದು ಕಡೆ ಅನುಭಾವ ; ಆತ್ಮನಿಗೆ ಸಂಸ್ಕಾರ. ಹೀಗಾಗಿ ಕಲ್ಯಾಣದಲ್ಲಿ ಕೈಲಾಸದ ಸಂತೃಪ್ತಿ ಆವಿರ್ಭವಿಸತೊಡಗಿತು. ಆಗ ಸ್ವರ್ಗವೇ ಬೆರಗಾಗಿ, ಮೂಕವಾಗಿ ಕಲ್ಯಾಣವನ್ನು ನೋಡಿತು. ಇಲ್ಲಿಯೋ ಹಾಲಿನ ಹೊಳೆಯಲ್ಲಿ ತೆಪ್ಪ ತೇಲುವಂತೆ; ಕಾಯಕದ ಸಮೃದ್ಧಿಯಲ್ಲಿ ದಾಸೋಹ ಬೆಳಗುತ್ತಿದೆ. ಪರಿಣಾಮವಾಗಿ ಎಲ್ಲರೂ ಸಂತೃಪ್ತಿಯಿಂದ ಉಣ ಬಲ್ಲರು ; ಹೊಟ್ಟೆಬಟ್ಟೆಯ ಚಿಂತೆಯಿಂದ ನಿರ್ಮುಕ್ತರು ; ಎಂತಹ ಅದ್ಭುತ ರಾಷ್ಟ್ರನಿರ್ಮಾಣ !' ಮಹಾದೇವಿ ತನ್ನಲ್ಲೇ ಆಶ್ಚರ್ಯಪಟ್ಟಳು.

'ಸ್ವಾಭಾವಿಕವಾಗಿ ಮಾನವನು ಸ್ವಾರ್ಥಿ ; ಎಷ್ಟಿದ್ದರೂ ಇನ್ನಷ್ಟು ಬೇಕು ಎನ್ನುವವ. ಹೀಗಿದ್ದಾಗ ಜನಗಳಿಗೆ ಇಂತಹ ತ್ಯಾಗದ ಪಾಠವನ್ನು ಹೇಗೆ ಕಲ್ಪಿಸುತ್ತಾರೆ?' ಆಕೆ ಕೇಳಿದಳು.

'ರಾಜದಂಡದ ಬಲದಿಂದ ಅಲ್ಲ; ನೈತಿಕ ಬೋಧೆಯಿಂದ! ಬಸವಣ್ಣ ನವರು ಈಗ ರಾಜಸತ್ತೆ, ಮತ್ತು ಪುರೋಹಿತವೃತ್ತಿಯ ವಿರುದ್ಧ ಹೋರಾಡ ಬೇಕಾಗಿದೆ. ಹೀಗಾಗಿ ಅವರ ಬೆಂಬಲ ಇವರಿಗಿಲ್ಲದಿರುವುದು ಬಹು ಸಹಜ. ಆದರೂ ಪ್ರಧಾನಮಂತ್ರಿಯ ಅಧಿಕಾರ ಎಷ್ಟೋ ಉಪಯುಕ್ತವಾಗುವುದು.'

'ಕಳವು ಮಾಡುವವ ಕಳ್ಳನಲ್ಲ, ಕಳವು ಮಾಡಿಸಿಕೊಂಬಂತೆ ಬಚ್ಚಿಟ್ಟು ಕೊಂಡು, ಇನ್ನೊಬ್ಬನಿಗೆ ಸಲ್ಲತಕ್ಕ ಒಡವೆಗಳನ್ನು ತನ್ನಲ್ಲಿರಿಸಿಕೊಂಡು ಅವನಿಗೆ ಕೊರತೆಯನ್ನು ಉಂಟುಮಾಡಿ ಕಳ್ಳತನಕ್ಕೆ ಪ್ರೋತ್ಸಾಹಿಸುವ ಸಿರಿವಂತನು ಕಳ್ಳ'* ಎಂಬ ವಿಚಾರವನ್ನು ಜಂಗಮರ ಮೂಲಕ ಪ್ರಚಾರ ಮಾಡಿಸುವರು.

ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ
ಕೂಡಲ ಸಂಗನ ಶರಣರಿಗೆ ಒಡನೆಯೇ ಸವೆಸುವುದು*

ನೆಲದಲ್ಲಿ ಹಣವನ್ನು ಹುಗಿದಿಡುವುದನ್ನು, ಮುಚ್ಚಿಮುಚ್ಚಿ ಇಡುವುದನ್ನು ಬಸವಣ್ಣನವರು ಟೀಕಿಸುವರು. 'ಯಾರಿಗಾಗಿಯೋ, ಎಂದಿಗೋ ಬೇಕೆಂದು ಮುಚ್ಚಿಡುವುದನ್ನು ಖಂಡಿಸಿ ಸಮಾಜಕ್ಕೆ ತೀವ್ರವಾಗಿ ಸವೆಸಿರಿ' ಎಂದು ಉಪದೇಶಿಸುವರು.

ಹೀಗಾಗಿ ಬಸವಣ್ಣನ ಆರ್ಥಿಕ ಸುಧಾರಣೆಯ ಕ್ಷೇತ್ರದಲ್ಲಿ, ಶರೀರವನ್ನು ದುಡಿಸುವವರಿಗೆ, ಮತ್ತು ಬುದ್ಧಿಯನ್ನು ದುಡಿಸುವವರಿಗೆ ಬೆಲೆಯುಂಟಲ್ಲದೆ ದುಡ್ಡನ್ನು ದುಡಿಸಿ ಬದುಕುವ ಸಾಲಿಗರಿಗೆ, ದುಡಿಯದೆ ಆಲಸಿಗಳಾಗಿ ಬದುಕ ಬೇಕು ಎನ್ನುವವರಿಗೆ ಯಾವ ಅವಕಾಶವೂ ಇಲ್ಲ. ಬೇಡುವವನಂತೂ ಶುದ್ಧ ಭವಿ....'

'ಇದು ನಿಜಕ್ಕೂ ಪರಂಪರಾಗತವಾಗಿ ಬಂದ ಕೆಲವು ಆಚರಣೆಗಳನ್ನೇ ಬುಡಮೇಲು ಮಾಡುವ ಪ್ರಯತ್ನವಲ್ಲವೇ ?' ಆನಂದತುಂದಿಲಳಾಗಿ ಕೇಳಿದಳು.

'ಅಹುದು....ಸಮಾಜವನ್ನು ದುಡ್ಡಿನ ಮೇಲೆ ನಿರ್ಮಾಣ ಮಾಡದೆ ದುಡಿತದ ಮೇಲೆ ನಿರ್ಮಾಣ ಮಾಡಬೇಕೆಂಬುದು ಬಸವಣ್ಣನವರ ಆಶಯ. ಜನರಲ್ಲಿ ತ್ಯಾಗಭಾವವೂ ಸ್ವಯಂ ಇಚ್ಛೆಯಿಂದ ಬರಬೇಕೇ ವಿನಾ ದಂಡದ ಭೀತಿಯಿಂದಲ್ಲ ; ಪಟುಭಟರ ಭೀತಿಯಿಂದ ಜನ ಒಳ್ಳೆಯವರಾಗಿರಬಯಸುವುದಕ್ಕಿಂತ ಅಂತರಾತ್ಮನೆಂಬ ತಳವಾರನ ಭೀತಿಯಿಂದ ಒಳ್ಳೆಯವರಾಗಿರಬೇಕೆಂದು ಅವರ ಮನೀಷೆ....' ಪಾರುಪತ್ಯಗಾರ ವಿವರಿಸಿದ.

'ಬಸವಣ್ಣನವರದು ಸರ್ವತೋಮುಖ ಕ್ರಾಂತಿ ! ಇಷ್ಟು ದಿವಸ ಕೇವಲ ಅವರ ಧಾರ್ಮಿಕ ಸಮಾನತೆಯ ಬಗ್ಗೆ ಅಷ್ಟೇ ತಿಳಿದ ನನಗೆ ಕಲ್ಯಾಣದ ವಲಯವನ್ನು ಸಮೀಪಿಸಿದ ಬಳಿಕ ಅವರು ಗೈದಿರುವ ಸಾಮಾಜಿಕ, ಆರ್ಥಿಕ ಕ್ರಾಂತಿಗಳು ಗೋಚರವಾಗತೊಡಗಿವೆ' ಮಹಾದೇವಿ ಹೇಳಿದಳು.

ಮಹಾದೇವಿ ದಿನನಿತ್ಯವೂ ಸಂಜೆಯಾಗುತ್ತಲೇ ಇದಿರಾದ ಊರಿನ ದಾಸೋಹ ಮಠದಲ್ಲಿ ಇಳಿದುಕೊಳ್ಳುತ್ತ, ಅಲ್ಲಿಯ ಪ್ರಸಾದವನ್ನು ಸ್ವೀಕರಿಸಿದ್ದಕ್ಕೆ ಪ್ರತಿಯಾಗಿ ತನ್ನ ಅಮೃತವಾಣಿಯ ಪ್ರಸಾದವನ್ನು ಜನತೆಗೆ ಉಣ್ಣಿಸುತ್ತ, ಕಲ್ಯಾಣದ ಕಡೆಗೆ ಸಾಗಿದಳು. ಕಲ್ಯಾಣಕ್ಕೆ ಸನಿಹವಾಗುತ್ತ

ಬಸವಣ್ಣನ ಪ್ರಭಾವ ಹೆಚ್ಚುಹೆಚ್ಚಾಗಿ ಪಲ್ಲವಿಸಿದ್ದನ್ನು ಕಂಡು, 'ಕಸ್ತೂರಿಯನ್ನು ಒಂದೆಡೆ ಇಟ್ಟರೆ ಮನೆಯ ತುಂಬೆಲ್ಲ ಅದರ ವಾಸನೆ ಹಬ್ಬುವಂತೆ, ಬಸವಣ್ಣನು ಕಲ್ಯಾಣದಲ್ಲಿದ್ದರೂ ಸುತ್ತೆಲ್ಲ ಅವನ ಸತ್ಕೀರ್ತಿಯ ಸೌರಭ ಹರಡುತ್ತಿದೆ' ಎಂದು ಅಚ್ಚರಿಯಿಂದ ಉದ್ಗರಿಸುತ್ತಿದ್ದಳು.

೩೩. ಕಲ್ಯಾಣ ಪ್ರವೇಶ

ಕಲ್ಯಾಣನಗರದ ಹೊರವಲಯವು ಕೆಲವಾರು ಹೆಜ್ಜೆಗಳಷ್ಟಿರುವಾಗಲೇ ಮಹಾದೇವಿಯ ಹೃದಯ ಸಂತಸದಿಂದ ಮಿಡಿಯುತ್ತಿತ್ತು. ರಾಜಮಾರ್ಗವನ್ನು ತುಳಿಯುತ್ತ ಬಂದ ಮಹಾದೇವಿಗೆ ಅದರ ತುದಿಗೆ ಇರುವ ಹೆಬ್ಬಾಗಿಲು ಕಂಡಿತು. ಹೆಬ್ಬಾಗಿಲನ್ನು ಆಲಂಗಿಸಿಕೊಂಡು, ಉನ್ನತವಾದ ಕೋಟೆ ತಲೆ ಎತ್ತಿ ಸಾಗಿತ್ತು. ಚಾಲುಕ್ಯರ ರಾಜಧಾನಿಯಾದ ಕಲ್ಯಾಣನಗರವು ಇತಿಹಾಸ ಪ್ರಸಿದ್ಧವಾದ ಧರ್ಮಕ್ಷೇತ್ರವಾದುದು ಬಸವಣ್ಣನವರ ಪಾದಸ್ಪರ್ಶದಿಂದ. ಅದನ್ನು ಸವಿಸ್ತಾರವಾಗಿ ತಿಳಿಸುವ ಚನ್ನಬಸವಣ್ಣನವರ ವಚನವೊಂದು ಶಿಲಾಶಾಸನದ ಮೇಲೆ ಕೊರೆಯಲ್ಪಟ್ಟು ಪುರದ ದ್ವಾರವಟ್ಟದ ಹೊರಮಗ್ಗುಲಲ್ಲಿ ಮೆರೆಯುತ್ತಿತ್ತು. ಹನ್ನೆರಡು ಯೋಜನ ಪರಿಪ್ರಮಾಣದಗಲದ ವಿಸ್ತೀರ್ಣವಾದ ಪಟ್ಟಣ ಕಲ್ಯಾಣನಗರ.

ಊರಿನೊಳಕ್ಕೆ ಬಂದ ಪ್ರವಾಸಿಕರಿಗೆ ದೊರೆವ ಸೌಲಭ್ಯಗಳ ವಿವರಗಳನ್ನು ಒದಗಿಸುವ ಫಲಕಗಳು ತೂಗುತ್ತಲಿದ್ದವು. ನಗರಕ್ಕೆ ಬಂದ ಅತಿಥಿಗಳಿಗೆ ಬಸವಣ್ಣನವರ ಮಹಾಮನೆಯೇ ಅಲ್ಲದೆ ಇನ್ನೂ ಅಸಂಖ್ಯಾತ ದಾಸೋಹದ ಮಠಗಳಿದ್ದವು. ಅದರಲ್ಲಿ ಪ್ರಮುಖವಾದುದು ತ್ರಿಪುರಾಂತಕಮಠ. ಸೂರ್ಯನು ಮುಳುಗುತ್ತಲಿದ್ದುದರಿಂದ ದಣಿದ ದೇಹವನ್ನು ಹೊತ್ತು ಆ ವೇಳೆಯಲ್ಲಿ ಮಹಾಮನೆಯನ್ನು ಹೊಗದೆ ಮಂಗಳ ಮುಂಜಾವಿನ ವೇಳೆಯಲ್ಲಿ ಹೋದರೆ ಆಯಿತೆಂದು ಮಹಾದೇವಿ ತ್ರಿಪುರಾಂತಕಮಠಕ್ಕೆ ಹೋಗಲು ನಿರ್ಧರಿಸಿದಳು.

'ಕೇವಲ ಒಂದು ರಾತ್ರಿಯನ್ನು ಕಳೆದುಬಿಟ್ಟರೆ ತನ್ನ ಕನಸು ನನಸಾಗುವುದು, ಬಾಳಿನ ಕಾಳಿಕೆಯೆಲ್ಲ ಕಳೆದು ಮಂಗಳ ಮುಂಬೆಳಗು ಮೂಡುವುದು' ಎನ್ನುವ ಸಂತೃಪ್ತಿಯಿಂದ ಮುಖವರಳಿತು.

ಇಷ್ಟಲಿಂಗಧಾರಿಯಾದ ಶರಣನೊಬ್ಬ ಮಹಾದೇವಿಯನ್ನು ಸಮೀಪಿಸಿ,

'ಶರಣು ಶರಣಾರ್ಥಿ, ತಾವು ಎಲ್ಲಿಯವರು, ತಾಯಿ? ಈಗ ಎಲ್ಲಿಗೆ ಹೊರಟಿರುವಿರಿ?' ಎಂದು ಪ್ರಶ್ನಿಸಿದ.

'ಉಡುತಡಿಯಿಂದ ಪಯಣ ಮಾಡುತ್ತ, ಬಸವಣ್ಣನವರ ಪಾದದರ್ಶನಕ್ಕೆ ಬಂದಿರುವುದು....'

ಅವನ ಮುಖದ ಮೇಲೆ ಸಂಭ್ರಮದ ತೆರೆ ಹಾಯಿತು.

'ಅಹುದು....' ಮಹಾದೇವಿ ನುಡಿದಾಗ, ಅವನ ಸಂತಸಕ್ಕೆ ಮೇರೆಯಿಲ್ಲ ವಾಯಿತು. ಆದರೂ ಅದನ್ನು ಒತ್ತಾಯಪೂರ್ವಕವಾಗಿ ಅಡಗಿಸಿಕೊಂಡ.

'ಇಂದಿನ ವಾಸ್ತವ್ಯ ಎಲ್ಲಿ; ನೇರವಾಗಿ ಮಹಾಮನೆಗೆ?' ಅವನು ಕೇಳಿದ.

'ತ್ರಿಪುರಾಂತಕಮಂದಿರದಲ್ಲಿದ್ದು ಬೆಳಿಗ್ಗೆ ಬರುವ ಉದ್ದೇಶವಿದೆ....'

ಅವನು ಮೌನವಾಗಿ ತನ್ನ ದಾರಿ ಹಿಡಿದು ನಡೆದ. ಮಹಾದೇವಿಗೆ ಅಚ್ಚರಿ ಯಾಗದಿರಲಿಲ್ಲ. 'ಮಹಾಮನೆಯ ಶರಣನೇ? ನನ್ನ ಹೆಸರು ಇವನಿಗೆ ಹೇಗೆ ಗೊತ್ತು? 'ಮಹಾಮನೆಗೆ ಬನ್ನಿರಿ' ಎಂದು ಅನ್ನಬಹುದಿತ್ತು. ಇವನ ವರ್ತನೆ ಎಳ್ಳಷ್ಟೂ ಅರ್ಥವಾಗದಾಯಿತು' ಎಂದುಕೊಂಡಳು.

ಕಲ್ಯಾಣದ ಮಹಾದ್ವಾರದಲ್ಲಿ ಜನ ಇರುವೆಗಳಂತೆ ಸರಿದಾಡುತ್ತಿದ್ದರು. ಒಳಹೋಗುವವರಿಗೆ, ಹೊರಬರುವವರಿಗೆ ಲೆಕ್ಕವೇ ಇರಲಿಲ್ಲ. ಆ ಸಂಭ್ರಮ ವನ್ನು ನೋಡುತ್ತ ಹೆಬ್ಬಾಗಿಲ ಸಮೀಪದ ಉದ್ಯಾನದಲ್ಲಿ ಕುಳಿತಳು.

ಮಲ್ಲಿಗೆಯ ಸುವಾಸನೆ, ಸಂಪಿಗೆಯ ಸೌರಭ ಸಂಜೆಯ ತಂಗಾಳಿಯಲ್ಲಿ ತೇಲಿಬಂದಿತು. ಕಲ್ಯಾಣದ ನೆಲ, ಜಲ, ಗಾಳಿ ಸಮಸ್ತವೂ ಜಗತ್ಕಲ್ಯಾಣದ ಶುಭಸಂದೇಶವನ್ನು ಹೊತ್ತು ನಿಂತಂತೆನಿಸಿತು. ಆ ಪಂಚಭೂತಗಳ ಸವಿಯ ನ್ನುಂಡು ಸರ್ವಾಂಗವೂ ಚೇತನಗೊಂಡಂತಹ ಅನುಭವ ಪಡೆದಳು.

> ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು.
> ಒಳಗೂ ಕಲ್ಯಾಣ ಹೊರಗೂ ಕಲ್ಯಾಣ!
> ಇದರಂತುವನು ಯಾರು ಬಲ್ಲರಯ್ಯಾ?
> ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
> ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತ್ತು,
> ಕೇಳಾ ಚನ್ನಮಲ್ಲಿಕಾರ್ಜುನಾ*

ಎಂದು ತನ್ನಲ್ಲಿ ತಾನೆ ನುಡಿದುಕೊಳ್ಳುತ್ತ ಹೆಬ್ಬಾಗಿಲನ್ನು ದಾಟತೊಡಗಿದಳು.

'ಈ ಮರ್ತ್ಯದಲ್ಲಿ ಅಸತ್ತು, ತಮಸ್ಸು, ಮೃತ್ಯು, ಪಾಪಗಳಿವೆಯೆಂದು ಜಿಗುಪ್ಸೆಗೊಂಡು ಸತ್, ಜ್ಯೋತಿ, ಅಮೃತತ್ವ, ಪುಣ್ಯದ ಕಡೆಗೆ ನಡೆಯುವ ಮಹಂತರೇ ಹೇರಳ. ಆದರೆ ಒಂದನ್ನು ಬಿಟ್ಟು ಮತ್ತೊಂದನ್ನು ಹಿಡಿಯ ಹೋಗದೆ, ಸ್ವರ್ಗನರಕಗಳು ಸ್ಥಾನವಿಶೇಷಗಳಲ್ಲ—ತತ್ತ್ವವಿಶೇಷಗಳು ಎಂದು ಭಾವಿಸಿ, ದ್ವೈವೀಮಯವಾದ ತತ್ತ್ವಗಳನ್ನು ಮರ್ತ್ಯದಲ್ಲಿ ಇಳಿಸಿ, ಇದನ್ನೇ ಕೈಲಾಸವನ್ನಾಗಿ ದಿವ್ಯಗೊಳಿಸಿದ ಮಹಾನುಭಾವ ಬಸವಣ್ಣ. ಇಂತಹ

ವಿಚಾರಧಾರೆಯ ಪ್ರಾಯೋಗಿಕ ಪರಿಣಾಮವೇ ಈ ಕಲ್ಯಾಣ ನಾಡು! ಸುಂದರವಾದ, ಬುದ್ಧಿರಮ್ಯವಾದ ಅನೇಕ ಸಿದ್ಧಾಂತಗಳನ್ನು ಕೊಟ್ಟ ತಾತ್ತ್ವಿಕರು ಹತ್ತಾರು ಜನರಿರಬಹುದು. ಆದರೆ ಅಂತಹ ಅರ್ಥಗರ್ಭಿತ ಸಿದ್ಧಾಂತವನ್ನು ಕ್ರಿಯಾರೂಪಕ್ಕಿಳಿಸಿ, ಕನಸಿನ ಕಲ್ಪನೆಯನ್ನು ಪ್ರತ್ಯಕ್ಷ ಜೀವನದಲ್ಲಿ ನನಸಿನ ರೂಪಕ್ಕೆ ತಂದು ತೋರಿಸಿರುವ ಕಾರಣಿಕಪುರುಷ ಬಸವಣ್ಣನು.

ಕಲ್ಯಾಣವು ದೈವೀಸಾಮ್ರಾಜ್ಯದ ಪ್ರತೀಕ. ಇದನ್ನು ಪ್ರವೇಶಿಸಬೇಕಾದರೆ ಆಸೆ, ಆಮಿಷ, ರೋಷ, ತಾಮಸಗಳನ್ನು ಗೆದ್ದಿರಬೇಕು ; ಒಳಹೊರಗೂ ಶುದ್ಧವಾಗಿ ನೀ–ನಾ ಎಂಬ ಭೇದಭಾವವನ್ನು ಬರಿದುಮಾಡಿರಬೇಕು. ನಾನು ಆ ಪರಾತ್ಪರ ಚನ್ನಮಲ್ಲಿಕಾರ್ಜುನನಿಗೊಲಿದು, ಹೆಣ್ಣು ಗಂಡೆಂಬ ಭೇದವನ್ನು ಮರೆತ ಕಾರಣ, ಇಂತಹ ಪವಿತ್ರ ನೆಲೆಯನ್ನು ಕಾಣುವಂತಹ ಸಾಮರ್ಥ್ಯ ಹೊಂದಿದೆ. ಸಾಂಕೇತಿಕ ದೈವೀರಾಜ್ಯವಾದ ಈ ಕಲ್ಯಾಣಕ್ಕೆ ನಮಸ್ಕರಿಸುವೆ'* ಎಂದುಕೊಳ್ಳುತ್ತ ಮಹಾದೇವಿ ದ್ವಾರವಟ್ಟವನ್ನು ಪ್ರವೇಶಿಸಿದಳು.

ಸುಪ್ರಸಿದ್ಧವಾದ ತ್ರಿಪುರಾಂತಕದಾಸೋಹಮಠದ ಕಡೆಗೆ ಹೆಜ್ಜೆಯಿಡುತ್ತ ನಗರದ ಸೌಂದರ್ಯ, ಜನರ ಸಾಂಸ್ಕೃತಿಕ ಸಂಪತ್ತು, ಅವರ ಸೌಜನ್ಯಪೂರ್ಣ ವರ್ತನೆಗಳನ್ನು ಸವಿಯತೊಡಗಿ, ಮಂತ್ರಮುಗ್ಧಳಾಗಿ ನಡೆದಳು.

ದೂರದೂರದಿಂದ ಬಂದ ದರ್ಶನಾರ್ಥಿಗಳು, ಮೋಕ್ಷಾರ್ಥಿಗಳು ಆ ಮಠದ ಪೌಳಿಯಲ್ಲಿ,ಕಮಾನುಗಳಲ್ಲಿ, ಜಗಲಿಯಮೇಲೆ ಬೀಡುಬಿಟ್ಟಿದ್ದರು. ಬಸವಣ್ಣನ ಭವ್ಯಸಾಧನೆಯನ್ನು ದರ್ಶಿಸಲು ಬಂದ ಜನಸಂದಣಿಯನ್ನು ನೋಡಿ ಮಹಾದೇವಿ ಬೆರಗಾದಳು. 'ಬೆಳಗು ಯಾವಾಗ ಹರಿದೀತೋ, ತಾನೂ ಆ ಪುಣ್ಯ ಪುರುಷನನ್ನು ಯಾವಾಗ ಕಣ್ತುಂಬಿ ನೋಡುವೆನೋ' ಎಂದು ಹಂಬಲಿಸುತ್ತಲೇ ರಾತ್ರಿಯನ್ನು ಕಳೆಯತೊಡಗಿದಳು.

* * *

ಮಹಾದೇವಿಯ ಆಗಮನದ ಸುದ್ದಿಯನ್ನು ಹೊತ್ತ ಶರಣನು ಸಂಭ್ರಮಿತನಾಗಿ ಅನುಭವಮಂಟಪಕ್ಕೆ ನಡೆದ. ಸಂಜೆಯ ಗೋಷ್ಠಿ ಆರಂಭವಾಗುತ್ತಲಿತ್ತು. ಅನುಭವಗೋಷ್ಠಿ ಬೆಳಗಿನ ಎರಡನೆಯ ಜಾವದಲ್ಲಿ, ಇರುಳಿನ ಮೊದಲ ಜಾವದಲ್ಲಿ ನಡೆಯುವ ಪರಿಪಾಠ. ಭಿನ್ನಭಿನ್ನ ಕಾಯಕದ ಶರಣರಿಗೆ ಭಾಗವಹಿಸಲು ಅನುಕೂಲವಾಗಲೆಂದು ಎರಡೂ ಹೊತ್ತು ನಡೆಯಿಸುತ್ತಲಿದ್ದರು.

ಮುಂಜಾವಿನ ಗೋಷ್ಠಿ ಹೆಚ್ಚಿನ ಬೌದ್ಧಿಕ ಮಟ್ಟದಲ್ಲಿ ಜರುಗುತ್ತಲಿದ್ದು ಮುಮುಕ್ಷುಗಳು, ಯೋಗಾಭ್ಯಾಸಿಗಳು ತಮ್ಮ ವೈಯಕ್ತಿಕ ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಿದ್ದುದು ಆವಾಗಲೇ.

ಮಹಾದೇವಿಯು ಕಲ್ಯಾಣದ ಸಮೀಪದಲ್ಲಿಯೇ ಬರುತ್ತಲಿರುವಳು ಎಂಬ ಸುದ್ದಿ ಕೆಲವಾರು ದಿವಸಗಳಿಂದ ಜಂಗಮರ ಮೂಲಕ ತಿಳಿದು ಬರುತ್ತಲಿದ್ದಿತು. ಆಗಿನಿಂದಲೂ ಎಲ್ಲ ಶರಣರ ಕುತೂಹಲಗಳು ಗರಿ ಬಿಚ್ಚಿ ಹಾರತೊಡಗಿದ್ದವು. ಬಸವಣ್ಣನ ಹೃದಯವಂತೂ ವಾತ್ಸಲ್ಯದಿಂದ ಮಿಡಿಯಲಾರಂಭಿಸಿತ್ತು. ಹಾಲನ್ನುಣ್ಣಲು ಅಂಬಾ ಎಂದು ಮೊರೆಯಿಡುವ ಎಳೆಗರುವಿನ ದನಿ ಕೇಳಿ ತಾಯಿಹಸು ಚಟಪಟಿಸುವಂತೆ, ತನ್ನ ಸ್ತ್ರೀಸ್ವಾತಂತ್ರ್ಯಸಿದ್ಧಿಯು ಸಾಕಾರವಾದ ಮಹಾದೇವಿಗಾಗಿ ಬಸವಣ್ಣ ಎಷ್ಟೋ ದಿವಸಗಳಿಂದ ಪರಿತಪಿಸುತ್ತಲಿದ್ದ.

'ಮಹಾದೇವಿ ಕಲ್ಯಾಣಕ್ಕೆ ಬರುತ್ತಿದ್ದಾಳೆ. ಕೇವಲ ಎರಡು ಯೋಜನ ದೂರದಲ್ಲಿದ್ದು ಏಕಾಂಗಿನಿಯಾಗಿ ಬರುತ್ತಲಿದ್ದಾಳೆ' ಎಂಬ ಸುದ್ದಿಯು ಕಿವಿಗೆ ತಲುಪಿದಾಗ ಬಸವಣ್ಣನು ಪ್ರಭುದೇವರ ಬಳಿಗೆ ಓಡಿದ.

'ಪ್ರಭುಗಳೇ, ತಾಯಿ ಮಹಾದೇವಿ ಏಕಾಂಗಿನಿಯಾಗಿ ಬರುತ್ತಿರುವಳಂತೆ. ಸುಮಾರು ಎರಡು ಯೋಜನಗಳ ದೂರದಲ್ಲಿರುವಳಂತೆ; ರಥವನ್ನಾಗಲಿ, ಮೇನೆಯನ್ನಾಗಲಿ ಕಳಿಸೋಣ. ಆ ಹೆಣ್ಣುಮಗು ತುಂಬ ಬಳಲಿರಬೇಕು....' ವಾತ್ಸಲ್ಯ ಮಿಡಿಯುವ ಧ್ವನಿಯಲ್ಲಿ ನುಡಿದ. ಪ್ರಭುದೇವರು ಬಸವಣ್ಣನ ಉತ್ಸಾಹಕ್ಕೆ ಪುಟವಿಡದೆ, ಗಂಭೀರವಾದರು.

'ಇಷ್ಟೊಂದು ಪರಿತಾಪವೇಕೆ, ಬಸವಣ್ಣನವರೇ ; ನೂರಾರು ಹರದಾರಿ ಕ್ರಮಿಸಿ ಬಂದವಳು ಇಲ್ಲಿಗೆ ಬರಲಾರಳೆ?' ಎಂದು ಪ್ರಭುದೇವರು ನುಡಿದಾಗ ಬಸವಣ್ಣನವರು ಮೌನವಾಂತರು. ಪ್ರಭುದೇವರು ದೂರಾಲೋಚನೆಯನ್ನು ಮಾಡದೆ ಯಾವುದನ್ನೂ ನುಡಿಯರು ಎಂಬ ವಿಶ್ವಾಸ ಅವರಿಗೆ.

ಆದರೂ ಬಸವಣ್ಣನವರು ದಿನನಿತ್ಯವೂ ಆಕೆಯ ಕುಶಲವಾರ್ತೆಯನ್ನು ತರಿಸಿಕೊಳ್ಳುತ್ತಿದ್ದುದಷ್ಟೇ ಅಲ್ಲದೆ ಅಂದು ಇಡೀ ದಿನ ಶರಣನೊಬ್ಬನನ್ನು ಕೋಟೆಯ ಹೆಬ್ಬಾಗಿಲಲ್ಲಿ ನಿಲ್ಲಿಸಿದ್ದರು. ಆ ಶರಣ ಸಂಭ್ರಮಿತನಾಗಿ ಬಂದು ಮಹಾದೇವಿ ಆಗಮಿಸಿ, ತ್ರಿಪುರಾಂತಕಮಠದ ಕಡೆಗೆ ನಡೆದುದನ್ನು ಬಸವಣ್ಣನವರಿಗೆ ಅರುಹಿದ.

ಆ ವಾರ್ತೆ ಬಸವಣ್ಣನವರಿಗೆ ಆಪ್ಯಾಯಮಾನವಾಗಿತ್ತು. ಎಲ್ಲ ಶರಣೆಯರೂ ನಾಳೆ ಆಕೆ ಬಂದಾಗ ಹೇಗೆ ಸ್ವಾಗತಿಸಬೇಕೆಂದು ಮನಸ್ಸಿನಲ್ಲಿ

ಮನೆಯಲ್ಲಿ ಗರ್ಭವತಿ ಸೊಸೆ ಚೊಚ್ಚಲು ಹಡೆಯಲಿರುವ ದಿನದಂದು ಕಾಣ ಬರುವ ಉತ್ಸಾಹ, ಉದ್ವೇಗ, ಸಂಭ್ರಮ ಎಲ್ಲರ ಮುಖದಲ್ಲಿ ಸುಳಿಯತೊಡಗಿದವು. ಅನುಭವಮಂಟಪಕ್ಕೆ ತಮ್ಮ ವಾತ್ಸಲ್ಯದ ಪುತ್ಥಳಿ ಬರುವಳೇನೋ ಎಂಬ ಪ್ರೇಮವು ಬಸವಣ್ಣ, ನೀಲಾಂಬಿಕೆ, ಗಂಗಾಂಬಿಕೆ, ಅಕ್ಕನಾಗಮ್ಮಗಳ ಹೃದಯದಲ್ಲಿ ಪುಟಿಯತೊಡಗಿತು. ಸಂಭ್ರಮದಿಂದ ಬಸವಣ್ಣ ನುಡಿದ:

‘ನಾವೆಲ್ಲರೊಂದಾಗಿ ತ್ರಿಪುರಾಂತಕಮಠಕ್ಕೆ ಹೋಗಿ, ತಾಯಿ ಮಹಾದೇವಿಯನ್ನು ಸ್ವಾಗತಿಸಿ, ಮೆರವಣಿಗೆಯಲ್ಲಿ ಕರೆತರಬಹುದಲ್ಲ!....’ ಪ್ರಭುದೇವರ ಒಪ್ಪಿಗೆಗಾಗಿ ಕೇಳಿದ.

‘ಅಹುದು....ಬಸವಣ್ಣಾ....ಎಲ್ಲ ಶರಣೆಯರೂ ಆರತಿಯ ತಟ್ಟೆಗಳೊಡನೆ ಅರೆಕ್ಷಣದಲ್ಲಿ ಸಿದ್ಧವಾಗುವರು. ಹೂಮಾಲೆಗಳನ್ನು ಸಿದ್ಧಪಡಿಸುತ್ತೇವೆ....’ ಅಕ್ಕನಾಗಮ್ಮ ದನಿಗೂಡಿಸಿದಳು.

‘ನಿಜ, ನಿಜ....! ಮಗುವು ದೀರ್ಘಪ್ರವಾಸದಿಂದ ದಣಿದು ಹಣ್ಣಾಗಿರಬೇಕು. ಬೇಗನೆ ಕರೆತಂದು ಎಣ್ಣೆನೀರೆರೆದು ಮಲಗಿಸಬಹುದು....’ ಎಂದು ನೀಲಾಂಬಿಕೆ ನುಡಿದಳು.

‘ನೀಲಾ....ನೀವು ಸ್ವಾಗತಿಸಿ ಕರೆತರುವುದರಲ್ಲಿ ನಾನು ಬಿಸಿಬಿಸಿ ಅಡುಗೆ ಮಾಡಿಡುವೆ. ಈ ಕೈಯಾರೆ ಪ್ರಸಾದವನ್ನುಣ್ಣಿಸುವ ಬಯಕೆ ಮಿಡಿಯುತ್ತಿದೆ’ ಗಂಗಾಂಬಿಕೆ ಅಂದಳು.

‘ನಾನು ಕೆಲವೇ ಕ್ಷಣಗಳಲ್ಲಿ ನಡೆಮುಡಿಯನ್ನು ಸಿದ್ಧಪಡಿಸಿ ತರುವೆ.... ಹೊರಟುಬಿಡುವೆ.’ ಮಡಿವಾಳ ಮಾಚಿದೇವರು ಮೇಲಕ್ಕೆದ್ದರು. ಹಾರುವ ಹಕ್ಕಿಯ ರೆಕ್ಕೆಗಳನ್ನು ಕತ್ತರಿಸುವಂತೆ, ಗಂಭೀರವದನರಾಗಿ ಕಂಚಿನ ಕಂಠದಲ್ಲಿ ಪ್ರಭುದೇವರು ‘ಶಾಂತಿ....ಶಾಂತಿ! ಸಾಕು ನಿಮ್ಮೆಲ್ಲರ ಉದ್ವೇಗ. ಯಾರೂ ಸ್ವಾಗತಿಸಲು ಹೋಗಬೇಕಾಗಿಲ್ಲ. ಈಗ ಗೋಷ್ಠಿಯ ವೇಳೆ ಮುಕ್ತಾಯಕ್ಕೆ ಬಂದಿದೆ. ತಾವೆಲ್ಲರೂ ಮಂಗಲ ಮಾಡಿ, ಚದುರಿಹೋಗಿರಿ. ಇಷ್ಟೇ ಅಲ್ಲ, ವಿಶೇಷವಾದ ಸ್ವಾಗತ-ಗೌರವವನ್ನು ನಾಳೆ ಯಾರೂ ವ್ಯಕ್ತಪಡಿಸಕೂಡದು. ದಿನದಂತೆ ಸಹಜವಾಗಿ ಇರಿ. ಬೆಳಗಿನ ಗೋಷ್ಠಿಯ ಬಗೆಗೆ ಎಲ್ಲ ಶರಣ ಬಂಧುಗಳಿಗೆ ತಿಳಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಆಗಮಿಸಲು ಹೇಳಿರಿ....’ ಹೀಗೆ ನುಡಿದಾಗ ಎಲ್ಲ ಕುತೂಹಲಗಳು ಒಮ್ಮೆಗೇ ಅದುಮಲ್ಪಟ್ಟವು.

‘ಎಂತಹ ಕಲ್ಲುಹೃದಯವಿದು....’ ಎಂದು ಕೆಲವು ಶರಣರು ಉದ್ಗಾರ ತೆಗೆಯದೆ ಇರಲಿಲ್ಲ. ಮಡಿವಾಳ ಮಾಚಿದೇವರು ಸ್ವಲ್ಪ ಉದ್ರಿಕ್ತರಾಗಿ ಎದ್ದು

ಮಂಗಲವಾಗಿ ಗೋಷ್ಠಿ ಚದುರಿತು. ಮಡಿವಾಳ ಮಾಚಿದೇವರು ಬಸವಣ್ಣ ನನ್ನು ಸಂದರ್ಶಿಸಿ,

'ಇದೇನು ಬಸವಣ್ಣಾ....ಪ್ರಭುದೇವರು ಇಂತಹ ಆಜ್ಞೆ ನೀಡಿದರು? ನಾನಂತೂ ಉಲ್ಲಂಘಿಸುವೆ. ನಡೆ, ಸ್ವಾಗತಕ್ಕೆ ಹೋಗೋಣ....' ಎಂದು ಉದ್ವಿಗ್ನರಾಗಿ ಹೇಳಿದರು.

'ತಾಳ್ಮೆ ಇರಲಿ, ಮಾಚಿದೇವರೇ! ನಿಮಗಿಂತ ಮೊದಲು ನಾನು ಉತ್ಸುಕ ನಾಗಿರುವೆ. ಆದರೆ ಪ್ರಭುದೇವರು ಮುಂದಾಲೋಚನೆ ಮಾಡದೆ ನುಡಿಯು ವವರಲ್ಲ. ಸಮಾಧಾನ ತಾಳೋಣ. ಮಗಳು ಮನೆ ತುಂಬಿದ ಮೇಲೆ ವಾತ್ಸಲ್ಯವನ್ನು ವ್ಯಕ್ತಪಡಿಸಲು ಅವಕಾಶ ಸಿಗದೇ?' ನಸುನಕ್ಕು ನುಡಿದರು.

ಶರಣೆಯರ ಉತ್ಸಾಹಕ್ಕೆ ಭಂಗಬಂದು ಅವರೆಲ್ಲ ಸಪ್ಪೆಮುಖದಿಂದ ಮನೆ ಸೇರಿದರು. ಪೂಜೆ-ಪ್ರಸಾದಗಳು ಮುಗಿದಬಳಿಕ ಬಸವಣ್ಣನವರು ಅಧ್ಯಯನ ದಲ್ಲಿದ್ದಾಗ ಪ್ರಭುದೇವರು ಅವರನ್ನು ಹುಡುಕುತ್ತ ಬಂದರು. ಬಸವಣ್ಣ ನವರು ಕುಳ್ಳಿರಲು ವಿಜ್ಞಾಪಿಸಿದರು.

'ಬಸವಣ್ಣಾ....ನಾನು ಹಾಗೆ ಖಂಡತುಂಡವಾಗಿ ನುಡಿದುದಕ್ಕೆ ಬೇಸರ ವಾಯಿತೇ?' ಮೃದುವಾಗಿ ಪ್ರಭುದೇವರು ಕೇಳಿದರು.

'ಬೇಸರ ಎಂತಹದು, ಪ್ರಭುವೇ? ಮಲ್ಲಿಗೆಯ ಮಾಲೆ ಮುತ್ತಿಟ್ಟರೂ ಚಂದವೇ, ಹೊಡೆದರೂ ಚಂದವೆ! ಪುರುಷದ ಗೊಂಬೆಯನ್ನು ಪ್ರೇಮದಿಂದ ಮುಟ್ಟಿದರೂ ಅಷ್ಟೇ; ಸಿಟ್ಟಿನಿಂದ ಒದೆದರೂ ಅಷ್ಟೆ. ಕಬ್ಬಿಣವು ಬಂಗಾರ ವಾಗಿಯೇ ತೀರುವುದು. ನೀವೆಂದೂ ದ್ವೇಷದಿಂದ ಅಹಿತ ಬಯಸುವವರಲ್ಲ; ಒಳ್ಳಿತಿಗೇ ದುಡಿಯುವಿರಿ, ನುಡಿಯುವಿರಿ. ಅಂದಾಗ ನಿಮ್ಮ ಆಜ್ಞೆ ಅಪ್ರಿಯ ವೇನಲ್ಲ.'

'ನಿನ್ನ ಹೃದಯ ಬಹು ದೊಡ್ಡದು, ಅಣ್ಣಾ. ನಿನಗೆ ಆಜ್ಞೆ ಮಾಡಲು ನಾನಾರು? ನೀನು ಕೂಡಿಸಿದ ಬೊಂಬೆಯಷ್ಟೆ! ಆದರೇನಂತೆ, ನೀನು ಕೊಟ್ಟ ಅಧಿಕಾರವನ್ನೇ ನಾನು ಸೂಕ್ತಪ್ರಸಂಗದಲ್ಲಿ ಬಳಸಬೇಕಲ್ಲವೇ?'

'ನಿಜ....ಅಂತೆಯೇ ನಿಮ್ಮ ಮಾತಿನಲ್ಲಿ ನನಗೆ ಪೂರ್ಣ ವಿಶ್ವಾಸ....'

'ನೀನು ಹಸುಗೂಸಿನಂತಹ ಹೃದಯಿ, ವಾತ್ಸಲ್ಯದ ವಾರಿಧಿ; ಪಾಪಿಗಳು-ಕೋಪಿಗಳು, ಸಜ್ಜನರು-ದುರ್ಜನರು, ಎಲ್ಲರಿಗೆ ಪ್ರೇಮವನ್ನೆರೆಯುವ ಕಾರುಣ್ಯ ನಿಧಿ. ಆದರೆ....ವ್ಯಾವಹಾರಿಕವಾಗಿ ಆಲೋಚಿಸಿ ನಾನು ತಡೆದೆ, ಅಣ್ಣಾ....' ಮುಗುಳ್ನಕ್ಕು ಪ್ರಭುದೇವರು ನುಡಿದರು.

[illegible] ಆಕೆಯನ್ನು ಯಾವುದೇ ಪರೀಕ್ಷೆಗೆ ಈಡುಮಾಡದೆ, ಸಂಭ್ರಮದಿಂದ ಸ್ವಾಗತಿಸಿ ಇಂಬಿಟ್ಟುಕೊಂಡರೆ ನೂರು ನಾಲಿಗೆ ನೂರು ನುಡಿದಾವು. ನನ್ನ-ನಿನ್ನಂತಹ ಕೆಲವರಿಗೆ ಆಕೆ ಚೊಕ್ಕ ಚಿನ್ನ ಎಂದು ಗೊತ್ತು. ಆದರೆ ಎಲ್ಲರೂ ನಮ್ಮ ಮಟ್ಟದ ಶರಣರೇ ಇರಲು ಸಾಧ್ಯವೆ? ಇನ್ನೂ ಅಪರಿಪಕ್ವವಾಗಿರುವ ಅಸಂಖ್ಯಾತರು ಇರಬಹುದು. ಮುಂದೆ ನಮ್ಮ ಮಂಟಪದವರೇ ಆಡಿ ತೋರಬಹುದು. ಅದಕ್ಕೆ ಆಸ್ಪದ ಏಕೆ? ಅವರೆಲ್ಲರ ಎದುರಿನಲ್ಲಿಯೇ ಪ್ರಶ್ನೋತ್ತರದ ಒರೆಗೆ ಹಚ್ಚಿಬಿಟ್ಟರೆ ತನ್ನ ಉನ್ನತ ವ್ಯಕ್ತಿತ್ವವನ್ನು ತಾನೇ ತೋರಿಸಿಕೊಂಡುಬಿಡುವಳಾ ತಾಯಿ....'

'ನಿಮ್ಮ ಪ್ರಶ್ನೋತ್ತರಗಳ ಘರ್ಷಣೆಯಲ್ಲಿ ಹೊರಬರುವುದು ಸಾಮಾನ್ಯವೆ, ಶರಣರೆ? ಅಷ್ಟೆಲ್ಲ ಸಭಿಕರ ನಡುವೆ ನಿಂತು ಮಾತನಾಡಲು ಆ ಮಗು ಹೆದರಿದರೆ?' ಗಂಗಾಂಬಿಕೆ ಕೋಣೆಯನ್ನು ಪ್ರವೇಶಿಸಿ, ಮಾತನ್ನು ಆಲಿಸುತ್ತಿದ್ದವಳು ನುಡಿದಳು.

'ಗಂಗಾ, ದೌರ್ಬಲ್ಯಯುತವಾಗಿ ತುಪ್ಪದಂತಿದ್ದರೆ ಬೆಂಕಿಯಲ್ಲಿ ಸುಟ್ಟು ಹೋಗಬಹುದು. ಚಿನ್ನವು ಪುಟವಿಕ್ಕಿದಂತೆಲ್ಲ ಉಜ್ವಲಿಸದೆ? ನಿನಗೇಕೆ ಇಂತಹ ಅಜ್ಞಾನಯುಕ್ತ ಭೀತಿ....?' ಬಸವಣ್ಣನವರು ನಸುನಕ್ಕರು.

'ಬಸವೇಶಾ....ಇನ್ನೂ ಒಂದು ವಿಚಾರವನ್ನು ಆಲೋಚಿಸಲು ಬಂದೆ. ಹೆಣ್ಣಿನ ಮನದ ಓಘವನ್ನು ಅರಿಯುವುದು ಬಹು ಕಷ್ಟಕರ. ಮಹಾದೇವಿಯದು ಅಭಾವ ವೈರಾಗ್ಯವೋ, ಸ್ವಭಾವ ವೈರಾಗ್ಯವೋ ಬಲ್ಲವರಾರು? ತಾತ್ಕಾಲಿಕ, ಕ್ಷಣಿಕ, ಆವೇಶದ ವಿರಕ್ತಿ ಇದ್ದರೂ ಇರಬಹುದು. ಅದನ್ನು ಬಗೆಬಗೆಯಿಂದ ಪರೀಕ್ಷಿಸಬೇಕು....'

'ಅಂಗೈಹುಣ್ಣಿಗೆ ಕನ್ನಡಿ ಬೇಕೇ? ಕಾಡುಮೇಡುಗಳನ್ನಲೆದು ಪಡಿಪಾಟಲು ಹೊಂದಿ, ಬಯಸಿಬಂದ ಭಾಗ್ಯವನ್ನು ಧಿಕ್ಕರಿಸಿ ಹೊರಟ ಒಬ್ಬ ವೈರಾಗ್ಯನಿಧಿಯಲ್ಲಿ ಇನ್ನೂ ಸಂದೇಹ ತಾಳುವುದು ಅಸಮಂಜಸವಲ್ಲವೇ, ಪ್ರಭು....'

'ಸಂದೇಹವೇನಿಲ್ಲ, ಅಣ್ಣ. ಅನುಭವಮಂಟಪದ ಶಿಖರಪ್ರಾಯ ವ್ಯಕ್ತಿಯಾಗಿ ಆಕೆ ಮೆರೆಯುವಳೆಂಬ ವಿಶ್ವಾಸ ನನಗಿದೆ. ಅವಳ ತೀಕ್ಷ್ಣ ವಿರಕ್ತಿಯನ್ನು ವಿವಿಧ ಮುಖಗಳಿಂದ ಜಗತ್ತಿಗೆ ಪರಿಚಯಿಸಬೇಕು....ಅದಕ್ಕಾಗಿ....' ಪ್ರಭುದೇವರು ಕ್ಷಣಕಾಲ ಗಂಭೀರರಾದರು.

'ಅದಕ್ಕಾಗಿ....ಏನು ಮಾಡಬೇಕು?' ಬಸವಣ್ಣ ಪ್ರಶ್ನಿಸಿದ.

'ನೋಡಲಿಕ್ಕೆ, ಸುಲಕ್ಷಣವಾಗಿರುವ, ಸುಂದರ ವ್ಯಕ್ತಿತ್ವದ, ಉತ್ತಮ

ಪರೀಕ್ಷೆಗಾಗಿ ಕಳಿಸುವೆ....' ಬಸವಣ್ಣನು ಮೊದಲು ಒಪ್ಪಲಿಲ್ಲ. ಪ್ರಭುದೇವರು ಒತ್ತಾಯಿಸಿದಾಗ ಮೌನ ತಾಳಿ ಸಮ್ಮತಿ ನೀಡಿದ.

ಹಸನ್ಮುಖರಾಗಿ ಪ್ರಭುದೇವರು ಅಲ್ಲಿಂದ ನಿರ್ಗಮಿಸಿದರು. ಮಹಾದೇವಿಯ ವೈರಾಗ್ಯವನ್ನು ಕೇಳಿ ಅರಿತಿದ್ದ ಅವರು ಆಕೆಯನ್ನು ಕಾಣಲು ಉತ್ಸುಕರಾಗಿದ್ದರೂ, ಕಟುತರ ಪರೀಕ್ಷೆಯ ಜಾಲವನ್ನು ಉದ್ದೇಶಪೂರ್ವಕವಾಗಿ ನಿರ್ಮಿಸಿದ್ದರು.

೪೫. ಕಿನ್ನರಯ್ಯನ ಪರೀಕ್ಷೆ

ಕ್ಷಣಕ್ಷಣಗಳನ್ನೂ ಎಣಿಸುತ್ತ, ನಕ್ಷತ್ರಗಳ ಚಲನೆಯನ್ನೇ ವೀಕ್ಷಿಸುತ್ತ ಮಹಾದೇವಿ ತ್ರಿಪುರಾಂತಕಮಠದ ಪೌಳಿಯಲ್ಲಿ ಮಲಗಿದಳು. ಇರುಳು ಸರಿದಂತೆಲ್ಲ ಆನಂದದ ಹೊನಲು ಉಕ್ಕತೊಡಗಿತು. ಬೆಳ್ಳಿಯ ಚುಕ್ಕೆ ದಿಗಂತದಲ್ಲಿ ಕಾಣಬರುತ್ತಲೇ ಮೇಲಕ್ಕೆದ್ದಳು. ಪ್ರಾತರ್ವಿಧಿಗಳನ್ನು ಪೂರೈಸಿಕೊಳ್ಳುವಷ್ಟರಲ್ಲಿ ಉಷೆಯ ಆಗಮನವಾಗಿ, ಕತ್ತಲೆಯ ಅವಕುಂಠನ ಸರಿಯತೊಡಗಿತು. ಆ ಮಂಗಳ ಮುಂಜಾವು ಆಹ್ಲಾದಕರವಾಗಿತ್ತು. ಇನ್ನೂ ಹೆಚ್ಚಿನ ಜನಸಂಚಾರ ಇರಲಿಲ್ಲ. ಮಠದ ಕಡೆಯ ಕೆರೆಯ ಭಾಗದಲ್ಲಿ ಜನರು ಬಂದು ಮೀಯಲಾರಂಭಿಸುತ್ತಿದ್ದರು. ಕೆರೆಯ ಒಂದು ನಿರ್ಜನ ಭಾಗಕ್ಕೆ ನಡೆಯತೊಡಗಿದಳು. ದೂರದ ಯಾತ್ರಿಕಳೊಬ್ಬಳು ತನ್ನ ಮಗಳನ್ನು ಕರೆದು ಕೆರೆಯ ದಂಡೆಯ ಮೇಲೆ ಬೆಲೆಬಾಳುವ ಸೀರೆಯನ್ನು, ಡಾಬು-ಅಡ್ಡಿಕೆಗಳನ್ನು ಇರಿಸುತ್ತ,

'ಇದನ್ನು ಎಚ್ಚರಿಕೆಯಿಂದ ಕಾಯುತ್ತಿರು; ನನ್ನದಾದ ಬಳಿಕ ನೀನು ಮೀಯುವೆಯಂತೆ' ಎಂದಳು.

ದನಗಳನ್ನು ಮೈತೊಳೆಯಲು ಕೆರೆಗೆ ತಂದ ಹೆಂಗಸೊಬ್ಬಳು ಆ ಯಾತ್ರಿಕಳ ಮಾತು ಕೇಳಿ, ತಲೆ ಎತ್ತಿ ಮುಗುಳ್ನಕ್ಕು ನುಡಿದಳು :

'ಅಕ್ಕಾ, ಕಲ್ಯಾಣಪಟ್ಟಣದಲ್ಲಿರುವವರೆಗೆ ಆ ಭೀತಿ ಬೇಡ. ಭಿಕ್ಷೆ ಬೇಡಿ ತಿನ್ನುವವರೇ ಇಲ್ಲಿ ಇಲ್ಲದಾಗ, ಕದ್ದು ಒಯ್ಯುವವರು ಯಾರು ಬರಬೇಕು? ಪರರ ಸೊತ್ತನ್ನು ಮುಟ್ಟುವವರು, ಬಯಸುವವರು ಇಲ್ಲಿ ಇಲ್ಲ. ಬಸವಣ್ಣನವರ ಕಾಯಕತತ್ತ್ವದಿಂದ ಇಲ್ಲಿ ಸಂಮೃದ್ಧಿಯ ಹಾಲಿನ ಹೊಳೆ ಹರಿಯುತ್ತಿದೆ. ಸಂತೃಪ್ತಿಯ ತೆಪ್ಪ ತೇಲುತ್ತಿದೆ. ಅದರಲ್ಲಿ ಕುಳಿತ ನಾವೆಲ್ಲ ಅಮೂಲ್ಯ ಸಿರಿವಂತರು....' ಮಹಾದೇವಿ ಆ ಸ್ತ್ರೀಯನ್ನು ದೂರದಿಂದಲೇ ದೃಷ್ಟಿಸಿದಳು. ಮುಖದ ಮೇಲಿನ ಅಪೂರ್ವ ಕಾಂತಿ, ಶಾಂತಿಗಳು, ಹಣೆಯ ಮೇಲಿನ ವಿಭೂತಿ ಅವಳ ಮನವನ್ನು ಸೆಳೆದವು.

'ಅವ್ವಾ, ನಿಮ್ಮ ಹೆಸರೇನವ್ವಾ? ಆಗಲೇ ಮಿಂದಾಯಿತೆ?' ಎಂದು ಆ ಆಗಂತುಕಳು ಶರಣೆಯನ್ನು ಕೇಳಿದಳು.

'ಬೆಳಗಾಗುವುದರಲ್ಲೇ ನನ್ನ ಸ್ನಾನ-ಪೂಜೆ ಮುಗಿಯುವುವು. ಹಾಲನ್ನು ಮಾರಾಟ ಮಾಡಿ ಬದುಕುವ ಗೌಲಿಗಿತಿ

ಹೋಗಬೇಕು. ಅದಕ್ಕೇ ಇಷ್ಟು ಅವಸರ.' ಆಕೆ ಹಸುವಿನ ಮೈಯುಜ್ಜುತ್ತ ಹೇಳಿದಳು.

'ಅನುಭವಗೋಷ್ಠಿ! ಹಂಗಂದ್ರೆ ಏನು....?' ಮೀಯಲು ಸಿದ್ಧಳಾದ ಯಾತ್ರಿಕಳು ಕೇಳಿದಳು.

'ನಿಮಗೆ ಗೊತ್ತಿಲ್ಲವೇ?....ಮತ್ತೆ ಈ ಕಲ್ಯಾಣಕ್ಕೆ ಯಾತ್ರೆ ಬಂದಿರುವುದೇಕೆ....?' ಗೌರವ್ವ ಸೋಜಿಗದಿಂದ ಕೇಳಿದಳು.

'ನಮ್ಮ ಹಿರ್‍ಯರು* ಮಹಾಮನೆಗೆ ದೀಕ್ಷ ತಗೊಳ್ಳಕ್ಕೆ ಅಂತ ನನ್ನನ್ನು ಕರಕೊಂಡು ಬಂದವ್ರೆ. ಅವರು ಊರಾಗ ಇದ್ದಾಗಲೂ ಅಷ್ಟೆ, ಏನೇನೋ ವಚನ ಅಂತ ಓದ್ತಾರೆ. ನಾನು ಬಸವಣ್ಣಪ್ಪನ ದರ್ಶನಕ್ಕೆ ಬಂದೀನಿ.'

'ಅವ್ವಾ, ಅಣ್ಣನವರನ್ನು ಕಣ್ಣಿನಿಂದ ದರ್ಶಿಸಿದರೆ ಸಾಲದು. ಅವರ ವ್ಯಕ್ತಿತ್ವವನ್ನು ಹೃದಯದಿಂದ, ಅವರ ವಿಚಾರವನ್ನು ಬುದ್ಧಿಯಿಂದ ದರ್ಶಿಸಬೇಕು. ನೀವು ಬೇಗಬೇಗನೆ ಅಣಿಯಾಗಿ ಹೊರಡಿರಿ. ಬೆಳಗಿನ ಎರಡನೆಯ ಜಾವಕ್ಕೆ ಗೋಷ್ಠಿ ಆರಂಭವಾಗುತ್ತೆ. ಇಂದು ವಿಶೇಷ ಕಾರ್ಯಕ್ರಮವೂ ಇದೆ....' ಗೌರವ್ವ ಹೇಳಿ, ತನ್ನ ಹಸುಗಳನ್ನು ದಂಡೆಗೆ ತಂದು ಊರ ಕಡೆಗೆ ನಡೆದಳು. ಮಹಾದೇವಿಯೂ ಅವಸರದಿಂದ ನಿರ್ಜನ ತಾಣವನ್ನು ಹುಡುಕಿಕೊಳ್ಳುತ್ತ ಸಾಗಿದಳು. ಕೆರೆಯಲ್ಲಿಳಿದು ತನ್ನ ಸೀರೆಯನ್ನು ಕಳಚಿ ಒಗೆದುಕೊಂಡಳು. ಮೂರು ಪಕ್ಷಗಳಿಂದ ಒಂದೇ ಸಮನೆ ದಿನವೂ ಅದನ್ನೇ ಉಟ್ಟು, ಅದೆಲ್ಲ ಜೀರ್ಣವಾಗತೊಡಗಿತ್ತು. ಉಟ್ಟುಕೊಂಡರೆ ಅಹುದೋ ಅಲ್ಲವೋ ಎಂಬಂತೆ ಮೈ ಮುಚ್ಚುತ್ತಿತ್ತೇ ಹೊರತು, ಸರ್ವಾಂಗವನ್ನೂ ಮುಚ್ಚುತ್ತಿರಲಿಲ್ಲ.

'ಇಂಥ ಚಿಂದಿಚಿಂದಿಯಾದ ಹರಕು ಸೀರೆಯನ್ನು ಉಟ್ಟು ಅನುಭವ ಮಂಟಪಕ್ಕೆ ಹೇಗೆ ಹೋಗಲಿ....?' ಮನಸ್ಸು ಕ್ಷಣಕಾಲ ತೂಗಾಡಿತು.

'ಎಷ್ಟೋ ಜನರು ಸೀರೆಯನ್ನು ಕೊಡಲು ಮುಂದಾಗಿರಲಿಲ್ಲವೆ? ಹರಿಹರಪುರದ ಗೌಡರು, ಮಹಾಗ್ರಾಮದ ಗೌಡರು ಮಿರುಗುವ ವಸ್ತ್ರವನ್ನು ಕೊಡಲು ಬಂದಿದ್ದರು. ನೀನೇ ನಿರಾಕರಿಸಿದೆ....' ಮನಸ್ಸು ನೆನಪಿಸಿ ಹೇಳಿತು.

'ಅಹುದು....ವಿಲಾಸ-ವಿರಕ್ತಿಗಳ ಹೋರಾಟದಲ್ಲಿ ಜಯಶೀಲಳಾಗಲು ದಿಗಂಬರಳಾದೆ; ವಸ್ತ್ರವನ್ನುಡಲು ಇಚ್ಛಿಸಲಿಲ್ಲ. ಮಸಣದಲ್ಲಿ ಕುಳಿತಾಗ ಗಾಳಿಗೆ ಹಾರಿ ಶಿವನೇ ಕಳಿಸಿದಂತೆನಿಸಿ, ಅವನ ಅಮೃತಹಸ್ತದಿಂದ ಬಂದ ಇದನ್ನು ಉಟ್ಟೆ

ಯನ್ನು ನೋಡಿ ಶರಣರೇನೂ ಹೊರದೂಡರು. ಚರ್ಮಚಕ್ಷುವಿನಿಂದ ಮಾನವರನ್ನು ಅಳೆಯುವಂತಹ ಕ್ಷುಲ್ಲಕರೇನಲ್ಲ ಅವರು. ಬಸವಣ್ಣನ ದಿವ್ಯಹಸ್ತದಿಂದ ಅನುಗ್ರಹಿಸಲ್ಪಟ್ಟ ವಸ್ತ್ರವನ್ನು ಪ್ರಸಾದವಾಗಿ ಪಡೆದು ಈ ದಿಗಂಬರತ್ವಕ್ಕೆ ಮಂಗಳ ಹಾಡುವೆ....' ಮಹಾದೇವಿ ಆ ಸೀರೆಯನ್ನು ಹಿಂಡಿದಳು. ಅದು ಮತ್ತಷ್ಟು ಹರಿಯಿತು. ತನ್ನಲ್ಲಿ ತಾನೇ ಮುಗುಳ್ನಗುತ್ತ ಅದನ್ನು ಮೇಲಕ್ಕೆ ತಂದು, ದಂಡೆಯ ಹಸಿರು ಹುಲ್ಲಿನ ಮೇಲೆ ಹರವಿದಳು. ಸೂರ್ಯನ ಕಿರಣಗಳು ಬೇಗನೆ ಒಣಗಿಸಿದರೆ ಹೋಗುವಾಗ ಉಡಬಹುದೆಂದು ಭಾವಿಸಿದಳು.

ಮತ್ತೆ ಏರಿಯನ್ನಿಳಿದು, ನೀರಿನಲ್ಲಿ ತನ್ನ ತಲೆಗೂದಲನ್ನು ತೋಯಿಸಿದಾಗ ನಡುಕ ಬಂದಿತು. ಮನೆಯಲ್ಲಿದ್ದಾಗ ಆಕೆಯ ದಟ್ಟವಾದ ಕೂದಲನ್ನು ತಿಕ್ಕಲಾರದೆ ಲಿಂಗಮ್ಮನ ಕೈ ಸೋಲುತ್ತಿದ್ದುದುಂಟು. ಮಹಾದೇವಿ ತಾನೇ ಎರೆದುಕೊಂಡರೆ ತಿಕ್ಕಿಕೊಳ್ಳಲಾರದೆ ಎಣ್ಣೆಯನ್ನು ಉಳಿಸಿಕೊಂಡುಬಿಡುವಳು ಎಂದು ಸ್ವತಃ ತಿಕ್ಕುತ್ತಿದ್ದ ಲಿಂಗಮ್ಮ ವಿಶೇಷ ಎಚ್ಚರಿಕೆಯಿಂದ ಕೂದಲನ್ನು ಸಂರಕ್ಷಿಸುತ್ತಿದ್ದಳು. ತಲೆಯಲ್ಲಿ ನೀರು ಉಳಿದು ಶೀತವಾದೀತು ಎಂದು ಒಂದು ಹನಿಯೂ ಉಳಿಯದಂತೆ ಬಟ್ಟೆಯಿಂದ ಹಿಂಡಿ ತೆಗೆದು, ಸಾಂಬ್ರಾಣಿ ಹೊಗೆಯಿಂದ, ಕೆಂಡದ ಕಾವಿನಿಂದ ಕೂದಲನ್ನು ಒಣಗಿಸುತ್ತಿದ್ದಳು. ಆದರೆ ಈಗ.... ಒಂದೂವರೆ ತಿಂಗಳಿನಿಂದ ಕಾಲಕಾಲಕ್ಕೆ ಎಣ್ಣೆಯಿಲ್ಲ, ಅಭ್ಯಂಗನವಿಲ್ಲ. ತಣ್ಣೀರಿನಲ್ಲಿ ಎರೆಯುವಿಕೆ. ಆದರೂ ಕೂದಲಿನ ಕಾಂತಿ ಇಳಿದಿರಲಿಲ್ಲ. ಬಿಸಿಲಿನ ಸಂಪರ್ಕ ಹೊಂದಿ ಇನ್ನೂ ಕಳೆ ಏರಿದ್ದವು.

ತಿಕ್ಕಿತಿಕ್ಕಿ ನೀರಿನಲ್ಲಿ ಚೆನ್ನಾಗಿ ತೊಳೆದುಕೊಂಡು ಮಿಂದು ಮೇಲಕ್ಕೆ ಬಂದಳು. ಸೂರ್ಯನು ಅದೇ ಆಗ ಮುಖ ತೋರಿಸತೊಡಗಿದ್ದ. ಆರಲು ಹಾಕಿದ್ದ ಸೀರೆಯು ಹಸಿಯಿತ್ತು. ಪೂಜೆಯನ್ನು ಮುಗಿಸಿ ಉಟ್ಟರಾಯಿತು ಎಂದು, ದಂಡೆಯ ಮೇಲಿದ್ದ ತುಂಬೆ ಹೂವುಗಳನ್ನು ಬಿಡಿಸಿಕೊಂಡು, ಎತ್ತರವಾಗಿ ಬೆಳೆದ ಪೊದೆಯೊಂದರ ಮುಂದೆ ಪೂಜೆಗೆ ಕುಳಿತಳು. ಸೂರ್ಯಕಿರಣಗಳು ತಂಪಾಗಿದ್ದ ಮೈಯನ್ನು ಹಿತವಾಗಿ ಬಿಸಿ ಮಾಡತೊಡಗಿದವು. ಮನಸ್ಸು ಉಲ್ಲಾಸಕರವಾಗಿತ್ತು. 'ತನ್ನ ಬದುಕಿನ ಹೋರಾಟ, ಹೊಯ್ದಾಟ, ಸಂಕಷ್ಟಗಳ ಅಂಕ ಇಂದು ಮುಗಿಯಲಿದೆ' ಎಂಬ ನೆನಪು ಸಂತಸದ ನೆಲೆಯಾಗಿತ್ತು.

'ಚನ್ನಮಲ್ಲಿಕಾರ್ಜುನಾ, ಶರಣರು ಮೆಟ್ಟಿದ ಧರೆ ಪಾವನವಾಗುವುದು, ಇದ್ದುದೇ ಕೈಲಾಸಪುರವಾಗುವುದು; ಪವಿತ್ರಾತ್ಮ ಬಸವಣ್ಣನು ತನ್ನ ಪರುಷಮಯ ಪಾದವಿಟ್ಟ

ಸಂಗನ ಬಸವಣ್ಣನ ಪಾದಕ್ಕೆ ಹೃತ್ಪೂರ್ವಕವಾಗಿ ನಮಿಸುವೆ.* ಒಂದಲ್ಲ, ಎರಡಲ್ಲ, ಸಾವಿರಾರು-ಲಕ್ಷಾಂತರ ವಿಭಿನ್ನ ಜನ್ಮಗಳನ್ನೆತ್ತಿ ಬಂದಿರುವೆ, ಶುಭಾಶುಭಂಗಳನ್ನುಂಡಿರುವೆ. ಹಿಂದಿನದು ಏನಾದರೂ ಆಗಲಿ....ಈಗ ಮಾತ್ರ ವಿವೇಕಯುಕ್ತ ನರಜನ್ಮ ನೀಡಿದೆ; ಬದುಕನ್ನು ಹೊರೆಮಾಡುವ ನಾಸ್ತಿಕತೆ ಕೊಡದೆ, ಮಲ್ಲಿಗೆಯ ಮಾಲೆಯಂತೆ ಸುವಾಸನಾಯುಕ್ತವಾಗಿ ಮಾಡುವ ಹರಭಕ್ತಿಯನ್ನು ಕೊಟ್ಟೆ, ಅದಕ್ಕೆ ಪೂರಕವಾಗಿ ಗುರುಕಾರುಣ್ಯ ವನ್ನೂ ಕೊಡಿಸಿದೆ. ಇನ್ನು ಮಹಾಂತರ ಸನ್ನಿಧಿಗೆ ಕರೆದೊಯ್ದು ಅವರ ಸಂಗದ ಆನಂದವನ್ನೂ ಕರುಣಿಸುವೆ. ಅದಕ್ಕಾಗಿ ನೀನು ಕೊಟ್ಟ ಕಷ್ಟಗಳೆಲ್ಲ ವನ್ನು ಮರೆತು ನಿನ್ನನ್ನು ಕ್ಷಮಿಸಿ, ಪ್ರೀತಿಸುವೆ ಚನ್ನಮಲ್ಲಿಕಾರ್ಜುನಾ'† ಎಂದು ಇಷ್ಟಲಿಂಗಕ್ಕೆ ಲಲ್ಲೆಗರೆದು ಮಾತನಾಡಿದಳು. ಈ ಸರಸ ಸಂಭಾಷಣೆ, ಆನಂದದ ಭರದಲ್ಲಿ ಬಹಿರಂಗದ ಅರಿವು ಉಳಿಯದೆ ತನ್ಮಯಳಾಗಿದ್ದಳು.

ಗಿಡದ ಕೆಳಗೆ ಕುಳಿತ ಕಿನ್ನರಿಯ ಬೊಮ್ಮಣ್ಣ ಒಂದೇ ಸಮನೆ ಎವೆ ಇಕ್ಕದೆ ಮಹಾದೇವಿಯನ್ನು ದೃಷ್ಟಿಸತೊಡಗಿದ. ಕರ್ಣಾಕರ್ಣಿಯಾಗಿ ಅನೇಕ ವದಂತಿಗಳನ್ನು ಆಕೆಯ ಬಗ್ಗೆ ಕೇಳಿದ್ದ ಬೊಮ್ಮಣ್ಣನಿಗೆ ಆಕೆಯನ್ನು ನೋಡ ಬೇಕೆಂಬ ಕುತೂಹಲ ಒಂದೇ ಸಮನೆ ವೃದ್ಧಿಯಾಗುತ್ತಿತ್ತು. ಆದರೆ ಅಂತಹ ಪ್ರಸಂಗದಲ್ಲಿ ಪ್ರಭುದೇವರು ಕಿನ್ನರಯ್ಯನನ್ನು ಕರೆದು ಮಹಾದೇವಿಯನ್ನು ಪರೀಕ್ಷಿಸಲು ಆಜ್ಞಾಪಿಸಿದಾಗ, ಅವನು ಬೆಚ್ಚಿಬಿದ್ದ.

'ಅಂತಹ ಮಹಾನ್ ವ್ಯಕ್ತಿಯನ್ನು ತಡವಲು ಹೋಗಲೆ? ಅನುಭವ ಮಂಟಪದಿಂದ ಹೊರದೂಡಿದರೂ ಚಿಂತೆಯಿಲ್ಲ, ಇಂತಹ ಶರಣರೊಡನೆ ಸರಸ ವಾಡುವ ಸಾಹಸ ಬೇಡ' ಎಂದು ನಿರಾಕರಿಸಿದ. ಪ್ರಭುದೇವರು ಬೆನ್ನುತಟ್ಟಿ ನುಡಿದಿದ್ದರು :

'ಕಿನ್ನರಯ್ಯ....ಮಹಾದೇವಿಯು ನಮ್ಮೆಲ್ಲರ ಅಚ್ಚುಮೆಚ್ಚಿನ ಕಂದನಾಗು ವಳು. ಅಕ್ಕಸಾಲಿಗ ಒರೆದೊರೆದು ಹೆಮ್ಮೆಯಿಂದ ತನ್ನ ಚಿನ್ನದ ಚೊಕ್ಕತನ ವನ್ನು ಪ್ರದರ್ಶಿಸುವಂತೆ ನಾವೂ ಅಂತಹ ಹೆಮ್ಮೆಯಿಂದಲೇ ಆಕೆಯನ್ನು ಪರೀಕ್ಷಿಸುತ್ತೇವೆ....ನಿನಗೆ ಕಳವಳ ಬೇಡ, ನನ್ನ ಆಜ್ಞೆಯನ್ನು ಮೌನವಾಗಿ ನೆರವೇರಿಸು.'

ಕಿನ್ನರಯ್ಯ ಸಮ್ಮತಿಸಿದಾಗ ಪ್ರಭುದೇವರು ಸಂಭಾಷಣೆಯ ಬಗೆಯನ್ನು ಯೋಜಿಸಿ ಹೇಳಿದ್ದರು. ಕಿನ್ನರಿಬ್ರಹ್ಮಯ್ಯ ಅದನ್ನು ನೆನಪಿನಲ್ಲಿರಿಸಿಕೊಳ್ಳುತ್ತ ತನ್ನ ನಿವಾಸಕ್ಕೆ ನಡೆದಿದ್ದ. ಆದರೆ ರಾತ್ರಿಯಿಡೀ ಅವನಿಗೆ ತಳಮಳವಾಗು

ತ್ತಿದ್ದು, 'ಎಂತಹ ಗುರುತರ ಕಾರ್ಯವನ್ನು ಕೈಗೊಂಡು ಬಂದೆ' ಎಂದು ಮಿಡುಕತೊಡಗಿದ್ದ.

'ತ್ರಿಪುರಾಂತಕಾ, ನೀನಿಕ್ಕಿದ ತೊಡಕನ್ನು ನೀನೇ ಬಿಡಿಸು. ಗುರುವಾಜ್ಞೆಯೆಂದು ತಿಳಿದು ನಾನು ಮಾಡುತ್ತಿರುವೆ....' ಎಂದು ಬೆಳಗಿನ ಪೂಜೆ ಮುಗಿಸಿ ಕೆರೆಯ ಕಡೆಗೆ ನಡೆದಿದ್ದ.

ಮಹಾದೇವಿಯನ್ನು ಅರಸುತ್ತ ಬಂದಾಗ ಜನಸಂಚಾರವಿಲ್ಲದ ಕಡೆ ಕೆರೆಯ ದಡದಲ್ಲಿ ಮಹಾದೇವಿ ಪೂಜೆಗೆ ಕುಳಿತಿರುವುದನ್ನು ಗಮನಿಸಿ, ಆಕೆ ಬಹಿರ್ಮುಖಳಾಗಲಿ ಎಂದು ನಿರೀಕ್ಷಿಸುತ್ತ ಗಿಡದ ಬೊಡ್ಡೆಗೆ ಆತು ಕುಳಿತಿದ್ದ.

ತಣ್ಣೀರು ಇಳಿಯುತ್ತಿದ್ದ ಒದ್ದೆ ಕೂದಲು ಆರಲೆಂದು ಮಹಾದೇವಿ ಮುಂದೆ ಹರಡಿಕೊಂಡು ಕುಳಿತಿದ್ದಳು. ಅದೇ ಆಗ ಉದಿಸಿದ್ದ ಬಾಲ ಸೂರ್ಯನ ಹೊಂಗಿರಣಗಳು ಅವಳ ಕೂದಲನ್ನು ಮಿರುಗಿಸುತ್ತಿದ್ದವು. ಅರ್ಧ ತೆರೆದ ದೃಷ್ಟಿಯನ್ನು ಇಷ್ಟಲಿಂಗದ ಮೇಲೆ ನಿಲ್ಲಿಸಿದ್ದಳು. ಮುಖದ ಮೇಲೆ ಸಾತ್ವಿಕ ತೇಜಸ್ಸು ಮಿನುಗುತ್ತಿತ್ತು. ಸೌಂದರ್ಯದ ಅಧಿದೇವತೆಯೇ ಮೈತಳೆದಂತೆ ಕಿನ್ನರಿ ಬೊಮ್ಮಯ್ಯನಿಗೆ ಭಾಸವಾಯಿತು. ಪ್ರಾರಂಭದಲ್ಲಿ ಕುತೂಹಲ ದೃಷ್ಟಿ ಇದ್ದುದು, ಅನಂತರ ಅಚ್ಚರಿಯಾಗಿ ಮಾರ್ಪಟ್ಟು, ಕಾಲಾನಂತರದಲ್ಲಿ ಗೌರವಭಾವವು ಆವರಿಸತೊಡಗಿತು.

'ಎಂತಹ ರೂಪಸಿ ಈಕೆ! ಇಷ್ಟು ಕಷ್ಟಕೋಟಲೆಗಳಲ್ಲಿ ಬಸವಳಿದು ಬಂದಿದ್ದರೂ ಸರ್ವಾಂಗಸೌಂದರ್ಯದಿಂದ ಶೋಭಿಸುವಳು. ಸಾತ್ವಿಕತೆಯೇ ಮೈತಳೆದು ನಿಂತಂತಹ ಮುಖಭಾವ, ನಿರ್ಲಿಪ್ತ ಪ್ರಜ್ಞೆ....' ಬ್ರಹ್ಮಯ್ಯ ಒಂದೇ ಸಮನೆ ಚಿಕಿತ್ಸಕದೃಷ್ಟಿಯಿಂದ ಅಡಿಯಿಂದ ಮುಡಿಯವರೆಗೆ ಅಳೆದ.

ಮಹಾದೇವಿ ಇಷ್ಟಲಿಂಗಪೂಜೆ ಮುಗಿಸಿ, ತೊಯ್ದಿದ್ದ ಲಿಂಗವಸ್ತ್ರವನ್ನು ಒಣಗಲೆಂದು ಮುಂದೆ ಹುಲ್ಲಿನ ಮೇಲೆ ಹಾಕಿಕೊಂಡವಳು, ತೆಗೆದು ಕೊರಳಿಗೆ ಕಟ್ಟಿಕೊಳ್ಳಲೆಂದು ದೃಷ್ಟಿ ಹರಿಸಿದಾಗ ಸಮೀಪದ ಗಿಡದ ಕೆಳಗೆ ಕುಳಿತು ತನ್ನನ್ನು ಹೀರುವಂತೆ ನೋಡತೊಡಗಿದ್ದ ಕಣ್ಣುಗಳನ್ನು ಕಂಡಳು. ಮೂವತ್ತರ ಹರೆಯದ ತರುಣ, ಸುಂದರ ಕಾಯದವನು, ತಲೆಗೂದಲನ್ನು ಹಿಂದಕ್ಕೆ ಬಾಚಿದ್ದಾನೆ. ಅವನ ಕಣ್ಣುಗಳು ಮಾತ್ರ ನೆಟ್ಟ ನೋಟದಿಂದ ತನ್ನನ್ನು ನೋಡುತ್ತಿವೆ.

'ಹಣೆಯ ಮೇಲಿನ ಭಸ್ಮ, ಕೊರಳೊಳಗಣ ರುದ್ರಾಕ್ಷಿ ಮಾಲೆಗಳು ಇವನೊಬ್ಬ ಶರಣನೇ ಇರಬೇಕು ಎಂದು ಸಂಕೇತಿಸಿದರೂ ಕಣ್ಣುಗಳ ಚಪಲತೆ

ನೋಡಿದರೆ ಅವನಿಗೇನೂ ಲಾಭವಿಲ್ಲ; ನನಗೇನೂ ಹಾನಿಯಿಲ್ಲ' ಎಂದು ಭಾವಿಸಿ ನಿರ್ಲಿಪ್ತಳಾಗಿ ಇಷ್ಟಲಿಂಗವನ್ನು ಕಟ್ಟಿಕೊಂಡಳು.

ಬ್ರಹ್ಮಯ್ಯ ಅಚ್ಚರಿಗೊಂಡ. 'ದಿಗಂಬರ ದೇಹವನ್ನು ಈ ಪರಿಯಿಂದ ನೋಡಿದರೂ ಅವಳ ಮುಖದ ಮೇಲೆ ಲಜ್ಜೆಯಾಗಲಿ, ಕ್ರೋಧವಾಗಲಿ, ದುಃಖವಾಗಲಿ ಸುಳಿಯಲಿಲ್ಲವಲ್ಲ; ಎಂತಹ ಸೋಜಿಗ!' ಎಂದುಕೊಂಡ. 'ಕೋಪ, ಲಜ್ಜೆ, ದುಃಖಗಳು ಮನೋದೌರ್ಬಲ್ಯದ ಲಕ್ಷಣಗಳು; ಹೆಣ್ತನದ ಅರಿವಿನ ಬಹಿರಂಗ ರೂಪಗಳು' ಎಂಬುದನ್ನು ಅವನು ಅರಿತಿದ್ದ.

ಮಹಾದೇವಿ ಮೇಲಕ್ಕೆದ್ದು ನಿಂತಾಗ ತಾನು ಸಮೀಪಕ್ಕೆ ಹೋಗಿ ನಿಂತು ಉದ್ಗರಿಸಿದ:

'ಜಗತ್ತಿನಲ್ಲಿ ಬಗೆಬಗೆಯ ಸೋಗಿನಿಂದ, ಶೃಂಗಾರಪೂರ್ಣ ವೇಷದಿಂದ ಹೆಂಗೆಳೆಯರು ಪುರುಷರ ಹೃದಯವನ್ನು ಸೆಳೆದುಕೊಳ್ಳುವುದನ್ನು ಕಂಡಿದ್ದೆ. ಆದರೆ ದಿಗಂಬರತ್ವವನ್ನು ಧರಿಸಿ, ತನ್ನ ಅಂಗಾಂಗಗಳ ಚೆಲುವನ್ನು ಪೂರ್ಣವಾಗಿ ಪ್ರದರ್ಶಿಸಿ ಹೃದಯವನ್ನು ಸೆಳೆಯಲೆತ್ನಿಸುವ ವಿಚಿತ್ರ ನಾಟಕವನ್ನು ಇದೇ ಮೊದಲು ಕಂಡೆ!'

'ಶಿವಶಿವಾ....ಅಣ್ಣಾ! ಯಾವ ಪುರುಷರನ್ನು ಆಕರ್ಷಿಸಲೂ ನಾನು ನಟನೆ ಮಾಡುತ್ತಲಿಲ್ಲವಣ್ಣಾ.

> ಸಾಕ್ಷಿ ಸತ್ತಿತ್ತು, ಪತ್ರ ಬೆಂದುತ್ತು, ಲೆಕ್ಕ ತುಂಬಿತ್ತು
> ಬೇವ ಜೀವಿತದ ಆಸೆ ನಿಂದುದು, ಭಾಷೆ ಹೋಯಿತ್ತು.
> ದೇಸವೆಲ್ಲರಿಯೆ ಎನ್ನ ದೇವ ಮಲ್ಲಿಕಾರ್ಜುನನ ನಂಬಿ
> ಹಂಬಲ ಮರೆದೆನಾಗಿ!*

ಜಗದ ಯಂತ್ರವಾಹಕ ಚನ್ನಮಲ್ಲಿಕಾರ್ಜುನನ ಪಾದಕಮಲಕ್ಕೆ ಮಣಿದೆ. ನನ್ನ ಬದುಕೆಂಬ ಆಸ್ತಿಯನ್ನು ಅವನಿಗೆ ಅರ್ಪಿಸುವೆನೆಂದು ಗುರುಸಾಕ್ಷಿಯಾಗಿ ಪ್ರಮಾಣ ಮಾಡಿದ್ದೆ. ಮಾಡಿದ ಪ್ರಮಾಣವನ್ನು ಪೂರೈಸಿರುವೆ. ಗುರುವಿನ ಸಾಕ್ಷಿ ಮುಗಿಯಿತು. ನನ್ನ ಮಾತು ಮುಟ್ಟಿ ಪ್ರತಿಜ್ಞೆಯ ಪತ್ರ ನಾಶವಾಯಿತು. ಅವನಿಗೆ ಸಲ್ಲಿಸಬೇಕಾದ ಸಂಪತ್ತು ಸಲ್ಲಿಸಿ ಲೆಕ್ಕ ಪೂರೈಸಿದೆ. ಕೈಗೊಂಡ ದಿವ್ಯ ಭಾಷೆ ಪೂರೈಕೆಯಾಗಿ ಹೋದ ಕಾರಣ, ಶರೀರವನ್ನು ಪ್ರದರ್ಶಿಸಿ ಬದುಕಬೇಕೆಂಬ ಆಸೆ ನಿಂತಿದೆ. ಚನ್ನಮಲ್ಲನಿಗೊಲಿದ ವಿರಾಗಿಣಿ ನಾನು ಎಂದು ದೇಶವೆಲ್ಲ ಅರಿತಿದೆ. ಇನ್ನೇಕಣ್ಣಾ ನನಗೆ ಮತ್ತೊಬ್ಬರನ್ನು ಆಕರ್ಷಿಸುವ ಪ್ರಯತ್ನ....'

---

* [illegible]

'ನೀನು ಬಹಳ ವಾಕ್ಚತುರೆಯಂತೆ ತೋರುವೆ.

> ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆ ಇರಲು,
> ಇದೇತರ ಮನ? ಇದೇತರ ನಿರ್ವಾಣ?
> ಮಹಾಲಿಂಗ ತ್ರಿಪುರಾಂತಕ ನಿನ್ನ ಸಂಸಾರಿ ಎಂಬನಲ್ಲದೆ
> ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ...*

ಮೈ ದಿಗಂಬರವಾದರೆ ಸಾಲದು, ಮನ ಬತ್ತಲೆಯಾಗಬೇಕು. ನಿನ್ನ ಕಾಯದಲ್ಲಿ ಕಳವಳ, ಪ್ರಾಣದಲ್ಲಿ ಅಪೇಕ್ಷೆ ತುಂಬಿವೆ. ನಿನ್ನದೆಂತಹ ವಿರಕ್ತಿ; ಬಿಡು ಬಿಡು' ಬ್ರಹ್ಮಯ್ಯ ನುಡಿದ.

'ಶರೀರ, ಪ್ರಾಣಗಳ ರಕ್ಷಣೆ ನನ್ನ ಗುರಿಯಲ್ಲ. ಅವುಗಳನ್ನು ನಾನು ದೇವನಿಗೆ ಸಮರ್ಪಿಸಿರುವೆ. ಇಹದಲ್ಲಿ ಉಳಿಸುವ, ಅಥವಾ ಅಳಿಸಿ ಬಳಿಗೆ ಎಳೆದುಕೊಳ್ಳುವ ಹೊಣೆಯನ್ನು ಅವನಿಗೇ ನೀಡಿರುವೆ. ಅಂದಾಗ ನಾನು ಏತಕ್ಕಾಗಿ ಅಪೇಕ್ಷೆ-ಕಳವಳ ಪಡಲಿ? ಒಡೆಯನು ತನ್ನ ಭೃತ್ಯನಿಗೆ ಒಡವೆಯನ್ನು ಕಾಯಲು ಒಪ್ಪಿಸಿದಾಗ ಅವನು ಕರ್ತವ್ಯಬದ್ಧನಾಗಿ ಕಾಯುವಂತೆ, ಈ ಬದುಕನ್ನು ರಕ್ಷಿಸಿಕೊಳ್ಳುತ್ತ ನಾನು ನಿರ್ಲಿಪ್ತಳಾಗಿರುವೆ. ಲೋಕವನ್ನು ಬಹಿರಂಗದಲ್ಲಿ ಹಿಡಿದುಕೊಂಡಿದ್ದರೂ ಅಂತರಂಗದಲ್ಲಿ ಅದರಿಂದ ದೂರವಿರುವ, ಶರೀರಧಾರಣೆ ಮಾಡಿದ್ದರೂ ಅದರ ಪ್ರಜ್ಞೆಯನ್ನು ಅಳಿದುಕೊಂಡಿರುವೆ. ಯಾಂತ್ರಿಕವಾಗಿ ಹೊರಜಗತ್ತಿನಲ್ಲಿ ವ್ಯವಹರಿಸುತ್ತಿದ್ದರೂ ಒಳಗೆ ಅದನ್ನು ಮರೆತು ಶಿವನ ಸಂಗದಲ್ಲಿರುವೆ. ಸುಟ್ಟ ಹಗ್ಗದಂತೆ, ನಾನು ನೋಡಲಿಕ್ಕಷ್ಟೇ ಹೆಣ್ಣು, ಅಂತರಂಗದಲ್ಲಿ ಹೆಣ್ತನದ ಪ್ರಕೃತಿ ಗುಣವಿಲ್ಲ. ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತೆ ನಿರ್ಲಿಪ್ತವಾಗಿ ಬದುಕಿರುವೆ.'† ಮಹಾದೇವಿ ಉತ್ತರಿಸಿದಳು.

'ಮಹಾದೇವಿ....ಕಾಣದ ದೇವನಿಗೆ ಮರುಳಾಗಿ ಈ ಇಹಲೋಕದ ಸುಖಗಳನ್ನು ಗಾಳಿಗೆ ತೂರುವುದು ಮಹಾ ಮೂರ್ಖತನ. ಮನುಷ್ಯ ಮಾಡಿದ ಕಾಲ್ಪನಿಕ ವಸ್ತುವೇ ದೇವರು. ಇಂತಹ ಕಾಲ್ಪನಿಕ ತತ್ತ್ವಕ್ಕೆ ಮಾರುಹೋಗಿ, ನಾವು ಸಾಧಿಸುವುದು ಅಷ್ಟರಲ್ಲಿಯೇ ಇದೆ.'

'ನನಗೆ ಹಾಗನ್ನಿಸದು, ಅಣ್ಣ. ಈ ಜಗತ್ತನ್ನು ಯಂತ್ರದಂತೆ ಕ್ರಮಬದ್ಧವಾಗಿ ತಿರುಗಿಸುವ ಯಂತ್ರವಾಹಕ, ನಿರಾಕಾರಶಕ್ತಿಯೇ ದೇವರು. ಅವನನ್ನು

---

*ಶೂನ್ಯಸಂಪಾದನೆ ಷೋಡಶೋಪದೇಶ, ವ. ೧

† ಮ. ವ.

ಅಲ್ಲಗಳೆಯುವುದೆಂದರೆ ತನ್ನ ಅಸ್ತಿತ್ವವನ್ನೇ ಅಲ್ಲಗಳೆದುಕೊಂಬಂತೆ. ಆದ್ದರಿಂದ ನನ್ನ ವಿಶ್ವಾಸವನ್ನು ಯಾರೂ ಅಲುಗಾಡಿಸರು.'

'ದೈವೀ ಅನುಭವ, ಸಾಕ್ಷಾತ್ಕಾರ ಇವೆಲ್ಲ ಸ್ವಯಂಕಲ್ಪನೆ, ಮಹಾದೇವಿ. ಅಳುವ ಮಗುವನ್ನು ಸಮಾಧಾನಿಸಲು ಬೆರಳನ್ನು ಬಾಯಿಗಿಡುವಂತೆ ದುಃಖಿತ ಮಾನವನನ್ನು ಸಾಂತ್ವನಿಸಲು ಈ ಎಲ್ಲ ಕಲ್ಪನೆ. ಇವೂ ಮರೀಚಿಕೆಗಳೇ! ಇವುಗಳಲ್ಲಿ ನನಗೆ ವಿಶ್ವಾಸವಿಲ್ಲ.'

'ಇಂತಹ ಅಲ್ಪವಿಶ್ವಾಸಿಯೂ ಚಂಚಲನೂ ಆದ ನಿನಗೆ ದೈವೀಕರುಣೆ ಸಾಧ್ಯವೂ ಆಗದು. ಏತದ ಬಾನೆಯಲ್ಲಿ ತೂತಿದ್ದರೆ ಮೇಲಕ್ಕೆ ಬರುವಷ್ಟರಲ್ಲಿ ನೀನು ಜೊಳ್ಳೆಂದು ಸೋರಿಹೋಗುವಂತೆ, ಅಳಿಮನದವನಲ್ಲಿ ಭಕ್ತಿಯ ನೀರೂ ಸೋರುವುದು; ಪೂರ್ಣವಾಗಿ ಹೊರಬಂದು ಬದುಕಿನ ಹೊಲದಲ್ಲಿ ಸಾಕ್ಷಾತ್ಕಾರದ ಬೆಳೆಯನ್ನು ಪವಾಡಸದೃಶ್ಯವಾಗಿ ನೀಡಲಾರದು. ದಿವ್ಯಾನುಭವದ ಸಮುಚ್ಚಯಗಳು ಅಸಂಖ್ಯಾತರ ಬದುಕನ್ನು ಪಲ್ಲಟಿಸಿರುವುದನ್ನು ಕಾಣೆಯಾ? ನಿನ್ನ ಸೋಲನ್ನು ಸಾಮಾನ್ಯೀಕರಿಸಿ ನುಡಿಯಬೇಡ. ಈ ಆಧ್ಯಾತ್ಮ, ಶರಣಾಗತಿಗಳು ನನಗೆ ಎಲ್ಲಿಲ್ಲದ ಬಲವನ್ನು, ಆನಂದವನ್ನು, ಆತ್ಮವಿಶ್ವಾಸವನ್ನು ಕೊಟ್ಟಿವೆ. ಈ ನಂಬಿಗೆಯಿಂದ ನಾನು ಪರಮಸುಖಿಯಾಗಿರುವೆ; ಶಿವನ ಪ್ರೇಮಬಂಧನ ನನಗೆ ಪರಮಸ್ವಾತಂತ್ರ್ಯ!....'

ಮಹಾದೇವಿಯ ಈ ಉತ್ತರದಿಂದ ಬ್ರಹ್ಮಯ್ಯನ ಬಾಯಿ ಕಟ್ಟಿತು.

'ಎಂತಹ ವಿಚಾರವಾದಿನಿ ಈಕೆ! ಈಕೆಯ ಮಸ್ತಕವನ್ನು ಮುಟ್ಟಿ ನೋಡಿದರೆ ಮನೋಹರನ ಉಳಿಮೆ ಕಾಣಬರುತ್ತಿದೆ. ದೇವರಲ್ಲಿ ಇಟ್ಟಿರುವ ವಿಶ್ವಾಸವನ್ನು ಅಲುಗಿಸಬೇಕೆಂದರೆ ಸಾಧ್ಯವಾಗದಷ್ಟು ತರ್ಕಜ್ಞಾನಿಯಾಗಿದ್ದಾಳೆ, ಅರಿವಿನ ಅರಮನೆಯಾಗಿದ್ದಾಳೆ. ಆದ್ದರಿಂದ ಇವಳನ್ನು ಬದಲಿಸಲು ಈಗ ಬೇರೊಂದು ಪ್ರಶ್ನೆ ಹಾಕುವೆ....' ಮನದಲ್ಲಿ ಆಲೋಚನೆ ಮಾಡಿ ನುಡಿದ:

'ಮಹಾದೇವಿ, ನಿನ್ನ ಸೌಂದರ್ಯವನ್ನು ನೋಡಿ ನನಗೆ ಹುಚ್ಚು ಹಿಡಿದಂತಾಗಿದೆ. ಇದೇನು ನಿನ್ನ ಅಂಗಾಂಗಗಳ ಪರಿಪುಷ್ಟತೆ, ಮಾಟ! ಇದೆಲ್ಲವೂ ವ್ಯರ್ಥವಾಗುತ್ತಲಿದೆ—ನಿನ್ನ ಹುಚ್ಚುವೈರಾಗ್ಯದಿಂದ!

ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ
ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ

ನಿನ್ನ ಸಮುಸುಖ ಕೂಟದೊಳಿರ್ದು ಶಿವಾನುಭಾವ
ಭಕ್ತಿಯಿಂ ಗೆಲುವೆನು; ಬಾರಾ ಹೆಣ್ಣೆ ಎಂದು ಕೈವಿಡಿವೆನು.*

ಮಹಾದೇವಿ ನಿನ್ನ ಸುಂದರ ಸ್ವರೂಪದಲ್ಲಿ ನನ್ನ ದಿಟ್ಟಿನಟ್ಟಿದ್ದರೆ ಲಾವಣ್ಯ ವನ್ನು ಸವಿಯಬೇಕೆಂದು ಮನ ಹಂಬಲಿಸುತ್ತಿದೆ. ನಿನ್ನ ವಿರಕ್ತಿ, ಭಕ್ತಿ ಯಾವುವೂ ಕಣ್ಣಿಗೆ ತೋರದೆ ನೀನು ಬಚ್ಚಬರಿಯ ಹೆಂಗಸು, ಸುಂದರ ತರುಣಿ ಎಂಬುದಷ್ಟೇ ನನ್ನ ಕಣ್ಣಿಗೆ ಕಾಣುತ್ತಿದೆ. ನಾವಿಬ್ಬರೊಂದಾಗಿ, ಆದರ್ಶ ಸತಿಪತಿಗಳಾದರೆ ನಿನ್ನ ಯೌವನವೂ ಉಪಯುಕ್ತ, ನಾನೂ ಸಂತೋಷ ಗೊಳ್ಳುವೆ. ಆತ್ಮಾನಂದದಿಂದ ನಿನ್ನ ಕೈಹಿಡಿಯುವೆ....' ಕಿನ್ನರಿಯ ಬ್ರಹ್ಮಯ್ಯ ಮುಂದೆ ಹೆಜ್ಜೆ ಇರಿಸುವಷ್ಟರಲ್ಲಿ ಮಹಾದೇವಿ ಹೌಹಾರಿ ಹಿಂದಕ್ಕೆ ಸರಿದು ನುಡಿವಳು :

'ಛೀ....ಅಲ್ಲೇ ನಿಲ್ಲು! ನಿನ್ನ ವೇಷದ ನಾಚಿಕೆ ಸಹ ನಿನಗಿಲ್ಲವೇ? ತೋರಲಿಕ್ಕೆ ಶರಣನ ವೇಷ, ಆಚಾರವನ್ನು ನೋಡಿದರೆ ಪಾಶವಿಕ ಮಟ್ಟದ್ದು! ನಿನ್ನನ್ನು ನೋಡಿಯೇ ಅಣ್ಣನವರು ನುಡಿದಿರಬೇಕು, 'ಒಲೆಯ ಬೂದಿಯ ಬಿಲಿಯಲು ಬೇಡ, ಒಲಿದಂತೆ ಹೂಸಿಕೊಂಡಿಪ್ಪುದು. ಹೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ? ಒಂದನಾಡಹೋಗಿ ಒಂಬತ್ತನಾಡುವ ಡಂಭಕರ ಮೆಚ್ಚ ನಮ್ಮ ಕೂಡಲಸಂಗಮದೇವ!' ಮಾವಿನ ಹಣ್ಣಿನ ಬುಟ್ಟಿಯಲ್ಲಿ ಎಕ್ಕೆಯ ಕಾಯಿ ಇದ್ದಂತೆ ಇರುವ ನೀನು ಎಂತಹ ಅವಿವೇಕಿ....!'

'ಮದುವೆಯಾಗಲು ಬಯಸುವುದು ತಪ್ಪೇ, ಮಹಾದೇವಿ? ಸತಿಪತಿ ಗಳೊಂದಾಗದೆ, ವಿಭಿನ್ನ ಆಸೆ-ಆಕಾಂಕ್ಷೆ ಹೊಂದಿ ಇಜ್ಜೋಡಾದರೆ ಆಗ ಅದು ಅಮೃತದಲ್ಲಿ ವಿಷವ ಬೆರೆಸಿದಂತೆ.† ನೀನು ಇಂಥ ವಿಷಮವಾತಾವರಣ ದಲ್ಲಿ ಸಿಕ್ಕಿಬಿದ್ದು ವೈವಾಹಿಕ ಜೀವನವೇ ಬೇಡ ಎಂದು ನಿರ್ಧರಿಸಿರುವೆ. ಕೌಶಿಕನಿಗೆ ನನಗೆ ಅಜಗಜಾಂತರ ವ್ಯತ್ಯಾಸ. ನಾನು ಆಧ್ಯಾತ್ಮಜೀವಿ, ಆಚಾರನಿಷ್ಠ, ನಿನ್ನೀಜೀವನದ ರೀತಿಗೆ ಪೂರ್ಣವಾಗಿ ಹೊಂದಿಕೊಳ್ಳುವವನು. ಬ್ರಹ್ಮಯ್ಯ ಎಂದು ನನ್ನ ಹೆಸರಿದ್ದು, ಅನುಭವಮಂಟಪದ ಓರ್ವ ಶರಣನು. ನಾನು ಕಿನ್ನರಿಯನ್ನು ನುಡಿಸುವುದರಲ್ಲಿ ಅಸಾಮಾನ್ಯ ಕಲಾವಂತ. ನಿನ್ನ ಇನಿ ಕೊರಳಿನ ದನಿಗೆ ನನ್ನ ಕಿನ್ನರಿಯ ಹಿನ್ನೆಲೆ; ನಿನ್ನ ಬದುಕಿನ ಗಾನಕ್ಕೆ ನನ್ನ ಪ್ರೇಮದ ಮೃದಂಗ. ಎಂತಹ ಜೋಡಿ! ಇಂತಹ ಸುಂದರ ಸಂಸಾರದಿಂದ

ನಿನ್ನ ಯೌವನದ ಸಾರ್ಥಕತೆ ಆಗುವುದು....ಪವಿತ್ರವಾದ ಪ್ರೇಮದಿಂದ ನಿಜಸುಖವು ದೊರೆವುದು....'

'ಸಾಕು ನಿಲ್ಲಿಸು ನಿನ್ನ ಪ್ರಲಾಪ. ಪವಿತ್ರ ಪ್ರೇಮ! ಎಂತಹ ಶಬ್ದ ಬಳಸುತ್ತಿರುವೆ. ಪವಿತ್ರವಾದ ಪ್ರೇಮಸಂಬಂಧ ಹೊಂದಬೇಕು ಅನ್ನುವವನು ನನ್ನನ್ನು ಸೋದರಿಯಂತೆ ಪ್ರೀತಿಸು; ತಂದೆಯಾಗಿ, ಮಗನಾಗಿ ಪ್ರೀತಿಸು. ಆ ಪ್ರೇಮವನ್ನು ಹೊಂದಲು ನನ್ನ ಶರೀರದ ಚೆಲುವಿನ ವರ್ಣನೆ ಏತಕ್ಕೆ! ಮದುವೆಯ ಜಂಜಡವೇತಕ್ಕೆ! ಕಾಮದ ನರೆಕೂದಲನ್ನು ಮುಚ್ಚಲು ಪ್ರೇಮದ ಬಣ್ಣದ ಬಡಿತವೆ?

ನೋಡುವ ಕಣ್ಣುಗಳಿಗೆ ನನ್ನ ಈ ತೊಗಲಗೊಂಬೆ ಅಂದವಾಗಿರಲು ನಾಚಿಕೆ ತೊರೆದುಬಂದಿರುವೆ, ಅಣ್ಣಾ; ನಿನ್ನ ಕಿವಿಗೆ ನನ್ನ ವಾಣಿ ಇಂಪೆನಿಸಲು ನಿರ್ಲಜ್ಜನಾಗಿ ಬಂದಿರುವೆಯಣ್ಣಾ. ನೀನು ಒಲಿಯುವುದು ನನ್ನ ಹೃದಯ ಸಂಪತ್ತಿಗಲ್ಲ, ನಾರಿ ಎಂಬ ರೂಪಕ್ಕೆ; ಹೀನವಾದ ಲೈಂಗಿಕ ಸುಖಾಪೇಕ್ಷೆಗಾಗಿ ದೊಡ್ಡದೊಡ್ಡ ಮಾತುಗಳನ್ನು ಮುಂದೆಮಾಡುತ್ತಿರುವೆ. ಪಾರಮಾರ್ಥದ ಸುಖವನ್ನು ಬಲಿಗೊಟ್ಟು, ಕ್ಷುಲ್ಲಕ ಸುಖಕ್ಕೆ ಎಳೆಸುವ ನಿನ್ನ ಬುದ್ಧಿಗೇಡಿತನಕ್ಕೆ ನನಗೆ ಹೇಸಿಕೆ ಬರತೊಡಗಿದೆ. ಗಂಗಾನದಿಯಲ್ಲಿ ಮಿಂದ ಬಳಿಕ ಗಂಜಳದಲ್ಲಿ ಮೀಯಬಾರದು; ಚಂದನವ ಪೂಸಿಕೊಂಡ ಬಳಿಕ ಕೆಸರನ್ನು ಮೈಗೆ ಬಡಿದುಕೊಳ್ಳಬಾರದು. ಇನಿತು ದಿವಸಕಾಲ ಪಾರಮಾರ್ಥ ಪ್ರಪಂಚದಲ್ಲಿ ಮಿಂದು, ನನ್ನ ಈ ಕಾಯದ ಚೆಲುವನ್ನು ನೋಡಿದ ತಕ್ಷಣ ಇರಿಸಿಕೊಂಡ ಆದರ್ಶಗಳನ್ನು ತೂರಿ ಮತ್ತೆ ಸಂಸಾರದ ಕೆಸರಿನಲ್ಲಿ ಇಳಿಯಬೇಕೆಂಬ ನಿನ್ನ ಅಜ್ಞಾನಕ್ಕೆ ಮರುಕವಾಗಿದೆ. ಇಂದ್ರಿಯವಿಕಾರಕ್ಕೆ ಒಳಗಾಗಿ ಆತ್ಮಾನಂದದ ನಿತ್ಯಸುಖವನ್ನು ಮರೆತು, ವಿಷಯಾನಂದದ ಕ್ಷಣಿಕಸುಖಕ್ಕಾಗಿ ಹಾತೊರೆಯುವುದು ಅತಿ ಹೇಯ....ನನ್ನ ಚೆಲುವು, ಯೌವನಗಳ ಉಪಯುಕ್ತತೆ ಪುರುಷಸಂಗದಿಂದಲೇ ಸಾಧ್ಯ ಎಂಬ ನಿನ್ನ ಮಾತನ್ನು ಕೇಳಿ ನಿನ್ನ ಮೇಲೆ ಜಿಗುಪ್ಸೆ ಬರುತ್ತಿದೆ. ಯೌವನದ ಉಪಯುಕ್ತತೆ ಆತ್ಯಂತಿಕ ಭೋಗದಲ್ಲಲ್ಲ, ಉನ್ನತ ಆದರ್ಶ ಸಾಧನೆಯಲ್ಲಿದೆ, ಸಂಯಮದಲ್ಲಿದೆ. ಚೆನ್ನಮಲ್ಲಿಕಾರ್ಜುನನನ್ನೊ ಒಲಿಸುವ ಸಾಧನೆಯಲ್ಲೇ ನನ್ನ ಬಾಳಿನ ಸಾರ್ಥಕತೆ ಇದೆ. ಅವನನ್ನು ಉಳಿದು ನೀನು, ಕೌಶಿಕ, ಇಡೀ ಜಗದ ಪುರುಷರೆಲ್ಲ ನನಗೆ ಸಹೋದರರು.... ದೂರ ಸರಿ ಮರುಳೇ* ಮಹಾದೇವಿ ತೀಕ್ಷ್ಣವಾಗಿ ನುಡಿದಳು.

ಕಿನ್ನರಯ್ಯನು ಮನದಲ್ಲೇ ಸೋಜಿಗಗೊಂಡ. 'ಸೌಂದರ್ಯ ವರ್ಣನೆಯನ್ನು ಮಾಡಿದರೆ ಮರುಳಾಗದ ಸ್ತ್ರೀಯರೇ ಇಲ್ಲ' ಎಂದುಕೊಂಡಿದ್ದ ಅವನಿಗೆ ಮಹಾದೇವಿಯ ವರ್ತನೆ ಆಶ್ಚರ್ಯದ ಅಲೆಗಳನ್ನು ಎಬ್ಬಿಸಿತು. 'ಇಂತಹ ರೂಪಸಿ ಇದ್ದರೂ ಇವಳಿಗೆ ದೇಹಪ್ರಜ್ಞೆ ಇಲ್ಲ, ಸೌಂದರ್ಯಾಭಿಮಾನವಿಲ್ಲ. ಇವಳ ಸುಂದರ ಮುಖಕಮಲವ ಮುಟ್ಟಿ ನೋಡಿದರೆ ಅಲ್ಲಿ ಶಿವನಡೆಗೆ ಶರಣಾಗತಿಯುಂಟೇ ವಿನಾ ಹಮ್ಮಿನ ಭಾವವಿಲ್ಲ. ಈಗ ಮುಂದೆ ಮಾತಾಡುವ ಬಗೆ....?' ಆಲೋಚಿಸುತ್ತ ನಿಂತು ಕ್ಷಣಕಾಲದ ಮೌನದ ನಂತರ ಮತ್ತೆ ನುಡಿದ:

'ಮಹಾದೇವಿ, ಆಧ್ಯಾತ್ಮಜೀವನಕ್ಕೆ ಕಾಲಿರಿಸಿದ ಹೊಸತರಲ್ಲಿ ನನಗೂ ನಿನ್ನಂತೆಯೇ ಆವೇಶವಿತ್ತು. ಆದರೆ ಈಗ ಅದೆಲ್ಲ ಇಳಿದುಹೋಗಿದೆ. ಅಲ್ಲಿ ನೋಡು....ನವದಂಪತಿಗಳಿಬ್ಬರು ಇಲ್ಲಿ ಬೇರೆ ಯಾರೂ ಇಲ್ಲ ಎಂದು ಭಾವಿಸಿ ಕೆರೆಯಲ್ಲಿಳಿದು ನೀರನ್ನು ಚಿಮ್ಮುತ್ತ, ನೀರಾಟವಾಡಿ ನಕ್ಕುನಲಿಯುತ್ತಿದ್ದಾರೆ. ಅವರಿಬ್ಬರ ಕಣ್ಣಿನಲ್ಲಿ ಎಂಥ ತೃಪ್ತಿಯಿದೆ! ಪ್ರೇಮಮಯ ಭಾಷೆ ಬಳಸುತ್ತ ಎಷ್ಟು ಆನಂದತುಂದಿಲರಾಗಿದ್ದಾರೆ." ಕಿನ್ನರಯ್ಯ ಕೈತೋರಿಸಿದತ್ತ ಮಹಾದೇವಿ ದೃಷ್ಟಿಹಾಯಿಸಿದಳು. ಹೊಸದಾಗಿ ಮದುವೆಯಾದ ಪತಿಪತ್ನಿಯರು ಜನಸಂಚಾರವಿಲ್ಲದ ಕೆರೆಯ ಈ ಭಾಗಕ್ಕೆ ಬಂದು ನೀರಿಗೆ ಇಳಿದಿದ್ದರು. ಯಾರೋ ಪರವೂರಿನ ಯಾತ್ರಿಕರು ಇದ್ದಂತೆ ತೋರಿತು.

ಪತಿಯು ಬೊಗಸೆಯಿಂದ ನೀರನ್ನು ಉಗ್ಗಿದ. ಪತ್ನಿಯು ಲಜ್ಜಿತಳಾಗಿ ರಕ್ತಸಿಕ್ತ ಮುಖ ಮಾಡಿಕೊಂಡು ತನ್ನ ಬೊಗಸೆಯಿಂದಲೂ ನೀರನ್ನು ಚಿಮ್ಮಿದಳು. ಮಹಾದೇವಿ ನಿರ್ಲಿಪ್ತಳಾಗಿ ನೋಡಿ ಕಿನ್ನರಯ್ಯನತ್ತ ತಿರುಗಿದಳು. ಅವನು ಅವಳನ್ನೇ ನೋಡುತ್ತ ನುಡಿದ:

'ನೋಡಿದೆಯಾ....ಎಂತಹ ಆನಂದ ಈ ಸರಸ-ಸಲ್ಲಾಪದಲ್ಲಿ! ಸ್ವರ್ಗ-ಸುಖವನ್ನು ಇದರ ಮುಂದೆ ನಿವಾಳಿಸಬೇಕು. 'ಇಂಥ ಸುಖದಿಂದ ವಂಚಿತನಾಗಿರುವೆನಲ್ಲಾ' ಎಂದು ನನಗೆ ನಿಜಕ್ಕೂ ಖೇದವಾಗಿದೆ. ನಿನಗೂ ಅಂತಹ ಪಶ್ಚಾತ್ತಾಪದ ಪ್ರಸಂಗ ಮುಂದೆ ಒದಗಬಾರದೆಂದು ನಾನು ಮುನ್ನೆಚ್ಚರಿಕೆ ನೀಡುತ್ತಿರುವೆ.'

'ಬಹಳ ಧನ್ಯವಾದಗಳು. ಗುಬ್ಬಿಯು ಬಹಳ ಎತ್ತರಕ್ಕೆ ಹಾರಲಾರದಾದರೆ 'ಪಾರಿವಾಳಕ್ಕೂ ಅದು ಅಸಾಧ್ಯ' ಎಂದು ಏಕೆ ಬುದ್ಧಿ ಹೇಳಬೇಕು? ಕೆಂಭೂತವು ಗರಿಹರವಿ ಕುಣಿಯಲಾರದಾದರೆ

ಸಲ್ಲಾಪಗಳು ನನ್ನ ಗುರಿಯನ್ನು ವಿಚಲಿತಗೊಳಿಸಲಾರವು; ಮನಸ್ಸನ್ನು ಡೋಲಾಯಮಾನ ಮಾಡಲಾರವು. ಲೋಕದ ಬಗ್ಗೆ ಇನ್ನು ಮಾತನಾಡ ಬೇಡವಣ್ಣಾ....

ನಮಗೆ ನಮ್ಮ ಲಿಂಗದ ಚಿಂತೆ, ನಮಗೆ ನಮ್ಮ ಭಕ್ತರ ಚಿಂತೆ
ನಮಗೆ ನಮ್ಮ ಆದ್ಯರ ಚಿಂತೆ
ನಮಗೆ ನಮ್ಮ ಚೆನ್ನಮಲ್ಲಿಕಾರ್ಜುನಯ್ಯನ ಚಿಂತೆಯಲ್ಲದೆ
ಲೋಕದ ಮಾತು ನಮಗೇಕಣ್ಣಾ?*

ಆಧ್ಯಾತ್ಮಪಥದಲ್ಲಿ ಉನ್ನತ ಗುರಿಯನ್ನು ಮುಟ್ಟಿದ ಆದ್ಯರ ಬದುಕು ನನ್ನನ್ನು ಆಕರ್ಷಿಸಿರುವುದೇ ವಿನಾ ಇಂತಹ ದಾಂಪತ್ಯ ಜೀವನವಲ್ಲ. ಇದೇನು ಬಹು ವೈಶಿಷ್ಟ್ಯಪೂರ್ಣವಾದ ಸಾಧನೆಯಲ್ಲ. ಚಕ್ರವಾಕದ ಜೋಡಿಗಳು, ಪಾರಿವಾಳ ದಂಪತಿಗಳು ಈ ಮಾನವನಿಗಿಂತಲೂ ಮಿಗಿಲಾದ ಪ್ರೇಮದಿಂದ ಬಾಳುತ್ತವೆ; ಸಂಗಾತಿಯು ಸತ್ತರೆ ಪ್ರಾಣ ಸಹಿತ ನೀಗುತ್ತವೆ. ದಾಂಪತ್ಯಪ್ರೇಮವು ಹಿತವಾಗಿರಬೇಕು, ನಿಜ; ಆದರೆ ಇದೇ ಬಹುದೊಡ್ಡ ಸಾಧನೆಯೇನಲ್ಲ' ಮಹಾದೇವಿ ನುಡಿದಳು.

ಕಿನ್ನರಿ ಬ್ರಹ್ಮಯ್ಯ ಅಂತರಂಗದಲ್ಲಿ ವಿಚಾರ ಮಾಡಿದ :

'ಲೌಕಿಕ ಸುಖಗಳನ್ನು ಮುಂದೊಡ್ಡಿ ಮನಸ್ಸನ್ನು ಪರಿವರ್ತಿಸಬೇಕೆಂದು ಪ್ರಯತ್ನಿಸಿದೆ; ಸರಸ ಸಂಭಾಷಣೆಯಲ್ಲಿ ತೊಡಗಿಸಬೇಕು ಎಂದುಕೊಂಡೆ. ಆದರೆ ಈಕೆ ಲೌಕಿಕ ವಿಷಯದ ಮಾತುಕತೆಗಳಲ್ಲಿ ಸಹ ನಿರಾಸಕ್ತಳು. ಈಕೆಯ ಕೊರಳನ್ನು ಮುಟ್ಟಿ ನೋಡಿದರೆ, ಅರ್ಥಾತ್ ವಾಣಿಯನ್ನು ಪರೀಕ್ಷಿಸಿದರೆ ಅಲ್ಲಿ ನೀಲಕಂಠನ ಇರುವೊಂದೇ ಅಲ್ಲದೆ ಮತ್ತೇನೂ ಇಲ್ಲ.

ಮಹಾದೇವಿ....ಈ ಶರೀರವು ಸೇವೆಯಲ್ಲಿ ಸವೆಯಬೇಕು. ಕೈಗಳು ಪತಿಯ ಪಾದಸೇವೆಗೆ, ಮಕ್ಕಳ ಉಪಚಾರಕ್ಕೆ ಮೀಸಲಾಗಬೇಕು. ಅದರಲ್ಲಿ ಸ್ತ್ರೀಗೆ ಸಾರ್ಥಕತೆ ಇದೆ....'

'ಸೇವೆಯಲ್ಲಿ ಸಾರ್ಥಕತೆ ಇದೆ ಎಂಬುದನ್ನು ನಾನೊಪ್ಪುವೆ, ಅಣ್ಣಾ! ಆದರೆ ಎಂತಹ ಸೇವೆ ಎಂಬುದು ಅತಿ ಮುಖ್ಯ. ಪತಿಗೆ ಶರೀರವನ್ನೊಪ್ಪಿಸುವುದಾಗಲೀ, ಅವನ ಪಾದಗಳನ್ನೊತ್ತುವುದಾಗಲೀ ಅದೇ ಆತ್ಯಂತಿಕ ಸೇವೆಯೆಂದು ನಾನು ಭಾವಿಸಿಲ್ಲ. ದುಃಖಿತ ಬಂಧುಗಳನ್ನು ಸಾಂತ್ವನಿಸಿ, ರೋಗಿಗಳ ಆರೈಕೆ ಮಾಡಿ ಪುನೀತರಾಗಬಹುದು; ಶರಣರ ಪಾದಸೇವೆಯನ್ನು ಮಾಡೋಣ. ತನ್ನವರನ್ನು ತನ್ನಂಥವರನ್ನು ಪ್ರೇಮಿಸುವುದು ಸ್ವಾರ್ಥ,

---

* ಮ. ವ. ೮೦

ಆದ್ದರಿಂದ ಈ ನನ್ನ ತೋಳುಗಳು ಶಿವನ ಅಪ್ಪುಗೆಗೆ ಕೈಗಳು, ದೇವನ ಮಕ್ಕಳ ಸೇವೆಗೆ ಮೀಸಲು....' ನಿರ್ಧಾರದಿಂದ ನುಡಿದಳು.

'ಇದೇನಿದು ? ಈಕೆಯನ್ನು ಹೇಗೆ ಪ್ರಶ್ನಿಸಿದರೂ ಶಿವನ ಸಂಬಂಧವಾದ ಉತ್ತರವನ್ನೇ ನೀಡುವಳಲ್ಲಾ. ತೋಳುಗಳನ್ನು ಮುಟ್ಟಿ ನೋಡಿದರೆ ಶಿವನ ಅಪ್ಪು ಕಾಣಬರುತ್ತಿದೆ..." ಸ್ವಗತವಾಗಿ ನುಡಿದುಕೊಂಡು ಮತ್ತೆ ಹೇಳಿದ :

'ಮಹಾದೇವಿ. ಇವೆಲ್ಲ ಕೇಳಲು, ನುಡಿಯಲು ಇಂಪಾದ ಮಾತುಗಳು. ಮಾನವನು ಕೇವಲ ಬುದ್ಧಿಜೀವಿಯಷ್ಟೇ ಅಲ್ಲ, ಭಾವಜೀವಿ. ವಿರಕ್ತ ಜೀವನದಲ್ಲಿ ಕಾಲಾನಂತರದಲ್ಲಿ ನಿರಾಶೆ ಸಮನಿಸುವುದು. ನಿಃಸ್ವಾರ್ಥಿಯಾಗಿ ವಿರಕ್ತನು ಎಷ್ಟೇ ಉಪಕಾರವನ್ನು ಸಮಾಜಕ್ಕೆ ಮಾಡಿದರೂ ಅವನು ಮುಪ್ಪಾದಾಗ ಒಬ್ಬರೂ ಸಹಾಯಕ್ಕೆ ಬರರು. ಯಾರಾದರೂ ಅಂತಹ ಆಧ್ಯಾತ್ಮಜೀವಿ, ಹೆಂಗರುಳಿನ ತ್ಯಾಗಿ, ಸಾತ್ತ್ವಿಕ ಸ್ತ್ರೀ ಆ ವಿರಕ್ತನ ಕಷ್ಟ ನೋಡಿ ಮರುಕಗೊಂಡು ಪವಿತ್ರವಾದ ಸೇವೆಮಾಡಿ, ತುತ್ತು ಅನ್ನ ನೀಡಿದರೆ ಸಾಕು ನೂರು ನಾಲಿಗೆಗಳು ನೂರು ಅಪವಾದ ಕೊಡುವವು. ಎಷ್ಟೋ ಜನ ವಿರಕ್ತರು ಒಂದಾನೊಂದು ವಯಸ್ಸಿನಲ್ಲಿ, 'ನನ್ನ ಪಾಲಿಗೆ 'ನನ್ನದು' ಎಂದು ದುಡಿಯುವ ಜೀವ ಒಂದಾದರೂ ಇಲ್ಲವಾಯಿತೇ ?' ಎಂದು ಖಿನ್ನರಾಗುವರು, ನಿರಾಶ್ರಿತರಾಗಿ ಪ್ರಾಣಬಿಡುವರು. ಆಗ ನಿಷ್ಕಾಮವಂತ ಸಂಗಾತಿಗಾಗಿ ಹೃದಯವು ಹಂಬಲಿಸುವುದು. ಜೀವನದ ಕಷ್ಟಸುಖಗಳನ್ನೆದುರಿಸುವಾಗ ಇನ್ನೊಂದು ವ್ಯಕ್ತಿ ಜೊತೆಗಿದ್ದರೆ ಎಷ್ಟೋ ಸಮಾಧಾನ; ನಿರಾಶೆಯ ಕಡಲಲ್ಲಿ ಬಾಳ ನೌಕೆಯು ನುಚ್ಚುನೂರಾಗದಂತೆ ಈ ಪ್ರೇಮ ತಡೆಯುವುದು. 'ನನಗಾಗಿ ಅಲ್ಲದಿದ್ದರೂ, ಈ ಪ್ರೇಮಪೂರ್ಣ ಸಂಗಾತಿಗಾಗಿಯಾದರೂ ಬದುಕಬೇಕು' ಎಂದು ಮನುಷ್ಯ ಆ ಆಶಾಕಿರಣದ ಬೆಳಗಿನಲ್ಲಿ ಬಾಳು ತಳ್ಳುವನು. ಎಂತಹ ಬಡತನ, ಸಂಕಷ್ಟಗಳಲ್ಲೂ ಗಂಡನಿಗಾಗಿ ಹೆಂಡತಿ, ಹೆಂಡತಿಗಾಗಿ ಗಂಡ ಸಂತೈಸಿ ಕೊಂಡು ಬಾಳುವರು; ಏತಕ್ಕಾಗಿ ? ಪ್ರೇಮಕ್ಕಾಗಿ ! ಒಬ್ಬ ಬಡ ವಿಧವೆಗೆ ಒಂದು ಕೂಸು ಇದ್ದರೆ ಆಕೆ ಅದನ್ನೇ ತನ್ನ ಆಶಾಕೇಂದ್ರವನ್ನಾಗಿ ಮಾಡಿ ಕೊಂಡು ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ಕೇವಲ ಕೂಸಿನ ಮೇಲಿನ ಪ್ರೇಮ ಕ್ಕಾಗಿ ಬಾಳುವಳು. ಅರಿತು ನೋಡು ಮಹಾದೇವಿ, ಪ್ರೇಮವು ಬಾಳದೋಣಿ ಯನ್ನು ಜಗದ ಶರಧಿಯಲ್ಲಿ ಮುಂದೆ ತಳ್ಳುವ ಹುಟ್ಟುಗೋಲು ; ನಿರಾಶೆ ಯಿಂದ ಹುಚ್ಚನಾಗದಂತೆ ರಕ್ಷಿಸುವ

ಸಿಕ್ಕಿ ಪುಡಿಯಾಗದಂತೆ ರಕ್ಷಿಸುವ ಕಬ್ಬಿಣದ ಕವಚ. ದೈವೀಪ್ರೇಮಕ್ಕೆ ಮಾನವಪ್ರೇಮ ಮೊದಲ ಮೆಟ್ಟಲು. ಈ ಪ್ರೇಮವನ್ನು ಸವಿಯದ ಬದುಕು ಬಂಜರುಭೂಮಿ, ವ್ಯರ್ಥ....'

'ಖಂಡಿತ ಒಪ್ಪುವೆ; ದೈವೀಪ್ರೇಮಕ್ಕೆ ಮಾನವಪ್ರೇಮ ಮೊದಲ ಮೆಟ್ಟಲು! ಆದರೆ ತುದಿಯನ್ನು ಮುಟ್ಟಿದವನು ಮರಳಿ ಮೊದಲ ಮೆಟ್ಟಲಿಗೆ ಬರಬೇಕಾಗಿಲ್ಲವಷ್ಟೆ! ಪ್ರೇಮ ಎಂಬ ಅಮೂಲ್ಯತತ್ತ್ವವನ್ನು ಪತಿಸತಿಯರ ಸಂಬಂಧದಲ್ಲಿಯೇ ಏಕೆ ಅಳೆಯುವಿರಿ? ವಿರಕ್ತನಿಗೆ ಯಾರೂ ಇಲ್ಲ ಎಂಬುದು ಅಜ್ಞಾನ. ಅವನಿಗೆ ಜಗತ್ತೆಲ್ಲವೂ ಬಂಧುವರ್ಗವೆ! ಗೃಹಸ್ಥ ಸೀಮಿತವಾದ ಪ್ರೇಮವನ್ನುಂಡರೆ ವಿರಕ್ತನು ವಿಶ್ವದ ಪ್ರೇಮವನ್ನುಣ್ಣುವನು. ನೋಡಿಲ್ಲಿ, ಅಣ್ಣ—ನನ್ನ ಹೃದಯವು ಹೂವಾಗಿ ಅರಳಿದೆ; ಇಲ್ಲಿ ಅರಸಿಕತೆಯ ಬಂಜರುತನವಿಲ್ಲ, ಭಾಕ್ತಿಕತೆಯ ಮಕರಂದವಿದೆ, ಜೊತೆಗೆ ಸುಜ್ಞಾನದ ಸೌರಭವಿದೆ. ನನ್ನ ಈ ಬದುಕನ್ನು ತೆರೆದು ಇಟ್ಟಿರುವೆ. ಆ ದೇವದುಂಬಿಯು ಯಾವಾಗ ಸುಜ್ಞಾನಸೌರಭಕ್ಕೆ ಆಕರ್ಷಿತವಾಗಿ ಬಂದು, ಸದ್ಭಕ್ತಿಯ ಮಕರಂದವನ್ನು ಈಂಟುವುದೋ ಎಂದು ಹಂಬಲಿಸುತ್ತಿರುವೆ. ಇಂತಹ ಮನಃಸ್ಥಿತಿಯಲ್ಲಿ ಪುರುಷಪ್ರೇಮಕ್ಕೆ ಎಡೆಯಿಲ್ಲವಣ್ಣಾ.'

ಕಿನ್ನರಯ್ಯ ಮಹಾದೇವಿಯ ಉತ್ತರಕ್ಕೆ ಮಾರುಹೋದ. 'ಈಕೆಯ ಉರಃಸ್ಥಲವ ಅಂದರೆ ಹೃದಯದ ಭಾವನೆಗಳನ್ನು ಪರೀಕ್ಷಿಸಿ ನೋಡಿದರೆ ಇಲ್ಲಿ ಶಿವಭಕ್ತಿಯೇ ಓತಪ್ರೋತವಾಗಿ ತುಂಬಿದೆಯಲ್ಲದೆ ಪುರುಷ ಪ್ರೇಮಕ್ಕೆ ಇಂಬಿಲ್ಲ' ಎಂದುಕೊಂಡ. ಅವನ ಬುದ್ಧಿಯ ಬತ್ತಳಿಕೆ ತೆರವಾಗತೊಡಗಿತ್ತು. ಇನ್ನು ಎರಡೇ ಅಸ್ತ್ರಗಳು ಉಳಿದಿದ್ದವು. ಅವು ಪ್ರಬಲವಾದ ಅಸ್ತ್ರಗಳೆಂದು ಅವನಿಗೆ ಪೂರ್ಣ ವಿಶ್ವಾಸ. ಆಗ ನುಡಿದ:

'ಮಹಾದೇವಿ....ಮಾನವರಲ್ಲಿ ಅನೇಕ ಹುಟ್ಟುಗುಣಗಳಿವೆ. ಅವು ತೃಪ್ತಿಯಾಗದ ಹೊರತು ಬದುಕಿನಲ್ಲಿ ಸುಖ ದೊರೆಯದು. ಅಂಥ ಹುಟ್ಟುಗುಣಗಳಲ್ಲಿ ವಾತ್ಸಲ್ಯವೂ ಒಂದು. 'ತನ್ನದಾದಂತಹ ಮಗುವಿಗೆ ಜನ್ಮ ನೀಡಬೇಕು; ಅದನ್ನು ಬೆಳೆಸಬೇಕು, ಪೋಷಿಸಬೇಕು. ಅದರ ಬಾಯಿಯಲ್ಲಿ 'ಅಪ್ಪಾ, ಅವ್ವಾ' ಎಂದು ನುಡಿಸಿಕೊಳ್ಳಬೇಕು. ಆ ಪುಟ್ಟ ತುಟಿಗಳಿಂದ ಮುದ್ದಿಕ್ಕಿಸಿಕೊಳ್ಳಬೇಕು, ಪ್ರೇಮಪೂರ್ಣ ಮೃದುಬಾಹುಗಳಿಂದ ಅಪ್ಪಿಸಿಕೊಳ್ಳಬೇಕು' ಎಂಬ ವಾತ್ಸಲ್ಯಾಪೇಕ್ಷೆಯು ಪುರುಷನಿಗಿಂತಲೂ ಸ್ತ್ರೀಯಲ್ಲಿ ಇನ್ನೂ ಉತ್ಕಟವಾಗಿರುವುದು. ಅದು ತೃಪ್ತಿಯಾಗದಿದ್ದರೆ ಎಷ್ಟೋ ಜನರು

ಎಷ್ಟು ವಾತ್ಸಲ್ಯಪೂರ್ಣವಾಗಿ ತನ್ನ ಕರುವನ್ನು ನೆಕ್ಕುತ್ತಿದೆ. ಆ ಕರುವೂ ಅಷ್ಟೇ ಮಂತ್ರಮುಗ್ಧವಾಗಿ ಕಣ್ಣು ಮುಚ್ಚಿ ನಿಂತಿದೆ. ಈ ವಾತ್ಸಲ್ಯಕ್ಕೆ ಬೆಲೆ ಕಟ್ಟಲು, ಅಳೆದು ನೋಡಲು ಸಾಧ್ಯವೆ? ಆ ಗಿಡದ ಮೇಲೆ ನೋಡು, ಮರಿ ಹಕ್ಕಿ ಕೀಚ್‌ಕೀಚ್ ಎಂದು ತಾಯಿಯ ಬರವನ್ನು ಹಾರೈಸುತ್ತಿದೆ. ತಾಯಿ ಹಕ್ಕಿ ಕೊಕ್ಕಿನಲ್ಲಿ ಆಹಾರವನ್ನು ತಂದು ತನ್ನ ಮರಿಗೆ ಗುಟುಕು ನೀಡುತ್ತಿದೆ. ತಾಯಿ-ಮಕ್ಕಳ ಸಂಭ್ರಮ ನೋಡು, ಎಂತಹ ಕಟುಕನನ್ನೂ ಮೈಮರೆಸುತ್ತದೆ....ನೀನೇನೇ ಹೇಳು, ಮಹಾದೇವಿ, ಮಕ್ಕಳಿಲ್ಲದ ಮನೆ ಮರುಭೂಮಿ, ಮನಸ್ಸು ಬತ್ತಿದ ಕೆರೆ. ಮಕ್ಕಳಿದ್ದ ಮನೆ ನಂದನವನ, ಮನಸ್ಸು ಜಲತುಂಬಿದ ತಿಳಿಗೊಳ. ಮಕ್ಕಳ ಪ್ರೇಮಕ್ಕಾಗಿ ತಾಯಿ-ತಂದೆ ಎಷ್ಟಾದರೂ ದುಡಿಯಬಲ್ಲರು....ಸುಂದರಳಾದ, ಮನದ ಆಸೆಯನ್ನು ಅರಿತು ನಡೆವ ಚತುರ ಪತ್ನಿ, ಹೊಣೆಯರಿತು ಬಾಳನ್ನು ನಡೆಸುವ ಪತಿ, ಮುದ್ದಾದ ಮಕ್ಕಳು ಇರುವ ಸಂಸಾರ ಜೀವನ, ಸಂನ್ಯಾಸ ಜೀವನಕ್ಕಿಂತ ಸುಖಕರ, ತೃಪ್ತಿಮಯ....' ಕಿನ್ನರಿ ಬ್ರಹ್ಮಯ್ಯ ತನ್ಮಯನಾಗಿ ನುಡಿದ.

'ನಿನ್ನಂತಹ ಅಲ್ಪ ಆದರ್ಶಜೀವಿ ಈ ಜೀವನಕ್ಕೆ ಹೇಗೆ ಬಂದೆ ಎಂಬುದು ನನಗೆ ಅರ್ಥವಾಗದ ಒಗಟಾಗತೊಡಗಿದೆ, ಕಿನ್ನರಯ್ಯ! ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ನೀನೆಲ್ಲೋ ವಿರಕ್ತನಾಗಿರಬೇಕು. ಭೂಮಿಯ ಮರೆಯಲ್ಲಿರುವ ಕರಿಕೆಯ ಬೇರು ಮಳೆಯಾದಾಗ ಚಿಗುರುವಂತೆ, ಅವಕಾಶ ಸಿಕ್ಕ ತಕ್ಷಣವೇ ನಿನ್ನ ಸುಪ್ತ ಆಕಾಂಕ್ಷೆಗಳು ಸ್ಫುರಿಸುವಂತೆ ಕಾಣುತ್ತವೆ. ನೀನು ಹೇಳಿದುದು ಸುಖೀಜೀವನದ ಚಿತ್ರವೇ ವಿನಾ ದಿವ್ಯ ಜೀವನದ್ದಲ್ಲ. ಸಹಸ್ರ ಹೆಜ್ಜೆಗಳೆತ್ತರದ ಒಂದು ಬೆಟ್ಟವಿದೆ ಎಂದುಕೋ. ಐದುನೂರು ಹೆಜ್ಜೆಗಳ ಮಟ್ಟ ಭೂಮಿಗಿಂತಲೂ ಉನ್ನತವೇ; ಆದರೆ ಸಾವಿರ ಹೆಜ್ಜೆಗಳ ಎತ್ತರದ ಕೆಳಗೇ ಎಂಬುದನ್ನು ಮರೆಯದಿರು. ಅಸಂತೃಪ್ತಿ-ದಮನಗಳ ಬದುಕಿಗಿಂತ ಸಂಸಾರದ ಸುಖಜೀವನ ಲೇಸು; ಏನೇ ಆದರೂ ದೈವೀಜೀವನದ ಶಾಂತಿಯ ಮುಂದೆ ಇದು ನಿಲ್ಲಬಹುದೆ? ಕತ್ತಲೆಗಿಂತ ಬೆಳುದಿಂಗಳು ಲೇಸು! ಬೆಳುದಿಂಗಳ ಬೆಳಕಿಗಿಂತ ಹಗಲು ಶ್ರೇಷ್ಠವಲ್ಲವೆ? ನನ್ನಲ್ಲಿಯೂ ವಾತ್ಸಲ್ಯದ ಭಾವನೆ ಇದೆ, ಅದು ಸಂಪೂರ್ಣವಾಗಿ ಬತ್ತಿಲ್ಲ. ಆದರೆ ಅದರ ವಿಸ್ತಾರ ಬಹು ಹಿರಿದು. ಒಡಲಿನ ಕುಡಿಗಳನ್ನಷ್ಟೇ ಮಕ್ಕಳು ಎಂಬುವ ಪ್ರಯತ್ನವೇಕೆ? ಶಿವನು ನನ್ನ ಪತಿ; ಅವನ ಅಂಶಗಳಾದ ಜಗತ್ತಿನ ಜೀವರಾಶಿಗಳೆಲ್ಲ ನನ್ನ ಮಕ್ಕಳಾದ್ದರಿಂದ ಎಲ್ಲರನ್ನೂ ನನ್ನವರು ಎಂದು ಪ್ರೇಮಿಸಿ, ಅವರ ಕ್ಷೇಮದಲಿ ಆನಂದಪಡುವ

ಸಾಧನ. ನಾಲ್ಕುಗೋಡೆಯ ಮಧ್ಯದ ಬಂಧುತ್ವವನ್ನು ಕೆಡಹಿ ನೆಲಮುಗಿಲನ್ನು ವ್ಯಾಪಿಸುವ ವಿಶ್ವಬಂಧುತ್ವಕ್ಕೆ ಕರೆತರುವ ಸಾಧನ ಈ ವೈರಾಗ್ಯ. ಮಳೆಯು ವರ್ಷಋತುವಿನಲ್ಲಿ ನೈಸರ್ಗಿಕವಾಗಿ ಬೀಳುತ್ತದೆ. ಆಗ ಹೊಲಗಳು ನೀರುಂಡು, ಬೆಳೆಯನ್ನು ಕೊಡುವುವು. ಆದರೆ ಹರಿದು ಇಂಗಿ ಹೋಗುವ ನೀರಿಗೆ ಏರಿಯನ್ನು ಕಟ್ಟಿ ಕೆರೆಯಲ್ಲಿ ನೀರು ಸಂಗ್ರಹವಾದರೆ ಇತರ ಕಾಲಗಳಲ್ಲೂ ಹೊಲಗಳು ನೀರುಣ್ಣುವುವು ಮತ್ತು ದೂರದ ಹೊಲಗಳೂ ನೀರುಣ್ಣುವವಷ್ಟೆ! ಹಾಗೆಯೇ ವಾತ್ಸಲ್ಯದ ಪ್ರವಾಹಕ್ಕೆ ಶಿವಪ್ರೇಮದ ಏರಿಯನ್ನು ಕಟ್ಟಿದರೆ ವಿಶ್ವಮಾನವರ ಹೃದಯದ ಹೊಲಗಳೆಲ್ಲ ನೀರುಂಡು ಅಲ್ಲಿ ವಿಶ್ವಬಂಧುತ್ವದ ಅಮೃತಬೆಳಸು ಬರುವುದು. ಆದುದರಿಂದಲೇ ಇಂತಹ ನಿಸ್ಸೀಮ ವಿಶ್ವ ಕುಟುಂಬತ್ವದ ಆದರ್ಶವನ್ನು ತೊರೆದು ನನ್ನ ಮನಸ್ಸು ಎಂದಿಗೂ ಸೀಮಿತ, ಮೋಹಾತ್ಮಕ, ಗೃಹಕುಟುಂಬತ್ವಕ್ಕೆ ಎಳಸದು....'

ಕಿನ್ನರಿಬ್ರಹ್ಮಯ್ಯ ಮಹಾದೇವಿಯ ವಿಚಾರದ ಆಳವನ್ನರಿತು ಅಪಾರ ಆನಂದ ಹೊಂದಿದ. ತಾಯ್ತನದ ಹಂಬಲವನ್ನು ವಿಶ್ವಬಂಧುತ್ವದ ಮಟ್ಟಕ್ಕೆ ದೈವೀಕರಿಸಿಕೊಂಡಿರುವ ಮಹಾದೇವಿಯ ಔನ್ನತ್ಯವನ್ನು ತಿಳಿದು 'ಬಸುರ ಮುಟ್ಟಿ ನೋಡಿದರೆ ಬ್ರಹ್ಮಾಂಡ ಕಾಣಬಂದಿತ್ತು...' ಎಂದು ಮನದಲ್ಲೇ ವಿಸ್ಮಯಪಟ್ಟನು.

ಅವಳನ್ನು ಸೋಲಿಸಲು ಯೋಜಿಸಿದ್ದ ಅಸ್ತ್ರಗಳಲ್ಲಿ ಇನ್ನು ಒಂದೇ ಒಂದು ಉಳಿದಿತ್ತು: ಮೆಲ್ಲನೆ ಹೊರತೆಗೆದ:

'ಮಹಾದೇವಿ.... ನೀನು ಬಹಳಷ್ಟು ಆದರ್ಶವಾದಿನಿ. ಒಂದು ದೃಷ್ಟಿಯಿಂದ ನನಗೆ ಸಂತೋಷ ಎನಿಸುತ್ತದೆ, ಆದರೆ ಈ ಆದರ್ಶವು ಆವೇಶಯುಕ್ತವಾದುದು. ಅರಗು ತುಂಬಿದ ಹಿತ್ತಾಳೆಯ ಒಡವೆಗೆ ಹೊನ್ನಿನ ನೀರು ಬಿಡಿಸಿ ಹೊಂಬಿತ್ತಾಳೆಯ ಒಡವೆಯಾಗಿ ಮಾಡಿ ದಾಸಿಯೋರ್ವಳು ತೊಟ್ಟರೆ ಕಾಲಾಂತರದಲ್ಲಿ ಹೊನ್ನಿನ ಆವರಣ ಕರಗಿ ಹಿತ್ತಾಳೆಯ ಗುಟ್ಟು ಬಯಲಾದಾಗ ದಾಸಿ ಅವಮಾನಿತಳಾಗುವಳು. ಹಾಗೆಯೇ ಮಾನವಸಹಜ ಲೈಂಗಿಕ ಬಯಕೆಗೆ ವಿರಕ್ತಿಯ ತೆರೆ ಹೊದ್ದಿಸಿದರೆ ಎಂದಿದ್ದರೂ ಮೇಲಿನ ಆವರಣ ಕರಗುವುದು ನಿಜ. ಆಗ ಸಾಮಾಜಿಕವಾಗಿ ಅಪಮಾನ, ಮಾನಸಿಕವಾಗಿ ಕಷ್ಟ. ಇಡೀ ಜಗತ್ತೆಲ್ಲವೂ ಕಾಮನ ಬಲೆಯ ಒಳಗು, ಎಂತೆಂತಹ ಋಷಿಮುನಿಗಳೆಲ್ಲ ಆ ಕಾಮನ ಕೈಗೊಂಬೆಗಳು. ದೇವನ ಸೃಷ್ಟಿಯ ಒಂದಂಶವಾದ ಕಾಮಶಕ್ತಿಯನ್ನು ತಿರಸ್ಕರಿಸಿ ನುಡಿದು, ಆ ಶಕ್ತಿಯನ್ನು ದಮನಿಸುವುದೇಕೆ? ಉಪಯೋಗಮಾಡಿಕೊಳ್ಳಲೆಂದು ತಾನೇ ದೇವನು ಜಗತಿನಲಿ

ಈ ಕಾಮತತ್ತ್ವವನ್ನು ಇಟ್ಟಿರುವುದು....'

ತೀಕ್ಷ್ಣವಾಗಿ ಮಹಾದೇವಿಯನ್ನು ಅಳೆಯುವಂತೆ ನೋಡುತ್ತ ಕಿನ್ನರಿ ಬ್ರಹ್ಮಯ್ಯ ಹೇಳಿದ.

ಮಹಾದೇವಿಯ ತಾಳ್ಮೆ ಕೆಡತೊಡಗಿತ್ತು. ಆದರೂ ಅದನ್ನು ಪ್ರಯತ್ನ ಪೂರ್ವಕವಾಗಿ ಒಟ್ಟುಗೂಡಿಸಿಕೊಂಡು ಹೇಳಿದಳು :

'ನಾನು ಆವೇಶದ ಆಶ್ರಯದಲ್ಲಿ ಈ ಶಿವಪಥವನ್ನು ಹೊಕ್ಕಿಲ್ಲ, ಅಣ್ಣ! ಒಳಗೆ ಹಿತ್ತಾಳೆಯಾಗಿದ್ದು ಹೊರಗೆ ಹೊನ್ನಿನ ಆವರಣ ಹೊದಿಸಿದಾಗ, ಒಳಗು ವ್ಯಕ್ತವಾದರೆ ಅಪಮಾನ-ನಿರಾಶೆ ಖಂಡಿತ. ಒಳಹೊರಗೆಲ್ಲ ಚೊಕ್ಕ ಚಿನ್ನವೇ ಇದ್ದರೆ ತಿಕ್ಕಿದಷ್ಟೂ ಅದು ಹೊಳಪನ್ನೇ ಕೊಡುವುದಲ್ಲವೆ? ನನ್ನದು ಅಭಾವವೈರಾಗ್ಯವಾಗಿ, ತಾತ್ಕಾಲಿಕ ಆವೇಶದಿಂದ ಇದ್ದರೆ ಕಾಲಾನಂತರದಲ್ಲಿ ಬಯಲಾಗಬಹುದಿತ್ತು. ಆತ್ಮವಿಶ್ವಾಸದ ತಳಹದಿಯ ಮೇಲೆ ನಿಂತ ನನ್ನದು ಸ್ವಭಾವವೈರಾಗ್ಯ ; ಎಂದಿಗೂ ಇದರಲ್ಲಿ ಕೊರತೆಯಾಗದು.

ಇಟ್ಟಿಯ ಹಣ್ಣು ತಿಂದು ನರಿ ಸೃಷ್ಟಿ ತಿರುಗುತ್ತಿದೆ ಎಂದು ಬೊಬ್ಬೆಹಾಕುವಂತೆ ನಿನ್ನ ಮನದ ದೌರ್ಬಲ್ಯ, ನಿರಾಶೆ, ಸೋಲುಗಳನ್ನು ಜಗತ್ತಿಗೆಲ್ಲ ಅನ್ವಯಿಸುತ್ತಿರುವೆಯಲ್ಲವೇ? ಇದು ಸಲ್ಲದು ; 'ನನಗೆ ಸಾಧ್ಯವಾಗದುದು ಜಗತ್ತಿಗೆಲ್ಲ ಸಾಧ್ಯವಿಲ್ಲ' ಎಂಬ ನಿನ್ನ ಅಜ್ಞಾನದ ತಿಳುವಳಿಕೆಗೆ ತಿಲಾಂಜಲಿ ನೀಡು. ಹಸುವಿಗೆ ಭಾರವಾದುದು ಆನೆಗೆ ಹುಲ್ಲಿನ ಹೊರೆಯಾಗಬಹುದು.

ಕಾಮನ ಆಟವು ಬಹು ಬಲವತ್ತರವಾದುದೆಂದು ಲಕ್ಷಾಂತರ ಅನುಭವಿಗಳ ಮಾತು ಕೇಳಿರುವೆ. ಆದರೆ ಅವನನ್ನು ಸೋಲಿಸುವುದೂ ಅಷ್ಟೇ ಸುಲಭ. ರಾಜನೊಬ್ಬ ನಮಗೆ ಶತ್ರುವಾದರೆ ನಿಸ್ಸಹಾಯಕರಾದ ನಾವು ಅವನಿಗಿಂತಲೂ ಮೇಲಿರುವ ಚಕ್ರವರ್ತಿಯ ಮರೆಹೊಕ್ಕರೆ ಸುರಕ್ಷಿತವಾಗಿರುವೆವಷ್ಟೆ? ಹಾಗೆಯೇ ಕಾಮನು ಕಾಡಲು ಬಂದರೆ ಕಾಮಾರಿಯ ಮೊರೆಹೊಕ್ಕರಾಯಿತು.

> ಪಂಚೇಂದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತಲ್ಲಾ!
> ಹರಿಬ್ರಹ್ಮರ ಬಲುಹ ಮುರಿದು ಕೊಂದು ಕೂಗಿತಲ್ಲಾ!
> ಮಹಾಋಷಿಯರ ತಪವ ಕೆಡಿಸಿ ಕೊಂದು ಕೂಗಿತಲ್ಲಾ!
> ಚನ್ನಮಲ್ಲಿಕಾರ್ಜುನಂಗೆ ಶರಣೆಂದು ನಂಬಿ ಮರೆಹೊಕ್ಕಡೆ ಅಂಜಿ
> ನಿಂದುದಲ್ಲ!*

ಬೆಳಗಿಗೆ ಹೆದರಿ ಕತ್ತಲೆ ಓಡುವಂತೆ ಕಾಮಾರಿಯ ಪ್ರಿಯರಾದರೆ ಕಾಮನ ಸೊಲ್ಲು ತಾನೇ ಅಡಗುವುದು. ನಾನು

ಉಪಯೋಗಿಸಲೂ ಇಚ್ಛಿಸೆನು ; ಉದಾತ್ತೀಕರಣ ಮಾಡಿಕೊಳ್ಳಬಯಸುವೆ. ಪ್ರತಿಯೊಬ್ಬನಲ್ಲಿ ಇಂದ್ರಿಯಶಕ್ತಿ ಪ್ರಕೃತಿದತ್ತವಾಗಿ ಇದೆಯಷ್ಟೇ. ಅದನ್ನು ಮೂರು ವಿಧದಲ್ಲಿ ಬಳಸಬಹುದು. ಮೋಡದಿಂದ ಸುರಿದ ನೀರು ಚರಂಡಿಯಲ್ಲಿ ಬಿದ್ದಾಗ ಕೊಚ್ಚೆಯಾಗಿ ಅನುಪಯುಕ್ತವಾಗುವುದು ; ಸ್ವಚ್ಛವಾದ ಕೆರೆಯ ಏರಿಯೊಳಕ್ಕೆ ಬಿದ್ದಾಗ ಕುಡಿಯುವ ನೀರಾಗುವುದು ; ಸದ್ಗುರುವಿನ ಪಾದದ ಮೇಲೆ ಹರಿದಾಗ ಪಾದೋದಕವಾಗಿ ಪವಿತ್ರಗೊಳಿಸುವುದು. ಹಾಗೆಯೇ ಇಂದ್ರಿಯಶಕ್ತಿಯು ಪಂಚೇಂದ್ರಿಯಗಳ ಮೂಲಕ ಎಲ್ಲೆ ಮೀರಿ ಹರಿದು ಅನೀತಿಯ ಪ್ರಪಂಚದಲ್ಲಿ ಬೆರೆದಾಗ ಪಾಪಮಯ ಮಾಡುವುದು. ತನ್ನ ಸತಿಯಲ್ಲಿ ಸೀಮಿತವಾದಾಗ ನೀತಿವಂತಿಕೆಯಾಗುವುದು. ಅದುವೇ ಹರನೆಡೆಗೆ ಹರಿದಾಗ ವಿರಕ್ತಿಯಾಗುವುದು. ಒಂದು ವಿಕೃತೀಕರಣ, ಇನ್ನೊಂದು ಉಪಯೋಗೀಕರಣ, ಮತ್ತೊಂದು ದೈವೀಕರಣ. ಒಂದು ದುಃಖವನ್ನೀಯುವುದು; ಇನ್ನೊಂದು ಸುಖವನ್ನು ಕೊಡುವುದು ; ಮತ್ತೊಂದು ದುಃಖಸುಖಾತೀತ ಆತ್ಮಶಾಂತಿ ನೀಡುವುದು. ಒಂದು ಪತನಿಸುವುದು, ಇನ್ನೊಂದು ಬಾಳಿಸುವುದು, ಮತ್ತೊಂದು ಉತ್ಥಾನಿಸುವುದು. ದೈವೀಕರಣದ ಆತ್ಮಶಾಂತಿಯ ಉತ್ಥಾನದ ಮಾರ್ಗ ನನಗೆ ಬೇಕೇ ವಿನಾ ಉಳಿದೆರಡು ಮಾರ್ಗಗಳಲ್ಲ. ನಾನು ಇದರಲ್ಲಿ ಪರಮತೃಪ್ತಳು. ಮಾತಿನ ಮಾಲೆ ಸಾಕಿನ್ನು, ನಾನು ಹೊರಡುವೆ" ಮಹಾದೇವಿ ಮುಂದೆ ಹೆಜ್ಜೆ ಇಟ್ಟಳು.

ಬಹು ಪ್ರಬಲವಾದ ಅಸ್ತ್ರವನ್ನು ಬಿಟ್ಟು ನೋಡಿದಾಗಲೂ ಮಹಾದೇವಿ ವಿಚಲಿತಳಾಗದೆ ಇದ್ದಾಗ ವಿಸ್ಮಯಪಟ್ಟ ಕಿನ್ನರಯ್ಯ ಹೀಗೆ ನುಡಿದುಕೊಂಡ :

'ಗುಹ್ಯವ ಮುಟ್ಟಿನೋಡಿದರೆ ಕಾಮದಹನ ಕಂಡುಬಂದಿತ್ತು...'

ಕಿನ್ನರಿಬ್ರಹ್ಮಯ್ಯ ಕೈ ಅಡ್ಡ ಹಿಡಿದು, ತಡೆದು ಹೇಳಿದ :

'ಒಂದೇ ಒಂದು ಮಾತು, ಮಹಾದೇವಿ ! ನಿನ್ನ ಸ್ವಭಾವ-ಆಸೆ-ಆಕಾಂಕ್ಷೆಗಳು ನನ್ನದರೊಡನೆ ಸಮರ್ಪಕವಾಗಿ ಹೊಂದುತ್ತವೆ. ಎರಡನೆಯದಾಗಿ, ಶರಣಧರ್ಮದ ಪ್ರಕಾರ ವೈವಾಹಿಕಜೀವನ ತಿರಸ್ಕರಣೀಯವಲ್ಲ. ಇಬ್ಬರೂ ಒಂದಾಗಿ ಭಕ್ತಿಮಾಡಿ ಶಿವನನ್ನು ಒಲಿಸಬಹುದು. ಈ ಸಂನ್ಯಾಸಜೀವನದ ಕಾಡು ತೊರೆದು, ಗೃಹಸ್ಥಜೀವನದ ನಂದನವನದಲ್ಲಿ ಪ್ರವೇಶಿಸಿ, ಶಿವನನ್ನು ಕೊಂಡಾಡಿ ಹಾಡಿ ನಲಿಯುತ್ತ, ನಾವಿಬ್ಬರೂ ಏಕೆ ಆಧ್ಯಾತ್ಮಮಾರ್ಗದಲ್ಲಿ ನಡೆಯಬಾರದು ?'

'ಜೀವನದಲ್ಲಿ ಲಗ್ನವು ಒಂದೇ ಬಾರಿಗೆ, ಅಣ್ಣ. ನಾನು ಚನ್ನಮಲ್ಲಿಕಾರ್ಜುನನೊಡನೆ ಮದುವೆಯಾಗಿದ್ದು, ನನ್ನ ತನುಮನಗಳೆಲ್ಲ ಅವನಿಗೆ ಮೀಸಲಾಗಿವೆ.

ಅವು ನನ್ನ ಆಸ್ತಿಗಳಲ್ಲ; ಅಡವಿಟ್ಟ ವಸ್ತುಗಳನ್ನು ಮಾರಲಿಕ್ಕೆ ಬರದಂತೆ ಬೇರಾರಿಗೂ ಅರ್ಪಿಸುವ ಅಧಿಕಾರ ನನಗಿಲ್ಲ.

ಭವಿಸಂಗವಳಿದು ಶಿವಭಕ್ತನಾದ ಬಳಿಕ
ಭಕ್ತಂಗೆ ಭವಿಸಂಗ ಅತಿಘೋರ ನರಕ;
ಶರಣಸತಿ ಲಿಂಗಪತಿಯಾದಬಳಿಕ
ಶರಣಂಗೆ ಸತಿಸಂಗ ಅತಿಘೋರ ನರಕ;
ಚನ್ನಮಲ್ಲಿಕಾರ್ಜುನಾ ಲಿಂಗೈಕ್ಯಂಗೆ
ಪ್ರಾಣಗುಣವಳಿಯದವರ ಸಂಗವೇ ಭಂಗ.*

ಪೂರ್ವಾಶ್ರಮ ಬಿಟ್ಟು ಜ್ಞಾನಾತ್ಮಕ ಪುನರ್ಜನ್ಮ ಪಡೆದ ಭಕ್ತ, ಪ್ರಾಕೃತಿಕ ಪೂರ್ವಾಶ್ರಮಗಳೊಡನೆ ಬಹಳಷ್ಟು ಬೆರೆಯಬಾರದು. ತಾನು ಸತಿಯಾಗಿ ಶಿವಪತಿಗೆ ಒಲಿದ ಶರಣಸ್ಥಲದ ಸಾಧಕನು ಸತಿಯನ್ನು ಕೂಡುವುದು ನರಕಕಾರಕ; ನನ್ನಂತಹ ವಿರಕ್ತೆ ಷಡೂರ್ಮಿಗಳಾದ ಜರಾ-ಮರಣ, ಕ್ಷುತ್-ಪಿಪಾಸೆ, ಶೋಕ-ಮೋಹಗಳಳಿಯದ ನಿನ್ನೊಡನೆ ಮಾತಿಗೆ ನಿಲ್ಲುವುದು ತಪ್ಪು. ಬಸವಣ್ಣನವರು ಹೇಳರೇ, 'ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ, ದಾರಿ ಸಂಗಡ ಬೇಡ; ದೂರ! ನುಡಿಸಲು ಬೇಡ....' ಎಂದು. ನಿನ್ನಂತಹ 'ತಿಳಿದ' ಅಜ್ಞಾನಿಯೊಡನೆ ಮಾತಿಗೆ ನಿಂತುದೇ ತಪ್ಪಾಗಿದೆ. ಸಾಕಿನ್ನು, ಅನುಭವಮಂಟಪಕ್ಕೆ ಹೋಗಲು ಸಮಯ ಸಮೀಪಿಸಿತು....' ಮಹಾದೇವಿ ತೀಕ್ಷ್ಣವಾಗಿ ನುಡಿದು ಒಣಗಲಿಕ್ಕೆಂದು ಸೀರೆಯನ್ನು ಹರವಿದ್ದ ಸ್ಥಳದ ಕಡೆಗೆ ಹೋಗಲು ಮುಂದೆ ಹೆಜ್ಜೆ ಇಟ್ಟಳು.

ಕಿನ್ನರಿಯ ಬ್ರಹ್ಮಯ್ಯ ಆವೇಶಯುಕ್ತನಾಗಿ ಧಾವಿಸಿಬಂದು ಸಾಷ್ಟಾಂಗ ವೆರಗಿ, ಮಹಾದೇವಿಯ ಎರಡೂ ಪಾದಗಳನ್ನು ಬಿಗಿಯಾಗಿ ಹಿಡಿದನು. ಮಹಾದೇವಿ ಸ್ತಂಭೀಭೂತಳಾಗಿ ಕ್ಷಣಕಾಲ ನಿಂತು, ಮರುಕ್ಷಣವೇ ಚೇತರಿಸಿಕೊಂಡು ನುಡಿದಳು:

'ಏಳು, ಅಣ್ಣಾ....ಈ ಉದ್ವೇಗವೇಕೆ? ಹಿರಿಯರಾದ ನೀವು ನನಗೆ ನಮಸ್ಕರಿಸಬಾರದು.'

ಪಾದಗಳನ್ನು ಪಶ್ಚಾತ್ತಾಪದ ಕಣ್ಣೀರಿನಿಂದ ತೊಳೆಯುತ್ತ ನುಡಿದ:

'ಎಂತಹ ಹಿರಿತನ? ವಯಸ್ಸಿನಿಂದ ಹಿರಿತನವೇ? ಕತ್ತೆಗೂ ವಯಸ್ಸಾಗುವುದು. ವಯಸ್ಸಿಗೆ ಬೆಲೆಯಿಲ್ಲ ತಾಯಿ, ಅರಿವಿಗೆ ಬೆಲೆಯುಂಟು.

ಶರಣಾರ್ಥಿ ಶರಣಾರ್ಥಿ ಎಲೆ ತಾಯಿ ನಮ್ಮವ್ವಾ
ಶರಣಾರ್ಥಿ ಶರಣಾರ್ಥಿ ಕರುಣಾಸಾಗರ ನಿಧಿಯೆ
ದಯಾಮೂರ್ತಿ ತಾಯೆ ಶರಣಾರ್ಥಿ ಶರಣಾರ್ಥಿ
ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ
ನೀವು ಬಿಡಿಸಿದಿರಾಗಿ ನಿಮ್ಮ ದಯದಿಂದ
ನಾನು ಹುಲಿ ನೆಕ್ಕಿ ಬದುಕಿದೆನು
ಶರಣಾರ್ಥಿ ತಾಯೆ...*

ಕಿನ್ನರಿಬ್ರಹ್ಮಯ್ಯ ಪಾದಗಳ ಮೇಲೆ ತಲೆ ಇರಿಸಿ, ಕಣ್ಣಿಗೊತ್ತಿಕೊಂಡ. ಕ್ಷಣಕಾಲ ತಡೆದು ನುಡಿದ:

'ತಾಯಿ, ನನ್ನನ್ನು ಕ್ಷಮಿಸುವ ತನಕ ನಾನು ಪಾದ ಬಿಡೆನು. ಕರುಣಾಸಾಗರೆ, ಮಾತೃವಾತ್ಸಲ್ಯಪರಿಪೂತೆ, ಪರಮಾತ್ಮನು ನನ್ನನ್ನು ಭಯಾನಕ ಬಲೆಯಲ್ಲಿ ಬೀಳಿಸುತ್ತಿದ್ದ. ನಾನು ಸಿಗುವ ಮುನ್ನ ನೀವು ಬಿಡಿಸಿದಿರಿ. ಹುಲಿಯನ್ನು ನೆಕ್ಕಲು ಹೋಗಿ ಬದುಕಿ ಬಂದ ಹರಿಣಿಯಂತಾದೆ. ನಿನ್ನ ಪಾದಕ್ಕೆ ಕೋಟಿ ನಮನ! ಈ ಮೂರ್ಖನನ್ನು—ಹುಚ್ಚನನ್ನು ಕ್ಷಮಿಸಿದ್ದೇನೆ ಎಂದು ಹೇಳು, ತಾಯಿ....'

ಮಹಾದೇವಿ ಹಗುರವಾಗಿ ನಕ್ಕು ಹೇಳಿದಳು:

'ಅಣ್ಣಾ....ನೀವು ಮೂರ್ಖರಲ್ಲ, ತಪ್ಪಿತಸ್ಥರಲ್ಲ; ನಿಮ್ಮನ್ನು ಮೂರ್ಖರನ್ನಾಗಿ ಮಾಡುವ—ಹದಿನಾಲ್ಕು ಲೋಕವ ನುಂಗಿ ನೀರು ಕುಡಿವ ಆ ಕಾಮಬಾಣದ ಗುಣದ ಪ್ರಭಾವವಿದು. ಕೆಸರಿನಲ್ಲಿ ಸಿಕ್ಕ ಎಳೆಗರುವಿನಂತೆ ಕಾಮದ ಕೈಯಲ್ಲಿ ಸಿಕ್ಕ ಮನುಷ್ಯ ನಿಸ್ಸಹಾಯಕನಾಗುತ್ತಾನೆ. ಆದರೇನು.... ತಿಳಿದವರು ಅಂತಹವರ ಬಗ್ಗೆ ಜಿಗುಪ್ಸೆಹೊಂದಿ, ತಿರಸ್ಕರಿಸಿದರೆ ಆಗದು. ಯುದ್ಧದಲ್ಲಿ ಕುದುರೆ ಮುಗ್ಗರಿಸಿದರೆ ಅದರ ಕಾಲನ್ನು ಕಡಿಯಲಾಗದು; ಅವಕಾಶ ನೀಡಿ ಅದು ಓಡಲು ಅನುವು ಮಾಡಿಕೊಡಬೇಕು. ಒಂದೇ ಒಂದು ದೌರ್ಬಲ್ಯಕ್ಕಾಗಿ, ಗೈದ ತಪ್ಪಿಗಾಗಿ ವ್ಯಕ್ತಿಯ ಬದುಕಿಗೆ ಮಸಿ ಬಳಿಯಬಾರದು. ಏಳಣ್ಣಾ; ಸತ್ಸಂಕಲ್ಪದ ರಪಣವ ಹಿಡಿದು ದೌರ್ಬಲ್ಯವನ್ನು ಕಡಿದು ಚೆಲ್ಲು. ಕಾಮನ ನೇಹಿಗನಾಗಿ ಚೆನ್ನಮಲ್ಲಿಕಾರ್ಜುನನಿಗೆ ಹಗೆಯಾಗದಿರು. ಪರಶಿವನ ಪುತ್ರನಾಗಿ ಕಾಮನೆಂಬ ಶತ್ರುವ ಸಂಹರಿಸು....! ಏಳು....ಸೋತು ಹತಾಶನಾಗಬೇಡ, ಗೆದ್ದು ಅಪ್ರತಿಮ ವೀರನಾಗು.'

ಕಿನ್ನರಿ ಬ್ರಹ್ಮಯ್ಯ ತುಂಬುಹೃದಯದಿಂದ ಎದ್ದು ಕಣ್ಣೀರನ್ನು ಒರೆಸಿಕೊಂಡು ನುಡಿದ:

'ತಾಯಿ....ನನ್ನ ಅಪರಾಧವನ್ನು ನಿನ್ನ ನೆನಪಿನ ಮಂದಿರದಲ್ಲಿ ಇರಿಸಿಕೊಳ್ಳಬೇಡ. ಮೃಗದ ಬೇಟೆಯಾಡಲು ಮುಗ್ಧ ಕರುವನ್ನು ಮುಂದೆ ಬಿಟ್ಟಂತೆ ಶರಣರು ಪರೀಕ್ಷೆಗಾಗಿ ನನ್ನನ್ನು ಕಳಿಸಿರುವರು. ಎಂತಹ ವಿಪತ್ತಿನಲ್ಲಿ ಸಿಕ್ಕಿಬೀಳುತ್ತಿದ್ದೆನಲ್ಲಾ! ನೀನು ಶಾಪವನ್ನು ಕೊಟ್ಟಿದ್ದರೆ ನನ್ನ ಗತಿ ಏನು....?' ಹೃದಯ ಕಂಪಿಸಿ ಕೇಳಿದ.

'ಶಾಪ! ಅಂತಹ ಕಾರ್ಯ ಶರಣರ ಜೀವನಕ್ಕೆ ಸಲ್ಲದು. ಅಣ್ಣಾ! ತಪ್ಪು ಮಾಡುವುದು ಮಾನವನ ಸಹಜಸ್ವಭಾವ. ಮಾಡಿದ ತಪ್ಪನ್ನು ಎತ್ತಿ ತೋರಿಸಿ ಚುಚ್ಚುನುಡಿ ಆಡುವುದು ದಾನವನ ಗುಣ. ಬೆಂದ ಹುಣ್ಣನ್ನು ಕಂಬಿಯಿಂದ ಕೀಸುವಂತೆ, ಪಶ್ಚಾತ್ತಾಪದಿಂದ ದಗ್ಧನಾದವನ ಮೇಲೆ ಶಾಪ ವಿಡುವುದು ತಪಸ್ಸಿಗೆ ಕಳಂಕ ತರುವಂತಹುದು. ಮಾಡಿದ ತಪ್ಪನ್ನು ಕ್ಷಮಿಸಿ, ತಿದ್ದಿಕೊಳ್ಳಲು ಅವಕಾಶ ನೀಡಬೇಕಾದುದೇ ಶರಣನ ಗುಣ. ಅಂದಾಗ ನಿನ್ನನ್ನು ಕ್ಷಮಿಸದಿರಲೇ....?' ಮಹಾದೇವಿ ಹೇಳಿದಳು.

'ಶರಣರಿಂದ ಆಜ್ಞಪ್ತನಾಗಿ ಈ ದುರ್ಧರಕಾರ್ಯ ಕೈಗೊಂಡೆ, ತಾಯಿ. ಈ ನಾಟಕದಲ್ಲಿ ಖಳನಾಯಕನ ಪಾತ್ರವನ್ನು ಏಕನಿಷ್ಠೆಯಿಂದ ನಿರ್ವಹಿಸಿದೆ. ಕಲ್ಯಾಣಕ್ಕೆ ಬರುತ್ತಲೇ ಇಂತಹ ವಿಷಮಪ್ರಸಂಗವು ಇವನಿಂದ ಒದಗಿತು ಎಂದು ಭಾವಿಸಬೇಡ....'

'ಅಣ್ಣಾ....ನನಗೆ ನೋವಾಗಿಲ್ಲ, ಆನಂದವಾಗಿದೆ! ನನ್ನಂತೆ ಪುಣ್ಯ ಮಾಡಿದ ಭಾಗ್ಯವಂತರು ಯಾರೂ ಇಲ್ಲ ಎನಿಸಿದೆ. ನಿನ್ನಂತಹ ಸೋದರನನು ಕಲ್ಯಾಣಕ್ಕೆ ಪ್ರವೇಶವಾಗುತ್ತಲೇ ಸಿಕ್ಕಿರುವಾಗ ಎಂತಹ ಭಾಗ್ಯವಂತಳು ನಾನು! ಚನ್ನಮಲ್ಲಿಕಾರ್ಜುನನಂತಹ ಗಂಡನನ್ನು ಪಡೆದು, ಶಿವಭಕ್ತರೆಂಬ ಬಂಧುಗಳನ್ನು ಪಡೆದು, ನಾನು ನಿತ್ಯತೃಪ್ತಳು....'* ಮಹಾದೇವಿ ಸಂತೃಪ್ತಿಯಿಂದ ನುಡಿದಾಗ ಕಿನ್ನರಯ್ಯ ಬೆರಗುಗೊಂಡ.

ಒಂದು ನಿಮಿಷಕಾಲ ಮೌನ ತಾಳಿ ಮತ್ತೆ ಹೇಳಿದಳು:

'ಅಣ್ಣಾ....ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟ ಬಳಿಕ, ಮತ್ತೆ ಅದೇ ತಪ್ಪನ್ನು ಎಂದಿಗೂ ಮಾಡಬಾರದು. ನಿನ್ನ ಸೋದರಿಯಾಗಿ ಒಂದು ಮಾತು ಹೇಳುವೆ. ಅತಿ ಉನ್ನತವಾದ ಆಧ್ಯಾತ್ಮಮಾರ್ಗ ಹಿಡಿದಿರುವೆ. ಇದರಲ್ಲಿ ಸಿಗುವ

ಸುರೆಗೆ ಎಳಸುವಂತೆ, ಈ ಸೌಖ್ಯದ ಬಳಿಕ ಸಂಸಾರಸುಖಕ್ಕೆ ಎಳೆಸಬೇಡ. ಕನಸುಮನಸಿನಲ್ಲಿ ಬಯಸಬೇಡ. ಮನಃಪೂರ್ವಕವಾಗಿ ಆಧ್ಯಾತ್ಮಸಾಧನೆ ಮಾಡು.

ಕಡೆಗೆ ಮಾಡದ ಭಕ್ತಿ ದೃಢವಿಲ್ಲದಾಳುತನ
ಮೃಡನೊಲಿಯ ಹೇಳಿದೊಡೆ ಎಂತೊಲಿವನಯ್ಯಾ ?
ಮಾಡಲಾಗದು ಅಳಿಮನವ, ಮಾಡಿದೊಡೆ
ಮನದೊಡೆಯ ಬಲ್ಲನೈಸೆ
ವಿರಳವಿಲ್ಲದೆ ಮಣಿಯ ಪವಣಿಸಿಹನೆಂದಡೆ
ಮರುಳೆ ಚನ್ನಮಲ್ಲಿಕಾರ್ಜುನನೆಂತೊಲಿವನಯ್ಯಾ *

ಕಿನ್ನರಿ ಬ್ರಹ್ಮಯ್ಯ ಮೌನವಾಗಿ ಗೌರವ ತುಂಬಿದ ಹೃದಯದಿಂದ ಸಮ್ಮತಿ ಸೂಚಕವಾಗಿ ತಲೆಯಾಡಿಸಿದ.

'ಇಂತಹ ಎಳೆವರೆಯದಲ್ಲಿ ಎಂತಹ ಆಧ್ಯಾತ್ಮಿಕ ನಿಲುವು. ಈಕೆ ಸಾಮಾನ್ಯಳಲ್ಲ...' ಮನದಲ್ಲಿ ಅಂದುಕೊಂಡು ನುಡಿದ:

'ನಾನು ಬೀಳ್ಕೊಂಡು ನಿರ್ಗಮಿಸುವೆ. ತಾವು ಅನುಭವಮಂಟಪಕ್ಕೆ ಬನ್ನಿರಿ. ಅಲ್ಲಿ ಮತ್ತೆ ಸಂಧಿಸೋಣ. ಶರಣು ಶರಣಾರ್ಥಿ....' ಕೆರೆಯ ಏರಿಯನ್ನು ಹಿಡಿದು ಊರಿನ ಕಡೆಗೆ ಸಾಗಿದ.

ಮಹಾದೇವಿ ಆಗಸವನ್ನು ನೋಡಿದಳು. ಹೊತ್ತು ಮೇಲೇರಿ ಎರಡನೆ ಜಾವಕ್ಕೆ ಸ್ವಲ್ಪವೇ ವೇಳೆ ಇದೆ ಎಂದು ತೋರಿಸುತ್ತಿತ್ತು. ವೇಳೆಯು ಬಹಳ ವಾಯಿತೇನೋ ಎಂದು ಅವಸರದಿಂದ ತನ್ನ ಸೀರೆಯನ್ನು ಉಡಲು ಒಣಗಲು ಹಾಕಿದ್ದ ಕಡೆಗೆ ನಡೆದಳು. ಆದರೆ ಅಲ್ಲಿ ಜರುಗಿದ್ದ ಘಟನೆ ನೋಡಿ ಕ್ಷಣಕಾಲ ಸ್ತಂಭೀಭೂತಳಾಗಿ ನಿಂತಳು.

ತಾನು ಪೂಜೆಯಲ್ಲಿ, ಸಂವಾದದಲ್ಲಿ ಮೈಮರೆದುನಿಂತಾಗ ಕೆರೆಯಂಗಳ ದಲ್ಲಿ ಮೇಯುತ್ತಿದ್ದ ಹೋರಿಯೊಂದು ಒಣಗಲು ಹಾಕಿದ್ದ ಹರುಕು ಸೀರೆ ಯನ್ನು ತಿಂದುಹಾಕಿಬಿಟ್ಟಿದ್ದಿತು. ಕೇವಲ ಒಂದು ಮೊಳದಷ್ಟು ಹೋರಿಯ ಬಾಯಲ್ಲಿ ಉಳಿದಿದ್ದು, ಅದೂ ಸ್ವಲ್ಪಸ್ವಲ್ಪವಾಗಿ ಒಳಸೇರುತ್ತಿತ್ತು.

"ಇದೇನಿದು ಶಿವನ ಲೀಲೆ! ಇದ್ದ ಒಂದು ಬಟ್ಟೆಯನ್ನೂ ಕಸಿದು ಕೊಂಡನೇ! ಎಷ್ಟು ಪವಾಡಾತ್ಮಕವಾಗಿ ಆ ಬಟ್ಟೆಯು ಕೈಸೇರಿತೋ ಅಷ್ಟೇ ವಿಸ್ಮಯ ರೀತಿಯಲ್ಲಿ ಕೈಬಿಟ್ಟಿತು....ಆದರೆ ಈಗ ನಾನು ಅನುಭವಮಂಟಪಕ್ಕೆ ನಗ್ನಳಾಗಿಯೇ ಹೋಗಬೇಕಾಯಿತಲ್ಲ....!' ಕ್ಷಣಕಾಲ ವಿಚಲಿತಳಾದಳು.

'ಇದು ಶಿವನ ಸಂಕಲ್ಪವೇ ಇರಬೇಕು. ದಿಗಂಬರದ ದಿವ್ಯಾಂಬರವನ್ನು ಉಟ್ಟು ನಾನು ಶರಣರ ದರ್ಶನಕ್ಕೆ ಹೋಗಬೇಕೆಂಬುದು ಅವನ ಅಪೇಕ್ಷೆ ಏನೋ....ಇರಲಿ. ಉಟ್ಟೆ-ಬಿಟ್ಟೆ, ಇದ್ದಿತು-ಹೋಯಿತು, ಇರುವುದು-ಇಲ್ಲ ಎಂಬ ಯಾವ ಭಾವನೆಯೂ ನನಗಿರಬಾರದು. ನಿರ್ಲಿಪ್ತಳಾಗಿ ಹೋಗುವೆ....' ತನ್ನಲ್ಲಿ ತಾನೇ ನಿರ್ಧರಿಸಿಕೊಂಡಳು.

'ಎಷ್ಟೋ ಕಷ್ಟನಷ್ಟಗಳನ್ನು ಸೋಸಿ ಶರಣರ ಕರುಣೆಗಾಗಿ ಬಂದೆ. ಅವನು ನನ್ನಲ್ಲಿ ಕುಂದುಕೊರತೆಗಳನ್ನು ತೆಗೆದು ಪ್ರವೇಶ ನೀಡದೆಯೇ ನಿರಾಕರಿಸಿದರೆ?' ಸಂಶಯದ ಅಲೆ ಮೂಡಿತು.

'ಅವರು ಎಷ್ಟೇ ಪರೀಕ್ಷಿಸಲಿ, ಕಾಡಿ ನೋಡಲಿ. ಅಣ್ಣನವರು ಹೇಳುವಂತೆ, ಎಡದ ಪಾದದಲ್ಲಿ ಒದ್ದರೆ ಬಲದ ಪಾದವ ಹಿಡಿವೆ; ಬಲದ ಪಾದದಲ್ಲಿ ಒದ್ದರೆ ಎಡದ ಪಾದವ ಹಿಡಿವೆ. ಶರಣಾಗತಳಾಗಿ ಅವರ ಊಳಿಗವ ಮಾಡುವೆ; ತೊತ್ತಾಗಿ ದುಡಿಯುವೆ. ವಿಷಯಪ್ರಪಂಚದಲ್ಲಿ ಕೀರ್ತಿವಾರ್ತೆ, ಧನಕನಕಗಳನ್ನು ಗಳಿಸಿ ರಾಜರಾಗಿ ಬದುಕುವುದಕ್ಕಿಂತ ಇಂತಹ ಶರಣರ ಸಂಗದಲ್ಲಿ ಸೇವಕರಾಗಿ ದುಡಿಯುವುದು ಲೇಸು. ಇಲ್ಲಿ ಬದುಕಿಗೆ ರಕ್ಷಣೆಯಿದೆ, ಬುದ್ಧಿಗೆ ಬೋಧೆ ಇದೆ. ಚನ್ನಮಲ್ಲಿಕಾರ್ಜುನಾ....ಇದೊಂದೇ ವರವ ಕೊಡು, ತಂದೆ. ಶರಣರ ಸಂಗದಲ್ಲಿ ಇರುವುದೇ ದೊಡ್ಡ ತಪಸ್ಸು, ಇದೇ ನನಗೆ ಸಾಕ್ಷಾತ್ಕಾರ.

ಮರ ಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯ್ತು.
ಆತ್ಮವಾತ್ಮ ಮಥನಿಸಿ ಜ್ಞಾನಾಗ್ನಿ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು.
ಇದುಕಾರಣ ಮಹಾನುಭಾವಿಗಳ
ಸಂಗವನೆ ಕರುಣಿಸಿ ಎನ್ನ ಒಡಲನುಳುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ*

ಹೃದಯತುಂಬಿ ಪ್ರಾರ್ಥಿಸುತ್ತ ಮಹಾದೇವಿ ತನ್ನ ನೀಳವಾದ ದಟ್ಟ ಕೂದಲನ್ನೇ ಹಿಂದಕ್ಕೆ ಮುಂದಕ್ಕೆ ಹರಡಿಕೊಂಡು ಮಹಾಮನೆಯ ಕಡೆಗೆ ನಡೆಯತೊಡಗಿದಳು.

೪೬. ಅನುಭವಮಂಟಪದ 'ಅಕ್ಕ'

ಕಲ್ಯಾಣದ ರಾಜಬೀದಿಯು ಮಹಾಮನೆಗೆ ನೇರವಾಗಿ ಕೊಂಡೊಯ್ದಿತು. ಮಾರ್ಗದ ಇಕ್ಕೆಲದಲ್ಲಿದ್ದ ವೃಕ್ಷಗಳು ಸತ್ತಿಗೆಯನ್ನು ಹಿಡಿದು ಮಹಾದೇವಿಯನ್ನು ಸ್ವಾಗತಿಸುವಂತೆ ನಿಂತಿದ್ದವು. ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗಗಳನ್ನು ಧರಿಸಿ ಸಾತ್ವಿಕ ಮುಖಮುದ್ರೆ ಹೊತ್ತ ಅನೇಕ ಶರಣರು ಗುಂಪು ಗುಂಪಾಗಿ ಹೋಗುವ ಪಥವನ್ನೇ ಮಹಾದೇವಿ ಅನುಸರಿಸಿದಳು. ಧರ್ಮ ಲಾಂಛನಧಾರಿಗಳನ್ನು ಕಂಡ ತಕ್ಷಣವೇ ಪರಿಚಿತರಿರಲಿ ಅಪರಿಚಿತರಿರಲಿ, ಎದುರಾದವರು 'ಶರಣು' ಎಂದು ಕೈಜೋಡಿಸಿ ಮುಗುಳ್ನಕ್ಕು ಮುಂದೆ ಸಾಗುತ್ತಿದ್ದರು. ರಾಜಬೀದಿಯ ಒಂದು ಮಗ್ಗುಲಿಗೆ ದೊಡ್ಡದಾದ ಮಹಾದ್ವಾರ. ಅದಕ್ಕಂಟಿಕೊಂಡು ಆಳೆತ್ತರದ ಪೌಳಿ ದೂರದವರೆಗೆ ಸಾಗಿತ್ತು. ಮಹಾದ್ವಾರದ ಮೇಲೆ ಹಾರುತ್ತಲಿದ್ದ ಕಾವಿಯ ಬಣ್ಣದ ಧ್ವಜ ಪಂಚಕೋನ ಆಕಾರದ ಚಿತ್ರವನ್ನು, ನಟ್ಟನಡುವೆ 'ಓಂ' ಅಕ್ಷರವನ್ನು ಒಳಗೊಂಡಿತ್ತು. ಮಹಾದೇವಿ ಆ ಪ್ರಶಾಂತ ವಾತಾವರಣದಿಂದ ಸಂಪ್ರೀತಳಾಗಿ ಒಳಹೊಕ್ಕಳು. ಮಹಾದ್ವಾರವನ್ನು ದಾಟಿ ವಿಶಾಲವಾದ ಉದ್ಯಾನವನ. ಎದುರುಗಡೆಯೇ ಮಹಾಮನೆಯ ಮುಖದ್ವಾರ. ಸುಂದರ ಕಲಾಕೃತಿಯ ಕಮಾನಿನಿಂದ ಶೋಭಿತವಾದ ಅದು ಮಹಾಮಂತ್ರಿಯ ನಿವಾಸ. ರಾಜಕೀಯ ಸಂದರ್ಶನಕ್ಕೆ ಹೋಗುವವರು ನೇರವಾಗಿ ಹೋಗುತ್ತಿದ್ದರು. ಅನುಭವಗೋಷ್ಠಿಗೆ ಬಂದವರು ಬಲಕ್ಕೆ ಹೊರಳುವ ಪಥದಲ್ಲಿ ಸಾಗಿ, ಅನುಭವಮಂಟಪದ ದ್ವಾರಕ್ಕೆ ಬಂದು ನಿಲ್ಲುತ್ತಿದ್ದರು.

ಮಂಟಪದ ದ್ವಾರವು ಸ್ವಲ್ಪ ಅಂತರದಲ್ಲಿರುವಾಗಲೇ ಶರಣನೊಬ್ಬ ಧಾವಿಸಿ ಬಂದು 'ಶರಣು' ಎಂದು ಸ್ವಾಗತಿಸಿ, ಕಲ್ಲಿನ ಬಾನೆಯೊಂದನ್ನು ತೋರಿಸಿ, ತಂಬಿಗೆಯಿಂದ ನೀರನ್ನು ಹಾಕಿ, ಒದ್ದೆ ಒರಸಲು ವಸ್ತ್ರ ನೀಡಿದ. ಮಹಾದೇವಿ ಕೈಕಾಲುಮುಖ ತೊಳೆದು ಒರೆಸಿಕೊಂಡು ವಸ್ತ್ರವನ್ನು ಹಿಂತಿರುಗಿಸಿ ಮುಂದೆ ನಡೆದಳು.

ಮಂಟಪದ ದ್ವಾರದ ಮುಂದಿನ ಅಂಕಣದಲ್ಲಿ ನಿಂತ ಉಗ್ಗಡಿಸುವ

ಭಾವ ಭ್ರಮೆವಂತರು ಬಾರದಿರಿ, ಜ್ಞಾನಹೀನರು ಬೇಗ ಹೋಗಿ
ತ್ರಿವಿಧ ಮಲಕ್ಕೆ ಕಚ್ಚಿ ಮುಚ್ಚಿ ಹೊಡೆದಾಡುವರತ್ತಲಿರಿ
ನಿರುತ ಸ್ವಯಾನುಭಾವರು ಬನ್ನಿ, ಪರಬ್ರಹ್ಮಸ್ವರೂಪರು ಬನ್ನಿ,
ಏಕಲಿಂಗನಿಷ್ಠಾಪರ ದೃಢವಂತರು ಬನ್ನಿ;
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ, ಎಂದು ಎನಗೆ ಕೊಟ್ಟ
ಕಾಯಕ, ಕೂಡಲಸಂಗಮದೇವರಲ್ಲಿ ಬಸವಣ್ಣ.

ಮಹಾದೇವಿ ವಚನವನ್ನು ಮನನಿಸುತ್ತ ಬಲಬದಿಯ ಕಟ್ಟೆಯ ಮೇಲಿದ್ದ ವಿಭೂತಿಮಂಟಪದಲ್ಲಿ ಕುಳಿತು ಭಸ್ಮವನ್ನು ಧರಿಸಿಕೊಂಡು ಮೇಲೆದ್ದಳು.

'ಗೋಷ್ಠಿಯು ಆರಂಭವಾಗಿ ಹಲವು ನಿಮಿಷಗಳಾದವು. ತಾವು ಒಳಗೆ ನಡೆಯಿರಿ....' ಎಂದು ನುಡಿದು, ದೇವಯ್ಯ ತನ್ನ ಕಾಯಕದಲ್ಲಿ ಮಗ್ನನಾದ. ಅಷ್ಟರಲ್ಲಿ ಮಹಾದೇವಿಯನ್ನು ಕಂಡ ಓರ್ವ ಶರಣನು ಅನುಭವಮಂಟಪದ ಒಳಗೆ ಹೋಗಿ ಬಂದ ಬಗ್ಗೆ ತಿಳಿಸುತ್ತಲೇ ಎಲ್ಲರ ಹೃದಯಗಳು ರೋಮಾಂಚಿತಗೊಂಡವು. ಮೆಲ್ಲನೆ ಗುಜುಗುಜು ಆರಂಭವಾಯಿತು.

'ಶಾಂತಿ....ಯಾರೂ ಸ್ಥಾನ ಬಿಟ್ಟು ಕದಲಲಾಗದು....' ಪ್ರಭುದೇವರು ನುಡಿದರು. ಎಲ್ಲರ ಉತ್ಸಾಹವೂ ಅದುಮಲ್ಪಟ್ಟಿತು.

'ನಾನೊಬ್ಬ ತುಂಟ ಮಗ ಎನ್ನುವುದು ಅಪ್ಪನವರಿಗೆ ಗೊತ್ತು....' ಎಂದು ನಗುತ್ತ ಮಡಿವಾಳ ಮಾಚಿದೇವರು ತಮ್ಮ ಆನಂದವನ್ನು ಹತ್ತಿಕ್ಕಿಕೊಳ್ಳಲಾರದೆ ಮೇಲಕ್ಕೆದ್ದು ಓಡಿಹೋಗಿ ಸಿದ್ಧಪಡಿಸಿಟ್ಟುಕೊಂಡಿದ್ದ ನಡೆಮಡಿಯನ್ನು ಹೊಸ್ತಿಲಿಗೆ ಹಾಸಿ,

'ಶರಣು ಶರಣಾರ್ಥಿ, ದಯಮಾಡಿಸಬೇಕು....ನಡೆವ ಮಡಿಯ ಮೇಲೆ ಪಾದವಿಟ್ಟು ಮುನ್ನಡೆಯಬೇಕು....' ಎಂದು ಕೈಮುಗಿದು ಸ್ವಾಗತಿಸಿದರು.

ಮಹಾದೇವಿ ಹೃದಯ ತುಂಬಿದ ಗೌರವದಿಂದ ಅವರನ್ನು ದಿಟ್ಟಿಸಿದಳು. ಎತ್ತರವಾದ ಆಕೃತಿ, ಕಣ್ಣುಗಳಲ್ಲಿ ತುಂಬಿದ ತತ್ತ್ವನಿಷ್ಠೆ, ಐವತ್ತನ್ನು ದಾಟಿದ ವಯಸ್ಸಿನಲ್ಲೂ ಕಾಂತಿಯುಕ್ಕುವ ಸದೃಢ ಶರೀರ, ತತ್ತ್ವನಿಷ್ಠೆಯ ಜೊತೆಗೆ ಅಪೂರ್ವವಾದ ವಾತ್ಸಲ್ಯ-ಗೌರವಗಳನ್ನು ಮೇಳವಿಸಿಕೊಂಡ ನೋಟ.

'ಕಲಿದೇವರದೇವನ ಕಂದ ಮಡಿವಾಳ ಮಾಚಿದೇವ ನಾನು....' ತಮ್ಮ ಪರಿಚಯವನ್ನು ತಾವೇ ಮಾಡಿಕೊಟ್ಟರು.

'ಶರಣರ ಬಟ್ಟೆಗಳೊಡನೆ, ಭವಜೀವಿಗಳ ಹೃದಯದ ಕೊಳೆಯನ್ನೂ ತೊಳೆಯುವ ಮಾಚಿ ತಂದೆಗೆ ಶರಣು....

'ಇಂತಹ ಮಹಾನುಭಾವ ವಿನಯ ತುಂಬಿ ಮಡಿ ಹಾಸಿದರೆ ತಾನದನ್ನು ಪಾದದಿಂದ ಮೆಟ್ಟುವುದೇ?' ಮನಸ್ಸಿಗೆ ಸರಿಬರದೆ ಮಹಾದೇವಿ ಬಾಗಿ ಅದನ್ನು ಎತ್ತಿಕೊಂಡು ಮೈಮೇಲೆ ಹೊದ್ದು, ಮತ್ತೆ ಭಕ್ತಿಯಿಂದ ತೆಗೆದು ಕೆಳಗಿರಿಸಿ, ಮಡಿಯನ್ನು ತುಳಿಯದೆ ಪಕ್ಕದಲ್ಲಿ ನಡೆಯತೊಡಗಿದಳು.

ಇಡೀ ಸಭೆಯೆಲ್ಲ ಸ್ತಬ್ಧವಾಯಿತು. ತೀವ್ರವಾಗಿ ಉಸಿರಾಡಿದರೂ ಕೇಳುವಷ್ಟು ಶಾಂತಿ ಅಲ್ಲಿ ನೆಲೆಸಿತ್ತು. ಎಲ್ಲರ ಹೃದಯಗಳು ಜಯಕಾರ ಮಾಡಲು ಮೊರೆಯುತ್ತಿದ್ದರೂ ಪ್ರಭುದೇವನ ಆಜ್ಞೆಗಾಗಿ ಕಾಯುತ್ತ, ಗೊಂಬೆಗಳಂತೆ ಕುಳಿತಿದ್ದರು. ಅಪರಿಚಿತರು ತಿನಿಸನ್ನು ಮುಂದೆ ಹಿಡಿದಾಗ ತಿನ್ನಬೇಕೆಂಬ ಆಸೆ ಉತ್ಕಟವಾಗಿದ್ದರೂ ಮಗು ತಿಂಡಿಯನ್ನೊಮ್ಮೆ ಒಪ್ಪಿಗೆಗಾಗಿ ತಾಯಿಯ ಮುಖವನ್ನೊಮ್ಮೆ ನೋಡುವಂತೆ ಶರಣರುಗಳು ಪ್ರಭುದೇವನನ್ನೊಮ್ಮೆ ಮಹಾದೇವಿಯನ್ನೊಮ್ಮೆ ನೋಡತೊಡಗಿದರು.

ಸುಂದರವಾದ ಶೂನ್ಯಪೀಠದ ಮೇಲೆ ಪ್ರಭುದೇವ ಆಸೀನನಾಗಿದ್ದ. ಅವನ ಅಕ್ಕಪಕ್ಕಗಳಲ್ಲಿ ಬಸವಣ್ಣ, ಚನ್ನಬಸವಣ್ಣನವರು ಕುಳಿತಿದ್ದರು. ನೆಲಕ್ಕೆ ಪೂರ್ಣವಾಗಿ ಹಾಸಿದ್ದ ರತ್ನಗಂಬಳಿಯ ಮೇಲೆ ಉಳಿದವರಿದ್ದರು. ಮಹಾದೇವಿ ನಡೆಯುತ್ತ ಬಂದು ಸಿಂಹಾಸನಕ್ಕೆ ಸ್ವಲ್ಪ ದೂರದಲ್ಲಿ ನಿಂತಳು. ಅವಳ ಕಣ್ಣುಗಳು ಬಸವಣ್ಣನಿಗಾಗಿ ಹುಡುಕುತ್ತಿದ್ದವು. ಮಹಾದೇವಿ ಸಭಾಂಗಣದ ಮಧ್ಯೆ ಬರುತ್ತಲೇ ಸ್ವಾಗತಿಸಲು ಎದ್ದು ನಿಂತ ಬಸವಣ್ಣ. ಎತ್ತರವಾದ ನಿಲುವು, ವಿಶಾಲವಾದ ವಕ್ಷಃಸ್ಥಲ, ಹರವಾದ ಹಣೆಯ ಮೇಲೆ ಮೂಡಿ ನಿಂತ ಶಿವನ ನಗೆಯಷ್ಟು ಕಳಾಪೂರ್ಣವಾದ ಧವಳಭಸಿತ. ಬಿಳಿಯದಾದ ಉತ್ತರೀಯವೊಂದನ್ನು ಮೈಮೇಲೆ ಹೊದ್ದಿದ್ದ ಬಸವಣ್ಣನ ಎದೆಯ ಮೇಲೆ ರುದ್ರಾಕ್ಷಿಮಾಲೆ, ಇಷ್ಟಲಿಂಗಗಳು ಎದ್ದುಕಾಣುತ್ತಿದ್ದವು. ಆ ಕಳಾಪೂರ್ಣ ಕಣ್ಣುಗಳನ್ನು, ಅವುಗಳಲ್ಲಿ ತುಂಬಿದ್ದ ಕರುಣೆಯ ಅಮೃತವನ್ನು ಕಾಣುತ್ತಲೇ ಬಸವಣ್ಣನವರು ಅವರೇ ಇರಬೇಕು ಎಂದು ನಿಶ್ಚಯಿಸಿದಳು. ಕಾಂತಿಯುಕ್ತವಾದ ಮೈಬಣ್ಣ, ಸಾತ್ವಿಕ ಮುಖಮುದ್ರೆ, ಆನಂದಸ್ಮಿತ ಮುಗುಳ್ನಗೆಗಳನ್ನು ಕಂಡು, 'ಬೆಳಕು ಸಾವಯವಗೊಂಡು ಬಸವಣ್ಣನಾಗಿದೆಯೋ'—ಎಂದು ಮಹಾದೇವಿಗೆ ಭಾಸವಾಗಿ, ಭಕ್ತಿತುಂಬಿ ಮನದಲ್ಲಿ ವಂದಿಸಿದಳು. ಸಭೆಯ ಶಿಷ್ಟಾಚಾರದಂತೆ ಪ್ರಭುದೇವರನ್ನು ಸಮೀಪಿಸಿ ಪೀಠದ ಮುಂದೆ ನಮಸ್ಕರಿಸಿದಳು. ಮೇಲಕ್ಕೆದ್ದು ಬಸವಣ್ಣನ ಬಳಿಗೆ ಸಾರಿ ಗದ್ಗದಕಂಠದಿಂದ,

'ಅರಸಿ ತೊಳಲಿದಡಿಲ್ಲ, ಹರಸಿ ಬಳಲಿದಡಿಲ್ಲ

ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು
ಶಿವನೊಲಿದಲ್ಲದೆ ಕೈಗೂಡದು
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ನಾನು ಸಂಗನಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು'*

ಎಂದು ನುಡಿಯುತ್ತ ಪಾದಕ್ಕೆ ಸಾಷ್ಟಾಂಗವೆರಗಿದಳು.

'ಏಳು ಮಗಳೇ....' ಬಸವಣ್ಣನವರು ಒಲವು ತುಂಬಿದ ದನಿಯಲ್ಲಿ ನುಡಿದರು. ಮಹಾದೇವಿಯನ್ನು ಸಭೆಗೆ ಪರಿಚಯಮಾಡಿಕೊಡುವ ಉದ್ದೇಶದಿಂದ ಹೇಳಿದರು:

ಕಾಯದ ಲಜ್ಜೆಯ ಕಲ್ಪಿತವ ಕಳೆದು
ಜೀವದ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು
ಭಾವದ ಕೂಟ ಬತ್ತಲೆ ಎಂದರಿದು
ತವಕದ ಸ್ನೇಹ ವ್ಯವಹಾರಕ್ಕೆ ಹೊಗದು!
ಕೂಡಲಸಂಗಮದೇವಯ್ಯ, ಎನ್ನ ಹೆತ್ತ ತಾಯಿ
ಮಹಾದೇವಿಯಕ್ಕನ ನಿಲವ ನೋಡಯ್ಯ ಪ್ರಭುವೆ**

'ಹೆತ್ತ ತಾಯಿ ಮಹದೇವಿಯಕ್ಕ....' ಎಂಬ ಶಬ್ದಗಳನ್ನು ಕೇಳುತ್ತಲೇ ಮಹಾದೇವಿ ರೋಮಾಂಚಿತಳಾದಳು. ಆಕೆಯ ಮೈಕೂದಲು ನಿಮಿರಿನಿಂತು, ಮಾತು ಮೂಕವಾಯಿತು. ಬಸವಣ್ಣ ಅಭಿಮಾನತುಂಬಿ ಮತ್ತೆ ಹೇಳಿದ:

ರೂಹಿಲ್ಲದವಂಗೆ ಒಲಿದವರಿಗೆ ತನುವಿನ ಹಂಗುಂಟೆ?
ಮನವಿಲ್ಲದವಗೆ ಮೆಚ್ಚಿದವರಿಗೆ ಅಭಿಮಾನದ ಹಂಗುಂಟೆ?
ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ?
ಕೂಡಲಸಂಗಮದೇವಯ್ಯ, ಮಹಾದೇವಿಯಕ್ಕನೆಂಬ ಭಕ್ತಿಗೆ
ಆವ ಹೊರೆಯೂ ಇಲ್ಲ ನೋಡಾ, ಪ್ರಭುವೆ!†

'ಅಂತಹ ದೊಡ್ಡ ಯೋಗ್ಯತೆ ನನ್ನದಲ್ಲ. ತಂದೆ! ಶರಣರ ಮನೆಯ ತೊತ್ತಾಗಿರಲು ಚೆನ್ನಮಲ್ಲಿಕಾರ್ಜುನನ ಕೈಹಿಡಿದು ಬಂದ ನಿಮ್ಮ ಕರುಣೆಯ ಕಂದ ನಾನು....' ಎಂದು ಪಾದ ಬಿಟ್ಟು ಮೇಲಕ್ಕೆದ್ದು ನಿಂತಳು.

'ಇವರು ಗುಹೇಶ್ವರಲಿಂಗದ ಅಲ್ಲಮಪ್ರಭು, ಆ ಕಡೆ ಕೂಡಲ ಚೆನ್ನಸಂಗಮ ದೇವರ ಶಿಶು ಚೆನ್ನಬಸವಣ್ಣ. ಮೊದಲ ಸಾಲಿನಲ್ಲಿ ಆ ಕಡೆಯಿಂದ ಮರುಳು ಶಂಕರ ದೇವರು, ಕೋಲ ಶಾಂತಯ್ಯ, ಮಾದಾರ ಧೂಳಯ್ಯ,

ಮೋಳಿಗೆಯ ಮಾರಯ್ಯ, ಹಡಪದ ಅಪ್ಪಣ್ಣನವರು, ನುಲಿಯ ಚಂದಯ್ಯ, ಶಿವಯೋಗಿ ಸಿದ್ಧರಾಮೇಶ್ವರ, ತತ್ತ್ವವೀರ ಘಟ್ಟಿವಾಳಯ್ಯ, ಸಮಗಾರ ಹರಳಯ್ಯ; ಅತ್ತಕಡೆ ಶರಣೆಯರ ಗುಂಪಿನಲ್ಲಿ ಕ್ರಾಂತಿಗಂಗೋತ್ರಿ ಅಕ್ಕ ನಾಗಮ್ಮ, ಪುಣ್ಯಾಂಗನೆಯರಾದ ನೀಲಾಂಬಿಕೆ, ಗಂಗಾಂಬಿಕೆಯರು, ಮಹಾತಾಯಿ ಮೋಳಿಗೆಯ ಮಹಾದೇವಿಯಮ್ಮ, ಯೋಗಬಲ್ಲಿದೆ ಲಿಂಗಮ್ಮ ತಾಯಿ, ಇಂತಿವರೆಲ್ಲ ಈ ಮಹಾಮನೆಯ ಮಹಾನುಭಾವರು....' ಬಸವಣ್ಣನವರು ಕೈತೋರಿಸಿ ಪರಿಚಯ ಮಾಡಿದಂತೆಲ್ಲ ಮಹಾದೇವಿ ಅವರಿಗೆ ಶರಣುಗಳನ್ನು ಸಲ್ಲಿಸುತ್ತ, ಕೊನೆಯಲ್ಲಿ 'ಚನ್ನಮಲ್ಲಿಕಾರ್ಜುನನ ಶರಣರ ಪಾದಕ್ಕೆ ನಮೋ ನಮೋ ಎಂಬೆನು....' ಎಂದು ಇಡೀ ಸಭೆಗೆ ಕೈಯೆತ್ತಿ ಮುಗಿದಳು. ಶರಣರ ಸಭೆಯೂ ಮರುವಂದಿಸಿತು.

ಆಗ ಶರಣೆಯರ ಗುಂಪಿನಿಂದ ಅಕ್ಕನಾಗಮ್ಮ ಎದ್ದುಬಂದು ತಮ್ಮಲ್ಲಿಗೆ ಮಹಾದೇವಿಯನ್ನು ಕರೆದೊಯ್ಯಬೇಕು ಎಂಬುವಷ್ಟರಲ್ಲಿ ಗಂಭೀರ ಧ್ವನಿ ಕೇಳಿಬಂದಿತು. ಪ್ರಭುದೇವರು ಕಂಚಿನ ಕಂಠದಲ್ಲಿ ನುಡಿದರು :

'ಸಾಕು....ಸಾಕು ಈ ನಾಟಕ! ಇದೇನು ವೇಷಧಾರಿಗಳಿಗೆ ಸುಲಭವಾಗಿ ದೊರೆಯುವ ಧರ್ಮಶಾಲೆಯೋ....ಅಲ್ಲ! ಅನುಭಾವಿಗಳಿಗೆ, ಜಿಜ್ಞಾಸುಗಳಿಗೆ ಮಾತ್ರ ಸ್ಥಾನ ನೀಡುವ ಅನುಭವಮಂಟಪ.

ತಾಯೆ, ಏರುತ್ತಿರುವ ತುಂಬುಜವ್ವನದಲ್ಲಿ ಅಪ್ರತಿಮ ಲಾವಣ್ಯವತಿಯಾಗಿರುವ ನೀನು ಈ ಆಧ್ಯಾತ್ಮಿಕ ಸ್ಥಾನಕ್ಕೆ ಏಕೆ ಬಂದೆಯವ್ವಾ? ಬಹುಶಃ ದಾರಿತಪ್ಪಿ ಬಂದಿರಬೇಕು....'*

ಪ್ರಭುದೇವರ ದೃಷ್ಟಿ ಮಹಾದೇವಿಯ ಅಂತರಂಗವನ್ನು ಮಥಿಸುವಂತಿತ್ತು. ಸಭೆ ನಿಶ್ಶಬ್ದವಾಯಿತು. ಮಹಾದೇವಿ ವಿಚಲಿತಳಾಗದೆ ಉತ್ತರಿಸಿದಳು :

'ಹಾದಿ ತಪ್ಪಿ ಬಂದಿಲ್ಲ, ಮಹಾನುಭಾವರೆ, ಉದ್ದೇಶಪೂರ್ವಕವಾಗಿ ಬಂದಿರುವೆ. ನನ್ನ ಆಮುಷ್ಮಿಕ ಬದುಕನ್ನು ಸಿಂಗರಿಸಿಕೊಂಡು, ಅರ್ಥಪೂರಿತವಾಗಿ ಮಾಡಿಕೊಳ್ಳಲು ಬಂದಿರುವೆ. ಕಣ್ಣಿಗೆ ಗುರುಹಿರಿಯರ ನೋಡುವುದು ಶೃಂಗಾರ, ಕಿವಿಗೆ ಮಹಂತರ ಸುಗೀತಂಗಳ ಕೇಳುವುದು ಶೃಂಗಾರ, ವಚನಕ್ಕೆ ಸತ್ಯವ ನುಡಿವುದು ಶೃಂಗಾರ, ಸಂಭಾಷಣೆಗೆ ಸದ್ಭಕ್ತರ ನುಡಿಗಡಣವೇ ಶೃಂಗಾರ, ಕರಕ್ಕೆ ಸತ್ಪಾತ್ರದಾನವೇ ಶೃಂಗಾರ, ಜೀವಿಸುವ ಜೀವನಕ್ಕೆ ಶರಣರ ಗಣಮೇಳಾಪವೇ ಶೃಂಗಾರ ; ಇವಿಲ್ಲದ ಬಾಳುವೆ ಉಪಯುಕ್ತವಿಲ್ಲ'* ಎಂದು ನಂಬಿರುವವಳು ನಾನು.

* ಮ.ವ. ೧೮೦

ಶರಣರೊಡನೆ ಸರಸಸಮ್ಮೇಳನದಲ್ಲಿ ಇರಬೇಕು ಎಂದು ಬಂದಿರುವೆ ನಾನು. ಚನ್ನಮಲ್ಲಿಕಾರ್ಜುನದೇವನು ಕೊಟ್ಟ ಆಯುಷ್ಯವಿರುವತನಕ ಲಿಂಗಸುಖಿಗಳ ಸಂಗದಲ್ಲಿ ಬದುಕಬೇಕೆಂದು ಹಂಬಲಿಸಿ ನಾನು ಬಂದಿರುವೆ....'*

ಪ್ರಭುದೇವರು ಮೌನವಾಗಿ ಮಹಾದೇವಿಯ ವ್ಯಕ್ತಿತ್ವವನ್ನು ಅಳೆಯು ತೊಡಗಿದ್ದರು. ಅವರಿಗೆ ಯಾವುದೋ ಚಿತ್ರ ಅಸ್ಪಷ್ಟವಾಗಿ ಕಣ್ಣೆದುರು ನಿಲ್ಲ ತೊಡಗಿ, ನೆನಪಿನ ನವಿಲು ಗರಿಗೆದರಿ ನರ್ತಿಸತೊಡಗಿತ್ತು.

'ಹೂಂ....ಹೆಣ್ಣನ್ನು ನಂಬುವುದು ಕಷ್ಟಸಾಧ್ಯ! ಅದಾವಾವ ವೇಷ ಧರಿಸಿ ದುರ್ಬಲಪುರುಷನ ಮನವನ್ನು ಸೆಳೆವಳೋ! ಪೂರ್ವಾಶ್ರಮದ ಪೊರೆ ಕಳಚಿ ಪ್ರಕೃತಿಯ ಗೂಡಾದ ಬನವಾಸಿಗೆ ಬಂದಿದ್ದೆನಷ್ಟೇ. ಅಂದು ಲೀಲೆಯನ್ನು ಮಾಡಹೋಗಿ ಜಾಲದಲ್ಲಿ ಸಿಕ್ಕಿಬೀಳುತ್ತಿದ್ದೆ! ಗುಹೇಶ್ವರನೇ ಕಾಪಾಡಿದ. ಅಂದು ಮಾಯೆಯು ಅಂಗವನ್ನು ಶೃಂಗರಿಸಿಕೊಂಡು, ಚೆಲುವನ್ನು ಪ್ರದರ್ಶಿಸುತ್ತ ನರ್ತಿಸಿದ್ದಳು. ಇಂದು ಎದುರು ನಿಂತ ಈಕೆ ಆಕೆಗಿಂತಲೂ ಅಂದಗಾತಿಯಾಗಿದ್ದರೂ ಇವಳಲ್ಲಿ ಮಾಯೆಯಂತಹ ಆಡಂಬರದ ಪ್ರದರ್ಶನವಿಲ್ಲ. ಆದರೂ ನಂಬುವುದು ಕಷ್ಟಕರ....' ಪ್ರಭುವಿನ ಮನಸ್ಸು ಸಂಶಯಪಟ್ಟಿತು. 'ಇರಲಿ....ಕಠೋರ ಪರೀಕ್ಷೆಗೆ ಗುರಿಮಾಡುವೆ....' ಎಂದುಕೊಂಡು ನುಡಿದ :

'ತಾಯಿ, ಹೆಣ್ಣುಮಕ್ಕಳು ಎಂದರೆ ನಮಗೆ ಭೀತಿ ಬಹಳ. ತರುಣಿಯರು ಎಂದರಂತೂ ಶರಣರು ದೂರ ಸಾಗುವರು. ಲಗ್ನವಾದ ಗೃಹಿಣಿಯಿದ್ದರೆ ಮಾತ್ರ ಆತಂಕವಿಲ್ಲ. ಆದ್ದರಿಂದ ನಿನಗೆ ಮದುವೆಯಾಗಿದೆಯೇ? ಎಂಬುದನ್ನು ಸ್ಪಷ್ಟವಾಗಿ ಹೇಳು....'**

ಪೂರ್ವಾಶ್ರಮದ ಪರಿಚಯ ಕೇಳುವುದು ಆಧ್ಯಾತ್ಮಜೀವಿಗಳಿಗೆ ಉಚಿತವಲ್ಲ ಎಂಬುದನ್ನು ಅರಿತೂ ಪ್ರಭುದೇವರು ಇಂತಹ ಪ್ರಶ್ನೆ ಕೇಳಿದರಲ್ಲ ಎಂದು ಕೆಲವರಿಗೆ ಬೇಸರವಾಗದಿರಲಿಲ್ಲ.

'ಪ್ರಭುವೇ, ನನ್ನ ಮದುವೆಯ ವಿಷಯ ಜನಜನಿತವಾಗಿದೆಯಷ್ಟೆ! 'ಹರನನ್ನು ವರಿಸಬೇಕು' ಎಂದು ಅನಂತಜನುಮಗಳಿಂದ ತಪಸ್ಸುಮಾಡುತ್ತಲಿದ್ದೆ. 'ನಿನಗೆ ಪತಿ ಯಾರು?' ಎಂದಾಗ ಶಶಿಧರನ ಹೆಸರು ಹೇಳಿದೆ.† ಆಗ ನನ್ನವರು ಅದಕ್ಕೆ ತಕ್ಕಂತೆ ಭಸ್ಮದ ಅನುಲೇಪನ ಮಾಡಿ, ರುದ್ರಾಕ್ಷಿಯ ಕಂಕಣ ಕಟ್ಟಿದರು; ಚನ್ನಮಲ್ಲಿಕಾರ್ಜುನನೊಡನೆ ನನ್ನ ಮದುವೆಯಾಯಿತು.'

'ಓಹ್ !....ಸರಿ ಸರಿ. ಅಂತೂ ನಿನಗೆ ಮದುವೆ ಆಯಿತೆಂಬುದು ಸತ್ಯ! ಆದರೆ ನಿನ್ನ ಪತಿಯ ಕುರುಹು ನಮಗೆ ಇನ್ನೂ ಸ್ಪಷ್ಟವಾಗಿ ಬೇಕು. ಶರಣರ ಸತ್ಸಂಗ ಬೇಕಾದರೆ ನಿನ್ನ ಪತಿ ಯಾರು ಎಂಬುದನ್ನು ಹೇಳು. ಇಲ್ಲವಾದರೆ ಬಂದ ದಾರಿಗೆ ಸುಂಕವಿಲ್ಲ ಎಂದು, ಗಂಭೀರವಾಗಿ ಆಚೆ ತೊಲಗು....'

'ನನ್ನ ಪತಿಯ ಕುರುಹು ಹೇಳಲು ನನಗೆ ಸಂಕೋಚವೇಕೆ? ಸಾವಿಲ್ಲದ ಸಹಜಂಗೆ, ರೂಹಿಲ್ಲದ ಚೆಲುವಂಗೆ, ಭವವಿಲ್ಲದ ಅಭವಂಗೆ, ನಿಶ್ಚಯದ ನಿಶ್ಚಲಂಗೆ ನಾನೊಲಿದೆನಯ್ಯಾ. ಚನ್ನಮಲ್ಲಿಕಾರ್ಜುನನೆಂಬ ಮಹಾವಿಭುವಿಗೆ ಒಲಿದಿರುವೆ....'

ಪ್ರಭುದೇವರ ನೆನಪು ಮತ್ತೆ ಗರಿ ಬಿಚ್ಚಿತು.

'ಈ ಹೆಂಗಸರು ಸಿಹಿ ಮಾತಿನ ಮಾಯಾವಿಗಳೇನೋ! ಅಂದು ಆ ಮಾಯೆಯೂ ಸಹ, 'ಮದುವೆ ಏಕಾಗಿಲ್ಲ?' ಎಂದು ಪ್ರಶ್ನಿಸಿದಾಗ, 'ಮಧುಕೇಶ್ವರನೇ ನನ್ನ ಗಂಡನು' ಎಂದು ನುಡಿದಿರಲಿಲ್ಲವೆ? ಹೀಗೆ ನುಡಿದು ಪ್ರತಿಜ್ಞೆ ಕೈಗೊಂಡ ಲಲನೆ ನನ್ನನ್ನು ತಾರುಣ್ಯವಯಸ್ಸಿನಲ್ಲಿ ಕಂಡ ತಕ್ಷಣವೇ ನಾನು ಮಧುಕೇಶ್ವರನ ಸಾಕಾರ ರೂಪವೆಂದು ಮೋಹಿತಳಾಗ ಲಿಲ್ಲವೆ? ಅಬ್ಬಾ! ವಸ್ತುವು ಸಿಕ್ಕದಿರುವವರೆಗೆ ವಿರಾಗ; ದೊರೆಯುತ್ತಿದ್ದಂತೆಯೇ ಅನುರಾಗ. ಈಕೆಯೂ ಹಾಗೆಯೇ ಇರಬಹುದೇ....?' ಮನಸ್ಸು ಸಂಶಯದ ಹೆಡೆ ಬಿಚ್ಚಿ ಆಡಿತು.

'ಛೇ....ಎಂತಹ ಅರ್ಥಹೀನ ಸಂಶಯ! ಈಕೆ ಮಾಯಾದೇವಿಯಲ್ಲ— ಮಹಾದೇವಿ! ಅವಳು ಮಮಕಾರ-ಮೋಹಿನಿಯರೆಂಬ ತಾಯಿತಂದೆಯರ ಸಂಗದಿಂದುದಿಸಿ, ಅಹಂಕಾರನೆಂಬ ಆಚಾರ್ಯನಲ್ಲಿ ಶಿಕ್ಷಣಪಡೆದ ಮೋಹದ ಮೂರ್ತಿ. ಈಕೆ ಓಂಕಾರ-ಲಿಂಗಮ್ಮರ ಸಂಯೋಗದಿಂದ ಜನ್ಮಿಸಿ, ಶ್ರೀಗುರು ಲಿಂಗದೇವರ ಕಾರುಣ್ಯಜಲದಲ್ಲಿ ಪೋಷಿತಳಾದ ವೈರಾಗ್ಯಮೂರ್ತಿ. ಕಾಮವೇ ಮೂರ್ತಿಗೊಂಡ ರಾಗಿಣಿಯಾಕೆ; ಭಕ್ತಿಯೇ ಮೈವೆತ್ತು ಬಂದಿಹ ಶಿವ ಯೋಗಿಣಿ ಈಕೆ!

ಇಡೀ ಜಗತ್ತನ್ನು ತೋರುಬೆರಳಿನಿಂದ, ಕಣ್ಸನ್ನೆಯಿಂದ, ಅಪೂರ್ವ ಸೌಂದರ್ಯದಿಂದ ಗೆದ್ದೇನೆಂದು ಎದೆ ಸೆಟೆಸಿ ನಿಂತ ಉನ್ಮತ್ತಳಾಕೆ; ಜಗತ್ತಿನ ಕೂಸು ನಾನು ಎಂದು ಶರಣರ ಪಾದಧೂಳಿಗಾಗಿ ವಿನಯದಿಂದ ತಲೆವಾಗಿರುವ ಮುಗ್ಧ ಮಗಳು ಈಕೆ. ಅಲ್ಲಿ ಜಗದ ಮುಂದೆ ಸೌಂದರ್ಯದ ಪ್ರದರ್ಶನ; ಇಲ್ಲಿ ಚೆನ್ನನಿಗೆ ಚೆಲುವಿನ ಅರ್ಪಣ! ತಾಮಸ ಕಳೆಯ ತೋರಿಕೆಯಿಂದ

ನ್ನೈವೆತ್ತು ಪುರುಷರ ಹೃದಯದಲ್ಲಿ ವಾತ್ಸಲ್ಯ ಮೂಡಿಸುವ [illegible] ಸಂಬಂಧ, ಎಂತಹ ತುಲನೆ....' ವಿವೇಕವು ದನಿಯೆತ್ತಿ ನುಡಿಯಿತು. ಮರು ಕ್ಷಣವೇ ನೆನಪಿನ ಜಾಲದಿಂದ ಹೊರಬಂದು ಪ್ರಭುದೇವರು ಕೇಳಿದರು :

'ಪರಮಾತ್ಮನನ್ನು ಮದುವೆಯಾದೆ ಎಂದು ಅವಿವೇಕರಮಣೀಯವಾದ ಮಾತುಗಳನ್ನು ಹೇಳುತ್ತಿರುವೆ. ಮದುವೆ ಎಂದರೇನು ? ಎರಡು ವ್ಯಕ್ತಿಗಳ ಸಂಯೋಗ ; ತಮ್ಮತಮ್ಮಲ್ಲಿಯೇ ಅಲ್ಲ, ಸಮಾಜಸಾಕ್ಷಿಯಾಗಿ. ಅಂದಾಗ ನೀನು ಯಾರ ಸಾಕ್ಷಿಯಾಗಿ ಮದುವೆಯಾಗಿರುವೆಯಮ್ಮಾ....?' ಅದೇ ಗಂಭೀರತೆಯಿಂದ ಪ್ರಶ್ನಿಸಿದರು.

'ಇಷ್ಟಲಿಂಗದೀಕ್ಷೆಯನ್ನು ಮಾಡಿದ ಶ್ರೀಗುರುಲಿಂಗದೇವರು ತೆತ್ತಿಗರಾದರು ; ಪರಮಾತ್ಮನು ಮದುವಣಿಗನಾದ, ನಾನು ಮದುವಳಿಗೆಯಾದೆ. ಆನಂದಹೊಂದಿ ಕಣ್ಣಿಂದ ಹರಿಸಿದ ಹರುಷಜಲವೇ ಧಾರೋದಕವಾಗಿ, ಸಮಸ್ತ ಮಾನವಕುಲವೇ ಈ ವಿಶ್ವಕುಟುಂಬತ್ವದ ವಿವಾಹಮಂಟಪದಲ್ಲಿ ಬಂಧು-ಬಳಗ ನಿಬ್ಬಣವಾಗಿ ನೆರೆಯಿತು. ಅಂತಹ ಅನುರೂಪ ವರನನ್ನು ಲಗ್ನವಾದುದೊಂದೇ ! ಅವನು ನನಗೆ ಕಾಣದಂತೆ, ನನ್ನೊಡನೆ ಕಣ್ಣುಮುಚ್ಚಾಲೆಯಾಡುತ್ತಿಹನು. ಆದುದರಿಂದ ಅವನೊಡನೆ ಒಂದುಗೂಡಿಸಿರಿ ಎಂದು ಕೇಳಿಕೊಳ್ಳಲು ನಿನ್ನ ಪಾದಕ್ಕೆ ಬಂದಿರುವೆ. ಇದರ ಹೊರತು ಲೋಕದ ಉಳಿದವರ ಸುದ್ದಿ ನಾನರಿಯೆ....'* ದೃಢಧ್ವನಿಯಲ್ಲಿ ನುಡಿದಳು, ಮತ್ತೆ ಮುಂದುವರಿಸಿದಳು :

'ನಿನ್ನ ಮದುವೆಯ ಸಂಭ್ರಮ ಹೇಗಿತ್ತು ? ವ್ಯವಸ್ಥೆಯ ಬಗೆ ಏನು ?— ಎಂದು ಪುನಃ ಪ್ರಶ್ನಿಸಬೇಡಿರಿ ನಾನೇ ಹೇಳಿಬಿಡುವೆ:

> ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ
> ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ
> ತಲೆಯಿಲ್ಲದ ಗಂಡ ಬಂದು ಮದುವೆಯಾದನು.
> ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ.
> ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.†

ಪ್ರಭುದೇವ ಗಹಗಹಿಸಿ ನಕ್ಕು ನುಡಿದ :

'ನೀನು ಮಾತಿನಲ್ಲಿ ಬಹು ಚತುರೆ, ಮುತ್ತುಮಾಣಿಕ್ಯಗಳನ್ನೇ ವರ್ಷಿಸುವೆ. ಆದರೆ ಇಂತಹ ಬೆಡಗಿನ ಒಗಟುಗಳಿಗೆ ನಾವು ಮರುಳಾಗುವವರಲ್ಲ. ಅದೇನೆಂದು ಬಿಚ್ಚುಭಾಷೆಯಲ್ಲಿ ಹೇಳು....'

'ಸದ್ಭಕ್ತಿ ಎಂಬ ಮಂಟಪವ ಮಾಡಿ, ಸುಜ್ಞಾನದ ಚಪ್ಪರವ ಕಟ್ಟಿ, ಸತ್ಕ್ರಿಯೆ ಎಂಬಂತಹ ಹಸೆಯ ಮಣೆಯನ್ನು ಹಾಸಿದರು. ದುಶ್ಚಾರಿತ್ರ್ಯವೆಂಬ ಕಾಲಿಲ್ಲದ, ಜಿಜ್ಞಾಸುವೆಂಬ ವಧುವಿಗೆ ವೃತ್ತಿಜ್ಞಾನ–ಇಂದ್ರಿಯ ಜ್ಞಾನವೆಂಬ ತಲೆಯಿಲ್ಲದ ಚೈತನ್ಯಜ್ಞಾನಯುಕ್ತ ಪರಶಿವನು ವರನಾದನು. ನಮ್ಮಿಬ್ಬರದು ಬಿಡದ ಬಾಳುವೆ. ಚನ್ನಮಲ್ಲಿಕಾರ್ಜುನನಿಗೊಲಿದ ನಿತ್ಯ ಮುತ್ತೈದೆ ನಾನು....'

ಪ್ರಭುದೇವನಿಗೆ ತೃಪ್ತಿಯಾಗಲಿಲ್ಲ. ಮಡಿಕೆಯನ್ನು ಕೊಳ್ಳುವವನು ಬೆರಳಗಿಣ್ಣಿನಿಂದ ಅದನ್ನು ಬಡಿದು ಬಡಿದು ಪರೀಕ್ಷಿಸುವಂತೆ, ತರ್ಕಬದ್ಧವಾಗಿ ಪರೀಕ್ಷಿಸತೊಡಗಿದ. ಪೂರ್ಣ ಸುಟ್ಟ ಮಡಿಕೆ ಟಂವ್ ಟಂವ್ ಎಂದು ಶಬ್ದ ಮಾಡಿದರೆ, ಹಸಿಬಿಸಿ ಬೆಂದುದು, ಸೀಳಿದುದು ಟಕ್ ಟಕ್ ಎನ್ನುವುದಷ್ಟೆ. ಮಹಾದೇವಿಯ ಪರಿಪಕ್ವ ಹೃದಯ ಹತಚೇತನವಾಗದೆ ಕಠೋರ ಪರೀಕ್ಷೆಯಿಂದ ಉತ್ತೇಜಿತಗೊಂಡು, ಆಕೆ ಸಮರ್ಪಕವಾಗಿ ಉತ್ತರಿಸತೊಡಗಿದ್ದಳು. ಇಲ್ಲಿಯವರೆಗೆ ಸಭಿಕ ಶರಣರಲ್ಲಿದ್ದ ಉದ್ವೇಗ, ವೇದನೆಗಳು ಅಳಿದುಹೋಗಿ ಈಗ ಸಂವಾದದ ಸೌರಭದಲ್ಲಿ ಆನಂದಿಸತೊಡಗಿದ್ದರು. ಮಹಾದೇವಿಯ ತಾತ್ತ್ವಿಕ, ತಾರ್ಕಿಕ, ಅಷ್ಟೇ ವಿನಯಶೀಲ ಹಾರ್ದಿಕ ಉತ್ತರಕ್ಕೆ ತಲೆದೂಗ ತೊಡಗಿದ್ದರು.

ಪ್ರಭುದೇವ ಮತ್ತೆ ಕೇಳಿದ :

'ಮಾತಿನ ಮಂಟಪವ ಕಟ್ಟಿ ಕೇಳುವವರು ತಲೆದೂಗುವಂತೆ ಮಾಡಿದರೆ ಉಪಯೋಗವಾಗದು, ಅವ್ವಾ! ರಮಣೀಯ ಶಬ್ದಜಾಲದಿಂದ ವಿವೇಕಿಗಳನ್ನು ಮರುಳುಮಾಡುವುದು ಅಸಾಧ್ಯ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ, ನಿನ್ನ ಚರಿತ್ರೆಯು ಜಗತ್ತಿನ ಸುದ್ದಿಯಾಗಿರುವಾಗ ಬಣ್ಣಬಣ್ಣದ ಮಾತುಗಳಿಂದ ಮಹಂತಳು ಎಂದು ತೋರಿಸಿಕೊಳ್ಳಲು ನೀನು ಸಾಹಸಪಡುತ್ತಿರುವೆ. ಕೌಶಿಕನೆಂಬ ರಾಜನ ಅರಮನೆಯಲ್ಲಿದ್ದು, ವಿನಾಕಾರಣ ತಪ್ಪನ್ನು ಅವನ ಮೇಲೆ ಹೊರಿಸಿ, ಬಾಳಲಾರದ್ದಕ್ಕೆ ಇತ್ತ ಬಂದು ಬಣ್ಣದ ಮಾತುಗಳನ್ನಾಡುವೆ ಎಂಬುದನ್ನು ಎಲ್ಲರೂ ಅರಿತಿದ್ದಾರೆ. ಅಂದಾಗ ಚನ್ನಮಲ್ಲಿಕಾರ್ಜುನನು ನಿನ್ನ ಪತಿ ಎಂಬುದಕ್ಕೆ ಯಾವ ಪ್ರಮಾಣವಿದೆ?'* ಪ್ರಭುದೇವರ ಕಠೋರ ಪ್ರಶ್ನೆಯಿಂದ ಸಭಾಂಗಣದಲ್ಲಿ ನೀರವಶಾಂತಿ ನೆಲಸಿತು. 'ಋಷಿಮೂಲವನ್ನು ನದಿ ಮೂಲವನ್ನು ಅರಸಲಾಗದು' ಎಂಬುದು ಧಾರ್ಮಿಕ ಪ್ರಪಂಚದ ಮೂಲಸತ್ಯವಾಗಿರುವಾಗ, ಹೀಗೆ ಪ್ರಶ್ನಿಸುವುದು ಅನುಚಿತವೆಂದು ಶರಣೆಯ

ರಾದಿಯಾಗಿ ಎಲ್ಲ ಶರಣರಿಗೆ ವೇದನೆಯಾಯಿತು. ಆದರೆ ಮಹಾದೇವಿ ವಿಚಲಿತಳಾಗಲಿಲ್ಲ.

‘ಪ್ರಭುವೇ, ತಮ್ಮ ಈ ಪ್ರಶ್ನೆ ಅನುಚಿತವಾದುದೇನಲ್ಲ, ಕೇಳಲು ಅರ್ಹವಾದುದೇ! ಹೆಗ್ಗಣವನ್ನು ಒಳಗಿಕ್ಕಿ ನೆಲೆಗಟ್ಟು ಮಾಡಿದರೆ, ಎಂದಿದ್ದರೂ ಅದು ಕೆದರಿ ಹೊರಬರಬಹುದು. ಇಂತಹ ಸಂಶಯಗಳನ್ನು ಅಂತರಂಗದಲ್ಲಿ ಅದುಮಿರಿಸಿಕೊಂಡು ಸದ್ಯಕ್ಕೆ ನನ್ನನ್ನು ಆದರದಿಂದ ಇಂಬಿಟ್ಟುಕೊಂಡರೂ ಕಾಲಾನಂತರದಲ್ಲಿ ಅವು ಪುಟಿಯುವ ಸಾಧ್ಯತೆ ಇದೆ. ಆದ್ದರಿಂದ ಇಂತಹ ಪ್ರಶ್ನೆ ಕೇಳಿ ಉತ್ತರವನ್ನು ಪಡೆದು ಸಂಶಯವನ್ನು ನಿರ್ಮೂಲನಮಾಡಿಕೊಂಡರೆ ಒಳ್ಳೆಯದು. ನನ್ನ ಲೋಕವಿರೋಧಿ ಜೀವನದಲ್ಲಿ ಈ ಸಮಸ್ಯೆ ವಿವಾದಾಸ್ಪದವಾಗಿ ಉಳಿಯಬಾರದಷ್ಟೆ. ನಾನು ಸಣ್ಣವಳಿದ್ದಾಗಿನಿಂದಲೂ ಶಿವಪ್ರಪಂಚದ ಸಾಧಕಿಯಾಗಿದ್ದೆ; ನನ್ನ ತನುವು ಶಿವನಿಗೆ ಅನುವಾಗಿ, ಮನವು ಮಾರುಹೋಗಿ ಅವನ ಮೀಸಲ ಕುಸುಮವಾಗಿದ್ದೆ.

ನನ್ನ ಬದುಕಿನ ಒಳಹೊರಗನ್ನೆಲ್ಲ ಅವನೇ ವ್ಯಾಪಿಸಿದ್ದ. ಅವನ ನೆನಹನ್ನು ಹಾಸಿಕೊಂಡು ಹೊದ್ದುಕೊಂಡು ಬಾಳುತ್ತಲಿದ್ದೆ. ಎನ್ನ ಮನವ ಮಾರುಗೊಂಡು, ತನುವ ಸೂರೆಗೊಂಡು, ಸುಖವನೊಪ್ಪುಗೊಂಡು, ಇರವನು ಇಂಬುಗೊಂಡು ಇರುವ ಚನ್ನಮಲ್ಲಿಕಾರ್ಜುನನ ಕುಲಸತಿಯಾಗಿ ಇರುವಾಗ ಶುಭ್ರ ಆಗಸದಲ್ಲಿ ತೇಲಿಬಂದ ಕಪ್ಪು ಮೋಡದಂತೆ ರಾಜನೋರ್ವ ಆಕಸ್ಮಿಕವಾಗಿ ನನ್ನನ್ನು ಕಂಡು ಮೋಹಿತನಾದ, ಲಗ್ನವಾಗಬಯಸಿದ. ಆದರೆ ‘ನನ್ನ ಸರ್ವಾಂಗವನ್ನು ಮೀಸಲಳಿಯದಂತೆ ಶಿವನಿಗೆ ಅರ್ಪಿಸಬೇಕು’ ಎಂಬ ಉತ್ಕಟ ಅಪೇಕ್ಷೆಯಿದ್ದ ನನ್ನನ್ನು ಲಗ್ನಮಾಡಿಕೊಡಲು ನಿರಾಕರಿಸಿದಾಗ ಹೆತ್ತವರನ್ನು ಕಾರಾಗೃಹಕ್ಕೆ ತಳ್ಳಿದ. ರಾಜದಂಡದ ಸರ್ವಾಧಿಕಾರತ್ವದ ಕೆಳಗೆ ಸಿಕ್ಕು ಬದುಕನ್ನು ಪತಿನಿಸಿಕೊಳ್ಳುವುದಕ್ಕಿಂತ ಉಪಾಯದಿಂದ ಪಾರಾಗಬೇಕೆಂದು ಯೋಚಿಸಿ, ಹಲವು ನಿಯಮಗಳನ್ನು ಮುಂದೆ ಮಾಡಿ ಅರಮನೆಯ ಹೊಸ್ತಿಲನ್ನು ತುಳಿದೆ. ಎಂತಹುದೇ ಪ್ರಸಂಗದಲ್ಲಿ ನನ್ನ ಪವಿತ್ರತೆಯನ್ನು ಬಲಿಗೊಡಬಾರದೆಂದು ನಿಶ್ಚಯಿಸಿ, ಪ್ರಾಣವನ್ನು ಪಣಕ್ಕಿರಿಸಿ ಅಲ್ಲಿ ಇದ್ದೆ. ನಾನು ಹಾಕಿದ್ದ ನಿಯಮಗಳಲ್ಲಿ ಒಂದಾದ ಲಿಂಗಪೂಜೆ, ಗುರುಪೂಜೆ, ಜಂಗಮ ಸೇವೆಗೆ ಅಡ್ಡಿಬಂದು ಒಪ್ಪಂದವನ್ನು ಉಲ್ಲಂಘಿಸಿದಾಗ ನಾನು ಬಿಡುಗಡೆ ಹೊಂದಿದೆ. ಆದುದರಿಂದ ಕಾಯಾ ವಾಚಾ ಮನಸಾ ನಾನು ಚನ್ನಮಲ್ಲಿಕಾರ್ಜುನನಿಗೆ ಒಲಿದ ಕಾರಣ ಮಿಕ್ಕಿನವರಾರೂ ಎನಗೆ ಸಂಬಂಧವಿಲ್ಲ

ವಿಷಯದ ಆಕರ್ಷಣೆಗೆ ಒಳಗಾಗಿಲ್ಲ ಎಂಬುದನ್ನು ನಂಬುವುದು ಹೇಗೆ ಮಹಾದೇವಿ?' ಪ್ರಭುದೇವ ತೀಕ್ಷ್ಣವಾಗಿ ನೋಟವನ್ನೆಸೆದು ಕೇಳಿದನು.

'ಈ ಸಂಶಯ ಕಾಡುವುದು ಬಹು ಸಹಜವೇ; ಆದರೆ ಜಾಗ್ರತ ಸ್ವಪ್ನ ಸುಷುಪ್ತಾವಸ್ಥೆಯಲ್ಲಿ ಸಹ ನನ್ನ ಮನಸ್ಸು ಲೌಕಿಕರ ಅಂಗಸುಖವನ್ನು ಬಯಸಿಲ್ಲ. ಪಾಪಪ್ರಪಂಚದ ಪುತ್ಥಳಿಯಾದ, ಮಾಯಿಕದ ಮಲಭಾಂಡ, ಆತುರದ ಭವನಿಳಯವಾದ ಪುರುಷಸುಖವನ್ನು ಚಿಂತಿಸಿಲ್ಲ. ಕೀಳಾದ ಸಂಸಾರಸುಖಕ್ಕೆ ಎಂದೂ ನನ್ನ ಚಿತ್ತವು ಹರಿದಿಲ್ಲ. ಆಕಸ್ಮಿಕವಾಗಿ ಕೈಗೆ ಬಿದ್ದ ಶಾಳೆಯ ಹಣ್ಣನ್ನು ಕೈಗಳು ಹಿಡಿದಿದ್ದವು ಅಂದಮಾತ್ರಕ್ಕೆ ಹಿಡಿದ ಮನುಷ್ಯ ತಿಂದನು ಅಂತ ಊಹಿಸುವುದು ಹೇಗೆ?* ಈಚಲ ಮರದ ಕೆಳಗೆ ಕುಳಿತು ಹಾಲನ್ನು ಕುಡಿದರೂ ಸಾಮಾನ್ಯರು ಹೆಂಡವೆಂದು ಊಹಿಸುವಂತೆ, ಲೌಕಿಕರ ದೃಷ್ಟಿಯಲ್ಲಿ ಸಂಶಯವು ಸ್ವಾಭಾವಿಕವಾಗಿ ಇರುವುದರಿಂದ ಅವರು ಹೇಗೇ ತಿಳಿದುಕೊಂಡರೂ ವ್ಯಥೆಯಾಗದು. ಆದರೆ ವ್ಯಕ್ತಿಗಳ ಅಂತರಂಗದ ಒಳಹೊಕ್ಕು ನೋಡಬಲ್ಲ ನಿಮ್ಮಂತಹವರು, ಇಲ್ಲದ ತಪ್ಪಿಗಾಗಿ ಹುಡುಕಿದರೆ ಅದು ಅನ್ಯಾಯವಲ್ಲವೆ?'

'ಕರುಣೆಯ ಕಡಲನ್ನು ಉಕ್ಕಿಸುವ ಈ ನಟನೆಯ ಮಾತುಗಳು ಶರಣರ ಮೇಲೆ ಪರಿಣಾಮ ಬೀರವು' ಪ್ರಭುದೇವನು ಗಡುಸಾಗಿ ನುಡಿದ.

'ನಟನೆಯ ಮಾತಿದಲ್ಲ ತಂದೆ, ಹೃದಯದಾಳದಿಂದ ಬಂದುದು.

ಬಾರದ ಭವಂಗಳಲಿ ಬಂದೆನಯ್ಯಾ.
ಕಡೆಯಿಲ್ಲದ ತಾಪಂಗಳಲ್ಲಿ ನೊಂದು
ನಿಮ್ಮ ಕರುಣೆಗೆ ಬಳಿಸಂದೆನಯ್ಯಾ.
ಇದು ಕಾರಣ ಎನ್ನ ದೇವ ಚನ್ನಮಲ್ಲಿಕಾರ್ಜುನಂಗೆ
ತನುವನುವಾಗಿ ಮನ ಮಾರುಹೋಗೆ
ಮತ್ತಿಲ್ಲದ ತವಕದ ಸ್ನೇಹಕ್ಕೆ ತೆರಹಿನ್ನೆಂತು ಹೇಳಾ, ತಂದೆ?†

ನಾನು ಬಯಸಿದ್ದರೆ ಲೌಕಿಕ ಸುಖಗಳು ಪಾದದ ಬಳಿ ಸಾಷ್ಟಾಂಗವೆರಗುತ್ತಿದ್ದವು. ಅವುಗಳನ್ನು ವಿರೋಧಿಸಿದ್ದಕ್ಕೆ ತಾನೇ ಪಡಬಾರದ ಕಷ್ಟಗಳ ಕುಲುಮೆಯಲ್ಲಿ ಹಾಯ್ದು ಬಂದು, ಕಡೆಯಿಲ್ಲದ ತಾಪಗಳಲ್ಲಿ ನೋಯಬೇಕಾಯಿತು. ನಟನೆಯೇ ನನ್ನ ಬದುಕಿನ ಸಾರವಾಗಿದ್ದರೆ ಇಷ್ಟು ಕಷ್ಟಪಟ್ಟು ಬಂದು, ನಿಮ್ಮ ಕರುಣೆಗಾಗಿ ಕೈಚಾಚುತ್ತಿದ್ದೆನೆ? ತಂದೇ, ತನುವು ಅನು

[illegible], ಸುಸ್ಪಷ್ಟ [illegible] ಸ್ನೇಹ ದಿಂದ ಚನ್ನನಿಗಾಗಿ ಹಂಬಲಿಸುವ ನನ್ನಲ್ಲಿ ಇನ್ನೂ ವಿಶ್ವಾಸ ಬರದೆ....?' ಮಹಾದೇವಿಯ ಮಾತುಗಳು ಶರಣರ ಹೃದಯಗಳನ್ನು ಮಿಡಿದವು ; ಆದರೆ ಪ್ರಭುದೇವನ ಮುಖದ ಬಿಗಿತ ಸಡಲಲಿಲ್ಲ.

'ಸರಿ! ಮಾತುಗಳ ಮೂಲಕ ನೀನು ಇನ್ನೊಬ್ಬರನ್ನು ಮೋಸಗೊಳಿಸ ಬಹುದು. ಆದರೆ ನಿನ್ನ ಕೃತಿಯು ಅಂತರಂಗದ ಭಾವನೆಗಳಿಗೆ ದರ್ಪಣ ಹಿಡಿ ಯುತ್ತಿದೆ. ತನುವು ಸೀರೆಯನ್ನು ಕಳಚಿ ನಿರ್ವಾಣವಾಗಿದ್ದರೂ ಸಹ ಮನವು ಭ್ರಾಂತಿಯನ್ನು ಕೊಡವಿ ಬತ್ತಲೆಯಾಗಿಲ್ಲ. ಅಂತೆಯೇ ನೀಳವಾದ ಕೇಶವನ್ನೇ ಪದರುಪದರಾಗಿ ಮಾಡಿ ಗೌಣೇಂದ್ರಿಯಗಳನ್ನು ಮುಚ್ಚಿಕೊಳ್ಳಲು ಹವಣಿಸು ತ್ತಿರುವೆ. ಲಜ್ಜೆ, ಅಪಮಾನದ ಭಾವವು ಹರಿದಿಲ್ಲ ಎಂಬುದು ಸುಸ್ಪಷ್ಟ....! ವೇಷಧಾರಿಣಿಯೇ....ನಿನ್ನ ಈ ಕೃತ್ರಿಮತೆಯನ್ನು ಗುಹೇಶ್ವರನು ಒಪ್ಪನು.'* ವ್ಯಂಗ್ಯವಾದ ಧ್ವನಿಯಲ್ಲಿ ಪ್ರಭುದೇವ ನುಡಿದ.

ಈ ನುಡಿಯ ತೀಕ್ಷ್ಣತೆ ಶರಣರ ಅಂತರಂಗವನ್ನು ಕೆರಳಿಸಿತು. ಆದರೂ ಮಹಾದೇವಿ ವಿಚಲಿತಳಾಗದೆ ನಿಂತುದನ್ನು ಕಂಡು ಎಲ್ಲರೂ ವಿಸ್ಮಿತರಾದರು. ಆಕೆ ನುಡಿದಳು :

'ಒಬ್ಬ ವ್ಯಕ್ತಿಯ ಅಂತಃಕರಣ ಪವಿತ್ರವಾಗಿದೆಯೇ, ಪರಿಪಕ್ವವಾಗಿದೆಯೇ ಎಂಬುದನ್ನು ತಿಳಿಯುವುದು ಬಹು ಕಷ್ಟಸಾಧ್ಯ. ತೋರಿಕೆಯನ್ನು ನೋಡಿ ಇರುವಿಕೆಯನ್ನು ಅಳೆಯುವುದು ಲೋಕದ ಗುಣ. ಆದರೆ ತೋರಿಕೆ ಇರುವಿಕೆಗೆ ಪೂರ್ಣ ಸಾಕ್ಷಿ ನೀಡಲಾರದು. ನೀರಿನಲ್ಲಿರಿಸಿದ ಕೋಲು ಬಾಗಿದಂತೆ ಕಂಡು ಬರುವುದು ತೋರಿಕೆ ; ಆದ್ದರಿಂದ ಹಾಗೆ ಕಂಡರೂ 'ನಿಜಕ್ಕೂ ಅದು ಬಾಗಿಲ್ಲ' ಎಂದು ಇರುವಿಕೆಯನ್ನು ಒಳಹೊಕ್ಕು ಅರಿಯುವುದು ವಿವೇಕತನ. ನಾನು ಲೋಕಸಾಕ್ಷಿಯಾಗಿ ನಡೆಯದೆ, ದೇವಸಾಕ್ಷಿಯಾಗಿ ನಡೆಯುತ್ತಿರುವೆ.

> ನಾನು ನಿನಗೊಲಿದೆ ನೀನು ಎನಗೊಲಿದೆ
> ನೀನೆನ್ನನಗಲದಿಪ್ಪೆ ; ನಾ ನಿನ್ನನಗಲದಿಪ್ಪೆನಯ್ಯಾ.
> ನಿನಗೆ ಎನಗೆ ಬೇರೊಂದು ಠಾವುಂಟೆ ?
> ನೀನು ಕರುಣೆ ಎಂಬುದ ನಾನು ಬಲ್ಲೆನು
> ನೀನಿರಿಸಿದ ಗತಿಯೊಳಗಿಪ್ಪವಳಾನಯ್ಯಾ
> ನೀನೇ ಬಲ್ಲೆ ಚನ್ನಮಲ್ಲಿಕಾರ್ಜುನಾ !†

---

* ಅ.ನ.ಚಂ. ೧೨೨೬ † ಮ.ವ. ೨೪೯

ನಾನು ಎಂತಿರುವೆ ಎಂಬುದನ್ನು ಚನ್ನಮಲ್ಲಿಕಾರ್ಜುನನೇ ಬಲ್ಲನು. ಉಟ್ಟೆ ಬಿಟ್ಟೆ ಎಂಬ ಭಾವ ನನಗಿಲ್ಲ, ಉಡಬೇಕು ತೊಡಬೇಕು ಎಂಬ ಆಸೆಯೂ ನನಗಿಲ್ಲ. ಅವನು ಇರಿಸಿದ ಗತಿಯಲ್ಲಿ ಇರುತ್ತಲಿದ್ದೇನೆ....' ಎಂದು ದೃಢವಾಗಿ ನುಡಿದಳು.

'ಇದು ಅತ್ಯುತ್ತಮವಾದ ಹಾರಿಕೆಯ ಉತ್ತರ. ದೇವನೊಲಿದನೋ, ನೀನೇ ಒಲಿದೆಯೋ ಅದು ಒತ್ತಟ್ಟಿಗಿರಲಿ. ನಿನ್ನ ಭಾವನೆಗಳು ಶುದ್ಧವಾಗಿದ್ದರೆ ಸೀರೆಯನ್ನು ಬಿಟ್ಟವಳು ಕೂದಲಿನಿಂದ ಮುಚ್ಚುವ ಪ್ರಯತ್ನವನ್ನೇಕೆ ಬಿಟ್ಟಿಲ್ಲ? ನಿನ್ನಂತರಂಗದ ನಾಚಿಕೆ ಬಹಿರಂಗದಲ್ಲಿ ವ್ಯಕ್ತವಾಗಿರುವುದು ಸುಸ್ಪಷ್ಟವಾಗಿದೆ....'

'ಮಹಾನುಭಾವ, ನಿನ್ನ ಪ್ರಶ್ನೆ ಬಹು ತೀಕ್ಷ್ಣವಾಗಿದೆ; ಆದರೆ ಒಂದು ಸತ್ಯವನ್ನು ಸ್ಪಷ್ಟವಾಗಿ ಸಾರುತ್ತಿದೆ. ನಿಮ್ಮಲ್ಲಿ ನಾನು ಒಂದು ಮಾತು ಕೇಳಬಯಸುತ್ತೇನೆ. ಈ ಜಗತ್ತಿನಲ್ಲಿ ನಾವು ಪರಿಣಾಮದಿಂದ ಕಾರಣಗಳನ್ನು ಅರಿಯುವುದು ಬಹು ಸಾಮಾನ್ಯಜ್ಞಾನವಷ್ಟೆ. ಒಂದು ಕಾಯಿ ಹಣ್ಣಾಗಿದೆಯೋ ಇಲ್ಲವೋ ಎಂಬುದನ್ನು ನಾವು ತಿಂದಮೇಲೆ ನಿರ್ಧರಿಸುವುದಿಲ್ಲ, ಕೆಲವು ಲಕ್ಷಣಗಳಿಂದ ನಿರ್ಧರಿಸುತ್ತೇವೆ. ಫಲದ ಸಿಪ್ಪೆ ಹಸಿರಳಿದು ಕೆಂಬಣ್ಣ ಹೊಂದಿದಾಗ, ಹಳದಿಗೆ ತಿರುಗಿದಾಗ ಅದು ಹಣ್ಣಾಯಿತೆಂದು ನಿಶ್ಚಯಿಸುತ್ತೇವೆ. ಹಾಗೆಯೇ, ನಿರ್ಲಿಪ್ತ ದಿಗಂಬರತ್ವವೆಂಬ ಬಣ್ಣ ನನ್ನ ನಿಲುವಿನಲ್ಲಿ ಮೂಡಿದೆ ಎಂದಾಗ ಅಂತರಂಗವು ವಿರಕ್ತಿಯಿಂದ ಪರಿಪಕ್ವವಾಗಿರಲೇಬೇಕೆಂದು ಊಹಿಸುವುದು ಸುಲಭವಷ್ಟೆ. ಎಲ್ಲಿಯವರೆಗೆ ಫಲವು ಪಕ್ವವಾಗಿರದೋ ಅಲ್ಲಿಯತನಕ ಮೇಗಣ ಸಿಪ್ಪೆಯು ಬಿಚ್ಚಲು ಬರದು. ಮಿಡಿಯ ಸ್ಥಿತಿಯಲ್ಲಿ ತಿರುಳಿಗೆ ಬಿಗಿಯಾಗಿ ಅಂಟಿಕೊಂಡಿರುವ ಸಿಪ್ಪೆಯು ಅದರಿಂದ ಬೇರ್ಪಡಲಾರಂಭಿಸಿದರೆ ಹಣ್ಣು ಮಾಗುತ್ತಿದೆಯೆಂದು ಸಾಮಾನ್ಯವಾಗಿ ನಿಶ್ಚಯಿಸಬಹುದು. ನಾನು ಶರೀರದ ಆವರಣವಾದ, ಮಾನ ಮುಚ್ಚುವ ಬಟ್ಟೆಯನ್ನು ಕಿತ್ತೊಗೆದಿರುವೆ ಎಂಬುದು ಕಣ್ಣಿಗೆ ಕಾಣುವ ಸತ್ಯ. ಹೃದಯವು ಒಳಗೆ ಹಣ್ಣಾಗಿರದಿದ್ದರೆ ಸೀರೆಯೆಂಬ ಸಿಪ್ಪೆ ಕಳಚಲು ಸಾಧ್ಯವೇ? ಸ್ತ್ರೀಯು ಎಂತಹ ದರಿದ್ರಳು—ನಿರ್ಗತಿಕಳು ಇದ್ದರೂ ಕಾಡಿಬೇಡಿಯಾದರೂ ಬಟ್ಟೆಯನ್ನು ತೊಡುವಳು. ನಗ್ನರಾಗುವುದು ಕೇವಲ ಇಬ್ಬರು ಮಾತ್ರ; ಅತಿ ಹುಚ್ಚರು ಮತ್ತು ಪರಮ ವಿರಕ್ತರು. ನಾನು ಹುಚ್ಚಿಯಂತೂ ಅಲ್ಲ, ಅಂದಾಗ ದಿಗಂಬರೆಯಾದ ನನ್ನನ್ನು ವಿರಕ್ತೆಯೆಂದು

ಶಂಕೆಯಿಂದ ನುಡಿದಳು. ಪ್ರಭುದೇವ ಕ್ಷಣಕಾಲ ವಿಚಲಿತನಾದ; ಸಾವರಿಸಿ ಕೊಂಡು ನುಡಿದ :

'ನೀನು ಸೀರೆಯನ್ನು ತೆಗೆದೊಗೆದುದು ವೈರಾಗ್ಯವೇ ಸರಿ....! ಅದರ ಬಗ್ಗೆ ನನಗೆ ಆತಂಕ ಉಳಿದಿಲ್ಲ. ಆದರೆ ಸೀರೆಯನ್ನು ಬಿಸುಟೆದ ವೈರಾಗ್ಯನಿಧಿ ಪುನಃ ಕೂದಲ ತೆರೆಯಿಂದ ಗೌಣೇಂದ್ರಿಯಗಳನ್ನು ಮುಚ್ಚುವ ಪ್ರಯತ್ನ ಮಾಡು ತ್ತಿರುವೆಯೇಕೆ ?'

ಪ್ರಭುದೇವನು ಚುಚ್ಚಿ ನುಡಿದ. ಮಹಾದೇವಿ ಗಂಭೀರವಾಗಿ ಹೇಳಿದಳು:

'ಅಹುದು....ಕೂದಲನ್ನು ಮರೆಮಾಡಿದುದಕ್ಕೆ ಪ್ರಬಲ ಕಾರಣವಿದೆ. ನನಗಾಗಿ ಅಲ್ಲ, ನಿಮ್ಮಂತಹವರಿಗಾಗಿ !....'

'ಆಂ....' ಎಂದು ಬೆರಗಾಗಿ ಉಚ್ಚರಿಸಿದ ಪ್ರಭುದೇವ ಬೆಚ್ಚಿದ.

'ಅಹುದು....ಎಲ್ಲರೂ ನಿಮ್ಮಂತಹ ಪರಿಪಕ್ವಾವಸ್ಥೆಯಲ್ಲೇ ಇರುವುದಿಲ್ಲ; ಅರ್ಧಂಬರ್ಧ ಸಿದ್ಧಪುರುಷರಾದ ಸಾಧಕರೂ ಈ ಅನುಭವಮಂಟಪದಲ್ಲಿರ ಬಹುದು. ಅಂಥವರು ಗೌಣೇಂದ್ರಿಯಗಳನ್ನು, ಮನೋವಿಕಾರದ ಹೇತುವಾದ ಕಾಮನ ಮುದ್ರೆಯನ್ನು ಕಂಡು ಕ್ಷೋಭೆಗೊಳ್ಳಬಾರದು ಎಂಬ ಮುನ್ನೆಚ್ಚರಿಕೆ ಯಿಂದ ಇತರರಿಗಾಗಿ ಮುಚ್ಚಿರುವೆ. ಇದರ ಬಗ್ಗೆ ತಾವು ತಪ್ಪು ತಿಳಿಯುವ ಪ್ರಮೇಯವೇ ಇಲ್ಲ.'

ಮಹಾದೇವಿಯ ದಿಟ್ಟತನಕ್ಕೆ ಶರಣಸಮೂಹವು ಬೆರಗಾಯಿತು. ಪ್ರಭು ದೇವ ಅಂತರಂಗದಲ್ಲಿ ತಲೆದೂಗಿದರೂ, ಬಹಿರಂಗದಲ್ಲಿ ಗಂಭೀರವಾಗಿಯೇ ಇದ್ದ.

'ಕೆಲವು ಸಲ ಸಿಪ್ಪೆಯು ಕೆಂಬಣ್ಣವನ್ನು ಹೊಂದಿರುವದು. ಮಾಗಿದ ಹಣ್ಣೆಂದು ಮೋಸಹೋಗಿ ಬಿಚ್ಚಿ ನೋಡಿದಾಗ ಒಳಗಿನ ರಸವೆಲ್ಲ ಕೊಳೆತು, ಹುಳುಗಳ ಆಗರವಾಗಿರುವುದು. ವಿರಕ್ತಿಯ ವೇಷ ನೋಡಿ ಅಂತರಂಗದ ಒಳಹೊಕ್ಕರೆ ಮನಸ್ಸು ಅರಿಷಡ್ವರ್ಗಗಳ ಕೂಪವಾಗಿರುವುದು ಸಾಧ್ಯವಿದೆ.... ಈ ಅರಿಷಡ್ವರ್ಗಗಳು ಶೀಲವಂತಿಕೆಯನ್ನು ಪತನಿಸಿರಲೂ ಸಾಧ್ಯ....'*

ಕಟುವಾದ ಪ್ರಸ್ತುತ ಪ್ರಶ್ನೆಯಿಂದ ಅನುಭವಮಂಟಪವು ತಲ್ಲಣಿಸಿ ಹೋಯಿತು. ಸೂಜಿ ಬಿದ್ದರೂ ಸಪ್ಪಳ ಕೇಳುವಂತಹ ನೀರವತೆ ನೆಲೆ ಗೊಂಡಿತು. 'ನೀನು ಶೀಲವಂತಳೇ, ಪವಿತ್ರಳೇ ?' ಎಂದು ನೇರವಾಗಿ ಹೆಣ್ಣನ್ನು ಕೇಳುವುದು ಎಂತಹ ದುಸ್ಸಾಧ್ಯದ ಪ್ರಶ್ನೆ. ಆದರೆ ಮಹಾದೇವಿ

'ಪ್ರಭುವೇ, ಲೋಕದ ವ್ಯವಹಾರದಲ್ಲಿ ಹಣ್ಣಿನ ಸಿಪ್ಪೆಯ ಮೇಲೆ ಬಣ್ಣ ವಿದ್ದಾಗ ಕೂಡ ಒಳಗಡೆಯ ರಸ ಕೊಳಕಾಗಿರಲು ಸಾಧ್ಯವಿದೆ. ಏಕೆಂದರೆ ಅದು ಮಿಡಿಯಿದ್ದಾಗ ಸಿಪ್ಪೆಯನ್ನು ಕೊರೆದು ಕೀಡೆಗಳು ಒಳಸೇರಿ, ಅಲ್ಲಿ ಮಲಿನ ಮಾಡುತ್ತವೆ. ಹಾಗೆಯೇ ಈ ವ್ಯಕ್ತಿತ್ವದ ಹಣ್ಣಿನಲ್ಲಿ ಅರಿಷಡ್ವರ್ಗದ ಕ್ರಿಮಿಗಳು ಸೇರಿದರೆ ನಿಶ್ಚಿತವಾಗಿಯೂ ಪವಿತ್ರತೆ ಕೆಡುವುದು. ಆದರೆ,

ಕರಣ ಮೀಸಲಾಗಿ ನಿನಗರ್ಪಿತವಾಯಿತ್ತು
ಆನೊಂದರಿಯೆನಯ್ಯಾ !
ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ
ಪ್ರಾಣ ನಿನಗರ್ಪಿತವಾಯಿತ್ತು.
ನೀನಲ್ಲದೆ ಪೆರತೊಂದು ನೆನೆದಡೆ
ಆಣೆ, ನಿಮ್ಮಾಣೆ ಚನ್ನಮಲ್ಲಿಕಾರ್ಜುನಾ !*

ಎಂಬ ಉತ್ಕಟ ಶರಣಾಗತಿಯ ಭದ್ರಕವಚವನ್ನು ಕೊರೆದು ಯಾವ ಕಾಮದ ಕೀಡೆಯೂ ಒಳಸೇರಲು ಸಾಧ್ಯವಿಲ್ಲವೆಂದಾಗ ಅಂತಃಕರಣಗಳು ಮಲಿನವಾಗುವ ಅವಕಾಶವೇ ಇಲ್ಲ....'

'ಇನ್ನೂ ಒಂದು ಬಹು ದೊಡ್ಡ ಸಮಸ್ಯೆ ಎಲ್ಲ ಶರಣರನ್ನು ಕಾಡುತ್ತಿದೆ. ನೋಡು ತಾಯಿ, ಸಿಪ್ಪೆಯು ಹಣ್ಣಿಗೆ ರಕ್ಷಣೆ ನೀಡುತ್ತದೆ. ಸಿಪ್ಪೆಯನ್ನು ಕಳಚಿ ಹಣ್ಣನ್ನು ಹೊರಗಿಟ್ಟರೆ ಹುಳುಗಳು ಬೇಗನೆ ಮುತ್ತುವವು. ಹಾಗೆಯೇ ಸೀರೆ ಯೆಂಬ ಸಿಪ್ಪೆ ಮೈಮೇಲಿದ್ದಾಗ ನೀನಿನ್ನೂ ಪವಿತ್ರವಾಗಿರಬಹುದು ಎಂಬ ನಂಬಿಗೆಗಾದರೂ ಆಸ್ಪದವಿರುತ್ತಿತ್ತು. ಆದರೆ 'ಸೀರೆಯೆಂಬ ಸಿಪ್ಪೆ ಕಳಚಿ ದಿಗಂಬರೆಯಾಗಿ ಹೊರಟ ನಿನ್ನನ್ನು ಕಾಮುಕರೆಂಬ ಕ್ರಿಮಿಗಳು ಮಲಿನ ಗೊಳಿಸಿಲ್ಲ' ಎಂದು ಹೇಗೆ ನಂಬುವುದು ?' ಪ್ರಭುದೇವರು ಈ ಪ್ರಶ್ನೆಯನ್ನು ತೂಗಿ ತೂಗಿ ಕೇಳಿದಾಗ,

'ಶಿವ ಶಿವಾ....ಇದೆಂತಹ ಕರ್ಣಕಠೋರ ಪ್ರಶ್ನೆ....!' ಎಂದು ಮಾಚಿ ದೇವರು ಉದ್ವೇಗದಿಂದ ಕೂಗಿದರು.

'ಸಾಕು....ಸಾಕು. ಪರೀಕ್ಷೆಗೆ ಒಂದು ಮಿತಿಯು ಇರಬೇಕು....' ಅಂಬಿಗರ ಚೌಡಯ್ಯನವರು ಗಟ್ಟಿಧ್ವನಿಯಲ್ಲಿ ಹೇಳಿದರು. ಮಹಾದೇವಿ ಅವರ ಕಾತುರ ಭರಿತ ಮುಖಗಳತ್ತ ಕಣ್ಣುಹಾಯಿಸಿ ಹೇಳಿದಳು :

'ಇರಲಿ....ನೀವೇಕೆ ವಿವಂಚಿತರಾಗುವಿರಿ, ತಂದೆಗಳಿರಾ! ಹಲವಾರು ತಿಂಗಳುಕಾಲ ವಿದ್ಯಾಭ್ಯಾಸ ಮಾಡಿದ ಅಣುಗ ಗುರುಗಳ ಎದುರಿನಲ್ಲಿ ಪರೀಕ್ಷೆಗೆ

ನಿಂತು, ಉತ್ತರಿಸಿ ಮೆಚ್ಚುಗೆ ಗಳಿಸಿದರೆ ಅದು ಲೇಸಲ್ಲವೆ? ಅವನು ಮುಂದೆ ಹೋಗಲು ಅದು ಸದವಕಾಶವಷ್ಟೆ! ಆದ್ದರಿಂದ ನಾನು ಉತ್ತರಿಸುವೆನು....'

'ಭಲೇ ಮಗಳೇ....!' ಮೋಳಿಗೆ ಮಾರಯ್ಯನವರು ಉದ್ಗರಿಸಿದರು.

'ಸಿಪ್ಪೆಯನ್ನು ಕಳಚಿ ಹೊರಗಡೆ ಇಟ್ಟರೆ ಕ್ರಿಮಿಗಳು ಮುತ್ತುವುದು ಬಹು ಸಹಜ. ಆದರೆ ಆ ಸಿಪ್ಪೆ ಕಳಚಿದ ಹಣ್ಣನ್ನು ತಿಂದುಬಿಟ್ಟರೆ ಅದು ಕೊಳೆಯುವುದೇ?

ಲೋಕದಾ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ, ಚನ್ನಮಲ್ಲಿಕಾರ್ಜುನಾ.*

ಸೀರೆಯೆಂಬಂತಹ ಸಿಪ್ಪೆಯನ್ನು ಕಳಚಿ ನನ್ನ ಕಾಯ, ಕರಣಂಗಳನ್ನು ಲೋಕದ ವ್ಯವಹಾರದಲ್ಲಿಟ್ಟರೆ ಅವು ಮಲಿನಗೊಳ್ಳಬಹುದು. ಆದರೆ ನಾನು ಕಾಯವನ್ನು, ಕರಣಗಳನ್ನು ಮತ್ತು ಜಗವನ್ನಾಡಿಸುವ ರವಿಯಂತೆ ಈ ಇಂದ್ರಿಯಗಳನ್ನಾಡಿಸುವ ಮನವನ್ನು, ಶಿವನಿಗೆ ಅರ್ಪಿತವ ಮಾಡಿರುವೆನು. ಪ್ರಸಾದವಾದ ಇವುಗಳು ಇನ್ನು ಮಲಿನಗೊಂಡಾವೆಂಬ ಭಯ ಎಳ್ಳಷ್ಟು ನನಗಿಲ್ಲ....'

'ಭಲೇ....ಭಲೇ...., ಉಘೇ....ಉಘೇ....!' ಶರಣರು ಜಯಕಾರವನ್ನು ಮಾಡಿದರು.

'ಅವ್ವಾ, ನೀನೇನೋ ಅರ್ಪಿತವ ಮಾಡಿರಬಹುದು. ಅಂದಮಾತ್ರಕ್ಕೆ ಅದು ಪ್ರಸಾದವಾಗಿದೆಯೆಂದು ಹೇಳಲು ಸಾಧ್ಯವಿಲ್ಲ. ಅರ್ಪಿತ ಮಾಡಿದ್ದು ನೈವೇದ್ಯ; ದೇವನು ಸ್ವೀಕರಿಸಿದಮೇಲೆ ಅದು ಪ್ರಸಾದ. ಸರ್ವಾಂಗದಲ್ಲಿ ಶುದ್ಧತೆ ಅಳವಡದೆ ಶಿವನು ಸ್ವೀಕರಿಸುವವನಲ್ಲ! ಶರೀರವನ್ನು ಸಮಾಜಕ್ಕೆ ಹೆದರಿಯೋ, ನ್ಯಾಯಕ್ಕೆ ಹೆದರಿಯೋ ಶುದ್ಧವಾಗಿ ಇರಿಸಿಕೊಂಡಿರಬಹುದು. ಮನಸ್ಸು ಕೂಡ ಅಷ್ಟೇ ಪವಿತ್ರವಾಗಿದೆ ಎಂದು ನಂಬುವುದು ಹೇಗೆ? ಎಂತೆಂತಹವರೋ ಕಾಮನ ಕೈಲಿ ಸಿಕ್ಕು ಮೂರಾಬಟ್ಟೆಯಾಗುತ್ತಾರೆ! ಇಂತಹ ಕಾಮನನ್ನು ಗೆಲ್ಲದೆ ಕಾಮಾರಿಯನ್ನು ಒಲಿಸುವುದು ಅಸಾಧ್ಯ....'† ಪ್ರಭುದೇವ ನುಡಿದ.

'ಶರೀರದ ಕೋಟಲೆಗಳನ್ನು ಆಚಾರದ ಬಲದಿಂದ ಗೆದ್ದೆ, ಮನದ ಸಂಕಲ್ಪ-

ವಿಕಲ್ಪಗಳನ್ನು ಅರಿವಿನ ಮೂಲಕ ಗೆದ್ದೆ. ಜೀವದ ಪರಿಭ್ರಮಣವನ್ನು ದಿವ್ಯವಾದ ಅನುಭವಗಳಿಂದ ಗೆದ್ದೆ, ಇಂದ್ರಿಯಗಳ ಉಪಟಳವನ್ನು ಶಿವನೊಲಿಮೆಯ ಬೆಳಗನ್ನುಟ್ಟು ಗೆಲಿದೆ....'

ಅತ್ಯಂತ ವಿನಯಶಾಲಿನಿಯಾಗಿ, ಸ್ವಾಭಿಮಾನದಿಂದ ಹೇಳಬಯಸುವೆ— ಜವ್ವನದ ತೇಜಸ್ಸಿನಲ್ಲಿ ನಾನಿದ್ದರೂ ನನ್ನ ಹಣೆಯ ಮೇಲೆ ಮೂಡಿನಿಂತ ವಿಭೂತಿಯ ರೇಖೆಗಳನ್ನು ನೋಡು ಪ್ರಭುವೇ, ಇದು ಅಂತರಂಗದ ಕರಣ ಗುಣಗಳನ್ನೆಲ್ಲ ಸುಟ್ಟ ಸಂಕೇತವಾಗಿ ಹಚ್ಚಿದ ಭಸ್ಮ. ಹರನಂತಹ ಮಹಾನು ಭಾವನು ಕಾಮನನ್ನು ಕೊಂದು 'ಎಲ್ಲರ ಮನಸಿಜನಾಗಿರು' ಎಂದು ಅವನನ್ನು ಹರಸಿದನಲ್ಲವೇ ? ಇಂತಹ ಕಾಮನಿಗೆ ನನ್ನ ಮನದಲ್ಲಿ ಹುಟ್ಟಲಿಕ್ಕೆ ಅವಕಾಶ ವನ್ನೇ ನೀಡದೆ, ಅವನ ಹಣೆಯಬರಹವನ್ನು, ಶಿವನ ವಾಣಿಯನ್ನು ಸುಳ್ಳಾಗಿ ಸಿರುವೆ ನಾನು. ಹೀಗೆ ಕಾಮನೇ ನನ್ನ ಮನದಲ್ಲಿ ಹುಟ್ಟಲ್ಲವಾದಾಗ ಅವನನ್ನು ಗೆಲ್ಲುವ ಪ್ರಸಂಗ ಎಲ್ಲಿಯದು ?'* ಈ ಉತ್ತರದಿಂದ ಪ್ರಭುದೇವ ಆಶ್ಚರ್ಯ ಪೂರಿತನಾದ.

'ಈಕೆ ಸಾಮಾನ್ಯಳಲ್ಲ. ಇವಳದೆಂತಹ ನಿಲುವು! ಜಗತ್ತಿನಲ್ಲಿ ಕಾಮನನ್ನು ಗೆದ್ದೆವು ಎಂಬುವವರುಂಟು, ಆದರೆ ಕಾಮನೇ ಹುಟ್ಟಲ್ಲ ಎಂಬುವವಳು ಈಕೆ ಯಷ್ಟೇ! ದಿಗಂಬರಳಾಗಿ ಇಲ್ಲಿ ಬಂದು ನಿಂತಿದ್ದರೂ ಒಬ್ಬರ ಮನದಲ್ಲೂ ದುರ್ಭಾವನೆಯ ಬಿರುಗಾಳಿ ಬೀಸಿಲ್ಲ. ಎಲ್ಲರ ಕಣ್ಣುಗಳಲ್ಲಿ ಆಕೆಯ ಬಗ್ಗೆ ಗೌರವ, ಭಕ್ತಿ, ಕುತೂಹಲ, ವಾತ್ಸಲ್ಯಗಳುಂಟೇ ವಿನಾ ಹೀನಭಾವನೆಗಳಿಲ್ಲ. ನಿಜಕ್ಕೂ ಬಹು ದೊಡ್ಡ ನಿಲುವು....' ಮನಸ್ಸಿನಲ್ಲಿ ಮೆಚ್ಚುಗೆಯ ಹೊನಲು ಹರಿದರೂ ಆದನ್ನು ಪ್ರಭುದೇವ ನಿಗ್ರಹಿಸಿಕೊಂಡ. ಮಹಾದೇವಿ ನುಡಿದಳು :

'ಈಗ ನನ್ನ ಇರುವು ಹೇಗಿದೆಯೆಂದರೆ :

> ಕೆಂಡದ ಶವದಂತೆ, ಸೂತ್ರ ತಪ್ಪಿದ ಗೊಂಬೆಯಂತೆ,
> ಜಲವರತ ತಟಾಕದಂತೆ, ಬೆಂದ ನುಲಿಯಂತೆ—
> ಮತ್ತೆ ಹಿಂದಣಂಗವುಂಟೆ, ಅಣ್ಣಾ,
> ಚನ್ನಮಲ್ಲಿಕಾರ್ಜುನನ ಸಂಗವೇ ಆಶ್ರಯವಾದವಳಿಗೆ.†

ಬೆಂದು ಹೋದ ಕಾಯ ನೋಡಲು ಆಕೃತಿಯಾಗಿ ಕಂಡರೂ, ಮತ್ತೆ ಅದು ಕಾಯದ ಕರ್ತವ್ಯ ಮಾಡಲಾರದು ; ಸೂತ್ರತಪ್ಪಿದ ಗೊಂಬೆ ನಾಟಕದಲ್ಲಿ ಪಾತ್ರವಾಡಲಾರದು. ಬತ್ತಿಹೋದ ತಟಾಕವನ್ನು ಕೆರೆಯೆಂದು ರೂಢಿಯಲ್ಲಿ

ಕರೆದರೂ ಅದು ಕರೆಯ ಕರ್ತವ್ಯ ನಿರ್ವಹಿಸುವುದಿಲ್ಲ. ಸುಟ್ಟ ನೂಲ [illegible] ದಿಂದ ಹಗ್ಗದಂತೆ ಕಂಡರೂ ಅದನ್ನು ತೆಗೆದುಕೊಂಡು ವಸ್ತುವನ್ನು ಕಟ್ಟಲು ಬರುವುದಿಲ್ಲ. ಹಾಗೆಯೇ ನಾನಾದರೂ ಅಂಗಗುಣ ಸುಟ್ಟ ಶವದಂತೆ, ಲೋಕ ವ್ಯಾಮೋಹದ ಸೂತ್ರ ತಪ್ಪಿದ ಗೊಂಬೆಯಂತೆ, ವಿಷಯವಾಸನೆಯ ರಸವು ಬತ್ತಿದ ಕೆರೆಯಂತೆ, ಹೆಣ್ತನವನಳಿದುಕೊಂಡು ಸುಟ್ಟ ಹಗ್ಗದಂತೆ ರೂಪ ಮಾತ್ರವಾಗಿರುವೆ. ಲೋಕದಲ್ಲಿ ಇದ್ದರೂ ಲೌಕಿಕಳಾಗಿಲ್ಲ; ಚನ್ನನ ಆಶ್ರಯ, ಸಂಗಗಳಲ್ಲಿರುವೆ....'

'ಇದನ್ನು ಒಪ್ಪುವುದು ಬಹಳ ಕಷ್ಟವವ್ವಾ. ಘನವಾದ, ರೂಪವುಳ್ಳ ವಸ್ತುವಿಗೆ ನಾಶವಿದೆ, ನಿರೂಪವಾದುದಕ್ಕೆ ನಾಶವಿಲ್ಲ. ರೂಪುಳ್ಳದ್ದು ಖಂಡಿತ; ನಿರೂಪವು ಅಖಂಡ. ಎರಡು ವಿಜಾತಿಯ ವಸ್ತುಗಳು ಬೆರೆಯಲು ಸಾಧ್ಯವಾಗದಂತೆ, ರೂಪು-ನಿರೂಪಗಳು ಸಾವಯವ-ನಿರವಯವಗಳು ಒಂದಾಗಲಾರವು. ನಿನಗೆ ದೇಹ, ಇಂದ್ರಿಯಗಳೆಂಬ ಜಾತಿಸೂತಕವಿರುವಾಗ ಗುಹೇಶ್ವರನನ್ನು ಬೆರೆಯಲು ಸಾಧ್ಯವೇ?'* ಪ್ರಭುದೇವರು ಕೇಳಿದರು.

'ಶರೀರವು ಇರುವ ತನಕ ದೇವನನ್ನು ಬೆರೆಯುವುದು ಸಾಧ್ಯವಿಲ್ಲ, ಎಂಬುದು ನಿಮ್ಮ ತಿಳುವಳಿಕೆಯೆ? ಅಣ್ಣನವರು ಹೇಳುವಂತೆ, 'ಇದು ಸಂಗಮನಾಥನನ್ನು ಒಲಿಸಲಿಕ್ಕೆ ಬಂದ ಸಾಧನ. ಇದನ್ನು ಮಾರಕವಾಗಿ—ಪೂರಕವಾಗಿ, ಹೇಯವಾಗಿ—ಪ್ರೇಯವಾಗಿ, ತ್ಯಾಜ್ಯವಾಗಿ—ಪೂಜ್ಯವಾಗಿ ಮಾಡಿಕೊಳ್ಳುವುದು ನಮ್ಮ ಕೈಯಲ್ಲಿದೆ. ಬದುಕಿದ್ದಂತೆಯೇ ದೇವನೊಲಿಮೆ ಗಳಿಸಿ ಅವನೊಡನೆ ಒಂದಾಗುವುದು ನಮ್ಮ ತತ್ತ್ವವೇ ಹೊರತು ಸತ್ತ ಬಳಿಕ ಸಾಧಿಸುವುದಲ್ಲ.

ಹಾವಿನಲ್ಲಿ ವಿಷದ ಹಲ್ಲು ಇರುವತನಕ ಅದು ಅಪಾಯಕಾರಿ. ಆದರೆ ಆ ವಿಷದ ಹಲ್ಲನ್ನು ಕಳೆದಾಗ ಹಾವಾಡಿಗನಿಗೆ ಬದುಕಲು ಅದೇ ಸಹಾಯಕಾರಿ. ಶರೀರವೆಂಬ ಈ ಸರ್ಪನಲ್ಲಿರುವ ವಿಷಯವಾಸನೆಯ ಹಲ್ಲನ್ನು ಕಿತ್ತರೆ ಇದುವೇ ದೇವನನ್ನೊಲಿಸುವ ಸಾಧನವಾಗುವುದು. ಕಾಯ, ಜೀವ, ಪ್ರಾಣ, ಮನ ಎಲ್ಲವೂ ಶಿವಾರ್ಪಿತವಾಗಿ, ದೈವೀಕರುಣೆಯಿಂದ ಪ್ರಸಾದಮಯವಾದಾಗ ಅಂತಹವರನ್ನು ಕಾಯಗೊಂಡವರು ಎನ್ನುವುದು ವ್ಯವಹಾರಿಕವಾಗಿ ಸಮಂಜಸವಾದೀತೇ ವಿನಾ, ಆಧ್ಯಾತ್ಮಿಕ-ತಾತ್ತ್ವಿಕ ದೃಷ್ಟಿಯಿಂದ ಅಲ್ಲ.'†

'ಪರಿಶುದ್ಧತೆ, ಸರ್ವಾಂಗ ಲಿಂಗತ್ವಗಳು ಸುಲಭಸಾಧ್ಯವಲ್ಲ, ತಾಯಿ. ಕೆಲವರಿಗೆ ತನು ಶುದ್ಧವಿದ್ದರೆ ಮನವು ಶುದ್ಧವಾಗಿರದು; ಮನಸ್ಸು ಶುದ್ಧ

ವಿದ್ದರೂ ಇಂದ್ರಿಯಗಳು ಚಪಲತೆಯಿಂದ ಹರಿಯುತ್ತಿರುತ್ತವೆ....ಈ ಎಲ್ಲವನ್ನು ಶುದ್ಧೀಕರಿಸುವುದು ಮಾತನಾಡಿದಷ್ಟು ಸುಲಭವಲ್ಲ....' ಪ್ರಭುದೇವರು ನುಡಿದರು.*

'ಗುರುಲಿಂಗ ಜಂಗಮರ ಪ್ರಸಾದದಿಂದ, ಕಾಯಕದ ಫಲದಿಂದ ತನು ಶುದ್ಧವಾದರೆ, ಮಹಂತರ ವಾಣಿಯನ್ನು, ದೇವನನ್ನು ನೆನೆದು ಮನಶುದ್ಧವಾಗುವುದು. ಮಹಾನುಭಾವರ ದರ್ಶನದಿಂದ ಕಣ್ಣುಗಳು ಶುದ್ಧವಾದರೆ, ಸಜ್ಜನರೊಡನೆ ಸಂವಾದಮಾಡಿ, ಕೇಳಿ ಕಿವಿ ಶುದ್ಧವಾಗುವುದು. ತನ್ನ ಆಚಾರ ವಿಚಾರಗಳಿಂದಲೇ ಮನುಷ್ಯ ಸುಖಿ, ದುಃಖಿ ಆಗುವನು. ಅವನ ಭಾವನೆಗಳ ಶುದ್ಧತೆಯೇ ಪರಮಸುಖಿಯನ್ನಾಗಿರಿಸುವುದು. ನಾನು ನೇರವಾಗಿ ದೇವನನ್ನು ಪೂಜಿಸಿ ಬದುಕಿನಲ್ಲಿ ತೃಪ್ತಿಯನ್ನು, ಮೋಕ್ಷದ ಸೌಖ್ಯವನ್ನು ಹೊಂದಬಲ್ಲವಳಾದೆ. ಶರೀರದಲ್ಲಿ ಇದ್ದುಕೊಂಡೇ ಅವನ ಕರುಣೆಯನ್ನು ಹೊಂದಲು ಸಮರ್ಥಳಾದೆ.'**

'ದೇವನನ್ನು ಒಲಿದೆ, ಕೂಡಿದೆ ಎಂದು ನುಡಿಯುವ ನೀನು, ಇಲ್ಲಿಯ ತನಕ ದೇವನಿಂದ ದೂರವಿದ್ದೆ—ಅಗಲಿದ್ದೆ ಎಂದು ಹೇಳಿದಂತಾಯಿತು. ದೇವರನ್ನು ಬಿಟ್ಟು ಮಾನವ ಇರಬಲ್ಲ ಎಂದು ಹೇಳುವುದೇ ಅಲ್ಲದೆ, ಅವನನ್ನು ಸರ್ವ ವ್ಯಾಪಕತ್ವದಿಂದ ಕೆಳಗಿಳಿಸಿದೆ....'† ವೈಯಕ್ತಿಕ ಬದುಕಿಗೆ ಸಂಬಂಧಿಸಿದ ವಿಷಯ ಬಿಟ್ಟು ತಾತ್ತ್ವಿಕ ಸಮಸ್ಯೆಗೆ ಪ್ರಭುದೇವ ಇಳಿದ—ಅವಳ ಜ್ಞಾನದ ಆಳವನ್ನು ತಿಳಿಯುವ ದೃಷ್ಟಿಯಿಂದ.

'ಇದು ವ್ಯಾವಹಾರಿಕ ಮಟ್ಟದಲ್ಲಿ ನಿಂತು ಆಡಿದ ಮಾತು, ಪ್ರಭುವೇ. ತುಪ್ಪವು ಸ್ವಾಭಾವಿಕವಾಗಿ ದ್ರವ. ತಂಪಿನ ಸಂಪರ್ಕವಾದಾಗ ಹೆರೆಯುವುದು. ಹೆರೆದ ತುಪ್ಪ ತಿಳಿದುಪ್ಪದ ಗರ್ಭದಲ್ಲೇ ಇರುವುದು. ಬಿಸಿ ಮಾಡಿದ ತಕ್ಷಣ ತಿಳಿದುಪ್ಪದೊಡನೆ ಒಂದಾಗುವುದು. ಪರಮಾತ್ಮನು ಜೀವರುಗಳಿಗೆ ಭೂಮಿಕೆ. ತಿಳಿದುಪ್ಪದಲ್ಲೇ ಇದ್ದೂ ವಾತಾವರಣದ ತೇವದ ಸಂಗದಿಂದ ಗಟ್ಟಿ ತುಪ್ಪ ರೂಪುಗೊಳ್ಳುವಂತೆ, ಆತ್ಮನು ಅಂತಃಕರಣಸಂಬಂಧದಿಂದ ಜೀವನಾಗುವನು. ಶ್ರೀಗುರುವು ಜ್ಞಾನಾಗ್ನಿಯಿಂದ ಈ ಮಲಿನ ಆವರಣವನ್ನು ಕರಗಿಸಿದಾಗ ಪರಿಶುದ್ಧವಾದ ಜೀವನು ಆತ್ಮನೆನಿಸಿ ಮೂಲ ಚೈತನ್ಯದೊಡನೆ ಬೆರೆಯುವನು. ನನ್ನ ಸರ್ವಾಂಗಗಳು ಶಿವನ ಸೊತ್ತಾಗಿ, ಭಕ್ತ ದೇಹಿಕ ದೇವನಾಗಿ ಅವನು ಭೋಗಿಸುವ ಕಾರಣ, 'ನಾನು ಚನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರೆಸಿದೆ, ಕೂಡಿದೆ' ಎಂದು ಹೇಳಿದೆ. ಅದರ ಅರ್ಥ,

---
* ಅ.ವ.ಚಂ. ೧೧೦೩ ** ಮು.ವ. ೯೬ † ಅ.ವ.ಚಂ. ೧೧೦೪

ಹುಟ್ಟಿ, ಅಲ್ಲೇ ಲೀಲೆಯಾಡಿ, ಪುನಃ ಅಲ್ಲೇ ಲಯವಾಗುವಂತೆ, ಮಹಾ ಗರ್ಭವಾದ ಪರಮಾತ್ಮನಲ್ಲೇ ಹುಟ್ಟಿ, ಮರಳಿ ಒಂದಾದೆ ಎಂಬುದು ಮಥಿತಾರ್ಥವಷ್ಟೇ !....'*

ಪ್ರಭುದೇವ ಗಹಗಹಿಸಿ ನಕ್ಕು ನುಡಿದ :

'ಇದಂತೂ ಬಹು ಹಾಸ್ಯಾಸ್ಪದ. ಸಕ್ಕರೆಯ ಗೊಂಬೆ ಕ್ಷೀರಸಾಗರದಾಳವನ್ನು ನೋಡಿ ಬರುವೆನೆಂದು ಟಣ್ಣನೆ ಸಮುದ್ರದೊಳಗೆ ಹಾರಿದರೆ ಮತ್ತೆ ಬರಬಲ್ಲುದೆ? ನಾ ಸತ್ತೆ ಎಂದು ಹೆಣ ಕೂಗಲು ಸಾಧ್ಯವೆ? ಕಣ್ಣಿಗೆ ಕಾಣದಂತೆ ಹುಗಿದಿಟ್ಟ ಧನ ಎದ್ದು ಕರೆಯಲು ಸಾಧ್ಯವೇ ? ಹೆಪ್ಪಿಟ್ಟ ಹಾಲು ಹುಳಿಯಾಗುವುದಲ್ಲದೆ ಸಿಹಿಯಾಗುವುದುಂಟೆ ? ಉಂಟು ಎಂದರೆ ಅದು ಮಹಾ ಮೂರ್ಖತನವಾದಂತೆ ದೇವರನ್ನು ಒಳಹೊಕ್ಕು ಬೆರೆಸಿದೆ ಎಂದು ನೀನು ಹೇಳಿದರೆ ನಂಬಲು ಸಾಧ್ಯವಿಲ್ಲ.** ಬೆರೆಸಿದವನ ಮಾತು ಮುಗ್ಧವಾಗುವುದು. ಬ್ರಹ್ಮಜ್ಞಾನವಾದಾಗ ವಾಕ್ಕು ಮೂಕವಾಗುವುದು. 'ನನ್ನ ಬಾಯಲ್ಲಿ ನಾಲಿಗೆ ಇಲ್ಲ' ಎಂದು ವ್ಯಕ್ತಿಯು ಘೋಷಿಸಿದರೆ, 'ಇಲ್ಲ' ಎಂಬುದರಲ್ಲೇ ನಾಲಿಗೆಯ ಅಸ್ತಿತ್ವ ಸಿದ್ಧವಾಗುವಂತೆ, ನೀನು ಮಾತನಾಡುತ್ತ 'ನಾನು ದೇವನನ್ನು ಕೂಡಿದೆ' ಎಂದು ಹೇಳುತ್ತಿರುವುದೇ ಕೂಡಿಲ್ಲವೆಂಬುದಕ್ಕೆ ಸಾಕ್ಷಿ. ಸಾಧಕನು ಮಾತನಾಡುವನು, ಸಿದ್ಧನು ಮಾತನಾಡನು. ಶಬ್ದಮುಗ್ಧತೆಯೇ ಸಿದ್ಧತ್ವದ ಲಕ್ಷಣ....'

ಮಹಾದೇವಿ ನಸುನಕ್ಕಳು. ಅವಳ ಮುಖ ಪ್ರಸನ್ನವಾಯಿತು. ಅದೇ ಭಾವದಲ್ಲಿ ನುಡಿದಳು :

'ಸತ್ತ ಹೆಣವು ಮಾತಾಡಲು ಸಾಧ್ಯವಿದೆ, ಹುಗಿದಿಟ್ಟ ಸಂಪತ್ತು ಕರೆಯುವ ಸಂಭವವಿದೆ, ಹೆಪ್ಪಿಟ್ಟ ಹಾಲು ಸಿಹಿಯಾಗುವುದು ಬಹು ಸಹಜ. ತಾವೇ ಆಲೋಚಿಸಿ ನೋಡಿರಿ.'†

'ಇದಂತೂ ವಿಪರೀತದ ವಿಚಾರ; ಎಷ್ಟು ಹಾಸ್ಯಾಸ್ಪದವಾದುದೆಂದರೆ 'ಶರೀರವಿಲ್ಲದೇ ಸುಖಪಡಬಹುದು, ಜೀವವಿಲ್ಲದೇ ಜನ್ಮಾಂತರದಲ್ಲಿ ಸಿಕ್ಕಬಹುದು, ಎಂಬಷ್ಟು.....!'§ ಪ್ರಭುದೇವ ಅಚ್ಚರಿಯಿಂದ ನುಡಿದ.

'ಹಾಗಾದಾರೆ ತಮಗೆ ಉತ್ತರ ಸಿಗಲಿಲ್ಲವೆಂದಾಯಿತು! ದಣಿದು ಮಲಗಿ ಕನಸನ್ನು ಕಂಡು, ಸ್ವಾನುಭವವನ್ನು ಹೇಳುವಲ್ಲಿ ಸತ್ತ ಹೆಣವು ಎದ್ದು

* ಮ.ವ. [illegible] ** ಅ.ವ. [illegible]

ಮಾತಾಡಿದಂತಾಗಲಿಲ್ಲವೆ? ನಿದ್ದೆಯೂ ದಿನನಿತ್ಯದ ಸಾವು. ಅಷ್ಟುಕಾಲ ಮಾನವನು ಜಾಗ್ರತ ಪ್ರಪಂಚದಿಂದ ದೂರವಾಗಿರನೆ? ಭೋಗಿಸಬೇಕು ಎಂಬ ಅದೃಷ್ಟವಿದ್ದರೆ ತನ್ನ ಋಣದ ಧನ, ಹೇಗಾದರೂ ಎದ್ದು ಕರೆಯುವುದು, ಉಡುತಡಿಯಿಂದ ಇಲ್ಲಿಯತನಕ ಬರುವಾಗ ಅಸಂಖ್ಯಾತರ ಮನೆಗಳಲ್ಲಿ ಭಿಕ್ಷೆ ಬೇಡಿದೆ. ಕೆಲವರು ನಿಂದೆಯನ್ನು ನೀಡಿದರೆ, ಮತ್ತೆ ಕೆಲವರು ಬೈಗಳನ್ನು ನೀಡಿದರು; ಇನ್ನು ಅನೇಕರು ಪ್ರಸಾದವನ್ನು ನೀಡಿದರು. ಯಾರ್ಯಾರಿಂದ ಎಷ್ಟೆಷ್ಟು ನನಗೆ ಸಲ್ಲಬೇಕಿದ್ದಿತೋ ಅಷ್ಟಷ್ಟು ಹೇಗಾದರೂ ಸಂದಿತು. ಇದು ಋಣ ನಿಧಾನ ಎದ್ದು ಕರೆದಂತಲ್ಲವೇ? ಹೆಪ್ಪಿಟ್ಟ ಹಾಲು ಹುಳಿಯಾದ ಮೊಸರಾದರೂ ಮತ್ತೆ ತುಪ್ಪವಾಗಿ ಸಿಹಿಯಾಗದೆ?* ಹುಳಿಮೊಸರು ತುಪ್ಪಕ್ಕೆ ಮೊದಲ ಮೆಟ್ಟಲು. ಹಾಗೆಯೇ ಶಬ್ದಮುಗ್ಧತೆ ಆತ್ಯಂತಿಕ ಗುರಿಯಲ್ಲ, ಆದರ್ಶ ಸಿದ್ಧಿಯಲ್ಲ; ಮಾತಿನ ಜ್ಯೋತಿರ್ಲಿಂಗದ ಸಿದ್ಧಿಗೆ ಸಹಾಯಕ ಸಾಧನ. ತಾವು... ಹಿಂದಿನದೆಲ್ಲವನ್ನು ಮರೆಯುವಂತೆ ತೋರುತ್ತದೆ...' ಮಹಾದೇವಿ ನಕ್ಕು, ವಿನಯದಿಂದ ನುಡಿದಳು.

'ಏಕೆ....ಹಾಗೆ ಹೇಳುವೆ?' ಪ್ರಭುದೇವ ಅಚ್ಚರಿಯಿಂದ ಕೇಳಿದ.

'ಮುಕ್ತಾಯಕ್ಕಗಳಿಗೆ ಇದೇ ಉತ್ತರವನ್ನು ತಾವು ಹೇಳಿಲ್ಲವೆ? 'ಅಧಿಕ ಪ್ರಸಂಗದ ಮಾತಿಗಿಂತ ಮೌನವು ಲೇಸು, ಮೌನಕ್ಕಿಂತಲೂ ಮಾತಿನ ಜ್ಯೋತಿರ್ಲಿಂಗ ಲೇಸು' ಎಂದು! 'ಮಾತು ಬೆಳ್ಳಿ, ಮೌನ ಬಂಗಾರ' ಎಂಬುದು ಶರಣಧರ್ಮವಲ್ಲ, 'ಮೌನ ಬಂಗಾರವಾದರೆ ದೈವೀನುಡಿ ಮಾಣಿಕ್ಯ' ಎಂಬುದು ಧರ್ಮದ ಈ ವಿಶೇಷ ದೃಷ್ಟಿಕೋನ. ಸಾಧಕನಾಗಿ ಆಡುವ ಮಾತಿಗೂ, ಸಿದ್ಧಪುರುಷನಾಗಿ ನುಡಿವ ವಚನಕ್ಕೂ ಅಜಗಜಾಂತರ ವ್ಯತ್ಯಾಸ. ಸಿದ್ಧಪುರುಷರ ಮಾತಿನ ಜ್ಯೋತಿಯಲ್ಲಿ ಲಿಂಗವನ್ನೇ ಕಾಣಬಹುದು. ಕೊಡವು ತುಂಬುವಾಗ ಶಬ್ದ, ತುಂಬಿದ ಬಳಿಕ ನಿಶ್ಯಬ್ದ; ಆದರೆ ತುಂಬಿದ ಕೊಡವನ್ನು ಬರಿದಾದ ಪಾತ್ರೆಗಳಿಗೆ ಬಗ್ಗಿಸುವಾಗ ಮತ್ತೆ ಶಿವಶಬ್ದ! ಪರಿಪಕ್ವವಾದವನು ತನಗಾಗಿ ಮಾತನಾಡನು, ಜಗದ ಕಲ್ಯಾಣಕ್ಕಾಗಿ ಮಾತನಾಡುವನಷ್ಟೇ....'

'ಭಲೇ ಭಲೇ....! ಅಪೂರ್ವ ಉತ್ತರ....' ಪ್ರಭುದೇವನ ಮುಖದ ಮೇಲೆ ಸಂಭ್ರಮದ ತೆರೆ ಹಾಯಿತು. ಇಲ್ಲಿಯ ತನಕ ತಡೆದಿಟ್ಟ ಅಭಿಮಾನವೆಂಬ ಮಹಾಪೂರದ ಕಟ್ಟೆಯೊಡೆಯಿತು. ಆನಂದೋದ್ರೇಕಿತನಾಗಿ ಎದ್ದುನಿಂತ.

'ಇದು ಲೇಸಾಯ್ತು; ಬಸವಣ್ಣಾ....ಅನುಭವಮಂಟಪವೆಂಬ ಆಧ್ಯಾತ್ಮದ

ಅತ್ಯಂತ ಆನಂದದಾಯಕ. ಕತ್ತಲೆಯಲ್ಲಿ ಸಾಗುವವನು ಮರವೊಂದನ್ನು ಕಂಡು, ಮೊದಲಿಗೆ ಕಳ್ಳನೆಂದು ತಿಳಿದು, ಬೆಳಕು ಬಿದ್ದಾಗ ಅದು 'ಸ್ಥಾಣು' ಎಂದು ಅರಿಯುವಂತೆ, ಮಹಾದೇವಿಯನ್ನು ಕೇವಲ ಸಾಮಾನ್ಯ ಹೆಣ್ಣು ಎಂದು ಅವಿವೇಕ-ಅಜ್ಞಾನದಿಂದ ತಿಳಿಯಬಾರದು ಎಂಬುದಕ್ಕಾಗಿ ಈ ಸಂವಾದದ ಬೆಳಗನ್ನು ಚೆಲ್ಲಬೇಕಾಯ್ತು.* ಬಸವಣ್ಣಾ... ನಿನ್ನ ಮೋಹದ ಮಗಳು, ಅನುಭವಮಂಟಪದ ಪ್ರೇಮದ ಪುತ್ಥಳಿ ಜಯಶೀಲಳಾದಳು.

ಅಂಗ ಅಂಗನೆಯ ರೂಪಲ್ಲದೆ,
ಮನ ವಸ್ತು ಭಾವದಲ್ಲಿ ಬೆಚ್ಚಂತಿರ್ಪುದು;
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ, ಅಕ್ಕ !
ಗುಹೇಶ್ವರಲಿಂಗದಲ್ಲಿ ಉಭಯನಾಮವಳಿದ ಎನ್ನಕ್ಕಾ !†

'ತಾಯಿ, ಅಂಗವು ಅಂಗನೆಯ ರೂಪದಿಂದ ಇದೆ. ಆದರೆ ಮನಸ್ಸು-ಭಾವಗಳು ಪರಿಪಕ್ವಗೊಂಡು, ಲಿಂಗಪ್ರಸಾದವಾಗಿವೆ. ಇಂತಹ ಕಠಿಣತಮ ಪರೀಕ್ಷೆಯಲ್ಲಿ ಕಳಾಯುಕ್ತಳಾಗಿ ಹೊರಬಂದ ನೀನು ನನ್ನ ಅಕ್ಕ! ಗುಹೇಶ್ವರ ಲಿಂಗದಲ್ಲಿ ಹೆಣ್ಣು-ಗಂಡೆಂಬ ಉಭಯನಾಮವಳಿದು, ನಿರ್ಲಿಪ್ತ ನಿಲುವನ್ನು ಮುಟ್ಟಿದ ಎನ್ನ ಅಕ್ಕ ನೀನು....' ಮೋಡಮೋಡಗಳು ತಾಕಲಾಡಿ ಮಳೆಯ ಧಾರೆ ಸುರಿವಂತೆ, ಪ್ರಭುದೇವನ ಹೃದಯದ ಭಾವನೆಗಳು ಆವೇಶದಿಂದ ತಾಕಲಾಡಿ ಕಣ್ಣಿನಲ್ಲಿ ಆನಂದಬಾಷ್ಪಗಳು ಸಂಗ್ರಹವಾಗುತ್ತಿದ್ದವು. ಶರಣರ ಹೃದಯಗಳು ಚಂದ್ರದರ್ಶನವಾದ ಸಮುದ್ರದಲೆಗಳಂತೆ ಆನಂದದ ಅಬ್ಬರದಿಂದ ಮೊರೆಯತೊಡಗಿದವು.

'ಜಯ ಜಯ ಅಕ್ಕಮಹಾದೇವಿ....ಉಘೇ....' ಎಂದು ಒಕ್ಕೊರಲಿನಿಂದ ಜಯಘೋಷಗೈದರು. ಪ್ರಭುದೇವ ಎದ್ದು ನಿಂತು ದೊಡ್ಡ ದನಿಯಲ್ಲಿ ನುಡಿದ:

'ಶರಣಪುಂಗವರೇ....ಮನುಕುಲ ಸಮುದ್ರದಲ್ಲಿ ದೊರೆವ ಅಪೂರ್ವ ಮೌಕ್ತಿಕವಿದು. ನೀವಿನ್ನು ಈ ತಾಯಿಯನ್ನು ಅಕ್ಕನೆಂದು ಸಂಬೋಧಿಸಿರಿ. ಆಕೆ ನಮಗೆ-ನಿಮಗಷ್ಟೇ ಅಕ್ಕನಲ್ಲ, ಜಗದ ಅಕ್ಕ; ಸ್ತ್ರೀಕುಲಮಾರ್ಗದರ್ಶಿನಿ ಅಕ್ಕ! ಈ ಸಂಬೋಧನೆ ಹುಟ್ಟಿನಿಂದ ಪಡೆದುದಲ್ಲ, ವ್ಯಕ್ತಿತ್ವದ ಗಳಿಕೆಯಿಂದ ಪಡೆದುದು; ಶರಣಸಮೂಹದಿಂದ ಕೊಡಲ್ಪಟ್ಟ ಮಹಾಬಿರುದು.

ಆದಿ ಶಕ್ತಿ ಅನಾದಿ ಶಕ್ತಿ ಎಂಬರು, ಅದನಾರು ಬಲ್ಲರಯ್ಯಾ ?
ಆದಿ ಎಂದರೆ ಕುರುಹಿಂಗೆ ಬಂದಿತ್ತು, ಅನಾದಿ ಎಂದರೆ ನಾಮಕ್ಕೆ ಬಂದಿತ್ತು.

ಆದಿಯಲ್ಲ ಅನಾದಿಯಲ್ಲ, ನಾಮವಿಲ್ಲದ ಸೀಮೆಯಿಲ್ಲದ
ನಿಜಶಕ್ತಿ ಚಿಚ್ಛಕ್ತಿಯಾಯಿತ್ತು ನೋಡಾ !
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ,
ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.*

ಪ್ರಭುದೇವನ ಉತ್ಸಾಹ, ಸಂತಸಗಳಿಂದ ಸಾಷ್ಟಾಂಗವೆರಗಿದಾಗ ಶರಣ ಸಂಕುಲವು ಆನಂದಬಾಷ್ಪವನ್ನು ಹರಿಸಿತು. ಮೋಡಿಗೊಳಗಾದಂತೆ ಎಲ್ಲರೂ ಮೂಕರಾಗಿ ಕುಳಿತಿದ್ದರು. ಪ್ರಭುದೇವನ ಗುಣಗ್ರಾಹಕತ್ವ, ವಿನಯಶೀಲತೆಯನ್ನು ಕಂಡು ಅವರು ಪರವಶೀಭೂತರಾಗಿದ್ದರು. ಅನಿರೀಕ್ಷಿತ ಮನ್ನಣೆಯನ್ನು ನೋಡಿ ವಿನಯದಿಂದ ಭಾರಳಾದ ಅಕ್ಕಮಹಾದೇವಿಯ ಕಣ್ಣಿಂದಲೂ ಹರುಷಜಲಬಿಂದುಗಳು ಹರಿಯುತ್ತಿದ್ದವು. ಅಮೃತದ ಹೊಳೆಯಲ್ಲಿ ಮಿಂದ ಅಪೂರ್ವ ಅನುಭವ ಪಡೆದ ಆಕೆ ತನ್ನನ್ನು ತಾನು ಹಿಡಿತಕ್ಕೆ ತಂದುಕೊಳ್ಳುತ್ತ ಹೇಳಿದಳು :

'ಗುರುದೇವಾ, ಮಹಾನುಭಾವ, ಎಳೆಗರುವಿನ ಮೇಲೆ ಹೇರು ಹೊರಿಸಿದಂತೆ ತಾವು ಮಾಡುತ್ತಿರುವಿರಿ. ತಮ್ಮಂತಹ ಹಿರಿಯರು ನನ್ನಂತಹ ಅಲ್ಪಳಿಗೆ ನಮಸ್ಕರಿಸುವುದೆ? ನಾನು ಹೀಗೆ ನುಡಿದರೆ ತಾತ್ತ್ವಿಕ ದೃಷ್ಟಿಯಿಂದ ತಾವು ತಪ್ಪು ಹುಡುಕಬಹುದು, 'ನನ್ನಲ್ಲಿನ್ನೂ ಏಕೋಭಾವ ಅಳವಟ್ಟಿಲ್ಲ' ಎಂದು ಆಕ್ಷೇಪಿಸಬಹುದು. ನೀರು-ಕ್ಷೀರಗಳು ಎಷ್ಟು ಅಭಿನ್ನವಾಗಿರುವವೋ, ಆತ್ಮ-ಆತ್ಮಗಳೂ ಅಷ್ಟೇ ಅಭಿನ್ನವಾಗಿರುವವು ಎಂಬುದನ್ನು ನಾನು ಅರಿತಿರುವೆ. ಎಲ್ಲರ ಸೂತ್ರವು ಒಂದೇ ಇರುವುದರಿಂದ ಆತ್ಮಭಾವದ ದೃಷ್ಟಿಯಿಂದ ಯಾವುದು ಕರ್ತೃ, ಯಾವುದು ಭೃತ್ಯ ಎಂದರಿಯೆ. ಯಾರು ನಮಸ್ಕರಿಸುವುದು, ಯಾರು ನಮಸ್ಕರಿಸಿಕೊಳ್ಳುವುದು ಎಂಬುದನ್ನು ಅರಿಯೆ ; ಯಾರು ಕಿರಿಯರು, ಯಾರು ಹಿರಿಯರು ಎಂದರಿಯೆ. ಆದರೆ ವ್ಯಾವಹಾರಿಕ, ಪ್ರಾಪಂಚಿಕ ದೃಷ್ಟಿಯಿಂದ ವೀಕ್ಷಿಸಿದರೆ ನಾನು ದೊಡ್ಡವಳಲ್ಲ ; ಇನ್ನೂ ಪರಿಪೂರ್ಣತೆ ಪಡೆದಿಲ್ಲ ; ನನ್ನಲ್ಲಿ ಯಾವ ವಿಶೇಷ ಶಕ್ತಿಯೂ ಇಲ್ಲ. ಪ್ರೇಮದ ದೃಷ್ಟಿಯಿಂದ ನೋಡಿದಾಗ ಇರುವೆಯೂ ರುದ್ರನಾಗಿ ಕಾಣುವಂತೆ, ನಿಮ್ಮ ವಾತ್ಸಲ್ಯ-ಅಭಿಮಾನಗಳ ಮೂಲಕ ದೊಡ್ಡವಳಾಗಿ ಕಾಣುತ್ತಿರುವೆನೇನೋ. ನಾನು ಶರಣರ ಪಾದ ಸೇವಕಿ, ಕರುಣೆಯ ಕಂದ. ಇದೊಂದೇ ಬಿರುದು ಸಾಕೆನಗೆ.'† ವಿನಯಶೀಲ

ಹೀಗೆ ಗದ್ಗದಕಂಠದಲ್ಲಿ ಅಕ್ಕಮಹಾದೇವಿ ಹೇಳಿದಳು. ಬಸವಣ್ಣನೂ ಅಷ್ಟೇ ಆನಂದದಿಂದ ನುಡಿದ :

'ಶರಣರೇ, ಈ ಹೆಣ್ಣುಕೂಸಿನ ವ್ಯಕ್ತಿತ್ವ ನೋಡಿರಿ. ದಿಗಂಬರಳಾಗಿ ನಿಂತಿದ್ದರೂ ಒಬ್ಬರಲ್ಲಿಯೂ ವಿಕೃತ ಭಾವನೆಗಳು ಮೂಡಿಲ್ಲ. ಪುಟ್ಟ ಕನ್ಯೆಯೊಂದು ಮಿಂದು, ನಗ್ನವಾಗಿ ಬಂದು, ಬಟ್ಟೆ ತೊಡಿಸೆಂದು ತಂದೆಯ ಮುಂದೆ ನಿಂತಂತಹ ಭಾವವಿಲ್ಲಿದೆ. ಈಕೆಯನ್ನು ನೋಡಿದರೆ ಬಾಲತನದ ಅಂಗಸನ್ನು ನೋಡಿದಂತೆ ಎನಿಸುತ್ತದೆ. ಎಲೈ ಲಿಂಗವಂತರೇ, ಈ ತಾಯಿಯನ್ನು ನೋಡಿರಿ; ಬ್ರಹ್ಮತತ್ತ್ವದಲ್ಲಿ ಬೆರೆತು ತನ್ನ ಹೆಣ್ತನವನ್ನು ಅಳಿದುಕೊಂಡ ಮಹಾನುಭಾವೆ ಈಕೆ. ತಾನು ಹಿಡಿದ ಪಥದಲ್ಲಿ ಎಂತಹ ದೃಢತೆಯಿದೆ, ಯಾರ ಪ್ರಶ್ನೆಗಳಿಗೂ ಹೆದರದೆ ಉತ್ತರಿಸುವ ದಿಟ್ಟತನವಿದೆ. 'ಹೆಣ್ಣು ಅಬಲಳು, ಮಾಯೆ' ಎಂದು ಸಂಪ್ರದಾಯವು ಶತಮಾನಗಳಿಂದ ಹೇರಿರುವ ಸಂಕೋಲೆಗಳನ್ನು ಕಿತ್ತೊಗೆದು ಸ್ತ್ರೀಸ್ವಾತಂತ್ರ್ಯದ ಕ್ರಾಂತಿಕಹಳೆಯನ್ನು ಊದ ಬಂದ ವೀರ ವಿರಕ್ತಳು ನಮ್ಮ ಮಹಾದೇವಿಯಕ್ಕ....'*

ಅಕ್ಕಮಹಾದೇವಿ ಸಂಕೋಚದಿಂದ ತಲೆಬಾಗಿದಳು. ಕಠೋರವಾದ ಪರೀಕ್ಷಕ ಪ್ರಶ್ನೆಗಳಿಗಿಂತ ಮೃದುವಾದ ಹೊಗಳಿಕೆಯ ಮಾತುಗಳು ಆಕೆಗೆ ಭಾರವಾದವು. ಸಮಾಧಾನ ತಂದುಕೊಂಡು ಹೇಳಿದಳು :

ನಿನ್ನ ಅಂಗದಾಚಾರವ ಕಂಡು,
ಎನಗೆ ಲಿಂಗ ಸಂಗವಾಯಿತ್ತಯ್ಯಾ ಬಸವಣ್ಣಾ.
ನಿನ್ನ ಮನದ ಸುಜ್ಞಾನವ ಕಂಡು
ಎನಗೆ ಜಂಗಮ ಸಂಬಂಧವಾಯಿತ್ತಯ್ಯಾ ಬಸವಣ್ಣಾ.
ನಿನ್ನ ಸದ್‌ಭಕ್ತಿಯ ತಿಳಿದು
ಎನಗೆ ನಿಜವು ಸಾಧ್ಯವಾಯಿತ್ತಯ್ಯಾ ಬಸವಣ್ಣಾ.
ಚೆನ್ನಮಲ್ಲಿಕಾರ್ಜುನನು ಹೆಸರಿಟ್ಟ ಗುರು ನೀನಾದ ಕಾರಣ,
ನಾನೆಂಬುದಿಲ್ಲವಯ್ಯಾ ಬಸವಣ್ಣಾ !†

ಬಸವ ತಂದೇ, ನಿನ್ನ ವಿನಯವನ್ನು ಕಂಡು ನನ್ನ ಹೃದಯವು ಮೂಕವಾಗಿದೆ. ನನ್ನಲ್ಲೇನಾದರೂ ಅಲ್ಪಸ್ವಲ್ಪ ವ್ಯಕ್ತಿತ್ವ ರೂಪುಗೊಂಡಿದ್ದರೆ ಅದು ನಿನ್ನಿಂದ. ನಿನ್ನ ಸದಾಚಾರವನ್ನು ಕಂಡು ಪ್ರಭಾವಿತಳಾಗಿ ಇಷ್ಟಲಿಂಗದೀಕ್ಷೆ ಪಡೆದೆ. ನಿನ್ನ ತತ್ತ್ವಗಳಿಗೆ ಮಾರುಹೋಗಿ ಸುಜ್ಞಾನಿಯಾಗಿ ಸ್ವಾನುಭವಿಯಾದೆ. ಮೂಢನಂಬಿಕೆಗಳನ್ನು ಖಂಡಿಸಿ ನಿಜಭಕ್ತಿಯನ್ನು ಬೋಧಿಸಿದ ನಿನ್ನ

ಧರ್ಮಕ್ಕೆ ಮಾರುಹೋಗಿ ಪರಮಾತ್ಮನ ಸ್ವರೂಪವನ್ನು ಅರಿತೆ. ವಿಶ್ವಮೌಲ್ಯ ತತ್ತ್ವಗಳನ್ನು ಬೋಧಿಸಲು ವಿಶ್ವಗುರುವಾಗೆಂದು ಚನ್ನಮಲ್ಲಿಕಾರ್ಜುನನು ನಿನ್ನನ್ನೇ ಹೆಸರಿಟ್ಟು ಕಳುಹಿಸಿರುವ ಕಾರಣ, ನಾನು ನಿನ್ನಿಂದ-ನಿನ್ನ ತತ್ತ್ವಗಳ ಸಂಪರ್ಕದಿಂದ ಘನವಂತಳು ಆಗಿರಬಹುದೇ ವಿನಾ ನನ್ನಿಂದಲೇ ನಾನಾಗಿಲ್ಲ. ಅಪ್ಪಾ! ಕಬ್ಬಿಣದ ಗೊಂಬೆಗೆ ಪರುಷದ ತೊಡವುಗಳನ್ನು ತೊಡಿಸಿದರೆ ಕಬ್ಬಿಣವು ಹೋಗಿ ಚಿನ್ನವಾದಾಗ, ಹೊಗಳಬೇಕಾದುದು ಕಬ್ಬಿಣವನ್ನಲ್ಲ ಪರುಷದ ಒಡವೆಯನ್ನಷ್ಟೆ. ನನ್ನ ಬದುಕು ಕಬ್ಬಿಣದ ಗೊಂಬೆ—ನಿನ್ನ ತತ್ತ್ವವು ಪರುಷದಾಭರಣ; ಹೊಗಳದಿರು ತಂದೆ....ನಿನ್ನ ಈ ಪಾದಶಿಶುವನ್ನು.'

'ಅಬ್ಬಾ....ಎಂತಹ ವಿನಯಶಾಲಿನಿ! ಬಸವಣ್ಣನಿಗೆ ತಕ್ಕ ಮಗಳು....' ಶರಣಸಮೂಹ ಉದ್ಗರಿಸಿತು.

ಕಿನ್ನರಿಯ ಬ್ರಹ್ಮಯ್ಯ ಸಭಿಕರ ಮಧ್ಯದಿಂದ ಎದ್ದು ಬಂದು, ಪ್ರಭುದೇವನಿಗೆ, ಬಸವಣ್ಣನವರಿಗೆ ಶರಣುಗೈದು, ಅಕ್ಕಮಹಾದೇವಿಯ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಎದ್ದುನಿಂತು ಕೈಜೋಡಿಸುತ್ತ ನುಡಿದ:

'ಶರಣ ಸಂಕುಳವೇ, ಇಂದು ನಾನು ಹುಲಿ ನೆಕ್ಕಿ ಬದುಕಿರುವೆ; ಪುನರ್ಜನ್ಮ ಹೊಂದಿರುವೆ. ಮಹಾಪ್ರಭುಗಳ ಆದೇಶದಂತೆ ಈ ವೈರಾಗ್ಯನಿಧಿಯನ್ನು ಪರೀಕ್ಷಿಸಲು ಹೋಗಿ, ವಿಪರೀತವಾದ ಪ್ರಶ್ನೆಗಳನ್ನು ಕೇಳಿದೆ. ಈ ತಾಯಿ ಕ್ರೋಧಗೊಳ್ಳದೆ, ಶಾಂತಚಿತ್ತಳಾಗಿ ನನ್ನ ಪ್ರಶ್ನೆಗಳಿಗೆ ಉತ್ತರ ನೀಡಿದ ಪರಿಯನ್ನು ಕಂಡು ಸೋಜಿಗದ ಉಯ್ಯಾಲೆಯಲ್ಲಿ ತೂಗುತ್ತಲಿರುವೆ.

'ಅಧ್ಯಾತ್ಮಜೀವನದ ಆಳವನ್ನರಿಯದ ಅಜ್ಞಾನಿಯೋ' ಎಂದು ಬೆರಳಿನ ಗಣ್ಣಿನಿಂದ ಮೃತ್ತಿಕೆಯ ಘಟವನ್ನು ಬಡಿದುನೋಡುವಂತೆ ಪ್ರಶ್ನೆಗಳ ಮೂಲಕ ಶಿರವನ್ನು ಮುಟ್ಟಿನೋಡಿದರೆ ಅಲ್ಲಿ ಶಿವಜ್ಞಾನ ಅಪೂರ್ವವಾಗಿ ಬೆಳಗುತ್ತಿತ್ತು. 'ತನ್ನ ಚೆಲುವಿನ ಅಭಿಮಾನವಿದೆಯೇನೋ' ಎಂದು ಮುಖಕಮಲದ ಪ್ರಶಂಸೆ ಮಾಡಿದರೆ, ಅಲ್ಲಿ ಕಾಯದಭಿಮಾನ ಅಳಿದು, ಕೇವಲ ಶಿವತತ್ತ್ವ ಉಳಿದಿತ್ತು. 'ಲೌಕಿಕರ ಪ್ರಣಯದೃಶ್ಯಗಳು, ಸರಸದ ಮಾತುಕತೆಗಳಿಂದ ವಿಕಾರಗೊಳ್ಳುವಳೇನೊ' ಎಂದು ಪರೀಕ್ಷಿಸಿದಾಗ ಆಕೆಯ ಕೊರಳಿನಿಂದ ಲಿಂಗವಾರ್ತೆಯನ್ನುಳಿದು ಬೇರೆಯದು ಹೊರಬರಲಿಲ್ಲ. 'ತೋಳುಗಳು ಅಂಗಸ್ಪರ್ಶಸುಖಕ್ಕೆ ಹಾತೊರೆಯುವವೇನೋ' ಎಂದು ಪ್ರಶ್ನಿಸಿ ನೋಡಿದಾಗ ಆ ಅಂಗಾಂಗಗಳು ದೈವೀಚಟುವಟಿಕೆಗಳಿಗೆ ಮಾತ್ರ ಮೀಸಲಾದುದು ಕಾಣ

ಭಾವನೆಗಳನ್ನು ಪರೀಕ್ಷಿಸಿದಾಗ ಆ ಉರದಲ್ಲಿ ಸದ್ಭಕ್ತಿಯುಕ್ತ ನಿಷ್ಕಲ್ಮಷ ಪ್ರೇಮವಲ್ಲದೆ ಅನ್ಯವು ತೋರಿಬರಲಿಲ್ಲ. 'ಪ್ರಕೃತಿಸಹಜವಾದ ವಾತ್ಸಲ್ಯ ಎಂಬ ಹುಟ್ಟುಗುಣಕ್ಕೆ ಮನಸೋಲುವಳೇನೋ' ಎಂದು ಪರೀಕ್ಷಿಸಿದಾಗ ಈಕೆ ಹಲವು ಮಕ್ಕಳ ತಾಯಾಗಲು ಹಂಬಲಿಸದೆ ಜಗದ ಜನತೆಗೆ ವಿಶ್ವಮಾತೆಯಾಗುವ ಭಾವವನ್ನು ವ್ಯಕ್ತಪಡಿಸಿದಳು.

ಈ ಪ್ರಪಂಚದಲ್ಲಿ ಮೂರು ಬಗೆಯ ಹೆಂಗೆಳೆಯರಿರುವರು. ಕೆಲವರು ತಾವೂ ಅನ್ಯರಿಂದ ವಿಕಾರಕ್ಕೊಳಗಾಗರು, ಅನ್ಯರನ್ನೂ ಪ್ರಚೋದಿಸರು; ಮತ್ತೆ ಕೆಲವರು ತಾವಾಗಿಯೇ ಇತರರನ್ನು ಪ್ರಚೋದಿಸದಿದ್ದರೂ ಆ ದಿಶೆಯಿಂದ ಪ್ರಚೋದನೆ ಬಂದಾಗ ತಮ್ಮನ್ನು ತಾವು ನಿಗ್ರಹಿಸಿಕೊಳ್ಳಲಾರದೆ ಸೋಲುವರು; ಇನ್ನು ಕೆಲವರು ತಾವಾಗಿಯೇ ಪುರುಷರನ್ನು ಪ್ರಚೋದಿಸುವರು ಮತ್ತು ಅಂತಹ ಪ್ರಚೋದನೆಗೆ ಬಲು ಸುಲಭವಾಗಿ ಈಡಾಗುವರು. ಅಕ್ಕಮಹಾದೇವಿಯದು ಮೂರನೆಯ ಸ್ವಭಾವವಂತೂ ಅಲ್ಲ ಎಂಬುದನ್ನು ಸಹಜವಾಗಿ ತಿಳಿದಿದ್ದೆ. ಎರಡನೆಯ ಸ್ವಭಾವದವಳಾಗಿದ್ದು ಅನ್ಯರ ಪ್ರಚೋದನೆಗೆ ಈಡಾಗುವ ವ್ಯಕ್ತಿಯೇನೋ ಎಂದು ಪರೀಕ್ಷಿಸುವ ಸಾಹಸವನ್ನು ಕೈಗೊಂಡೆ.

ಆದಕ್ಕಾಗಿ ಅತ್ಯಂತ ಕೆಳಮಟ್ಟಕ್ಕಿಳಿದು ಲೈಂಗಿಕ ಸುಖಾಪೇಕ್ಷೆಗಳನ್ನು ಮುಂದಿರಿಸಿ ಪ್ರಶ್ನೆ ಕೇಳಿದೆ. ಆದರೇನಂತೆ, ಆಕೆ ಜಾಗ್ರತ್ ಸ್ವಪ್ನ ಸುಷುಪ್ತಾವಸ್ಥೆಯಲ್ಲಿ ಸಹ ಅಂತಹ ಅಪೇಕ್ಷೆಗಳಿಲ್ಲವೆ ವೈರಾಗ್ಯದ ಅಗ್ನಿಕುಂಡ ಎಂಬುದನ್ನು ಮನಗಂಡೆ. ಅಂತರಂಗದಲ್ಲಿ ಸಂಪೂರ್ಣವಾಗಿ ಕಾಮದಹನವಾದುದನ್ನು ಕಂಡುಕೊಂಡು ಪಶ್ಚಾತ್ತಾಪದಿಂದ ಪಾದ ಹಿಡಿದೆ.* ಈ ತಾಯಿಯ ಔದಾರ್ಯ ಬಹು ದೊಡ್ಡದು; ನನ್ನ ಅಜ್ಞಾನ-ಅಹಂಕಾರಗಳ ಮಾತನ್ನು ಲೆಕ್ಕಕ್ಕಿಡದೆ ಕ್ಷಮಿಸಿ, ಉದ್ಧರಿಸಿದಳು.

ಇಂತಹ ಮಹಾಮಾತೆಯ ಅಡಿಯಲ್ಲಿ, ತಮ್ಮೆಲ್ಲರ ಸಮ್ಮುಖದಲ್ಲಿಯೇ ಬಿನ್ನವಿಸಿಕೊಳ್ಳುವೆ,

ಶರಣರ ಆಜ್ಞಾಧಾರಿಯಾಗಿ ಮಾಡಿದ ನನ್ನ ತಪ್ಪನ್ನು ಮನಕ್ಕೆ ತೆಗೆದುಕೊಳ್ಳದೆ ಮನ್ನಿಸಬೇಕು' ಎಂದು ಕಿನ್ನರಿಯ ಬ್ರಹ್ಮಯ್ಯ ಬಿನ್ನೈಸಿದ. ಅಕ್ಕಮಹಾದೇವಿ ನಸುನಗೆ ನಕ್ಕು ಹೇಳಿದಳು:

'ಅಣ್ಣಾ, ನಿನಗೆ ನಾನು ನಿಜಕ್ಕೂ ಚಿರಋಣಿ. ಏಕೆಂದರೆ ಆಸೆ-ಆಮಿಷಗಳು ವಿಲಾಸಿ ಕೌಶಿಕನೆಂಬ

ಶರಣ ಕಿನ್ನರಿಯ ಬ್ರಹ್ಮಯ್ಯನೆಂಬ ಗೋಮುಖವ್ಯಾಘ್ರರೂಪದಲ್ಲೇ ಬರಲಿ, ಏನಾದರೂ ಸೋಲದಷ್ಟು ದೃಢತ್ವವನ್ನು ನನ್ನ ಮನಸ್ಸು ಪಡೆದಿದೆಯಲ್ಲ ಎಂಬ ಆತ್ಮವಿಶ್ವಾಸವನ್ನು ತಾಳಲು ನಿನ್ನ ಪರೀಕ್ಷೆ ಸಹಾಯಕವಾಗಿದೆ. ಅಲ್ಲದೆ, ಪರೀಕ್ಷೆಯ ಫಲವಾಗಿ ನಿನ್ನಂತಹ ಉಜ್ವಲ ಶರಣನನ್ನು ಅಣ್ಣನನ್ನಾಗಿ ಪಡೆದೆನಷ್ಟೇ? ಅಂದಾಗ ಮನ್ನಿಸುವ ಮಾತೆಲ್ಲಿಯದು?'

ಅಕ್ಕಮಹಾದೇವಿ ಶಾಂತಚಿತ್ತಳಾಗಿ ಹೇಳಿದಾಗ ಅನುಭವಿಗಳೆಲ್ಲ ಆನಂದದ ಘೋಷ ಮಾಡಿದರು. ಆಗ ಚನ್ನಬಸವಣ್ಣ ಎದ್ದುನಿಂತ:

'ಶರಣರೇ....ಇಂದಿನ ಗೋಷ್ಠಿಯು ಅಭೂತಪೂರ್ವವು, ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾಗುವ ಐತಿಹಾಸಿಕ ಮಹತ್ವ ಉಳ್ಳುದು. ನೀವೆಲ್ಲರೂ ತಿಳಿಯಬೇಕು; ಹಿರಿಯತನ ಇರುವುದು ವಯಸ್ಸಿನಲ್ಲಲ್ಲ, ಗಳಿಸಿಕೊಂಡ ವ್ಯಕ್ತಿತ್ವದಲ್ಲಿ ಎಂಬುದನ್ನು. ಸಾವಿರ ವರುಷ ಬದುಕಿದವನು ಹಿರಿಯನಲ್ಲ. ಕುಳಿತಲ್ಲಿಯೇ ಸುತ್ತಲೂ ಹುತ್ತ ಬೆಳೆದು, ಬೆತ್ತವೂ ಅದರ ಮೇಲೆ ಬೆಳೆದ ತಪಸ್ವಿ ಹಿರಿಯನಲ್ಲ, ಬದುಕನ್ನು ಅಜ್ಞಾನದಲ್ಲಿ ಕಳೆದು ಮುಪ್ಪಿನಲ್ಲಿ ತಲೆಕೆಟ್ಟು ಮಾತನಾಡುವ ಅಜ್ಞಾನಿಗಳು ಹಿರಿಯರಲ್ಲ. ಜ್ಞಾನ-ವಿರಕ್ತಿ-ನಿರ್ಲಿಪ್ತತೆಗಳೇ ಹಿರಿತನದ ಲಕ್ಷಣಗಳೆಂಬುದನ್ನು ಕೂಡಲ ಚನ್ನಸಂಗನ ಸತಿ ಮಹಾದೇವಿಯಕ್ಕ ಸಾಧ್ಯಶ್ಯಪಡಿಸಿರುವಳು....'*

'ಮುತ್ತಿನಂತಹ ನುಡಿಯಾಡಿದೆ, ಚನ್ನಬಸವಣ್ಣ. ಅಜ್ಞಾನಿಗಳು, ಲೌಕಿಕರು ವಯಸ್ಸಿನ ಮೇಲೆ ಹಿರಿಯರು, ಕಿರಿಯರು ಎಂದು ನಿರ್ಧರಿಸಿ ಮಾತನಾಡುವರು. ಅರಿವುಳ್ಳವನ ಹಿರಿತನಕ್ಕೆ ವಯಸ್ಸು ಅಡ್ಡಬಾರದು, ಹಿಂದಿನ ಪುಣ್ಯದಿಂದ ಅನುಭವಮಂಟಪಕ್ಕೆ ಬಂದು ನಾನು ಇಂದು ಮಹಾವ್ಯಕ್ತಿಯನ್ನು ಕಂಡು ಶುದ್ಧನಾದೆ....' ಸಿದ್ಧರಾಮೇಶ್ವರರು ಹೇಳಿದರು.

'ಅಲ್ಲದೇ ಏನು ಸಿದ್ಧರಾಮಯ್ಯನವರೆ....! ಶಿವಕಾಮಿನಿಯಾಗಿ ನಿಃಕಾಮಿಯಾದ, ಶರೀರದಲ್ಲೇ ಇದ್ದು ಪ್ರಾಕೃತಿಕ ಗುಣಗಳನ್ನು ಜಯಿಸಿದ, ಭೋಗಭಾಗ್ಯ ಅರಸೊತ್ತಿಗೆಗಳು ಪಾದಸೇವೆಗೈತಂದಾಗ ನಿರ್ಲಕ್ಷಿಸಿ ಬಂದ ಈ ಮಹಿಮಾನ್ವಿತೆ ಬಸವಣ್ಣನೇ ಗತಿಯೆಂದು ಶರಣಾಗತಳಾಗಿ ಬಂದಾಗ ನಾನು ನಡೆನ ಮಡಿ ಹಾಸಿದರೆ ಅದರ ಮೇಲೆ ಕಾಲಿಡದೆ ಮೈಗೆ ಹೊದ್ದಳು. ಎಂತಹ ಅಪರೂಪದ ಶರಣೆ! ಇಂತಹ ಮಹಾಮಹಾ ವ್ಯಕ್ತಿಗಳನ್ನು ದರ್ಶಿಸುವ ಸೌಭಾಗ್ಯ ಒದಗಿದುದು ಬಸವಣ್ಣನ ಕೃಪೆಯಿಂದ ಅಲ್ಲವೆ....?† ಮಡಿವಾಳ ಮಾಚಯ್ಯನವರು ಹೇಳಿದರು.

'ಮಾಚಯ್ಯನವರೇ, ಶಿವಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ ಮಧ್ಯೆ ಮಧ್ಯೆ ನನ್ನ ಹೊಗಳಿಕೆಯೇಕೆ?' ಸಂಕೋಚಪಟ್ಟು ಬಸವಣ್ಣನು ನಸುನಕ್ಕು ನುಡಿದ.

'ಬೆಲೆಬಾಳುವ ಮುತ್ತುಗಳು ಸಮುದ್ರದ ತಳದಲ್ಲೋ, ಮನೆಯ ಪೆಟ್ಟಿಗೆಗಳಲ್ಲೋ ಇದ್ದರೆ ಅವುಗಳ ಬೆಲೆ ತಿಳಿಯುವುದೆ? ಚಿನ್ನದ ತಂತುವನ್ನು ತೆಗೆದುಕೊಂಡು ಅವುಗಳನ್ನು ಬಂಧಿಸಿದರೆ ಕೊರಳ ಹಾರವಾಗಿ ಎದ್ದು ಕಾಣುವುದು. ನೀನು ಆ ಸೂತ್ರವಾಗಿ ಈ ಎಲ್ಲ ಶರಣಮೌಕ್ತಿಕಗಳನ್ನು ಅನುಭವ ಮಂಟಪದಲ್ಲಿ ಪೋಣಿಸದಿದ್ದರೆ ಇವರೆಲ್ಲರ ವ್ಯಕ್ತಿತ್ವ ಜಗಕ್ಕೆ ಗೋಚರವಾಗುತ್ತಿತ್ತೇನಣ್ಣಾ?'

'ಇದು ಬಹು ದೊಡ್ಡ ಹೊಗಳಿಕೆಯ ಮಾತು, ಮಾಚಯ್ಯನವರೇ! ಮಾಡುವವರಾರು, ಮಾಡಿಸಿಕೊಳ್ಳುವವರಾರು? ನಾನು ನಿಮಿತ್ತಮಾತ್ರನು; ಕೂಡಲಸಂಗನ ಕೈಯೊಳಗಣ ಯಂತ್ರದ ಬೊಂಬೆ' ಬಸವಣ್ಣನು ನಿರ್ಲಿಪ್ತನಾಗಿ ನುಡಿದ.

'ಬಹು ಸಮಂಜಸ ಮಾತು, ಮಾಚಿದೇವರೇ! ಹುಟ್ಟಿದ ನದಿಗಳು ಮುಂದೆ ಹರಿದು ಒಂದರೊಡನೊಂದು ಸಂಗಮಿಸದಿದ್ದರೆ ಅವು ಜೀವನದಿಗಳಾಗದೆ, ಅಲ್ಪಕಾಲದಲ್ಲಿ ಬತ್ತುವುವು. ಜೀವಂತ ಬೃಹತ್ ನದಿಯೊಡನೆ ಸಂಗಮಿಸಿ ಬಲಗೊಂಡು ನಡೆದರೆ ಮಾತ್ರ ಸಮುದ್ರವನ್ನು ಸೇರುವುವು. ಬಸವಣ್ಣನು ಮಹಾ ಜೀವನದಿ: ಎಲ್ಲ ಕಾಲ, ದೇಶಗಳಲ್ಲಿ ಲಕ್ಷಾಂತರ ಹೃದಯಗಳನ್ನು ತಣಿಸುತ್ತ ಹರಿವ ಗಂಗೆ. ಈ ನದಿಯೊಡನೆ ಬಂದು ಬೆರೆಯದಿದ್ದರೆ ನಮ್ಮ–ನಿಮ್ಮಂತಹವರೆಲ್ಲ ಅಲ್ಪಾಯುಷಿ ನದಿಗಳಾಗಿಬಿಡುತ್ತೇವೆ. ಈ ಅನುಭವಮಂಟಪವು ಮಹಾಸಂಗಮಸ್ಥಾನ....ಇದರ ಮೂಲಚೇತನ ಬಸವ ತಂದೆ. ಅಂತೆಯೇ ನಾನಿಲ್ಲಿಗೆ ಧಾವಿಸಿ ಬಂದೆ' ಅಕ್ಕನು ಹೇಳಿದಳು.

ಮಹಾದೇವಿಯಕ್ಕ ಮಾತನಾಡಿದ ಮೇಲೆ ಮುಂದೆ ಮಾತಿಲ್ಲ. ಇಲ್ಲಿಗೆ ನಿರ್ವಚನತ್ವ! ಶರಣರೇ, ನಾನು ಹೊಗಳುವೆ ಎಂದು ತಪ್ಪು ಭಾವಿಸಬೇಡಿ. ಅಥವಾ ಅಕ್ಕನ ಮುಖಸ್ತುತಿಯನ್ನೂ ನಾನು ಮಾಡುತ್ತಿಲ್ಲ. ಎಲ್ಲ ವಚನಗಳಿಗೆ ಅಧಿಕೃತತೆಯ ಮುದ್ರೆಯನ್ನು ಒತ್ತುವವನು ನಾನು ಎಂಬುದು ತಮಗೆ ತಿಳಿದಿದೆ. ಇಷ್ಟೇ ಅಲ್ಲ ನೀವೆಲ್ಲರೂ ಕೂಡಿ ಈ ಅಲ್ಪನಿಗೆ, ನಿಮ್ಮ ಕರುಣೆಯ ಕಂದನಿಗೆ ಷಟ್ಸ್ಥಲಜ್ಞಾನಿ ಎಂದು ಸಹ ಅಭಿಮಾನದಿಂದ ಕರೆದಿರುವಿರಿ. ವಚನಗಳನ್ನು ಪರಿಷ್ಕರಿಸಬೇಕಾದ ನಾನು

ಯುಳ್ಳ ವಜ್ರವನ್ನು ಕೊಂಡ ವಜ್ರವ್ಯಾಪಾರಿಯಷ್ಟು ಆನಂದಿಸುತ್ತಿರುವೆ. ಏಕೆಂದರೆ ಅಕ್ಕನವರ ವಚನಪುಷ್ಪಗಳಲ್ಲಿ ಭಕ್ತಿಯ ಮಕರಂದ, ಸುಜ್ಞಾನದ ಸೌರಭ, ಸತ್ಕ್ರಿಯೆಯ ಸೌಂದರ್ಯ ಮೇಳವಿಸಿವೆ. ಉಪಮೆಗಳು ಅಪೂರ್ವ; ಭಾಷೆಯ ಗದ್ದಲವಿಲ್ಲ. ಸರಳ, ಸಮಂಜಸ ಶಬ್ದಗಳು; ಅನುಭವಪೂರಿತವಾದ ಹೇಳಿಕೆಗಳು ಹೃದಯವನ್ನು ಅರಳಿಸುತ್ತವೆ. ತನ್ನ ಹೃದಯವನ್ನು ಚೆನ್ನನಿಗೆ ತೆರೆದಿಟ್ಟ ಈ ತಾಯಿ ತನ್ನ ವಚನಗಳಿಂದ ಅನ್ಯರ ಹೃದಯವನ್ನು ಸದ್ಭಾವನೆಗಳಿಂದ ತುಂಬಿ, ಮಿಡಿಸುತ್ತಾಳೆ....' ಎಂದು ಚನ್ನಬಸವಣ್ಣನು ನಿರ್ಣಯಿಸಿ ನುಡಿದಾಗ,

'ಜಯ ಜಯ ಮಹಾದೇವಿಯಕ್ಕ, ಉಘೇ ಉಘೇ ಅಕ್ಕಮಹಾದೇವಿ' ಎಂಬ ಜಯಘೋಷ ಅನುಭವಮಂಟಪವನ್ನು ತುಂಬಿ ಮುಗಿಲನ್ನು ಮುಟ್ಟಿದಂತಿತ್ತು. ಅಕ್ಕನಾಗಮ್ಮ ಶರಣೆಯರ ಗುಂಪಿನಿಂದ ಎದ್ದು ಬಂದು,

'ಮಾತಿನ ಮಂಟಪ ಇನ್ನೂ ಮುಗಿಯಲಿಲ್ಲ; ದಣಿದು ಬಂದ ಮಗಳಿಗೆ ಉಪಚರಿಸುವುದು ಹೀಗೆಯೇ....?' ಎಂದು ನಕ್ಕು ನುಡಿದಳು.

ಪ್ರಭುದೇವರು ಹೇಳಿದರು:

'ಈಗ ಮಂಗಲವಾಗಲಿ, ಅದಕ್ಕೆ ಮುನ್ನ ಸಭೆಗೆ ಶರಣುಗೈಯಬೇಕು, ಮಹಾದೇವಿಯಕ್ಕ.'

ಅಕ್ಕಮಹಾದೇವಿ ನಟ್ಟನಡುವಿನ ವೇದಿಕೆಯ ಮೇಲೆ ನಿಂತು ಕೈಜೋಡಿಸಿ ಸಭೆಯನ್ನು ಉದ್ದೇಶಿಸಿ ನುಡಿದಳು:

> ಅಯ್ಯಾ, ನಿಮ್ಮ ಸಜ್ಜನ ಸದ್ಭಕ್ತರ ಕಂಡೆನಾಗಿ
> ಎನ್ನ ಕಂಗಳ ಪಟಲ ಹರಿಯಿತ್ತಿಂದು.
> ಅಯ್ಯಾ ನಿಮ್ಮ ಸಜ್ಜನ ಸದ್ಭಕ್ತರ ಶ್ರೀಚರಣಕ್ಕೆರಗಿದೆನಾಗಿ
> ಎನ್ನ ಹಣೆಯ ದುರ್ಲಿಖಿತ ತೊಡೆಯಿತ್ತಿಂದು.
> ಚನ್ನಮಲ್ಲಿಕಾರ್ಜುನಯ್ಯಾ,
> ನಿಮ್ಮ ಶರಣ ಸಂಗನಬಸವಣ್ಣನ ಪಾದವ ಕಂಡು
> ಮಿಗೆ ಮಿಗೆ ನಮೋ ನಮೋ ಎನುತಿರ್ದೆನಯ್ಯಾ !*

ಮಂಗಲದ ಬಳಿಕ ಶರಣ ಬಳಗವು ಸಂತಸದ ಅಮೃತವನ್ನು ಹೃದಯದ ಕೊಡದಲ್ಲಿ ಹೊತ್ತು ಚದರಿತು.

* * *

ಈಗ ಶರಣೆಯರ ಬಳಗ

ಅಕ್ಕನಾಗಮ್ಮ ಒಳಮನೆಗೆ ಕರೆದೊಯ್ದಳು, ನೀಲಾಂಬಿಕೆ-ಗಂಗಾಂಬಿಕೆಯರು ಪರಿಚಯ ಮಾಡಿಕೊಂಡು ಸಂಭ್ರಮದಿಂದ ಮಾತನಾಡಿಸಿದರು. ಗಂಗಾಂಬಿಕೆ ಪ್ರಸಾದ ಸಿದ್ಧತೆಗೆ ತೊಡಗುತ್ತಿದ್ದಂತೆ ನೀಲಾಂಬಿಕೆ ಅಕ್ಕಮಹಾದೇವಿಯ ಮೈಗೆ ಬಿಸಿಮಾಡಿದ ಎಣ್ಣೆಯನ್ನು ತಿಕ್ಕಿ, ನೆತ್ತಿಗೆ ಎಣ್ಣೆಯನ್ನು ಒತ್ತಿದಳು.

'ಮಳೆ, ಬಿಸಿಲು, ಗಾಳಿಗೆ ಸಿಕ್ಕಿ ಎಷ್ಟು ಕಂದಿರುವೆಯಲ್ಲಾ, ಮಹಾದೇವಿ; ಬಂಗಾರದಂತಹ ಚರ್ಮ ಸುಟ್ಟು ಹೋಗಿದೆ....' ಎಂದು ನೀಲಾಂಬಿಕೆ ಉದ್ಗರಿಸಿ ಎಣ್ಣೆಯನ್ನು ನವಿರಾಗಿ ತಿಕ್ಕಿದಾಗ ಅಕ್ಕಮಹಾದೇವಿ ಆ ವಾತ್ಸಲ್ಯಕ್ಕೆ ಮೂಕಳಾದಳು. ನೀಲಾಂಬಿಕೆಯ ಮಾತಿನಲ್ಲಿ ಮಾತೃತ್ವ ಪುಟಿಯುತ್ತಿತ್ತು. 'ನಾನು ತಣ್ಣೀರಿನಲ್ಲಿ ಮೀಯುವೆ, ಅವ್ವಾ' ಎಂದು ಅಕ್ಕಮಹಾದೇವಿ ನುಡಿದಾಗ, ನೀಲಾಂಬಿಕೆ ನಸುನಕ್ಕು ಹೇಳಿದಳು:

'ಕಾಡು-ಸ್ಮಶಾನದ ವಾಸ, ಭಿಕ್ಷಾನ್ನದ ಊಟ, ದಿಗಂಬರತ್ವ ಇವು ನಿನ್ನ ಗಂಡನ ಮನೆಯ ಉಪಚಾರಗಳವ್ವ. ಇದು ನಿನ್ನ ತೌರು; ಇಲ್ಲಿ ನಿನ್ನ ಮಾತು ನಡೆಯದು. ನೀನು ನಮ್ಮ ಪುಟ್ಟ ಮಗಳಷ್ಟೇ....' ಎಂದು ತಲೆ ನೇವರಿಸಿ, ಬಿಸಿನೀರಿನಿಂದ ತಲೆಯನ್ನು ತೊಳೆದಾಗ ಅಕ್ಕಮಹಾದೇವಿ ನೀಲಾಂಬಿಕೆಯ ಪಾದಗಳನ್ನು ಕಣ್ಣಿಗೆ ಒತ್ತಿಕೊಂಡಳು.

'ಅವ್ವಾ....ನಾನೆಂತಹ ಪುಣ್ಯವಂತೆ! ಬಸವಣ್ಣನಂತಹ ಅಪ್ಪ, ನಿನ್ನಂತಹ ತಾಯಿ....ಚನ್ನಮಲ್ಲಿಕಾರ್ಜುನನಂತಹ ಗಂಡ, ಪರಮ ಸುಖಿ ನಾನು! ಸಾಸುವೆಯಷ್ಟು ಸುಖಕ್ಕೆ ಸಂಸಾರಜೀವನದಲ್ಲಿ ಸಾಗರದಷ್ಟು ದುಃಖ. ತ್ಯಾಗ ಜೀವನದಲ್ಲಿ ಸಾಸುವೆಯಷ್ಟು ದುಃಖಕ್ಕೆ ಸಾಗರದಷ್ಟು ಸುಖ. ಅಲ್ಲವೇ ಅವ್ವಾ....?' ಮುಗ್ಧಳಾಗಿ ನೀಲಾಂಬಿಕೆಯನ್ನು ಕೇಳಿದಳು.

'ನೀನು ಬಲು ಜಾಣ ಮಗಳು, ಮಹಾದೇವಿ. ಮಾತಿನಲ್ಲಿ ನಿನ್ನಂತಹ ಚತುರೆ ನಾನಲ್ಲ. ಅನುಭವಮಂಟಪಕ್ಕೆ ಜ್ಞಾನಪಿಪಾಸುಗಳಾಗಿ ಬಂದ ದೇವರ ಮಕ್ಕಳ ಸೇವೆಯೊಂದೇ ನನ್ನ ಸರ್ವಸ್ವ, ಅದುವೇ ಮುಕ್ತಿಮಾರ್ಗ। ನಾನು ತಿಳಿದಿರುವೆ, ನಿಮ್ಮಂತಹವರ ಸೇವೆ ಮಾಡಿದರೆ ನೀವೆಲ್ಲರೂ ದೇವನಲ್ಲಿ ನನ್ನ ಪರವಾಗಿ ಮಾತನಾಡುವಿರಿ. ಎಲ್ಲರಿಂದ ಒಂದೊಂದು ಅಂಶ ಸಿಕ್ಕರೂ ನನ್ನ ಮುಕ್ತಿಪಾತ್ರೆ ತುಂಬುವುದು....' ನೀಲಾಂಬಿಕೆ ಮುಗುಳ್ನಕ್ಕು ಹೇಳಿದಳು.

'ನನಗೆ ಹಾಡಲು ಬರದು' ಎಂದು ಕೋಗಿಲೆ ಇಂಪಾಗಿ ಹೇಳಿದಂತೆ ಆಯಿತು ನಿನ್ನ ಮಾತು. ಮಾತಿನಲ್ಲಿ ಚತುರೆಯಲ್ಲ ಎಂಬುದನ್ನೇ ಎಷ್ಟು

ನೀಲಾಂಬಿಕೆ [illegible] ಸೀರೆಯನ್ನು ಗಂಟಿನಿಂದ ತೆಗೆದು ಕೊಟ್ಟಳು. ಅಕ್ಕಮಹಾದೇವಿ ಗಂಭೀರಳಾಗಿ ನುಡಿದಳು :

'ಈಗ ಬೇಡ, ಅವ್ವಾ....'

'ಮಗಳೇ, ಆವೇಶದ ವರ್ತನೆ ಆದರ್ಶದ ವರ್ತನೆಯಲ್ಲ. ಆ ಸಂದರ್ಭಕ್ಕೆ ನಿನ್ನ ದಿಗಂಬರತ್ವ ಚೆನ್ನಾಗಿ ಒಪ್ಪಿತು. ನಿನ್ನ ಪೂರ್ವ ಸಂಕೋಲೆ ಹರಿದು ಪುನರ್ಜನ್ಮ ಹೊಂದಿ, ಶರಣಬಳಗವನ್ನು ಕೂಡಿದಮೇಲೆ ಹಿಂದಿನ ದುರಂತ ನಾಟಕದ ಅವಶೇಷವಾಗಿ ಈ ದಿಗಂಬರತ್ವವಿನ್ನೇಕೆ ಬೇಕಮ್ಮಾ?' ತಲೆದಡವಿ ಕೇಳಿದಳು.

'ಹಾಗೇನಿಲ್ಲ, ತಾಯಿ....ಉಟ್ಟರೂ ಅಷ್ಟೇ ಬಿಟ್ಟರೂ ಅಷ್ಟೇ. ನನಗಾಗಿ ಬೇಡವಾದರೂ ನನ್ನನ್ನು ತನ್ನ ಮಧ್ಯೆ ಇರಿಸಿಕೊಂಡಿರುವ ಸಮಾಜದ ಸಲುವಾಗಿಯಾದರೂ ನಾನು ಉಡುವೆ. ಹಿಂದಿನ ಭಾವ-ಆವೇಶಗಳು ಈಗ ನನ್ನಲ್ಲಿಲ್ಲ. ನನ್ನ ಉದ್ದೇಶವಿಷ್ಟೇ—ಅಪ್ಪ ಬಸವಣ್ಣನವರ ದಿವ್ಯಹಸ್ತದಿಂದ, ಪ್ರಭುದೇವರ ಸನ್ನಿಧಿಯಲ್ಲಿ ಜಂಗಮದೀಕ್ಷೆಯನ್ನು ಹೊಂದಿ, ಕಾವಿಯ ವಸ್ತ್ರವನ್ನು ಉಡಬೇಕು; ಹಿಂದಿನ ದುರಂತ ನಾಟಕಕ್ಕೆ ಸಂಪೂರ್ಣ ತೆರೆ ಎಳೆದು, ಹೊಸ ಬಾಳಿನ ದಿವ್ಯದೃಶ್ಯವನ್ನು ಆರಂಭಿಸಬೇಕೆಂಬುದು....'

'ಅದೂ ಅರ್ಥಪೂರ್ಣವಾದುದೇ! ಹಾಗೆಯೇ ಮಾಡು, ಮಗಳೇ....' ನೀಲಾಂಬಿಕೆ ಒತ್ತಾಯಿಸಲಿಲ್ಲ.

ಅಕ್ಕಮಹಾದೇವಿ ಸಾಂಕೇತಿಕ ಜಂಗಮ ದೀಕ್ಷೆಯನ್ನು ಪಡೆದು, ಕಾವಿಯ ವಸ್ತ್ರವನ್ನು ಧರಿಸಿಕೊಂಡಳು–ಶರಣರ ಅನುಗ್ರಹವನ್ನು ಹೊದ್ದು, ಪುನರ್ಜನ್ಮ ಪಡೆಯುವಂತೆ.

೪೭. ಶಿವಯೋಗ ಸಾಧನೆಯಲ್ಲಿ

ಅನುಭವಮಂಟಪದ ಸದ್ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದ ಅಕ್ಕಮಹಾದೇವಿ ಅಲ್ಲಿಯ ಕಾರ್ಯಕಲಾಪಗಳನ್ನು ಕಂಡು ಬೆರಗಾದಳು. ಜನಸಾಮಾನ್ಯರನ್ನು ಜಾಗೃತಿಸುವ ಮಹಾಮಣಿಹವನ್ನು ಹೊತ್ತ ಅನುಭವಮಂಟಪವು ಮಾನವನ ಆರ್ಥಿಕ, ಸಾಮಾಜಿಕ, ನೈತಿಕ, ಧಾರ್ಮಿಕ, ಸಾಂಸ್ಕೃತಿಕ ಸರ್ವತೋಮುಖ ಪ್ರಗತಿಗೆ ಪ್ರಯತ್ನಿಸುವುದನ್ನು ಕಂಡಳು. ಬಾಹಿರಂಗಿಕ, ಸಮಷ್ಟಿಪ್ರಜ್ಞೆಯ ಉದ್ದೀಪನೆಯೊಡನೆ ಆಂತರಂಗಿಕ, ಆತ್ಮಸಾಕ್ಷಾತ್ಕಾರದ ಸಾಧನೆಗೂ ಮಾರ್ಗ ದರ್ಶನ ದೊರೆಯುತ್ತಲಿತ್ತು. ಸಂಜೆಯ ವೇಳೆಯ ಅನುಭವಗೋಷ್ಠಿ ನಡೆದ ಬಳಿಕ ಅತ್ಯುನ್ನತ ಮಟ್ಟದ ಸಾಧನೆಯ ಪಥದಲ್ಲಿರುವ ಸಾಧಕರು ಒಂದೆಡೆ ಕುಳಿತುಕೊಳ್ಳುತ್ತಲಿದ್ದರು. ಪ್ರಭುದೇವ, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮೇಶ್ವರ, ನೀಲಾಂಬಿಕೆ, ಅಕ್ಕನಾಗಮ್ಮ, ಲಿಂಗಮ್ಮ—ಇವರಲ್ಲಿ ಪ್ರಮುಖರು. ಅಂತರ್ಮುಖ ಸ್ವಭಾವದ ಅಕ್ಕಮಹಾದೇವಿಗೆ ಈ ಗೋಷ್ಠಿಯು ಬಹು ಹಿತವೆನಿಸಿತು. ತಮ್ಮತಮ್ಮ ಸಾಧನೆಯ ಹಂತಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುವಾಗ ಅಕ್ಕಮಹಾದೇವಿ ತನ್ನ ಅಂತರಂಗವನ್ನು ಬಹುದಿನಗಳಿಂದ ಕೊರೆಯುತ್ತಿದ್ದ ಹಂಬಲವನ್ನು ಎಲ್ಲರ ಮುಂದಿರಿಸಿದಳು :

'ಅಣ್ಣನವರೇ, ಕೋಟ್ಯಾಧೀಶ್ವರರಾದ ಗಂಡಂದಿರ ಪತ್ನಿಯರು ಮೈ ತುಂಬ ಅಲಂಕರಿಸಿಕೊಂಡು ಆ ವಸ್ತು-ವಡವೆಗಳ ಚರ್ಚೆಯಲ್ಲಿ ಹೆಮ್ಮೆಯಿಂದ ಮಾತನಾಡುವಾಗ, ನಡುವೆ ಬಂದು ಕುಳಿತ ಬಿಚ್ಚೋಲೆ ಗೌರಮ್ಮನಂತಹ ಬಡವೆಯೊಬ್ಬಳಂತೆ ನನ್ನ ಪರಿಸ್ಥಿತಿಯಾಗಿದೆ. ನಾನು ನನ್ನ ಚನ್ನಮಲ್ಲಿ ಕಾರ್ಜುನನಲ್ಲಿ ಬಿನ್ನವಿಸಿಕೊಳ್ಳುತ್ತಲಿರುವೆ :

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ ?
ರೂಪವಿದ್ದು ಫಲವೇನು ಗುಣವಿಲ್ಲದನ್ನಕ್ಕ ?
ಅಲಗಿದ್ದು ಫಲವೇನು ಮನವಿಲ್ಲದನ್ನಕ್ಕ ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ

'ಅಹುದು, ನಿನ್ನ ಅಭೀಪ್ಸೆ ಸಹಜವಾದುದು, ತಾಯಿ. ಮುಮುಕ್ಷುವು ಪಿಂಡಸ್ಥಲದಲ್ಲಿ ತನ್ನ ಆತ್ಮಸ್ವರೂಪವನ್ನು ಬೌದ್ಧಿಕವಾಗಿ ಅರಿತ ಬಳಿಕ ಅದನ್ನು ಪ್ರಾಣಲಿಂಗಿಸ್ಥಲದಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕು. ಪಿಂಡಜ್ಞಾನಸ್ಥಲದಲ್ಲಿ ತನ್ನ-ಪರಮಾತ್ಮನ ಸಂಬಂಧವನ್ನು ಬೌದ್ಧಿಕವಾಗಿ ಅರಿತವನು ಐಕ್ಯಸ್ಥಲದಲ್ಲಿ ಅದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾಗುತ್ತದೆ. ಬದ್ಧಜೀವಿಯು ಬುದ್ಧಜೀವಿಯಾಗಲಿಕ್ಕೆ ಕ್ರಮಿಸಬೇಕಾದ ಸಾಧನಾಪಥದಲ್ಲಿ ಆರು ಹಂತಗಳನ್ನು ಗುರುತಿಸಬಹುದು; ಇವೇ ಷಟ್ಸ್ಥಲಗಳು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಈ ಆರರಲ್ಲಿ ಮೊದಲೆರಡು ಆಚಾರಪ್ರಧಾನ, ಎರಡನೆಯವು ವಿಚಾರಪ್ರಧಾನ, ಕೊನೆಯವೆರಡು ಅನುಭಾವಪ್ರಧಾನ. ಮೊದಲನೆಯದು ಇಷ್ಟಲಿಂಗಪೂಜಾಸ್ಥಿತಿಯಲ್ಲಿ ನಿಲ್ಲಿಸಿದರೆ, ಎರಡನೆಯದು ಪ್ರಾಣಲಿಂಗಸಿದ್ಧಿಯಲ್ಲಿ, ಮೂರನೆಯದು ಭಾವಲಿಂಗಸಾಕ್ಷಾತ್ಕಾರದಲ್ಲಿರಿಸುವುದು. ತ್ಯಾಗಾಂಗ, ಭೋಗಾಂಗ, ಯೋಗಾಂಗಗಳೆಂದು ಇವುಗಳಿಗೆ ಹೆಸರು. ಇಷ್ಟಲಿಂಗಸಿದ್ಧಿ ಎಂದರೆ ಯಾಂತ್ರಿಕವಾಗಿ ಇಷ್ಟಲಿಂಗವನ್ನು ಪೂಜಿಸುವುದಲ್ಲ. ಭಕ್ತಸ್ಥಲದ ಲಕ್ಷಣಗಳಾದ ಶ್ರದ್ಧೆ, ಶರಣಾಗತಿ, ಅಂತರಂಗ ಶುದ್ಧಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಮಹೇಶ್ವರಸ್ಥಲದ ಲಕ್ಷಣಗಳಾದ ತತ್ತ್ವನಿಷ್ಠೆ, ಗಣಾಚಾರ, ಸಮಾಜಪ್ರಜ್ಞೆಗಳನ್ನು ಮೈಗೂಡಿಸಿಕೊಳ್ಳುವುದು. ಭಕ್ತಸ್ಥಲದಲ್ಲಿ ತನ್ನ ಜೀವನವನ್ನು ಶುದ್ಧೀಕರಿಸಿಕೊಂಡ ಸಾಧಕನು, ಮಹೇಶ್ವರಸ್ಥಲದಲ್ಲಿ ಸಮಾಜದ ಉದ್ಧಾರಕ್ಕೆ ನಿಲ್ಲುವನು. ನೋಡಮ್ಮಾ, ಆಧ್ಯಾತ್ಮಜೀವಿಗಳೆಂದರೆ ಬದುಕಿನ-ಸಮಾಜದ ಸಮಸ್ಯೆಗಳಿಗೆ ಬೆನ್ನು ತೋರಿಸಿ ಹೋಗುವವರಲ್ಲ; ನಿಂತು ಎದುರಿಸಿ ಉತ್ತರ ಕಂಡುಕೊಳ್ಳಬೇಕೆನ್ನುವವರು.

ಹೀಗೆ ಸಾಧನಾ ಮಾರ್ಗದಲ್ಲಿ ಸಾಗಿದಾಗ ಬರುವ ಎಡರು-ತೊಡರು, ಸುಖ-ದುಃಖ, ನೋವು-ನಲಿವು ಎಲ್ಲವನ್ನೂ ಶಿವಪ್ರಸಾದವೆಂದು ಸ್ವೀಕರಿಸಿ ನಿರಾಶೆಗೊಳ್ಳದೆ ಅಷ್ಟೇ ದೃಢತೆಯಿಂದ ಮುಂದೆ ಸಾಗುವ ತೃಪ್ತನೇ ಪ್ರಸಾದಿ. ನೀನು ಈ ತತ್ತ್ವಗಳನ್ನು ಆಗಲೇ ಅಳವಡಿಸಿಕೊಂಡಿರುವೆ. ಭಕ್ತಸ್ಥಲದ ಶರಣಾಗತಿ, ಮಹೇಶ್ವರಸ್ಥಲದ ದಿಟ್ಟ ತತ್ತ್ವನಿಷ್ಠೆ, ಪ್ರಸಾದಿಸ್ಥಲದ ಚಿತ್ತಸಮತೆ ನಿನ್ನಲ್ಲಿರದಿದ್ದರೆ ನೀನು ಈ ಸ್ಥಿತಿಗೆ ಬರಲು ಸಾಧ್ಯವಿರಲಿಲ್ಲ. ಮುಂದೆ ನೀನು

ಪ್ರಾಣಲಿಂಗಿಸ್ಥಲದ ಯೋಗಸಾಧನೆಗಾಗಿ ಈಗ ನಾವು ಮಾರ್ಗದರ್ಶನ ಮಾಡಬೇಕು....'

ಬಸವಣ್ಣನವರು ಮತ್ತೆ ಮುಂದುವರಿದು ಹೇಳಿದರು :

'ಯೋಗವು ಧರ್ಮದ ಸಾಧನಾಂಗ. ಬೌದ್ಧ, ಜೈನ, ವೈದಿಕ ಎಲ್ಲ ಮತಗಳಲ್ಲಿ ಇದು ಬಳಕೆಯಲ್ಲಿದ್ದರೂ, ಆ ಧರ್ಮದ ಮೂಲಸಿದ್ಧಾಂತಕ್ಕನು ಸರಿಸಿ ಇದರ ಗುರಿಯೂ ಬೇರೆಯಾಗುವುದು. ಪಾತಂಜಲಿಯ ಅಷ್ಟಾಂಗ ಯೋಗ ನಿರೀಶ್ವರಯೋಗವಾದ ಕಾರಣ ಅಲ್ಲಿ ದೇವರ ಕಲ್ಪನೆ, ದೈವೀಕರುಣೆ ಮುಂತಾದವಕ್ಕೆ ಅವಕಾಶವಿಲ್ಲ. ನಮ್ಮ ಶಿವಯೋಗದಲ್ಲಿ ದೇವನ ಅಸ್ತಿತ್ವ-ಕರುಣೆಗಳು ಪ್ರಮುಖವಾದ ಅಂಶಗಳು. 'ಯೋಗಶ್ಚಿತ್ತವೃತ್ತಿನಿರೋಧಃ' ಎಂಬ ಪಾತಂಜಲಿವಾಣಿಯಂತೆ ಚಿತ್ತವೃತ್ತಿಗಳನ್ನು ನಿವೃತ್ತಿಮಾಡುವುದೇ ಅಲ್ಲಿ ಪ್ರಮುಖ ಸಿದ್ಧಿ. ನಮ್ಮ ಯೋಗದ ಪ್ರಕಾರ ಚಿತ್ತವೃತ್ತಿಗಳನ್ನು ನಿವೃತ್ತಿಸಿ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡು, ಈ ಶುದ್ಧೀಕೃತ ಆತ್ಮಚೈತನ್ಯವನ್ನು ಪರಮಾತ್ಮನಲ್ಲಿ ಒಂದಾಗಿಸುವುದು. ಈಗಾಗಲೇ ಐದು ಪ್ರಮುಖ ಯೋಗಗಳು ಆಚರಣೆಯಲ್ಲಿವೆಯಷ್ಟೆ. ಆತ್ಮನಿಗೆ ಐದು ಶಕ್ತಿಗಳಿವೆ—ಪ್ರಾಣಶಕ್ತಿ, ಕ್ರಿಯಾಶಕ್ತಿ, ಧ್ಯಾನಶಕ್ತಿ, ಬುದ್ಧಿಶಕ್ತಿ, ಮತ್ತು ಭಾವಶಕ್ತಿ ಎಂಬಿವೇ ಆ ಪಂಚಶಕ್ತಿಗಳು. ಇವುಗಳನ್ನು ಬಳಸಿಕೊಂಡು ಕ್ರಮವಾಗಿ ಹಠಯೋಗ, ಕರ್ಮಯೋಗ, ರಾಜಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗ ಎಂಬುವು ವಿಕಾಸವಾಗಿವೆ. ಆದರೆ ನಮ್ಮ ಯೋಗವು ಈ ಐದೂ ಯೋಗಗಳ ಪ್ರಮುಖ ಅಂಶಗಳನ್ನೊಳಗೊಂಡು, ಮತ್ತೂ ಭಿನ್ನವಾದ ಅನೇಕ ತತ್ತ್ವಗಳನ್ನು ಒಳಗೊಂಡು ಸ್ವತಂತ್ರಯೋಗ ಎನ್ನಿಸಿಕೊಳ್ಳುತ್ತದೆ. ಇಲ್ಲಿ ಭಕ್ತಿಯು ಮಹತ್ವಪೂರ್ಣವಾದ ತತ್ತ್ವ. ಅದಿಲ್ಲದೆ ಸಾಧನೆಯಿಲ್ಲ. ಆದರೆ ಈ ಭಕ್ತಿಯು ಕುರುಡುನಂಬಿಗೆಯಿಂದ ಕೂಡಿರುವ ಮೂಢಭಕ್ತಿಯಲ್ಲ, ವೈಚಾರಿಕ ಭಕ್ತಿ; ಅರಿವಿನ ತೇಜದಿಂದ ಉದ್ದೀಪನೆಗೊಂಡುದು. ಇದು ಹೃದಯದಲ್ಲಿ ಹದುಳಿಗ ಭಾವವನ್ನು ಹುಟ್ಟಿಸಿ, ಸಂಕುಚಿತವಾದ ಪ್ರೇಮವನ್ನು ವಿಶಾಲ ಮಾಡಿ, ಮನಸ್ಸನ್ನು ವಿಶ್ವಭ್ರಾತೃತ್ವಕ್ಕೆ ಒಯ್ಯುವುದು. ಆದ್ದರಿಂದ ಈ ಎಲ್ಲ ಯೋಗಗಳಲ್ಲಿ ಒಂದೊಂದು ತತ್ತ್ವಗಳಿಗೆ ಪ್ರಾಮುಖ್ಯತೆ ಇದ್ದರೆ, ಶಿವಯೋಗವು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆ ಎಂಬ ಐದು ತತ್ತ್ವಗಳನ್ನು ಅಳವಡಿಸಿಕೊಂಡಿದೆ.

ಲಿಂಗವೆಂದರೆ ಆತ್ಮ. ಪಂಚಪ್ರಾಣಗಳನ್ನು ವಾಹನವಾಗಿ ಮಾಡಿಕೊಂಡು ಕಾರ್ಯಪ್ರವೃತ್ತವಾಗಿರುವ ಕಾರಣ ಆತ್ಮನಿಗೆ ಪ್ರಾಣಲಿಂಗ ಎಂದು ಹೆಸರು. ಪಂಚಪ್ರಾಣಗಳಿಗೆ ಈ ಆತ್ಮವು ಚೇತನ ನೀಡಿದರೆ, ಅವು ವಾಹನಗಳಾಗಿ ಆತ್ಮ ಶಕ್ತಿಯನ್ನು ಪ್ರಕಾಶಕ್ಕೆ ತರುವವು. ಇಷ್ಟಲಿಂಗವನ್ನು ಕರಕಮಲದಲ್ಲಿಟ್ಟು, ವಿವಿಧ ಪೂಜಾಪರಿಕರಗಳಿಂದ ಅರ್ಚಿಸಿದರೆ, ಪ್ರಾಣಲಿಂಗವನ್ನು ಹೃದಯ ಪೀಠದಲ್ಲಿಟ್ಟು, ಸದುಗುಣಗಳಿಂದ ಅರ್ಚಿಸಬೇಕು....'

'ಅಣ್ಣನವರೇ, ನನ್ನದೊಂದು ಸಂದೇಹ....' ಅಕ್ಕಮಹಾದೇವಿ ತಡೆದಳು.

'ಹೂಂ, ಹೇಳು ತಾಯಿ....'

'ಉದಕ, ಪತ್ರಿ, ಪುಷ್ಪ, ವಿಭೂತಿ, ಗಂಧ ಇವನ್ನು ಏಕೆ ಅರ್ಪಿಸಿ, ಅರ್ಚಿಸಬೇಕು ?'

'ಪೂಜೆಯನ್ನೇಕೆ ಮಾಡಬೇಕು ಎಂದು ಕೇಳಿದಂತಾಯಿತು, ಅಲ್ಲವೇ ? ನೋಡವ್ವಾ, ಈ ಸೃಷ್ಟಿ, ಇಳೆ, ಬೆಳೆ, ಗಾಳಿ, ಮಳೆ ಎಲ್ಲವೂ ಕರ್ತನ ಕೊಡುಗೆ. ಆ ದಾನವನ್ನುಂಡು ನಾವಿಲ್ಲಿ ಬದುಕಿದ್ದೇವೆ. ಇಷ್ಟೆಲ್ಲವನ್ನು ಕೊಟ್ಟ ಕರ್ತನಿಗೆ ಕೃತಜ್ಞತೆ ಅರ್ಪಿಸಬೇಡವೆ? ಆ ಕೃತಜ್ಞತೆಯ ಸಂಕೇತವಾಗಿಯೇ ಈ ಪೂಜೆ. ಮಳೆಯನ್ನು ಕೊಟ್ಟ ದೇವರಿಗೆ ಉದಕದ ಮಜ್ಜನ, ಬೆಳೆಯನ್ನು ಕೊಟ್ಟ ಅವನಿಗೆ ಪ್ರಸಾದದ ನೈವೇದ್ಯ. ಅವನು ನಾವು ಕೊಟ್ಟುದ್ದರಿಂದಲೇ ತೃಪ್ತಿಪಡುವವನೇನೂ ಅಲ್ಲ, ಆದರೆ ನಮ್ಮ ಆನಂದಕ್ಕಾಗಿ ನಾವು ಕೃತಜ್ಞ ರಾಗಿರಬೇಕು. ಇವುಗಳನ್ನು ಯಾಂತ್ರಿಕವಾಗಿ ಅರ್ಪಿಸಿದರೂ ಸಾರ್ಥಕ ವಾಗದು. ಜೊತೆಗೆ ತತ್ಸಂಬಂಧವಾದ ಸದುಗುಣಗಳನ್ನು ಅಳವಡಿಸಿಕೊಳ್ಳ ಬೇಕು. ಮಜ್ಜನಕ್ಕೆರೆಯುವ ಉದಕದೊಡನೆ ಕರುಣೆಯನ್ನೂ ಸೇರಿಸಿ, 'ಸಕಲ ಜೀವರಾಶಿಗೆ ಕರುಣೆಯನ್ನು ತೋರುವೆ' ಎಂಬ ಭಾವದಿಂದ ಎರೆಯಬೇಕು. ಅಂತರಂಗದ ಕಾಮನೆಗಳನ್ನು ಜ್ಞಾನಾಗ್ನಿಯಿಂದ ಸುಟ್ಟುರುಹಿದ ಭಸ್ಮವನ್ನು ಹಚ್ಚುವೆ; ಸದ್ವಿಚಾರದ ಕುಸುಮಗಳನ್ನು ಮುಡಿಸುವೆ, ಸದ್ಭಾವನೆಯ ಧೂಪವನರ್ಪಿಸುವೆ, ಅರಿವಿನ ಆರತಿ ಬೆಳಗುವೆ, ಸಂತೃಪ್ತಿಯ ನೈವೇದ್ಯ ಮಾಡುವೆ, ಸರಳ ಜೀವನದ ಗಂಧವನರ್ಪಿಸುವೆ ಎಂಬ ಭಾವನೆಯಿಂದ ಅರ್ಪಿಸುತ್ತ, ಪೂಜಿಸಬೇಕು. ಮಾನವೀಯತೆ ಇಲ್ಲದ ಆಧ್ಯಾತ್ಮಿಕತೆಗೆ ಅರ್ಥವೇ ಇಲ್ಲ, ಮಹಾದೇವಿಯಕ್ಕ. ಕೆಲವರು ಮಡಿವಂತರು, ಆಚಾರ ವಂತರು ಕ್ರೂರವಾಗಿ ವರ್ತಿಸುವುದನ್ನು ನೋಡಿದರೆ ಮಾನವೀಯತೆ ಇಲ್ಲದ ಅವರ ಪೂಜೆಯಿಂದ ಪ್ರಯೋಜನವೇನು ಎನಿಸದೆ ಇರದು. ತೆಂಗಿನಕಾಯಿ

... ಹೇಗೆ ಮುಟ್ಟಲಿ?' ಎಂದು ಹಿಂದೆಮುಂದೆ ನೋಡಿದರೆ, ಅಂಥ ಕಾಯಿಕರ್ಪೂರ ತೆಗೆದುಕೊಂಡು ದೇವರೇನು ಮಾಡುವನು, ಅಂಥವರಿಗೆ ಹೇಗೆ ಒಲಿವನು ? ಲಿಂಗಭಕ್ತಿ ಬಹು ಸುಲಭ, ಜಂಗಮಭಕ್ತಿ ಅಂದರೆ ಸಮಾಜಸೇವೆ ಕಠಕಷ್ಟ.... ನಿಜವಾದ ಆಧ್ಯಾತ್ಮಜೀವಿಗೆ ಮಾನವೀಯತೆಯೇ ಅಲಂಕಾರ....

ಸದುಗುಣಗಳಿಂದ ಪೂಜಿಸಿದ ಬಳಿಕ ಧ್ಯಾನವು ಅತಿ ಮುಖ್ಯ ಸಾಧನೆ. ಲಿಂಗದೇವನನ್ನು ಅಂಗೈಯಲ್ಲಿರಿಸಿ ಬೆಳಗನ್ನು ಪ್ರತಿಫಲಿಸುವ ಅದರ ಮುಖದ ಮೇಲೆ ದೃಷ್ಟಿಯಿರಿಸಿ, ಷಡಕ್ಷರಿಯ ಅನುಸಂಧಾನವನ್ನು ಮಾಡಬೇಕು. ಒಂದೊಂದು ಅಕ್ಷರಗಳನ್ನು ಉಸಿರಿನಲ್ಲಿ ತುಂಬಿ ಷಡ್‌ಚಕ್ರಗಳನ್ನು ಭೇದಿಸುವಂತೆ ಒಳಗೆ ಇಳಿಸಬೇಕು. ನವದ್ವಾರಗಳು ತಮ್ಮ ಪ್ರಾಕೃತಿಕ ಕಾರ್ಯಗಳನ್ನು ತಡೆದು ಧ್ಯೇಯವಸ್ತುವಿನತ್ತ ಮುಖ ಮಾಡಿದಾಗ, ಮೇಲಿನಿಂದ ಸತ್ವಯುತ ಪ್ರಣವ ಚಿಚ್ಛಕ್ತಿ ಇಳಿದುಬಂದು, ಆಧಾರಚಕ್ರದಲ್ಲಿ ಸುಪ್ತವಾಗಿ ಹುದುಗಿಕೊಂಡಿರುವ ಕುಂಡಲಿನಿಯನ್ನು ಚೇತನಿಸಿ, ಕಾರ್ಯೋನ್ಮುಖವಾಡಿ ಮೇಲಕ್ಕೆ ಹರಿವಂತೆ ಪ್ರಚೋದಿಸುವುದು. ಆಧಾರಚಕ್ರದಲ್ಲಿ ಕುಂಡಲಿನಿ ಅಂದರೆ 'ಜೀವನ' ಶಕ್ತಿ ಹುದುಗಿಕೊಂಡಿರುವಂತೆ ಏಳನೆಯ ಚಕ್ರವಾದ ಸಹಸ್ರಾರದಲ್ಲಿ ಶಿವನ ಶಕ್ತಿ ಸುಪ್ತವಾಗಿರುವುದು. ಕುಂಡಲಿನಿ ಜಾಗೃತವಾಗಿ ಆರೋಹಿಸ ತೊಡಗಿದಂತೆ, ಈ ಪರಾಶಕ್ತಿ ಪ್ರಚೋದಿತವಾಗಿ ಅವರೋಹಿಸತೊಡಗುವುದು. ಆಧಾರದಿಂದ ಸ್ವಾಧಿಷ್ಠಾನ, ಮಣಿಪೂರಕವನ್ನು ಕುಂಡಲಿನಿಯು ದಾಟುವಲ್ಲಿ ಸಹಸ್ರಾರದಿಂದ ಆಜ್ಞಾ, ವಿಶುದ್ಧಿಗಳನ್ನು ದಾಟಿ ಶಿವನ ಶಕ್ತಿ ಇಳಿದು, ಎರಡೂ ಅನಾಹತಚಕ್ರದಲ್ಲಿ, ಅಂದರೆ ಹೃದಯಕಮಲದಲ್ಲಿ ಬೆರೆಯುವವು. ಆಗ ಅಪಾರವಾದ ಆನಂದವಾಗುವುದು. ಅದೇ ನಿರ್ವಿಕಲ್ಪ ಸಮಾಧಿಯ ಅನುಭವ. ಆ ಆನಂದವನ್ನು ಸ್ಥಿರಪಡಿಸಿಕೊಂಡು ಸಮಾಧಿಯು ಉತ್ಥಾನವಾದ ಬಳಿಕವೂ ತನ್ನ ಪ್ರತಿಯೊಂದು ಕರ್ತವ್ಯಗಳಲ್ಲಿ, ವ್ಯವಹಾರದಲ್ಲಿ ಆ ಆನಂದವನ್ನು ಅನುಭವಿಸುತ್ತ ಬಾಳಬೇಕು. ಸಮಾಧಿಸ್ಥಿತಿಯನ್ನು ಹೊಂದಿದವನು ಲೋಕದ ಹಿತವನ್ನೇ ಗಮನಿಸದೆ ಅಂತರ್ಮುಖನಾಗಬಾರದು. ತನ್ನ ಆನಂದವನ್ನು ಇನ್ನೊಬ್ಬನೂ ಪಡೆಯಲು ಸಹಾಯಕನಾಗಬೇಕು. ಜಗದುದ್ಧಾರಕ್ಕೆ ಟೊಂಕ ಕಟ್ಟಿ ನಿಲ್ಲಬೇಕು....'

'ಈ ಜಗತ್ತು ಮಿಥ್ಯವಾದುದಾಗಿರುವಾಗ ಇದರ ಉದ್ಧಾರಕ್ಕೆ ಯತ್ನಿಸುವುದು ಏಕೆ, ಅಣ್ಣಾ ? ...

‘ಇದು ನಮ್ಮ ವಿಚಾರಧಾರೆಯಲ್ಲ, ಅಕ್ಕಮಹಾದೇವಿ; ಈ ಜಗತ್ತು ಮಿಥ್ಯವಲ್ಲ, ಇದು ಕರ್ತಾರನ ಕಮ್ಮಟ, ಶಿವನ ಲೀಲಾರಂಗ; ಆತ್ಮರುಗಳನ್ನು ಪರಮಾತ್ಮನ ಮಿಲನಕ್ಕೆ ಸಜ್ಜುಗೊಳಿಸುವ, ಪರಿಪಕ್ವಗೊಳಿಸುವ ಸಾಧನಾ ರಂಗ. ಆಧ್ಯಾತ್ಮಜೀವಿಯು ಇದರ ಚಿಂತೆಯನ್ನೇ ಮಾಡಬಾರದು ಎನ್ನುವಿಯಾ? ಇದು ಮಹಾ ತಪ್ಪು! ಅವನೇ ಹೆಚ್ಚು ಚಿಂತಿಸಬೇಕು, ಅವನಿಗೇ ಅದರ ಹೊಣೆ ಅಧಿಕವಾಗಿರುವುದು....’

‘ಅದು ಹೇಗೆ....?’

‘ನೋಡು, ಸಿರಿವಂತನೊಬ್ಬ ಮನೆಯನ್ನು ಕಟ್ಟಿಸಿ ಬಾಡಿಗೆಯ ಮೇಲೆ ಬೇರೊಬ್ಬನಿಗೆ ಕೊಡುವನು. ಬಾಡಿಗೆದಾರ ಬಹಳಷ್ಟು ಎಚ್ಚರಿಕೆಯಿಂದ ಮನೆಯನ್ನು ರಕ್ಷಿಸುವನೆ? ಇಲ್ಲ. ಆದರೆ ಮಗ? ಆ ಮನೆಯ ರಕ್ಷಣೆ ಮಾಡುವಾಗ ವಿಶೇಷ ಆಸಕ್ತಿ ವಹಿಸುವನು. ಏಕೆಂದರೆ ಅವನಿಗೆ ಅದು ತನ್ನ ಸ್ವತ್ತೆಂಬ ಅಭಿಮಾನ. ಹಾಗೆಯೇ ಆಧ್ಯಾತ್ಮಜೀವಿಗೆ ಈ ಜಗತ್ತು ಶಿವನ ಮನೆ; ಅವನು ದೇವರ ಮಗ. ಅಂದಾಗ ತನ್ನ ತಂದೆಯ ಆಸ್ತಿಯನ್ನು ವಿಶೇಷವಾಗಿ ರಕ್ಷಿಸುವನಷ್ಟೆ; ರಕ್ಷಿಸಬೇಕಷ್ಟೆ?’ ಬಸವಣ್ಣನವರು ಪ್ರಶ್ನಿಸಿದರು.

‘ಹಾಗಾದರೆ ನಿಮ್ಮ ವಿಚಾರಕ್ಕನುಸಾರವಾಗಿ ಆಧ್ಯಾತ್ಮಜೀವಿಯು ಸಮಾಜ ಸುಧಾರಣೆಯ ಕಾರ್ಯದಲ್ಲಿ ನಿಲ್ಲಬೇಕು; ಅವನಿಗೆ ನಾಡು, ನುಡಿ, ಜನಾಂಗ ಜಾಗೃತಿಯ ಸಮಷ್ಟಿಪ್ರಜ್ಞೆ ಇರಬೇಕು ಎಂದಾಯಿತಲ್ಲವೆ....?’

‘ನಿಶ್ಚಯವಾಗಿಯೂ; ನಾನು ಹೇಳಿದ ಎಲ್ಲ ತತ್ತ್ವಗಳನ್ನು ಮನದಟ್ಟು ಮಾಡಿಕೊಂಡು ಸಾಧನೆ ಮುಂದುವರಿಸು, ತಾಯಿ....ಪ್ರಾಣಲಿಂಗದ ಸಾಕ್ಷಾತ್ಕಾರದ ಬಳಿಕ ಭಾವಲಿಂಗಾನುಸಂಧಾನ ಮಾಡಬೇಕು....’ ಅಕ್ಕಮಹಾದೇವಿ ಕೃತಜ್ಞತಾಪೂರ್ವಕವಾಗಿ ಬಸವಣ್ಣ-ಪ್ರಭುದೇವರಿಗೆ ನಮಿಸಿ ತನ್ನ ಕೋಣೆಯ ಕಡೆಗೆ ಎದ್ದು ಹೋದಳು.

ಅಂದಿನಿಂದ ಅವಳ ಸಾಧನೆ ತೀವ್ರವಾಯಿತು. ಆಸನಸಿದ್ಧಿಯು ಅಳವಟ್ಟು ಒಂದು ಜಾವದ ಕಾಲ ಸಿದ್ಧಾಸನ, ಪದ್ಮಾಸನಗಳಲ್ಲಿ ಕುಳಿತುಕೊಳ್ಳಬಲ್ಲವಳಾದಳು. ಅವಳ ದೃಢತೆ, ನಿಷ್ಠೆಗಳನ್ನು ಕಂಡು ಶರಣರು ಅಚ್ಚರಿಪಟ್ಟರು. ಮನಸ್ಸು ಮೊದಮೊದಲು ನೆಲೆ ನಿಲ್ಲಲು ಪ್ರತಿಭಟಿಸುತ್ತಿತ್ತು. ಕಾಡಿನ ಆನೆಯನ್ನು ಪಳಗಿಸುವಂತೆ ಬಹಳಷ್ಟು ಸಹನೆಯಿಂದ ಅದನ್ನು ಪಳಗಿಸಬೇಕಾಗುತ್ತಿತ್ತು. ಕಾಲಾನಂತರದಲ್ಲಿ ಅದೂ ಒಗ್ಗಿಕೊಂಡು ಮೆಲ್ಲನೆ ಮಾತು

ಕೂಸು ಜೋಗುಳವನ್ನು ಆಲಿಸುತ್ತ ನಿಧಾನವಾಗಿ ಕಣ್ಣು ಮುಚ್ಚಿಕೊಂಡು ಮಲಗುವಂತೆ, ಮನಸ್ಸು ಮಂತ್ರವನ್ನು ಆಲಿಸುತ್ತ ಶಾಂತವಾಗುತ್ತಲಿತ್ತು.

ಚಿತ್ತವು ದಿನದಿನಕ್ಕೆ ನಿರ್ಮಲವಾಗತೊಡಗಿ, ನಿಶ್ಚಲವೂ ಆಗಲು ಕಲಿಯಿತು. ಯಾವ ಚಿಂತೆಗಳು, ಭಾವನೆಗಳು ಸುಳಿಯದಷ್ಟು ನಿಸ್ತರಂಗವಾಗಿ, ಧ್ಯೇಯವಸ್ತುವಿನ ಮೇಲೆ ಏಕಪ್ರಕಾರವಾಗಿ ನಿಲ್ಲತೊಡಗಿತು. ಆಸನಬದ್ಧಳಾಗಿ ಕುಳಿತ ಕೆಲಕಾಲದನಂತರ ಒಂದು ಬಗೆಯ ಮಿಡಿತ ನರಗಳಲ್ಲಿ ಪ್ರಾರಂಭವಾಗಿ, ವಿದ್ಯುತ್ತಿನ ಸಂಚಾರವಾದಂತೆನಿಸುತ್ತಿತ್ತು.

ಒಂದು ದಿವಸ ಸಂಜೆಯ ಅನುಭವಗೋಷ್ಠಿಯ ಬಳಿಕ ಅಕ್ಕನು ತನ್ನ ಕೋಣೆಯಲ್ಲಿ ಪೂಜೆಗೆಂದು ಕುಳಿತಿದ್ದಳು. ಪದ್ಮಾಸನದಲ್ಲಿ ಕುಳಿತು, ಎಡಗೈಯಲ್ಲಿ ಇಷ್ಟಲಿಂಗವನ್ನು ಇರಿಸಿಕೊಂಡು, ಶಾಂಭವಿಮುದ್ರೆಯನ್ನು ತಾಳಿ, ದೃಷ್ಟಿಯೋಗವನ್ನು ಮಾಡತೊಡಗಿದಳು. ಹೂವಿನ ಮಕರಂದವನ್ನು ಈಂಟಲಾರಂಭಿಸುವ ದುಂಬಿ ಮೊದಲು ಸ್ವಲ್ಪ ಸಂದಾಡುತ್ತ ಈಂಟಿದ ಬಳಿಕ ಉನ್ಮತ್ತವಾಗಿ, ಪ್ರಜ್ಞೆಯಳಿದು ಕುಳಿತಲ್ಲೇ ಮೈಮರೆತು ಸ್ಥಿರವಾಗಿ ನಿಲ್ಲುವಂತೆ, ಕಣ್ಣಾಲಿಗಳು ಮೊದಲು ಸ್ವಲ್ಪ ಚಲಿಸುತ್ತಿದ್ದರೂ ಕೆಲವಾರು ಕ್ಷಣಗಳಲ್ಲಿ ಸ್ಥಿರವಾಗಿ ಇಷ್ಟಲಿಂಗದಲ್ಲಿ ನೆಲೆ ನಿಂತವು. ಪ್ರಭುದೇವರು ತಮ್ಮ ಕೋಣೆಯಲ್ಲಿ ಕುಳಿತು ಏಕನಾದವನ್ನು ಮೀಂಟುತ್ತ ಹಾಡತೊಡಗಿದ್ದರು. ಏಕನಾದದ ಏಕಪ್ರಕಾರದ ಮಿಡಿತ, ಪ್ರಭುದೇವರ ಭಾವಪೂರ್ಣಧ್ವನಿ ಅಕ್ಕಮಹಾದೇವಿಯ ತನ್ಮಯತೆಗೆ ಪ್ರೋತ್ಸಾಹನೀಡಿದವು. ಆ ನಾದಸ್ಪಂದನಗಳನ್ನು ಗ್ರಹಿಸಿಕೊಂಡ ಹೃದಯ ತಾನೂ ಅನಾಹತಗಾನವನ್ನು ಪ್ರತಿಧ್ವನಿಸುತ್ತ ಹಾಡತೊಡಗಿತು. ಪ್ರಣವನಾದವು ಹೃದಯದಲ್ಲಿ ಮೊರೆಯತೊಡಗಿದಂತೆ, ನರಗಳು ಚೇತನಗೊಂಡವು. ನರಗಳೆಲ್ಲವು ವೀಣೆಯ ತಂತಿಗಳಂತಾಗಿ ತಾವೂ ಆತ್ಮಿಕ ವಾದ್ಯಗೋಷ್ಠಿಯಲ್ಲಿ ಪಾಲುಗೊಂಡು ಮಿಡಿಯತೊಡಗಿದವು. ಇಡೀ ಶರೀರವೇ ಒಂದು ವೀಣೆಯೆಂಬ ಅನುಭವವು ಅಕ್ಕಮಹಾದೇವಿಯಲ್ಲಿ ಮೂಡತೊಡಗಿತ್ತು.

ಗಾಯಕನಿಂದ ಆಜ್ಞಾಪಿತವಾದ ವಾದ್ಯವೃಂದವು ಸ್ವರಸಮ್ಮೇಳನದಲ್ಲಿ ತಲ್ಲೀನವಾದಾಗ ಗಾಯಕನು ಆ ಹಿನ್ನೆಲೆಯ ವಾದ್ಯಮೇಳವನ್ನು ಆಗಾಗ ತನ್ಮಯನಾಗಿ ಕೇಳುತ್ತ, ತನ್ನ ಗಾಯನವನ್ನು ಸ್ಥಗಿತಗೊಳಿಸುವಂತೆ, ಆತ್ಮನಿಂದ ಪ್ರಚೋದಿತವಾದ ಈ ದಿವ್ಯ ಗಾಯನವನ್ನು ಆತ್ಮನನ್ನು ತನ್ಮಯಗೊಳಿಸು

ಮೀಯಿಸಿದ ಪರಂಜ್ಯೋತಿಯ ಆ ಅನುಭವದಲ್ಲಿ ತನ್ನ ಭಾವನೆಗಳೆಲ್ಲ ಕರಗಿ ಹೋಗಿ, ಭಾವನಾತೀತ ಸ್ಥಿತಿಯಲ್ಲಿ ಉಳಿದಳು. ಆಧಾರಚಕ್ರದಲ್ಲಿ ಉದ್ದೀಪನಗೊಂಡು ಮೇಲೇರುತ್ತ ಬಂದ ಕುಂಡಲಿನಿಶಕ್ತಿಯು ಹೃದಯದಲ್ಲಿ ನಿಂತು, ಸಹಸ್ರಾರದಿಂದ ಇಳಿದು ಬಂದ ಪರಾಶಕ್ತಿಯೊಡನೆ ಸಂಗಮಿಸಿದಾಗ ಆನಂದದ ಬುಗ್ಗೆ ಪುಟಿಯತೊಡಗಿತು. ಆ ಆನಂದಾಮೃತವನ್ನು ದಣಿದುಂಡು ತೃಪ್ತಳಾಗಿ ಮೈಮರೆತಳು. ಅಂತರ್ಮನ ಹೊರ ಜಗತ್ತಿಗೆ ಕೇಳದಂತೆ ಹಾಡುತ್ತಿತ್ತು :

> ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ
> ಸುರಿವ ಅಮೃತವ ದಣಿದುಂಡ ಕಾರಣವು
> ತೊರೆದೆನು ಜನನ ಮರಣಗಳ*

ಅಕ್ಕಮಹಾದೇವಿ ಪೂಜೆಗೆ ಕುಳಿತು ಜಾವದ ಮೇಲಾಗಿತ್ತು. ರಾತ್ರಿಯ ಪ್ರಸಾದವನ್ನು ಇನ್ನೂ ಸ್ವೀಕರಿಸಿರದ ಆಕೆಗಾಗಿ ನೀಲಾಂಬಿಕೆ, ಗಂಗಾಂಬಿಕೆಯರು ನಿರೀಕ್ಷಿಸಿ, ಕಡೆಗೆ ಬರದಿರಲು ತಾವೇ ಕೋಣೆಯ ಎಡೆಗೆ ಬಂದರು. ಬಹಿರಂಗ ಪ್ರಪಂಚದ ಅರಿವು ಇಲ್ಲದೆ ಶಿಲಾಪ್ರತಿಮೆಯಂತೆ ಕುಳಿತ ಆಕೆಯನ್ನು ಕಂಡು ಗಂಗಾಂಬಿಕೆ ಅವಾಕ್ಕಾದಳು. ನೀಲಲೋಚನೆ ಸಂತಸದಿಂದ ಹೇಳಿದಳು:

'ಗಂಗಾ....ಈ ಅನುಭವಕ್ಕಾಗಿ ಮಹಾದೇವಿಯಕ್ಕನ ಹೃದಯ ಅನವರತ ಮೊರೆಯುತ್ತಿತ್ತು. ಕಾಲುದೀಪಕ್ಕೆ ಹಾಕಿದ್ದ ಹರಳೆಣ್ಣೆ ಮುಗಿದಂತೆ ತೋರುವುದು. ನಾನು ಹೋಗಿ ಅದರ ತುಂಬ ಎಣ್ಣೆ ಹಾಕುವೆ. ನೀನು ತಾಡಓಲೆಯನ್ನು, ಕಂಠವನ್ನು ತೆಗೆದುಕೊಂಡು ಬಾ. ಆಕೆಯ ಪಕ್ಕದಲ್ಲಿಡುವೆ ; ಉತ್ಥಾನವಾದ ಬಳಿಕ ಏನಾದರೂ ಬರೆಯಬೇಕು ಎನ್ನಿಸಬಹುದು....' ನೀಲಲೋಚನೆ ಶಬ್ದಮಾಡದೆ, ದೀಪದ ಬತ್ತಿ ಚಾಚಿ, ಕುಡಿ ತೆಗೆದು ಎಣ್ಣೆಯನ್ನು ಎರೆದಳು. ಗಂಗಾಂಬಿಕೆ ತಂದುಕೊಟ್ಟ ಬರವಣಿಗೆಯ ಸಲಕರಣೆಗಳನ್ನು ಬಲಗಡೆ ಇಟ್ಟು, ಬಿಸಿ ಮಾಡಿದ ಹಾಲನ್ನು, ಸಿಪ್ಪೆ ಬಿಡಿಸಿದ ಕಿತ್ತಲೆಯ ತೊಳೆಗಳನ್ನು, ಬಾಳೆಯ ಹಣ್ಣುಗಳನ್ನು ತಳಿಗೆಯಲ್ಲಿರಿಸಿ ಸಮೀಪದಲ್ಲಿಟ್ಟು, ಹೊರ ನಡೆದಳು—ಗಂಗಾಂಬಿಕೆಯೊಡನೆ.

'ನೀಲಾ, ಆದರ್ಶದ ಖಣಿ ಕಣೇ ! ಅಂತೆಯೇ ನೀನು ಅವರ ಮನಸ್ಸನ್ನು ಸೂರೆಗೊಂಡಿದ್ದೀಯ. ನೀನಿಲ್ಲದಿದ್ದರೆ ಅವರ ಬಾಳು ಬರಡಾಗುತ್ತಿತ್ತು, ನನ್ನ ಬದುಕು ಅರ್ಥಹೀನವಾಗುತ್ತಿತ್ತು. ನಿನ್ನ ಸೇವಾಭಾವನೆ ನೋಡಿದರೆ, ರಾಜಕುವರಿ ಎಂದು ಯಾರೂ ಊಹಿಸರು....' ಗಂಗಾಂಬಿಕೆ ಅಭಿಮಾನದಿಂದ ನುಡಿದಳು.

'ಬಿಡು ಗಂಗೇ....ನಿನ್ನ ಹೊಗಳಿಕೆಯು ಮಿತಿ ದಾಟಿತು. ನಿನ್ನದೇನು ಕಡಿಮೆಯೇ....? ನಾನು ಹೊರಗಿನ ಚಟುವಟಿಕೆಗಳಲ್ಲಿ ಭಾಗವಹಿಸಿ ಅಲ್ಪ ಸ್ವಲ್ಪ ಕೀರ್ತಿಯನ್ನಾದರೂ ಪಡೆಯುವೆ. ನೀನೋ ಎಲೆಮರೆಯ ಕಾಯಿಯಂತೆ ಎಲ್ಲಕ್ಕೂ ನಿರ್ಲಿಪ್ತಳಾಗಿ ದುಡಿಯುತ್ತಿಲ್ಲವೆ....?' ನೀಲಲೋಚನೆ ಹೇಳಿದಳು.

'ಮಹಾಮಂತ್ರಿಗಳ ಧರ್ಮಪತ್ನಿ ಎಂಬ ಹೆಮ್ಮೆಗಿಂತಲೂ ಶರಣರ ಸೇವಕಿ ಎಂಬ ಬಿರುದೇ ಸಾಕು ನನಗೆ. ಮಹಾವ್ಯಕ್ತಿಯ ಕೈಹಿಡಿದ ಭಾಗ್ಯ ನಮ್ಮದು. ಅವರು ಧರ್ಮದ ಭವನದಂತಿದ್ದರೆ, ನಾವು ಅದಕ್ಕೆ ಅಡಿಗಲ್ಲಾಗಿ ನಿಲ್ಲೋಣ....' ಪರಸ್ಪರ ಮಾತನಾಡಿಕೊಳ್ಳುತ್ತ ನೀಲಾಂಬಿಕೆ-ಗಂಗಾಂಬಿಕೆಯರು ಬಸವಣ್ಣ-ಪ್ರಭುದೇವರು ಕುಳಿತಿದ್ದಲ್ಲಿಗೆ ನಡೆದರು.

'ಅನಂತಕಾಲದಿಂದ ಹಾತೊರೆಯುತ್ತಿದ್ದ ಮನದ ಶಿಶುವು ಆತ್ಮಾನುಭವದ ತಾಯಮಡಿಲಲ್ಲಿ ಸುಖವಾಗಿ ನಿದ್ರಿಸುತ್ತಿದೆ, ಪ್ರಭುಗಳೇ.' ನೀಲಾಂಬಿಕೆ ಮಾರ್ಮಿಕವಾಗಿ ಹೇಳಿದಳು. ಕೇಳಿದ ಉಭಯತರೂ ಬೆರಗಾಗಿ, ಪ್ರಭುದೇವರು ಪ್ರಶ್ನಿಸಿದರು :

'ಏನನ್ನು ಕುರಿತು ಹೇಳುತ್ತಿರುವೆ, ತಾಯಿ....?'

ಅಕ್ಕಮಹಾದೇವಿಯ ಸಂಕಲ್ಪ ಇಂದಿಗೆ ಕೈಗೂಡಿದೆ. ಮನಸ್ಸು ಸಂಪೂರ್ಣವಾಗಿ ಧ್ಯೇಯವಸ್ತುವಿನ ಮೇಲೆ ನೆಲೆ ನಿಂತು, ತೂರ್ಯಾವಸ್ಥೆಯ ನಿರ್ವಿಕಲ್ಪ ಸಮಾಧಿಯಲ್ಲಿ, ಬಹಿಃಪ್ರಜ್ಞೆಯನ್ನು ಅಳಿದುಕೊಂಡು ಆಕೆ ಕುಳಿತುಬಿಟ್ಟಿರುವಳು."

'ಅಹುದೇ ? ಇದು ಅಪೂರ್ವಸಿದ್ಧಿಯಲ್ಲವೇ, ಅಣ್ಣನವರೇ ; ಕೈಗೂಡಲೂ ಪುಣ್ಯ ಬೇಕು. ಪ್ರಯತ್ನಿಸುವ ಎಲ್ಲರಿಗೂ ದೊರೆಯದೆ ಕೇವಲ ವಿಶೇಷ ಸಂಸ್ಕಾರವಿದ್ದವರಿಗಷ್ಟೇ ಕರಗತವಾಗುವುದು. ಆದರೊಂದು ಮುನ್ನೆಚ್ಚರಿಕೆ, ತಾಯಂದಿರೇ....ಯಾರೂ ಶಬ್ದಮಾಡಿ ಭಂಗತರದಂತೆ ಜಾಗ್ರತೆ ವಹಿಸಬೇಕು. ಗೂಡುಕಟ್ಟಿಕೊಂಡು ಅರ್ಧಂಬರ್ಧ ಪಕ್ವವಾಗಿರುವ ಚಿಟ್ಟೆಯನ್ನು ಬಲವಂತವಾಗಿ ಹೊರತೆಗೆದರೆ ಅದು ಅಪರಿಪೂರ್ಣತೆಯಲ್ಲಿ ಬಳಲುವಂತೆ ಆಕೆಯ ಸ್ಥಿತಿಯಾದೀತು' ಪ್ರಭುದೇವರು ಎಚ್ಚರಿಸಿದರು. ಆ ವಿಶೇಷ ಎಚ್ಚರಿಕೆಯನ್ನು ತಾನು ಈಗಾಗಲೇ ತೆಗೆದುಕೊಂಡಿರುವುದಾಗಿ ನೀಲಾಂಬಿಕೆ ನುಡಿದಳು.

'ಅದು ಸಾಮಾನ್ಯ ಚೇತನವಲ್ಲ, ಪ್ರಭುದೇವ ; ಶರಣಧರ್ಮಾಗಸದಲ್ಲಿ

೪೮. ಯೋಗಾಂಗ ತ್ರಿವಿಧಿಯ ರಚನೆ

ಅಕ್ಕಮಹಾದೇವಿಯು ಉತ್ಥಾನಗೊಂಡಾಗ ವೇಳೆ ಎಷ್ಟಾಯಿತೆಂದು ಅರಿವಾಗ ಲಿಲ್ಲ. ದೀವಿಗೆಯು ಸಾಕಷ್ಟು ಎಣ್ಣೆಯಿಂದ ತುಂಬಿದ್ದನ್ನು ನೋಡಿ ವಿಸ್ಮಯ ವಾಯಿತು. ದೀರ್ಘ ಕಾಲದವರೆಗೆ ಪದ್ಮಾಸನದಲ್ಲಿ ಕುಳಿತಿದ್ದರೂ ಸಹ ನೋವೆನಿಸದೆ, ಶರೀರವು ಅರಳೆಯಷ್ಟು ಹಗುರವಾಗಿದ್ದು ಅತೀಂದ್ರಿಯ ಅನುಭವವು ದಿವ್ಯಾನಂದವನ್ನು ನೀಡಿದ್ದಿತು. ಇಷ್ಟಲಿಂಗವನ್ನು ಧರಿಸಿ ಕೊಳ್ಳುತ್ತ 'ನನ್ನ ಅನುಭವವನ್ನು ಬರೆದಿಡಬೇಕು ಎನಿಸುತ್ತಿದೆ. ಓಲೆಯನ್ನು, ಓಲೆಯ ಕಂಠವನ್ನು ಒಡನೆಯೇ ಇರಿಸಿಕೊಳ್ಳಲಿಲ್ಲವಲ್ಲಾ....' ಎಂದುಕೊಂಡು ಮಗ್ಗುಲಿಗೆ ನೋಡಿದಾಗ ಅವು ಸಿದ್ಧವಾಗಿದ್ದವು. ಅವುಗಳ ಪಕ್ಕದಲ್ಲಿ ಕೇಸರಿ ಮಿಶ್ರಿತ ಹಾಲು, ಸಿಪ್ಪೆ ತೆಗೆದಿಟ್ಟ ಹಣ್ಣುಗಳಿದ್ದವು. ಇದು ನೀಲಾಂಬಿಕೆಯ ವ್ಯವಸ್ಥೆ ಇರಬೇಕು ಎಂದುಕೊಂಡು ಹೃದಯ ತುಂಬಿ ಬಂದಿತು. ಮಾತ್ರ ಪ್ರಸಾದವೆಂದು ಭಕ್ತಿಯಿಂದ ಸ್ವೀಕರಿಸಿ ತನ್ನ ಅನುಭವವನ್ನು ತ್ರಿಪದಿಯ ಮೂಲಕ ಬರೆಯಲಾರಂಭಿಸಿದಳು. ತುಂಬಿದ ಹೊಳೆ ಹರಿವಂತೆ, ಅನುಭವವು ತ್ರಿಪದಿಯ ರೂಪದಲ್ಲಿ ನಿರರ್ಗಳವಾಗಿ ಹರಿಯಿತು. ಬೆಳಗಿನ ಕೋಳಿ ಕೂಗಿದಾಗ ಮೇಲಕ್ಕೆದ್ದಳು. ಎಷ್ಟೋ ವರುಷಗಳ ಅಂತರಂಗದ ಹಸಿವೆ ಇಂದು ಹಿಂಗಿದಂತೆನಿಸಿ, ಸಂತೃಪ್ತಿಯು ಸರ್ವಾಂಗವನ್ನು ಬಳಸಿಕೊಂಡಿದ್ದಿತು. ಆ ಸಂತೃಪ್ತಿಯ ಅಲೆಗಳನ್ನು ವದನ ಸರಸಿಯಲ್ಲಿ ಇಂಬಿಟ್ಟುಕೊಂಡು, ಸುಪ್ರಭಾತದ ಪೂಜೆ ಮುಗಿಸಿ ಅನುಭವಗೋಷ್ಠಿಗೆ ನಡೆದಳು.

ಮುಂಜಾವಿನ ಪೂಜೆ ಪೂರೈಸಿ ಬಸವಣ್ಣ, ಪ್ರಭುದೇವ ಮತ್ತು ಚನ್ನ ಬಸವಣ್ಣನವರು ನೆರೆದ ಶರಣರ ಮಧ್ಯೆ ಚರ್ಚೆಗಾಗಿ ಕೈಗೆತ್ತಿಕೊಳ್ಳಬೇಕಾದ ವಿಷಯದ ಬಗ್ಗೆ ಯೋಚಿಸುತ್ತ ಕುಳಿತಿದ್ದರು. ಅಕ್ಕಮಹಾದೇವಿ ಪ್ರಸನ್ನ ವದನಳಾಗಿ ಅವರಿಗೆ ಪ್ರಣಾಮಿಸಲು ಅವರೂ ಮರುನಮಸ್ಕರಿಸಿದರು.

'ಬಹು ದಿನಸಗಳ ನಿನ್ನ ಬಯಕೆ ಕೈಸಾರಿತಲ್ಲವೇ, ಅಕ್ಕಾ? ಚನ್ನ ಮಲ್ಲಿಕಾರ್ಜುನನ ಪ್ರೇಮಪಾತ್ರ ಅರ್ಧಾಂಗಿನಿ ನೀನು. ಅಂತೆಯೇ ನಿನ್ನ ಸಾಧನೆಗೆ ಅವನು ಬಹುಬೇಗನೆ ಫಲವೀಯುವನು. ಕೂಡಲದಲ್ಲಿ ಸಗುಣ ಸಾಕ್ಷಾತ್ಕಾರ ಹೊಂದಿದನಂತರ ನಾನು ಇತ್ತ ಬಂದೆನಷ್ಟೆ. ಆಗ ನನ್ನ ಗಂಡ

ಜ್ಞಾನದ ದೀಪವಿರಿಸಿ ಪಶ್ಚಿಮದ ಬಾಗಿಲನ್ನು ತೆರೆದು, ಮೈಯೆಲ್ಲ ಕಣ್ಣಾಗಿ ಕಾಯುತ್ತಲಿದ್ದೆ. ಹನ್ನೆರಡು ವರುಷಗಳ ಘನಸಾಧನೆಯಿಂದ ಪರಿತಪಿಸಿದಾಗ ನನ್ನೊಡೆಯ ಕಣ್ತೆರೆದು, ಕೃಪೆತೋರಿ, ಹೃದಯದಲ್ಲಿ ಮೂರ್ತಿಗೊಂಡ.* ನಿನ್ನನ್ನು ಮಾತ್ರ ಅಷ್ಟು ದೀರ್ಘಕಾಲ ಕಾಯಿಸಲಿಲ್ಲ. ಮಕ್ಕಳ ಮೇಲಿರುವುದಕ್ಕಿಂತ ಹೆಂಡಿರ ಮೇಲೆ ಪ್ರೀತಿಯು ಹೆಚ್ಚಲ್ಲವೆ?' ಬಸವಣ್ಣ ಮುಗುಳ್ನಕ್ಕ.

'ಅಣ್ಣಾ....ಗುರಿಗೊಂದು ದಾರಿಯನ್ನು ಮೊಟ್ಟಮೊದಲಿಗೆ ಕಂಡುಹಿಡಿವವರಿಗೆ ಬಹು ಕಷ್ಟ. ಒಮ್ಮೆ ಕಂಡುಕೊಂಡು ರಾಜಮಾರ್ಗವನ್ನು ಹಾಕಿಕೊಟ್ಟ ಬಳಿಕ, ಹಿಂಬಾಲಿಸುವವರಿಗೆ ಕಷ್ಟವೆ? ನೀನು ನಮಗೆಲ್ಲ ದಾರಿದೀಪ....' ಅಕ್ಕಮಹಾದೇವಿ ಕೃತಜ್ಞತೆಯಿಂದ ನುಡಿದಳು.

'ಸರಿಯಾಗಿ ನುಡಿದೆ, ತಾಯಿ; ಗುಹೇಶ್ವರಲಿಂಗಕ್ಕೆ ವಿಳಾಸವಾಗಿರುವನು ಈ ಸಂಗನಬಸವಣ್ಣನು. ಭಕ್ತರು ದೇವನಿಗೆ ಬರೆಯಬೇಕಾದ ಬಿನ್ನಪದ ಓಲೆಗಳನ್ನು ಸಂಗನಬಸವಣ್ಣನ ವಿಳಾಸಕ್ಕೆ ಹಾಕಿದರೆ ಸಾಕು. ಏಕೆಂದರೆ ಸರ್ವವ್ಯಾಪಕನು, ನಿರಾಕಾರನು ಆದ ಆ ಪರಮಾತ್ಮನು ವಿಶೇಷವಾಗಿ ಕೇಂದ್ರೀಕೃತವಾಗಿ ಈ ಮಹಾಗುರುವಿನ ಆಶ್ರಯದಲ್ಲಿರುವನು....' ಪ್ರಭುದೇವರು ನಕ್ಕರು. ಬಸವಣ್ಣ ಗಂಭೀರಮುದ್ರೆ ಧರಿಸಿ ಹೇಳಿದ.'

'ಇದು ಬಹು ದೊಡ್ಡ ಮಾತು, ಪ್ರಭುದೇವರೇ; ಈಗಾಗಲೇ ಜನರು ನನ್ನನ್ನು 'ಧರ್ಮಗುರು', 'ಸಮಯಾಚಾರಿ' ಎನ್ನತೊಡಗಿರುವರು. ಈ ಹೊಗಳಿಕೆ ನನಗೆ ಬಹಳಷ್ಟು ವ್ಯಥೆಯನ್ನುಂಟುಮಾಡುತ್ತಿದೆ....'

'ಬಸವಣ್ಣಾ, ನಿನ್ನ ಬಂಧುಗಳಾಗಿ, ಸಮಕಾಲೀನರಾಗಿ ಇರುವ ಪುಣ್ಯ ನಮ್ಮದು. ಮುಂದಿನ ಜಗತ್ತು ನಿನ್ನಂಥ ಸರ್ವಾಂಗಪರಿಪೂರ್ಣ ಮಹಾಂತನನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಬಲ್ಲುದೆ? ಇಂತಹ ವ್ಯಕ್ತಿಯೋರ್ವನಿದ್ದ, ಇರಲು ಸಾಧ್ಯ ಎಂದು ಕಲ್ಪಿಸಿಕೊಳ್ಳಬಹುದೇ ಎಂಬ ಸಂಶಯ ನನಗೆ....' ಚನ್ನಬಸವಣ್ಣ ದನಿಗೂಡಿಸಿದ.

'ಅಷ್ಟಲ್ಲದಿದ್ದರೆ ನಿನ್ನ ಹೆಸರು ಮಂತ್ರವಾಗಿ ಜನಮನದಲ್ಲಿ ನಿಲ್ಲಬಹುದಿತ್ತೇ? ನೀನರಿಯೆ ಬಸವಣ್ಣಾ....ನಾಳಿನ ಜಗತ್ತು ದೇವರ ಇರವನ್ನೇ ಮರೆತು ನಾಸ್ತಿಕವಾಗಿ ನಿಂತರೂ, ನಿನ್ನ ಹೆಸರನ್ನು ಎಂದೂ ಮರೆಯದು. ಮಾನವತಾವಾದಿ ಎಂದು, ಸ್ವತಂತ್ರ ವಿಚಾರಕನೆಂದು, ದೀನರ ಉದ್ಧಾರಕನೆಂದು ಜಾತ್ಯತೀತ ರಾಷ್ಟ್ರನಿರ್ಮಾಪಕನೆಂದು, ಆರ್ಥಿಕ ಅಸಮಾನತೆಯನ್ನು

ತೊಡೆದ ಸಮತಾವಾದಿಯೆಂದು, ಶ್ರೀಸಾಮಾನ್ಯನಿಗೆ ಧರ್ಮಮಂದಿರದ ಹೆಬ್ಬಾಗಿಲು ತೆರೆದು ಇಂಬುಕೊಟ್ಟವನೆಂದು ಜಯಘೋಷ ಮಾಡುವುದು. 'ಧರ್ಮವನ್ನು ನಂಬಿದರೆ ಮೂಢನಂಬಿಕೆ, ಕರ್ಮವಾದ, ನಿರಾಶೆ, ಹೇಡಿತನಗಳು ಬರುವುವು' ಎಂಬ ವಿತಂಡವಾದಿಗಳು ನಿನ್ನ ಬದುಕನ್ನು ನೋಡಿ, ವೈಚಾರಿಕ ಶರಣ ಸಾಹಿತ್ಯವನ್ನೋದಿ ನಿಜವಾದ ಧರ್ಮದ ತಳಹದಿಯ ಮೇಲೆಯೇ ಮೌಢ್ಯತೆ ಇಲ್ಲದ, ವಾಸ್ತವವಾದಿತ್ವದ, ತತ್ತ್ವನಿಷ್ಠೆಯ, ವರ್ಗರಹಿತ, ವರ್ಣರಹಿತ, ಸಮಾಜ-ರಾಷ್ಟ್ರಗಳನ್ನು ಕಟ್ಟಬಹುದು ಎಂಬ ನಂಬಿಕೆ ತಾಳುವುದು....ಈಗ ನೀನು ವಿಚಾರವಂತ ಭಕ್ತರ ಮಂತ್ರಪುರುಷನಾಗಿದ್ದರೆ, ಶತಮಾನಗಳ ಬಳಿಕ ಕೋಟಿಕೋಟಿ ಶ್ರಮಜೀವಿಗಳ ಆರಾಧ್ಯಗುರುವಾಗುವೆ....' ಪ್ರಭುದೇವರು ಭಕ್ತಿಭಾವ ತುಂಬಿ ನುಡಿದರು.

'ಸಾಕುಸಾಕು ಪ್ರಭುವೇ! ಈ ಹೊಗಳಿಕೆಯ ಹೊನ್ನಶೂಲ ಸಾಕು ತಂದೆ....ನನ್ನ ಬದಲು ದೇವಾಧಿದೇವನನ್ನು ಹೊಗಳಿರಿ. ಕೇಳಿ ಪುನೀತನಾಗುವೆ....' ಸ್ವಲ್ಪ ನೊಂದುಕೊಂಡು ಬಸವಣ್ಣನು ವಿನೀತನಾಗಿ ಖಿನ್ನ ದನಿಯಲ್ಲಿ ಹೇಳಿದ.

'ಹೊಗಳಿಕೆಯಲ್ಲ ಬಸವಣ್ಣ, ಇದು ವಾಸ್ತವಿಕತೆ. ಕಾಯಕತತ್ತ್ವವನ್ನು ನೀಡಿ ದುಡಿತಕ್ಕೆ ಗೌರವವನ್ನು, ದೈವತ್ವವನ್ನು ತಂದುಕೊಟ್ಟು ಭೂಸ್ವರ್ಗವನ್ನು ನಿರ್ಮಾಣಮಾಡಿದ ನೀನು ಕಾಣದ ಆ ದೇವನಿಗಿಂತ ಮಿಗಿಲು. ಅವನನ್ನು ತೋರಿದವ ನೀನೆ ತಾನೆ! ದೇವನು ಮುಕ್ತಿಯನ್ನು ನೀಡುವವನು, ನೀನು ಕೊಡಿಸುವವನು, ನಾವು ಪಡೆಯುವವರು!' ಅಕ್ಕಮಹಾದೇವಿ ನುಡಿದಳು.

'ಆಯಿತು ತಾಯಿ; ನೀನೂ ಇವರ ಜಾಡಿನಲ್ಲೇ ನುಡಿವೆಯಾ? ಈ ಹೊಗಳುಭಟ್ಟಂಗಿಗಳ ಕೂಟ ಸಾಕು....! ಬೆತ್ತದ ಬುಟ್ಟಿಯಲ್ಲಿ ಅದೇನನ್ನು ತಂದಿರುವೆ ತೋರಿಸು....' ಬಸವಣ್ಣ ಮಾತಿನ ಪಥವನ್ನು ತಿರುಗಿಸಿದನು.

ಅಕ್ಕಮಹಾದೇವಿ ತಾನು ರಚಿಸಿದ ತ್ರಿಪದಿಗಳನ್ನು ಎದುರಿಗಿಟ್ಟಳು.

'ಕೃತಿಯ ಹೆಸರೇನು?' ಪ್ರಭುದೇವರು ಪ್ರಶ್ನಿಸಿದರು.

'ಯೋಗಾಂಗತ್ರಿವಿಧಿ ಎಂದು....'

'ವಿಷಯವ್ಯಾಪ್ತಿಯೇನು....?' ಚನ್ನಬಸವಣ್ಣನವರು ಕೇಳಿದರು.

'ಈಗಾಗಲೇ ನಾನು ನೂರಾರು ವಚನಗಳನ್ನು ಬರೆದಿರುವೆ. ಅವು ಸಮಗ್ರ ಜೀವನದ ವಿವಿಧ ಘಟನೆಗಳನ್ನು, ನಾನು ಹೇಳಲಿರುವ ತತ್ತ್ವಗಳನ್ನು ಒಳಗೊಂಡು ನುಡಿವ ಮೌಕ್ತಿಕಗಳು. ಆದರೆ ಈ ಕೃತಿಯು ವಿಶೇಷವಾಗಿ ವನ

ಯೋಗಸಾಧನೆಯ ದರ್ಪಣವಾಗಿ ಸ್ವಾನುಭಾವನನ್ನು ಪ್ರತಿಬಿಂಬಿಸಬೇಕೆಂದು ನನ್ನಿಚ್ಛೆ.'

'ಒಳ್ಳೆಯ ವಿಚಾರ....' ಎಂದು ಬಸವಣ್ಣ ಮೆಚ್ಚಿಗೆ ಸೂಸಿ, 'ನೀನೇ ಓದು ತಾಯಿ' ಎಂದ. ಅಕ್ಕಮಹಾದೇವಿಯು ತಂಬೂರಿಯನ್ನು ಮೀಂಟುತ್ತ ಜನಪದ ಗೀತೆಯ ಧಾಟಿಯಲ್ಲಿ ಹಾಡತೊಡಗಿದಳು. ಮೊದಲು ಗುರುಸ್ತೋತ್ರ ವನ್ನು ಮಾಡಿ ನಂತರ ಯೋಗಸಾಧನೆಯ ವಿವಿಧ ಹಂತಗಳಲ್ಲಿ ಸಾಧಕನ ಮನಃಸ್ಥಿತಿ, ಅವನು ಪಡೆಯುವ ಅನುಭವಗಳನ್ನು ಸುಶ್ರಾವ್ಯವಾಗಿ ಹಾಡಿ ದಳು :

ಮಾಗಮಾಸವು ಪೋಗಿ ಮೇಗೆ ಬಂದಿತು ಚೈತ್ರ
ಬೇಗ ಮಾಮರವು ತಳಿರೇರೆ ಅದ ಕಂಡು
ಕೂಗಿ ಕರೆಯಿತ್ತು ಕಳಕಂಠ ॥

ಒಂಬತ್ತು ವೆಜ್ಜದ ತುಂಬಿದ ಕೊಡನೊಳಗೆ
ಸಂಭ್ರಮದ ಮುತ್ತು ಇರುತಿಹುದು । ಅದರನುವ
ನಂಬಿಕೊಂಡವನೆ ಕಡುಜಾಣ ॥

ಕೋಡಗದ ಒಡಗೂಡಿ ಆಡುವ ನರಿನಾಯಿ
ಗೀಡಾದ ಮನೆಯ ಮುರಿದೆನು । ಮತ್ತೊಂದು
ಗೂಡಿನೊಳು ನಾನು ಮೆರೆದೆನು ॥

ಹಿತ್ತಲ ಬಾಗಿಲ ತೆರೆದು ಸತ್ತವನ ಎಬ್ಬಿಸಿ
ಹೆತ್ತಮ್ಮನ ಕರವ ಪಿಡಿಯಲು । ಅವಳೀಗ
ಇತ್ತಳು ತನ್ನ ಪದಕವನು ॥

ಕುಂಡಲಿಯ ಸರ್ಪನು ತುಂಡ ಮೇಲಕೆ ತೆಗೆಯೆ
ಮಂಡಲವು ಮೂರು ಬೆಳಗಾಗೆ ನಡುವಳ
ಖಂಡ ಜ್ಯೋತಿಯಲಿ ಬಯಲಾದೆ ॥*

ಹೃದಯವು ಸುಯಿಧಾನದ ಸರಸಿಯಾಗಿ, ತಾದಾತ್ಮ್ಯಭಾವದಿಂದ ಅಕ್ಕ ಮಹಾದೇವಿಯು ಹಾಡಿ ನಿಲ್ಲಿಸಿದಾಗ ತಂಬೂರಿಯನ್ನು ಬೆರಳುಗಳು ಮೀಂಟು ತ್ತಲೇ ಇದ್ದು, ಪರಮಾನಂದದ ಅಲೆಗಳು ಸುತ್ತಲೂ ಪ್ರವಹಿಸುತ್ತಿದ್ದವು. 'ಭಲೆ....ಭಲೆ....ಅದ್ಭುತ!' ಪ್ರಭುದೇವ ಉದ್ಗರಿಸಿದನು. ಬಸವಣ್ಣನು ಮಾತಿಗೆ ಮೀರಿದ ಸಂತೃಪ್ತಿಯ ನಗೆ ಸೂಸುತ್ತ ನುಡಿದ:

'ಶರಣ-ಶರಣೆಯರಿಗೆ ಶರಣುಶರಣಾರ್ಥಿ. ಯಾವ ವಿಷಯವನ್ನು ಪ್ರಸ್ತಾ

ಯವರು ತಮ್ಮ ನೂತನ ಕೃತಿಯ ಪರಿಚಯವನ್ನು ತಮಗೆ ಮಾಡಿಕೊಟ್ಟರು ವರು. ಈಗ ಅವರು ಹಾಡಿದ ತ್ರಿಪದಿಗಳ ಅರ್ಥ ನಿಮಗೆಲ್ಲ ಎಷ್ಟಾಯಿತು ಎಂಬುದನ್ನು ಅರಿಯೋಣ. ತಿಳಿಯದಿದ್ದರೆ ಸ್ವತಃ ಅನುಭಾವಶಿಖಾಮಣಿಗಳಾದ ಅವರೇ ಬಿಡಿಸಿ ಹೇಳಬಹುದು.'

ಅಪ್ಪಣ್ಣನ ಸತಿ ಲಿಂಗಮ್ಮ ಹೇಳಿದಳು :

'ಅಜ್ಞಾನದ ಅವಸ್ಥೆ, ಅಪ್ರಬುದ್ಧತೆ, ಲೌಕಿಕತೆಯ ಮಾಘಮಾಸವು ಹೋಗಿ, ಸುಜ್ಞಾನೋದಯವಾಗಿ, ಪ್ರಬುದ್ಧತೆ ಪಡಿಮೂಡಿದ ವಸಂತಋತು ಬಂದಾಗ, ಸದ್ಭಕ್ತಿಯ ಮಾವಿನ ವೃಕ್ಷ ಚಿಗುರೊಡೆವುದು. ಆಗ ಜೀವನೆಂಬ ಕೋಗಿಲೆ ಪರಶಿವನೆಂಬ ಸಂಗಾತಿಯನ್ನು ಕೂಗಿ ಕರೆಯತೊಡಗುವುದು....'

'ನವದ್ವಾರಗಳಿಂದ ಕೂಡಿರುವ ಈ ಶರೀರವೆಂಬ ಕೊಡದಲ್ಲಿ ಆತ್ಮವೆಂಬ ಮುತ್ತು ನೆಲೆಸಿರುತ್ತದೆ. ಅದರ ರಹಸ್ಯವನ್ನು ತಿಳಿದು, ಪಡೆದುಕೊಳ್ಳುವವನೇ ನಿಜವಾದ ಜ್ಞಾನಿ....' ಅಕ್ಕನಾಗಮ್ಮ ವಿವರಿಸಿದಳು.

'ಮನವೆಂಬ ಕಪಿಯ ಸ್ನೇಹ ಮಾಡಿಕೊಂಡು ಆಟವಾಡುವ ಪಂಚ ಕರ್ಮೇಂದ್ರಿಯ ಎಂಬ ನಾಯಿಗಳು, ಪಂಚಜ್ಞಾನೇಂದ್ರಿಯ ಎಂಬ ನರಿಗಳು, ಇವಕ್ಕೆ ಕ್ರೀಡಾರಂಗವಾದ ಈ ಪ್ರಾಕೃತಿಕ ಶರೀರವನ್ನು ಮುರಿದು ಅಪ್ರಾಕೃತಿಕ ದೈವೀಶರೀರವನ್ನು ನಾನು ಹೊಂದಿದೆನು....' ಮೋಳಿಗೆ ಮಾರಯ್ಯನವರ ಪತ್ನಿ ಮಹಾದೇವಿಯಮ್ಮ ಅರ್ಥೈಸಿದಳು.

ನೀಲಲೋಚನೆ ವಿವರಿಸಿದಳು :

'ಹಿತ್ತಿಲ ಬಾಗಿಲೆಂದರೆ ಆಧಾರಚಕ್ರ. ಅದನ್ನು ತೆರೆದು ಸತ್ತಂತಿದ್ದ ಕುಂಡಲಿನಿ ಶಕ್ತಿಯನ್ನು ಜಾಗ್ರತಿಸಿ, ದೈವೀಶಕ್ತಿಯಾದ ಚಿಚ್ಛಕ್ತಿಯ ಕರವನ್ನು ಹಿಡಿಯಲು, ಆಕೆ ಮುಕ್ತಿಪದವಿಯ ಪದಕವನ್ನು ಕೊಟ್ಟಳು....'

'ಹೀಗೆ ಕುಂಡಲಿನಿಯ ಸರ್ಪನು ತನ್ನ ತುಂಡ ಮೇಲಕ್ಕೆ ತೆಗೆಯಲು, ತ್ರಿಕೂಟ ಸ್ಥಾನವಾದ ಆಜ್ಞಾಚಕ್ರವು ಬೆಳಗಿತು; ಆಗ ಸಹಸ್ರಾರದಲ್ಲಿ ನೆಲೆನಿಂತ ಅಖಂಡ ಜ್ಯೋತಿಯಲ್ಲಿ ಬಯಲಾದೆ....' ವಚನಗಾಯನ ಕಾಯಕದ ಮಾಯಿದೇವಿ ಹೇಳಿದಳು :

'ಎಲ್ಲರೂ ಸಮರ್ಪಕವಾಗಿ ಬಿತ್ತರಿಸಿದರು. ಮಹಾದೇವಿಯಕ್ಕಾ, ನಿನಗೆ ಸಮಂಜಸವೆನಿಸಿತೆ ?' ಬಸವಣ್ಣ ಕೇಳಿದ.

'ತಮ್ಮಂತಹವರ ಮುಂದೆ ನಿಂತು ಈ ಮಹಾನುಭಾವಿಗಳ ವಾಣಿಯಲ್ಲಿ ತಪ್ಪು ತೆಗೆಯುವುದೇ; ಆ ಧಾರ್ಷ್ಟಿಕತನ ನನಗಿಲ್ಲ, ಗುರುವೆ....ಈ ಕೃತಿಯು ಇನ್ನೂ ಪೂರ್ಣವಾಗಿಲ್ಲ. ಆತ್ಯಂತಿಕ ಅನುಭವವು ಕರಗತವಾದ ಬಳಿಕ ಇದಕ್ಕೆ

'ಹಾಗೇ ಆಗಲಿ ತಾಯಿ, ಇಲ್ಲಿಗೆ ನೀನು ಪ್ರಾಣಲಿಂಗ ಸಾಕ್ಷಾತ್ಕಾರದ ಹಂತವನ್ನು ಮುಟ್ಟಿದಂತಾಯಿತು....' ಪ್ರಭುದೇವ ಹೇಳಿದ.

'ಅಣ್ಣನವರೇ, ನಿನ್ನೆ ನನ್ನ ಮುಂದೆ ಒಂದು ಹೊಸ ಪ್ರಪಂಚವನ್ನೇ ತೆರೆದಿಟ್ಟ ಅನುಭವವಾಯಿತು. ಈ ಆತ್ಮಾನಂದಕ್ಕಾಗಿ ಅದೆಷ್ಟು ಹಂಬಲಿಸಿದ್ದೆನೆಂದರೆ ಕಾಡಿನ ಹಕ್ಕಿಪಕ್ಷಿಗಳನ್ನು ಸಹ ಹಂಬಲ ತುಂಬಿ ಕೇಳುತ್ತಿದ್ದೆ: 'ಎಲೈ ಭ್ರಮರವೇ, ನೀನು ಮಕರಂದಪ್ರಿಯಳು; ನನ್ನ ಪರಶಿವನು ಸಹ ಭಕ್ತಿರಸ ಮಕರಂದಪ್ರಿಯನು. ಮಾಮರವೇ, ನೀನು ರುಚಿಯಾದ ಫಲಗಳನ್ನು ನೀಡಿದರೆ ನನ್ನ ದೇವನು ಮಹಾವೃಕ್ಷವಾಗಿ ಮುಕ್ತಿಪದವಿ ಎಂಬ ಫಲವನ್ನು ನನಗೀಯುವನು. ಬೆಳುದಿಂಗಳೇ, ನೀನು ನಿನ್ನ ತಂಗಿರಣಗಳಿಂದ ಜಗದ ಜನರನ್ನು ಆನಂದಪಡುವಂತೆ ಮಾಡುವೆ; ನನ್ನ ಪರಶಿವನು ತನ್ನ ಕಾರುಣ್ಯ ಕಿರಣಗಳಿಂದ ಭಕ್ತರನ್ನು ಮುದಗೊಳಿಸುವನು. ಕೋಗಿಲೆಯೆ, ಇನಿದನಿಯಿಂದ ನೀನು ಜನಮನವ ತಣಿಸಿದರೆ, ನಾದಲೋಲ ಪರಮಾತ್ಮನು ಅನಾದಿಗಾಯಕನೆಂದು ಬಿರುದು ತಾಳಿ, ಓಂಕಾರವನ್ನು ಹಾಡಿ ಆ ನಾದಸ್ಪಂದನದಿಂದಲೇ ಸೃಷ್ಟಿಯ ರಚನೆಗೆ ಕಾರಣೀಭೂತನಾಗಿರುವನು. ಹೀಗೆ ಅನೇಕ ಅವನ ಗುಣಗಳು ನಿಮ್ಮಲ್ಲಿವೆ, ನೀವು ಅವನ ಇರುಹನ್ನು ಬಲ್ಲಿರಾ?'* ಎಂದು ಪರಿತಪಿಸಿ ಕೇಳುತ್ತಲಿದ್ದೆ.

ಕಸ್ತೂರಿಮೃಗವು ತನ್ನ ಹೊಕ್ಕುಳದಲ್ಲಿ ಕಸ್ತೂರಿಯನ್ನು ಇರಿಸಿಕೊಂಡು ಸುತ್ತಲೂ ಅರಸಿ ಬಳಲುವಂತೆ ನಾನೂ ಆ ಪರಮನಿಗಾಗಿ, ಅವನ ಕಾರುಣ್ಯದ ಆನಂದಕ್ಕಾಗಿ ದಿಕ್ಕೆಟ್ಟು ಅರಸುತ್ತಲಿದ್ದೆ. ಆದರೆ ನಿನ್ನೆಯ ಅನುಭವದಿಂದ ವಿಸ್ಮಿತಳಾಗಿ ಅವನನ್ನು ಕೇಳಿದೆ:

ಎನ್ನ ನಾನರಿಯದ ಮುನ್ನ ಎಲ್ಲಿರ್ದೆ ಹೇಳಯ್ಯಾ?
ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆ.
ಅಯ್ಯಾ, ಎನ್ನೊಳಗೆ ಇನಿತಿರ್ದು ಮೈದೋರದ ಭೇದವ
ನಿಮ್ಮಲ್ಲಿ ಕಂಡೆ ಕಾಣ ಚನ್ನಮಲ್ಲಿಕಾರ್ಜುನಾ.†

ಹಾಲಿನಲ್ಲಿರುವ ತುಪ್ಪದಂತೆ, ಸೂರ್ಯಕಾಂತದೊಳಗಣ ಅಗ್ನಿಯಂತೆ, ಅಡಗಿಕೊಂಡಿರುವ ಚನ್ನಮಲ್ಲಿಕಾರ್ಜುನನನ್ನು ಕಂಡು ಕಣ್ತೆರೆದೆನು, ಎಚ್ಚರಗೊಂಡೆನು; ಇಲ್ಲಿಯೇ ಇದ್ದು ಮೈದೋರದ ಅವನ ಲೀಲೆಗೆ ಅಚ್ಚರಿಪಟ್ಟೆನು.'

ಹಿಂದಿನ ದಿನದ ಸವಿ ಅನುಭವವನ್ನು ನೆನಪಿಸಿಕೊಂಡು ಅಕ್ಕಮಹಾದೇವಿ ನುಡಿದಳು. ಬಸವಣ್ಣ ಆಗ ಹೇಳಿದ:

'ಮುಂದಿನ ಅನುಭವವೇ ಭಾವಲಿಂಗ ಸಾಕ್ಷಾತ್ಕಾರ, ಮಹಾದೇವಿಯಕ್ಕ. ಆ ದೈವೀಚೈತನ್ಯ ಅಂತರಂಗದಲ್ಲಿ ಅಡಗಿಕೊಂಡಿರುವುದನ್ನು ಕಂಡಂತೆ, ಅದೇ 'ತತ್ತ್ವ'ವು ಜಗತ್ತಿನಲ್ಲಿ ಹಾಸುಹೊಕ್ಕಾಗಿ ತುಂಬಿರುವುದನ್ನೂ ಕಾಣಬೇಕು. ಈ ಶರಣಶರಣೆಯರಲ್ಲಿ ಅನೇಕರು ತತ್ಸಾಧನೆಯಲ್ಲಿ ತೊಡಗಿರುವರು. ಕೆಲವರು ಪಥದಲ್ಲಿದ್ದಾರೆ. ಮತ್ತೆ ಕೆಲವರು ಗುರಿ ಮುಟ್ಟಿದ್ದಾರೆ. ಅಂತೂ ಶರಣೆಯರ ಸಂಕುಳದಲ್ಲಿ,

> ಭ್ರುಕುಟಿಯ ಹಿಡಿದು ನಿಟಲನಯನನ ಬೆರೆದಳು ಅಕ್ಕಮಹಾದೇವಿ
> ಶಿಖಾಚಕ್ರವಿಡಿದು ಶಿವನ ಬೆರೆದಳು ಅಕ್ಕನಾಗಾಯಿ.
> ಪಶ್ಚಿಮ ಚಕ್ರವಿಡಿದು ಪರಮನಾದಳು
> ಕೂಡಲಸಂಗನ ಮರುಳು ಮಗಳು ನೀಲಲೋಚನೆ.*

ಇದು ಸ್ತ್ರೀಕುಲವು ತಲೆ ಎತ್ತಿ ಹೆಮ್ಮೆಪಡಬಲ್ಲ ಅಪೂರ್ವಸಾಧನೆಯಲ್ಲವೇ, ಪ್ರಭುಗಳೇ?' ಬಸವಣ್ಣನು ಹೀಗೆ ಮಾತನಾಡಿ ನೀಲಾಂಬಿಕೆಯನ್ನು ಉದ್ದೇಶಿಸಿ ಹೇಳಿದ:

'ನೀಲಾ, ಮುಂದಿನ ಭಾವಲಿಂಗಾನುಸಂಧಾನ ಮಾಡುವ ಸಾಧನೆಯನ್ನು ಅಕ್ಕಮಹಾದೇವಿಗೆ ಹೇಳಿಕೊಡು. ಮಹಾದೇವಿಯಕ್ಕಾ, ಈ ನೀಲಲೋಚನೆ ಯೋಗಸಿದ್ಧಿಯಲ್ಲಿ ಆತ್ಯಂತಿಕ ಸ್ಥಿತಿಯನ್ನು ಮುಟ್ಟಿದ್ದಾಳೆ. ಅಪ್ಪಣ್ಣನವರ ಸತಿ ಲಿಂಗಮ್ಮನೂ ಬಹಳ ಬಲ್ಲಿದಳು. ಇವರಿಂದ ಮುಂದಿನ ಸಾಧನೆಯಲ್ಲಿ ಪ್ರಾಯೋಗಿಕವಾಗಿ ಪರಿಣತಿ ಪಡೆ.'

ಆಗ ಪತಿಯ ಅನುಜ್ಞೆಯಂತೆ ನೀಲಾಂಬಿಕೆ ಹೇಳಿದಳು:

'ಭಾವಲಿಂಗ ಎಂದರೆ ಬ್ರಹ್ಮಾಂಡಗತ ದೇವಚೈತನ್ಯ. ತಾತ್ತ್ವಿಕ ದೃಷ್ಟಿಯಿಂದ ಅದನ್ನು ಮಹಾಲಿಂಗ ಎಂದು ಕರೆದರೆ, ಸಾಧನಾತ್ಮಕ ದೃಷ್ಟಿಯಿಂದ ಭಾವಲಿಂಗ ಎನ್ನುತ್ತೇವೆ. ಈ ಮಹಾಚೇತನವು ಹೂಮಾಲೆಯೊಳಗಣ ಸೂತ್ರದಂತೆ ಹಾಸುಹೊಕ್ಕಾಗಿ ಜಗತ್ತಿನಲ್ಲಿದ್ದು ಇದನ್ನು ಕಂಡುಕೊಂಡು, ಪೂಜ್ಯ-ಪೂಜಕ-ಪೂಜೆಯ ತ್ರಿಪುಟಿಯಳಿಯುವುದೇ ಭಾವಲಿಂಗಸಾಕ್ಷಾತ್ಕಾರ. ಪ್ರಾಣಲಿಂಗ ಸಾಕ್ಷಾತ್ಕಾರದಲ್ಲಿ ತನ್ನನ್ನು ತಾನರಿತರೆ, ಇಲ್ಲಿ ತಾನೇ ತಾನಾಗುವನು. ಮೊದಲು ತನ್ನಲ್ಲಿ ಅವನನ್ನು ಕಂಡರೆ, ಕೊನೆಯ ಹಂತದಲ್ಲಿ ಪರಮಾತ್ಮನ ಗರ್ಭದಲ್ಲಿ ತಾನಿರುವುದನ್ನು ಕಾಣುವನು.'

---

* ಬ.ಷ.ವ. ೧೩೫೭

ಗಳನ್ನೂ ಚೆನ್ನಾಗಿ ಮನದಟ್ಟುಮಾಡಿಕೊಂಡಳು.

ಅಂದಿನಿಂದ ಅವಳ ಸಾಧನೆ ಮುಂದುವರಿಯಿತು. ಬ್ರಹ್ಮರಂಧ್ರಕ್ಕೆ ಏರಿದ್ದ ಯೋಗಶಕ್ತಿಯನ್ನು ಶಿಖಾ ಮತ್ತು ಪಶ್ಚಿಮ ಚಕ್ರಗಳಿಗೆ ಏರಿಸಲು ಯತ್ನಿಸಿದಳು. ಅನೇಕ ದಿನಗಳವರೆಗೆ ಪ್ರಗತಿಯು ಅಷ್ಟಾಗಿ ತೋರದಿದ್ದಾಗ ಸ್ವಲ್ಪ ನಿರಾಶೆಗೊಂಡಳು.

ಅಯ್ಯಾ, ನಿನ್ನ ಮುಟ್ಟಿ ಮುಟ್ಟದೆನ್ನ ಮನ ನೋಡಾ.
ಬಿಚ್ಚಿ ಬೇಸರವಾಯಿತ್ತೆನ್ನ ಮನ,
ಹೊಳಲ ಸುಂಕಿಗನಂತೆ ಹೊದಕುಳಿಗೊಂಡಿತೆನ್ನ ಮನ.
ಎರಡೆಂಬುದ ಮರೆದು ಬರಿದಾಗದೆನ್ನ ಮನ.
ನಾನು ನೀನಪ್ಪ ಪರಿಯೆಂತು ಹೇಳಾ ಚನ್ನಮಲ್ಲಿಕಾರ್ಜುನಾ*

ಎಂದು ಪರಿತಪಿಸಿ ಚೆನ್ನನಲ್ಲಿ ಬೇಡಿಕೊಂಡಳು. ತನ್ನ ಅಸಹಾಯಕತೆಯನ್ನು, ಸಾಧನೆಯ ಕುಂಠಿತವೇಗವನ್ನು ಬಿನ್ನವಿಸಿಕೊಳ್ಳಲು ಮಹಾದೇವಿ ರಾತ್ರಿಯ ಪ್ರಸಾದವಾದ ಬಳಿಕ ಬಸವಣ್ಣನ ಬಳಿಗೆ ನಡೆದಳು.

ನೀಲಾಂಬಿಕೆ, ಗಂಗಾಂಬಿಕೆ, ಅಕ್ಕನಾಗಮ್ಮ, ಚನ್ನಬಸವಣ್ಣನವರೊಡನೆ ಬಸವಣ್ಣ-ಪ್ರಭುದೇವರು ಆಸೀನರಾಗಿದ್ದರು. ಅಕ್ಕಮಹಾದೇವಿ ತನ್ನ ಸಂದೇಹವನ್ನು ಆ ಶರಣಸಂದೋಹದ ಮುಂದಿಟ್ಟಳು :

'ವಿಶ್ವಲಿಂಗಪೂಜೆಗೆ ಹೋಗುತ್ತಲಿದೆ ಎನ್ನುವಷ್ಟರಲ್ಲಿ ಈ ಮನ ಮತ್ತೆ ಹಿಂದೆ ಸರಿಯುತ್ತದೆ. ಹೀಗಾಗಿ ನನಗೆ ತುಂಬ ಬೇಸರವೆನಿಸುತ್ತದೆ. 'ನಾನು ಬೇರೆ—ದೇವನು ಬೇರೆ' ಎಂಬ ಭಾವವನ್ನು ಮರೆದು, ಅತೀತವಾದ ಬಯಲ ಭಾವವನ್ನು ಅಳವಡಿಸಿಕೊಳ್ಳಲಾರದಂತಾಗಿರುವೆ.

ಎಂದಿಗೆ 'ನನ್ನತನ'ವಳಿದು 'ಶಿವತನ'ದಲ್ಲಿ ನಾನುಳಿವೆನೋ ಎಂಬ ಅಭೀಪ್ಸೆ ಅಂತರಂಗದಲ್ಲಿ ಮೊರೆಯುತ್ತಿದೆ.' ಅಕ್ಕಮಹಾದೇವಿಯ ಮಾತು ಕೇಳಿ ಬಸವಣ್ಣನವರು ಮುಗುಳ್ನಕ್ಕು ಹೇಳಿದರು :

'ಅಕ್ಕಾ....ಆಯಿತು-ಆಗಲಿಲ್ಲ ಎಂಬ ಉದ್ವೇಗವಿಲ್ಲದ ಶರಣಾಗತಿಭಾವವನ್ನು ಮನಸ್ಸು ಅಳವಡಿಸಿಕೊಳ್ಳಬೇಕು.'

'ಭಕ್ತಸ್ಥಲದಲ್ಲಿಯೇ ಶರಣಾಗತಿಭಾವ ಅಳವಟ್ಟಿರುವುದಲ್ಲವೇ, ಅಣ್ಣಾ?'

'ಅದಲ್ಲವಮ್ಮ! ಈ ಶರಣಸ್ಥಲದಲ್ಲಿ ಬೇಕಾದ ಶರಣಾಗತಿಯ ಸ್ಥಿತಿಯೇ

ಶರಣಾಗತಿ ಇರುವುದು; ಭೃತ್ಯ, ಸತಿ ಇವರ ಮನೋಭಾವನೆ ಬೇರೆಬೇರೆ. ದಾಸ—ಒಡೆಯರ ಮಧ್ಯೆ ಅಂತಸ್ತಿನ ಅಂತರ ಬಹಳವಿದೆ; ಸತಿ-ಪತಿಯ ನಡುವೆ ಈ ಅಂತರ ಕಿರಿದು. ಕಡೆಯವರೆಗೂ ಭೃತ್ಯ ಭೃತ್ಯನಾಗಿ ಇರುವನು; ಅವನಲ್ಲಿ ಭಿನ್ನತೆಯ ಭಾವ ಅಳಿಯದು. ಆದರೆ ಸತಿಪತಿಯರಲ್ಲಿ ತಾದಾತ್ಮ್ಯೀ ಭಾವ ಅಳವಟ್ಟು, ಅಭಿನ್ನಭಾವವೇ ಹೆಚ್ಚಾಗಿರುವುದು. ಭೃತ್ಯನಿಗೆ ಸಾಮೀಪ್ಯವೇ ದೊಡ್ಡ ಸಿದ್ಧಿಯಾದರೆ ಶರಣಸತಿಗೆ ಸಮರಸವು ಆತ್ಯಂತಿಕ ಸಿದ್ಧಿ; ಹೆಚ್ಚಿನ ಸಂಬಳಕ್ಕಾಗಿ ಭೃತ್ಯನು ಬೇಡಿದರೆ, ನಿಜವಾದ ಸತಿಯು ಪತಿಯ ಆಸ್ತಿಯೆಲ್ಲಾ ತನ್ನದೆಂದು ನಿಶ್ಚಿಂತಳಾಗಿರುವಳು. ಶರಣನಲ್ಲಿ ದೈನ್ಯತೆಗಿಂತ ಆತ್ಮವಿಶ್ವಾಸ ಅಧಿಕವಾಗಿದ್ದು 'ಶಿವ ಒಲಿಯಬೇಕಾದುದು ಅವನ ಕರ್ತವ್ಯ; ಒಲಿಮೆ ಪಡೆಯಬೇಕಾದುದು ನನ್ನ ಜನ್ಮಸಿದ್ಧ ಹಕ್ಕು' ಎಂಬ ದಿಟ್ಟವಾದ ಹಾರ್ದಿಕ ಶರಣಾಗತಿ ಇಲ್ಲಿರುವುದು. ಆದ್ದರಿಂದ ಮನಸ್ಸು ಉದ್ವಿಗ್ನಗೊಳ್ಳಬಾರದು, ತಾಯಿ.' ಅಕ್ಕಮಹಾದೇವಿ ಸಮಾಧಾನಚಿತ್ತಳಾಗಿ ತನ್ನ ಕೋಣೆಗೆ ನಡೆದಳು. ಅಂತರ್ಮುಖಳಾಗುತ್ತ, ಚಿತ್ತಶಾಂತಿ ತಾಳಿ ಪರಮಾತ್ಮನ ಹೊಣೆಗೇ ಒಲಿಯುವುದನ್ನೂ ಬಿಟ್ಟುಕೊಟ್ಟಳು.

ವರ್ಷಋತುವಿನ ಒಂದು ದಿನ. ಅಂದು ಪೌರ್ಣಿಮೆ. ಚಂದಿರನು ತುಂಬು ಮೊಗದಿಂದ ಆಗಸವನ್ನು ಬೆಳಗುತ್ತಿದ್ದ. ಇರುಳಿನ ಕಡೆಯ ಜಾವದಲ್ಲಿ ಪೂಜೆಗೆ ಅಣಿಯಾದ ಅಕ್ಕಮಹಾದೇವಿ ಆ ಬೆಳುದಿಂಗಳ ಸೊಗಸಿಗೆ ಮಾರುಹೋಗಿ ಮಹಡಿಯನ್ನೇರಿ ಅಲ್ಲಿಯೇ ಇಷ್ಟಲಿಂಗವನ್ನು ಅಂಗೈಯಲ್ಲಿ ಇರಿಸಿಕೊಂಡು ಪೂಜೆಗೆ ತೊಡಗಿದಳು. ಇಂದುವಿನ ಪ್ರತಿಬಿಂಬ ಇಷ್ಟಲಿಂಗದ ದರ್ಪಣದಲ್ಲಿ ಮಾರ್ಪೊಳೆಯುತ್ತಲಿತ್ತು. ದೀವಿಗೆಯ ಕಿರಣಗಳ ಮೇಲೆಗೈವ ದೃಷ್ಟಿಯೋಗ ಆ ಬಯಲಲ್ಲಿ ಸಾಧ್ಯವಿರಲಿಲ್ಲ. ಆದ್ದರಿಂದ ಇಷ್ಟಲಿಂಗ ಮುಕುರದಲ್ಲಿ ಮೂಡಿದ ಚಂದಿರನ ಪ್ರತಿಕೃತಿಯ ಮೇಲೆ ದೃಷ್ಟಿಯಿಟ್ಟಳು. ಅನಿಮಿಷನೋಟದಿಂದ ನೇರವಾಗಿ ದೃಷ್ಟಿಸುವಾಗ ಕೋಟಿ ರವಿಶಶಿಯರಿಗೆ ಮೀರಿದ ಪ್ರಭೆಯೊಂದು ಇಷ್ಟಲಿಂಗದಲ್ಲಿ ಅಡಗಿದಂತಾಯಿತು. ಹೀಗೆ ಅಡಗಿದ ಬೆಳಕು ವಿಸ್ತಾರವಾಗ ತೊಡಗಿತು. ತನ್ನನ್ನು ಸಮಗ್ರವಾಗಿ ಬಳಸಿಕೊಂಡು, ಅದು ಇನ್ನೂ ವಿಸ್ತಾರಗೊಳ್ಳುತ್ತ ಪರಿಸರವನ್ನು ತುಂಬತೊಡಗಿ, ಭೂಮಿ ಆಕಾಶಗಳನ್ನೂ ಸುತ್ತುವರಿಯಿತು. ಎತ್ತ ನೋಡಿದಡತ್ತ ದೇದೀಪ್ಯಮಾನ ಬೆಳಕಿನ ವಾರಿಧಿ. ಮನದಲ್ಲಿ ಮಿಡಿಯುತ್ತಿದ್ದ ಮಂತ್ರ ನಿಂತಿತು, ನೋಡುವ ಕಣ್ಣು ನೆಲೆನಿಂತಿತು. ತಾನು ಆ ಬೆಳಗಿನಲ್ಲಿ—ಕರ್ಪೂರವು ಉರಿಯಲ್ಲಿ ಕರಗಿಹೋದಂತೆ ಸಮರಸವಾಗತೊಡಗಿದಳು.

ತೂರ್ಯಾತೀತ ಸಮಾಧಿಯ ಈ ಸ್ಥಿತಿಯಲ್ಲಿ ಬೆಳಗಾದುದೂ ತಿಳಿಯಲಿಲ್ಲ. ಸೂರ್ಯನು ತನ್ನ ಹೊಂಬಿಸಿಲನ್ನು ಚೆಲ್ಲುತ್ತ ಮೇಲೇಳತೊಡಗಿದಂತೆ ಜಗದ ಚಟುವಟಿಕೆ ಆರಂಭವಾಗಿ, ಗಿಡಮರಗಳಲ್ಲಿ ನಿದ್ರಿಸುತ್ತಿದ್ದ ಹಕ್ಕಿಗಳೆಲ್ಲ ಚಿಲಿಪಿಲಿ ಗುಟ್ಟುತ್ತ ವಾದ್ಯಮೇಳವನ್ನು ಸೃಷ್ಟಿಸಿದವು. ಬಾಹ್ಯಸಂವೇದನೆಗಳು ಇಂದ್ರಿಯ ಗಳ ದ್ವಾರಾ ಒಳಹೊಕ್ಕರೂ ಅವು ಮನಸ್ಸನ್ನು ತನ್ಮಯತೆಯಿಂದ ಎಚ್ಚರಿಸ ಲಾರವಾಗಿದ್ದವು. ತನ್ನತನವನ್ನು ಅಳಿದುಕೊಂಡು ಅಕ್ಕಮಹಾದೇವಿ ಬೆಳಕಿನ ಶರಧಿಯಲ್ಲಿ ತೇಲಾಡುತ್ತಿದ್ದಳು.

ಸೂರ್ಯೋದಯವಾದ ಕೆಲವಾರು ನಿಮಿಷಗಳನಂತರ ಮಳೆಯ ಮೇಘ ಗಳು ಆಗಸದಲ್ಲಿ ಸಂಗ್ರಹವಾಗಲಾರಂಭಿಸಿದವು.

ವರ್ಷಾಕಾಲದ ಮೋಡಗಳು ಸದ್ದುಗದ್ದಲವಿಲ್ಲದೆ ಒಕ್ಕೂಡಿ ಬಂದು ಮಳೆ ಯನ್ನು ಧಾರೈಸತೊಡಗಿದವು. ಅಕ್ಕಮಹಾದೇವಿಗೆ ಪ್ರಜ್ಞೆಮೂಡಿತು. ಆದರೆ ಆ ಪ್ರಜ್ಞೆ ಪೂರ್ಣವಾಗಿ ಮರ್ತ್ಯಮಟ್ಟಕ್ಕೆ ಇಳಿದಿರಲಿಲ್ಲ. ಮೊದಲಿನ ಅನುಭವಕ್ಕೆ ಈಗ ಇನ್ನೊಂದೂ ಸೇರಿತು. ಒಂದು ಮಹಾಚೇತನ ತನ್ನನ್ನೂ ಇಂಬಿಟ್ಟುಕೊಂಡು ಬ್ರಹ್ಮಾಂಡದಲ್ಲೆಲ್ಲ ತುಂಬಿಕೊಂಡಂತೆ, ಆ ಚೇತನದ ವಿಶ್ವ ಪೂಜೆ ನಡೆಯುತ್ತಿರುವಂತೆ ಆಕೆಗೆ ಮನದಟ್ಟಾಗತೊಡಗಿತು. ಆಗಸ ತುಂಬಿದ ಕಾರ್ಮುಗಿಲುಗಳು ಮಜ್ಜನವೆರೆಯುವ ಕುಂಭಗಳಂತೆ ಕಂಡವು. ಅವು ತಮ್ಮ ವರ್ಷಧಾರೆಯಿಂದ ಶಿವನಿಗೆ ಮಜ್ಜನವನ್ನು ಮಾಡುವಂತೆ ಎನಿಸಿತು. ಸೃಷ್ಟಿ ಯೆಲ್ಲ ಸಚೇತನಗೊಂಡಂತಾಗಿ,ತಾನು ಯಾವುದೋ ಉನ್ನತ ಸ್ಥಾನದಲ್ಲಿ ನಿಂತ ಭಾವನೆಯಾಗಿ ಲೀಲಾನಾಟಕವನ್ನು ಪ್ರೇಕ್ಷಕಳಂತೆ ನೋಡಲಾರಂಭಿಸಿದಳು. ಪ್ರಕೃತಿಯ ಒಡಲಲ್ಲಿ ಬೆಡಗಿನಿಂದ ಅರಳುವ ಹೂವುಗಳು ದೇವನಿಗೆ ಪುಷ್ಪಾ ಲಂಕಾರ ಮಾಡುವಂತೆ, ನಭದಲ್ಲಿ ನಿಂದು ಬೆಳಗುವ ರವಿಶಶಿ ಆರತಿಯನ್ನು ಬೆಳಗುವಂತೆ, ನೀಲಾಂಬರದಲ್ಲಿ ಮಿಂಚುವ ಚುಕ್ಕೆಗಳು ಅಕ್ಷತೆಯಾಗಿ ಅರ್ಪಿತ ವಾದಂತೆ, ಅಗ್ನಿಯು ಹಲವಾರು ವಸ್ತುಗಳನ್ನು ದಹಿಸಿ ಭಸ್ಮವನ್ನು ಲೇಪಿಸಿ ದಂತೆ, ಲೋಕದ ಪರಿಮಳವು ಸುವಾಸಿತ ಚಂದನವನ್ನು ಸವರಿದಂತೆ, ಸಕಲ ಧಾನ್ಯಗಳು ನೈವೇದ್ಯವಾದಂತೆ, ಒಯ್ಯಾರದಲ್ಲಿ ಬೀಸುವ ಗಾಳಿಯು ದೇವನಿಗೆ ಚಾಮರವನ್ನು ಬೀಸುವ ತೆರದಿ, ಶುಕಪಿಕಕೋಕಿಲೆಗಳು ಸಾಸಿರ ಕಂಠದಿಂದ ಘಂಟಾರವವನ್ನು ಮಾಡುತ್ತ, ಎಲ್ಲ ದಿಕ್ಕುಗಳು ದೇವನ ಒಡಲನ್ನು ಅಂಬರ

ತಾನು ನಿಂತಹಾಗೆ, ತನ್ನ ಕಣ್ಣೆದುರಿಗೆ ವಿಶ್ವದ ಸಮಸ್ತ ಚೇಷ್ಟೆಯೆಲ್ಲ ಸ್ಪಷ್ಟವಾಗಿ ಇಟ್ಟಂತೆ, ಅನುಭವಿಸತೊಡಗಿದಳು. ಲೀಲಾಮಯ ಮಹಾಬ್ರಹ್ಮಾಂಡದಲ್ಲಿ ತಿರುಗುತ್ತಲಿರುವ ಸಾಸಿರಸಾಸಿರ ಗೋಲಗಳು ವಿಶ್ವಚೇತನದ ಪ್ರದಕ್ಷಿಣೆ ಮಾಡುವ ರೀತಿ ಭಾಸವಾದ ಅಕ್ಕಮಹಾದೇವಿಗೆ, ಈ ಸೃಷ್ಟಿಯು ಪರಾಶಕ್ತಿಯ ಅಭಿವ್ಯಕ್ತರೂಪವಾಗಿ, ಕರ್ತನ ವಿರಾಟ್ ಪೂಜೆಯನ್ನು ಮಾಡುತ್ತಿರುವಂತೆ, ಓಂಕಾರದ ಸ್ಪಂದನದೊಡನೆ ಗಾಯನವನ್ನು ಮಾಡುವ ಅನುಭವವಾಯಿತು. ಇಂತಹ ದಿವ್ಯಾನುಭವದಲ್ಲಿ ಕರಗಿಹೋದ ಅಕ್ಕಮಹಾದೇವಿ ಎತ್ತೆತ್ತ ನೋಡಿದರೂ ಬಯಲನ್ನೇ ಕಂಡಳು. ಅದು ಏನೂ ಇಲ್ಲದ ಬಯಲಲ್ಲ, ಪರಿಪೂರ್ಣತೆಯಿಂದ ಮಿಡಿಯುತ್ತಿರುವ ಚಿದ್ಬೆಳಗಿನ ಆಗರವಾದ ಬಯಲು. 'ಇದು ಬಂಜೆಯ ಗರ್ಭವಲ್ಲ, ತುಂಬಿ ಬೆಳೆದ ಕೂಸನ್ನು ಹೊತ್ತ ಬೆಸಲೆಯ ಬಸುರಿನಂತೆ' ಎಂದುಕೊಂಡ ಅಕ್ಕಮಹಾದೇವಿ ಆ ಬಯಲಿನ ತುಂಬೆಲ್ಲ ಚೈತನ್ಯವು ಸ್ಪಂದಿಸುತ್ತಿರುವುದನ್ನು ಕಂಡಳು. ಆ ಅನುಭವವು ಆಕೆಯ ಚಿತ್ತರಂಗದ ಮೇಲೆ ಅಚ್ಚೊತ್ತಿತು.

ಇಂತಹ ಬೃಹತ್ ಸೀಮಾತೀತ ಅನುಭವವನ್ನು ಬುದ್ಧಿ, ಮನಸ್ಸುಗಳು ಸ್ವಲ್ಪಸ್ವಲ್ಪವಾಗಿ ಹಿಡಿದಿಟ್ಟುಕೊಳ್ಳುವ ಸಾಹಸ ಮಾಡಿದರೂ, ಪರಿಪೂರ್ಣವಾಗಿ ಹಿಡಿದಿಟ್ಟುಕೊಳ್ಳಲಾರದಾದವು. ಇಂದ್ರಿಯಬುದ್ಧಿಗಳಿಗೆ ಅತೀತವಾಗಿ, ಸಂವೇದನಾಪ್ರಪಂಚದ ಸ್ವತ್ತಾಗಿತ್ತು ಆ ತೂರ್ಯಾತೀತ ಸ್ಥಿತಿ.

ದೀರ್ಘಕಾಲದ ಬಳಿಕ ಬಹಿರ್ಮುಖಗೊಂಡು ಅಕ್ಕಮಹಾದೇವಿ ನೋಡಿದಾಗ ಆಗತಾನೆ ಬಾನು ತೆರವಾಗುತ್ತಿತ್ತು. ಮಳೆಯಲ್ಲಿ ಸೃಷ್ಟಿಯು ಮಿಂದು, ರವಿಕಿರಣದ ಅಂಬರವನ್ನುಟ್ಟು ಚೇತೋಹಾರಿಯಾಗಿ ಕಂಡಿತು. ಆ ಮಳೆಯ ಧಾರೆಯಿಂದ ಗಿಡ ಮರ ಬಳ್ಳಿ ಸಮಸ್ತವೂ ಕುಲುಕುಲು ನಗುತ್ತಿದ್ದವು. ಮಳೆಯು ಆಗಿಹೋದುದರ ಸಾಕ್ಷಿಯಂತೆ ಭೂಮಿಯು ಹಸಿಯಾಗಿ, ಅಲ್ಲಲ್ಲೇ ನೀರು ಪ್ರವಹಿಸುತ್ತಿದ್ದುದು ಕಾಣಬಂದಿತಲ್ಲದೆ ತನ್ನ ಬಟ್ಟೆಗಳು ಒದ್ದೆಯಾಗಿ ನೀರಿಳಿಯುತ್ತಿತ್ತು, ಕೂದಲು ತೋಯ್ದು ತೊಪ್ಪೆಯಾಗಿದ್ದವು. ಆದರೂ ಆ ದಿವ್ಯಾನುಭವದ ಮನಃಸ್ಥಿತಿಯಿಂದ ಹೊರಬೇಕೆನಿಸಲಿಲ್ಲ. ತನ್ನಿಂದ ಸ್ವಲ್ಪ ದೂರದಲ್ಲಿ ಮನುಷ್ಯಾಕೃತಿಯ ಗೊಂಬೆಗಳು ನಿಂತಂತೆನಿಸಿದರೂ ಅದರ ಕಡೆಗೆ ಗಮನ ಕೊಡದೆ ಮರಳಿ ಕಣ್ಣು ಮುಚ್ಚಿಕೊಂಡಳು. ಮಳೆಯ ಬಳಿಕ ನೆಲವು ತೋಯುವಂತೆ, ಭಾವಲಿಂಗಸಾಮರಸ್ಯದಿಂದಾಗಿ ಮನ, ಬುದ್ಧಿಗಳು ಸುಯಿಧಾನದಲ್ಲಿ ಮುಳುಗಿದ್ದವು. ಆ ತಣಿವು ಸರ್ವಾಂಗದಲ್ಲಿಳಿದು ಅಂಗವಿಸಿ, ಬೇರು

ಕೊಳ್ಳುವ ಸಾಹಸವನ್ನು ಹೃದಯ ಮಾಡುತ್ತಿತ್ತು.

ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ
ಲಿಂಗಾನುಭಾವದಿಂದ ನಿಮ್ಮ ಕಂಡು,
ಎನ್ನ ಮರೆದೆ ಕಾಣಾ ಕೂಡಲ ಚನ್ನಸಂಗಮದೇವಾ ॥*

ಎಂಬ ವಚನವನ್ನು ಕಿನ್ನರಿಯ ಬ್ರಹ್ಮಯ್ಯ ಕಿನ್ನರಿಯನ್ನು ಬಾರಿಸುತ್ತ ಹಾಡುತ್ತಲಿದ್ದುದು ದೂರದ ಯಾವುದೋ ಗಹ್ವರದಿಂದ ಬಂದಂತಾಗಿ ಅದು ಅಸ್ಪಷ್ಟವಾಗಿ ಅಕ್ಕಮಹಾದೇವಿಯ ಮನವನ್ನು ಹೊಕ್ಕಿತು.

ಅಹುದು....ಆಕೆಯ ಅಪರಿಪೂರ್ಣ ಅರಿವು ಒಂದೇ ಸಮನೆ ತೃಪ್ತಿಗಾಗಿ ಹಂಬಲಿಸುತ್ತಿತ್ತು—ತಾಯ ಹಾಲಿಗಾಗಿ ಹಂಬಲಿಸುವ ಹಸಿದ ಕೂಸಿನಂತೆ, ತಾಯಿಯ ಹಾಲು ನಾಲಿಗೆಯ ಮೇಲೆ ಹರಿಯುತ್ತಲೇ ಆಕ್ರಂದಿಸುವ ಹಸುಳೆ ಮೌನವಾಗಿ ಕ್ಷೀರವನ್ನು ಸವಿಯತೊಡಗುವಂತೆ, ಈ ಬುದ್ಧಿ ಶಿಶುವೂ ದೈವಾನುಭಾವದ ಹಾಲನ್ನು ಉಂಡು ತೃಪ್ತಿಪಡತೊಡಗಿತ್ತು. ಪರಿಣಾಮವಾಗಿ ಅಕ್ಕಮಹಾದೇವಿ ತನ್ನತನವನ್ನೇ ಅಳಿಸಿದ ಆ ಅನುಭವವನ್ನು ಕುರಿತು ಹೀಗೆ ಹಾಡತೊಡಗಿದಳು....

ಲಿಂಗವೆನ್ನೆ ಲಿಂಗೈಕ್ಯವೆನ್ನೆ
ಸಂಗವೆನ್ನೆ ಸಮರಸವೆನ್ನೆ
ಆಯಿತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ
ಚನ್ನಮಲ್ಲಿಕಾರ್ಜುನ ಲಿಂಗದಲ್ಲಿ
ಘನ ಲಿಂಗೈಕ್ಯವಾದ ಬಳಿಕ
ಮತ್ತೇನೂ ಎನಲೊಲ್ಲದೆ ಇದ್ದೆನು †

ಆರೂಢಾವಸ್ಥೆಯಲ್ಲಿ ಪೂಜ್ಯ-ಪೂಜಕ-ಪೂಜೆ ಎಂಬ ಭಿನ್ನಭಾವವಳಿದಿತ್ತು. ಸಮುದ್ರದಲ್ಲಿ ವಿಲೀನವಾಗುವ ಉಪ್ಪಿನ ಗೊಂಬೆಯಂತೆ, ಉರಿಯನಲ್ಲನ ಅಪ್ಪುಗೆಯಲ್ಲಿ ಕರಗುವ ಕರ್ಪೂರದ ನಲ್ಲೆಯಂತೆ ಶಿವಭಾವದಾಲಿಂಗನದಲ್ಲಿ ದೇಹಭಾವ ಕರಗಿತ್ತು.

* * *

ಅಕ್ಕಮಹಾದೇವಿ ಭಾವಸಮಾಧಿಯಿಂದ ಬಹಿರ್ಮುಖಳಾಗುವಳೆಂದು ಬಹು ಹೊತ್ತಿನಿಂದ ನಿರೀಕ್ಷಿಸುತ್ತ ಶರಣರು ಸನಿಹದಲ್ಲೇ ಕುಳಿತಿದ್ದರು. ಮುಗಿಲು ಹರಿದು ಧೋ ಎಂದು ಮಳೆ ಸುರಿಯತೊಡಗಿತು. ಅಕ್ಕಮಹಾದೇವಿ

ಪ್ರಭುದೇವರು ಕಣ್ಣನ್ನೆ ಮಾಡಿ ತಡೆದರು. ದೊಡ್ಡದಾದ ನಗರದಲ್ಲಿ ನಡು ನಡುವೆ ಯಥೇಚ್ಛ ದೀಪಸ್ತಂಭಗಳಿದ್ದು, ಊರು ಬೆಳಗುತ್ತಿದ್ದರೆ, ರಾತ್ರಿಯ ವೇಳೆ ಆ ಊರ ಹೊರಗೆ ಸ್ವಲ್ಪ ದೂರದಲ್ಲಿ ನಿಂತವನಿಗೆ ದಿಗಂತದಲ್ಲಿ ಆ ಪಟ್ಟಣದ ನೇರಕ್ಕೆ ಬೆಳ್ಳನೆಯ ಛಾಯೆ ಹರಡಿರುವುದನ್ನು ಕಾಣಬಹುದು. ಬೆಳ್ಳನೆಯ ಛಾಯೆಯಿಂದ ಊರನ್ನು ಊಹಿಸುವಂತೆ, ಅಕ್ಕಮಹಾದೇವಿಯ ಮೊಗದ ಮೇಲೆ ಪಸರಿಸಿದ್ದ ಅಪೂರ್ವ ತೇಜಸ್ಸನ್ನು ಕಂಡ ಪ್ರಭುದೇವರು ಅವಳೀಗ ಲಿಂಗಾಂಗಸಾಮರಸ್ಯಸ್ಥಿತಿಯಲ್ಲಿರುವುದನ್ನು ಗ್ರಹಿಸಿದರು. ಅವರ ಅರಿವಿನ ಕಣ್ಣಿಗೆ ಅವಳ ಸುತ್ತಲೂ ದೇದೀಪ್ಯಮಾನವಾದ ಪ್ರಭಾವಳಿಯು ಸುತ್ತುವರಿದಿರುವುದು ಕಾಣಿಸಿತು. ಅವರು ಸಂತಸಪೂರ್ಣರೂ, ಮೂಕ ವಿಸ್ಮಿತರೂ ಆಗಿ ಉಳಿದ ಶರಣರನ್ನು ಆ ತಾಣದಿಂದ ಮೌನವಾಗಿ ಕರೆ ದೊಯ್ದರು.

ಬಹುಹೊತ್ತಿನ ಬಳಿಕ ಉತ್ಥಾನಗೊಂಡ ಅಕ್ಕಮಹಾದೇವಿ ಓಲೆಕಂಠ ವನ್ನು ತೆಗೆದುಕೊಂಡು ತನ್ನ ಕೃತಿ ಯೋಗಾಂಗತ್ರಿವಿಧಿಯನ್ನು ಬರೆದು ಮುಗಿಸಿದಳು. ಅವಳ ಹೃದಯವು, ಮಕರಂದವನ್ನು ಈಂಟಿ ತೃಪ್ತಿಗೊಂಡು ಒಂದು ಬಗೆಯ ಏಕತಾನದ ಗುಂಜಾರವ ಮಾಡುವ ಭ್ರಮರದಂತೆ, ಸಂತೃಪ್ತಿಯನ್ನು ಈಂಟಿದ್ದುದೇ ಅಲ್ಲದೆ ಎಡಬಿಡದೆ ಓಂಕಾರ ನಾದವನ್ನು ಗುಂಯ್ಗುಡುತ್ತಿತ್ತು.

'ತನ್ನ ಅನುಭವವು ಭಾವಕ್ಕೇ ಹೊರತು, ಬುದ್ಧಿಯ ಪ್ರಖರತೆಗಾಗಲಿ, ಗಲಗದ ಮೊನೆಗಾಗಲಿ ಸಿಗುವಷ್ಟು ಅಲ್ಪವಲ್ಲ' ಎಂದರಿತೂ, ತಾನು ಕಂಡ ಸುಂದರ ಕನಸನ್ನು ಹಾವಭಾವ ಸನ್ನೆಗಳ ನುಡಿಯಿಂದ ವರ್ಣಿಸಲು ಸಾಹಸ ಪಡುವ ಮೂಕನಂತೆ ಬರೆಯತೊಡಗಿದಳು.

> ಪಶ್ಚಿಮದ ಕೊಳದಲ್ಲಿ ಅಚ್ಚತಾವರೆ ಅರಳಿ
> ನಿಶ್ಚಳದ ಗಂಧವೆಸೆಯಲು ಅದ ಕಂಡು
> ಸಚ್ಚಿತ್ತದ ಭ್ರಮರ ಎರಗಿತ್ತು*

ಚಿದಾಕಾಶದ ಅಥವಾ ಕುಂಭಿನಿ ಸರಸಿಯ ಪಡುವಣ ಭಾಗದಲ್ಲಿ, ಪಶ್ಚಿಮ ಚಕ್ರವರಳಿ ದಿವ್ಯಾನುಭವದ ಸೌರಭವನ್ನು ಸೂಸತೊಡಗಲು, ಸತ್-ಚಿತ್-ಆನಂದಸ್ವರೂಪದ ದೇವಭ್ರಮರವು ಬೆಳಗಿನ ರೂಪದಲ್ಲಿ ತನ್ನ ಮೇಲೆ ಎರಗಿದುದನ್ನು ಕೆಲವೇ ಸಾಂಕೇತಿಕ ಬೆಡಗಿನ ಶಬ್ದಗಳಲ್ಲಿ ಹಿಡಿದಿಟ್ಟು

---

* [illegible]

ಮಾಡಿತು.

'ಏಲಕ್ಕಿಯನ್ನು ಹಾಕಿ ತುಪ್ಪದಲ್ಲಿ ಮಾಡಿದ ರವೆಯುಂಡೆಯನ್ನು ತಿಂದು ಬಂದ ಮಗುವು ತಾನು ತಿಂದುದನ್ನು ತಡವರಿಸುತ್ತ ಹೇಳತೊಡಗುವುದು. ಅದು ಹಾವಭಾವಗಳನ್ನು ಮಾಡುತ್ತ ತೊದಲುವಾಗ ಕೇಳುವವರು, ಓಹೋ !....ನೀನು ರವೆಯುಂಡೆ ತಿಂದೆಯಾ....?' ಎಂದು ಅಶ್ಚರ್ಯಸಿಕೊಂಡು ಪ್ರಶ್ನಿಸಿದರೆ, ಅದು ಸಂಭ್ರಮಪಟ್ಟು 'ಹೂಂ....' ಎಂದು ನಕ್ಕು ಸಮಾಧಾನ ತಾಳುವುದು. ಹಾಗೆಯೇ ಪ್ರೌಢಮಾನವನ ಭಾಷೆಯು ಸಹ ದೈವಾನುಭವವನ್ನು ವಿವರಿಸುವಾಗ ತಟ್ಟರಿಸುವುದು. ಆದರೂ ಉಳಿದ ಅನುಭಾವಿಗಳು ನನ್ನ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಅನುಭವವನ್ನು ಇಂತಹುದೇ ಎಂದು ಅರ್ಥಮಾಡಿಕೊಳ್ಳುವಷ್ಟು ಸಮರ್ಪಕವಾಗಿ ಇದು ಇದೆ....' ಎಂದು ತನ್ನಲ್ಲಿ ತಾನೇ ಅಕ್ಕಮಹಾದೇವಿಯು ಸಂತೃಪ್ತಿಪಟ್ಟುಕೊಂಡಳು.

ಯಾರೊಡನೆಯೂ ಬೆರೆಯಬೇಕು, ಮಾತನಾಡಿಸಬೇಕು ಎಂಬ ಅಪೇಕ್ಷೆಯಾಗದೆ ಅಕ್ಕನು ಎರಡು ದಿವಸಗಳ ಕಾಲ ಅಂತರ್ಮುಖಳಾಗಿಯೇ ಇದ್ದು, ಮನಸ್ಸು ಬಂದಾಗ ಪ್ರಸಾದವನ್ನು ಸ್ವೀಕರಿಸುತ್ತಿದ್ದಳು. ಅನುಭವಗೋಷ್ಠಿಗೂ ಬರಲಿಲ್ಲ. ಶರೀರವು ಈ ಹೊರಪ್ರಪಂಚದಲ್ಲಿ ಇದ್ದರೂ, ಉಳಿದೆಲ್ಲ ಅಂಗಗಳು ವ್ಯವಹಾರಪ್ರಪಂಚದಲ್ಲಿ ಇರುವಂತೆ ತೋರಲಿಲ್ಲ. ಲೋಕವನ್ನು ಹಿಡಿದೂ ಲೋಕದಲ್ಲಿ ಬೆರೆಯದಂತೆ, ಸಾಕಾರ ದೇಹದಲ್ಲಿದ್ದೂ ನಿರಾಕಾರದೊಡನೆ ಸಂಬಂಧ ಇರಿಸಿಕೊಂಡಂತೆ, ಬೆಂದ ನುಲಿಯಂತೆ, ಒಳಗೆ ಅರಿದು ಹೊರಗೆ ಕ್ರಿಯೆಗಳನ್ನು ಮಾಡುತ್ತಲಿದ್ದಳು. ಈ ದಿವ್ಯಾನುಭವವು ಬಿಚ್ಚಿ ಬೇರಾಗದಷ್ಟು ವ್ಯಕ್ತಿತ್ವದಲ್ಲಿ ಅಳವಟ್ಟಿತೆಂಬ ಆತ್ಮವಿಶ್ವಾಸ ಬಂದಾಗ ಅಕ್ಕಮಹಾದೇವಿ ಹೊರಜಗತ್ತಿಗೆ ದೃಷ್ಟಿ ಹರಿಸಿದಳು. ಆಳವಾಗಿ ಬೇರುಬಿಡದ ನಾರಿವಾಳ ಸಸಿಗಳ ಬಗ್ಗೆ ತೋಟಿಗ ವಿಶೇಷ ಎಚ್ಚರಿಕೆ ವಹಿಸಿಕೊಳ್ಳುವನು. ಅವು ಚೆನ್ನಾಗಿ ಬೇರು ಬಿಟ್ಟು ಸುಳಿದೆಗೆದು ನಿಂತಾಗ ಅವನು ನಿಶ್ಚಿಂತನಾಗುವನು. ಹಾಗೆಯೇ ಮೂರು ದಿವಸಗಳ ಕಾಲ ಭಾವಸಮಾಧಿಯಲ್ಲಿ ಇದ್ದ ಅಕ್ಕಮಹಾದೇವಿ 'ಅದು ನನ್ನ ಹಿಡಿತದಲ್ಲಿ ಸಿಕ್ಕಿದೆ; ಇನ್ನುಮುಂದೆ ತಾನು ಬಯಸಿದ ಆ ಕ್ಷಣ ಕೈಗೂಡುವ ಚೈತನ್ಯಸಮಾಧಿಯಾಗಿದೆ' ಎಂಬ ದೃಢಭಾವ ಮೂಡಿದಾಗ ಬಹಿರ್ಮುಖಗೊಂಡಳು.

ತನ್ನ ಅನುಭವವನ್ನು ಶರಣರ ಮುಂದಿಡಬಯಸಿ ಗೋಷ್ಠಿಗೆ ಪ್ರವೇಶಿಸಿದಾಗ ಅಕ್ಕಮಹಾದೇವಿಯಲ್ಲಿ ಆದ ಮಹತ್ತರ ಬದಲಾವಣೆ, ಸಿದ್ಧಿ, ಮೊಗವು ಸ್ಫುರಿಸುತ್ತಿದ್ದ ಕಾಂತಿಯನ್ನು ಕಂಡು ಶರಣರು ತಲೆಬಾಗಿದರು. ಪ್ರಶಾಂತ ಮುಖಮುದ್ರೆಯನ್ನು ಹೊತ್ತು ಮಂಟಪದಲ್ಲಿ ಪಾದವಿಕ್ಕಿದ ಆಕೆ ಎಲ್ಲರಿಗೆ ಶರಣುಗೈದು ಹೇಳಿದಳು :

'ಅಣ್ಣನವರ, ನೀಲಮ್ಮತಾಯಿಗಳ ಮಾರ್ಗದರ್ಶನದಲ್ಲಿ ಸಾಧನೆಗೆ ತೊಡಗಿದ ನಾನು ಅಪೂರ್ವವಾದ ಅನುಭವವನ್ನು ಪಡೆದು ಪುನೀತಳಾದೆ. ಕೋಟಿ ರವಿಶಶಿಯರಿಗೆ ಮೀಟದ ಪ್ರಭೆ ಬಂದು ನಾಟಿತ್ತು ಎನ್ನ ಕರದೊಳಗಣ ಇಷ್ಟಲಿಂಗದಲ್ಲಿ. ಅದರಿಂದಾಗಿ ನಾನು ಭವದ ಕುಣಿಯಿಂದ ಬಿಡುಗಡೆ ಹೊಂದಿದ ಅನುಭವವಾಯಿತು.* ನನ್ನ ಚಿದಾಕಾಶದೊಳಗೆ ತುಂಬಿರುವ ಜ್ಯೋತಿಯು ಒಳ-ಹೊರಗೆ ಓತಪ್ರೋತವಾಗಿ ಹರಿದು, ಲೋಕವನ್ನೆಲ್ಲ

[illegible] ನನ್ನ ಪರಲಿಂಗದೊಳಗೆ ಆನಂದಿಸಿದ.'*
ಅಕ್ಕಮಹಾದೇವಿ ತನ್ನ ಅನುಭವವನ್ನು ನೆನಪಿಸಿಕೊಂಡು ಹೇಳತೊಡಗಿದಳು.

ಆಗ ಕೊಟ್ಟಣದ ರೆಮ್ಮವ್ವೆ ಎಂಬ ಶರಣೆಯೊಬ್ಬಳು ಎದ್ದು ನಿಂತು ಕೇಳಿದಳು :

'ಅಕ್ಕನವರೇ, ಆ ಅನುಭವವಾಗುವಾಗ ತಮಗೆ ಏನನ್ನಿಸಿತು....?' ಅಕ್ಕಮಹಾದೇವಿ ನಸುನಕ್ಕು ಮಾರ್ಮಿಕವಾಗಿ ನುಡಿದಳು :

ನಲ್ಲೆ ನಲ್ಲನ ಸುಖವ ಎಲ್ಲರಿಗೆ ಅರುಹುವಳೆ
ಬಲ್ಲಡೆ ಅದರ ತೆರನಂತೆ। ಲಿಂಗಸುಖ
ಬಲ್ಲವರು ಪರರಿಗುಸುರುವರೆ ॥†

ಆಗ ಶರಣ ಘಟ್ಟಿವಾಳಯ್ಯ ಹೇಳಿದ :

'ಅವ್ವಾ, ಶ್ರೀಗಿರಿಯಂಥ ಉನ್ನತವಾದ ಬೆಟ್ಟವನ್ನು ಆರೋಹಿಸುವ ಶಕ್ತಿ ಎಲ್ಲರಿಗೆ ಇರದಲ್ಲವೇ, ತಾಯಿ? ಕುರುಡರು-ಕುಂಟರು ಗಿರಿಯ ಆರೋಹಣ ಮಾಡಿ ಬಂದವರ ಬಾಯಿಯಲ್ಲಿ ಕೇಳಿ ತೃಪ್ತಿಯನ್ನು ಪಡಬೇಕಾಗುವುದಲ್ಲವೆ? ಹಾಗೆಯೇ ಅಜ್ಞಾನಿಗಳು, ಸದಾಚಾರರಹಿತರು ಆದ ನಮ್ಮಂಥ ಅಸಂಖ್ಯಾತರು ತಮ್ಮಂತಹ ಅನುಭಾವಿಗಳ ವಾಣಿಯಿಂದಲೇ ತೃಪ್ತಿಪಡುತ್ತೇವೆ.' ಘಟ್ಟಿವಾಳಯ್ಯ ಸ್ವಲ್ಪ ಒರಟು ಸ್ವಭಾವದವನು, ಆದರವನ ಹೃದಯ ಬಲು ಮೃದು, ತತ್ತ್ವನಿಷ್ಠೆಯ ಆಗರ. ಆಗ ಅಕ್ಕಮಹಾದೇವಿ ಅವನತ್ತ ನೋಡಿ ಹೇಳಿದಳು :

'ಅಣ್ಣಯ್ಯ, ಬುದ್ಧಿಯು ಗ್ರಹಿಸಿದುದೆಲ್ಲವನ್ನು ಶಾಬ್ದಿಕವಾಗಿ ಹೇಳಬಹುದು, ಆದರೆ ಹೃದಯವು ಅನುಭವಿಸಿದುದೆಲ್ಲವನ್ನು ಹೇಳಲಿಕ್ಕಾಗದು. ಶ್ರೀಗಿರಿಯನ್ನು ಅಥವಾ ಪ್ರಕೃತಿಸೌಂದರ್ಯವನ್ನು ಸವಿಯುವಾಗ ಆ ವರ್ಣವಿನ್ಯಾಸ, ಹಕ್ಕಿಗಳ ವಾದ್ಯಗೋಷ್ಠಿ, ತೊರೆಯ ಮಂಜುಳನಿನಾದ—ಇವೆಲ್ಲವನ್ನು ಕಣ್ಣು ಕಂಡಿರುವುದು, ಹೃದಯ ಅನುಭವಿಸಿರುವುದು. ಆದರೆ ಅದನ್ನು ವರ್ಣಿಸಬೇಕಾದರೆ ಭಾಷೆಯ ಮಾಧ್ಯಮವು ಬೇಕಾಗುವುದು. ಆ ಭಾಷಾಸಂಪತ್ತು, ವಾಣಿಶಕ್ತಿ ಇಲ್ಲದ ವ್ಯಕ್ತಿಯು 'ನಾನು ಶ್ರೀಗಿರಿಗೆ ಹೋಗಿದ್ದೆ; ಗುಡಿಯಲ್ಲಿದ್ದ ಲಿಂಗದ ದರ್ಶನವನ್ನು ಪಡೆದು ಬಂದೆ' ಎಂದು ಮುಗಿಸುವನು. ಅವನಿಗೆ ಗುಡಿಯೊಳಗಣ ಜಡದೇವರ ದರುಶನ ಪಡೆಯಲು ಬಂದೀತೇ ಹೊರತು, ಚೈತನ್ಯಮಯ ಗುಡಿಯಾದ ಬ್ರಹ್ಮಾಂಡದಲ್ಲಿಹ ಜೀವಂತ ದೇವನ ದರ್ಶನ ಪಡೆಯಲು ಬಾರದು. ಹಾಗೆಯೇ ನಾನಾದರೂ ಸತ್ಯಪೂರಿತ

ಅನುಭವವನ್ನು ಶಬ್ದಗಳಲ್ಲಿ ಚಿತ್ರಿಸಲು ಅಸಮರ್ಥಳಿದ್ದರೂ, ಕೈಲಾದಮಟ್ಟಿಗೆ ಬಿತ್ತರಿಸುವೆ.

ನಿತ್ಯವೆಂಬ ನಿಜಪದವೆನ್ನ ಹತ್ತೆ ಸಾರ್ದು ಕಂಡ ಬಳಿಕ
ಚಿತ್ತ ಕರಗಿ ಮನ ಕೊರಗಿ ಹೃದಯವರಳಿತ್ತು ನೋಡಯ್ಯಾ.
ಒತ್ತಿ ಬಿಗಿದ ಸೆರೆಯೊಳಗೆ ಅತಿತ್ತಲೆಂದರಿಯದೆ
ಚನ್ನಮಲ್ಲಿಕಾರ್ಜುನನ ಪಾದದಲ್ಲಿ ಮರೆದೊರಗಿದೆ ನೋಡಯ್ಯಾ*

'ಅಕ್ಕಾ, ನೀನು ಇಷ್ಟು ಸಾಂಕೇತಿಕವಾಗಿ, ಸೂತ್ರ ರೂಪದಲ್ಲಿ ಹೇಳಿ ಬಿಟ್ಟರೆ ನನ್ನಂಥ ಮೂಢ ತಮ್ಮನಿಗೆ ಅರ್ಥವಾಗದು. ಬಿಚ್ಚಿ ಹೇಳು ; ತಾಯಿಯು ಮಗುವಿಗೆ ಬಾಳೆಯ ಹಣ್ಣಿನ ಸಿಪ್ಪೆಯನ್ನು ಸುಲಿದು ಕೊಡುವಂತೆ ಶಬ್ದಗಳ ಬೆಡಗಿನ ಸಿಪ್ಪೆಯನ್ನು ಬಿಚ್ಚಿ, ಅನುಭವದ ಹಣ್ಣನ್ನು ನನಗೆ ಕೊಡು....' ಘಟ್ಟಿವಾಳಯ್ಯ ಕೇಳಿದಾಗ ಅನುಭವಮಂಟಪವು ಮನಸಾರೆ ನಕ್ಕಿತು.

'ಪರಮಾತ್ಮನು ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣನೆಂಬುದು ತಮಗೆ ತಿಳಿದಿವೆ....' ಎಂದು ಅಕ್ಕಮಹಾದೇವಿ ನುಡಿದು ನಿಲ್ಲಿಸಿದಾಗ,

'ಇಲ್ಲ....ಅದರ ಅರ್ಥವನ್ನು ಬಿಡಿಸಿ ಹೇಳಲೇಬೇಕು....' ಘಟ್ಟಿವಾಳಯ್ಯ ಹೇಳಿದ.

'ಸತ್ ಎಂದರೆ ಶುದ್ಧವಾದ ಇರುವಿಕೆ, ಚಿತ್ ಅಂದರೆ ಶುದ್ಧವಾದ ಜ್ಞಾನ, ಆನಂದ ಎಂದರೆ ಶುದ್ಧವಾದ, ಆತ್ಯಂತಿಕ ಸಂತೃಪ್ತಿ. ನಿತ್ಯ ಎಂದರೆ ಎಂದೂ ನಾಶವಾಗದುದು—ಸೃಷ್ಟಿ ರಚನೆಗೆ ಪೂರ್ವದಲ್ಲಿ ಇದ್ದು, ಸೃಷ್ಟಿ ರಚನೆಯಾದಾಗಲೂ ಇದ್ದು, ಸೃಷ್ಟಿ ಲಯವಾದ ಬಳಿಕವೂ ಇರುವ ಅಖಂಡ, ಅವಿನಾಶಿ ಚೇತನ; ಸರ್ವಗುಣಶೋಭಿತ ಪರಿಪೂರ್ಣ ತತ್ತ್ವವಿದು.

'ಶುದ್ಧವಾದ ಇರುವಿಕೆ' ಎಂದರೆ ಯಾವುದರ ಆಧಾರದ ಮೇಲೆಯೂ ಬದುಕದೆ ತನ್ನಲ್ಲಿ ತಾನೇ ನಿರಾಲಂಬವಾಗಿ ಇರುವಂತಹುದು. ಅಂದರೆ ತಾನು ಸಕಲ ಜಗಕ್ಕೆ ಆಶ್ರಯೀಭೂತವಾಗಿ ತನಗೊಂದು ಆಶ್ರಯವಿಲ್ಲದೆ ಇರುವ, ವಿಕಾರಕ್ಕೀಡಾಗದ ಚೈತನ್ಯ 'ಸತ್' ತತ್ತ್ವವೇ ದೇವರು. ಮಾನವರು ಹೊಂದುವದು ಇಂದ್ರಿಯಾತ್ಮಕ ಜ್ಞಾನವಾದರೆ ಪರಮಾತ್ಮನದು ಇಂದ್ರಿಯಾತೀತವಾದ ಶುದ್ಧಜ್ಞಾನ. ಮಾನವನು ಅಲ್ಪವ್ಯಾಪಿಯಾಗಿ ಇರುವುದರಿಂದ, ಅವನು ಅಲ್ಪಜ್ಞನೂ ಹೌದು. ಸಮಸ್ತ ಬ್ರಹ್ಮಾಂಡವು ಪರಮಾತ್ಮನ ಗರ್ಭದಲ್ಲಿ ಇಂಬಿಡಲ್ಪಟ್ಟಿರುವುದರಿಂದ ಆವನು ಸರ್ವವ್ಯಾಪಕನು-ಸರ್ವಜ್ಞನು

---

* ಮ.ವ. ೩೦೭

ಆಗಿರುವನು. ದೇವನು ಶುದ್ಧವಾದ ಆನಂದಸ್ವರೂಪನು; ಹೀಗೆ ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣ ಎಂಬ ಈ ಐದು ತತ್ತ್ವಗಳು ಪರಮಾತ್ಮನ ಗುಣಗಳಲ್ಲ, ಸ್ವರೂಪವು. ನಾನುಟ್ಟಿರುವ ಕಾವಿಯ ಸೀರೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ಕಾವಿಯ ಬಣ್ಣವು ಈ ವಸ್ತ್ರದ ಗುಣವಾದರೆ, ಅಡ್ಡ-ಉದ್ದ ಎಳೆಗಳು ಇದರ ಸ್ವರೂಪ. 'ಗುಣ'ವನ್ನು ಕಳೆದುಕೊಂಡು ಒಂದು ವಸ್ತುವು ಇರಬಹುದು, ಆದರೆ 'ಸ್ವರೂಪ'ವನ್ನು ಕಳೆದುಕೊಂಡು ಆವುದೂ ಇರಲಾರದು. ಸಚ್ಚಿದಾನಂದಸ್ವರೂಪದ, ನಿತ್ಯವಾದ ಪರಮಾತ್ಮನ ಆನಂದವು ನನ್ನ ಹತ್ತಿರ ಸಾರಿದಾಗ ಚಿತ್ತದಲ್ಲಿದ್ದ ನೆನಪುಗಳ ಸಂಗ್ರಹ ಕರಗಿತು, ಮನದ ಸಂಕಲ್ಪ-ವಿಕಲ್ಪಗಳು ಅಳಿದು, ನೀರನ್ನು ತೆರವು ಮಾಡಿದ ಏತದ ಬಾನೆಯಂತೆ ಅದು ಸೊರಗಿತು. ಹೃದಯಕಮಲವು ಸಾಕ್ಷಾತ್ಕಾರದ ರವಿಕಿರಣಗಳಿಂದ ಸಂತಸಗೊಂಡು ದಳ ಬಿಚ್ಚಿತು. ಸರ್ವಾಂಗವನ್ನು ಬಿಗಿದಪ್ಪಿದ ಬಂಧನದ ಪರಿಣಾಮವಾಗಿ ಏನೂ ಕಾಣದಂತಾಯಿತು. ಎಲ್ಲ ಭಾವನೆಗಳಳಿದು ಚನ್ನಮಲ್ಲಿಕಾರ್ಜುನನ ಪಾದದಲ್ಲಿ ಭಾವನಾತೀತಳಾಗಿ ಒರಗಿದೆ. ಮಧುವನ್ನು ಹೀರುತ್ತ ದುಂಬಿ ಮೈಮರೆಯುವಂತೆ ಮುಂದಿನ ಅನುಭವವನ್ನು ಗ್ರಹಿಸಿಕೊಳ್ಳಲಾರದಷ್ಟು ಬುದ್ಧಿಯು ತನ್ಮಯವಾಗಿ ಮೈಮರೆಯಿತು.

ಅಂಗಸಂಗದಲ್ಲಿ ಲಿಂಗಸಂಗಿಯಾದೆನು,
ಲಿಂಗಸಂಗದಲ್ಲಿ ಅಂಗಸಂಗಿಯಾದೆನು.
ಉಭಯಸಂಗವನೂ ಅರಿಯದೆ ಪರಿಣಾಮಿಯಾದೆನು.
ನುಡಿಯ ಗಡಣವ ಮರೆದು ತೆರಹಿಲ್ಲದಿದ್ದೆನು.
ಎನ್ನ ದೇವ ಚನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ
ಇನ್ನು ನಾನು ಏನೆಂದೂ ಅರಿಯೆನಯ್ಯಾ.*

ಮೊದಲ ಹಂತದಲ್ಲಿ ನನ್ನ ಅಂಗದಲ್ಲಿ, ಅಂದರೆ ಕಾಯದಲ್ಲಿಯೇ ನೆಲದ ಮರೆಯ ನಿಧಾನದಂತೆ, ಶಿಲೆಯ ಮರೆಯ ಹೇಮದಂತೆ, ಮುಗಿಲ ಮರೆಯ ಮಿಂಚಿನಂತೆ ಅಡಗಿಕೊಂಡಿರುವ ಪ್ರಾಣಲಿಂಗವನ್ನು ಅರಿತು ಈ ಶರೀರದ ಮಂದಿರದ ಹೃದಯಸೆಜ್ಜೆಯಲ್ಲೇ ಪರಮಾತ್ಮನನ್ನು ಕೂಡಿದೆ. ಆ ಬಳಿಕ ನನ್ನಲ್ಲಿ ಅಡಗಿಕೊಂಡಿರುವ ಆತ್ಮಚೇತನವು ಸರ್ವವ್ಯಾಪಕ ಚೇತನವಾಗಿ ವಿಶ್ವವನ್ನೆಲ್ಲ ತುಂಬಿಕೊಂಡಿರುವುದನ್ನು ಕಂಡು, ಆ ಭೂಮದಲ್ಲಿ ನನ್ನ ಮನವನ್ನು ನಿಲ್ಲಿಸಲೆಳಸಿ ಯಶಸ್ವಿಯಾದೆನು. ಆ ಬೃಹತ್ ಚೇತನದ ಅಂಶವನ್ನು ದೇಹ ದೇವಾಲಯದಲ್ಲಿ ಕಂಡುಕೊಳ್ಳುವ ಸಾಧನೆಯನ್ನು ಮೊದಲು ಮಾಡಿ,

* ಮ.ವ. ೩೨೯

ವಿಶ್ವದೇವಾಲಯದಲ್ಲಿ ತುಂಬಿರುವ ಆ ಭೂಮಚೇತನದಲ್ಲಿ ನನ್ನನ್ನು ಲೀನಗೊಳಿಸುವ ಪ್ರಯತ್ನವನ್ನು ನಂತರ ಮಾಡಿದಂತಾಯಿತಷ್ಟೆ. ಆ ಬಳಿಕ ಕೂಡಿದೆ-ಅಗಲಿದೆ ಎಂಬ ಎರಡೂ ಭಾವನೆಗಳನ್ನು ದಾಟಿ ಪರಮತೃಪ್ತಿಯಲ್ಲಿ ಓಲಾಡಿದೆ.

ಜೀವನದಲ್ಲಿ ಪ್ರತಿಯೋರ್ವ ಮಾನವನು ಆನಂದದ ಅನ್ವೇಷಣೆಯಲ್ಲಿ ಇರುವನು. ತತ್ಪ್ರಯತ್ನದಲ್ಲಿ ಮೂರು ಬಗೆಯ ಆನಂದವನ್ನು ಹೊಂದುವನು. ಈ ಆನಂದೋತ್ಪತ್ತಿ ಎರಡು ವಸ್ತುಗಳ, ಅಥವಾ ಎರಡು ತತ್ತ್ವಗಳ ಮಿಲನದಿಂದ ಆಗುವುದು. ಪಂಚವಿಷಯಗಳಾದ ಶಬ್ದ ಸ್ಪರ್ಶ ರೂಪ ರಸ ಗಂಧ ಎಂಬುವು ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಎಂಬ ಪಂಚೇಂದ್ರಿಯಗಳೊಡನೆ ಸನ್ನಿಕರ್ಷವಾದಾಗ ಸ್ಫುರಿಸುವುದು ವಿಷಯಾನಂದ. ಬುದ್ಧಿ ಮತ್ತು ವಿಚಾರಗಳ ಕೂಟವಾದಾಗ ಉದಿಸುವುದು ಬೌದ್ಧಿಕಾನಂದ. ಆತ್ಮ-ಪರಮಾತ್ಮರ, ಅಂಗ-ಲಿಂಗಗಳ ಸಾಮರಸ್ಯದಿಂದ ಹೊಮ್ಮುವುದು ಆತ್ಮಾನಂದ-ಲಿಂಗಾನಂದ. ಇದಕ್ಕೆ ಸುಯಿಧಾನವೆಂಬುದಾಗಿ ಅಥವಾ ಪರಿಣಾಮವೆಂದೂ ಅನ್ನಬಹುದು. ಪರಿಣಾಮ ಎಂದರೆ ಪರಮತೃಪ್ತಿ; 'ಇದು ಸಾಕೆನಿಸದ—ಮತ್ತೊಂದು ಬೇಕು ಎನಿಸದ ಆತ್ಯಂತಿಕ ತೃಪ್ತಿ.' ಇಂತಹುದನ್ನು ಪಡೆದ ನಾನು ಶಬ್ದಮುಗ್ಧಳಾದೆ. ನುಡಿಯ ಗಡಣವನ್ನು ಮರೆದು, ಪರಮಾತ್ಮನನ್ನು ಬಿಟ್ಟು ಬೇರಾಗದಷ್ಟು ಕೂಡಿದೆನು.'

'ಅಕ್ಕಾ....ಇಂತಹ ಒಂದು ದಿವ್ಯಾನುಭವವನ್ನು ಪಡೆಯಲಿಕ್ಕೆಂದು ತಾನೇ ಮೋಕ್ಷಾಪೇಕ್ಷಿ ಸಾಧಕರು ಹಂಬಲಿಸುವುದು? ಅದನ್ನು ಪಡೆದು ನೀನು ನಿಜಕ್ಕೂ ಧನ್ಯಳಾದೆ....' ಪ್ರಭುದೇವರು ಮೆಚ್ಚುಗೆ ಸೂಸಿ ನುಡಿದರು.

'ಆತ್ಯಂತಿಕ ಮಟ್ಟದ ದೈವೀ ಅನುಭವವನ್ನು ನೀನು ಪಡೆದಂತಾಯಿತು. ಈ ದಾರ್ಶನಿಕ ಅನುಭವದ ಪರಿಣಾಮ ನಿನ್ನ ಜೀವನದಲ್ಲಿ, ಮನಸ್ಸಿನ ಮೇಲೆ ಹೇಗೆ ಆಗಿದೆ ಎಂಬುದನ್ನು ತಿಳಿಸಬಲ್ಲೆಯಾ, ಅಕ್ಕಾ....?' ಬಸವಣ್ಣನವರು ಕೇಳಿದರು.

'ಪರಿಣಾಮವು ಅನೇಕ ಬಗೆಯಲ್ಲಿ ಆಗಿದೆ, ತಂದೆ! ಒಂದನೆಯದಾಗಿ, ಪ್ರಕೃತಿಜನ್ಯವಾದ ಗುಣಗಳು ಅಳಿದುಬಿಟ್ಟವು.

ಚಕ್ರಮಂಡಲವನ್ನು ಬೆಟ್ಟಕ್ಕೆ ಹೋಲಿಸಿದರೆ, ಸಹಸ್ರಾರದಲ್ಲಿ ಹುದುಗಿಕೊಂಡಿರುವ ಚಿಚ್ಛಕ್ತಿಯು ಜಾಗ್ರತವಾದಾಗ ಅದು ಸರ್ವಾಂಗದ ಸ್ವಭಾವಸಿದ್ಧ ಗುಣಗಳನ್ನು ಸುಟ್ಟುಬಿಡುವುದು. ಆಗ ಶರೀರದ ಕಾನನದಲ್ಲಿರುವ ಎಲ್ಲ

ಲೊಳಗೆ ವಿಹರಿಸಿದೆ; ಇದನ್ನು ಯೋಗಾಂಗತ್ರಿವಿಧಿಯಲ್ಲಿ ಹೀಗೆ ಹೇಳಿರುವೆ:

ಬೆಟ್ಟದ ಮೇಲಣ ಕಿಚ್ಚು ಸುಟ್ಟಿತ್ತು ಕಾನನವ
ಅಷ್ಟು ಮೃಗಜಾತಿಯಳಿದವು। ಅದಕಂಡು
ಬಟ್ಟಬಯಲೊಳಗೆ ಮೆರೆದನು॥*

'ಬಹು ಸುಂದರ, ಅರ್ಥಗರ್ಭಿತ!' ಪ್ರಭುದೇವರು ಉದ್ಗರಿಸಿದರು. ಪುನಃ ಅಕ್ಕಮಹಾದೇವಿ ಮುಂದುವರಿಸಿದಳು:

'ಎರಡನೆಯದಾಗಿ ಅಂಗೇಂದ್ರಿಯಗಳು ಲಿಂಗೇಂದ್ರಿಯಗಳಾದವು. ಲೋಕದ ರುಚಿ ಅಳಿದು ಲಿಂಗರುಚಿ ಆಳವಟ್ಟಿದೆ. ಈಗ ನಾನು ವಿಲಕ್ಷಣ ಮಾನಸಿಕ ಮಟ್ಟವನ್ನು ಮುಟ್ಟಿ, ಹೀಗಿರುವೆ ನೋಡಿರಿ:

ಭಾವಿಸಿ ನೋಡಿದಡೆ ಅಂಗವಾಯಿತ್ತು
ಅಂಗಗುಣವಳಿದುಳಿದ ಬಳಿಕ ನಾನಿನಗಂಗವಾದೆ.
ಭಿನ್ನರುಚಿಯ ಬಿಟ್ಟು ಲಿಂಗರುಚಿಯಾದಬಳಿಕ
ಚನ್ನಮಲ್ಲಿಕಾರ್ಜುನಯ್ಯನ ಕೊಂಡು ಸಾವ ಭಾಷೆ. †

ನಿಮ್ಮೆಲ್ಲರ ಮಧ್ಯೆ ನಾನು ಕುಳಿತಿರುವೆ: ಮುಟ್ಟಿದರೆ ಕೈಗೆ ಸಿಗುವೆ, ದೃಷ್ಟಿಗೆ ಕಾಣಸಿಗುವೆ, ಮಾತನಾಡಿದರೆ ಕೇಳಸಿಗುವೆ; ಈ ಎಲ್ಲ ಪ್ರಬಲ ಸಾಕ್ಷಿಗಳ ಆಧಾರದಮೇಲೆ ವ್ಯಾವಹಾರಿಕ ದೃಷ್ಟಿಯಿಂದ ನಾನು 'ಅಂಗವಂತ'ಳಾಗಿರುವೆ, 'ಕಾಯಧಾರಿ'ಯಾಗಿರುವೆ ಎಂದು ನೀವು ನಂಬಬಹುದು. ಆದರೆ ಶರೀರವು ತನ್ನ ಗುಣಗಳೆಲ್ಲವನ್ನು ಕಳೆದುಕೊಂಡಿರುವುದರಿಂದ ಆಧ್ಯಾತ್ಮಿಕ ದೃಷ್ಟಿಯಿಂದ ನಾನು ಅಂಗವಂತಳಲ್ಲ—ಲಿಂಗವಂತಳು; ಲಿಂಗಶರೀರಿ. ಆದ್ದರಿಂದ ಈಗ ದೇವನಿಗೇ ನಾನು ಅವಯವವಾಗಿರುವೆ. ಹೀಗೆ ಲೌಕಿಕ ಆಸೆ-ಆಕಾಂಕ್ಷೆ, ರುಚಿಗಳನ್ನು ಬಿಟ್ಟು, ಶಿವಸಂಬಂಧವಾದ ಆಸೆ-ಆಕಾಂಕ್ಷೆ, ರುಚಿಗಳಿಂದ ಬದುಕುತ್ತಿರುವ ನಾನು, ಚನ್ನಮಲ್ಲಿಕಾರ್ಜುನನ ಆನಂದವನ್ನು ಕೊಂಡು, ಶಾರೀರಿಕವಾಗಿ ಸತ್ತುಹೋಗಿರುವೆ, ಆತ್ಮಿಕವಾಗಿ ಬದುಕಿರುವೆ..'

'ಭಲೆ....ಭಲೆ! ಅದ್ಭುತ ನಿರೂಪಣೆ....!' ಪ್ರಭುದೇವರು ಉದ್ಗರಿಸಿದರು.

'ಅನಂತರ ಈಗ ನಾನು ಎಂಟು ಜಾವಗಳ ಕಾಲದಲ್ಲಿಯೂ ಎಡಬಿಡದೆ ಪೂಜೆಯನ್ನು ಮಾಡತೊಡಗಿರುವೆ; ನಿಮ್ಮ ಕಣ್ಣಿಗೆ ನನ್ನ ಪೂಜೆಯು ಕಾಣಲಿಕ್ಕಿಲ್ಲ. ಏಕೆಂದರೆ ಆ ಪೂಜೆಯ ಪರಿ ಹೀಗಿದೆ:

---

* ಯೋ.ತ್ರಿ.

ಸಜ್ಜನೆಯಾಗಿ ಮಜ್ಜನಕ್ಕೆರೆವೆ
ಶಾಂತಳಾಗಿ ಪೂಜೆಯ ಮಾಡುವೆ
ಸಮರತಿಯಿಂದ ನಿಮ್ಮ ಕೂಡುವೆ.
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ !*

ನನ್ನ ಸಜ್ಜನತ್ವದ ಉದಕವೇ ದೇವನಿಗೆ ಸದಾ ಮಜ್ಜನವಾದರೆ, ಶಾಂತಿ ಗುಣವೇ ಉಪಾಸನೆಯಾಗಿದೆ. ಮರೆಯದೆ ನೆನೆಯುವ ಸಮರತಿಯೇ ಕೂಟ ವಾದರೆ, ಅಗಲದ ಪೂಜೆಯನ್ನು ಜಾಗ್ರತ ಸ್ವಪ್ನಸುಷುಪ್ತಾವಸ್ಥೆಗಳಲ್ಲಿ ಮಾಡುತ್ತಿರುವುದರಿಂದ ಈಗ ನನ್ನ ಸಮಗ್ರ ಜೀವನವೇ ಪೂಜೆಯಾಗಿದೆ. ಸಮಾಧಿಯ ಸ್ಥಿತಿಯಲ್ಲಿ ಹೊಂದುವ ದಿವ್ಯಾನಂದವನ್ನು ಸದಾಕಾಲದಲ್ಲಿಯೂ ನೀಡುವ ಚೈತನ್ಯಸಮಾಧಿಯನ್ನು ಪಡೆದಿರುವೆ.

ಹೀಗಾಗಿ ನನ್ನ ಉಸಿರಿನ ಪರಿಮಳವೇ ಶಿವನಿಗೆ ಸೌರಭಯುಕ್ತ ಕುಸುಮ ವಾದಾಗ ಹೂವಿನ ಅರ್ಪಣೆಯ ಹಂಗೂ ನನಗಿಲ್ಲ. ಕ್ಷಮೆ-ದಮೆಗಳು, ಶಾಂತಿ ಸೈರಣೆಯ ಗುಣಗಳು ಅಳವಟ್ಟಿರುವ ಕಾರಣ ಸದಾ ಸಂತೃಪ್ತಳಾಗಿ ಇರು ವುದರಿಂದ ಸಮಾಧಿಸ್ಥಿತಿಯ ಬಯಕೆ ಸಹ ಉಳಿದಿಲ್ಲ. ಲೋಕದಲ್ಲಿ ತುಂಬಿರು ವುದು ನನ್ನ ಚೈತನ್ಯವೇ ಎಂಬ ಭಾವವಳವಟ್ಟಿದ್ದರಿಂದ ಏಕಾಂತದ ಅಪೇಕ್ಷೆ ಸಹ ಅಳಿದಿದೆ. ಸಂತೆಯ ಮಧ್ಯದಲ್ಲಿಯೂ ಕುಳಿತು ಶಿವಸಾಮರಸ್ಯದಲ್ಲಿ ತಲ್ಲೀಯವಾಗಬಲ್ಲೆ.† ಆದ್ದರಿಂದ ಪಾರಮಾರ್ಥಿಕ ಪ್ರಪಂಚದ ಕೂಸಾಗಿ ಮಾತನಾಡುವುದಾದರೆ ನಾನೀಗ ಅಕ್ಕಮಹಾದೇವಿಯಾಗಿ ಬದುಕಿಲ್ಲ, ಚೆನ್ನ ಮಲ್ಲಿಕಾರ್ಜುನನ ಚೇತನದ ನಿಧಿಯಾಗಿರುವೆ.'

ಅಕ್ಕಮಹಾದೇವಿಯು ಹಾಗೆ ಹೇಳುವಲ್ಲಿ ಅಹಂಭಾವವಾಗಲಿ, ತಾನು ಎಲ್ಲರಿಗಿಂತಲೂ ದೊಡ್ಡವಳೆಂಬ ಪ್ರತಿಷ್ಠೆಯಾಗಲಿ ಇರಲಿಲ್ಲ. ತಾನು ಅನುಭವಿ ಸಿದುದನ್ನು, ಮುಟ್ಟಿರುವ ಸ್ಥಿತಿಯನ್ನು ಪ್ರಾಮಾಣಿಕವಾಗಿ ಇತರರಿಗೆ ನಿರೂಪಿಸುವ ಪ್ರಯತ್ನವಿತ್ತು.

ಆಕೆಯ ಬಿತ್ತರಣೆಯಿಂದ ವಿಸ್ಮಯ-ಸಂತೋಷದ ಹೊನಲು ಅನುಭವ ಗೋಷ್ಠಿಯಲ್ಲಿ ಹರಿಯತೊಡಗಿತ್ತು. ಶರಣರ ಮೊಗದ ಮೇಲೆ ಮೆಚ್ಚುಗೆಯ ಕಳೆ ಸೂರೆಯಾಡುತ್ತಿತ್ತು. ಆಗ ಬಸವಣ್ಣನವರು ವರ್ಣನಾತೀತ ಸಂತೋಷ ತುಂಬಿದ ಹೃದಯದಿಂದ ಎದ್ದು ನಿಂತರು. ಸ್ತ್ರೀಪ್ರಪಂಚದ ಮೇಲೆ ಮೂಢ ರೂಢಿಯು ಹೇರಿದ್ದ ಕೀಳ್ತನದ ಹೊರೆಯನ್ನು ಇಳಿಸಲೆತ್ನಿಸಿ ಮಹಿಳಾಕುಲದ

ತಮ್ಮ ಪೈಜೆಯನ್ನು ದಿಟಮಾಡಿಸುವ ಸ್ತ್ರೀರತ್ನವೊಂದು ಅನುಭವಮಂಟಪದ ಖನಿಯಿಂದ ಜಗತ್ತಿಗೆ ಸಿಗುವಂತಾದುದಕ್ಕೆ ಸಿಸ್ಸೀಮ ಸಂತಸವಾಗಿತ್ತು. 'ಸ್ತ್ರೀಗೆ ಅವಕಾಶ ಸಿಕ್ಕಾಗ ಪುರುಷನ ಮಟ್ಟಕ್ಕೆ ಏರಬಲ್ಲಳು; ಪ್ರಸಂಗ ಒದಗಿದರೆ ಮುಂದೂ ಸಾಗಬಲ್ಲಳು' ಎಂಬ ತತ್ವವನ್ನು ತಳೆದು, ಅಪೂರ್ವ ಎದೆಗಾರಿಕೆಯಿಂದ ಅದನ್ನು ಬಿತ್ತರಿಸುವ ಬೌದ್ಧಿಕ ಸಾಮರ್ಥ್ಯವನ್ನು ಅಕ್ಕ ಮಹಾದೇವಿ ಪಡೆದುದೇ ಅಲ್ಲದೆ, ಯೌಗಿಕವಾಗಿ ಅತ್ಯುನ್ನತ ಹಂತವನ್ನು ಮುಟ್ಟಿ ಬೌದ್ಧಿಕ ಆಹ್ವಾನವನ್ನು ಪ್ರಾಯೋಗಿಕ ರೂಪದಲ್ಲಿ ಮಾಡಿ ತೋರಿದುದು ಅಮೃತ ಘಟನೆಯಾಗಿತ್ತು. ಅಂತೆಯೇ ಆ ಅಭಿಮಾನವನ್ನು ಹೀಗೆ ವ್ಯಕ್ತಪಡಿಸಲಿಚ್ಛಿಸಿದರು:

> ಅಜ್ಞಾನ ಹಿಂಗಿತ್ತು, ಅಹಂಕಾರವಡಗಿತ್ತು,
> ಅರಿಷಡ್ವರ್ಗಂಗಳು ಹರಿಹಂಚಾದವು.
> ಅಷ್ಟಮದಂಗಳು ಪಟ್ಟ ಪರಿಯಾದವು.
> ದಶವಾಯುಗಳು ವಶವರ್ತಿಯಾದವು,
> ಇಂದ್ರಿಯಂಗಳು ಬಂಧನವಡೆದವು, ಮನೋವಿಕಾರ ನಿಂದಿತ್ತು.
> ಕೂಡಲಸಂಗಮದೇವಾ, ನಿಮ್ಮಲ್ಲಿ ನಮ್ಮ ಮಹಾದೇವಿಯಕ್ಕಗಳ
> ನಿರ್ವಾಣದ ಸಹಜ ನಿಲವ ಕಂಡು
> ನಮೋ ನಮೋ ಎನುತಿರ್ದೆನಯ್ಯಾ ಪ್ರಭುವೆ.*

'ಶರಣಬಂಧುಗಳೇ, ಶತಶತಮಾನಗಳಿಂದ ಧರ್ಮವು ಅಪಚಾರವೊಂದನ್ನು ಮಾಡಿತು. ಸ್ತ್ರೀಯನ್ನು ಸ್ವಾಭಾವಿಕವಾಗಿ ಅಜ್ಞಾನಿ, ಅಹಂಕಾರಿ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಸ್ವರೂಪಳು, ಅಷ್ಟಮದಗಳ ಗಟ್ಟಿ, ಪ್ರಾಣಪ್ರೀತಳು, ಇಂದ್ರಿಯದೌರ್ಬಲ್ಯ-ಮನೋವಿಕಾರದ ತವರು; ಎಂದೆಲ್ಲ ಹಳಿದು ಅವರ ಸುಪ್ತಪ್ರತಿಭೆಯನ್ನು ಹತ್ತಿಕ್ಕಲಾಯಿತು. ಮಾನವನು ಶರೀರವನ್ನು ಹೊತ್ತಮೇಲೆ ಇವಿರುವುದು ಸಹಜ. ಆದರೆ ಸ್ತ್ರೀಯತ್ತಲೇ ಬೆರಳು ಮಾಡಿ ಹಳಿಯುತ್ತ ಧರ್ಮಸಂಸ್ಕಾರವನ್ನು ಸಹ ಕೊಡದೆ ಇರಿಸಲಾಗಿತ್ತಲ್ಲವೆ? ಪುರುಷಕುಲದ, ಧರ್ಮಶಾಸ್ತ್ರಗಳ ಈ ದೌರ್ಜನ್ಯವನ್ನು ಪ್ರತಿಭಟಿಸಿಯೇ ನಾನು ಮನೆಯನ್ನು ತೊರೆದುದು ತಮಗೆಲ್ಲ ವಿದಿತವಿದೆ. ಅಂತೆಯೇ ಸರ್ವಸಮಾನತೆ ಸಾರುವ ಧರ್ಮವನ್ನು ರೂಪಿಸಿ ತಮ್ಮೆದುರಿಗೆ

ಮಾಡಿಕೊಂಡು ಈ ಮಹಾತಾಯಿ ನನಗೆ-ನಿಮಗೆ, ನಮ್ಮ ಧರ್ಮ-ಸಾಹಿತ್ಯ ಗಳಿಗೆ ಅಮರತ್ವ-ಕೀರ್ತಿತರುವಂತಹ ಸಾಧನೆ ಮಾಡಿದ್ದಾಳೆ. ನಾನು ತಾತ್ತ್ವಿಕ ವಾಗಿ ಆಡಿದ ನುಡಿಯನ್ನು ಸಾಕ್ಷಾತ್ತಾಗಿ ಮಾಡಿ ತೋರಿಸಿ, ಸ್ತ್ರೀಯರನ್ನು ಕೀಳಾಗಿ ಕಾಣುವ ಮನೋಭಾವದವರಿಗೆ ಒಂದು ಸಮಂಜಸ 'ಮುಂಡಿಗೆ' ಯಾಗಿದ್ದಾಳೆ. ಶರೀರ ತಾಳಿ ಹುಟ್ಟಿಯೂ ಶಾರೀರಿಕ ಗುಣಗಳನ್ನು ಮೆಟ್ಟಿ, ನಿರ್ಲಿಪ್ತ ನಿರ್ವಾಣ ಪದವಿಯನ್ನು ಪಡೆದು, ಸ್ತ್ರೀಕುಲಕ್ಕೊಂದು ಅಪೂರ್ವ ಮಾದರಿಯಾಗಿದ್ದಾಳೆ. ಇಂತಹ ತಾಯಿಗೆ ಹೃದಯ ತುಂಬಿ ಪ್ರಣಾಮ ಸಲ್ಲಿಸುವೆ.' ಸಾಮಾನ್ಯ ಕಾಲಾಳಾಗಿ ಸಮರಕ್ಕೆ ಹೋಗಿ ವೀರಾವೇಶದಿಂದ ಕಾದಾಡಿ, ಕೀರ್ತಿಗಳಿಸಿಕೊಂಡು ದಂಡನಾಯಕನಾಗಿ ಹಿಂದಿರುಗಿದ ಮಗ ನನ್ನು ಕಂಡು ತಂದೆಯ ಎದೆಯುಬ್ಬುವಂತೆ, ಬಸವಣ್ಣನ ಅಭಿಮಾನ ಸೀಮಾತೀತವಾಗಿ ಹರಿಯುತ್ತಿತ್ತು. ಬಸವಣ್ಣನ ಮಾತಿನಿಂದ ಸ್ಫೂರ್ತಿ ಗೊಂಡು ಷಟ್ಸ್ಥಲಜ್ಞಾನಿ ಚನ್ನಬಸವಣ್ಣನವರು ಗೋಷ್ಠಿಗೆ ಮಂಗಲವನ್ನು ಮಾಡುವ ಸಲುವಾಗಿ ಎದ್ದುನಿಂತು, ಹೀಗೆ ನುಡಿದರು :

'ಶರಣಜನಸಮುದಾಯವೇ, ತಾವೆಲ್ಲರೂ ಶಿವಸುಖದ ಕಡಲಿನಲ್ಲಿ ಅರಸಂಚೆ ಗಳಂತೆ ವಿಹರಿಸುತ್ತಿದ್ದೀರಿ. ತಮ್ಮ ಸುಖಕ್ಕೆ ನನ್ನ ಮಾತು ಭಂಗತರ ಬಹುದು. ಆದರೆ ಅನಿವಾರ್ಯವಾಗಿ ಸಭೆಯ ನಿಯಮಾನುಸಾರ ನುಡಿ ಯಾಡುವೆ. ಅಕ್ಕನವರ ಅನುಭವವಾಣಿಯನ್ನು ಮನದಣಿಯೆ ಉಂಡಿರುವಿರಿ ; ಅವರ ಶಬ್ದಸಂಪತ್ತು, ನಿರೂಪಣೆಯ ಸಾಮರ್ಥ್ಯಗಳು ಅತ್ಯದ್ಭುತವಾಗಿವೆ.

ಸಾಮಾನ್ಯವಾದ ಒಂದು ಲೌಕಿಕ ದೃಷ್ಟಾಂತದ ಮೂಲಕ ಇವರ ನಿಲುವನ್ನು ವಿವರಿಸುವೆ.

ಕೆಲವರಿಗೆ ಅಡಿಗೆಯ ರುಚಿ ಚೆನ್ನಾಗಿ ತಿಳಿಯುವುದು, ಅಡಿಗೆ ಮಾಡುವ ಬಗ್ಗೆ ಶಾಸ್ತ್ರೀಯ ಜ್ಞಾನವೂ ಇರುವುದು. ಇನ್ನೊಬ್ಬರು ಮಾಡಿಟ್ಟ ಅಡಿಗೆಯ ಲೋಪದೋಷಗಳ ವಿಮರ್ಶೆಯನ್ನೂ ಮಾಡಬಲ್ಲರು. ಆದರೆ 'ಅಡಿಗೆಯನ್ನು ಮಾಡು' ಎಂದು ಕರ್ತವ್ಯಕ್ಕೆ ಬಿಟ್ಟರೆ ಏನೇನೂ ಮಾಡಲಾರದೆ ಸೋಲುವರು. ಎರಡನೆಯವರು ಶಾಸ್ತ್ರೀಯ ಜ್ಞಾನವಿಲ್ಲದಿದ್ದರೂ, ಅಡಿಗೆಯನ್ನು ಸಿದ್ಧ ಪಡಿಸುವರು. ಮೂರನೆಯವರು ವೈವಿಧ್ಯಮಯವಾಗಿ ಸಿದ್ಧಪಡಿಸಿದರೂ ಅಡಿಗೆ ಯನ್ನು ಸಮರ್ಪಕವಾಗಿ ತಳಿಗೆಗೆ ಎಡೆಮಾಡುವ ಕಲಾವಂತಿಕೆ ಹೊಂದಿರರು. ನಾಲ್ಕನೆಯವರಿಗೆ ಅಡಿಗೆಯ ಶಾಸ್ತ್ರೀಯ ಜ್ಞಾನವಿದೆ, ಚೆನ್ನಾಗಿ ಸಿದ್ಧಪಡಿಸಲೂ ಬಲ್ಲರು, ಪಾಕ ಮಾಡಿದ್ದನ್ನು ಕಲಾವಂತಿಕೆಯಿಂದ, ಸಮರ್ಪಕವಾಗಿ ಎಡೆ

ಇದೇ ರೀತಿ ಪಾರಮಾರ್ಥ ಪ್ರಪಂಚದಲ್ಲಿ ತತ್ತ್ವಜ್ಞಾನಿ, ಕೇವಲಾನುಭವಿ, ನಿಃಶಬ್ದಬ್ರಹ್ಮಿ, ದಾರ್ಶನಿಕ ಎಂದು ನಾಲ್ಕು ಬಗೆಯ ಶರಣರನ್ನು ಕಾಣಬಹುದು.

ಜಗತ್ತಿನಲ್ಲಿ ಶಾಬ್ದಿಕ ತತ್ತ್ವಜ್ಞಾನಿಗಳು ಅನೇಕರು; ಕೇವಲ ಗಾಣದ ಎತ್ತಿನಂತೆ ತರ್ಕವಲಯದಲ್ಲಿಯೇ ಸುತ್ತುವವರಿವರು. ಕೇವಲಾನುಭವಿಗಳೆಂದರೆ ಅಷ್ಟಾಗಿ ಶಾಸ್ತ್ರಜ್ಞಾನವಿಲ್ಲದ, ಆದರೆ ದಿವ್ಯಾನುಭವ ಪಡೆದವರು. ನಿಃಶಬ್ದ ಬ್ರಹ್ಮಿಗಳು—ಶಾಸ್ತ್ರೀಯ ಜ್ಞಾನವನ್ನೂ ಹೊಂದಿದವರು ಮತ್ತು ಸ್ವತಃ ಅನುಭವಿಗಳು.ಆದರೆ ತಮ್ಮ ಅನುಭವವನ್ನಾಗಲೀ,ವಿಚಾರಗಳನ್ನಾಗಲೀ ಇನ್ನೊಬ್ಬರಿಗೆ ಅರುಹಲಾರದ ಶಬ್ದಸಂಪತ್ತಿನ ಕೊರತೆಯಿಂದ ಬಳಲುವವರು. ಅವರಿಗೆ ವಾಣಿಯ ಶಕ್ತಿಯಾಗಲಿ, ರಚನಾಶಕ್ತಿಯಾಗಲಿ ಇರದು. ಕೇವಲ ಕೆಲವರು ಮಾತ್ರ, ಅದೂ ಬೆರಳಮೇಲೆಣಿಸುವಷ್ಟು ಜನರು ಸರ್ವಾಂಗೀಣ ವ್ಯಕ್ತಿತ್ವ ಸಾಧಿಸುತ್ತಾರೆ; ಅವರೇ ದಾರ್ಶನಿಕರು. ದಾರ್ಶನಿಕನು ತತ್ತ್ವಜ್ಞಾನಿಯೂ ಅಹುದು, ಅನುಭಾವಿಯೂ ಅಹುದು. ಜೊತೆಗೆ ತನ್ನ ವಿಚಾರ-ಅನುಭವಗಳನ್ನು ಅತ್ಯಂತ ಸಮರ್ಪಕವಾಗಿ, ಶಾಸ್ತ್ರೀಯವಾಗಿ ಪಾಮರ-ಪಂಡಿತರೀರ್ವರಿಗೆ ತಿಳಿಸಬಲ್ಲ.

ಈ ದೃಷ್ಟಿಯಿಂದ ನೋಡಿದಾಗ ಅಕ್ಕನವರಲ್ಲಿ ಬೌದ್ಧಿಕ ಪಾಂಡಿತ್ಯ, ಅನುಭವ ಮತ್ತು ಸತ್ವಶಾಲೀ ಸಾಹಿತ್ಯ ಪ್ರತಿಭೆಯಿರುವ ಕಾರಣ ಅವರು ಮಹಾದಾರ್ಶನಿಕರು.

ಕಾಡಿನಲ್ಲಿ ಮರದ ದಿಮ್ಮಿಗಳನ್ನು ಕಡಿದು ನದಿಗಳಲ್ಲಿ ತೇಲಿಬಿಡುತ್ತಾರೆ. ಪ್ರವಾಹದಗುಂಟ ಅವು ತೇಲುತ್ತಾ ಬಂದಾಗ ನಿರೀಕ್ಷಿಸಿದ ತಾಣಗಳಲ್ಲಿ ಸಂಗ್ರಹಿಸಿಕೊಳ್ಳುತ್ತಾರೆ. ನದಿಯಲ್ಲಿ ಪ್ರವಾಹದ ಒತ್ತಡ ಚೆನ್ನಾಗಿದ್ದರೆ ದಿಮ್ಮಿಗಳು ಉದ್ದೇಶಿಸಿದ ತಾಣವನ್ನು ಮುಟ್ಟುತ್ತವೆ. ಇಲ್ಲವಾದರೆ ಎಲ್ಲಿಯೋ ನಿಂತುಬಿಡುತ್ತವೆ. ಹಾಗೆಯೇ ಅನುಭಾವಿಯಲ್ಲಿ ಸಾಹಿತ್ಯಗಂಗೆಯ ಗಾತ್ರ ವಿಪುಲವಿದ್ದರೆ ಮಾತ್ರ ತನ್ನ ವಿಚಾರದ ದಿಮ್ಮಿಗಳನ್ನು ಸಮರ್ಪಕವಾಗಿ ಗುರಿಮುಟ್ಟಿಸುವನು. ಇಲ್ಲವಾದರೆ ಅನುಭವದ ವಿಚಾರಗಳು ಸಾಹಿತ್ಯದ ಕೊರತೆಯಿಂದ ಎಲ್ಲೆಲ್ಲೋ ನಿಂತುಬಿಡುವವು. ಅಕ್ಕನವರಲ್ಲಿ ಸಾಹಿತ್ಯ ತರಂಗಿಣಿಯು ಸತ್ವಶಾಲಿಯಾಗಿ ಪ್ರವಹಿಸುವುದರಿಂದ, ಅವರು ತಮ್ಮ ವಿಚಾರದ ದಿಮ್ಮಿಗಳನ್ನು ಬಹುನಿಸರ್ಗಳವಾಗಿ ವಾಣಿ-ವಚನಗಳೆರಡರ ಮೂಲಕವಾಗಿಯೂ

ಕುದಿಸಿಟ್ಟ ಸಾರಿಗೆ ಕೊಟ್ಟ ಆಕರ್ಷಣೀಯ ಒಗ್ಗರಣೆಯಂತೆ ಅದಕ್ಕಿಂತಲೂ ಇದೇ ಹೆಚ್ಚು ಘಮಘಮಿಸುತ್ತಿದೆ....' ಅಕ್ಕಮಹಾದೇವಿ ಹೊಗಳಿಕೆಯಿಂದ ಸಂಕೋಚಗೊಂಡು ಹೇಳಿದಳು.

'ಅಕ್ಕಾ, ಸಾರು ಮುಖ್ಯವೇ ವಿನಾ ಒಗ್ಗರಣೆಯಲ್ಲ! ಸಾರು ಸಿದ್ಧವಾಗಿರದಿದ್ದರೆ ನಾನು ಹೇಗೆ ಒಗ್ಗರಣೆ ನೀಡಬಲ್ಲೆ....?' ಚನ್ನಬಸವಣ್ಣನು ನಕ್ಕು ಮತ್ತೆ ಪ್ರಶ್ನಿಸಿದಾಗ,

'ಅದು ಬಹು ಅಭಿಮಾನದ ಮಾತು, ಚನ್ನಣ್ಣಾ....' ಎಂದು ನುಡಿದಳು. ಸಭೆಗೆ ಸಮಾರೋಪಸ್ಗೈವ ಉದ್ದೇಶದಿಂದ ಹೇಳಿದನು :

'ಶರಣರೇ, ಇಂದಿನ ಗೋಷ್ಠಿಯು ಕೆಲವೇ ಕ್ಷಣಗಳಲ್ಲಿ ಮುಕ್ತಾಯಗೊಳ್ಳುವುದು. ಆದರೆ ಅದಕ್ಕೆ ಮುನ್ನ ಅತಿಮುಖ್ಯವಾದ ಒಂದು ಮಾತನ್ನು ಹೇಳಲಿಚ್ಛಿಸುವೆ :

'ಬ್ರೊಮ್ಮವನು ಅರಿದವರು ಶಬ್ದಮುಗ್ಧರಾಗಿರಬೇಕು; ಅವರು ಮತ್ತೆ ಮಾತನಾಡುವುದು ಅಪರಿಪೂರ್ಣತ್ವದ ಸಂಕೇತ ಎಂಬ ನಂಬುಗೆಯನ್ನು ನಾವು ಹೀಗೆ ಅಲ್ಲಗಳೆಯಬಹುದು. ಆಳವಾದ ಬಾವಿಯಲ್ಲಿ ಅಗ್ಗವಣಿ ಇದೆ ಎಂದಿಟ್ಟುಕೊಳ್ಳಿ. ಸಾಮರ್ಥ್ಯವಿರುವ ಕೆಲವು ವ್ಯಕ್ತಿಗಳು ಒಳಗಿಳಿದು ಕುಡಿಯಬಹುದು. ಅಂದಮಾತ್ರಕ್ಕೆ ಉಳಿದ ಎಷ್ಟು ಜನಕ್ಕೆ ಅದು ಸಾಧ್ಯ? ಕುರುಡರು, ಕುಂಟರು, ಅಶಕ್ತರು ಹೋಗಲಾರರಷ್ಟೆ. ಆದರೆ ಶಕ್ತಿಯಿರುವವರು ಭಾವಿಯ ದಂಡೆಯ ಮೇಲೆ ನಿಂತು, ಹಗ್ಗ-ಕೊಡಗಳನ್ನು ಬಿಟ್ಟು ನೀರನ್ನು ಹೊರತೆಗೆದರೆ ದಂಡೆಯ ಮೇಲಿರುವವರೂ ಕುಡಿದು ತಣಿವರು. ಹಾಗೆಯೇ ಹೃದಯದ ಆಳದಲ್ಲಿರುವ ಶಿವಾನುಭಾವ ರಸವನ್ನು ಹೊರತೆಗೆಯಲು ಸಂಕಲ್ಪ ಹೀನರಿಗೆ, ಅಜ್ಞಾನಿಗಳಿಗೆ ಸಾಧ್ಯವಾಗದು. ಅದನ್ನು ಕಂಡುಕೊಂಡ ಸ್ವಾನುಭಾವಿಗಳು ಶಬ್ದಸಮೂಹವೆಂಬ ಹಗ್ಗವನ್ನು ಬಿಟ್ಟು, ಅದಕ್ಕೆ ವಚನಗಳ ಕೊಡವನ್ನು ಕಟ್ಟಿ, ಅನುಭಾವರಸವನ್ನು ಮೇಲಕ್ಕೆತ್ತಿ, ಮೋಕ್ಷಾಪೇಕ್ಷಿಗಳ ಹೃದಯದ ಬಟ್ಟಲುಗಳಿಗೆ ಎರೆದರೆ ಎಲ್ಲರೂ ಕುಡಿದು ತಣಿಯಬಲ್ಲರಷ್ಟೆ?* ಅಂಥ ಮಹೋನ್ನತ ಸಾಧನೆಯನ್ನು ಅಕ್ಕನವರು ಮಾಡಿ, ನಮಗೆಲ್ಲ ಮಾರ್ಗದರ್ಶನ ಮಾಡಿದ್ದಾರೆ....' ಎಂದು ಚೆನ್ನಬಸವಣ್ಣನು ಪ್ರವಚಿಸಿದನು.

ಅಕ್ಕಮಹಾದೇವಿ ವಿನಯಶೀಲಳಾಗಿ ಶರಣರಿಗೆ ವಂದಿಸುತ್ತ ಹೇಳಿದಳು :

---

* ಚ.ಬ.ವ. ೬೬೬

ಸಂಗದಿಂದಲ್ಲದೆ ಅಗ್ನಿ ಹುಟ್ಟದು,
ಸಂಗದಿಂದಲ್ಲದೆ ಬೀಜ ಮೊಳೆದೋರದು,
ಸಂಗದಿಂದಲ್ಲದೆ ದೇಹವಾಗದು,
ಸಂಗದಿಂದಲ್ಲದೆ ಸರ್ವಸುಖದೋರದು.
ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು
ಪರಮ ಸುಖಿಯಾದೆನಯ್ಯಾ.*

'ಶರಣಪುಂಗವರೇ, ಜೀವನದಲ್ಲಿ ಸಂಗಕ್ಕೆ ಬಹು ಮಹತ್ವ ಸ್ಥಾನವಿದೆ. ಕೆಸರಿನ ಗುಂಡಿಯ ಸಂಗವನ್ನುಮಾಡಿದ ಗಾಳಿಯು ದುರ್ವಾಸನೆ ಕೊಡುವುದು. ಮಲ್ಲಿಗೆಯ ಹೂವಿನ ಸಹವಾಸ ಮಾಡಿದ ಗಾಳಿ ಸುವಾಸನೆಯನ್ನು ನೀಡುವುದು. ಗಾಳಿಗೆ ನಾವು ಮನ್ನಣೆ ಕೊಡುವುದಕ್ಕಿಂತ ಮಲ್ಲಿಗೆಹೂವನ್ನು ನಾವು ಗೌರವಿಸಬೇಕಷ್ಟೆ. ಹಾಗೆಯೇ ಶರಣರ ಸಂಗದಿಂದ ನಾನು ವಿಶಿಷ್ಟ ಸಾಧನೆ ಮಾಡಬಲ್ಲವಳಾದೆ. ಈ ಶ್ರೇಯಸ್ಸು ನನಗಲ್ಲ, ತಮಗೆ ಸೇರಿದುದು....'

ಮಂಗಲವಾದೊಡನೆಯೇ ಅನುಭವ ಗೋಷ್ಠಿಯು ಚದುರಿತು. ಅಕ್ಕ ಮಹಾದೇವಿಯ ದಿವ್ಯಸಾಧನೆ-ಬೋಧೆಗಳು ಶರಣರಮೇಲೆ ಅಚ್ಚಳಿಯದ ಮನ್ನಣೆಯ ಮುದ್ರೆಯನ್ನೊತ್ತಿದ್ದವು.

೫೦. ದ್ವೇಷದ ಜ್ವಾಲೆ-ಪ್ರೇಮದ ಜಲ

ಈಗ ಅಕ್ಕಮಹಾದೇವಿಯು ಅನುಪಮ ಸುಖಿ. ತಾನು ಬಯಸಿದ ಎಲ್ಲ ಬಯಕೆಗಳು ಕೈಸಾರಿದ್ದವು. ಇರಿಸಿಕೊಂಡ ಆತ್ಯಂತಿಕ ಗುರಿಯೂ ಪೂರೈಸಿದ್ದಿತು. ಕಣ್ಣೆದುರಿಗೆ ತಾಥಿರಿಸಿಕೊಂಡ ಗುರಿಯನ್ನು ಮುಟ್ಟಿದಾಗ ಮಾನವನಿಗೆ ಎಲ್ಲಿಲ್ಲದ ಆನಂದವಾಗುವುದು ಬಹು ಸಹಜವೆ. ಶರಣರ ಸಂಗವು, ವಜ್ರದ ಹರಳನ್ನು ಚಿನ್ನದ ಕಟ್ಟು ಬಳಸಿದಂತೆ, ಅಕ್ಕನ ಸಿದ್ಧಿಗೆ ಶೋಭೆ ನೀಡಿತ್ತು. ಅನುಭವಮಂಟಪವು ತನ್ನ ಬಹುಮುಖ ಕಾರ್ಯಗಳಿಂದ ಜನರನ್ನು ಆಕರ್ಷಿಸುತ್ತಿತ್ತು. ಆಕೆ ಬಂದು ಎರಡು ವರುಷಗಳಷ್ಟೇ ಸಂದಿದ್ದರೂ ಬಸವಣ್ಣನ ಕಾರ್ಯಕ್ಷೇತ್ರವು ನಿರೀಕ್ಷೆಗೆ ಮೀರಿ ವಿಸ್ತಾರವಾಗಿದ್ದಿತು. ಸ್ವಚ್ಛ ರಾಜಕಾರಣ, ಸಮಾಜಸೇವೆ, ಧಾರ್ಮಿಕ ಉತ್ಥಾನ, ಆರ್ಥಿಕ ಸುಧಾರಣೆ, ಸಾಹಿತ್ಯಿಕ ಬೆಳವಣಿಗೆ ಮುಂತಾದ ಅನೇಕ ಧ್ಯೇಯಗಳನ್ನು ಕಣ್ಣಮುಂದಿರಿಸಿಕೊಂಡ ಬಸವಣ್ಣನು ಹಗಲಿರುಳು ದುಡಿಯುತ್ತಿದ್ದ. ಜನಸಾಮಾನ್ಯರ ಸರ್ವಾಂಗೀಣ ಉದ್ಧಾರಕ್ಕಾಗಿ ಅಹೋರಾತ್ರಿ ಬೆವರು ಸುರಿಸುವ ಬಸವಣ್ಣನನ್ನು ಕಂಡು ಅಕ್ಕಮಹಾದೇವಿ ಇದು ಮಾನವಶಕ್ತಿಯೋ, ಅಥವಾ ಸಾವಯವಗೊಂಡ ದೈವೀಶಕ್ತಿಯೋ ಎಂದು ಭಕ್ತಿ ತುಂಬಿ ಸಂತಸಪಡುತ್ತಿದ್ದಳು. ಶ್ರೀಸಾಮಾನ್ಯರಲ್ಲಿ ವೈಚಾರಿಕಪ್ರಜ್ಞೆ ಮತ್ತು ಸಮಷ್ಟಿಪ್ರಜ್ಞೆಗಳನ್ನು ಉದ್ದೀಪಿಸಲು ಬಸವಣ್ಣನು ಮಾಡುವ ಪ್ರಯತ್ನ, ಶಿಕ್ಷಣದ ಬಗೆಗಳನ್ನು ಕಂಡು ತಲೆದೂಗಿದಳು. ಹೀಗಿರುವಲ್ಲಿ ಒಂದು ದಿನ ಅಪೂರ್ವ ಪ್ರಸಂಗವೊಂದು ಜರುಗಿತು.

ಎಂದಿನಂತೆ ಅಂದೂ ಸಂಜೆಯ ಅನುಭವಗೋಷ್ಠಿಯು ನೆರೆದಿತ್ತು. ಶರಣರೆಲ್ಲರೂ ಏಕಚಿತ್ತರಾಗಿ ಚರ್ಚೆಯಲ್ಲಿ ತಲ್ಲೀನರಾಗಿದ್ದಾಗ ಇದ್ದಕ್ಕಿದ್ದಂತೆಯೇ ಕೂಗು ಕೇಳಿಬಂದಿತು. ಎಲ್ಲರ ಚಿತ್ತಗಳು ಅತ್ತ ಹೊರಳಿದವು. ಅಷ್ಟರಲ್ಲಿ ಮಹಾಮನೆಯ ಗೋವಳಿಗರು ಭಯಗೊಂಡು ಹುಯ್ಯಲಿಡುತ್ತ ಓಡಿಬಂದು ಬಸವಣ್ಣನಿಗೆ ಸಾಷ್ಟಾಂಗವೆರಗಿ ಎದ್ದು, ಮುಂದೆ ನಿಂತು ನಡುಗತೊಡಗಿದರು. ಇಡೀ ಶರಣಸಮೂಹವೆಲ್ಲ ಅಚ್ಚರಿಗೊಂಡಿತು. ಗೋವಳಿಗರ ತುಟಿ ಕಂಪಿಸುತ್ತಿದ್ದವು, ಮುಖಗಳು ಬಿಳುಚಿಕೊಂಡಿದ್ದವು, ಎದೆಗೂಡುಗಳು ಕಮ್ಮಾರನ ಮನೆಯ ತಿದಿಯಂತೆ ಆಕುಂಚನ-ವಿಕಸನಗೊಳ್ಳುತ್ತಿದ್ದು, ಬೆವರಹನಿಗಳು ಹಣೆಯ ಮೇಲೆ ಸಾಲಿಟ್ಟಿದ್ದವು. ಅಮೃತಶಿಲೆಯ ಮೂರ್ತಿಯಂತೆ ಬಸವಣ್ಣನು

‘ಏನಾಯಿತು ಗೋಪಾಲಕರೇ, ಇದೇಕೆ ಈ ಭಯ?’

‘ಸ್ವಾಮಿ, ಅಯ್ನೋರೇ, ನಮ್ದೇನೂ ತಪ್ಪಿಲ್ಲ....’ ಗೋವಳಿಗನೋರ್ವ ತೊದಲಿದ.

‘ಮಾನವ ಮಾನವನೊಬ್ಬನಿಗೆ ಇಷ್ಟೊಂದು ಹೆದರುವುದು ಸಲ್ಲದು, ಎಂದು ನಿಮಗೆ ದಿನನಿತ್ಯ ಬೋಧಿಸಿದರೂ, ಇನ್ನೂ ಆತ್ಮಸ್ಥೈರ್ಯ ಬಂದಿಲ್ಲ; ಬರೀ ಕೀಳರಿಮೆಯೇ ತುಂಬಿದೆ. ಇದೇಕಿಷ್ಟು ಭೀತಿ? ಅದೇನೆಂದು ಸಮಾಧಾನಗೊಂಡು ಹೇಳಿರಿ....’ ಬಸವಣ್ಣನು ನುಡಿದ.

‘ನಾವು ಹಸುಗಳ್ನ ಮೇಸಿಕೊಂಡು ಹಿಂಡಿನ ಕೂಡ ಬರ್ತಿದ್ವಿ. ತುಸು ತಡವಾಗಿ ಹುಲ್ಗಾವಲು ಬಿಟ್ಟುದ್ರಿಂದ ಅಲ್ಲೆ ಮುಸ್ಸಂಜೆಯಾತು. ಅಷ್ಟರಾಗೆ ಕಳ್ಳರ ಗುಂಪೊಂದು ಬಂದು ನಮ್ಮನ್ನು ಬೆದ್ರಿಸಿ ಎಲ್ಲ ಹಸುಗಳ್ನ ಹೊಡ್ದು, ಅಟ್ಟಿಕೊಂಡು ಹೋದ್ರು.’

ಬಸವಣ್ಣನು ಚಿಂತನಾಮಗ್ನನಾಗಿ ಗಂಭೀರನಾದ. ಅಷ್ಟರಲ್ಲಿ ಮಹಾಮನೆಯ ಒಳಭಾಗದಿಂದ ಬಂದ ಭೃತ್ಯಳೊಬ್ಬಳು ಶರಣೆಯರ ಗುಂಪಿನ ಕಡೆಗೆ ನಡೆದು, ನೀಲಾಂಬಿಕೆಗೆ ಹೇಳಿದಳು:

‘ಅವ್ವಾ....ಬಾಲಸಂಗಯ್ಯನವರು ಒಂದೇ ಸಮನೆ ‘ಅವ್ವಾ’ ಎಂದು ಅಳಲುತ್ತಿದ್ದಾರೆ. ಬೇಗ ಬನ್ನಿ, ಹಸ್ದಿರಬೇಕು....” ನೀಲಾಂಬಿಕೆಗೆ ಮಗನಿಗೆ ಹಾಲೂಡಿಸಿರದ ನೆನಪಾಗಿ ಎದ್ದು ಅತ್ತ ನಡೆದಳು. ಬಸವಣ್ಣನು ಸೂಕ್ಷ್ಮವಾಗಿ ಗಮನಿಸಿ, ನಂತರ ತಟ್ಟನೆ ಕೇಳಿದ:

‘ಗೋಪಾಲಕರೇ, ಕರುಗಳು ಇನ್ನೂ ತಾಯ ಹಾಲನ್ನು ಕುಡಿದಿಲ್ಲವೇ?....’ ಅವನ ಧ್ವನಿಯಲ್ಲಿ ಮರುಕದ ಹೊಳೆ ಹರಿಯುತ್ತಿತ್ತು.

‘ಇಲ್ಲ ನನ್ನೊಡೆಯಾ....ಹಸುಗಳ್ನ ಕಳ್ರು ಕೊಂಡೊಯ್ದಿದ್ರಿಂದ, ಕರಗಳ್ಗೆ ಹಾಲು ಹೇಗೆ ಊಡಿಸಬೇಕು?’ ಬಸವಣ್ಣನ ಹೃದಯ ಪರಿತಪಿಸಿತು. ಅತ್ಯಂತ ನೋವಿನ ಧ್ವನಿಯಲ್ಲಿ ನುಡಿದ:

ಆಕಳ ಕಳ್ಳರು ಕೊಂಡೊಯ್ದರು ಎನ್ನದಿರಿಂ ಭೋ
ಬೊಬ್ಬಿಡದಿರಿಂ ಭೋ, ಅರಿಡದಿರಿಂ ಭೋ
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ

ತಾಯಿಯಿಂದ ದೂರವಿರುವ ಕರುಗಳ ಚಿತ್ರ ಕಣ್ಣಿಗೆ ಕಟ್ಟಿ, ಅಪಾರ, ಅನುಕಂಪ ಕೂಡಿದ ಧ್ವನಿಯಲ್ಲಿ ಹೇಳಿದಾಗ ಅನುಭವಮಂಟಪವು ವಿಲಕ್ಷಣ ಮೌನ ತಾಳಿತು. ಆತ ಮತ್ತೆ ಹೇಳಿದ:

"ಗೋಪಾಲಕರೇ, ತಾಯಿಯ ನೆನಪು, ಹೊಟ್ಟೆಯ ಹಸಿವು ಈ ಎರಡರಲ್ಲಿ ತೊಳಲಾಡುವ ಆ ಕಂದಮ್ಮಗಳು 'ಅಂಬಾ' ಎಂದು ಒರಲುತ್ತಿರಬಹುದು. ಬೇಗ ತ್ವರೆಮಾಡಿ ಕರುಗಳನ್ನು ಬಿಚ್ಚಿಕೊಂಡು ಆ ಶರಣರ ಮನೆಗಳನ್ನು ಹುಡುಕಿ ಅಲ್ಲಿ ಬಿಟ್ಟು ಬನ್ನಿರಿ. ದೊಡ್ಡ ಕರುಗಳಿದ್ದರೆ ನಡೆಸಿಕೊಂಡು ಒಯ್ಯಿರಿ, ಎಳೆಗರುಗಳಾದರೆ ಬಂಡಿ ಹೂಡಿ ಬಂಡಿಯಲ್ಲಿ ಹಾಕಿಕೊಂಡು ಹೋಗಿರಿ....'

'ಅಂ....ಇದ್ಯಾವ ಮಾತು ನನ್ನೊಡ್ಯ! ಕಳ್ರು ಸನಿಹದ ಊರೋರು. ತಳವಾರ್ರನ್ನು, ಭಟರನ್ನು ಜೊತೆಕ್ಕೊಡಿ, ಬೆಳಗಾಗೋದ್ರಲ್ಲಿ ಹುಡುಕಿ ತರ್ತೇವೆ.' ಗೋಪಾಲನೋರ್ವ ಆವೇಶದಿಂದ ನುಡಿದ.

'ಬೇಡ ದನಗಾಹಿ; ಅವು ಇಲ್ಲಿದ್ದರೂ ಜನತೆಯ ಮುಖದಲ್ಲಿ ಉಣ್ಣುವವ ಸಂಗಮನಾಥನೇ, ಅಲ್ಲಿದ್ದರೂ ಉಣ್ಣುವವನು ಸಂಗಮನಾಥನೇ! ಅವರು ಕಳ್ಳರಲ್ಲ, ದೇವನ ಜೀವಂತ ಮುಖಗಳು.' ಬಸವಣ್ಣನವರು ಹೇಳಿದಾಗ ಗೋವಳಿಗರು ಶಬ್ದಮುಗ್ಧರಾದರು.

ಬಸವಣ್ಣನು ಪಟುಭಟರನ್ನು ಕರೆದು ಪಂಜುಗಳನ್ನು ತೆಗೆದುಕೊಂಡು ಹೋಗಿ ಬೇಗನೆ ಕರುಗಳನ್ನು, ತಾಯಂದಿರ ಹಿಂಡಿಗೆ ಕೂಡಿಸಲು ಆಜ್ಞೆ ಮಾಡಿದ. ಅವರತ್ತ ಹೋಗುತ್ತಲೇ ಅನುಭವಮಂಟಪವನ್ನುದ್ದೇಶಿಸಿ ನಿರಾಶೆಯ ದನಿಯಲ್ಲಿ ನುಡಿದ:

'ಆರ್ಥಿಕ ಅಸಮಾನತೆ ಹೋಗಿ, ಯಾರೂ ಯಾರ ಸ್ವತ್ತಿಗೂ ಆಸೆಪಡದೆ, ತಮಗೆ ಅವಶ್ಯಕವಾಗಿ ಸಾಕಾಗುವಷ್ಟನ್ನು ಪಡೆದು, ತೃಪ್ತರಾಗಿ ಬಾಳಬೇಕು' ಎಂದು ಹಗಲಿರುಳು ಹಂಬಲಿಸುತ್ತಿರುವೆ. ಆದರೇನಂತೆ, ನನ್ನ ಬಯಕೆಯು ಪೂರೈಸಲಿಲ್ಲ. ಕಳವು ಮಾಡುವವನು ಕಳ್ಳನಲ್ಲ; ಕಳವು ಮಾಡಿಸಿಕೊಂಬಂತೆ ಸಂಗ್ರಹಿಸಿಕೊಳ್ಳುವವನು ಕಳ್ಳ! ಪಾಪ, ಅವರಲ್ಲಿ ಹಸುಗಳು ಇರಲಿಲ್ಲವೇನೋ, ನನ್ನಲ್ಲಿ ಬಹಳವಿದ್ದವು. ಅವರ ಮನೆಮಕ್ಕಳು ಒಣ ಊಟವನ್ನು ಉಣ್ಣುತ್ತಿದ್ದರೇನೋ; ಅದಕ್ಕಾಗಿ ಈ ಅಪಹರಣ! ಇನ್ನೂ ಬಡತನವು ತೊಲಗಿಲ್ಲವೆ? ನನ್ನ ಕಲ್ಪನೆಯ ಕಲ್ಯಾಣ ರಾಜ್ಯವು ಸ್ಥಾಪನೆಯಾಗಲಿಲ್ಲವೆ? ಹಾಗಾದರೆ ಅದು ಎಂದಿಗೆ ಸಾಧ್ಯವಾದೀತೋ!' ನಿರಾಶೆಯಿಂದ ನುಡಿದು

ತಪ್ಪು. ಖಂಡಿತವಾಗಿ ಇದು ರಾಜಕೀಯ ಒಳಸಂಚಲ್ಲದೆ ಬೇರಲ್ಲ. ಈ ಕಲ್ಯಾಣದ ಸುತ್ತುಮುತ್ತು ಎಲ್ಲೆಲ್ಲಿಯೂ ಭಿಕ್ಷುಕರಿಲ್ಲ, ನಿರ್ಗತಿಕರಿಲ್ಲ. ಒಂದು ವೇಳೆ ಬಡತನದ ಬವಣೆ ಇದ್ದು, ಹೊಟ್ಟೆಗಾಗಿ ಮಾಡಿದ ಕಳ್ಳತನವಾಗಿದ್ದರೆ ಹಿಂಡುಹಿಂಡಾಗಿ ಮಹಾಮನೆಯ ಗೋವುಗಳನ್ನೆಲ್ಲ ಅಪಹರಿಸುತ್ತಿರಲಿಲ್ಲ. ಅಷ್ಟೂ ತಿಳಿಯದೇನಣ್ಣಾ?' ಮಡಿವಾಳ ಮಾಚಿದೇವ ಕೇಳಿದ.

'ರಾಜಕೀಯ ಸಂಚನ್ನು ಏಕೆ ಮಾಡಹೋಗುವರು, ಮಾಚಿದೇವಾ....?'

'ಸರಿಯಾಯ್ತು! ನಿಮ್ಮಂತಹ ನಿಷ್ಕಪಟ ಹೃದಯಿಗಳು ರಾಜಕೀಯ ಪ್ರಪಂಚಕ್ಕೆ ಸಲ್ಲರು. ಅಣ್ಣಾ....ನಿಮ್ಮ ಜನಪ್ರಿಯತೆ, ಏಳಿಗೆಗಳನ್ನು ಸಹಿಸಲಾರದ ಕುಹಕಿಗಳು, ರಾಜಕೀಯ ವಿರೋಧಿಗಳು ಈ ಗೋವುಗಳನ್ನು ಅಪಹರಿಸಿರುವರು. 'ಒಂದೋ ಎರಡೋ ಹೋದರೆ ನೀವು ಶಾಂತವಾಗಿಯೇ ಇದ್ದು ಬಿಡಬಹುದು; ಎಲ್ಲ ಗೋವುಗಳನ್ನು ಒಟ್ಟಾಗಿ ಅಪಹರಿಸಿದರೆ, ನೀವು ಸುಮ್ಮನಿರದೆ ಅನಿವಾರ್ಯವಾಗಿ ಸೇನೆಯನ್ನು ಕಳುಹಿಸಿ ಮರಳಿ ಬಿಡಿಸಿಕೊಳ್ಳುವಿರಿ. ಆಗ ಕಾದಾಟಕ್ಕೆ ನಿಂತು ಹಳ್ಳಿಗರು ರೊಚ್ಚಿಗೇಳುವಂತೆ ಮಾಡಿ, ನಿಮ್ಮ ಜನಪ್ರಿಯತೆಯ ಹಾಲಿನಲ್ಲಿ ದ್ವೇಷದ ಉಪ್ಪು ಬೆರೆಸಬೇಕು' ಎಂಬ ದುರಾಲೋಚನೆಯೇ ಅವರ ಈ ಪ್ರಯತ್ನದ ಹೇತು.' ಮಾಚಿದೇವರು ಆಕ್ರೋಶದಿಂದ ನುಡಿದರು.

'ಹೋಗಲಿ ಬಿಡಿ, ಮಾಚಿತಂದೆಗಳೇ! ಆ ರೀತಿ ಸ್ವಯಂಕಲ್ಪಿತ ಸಂಶಯ ತಾಳುವುದೇಕೆ....? ನಾವಂತೂ ಮಾನವೀಯತೆಯಿಂದ ವರ್ತಿಸಿದ್ದೇವೆ ತಾನೆ? ಇದು ನನಗೆ ಸಮಾಧಾನ ನೀಡುವುದು.'

'ಅದೇನೇ ಇರಲಿ, ನೀವು ಕೈಗೊಂಡ ಕ್ರಮ ಸೂಕ್ತವಲ್ಲ. ನಿಮ್ಮ ವರ್ತನೆಯು ಮಾನವೀಯತೆ-ಔದಾರ್ಯಗಳ ಕೃತಿ ಎಂದು ಅವರು ಅರ್ಥ ಮಾಡದೆ, ದೌರ್ಬಲ್ಯ-ಹೇಡಿತನ ಎಂದು ತಿಳಿಯುವರು. ತಾವು ಸೇನೆಯನ್ನು ಕಳಿಸಿ ಆ ಕುಹಕಿಗಳನ್ನು ಮರ್ದಿಸಬೇಕಾಗಿತ್ತು. ಅಂದರೆ ಮಾತ್ರ ಅವರು ಎಚ್ಚರಗೊಂಡು ಬುದ್ಧಿಗಲಿಯುತ್ತಿದ್ದರು. ಅಷ್ಟೇ ಅಲ್ಲ, ಮೂಗನ್ನು ಹಿಡಿದರೆ ಬಾಯಿ ತೆರೆಯುವಂತೆ ಆ ದ್ರೋಹಿಗಳನ್ನು ಹಿಡಿದು ಥಳಿಸಿದ್ದರೆ, ಈ ಗಾಳಿಪಟಗಳ ಸೂತ್ರಗಳಾಗಿ ಅವರ ಬೆನ್ನಿಗಿರುವ ರಾಜಕೀಯ ವಿರೋಧಿಗಳೂ ಬಯಲಿಗೆ

ಬಾರದು, ಒಣಕಟ್ಟಿಗೆಯನ್ನೂ ಚಾಚಬಾರದು ; ಕೇವಲ ನೀರನ್ನು ಸುರಿಯ ಬೇಕು. ಹಾಗೆಯೇ ದ್ವೇಷದ ದಾವಾನಲವನ್ನು ನಂದಿಸಲು ದ್ವೇಷಮಾಡ ಬಾರದು ; ಕ್ರೂರವರ್ತನೆಯನ್ನೂ ಗೈಯಬಾರದು, ಕೇವಲ ಪ್ರೇಮದ ವರ್ಷ ವನ್ನು ಧಾರೈಸಬೇಕು. ಈ ಲೋಕದಲ್ಲಿ ನನಗೆ ಯಾರೂ ವಿರೋಧಿಗಳಲ್ಲ. ಕೇವಲ ನನ್ನ ಅಂತರಂಗದ ದುರ್ಗುಣಗಳಷ್ಟೆ ನನ್ನ ಶತ್ರುಗಳು....'

ಮಾಚಿದೇವ-ಚೌಡಯ್ಯನವರುಗಳ ಆವೇಶ ಒಮ್ಮೆಲೇ ಇಳಿಯಿತು. ಬಸವಣ್ಣನು ಪುನಃ ಹೇಳಿದ :

'ಮಹಾಂತರೇ, ಪ್ರೇಮಕ್ಕೆ ತನ್ನದೇ ಆದ ಮಾಂತ್ರಿಕ ಶಕ್ತಿಯಿದೆ. ಮನುಕುಲವನ್ನು ವಿನಾಶದಿಂದ ರಕ್ಷಿಸಬಲ್ಲ, ಒಂದಾಗಿ ಬೆಸೆಯಬಲ್ಲ ಒಂದೇ ಒಂದು ಸೂತ್ರವೆಂದರೆ ಪ್ರೇಮತತ್ತ್ವ ! ನನಗೆ ಅದೊಂದೇ ಸಾಕು ; ಈ ರಾಜಕೀಯ ಪದವಿ, ಭೌತಿಕ ಸಂಪತ್ತು, ಕೀರ್ತಿವಾರ್ತೆ—ಇವುಗಳು ಬಂದು ಹೋಗುವ ಅಲೆಗಳು....' ಯಾರೂ ಮಾತನ್ನಾಡುವ ಸಾಹಸ ಮಾಡಲಿಲ್ಲ.

ಕಾರುಣ್ಯನಿಧಿಯಾದ ಬಸವಣ್ಣನ ಮಾಂತ್ರಿಕಶಕ್ತಿಯ ಪರಿಣಾಮ ತೋರ ದಿರಲಿಲ್ಲ. ಮರುದಿನ ಬೆಳಿಗ್ಗೆಯ ಹೊತ್ತಿಗೆ ಕಳ್ಳರು ಗೋಸಮೂಹದೊಡನೆ ಬಂದು ಮನೆಯಂಗಳದಲ್ಲಿ ನಿಂತರು. ಬಸವಣ್ಣನು ಸುಪ್ರಭಾತದ ಪೂಜೆ ಮುಗಿಸಿ ಪ್ರಸನ್ನವದನನಾಗಿ ಉದ್ಯಾನದಲ್ಲಿ ಗಿಡಗಳ ಯೋಗಕ್ಷೇಮ ನೋಡು ತ್ತಲಿದ್ದ. ಆಕಳ ಗುಂಪಿನಲ್ಲಿದ್ದ ಸುಂದರವಾದ ಬಿಳಿಯ ಹಸುವೊಂದು ಓಡುತ್ತ ಬಂದು, ಬಸವಣ್ಣನ ಮೈಯನ್ನು ನೆಕ್ಕಿತು. ಅನಿರೀಕ್ಷಿತವಾಗಿ ಅದನ್ನು ಕಂಡು ಅಚ್ಚರಿಪಡುತ್ತಲೇ,

'ಗೌರೀ, ನನ್ನಮ್ಮ....ನನ್ನ ನೆನಪಿತ್ತೇ ?' ಎಂದು ಬಸವಣ್ಣ ವಾತ್ಸಲ್ಯ ದಿಂದ ಕೇಳಿ ಕುತ್ತಿಗೆಯ ಗಂಗೆದೊಗಲನ್ನು ಸವರಿದಾಗ ಆ ನೇವರಿಕೆಗೆ ಅದು ಮನಸೋತು ಮಂತ್ರಮುಗ್ಧವಾಗಿ ನಿಂತಿತು. ಬಸವಣ್ಣನು ದಿನಕ್ಕೊಮ್ಮೆ ಯಾದರೂ ಗೋಶಾಲೆಯನ್ನು ಪ್ರವೇಶಿಸಿ, ಎಲ್ಲ ಹಸುಗಳನ್ನು ನೋಡಿ, ಮೈ ಸವರಿ ಬರುತ್ತಲಿದ್ದ. ಆ ಪ್ರೇಮವನ್ನು ಧೇನುಗಳು ಅರ್ಥಮಾಡಿಕೊಂಡಿದ್ದವು. ಈ ಮುದ್ದಾದ ಗೌರಿಯಮೇಲೆ ಅವನಿಗೆ ವಿಶೇಷ ಪ್ರೇಮ. ಕೈ ನೆಕ್ಕುವುದನ್ನು ಅದು ನಿಲ್ಲಿಸಿದಾಗ ತನ್ನ ದೃಷ್ಟಿಯನ್ನು ತಿರುಗಿಸಿ :

'ಗೋವಳಿಗರೇ....ಏಕೆ ಮರಳಿ ತಂದಿರಿ? ಅಧಿಕಾರದ ಬಲವನ್ನುಪಯೋಗಿಸಿ ದೌರ್ಜನ್ಯ ಮಾಡಿದಿರಾ ? ಛೀ !....ನೀವು ನನ್ನ ತತ್ತ್ವಕ್ಕೆ ಚ್ಯುತಿ ತಂದಿರಿ....' ನೊಂದಸ್ವರದಲಿ ಹೇಳಿದ.

ಆಕಳುಗಳನ್ನು [illegible]
ನಡುಗುತ್ತ ಹೇಳಿದ.

‘ಹಾಗನ್ನದಿರಿ, ಸೋದರರೇ....ಇವು ನಿಮ್ಮದೇ ಸ್ವತ್ತು. ನಾನು ನಿಮ್ಮ ಕಿಂಕರ. ನನ್ನದೆಂಬುದು ಏನೂ ಇಲ್ಲ....’ ಬಸವಣ್ಣನು ಶಾಂತನಾಗಿ, ಕರುಣೆ ತುಂಬಿದ ದೃಷ್ಟಿಯನ್ನು ಬೀರಿ ಹೇಳಿದಾಗ ಆಗಂತುಕರೆಲ್ಲರೂ ತಲೆತಗ್ಗಿಸಿದ್ದರು. ಅವರ ಕಪೋಲದ ಮೇಲೆ ಹರಿವ ನೀರಿನ ಹನಿಗಳು ಸ್ಪಷ್ಟವಾಗಿ ಕಾಣುತ್ತಲಿದ್ದವು. ಪಾದದ ಮೇಲೆ ಬಿದ್ದವನು ಹರಿಸಿದ ಕಣ್ಣೀರಿನಿಂದ ಬಸವಣ್ಣನ ಪಾದಗಳು ತೇವಗೊಂಡಿದ್ದವು.

‘ಏಳು ಅಣ್ಣಾ, ಪ್ರಜರ ಒಡವೆಯನ್ನು ಪ್ರಜರು ಒಯ್ದರೆ ಅದು ಕಳ್ಳತನವೇನಲ್ಲ. ನೀವು ಮರಳಿ ಒಯ್ದು, ಇವುಗಳನ್ನು ಸಾಕಿಕೊಂಡು ನಿಮ್ಮ ಮಕ್ಕಳು ಮರಿಗೆಲ್ಲ ಹಾಲುಣ್ಣಿಸಿರಿ. ಇಲ್ಲಿದ್ದರೂ ನನ್ನ ಮಗ ಬಾಲಸಂಗನು ಹಾಲು ಕುಡಿವನು. ಅಲ್ಲಿದ್ದರೆ ನಿಮ್ಮ ಮಕ್ಕಳು ಕುಡಿಯುವರು. ಅವರೂ ನನ್ನ ಮಕ್ಕಳೇ ಅಲ್ಲವೇ ?’ ಸಾಷ್ಟಾಂಗವೆರಗಿದ್ದ ವ್ಯಕ್ತಿಯನ್ನು ಬಸವಣ್ಣ ಹಿಡಿದೆತ್ತಿದ.

ಆ ವ್ಯಕ್ತಿ ಮರುನುಡಿದ :

‘ಮಹಾನುಭಾವ, ನಾವು ಇಲ್ಲದ ನಿರ್ಗತಿಕರಲ್ಲ. ನೀವು ಮಹಾಮಂತ್ರಿಗಳಾದಮೇಲೆ ಕಾಯಕದ ಹಾಲಿನ ಹೊಳೆಯಲ್ಲಿ, ಸುಖಜೀವನದ ತೆಪ್ಪ ತೇಲುತ್ತಿದೆ. ಕುತಂತ್ರಿಗಳ ಒಳಸಂಚಿಗೆ ಬಲಿಯಾಗಿ, ನಿಮ್ಮನ್ನು ಕೆರಳಿಸಲು ನಾವು ಮಾಡಿದ ಕುಹಕಕಾರ್ಯವಿದು. ಮಂಜುಬೆಟ್ಟವನ್ನು ಜ್ವಾಲಾಮುಖಿಯನ್ನಾಗಿ, ಸೂರ್ಯನನ್ನು ಹಿಮಗಡ್ಡೆಯನ್ನಾಗಿ ಮಾಡಲು ಗೈದ ವ್ಯರ್ಥ ಪ್ರಯತ್ನವಿದೆಂದು ತಿಳಿಯಿತು. ಕನ್ನಡಿಯನ್ನು ನೋಡಿ, ಇನ್ನೊಂದು ಗುಬ್ಬಿ ಉಂಟೆಂದು ಭ್ರಮಿಸಿ ಕುಕ್ಕುವ ಗುಬ್ಬಿ ತಾನೇ ಸೋತು ಸುಣ್ಣವಾಗುವುದು ; ಕನ್ನಡಿ ಮಾತ್ರ ಅದೇ ನಿರ್ಲಿಪ್ತತೆಯಿಂದ ಇರುವಂತೆ, ತಾವಿರುವಿರಿ. ನಿಮ್ಮನ್ನು ಕೆರಳಿಸಲು ಯಾರಿಗೂ ಆಗದು. ರಾಜಕೀಯ ದ್ರೋಹಿಗಳ ಸಂಚಿಗೆ ಬಲಿಯಾದ ಅಜ್ಞಾನಿಗಳು-ಮೂರ್ಖರು ಆದ ನಮ್ಮನ್ನು ಕ್ಷಮಿಸಿರಿ, ತಂದೆ....’

ಬಸವಣ್ಣನು ನಸುನಕ್ಕು ಅವನ ಬೆನ್ನನ್ನು ಸವರಿ, ಆ ಆಗಂತುಕರೆಲ್ಲರನ್ನು ಪ್ರಸಾದ ಸ್ವೀಕಾರಕ್ಕಾಗಿ ಮಹಾಮನೆಯೊಳಕ್ಕೆ ಕರೆದೊಯ್ದನು. ಅಂದು ಶರಣರೆಲ್ಲರಿಗೆ ಅಪೂರ್ವ ಅನುಭವವಾಗಿ, ‘[illegible]

ಈ ಘಟನೆ ಅಕ್ಕಮಹಾದೇವಿಯ ಮೇಲೆ ಅತುಳ ಪರಿಣಾಮವನ್ನು ಬೀರಿತು. ಬಸವಣ್ಣನ ಹೃದಯದ ದಯಾರ್ದ್ರತೆ, ವಾತ್ಸಲ್ಯ ಎಂಥವರನ್ನೂ ಪ್ರೀತಿಸುವ ಔದಾರ್ಯ, ತತ್ತ್ವವ ಹೊತ್ತವರನ್ನು ಕಂಡು ತಲೆಬಾಗುವ ವಿನಯಗಳು ಆಕೆಯಲ್ಲಿ ಅಚ್ಚರಿ-ಮನ್ನಣೆಗಳ ಸಮ್ಮಿಶ್ರಭಾವದ ಅಲೆಗಳನ್ನು ಏಳಿಸುತ್ತಿದ್ದವು. 'ಸಮುದ್ರವು ಎಲ್ಲಕ್ಕೂ ಕೆಳಗೆ ಇರುವುದರಿಂದ ನದಿಗಳು ಅದರತ್ತ ಹರಿಯುತ್ತವೆ. 'ಬಾಗಿದ ತಲೆ, ಮುಗಿದ ಕೈಯಿ'ಯ ಧೀಮಂತ ವ್ಯಕ್ತಿಯಾಗಿರುವ ಕಾರಣ ನಿನ್ನತ್ತಲೇ ಸಾಧಕರೆಂಬ ನದಿಗಳು ಧಾವಿಸುತ್ತವೆ. ಸಮುದ್ರವು ಅಸಂಖ್ಯಾತ ವಾಹಿನಿಗಳನ್ನು ಇಂಬಿಟ್ಟುಕೊಳ್ಳುವ ಸಾಮರ್ಥ್ಯ ಪಡೆದಂತೆ ತವ ಹೃದಯವೂ ಪ್ರೇಮದ ಕಡಲಾಗಿರುವುದರಿಂದ ಅನಂತಚೇತನಗಳು ಇಲ್ಲಿ ಸಂಗಮಿಸಲು ಬರುತ್ತಿವೆ' ಎಂದು ಮನದಲ್ಲೇ ಬಾರಿಬಾರಿಗೂ ವಂದಿಸುತ್ತಿದ್ದಳು. ಅನುಭವಮಂಟಪ ಮತ್ತು ಅದರ ಕಾರ್ಯಕಲಾಪಗಳನ್ನು ನೋಡಿದಾಗ ರಾಶಿ ಮಾಡುವ ಪ್ರಸಂಗದ ನೆನಪಾಕೆಗೆ ಬರುತ್ತಿತ್ತು. ವಿಸ್ತಾರವಾದ ಕಣವನ್ನು ಮಾಡಿ, ನಟ್ಟನಡುವೆ ಮೇಟಿಯ ಗೂಟವನ್ನು ನೆಡುವರು. ತೆನೆಗಳನ್ನು ಕಣದಲ್ಲಿ ಹಾಕಿ ಹತ್ತಾರು ಎತ್ತುಗಳನ್ನು ಬಿಟ್ಟು ತುಳಿಸುವರು. ಈಗಾದರೂ ಅದೇ ರೀತಿ ಅನುಭವಮಂಟಪವೆಂಬ ಕಣದಲ್ಲಿ, ಬಸವಣ್ಣನೇ ಮೇಟಿಯ ಗೂಟವಾಗಿದ್ದ. ಸಮಾಜದಲ್ಲಿ ರೂಢಿಗೊಂಡಿರುವ ಆಚಾರ-ವಿಚಾರ, ಆದರ್ಶ ಮೌಲ್ಯಗಳೆಂಬ ತೆನೆಗಳನ್ನು ಅನೇಕ ಶರಣ-ಶರಣೆಯರು ಪರಿಷ್ಕರಿಸುತ್ತ, ಅನವಶ್ಯಕವಾದ ಜೊಳ್ಳು ತತ್ತ್ವಗಳನ್ನು ಬೇರ್ಪಡಿಸುತ್ತ, ವಚನ ಸಾಹಿತ್ಯದ ಅಮೃತಧಾನ್ಯಗಳನ್ನು ನೀಡುತ್ತಲಿದ್ದರು. ಇಂತಹ ಭೂಮ ಕಾರ್ಯವನ್ನು ಹಮ್ಮಿಕೊಂಡು, ಅದರ ಕೇಂದ್ರಶಕ್ತಿಯಾಗಿ ನಿಂತ ಬಸವಣ್ಣನ ಜೀವನವೇ ಒಂದು ಪವಾಡವೆಂದು ಅಕ್ಕಮಹಾದೇವಿಗೆ ಅನ್ನಿಸದೆ ಇರಲಿಲ್ಲ.

ಭಾಗ ೫

ಸಮಾಗಮ

೫೧. ಕದಳಿಯ ಕಾಮನೆ

ಅಕ್ಕಮಹಾದೇವಿ ಇತ್ತೀಚೆಗೆ ಹೆಚ್ಚು ಅಂತರ್ಮುಖಳಾಗತೊಡಗಿದ್ದಳು. ಅನುಭವಮಂಟಪಕ್ಕೆ ಬಂದು ಸುಮಾರು ಐದು ವರ್ಷಗಳು ಸಂದಿದ್ದವು. ತಾನು ಪಾರಮಾರ್ಥ ಪಥದಲ್ಲಿ ಮುಟ್ಟಬಯಸಿದ್ದ ಹಂತವನ್ನು ಮುಟ್ಟಿಯೂ ಆಗಿತ್ತು. ಒಂದು ದಿನ ಪೂಜೆಯಲ್ಲಿ ಮೈಮರೆತಾಗ 'ಇಷ್ಟಲಿಂಗದರ್ಪಣ'ದಲ್ಲಿ ರಮಣೀಯ ದೃಶ್ಯವೊಂದು ಕಂಡಿತು. ಅದನ್ನು ದರ್ಶಿಸಿ ಮೂಕವಿಸ್ಮಿತಳಾದಳು. ಎತ್ತರವಾದ ನಿಲುವಿನ ಬಾಳೆಯ ಗಿಡಗಳು. ಅದರ ಗರ್ಭದಲ್ಲಿ ಒಂದು ವಿಶಾಲ ಗುಹೆ. ಆ ನಿಸರ್ಗನಿರ್ಮಿತ ಗುಹೆಯ ಮುಂಭಾಗದಲ್ಲಿ ಯೋಗಿಣಿಯೋರ್ವಳು ತಪಸ್ಸಿಗೆ ಕುಳಿತಂತೆ! ದಿಟ್ಟಿಸಿ ನೋಡಿದಳು; ಅದು ಯಾರೂ ಅಲ್ಲ, ತಾನೇ! ನೋಡನೋಡುತ್ತ ಇರುವಾಗ ಬೆಳಕೊಂದು ಉದ್ಭವಿಸಿ ಆಕೆಯನ್ನು ಬಳಸಿದಂತೆ, ಅದರ ಗರ್ಭದಲ್ಲಿ ತಾನು ಕಣ್ಮರೆಯಾದಂತೆ ಕಾಣಿಸಿತು. ಆ ದೃಶ್ಯದಿಂದ ಪುಳಕಿತಳಾದಂತೆ, ಕುತೂಹಲಿತಳೂ ಆದಳು. ಈ ಅತೀಂದ್ರಿಯ ಅನುಭವದ ಸಂಕೇತವನ್ನು ಅರಿಯಲು ಆಳವಾಗಿ ಚಿಂತಿಸಿದಳು. 'ಇಹಲೋಕದ ವ್ಯಾಪಾರ ಸಾಕೆಂದು, ತನ್ನನ್ನು ಚನ್ನಮಲ್ಲಿಕಾರ್ಜುನನು ಕರೆಯುತ್ತಿರುವನು' ಎಂಬ ವಿಚಾರ ಮಿಂಚಿನಂತೆ ಹೊಳೆದಾಗ ಸಂತಸಗೊಂಡಳು. ತಾನು 'ದೂರದರ್ಶನ'ದಲ್ಲಿ ಕಂಡ ಪ್ರಕೃತಿ ತಾಣ ಯಾವುದಿರಬಹುದೆಂದು ಆಲೋಚಿಸುತ್ತ ಕುಳಿತಾಗ, ಅದು ಶ್ರೀಗುರುಲಿಂಗದೇವರು ಸಂದರ್ಶಿಸಿ ಬಂದು ವರ್ಣಿಸಿದ, ಕದಳಿಯ ಬನ ಎಂಬ ಅರಿವಾಯಿತು. ನಿಜ, ಆ ರಮ್ಯ ತಪಃಕ್ಷೇತ್ರವನ್ನು ಸಂದರ್ಶಿಸಬೇಕೆಂಬ ಒಂದೇ ಒಂದು ಬಯಕೆ ಅಪೂರ್ಣವಾಗಿ ಉಳಿದಿತ್ತು. ಶರಣರ ಸಂಗದ ದಿವ್ಯಾನಂದದಿಂದಾಗಿ ಸ್ವಲ್ಪ ಮರೆಯಾಗಿ ಮನದ ಮೂಲೆಯಲ್ಲಿ ಅವಿತುಕೊಂಡು ಕುಳಿತಿದ್ದ 'ಬಚ್ಚಿಟ್ಟ ಬಯಕೆ' ಮತ್ತೆ ಬಣ್ಣವನ್ನು ಬಳಿದುಕೊಂಡು ಮನೋರಂಗದ ಮೇಲೆ ನರ್ತಿಸಲಾರಂಭಿಸಿತು. ಪೂಜೆಯನ್ನು ಮುಗಿಸಿದ ಅಕ್ಕಮಹಾದೇವಿ, ರಾತ್ರಿಯ ಪ್ರಸಾದವನ್ನು ಸ್ವೀಕರಿಸಲು ಶರಣರ ಸಾಮೂಹಿಕ ಪಂಕ್ತಿಯಲ್ಲಿ ಆಸೀನಳಾಗಿ, ಪ್ರಸಾದ ಮುಗಿಸಿದನಂತರ ದಿನನಿತ್ಯದ ವಿಶೇಷ ಚರ್ಚಾಗೋಷ್ಠಿ ನಡೆಯುತ್ತಿದ್ದಲ್ಲಿಗೆ ಬಂದಳು. ಬಸವಣ್ಣ, ಪ್ರಭುದೇವ, ಚನ್ನಬಸವಣ್ಣ, ನೀಲಾಂಬಿಕೆ, ಅಕ್ಕನಾಗಮ್ಮ ಮುಂತಾದವರು ಎಂದಿನಂತೆ ಅಂದೂ ಸಮಾವೇಶವಾಗಿದ್ದರು.

ಏಕೆಂದರೆ ಆಕೆ ಇತ್ತೀಚೆಗೆ ಹೆಚ್ಚಾಗಿ ಏಕಾಂತದಲ್ಲಿರಬಯಸುತ್ತಿದ್ದಳು. ಸದಾ ಕಾಲದಲ್ಲಿ ಆಕೆಯ ಹೃದಯವು ಸಮರಸಭಕ್ತಿಯ ಸರಸಿಯಲ್ಲೇ ವಿಹರಿಸಲು ಇಚ್ಛಿಸುತ್ತಿತ್ತು. ಗಿಟುಕಾದ ಕೊಬ್ಬರಿಯಂತೆ ಅತ್ಯಂತ ನಿರ್ಲಿಪ್ತಳಾಗಿ, ಸಾನಂದದಲ್ಲಿರುತ್ತಿದ್ದ ಅಕ್ಕಮಹಾದೇವಿ ಇಂದು ಗೋಷ್ಠಿಗೆ ಬರುತ್ತಲೇ ಬಸವಣ್ಣನು ಮುಗುಳ್ನಗುತ್ತ ನುಡಿದ :

'ಗಂಡನು ಸಿಕ್ಕ ತಕ್ಷಣ ಹೆತ್ತವರ ಕಡೆಗೆ ಗಮನ ಕಡಿಮೆಯಾಗುವ ಲೋಕದ ಪರಿಪಾಠದಂತೆ ಅಕ್ಕನೂ ಚೆನ್ನಮಲ್ಲಿಕಾರ್ಜುನನ ಕೂಟದಲ್ಲಿ ನಮ್ಮನ್ನೆಲ್ಲ ಮರೆಯುತ್ತಿಲ್ಲವೆ, ಪ್ರಭುಗಳೇ ?'

ಪ್ರಭುದೇವರೂ ನಕ್ಕರು. ಅಕ್ಕಮಹಾದೇವಿ ಹೇಳಿದಳು :

'ಆ ಲೌಕಿಕ ಪತಿಗಳದ್ದು ಖಂಡಿತ ಪ್ರೇಮವಾದ ಕಾರಣ, ಅಷ್ಟಷ್ಟು ಹಂಚಿಕೊಡಲು ಬರುವುದು. ಆದರೆ ನಿಮ್ಮ ಅಳಿಯ ಸಾಮಾನ್ಯನಲ್ಲ, ಅಪ್ಪ ನವರೇ; ಅವನು ಸ್ವಾರ್ಥಿ. ತನ್ನ ಸತಿಯರ ಪರಿಪೂರ್ಣ ಪ್ರೇಮವನ್ನು, ಕೊರತೆಯಾಗದಂತೆ ಬಯಸುತ್ತಾನೆ. ಈ ಮನಸ್ಸನ್ನು ಅತ್ತಿತ್ತ ಸರಿಯದಂತೆ ಹಿಡಿದಿಟ್ಟುಕೊಂಡಿರುವನು. ಪ್ರಾಪಂಚಿಕರು ಅಲ್ಪ ಕಾಮಿಗಳಾದರೆ, ಈ ಪರ ಮಾತ್ಮ ಅತಿಕಾಮಿ....' ನುಡಿದು ಮುಗುಳ್ನಕ್ಕಳು.

'ಅಂತೆಯೆ ಹೆಚ್ಚು ಅಂತರ್ಮುಖಳಾಗಿರುವೆಯೇನೋ ! ಆದರೆ ಇಂದೇಕೋ ನಿನ್ನ ಪತಿಯು ತನ್ನ ನೆನಹಿನ ಪಂಜರದಿಂದ ಬಿಡುಗಡೆ ಮಾಡುವ ಔದಾರ್ಯ ತೋರಿರುವನಲ್ಲ....?' ನೀಲಾಂಬಿಕೆ ಕೇಳಿದಳು.

'ಅಹುದು, ಅವ್ವಾ ! ಆದೂ ಸ್ವಾರ್ಥಸಹಿತ ಔದಾರ್ಯ, ನನ್ನನ್ನು ಇನ್ನೂ ಹೆಚ್ಚು ಸನಿಹಕ್ಕೆ ಎಳೆದುಕೊಳ್ಳುವ ಹಂಬಲದಿಂದ.' ಸೂಕ್ತ ಸಂದರ್ಭ ಒದಗಿ ತೆಂದು ಮಾರ್ಮಿಕವಾಗಿ ಹೇಳಿದಳು.

'ಇನ್ನೆಂತಹ ಸನಿಹ ತಾಯಿ ! ನಿನ್ನ ಕಾಯ, ಜೀವ, ಮನ, ಭಾವಗಳೆಲ್ಲ ಅವನನ್ನೇ ಹಾಸುಹೊಕ್ಕಾಗಿ ಮಾಡಿಕೊಂಡಿದ್ದು, ನೀರಿನಲ್ಲಿ ತೇಲುವ ಮಂಜು ಗಡ್ಡೆಯಂತೆ ಅವನ ಸಂಯೋಗದಲ್ಲಿ ನೀನಿರುವಾಗ ಇನ್ನಾವ ಸಮೀಪತ್ವ ಬೇಕು....?' ನೀಲಮ್ಮ ಅಚ್ಚರಿಗೊಂಡು ಕೇಳಿದಳು.

'ನೀರಿನ ಮಧ್ಯೆ ಇರುವ ಮಂಜುಗಡ್ಡೆ ಕರಗಿ ನೀರಿನಲ್ಲಿ ಒಂದಾಗಬೇಕು ಎಂಬುದವನ ಬಯಕೆ. ಘಟದಲ್ಲಿ ಗಾಳಿಯಿದೆ, ಹೊರಗೂ ಗಾಳಿಯಿದೆ. ಆದರೆ

ಸರ್ವಾಂಗಸಮರಸವನ್ನು ನಾನು ಹೊಂದಿಲ್ಲನಷ್ಟೆ....' ಅಕ್ಕಮಹಾದೇವಿ ಮಾರುತ್ತರಿಸಿದಳು.

'ಅಂದರೆ....ನಿನ್ನ ಒಗಟುಭಾಷೆ ಏನನ್ನು ಧ್ವನಿಸುತ್ತದೆ....?' ಬಸವಣ್ಣನ ಹೃದಯ ಮೆಲ್ಲನೆ ಕಂಪಿಸಿತು; ಸೂಕ್ಷ್ಮವಾಗಿ ಅಕ್ಕಮಹಾದೇವಿಯ ಆಕಾಂಕ್ಷೆ ಅವನಿಗೆ ಅರ್ಥವಾಗಿತ್ತು.

'ಮಹಾದೇವಿಯಕ್ಕನಿಗೆ ಇನ್ನೂ ಸಂಪೂರ್ಣ ತೃಪ್ತಿ ಸಾಧನಾಮಾರ್ಗದಲ್ಲಿ ಸಮನಿಸಿಲ್ಲವೆ....?' ಪ್ರಭುದೇವರು ಕೇಳಿದರು.

ಆಗ ಆಕೆ ಹೇಳಿದಳು :

> ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿಮಗೆ
> ಮಾಟವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ
> ಚನ್ನಬಸವಣ್ಣಂಗೆ
> ಬಂದ ಬಂದ ಭಾವ ಸೆಲೆ ಸಂದಿತ್ತು.
> ಎನ್ನಂಗದ ಅವಸಾನವ ಹೇಳಾ ಚನ್ನಮಲ್ಲಿಕಾರ್ಜುನಾ*

'ಅಂದರೆ ನಿನ್ನ ಅಭಿಪ್ರಾಯ ಏನವ್ವಾ ?' ನೀಲಾಂಬಿಕೆ ದುಗುಡಗೊಂಡು ಕೇಳಿದಳು.

'ಅವ್ವಾ! ತನ್ಮೊಲ್ಲರ ತಿಂಥಿಣಿಯಲ್ಲಿ ಘನವನ್ನು ಕಂಡೆ. ಇಷ್ಟಲಿಂಗದ ಆಯತ, ಪ್ರಾಣಲಿಂಗದ ಸ್ವಾಯತ, ಭಾವಲಿಂಗದ ಸನ್ನಿಹಿತ ಮೂರನ್ನೂ ಅರಿತುಕೊಂಡು, ಜನ್ಮಾಂತರಗಳಿಂದ ಬೆನ್ನಟ್ಟಿಬಂದ ಅಜ್ಞಾನವನ್ನು ಜ್ಞಾನದಿಂದ ತೊಡೆದೆ. ಪರಮಾತ್ಮನೊಡನೆ ಭಾವಸಮರಹೊಂದಿ ಅಪಾರ ಸುಖ ಪಡೆದೆ, ಜೀವನ್ಮುಕ್ತಳೂ ಆಗಿರುವೆ.** ಸದಾಚಾರ-ವಿರಕ್ತಿಗಳನ್ನೇ ಮೂಲಭೂತ ಆದರ್ಶವಾಗಿ ಇರಿಸಿಕೊಂಡು ಸಾಧನೆಮಾಡಿದೆ. ಬಾಳೆಯ ಹಣ್ಣು ಬೀಜರಹಿತ ಫಲವಾಗಿದ್ದು ಮತ್ತೆ ಭವಕ್ಕೆ ಬೀಳದಂತೆ, ನಾನು ಸಂಸ್ಕಾರದ ಬೀಜಗಳನ್ನು ಹುರಿದು ಭವದ ಬಳ್ಳಿಯು ಚಿಗುರದಂತೆ ಮಾಡಿಕೊಂಡಿರುವೆ. ಮಹಾಪ್ರಭು-ತಾವು ಬಯಲುಕಾಯವನ್ನು ಗಳಿಸಿಕೊಂಡು ಮುಕ್ತರಾದಿರಿ. ಬಸವಣ್ಣನಿಗೆ ದಾಸೋಹ, ಜಗತ್ತಿನ ಸೇವೆ, ಮಾನವರ ಹಿತಚಿಂತನೆಗಳೇ ಆತ್ಯಂತಿಕ ಸಿದ್ಧಿಗಳು; ಚನ್ನಬಸವಣ್ಣನಿಗೆ ಜ್ಞಾನವೇ ಮಹಾಸಾಧನೆ. ಹೀಗೆ ಎಲ್ಲರೂ ಒಂದೊಂದು ಬಗೆಯಲ್ಲಿ ಭವವನ್ನು ಗೆದ್ದುದಾಯಿತು. ಇನ್ನು ಈ ಲೋಕದಾಟವನ್ನು ಸಾಕುಮಾಡಿ, ನನ್ನ ಅಂಗವನ್ನು ವಿಸರ್ಜಿಸಿ, ವಿದೇಹ

---

* ಮ.ವ. ೩೩೨. ** ಮ.ವ. ೨೩೧

ಅಭಿಷ್ಟ ಈಡೇರಲು ಒಂದು ಸ್ಥಾನವನ್ನು ಅರಸಬೇಕಾಗಿದೆಯಷ್ಟೇ ?'

ಅನಿರೀಕ್ಷಿತವಾದ ಅಪೇಕ್ಷೆಯನ್ನರಿತು ಶರಣರು ದಿಗ್ಭ್ರಾಂತರಾದರು. ಕ್ಷಣಕಾಲ ಕೋಣೆಯನ್ನೆಲ್ಲ ಮೌನವು ತನ್ನ ಬಾಹುಗಳಿಂದ ಬಿಗಿದಪ್ಪಿತು. ಪ್ರಭುದೇವರೇ ನುಡಿದರು :

'ಅವ್ವಾ! ಶರೀರವಿರುವತನಕ ಶರಣರ ಸಂಗದಲ್ಲಿರಬೇಕು. ಒತ್ತಾಯದಿಂದ ಅದನ್ನು ಅವಸಾನಿಸುವುದೇಕೆ? ಅಜ್ಞಾನವಿದ್ದಾಗ ಅಗಲಿದೆ, ಕೂಡಿದೆ ಎಂಬ ಭಾವವುಂಟು. ಜ್ಞಾನೋದಯವಾದಬಳಿಕ ಆ ಭಾವಕ್ಕೆ ಅವಕಾಶ ಉಂಟೆ? ಸದಾಕಾಲ ಶಿವನ ಸಂಗದಲ್ಲೇ ಇರುವ ನೀನು, ಇನ್ನೂ ಅವನನ್ನು ಬೆರೆಯಬೇಕೆಂಬ ಮರೆವಿನಲ್ಲಿರುವೆಯಾ ?'*

'ಇಲ್ಲ ಪ್ರಭುವೇ, ಲಿಂಗಸಂಗಸುಖದಲ್ಲಿ ತೃಪ್ತಿಪಡೆದ ನನ್ನ ಮನಕ್ಕೆ ಇನ್ನಾವ ಬಯಕೆಗಳಿಲ್ಲ. ಅಗಲಿದೆ-ಕೂಡಿದೆ ಎಂಬ ಭಿನ್ನಭಾವವಂತೂ ಇಲ್ಲವೇ ಇಲ್ಲ. ಸಾಧಕಜೀವನದ ಪ್ರಾರಂಭಾವಸ್ಥೆಯಲ್ಲಿ ಆ ಭಾವವಿದ್ದಿತು. ತಮ್ಮಂತಹ ಶರಣರ ಸತ್ಸಂಗದಲ್ಲಿದ್ದ ಬಳಿಕ ನನ್ನ ಭಾವನೆಗಳು ಪರಿವರ್ತನೆಗೊಂಡಿವೆ. ಸದಾಚಾರ ಸಂಪನ್ನನಾದ ಮಹಾಗುರು ಬಸವಣ್ಣನ ಬದುಕನ್ನು ಅರಿತಬಳಿಕ ನನ್ನ ಕಾಯಗುಣಗಳು ಅಳಿದುಹೋಗಿವೆ. ಸುಜ್ಞಾನಿಯಾದ ಚನ್ನಬಸವಣ್ಣನ ಒಡನಾಟದಿಂದ ಪ್ರಾಣಗುಣಗಳು ಹೇಳಹೆಸರಿಲ್ಲವಾಗಿವೆ. ಮಹಾನುಭವಿಗಳಾದ ತಮ್ಮ ದರ್ಶನದಿಂದ ಪರಮಾತ್ಮನ ಅರಿವು ಸಾಧ್ಯವಾಯಿತು. ತಮ್ಮೆಲ್ಲರ ಕಾರುಣ್ಯದಿಂದ ಮೋಕ್ಷಾಪೇಕ್ಷೆಯ ಭಿಕ್ಷಾಪಾತ್ರೆಯು ತುಂಬಿರುವುದರಿಂದ ಇನ್ನಾವ ಜಂಜಡ ನನಗಿಲ್ಲ.** ಅಂಗ, ಮನ, ಭಾವಗಳು ಸತ್ಕ್ರಿಯೆ, ಸುಜ್ಞಾನ ಸದ್ಭಕ್ತಿಗಳಿಂದ ಪರಿಪ್ಲುತವಾಗಿ ಸರ್ವಾಂಗಲಿಂಗತ್ವವು ಮೈಗೂಡಿದೆ.† ಬೇರಾವ ಕೊರತೆಯಿದೆಯೆಂದು ನಾನು ಪರಿಪೂರ್ಣತ್ವಕ್ಕೆ ಹಂಬಲಿಸಲಿ.'

'ಹಾಗಾದರೆ ಹೋಗಬೇಕೆಂಬ ಅಪೇಕ್ಷೆ ಏಕೆ?' ನೀಲಮ್ಮನ ಪ್ರಶ್ನೆ.

'ಅವ್ವಾ, ನಾನೀಗ ಸಾಧಕಳಾಗಿ ಏನನ್ನಾದರೂ ಅರಸಿಕೊಂಡು ಹೋಗುತ್ತಿಲ್ಲ. ಸಿದ್ಧಪುರುಷಳಾಗಿ ಸ್ವ-ಆನಂದದಲ್ಲಿ ತಲ್ಲೀನವಾಗಲು ಹೋಗಲಿಚ್ಛಿಸುತ್ತಿರುವೆ. ಸೃಷ್ಟಿಭೂಪನ ರಾಣಿವಾಸದಂತಿರುವ ದಟ್ಟವಾದ ನಿಸರ್ಗದಲ್ಲಿ, ಮಾನವರ ಉಲುಹು ಕೇಳಿಬರದಂತಹ ನಿರ್ಜನಪ್ರದೇಶದಲ್ಲಿ ಏಕಾಗ್ರಚಿತ್ತಳಾಗಿ ...

ಸಂಪೂರ್ಣವಾಗಿ ಮೆಟ್ಟಿನಿಂತು ಪರಮಸುಖದಲ್ಲಿ ಮೈಮರೆತು ಇಚ್ಛಾ ಮರಣತ್ವದ ಸಿದ್ಧಿಯನ್ನು ಪಡೆದು ಈ ಪ್ರಾಕೃತಿಕ ಶರೀರವನ್ನು ವಿಸರ್ಜಿಸುವ ಉತ್ಕಟಾಪೇಕ್ಷೆ ಮೊರೆಯುತ್ತಿದೆ. ದಯಮಾಡಿ ಅಡ್ಡಿಮಾಡದೆ ಮಾರ್ಗ ದರ್ಶನಮಾಡಿರಿ.' ಅಕ್ಕಮಹಾದೇವಿಯ ಧ್ವನಿಯಲ್ಲಿ ಅಚಲವಾದ ನಿರ್ಧಾರದ ಸುಳುಹಿತ್ತು.

ಶರಣರೆಲ್ಲರ ಬಾಯಿ ಕಟ್ಟಿತು. ತಾವಿನ್ನು ಆ ದಿವ್ಯ ಚೇತನವನ್ನು ಉಳಿಸಿಕೊಳ್ಳಲೆತ್ನಿಸುವುದೂ, ಭೋರ್ಗರೆದು ಹರಿಯುವ ಪ್ರವಾಹವನ್ನು ತಡೆ ದಿಡುವ ಪ್ರಯತ್ನ ಮಾಡುವುದೂ ವ್ಯರ್ಥ ಸಾಹಸ ಎಂಬ ಮನವರಿಕೆ ಮಾಡಿ ಕೊಂಡರು. ಪ್ರಭುದೇವರು ಅನಿವಾರ್ಯವಾಗಿ ಆಗ ನುಡಿದರು :

'ಅಂತಹ ಗುರಿಯ ಸಾಧನೆಗಾದರೆ ಕದಳಿಯ ಬನವೇ ಪ್ರಶಸ್ತ ಸ್ಥಳ, ತಾಯಿ....' ಕದಳಿಯ ಬನದ ಹೆಸರನ್ನು ಕೇಳಿ ಪುಳಕಿತಗೊಂಡಳು ಅಕ್ಕ ಮಹಾದೇವಿ. ಸಂದರ್ಭವು ಸೂಕ್ತವಾಗಿ ಒದಗಿತೆಂದು ತಾವು ಪೂಜೆಯ ವೇಳೆಯಲ್ಲಿ ಕಂಡ ದೃಶ್ಯವನ್ನು ಕುರಿತು ಆಗ ಹೇಳಿದಳು. ಅದನ್ನು ಕೇಳಿದ ಶರಣರಿಗೆ ತನ್ನ ಗಂಡನಿಂದ ಕರೆಬಂದ ಕಾರಣ ಅಕ್ಕಮಹಾದೇವಿ ಹೋಗ ಬೇಕಾದುದು ಅನಿವಾರ್ಯ ಎನಿಸದೆ ಇರಲಿಲ್ಲ.

'ಗುರುದೇವಾ....ತಾವಾಗಲೇ ಕದಳಿಯನ್ನು ಸಂದರ್ಶಿಸಿರುವಿರಾ ?'

'ಅಹುದಕ್ಕಾ....ಒಮ್ಮೆ ಸಂಚಾರವನ್ನು ಕೈಗೊಂಡು ಅಲ್ಲಿಗೆ ಹೋಗಿ ದ್ದೆನು. ಮಾನವರ ಉಲುಹೇ ಕೇಳಿಬರದ ಅತ್ಯಂತ ಗಹನವಾದ ಗಿರಿಯ ಗರ್ಭದಲ್ಲಿದೆ. ನಿನ್ನ ಗುರಿಗೆ ಅತಿ ಸೂಕ್ತ ಸ್ಥಳ ; ನಾನೂ ಸಹ ಅಂತ್ಯಕ್ಕಾಗಿ ಬರುವುದು ಅಲ್ಲಿಗೆಯೇ. ಆದರೆ ನನ್ನ ಕಾಲವಿನ್ನೂ ಕೂಡಿಬಂದಿಲ್ಲ. ಬಸವಣ್ಣನ ವಿರಾಟ್‌ರೂಪಿ ಕಾಂತಿಭವನದ ಕಂಭಗಳಾಗಿ ನಾವು ನಿಲ್ಲಬೇಕಾಗಿದೆ. ಅನುಭವ ಮಂಟಪವು ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿ ಈಗ ಇದ್ದು, ಬಹುಮುಖ ಮಣಿಹವನ್ನು ಹೊತ್ತಿದೆ. ಬಸವಣ್ಣನಿಗೆ ಬೆಂಬಲವಾಗಿ ನಿಲ್ಲುವ ಕರ್ತವ್ಯವು ತಲೆಯ ಮೇಲಿದೆ. ಸ್ವಯಂಸಿದ್ಧತ್ವವು ಈ ಸಂಸ್ಥೆಗೆ ಬಂದಾಗ, ಗುಹೇಶ್ವರ ನೊಡನೆ ಸಮರಸಕ್ಕೆ ಅಣಿಯಾಗಿ ನಾನೂ ಕದಳಿಗೆ ಬರುವೆನು.'

'ತಾವಾಗಲೇ ನೋಡಿಬಂದಿರುವುದರಿಂದ ಪಥನಿರ್ದೇಶನ ಮಾಡಬಲ್ಲಿರಾ ಗುರುದೇವಾ ?' ಅಕ್ಕಮಹಾದೇವಿ ಮರುಪ್ರಶ್ನಿಸಿದಳು.

ತ್ರಿಕೂಟದಿಂದ ಸೋಪಾನಗಳಿಂದ ತಪ್ಪಲಿಂದಲು ಮೆಟ್ಟಿ ನೋಡಲು
ಬಟ್ಟಬಯಲು ಕಾಣಬಹುದು ನೋಡಾ.
ಆ ಬಯಲ ಬೆರೆಸುವರೆ ತ್ರಿಕೂಟ ಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ.
ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ.
ನಡೆಯಲ್ಲಿಗೆ ತಾಯೆ. ಗುಹೇಶ್ವರ ಲಿಂಗದಲ್ಲಿ
ಪರಮಪದವಿ ನಿನಗೆ ಸ್ವಯವಹುದು ನೋಡಾ.*

ಈ ವಚನದ ಗೂಢಾರ್ಥವನ್ನು ಗಂಭೀರವಾಗಿ ಎಲ್ಲರೂ ಮನನಿಸತೊಡಗಿದರು. 'ನುಡಿಯ ಬೆಡಗನ್ನೊಡೆದು ಅರ್ಥವಾಗುವ ಪರಿಯಲ್ಲಿ ಹೇಳಬಾರದೆ, ಗುರುದೇವಾ....?' ಚನ್ನಬಸವಣ್ಣ ಕೇಳಿದ.

'ಈ ವಚನಕ್ಕೆ ಎರಡು ಬಗೆಯ ಅರ್ಥ ಮಾಡಬಹುದು. ಒಂದು ಭೌಗೋಳಿಕವಾಗಿ, ಎರಡನೆಯದು ಯೌಗಿಕವಾಗಿ. ಶ್ರೀಶೈಲಪರ್ವತದ ತನಕ ಸಾಮಾನ್ಯರೊಡನೆ ಸಹಜವಾಗಿ ಸಾಗಬಹುದು. ಅಲ್ಲಿಂದ ನಂತರ ತಪೋಧಾಮವಾದ, ದಟ್ಟಕಾಡಿನಿಂದ ಕೂಡಿದ ದುರ್ಗಮ ತಾಣವಾದ ಕದಳಿಯ ಬನವು ಶ್ರೀಗಿರಿಯ ಪಶ್ಚಿಮ ದಿಕ್ಕಿನಲ್ಲಿದೆ. ಶ್ರೀಗಿರಿಯಿಂದ ವಾಯುವ್ಯ ದಿಕ್ಕಿನಲ್ಲಿ ನಡೆದರೆ ನಾಲ್ಕೈವರೆ ಹರದಾರಿ ಅರಣ್ಯಪಥವನ್ನು ಕ್ರಮಿಸಿದಾಗ ಒಂದು ಸುಂದರ ಹಳ್ಳವಿರುವುದು. ಆ ಮಂಜುಳವಾಹಿನಿಯು ಕೃಷ್ಣೆಯ ಒಡಲನ್ನು ಕೂಡುವುದು. ಇದೂ ಕೂಡ ತಪಸ್ಸಾಧನೆಗೆ ಪ್ರಶಸ್ತವಾಗಿದೆ. ಆದರೆ ಅದು ಆಗಾಗ ಜನರು ಬಂದು ಹೋಗುವ ಸ್ಥಾನ. ತೆಲುಗುನಾಡಿನಿಂದ ಬರುವವರು ಇದನ್ನು ರೇವನ್ನಾಗಿ ಮಾಡಿಕೊಂಡಿರುವ ಕಾರಣ ಇಲ್ಲಿಯೇ ಕೃಷ್ಣಾನದಿಯನ್ನು ದಾಟಿ ಶ್ರೀಗಿರಿಗೆ ಬರುವರು. ಅಲ್ಲಿಂದ ತ್ರಿಕೂಟಪರ್ವತದ ತಪ್ಪಲು ಆರಂಭ. ನೈಋತ್ಯ ದಿಕ್ಕಿನಲ್ಲಿ ಸಾಗಿ ಸೋಪಾನದಂತಿರುವ ಮೂರು ಬೃಹತ್ ಪರ್ವತಗಳನ್ನು ಆರೋಹಿಸಿ ಮುಂದೆ ನಡೆದರೆ ಆಗ ದೊರೆಯುವುದು ವಿಶಾಲವಾದ ಬಯಲು. ಸುಮಾರು ಎರಡು ಹರದಾರಿ ವಿಸ್ತೀರ್ಣದ ಬಯಲಿದು. ಅಲ್ಲಿ ಹರದಾರಿ ನಡೆದಾಗ ಮಾರ್ಗದಲ್ಲಿ ಇನ್ನೊಂದು ಹಳ್ಳ ಸಿಗುತ್ತದೆ. ಬೇಸಿಗೆಯ ಕಾಲದಲ್ಲಿ ಬತ್ತಿರುವ ಈ ವಾಹಿನಿ ಮಳೆಗಾಲದಲ್ಲಿ ಹರಿಯುತ್ತದೆ. ಅದನ್ನು ಜೊತೆಗಿರಿಸಿಕೊಂಡು

ಪಾತವಾಗಿ ಅದು ಧುಮ್ಮಿಕ್ಕುತ್ತದೆ. ಇದಕ್ಕೆ ಹೊಂದಿಕೊಂಡು ನೀನು ಸೇರ ಬಯಸಿರುವ ಕದಳಿಯ ವನದ ಗವಿಯಿದೆ. ಅದು ತೋರಿಕೆಯ ದೃಷ್ಟಿಗೆ ಒಂದೇ ಸಲಕ್ಕೆ ಗೋಚರವಾಗದು. ಈ ಗವಿಯು ಕದಳಿಯ ಕೊಳ್ಳದ ನೆತ್ತಿಗಿದೆ. ಅಲ್ಲಿಗೆ ನೀನು ಸಾಗಿ, ತಪಸ್ಸಿಗೆ ಕುಳಿತು, ನಿನ್ನ ಶರೀರವನ್ನು ವಿಸರ್ಜಿಸಿ, ಆತ್ಮನನ್ನು ಪರಮಾತ್ಮನಲ್ಲಿ ವಿಲೀನ ಮಾಡು, ತಾಯಿ....'

'ಇದರ ಯೌಗಿಕ ಅರ್ಥವನ್ನೂ ಅಷ್ಟು ಹೇಳಿಬಿಡಿರಿ....' ಚನ್ನಬಸವಣ್ಣ ಬಿನ್ನವಿಸಿದ.

'ಆಧಾರಚಕ್ರದಲ್ಲಿ ಇರುವ ಕುಂಡಲಿನಿಯು ಜಾಗ್ರತಗೊಂಡು ಆರೋಹಣಕ್ಕೆ ಆರಂಭಿಸಿದಾಗ ಸಾಧಕರಲ್ಲಿ ದೇವನು ಭಕ್ತನಿಂದ ದೂರವಿರುವನೆಂಬ ಅಪರಿಪೂರ್ಣಭಾವವು ಇನ್ನೂ ಅಳಿದಿರುವುದಿಲ್ಲ. ಅದು ಸ್ವಾಧಿಷ್ಠಾನಾದಿ ಚಕ್ರಗಳಲ್ಲಿ ಪ್ರವಹಿಸುತ್ತ ಏರತೊಡಗಿದಾಗ ಭಿನ್ನತೆ, ಬಹಿರಂಗದ ಅರಿವು ಅಳಿಯತೊಡಗಿ ಅತೀತನಾಗುವನು. ಆಜ್ಞಾಚಕ್ರಕ್ಕೆ ಏರಿ ಭ್ರುಕುಟಿಯಲ್ಲಿ ನೆಲೆನಿಂತು ನೋಡಿದಾಗ ಸನಿಹದಲ್ಲಿರುವ ಸಹಸ್ರಾರ, ಅದರೊಳಗಿರುವ ಚಿದಾಕಾಶ ಅರ್ಥಾತ್ ಬಯಲು ಕಾಣತೊಡಗುವುದು. ಇಲ್ಲಿ ಸ್ವಲ್ಪ ಕಾಲ ನೆಲೆನಿಂತು ಮತ್ತೆ ಸಾಗಿದರೆ ಶಿಖಾಚಕ್ರದ ಕದಳಿಯ ಬನವುಂಟು. ಅದಕ್ಕೆ ಹೊಂದಿಕೊಂಡು ಪಶ್ಚಿಮ ಚಕ್ರದ ಗವಿಯುಂಟು. ಅಲ್ಲಿರುವುದೇ ನಿಶ್ಶೂನ್ಯಲಿಂಗ. ಅಲ್ಲಿಯೇ ದೃಷ್ಟಿ, ಮನ, ಭಾವ ಎಲ್ಲವನ್ನು ಕೇಂದ್ರೀಕರಿಸಿ ಧ್ಯಾನಾಸಕ್ತರಾದರೆ ಪಶ್ಚಿಮ ಕವಾಟವು ತೆರೆದು ಪ್ರಾಣವಾಯು ಶರೀರವನ್ನು ಬಿಡುವುದು. ಆಗ ಆತ್ಮವು ದೇಹದಿಂದ ಹೊಂದಿ ಪರಶಿವನಲ್ಲಿ ಲೀನವಾಗುವುದು. ಅದುವೇ ಪರಮಪದವಿ ; ವಿದೇಹಮುಕ್ತಿಯನ್ನು ಪಡೆಯುವ ಸಾಧನೆ.'

'ಅಲ್ಲಿಗೆ ಹೋದ ನಾನು ಪ್ರಸ್ತುತ ಗುರಿಸಾಧನೆಗಾಗಿ ಯಾವ ರೀತಿ ಮುಂದುವರಿಯಬೇಕು, ಗುರುದೇವಾ?'

> ಕಾಯವೆಂಬ ಕದಳಿಯ ಹೊಕ್ಕು
> ಪ್ರಾಣವೆಂಬ ಗಹ್ವರದೊಳಗೆ
> ಸಕಲೇಂದ್ರಿಯವೆಂಬ ಕೋಣೆಕೋಣೆಗಳಲ್ಲಿ
> ತಿರುಗಾಡುತ್ತ ಬರಲಾಗಿ
> ಮೇರುಮಂದಿರದ ತ್ರಿಕೋಣೆಯ ಬೆಳಗಾಯಿತು.
> ಗುಹೇಶ್ವರ ಲಿಂಗವೆಂಬೊಂದು ರೂಪಾಯಿತು.

ಶರೀರವೇ ಒಂದು ಕದಲಿಯವನ ; ಆತ ಕ್ಕೆ ವಾಹನಗಳಾಗಿ ಕಾರ್ಯಪ್ರವೃತ್ತ

ಯಗಳೆಂಬ ಕೋಣೆಗಳಲ್ಲಿ ನೆಲೆನಿಲ್ಲದೆ ಈ ಎಲ್ಲವುಗಳಿಂದಲೂ ಮನಸ್ಸನ್ನು ಬೇರ್ಪಡಿಸಿ ಕುಂಡಲಿನಿಯನ್ನು ಜಾಗ್ರತಿಸಿ, ಅದನ್ನು ಮತ್ತು ಮನಸ್ಸನ್ನು ಒಂದುಗೂಡಿಸಿ ಮೇರುಪರ್ವತದೋಪಾದಿಯಲ್ಲಿ ಇರುವ ಸುಷುಮ್ನಾ ನಾಡಿಯಲ್ಲಿ ಏರಿಸುತ್ತ ಹೋದಾಗ ಭ್ರೂಮಧ್ಯ ಸ್ಥಾನವು ಉಜ್ವಲವಾಗಿ ಬೆಳಗತೊಡಗುವುದು....ನಾನಾಗಲೇ ತಿಳಿಸಿದಂತೆ ಆಗ ಪ್ರಾಣವನ್ನು ವಿಸರ್ಜಿಸಬೇಕು.'

ಪ್ರಭುದೇವರು ನುಡಿದುದನ್ನು ಮನವಿಟ್ಟು ಆಲಿಸಿ, ನೆನಪಿನ ಕೋಣೆಯಲ್ಲಿ ಭದ್ರವಾಗಿರಿಸಿಕೊಳ್ಳುವಂತೆ ಚಿಂತಾಮಗ್ನಳಾದ ಅಕ್ಕಮಹಾದೇವಿ, ನಂತರ ಬಸವಣ್ಣನವರಲ್ಲಿ ವಿನಂತಿಸಿದಳು :

'ಹಾಗಾದರೆ ಅಪ್ಪಾ, ನಾಳೆ ನಾನಿನ್ನು ಬೀಳ್ಕೊಳ್ಳಬಹುದಲ್ಲವೆ?'

ಬಸವಣ್ಣನು ಅಪಾರ ವ್ಯಥೆಯಿಂದ ಮುಖ ಕಂದಿದವನಾಗಿ, ಸಂತೈಸಿಕೊಳ್ಳುತ್ತ ಹೇಳಿದ :

'ನಾಳೆ ನಿನ್ನ ಅಭೀಪ್ಸೆಯನ್ನು ಮಂಟಪದ ಮುಂದಿಡು, ತಾಯಿ; ನಾಳಿದ್ದು ಎಲ್ಲರ ಸಮಕ್ಷಮದಲ್ಲಿ ಬೀಳ್ಕೊಳ್ಳುವಿಯಂತೆ....' ಇದಕ್ಕೆ ಒಪ್ಪಿದ ಮಹಾದೇವಿ ವಿಶ್ರಾಮ ಪಡೆಯಲು ಸಾಗಿದಳು.

೫೨. ಪಯಣದ ಪ್ರಸ್ತಾಪ

ಅಕ್ಕಮಹಾದೇವಿ ನಸುಕಿನಲ್ಲಿಯೇ ಎದ್ದು ಮಿಂದು ಮಡಿಯುಟ್ಟು, ದೀರ್ಘ ಕಾಲದವರೆಗೆ ಪೂಜೆ-ಧ್ಯಾನಗಳಲ್ಲಿ ತನ್ಮಯಳಾಗಿದ್ದು, ಬೆಳಗಿನ ವೇಳೆಯಲ್ಲಿ ನಡೆಯುವ ಅನುಭವಗೋಷ್ಠಿಗೆ ಹೋಗಲುದ್ಯುಕ್ತಳಾದಳು. ಶರಣಬಂಧುಗಳ ಮುಂದೆ ತನ್ನ ನಿರ್ಧಾರವನ್ನು ಪ್ರಚುರಪಡಿಸುವುದು ಆಕೆಯ ಮುಖ್ಯ ಉದ್ದೇಶವಾಗಿದ್ದಿತು. ಉಟ್ಟ ತಿಳಿಗಾವಿಯ ಸೀರೆಯ ಆಚ್ಛಾದನೆಯಲ್ಲಿ ಅಕ್ಕ ಮಹಾದೇವಿ ಪ್ರಸನ್ನಮುಖಮುದ್ರೆಯನ್ನು ಹೊತ್ತು ಅನುಭವಮಂಟಪವನ್ನು ಪ್ರವೇಶಿಸಿದಳು. ಮೊಗದಲ್ಲರಳಿದ ಸಂತೃಪ್ತಭಾವ, ಅಂತರ್ಮುಖ ವ್ಯಕ್ತಿತ್ವ ವನ್ನು ಪ್ರತಿಬಿಂಬಿಸುವ ನಿಶ್ಚಲ ದೃಷ್ಟಿ, ಅಂತರಂಗದ ಪರಿಪಕ್ವತೆಯನ್ನು ತೋರಿಸುವ ತೇಜಃಪುಂಜ ಕಣ್ಣಾಲಿಗಳು—ಇವೆಲ್ಲ ಎರಕಹೊಯ್ದ ಮೂರ್ತಿ ಯಾಗಿ ಅಕ್ಕಮಹಾದೇವಿ ಆಗಮಿಸಿದಾಗ ವಾತಾವರಣವು ದೈವೀಮಯ ವಾಗಿ ಶರಣಸಂದೋಹವು ಭಕ್ತಿತುಂಬಿದ ಗೌರವವನ್ನು ವ್ಯಕ್ತಪಡಿಸಿತು.

ಗೋಷ್ಠಿಯ ಆರಂಭದ ವೇಳೆ ಕಾಲಿಕ್ಕುತ್ತಿದ್ದಂತೆಯೇ ಓಂಕಾರವನ್ನು ಪಂಚ ಲೋಹದ ಗಂಟೆಯು ನಿನದಿಸಿ, ವಾತಾವರಣದಲ್ಲಿ ಪ್ರಣವದ ಝೇಂಕಾರ ವನ್ನು ತೇಲಿಬಿಟ್ಟಿತು. ಅದನ್ನು ಶ್ರುತಿಗೂಡಿಸಿಕೊಂಡು ಓಂಕಾರದಿಂದ ಪ್ರಾರ್ಥನೆ ಆರಂಭವಾಯಿತು. ಪ್ರಾರ್ಥನೆಯು ಮುಗಿಯುತ್ತಿದ್ದಂತೆಯೇ ಅಕ್ಕಮಹಾದೇವಿ ಸಭೆಗೆ ವಂದಿಸಿ ಹೇಳಿದಳು :

'ಶರಣಬಂಧುಗಳೇ ; ಗಂಗೆಯ ಪ್ರವಾಹದೊಡನಾಡಿ ಬೆಟ್ಟ-ಗುಡ್ಡಗಳು ಕ್ಷೀಣಿಸುವಂತೆ, ಅಗ್ನಿಯೊಡನಾಡಿ ಕಸ-ಕಾಷ್ಠಂಗಳು ಸುಟ್ಟುಹೋಗುವಂತೆ, ಜ್ಯೋತಿಯೊಡನಾಡಿ ಕತ್ತಲೆಯು ಕೆಡುವಂತೆ, ಜ್ಞಾನಿಯೊಡನಾಡಿದ ಅಜ್ಞಾನಿ ಅರಿವುಳ್ಳ ಶರಣನಾಗುವಂತೆ, ತಮ್ಮಂತಹ ಮಹಾನುಭಾವರ ಸಂಗದಲ್ಲಿದ್ದು ನಾನು ಜನನ-ಮರಣ ದ್ವಂದ್ವಾತ್ಮಕ ಭವಚಕ್ರದ ಸುಳಿಯಿಂದ ಪಾರಾದೆ.*

ಪರಿವರ್ತನಗೊಳಿಸುವ ಸಾಮರ್ಥ್ಯವುಳ್ಳ ಈ ದೈವಸಾಕ್ಷಾತ್ಕಾರಿಗಳ ಸಂಪರ್ಕದಿಂದ ಎನ್ನ ತನುಮನಗಳೆಲ್ಲವು ಶುದ್ಧವಾದವು. ಹಲವಾರು ಲೋಪ ದೋಷಗಳನ್ನು ತಿದ್ದಿ, ಪುಟಕ್ಕಿಕ್ಕಿ ನನ್ನನ್ನು ಚೆಲುವಾದ ಆಭರಣವನ್ನಾಗಿ ಗೈದಿರಿ. ಉಡುತಡಿಯ ಜೀವಿತ ಸಂಸಾರದ ಖನಿಯಲ್ಲಿ ದೊರೆತ ಅದಿರನ್ನು

ಅನುಭವಮಂಟಪದ ಅಗ್ಗಿಷ್ಟಿಕೆಯಲ್ಲಿ ಪುಟಕೊಂಡು, ತಮ್ಮಂತಹ ಪಾರಮಾರ್ಥಿಕ ಸ್ವರ್ಣಕಾರರ ಕೈಯಲ್ಲಿ ಸಿಕ್ಕು ಆಭರಣದ ರೂಪು ತಾಳಿದೆ.* ಇನ್ನು ಈ ಆಭರಣವು ಶಿವಾರ್ಪಿತವಾಗಬೇಕಾದುದು ಉಚಿತವಲ್ಲವೇ? ಅಂತೆಯೇ ಧರಿಸಿಕೊಳ್ಳಲು ಉತ್ಕಟನಾಗಿಹ ಚೆನ್ನಮಲ್ಲಿಕಾರ್ಜುನನಿಂದ ಕರೆ ಬಂದಿರುವ ಕಾರಣ ಅನಿವಾರ್ಯವಾಗಿ ತಮ್ಮಿಂದ ಅಗಲಬೇಕಾಗಿದೆ.'

'ಎತ್ತ ಹೋಗುವಿಯಕ್ಕಾ....?' ಶರಣರು ಒಕ್ಕೊರಲಿನಿಂದ ಪ್ರಶ್ನಿಸಿದರು.

'ಸಣ್ಣ ವಾಹಿನಿಯಾಗಿ ಉಗಮಿಸಿ ಹರಿದ ನಾನು, ಈ ಮಹಾಸಂಗಮದಲ್ಲಿ ಮಿಲನಗೊಂಡೆ. ಇನ್ನು ನನ್ನ ಬಾಳನದಿಯು ಪರಶಿವಶರಧಿಯಲ್ಲಿ ಸಮಾಗಮಿಸಬೇಕಲ್ಲವೆ? ಈ ಸಮಾಗಮದ ತಾಣವಾಗಿ ಶ್ರೀಗಿರಿಯ ಬಳಿ ಇರುವ ಕದಳಿಯ ಬನದ ಗವಿಯನ್ನು ಆರಿಸಿಕೊಳ್ಳಲು ಸಂಕಲ್ಪಿಸಿರುವೆ. ಇದು ಚನ್ನಮಲ್ಲಿಕಾರ್ಜುನನ ಅಪೇಕ್ಷೆಯೂ ಅಹುದು; ಗುರುದೇವರ ಸಲಹೆಯೂ ಆಗಿದೆ.'

ಈ ವಿಚಾರ ತಿಳಿಯುತ್ತಲೇ ಶರಣರ ಹೃದಯಗಳು ವಿಹ್ವಲಗೊಂಡವು. ಆ ಕಳವಳವನ್ನು ಅನೇಕರು ಮೂಕವಾಗಿ ಅನುಭವಿಸತೊಡಗಿದರು. ಆಗ ಹಡಪದ ಅಪ್ಪಣ್ಣನವರ ಪುಣ್ಯಾಂಗನೆ ಲಿಂಗಮ್ಮ ಹೇಳಿದಳು:

'ಅಕ್ಕಾ, ಯಾವನನ್ನು ಬಿಟ್ಟು ನಾವಿಲ್ಲವೋ, ಯಾವ ಪರವಸ್ತುವಿನ ಗರ್ಭದಲ್ಲಿ ಇಂಬಿಡಲ್ಪಟ್ಟಿದ್ದೇವೆಯೋ, ಯಾರು ಓತಪ್ರೋತವಾಗಿ ಜಗದ ಒಳಹೊರಗೆ ತುಂಬಿರುವನೋ, ಅಂತಹ ಪರಶಿವನನ್ನು ಬೆರೆಯಲು ವಿಶಿಷ್ಟ ತಾಣವೊಂದನ್ನು ಅರಸಿಕೊಂಡು ಹೋಗಬೇಕೇ? ಈ ಶರೀರವೇ ಒಂದು ಕದಳಿಯ ಬನ. ಈ ಬನದಲ್ಲಿರುವ ಹೃದಯವೇ ಗವಿ. ವಾಙ್ಮನಕ್ಕಗೋಚರನಾದ ಪರಶಿವನು ನೀನೇ ಹೇಳಿದಂತೆ, ಆರು ಭೂತಂಗಳಲ್ಲಿ ಆರಾರು ತತ್ತ್ವದಲ್ಲಿ ಪೂರೈಸಿ ಇಪ್ಪ ಘನನು. ಇವನನ್ನು ಮನದಲ್ಲಿ ಅರೈದು ತಿಳಿದವ ಮುಕ್ತ. ಇಂತಹ ಪರಮನೊಡನೆ ಸಮಾಗಮ ಹೊಂದಲು ಇಲ್ಲಿ ಬರದೆ? ಶರಣರ ಸಂಗವು ಬಹು ಅಮೂಲ್ಯವಾದುದು. ಅದನ್ನು ತೊರೆದು ಹೋಗುವುದೇಕೆ?'

'ಲಿಂಗಮ್ಮ ತಾಯಿ, ಶರಣರ ಸಂಗದ ಮಹಿಮೆಯನ್ನು ನಾನು ಅರಿಯೆನೆ? ಅನುಭವಮಂಟಪವೆಂಬ ಈ ಆಧ್ಯಾತ್ಮ ಶಿಲ್ಪಕಾರ್ಯಾಗಾರಕ್ಕೆ ಬರದಿದ್ದರೆ ಕಾಡುಕಲ್ಲಿನಂತೆ ಕಟೆಯಲ್ಪಡದೇ ಉಳಿಯುತ್ತಿದ್ದೆ. ನಾನು, ಕದಳಿಗೆ ಹೋಗ

ದೇವನನ್ನರಸಿಕೊಂಡು, ಅಪಕ್ವ ಭಾವದಿಂದ ಹೋಗುತ್ತಿಲ್ಲ. ಉಡುತಡಿಯಿಂದ ಕಲ್ಯಾಣದವರೆಗಿನ ಪಯಣ 'ಸಾಧಕ' ಮನೋವೃತ್ತಿಯದಿದ್ದರೆ ಕಲ್ಯಾಣದಿಂದ ಕದಳಿಗೆ 'ಸಿದ್ಧ' ಮನೋವೃತ್ತಿಯದಿದೆ. ಆಗ ನಾನು ಗಿಡ-ಮರಗಳನ್ನು, ಪಶು-ಪಕ್ಷಿಗಳನ್ನು, ಕ್ರಿಮಿ-ಕೀಟಗಳನ್ನು, ನದಿ-ಬೆಟ್ಟಗಳನ್ನು ಕೇಳುತ್ತಿದ್ದೆ, 'ನನ್ನ ದೇವನೆಲ್ಲಿಹನು ತೋರಿರಿ' ಎಂದು. ಹೀಗೆ ಅರಸುತ್ತ ಅಳಲುತ್ತ ಬಂದು ಶರಣರ ಸಾನ್ನಿಧ್ಯದಲ್ಲಿದ್ದು ಅವನ ಸಾಕ್ಷಾತ್ಕಾರ ಪಡೆದುಕೊಂಡು ಪರಿಪೂರ್ಣಳಾದೆ. ಲಿಂಗಾಂಗಸಮರಸದಲ್ಲಿ ಸದಾ ಸುಖಿಯಾದ ಕಾರಣ ಅಗಲಿದ-ಕೂಡುವ ಭಿನ್ನಭಾವವಿಲ್ಲ. ಹಾಗಾದರೆ ಈ ಪಯಣವು ಏತಕ್ಕಾಗಿ ಎಂದರೆ ಮೊದಲನೆಯದಾಗಿ ಶರಧಿಯನ್ನು ಕೂಡುವುದು ನದಿಯ ಗುರಿಯಾದರೂ ಮಾರ್ಗಮಧ್ಯದಲ್ಲಿ ಸಿಗುವ ಹೊಲಗಳಿಗೆ ನೀರನ್ನು ಎರೆಯುತ್ತ ಹೋಗುವಂತೆ, ನಾನೂ ಸಹ ನಿಂತಲ್ಲಿ ನಿಲ್ಲದೆ ಬಸವ ತತ್ತ್ವದ ಅಮೃತ ಜಲವನ್ನು ಜನತೆಗೆ ಎರೆಯುತ್ತ ಹೋಗುವ ಅಪೇಕ್ಷೆಯನ್ನು ಇರಿಸಿಕೊಂಡಿರುವೆ. ಬೃಹತ್ತಾದ ಸಮಾಜದಲ್ಲಿ ಧರ್ಮದ ಕಡೆಗೆ ಕಣ್ಣೆತ್ತಿನೋಡದ ನಾಸ್ತಿಕರು, ಅಪೇಕ್ಷೆ ಇದ್ದೂ ಅವಕಾಶವಿಲ್ಲದ ಶೋಷಿತರು ಅಸಂಖ್ಯಾತರಾಗಿರುವುದರಿಂದ ಅಂತಹವರ ಹೃದಯಕ್ಕೆ ಧರ್ಮಜಲವನ್ನು ಧಾರೈಸಲಿಚ್ಛಿಸುವೆ.

ಎರಡನೆಯದಾಗಿ ಹಸಿವು-ತೃಷೆಗಳ ಹಂಗನ್ನಳಿದು ಸ್ಥಿರವಾಗಿ ತಪಸ್ಸಿಗೆ ಕುಳಿತು, ಆತ್ಮಾನಂದವನ್ನು ಹೊಂದುತ್ತಲೇ ಇಚ್ಛಾಮರಣಿಯಾಗಿ ಪಂಚಭೂತಾತ್ಮಕ ಕಾಯವಿದನ್ನು ವಿಸರ್ಜಿಸುವ ಅಪೇಕ್ಷೆ. ಇದು ಸಾಧನಾತ್ಮಕ ತಪಸ್ಸಲ್ಲ; ಸ್ವಾನಂದ ತಪಸ್ಸು. ಈಜನ್ನು ಕಲಿಯುವ ವ್ಯಕ್ತಿಯು ಭಯ, ಕಾತರಗಳಿಂದ ಕಲಿಯಲಾರಂಭಿಸುವನು. ಅದರಲ್ಲಿ ಬಲ್ಲಿದನಾದ ಬಳಿಕ ನೀರಿನಲ್ಲಿ ಅತ್ಯಂತ ನಿರ್ಭಯವಾಗಿ, ಸಹಜವಾಗಿ ಕೈಕಾಲು ಬಡಿಯುತ್ತ, ಆಡುತ್ತ ಆನಂದ ಹೊಂದುವನು. ಹಾಗೆಯೇ ನಿರಾತಂಕವಾಗಿ, ನಿರ್ವಿಘ್ನವಾಗಿ, ಲೋಕದ ಎಲ್ಲ ಚಟುವಟಿಕೆಗಳಿಂದ ದೂರವಿದ್ದು ಧ್ಯಾನಮಗ್ನಳಾಗುವ ಅಭೀಪ್ಸೆ ಇದೆ.

ಅತಿಮುಖ್ಯವಾದ ತಾತ್ತ್ವಿಕ ಕಾರಣವೆಂದರೆ, ಬಹುದೇವೋಪಾಸನೆ-ಗುಡಿಗುಂಡಾರಗಳ ನಿರ್ಮಾಣವು ರಕ್ತಗತವಾಗಿ ಬೆರೆದಿರುವ ಜನರು ನಾವು ಸಮಾಧಿ ಹೊಂದಿದ ಠಾವುಗಳ ಮೇಲೆ ಗುಡಿ ಕಟ್ಟಿ, ಪೂಜಾರಿತತ್ತ್ವವನ್ನು ಮತ್ತೆ ಪೋಷಿಸದೆ ಇರೆವು. ಆದ್ದರಿಂದ ಇದನ್ನು ಪ್ರೋತ್ಸಾಹಿಸಬಾರದೆಂದು ನಾನು ಗುಪ್ತವಾದ, ದುರ್ಗಮವಾದ, ಕಾನನಮಧ್ಯದಲ್ಲಿ ಜೀವಂತಸಮಾಧಿ

ಕೆಲಸವೆಂದು ಶರಣರು ಮನಗಂಡರು.

'ತಾಯಿ, ಇನ್ನೂ ಕೆಲವು ದಿವಸಗಳ ಕಾಲವಾದರೂ ಇದ್ದು ಹೋಗುವ ಮನಸ್ಸು ಮಾಡುವಿಯೆಂದು ನಂಬುತ್ತೇವೆ' ಮಡಿವಾಳ ಮಾಚಿದೇವರು ಗದ್ಗದಕಂಠದಿಂದ ನುಡಿದರು.

ಅಕ್ಕಮಹಾದೇವಿ ನಿರ್ಲಿಪ್ತನಗೆ ನಕ್ಕು ಹೇಳಿದಳು :

'ತಂದೆ, ಅಂತರಂಗದ ಸೆಳೆತ ಬಹಳವಾಗಿದೆ. ಸಮುದ್ರದ ಸನಿಹಕ್ಕೆ ಸಾರುವ ತರಂಗಿಣಿಯೋಪಾದಿಯಲ್ಲಿ ಮನಸ್ಸು ಸಮಾಗಮಕ್ಕೆ ಉತ್ಸುಕವಾಗಿದೆ. ಎಲವದ ಮರವಾಗಿ ಹತ್ತು ವರುಷ ಕಾಲ ಬಾಳುವುದಕ್ಕಿಂತಲೂ ಹತ್ತಿಯ ಗಿಡವಾಗಿ ಹತ್ತು ದಿನ ಬಾಳಿದರೆ ಸಾಲದೆ? ಆದುದರಿಂದ ನಾಳೆಯ ಮಂಗಳ ಮುಂಜಾವಿನಲ್ಲಿ ಹೊರಡುವ ನಿರ್ಧಾರ ಮಾಡಿರುವೆ. ತಾವು ಚಿಂತಿತರಾಗುವ ಪ್ರಮೇಯವಿಲ್ಲ; ನಿಮ್ಮ ಹರಕೆಯನ್ನು ನನ್ನ ಉಡಿಗೆ ತುಂಬಿರಿ....'

'ಅನುಭವಮಂಟಪಕ್ಕೆ ನಿನ್ನ ಸಂದೇಶವೇನು, ಅಕ್ಕಾ? ಶರಣಸಂಕುಲ ಆತುರದಿಂದ ನಿರೀಕ್ಷಿಸುತ್ತಿದೆ....'

'ಶರಣಬಂಧುಗಳೇ, ನಿಮಗೆ ನಾನಾವ ಸಂದೇಶ ನೀಡಬಲ್ಲೆ? ನಮ್ಮೆಲ್ಲರ ಮಹಾಗುರುವಾದ, ಈ ವಚನಧರ್ಮದ ಹೃದಯವಾದ ಬಸವತಂದೆಗಳು ಅದೊಂದು ವ್ಯಕ್ತಿಯಲ್ಲ—ಶಕ್ತಿ. ಸಾಮಾನ್ಯವಾಗಿ ನಾವು, ಸಮಕಾಲೀನರಾಗಿ ನಮ್ಮೊಡನಿರುವ ಅನೇಕ ಮಹಾನುಭಾವರನ್ನು ಅಜ್ಞಾನದಿಂದಲೋ, ಉದಾಸೀನದಿಂದಲೋ, ಅಹಂಕಾರದಿಂದಲೋ ಪ್ರೇರಿತರಾಗಿ ತಿಳಿದುಕೊಳ್ಳಲು ಅಸಮರ್ಥರಾಗಿಬಿಡುತ್ತೇವೆ. ಹಾಗೆ ಅವರನ್ನು ತಿಳಿದುಕೊಳ್ಳದೆ ಹೋಗಿ, ಅವರು ಕೈಗೊಂಡ ಗುರಿಗಳಲ್ಲಿ ಸಹಕರಿಸದೆ ಇದ್ದರೆ ಲೋಕಕ್ಕೆ ಅವರಿಂದ ಸಲ್ಲಬಹುದಾದಷ್ಟು ಕಾಣಿಕೆಯನ್ನು ಪಡೆದುಕೊಳ್ಳಲಾರೆವು.

ಅಣ್ಣನವರದು ಸರ್ವಾಂಗಪರಿಪೂರ್ಣ ವ್ಯಕ್ತಿತ್ವ. ಚಾಣಕ್ಯನು ತನ್ನ ಅರ್ಥಶಾಸ್ತ್ರಗ್ರಂಥದಲ್ಲಿ ಮಹಾ ಅಮಾತ್ಯನಿಗಿರಬೇಕಾದ ಇಪ್ಪತ್ತೈದು ಲಕ್ಷಣಗಳನ್ನು ವಿವರಿಸುವನು. ಚಾಲುಕ್ಯ ರಾಜ್ಯದ ಮಹಾ ಅಮಾತ್ಯರಾದ ಅಣ್ಣನವರಿಗೆ ಇವೆಲ್ಲ ಇವೆ. ರಾಜಕೀಯಕ್ಷೇತ್ರದ ದೃಷ್ಟಿಯಿಂದ ಚಾಣಕ್ಯನ ಅಳತೆಗೋಲು ಸರಿ. ಆದರೆ ಧಾರ್ಮಿಕ ದೃಷ್ಟಿಯಿಂದ ಐವತ್ತೆರಡು ವಿಶೇಷ ಗುಣಗಳನ್ನು ನಾನು ಅಪ್ಪನವರಲ್ಲಿ ಗುರುತಿಸಿದ್ದೇನೆ.*

ಸಮಸ್ಯೆಗಳು ತುಂಬಿತುಳುಕುತ್ತಿವೆ. ಬಹುಶಃ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿಕ್ಕೆಂದೇ ಅಪ್ಪನವರು ಅವತರಿಸಿರಬೇಕು. ಇವರು ಕೈಗೊಂಡ ವ್ಯಾಪಕ ಕಾರ್ಯ, ಪಡೆದ ಯಶಸ್ಸನ್ನು ನೋಡಿದರೆ ಇದನ್ನೆಲ್ಲ ನಿರ್ವಹಿಸುವುದು ಯಾವುದೋ ಸಾಮಾನ್ಯ ಹಸ್ತವಲ್ಲ, ಅನುಗ್ರಹಾತ್ಮಕ ದೈವೀಹಸ್ತವೇ ಇರಬೇಕು ಎನ್ನಿಸುವುದು. ರಾಜಕೀಯ-ಧರ್ಮ, ತ್ಯಾಗ-ಭೋಗ, ನಿರ್ಲಿಪ್ತತೆ-ಕಾಯಕಯೋಗ, ಲೌಕಿಕ-ಪಾರಮಾರ್ಥ ಇಂತಹ ಈ ದ್ವಂದ್ವಗುಣಗಳನ್ನು ಮೈಗೂಡಿಸಿಕೊಂಡ ಇವರು ಮನುಕುಲದ ಉದ್ಧಾರಕ್ಕಾಗಿಯೇ ಅವತರಿಸಿದ ಕಾರಣಿಕರು.

ಶತಶತಮಾನಗಳಿಂದ ಕರ್ಮವಾದದ ಹೊರೆ ಹೊತ್ತು ಕೀಳರಿಮೆಯಲ್ಲಿ ಬಾಳಿದ್ದ ನಿಮ್ನ ಜನಾಂಗದ ಡೊಗುಬೆನ್ನನ್ನು ವೈಚಾರಿಕ ಪ್ರಜ್ಞೆಯಿಂದ ನೆಟ್ಟಗೆ ಮಾಡಿದವರಿವರು. ಉಚ್ಚವರ್ಣದಲ್ಲಿ ಹುಟ್ಟಿದರೂ ತಮಗಷ್ಟು ಸೌಲಭ್ಯಗಳು ದೊರೆತರೆ ಸಾಕೆಂಬ ಸ್ವಾರ್ಥತಾಳದೆ ಧರ್ಮದ ದೃಷ್ಟಿಯಲ್ಲಿ ಎಲ್ಲರೂ ಸಮಾನರು; ಅಪೇಕ್ಷಿಸಿದವರಿಗೆ ಧರ್ಮಸಂಸ್ಕಾರವು ಸಿಗುವಂತಾಗಬೇಕು, ಮುಕ್ತಿಯು ಮಾನವನ ಜನ್ಮಸಿದ್ಧ ಹಕ್ಕೆಂದು ಹೋರಾಡುತ್ತಿರುವರು. ಮಾನವ ಸ್ವಾತಂತ್ರ್ಯದ ಪ್ರತಿನಿಧಿಯಾದ ಇವರು ಸಾಧಿಸಲು ಬಯಸಿದ ಗುರಿಯನ್ನು ಅರಿತು ಅವರ ಮಣಿಹದ ಸಫಲತೆಗೆ ಎಲ್ಲರೂ ಕೈಕೂಡಿಸಬೇಕು. ಅಪ್ಪನವರ ವ್ಯಕ್ತಿತ್ವವನ್ನಾಗಲೀ ಅವರ ಧ್ಯೇಯಾದರ್ಶಗಳನ್ನಾಗಲೀ ಅರಿಯದೆ ಅವರನ್ನು ಮೂರ್ತೀಕರಿಸಿ ಪೂಜೆಮಾಡಿದರೆ ಸಾಲದು.

ಸುಂದರ ಶಿಲ್ಪಿಯೋರ್ವ ತನ್ನ ತಪಸ್ಸನ್ನು ಧಾರೆಯೆರೆದು ಅತ್ಯುನ್ನತವಾದ ಶಿಲ್ಪಕೃತಿಯೊಂದನ್ನು ರೂಪುಗೊಳಿಸಿ ಪ್ರದರ್ಶನಕ್ಕಿಟ್ಟಾಗ ಪ್ರೇಕ್ಷಕರು ಅದನ್ನು ಹಗುರವಾಗಿ ನೋಡಿದರೆ, ಆಳವನ್ನು ಅರ್ಥಮಾಡಿಕೊಳ್ಳದೆ ಮುಂದೆ ಹೋದರೆ ಶಿಲ್ಪಿಯ ಹೃದಯ ಮೂಕವೇದನೆಯಿಂದ ಜರ್ಜರಿತವಾಗುವುದು. ಉತ್ತಮ ಗಾಯಕನು ತನ್ನ ಮನವನ್ನು ಕಂಠದಲ್ಲಿ ವಿಲೀನಗೊಳಿಸಿ ಭಾವಸಮಾಧಿಸ್ಥನಾಗಿ ಹಾಡುತ್ತ, ಸ್ವರಪ್ರಸ್ತಾರ-ಆಲಾಪಗಳನ್ನು ಮಾಡುವಾಗ ಶ್ರೋತೃಗಳು ತಮ್ಮ ಪಾಡಿಗೆ ತಾವು ಮಾತಿನಲ್ಲಿ ತೊಡಗಿದರೆ ಗಾಯಕನ ಉತ್ಸಾಹವನ್ನೇ ಅದು ಬತ್ತಿಸುವಂತೆ, ಅಣ್ಣನವರು ಮೂರ್ತಿಗೊಳಿಸಿ ಇಟ್ಟ ಈ ವಿಶ್ವಧರ್ಮವನ್ನು, ಅವರ ಹೃದಯವು ಶರಣಸಮೂಹದೊಡನೆ ಹಾಡಿದ ವಚನಸಾಹಿತ್ಯವನ್ನು, ಅವರ ಸತ್ವ-ಮರ್ಮಗಳನ್ನು ಅರ್ಥಮಾಡಿ, ಅಂಗವಿಸಿಕೊಳ್ಳದಿದ್ದರೆ ಅಪ್ಪನವರಿಗೆ ತೃಪ್ತಿಯಾಗದು. ಆದ್ದರಿಂದ ಅವರು ಇಲ್ಲಿ ಸೂತ್ರರೂಪವಾಗಿ

ನಾವು ಎಲ್ಲೆಡೆ ಕಟ್ಟಲು ಯತ್ನಿಸಬೇಕು; ... ಮಾರ್ಗವನ್ನು ತೋರಬೇಕು; ಶತಮಾನಗಳವರೆಗೆ ಈ ಸಂದೇಶವು ಹರಿದು ಹೋಗಲು ಭದ್ರತಳಪಾಯವನ್ನು ಹಾಕಬೇಕು. ಅಣ್ಣನವರು ಹೃತ್ಪೂರ್ವಕವಾಗಿ ಆಶಿಸಿರುವಂತೆ ಈ ವಿಶ್ವವೇ ಒಂದು ಭವನವಾಗಿ, ಪ್ರೇಮವೇ ಬದುಕಿನ ಜೀವಾಳವಾಗಿ, ಸಮಾನತೆಯನ್ನು ಸಾರುವ ಷಟ್‌ಸ್ಥಲ ಧ್ವಜವು ಎಲ್ಲೆಡೆ ಹಾರಬೇಕು....'

'ಆಹಾ !....ಎಂಥ ಉದ್ಬೋಧಕ ಸಂದೇಶ.'

'ನಿಜಕ್ಕೂ ಮಾರ್ಮಿಕ ಮಾರ್ಗದರ್ಶನ.'

'ಹೃತ್ಪ್ರಚೋದಕ ಕರೆ.'

ಉದ್ಗಾರಮಿಶ್ರಿತ ಮೆಚ್ಚಿಗೆಯ ಧ್ವನಿಗಳು ಅನುಭವಮಂಟಪದ ಮೂಲೆ ಮೂಲೆಗಳಿಂದ ಉಲಿದವು. ಅಕ್ಕಮಹಾದೇವಿ ಮಾತಿಗೆ ಮುಕ್ತಾಯ ಹಾಡಿ ಆಸೀನಳಾದಳು. ಬಸವಣ್ಣನವರು ಮೇಲೆದ್ದು ನಿಂತರು. ಭಾವಜೀವಿಗಳಾದ ಅವರ ಹೃದಯವು ಒಳಗೇ ಮಿಡಿಯುತ್ತಿತ್ತು.

'ಶರಣ ಬಂಧುಗಳೇ !....ಅಂಬುಜೆಯ ಅರಳುವಿಕೆಯಿಂದ ಸರೋವರದ ಚೆಲುವು ಹೆಚ್ಚುವಂತೆ, ಅಕ್ಕಮಹಾದೇವಿಯೆಂಬ ಈ ಶಿವಾಂಬುಜೆಯು ಮಹಾಮನೆಯ ಸರಸಿಯ ಅಂದವನ್ನು ಹೆಚ್ಚಿಸಿದ್ದಳು. ವಚನಕೋಗಿಲೆಯಾಗಿ ಅನುಭವಮಂಟಪದ ಬನವನ್ನು ಭಾಕ್ತಿಕ ಕುಹೂ ಸರದಿಂದ ತಣಿಸಿದ್ದಳು. ವಿರಕ್ತಿಯ ಮಯೂರವಾಗಿ ಶರಣಜನರ ಹೃದಯಗಿರಿಗಳಲ್ಲಿ ನರ್ತಿಸಿದ್ದಳು. ನಾವು ಈ ದಿವ್ಯಚೇತನವನ್ನು ನಾಳೆಯೇ ಬೀಳ್ಕೊಡಬೇಕೆಂಬುದು ನಮಗೆಲ್ಲ ದುಃಖದಾಯಕ ಸನ್ನಿವೇಶ. ಆದರೇನಂತೆ—ಉತ್ತಮ ವರನಿಗೆ ಧಾರೆ ಎರೆದು ಕಳಿಸುವಾಗ ಸಾಕಿ ಸಲಹಿದ ಮಗಳನ್ನು ಅಗಲಬೇಕಲ್ಲ ಎಂಬ ವ್ಯಥೆ ತಾಯಿ ತಂದೆಯರಿಗೆ ಇದ್ದರೂ ಕುಲೀನ ತಾಣವನ್ನು ಮಗಳು ಸೇರುವಳೆಂಬ ಸಂತಸ ಹೆತ್ತವರಿಗೆ ಇರುವುದು ಸಹಜವಷ್ಟೇ? ಹಾಗೆಯೇ ಅಕ್ಕಮಹಾದೇವಿ ನಾಳೆ ಶಾರೀರಿಕವಾಗಿ ಶರಣಜನರನ್ನು ಅಗಲುತ್ತಿದ್ದರೂ ಚನ್ನಮಲ್ಲಿಕಾರ್ಜುನನ ಚೆನ್ನಸತಿಯಾಗಿ ಅವನನ್ನು ಬೆರೆಯಲು ಹೊರಟಿರುವುದರಿಂದ ನಾವು ಸಂತಸವನ್ನು ವ್ಯಕ್ತಪಡಿಸಬೇಕಾಗುವುದು. ನಾಲ್ಕೈದು ವರುಷಗಳ ಮಟ್ಟಿಗೆ ಇಂತಹ ವೀರವೈರಾಗ್ಯ, ಮಹಾಶಿವಯೋಗದ ಸಂಗಮವಾದ ದಿವ್ಯಚೇತನವು ನಮ್ಮ ಮಧ್ಯೆ ಇದ್ದು, ನಮ್ಮನ್ನು ಪುನೀತಗೊಳಿಸಿತ್ತು ಎಂಬುದೇ ನಮ್ಮ ಪಾಲಿಗೆ

'ತಂದೆ....ಇದು ಬಹು ದೊಡ್ಡ ಮಾತು! ನನ್ನ ವ್ಯಕ್ತಿತ್ವ-ಸಾಧನೆಗಳು ಒಂದು ರೂಪವನ್ನು ಹೊಂದಿದುದು ನಿನ್ನ ದಯದಿಂದ:

ಕಾಮನ ಗೆಲಿದೆನು ಬಸವಣ್ಣಾ ನಿನ್ನ ದಯದಿಂದ.
ಸೋಮಧರನ ಹಿಡಿದಪ್ಪಿದೆನು ಬಸವಣ್ಣಾ ನಿಮ್ಮ ಕೃಪೆಯಿಂದ.
ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು?
ಭಾವಿಸಲು ಗಂಡುರೂಪ, ಬಸವಣ್ಣಾ ನಿಮ್ಮ ಬಲದಿಂದ.
ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ
ಎರಡರಿಯದೆ ಕೂಡಿದೆನು, ಬಸವಣ್ಣಾ ನಿಮ್ಮ ದಯದಿಂದ.*

ಕಾಮನನ್ನು ನಾನು ಗೆಲಿದು ವೈರಾಗ್ಯನಿಧಿಯಾಗಿ ನಿಂತುದಾಗಲಿ, ಶಿವನನ್ನು ಒಲಿಸಿಕೊಂಡು ಶಿವಯೋಗಿಣಿಯಾದುದಾಗಲಿ, ವಚನರಚನೆಯನ್ನು ಗೈದು ಕವಿಕೋಗಿಲೆಯಾದುದಿರಲಿ, ಎಲ್ಲವೂ ನಿನ್ನಿಂದಾದುದು ತಾನೆ? ನಾಮದಲ್ಲಿ, ರೂಪದಲ್ಲಿ ಹೆಂಗುಸಾಗಿ ಇದ್ದರೆ ಏನಂತೆ, ಭಾವದಲ್ಲಿ ಗಂಡಾಗಿ ಆಧ್ಯಾತ್ಮ ಸಾಧನೆಯಲ್ಲಿ ಮುಂದಾದುದು ನಿನ್ನ ಬೆನ್ನಬಲದಿಂದ ತಾನೆ? ಹೆಣ್ಣು ಮಾಯೆ ಎಂದು ಮೂಗೆಳೆಯುತ್ತಿದ್ದ ಸಮಾಜದಲ್ಲಿ, ಸ್ತ್ರೀಕುಲದಲ್ಲಿದ್ದ ಅವಿರಳ ಪ್ರತಿಭೆಯನ್ನು ಗಮನಿಸಿ ಅವರಿಗೆ ಸಮಾನತೆ ನೀಡಿ ಮೇಲಕ್ಕೆತ್ತಿದ್ದು ನೀನಲ್ಲವೆ? ಆ ತತ್ತ್ವದ ಬಲದಿಂದ ನಾನೇನಾದರೂ ಕಿಂಚಿತ್ ಸಾಧನೆ ಮಾಡಿರುವೆನೇನೋ, ಅಷ್ಟೆ....!' ಅಕ್ಕಮಹಾದೇವಿ ವಿನಯದಿಂದ ಪರಿಪ್ಲುತಳಾಗಿ ಉತ್ತರಿಸಿದಾಗ ಪ್ರಭುದೇವ ಕೇಳಿದ:

'ಅಕ್ಕಮಹಾದೇವಿ, ನೀನು ವಿವಾದಾತ್ಮಕವಾಗಿ ಒಂದು ಮಾತನ್ನು ಹೇಳಿದೆ. ಮೊದಲ ದಿನ ನಿನ್ನಲ್ಲಿ ಕಾಮಭಾವ ಇದೆಯೋ ಇಲ್ಲವೋ ಎಂದು ಪರೀಕ್ಷಾತ್ಮಕ ಪ್ರಶ್ನೆ ಕೇಳಿದಾಗ 'ನನ್ನಲ್ಲಿ ಕಾಮನೇ ಹುಟ್ಟಿಲ್ಲ, ಗೆಲ್ಲುವುದೇನು ಬಂದಿತು; ಮನಸಿಜನಾಗಿ ಎಲ್ಲರಲ್ಲಿ ಹುಟ್ಟು ಎಂದು ಶಾಪಕೊಟ್ಟ ಶಿವನ ವಾಣಿಯನ್ನು ಸುಳ್ಳು ಮಾಡಿರುವೆ' ಎಂದು ಹೇಳಿದ್ದೆ. ಆದರಿಂದು 'ಕಾಮನ ಗೆಲಿದೆನು ಬಸವಣ್ಣ ನಿಮ್ಮ ದಯದಿಂದ' ಎಂದು ನುಡಿಯುತ್ತಿರುವೆ. ಇದರರ್ಥ ಕಾಮನು ಹುಟ್ಟಿದ್ದ, ಅನಂತರ ಅವನನ್ನು ಗೆದ್ದೆ ಎಂದು ಒಪ್ಪಿಕೊಂಡಂತಾಗಲಿಲ್ಲವೆ? ಅಂದಾಗ ಪರಸ್ಪರ ವಿರುದ್ಧವಾದ ವಿಚಾರದ ಈ ಎರಡೂ ಹೇಳಿಕೆಗಳನ್ನು ಹೇಗೆ ಸಮರ್ಥಿಸುವೆ?' ಅಕ್ಕಮಹಾದೇವಿ ಮುಗುಳ್ನಕ್ಕಳು.

'ಗುರುದೇವಾ....ಮೊನಚಾದ ಪ್ರಶ್ನೆ ಕೇಳಿ ಪೇಚಿನಲ್ಲಿ ಸಿಕ್ಕಿಸುವದು

ಅವನನ್ನು ನಿಯ ಪ್ರಶ್ನೆ... ಳಾಗಿ ಉತ್ತರಿಸುವೆ. ಕಾಮನು ನನ್ನ ಅಂತರಂಗದಲ್ಲಿ ಎಂದೂ ಹುಟ್ಟಿಯೇ ಇಲ್ಲ. ಆದರೂ ನನ್ನನ್ನು ನೋಡಿ ಕೌಶಿಕ ಮುಂತಾದ ಅನೇಕರಿಗೆ ಕಾಮ ಉತ್ಪನ್ನವಾಗಿತ್ತು. ಅನುಭವಮಂಟಪದಲ್ಲಿದ್ದು ಬಸವ ತಂದೆಗಳ ಅನುಗ್ರಹ ಪಡೆದ ಬಳಿಕ, ನನ್ನನ್ನು ಕಂಡು ಇನ್ನೊಬ್ಬರ ಮನದಲ್ಲೂ ಕಾಮಭಾವ ಜಾಗ್ರತವಾಗದಂತಹ ಸ್ಥಿತಿಯನ್ನು ನಾನು ಗಳಿಸಿಕೊಂಡಿರುವೆ ಎಂಬುದು ಈ ಮಾತಿನ ಅಂತರಾರ್ಥ....'* ನಿರಾಯಾಸವಾಗಿ ಪ್ರಶ್ನೆಗೆ ಉತ್ತರ ನೀಡಿದಾಗ ಪ್ರಭುದೇವರು 'ಭಲೇ....ಭಲೇ....' ಎಂದು ಉದ್ಗರಿಸಿದರು.

'ಪ್ರಭುವೇ, ತಮ್ಮ ಕರುಣೆಯಿಂದಾಗಿ ಆಸೆ-ಆಮಿಷಗಳು ಹಿಂಗಿದವು; ನನಗಿದ್ದ ಅನೇಕ ಸಂಶಯಗಳು ಪರಿಹಾರಗೊಂಡು ಆಧ್ಯಾತ್ಮಪಥವು ನಿಚ್ಚಳವಾಯಿತು. ಮನದೊಳಗೆ ಅಪಾರ ಸಂತೃಪ್ತಿಯು ನೆಲೆಗೊಂಡಿತು. ತಮ್ಮಿಂದ ನಾನು ಉದ್ಧರಿಸಲ್ಪಟ್ಟೆ....' ಅಕ್ಕಮಹಾದೇವಿ ಹೀಗೆ ನುಡಿದು, ಅನಂತರ ಶರಣಸಮುದಾಯದೆದುರು ಬಿನ್ನವಿಸಿದಳು.

'ನಾನು ಇಲ್ಲಿಗೆ ಬರುವಾಗ ಹಸಿದ ಭಿಕ್ಷುಕಿಯಾಗಿ, ಬರಿದಾದ ಹೃದಯ ಪಾತ್ರೆಯನ್ನು ಹೊತ್ತು ಬಂದೆನು. ಸಂಗನ ಬಸವಣ್ಣನವರು ಭಕ್ತಿಯನ್ನು ಅದರಲ್ಲಿ ತೀವಿದರೆ, ಪ್ರಭುದೇವರು ಜ್ಞಾನವನ್ನು ತುಂಬಿದರು, ಚನ್ನಬಸವಣ್ಣನವರು ಪ್ರಸಾದ ಜೀವನದ ಸಂತೃಪ್ತಿಯನ್ನು ತುಂಬಿದರು. ಪರಿಣಾಮವಾಗಿ ನನ್ನ ಭಿಕ್ಷಾಪಾತ್ರೆ ತುಂಬಿ, ನಾನು ತಮ್ಮೆಲ್ಲರ ಕಾರುಣ್ಯದ ಶಿಶುವಾದೆನು.†

ಅನುಭವಮಂಟಪದ ಒಂದೊಂದು ಆತ್ಮವೂ ನನ್ನನ್ನು ತಿದ್ದಿದೆ, ತೀಡಿದೆ, ಒಪ್ಪವಿಟ್ಟಿದೆ. ಶಿವಭಕ್ತರಿಗೆ ಶರಣಾಗತಳಾಗಿ ಅವರ ಸಂಗದಲ್ಲಿದ್ದ ಕಾರಣ ನನ್ನ ತನುವು ಶುದ್ಧವಾಯಿತು. ಇವರೆಲ್ಲರ ಜೀವನವು ತೆರೆದಿಟ್ಟ ಪುಸ್ತಕ; ಅದನ್ನು ಓದಿದ ನನ್ನ ಮನಸ್ಸು ಶುದ್ಧವಾಯಿತು. ಇವರ ವಾಣಿಯನ್ನು ಕೇಳಿ ಕಿವಿ ಶುದ್ಧವಾದರೆ, ಅವರ ಸದಾಚಾರದ ನಡೆನುಡಿಗಳನ್ನು ಕಂಡು ಕಣ್ಣು ಶುದ್ಧವಾದವು. ಇಂತಹ ಪವಿತ್ರಾತ್ಮರಿಗೆ ನಾನು ಎಂದೆಂದೂ ಕೃತಜ್ಞಳಾಗಿರುವೆ....' ಕೈಮುಗಿದು ತಲೆಬಾಗಿದಳು.

'ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲನನ್ನು ಕೂಡಿ ನಾನು ಬಹಳಷ್ಟು ಸುಖಿಯಾಗಿರುವೆ. ನನ್ನ ಮನಸ್ಸು ಮತ್ತಾವ ಸುಖಕ್ಕೆ ಓಸರಿಸದು. ಷಟ್ಸ್ಥಲ ಸೋಪಾನಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳನ್ನು ...

ಪರಮಾತ್ಮ ಎಂಬ ಎರಡೇ ಸ್ಥಿತಿಗೆ ಬಂದು, ಈಗ ಅಂಗಭಾವವ ಮರೆತು ಲಿಂಗಭಾವದಲ್ಲಿರುವೆ. ತಮ್ಮೆಲ್ಲರ ಶಿಶು ಎಂಬುದನ್ನು ಮರೆಯದೆ, ಚನ್ನಮಲ್ಲಿಕಾರ್ಜುನನ ಚೆನ್ನಸತಿಯಾಗಿ ಬೆರೆಸು ಎಂದು ತಾವು ನಾಳೆ ಇಲ್ಲಿಗೆ ಆಗಮಿಸಿ, ಹೃದಯ ತುಂಬಿ ಹರಸಿ ಕಳುಹಿಸಿರಿ.'*

ಆಗ ಪ್ರಭುದೇವರು ಗಂಭೀರವದನರಾಗಿ, ಕಂಚಿನ ಕಂಠದಲ್ಲಿ ನುಡಿದರು : 'ನಾವು-ನೀವೆಲ್ಲ ಲೌಕಿಕ ಮಟ್ಟದವರಲ್ಲ. ಸಂಯೋಗ-ವಿಯೋಗವೆಂಬ ಭಾವ ಳಿದು ಶಿವಭಾವದಲ್ಲಿ ನಿಂದಿರುವವರು. ಉನ್ನತ ಬದುಕಿಗೆ ಹೊರಟ ಮಗಳನ್ನು ಅಲ್ಪವಲಯದಲ್ಲಿ ಉಳಿಸಿಕೊಳ್ಳುವ ಪ್ರಯತ್ನ ಮಾಡದೆ ಕಳುಹಿಸಿಕೊಡೋಣ... ನಾಳೆಯ ಬೆಳಗಿನ ವೇಳೆಯಲ್ಲಿ ನಾವು ಇಲ್ಲಿ ಎಲ್ಲರೂ ನೆರೆದು, ಸ್ವಲ್ಪ ದೂರದವರೆಗೆ ಸಾಗಿ, ಬೀಳ್ಕೊಟ್ಟು ಬರೋಣ. ತಾವು ಸಿದ್ಧರಾಗಿ ಬನ್ನಿರಿ.

ತನುಗುಣ ನಾಸ್ತಿಯಾಗಿ ಲಿಂಗಸಂಗವನ್ನು ಮಾಡಿಕೊಂಡು, ಮನಗುಣಗಳನ್ನು ಅಳಿದು ಅರಿವನ್ನು ಕೂಡಿಕೊಂಡು, ಭಾವದಲ್ಲೆಲ್ಲ ಶಿವತತ್ತ್ವವನ್ನು ತುಂಬಿಕೊಂಡು, ಉನ್ನತ ಶ್ರೇಣಿಯಲ್ಲಿ ನಿಂತಿರುವ ಮಹಾದೇವಿಯಕ್ಕಗಳ ನಿಲುವಿಂಗೆ ನಾನು ಶರಣು ಎನ್ನುವೆನು....' ಎಂದು ಕೈ ಮುಗಿದರು. ಅನುಭವ ಗೋಷ್ಠಿಯು ಚದುರಿತು. ಬುದ್ಧಿಯ ಬಲದಿಂದ ಮನಸ್ಸನ್ನು ಎಷ್ಟೇ ಸಾಂತ್ವನಿಸಿದರೂ ಅದು ಕೇಳದೆ, ನೋವಿನ ತೆರೆಗಳನ್ನು ಎಲ್ಲರ ಹೃದಯಗಳಲ್ಲಿ ಏಳಿಸುತ್ತ, ಚಿತ್ತಗಳನ್ನು ಕಲಕುತ್ತಲೇ ಇದ್ದಿತು.

---

*

೫೩. ಕರುಣೆಯ ಕಂದ

ನೀಲಾಂಬಿಕೆ, ಗಂಗಾಂಬಿಕೆಯರು ಮುಂಕಾವರಿಸಿಕೊಂಡು ಶಬ್ದಮುಗ್ಧರಾಗಿದ್ದರು. ಅಚ್ಚುಮೆಚ್ಚಿನ ಕರುಣೆಯ ಕಂದನನ್ನು ಅಗಲಲಾರದೆ ಅಪಾರ ವ್ಯಥೆಪಡುತ್ತಿದ್ದರು. ತಮ್ಮ ವಿಚಾರಸಾಮರ್ಥ್ಯದಿಂದ ವ್ಯಥೆಯನ್ನು ನಿಗ್ರಹಿಸಿಕೊಂಡು ಅಂದು ವಿಶೇಷವಾದ ಉಪಚಾರದಲ್ಲಿ ತೊಡಗಿದರು. ಎಣ್ಣೆಯ ನೀರನ್ನು ಎರೆಯಲು ತೊಡಗಿದಾಗ ಅಕ್ಕಮಹಾದೇವಿ ನಸುನಕ್ಕಳು :

'ಮಗಳನ್ನು ಗಂಡನ ಮನೆಗೆ ಕಳಿಸಬೇಕೆಂದು ಈ ಸಂಭ್ರಮವೇ, ಅವ್ವಾ! ಮಾಡಿರಿ, ನಾನೀಗ ಒಲ್ಲೆ ಎನ್ನೆನು. ಸಾಧಕಾವಸ್ಥೆಯಲ್ಲಿ ಇದ್ದ ಕಳವಳ ನನಗೀಗಿಲ್ಲ. ಎಲ್ಲವೂ ಶಿವನ ಪ್ರಸಾದ; ನೀವು ಕೊಟ್ಟುದನ್ನು ಉಣ್ಣುವೆ, ಉಡುವೆ....'

'ಅಕ್ಕಮಹಾದೇವಿ....ನೀನಿದ್ದ ಗಳಿಗೆಗಳು ಅಮೃತಗಳಿಗೆಗಳು; ನಮ್ಮೆಲ್ಲರ ನೆನಪಿನ ನಂದನವನದಲ್ಲಿ ಹಸುರಾಗಿ ಉಳಿದು ನಮ್ಮನ್ನು ಚೇತನಿಸುತ್ತವೆ. ನಿನ್ನನ್ನು ಅಗಲುವ ಸಂಕಷ್ಟವನ್ನು ಹೇಗೆ ಸಹಿಸಿಕೊಳ್ಳಲಿ?' ನೀಲಾಂಬಿಕೆ ಬಿಗಿದಪ್ಪಿ ಕೇಳಿದಳು.

'ಅವ್ವಾ, ನಿನ್ನಂತಹ ಜ್ಞಾನಿಯನ್ನು ಸಾಂತ್ವನಿಸುವ ಶಕ್ತಿ ನನಗುಂಟೆ? ಅಪ್ಪನವರ ಜೀವನವೃಕ್ಷದ ಬೇರುಗಳಂತೆ ನೀವು, ಗಂಗಾಂಬಿಕೆ, ನಾಗಮ್ಮ ತಾಯಿಯವರು. ನೀವು ಒದಗಿಸುವ ಶಕ್ತಿ ಅಪೂರ್ವವಾಗಿದೆ. ಇಲ್ಲವಾದರೆ ಅವರು ಈ ಮಹಾಕಾರ್ಯವನ್ನು ಕಷ್ಟಸಾಧ್ಯವಾಗಿ ನಿರ್ವಹಿಸಬೇಕಾಗುತ್ತಿತ್ತು.'

'ಆ ಮಾತು ಅತ್ತ ಇರಲಿ; ನೀನು ಒಂಟಿಯಾಗಿ ಪ್ರವಾಸ ಕೈಗೊಳ್ಳದಿರು, ಮಗಳೇ. ಕೆಲವು ಶರಣರನ್ನು ಒಡನೆ ಕರೆದೊಯ್ದು, ನಂತರ ಕಳುಹಿಸು....'

'ಆ ಭಯ ಬೇಡ, ತಾಯಿ. ಸಾಧಕಳಾಗಿದ್ದಾಗಲೇ ನಿರ್ಭೀತಳಾಗಿ ಸಂಚರಿಸಿದೆ; ಈಗ ಏನಾದೀತು; ಕೈಗೊಂಡ ಸಾಧನೆ ಮುಗಿದಿರುವ ಕಾರಣ ಪ್ರಾಣಹೋದರೂ ಭಯವಿಲ್ಲ. ಮೇಲೆ ಉಟ್ಟ ಸೀರೆಯಂತೆ, ಆತ್ಮನನ್ನು ಮುಚ್ಚಿದ ಶರೀರವಿದೆ. ಅದು ಬಿದ್ದುಹೋದರೆ ನನಗೇನೂ ಕಳವಳವಿಲ್ಲ. ನಾನಾಗಿಯೇ ಅರ್ಪಿತ ಮಾಡಬೇಕೆಂದು ಹೊರಟಿರುವೆ; ಅದಕ್ಕೆ ಮುನ್ನ ಅವನೇ ಸೆಳೆದುಕೊಂಡರೆ ಇನ್ನೂ ಒಳ್ಳೆತಲ್ಲವೆ?' ನಿರ್ಲಿಪ್ತಳಾಗಿ ಕೇಳಿದಳು.

... ತಂಡದೊಡನೆ ಶ್ರೀಗಿರಿಯ ವರೆಗೆ ಹೋಗು. ಧರ್ಮಪ್ರಸಾರಕ್ಕಾಗಿ ಅವರು ಅಲ್ಲಿಯೇ ಸಂಚರಿಸುವರು. ನೀನು ಕದಳಿಗೆ ಓರ್ವಳೇ ಮುನ್ಸಾಗಬಹುದು....'

'ಹಾಗೆಯೇ ಆಗಲಿ ತಾಯಿ....' ಎಂದು ಒಪ್ಪಿಗೆ ನೀಡಿದಾಗ ನೀಲಾಂಬಿಕೆಗೆ ಸಮಾಧಾನವೆನಿಸಿತು. ನಾಲ್ವರು ಜಂಗಮರನ್ನು ಜೊತೆಗೆ ಸಾಗಲಿಕ್ಕೆ ಅಣಿ ಮಾಡಿದರು.

ಬೆಳಗಿನ ಸ್ನಾನ ಪೂಜೆ ಪ್ರಸಾದಗಳನ್ನು ಮುಗಿಸಿ ಅಕ್ಕಮಹಾದೇವಿಯು ಸಿದ್ಧಳಾದಾಗ ಮಂಟಪದಲ್ಲಿ ಶರಣ ಬಳಗ ಸಮಾವೇಶಗೊಂಡಿತು. ಆಕೆಯಲ್ಲಿ ಕದಳಿಗೆ ಹೋಗುವ ಉತ್ಸಾಹದ ಪ್ರಮಾಣ ಬಹುವಾಗಿದ್ದರೂ ಅದರೊಟ್ಟಿಗೆಯೇ ನೋವೂ ಸಹ ಮನದಲ್ಲಿ ಸುಳಿಯುಪ ಇರಲಿಲ್ಲ. ಶರಣರ ಉತ್ತಮ ಸಂಗದಿಂದ, ಅವರ ವಾತ್ಸಲ್ಯದ ಪರಿಘದಿಂದ ದೂರವಾಗುತ್ತಿರುವುದು ಅಕ್ಕಮಹಾದೇವಿಯ ಹೃದಯವನ್ನು ಭಾರವಾಗಿ ಮಾಡಿದ್ದವು. ನೀಲಾಂಬಿಕೆ-ಗಂಗಾಂಬಿಕೆಯರು ತಮ್ಮೊಡನೆಯೇ ಕರೆದುಕೊಂಡು ಮಂಟಪಕ್ಕೆ ಬಂದರು.

ಬಸವಣ್ಣನು ಮೃದುವಾದ, ದುಃಖಮಿಶ್ರಿತ ಕಂಠದಲ್ಲಿ ಅಂದಿನ ಪ್ರಸಂಗವನ್ನು ವಿವರಿಸಿ ಅಕ್ಕಮಹಾದೇವಿಯತ್ತ ತಿರುಗಿ ಹೇಳಿದನು :

> ಎನ್ನ ಭಕ್ತಿಯ ಶಕ್ತಿಯೂ ನೀನೆ, ಎನ್ನ ಯುಕ್ತಿಯ ಶಕ್ತಿಯೂ ನೀನೆ
> ಎನ್ನ ಮುಕ್ತಿಯ ಶಕ್ತಿಯೂ ನೀನೆ, ಎನ್ನ ಮಹಾಘನದ
> ನಿಲವಿನ ಪ್ರಭೆಯನುಟ್ಟು ತಳು ವೆಳಗಾದ ಸ್ವಯಂಜ್ಞಾನಿ
> ಕೂಡಲ ಸಂಗಯ್ಯನಲ್ಲಿ ಮಹಾದೇವಿಯಕ್ಕಗಳ ನಿಲವ
> ಮಡಿವಾಳನಿಂದರಿದು ಬದುಕಿದೆನಯ್ಯ ಪ್ರಭುವೆ...*

'ಅಪ್ಪಾ, ತಮ್ಮ ಹೃದಯವು ಸದ್ಗುಣದ ನಿಕ್ಷೇಪ. ಈ ಲೋಕದಲ್ಲಿ ಮೂರು ಬಗೆಯ ತಂದೆಯರನ್ನು ಕಾಣಬಹುದು. ಒಬ್ಬನು—ತಾನು ದುಡಿದುದೇ ತನಗೆ ಸಾಕಾಗದೆ ಅರೆಹೊಟ್ಟೆಗೆ ಉಂಡು, ಅರೆಮೈಯನ್ನು ಮುಚ್ಚಿ, ಹಿಂದಿನವರಿಗೂ ಅದೇ ಗತಿ ಕಾಣಿಸಿ ಹೋಗುವವನು. ಇನ್ನೊಬ್ಬನು—ತಾನು ಸುಖವಾಗಿ ಬದುಕಿ, ಅರೆಕೊರೆಯಾಗದಂತೆ ನೆಮ್ಮದಿಯಲ್ಲಿದ್ದು, ಆದರೆ ತನ್ನ ಹಿಂದಿನವರಿಗೆ ಮಾತ್ರ ಏನನ್ನೂ ಬಿಟ್ಟುಹೋಗದವನು. ಇನ್ನೋರ್ವನು—ಅತ್ಯಂತ ಪ್ರಾಮಾಣಿಕತೆ-ನಿಷ್ಠೆಗಳಿಂದ ಸಂಪತ್ತನ್ನು ಗಳಿಸಿ ತಾನೂ ನೆಮ್ಮದಿಯಾಗಿದ್ದು, ಹೋಗುವಾಗ ತನ್ನ ಹಿಂದಿನವರಿಗೆ ಸಂಪದವನ್ನುಳಿಸಿ ಹೋಗು

ವನನು. ಇದನ್ನ [illegible]
ಕೋಟಿ ಜನ ಯಾವ ಆದರ್ಶಗಳನ್ನಿರಿಸಿಕೊಳ್ಳದೆ, ಮೌಲ್ಯವಿಹೀನರಾಗಿ ಆಧ್ಯಾತ್ಮಿಕದರಿದ್ರರಾಗಿ ಬಾಳು ಕಳೆವರು. ಇವರೇ ಭೋಗಿಗಳು; ಇನ್ನು ಕೆಲವರು ಆದರ್ಶಜೀವಿಗಳಾಗಿ ಉನ್ನತ ಸಿದ್ಧಿಯನ್ನು ಸಾಧಿಸಿ, ಆದರೆ ಆ ಸಿದ್ಧಿಯ ಮಾರ್ಗವನ್ನು ಅನ್ಯರಿಗೆ ಪ್ರಚುರಪಡಿಸದೆ ಶಬ್ದಮುಗ್ಧತೆಯನ್ನೇ ಉತ್ತುಂಗ ಗುರಿಯೆಂದು ಭಾವಿಸಿ ಏಕಾಂತಜೀವಿಗಳಾಗಿ ಹೋಗುವ ಯೋಗಿಗಳು. ಆದರೆ ವ್ಯಷ್ಟಿಯ ಉತ್ಥಾನದೊಡನೆ ಸಮಷ್ಟಿಯ ಉದ್ಧಾರವನ್ನೂ ಕಣ್ಣೆದುರಿಗಿರಿಸಿಕೊಂಡು, ತನ್ನ ನಂತರ ಅಪಾರ ಸಂದೇಶದ ಸಂಪತ್ತನ್ನು ಬಿಟ್ಟುಹೋಗುವ ನಿನ್ನಂತಹ ತ್ಯಾಗಿಗಳು ಕ್ವಚಿತು! ಅಂದಾಗ ಅಪ್ಪಾ, ಇಂತಹ ಪೂಜ್ಯರು, ಅಖಂಡ ಸ್ತ್ರೀಕುಲಕ್ಕೆ ಧಾರ್ಮಿಕ ಸಮಾನತೆಯಿತ್ತ ಕ್ರಾಂತಿಕಾರಿಗಳು, ನಿಮ್ಮ ತತ್ತ್ವದ ವೃಕ್ಷವನ್ನಾಧರಿಸಿಕೊಂಡು ಬೆಳೆದ ಈ ಲತೆಯನ್ನು ಹೊಗಳುವುದು ಸರಿಯೆ?

ಅರಸಿ ಮರೆಹೊಕ್ಕಡೆ ಕಾಯುವ ಗುರು ತಾವು; ದೇವರ ಸ್ವರೂಪವನ್ನು ಅರಿಯದೆ, ಅರಿತರೂ ಪೂಜಿಸಲು ಹಕ್ಕು ದೊರೆಯದೆ ಇದ್ದ ಬೃಹತ್ ಶೋಷಿತ ಜನಾಂಗಕ್ಕೆ ಬಯಲುರೂಪದ ಪರವಸ್ತುವಿನ ಸಾಕಾರವಾಗಿ ಇಷ್ಟಲಿಂಗವೆಂಬ ಕುರುಹನ್ನು ಕೊಟ್ಟು, ಮೇಲು-ಕೀಳೆಂಬ ಭೇದವನ್ನು ತೊಡೆದ ಮಹಾನುಭಾವರು, ಪ್ರಗತಿಪರ ಧರ್ಮವನ್ನು ಕೊಟ್ಟು ಉದ್ಧರಿಸಿದ ತಾವು ಲಿಂಗಾಯತ ಧರ್ಮದ ಆದಿಗುರುವು-ಮಂತ್ರಪುರುಷ ಎಂಬುದನ್ನು ಮರೆಯಲಾದೀತೆ? ಶ್ರೀಸಾಮಾನ್ಯನ ಮಾತೃಭಾಷೆಯನ್ನೇ ದೇವನನ್ನೊಲಿಸುವ ಭಾಷೆಯಾಗಿ ಮಾಡಿ, ವಚನಶಾಸ್ತ್ರವೆಂಬ ಧರ್ಮಶಾಸ್ತ್ರವನ್ನು ಕೊಟ್ಟ ಮಹಾಗುರು ತಾವು. ಇಲ್ಲಿ ನೆರೆದಿರುವ ನಾವುಗಳೆಲ್ಲ ಧರ್ಮದ ಗುರುಗಳು, ಧರ್ಮಕ್ಕೆ ಗುರುಗಳಲ್ಲ. ನಮ್ಮಂತಹ ಅಸಂಖ್ಯಾತರು ಹುಟ್ಟಬಹುದು, ಅಳಿಯಬಹುದು. ಆದರೆ ತಾವು ಶರಣಧರ್ಮದ ಹೃದಯಸ್ವರೂಪರು. ಇಂತಹವರು ನನ್ನನ್ನು ಮೇಲಕ್ಕೇರಿಸಿ ನುಡಿಯದಿರಿ, ತಂದೆ....' ಅಕ್ಕಮಹಾದೇವಿ ಬಸವಣ್ಣನಿಗೆ ಸಾಷ್ಟಾಂಗವೆರಗಿದಳು.

ಅದೊಂದು ಹೃದಯಸ್ಪರ್ಶಿ ಸನ್ನಿವೇಶವಾಗಿತ್ತು. ಬಸವಣ್ಣ ಹೇಳಿದ:

'ಅಕ್ಕಾ....ರಕ್ತಸಂಬಂಧವನ್ನು ತೊರೆದೊಗೆವುದು ಸುಲಭ. ಭಕ್ತಿಬಂಧನವನ್ನು ಹರಿವುದು [illegible]

ಅನುರಜ್ಯೋತಿ, ವೈರಾಗ್ಯವಾರಿಧಿಯಾದ ನಿನ್ನನ್ನಗಲಲು ವ್ಯಥೆಯಾಗುತ್ತಿದೆ. ಆದರೇನಂತೆ, ಕೂಡುವಿಕೆಯಷ್ಟೇ ಅಗಲುವಿಕೆ ಅನಿವಾರ್ಯವಾದ ಕಾರಣ ಚನ್ನಮಲ್ಲಿಕಾರ್ಜುನನ ಚೆನ್ನಸತಿಯಾಗೆಂದು ಹರಸುವೆನು, ತಾಯಿ....'

ಭಾವುಕನಾದ ಘಟ್ಟಿವಾಳಯ್ಯನು ಮುಂದೆ ಬಂದು ಹೇಳಿದ:

'ಅಕ್ಕಾ....ನೀನು ಅವ್ವ ನೀಲಮ್ಮನ ಮೋಹದ ಮಗಳಾಗಿ, ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿಯಾಗಿ, ನಿಷ್ಕಳಂಕ ಪ್ರಭುದೇವರ ಸತ್ಯದ ಸೊಸೆಯಾಗಿ, ಚನ್ನಮಲ್ಲಿಕಾರ್ಜುನನ ಅರ್ಧಾಂಗಿನಿಯಾಗಿ, ಶರಣರೆಲ್ಲರ ಅರಗಿಣಿಯಾಗಿ, ನನ್ನ ಸೋದರಿಯಾಗಿ, ಕಂಗೊಳಿಸಿದೆ. ನೀನಿಲ್ಲದ ಈ ಅನುಭವಮಂಟಪವು ಕಳಾಹೀನವಾಗದೇ, ಅಕ್ಕಾ....'

ಅಕ್ಕಮಹಾದೇವಿ ಎಲ್ಲರ ಪ್ರೇಮಕ್ಕೆ ಮೂಕಳಾದಳು. ವಿಶೇಷವಾದ ಒಂದು ಆಸನವನ್ನು ಇಟ್ಟು, ರತ್ನಗಂಬಳಿಯನ್ನು ಅದರ ಮೇಲೆ ಹಾಸಿ ಅಕ್ಕಮಹಾದೇವಿಯನ್ನು ಕುಳ್ಳಿರಿಸಿದ್ದರು. ಶರಣು ಸಮರ್ಪಣೆ ಮುಗಿಯುತ್ತಿದ್ದಂತೆಯೇ ಶರಣ-ಶರಣೆಯರು ಪುಷ್ಪವೃಷ್ಟಿಯನ್ನು ಧಾರೈಸಿದರು. ಮಂಗಲಾರತಿಯನ್ನು ಬೆಳಗುತ್ತಿದ್ದಂತೆಯೇ ಜಯಕಾರ ಧ್ವನಿ ನಭಕ್ಕೆ ಮುಟ್ಟುವಂತೆ ಮೊಳಗಿ ಮಾರ್ದನಿಸಿತು.

ಮಾತುಮೂಕಳಾದ ಅಕ್ಕಮಹಾದೇವಿ ಎದ್ದುನಿಂತು ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ನೀಲಾಂಬಿಕೆ ಆದಿಯಾಗಿ ಶರಣರಿಗೆ ವಂದನೆಗೈದು ನಿಲ್ಲುತ್ತಲೇ, ಮಡಿವಾಳ ಮಾಚಿದೇವ ಉತ್ಸುಕಚೇತನನಾಗಿ ನಡೆಮುಡಿಯನ್ನು ತಂದನು.

ರತ್ನಗಂಬಳಿಗೆ ಹೊಂದಿಕೊಂಡು ಶುಭ್ರಧವಳ ನಡೆಮುಡಿಯನ್ನು ಹಾಸಿ, 'ಅಕ್ಕಾ, ತಾವಿದರಮೇಲೆ ಪಾದ ಊರಬೇಕು. ಮಹಾದೇವಿಯಾಗಿ ಕಾರುಣ್ಯ ಪಡೆಯಲಿಕ್ಕಾಗಿ ಕೈಚಾಚಿ ಬಂದ ತಾವು ಅಂದು ನಿರಾಕರಿಸಿದ್ದು ಸಮರ್ಥನೀಯವಾದೀತು. ಆದರೆ ಇಂದು ಅಕ್ಕಮಹಾದೇವಿಯಾಗಿ ಕಾರುಣ್ಯ ನೀಡಲಿಕ್ಕೆಂದು ಕೈಚಾಚುತ್ತಿರುವ ತಾವು ಪವಿತ್ರ ಪಾದಸ್ಪರ್ಶದಿಂದ ನನ್ನನ್ನು ಪುನೀತಗೊಳಿಸಬೇಕು....' ಮಾಚಿದೇವರ ವಾಣಿಯಲ್ಲಿ ಭಕ್ತಿ-ಗೌರವ-ಆದರಗಳು ಮುಪ್ಪುರಿಗೊಂಡಿದ್ದವು. ಆಗ ನಸುನಕ್ಕು ಅಕ್ಕಮಹಾದೇವಿಯು,

'ಮಾಚಿದೇವ ತಂದೆಗಳೆ, ಮಾಡುವವರಾರು ಮಾಡಿಸಿಕೊಳ್ಳುವವರಾರು; ಗೌರವಿಸುವವರಾರು ಗೌರವಿಸಿಕೊಳ್ಳುವವರಾರು? ಇದು ಎಲ್ಲರಲ್ಲೂ ಓತಪ್ರೋತವಾಗಿ ತುಂಬಿಪ್ಪ ಚನ್ನಮಲ್ಲಿಕಾರ್ಜುನನ ಲೀಲೆಯಷ್ಟೇ! ಈ ಲೀಲೆ

ವಾಗಿ ನೋಡುವ. ತಮ್ಮ ಕಾರ್ಯವನ್ನು ...

ಆನಂದತುಂದಿಲನಾದ ಮಾಚಿದೇವ ಸಂಭ್ರಮದಿಂದ ಮಹಾಮನೆಯ ದ್ವಾರವಟ್ಟದವರೆಗೆ ನಡೆಮುಡಿಯನ್ನು ಹಾಸಿದ. ದ್ವಾರವಟ್ಟದ ಹೊಸ್ತಿಲನ್ನು ತುಳಿಯುತ್ತಲೇ ಸಮಗಾರ ಹರಳಯ್ಯನವರು ಸಡಗರದಿಂದ ಒಂದು ಜೊತೆ ಚಮ್ಮಾವುಗೆಗಳನ್ನು ಪಾದದ ಮುಂದಿರಿಸಿ, ಸಮರ್ಪಿಸಿದರು.

'ಇದು ಶಾಶ್ವತ ನಡೆಮುಡಿಯೆ?' ಮುಗುಳ್ನಕ್ಕು, ಕೃತಜ್ಞತೆಯನ್ನು ಕಂಗಳಲ್ಲಿ ತುಂಬಿಕೊಂಡು ಮೆಟ್ಟಿದಾಗ ಹರಳಯ್ಯ ಪುಳಕಿತನಾದ. ಕದಿರೆಯ ರೆಮ್ಮವ್ವೆ ತಾನು ನೂತ ನೂಲಿನ ಕಾವಿಯ ಸೀರೆಯನ್ನು, ಕುಂಬಾರ ಅಂಬಯ್ಯ ಬಿಸಿಲಿನಲ್ಲಿ ನೀರು ಕುಡಿಯಲಿಕ್ಕೆಂದು ತತ್ರಾಣಿಯನ್ನು ಅರ್ಪಿಸಿದಾಗ, ಅಕ್ಕ ಮಹಾದೇವಿ ತನ್ನ ಗಂಟು ದೊಡ್ಡದಾದೀತೇನೋ ಎಂದು ಹೆದರಿದಳು.

ಮಾತಿನ ಮಿತವಲಯವನ್ನು ದಾಟಿದ ಒಬ್ಬೊಬ್ಬರ ನೋಟ-ಮಾಟಗಳು ಅಕ್ಕಮಹಾದೇವಿಯ ನರನರಗಳನ್ನು ಮೀಂಟುತ್ತ, ಮಧುರ ವ್ಯಥೆಯನ್ನು ಉಂಟುಮಾಡುತ್ತಿದ್ದವು. ವಿಜಾತಿಯ ವಸ್ತುಗಳನ್ನಾದರೆ ಬೇಗನೇ ಬೇರ್ಪಡಿಸ ಬಹುದು, ಸಜಾತಿಯ ವಸ್ತುಗಳನ್ನು ಬೇರ್ಪಡಿಸುವದು ಕಠಿಣ ಸಾಧ್ಯವಲ್ಲವೆ? ಅದೇ ರೀತಿ ಲೌಕಿಕರನ್ನಗಲಿ ಶರಣರೆಡೆಗೆ ಧಾವಿಸುವಾಗ ಯಾವ ವೇದನೆ ಯನ್ನೂ ಅನುಭವಿಸದ ಅಕ್ಕಮಹಾದೇವಿ ಪ್ರವೃತ್ತಿಬಾಂಧವರಾದ ಆಧ್ಯಾತ್ಮ ಜೀವಿ ಶರಣರನ್ನು ಅಗಲುವಾಗ ವ್ಯಥಿತಳಾದಳು.

ಶರಣ ಬಳಗವೆಲ್ಲ ಆಕೆಯನ್ನು ಬೀಳ್ಕೊಡಲು ಹೊರಟಿತು. ಕಲ್ಯಾಣದ ಹೊರವಲಯಕ್ಕೆ ಬಂದಾಗ ತಿಳಿಯಾಗಿ ಹರಿಯುವ ನಿರ್ಝರಿಣಿಯೊಂದರ ಪ್ರಶಾಂತ ದಂಡೆಯ ಮೇಲಿದ್ದ ವೃಕ್ಷದ ಬುಡದಲ್ಲಿ ಶರಣರು ವಿಶ್ರಮಿಸಿಕೊಳ್ಳಲು ಕುಳಿತರು. ಅಕ್ಕಮಹಾದೇವಿ ಪ್ರಯಾಣಕ್ಕೆ ಬಿಸಿಲಾಗುವುದು ಎಂದು ತಿಳಿದು ಎದ್ದುನಿಂತು ಎಲ್ಲರಿಗೂ ಕುಳಿತುಕೊಂಡಿರಲು ಸೂಚಿಸಿ, ಬಿನ್ನವಿಸಿದಳು :

'ಇನ್ನೆಷ್ಟು ದೂರ ತಾವು ಬರುವುದು? ದಯಮಾಡಿ ತಾವಿನ್ನು ಹಿಂತಿರುಗಿರಿ. ಮತ್ತೊಮ್ಮೆ ತಮ್ಮಲ್ಲಿ ಬಿನ್ನವಿಸಿಕೊಳ್ಳುವೆನು. ನನ್ನ ಬದುಕು ಪ್ರಾರಂಭ ವಾದುದು ತಾಯಿತಂದೆಯರ ಒಡಲ ಕುಡಿಯಾಗಿ ಭೂಮಿಗೆ ಬಿದ್ದು ಅತ್ತಾಗ ಲಲ್ಲ, ಶ್ರೀಗುರುವಿನ ಹಸ್ತದಲ್ಲಿ ದೀಕ್ಷಿತಳಾದಾಗ! ಹೀಗೆ ಸದ್ಗುರುವಿನ ಮಗಳಾಗಿ ಹುಟ್ಟಿ, ತಮ್ಮಂತಹ ಅಸಂಖ್ಯಾತ ಲೋಕಬಂಧುಗಳ ಕಾರುಣ್ಯ ದಲ್ಲಿ ಪೋಷಿತಳಾದೆ. ಸದ್ಭಾವನೆಯ ಹಾಲನು ಸುಜ್ಞಾನದ ತುಪ್ಪವನ್ನು

ನಿರಿ. ತಂದೆ ಬಸವಣ್ಣನು ಮೆಚ್ಚುವಂತೆ ಶಿವನೊಡನೆ ಸಂಸಾರವ ಮಾಡುವೆ; ತಮ್ಮೆಲ್ಲರ ಕರುಣೆಯ ಶಿಶುವಾಗಿ ಪ್ರತಿಜ್ಞೆ ಕೈಗೊಳ್ಳುವೆ: ನಿಮ್ಮ ಮುಂಡಿಗೆ ಕೀರ್ತಿಯ ಹೂವನ್ನು ಮುಡಿಸುವೆನೇ ವಿನಾ, ಅಪಕೀರ್ತಿಯ ಹುಲ್ಲುಹೊರೆಯನ್ನು ಹೊರಿಸೆನು. ಕೃಪೆಯಿರಿಸಿ, ತಮ್ಮ ಕಾಲುಗಳನ್ನು ಹಿಂದಕ್ಕೆ ತಿರುಗಿಸಿರಿ.... ಶರಣು ಶರಣಾರ್ಥಿ....'* ಶರಣಸಂಕುಲವು ಮೇಲೆದ್ದು ಕರವೆತ್ತಿ ಮುಗಿಯಿತು. ಅಕ್ಕಮಹಾದೇವಿಯು ಬಸವಣ್ಣನ ಪಾದಕ್ಕೆ ನಮಸ್ಕರಿಸಿ, ನೀಲಮ್ಮನ ಬಳಿಗೆ ಹೋದಾಗ ಆಕೆ ಬಿಗಿದಪ್ಪಿದಳು. ಆಕೆಯ ಬಂಧನವನ್ನು ಬಿಡಿಸಿಕೊಂಡು, ಎಲ್ಲರಿಗೆ ಕೈಯೆತ್ತಿ ಮುಗಿದಳು.

ಕೆಲವು ಹೆಜ್ಜೆಗಳ ದೂರ ಸಾಗಿ, ನಿಂತು ಹಿಂದಕ್ಕೆ ತಿರುಗಿ ಬಸವಣ್ಣನನ್ನು—ನೀಲಾಂಬಿಕೆಯನ್ನು ನಿಟ್ಟಿಸಿ ನೋಡಿದಳು. ನೀಲಾಂಬಿಕೆಯ ಕಣ್ಣುಗಳು ಹನಿಗೂಡಿದ್ದವು. ಅಚ್ಚಳಿಯದ ಪ್ರಸನ್ನತೆ, ನಿರ್ಲಿಪ್ತತೆಯೊಡನೆ ಅಣ್ಣನ ಮೊಗದ ಮೇಲೆ ಸಂಗಮಿಸಿತ್ತು. ಅಗಲುವ ವೇದನೆ ವಾತ್ಸಲ್ಯದೊಡನೆ ಮೇಳವಿಸಿ ಕಣ್ಣುಗಳಲ್ಲಿ ಮಡುಗಟ್ಟಿ ನಿಂತಿತ್ತು.

'ಈ ಪ್ರಸನ್ನತೆ-ಕರುಣೆಗಳ ಕಡಲಾದ ಅಪ್ಪನ ಮುಖವನ್ನು ಮತ್ತೆಂದಿಗೂ ನೋಡಲಾರೆನಲ್ಲವೆ?' ಎಂದುಕೊಂಡಾಗ ಅಕ್ಕಮಹಾದೇವಿಯ ಹೃದಯವು ಮೆಲ್ಲನೆ ಕಂಪಿಸಿತು. ನೆಟ್ಟ ದೃಷ್ಟಿಯನ್ನು, ಮಿಡಿಯುತ್ತಿದ್ದ ಹೃದಯವನ್ನು ಅಲ್ಲಿಂದ ಬಲವಂತವಾಗಿ ಕಿತ್ತು, ದಾರಿಯ ಮೇಲೆ ನಿಲ್ಲಿಸಿ, ಭಾರವಾದ ಕಾಲುಗಳನ್ನು ಒತ್ತಾಯಪೂರ್ವಕವಾಗಿ ಎತ್ತಿ ಊರತೊಡಗಿದಳು. ಮನಸ್ಸು ತಡೆಯದೆ ಮತ್ತೊಮ್ಮೆ ಹಿಂತಿರುಗಿ, 'ಶರಣು ಶರಣಾರ್ಥಿ....' ಎಂದು ಕೈಬೀಸಿದಳು. ಗಾಳಿಯನ್ನು ತುಂಬಿದ ಶಬ್ದನಾದ ನಿಧಾನವಾಗಿ ಅದರಲ್ಲಿ ಲೀನವಾಗತೊಡಗಿತು. ಕಟೆದ ಚಿತ್ರದಂತೆ ಶರಣಸಮೂಹವು ನಿಂತಿತ್ತು. ಕ್ಷಣಕಾಲ ನೋಡಿ ಮುಖ ತಿರುವಿ ನಿರ್ಲಿಪ್ತತೆಯನ್ನು ಮೈಗೂಡಿಸಿಕೊಂಡು ಮುಂದೆ ಸಾಗಿದಳು—ಜಂಗಮರ ತಂಡವು ಆಕೆಯನ್ನು ಮೌನವಾಗಿ ಹಿಂಬಾಲಿಸಿತು.

ಅಕ್ಕಮಹಾದೇವಿಯು ಮುಂದೆ ಮುಂದೆ ಸಾಗಿದಳು. ಗಿರಿದ್ವಯಗಳ ಮಧ್ಯೆ ಕಂದರದಲ್ಲಿ ಹರಿವ ನದಿಯಂತಿರದೆ ಆಕೆಯ ಜೀವನವೀಗ ವಿಶಾಲವಾದ ಬಯಲಿನಲ್ಲಿ ಹರಿವ ಪ್ರಶಾಂತ ಪ್ರವಾಹದಂತಿತ್ತು. ಕಲ್ಯಾಣಕ್ಕೆ ಬರುವಾಗ ಉದ್ವೇಗ-ಕಾತರಗಳಿಂದ ಕೂಡಿ ದಟ್ಟಕಾನನದಂತಿದ್ದ ಅವಳ ಮನ ಕಲ್ಯಾಣವನ್ನು ಬಿಡುವಾಗ ಪ್ರಶಾಂತಿ, ಪ್ರಸನ್ನತೆಯ ನಂದನವನವಾಗಿ ರಮಣೀಯವಾಗಿತ್ತು. ಆಗ ಆನಂದದ ಅನ್ವೇಷಣೆಯಲ್ಲಿದ್ದರೆ, ಈಗ ಆನಂದದ ನೆಲೆ

* ಮೂ

ಸಂಗ. ಅದನ್ನು ನೆನಪು ಮಾಡಿಕೊಳ್ಳುತ್ತಲೇ ದಾರಿಯನ್ನು ಸಂಗಡಿಗರೊಡನೆ ಸವೆಸಿದಳು. ಸಂಜೆಯಾಗುತ್ತಿರುವಂತೆಯೇ ಕಲ್ಯಾಣದ ನೆನಪು ಕಾಡತೊಡಗಿತು. ಅದನ್ನು ಮರೆಯಲೆಂದು ಪೂಜೆಗೆ ಕುಳಿತರೆ, ಎಡಗೈಯಲ್ಲಿರಿಸಿಕೊಂಡ ಇಷ್ಟಲಿಂಗದಲ್ಲಿ ತಾನು ಅಗಲುವಾಗ ಕಂಡ ಹೃದಯಸ್ಪರ್ಶಿ ಸನ್ನಿವೇಶ ಅಚ್ಚೊತ್ತಿ ಮೂಡಿತ್ತು. ಒಂದೊಂದೂ ಮುಖದ ಭಾವನೆಗಳನ್ನು, ಭಾವನೆಗೂ ಮೀರಿದ ನೋಟದ ಅರ್ಥವನ್ನು ನೆನಪಿಸಿಕೊಂಡಳು.

'ನಾನೇನು ಬಹಳ ದೂರದವರೆಗೆ ಬಂದಿಲ್ಲವಷ್ಟೇ, ಮರಳಿ ಹೋಗಿ ಶರಣರ ಸಂಗದಲ್ಲಿದ್ದರೆ ಸುಖಿಯಾಗುವೆ....' ಎಂಬ ಆಲೋಚನೆ ಸುಳಿಯಿತು. ಕದಳಿಯ ಬನದಲ್ಲಿ ಸಾಧನೆಯನ್ನು ಮಾಡುವ ಅದಮ್ಯ ಆಕಾಂಕ್ಷೆಯು ಮೇಲೆದ್ದು ಮೊದಲಿನದನ್ನು ಮೆಟ್ಟಿಹಾಕಿತು. ಆಕೆಯ ಮನಸ್ಸು ಮತ್ತೆಮತ್ತೆ ಸೂರ್ಯನ ಸುತ್ತಲೂ ಸುತ್ತುವ ಭೂಮಿಯಂತೆ ಬಸವಾದಿ ಪ್ರಮಥರ ಸುತ್ತಲೇ ಪರಿಭ್ರಮಿಸುತ್ತಿದ್ದಿತು. ಇದನ್ನು ಕಂಡು ವಿಸ್ಮಿತಳಾಗಿ ನುಡಿದಳು :

'ದೇವಾ, ಶರಣರನ್ನು ಒಡಗೂಡಿಕೊಂಡು ಇರುವ ಸುಖವನ್ನು ಉಪಮಿಸುವುದು ಕಷ್ಟಸಾಧ್ಯ. ನಿಮ್ಮನ್ನು ಅರಿದ ಮಹಾಂತರ ಜೊತೆಗಿದ್ದು ಅಗಲುವ ವ್ಯಥೆಯಲ್ಲಿ ಬಳಲುವದಕ್ಕಿಂತ ಸಾಯುವುದೇ ಒಳ್ಳಿತು. ನಿಮ್ಮನ್ನು ತೋರಿಸಿಕೊಟ್ಟ ಮಹಿಮರನ್ನು ಅಗಲಿ ಇರಲಾರೆನು ಎನ್ನಿಸುತ್ತಿದೆ....'* ಆ ನೆನಪಿನ ಬಲೆಯಿಂದ ಪಾರಾಗಲು ಯೋಚಿಸಿ ಜಂಗಮರಲ್ಲಿಗೆ ಬಂದು ವಚನಗಳನ್ನು ಹಾಡಲು ಪ್ರಾರಂಭಿಸಿದಳು.

೫೪. ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ?

ಬಸವತತ್ತ್ವವನ್ನು ಅಂಗವಿಸಿಕೊಂಡು ಅಪಾರ ಸಂತೃಪ್ತಿಯನ್ನು ತಾಳಿ, ಆತ್ಯಂತಿಕ ಸಿದ್ಧಿಯನ್ನು ಪಡೆದಿದ್ದ ಅಕ್ಕಮಹಾದೇವಿ ಆ ತತ್ತ್ವದ ಸತ್ವವನ್ನು ಅನ್ಯರಿಗೆ ಮನಗಾಣಿಸಿಕೊಡುವ ಮನೀಷೆ ತಾಳಿದ್ದಳು. ಸಂಜೆಯು ಅರ್ಧ ಜಾವ ಕಾಲವಿರುತ್ತಿದ್ದಂತೆಯೇ ಒಂದು ಗ್ರಾಮದಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಸಂಗಡವಿದ್ದ ಜಂಗಮರು ಊರೊಳಕ್ಕೆ ನಡೆದು, ಪ್ರಮುಖರನ್ನು ಕಂಡು ಅಕ್ಕಮಹಾದೇವಿಯ ಬೋಧೆಗಾಗಿ ಚಾವಡಿಯ ಕಟ್ಟೆಯನ್ನು ಗೊತ್ತುಪಡಿಸುತ್ತಿದ್ದರು. ಡಂಗೂರವನ್ನು ಸಾರಿದ ಬಳಿಕ ಜನತೆಯು ಅಲ್ಲಿ ಸಮಾವೇಶವಾಗುತ್ತಿದ್ದರು. ಅಕ್ಕಮಹಾದೇವಿಯ ಶಾಂತಮುದ್ರೆ, ಅಂತರ್ಮುಖ ಭವ್ಯ ವ್ಯಕ್ತಿತ್ವ, ಕಣ್ಣುಗಳಲ್ಲಿ ಮಿರುಗುವ ತಪೋಕಾಂತಿಗಳನ್ನು ಕಂಡು ಬೆರಗಾಗುತ್ತಿದ್ದರು. ಇನಿದಾದ ಕಂಠದಿಂದ ನಡುವೆ ವಚನಗಳನ್ನು ಹಾಡುತ್ತ, ಅವುಗಳ ಅರ್ಥವನ್ನು ವಿವರಿಸುತ್ತಿದ್ದರೆ ಕೇಳುಗರು ಮಂತ್ರಮುಗ್ಧರಾಗುತ್ತಿದ್ದರು. ಬೌದ್ಧಿಕ ಪ್ರತಿಭಾವಂತರು ವಚನಗಳ ಶಾಸ್ತ್ರೀಯ ವಿವೇಚನೆಗೆ, ಪಂಡಿತ-ಪಾಮರರನ್ನು ಸೆರೆಹಿಡಿಯುವ ಅಪೂರ್ವ ನಿರೂಪಣಾಸಾಮರ್ಥ್ಯಕ್ಕೆ ತಲೆದೂಗುತ್ತಿದ್ದರು.

ಹೀಗೆ ಪಟ್ಟಣಕ್ಕೆ ಪಂಚರಾತ್ರಿಯಂತೆ, ಹಳ್ಳಿಗೆ ಏಕರಾತ್ರಿಯಂತೆ ಬೋಧೆ ಮಾಡುತ್ತ ಸಾಗಿರುವಾಗ ಪ್ರವಾಸಮಧ್ಯದಲ್ಲಿ ಅಪೂರ್ವ ಘಟನೆಯೊಂದು ಜರುಗಿತು. ಮುತ್ತೂರಿನ ಗೌಡರಾದ ಮಲ್ಲಪ್ಪನವರು ಸ್ವಭಾವತಃ ಧರ್ಮಭೀರುಗಳು, ಸಜ್ಜನರು, ಸಹೃದಯರು. ತಮ್ಮ ಊರಿಗೆ ಆಗಮಿಸಿ ಗುಡಿಯೊಂದರಲ್ಲಿ ವಸತಿ ಮಾಡಿದ್ದ ಅಕ್ಕಮಹಾದೇವಿಯ ಆಗಮನದ ವಾರ್ತೆ ಜಂಗಮರ ಮೂಲಕ ಕರ್ಣಪಟಲವನ್ನು ತಲುಪುತ್ತಲೇ ರೆಕ್ಕೆಮೂಡಿದ ಹಕ್ಕಿಯಂತೆ ಉತ್ಸುಕಚಿತ್ತರಾಗಿ ಸ್ವಾಗತಿಸಲು ಹೋದರು. ಅಕ್ಕಮಹಾದೇವಿಯ ಉತ್ತುಂಗ ವ್ಯಕ್ತಿತ್ವಕ್ಕೆ ತಲೆ ಬಾಗಿಸಿ, ಅಂದಿನ ಅನುಭವಗೋಷ್ಠಿಯನ್ನು ತಮ್ಮ ಮನೆಯ ಮುಂದಿನ ಬಯಲ ಅಂಗಳದಲ್ಲಿ ಏರ್ಪಡಿಸಿದರು.

ಅಂದು ಅಕ್ಕಮಹಾದೇವಿ ನೀಡಿದ ಉದ್ಬೋಧಕ ಪ್ರವಚನವು ತನ್ಮಯತೆಯ ತೊರೆಯಲ್ಲಿ ಎಲ್ಲರನ್ನೂ ಮೀಯಿಸಿ ಅವರ ಹೃದಯಗಳನ್ನು ಸೆರೆಹಿಡಿಯಿತು. ಊರ ಗೌಡರಾದ ಮಲ್ಲಪ್ಪನವರು ಸಂಪ್ರೀತರಾಗಿ ತಮ್ಮ ಮನೆಗೆ ಪೂಜೆ-

ಇಚ್ಛೆಯನ್ನು [illegible]
ಧರ್ಮದ ಜ್ಞಾನವನ್ನು ಕೊಡಬೇಕು’ ಎಂದು ವಿನಂತಿಸಿದರು. ಅಷ್ಟೇ ಅಲ್ಲದೆ ಮರುದಿವಸ ತಾಪಸಿಗಳೋರ್ವರು ತಮ್ಮೂರಿಗೆ, ತಮ್ಮ ಮನೆಗೆ ಆಗಮಿಸಲಿರುವ ಕಾರಣ, ಅವರ ಪೂಜೆಯು ವೈಭವದಿಂದ ಸಾಗಲಿರುವುದರಿಂದ ಇದ್ದು ಪೂರೈಸಿಕೊಂಡು ಹೋಗಬೇಕೆಂದು ಬೇಡಿಕೊಂಡಾಗ ಅಕ್ಕಮಹಾದೇವಿಗೆ ನಿರಾಕರಿಸುವ ಸಾಧ್ಯತೆ ಉಳಿಯಲಿಲ್ಲ. ಅದಕ್ಕಿಂತಲೂ ಮಿಗಿಲಾಗಿ ‘ತಾಪಸಿಗಳೋರ್ವರು ಬರಲಿರುವರು’ ಎಂಬ ವಾರ್ತೆ ಕರ್ಣಾನಂದಕರವಾಗಿತ್ತು. ಉನ್ನತ ಮಟ್ಟದ ಶರಣರನ್ನು ಸಂದರ್ಶಿಸಿ, ದರ್ಶನಲಾಭವನ್ನು ಪಡೆಯಲು ಆತುರಗೊಂಡು ಮನಸ್ಸು ಉತ್ಸಾಹಪೂರ್ಣವಾಯಿತು.

ಮರುದಿನ ಸಂಜೆಯ ಮುನ್ನ ಗುರುಗಳು ಬರಲಿದ್ದರಿಂದ ತಳಿರು-ತೋರಣ, ಚಳೀವು-ರಂಗವಲ್ಲಿ, ಸಾರಣೆ-ಕಾರಣೆಗಳಿಂದ, ಮನೆ-ಓಣಿಗಳು ಅಂದಗೊಳಿಸಲ್ಪಟ್ಟವು. ಸುಪ್ರಭಾತದಲ್ಲಿಯೇ ಬಂಡಿಗಟ್ಟಲೆ ಪೂಜಾಸಾಮಗ್ರಿಗಳು, ಅದನ್ನು ಅಣಿಗೊಳಿಸುವ ಶಿಷ್ಯ ಪರಿವಾರ, ಅವುಗಳ ರಕ್ಷಣೆಗಾಗಿ ರಾಜಾಶ್ವಗಳನ್ನು ಆರೋಹಿಸಿದ ಶಸ್ತ್ರಸಜ್ಜಿತ ಭಟರ ಆಗಮನವಾಯಿತು. ಊರಿನ ಜನರೆಲ್ಲ ಬೆರಗಾಗಿ ನೋಡುತ್ತಲಿದ್ದರು. ಇವೆಲ್ಲವೂ ಸೋಜಿಗದ ಭವ್ಯಕಾರ್ಯಗಳಾಗಿ ಕಂಡು ಗುರುಗಳು ಬಹಳ ದೊಡ್ಡವರಿರಬೇಕೆಂದು ಕುತೂಹಲಿತರಾದರು.

ಭಯಭಕ್ತಿಗಳ ಸಮ್ಮಿಶ್ರಭಾವದಿಂದ ಅಡ್ಡಪಲ್ಲಕ್ಕಿಯ ಮೂಲಕ ಸ್ವಾಗತಿಸಿದರು ಊರ ಭಕ್ತವೃಂದದವರು. ಗೌಡರು ಮುಂದಾಳತ್ವ ವಹಿಸಿ ಗೌರವಿಸಿ ಪಾದಪೂಜೆಯನ್ನು ಮಾಡಿ ಒಳಗೆ ಕರೆದುಕೊಂಡು, ಉನ್ನತ ಪೀಠವನ್ನು ಕೊಟ್ಟರು. ಅಕ್ಕಮಹಾದೇವಿ ಬೋಧೆಯನ್ನು ಮುಗಿಸಿ ಊರ ಹೊರಗಿನ ಗುಡಿಯಲ್ಲಿರಲಿಚ್ಛಿಸಿದಳು. ಪ್ರಶಾಂತವಾದ ವಾತಾವರಣವಿದ್ದರೆ ಪೂಜೆಯು ನೆಮ್ಮದಿಯಾಗಿ ಸಾಗುವ ಕಾರಣ ಅಲ್ಲಿದ್ದು, ಮರುದಿನ ಪೂಜ್ಯರ ಪೂಜಾ ಸಂದರ್ಶನಕ್ಕೆ ಬರುವ ವಿಚಾರವನ್ನು ಗೌಡರ ಮುಂದಿಟ್ಟಳು.

ಸುಪ್ರಭಾತದ ಮಂಗಳಮಯ ವಾತಾವರಣದಲ್ಲಿ ಪೂಜೆಯನ್ನು ಮುಗಿಸಿಕೊಂಡು, ಮುಂಜಾವಿನ ಎರಡನೆಯ ಜಾವಕ್ಕೆ ಒದಗಿದರು. ಭವ್ಯವಾದ, ವಿಸ್ತಾರವಾದ ಕರಿಯ ಕಂಭಗಳ ಮನೆಯದು. ಶಿಷ್ಯರುಗಳು ನಡುಮನೆಯನ್ನು ಶುದ್ಧೀಕರಿಸಿದ ಬಾವಿಯ ನೀರಿನಿಂದ ತೊಳೆದು ಮಡಿ ಮಾಡಿದರು. ನುಣ್ಣನೆಯ ಬೂದಿ, ಹುಣಿಸೆಹಣ್ಣು-ಉಪ್ಪಿನಿಂದ ತಿಕ್ಕಿ ತೊಳೆದು ಭಾಜನಗಳು

ವೃಕ್ಷದ ಕೆಳಗೆ ಅಕ್ಕಮಹಾದೇವಿ ಶಾಂತಚಿತ್ತಳಾಗಿ ಕುಳಿತು, ಅಧ್ಯಯನದಲ್ಲಿ ತೊಡಗಿದ್ದಳು. ಪೂಜಾರಂಭಕ್ಕೆ ಸಾಕಷ್ಟು ಸಮಯವಿದ್ದ ಕಾರಣ ಹಿತ್ತಿಲಿನ ಕೈದೋಟದಲ್ಲಿ ಆಸೀನಳಾಗಿರುವಾಗಲೇ ಅಲ್ಲಿಯೂ ಮಾತುಕತೆ ಆರಂಭವಾದವು. ಬಾವಿಗೆ ನೀರು ಸೇದಲು ಬಂದ ಪೂಜಾ 'ಮರಿ'ಗಳು ಗೊಣಗುತ್ತಿದ್ದರು :

'ಯಾರ ಮನ್ಯಾಗಾದ್ರೂ ಪೂಜೆ ಇದ್ರೆ ನನ್ರಟ್ಟೆಗಳು ಬಿದ್ದುಹೋಗ್ತಾವಯ್ಯ; ನೀರು ಸೇದಿ ಸೇದಿ ಹೆಣವಾಗ್ಬೇಕು. ಚಳಿಗಾಲ ಇರ್ಲಿ, ಮಳೆಗಾಲ ಇರ್ಲಿ, ಒದ್ದೆ ಬಟ್ಟೆ ಉಟ್ಕೊಂಡು ಯಾರು ಒದ್ದಾಡಬೇಕು?'

'ಏನ್ಮಾಡೋದಯ್ಯ, ಹೊಟ್ಟೆಪಾಡಿಗಾಗಿ ಇದೊಂದು ಉದ್ಯೋಗ. ಕಷ್ಟ ಪಡ್ದಿದ್ರೆ ಸಂಬ್ಳ ಕೊಡ್ತಾರಾ? ಹೆಂಡ್ತಿ ಮಕ್ಳ ಗತಿ?' ಇನ್ನೋರ್ವ ನಿಟ್ಟುಸಿರ್ಗರೆಯುತ್ತಲಿದ್ದ.

ಅಧ್ಯಯನದಲ್ಲಿ ಮಗ್ನಳಾದ ಅಕ್ಕಮಹಾದೇವಿ, ತನ್ನ ದೃಷ್ಟಿಯನ್ನು ಹರಿಸಿ ಅವರನ್ನು ಗಮನಿಸಿದಳು.

'ಅನ್ಯರಿಗೆ ಹೊರೆಯಾಗುವಂತೆ ಪೂಜೆಯನ್ನು ಮಾಡಬೇಕೆ? ಇದೆಂತಹ ವಿಚಿತ್ರ!' ಎಂದು ಅಂದುಕೊಂಡಳು. ತಪಸ್ವಿಗಳು ಮಿಂದು, ನಡುಮನೆಗೆ ಕಾಲಿರಿಸುವುದರಲ್ಲಿ ಅವರ ಪೂಜೆಗೆ ಅಣಿಯಾಗಿತ್ತು. ಗೌಡರ ನಡುಮನೆಯಲ್ಲಿ ಹಸಿರು ಮಂಟಪವನ್ನು ಮಾಡಿ, ವಿಶಾಲವಾದ ಕಟ್ಟಿಗೆಯ ಮಣೆಯನ್ನಿಟ್ಟಿದ್ದರು. ಗುರುಗಳು ಬಂದು ಪೂಜಾರಿಗಳ ಮಂತ್ರಘೋಷದ ಮಧ್ಯೆ ಆಸನವನ್ನೇರಿದರು. ತಮ್ಮೆದುರಿನ ಮಣೆಯ ಮೇಲೆ ಬಂಗಾರದ ಹರಿವಾಣವನ್ನಿಟ್ಟು, ಇಷ್ಟಲಿಂಗವನ್ನು ಅದರ ಮೇಲಿಟ್ಟು, ಸೂತ್ರವನ್ನು ಕಟ್ಟಿದರು. ಪೂಜ್ಯರು ಬಿಜಯಂಗೈಯುತ್ತಲೇ ಪತ್ನೀಸಮೇತರಾಗಿ ಗೌಡರು ಒದ್ದೆಯನ್ನುಟ್ಟು ಮೊಟ್ಟಮೊದಲ ಬಿಂದಿಗೆ ನೀರನ್ನು ಲಿಂಗಕ್ಕೆ ಎರೆದರು. ಹನ್ನೊಂದು ವರಹಗಳನ್ನಿತ್ತು ಒಂದು ಬಿಂದಿಗೆ ನೀರನ್ನು ಲಿಂಗಕ್ಕೆ ಎರೆಯಬೇಕಾಗಿದ್ದಿತು. ನೂರೊಂದು ಕೊಡಗಳನ್ನು ವಿಶೇಷ ಪೂಜೆಗೆ ಎರೆದುಕೊಳ್ಳುವ ನೇಮ ಅವರದಾಗಿತ್ತು. ಪೂಜಾರಿಗಳು ಮಂತ್ರಘೋಷ ಮಾಡುತ್ತಲೇ ಇದ್ದರು. ಬೇರೆಬೇರೆ ಭಕ್ತರು ಬಂದ ಪಾರುಪತ್ತೇಗಾರರಿಗೆ ಹಣವನ್ನು ಸಲ್ಲಿಸಿ, ನೀರೆರೆಯುತ್ತಿದ್ದರು.

ಆದರೆ, ಆ ಊರಿನಲ್ಲಿ ಗೌಡರ ಮಾತನ್ನು ಮನ್ನಿಸಿ ಕೆಲವರು, ಸ್ವಯಂ ಭಕ್ತಿಯಿಂದ ಕೆಲವರು, ಎರೆಯಲುದ್ಯುಕ್ತರಾದರೂ ನೂರೊಂದು ಕೊಡಗಳಿಗೆ ಇಪ್ಪತ್ತು ಕೊರತೆಯಾದಾಗ ತಣ್ಣೀರನ್ನು ಎರೆಸಿಕೊಳ್ಳುತ್ತಿದ್ದರೂ ಗುರುಗಳು

'ಇದೆಂತಹ ಅಪಚಾರ, ಗುರುಗಳಿಗೆ ಮುಖಭಂಗ! ಹಿಡಿದ ನೇಮವನ್ನು ಪೂರೈಸುವ ಶಕ್ತಿ ನಿಮಗಿಲ್ಲದಿದ್ದರೆ ನೂರೊಂದು ಕೊಡದ ನೇಮವನ್ನೇಕೆ ಹಿಡಿಯಬೇಕಿತ್ತು? ನೋಡಿರಿ, ಮಹಾಗುರು ಬಸವಣ್ಣನವರು ಹೇಳುತ್ತಾರೆ:

ಇದ್ದು ದ ವಂಚನೆ ಮಾಡದಿದ್ದರೆ ಅದು ನೇಮ,
ನಡೆದು ತಪ್ಪದಿದ್ದಡೆ ನೇಮ, ನುಡಿದು ಹುಸಿಯದಿದ್ದಡೆ ನೇಮ
ನಮ್ಮ ಕೂಡಲ ಸಂಗನ ಶರಣರು ಬಂದಡೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ'*

ಹೀಗೆ ಓರ್ವನು ಹೇಳಿದಾಗ, ಇನ್ನೋರ್ವನು ದನಿಗೂಡಿಸಿದ:

'ಅಹುದು, ಆ ಮಹಾನುಭಾವರೇ ಹೇಳುತ್ತಾರೆ: 'ಹಿಡಿದುದನ್ನು ಕಡೆ ಮುಟ್ಟಿಸದಿದ್ದರೆ ಕೂಡಲಸಂಗಮದೇವನು ನಡುನೀರಿನಲ್ಲಿ ಅದ್ದುವನು' ಎಂಬುದಾಗಿ. ಗೌಡರೇ, ತಾವು ನೂರೊಂದು ಕೊಡಗಳ ನೇಮವನ್ನು ಪೂರೈಸದಿದ್ದರೆ ಗುರುಗಳ ಶಾಪವಾದರೂ ತಟ್ಟೀತು. ಇಲ್ಲವೇ ದೇವನ ಕ್ರೂರದೃಷ್ಟಿಗೆ ಪಾತ್ರರಾಗುವಿರಿ....'

ಗೌಡರು ಗಾಳಿಗೆ ಸಿಕ್ಕ ಬಾಳೆಯ ಎಲೆಯಂತೆ ಗಡಗಡನೆ ನಡುಗಿ,

'ಸ್ವಾಮಿ, ಪರಿಹಾರ ತಾವೇ ಸೂಚಿಸ್ರಿ. ನಾನಾರ ಏಂ ಮಾಡ್ಲಿ? ಊರಾಗಿರೋ ನಮ್ಜನದ ಮನೆ ಮುಗಿದ್ವು. ಇನ್ನು ಕೆಲವ್ರು ಬಸವಣ್ಣಪ್ಪನ ಕಟ್ಟುನಿಟ್ಟಿ ಶಿಷ್ಯರು. ಅವರು ಇಂಥಾದನ್ನು ಆಡಂಬರ ಅಂಥ ಹೀಯಾಳಿಸ್ತಾರೆ, ಒಪ್ಪಾಕಿಲ್ಲ.'

'ಗೌಡ್ರೆ, ಬಸವಣ್ಣನವರ ವಚನವನ್ನೇ ಹೇಳ್ಲಿಲ್ವೇ? ಅವರೇ ಹೇಳ್ತಾರೆ —ನುಡಿದು ಹುಸಿಯಬಾರ್ದು, ಶರಣ್ರಿಗೆ ಧನ ಒಪ್ಪಿಸ್ಬೇಕು ಅಂಥ....'

'ಯಪ್ಪಾ, ಆ ಜನಾನ ಒಪ್ಸೋಕೆ ಆಗಾಕಿಲ್ರಿ. ಬೇರೇನಾರ ಹೇಳ್ರಿ.'

'ಒಳ್ಳೇದು. ಉಳಿದ ಇಪ್ಪತ್ತು ಬಿಂದಿಗೆಗಳ ಹಣ ನೀವೇ ತುಂಬಿ, ನಿಮ್ಮ ಮನೆಮುಂದಿ ಕಡಿಂದ ಎರೆಸಿಬಿಡ್ರಿ....' ಗೌಡರು ಸಮಾಧಾನದ ಉಸಿರೆಳೆದು 'ನೇಮ'ವನ್ನು ಪೂರೈಸಿ ಸಂತೃಪ್ತಿಪಟ್ಟರು.

ಮೌನಪ್ರೇಕ್ಷಕಳಾಗಿ ವೀಕ್ಷಿಸಿದ ಅಕ್ಕಮಹಾದೇವಿಯ ಹೃದಯದಲ್ಲಿ ವಿಷಣ್ಣಭಾವದ ಬಿರುಗಾಳಿ ಬೀಸುತ್ತಿತ್ತು. ಬಸವಣ್ಣನವರ ವಚನವನ್ನು

ದುರುಪಯೋಗ ಮಾಡಿಕೊಂಡಿದ್ದನ್ನು ಕಂಡು ತಳಮಳಗೊಂಡಿದ್ದಳು. ಶ್ರಮ ವಹಿಸಿ ಮಾತನ್ನು ಬಂಧಿಸಿಟ್ಟಳು.

ವಿಶಾಲವಾದ ನಡುಮನೆಯಲ್ಲಿ ಉರಿಯುತ್ತಿದ್ದ ದೀವಿಗೆಗಳ ಬೆಳಕಿನಲ್ಲಿ ಬೆಳ್ಳಿ-ಬಂಗಾರಗಳ ಸಲಕರಣೆಗಳು ಉಜ್ವಲವಾಗಿ ಹೊಳೆಯುತ್ತಿದ್ದವು. ಕೆಲವು ಭಕ್ತರಂತೂ ಆ ವೈಭವಕ್ಕೆ ಮಾರುಹೋಗಿ ಮೂಕರಾಗಿದ್ದರು. ನೂರಾರು ನಂದಾದೀಪಗಳು ತುಪ್ಪವನ್ನು ಸುರಸುರನೆ ಕುಡಿಯುತ್ತ ತೇಜೋಮಾನವಾದ ಪ್ರಭೆಯನ್ನು ಚೆಲ್ಲಿದ್ದವು. ತಾಪಸಿಗಳು ಚಟಚಟನೆ ಅರಳು ಹಾರಿದಂತೆ ಸಂಸ್ಕೃತ ಮಂತ್ರಗಳನ್ನು ಪಠಿಸುತ್ತ ಅಭಿಷೇಕ ಮಾಡತೊಡಗಿದಾಗ, ಅವರ ವಿದ್ವತ್ತಿಗೆ ಗ್ರಾಮದ ಜನರು ತಲೆದೂಗಿದರು. ಹಾಲು, ತುಪ್ಪ, ಜೇನುತುಪ್ಪ ಇತ್ಯಾದಿಗಳ ಪಂಚಾಮೃತದ ಅಭಿಷೇಕ ಮಾಡಿದಾಗ ಹೆಂಗೆಳೆಯರು ಮೂಗಿನ ಮೇಲೆ ಬೆರಳಿರಿಸಿಕೊಂಡರು.

'ಯವ್ವಾ....ಎಂಥಾ ಪುಣ್ಯಪುರುಷನೇ! ನಮ್ಮ ಹಣೇಬರಹಕ್ಕೆ ಕುಡಿಯಾಕೆ ಮಿಳ್ಳೆ ಹಾಲು ಸಿಗಲ್ಲ. ಉಸಿರು ಕಟ್ಟಿ ಅತ್ತರೂ ಕೂಸುಗಳ್ಗೆ ಒಂದು ಒಳಲೆ ತುಪ್ಪ ಇರಲ್ಲ. ಪುಣ್ಯಾತ್ಮ....ಕೊಡಗಟ್ಟಲೆ ಹಾಲು-ತುಪ್ಪ ಎರೀತಾನೇ! ಎಲ್ಲಾರ್ಗೂ ಬಾ ಅಂದ್ರೆ ಬಂದೀತಾ. ಪುಣ್ಯ ಮಾಡಿ ಹುಟ್ಟವ್ರೆ; ದಿನಾ ದೇವರ್ಗೆ ಹಾಲು-ತುಪ್ಪ ಎರೀತಾರೆ....'

ಈ ಮಾತುಗಳನ್ನು ಕೇಳಿ ಅಕ್ಕಮಹಾದೇವಿಯ ಹೃದಯದಲ್ಲಿ ವೇದನೆಯ ಹಾವು ಸರಿದಾಡಿತು. ಗುರುಗಳು ಕೋಟಿ ಬಿಲ್ವಾರ್ಚನೆಯ ನೇಮದವರಾದ ಕಾರಣ ಶಿಷ್ಯರು ಪುಟ್ಟಿಗಳಲ್ಲಿ ತಂದೀಯುತ್ತಿದ್ದ ಬಿಲ್ವಪತ್ರೆಗಳನ್ನು ಏರಿಸುತ್ತಲೇ ಹೋದರು. ಅದನ್ನು ಕಂಡು ಬೆರಗಾದಳು ಅಕ್ಕಮಹಾದೇವಿ. ಅನುಭವ ಮಂಟಪದಲ್ಲಿ ಮಹಾಯೋಗಿಗಳನ್ನು, ದಿವ್ಯಜ್ಞಾನಿಗಳನ್ನು, ಸಾಕ್ಷಾತ್ಕಾರ ಪಡೆದು ನಿಂತ ಸಿದ್ಧಪುರುಷರನ್ನೆಲ್ಲ ಕಂಡಿದ್ದಳಾಕೆ. ಅವರುಗಳು ಅತ್ಯಂತ ಸರಳಜೀವಿಗಳು, ಭಾವಪ್ರಧಾನ ಪೂಜಕರು ಆಗಿದ್ದರೇ ವಿನಾ ಶುಷ್ಕಾಚಾರದ ಜಂಜಡಕ್ಕೆ ಸಿಕ್ಕಿಬಿದ್ದಿರಲಿಲ್ಲ. ಇಷ್ಟಲಿಂಗವೇ ಕಾಣದಂತೆ ಪುಟ್ಟ ಪತ್ರೆಯನ್ನೊಟ್ಟಿದರೆ ತ್ರಾಟಕಯೋಗ-ಅನುಸಂಧಾನಗಳಿಗೆ ಅವಕಾಶವೆಲ್ಲಿಯದು. ಎಲ್ಲರೂ ಇದೇ ಪರಿಯಲ್ಲಿ ಪೂಜಿಸುವುದಾದರೆ ಗಿಡಗಳ ಗತಿ ಏನಾಗಬೇಕು? —ಇದನ್ನೆಲ್ಲ ಚಿಂತಿಸುತ್ತ ವ್ಯಥಿತಳಾಗಿದ್ದಳು.

'ಯವ್ವಾ....ತುಪ್ಪದ ದೀಪಗಳ ಸಂಭ್ರಮ ನೋಡೆ' ಒಬ್ಬ ಸ್ತ್ರೀಯು ಮೊಳಕೈಯನ್ನು ತಿವಿದು ಪಕ್ಕದಲ್ಲಿದ್ದವಳಿಗೆ ಹೇಳಿದಳು. ಆಲೋಚನೆಯ ಜಾಲ

ತುಪ್ಪದ ಆರತಿಗಳನ್ನು ಬೆಳಗುವಾಗ ಇಡೀ ನಡುಮನೆ ಮಿಂಚಿನ ಆರಮನೆಯಾಯಿತು.

‘ಲಕ್ಷದ ಒಂದು ದೀಪ; ಅಬ್ಬಾ! ಏನು ಬೆಳ್ಕು. ಕೈಲಾಸನೇ ಇಳಿದಂಗೆ ಐತಲ್ವೆ. ಮೊನ್ನೆ ನನ್ನ ಕೂಸಿಗೆ ಹೊಟ್ಟೆ ನೋಸಕತ್ತಿತ್ತು. ಬಿಸಿಯನ್ನ-ತುಪ್ಪ ತಿನ್ನಸ್ಬೇಕು ಅಂದ್ರೆ ಸಾಧ್ಯಾಗಲಿಲ್ಲ. ನಮ್ಮದೂ ಪಾಪಿಜಲ್ಮ....ಅವರು ಪಡೆದು ಹುಟ್ಯಾರವ್ವ; ಮಗಿಮಗಿ ಗಟ್ಟಿ ತುಪ್ಪ ದೀಪಕ್ಕೆ ಎರೆದು ಪುಣ್ಯ ಗಳಿಸ್ತಾರೆ....’ ಆ ಸ್ತ್ರೀಯ ಹೃದಯದಿಂದ ಹೊರಹೊಮ್ಮಿದ ನಿಡಿದುಸಿರು ಅಕ್ಕಮಹಾದೇವಿಯನ್ನು ದಹಿಸಿತು....

ನೆನಪಿನ ಚಕ್ರ ಹಿಂದಕ್ಕೆ ಗರಗರನೆ ಓಡಿತು.

ಅಂದು ಮಹಾಮನೆಯಲ್ಲಿ ನಡೆದ ಘಟನೆ. ಅತಿಥಿಯೋರ್ವನು ಆಢ್ಯತೆಯಿಂದ ತಳಿಗೆಯಲ್ಲಿಟ್ಟ ಪ್ರಸಾದದಲ್ಲಿ ಅರ್ಧದಷ್ಟನ್ನು ಚೆಲ್ಲಿದ್ದ. ಬಸವಣ್ಣನವರ ಸೂಕ್ಷ್ಮದೃಷ್ಟಿ ಅದನ್ನು ಗ್ರಹಿಸಿತ್ತು. ಮತ್ತೆ ಸಂಜೆಯ ಪ್ರಸಾದಕ್ಕೆ ಅವನು ಕುಳಿತಾಗ ಅಣ್ಣನವರು ತ್ವರಿತವೇಗದಲ್ಲಿ ಧಾವಿಸಿ, ಬರಿದಾದ ತಳಿಗೆಯಲ್ಲಿ ಮುತ್ತು-ರತ್ನಗಳನ್ನು ಸುರಿಸಿದರು. ಅವನು ವ್ಯಗ್ರಗೊಂಡ. ಎಡೆ ಮಾಡುವವನಿಗೆ ಝಂಕಿಸಿ ಕೇಳಿದ:

‘ಏನಯ್ಯಾ....ಮುತ್ತುರತ್ನಗಳನ್ನು ಉಣ್ಣಲು ಬರುವುದೆ?’

‘ತಮಗೇನು ಬೇಕು ಶರಣರೇ?’ ಅವನು ಶಾಂತನಾಗಿ ಕೇಳಿದ್ದ.

‘ಜೋಳ, ರಾಗಿಗಳ ಉಣಿಸುಗಳು....’ ಅತಿಥಿ ಹೇಳಿದನು.

‘ಅವಕ್ಕಿಂತಲೂ ಮುತ್ತುರತ್ನಗಳೇ ಬೆಲೆಯುಳ್ಳವಲ್ಲವೆ?’

‘ಆದರೆ ತಿನ್ನಲು ಬರುವುದೇ....ನಿನಗೆ ತಲೆ ಸರಿಯುಂಟೇ?’ ಕೆರಳಿದ ಧ್ವನಿಯಲ್ಲಿ ಆಗಂತುಕನು ನುಡಿದಾಗ ಅಣ್ಣನವರು ಕಾಣಿಸಿಕೊಂಡರು.

‘ಅದನ್ನೇ ತಮಗೆ ಮನವರಿಕೆ ಮಾಡಬೇಕಾಗಿತ್ತು ಶರಣರೇ...ಉಣ್ಣಲು-ತಿನ್ನಲು ಬರುವ ಆಪ್ಯಾಯನ ಪ್ರಸಾದವನ್ನು ಚೆಲ್ಲುವುದು-ಕೆಡಿಸುವುದು ಮಹಾದ್ರೋಹ. ಹೊನ್ನು ಮುತ್ತುರತ್ನಗಳಿಲ್ಲದೆ ಮಾನವ ಬದುಕಬಹುದು, ಅನ್ನವಿಲ್ಲದೆ ಬದುಕಲಾರ. ಅಂದಾಗ ಆಢ್ಯತೆ-ಒಣಪ್ರತಿಷ್ಠೆಯಿಂದಲಾಗಲೀ, ದೇವರ ಹೆಸರಿನಲ್ಲಾಗಲೀ ಚೆಲ್ಲುವುದು, ಸುಡುವುದು ಮಾನವಕುಲಕ್ಕೆ ಮಾಡಬಹುದಾದ ಅಪಚಾರ....’

ಅಕ್ಕಮಹಾದೇವಿ ಮನ್ಮಲ ಮರುಗಿದಳು.

ಪೂಜೆಯುದ್ದಕ್ಕೂ ಘೋರ್ಗರೆಯುವ, ಮೊರೆಯುವ ಗಂಟೆ-ಜಾಗಟೆಗಳ ನಿನಾದ ಬೇರೆ ಆಕೆಯ ಚಿತ್ತವನ್ನು ಕಲಕಿತ್ತು. 'ಪೂಜೆ-ಧ್ಯಾನಗಳಿರುವುದು ಮನಶ್ಶಾಂತಿಯನ್ನು ಹೊಂದಲಿಕ್ಕೆ. ಈ ಬಗೆಯ ಪೂಜೆ ಮನಸ್ಸನ್ನು ಇನ್ನೂ ಉದ್ರಿಕ್ತಗೊಳಿಸುವುದು. ಪಂಚಲೋಹದ ಗಂಟೆ ಉತ್ಪಾದಿಸುವ 'ಓಂ'ಕಾರ ನಾದವನ್ನು ಶ್ರುತಿಯಾಗಿರಿಸಿಕೊಂಡು ಅನಾಹತ ಹೃದಯನಾದವನ್ನು ಆರಂಭಿಸಲು ಇದೊಂದು ಸಾಧನ. ಆದರೆ....ಈ ಸದ್ದು ಕಿವಿಗಳನ್ನೇ ಗಡುಚಿಕ್ಕುತ್ತಿದೆ....ಮಂತ್ರಕ್ಕಿಂತಲೂ ಉಗುಳೇ ಹೆಚ್ಚೆಂಬಂತೆ ಎಷ್ಟು ಆಡಂಬರದ ಪೂಜೆಯಿದು.' ಅಚ್ಚರಿಯ ಕಡಲಲ್ಲಿ ತೇಲುವಾಗಲೇ ಪೂಜೆ ಮುಕ್ತಾಯಗೊಂಡು, ಮಂಗಲ ಕೇಳಿತು.

ಪೂಜೆಯ ನಂತರ ಪ್ರಸಾದ ಸ್ವೀಕಾರ. ಗೌಡರು ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು, ಗುರುಗಳ ಒಲಿಮೆ ಪಡೆಯಲು ಶಕ್ತಿಗನುಸಾರವಾಗಿ ವ್ಯಯಮಾಡಿ, ಭಕ್ಷ್ಯಭೋಜ್ಯಗಳನ್ನು ಸಿದ್ಧಪಡಿಸಿದ್ದರು. ಅಕ್ಕಮಹಾದೇವಿ ವಿಚಿತ್ರವಾದ ವ್ಯಥೆಯನ್ನನುಭವಿಸುತ್ತಿದ್ದಳು. ತಲೆಯಲ್ಲಿ ಪುನಃಪುನಃ ಇದೇ ವಿಚಾರ ಮರುಕಳಿಸುತ್ತಿತ್ತು.

'ಒತ್ತಿಡೆ ಕೂಸು ಅತ್ತರೆ ಕುಡಿಯಲು ಮಿಳ್ಳೆ ಹಾಲಿಲ್ಲ; ಇನ್ನೊತ್ತಿಡೆ ದೇವರ ಹೆಸರಿನಲ್ಲಿ ಚೆಲ್ಲಾಟ....' ಈ ನೆನಪು ಅವಳ ಎದೆಯನ್ನು ಬಟ್ಟೆಯಂತೆ ಹಿಂಡುತ್ತಿತ್ತು. ತನ್ನನ್ನು ಪ್ರಸಾದ ಸ್ವೀಕಾರಕ್ಕೆ ಕರೆದಾಗ ಮೈಯೊಳಗೆ ಕ್ಷೇಮವಿಲ್ಲವೆಂದು ನಿರಾಕರಿಸಿದಳು.

ಗುರುಗಳ ಪ್ರಸಾದದಾರೋಗಣೆ ಮುಗಿದನಂತರ ಅವರು ಪಡಸಾಲೆಯಲ್ಲಿ ಆಸೀನರಾದರು. ಗೌಡರು ಭಯಭಕ್ತಿಯಿಂದ ಅಕ್ಕಮಹಾದೇವಿಯ ಪರಿಚಯವನ್ನು ಮಾಡಿಕೊಟ್ಟರು. ಶರಣುಗಳನ್ನು ಅರ್ಪಿಸುತ್ತ ಆಕೆ ಆಸೀನಳಾದಾಗ, ಗೌಡರು ಹೇಳಿದರು :

'ಈ ಮಹಾತಾಯಿಯವರು ಕಲ್ಯಾಣದ ಕಡೆಯಿಂದ ಬಂದವ್ರೆ....' ಅಕ್ಕಮಹಾದೇವಿಯ ಕಣ್ಣುಗಳಲ್ಲಿ ಮಿನುಗುತ್ತಿದ್ದ ತೀಕ್ಷ್ಣ ಕಾಂತಿಯನ್ನು ನೋಡಿ ಆ ತಾಪಸಿಗಳು ಬೆರಗಾದರು. ಆದರೆ ತಮ್ಮ ಗೌರವವನ್ನು ಕಾಯ್ದುಕೊಳ್ಳುವುದಕ್ಕಾಗಿ ಅವರು ಶ್ರೀಮದ್ಗಾಂಭೀರ್ಯ-ಬಿಗುಮಾನಗಳಿಂದಲೇ, 'ಬಸವಣ್ಣನವರ ದರ್ಶನವಾಯಿತೆ?' ಎಂದು ಕೇಳಿದರು. ಅಕ್ಕಮಹಾದೇವಿ ಮನದಲ್ಲೇ ಮುಸಿನಕ್ಕು ಅಂದುಕೊಂಡಳು :

ಏನೂ ಇಲ್ಲದ ಇಲ್ಲಿ ಅದೆಷ್ಟು ಬಿಗುಮಾನ!

'ಪೂರ್ವ ಜನ್ಮದ ಪುಣ್ಯ ಸಂಚಯದಿಂದ ಅವರ ದರ್ಶನಲಾಭ ದೊರೆಯಿತು; ಅನುಗ್ರಹವೂ ಆಯಿತು. ತಾವು ಅವರ ದರ್ಶನವನ್ನು ಪಡೆದಿರುವಿರಾ....?' ಅಕ್ಕಮಹಾದೇವಿ ಕೇಳಿದಳು.

'ಇನ್ನೂ ಇಲ್ಲ; ಅತ್ತ ಕಡೆಗೇ ಹೊರಟಿರುವೆ. ನಮ್ಮ ಸದ್ಗುರುಗಳು ಕಾಳಾಮುಖ ಪರಂಪರೆಯುವರಿದ್ದು ಬಸವಣ್ಣನವರ ತತ್ತ್ವದ ಪ್ರಭಾವಕ್ಕೊಳಗಾಗಿ, ದೀಕ್ಷೆಯನ್ನು ಪಡೆದು ಲಿಂಗವಂತರಾದರು. ಅವರು ಶಿವೈಕ್ಯರಾಗುವಾಗ ನಮ್ಮನ್ನು ಆ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಮಾಡಿ ದೇಹಬಿಟ್ಟರು. ಹಾಗೆ ಆಗಲುವಾಗ, ಜೀವಮಾನದಲ್ಲಿ ಒಮ್ಮೆಯಾದರೂ ಬಸವಣ್ಣನವರ ದರ್ಶನ ಪಡೆಯಲು ತಪ್ಪಬಾರದೆಂದು ಆಜ್ಞಾಪಿಸಿದರು. ಗುರುಗಳ ಅಭೀಷ್ಟವನ್ನು ಪೂರೈಸಲೋಸುಗ ಅತ್ತಲೇ ಸಾಗುತ್ತಲಿರುವೆವು....'

'ಬಹಳ ಸಂತೋಷ; ಆದರೊಂದು ಸೂಚನೆ....ಸರಳತೆಯ ಸಾಕಾರ ಮೂರ್ತಿಗಳಾದ ಅಣ್ಣನವರ ದರ್ಶನಕ್ಕೆ ಇದೇ ಆಡಂಬರದಲ್ಲೇ ಹೋಗದಿರಿ.' ಅಕ್ಕಮಹಾದೇವಿ ನಸುನಕ್ಕು ಹೇಳಿದಾಗ ತಾಪಸಿಗಳು ಅಪಮಾನಿತರಾದಂತೆ ಕಂಡರು.

'ಇದರಲ್ಲಿ ಆಡಂಬರವೇನು ಬಂದಿತು. ಶಿವನ ಪೂಜೆಯನ್ನು ವೈಭವದಿಂದಲೇ ನೆರವೇರಿಸಬೇಕಾಗುತ್ತದೆ. ನಮ್ಮ ಮಠ-ಪೀಠದ ಸ್ಥಾನಮಾನವನ್ನು ಗೌರವಪೂರ್ವಕವಾಗಿ ಕಾಪಾಡಿಕೊಳ್ಳಬೇಕಾದುದು ನಮ್ಮ ಆದ್ಯಕರ್ತವ್ಯ.'

'ಜಗತ್ತಿನ ಸೇವೆ ಮಾಡುವುದರಿಂದ ಗೌರವವನ್ನು ಹೊಂದಬಹುದೇ ವಿನಾ, ಶೋಷಣೆಯಿಂದಲ್ಲ. ಧರ್ಮ-ಧಾರ್ಮಿಕ ಗುರುಗಳು ಇರಬೇಕಾದುದು ಅಜ್ಞ ಜನರ ಶೋಷಣೆಗಲ್ಲ, ಅವರ ಜಾಗೃತಿ-ಉದ್ಧಾರಗಳಿಗೆ! ಸರಳವಾದ ಶ್ರೀಸಾಮಾನ್ಯನ ಧರ್ಮವನ್ನು ಬಸವಣ್ಣನವರು ಕೊಟ್ಟಿರುವಾಗ ಮತ್ತೂ ಅದನ್ನು ಸಿರಿವಂತರ ಸ್ವತ್ತನ್ನಾಗಿ ಮಾಡುತ್ತ, ಬಡವರಿಗೆ ಇದು ಅಸಾಧ್ಯವೇನೋ ಎಂಬ ಭಾವವನ್ನು ಹುಟ್ಟಿಸುತ್ತಿರುವಿರಿ. ಆರೋಗ್ಯ ರಕ್ಷಣೆ–ಮಾನಸಿಕ ಉಲ್ಲಾಸಗಳಿಗಾಗಿ ಸ್ನಾನವು ಒಂದು ಸಾಧನ. ಆದರೆ ಅದೇ ಒಂದು ನಿಯಮವಾಗಬಾರದು. ಜಗತ್ತಿಗೆಲ್ಲ ಮಳೆಯನ್ನು ಧಾರೈಸುವ ಪರಮಾತ್ಮನಿಗೆ ನೂರೊಂದು ಕೊಡಗಳ ಮಜ್ಜನ ಮಾಡಿಸುವುದೇ ಬಹು ದೊಡ್ಡ ಸಾಧನೆ ಎಂದು ತಿಳಿದಿರುವಿರಿ...

ನೀವೇ ನೀರನ್ನು ಸೇದಿರಿಸಿಕೊಂಡು ಎರೆದರೆ ನಿಮ್ಮ ನಿಷ್ಠೆಗಾದರೂ ದೇವರು ಮೆಚ್ಚಬಹುದು. ಅವನು ಮೆಚ್ಚದಿದ್ದರೆ ಹೋಗಲಿ ಕಡೆಗೆ ತಮಗಾದರೂ ನ್ಯಾಯಯಾಮವಾಗುವುದೆಂದು ಸಮಾಧಾನ ಪಡಬಹುದು. ಭಕ್ತರ ಬದುಕಿನ ಸಂಕಷ್ಟದ ಭಾರವನ್ನು ಹಗುರ ಮಾಡಲಿಕ್ಕೆ ಪೂಜೆ—ಧ್ಯಾನಗಳಿರಬೇಕೇ ಹೊರತು ಇನ್ನಷ್ಟು ಹೊರೆಯನ್ನು ಹೇರಲಿಕ್ಕಲ್ಲ....'

'ಇದು ಹೊರೆಯಲ್ಲ....ಪೂಜೆಯನ್ನು ಮಾಡುವವರಿಗೆ, ಪೂಜೆಗೆ ಸಹಾಯ ಮಾಡುವವರಿಗೆ ಇಬ್ಬರಿಗೂ ಪುಣ್ಯ ಬರುವುದು....' ಸ್ವಾಮಿಗಳು ಹೇಳಿದರು.

'ಸ್ವಾಮಿಗಳೇ, ತಾವು ಹಿರಿಯರು ನಿಜ; ಅಂತರಾವಲೋಕನ ಮಾಡಿ ಕೊಳ್ಳಿರಿ. ಪುಣ್ಯಾಪೇಕ್ಷೆಯಿಂದ ಮಾಡುವುದು ನಿಜವಾದ ಪೂಜೆಯಲ್ಲ. ನಿತ್ಯವಾದ ನಿಜಾನಂದ ಪಡೆಯಲಿಕ್ಕಾಗಿ ಮಾಡುವುದೇ ಸತ್ವಪೂರ್ಣವಾದ ಪೂಜೆ. ನೀವು ಮಾಡುವ ಈ ಬಗೆಯ ಪೂಜೆ ಆತ್ಮಾನಂದವನ್ನು ದೊರಕಿಸಲಾರದು. ಏಕೆಂದರೆ:

> ಅಕ್ಕಿಯಿಲ್ಲದ ತುಷಕ್ಕೆ ಅಗ್ಘವಣಿಯ ಎರೆದಡೆ
> ಅದೆಂದಿಗೆ ಬೆಳೆದು ಫಲವಪ್ಪುದಯ್ಯಾ?
> ಅರಿವಿಲ್ಲದವರಿಗೆ ಆಚಾರವಿದ್ದಡೆ
> ಅರಕೆಗೆಟ್ಟು ಸುಖವೆಂದಪ್ಪುದಯ್ಯಾ?
> ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
> ಎನ್ನ ದೇವ ಚನ್ನಮಲ್ಲಿಕಾರ್ಜುನನರಿಯದವರಿಗೆ
> ಆಚಾರವಿಲ್ಲ ಕಾಣಿರಣ್ಣಾ!*

ತಮ್ಮ ಆಡಂಬರದ ಪೂಜೆಯನ್ನು ಕಂಡೆ—ಅದು ಅಕ್ಕಿಯಿಲ್ಲದ ಸಿಪ್ಪೆಯಂತಿದೆ. ಅದಕ್ಕೆ ಎಷ್ಟು ದಿನ ಸಾಧನೆಯ ನೀರೆರೆದರೇನು—ಫಲಿಸಲಾರದು. ಅರಿವು, ತಿಳುವಳಿಕೆಯಿಲ್ಲದ ಯಾಂತ್ರಿಕ ಆಚರಣೆಯಿಂದ ನಿಜವಾದ ಸುಖ ಸಿಗದು.

'ಅಂತಃಕರಣ ಪರಿಶುದ್ಧತೆ ಪಡೆಯದೆ ಮಾಡುವ ಉಪಾಸನೆಯಂತೂ ಬಲು ವ್ಯರ್ಥ. ಅದರ ಸಾಧನೆಗಾಗಿಯೇ ನೇಮ—ಪೂಜೆಗಳೆಲ್ಲವು. ಮನಸ್ಸನ್ನು ನಿಗ್ರಹಿಸಲಿಕ್ಕೆ, ಸಂಕಲ್ಪವನ್ನು ಪೂರೈಸಲಿಕ್ಕೆ ಅನುವಾಗುವ ಕೃತಿಯು ನೇಮವಾಗಬಹುದೇ ವಿನಾ ಭಕ್ತರನ್ನು ಮರುಳುಗೊಳಿಸುವಂಥದಲ್ಲ. ಗೌಡರನ್ನು ಹೆದರಿಸಲು ಅಣ್ಣನವರ ವಚನವನ್ನು ಉದಾಹರಿಸಿ 'ನಡೆದು ತಪ್ಪದೆ, ನುಡಿದು ಹುಸಿಯದೆ' ಇರಬೇಕೆಂದಿರಿ. ಆ ವಚನದಲ್ಲಿ ಬರುವ ಮೊದಲ ವಾಕ್ಯ,

ಬೇಕು-ಬೇಡೆಂಬುದನ್ನು ದಾಟಿ ಸಹಜಸ್ಥಿತಿಗೆ ಬರಬೇಕಲ್ಲವೆ ...?'

ತಾಪಸಿಗಳು ಗಂಭೀರರಾಗಿ ಕುಳಿತು, ಆಲಿಸುತ್ತಿದ್ದರು.

'ಸೌಂದರ್ಯವನ್ನು ಹೆಚ್ಚಿಸಲು ಆಭರಣಗಳು ಬೇಕು. ತೊಟ್ಟ ಆಭರಣಗಳು ಮೈಯನ್ನೇ ಮುಚ್ಚಿಬಿಟ್ಟರೆ ಅವು ಅಲಂಕಾರವಾಗದೆ ಹೊರೆಯಾಗುವವಷ್ಟೆ! ಅದೇ ರೀತಿ ನಮ್ಮ ಭಾವೋದ್ದೀಪನೆಗೆ ಅರ್ಚನೆ-ಉಪಾಸನೆಗಳು ಬೇಕು. ಆದರೆ ಭಕ್ತಿಯನ್ನೇ ಬೆಳೆಸದ ಆಡಂಬರದ ಆಚರಣೆಗಳು ಹೊರೆಯೇ ಸರಿ. ಆಡುಗಳ ದಾಯಾದಿಗಳಂತೆ ಪತ್ರೆಯ ಗಿಡವನ್ನು ತರಿದು, ಪುಟ್ಟಪುಟ್ಟ ಪತ್ರೆ ಒಟ್ಟಿ ಪೂಜಿಸಿದಲ್ಲಿ ಫಲವೇನು, ಅತಿ ಮುಖ್ಯವಾದ ದೃಷ್ಟಿಯೋಗ-ಧ್ಯಾನಗಳನ್ನು ಮಾಡದೆ? ಮರದ ಹೂವ ಕೊಯ್ದು ಮರಕ್ಕೇರಿಸಿ, 'ನಾನು ಮಾಡಿದೆ' ಎಂಬ ಹಮ್ಮಿನಲ್ಲಿ ಹೊರಳಾಡುವುದೇಕೆ? ಇದೂ ಕೂಡಲಸಂಗ ನೊಡ್ಡಿದ ಮಾಯೆಯೇ* ಎನ್ನುತ್ತಾರೆ ಅಣ್ಣನವರು. ಹುತ್ತವ ಬಡಿದಡೆ ಹಾವು ಸಾಯದಂತೆ ಇಂತಹ ಯಾಂತ್ರಿಕ—ಆಡಂಬರದ ಪೂಜೆಯಿಂದ ವ್ಯಕ್ತಿತ್ವವು ವಿಕಾಸವಾಗದು....

ಇಷ್ಟಲಿಂಗಾರ್ಚನೆಯನ್ನು ಅದೆಷ್ಟು ವೈಭವಯುತವಾಗಿ ಮಾಡಿದಿರಿ. ಆದರೆ 'ಆವು ಅಟ್ಟದ ಮೇಲೆ ಕರು ಬೆಟ್ಟದ ಮೇಲೆ' ಎಂಬಂತೆ ಲಿಂಗವನ್ನು ಅಂಗದಿಂದ ಅಗಲಿಸಿಟ್ಟು ಪೂಜಿಸಿದರೆ ಸಾಮರಸ್ಯದ ಆನಂದ ದೊರೆತೀತೆ? ಮತ್ತು ದಿನನಿತ್ಯ ದೂರವಿರಿಸಿ ಅರ್ಚಿಸಿದರೆ ಚಿತ್ಕಳೆಯಿಂದ ಅದು ಒಡಗೂಡಲುಂಟೆ?....' ಅಕ್ಕಮಹಾದೇವಿ ನಿರ್ಭೀತಳಾಗಿ ಹೇಳಿದಳು.

'ಅದೇಕವ್ವಾ; ಲಿಂಗವನ್ನಿಟ್ಟ ಹರಿವಾಣಕ್ಕೆ ಸೂತ್ರ ಕಟ್ಟಿ ನಾವು ಹಿಡಿದಿರುತ್ತೇವಷ್ಟೆ?'

'ಪತಿಯಿಂದ ಓಲೆ ಬಂದಾಗ ಅಗಲಿದ್ದ ಸತಿಗೆ ಆನಂದವಾಗುವುದು ನಿಜವಾದರೂ, ಪ್ರತ್ಯಕ್ಷ ಪತಿಯನ್ನು ಕಂಡಾಗ ಆಗುವ ಆನಂದಕ್ಕೆ ಅದು ಸರಿಬಂದೀತೆ? ಭಕ್ತಿಯು ಹೃದಯದ ನಿಕ್ಷೇಪ, ಲಿಂಗಪತಿ-ಶರಣಸತಿಯರನ್ನು ಸನಿಹಕ್ಕೆ ತರಬೇಕಾದ ಮಂಗಳಸೂತ್ರವೇ ಹೊರತು ಆಡಂಬರದ ಪ್ರದರ್ಶನಕ್ಕಿಡುವ ಆಸ್ತಿಯಲ್ಲ.'

'ನಮಗಾಗಿ ನಾವು ಮಾಡುವುದಿಲ್ಲ; ಭಕ್ತರ ಸಂತೃಪ್ತಿಗಾಗಿ ಇದನ್ನೆಲ್ಲ ಮಾಡಬೇಕಾಗುವುದಮ್ಮ....' ಸ್ವಲ್ಪ ಕೇಂಕಾರ, ಬಿಗುಮಾನದಿಂದ ಸ್ವಾಮಿ

'ನಿಮ್ಮ ಆಚರಣೆಯು ಮೂಢಭಕ್ತರ ಅಲ್ಪಬುದ್ಧಿಯನ್ನು ತಣಿಸಬಹುದೇ ವಿನಾ, ವೈಚಾರಿಕರ ವಿಮರ್ಶಾತ್ಮಕ ಪ್ರಜ್ಞೆಯನ್ನಲ್ಲ. ಅಂತರಂಗದ ಪರಿಪಕ್ವತೆಗೆ ಪ್ರಯತ್ನಿಸದೆ ಬರೀ ಬಹಿರಂಗದ ಕ್ರಿಯೆಗಳಲ್ಲಿ ತೊಡಗುವುದು ಪರಿಮಳವನ್ನು ಕೃತಕ ಹೂವಿಗೆ ಸಿಂಪಡಿಸಿದಂತೆ; ಕೃತಕ ಹೂವಿನಿಂದ ಶಿವನೆಂಬ ದುಂಬಿ ಆಕರ್ಷಿತವಾಗದು.

ಮಗುವು ಬಯಸಿದುದನ್ನು ಕೊಡುವವಳು ನಿಜವಾದ ತಾಯಿಯಲ್ಲ; ಮಗುವಿಗೆ ಅವಶ್ಯಕವಾದುದನ್ನು ಕೊಡುವವಳು ಉತ್ತಮ ತಾಯಿ. ಹಾಗೆಯೇ ಅಜ್ಞಾನಿಗಳಾದ ಭಕ್ತರು ಬಯಸಿದುದನ್ನು ನೀಡುವವರು ನಿಜ ಗುರುಗಳಲ್ಲ, ಅವರ ಉದ್ಧಾರಕ್ಕೆ ಅವಶ್ಯಕವಾದುದನ್ನು ಕೊಡುವವರು ನಿಜ ಗುರುಗಳು....'

'ನೋಡಮ್ಮಾ, ನಿನಗಿನ್ನೂ ಸಮಾಜಪ್ರಜ್ಞೆಯಿಲ್ಲ, ಲಕ್ಷಾವಧಿ ಜನರು ದುಶ್ಚಟ-ದುರ್ಗುಣಗಳಿಗೆ ಹಾಳು ಮಾಡುವರು; ಕುಡಿತ-ಜೂಜುಗಳಿಗೆ ವ್ಯಯಿಸುವರು. ಅಂತಹ ದುಡ್ಡನ್ನು ಪೂಜೆಗಾಗಿ ವೆಚ್ಚಮಾಡಿಸಿದರೆ ತಪ್ಪೇನು?'

'ನಿಮ್ಮ ಆಕಾಂಕ್ಷೆ ಚೆನ್ನಾಗಿದೆ, ಆದರೆ ಸಾಧನೆ ತರ್ಕಬದ್ಧವಾಗಿಲ್ಲ. ಅಂತಹ ದುಡ್ಡನ್ನು ಸ್ವೀಕರಿಸಿ ವಿಧಾಯಕವಾದ ರೀತಿಯಲ್ಲಿ ಬಳಸಿರಿ. ಸಮಾಜದ ನಿರ್ಮಾಣಕ್ಕೆ ವಿನಿಯೋಗಿಸಿರಿ; ಅದು ಬಿಟ್ಟು ಸಾವಿರದ ಒಂದು, ಲಕ್ಷದ ಒಂದು ತುಪ್ಪದಾರತಿಗಳನ್ನು ಬೆಳಗಿ ಖಂಡುಗ ತುಪ್ಪ ಸುಡುವ, ಆಪ್ಯಾಯನ ಪ್ರಸಾದವನ್ನು ಕೆಡಿಸುವ ಆಚಾರವು ಯಾವ ದೇವರಿಗೆ ಮೆಚ್ಚುಗೆ ಎನಿಸುವುದು? ಬೆಂಕಿಗೆ ಎರೆದು ತುಪ್ಪವನ್ನು ಸುಡುವುದಕ್ಕಿಂತ ಬಡಹೊಟ್ಟೆಯ ಜಠರಾಗ್ನಿಗೆ ಎರೆದರೆ ದೇವರು ಸಂಪ್ರೀತನಾಗುವನು.

ನಾವು ಕೊಡುವ ನೈವೇದ್ಯದ ಮೇಲೆಯೇ ದೇವನೇನೂ ಬದುಕಿಲ್ಲ.

> ನಿತ್ಯ ತೃಪ್ತಂಗೆ ನೈವೇದ್ಯದ ಹಂಗೇತಕ್ಕೆ?
> ಸುರಾಳ ನಿರಾಳಂಗೆ ಮಜ್ಜನದ ಹಂಗೇತಕ್ಕೆ?
> ಸ್ವಯಂ ಜ್ಯೋತಿರ್ಮಯಂಗೆ ದೀಪಾರಾಧನೆಯ ಹಂಗೇತಕ್ಕೆ...?'*

ಮಾಟದಲ್ಲಿ ಮನನಂಬುಗೆಯಿಲ್ಲದ, ಅಹಂಕಾರಕ್ಕೀಡಾದ, ಆಧ್ಯಾತ್ಮಸಾಧನೆಯಿಂದ ಯಾವದೇ ಸುಖವಿಲ್ಲ. ಮಾಡುವ ಭಕ್ತಿಯ ಹಿಂದೆ ಜ್ಞಾನದ ಸೂತ್ರವಿರಬೇಕು; ಜ್ಞಾನ-ಭಕ್ತಿಗಳು ಸೂರ್ಯ-ಸೂರ್ಯಕಿರಣದಂತೆ.† ಆಡಂಬರದ ಖಂಡುಗ ಭಕ್ತಿಗಿಂತ ಹೃದಯ ತುಂಬಿ ಹೊಮ್ಮುವ ಒಳಲೆ ಭಕ್ತಿಯೇ ಸಾಕು....'

ಅಕ್ಕಮಹಾದೇವಿಯ ವೈಚಾರಿಕವಾದಕ್ಕೆ ನೆರದ ಜನರು ತಲೆದೂಗಿದರು. ಆಕೆಯ ಮಾತು ಅವರ ಬುದ್ಧಿಗೆ ಮನದಟ್ಟಾಗಿತ್ತು. ಆದರೆ ತಪಸ್ವಿಗಳು ಸೋಲೊಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಅವರು ಕ್ರುದ್ಧರಾಗಿ ನುಡಿದರು :

'ಈಗಿನ ಕಾಲದ ತರುಣ ವಯಸ್ಕರೆಂದರೆ ಹೀಗೇ ; ಹಿರಿಯರು-ಕಿರಿಯರು, ಸ್ವಾಮಿಗಳು ಎನ್ನದೆ ಧಿಃಕ್ಕರಿಸಿ ಮಾತನಾಡುವರು....ದೊಡ್ಡವರ ಆಚರಣೆಯನ್ನು ನಿಂದಿಸುವರು....'

'ಕ್ಷಮಿಸಿರಿ ಮಹಾನುಭಾವರೇ ; ಉದ್ಧಟತನಕ್ಕೆ ಮಾರುಹೋಗಲು ನಾವು ಆಧ್ಯಾತ್ಮಜೀವನಕ್ಕೆ ಬಂದಿಲ್ಲ. ನಾನು ಮಾಡುವುದು ನಿಂದೆಯಲ್ಲ, ವಿಮರ್ಶೆ-ವಿಶ್ಲೇಷಣೆ. ಬಸವಣ್ಣನವರ ವಚನವನ್ನು ತಮ್ಮ ಶಿಷ್ಯರು ತಪ್ಪಾಗಿ ಬಳಸಿಕೊಂಡುದಕ್ಕೆ ನನಗೆ ನೋವೆನಿಸಿತು' ಅಕ್ಕಮಹಾದೇವಿಯು ನುಡಿದು ಗೌಡರ ಕಡೆಗೆ ತಿರುಗಿದಳು.

'ಗೌಡರೇ, ಧರ್ಮವು ಬೆಳೆಯಬೇಕಾದುದು ಆತ್ಮವಿಶ್ವಾಸದ ಬುನಾದಿಯ ಮೇಲೇ ಹೊರತು ಭಯದ ಮೇಲಲ್ಲ; ತಮ್ಮಂತಹ ಅಜ್ಞ ಸಿರಿವಂತರಿರುವ ತನಕ ವಿಚಾರ ದಾಸ್ಯದಲ್ಲಿ ಕೆಡಹುವವರಿಗೆ ಈ ಸಮಾಜದಲ್ಲಿ ಕೊರತೆ ಇಲ್ಲ....' ಎಂದು ನುಡಿದು ಮೇಲೆದ್ದ ಅಕ್ಕಮಹಾದೇವಿ ಜಂಗಮ ತಂಡದೊಡನೆ ಹೊರಟುಬಿಟ್ಟಳು. ಹೋಗುತ್ತ ನಿಟ್ಟುಸಿರ್ಗರೆದು ನುಡಿದಳು :

'ಪಡಭೂಮಿಯಾಗಿದ್ದರೆ ಅದನ್ನು ಹೇಗಾದರೂ ಫಲನೀಡುವಂತೆ ಮಾಡಬಹುದು; ಕರಿಕೆಯ ಭೂಮಿಯಲ್ಲಿ ಫಲವನ್ನು ತೆಗೆಯುವುದು ಬಹು ಕಷ್ಟಸಾಧ್ಯ. ಮೂಢನಂಬಿಕೆಗಳ ನೆಲೆಬೀಡಾಗಿರುವ ಜನರಲ್ಲಿ ತಮ್ಮ ಪ್ರಗತಿಪರ ವಿಚಾರಗಳ ಬೀಜ ಬಿತ್ತಲು ಬಸವಣ್ಣನವರು ಎಷ್ಟು ಶ್ರಮಿಸುತ್ತಾರೆ. ಎಲ್ಲವೂ ಕರಿಕೆಯ ಹೊಲದಲ್ಲಿ ಬಿತ್ತಿದಂತೆ ವ್ಯರ್ಥವಾಗುತ್ತದೆ....'

'ಹೌದು ಅಕ್ಕಾ....ಕೇವಲ ಜನರಷ್ಟೇ ಅಜ್ಞರಿದ್ದರೆ ಹೇಗೋ ತಿದ್ದಬಹುದು. ಆದರೆ ಅವರ ಅಜ್ಞತೆಯ ವಿಷಬಳ್ಳಿಗೆ ನೀರೆರೆಯುವ ಇಂಥ ಗುರುಗಳಿರುವ ತನಕ ತಿದ್ದುವದು ಬಹು ಕಷ್ಟಕರ....' ಜಂಗಮನೋರ್ವ ಮರು ನುಡಿದ.

* * *

ನಿರ್ವಿಕಾರ ಸ್ಥಿತಿಯನ್ನು ಮುಟ್ಟಿದ ಅಕ್ಕಮಹಾದೇವಿ ಜ್ಞಾನದ ಉಣಿಸನ್ನು ಜನರ ಶಿರ-ಉರಗಳ ತಳಿಗೆಗಳಿಗೆ ಎಡೆಮಾಡುತ್ತ ಸಾಗಿದ್ದಳು. ಪ್ರಪಂಚದ ವೈವಿಧ್ಯತೆಯ ಅರಿವು, ಮಾನವಸ್ವಭಾವದ ಲೋಪ-ದೋಷಗಳನ್ನು ಕಾಣುತ್ತ

ದಂಡೆಯನ್ನು ಮುಟ್ಟಿ ಹಿಂದಿರುಗಿ ನೋಡಿದಾಗ—ಆವನನ್ನು ಅನುಸರಿಸಿ ಬಂದಿದ್ದ ದೇಹ ದುರ್ಬಲನೊಬ್ಬ ಅರ್ಧದಷ್ಟು ನದಿಯನ್ನೂ ದಾಟದೆ ದೇಹದ ಶಕ್ತಿಯುಡುಗಿ ನಿಸ್ಸಹಾಯಕನಾಗಿ ಪರಿತಪಿಸುವುದನ್ನು ಕಂಡು ಅನುಕಂಪ ಪಡುವಂತೆ, ಅಕ್ಕಮಹಾದೇವಿ ಕೆಲವು ಧಾರ್ಮಿಕ ಜನರ ಬದುಕನ್ನು ನೋಡಿ ಮರುಕಪಟ್ಟಳು.

ಸಪ್ತವ್ಯಸನ, ಅಷ್ಟಮದ, ಅರಿಷಡ್ವರ್ಗ, ಪಂಚವಿಷಯಗಳ ಉಗ್ರಾಣವಾದ ಭವಶರಧಿಯಲ್ಲಿ ನಿರಾಯಾಸವಾಗಿ ಈಜಿ ಆಸೆ-ಆಮಿಷಗಳೆಂಬ ಮೊಸಳೆ-ತಿಮಿಂಗಲಗಳಿಂದಲೂ ಪಾರಾಗಿ, ಜೀವನ್ಮುಕ್ತಿ ದಡವನ್ನು ಆಕೆ ಮುಟ್ಟಿದ್ದಳು. ಆದರೆ ಅಂತಹ ಅವಕಾಶವಿಲ್ಲದೆಯೋ, ಸಾಮರ್ಥ್ಯವಿಲ್ಲದೆಯೋ ನಡುನೀರಿನಲ್ಲಿ ಕೈಸೋತುಹೋಗಿ ಮುಳುಗು ಹಾಕುವವರನ್ನೂ ಕಂಡಳು.

ಪ್ರಯಾಣ ಮಧ್ಯದಲ್ಲಿ ಅಂದು ಸಂಜೆ ಒಂದು ಗ್ರಾಮದ ಸನಿಹಕ್ಕೆ ಬಂದಿದ್ದರು. ಒಳಕ್ಕೆ ಪ್ರವೇಶಿಸುವ ಮುನ್ನ ಊರ ದಿಡ್ಡಿ ಬಾಗಿಲು ಕೂಗಳತೆ ದೂರವಿದ್ದಂತೆಯೇ ಮಠದಂತೆ ತೋರುವ ಕಟ್ಟಡವೊಂದನ್ನು ಕಂಡು ವಸತಿಯ ಅನುಕೂಲತೆಯ ಬಗ್ಗೆ ವಿಚಾರಿಸಿಕೊಂಡು ಬರಲು ಕಿರಿಯ ಜಂಗಮನೊಬ್ಬನನ್ನು ಕಳುಹಿಸಿದಳು. ಅದು ಮಠವೆಂದು, ವಾಸ್ತವ್ಯಕ್ಕೆ ಸೌಕರ್ಯವನ್ನು ಕಲ್ಪಿಸಲು ಸಿದ್ಧವಿರುವರೆಂದು ದೃಢವಾದ ಮೇಲೆ, 'ಶರಣ ಪುಂಗವರೇ, ಇಂದು ಇಲ್ಲಿಯೇ ಇಳಿದುಕೊಳ್ಳೋಣ. ಏಕೆಂದರೆ ಇದು ಸದ್ದುಗದ್ದಲವಿಲ್ಲದೆ ಊರ ಹೊರಗಿರುವ ಪ್ರಶಾಂತ ತಾಣ. ಇರುಳಿನಲ್ಲಿ ಬೋಧೆ ಮಾಡಲು ಊರೊಳಗೆ ಚಾವಡಿಗೆ ಹೋದರಾಯಿತು. ಜನಸಂದಣಿಯಿದ್ದಲ್ಲಿ ಶಾಂತ ವಾತಾವರಣ ವಿರದು' ಎಂದು ಹೇಳಿದಳು. ಹೊಂಗುಟ್ಟಿದ ಜಂಗಮರು ಒಳಗೆ ಹೋಗಿ ವಿಚಾರಿಸಿದಾಗ ಅಲ್ಲಿದ್ದ ಅವಧೂತ ಸ್ವಾಮಿಗಳು ಕಾವಿಧಾರಿ ಆಗಂತುಕರನ್ನು ಕಂಡು ಆನಂದಿಸಿ, ಸ್ವಾಗತಿಸಿದರು.

ಸಾಮಾನು-ಸರಂಜಾಮಿನ ಜೋಳಿಗೆಗಳನ್ನು ಒಂದೆಡೆ ಇರಿಸಿ ಊರೊಳಕ್ಕೆ ಹೋಗಿ ಬೋಧೆಯ ಕಾಯಕ ಪೂರೈಸಿ, ಭಿಕ್ಷಾಟನೆಯನ್ನು ಮಾಡಿಕೊಂಡು ಬರುವ ಹೊತ್ತಿಗೆ ಇರುಳಿನ ಮೊದಲ ಜಾವ ಸರಿಯುತ್ತಲಿತ್ತು. ಬಂದವರು ತಮ್ಮ ನಿಯಮಿತ ಸ್ಥಾನಕ್ಕೆ ಹೋಗುತ್ತಿರುವಲ್ಲಿ ಸ್ತಂಭೀಭೂತರಾಗಿ ನಿಂತರು. ವಿಶಾಲವಾದ ನಡುಮನೆಯಲ್ಲಿ ಹುಲಿಯ ಚರ್ಮವನ್ನು ಹಾಸಿಕೊಂಡು ಅವಧೂತರು ಕುಳಿತಿರುವರು ; ಅವರ ಸುತ್ತಲೂ ಕೈತಾಳ, ಏಕನಾದಗಳೊಡನೆ ಅನೇಕ ಸಾಧುಗಳು ಕುಳಿತಿರುವರು. ಅವರೊಡನೆ ಗ್ರಾಮದ ನಿವಾಸಿಗಳೂ

...ಪತ್ರೆಗಳು, ಸಿದ್ಧಪತ್ರೆಯ ಕೊಳವೆಗಳು ಎದ್ದು ಕಾಣು ತ್ತಲಿವೆ. ಮತ್ತೇರಿದ ಕಣ್ಣುಗಳಿಂದ ಅತಿಥಿಗಳನ್ನು ಗಮನಿಸಿ ಆ ಅವಧೂತನು ತೊದಲುವ ತುಟಿಗಳಿಂದ ನುಡಿದ:

'ಬರ್ರಿ....ಬರ್ರಿ....ಸಮಯಕ್ಕೆ ಸರ್‍ಯಾಗಿ ಬಂದ್ರಿ. ತೀರ್ಥ-ಪ್ರಸಾದ ತಕ್ಕೊಳ್ಳಿ....ಈ ಅಮೃತವೇ ತೀರ್ಥ, ಸಿದ್ಧಪತ್ರೆಯ ಮಧುರ ಹೊಗೆಯೇ ಧೂಪ. ಆಹಾ....ಭೂರಿ ಬ್ರಹ್ಮಾನಂದ ಪದವಿ....ಆನಂದ ಪರಮಾನಂದ....' ಕಣ್ಣನ್ನು ಮುಚ್ಚುತ್ತ, ತಲೆಯನ್ನು ಓಲಾಡಿಸುತ್ತಲಿದ್ದ.

ಅಕ್ಕಮಹಾದೇವಿ ದಿಗ್ಭ್ರಾಂತಳಾಗಿ ಕ್ಷಣಕಾಲ ಮೂಕಳಾಗಿ ನಿಂತಳು. ಮರುಕ್ಷಣದಲ್ಲೇ ಕೇಳಿದಳು:

'ಇದೇನಿದು ಹಿರಿಯರೇ....ತಮ್ಮಂತಹವರು ಇಂಥಾ ಅನಾಚಾರವನ್ನು ಗೈವುದೆ?'

'ಹಾಂ....ಇದು ಅನಾಚಾರವಲ್ಲ, ಶಿವಾಚಾರ. ನಮಗಾಗಿ ಅಲ್ಲ ಆ.... ಆ....ಶಿವನಿಗಾಗಿ....'

'ಛೀ....ಎಂಥ ಅಸಹ್ಯ....ಹೆಂಡವನ್ನು ಕುಡಿದು, ಬಂಗಿಯನ್ನು ಸೇದಿದರೆ ಶಿವನು ಒಲಿವನೆ?' ಕೆಂಪಾದ ಕಣ್ಣುಗಳನ್ನು ಹೊರಿಸುತ್ತ ಹೇಳಿದನು:

'ನಿಲ್ಲವ್ವಾ....ಎಂಥಾ ವೈಭವದಿಂದ ಭಜನೆ ಮಾಡ್ತೀವಿ....ನೋಡುವಿಯಂತೆ ತಡಿ....ಎಲ್ಲಲಾ ಬ್ರಹ್ಮಾನಂದ....ಒಂದು ಕೈತಗೋ....' ತತ್ತರಿಸುತ್ತ ಮೇಲೆದ್ದು, ಶಿಷ್ಯನಿಗೆ ಸೂಚನೆಯನ್ನು ನೀಡುತ್ತಿದ್ದಂತೆಯೇ ಒಂದು ಜೊತೆ ತಾಳಗಳನ್ನು ತಾನೂ ಕೈಯಲ್ಲಿ ಹಿಡಿದುಕೊಂಡನು. ಸಹ ಪರಿವಾರವೂ ಎದ್ದಿತು. ಆಗಾಗ ಮದ್ಯವನ್ನು 'ಸ್ಫೂರ್ತಿ'ಗಾಗಿ ಕುಡಿಯುತ್ತ, ನಡುನಡುವೆ ಸಿದ್ಧಪತ್ರೆಯನ್ನು ಸೇದುತ್ತ,

'ಶಿವಾಯ ನಮಃ....ನಮಃ ಶಿವಾಯ....' ಎಂದು ರಾಗವಾಗಿ ಹೇಳುತ್ತ ಕುಣಿಯಲಾರಂಭಿಸಿದರು. ಸತ್ವಗುಣ ಪ್ರಧಾನ ಪ್ರಾರ್ಥನೆ-ಧ್ಯಾನಗಳಂತೆ ಇರದೆ ತಮೋಗುಣ ಪ್ರಧಾನ ಅಸಹ್ಯ ಕುಣಿತದಂತೆ ಕಂಡುಬಂದ ಆ ಭಜನೆಯನ್ನು ನೋಡುತ್ತ ಅಕ್ಕಮಹಾದೇವಿ ಬಲವಂತವಾಗಿ ನಗುವನ್ನು ತಡೆದುಕೊಂಡು ಒಳಗೇ ಮುಸಿನಗುತ್ತಿದ್ದರೂ, ಮರುಕದಿಂದ ಮನನೊಂದುಕೊಂಡಳು. ಆವೇಶಪೂರ್ಣ ಕುಣಿತವನ್ನು ಮುಗಿಸಿ ಅವಧೂತರು ಆಸನದ ಮೇಲೆ ದಣಿದು ಒರಗುತ್ತ:

'ಹೆಂಗೈತ್ರಯ್ಯಾ.....ಬ್ರೋ....

'ಹಿರಿಯರೇ .... ದೈವೀಕಾರುಣ್ಯವನ್ನು ದೊರಕಿಸಿಕೊಳ್ಳಬೇಕಾದರೆ ಭಕ್ತಿಯು ಅವಿವೇಕ-ಆವೇಶಗಳಿಂದ ಕೂಡಿರಬಾರದು, ಜ್ಞಾನ-ಶಾಂತಿಗಳಿಂದ ಕೂಡಿರಬೇಕು. ಧಿಮಿಧಿಮಿ ಎಂದು ಮೈಮರೆತು ಕುಣಿದೂ ಬದುಕಿನಲ್ಲಿ ಆದರ್ಶಮೌಲ್ಯಗಳು ಅಳವಡದಿದ್ದರೆ ಅದು ಬಂಧನವಲ್ಲದೆ ಬೇರಲ್ಲ.

ರತ್ನದ ಸಂಕೋಲೆಯಾದರೇನು ತೊಡರಲ್ಲವೆ ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದರೆ
ಜನನ ಮರಣ ಬಿಡುವುದೇ ಚನ್ನಮಲ್ಲಿಕಾರ್ಜುನಾ ?*

'ಯವ್ವಾ....ಭೂರಿ ಬ್ರಹ್ಮಾನಂದದಲ್ಲಿ ತೇಲುವವರು ನಾವು ; ಸಾಕ್ಷಾತ್ ಪರಬ್ರಹ್ಮ ಸ್ವರೂಪರು. ಇದು ತೂರ್ಯಾತೀತ ಆರೂಢ ಪದವಿ....'

'ತೂರ್ಯಾತೀತ ಸ್ಥಿತಿ ದೊರೆಯುವುದು ಅನಾಚಾರದಿಂದಲ್ಲ, ಶುಷ್ಕಾಚಾರ ದಿಂದಲೂ ಅಲ್ಲ ; ಕೇವಲ ಸದಾಚಾರದಿಂದ ಮಾತ್ರ. ಇಂಥ ಅಸಹ್ಯ ಚಟ ಗಳಿಂದ ಬದುಕನ್ನೇ ಕಲಂಕಯುಕ್ತ ಮಾಡಿಕೊಂಡವರಿಗೆ ಅಂಥ ಪವಿತ್ರ ಸ್ಥಿತಿ ಒದಗುವುದುಂಟೇ ?....'

'ಪಾಪ....ಪಾಪ....ನೀನಿನ್ನೂ ಎಳೆಯ ಮಗು ! ಬಾಳ ಸಾಧನೆ ಮಾಡ್ಬೇಕವ್ವಾ. ಅಷ್ಟು ಸುಲಭವಾಗಿ ಬ್ರಹ್ಮಾನಂದದ ಸ್ಥಿತಿ ಬರದು. ನಾನೇ ಸಾಕ್ಷಾತ್ ಪರಬ್ರಹ್ಮನು, ನಿರಂಜನನೂ ಸ್ವಭಾವತಃ ಇರುವಾಗ ಇದಾವ ಕಲಂಕವೂ ನನ್ನನ್ನು ತಟ್ಟಲಾರದು....ನಿನ್ನಲ್ಲಿನ್ನೂ ಜೀವಭಾವವೇ ಹೋಗಿಲ್ಲ....ಶಿವಭಾವವು ಬಂದಿಲ್ಲ....' ಮರುಕದ ದನಿಯಲ್ಲಿ ಅವಧೂತರು ಹೇಳಿದರು.

'ನಾನೇ ಬ್ರಹ್ಮ ಎಂದರೆ ಅರ್ಥವೇನು ಸ್ವಾಮಿಗಳೇ ? ಸಚ್ಚಿದಾನಂದ ಬ್ರಹ್ಮಸ್ವರೂಪದ ಸರ್ವಜ್ಞತ್ವ, ಸರ್ವವ್ಯಾಪಕತ್ವ, ನಿಮಗೇನಾದರೂ ಉಂಟೆ ? ಮಾನವಸಹಜ ದೌರ್ಬಲ್ಯ-ಪ್ರಾಕೃತಿಕ ಗುಣಗಳೇ ನಿಮ್ಮಲ್ಲಿನ್ನೂ ತೊಲಗಿಲ್ಲ ; ಇನ್ನು ದೈವತ್ವ ಬರುವುದು ಎತ್ತಣದು !'

'ಪಾಪ....ಎಂತಹ ಅಜ್ಞಾನಿ ! ಯವ್ವಾ....ನಾನೇ ಬ್ರಹ್ಮನಿರುವಾಗ ಇನ್ನು ದೈವತ್ವ ಎಲ್ಲಿಂದ ಬರಬೇಕು....?'

'ಶರೀರದಿಂದ ಸೀಮಿತವಾಗಿ, ಮನಸ್ಸಿನ ಬಯಕೆಗಳಿಂದ ಮೆಟ್ಟಲ್ಪಟ್ಟು,

---

* ಮು.ವ. ೯೧

ಇಂದ್ರಿಯಗಳಿಂದ ಆಳಲ್ಪಟ್ಟು, ಸುಖದುಃಖ ಜಾಲದಲ್ಲಿ ಬಳಲುತ್ತ 'ನಾನು ಬ್ರಹ್ಮನಿರುವೆ' ಎಂದು ಬುದ್ಧಿಯಿಂದ ತಿಳಿದ ಮಾತ್ರಕ್ಕೆ ಬ್ರಹ್ಮನಾಗಲು ಸಾಧ್ಯವೇ! ಅಂತಹ ಸ್ಥಿತಿ ಪಡೆಯಲು ಪ್ರಯತ್ನಿಸಬೇಕು. ಶಾಬ್ದಿಕ ಅರಿವು ಸಾಧ್ಯವಾಯಿತೆಂದು ಪೂಜೆ-ಪುರಸ್ಕಾರ ಬಿಟ್ಟು, ಎಲ್ಲವೂ ಬ್ರಹ್ಮನೆಂಬುದನ್ನು ಅಸಾರ್ಥಮಾಡಿ, ಅಖಂಡಜ್ಞಾನವಾಯಿತ್ತೆಂದು ಪರಧನ—ಪರಸ್ತ್ರೀಗೆ ಎಳಸಲಾಗುವುದೇ? ಎಲ್ಲವೂ ಶಿವನೇ ಎಂಬ ಅಭಿನ್ನ ಜ್ಞಾನವಾಯಿತೆಂದು ನಾಯಿ ಹಂದಿಕೋಳಿಗಳೊಡನೆ ಒಂದೇ ತಳಿಗೆಯಲ್ಲಿ ಭುಂಜಿಸಬಹುದೆ? ಅಂತರಂಗದಲ್ಲಿ—ಭಾವದಲ್ಲಿ ಪರಿಪಕ್ವಗೊಂಡು ಎಲ್ಲೆಡೆಯಲ್ಲಿ ದೈವೀಚೇತನವು ಹಾಸುಹೊಕ್ಕಾಗಿ ಇರುವುದನ್ನು ಅರಿತಿರಬೇಕು; ಬಹಿರಂಗದಲ್ಲಿ ಸಂಯಮ ಮೀರದೆ, ಅನಾಚಾರಕ್ಕಿಳಿಯದೆ ಸುಜ್ಞಾನ-ಸತ್ಕ್ರಿಯಾ ಮಾರ್ಗದಲ್ಲಿ ನಡೆಯಬೇಕು....'*

'ಯವ್ವಾ....ನಾನು ಹಾಲನ್ನು ಕುಡಿದಷ್ಟು ನೀನು ನೀರು ಕುಡಿದಿಲ್ಲ. ನಾನು ನಿನ್ನಂಗೇ ಭಾರೀ ಉಪದೇಶ ಮಾಡ್ತಿದ್ದೆ. ದಿನಕ್ಕೆ ಮೂರು ಬಾರಿ ಮೀಯ್ತಿದ್ದೆ. ಪೂಜೆ-ಪುರಸ್ಕಾರ ಎಲ್ಲವಿತ್ತು. ಆದರೆ ಜೀವಭಾವ ತೊಲಗಿ, ಬ್ರಹ್ಮಭಾವ ಬಂದ ಬಳಿಕ ಅವೆಲ್ಲ ಉಪಯೋಗವಿಲ್ಲ ಎಂದು ಬಿಟ್ಬಿಟ್ಟೆ....'

'ಹಿರಿಯರೇ, ಅರ್ಥವಿಲ್ಲದ ಶುಷ್ಕಾಚಾರವೂ ಬೇಡ, ಅತಿಯಾದ ಅನಾಚಾರವೂ ಬೇಡ. ಉಣ್ಣುವ ಊಟ ಅತಿಯಾದರೆ ಬೊಜ್ಜು ಬರುತ್ತದೆ, ಕೊರತೆಯಾದರೆ ಸೊರಗುತ್ತದೆ. ಎರಡೂ ಅವಲಕ್ಷಣದ ವ್ಯೈಗಳೇ....ಅವಶ್ಯವಿದ್ದಷ್ಟು ಉಂಡು, ಸರಿಯಾಗಿ ಪಚನಮಾಡಿಕೊಂಡು ದುಡಿಯುತ್ತಿದ್ದರೆ ಆರೋಗ್ಯವೂ ಚೆನ್ನಾಗಿರುವುದು, ಶಾಂತಿಯೂ ಉಳಿಯುವುದು. ಅತಿಯಾದ ಶುಷ್ಕಾಚಾರ ಮಾಡಿದಾಗ ಭಾಕ್ತಿಕ ಬದುಕಿನಲ್ಲಿ ಮೂಢನಂಬಿಕೆಯ ಬೊಜ್ಜು ಸೇರಿ ಪಾರಮಾರ್ಥ ಜೀವನವು ಆಡಂಬರದಂತೆ ತೋರುವುದು. ಅವಶ್ಯಕವಿದ್ದಷ್ಟು ಆಚಾರವನ್ನೂ ತೊರೆದರೆ ಸುನೀತಿ-ಸುಜ್ಞಾನಗಳೆಂಬ ರಕ್ತಮಾಂಸಗಳ ಕೊರತೆಯಿಂದ ಆಧ್ಯಾತ್ಮಿಕ ಬದುಕು ಬಡಕಲಾಗಿ ಅಸಹ್ಯಕರ ಕಾಣುವುದು.

'ನಾವು ಆದರ್ಶಗಳನ್ನು ಇಟ್ಟುಕೊಂಡು ಈ ಬಾಳಿಗೆ ಬಂದರಷ್ಟೇ ಸಾಲದು. ಅವನ್ನು ನೀರ ಗುರುಳೆಗಳಂತೆ ಸಿಡಿದುಹೋಗಲವಕಾಶ ಕೊಡದೆ ಕಡೆಯವರೆಗೂ ಉಳಿಸಿಕೊಳ್ಳಬೇಕಾದುದು ಅತ್ಯಾವಶ್ಯಕ. ಈ ಪಾರಮಾರ್ಥಿಕ ಬದುಕೊಂದು ಕಳ. ದೇವನೇ ಮಾರಂಕ, ಜೀವನೇ ಶರಣವೀರ. ಶೂರನಾದ ಯೋಧನು ಯುದ್ಧದಲ್ಲಿ

ಹಿಮ್ಮೆಟ್ಟಬಾರದು. ಈ ದೇವ-ಭಕ್ತರ ಸಮರದಲ್ಲಿ ಬಳಸುವ ಅತಿಮುಖ್ಯ ಕೈದು ಎಂದರೆ ಸದಾಚಾರ. ಆ ಆಯುಧವ ಕೈಬಿಟ್ಟರೆ ಮಾರಂಕನು ಎಂದಿಗೂ ಉಳಿಯಗೊಡಲಾರನು.'*

'ಮಾವಿನ ಹಣ್ಣುಗಳ ಕಾಲದಲ್ಲಿ ಗಿಡದಿಂದ ಹಣ್ಣುಗಳನ್ನಿಳಿಸಿ ಕಾವಿಗಿಡುವರು. ಮಿಡಿಗಾಯಿಯನ್ನೇ ಕಿತ್ತಿದ್ದರೆ ಅದು ಹುಳಿಯಾಗಿದ್ದು, ಪೂರ್ಣ ಚೆಂಬಣ್ಣಕ್ಕೆ ತಿರುಗದು. ಪೆಟ್ಟುಬಿದ್ದ ಕಾಯಾದರೆ ಅಷ್ಟು ಭಾಗ ಕೊಳೆತಿರುವುದು. ಯೋಗ್ಯ ದೋರೆಗಾಯಿಯಾದರೆ ಮಧುರವಾದ ವಾಸನೆ ಸೂಸುತ್ತ ಕೆಂಪು-ಹಳದಿ ವರ್ಣಕ್ಕೆ ತಿರುಗಿ ಸಿಹಿಯಾಗಿರುವುದು. ಹಾಗೆಯೇ ಗುರಿಮುಟ್ಟಲಾರದೆ ಹತಾಶರಾದ ಸಾಧಕರು ನಿರಾಶೆ-ಅತೃಪ್ತಿಗಳ ಸಂಗಮವಾಗಿ ಉಳಿಯುವರು. ದುರ್ಗುಣ-ದುಶ್ಚಟಗಳ ಪೆಟ್ಟಿಗೆ ಬಲಿಯಾದವರು ತಮ್ಮಂತೆ ಅನಾಚಾರದ ಬದುಕಿನಲ್ಲಿ ಕೊಳೆಯುವರು. ಸಜ್ಜನತ್ವ-ಶಾಂತಿ, ಮನೋನಿಗ್ರಹಗಳಿಂದ ಕೂಡಿದ ಸತ್ವಗುಣ ಪ್ರಧಾನ ಅಂತರ್ಮುಖ ಜೀವನವಿದ್ದವರು ಮಾತ್ರ ಮಾಗಿದ ಮಧುರ ಫಲವಾಗುವರು. ಆಗ ಚನ್ನಮಲ್ಲಿಕಾರ್ಜುನನು ಆ ಜೀವವನ್ನು ತನಗೆ ಬೇಕೆಂದು ಎತ್ತಿಕೊಳ್ಳುವನು....'

ಅಕ್ಕಮಹಾದೇವಿಯ ಕಣ್ಣುಗಳು ವಿಲಕ್ಷಣ ಕಾಂತಿಯಿಂದ ಮಿರುಗುತ್ತಿದ್ದವು. ಅಲ್ಲಿಂದ ಸ್ಫುರಿಸುತ್ತಿದ್ದ ಜ್ಞಾನಪ್ರಭೆಯನ್ನು, ಮುಖದ ಮೇಲೆ ಗುಡಿಗಟ್ಟಿದ ತೇಜಸ್ಸನ್ನು ಕಂಡ ಆ ಅವಧೂತರು ಮಿಂಚಿನ ಸಂಚಲವಾದ ಅನುಭವ ಪಡೆದು ಮೇಲೆದ್ದು ಸಾಷ್ಟಾಂಗವೆರಗಿದರು. ಸುತ್ತಲೂ ಇದ್ದ ಶಿಷ್ಯ ಪರಿವಾರವು ಅವಾಕ್ಕಾಯಿತು.

'ಏಳಿರಿ....ಹಿರಿಯರೇ....ತಮ್ಮಂತಹವರು ಸಾಷ್ಟಾಂಗವೆರಗಬಾರದು.'

'ತಾಯಿ....ಗುರುಮಾತಾ ಅಧೋಮಾರ್ಗದಲ್ಲಿದ್ದವನನ್ನು ಎಚ್ಚರಿಸಿದೆ. ಮನೋದೌರ್ಬಲ್ಯಕ್ಕೆ ತಾತ್ತ್ವಿಕ ಸಮರ್ಥನೆ ಕೊಡುತ್ತ ಮೇಲೇಳಲಾರದ ಕೂಪದಲ್ಲಿ ಬಿದ್ದವನನ್ನು ಜ್ಞಾನೋಪದೇಶದ ಹಗ್ಗವನ್ನು ಕೊಟ್ಟು ಮೇಲೆತ್ತಿದೆ. ನಿನ್ನ ಪರುಷಹಸ್ತದಿಂದ ದೀಕ್ಷೆಯನ್ನೂ ನೀಡಿ ಉದ್ಧರಿಸು ತಾಯಿ....'

ಇನ್ನುಮುಂದೆಯಾದರೂ ಸದಾಚಾರಸಂಪನ್ನರಾಗಿರಿ. 'ಕುಂಬಾರನಿಗೆ ತಿಂಗಳು, ದೊಣ್ಣೆಗೆ ನಿಮಿಷ' ಎಂಬಂತೆ ವಿಧಾಯಕದೈವೀಬದುಕನ್ನು ರೂಪಿಸಿಕೊಳ್ಳಲು ಶ್ರಮ ಬಹಳ; ವಿಧ್ವಂಸಕ ಕೀಳು ಬದುಕಿಗೆ ಪಕ್ಕಾಗಲು ಯಾವ ಶ್ರಮವೂ ಬೇಡ....ಬೆಟ್ಟವನ್ನು ಏರುವುದರಲ್ಲಿ ಘನ ಸಾಧನೆಯುಂಟೇ ವಿನಾ, ಜರ‍್ರನೆ ಜಾರುವುದರಲ್ಲಲ್ಲ....'

---

* ಮ.ವ. ೧೧೮

ಶಾಸ್ತ್ರೋಕ್ತವಾಗಿ ದೀಕ್ಷೆಯನ್ನು ನೀಡಿ, ಅವಧೂತನಲ್ಲಿ ನಶಿಸುತ್ತಿದ್ದ ವಿರಕ್ತಿಯ ಕಿಡಿಯನ್ನು ಉಜ್ವಲಮಾನವಾಗಿ ಉರಿಯುವಂತೆ ಉದ್ದೀಪಿಸಿದಳು.

೫೫. ದಯೆಯೇ ಧರ್ಮದ ಮೂಲ

ಅಕ್ಕಮಹಾದೇವಿಯು ಈಗ ಶ್ರೀಗಿರಿಯ ಕಡೆಗೆ ಸಾಗುತ್ತ, ದಿನದಿನಕ್ಕೂ ಸನಿಹವಾಗುತ್ತಲಿದ್ದಳು. ಅಂದು ಪ್ರಶಾಂತವಾದ ಬೆಳುದಿಂಗಳು ಜಗತ್ತನ್ನು ತನ್ನ ಬಾಹುಗಳಿಂದ ಬಿಗಿದಪ್ಪಿತ್ತು. ಆ ಆನಂದವನ್ನು ಸವಿಯುವ ಸಲುವಾಗಿ ಊರಿನಲ್ಲಿ ಪ್ರವೇಶಿಸಬಯಸದೆ ಒದಗಿದ ನದಿಯ ದಂಡೆಯಲ್ಲೇ ವಸತಿ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದಳು. ಮಳಲ ಮೈದಾನದ ಮೇಲೆ ಕುಳಿತು ಆಗಸವನ್ನೇ ದಿಟ್ಟಿಸುತ್ತ ತೂರ್ಯಾವಸ್ಥೆಯಲ್ಲಿ ಕಾಲ ಕಳೆದಳು. ಸೃಷ್ಟಿಯ ಚೆಲುವನ್ನು ಕಡೆಗಣಿಸಿ ಮಿಥ್ಯವಿದು ಎಂದು ಮೂಗೆಳೆಯುವವರ ಸಿದ್ಧಾಂತಕ್ಕೆ ಅಚ್ಚರಿಗೊಂಡಳು. ಭಾವಲಿಂಗ ಸಾಕ್ಷಾತ್ಕಾರವಾದಂದಿನಿಂದ ಸೃಷ್ಟಿಯ ಕಣ ಕಣದಲ್ಲೂ ಚೈತನ್ಯವೊಂದು ಮಿಡಿಯುತ್ತಿದೆ ಎಂಬ ಭಾವವು ಬಲಿದಿತ್ತಾಕೆಗೆ.

'ಸೃಷ್ಟಿಯ ದೇವದೇಗುಲದೊಳಗೆ ಕರ್ತನ ಪೂಜೆಯು ಸಾಗುತ್ತಿದೆ. ಆದರೇನಂತೆ ಕಾಣುವ ಕಣ್ಣು ಇರದಿರೆ ಇಲ್ಲಿ, ತೋರುವುದೆಲ್ಲವು ಜಡಕ್ರಿಯೆಯಾಗಿ....' ಎಂದುಕೊಂಡಳು. ಬೆಳ್ಳಿಯ ಚುಕ್ಕೆ ಮೂಡುವ ಮುನ್ನವೇ ಬೆಳ್ದಿಂಗಳ ಬೆಳಗಿನಲ್ಲಿ ಹೊಳೆಯುತ್ತ ಹರಿಯುವ ನದಿಯಲ್ಲಿ ಮಿಂದು ಪೂಜೆಗೆ ಕುಳಿತಳು. 'ನಾನು ಎಂದು ಕದಳಿಯ ವನವನ್ನು ಸೇರುವೆನೋ, ಪೂಜೆಗೆ ಕುಳಿತವಳು ಮತ್ತೆ ಏಳದಂತೆ ಕುಳಿತು, ನಾನೊಬ್ಬಳೇ ಆ ತೂರ್ಯಾತೀತ ಅವಸ್ಥೆಯಲ್ಲಿ ಎಂದು ನಿಲ್ಲುವೆನೋ' ಎಂಬ ಅಂತರಂಗದ ಕರೆ ಮತ್ತೊಮ್ಮೆ ಮೊರೆಯಿತು. ಒಡನೆ ಬಂದಿದ್ದ ಜಂಗಮರು ಗಾಢನಿದ್ರೆಯಲ್ಲಿದ್ದರು.

ಬೆಳಗಿನ ರವಿ ಕಿರಣಗಳು ಆಕೆಯನ್ನು ಅಪ್ಪಿದಾಗಲೂ ಕಣ್ಣುಗಳನ್ನು ತೆರೆದು ಬಹಿರ್ಮುಖಳಾಗಬೇಕೆನಿಸಲಿಲ್ಲ. ಎಷ್ಟೋ ವೇಳೆಯ ಬಳಿಕ ಆಕೆ ಎಚ್ಚರಗೊಂಡಾಗ ಸುತ್ತಲೂ ಕಣ್ಣುಹಾಯಿಸಿದಳು. ಧ್ಯಾನಸ್ಥಿತಿಯಲ್ಲಿರುವ ಆಕೆಯನ್ನು ಬಹಿರ್ಮುಖಿಸದೆ ಜಂಗಮರು ಮೀಯಲು ಹೋಗಿದ್ದರು. ಅಕ್ಕ ಮಹಾದೇವಿ ಮೇಲೆದ್ದು ತೋಯ್ದ ಕೂದಲನ್ನು ಬಿಡಿಬಿಡಿಯಾಗಿ ಹರವಿಕೊಂಡು ಸುಪ್ರಭಾತದ ಸೊಬಗನ್ನು ಸವಿಯುತ್ತ ನದಿಯ ದಂಡೆಯ ಮೇಲೆ ನಡೆದಾಡತೊಡಗಿದಳು. ಮನುಷ್ಯರ ಧ್ವನಿಯನ್ನು ಕೇಳಿ ಅತ್ತ ನೋಡಿದಾಗ ನದಿಯು ಮಡುಗಟ್ಟಿನಿಂತ ಸ್ಥಳದಲ್ಲಿ ಇಬ್ಬರು ಹಳ್ಳಿಗರು ಕುಳಿತಿದ್ದರು. ಅಕ್ಕ ಮಹಾದೇವಿಯ ದೃಷ್ಟಿ ಅವರ ಮೇಲೆ ಬೀಳುತ್ತಲೇ ತಮ್ಮತಮ್ಮಲ್ಲಿ ಮಾತಿಗೆ ತೊಡಗಿದರು.

‘ಎಂಥಾ ಕಳಾವಂತಳೋ ಭೀಮ್ಯಾ ಈ ತಾಯಿ! ವನದೇವತೆ ಇರ್ಬೇಕು. ಸುತ್ತಾಡ್ತಾ ಇದ್ದಾಳೆ....’ ಎಂದ ಕಣ್ಣುಗಳಲ್ಲಿ ಆಶ್ಚರ್ಯ ಸೂಸುತ್ತ.

‘ಇಲ್ಲೋ....ಈ ಗಂಗವ್ವ ರೂಪ ತಗೊಂಡು ಬಂದಿರ್ಬೇಕು....’

‘ನಮ್ಮೂರ ಮಾರವ್ವ ಏನಾರಾ ಬಂದಿರುವಳೋ....’

‘ಬಿಡೋ....ಅದ್ಕೇ ಬೆಪ್ಪಾ ಅನ್ನೋದು. ಮಾರವ್ವ ಉಗ್ರದೇವತೆ ಅಲ್ವಾ. ಈಯಮ್ಮನ ಮುಖದ ಕಾಂತಿ ನೋಡು. ಆ ಹಣೆ ಮೇಲಿನ ಭಸ್ಮ ನೋಡು. ಸಾಕ್ಷಾತ್ ಪಾರ್ವತಿ ಹಂಗೆ ಕಾಣ್ತಾಳೆ. ನಮಸ್ಕಾರ ಹಾಕಾಣ ಬಾ....’

ಅಕ್ಕಮಹಾದೇವಿ ಅವರ ಮಾತಿಗೆ ಮನದಲ್ಲೇ ನಕ್ಕಳು. ಎಂತಹ ಮುಗ್ಧರಿವರು, ಎಂದುಕೊಳ್ಳುತ್ತ ಅವರ ಸಮೀಪಕ್ಕೆ ಹೋದಳು.

‘ಏನು ಮಾಡ್ತ ಇದ್ದೀರಪ್ಪ ನೀವು....?’ ಎಂದಳು. ಅವರು ಗಡಬಡಿಸಿ ಕೈಲಿ ಹಿಡಿದ ಬಲೆಯನ್ನು ಮಗ್ಗುಲ ಬಂಡೆಗೆಳೆದು, ಬಂದು

‘ಅಡ್ಡ ಬಿದ್ವಿ ತಾಯಿ....’ ಎಂದು ಈರ್ವರೂ ನಮಸ್ಕರಿಸಿದರು.

‘ಯವ್ವಾ ಮೀನು ಹಿಡಿತಿದ್ದೀವಿ. ನಾವು ಬೆಸ್ತರು; ಇದೇ ನಮ್ಮುದ್ಯೋಗ.’

‘ಮೀನು ಹಿಡಿದು ಆಯ್ತೇನಪ್ಪಾ....?’

‘ಹೆಂಗ ಆಗುತ್ತವ್ವ. ಇನ್ನೂ ಇಷ್ಟೇ ಸಿಕ್ಕಿರೋದು....’ ಬೊಟ್ಟುಮಾಡಿ ಪುಟ್ಟಿಯ ಕಡೆ ತೋರಿಸಿದ. ಅಕ್ಕಮಹಾದೇವಿ ಸಹಜವಾಗಿ ಅತ್ತ ದೃಷ್ಟಿ ಹರಿಸಿದಳು. ಆದರೆ ಮರುಕ್ಷಣದಲ್ಲೇ ದುಃಖದ ಆಳದಲ್ಲಿ ಮುಳುಗಿದಳು. ಬುಟ್ಟಿಯಲ್ಲಿ ಬಿದ್ದ ಮೀನುಗಳು ನೀರಿನ ವಲಯದಿಂದ ಹೊರಬಂದ ಕಾರಣ ವಿಲಿವಿಲಿ ಒದ್ದಾಡುತ್ತಿದ್ದವು. ಹೃದಯವು ಕಂಪಿಸಿ ಕಣ್ಣುಗಳು ಹನಿಗೂಡಿದವು. ಅಂತಹ ಜೀವವಧೆಯ ಪ್ರಸಂಗವನ್ನು ನೇರವಾಗಿ ಆಕೆ ಎಂದೂ ನೋಡಿರಲಿಲ್ಲ. ಇಲ್ಲಿಯ ತನಕ ಸೃಷ್ಟಿಯ ಪ್ರಸನ್ನಮುಖವನ್ನು ನೋಡಿದ ಆಕೆಗೆ ಈಗ ಸಾಕ್ಷಾತ್ ಚನ್ನಮಲ್ಲಿಕಾರ್ಜುನನ ಚೇತನವೇ ಅಲ್ಲಿ ಒದ್ದಾಡುವ ಅನುಭವವಾಯಿತು.

ಆ ಭರಮಣ್ಣ ಹೇಳುತ್ತಿದ್ದ :

‘ಯವ್ವಾ....ಇದೇ ನಮ್ಮ ಬದುಕಿನ ಮಾರ್ಗ. ಮನ್ಯಾಗೆ ನಾನು, ನನ್ತಾಯಿ, ನನ್ನ ಹೆಂಡ್ತಿ, ಐದು ಮಕ್ಕಳು...ಅಲ್ಲ ಅಲ್ಲ....ನಾಕು ಮಕ್ಕಳು ತಿನ್ನಾಕೆ ಬೇಕು; ಇನ್ನೂ ಪುಟ್ಟೀನೆ

‘ಅವ್ವಾ....ಈ ಭರಮನಿಗೆ ಐವರು ಮಕ್ಕಳಿದ್ರು. ಮೊನ್ನೆ ಒಂದು ಕೂಸು ಜೀವ ಬಿಡ್ತು. ನೆನಪಾಗಿ ಅಳ್ತಾ ಅನ್ನೆ. ಅವನ ಹೆಂಡ್ತಿ ಬೊಮ್ಮಿ ಅಂತೂ ಮಕ್ಕಂಡವ್ಳು ಮ್ಯಾಕೆ ಎದ್ದಿಲ್ಲ....’

ಅವನ ದುಃಖವನ್ನು ಕಂಡು ಆಕೆಗೆ ಜೀವವನ್ನು ಹಿಂಡಿದಂತಾಯಿತು. ತತ್‌ಕ್ಷಣವೇ ಪುಟ್ಟಿಯಲ್ಲಿನ ಅಲ್ಪ ಸ್ವಲ್ಪ ಜೀವವುಳ್ಳ ಮೀನುಗಳೂ ಸಹಾಯವನ್ನು ಯಾಚಿಸುವಂತೆ ಅನಿಸಿತು. ಆವೇಶದಿಂದ ಮುಂದೆ ಸಾಗಿ ಪುಟ್ಟಿಯನ್ನು ಎತ್ತಿ ಹರಿಯುವ ನೀರಿನೊಳಗೆ ಎಸೆದಳು. ನೀರಿನಲ್ಲಿ ಬಿದ್ದ ಮೀನುಗಳು ಚೇತರಿಸಿಕೊಳ್ಳುವುದನ್ನು ಗಮನಿಸುತ್ತ ನಿಂತಿರುವಾಗಲೇ,

‘ಯವ್ವಾ....ಇದೇನು ಮಾಡಿದ್ರಿ....?’ ಎಂದು ಭರಮಣ್ಣ ನೀರಿಗೆ ಬಿದ್ದ ಬುಟ್ಟಿಯನ್ನು ಮರಳಿ ತಂದ.

ಯಾವ ಮಾತೂ ಕೇಳಿಬರದ ಅಕ್ಕಮಹಾದೇವಿ ಸಮಾಧಾನಚಿತ್ತಳಾಗಿ ಬಂಡೆಗಲ್ಲ ಮೇಲೆ ಕುಳಿತು ಆಲೋಚಿಸಿದಳು. ಆ ಅನುಭವವು ವಚನವೊಂದನ್ನು ಪುಟಿಸಿತು—

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ,
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕೆ ಮರಗುವಂತೆ ಅವಕೇಕೆ ಮರುಗ...?
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ
ಇದು ಕಾರಣ, ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ...*

ವಚನವನ್ನು ಗುಣಗಿಕೊಳ್ಳುತ್ತ, ತನ್ನನ್ನು ಬೆರಗಾಗಿ ದಿಟ್ಟಿಸುತ್ತಿದ್ದ ಆ ಬೆಸ್ತರನ್ನು ನೋಡಿದಳು. ಅವರನ್ನು ಕರೆದು, ಕುಳಿತುಕೊಳ್ಳುವಂತೆ ಹೇಳಿದಳು.

‘ಭರಮಣ್ಣಾ....ನಿನ್ನ ಒಂದು ಮಗು ಸತ್ತರೆ ನಿನಗೆಷ್ಟು ವ್ಯಥೆ ನೋಡು. ನಿನ್ನ ಹೆಂಡತಿ ಎಷ್ಟು ನೋಯುತ್ತಿರುವಳು ಅಲ್ವೇ....?’ ಮಗುವಿನ ನೆನಪು, ಮೀನುಗಳನ್ನು ಕಳೆದುಕೊಂಡದ್ದು ಎರಡೂ ಸೇರಿ ಇಬ್ಬರೂ ವ್ಯಥಿತರಾಗಿದ್ದರು.

‘ಅಹುದವ್ವಾ....’

‘ಹಾಗೆಯೇ ನೀನು ಮೀನುಗಳನ್ನು ಹಿಡಿದರೆ, ಅವುಗಳ ತಾಯಿ-ತಂದೆಯರಿಗೆ ವ್ಯಥೆಯಾಗದೆ? ನೀನು ಬಲೆ ಬೀಸಿ ಮೀನುಗಳನ್ನು ಹಿಡಿಯುವೆ. ಹೆಚ್ಚು ಸಂಖ್ಯೆಯಲ್ಲಿ ಸಿಕ್ಕರೆ ಆನಂದಪಡುವೆ. ಹಾಗೆಯೇ ವಿಧಿ ಎಂಬ

---

*

ಬಿನ್ನಿನ ನೀವಿನ ಬಲೆ ಬೀಸಿ ನಿನ್ನ ಮಗುವನ್ನು ಹಿಡಿದರೆ ಏಕೆ ನೋಯುವೆ...?,
ನಿನ್ನಂತೆ ಇತರ ಜೀವಿಗಳಿಗೆ ಸಹ ಸುಖ-ದುಃಖಗಳಿವೆ ಎಂಬುದು ತಿಳಿಯದೆ....?,

'ಯವ್ವಾ....ನಮ್ಮ ಉದ್ಯೋಗವೇ ಇದು ಕಣವ್ವಾ....'

'ಅನ್ಯಜೀವಿಗಳ ಪ್ರಾಣಹರಣ ಮಾಡಿ ಬದುಕುವ ಬಗೆ ಬೇಡವಪ್ಪ. ನಿಸರ್ಗವು ತಾಯಿಯಂತೆ. ಆಕೆಯ ಹಾಲನ್ನು ಹೀರಬೇಕೇ ವಿನಾ ರಕ್ತವನ್ನು ಕುಡಿಯಬಾರದು. ನಿನ್ನ ಮಗನನ್ನು ಯಾರಾದರೂ ಹೊಡೆದರೆ ಬಡಿದರೆ ನೀನು ಕೋಪಗೊಳ್ಳುವಂತೆ ಶಿವನ ಮಕ್ಕಳೇ ಆದ ಪ್ರಾಣಿಗಳನ್ನು ಕೊಂದರೆ ಅವನು ಕೋಪಗೊಳ್ಳದಿರುವನೆ....?'

'ಮತ್ತೆ ಹೆಂಗ ಬದುಕಬೇಕವ್ವಾ....?'

'ಪ್ರಾಣಿಹಿಂಸೆ ಮಾಡದ ಅನೇಕ ನಿರ್ಮಲ ಉದ್ಯೋಗಗಳು ಇಲ್ಲವೇ ಅಣ್ಣಾ? ಪವಿತ್ರ ಕಾಯಕಗಳನ್ನು ಮಾಡಿ ಬದುಕಬೇಕು. ತಾನೂ ಬದುಕಿ, ಇತರರನ್ನೂ ಬದುಕಿಸುವ ಪ್ರಯತ್ನ ಮಾಡಬೇಕು ಅಣ್ಣಾ. ಕೇವಲ ಶರೀರ ರಕ್ಷಣೆಗಾಗಿ ಅನ್ಯರ ಪ್ರಾಣಹರಣ ಮಾಡುವ ನೀವು, ಸಾಯದೇ ಶಾಶ್ವತ ವಾಗಿ ಇರುವಿರಾ? ಅಂದಾಗ ಬದುಕಿನ ತುಂಬ ಪಾಪದ ಬುತ್ತಿಯನ್ನು ಕಟ್ಟುವುದೊಂದೇ ಕೆಲಸವೆ....?'

'ಆಗಲವ್ವಾ....ಪವಿತ್ರವಾದ ಉಳಿಮೆ ಕಾಯಕ ಮಾಡಿ ನಾವು ಬದುಕುತ್ತೀವೆ. ಇನ್ನೆಂದೂ ಜೀವಹಿಂಸೆ ಮಾಡಲ್ಲ....' ಎಂದು ಈರ್ವರೂ ಸಾಷ್ಟಾಂಗ ನಮಸ್ಕಾರ ಹಾಕಿದಾಗ ಸಮಾಧಾನಚಿತ್ತಳಾಗಿ ನುಡಿದಳು:

'ಇನ್ನೊಂದು ಜೀವಕ್ಕೆ ಅಂತ್ಯವನ್ನು ತರಬೇಕೆನ್ನುವವನು ದೇವನನ್ನೇ ಹಿಂಸಿಸುತ್ತಾನೆ, ತನ್ನ ಆತ್ಮವನ್ನೇ ತಾನು ಪಾಪದ ಕತ್ತಿಯಿಂದ ಇರಿದುಕೊಂಡು ಕಲಂಕಿತನಾಗುತ್ತಾನೆ. ಅನ್ಯ ಜೀವರನ್ನು ಹಿಂಸಿಸದೆ, ಎಲ್ಲರನ್ನೂ ಪ್ರೇಮಿಸಿ ಬದುಕುವುದೇ ಬಾಳಿನ ತತ್ತ್ವವಾಗಬೇಕು ಅಣ್ಣಾ....ಇಂದು ನೀವು ಉಣ್ಣಬೇಕಾಗಿದ್ದ ಆಹಾರವನ್ನು ಬಿಸುಟಿದೆನಲ್ಲವೇ? ಮನೆಯಲ್ಲಿ ಮಕ್ಕಳು-ಮರಿ ಉಪವಾಸವಿರುವುದು ಬೇಡ. ನನ್ನ ಹಿಂದೆ ಬನ್ನಿರಿ....' ಎಂದು ಅಕ್ಕಮಹಾದೇವಿ ಮುಂದೆ ಸಾಗಿದಾಗ ಅವರು ಮಂತ್ರಮುಗ್ಧರಾಗಿ ಹಿಂಬಾಲಿಸಿದರು. ಜೋಳಿಗೆಗಳಲ್ಲಿದ್ದ ಅಕ್ಕಿ ಮತ್ತು ಹಿಟ್ಟನ್ನು ಅವರ ವಸ್ತ್ರಗಳಿಗೆ ಸುರಿದು, ಅವರು ತೃಪ್ತರಾಗಿ ಕೈಮುಗಿದು ಹೋದುದನ್ನು ನಿರೀಕ್ಷಿಸಿ, ಸಮಾಧಾನಪಟ್ಟಳು.

ಮಾಡಿದ್ದರು. ತಂಡದಲ್ಲಿದ್ದ ಜಂಗಮನೊಬ್ಬನಿಗೆ ಅಲ್ಪಸ್ವಲ್ಪವಾಗಿ ತೆಲುಗು ಬರುತ್ತಿದ್ದುದರಿಂದ ಅವನು ದುಭಾಷಿಯಾಗಿ ಕಾರ್ಯ ಮಾಡಿ ವಿಚಾರಗಳನ್ನು ಪರಸ್ಪರರಿಗೆ ಮುಟ್ಟಿಸುತ್ತಿದ್ದ. ಭಾಷೆಯು ಯಾವುದಾದರೇನು, ಅಕ್ಕ ಮಹಾದೇವಿಯ ಅಪೂರ್ವ ತೇಜಸ್ಸಿಗೆ ಮೂಕರಾದ ಜನತೆ ತಾವಾಗಿ ಸೇವೆ ಸಲ್ಲಿಸಲು ಸಿದ್ಧರಾಗುತ್ತಿದ್ದರು. ಕಲ್ಲಿದ್ದಿಲಿನೊಳಗಣ ಸುಪ್ತ ಬೆಂಕಿ ಪ್ರಕಟವಾಗಿ ಕಲ್ಲಿದ್ದಿಲಿನ ಪ್ರಾಕೃತಿಕ ಗುಣಗಳನ್ನು ತೊಡೆದು ಬೆಂಕಿಯ ರೂಹಾಗಿ, ತನ್ನ ಪರಿಸರವನ್ನೂ ಕಾಯಿಸತೊಡಗುವಂತೆ ಅಕ್ಕಮಹಾದೇವಿಯ ಸ್ಫುಟಗೊಂಡ ಆತ್ಮಶಕ್ತಿ ಆಕೆಯ ಶರೀರದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಸಾಧಿಸಿ ದಂತೆ ಸೃಷ್ಟಿಯ ಮೇಲೂ ಪರಿಣಾಮ ಬೀರುವುದೆನಿಸುತ್ತಿತ್ತು. ಅಷ್ಟು ಸುಲಭ ವಾಗಿ ಆಕೆಯ ಆವಶ್ಯಕತೆಗಳು ಚನ್ನಮಲ್ಲಿಕಾರ್ಜುನನ ಕೈವಾಡದಂತೆನಿಸಿ ಪೂರೈಸುತ್ತಿದ್ದವು.

ಜಾಗ್ರತ, ಸ್ವಪ್ನ, ಸುಷುಪ್ತ್ಯಾವಸ್ಥೆಗಳಲ್ಲೆಲ್ಲ ಸಂತೃಪ್ತಿಯ ತೆರೆಯನು ಹೊದ್ದು ಇರುತ್ತಿದ್ದ ಅಕ್ಕಮಹಾದೇವಿಯ ಪರಿಪಕ್ವ ನಿಲುವು ಸಂಗಡಿಗ ಶರಣರಲ್ಲಿ ಭಯಭಕ್ತಿಗಳನ್ನು ಹುಟ್ಟಿಸಿದ್ದವು. ಸುಸಂಸ್ಕೃತ ವಾತಾವರಣ ವಿರುವ ಊರಿನಲ್ಲಿ ವಿಶೇಷ ಪ್ರಸಾದ ದೊರೆಯುತ್ತಿತ್ತು. ಒಮ್ಮೊಮ್ಮೆ ಜೋಳದ ಒಣಕಲು ಕಜ್ಜಾಯ, ಮೆಣಸಿನ ಪುಡಿಯ ಹೊರತು ಬೇರೇನೂ ಸಿಗುತ್ತಿರಲಿಲ್ಲ. ಪ್ರವಾಸಿಕ ತಂಡದಲ್ಲಿದ್ದ ಕಿರಿಯ ಶರಣ ರುದ್ರಯ್ಯನು ಅಂಥ ಪ್ರಸಂಗದಲ್ಲಿ ಗೋಳಾಡುತ್ತಿದ್ದುದುಂಟು. ಆದರೆ ಆಗರ್ಭ ಸಿರಿವಂತ ಮನೆತನದಲ್ಲಿ ಹುಟ್ಟಿ, ಸುಖ ಸೌಭಾಗ್ಯದಲ್ಲಿ ಬೆಳೆದು, ಬಂದುದನ್ನು ಶಿವ ಪ್ರಸಾದವೆಂದು ಸ್ವೀಕರಿಸುವ ಅಕ್ಕಮಹಾದೇವಿಯ ಸಂತೃಪ್ತಿಯನ್ನು ಕಂಡು ಅವನ ನಾಲಿಗೆ ಗೊಣಗಲು ಸಾಮರ್ಥ್ಯವಿಲ್ಲದೆ ಮೌನ ತಾಳುತ್ತಲಿತ್ತು.

ಅಕ್ಕಮಹಾದೇವಿ ಕೆಲವು ಸಲ ಬಿನ್ನಹ ಸ್ವೀಕರಿಸಿ ಮನೆಗೆ ಹೋದಾಗಲೂ ಪ್ರಸಾದದ ನಂತರ ಅವರು ವಸ್ತ್ರ, ಕಾಣಿಕೆಗಳನ್ನರ್ಪಿಸಿ ಬಂದರೆ ನಿರಾಕರಿಸು ತ್ತಿದ್ದಳು. ರುದ್ರಯ್ಯನು ಒಂದು ಬಾರಿ ಹಾಗೆ ಪಡೆದುಕೊಂಡುದನ್ನು, ಆಕೆಯ ಕಣ್ಣಿಗೆ ಕಾಣದಿರಲೆಂದು ಹಳೆಯ ಅರಿವೆಯಲ್ಲಿ ಸುತ್ತಿ ಮುಚ್ಚಿರಿಸಿದುದನ್ನು ಗಮನಿಸಿ, ಅಂದು ಸಂಜೆ ಗುಡಿಯೊಂದರಲ್ಲಿ ಬೀಡು ಬಿಟ್ಟಾಗ ನುಡಿದಳು :

'ಇಂದು ಸುಂದರವಾದೊಂದು ವಚನ ಮೂಡಿ ಬಂದಿದೆ. ಹಾಡಲೇ ?'

'ನಿಶ್ಚಯವಾಗಿಯೂ ಹಾಡಿ....' ಎಲ್ಲರೂ ಉತ್ಸುಕರಾಗಿ ನುಡಿದರು.

ಅರ್ಥ ಸನ್ನಾಸಿಯಾದಡೇನಯ್ಯಾ,

ಸ್ತ್ರೀ ಸನ್ಯಾಸಿಯಾದಡೇನಯ್ಯಾ,
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಲ್ಲದಿರಬೇಕು.
ದಿಗಂಬರಿಯಾದಡೇನಯ್ಯಾ
ಮನ ಬತ್ತಲೆ ಇರಬೇಕು.
ಇಂತೀ ಚತುರ್ವಿಧ ಹೊಲಬನರಿಯದೆ ವೃಥಾ ಕೆಟ್ಟರು
ಕಾಣಾ ಚನ್ನಮಲ್ಲಿಕಾರ್ಜುನಾ.*

‘ಅದರ ವಿವರಣೆಯನ್ನೂ ನೀಡಿಬಿಡಿ ತಾಯಿ....’ ಒಬ್ಬ ಕೇಳಿದ.

‘ರುದ್ರಯ್ಯಾ....ತತ್ತ್ವ-ಧರ್ಮಗಳಿರುವುದು ಕೇವಲ ಕಿವಿಯನ್ನು ತಣಿಸಲಿಕ್ಕಲ್ಲ, ಬದುಕನ್ನು ನಡೆಸಲಿಕ್ಕೆ! ‘ರುಚಿಯ ಸನ್ಯಾಸ’ ಹೊಂದಿ ಪ್ರಸಾದಿಕರಾದಮೇಲೆ ಪ್ರಸಾದದಲ್ಲಿ ರುಚಿ-ಅರುಚಿಗಳನ್ನು ಅರಸಲು ಹೋಗಬಾರದು. ಹುಗ್ಗಿಯೇ ಬರಲಿ, ಒಣಕಲು ಕಜ್ಜಾಯವೇ ಬರಲಿ ಅದೆಲ್ಲವೂ ಶಿವನು ಒದಗಿಸಿದ ಪ್ರಸಾದ ಎಂದು ಸಂತೃಪ್ತಿ ತಾಳಬೇಕು. ಉಣ್ಣುವುದು ಏತಕ್ಕಾಗಿ? ಬದುಕಲಿಕ್ಕೆ, ಬದುಕಿ ಗುರಿಯನ್ನು ಸಾಧಿಸಲಿಕ್ಕೆ. ನಮ್ಮ ಗುರಿಯೆಂದರೆ ಸದ್ಗುಣಗಳನ್ನು, ಜೀವನದಲ್ಲಿ ಸಂತೃಪ್ತಿಯನ್ನೂ ಅಳವಡಿಸಿಕೊಳ್ಳುವುದು. ಅಂದಾಗ ಅವನ್ನು ಅಳವಡಿಸಿಕೊಳ್ಳದೆ, ಕೇವಲ ತಿಂದುಂಡು ಬದುಕುವ ಉಸಿರಾಡುವ ಯಂತ್ರವಾದರೆ ಆಯಿತೆ....?’

ರುದ್ರಯ್ಯನು ತಪ್ಪಿತಸ್ಥ ಮುಖಭಾವದಿಂದ ತಲೆಯನ್ನು ತಗ್ಗಿಸಿದ.

‘ಹಾಗೆಯೇ ಹಣವು ಸಹ! ಸನ್ಯಾಸಿಯನ್ನು ಹಿಮ್ಮುಖ ಮಾಡುವ ಪ್ರಮುಖ ಸಾಧನ ಸಂಗ್ರಹ ಬುದ್ಧಿ. ‘ಪಸಾರಕ್ಕನುವಿಲ್ಲ, ಬಂದ ತತ್ಕಾಲಕ್ಕುಂಟು, ಕೂಡಲ ಸಂಗನ ಶರಣರು ಸ್ವತಂತ್ರ ಧೀರರು’ ಎಂದು ಅಣ್ಣನವರು ನುಡಿದಿಲ್ಲವೆ? ಅರ್ಥ ಸನ್ಯಾಸಿಯಾದವನು ಅದನ್ನು ಸ್ವೀಕರಿಸಬಾರದು....’ ಅಕ್ಕಮಹಾದೇವಿ ನುಡಿದಾಗ ರುದ್ರಯ್ಯನು ಮರು ಪ್ರಶ್ನಿಸಿದ:

‘ನಾನು ವಾದಿಸುವೆ ಎಂದು ತಿಳಿಯದಿರಿ ತಾಯಿ. ಬಸವಣ್ಣನವರು ಮಹಾಮನೆಗೆ ದರ್ಶನಾರ್ಥಿಗಳಾಗಿ ಬಂದವರು ಕೊಟ್ಟ ಲಕ್ಷಲಕ್ಷ ಹೊನ್ನನ್ನು ಸ್ವೀಕರಿಸುವರಲ್ಲ?....ಇಲ್ಲವಾದರೆ ಅಂತಹ ಬೃಹತ್ ಸಂಸ್ಥೆಯಾದ ಅನುಭವ ಮಂಟಪವನ್ನು ಕಟ್ಟಲು ಅನುಕೂಲವಾಗುತ್ತಿತ್ತೇ....?’

‘ನಿಜ ತಮ್ಮಾ....ಆದರೆ ನನ್ನ-ನಿನ್ನಂಥವರಿಗೆ ಹಣ ಬೇಡ, ಬಸವಣ್ಣ

ನಿಗೆ ಖಂಡಿತವಾಗಿ ಬೇಕು. ಪ್ರಭುದೇವರಿಗೆ ಬೇಡ, ಸಿದ್ಧರಾಮೇಶ್ವರರಿಗೆ ಬೇಕು. ವ್ಯಷ್ಟಿಚೇತನದ ಉದ್ಧಾರಕ್ಕೆ ಮಾತ್ರ ಯತ್ನಿಸುವ ನಮ್ಮಂಥ ಸನ್ಯಾಸಿಗಳಿಗೆ ಬೇಡ, ಸಮಷ್ಟಿಚೇತನದ ಉದ್ಧಾರ ಗೈಯಬಯಸುವ ಬಸವಣ್ಣನಂಥ 'ವಿರಕ್ತ'ರಿಗೆ ಬೇಕು. ಎಲ್ಲವನ್ನೂ ಬಿಟ್ಟು ನಿರ್ಲಿಪ್ತಳಾಗಿರಬೇಕೆಂಬ ನಾನು ಸಮಾಜದ ಆಗುಹೋಗು, ಉದ್ಧಾರದ ಬಗೆಗೆ ಆಲೋಚಿಸುತ್ತಿಲ್ಲ; ಆದರೆ ಬಸವಣ್ಣನು ಸಮಾಜದ ಮಧ್ಯದಲ್ಲಿದ್ದುಕೊಂಡು ಅದನ್ನು ತಿದ್ದಿ, ತೀಡಿ ಉದ್ಧರಿಸಬೇಕೆಂಬುವವನು. ನಾನು-ನೀನು ವ್ಯಕ್ತಿಗಳಾಗಿ ಬಸವಣ್ಣನು ಕೊಟ್ಟ ತತ್ತ್ವವನ್ನು ಹಸರಿಸಬೇಕು ಎನ್ನುವವರು; ಆದರೆ ಬಸವಣ್ಣನು ಮಹಾ ಸಂಸ್ಥೆಯನ್ನು ನಿರ್ಮಿಸಿ ತನ್ಮೂಲಕ ಹೊಸ ಧರ್ಮವನ್ನು ರೂಪಿಸುತ್ತಿರುವವನು. ಆದ ಕಾರಣ ನನಗೆ ಹಣವು ಬಾಧಕವಾದರೆ, ಅವರಿಗೆ ಸಾಧಕ; ನನಗೆ ಅದು ಆತಂಕಕಾರಿಯಾದರೆ ಅವರಿಗೆ ಸಹಾಯಕಾರಿ. ಹಾವನ್ನು ಹಿಡಿಯ ಹೋಗುವ ಗಾರುಡಿಗ ಸೊಪ್ಪಿನ ರಸವೊಂದನ್ನು ಕೈಗೆ ಸವರಿಕೊಳ್ಳುವಂತೆ, ನಿರ್ಲಿಪ್ತತೆ–ತ್ಯಾಗದ ಭಾವವನ್ನು ಅಳವಡಿಸಿಕೊಂಡ ಬಸವಣ್ಣನಂಥವರಷ್ಟೇ ಈ ಧನದ ಕಾಳೋರಗವನ್ನು ಹಿಡಿದುಕೊಂಡು ಆಟವಾಡಿಸಬಲ್ಲರು. ಆದರೆ ಸಿದ್ಧಪುರುಷರ ಲೀಲೆಗಳನ್ನು ಸಾಧಕರು ಮಾಡಬಾರದು. ಹಾಗೆ ಮಾಡಿದರೆ ಹುಲಿಯ ಹೊಂಬಣ್ಣವನ್ನು ಕಂಡು ನರಿ ಮೈಮೇಲೆ ಬರೆಯನ್ನೆಳೆದುಕೊಂಡಂತಾಗುವುದು....' ರುದ್ರಯ್ಯ ಪಶ್ಚಾತ್ತಾಪಪಟ್ಟು, ಕ್ಷಮೆ ಕೇಳಿಕೊಂಡು ತನ್ನ ತಪ್ಪನ್ನು ತಿದ್ದಿಕೊಂಡ.

ಅಕ್ಕಮಹಾದೇವಿಯ ಸತ್ಸಂಗವು ಪಯಣವನ್ನು ಒಂದು ಶಿಕ್ಷಣಕೇಂದ್ರವನ್ನಾಗಿ ಮಾಡಿ ಸಂಗಡಿಗರನ್ನು ಪರಿಪೂರ್ಣತೆಯತ್ತ ಒಯ್ಯುತ್ತಲಿತ್ತು.

೫೬. ಶ್ರೀಗಿರಿಯ ಆರೋಹಣ

ಶರಣರ ತಂಡವು ಆತ್ಮಕೂರನ್ನು ಮುಟ್ಟಿತು. ದಟ್ಟವಾದ ಅರಣ್ಯ, ಬೆಟ್ಟದ ಕೋಟೆಯ ಗರ್ಭದಲ್ಲಿ ಅವಿತುಕೊಂಡಿರುವ ಶ್ರೀಗಿರಿಯನ್ನು ಮುಟ್ಟಲು ಆತ್ಮಕೂರು ಗಿರಿದ್ವಾರವಾಗಿತ್ತು. ಬೆಟ್ಟದ ತಪ್ಪಲಿನಲ್ಲಿರುವ ಈ ತಾಣವನ್ನು ದಾಟಿದ ಬಳಿಕವೇ ಗಿರಿಗಳ ಹಿಂಡು ಆರಂಭವಾಗುತ್ತಲಿದ್ದುದು. ಕಷ್ಟಸಾಧ್ಯವಾದ ಹಾದಿಯನ್ನು ತುಳಿದು ಶ್ರೀಗಿರಿಯ ಮಲ್ಲಯ್ಯನನ್ನು ದರ್ಶಿಸಿ ಬರುವುದು ಶಾರೀರಿಕ, ಮಾನಸಿಕವಾಗಿ ಸಬಲರಾದವರಿಗಷ್ಟೇ ಹೊರತು ದುರ್ಬಲರಿಗಲ್ಲ. ಅಲ್ಲಿಗೆ ಹೋಗಿ ಬಂದು ತಮ್ಮ ಊರು ಮುಟ್ಟಿದರೆ ಪುನರ್ಜನ್ಮ ಹೊತ್ತು ಬಂದಂತೆಯೇ ಸರಿ. ಶ್ರೀಗಿರಿ ಮಲ್ಲಯ್ಯನನ್ನು ದರ್ಶಿಸಲಾಗದೆ ನಿಸ್ಸಹಾಯಕರಾದವರಿಗೆ ಆತ್ಮಕೂರಿನ ಮಲ್ಲಿಕಾರ್ಜುನ ದೇವಾಲಯ ಸಾಂತ್ವನ ನೀಡುತ್ತಿತ್ತು. ದೂರದಿಂದ ದಣಿದು ಬಂದ ಯಾತ್ರಾರ್ಥಿಗಳು ಗಿರಿಕೋಟೆಯ ಹೆಬ್ಬಾಗಿಲಿನಂತಿರುವ ಆತ್ಮಕೂರಲ್ಲಿ ತಂಗಿ, ಉತ್ಸುಕಚೇತನರಾಗಿ ಮುಂದೆ ಸಾಗುತ್ತಲಿದ್ದರು. ಕಾಲುನಡಿಗೆಯಿಂದ ಹಳ್ಳಕೊಳ್ಳಗಳನ್ನು ತುಳಿದು, ಬೆಟ್ಟಗುಡ್ಡಗಳನ್ನು ಏರಿ ನಡೆದರೆ ಆತ್ಮಕೂರಿನಿಂದ ಶ್ರೀಗಿರಿಯು ಕೇವಲ ಇಪ್ಪತ್ತು ಹರದಾರಿಗಳ ದೂರ—ಕಷ್ಟಪಟ್ಟು ನಡೆದರೆ ಮೂರು ದಿವಸಗಳಲ್ಲಿ ತುಳಿದು ಪೂರೈಸಬಹುದಾದಷ್ಟು.

ಶ್ರೀಗಿರಿಯ ಜಾತ್ರೆಗಾಗಿ ಸಹಸ್ರಾರು ಜನರು ನೆರೆದರೆ, ಜಾತ್ರೆಯ ಗದ್ದಲವು ಅಪ್ರಿಯವೆನಿಸುವ ಕೆಲವರು ಬಿಡುವಿನ ವೇಳೆಯಲ್ಲಿ ಬಂದು, ಪ್ರಶಾಂತ ವಾತಾವರಣದಲ್ಲಿ ದಿನಗಳೆದು ಹೋಗುತ್ತಿದ್ದರು. ಹೀಗಾಗಿ ಜನಪ್ರಿಯ ಕ್ಷೇತ್ರವಾದ ಶ್ರೀಗಿರಿಯತ್ತ ಸಾಗುವ ಅನೇಕ ತಂಡಗಳು ಆತ್ಮಕೂರಿನಲ್ಲಿ ಬೀಡು ಬಿಟ್ಟಿದ್ದವು. ಅಕ್ಕಮಹಾದೇವಿಯೂ ತನ್ನ ಶರಣ ಬಂಧುಗಳೊಡನೆ ಮುಂದೆ ಸಾಗಿದಳು. ದುರ್ಗಮವಾದ ಹಾದಿಯನ್ನು ಸವೆಸುತ್ತ, ಬೆವರನ್ನು ಇಳಿಸಿಕೊಳ್ಳುತ್ತ ನಡೆಯುತ್ತಿದ್ದರೂ ಜನತೆಯ ಉತ್ಸಾಹ ಮಾತ್ರ ಅನಂತವಾಗಿರುತ್ತಿತ್ತು. 'ಶ್ರೀಗಿರಿ ಮಲ್ಲಯ್ಯ ಉಘೇ, ಉಘೇ ; ಮಹಾಂತ ಮಲ್ಲಯ್ಯ ಉಘೇ ಉಘೇ' ಎಂಬ ಘೋಷಣೆ 'ಹರಹರ ಮಹಾದೇವ' ಎಂಬ ಜಯಕಾರಗಳು ಯಾತ್ರಿಕರ ಮನಸ್ಸಿಗೆ ಚೈತನ್ಯ ತುಂಬಿ, ಮುಂದೆ ನಡೆಸುತ್ತಿದ್ದವು.

ವೆಂಕಟಾಪುರ, ನಾಗಲೋಟಿಗಳ ಮಾರ್ಗವಾಗಿ ಸಾಗಬೇಕು. ನಾಗಲೋಟಿಯಲ್ಲಿ ಸುಪ್ರಸಿದ್ಧ ವೀರಭದ್ರ ದೇವಾಲಯವಿದ್ದು ಯಾತ್ರಿಕರಿಗೆ ಅದು ತಂಗುದಾಣ. ನಾಗಲೋಟಿಯ ವೀರಣ್ಣನ ದರ್ಶನ ಪಡೆದು ಮುಂದೆ ನಡೆದರೆ ಕೈಲಾಸದ್ವಾರವೆಂಬ ಇನ್ನೊಂದು ತಂಗುದಾಣ. ದಟ್ಟವಾದ ಕಾಡು, ಗಂಭೀರವಾಗಿ ತಲೆ ಎತ್ತಿ ನಿಂತ ಗಿರಿಶೃಂಗಗಳ ಆರಂಭ ಇಲ್ಲಿಂದ. ಈ ಕೈಲಾಸದ್ವಾರದ ಬಳಿ ಪುರಾತನವಾದ ನಾಲ್ಕು ಮಠಗಳು. ಅಂದಿನ ಕಾಲದಲ್ಲಿ ಯಾತ್ರಿಕರು ಕಾಲ್ನಡಿಗೆಯಿಂದಲೇ ಶ್ರೀಗಿರಿಗೆ ಹೋಗುತ್ತಿದ್ದುದರಿಂದ ಈ ಮಠಗಳು ವಿಶ್ರಾಂತಿಧಾಮಗಳಾಗಿ ಪ್ರವಾಸಿಕರಿಗೆ ಆಶ್ರಯ ನೀಡಿ, ಅನ್ನದಾಸೋಹ ಮಾಡಿ ಅವರ ಊಟೋಪಚಾರಗಳನ್ನು ನಿರ್ವಹಿಸುತ್ತಿದ್ದವು. ಜನರು ಪ್ರಯಾಣಿಸುವುದೇ ಒಂದು ಕಠಕಷ್ಟದ ಸಾಹಸವಾದಾಗ ಅವರು ದವಸ ಧಾನ್ಯಗಳನ್ನು ಹೊತ್ತು ತರುವುದು ಇನ್ನೂ ಶ್ರಮದಾಯಕವಿದ್ದುದರಿಂದ, ಮಠಗಳ ಈ ಉಪಕಾರವನ್ನು ಜನರು ಸ್ಮರಿಸದಿರುತ್ತಿರಲಿಲ್ಲ. ಕೈಲಾಸದ್ವಾರವೆಂಬ ಗಿರಿಯ ಕೋಟೆಯ ಹೆಬ್ಬಾಗಿಲನ್ನು ಪ್ರವೇಶಿಸಿ ಒಳಹೊಕ್ಕು ಮುನ್ನಡೆದಾಗ ಅಂಬಲಿ ಹಳ್ಳವೆಂಬ ನೀರಿನ ವಾಹಿನಿ ಕಂಡಿತು. ಈ ಹಳ್ಳದ ನೀರು ಬಹು ರುಚಿಯಾಗಿ ಮತ್ತು ನೋಡಲು ಬಿಳಿಯಾಗಿ ಇರುವುದರಿಂದ ಬಹುಶಃ ಈ ಹೆಸರು ಬಂದಿರಬಹುದು ಎಂದು ಅಕ್ಕಮಹಾದೇವಿ ಊಹಿಸಿದಳು. ಈ ಅಂಬಲಿ ಹಳ್ಳದ ಬಳಿಯೂ ಮಲ್ಲಿಕಾರ್ಜುನನ ಗುಡಿಯೊಂದು ಇದ್ದಿತು. ಅಲ್ಲಿಂದ ಮುಂದೆ ಸಾಗಿದಾಗ ಪೆಚ್ಚೆರು ಎಂಬ ಸ್ಥಾನವಿದ್ದು, ಅಲ್ಲಿ ವಿಸ್ತಾರವಾದ ಒಂದು ಕೆರೆ ಮತ್ತು ಒಂದು ಬಾವಿ ಕಂಡವು.

ಸಾಮಾನ್ಯವಾಗಿ ಯಾತ್ರಿಕರು ತಂಗುತ್ತಿದ್ದುದು ಇದರ ದಂಡೆಯ ಮೇಲೆಯೇ. ಪಯಣವನ್ನು ಮುಂದುವರಿಸಿದರೂ ಇರುಳಿನೊಳಗೆ ಸೂಕ್ತ ತಾಣ ಸಿಗದೆಂದು ಅಲ್ಲಿಯೇ ಉಳಿದು, ಅಕ್ಕಮಹಾದೇವಿಯಿದ್ದ ತಂಡವು ಮರುದಿನ ಮುಂದೆ ಹೊರಟಿತು. ಪೆಚ್ಚೆರುವನ್ನು ದಾಟಿ ಪಯಣವನ್ನು ಆರಂಭಿಸುತ್ತಿದ್ದಂತೆ ಇಳಿಯಲು ಸಿಗುವುದೇ ಭೀಮನಕೊಳ್ಳ. ಅಲ್ಲಿಯ ದಟ್ಟ ಕಾಡು, ಎತ್ತರವಾದ ಬೆಟ್ಟ, ಹೆಮ್ಮರಗಳ ಉಗ್ರಾಣವಾದ ಆಳವಾದ ರುದ್ರ ಭೀಕರ ಕೊಳ್ಳ ಇವುಗಳಿಂದಾಗಿ ಆ ಕೊಳ್ಳಕ್ಕೆ ಈ ಹೆಸರು ಹೊಂದಿಸಲ್ಪಟ್ಟ ತೇನೋ ಎಂದೆನಿಸುತ್ತದೆ. ಆ ಕೊಳ್ಳದಲ್ಲಿ ಸದಾಕಾಲದಲ್ಲೂ ಹಳ್ಳವೊಂದು ಪ್ರವಹಿಸಿ ಯಾತ್ರಿಕರನ್ನು ತಣಿಸುತ್ತಿತ್ತು. ಇಲ್ಲಿಂದ ಶ್ರೀಗಿರಿಯ ಬೆಟ್ಟಗಳ ಒಳಸಾಲು ಆರಂಭ.

ಬೆಟ್ಟಗಳ ಶ್ರೇಣಿ ಪ್ರಾರಂಭವಾಗುತ್ತಿದ್ದಂತೆಯೇ ಅಕ್ಕಮಹಾದೇವಿ ಅಂತ-

ತನ್ನತ್ತ ಸೆಳೆದುಬಿಟ್ಟಿತ್ತು. ಆರು ಬೆಟ್ಟಗಳ ಸಾಲು ತಲೆಯೆತ್ತಿ ನಿಂತು ಆಚೆ ಇರುವ ಮಲ್ಲಯ್ಯನ ಅಂಗರಕ್ಷಕ ಪಡೆಯಂತೆ ತೋರಿದ್ದಲ್ಲದೆ, ಶರೀರದಲ್ಲಿರುವ ಆರು ಚಕ್ರಗಳಂತೆ ಅವು ಕಂಡ ಅನುಭವವಾಯಿತು. ಪ್ರಾರಂಭದಲ್ಲಿ ಮನೋಹರವಾಗಿದ್ದ ಪ್ರಕೃತಿಯು ಧ್ಯಾನಮಗ್ನಳಾದ ತಾಪಸಿಯಂತೆ ಇದ್ದರೆ ಬರು ಬರುತ್ತ ಭಯಂಕರ ವದನೆಯಾದ ಆಕೆ, ಯುದ್ಧನಿರತ ಅಶ್ವಾರೋಹಿಣಿಯಂತೆ ತೋರಿದಳು. ಮುಗಿಲು ಮುಟ್ಟುವ, ದಟ್ಟ ಎಲೆಗಳ ಹಸಿರ್ಗೊಡೆಯನ್ನು ಹೊತ್ತ ಮರಗಳು ಕೆಳಗೆ ಬಿಸಿಲನ್ನು ಬೀಳಗೊಡದೆ, ಪಾದವಿರಿಸಿದಾಗ ತಂಪನ್ನು ಎರೆಯುತ್ತಿದ್ದವು. ಗಾಳಿ ಬೀಸಿದಾಗ ಸರಸರ ಸಪ್ಪಳಮಾಡುತ್ತ ಎಲೆಗಳು ಉಲಿಯುತ್ತಿದ್ದರೆ ಆ ವಾತಾವರಣವು ರುದ್ರರಮಣೀಯವೆನಿಸುತ್ತಿತ್ತು.

ಭೀಮನ ಕೊಳ್ಳವನ್ನು ಕ್ರಮಿಸಿ ಮುಂದೆ ಕಾಣುವ ಬೆಟ್ಟವನ್ನು ಆರೋಹಿಸುತ್ತಾ ಹೋಗುವಾಗ ಆಧಾರಚಕ್ರದಿಂದ ಸಹಸ್ರಾರದವರೆಗೆ ಪ್ರಾಣವಾಯುವನ್ನು ಏರಿಸುತ್ತ ಹೋಗುವ ಯೋಗಸಾಧನೆಯ ನೆನಪಾಗುತ್ತಲಿತ್ತು. ಹಂತ ಹಂತವಾಗಿ ಏರುತ್ತ ಅಲ್ಲಲ್ಲೇ ನಿಂತು ವಿಹಂಗನೋಟವನ್ನು ಹರಿಸಿದಾಗ ಅನ್ನಮಯ, ಮನೋಮಯ, ಪ್ರಾಣಮಯ, ವಿಜ್ಞಾನಮಯ ಕೋಶಗಳನ್ನು ಒಂದೊಂದಾಗಿ ಕಳಚುತ್ತ ಹೋದಂತೆನಿಸಿ, ಬೆಟ್ಟದ ನೆತ್ತಿಯಲ್ಲಿ ಮಂಟಪಾಕಾರದಲ್ಲಿ ನಿರ್ಮಿತವಾದ ಕೈಲಾಸದ್ವಾರವನ್ನು ಮುಟ್ಟಿ ಹಿಂದಿರುಗಿ ನೋಡುತ್ತ ನೆರಳಲ್ಲಿ ಕುಳಿತಾಗ ಆನಂದಮಯಕೋಶದಲ್ಲಿ ಜೀವವು ನೆಲೆನಿಂತಂತೆನಿಸಿತು. ಆತ್ಮಕೂರನ್ನು ಕ್ರಮಿಸಿದ ಬಳಿಕ ಎದುರಾದ ಕೈಲಾಸದ್ವಾರವು ಬೆಟ್ಟಗಳ ಸಾಲಿನ ಹೆಬ್ಬಾಗಿಲಾದರೆ, ಈಗ ಸಿಕ್ಕಿದ ದ್ವಾರವು ಶ್ರೀಶೈಲದ ಪ್ರವೇಶ ದ್ವಾರದಂತಿದ್ದಿತು. ರಾಜಧಾನಿಯನ್ನು ಸುತ್ತುವರಿದ ಕೋಟೆಯ ಬಾಗಿಲಿನಂತೆ ಮೊದಲನೆಯದಿದ್ದರೆ ಅರಮನೆಯ ಪೌಳಿಯ ದ್ವಾರವಟ್ಟದಂತೆ ಇದು ಕಂಡಿತು.

ಈ ತಲೆವಾಗಿಲನ್ನು ಕಾಣುತ್ತಲೇ ಒಡನಿರ್ದ ಇತರ ಯಾತ್ರಿಕರು ಜಯಘೋಷಮಾಡುತ್ತ, ಸಮಾಧಾನದ ಉಸಿರನ್ನು ಬಿಟ್ಟು, ನೆರಳಲ್ಲಿ ಕುಳಿತು ಗೋಡೆಗಳಿಗೆ ಮೈಯ್ಯಾನಿಸಿದರು. ಆ ದುರ್ಗಮವಾದ ಅರಣ್ಯದ ಹಾದಿಯನ್ನು ಕಂಡೇ ಎದೆಯೊಡೆಯುವ ಅನೇಕರು, ಅನ್ಯರ ಒತ್ತಾಸೆಗೆ ಬಲಿಯಾಗಿಯೋ, ಹಿಂದೆ ಉಳಿದರೆ ಹೇಡಿಗಳೆಂಬ ಬಿರುದಿಗೆ—ಅಪಹಾಸ್ಯಕ್ಕೀಡಾಗಬಹುದೆಂಬ ಒಣಹಮ್ಮಿಗೋ ಛಲದಾಳಿ ಬಂದರೂ, 'ದಾರಿಯನ್ನು ಪೂರೈಸುವೆನೋ

ಮಲ್ಲಿಕಾರ್ಜುನನ ದರ್ಶನವನ್ನು ಪಡೆಯಬಲ್ಲೆ ಎಂಬ ಭರವಸೆ ಆತ್ಮವಿಶ್ವಾಸದ ಕಳೆಯನ್ನು ಮುಖದಲ್ಲಿ ಮೂಡಿಸದೆ ಇರದು.

ಕೈಲಾಸದ್ವಾರವನ್ನು ಹಿಂದಕ್ಕುಳಿಸಿ ಮುಂದೆ ಮುಂದೆ ನಡೆದಾಗ ತಟ್ಟನೆ ಎದುರಿಗೆ ಭವ್ಯವಾಗಿ ನಿಂತಿತ್ತು ಶಿಖರೇಶ್ವರ.

ಈಗವರು ಕ್ರಮಿಸಿದ ಹಲವಾರು ಶ್ರೀಗಿರಿಯ ಪರ್ವತಶೃಂಗಗಳಲ್ಲಿ ಅತಿ ಎತ್ತರವಾದುದು ಶಿಖರೇಶ್ವರ. ಅಲ್ಲೊಂದು ಶಿಖರೇಶ್ವರನೆಂಬ ನಾಮಾಂಕಿತದ ಲಿಂಗ, ಆವನನ್ನು ಬಂಧಿಸಿಟ್ಟ ಪುಟ್ಟ ಗುಡಿಯೂ ಇದ್ದುವು. ಅಲ್ಲಿ ಅಕ್ಕಮಹಾದೇವಿಯನ್ನು ಬೆರಗುಗೊಳಿಸಿದ್ದೆಂದರೆ ಅಂತಹ ಎತ್ತರದ ಸ್ಥಾನದಲ್ಲೂ ಪ್ರಕೃತಿಯ ಪವಾಡವೆಂಬಂತೆ ತಿಳಿನೀರಿನ ಕೊಳವಿದ್ದಿತು. ಶ್ರೀಗಿರಿ ಮಲ್ಲಯ್ಯನ ದರ್ಶನಕ್ಕೆ ಬಂದವರು ಮೊತ್ತಮೊದಲು ಇಲ್ಲಿ ಏರಿ, ಶಿಖರೇಶ್ವರನ ದರ್ಶನ ಪಡೆದು, ಶಿಖರದ ತುದಿಯಲ್ಲಿ ನಿಂತು ಶ್ರೀಶೈಲ ಮಲ್ಲಯ್ಯನ ಗುಡಿಯ ಗೋಪುರವನ್ನು ನೋಡಿದರೆ ಪುನರ್ಜನ್ಮವಿಲ್ಲ ಎಂಬ ಪ್ರತೀತಿ ಇತ್ತು. ಬಹುಶಃ ಅಂತಹ ಪ್ರತೀತಿಗೆ ಹಲವಾರು ಕಾರಣಗಳಿರಬೇಕೆಂದು ಅಕ್ಕಮಹಾದೇವಿ ಆಲೋಚಿಸಿದಳು.

ಶ್ರೀಶೈಲಯಾತ್ರೆ ಆ ಕಾಲದಲ್ಲಿ ಬಹು ಕಷ್ಟಕರ. ದುರ್ಗಮವಾದ, ಭಯಾನಕ ಹಾದಿಯನ್ನು ತುಳಿಯುತ್ತ ಬಂದು ಶ್ರೀಗಿರಿ ಮಲ್ಲಯ್ಯನ ದರ್ಶನ ಪಡೆದು ತಮ್ಮೂರನ್ನು ಸುರಕ್ಷಿತವಾಗಿ ಸೇರಿದರೆ ಆ ಯಾತ್ರಿಕನು ಪುನರ್ಜನ್ಮ ಪಡೆದು, ಮತ್ತೆ ಹುಟ್ಟಿಬಂದಂತೆ ಭಾವಿಸುತ್ತಿದ್ದ. ಪ್ರಾಣವನ್ನು ಪಣಕ್ಕಿರಿಸಿಯೇ ಯಾತ್ರೆ ಹೊರಡಬೇಕಾಗಿತ್ತು. ಅವನು ಕಷ್ಟದ ದಾರಿಯನ್ನು ಮೆಟ್ಟುತ್ತ ಬರುವಾಗ, ಉತ್ಸಾಹವು ಕುಂದುವುದು ಸಹಜವೇ. ಇನ್ನೆಷ್ಟು ದೂರವೋ ಎಂಬ ವಿಚಾರವೂ ಅವನನ್ನು ಅಧೀರನನ್ನಾಗಿ ಮಾಡಬಹುದು. ಅಂತಹ ಪ್ರಸಂಗದಲ್ಲಿ 'ಇನ್ನೇನು ಬಂದೇಬಿಡ್ತು, ಓ....ಅಲ್ಲೇ ಗುಡಿ ಕಾಣುತ್ತಲಿದೆ....' ಎಂಬ ಆಶ್ವಾಸನೆ ಕುಸಿಯುವ ಧೈರ್ಯವನ್ನು ಎತ್ತಿ ಹಿಡಿದು, ಗುರಿಮುಟ್ಟುವ ಉತ್ಸಾಹವನ್ನು ತುಂಬುವುದು. ಸಣ್ಣ ಮಕ್ಕಳು ನಡೆಯಲಾರದೆ ಸೋತು ಹಟ ಹಿಡಿದಾಗ ತಾಯಿಗೆ ಬಲು ಪೇಚು. ಎತ್ತಿಕೊಳ್ಳಲಿಕ್ಕೆ ಭಾರ. ಆಗ ಆಕೆ ಮಗುವನ್ನುದ್ದೇಶಿಸಿ 'ಅಲ್ನೋಡು ತಿಂಡಿ ಅಂಗಡಿ ; ಅಲ್ಲಿತನಕ ನಡೆ. ಗಾರಿಗೆ, ಹೆಸರುಂಡೆ, ಇಡ್ಲಿಕೆಗಳನ್ನು ಕೊಡುಸ್ತೀನಿ' ಎಂದಾಗ ಮಗುವು ಉತ್ಸಾಹವನ್ನು ಮೈಗೂಡಿಸಿಕೊಂಡು ಮುಂದೆ ಓಡುವುದು. ಇಂತಹ ಆಶ್ವಾಸನೆಯನ್ನು ತುಂಬುವಂತಿತ್ತು ಆ ಶಿಖರೇಶ್ವರ ಗಿರಿಶೃಂಗ.

ಸವಿದಳು. ಶಿಖರೇಶ್ವರದ ಸುತ್ತಲೂ ಅಸಂಖ್ಯಾತ ಗಿರಿಶೃಂಗಗಳು, ನಡುನಡುವೆ ದಟ್ಟವಾದ ಕಾಡು. ಎತ್ತರವಾದ ಈ ಶೃಂಗದ ಮೇಲೆ ನಿಂತಾಗ ವಿಸ್ತಾರ ವಾದ ಸೃಷ್ಟಿಯ ಮುಖವನ್ನು ಕನ್ನಡಿಯಲ್ಲಿ ಚುಳುಕಾಗಿ, ಸ್ಪಷ್ಟವಾಗಿ ಕಂಡಷ್ಟು ಆನಂದವಾಯಿತು. ಸಣ್ಣಸಣ್ಣ ಬೆಟ್ಟಗಳ ಮೇಲೆ ನಿಂತಾಗ ಬಿಡಿ ಬಿಡಿಯಾಗಿ ವನಶ್ರೀಯನ್ನು ನೋಡುತ್ತಲಿದ್ದ ಆಕೆ ಇಲ್ಲಿ ಅಖಂಡವಾಗಿ, ಪಕ್ಷಿ ನೋಟದಿಂದ ವನಶ್ರೀಯ ಸಂಪದವನ್ನು ಕಣ್ಣಿನಿಂದ ಉಂಡು ತಣಿದಳು.

ಶಿಖರೇಶ್ವರ ಶೃಂಗದ ತುದಿಯಲ್ಲಿ ನಿಂತಾಗ ಹಸಿರು ವನರಾಜಿಯ ಒಡಲಲ್ಲಿ ಮಲ್ಲಿಕಾರ್ಜುನ ದೇವಾಲಯದ ಎತ್ತರವಾದ ಅಚ್ಚ ಬಿಳಿಯ ಗೋಪುರ, ಅದರ ಬಂಗಾರದ ಕಳಸಗಳು ಕಾಣುತ್ತಲೇ ಜನರು ಕೇಕೆ ಹಾಕಿ ಹರ್ಷಧ್ವನಿಗೈದು, ಸರ್ವಾಂಗದ ಬಲವನ್ನೂ ಕಂಠದ ಢಮರುಗದ ಮೇಲೆ ಹಾಕಿ,

'ಉಘೇ....ಉಘೇ....ಶ್ರೀಗಿರಿ ಮಲ್ಲಯ್ಯ....ಉಘೇ....ಉಘೇ....

ಮಹಾಂತ ಮಲ್ಲಯ್ಯ ಉಘೇ ಉಘೇ....'

ಎಂದು ಗಟ್ಟಿಯಾದ ಧ್ವನಿಯಲ್ಲಿ ಜಯಘೋಷ ಮಾಡಿದಾಗ, ಧ್ವನಿ ತರಂಗಗಳು ಬೆಟ್ಟಗಳ ಕಲ್ಲುಗಳಿಗೆ ಬಡಿದು ಹಿಮ್ಮೆಟ್ಟಿ, ಮಾರುಲಿಯುತ್ತ ಅಲೆ ಅಲೆಯಾಗಿ ಹರಿದು ಕಾನನದಲ್ಲಿ ವಿಲೀನವಾದವು.

ಪಡುವಣ ದಿಕ್ಕಿನ ಶಯ್ಯಾಗಾರವನ್ನು ರವಿಯು ಪ್ರವೇಶಿಸಲಿಕ್ಕೆ ಅರ್ಧ ಜಾವದ ಸಮಯವಿತ್ತು. ಹೊಂಗಿರಣಗಳು ಸುವರ್ಣದ ತೆಳು ತೆರೆಯ ಚಳಿ ಯನ್ನು ಹಸಿರು ಮರಗಳಿಗೆ, ಹೂಗಿಡಗಳಿಗೆ ಆಚ್ಛಾದಿಸಿದ್ದವು. ಶಿಖರೇಶ್ವರ ಶೃಂಗದ ತುದಿಯಲ್ಲಿ ಕುಳಿತು ಸೂರ್ಯನಿಗೆ ಬೆನ್ನು ತಿರುಗಿಸಿ ಸಚೇತನಗೊಂಡ ಸೃಷ್ಟಿಯನ್ನು ಅಕ್ಕಮಹಾದೇವಿ ನೋಡತೊಡಗಿದ್ದಳು.

ಸೂರ್ಯನು ಮುಳುಗುವ ಮುನ್ನವೇ ಶ್ರೀಗಿರಿಯನ್ನು ಸೇರುವ ಉತ್ಸಾಹ ಒಡನೆ ಬಂದಿರ್ದ ಯಾತ್ರಿಕ ತಂಡದವರಿಗೆ. ಆತ್ಮಕೂರಿನಿಂದ ಜೊತೆಯಾಗಿ ಬಂದಿದ್ದ ಆ ಯಾತ್ರಿಕರ ಗುಂಪು ಕನ್ನಡನಾಡಿನಿಂದ ಬಂದುದಾಗಿದ್ದು, ರಾತ್ರಿಯ ವೇಳೆ ಬಿಡಾರ ಮಾಡಿದಲ್ಲೆಲ್ಲ ಅಕ್ಕಮಹಾದೇವಿಯ ಬೋಧೆ ಕೇಳಿ ಅವರು ಪ್ರಭಾವಿತರಾಗಿದ್ದರು.

'ಅವ್ವಾ....ಬ್ಯಾಗ್ನೆ ಮಲ್ಲಯ್ಯನ ಹತ್ತಿರ ಹೋಗೋಣಂತೆ ನಡಿ ಯವ್ವಾ....' ಎಂದು ಮಧ್ಯಮ ವಯಸ್ಸಿನ ಸ್ತ್ರೀಯೊಬ್ಬಳು ಅಕ್ಕಮಹಾ ದೇವಿಯನ್ನು ಎಚ್ಚರಿಸಿ ಕರೆದಳು.

ಏನಿಲ್ಲ. ಶಿಖರಪ್ಪನ ನೋಡ್ದಂಗಾತು....ನಡೀ ಮಲ್ಲಯ್ಯನ ದರ್ಶನ ಮಾಡ್ಕೊಳ್ಳೋಣ....' ಈ ಮಾತುಗಳನ್ನು ಕೇಳಿ ಅಕ್ಕಮಹಾದೇವಿ ಹಗುರವಾಗಿ ನಕ್ಕಳು.

'ತಾಯಿ....ನನ್ನ ಮಲ್ಲಯ್ಯ ಬ್ರಹ್ಮಾಂಡದ ಗುಡಿಯಲ್ಲಿ ಸೂರ್ಯನಿಂದ ಆರತಿಯನ್ನು ಬೆಳಗಿಸಿಕೊಂಡು ಹೊಂಬೆಳಗಿನಿಂದ ಕಂಗೊಳಿಸುತ್ತಿರುವನು. ಒತ್ತಾಯ ಮಾಡದಿರಿ....' ಆಕೆ ಬೆರಗಾಗಿ ತನ್ನ ಗುಂಪನ್ನು ಸೇರಿಕೊಂಡು ಹೋದಳು. ಅಂತಹ ಜನರನ್ನು ನೋಡಿ ಮೂಕಳಾಗಿ ಅಕ್ಕಮಹಾದೇವಿ ಆಲೋಚಿಸಿದಳು :

'ಸಚೇತನವಾದ ದೈವೀಶಕ್ತಿಯನ್ನು ನೋಡಲಾರದೆ ಗೋಡೆಯ ಮಧ್ಯದಲ್ಲಿ ಬಂಧಿತವಾದುದನ್ನೇ ಬಹಳಷ್ಟು ಜನರು ನೋಡಹೋಗುವರಲ್ಲ. ನಮ್ಮ ಜನರಲ್ಲಿ ಈ ದೃಷ್ಟಿಕೋನ ಹಾಸುಹೊಕ್ಕಾಗಿದೆಯೆಂದೇ, ಶಿಖರೇಶ್ವರ ಶೃಂಗಕ್ಕೆ ಕರೆತಂದು ಪ್ರಕೃತಿಯನ್ನು ಇದಿರಿಟ್ಟು ತೋರಿಸಲಿಕ್ಕಾಗಿ ಹಿಂದಿನವರು ಇಂಥಲ್ಲಿ ಲಿಂಗವನ್ನಿರಿಸಿದ್ದಾರೇನೋ.

'ನಿಸರ್ಗ ಸೌಂದರ್ಯವನ್ನು ಸವಿಯಲು ಬನ್ನಿರಿ' ಎಂದರೆ ಸಾಮಾನ್ಯ ಯಾತ್ರಿಕರು ಬೆಟ್ಟವನ್ನೇರುವ ಸಾಹಸ ಮಾಡಲಾರರು. ಅದರ ಬದಲಿಗೆ 'ಶ್ರೀಗಿರಿ ಮಲ್ಲಯ್ಯನ ದರ್ಶನವನ್ನು ಪಡೆಯುವ ಪೂರ್ವದಲ್ಲಿ ಶಿಖರೇಶ್ವರನ ದರ್ಶನವನ್ನು ಮಾಡಲೇಬೇಕು' ಎಂಬ ಕಡ್ಡಾಯ ನೇಮವನ್ನು ಹಾಕಿ, 'ಶಿಖರೇಶ್ವರನ ಸಮೀಪದಲ್ಲಿ ನಿಂತು ಮಲ್ಲಿಕಾರ್ಜುನನ ಕಳಸವನ್ನು ನೋಡಿದರೆ ಪುನರ್ಜನ್ಮವಿಲ್ಲ' ಎಂಬ ಆಮಿಷವನ್ನೂ ಇರಿಸಿದರೆ ಎಷ್ಟೇ ಕಷ್ಟವಾದರೂ ತಪ್ಪದೆ ಬೆಟ್ಟವನ್ನೇರುವರು. 'ಬಿಟ್ಟರೆ ಪಾಪ ಬಂದೀತೇನೋ, ಅಥವಾ ಪುಣ್ಯದ ಕೊರತೆಯಾದೀತೇನೋ' ಎಂಬ ಭಯವೊಂದೇ ಈ ಕಾರ್ಯಕ್ಕೆ ಪ್ರೇರೇಪಣೆ! ಕಡಿದಾದ ಈ ಬೆಟ್ಟವನ್ನೇರಿ ಸುಧಾರಿಸಿಕೊಳ್ಳಲು ತಂಗಾಳಿಗೆ ಮೈಯೊಡ್ಡಿ ಕುಳಿತರೆ, ಇವರು ಬೇಡವೆಂದರೂ ಕೇಳದೆ ಅನಿವಾರ್ಯವಾಗಿ ಸೃಷ್ಟಿಯ ಸೌಂದರ್ಯವು ಕಣ್ಣ ಮುಂದೆ ಬಣ್ಣಕಟ್ಟಿ ನಿಂತುಬಿಡುವುದು. 'ರಸಪ್ರಜ್ಞೆಯಿಂದ ಇವರು ಬೆಟ್ಟವನ್ನೇರದಿದ್ದರೂ, ಏರಿದ ಬಳಿಕವಾದರೂ ರಸಪ್ರಜ್ಞೆಯನ್ನು ಹೊಂದಲಿ' ಎಂಬ ಮನೀಷೆಯಿಂದಲೇ ಹಿಂದಿನ ರಸಋಷಿಗಳು ಈ ಸುಂದರ ತಾಣವನ್ನು ಧಾರ್ಮಿಕ ತಾಣವನ್ನಾಗಿ ಪರಿವರ್ತಿಸಿದ್ದಾರೆ. ಇಲ್ಲಿಗೆ ಬಂದ ಬಳಿಕ ಪ್ರಕೃತಿಯಲ್ಲಿ ಮಿಡಿಯುವ ಶಿವಚೇತನವನ್ನು ಕಣ್ಣಾರೆ ಕಂಡು, ಮನವನ್ನು ತಣಿಸಿಕೊಳ್ಳಲಾರದ ಭಕ್ತರ ಹೃದಯಕ್ಕೂ ಸಾಂತ್ವನ ಕೊಡುವ ಶಿಖರೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ.' ಅಕ್ಕಮಹಾದೇವಿ ಉಲ್ಲಾಸ

ಅಲ್ಲಿಯೇ ಸ್ನಾನ-ಪೂಜೆಗಳನ್ನು ಪೂರೈಸಿ ಸೂರ್ಯನ ಪ್ರಖರತೆ ಕಡಿಮೆಯಾದ ಬಳಿಕ ಶಿಖರದಿಂದ ಇಳಿದು ಮುಂದೆ ಸಾಗಿದರು. ಮಾರ್ಗಮಧ್ಯದಲ್ಲಿ ಅರ್ಕೇಶ್ವರನ ಗುಡಿ. ಹಟಕೇಶ್ವರ ಎಂದೂ ಅದಕ್ಕೆ ಪ್ರಸಿದ್ಧ ನಾಮವಿದೆ. ಈ ಅರ್ಕೇಶ್ವರನ ಗುಡಿ ಇದ್ದುದು ಬಹು ಸುಂದರ, ರಮ್ಯವನದ ಮಧ್ಯೆ. ಗುಡಿಯ ಮುಂದೆ ತಿಳಿಯಾದ ನೀರಿನ ಕೊಳವಿತ್ತು. ತಪಸ್ಸು ಮಾಡಲಿಕ್ಕೆ ಸಾಧಕರಿಗೆ ಇದು ಅತ್ಯಂತ ಯೋಗ್ಯಸ್ಥಳವಾಗಿದ್ದ ಕಾರಣ ಅನೇಕ ಮುಮುಕ್ಷುಗಳು ಪರ್ಣಕುಟೀರಗಳನ್ನು ಕಟ್ಟಿಕೊಂಡು ತಪೋಮಗ್ನರಾಗಿದ್ದರು.

ಅರ್ಕೇಶ್ವರನ ಗುಡಿಯನ್ನು ದಾಟಿ ಮುಂದೆ ನಡೆದಾಗ ಕಂಡವು—ಬಹು ಸುಂದರವಾದ ಪಂಚಧಾರೆ ಮತ್ತು ಪಾಲಧಾರೆ ಎಂಬ ಸುಂದರ ದಬೆದಬೆಗಳು. ಬೆಟ್ಟದ ಗರ್ಭದ ಶಿಲಾಪದರಗಳಲ್ಲಿ ಗುಪ್ತವಾಗಿ ಹರಿದು ಬಂದು, ಐದು ಟಿಸಿಲಾಗಿ ಒಡೆದು ಪಂಚಧಾರೆಗಳಾಗಿ ಬೀಳುವ ಆ ದೃಶ್ಯ ಬಹು ಸುಂದರ ವಿದ್ದಿತು. ಇನ್ನೊಂದು ದೊಡ್ಡ ಪ್ರಮಾಣದ ನೀರಿನ ಝರಿ. ಅದು ಒಂದು ಬಂಡೆಯಿಂದ ಒಯ್ಯಾರಪೂರ್ಣವಾಗಿ ಜಾರುವಾಗ ವಾಃಕ್ಕಣಗಳು ಚಿಮ್ಮಿ ಹಾಲಿನ ಬಣ್ಣದಲ್ಲಿ ವ್ಯಕ್ತವಾಗುವುದರಿಂದ ಇದಕ್ಕೆ ಪಾಲಧಾರೆ ಎಂಬ ಹೆಸರು. ಈ ಎರಡೂ ಧಾರೆಗಳು ಮಳೆಗಾಲದಲ್ಲಿ ಬಹು ರಮಣೀಯವಾಗಿ, ಶಕ್ತಿಯುತ ವಾಗಿ ಸುರಿದು, ಮುಂದಿರುವ ಆಳವಾದ ಕೊಳ್ಳದಲ್ಲಿ ಧುಮುಕಿ ಹರಿದು ಸಾಗುವವು. ಬಿಸಿಲಲ್ಲಿ ನೀರು ಬಹು ತಂಪೆನಿಸಿದ ಕಾರಣ ಮುಖ ತೊಳೆದು ವಿಶ್ರಾಂತಿಗಾಗಿ ವಿಸ್ತಾರವಾದ ನೆರಳನ್ನು ನಿರ್ಮಿಸಿದ ವೃಕ್ಷರಾಜಿಯ ಕೆಳಗೆ ಅಕ್ಕಮಹಾದೇವಿ ಕುಳಿತಾಗ ದಣಿದ ಯಾತ್ರಿಕರಿಗೆ ಚಾಮರ ಸೋವುವಂತೆ ಗಿಡ-ಮರಗಳ ಗಾಳಿಯು ಮೈಗೆ ಬಹು ಹಿತವಾಗಿ ಬೀಸಿತು. ಕೆಲವು ಕಾಲ ಕುಳಿತು ಮೈಗೆ ತಂಪೆರೆದುಕೊಂಡು ಮುಂದೆ ಸಾಗಿದಾಗ ಶ್ರೀಗಿರಿ ಮಲ್ಲಯ್ಯನ ಗುಡಿಯ ಹೆಬ್ಬಾಗಿಲಿಗೆ ಕರೆದೊಯ್ಯುವ ಮಾರ್ಗ ಸ್ಪಷ್ಟವಾಗಿ ಕಂಡಿತು. ಗುಡಿಯ ಹೊರವಲಯದಲ್ಲಿದ್ದ ಪೌಳಿಯ ಕಮಾನುಗಳೆರಡನ್ನು ಆರಿಸಿಕೊಂಡು ಸಾಮಗ್ರಿಗಳನ್ನು ಇಳಿಸಿ, ವಿಶ್ರಾಂತಿ ಪಡೆದರು.

* * *

ಪ್ರಶಾಂತಮಯ ಉಷಃಕಾಲದಲ್ಲೇ ಎಚ್ಚರಗೊಂಡು ಮೀಯಲಿಕ್ಕೆಂದು

ಗೆರೆಯಂತೆ ಕಂಡಿತು. ಎಣ್ಣೆನೀರೆರೆಸಿಕೊಳ್ಳಲು ತಾಯಿಯು ಚಾಚಿದ ಕಾಲುಗಳ ಮಧ್ಯದ ಸಂಧಿಯಲ್ಲಿ ಮಲಗಿಕೊಂಡು, ಮೊದಲು ಅತ್ತರೂ ಬಿಸಿನೀರಿನ ಹಿತವಾದ ಸ್ಪರ್ಶದಿಂದ ಎರೆಸಿಕೊಳ್ಳುತ್ತಲೇ ನಿದ್ರೆಹೋದ ಎಳೆಗೂಸಿನಂತೆ ಆ ನದಿ ಕಂಡುಬರುತ್ತಿತ್ತು. ಹೆಜ್ಜೆಗಳನ್ನಿಡುತ್ತ ಸೋಪಾನಗಳನ್ನು ಇಳಿಯುತ್ತ ಬಂದಂತೆ ಸೂರ್ಯನ ಕಿರಣಗಳಲ್ಲಿ ಮಿಂದ ಬೆಟ್ಟ, ಕಾಡುಗಳು ಜೀವಕಳೆಯಿಂದ ಮಿಡಿಯುತ್ತಿದ್ದವು. ಬ್ರಹ್ಮಾಂಡಗತ ಪರಶಿವನ ಪಾದಗಳನ್ನು ತೊಳೆಯುವಳೆಂಬಂತೆ ಪಾತಾಳದಲ್ಲಿ ಹರಿಯುತ್ತ ಮುಂದೆ ಸಾಗುತ್ತಿದ್ದಳು ಆ ಗಂಗೆ.

ಯಾತ್ರಿಕರು ಯಾರೂ ಅಷ್ಟಾಗಿ ಮೀಯಲು ಬಂದಿರಲಿಲ್ಲ. ಬಂದವರೂ ಇಷ್ಟೊಂದು ಒಳಭಾಗಕ್ಕೆ ಬರದೆ ಸ್ವಲ್ಪವೇ ನೀರಿದ್ದಲ್ಲಿ ಒಡಲನ್ನದ್ದಿ ಮುಳುಗು ಹಾಕಿ ಹೋಗುತ್ತಲಿದ್ದರು. ಇದರಿಂದಾಗಿ ಅಕ್ಕಮಹಾದೇವಿಗೆ ಪಾತಾಳ ಗಂಗೆಯ ಮಡಿಲಲ್ಲಿ ಮನತಣಿಯುವಷ್ಟು ಈಜಾಡಬೇಕೆನ್ನಿಸಿತು. ಮಡಿಯಾಗಿದ್ದ ಬಟ್ಟೆಗಳನ್ನು ಬಂಡೆಯ ಮೇಲಿರಿಸಿ ಕಲ್ಲೊಂದನ್ನು ಭಾರಕ್ಕಾಗಿ ಇಟ್ಟು ನೀರಿಗಿಳಿದು ಈಜತೊಡಗಿದಳು. ಈಜುತ್ತಿರುವಾಗಲೇ ಬಾಲ್ಯದಲ್ಲಿ ನಡೆದ ಮಾತುಕತೆ ನೆನಪಿಗೆ ಬರತೊಡಗಿತ್ತು.

ತಂದೆ ಓಂಕಾರಶೆಟ್ಟಿಗೆ ಈಜುವುದೆಂದರೆ ಬಹಳಷ್ಟು ಅಕ್ಕರೆ. ಆಗಾಗ ತಮ್ಮ ತೋಟದಲ್ಲಿದ್ದ ವಿಶಾಲವಾದ ಬಾವಿಗೆ, ತಮ್ಮೂರಿನ ವಿಸ್ತಾರವಾದ ಕೆರೆಗೆ ಈಜಲಿಕ್ಕೆ ಹೋಗುವಾಗ ಮಗಳನ್ನೂ ಕರೆದೊಯ್ಯುತ್ತಿದ್ದ. ಮೊದ ಮೊದಲು ದಂಡೆಯ ಮೇಲೆ ಕುಳಿತು ಅಪ್ಪನು ತೆಗೆದಿಟ್ಟ ಬಟ್ಟೆ, ಕೊರಳ ಚಿನ್ನದ ಸರಗಳನ್ನು ಕಾಯುತ್ತ, ಈಜುವುದನ್ನೇ ಬಿಟ್ಟಗಣ್ಣಿನಿಂದ ನೋಡುತ್ತ ಕುಳಿತಿರುತ್ತಿದ್ದ ತರಳೆ, ತನಗೂ ಕಲಿಸಬೇಕೆಂದು ಪೀಡಿಸತೊಡಗಿದಳು. ಓಂಕಾರನು ಮಗಳನ್ನು ಬೆನ್ನಮೇಲೆ ಹಾಕಿಕೊಂಡು ನೀರಿಗಿಳಿದು ನಿಧಾನವಾಗಿ ಕಲಿಸತೊಡಗಿದ. ಕೆಲವೇ ದಿನಗಳಲ್ಲಿ ಆಕೆ ಈಜುವುದರಲ್ಲಿ ಬಲ್ಲಿದಳಾದಳು.

ಒಂದು ದಿನ ಬಯಲ ಬುತ್ತಿಯನ್ನು ಕಟ್ಟಿಕೊಂಡು ಮನೆಯವರೆಲ್ಲ ತೋಟಕ್ಕೆ ಬಂದಾಗ ಓಂಕಾರನು ಈಜಲು ತೊಡಗುತ್ತಿದ್ದಂತೆಯೇ, ಮಗಳು ನೀರಿಗಿಳಿಯಲಾರಂಭಿಸಿದಳು. ಇದನ್ನು ಕಂಡು ಲಿಂಗಮ್ಮ ಕಿರುಚುತ್ತ ಓಡಿ ಬಂದು, ‘ಮಾದೇವಿ....ನೀರು ಬಹಳ ಅದಾವೆ ಇಳೀಬೇಡ, ಜಾರಿಬಿಟ್ಟೀಯೇ ಬಿಂದಿಗೆಯಲ್ಲಿ ಸೇದಿಸಿ, ಸ್ನಾನ ಮಾಡುವಿಯಂತೆ ಬಾ' ಎಂದರೂ ಕೇಳದೆ ನೀರಿಗಿಳಿದಳು. ನಗುನಗುತ್ತ ಸಲಿಲವಾಗಿ ಈಜಿದಾಗ ಲಿಂಗಮ್ಮ ಅಚ್ಚರಿಗೊಂಡಳು. ಈಜಿ ಹೊರಬಂದಾಗ ಗಂಡನನ್ನು ಆಕ್ರೋಶದಿಂದ ಛೇಡಿಸಿದಳು. ... ಗಂಡುಬೀರಿ

'ಈಜೋದನ್ನು ಗಂಡಸ್ರೇ ಕಲೀಬೇಕು ಅಂತ ಎಲ್ಲಿ ಬರೆದಿವೆ. ಇದು ಆತ್ಮರಕ್ಷಣೆಯ ಸಾಧನೆ. ಯಾವೊತ್ತಿನಲ್ಲಿ ಏನೋ, ಗೊತ್ತಿದ್ರೆ ಒಳ್ಳೇದು....,' ಓಂಕಾರ ಉತ್ತರಿಸಿದ್ದ.

'ಹೆಣ್ಣುಮಕ್ಕಳು ಮನೆ ಬಿಟ್ಟು ಹೋಗೋದೇನಿರುತ್ತೆ? ರಕ್ಷಣೆ ಮಾಡ್ಕೊಳ್ಳೋ ಪ್ರಸಂಗ ಏನ್ಬರ್ತಾವೆ....? ಸಾರಿನ ಪಾತ್ರೇಲಿ ಸೌಟನ್ನು ಈಜಾಡ್ಸೋದೊಂದೇ ಅವರಿಗೆ ಬೇಕಾದ್ದು....' ಲಿಂಗಮ್ಮ ಹೇಳಿದ್ದಳು.

'ನಿಜ, ಅಂದು ಕಲಿತ ಈಜು ಎಷ್ಟೋ ಬಾರಿ ಉಪಯೋಗಕ್ಕೆ ಬಂತು. ಅರಣ್ಯದಲ್ಲಿ ಅಲೆಯುವಾಗ ಎಷ್ಟೊಂದು ತೊರೆ-ಹಳ್ಳಗಳನ್ನು ದಾಟ ಬೇಕಾಯ್ತು....'

ಅಕ್ಕಮಹಾದೇವಿ ಅಂದುಕೊಂಡಳು. ತೃಪ್ತಿಯಾಗುವಷ್ಟು ಈಜಾಡಿ ಹೊರಬಂದು ಮಡಿಯುಟ್ಟ ಆಕೆ ನದಿಯ ಒಳಭಾಗಕ್ಕೆ ವಿಸ್ತಾರವಾಗಿದ್ದ ಚಾಚಿದ್ದ ಬಂಡೆಗಲ್ಲಮೇಲೆ ಕುಳಿತು ಪೂಜಾಮಗ್ನಳಾದಳು. ತಲೆಯೆತ್ತಿ ನೋಡಿದರೆ ಉತ್ತುಂಗವಾದ ಬೆಟ್ಟಗಳು ಸಾಲುಸಾಲಾಗಿ ಹಬ್ಬಿ ಮುಂದೆ ಸಾಗಿ, ಪ್ರಕೃತಿ ಗುಡಿಯ ಗೋಪುರಗಳಂತೆ ಕಂಡರೆ, ಶೃಂಗಗಳು ರವಿಕಿರಣ ದಾಲಿಂಗನದಿಂದ ಹೊಂಗಳಸಗಳಾಗಿ ಕಾಣುತ್ತಿದ್ದವು. ಇಷ್ಟಲಿಂಗದರ್ಪಣದಲ್ಲಿ ಸೃಷ್ಟಿಯು ಚುಳುಕಾಗಿ ಪ್ರತಿಕೃತಿಗೊಂಡಿತ್ತು. ಆನಂದತುಂದಿಲಳಾಗಿ ವಚನ ವನ್ನು ಹಾಡುತ್ತ ಭಾವತನ್ಮಯಳಾದಳು.

ಪಾತಾಳವಿತ್ತಿತ್ತ ಪಾದಂಗಳತ್ತತ್ತ
ದಶದಿಕ್ಕು ಇತ್ತಿತ್ತ ದಶಭುಜಂಗಳತ್ತತ್ತ
ಬ್ರಹ್ಮಾಂಡವಿತ್ತಿತ್ತ ಮಣಿಮುಕುಟವತ್ತತ್ತ
ಚನ್ನಮಲ್ಲಿಕಾರ್ಜುನಯ್ಯಾ,
ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೆ.*

ತೃಪ್ತಿಯಾಗುವಷ್ಟು ಪೂಜಿಸಿ ಮೇಲೇರತೊಡಗಿದಳು. ಶಾರೀರಿಕ ಸ್ವಭಾವ ದಂತೆ ಕಡಿದಾದ ಮೆಟ್ಟಲುಗಳನ್ನು ಏರುವಾಗ ಮೈಯ್ಯಿ ದಣಿಯುತ್ತಿದ್ದರೂ ಸೃಷ್ಟಿಯ ಸೊಬಗು ನೋವನ್ನು ಮರೆಸುತ್ತಿತ್ತು. ಕುತೂಹಲಭರಿತಳಾಗಿ ಗುಡಿಯ ಹೊರಒಳಗುಗಳನ್ನು, ಸನಿಹದಲ್ಲಿದ್ದ ಪ್ರಮುಖ ಸ್ಥಳಗಳನ್ನೂ ಸಂದರ್ಶಿಸಿದಳು.

ಮಲ್ಲಯ್ಯನನ್ನು ಅರಸಿಕೊಂಡು ಬಂದಿದ್ದಾಗ, ಪರಿಷೆಯು ತಂಡದವರು ತಮ್ಮ ಆಚರಣೆಗೆ ಅನುಸಾರವಾಗಿ ಗುಡಿಯೊಳಗಣ ಮಲ್ಲಿಕಾರ್ಜುನನನ್ನು ತೋರಿಸಿದಾಗ ಒಪ್ಪದೆ, 'ಇದು ಮಲ್ಲಯ್ಯನಲ್ಲ, ಕಲ್ಲಯ್ಯ. ನನಗೆ ಬೇಕಾಗಿರುವುದು ಜೀವಂತ ಮಲ್ಲಯ್ಯ—' ಎಂದು ಶ್ರೀಶೈಲದ ಗಿರಿಗಹ್ವರಗಳು ಪ್ರತಿಧ್ವನಿಸುವಂತೆ ಕೂಗಿ, ಗಿರಿ ಗಿಡ ವನಗಳಲ್ಲಿ ಹುಡುಕಿ ಹತಾಶನಾಗಿದ್ದನು. ದೇವನಿಗಾಗಿ ಆತ್ಮಾಹುತಿ ಮಾಡಿಕೊಳ್ಳಲುದ್ಯುಗಿಸಿ ಬರುವಾಗಲೇ ಕಣ್ಣಿಗೆ ಕಂಡಿತು, ರುದ್ರ ಗಮ್ಮರಿ—ಆಳವಾದ ಕೊಳ್ಳದಿಂದೊಡಗೂಡಿದ ಪ್ರಪಾತ. ಸಿದ್ಧರಾಮನು ಆದರ ದಂಡೆಯಮೇಲೆ ಕುಳಿತು ಸುರಿಸಿದ ಕಣ್ಣೀರಧಾರೆ ಪ್ರಚಂಡವಾಗಿ ಹರಿಯಿತು, ಹರಿದು ಕೊಳ್ಳದಲ್ಲಿ ಪ್ರವಹಿಸುತ್ತಿದ್ದ ವಾಹಿನಿಯಲ್ಲಿ ಒಂದಾಗಿ ಸಿದ್ಧರಾಮನ ಹಳ್ಳವೆಂದೇ ಪ್ರಸಿದ್ಧಿ ಹೊಂದಿತು.

ಆ ಗಮ್ಮರಿಯಲ್ಲಿ ಧುಮುಕಿ ಆತ್ಮಾರ್ಪಣೆ ಮಾಡಿಕೊಳ್ಳಲು ಯತ್ನಿಸಿದಾಗಲೇ ಸಿದ್ಧರಾಮನಿಗೆ ಮಲ್ಲಯ್ಯನ ಸಾಕ್ಷಾತ್ಕಾರವಾದುದು. ಬೆಟ್ಟಗಳ ಬುಡಕ್ಕೆ ಮೈಯನ್ನು ತಾಡಿಸುತ್ತ ಮಂಜುಳ ರವದಿಂದ ಹಾಲಿನ ಹಳ್ಳದಂತೆ ಶುಭ್ರ ಧವಳ ನೊರೆಯನ್ನುಕ್ಕಿಸುತ್ತ, ಅಲ್ಲಲ್ಲೇ ದಬೆದಬೆಯಾಗಿ ನರ್ತಿಸುತ್ತ ಮುಂಸಾಗುತ್ತಿದ್ದ ಹಳ್ಳ ಬಹು ಸುಂದರವಾಗಿತ್ತು.

ಶ್ರೀಗಿರಿಯು ತನ್ನ ರಮಣೀಯ ನಿಸರ್ಗ ಸಂಪತ್ತು, ಪ್ರಶಾಂತ ವಾತಾವರಣ, ಅಲ್ಲಲ್ಲೇ ನಿರರ್ಗಳವಾಗಿ ಪುಟಿಯುವ ಸೆಲೆಗಳು, ಹರಿಯುವ ಝರಿಗಳು, ಲೌಕಿಕರು ಕಷ್ಟಸಾಧ್ಯದಿಂದ ಬರುವ ದುರ್ಗಮ ಕಾನನಗಳಿಂದ ಕೂಡಿ ತಪೋಧಾಮವಾಗಿತ್ತು. ಅನೇಕ ಸಾಧಕರು, ಜ್ಞಾನಪಿಪಾಸುಗಳು, ಸಿದ್ಧರು ಎಲ್ಲರೂ ತಮ್ಮತಮ್ಮ ಸಾಧನೆಯಲ್ಲಿ ಮಗ್ನರಾಗಿ ವಾಸಿಸುತ್ತಿದ್ದರು. ತನ್ನ ಅಮೂಲ್ಯ ಗಿಡಮೂಲಿಕೆಗಳ ಸಂಪದದಿಂದ ಉತ್ತಮ ವೈದ್ಯರು, ರಸಸಿದ್ಧರನ್ನೂ ಆ ಗಿರಿಯು ಆಕರ್ಷಿಸಿದ್ದರಲ್ಲಿ ಅಚ್ಚರಿಯೇನಿಲ್ಲ.

ಅಲ್ಲಿದ್ದ ಹಲವಾರು ಮಠಗಳಲ್ಲಿ ಪ್ರಮುಖವಾದ, ಉತ್ತಮ ವಿಭೂತಿಯನ್ನು ನಾಡಿಗೆ ಒದಗಿಸುತ್ತಿದ್ದ ವಿಭೂತಿ ಮಠ, ರುದ್ರಾಕ್ಷಿಗಳನ್ನು ಉತ್ತರ ಭಾಗದಿಂದ ತಂದು ದಕ್ಷಿಣದ ಭಕ್ತರಿಗೆ ಪೂರೈಸುತ್ತಿದ್ದ ರುದ್ರಾಕ್ಷಿ ಮಠಗಳೇ ಅಲ್ಲದೆ ಅನೇಕ ಶೈವಾಚಾರ್ಯರಿಂದ ಕೂಡಿದ್ದ ಘಂಟಾಸಿದ್ಧೇಶ್ವರ ಮಠ, ಪಂಚಲಿಂಗ ಮಠ, ಜಟಾವೀರಭದ್ರ ಮಠ ಇತ್ಯಾದಿಗಳನ್ನು ಸಂದರ್ಶಿಸಿ, ಅಲ್ಲಿದ್ದ ಅನೇಕ ಯೋಗಿಗಳು—ತಾಪಸಿಗಳೊಡನೆ ಅನುಭವವಿನಿಮಯ ನಡೆಸಿದಳು. ಅನಿತೊಂದು ಕಿರಿದಾದ ವಯಸ್ಸಿನಲ್ಲಿ ಆಕೆ ಗಳಿಸಿಕೊಂಡ ಜ್ಞಾನ-ಸಿದ್ಧಿಗಳನ್ನು

೫೭. ಕದಳಿಯತ್ತ ಪಯಣ

ಕೆಲವಾರು ದಿನಗಳನ್ನು ಅಲ್ಲಿ ಕಳೆದ ಅಕ್ಕಮಹಾದೇವಿ ಒಂದು ದಿವಸ ಗುಡಿಯ ಪ್ರಧಾನ ಪೂಜಾರಿಗಳನ್ನು ಕಂಡಳು.

'ಪೂಜಾರಿಗಳೇ....ಶ್ರೀಗಿರಿಗೆ ಅತ್ಯಂತ ಸನಿಹದಲ್ಲಿ ತ್ರಿಕೂಟ ಪರ್ವತವೆಂಬ ಗಿರಿಯಿದ್ದು ಅದರ ಬಯಲಲ್ಲಿ ಕದಳಿಯ ಬನವಿದೆಯಂತೆ....'

'ಅಹುದು ತಾಯಿ, ಆದರೆ ಅದು ಬಹು ದುರ್ಗಮವಾದ ಅರಣ್ಯಗರ್ಭದಲ್ಲಿದೆ. ನಾನಂತೂ ನೋಡಿಲ್ಲ; ವಿಶೇಷವಾಗಿ ಯೋಗಿಗಳು ಹೋಗಿ ಬರುವರು.'

'ನಾನಲ್ಲಿಗೆ ಹೋಗಬೇಕಾಗಿದೆ ಪೂಜಾರಿಗಳೇ....ಮಾರ್ಗದರ್ಶನ ಮಾಡಲಿಕ್ಕೊಬ್ಬರು ಜೊತೆಗೆ ಬೇಕಲ್ಲಾ....'

'ತಾಯಿ, ಅಂಥಲ್ಲಿಗೆ ತಾವು ಹೋಗಿ ಏನು ಮಾಡುವಿರಿ? ಕೇವಲ ಕಾಡು ಪ್ರಾಣಿಗಳಷ್ಟೇ ಅಲ್ಲಿ ಸಂಚರಿಸುವುದು. ಇಲ್ಲಿಯೇ ಗುಡಿಯ ಒಂದು ಭಾಗದಲ್ಲಿ ಇರಬಹುದಲ್ಲಾ ?'

'ಇಲ್ಲ ಪೂಜಾರಿಗಳೇ....ಅದೊಂದೇ ಅಪೂರ್ಣವಾಗಿ ಉಳಿದಿರುವ ಅಪೇಕ್ಷೆ. ನಾನು ಅಲ್ಲಿಗೆ ಹೋಗಲೇಬೇಕು....' ಅಕ್ಕಮಹಾದೇವಿ ತನ್ನ ನಿರ್ಧಾರದಿಂದ ಹಿಂದೆ ಸರಿಯಳೆಂದು ಪೂಜಾರಿಗೆ ಮನವರಿಕೆಯಾಯಿತು. ಅಂಥ ಅರಣ್ಯ ಗರ್ಭದಲ್ಲಿ ಹೋಗಲು ಎಂಟೆದೆಯ ಗಂಡಸರೂ ತಲ್ಲಣಿಸುವಾಗ ನಿರ್ಭಯ ನಿಲುವಿನಿಂದ ಹೋಗುತ್ತೇನೆನ್ನುವ ಆಕೆಯ ಸಾಹಸವನ್ನು ಕಂಡು ವಿಸ್ಮಯದ ಕಡಲುಕ್ಕಿ ಹರಿಯಿತು.

'ಆಗಲೀ ತಾಯಿ....ತಮ್ಮ ಅಪೇಕ್ಷೆಗೆ ಇದಿರಾಡೆನು. ಇಲ್ಲಿ ಚುಂಚರೆಂಬ ವನ್ಯವಾಸಿ ಜನಾಂಗ ಇರುವುದು. ಅವರು ಕಾಡಿನ ಮಡಿಲಲ್ಲಿ ಹುಟ್ಟಿ, ಆಡಿ, ಬೆಳೆದವರು. ಆ ಬಯಲಲ್ಲಿ ಬೃಹದಾಕಾರದ ಒಂದು ಗವಿಯೊಡನೆ ಇರುವ ಕದಳಿಯ ಬನ ಮತ್ತು ಅದರಿಂದ ಅರ್ಧ ಹರಿದಾರಿಯ ಮೇಲೆ ಕಿರಿದಾದ ಇನ್ನೊಂದು ಕದಳಿಯ ಬನವಿದೆ. ಅಲ್ಲಿಂದ ಮುಂದೆ ಕಾಲುಹರದಾರಿಯಲ್ಲಿ ಲಿಂಗಭೇರಿ ಎಂಬ ಚುಂಚರ ಹಳ್ಳಿಯಿದೆ. ಇಲ್ಲಿಂದ ಎಷ್ಟೋ ಜನ ಚುಂಚರು ಅಲ್ಲಿಗೆ ಮಕ್ಕಳನ್ನು ತಂದು-ಕೊಟ್ಟು, ಬೀಗತನ ಮಾಡಿರುವರು. ಲಿಂಗಭೇರಿ

ಬನದಲ್ಲಿ ತಪೋಮಗ್ನರಾಗಿದ್ದುದನ್ನು ಅರುಹಿದರು. ಸಂಚಾರ ಮಾಡುತ್ತ ಏಕಾಂಗಿಗಳಾಗಿ ಹೋಗಿ ನಿಸರ್ಗನಿರ್ಮಿತ ಗವಿಯನ್ನು ಆ ಮಹಿಮರೇ ಕಂಡುಹಿಡಿದರೇನೋ! ಆ ಬಳಿಕ ಅದರ ಅಸ್ತಿತ್ವ, ಪ್ರಶಾಂತತೆಗಳು ಪ್ರಚಾರಕ್ಕೆ ಬಂದವು. ತಾವು ಹೋಗಬಯಸುವುದು ಇವೆರಡರಲ್ಲಿ ಯಾವ ಬನಕ್ಕೆ....?'

'ಭವ್ಯಾಕಾರದ ಗವಿಯಿರುವ ಮೂಲ ಬನಕ್ಕೆ....'

'ಸರಿ ಹಾಗಾದರೆ; ನಮ್ಮ ಗುಡಿಗೆ ಹತ್ತಿರದಲ್ಲಿರುವ ಚುಂಚರ ಪ್ರಮುಖನಾದ ಮಲ್ಲನನ್ನು ಕೇಳಿದರೆ ಅಲ್ಲಿಗೆ ಕರೆದೊಯ್ಯುವ ವ್ಯವಸ್ಥೆಯನ್ನು ಮಾಡುವನು.'

'ತಮ್ಮಲ್ಲಿ ಒಂದು ಬಿನ್ನಪ....' ಅಕ್ಕಮಹಾದೇವಿ ಅಂದು, ಮಾತು ನಿಲ್ಲಿಸಿದಾಗ,

'ತಾಯಿ, ಅಂತಹ ದೊಡ್ಡ ಮಾತನ್ನಾಡದಿರಿ....ಆಜ್ಞೆ ಮಾಡಿದರೂ ಸಾಕು. ತಮ್ಮ ಸಾಧನೆ—ವ್ಯಕ್ತಿತ್ವಗಳು ಅನುಪಮವಾಗಿವೆ. ನೀವೀ ತಾಣವನ್ನು ಪಾದವಿಟ್ಟು ಪವಿತ್ರೀಕರಿಸಿದ ಸಾಕ್ಷಿಯಾಗಿ ನಮ್ಮ ಗುಡಿಯ ಪೌಳಿಯ ಹೊರಮುಖಕ್ಕೆ ತಮ್ಮ ಶಿಲ್ಪಚಿತ್ರವೊಂದನ್ನು ಇಡಿಸುವ ಆಲೋಚನೆ ಮಾಡಿರುವೆ....' ಪ್ರಧಾನ ಪೂಜಾರಿ ಭಕ್ತಿ ತುಂಬಿ ನುಡಿದ.

'ನೋಡಿ....ಮಹಾಮಹಿಮ ಪ್ರಭುದೇವರು ಅದೇ ಕದಳಿಯ ಬನಕ್ಕೆ ಐಕ್ಯವಾಗಲು ಬರಲಿರುವರು. ತಮ್ಮಿಂದ ಗುರುತರ ಕಾರ್ಯವೊಂದಾಗಬೇಕು. ನಾನು ನನ್ನ ಸಂಗಡ ತಾಡೋಲೆ-ಕಂತೆಗಳನ್ನು ಒಯ್ಯುವೆ. ನನ್ನ ಅನಿಸಿಕೆ, ಅನುಭವ, ಭಾವನೆಗಳನ್ನು ಬರೆದಿಡುವೆ. ಅವೆಂದಿಗೂ ವ್ಯರ್ಥವಾಗಬಾರದೆಂದು ಕಲ್ಯಾಣದ ಶರಣರ ಕಟ್ಟಪ್ಪಣೆಯಾಗಿದೆ. ಆದ್ದರಿಂದ ಯಾರಾದರೂ ಕಲ್ಯಾಣದ ಶರಣರು, ಜಂಗಮರು ಬಂದಾಗ ಸ್ಥಳ ನಿರ್ದೇಶನ ಮಾಡಿ ಆ ಗವಿಯಲ್ಲಿರುವ ವಚನಗಳ ಕಟ್ಟನ್ನು ಸಂಗ್ರಹಿಸಿಕೊಳ್ಳಲು ತಿಳಿಸಿರಿ....'

'ಆಗಲವ್ವಾ, ಸಾಹಿತ್ಯ ಸಂರಕ್ಷಣೆಯ ಆ ಪುಣ್ಯಕಾರ್ಯಕ್ಕೆ ನಾನು ಹಿಂಜರಿವೆನೇ?' ಎಂದು ಪೂಜಾರಿಯು ಹೃದಯಪೂರ್ವಕವಾಗಿ ಒಪ್ಪಿ, ಭಕ್ತಿಭರಿತನಾಗಿ ಪಾದಮುಟ್ಟಿ ನಮಸ್ಕರಿಸಿದಾಗ ಅಕ್ಕಮಹಾದೇವಿ ಸ್ಮಿತವದನೆಯಾಗಿ ಅವನನ್ನು ಆಶೀರ್ವದಿಸಿದಳು.

ಮರುದಿನ ಸುಪ್ರಭಾತದಲ್ಲಿಯೇ ಮಿಂದು-ಪೂಜಿಸಿ, ಅಲ್ಪೋಪಾಹಾರ ಮಾಡಿ ಹೊರಡುವುದೆಂದು ನಿರ್ಧಾರವಾಗುತ್ತಿದ್ದಂತೆಯೇ ಕಲ್ಯಾಣದಿಂದ ಬಂದ ಶರಣರ ಬಳಗವೂ ಆಕೆಯನ್ನು ಹಿಂಬಾಲಿಸಲು ಇಚ್ಛಿಸಿತು. ಅಕ್ಕಮಹಾದೇವಿ [illegible] ದನಿಯಲ್ಲಿ ಹೇಳಿದಳು:

ಶ್ರೀಗಿರಿಯನ್ನು ಮುಟ್ಟಿದ ವಿವರವನ್ನು ಅರುಹಿರಿ. ಅವರ ಶ್ರೀಪಾದಕ್ಕೆ ಮತ್ತು ಎಲ್ಲ ಶರಣಬಂಧುಗಳಿಗೆ ಭಕ್ತಿಪೂರ್ವಕ ಶರಣುಗಳನ್ನು ಸಲ್ಲಿಸಿರಿ....'

'ಇಲ್ಲ ಅವ್ವಾ, ಅಲ್ಲಿಯತನಕ ಮುಟ್ಟಿಸಿಬಂದೇ ವಾರ್ತೆಯನ್ನು ಕೊಂಡೊಯ್ಯುತ್ತೇವೆ.'

'ಏಕಾಂಗಿನಿಯಾಗಿ ಧ್ಯಾನಮಗ್ನಳಾಗಲು ಬಯಸಿರುವ ನನ್ನಾಸೆಗೆ ಭಂಗ ತರದಿರಿ....'

ನಿರ್ವಾಹವಿಲ್ಲದೆ ಅವರು ಹೃದಯವನ್ನು ತುಂಬಿಕೊಂಡ ಭಕ್ತಿ-ವ್ಯಥೆಗಳ ಸಂಯುಕ್ತಭಾವದಿಂದ ನಮಸ್ಕರಿಸಿ, ಕದಳಿಯತ್ತ ಕಳಿಸಿ ಹೊರಡುತ್ತೇವೆಂದರು.

ನಾಲ್ವರು ಚುಂಚರು ಸಿದ್ಧರಾಗಿ ಬಂದರು. ಗಟ್ಟಿಮುಟ್ಟಾದ ಕೋಲುಮೈಯಿಯ, ಎತ್ತರದ ನಿಲುವಿನ ಅವರು ಆತ್ಮರಕ್ಷಣೆಗೆ ವಿಶೇಷ ಆಯುಧಗಳನ್ನೇನೂ ಹೊಂದಿರದೆ ಬಿಲ್ಲು-ಬಾಣಗಳನ್ನು ಮಾತ್ರ ತಂದಿದ್ದರು. ಹೆಗಲನ್ನೇರಿದ್ದ ಹಸಿಬಿಯಲ್ಲಿ ಅವರಿಗೆ ಬೇಕಾದ ಆಹಾರಧಾನ್ಯಗಳಿದ್ದವು. ಬಲಗೈಯಲ್ಲಿ ಒಂದು ಮಣ್ಣಿನ ಕುಡಿಕೆಯಿದ್ದಿತು. ವಿಷಪೂರಿತ ದ್ರಾವಣವೊಂದನ್ನು ಅದರಲ್ಲಿರಿಸಿ ಮುಚ್ಚಿದ್ದರು. ಹುಲಿ-ಕರಡಿಗಳಂತಹ ಕ್ರೂರ ಮೃಗಗಳಿಗೆ ಸಾವು ತರಲು ಸಹಾಯಕವಾಗುವ ಆ ದ್ರಾವಣವನ್ನು ಬಾಣದ ತುದಿಗೆ ಹಚ್ಚಿ, ಬಿಟ್ಟಿದ್ದೇ ಆದರೆ ನಂಜೇರಿದ ಆ ಪ್ರಾಣಿಯು ಕೆಲವು ಕ್ಷಣಗಳಲ್ಲಿ ಮರಣವನ್ನಪ್ಪುತ್ತಿತ್ತು.

ಅಕ್ಕಮಹಾದೇವಿ ಚುಂಚರ ಮಾರ್ಗದರ್ಶನದಲ್ಲಿ ಮಲ್ಲಿಕಾರ್ಜುನ ಗುಡಿಯ ಹಿಂಭಾಗದ ಕಾಲುದಾರಿಯನ್ನನುಸರಿಸಿ ಪಶ್ಚಿಮ ದಿಕ್ಕಿನಲ್ಲಿ ಸಾಗಿದಳು. ಬನವಾಸಿ-ಬಳ್ಳಿಗಾವಿಗಳ ಕಡೆಗಿರುವ ಮಲೆನಾಡಿನ ಬೆಟ್ಟಗಳಂತೆ ಹೆಮ್ಮರಗಳಿಂದ ಕೂಡಿರದೆ ಬಯಲು ನಾಡಿನ ಈ ಬೆಟ್ಟಗಳು ಬೃಹದಾಕಾರದ ಬಂಡೆಗಳಿಂದ, ತಗ್ಗುತೆವರು, ಗಿಡಗಂಟೆಗಳಿಂದ ಕೂಡಿದ್ದವು. ನಿರಾಯಾಸಕರವಾಗಿ ಪ್ರಯಾಣವು ಮುಂದುವರಿಯಿತು.

ಮಾರ್ಗಮಧ್ಯದಲ್ಲಿ ಅಕ್ಕಮಹಾದೇವಿಗೆ ಆಶ್ಚರ್ಯವಾಗುವಂತೆ ಇದಿರಾಯಿತು—ಹರಳಯ್ಯ ಮಂಟಪ. ಕಲ್ಲಿನ ಕಟ್ಟೆ, ನಾಲ್ಕು ಕಂಭಗಳು; ಕಂಭದ ನೆತ್ತಿಯು ಕಲ್ಲಿನ ಬೋದಿಗೆಯಿಂದ ಕೂಡಿದ ಮಂಟಪವದಾಗಿತ್ತು. ಆಶ್ಚರ್ಯವನ್ನು ಹತ್ತಿಕ್ಕಲಾರದೆ ಚುಂಚರನ್ನು

ಅನುಕೂಲವಾಗಿದ್ದಿತ್ತು. ಹೃದಯಗಳು ಮಾತನಾಡುವುದು ಭಾಷೆಗಿಂತಲೂ ಭಾವನೆಗಳ ಮೂಲಕವಾದ ಕಾರಣ ಚುಂಚರು ಆಕೆಯ ಮನೋಭಾವನೆಗಳನ್ನು ಬಹು ತೀಕ್ಷ್ಣವಾಗಿ ಗ್ರಹಿಸುತ್ತಿದ್ದರು. ಆಗ ಅವರಾಡಿದ ಹರುಕು-ಮುರುಕು ಕನ್ನಡ ಭಾಷೆಯ ಮೂಲಕ ತಿಳಿದುದಿಷ್ಟು—

'ಕಲ್ಯಾಣದ ಶರಣರಲ್ಲಿ ಒಬ್ಬರಾದ ಹರಳಯ್ಯನವರು ಶ್ರೀಗಿರಿಯಲ್ಲಿ ಜಾತ್ರೆ ನಡೆದ ಕಾಲಕ್ಕೆ ಜಂಗಮರೊಡನೆ ಧರ್ಮಪ್ರಸಾರಕ್ಕೆ ಬಂದಿದ್ದರು. ತೆಲುಗುನಾಡಿನ ಕಡೆಯಿಂದ ಬಂದು ಕಡಿದಾದ, ದುರ್ಗಮವಾದ ಚುಕ್ಕಲ ಪರ್ವತವನ್ನು ಏರುವಷ್ಟರಲ್ಲಿ ಅಪಾರ ದಣಿವಿಗೆ ಒಳಗಾದರು. ವಯಸ್ಸು ಇಳಿಯುತ್ತಿದ್ದ ಅವರಿಗೆ ಎದೆಯು ತಿದಿಯಂತೆ ಉಬ್ಬಸಪಡತೊಡಗಿ ಮುಂದೆ ಹೆಜ್ಜೆ ಇಡಲಸಾಧ್ಯವಾದಾಗ ಈರ್ವರು ಪ್ರವಾಸಿಕರೊಡನೆ ಅನಿವಾರ್ಯವಾಗಿ ಕೆಲವು ದಿನಗಳ ಕಾಲ ತಂಗಬೇಕಾಯಿತು. ನೆಲದ ಗದ್ದುಗೆ, ಮುಗಿಲ ಬೋದಿಗೆಗಳನ್ನು ಬಿಟ್ಟರೆ ತಲೆಯನ್ನು ನೆಲಕ್ಕೆ ಹಚ್ಚಲಿಕ್ಕಿಷ್ಟು ನೆಲೆಯಿಲ್ಲ. ಆಗವರು ತಮ್ಮ ಸಂಗಡಿಗರೊಡನೆ ಒಂದಿಷ್ಟು ಠಾವನ್ನು ಕೊಡಬಲ್ಲ ಮಂಟಪವನ್ನು ಮಾಡಲು ಕಾರ್ಯೋನ್ಮುಖರಾದರು. ಯಾರಿಗಾದರೂ ಚುಕ್ಕಲ ಪರ್ವತವನ್ನು ಏರಿದ ಬಳಿಕ ಅಂಥ ದಣಿವಾಗುವುದು ಸಹಜವೇ ಇದ್ದ ಕಾರಣ ದಾರಿಕಾರರಿಗೆ ಅದರ ಅವಶ್ಯಕತೆ ಇತ್ತು. ಆದ್ದರಿಂದಲೇ ಅವರ ಹೆಸರು ಮಂಟಪದೊಡನೆಯೇ ಉಳಿದಿತ್ತು.

ಈಗವರು ತುಳಿಯುತ್ತಿದ್ದುದೇ ಚುಕ್ಕಲ ಪರ್ವತ. ಅದರ ನೆತ್ತಿಯ ಮೇಲೆ ನಿಂತ ಅವರು ಇನ್ನು ಒಂದೇ ಸಮನೆ ಇಳಿಯಬೇಕಿತ್ತು.

ನರಗಳನ್ನು ಮುರಿಯುವಷ್ಟು ಕಡಿದಾದ, ಆಳವಾದ ಗಿರಿ ಅದಾಗಿತ್ತು. ಯೋಗಾಸನಗಳ ಸಾಧನೆಯಿಂದ ಅಕ್ಕಮಹಾದೇವಿಯ ಶರೀರ ಸುಲಭವಾಗಿ ಮಣಿಯಬಲ್ಲ ನಮನೀಯತೆಯಿಂದ ಕೂಡಿದ್ದರಿಂದ ಅಷ್ಟಾಗಿ ಶ್ರಮವೆನಿಸದೆ ಅರಣ್ಯವಾಸಿ ಚುಂಚರೊಡನೆ ಜಿಂಕೆಯ ನಡಿಗೆಯಿಂದ ಪಾಲುಗಾರಳಾಗುತ್ತಿದ್ದಳು. ಆಕೆಯ ನಿತ್ಯನೂತನ ಉತ್ಸಾಹ, ಶರೀರ ಸಾಮರ್ಥ್ಯಗಳನ್ನು ಕಂಡು ಚುಂಚರು ಚಕಿತರಾಗುತ್ತಿದ್ದರು. ಬಿಸಿಲಿನ ತಾಡನಕ್ಕೆ ಸಿಕ್ಕು ಮುಖವು ಕೆಂಪೇರುತ್ತಿದ್ದರೂ ಅಳಿಯದ ಉತ್ಸಾಹ ಕಣ್ಣಿನಲ್ಲಿ ಪುಟಿಯುತ್ತಿತ್ತು.

ಚುಕ್ಕಲ ಪರ್ವತದ ಅವರೋಹಣಕ್ಕೆ ಮುನ್ನ ಶೃಂಗದ ತುದಿ ಬಂಡೆಯ ಮೇಲೆ ಕ್ಷಣಕಾಲ ಸಿದ್ಧಾಸನದಲ್ಲಿ ಕುಳಿತು ದೃಷ್ಟಿಯನ್ನು ಮುಂದಕ್ಕೆ

ದಿಂದಾಗಿ. ಸುತ್ತಲಿನ ಎಲ್ಲ ಗಿರಿಗಳು ಚುಕ್ಕಲ ಪರ್ವತದೊಡನೆ ಸ್ಪರ್ಧಿಸಲಾರದೆ ತಲೆತಗ್ಗಿಸಿ ನಿಂತಿದ್ದವು. ಎದುರಲ್ಲಿಯೇ ವೀರಭದ್ರ ಪರ್ವತ. ತೆಲುಗು ನಾಡಿನಿಂದ ಬರುವವರು ನೇರವಾಗಿ ಆ ದಿಕ್ಕಿನಿಂದ ಬಂದು ಕೃಷ್ಣೆಯನ್ನು ದಾಟಿ ಚುಕ್ಕಲಗಿರಿಯನ್ನು ಆರೋಹಿಸಿ ಸಾಗುತ್ತಿದ್ದರು.

ವೀರಭದ್ರ ಪರ್ವತವೂ ಚುಕ್ಕಲ ಪರ್ವತಕ್ಕಿಂತ ಸ್ವಲ್ಪವೇ ಎತ್ತರದಲ್ಲಿ ಕಡಿಮೆಯಿದ್ದು ಆದರೆ ಅದಕ್ಕಿಂತಲೂ ವನಸಂಪತ್ತಿನಲ್ಲಿ ದಟ್ಟವಾಗಿರುವ ಬೆಟ್ಟ. ಅದು ಕಡಿದಾಗಿ ಇಳಿಯದೇ ಹರಡಿಕೊಂಡು ತಲೆ ಎತ್ತಿದ್ದ ಬೆಟ್ಟ. ಚುಕ್ಕಲ ಪರ್ವತವು ಬಂಡೆಗಲ್ಲುಗಳ ಸಂಚಯದಿಂದ, ಸಣ್ಣ ಸಣ್ಣ ಗಿಡಗಳಿಂದ ಕೂಡಿದ್ದರಿಂದ ದೂರಕ್ಕೆ ಹಸಿರು ಮಿಶ್ರಿತ ಕಂದು ಬಣ್ಣದಲ್ಲಿ ತೋರುತ್ತಿದ್ದರೆ ವೀರಭದ್ರ ಪರ್ವತವು ದಟ್ಟವಾದ ಹಸಿರು ಸೀರೆಯಲ್ಲಿ ಮೈಯನ್ನು ಮುಚ್ಚಿಕೊಂಡಿತ್ತು. ಹಸಿರು ವನಶ್ರೀಯ ಮಧ್ಯೆ ಕಲ್ಲಿನ ಸೋಪಾನಗಳ ಸಾಲು, ಅದರಗುಂಟ ಇಳಿಯುವ ಬಣ್ಣಬಣ್ಣದ ವಸ್ತ್ರಗಳನ್ನುಟ್ಟ ಕೆಲವು ಪ್ರವಾಸಿಕರು ಇರುವೆಗಳಂತೆ ಸರಿದಾಡುತ್ತ ಇಳಿಯುತ್ತಿದ್ದರು. 'ಅಮ್ಮಾ....ಇತ್ತ ನೋಡಿ, ಅದೇ ತ್ರಿಕೂಟ ಪರ್ವತ....' ಚುಂಚನು ಉತ್ಸಾಹದಿಂದ ಕೈ ತೋರಿಸಿದ. ಎಡಕ್ಕೆ ಕತ್ತು ಹೊರಳಿಸಿದಾಗ ತ್ರಿಶೂಲದ ಮೂರು ತುದಿಗಳಂತೆ, ಆದರೊಂದಕ್ಕಿಂತಲೂ ಇನ್ನೊಂದು ಎತ್ತರವಾಗಿ ಸೋಪಾನದೋಪಾದಿಯಲ್ಲಿ ಮೂರು ಶಿಖರಗಳ ಬೆಟ್ಟವೊಂದು ಕಾಣುತ್ತಲಿತ್ತು.

ತಾನು ಕುಳಿತಿದ್ದ ಚುಕ್ಕಲ ಪರ್ವತ, ತನ್ನ ಎದುರಿಗಿರುವ ವೀರಭದ್ರ, ಎಡಕ್ಕಿರುವ ತ್ರಿಕೂಟ; ಹೀಗೆ ನೋಡಿದಾಗಲೂ ತ್ರಿಕೋನಾಕೃತಿಯಲ್ಲಿ ಕಾಣುವ ಗಿರಿಸಂಚಯದಿಂದ ಅದಕ್ಕೆ 'ತ್ರಿಕೂಟ'ವೆಂಬ ಹೆಸರು ಬಂದಿತೋ, ಅಥವಾ ಎಡಕ್ಕಿರುವ ಒಂದು ಅಖಂಡ ಬೆಟ್ಟದಲ್ಲೇ ಮೂರು ಶಿಖರಗಳಿರುವ ಕಾರಣ ಆ ಹೆಸರು ಬಂದಿದೆಯೋ ಎಂದು ಆಲೋಚಿಸುತ್ತಿರುವಾಗಲೇ ವೀರಭದ್ರ-ಚುಕ್ಕಲಗಳ ನಡುವಿನ ಕಂದಕದಲ್ಲಿ ಹರಿಯುವ ಕೃಷ್ಣೆ ಕಂಡಳು. ಅಂಕುಡೊಂಕಾದ ನಡಿಗೆಯಲ್ಲಿ ನಾಗರಹಾವಿನೋಪಾದಿಯಲ್ಲಿ ದೂರದಿಂದ ಬಂದು ಚುಕ್ಕಲ ಪರ್ವತವನ್ನು ಅರ್ಧಚಂದ್ರಾಕಾರದಲ್ಲಿ ಬಳಸಿ ಹರಿದು ಮುಂದೆ ಸಾಗುತ್ತಿದ್ದಳು. ವಿಶಾಲವಾದ ಹರವಿನ ಕೃಷ್ಣಾನದಿ ಈ ಎತ್ತರ

ಶ್ರೀಗಿರಿಯತ್ತ ಸಾಗುತ್ತಿತ್ತು. ವಿಹಂಗಮನೋಟದಿಂದ ನೋಡುವವರಿಗೆ ಮೊನಚಾದ ಶೃಂಗವು ಚುಕ್ಕೆಯಾಕಾರದಲ್ಲಿ ಕಾಣುತ್ತಿದ್ದರಿಂದ ಚುಕ್ಕಲ ಪರ್ವತ ಎಂದು ಕರೆದುದರಲ್ಲಿ ಆಶ್ಚರ್ಯವೇನಿಲ್ಲ ಎಂದು ಅಕ್ಕಮಹಾದೇವಿ ಅಂದುಕೊಂಡಳು.

'ಅಮ್ಮಾ....ಕತ್ಲು ಕವುಚೋದ್ರೊಳಗೆ ಬೆಟ್ಟ ಇಳಿದು ಜಾತರೇವಿನಲ್ಲಿ ವಸತಿ ಹೂಡ್ಬೇಕು. ಅನ್ನ ಬೇಸಾಕೆ ಒಲೆಹೂಡಿ ಬೆಂಕಿ ಹಾಕೋಕೆ ಕಟ್ಟಿಗೆ ಆರಿಸ್ಬೇಕು....ಅವಸ್ರ ಮಾಡಿದ್ರೆ ಚೆಂದಾದೀತು.' ಚುಂಚನು ಎಚ್ಚರಿಸಿದಾಗ ಅಕ್ಕಮಹಾದೇವಿ ನಿಸರ್ಗದಲ್ಲಿ ನೆಟ್ಟಿದ್ದ ಕಣ್ಣುಗಳನ್ನು ಕಿತ್ತಳು. ಆದರೆ ಮನಸ್ಸು ಅಷ್ಟೊಂದು ಸುಲಭವಾಗಿ ಕಂಗಳನ್ನು ಹಿಂಬಾಲಿಸಲು ಇಚ್ಛಿಸಲಿಲ್ಲ. ತಾಯಿಯು ಮಗನನ್ನು ಕರೆದುಕೊಂಡು ಸಂತೆಗೆ ಹೋದಾಗ ಕತ್ತಲಿಳಿವ ಮುನ್ನವೇ ವ್ಯಾಪಾರ ಮುಗಿಸಿ ಊರು ಸೇರಬೇಕೆಂದು ಧಾವತಿಗೊಂಡು ಆಕೆಯು ಮುಂದೆ ಸಾಗಿದರೂ, ಮಗುವು ತಿಂಡಿ ಅಂಗಡಿ, ಬೊಂಬೆ ಅಂಗಡಿಗಳಿಂದ ಕಾಲುಕಿತ್ತು ಬರಲಾರದಂತೆ ಅಕ್ಕಮಹಾದೇವಿಯ ಮನಸ್ಸು ಮೊಂಡಾಟ ಹೂಡುತ್ತಿತ್ತು—ನಿಸರ್ಗದ ದೃಷ್ಟಿಕೂಟದಿಂದ ಹಿಂದೆ ಸರಿಯಲು. ಆಕೆಯ ವಿವೇಕ ಸಂತೈಸಿತು :

'ಮುದ್ದು ಮನವೇ, ಸಮಾಧಾನ ಮಾಡಿಕೋ ; ಇನ್ನು ಮುಂದೆ ನೀನೇ ನೀನು ! ಬೇಡವೆನ್ನುವವರಿಲ್ಲ, ಎಚ್ಚರಿಸುವವರಿಲ್ಲ ; ಅವರಿಗಾಗಿಯಾದರೂ ಕರ್ತವ್ಯಮಗ್ನವಾಗು....'

ಅಂತೂ ಅರ್ಧಂಬರ್ಧ ಒಪ್ಪಿದಾಗ ಅಕ್ಕಮಹಾದೇವಿ ಮೇಲೆದ್ದು, ಬಂಡೆಯನ್ನಿಳಿದು, ಬೆಟ್ಟವನ್ನು ಅವರೋಹಿಸಲು ಸೂಚನೆ ನೀಡಿದಳು. ಸ್ತಂಭದೋಪಾದಿಯಲ್ಲಿ ಲಂಬವಾಗಿ, ಕಡಿದಾಗಿ ನಿಂತ ಆ ಬೆಟ್ಟದ ಒಂದೊಂದು ಸೋಪಾನವೂ ನೇರವಾಗಿ ಕೆಳಗಿಳಿಸುತ್ತಿತ್ತು. ಮನಸ್ಸು ಸುತ್ತಲಿನ ಸೌಂದರ್ಯವನ್ನು ಸವಿಯುತ್ತ ಮೈಮರೆಯುತ್ತಿದ್ದುದರಿಂದ ಶಾರೀರಿಕ ಶ್ರಮ ಅಷ್ಟಾಗಿ ತೋರಿಬರುತ್ತಲಿರಲಿಲ್ಲ. ಅರ್ಧದಷ್ಟು ಬೆಟ್ಟವನ್ನು ಕ್ರಮಿಸಿದ ಬಳಿಕ ಅದು ನಿಧಾನವಾಗಿ ಇಳಿಯುತ್ತಿದ್ದುದರಿಂದ ಕಡಿದು ಕಡಿಮೆಯಾಯಿತು. ಅಂತೂ ಬೆಟ್ಟವನ್ನು ಇಳಿಯುವುದಕ್ಕೂ ಸೂರ್ಯನು ಅಸ್ತಂಗತನಾದುದಕ್ಕೂ ಹೊತ್ತು ಗೂಡಿತು. ಅವರೀಗ 'ಜಾತರೇವಿಗೆ' ಬಂದಿದ್ದರು. ಕೃಷ್ಣಾನದಿಯು ಹೆಚ್ಚಾಗಿ ಎರೆಯ ಕರಿಮಣ್ಣಿನಲ್ಲೇ ಹರಿದು ಬರುವುದರಿಂದ ಸಾಮಾನ್ಯವಾಗಿ ಅದರ ದಂಡೆ ಉಸುಕಿಗಿಂತಲೂ ಮಿಗಿಲಾಗಿ ರ್ಯಾಗಿ ಮಣ್ಣಿನಿಂದ ಕೂಡಿರುವುದು.

[illegible] ಕೂಡಿದ್ದ ತಾಣವಾದ ಕಾರಣ ಪ್ರವಾಸಿಗಳು ಒಂದು ರಾತ್ರಿಯನ್ನು ಕಳೆದು ಮುಂದೆ ಸಾಗಲು ಸೂಕ್ತ ಸ್ಥಳವಾಗಿತ್ತು.

ಚುಂಚರು ಸಾಮಗ್ರಿಗಳನ್ನು ಕೆಳಗಿರಿಸಿ ಕಟ್ಟಿಗೆ-ಕಾಡುಕುಳ್ಳುಗಳನ್ನು ಆರಿಸಲು ಉದ್ಯುಕ್ತರಾದರು. ರಾತ್ರಿಯು ಧರೆಗಿಳಿವ ಮುನ್ನವೇ ಆತ್ಮರಕ್ಷಣೆಯ ವ್ಯವಸ್ಥೆಯನ್ನವರು ಮಾಡಿಕೊಳ್ಳಬೇಕಾಗಿತ್ತು. ಅಕ್ಕಮಹಾದೇವಿಗೆ ಆ ಚಿಂತೆ ಇರಲಿಲ್ಲ. ಶ್ರೀಗಿರಿಯನ್ನು ಬಿಡುವಾಗ ಆಗ್ರಹಪೂರ್ವಕ ಒತ್ತಾಯದಿಂದ ಪೂಜಾರಿಯು ಹಣ್ಣುಗಳನ್ನು ಜೋಳಿಗೆಯಲ್ಲಿ ಹಾಕಿದ್ದನು. ಅವುಗಳು ಆಕೆಯ ಕ್ಷುಧೆಯನ್ನು ತಣಿಸಬಲ್ಲವಾಗಿದ್ದವು. ಅಂತೆಯೇ ಮೀಯಲು ಉದ್ಯುಕ್ತಳಾಗಿ, ನದಿಯಲ್ಲಿ ಸ್ನಾನ ಮಾಡಿ ಮೇಲೆದ್ದು ಹಾಸುಬಂಡೆಯಮೇಲೆ ಕುಳಿತುಕೊಂಡು ಪೂಜೆಗೆ ಆರಂಭಿಸುವಷ್ಟರಲ್ಲಿ, ಚುಂಚರು ಒಣಕಟ್ಟಿಗೆಗಳನ್ನು ಸಂಗ್ರಹಿಸಿಕೊಂಡು ಬಂದು ಒಂದೆಡೆ ಒಟ್ಟಿದರು. ಮೂರು ಗುಂಡುಗಳನ್ನು ಹೂಡಿ ಅಡಿಗೆಯನ್ನು ಮಾಡಲು ಒಬ್ಬನು ತೊಡಗಿದರೆ, ನಾಲ್ಕು ದಿಕ್ಕಿಗೆ ನಾಲ್ಕು ಕಡೆ ಬೆಂಕಿ ಹಾಕಿ ಉರಿ ಮಾಡಲು ಉಳಿದವರು ತೊಡಗಿದರು.

'ಇವೇತಕ್ಕೆ....?' ಎಂದು ಕುತೂಹಲದಿಂದ ಅಕ್ಕಮಹಾದೇವಿ ಪ್ರಶ್ನಿಸಿದಾಗ ಅವರು,

'ಇದೇ ನಮ್ಮ ದೇವ್ರು, ಜೀವನಾಧಾರ. ಕಾಡ್ನಾಗೆ ಬದುಕೋ ಬಡಜೀವಿಗ್ಳು ನಾವು. ರಾತ್ರಿ ಬೆಂಕಿ ಉರಿಸದಿದ್ರೆ ಹುಲಿ, ಚಿರತೆ ಸಿಗೀದೇ ಇದ್ದಾವಾ? ಬೆಂಕಿ ಇದ್ರೆ ಸನಿಹಕ್ಕೆ ಬರಕ್ಕೆ ಹೆದ್ರಿ ಸಾಯ್ತಾವೆ. ಅಲ್ದೆ, ರಾತ್ರಿ ಒಪ್ಪೊತ್ತು ಕಳ್ದಾಗ ಸಾಯೋ ಅಂಥ ಚಳಿ ಬೇರೆ ಕಾಡುತ್ತೆ. ಬೆಂಕಿ ಇದ್ದರೆ ದುಪ್ಪಟೀನೇ ಬೇಡ....' ಅಕ್ಕಮಹಾದೇವಿಗೆ ನಿಜವೆನಿಸಿತು. ನದಿಯ ಮೇಲಿಂದ, ಗಿಡಗಳ ಒಡಲಿಂದ ಬೀಸಿ ಬರುವ ಹಿಮಗಾಳಿ ಆಗಲೇ ಶರೀರವನ್ನು ತಣ್ಣಾಗಿಸತೊಡಗಿತ್ತು.

ಚಕ್ಕಮುಕ್ಕಿ ಕಲ್ಲನ್ನಿಟ್ಟು ಅದರ ಮೇಲೆ ಬೊಕ್ಕಣದಲ್ಲಿದ್ದ ದೂದಿಯನ್ನಿರಿಸಿ ಉಕ್ಕಿನ ಗಟ್ಟಿಯಿಂದ ಹೊಡೆದಾಗ ಹೊನ್ನರಳೆಯು ದಗದಗನೆ ಉರಿ ಹತ್ತಿತು. ಅದನ್ನು ಕಾಡುಕುಳ್ಳುಗಳಿಗೆ ಹಚ್ಚಿ ಅದರ ಮೇಲೆ ಪುರುಳೆಗಳನ್ನು, ಒಣ ಕಟ್ಟಿಗೆಗಳನ್ನು ಹಾಕಿ ಬೆಂಕಿ ಮಾಡಿದರು. ಕ್ಷಣಕಾಲದ ಬಳಿಕ ಕೆನ್ನಾಲಿಗೆಗಳನ್ನು ಚಾಚಿ ಬೆಂಕಿಯು ಉರಿಯತೊಡಗಿತು. ಚುಂಚರು ಅಡಿಗೆ ಮಾಡಿ ಉಂಡು, ಬೆಂಕಿಗೆ ಸನಿಹದಲಿ ಮಲಗಿ, [illegible]

ಚಂದಿರನನ್ನು ನೋಡುತ್ತ ತನ್ಮಯಳಾದಳು.

'ಚನ್ನಮಲ್ಲಿಕಾರ್ಜುನಾ....ಪೃಥ್ವಿಯೇ ನೆಲೆಗಟ್ಟು, ಆಗಸವೇ ಛಾವಣಿ, ಗಿರಿಗಳೇ ಕಂಭಗಳು, ಸೂರ್ಯ-ಚಂದ್ರರು ನಿನ್ನ ಮನೆಯನ್ನು ಬೆಳಗುತಿಹ ಸೊಡರುಗಳು; ಲತೆ-ಗಿಡಗಳೇ ಬಾಗಿಲುವಾಡಗಳು, ನಕ್ಷತ್ರಗಳೇ ತೂಗುದೀಪಗಳು, ಮೋಡಗಳೇ ಮುತ್ತಿನ ಗೊಂಡೆಗಳು, ಬಂಡೆ-ಹುಲ್ಲುಗಾವಲುಗಳೇ ಪೀಠೋಪಕರಣಗಳು; ಇದೆಂತಹ ಸುಂದರ ಮನೆ ನಿನ್ನದು! ಇಂತಹ ಮನೆಗೆ ಮಡದಿಯಾಗಿ ಬರುವ ಪುಣ್ಯ ಎಷ್ಟು ಜನರಿಗಿದೆ. ಪತಿಯ ಗೃಹದಲ್ಲಿ ಏಕಾಂಗಿನಿಯಾಗಿದ್ದು ಸಮರಸ ಸುಖದಲ್ಲಿ ತಲ್ಲೀಯವಾಗಬೇಕೆಂದು ಅದೆಷ್ಟು ಸಂವತ್ಸರಗಳಿಂದ ಹಾತೊರೆಯುತ್ತಿದ್ದೆ. ಅಂತಹ ಏಕಾಂತ ಸಮರಸದ ಕಾಲ ಬಹು ಸನಿಹದಲ್ಲಿದೆಯಲ್ಲವೆ?'

ಬೆಳುದಿಂಗಳ ಶುಭ್ರ ಬೆಳಗಿನಲ್ಲಿ ಕೃಷ್ಣೆಯ ವೈಯ್ಯಿ ಫಳಫಳನೆ ಮಿಂಚುತ್ತ, ಹಾಲಿನ ಹಳ್ಳದಂತೆ ಹರಿಯುತ್ತಿತ್ತು. ಇರುಳಿನಲ್ಲಿ ನೀರು ಕುಡಿಯಲು ಬರುವ ವನ್ಯಮೃಗಗಳ ಗರ್ಜನೆಯು ಆಗಾಗ ಕಿವಿಯ ಮೇಲೆ ಬೀಳದಿರಲಿಲ್ಲ. ಒಮ್ಮೆಯಂತೂ ಅಂತಹ ಪ್ರಾಣಿಯ ಗರ್ಜನೆ ತುಂಬಾ ಸನಿಹದಲ್ಲಿ ಕೇಳಿತು. ನೀರು ಕುಡಿಯಲು ರೂಢಿಯಂತೆ ಬಂದ ಆ ಮೃಗವು ಕೆನ್ನಾಲಿಗೆ ಚಾಚಿ ಉರಿಯುವ ಅಗ್ನಿಯನ್ನು ಕಂಡು ಮನುಷ್ಯರ ಸುಳಿವಿಡಿದು ಭಯಗೊಂಡು ಮುನ್ನೆಚ್ಚರಿಕೆ ಕೊಡುವಂತೆ ಧ್ವನಿಗೈದು ಹಿಂದೆ ಸರಿಯಿತು.

'ನಿಮ್ಮ ಸಾರ್ವಭೌಮತ್ವಕ್ಕೆ ನಮ್ಮಿಂದ ಅಡ್ಡಿಯಿಲ್ಲವೇ?' ಎಂದು ಮುಗುಳ್ನಕ್ಕ ಅಕ್ಕಮಹಾದೇವಿ ಸಂತೃಪ್ತಿಯಿಂದ ಮಂತ್ರವನ್ನು ಧ್ಯಾನಿಸುತ್ತ ನಿದ್ದೆ ಹೋದಳು.

ಕೆಂಬಣ್ಣವು ದಿಕ್ತಟದಲ್ಲಿ ರೂಪುಗೊಳ್ಳುತ್ತಿದ್ದಂತೆಯೇ ಎಚ್ಚರಗೊಂಡಳು. ಜಗದ ನಿದ್ರೆ ಹರಿಯುತ್ತಿದ್ದರೂ ಚುಂಚರ ನಿದ್ರೆ ಹರಿದಿರಲಿಲ್ಲ. ಅಕ್ಕಮಹಾದೇವಿ ಎದ್ದು ಪ್ರಾತರ್ವಿಧಿಗಳನ್ನು ಪೂರೈಸಿ, ಜಾಲಿಯ ತುಣುಕೊಂದನ್ನು ಕಿತ್ತು ಹಲ್ಲುಕಡ್ಡಿಯನ್ನಾಗಿ ಮಾಡಿಕೊಂಡು ಹಲ್ಲುಜ್ಜಿ, ಸ್ನಾನ ಮಾಡಿ ಮುಗಿಸಿದಾಗ ಸೂರ್ಯನು ಚಂದ್ರನನ್ನು ಕಾಯಕದಿಂದ ನಿವೃತ್ತಿ ಮಾಡಿ ಶಿವನರಮನೆಗೆ ದೀವಟಿಗೆ ಹಿಡಿಯಲು ಮೇಲೇಳುತ್ತಿದ್ದ. ಕಾಡು ಇರವಂತಿ ಹೂವುಗಳನ್ನು ಸಂಗ್ರಹಿಸಿ, ತತ್ರಾಣಿಯಲ್ಲಿ ಪೂಜೆಗೆ ನೀರನ್ನು ತುಂಬಿಕೊಂಡು, ಜೋಳಿಗೆಯಲ್ಲಿದ್ದ ವಿಭೂತಿಯನ್ನು ತೆಗೆದಿರಿಸಿಕೊಂಡು ಪೂರ್ವಾಭಿಮುಖವಾಗಿ ಕುಳಿತು ಸೂರ್ಯೋದಯವನ್ನು ಸವಿಯುತ್ತ ಪೂಜಾಮಗ್ನಳಾದಳು ಅಕ್ಕಮಹಾದೇವಿ.

ಪುಲಿ' ಎಂದು ಕೂಗುತ್ತ ತಮ್ಮ ಬಾಣಗಳನ್ನು ಬತ್ತಳಿಕೆಯಿಂದ ತೆಗೆದು ವಿಷಪೂರಿತ ದ್ರಾವಣದಲ್ಲದ್ದಿ ಹೆದೆ ಏರಿಸುವ ಸನ್ನಾಹದಲ್ಲಿದ್ದುದು ಕಂಡಿತು. ಬೆಳಗಿನ ಚೆಂಗಿರಣಗಳಲ್ಲಿ ಅಡ್ಡಾಡುತ್ತ ನೀರು ಕುಡಿಯಲು ಬಂದ ಹುಲಿಯು ಮನುಷ್ಯರ ವಾಸನೆಯ ಸುಳಿವಿಡಿದಿತ್ತು. ಯಾರಲ್ಲೂ ಚಲನೆವಲನೆಯಿಲ್ಲದೆ ಚುಂಚರು ಮಲಗಿದ್ದಾಗ ಅದಕ್ಕೆ ಆಸೆಯಾಗಿ ಹೊಂಚು ಹಾಕುತ್ತ ಹೆಜ್ಜೆ ಇಡುತ್ತಿತ್ತು. ಮಲಗಿ ಹೊರಳಾಡುವವನೊಬ್ಬ ಆಕಸ್ಮಿಕವಾಗಿ ನೋಡಿ ಗದಗದ ನಡುಗುತ್ತ, ಪಕ್ಕದಲ್ಲಿದ್ದವನನ್ನೂ ಚುಚ್ಚಿ ಎಬ್ಬಿಸಿದ್ದ. ದಿಗ್ಗನೆ ಎದ್ದು ಹೆದೆ ಏರಿಸುವಾಗಲೇ ಅಕ್ಕಮಹಾದೇವಿ ಕಂಡಳು, ಸೂರ್ಯನ ಕಿರಣಗಳಲ್ಲಿ ಮಿರುಗುವ ಬಂಗಾರ ವರ್ಣದ ಹುಲಿಯ ಮೈಯ್ಯಿ, ಹೊಳೆಯುವ ಕಣ್ಣು ಗಳನ್ನು ಕಂಡು ಹೆದರಿಕೆಯಾಗುವ ಬದಲು ಸಂಭ್ರಾಂತಳಾಗಿ,

'ಇಂತಹ ಕ್ರೂರ ಪ್ರಾಣಿಯಲ್ಲೂ ಎಂಥಾ ಚೆಲುವನ್ನು ದೇವರು ಇಟ್ಟಿದ್ದಾನೆ....' ಎಂದುಕೊಂಡು,

'ಚುಂಚರೇ....ಬಾಣವನ್ನು ಬಿಡಬೇಡಿ. ನೀವು ನನ್ನ ಬೆನ್ನಿಗೆ ನಿಂತು ಕೊಳ್ಳಿ. ಹಿಂದಕ್ಕೆ ಬನ್ನಿರಿ. ಅದು ತಿಂದರೂ ನನ್ನನ್ನೇ ತಿಂದುಹೋಗಬೇಕಷ್ಟೆ. ನೋಡೋಣ....ನಮ್ಮ ಅಂತಃಕರಣದ ಪ್ರೇಮವು ಇಂತಹ ಮೃಗಗಳನ್ನೂ ಪರಿವರ್ತಿಸುವುದೇನೋ....' ಕಾರುಣ್ಯ ತುಂಬಿದ ಕಣ್ಣುಗಳಿಂದ ಹುಲಿಯ ಕ್ರೂರ ಕಣ್ಣುಗಳನ್ನು ನಿಟ್ಟಿಸಿದಳು. ಅದು ಮೆಲ್ಲಮೆಲ್ಲನೆ ಹೆಜ್ಜೆಯಿರಿಸುತ್ತ ಮುಂದೆಮುಂದೆ ಬರುತ್ತಿತ್ತು. ಅದೂ ಸಹ ಭಯ, ಆಕ್ರೋಶಗಳಿಂದ ಆಕೆ ಯನ್ನೇ ನೋಡುತ್ತಿತ್ತು. ಆದರೆ ಹುಲಿಯು ಸಮೀಪಿಸಿದಂತೆಲ್ಲ ಕಂಗಳಲ್ಲಿನ ಕ್ರೌರ್ಯದ ಕಾವು ಇಳಿಯಲಾರಂಭಿಸಿ ಕೇವಲ ಒಂದು ಮಾರು ದೂರದಲ್ಲಿ ಬಂದು ನಿಂತಿತು. ಬಂಡೆಯ ಮೇಲೆ ಕುಳಿತ ಆಕೆ ಅದೇ ವಾತ್ಸಲ್ಯ-ನಿರ್ಭೀತಿ ಯಿಂದ ನಿಟ್ಟಿಸಿದಾಗ ಅದು ಶಾಂತವಾಗಿ, ಮೋಡಿಗೊಳಗಾದಂತೆ ಆಕರ್ಷಿತ ವಾಗಿ, ಮುಂದಕ್ಕೆ ಹೆಜ್ಜೆಯಿಟ್ಟು ಬಂಡೆಯ ಬಳಿ ನಿಂತು ಮೂಸಲಾರಂಭಿಸಿತು. ಅಕ್ಕಮಹಾದೇವಿಯು ಪ್ರೇಮತುಂಬಿ ಅದರ ನೆತ್ತಿಯನ್ನು ಸವರತೊಡಗಿದಾಗ ಸನ್ಮೋಹಕ್ಕೊಳಗಾಗಿ, ಕಣ್ಣು ಮುಚ್ಚಿಕೊಂಡು ಮುಗ್ಧವಾಗಿ ನಿಂತಿತು. ಚುಂಚರು ಗಡಗಡನೆ ನಡುಗುತ್ತಿದ್ದವರು ಈಗ ಆಶ್ಚರ್ಯಚಕಿತರಾಗಿ ರೆಪ್ಪೆ ಬಡಿಯದೆ ನೋಡುತ್ತ ನಿಂತರು. ಕೆಲವು ಕ್ಷಣಗಳ ಬಳಿಕ ಹುಲಿಯು ಮರಳಿ

ಕಾಂತಿಯನ್ನು ಕಂಡು ಚುಂಚರು ಭಯ-ಭಕ್ತಿಯಿಂದ ಉದ್ದೀಪಿತರಾಗಿ ಸಾಷ್ಟಾಂಗವೆರಗಿದರು.

'ಅವ್ವಾ....ಈಗ ನದೀನ ದಾಟಿ ಅರ್ಧ ಹರ್ದಾರಿ ಹೋದ್ರೆ ಅಲ್ಲಿನ್ನೊಂದು ಹೊಳೆಯಿದೆ. ತುಂಬ ಚಂದವಾದ ಜಾಗ. ಹೋಗಿಬಿಟ್ಟು ಅಲ್ಲೇ ಅಡ್ಗಿ ಮಾಡಿ ಉಂಡು, ಮ್ಯಾಕೆ ಕದ್ಳಿಬನಕ್ಕೆ ನಡ್ಯಾಣ....'

ಅಕ್ಕಮಹಾದೇವಿ ಸಾಮಾನುಗಳನ್ನು ಒಟ್ಟುಗೂಡಿಸಿ ಎದ್ದಳು. ದಂಡೆಗೆ ಇದ್ದ ಹೆಬ್ಬಂಡೆಯೊಂದಕ್ಕೆ ಕಬ್ಬಿಣದ ಸರಪಳಿಯಿಂದ ಬಿಗಿಯಲ್ಪಟ್ಟಿದ್ದ ದೋಣಿಯು ಮರಳನ್ನಪ್ಪಿ ಮಲಗಿತ್ತು.

'ಇದೇನು ಅಚ್ಚರಿ....ಇಲ್ಲಿ ದೋಣಿ ಹೇಗೆ ಬಂದಿತು?' ಆಶ್ಚರ್ಯಗೊಂಡು ಕೇಳಿದಳು.

'ಅವ್ವಾ....ಶ್ರೀಶೈಲದಾಗೆ ಜಾತ್ರೆ ನಡೆಯೋ ಕಾಲಕ್ಕೆ ಸಾವಿರಾರು ಮಂದಿ ಈಚೆಕಡೆಯಿಂದ ಬರ್ತಾರೆ. ಇಳೀಲಾಕೆ ಸೋಪಾನ ಬೋ ಚಂದಾಗವೆ. ಆಗ ಜಾತ್ರೆ ವೇಳ್ಯಾಕ ದೋಣ್ಯಾಗೆ ಜನರನ್ನ ದಾಟಿಸ್ತಾರೆ. ಉಳಿದಾಗ ಯಾರೂ ಬರಲ್ಲ. ಅದಕ್ಕೆ ಇಲ್ಲಿ ಬಿಗಿದು ಹೋಗಿರ್ತಾರ....'

ನಾಲ್ವರೂ ಸೇರಿ ದೋಣಿಯನ್ನು ಮರಳಿನಿಂದ ಎಳೆದು ತಂದು ನೀರಿಗೆ ಇಳಿಸಿದರು. ಹುಟ್ಟನ್ನು ಸರಿಪಡಿಸಿಕೊಂಡರು. ಅಕ್ಕಮಹಾದೇವಿ ಕೂಡುತ್ತಲೇ ಹುಟ್ಟನ್ನು ಮೀಂಟಿದರು. ದೋಣಿಯು ಮುಂದೆ ಸಾಗಿತು. ಸುಪ್ರಭಾತದ ರಮಣೀಯ ವಾತಾವರಣದಲ್ಲಿ ಹಿಂದೊಮ್ಮೆ ಹೀಗೇ ಹೋಗಿದ್ದಳಷ್ಟೆ; ಅದು ನೆನಪಾಯಿತು. 'ಛೀ....ಆ ಕಹಿನೆನಪು ಬೇಡವೇ ಬೇಡ' ಚಿತ್ತರಂಗದಿಂದ ನೆನಪನ್ನು ಹೊರದೂಡಿದಳು.

'ಕಹಿಯೂ ಅಲ್ಲ....ಸಿಹಿಯೂ ಅಲ್ಲ, ಆ ಘಟನೆಯೊಂದು ಬಾಳಿನಾಗಸದಲ್ಲಿ ವೈರಾಗ್ಯದ ಶಶಿಗೆ ಮುಸುಕಬಂದ ಕಪ್ಪುಮೋಡ. ಆದರೆ ಶಾಶ್ವತವಾಗಿ ಅದು ಕವುಚದೆ ಆತ್ಮವಿಶ್ವಾಸದ ಬಿರುಗಾಳಿಗೆ ಸಿಕ್ಕಿ ತತ್ತರಿಸಿ ಚದುರಿದ ಮೇಘ.

ಅದಕ್ಕೂ ಇದಕ್ಕೂ ಆಡು-ಆನೆಯಷ್ಟು ಅಂತರ. ಆಗ ಪಂಜರದ ಪಕ್ಷಿ, ಈಗ ಅರಣ್ಯದ ಹಕ್ಕಿ; ಆಗ ವಿಲಾಸ-ಬಂಧನದ ಗೂಡಿನಲ್ಲಿ, ಈಗ ಪಾರಮಾರ್ಥದ ಸ್ವಚ್ಛಂದ ಸೃಷ್ಟಿಯಲ್ಲಿ. ಆಗ ಕಳವಳದ ಕೂಪದಲ್ಲಿ, ಈಗ ಸ್ವಾನಂದ ಸರಸಿಯಲ್ಲಿ. ಎಷ್ಟು ಅಂತರವಲ್ಲವೆ!'

ದೋಣಿಯು ಓಲಾಡುತ್ತ ಸಾಗಿ ಬಂದು ದಂಡೆಯನ್ನು ಮುಟ್ಟಿದಾಗ

ಅಕ್ಕಮಹಾದೇವಿ ಪ್ರಕೃತಿಯ ಸವಿಸವಿಯಾದ ದೃಶ್ಯವನ್ನಿಲ್ಲಿ ಕಂಡಳು. ಸುತ್ತಲೂ ಬೆಟ್ಟಗುಡ್ಡಗಳ ಭವ್ಯ ಕೋಟೆ, ಹೆಮ್ಮರಗಳು—ಕಾಡುಗಿಡಗಳ ಮಧ್ಯದಲ್ಲಿ ಅತ್ಯಂತ ಮೃದು-ಮಧುರ ನಿಸರ್ಗ. ಎಲುಬಿನ ಹಂದರದೊಳಗೆ ರಕ್ಷಿಸಲ್ಪಟ್ಟ ಎದೆಯ ಗೂಡಿನಂತೆ, ಬಿರುಸಾದ ಮಟ್ಟೆ-ಸಿಪ್ಪೆ-ನಾರು-ಚಿಪ್ಪುಗಳ ಕೋಟೆಯಲ್ಲಿ ರಕ್ಷಿಸಲ್ಪಟ್ಟ ಎಳೆಯ ತೆಂಗಿನಕಾಯಿಯಂತೆ ಈ ವನಪ್ರದೇಶ ಕಂಡಿತು. ಇಲ್ಲಿಯತನಕದ ಪಯಣದಲ್ಲಿ ನಿಸರ್ಗದಲ್ಲಿ ಒಂದು ಬಗೆಯ 'ಬಿರುಸು' ಕಂಡರೆ, ಈಗ ಅತ್ಯಂತ 'ಮೃದುತ್ವ.' ಅದೂ ಭಿನ್ನವಾಗಿ ಎರಡೂ ಇರದೆ ಬೇಲದ ಕಾಯಿಯ ಚಿಪ್ಪಿನೊಳಗಣ ತಿರುಳಿನಂತೆ ಅದರ ಗರ್ಭದಲ್ಲಿ ಇದು.

ಈ ಪ್ರಕೃತಿ ಸೌಂದರ್ಯ ಒಂದು ಬಗೆಯ 'ಹುಚ್ಚಿನ ತೆರೆ'ಯನ್ನು ಬಲವಾಗಿ ಕವ್ರುಚಿತು ಅಕ್ಕಮಹಾದೇವಿಯ ಮೇಲೆ. ಭೀಮನಕೊಳ್ಳ, ರುದ್ರಗಮ್ಮರಿಗಳಂತಹ ಉಗ್ರರೂಪವನ್ನು ಪ್ರಕೃತಿಯು ಇಲ್ಲಿ ತೋರದೆ, ಪ್ರಶಾಂತ ಮುಖಮುದ್ರೆಯ ಸಾತ್ವಿಕಶಕ್ತಿಯಾಗಿ ಕಂಗೊಳಿಸುತ್ತಿದ್ದಳು. ದಟ್ಟನೀಲಿ ಬಣ್ಣದ ಕೃಷ್ಣಾನದಿಯ ಒಡಲೊಳಕ್ಕೆ ಬಿಳಿಯಾದ ವಾಹಿನಿಯೊಂದು ಬಂಡೆಗಲ್ಲುಗಳ ಮೇಲೆ ಬಳುಕುತ್ತ, ನರ್ತಿಸುತ್ತ ಬಡಗಣ ದಿಸೆಯಿಂದ ಹರಿದು ಮಧುರವಾಗಿ ಮಿಲನವಾಗುತ್ತಿತ್ತು. ಎರಡೂ ಒಂದರೊಡನೊಂದು ಬೆರೆಯುತ್ತ ಬೆಸುಗೆಯುಳಿಯದಂತೆ ಕೂಡಿ ಹರಿವುದು ಚೇತೋಹಾರಿ ದೃಶ್ಯವಾಗಿತ್ತು. ಎರಡರ ನಡುವೆ ನಿಂತು ಅಕ್ಕಮಹಾದೇವಿ ಮಂದಸ್ಮಿತಳಾಗಿ ನುಡಿದಳು: 'ಅದು ನೀನು....ಇದು ನಾನು; ಚೆನ್ನಮಲ್ಲಿಕಾರ್ಜುನಾ.'

ವಾಹಿನಿಯ ದಂಡೆಗುಂಟ ತೊಡೆಮಟ್ಟ ಬೆಳೆದ ನವಿರಾದ ಹುಲ್ಲಿನ ತೆನೆಗಳನ್ನು ಹಗುರಾಗಿ ಸವರುತ್ತ 'ದೇವಾ, ನನ್ನನ್ನು ಸ್ವಾಗತಿಸಲು ಹಸಿರು ನಡೆಮುಡಿಯನ್ನು ಹಾಸಿಟ್ಟಿರುವೆಯಾ?' ಎಂದುಕೊಳ್ಳುತ್ತ ಅಕ್ಕಮಹಾದೇವಿ ಹೆಜ್ಜೆ ಇಟ್ಟಳು. ಸುಂದರವಾದ ತೊರೆಯ ದಂಡೆಯ ಮೇಲೆ ನಿಂತು ಪ್ರಕೃತಿಯ ರಮಣೀಯತೆಯನ್ನು ಪರವಶೀಭೂತಳಾಗುತ್ತ ಸವಿದು ಹೇಳಿಕೊಂಡಳು:

'ಚೆನ್ನಮಲ್ಲಿಕಾರ್ಜುನಾ....ಈ ಬ್ರಹ್ಮಾಂಡವೇ ನಿನ್ನ ಮನೆ, ಹಳ್ಳದ ದಂಡೆಯ ಆಸುಪಾಸಿಗೆ ನಿಸರ್ಗ ಸ್ವರ್ಗವೇ ನನ್ನ-ನಿನ್ನ ಶಯ್ಯಾಗೃಹ; ಕದಳಿಯ ಗವಿಯೋ ಸೆಳೆಮಂಚ. ಇದೆಂತಹ ಮಧುರ ಕಲ್ಪನೆಯಲ್ಲವೆ....!'

ಕಾನನವನ್ನು ಕಂಡಿದ್ದು ಅತಿ ವಿರಳ. 'ಅದು ಹೊಯ್ಯಾಲಿನಂತೆ, ಇದು ತಾಯ ಎದೆಹಾಲಿನಂತೆ! ಇದರಿಂದ ಸಿಗುವ ನೆಮ್ಮದಿ ಅದರಿಂದ ಸಿಕ್ಕೀತೆ?' ಎಂದು ಉದ್ಗರಿಸಿದಳು.

ವಿಶಾಲವಾದ ಹಾಸುಬಂಡೆಯ ಮೇಲೆ ತಮ್ಮ ಸಾಮಗ್ರಿಗಳನ್ನಿಳಿಸಿ, ಚುಂಚರು ಒಲೆಹೂಡಿ ಊರಿನಿಂದ ತಂದಿದ್ದ ಬಿದಿರಕ್ಕಿಯ ಅನ್ನಕ್ಕಾಗಿ ಮಡಿಕೆಯಲ್ಲಿ ಎಸರಿಟ್ಟರು. ಸಾರಿಗಾಗಿ ಬಿದಿರಿನ ಕಳಿಲೆ, ಸೊಪ್ಪು, ಕಾಯಿಪಲ್ಲೆಗಳನ್ನು ಅರಸತೊಡಗಿದರು. ಬಿದಿರು ಮೆಳೆಗಳ ಕೆಳಗೆ ಯಥೇಚ್ಛವಾಗಿ ಉದುರಿದ್ದ ಬಿದಿರಕ್ಕಿಯನ್ನು ಆಯ್ದು ಊರಿಗೆ ಒಯ್ಯಲು ಗಂಟುಕಟ್ಟಿಟ್ಟರು. ಅಕ್ಕಮಹಾದೇವಿ ಕೆಲವು ಕ್ಷಣಕಾಲ ಎತ್ತರವಾದ ಬಂಡೆಗಲ್ಲಮೇಲೆ ಕುಳಿತು ಸುತ್ತಲೂ ಕಣ್ಣು ಹಾಯಿಸಿದಳು. ಬೃಹದಾಕಾರದ ಎರಡು ಬೆಟ್ಟಗಳ ಬುಡದಲ್ಲಿದ್ದ ಆಳವಾದ ಕಂದರದಲ್ಲಿ ಗುಂಡುಗುಂಡಾದ ಕಲ್ಲುಗಳನ್ನು ಮುದ್ದಿಟ್ಟು ಬಳುಕುತ್ತ, ಇಳಿಯುತ್ತ, ಧುಮುಕುತ್ತ, ತೆವಳಿ ಮುಂದೆ ಸಾಗಿ ಮಂಜುಳ ರವದಿಂದ ಹರಿಯುವ ಆ 'ವಾಗು' ತುಂಬ ಪ್ರಿಯವೆನಿಸಿತು. ಅತ್ಯಂತ ಮೋಹದಿಂದ ಬೊಗಸೆಯಲ್ಲಿ ನೀರನ್ನೆತ್ತಿಕೊಂಡು ಕುಡಿದಾಗ ಬಹಳ ಸಿಹಿಯಾಗಿದ್ದವು. ಬೆಟ್ಟದ ಮೈಮೇಲಿನ ಗಿಡಮೂಲಿಕೆಗಳ ಸಂಪರ್ಕ ಪಡೆದು ನೀರು ಹರಿಯುತ್ತಿದ್ದುದೇ ಆ ಸವಿಗೆ ಪ್ರಮುಖ ಕಾರಣ. ವಕ್ರಗತಿಯಿಂದ ಮಯೂರ ನಾಟ್ಯ ಮಾಡುವ ಆ ವಾಹಿನಿ ಅಕ್ಕಮಹಾದೇವಿಯ ಮನಸ್ಸನ್ನು ಸೆಳೆದು ನಿಲ್ಲಿಸಿತು. ಕೊಳಲ ನಾದಕ್ಕೆ ಮನಸೋತ ಅವು ಶಿಲಾಸ್ತಿಮಿತದಿಂದ ನೆಲೆ ನಿಲ್ಲುವಂತೆ, ಆಕೆಯ ಮನ ಆಕರ್ಷಿಸಲ್ಪಟ್ಟು ಕೆಲವಾರು ದಿನಗಳನ್ನಾದರೂ ಇಲ್ಲಿ ಕಳೆಯುವ ಸಂಕಲ್ಪ ಮಾಡಿತು.

ಅದಕ್ಕಾಗಿ ಸೂಕ್ತ ತಾಣವನ್ನು ಅರಸಲು ಇಚ್ಛಿಸಿದಳು. ಎರಡೂ ವಾಹಿನಿಗಳ ಸಂಗಮದಿಂದ ಒಂದೆರಡು ಕೂಗಳತೆ ದೂರದಲ್ಲಿ ರಮಣೀಯ ಪ್ರದೇಶ ಇದ್ದಿತಾದರೂ ನೆಲೆ ನಿಲ್ಲಲು ಅಂಗೈಯಗಲ ಮಂಟಪವೋ, ಮಾಡೋ ಏನೂ ಇರಲಿಲ್ಲ. ಯಾವುದೋ ಶಕ್ತಿಯು ಕರೆದೊಯ್ಯುವಂತೆ ಆ ಬೆಟ್ಟವನ್ನು ಆವೇಶದಿಂದ ಏರಿದಳು. ಕಾನನವು ಕೇವಲ ಉರವಲು, ಪೀಠೋಪಕರಣ, ಮುಟ್ಟುಗಳಿಗೆ ಬೇಕಾಗುವ ಮರಗಳನ್ನಷ್ಟೇ ಹೊಂದಿರದೆ ತೊರೆಯ ದಂಡೆಯ ಮೇಲಿನ ವಿಶಾಲ ಬಯಲು, ಹುಲ್ಲುಗಾವಲುಗಳಲ್ಲಿ ಯಥೇಚ್ಛವಾಗಿ ಕಾಯಿಪಲ್ಲೆ, ಗಡ್ಡೆಗೆಣಸುಗಳನ್ನು ಹೊಂದಿತ್ತು. ಒಂದು ಕಡೆ ಕಾಡು ಕಬ್ಬು, ಕಾಡು ಬತ್ತದ ಹೊಲಗಳು, ಅಲ್ಲಲ್ಲೇ ಹೇರಳವಾಗಿ ಹಣ್ಣುಗಳನ್ನು ಉದುರಿಸಿದ

ಬೆಳೆದಿದ್ದವು. ಕಾಡುಹಂದಿಯೊಂದು ನೆಲವನ್ನು ಕೆದಕುತ್ತಿತ್ತು. ಅದರ ಜಾಡು ಹಿಡಿದು ನೋಡಿದಾಗ ಸಿಹಿ ಗೆಣಸು, ವಿವಿಧ ಗಡ್ಡೆಗಳು ನಿಬಿಡವಾಗಿದ್ದವು. ಕಾಡು ಕಡಲೆ, ಕಾಡು ಬೆಂಡೇಕಾಯಿ, ಸೌತೆಕಾಯಿ ಗಿಡಗಳೂ ಸಮೃದ್ಧವಾಗಿದ್ದವು. ಅತ್ಯಂತ ಮೃದುವಾದ ಹುಲ್ಲು, ಅರಿವೆ-ಸಬ್ಬಸಿಗೆ ಸೊಪ್ಪುಗಳ ಬೆಸೆಯಿಂದಾಗಿ ಮೊಲ-ಜಿಂಕೆಗಳು ಮಿಂಚಿನಂತೆ ಸುಳಿದು ಮಾಯವಾಗುತ್ತಿದ್ದವು. ಎಷ್ಟು ದಿವಸಗಳ ಕಾಲವಾದರೂ ನಿಶ್ಚಿಂತೆಯಿಂದ ಇರಬಹುದೆನ್ನಿಸಿತು ಸಂಪತ್ತನ್ನು ನೋಡಿ.

ಅಕ್ಕಮಹಾದೇವಿ ಏರುತ್ತೇರುತ್ತ ಬೆಟ್ಟದ ಓರೆಯಲ್ಲಿ ನಡೆದಾಗ ಕಾಲುದಾರಿ ಕಂಡಿತು. ಮನುಷ್ಯರ ಸಂಚಾರವೇನಾದರೂ ಇದ್ದೀತೇನೋ ಎಂದುಕೊಂಡು ಮುಂದೆ ಸಾಗುವಾಗಲೇ ಭವ್ಯವಾದ ಚೌಕಾಕಾರದ ಕಮಾನೊಂದು ಕಾಣಿಸಿತು. ಮನುಷ್ಯನ ಕೈವಾಡವೇನೋ ಎನ್ನಿಸುವಷ್ಟು ಅಚ್ಚುಕಟ್ಟಾಗಿತ್ತು ಆ ಹೆಬ್ಬಾಗಿಲು. ಸಮೀಪಿಸಿದಾಗ ತಿಳಿಯಿತು—ಅದು ನಿಸರ್ಗದ ಪವಾಡವೆಂಬುದಾಗಿ. ಸುಮಾರು ನೂರೈವತ್ತು ಹೆಜ್ಜೆಗಳ ಅಗಲದ ಮೂವತ್ತು ಹೆಜ್ಜೆಗಳೆತ್ತರದ ಗವಿಯ ಬಾಗಿಲು ಅದು. ನಟ್ಟನಡುವೆ ಗವಿಯೊಳಕ್ಕೆ ಹೋಗುವ ಪಥ. ಎಡಕ್ಕೆ ಹೊರಳಿದರೆ ಗವಿಯು ಮೊದಲು ಅಗಲವಿದ್ದುದು ಬರುಬರುತ್ತ ಕಿರಿದಾಗಿದ್ದಿತು. ಬಲಕ್ಕೆ ಹೊರಳಿದರೆ ವಿಸ್ತಾರವಾದ ಸುಮಾರು ಹದಿನೈದು ಹೆಜ್ಜೆಗಳೆತ್ತರದ ಕೋಣೆಯಂತೆ. ಎತ್ತಣಿಂದಲೋ ತೂರಿ ಬರುವ ಬೆಳಕಿನಲ್ಲಿ ದಿಟ್ಟಿಸಿದಾಗ ಛಾವಣಿಗೆ ಕಚ್ಚಿನಿಂತ ಪಟ್ಟೆಪಟ್ಟೆ ಮೈಯ್ಯ ಹೆಬ್ಬಾವುಗಳು! ಒಂದು ಕ್ಷಣ ಜೀವ ತಣ್ಣಗಾಯಿತು. ಮರುಕ್ಷಣವೇ ನಗು ಬಂದಿತು; 'ಶರೀರ ವಿಸರ್ಜನೆಗಾಗಿಯೇ ನೂರಾರು ಗಾವುದಗಳನ್ನು ಕ್ರಮಿಸಿ ಬಂದ ನಾನು ಸಾವಿಗಾಗಿ ಹೆದರುವುದೆ? ಪತಿಗಾಗಿ ಸತಿಯು ಸವಿಯಾದ ತಿನಿಸುಗಳನ್ನು ಮಾಡಿ ಎಡೆಮಾಡಬೇಕೆಂದು ಕಾತುರದಿಂದ ತಲೆವಾಗಿಲಿನಲ್ಲಿ ನಿಂತು ಕಾಯುತ್ತಿರುವಳು. ಆಗ ಅವನು ಅವಳನ್ನು ಅವಾಕ್ಕಾಗಿ ಮಾಡಬೇಕೆಂದು ಬೇರೊಂದು ಮಾರ್ಗದಿಂದ ಪ್ರವೇಶಿಸಿ ಮಾಡಿಟ್ಟ ತಿನಿಸುಗಳನ್ನು ತಿಂದರೆ ಸತಿಯು ಮುನಿಸುಗೊಳ್ಳುವಳೇ....ಇಲ್ಲ....ಮುದಗೊಳ್ಳುವಳು. ನನ್ನನ್ನು ನಾನರ್ಪಿಸುವ ಮುನ್ನವೇ ಆತ್ಯಾತುರದಿಂದ ಅವನೇ ನನ್ನನ್ನು ಬಳಿಗೆಳೆದುಕೊಂಡರೆ ವಿಮಂಚನೆ ಏಕೆ?

ಈ ಹಾವುಗಳನ್ನೇ ಕೊರಳಿಗೆ ಮಾಲೆ ಮಾಡಿಕೊಳ್ಳುವೆ....' ಹುಚ್ಚು

ಮುಟ್ಟಿದ್ದ ಆಲದ ವೃಕ್ಷದ ಬೇರುಗಳು. 'ಸ್ವಯಂ ಭೀತಿಗಿಂತ ಮಿಗಿಲಾದ ಶತ್ರು ಇನ್ನೊಂದಿಲ್ಲ' ಎಂದುಕೊಂಡು ಸಾಗಿದಾಗ ಮೂವತ್ತು ಹೆಜ್ಜೆಗಳ ಮುಂದಕ್ಕೆ ಹೆಬ್ಬಂಡೆಯು ಮೈ ಸಿಕ್ಕಿತು. ಗಾಳಿ-ಬೆಳಕುಗಳ ಕೊರತೆ ಬಹಳವಾಗಿದ್ದುದರಿಂದ ಅದು ವಸತಿಯೋಗ್ಯ ತಾಣವಲ್ಲವೆಂದು ಹಿಂತಿರುಗಿ ಬರುವಾಗಲೇ ಹೆಬ್ಬಾಗಿಲಿನ ಎಡ-ಬಲಕ್ಕಿದ್ದ ಬಂಡೆಗಳ ಕೆಳಗೆ ಕಮಾನಿನಾಕಾರದ ಪುಟ್ಟ ಕೋಣೆಗಳು ಕಂಡವು. ಅಲ್ಲಿ ಹೇರಳವಾಗಿ ಗಾಳಿ-ಬೆಳಕು ಪ್ರವೇಶಿಸುತ್ತಲಿದ್ದವು. ಅಲ್ಲಿಯೇ ತಾನಿರುವುದೆಂದು ನಿರ್ಧರಿಸಿಕೊಂಡಳು.

ಗವಿಯ ಮುಂಭಾಗದಲ್ಲಿ ಕುಳಿತರೆ ಎದುರಿಗೆ ತಲೆ ಎತ್ತಿ ನಿಂತ ಬೆಟ್ಟ. ಕಂದು-ನೇರಿಳೆ ಬಣ್ಣದ ಬಂಡೆಗಳು, ಹಸಿರು ಹುಲ್ಲು, ಅಲ್ಲಲ್ಲರಳಿದ ಬಣ್ಣ ಬಣ್ಣದ ಹೂವುಗಳಿಂದ ವಿಚಿತ್ರ ವರ್ಣತರಂಗ ಆ ಬೆಟ್ಟವನ್ನು ಮುಸುಕಿತ್ತು. ಅದನ್ನು ಬಳಸಿ ಪಡುವಣದಿಂದ ಹರಿದುಬಂದ ವಾಹಿನಿ. ವಾಹಿನಿಯ ಇಕ್ಕೆಲಗಳಲ್ಲಿ ಒಂದಲ್ಲ ಎರಡಲ್ಲ ನೂರಾರು ಬಗೆಯ ಪುಷ್ಪ ಸಮೂಹ. ಒಂದು ಕಡೆ ದೇವಕಣಿಗಿಲೆ, ಚೆಂಗಣಗಿಲೆಗಳು ; ಮತ್ತೊಂದು ಕಡೆ ನಿಸರ್ಗದ ಅಪರೂಪ ಕೊಡುಗೆಗಳಾದ ನಾಗಲಿಂಗಪುಷ್ಪ, ಮಹಾಲಿಂಗನ ಬಳ್ಳಿಗಳು. ನೂರಾರು ತುಂಬೆಗಿಡಗಳು ದಟ್ಟವಾಗಿ ನೆಲಕಾಣದಷ್ಟು ಬೆಳೆದಿದ್ದರೆ, ತುತ್ತೂರಿಯಾಕಾರದ ಉಮ್ಮತ್ತ ಗಿಡಗಳು ಇನ್ನೊಂದು ಕಡೆ. ಹಳ್ಳದ ದಂಡೆಗುಂಟ ದೂರದೂರಕ್ಕೆ ಇಪ್ಪತ್ತು-ಇಪ್ಪತ್ತೈದು ಮೊಳದೆತ್ತರಕ್ಕೆ ಬೆಳೆದು ನಿಂತ ಕಕ್ಕೆ ಗಿಡಗಳು. ಚಿನ್ನದ ಬಣ್ಣದ ಹೂವುಗಳು ಗಿಡವನ್ನು ಮುಚ್ಚಿ, ಬಿಸಿಲಿನ ಸ್ಪರ್ಶದಿಂದ ಮಿರುಗುತ್ತಿದ್ದವು. ಇಡೀ ಗಿಡವೇ ಅಡಿಯಿಂದ ಮುಡಿಯವರೆಗೆ ಬಂಗಾರದ ಆಭರಣ ತೊಟ್ಟಂತೆ ಮಿಂಚುತ್ತಿತ್ತು. ಉದುರಿ ಬಿದ್ದ ಹೂವುಗಳು ಸೂರ್ಯ ರಶ್ಮಿಯಿಂದಾಗಿ ಮಿಂಚುವಾಗ, ಬಂಗಾರದ ನಾಣ್ಯಗಳನ್ನು ಅಲ್ಲೆಲ್ಲಾ ಸೂರೆ ಮಾಡಿದಂತಿತ್ತು. ನೇರಿಳೆ-ಬಿಳಿಯ ಬಣ್ಣದ ತೆನೆಗಳಿಂದ ಕೂಡಿದ ಹೂಗಿಡಗಳಂತೂ ದಟ್ಟವಾಗಿ ಬೆಳೆದು ರತ್ನಗಂಬಳಿ ಹಾಸಿದ್ದವು.

ಅಕ್ಕಮಹಾದೇವಿ ಇಳಿಯತೊಡಗಿದಾಗ ಅಲ್ಲಿದ್ದ ಬಿಲ್ವಗಿಡಗಳನ್ನು ಕಂಡು ಆಗಾಗ ತಾಪಸಿಗಳಾರಾದರೂ ಇಲ್ಲಿಗೆ ಬಂದು ಇರಬಹುದೇನೋ ಎಂದುಕೊಳ್ಳುತ್ತ ತಟಕ್ಕೆ ಬರುವಷ್ಟರಲ್ಲಿ ಚುಂಚರ ಅಡಿಗೆ ಮುಗಿದಿತ್ತು. ತಾನೂ ಸೌತೇಕಾಯಿ, ಗಡ್ಡೆ-ಗೆಣಸುಗಳನ್ನು ಕೀಳುವಷ್ಟರಲ್ಲಿ ಚುಂಚರು ಬಿಕ್ಕೆ, ನೇರಿಳೆ, ಅತ್ತಿಹಣ್ಣುಗಳನ್ನು ಸಂಗ್ರಹಿಸಿದ್ದರು.

ಊಟದಲ್ಲಿ ಮಗ್ನರಾದ ಅವರು ಕೇಳಿದರು :

... ? ಈಗಲೇ

'ಎಲ್ಲಿಗಪ್ಪಾ....?' ಹಣ್ಣನ್ನು ಸವಿಯುತ್ತಲಿದ್ದವಳು ಕೇಳಿದಳು.

'ಯಾಕಮ್ಮಾ....ನೆಪ್ಪುಹಾರ್‍ತಾ? ಕದಳಿ ಬನಕ್ಕೆ....'

'ಇಲ್ಲಿ ಕೆಲವು ದಿನ ಇರ್‍ತೀನಪ್ಪಾ. ತುಂಬಾ ಚನ್ನಾಗಿದೆ ಇಲ್ಲಿ....'

'ಉಣ್ಣಾಕೆ—ತಿನ್ನಾಕೆ....'

'ಎತ್ತ ನೋಡಿದಡತ್ತ ಸಂಪತ್ತೀ ತುಂಬಿದೆ ನನ್ನ ಪತಿಯು ಅರಮನೆಯಲ್ಲಿ' ವನದತ್ತ ಕೈತೋರಿದಳು.

'ಸಂಗಟ ಯಾರು?' ಚುಂಚರು ಕೇಳಿದಾಗ ಮೌನವಾಗಿ ತನ್ನೆದೆಯ ಮೇಲಿದ್ದ ಇಷ್ಟಲಿಂಗವನ್ನು ಬೆರಳಿಂದೆತ್ತಿ ತೋರಿದಳು. ವಿಸ್ಮಿತರಾದ ಚುಂಚರು 'ಇರಾಕೆ ಜೋಪಡಿ ಕಟ್ಟಕೊಡೋಣವೇ?' ಎಂದವರು, ಆಕೆ ತಾನು ವಸತಿಗಾಗಿ ಆಯ್ಕೆ ಮಾಡಿದ್ದ ತಾಣವನ್ನು ನೋಡಿ ಸಮಾಧಾನ ತಾಳಿದರು. ಒಣಗಿದ ಕಟ್ಟಿಗೆಗಳನ್ನು ಸಂಗ್ರಹಿಸಿ ಅಲ್ಲಿ ಒಟ್ಟಿದರು. ಒಣಹುಲ್ಲನ್ನು ಶೇಖರಿಸಿ ಮಲಗಲಿಕ್ಕಷ್ಟು ಮೆತ್ತನೆಯ ಹುಲ್ಲಿನ ಹಾಸುಗೆ ಮಾಡಿದರು. ಗಾಳಿ-ಛಳಿ ಬಹಳವಾದರೆ ರಕ್ಷಣೆಗಿರಲೆಂದು ಎಳೆಬಿದಿರನ್ನು ಕಡಿದು ಬಳ್ಳಿಯಿಂದ ಬಿಗಿದು ತಡಿಕೆಯನ್ನು ಮಾಡಿ ಬಂಡೆಗೆ ಆನಿಸಿದರು. ತಮ್ಮಲ್ಲಿದ್ದ ಬೂರುಗದರಳೆ, ಚಕ್ಕಮುಕ್ಕಿ ಕಲ್ಲು, ಉಕ್ಕಿನ ಗಟ್ಟಿಗಳನ್ನು ಕೈಗಿತ್ತು ರಾತ್ರಿ ಹೊತ್ತು ಸ್ವಲ್ಪವಾದರೂ ಬೆಂಕಿ ಸದಾ ಉರಿಯುವಂತೆ ಎಚ್ಚರವಹಿಸಲು ಸೂಚಿಸಿದರು.

ಅಷ್ಟರಲ್ಲಿ ಒಬ್ಬ ಚುಂಚನು ಎಲ್ಲಿಂದಲೋ ಹೊಸ ಮುಖದ ವ್ಯಕ್ತಿಯೊಡನೆ ಬಂದಿದ್ದ. ಅಚ್ಚರಿಗೊಂಡ ಅಕ್ಕಮಹಾದೇವಿ ಪ್ರಶ್ನಿಸಿದಾಗ ವೀರಭದ್ರ ಪರ್ವತದ ಮೇಲೆ ಅಲ್ಲಿಂದ ಒಂದು ಹರದಾರಿ ದೂರದಲ್ಲಿರುವ ಹಳ್ಳಿಯವನು ತಾನೆಂದೂ, ಹಾಲಿಳಿದ ಆಕಳುಗಳನ್ನು ಮೇಯಿಸಲಿಕ್ಕಾಗಿ ಈ ನದಿಯ ಹುಲ್ಲುಗಾವಲಿನಲ್ಲಿ ಅಲ್ಲಿಂದ ಒಂದು ಕೂಗಳತೆ ದೂರದ ಮೇಲೆ ಬಿಡಾರ ಹೂಡಿರುವುದಾಗಿ ತಿಳಿಸಿ ನೊರೆಹಾಲಿನ ಮಗಿಯನ್ನು ಮುಂದಿರಿಸಿದ. ಚೆನ್ನಮಲ್ಲಿಕಾರ್ಜುನನ ಲೀಲೆಗೆ ವಿಸ್ಮಯಪಡುತ್ತಿರುವಾಗಲೇ ಅವನು:

'ಅಮ್ಮಾ...ನಾವೊಂದ್ಮೂವರು ಹಸುಗಳನ್ನು ಮೇಸಲಿಕ್ಕೆ ಜೋಪಡಿ ಹಾಕ್ಕೊಂಡಿದ್ದೀವಿ; ನಿಮಗೇನಾದ್ರೂ ಸಹಾಯ ಬೇಕಾದ್ರೆ ಕೂಗ್ಹಾಕ್ರಿ, ಓಡಿ ಬರ್‍ತೀವಿ; ದಿನಾಲು ಒಂದು ತಂಬಿಗೆ ಹಾಲು ತಂದ್ಕೊಡ್ತೀವಿ. ನಿಮ್ಮ

ಮುಟ್ಟಿಸಿ ಬರ್ತೀವಿ....' ಶ್ರೀಗಿರಿಯಿಂದ ಬಂದಿದ್ದ ಚುಂಚನೊಬ್ಬ ಹೇಳಿದ.

'ಇನ್ನೆಸ್ಟು ದೂರದಲ್ಲಿದೆಯಪ್ಪಾ....?'

'ಬಾಳ ದೂರೇನಿಲ್ಲ. ಈ ಹಳ್ಳದ ದಂಡೇಮೇಲಿ ಅನ್ನ ಬೇಸಿದ್ವಲ್ಲ, ಅಲ್ಲಿ ಹಳ್ಳ ತೊಡೆಮಟ್ಟ ಐತಿ....ಅಲ್ಲಿ ದಾಟಿ ಮ್ಯಾಕೆ ಹೋದ್ರೆ ಬೆಟ್ಟದ ಬುಡಕ್ಕಿರ್ತೀವಿ. ಇಕೋ ಎದ್ರಿಗೆ ಕಾಣ್ತೈತಲ್ಲ ಇದೇ ತ್ರಿಕೂಟ ಪರುತ. ಮ್ಯಾಕೆ ಹತ್ತಾಕೆ ಅತ್ತಾ ಕಡೇನೆ ಚಂದ. ಏರ್ತಾ ಏರ್ತಾ ಹೋದ್ರೆ, ಮೂರು ಬೆಟ್ಟದ ತುದಿಗಳ ದಾಟಿರ್ತೇವೆ. ಮೂರೂ ಆದಮ್ಯಾಗೆ ದೊಡ್ಡ ಬಯ್ಲು ಐತಿ, ದಾರೀಲಿ ಕಾಡು ಬಾಳ. ಹುಲ್ಲು ವಿಪರೀತ....ಕೆಲವು ಠಾವಿನಾಗೆ ಎದೆ ಮಟ್ಟ ಕೂಡ ಬೆಳೆದು ಮೈನ ಜುಂ ಅನಸ್ತದೆ. ಹಾವಂತೂ ಸರಸರ ಹರೀತಾವೆ. ಆ ಬಯ್ಲಾಗೆ ಒಂದು ಹರ್ದಾರಿ ನಡೆದ್ರೆ ಕದಳಿ ಬನ ಸಿಕ್ತೈತ್ರಿ. ಅದ್ಕೆ ಗುರ್ತೂಂದ್ರೆ—ದಾರ್ಯಾಗೆ ಎಲ್ಲೂ ನೀರಿಲ್ಲ. ಅಲ್ಲಷ್ಟೇ ಪಡುವಣದಿಂದ ಒಂದು ತೊರೆ ಹರಿದು ಬರ್ತದೆ. ದೊಡ್ಡ ಬಂಡೇಮೇಲೆ ಹರಿದು ಧುಮ್ಕಾತ್ತದೆ. ಆ ಬಂಡೇ ತಳ್ಗೇ ಗವಿಯಿದೆ. ಅತ್ತಾಗ ಒಂದು ಹರ್ದಾರೀಲಿ ನಮ್ಮ ನದ್ದೊಂದು ಹಳ್ಳಿ ಐತಿ. ಅಲ್ಗೇ ನಮ್ಮಕ್ಕನ್ನ ಕೊಟ್ಟೇವಿ. ಎಷ್ಟೋ ಸಲ ನಾವಲ್ಲೇ ತಿರ್ಗಾಡಿದ್ರೂ ಗೊತ್ತಾಗಿರ್ಲಿಲ್ಲ. ಆ ಹಳ್ಳಕ್ಕೆ ದನ ಮೇಸಾಕೆ ಹೋಗಿದ್ವಿ. ತಿಂಗಳಗಟ್ಲೆ ಇರ್ತಿದ್ವಿ. ಒಮ್ಮೆ ಪ್ರಭುಗಳು ಎಂಬೋರು ಆದರೊಳಗೆ ತಪಸ್ಸಿಗೆ ಕುಂತಾಗ ಆ ಜಾಗೇದ ವಿಸ್ಯ ತಿಳೀತು ನೋಡ್ರಿ....ತಾವು ಹೋಗೋದು ಯಾವಾಗ....?'

'ಈಗಿನ್ನೂ ನಿರ್ಧಾರ ಮಾಡಿಲ್ಲಪ್ಪ. ಮನಸ್ಸು ಬಂದಾಗ ಹೋಗ್ತೀನಿ.... ನೋಡೋಣಂತೆ....ನೀವಿನ್ನು ಹೊರಡ್ರಿ....ನನಗೋಸ್ಕರ ಎಷ್ಟೊಂದು ಶ್ರಮ ತಗೊಂಡಿರಿ. ನಿಮ್ಮುಪಕಾರ ಹೇಗಪ್ಪಾ ಮುಟ್ಟಿಸೋದು....?' ಅಕ್ಕಮಹಾದೇವಿ ಕೃತಜ್ಞತೆಯಿಂದ ನುಡಿದಾಗ ಅವರು ಒಕ್ಕೊರಲಿನಿಂದ ಕಂಠ ತುಂಬಿ ಹೇಳಿದರು :

'ಹಾಗನ್ನಬೇಡ್ರಿ.....ನಿಮ್ಮ ದರ್ಶನ-ಸ್ಯಾವೆಗಿಂತ ದೊಡ್ಡ ಪುಣ್ಯ ಯಾವ್ದೈತಿ....' ಅವರ ಕಣ್ಣುಗಳು ಹನಿಗೂಡಿದ್ದವು. ಭಾರವಾದ ಹೃದಯದಿಂದ ಹೊರಡುತ್ತ ನುಡಿದರು :

'ಅಮ್ಮ....ಇಂಥ ಕೆಟ್ಟ ಅರಣ್ಯದಾಗೆ ಒಬ್ಬಳ್ನೇ ಬಿಟ್ಟು ಹೋಗಾದೆಂಗಮ್ಮ ....ಜೀವಾನೆ ಕಿತ್ತು ಬರ್ತೈತಿ....' ಅಕ್ಕಮಹಾದೇವಿಗೆ ಸಾಷ್ಟಾಂಗವೆರಗಿ ಮುಂದೆ ನಡೆದರು.

ಹಿಂತಿರುಗಿ ನೋಡಿದರು. ಅಕ್ಕಮಹಾದೇವಿ ಅಚ್ಚರಿಪಟ್ಟು ನುಡಿದುಕೊಂಡಳು : 'ಯಾವ ಋಣಾನುಬಂಧವೋ, ಯಾರಾರಿಂದಲೋ ಅನುವು ಒದಗುತ್ತೆ. ಸ್ವಲ್ಪ ಸೋಂಕಿದರೂ ಸಾಕು ಅಂಟರಿಕೆಯಂತೆ ಬಿಗಿಯಾದ ನಂಟು ಕಚ್ಚಿ ಕೊಳ್ಳುತ್ತೆ. ಕೂಡಿದಾಗ ಆನಂದ, ಅಗಲಿದಾಗ ನೋವು....ಜಗದಾಟವೇ ವಿಚಿತ್ರ ! ಶರಣನಿಗೆ ನೋವಿಲ್ಲ – ನಲಿವಿಲ್ಲ, ನಂಟಿಲ್ಲ – ಅಂಟಿಲ್ಲ ; ನಿರ್ಲಿಪ್ತ – ನಿರ್ವಿಕಾರಿಯವನು.'

೫೮. ಅನುಷ್ಠಾನದ ಆನಂದದಲ್ಲಿ

ಈಗ ಆಕೆಯದು ಸರಳ ದಿನಚರಿ. ಉದಯಕಾಲ ಸಮೀಪಿಸುತ್ತಿದ್ದಂತೆಯೇ ಉಪ್ಪವಡಿಸಿ, ಬೆಟ್ಟವನ್ನಿಳಿದು ತಿಳಿನೀರಿನಲ್ಲಿ ಮೀಯುವಳು. ಅರುಣೋದಯವಾಗುವಾಗ ಅದರ ಸೊಬಗನ್ನು ಸವಿಯುವುದರೊಡನೆ ಪೂಜಾನಿರತಳಾಗಿ ಬಂಡೆಗಲ್ಲ ಮೇಲೆ ಕುಳಿತುಬಿಡುವಳು. ಎಚ್ಚರಿಸುವವರಿಲ್ಲ, ಹೊತ್ತಾಯಿತೆಂಬುವವರಿಲ್ಲ. ಯಾವ ಚಟುವಟಿಕೆಗಳೂ ಇಲ್ಲದೆ ಕಾಲಾತೀತಳಾಗಿದ್ದಳು. ಬಿಸಿಲೇರುತ್ತಿದ್ದಂತೆಯೇ ಕಾಡಿನಲ್ಲಿ ಉಲ್ಲಾಸಕರವಾಗಿ ಅಲೆದಾಡಿ ಅಲ್ಲಿದ್ದ ಗಡ್ಡೆ-ಗೆಣಸು, ಸವುತೇಕಾಯಿಗಳನ್ನು ಅತ್ತಿ, ನೇರಳೆ, ಬಿಕ್ಕೆ ಹಣ್ಣುಗಳನ್ನು ಸಂಗ್ರಹಿಸಿ ಮೆಲ್ಲುವಳು. ಸನಿಹದಲ್ಲಿ ದನಗಳ ಹಟ್ಟಿಯನ್ನು ಮಾಡಿಕೊಂಡಿದ್ದ ಚುಂಚನು ಎರಡನೆಯ ಜಾವಕ್ಕೆ ಮಗಿಯಲ್ಲಿ ತಂದುಕೊಟ್ಟ ನೊರೆವಾಲನ್ನು ಈಂಟುವಳು. ಮಧ್ಯಾಹ್ನವಿಡೀ ಶರಣ ವಚನಗಳನ್ನು ಅಧ್ಯಯನಿಸುತ್ತ ಸಂತೃಪ್ತಳಾಗಿದ್ದು, ಸಂಜೆ ಸಮೀಪಿಸುತ್ತಿದ್ದಂತೆಯೇ ಹುಲ್ಲುಗಾವಲು—ಬೆಟ್ಟ ಗುಡ್ಡಗಳಲ್ಲಿ ನಿರಾಳವಾಗಿ ಅಲೆದಾಡುವಳು. ಮನಸ್ಸು ಬಂದರೆ ಚುಂಚರು ಮೇಯಿಸಲು ತಂದ ಹಸುಗಳೊಡನೆ ಮಾತನಾಡುತ್ತ, ನೀವುವಳು. ಕೆಲವು ಮುದ್ದುಕರುಗಳನ್ನು ಕಂಡರಂತೂ ಅಪಾರ ಪ್ರೀತಿ. ಚಂಗನೆ ಬಾಣದಂತೆ ಚಿಮ್ಮುತ್ತ ಬಾಲವನ್ನೆತ್ತಿಕೊಂಡು ರೀವಿಯಿಂದ ದಿಟ್ಟಿಸಿ, ಮಿಂಚಿನಂತೆ ಹುಲ್ಲುಗಾವಲುಗಳಲ್ಲಿ ನೆಗೆಯುತ್ತಿದ್ದ ಕರುಗಳನ್ನು ನೋಡಿ ವಾತ್ಸಲ್ಯತುಂಬಿ ಅವುಗಳ ಮೂತಿಯನ್ನು ನೇವರಿಸುತ್ತಿದ್ದಳು. ನಿಬಿಡವಾಗಿ ಬೆಳೆದ ಹುಲ್ಲು, ತಿಳಿನೀರನ್ನು ಕುಡಿದ ಶ್ರೀಗಿರಿ ವನಪ್ರದೇಶದ ಹಸುಗಳು ದಷ್ಟಪುಷ್ಟವಾಗಿದ್ದು, ಮಾಟವಾದ ದೇಹ—ಶುಭ್ರ ಧವಳ ಬಣ್ಣದಿಂದ ಮನಸ್ಸನ್ನು ಮುದಗೊಳಿಸುತ್ತಿದ್ದವು. ನಂತರ ಹೂವುಗಳನ್ನು ಸಂಗ್ರಹಿಸಿ, ಮಿಂದು ತನ್ನ ಗವಿಯೊಳಕ್ಕೆ ನಡೆದು ಪೂಜೆಗೆ ಕುಳಿತುಬಿಡುತ್ತಿದ್ದಳು. ಇಡೀ ರಾತ್ರಿಯೆಲ್ಲಾ ಒಂದು ಬಗೆಯ ತ್ರ್ಯಾರಾತೀತ ಧ್ಯಾನಸ್ಥಿತಿಯಲ್ಲಿ ಆನಂದಿಸುವಳು.

ಒಮ್ಮೊಮ್ಮೆ ಬಿಸಿಲದಗೆ ಬಹಳವೆನ್ನಿಸಿದಾಗ ಗವಿಯನ್ನು ಬಿಟ್ಟು ಹೊರ ಬಂದು ತೊರೆಯ ದಂಡೆಯ ಮೇಲಿದ್ದ ಅತ್ತಿಯ ಮರದ ಕೆಳಗೆ ಕುಳಿತುಕೊಳ್ಳುವಳು. ಮಾನವರ ಮುಖದರ್ಶನವೇ ಇಲ್ಲದ ಆ ತಾಣದಲ್ಲಿ ತನ್ನ

ಮಾಡಿದ್ದನು. ಎರಡು ಕಂಭಗಳನ್ನು ನೆಟ್ಟು, ಮೇಲೆ ತೊಲೆಯನ್ನೇರಿಸಿ, ಬಿದಿರನ್ನು ಕಡಿದು ಮಣೆಯಾಕಾರದಲ್ಲಿ ಹೊಂದಿಸಿ ಬಳ್ಳಿಗಳಿಂದ ಕಟ್ಟಿ, ತೂಗು ಬಿಟ್ಟಿದ್ದನು. ಆ ಮಕ್ಕಳು ಆಗಾಗ ತೂಗಾಡುತ್ತಿದ್ದರು.

ಒಂದು ದಿನ ಹೂಬಿಸಿಲು ಮನೋರಮ್ಯವಾಗಿ ಹರಡಿತ್ತು. ನಿಸರ್ಗದ ಒಡಲಲ್ಲಿ ಆನಂದಿಸಲು ಅಕ್ಕಮಹಾದೇವಿ ಬಂಡೆಯ ಮೇಲೆ ಕುಳಿತಳು. ದನ-ಗಾಹಿಗಳು ದನಗಳನ್ನು ಅಟ್ಟಿಕೊಂಡು ಹೊರಟುಹೋಗಿದ್ದರು. ಮಂದವಾಗಿ ಬೀಸುವ ತಂಗಾಳಿ ಮಧುರ ಸ್ಪರ್ಶವನ್ನೀಯುತ್ತಿತ್ತು. ಉತ್ಸುಕಚೇತನಳಾಗಿ ಉಯ್ಯಾಲೆಯನ್ನೇರಿ, ನಿಧಾನವಾಗಿ ತೂಗುತ್ತತೂಗುತ್ತ ಹಾಡಿಕೊಳ್ಳ ತೊಡಗಿದಳು. ಇನಿದಾದ ಕಂಠದಿಂದ ದನಿ ತೆಗೆದು ಹಾಡಿದಾಗ ಸೃಷ್ಟಿಯೆಲ್ಲ ಸ್ತಬ್ಧವಾಗಿ ನಿಂತು ಕೇಳುವಂತೆನಿಸಿತು.

'ದೇವಾ....ಪಾರಮಾರ್ಥ ಬದುಕೆಂಬ ಜೋಕಾಲಿಯನ್ನೇರಿ ದೃಢಮನ ದಿಂದದನ್ನು ತೂಗಿ, ನಿನ್ನ ಅಡಿಗೆ ಬಂದಿರುವೆ. ಭಕ್ತಿಯ ಪೃಥ್ವಿಯ ಮೇಲೆ ಜ್ಞಾನ—ಕ್ರಿಯೆಗಳೆಂಬ ಎರಡು ಕಂಭಗಳ ನೆಟ್ಟು, ವೈರಾಗ್ಯದ ತೊಲೆಯನ್ನು ಅಡ್ಡಹಾಕಿ, ನಿರ್ಮೋಹದ ಕೀಲುಗಳ ನೆಟ್ಟು ಉಯ್ಯಾಲೆಯನ್ನು ಕಟ್ಟಿದೆ. ನಾಲ್ಕು ಅಂತಃಕರಣಗಳೆಂಬ ತೂಗುಮಣೆಯ ಬಳೆಗಳಿಗೆ, ದೈವೀಕರಿಸಿದ ಸುಚಿತ್ತ, ಸುಮನ, ಸುಬುದ್ಧಿ, ನಿರಹಂಕಾರಗಳೆಂಬ ಹಗ್ಗಗಳನ್ನು ಕಟ್ಟಿ, ಅವುಗಳ ಅಡಿಗೆ ಷಟ್ಸ್ಥಲವೆಂಬ ಮಣೆಯನ್ನಿರಿಸಿ, ಆ ಹುರಿಗಳು ಅತ್ತಿತ್ತ ಸರಿಯದಿರಲೆಂದು ದೇವನ ಧ್ಯಾನವೆಂಬ ಕೋಲುಗಳ, ಮಂತ್ರದ ಸರವಿಯಿಂದ ಬಿಗಿದು, ನಾನು ಉಯ್ಯಾಲೆಯನ್ನು ತೂಗಿದೆ.

ಆಗ ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯಗಳೆಂಬ ಸುಮುಖಿಯರು ಪ್ರಸಾದೀಕರಿಸಿದ ತನ್ಮಾತ್ರೆಗಳು-ಸದ್ಗುಣಗಳೆಂಬ ಮುತ್ತು-ಮಾಣಿಕ್ಯಗಳ ತೊಡಿಗೆಗಳ ತೊಟ್ಟು, ನನ್ನಂತರಾತ್ಮವು ಹಿಡಿದಿದ್ದ ನಿತ್ಯಜ್ಞಾನದ ಶ್ರುತಿಗೆ ಹೊಂದಿಕೊಂಡು ಹೃತ್ಪೂರ್ವಕವಾಗಿ ಭಕ್ತಿಗೀತವನ್ನು ಪಾಡಿದರು. ಆಧಾರ ಚಕ್ರದ ತುದಿಯಿಂದ ಹೊರಟ ಉಯ್ಯಾಲೆಯು ಆಜ್ಞಾಚಕ್ರದವರೆಗೆ ವೇಗ ದಿಂದ ತೂಗಿದಾಗ ಮೀರಿದ ಸ್ಥಲವಾದ ಸಹಸ್ರಾರದಲ್ಲಿದ್ದ ಚೆನ್ನಮಲ್ಲಯ್ಯ ನನ್ನೊಡನೆ ನೀನು ಬೆರೆದಾಗ, ನಿನ್ನನ್ನು ನನ್ನಲ್ಲಿ ಇಂಬಿಕ್ಕಿಕೊಂಡು ನಿಜದ ಉಯ್ಯಾಲೆ ಆಡುತ್ತಲಿಹೆನು....,'

ಈ ಭಾವನೆಗಳನ್ನು

ತೂಗಿದೆನು ನಿಜದುಯ್ಯಾಲೆಯ ನಾ
ಬೀಗಿದೆನು ನೆನಹು ನಿಶ್ಚಲದಲ್ಲಿಗೆ ॥ ತೂಗಿದೆನು ॥

ನೀಲದ ಧರೆಯು ಮೇಲೆ ನೆಟ್ಟವೆರ
ಡಾಲಿಕಲ್ಲಿನ ಕಂಭವು
ಮೇಲೆ ಮಾಣಿಕದ ತೊಲೆಗೆ
ಕೀಲಿಟ್ಟು ಜಾಣೆ ನಾಡಿದೆನುಯ್ಯಾಲೆ ॥

ಸರವು ನಾಲ್ವರ ಹುರಿಯೊಳು ಭರದಿಂದ
ಅರಿದ ಮಣಿಯಾರನಿರಿಸಿ
ಅರಿದು ಕೋಲೆಯಲಿ ಕಟ್ಟಲು ಆ ಉಯ್ಯಾಲೆ
ಹರಿಯಲೊದೆಯಿತು ಮುಂದೆ ॥

ಮುತ್ತು ಮಾಣಿಕ ರತ್ನದ ತೊಡಿಗೆಯನು
ಸತ್ಯ ಮುಖಿಯರು ತೊಟ್ಟರು
ಅರ್ತಿಯಿಂ ರಾಗ ಮಾಡಿ ಪಾಡಿದರು
ನಿತ್ಯಜ್ಞಾನದ ಶ್ರುತಿಯೊಳು ॥

ಆರು ಚಕ್ರವನು ದಾಟ ಆ ಉಯ್ಯಾಲೆ
ಹಾರಲೊದೆಯಿತು ಮುಂದಕೆ
ಮೀರಿದ ಸ್ಥಲದಿ ನಿಂದು ಚೆನ್ನಮಲ್ಲನೊಳು
ಬೆರೆದು ಆಡಿದೆನುಯ್ಯಾಲೆ ॥*

ಗಾಯನದ ಅಲೆಗಳು ನವಿರಾಗಿ ತೇಲುತ್ತ ಗಾಳಿಯಲ್ಲಿ ಅಡಕವಾಗಿ ಸೃಷ್ಟಿಯೊಡನೆ ನಿಧಾನವಾಗಿ ಬೆರೆಯತೊಡಗಿದವು. ಉಯ್ಯಾಲೆ ತೂಗುತ್ತಿತ್ತು, ಮೇಲೆ ಕುಳಿತ ಅಕ್ಕಮಹಾದೇವಿಯ ಮನವೂ ಅದರೊಡನೆ ತೂಗಿ ಚೆನ್ನಮಲ್ಲಿಕಾರ್ಜುನನಲ್ಲಿ ಒಂದಾಗಿತ್ತು.

*

೫೯. ಪ್ರವೃತ್ತಿ ಪಲ್ಲಟ

ಅಕ್ಕಮಹಾದೇವಿ ಇಲ್ಲಿಗೆ ಬಂದು ನೆಲೆಸಿದ ಎಂಟು ವಾರಗಳ ಕಾಲದಲ್ಲಿ ಅಂತಹ ದುರ್ಗಮ ಅರಣ್ಯದಲ್ಲೂ ಅಲ್ಲಲ್ಲಿರುವ ಹಳ್ಳಿಗಳ ಜನರಿಗೆ ಸುದ್ದಿ ಮುಟ್ಟಿತ್ತು. ಅದರಲ್ಲಿಯೂ ತೆಲುಗು ನಾಡಿನ ಭಾಗದಿಂದ ಬರುವ ಯಾತ್ರಿಕರು ವೀರಭದ್ರ ಪರ್ವತವನ್ನಿಳಿದು ತಂಗದೆ ಹೋಗುತ್ತಿರಲಿಲ್ಲ. ಹಾಗೆ ತಂಗಿದಾಗ ಅಲ್ಲಿಯೇ ಬೀಡುಬಿಟ್ಟಿದ್ದ ಚುಂಚರು ಅಕ್ಕಮಹಾದೇವಿಯ ಬಗ್ಗೆ ಭಕ್ತಿ ತುಂಬಿ ಮಾತನಾಡಿ ದರ್ಶನಕ್ಕೆ ಕರೆತರುತ್ತಲಿದ್ದರು. ಅಂತಹ ಭಯಾನಕ ಅರಣ್ಯದಲ್ಲಿ ಮೂವತ್ತರ ಹರೆಯದ ಯೋಗಿಣಿಯೋರ್ವಳು ಏಕಾಂಗಿನಿಯಾಗಿ ವಾಸಿಸುವಳೆಂಬುದು ಜನರಿಗೆ ಸೋಜಿಗದ ಸಂಗತಿಯಾಗಿತ್ತು. ಅದು ಇದ್ದುದೂ ನಿಜವೇ ! ಎಂತಹ ಎಂಟೆದೆಯ ಗಂಡಸೂ ಏಕಾಂಗಿಯಾಗಿ ಅಲ್ಲಿ ರಾತ್ರಿಯನ್ನು ಕಳೆಯಲು ಥರಗುಟ್ಟುತ್ತಿದ್ದ. ಕರೆದರೆ 'ಓ' ಎನ್ನುವ ಮಾನವರಿಲ್ಲ; ರಾತ್ರಿಯ ವೇಳೆಯಲ್ಲಿ ವೇಗವಾಗಿ ಗಾಳಿ ಬೀಸಿದರೆ ಸರಗುಟ್ಟುವ ಬಿದಿರು ಮೆಳೆಗಳ ಸಪ್ಪಳ ಭಯಾನಕವಾಗಿರುತ್ತಿತ್ತು. ಕಾಡುಮೃಗಗಳ ಗರ್ಜನೆ, ಗೂಗೆಗಳ ಘೂರ್ಣ ಸ್ವರ ಜೀವವನ್ನು ತಣ್ಣಗಾಗಿಸಿ, ಗದಗುಟ್ಟಿಸುತ್ತಿದ್ದವು. ಹಗಲು ವೇಳೆಯಲ್ಲಿ ಎಷ್ಟು ರಮಣೀಯವಾಗಿ ಆ ವನಪ್ರದೇಶ ಕಾಣುತ್ತಿತ್ತೋ ಅಷ್ಟೇ ಭಯಾನಕವಾಗಿ ರಾತ್ರಿಯ ವೇಳೆ ಅನುಭವವಾಗುತ್ತಿತ್ತು. ಆದರೆ ಅಕ್ಕಮಹಾದೇವಿ ಪ್ರಕೃತಿಯ ಪ್ರಶಾಂತ ಮತ್ತು ಉಗ್ರಮುಖಗಳೆರಡರಲ್ಲಿಯೂ ದೈವೀಅಸ್ತಿತ್ವವನ್ನು ಕಾಣಬಲ್ಲವಳಾದ್ದರಿಂದ ನಿರ್ಭಯವಾಗಿ ವಾಸಿಸುತ್ತಿದ್ದಳು. ಇದನ್ನು ಕಂಡ ಜನರು ಅಪಾರ ಗೌರವದಿಂದ ತಲೆಬಾಗಿ ದರ್ಶನಕ್ಕಾಗಿ ಆಗಾಗ ಬರತೊಡಗಿದರು.

ಮಹಾಯೋಗಿಣಿಯೋರ್ವಳು ಅನುಷ್ಠಾನಮಗ್ನಳಾಗಿರುವುದನ್ನು ಕಂಡು ಮಾರ್ಗದರ್ಶನವನ್ನು ಪಡೆಯಲು ಯೋಗಾಭ್ಯಾಸಿಗಳು, ಸಾಧಕರು, ಮುಮುಕ್ಷುಗಳು ಸಹ ಧಾವಿಸಲಾರಂಭಿಸಿದರು. ಅವರಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದಳು. ಅಂಥ ಕೆಲವರು ವಾಹಿನಿಯ ದಂಡೆಯ ಮೇಲೆ ಪರ್ಣಕುಟೀರಗಳನ್ನು ನಿರ್ಮಿಸಿಕೊಂಡು ಸಾಧನೆಯನ್ನು ಮಾಡುತ್ತ ಮುಂದುವರಿಯುತ್ತಿದ್ದರು. ಹೀಗಾಗಿ ಸಾಧಕರ

ಕರೆಯುತ್ತಿದ್ದವರು ಇಲ್ಲಿಯವರೆಗೆ ಕರೆಯುತ್ತಿದ್ದ ಹೆಸರನ್ನು ಬಿಟ್ಟು 'ಅಕ್ಕಮ್ಮನ ನಾಗು', 'ಅಕ್ಕನ ಹಳ್ಳ' ಎಂದು ಕರೆಯತೊಡಗಿದರು. ಆ ಸ್ಥಾನವು ಶ್ರೀಗಿರಿಗೆ ಪಯಣ ಮಾಡುವವರಿಗೆ, ಮರಳುವವರಿಗೆ ತಂಗುದಾಣವೇ ಆಗತೊಡಗಿತು. ಇಲ್ಲಿಯವರೆಗೆ ಕೇವಲ ಸುಂದರಸ್ಥಾನವಾಗಿದ್ದುದು ಈಗ ದೈವೀಸ್ಥಾನವಾಗಿ ಪ್ರಚಾರವಾಗತೊಡಗಿತು.

ಈ ಕೀರ್ತಿವಾರ್ತೆಯನ್ನು ಕಂಡು ಅಕ್ಕಮಹಾದೇವಿಗೆ ಆನಂದವಾಗುವುದರ ಬದಲಿಗೆ ಕಳವಳ ಆರಂಭವಾಯಿತು. ಕೀರ್ತಿಕಾಮಿನಿಯು ತನ್ನ ಏಕಾಂತ ಜೀವನಕ್ಕೆ ಅಡ್ಡಿ ತರುವಳೇನೋ ಎಂದು ಆತಂಕವಾಗದೇ ಇರಲಿಲ್ಲ.

ಕಾಲಚಕ್ರ ಉರುಳುತ್ತ ಮತ್ತೊಂದು ಅಮಾವಾಸ್ಯೆಯನ್ನು ಹಿಂದಕ್ಕೆ ಕಳಿಸಿ, ಪೌರ್ಣಿಮೆಯನ್ನು ಸ್ವಾಗತಿಸುತ್ತಿತ್ತು. ಪೌರ್ಣಿಮೆಗೆ ನಾಲ್ಕಾರು ದಿನಗಳಷ್ಟೇ ಉಳಿದಿದ್ದವು. ತಾಯಿಯ ಹಾಲನ್ನೀಂಟುತ್ತಲೇ ಮಗುವು ಮಲಗಿದಾಗ ನಿದ್ರಿಸಿದ ತಾಯಿ-ಮಕ್ಕಳೀರ್ವರ ಮೊಗದ ಮೇಲೂ ಮುಗ್ಧ ಸಂತೃಪ್ತಿ ಮಿನುಗುವಂತೆ ಕಾನನವು ತಿಂಗಳಬೆಳಕಿನ ಆಲಿಂಗನದಲ್ಲಿ ತನ್ಮಯವಾಗಿ ಮಲಗಿತ್ತು. ಅಂತಹ ಸುಂದರ ಕಾನನವನ್ನು ತಬ್ಬಿಕೊಂಡು ಹಬ್ಬಿದ ಬೆಳುದಿಂಗಳಲ್ಲಿ ಮುಗುಳ್ನಗೆ ಅರಳಿದಂತೆ ಶುಭ್ರತೆ ನಲಿಯುತ್ತಿತ್ತು. ಬೆಳುದಿಂಗಳ ಆಚ್ಛಾದನೆಯಲ್ಲಿ ಕಾಡು ಸಹ ಕುಲುಕುಲು ನಗುತ್ತಲಿತ್ತು. ಅದನ್ನು ಸವಿಯಲಿಕ್ಕೆಂದು ಬೆಳ್ಳಿಚುಕ್ಕೆಯು ಮೂಡುತ್ತಲೇ ಗವಿಯಿಂದ ಹೊರ ಬಂದು ಅಕ್ಕಮಹಾದೇವಿ ಕೆಳಗಿಳಿಯಲಾರಂಭಿಸಿದಳು. ಆ ಹಳ್ಳವು ಹಾಲಿನ ಬಣ್ಣದಿಂದ ಜ್ಯೋತ್ಸ್ನೆಯಲ್ಲಿ ಮಿಂಚುತ್ತ ಹರಿಯುತ್ತಿದ್ದರೆ ಅದು ದೇವನು ನಕ್ಕಾಗ ಹಸರಿಸಿದ ಹಲ್ಲುಗಳ ಧವಳಕಾಂತಿಯೇನೋ ಎಂದುಕೊಂಡಳು. ಮಿಂದು, ಪೂರ್ವ ದಿಗಂತಕ್ಕೆದುರಾಗಿ ಸಿದ್ಧಾಸನದಲ್ಲಿ ಕುಳಿತು ಆಗಸವು ತಾಳುವ ವಿವಿಧ ವರ್ಣವಿನ್ಯಾಸವನ್ನು ಸವಿಯುತ್ತಿದ್ದಳು. ಕಾಡಿನಲ್ಲರಳಿದ ಜಾಜಿ, ಮಲ್ಲಿಗೆ, ಸಂಪಿಗೆಯ ಹೂಗಳು ಉನ್ಮಾದಕ ಪರಿಮಳವನ್ನು ವಾಯುವಿನಲ್ಲಿ ಬೆರೆಸುತ್ತಿದ್ದವು. ಸಂತೃಪ್ತಿಯಿಂದ ಪೂಜಿಸುವಾಗಲೇ ಆರಕ್ತಮುಖದ ಲಜ್ಜೆಗೊಂಡ ರವಿವಧು ಉಷೆಯೂ ಆಗಮಿಸಿ, ಅವಳ ಬೆಂಬಳಿವಿಡಿದು ಕಮಲಸಖನೂ ಧಾವಿಸಿ ಬಂದ. ಸೃಷ್ಟಿಯು ಪ್ರಾಣ ತಳೆದು ಹಾಡತೊಡಗಿತು. ಹಕ್ಕಿಗಳ ಕಲರವವು ಶಿವನಿಗೆ ಉದಯಗೀತೆ ಹಾಡುವಾಗಲೇ ಅಕ್ಕಮಹಾದೇವಿ ಆ ಹಸಿರು ಗುಡಿ, ಜಲದ ಮಡಿಲು, ನಿಸರ್ಗದ ಒಡಲು,

ವಾಗಿ ಮಾಡಿದ್ದವು. ಅದಕ್ಕೆ [illegible] ಸೇರಿಯು ಅಂತರಂಗದ ವೈರಾಗ್ಯಕ್ಕೆ ಕುರುಹಾಗಿತ್ತು. ಬಲಗೈಯ್ಯಿಯು ಜಪಮಾಲೆಯನ್ನು ಹಿಡಿದು ಎಣಿಸಲು ಮರೆತಿತ್ತು. ಕೊರಳೊಳಗಣ ರುದ್ರಾಕ್ಷಿಯು ಎದೆಯ ಮೇಲೆ ಇಳಿದುಬಿದ್ದು ಯೋಗಕಾಯಕ್ಕೆ ಸೂಕ್ತ ಸಂಕೇತವನ್ನೊದಗಿಸಿದ್ದವು. ಭ್ರೂಮಧ್ಯದಲ್ಲಿ ದೃಷ್ಟಿಯಿರಿಸಿದ್ದರಿಂದ ಕಣ್ಣು ರೆಪ್ಪೆಗಳು ಕೆಳಕ್ಕೆ ಬಾಗಿ ಕಮಲದಳದಂತಿದ್ದವು. ಸೂರ್ಯನು ಕೊಳಗಳಲ್ಲಿದ್ದ ತಾವರೆದಳಗಳನ್ನು ಬಿರಿಸಿದರೂ ಪ್ರಶಾಂತ ವದನ ಸರಸಿಯಲ್ಲಿ ದಳಮುಚ್ಚಿದ್ದ ಅಕ್ಕಮಹಾದೇವಿಯ ಕಣ್ಣೆಸಳನ್ನು ಬಿಡಿಸಲಾರದವನಾಗಿದ್ದ.

'ಮಹಾದೇವಿ....ನಾನು ಪಾಪಿ....ನನ್ನನ್ನು ಮನ್ನಿಸು ; ಈ ಪಾಪಿಯನ್ನು ಕ್ಷಮಿಸು....' ಕಾಡು ನಡುಗುವಂತೆ ಆವೇಶದಿಂದ ಚೀರುತ್ತ ಬಂದ ವ್ಯಕ್ತಿಯೋರ್ವನು ಬಂಡೆಯ ಮೇಲೆ ಧೊಪ್ಪನೆ ಬಿದ್ದಾಗ, ಅಸಹಜ ಚೀರುವಿಕೆಯ ತರಂಗಗಳು ಅಂತರಂಗವನ್ನು ಕಲಕಿದಂತಾಗಿ ಅಕ್ಕಮಹಾದೇವಿ ಮೆಲ್ಲನೆ ಕಣ್ತೆರೆದಳು. ಯಾವುದೋ ಲೋಕದಿಂದ ಇಳಿದುಬಂದಂತಿದ್ದ ಆಕೆಗೆ ತಟ್ಟನೆ ಏನೂ ತಿಳಿಯಲಿಲ್ಲ. ತಾನು ಕುಳಿತಿದ್ದ ಬಂಡೆಯ ಮುಂದೆ ವ್ಯಕ್ತಿಯೋರ್ವ ಮುಖ ಕೆಳಗೆ ಮಾಡಿ ಉರುಳಿರುವನು. ಅವನ ನೀಳವಾದ ಕೂದಲು ಗಾಳಿಗೆ ಮನಬಂದಂತೆ ಚೆದುರಿ ಬೆನ್ನಮೇಲೆ ಇಳಿದುಬಿದ್ದಿವೆ. ಕೆಳಗೆಲ್ಲ ಕಾವಿಯ ಬಣ್ಣದ ಉದ್ದನೆಯ ನಿಲುವಂಗಿ ಕಾಣುತ್ತಲಿದೆ. ಸಾಷ್ಟಾಂಗವೆರಗಿದ್ದ ಅವನ ಕಾಲುಗಳ ಹಿಮ್ಮಡಿಗಳು ಸೀಳಿ, ಧೂಳು ಮೆತ್ತಿದೆ. ಎಲ್ಲವೂ ವಿಚಿತ್ರವಾಗಿ ತೋರಿತು.

'ಏಳಪ್ಪಾ....ಯಾರು ನೀನು?' ಧ್ವನಿಯನ್ನು ಕರುಣಾಪೂರಿತವಾಗಿ ಮಾಡಿಕೊಂಡು ಹೇಳಿದಳು.

'ನಾನು ಪಾಪಿ ; ಘೋರ ಪಾತಕಿ....' ಮುಖವನ್ನೆತ್ತದೆ ಅವನು ನುಡಿದ.

'ಅಣ್ಣಾ....ಈ ಜಗತ್ತಿನಲ್ಲಿ ಯಾರೂ ಪಾಪಿಗಳಲ್ಲ....ಎಲ್ಲರೂ ಸಚ್ಚಿದಾನಂದ ಸ್ವರೂಪಿ ಆತ್ಮರು ; ಮೇಲೇಳಣ್ಣಾ....ಸಂತೈಸಿಕೊ....' ಆ ವ್ಯಕ್ತಿಯು ಬಿಕ್ಕುತ್ತಲೇ ಇದ್ದ. ಆದರೆ ಇನ್ನೊಂದು ಸ್ತ್ರೀವ್ಯಕ್ತಿಯು ಪುರುಷರೋರ್ವರೊಡನೆ ಸಮೀಪಿಸುವುದು ಕಂಡಿತು. ಬೆನ್ನಿಗೆ ಸೂರ್ಯನನ್ನಿರಿಸಿಕೊಂಡ ಆ ಆಗಂತುಕರ ಮುಖಗಳು ಸ್ಪಷ್ಟವಾಗಿ ಕಾಣದೆ ಛಾಯೆಯಷ್ಟೇ ಕಾಣುತ್ತಲಿತ್ತು.

ಅಕ್ಕಮಹಾದೇವಿಯನ್ನು [illegible]

ತನ್ನ ವೈವಿಧ್ಯಮಯ ಪ್ರಪಂಚಾನುಭವದಲ್ಲಿ ಆಗಂತುಕರ ನೆನಪು ಸ್ಪಷ್ಟವಾಗ ಲಿಲ್ಲ. ತೂರ್ಯಾತೀತಾವಸ್ಥೆ ಒದಗಿದ ನಂತರ ತನ್ಮಯತೆಯ ತೆರೆ ಆಕೆಯನ್ನು ಬಳಸಿದ್ದ ಕಾರಣ ಗತಬದುಕಿನ ಘಟನೆಗಳು, ವ್ಯಕ್ತಿಗಳು ಅಷ್ಟಾಗಿ ಸ್ಮೃತಿಗೆ ಒದಗುತ್ತಿರಲಿಲ್ಲ. ಕೇವಲ 'ಲಿಂಗಭಾವ'ದಲ್ಲಿದ್ದ ಆಕೆ ಸ್ಮರಿಸಿಕೊಳ್ಳುವ ಗೋಜಿಗೂ ಹೋಗುತ್ತಿರಲಿಲ್ಲ.

ಆಗಂತುಕಳ ಮುಖ ಮಾತ್ರ ಕನಸಿನಲ್ಲಿ ಕಂಡಷ್ಟು ಅಸ್ಪಷ್ಟವಾಗಿ ಕಾಣುತ್ತ ಲಿತ್ತು. ತನ್ನ ಚಿತ್ತದ ಕೂಪದೊಳಕ್ಕೆ ನೆನಪಿನ ಪಾತಾಳಗರಡಿಯನ್ನು ಇಳಿಸಿ ದಳು. ಸ್ಮರಣೆಯ ಪಾತಾಳಗರಡಿಯ ಚೂಪು ಕೊಕ್ಕೆಗಳಿಗೆ ಸ್ವಲ್ಪವೇ ತಟ್ಟಿ ದಂತಾಯಿತು. ತಕ್ಷಣವೇ ಉದ್ಗರಿಸಿದಳು :

'ಓಹ್....ಶಿವಕಾಮಿನಿ....ನೀನು ...ಈ ಕಾಡಾರಣ್ಯದಲ್ಲಿ....!' ಅಚ್ಚರಿಯ ಅಲೆಯುಕ್ಕಿತು. ಆಕೆಯೊಡನೆ ನಿಂತವರಿಬ್ಬರು ತನ್ನನ್ನು ಈ ತಾಣಕ್ಕೆ ಕರೆ ತಂದು ಬಿಟ್ಟು ಹೋದ ಶ್ರೀಶೈಲದ ಚುಂಚರು.

'ಅಹುದು ತಾಯಿ ; ತಮ್ಮ ದರ್ಶನಕ್ಕಾಗಿ ಬಂದೆವು. ನೀವು ಹೊರಿಸಿ ಹೋದ ಕರ್ತವ್ಯಭಾರವನ್ನು ಸಮರ್ಪಕವಾಗಿ ಪೂರೈಸಬೇಕಾದರೆ ಮಹಾ ರಾಜರು ಉಳಿಯಬೇಕು. ಅವರು ಜೀವಂತವಾಗಿ ಉಳಿಯಬೇಕಾಗಿದ್ದರೆ ತಮ್ಮನ್ನು ಕಾಣದೆ ಗತ್ಯಂತರವಿರಲಿಲ್ಲ....'

'ಹಾಗಾದರೆ....ಇವರು....' ನುಡಿದು ನಿಲ್ಲಿಸಿದಳು.

'ಅಹುದು....ಕೌಶಿಕ....ನಾನೇ ಕೌಶಿಕ....' ಮುಖ ಕೆಳಗೆ ಮಾಡಿ ಬಿಕ್ಕುತ್ತಿದ್ದ ಕೌಶಿಕ ಮೆಲ್ಲನೆ ತಲೆ ಎತ್ತಿದ. ಅವನ ಕಣ್ಣುಗಳಿಂದ ಪಶ್ಚಾ ತ್ತಾಪದ ಜಲಬಿಂದುಗಳು ಒಂದರ ಹಿಂದೊಂದು ಉರುಳುತ್ತಿದ್ದವು. ಅವನ ಬಗ್ಗೆ ತಿರಸ್ಕಾರವಾಗಲೀ, ಕ್ರೋಧವಾಗಲೀ ವ್ಯಕ್ತವಾಗದೆ ಅಕ್ಕಮಹಾದೇವಿ ಅದೇ ಶಾಂತ ಮುಖಮುದ್ರೆಯಿಂದಲೇ ಇದ್ದಳು.

'ಏಳಣ್ಣಾ ; ಏಕಿಷ್ಟು ಪರಿತಾಪ....' ಸಂತೈಸುವ ದನಿಯಲ್ಲಿ ಹೇಳಿದಳು. ಆ ವಾಣಿಯ ಶಾಂತಿ, ನಿರ್ವಿಕಾರತೆಗಳನ್ನು ಕಂಡು ಕೌಶಿಕನು ಬೆರಗಾದ.

'ಮಹಾದೇವಿ.... ನಾನು .... ನಿನ್ನ ....' ಎಂದು ಅವನು ಹೇಳುವಾಗ ಅವನನ್ನು ತಡೆದು ಹೇಳಿದಳು :

'ಕ್ಷಮಿಸಣ್ಣಾ....ನಾನು ಅಕ್ಕಮಹಾದೇವಿ....ಕೇವಲ ಮಹಾದೇವಿಯಲ್ಲ. ಪರುಷಸ್ಪರ್ಶದಿಂದ ಕಬ್ಬಿಣವು ಚಿನ್ನವಾಗಿ ಪರಿವರ್ತನೆಗೊಂಡ ಬಳಿಕ ಅದನ್ನು ಚಿನ್ನವೆಂದೇ ಸಂಬೋಧಿಸಬೇಕು. ಕಾಬ್ಬಿಣವೆಂದಲ್ಲ. ಹುಟ್ಟಿದೊಡನೆ, ಜನ

'ಹಾಗಾದಲ್ಲಿ ನಾನು ಹೃದಯ ತುಂಬಿ ಎಳೆಶಿಶುವು ತಾಯಿಯನ್ನು ಕರೆ ವಂತೆ 'ಅಮ್ಮಾ' ಎನ್ನಲೇ?' ಭಾವುಕನಾಗಿ ಕೌಶಿಕ ಕೇಳಿದ.

'ಬಹಳ ಸಂತೋಷ....'

'ಅಮ್ಮಾ....ನಿನ್ನ ಬದುಕಿನಲ್ಲಿ ಪೈಶಾಚಿಕ ಶಕ್ತಿಯಂತೆ ಅಡ್ಡಬಂದು ಶಾಂತ ವಾಗಿ ಹರಿಯುತ್ತಿದ್ದ ತರಂಗಿಣಿಯನ್ನು ಕಲಕಿದ ಪಾತಕಿ ನಾನು....'

'ಸತ್ತು ಹುಗಿದ ಶವವನ್ನು ಹೊರತೆಗೆವ, ಎಂದೋ ಬಿದ್ದ ದುಃಸ್ವಪ್ನದ ಕನವರಿಕೆಯನ್ನು ನೆನಪಿಸಿಕೊಳ್ಳುವ ಮೂರ್ಖಳು ನಾನಲ್ಲ. ನನ್ನ ದೃಷ್ಟಿಯಲ್ಲಿ ಯಾರೂ ದುಷ್ಟರಲ್ಲ, ಪಾತಕಿಗಳಲ್ಲ; ಎಲ್ಲರೂ ಮಲ್ಲಿಕಾರ್ಜುನನ ಕಿಡಿಗಳೇ.'

'ತಾಯೀ, ನೀನೇನೇ ಹೇಳು ನಾನು ಮಾಡಿದ ಅಪರಾಧ ಸಾಮಾನ್ಯ ವಲ್ಲ....ಜಗನ್ಮಾತೆಯನ್ನು ಬಂಧಿಸಿಟ್ಟ ಅಘೋರ ನರಕಿ....'

'ಹಾಗೆಲ್ಲ ಆತ್ಮನಿಂದನೆಯನ್ನು ಮಾಡಿಕೊಳ್ಳುವುದು ಒಳಿತಲ್ಲವಣ್ಣಾ. ಚನ್ನಮಲ್ಲಿಕಾರ್ಜುನ ಆಡಿಸುವ ಈ ಬಯಲಾಟದಲ್ಲಿ ಎಲ್ಲರೂ ಪಾತ್ರಧಾರಿಗಳು. ನನಗೊಂದು ಪಾತ್ರ ಕೊಟ್ಟ, ನಿನಗೊಂದು ವೇಷ ಕೊಟ್ಟ. ನನ್ನ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಂಡು ನನ್ನನ್ನು ಪರೀಕ್ಷಿಸಲು ಪಥ ಮಧ್ಯದಲ್ಲಿ ನಿನ್ನನ್ನು ತಂದು, ಮನೋಸ್ಥೈರ್ಯವನ್ನು ಅಲುಗಿಸುವ ನಾಟಕ ಹೂಡಿದ. ನೀನು ಕೇವಲ ನಿಮಿತ್ತಮಾತ್ರ ಪಾತ್ರಧಾರಿ···ಅವನೇ ಬಹು ಚತುರ ಸೂತ್ರಧಾರಿ....' ಹಗುರವಾಗಿ ನಕ್ಕಳು.

'ಅದು ನಿನ್ನ ಔದಾರ್ಯ....ದಯಾಮಯಿಯಾದ ನೀನು ಸ್ಮರಣೆಯ ಉಗ್ರಾಣದಿಂದ ಕಿತ್ತೆಸೆದಿರಬಹುದು. ಆದರೆ ಕೃತಿಯನ್ನು ಮಾಡಿದ ನಾನೆಂತು ಮರೆಯಲು ಸಾಧ್ಯ....?'

'ಒಂದು ದೃಷ್ಟಿಯಲ್ಲಿ ನೀನು ನನಗೆ ಮಾಡಿದ ಉಪಕಾರವನ್ನು ನಾನು ಸ್ಮರಿಸಬೇಕು. ಮೋಹದ ತಂತುಗಳಿಂದ ಕಟ್ಟಲ್ಪಟ್ಟು ಸೀಮಿತ ಸಂಸಾರದ ಪಂಜರದಲ್ಲಿ ಬಂಧಿತಳಾಗಿದ್ದ ನನ್ನನ್ನು ಅಲ್ಲಿಂದ ಬಿಡುಗಡೆ ಮಾಡಿ ಕರೆತಂದು, ಎಳೆಯ ಹಕ್ಕಿಗೆ ಹಾರಲು ಕಲಿಸಿದಂತೆ ಪ್ರಪಂಚವನ್ನು ಎದುರಿಸಲು ಕಲಿಸಿದೆ. ಆದ್ದರಿಂದ ನೀನು ಮಾಡಿದ್ದೊಂದು ಅಪರಾಧ ಎಂದು ಕೊರಗದೆ—ಮರುಗದೆ, ಸೊರಗದೆ—ಸೊಮ್ಮಳಿಸದೆ ಧೈರ್ಯ ತಾಳಿ ಭವಿಷ್ಯವನ್ನು ಶಾಂತಿದಾಯಕ ವಾಗಿ ಮಾಡಿಕೋ....'

‘ಕ್ಷಮೆ? ನೀನು ಮಾಡಿದ ಕೃತಿಯ ನೆನಪೇ ನನಗಿಲ್ಲದಾಗ ಇನ್ನು ಮರೆಯುವುದೆಲ್ಲಿಂದ ಬಂದಿತು? ಇದು ಬಂಜೆಯ ಮಗುವನ್ನು ಕೊಲ್ಲು ಎಂದಂತಾಯಿತು....’ ಮುಗುಳ್ನಕ್ಕು ಹೇಳಿದಳು.

‘ಬಾಯಿಬಿಟ್ಟು ‘ಕ್ಷಮಿಸಿರುವೆ ಕಂದಾ’ ಎಂದೊಮ್ಮೆ ಉಸುರಿ, ನಿನ್ನ ಪಾದಗಳನ್ನು ಚಾಚು ಅಮ್ಮಾ....ನಮಸ್ಕರಿಸಿ ಧನ್ಯನಾಗುವೆ....’ ಆವನ ಪರಿತಾಪವನ್ನು ಕಂಡು ನಿರ್ಲಿಪ್ತಳಾಗಿ ಪಾದಗಳನ್ನು ಇಳಿಯಬಿಟ್ಟಳು. ಕೌಶಿಕನು ಪಾದದ ಮೇಲುರುಳಿ ಆನಂದ-ದುಃಖ ಸಮ್ಮಿಶ್ರವಾದ ಕಣ್ಣೀರಿನಿಂದ ಪಾದಾಭಿಷೇಕ ಮಾಡಿದ.

‘ಏಳು ಮಗು....ನಿನ್ನ ಬದುಕು ಮಂಗಳಮಯವಾಗಲಿ....ಚನ್ನಮಲ್ಲಿಕಾರ್ಜುನನ ಕರುಣೆಯ ಕಂದನಾಗು.’

ಅಕ್ಕಮಹಾದೇವಿ ಹೃದಯತುಂಬಿ ಆಶೀರ್ವದಿಸಿದಾಗ ಸುತ್ತಲಿದ್ದವರ ಮೈಗಳು ಪುಳಕಗೊಂಡವು. ಶಿವಕಾಮಿನಿಯೂ ಭಾವಾವೇಶದಿಂದ ಕಣ್ಣೀರು ಹರಿಸುತ್ತಿದ್ದಳು.

‘ಅಮ್ಮಾ....ನನ್ನ ತಾಯಿ....ಇಂತಹ ಕ್ಷಣಗಳಿಗಾಗಿ ಅನ್ನ-ನೀರಿಲ್ಲದೆ ಕೊರಗಿದೆ, ನಿದ್ರೆ-ಶಾಂತಿಗಳಿಲ್ಲದೆ ಬಳಲಿದೆ....ಜೀವಂತ ಶವವಾಗಿ ಚಿಂತಾಗ್ನಿಯಲ್ಲಿ ದಹಿಸಿದೆ. ನನ್ನ ಕರ್ಮವು ಈ ಯೋಗಪಾದಗಳ ಪವಿತ್ರ ಸ್ಪರ್ಶದಿಂದ ಇಂದು ಹರಿಯಿತು....’ ಕೌಶಿಕನು ಗದ್ಗದಿತನಾಗಿ ನುಡಿದ.

‘ಅಹುದು ತಾಯಿ....ಮಹಾರಾಜರ ವ್ಯಾಕುಲತೆಯನ್ನು ನೋಡಲಾಗುತ್ತಿರಲಿಲ್ಲ. ಅವರು ಜೀವದಿಂದ ಉಳಿಯುವರು ಎಂಬುದೇ ನಮಗೆಲ್ಲ ಸಂಶಯಾಸ್ಪದವಾಗಿತ್ತು.’ ಶಿವಕಾಮಿನಿಯಲ್ಲಿ ಸ್ಮರಣೆಯ ಗಾಲಿ ಹಿಮ್ಮುಖವಾಗಿ ಓಡತೊಡಗಿತು....

* * *

‘ಮಹಾದೇವಿ....ಮಹಾದೇವಿ....’ ಕೌಶಿಕನು ಚೀರಿ ಕುಸಿದಾಗ ಅರಮನೆಯು ಅದೇ ದನಿಯನ್ನು ಮಾರುಲಿಯಿತು. ಕೆಳಗೆ ಬೀಳುವ ರಾಜನನ್ನು ಅಂಗರಕ್ಷಕರು, ಮದನರತಿ ಆಸರೆ ನೀಡಿ ತಡೆದರು. ಮೆಲ್ಲನೆ ಕರೆದೊಯ್ದು ಪಲ್ಲಂಗದ ಮೇಲೆ ಮಲಗಿಸಿದರು. ಅರೆ ಮೂರ್ಛಾವಸ್ಥೆಯಲ್ಲಿದ್ದ ರಾಜನ ಸುತ್ತಲೂ ರಾಣಿವಾಸದವರು ನೆರೆದರು. ತಲೆಯು ಗಿಮಿಗಿಮಿ ತಿರುಗುತ್ತಲಿದ್ದು, ಕಣ್ಣೆವೆಗಳು ಭಾರವಾಗಿ ಮುಚ್ಚಿದ್ದವು. ಪೂರ್ಣಪ್ರಜ್ಞೆಗೆ ಮರಳಿಸಬೇಕೆಂದು ವೈದ್ಯರು ಶತಪ್ರಯತ್ನ ಮಾಡಿದರು. ಹಗಲು ರಾತ್ರಿಯಿಡೀ ಕನವರಿಸುತ್ತಿದ್ದ.

ಸುತ್ತಲೂ ನಿರುಕಿಸುತ್ತ. ಎಲ್ಲರತ್ತ ಶೂನ್ಯವಾಗಿ ಕಣ್ಣನ್ನು ಹರಿಯಿಸಿ,

'ಮಹಾದೇವಿ....ಆವಳೆಲ್ಲಿ?' ಎಂದ. ಎಲ್ಲರೂ ಸ್ತಂಭೀಭೂತರಾಗಿ ತುಟಿಯನ್ನಾಡಿಸಲೂ ಅಸಹಾಯಕರಾಗಿ ನಿಂತಿದ್ದರು. ಮಂಚಕ್ಕೆ ಸನಿಹದಲ್ಲಿ ನಿಂತಿದ್ದ ಶಿವಕಾಮಿನಿಯನ್ನು ಕಾಣುತ್ತಲೇ ಕಣ್ಣುಗಳಲ್ಲಿ ಬರಿದಾದ ಭಾವದ ಬದಲಿಗೆ ಕಳೆಮೂಡಿತು. ದೃಷ್ಟಿಯನ್ನವಳಲ್ಲಿ ಕೇಂದ್ರೀಕರಿಸಿ ಮೆಲ್ಲನೆ ಕೇಳಿದ:

'ವಿಲಾಸಿನಿ....ಅಲ್ಲ....ಥೂ ಆ ಹೆಸರು ಬೇಡ....ಶಿವಕಾಮಿನಿ, ನಿನ್ನ ಒಡತಿ....ನನ್ನ ಮಹಾದೇವಿ ಎಲ್ಲಿ? ಶಿವಕಾಮಿನಿ ನೀರಿನಿಂದ ತುಂಬಿ ಮಂಜಾದ ಕಣ್ಣುಗಳನ್ನು ತಗ್ಗಿಸಿದಳು. ಮಹಾದೇವಿಯನ್ನು ಅಗಲಿದ ವೇದನೆ ಒಂದು ಕಡೆಯಾಗಿದ್ದರೆ, ರಾಜನ ಮನಸ್ಸಿನ ಮೇಲಾದ ಆಘಾತವೊಂದೆಡೆ ಅವಳನ್ನು ಹಣ್ಣುಮಾಡಿತ್ತು. ಮಹಾದೇವಿಗೆ ಇಂಥ ಪರಿಸ್ಥಿತಿಯನ್ನು ತಂದೊಡ್ಡಿದ್ದ ಅವನನ್ನು ಶಪಿಸುತ್ತ, ಹಲ್ಲು ಕಡಿಯುತ್ತ ಮಠದಿಂದ ಮರಳಿದ ಅವಳಲ್ಲಿ, ಕೌಶಿಕನನ್ನು ವಿಲಕ್ಷಣ ಪರಿಸ್ಥಿತಿಯಲ್ಲಿ ಕಂಡ ಬಳಿಕ ಆ ದ್ವೇಷಭಾವ ಉಳಿದಿರಲಿಲ್ಲ.

'ಮಹಾ ಕ್ರೂರಿ, ಅತಿ-ಕಾಮುಕ, ಬಲು ದುರ್ಜನನಾದ ಇವನ ಮೇಲೆ ಇಂಥ ಪರಿಣಾಮವೇ?' ಎಂದು ಸೋಜಿಗದ ಸರಸಿಯಲ್ಲಿ ಮುಳುಗಿದಳು.

'ಏಕೆ ತಲೆ ತಗ್ಗಿಸಿದೆ....ಹೇಳು ಶಿವಕಾಮಿನಿ. ಆವಳೆಲ್ಲಿ?'

'ಅವರು ಹೊರಟುಹೋದರು....' ಅಗಲಿಕೆಯ ನೋವಿನಿಂದ ಗಳಗಳನೆ ಅಳುತ್ತ ಹೇಳಿದಳು.

'ಎಲ್ಲಿಗೆ, ತನ್ನ ತಂದೆಯ ಮನೆಗೆ?' ಎಷ್ಟೋ ಸಮಾಧಾನ ಅವನ ಮುಖದ ಮೇಲೆ ಮೂಡಿತ್ತು.

'ಅಲ್ಲ; ಈ ಉಡುತಡಿಯ ಊರನ್ನೇ ತೊರೆದು....' ಕಂಠ ಭಾರವಾಗಿ ತೊದಲಿದಳು.

'ಆಹುದೇ....ಎತ್ತ ಕಡೆಗೆ ಹೋದಳು?' ಮತ್ತೆ ಅಧೀರತೆ ಅವನನ್ನು ಬಳಸತೊಡಗಿತು.

'ಕಾಡಿನೊಳಕ್ಕೆ ಹೋದರು; ದಿಗಂಬರರಾಗಿಯೇ ಹೋದರು....'

'ಅಯ್ಯೋ....ಊರನ್ನೇ ತೊರೆದು ಹೋದಳೆ?' ಮತ್ತೊಮ್ಮೆ ಚೀರಿ ಮೂರ್ಛೆಹೊಂದಿದ ಕೌಶಿಕ.

ಅಂದು ಇಡೀ ಅರಸು ಪರಿವಾರವು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯ್ದು

ಮೆಲ್ಲನೆ ಕಣ್ತೆರೆದು, ವೈದ್ಯರು ಬೇಡವೆಂದರೂ ಅವರ ಮಾತು ಕಿವಿಗೇ ಬೀಳ ದವನಂತೆ ಮೇಲೆದ್ದು ಮಂಚವನ್ನಿಳಿದು ಮಹಾದೇವಿ ಇರುತ್ತಿದ್ದ ಕೋಣೆ ಯೊಳಕ್ಕೆ ಹೋದ. ಪೂಜೆಗೆ ಬಳಸುತ್ತಿದ್ದ ಸಾಮಗ್ರಿಗಳನ್ನು ಒಂದೊಂದಾಗಿ ಮುಟ್ಟುತ್ತ, 'ನಿಮ್ಮೊಡತಿ ಇಲ್ಲವೆ ?....' ಎಂದು ವಿಷಾದದ ನಗೆ ನಕ್ಕ. ನಡುಮನೆಯಲ್ಲಿ ಹಾಸಿದ್ದ ಚಾಪೆಯನ್ನು ಸವರಿ 'ಕುಳಿತುಕೊಳ್ಳುವವಳು ಇನ್ನಿಲ್ಲ....' ಎಂದು ಸುತ್ತಿಟ್ಟ. ಚಾಪೆಯ ಮುಂದಿದ್ದ ಕಾಲುಮಣೆಯ ಮೇಲಿದ್ದ ಓಲೆಕಂತವನ್ನು ಕೈಯಲ್ಲಿ ಮುಟ್ಟಿ, ಮೆಲ್ಲನೆ ಬೆರಳುಗಳಿಂದ ನವಿ ರಾಗಿ ಸವರಿ 'ನೀನೆಷ್ಟು ಭಾಗ್ಯಶಾಲಿಯಾಗಿದ್ದೆ! ಆ ಸುಂದರ ಹಸ್ತಗಳ ಮಡಿಲಲ್ಲಿ ಆಡುವ ಕೂಸಾಗಿದ್ದೆಯಲ್ಲವೇ ? ಆದರೆ ನೀನಿನ್ನು ಅನಾಥ.... ಅನಾಥ' ಓಲೆಯ ಕಂತವನ್ನು ಎದೆಗಪ್ಪಿಕೊಂಡು ಅಳತೊಡಗಿದ ಕೌಶಿಕ.

ಕ್ಷಣಕಾಲದ ನಂತರ ಹೊರಗೆ ಬಂದ. ಅಂದು ಬೆಳಗ್ಗೆ ಜಂಗಮರ ಗೋಷ್ಠಿ ನಡೆದಲ್ಲಿಗೆ ಬಂದು ನಿಂತ. ಎಲ್ಲ ಘಟನೆಗಳು ಚಿತ್ತಭಿತ್ತಿಯಮೇಲೆ ಆಗಸದಲ್ಲಿ ಬಂದು, ಸರಿಯುವ ಮೋಡಗಳಂತೆ ಬಂದುಬಂದು ಹೋಗತೊಡಗಿ ದವು. ತಾನು ಜಂಗಮರ ಅವಹೇಳನ ಮಾಡಿದುದು; ಮಹಾದೇವಿಯ ಬಗ್ಗೆ ಹೀನ ಮಾತನಾಡಿದುದು; ಆಕೆ ಅಗ್ನಿಪರ್ವತದಂತೆ ಉದ್ರಿಕ್ತಳಾಗಿ ತಾನು ಮುಟ್ಟಿದ ಸೆರಗಿನ ಸಮೇತವಾಗಿ ಸೀರೆಯನ್ನು ಬಿಚ್ಚಿ ಮುಖದ ಮೇಲೆ ಎಸೆದುದು ಕಣ್ಣೆದುರಿಗೆ ಕಟ್ಟಿದವು. ನೀಳವಾದ ಕೇಶರಾಶಿಯನ್ನು ನಗ್ನವಾದ ಮೈಗೆ ಹರಡಿಕೊಂಡು ಆಕೆ ನಿಂತುದು ನಿಚ್ಚಳವಾಗಿ ಕಂಡು, ಶಕ್ತಿಮೀರಿ 'ಮಹಾದೇವಿ....ನಾನು ಪಾಪಿ....ಪಾಪಿ' ಎಂದು ಚೀರಿ ಮತ್ತೆ ಕುಸಿದ. ಆಕೆಯ ಅಂಗಾಂಗಗಳ ಮಾಟವನ್ನು ಕಾಣುವುದಕ್ಕೆ ಹಗಲಿರುಳು ತಪಿಸುತ್ತಿ ದ್ದವನಿಗೆ, ಇವನ ಬಗ್ಗೆ ತಿರಸ್ಕಾರ ತಾಳಿ ಆಕೆ ನಿರ್ಭಯಳಾಗಿ ದಿಗಂಬರ ಗೊಂಡು ನಿಂತಾಗ ಅವನ ಅಂತರಂಗ ಗಡಗಡನೆ ನಡುಗಿತು. ಭಯದಿಂದ ಕಣ್ಣು ಮುಚ್ಚಿದ್ದನು. ಅವನ ಮನವನ್ನು ಕೆರಳಿಸುವ ಬದಲು ಆ ದಿಗಂಬರತ್ವವು ಅವನನ್ನು ನಿಶ್ಯಕ್ತನನ್ನಾಗಿ ಮಾಡಿತ್ತು; ವಿಕಾರಕ್ಕೆ ಪುಟವಿಕ್ಕದೆ ಹೃದಯ ವನ್ನು ಮುದುಡಿಸಿತ್ತು.

ಇರುಳಿಡೀ ನಿದ್ರೆ ಮಾಡನೆಂದರಿತು ಎಚ್ಚರ ತಪ್ಪಿದ ಕೌಶಿಕನನ್ನು ಪುನಃ ಕರೆದೊಯ್ದು ಮಲಗಿಸಿದ ವೈದ್ಯರು ಅವನಿಗೆ ಮತ್ತು ಬರಿಸುವ ಮದ್ದನ್ನು ಗಂಟಲಲ್ಲಿಳಿಸಿದರು. ಅತ್ತು ಅತ್ತು ದಣಿದ ಮಗುವು ನಿಸ್ಸತ್ವಗೊಂಡು ಸೊಮ್ಮಳಿಸಿ ಮಲಗುವಂತೆ, ಕೌಶಿಕನು ನಿಸ್ತೇಜಮುಖವನ್ನು ಹೊತ್ತು ನಿದ್ರೆಯ ಆಲಿಂಗನಕ್ಕೆ ...

ಮಾರನೆಯ ದಿವಸವೂ ಹಾಸಿಗೆ ಬಿಟ್ಟೇಳುವಾಗ ಕವಿದ ಮಂಕಿನ ತೆರೆ ಇನ್ನೂ ಕಳಚಿರಲಿಲ್ಲ. ಪರಿಚಾರಕರು ಮೀಯಿಸಿ, ಉಪಾಹಾರ ನೀಡಿದರು. ಯಾಂತ್ರಿಕವಾಗಿ ತಿಂದು ಮುಗಿಸಿದ. ವೈದ್ಯರಿತ್ತ ಮದ್ದನ್ನೂ ಕುಡಿದ. ಉದ್ಯಾನದೊಳಕ್ಕೆ ಹೋಗಿ ಸಾಮಾನ್ಯವಾಗಿ ಮಹಾದೇವಿ ಕುಳಿತುಕೊಳ್ಳು ತ್ತಿದ್ದ ಲತಾಮಂಟಪದಲ್ಲಿ ಕೆಲವು ಕ್ಷಣಕಾಲ, ಕೊಳದ ಕಟ್ಟೆಯಮೇಲೆ ಚಣಕಾಲ ಕುಳಿತ.

'ಇತ್ತ ಬರುತ್ತಲೇ....ಅವಳಿಗಾಗಿ ಇಲ್ಲೆಲ್ಲ ನನ್ನ ಕಣ್ಣುಗಳು ಅರಸು ತ್ತಿದ್ದವು. ಇನ್ನು ಯಾರಿಗಾಗಿ ಅರಸಲಿ?' ಬರಿದಾದ ಮನದಿಂದ ಎದ್ದು ಬಂದ. ಏನೋ ನೆನಪಾಗಿ ಕೇಳಿದ,

'ಶಿವಕಾಮಿನಿ....ನನ್ನ ಪ್ರಿಯ ಮಿತ್ರ ವಸಂತಕನೆಲ್ಲಿ? ಈ ದುರಂತ ನಾಟಕದ ಸೂತ್ರಧಾರನಾದ ಅವನೆಲ್ಲಿ....?'

ಶಿವಕಾಮಿನಿ ಸಂದಿಗ್ಧಕ್ಕೊಳಗಾಗಿ ನಿಧಾನವಾಗಿ ಹೇಳಿದಳು:

'ಅವರು....ಒಡತಿಯರು ನಿರ್ಗಮಿಸುತ್ತಲೇ ಅರಮನೆಯನ್ನು ತೊರೆದು, ಗುರುಗಳ ಮಠಕ್ಕೆ ನನ್ನೊಡನೆ ಬಂದು ಅಪ್ಪನವರಿಂದ ಕಾವಿಯ ವಸ್ತ್ರವನ್ನು ಆಶೀರ್ವಾದವಾಗಿ ಪಡೆದು, ಧರಿಸಿಕೊಂಡು ಮತ್ತೊಂದು ದಿಕ್ಕಿನಲ್ಲಿ ಎತ್ತಲೋ ಹೊರಟು ಹೋಗಿರುವರು....'

'ನಿಜವೇ....ಅವನೂ ಹೋದನೆ? ನನ್ನ ಕಿವಿಗಳು ಮೋಸ ಮಾಡು ತ್ತಿಲ್ಲವಷ್ಟೇ....ಹಾಯ್ ಮಿತ್ರಾ....ನೀನೂ ನನ್ನ ಕೈಬಿಟ್ಟೆಯಾ....ಅಗಲಿ ಹೋದೆಯಾ?' ಕೌಶಿಕ ದುಃಖತಪ್ತನಾಗಿ ತಲೆತಗ್ಗಿಸಿ ಕುಳಿತ.

ರಾಜನನ್ನು ಮಾನಸಿಕ ಒತ್ತಡದಿಂದ ಮುಕ್ತಿಗೊಳಿಸಲು, ಸಾಂತ್ವನಿಸಲು ಶತಪ್ರಯತ್ನ ಮಾಡಿ ಹೇಗೋ ಮನವೊಲಿಸಿ ಯಶೋಮತಿಯು ಪ್ರಶಾಂತ ಭವನದ ಆವರಣದಿಂದ ದೂರಕ್ಕೆ—ತನ್ನ ನಿವಾಸಕ್ಕೆ ಕರೆದೊಯ್ದಳು. ಪರಿಚಿತ ವಸ್ತುಗಳು ಅಂಥ ಸಂದರ್ಭಗಳಲ್ಲಿ ಮನಸ್ಸನ್ನು ವಿಕ್ಷುಬ್ಧಗೊಳಿಸುವುವೆಂಬು ದನ್ನವಳು ಬಲ್ಲಳು. ಏನೇ ಆದರೂ ರಾಜನನ್ನು ಮೊದಲಿನ ಸ್ಥಿತಿಗೆ ತರಲಿಕ್ಕೆ ಸಾಧ್ಯವಾಗಲಿಲ್ಲ. ದಿನಗಳೆದಂತೆ ಸ್ವಲ್ಪಸ್ವಲ್ಪವಾಗಿ ಮಂಕಿನ ಪೊರೆಯಿಂದ ಹೊರಬಂದರೂ ಸಹ, ಅವನು ಬದುಕಿನಲ್ಲಿ ಉತ್ಸಾಹವನ್ನು ಕಳೆದುಕೊಂಡಿದ್ದ. ಯಾಂತ್ರಿಕವಾಗಿ ಕರ್ತವ್ಯಗಳನ್ನು ಪೂರೈಸುತ್ತ ಆಟಪಾಟ-ವಿಲಾಸಗಳಲ್ಲಿ ನಿರಾಸಕ್ತಿಯನ್ನು

ಪರಿಣಾಮಕ್ಕೂ ಒಳಗಾಗಲಿಲ್ಲವಲ್ಲ. ಇಂತಹ ಏರುಂಜವ್ವನದಲ್ಲಿ ಹೆಣ್ಣಿನ ಪ್ರಾಕೃತಿಕ ಗುಣಗಳನ್ನೇ ಮೆಟ್ಟಿ ನಿಂತು ಅಚಲವಾದ ನಿಷ್ಠೆಯಿಂದ ವೈರಾಗ್ಯ ವನ್ನು ಕಾಪಾಡಿಕೊಂಡಳು. ಆದರೆ ಇಂತಹ ಸಾಧ್ವಿಗೆ ನಾನು ಕೊಟ್ಟ ಕಿರುಕುಳವೆಷ್ಟು. 'ಮಹಾದೇವಿ....ನಿನಗಾಗಿ ಸರ್ವಸ್ವವನ್ನೂ ನಾನು ಅರ್ಪಿಸಲು ಸಿದ್ಧವಿರುವಾಗ ನನ್ನನ್ನು ನೀನು ಒಲಿಯುತ್ತಿಲ್ಲವೇಕೆ?' ಎಂದು ಅನೇಕ ಬಾರಿ ಕೇಳಿದಾಗಲೂ ಅಷ್ಟೇ ದೃಢವಾಗಿದ್ದಳು. ಒತ್ತಾಯ, ಪ್ರಲೋಭನೆ, ವಿನಂತಿ ಯಾವುದಕ್ಕೂ ಸೋಲದೆ ಪವಿತ್ರತೆಯನ್ನು ಕಾಪಾಡಿ ಕೊಂಡಳು. ಕೆಲವು ಸಲ ಒತ್ತಾಯಕ್ಕೆ ಒಲಿಯದವರು ಪ್ರಲೋಭನೆಗೆ ಒಲಿವರು, ಇನ್ನು ಕೆಲವರು ವಿನಯಪೂರ್ವಕ ಬೇಡಿಕೆಗೆ ಸೋಲುವರು. 'ನಾನೇ ಸೋತು ಗೆದ್ದರಾಯಿತು' ಎಂದುಕೊಂಡು ಎಷ್ಟು ಬಾರಿ ಸೋತು ಕಿಂಕರನಾಗಿ ಬೇಡಿದೆ. ಆದರೆ ಆಕೆ ಅಚಲಳು; ಚನ್ನಮಲ್ಲಿಕಾರ್ಜುನನನ್ನು ಬಿಟ್ಟು ಬೇರೇನನ್ನೂ ಆಲೋಚಿಸದವಳು. ಅಂದು ನಾನು ಕೇಳಿದ್ದೆ,

'ಮಹಾದೇವಿ....ನಿನ್ನಲ್ಲಿ ಅಪಾರ ಲಾವಣ್ಯವಿದೆ, ಸೌಂದರ್ಯವನ್ನು ಗ್ರಹಿಸುವ ರಸಿಕಪ್ರಜ್ಞೆ ಇದೆ. ಬುದ್ಧಿಚಾತುರ್ಯ-ಸದ್ಗುಣ ಸಂಪದಗಳಿವೆ. ನನ್ನಲ್ಲಿಯೂ ರೂಪ, ಅಧಿಕಾರ, ಸಂಪತ್ತು, ಧೈರ್ಯ, ಪ್ರೇಮ ಇವುಗಳೆಲ್ಲ ಮೇಳೈಸಿವೆ. ನೀನೇಕೆ ನನ್ನನ್ನು ಲಗ್ನವಾಗಲು ನಿರಾಕರಿಸುವೆ....?'

'ಮಹಾರಾಜಾ ಅರಿವೆಯ ಅಂಗಡಿಗೆ ಬಂದು ಅಕ್ಕಿಯನ್ನು ಕೇಳುವ, ದಿನಸುಗಳ ಅಂಗಡಿಗೆ ಹೋಗಿ ರತ್ನಹಾರ ಕೇಳುವ ನಿನ್ನ ಅವಿವೇಕತನಕ್ಕೆ ಏನುತ್ತರಿಸಲಿ....? ಎಲ್ಲಿ ಯಾವುದಿದೆಯೋ ಅಲ್ಲಿಗೆ ಹೋಗಿ ಕೊಂಡುಕೊಳ್ಳ ಬೇಕು. ಇಲ್ಲದಲ್ಲಿ ಹೋಗಿ ಕೇಳುವುದು ನಮ್ಮ ತಪ್ಪು-ಅಜ್ಞಾನವೇ ವಿನಾ ಕೊಡಲು ಅಸಮರ್ಥನಾದ ಅಂಗಡಿಯವನದಲ್ಲ. ನನ್ನ ಈ ಅಧ್ಯಾತ್ಮದ ಅಂಗಡಿ ಯಲ್ಲಿ ದೊರೆಯುವುದು ಭಕ್ತಿ-ಜ್ಞಾನ-ವಿರಕ್ತಿಗಳ ಪರಿಕರಗಳೇ ಹೊರತು ಸಂಸಾರಾಪೇಕ್ಷೆ, ಶೃಂಗಾರಾಭಿರುಚಿ, ಮೋಹಗಳಂತಹ ಲೌಕಿಕ ಸಾಮಗ್ರಿ ಗಳಲ್ಲ. ನಿನ್ನ ಆಯ್ಕೆ ಸರಿಯಾಗಿಲ್ಲ; ನಾನೇನು ಮಾಡಲಿ?'

'ನಿಜ ನಿಜ, ನನ್ನ ಆಯ್ಕೆ ತಪ್ಪಾಯಿತು. ಲೌಕಿಕ ಬದುಕನ್ನೇ ಬಯಸದ ಆ ಅಧ್ಯಾತ್ಮ ಅರಸಂಚೆಯನ್ನು ವಿಲಾಸದ ಪಂಕಕ್ಕೆಳೆಯಬಯಸಿದೆ.... ಅಂತಹ ಸಾಧ್ವಿಯನ್ನು ನೋಯಿಸಿದ ಪಾತಕಿ ನಾನು. ಆಕೆಯ ಬಿಸಿಯುಸಿರು ಜನ್ಮಜನ್ಮಾಂತರದಲ್ಲಿ ನನ್ನನ್ನು ದಹಿಸದಿಹುದೇ....?'

ಕಣ್ಣುಗಳು ಅತ್ತ ಹರಿಯುತ್ತಿರಲಿಲ್ಲ. ವಿಳಾಸಿನಿಯರು ರಾಜನನ್ನು ಉತ್ಸಾಹಪೂರ್ಣನನ್ನಾಗಿ ಮಾಡಲು ನರ್ತಿಸಿದರೆ, ಪ್ರಣಯಗೀತೆಗಳನ್ನು ಹಾಡಿದರೆ ಕೇಳುತ್ತ ಕೇಳುತ್ತ, 'ಸಾಕು ನಿಲ್ಲಿಸಿ....' ಎಂದು ಅಬ್ಬರಿಸುವನು. ಊಟ-ಆಟದಲ್ಲಿ, ಉಡಿಗೆ-ತೊಡಿಗೆಯಲ್ಲಿ ಕಿಂಚಿತ್ತೂ ಆಸಕ್ತಿ ತೋರಿಸದೆ ಶಿಲಾಪ್ರತಿಮೆಯಂತೆ ಕುಳಿತುಬಿಡುತ್ತಿದ್ದವನನ್ನು ಶಿವಕಾಮಿನಿಯು ಸಮೀಪಿಸಿ,

'ಪ್ರಭು....ಮೀಯಲೇಳಿ ; ಉಣ್ಣಲು ತಡವಾಯಿತು....' ಎಂದು ಕರೆದಾಗ ನಿಶ್ಶೂನ್ಯಭಾವದಿಂದ ನೋಡುವನು.

'ನಾನು ಏತಕ್ಕಾಗಿ ಉಣ್ಣಬೇಕು ವಿಲಾಸಿನಿ....ಅಲ್ಲ....ಶಿವಕಾಮಿನಿ. ನಾನಿನ್ನು ಬದುಕಿ ಏನು ಮಾಡಬೇಕಾಗಿದೆ?' ಆ ನಿರಾಶೆಯ ನುಡಿಗಳನ್ನು ಕೇಳಿ ಶಿವಕಾಮಿನಿ ಗಳಗಳನೆ ಅತ್ತುಬಿಡುತ್ತಿದ್ದಳು. ಸಮಾಧಾನ ತಂದು ಕೊಂಡು,

'ಅವರನ್ನಿನ್ನು ಮರೆತುಬಿಡಿ ಪ್ರಭು. ಸುರಸುಂದರಾಂಗಿ ಯಶೋಮತಿ ಯವರಿರುವರು; ಇನ್ನೂ ಅನೇಕ ಲಾವಣ್ಯವತಿಯರಿರುವರು. ಅವರನ್ನು ಕಂಡು ಸಮಾಧಾನ ತಂದುಕೊಳ್ಳಿ....'

'ಅಯ್ಯೋ....ಅದಕ್ಕಾಗಿ ಅಲ್ಲ ಶಿವಕಾಮಿನಿ. ಹೆಣ್ಣಿನಾಸೆ ಹಿಂಗಿಹೋಗಿದೆ. ಆಕೆಯು ನನ್ನ ಕೈಗೆ ಸಿಗಲಿಲ್ಲ ಎಂಬುದಕ್ಕಾಗಿ ಚಿಂತಿಸುತ್ತಲಿಲ್ಲ; ನಾನು ಆಕೆಗೆ ಮಾಡಿದ ದ್ರೋಹಕ್ಕಾಗಿ ಪರಿತಪಿಸುತ್ತಿರುವೆ. ಶುಭ್ರ ನೀಲಾಗಸದಲ್ಲಿ ಹಾರುವ ಧವಳ ಅರಸಂಚೆಯನ್ನು ಕಂಡೆ; ಅದರ ಪಾಡಿಗೆ ಅದನ್ನು ಹಾರಿ ಹೋಗಲು ಬಿಡದೆ ಬಾಣವನ್ನು ಬಿಟ್ಟು ಗಾಯಮಾಡಿದೆ....ಅದು ಕೈಗೆ ಸಿಗಲಿಲ್ಲ, ಪಾರಾಗಿ ಹೋದುದು ನಿಜ....ಆದರೆ....ಆ ಮುಗ್ಧ ಹಂಸಪಕ್ಷಿಗೆ ಎಂಥ ಪೆಟ್ಟು....! ಅದೂ ನನ್ನಿಂದ....' ನೆನಪಿಸಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದ.

'ಕಾಲಾನಂತರದಲ್ಲಿ ಅವನು ಮರೆತೇ ಮರೆಯುವನು, ಹೃದಯದ ಗಾಯವು ಮಾಯುವದು' ಎಂಬ ನಿರೀಕ್ಷೆ ಹುಸಿಯಾಗಿ, ಆ ನೋವು ಮಾಯುವ ಬದಲು ಉಲ್ಬಣಗೊಂಡಿತು. ಮನಸ್ಸು ತಡೆಯದೆ ಶಿವಕಾಮಿನಿಯನ್ನು ಓಂಕಾರಶೆಟ್ಟಿಯ ಮನೆಗೆ ಹೋಗಿ ಮಹಾದೇವಿ ಹೋದ ತಾಣವನ್ನು ಅರಿತು ಬರಲು ಕಳುಹಿದ. ಶಿವಕಾಮಿನಿ

ರೋಗದಿಂದ ಹಾಸಿಗೆ ಹಿಡಿದಿದ್ದಳು. ಆಕೆ ಸರ್ವಸ್ವವೂ ಸೂರೆ ಹೋದಷ್ಟು ಹತಾಶಳಾಗಿದ್ದಳು. ಕಾಂತಿಯಿಂದ ಪುಟಿಯುತ್ತಿದ್ದ ಅವಳ ಕಣ್ಣುಗಳು ಪಾತಾಳಕ್ಕಿಳಿದಿದ್ದವು. ಎಲುಬಿನ ಗೂಡಾಗಿದ್ದ ಆಕೆಯನ್ನು ಕಂಡು ಲಿಂಗಮ್ಮನೆಂದು ಊಹಿಸಿಕೊಳ್ಳಲಿಕ್ಕೂ ಸಾಧ್ಯವಾಗಲಿಲ್ಲ. ಶಿವಕಾಮಿನಿಯನ್ನು ಕಾಣುತ್ತಲೇ,

'ಅರಮನೆಯ ರಕ್ಕಸರಿಗೆ ಇಲ್ಲೇನು ಕೆಲಸವವ್ವಾ....ತೊಲಗಾಚೆ....' ಎಂದು ಚೀರಿ ಹೇಳಿದಳು. ಶಿವಕಾಮಿನಿ ದುಃಖಿತಳಾಗಿ ಮೆಲ್ಲನೆ ಸಂತೈಸುತ್ತ,

'ಅಮ್ಮಾ...ನಿಮ್ಮಷ್ಟೇ ನಾವೂ ನೊಂದಿದ್ದೇವೆ. ಅವರು ಎತ್ತ ಹೋದರು, ಎಲ್ಲಿರುವರೆಂಬುದನ್ನು ತಾವು ತಿಳಿದಿರುವಿರಾ....? ಅರಿತಿದ್ದರೆ ತಿಳಿಸಿರಿ...ಮಹಾರಾಜರು....' ಎಂದು ಹೇಳಿ ಮುಗಿಸುವ ಮುನ್ನವೇ ಲಿಂಗಮ್ಮನು,

'ನಮಗ್ಗೊತ್ತಿಲ್ಲವ್ವಾ....ಗೊತ್ತಿದ್ರೂ ಹೇಳಲ್ಲವ್ವಾ; ನೀವು ಏನು ಬೇಕಾರ ಮಾಡ್ರಿ....ಬೇಕಾದ್ರೆ ನಮ್ಮಿಬ್ರುನ್ನೂ ಒಯ್ದು ಕಾರಾಗೃಹದಾಗೆ ಒಗೀರಿ.... ಇಲ್ಲಿ ಬಿಡೋ ಪ್ರಾಣಾನ ಅಲ್ಲೇ ಬಿಡ್ತೀವಿ....' ಲಿಂಗಮ್ಮನಿಗೆ ಹಿಂದಿನ ನೆನಪುಗಳು ಕಲಕಿದಂತಾಗಿ ಬಿಕ್ಕಿದಳು.

'ಅವ್ವಾ....ನಿಧಾನವಾಗಿ ಕೇಳ್ರಿ. ನಮ್ಮ ಅರಸರೂ....'

'ಆ ರಕ್ಕಸನ ಸುದ್ದಿ ಎತ್ತಬೇಡವ್ವಾ....ನಡಿ ಆಚೆ....ಮನಸ್ಸಿಗೆ ಬಂದಂತೆ ಮಾಡ್ರಿ....ಎಲ್ಲಕ್ಕೂ ನಾವು ಸಿದ್ಧವಾಗಿದೀವಿ....' ಬಾಯಿಕಟ್ಟಿದ ಶಿವಕಾಮಿನಿ ಹಿಂದಿರುಗಿ ಅರಸನಿಗೆ ಇದನ್ನು ವರದಿ ಮಾಡಿದಾಗಿನಿಂದ ಕೌಶಿಕ ಇನ್ನೂ ಹತಾಶನಾದ. ತನ್ನ ಕೃತಿಯಿಂದ ಆ ಎರಡು ಜೀವಗಳೂ ಹಣ್ಣಾಗುತ್ತಿರುವುದನ್ನು ತಿಳಿದು ವಿಚಿತ್ರ ವೇದನೆಗೀಡಾದ. ಮಾನಸಿಕ ಚಿತ್ರಹಿಂಸೆ ತಾಳಲಾರದೆ ತಲೆಯಲ್ಲಿ ಆತ್ಮಹತ್ಯೆಯ ವಿಚಾರ ಹಲವಾರು ಸಲ ಸುಳಿಯಿತು. ಆದರೆ 'ಆಕೆಯಿಂದ ಕ್ಷಮೆ ಪಡೆಯದೆ ಸಾಯಬಾರದು' ಎಂಬ ಆಸೆ ಅಂತರಂಗದಲ್ಲಿ ಮೊರೆಯುತ್ತಿತ್ತು. 'ಎತ್ತ ಹೋದಳೆಂದು ಹುಡುಕಲಿ?' ಎಂದು ವ್ಯಾಕುಲಿತನಾಗಿ ಒಂದು ದಿವಸ ಅರಮನೆಯ ಹೆಬ್ಬಾಗಿಲಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಿದ್ದ. ರಾಜಪಥದಲ್ಲಿ ಕಾವಿಧಾರಿ ಜಂಗಮನೊಬ್ಬ ಜೋಳಿಗೆ ಹಿಡಿದು ಸಾಗುತ್ತಿದ್ದ. ಅವನ ಬಲಗೈಯು ಏಕನಾದವನ್ನು ಮೀಂಟುವಾಗ ಬಾಯಿಯು ವಚನವೊಂದನ್ನು ಹಾಡುತ್ತಿತ್ತು:

ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು.

ಆ ಕೋಪಾಗ್ನಿಯ ತಾಮಸ ಧೂಮ್ರ ಮುಸುಕಿದಲ್ಲಿ
ನಾ ನಿಮ್ಮ ಮರೆದು ಭವದುಃಖಕ್ಕೀಡಾದೆ.
ನೀ ಕರುಣದಿಂದೆತ್ತಿ ಎನ್ನ ಮರಹ ನಿಂಗಡಿಸಿ
ನಿಮ್ಮ ಪಾದವನರುಹಿಸಯ್ಯಾ, ಚನ್ನಮಲ್ಲಿಕಾರ್ಜುನ.*

ಇಂಪಾದ ಕಂಠವು ಕೌಶಿಕನ ಮನವನ್ನು ಸೆಳೆಯುವುದರೊಳಗೆ, ಆ ವಚನದ ಭಾವ ಅವನ ಅಂತರಂಗವನ್ನು ಕಡೆಯತೊಡಗಿತ್ತು. 'ಚನ್ನಮಲ್ಲಿಕಾರ್ಜುನಾ' ಎಂಬ ಶಬ್ದವನ್ನು ಕೇಳುತ್ತಿದ್ದಂತೆಯೇ ಕಿವಿ ನಿಮಿರಿ, ಹೃದಯ ಅರಳಿತು. ಆತುರಾತುರವಾಗಿ ಆ ಜಂಗಮನನ್ನು ಕರೆಸಿದ. ಅತ್ಯುತ್ಸಾಹವನ್ನು ಹತ್ತಿಕ್ಕಿಕೊಂಡು, ಶಾಂತಸ್ವರದಲ್ಲಿ ಕೇಳಿದ :

'ಶರಣರೇ....ಎಷ್ಟೊಂದು ಮಧುರಕಂಠದಿಂದ ಹಾಡಿದಿರಿ. ಇದನ್ನು ರಚಿಸಿದವರು ಯಾರು?....' ತನ್ನ ಗಾನಕ್ಕೆ ಅವನು ಆಕರ್ಷಿತನಾದುದನ್ನು ಕಂಡು ಉಬ್ಬಿಹೋದ ಜಂಗಮನು ಉತ್ಸಾಹದಿಂದ ಮರುನುಡಿದ :

'ಮಹಾದೇವಿಯಕ್ಕನವರೆಂಬ ಶರಣೆಯರು ಇದನ್ನು ರಚಿಸಿದವರು. ಆ ತಾಯಿಯವರು ಮಹಾಜ್ಞಾನಿಗಳು, ತತ್ತ್ವಶಿಖಾಮಣಿಗಳು, ದಿವ್ಯಯೋಗಿಣಿಯರು. ನಮ್ಮನುಭವಮಂಟಪದ ಹೊಂಗಳಸದಂತಿರುವರು.'

'ಅವರಿರುವುದೆಲ್ಲಿ....?'

'ಬಸವಣ್ಣನ ಕಲ್ಯಾಣದಲ್ಲಿ....' ಕೌಶಿಕನು ಆನಂದೋತ್ಸಾಹದಿಂದ ಬಂಗಾರದ ನಾಣ್ಯಗಳನ್ನು ಕೈಗಿಡಹೋದ. ನಿರಾಕರಿಸಿದ ಜಂಗಮನು :

'ನಾನೊಲ್ಲೆ....ಧಾನ್ಯವನ್ನುಳಿದು ಏನನ್ನೂ ಸ್ವೀಕರಿಸೆನು....' ಕೌಶಿಕ ದ್ವಾರಪಾಲಕರಿಗೆ ಧಾನ್ಯವನ್ನು ನೀಡಲು ಆಜ್ಞಾಪಿಸಿ ಅರಮನೆಯೊಳಕ್ಕೆ ಬೀಸುಗಾಲನ್ನು ಹಾಕುತ್ತ ನಡೆದು, ಶಿವಕಾಮಿನಿಯನ್ನು ಕರೆದ.

'ಶಿವೆ....ಮಹಾದೇವಿ ಸಿಕ್ಕಿದಳು....ಸಿಕ್ಕಿದಳು....' ಉದ್ವಿಗ್ನನಾಗಿ ಹೇಳಿದ.

'ಎಲ್ಲಿ ಪ್ರಭು?' ಅಪ್ರತಿಭಳಾಗಿ ಸುತ್ತಲೂ ನೋಡಿದಳು.

'ಆಕೆ ಸಿಕ್ಕಿಲ್ಲ—ಆದರೆ ಇರುವ ತಾಣದ ಸುಳಿವು ಸಿಕ್ಕಿದೆ. ಬಸವಣ್ಣನವರ ಕಲ್ಯಾಣದಲ್ಲಿರುವಳಂತೆ....'

'ಅಂತೂ ಸುಖವಾಗಿದ್ದಾರಲ್ಲಾ....ಅಷ್ಟೇ ಸಾಕು!' ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಳು. ದಿನವೂ ಬಿಸಿಯುಸಿರನ್ನು ಬಿಡುತ್ತಿದ್ದ ಹೃದಯವು ಈ ವಾರ್ತೆಯನ್ನು ಕೇಳಿ

'ಶಿವೆ....ನನ್ನನ್ನು ಅವಳು ಕ್ಷಮಿಸಬಹುದೇ ? ನನಗೀಗ ಬೇಕು ಆಕೆಯ ಕ್ಷಮೆ ; ಇಲ್ಲವೇ ಸಾವು. ಯಾವುದನ್ನು ಆರಿಸಿಕೊಳ್ಳಲಿ....ಬೇಗ ಹೇಳು.'

'ಸತ್ತು ಏನನ್ನೂ ಸಾಧಿಸದಿರುವುದಕ್ಕಿಂತ ಕ್ಷಮೆ ಪಡೆದು ಹೊಸ ಹುಟ್ಟು ಹೊಂದುವುದೇ ಲೇಸು. ಅವರು ದಯಾಮಯಿ....ಖಂಡಿತ ಕ್ಷಮೆ ತೋರುವರು. ಇಲ್ಲವಾದರೆ ಅಂದು ಇಲ್ಲಿಂದ ನಿರ್ಗಮಿಸುವ ದಿನ ನಾನು ಅರಮನೆ ತೊರೆಯಲು ಸಿದ್ಧಳಾದಾಗ, 'ನೀನು ರಾಜರನ್ನು ತೊರೆಯದಿರು ; ಮಗಳಂತೆ ಅವರ ಸೇವೆ ಮಾಡಿ ನೊಂದ ಹೃದಯವನ್ನು ಸಾಂತ್ವನಿಸು' ಎಂದು ಉಪದೇಶಿಸುತ್ತಿದ್ದರೇ ? ನಿಮ್ಮ ಬಗ್ಗೆ ಅಪಾರ ಜಿಗುಪ್ಸೆ-ಸಿಟ್ಟು ಮೈಗೂಡಿದ ನಾನು ನನ್ನ ನಿರ್ಧಾರದಿಂದ ಹಿಂದೆ ಸರಿದು ನಿಮ್ಮುಪಚಾರಕ್ಕೆ ನಿಂತುದು ಅವರ ದೈವೀಆಜ್ಞೆಗೆ ಮಣಿದೇ....'

'ಶಿವಕಾಮಿನಿ....ನೀನು ನನ್ನ ಮಗಳಲ್ಲ, ತಾಯಿ. ನಿನ್ನ ಹೃತ್ಪೂರ್ವಕ ಉಪಚಾರದಿಂದ ನಾನು ಬದುಕಿದೆ. ಶೃಂಗಾರಿಕೆಯಾಗಿ ಅರಮನೆಯಲ್ಲಿ ಕಾಲಿಟ್ಟರೂ ಬಂಗಾರದಂಥ ಗುಣ ನಿನ್ನದು....'

'ಆದರೆ ಪ್ರಭು....ಪಡಭೂಮಿಯಂತೆ ಯಾವುದೇ ಆದರ್ಶರಹಿತಳಾಗಿದ್ದ ನನ್ನಲ್ಲಿ ಉಪದೇಶದ ಬೀಜ ಬಿತ್ತಿ ಸದ್ಗುಣದ ಬೆಳೆ ತೆಗೆದವರು ಆ ಮಹಾತಾಯಿಯವರೇ....'

'ಮಹಾದೇವಿಯು ನನ್ನನ್ನು ಕ್ಷಮಿಸುವಳೆಂದು ನನ್ನ ಅಂತರಂಗವು ಹೇಳುತ್ತಿದೆ. ಆದಕ್ಕಾಗಿ ಹೊರಡುವ ನಿರ್ಧಾರ ಮಾಡಿರುವೆ....' ಕೌಶಿಕ ದೃಢಚಿತ್ತನಾಗಿ ಹೇಳಿದಾಗ ಶಿವಕಾಮಿನಿ ಬೆರಗಾದಳು.

'ರಥದಲ್ಲಿ ಹೋಗಿ ಅವರನ್ನು ಕಂಡು ಮರಳಿ ಬರಲು ಒಂದೆರಡು ತಿಂಗಳಾದರೂ ಬೇಕಷ್ಟೇ....'

'ಮರಳಿ ಬರುವವರಾರು....?'

'ಹಾಗಾದರೆ ರಾಜ್ಯದ ಗತಿ....'

'ದೈವೀಚಿತ್ತಕ್ಕಿರಲಿ. ಶಿವಕಾಮಿನಿ....ನನಗೇಕೋ ಇದರಲ್ಲಿ ಆಸಕ್ತಿ ಹೊರಟುಹೋಗಿದೆ. ಎಷ್ಟೆಲ್ಲ ಆಸೆಆಮಿಷಗಳನ್ನು ಮೆಟ್ಟಿನಿಂತು ಮಹಾದೇವಿಯು ಚೆನ್ನಮಲ್ಲಿಕಾರ್ಜುನನಿಗಾಗಿ ಹಂಬಲಿಸಿದಳು. ರಾಜಾಧಿರಾಜ ಅನಿಮಿಷಯ್ಯನು ಲಿಂಗಾಂಗ ಸಾಮರಸ್ಯಕ್ಕಾಗಿ ಪ್ರಾಣದ ಹಂಗಿಲ್ಲದೆ ಏಕಾಗ್ರಚಿತ್ತನಾದ. ಏನೋ ಒಂದು ಪರಮಶಾಂತಿಯು ದೊರೆಯದಿದ್ದರೆ ಇವರೆಲ್ಲ ಏತಕ್ಕಾಗಿ ತ್ಯಾಗಮಾಡಿ ಅತ್ತ ಹೋಗುವರು ? ನಾನೂ ಅದೇ ತ್ಯಾಗವನ್ನು ಮಾಡಬಯಸಿರುವೆ....

ರಥಾರೂಢನಾಗಿ, ಅಶ್ವಾರೋಹಿಯಾಗಿ ಪಯಣಿಸದೆ ಕಾಲುನಡಿಗೆಯಿಂದಲೇ ಹೋಗಲು ಸಂಕಲ್ಪಿಸಿರುವೆನು. ನನ್ನ ನಿರ್ಗಮನವು ಅರಸು ಪರಿವಾರಕ್ಕೆ ತಿಳಿಯಬಾರದು. ತಿಳಿದರೆ ಅವರು ಖಂಡಿತವಾಗಿ ನನ್ನನ್ನು ಬಿಟ್ಟುಕೊಡರು.'

'ಪ್ರಭು....ತಮ್ಮ ಉಪಚಾರಕ್ಕಾಗಿ ಈ ಮಗಳೂ ಹಿಂಬಾಲಿಸದೇ ಇರುವವಳಲ್ಲ. ಮತ್ತು ಆ ತಾಯಿಯ ಪರಮಪವಿತ್ರ ಪಾದಗಳನ್ನು ಕಾಣುವ ಬಯಕೆ ನನ್ನಲ್ಲೂ ಉತ್ಕಟವಾಗಿದೆ....'

ಕೌಶಿಕನು ಶಿವಕಾಮಿನಿಯೊಡಗೂಡಿ ಒಂದಿರುಳು ಅರಮನೆಯನ್ನು ತೊರೆದು, ಅಜ್ಞಾತ ವೇಷದಲ್ಲಿ ಪಯಣಿಸಿ, ಮಾರ್ಗಮಧ್ಯದಲ್ಲಿ ಕಾವಿಯ ವಸ್ತ್ರಗಳನ್ನು ಧರಿಸಿ ಕಲ್ಯಾಣಕ್ಕೆ ಬಂದಿದ್ದ. ಆದರೆ ಅನುಭವಮಂಟಪವನ್ನು ಪ್ರವೇಶಿಸಿದಾಗ ಅವನಿಗಾದ ಆಘಾತ ಅಷ್ಟಿಷ್ಟಲ್ಲ. ಅಕ್ಕಮಹಾದೇವಿಯಾಗಲೇ ಅಲ್ಲಿಂದ ನಿರ್ಗಮಿಸಿದ್ದಳು. ತನ್ನ ಪರಿಚಯವನ್ನು ಯಾರಿಗೂ ಮಾಡಿಕೊಡಲು ಅವನು ಬಯಸಲಿಲ್ಲ. ಕಾರಣವೆಂದರೆ ಅಕ್ಕಮಹಾದೇವಿಯ ಸುಕೀರ್ತಿಯೊಡನೆಯೇ ಅವನ ಕುಕೀರ್ತಿಯೂ ಹಬ್ಬಿತ್ತು.

'ಮನಾಪಹಾರಕ ಬಣ್ಣಗಳಲ್ಲಿ ಇತಿಹಾಸವು ಅಕ್ಕಮಹಾದೇವಿಯ ಚಿತ್ರವನ್ನು ಚಿತ್ರಿಸುವುದರೊಡನೆ ಜಿಗುಪ್ಸಾಕಾರಕ ವರ್ಣಗಳಲ್ಲಿ ತನ್ನನ್ನೂ ಚಿತ್ರಿಸುವಂತಾಯಿತೇ' ಎಂದು ನಾಚಿ ತಲೆಬಾಗಿದ. ಮುಂದಿನ ಜಗತ್ತು–ಇತಿಹಾಸ ಏನೇ ಅನ್ನಲಿ ಅವನ ಚೀರಿಡುವ ಅಂತರಂಗದ ಬಾಯಿ ಮುಚ್ಚಬೇಕಾದರೆ, ನೆಮ್ಮದಿಯ ಸಾವನ್ನು ಸಾಯಬೇಕಾದರೆ ಅವನಿಗೀಗ ಬೇಕಾಗಿದ್ದುದು ಆಕೆಯ ಕ್ಷಮೆ. ಅಕ್ಕಮಹಾದೇವಿಯು ಕಲ್ಯಾಣದಿಂದ ಶ್ರೀಗಿರಿಗೆ ನಿರ್ಗಮಿಸಿದುದು ಜನಜನಿತವಾದ ಕಥೆಯಾಗಿದ್ದರಿಂದ ಅಲ್ಲಿಂದ ಕೌಶಿಕ-ಶಿವಕಾಮಿನಿಯರು ಶ್ರೀಗಿರಿಯತ್ತ ನಡೆದರು. ಅಲ್ಲಿ ವಿಚಾರಿಸುವಾಗಲೇ ಗುಡಿಯ ಅರ್ಚಕರಿಂದ ಅಕ್ಕಮಹಾದೇವಿಯು 'ಅಕ್ಕಮ್ಮ ವಾಗು'ವಿಗೆ ಹೋದುದು ತಿಳಿಯಿತಲ್ಲದೆ, ಮಾರ್ಗದರ್ಶನ ಮಾಡಲು ಚುಂಚರನ್ನೂ ಅವರು ಜೊತೆಗೂಡಿಸಿದರು.

ಶಾರೀರಿಕ-ಮಾನಸಿಕ ಬಳಲಿಕೆಗಳೆರಡೂ ಅವನನ್ನು ಸೊರಗಿಸಿದ್ದವು. ಕಣ್ಣುಗಳು ಗುಳಿಬಿದ್ದು, ಕೂದಲು ಜಡೆಗಟ್ಟಿದ್ದವು. ಅಂಥ ದುರ್ಗಮ ಅರಣ್ಯವನ್ನು ಅದು ಹೇಗೆ ಕ್ರಮಿಸಿದಳೋ ಎಂಬುದೊಂದು ವಿಸ್ಮಯವಾಗಿತ್ತವನಿಗೆ. ಮತ್ತು ಅಂಥಲ್ಲಿ ಒಬ್ಬಂಟಿಗಳಾಗಿ ಇರುವುದೊಂದು ಪ್ರಮಾದವೆನಿಸಿತು.

ದಿಂದ ಬಂಡೆಯ ಮೇಲೆ ಸಿದ್ಧಾಸನದಲ್ಲಿ ಕುಳಿತಿದ್ದ ಅಕ್ಕಮಹಾದೇವಿಯನ್ನು ಕಂಡ. ಆ ಮುಖದಲ್ಲಿದ್ದ ಸಂತೃಪ್ತಿ-ಕಳೆಗಳನ್ನು ನೋಡಿ ಅಚ್ಚರಿಯೊಂದೆಸೆ— ತನ್ನ ಅಪರಾಧಕ್ಕಾಗಿ ಪಶ್ಚಾತ್ತಾಪ ಮತ್ತೊಂದೆಸೆ. ಅಂತೆಯೇ ಆವೇಶ ಪೂರ್ಣವಾಗಿ ಬಂದು ಮುಖ ಅಡಿಯಾಗಿ ಬಿದ್ದಿದ್ದ.

* * *

ಮೌನವಾಗಿ ನಿಂತು ಶಿವಕಾಮಿನಿ ಎಲ್ಲವನ್ನೂ ಮೆಲುಕಾಡಿಸಿದಳು. ಆ ಹೃದಯಸ್ಪರ್ಶಿ ಸಂದರ್ಶನ, ಕ್ಷಮಾದಾನ, ಪವಿತ್ರ ಪಾದಸ್ಪರ್ಶನಗಳು ಅವಳನ್ನು ಮೈಮರೆಸಿದ್ದವು. ಅಕ್ಕಮಹಾದೇವಿಯು ವಾತ್ಸಲ್ಯದ ದನಿಯಲ್ಲಿ,

‘ಏಳು ಮಗು....ನನ್ನ ಪತಿಯ ಮನೆಗೆ ಬಂದಿರುವ ಅತಿಥಿಗಳು ನೀವೆಲ್ಲ. ಮಿಂದು ಮಡಿಯುಡಿರಿ, ಹಣ್ಣು-ಹಾಲನ್ನು ಸ್ವೀಕರಿಸುವಿರಂತೆ....?’

‘ಅಮ್ಮಾ....ನಾವಿನ್ನು ಹೊರಡಲಪ್ಪಣೆಯೇ ?’ ಚುಂಚರು ಕೇಳಿದರು.

‘ಇವರದ್ದೂ ಸ್ನಾನ-ಫಲಾಹಾರ ಮುಗಿಯಲಿ ; ನೀವೂ ಮುಗಿಸಿಕೊಳ್ಳುವಿರಂತೆ. ಅಪರಿಚಿತರಾದ ಇವರಿಗೆ ಮರಳುವಾಗ ದಾರಿ ತಪ್ಪಬಾರದಷ್ಟೇ?’ ಸೂಚ್ಯವಾಗಿ ಹೇಳಿದಳು.

‘ಮತ್ತೆಲ್ಲಿಗೆ ನಾವು ಹೋಗಬೇಕು ತಾಯಿ....?’ ಕೌಶಿಕನು ಕೇಳಿದ.

‘ರಾಜನ ಕರ್ತವ್ಯವನ್ನು ಪೂರೈಸಲು ಉಡುತಡಿಗೆ....’

‘ಇಲ್ಲ...ನಾನೊಲ್ಲೆ. ನಿನ್ನ ಪವಿತ್ರವಾದ ಪಾದಸೇವೆಯನ್ನು ಮಾಡಿಕೊಂಡು ನಾವೀರ್ವರೂ ಇಲ್ಲೇ ಇರುವವರು....’

‘ಕರ್ತವ್ಯವೂ ದೈವೀ ಸೇವೆಯೆ. ದಕ್ಷರೂ, ನಿಸ್ಪೃಹರೂ ಆದ ನಿಮ್ಮ ಸೇವೆ ಇನ್ನೂ ಆ ರಾಜ್ಯಕ್ಕೆ ದೊರೆಯಲಿ....’

‘ಇಲ್ಲ ತಾಯಿ....ನನಗೆ ಬೇಡವಾಗಿದೆ. ಅಲ್ಲಿಗೆ ಹೋಗಿ ರಾಜ್ಯದ ಹೊಣೆಯನ್ನು ಹೊರಲೇಬೇಕೆಂಬ ಇಚ್ಛೆ ನಿನಗಿದ್ದರೆ, ನೀನೂ ಅಲ್ಲಿಗೆ ಬಂದು ರಾಜಸಿಂಹಾಸನಕ್ಕೆ ಗುರುವಾಗಿ ಮಾರ್ಗದರ್ಶನ ಮಾಡಿದರೆ ಮಾತ್ರ ನಾನು ಹೋಗುವೆ....’

‘ಇದು ಅಸಾಧ್ಯದ ಮಾತು....ಸಮುದ್ರ ಒಡಲಲ್ಲಿ ಅರ್ಧಂಬರ್ಧ ಸಮಾಗಮ ಹೊಂದಿರುವ ತರಂಗಿಣಿಯನ್ನು ಮರಳಿ ಉಗಮಸ್ಥಾನಕ್ಕೆ ಹರಿಸುವೆನೆಂಬುದು ಅಸಾಧ್ಯದ ಕೃತಿ....’

‘ಅಮ್ಮಾ....ಇದು ನನ್ನ ನಿರ್ಧಾರ. ನಿನ್ನ ದಿವ್ಯಹಸ್ತದಿಂದ ಲಿಂಗದೀಕ್ಷೆ ಪಡೆದು ಇಲ್ಲಿಯೇ ಯೋಗಸಾಧನೆಯಲ್ಲಿ ನಿರತನಾಗುವೆ. ನನ್ನ ಪ್ರವೃತ್ತಿ ಪೂರ್ತಿಯಾಗಿ

ಲಿಂಗದೀಕ್ಷೆ ಏಕೆ ಬೇಕು? ಮತ್ತೆ ಈ ಶಿವಭಕ್ತೆಯನ್ನು ಮದುವೆ ಯಾಗಲಿಚ್ಛಿಸಿರುವೆಯಾ....?' ತಿಳಿಹಾಸ್ಯದ ದನಿಯಲ್ಲಿ ಕೇಳಿದಾಗ, ಕೌಶಿಕ ತಟ್ಟನೆ ಹೇಳಿದ :

'ಶಿವನನ್ನು ಲಗ್ನವಾಗಬಯಸಿರುವೆ....'

ಅಕ್ಕಮಹಾದೇವಿ ಅವರೆಲ್ಲರಿಗೆ ಮೀಯಲು ಹೇಳಿ, ಧ್ಯಾನಾಸಕ್ತಳಾಗುತ್ತ ತನ್ನಲ್ಲಿ ತಾನೇ ನುಡಿದುಕೊಂಡಳು.

'ಚನ್ನಮಲ್ಲಿಕಾರ್ಜುನಾ, ಇದೇನು ನಿನ್ನ ಆಟ! ಏಕಾಂತದಲ್ಲಿದ್ದು ಕೊಂಡು ಸದಾ ನಿನ್ನ ಧ್ಯಾನದಲ್ಲಿರಬೇಕೆಂಬ ನನಗೆ ಮತ್ತೂ ಅಡ್ಡಿ ಆತಂಕ ವನ್ನೊಡ್ಡುವೆ. ಮಾಯೆಯನ್ನು ಬಿಡದಂತೆ ಬೆನ್ನುಹತ್ತಿಸುವೆ. ಯೋಗಿಣಿ ಯಾಗಿರುವ ನನಗೆ ಯೋಗಿಯ ವೇಷದಲ್ಲಿ ಕಳಿಸಿರುವೆ; ನಿನ್ನ ಮಾಯೆಗೆ ನಾನಂಜುವವಳಲ್ಲ. ನೋಡುತ್ತಿರು'* ತನ್ನಲ್ಲಿಯೇ ನಸುನಕ್ಕಳು.

'ಕೌಶಿಕ-ಶಿವಕಾಮಿನಿಯರು ಮಿಂದು ಬಂದರು. ನೆರಳನ್ನು ದಟ್ಟವಾಗಿ ಚಾಚಿದ್ದ ಗಿಡವೊಂದರ ಅಡಿಯಲ್ಲಿ ಒಣಹುಲ್ಲನ್ನು ಹರವಿ ಆಸನ ಮಾಡಿ ಕೊಂಡಿದ್ದ ಆಕೆ ತನ್ನೆದುರಿನಲ್ಲಿ ಕುಳ್ಳಿರಿಸಿ, ಅವರೀರ್ವರನ್ನೂ ಅನುಗ್ರಹಿಸಿದಳು. ಕೌಶಿಕನ ನೆತ್ತಿಯ ಮೇಲೆ ಹಸ್ತವನ್ನಿಟ್ಟು, ಮಂತ್ರವನ್ನು ಉಸುರಿ, ಚಿತ್ಕಳೆ ತುಂಬಿದ ಇಷ್ಟಲಿಂಗವನ್ನು ಅಂಗೈಯಲ್ಲಿರಿಸಿ ವೇದಾ, ಮಂತ್ರ, ಕ್ರಿಯಾದೀಕ್ಷೆ ಗಳನ್ನು ಮುಗಿಸಿದಾಗ ಪುನರ್ಜನ್ಮ ಪಡೆದ ಕೌಶಿಕನು ಆನಂದಬಾಷ್ಪಗಳನ್ನು ಹರಿಸಿದ. ಮಂತ್ರದ ನಾದ ಕರ್ಣಮುಖೇನ ಹೃದಯಕ್ಕಿಳಿವಾಗ ಮಿಂಚಿನ ಸಂಚಾರ ಅವನಿಗಾಯಿತು. ಅದೇ ರೀತಿ ಶಿವಕಾಮಿನಿಯೂ ದೀಕ್ಷೆಯನ್ನು ಪಡೆದಳು.

ದೀಕ್ಷೆಯ ನಂತರ ಅಕ್ಕಮಹಾದೇವಿಯ ಪಾದಗಳಿಗೆ ಮಣಿದು, ಭಕ್ತಿ ಯಿಂದ ಉದ್ದೀಪಿತನಾಗಿ ಕೌಶಿಕನು :

'ಅಮ್ಮಾ....ನೇರವಾದ ದಾರಿಯಲ್ಲಿ ಅನುಗ್ರಹ ಪಡೆಯುವ ಯೋಗವಿರದ ನಾನು ಅಂಕುಡೊಂಕಿನ ಹಾದಿಯಿಂದ ಬಂದು ಪಡೆಯಬೇಕಾಯಿತು....'

'ಯಾವ ಹಾದಿಯಿಂದಲೇ ಬರಲಿ ಕಡೆಗೆ ಗುರಿ ಎಡೆಗೆ ಬಂದೆಯಲ್ಲಾ, ಇದುವೇ ಸಂತಸದ ಸಂಗತಿ ಕಂದಾ....ಅಂತೂ ಬಾಳಿನಲ್ಲಿ ನನಗಿದ್ದ ಈ ಅಪೇಕ್ಷೆಯೂ ಪೂರೈಸಿತು....' ಅಕ್ಕಮಹಾದೇವಿ ತನ್ಮಯಳಾಗಿ ನುಡಿದು ಪ್ರಸಾದವಾಗಿ ಹಣ್ಣುಗಳನ್ನಿತ್ತಳು. ಎರಡೂ ಕೈಗಳನ್ನೂ ಚಾಚಿ, ತಲೆಬಾಗಿಸಿ ಪ್ರಸಾದವನ್ನು

ಊರುದೊಣ್ಣೆಯ 'ಟಕ್....ಟಕ್' ಶಬ್ದವು ತಲೆಬಾಗಿಲಿನಲ್ಲಿ ಕೇಳಿ ಬರುತ್ತಿದ್ದಂತೆಯೇ ಗಿರಿಜಾಂಬೆ ಸೋಜಿಗಗೊಂಡು ಇಣುಕಿದಳು. ವಯೋವೃದ್ಧರಾದ, ಬೆನ್ನು ಸ್ವಲ್ಪವಾಗಿ ಬಾಗುತ್ತಿದ್ದ ಗುರುಲಿಂಗದೇವರು ಕೋಲನ್ನೂರಿಕೊಂಡು ಮನೆಯ ಸೋಪಾನವನ್ನೇರುತ್ತಿದ್ದರು. ಶಿಷ್ಯ ಶಿವಪುತ್ರಪ್ಪನು ಕೈಯನ್ನು ಆಸರೆಗೆ ನೀಡುತ್ತ ಹತ್ತಿ ಸುತ್ತಿದ್ದ. ಮಿಂಚಿನ ವೇಗದಲ್ಲಿ ಒಳಗೆ ಹೋಗಿ ತಂಬಿಗೆಯಲ್ಲಿ ನೀರನ್ನು ತಂದು ಎರೆದು, ಪಾವುಡದಿಂದ ಒರೆಸಿ ವಿಭೂತಿ ಧರಿಸಿ ನಮಸ್ಕರಿಸಿದಳು.

'ಅಪ್ಪ-ಅಪ್ಪನವರು ಪೂಜೆಯಲ್ಲಿ ಮಗ್ನರಾಗಿರುವರು, ಮುಗಿಯುತ್ತಲಿರಬೇಕು. ದಯಮಾಡಿಸಿ ಬುದ್ಧಿ; ಕರೆದುಬಿಡುವೆನು....' ಸಂಭ್ರಮದಿಂದ ಗಿರಿಜಾಂಬೆ ಕುಳಿತುಕೊಳ್ಳಲು ಆಸನವನ್ನು ಸಿದ್ಧಪಡಿಸಿದಳು.

'ನಾವೇ ಅಲ್ಲಿಗೆ ಹೋಗೋಣ ತಡೆಯವ್ವಾ....' ಶ್ರೀಗುರುಲಿಂಗದೇವರು ಶಿಷ್ಯನೊಡನೆ ಪೂಜೆಯ ಕೋಣೆಯತ್ತ ಸಾಗಿದರು. ತಾವಾಗಿಯೇ ಗುರುಗಳು ಅನಿರೀಕ್ಷಿತವಾಗಿ ಆಗಮಿಸಿದ್ದನ್ನ ಕಂಡು ಅಪ್ರತಿಭರಾದ ಲಿಂಗಮ್ಮ-ಓಂಕಾರರು ದೇವರನ್ನು ಕೈಯಲ್ಲಿ ಹಿಡಿದುಕೊಂಡೇ ಮೇಲೆದ್ದು ಪ್ರಣಾಮಿಸಿ, ಕುಳ್ಳಿರಲು ಗದ್ದುಗೆಯನ್ನು ನೀಡಿದರು.

'ಗುರುದೇವಾ....ವಯೋವೃದ್ಧರಾದ ತಾವೇ ಬರುವುದೇ? ಅಂತಹ ಪ್ರಸಂಗವಿದ್ದರೆ ಒಂದು ಮಾತನ್ನು ಹೇಳಿಕಳಿಸಿದ್ದರೂ ಸಾಕಿತ್ತು. ಓಡಿ ಬರುತ್ತಿದ್ದೆವಲ್ಲಾ....' ಓಂಕಾರನು ಹೇಳಿದ.

'ತಡೆಯಲಾರದಷ್ಟು ಆನಂದ ನನಗಾಯಿತು ಓಂಕಾರ. ಅಂತೆಯೇ ಓಡಿ ಬಂದೆ....' ಅವರ ಮುಖದ ಮೇಲೆ ಸಂಭ್ರಮದ ತೆರೆ ಹಾಯುತ್ತಿತ್ತು. ಕಾರಣವನ್ನರಿಯದ ದಂಪತಿಗಳು ಅವಾಕ್ಕಾಗಿ ನಿಂತರು.

'ನನ್ನ ಸಂಕಲ್ಪ ಸಿದ್ಧಿಯಾಯಿತು, ಬದುಕು ಸಾರ್ಥಕವಾಯಿತು. ನಿಮ್ಮ ಜನ್ಮವೂ ಪಾವನವಾಯಿತು' ಆನಂದಾತಿರೇಕದಿಂದ ಗುರುಲಿಂಗರು ತೊದಲು ನುಡಿದರು.

'ಇಂತಹ ಸಂತಸಕ್ಕೆ ಕಾರಣವೇನು ಗುರುದೇವಾ?'

'ನಾನು ಅಂದಿರಲಿಲ್ಲವೇ ಲಿಂಗಮ್ಮಾ....ನಿಮ್ಮ ಮಗಳು ಸಾಮಾನ್ಯಳಲ್ಲ, ಕಾರಣಿಕಕನ್ಯೆ, ವಿಶ್ವದ ವಿನೂತನ ಪರಂಜ್ಯೋತಿಯೆಂದು. ಆ ಮಹಾತಾಯಿಯು ತನ್ನ ಅಸಾಮಾನ್ಯ ವ್ಯಕ್ತಿತ್ವದಿಂದ ಕಲ್ಯಾಣದ ಕಣ್ಮಣಿಯಾಗಿ, ಶರಣರ

ವಳು. ನಮ್ಮ ಧರ್ಮಗುರುವಾದ ಮಹಾಪುರುಷ ಬಸವಣ್ಣನ ಬಾಯಿಯಲ್ಲಿ 'ಎನ್ನ ಹೆತ್ತ ತಾಯಿ ಮಹದೇವಿಯಕ್ಕ' ಎಂದು ಹೊಗಳಿಸಿಕೊಂಡಳು. ನಾನು ಧನ್ಯನಾದೆ ಓಂಕಾರ....' ಹೇಳುತ್ತ ಹೇಳುತ್ತ ಪರವಶೀಭೂತರಾದ ಗುರುಲಿಂಗದೇವರ ಕಣ್ಣುಗಳಲ್ಲಿ ಆನಂದ ಜಲಬಿಂದುಗಳು ಹರಿಯುತ್ತಿದ್ದವು.

'ಆ ಪುಣ್ಯಮಯಿಗೆ ಜನ್ಮವಿತ್ತ ನಿಮ್ಮ ಹೆಸರುಗಳು ಇತಿಹಾಸದಲ್ಲಿ ಅಮರವಾದವು. ಆಕೆಗೆ ಗುರುವಾಗುವ ಭಾಗ್ಯವು ನನಗೆ ದೊರೆಯಿತು. ನನಗೆ ಮುಕ್ತಿ ಬೇಡ, ಸಾಕ್ಷಾತ್ಕಾರ ಬೇಡ. ಹತ್ತು ಜನ್ಮಗಳು ಬಂದರೂ ಬರಲಿ.... ಇಂತಹ ಧೀಮಂತ ಶಿಷ್ಯರನ್ನು ಪಡೆಯುವಂತಿದ್ದರೆ ಎಷ್ಟು ಜನ್ಮಗಳನ್ನಾದರೂ ಎತ್ತಲು ಸಿದ್ಧನು' ಎಂದು ಹೇಳುತ್ತ ಮಾತು ಮೂಕವಾಗಿ ಕುಳಿತರು.

ಧರ್ಮಪ್ರಸಾರಕ್ಕೆ ಬಂದಿದ್ದ ಕಲ್ಯಾಣದ ಜಂಗಮ ತಂಡವೊಂದು ತಂದಿದ್ದ ವಾರ್ತೆಯೊಂದು ಅಕ್ಕಮಹಾದೇವಿಗೆ ಅಲ್ಲಿ ದೊರೆತ ಸ್ಥಾನಮಾನ, ಆಕೆ ಗಳಿಸಿದ ಅಸಾಮಾನ್ಯ ಯೌಗಿಕ ನಿಲುವುಗಳನ್ನು ಬಿತ್ತರಿಸುತ್ತಿತ್ತು. ಇದನ್ನು ಅರಿತು ಶ್ರೀಗುರುಲಿಂಗದೇವರ ಸಂತಸವು ಮುಗಿಲು ಮುಟ್ಟಿತ್ತು. ವಾರ್ತೆಯನ್ನು ಕೇಳುವುದೇ ತಡ ಆ ಆನಂದವನ್ನು ಹತ್ತಿಕ್ಕಿಕೊಳ್ಳಲಾರದೆ ಶಿಷ್ಯನನ್ನು ಒಡನೆ ಕರೆದುಕೊಂಡು ಬಂದುಬಿಟ್ಟಿದ್ದರು.

'ಅಂತೂ ಮಗಳು ಸುಖವಾಗಿರುವಳು....' ಮನದ ಅಳಲನ್ನು ಹೊರಹಾಕುವಷ್ಟು ದೀರ್ಘವಾದ ಸಮಾಧಾನದ ಉಸಿರು ಲಿಂಗಮ್ಮನಿಂದ ಹೊರಬಿದ್ದು, ಬತ್ತಿದ್ದ ಕಂಗಳಲ್ಲಿ ವಿನೂತನ ಕಾಂತಿಯು ಮಿನುಗಿತು.

'ಲಿಂಗಾ....ಬರೀ ಸುಖವಾಗಿರುವುದಲ್ಲ ಅಮರ ಆತ್ಮಾನಂದವನ್ನೂ ಪಡೆದು ದೇದೀಪ್ಯಮಾನ ದೈವೀಪ್ರಭೆಯಾಗಿ ಅನುಭವಮಂಟಪವನ್ನು ಬೆಳಗುತ್ತಿರುವಳು. ನಮ್ಮ ಬದುಕು ಸಾರ್ಥಕವಾಯಿತು. ಗುರುದೇವರ ಪ್ರಸಾದವಾಣಿ ದಿಟವಾಯಿತು. ಇಂಥ ಮಗಳನ್ನು ಹೆರಲು ನಾವು ಎಷ್ಟು ಪುಣ್ಯ ಮಾಡಿದ್ದೆವೋ....!' ಉದ್ಗರಿಸಿದ ಓಂಕಾರಶೆಟ್ಟಿಯ ಮುಖದ ಮೇಲೆ ಸಂತೃಪ್ತಿ-ಸಮಾಧಾನದ ಕಳೆ ಅಪೂರ್ವವಾಗಿ ಹರಡಿತು. ಅನೇಕ ವರುಷಗಳಿಂದ ಆ ಮನೆಯನ್ನು ಮುಸುಗಿದ್ದ ಚಿಂತೆ, ನಿರಾಶೆಗಳ ಕಾರ್ಮೇಘಗಳು ಕಲ್ಯಾಣದ ವಾರ್ತೆಯಿಂದ, ಪವಾಡಸದೃಶ್ಯವಾಗಿ ಸರಿದುಹೋಗಿ, ವಿನೂತನ ಸಂಭ್ರಮ ಸೂರೆಯಾಡತೊಡಗಿತ್ತು.

೬೦. ಸಾಗರದಲ್ಲಿ ಸಮರಸ

ದೀಕ್ಷೆಯನ್ನು ಹೊಂದಿದ ಕೌಶಿಕ-ಶಿವಕಾಮಿನಿಯರು 'ಅಕ್ಕನ ಹಳ್ಳ'ದ ಮೇಲ್ದಂಡೆಯಲ್ಲಿ ಪರ್ಣಕುಟೀರವನ್ನು ನಿರ್ಮಿಸಿಕೊಂಡು ಸಾಧನೆಯಲ್ಲಿ ತೊಡಗಿದರು. ಅಕ್ಕಮಹಾದೇವಿ ಅವರಿಗೆ ಸಮರ್ಪಕವಾದ ಮಾರ್ಗದರ್ಶನ ಮಾಡುತ್ತಲಿದ್ದಳು. ಅವರಿಂದ ಆತಂಕವೇನೂ ಇರಲಿಲ್ಲ. ಕೌಶಿಕನು ಪೂರ್ಣವಾಗಿ ಪಲ್ಲಟಗೊಂಡು ಅಂತರ್ಮುಖಿಯಾಗಿ ತಪಶ್ಚರ್ಯೆಗೆ ತೊಡಗಿದ್ದ. ಆದರೇನೋ ಅಕ್ಕಮಹಾದೇವಿಗೆ ಮತ್ತೆ ಕೊರತೆ ಎನಿಸಿತು ; ತಾನು ಮಾನವರ ಸಂಪರ್ಕವೇ ಇಲ್ಲದೆ ಕಾಲಕಳೆಯಬೇಕೆಂಬುವ ಅಪೇಕ್ಷೆ ಮತ್ತೆ ಚಿವುಟಲ್ಪಟ್ಟಿತು. ತನ್ನ ಏಕಾಂತಕ್ಕೆ ಭಂಗತಂದ ದೇವರ ಮೇಲೆ ಮುನಿಸೂ ಮೂಡದಿರಲಿಲ್ಲ.

ಅಂದು ಇರುಳಿನ ಕಡೆಯ ಜಾವ ಆರಂಭವಾಗುತ್ತಿದ್ದಂತೆಯೇ ಯೋಗನಿದ್ರೆಯಿಂದ ಎಚ್ಚರವಾಯಿತು. ಹುಣ್ಣಿಮೆಯ ಚಂದಿರ ಆಗಸದಲ್ಲಿ ಶುಭ್ರವದನದಿಂದ ಸಂಚರಿಸುತ್ತಲಿದ್ದ. ಆಕೆ ಬೆಳುದಿಂಗಳನ್ನು ಸವಿಯುತ್ತ ಗವಿಯ ಮುಂಭಾಗಕ್ಕೆ ಬಂದು ಕುಳಿತಳು. ಎದುರಿಗಿದ್ದ ತ್ರಿಕೂಟ ಪರ್ವತವು ಬೆಳ್ಳಿಯ ಕಿರಣಗಳ ತೆರೆಯಲ್ಲಿ ಮಬ್ಬಾಗಿ ಕಾಣುತ್ತಲಿತ್ತು. ಅದನ್ನೇ ದೃಷ್ಟಿಸುತ್ತ ಅಂದಳು :

'ಚನ್ನಮಲ್ಲಿಕಾರ್ಜುನಾ, ಏಕಿಂತು ನನ್ನನ್ನು ಪೀಡಿಸುವೆ? ಈ ರಮ್ಯನಂದನ ವನದಲ್ಲಿ ಆನಂದದಿಂದ ಕಾಲ ಕಳೆಯಬೇಕೆಂದರೆ ಅದಕ್ಕೂ ಬಿಡಲೊಲ್ಲೆ. ನಿನ್ನ-ನನ್ನ ಮಧ್ಯೆ ಯಾರೂ ಬರಬಾರದೆಂದು ನನ್ನಿಚ್ಛೆ. ಬೇರಾವ ಮಾತಿಗೂ ನನ್ನನ್ನೆಳೆಯದಿರಲೆಂದು ಹಾರೈಸುವೆ. ಆದರೂ ಗತಜೀವನದ ಘಟನೆಗಳನ್ನು ಅವರುಗಳು ಸ್ಮರಿಸಿಕೊಂಡು ಪಶ್ಚಾತ್ತಾಪ-ಆನಂದ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸುವರು. ನಾನಾದರೋ ಕೋಪ-ತಾಪ, ಮೋಹ-ಮುನಿಸು, ಕ್ಷಮೆ-ದ್ವೇಷ ಎಲ್ಲವುಗಳಿಂದ ಅತೀತವಾಗಿರುವೆ. ನಾನು ಸುಖದಿಂದಿರುವುದು ನಿನಗೆ ಬೇಡವೇ ?

ಕಲ್ಲು ಹೊಕ್ಕಡೆ ಕಲ್ಲ ಬರಿಸಿದೆ, ಗಿರಿಯ ಹೊಕ್ಕಡೆ ಗಿರಿಯ ಬರಿಸಿದೆ
ಭಾಪು ಸಂಸಾರವೆ, ಬೆನ್ನಿಂದ ಬೆನ್ನ ಹತ್ತಿ ಬಂದೆ.
ಚನ್ನಮಲ್ಲಿಕಾರ್ಜುನಯ್ಯಾ, ಇನ್ನೇವೆನಿನ್ನೇವೆ ?'*

ಹೀಗೆ ಗುಣಾಗುಣಿಸುತ್ತ ತ್ರಿಕೂಟ ಗಿರಿಯನ್ನು ದರ್ಶಿಸುವಾಗಲೇ ಅದರ ಗರ್ಭದಿಂದ ದಿವ್ಯ ಬೆಳಗೊಂದು ಮೇಲೆದ್ದು ರೂಪದಾಳಿ ಮತ್ತೆ ಕರಗಿದಂತಾಯಿತು. ಅದನ್ನು ಕಂಡು ಮೈಯಲ್ಲಿ ನೂರಾರು ಮಿಂಚುಗಳು ಸಂಚಲವಾದ ಅನುಭವವಾಯಿತು. ಆನಂದೋದ್ರೇಕದಿಂದ ನುಡಿದಳು :

'ಚೆನ್ನಾ....ನನ್ನ ದೇವಾ....ನನ್ನನ್ನು ಕೈಬೀಸಿ ಕರೆವೆಯಾ? ನಿನ್ನಲ್ಲಿ ಬೆರೆಯುವ ಬದಲು ವಿಳಂಬ ಮಾಡುತ್ತ ಈ ರಮಣೀಯ ನಂದನವನದಲ್ಲಿ ಮೈಮರೆತ ಕಾರಣ ಇಲ್ಲಿಂದ ನನ್ನನ್ನು ಸ್ಥಳಾಂತರ ಮಾಡುವ ಉಪಾಯ ಯೋಜಿಸಿದೆಯಾ! ನೀನು ಅತಿಕಾಮಿಯೇ ಸರಿ....ನನ್ನನ್ನು ಸರ್ವಾಂಗ ಸಮರಸ ಮಾಡಿಕೊಳ್ಳಲು ಇಷ್ಟೊಂದು ಆತುರವೇ? ಬರುವೆ....ಹೊರಡುವೆ' ಉತ್ಸುಕಚೇತನಳಾಗಿ ಮೇಲೆದ್ದು ಅಕ್ಕಮಹಾದೇವಿ ವಿರಚಿತ ವಚನಗಳ ಕಟ್ಟನ್ನು, ಯೋಗದಂಡ, ಯೋಗವಟ್ಟಿಗೆ ಮುಂತಾದ ತನ್ನ ಅಲ್ಪ ಸಾಮಗ್ರಿಗಳನ್ನು ಜೋಳಿಗೆಯಲ್ಲಿ ಒಟ್ಟುಗೂಡಿಸಿಕೊಂಡು ಹೆಗಲೇರಿಸಿ ಮೆಲ್ಲನೆ ಗಿರಿಯನ್ನು ಅವರೋಹಿಸತೊಡಗಿದಳು. ಬೆಳುದಿಂಗಳ ಆ ಬೆಳಕಿನಲ್ಲೇ ನೀರನ್ನು ದಾಟುವುದು ಕಷ್ಟಕರವಿದ್ದರೂ ಬಿದಿರ ತುಂಡೊಂದನ್ನು ಊರುತ್ತ ಹಳ್ಳವನ್ನು ದಾಟಿ, ಹುಲ್ಲುಗಾವಲಿನಲ್ಲಿ ಕಾಲಿಟ್ಟಳು. ನೂರು ಹೆಜ್ಜೆಗಳನ್ನು ಮುಗಿಸುವುದರಲ್ಲಿ ತ್ರಿಕೂಟ ಪರ್ವತದ ಬುಡದಲ್ಲಿದ್ದಳು. ದಟ್ಟವಾಗಿ ಬೆಳೆದ ಹುಲ್ಲು ಮತ್ತು ಗಿಡಗಳಿಂದಾಗಿ ಜ್ಯೋತ್ಸ್ನೆಯು ನೆಲವನ್ನು ಸ್ಪರ್ಶಿಸಲಸಮರ್ಥವಾಗಿತ್ತು. ಬಾನು ಸ್ವಲ್ಪ ತೆರವಾದಮೇಲೆ ಹೋಗೋಣವೆಂದು ಧ್ಯಾನೋನ್ಮುಖಳಾಗಿ ಕುಳಿತಳು. 'ನಾನವರಿಗೆ ಕಾಣದಂತೆ ಹೋಗುವದಾದರೂ ಏಕೆ? ಹೇಳಿಯೇ ಹೋಗಬಹುದು. ಆಜ್ಞೆಯನ್ನು ಮೀರುವ ಸ್ಥಿತಿಯಲ್ಲಿ ಅವರಿಲ್ಲ....' ಎಂದು ಮನಸ್ಸು ಹೇಳಿತು.

'ಕೌಶಿಕನು ತನ್ನ ವಿಚಾರವನ್ನು ನಿನ್ನ ಮೇಲೆ ಹೇರುವ ಮನಃಸ್ಥಿತಿಯಲ್ಲಿ ಇಲ್ಲವೆಂಬುದು ದಿಟ. ಆದರೆ ದೀನರಾಗಿ ಅವರಿಬ್ಬರೂ ಬೇಡಿಕೆಯನ್ನು ಮುಂದಿಟ್ಟು ಮತ್ತೂ ಹಿಂಬಾಲಿಸದೆ ಇರರು. ನಿನಗೀಗ ಯಾರ ಸಂಪರ್ಕವೂ ಬೇಡ....' ಅಂತರಾತ್ಮನ ಕರೆ ಮೊರೆಯಿತು.

ಪೂರ್ವ ದಿಗಂತದ ಸರಸಿಯಲ್ಲಿ ಕೆಂಛಾಯೆಯ ಕಮಲ ಮೆಲ್ಲನೆ ಅರಳತೊಡಗಿತು. ಅಕ್ಕಮಹಾದೇವಿ ಅವಸರಿಸಿಕೊಂಡು ಮೇಲೆದ್ದಳು. ಮೀಯಲಿಕ್ಕೆಂದು ಅವರು ನದಿಗೆ ಬರುವುದು ಸಹಜವಿದ್ದಿತು. ಮಿಂದು ಹೋದರೆ ಪೂಜೆಗೆ ತೊಡಗು

ಸಾಧ್ಯತೆಯಿರಲಿಲ್ಲ. ದಾರಿ ಸ್ಪಷ್ಟವಾದಂತೆ ತೀವ್ರಗತಿಯಲ್ಲಿ ನಡೆದಳು. ಈಗ ಸಂಪೂರ್ಣವಾಗಿ ಹಳ್ಳದ ದಂಡೆಯು ದೃಷ್ಟಿ ವಲಯದಿಂದ ಪಾರಾಗಿ, ಎಡಗಡೆಯ ಬದಿಯಲ್ಲಿ ಹರಿಯುವ ಕೃಷ್ಣೆ ವಿಸ್ತಾರವಾಗಿ ಕಾಣುತ್ತಿದ್ದಳು. ತ್ರಿಕೂಟ ಪರ್ವತದ ಮೊದಲ ಶೃಂಗದ ತುದಿಯಲ್ಲಿ ನಿಂತು ಹಿಂದಕ್ಕೆ ಹೊರಳಿದಾಗ ತಾನಿದ್ದ ಗವಿಯ ಪರಿಸರ ಅಸ್ಪಷ್ಟವಾಗಿ ಕಂಡಿತು. ಎದುರಿಗೆಲ್ಲ ಕೇವಲ ಬೃಹದಾಕಾರದ ಬೆಟ್ಟಗಳು, ಹಸಿರು ಮೈದಾನಗಳನ್ನು ಬಿಟ್ಟರೆ ಮತ್ತೇನೂ ಇಲ್ಲ. ಮೂರೂ ಶೃಂಗಗಳನ್ನು ಕ್ರಮಿಸುತ್ತ ನಂತರ ಬಟ್ಟಬಯಲಿಗೆ ಬಂದಳು. ಅಚ್ಚರಿ ಎಂದರೆ ಅಲ್ಲಿಯೂ ಅಸ್ಪಷ್ಟವಾದ ಕಾಲುದಾರಿ, ದನಗಳ ಒಣಗಿದ ಸಗಣಿ ಅಲ್ಲಿಯೇ ಬಿದ್ದಿತ್ತು. 'ಇಂಥಲ್ಲಿ ಯಾರು ಬರುವರೋ' ಎಂದು ಅಚ್ಚರಿಪಡುವಾಗಲೇ ಕದಳಿಯ ಗವಿಯ ನೆತ್ತಿಯ ಮೇಲಿರುವ ಹಳ್ಳದ ದಂಡೆಗೆ ಹಾಲಿಳಿದ ದನಗಳನ್ನು ಸಂರಕ್ಷಿಸಲು ತುರುಗಾಹಿಗಳು ಬರುವರೆಂದು ಚುಂಚರಿಂದ ಕೇಳಿದ್ದು ನೆನಪಾಯಿತು.

ಸ್ವಲ್ಪ ದೂರದವರೆಗೆ ಸಾಗುವಾಗಲೇ ಮಂಜುಳರವದೊಡನೆ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಬರುವ ತಿಳಿನೀರಿನ ವಾಹಿನಿಯೊಂದು ಗೋಚರಿಸಿತು. ಅದರ ದಂಡೆಗುಂಟ ಎತ್ತರವಾಗಿ ಬೆಳೆದ ಬಾಳೆಯ ಗಿಡಗಳ ವನ. ವಿಶಾಲವಾದ ನಳನಳಿಸುವ ಹಸಿರು ಎಲೆಗಳಿಂದ ಚಾಮರಗಳನ್ನು ಬೀಸುತ್ತ ಚನ್ನಮಲ್ಲಿಕಾರ್ಜುನನು ತನ್ನನ್ನು ಸ್ವಾಗತಿಸುತ್ತಿರುವನೆಂದು ಭಾವಿಸಿ ಪುಳಕಿತಳಾದಳು. ತಾನು ಸೇರಬಯಸಿದ್ದ ಕದಳಿಯ ಬನದಲ್ಲಿ ವಾಹಿನಿಯೊಂದು ಹರಿಯುವುದೆಂದು ಚುಂಚರು ವಿವರಿಸಿದ್ದರು. ಆ ವಾಹಿನಿಯುಗುಂಟ ಪೂರ್ವಕ್ಕೆ ನಡೆದಾಗ ಅದು ದಬೆದಬೆಯ ರೂಪ ತಾಳಿ ಹೆಬ್ಬಂಡೆಯ ಮೇಲೆ ಹರಿದು ಧುಮ್ಮಿಕ್ಕುತ್ತಿತ್ತು. ಗಿಡವೊಂದನ್ನು ಆಸರೆಗೆ ಹಿಡಿದು ಬಗ್ಗಿ ನೋಡಿದಳು. ಕಣ್ಣಳತೆಗೆ ಮೀರಿದ ಆಳವಾದ ಕಮ್ಮರಿ; ಅದರೊಳಕ್ಕೆ ರಭಸದಿಂದ ನುಗ್ಗುವ ಕಿರುತೊರೆಯ ಹೊರತು ಉಳಿದುದೇನೂ ಕಾಣಲಿಲ್ಲ. ತಟ್ಟನೆ ಪ್ರಭುದೇವರ ಸ್ಥಳ ನಿರ್ದೇಶಕ ವಚನವು ಚಿತ್ತಭಿತ್ತಿಯ ಮೇಲೆ ಮೂಡಿತು. 'ತ್ರಿಕೂಟಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ.' 'ತ್ರಿಕೂಟವಂತೂ ಇದೇ. ಹಾಗಾದರೆ ಗವಿಯು ಇಲ್ಲೆಲ್ಲೋ ಇರಲೇಬೇಕು' ಎಂದುಕೊಂಡು ಅಕ್ಕಮಹಾದೇವಿ ಸ್ವಲ್ಪ ಎಡಕ್ಕೆ ಹೊರಳಿ ಮುಂದಕ್ಕೆ ಸಾಗಿ ನೋಡಿದಳು. ಆ ಜಲಪಾತವು ಹೆಬ್ಬಂಡೆಯ ಮುಕ್ಕಾಲು ಭಾಗವನ್ನು ವ್ಯಾಪಿಸಿತ್ತು. ಆದರೆ ಇನ್ನು ಕಾಲುಭಾಗ ಪೊಳ್ಳಾಗಿ ಕಾಣುತ್ತಿದ್ದು ಹಿಂದೊಂದು ಗವಿಯಿದ್ದುದು, ಗವಿಯ ಬಲಬದಿಯಿಂದ ಒಳಕ್ಕೆ ಇಳಿಜಾರಾದ ಮಾರ್ಗವಿದ್ದುದು ಕಂಡಿತು.

ಅಕ್ಕಮಹಾದೇವಿಯಲ್ಲಿ ಸಮುದ್ರ ಸಂಗಮವನ್ನು ಸಮೀಪಿಸಿದ ನದಿಯ ಉತ್ಸಾಹ ಅವಿಶ್ರಾಂತವಾಗಿ ಪ್ರವಹಿಸಿತು. ತನ್ನನ್ನು ತಾನು ನಿಗ್ರಹಿಸಿ ಕೊಳ್ಳಲಾರದ ಸಂತಸದಿಂದ ಹಿಂದಕ್ಕೆ ಬಂದು ನದಿಯ ದಂಡೆಯ ಮೇಲಿದ್ದ ಗಿಡವೊಂದರ ನೆರಳಿಗೆ ಕುಳಿತು, ಸುತ್ತಲೂ ಕಣ್ಣುಗಳನ್ನು ಹಾಯಿಸಿದಳು. ಸೀಮಂತ ಕಾರ್ಯವನ್ನು ಪೂರೈಸಿಕೊಂಡ ಬಸಲೆಯು ತೌರಿನವರು ಕೊಟ್ಟ ಹಸಿರು ಬಳೆ, ಹಸಿರು ಸೀರೆಗಳನ್ನುಟ್ಟು ಕಾಂತಿಯುಕ್ತ ವದನೆಯಾಗಿ ಶೋಭಿತ ಳಾದಂತೆ ನಿಸರ್ಗವು ಸೃಷ್ಟಿಕರ್ತನು ತೊಡಿಸಿದ ಹಸಿರೆಲೆಗಳಿಂದ ಶೋಭಿಸುತ್ತ ಕಳಾಯುಕ್ತವಾಗಿತ್ತು. ಸಮೃದ್ಧವಾದ ವನಪ್ರದೇಶವದು. ಉತ್ತಮ ರಸ ಬಾಳೆಯ ಗೊನೆಗಳು ಸವಿಯುವವರಾರಿಲ್ಲದೆ ಅನಾಥವಾಗಿ ತೂಗಾಡುತ್ತಿದ್ದು, ಗಿಳಿಗೊರವಂಕಗಳು ಕೊಕ್ಕಿನಿಂದ ಕುಕ್ಕಿದ್ದರಿಂದ ಮೈಹರಿದುಕೊಂಡು ಓಲಾಡು ತ್ತಿದ್ದವು. ಮಾಗಿದ ಸಿಪ್ಪೆಯಿಂದ ಜಾರಿ ನೆಲಕ್ಕೆ ಕೆಲವು ಉರುಳಿದ್ದವು. ನೇರಿಳೆ, ಬಿಕ್ಕೆ, ಹಲಸಿನ ಹಣ್ಣುಗಳ ಮರಗಳೂ ಹೇರಳವಾಗಿ ಇರದಿರಲಿಲ್ಲ. ಸಣ್ಣಸಣ್ಣ ಗಿಡಗಳು ನಾಟೀ ಔಷಧಿಯ ನಿಧಿಗಳಾಗಿದ್ದು ಹಸಿವನ್ನು ಹಿಂಗಿ ಸುವ ಸಾಮರ್ಥ್ಯದೊಡನೆ, ಕಾಯಿಲೆಗೆ ಸಂಜೀವಿನಿಗಳಾಗುವ ಮದ್ದೂ ಆಗು ತ್ತಿದ್ದವು. ಅಕ್ಕಮಹಾದೇವಿ ಝರಿಯಲ್ಲಿ ಮುಖ ತೊಳೆದುಕೊಂಡು, ವಿಭೂತಿ ಧರಿಸಿ ಬೊಗಸೆಯಲ್ಲಿ ನೀರನ್ನು ಕುಡಿದಾಗ ಅಮೃತವನ್ನು ಈಂಟಿದಷ್ಟು ಸವಿ ಎನಿಸಿತಲ್ಲದೆ ಗಿರಿಯನ್ನೇರಿ ಬಂದಿದ್ದ ಶ್ರಮವೆಲ್ಲ ಬಿಸಿಲಿಗೊಡ್ಡಿದ ಮಂಜಿ ನಂತೆ ಕರಗಿತ್ತು. ಸುಧಾರಿಸಿಕೊಂಡು ಕುಳಿತಿರುವಾಗಲೇ ಮಾನವರನ್ನೇ ಕಂಡಿರದ ಮುದ್ದಾದ ಜಿಂಕೆಯೊಂದು ಮೆಲ್ಲನೆ ಬಂದು ಅಕ್ಕಮಹಾದೇವಿಯ ಬಳಿ ನಿಂತು ಮೂಗಾನಿಸಿತು. ಮೊಲವೊಂದು ಹುಲ್ಲಿನ ಹಾಸುಗೆಯಿಂದ ಮೂತಿ ತೂರಿಸಿ ನಿಧಾನವಾಗಿ ಹೊರಬಂದು ಕಾಲನ್ನು ಮುದ್ದಿಟ್ಟಿತು. ಮಾನವರ ಬಳಿಗೆ ತಾವಾಗಿ ಎಂದೂ ಬರದೆ, ಕಂಡರೆ ದಿಕ್ಕೆಟ್ಟು ಓಡುವ ಪ್ರಾಣಿಗಳು ಇಲ್ಲಿ ತಾವಾಗಿಯೇ ಸಮೀಪಿಸಿ ಮೂಸಿ ನೋಡುವುದನ್ನು ಕಂಡು ಮೂಕವಿಸ್ಮಿತಳಾಗಿ ಜಿಂಕೆಯ ಬೆನ್ನನ್ನು ಸವರಿದಳು. ಮೊಲವನ್ನು ಮಡಿಲಲ್ಲಿ ಕೂರಿಸಿಕೊಂಡು ನವುರಾಗಿ ಕೈಯಾಡಿಸಿದಳು. ಅವು ತನ್ನನ್ನು ಸ್ವಾಗತಿಸಿದ ನಾದಿನಿ-ಮೈದುನರಂತೆ ಕಂಡವು.

ಸಿರಿವಂತ ಗಂಡನ ಹರ್ಮ್ಯವನ್ನು ಮೊಟ್ಟಮೊದಲಬಾರಿಗೆ ಪ್ರವೇಶಿಸಿದ ಮನೆಯ ಸೊಸೆಯು ಅಲ್ಲಿಯ ಸಂಪದವನ್ನೆಲ್ಲ ನೋಡುತ್ತ ಬೆರಗಾಗುವಂತೆ ಅಕ್ಕಮಹಾದೇವಿ ...

ಸಂಪೂರ್ಣ ಯಜಮಾನಿತಿ' ಎಂದು ಎದೆಯುಬ್ಬಿತು. ಆಗ ಮನಸ್ಸು ಉಲ್ಲಾಸಗೊಂಡು ಹಾಡಿತು :

ವನವೆಲ್ಲ ಕಲ್ಪತರು ಗಿಡವೆಲ್ಲ ಮರುಜವಣಿ
ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತ ಕ್ಷೇತ್ರ.
ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪುರುಷಾಮೃಗ
ಎಡಹುವ ಹರಳೆಲ್ಲ ಚಿಂತಾಮಣಿ.
ಚೆನ್ನಮಲ್ಲಿಕಾರ್ಜುನಯ್ಯ ನಚ್ಚಿನ ಶ್ರೀಗಿರಿಯ ಸುತ್ತಿ ನೋಡುತ್ತ
ಬಂದು ಕದಳಿಯ ಬನವ ಕಂಡೆ ನಾನು*

ಹಾಡಿಕೊಳ್ಳುತ್ತ ಮೇಲಿದ್ದು ಗವಿಯ ಬಲಬದಿಗೆ ಹೋಗಿ ನಿಂತಾಗ ಮೆಲ್ಲನೆ ಒಂದು ದಾರಿ ಕೆಳಗಿಳಿದಿತ್ತು. ಅದನ್ನು ಎಚ್ಚರಿಕೆಯಿಂದ ಇಳಿಯುತ್ತ ಗಿಡಗಳ ಕೊಂಬೆಗಳನ್ನು ಆಧಾರಕ್ಕೆ ತೆಗೆದುಕೊಂಡು ಕೆಳಗೆ ಕ್ರಮಿಸುವಾಗಲೇ ಅರ್ಧಗೋಲಾಕಾರದ ಹೆಬ್ಬಂಡೆಯ ಗವಿ ಸ್ಪಷ್ಟವಾಗಿ ಕಾಣುತ್ತಿತ್ತು. ಹರಿವ ಝರಿಯ ತಳದಲ್ಲಿ, ತಾನು ಕಾಲಿರಿಸಿಕೊಂಡು ನಿಂತುಕೊಂಡ ಆ ಹೆಬ್ಬಂಡೆಯೇ ಗವಿಯ ಮೇಲ್ಛಾವಣಿ. ಪೂರ್ಣವಾಗಿ ಇಳಿದು ಮತ್ತೆ ಹತ್ತೆಂಟು ಹೆಜ್ಜೆಗಳನ್ನು ಏರುವಾಗಲೇ ಮಟ್ಟಸವಾದ ಗವಿಯ ತಳಭಾಗವನ್ನು ಕಾಲು ಮೆಟ್ಟಿತು. ಮಾನವನ ಊಹೆಗೆ ಮೀರಿದ ವಿಸ್ತಾರವಾದ ಆ ಗವಿ ನಿಸರ್ಗದ ಅನುಪಮ ಪವಾಡವಾಗಿತ್ತು. ಸುಮಾರು ನೂರಮೂವತ್ತು ಮೊಳದಷ್ಟು ಅಗಲವಾದ ಕೊಳ್ಳದ ನೆತ್ತಿಗಿದ್ದು ಪೂರ್ವದಿಶಾಭಿಮುಖವಾಗಿ ತೆರಹಾಗಿದ್ದ ಕಾಮನಬಿಲ್ಲಿನಾಕಾರದ ಗವಿಯದು. ಮುಂಭಾಗದಲ್ಲಿ ಹದಿನಾರು ಗೇಣು, ನಡುಭಾಗದಲ್ಲಿ ಹದಿನೆರಡು ಗೇಣು, ಹಿಂಭಾಗದಲ್ಲಿ ಒಂಭತ್ತು ಗೇಣುಗಳ ಎತ್ತರದಿಂದ ಕೂಡಿತ್ತು. ಹಿಂಭಾಗದ ಕಲ್ಲಿನ ಪೊಟರೆಗಳಲ್ಲಿ ಪುಟ್ಟಪುಟ್ಟ ಸಂದುಗಳಿದ್ದು ಕತ್ತಲೆಯು ಗಾಢವಾಗಿದ್ದುದರಿಂದ ಅಲ್ಲಿ ಕಣ್ಣುಕಪ್ಪಡಗಳಷ್ಟೆ ವಾಸಿಸುತ್ತಿದ್ದುವು. ಮುಂಭಾಗದಲ್ಲಿ ಆಳವಾದ ಪ್ರಪಾತ ; ಬಾಗಿ ನೋಡಿದರೆ ತಳ ಕಾಣುತ್ತಿರಲಿಲ್ಲ. ಕೊಳ್ಳದ ದಂಡೆಗುಂಟ ವನರಾಜಿ. ಸುತ್ತಲೂ ಬಾಳೆಯ ಗಿಡಗಳು ಅಸಹಜ ಎತ್ತರದಿಂದ ನಳನಳಿಸುತ್ತಿದ್ದವು. ಹರಿವ ತೊರೆಯಿಂದ ಬಹಳ ಎತ್ತರದಲ್ಲಿ ಕದಳಿಯ ಗಿಡಗಳು ಇದ್ದರೂ ಅವುಗಳ ಬುಡದಲ್ಲಿ ಒಸರುವ ಗುಪ್ತ ಝರಿಗಳಿಂದ ಪೋಷಿತವಾಗಿದ್ದವು. ಒಂದೆರಡು ಕಡೆ ಬೆರಳಗಾತ್ರದ ಸ್ಪಷ್ಟವಾದ ಸೆಲೆಗಳಿದ್ದವು. ಗವಿಯ ಮುಂಭಾಗದಲ್ಲಿ ಧುಮ್ಮಿಕ್ಕುವ ವಾಹಿನಿ ತೆರವಾದ ಗವಿಗೆ ಬಿಳಿಯ ತೆರೆಯನ್ನು ಹೊದ್ದಿಸಿತ್ತು. ಗವಿಯ ಆಕಾರವನ್ನು

* ಮು.ವ. [illegible]

ಪರಿಶೀಲಿಸಿದಾಗ ಚನ್ನಮಲ್ಲಿಕಾರ್ಜುನನ ಹೃದಯವನ್ನೇ ಪ್ರವೇಶಿಸಿದಂತೆನಿಸಿ ರೋಮಾಂಚಿತಳಾಗಿ ಕುಳಿತಳು; ವರುಷ ವರುಷಗಳ ಆಕಾಂಕ್ಷೆ ಇಂದು ಪೂರ್ಣಗೊಂಡಿತ್ತು.

* * *

ಶಿವಕಾಮಿನಿ ಸೂರ್ಯೋದಯವಾಗುತ್ತಲೇ ಎಚ್ಚರಗೊಂಡು ಮಿಂದು ಕೌಶಿಕನ ಕುಟೀರಕ್ಕೆ ಹೋಗಿ ಪೂಜೆಗೆ ಅಣಿಮಾಡತೊಡಗಿದಳು. ಕೌಶಿಕನು ವಾಹಿನಿಯಲ್ಲಿ ಸ್ನಾನ ಮಾಡಿ ಕುಟೀರವನ್ನು ಪ್ರವೇಶಿಸುತ್ತ,

'ಶಿವೆ....ದನಗಾಹಿ ಹೇಳುತ್ತಿದ್ದ ಇಂದೇಕೋ ಅಮ್ಮನವರು ಪ್ರತಿನಿತ್ಯ ಕುಳಿತುಕೊಳ್ಳುವ ಸುರಹೊನ್ನೆ ಗಿಡದ ಕೆಳಗಿರುವ ಬಂಡೆಯ ಮೇಲೆ ಧ್ಯಾನಕ್ಕಾಗಿ ಕುಳಿತಿಲ್ಲವಂತೆ....'

'ಅವರದ್ದೇನು ಬಿಡಿ ಪ್ರಭು....ಸದಾ ತೂರ್ಯಾವಸ್ಥೆಯಲ್ಲಿರುವವರು. ಬಹುಶಃ ತಮ್ಮ ಗವಿಯಲ್ಲಿ ಅಂತರ್ಮುಖರಾಗಿ ಕುಳಿತಿರಬಹುದು. ಹಗಲು-ಇರುಳು ಎಂಬ ಭೇದವೇ ಇಲ್ಲದ ಸ್ವಯಂಭು ಸ್ಥಿತಿ ಅವ್ವನದು.'

ಅವರಿಬ್ಬರು ಪೂಜೆ-ಧ್ಯಾನಗಳನ್ನು ಪೂರೈಸಿ ಅಧ್ಯಯನ ಮಾಡಿ ಹಣ್ಣು-ಹಂಪಲನ್ನು ಆಯಲು ಹೊರಟರು. ಹಗಲಿನ ಎರಡನೆಯ ಜಾವವು ಅರ್ಧ ಪೂರೈಸಿತ್ತು. ಹಾಲಿನ ಮಗಿಯೊಡನೆ ಬೆಟ್ಟವನ್ನೇರಿದ ಚುಂಚನು ಅಲ್ಲಿ ಅಕ್ಕಮಹಾದೇವಿಯನ್ನು ಕಾಣದೆ ಇಳಿದು ಬಂದು ಹಣ್ಣುಗಳನ್ನು ಆಯುವುದರಲ್ಲಿ ಮಗ್ನನಾಗಿದ್ದ ಕೌಶಿಕನಿಗೆ ಹೇಳಿದ:

'ಸ್ವಾಮಿ, ಅಮ್ಮನೋರಿಗೆ ಹಾಲನ್ನು ಕೊಡಲಿಕ್ಕೆ ಹೋಗಿದ್ದೆ. ಅವರು ಕಾಣಸಿಗಲಿಲ್ಲ....ಕೌಶಿಕ-ಶಿವಕಾಮಿನಿಯರು ಮಗಿಯನ್ನು ತೆಗೆದುಕೊಂಡು ತಾವೇ ಕೊಡಲು ಹೊರಟರು. ಆಕೆ ಕುಳಿತುಕೊಳ್ಳುತ್ತಿದ್ದ ತಾಣಗಳನ್ನೆಲ್ಲ ಗಮನಿಸುತ್ತಲೇ ಮೇಲೇರಿದರು. ಅಕ್ಕಮಹಾದೇವಿಯು ಇರುತ್ತಿದ್ದ ಭಾಗಕ್ಕೆ ಮುಚ್ಚುತ್ತಿದ್ದ ಬಿದಿರಿನ ತಡಿಕೆ ಸರಿದಿತ್ತು ; ಅಲ್ಲಿ ಆಕೆ ಕಾಣಲಿಲ್ಲ. ಗವಿಯೊಳಗೇನಾದರೂ ಧ್ಯಾನಮಗ್ನವಾಗಿರಬೇಕೆಂದು ಪಂಜನ್ನು ಹೊತ್ತಿಸಿ ಒಳಗೆ ಹೋದರು. ಬರುಬರುತ್ತ ಗವಿ ಕಿರಿದಾಗಿ, ಗಾಳಿಯು ಸಹ ಆಡದಲ್ಲಿ ಆಕೆ ಇರುವುದು ದುಸ್ತರವೆಂದು ಹೊರಬಂದರು. ವಾಸಮಾಡುತ್ತಿದ್ದಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ನೆಲಕ್ಕೆ ಹಾಸಿದ ಒಣಹುಲ್ಲಿನ ಮೆದೆಯನ್ನು ಬಿಟ್ಟರೆ ಯೋಗದಂಡ, ಯೋಗಪಟ್ಟಿಗೆ, ವಿಭೂತಿ ಯಾವುದೂ ಕಾಣಬರಲಿಲ್ಲ.

ಕೊಳಕ್ಕಿಳಿದ. ಅಲ್ಲೂ ಕಾಣದಿರಲು ಬೆಟ್ಟದ ತುದಿಯನ್ನೇರಿ ಹಣೆಯ ಮೇಲೆ ಕೈ ಇಟ್ಟು ಸುತ್ತಲೂ ನಿಟ್ಟಿಸಿದ. ಹುಚ್ಚನಂತೆ 'ಅಮ್ಮಾ....ಅಮ್ಮಾ....' ಎಂದು ಚೀರಿದಾಗ ಸುತ್ತಲಿನ ಬೆಟ್ಟಗಳು ಮಕಾರವನ್ನು ಅಲೆಅಲೆಯಾಗಿ ಮಾರುಲಿದವು. ಆ ನೋವಿನ ಸ್ವರ ಶಿವಕಾಮಿನಿಯನ್ನು ಹಿಂಡಿತು. ಓಡುತ್ತ ಬೆಟ್ಟದ ತುದಿಯಿಂದಿಳಿದು ಅಕ್ಕಮಹಾದೇವಿ ಕುಳಿತುಕೊಳ್ಳುತ್ತಿದ್ದ ಹುಲ್ಲು ಮೆದೆಯ ಎಸಳನ್ನು ಕಣ್ಣಿಗೊತ್ತಿಕೊಳ್ಳುತ್ತ,

'ಶಿವೆ....ಅಮ್ಮನು ನಮ್ಮನ್ನು ಅನಾಥರನ್ನಾಗಿ ಮಾಡಿದಳು....' ಬಿಕ್ಕಿಬಿಕ್ಕಿ ಅಳತೊಡಗಿದ. ಶಿವೆ ಮೌನವಾಗಿ ದುಃಖಿಸಿದಳು.

'ಶಿವಕಾಮಿನಿ, ಆಕೆಗೆ ನಾವೇನೂ ಆತಂಕ ಒಡ್ಡುತ್ತಿರಲಿಲ್ಲವಲ್ಲ. ಹಸು-ಗೂಸುಗಳಂತೆ ಸೇವೆ ಮಾಡುತ್ತಲಿದ್ದೆವು. ನಮಗೇನೂ ಆಕೆಯಿಂದ ಬೇಕಿರಲಿಲ್ಲ; ಆ ಸಾತ್ವಿಕ-ವಾತ್ಸಲ್ಯಪೂರಿತ ಕಣ್ಣುಗಳ ಮುಖದರ್ಶನ ಒಂದಿದ್ದರೆ ಸಾಕಿತ್ತು. ಹೀಗೇಕೆ ಮಾಡಿದಳು? ಅನಾಥರನ್ನಾಗಿ ಮಾಡಿ ನಮ್ಮನ್ನೇಕೆ ತೊರೆದು ಹೋದಳು?' ಅವನ ದುಃಖ ಸೀಮಾತೀತವಾಗಿತ್ತು.

'ಸಂತೈಸಿಕೊಳ್ಳಿ ಪ್ರಭು. ನೀವೀಗ ಅಜ್ಞಾನಿಗಳಲ್ಲ; ಪಾರಮಾರ್ಥ ಪ್ರಪಂಚದಲ್ಲಿ ಪ್ರಬುದ್ಧರಾಗುತ್ತಿರುವವರು. ಅಮ್ಮನವರು ಸದಾಕಾಲ ದೇವರ ಧ್ಯಾನ—ಅವನೊಡನೆ ಮಾತುಕತೆ ಇವುಗಳಲ್ಲೇ ಲೀಲಾಮೂರ್ತಿಗಳಾಗಿ ಕಾಲ ಕಳೆಯುತ್ತಿದ್ದವರು. ನಮ್ಮ ಸೇವೆ-ಸಂದರ್ಶನ, ನಮ್ಮೊಡನೆ ಮಾತುಕತೆ ಏನೂ ಬೇಡವಾಗಿದ್ದವು ಅವರಿಗೆ....'

'ಶಿವೆ....ಹಲವಾರು ವರ್ಷಗಳಿಂದ ಹಲುಬಿ, ಕಳವಳಿಸಿ, ಅಲೆದು ಪಡೆದ ಆ ತಾಯಿಯ ಪಾದಗಳಿಂದ ಇಷ್ಟು ಬೇಗನೆ ನಾವು ವಂಚಿತರಾದೆವಲ್ಲ....'

'ಅವರ ಯೋಗನಿದ್ರಾಸ್ಥಿತಿಯನ್ನು ನೋಡಿದರೆ ಇನ್ನು ಹೆಚ್ಚುಕಾಲ ಪ್ರಾಕೃತಿಕ ಪ್ರಪಂಚದಲ್ಲಿ ಉಳಿಯಲಾರರೆನ್ನಿಸುತ್ತದೆ. ಪ್ರಭು....ನಾವೀಗ ಯೋಗಸಾಧಕರು; ಯಾವ ವ್ಯಾಮೋಹವೂ ನಮಗೆ ಸಲ್ಲದು. ತಾಯಿಯವರು ಚಿತ್ಕಳೆ ತುಂಬಿಕೊಟ್ಟ ಮಹಾನಿಧಿಯಾದ ಇಷ್ಟಲಿಂಗವಿದೆ. ಈ ಜ್ಯೋತಿಯನ್ನು ಹಿಡಿದುಕೊಂಡು ಮುಂದೆ ಸಾಗಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳೋಣ. ಅವರ ಬದುಕು-ನೆನಪುಗಳು ಸದಾ ಹೃದಯದಲ್ಲಿ ಹಸುರಾಗಿರುವಂತೆ ಇಟ್ಟುಕೊಳ್ಳುವಾ. ಏಳಿ....ಹಣ್ಣು-ಹಾಲನ್ನು ಸ್ವೀಕರಿಸಲು ನಡೆಯಿರಿ....'

'ಓ....ನಾನಿನ್ನೇತಕ್ಕಾಗಿ ಬದುಕಿರಲಿ ಶಿವೆ....?'

… ಮಾಡಬಾರದೆಂದೇ ಅವರು ದೂರ ಸಾಗಿರುವರು....'

'ಶಿವೆ....ಅಮ್ಮನು ಎಲ್ಲಿರುವಳೆಂದು ಹುಡುಕೋಣವೇ? ನಮ್ಮಿಂದ ಯಾವುದೇ ವಿಘ್ನವಾಗದೆಂದು ಭರವಸೆ ನೀಡಿ ಆಕೆಯ ಪಾದದ ನೆರಳಿನಲ್ಲಿ ನೆಮ್ಮದಿಯಾಗಿರೋಣ....'

'ಬೇಡ ಪ್ರಭು....ಅವರ ದಿವ್ಯ ಏಕಾಂತಕ್ಕೆ ಭಂಗತರುವ ಪ್ರಯತ್ನವಿನ್ನು ಸಾಕು. ನಾವು ಇಲ್ಲಿರುವುದು ಬೇಡ. ಅವರ ದೈವೀಸನ್ನಿಧಿಯಿಂದ ಇಲ್ಲಿ ಒಂದು ಬಗೆಯ ಜೀವಂತಿಕೆ-ಉತ್ಸಾಹ ಮಿಡಿಯುತ್ತಿದ್ದವು. ಇನ್ನು ಯಾವ ಕಳೆಯೂ ಇರದು. ಜನರ ಸುಳಿದಾಟ-ಒಡನಾಟ ಇಲ್ಲದ ಇಲ್ಲಿಂದ ಹೊರಟು ಶ್ರೀಶೈಲದ ಗುಡಿಯ ಸನಿಹದಲ್ಲಿರುವ ಘಂಟಾಸಿದ್ಧೇಶ್ವರ ಮಠದಲ್ಲಿದ್ದು ಸಾಧನಾಮಗ್ನರಾಗಿ ಉಳಿದ ಬಾಳನ್ನು ಸವಿಯೋಣ....'

ಶಿವಕಾಮಿನಿಯ ಸಲಹೆ ಸಮ್ಮತವಾದ ಕೌಶಿಕನು ಮೆಲ್ಲನೆದ್ದು ಕುಟೀರಕ್ಕೆ ಆಕೆಯನ್ನು ಹಿಂಬಾಲಿಸಿದನು. ಫಲಾಹಾರವನ್ನು ಪೂರೈಸಿ, ಇದ್ದ ಅಲ್ಪ ಸಾಮಗ್ರಿಗಳನ್ನು ಜೋಳಿಗೆಯಲ್ಲಿ ಒಟ್ಟುಗೂಡಿಸಿಕೊಂಡು ಹೆಗಲಿಗೇರಿಸಿದ ಅವರು ಅಕ್ಕಮಹಾದೇವಿ ಧ್ಯಾನಮಗ್ನಳಾಗಿ ಕುಳಿತುಕೊಳ್ಳುತ್ತಿದ್ದ ತಾಣಗಳನ್ನು ಮತ್ತೆಮತ್ತೆ ದಿಟ್ಟಿಸುತ್ತ, ತೂಕವಾದ ಕಾಲುಗಳನ್ನೆಳೆದುಕೊಂಡು ಬೆಟ್ಟವನ್ನಿಳಿದು ಶ್ರೀಗಿರಿಯತ್ತ ಅಭಿಮುಖವಾದರು.

* * *

ಯೋಗಸಾಧಕರಿಗಾಗಿಯೇ ವಿಶೇಷವಾಗಿ ನಿರ್ಮಾಣವಾದಂತಿತ್ತು ಆ ಗವಿ. ಯಾವ ಕೊರತೆಗಳೂ ಅಲ್ಲಿರಲಿಲ್ಲ. ಅಕ್ಕಮಹಾದೇವಿ ಸಂತೃಪ್ತಳಾಗಿ ಅನುಷ್ಠಾನನಿರತಳಾದಳು. ಮೊದಮೊದಲಿಗೆ ಹಣ್ಣು-ನೀರನ್ನು, ಸೊಪ್ಪು-ಪಲ್ಯೆಗಳನ್ನು ಸ್ವೀಕರಿಸಿ ಇರುತ್ತಿದ್ದ ಆಕೆ ಬರುಬರುತ್ತ ಆಹಾರವನ್ನು ಬಹಳಷ್ಟು ಕಡಿಮೆ ಮಾಡಿದಳು.

ಮರುದಿವಸ ಪೂರ್ಣಿಮೆ. ಅಂದು ಧ್ಯಾನಮಗ್ನಳಾಗಿ ಕುಳಿತಿರುವಾಗಲೇ ಇನ್ನು ಉಣಿಸು-ತಿನಿಸುಗಳಿಂದಲೂ ನಿರ್ಲಿಪ್ತಳಾಗಿ ನಿಲ್ಲಬೇಕೆಂದು ಸಂಕಲ್ಪಿಸಿ ಹಾಡಿಕೊಂಡಳು:

ಆನು ಬೇಡಿ ಭವಿಯಾದೆನು; ಅವು ನೀಡಿ ಭಕ್ತರಾದವು.
ಇನ್ನು ಬೇಡಿದೆನಾದಡೆ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮಾಣೆ.*

ಅಂದು ಹುಣ್ಣಿಮೆ. ಸುಪ್ರಭಾತದಲ್ಲಿ ಹರಿಯುವ ವಾಹಿನಿಯಲ್ಲಿ ಮಿಂದಳು. ಪೂಜೆಯ ಪರಿಕರಗಳನ್ನು ಹೊಂದಿಸಿಕೊಂಡು ಗವಿಯು ಹೊರಕ್ಕೆ ಕಾಲಿಕ್ಕೆ ನೆಂಬ ಸಂಕಲ್ಪದೊಡನೆ ಒಳಹೊಕ್ಕಳು. ಗವಿಯ ನಟ್ಟನಡುವೆ ಚೌಕಾಕಾರ ದಲ್ಲಿ ಹುಲ್ಲನ್ನು ಹರವಿಕೊಂಡು, ಪದ್ಮಾಸನದಲ್ಲಿ ಕುಳಿತಳು. ಬೆನ್ನು ಬಾಗ ದಂತೆ, ಕಾಲುಗಳು ಸರಿದಾಡದಂತೆ ಯೋಗವಟ್ಟಗೆಯಿಂದ ಆಧರಿಸಿಕೊಂಡು, ಇಷ್ಟಲಿಂಗವನ್ನು ಹಿಡಿದ ಎಡಗೈಯು ಕುಸಿಯದಂತೆ ಯೋಗದಂಡವನ್ನು ಆನಿಸಿದಳು.

'ಚನ್ನಮಲ್ಲಿಕಾರ್ಜುನಾ....ಇದು ನನ್ನ ಕಡೆಯ ಸಾಕಾರ ಪೂಜೆ. ಇನ್ನು ನಿನ್ನಲ್ಲಿ ಒಂದಾದ ಬಳಿಕ ಯಾರನ್ನು ಪೂಜಿಸಲಿ ಪ್ರಭು?' ಎಂದು ಆನಂದ ದಿಂದ ಹಾಡತೊಡಗಿದಳು.

ಅಂಗೈಯೊಳಗಣ ಲಿಂಗವ ಪೂಜಿಸುತ್ತ
ಮಂಗಳಾರತಿಗಳನು ತೊಳಗಿ ಬೆಳಗುತಲಿರ್ದಡೆ ನೋಡಯ್ಯಾ.
ಕಂಗಳ ನೋಟ, ಕರುವಿಟ್ಟ ಭಾವ, ಹಿಂಗದ ಮೋಹ
ತೆರಹಿಲ್ಲದಿರ್ದ ನೋಡಯ್ಯಾ.
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.**

ಕ್ರಿಯೆಗಳು ಮುಟ್ಟಲರಿಯದ ನಿನ್ನನೆಂತು ಪೂಜಿಸಲಿ? ನಾದಬಿಂದು ಗಳು ಮುಟ್ಟಲಾರದ ನಿನ್ನನ್ನು ಕುರಿತು ಹೇಗೆ ಹಾಡಲಿ? ಯಾವ ಭಾವವೂ ಉಳಿಯದೆ ನಿಮ್ಮ ನೋಡಿ ನೋಡಿ ಸ್ವೈರೆರಗಾಗುತ್ತಲಿರುವೆ.†

ಇಷ್ಟಲಿಂಗದಲ್ಲಿ ನೆಟ್ಟ ಕಣ್ಣುಗಳು ಕಾಂತಿ ಜ್ಯೋತಿಗಳಾಗಿ ಮಿನುಗುತ್ತಿ ದ್ದವು, ಮನಸ್ಸು ನಿವೇದಿಸುತ್ತಿತ್ತು. ಅವಕಾಶ ಸಿಕ್ಕಾಗ ಕೈಗಳನ್ನು ಆಶ್ರಯಿ ಸುತ್ತಿದ್ದ ಓಲೆಯ ಕಂಠವು ತಾಡೋಲೆಗಳ ಮೇಲೆ ಓಡುತ್ತಿದ್ದಿತು.

'ಪ್ರಭು....ಚಂದ್ರಕಾಂತದ ಗಿರಿಯ ಮುಂದೆ ನಿಂತ ಗಜವು ಅದರೊಳಗೆ ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಅದು ಬೇರೊಂದು ಗಜವೆಂಬ ಭ್ರಾಂತಿ ಯಿಂದ ಎರಗತೊಡಗುವುದು. ಆ ಬಳಿಕ ಅದರ ಮತಿಯು ಅರಿಯುವುದು ಅದು ತನ್ನದೇ ರೂಹು ಎಂಬುದಾಗಿ. ಹಾಗೆಯೇ ನಾನು ನಿನ್ನಿಂದ ಭಿನ್ನ ಳಾಗಿರುವೆ ಎಂಬ ಭಾವದಿಂದ ಸಾಧನೆಗೆ ತೊಡಗಿದೆ. ಬರುಬರುತ್ತ ಇಷ್ಟಲಿಂಗ

ದರ್ಪಣದಲ್ಲಿ ವೀಕ್ಷಿಸಿದ ಬಳಿಕ, ಸ್ವ-ರೂಪದ ಅರಿವಾಗಿ 'ನಾನು ನೀನು ದೂರವಿಲ್ಲ. ನಿನ್ನೊಳಗೆ ನಾನು ನನ್ನೊಳಗೆ ನೀನು' ಎಂಬುದನ್ನರಿತಿರುವೆ.* ಆದ್ದರಿಂದ—

ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ?
ಮನ ನಿಮ್ಮ ರೂಪಾದ ಬಳಿಕ ನಾನಾರ ನೆನೆವೆ?
ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ?
ಚೆನ್ನಮಲ್ಲಿಕಾರ್ಜುನಾ, ನಿಮ್ಮಿಂದ ನೀವೆಯಾದಿರಾಗಿ
ನಿಮ್ಮನೆ ಅರಿವುತಿರ್ದೆನು.'†

ಅಪಾರ ಯೋಗಸಾಮರ್ಥ್ಯದಿಂದಾಗಿ ಪ್ರಾಣವಾಯುವು ಸುಷುಮ್ನಾ ನಾಡಿಯನ್ನು ಕಾವೇರಿಸಿತು. ಮುಚ್ಚಿದ್ದ ಸುಷುಮ್ನೆಯು ತೆರಹಾದಾಗ ಕುಂಭಿನಿ ಸರಸಿಯಿಂದ ಚಿದಾಮೃತವು ಸುರಿಯತೊಡಗಿತು. ಅದರ ಪರಿಣಾಮ ವಾಗಿ ಹಸಿವು-ತೃಷೆಗಳು ಇಲ್ಲದಂತಾದವು. ಆಗ ತನ್ನ ಸ್ಥಿತಿಯನ್ನು ಹೀಗೆ ನಿವೇದಿಸಿದಳು:

'ಜನ್ಮಜನ್ಮಾಂತರಗಳಲ್ಲಿ ನನ್ನ ಮನಸ್ಸು ಕಾಯದ ಕತ್ತಲೆ, ಮನದ ಆಸೆ ಗಳಿಂದ ತೊಳಲಿ ಬಳಲಿತು. ಪ್ರಕೃತಿ ಗುಣಗಳನ್ನು ಮೆಟ್ಟಲಾರದೆ ಹುಟ್ಟಿ ಬಂದೆ. ಉಂಡರೆ ಹಸಿಯುವುದು, ಹಸಿದರೆ ಉಣ್ಣುವುದು—ಹೀಗೆ ಹಸಿವಿನ ಚಕ್ರ ಗರಗರನೆ ತಿರುಗಿತು. ಆದರೆ ಈಗ ನಿನ್ನೊಲಿಮೆಯಾದ ಕಾರಣ ಚಿದಾಕಾಶದ ಅಮೃತದ ಆಪ್ಯಾಯನವಾಯಿತ್ತು. ಈ ಮಾಯೆಯನ್ನು ನಾನು ಗೆದ್ದಂತಾಯಿತು....'

ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ ನಿತ್ಯ ನಿರಂಜನಪ್ರಭೆಯ ಬೆಳಗನ್ನು ಸವಿಯುತ್ತ ಶಿವಸಾಮರಸ್ಯದಲ್ಲಿ ಅನುಪಮ ಸುಖಿಯಾಗಿ ಅಕ್ಕ ಮಹಾದೇವಿ ಹಲವಾರು ದಿನಸಗಳನ್ನು ಕಳೆದಳು. ಸಹಜಾನಂದಸಿದ್ಧಿಯ ನವಿಲಾಗಿ ಶಿವಹೃದಯದಲ್ಲಿ ನರ್ತಿಸುತ್ತಿದ್ದಳು. ಒಂದು ತಿಂಗಳು ಕಳೆದು ಮರು ಪೌರ್ಣಿಮೆ ಒದಗಿತ್ತು. ಕ್ಷುಧೆ-ದಾಹಗಳನ್ನು ಮೆಟ್ಟಿ ಇದೇ ಸ್ಥಿತಿ ಯಲ್ಲಿ ಕುಳಿತರೆ ವರ್ಷಗಟ್ಟಳೆ ಕುಳಿತುಕೊಳ್ಳಬಹುದೆಂಬ ಆತ್ಮವಿಶ್ವಾಸ ಬಂದಿತ್ತು. ಆದರೆ ಈ ಲೀಲೆಯೂ ಸಾಕೆನಿಸತೊಡಗಿತು.

'ಮಾನವ ಶರೀರವು ಗಳಿಸಿಕೊಳ್ಳಬಹುದಾದ ಅತ್ಯಂತಿಕ ಸಿದ್ಧಿಗಳನ್ನು, ಅವನ ಬದುಕು ಪಡೆದುಕೊಳ್ಳಬಹುದಾದ

ವನ್ನು ಪಡೆದುಕೊಂಡಾಯಿತು. ಇನ್ನು ನಿನ್ನೊಡನೆ ಸರ್ವಾಂಗ ಸಮರಸ ವನ್ನು ಹೊಂದಿಬಿಡುವೆ. ಷಟ್ಸ್ಥಲದ ಎಲ್ಲ ಸ್ಥಲಗಳನ್ನು ಸಾಧಿಸಿದ್ದಾಯಿತು. ಭಕ್ತೆ ಎಂದು ಕರೆದುಕೊಳ್ಳುವನೇ ಕರ್ತೃ-ಭೃತ್ಯ, ಪೂಜ್ಯ-ಪೂಜಕ ಎಂಬ ಭಾವ ಭೇದವಿಲ್ಲ; ಮಾಹೇಶ್ವರಿ ಎಂದುಕೊಳ್ಳುತ್ತಲೇ ವ್ರತ, ನೇಮ, ಭವ ಎಲ್ಲವುಗಳನ್ನು ದಾಟಿರುವೆ. ಪ್ರಸಾದಿಯೇ? ಅರ್ಪಿತ-ಅನರ್ಪಿತ ಎಂಬ ಭಾಲ ವಿಲ್ಲದಷ್ಟು ಸರ್ವಸ್ವವನ್ನು ಒಪ್ಪಿಸಿರುವೆ. ಪ್ರಾಣಲಿಂಗಿಸ್ಥಲದವಳು ಎಂದು ಕೊಳ್ಳೆನೇ ಅನುಭವಿಸಬೇಕಾದ ಸ್ಥಿತಿಗಳಾವುವೂ ಉಳಿದಿಲ್ಲ. ಶರಣ ಸ್ಥಲ ದವಳು ಎಂಬೆನೇ ನೀನು ಪತಿ—ನಾನು ಸತಿ ಎಂಬ ಭಿನ್ನತೆಯುಳಿದಿಲ್ಲ. ಐಕ್ಯ ಳಾನು ಎಂಬೆನೆ? ನಿನ್ನಲ್ಲಿ ಬೆರಸಿ ಭೇದವನ್ನರಿಯೆ....* ನಿಃಸ್ಥಲದಲ್ಲಿ ನಿಂತ ನನಗೆ ಇನ್ನೇನು ಬೇಕು ಹೇಳು? ಆದ್ದರಿಂದ,

ಎಲೆ ದೇವಾ, ಸಕಲ ಕರಣಂಗಳ ಉಪಟಳಕ್ಕಂಜಿ
ನಿಮ್ಮ ಶರಣರ ಮರೆಹೊಕ್ಕು, ಕಾರುಣ್ಯಮಂ ಪಡೆದು,
ಬಂದು ನಿಮ್ಮ ಶ್ರೀ ಮೂರ್ತಿಯ ಕಂಡೆ.
ಇನ್ನು ಎನ್ನ ನಿಮ್ಮೊಳಗೆ ಐಕ್ಯವ ಮಾಡಿಕೊಳ್ಳಾ
ಚನ್ನಮಲ್ಲಿಕಾರ್ಜುನಾ**

ಅಕ್ಕಮಹಾದೇವಿಯು ತನ್ನ ಬದುಕಿನ ಸಿಂಹಾವಲೋಕನ ಮಾಡಿ ಕೊಂಡಳು.

'ದೇವಾ....ನನ್ನ ಕಾಯದ ಕಳವಳವ ಕೆಡಿಸಿದೆ, ಮನದ ಮಾಯೆಯ ಮಾಣಿಸಿದೆ, ಎನ್ನ ಪ್ರಾಣದ ಕೋಟಲೆಯ ಕಳೆದು, ಭವದ ಬೇರನ್ನಲುಗಿಸಿ ನಿಮ್ಮತ್ತ ಸೆಳೆದುಕೊಂಡ ಮಹಾಯೋಜನೆಯನ್ನು ಎಂದೂ ವರ್ಣಿಸಲು ಸಾಧ್ಯವಿಲ್ಲ. ಕೈಬಿಡುವಂತೆ ಮಾಡಿ ಮತ್ತೆ ಮೇಲಕ್ಕೆತ್ತಿಕೊಂಡೆ; ಪರೀಕ್ಷೆ ಗಾಗಿ ವಿಘ್ನಗಳನ್ನೊಡ್ಡಿದಂತೆ ಮಾಡಿದರೂ ಎಳ್ಳಷ್ಟು ಘಾಸಿಯಾಗದಂತೆ ಪಾರುಮಾಡಿದೆ. ಇದೆಲ್ಲ ನಿನ್ನ ಮಹಿಮೆಯೇ! ಪರಿಣಾಮವಾಗಿ ನಿಮ್ಮ ಶ್ರೀಪಾದ ಕಮಲ ತುಂಬಿಯಂತೆ ಸಮರಸ ಸುಖವನ್ನೀಂಟಿ ಓಲಾಡುತ್ತಿರುವೆ.'†

ತನ್ನ ಮನಸ್ಸಿನೊಡನೆ ಸ್ವಗತ ಸಂವಾದದಲ್ಲಿ ತೊಡಗಿದಳು:

'ಎಲೈ ಕುಂಡಲಿನಿಯೇ, ಬೆಳಗಿನ ಸ್ವರೂಪನಾದ ಅವನು ಜೀವಾತ್ಮನನ್ನು ದೂರವಿರಿಸಿ, ಕರೆಯಲು ಕಳಿಸಿದ ಮನಸ್ಸು ಎಂಬ ಸಖಿಯನ್ನೇ ನೆರೆದುಬಿಟ್ಟ. ಪ್ರಸ್ತುತ ತೂರ್ಯಾವಸ್ಥೆಯಲ್ಲಿ ತೂಗಿತೂಗಿ ನೋಡುತ್ತ ಎನಿತು ಕಾಲವಿರಲಿ? ಈ ಗಿರಿ ಬೆಂದಿದೆ, ಆದರೆ ತರುವುಳಿದಿದೆ. ಶರೀರವು ಪ್ರಾಕೃತಿಕ ಗುಣಗಳನ್ನು

ಕಳೆದುಕೊಂಡು ಅದರೊಳಗಣ ಚೇತನದ ತಿರುಳುಮಾತ್ರ ಉಳಿದಿದೆ. ಆತ್ಮನೆಂಬ ಹೊನ್ನರಳೆಯ ಮರ ಮಧುರವಾಗಿ ಉಲಿಯುತ್ತಿದೆ....ಈಗಲೇ ನಾನು ಅವನಲ್ಲಿ ನೆರೆವೆನು. *

ದೇವಾ, ಚನ್ನಮಲ್ಲಿಕಾರ್ಜುನಾ....ಕಾಮನ ತಲೆಯ ಕೊರೆದೆ ನಿನ ಗೊಲಿದು ; ಕಾಲನ ಕಣ್ಣ ಕಳೆವೆ ಹಸಿವು-ತೃಷೆಗಳ ಮೆಟ್ಟಿ ; ಈಡಾ-ಪಿಂಗಳೆ ಗಳನ್ನೇ ಯೋಗಶಕ್ತಿಯಿಂದ ಪುಡಿಮಾಡಿ ತಿಂದೆ. ನನಗಿನ್ನಾವ ನಾಮ-ರೂಪ ವಿದೆ? ಇಂಬಿಟ್ಟುಕೊಳ್ಳುವ ಮದುವಳಿಗ ನೀನಾದರೆ ; ನಾನು ಆಶ್ರಯಿಸುವ ಮದುವಳಿಗಿತ್ತಿಯಾಗುವೆ. ನನ್ನ ಈ ಮರುತನನ್ನು ಯಮನಲ್ಲಿ ಬೆರೆಸುವೆ ; ಸರಿಯೇ ?**

ಇಚ್ಛಾಮರಣಿಯಾಗಿ ನಿನ್ನೊಡಗೂಡುವೆ. ನಾನೀಗ ಪಂಜರದ ಪಕ್ಷಿಯಲ್ಲ, ಗೂಡಿನ ಪಕ್ಷಿ. ನನ್ನಾತ್ಮದ ಗಿಳಿ ದೇಹದ ಗೂಡಿನಲ್ಲಿ ಬಂಧಿತವಾಗಿಲ್ಲ.... ಸರ್ವಸ್ವತಂತ್ರವಾಗಿದೆ. ಬೇಕೆಂದಾಗ ನಿನ್ನತ್ತ ಹಾರಬಲ್ಲದು. ನನ್ನನ್ನು ಸ್ವೀಕರಿಸಲು ಸಿದ್ಧನಾಗು.

ಮೂಲದ್ವಾರದ ಬೇರ ಮೆಟ್ಟಿ ಭೂಮಂಡಲವನ್ನೇರಿದೆ.
ಆಚಾರದ ಬೇರ ಹಿಡಿದು, ಐಕ್ಯದ ತುದಿಯನೇರಿದೆ.
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ.
ಕೈವಿಡಿದು ತೆಗೆದುಕೊಳ್ಳಾ, ಚನ್ನಮಲ್ಲಿಕಾರ್ಜುನಾ†

ಶಿವಯೋಗ ಸಾಧಕಿಯಾಗಿ ಆಧಾರಚಕ್ರದಲ್ಲಿ ಹುದುಗಿದ್ದ ಕುಂಡಲಿನಿ ಯನ್ನು ಚೇತನಿಸಿ ಸಹಸ್ರಾರವನ್ನೇರಿ ಬೆಳಕನ್ನು ದರ್ಶಿಸಿದೆ. ಷಟ್ಸ್ಥಲದ ಪಥಿಕಳಾಗಿ ಭಕ್ತಸ್ಥಲದಲ್ಲಿ ಪಾದವಿಟ್ಟು ಐಕ್ಯಸ್ಥಲವನ್ನು ಮುಟ್ಟಿ ಅನುಭಾವದ ಆನಂದವನ್ನು ಉಂಡೆ ; ನಿನ್ನ ಸಾಮರಸ್ಯದ ಶ್ರೀಗಿರಿಯನ್ನೇರಲು ಒಬ್ಬೊಬ್ಬರು ಒಂದೊಂದು ಸೋಪಾನವನ್ನು ಆರಿಸಿಕೊಂಡರು. ಭಕ್ತಿಯನ್ನೋರ್ವರು, ಸಮಾಜಸೇವೆಯನ್ನು ಮತ್ತೋರ್ವರು, ಜ್ಞಾನವನ್ನು ಇನ್ನೊಬ್ಬರು ಸಾಧನ ವಾಗಿ ಬಳಸಿಕೊಂಡರೆ ನಾನು ವೀರವೈರಾಗ್ಯವನ್ನು ನನ್ನ ಸೋಪಾನವಾಗಿ ಆರಿಸಿಕೊಂಡು ನಿನ್ನೆಡೆಗೆ ಬರುವೆ. ನನ್ನನ್ನು ತ್ವರೆಯಿಂದ ಸ್ವಾಗತಿಸು....'

ಅಕ್ಕಮಹಾದೇವಿಯ ದೇಹ ನಿಶ್ಚಲವಾಯಿತು ; ನೆಟ್ಟ ದೃಷ್ಟಿ ಸ್ಥಿರ ವಾಯಿತು. ಶ್ವಾಸವನ್ನು ದೀರ್ಘವಾಗಿ ಎಳೆದುಕೊಂಡು ಹಂತಹಂತವಾಗಿ ಕೆಳಗಿಳಿಸುತ್ತಲೇ ಸುಪ್ತವಾಗಿದ್ದ ಕುಂಡಲಿನಿ ಪ್ರಾಣವಾಯುವಿನ ರಭಸಕ್ಕೆ

ತಕ್ಕಂತೆ ಆರೋಹಿಸುತ್ತ ಹೋಯಿತು. ಅದು ಮೇಲೇರಿದಂತೆ ಮೈ ಹಗುರ ವಾದಂತೆನಿಸಿತು. ಕುಂಡಲಿನಿಯು ಅನಾಹತ ಚಕ್ರಕ್ಕೆ ಏರಿದಾಗ ಹೃದಯವು ಮತ್ತೊಮ್ಮೆ ನೊರೆಯಿತು.

'ಬೆರೆಸುವರೆ ಬೇಗ ತೋರಾ, ಹೊರಹಾಕದಿರಯ್ಯಾ.
ನಿಮ್ಮಲ್ಲಿಗೆ ಸಲೆಸಂದ ತೊತ್ತಾನು
ಎನ್ನ ಹೊರಹಾಕದಿರಯ್ಯಾ.
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ನಂಬಿ ಬೆಂಬಳಿ ಬಂದೆನು
ಇಂಬುಗೊಳ್ಳಯ್ಯಾ ಬೇಗದಲಿ !*

ಕುಂಡಲಿನಿ ಶಕ್ತಿಯು ಆಜ್ಞಾಚಕ್ರದಲ್ಲಿ ನೆಲೆನಿಂತಾಗ ಭ್ರೂಮಧ್ಯದಿಂದ ಹೊರಹೊರಟ ಬೆಳಗು ಇಷ್ಟಲಿಂಗದಲ್ಲಿ ಗರಗರನೆ ತಿರುಗುತ್ತ ಲಯವಾಗುತ್ತಿತ್ತು. ಇಷ್ಟಲಿಂಗದಲ್ಲಿ ಪ್ರತಿಸ್ಪರ್ಧಿಯಾಗಿ ಉದಿಸಿದ ಮತ್ತೊಂದು ಬೆಳಕು ಹಿರಿದಾಗಿ ಇಡೀ ವಿಶ್ವವನ್ನೆಲ್ಲ ವ್ಯಾಪಿಸಿಕೊಂಡಿತು. ಆ ಮಹಾ ಬೆಳಕು ಸುತ್ತಲೂ ತುಂಬಿಕೊಳ್ಳುತ್ತ ಕತ್ತಲೆಯನ್ನು ನುಂಗಿ ನೀರು ಕುಡಿಯುತ್ತ, ಈಕೆಯನ್ನೂ ನಿಧಾನವಾಗಿ ಬಳಸತೊಡಗಿತು. ಪರಮಾತ್ಮ ಪರಂಜ್ಯೋತಿಯ ಬೆಳಗಿನ ಸರಸಿಯಲ್ಲಿ ಆತ್ಮದ ಅರಸಂಚೆ ವಿಹರಿಸಲಾರಂಭಿಸಿತು. ಆ ಬೆಳಕು ಘನೀಭೂತಗೊಂಡು, ಸಂಕುಚಿತಗೊಳ್ಳುತ್ತಾ ಬಿಗಿದಪ್ಪುವ ಅನುಭವವಾಗ ತೊಡಗಿದಾಗ ಅಂದುಕೊಂಡಳು :

ಕದಳಿ ಎಂಬುದು ತನು, ಕದಳಿಯೆಂಬುದು ಮನ.
ಕದಳಿ ಎಂಬುದು ವಿಷಯಂಗಳು.
ಕದಳಿ ಎಂಬುದು ಭವ ಘೋರಾರಣ್ಯ
ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆ.
ಭವಗೆದ್ದು ಬಂದ ಮಗಳೆ ಎಂದು ಕರುಣದಿಂದ ತೆಗೆದು ಬಿಗಿದಪ್ಪಿದಡೆ
ಚನ್ನಮಲ್ಲಿಕಾರ್ಜುನ ಹೃದಯಕಮಲದಲ್ಲಿ ಅಡಗಿದೆನು. †

ಆ ಅಲೌಕಿಕ ಬೆಳಗಿನ ವಲಯವು ಸುತ್ತಲೂ ಪರಿಭ್ರಮಿಸತೊಡಗಿತು. ಅಕ್ಕಮಹಾದೇವಿಯ ಮನಸ್ಸು ದೀಪ್ತಿಯ ನಿಧಿಯಾದ ಪರಂಜ್ಯೋತಿ ಸ್ವರೂಪನಿಗೆ ಆರತಿಯನ್ನು ಬೆಳಗಲು ಉತ್ಸುಕವಾಯಿತು. ನಿಜ....ಆದರೆ ಎಣ್ಣೆಯೆಲ್ಲಿ—ಬತ್ತಿಯೆಲ್ಲಿ? ಯಾವುದೂ ಇಲ್ಲದ ಆರತಿಯೇ! ಅಹುದು....

ಕಂಗಳೇ ಆರತಿ, ಕಾಯಕವೇ ಕರ; ಒಳಗಿನ ತೇಜಸ್ಸೇ ಬೆಳಕು. ಆರತಿಯ ಗೀತೆಯು ಉಲಿಯತೊಡಗಿತು.

ಕಂಗಳನೋಟವು ಕಾಯಕದ ಕರದಲಿ
ಲಿಂಗದ ಕೂಟವು ಶಿವಶಿವ ಚಲುವನು
ಮಂಗಳ ಮೂರುತಿ ಮಲೆಗಳ ದೇವಂಗೆತ್ತುವನಾರತಿಯ !
ನಾ ಬೆಳಗುವೆನಾರತಿಯಾ
॥ ಪ ॥

ಜಗವಂದ್ಯಗೆ ಬೇಟವ ಮಾಡಿದೆ ನಾ
ಹಗೆಯಾದೆನು ಸಂಸಾರಕ್ಕೆಲ್ಲ
ನಗುತೈದರೆ ಲಜ್ಜೆನಾಚಿಕೆಯನು ತೊರೆದವಳೆಂದನ್ನ ।

ಗಗನ ಗಿರಿಯ ಮೇಲಿರ್ದಹನೆಂದೆಡೆ
ಲಗುನೆಯಾಗಿ ನಾನರಸುತ ಬಂದೆನು
ಅಘಹರ ಕರುಣಿಸು ನಿಮಗಾನೊಲಿದೆನು ಮಿಗೆ ಒಲಿದಾರತಿಯ ॥ ೧ ॥

ಭಕುತಿ ರತಿಯೆ ಸಂಭಾಷಣೆಯಿಂದವೆ
ಯುಕುತಿಯ ಮರೆದೆನು, ಕಾಯದ ಜೀವದ
ಪ್ರಕೃತಿಯ ತೊರೆದೆನು ಸುತ್ತಿನ ಮಾಯಾಪಾಶವ ಹರಿದೆನಲಾ ।

ಸುಕೃತಿಯಾಯ್ತು ನಿಮ್ಮಯ ನೆನಹಿಂದವೆ
ಮುಕುತಿಯ ಫಲಗಳ ದ್ರಾಂಟಿಯೆ ಬಂದೆನು
ಶಕುತಿಯಾದೆ ನಾ ಪ್ರಾಣಲಿಂಗಕೇ ಮನವೊಲಿದಾರತಿಯ ॥ ೨ ॥

ಮಚ್ಚಿ ಒಲಿದು ಮನವಗಲದ ಭಾವವು
ಬಿಚ್ಚದೆ ಬೇರೊಂದೆನಿಸದ ಪ್ರಾಣವು
ಬೆಚ್ಚಂತಿರ್ದುದು ಅಚ್ಚೊತ್ತಿದ ಮಹಾ ಘನ ತಾ ನೆಲೆಗೊಂಡು ।

ಪಶ್ಚಿಮ ಮುಖದಲ್ಲಿ ಬೆಳಗು ಪ್ರಕಾಶವು
ನಿಚ್ಚನಿರಂಜನ ಚನ್ನಮಲ್ಲಿಕಾರ್ಜುನ
ಗೆತ್ತುವೆನಾರತಿಯ ರತಿಯಿಂದವೆ ಮನವೊಲಿದಾರತಿಯ ॥ ೩ ॥

ಕಂಗಳ ಆರತಿ ಬೆಳಗುತ್ತಿತ್ತು. ಹಾಡಿನ ನಾದ ನಿಸರ್ಗದ ಅಣುಅಣುವಿನಲ್ಲಿ, ವಿಶ್ವದ ಕಣಕಣಕ್ಕೆ ವ್ಯಾಪಿಸಲಾರಂಭಿಸಿತ್ತು.

ತನುವ ಮೀರಿದ ಮನವ ಮೀರಿದ ಬುದ್ಧಿಯನ್ನು ದಾಟಿದ ಆ ಅನುಭವದಿಂದ ಮಾತು ಮೂಕವಾಯಿತು; ತರ್ಕ ತಟ್ಟರಿಸಿ ನಿಂತಿತು. ಉಸಿರು ರಭಸದಿಂದ

ವಿಲೀನಗೊಂಡು, ಕಂಗಳ ಎವೆಗಳು ಕೆಳಗೆ ಮುಚ್ಚಿ, ಬೆಳಕಿನ ಚಕ್ರವು ಸುತ್ತತೊಡಗಿತು. ಪರಂಜ್ಯೋತಿಯ ಉರಿಯಲ್ಲಿ ಕರ್ಪೂರದಂತೆ ಚೈತನ್ಯದ ಚಿಜ್ಯೋತಿಯೊಂದು ಕರಗುತ್ತಿತ್ತು. ಚನ್ನಮಲ್ಲಿಕಾರ್ಜುನನ ಹೃದಯದೋಪಾದಿಯಲ್ಲಿರುವ ಆ ಕದಳಿಯ ಗರ್ಭದ ಗುಹೆಯಲ್ಲಿ ಬೆಳಕಿನ ಪ್ರವಾಹವು ಹರಿಯುತ್ತಿದ್ದು, ಭೂಮಬ್ರಹ್ಮಾಂಡದಲ್ಲಿ ಅದು ನಿಧಾನವಾಗಿ ಸಮರಸವಾಯಿತು.

* * *

ಸಾಗರವು ಮತ್ತೂ ಪ್ರಶಾಂತವಾಗಿತ್ತು. ಕಿರುಝರಿಯಾಗಿ, ತೊರೆಯಾಗಿ, ಮಹಾನದಿಯಾಗಿ ಹರಿದುಬಂದ ಆ ತರಂಗಿಣಿ ಶರಧಿಯ ಒಡಲಲ್ಲಿ ತನ್ನತನವನ್ನಳಿದುಕೊಂಡು ಬೆರೆಯಿತು. ನದಿಯ ವಿಶಿಷ್ಟ ರುಚಿ-ಬಣ್ಣ-ಸಾಂದ್ರತೆಗಳು ಉಳಿಯದೆ ಸಾಗರದ ಬಣ್ಣ-ರುಚಿ-ಸಾಂದ್ರತೆಗಳಷ್ಟೇ ಉಳಿದಿದ್ದವು.

ಮಹಾದೇವಿಯೆಂಬ ಉಡುತಡಿಯ ಆ ಝರಿ, ಅಕ್ಕಮಹಾದೇವಿಯೆಂಬ ಬೃಹತ್ ತರಂಗಿಣಿಯಾಗಿ ಕದಳಿಯ ಸಂಗಮ ತಾಣದಲ್ಲಿ, ಪರಶಿವ ಸಾಗರದೊಡನೆ ಒಡವೆರೆದು ಒಂದಾಗಿತ್ತು. ಕಾಯದ ಕತ್ತಲೆಯ ಬಣ್ಣ, ಮನದ ಮಾಯೆಯ ರುಚಿ, ಜೀವನದ ಜಂಜಡದ ಸಾಂದ್ರತೆಗಳನ್ನು ಅಳಿದುಕೊಂಡು ಪರಶಿವಾಂಬುಧಿಯ ಸತ್-ಚಿತ್-ಆನಂದದ ನಿಲುವನ್ನು ಪಡೆದಿತ್ತು. ತರಂಗಿಣಿ ಶರಧಿಗಳ ಬಿಗಿಯಪ್ಪುಗೆ ಹೇಗಿತ್ತೆಂದರೆ ಅಲ್ಲಿ ಕೂಟದ ಕಲೆ ಸಹ ಉಳಿದಿರಲಿಲ್ಲ.

ನದಿಯು ಬತ್ತಿ ವ್ಯರ್ಥವಾಯಿತೆ? ಇಲ್ಲ; ಕೇವಲ ಮಳೆಗಾಲದ ನದಿಯಾಗಿ ಅಳಿಯದೆ, ಅಪೂರ್ಣ ನದಿಯಾಗಿ ಉಳಿಯದೆ, ಸಾಗರವನ್ನು ಬೆರೆದು ಅದರ ಗರ್ಭದಲ್ಲಿ ಶಾಶ್ವತವಾಗಿ ಉಳಿಯುವ ಸಾರ್ಥಕತೆಯನ್ನು ಸಾಧಿಸಿತು. ಮುಂದೆ ಹುಟ್ಟಲಿರುವ ಮೋಡ-ಮಳೆ, ಝರಿ-ತೊರೆಗಳಿಗೆ ಚೈತನ್ಯ-ಸ್ಫೂರ್ತಿಗಳನ್ನೊದಗಿಸುವ ಚನ್ನಮಲ್ಲಿಕಾರ್ಜುನನ ಚಿನ್ಮಯನಿಧಿಯಾಯಿತು.